ಬ್ರಿಟಿಷ್ ಖಜಾನಾ ಮಂತ್ರಿಯಾದ ಮೆ| ಲ್ಯೊಡ್ ಜೋರ್ಜರವರು ವೇಲ್ಸಿಗೆ ಹೋಗಿದ್ದಾಗ ಸಫ್ರಜೆಟ್ಟ ಸ್ತ್ರಿಯರು ಅಲ್ಲಿಗೂ ಹೋಗಿ ಮೆ| ಲ್ಯೊಡ್ ಜೋರ್ಜರವರು ಅಲ್ಲಿ ನಿರ್ವಹಿಸಲಿಕ್ಕಿದ್ದ ಕೆಲಸವನ್ನು ಹಾಳುಮಾಡ ನೋಡಿದರು. ಆದರೆ ಕೂಡಿದ್ದ ಜನರ ಗುಂಪು ಆ ಸ್ತ್ರೀಯರನ್ನು ಹಿಡಿದು ಅವರ ವಸ್ತ್ರಗಳನ್ನು ಹರದು ಕೇಶಗುಚ್ಛಗಳನ್ನು ಹಿಡಿತುಂಬಾ ಎಳದು ತೆಗೆದರು. ಒಬ್ಬ ಹೆಂಗಸು ಅಲ್ಲಿದ್ದ ಆವರಣದ ಮೇಲೆ ಬಿದ್ದಳು. ಮೆ| ಲೊಯ್ಡ್ ಜೋರ್ಜರವರು "ಅವಳಿಗೆ ಕೇಡುಮಾಡ ಬೇಡಿರಿ" ಎಂದು ಕೂಗಿದರು.

* * *

ತಾ. ೫ರಲ್ಲು ಸಫ್ರಜೆಟ್ಟ ಸ್ತ್ರೀಯರು ಡಬ್ಲಿನ್ ಪಾರ್ಕಿನಲ್ಲಿ ಕೂಡಿಬಂದು ಸಭೆ ಮಾಡಿದರು. ಈ ಸಭೆಯಲ್ಲಿ ಒಬ್ಬ ಸಫ್ರಜೆಟ್ಟ ಸ್ತ್ರೀಯು ಭಾಷಣ ಕೊಡುತ್ತಿರುವಾಗ ಜನರ ಗುಂಪು ಅವರ ಮೇಲೆ ಬಿದ್ದು ಅವಳ ಬಾಯಿ ಕಟ್ಟಿದರು. ಈ ಸಭೆಗೆ ಬಂದಿದ್ದ ಒಂದು ತಂತೀ ವರ್ತಮಾನವನ್ನು ಆಹಾರ ಮುಷ್ಕರ ಹಾಕಿದ ಕಾರಣ ಶೆರೆಯಿಂದ ಬಿಡಿಸಲ್ಪಟ್ಟ ಮಿಸ್ ಮೇರಿ ಲಿಯು ಓದಿ ಹೇಳಿದಳು. "ಡಬ್ಲಿನ್ ನಾಟಕರಂಗದಲ್ಲಿಯ ಗೊಂದಲದಲ್ಲಿ ೫ ವರ್ಷಗಳ ಶಿಕ್ಷೆ ವಿಧಿಸಲ್ಪಟ್ಟ ಮಿಸ್ ಗ್ಲೇಡಿಸ್ ಇವನ್ನಳು ಶೆರೆಯಿಂದ ಬಿಡಿಸಲ್ಪಡದಿ

ದ್ದರೆ ನಾನು ಬಂದಿಖಾನೆಗೆ ಹೋಗಿ ಅವಳನ್ನು ಬಿಡಿಸ ಪ್ರಯತ್ನಿಸುವೆನು, ಇದರಿಂದ ನಾನು ಸತ್ತರೂ ಚಿಂತಿಲ್ಲ" ಎಂಬದಾಗಿ ಆ ತಂತಿಯಲ್ಲಿ ಬಂದಿತ್ತು.

ಮೊಂಗೋಲಿಯದಲ್ಲಿ ಚೀನಿಯರ ಸೈನೀಕರು ಸಾವಿರ ಮಂದಿಯನ್ನು ಕಡಿದುಹಾಕಿದರೆಂದೂ ಹೆಂಗಸರನ್ನೂ ಮಕ್ಕಳನ್ನೂ ಹಿಂಸಿಸಿ ಅಮಾನುಷ ರೀತಿಯಲ್ಲಿ ಸುಟ್ಟು ಹಾಕಿದರೆಂದೂ ವಾರ್ತೆ ಬಂದದೆ.

ಚೀನದ ಪ್ರಜಾಧಿಪತ್ಯದ ಪ್ರೆಸಿಡೆಂಟರ ರಾಜಕೀಯ ಸೆಕ್ರಟರಿಯಾಗಿ ನೇಮಿಸಲ್ಪಟ್ಟ ಡಾಕ್ಟರ್ ಮೊರಿಸನರವರು ಪಾರಿಸಿಗೆ ಹೋಗಿರುವರು. ಅಲ್ಲಿಂದ ಬೆರ್ಲಿನಿಗೆ ಹೋಗಿ ಪುನಃ ಬರುವ ತಿಂಗಳ ತಾ. ೯ಕ್ಕೆ ಪೆಕಿಂಗಿಗೆ ಹಿಂತೆರಳುವರು. ಚೀನದ ಜನರು ಪ್ರಜಾಧಿಪತ್ಯದ ಕಡೆಗೆ ಪುನಃ ಸಂತೋಷವನ್ನು ತೋರ್ಪಡಿಸುತ್ತಿದ್ದಾರೆಂದೂ ಚೀನದ ಸ್ಥಿತಿಯು ದಿನೇ ದಿನೇ ಒಳ್ಳೇದಾಗುತ್ತಾ ಬರುತ್ತದೆಂದೂ ಡಾಕ್ಟರ್ ಮೊರಿಸನರವರು ಹೇಳುವರು.

ಹಂಗೇರಿಯದ ಮಂತ್ರಿ ಸಭೆಯಲ್ಲಿ ತಾ. ೧೮ರಲ್ಲು ಬಹಳ ಗೊಂದಲವಾಯಿತು. ಮಂತ್ರಿ ಸಭೆಯು ಕೂಡಿದಾಕ್ಷಣ ಸದಸ್ಯರಲ್ಲಿ ವಿರೋಧ ಪಕ್ಷದವರು ಗಂಟೆ ಬಾರಿಸಿ, ಇತರ ನಾದಗಳನ್ನು ಮಾಡಿ ಗುಲ್ಲು ಮಾಡಿದರು. ಪೋಲೀಸಿನವರು ಬಂದ ಮೇಲೆಯೂ ಇವರು ಗುಲ್ಲು ನಿಲ್ಲಿಸಲಿಲ್ಲ. ಕಡೆಗೆ ಪೋಲೀಸಿನವರು ಒಳ ಪ್ರವೇಶಿಸಿ ಸಭೆಯನ್ನು ಬಿಟ್ಟುಹೋಗಬೇಕೆಂದು ವಿರೋಧ ಪಕ್ಷದ ಮೆಂಬರರನ್ನು ಬಲವಂತ ಪಡಿಸಿದರು. ಆದರೆ ಸುಮಾರು ನೂರು ಮಂದಿ ಮೆಂಬರರು ಮಂತ್ರಿ ಸಭೆಯ ಮಧ್ಯೆ ನಿಂತು ತಾವು ಮಂತ್ರಿ ಸಭೆಯನ್ನು ಬಿಡುವದಿಲ್ಲವೆಂದು ಹೇಳಿದರು. ಅನಂತರ ಪೋಲೀಸಿನವರು ಬಲತ್ಕಾರದಿಂದ ಅವರನ್ನು ಹೊರ ದೂಡುವಾಗ ಉಭಯತರೂ ಮುಷ್ಟಿ ಪೂಜೆಯನ್ನು ಮಾಡಿಕೊಂಡರು.

ವಿರೋಧ ಪಕ್ಷದ ಮೆಂಬರರಲ್ಲಿ ಒಬ್ಬನು ವಾಣಿಜ್ಯ ಮಂತ್ರಿಯಾದ ಎಮ್. ಬಿಯೋತಿಯು ದೊಡ್ಡ ಪಟಿಂಗನೆಂದು ಕೂಗಿದನು. ಇನ್ನೊಬ್ಬನು ಕೂಡ್ಲೇ ಮಂತ್ರಿಗೆ ಹೊಡದು ಅನಾಚ್ಯ ಮಾತುಗಳಿಂದ ಪಚಾರಿಸಿದನು. ವಿರೋಧ ಪಕ್ಷದ ಇತರ ಮೆಂಬರರೂ ಮಂತ್ರಿಯ ಮೇಲೆ ಬಿದ್ದು ಮುಷ್ಟಿ ಫಲಹಾರ ಮಾಡಿದರು. ಅನಂತರ ಸರಕಾರದ ಕಡೆಯ ಮೆಂಬರರ ಸಹಾಯದಿಂದ ಈ ಮಂತ್ರಿಯು ಬದುಕಿ ಉಳಿದನು.

ಕಡೆಗೆ ಕೌಂಟು ಟಿಜ್ಜರವರು ಆಸನವನ್ನು ಏರಿದರು. ಪುನಃ ವಿರೋಧ ಪಕ್ಷದವರು ಕೊಳಲುಗಳನ್ನೂದಿ ಗುಲ್ಲು ಮಾಡಿದರು. ಕೂಡ್ಲೇ ಬಲವಾದ ಪೋಲೀಸ್ ಪಡೆಯು ಒಳಹೋದ್ದರಿಂದ ವಿರೋಧ ಪಕ್ಷದವರು ಮಂತ್ರಿ ಸಭೆಯನ್ನು ಬಿಟ್ಟುಹೋದರು.

ಪೋಲೀಸಿನವರಿಂದ ಹೊರಡಿಸಲ್ಪಟ್ಟ ವಿರೋಧ ಪಕ್ಷದ ನೆಷನಲಿಷ್ಟ ಮೆಂಬರರು ಅಂದೇ ಸಾಯಂಕಾಲ ದೊಡ್ಡ ಸಭೆಕೂಡಿಸಿದರು. ಪೋಲೀಸ್ ಸೈನ್ಯವು ಹೋಗಿ ಸಭೆಯನ್ನು ಆಗಲಿಸಿದರು. ಈ ಸಂದರ್ಭದಲ್ಲಿ ಅನೇಕರು ಗಾಯಪಟ್ಟರು. ೨೪ ಮಂದಿ ನೋದಂಡ ಸ್ಥಿತಿಯಲ್ಲಿರುವರು. ೮೦ ಮಂದಿ ಕೈದುಮಾಡಲ್ಪಟ್ಟಿರುವರು.

ಇಂಗ್ಲಾಂಡಿನ ಬೇಂಕಿನಲ್ಲಿ ಕೆಲಸಮಾಡುತ್ತಿದ್ದ ಹುಡುಗರಲ್ಲಿ ೧೩೦ ಮಂದಿ ತಮಗೆ ಸಂಬಳ ಏರಿಸಬೇಕೆಂದು ಹಟ ಹಿಡಿದು ಕೆಲಸಕ್ಕೆ ಮುಷ್ಕರ ಹಾಕಿದರು. ಬೇಂಕಿನ ಮೇಲಾಧಿಕಾರಿಗಳು ಈ ಹುಡುಗರನ್ನು ಕೆಲಸದಿಂದ ಬರತರಫು ಮಾಡಿಬಿಟ್ಟರು.

ಜೋರ್ಜ ಸಾರ್ವಭೌಮರವರು ೧೯೧೪ನೇ ಇಸವಿಯಲ್ಲಿ ದಕ್ಷಿಣ ಆಫ್ರೀಕವನ್ನು ಸಂದರ್ಶಿಸ ಬೇಕೆಂದು ಅಲ್ಲಿಯ ಸರಕಾರದವರು ಅವರನ್ನು ಆಮಂತ್ರಿಸಿದ್ದರೆಂದೂ ಚಕ್ರವರ್ತಿಯವರು ಆಮಂತ್ರಣವನ್ನು ಸ್ವೀಕರಿಸಿರುವರೆಂದೂ ಸಾಲ್‌ಮಾಲ್ ಗಜೀಟ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದರೆ ರೂಟರ್ ಎಜನ್ಸಿಯವರು ಈ ವಾರ್ತೆಯ ವಿಷಯ ತಿಳಕೊಳ್ಳುವರೆ ಚಕ್ರವರ್ತಿಯವರ ಸೆಕ್ರಟರಿಗೆ ಭೇಟಿಕೊಟ್ಟಲ್ಲಿ ಚಕ್ರವರ್ತಿಯವರಿಗೆ ಅಂಥಾ ಆಮಂತ್ರಣವಾಗಲಿಲ್ಲವೆಂಬದಾಗಿ ತಿಳಿದುಬಂತು.

ಬ್ರಿಟಿಷ್ ಪ್ರಧಾನ ಮಂತ್ರಿಯವರಾದ ಅಸ್ಕ್ವಿತರವರು ಡಬ್ಲಿನಿಗೆ ಹೋದಾಗ ಉಪಟಳ ನಡಿಸಿದ ಸಫ್ರಜೆಟ್ಟ ಸ್ತ್ರೀಯರಲ್ಲಿ ೫ ವರ್ಷಗಳ ಶಿಕ್ಷೆವಿಧಿಸಲ್ಪಟ್ಟ ಮಿಸ್ ಮೇರಿ ಲೇ ಎಂಬವಳು ಬಂದಿಖಾನೆಯಲ್ಲಿ ೪೪ ದಿವಸಗಳ ವರೆಗೆ ಆಹಾರ ತಕ್ಕೊಳ್ಳದೆ ಇದ್ದದರಿಂದ ತಾ. ೨೧ರಲ್ಲು ಬಿಡುಗಡೆ ಮಾಡಲ್ಪಟ್ಟಳು.

ಗ್ಲಾಸ್‌ಗೋ ಪಟ್ಟಣದಲ್ಲಿ ಹೇಟ್ ಫೀಲ್ಡ್ ಎಂಬವನು 13 ನಿಮಿಷ 28⅘ ಸೆಕುಂದದೊಳಗೆ ಸಾವಿರ ಗಜ ದೂರ ಈಜಾಡಿ ಈಜಾಡುವುದರಲ್ಲಿ ಪ್ರಖ್ಯಾತನೆಂದೆಣಿಸಿ ಕೊಂಡನು.

ಟೈಂಸ್ ಎಂಬ ಲಂಡನ್ ಪಟ್ಟಣದ ವರ್ತಮಾನ ಪತ್ರಿಕೆಗೆ ಚೀನಾ ರಾಜ್ಯದ ಸಮಾಚಾರಗಳನ್ನು ಬರೆದು ಕಳುಹಿಸುತ್ತಾ ಪ್ರಖ್ಯಾತಿ ಪಡೆದಿದ್ದ ಡಾಕ್ಟರ್ ಮೊರಿಸನ್ ಎಂಬವರನ್ನು ಚೀನಾ ಪ್ರಜಾಪ್ರಭುತ್ವದ ಸರಕಾರದವರು ರಾಜಕೀಯ ಸೆಕ್ರಟರಿಯಾಗಿ ನೇಮಿಸಿಕೊಂಡರಷ್ಟೆ. ಈಚೆಗೆ ಕಾರ್ನೇಲ್ ವಿದ್ಯಾನಿಲಯದಲ್ಲಿ ಪಂಡಿತರಾದ ಜೆಂಕ್ಸ್ ಎಂಬವರನ್ನು ಖಜಾನಾ ಇಲಾಖೆಯ ಮೊಕ್ತೇಸರನ್ನಾಗಿಯೂ, ಪ್ರೆಂಚ್ ಸೈನೀಕರ ಹುದ್ದೆದಾರರಾದ ಲೆಪ್ಟನೆಂಟ್ ಬ್ರಸೋ ಎಂಬವರನ್ನು ಸೈನ್ಯದ ಇಲಾಖೆಯ ಮುಖ್ಯಾಧಿಕಾರಿಯನ್ನಾಗಿಯೂ ನೇಮಕ ಮಾಡಿದ್ದಾರೆ. ಇದರಿಂದ ಚೀನದಲ್ಲಿ ಸುಧಾರಣೆಯುಂಟಾಗುವುದೆಂಬದಕ್ಕೆ ಅನುಮಾನವಿಲ್ಲ. ಈಗ ಚೀನದಲ್ಲಿ ಶಾಂತತೆಯಿದ್ದು ತೆರಿಗೆಗಳು ಕ್ರಮವಾಗಿ ವಸೂಲಾಗುತ್ತದೆಂದು ಡಾಕ್ಟರ್ ಮೊರಿಸನರವರು ತಿಳಿಸುವರು. ಚೀನದಲ್ಲಿ ಒಂದು ದೊಡ್ಡ ಬೇಂಕು ಸ್ಥಾಪಿಸಲ್ಪಡುವುದು. ಚೀನದಲ್ಲಿಯೇ ರೈಲ್ವೆಯನ್ನು ಮಾಡುವರು. ಯುರೋಪಿಯನರಿಗೆ ಬೇಕಾದಲ್ಲಿ ಹೋಗುವರೆ ಅನಿರುದ್ಧ ಅಪ್ಪಣೆ ಕೊಡುವರು. ಆದರೆ ಇವರ ಅಪರಾಧಗಳ ವಿಚಾರಣೆಯನ್ನು ಮಾಡುವ ಅಧಿಕಾರವನ್ನು ತಾವೇ ಇಟ್ಟುಕೊಳ್ಳುವರು.

ಉತ್ತರ ಹಿಂದೂಸ್ಥಾನ.

ಕಾಶ್ಮೀರ ಸಂಸ್ಥಾನದ ಮಹಾರಾಜರವರು ಅರಮನೆಯಲ್ಲಿ ನಡೆಯುವ ದರ್ಬಾರ್ ಕಾಲದಲ್ಲಿ ಇನ್ನು ಮುಂದೆ ವೇಶ್ಯಾಸ್ತ್ರೀಯರ ನರ್ತನವನ್ನು ವಜಾಮಾಡತಕ್ಕದೆಂದು ಅಪ್ಪಣೆಕೊಟ್ಟಿದ್ದಾರೆ.

ಆಲಿಪುರದ ಡಿಪ್ಯುಟಿ ಮೇಜಿಸ್ಟ್ರೇಟರಾದ ಬಾಪು ಭೂಪತಿಚರಣ ಚಕ್ರವರ್ತಿಯವರು ಹಿಂದಿನ ಮಂಗಳವಾರ ಮನೆಯಿಂದ ಹೋದವರು ನಾಲ್ಕಾರು ದಿವಸಗಳ ವರೇಗೆ ಕಾಣೆಯಾಗಿದ್ದರು. ಕಳೆದ ಸೋಮವಾರ ಅವರ ಹೆಣವು ಮಧುಪುರದ ಒಂದು ಭಾವಿಯಲ್ಲಿ ತೇಲುತ್ತಿತ್ತು.

ಹಿಂದೂಸ್ಥಾನದಲ್ಲಿ ವಿಮಾನ ಯಂತ್ರಗಳನ್ನು ಉಪಯೋಗಿಸುವಂಥವರಿಗೆ ಸರಕಾರದವರು ಒಂದು ಕಾನೂನನ್ನು ರಚಿಸಿ ಇದನ್ನು ಆಕ್ಟೋಬರ ತಾರೀಕು ೧೫ರಿಂದ ಜಾರಿಗೆ ತರುವುದಾಗಿಯೂ ಅಷ್ಟರೊಳಗೆ ಪ್ರಜೆಗಳು ಈ ವಿಷಯವಾದ ತಮ್ಮ ಅಭಿಮತವನ್ನು ಸರಕಾರಕ್ಕೆ ತಿಳಿಯಪಡಿಸಬಹುದಾಗಿಯೂ ಪ್ರಕಟಿಸಿರುತ್ತಾರೆ. ಈಗ ಸರಕಾರದವರು ಠರಾಯಿಸಿರುವ ಕ್ರಮಗಳವ್ಯಾವುವಂದರೆ:— ವಿಮಾನ ಯಂತ್ರಗಳನ್ನು ಕೊಂಡು ತರಿಸಿ ಉಪಯೋಗಿಸುವವರೆಲ್ಲಾ ಪ್ರೆಸಿಡೆನ್ಸಿ ಪಟ್ಟಣಗಳಲ್ಲಿರುವ ಪೋಲೀಸ್ ಕಮಿಷನರಿಗೆ ಮೊದಲೇ ತಿಳಿಸಿ ಅವರಿಂದಲೂ ಇತರ ಕಡೆಗಳಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರುಗಳಿಂದಲೂ ಲೈಸನ್ಸ್ ಪಡಕೊಳ್ಳಬೇಕು. ಈ ಲೈಸನ್ಸ್ ವರುಷಕೊಂದಾವರ್ತಿ ಕೊಡಲ್ಪಡುವುದು. ವಿಮಾನ ಯಂತ್ರಗಳಲ್ಲಿ ಸಂಚಾರಮಾಡುವಂಥವರು ಆ ಯಂತ್ರಗಳೊಳಗೆ ತಮ್ಮ ಸಂಗಡ ಸಿಡಿಮದ್ದಿನ ಪದಾರ್ಥಗಳನ್ನಾಗಲೀ ಯುದ್ಧ ಸಾಮಗ್ರಿಗಳನ್ನಾಗಲೀ ತಂತೀಗಳ ಸಹಾಯವಿಲ್ಲದೆ ವರ್ತಮಾನ ಕೊಟ್ಟು ತರಿಸಿಕೊಳ್ಳಬಹುದಾದ ಉಪಕರಣಗಳನ್ನಾಗಲೀ ಹೈಯ್ಯಕೂಡದು. ಸಮಾಚಾರ ಕಾಗದ ಪತ್ರಗಳನ್ನೂ, ಸ್ಥಳಾಂತರಗಳಿಗೆ ತಲಪಿಸುವಂಥಾ ತರಬೇತು ಮಾಡಲ್ಪಟ್ಟ ಪಕ್ಷಿಗಳನ್ನೂ, ಫೋಟೋ ತೆಗೆಯುವ ಸಾಮಾಗ್ರಿಗಳನ್ನೂ ತೆಗೆದುಕೊಂಡು ಹೋಗಕೂಡದು. ಆದರೆ ಆಯಾ ಸ್ಥಳಗಳ ಅಧಿಕಾರಿಗಳು ಈ ಸಂದರ್ಭದಲ್ಲಿ ರಿಯಾಯತಿ ತೋರಿಸಲೂ ಬಹುದು. ಮೇಜಿಸ್ಟ್ರೇಟರೂ ಇತರ ಅಧಿಕಾರಿಗಳೂ ತಮಗೆ ಇಷ್ಟ ಬಂದ ಕಾಲದಲ್ಲಿ ಆ ಯಂತ್ರಗಳನ್ನು ಪರೀಕ್ಷಿಸಿ ಒಳಗಿದ್ದ ಸಾಮಾನುಗಳನ್ನು ಇಷ್ಟ ಬಂದ ಹಾಗೆ ಶೋಧನೆಮಾಡಬಹುದು.

ಇದೇ ತಾ. ೧೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೨೬೦ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೯೬೬ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿಯಲ್ಲಿ ೩೫೧; ಮದ್ರಾಸ್ ೭೧; ಬಂಗಾಳ ೨; ಬಿಹಾರ್ ಮತ್ತು ಒರಿಸ್ಸ ೩೧; ಸಂಯುಕ್ತ ಸಂಸ್ಥಾನ ೮೪; ಪಂಜಾಬು ೨೫; ಬರ್ಮ ೬೪; ಮಧ್ಯ ಸಂಸ್ಥಾನ ೩; ಮೈಸೂರು ೧೧೧; ಹೈದರಾಬಾದ್ ೨೦೬; ರಜಪುತಾನದಲ್ಲಿ ಇತರ ಸ್ಥಳಗಳಿಂದ ಬಂದ ಒಬ್ಬನು ಮೃತಪಟ್ಟನು.

ಮುಂಬಾಯಿ ಸಂಸ್ಥಾನದ ಬೀರರ್ ಶೀಮೆಯಲ್ಲಿ ಪಂಚಮರ ಹುಡುಗರನ್ನು ಎಲ್ಲಾ ಸರಕಾರಿ ಶಾಲೆಗಳಲ್ಲಿಯೂ ನಿರಾಕ್ಷೇಪವಾಗಿ ಇತರ ಜಾತಿಯ ಹುಡುಗರಂತೆ ತೆಗೆದುಕೊಳ್ಳುತ್ತಾರೆ.

ಮುಂಬಾಯಿ ಸಂಸ್ಥಾನದ ತುಗುಂತೆ ಎಂಬಲ್ಲಿ ಪಂಚಮರ ಸುಧಾರಕ ಸಂಘವನ್ನು ಸ್ಥಾಪಿಸಿದ್ದಾರೆ. ಇವರ ಮಹಾಸಭೆಗೆ ೨೦೦೦ ಪಂಚಮರು ಕೂಡಿದರು. ಇವರಿಗೆ ಪ್ರೋತ್ಸಾಹ ಕೊಡುವಗೋಸ್ಕರ ಮುಂಬಾಯಿ ಮತ್ತು ಪುಣೆಯಿಂದ ೨೦ ಮೇಲ್ ಜಾತಿಯ ಸ್ತ್ರೀಯರೂ ಕೆಲವು ಮೇಲ್ ಜಾತಿಯ ಗೃಹಸ್ತರೂ ಇವರ ಸಭೆಗೆ ಬಂದಿದ್ದರು.

ದಕ್ಷಿಣ ಹಿಂದೂಸ್ಥಾನ

ಹೈದರಾಬಾದಿನ ಗುಂಜಾ ಎಂಬ ಗುಡ್ಡಕ್ಕೆ ತಾ. ೧೧ರಲ್ಲು ಇಬ್ಬರು ಸಾರ್ಜೆಂಟರು ಶಿಕಾರಿಗೆ ಹೋದರು. ಅವರು ಬಹಳವಾಗಿ ಅಲ್ಲಾಡುವ ಒಂದು ಗಾಡಿಯಲ್ಲಿ ಕೂತು ಹಾಳು ಮಾರ್ಗದಲ್ಲಿ ಶಿಕಾರಿ ಸ್ಥಳಕ್ಕೆ ಹೋಗುತ್ತಿರುವಾಗ ಸಾರ್ಜೆಂಟ್ ಕುಕ್ಸ್ ಎಂಬವನು ತನ್ನ ತೊಡೆಯ ಮಧ್ಯ ಇಟ್ಟಿದ್ದ ಕೋವಿಯು ಸಿಡಿದು ಹೊಟ್ಟೆಗೆ ನಾಟಿಕೊಂಡದ್ದರಿಂದ ಕೂಡ್ಲೇ ಮೃತಪಟ್ಟನು.

ಎಲ್ಲೂರಿನಲ್ಲಿ ಮಹಮ್ಮದೀ ಹುಡಿಗಿಯರಿಗಾಗಿ ಸರಕಾರ ಶಾಲೆಯನ್ನು ಸ್ಥಾಪಿಸುವರೆ ವಿದ್ಯಾಖಾತೆಯ ಡಿರೆಕ್ಟರರವರು ಅಪ್ಪಣೆಕೊಟ್ಟಿರುವರು. ಈ ಶಾಲಾ ಖರ್ಜಿಗಾಗಿ ವರ್ಷ ಒಂದಕ್ಕೆ ೧,೫೫೮ ರೂಪಾಯಿ ಬೇಕಾಗುವುದು.

ದಕ್ಷಿಣ ಕನ್ನಡ.

ಮಂಗಳೂರು. ಮುನ್ಸಿಪಲ್ ಕೌನ್ಸಿಲಿನ ಚೇಯರ್ ಮೇನ್ ಪದವಿಗೆ ಮ| ರಾ| ರಾ| ಅಮ್ಮೆಂಬಳ ವಾಸುದೇವ ಪೈಗಳವರೂ ಈಗ ವ್ಯಾಸ್ ಚೇಯರ್ ಮೇನರಾಗಿರುವ ಮೆ| ಡಾಕ್ಟರ್ ಎಲ್. ಪಿ. ಪೆರ್ನಾಂದೀಸರೂ ಉಮೇದ್ವಾರರಾಗಿರುವರೆಂದು ತಿಳಿಯುತ್ತೇವೆ.

ಹಿಂದೂ ಟ್ರಾನ್ಸಿಟ್ ಕಂಪೆನಿಯ ಮಾಲೀಕರಾದ ಮ| ರಾ| ಬೆಳ್ಳೆ ಸುಬ್ಬಯ್ಯ ಶೆಟ್ರರವರು ಮ| ರಾ| ಸಬ್ ಮೇಜಿಸ್ಟ್ರೇಟ ಪಿ. ಎನ್. ಕೃಷ್ಣರಾಯರ ಮೇಲೆ ಸೆಂಕ್ಷನ್ ಕೇಳಿ ಮಾಡಿದ ಅರ್ಜಿಯು ತೆಗೆದುಹಾಕಲ್ಪಟ್ಟಿತು.

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತೆ ಮೊಕ್ತೇಸರ್ ರಾ| ಗೋಪಾಲ ಕುಡ್ವರ ಮೇಲೆ ರಾ| ಬಂಗ್ಲೆ ನಾರಾಯಣ ಕಮ್ತಿಯವರು ನಡಿಸಿದ ವಿಶ್ವಾಸ ಘಾತುಕ ಫಿರ್ಯಾದಿಯನ್ನು ಡಿವಿಜನಲ್ ಮೆಜಿಸ್ಟ್ರೇಟರು ತೆಗೆದುಹಾಕಿದತೀರ್ಮಾನದ ಮೇಲೆ ರಿವಿಜನಲ್ ತನಖಿಯು ಬರುವ ಸೋಮವಾರ ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ನಡಿಯುವುದು.

ರಾ. ಗೋಪಾಳ ಕುಡ್ವರು ತನ್ನ ಮೇಲೆ ಸುಳ್ಳುಫಿರ್ಯಾದು ನಡಿಸಿದರೆಂದು ರಾ. ಬಂಗ್ಲೆಕಾರ್ ಮತ್ತು ಈ ಫಿರ್ಯಾದಿಯಲ್ಲಿ ಸಾಕ್ಷಿ ಹೇಳಿದ ರಾ. ಉದ್ಯಾವರ ವಿಟ್ಟಳ ಶ್ಯಾನುಭಾಗ ರಾ. ಮುಲ್ಕಿ ಮೇಗಿನ ಪೇಟೆ ವೈಕುಂಟ ಕಮ್ತಿ ಈ ಮೂರು ಜನರ ಮೇಲೆ ಸೆಂಕ್ಷನ್ ಕೇಳಿ ಡಿವಿಜನಲ್ ಆಫೀಸರರಲ್ಲಿ ಅರ್ಜಿ ದಾಖಲು ಮಾಡಿರುವರು.

ಈ ತಿಂಗಳ ತಾ. ೨೮ರಲ್ಲಿ ಕೂಡಿದ ಇಲ್ಲಿಯ ನಿರಾಶ್ರಿತ ಜನಸಹಾಯಕ ಸಂಘದ ಕಮಿಟಿ ಮೀಟಿಂಗಿನಲ್ಲಿ ಇಲ್ಲಿಯ ಈ ಸಂಘವನ್ನು ೧೮೬೦ನೇ ಇಸವಿಯ ೨೧ನೇ ಆಕ್ಟು ಮೇರೆಗೆ ರಿಜಿಸ್ತ್ರಿಮಾಡುವುದು ಉಚಿತವೋ ಎಂಬೀ ವಿಷಯವು ಚರ್ಚಿಸಲಾಯಿತು. ಕಾನೂನಿಗೆ ಸರಿಯಾದ ಅಭಿಪ್ರಾಯವನ್ನು ಈ ವಿಷಯದಲ್ಲಿ ತಿಳಿಸುವರೆ ಮ| ರಾ| ಅಮ್ಮೆಂಬಳ ಶ್ರೀನಿವಾಸ ಪೈ, ಮ| ರಾ| ಗಂಗೊಳ್ಳಿ ಕಣ್ಣರಾವ್ ಮತ್ತು ಮ| ರಾ| ಮಂಗಳೂರು ಮಾಧವರಾವ್ ಇವರನ್ನು ಕಮಿಟಿಯವರು ವಿಜ್ಞಾಪಿಸಿಕೊಂಡಿರುವರು. ಮ| ರಾ| ಹುಂಡಿ ವಾಮನರಾವ್ ವಕೀಲ ಮತ್ತು ಮಂಗಳೂರು ಮಾಧವರಾವ್ ವಕೀಲ ಇವರನ್ನು ಸಂಘದ ಲೆಕ್ಕ ಪರಿಶೋಧಕರಾಗಿ ನೇಮಿಸಿರುತ್ತಾರೆ. ಜಿಲ್ಲೆಯ ಆಯಾ ಪ್ರಾಂತ್ಯಗಳಲ್ಲಿ ಈ ಸಂಘದ ಶಾಖೆಗಳನ್ನು ಸ್ಥಾಪಿಸಬೇಕೆಂದೂ ಈ ಬಗ್ಯೆ ಬೇಕಾದ ಸಹಾಯವನ್ನು ತಿಂಗಳು ಕಟ್ಲೆ ಅಥವಾ ವರುಷಾವಧಿ ಚಂದಾ ಮೂಲಕ ಜಿಲ್ಲೆಯ ಮಹಾನುಭಾವರಿಂದ ಕೇಳಿಕೊಳ್ಳಬೇಕೆಂತಲೂ ನಿರ್ಣಯಿಸಿರುವರು. ಎಲ್ಲಾ ಜಾತಿ ಮತಸ್ಥರ ಸಹಾನುಭೂತಿಯು ಈ ಸಂಘದವರು ಕೈಕೊಂಡ ನಿರಾಶ್ರಿತ ಜನೋದ್ಧರಣೆಯಲ್ಲಿರುವುದಲ್ಲದೆ ಆಯಾ ಜಾತಿಯ ಪ್ರತಿನಿಧಿಗಳು ಈ ಸಂಘದ ಕಮ್ಮಿಟಿ ಮೆಂಬರರಾಗ ಸೇರಿಕೊಂಡು ಬೇಕಾದ ಸಹಕಾರವನ್ನೀಯುತ್ತಿರುವರು. ಸಂಘ ಶಾಖೆಗಳನ್ನು ಈ ಜಿಲ್ಲೆಯ ಆಯಾ ಪ್ರಾಂತ್ಯಗಳಲ್ಲಿ ಸ್ಥಾಪಿಸುವರೆ ಜಿಲ್ಲಾ ಜನರು ತಕ್ಕ ಸಹಾಯವನ್ನು ಮಾಡುವರೆಂಬುದಾಗಿ ನಂಬಿರುವೆವು.

ಸೆಂಟ್ರೆಲ್ ವಾರ್ಡಿನ ಮುನ್ಸಿಪಲ್ ಕೌನ್ಸಿಲ್ಲರ ಚುನಾವಣೆಯು ಒಕ್ಟೋಬರ ತಿಂಗಳ ೨ನೇ ತಾರೀಕಿಗೆ ನಡಿಯುವುದು. ಇದಕ್ಕೆ ಮೆ| ಮಾರ್ಟಿನ್ ಪಾಯಿಸ್. ರಾ| ನಗರ ಗಣಪತಿ ರಾವ್, ರಾ| ಹುಂಡಿ ಪುರುಷೋತ್ತಮ ಕಮತರವರು ಉಮೇದ್ವಾರರಾಗಿ ನಿಂತಿರುವರು.

ತಾ. ೨೧ನೇ ಶನಿವಾರ ಇಲ್ಲಿಯ ಮುನಿಸಿಪಾಲ್ ಸೆಕ್ರಟರಿಯ ಚುನಾವಣೆಯು ನಡೆದು ಮೆ| ಸಿಕೇರರವರು ಮುನಿಸಿಪಾಲ್ ಸೆಕ್ರಟರಿಯಾಗಿ ಆರಿಸಲ್ಪಟ್ಟರು.

ಕಳದ ಸಂಚಿಕೆಯಲ್ಲಿ ತಿಳಿಸಿದಂತೆ ತಾ. ೨೧ರಲ್ಲು ಇಲ್ಲಿಯ 'ಗವರ್ನಮೆಂಟ್ ಕಾಲೇಜು ಡೆ' ಬಹಳ ವಿಜೃಂಭಣೆಯಿಂದ ಜರುಗಿತು. ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಾಗಿದ್ದು ಈಗ ಸೇಲಮಿನಲ್ಲಿರುವ ಹಾರ್ಡಿಂಜ್ ದೊರೆಗಳವರು ಸಭಾಧ್ಯಕ್ಷರಾಗಿದ್ದರು. ಅಂದೇ ಮೆ| ಹಾರ್ಡಿಂಜ್ ದೊರೆಗಳವರು ಸೇಲಮಿನಿಂದ ತಂದಿದ್ದ ಕ್ರಿಕೆಟ್ ಕ್ಲಬ್ಬಿನವರಿಗೂ ಇಲ್ಲಿಯ ಎಮ್. ಸಿ. ಸಿ. ಕ್ಲಬ್ಬಿನವರಿಗೂ ಕ್ರಿಕೆಟ್ ಪಂದ್ಯಾಟವು ನಡೆಯಿತು. ಈ ಆಟದಲ್ಲಿ ಸೇಲಮಿನವರು ಗೆದ್ದರು. ಮರುದಿನ ಹಿಂದು ಕ್ರಿಕೆಟ್ ಕ್ಲಬ್ಬಿನವರಿಗೂ ಸೇಲಂ ಕ್ರಿಕೆಟ್ ಕ್ಲಬ್ಬಿನವರಿಗೂ ಪಂದ್ಯಾಟವು ಜರಗಿತು. ಆದರೆ ಮಳೆ ಬಂದದರಿಂದ ಆಟವು ನಿಲ್ಲಿಸಲ್ಪಟ್ಟಿತು.

ಭಾರತ ಜೀವ ವಿಮೇ ಸಂಘದವರು ಹಿಂದೂಸ್ಥಾನದ ಜೀವ ವಿಮಾ ಸಂಘಗಳ ಆಕ್ಟಿಗನುಸಾರವಾಗಿ ೨ಲಕ್ಷ ರೂಪಾಯಿಯನ್ನು ಸರಕಾರ ರೇವಣಾತಿಯಲ್ಲಿ ಇಟ್ಟಿರುವರು ಎಂದು ಸದರಿ ಸಂಘದ ಮದ್ರಾಸ್ ಸಂಸ್ಥಾನದ ಏಜಂಟರಾದ ಮೆಸ್ಸರ್ಸ್ ಬಿ. ಬಾಬುರಾವ್ ಎಂಡ್ ಸನ್ಸರವರು ತಿಳಿಸಿರುವರು.

ಕಳದ ವಾರ ಮಂಗಳೂರಲ್ಲಿ ೮ ಪ್ಲೇಗು ಮರಣಗಳಿದ್ದವು. ಪ್ಲೇಗು ರೋಗವು ಇಲ್ಲಿ ಹೆಚ್ಚುತ್ತಾ ಬರುವ ಸಂಭವವು ತೋರುತ್ತಿರುವುದು.

ನಯನಶಾಸ್ತ್ರ ಪಂಡಿತರಾದ ಡಾಕ್ಟರ್ ಎ. ರಾಮ ಕಾಮತರವರು ಇನ್ನೂ ಒಂದೆರಡು ವಾರಗಳ ತನಕ ಇಲ್ಲಿರುವರೆಂದು ತಿಳಿಯುತ್ತೇವೆ.

ದಕ್ಷಿಣ ಕನಡಾ ಜಿಲ್ಲೆಯಲ್ಲಿ ಸರಾಸರಿ ಮೇಲೆ ಒಂದು ಚಚೌಕ ಮೈಲಿಗೆ ೨೦೦ರಿಂದ ೩೦೦ರ ವರೆಗೆ ಜನ ಸಂಖ್ಯೆ ಇರುವುದು. ಮಲೆಬಾರ ಜಿಲ್ಲೆಯಲ್ಲಿ ೫೦೦ರಿಂದ ೬೫೦ರ ವರೇಗೆ ಇರುವುದು.

೧೮೦೧ನೆ ಇಸವಿಯ ಖಾನೇಶುಮಾರಿ ಆದಂದಿನಿಂದ ೧೯೧೧ನೆ ಇಸವಿಯ ಖಾನೇಶುಮಾರಿ ಆಗುವವರೇಗೆ. ಸರಾಸರಿ ಮೇಲೆ ಪ್ರತಿ ಚಚೌಕ ಮೈಲಿಗೆ ದಕ್ಷಿಣ ಕನಡಾ ಜಿಲ್ಲೆಯಲ್ಲಿ ೧೦ರಿಂದ ೨೦ರ ವರೆಗೂ ಮಲೆಬಾರಿನಲ್ಲಿ ೩೫ರಿಂದ ೫೦ರ ವರೆಗೂ ಜನಸಂಖ್ಯೆ ಏರಿಯದೆ. ದಕ್ಷಿಣ ಆರ್ಕಾಡು ಜಿಲ್ಲೆಯಲ್ಲಿ ಒಂದು ಮೈಲಿಗೆ ೬೦ಕ್ಕಿಂತಲೂ ಹೆಚ್ಚು ಜನಸಂಖ್ಯೆ ಏರಿಯದೆ.

ಜಪ್ಪು ಮಿಶನ್ ಕಾರ್ಖಾನೆಯ ಮೆನೇಜರರಾಗಿರುವ ಗ್ಲಾತ್‌ಫೀಲ್ಡರ್ ದೊರೆಗಳವರು ಸ್ವದೇಶಕ್ಕೆ ತೆರಳುವರೆಂದು ತಿಳಿಸಿತ್ತಷ್ಟೆ. ಈ ಸಂಬಂಧ ಅವರಿಗೆ ಸ್ವಸ್ತಿವಚನವನ್ನು ನುಡಿಯುವುದಕ್ಕಾಗಿ ತಾ, ೨೨ನೇ ಆದಿತ್ಯವಾರ ಜಪ್ಪು ಕಾಂತಿ ದೇವಾಲಯದಲ್ಲಿ ಕಾರ್ಖಾನೆಯ ಕ್ರೈಸ್ತ, ಅಕ್ರೈಸ್ತರೂ, ಸಭಿಕರೂ ಕೂಡಿಬಂದರು. ಗ್ಲಾತ್‌ಫೀಲ್ಡರ್ ದೊರೆಗಳವರು ಸಾನಿಯೊಂದಿಗೆ ನಿಯಮಿತ ಸಮಯಕ್ಕೆ ದೇವಾಲಯದ ಸಮೀಪ ಬರುತ್ತಲೇ ಜಪ್ಪು ಕ್ರೈಸ್ತ ಬೇಂಡ್ ವಾದ್ಯದವರು ಅವರನ್ನು ಸ್ವಾಗತಮಾಡಿಕೊಂಡರು. ಸನ್ಮಾನ ಪತ್ರಿಕೆಗಳನ್ನು ಕೊಡಲಿಕ್ಕಿದವರು ಪುಷ್ಪಮಾಲೆಗಳನ್ನು ಹಾಕಿದರು. ಅನಂತರ ಸಭಾಪಾಲಕರಾದ ಡಬ್ಲ್ಯು, ಮಿಕ್ಕೆರವರು ಅವರನ್ನು ಸ್ವಾಗತಮಾಡಿಕೊಂಡು ದೇವಾಲಯದೊಳಗೆ ಕರಕೊಂಡು ಹೋಗಿ ಆಸನದಲ್ಲಿ ಕೂಂಡ್ರಿಸಿ ದೇವತಾ ಪ್ರಾರ್ಥನೆಯೊಂದಿಗೆ ದೊರೆಗಳವರ ಉದಾರ ಗುಣಗಣಗಳನ್ನು ಶ್ಲಾಘಿಸಿ ಭಾಷಣಮಾಡಿದರು. ಬಳಿಕ ಹಂಚಿನ ಕಾರ್ಖಾನೆಯ ಹೆಡ್ ಕ್ಲಾರ್ಕರಾದ ಮೆ| ಇ. ಶಿರಿಯವರು ಕಾರ್ಖಾನೆಯ ಕ್ರೈಸ್ತ ಮತ್ತ ಅಕ್ರೈಸ್ತರ ಪರವಾಗಿ ಒಂದು ಬಹುಮಾನ ಪತ್ರವನ್ನು ಓದಿ ಇಬ್ಬರು ಬಾಲಕಿಯರ ಕೈಯಿಂದ ದೊರೆ ಮತ್ತು ಸಾನಿಯವರಿಗೆ ಇನಾಂ ಕೊಡಿಸಿದರು. ತರುವಾಯ ಕಾರ್ಖಾನೆಯಲ್ಲಿ ಮಣ್ಣಿನ ಕಂಟ್ರಾಕ್ಟರರಾಗಿರುವ ಒಬ್ಬ ಮಾಪಿಳ್ಳಾ ಗೃಹಸ್ತರು ದೊರೆಗಳವಂಗೆ ಉಡಿಗೆರೆ ಮಾಡಿದರು. ಕಡೆಗೆ ಜಪ್ಪಿನ ಸಭೆಯವರ ಪರವಾಗಿ ಸಭಾ ಹಿರಿಯರಾದ ಮೆ| ಲುಥರ್ ಮಾಬೆನ್ನರು ಸನ್ಮಾನ ಪತ್ರದೊಂದಿಗೆ ಉಡಿಗೆರೆಯನ್ನು ದೊರೆಗಳಿಗೆ ಕೈವರ್ತಿಸಿದರು. ಈ ಸಮಾರಂಭದಲ್ಲಿ ಸಭಾ ಮಕ್ಕಳು ದೊರೆಗಳವರ ಸ್ವಭಾವನುಡಿನಡೆಗಳನ್ನು ಅಭಿನಯಗೀತದಿಂದ ಹಾಡಿ ತೋರಿಸಿದ್ದು ಕೂಡಿದ ಸಭಿಕರನ್ನು ಅತ್ಯಾನಂದಗೊಳಿಸುವುದಾಯಿತು. ದೊರೆಗಳವರು ಪತ್ನಿ ಸಮೇತ ತಾ. ೨೫ನೇ ಬುಧವಾರ ರೈಲ್ವೇ ಗಾಡಿಯಲ್ಲಿ ಕೂತು ಮುಂಬಾಯಿಗೆ ತೆರಳಿದರು. ಕಾರ್ಖಾನೆಯವರು ದೊರೆಗಳೊಂದಿಗೆ ರೈಲ್ವೇ ಸ್ಟೇಶನಿಗೂ ಹೋಗಿ ಕಂಬನಿ ಸುರಿಸಿದರು ಎಂಬದಾಗಿ ನಮ್ಮ ಒಬ್ಬ ಬಾತ್ಮಿದಾರರು ತಿಳಿಸಿರುವರು.

ಮೊಗೇರರ ಶ್ರೀ ಧರ್ಮೋದಯ ಸಂಘದ ಕಾಯಂ ಸದಸ್ಯರಾಗಲು ಇಚ್ಛಿಸಿ ದ್ರವ್ಯ ಸಹಾಯಮಾಡಲು ಒಪ್ಪಿಕೊಂಡ ದಾತರ ಪೈಕಿ ತಮ್ಮ ವಾಗ್ದಾನದ ಮೇರೆಗೆ ದ್ರವ್ಯ ಸಹಾಯ ವಸೂಲು ಕ್ಕೊಟ್ಟವರ ವಿವರವು—ರಾ' ದಫೇದಾರ ಮೋಹನಪ್ಪ ಸಾಲ್ಯಾನರಿಂದ ಬೋಳಾರ ರೂ ೧೦. ಬೇಂಕಿನ ಕೆ, ಗುರುವಪ್ಪ ಪುತ್ರಣ್ಣಾಯರಿಂದ ಕುದ್ರೋಳಿ ರೂ ೫೦. ಕೆ. ಗುರುವಪ್ಪ ಕರ್ಕಡರಿಂದ ಕುದ್ರೋಳಿ ರೂ ೨೫. ಜಿ. ಕೊರಗಪ್ಪ ಸಾಲ್ಯಾನರಿಂದ ಬೊಕ್ಕಪಟ್ಣ ೨೫ ರೂಪಾಯಿಗಳ ಪೈಕಿ ರೂ. ೧೦. ಬಿ. ಕೊರಗಪ್ಪ ಪುತ್ರಣ್ಣಾಯರಿಂದ ಬೊಕ್ಕಪಟ್ಣ ರೂ. ೨೫. ಬಿ. ನಾಗಪ್ಪ ಸುವರ್ಣರಿಂದ (ಮೋಹನಪ್ಪ ದಫೇದಾರರ ಮಗ) ರೂ೧೦. ಯು. ನಾಗಪ್ಪ ಉಪ್ಪೂರು ರೂ ೧೦. ಬಿ. ಬಸಪ್ಪ ಕೋಟ್ಯಾನರಿಂದ ಬೊಕ್ಕಪಟ್ಣ ರೂ ೫. ಮುದುರ ಸುವರ್ಣರ ಅಳಿಯ ಜಾರಪ್ಪ ಸುವರ್ಣರಿಂದ ಕುದ್ರೋಳಿ ರೂ ೧೦. ಬೈಸಿಕಲ್ ಗುರುವಪ್ಪನವರಿಂದ ಬೊಕ್ಕಪಟ್ಣ ರೂ ೫.

ಜುಮುಲಾ. ರೂ. ೧೬೦—೦—೦

ಒಬ್ಬ ಬಾತ್ಮೀದಾರರಿಂದ. ನಿನ್ನೆಯ ದಿನ ಬಾಸೆಲ್ ಮಿಶ್ಯನ್ ಸಭೆಯ ೭೪ನೇ ವಾರ್ಷಿಕೋತ್ಸವವು ಇಲ್ಲಿಯ ಬಲ್ಮಠ ಶಾಂತಿ ದೇವಾಲಯದಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು. ಈ ಸಂದರ್ಭದಲ್ಲಿ ಜಿಲ್ಲೆಯ ಆಯಾ ಕಡೆಗಳಿಂದ ಕ್ರೈಸ್ತ ಸಭಿಕರೂ ವೈದೀಕರೂ ಕೂಡಿ ಬಂದಿದ್ದರು. ಬೆಳಿಗ್ಗೆ ದೇವಾಲಯದಲ್ಲಿ ವಿಶೇಷ ಪ್ರಾರ್ಥನಾ ಕೂಟವು ನಡೆಯಿತು. ನಾಲ್ಕು ಮಂದಿ ವೈದೀಕರು ಈ ಪ್ರಾರ್ಥನಾ ಕೂಟವನ್ನು ಜರುಗಿಸಿದರು. ಮದ್ಯಾಹ್ನದ ನಂತರ ದೇವಾಲಯ ತುಂಬಾ ಕಿಕ್ಕಿರಿದು ಕೂಡಿದ ಕ್ರೈಸ್ತ ಸಭಿಕರಿಗೆ ರೆವರೆಂಡ್ ಬೂನ್ಸ್ ದೊರೆಗಳವರು ಭಾಷಣ ಕೊಟ್ಟು ಪರಮಾತ್ಮನು ಪರಿಶುದ್ಧನು, ಕಾರ್ಣಿಕ ಪುರುಷನು, ಬಲವುಳ್ಳವನು ಎಂಬದನ್ನು ಸಭಿಕರೊಳಗೆ ಖಚಿತ ಪಡಿಸಿದರು. ಅನಂತರ ಮೆ. ಡಬ್ಲ್ಯು. ಪೆರ್ನಾಂದಿಸರು ಕುಂದಾಪುರ ತಾಲೂಕಿನಲ್ಲಿ ಮಿಶ್ಯನ್ ಕೆಲಸವು ಹ್ಯಾಗೆ ನಡೆಯುತ್ತದೆಂಬದನ್ನು ದೃಷ್ಟಾಂತಪೂರ್ವಕವಾಗಿ ವಿವರಿಸಿದರು. ಮೂರನೇದಾಗಿ ಮೆ. ಜಿ. ವೇದಮುತ್ತರವರು

ಕ್ರೈಸ್ತರು ಪರಾತ್ಪರನಾದ ದೇವರ ಬಲವನ್ನು ಸ್ವೀಕರಿಸಿ ಆತನ ಮಹಿಮೆಗಾಗಿ ತಮ್ಮ ಜೀವಮಾನವನ್ನು ಕಳೆಯುವರಾಗಿರಬೇಕೆಂದು ಸಭಿಕರನ್ನು ಪ್ರಬೋಧಿಸಿದರು. ಬಳಿಕ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುವ ರೆವೆರೆಂಡ್ ಇ. ಪುರ್ತಾದರವರು ಮಳೆಯ ಉಪಮೆಯನ್ನು ತೆಗೆದು ತಾವು ಬಿತ್ತಿದ ದೇವರ ವಾಕ್ಯವು ಎಂದಿಗೂ ನಿಷ್ಪ್ರಯೋಜನವಾಗಿ ಹೋಗಲಿಕ್ಕಿಲ್ಲವೆಂಬದನ್ನು ದೃಷ್ಟಾಂತ ಮೂಲಕ ವಿವರಿಸಿ ಸಭಿಕರನ್ನು ಪ್ರೋತ್ಸಾಹಗೊಳಿಸಿದನಂತರ ರೆವರೆಂಡ್ ಇ. ಸೋನ್ಸರವರು ಕಾಸರಗೋಡು ತಾಲೂಕಿನಲ್ಲಿ ೧೦ ವೈದೀಕರಿಂದಲೂ ೧೦ ಮಿಶ್ಯನ್ ಶಾಲೆಗಳಿಂದಲೂ ಮಿಶ್ಯನ್ ಕೆಲಸವು ಹೇಗೆ ಪ್ರಸಾರವಾಗುತ್ತದೆಂಬದನ್ನು ವಿವರಿಸಿ ಹೇಳಿದರು.

ಕಡೆಗೆ ರೆವೆರೆಂಡ್ ಗ್ರೋಸ್‌ಮಾನ್ ದೊರೆಗಳವರು ಕ್ರೈಸ್ತರು ಪ್ರಯೋಜನಕಾರಿಗಳಾಗಿ ಬದುಕಿ, ಜೀವದ ನೀರಿನ ಬುಗ್ಗೆಗಳನ್ನು ಕೊಂಡೊಯ್ಯುವ ನಳಿಗೆಗಳಾಗಿ ಪರಿವರ್ತನಾ ಹೊಂದಬೇಕೆಂಬ ಸರಸವಾದ ಭಾಷಣವನ್ನು ಕೊಟ್ಟು ಪ್ರಾರ್ಥನೆಯೊಂದಿಗೆ ಸಭೆಯನ್ನು ಮುಕ್ತಾಯ ಪಡಿಸಿದರು. ಈ ಮಧ್ಯೆ ಸಂಗೀತ ಮಂಡಲಿಯವರು ಹಾಡಿದ ಗಾಯನಗಳು ಸಭಿಕರನ್ನು ಉತ್ಸಾಹ ಪಡಿಸುವುದಾಯಿತು. ಈ ಉತ್ಸವವನ್ನು ನಡಿಸಲಿಕ್ಕೆ ಬಂದ ನಮ್ಮ ಹೊಸ ಸೀನಿಯರ್ ಮಿಶ್ಯನರಿ ದೊರೆಗಳವರು ಮಾತ್ರ ಕಾರ್ಯಭಾರದಿಂದಲೋ ಯಾ ದೇಹಾಲಸ್ಯದಿಂದಲೋ ಈ ಉತ್ಸವಕ್ಕೆ ಹಾಜರಾಗದೆ ಯಾ ಭಾಷಣಕೊಡದೆ ಹೋದ್ದರಿಂದ ಸಂತೋಷದ ಮಧ್ಯೆ ತುಸ ದುಃಖಾಸ್ಪದಕ್ಕೆ ಕಾರಣವಾದರೂ ಆದಿತ್ಯವಾರ ನಡೆಯುವ ಸ್ವದೇಶಿ ಮಿಶ್ಯನ್ ತೃತೀಯ ವಾರ್ಷಿಕೋತ್ಸವಕ್ಕಾದರೂ ಹಾಜರಾಗಿ ಸಭಿಕರಿಗೆ ಕಾಲೋಚಿತ ಬುದ್ಧಿವಾದವನ್ನು ಕೊಡುವರೆಂಬದಾಗಿ ಹಾರೈಸುವೆವು. ಹಬ್ಬದ ದಿನ ಸಭಿಕರಿಂದ ಸುಮಾರು ೧೦೦ ರೂಪಾಯಿ ಕಾಣಿಕೆ ಕೂಡಿರುವುದು.

ತಾ. ೨೬ನೇ ಬ್ರಹಸ್ಪತಿವಾರ ಸಾಯಂಕಾಲ ಬಲ್ಮಠದಲ್ಲಿ ಕ್ರೈಸ್ತ ಕುಟುಂಬ ಸಹಾಯಕ ಫಂಡಿನ ೨೫ನೇ ವಾರ್ಷಿಕೋತ್ಸವು ನಡೆಯಿತು. ಈ ಸಭೆಗೆ ಆಯಾ ಸ್ಥಳಗಳಿಂದ ಬಂದ ವೈದೀಕರೂ ಇತರ ಗೃಹಸ್ಥರೂ ಆಮಂತ್ರಿಸಲ್ಪಟ್ಟಿದ್ದರು. ಸಭೆಯಲ್ಲಿ ಡಾಕ್ಟರ್ ವಿ. ವರ್ಗೀಸರವರು ಸಭಾಧ್ಯಕ್ಷರಾಗಿದ್ದು ಇಂಥಾ ಸಹಾಯ ಸಂಘವು ಕ್ರೈಸ್ತ ಕುಟುಂಬಗಳಿಗೆ ಎಷ್ಟು ಅವಶ್ಯವಾದದ್ದು ಎಂಬದನ್ನು ಶ್ರುತಪಡಿಸಿದನಂತರ ರೆವರೆಂಡ್ ಪಿ. ಪುರ್ತಾದರವರೂ, ಮೆ| ಅರ್ನೋನರವರೂ ಅಧ್ಯಕ್ಷರ ಮಾತುಗಳನ್ನು ಅನುಮೋದಿಸಿ ಮಾತನ್ನಾಡಿದರಲ್ಲದೆ ಮೆ| ಸಿ. ಮಾಬೆನ್ನರು ಕ್ರೈಸ್ತ ಸಭಿಕರಲ್ಲಿ ಹಣ ಉಳಿಸುವ ಸ್ವಭಾವವನ್ನುಂಟುಮಾಡುವಹಾಗೆ ಮತ್ತು ಬಡವರಿಗಾದರೂ ಪ್ರಯೋಜನವುಂಟಾಗುವಹಾಗೆ ನಾಲ್ಕಾಣೆಯ ಒಂದು ವಿಮೇ ಫಂಡನ್ನು ಸಾಪಿಸುವುದು ಉಚಿತವೆಂತಲೂ ವಿದ್ಯಾರ್ಥಿ ವೇತನ ಫಂಡನ್ನು ಸ್ಥಾಪಿಸಿ ಸಭೆಯನ್ನು ಏಳಿಗೆಗೆ ತರುವ ಪ್ರಯತ್ನ ಮಾಡಬೇಕೆಂತಲೂ ಸೂಚನೆ ಕೊಟ್ಟರು. ಇದೂ ಸಭಿಕರಿಂದ ಅನುಮೋದಿಸಲಾಯಿತು. ಈ ಕ್ರೈಸ್ತ ಕುಟುಂಬ ಸಹಾಯಕ ಫಂಡಿನಿಂದ ಕಳದ ೨೫ ವರ್ಷಗಳಲ್ಲಿ ೧೧,೦೦೦ ಚಿಲ್ಲರೆ ರೂಪಾಯಿಗಳು ಸಹಾಯವಾಗಿ ಕೊಡಲ್ಪಟ್ಟವೆಂತಲೂ ಈಗ ೩೦೦೦ ರೂಪಾಯಿ ಮೂಲಧನವೂ ೧೧೨ ಮೆಂಬರರಿರುವರೆಂತಲೂ ತಿಳಿಯುತ್ತೇವೆ.

* * *

ಉಡ್ಪಿ:—ಇಲ್ಲಿಯ ಟಪ್ಪಾಲ್ ಆಫೀಸಿನ ಕ್ಲಾರ್ಕರಾಗಿರುವ ಪಾಂಡುರಂಗ ಭಟ್ಟರು ಇಂಡಿಯನ್ ಪೆನಲ್ ಕೋಡಿನ ೪೬೭ ಮತ್ತು ೪೬೮ ಪ್ರಕರಣದ ಪ್ರಕಾರ ಶೇಷಗಿರಿ ಶಾನುಭೋಗ, ರಾಮಕೃಷ್ಣ, ಮಾಧವರಾವ್ ಮತ್ತು ಕಿಟ್ಟಿ ಎಂಬವರ ಮೇಲೆ ದಾಕಲು ಮಾಡಿದ ಮೊಕದಮೆಯನ್ನು ಪುತ್ತೂರು ಡಿವಿಜನಲ್ ಆಫೀಸರರು ತನಖಿಮಾಡಬೇಕೆಂದು ಡಿಸ್ಟ್ರಿಕ್ಟ್ ಕಲೆಕ್ಟರವರಿಂದ ಹುಕುಂ ಆಗಿರುವುದು. ಈ ಮೊಕದಮೆಯು ಇಲ್ಲಿಂದ ಪುತ್ತೂರು ಡಿವಿಜನಲ್ ಆಫೀಸರರಿಗೆ ತನಖಿ ಬಗ್ಯೆ ಹೋದ ಕಾರಣವು ಏನೆಂಬದನ್ನು ತಿಳಿಯುವುದು ಕಷ್ಟಸಾಧ್ಯ.

ರಾ| ಬಿ. ಸುಬ್ಬಯ ಸೆಟ್ಟರು ಇಲ್ಲಿಯ ಪೋಲೀಸ್ ಇನ್ಸ್‌ಪೆಕ್ಟರರಾದ ಟಿ. ರಾಮರಾಯರನ್ನು ಕುರಿತು ಪೋಲೀಸ್ ಸುಪರಿಂಟೆಂಡೆಂಟರವರಿಗೆ ಮಾಡಿದ ಅರ್ಜಿಯು ತಳ್ಳಿ ಹಾಕಲ್ಪಟ್ಟಿರುವುದು.

ಲನೇ ಸರ್ಕಲಿನ ಶಾಲೆಗಳ ಇನ್ಸ್‌ಪೆಕ್ಟರರಾದ ರೆನ್ಸ್‌ಫೊರ್ಡು ದೊರೆಗಳವರು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿಯ ಇತಿಹಾಸ ಪಂಡಿತವರ್ಯರಾದ ಮೆ| ಡಬ್ಲ್ಯು. ಗ್ರೀನರವರೊಂದಿಗೆ ಇಲ್ಲಿಗೆ ಚಿತ್ತೈಸಿ ತಾ. ೧೯-೨೦ರಲ್ಲು ಇಲ್ಲಿಯ ಬಿ. ಜಿ. ಎಂ. ಹೈಸ್ಕೂಲನ್ನು ಪರೀಕ್ಷಿಸಿದರು. ತಾ. ೨೧ರಲ್ಲು ಉಪಾಧ್ಯಾಯರ ಫೈನಲ್ ಪರೀಕ್ಷೆಯನ್ನು ಮಾಡಿದರು. ಅಂದೇ ಬಿ. ಜಿ. ಯಂ. ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಇನಾಂ ಹಂಚುವ ಸಮಾರಂಭವು ಬಹಳ ವಿಜೃಂಭಣೆಯಿಂದ ಜರುಗಿತು. ಈ ಸಮಾರಂಭಕ್ಕೆ ಇನ್ಸ್‌ಪೆಕ್ಟರ್ ದೊರೆಗಳವರು ಅಧ್ಯಕ್ಷರಾಗಿದ್ದು ಕಾಲೋಚಿತ ಭಾಷಣದೊಂದಿಗೆ ವಿದ್ಯಾರ್ಥಿಗಳಿಗೆ ಇನಾಂಗಳನ್ನು ಹಂಚಿದರು. ಅನಂತರ ಶಾಲಾ ವಿದ್ಯಾರ್ಥಿಗಳು "ಮರ್ಚೆಂಟ್ ಅಫ್ ವೇನಿಸ್" ಎಂಬ ನಾಟಕವನ್ನು ಬಹು ಅಂದವಾಗಿ ಆಡಿ ತೋರಿಸಿದರು. ಇನ್ಸ್‌ಪೆಕ್ಟರ್ ದೊರೆಗಳವರು ಇಲ್ಲಿಂದ ಕುಂದಾಪುರದತ್ತ ಕಡೆ ಸರ್ಕೀಟು ಬೆಳಸಿರುವರು.

—o—

ವಿವಿಧ ವಿಷಯಗಳು.

ಅಮೇರಿಕದ ಮಾಜಿ ಪ್ರೆಸಿಡೆಂಟರಾದ ರೊಸ್‌ವೆಲ್ಟರವರೂ ಈಗಿನ ಪ್ರೆಸಿಡೆಂಟರಾದ ಟಾಪ್ಟರವರೂ ಪರಮಮಿತ್ರರಿದ್ದು ರೊಸ್‌ವೆಲ್ಟರು ತಾನೇ ಟಾಪ್ಟರವರಿಗೆ ಅಧ್ಯಕ್ಷ ಸ್ಥಾನವನ್ನು ಕೊಡಿಸಿದ್ದರು. ಈಗ ಈ ಸಾರಿ ನಡೆದಿರುವ ಚುನಾವಣೆಯಲ್ಲಿ ಪುನಃ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕೆಂಬ ಅಭಿಲಾಷೆಯು ರೊಸ್‌ವೆಲ್ಟರವರಿಗೆ ಹುಟ್ಟಿ ಅದಕ್ಕಾಗಿ ಪ್ರಯತ್ನಮಾಡತೊಡಗಿದರು. ಇತ್ತಕಡೆ ಟಾಪ್ಟರವರು ಪುನಃ ತಾನೇ ಪ್ರೆಸಿಡೆಂಟನಾಗಿ ಆರಿಸಲ್ಪಡಬೇಕೆಂಬ ಇಚ್ಛೆಯಿಂದ ಉಮೇದ್ವಾರರಾಗಿ ನಿಂತ ತನ್ನ ಪರಮಮಿತ್ರನಾಗಿದ್ದ ರೊಸ್‌ವೆಲ್ಟರ ಮೇಲೆ ನಾನಾ ಆರೋಪನೆಗಳನ್ನು ಬಗೆದರು. ಜಗತ್ಪ್ರಸಿದ್ಧವಾದ ಸ್ಟೇಂಡಾರ್ಡ ಓೈಲ್ ಕಂಪೆನಿಯವರು ರೊಸ್‌ವೆಲ್ಟರವರ ಚುನಾವಣೆಗಾಗಿ ಎರಡು ಲಕ್ಷರೂಪಾಯಿ ವೆಚ್ಚಮಾಡಿದ್ದಾರೆಂದು ಟಾಪ್ಟರವರ ಪಕ್ಷದವರು ಸಾರಿ, ಈ ವೆಚ್ಚಮಾಡಿದ್ದು ನಿಜವೆಂಬದಕ್ಕೆ ಕಂಪೆನಿಯವರಿಂದ ಹೇಳಿಸಿರುವರು. ಟಾಪ್ಟರವರು ರೊಸ್‌ವೆಲ್ಟರ ಮೇಲಿನ ಈ ಅಪರಾಧವನ್ನು ವಿಚಾರಿಸುವದಕ್ಕಾಗಿ ಪ್ರತ್ಯೇಕ ಒಂದು ಕಮಿಷನ್ ನೇಮಿಸಿರುವರು. ಅಮೇರಿಕವು ಸುಧಾರಣೆಯಲ್ಲಿ ಉಚ್ಚಸ್ಥಾನವನ್ನು ಹೊಂದುತ್ತಾ ಬರುವಷ್ಟಕ್ಕೆ ಸ್ವಾರ್ಥದ ಶಿಖರಕ್ಕೂ ಮುಟ್ಟಿತು ಎಂಬದಾಗಿ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

* * *

ಲಂಡನ್ ನಗರದಲ್ಲಿ ಸಾವಿರಕ್ಕೆ ೩೫೦ರಂತೆ ಸ್ತ್ರೀಯರ ಸಂಖ್ಯೆಯು ಹೆಚ್ಚಿರುತ್ತದೆ. ೨೫ ವರ್ಷಗಳ ಕೆಳಗೆ ಯಾವದೊಂದು ಆಫೀಸಿನಲ್ಲಿ ಹೆಂಗಸು ಗುಮಾಸ್ತೆ ಕೆಲಸವನ್ನು ಮಾಡುವುದು ನೋಡ ಸಿಕ್ಕುವದು ಅಪರೂಪವಾಗಿತ್ತು. ಆದರೆ ಈಗ ಹೆಂಗಸರು ಇಲ್ಲದ ಒಂದು ಆಫೀಸೂ ಇಲ್ಲ. ಲಂಡನಿನ ಒಂದು ಟೆಲಫೂನು ಆಫೀಸಿನಲ್ಲಿಯೇ ೧೦,೦೦೦ ಹುಡುಗಿಯರು ಕೆಲಸಮಾಡುತ್ತಿದ್ದಾರೆ. ಈ ಸಂಖ್ಯೆಯಿಂದ ಆಫೀಸು ಎಷ್ಟು ದೊಡ್ಡದಿರಬಹುದೆಂದು ಊಹಿಸಬಹುದಾಗಿದೆ. ಹೀಗೆ ಪ್ರಾಯಪ್ರಬುದ್ಧರಾದ ಹೆಂಗಸರ ಸಂಖ್ಯೆಯು ಅಲ್ಲಿ ಹೆಚ್ಚಾಗಿ ಅವರನ್ನು ವಿವಾಹವಾಗತಕ್ಕ ವರನು ಸಿಕ್ಕುವುದು ಕಷ್ಟವಾಗಿರುವುದರಿಂದ ಸಮಾಜ ಸುಧಾರಕರಿಗೆ ಬಹಳ ಚಿಂತೆಯುಂಟಾಗಿದೆ.

* * *

ನೊರ್‌ಫೊಕ್ ಎಂಬಲ್ಲಿ ಸಿಕ್ಕಿದ ಆನೆ ಜಾತಿಯ ಒಂದು ಪ್ರಾಣಿಯ ದವಡೆಯು ೯ ಅಡಿ ಉದ್ದವಿತ್ತು. ಒಂದು ದವಡೆಯಿಂದ ಮತ್ತೊಂದು ದವಡೆಯ ತುದಿಗೆ ೧೨ ಅಡಿ ಅಂತರವಿತ್ತು.

* * *

ಬೆಲ್ಫನ್ ಹಾಮ್ ಕಾಲೇಜಿಯ ೧೭ ವರ್ಷ ವಯಸ್ಸಿನ ವಿದ್ಯಾರ್ಥಿಯೊಬ್ಬನು ಒಂದು ಹೊಸ ಬಾಲ ಚುಕ್ಕೆಯನ್ನು ಕಂಡು ಹಿಡಿದಿರುವನು.

* * *

ರಾಗಿಯ ಪೈರಿಗೆ ನೀರು ಕಟ್ಟಿದ ತರುಣದಲ್ಲಿಯೇ ದೊಡ್ಡ ಮಳೆಯಾದರೆ ಪೈರುಗಳು ಕೆಂಪಾಗಿ ಕರಟು ಬೀಳುವುವು. ಜಮೀನಿನಲ್ಲಿ ಅವಶ್ಯಕವಾದುದುಕ್ಕಿಂತಲೂ ಜಾಸ್ತಿ ಕಾಲ ಹೆಚ್ಚು ತೇವವು ನಿಲ್ಲುವುದೇ ಇದಕ್ಕೆ ಕಾರಣವೆಂದು ಹೇಳಬೇಕು. ಹೆಚ್ಚು ತೇವವು ನಿಲ್ಲುವುದರಿಂದ ಬೇರುಗಳು ಪೈರಿಗೆ ಆಹಾರವನ್ನು ಒದಗಿಸುವ ಶಕ್ತಿಯನ್ನು ಕಳೆದುಕೊಳ್ಳುವುವು. ಆದರೆ ರಾಗಿಯನ್ನು ಮಟ್ಟಸವಾದ ಮಡಿಗಳಲ್ಲಿ ಎರಚುವುದಕ್ಕೆ ಬದಲಾಗಿ ಜಮೀನಿನಲ್ಲಿ ಸಣ್ಣನಾದ ದಿಂಡು (ತೆವರಿ) ಗಳನ್ನು ಕಟ್ಟಿ ಅದರ ಎರಡು ಕಡೆಗಳಲ್ಲಿಯೂ ನೇಗಿಲಿನಿಂದ ಸಾಲುಮಾಡಿ ಅಲ್ಲಿ ರಾಗಿಯ ಪೈರನ್ನು ನೆಟ್ಟಿದ್ದೇ ಆದರೆ ನೀರು ಚನ್ನಾಗಿ ಹರಿದು ಗಿಡಗಳು ಆರೋಗ್ಯವಾಗಿರುವುವು. ಕಳೆದ ಐದು ಸಾಲುಗಳಲ್ಲಿಯೂ ಮದರಾಸು ವ್ಯವಸಾಯದ ಇಲಾಖೆಯವರು ಮೇಲ್ಕಂಡ ರೀತಿಯಲ್ಲಿ ತೆವರಿಗಳನ್ನು ಕಟ್ಟಿ ಅವುಗಳ ಪಕ್ಕಗಳಲ್ಲಿ ಪೈರನ್ನು ನೆಟ್ಟು ವ್ಯವಸಾಯಮಾಡಿ ನೋಡಿದ್ದರಲ್ಲಿ ಈ ಕ್ರಮವು ಮಡಿಗಳಲ್ಲಿ ರಾಗಿಯನ್ನು ಎರಚಿ ಬೆಳೆಮಾಡುವುದಕ್ಕಿಂತ ಹೆಚ್ಚು ಲಾಭಕರವೆಂದು ಕಂಡು ಬಂದಿರುತ್ತದೆ.

* * *

ಜೀನಸುಗಳ ಧಾರಣೆ, ಮಂಗಳೂರು. (ರಜಂ)

ಮಸ್ಕತಿ ಅಕ್ಕಿ ...	... 5—14—0—6—1—0
ಗುಡ್ಡು ಮಸ್ಕತಿ...	... 5—13—0-5—6—0
ಮಸ್ಕತಿ ದುಯಂ...	... 5-10-0—5—13—0
ಗಾಡಿ ಸುಗ್ಗಿ	... ... 5—6—0
ಉಂಚು ಸುಗ್ಗಿ ...	... 5—9—0—5-13—0
ಮಸ್ಕತಿ ಬೆಳ್ತಿಗೆ	... ... 6—9—0
ರಂಗೂನ್ ಬೆಳ್ತಿಗೆ ಗೋಣಿ 1ರ ...	... 11—0—0
ಹುರುಳಿ ಗೋಣಿ ೧, ಮುಡಿ 2ರ ...	... 6-12-0
ಉಪ್ಪು ಗೋಣಿ ೧ರ	... 3—14—0
ಖೊಬ್ರಿ ಖಂಡಿ ೧ರ	... 85—0-0-95—0—0
ಖೊಬ್ರಿ ಎಣ್ಣೆ ಮಣ ೧ರ	... 7—0—0
ಖೊಬ್ರಿ ಹಿಂಡಿ ಖಂಡಿ ೧ರ ...	... 32—8—0
ಊರು ಬೆಲ್ಲ ಖಂಡಿ ೧ರ ...	... 55—0—0
ಕಾಫಿ ಖಂಡಿ ೧ರ 270—0—0	275—0—0
ಕಾಳು ಮೆಣಸು ಖಂಡಿ	... 175—0—0
ಬಿಳಿ ಗೋಟು ಅಡಿಕೆ ಖಂಡಿ ೧ರ	... 75—8—0
ಪಚ್ಚೆಹೆಸರು ಗೋಣಿ ೧ರ ...	... 11—4—0
ಬೊಂಬಾಯಿ ಉದ್ದು ಗೋಣಿ ೧ರ ...	... 10-0—0
ಗೋದಿ ಗೋಣಿ ೧ಕ್ಕೆ	... 12—8—0
ಕಡಲೆ ಗೋಣಿ ೧ರ	... 7—12—0
ತೊಗರಿ ಗೋಣಿ ೧ರ	... 8—8—0
ತೊಗರಿಬೇಳೆ ಗೋಣಿ ೧ರ	11—0—0—13—0—0
ಮೋರಿಸ್ ಸಕ್ಕರೆ ಮಣ ೧ರ ...	...2—15—0
ಎಳ್ಳಿಂಡಿ	... 31-4—0

* * *

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾವಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. **ಪ್ರಮೇಹರಿಪು ಬಿಂದು.** ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. **ಕಾಮೇಶ್ವರ ಮಾತ್ರೆ.** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. **ಸೂರಣಾವ ಲೇಹ.** ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. **ಸರಳಭೇದಿ ಮಾತ್ರೆ.** ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. **ವಾಸಾವ ಲೇಹ.** ಕೆಮ್ಮು, ಗೂರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. **ವಾತಮುರಾರಿ ಬಾಮ್.** ತಲೆನೋವು, ಎದೆನೋವು, ಸೊಂಟೆನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ **ಸವ್ವೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವನನ್ನುಂಟುಮಾಡುವದು. ತೊಲೆಗೆ ೧ ರೂ.

೧೫. **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original
BABA BUDAN-GHIRY
COFFEE POWDER
PROPRIETORS
J. S. SOUZA & Co
MANGALORE

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಡೋಂಗರೆ ಇವರ ಬಾಲಾಮೃತ

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಸಂಪೂರ್ಣವಾಗಿ ಇಲ್ಲದಂತಾಗುತ್ತವೆ. ಸಣ್ಣ ಹುಡುಗರಿಗೆ ಅತ್ಯುತ್ತಮ ಗುಣಕಾರಿಯೆಂಬ ಹೆಸರು ಪಡದದ್ದು ಡೊಂಗರೆಯ ಬಾಲಾಮೃತವೇ. ತೆಗೆದುಕೊಳ್ಳುವಾಗ ಡೋಂಗರೆ ಎಂಬ ಹೆಸರುಳ್ಳದ್ದನ್ನೆ ಪಡಕೊಳ್ಳಿರಿ. ಯಾಕಂದರೆ ಈಗ ಹಲವು ಜನರು ಠಕಾರಿ ಬಾಲಾಮೃತವನ್ನು ತಯಾರಿಸಿ ಮಾರುತ್ತಾರೆ. ಆದರೂ ತೆಗೆದುಕೊಳ್ಳುವ ಸಮಯದಲ್ಲಿ ಬಾಟ್ಲಿಯ ಮೇಲಿರುವ ಲೇಬಲಿನ ಮೇಲೆ ಡೋಂಗರೆ ಎಂಬ ಹೆಸರಿರುವದನ್ನು ತೆಗೆದುಕೊಳ್ಳಿರಿ.

ಬಾಟ್ಲಿ ಒಂದರ ಕಿಮ್ಮತು 0—12—0. ವ್ಹಿ. ಪಿ. ಖರ್ಚು 0-4-0.

K. T. Dongre & Co., ಕೆ. ಟಿ. ಡೊಂಗರೆ ಮತ್ತು ಕಂಪೆನಿ
Girgaon Bombay. ಗಿರಗಾಂ ಮುಂಬಯಿ

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ

ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ.

"ಅಮೇರಿಕದ ವಿಶಿಷ್ಟತೆ."

પ્રો. જેમ્સની વિજળીક શક્તિની ગોળીઓ.
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಶಕ್ತ್ಯಾಘಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ—ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು-ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತವೆ. ಶೀಲವು ಪ್ರಸನ್ನವಾಗುತ್ತವೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮೆ. ಜೀ. ಸಿ. ಬ್ರೀತೋ (ಪೊಂಡಾ-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮೆ. ಜೆ. ಆರ್. ಗಾಯಿಕವಾಡ, (ಸಕ್ರಿಯ ಮಾಮಲತದಾರರು—ಎ.ಪಿ, ದ್ವಾರಾ ಆದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಅತೀವ ಉತ್ತಮವಿದೆ.

The Anglo Indian Drug & Chemical Company,
155, Market, Jumma Musid BOMBAY

ಏಜಂಟರು:—ದಿ. ಊಲನ್‌ವರ್ಥ್, ಮಂಗಳೂರು.

ಡಾಕ್ಟರ್ ಪೆರೇರರ ಸಿದ್ಧೌಷಧಗಳು.

ಮೂತ್ರರೋಗದ ಔಷಧ—ಈ ಔಷಧವು ಅತ್ಯಾದ್ಭುತವಾದದ್ದು. ಮೂತ್ರ ರೋಗದ ಯಾವ ಅಂತಸ್ಥಿನಲ್ಲಿಯೂ ಈ ಔಷಧ ಸೇವನೆಯು ಗುಣಕಾರಿ. ರಾಜಕುರು ಇತ್ಯಾದಿ ಸಂದರ್ಭಗಳಲ್ಲಿ ಎರಡು ದಿವಸ ಪ್ರಯೋಗಿಸುವ ಮಾತ್ರದಿಂದ ಇದರ ಮಹತ್ವವು ನಿಮಗೇನೇ ಖಾತ್ರಿಯಾಗುವುದು.

ನಾಲ್ಕು ಆಣೆ ಸ್ಟಾಂಪು ಕಳುಹಿಸಿದಲ್ಲಿ ನಮೂನೆ ಕಳುಹಿಸೋಣಾಗುವುದು.

ನಾಯಿಕೆಮ್ಮು ಔಷಧ—ಇದರಿಂದ 12 ದಿವಸಗಳೊಳಗೆ ನಾಯಿಕೆಮ್ಮು ಸಂಪೂರ್ಣ ಗುಣವಾಗುವುದು.

ನೇವಸದ ಔಷಧ—ನೇವಸದಿಂದ ಪೀಡಿತರಾದವರಿಗೆ ಯಾವ ಅಂತಸ್ಥಿನಲ್ಲಿಯೂ ಇದು ರಾಮಬಾಣದಂತಿದೆ.

ಮೋಹ ಸಂಬಂಧವಾದ ರೋಗಗಳಿಗೆ ಔಷಧ—ಸರ್ವ ವಿಧದ ಮೋಹ ರೋಗಗಳಿಗೆ ಇದು ದಿವ್ಯೌಷಧ.

ಪೌಷ್ಟಿದಾಯಕವಾದ ವ್ಯಾನ್—ರಕ್ತ ಇಲ್ಲದಿರುವುದು, ವ್ರಣ, ಖಜ್ಜಿ, ಬಲಹೀನ, ಮಲಬದ್ಧತೆ, ತಲೆಸಿಡಿತ, ಹೃದಯ ವೇಗವಾಗಿ ಬಡಿಯೋಣ, ಜೀರ್ಣವಾಗದಿರುವುದು, ಹೊಟ್ಟೆನೋವು ಮೊದಲಾದ ರೋಗಗಳಲ್ಲಿ ಇದು ಕೈಕಂಡ ಔಷಧವಾಗಿದೆ.

ಆಮಶಂಕೆಯ ಔಷಧ—ಈ ಔಷಧದಿಂದ ಎಂಥಾ ಆಮಶಂಕೆಯು ನಿಂತುಹೋಗುವುದೆಂಬದು ದಿಟವು.

ಎಮ್ಮಿನ ಒಯಿಂಟ್‌ಮೆಂಟ್—ವ್ರಣ, ರದ್ದು, ಖಜ್ಜಿ, ಸರ್ವ ವಿಧದ ಚರ್ಮರೋಗವು ಇದರಿಂದ ವಾಸಿಯಾಗುವುದು.

ಜ್ವರ ಮತ್ತು ಜುಲಾಬು ಮಾತ್ರೆಗಳು—ಇವು ಜ್ವರವನ್ನು ಹೊರಡಿಸಿ ಕಲಿಜೆಯನ್ನೂ ಕರುಳನ್ನೂ ಶುಚಿಮಾಡುವುದು. ಮಲೇರಿಯ ಜ್ವರಕ್ಕೆ ಇದು ಸಿದ್ಧೌಷಧವು.

J. F. Pererira & Co.
Chemists No. 6.
Calicut, Malabar.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ

ಸಾರ್ಸಾಪರಿಲಾ.

ಜಗಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ-ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷಾಘಾತಾದಿ ಭಯಂಕರ ರೋಗಗಳು-ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ, ಬಹಳ ದಿನಗಳ ಹಳೇ ಪ್ರಮೇಹ ಇದೀಮೈಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶಿರಿಕೆ ಹೊಡಿಯೋಣ ವಗೈರೆ.

ಪೂರ್ವದ ಸ್ಥಿತಿ.

ನಂತರದ ಸ್ಥಿತಿ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಲಾಸ:— ಪ್ರೊಪ್ರೈಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೊಸಿಟ್ ಟಾಕೂರ್ ದ್ವಾರ್ ಪೋಸ್ಟು ಅಫೀಸು, ಮುಂಬಾಯಿ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ,

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮಾನವನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)

KAMINIA OIL
Regd.
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA PERFUMERY Co. BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಅಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ಗಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30—5—11 ಮ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ, ಬೆಳಗಾಂ, ನೀವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28—7—11. ಮ. ವಿ. ಡಿ. ಮಾದವಸಿಂಗ್, ರುಕ್ಮಿಣೀವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11. ಮ. ಸಿ. ಆರ್. ನಾಯುದು ಪ. ವ. ಡಿ. ಟಾಸಿಲ, (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

Address—**Anglo Indian Drug & Chemical Co.,**
155 Jumma Musid, Market, Bombay.
ಸೋಲ್ ಏಜಂಟ್ಸ್:—ದಿ. ಊಲನ್‌ವರ್ಥ್, ಮಂಗಳೂರು.

ಉತ್ತಮವಾದ ಸುಗಂಧ ದ್ರವ್ಯಗಳು.

ವಿಶ್ವಾಂಜನ ಸ್ನೈನ್ ಬಾಂ ಬಾಟ್ಲಿ ೧ಕ್ಕೆ	೦-೪-೦	ಕಸ್ತೂರಿ ಬತ್ತಿ ಸೇರು ೧ಕ್ಕೆ	೩-೦-೦
ತಾಂಬೂಲ ಮಾತ್ರೆ ಬಾಟ್ಲಿ ೧ಕ್ಕೆ	೦-೩-೦	ಜವಾಜಿ ಬತ್ತಿ ,,	೧-೧೨-೦
ದಶಾಂಗ ಡಬ್ಬಿ ೧ಕ್ಕೆ	೦-೩-೦	ಪುಣುಗು ಬತ್ತಿ ,,	೧-೪-೦
ಮಹಾರಾಜಾ ತಂಬಾಕ್ ಡಬ್ಬಿ ೧ಕ್ಕೆ	೦-೨-೦	ಗುಲಾಬಿ ಬತ್ತಿ ,,	೧-೦-೦
ವಸಂತ ಮಾಲತಿ ಬಾಟ್ಲಿ ೧ಕ್ಕೆ	೦-೨-೦	ಪನ್ನೀರು ಬತ್ತಿ ,,	೦-೮-೦
ವ್ರಣಹಾರಿಯ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕಸ್ತೂರಿ ಬಿಲ್ಲೆ ತೊಲೆ ೧ಕ್ಕೆ	೨-೦-೦
ಕುಸುಮ ಮಾಲತಿ ಎಣ್ಣೆ ಬಾಟ್ಲಿ ೧ಕ್ಕೆ	೦-೮-೦	ಪುಣುಗಿನ ಬಿಲ್ಲೆ ,,	೧-೦-೦
ದಿಲ್‌ದಾರ ಅತ್ತರ್ ಶೀಶೆ ೧ಕ್ಕೆ	೦-೪-೦	ಕೇಸರಿ ಬಿಲ್ಲೆ ,,	೦-೮-೦
ಹುಳದ ಮುಲಾಮು ಡಬ್ಬಿ ೧ಕ್ಕೆ	೦-೨-೦	ಅರ್ಗಜ ,,	೦-೧೨-೦
ವಾತಸಂಜೀವನೀ ತೈಲ ಬಾಟ್ಲಿ ೧ಕ್ಕೆ	೦-೪-೦	ಫಿತ್ನಾ ,,	೦-೧೨-೦
ದಿಲ್ ಕುಸುಮ ಬತ್ತಿ ಸೇರು ೧ಕ್ಕೆ	೧೦-೦-೦	ನಾಸಿಕಚೂರ್ಣ ಡಜನ್ ೧ಕ್ಕೆ	೦-೧-೦
A ಅಂಬರ್ ಬತ್ತಿ ,,	೬-೦-೦		

ಕೊಂಕಣಿ ಭಾಷಯಿಂದ ತಯಾರಿಸಲ್ಪಟ್ಟ ಚಂದ್ರಹಾಸನಾಟಕದ ಪುಸ್ತಕವು ನಮ್ಮಲ್ಲಿ ದೊರಕುತ್ತದೆ. ಕ್ರಯ ೦-೪-೦. ಬೇಕಾದವರು ಈ ವಿಳಾಸಕ್ಕೆ ಬರಕೊಳ್ಳಿರಿ. ಬಿ. ವಿ. ಪಿ. ಭಂಡಾರಕರ,

"ವಿಶ್ವಾಂಜನ ಡಿಪೊ",
ಮಂಗಳೂರು.

ದೇಶಬಾಂಧವರೇ! ಇತ್ತ! ಗಮನಿಸಿ!!
ಏಜಂಟರಿಗೂ ವಿಮೇದ್ದಾರರಿಗೂ ಸುಸಮಯ!! ಬಿಡಬೇಡಿರಿ!!!
ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್

ಕಂಪನಿ, ಲಿಮಿಟೆಡ್.

ಹೆಡ್ ಆಫೀಸು:—45, ಹೆರಿಸನ್ ರೋಡ್, ಕಲ್ಕತ್ತಾ.
ಮೂಲಧನ 10,00,000 ವಿಮೆದಾರರ ಸಂಖ್ಯೆ 50,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದ್ದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ!! ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲೈಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪನಿಯ ಸ್ಥಿರತ್ವದ ವಿಚಾರದಲ್ಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!!

ಕಂಪನಿಯ ಎಲ್ಲಾ ನಿಯಮಗಳನ್ನು ತಿಳಿಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಸೂಚಕಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ತರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಯೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:—ಟಿ. ಆರ್. ಪೈ ಅಂಡ್ ಬ್ರದರ್ಸ್,
ಸೋಲ್ ಏಜಂಟ್ಸ್, ಆಫೀಸು ಉಡುಪಿ, (ದ. ಕನ್ನಡ.)

ಕೊಂಕಣಿ ಭಾಷೆಯಲ್ಲಿ

ಸಂಗೀತ ಚಂದ್ರಹಾಸ ನಾಟಕ.

ಪ್ರತಿ ಒಂದಕ್ಕೆ ನಾಲ್ಕಾಣೆ.

ಪೋಸ್ಟು ಖರ್ಚು ಪ್ರತ್ಯೇಕ.

ವಿಳಾಸ:— ಬಿ. ಕೆ. ಪ್ರಭು,
ಬಂಟ್ವಾಳ ದ. ಕನ್ನಡಾ

ಗುಣವಾಗದಿದ್ದರೆ ಹಣ ಪರತ್ತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೋಲೆರಾ ಅಥವಾ ಉಷ್ಣಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ ರೂ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು

ಕರ್ಣಾಟಕ ಕಥಾ ಸರಿತ್ಸಾಗರ.

ಪೂರ್ವಭಾಗ

ಕನ್ನಡ ಕಥೆಗಳೆಂಬ ಹೊಳೆಗಳ ಕಡಲು.

ಸೊಗಸಾದ ಕಥೆಗಳು! ದಿವ್ಯವಾದ ಕಥೆಗಳು!!

ಅಂದವಾದ ಅಚ್ಚು, ಬಿಳಿದಾಗಿ ತಳತಳಿಸುವ ದಪ್ಪವಾದ ಕಾಗದ:
ಬಲು ಗಟ್ಟಿಯಾದ ಅಟ್ಟೆ, ಪುಟಗಳು ೫೬೦.

ಈ ಕಥೆಗಳನ್ನು ಮೊತ್ತಮೊದಲು ಪರಮೇಶ್ವರನು ಪಾರ್ವತೀದೇವಿಗೆ ಹೇಳಿದನು. ಆ ಸಮಯದಲಿ ಕೈಲಾಸದಲ್ಲಿ ಪ್ರಚ್ಛನ್ನರೂಪನಾಗಿ ಅದನ್ನು ಪುಷ್ಪದಂತನೆಂಬ ಗಣಾಧಿಪತಿಯು ಕೇಳಿ ಪ್ರಕಟಿಸಿದ್ದರಿಂದ ಪಾರ್ವತೀದೇವಿಯ ಶಾಪ ಬಂದು ಭೂಲೋಕದಲಿ ನಂದರಾಜಮಂತ್ರಿ ವರರುಚಿಯಾಗಿ ಅವತರಿಸಿ ಕಾಣಭೂತಿಯೆಂಬ ಪಿಶಾಚ ರಾಜನಿಗೆ ಶ್ರುತಪಡಿಸಿದನು. ಆತನು ಸಾತವಾಹನ ಮಹೀಪತಿ ಮಂತ್ರಿಯಾದ ಗುಣಾಢ್ಯ ಪಂಡಿತನಿಗೆ ವಿವರಿಸಿದನು. ಆತನು ಪೈಶಾಚಿಕ ಭಾಷೆಯಲ್ಲಿ ಲಕ್ಷಗ್ರಂಥ ಪರಿಮಿತವಾಗಿ ಬೃಹತ್ಕಥಾ ನಾಮದಿಂದ ರಚಿಸಿದನು. ಅದನ್ನು ಶ್ರೀ ಸಾತವಾಹನ ಭೂಪತಿಯು ಭೂಲೋಕದಲ್ಲಿ ಪ್ರಕಟಿಸಿದನು. ಹೀಗೆ ಪೈಶಾಚಿಕ ಭಾಷೆಯಲ್ಲಿದ್ದ ಇದನ್ನು ಸಾತವಾಹನ ಭೂನಾಥವಂಶಜಾತನಾದ ಕಾಶ್ಮೀರದೇಶದ ಅನಂತರಾಯನ ಪಟ್ಟದ ರಾಣಿ.ಲೋಕೈಕವಂದ್ಯೆಯಾದ ಸೂರ್ಯವತಿಯು ತಾನು ಮಾಡುತ್ತಿರುವ ಶಾಸ್ತ್ರಶ್ರವಣ ಸಂತತ ಪರಿಶ್ರಮವನ್ನು ಆಗಿಂದಾಗ ಸಡಲಿಸುವುದಕ್ಕೆ ಆಸ್ಥಾನ ಪಂಡಿತನಾದ ಸೋಮದೇವ ಭಟ್ಟಾಚಾರ್ಯನೆಂಬ ಮಹಾ ಕವಿಯಿಂದ ಸಂಕ್ಷೇಪವಾಗಿ ಸಂಸ್ಕೃತದಲ್ಲಿ "ಕಥಾ ಸರಿತ್ಸಾಗರ"ವೆಂಬ ಹೆಸರಿಂದ ರಚಿಸಿದಳು. ಅದನ್ನು ಪಂಡಿತನಾದ ಶ್ರೀಕಂಠಶರ್ಮನು ಕನ್ನಡಿಸಿ ಸವಿನುಡಿಯಿಂದ ಪ್ರಕಟವಾಯಿತು.

ಅಲೆಗ್ಸಾಂಡರು ಕಾಲದವನಾದ ಚಂದ್ರಗುಪ್ತ ಮತ್ತು ನವನಂದಮಂತ್ರಿಯಾದ ವರರುಚಿಯು ಭೂಲೋಕದಲ್ಲಿ ಈ ಮಹಾಪ್ರಬಂಧಕ್ಕೆ ಪ್ರಥಮ ಪ್ರವರ್ತಕನು. ಆದುದರಿಂದ ಈ ಕಥೆಯು ಕ್ರಿಸ್ತಶಕಕ್ಕೆ ಪೂರ್ವ ಮುನ್ನೂರಮುವತ್ತು ವರುಷಗಳಲ್ಲಿ ಹುಟ್ಟಿತೆಂಬರು.

ಕನ್ನಡಿಗರಲ್ಲಿ ಓದುವವರಿಗೆ ಒಪ್ಪಾದ ಕಥೆಗಳಿವಲ್ಲದೆ ಬೇರೆ ಇಲ್ಲ. ಈ ಕಥೆಗಳಿಂದ ತಿಳಿಯದ ಸಂಗತಿಯೇ ಕಾಣದು. ತಿಳಿದವರು ತಿಳಿವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಈ ಕಥೆಗಳನ್ನು ಹೇಳಬೇಕು. ತಿಳಿವಿಲ್ಲದವರು ತಿಳಿದವರಾಗುವದಕ್ಕೆ ಈ ಕಥೆಗಳನ್ನು ಕೇಳಬೇಕು. ಈ ಗ್ರಂಥವು ಭಾರತ ರಾಮಾಯಣಗಳಿಗೆ ಸುಮತುಲಿತವು. ಸ್ವದೇಶ ವಿದೇಶ ಕಥಾಸಂತಾನಗಳೆಲ್ಲಕ್ಕೂ ಇದುವೆ ಪ್ರಸವಭೂಮಿ ಮತ್ತು ಪ್ರದರ್ಶನಭೂಮಿಯು. ವಾಸವದತ್ತೆಯಲ್ಲಿ ಸುಬಂಧುವೂ, ಕಾದಂಬರಿಯಲ್ಲಿ ಬಾಣನೂ, ಮೇಘಸಂದೇಶದಲ್ಲಿ ಕಾಳಿದಾಸನೂ ಈ ಕಥಾಪ್ರಬಂಧವನ್ನು ಸೋತಿರುವರು. ನಾಗಾನಂದ, ಪ್ರಿಯದರ್ಶಿಕ, ರತ್ನಾವಳೀ, ಮಾಲತೀ ಮಾಧವ, ಮುದ್ರಾರಾಕ್ಷಸಾದಿ ರೂಪಗಳೆಲ್ಲಕ್ಕೂ ಕಾದಂಬರ್ಯಾದಿ ಕಥೆಗಳಿಗೂ ಇದುವೆ ಮೂಲವು. ಐಹಿಕ ಸಮಸ್ತ ಸಂಪತ್ತಿಗೂ ಮೂಲವಾದ ಬುದ್ಧಿವೈಭವವನ್ನು ಇದನ್ನೋದುವುದರಿಂದುಂಟಾಗುವುದು. ಹೆಚ್ಚೇನು? ಸ್ವಪರೋಭಯ ಹಿತಚಿಂತನೆಯ ನೀತಿಯನ್ನು ಕಲಿಸಿ ಸರ್ವ ಸಂಪ್ರದಾಯಗಳಲ್ಲಿಯೂ ಈಶ್ವರೋಪಾಸ್ಯತೆಯ ಸಮತ್ವಸ್ಥಿತಿಯ ವೈರಾಗ್ಯವನ್ನು ತಿಳಿಸಿ, ಮೋಹನಿದ್ರೆಯಿಂದ ಪ್ರಬುದ್ಧರಾಗುವವರಿಗೆ ಮೂರು ಲೋಕಗಳನ್ನು ಕಣ್ಣೆದುರಿಗೆ ಕಾಣಿಸಿಕೊಡುವುದು. ಈ ಕಥಾ-ಪ್ರಾಸಾಳಿಕಾ ಪ್ರಭಾವವು ಅದನ್ನೋದುವುದರಿಂದಲೇ ಗೊತ್ತಾಗುವುದಾದುದರಿಂದ ಆ ಸಂಗತಿಯನ್ನು ಇಲಿ ಹೆಚ್ಚು ಹೊಗಳಬೇಕಾದುದಿಲ್ಲ.

ನಮ್ಮ ಗ್ರಾಹಕರಿಗೆ ಅಂಚೆವೆಚ್ಚದೊಡನೆ ಒಂದು ರೂಪಾಯಿ ಹನ್ನೆರಡಾಣೆ ಮಾತ್ರ.
ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭಾರತಿ ಸಂಪಂಗಿರಾಮು,
ಪೋಸ್ಟು—ಹೊಸಕೋಟೆ, ಡಿಸ್ಟ್ರಿಕ್ಟ್—ಬೆಂಗಳೂರು.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್. ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.
M. D. Rane & Co.,
Post, Grant Road, Bombay

ದಿ ಏಸಿಯನ್ ಕಮರ್ಶಲ್

ಎಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮುಂಬಯಿ.

ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ ಪ್ರಿಮಿಯಂ ವಗೈರೆ ಇತರ ಕಂಪೆನಿಗಿಂತಲೂ ಅತೀ ಕಡಿಮೆಯಾಗಿರುತ್ತದೆ.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂ. 17—4—0 ತೆತ್ತು ಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರುಷ ಪ್ರಾಯದಲ್ಲಿ ಒಂದು ಸಾವಿರ ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವ 14 ವರುಷ ವಳಗಿನ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸುರು ಮಾಡಲ್ಪಟ್ಟ ಮಕ್ಕಳು ವಿಮೆಗೆ ಆರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟಲ್ಲಿ ವಿಮೆ ಮಾಡಿದ ಪೂರ್ಣ ಐವಜು ಅವರ ಬಾಧ್ಯಸ್ತರಿಗೆ ಸಿಕ್ಕುವುದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೂ ಹೆಂಗಸರನ್ನೂ 50 ವರುಷ ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 15 ವರುಷದ ಮೇಲಿನಮತು 30 ವರುಷದ ವಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊಳ್ಳುವದಿಲ್ಲ.

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹುದಾದ 1000 ವ ಅದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾರ ತೆರಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ತೆತ್ತು ಆತನ ಪ್ರಿಮಿಯಮ್ 4ರ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡೆಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈವರಿವಿಗೆ ಕಂಡುಬರುವದಿಲ್ಲ. ಆದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದರ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟು ರೋಡ್ ಉಡುಪಿ.

ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಖ್ಖಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

---

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ ಕಲಾ ಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನ್ನೂ, ಛಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ, ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟುಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ವಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.
ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ ಮಂಗಳೂರು ಕ

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಅದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಕೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ರಸವಾಗಿರುತ್ತದೆ. ಇನು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ 51 ಕವಾಳಣಿಸಿರು ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ವೈದ್ಯಸಾರಸಂಗ್ರಹ (ಮೂಲಿಕಾ ಔಷಧಿ)	೩—೦—೦
ಶುಕಸಪ್ತತಿ ವೇದಾಂತ ಪೂರ್ವದ ಪ್ರತಿ	೨—೦—೦
ರಘುವಂಶ ೧ನೇ ಪರ್ವ...	೧—೦—೦
ಡಿಟ್ಟೊ (೨ನೇ ಪ.) ಅರ್ಥ ತಾತ್ಪರ್ಯ ಆಕಾಕ್ಷೆ ಇತ್ಯಾದಿ ...	೧—೦—೦
ವಿವೇಕ ಚೂಡಾಮಣಿ	೨—೪—೦
ಶಾಮಕುಬ್ಜ ಕಥೆ	೦—೮—೦
ಚಮತ್ಕಾರ ಚಿಂತಾಮಣಿ	೦-೧೦—೦
ಮಹಿಮ್ನ ಸ್ತೋತ್ರ (ಟೀ. ತಾ.)	೦—೩—೦
ಮುಕುಂದಮಾಲಾ ಸ್ತೋತ್ರ (ಟೀ. ತಾ.)	೦—೪—೦
ಶಿವಗೀತಾ (ಟೀ. ತಾ. ಸಹಿತ)	೦—೮—೦
ಶಿವಾನಂದಲಹರಿ (ಟೀ. ತಾ.)	೦—೬—೦
ವಿದ್ಯಾನಂದ ಮಾಸಪತ್ರಿಕೆ ಚಂದಾ	೨—೪—೦

ಮಾದ್ರಿ ಪತ್ರಿಕೆ, ಪುಸ್ತಕ ಪಟ್ಟಿ ಉಚಿತ. ಇನ್ನೂ ಅನೇಕ ಪುಸ್ತಕಗಳು ದೊರೆಯುವವು.

ವಿಳಾಸ:—
ವಿದ್ಯಾನಂದ ಆಫೀಸು.
ಬೆಂಗಳೂರು ಸಿಟಿ.

* * *

ಹೊಸ ಪುಸ್ತಕಗಳು! ಬೇಗ ಬರೆಯಿರಿ!!

ಮಧುರವಾಣೀ ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಸಾಹಸಿಕೆ	0-2-6	ಮಹನೀಯರ ಚರಿತ್ರೆ ...	0-10-0
ಗೃಹಿಣಿಯಾದ ಗಂಗೆ ...	0-3-0	ಸಾಧನೆ	0-8-0
ನಾನಕನ ಚರಿತ್ರೆ	0-4-0	ಮನೋರಮ	1-0-0
ವಿವೇಕಮಂಜರಿ 1ನೇ ಭಾಗ	0-2-0	ಭಕ್ತವಿಜಯ	3-4-0
ಡಿ. 2ನೇ ಭಾಗ	0-3-0	ಪಾರ್ವತಿ ಪರಿಣಯ ನಾಟಕಂ	0-8-0
ಸೌದಾಮನಿ	0-6-0	ಗೋಪಿಕಾ ಗೀತೆ... ...	0-1-0
ವಿಶ್ವನಾಥ	0-1-0	ಭಜಗೋವಿಂದಂ	0-1-0
ದೇವಿ ಚೌದ್‌ರಾಣಿ... ...	1-4-0	ಹಾಲಾಸ್ಯ ಮಹಾತ್ಮೆ ...	1-4-0
ಸಚಿತ್ರಕಲಾತರಂಗ... ...	1-0-0	ವಿಷವೃಕ್ಷ...	1-4-0

ಇನ್ನೂ ಅನೇಕ ಪುಸ್ತಕಗಳು ಶಿಕ್ಕುವವು. ಕ್ಯಾಟಲಾಗಿಗೆ ಬೆಲೆ ಇಲ್ಲ. ಅಪೇಕ್ಷಕರು ಆತುರಿಸಿರಿ.

ವಿಳಾಸ:— ಹನುಮಾನ್ ಮತ್ತು ಕಂಪೆನಿ.
ಮೈಸೂರು.

* * *

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಿಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಿಕ್ರಗಳನ್ನು, ದೃಷ್ಟಿಗಳನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಿಕ್ರಗಳ ಯಾವದೊಂದು ಭಾಗವು ಒಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿ ಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ, ಕನ್ನಡ

* * *

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಆವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಆಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ „ „	6—0—0	B ಅರಗಜ „ „	1—0—0
ಕಸ್ತೂರಿ ಬತ್ತಿ „ „	3—0—0	ಕಸ್ತೂರಿ ಬಿಲ್ಲೆ„ „	2—0—0
ಜವಾಜಿ ಬತ್ತಿ „ „	2—0—0	ಜವಾಜಿ ಬಿಲ್ಲೆ„	1—0—0
ಪುಣಗಿನ ಬತ್ತಿ „ „	1—8—0	ಕೇಸರಿ ಬಿಲ್ಲೆ „ „	0—8—0
A ಪನ್ನೀರ್ ಬತ್ತಿ „ „	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ „ „	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ವಿಳಾಸ:— ಎನ್. ಎಂ. ಸುಬ್ರಾಯ್, „ಸುಗಂಧವಿಲಾಸ" ಮಂಗಳೂರು.

ನಮ್ಮ ಏಜಂಟರು:—

T. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

K. ಅಣ್ಣಪ್ಪ ನಾಯ್ಕರು,
ಬುಕ್ ಸೆಲ್ಲರ್ ಮತ್ತು ಕಮಿಶನ್
ಏಜಂಟ್, ವಿಟ್ಲ, ದ. ಕ.

* * *

CHEAP JACK

FANCY UMBRELLA MART.

ಚಿತ್ರವಿಚಿತ್ರವಾದ ಕೊಡೆಗಳು.

ಕಂ ॥ ಧರೆಯೊಳ್ ಮೆರೆ ಮಹಾಶಯ । ರಿರಃ ನಾವಿನಿಸುಂದಿನಂ ಕೊಡೆಯ ವಿಕ್ರ
ಯಮಂ ॥ ಇರಿಸಿರ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿಯೆ
ವದಂರಮಂ ॥೧॥ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ
ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾಮಾತಿಂ । ಗೆಡೆಯಾಗಿಯೆ
ನೆರಲನೀವ ಕೊಡೆಯಿಲ್ಲಿರ್ಕುಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

* * *

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇನೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

* * *

ಬಿಟ್ಟಿ! ಪುಗಸಟ್ಟೆ! ಬಿಟ್ಟಿ!

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ಒಂದು ರಾಸ್ಕೋಪ್ ಸಿಸ್ಟಂ ಲೀವರ್ ವಾಚನ್ನು ರೂ. ೩—೪—೦ಗೆ ಕೊಂಡುಕೊಳ್ಳುವವರಿಗೆಲ್ಲಾ ಕೆಳಗೆ ಹೇಳುವ ೧೨ ಬಹುಮಾನಗಳು ಸಿಗುವವು. ಇದರಲ್ಲಿ ಸ್ವಲ್ಪವೂ ಮೋಸ ಇಲ್ಲ.



(೧) ಒಂದು ಸೊಗಸಾದ ಸರಪಣಿ. (೨) ಒಂದು ಹಣದ ಚೀಲ. (೩) ಒಂದು ಚಾಕು. (೪) ಒಂದು ತಮಾಷಿ ಪೆಟ್ಟಿಗೆ (೫) ಒಂದು ಮಡಿಚುವ ಕತ್ತರಿ. (೬) ಒಂದು ಫೌಂಟೆನ್ ಲೇಖಣಿ. (೭) ಒಂದು ಕೈ ಚೌಕ. (೮) ಒಂದು ಜೊತೆ ಕಾಲು ಚೀಲ. (೯) ಒಂದು ಸುಂದರವಾದ ಉಂಗುರ. (೧೦) ಒಂದು ಸೊಗಸಾದ ಬೀಸಣಿಗೆ. (೧೧) ಒಂದು ಸೆಟ್ ಷರಟು ಗುಂಡಿ. (೧೨) ಒಂದು ಕತ್ತಿನ ಪಟ್ಟಿ.

P. A. Razak & Co.,
10 Esplanade, Madras.

ಪಿ. ಎ. ರಜಾಕ್ ಅಂಡ್ ಕೊ.,
10 ಎಸ್ಪಳನೇಡ್, ಮದ್ರಾಸು.

* * *

ರೇಷ್ಮೆ ಪೀತಾಂಬರ್ ಕಂಪೆನಿ, ಬನಾರಿಸ್ ಪಟ್ಟಣ.

ಪ್ರಸಿದ್ಧವಾದ

ರೇಷ್ಮೆ ಬಟ್ಟೆಗಳು! ಪೀತಾಂಬರದ ಶೀರೆಗಳು!!

ಒಪ್ಪಲ್ಪಡದೆ ಇದ್ದರೆ ವಾಪಾಸು ತೆಗೆದುಕೊಳ್ಳಲ್ಪಡುವುದು.

ಪೀತಾಂಬರದ ಶೀರೆಗಳು.

ಬನಾರಸ್ ಪೀತಾಂಬರದ ಶೀರೆಗಳು:—೧೬ ಮೊಳ ಉದ್ದ ೨॥ ಮೊಳ ಅಗಲ, ಸೆರಗೂ ಅಂಚು ಉತ್ತಮವಾದ ಜರತಾರಿ ಉಳ್ಳದ್ದು. ಕೆಂಪು, ಹಸರು, ಊದಾ ಮತ್ತು ಗುಲಾಬೀ ರಂಗುವುಳ್ಳ ಅಂಚುಗಳು, ಒಳಭಾಗವು ಸಾದಾ, ಸಾಮಾನ್ಯವಾದ ಶೀರೆಗಳಿಗೆ ಬೆಲೆಯು ೨೦ರಿಂದ ೩೫ ರೂಪಾಯಿನ ವರೆಗೂ ಇರುವುದು. ಅತ್ಯುತ್ತಮವಾದವುಗಳಿಗೆ ೪೦ರಿಂದ ೨೦೦ರ ವರೆಗೂ ಬೆಲೆಯಾಗುವುದು.

ಪೀತಾಂಬರದ ಬೂಟಾ ಶೀರೆಗಳು.

ಪೀತಾಂಬರದ ಬೂಟಾ ಶೀರೆಗಳು ಮೈದಾನದಲ್ಲಿ ಜರಿತಾರಿ ಹುವ್ವುಗಳು ಅಥವಾ ಬೂಟಾಗಳು ಇರುವವು. ಇವುಗಳಲಿ ಸಾಮಾನ್ಯವಾದ ಶೀರೆಗಳಿಗೆ ೨೫ರಿಂದ ೩೫ ರೂಪಾಯಿನ ವರೆಗೂ ಆಗುವುದು. ಉತ್ತಮವಾದವುಗಳಿಗೆ ೪೦ ರೂಪಾಯಿಗಳಿಂದ ೫೦೦ರೂಪಾಯಿಗಳ ವರೆಗೂ ಆಗುವುದು.

ಪೀತಾಂಬರದ ಕಣಗಳು.

ಜರತಾರಿ ಅಂಚು, ಮೈದಾನದಲಿ ಹೂವಿನ ಕೆಲಸ, ರಂಗು ಕೆಂಪು, ಹಸರು, ಊದಾ ಮತ್ತು ಗುಲಾಬಿ, ಸಾದಾ ಮೈದಾನವುಳ್ಳ ಕಣ ಒಂದಕ್ಕೆ ೨ ರೂಪಾಯಿನಿಂದ ೨ ರೂಪಾಯಿ ವರೆಗೂ ಕ್ರಯವಾಗುವುದು. ಬೂಟಾ ಮೈದಾನವುಳ್ಳದ್ದು ಕಣ ೧ಕ್ಕೆ ೮॥ ರೂಪಾಯಿನಿಂದ ೨೫ ರೂಪಾಯಿನ ವರೆಗೂ ಆಗುವುದು.

ರುಮಾಲುಗಳು ಅಥವಾ ಪೇಟಾಗಳು.

ಎಲ್ಲಾ ರಂಗಿನ ರುಮಾಲುಗಳು ಮತ್ತು ಪೇಟಾಗಳು ೨೫ ರೂಪಾಯಿ ಮೊದಲ್ಗೊಂಡು ೧೦೦ ರೂಪಾಯಿನ ವರೆಗೂ ಬೆಲೆಯುಳ್ಳವುಗಳಾಗಿರುತ್ತವೆ.

ಮಕ್ಕಳ ಆಟದ ಪಾತ್ರೆಗಳು.

ಚಿಕ್ಕದಾಗಿಯೂ, ಸುಂದರವಾಗಿಯೂ, ಹೊಳೆಯತಕ್ಕವುಗಳಾಗಿಯೂ ಇರುತ್ತವೆ. ಇವುಗಳಲ್ಲಿ ದೊಡ್ಡದಾಗಿರತಕ್ಕ ಪಾತ್ರೆಗಳ ಸೆಟ್ಟಿಗೆ ೪ ರೂಪಾಯಿ ಚಿಕ್ಕ ಸೆಟ್ಟಿಗೆ ೨ ರೂಪಾಯಿ.

ಬನಾರಸ್ ಪಟ್ಟಣದಲ್ಲಿರತಕ್ಕ ರೇಷ್ಮೆ ಪಿತಾಂಬರ ಕಂಪೆನಿ ಮ್ಯಾನೇಜರಿಗೆ ಬರೆದುಕೊಂಡರೆ ಇದರ ತಪಶೀಲುವಾರು ಕ್ಯಾಟಲಾಗು ಕೊಡಲ್ಪಡುವುದು.

* * *

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸು

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್ಸ್
ಮಂಗಳೂರು
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು.

* * *

ರಾಜವೈದ್ಯ ನಾರಾಯಣಜೀ ಕೇಶವಜೀ,

ಆಯುರ್ವೇದೋದಯ ಔಷಧಾಲಯ, ೧೭೭, ಚೀನಾಬಜಾರ್ ರೋಡ್, ಮದ್ರಾಸ್

ಮದನಮಂಜರಿ ಮಾತ್ರೆಗಳು.

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖಲಿತಮೂತ್ರದೊಡನೆ ಇಂದ್ರಿಯ ಸ್ರವಿಸುವದು ಮುಂತಾದ ಸಕಲ ಮೂಗು ಪಿಂಡರೋಗಗಳನ್ನು ನಿರ್ಮೂಲಮಾಡುವದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಧವಾದ ದೋಷಗಳನ್ನು ಕ್ರಮಪಡಿಸುವವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ, ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನೂ ದೀರ್ಘಾಯುಸ್ಸನ್ನೂ ಮುಖಕ್ಕೆ ಒಳ್ಳೇಕಾಂತಿಯನ್ನೂ ಉಂಟು ಮಾಡುತ್ತದೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಆವಶ್ಯಕವಾದ ಸಕಲ ಪಂಚಭೂತಗಳು ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೪೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧—೦—೦.

ಬಿಟ್ಟಿ! ಪುಗಸಟೆ!

ವೈದ್ಯವಿದ್ಯ.

ಸಂಪೂರ್ಣಾರೋಗ್ಯವನ್ನೂ ದೀರ್ಘಾಯುವನ್ನೂ, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲುಗು, ಕನ್ನಡ, ಇಂಗ್ಲೀಷು ಮುಂತಾದ ೮ ಭಾಷೆಗಳಲ್ಲಿ ದೊರೆಯುವದು. ಕೋರಿದವರಿಗೆ ಕ್ರಯವು ಅಂಚೆಹಾಸಲು ಸಹ ಇಲ್ಲದೆ ಮುಫತ್ತಾಗಿ ರವಾನಿಸಲ್ಪಡುವದು. ಜಾಗ್ರತೆ ನಿಮ್ಮ ವಿಳಾಸವನ್ನು ತಿಳುಹಿಸಿ. ಈ ವರಿಗೂ ೩೦೦೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ದಿವಸವೇ ಒಂದು ಕಾರ್ಡು ಬರೆಯಿರಿ.

* * *

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ **6**ನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ. ಇದರಲ್ಲಿ ದೃಡವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವದಿವಿಮೆ ದುಬಾರೆ ಎಂಡೌಮೆಂಟ್ ಪೊಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ತೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯ ಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣಗೋಸ್ಕರ ತಿಂಗಳಿಗೆ ೨ ರೂಪಾಯಿ ೧ ರೂಪ್ಯಾ ೮ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪೆನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರೆವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ತಿಲ್ಯಾನೋ

ರಾಯ್ಮಂಡ್ ಎ. ಮಿನೇಜಸ್
ಟ್ರಾವಲಿಂಗ್ ಏಜಂಟ್.

ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.
ಮಂಗಳೂರು, ದಕ್ಷಿಣ ಕನ್ನಡ.

ಸುಲಭ ಕ್ರಯ! ಸುಲಭ ಕ್ರಯ!! ಸುಲಭ ಕ್ರಯ!!

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡು ಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವದಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ ಮನೋಉಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದುಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15ಸಾರಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕಗುಣವೂ, ಪರಿಮಳವೂ, ಕಾರವೂ ಹೋಗುವದಿಲ್ಲ. ಬುಡ್ಡಿ 1ಕ್ಕೆ ಕ್ರಯ ರೂ. 0-4-0. ವಿ. ಪಿ. ಚಾರ್ಜು 0-3-0 ಡಜನ್ 1ಕ್ಕೆ ಕ್ರಯ ರೂ. 2-8-0. ವಿ.ಪಿ. ಚಾಜು ೩0-6-0.

ಪುಕಟ! **Free Sample Coupon** ಪುಕಟ!!

ದಯವಿಟ್ಟು ಕೆಳಗಿನ ವಿಳಾಸಕೆಡ್ವಾಕರ್ ಜಿ. ಬಿ. ಯವರ ಸುಗಂಧನಶ್ಯದ ಪುಡಿಯ ನಮೂನಿ ಬಾಟ್ಲಿ ಒಂದನ್ನು ಕಳುಹಿಸಬೇಕು.

ಹೆಸರು..

(*Registered*) ☞ ವಿಳಾಸ:—ಗುರುಬಸವ ಅಂಡುಕಂಪೆನಿ, ಮದ್ರಾಸ

ಬೆಳ್ಳಿಯ ವಿಗ್ರಹಗಳು.

ಪೂಜೆ ಮಾಡಲು ಯೋಗ್ಯವಾಗಿಯೂ ಮತ್ತು ಗಡಿಯಾರದ ಸರಪಣಿಗೆ ತಗಲಿಸಿಕೊಳ್ಳಲು ಅನುಕೂಲವಾಗಿಯೂ ಇರುವದಲ್ಲದೆ ಅರಗಿನ ಸೀಲು ಹಾಕುವದಕ್ಕೆ ಅಕ್ಷರಗಳನ್ನು ಕೆತ್ತಿಕೊಳ್ಳುವದಕ್ಕೂ ಸಹ ಅನುಕೂಲಿಸುತ್ತದೆ.

ಬೆಳ್ಳಿ ಗಣಪತಿ ವಿಗ್ರಹ 1ಕ್ಕೆ	2—4—0	2—12—0	3—0—0
,, ಕೃಷ್ಣ ವಿಗ್ರಹ 1ಕ್ಕೆ	2—4—0	2—12—0	3—0—0
,, ಶ್ರೀನಿವಾಸ ದೇವರ ವಿಗ್ರಹ 1ಕ್ಕೆ	2—4—0	2—12—0	3—0—0

ಹಾಸಲು ಪ್ರತ್ಯೇಕ, ಬೇಕಾದವರು ಬರೆದಲ್ಲಿ ವಿ. ಪಿ. ಮುಖಾಂತರ ಕಳುಹಿಸಿಕೊಡುತ್ತೇವೆ.

ವ್ಯಾಪಾರಧರ್ಮ ಸೂಚಿಕೆ.

ಅಭಿವೃದ್ಧಿ, ನಾಗರೀಕತೆ, ಕುಶಲತೆ, ಪರಿಚಯ, ಐಶ್ವರ್ಯ, ಪೈಪೋಟಿ, ಶಾಂತಪ್ರಕೃತಿ, ವಿವೇಕ, ಉದಾರತ್ವ ಇವೇ ಮೊದಲಾದ ವಿಷಯಗಳು ಅಡಗಿರುವ ಈ ಪುಸ್ತಕದ ಬೆಲೆ ೬ ಆಣೆ ಮಾತ್ರ. ವಿ. ಪಿ. ಮೂಲಕ ೮ ಆಣೆ.

ವಚನ ಶಂಕರ ಸಂಹಿತೆ	3—8—0
ವೃತ ಚೂಡಾಮಣಿ 360 ವೃತಗಳಿರುವದು.	1—0—0
ವೃತ ಪಲ್ಲಿ 40 ವೃತಗಳು ತಾತ್ಪರ್ಯ ಸಹಿತ	0—10—0
ಶ್ರೀ ಮತ್ಪಾತಂಜಲಯೋಗ ಶಾಸ್ತ್ರ ಟೀಕಾತಾತ್ಪರ್ಯ ಸಹ ...	2—0—0

ಎಚ್. ಎನ್. ರಾವ್ ಬ್ರದರ್ಸ್.
ಚಿಕ್ಕ ಪೇಟೆ,
ಬೆಂಗಳೂರು ಸಿಟಿ.

ಬೆಲೆ ಸುಲಭ! ಗುಣವಧಿಕ!! ಕನ್ನಡಿಗರೇ ಇತ್ತ ಬನ್ನಿ!!

	ಇತರರಿಗೆ.	ಚಂದಾದಾರರಿಗೆ.
ಸಚಿತ್ರ ಕಲಾತರಂಗ	0-10—0	0—8—0
ಬಾಲಿಕಾ ನೀತಿಮಾಲಿಕೆ	0—2—6	0—2—0
ಪೇಷ್ವೆ ನಾರಾಯಣರಾವು	0—4—0	0—3—6
ವಿವೇಕಾನಂದ (ಅಚ್ಚಿನಲ್ಲಿದೆ)	0-12—0	0-10—0

ವಿಳಾಸ:— ಸ್ವದೇಶಾಭಿಮಾನಿ ಆಫೀಸು ಮಂಗಳೂರು, ಮತ್ತು
ಎಂ. ಟಿ. ವಲ್ಲಭೈಯ್ಯಂಗಾರ್ ವಾುಗಡಿ.

ಕ್ಲೆಮೆಂಟರ

ಮೆಜಿಕ್‌ಬಾಂ ತೈಲವು.

ಈ ತೈಲ್ಯದಿಂದ ಸಕಲ ವಿಧದ ನೋವು ನಿವಾರಣೆಯಾಗುವದು. ತಲೆ ನೋವು, ವಾಯುನೋವು, ಸೆಳತ, ಗಂಟ್ಲು ನೋವು, ಬೆನ್ನು ನೋವು, ಕೀಲುಗಳ ನೋವು, ಪಾರ್ಶ್ವವಾಯು, ವಿವಿಧವಾದ ವಾಯು ರೋಗಗಳು, ಶೀತ ರೋಗಗಳು, ಸಂದುವಾತ, ಚೇಳು ಕಡಿದ ನೋವು—ಇವುಗಳೆಲ್ಲಾ ಈ ತೈಲ್ಯ ಹಚ್ಚಿದ ಮಾತ್ರದಿಂದ ಚಮತ್ಕಾರಿಕವಾಗಿ ಮಾಯವಾಗುವದು. ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪ್ರಯೋಗಿಸಿ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಇದರಷ್ಟು ಅಮೋಘವಾದ ತೈಲ್ಯವು ಬೇರೊಂದಿಲ್ಲವೆಂಬದಾಗಿ ಕಂಡುಕೊಂಡಿದ್ದಾರೆ. ಈ ಅತ್ಯುತ್ತಮವಾದ ತೈಲ್ಯವು ನೋವಿನ ಮೂಲವನ್ನು ಕಂಡುಹಿಡಿದು ಅದರೆ ಹುಟ್ಟಡಗಿಸಿಬಿಡುವದು.

ಕ್ರಯ ಶೀಸೆ ೧ಕ್ಕೆ ೧೨ ಆಣೆ, ಪ್ಯಾಕಿಂಗ್ ೪ ಆಣೆ. ಮೂರು ಅಥವಾ ಹೆಚ್ಚು ಬಾಟ್ಲ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡಲಾದೀತು. ಈ ತೈಲ್ಯವು ಎಲ್ಲಾ ವ್ಯಾಪಾರಸ್ಥರಲ್ಲಿಯೂ ವೈದ್ಯರಲ್ಲಿಯೂ ಬಿಕರಿಮಾಡಲ್ಪಡುತ್ತದೆ.

ವಿಳಾಸ:— ಎಸ್. ಪೀಟರ್ಸ್.
37 ವೇದಮಲೆಪಿಳ್ಳೆ ಬೀದಿ,
ಪರಸುವಾಕಂ ವೇಪರಿ ಮದ್ರಾಸು.

ಏಜಂಟ್:— ಜಿ. ಎಸ್. ಕಣ್ಣೈಚೆಟ್ಟಿ,
ಊಲನ್‌ಕೇಪ ಮನುಫೆಕ್ಚರರ್, ತುಮಕೂರ.

Printed & Published by V. S. Kamath at the Mangalore Trading Association's Sharada press, Mangaloe.

Registered, M No. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ
ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 40.

ಮಂಗಳೂರು ತಾ. 4ನೇ ಶುಕ್ರವಾರ
ಅಕ್ಟೋಬರ 1912.

Amrutanjan Depot, Head Office: Bombay.

ಅಮೃತಾಂಜನ ರಿಜಿಸ್ಟ್ರಿ ಮಾಡಲ್ಪಟ್ಟದೆ.

Trade Mark Registered.

ಅಮೃತಾಂಜನ ರಿಜಿಸ್ಟ್ರಿ ಮಾಡಲ್ಪಟ್ಟದೆ

AMRUTANJAN

ಅಮೃತಾಂಜನವು.

AMRUTANJAN BO
AMRUTANJA
Best Indian
Pain Balm
Amrutanjan D
BOMBAY.

ರಿಜಿಸ್ಟ್ರಿಯಾಗಿಯದೆ!

ಅಮೃತಾಂಜನವು ಎಂಥಾದ್ದು? ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟಂಥಾದ್ದಾಗಿದೆ. ಇದರಲ್ಲಿ ಅತ್ಯುತ್ತಮವಾದ ಗಿಡಮೂಲಿಕೆಗಳು ಸೇರಿಯವೆ. ಎಲ್ಲಾ ವಿಧದ ನೋವುಗಳಿಗೆ ರಾಮಬಾಣದಂತಿದೆ.

ಇದರಿಂದೇನು ಪ್ರಯೋಜನ? ಇದರಿಂದ ನಿಮ್ಮ ನರಸಂಸ್ಥಾನ್ಯಯದಲ್ಲಿರುವ ನೋವುಗಳೆಲ್ಲಾ ಗುಣವಾಗುವದು. ಇದು ನೋವಿನ ಮೂಲಸ್ಥಾನವನ್ನು ಕಂಡುಹಿಡಿದು ನೋವಿನಿಂದ ಬಿಡುಗಡೆ ಮಾಡಿ ನಿಮ್ಮನ್ನು ಎಂದೂ ನೋವಿಲ್ಲದವರಾಗಮಾಡುವದು. ತಲೆಸಿಡಿತ, ಬೆನ್ನುನೋವು, ವಾತ, ತುರಿಖಜ್ಜಿ, ಕಾಲುನೋವು, ವ್ರಣ, ಗಂಟ್ಲುನೋವು, ಕುರು, ಎಲ್ಲಾ ವಿಧದ ಕಜ್ಜಿಗಳನ್ನು ನಿವಾರಿಸುವದು. ಒಂದು ಸಲ ಪ್ರಯೋಗಿಸಿ ನೋಡಿರಿ. ಅದಿಲ್ಲದೆ ನೀವು ಒಂದು ನಿಮಿಷವಾದರೂ ಇರಲಾರಿರಿ. ಕ್ರಯ 8 ಆಣೆ.

ರಿಜಿಸ್ಟ್ರಿಯಾಗಿಯದೆ!

ಗಜಕರ್ಣದ ಮುಲಾಮು.

ಗಜಕರ್ಣವು ಅಥವಾ ನವೆಯು ಇದು ಶರೀರದ ಮೇಲೆ ಅತಿಶಯ ಸೂಕ್ಷ್ಮ ಕ್ರಿಮಿಗಳಿಂದ ಉಂಟಾಗುತ್ತದೆ. ಈ ಚರ್ಮರೋಗವು ಬೇಗನೆ ಮೈಮೇಲೆ ಎಲಾಕಡೆಯಲಿ ಪಸರಿಸುತ್ತದೆ. ಈ ಮುಲಾಮು ಅದರ ಮೇಲೆ ಎರಡು ಸಾರಿ ತಾಗಿಸುವದರಿಂದ ಬಿಳೀ ಮತ್ತು ಕಪ್ಪು ನವೆಯು ಹೋಗಿ ಗಜಕರ್ಣವು ನಾಶವಾಗುವುದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯು ಬರುವದಿಲ್ಲ. ಡಬ್ಬಿ ಒಂದರ 6 ಆಣೆ.

ದಂತಮಂಜನ.

ಹಲ್ಲಿಗೆ ಬಲವನ್ನೂ ಬಾಯಿಗೆ ಸುಗಂಧವನ್ನೂ ಕೊಡುವ ದಂತಮಂಜನ, ಅಲ್ಪ ಬೆಲೆಯುಯುಳ್ಳ ಮತ್ತು ಉತ್ತಮ ಗುಣಕೊಡುವ ಈ ದಂತಮಂಜನವು ಹಲವು ಔಷಧಿಗಳಿಂದ ತಯಾರಿಸಲ್ಪಟ್ಟದೆ. ಇದರಿಂದ ದಿನಾಲೂ ಹಲ್ಲುಗಳನ್ನು ತಿಕ್ಕಿಸ್ವಚ್ಛ ಮಾಡುವದರಿಂದ ಹಲುಗಳ ಬಲಹೀನತೆ, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಹಲ್ಲುಗಳಿಂದ ಬರುವ ಕೀವು, ಹಲ್ಲುಗಳ ನೋವು, ವಗೈರೆ ಸಂಪೂರ್ಣವಾಗಿ ನಿಲ್ಲುವದು. ಹಲ್ಲುಗಳು ಮುತ್ತಿನಂತೆ ಬೆಳ್ಳಗಾಗುವವು. ಲಕ್ಷಗಟ್ಲೆ ಡಬ್ಬಿಗಳು ಮಾರಲ್ಪಟ್ಟವು.

ಡಬ್ಬಿ ಒಂದರ ಕಿಮ್ಮತು 2 ಆಣೆ.

ಕೇಶವರ್ಧಿನಿ ತೈಲ.

ಕೇಶವರ್ಧಿನಿ ತೈಲ:—ಮನೋಹರವಾದ ಪರಿಮಳ ತೈಲ. ಇದು ಸ್ಪಿರಿಟು ಇಲ್ಲದ ಉತ್ತಮ ತೈಲ. ಇದರ ಕ್ರಯ ಕಮ್ಮಿ ಗುಣ ಹೆಚ್ಚು. ಸಾವಿರಾರು ಬಾಟ ಮಾರಲ್ಪಟ್ಟವು. ಬಾಟ ಒಂದರ ಕಿಮ್ಮತು **1—0—0** 3 ಬಾಟ್ಲಗಳಿಗೆ **2—10—0**. ವಿ. ಪಿ. ಪ್ರತ್ಯೇಕ.

ರಖಂ ಆಗಿಯೂ ಚಿಲರೆ ಆಗಿಯೂ ಈ ಕೆಳಗಿನ
ವಿಳಾಸದವರಲ್ಲಿ ದೊರೆಯುವುದು:—
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ಮಂಗಳೂರು.

ವಿಳಾಸ:— ಅಮೃತಾಂಜನ ಡಿಪೊ,
109 ಫ್ರೇಯರ್ ರೋಡ್,
ಫೋರ್ಟ್, ಮುಂಬಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟ ಪ್ರಕಾರ ರಿಜಿಸ್ಟರಾಗಿದೆ.

ನಿಯಮಿತ ಮೂಲಧನ ರೂ. 10,00,000.
ಪ್ರತಿಜ್ಞಾತ ಮೂಲಧನ ರೂ. 85,00,00.
ಆಗತ ಮೂಲಧನ ರೂ. 10,6450.
ಭಂಡವಾಳ ರೂ. 12,00,000.
ವಿಮೆ ಮಾಡಿರುವವರ ಸಂಖ್ಯೆ 76,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ ಏಜಂಟರು ಬೇಕು. ನಮ್ಮ ವಿಳಾಸ:—

ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ.

ಸ್ವದೇಶಿಲೈಫ್ಎಶ್ಯುರೆನ್ಸ್‌ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಐ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ॥ ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)-ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದಾರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವಾಗ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವರಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19-1-0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20--6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ರಂಥಿಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:—

ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸುಲಭ ಕ್ರಯ! ಪರೀಕ್ಷಿಸಿರಿ!! ಸಂತೋಷ ಪಡುವಿರಿ!!!

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ. ಸುಂದರವಾದ ಗಡಿಯಾರದ ಸರಪಣಿ ಸಮೇತ ರೂ. 2—4—0 ಮಾತ್ರ. 5 ವರುಷಗಳ ಗ್ಯಾರೆಂಟಿ.

SUPERIOR WATCH Co.
Rs. 2/4.
Rs. 2/4.
POST BOX No. 167
MADRAS, E.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡಿಯುತ್ತದೆ. 'ಸಾವಿರಗಟ್ಲೆ' ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು. ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಕ್ರಯ ರೂ. 5-12-0. ಇದನ್ನು ಜುಲಾಯಿ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಘಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪಿಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:— ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಸುಲಭ ಕ್ರಯಗಳು! ಪರೀಕ್ಷಿಸಿರಿ!! ಸಂತೋಷ ಪಡುವಿರಿ!!!

ವ್ಯಾಪಾರಸ್ಥರುಗಳಿಗೆ ಕೊಡುವ ಕ್ರಯಗಳಿಗೆ ಬಿಕರಿ.

ರಾಸ್ಕೋಪ್ ಸಿಷ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ಎಂದೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಹಿಂಭಾಗದಲ್ಲಿ ಗ್ಲಾಸುಡೋಮು ಇದು ನೋಡಲಿಕ್ಕೆ ಬಹು ರಮಣೀಯವಾಗಿದೆ. ಬಹು ಮಜಬೂತಾದ ದೀರ್ಘಕಾಲ ಬಾಳಿಕೆಗೆ ಬರುವ ಮತ್ತು ಕಾಲವನ್ನು ಸರಿಯಾಗಿ ತೋರಿಸುವ ಘಡಿಯಾರವು. ಇದಕ್ಕೆ ೫ ವರುಷಗಳ ಗ್ಯಾರೆಂಟಿ. ಬೇರೆ ಕಂಪೆನಿಯವರು ಇದಕ್ಕಿಂತ ಕಮ್ಮಿ ಬೆಲೆಯ ಘಡಿಯಾರವನ್ನು ರೂ. 2—8—0 3—8—0 ಬೆಲೆಗೆ ಮಾರುತ್ತಾರೆ. ಕಾರಣ ಮೋಸ ಪಡಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತೃಪ್ತಿಯಾಗಿಯೂ ಸಂತೋಷವಾಗಿಯೂ ಇರುವದು

ಕ್ರಯ ರೂ. 2—8—0. ವಿ. ಪಿ. ಪಿ. ಚಾರ್ಜು ರೂ. 0—4—0.

ಸ್ವೀಸ್ ಮೇಡ್ ರೈಲ್ವೆ ರೆಗ್ಯುಲೇಟರ್ ಲೀವರ್ ಜ್ಯುವೆಲ್ಡ್ ವಾಚ್.



ಇದು ಎಲ್ಲಾ ದೇಶದಲ್ಲಿಯೂ ಬಹಳ ಪ್ರಸಿದ್ಧವಾದ ಘಡಿಯಾರವು. ಇದು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹಳ ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುವದು. ಇದು ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟುದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುವವು. ಇದಕ್ಕೆ ಒಳಗಿನ ಗ್ಲಾಸು ಡೋಮ ಸಹಾ ಇರುವದು. ಇದಕ್ಕೆ ೫ ವರುಷಗಳ ಗ್ಯಾರಂಟಿ.

ಕ್ರಯ ರೂ. 3—8—0 ವಿ. ಪಿ. ಪಿ. ಚಾರ್ಜು ರೂ. 0-4—0.

ಲೇಡಿಸ್ ಸಿಲ್ವರ್ ಜ್ಯುವೆಲ್ಡ್ ವಾಚ್.



ಈ ಘಡಿಯಾರವು ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿರುವವು. ಇದು ಕಾಲವನ್ನು ಸರಿಯಾಗಿ ತೋರಿಸುತ್ತದೆ. ಉಪಯೋಗಕ್ಕೆ ಯೋಗ್ಯವಾದದ್ದು. ಇದನ್ನು ಕೈಯಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಇಂಥಾ ವಾಚನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದಕ್ಕೆ ಗ್ಯಾರಂಟಿ ೫ ವರುಷಗಳು.

ಕ್ರಯ ರೂ. 6—0—0 ವಿ. ಪಿ. ಪಿ. ಚಾರ್ಜು ರೂ. 0—6—0.

ಪೋಲಾರ್ ಲೀವರ್ ವಾಚ್.



(ವಾರಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು)

ಇದು ಬಹಳ ಆಶ್ಚರ್ಯಕರವಾದ ಎಂಟು ದಿವಸಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು. ಇದು ಬಹಳ ಗಟ್ಟಿತರವಾದದ್ದು. ಇದು ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಬಂಗಾರದ ಪದಕಗಳನ್ನು ಹೊಂದಿರುತ್ತದೆ. ಇದು ಶುದ್ಧ (ಚೊಕ್ಕ) ಬೆಳ್ಳಿಯಿಂ ಮಾಡಲ್ಪಟ್ಟಿರುತ್ತದೆ. ಇಂಥಾ ರಮಣೀಯವಾದ ಮತ್ತು ಆಶ್ಚರ್ಯಕರವಾದ ಗಡಿಯಾರವನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದನ್ನು ಪ್ರತಿ ಒಬ್ಬರು ತರಿಸಿಕೊಂಡು ಸಂತೋಷಪಡುವಿರೆಂದು ನಂಬುತ್ತೇವೆ. ಇದಕ್ಕೆ ಗ್ಯಾರಂಟಿ ೧೦ ವರುಷಗಳು.

ಕ್ರಯ ರೂ. 10—0—0. ವಿ. ಪಿ, ಪಿ. ಚಾರ್ಜು ರೂ. 0—8—0.

ಟೇಬಲ್ ಟ್ಯಾಂಪೀಸು ಘಡಿಯಾರಗಳು.



ಇವುಗಳು ಬಹಳ ಕಡಿಮೆ ಕ್ರಯದವುಗಳಾಗಿರುವದಲ್ಲದೆ ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಮನೋಹರವಾಗಿಯೂ ಇರುವವು. ಇವುಗಳು ಅನೇಕ ಸಂವತ್ಸರಗಳ ವರಿವಿಗೆ ಬಾಳಿಕೆ ಬರುವವು. ಈ ಘಡಿಯಾರಗಳನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲಿಯೂ ಅವಶ್ಯ ಇಡಬೇಕಾದ್ದು.

ನಂಬರ್ ೧. ತಾರೀಕುಗಳನ್ನು ತೋರಿಸುವ ಮತ್ತು ಅಲಾರಂ ಸಹ ಇರುವ ಕ್ಯಾಲಂಡರ್ ಅಲಾರಂ ಟ್ಯಾಂಫೀಸು ೧ಕೆ ಕ್ರಯ ರೂ. 2-8-0 ವಿ. ಪಿ. ಪಿ. ಚಾರ್ಜು 0—6—0. ನಂಬರ್ ೨. ತಾರೀಕುಗಳು ಇಲ್ಲದ ಬರೀ ಅಲಾರಂ ಟ್ಯಾಪಸೆ ೧ಕ್ಕೆ ಕ್ರಯ ರೂ. 2-0-0 ವಿ.ಪಿ. ಚಾರ್ಜು 0-6-0. ನಂಬರ್ ೩. ತಾರೀಕು ಮತ್ತು ಅಲಾರಂ ಇಲ್ಲದ ಸಾದಾ ಟ್ಯಾಂಫೀಸ ೧ಕ್ಕೆ ಕ್ರಯ ರೂ. 1-4-0 ವಿ. ಪಿ. ಪಿ. ಚಾರ್ಜು 0-6-0.

ಕ್ಯಾರೇಜು ಕ್ಲಾಕು ಘಡಿಯಾರಗಳು.



ಇವು ಬಹಳ ರಮ್ಯವಾದವುಗಳು ಮತ್ತು ಮನೋಹರವಾದವುಗಳು. ಅನೇಕ ವರುಷಗಳ ವರಿಗೂ ಬಾಳಿಕೆ ಬರತಕ್ಕವುಗಳು. ಇವು ಉತ್ತಮ ತರದ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿ ಸೈಡು ಗ್ಲಾಸುಗಳು ಸಹ ಇರುವವು. ಇವನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲ್ಲಿಯೂ ಮತ್ತು ಇತರ ಕಾರ್ಯಾಲಯಗಳಲ್ಲಿಯೂ ಇಡುವದಕ್ಕೆ ಯೋಗ್ಯವಾದವುಗಳು.

ನಂಬರ್ ೧. ಘಂಟೆ, ಅರ್ಧ ಘಂಟೆ ಹೊಡೆಯುವದು. ಮತ್ತು ಅಲಾರಂ ಸಹ ಇರುವದು ೧ಕ್ಕೆ ಕ್ರಯ ರೂ. 5-0-0. ವಿ. ಪಿ. ಪಿ. ಚಾರ್ಜು ರೂ. 0-10-0 ನಂಬರ್ ೨. ಘಂಟೆ, ಅರ್ಧಘಂಟೆ ಮಾತ್ರ ಹೊಡೆಯುವದು ರೂ. 4-8-0 ವಿ.ಪಿ.ಪಿ. ಚಾರ್ಜು 0-8-0. ನಂಬರ್ ೩. ಕಾಲವನ್ನು ಮಾತ್ರ ತೋರಿಸಿ 15 ನಿಮಿಷಗಳ ವರಿಗೂ ವಾದ್ಯವನ್ನು ಬಾರಿಸುವದು. ರೂಪಾಯಿ 5-0-0 ವಿ. ಪಿ. ಪಿ. ಚಾರ್ಜು 0—10—0 ನಂಬರ್ ೪. ಘಂಟೆಘಂಟೆಗೆ ವಾದ್ಯವನ್ನು ಬಾರಿಸುವದು. ರೂ. 5-8-0 ವಿ. ಪಿ. ಪಿ. ಚಾರ್ಜು ರೂ. 0—10—0

ನಿಕ್ಕಲ್ ಬೆಳ್ಳಿ ಗಡಿಯಾರದ ಸರಪಣಿ.

ಇದು ಎಂದೆಂದಿಗೂ ಕಪ್ಪಾಗದಂಥ ಒಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ನೋಡುವದಕ್ಕೆ ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ೧ಕ್ಕೆ ಕ್ರಯ ರೂ. 0--8--0 ವಿ. ಪಿ. ಪಿ. ಚಾರ್ಜು ರೂ. 0--4--0.

ಎಲೆಕ್ಟ್ರಿಕ್ ಭಂಗಾರದ ಘಡಿಯಾರದ ಸರಪಣಿ.

ಇದು ಎಂದಿಗೂ ಭಂಗಾರದಂತೆ ಹೊಳೆಯುವ ಘಡಿಯಾರದ ಸರಪಣಿ. ಬಹಳ ಉತ್ತಮ ರಖಂ ೧ಕ್ಕೆ ಕ್ರಯ ರೂ. 1--0--0 ವಿ.ಪಿ.ಪಿ. ಚಾರ್ಜು ರೂ. 0--4--0.

ಶುದ್ಧ ಬೆಳ್ಳಿಯ ಘಡಿಯಾರದ ಸರಪಣಿ.

ಇದು ೧ನೇ ನಂಬರ್ ಚೊಕ್ಕ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಕೆಲಸ ಬಹಳ ನಾಜೂಕಾಗಿಯೂ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ೧ಕ್ಕೆ ಕ್ರಯ ರೂ. 3—0—0 ವಿ. ಪಿ. ಪಿ. ಚಾರ್ಜು ರೂ. 0--4--0. ವಿಳಾಸ:—

ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ,
ನಂಬರ್ ೨೦, ಶಿಂಗಣಸ್ ಬೀದಿ, ಪಾರ್ಕು ಟೌನ್, ಪೋಸ್ಟು, ಮದ್ರಾಸ್.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ ಡಿ. ಅಂಡ್ರೂಸ

ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

"ಅಮೇರಿಕದ ವಿಶಿಷ್ಟತೆ."

પ્રો. જેમ્સની વિજળીક શક્તિની ગોળીઓ.
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷಘಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ—ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಆಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ. ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು-ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮೆ.ಜೇ.ಸಿ. ಬ್ರೀತೋ(ಪೊಂಡಾ-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮೆ. ಜೆ. ಆರ್. ಗಾಯಿಕವಾಡ, (ಸಕ್ರಿಯ ಮಾಮುಲತದಾರರು—ವಿ.ಪಿ. ದ್ವಾರಾ ಆದಷ್ಟು ತ್ವರಿತದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

The Anglo Indian Drug & Chemical Company,
155, *Market, Jumma Musid* BOMBAY.

ಪ್ರಿಂಟರು:—ದಿ. ಊಲನ್‌ವರ್ಕ್ಸ್, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 4ನೇ ಒಕ್ಟೋಬರ 1912.

ಮದ್ರಾಸು ನ್ಯಾಯವಿಧಾಯಕ ಸಭೆಯು.

ಕಳೆದ ತಿಂಗಳ ತಾ. ೨೭ರಲ್ಲಿ ನ್ಯಾಯವಿಧಾಯಕ ಸಭೆಯು ಉದಕಮಂಡಲದಲ್ಲಿ ಕೂಡಿತು. ಆಕ್ಟಿಂಗ್ ಗವರ್ನರರಾದ ಬಹುಮಾನಪಟ್ಟ ಸರ್ ಮುರ್ರೆ ಹೆಮ್ಮಿಕ್‌ರವರು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ನಮ್ಮ ಪ್ರಾಂತ್ಯಗಳ ಪ್ರತಿನಿಧಿಗಳಾದ ಬಹುಮಾನಪಟ್ಟ ರಾವ್‌ಬಹದ್ದೂರ್ ಎನ್ ಸುಬ್ಬರಾವ್‌ರವರು ಈ ಸರ್ತಿ ದಕ್ಷಿಣ ಕನ್ನಡ ಮತ್ತು ಮಲೆಬಾರ ಜಿಲ್ಲೆಗಳ ಪರವಾಗಿ ಸರಕಾರದವರ ಕೂಡೆ ಕೆಲವು ಪ್ರಶ್ನೆಗಳನ್ನು ಕೇಳಿರುವರು. ಫೋರೆಸ್ಟ ಕಮ್ಮಿಟಿಯುವರು ಈ ಜಿಲ್ಲೆಯನ್ನು ಸಂದರ್ಶಿಸುವಂತೆ ಸರಕಾರದವರು ಈ ಕಮ್ಮಿಟಿಯವರನ್ನು ಆಜ್ಞಾಪಿಸಬೇಕೆಂದು ರಾ। ಸುಬ್ಬರಾವ್‌ರವರು ಸರಕಾರದವರನ್ನು ಕೇಳಿಕೊಂಡಿದ್ದರು. ಆದರೆ ಸುಬ್ಬರಾವ್‌ರವರ ಈ ವಿಜ್ಞಾಪನೆಯು ನಿರಾಕರಿಸಲ್ಪಟ್ಟಿರುವುದೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ. ಫೋರೆಸ್ಟ್ ಕಮ್ಮಿಟಿಯುವರು ಈ ಜಿಲ್ಲೆಯನ್ನು ಸಂದರ್ಶಿಸುವಂತೆ ಪುತ್ತೂರು ವರ್ಗದಾರರ ಸಂಘ ಮೊದಲಾದವರು ಬರಕೊಂಡ ಅರ್ಜಿಗಳು ಫೋರೆಸ್ಟ್ ಕಮ್ಮಿಟಿಯವರಿಂದ ಪರ್ಯಾಲೋಚಿಸಲ್ಪಟ್ಟಿರುವವು. ಈ ಜಿಲ್ಲೆಯನ್ನು ಸಂದರ್ಶಿಸಬೇಕಾದ ಸಮಯವು ಕಮ್ಮಿಟಿಯವರಿಗೆ ಇಲ್ಲದ್ದರಿಂದಲೂ ವ್ಯವಸಾಯ ಪಶುಗಳಿಗೆ ಮೇಯಲು ಬೇಕಾದ ಹುಲ್ಲುಗಾವಲುಗಳ ವಿಶೇಷ ಪ್ರಸ್ತಾಪಗಳು ಈ ಜಿಲ್ಲೆಯಲ್ಲಿಲ್ಲದ್ದರಿಂದಲೂ ಫೋರೆಸ್ಟ್ ಕಮಿಟಿಯವರು ಇಲ್ಲಿ ಬರಲಾರರು. ಜಂಗ್ಲಿ ಇಲಾಖೆಯ ಆಡಳಿತೆಯ ಕೆಲವು ಸಾಮಾನ್ಯ ಅಡಚಣಿಗಳನ್ನು ಹ್ಯಾಗೆ ನಿವಾರಿಸಬಹುದೆಂಬುದನ್ನು ಪರ್ಯಾಲೋಚಿಸುವರೆ ಈ ಕಮ್ಮಿಟಿಯು ಏರ್ಪಡಿಸಲ್ಪಟ್ಟಿರುವುದು. ಆದ್ದರಿಂದ ಆಯಾ ಪ್ರಾಂತ್ಯಗಳಿಗೆ ವಿಶೇಷವಾಗಿರುವ ಸಂಕಷ್ಟಗಳ ಪರಿಶೋಧನೆಯನ್ನು ಈ ಕಮ್ಮಿಟಿಯವರು ಮಾಡಲಾರರು. ಈ ರೀತಿ ಸರಕಾರದವರು ರಾ। ಸುಬ್ಬರಾವ್‌ರವರ ಈ ವಿಷಯದ ಪ್ರಶ್ನೆಗೆ ಉತ್ತರ ಕೊಟ್ಟಿರುವರು. ಈ ಜಿಲ್ಲೆಯ ಜನರು ಸುರಕ್ಷಿತ ಕಾಡುಗಳ ಮೂಲಕ ಅನುಭವಿಸುತ್ತಿರುವ ಸಂಕಷ್ಟಗಳ ನಿವಾರಣೆಯನ್ನು ಸರಕಾರದವರಿಗೆ ಯುಕ್ತ ಕಂಡರೆ ಈಗ ನೇಮಿಸಲ್ಪಟ್ಟಿರುವ ಕಮ್ಮಿಟಿಯವರ ಮೂಲಕವೇ ಮಾಡಬೇಕೆಂತಿಲ್ಲ. ತಾವಾಗಿಯೇ ಈ ಸಂಕಷ್ಟಗಳಿಗೆ ನಿವಾರಣೆಯನ್ನು ಕಲ್ಪಿಸಿಕೊಡಬಹುದು. ಆದರೆ ಸರಕಾರದವರ ಉತ್ತರದಿಂದ ತೋರಿಬರುವಂತೆ ಜಂಗ್ಲಿ ಇಲಾಖೆಯ ಆಡಳಿತೆಯ ಕೆಲವು ವಿಷಯಗಳು ಈ ಕಮ್ಮಿಟಿಯವರಿಂದ ಪರ್ಯಾಲೋಚಿಸಲ್ಪಡುವಾಗ ನಮ್ಮ ಜಿಲ್ಲೆಗೆ ವಿಶೇಷವಾದವುಗಳು ಸಹ ಇವರಿಂದಲೇ ಪರ್ಯಾಲೋಚಿಸಲ್ಪಡುತ್ತಿದ್ದರೆ ನಮ್ಮ ಸಂಕಷ್ಟಗಳಿಗೆ ಸಹ ಸರಕಾರವು ತಕ್ಕದಾದ ಲಕ್ಷ್ಯವನ್ನು ಕೊಡುತ್ತಿರುವುದೆಂಬುವ ಭಾವವು ನಮ್ಮೆಲ್ಲವರಲ್ಲಿ ಉಂಟಾಗುತ್ತಿತ್ತು. ನಮ್ಮ ಸಂಕಷ್ಟಗಳ ಯಥಾರ್ಥ ಸ್ಥಿತಿಯನ್ನು ಕಮಿಟಿ ಮೂಲಕ ತಿಳಕೊಳ್ಳುವರೆ ಸರಕಾರದವರಿಗೆ ಅವಕಾಶ ದೊರಕುತ್ತಿತ್ತು. ಕಾಡು ಮೃಗಗಳಿಂದುಂಟಾಗುವ ದನಕರುಗಳ ನಷ್ಟವನ್ನು ಕಡಮೆ ಮಾಡುವ ವಿಷಯ ಸರಕಾರದವರು ಕೋವಿ ಲೈಸನ್ಸುಗಳನ್ನು ಹೆಚ್ಚಾಗಿ ಕೊಟ್ಟಿರುವರೆಂದೂ ಹಲವು ಜನರು ಕೂಡಿಕೊಂಡು ಮಾಡಬೇಕಾದ ಸಿಕಾರಿಗಳಿಗೆ ಜಂಗ್ಲಿ ಇಲಾಖೆಯವರು ತಮ್ಮ ಅಪ್ಪಣೆಯನ್ನು ನಿರಾಕರಿಸರೆಂದೂ ತಿಳಿಸಿರುತ್ತಾರೆ. ಆದರೆ ಸುರಕ್ಷಿತ ಕಾಡುಗಳಲ್ಲಿರುವ ಹಿಂಸ್ರ ಮೃಗಗಳ ಬೇಟೆಯನ್ನು ಪ್ರಜಾಸಹಾಯದಿಂದ ಸರಕಾರದವರೇ ಮಾಡಿಸುವುದು ಉಚಿತವಾಗಿರುವುದು. ಈ ಬಗ್ಯೆ ಹಲವು ನೂರು ರೂಪಾಯಿಗಳ ಸಂಬಳವುಳ್ಳ ಸಿಕಾರಿಯೊಬ್ಬನನ್ನು ನೇಮಿಸುವುದರಿಂದ ಪ್ರಯೋಜನವಿರದು. ಜಂಗ್ಲಿ ಇಲಾಖೆಯವರಿಂದಲೇ ಈ ಕೆಲಸವನ್ನು ನಿರ್ವಹಿಸಬಹುದು. ಸುರಕ್ಷಿತ ಕಾಡುಗಳ ಪೈಕಿ ಸಾಗುವಳಿ ಸ್ಥಳಗಳಿಗೆ ತಾಗಿರುವ ೮೮೦ ಗಜಗಳ ವಿಸ್ತೀರ್ಣದಿಂದ ಕಾಡುಗಳನ್ನು ತೆಗದರೆ ದನಕರುಗಳ ವಧೆಯು ಕಡಮೆಯಾಗುತ್ತಿತ್ತು. ಆದರೆ ಈ ರೀತಿ ವರ್ತಿಸುವುದು ಸರಕಾರದವರಿಗೆ ಯುಕ್ತತೋರುವದಿಲ್ಲವೆಂತ ರಾ। ಸುಬ್ಬರಾವರವರಿಗೆ ಈ ವಿಷಯದಲ್ಲಿ ಕೊಟ್ಟ ಉತ್ತರದಿಂದ ತಿಳಿಯುತ್ತೇವೆ.

ಉಳ್ಳಾಲ ಸಮೀಪ ನೇತ್ರಾವತಿ ಹೊಳೆಯ ಮೇಲೆ ಹಾಕಿರುವ ರೈಲ್ವೆ ಸಂಕದ ದೆಸೆಯಿಂದ ಮಂಗಳೂರು ಅಳಿವೆಯ ಆಳವು ಕಡಮೆಯಾಗುತ್ತಾ ಬರುವುದರಿಂದ ಅಳಿವೆಯು ಈ ರೀತಿ ಹಾಳಾಗದಂತೆ ಸರಕಾರದವರು ಏನು ಉಪಾಯ ಮಾಡಲಿಕ್ಕಿರುವರೆಂದು ರಾ। ಸುಬ್ಬರಾವ್‌ರವರು ಸರಕಾರದವರನ್ನು ಕೇಳಿಕೊಂಡರು. ಅಳಿವೆಯ ಆಳವು ಹೀಗೆ ಕಡಮೆಯಾಗಿ ಹೋಗಿದೆ ಎಂಬುದಕ್ಕೆ ದೃಷ್ಟಾಂತಗಳೇನೂ ಸರಕಾರದವರಿಗೆ ದೊರಕಿದ್ದಿಲ್ಲವೆಂಬ ಉತ್ತರವು ಕೊಡೋಣಾಗಿದೆ. ಈ ವಿಷಯದಲ್ಲಿ ಸರಕಾರದವರು ತಕ್ಕ ತನಖಿ ನಡಿಸುವುದು ಅಗತ್ಯವಾಗಿದೆ. ಸಮುದ್ರ ಪ್ರವಾಹದಿಂದ ಕೊರೆದು ಹೋಗುತ್ತಿರುವ ಗಂಗೊಳ್ಳಿ ಬಂದರವನ್ನು ಸುರಕ್ಷಿತಗೊಳಿಸಲು ಬೇಕಾದ ಏರ್ಪಾಡಿನ ಆಲೋಚನೆಯು ಮಳೆಗಾಲವು ಮುಗಿದನಂತರ ತಿರಿಗೊಮ್ಮೆ ಸರಕಾರದವರಿಂದ ಮಾಡಲ್ಪಡುವುದೆಂತ ರಾ। ಸುಬ್ಬರಾವರಿಗೆ ತಿಳಿಸಲ್ಪಟ್ಟಿದೆ. ಉಪ್ಪಿನಂಗಡಿ ತಾಲೂಕಿನ ಸುಳ್ಯದಲ್ಲಿ ಜನರ ಅನುಕೂಲತೆಗಾಗಿ ಒಂದು ಸಬ್ ರಿಜಿಸ್ತ್ರಿ ಆಫೀಸನ್ನು ಸ್ಥಾಪಿಸುವ ವಿಷಯವು ರಿಜಿಸ್ತ್ರಿ ಇಲಾಖೆಯ ಇನ್ಸ್‌ಪೆಕ್ಟರ್ ಜನರಲರವರ ಆಲೋಚನೆಯಲ್ಲಿರುವುದು. ಈ ಆಫೀಸನ್ನು ಬೇಗನೆ ತೆರೆದಲ್ಲಿ ಆ ಪ್ರಾಂತ್ಯಗಳ ಜನರಿಗೆ ಬಹಳ ಉಪಕಾರವಾಗುತ್ತಿತ್ತು. ಮಂಗಳೂರಿನಿಂದ ಮದ್ರಾಸಿಗೆ ಹೋಗುತ್ತಿರುವ ಮೈಲು ಬಂಡಿಗಳ ಸಮಯವನ್ನು ತಬ್ದೀಲು ಮಾಡಬೇಕೆಂಬುವ ಸೂಚನೆಯನ್ನು ಸುಬ್ಬರಾವ್‌ರವರು ಸರಕಾರದವರ ಮುಂದಿಟ್ಟಿದ್ದರು. ಆದರೆ ಈ ಸೂಚನೆ ಮೇರೆಗೆ ರೈಲ್ವೆ ಕಂಪೆನಿಯವರಿಗೆ ಆಜ್ಞೆ ಕೊಡುವ ಅಧಿಕಾರವು ಮದ್ರಾಸು ಸರಕಾರದವರಿಗಿಲ್ಲೆಂದು ತಿಳಿಯುತ್ತೇವೆ.

ಇತರ ಮೆಂಬರರಿಂದ ಸಹ ಕೆಲವು ಪ್ರಶ್ನೆಗಳು ಕೇಳೋಣಾಗಿವೆ. ವಿದ್ಯಾಶಾಲೆಗಳಿಗೆ ಕೊಡೋಣಾಗುವ ದ್ರವ್ಯಸಹಾಯ ವಿಷಯವಾದ ನಿಬಂಧನೆಗಳು ತಿದ್ದಲ್ಪಟ್ಟವೆ. ಈ ಬದಲಾವಣೆಗಳಿಂದ ಶಾಲೆಗಳಿಗೆ ಮುಂಚಿನಕ್ಕಿಂತ ಹೆಚ್ಚಿನ ಸಹಾಯವು ದೊರಕುವಂತೆ ಅಸ್ಪದವಿರುವುದು. ಬಹುಮಾನಪಟ್ಟ ಕೊಲ್ಲೆಂಗೋಡು ವಾಸುದೇವ ರಾಜರಿಂದ ಸಭೆಯು ಮುಂದಿಡಲ್ಪಟ್ಟ 'ಮಲಬಾರ್ ಇನ್ಹೆರಿಟೆನ್ಸ್ ಬೀಲ್' ಎಂಬ ಕಾನೂನಿನ ಮಸೂದೆಯು ಕೌನ್ಸಿಲಿನ ಪರ್ಯಾಲೋಚನೆ ಬಗ್ಯೆ ಸ್ವೀಕರಿಸಲ್ಪಟ್ಟಿರುವುದು. ಇದನ್ನು ಪರ್ಯಾಲೋಚಿಸುವರೆ ಒಂದು ಉಪಕಮಿಟಿಯು ನೇಮಿಸಲ್ಪಟ್ಟಿರುತ್ತದೆ.

ಇನ್ನು ಬೇಗನೆ ಕೆಲಸದಿಂದ ನಿವೃತ್ತರಾಗುವ ಆಕ್ಟಿಂಗ್ ಗವರ್ನರ ದೊರೆಗಳವರ ಕಾರ್ಯಶ್ರಮಗಳನ್ನು ಸ್ತುತಿಸಿ ಪ್ರಜಾಕಡೆಯ ಮೆಂಬರರು ಭಾಷಣ ಮಾಡಿದ ನಂತರ ಗವರ್ನರ್ ದೊರೆಗಳವರು ಈ ಭಾಷಣಗಳಿಗೆ ತಕ್ಕ ಉತ್ತರವನ್ನು ಕೊಟ್ಟು ಸಭೆಯನ್ನು ಮುಕ್ತಾಯಗೊಳಿಸಿದರು.

ಬಂಗ್ರಮಂಜೇಶ್ವರ ಸರಸ್ವತಿ ವಿದ್ಯಾಲಯ.

ಈ ವಿದ್ಯಾಲಯದ ವರುಷಾವಧಿ ಸಭೆಯು ಕಳೆದ ತಿಂಗಳ ತಾ. ೨೨ರಲ್ಲು ಮಂಜೇಶ್ವರದಲ್ಲಿ ಜರಗಿತು. ತಲಚೇರಿಯ ಮ। ರಾ। ರಾ। ಟಿ. ಮುಕುಂದ ಮಲ್ಯರ್. ಬಿ. ಎ. ಎಲ್. ಟಿ ಯವರು ಈ ಸಭೆಯ ಅಧ್ಯಕ್ಷರಾಗಿದ್ದರು. ಬಂಗ್ರಮಂಜೇಶ್ವರ, ಮಂಜೇಶ್ವರ, ಮಂಗಳೂರಿನ ಗೃಹಸ್ಥರು ಸಹ ಈ ಸಭೆಯಲ್ಲಿ ಹಾಜರಿದ್ದರು. ಶಾಲೆಯ ಬಾಲಿಕೆಯರಿಂದ ಸ್ವಾಗತ, ಹಾಡುಗಳು ಮೊದಲಾದವುಗಳನ್ನು ಹಾಡಿಸಿ ಆದ ಮೇಲೆ ಶಾಲಾ ಹೆಡ್ ಮಾಸ್ತರರಾದ ರಾ। ಎಮ್. ಪಾಂಡುರಂಗ ಕಾಮತರವರು ಇದೇ ಕಳದ ಸಪ್ಟಂಬರ ತಿಂಗಳ ತಾ. ೨೦ಕ್ಕೆ ಅಂತ್ಯವಾಗುವ ಶಾಲೆಯ ೫ನೇ ವರುಷದ ಸಮಾಚಾರವನ್ನು ಸಭೆಯವರಿಗೆ ಓದಿ ಹೇಳಿದರು.

ವಿದ್ಯಾರ್ಥಿಗಳಿಗೆ ಶಿಕ್ಷಣವು ಎಂದಿನಂತೆ ಉಚಿತವಾಗಿ ಕೊಡೋಣಾಗುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯು ೩೯ ಆಗಿರುವುದು. ಅಂದರೆ ಕಳೆದ ವರುಷಕ್ಕಿಂತ ಇದು ತಗ್ಗಿರುವುದು. ಹೆಡ್ ಮಾಸ್ತರರು ಪ್ರತಿಫಲ ಹೊಂದದೆ ಈ ಶಾಲಾ ಕೆಲಸವನ್ನು ನಿರ್ವಹಿಸುತ್ತಿರುವರು. ಅಸಿಸ್ಟಾಂಟ್ ಉಪಾಧ್ಯಾಯರೊಬ್ಬರನ್ನು ನೇಮಿಸಿರುತ್ತಾರೆ. ಶಾಲಾ ಹಿತಚಿಂತಕರಿಂದ ಸಹಾಯದ್ರವ್ಯವಾಗಿ ರೂ. ೧೨೮—೪—೦ ಶಾಲೆಗೆ ದೊರಕಿರುವುದು. ಮುಷ್ಟಿಫಂಡಿನ ಮೂಲಕ ರೂ. ೪—೧೪—೦ ಜಮೆಯಾಗಿರುತ್ತದೆ. ಮುಷ್ಟಿಫಂಡಿನ ಮೂಲಕ ದೊರಕಿದ್ದು ಕಳೆದ ವರುಷದಕ್ಕಿಂತ ಕಡಮೆಯಾಗಿರುವುದು. ಗ್ರಾಮಸ್ಥರ ಅಪೇಕ್ಷೆ ಮೇರೆಗೆ ಕಳದ ಆಗೋಸ್ತು ತಿಂಗಳ ವರೆಗೆ ಹುಡುಗರ ಶಾಲೆಯಾಗಿದ್ದ ಈ ಶಾಲೆಯನ್ನು ಅಂದಿನಿಂದ ಬಾಲಿಕಾ ಪಾಠಶಾಲೆಯಾಗಿ ಮಾಡಿದ್ದಾರೆ. ಶಾಲೆಯು ಬೇಗನೆ ಸರಕಾರದವರಿಂದ ಮಂಜೂರು ಮಾಡಲ್ಪಡುವ ಸಂಭವವಿದೆ. ತಾಲೂಕು ಬೋರ್ಡು ಪ್ರೆಸಿಡೆಂಟರು ಈ ಶಾಲೆಯನ್ನು ಸಂದರ್ಶಿಸಿರುವರು. ಚಿ[illegible]ಪುರ ಮಠದ ಶ್ರೀಪಾದಂಗಳವರು ಶಾಲಾ ಮಕ್ಕಳಿಗೆ ಮಿಠಾಯಿ ಹಂಚಿಸಿದ್ದಲ್ಲದೆ ಶಾಲಾ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಆರೋಗ್ಯ ಧನ, ಸುಖ ವೃದ್ಧಿಸಲೆಂದು ಆಶೀರ್ವದಿಸಿರುವರು.

ಮೇಲಿನ ಶಾಲಾ ಸಮಾಚಾರದಿಂದ ಶಾಲೆಯನ್ನು ನಡೆಸಲು ಹೆಡ್‌ಮಾಸ್ತರರಾದ ಪಾಂಡುರಂಗ ಕಾಮತರವರು ಬಹಳ ಪೇಚಾಡುತ್ತಿರುವರೆಂಬುದಾಗಿ ವ್ಯಕ್ತವಾಗುವುದು. ಆದರೆ ಅವರಿಗೆ ತಕ್ಕ ಪ್ರೋತ್ಸಾಹವು ಶಿಕ್ಕಿದ್ದು ವರದಿಯಿಂದ ತೋರಿ ಬರುವುದಿಲ್ಲ. ವರದಿಯಲ್ಲಿ ಪ್ರಕಟಿಸಲ್ಪಟ್ಟ ಆಶ್ರಯದಾತರ ಹೆಸರುಗಳಲ್ಲಿ ಮಂಜೇಶ್ವರದ ಸಂಪನ್ನರ ಹೆಸರುಗಳು ಕಾಣಬರುವುದಿಲ್ಲ. ವರುಷ ಒಂದಕ್ಕೆ ೨೦ ಸಾವಿರಕ್ಕೆ ಮಿಕ್ಕಿ ಆದಾಯವುಳ್ಳ ಪ್ರಸಿದ್ಧ ದೇವಸ್ಥಾನವೂ ಇದೇ ರೀತಿ ಆದಾಯವುಳ್ಳ ವರ್ಗದಾರರೂ ಮಂಜೇಶ್ವರದಲ್ಲಿರುವರು. ಇಂಥಾ ಸಂಪತ್ತಿರುವ ಸ್ಥಳದಲ್ಲಿ ಉಚಿತ ಶಿಕ್ಷಣದ ಒಂದು ಶಾಲೆಯನ್ನು ಪಾಂಡುರಂಗ ಕಾಮತರವರು ಸ್ಥಾಪಿಸಿದ್ದು ಯುಕ್ತವಾಗಿರುವುದು. ಲಕ್ಷ್ಮೀ ನಿವಾಸನಾಗಿರುವ ಮಂಜೇಶ್ವರ ಬಂಗ್ರಮಂಜೇಶ್ವರದ ಸರಸ್ವತಿ ವಿದ್ಯಾಲಯದ ಅಭಿವೃದ್ಧಿಗೆ ಸ್ಥಳಿಕ ಗೃಹಸ್ಥರ ಪ್ರೋತ್ಸಾಹವು ಹೆಚ್ಚೆಚ್ಚಾಗಿರ ಬೇಕೆಂಬುವುದೇ ನಮ್ಮ ಅಪೇಕ್ಷೆಯಾಗಿರುವುದು.

'ಆರ್ಯನ್ ಬ್ರದರ್ ಹುಡ್' ಎಂಬ ಆರ್ಯ ಭ್ರಾತೃಗಳ ಸಮಿತಿಯು.

ಹಿಂದೂ ಸಮಾಜ ಸುಧಾರಣೆ ಬಗ್ಗೆ ಮೇಲೆ ಹೆಸರು ಕಾಣಿಸಿದ ಒಂದು ಸಂಘವು ಇತ್ತಲಾಗೆ ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಮುಂಬಯಿ ಹ್ಯಾಕೋರ್ಟು ಜಡ್ಜರಾದ ಬಹುಮಾನಪಟ್ಟ ಸರ್ ನಾರಾಯಣ ಗಣೇಶ ಚಂದಾವರಕಾರರವರು ಈ ಸಮಿತಿಯ ಅಧ್ಯಕ್ಷರಾಗಿರುವರು. ರಾ. ಕೆ. ಆರ್. ದಫ್ತಾರಿಯವರು ಇದರ ಕಾರ್ಯದರ್ಶಿಗಳಾಗಿರುತ್ತಾರೆ. ಪೂರ್ವಕಾಲದಲ್ಲಿ ಸಮಾಜದ ಅಭಿವೃದ್ಧಿ ಸಾಧನೆ ಬಗ್ಗೆ ಆ ಕಾಲದ ವಿದ್ಯಮಾನಗಳಿಗನುಗುಣವಾಗಿ ವರ್ಣಭೇದವು ಆರ್ಯರಿಂದ ಕಲ್ಪಿಸಲ್ಪಟ್ಟಿತು. ಆದರೆ ಇಂಥಾ ವರ್ಣಭೇದವು ಜಾತಿಭೇದಗಳಾಗಿ ಪರಿಣಮಿಸಿ ಕಾಲವು ಮಾರ್ಪಟ್ಟಂತೆ ಈ ಜಾತಿ ಕಟ್ಟುಗಳಲ್ಲಿ ಬೇಕಾದ ಮಾರ್ಪಾಟುಗಳು ಆಗದೆ ಹೋದ್ದರಿಂದ ಪ್ರಕೃತ ಜಾತಿಭೇದದಿಂದ ಅನೇಕ ದುಷ್ಪರಿಣಾಮಗಳು ಹಿಂದೂ ಸಮಾಜಕ್ಕೆ ಸಂಭವಿಸುತ್ತಲಿವೆ. ಈ ದುಷ್ಪರಿಣಾಮಗಳನ್ನು ಹೋಗಲಾಡಿಸಿ ಹಿಂದೂ ಸಮಾಜದಲ್ಲಿ ಐಕ್ಯ ಭಾವನೆಯೂ ಪರಸ್ಪರ ಸಹಾನುತಾಪವೂ ಉಂಟಾಗುವಂತೆ ಸಾಹಸಪಡಬೇಕೆನ್ನುವ ಆಶಯವು ಸುಧಾರಕರ ವರ್ಗದಲ್ಲಿ ಮಾತ್ರವಲ್ಲ ಸುಧಾರಕರಲ್ಲದ ಇತರರಲ್ಲಿಯೂ ಸಹ ತಲೆದೋರಿಯದೆ. ನವೀನ ನಾಗರೀಕತೆಗೂ ಪ್ರಕೃತ ಕಾಲಕ್ಕೂ ಪ್ರತಿಕೂಲವಲ್ಲದ ಜೀವನ ಆದರ್ಶಗಳನ್ನು ಹಿಂದೂ ಧರ್ಮಶಾಸ್ತ್ರ ಪ್ರಕಾರ ಕಲ್ಪಿಸಿಕೊಂಡು ಸಮಾಜದ ಮೇಲ್ಮೆಯು ಸರ್ವತೋಮುಖವಾಗಿ ಸಾಗುವಂತೆ ವರ್ತಿಸಲು ಶಾಸ್ತ್ರ ವಚನಗಳಲ್ಲಿ ಏನೂ ಅಭ್ಯಂತರವಿರದು. ಆದ್ದರಿಂದ ಕಾಲಕ್ಕೆ ತಕ್ಕಂತೆ ಹಿಂದೂ ಜಾತಿಭೇದಗಳನ್ನು ಮಾರ್ಪಡಿಸುವದೆ ಈ ಸಮಿತಿಯ ಮುಖ್ಯ ಉದ್ದೇಶವಾಗಿರುತ್ತದೆ. ವೇದ, ಉಪನಿಷತ್, ಗೀತೆ ಇವುಗಳಲ್ಲಿ ಸೂಚಿಸುವ ಸಿದ್ಧಾಂತಗಳನ್ನನುಸರಿಸಿ ಜಾತಿಭೇದಗಳನ್ನು ಬದಲಾಯಿಸುವುದೇ ಈ ಸಂಘದವರ ಮುಖ್ಯ ಸಾಧನ.

ಸಮಿತಿಯ ಈ ಉದ್ದೇಶವನ್ನು ನೆರವೇರಿಸಲು ಮುಂಬಯಿಯಲ್ಲಿ ಇದೇ ಬರುವ ನವಂಬರ ತಿಂಗಳ ತಾ. ೯ಲ್ಲು ಒಂದು ಪರಿಷದವು ಕೂಡುವುದು. ಸಮಿತಿಯ ಕಾರ್ಯಸಾಧನಗಳಲ್ಲಿ ಸಹಾನುಭೂತಿಯಿರುವ ಹಿಂದೂ ಸಮಾಜದ ಮುಂದಾಳುಗಳಿಗೆ ಈ ಪರಿಷದಕ್ಕೆ ಆಮಂತ್ರಣವು ಕೊಡಲ್ಪಡುವುದು. ಜಾತಿಭೇದ, ಇದರ ಕೆಡಕುಗಳು, ಮತ್ತು ಈ ಕೆಡಕುಗಳ ನಿವಾರಣೋಪಾಯಗಳು ಮಾತ್ರ ಈ ಪರಿಷದದಲ್ಲಿ ಪರ್ಯಾಲೋಚಿಸಲ್ಪಡುವವು. ಸಭಾ ಕಾರ್ಯಗಳು ನಾಲ್ಕು ದಿನಗಳ ಪರಿಯಂತರ ನಡೆಯುವವು.

ಹಿಂದೂಸ್ಥಾನದ ಮುಂದಿನ ಅಭಿವೃದ್ಧಿಯು.

ಡೇರಾ ಇಸ್ಮೈಲ್‌ಖಾನಿನ ಜಮೀನುದಾರ ಠಾಹಲ್‌ರಾಮ ಗಂಗಾರಾಮರೆಂತ ಒಬ್ಬ ಪಂಜಾಬ ಗ್ರಹಸ್ಥರು ಮಂಗಳೂರಿಗೆ ಬಂದಿರುವರು. ಹಿಂದೂಸ್ಥಾನದ ಅಭಿವೃದ್ಧಿಯು ಸಾಮಾನ್ಯ ಶಿಕ್ಷಣದ ಮೂಲಕ ಹ್ಯಾಗೆ ನೆರವೇರಿಸಬೇಕೆಂಬುದರ ವಿಷಯ ಇವರು ಕೆಲವು ಸೂಚನೆಗಳನ್ನು ಬರದು ಪ್ರಕಟಣೆ ಬಗ್ಗೆ ಕಳುಹಿಸಿರುತ್ತಾರೆ.

ಖ್ಯಾತಿಯನ್ನೂ ಸಂಪನ್ನತೆಯನ್ನೂ ಹಿಂದೂಸ್ಥಾನವು ಪೂರ್ವಕಾಲದಲ್ಲಿ ಹೊಂದಿದಂತೆಯೇ ಈಗಲೂ ಹೊಂದಬೇಕಾದರೆ ಸಾಮಾನ್ಯ ಶಿಕ್ಷಣವನ್ನು ಕಡ್ಡಾಯವಾಗಿಯೂ ಉಚಿತವಾಗಿಯೂ ಮಾಡಬೇಕು. ಹಿಂದೂಸ್ಥಾನದಲ್ಲಿ ಪ್ರಾಚೀನಕಾಲದಲ್ಲಿ ಶಿಕ್ಷಣವು ಉಚಿತವಾಗಿಯೂ ಕಡ್ಡಾಯವಾಗಿಯೂ ಇತ್ತೆಂಬುದು ಸಂಸ್ಕೃತ ವಾಙ್ಮಯದಿಂದ ತಿಳಿದುಬರುತ್ತದೆ. ಭೋಜರಾಯನ ಕಾಲದಲ್ಲಿ ಮಾರ್ಗ ಗುಡಿಸುವ ತೋಟಿಗಳಿಗೆ ಸಹ ಶಿಕ್ಷಣವಿತ್ತು. ಹಿತೋಪದೇಶ ಮೊದಲಾದ ಸಂಸ್ಕೃತ ಗ್ರಂಥಗಳಲ್ಲಿ ವಿದ್ಯಾವಿಹೀನನು ಪಶು ಎಂಬುದಾಗಿ ನಿರ್ಧರಿಸಲ್ಪಟ್ಟಿರುತ್ತದೆ. ವಿದ್ಯೆ ಮತ್ತು ಸಂಪನ್ನತೆಗಳಲ್ಲಿ ಭಾರತೀಯ ಋಷಿಗಳು ವಿದ್ಯೆಯನ್ನೇ ಸ್ವೀಕರಿಸಿ ಸಂಪನ್ನತೆಯನ್ನು ತ್ಯಜಿಸಿ ಬಿಟ್ಟಿರುವರು. ಶಿಕ್ಷಣ ಬಾಹುಳ್ಯವು ಹಿಂದೂಸ್ಥಾನದಲ್ಲಿ ಪೂರ್ವಕಾಲದಲ್ಲಿ ಹ್ಯಾಗಿತ್ತೆಂಬುದನ್ನು ಈ ವಿದ್ಯಮಾನಗಳಿಂದ ತಿಳಿಯಬಹುದು. ಇಂಡಿಯಾ ಸರಕಾರದವರು ಶಿಕ್ಷಣವನ್ನು ಕಡ್ಡಾಯವಾಗಿಯೂ ಉಚಿತವಾಗಿಯೂ ಮಾಡದೆ ಹೋದರೆ ಪ್ರಜಾಮುಂದಾಳುಗಳು ಶಿಕ್ಷಣವು ಉಚಿತವಾಗಿ ಸಾಮಾನ್ಯರಿಗೆ ದೊರಕುವಂತೆ ಪ್ರಯತ್ನಪಡಬೇಕು. ದೇವಸ್ಥಾನ, ಮಠ, ಧರ್ಮಶಾಲೆ ಮೊದಲಾದವುಗಳ ಪರವಾಗಿ ವಿದ್ಯಾಶಾಲೆಗಳನ್ನೂ, ವಾಚನಮಂದಿರಗಳನ್ನೂ, ಪುಸ್ತಕಾಲಯಗಳನ್ನೂ ಸ್ಥಾಪಿಸಬೇಕು. ಮಾಲಿ ಕೆಲಸದವರಿಗೂ ಹಗಲಲ್ಲಿ ಶಾಲೆಗೆ ಬರಲು ಸಮಯವಿಲ್ಲದವರ ಬಗ್ಗೆಯೂ ರಾತ್ರೆ ಶಾಲೆಗಳನ್ನು ಪ್ರತಿ ಬೀದಿಗಳಲ್ಲಿಯೂ ಏರ್ಪಡಿಸಬೇಕು. ಮತ, ರಾಜಕೀಯ ಮತ್ತು ಸಾಮಾಜಿಕ ವಿಷಯಗಳ ಕುರಿತು ಚಿಕ್ಕ ಚಿಕ್ಕ ವಹಿಗಳನ್ನು ದೇಶಭಾಷೆಗಳಲ್ಲಿ ಪ್ರಕಟಿಸಿ ಅವುಗಳು ಮುಖ್ಯವಾಗಿ ಸಾಧುಗಳು ಮತ್ತು ಪುರೋಹಿತರಾಗಿರುವವರಲ್ಲಿ ಪ್ರಚಾರವಾಗುವಂತೆ ಸಾಧಿಸತಕ್ಕದ್ದು. ಅಶಿಕ್ಷಿತ ಸಾಮಾನ್ಯರ ಪುರೋಹಿತ ವರ್ಗವು ಪ್ರಬಲವಾಗಿರುವುದರಿಂದ ಪುರೋಹಿತರಲ್ಲಿ ಈಗಿನ ಸಾಮಾಜಿಕ, ರಾಜಕೀಯ ಮತ್ತು ಮತ ಸಂಬಂಧವಾದ ಸುಧಾರಣಾ ವಿಷಯ ಭಾವಗಳನ್ನು ಬೀರಿದ್ದಲ್ಲಿ ಸಾಮಾನ್ಯರು ಇವುಗಳನ್ನು ಬೇಗನೆ ತಿಳಕೊಳ್ಳುವರು. ಜೀವನ ಉದ್ದೇಶವಿಲ್ಲದೆ ತಿರುಗಾಡುತ್ತಿರುವ ಸಾಧುಗಳು ಹಿಂದೂಸ್ಥಾನದಲ್ಲಿ ಸುಮಾರು ೫೨ ಲಕ್ಷವಿರುವರು. ಇವರು ದೇಶಾಭಿವೃದ್ಧಿಯ ಕಾರ್ಯಗಳಲ್ಲಿ ನೆರವಾಗುವಂತೆ ಮಾಡಿದರೆ ಜನಾಂಗದೇಳಿಗೆಯು ಬೇಗನೆ ನೆರವೇರುವುದು.

ಈ ಜಮೀನುದಾರರು ಈ ಮೊದಲಾದ ತಮ್ಮ ಕೆಲವು ಸೂಚನೆಗಳನ್ನು ನಮಗೆ ಬರೆದು ಕಳುಹಿಸಿರುತ್ತಾರೆ.

ಉದ್ಯೋಗಂ ಪುರುಷಲಕ್ಷಣಂ.

ಮಾನುಷ ಜೀವನದ ಅಧಿಕಾಂಶವು ಕರ್ಮಬದ್ಧವಾಗಿಯೇ ಇರುವುದು. ಸಾಧಾರಣರಿಗಂತೂ ಕಾಯಕಷ್ಟವೇ ಮುಖ್ಯ ಜೀವನೋಪಾಯ. ಉದ್ಯೋಗವೇ ಮನುಷ್ಯನನ್ನು ಪುರುಷನೆನ್ನಿಸುವುದು. ಕಷ್ಟ ಜೀವಿಗಳಿಗಂತೂ ಉದರ ಪೋಷಣೆಗಾಗಿ ಉದ್ಯೋಗವು ಅಗತ್ಯ; ಯಾವ ಸ್ಥಿತಿಯ ಮನುಷ್ಯನಿಗಾದರೂ ಯಾವ ಜೀವನ ಸಂಬಂಧಗಳಲ್ಲಿಯಾದರೂ ಕಾಯಕಷ್ಟವು ಅಷ್ಟೇ ಅಗತ್ಯ.

ನಮ್ಮ ಸುತ್ತಲಿನವರೆಲ್ಲ ಕಾರ್ಯಪರರಾಗಿರಲು ನಾವು ಕರ್ತವ್ಯವಿಮುಖರಾಗಿ ಹೇಗೆ ತಾನೆ ಇರಬಹುದು? ಕರ್ಮದಲ್ಲಿ ಉದಾಸೀನರಾದ ಯಾರಿಗೆ ತಾನೆ ಸಮಾಜವು ಘನತೆ, ಗೌರವ, ಜವಾಬ್ದಾರಿಕೆಗಳಿಂದ ಆದರಿಸಬಲ್ಲುದು? ಕಾರ್ಯಪ್ರವರ್ತನೆಯೇ ಅತ್ಯುಚ್ಚವಾದ ಶಿಕ್ಷಣೆ; ಸಾಧಕನು ಅನ್ಯವ್ಯಕ್ತಿಗಳೊಡನೆಯೂ, ಅನ್ಯ ಪ್ರಮಾದಗಳಲ್ಲಿಯೂ ಕಾರ್ಯಾಸಕ್ತನಾದರೆ ವಿಹರಿಸಬೇಕಾಗುವುದು. ಮಹನೀಯರ ಜೀವನಿಗಳನ್ನು ಓದಿದರೆ, ಅವರೆಲ್ಲರೂ ಅತಿ ಉದ್ಯಮಶೀಲರಾಗಿಯೂ ಕಾರ್ಯ ಚತುರತೆಯುಳ್ಳವರಾಗಿಯೂ ಸಾಧನಗಳಲ್ಲಿ ಸಾಹಸಿಗಳಾಗಿಯೂ ಇದ್ದರೆಂದು ತಿಳಿಯುವೆವು. ಜಗತ್ತಿನ ವಿದ್ಯಾಪ್ರಚುರತೆ, ಜ್ಞಾನಭಂಡಾರ, ಅಭಿವೃದ್ಧಿ, ಸಭ್ಯತೆಗಳು ಮನುಷ್ಯನ ಹಸ್ತಮಸ್ತಿಷ್ಕಗಳ ಚಿರಕೃತಜ್ಞತಾ ಪಾತ್ರರಾಗಿ ಬೆಳೆದುವೆನ್ನುವುದು ಸತ್ಯವೇ.

ಒಡವೆಗಳ ಬೆಲೆಯೇ ಅವುಗಳನ್ನು ನಿರ್ಮಿಸುವುದರಲ್ಲಿ ವ್ಯಯಿಸಿದ ಕಷ್ಟದ ಬೆಲೆ; ಉದ್ಯಮವಿಲ್ಲದೆ ಸೃಷ್ಟಿಯು ಅಸಾಧ್ಯ. ಜನನಕಾಲದಲ್ಲಿಯೇ ಅಪೂರ್ವಯೋಗದಿಂದ ಬುದ್ಧಿ ಚಾತುರ್ಯ ಕೌಶಲ್ಯಗಳು ಹುಟ್ಟಿದ್ದರೂ, ಮುಂದಿನ ಚಿರ ಉದ್ಯಮದಿಂದ ಬೆವರು ಪ್ರವಹಿಸಿದಲ್ಲದೆ ಪ್ರವೀಣರೂ ವಿಜಯಿಗಳಾಗರು. ಕಾರ್ಯಶೀಲತೆಯು ಒಂದು ಕೆಡುಕಲ್ಲ; ಶಿಕ್ಷೆಯಲ್ಲ. ಜಯಾಪೇಕ್ಷೆಯಿದ್ದರೆ ಕರ್ಮ ವ್ಯಾಯಾಮವು ಅಪೂರ್ವ ಸಂತೋಷವುಳ್ಳದ್ದಾಗುವುದು. ಅಕರ್ಮಕ್ಕಿಂತಲೂ ಕಠಿಣವಾದ ಕರ್ಮವಿಲ್ಲ. ದೀನರಲ್ಲಿ ಕಾರ್ಯ ಶೀಲತೆಯ ಮೌಲ್ಯವು ಹೆಚ್ಚು. ಲಕ್ಷ್ಮಿಯು ನರಪುಂಗವನ ಕಾರ್ಯ ದುರಂಧರತೆಗೆ ಒಲಿಯುವಳು; ಅದೃಷ್ಟವನ್ನು ದೂರುವ ಸೋಮಾರಿಗಳು ಕ್ಷುದ್ರ ಅಬಲರು.

ತರುಣರಲ್ಲಿ ಆಲಸ್ಯಕ್ಕಿಂತ ಹೆಚ್ಚಿನ ಮಾರಿಯೇ ಇಲ್ಲ. ಹಲವರು ಸ್ವಲ್ಪ ಕಷ್ಟ ಮಾಡಬೇಕೆಂದರೆ, ಆ ಕೆಲಸದಿಂದಲೇ ಪಲಾಯನ ಮಾಡುವರು; ಆದರೆ ಇಂಥಾ ಕಾರ್ಯವಿಮುಖರಲ್ಲಿ ಎಷ್ಟು ಮಂದಿ ತಾನೇ ನಿರುಪಯೋಗಿಗಳಾಗಿ ತಾವೇಕೆ ಹುಟ್ಟಿದುದೆಂದೂ, ತಮ್ಮ ಆಲಸ್ಯವೇ ತಮ್ಮನ್ನು ಜೀರ್ಣಿಸುವುದೆಂದೂ ಅರಿತಿರುವರು? ಆಲಸ್ಯಭರಿತನು ಸಂತೋಷದಲ್ಲಿ ರುಚಿ ಹೊಂದುವನು. ಆತನ ಜೀವಮಾನವೆಲ್ಲ ಒಂದು ದೀರ್ಘ ವಿಶ್ರಾಂತಿಯ ಕಾಲ; ಯಥಾರ್ಥವಾದ ಸುಖಾರಾಮವು ಇವನಿಗಿಲ್ಲ. ಪರ್ಯಂಕಪ್ರೀತರು ಎಂದೂ ಯಾವ ಸಾರ್ಥಕಕ್ಕೂ ಒದಗಲಿಲ್ಲ. ಕಾಲಸ್ರೋತವು ಗಡುಗುಡಿಸುತ್ತ ಮುಂದರಿಯುವಾಗ ಇವರು ಪಾಷಾಣಸ್ಥಾವರರಾಗಿ ಬಿದ್ದಲ್ಲೇ ಬಿದ್ದಿರುವರು.

ಆಲಸ್ಯವು ಜೀವಿತ ದೇಹಿಯ ದಫನ; ಅಕರ್ಮಿಯು ಲೋಕಕ್ಕೆ ಎಷ್ಟರ ನಿರುಪಕಾರಿಯೆಂದರೆ, ಲೋಕದ ವಿದ್ಯಮಾನಗಳ ಸಂಪರ್ಕ ಬಾಹಿರರಾದ ಪ್ರೇತಗಳ ಹಾಗೆಯೇ,—ಜೀವಿಸಿರುವುದಾದರೆ ಕ್ರಿಮಿ ಕೀಟಗಳಂತೆ ಹೊಟ್ಟೆ ಹೊರಕೊಳ್ಳುವ ಒಂದು ಕ್ಷುದ್ರ ಜೀವ್ರಾಣು. ಆಲಸ್ಯವು ಪರಮ ಪಾಲುಮಾರಿಕೆ!

ಯವನ (ಗ್ರೀಕ)ರಲ್ಲಿ ಸಮಾಜದ ನಿಯಮ ಪ್ರಕಾರ, ಶೂನ್ಯವೃತ್ತಿಯವನನ್ನು ಕಾರಾಗೃಹದಲ್ಲಿರಿಸುವುದೂ, ಅಂತಹನನ್ನು ಪರಭೃತನಂತೆಯೂ ತಸ್ಕರನಂತೆಯೂ ಎಣಿಸುವುದೂ ವಾಡಿಕೆಯಲ್ಲಿತ್ತು. ಪಾಷಂಡಿತನಕ್ಕೆ ಉದ್ಯಮ ಪ್ರವೃತ್ತಿಯೇ ರಾಮಬಾಣ. ಅಕರ್ಮಿಯ ಮೆದುಳಲ್ಲಿ ಪಿಶಾಚನ ಕಾರ್ಯಾಲಯ; ಕ್ರಮೇಣ ಅಕರ್ಮಿಯು ಕುಕರ್ಮಿಯಾಗುವನು. ತನಗೆ ಕೆಲಸವಿಲ್ಲವೆನ್ನುವವನನ್ನು ಪಾಪದೇವನೆಂದೂ, ಪರಪುಟ್ಟನೆಂದೂ ತಿಳಿಯಬೇಕು. ಆಲಸ್ಯವೇ ಪರಮ ಧನವೆನ್ನುವವನ ನೀತಿಯು ಬುಡವೇ ಕೀಳಿಯದೆ, ಪುರುಷತ್ವವು ಲೋಪಿಸಲ್ಪಟ್ಟಿದೆ;—ಆತನ ರೋಗಕ್ಕೆ ಯಮನೇ ವೈದ್ಯನು!

ಮೈಗಳ್ಳನಿಗೂ ಕಳ್ಳನಿಗೂ ನಂಟುತನವಿದೆ.

ವಿಷಯವ್ಯಾಮೋಹವು ಠಕ್ಕು ಸೌಂದರ್ಯವನ್ನು ತೋರಿ, ವ್ಯಕ್ತಿಯನ್ನು ಮರಳುಗೊಳಿಸಿ, ಸುಖಗೊಡುವ ಭ್ರಮೆಯಿಂದ ಪಾಪಕೂಪಕ್ಕೊಯ್ದು ಬಿಡುವುದು. ಪಾಪವು ಅಕರ್ಮಿಯನ್ನೋ, ಅಕರ್ಮಿಯು ಪಾಪವನ್ನೋ ಆಲಿಂಗಿಸುವರು. ಪಾಪಕರ್ಮಿಯು ವಿನಾಶದ ಕಡೆಗೆ ತೀವ್ರಗಾಮಿಯಾಗುವನು; ಆತನ ಸುಖವು ವಿರೂಪ ಹೊಂದಿದ ದುಃಖವೇ.

ಕಾರ್ಯ ಶೀಲತೆಯೇ ಸಂತೋಷವು. ನಶ್ವರ ಜಗತ್ತಿನ ಚಂಚಲ ವಿಷಯಗಳ ಆಸಕ್ತಿಯುಳ್ಳ ಮಂದಭಾವವು ಆರೋಗ್ಯ ಸುಖಗಳ ಕಡುವೈರವುಳ್ಳ ದಾಯವಾದಿ. ನಿಮಿಷ ನಿಮಿಷಗಳನ್ನು ಸಂಗ್ರಹಿಸಿ ನಾವು ಪ್ರವರ್ತಿಸುವುದಾದರೆ, ನಮ್ಮ ಕಷ್ಟಗಳ ಅಪಾರ ಸತ್ಫಲ ರಾಶಿಯು ಮುಂದೆ ಪರ್ವತ ಪ್ರಾಯವಾಗಿ ಏಳುವುದು. ರೆಪ್ಪೆಗಳ ಬಡದಾಟಗಳ ಮಧ್ಯದಲ್ಲಿ ಮರೆಯಾಗುವ ನಿಮಿಷಗಳನ್ನು ಕೂಡಿಸುವ ದುಂದುಗಾರಿಕೆಯಂತಹ ಸುಲಭ ಧನ ಸಂಗ್ರಹ ಬೇರಿಲ್ಲ. ಬಾಲ್ಯದಲ್ಲಿ ನಿಮಿಷಗಳು ಸುವರ್ಣದವು; ಯೌವ್ವನದಲ್ಲಿ ರಜತದವು; ವೃದ್ಧಾಪ್ಯದಲ್ಲಿ ಲೋಹದವು. ಇಪ್ಪತ್ತರಲ್ಲು ಅಜ್ಞಾನಿ, ಮೂವತ್ತರಲ್ಲಿ ಅಕರ್ಮಿ, ನಾಲ್ವತ್ತರಲ್ಲಿ ನಿರ್ಧನಿ.

ಅಂಗ್ಲ ಸಾಹಿತ್ಯ ಕರ್ತ ರಸ್ಕಿನ್, ಹೇಳುವನು:—ಸೃಷ್ಟಿಯಲ್ಲಿ ಕಾರ್ಯಭೇದದಿಂದ ಮೂರು ಶ್ರೇಣಿಗಳಿರುವುವು. ಕನಿಷ್ಠ ಶ್ರೇಣಿಯವರು ಸ್ವಾರ್ಥ, ಮಂದ ಭಾವದವರು; ಇವರಿಗೆ ದೃಷ್ಟಿಯಿಲ್ಲ, ಭಾವನೆಗಳಿಲ್ಲ. ಮಧ್ಯಮ ಶ್ರೇಣಿಯವರು ಸಹಾನುಭೂತಿ, ಘನತೆಯುಳ್ಳವರು; ಇವರು ಗ್ರಹಿಸದೆಯಾಗಲಿ ಕೆಲಸಮಾಡದೆಯಾಗಲಿ ಯಾವುದೊಂದನ್ನೂ ದೃಷ್ಟಿಸರು, ಭಾವಿಸರು. ಉತ್ತಮ ಶ್ರೇಣಿಯವರಾದರೋ ಮನೋಧೃಢತೆಯೇ ದೃಷ್ಟಿಯುಳ್ಳವರು, ಕಾರ್ಯಶಕ್ತಿಯೇ ಭಾವನೆಯುಳ್ಳವರು. ಜೀವನದ ಸುಖವಿರಾಮಗಳಿಗೆ ಸಮಯೋಚಿತತ್ವವೂ ಸಮಯ ನಿಯಮಿತತ್ವವೂ ಮೂಲಾಧಾರಗಳು; ಈ ಎರಡು ಗುಣಗಳ ಲೋಪದಿಂದ ಅನೇಕರ ಜೀವನಗಳು ನಿಷ್ಫಲವಾಗಿವೆ.

ಸಾಮಾನ್ಯ ವ್ಯವಹಾರಗಳಲ್ಲಿ ಸಮಯದ ಉಪಯೋಗವನ್ನು ಅರಿತು, ಅದನ್ನು ಜಾಗ್ರತೆಯಿಂದ ಕಾಪಾಡಿ, ನಮ್ಮ ಅಥವಾ ಅನ್ಯರ ಸಮಯ ದುರ್ವ್ಯಯಿಸದಿರುವುದೇ ಪರಮ ಪೂಜನೀಯ ಗುಣ. ನಿಯಮ ಬದ್ಧರಾಗದಿದ್ದರೆ, ನಮಗೂ ಮತ್ತೊಬ್ಬರಿಗೂ ತಂಟೆ ಪೀಡೆ, ನಿರಾಶೆ, ಗಂಡಾಂತರಗಳೊದಗುವುವು. ಸಮಯ ನಿಯಮಿತತ್ವವು ಅರಸರ ಮತ್ತು ಪ್ರಜೆಗಳ ಘನತೆ; ತೃತೀಯ ಜೋರ್ಜನ ಸರದಾರನು ತಾನು ಸಮಯ ಹಿಂದಾಗಿ ಬಂದು,—'ಬಾರದಿರುವುದಕ್ಕಿಂತಲೂ ತಡಮಾಡಿ ಬರುವುದೇ ಲೇಸು' ಎಂದೆನ್ನಲು, ರಾಜನು, 'ತಡಮಾಡಿ ಬರುವುದಕ್ಕಿಂತಲೂ ಬಾರದಿರುವುದೇ ಲೇಸು' ಎಂದ ಚತುರೋಕ್ತಿಯು ಜ್ಞಾಪಕದಲ್ಲಿರಬೇಕು. 'ತಡ'ವೆಂಬುದು ಜೀವನದ ಶಾಪ; ಮಹಾ ಪೀಡೆ. ವಿಧೇಯವಾಗಲು ತಡ, ಮರ್ಯಾದೆ ತೋರಿಸಲು ತಡ, ಆಶೀರ್ವಾದ ಪಡೆಯಲು ತಡ, ಉದ್ಧಾರ ಹೊಂದಲು ತಡ, ವಿಜಯಿಯಾಗಲು ತಡ,—ಇದೆಲ್ಲ ಹೌದು; ಆದರೆ ವಿನಾಶ ಕಾಲಕ್ಕೆ ತಡವಿಲ್ಲವೆಂಬುದನ್ನು ಮರೆಯಲಾಗುವುದಿಲ್ಲ.

ನಮ್ಮ ಕೈಸೋಂಕಿದ ಯಾವ ಕಾರ್ಯವಾದರೂ ನಾವು ಬೇಕೆಂತಲೇ ನಿಷ್ಫಲಗೊಳ್ಳಿಸಬೇಕಲ್ಲದೆ, ಅನ್ಯಥಾ ಅಲ್ಲ. ಇಚ್ಛೆಯಿದ್ದರೆ ನಾವು ನಮ್ಮನ್ನೂ ಅನ್ಯರನ್ನೂ ಉದ್ಧರಿಸಬಹುದು: ಪ್ರತಿಯೊಂದು ಕಾರ್ಯವೂ ಕಷ್ಟಸಾಧ್ಯವಾದುದೆಂದು ನಂಬಿ, ಸ್ಥೈರಣೆಯಿಂದ ನಡಿಸುವುದಾದರೆ, ಹೇಗೆ ತಾನೇ ಅದು ನಿಷ್ಫಲವಾದೀತು? ಎಷ್ಟೋ ಮಹನೀಯರು ಸಾಮಾನ್ಯ ಕೂಲಿಯವರಂತೆ ಕಠಿಣ ಕಷ್ಟದಿಂದ ಜೀವನದ ಉದ್ಧಾರವನ್ನೇ ಸಾಧಿಸಿರುವರು! ದೀರ್ಘಕಾಲದ ತಾಳ್ಮೆಯೂ, ದೀರ್ಘಕಾಲದ ಪರಿಶ್ರಮವೂ ಚೌಷಷ್ಟಿ ಕಲೆಗಳನ್ನೂ ಸಾಧಿಸಲು ಅಗತ್ಯ. ಪ್ರತಿಭಾಶಾಲಿಗಳೆಂದರೆ ಚಿರೋದ್ಯಮಿಗಳೇ ಮಾತ್ರ; ಆಯುಷ್ಯವೆಲ್ಲ ತಾಳ್ಮೆ ಆಯುಷ್ಯವೆಲ್ಲ ಕಾರ್ಯಾಸಕ್ತಿ. ಅನಗತ್ಯವಾದುದನ್ನೆಣಿಸದೆ ಅತ್ಯಗತ್ಯವಾದುದು ಸ್ಪಷ್ಟವಾಗದು.

ತಾಳ್ಮೆಯುಳ್ಳ ಸೂಕ್ಷ್ಮ ವಿಚಾರದಿಂದ, ದೀರ್ಘ ಪ್ರತೀಕ್ಷೆಯಿಂದ ರಚನಾ ಶಕ್ತಿಯು ಜನಿಸುವುದು; ಸೂತ್ರಗಳು ಮಾನುಷಿಕ, ಸಂಘಟನೆಗಳು ದೈವಿಕ. ಆದುದರಿಂದ ಅವಸ್ಥೆಗಳನ್ನು ತಾಳ್ಮೆಯಿಂದ ಏಕಾಗ್ರದೃಷ್ಟಿಯಿಂದ ಸಾಧಿಸಲು ಬಲ ಬೆಳೆಯಿಸಬೇಕು.

ಧೃಢಚಿತ್ತವು ಅತ್ಯುಪಕಾರಿ; ಸ್ಥೈರಣೆಯ ಸಾಹಸವಿಲ್ಲದೆ, ಸಾಹಸದ ಸ್ಥೈರಣೆಯಿಲ್ಲದೆ ಇದನ್ನು ಹೊಂದಲಾಗುವುದಿಲ್ಲ. ತೊಡಕುಗಳ ತಂಡ ತಂಡಗಳನ್ನು ಚೂರ್ಣೀಕರಿಸಲು ನಿಷ್ಕಲ ಉತ್ಸಾಹ ಪೂರಿತ ಧೃಢಚಿತ್ತವೇ ಅಗತ್ಯ; ಇದೊಂದು ತರದ ವ್ರತದೀಕ್ಷೆ. ಕಾರ್ಯ ಪರಾಯಣತೆಯ ಅಭ್ಯಾಸವೇ ಕರ್ಮಯೋಗದೀಕ್ಷೆ; ಇದರಿಂದಲೇ ಅಪ್ರತಿಮ ಬುದ್ಧಿಸ್ಥೈರ್ಯಗಳು ಹುಟ್ಟುವುವು. ಭಾರವಾದ ಕಲ್ಲೆತ್ತಬೇಕಾದರೆ, ಒಂದು ಅಂಗುಲ ಪ್ರಮಾಣ ಸ್ಥಳದ ಮೇಲೆ ಕೈಲಾದ ಬಲದ ಏಕಾಗ್ರತೆಯಿರಬೇಕು. ಮತ್ತೊಬ್ಬನಿಗಿಂತಲೂ ನಮ್ಮ ಬಲ ಕಡಿಮೆಯಾದಲ್ಲಿ, ಏಕಾಗ್ರತೆ ಹೆಚ್ಚಿಸಿದರಾಯಿತು. ಜನನಾವಸ್ಥೆಯಲ್ಲಿ ಅತಿ ಚತುರರಾದವರಿಗೆ ಸಹಾ ತಮ್ಮ ಬಲವರಿಯದು; ಮುಂದೆ ವ್ಯವಹಾರ ಸಂದರ್ಭಗಳಲ್ಲಿ ಆ ಬಲವನ್ನು ಉಪಯೋಗಿಸುವ ಅಭ್ಯಾಸ ಬಲದಿಂದ ನಿಜಸ್ಥಿತಿಯು ಉದಯಿಸಿ ವ್ಯಕ್ತವಾಗುವುದು.

K.

ಸುಗದಾಸಿ ಭತ್ತ.

ನಮ್ಮ ದಕ್ಷಿಣ ಕನ್ನಡಾ ಜಲ್ಲೆಯಲ್ಲಿ ಕಾಡುಗಳು ಹತ್ತರವಿಲ್ಲದೆ ಇರುವ ಪ್ರಾಂತ್ಯಗಳಲ್ಲಿ ಕೂಡಾ ಕಯಮೆ ಯಾ ಮಸ್ಕತಿ ಭತ್ತದ ಬೆಳೆಯನ್ನು ಎಣೆಲಿಗೆ ಬೆಳಸಿ ಸುಗ್ಗಿ ಬೆಳೆ ಬೆಳಸಲಿಕ್ಕೆ ಅಮಖಾಸ ನೀರಾಶ್ರಯವಿಲ್ಲದೆ ಬೇಸಾಯಗಾರರು ಹೆಚ್ಚು ಕ ಪಡುತ್ತಾರೆ. ಇದರ ಕಾರಣವು ಮೇಲೆ ಹೇಳಿದ ಭತ್ತಗಳ ಬೆಳವಣಿಗೆಗೆ ೪ ತಿಂಗಳಿಗಿಂ ಜಾಸ್ತಿ ಕಾಲ ತಗಲುವದರಿಂದ ಆಗಿರುತ್ತದೆ. ನಂತರ ಆ ಗದ್ದೆಯಲ್ಲಿ ಬೆಳಸಲಿಕ್ಕೆ ನೀರಾಶ್ರಯ ಸಿಕ್ಕದೆ ಸುಗ್ಗಿ ಫಸಲು ಕಮ್ಮಿ ಸಿಗುತ್ತದೆ. ನಾವು ಸುಗ್ಗಿ ಬೆಳೆಗೆ ಬೆ ಅತಿಕ್ರಾಯಿ ಭತ್ತಕ್ಕೆ ನೀರಾಶ್ರಯವು ಹೆಚ್ಚು ಬೇಕಾಗುತ್ತದೆ. ಇದಕ್ಕೆ ನೀರು ಸ್ವಲ್ಪ ಕಮ್ಮಿಯಾದರೆ ಬೆಳೆ ಕೆಟ್ಟುಹೋಗುತ್ತದೆ. ಕಯಮೆ ಯಾ ಮಸ್ಕತಿ ಭತ್ತಕ್ಕಿಂ ಬೇಗನೇ ಬೆಳದು ಒಳ್ಳೇ ಫಸಲು ಸಿಕ್ಕುವ ಭತ್ತವನ್ನು ಎಣೇಲು ಬೆಳೆಗೆ ಅಂಥಾ ಗದ್ದೆಳಲ್ಲಿ ಬೆಳಸಿದರೆ ನಮ್ಮ ಊರಿನ ಬಡ ರೈತರಿಗೆ ಒಂದು ನಷ್ಟ ತಪ್ಪಿಸಿದ ಹಾಗಾದೀತೆ ಎಂಬ ಅಭಿಲಾಷೆಯಿಂದ ನಾನು ಆ ಕುರಿತು ವಿಚಾರಿಸುತ್ತಾ ಇದ್ದೆ.

ಸಿಂಧು ಪ್ರಾಂತ್ಯದ ಲಾರ್ಖಾನಾ ಜಿಲ್ಲೆಯಲ್ಲಿ ೬೦ ದಿವಸಗಳಲ್ಲಿ ಕಟಾವಿಗೆ ಸಿ ವಾಗುವಂಥಾ 'ಸುಗಧಾಶಿ' ಎಂಬ ಭತ್ತ ಬೆಳಿಸುತ್ತಾರಾಗಿ ಕೇಳಿ ನಾನು ಅಲ್ಲಿಂದ ಆ ಭತ್ತ ಸ್ವಲ್ಪ ಬೀಜವನ್ನು ತರಿಸಿ, ಈ ಪೈಕಿ ಒಂದು ಸೇರಿನಷ್ಟು ಬೀಜದ ನೇಜಿಯನ್ನು ಭೂಮಿಯ ಒಂದು ಬೆಟ್ಟು ಗದ್ದೆಯಲ್ಲಿ ಇದೇ ಮಳೆಗಾಲದಲ್ಲಿ ನಡಿಸಿದೆ. ಆದರೆ ಬೆಟ್ಟು ಗದ್ದೆಯು ಸಾಗುವಳಿಯು ಬಹು ವಿತರಣೆಯಿಂದ ನಡಿಸೋಣಾಗುವುದರಿಂದ ಬೆಳೆಯು ಅಷ್ಟು ಒಳ್ಳೇದು ಇರಲಿಲ್ಲ; ಆದರೂ ಇಷ್ಟರ ಒಳಗೆ ಕಟಾವು ಮಾಡಿರಲಿಕ್ಕೆ ಸಾ ಒಂದು ಅರ್ಧ ಸೇರಿನಷ್ಟು ಬೀಜವನ್ನು ಇಲ್ಲಿ ಜಪ್ಪಿನಲ್ಲಿ ಇದೇ ಇಸವಿ ಜೂನು ತಾರೀಕಿಗೆ ನೇಜಿ ಬಗ್ಗೆ ಬಿತ್ತಿಸಿ ಜುಲಾಯಿ ತಾ. ೩ರಲ್ಲು ನೇಜಿಯನ್ನು ತೆಗೆದು ಒಂದು ಬೈಲು ಗದ್ದೆಯ ಅಂಶದಲ್ಲಿ ನಡಿಸಿತ್ತು. ೩ ತಿಂಗಳಲ್ಲಿಯೇ ಬೆಳೆಯು ಕಟಾವಿಗೆ ತ ರಾಯಿತು; ಪರಂತು ಇದನ್ನು ಬೀಜದ ಬಗ್ಗೆ ಇಡಬೇಕೆಂಬದರಿಂದ ಇದೇ ತಿಂಗಳ ೨ ತಾರೀಕಿನವರೆಗೆ ಬೆಳಸಿ ಆ ದಿವಸ ಕಟಾವು ಮಾಡಲ್ಪಟ್ಟಿತು. ಇದರ ಬಾಬ್ತು ಅ ಸೇರಿನಷ್ಟು ಕಾಳು ಇಲಿ ಹೆಗ್ಗಣಗಳೋ ತಿಂದು ಅದರ ಹೊಟ್ಟು ಗದ್ದೆಯಲ್ಲಿ ಬಿದ್ದ ಕಾಣುತ್ತಿತ್ತು. ಬೆಳೆ ಕಟಾವು ಮಾಡಿ ಗೇರಿ ಅಳತೆ ಮಾಡಿದ್ದಲ್ಲಿ ೯॥ ಸೇರು ಸಿಕ್ಕಿತು. ಸಾಧಾರಣ ೧ಕ್ಕೆ ೨೦ ಪಾಲಿನಷ್ಟು ಸಿಕ್ಕಿದ ಹಾಗಾಯಿತು; ಮಾತ್ರ ಈ ಭತ್ತದ ನಮೂನೆಯು ಜೀರಸಾಲೆ ಭತ್ತದ ಹಾಗೆಯೇ ಉದ್ದ ಇರುತ್ತದೆ, ಅ ಸುವಾಸನೆಯೂ ಉಂಟೆಂತ ಕೇಳಿದ್ದೇನೆ. ಆದುದರಿಂದ ಮೂರು ತಿಂಗಳಲ್ಲಿಯೇ ಎಣೇ ಬೆಳೆಯನ್ನು ಬೆಳಿಸಿ ಕಟಾವು ಮಾಡಿ ಬೇಗನೇ ಸುಗ್ಗಿ ಬೆಳೆಯನ್ನು ಬೆಳಸಬೇಕೆಂಬುವ ಈ ಭತ್ತದ ಬೆಳೆಯನ್ನು ಅಗೋಸ್ತು ತಿಂಗಳ ಆಖೈರಿಗೆ ಯಾ ಸಪ್ಟಂಬರ ತಿಂಗಳ ವಿನಲ್ಲಿ ಕಟಾವು ಮಾಡಿ ಕೂಡಲೇ ಬಂಕು ಭತ್ತವನ್ನು ಸುಗ್ಗಿಗೆ ಪೈದಾಸ್ತು ನಾ ನೀರಿನ ತೊಂದರೆಯಿಂದ ಪಡುವ ನಷ್ಟವನ್ನು ಹೆಚ್ಚು ಜನರು ತಪ್ಪಿಸಿಕೊಳ್ಳಬಹು ಈ ಎರಡು ಬೆಳೆಯ ಭತ್ತದ ಅಕ್ಕಿಯನ್ನು ತಯಾರಿಸಿ ಮಾರಿದರೆ ಹೆಚ್ಚು

ಹೊಂದಬಹುದು ಎಂಬದಾಗಿ ನನಗೆ ತೋರಿದ ಅಭಿಪ್ರಾಯವನ್ನು ತಿಳಿಸಿದ್ದೇನೆ. ಎಣೇಲು ಬೆಳೆಯ ಭತ್ತದಿಂದ ಬೆಳ್ತಿಗೆ ಅಕ್ಕಿಯನ್ನೂ ಸುಗ್ಗಿಯ ಬಂಕು ಭತ್ತದಿಂದ ಕುಚ್ಲು ಅಕ್ಕಿಯನ್ನೂ ತಯಾರಿಸಬಹುದು.

ಮಂಗಳೂರು.
ತಾ. 29-9-1912. } ಎಲ್ಲೂರ್ ಸುಬ್ಬರಾವ್.

ಪತ್ರವ್ಯವಹಾರ.

ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.

ನಿಮ್ಮ ಜಾತಿಯ ಹೆಣವು.

ಕುಲಸ್ತ್ರೀಯರೇ ನಿಮ್ಮ ಜಾತಿಯ ಹೆಣವು.

ಸ್ವದೇಶಾಭಿಮಾನಿ ಪತ್ರ ಸಂಪಾದಕರೇ, ಸ್ವಾಮಿ!

ಕಳದ ಹಪ್ತೆಯ ಸಂಚಿಕೆಯಲ್ಲಿ ತಮ್ಮ ಬಾತ್ಮೀದಾರ ಹೆಣನವರು ಬರೆದ ಲೇಖನವನ್ನು ನೋಡಿದೆನು. ಹಂಪನಕಟ್ಟೆ ಮಾರ್ಗದ ಬದಿಯ ಖಣಿಯಲ್ಲಿ ಬಿದ್ದ ಕೂಲಿಯವನ ಹೆಣವನ್ನು ನಾನು ಕೂಡಾ ನೋಡಿದ್ದೆ. ಜೀವಂತನಾಗಿರುವಾಗ ಯಾವ ವಸ್ತ್ರವನ್ನು ಅತನು ಧರಿಸಿಕೊಂಡಿದ್ದನೋ, ಅದೇ ವಸ್ತ್ರ ಧರಿಸಿಕೊಂಡವನಾಗಿದ್ದು ಖಣಿಯಲ್ಲಿ ಬಿದ್ದಿದ್ದನು. ನನ್ನ ಅನುಭವವನ್ನು ನಾನು ತಮಗೆ ಹೇಳಿದರೆ—"ದಮ್ಮಯ್ಯ ದೇವರೇ ಕೂಲಿಯಾಳು ಆಗಿ ಮಾರ್ಗದ ಬದಿಯಲ್ಲಿ ಬಿದ್ದು ಸತ್ತರೂ ಚಿಂತೆಯಿಲ್ಲ. ಸ್ತ್ರೀಯಾಗಿ ನನ್ನನ್ನು ಹುಟ್ಟಿಸಬೇಡ" ಎಂತ ಹೇಳುವಿರಿ.

ನಾನು ಈಗ ಮುದುಕನು; ಚಿಕ್ಕಂದಿನಿಂದಲೇ ಹೆಣಗಳನ್ನು ಸ್ಮಶಾನಕ್ಕೆ ಹೊತ್ತು ಹೊತ್ತು ಮೂರ್ತೆ ಮಾಡುವವರ ಕಾಲಿಗೂ ದೋಣಿಕಾರರ ಕೈಗಳಿಗೂ ಜಡ್ಡು ಕಟ್ಟಿದ ಹಾಗೆ ನನ್ನ ಹೆಗಲುಗಳಿಗೆ ಜಡ್ಡು ಕಟ್ಟಿಹೋಗಿದೆ. ಕೆಲವು ವರ್ಷಗಳ ಮೊದಲು ನನ್ನ ಜಾತಿಯಲ್ಲಿ ಸುಮಂಗಲೇ ಸ್ತ್ರೀಯು ಮರಣಪಟ್ಟರೆ ಶವವನ್ನು ಸ್ತ್ರೀಯರು ಚಲೋ ರೀತಿಯಲ್ಲಿ ಅಲಂಕರಿಸುವುದಿತ್ತು. ಸುಮಂಗಲೆಯಾಗಿಯೇ ಸಾಯುವ ಯೋಗ್ಯತೆ ನಮಗೂ ಸಿಕ್ಕಬೇಕೆಂಬ ಆಶೆ ಉಳ್ಳವರಾಗಿ ನೆರೆಕರೆಯಿಂದಲೂ, ಬಹು ದೂರದಿಂದಲೂ ಸುಮಂಗಲೆಯರು ಬಂದು ಶವದ ಸಮೀಪ ನಿಂತು ವೈದಿಕರಿಂದ ವಾಯಣ ಪಡಕೊಳ್ಳುತ್ತಿದ್ದರು. ಈಗಿನ ಕಾಲದಲ್ಲಿ ವೈದಿಕರು ಬೊಬ್ಬೆ ಹಾಕಿ ಕರೆದರೂ ವಾಯಣದಗೋಸ್ಕರ ಸ್ತ್ರೀಯರು ಬರುವುದಿಲ್ಲ. ಮನೆಯವರೇ ಅಥವಾ ನೆರೆಯವರೇ ೩-೪ ಸ್ತ್ರೀಯರು ಹಾಜರಿದ್ದರೆ ಶವ ತಟ್ಟೀತು ಎಂಬ ಹೆದರಿಕೆಯಿಂದ ಅರ್ಧ ಮೈಲು ದೂರ ನಿಲ್ಲುತ್ತಾರೆ. ಚಿಂತೆಯಿಲ್ಲ, ಸ್ತ್ರೀಯರಿಗೆ ವಾಯಣ ಬೇಡವಾದರೆ ಬಡ ವೈದಿಕರಿಗೆ ಆದರೂ ತೆಂಗಿನ ಕಾಯಿಗಳು ಸಿಕ್ಕುವವು. ಒಂದು ಕಡೆಯಲ್ಲಿ ನನಗೆ ಸಿಟ್ಟುಬಂದು "ಅಮ್ಮಾ, ಗಂಡಸರ ಹೆಣ ಗಂಡಸರಿಗೆ ಕಚ್ಚುವುದಿಲ್ಲ; ಹೆಣ್ಣು ಹೆಣವು ಹೆಂಗಸರಿಗೆ ಕಚ್ಚುತ್ತದೋ" ಎಂತ ಕೇಳಿದೆನು. ೧೬ ವರ್ಷಗಳ ಹಿಂದೆ ಒಂದು ಎಳೇ ಪ್ರಾಯದ ಸುಮಂಗಲೆ ಹುಡುಗಿ ತನ್ನ ಸಂಬಂಧಿಕರ ಮನೆಯಲ್ಲಿ ಮೃತಳಾದಳು. ಸಂಬಂಧಿಕರೂ ನೆರೆಕರೆಯವರೂ ಕೂಡಿ ಸುಮಾರು ೧೦-೧೫ ಸ್ತ್ರೀಯರು ಹಾಜರಿದ್ದರು. ಒಬ್ಬಳಾದರೂ ಶವ ಅಲಂಕಾರಕ್ಕೆ ಬರಲಿಲ್ಲ. ನಾನೂ ಮತ್ತು ನನ್ನ ಜೊತೆಗೆ ಬಂದ ಒಬ್ಬ ತರುಣನು ಸಹ ಒಳಗೆ ಹೋಗಿ, ಅಮ್ಮಾ, ಯಾರಾದರೂ ಶವವಿರುವ ಕೋಣೆಗೆ ಬಂದು ಶವಕ್ಕೆ ಒಂದು ಶೀರೆ ಸುತ್ತಿಬಿಡಿ. ಶವದ ಮೇಲೆ ಒಂದು ವೊಲ್ಲಿ ಮಾತ್ರ ಉಂಟು. ಒಂದು ವಸ್ತ್ರದ ತುಂಡು ಸೊಂಟಕ್ಕೂ, ಒಂದು ಮೇಲೆ ಎದೆಗೂ ಸುತ್ತಿಬಿಡಿ ಎಂತ ಹೇಳಿದೆವು. ಒಬ್ಬಳು ತಲೆ ತಗ್ಗಿಸಿ ಪೂರ್ವಕ್ಕೆ–ಇನ್ನೊಬ್ಬಳು ಪಶ್ಚಿಮಕ್ಕೆ ಹೋದಳು. ಇನ್ನೊಬ್ಬಳು "ಅಯ್ಯೊಬ್ಬಾ" ಎಂತ ಹೇಳಿ ಆಚೆಗೆ ಹೋದಳು. ಸುಮಂಗಲೆಯರ ಆಶೆ ಬಿಟ್ಟು ಸುಮಾರು ೪೫-೫೦ ವರುಷ ಪ್ರಾಯದ ಒಂದು ವಿಧವೆ ನಿಂತಲ್ಲಿ ಹೋಗಿ, ಅಮ್ಮಾ ನೀವಾದರೂ ಬಂದು ಒಂದು ವಸ್ತ್ರ ಸುತ್ತಿಬಿಡಿ ಎಂತ ನಾನು ಹೇಳಿದೆನು. "ಅಯ್ಯೊಬ್ಬಾ ನನಗೆ ಹೆದರಿಕೆಯಾಗುತ್ತದಪ್ಪಾ" ಎಂತ ಹೇಳಿ ಆಕೆಯು ದೂರಕ್ಕೆ ಹೋದಳು. ತದನಂತರ ಸ್ತ್ರೀಯರ ಸಹಾಯದ ಆಶೆಬಿಟ್ಟು ಅಯ್ಯಾ ಮೃತಳು ನಮ್ಮ ಸಹೋದರಿ ಎಂತ ಭಾವಿಸಿ ನಾವೇ ಅಲಂಕಾರದ ಕೆಲಸ ಮಾಡುವಾ ಎಂತ ಹೇಳಿ ಸ್ತ್ರೀಯರು ಮಾಡುವ ಕೆಲಸವನ್ನು ನಾವೇ ಮಾಡಿದೆವು. ಇತ್ತಲಾಗೆ ಅಂತೂ ಒಂದು ಸ್ತ್ರೀಯ ಪ್ರಾಣ ಹೋಗುತ್ತಲೇ ಉಳಿದ ಸ್ತ್ರೀಯರು ಶವವನ್ನೇ ಬಿಟ್ಟು ದೂರ ಹೋಗುವುದೇ ರೂಢಿಯಾಗಿದೆ. ಅನ್ಯಜಾತಿಗಳಲ್ಲಿ ಸ್ತ್ರೀಯರು ಹೇಗೆ ನಡಕೊಳ್ಳುತ್ತಾರೋ ನಾನರಿಯೆ.

ವಿಶೇಷ ನಾಚಿಕೆಯುಳ್ಳವರಾದ, ತಮ್ಮ ಶರಗು ನಡಿಯುವಾಗ ಘಳಿಗೆ ಅತ್ತಿತ್ತ ಆಗದ ಹಾಗೆ ಎಚ್ಚರಿಕೆ ಇರುವ ಸ್ವಭಾವದವರಾದ ಸ್ತ್ರೀಯರು ತಮ್ಮ ಸ್ವಜಾತಿಯ ಒಬ್ಬ ಸ್ತ್ರೀಯು ಮೃತಳಾಗುತ್ತಲೇ ಆಕೆಯ ನಾಚಿಕೆಯ ಕುರಿತು ಕಿಂಚಿತ್ತಾದರೂ ಅನುಕಂಪವಿಲ್ಲದವರಾಗಿ ನಡಕೊಳ್ಳುವುದರ ಕಾರಣವೇನು? ಕಾರಣವೇನೋ, ನಾನು ಮಾಡಿದ ಪಾಪಗಳಿಗೆ ನನಗೆ ಶಿಕ್ಷೆಯಾಗಿ ಶ್ರೀ ವಿಷ್ಣು ಯಾವ ಜನ್ಮ ಕೊಟ್ಟರೂ ಚಿಂತೆ ಇಲ್ಲ; ನಮ್ಮ ಜಾತಿಯಲ್ಲಿ ಸ್ತ್ರೀಯಾಗಿ ನನ್ನನ್ನು ಹುಟ್ಟಿಸದಿರಲಿ.

ಕದಳಿ ಬಾಪ್ಪಯ್ಯಾ.

ಮೂಲಗೇಣಿ ಗುತ್ತೆ ವಿಷಯ.

ಸ್ವದೇಶಾಭಿಮಾನಿ ಪತ್ರಕರ್ತರೇ, ಈ ಕೆಳಗಿನ ವಿಜ್ಞಾಪನೆಗಳಿಗೆ ಸ್ಥಳ ಕೊಡುವಿರಾಗಿ ನಂಬಿ ಬರಕೊಂಡಿದ್ದೇನೆ.

ಸಪ್ಟಂಬರ ೨೦ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿ ಮೂಲಗೇಣಿ ತೀರ್ವೆ ಹಂಚುವದರ ಬಗ್ಯೆ ತೋರುವ ಒಂದು ಅಭಿಪ್ರಾಯವು ಸರ್ವ ಸಮ್ಮತವಲ್ಲ.

ಮೂಲಗೇಣಿ ಪಟ್ಟೆ ಆಸ್ತಿಯ ಬಗ್ಯೆ ತೀರ್ವೆ ಅಷ್ಟೇ ಮುನಾಫೆಯೆಂತ ನಿಶ್ಚಯಿಸಲಿಕ್ಕೆ ಆಧಾರವಿಲ್ಲ. ಅದನ್ನು ಬಲಪಡಿಸಿ ತೀರ್ವೆಗೆ ಹಂಚಿ ಹಾಕಿದರೆ ನ್ಯಾಯವಾಗಲಾರದು.

ತೀರ್ವೆಯಷ್ಟು ಮುನಾಪೆ ಇಲ್ಲದ ಸ್ಥಳವೂ ಉಂಟು. ಅದರಂತೆ ತೀರ್ವೆಯ ಒಂದರ ಹತ್ತರಷ್ಟಕ್ಕೂ ಜಾಸ್ತಿ ಮುನಾಪೆ ಸಿಕ್ಕುವ ಸ್ಥಳವೂ ಉಂಟು. ಇದೆಲ್ಲ ಪ್ರತ್ಯಕ್ಷ ಇರುವದರಿಂದ ಇಂಥಾ ದೃಶ್ಯವನ್ನು ಬಿಟ್ಟು ತೀರ್ವೆಯಷ್ಟೇ ಮುನಾಪೆಯೆಂತ ಅದೃಶ್ಯವಾದವುಗಳನ್ನು ಕಲ್ಪಿಸುವದು ಯಾಕೆ.

ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳುವಾಗ ತೀರ್ವೆ ಕಳದು ಉಳಿದ ಮುನಾಫೆಗೆ ಒಂದು ದರದ ಬಡ್ಡಿಯೆಂತ ನಿಶ್ಚಯಿಸಿಕೊಂಡಂತೆ ವರ್ಗದಾರರ ಆಸೆಗೂ ಮೂಲಗೇಣಿ ಹೊಂದಿದ ವಕ್ಲುತನದವರು ಕೊಡುವ ಗೇಣಿಯ ಪ್ರತಿಫಲಕ್ಕೆ ಹೆಚ್ಚಿನ ಉತ್ಪತ್ತಿ ಬೆಳಿಸಿದರೆ ಅದೆಲ್ಲ ತಮಗೆ ಲಭ್ಯವಾಗುತ್ತದೆ ಎಂಬ ವಕ್ಕಲಿನ ಆಸೆಗೂ ತೀರ್ವೆ ಏರಿದ ಆಸ್ತಿ ಮಟ್ಟಿಗೆ ನಿರಾಶೆ ಆಗಿದೆ.

ಆದರೆ ಆಸ್ತಿ ಮೇಲೆ ವರ್ಗದಾರರಿಗೆ ಅನಾದಿಯಿಂದ ಇರುವ ಪ್ರಥಮ ಹಕ್ಕು ಈಗಲೂ ನಾಶವಾಗದೆ ಊರ್ಜಿತದಲ್ಲಿಯೇ ಉಂಟು. ಅದು ಸರಕಾರಕ್ಕೆ ಒಪ್ಪಿಸುವದು. ವರ್ಗದಾರನು ಈ ಹಕ್ಕಿಗೆ ವಿರೋಧವಿಲ್ಲದ್ದೆ ಆಸ್ತಿಯ ತೀರ್ವೆಗೆ ಪ್ರಥಮ ಜವಾಬುದಾರಿಯೆಂತಲೆ ಮಾಡಿರುವದರಿಂದ ತೀರ್ವೆಯು ಆಸ್ತಿಯನ್ನೇ ಆಶ್ರಯಿಸಿಕೊಂಡದ್ದಾಗುತ್ತದೆ. ಈಗಿನ ಭೂಮಿ ಸ್ಥಿತಿ ಮೇಲೆ ಆದ ಅಂಥಾ ತೀರ್ವೆಯನ್ನು ಆಸ್ತಿ ಸ್ವಾಧೀನಗಾರ ಕೊಡುವರೆ ಬದ್ದನೆಂತಲೆ ನಿಶ್ಚಯಿಸಿದರೆ ಆಸ್ತಿಯು ಇನ್ನಷ್ಟು ವೃದ್ಧಿಗೆ ಬರಲಿಕ್ಕೆ ಕಾರಣವಾಗುತ್ತದೆ. ಇದರಿಂದ ಉಭಯ ಭ್ರಷ್ಟತನವನ್ನು ಹೋಗಲಾಡಿಸಿಕೊಳ್ಳಲಿಕ್ಕೆ ಇದ್ದ ಯತ್ನ ತಪ್ಪುವದಿಲ್ಲ.

ಪಟ್ಟಾದಾರನಾಗಲಿ, ಮೂಲಗೇಣಿಗಾರನಾಗಲಿ ಮುಂದಿನ ಸೆಟ್ಲೆಮೆಂಟು ವಿವರವನ್ನು ತಿಳಿಯದೆ ಲೇವಣಿ ತೀರ್ವೆ ಉಳ್ಳ ಆಸ್ತಿಗೆ ನಿಶ್ಚಯಿಸಿಕೊಂಡ ಗೇಣಿಯನ್ನು ತಬ್ದೀಲ್ ಮಾಡುವ ಸ್ವತಂತ್ರ ಆಗ್ಯೆ ಇಟ್ಟುಕೊಳ್ಳಲಿಲ್ಲವೆಂಬದು ಪ್ರಸಿದ್ಧವಾದ್ದೇ.

ಈಗಿನ ಹೊಸ ವಿಲೆವಾರಿ ಕುರಿತು ತೀರ್ವೆ ಅಷ್ಟೆ ಮುನಾಫೆಯೆಂತ ನಿಶ್ಚಯಿಸಿ ಧನಿ ವಕ್ಲುಗಳ ಮೇಲೆ ಹಂಚುವದರ ಬದಲಾಗಿ ಆಸ್ತಿಯನ್ನು ಹೊಂದಿದ ತೀರ್ವೆ ಬಗ್ಯೆ ರೆವಿನ್ಯೂ ತೀರ್ವೆಯೆಷ್ಟು, ಸೆಟ್ಲೆಮೆಂಟ ತೀರ್ವೆಯೆಷ್ಟು ಎಂತ ನೋಡುವಾಗ ಏರಿದ ತೀರ್ವೆ ಸಿಕ್ಕುತ್ತದೆ. ಅದು ಪೂರ್ಣ ಸರಕಾರಕ್ಕೆ ಸಲ್ಲಬೇಕಾದ್ದರಿಂದ ಆಸ್ತಿ ಸ್ವಾಧೀನಗಾರ ಕೊಡಲಿಕ್ಕೆ ತಕ್ಕದ್ದಾಗುತ್ತದೆ.

ಅಂಥಾ ತೀರ್ವೆಯನ್ನು ಪ್ರಥಮ ವರ್ಗದಾರನು ಸರಕಾರಕ್ಕೆ ಕೊಡಬೇಕಾದ್ದರಿಂದ ಹಾಗೆ ಕೊಡುವಿಕೆ ಬಗ್ಯೆ ಧನಿಗೆ ವಕ್ಲು ಕೊಡಬೇಕು. ಅಥವಾ ಎಷ್ಟು ಕೊಡಬೇಕೆಂತ ನಿಶ್ಚಯಿಸಿದರೆ ಧನಿ ವಕ್ಲುಗಳಿಗೆ ಯಾವ ನಷ್ಟ ಉಂಟಾಗದೆ ಭೂಮಿ ಸ್ಥಿತಿ ಮೇಲೆ ಏರಿದ ತೀರ್ವೆಯು ಆಸ್ತಿಯನ್ನೆ ಆಶ್ರಯಿಸಿಕೊಂಡತ್ತಾಗುತ್ತದೆ.

ಈ ಅರಿಕೆಯನ್ನು ದಯಾಳು ಸರಕಾರದವರು ಆಲೋಚಿಸಿಯಾರು ಎಂತ ನಂಬಿಕೊಂಡ ವರ್ಗದಾರ ಮತ್ತು ಮೂಲಗೇಣಿಗಾರ.

ಒಬ್ಬ ರಹಿತ.

ವಿದೇಶ ವೃತ್ತಾಂತ.

ಮದ್ರಾಸ್ ಗವರ್ನರರಾಗಿ ನೇಮಿಸಲ್ಪಟ್ಟ ಪೆಂಟಲೆಂಡ ಪ್ರಭುಗಳವರು ಕುಟುಂಬ ಸಹಿತವಾಗಿ ಹಿಂದೂಸ್ಥಾನಕ್ಕೆ ಬರಲು ತಾ. ೨೮ರಲ್ಲು ಹಡಗ ಹತ್ತಿದರು.

ಬಹುಮಾನಪಟ್ಟ ಗೋಖಲೆಯವರು ಈಗ ಲುಸ್ಸಾನೆಯಲ್ಲಿದ್ದು ತಕ್ಕಷ್ಟು ದೇಹಾರಾರೋಗ್ಯವನ್ನು ಹೊಂದುತ್ತಾ ಬರುತ್ತಾರೆ. ಅಲ್ಲಿಂದ ಅವರು ಲಂಡನಿಗೆ ಹೋಗಿ ಇದೇ ವಾರದಲ್ಲಿ ದಕ್ಷಿಣ ಆಫ್ರೀಕವನ್ನು ಸಂದರ್ಶಿಸುವರೆ ಹೊರಡುವರು ಎಂಬದಾಗಿ ತಿಳಿದು ಬರುತ್ತದೆ.

ಜಪಾನಿನ ಟೋಕಿಯೋದಲ್ಲಿ ತಾ. ೨೮ರಲ್ಲು ಬಲವಾದ ಸುಂಟರ ಗಾಳಿಯು ಬೀಸಿ ಟೊಕಿಯೋ ನಗರದಲ್ಲಿ ಅತಿರೇಕ ನಷ್ಟವಾಗಿರುವುದು. ಜಪಾನರ ಕೆಲವು ಹಡಗಗಳು ಮುಣುಗಿ ಹೋದವು. ಇಂಥಾ ಸುಂಟರ ಗಾಳಿಯು ೫೦ ವರ್ಷಗಳಿಂದೀಚೆಗೆ ಆಗಲಿಲ್ಲವು. ನಗೋಯ, ಒಸಾಕ, ಜಫು, ನಾರ ಎಂಬೀ ಸ್ಥಳಗಳಲ್ಲಿ ವಿಪರೀತ ನಷ್ಟವಾಗಿಯದೆ. ಸಾವಿರಾರು ಜನರು ನಿರ್ಗತಿಕರಾಗಿರುವರು. ಸಾವಿರಾರು ಜನರು ಸತ್ತುಹೋದರು. ಒಸಾಕದಲ್ಲಿ ೨೦ ಸಾವಿರ ಮನೆಗಳು ನೆಲಸಮವಾದವು. ಬಂದರವು ಹಾಳಾಯಿತು. ನಾರ ಎಂಬಲ್ಲಿದ್ದ ೧೦೦೦ ವರುಷಗಳ ಹಿಂದೆ ಕಟ್ಟಿಸಲ್ಪಟ್ಟ ಬಲವಾದ ಒಂದು ದೇವಸ್ಥಾನವು ಕಾಗದದಿಂದ ಮಾಡಿದ ಮನೆಯಂತೆ ಕುಸಿದು ಬಿತ್ತು. ಸಪಾರೋ ಎಂಬಲ್ಲಿ ೪೦೦ ಮಂದಿ ಮೀನು ಹಿಡಿಯುವವರು ಮುಣುಗಿ ಹೋದರು. ಅನೇಕ ಸ್ಥಳಗಳಲ್ಲಿ ಶಾಲೆಗಳೂ, ದೇವಸ್ಥಾನಗಳೂ ನೆಲಸಮವಾಗಿರುವುದು.

ಫ್ರಾನ್ಸಿನಲ್ಲಿ ಈಗ ಒಂದು ಹೊಸ ಯಂತ್ರವನ್ನು ನಿರ್ಮಿಸಿದ್ದಾರೆ. ಇದು ಗ್ರಾಮಫೋನ್ ಯಂತ್ರದಂತೆ ಇರುವುದು. ಈ ಯಂತ್ರ ಒಂದನ್ನು ಹೆಗಲಿಗೆ ಕಟ್ಟಿಕೊಂಡು, ಆಕಾಶ ವಿಮಾನದಲ್ಲಿ ಪ್ರಯಾಣ ಮಾಡುತ್ತಾ ತನ್ನ ಕಣ್ಣಿಗೆ ತೋರಿದ ಸಂಗತಿಗಳನ್ನೂ ಶತ್ರು ಸೇನೆಯು ಯಾವ ವಿಧವಾಗಿ ನೆಲಸಿರುವುದೋ, ಯಾವ ಯುದ್ಧ ನಾವೆಯು ಎಲ್ಲಿರುವುದೋ, ಯಾವ ಪಟ್ಟಣದ ಕೋಟೆ ಕೊತ್ತಲಗಳು ಯಾವ ರೀತಿಯಲ್ಲಿರುವುದೋ ಮೊದಲಾದ ವಿಷಯಗಳನ್ನೆಲ್ಲಾ ಪಕ್ಕದಲ್ಲಿ ಕುಳಿತಿರುವ ಸ್ನೇಹಿತನೊಡನೆ ಮಾತನಾಡುವಂತೆ ಈ ಯಂತ್ರದ ಬಾಯಲ್ಲಿ ಮಾತನಾಡಿದರೆ ಅದು ಎಲ್ಲವನ್ನೂ ಆಕರ್ಷಿಸಿಕೊಳ್ಳುವದು. ವಿಮಾನಗಾಮಿಯು ಭೂಮಿಗೆ ಇಳಿದ ಕೂಡಲೇ ಆ ಯಂತ್ರವನ್ನು ತಿರುಗಿಸಿದರೆ ಅವನು ನೋಡಿ ಹೇಳಿದ ವಿಷಯವನ್ನೆಲ್ಲಾ ಅದು ಸ್ಪಷ್ಟವಾಗಿ ಹೇಳುವುದು. ಈ ಪದ್ಧತಿಯಿಂದ ಕಣ್ಣಾರೆ ನೋಡಿದ ಸಂಗತಿಯನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾದ ಅವಶ್ಯಕತೆಯೂ ಮರೆತು ಹೋಗುತ್ತದೆಂಬ ಭಯದಿಂದ ಬರೆದಿಟ್ಟುಕೊಳ್ಳಬೇಕಾದ ಅವಶ್ಯಕತೆಯೂ ಇರುವದಿಲ್ಲ.

ಟ್ರಿಪೋಲಿಯ ಜಂಜೂರಿನಲ್ಲಿ ಇಟಾಲಿಯರಿಗೂ ತುರ್ಕರಿಗೂ ನಡೆದ ಯುದ್ಧದಲ್ಲಿ ತುರ್ಕರ ಸೈನ್ಯವೆಲ್ಲವೂ ಯುದ್ಧ ರಂಗಕ್ಕೆ ಬಂದು ಕಾದಾಡಿದರು. ಚತುರ್ದಿಕ್ಕಿನಿಂದಲೂ ೧೨-೧೫ ಸಾವಿರ ತುರ್ಕರ ಸೈನ್ಯವು ಇಟಾಲಿಯರ ಮೇಲೆ ಬಂದು ಬಿತ್ತು. ಆದರೆ ಇಟಾಲಿಯರು ಜಯಪ್ರದರಾದರು. ತುರ್ಕರಲ್ಲಿ ಹೆಚ್ಚುಕಡಿಮೆ ೨ ಸಾವಿರ ಮಂದಿ ಮಡಿದರು.

ಇಟಾಲಿಯರಿಗೂ ತುರ್ಕರಿಗೂ ಸಂಧಾನ ಮಾಡುವರೆ ಔಚಿ ಎಂಬಲ್ಲಿ ಕೂಡಿದ ಪ್ರತಿನಿಧಿಗಳು ಸಂಧಾನದ ಪ್ರಸ್ತಾಪವು ನಿಲ್ಲಿಸಲ್ಪಡಲಿಲ್ಲ, ಇದೇ ಕಳದ ಜುಲಾಯಿಂದ ಈ ಸಂಬಂಧ ಸಭೆ ಕೂಡಿ ಆಲೋಚನೆ ನಡೆಯುತ್ತಿದೆ. ಆದರೆ ಟ್ರಿಪೋಲಿಯಲ್ಲಿ ಇಟಾಲಿಯರ ರಾಜಭಾರವನ್ನು ಸ್ಥಾಪಿಸುವ ಮುಖ್ಯ ಪ್ರಶ್ನೆಯು ಇನ್ನೂ ಇತ್ಯರ್ಥವಾಗಲಿಲ್ಲವೆಂದು ಹೇಳುವರು.

ಬಾಲ್ಕಾನದ ಪ್ರಜೆಯವರು ದಂಗೆ ಎದ್ದಿರುವುದರಿಂದ ತುರ್ಕರು ಇಟಾಲಿಯರ ಕೂಡೆ ಬೇಗನೇ ಸಂಧಾನವಾಗಲಿಕ್ಕಿರುವರು. ಮಂತ್ರಿಯಾಗಿರುವ ರಶಿದ್ ಪಾಶರವರು ಇಟಾಲಿಯರ ವಿದೇಶಿ ಮಂತ್ರಿಯಾಗಿರುವ ಮಾರ್ಕ್ವಿಸ್. ಡಿ. ಸಾನ್ ಗಿಲಿಯಾನರವರ ಕೂಡೆ ಈ ವಿಷಯ ಮಾತನ್ನಾಡುವರೆ ಕನ್‌ಸ್ತಂತಿನೋಪಲಿನಿಂದ ಸ್ವೀಜರ್‌ಲೇಂಡಿಗೆ ಹೋಗಿರುವರು.

ಐರ್ಲಾಂಡಿಗೆ ಹೋಮ್‌ರೂಲು ಕೊಡುವುದನ್ನು ಮನ್ನಪಡಿಸಬೇಕೆಂದು ಅಲಸ್ಟರಿನ ಪ್ರಜೆಗಳು ಮಾಡುತ್ತಿರುವ ಪ್ರಯತ್ನಗಳೂ ಈ ಸಂಬಂಧ ಅವರು ಮಾಡಿಕೊಳ್ಳಲಿಕ್ಕಿರುವ ಕರಾರು ಯಾವುದೆಂಬದನ್ನೂ ಕಳದ ಸಂಚಿಕೆಯಲ್ಲಿ ತಿಳಿಸಿತ್ತಷ್ಟೆ. ತಾ. ೨೮ರಲ್ಲು ಅಲಸ್ಟರಿನ ಪ್ರೊಟೆಸ್ಟಾಂಟರು ಬೆಲ್‌ಫಾಸ್ಟಿನಲ್ಲಿ ಕೂಡಿ ಬಂದರು. ಆ ದಿನ ಪ್ರಾತಃಕಾಲವು ಆದಿತ್ಯವಾರ ಮುಂಜಾನೆಯಂತೆಯೇ ನಿಶಬ್ಧವಾಗಿತ್ತು. ಜನರ ಗುಂಪು ದೇವಾಲಯಕ್ಕೆ ಹೋಗುವಂತೆಯೇ ಅಲಸ್ಟರಿನ ಸಭಾಸದನದಲ್ಲಿ ಕೂಡಿದರು. ಇವರ ಮುಂದಾಳಾಗಿರುವ ಸರ್ ಎಡ್ವರ್ಡ್ ಕಾರ್ಸನರವರೂ, ಪಟ್ಟಣ ಪಾಲಕರೂ, ಪ್ರಭುಗಳೂ ಅಲ್ಲಿ ಕೂಡಿಬಂದನಂತರ ದೇವಾರಾಧನೆಯು ನಡೆಯಿತು. ಇದರನಂತರ ಸರ್ ಎಡ್ವರ್ಡ್ ಕಾರ್ಸನರವರು ಆ ಕರಾರಿನ ಪ್ರತಿಯೊಂದಿಗೆ ಪಟ್ಟಣ ಸಭಾಸದನಕ್ಕೆ ಕೂಡಿದ ಜನ ಸಂದಣಿಯೊಡನೆ ಹೋಗಿ ಕರಾರಿಗೆ ತನ್ನ ದಸ್ಕತ್ತು ಕೊಟ್ಟರು. ಮೇಜಿಯು ಯೂನ್ಯನ್ ಜೇಕಿನಿಂದ ಮುಚ್ಚಲ್ಪಟ್ಟಿತ್ತು. ಸರ್ ಎಡ್ವರ್ಡ್ ಕಾರ್ಸನರವರು ಬೆಳ್ಳಿಯ ಲೇಖನಿಯಿಂದ ಸಹಿ ಮಾಡಿದರು. ಇವರನಂತರ ಲಂಡನ್‌ಡರಿ ಪ್ರಭುಗಳೂ ಆಯಾ ಪ್ರೊಟೆಸ್ಟಾಂಟ ಸಭೆಗಳ ಮುಂದಾಳುಗಳೂ, ಶ್ರೀಮಂತರೂ, ಪ್ರಭುಗಳೂ, ಹುದ್ದೆದಾರರೂ ಕರಾರಿಗೆ ಸಹಿ ಮಾಡಿದರು. ಬ್ರಿಟಾನಿನ ಎಲ್ಲಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇದ್ದ ಅಲಸ್ಟರಿನವರು ಆ ದಿನ ಈ ಕರಾರನ್ನು ಹಾಡುತ್ತಾ ಮೆರವಣಿಗೆ ಹೊರಟರು. ಸರ್ ಎಡ್ವರ್ಡ್ ಕಾರ್ಸನರವರೂ ಇತರ ಮುಂದಾಳುಗಳೂ ಈ ಕರಾರಿಗೆ ಸಹಿಮಾಡಿದನಂತರ ಜನರು ಬೀದಿಯಲ್ಲಿ ಮೆರವಣಿಗೆ ಮಾಡಿದರು. ಐರ್ಲಾಂಡಿನ ಪ್ರಧಾನ ಗುರುಗಳು "ತಮ್ಮ ಮಾತೃಭೂಮಿಯಾದ ಐರ್ಲಾಂಡನ್ನು ತೇಜೋಭಂಗದಿಂದ, ಅಶುಭವಾದ ಸಂಗತಿಯಿಂದ, ಕಡಿದಾಟದಿಂದ, ಅಂತಃಚ್ಛಿದ್ರದಿಂದ ಕಾಪಾಡುವ ಹಾಗೆ ಐರ್ಲಾಂಡಿನ ಜನರನ್ನು ನಡಿಸಲಿಕ್ಕೆ ಬೇಕಾದ ಬಲವನ್ನೂ ಜ್ಞಾನವನ್ನೂ ದೇವರು ನಿನಗೆ ದಯಪಾಲಿಸಲಿ" ಎಂಬದಾಗಿ ಸರ್ ಎಡ್ವರ್ಡ್ ಕಾರ್ಸನವರಿಗೆ ತಂತೀ ಬಿಟ್ಟರು. ಆ ದಿನ ದೇವಮಂದಿರದಲ್ಲಿ ಬಿಷೋಪರವರು ಭಾಷಣ ಕೊಟ್ಟು ಹೋಮ್ ರೂಲನ್ನು ತಡೆಕಟ್ಟುವುದಕ್ಕಾಗಿ ತಾವು ಸರ್ವವನ್ನೂ ತ್ಯಾಗ ಮಾಡುವರೆ ಸಿದ್ಧವಿದ್ದೇವೆಂದು ಹೇಳಿದರು. ಎಡಿನ್‌ಬರ್ಗಿನಲ್ಲಿರುವ ಅಲಸ್ಟರಿನ ಜನರಲ್ಲಿ ೧೫೦೪ ಮಂದಿ ಈ ಕರಾರಿಗೆ ದಸ್ಕತು ಹಾಕಿದರು. ಈ ಮಹಾ ದಿವಸದಲ್ಲಿ ಬೆಲ್‌ಫಾಸ್ಟಿನಲ್ಲಿ ಏನೊಂದೂ ಗೊಂದಲ ನಡೆಯಲಿಲ್ಲ. ಸರ್ ಎಡ್ವರ್ಡ್ ಕಾರ್ಸನರವರು ಲಿವರ್ ಪೂಲಿಗೆ ಹೋಗುವರೆ ಹಡಗ ಹತ್ತಿದರು. ಜನರು ಅವರನ್ನು ಮೆರವಣಿಗೆಯಿಂದ ಕಳುಹಿಸಿಕೊಟ್ಟು ಬಹುಮಾನಾರ್ಥವಾಗಿ ಪಿಸ್ತೂಲುಗಳನ್ನು ಹಾರಿಸಿದರು. ಇವರು ಹಡಗ ಹತ್ತುವ ಮೊದಲು ಮಾಡಿದ ಭಾಷಣದಲ್ಲಿ, ತಾನು ಐರ್ಲಾಂಡಿಗೆ ಹ್ಯಾಗೆ ಹಿಂದೆ ಬರುವೆನೆಂದು ತನಗೆ ಈಗ ಗೊತ್ತಿಲ್ಲ. ಸಮಾಧಾನವು ನೆಲೆಗೊಳ್ಳಬೇಕೆಂಬದೇ ತನ್ನ ಆಶೆಯಾಗಿದೆ. ಆದರೆ ಯುದ್ಧ ಮಾಡುವುದು ಅವಶ್ಯವೆಂತಾದರೆ ತಾನು ಇದಕ್ಕೆ ಎಂದೂ ಹಿಂಜರಿಯುವುದಿಲ್ಲವೆಂಬದಾಗಿ ಹೇಳಿದರು.

ಮೋಯಿ ಎಂಬಲ್ಲಿ ಅಲಸ್ಟರ್‌ಡೇ ಆಚರಿಸಲ್ಪಡುವಾಗ ಕತ್ತಲೆಯಲ್ಲಿ ದೊಡ್ಡ ದೊಂಬಿ ನಡೆಯಿತು. ಕಲ್ಲುಗಳನ್ನೂ ಕುಪ್ಪಿಗಳನ್ನೂ ಒಬ್ಬೊರಿಗೊಬ್ಬರು ಬಿಸಾಡಿಕೊಂಡು ರಿವೋಲ್ವರುಗಳನ್ನು ಪ್ರಯೋಗಿಸಿಕೊಂಡರು. ಅಲ್ಲಿದ್ದ ಸಣ್ಣ ಪೋಲೀಸ್ ಸಿಬಂದಿಯಿಂದ ದೊಂಬಿಯನ್ನು ನಿಲ್ಲಿಸಲಾಗದೆ ಹೋಯಿತು. ಬೆಲ್ಫಾಸ್ಟಿನಲ್ಲಿ ಕೆಲವು ಅನಾಮಿಕ ಪತ್ರಗಳು ಟಪ್ಪಾಲಿಗೆ ಹಾಕಲ್ಪಟ್ಟವು. ಇದರಲ್ಲಿ "ನಮಗೆ ಹೋಮ್ ರೂಲು ಬೇಡ, ಇಂಗ್ಲಾಂಡಿನವರು ನಮಗೆ ಸಹಾಯಮಾಡದಿದ್ದರೆ ಜರ್ಮನಿಯವರು ಮಾಡ್ಯಾರು" ಎಂಬದಾಗಿ ಬರೆದಿತ್ತು. ಲಿವರ್‌ಪೂಲಿನಲ್ಲಿ ಸರ್ ಎಡ್ವರ್ಡ್ ಕಾರ್ಸನರವರೂ ಮೆ| ಡಬ್ಲ್ಯು ಇ.ಸ್ಮಿತ್ತರವರೂ ೧೦೦,೦೦೦ ಮಂದಿಗೆ ಭಾಷಣಕೊಟ್ಟರು. ಲಿವರ್‌ಪೂಲಿನ ಹಡಗ ಮಾಲಿಕರಲ್ಲಿ ೩ ಮಂದಿ ಬೆಲ್ಫಾಸ್ಟಿಗೆ ೧೦,೦೦೦ ಜನರನ್ನು ಕಳುಹಿಸಿ ಕೊಡುವರೆ ಮಾತು ಕೊಟ್ಟಿದ್ದಾರೆಂಬದಾಗಿ ಸ್ಮಿತ್ತರವರು ತನ್ನ ಭಾಷಣದಲ್ಲಿ ಹೇಳಿದರು.

ಲಂಡನಿನ ಹೊರ್ಸ್‌ಶೋ ಹೋಟೇಲಿಗೆ ತಾ. ೨೭ರಲ್ಲು ಟಿಟ್ಟೂಸ್ ಎಂಬ ಒಬ್ಬನು ಹೋಗಿ ಅದರ ಯಜಮಾನಿಯನ್ನು ಗುಂಡುಹೊಡೆದು ಕೊಂದು ಮತ್ತೊಬ್ಬನನ್ನು ಘಾಯ ಪಡಿಸಿದನು. ಅನಂತರ ಹೋಟೇಲಿಗೆ ಬಂದಿದ್ದ ಇತರ ಇಬ್ಬರಿಗೂ ಗುಂಡು ಹೊಡೆದು ಅಲ್ಲಿಂದ ಹೊರಗೆ ಓಡಿ ಬಾಗಲು ಕಾಯುವವನಿಗೂ ಹೊಡೆದನು. ಅವನು ಮಧ್ಯೆ ನಿಂತುಕೊಂಡು ಎಡಕ್ಕೂ ಬಲಕ್ಕೂ ಗುಂಡು ಹಾರಿಸಿದ್ದನ್ನು ನೋಡಿದ ಅಲ್ಲಿದ್ದ ಒಬ್ಬ ವಾರ್ತಾದಾಯಕನು ಮತ್ತೊಬ್ಬನ ಸಹಾಯದಿಂದ ಈ ಘಾತುಕನನ್ನು ಹಿಡಿದನು. ಆದರೆ ಈ ಘಾತುಕನು ವಾರ್ತಾದಾಯಕನಿಗೆ ರಿವೋಲ್ವರಿನಿಂದ ಹೊಡೆದು ಅವನ ಸಹಾಯಕನಿಗೆ ರಿವೋಲ್ವರಿನಿಂದ ಬಾಯಿಗೆ ಹೊಡೆದು ಹಲ್ಲು ಉದುರಿಸಿದನು. ಆದರೂ ಈ ದಾರಿಗನು ಪೋಲೀಸಿನವರು ಬರುವ ವರೆಗೆ ಘಾತುಕನೊಡನೆ ಕಾದಾಡಿದನು. ಅನಂತರ ಪೋಲೀಸಿನವರು ಅವನನ್ನು ಕೈದುಮಾಡಿದರು.

ಈಚೆಗೆ ಬೆರ್ಲಿನ್ ನಗರದಿಂದ ಲಂಡನಿಗೆ ಬಂದ ಪ್ರಾಯುವೇನ್ ಬ್ರನ್ ಹೈಲ್ಡ್ ಎಂಬ ಯೌವ್ವನ ಸ್ತ್ರೀಯು ೭ ಅಡಿ ೧೧ ಅಂಗುಲ ಎತ್ತರವಿದ್ದಾಳೆ. ಲೋಕದಲ್ಲಿ ಇವಳೇ ಎತ್ತರ ಹೆಂಗಸು. ಇವಳು ಲಂಡನಿಗೆ ಬಂದಾಗ ಸಿಟಿ ಪೋಲೀಸಿನವರನ್ನು ನೋಡಿ ಈ ಚಿಕ್ಕ ಪ್ರಾಣಿಗಳು ಯಾವುದು ಎಂದಳು. ಲಂಡನಿನ ಜನರು ಇವಳಿಗೆ ಬಹಳ ಕುಳ್ಳರಾಗಿ ಕಾಣುವರು. ಎಕ್ಸ್‌ಪ್ರೆಸ್ ಎಂಬ ವರ್ತಮಾನ ಪತ್ರಿಕೆಯ ಪ್ರತಿನಿಧಿಗಳು ಆಕೆಯನ್ನು ಭೇಟಿಕೊಟ್ಟಾಗ ಅವಳು "ಈ ಲೋಕವು ನನಗಾಗಿ ಸೃಷ್ಟಿಸಲ್ಪಡಲಿಲ್ಲ. ಸಾಧಾರಣ ಪರಿಮಾಣದ ಜನರಿಗಾಗಿ ಸೃಷ್ಟಿಸಲ್ಪಟ್ಟದೆ. ನಿಮ್ಮ ಟ್ರೇಮು ಬಂಡಿಗಳೂ ಕುದುರೆ ಗಾಡಿಗಳೂ ಬಹಳ ಸಣ್ಣವು. ಅದರಲ್ಲಿ ನನಗೆ ಕೂತುಕೊಳ್ಳಲಿಕ್ಕೆ ಆಗುವುದೇ ಇಲ್ಲ. ನಾನು ನನಗಾಗಿ ಮಾಡಿದ ದೊಡ್ಡ ಮೋಟೋರ್ ಗಾಡಿಯಲ್ಲಿ ಕೂತುಕೊಳ್ಳಬೇಕಾಗಿಯದೆ. ನಿಮ್ಮ ಮನೆಗಳೆಲ್ಲಾ ನನಗೆ ಆಟದ ಗೊಂಬೆಗಳ ಮನೆಗಳಂತೆ ಕಾಣುತ್ತಿವೆ. ಬೆರ್ಲಿನಿನ ನನ್ನ ಮನೆಯು ಎತ್ತರ ಮಾಡುಳ್ಳದ್ದಾಗಿ ಕಟ್ಟಿಸಿದ್ದಾಗಿರುತ್ತದೆ. ಕಟ್ಟುಕಥೆಗಳಲ್ಲಿ ಕಾಣ ಬರುವ ದೊಡ್ಡ ರಾಕ್ಷಸರ ಮನೆಯಂತೆ

ನನ್ನ ಆ ಮನೆ ಇದೆ. ನಾನು ಸಾಧಾರಣ ಇತರ ಮನುಷ್ಯರಿಗಿಂತ ಎರಡಡಿ ಮಾತ್ರ ಎತ್ತರವಿದ್ದೇನೆ. ಆದರೂ ನಾನು ಉಪಯೋಗಿಸಬಹುದಾದ ಒಂದು ವಸ್ತುವಾದರೂ ಇಲ್ಲಿ ಇಲ್ಲ. ಮನೆಗಳ ಮತ್ತು ಗಾಡಿಗಳ ಬಾಗಲುಗಳನ್ನು ಬಗ್ಗಿಕೊಂಡು ಹೊಗಬೇಕಾಗಿಯದೆ. ನನಗೆ ಬಗ್ಗಿ ಬಗ್ಗಿ ಸಾಕಾಯಿತು ಎಂದು ಹೇಳಿದಳು.

ಉತ್ತರ ಹಿಂದೂಸ್ಥಾನ.

ನಮ್ಮ ಹಿಂದೂಸ್ಥಾನದಲ್ಲಿ ಜೀವವಿಮೆ ಫಂಡು, ವಿವಾಹ ಫಂಡು, ಇತ್ಯಾದಿ ಕಂಪೆನಿಗಳು ದಿನೇ ದಿನೇ ಹೆಚ್ಚಾಗಿ ದೇಶದ ಎಲ್ಲಾ ಭಾಗಗಳಲ್ಲಿಯೂ ಹರಡಿಕೊಳ್ಳುತ್ತಿರುವುದು ಸರ್ವರಿಗೂ ಗೊತ್ತಿದ್ದ ಸಂಗತಿಯಷ್ಟೆ. ಲಾಹೋರ್ ಪಟ್ಟಣದಲ್ಲಿ ಸ್ಥಾಪಿತವಾಗಿ ಬಹಳ ಪ್ರಖ್ಯಾತಿಯನ್ನು ಹೊಂದಿದ ಒಂದು ವಿವಾಹ ಫಂಡಿನ ಕಂಪೆನಿಯು ಕೆಲವು ದಿವಸಗಳ ಹಿಂದೆ ದಿವಾಳಿಯಾಯಿತು. ಇದರ ಅಧಿಕಾರಿಗಳು ಪಾಲುದಾರರನ್ನು ಮೋಸ ಪಡಿಸಿ ಹಣವನ್ನು ತಿಂದುದಕ್ಕಾಗಿ ಸರಕಾರದವರು ಅವರನ್ನೆಲ್ಲಾ ಕೈದು ಮಾಡಿ ವಿಚಾರಣೆಗೆ ಗುರಿಪಡಿಸಿದಲ್ಲಿ ಸದರಿ ಅಧಿಕಾರಿಗಳ ಪೈಕಿ ೩ ಮಂದಿಯನ್ನು ಬಿಟ್ಟು ಇತರರಲ್ಲಿ ಪ್ರತಿಯೊಬ್ಬನಿಗೂ ೧ರಿಂದ ೭ ವರ್ಷಗಳ ಕಠಿಣ ಸಜೆಯೂ ಮತ್ತು ಜುರುಮಾನೆಯೂ ವಿಧಿಸಲ್ಪಟ್ಟಿತು. ಹಾಗೆ ವಿಧಿಸಲ್ಪಟ್ಟ ಜುರುಮಾನೆಯ ಒಟ್ಟು ಮೊಬಲಗು ೨೭,೦೦೦ ರೂಪಾಯಿಗಳು.

* * *

ಅಫ್ಘಾನ್‌ಸ್ಥಾನಕ್ಕೆ ಸೇರಿದ ಕಾಬೂಲಿನಲ್ಲಿ ಒಬ್ಬ ಮಹಮ್ಮದೀಯನು ಪ್ರಾಯಸ್ಥಳಾದ ಒಬ್ಬ ವಿತಂತುವನ್ನು ಬಲತ್ಕಾರದಿಂದ ತನ್ನ ಮತಕ್ಕೆ ಸೇರಿಸಿಕೊಂಡದಕ್ಕಾಗಿ ಅಲ್ಲಿನ ಖಾಜಿಯವರಲ್ಲಿ ಪಿರ್ಯಾದು ಮಾಡಲು, ಆ ವಿತಂತುವು ಸದರಿ ಮಹಮ್ಮದೀಯನನ್ನು ಮದುವೆ ಮಾಡಿಕೊಳ್ಳಬೇಕೆಂಬ ಇಚ್ಛೆಯಿಂದ ತಾನಾಗಿಯೇ ಮತಾಂತರಗೊಂಡಳೆಂದು ಸಾಕ್ಷಿಗಳು ಹೇಳಿದ್ದರಿಂದ ಖಾಜಿಯವರು ಮಹಮ್ಮದೀಯರ ಪರವಾಗಿ ತೀರ್ಮಾನ ಮಾಡಿದರು. ಹಿಂದುಗಳು ಈ ಅನ್ಯಾಯವನ್ನು ಸಹಿಸಲಾರದೆ ಅಮೀರರಲ್ಲಿ ವಿಜ್ಞಾಪಿಸಿಕೊಳ್ಳಲು ಅವರು ಚೆನ್ನಾಗಿ ವಿಚಾರಣೆ ಮಾಡಿ ಖಾಜಿಯವರಲ್ಲಿ ಸಾಕ್ಷಿ ಹೇಳಿದವರಲ್ಲಿ ಕೊಟ್ಟ ರುಜುವಾತು ಶುದ್ಧ ತಪ್ಪೆಂದು ಕಂಡುಬಂದದರಿಂದ ಹಿಂದುಗಳ ಪರವಾಗಿ ತೀರ್ಮಾನ ಮಾಡಿ ಸದರಿ ಹೆಂಗಸನ್ನು ಅವಳ ಬಂಧುಗಳ ವಶಕ್ಕೆ ಒಪ್ಪಿಸಿ ಅಪರಾಧಿಗೂ ಆತನಿಗೆ ಸಹಾಯಮಾಡಿದ ಸಾಕ್ಷಿಗಳೂ ದೀರ್ಘಕಾಲದ ಕಠಿಣ ಶಿಕ್ಷೆಯನ್ನು ಜುಲುಮಾನೆಯನ್ನೂ ವಿಧಿಸಿ ಆ ಜುಲುಮಾನೆಯ ಹಣವನ್ನು ಪರಿಹಾರ ದ್ರವ್ಯವಾಗಿ ಹಿಂದೂಗಳಿಗೆ ಕೊಡಿಸಿದರು.

* * *

ಅಪಗಾನಿಸ್ಥಾನದ ಅಮೀರರು ಉತ್ತಮವಾದ ಮೋಟೋರು ಬಂಡಿಯನ್ನು ತರಿಸಿಕೊಂಡು ಕಾಬೂಲಿನಿಂದ ಜಲಾಲಬಾದಿಗೆ ಸಂಚರಿಸಿಕೊಂಡು ಹೋಗುತ್ತಿದ್ದಾರೆ. ಇವರ ಸಂಚಾರದ ಅನುಕೂಲಕ್ಕಾಗಿ ಮಾರ್ಗಗಳನ್ನೆಲ್ಲಾ ಸರಿಪಡಿಸಲು ಹುಕುಂ ಮಾಡಿದ್ದಾರೆ. ಅಪಗಾನಸ್ಥಾನಕ್ಕೂ ಹಿಂದೂಸ್ಥಾನಕ್ಕೂ ನಡೆಯುತ್ತಿರುವ ವ್ಯಾಪಾರವು ಈಚೀಚೆಗೆ ವೃದ್ಧಿಯಾಗುತ್ತಾ ಬರುತ್ತಿದೆ. ಕಳೆದ ಜೂನು ತಾ. ೩೦ಕ್ಕೆ ಅಂತ್ಯವಾದ ಮೂರು ತಿಂಗಳಲ್ಲಿ ಒಟ್ಟು ೬೨ ಲಕ್ಷರೂಪಾಯಿಗಳ ವ್ಯಾಪಾರವು ನಡೆದಿದೆ. ಹಿಂದೆ ೩ ತಿಂಗಳ ಹಿಂದೆ ಇದೇ ಕಾಲದಲ್ಲಿ ೬೭ ಲಕ್ಷರೂಪಾಯಿಗಳ ವ್ಯಾಪಾರ ಮಾತ್ರ ನಡೆದಿದ್ದಿತು.

* * *

ಹಿಂದೂಸ್ಥಾನದಲ್ಲಿ ಹಿಂದೂಗಳೂ ಮಹಮ್ಮದೀಯರೂ ಯಾತ್ರೋತೀರ್ಥಾದಿಗಳಿಗೋಸ್ಕರ ಹೋಗಿ ಕೂಡುವ ಕ್ಷೇತ್ರಗಳಲ್ಲಿ ಯಾತ್ರಿಕರ ಆರೋಗ್ಯಾದಿಗಳನ್ನು ಕಾಪಾಡುವುದಕ್ಕಾಗಿ ಯಾವ್ಯಾವ ಏರ್ಪಾಡುಗಳು ನಡೆಯುತ್ತಿವೆಯೆಂದೂ ಇನ್ಯಾವ ಏರ್ಪಾಡುಗಳು ಅಗತ್ಯವೆಂದೂ ತಿಳಕೊಳ್ಳುವರೆ ಇಂಡಿಯಾ ಸರಕಾರದವರು ಒಂದು ಪಂಚಾಯತಿ ಕಮಿಟಿಯನ್ನು ಏರ್ಪಾಡಿಸಿದ್ದಾರೆ. ಈ ಕಮಿಟಿಯವರು ಆಯಾ ಯಾತ್ರಸ್ಥಳಗಳಿಗೆ ಹೋಗಿ ಅದರ ಆರೋಗ್ಯ, ಸ್ಥಿತಿ, ಕುಡಿಯುವ ನೀರಿನ ಸರಬರಾಯಿ, ಪ್ರಯಾಣದ ಸೌಕರ್ಯ ಇತ್ಯಾದಿ ವಿಷಯಗಳನ್ನು ತಿಳಕೊಂಡು ಸರಕಾರದವರಿಗೆ ರಿಪೋರ್ಟು ಬರೆಯುವರು.

* * *

ವ್ಯಾಸರಾಯ ನಿಯಮ ನಿರ್ಮಾಣಕ ಸಭೆಯ ಮುಂದೆ ಬಹುಮಾನಪಟ್ಟ ಮಾಡ್ಗೆಯವರಿಂದ ಇಡಲ್ಪಟ್ಟ ಪಾಶ್ಚಾತ್ಯ ದೇಶಗಳ ಹೆಂಗಸರನ್ನು ದುರ್ವ್ಯಾಪಾರ ವೃತ್ತಿಗಾಗಿ ಕಳುಹಿಸುವ ಪದ್ಧತಿಯನ್ನು ನಿಲ್ಲಿಸುವ ಮಸೂದೆಯು ಮತ್ತು ಬಹುಮಾನಪಟ್ಟ ದಾದಬಾಯಿ ನೌರೋಜಿಯವರಿಂದ ತರಲ್ಪಟ್ಟ ದೇವಸ್ಥಾನಗಳಲ್ಲಿ ಅಪ್ರಾಯಸ್ಥ ಹುಡುಗಿಯರು ದೇವದಾಸಿಯರಾಗಿ ಉಪಯೋಗಿಸಲ್ಪಡುವ ಪದ್ಧತಿಯನ್ನು ನಿಲ್ಲಿಸುವ ಮಸೂದೆಯ ವಿಷಯವಾಗಿ ಶ್ರೇಷ್ಠ ಸರಕಾರದವರು ಆಯಾ ಸಂಸ್ಥಾನಿಕ ಸರಕಾರಗಳ ಅಭಿಪ್ರಾಯವನ್ನು ಕೇಳಿಕೊಳ್ಳಲಿಕ್ಕಿದ್ದಾರೆ.

* * *

ಕಳೆದ ಅಗೋಸ್ತು ತಿಂಗಳ ೭ರಲ್ಲು ಕಲ್ಕತ್ತೆಯಲ್ಲಿ ವಿದೇಶಿ ವಸ್ತುಗಳ ಬಹಿಷ್ಕಾರ ದಿವಸವನ್ನು ಆಚರಿಸುವ ಸಂದರ್ಭದಲ್ಲಿ ಸ್ವದೇಶಿ ಪ್ರಸಂಗಿಯಾದ ಲಿಕಾತ್ ಹುಷೇನರವರು ಪೋಲೀಸಿನವರ ಹುಕುಮನ್ನು ಮೀರಿ ಮೆರವಣಿಗೆ ಹೊರಟ ತಕ್ಷೀರಿಗಾಗಿ ಅವರಿಗೆ ೧೦೦ ರೂಪಾಯಿ ಜುಲುಮಾನೆ ತಪ್ಪಿದರೆ ಒಂದು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

* * *

ಡಕ್ಕದಲ್ಲಿ ಪೋಲೀಸ್ ಹೆಡ್ ಕನ್‌ಸ್ಟೇಬಲನಾಗಿದ್ದ ರತಿಲಾಲ್ ರೋಯಿ ಎಂಬವನನ್ನು ಕಳೆದ ತಾ. ೨೫ರಲ್ಲು ಯಾರೋ ಗುಂಡುಹೊಡೆದು ಕೊಂದರು. ರತಿಲಾಲನು ಒಂದು ಓಣಿಯಲ್ಲಿ ಹೋಗುತ್ತಿರುವಾಗ ೩ ಜನರು ಹಿಂದಿನಿಂದ ಬಂದು ಗುಂಡು ಹೊಡೆದರು. ಈ ಕನ್‌ಸ್ಟೇಬಲನು ಡಕ್ಕಾ ರಾಜದ್ರೋಹ ಪಿತೂರಿ ಮೊಕದಮೆಯಲ್ಲಿ ಸರಕಾರ ಕಡೆಯಿಂದ ಮೊದಲನೇ ಸಾಕ್ಷಿಯಾಗಿದ್ದವನು. ಕನ್‌ಸ್ಟೇಬಲನನ್ನು ಹೊಡದ ಗುಂಡಿನ ಶಬ್ದದಿಂದ ನೆರೆಹೊರೆಯವರು ಹೊರಗೆ ಓಡಿ ಬಂದು ನೋಡುವಾಗ ಓಡುತ್ತಿದ್ದ ಒಬ್ಬ ಗಾತುಕನನ್ನು ಗುರ್ತಿಸಿ ಆತನು ಬಿಕಾಂಪುರದ ಒಬ್ಬ ಬ್ರಾಹ್ಮಣನ ಹಾಗೆ ತೋರುತ್ತಾನೆಂದು ಪೋಲೀಸ್ ಸುಪರಿಂಟೆಂಡರವರಿಗೆ ಹೇಳಿರುವರು.

ಡಕ್ಕಾದಲ್ಲಿ ರತಿಲಾಲನೆಂಬ ಕನ್‌ಸ್ಟೇಬಲನನ್ನು ಕೊಂದ ಸಂದರ್ಭದಲ್ಲಿ ಪೋಲೀಸಿನವರು ಟಿ. ಚಕ್ರವರ್ತಿ ಎಂಬ ಸುಮಾರು ೨೫ ವರ್ಷದ ಯುವಕನೊಬ್ಬನನ್ನು ನಾರಾಯಣಗಂಜ್ ಎಂಬಲ್ಲಿ ಕೈದು ಮಾಡಿರುವರು. ಇವನು ಡಕ್ಕದ ರಾಜದ್ರೋಹ ಪಿತೂರಿ ಮೊಕದಮೆಯಲ್ಲಿ ತಲೆತಪ್ಪಿಸಿಕೊಂಡ ಅಪಾದಿತನೆಂತಲೂ ದೋಣಿ ದರೋಡೆ ಕಳವಿನಲ್ಲಿ ಶಿಕ್ಷೆ ವಿಧಿಸಲ್ಪಟ್ಟವನೆಂದೂ ತಿಳಿದು ಬರುತ್ತದೆ. ರತಿಲಾಲನನ್ನು ಕೊಂದ ಘಾತುಕನನ್ನು ಹಿಡಿದು ಕೊಟ್ಟವರಿಗೆ ೫೦೦೦ ರೂಪಾಯಿ ಉಡುಗೆರೆಕೊಡಲ್ಪಡುವುದೆಂದು ಸರ್ಕಾರದಿಂದ ಡಂಗುರ ಹೊಡಿಸಲ್ಪಟ್ಟಿರುವುದು. ಅನುಮಾನದ ಮೇಲೆ ಕೈದುಮಾಡಲ್ಪಟ್ಟ ಟಿ. ಚಕ್ರವರ್ತಿಯು ಈಗ ಲಾಕಪ್ಪಿನಲ್ಲಿರುವನು.

* * *

ಲಾಹೋರಿನಲ್ಲಿರುವ "ಆಲ್ ಇಂಡಿಯ ಬೇಂಕಿಂಗ್" ಕಂಪೆನಿಯ ಎರಡು ಲಕ್ಷರೂಪಾಯಿಗಳನ್ನು ದುರುಪಯೋಗ ಮಾಡಿದನೆಂದು ಅಪಾದಿಸಲ್ಪಟ್ಟ ಸದರಿ ಕಂಪೆನಿಯ ಮೆನೇಜಿಂಗ್ ಡಿರೆಕ್ಟರರಾದ ಪಂಡಿತ ಗಾಂಗಾರಾಮನ ಮೊಕದಮೆಯನ್ನು ಲಾಹೋರಿನಲ್ಲಿ ನಡೆಯಿಪಬೇಕೆಂದು ಸ್ಥಳೀಕ ಚೀಫ್ ಕೋರ್ಟಿನ ಜಸ್ಟಿಸ್ ಚೆವಿಸರವರು ಹುಕುಂ ಮಾಡಿರುವರು.

* * *

ಭೂಲೋಕವನ್ನೆಲ್ಲಾ ಕಾಲುನಡೆಯಾಗಿಯೇ ಸುತ್ತಿ ಬರುತ್ತೇನೆಂದು ೧,೫೦೦ ಪವನಿಗೆ ಪಂಥ ಹಾಕಿ ಜರ್ಮನಿಯ ಹನೋವರದಿಂದ ೧೯೧೧ನೇ ಇಸವಿಯ ನವಂಬರ ತಿಂಗಳಲ್ಲಿ ಹೊರಟ ಎಲ್. ರೋಮಾಯಟ್ ಎಂಬವನು ಆಸ್ಟ್ರೇಲಿಯ, ರೊಮೇನಿಯ, ಸರ್ವಿಯ, ಟರ್ಕಿ, ಅರಬಿಯ, ಪರ್ಶಿಯ ಬಲೂಚಿಸ್ಥಾನ ದೇಶಗಳನ್ನು ತಿರುಗಾಡಿ ಕರಾಚಿಗೆ ಬಂದಿರುವನು. ಕರಾಚಿಯಿಂದ ಮುಂಬಾಯಿಗೆ ಹೋಗಿ ಕಲ್ಕತ್ತೆಗೆ ಹೋಗುವನು. ಕಲ್ಕತ್ತೆಯಿಂದ ಬರ್ಮ, ಸಿಯಾಮ್, ಚೀನ, ಜಾಪಾನ್, ಅಮೇರಿಕ, ಸ್ಪಾನಿಯ, ಪ್ರಾನ್ಸ್, ಇಂಗ್ಲಾಂಡ್ ದೇಶಗಳನ್ನು ಸಂದರ್ಶಿಸಿ ಪುನಃ ಹನೋವರಿಗೆ ಹೋಗುವನು. ಈ ದೊಡ್ಡ ಪ್ರಯಾಣವನ್ನು ೧೯೧೪ನೇ ಇಸವಿ ನವಂಬರ ತಿಂಗಳೊಳಗೆ ತೀರಿಸಬಹುದೆಂದು ಆತನು ಹೇಳುವನು.

* * *

ಬಂಗಾಳದಲ್ಲಿರುವ ಮಲೆನಾಡು ಜ್ವರ ನಿವಾರಣಾ ಫಂಡಿಗೆ ಬಂಗಾಳ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳವರು ೧೫೦ ರೂಪಾಯಿ ಕೊಟ್ಟಿರುವರು.

* * *

ತಾರೀಕು ೨೭ರಲ್ಲು ಪೂನೆಯಲ್ಲಿಯ ಸೇವಾಸದನದಲ್ಲಿ ಮಾಡಲ್ಪಟ್ಟ ಕಸೂತಿ ತೆಗೆದ ವಸ್ತುಗಳ ಸಂತೆ ಜರುಗಿತು. ಈ ಸಂತೆಗೆ ಮುಂಬಾಯಿ ಗವರ್ನರರ ಪತ್ನಿಯವರು ಹೋಗಿದ್ದು ಈ ಸಂತೆಯಲ್ಲಿದ್ದ ವಸ್ತುಗಳನ್ನು ನೋಡಿ ಈ ತನಕ ಏಕಾಂತವಾಗಿ ಗೋಶೆಯರಂತೆ ಇದ್ದ ಭಾರತೀಯ ಹೆಂಗಸರು ಈಗ ವೃದ್ಧಿಯನ್ನು ಹೊಂದಿ ಪಾಶ್ಚಿಮಾತ್ಯರ ಕಲಾಕೌಶಲ್ಯಕ್ಕನುಸಾರವಾಗಿ ಮಾಡುವಂಥಾ ಈ ಕೆಲಸಗಳು ಫಲವೀಯಬೇಕೆಂಬದೇ ತನ್ನ ಅಪೇಕ್ಷೆಯಾಗಿದೆ ಎಂಬದಾಗಿ ಹೇಳಿದರು.

* * *

ಕಳೆದ ಸಪ್ತಂಬರ ತಾ. ೨೧ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೧೫೪ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೫೫೬ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿಯಲ್ಲಿ ೯೭೦; ಮದ್ರಾಸ್ ೭೮; ಬಂಗಾಳ ೭; ಬಿಹಾರ್ ೩೧; ಸಂಯುಕ್ತ ಸಂಸ್ಥಾನ ೯೪; ಪಂಜಾಬು ೨೦; ಬರ್ಮ ೫೦; ಮಧ್ಯ ಸಂಸ್ಥಾನ ೪; ಮೈಸೂರು ೧೭೮; ಹೈದರಾಬಾದ್ ೧೩೯; ರಜಪುತಾನ ೩ ಮರಣಗಳಾದವು.

* * *

ಕಲ್ಕತ್ತೆಯ ಶಾಮನಗರ ಎಂಬಲ್ಲಿಯ ಎರಡು ಹತ್ತೀ ಕಾರ್ಖಾನೆಗಳಿಗೆ ಬೆಂಕಿ ಬಿದ್ದು ಸುಮಾರು ೧॥ ಲಕ್ಷರೂಪಾಯಿಯ ಹತ್ತಿ ಸುಟ್ಟುಹೋಯಿತು.

* * *

ಮುಂಬಾಯಿಯಲ್ಲಿರುವ ಪೋರ್ಚುಗೀಸರವರಾದ ಎಫ್. ಎಕ್ಸ್. ಪುರ್ತಾದೋ, ಪೆರಾರ ಮತ್ತು ಫೆರ್ನಾಂದಿಸರವರು ಬ್ರಿಟಿಷ್‌ರಾಷ್ಟ್ರವನ್ನು ಬಿಟ್ಟು ಹೋಗಬೇಕೆಂದು ಮುಂಬಾಯಿ ಸರಕಾರದವರು ಹುಕುಂ ಕೊಟ್ಟಿರುವರು. ಈ ಹುಕುಮನ್ನು ಕೊಡಲು ಕಾರಣವೇನೆಂಬದು ತಿಳಿದು ಬರಲಿಲ್ಲ.

* * *

ಪೂಣೆ ಶಹರಿನಲ್ಲಿ ಮೇಲ್ ಜಾತಿಯ ಮರ್ಯಾದಸ್ಥ ಕುಟುಂಬದ ಸ್ತ್ರೀಯರು ಹೊಲೆಯರ ಹೆಂಗಸರ ಸಭೆ ಕೂಡಿಸಿ ಭಾಷಣಮಾಡುತ್ತಾರೆ. ಮಾಲ್ವಾನಿನಲ್ಲಿ ಒಬ್ಬ ಸಾವಕಾರನು ನಿರಾಶ್ರಿತ ಜನಸಹಾಯಕ ಸಂಘದವರಿಗೆ ಪ್ರೋತ್ಸಾಹ ಕೊಡುವ ಉದ್ದಿಶ್ಯ ಹೊಲೆಯರ ಹೆಂಗಸರನ್ನು ಮತ್ತು ಹುಡುಗರನ್ನು ತನ್ನ ಭಂಡಸಾಲೆಯಲ್ಲಿ ನೌಕರರನ್ನಾಗಿ ನೇಮಿಸಿದ್ದಾನೆ.

ದಕ್ಷಿಣ ಹಿಂದೂಸ್ಥಾನ

ಕಳೆದ ತಾ. ೨೭ರಲ್ಲು ಮದ್ರಾಸ್ ನ್ಯಾಯವಿಧಾಯಕ ಸಭೆಯು ಉಟಾಕಮಂಡಲದಲ್ಲಿ ಕೂಡಿತು.

* * *

ಹೈದರಾಬಾದಿನಿಂದ ೪ ಮಂದಿ ಗಡಿಪಾರು ಮಾಡಲ್ಪಟ್ಟರು ಎಂಬದಾಗಿ ತಿಳಿಸಿತ್ತಷ್ಟೆ. ಇವರು ಹೈದರಾಬಾದ್ ನೈಜಾಮರ ವಿಷಯವಾಗಿ ವೈಸರಾಯರಿಗೆ ಅನಾಮಿಕ ಪತ್ರಗಳನ್ನು ಬರೆದು ಸಿಕ್ಕಿ ಬಿದ್ದದ್ದೇ ಈ ಶಿಕ್ಷೆ ಹೊಂದಲು ಕಾರಣವೆಂಬದಾಗಿ ತಿಳಿದು ಬರುತ್ತದೆ.

* * *

ಬೆಂಗಳೂರು ದಂಡು ಸೆಂಟ್ ಜಾನ್ಸ್ ಹಿಲ್ ಎಂಬ ಮೊಹಲ್ಲೆಯಲ್ಲಿರುವ ಪಡಪಾತು ಎಂಬ ಒಬ್ಬ ಹೆಂಗಸು ದೇವಾಲಯದಲ್ಲಿ ಧರ್ಮದ ಪೆಟ್ಟಿಗೆಯಿಂದ ೫ ರೂಪಾಯಿ ಕದ್ದುಕೊಂಡಳು. ವಿಚಾರಣೆಯಾದಾಗ ಅವಳು ತಾನು ಕದ್ದುಕೊಂಡದ್ದು ನಿಜ; ನಾನು ಹೊಟ್ಟೆಗಿಲ್ಲದೆ ಪರಿತಾಪಪಡುತ್ತಿರುವ ವೇಳೆಯಲ್ಲಿ ದೇವಾಲಯಕ್ಕೆ ಹೋಗಿ ಪ್ರಾರ್ಥನೆಮಾಡುತ್ತಿದ್ದಾಗ ದೇವರು ಆ ಹಣವನ್ನು ತೆಗೆದುಕೊಳ್ಳುವಂತೆ ನನಗೆ ಹೇಳಿದ್ದರಿಂದ ನಾನು ಹಾಗೆ ಮಾಡಿದೆನು ಎಂದು ವಾಜ್ಮೂಲ ಕೊಟ್ಟಳು. ಮೇಜಿಸ್ಟ್ರೇಟರು ಅವಳನ್ನು ಕುರಿತು—ನಿನಗೆ ಮೂರು ತಿಂಗಳ ಕಠಿಣ ಸಜಾ ವಿಧಿಸಬೇಕೆಂದು ದೇವರು ನನಗೆ ತಿಳಿಸುತ್ತಾನಾದ್ದರಿಂದ ಬಂದಿಖಾನೆಯಲ್ಲಿ ಹೋಗಿ ಇರು ಎಂಬದಾಗಿ ಹೇಳಿ ಅವಳಿಗೆ ಸಜಾ ವಿಧಿಸಿರುತ್ತಾರೆ.

* * *

ಮೈಸೂರಿನ ನಂಜನಗೂಡು ತಾಲೂಕಿನ ಕಳಲೆ ಎಂಬಲ್ಲಿಯ ಗ್ರಾಮವಾಸಿಗಳಾದ ಸುಮಾರು ೨೦೦೦ ಪಂಚಮರು ಅವರ ಮುಖಂಡರ ಮಾತಿನ ಪ್ರಕಾರ ಶೇಂದಿ ಕುಡಿಯುವುದನ್ನು ತ್ಯಜಿಸಿರುವರು. ಅಲ್ಲಿಯ ಸೇಂದಿ ಕಂಟ್ರಾಕ್ಟುದಾರರು ಸೇಂದಿಯ ದರವನ್ನು ಏರಿಸಿದ್ದರಿಂದ ಆ ಪ್ರಾಂತ್ಯದಲ್ಲಿ ಸೇಂದಿ ಕುಡಿಯುತ್ತಿದ್ದ ಪಂಚಮರು ಈ ವಿಷಯ ಆಲೋಚಿಸುವರೆ ಸಭೆ ಕೂಡಿದಾಗ ಯಜಮಾನ್ ಜವರ ಎಂಬ ಪಂಚಮನು ಆ ಸಭೆಯಲ್ಲಿ ಮುಖಂಡನಾಗಿ ನಿಂತು ಮದ್ಯಪಾನದಿಂದುಂಟಾಗುವ ಕೇಡನ್ನು ಸಭಿಕರಿಗೆ ವಿವರಿಸಿ ಆ ಕೆಟ್ಟ ಪದ್ಧತಿಯನ್ನು ಬಿಟ್ಟುಬಿಡುವ ಹಾಗೆ ಸಭಿಕರನ್ನು ಹುರಿದುಂಬಿಸಿದನು. ಈ ಸಭೆಯಲ್ಲಿ ನಡೆದ ಕಟ್ಟಳೆಯ ಪ್ರಕಾರ ಪಂಚಮರೆಲ್ಲಾ ಈಗ ಸೇಂದಿ ಕುಡಿಯುವುದು ಬಿಟ್ಟಿದ್ದಾರೆ. ಆದರೆ ಈ ಪೈಕಿ ಕುಂಭಳ್ಳಿ ಗ್ರಾಮದ ಸುಮಾರು ೫೦ ಮಂದಿ ಪಂಚಮರು ಈ ಕಟ್ಟಳೆಯನ್ನು ಮೀರಿ ನಡೆದ್ದರಿಂದ ಇದನ್ನು ತಿಳಿದ ಆ ಸಭೆಯವರು ಇವರಿಗೆ ಬಹಿಷ್ಕಾರ ಹಾಕಿದರು. ಈಗ ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ತಮ್ಮನ್ನು ಪುನಃ ಜಾತಿಗೆ ಸೇರಿಸಬೇಕೆಂದು ಆತುರ ಪಡುತ್ತಿದ್ದಾರೆ. ಇತ್ತಕಡೆ ಶೇಂದಿ ಗುತ್ತೆದಾರರು ತಮ್ಮ ಆದಾಯವನ್ನು ಕಳಕೊಂಡವರಾಗಿ ಶೇಂದಿ ಕುಡಿಯುವ ಹಾಗೆ ಪಂಚಮರನ್ನು ಒತ್ತಾಯ ಪಡಿಸುತ್ತಿದ್ದಾರೆಂಬದಾಗಿಯೂ ವಾರ್ತೆ ಇದೆ.

* * *

ಮದ್ರಾಸ್ ಸಂಸ್ಥಾನದ ಶಾಲೆಗಳ ಇನ್ಸ್‌ಪೆಕ್ಟರರಾಗಿದ್ದು ಕೆಲಸದಿಂದ ನಿವೃತ್ತರಾಗಿ ಶೀಮೆಗೆ ಹೋಗಿದ್ದ ಜೆ. ಸ್ಟೋನ್. ಎಮ್. ಎ. ರವರು ಮೈಸೂರಿನ ವಿದ್ಯಾಖ್ಯಾತೆಯ ಇನ್ಸ್‌ಪೆಕ್ಟರ್ ಜನರಲರಾಗಿ ನೇಮಿಸಲ್ಪಟ್ಟಿರುವರು.

* * *

ಮೈಸೂರಿನ ಸಿವಿಲ್ ಸರ್ಜನ್ ಡಾಕ್ಟರರಾದ ಇ. ಎಸ್. ಕೃಷ್ಣಸ್ವಾಮಿಯವರು ಪೋಸ್ಟು ಗ್ರಾಡ್ಯುವೇಟ್ ಎಂಬ ಪರೀಕ್ಷೆಯಲ್ಲಿ ಪ್ರವೀಣತೆಯನ್ನು ಹೊಂದುವುದಕ್ಕಾಗಿ ಕಳೆದ ತಾ. ೨೫ರಲ್ಲು ಶೀಮೆಗೆ ತೆರಳಿದರು.

ದಕ್ಷಿಣ ಕನ್ನಡ.

ಬಾತ್ಮೀದಾರರಿಗೆ ನೋಟೀಸು:—ಪತ್ರವ್ಯವಹಾರಕರು ಬರೆಯುವ ಬಾತ್ಮಿಗಳು ಯುಕ್ತವಾದ ರೀತಿಯಲ್ಲಿ ಪ್ರಕಟವಾಗುವಂತೆ ಅವುಗಳನ್ನು ತಿದ್ದುವ ಸ್ವತಂತ್ರವನ್ನು ಪತ್ರ ಸಂಪಾದಕರೇ ಇಟ್ಟುಕೊಂಡಿರುವುದರಿಂದ ಬಂಟ್ವಾಳ ಪಿ. ಎ. ರವರು ಬರದ ಬಾತ್ಮಿಯನ್ನು ಪ್ರಕಟಿಸಲಾರೆವು. ಸಂಚಾರಿ; ಒಂದು ವಿಚಿತ್ರ ಪತ್ರ; ಬಾತ್ಮೀದಾರರ ಪೂರ್ಣ ಹೆಸರು ವಿಳಾಸವಿಲ್ಲದ್ದರಿಂದ ಪ್ರಕಟಿಸಲಾರೆವು.

* * *

ಮಂಗಳೂರು:—ಇಲ್ಲಿಯ ಡಿಸ್ಟ್ರಿಕ್ಟ್ ಕಲೆಕ್ಟರರಾಗಿರುವ ಎ. ಫೋದರಿಂಗಾಮ್ ದೊರೆಗಳವರು ದಕ್ಷಿಣ ಆರ್ಕಾಡು ಜಿಲ್ಲೆಯ ಟಿಂಡಿವರಾಮ್ ಜಿಲ್ಲೆಯ ಸಬ್ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುವುದರಿಂದ ಇಲ್ಲಿಗೆ ಮೆ। ಎಮ್. ಇ. ಕೌಚುಮೇನ್ ದೊರೆಗಳವರು ಡಿಸ್ಟ್ರಿಕ್ಟ್ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಇಲ್ಲಿಯ ಸರಕಾರಿ ಕಡೆಯ ವಕೀಲರಾಗಿರುವ ಮೆ। ಎ. ಜೆ. ಲೋಬರವರು ರಜೆ ಪಡಕೊಂಡಿರುವುದರಿಂದ ಬೆರಿಷ್ಟರರಾದ ಮೆ। ಆರ್. ಎಮ್. ರೋಯಿರವರು ಸರಕಾರಿ ಕಡೆಯ ವಕೀಲರಾಗಿ ನೇಮಿಸಲ್ಪಟ್ಟಿರುವರು.

ಬಹುಮಾನಪಟ್ಟ ರಾವ್‌ಬಹದ್ದೂರ್ ಎನ್, ಸುಬ್ಬರಾಯರವರೂ ಬಹುಮಾನಪಟ್ಟ ಎಫ್. ಎಕ್ಸ್ ಸಲ್ಡಾಞ್ಞರವರೂ ಒನರರಿ ಅಸಿಸ್ಟಾಂಟ್ ಪ್ಲೇಗ್ ಆಫೀಸರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕೆಲವು ಸಮಯ ಕುಂದಾಪುರದ ಆಕ್ಟಿಂಗ್ ಸಬ್ ಮೇಜಿಸ್ಟ್ರೇಟರಾಗಿದ್ದ ರಾ। ಕೆ. ಶಿವರಾಯರು ಇಲ್ಲಿಯ ಹಜೂರು ಆಕ್ಟಿಂಗ್ ಟ್ರೆಜರರಾಗಿ ನೇಮಿಸಲ್ಪಟ್ಟಿದ್ದಾರೆ.

ರೆವಿನ್ಯೂ ಡಿವಿಜನಲ್ ಆಫೀಸರರು ಫರಂಗಿ ಪೇಟೆಯತ್ತಕಡೆ ಸರ್ಕಿಟಿನಲ್ಲಿರುವರು.

ಮುಲ್ಕಿ ಡಿವಿಜನಿನ ಶಾಲಾ ಸುಪರವ್ಯಾಜರರಾದ ರಾ। ಜಮಾಲಾಬಾದ್ ದೇವರಾಯರು ತರ್ಬೇತು ಹೊಂದುವುದರಿಂದ ಅವರ ಕೆಲಸಕ್ಕೆ ರಾ। ಎಚ್. ರಾಮಚಂದ್ರ ಕಾಮತರವರು ಮೊಕರೂರಾಗಿರುವರು.

ಸ್ಪೆಶ್ಯಲ್ ಟೆಸ್ಟ್ ಪರೀಕ್ಷೆಯು ಇದೇ ತಾ. ೨೧ರಿಂದ ಸೆಂಟ್ ಅಲೋಷಿಯಸ್ ಕಾಲೇಜಿನಲ್ಲಿ ನಡೆಯುವುದು. ಈ ಬಗ್ಯೆ ಕುಂದಾಪುರ ಡ್ಯುಪಿಟಿ ಕಲೆಕ್ಟರರಾದ ರಾ। ಎಸ್. ಶ್ರೀನಿವಾಸರಾವರವರು ಚೀಫ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿದ್ದಾರೆ.

ಡಾಕ್ಟರ್ ಎಲ್. ಪಿ. ಫೆರ್ನಾಂದೀಸರವರು ಮುನಿಸಿಪಾಲ್ ಚೇಯರ್‌ಮೇನ್ ಕೆಲಸಕ್ಕೆ ಉಮೇದ್ವಾರರಾಗಿ ನಿಂತಿರುವರೆಂದು ತಿಳಿಸಿತ್ತಷ್ಟೆ. ಆದರೆ ಇವರು ಉಮೇದ್ವಾರಿಕೆಯನ್ನು ಹಿಂದೆ ತೆಗೆಯಲಿಕ್ಕಿದ್ದಾರೆಂಬದಾಗಿ ವಾರ್ತೆ ಇದೆ.

ಫೋರೆಸ್ಟ್ ಇಲಾಖೆಯ ಸಂಬಂಧವಾಗಿ ನಮ್ಮ ಜಿಲ್ಲೆಯನ್ನು ಎರಡು ಪಾಲು ಮಾಡಿ ಒಬ್ಬ ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರರಿಗೆ ಕುಂದಾಪುರವನ್ನು ಹೆಡ್‌ಕ್ವಾರ್ಟರ್ಸಾಗಿ ಮಾಡುವ ಆಲೋಚನೆಯು ಸರಕಾರದವರಲ್ಲಿದೆಂದು ತಿಳಿದು ಬರುತ್ತದೆ.

ರಾ। ಹ್ಯೊಗೆ ಕೊರಗಪ್ಪನವರೂ ಇತರ ಇಬ್ಬರೂ ತೆಂಗಿನ ಮರಗಳಿಂದ ಸೇಂದಿಯನ್ನು ತೆಗೆಯದ ಹಾಗೆ ತಡೆಕಟ್ಟಿ ಸರಕಾರಕ್ಕೆ ನಷ್ಟವನ್ನುಂಟುಮಾಡುತ್ತಾರೆಂಬದಾಗಿ ಒಬ್ಬಿಬ್ಬ ಗುತ್ತೆದಾರರು ಇಲ್ಲಿಯ ಸಬ್ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ಅರ್ಜಿ ಮಾಡಿರುವರು. ಈ ಸಂಬಂಧ ತಕ್ಕ ತನಖಿಯು ಬೇಗನೇ ನಡೆಯುವುದು.

ಸರ್ಜನ್ ಜನರಲರವರು ಬರುವ ಸೋಮವಾರ ಇಲ್ಲಿಗೆ ಬರುವರು.

ರಾ। ಎಚ್. ಪುರುಷೋತ್ತಮ ಕಮತರವರೂ ರಾ। ಎನ್. ಗಣಪತಿರಾವ್‌ರವರೂ ಸೆಂಟ್ರಲ್ ವಾರ್ಡಿನ ಕೌನ್ಸಿಲ್ಲರಾಗಿ ಆರಿಸಲ್ಪಟ್ಟಿರುತ್ತಾರೆ.

ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೩ ಪ್ಲೇಗು ಮರಣಗಳು ಇದ್ದವು.

ಬಲ್ಮಠ ಕ್ರೈಸ್ತರ ಕದಿರು ಹಬ್ಬವು ಇದೇ ತಿಂಗಳ ತಾ. ೧೭ನೇ ಬುಧವಾರ ಜರಗುವುದೆಂಬದಾಗಿ ತಿಳಿಯುತ್ತೇವೆ.

ಕಳೆದ ಆದಿತ್ಯವಾರ ಬಲ್ಮಠದಲ್ಲಿ ದೇಶಿಯ ಮಿಶನ್ ತೃತೀಯ ವಾರ್ಷಿಕೋತ್ಸವವು ಜರುಗಿತು. ಈ ಉತ್ಸವದಲ್ಲಿ ರೆವರೆಂಡ್ ಎ. ಪುರ್ತಾದೊರವರೂ ದೇಶಿಯ ಮಿಶ್ಯನೆರಿಯವರಾದ ಲೆಮುವೇಲ್ ಸೋನ್ಸರವರೂ ರೆವರೆಂಡ್ ಬ್ಲೂಮ್‌ರವರೂ ಭಾಷಣಗಳನ್ನು ಕೊಟ್ಟು ಈ ಸ್ವದೇಶಿ ಮಿಶ್ಯನ್ ಕೆಲಸವು ಮಧ್ಯದಲ್ಲಿಯೇ ಬಿದ್ದುಹೋಗದೆ ಶಾಶ್ವತವಾಗಿ ಉಳಿಯುವಂತೆ ಸಭಿಕರು ಇನ್ನು ಮುಂದಕ್ಕೆ ಯಥಾ ರೀತಿ ಸಹಾಯಮಾಡುತ್ತಿರಬೇಕೆಂದು ಸಭಿಕರನ್ನು ವಿವಿಧ ರೀತಿಯಲ್ಲಿ ಪ್ರಬೋಧಿಸಿದರು. ಸಭಿಕರಲ್ಲಿ ಇಚ್ಛೆ ಇದ್ದವರು ವಾರಕ್ಕೆ ಒಂದು ಪೈ ಪ್ರಕಾರ ವಂತಿಗೆ ಕೊಡುತ್ತಾ ಬಂದು ಒಟ್ಟು ಕೂಡಿದ ಹಣದಿಂದ ಈ ಸ್ವದೇಶಿ ಮಿಶ್ಯನ್ ಕೆಲಸವು ನಡೆಯುತ್ತಿದೆ ಎಂಬದನ್ನು ತಿಳಿಯಲು ಸಂತೋಷಪಡುತ್ತೇವೆ. ಈ ದಿನ ಕೂಡಿದ ಕಾಣಿಕೆ ರೂಪಾಯಿ ೪೨ ಚಿಲ್ಲರೆ ಎಂಬದಾಗಿ ತಿಳಿಯುತ್ತೇವೆ.

ಸಿಂಘಪೂರ್ ದ್ವೀಪಕ್ಕೆ ಎದುರಾಗಿ ಇರುವ ಮಲಾಯಿ ಅರ್ಧ ದ್ವೀಪದ ಜೋಹೊರ್ ಎಂಬ ದೇಶಿಯ ರಾಜರ ಸಂಸ್ಥಾನಕ್ಕೆ ಉದ್ಯೋಗದ ಪರವಾಗಿ ಹೋಗಲಿಕ್ಕಿದ್ದ ಇಲ್ಲಿ ಖಾಸಗಿ ವೈದ್ಯರಾಗಿದ್ದ ಇ. ಪೀಟರ್ಸ್‌ರವರಿಗೆ ಸ್ವಸ್ತಿ ವಚನವನ್ನು ಹೇಳುವುದಕ್ಕಾಗಿ ಕಳೆದ ಆದಿತ್ಯವಾರ ಬಲ್ಮಠದಲ್ಲಿ ಸಭೆಕೂಡಿತು. ಈ ಸಭೆಗೆ ಡಾಕ್ಟರ್ ಎಲ್. ಪಿ. ಪೆರ್ನಾಂದಿಸರವರೂ, ಡಾಕ್ಟರ್ ವಿ. ವರ್ಗೀಸರವರೂ, ಬೆರಿಷ್ಟರ್ ರೋಯಿ ಮೊದಲಾದ ಮಹನೀಯರೂ ಹಾಜರಿದ್ದರು. ರೆವರೆಂಡ್ ಬೇಕ್ಸ್ ದೊರೆಗಳವರು ಸಭಾಧ್ಯಕ್ಷರಾಗಿದ್ದು ಇ. ಪೀಟರ್ಸ ಗುಣಗಣಗಳನ್ನು ಕುರಿತು ಭಾಷಣಗಳನ್ನು ಕೊಟ್ಟನಂತರ ಬೇರಿಷ್ಟರ್ ರೋಯಿರವರೂ, ಡಾಕ್ಟರ್ ಪೆರ್ನಾಂದಿಸರವರೂ ಮೆ. ಜಿ. ಹರ್ಬರ್ಟರವರೂ ಕಾಲೋಚಿತ ಭಾಷಣ ಕೊಟ್ಟು, ಡಾಕ್ಟರ್ ಇ. ಪೀಟರ್ಸರು ತನ್ನ ತಂದೆಯಾದ ಪೀಟರ್ ಡ್ರೇಸರರ ಹೆಜ್ಜೆಜಾಡೆಯಲ್ಲಿ ನಡೆದು ಕಳೆದ ಎರಡು ವರ್ಷಗಳಲ್ಲಿ ಅವರು ಕ್ರೈಸ್ತ ಸಭೆಯಲ್ಲಿ ಮಾಡಿದ ಕೆಲಸದ ಫಲಿತಾಂಶವನ್ನು ಕುರಿತು ಮಾತನ್ನಾಡಿ ಅವರಿಗೆ ಸುಕ್ಷೇಮವನ್ನು ಬಯಸಿದರು. ಮರುದಿನ ಬೆಳಿಗ್ಯೆ ಡಾಕ್ಟರ್ ಇ. ಪೀಟರ್ಸರು ಅಗ್ಗಾಡಿ ಹತ್ತಿ ತೆರಳಿದರು.

ಮೆನುಫೆಕ್ಚರರ್ಸ ಲ್ಯಾಫ ಇನ್ಸುರೆನ್ಸ ಕಂಪೆನಿ ಎಂಬ ಜೀವ ವಿಮೇ ಸಂಘಕ್ಕೆ ಇಲ್ಲಿಯ ಎ. ಜಿ. ಹೆಗಡೆ ಎಂಡ್ ಸನ್ಸ್ ಎಂಬವರನ್ನು ನಮ್ಮ ಇಡೀ ಸಂಸ್ಥಾನದ ಮುಖ್ಯ ಏಜಂಟರಾಗಿ ನೇಮಿಸಿರುತ್ತಾರಾಗಿ ತಿಳಿಯುತ್ತೇವೆ.

ಕಳೆದ ಸಂಚಿಕೆಯಲ್ಲಿ ಮುನಿಸಿಪಲ್ ಕೌನ್ಸಿಲಿನ ಚೇಯರ್‌ಮೇನ್ ಪದವಿಗೆ ಮ। ರಾ। ರಾ। ಅಮ್ಮೆಂಬಳ ವಾಸುದೇವ ಪೈಗಳವರೂ ಡಾಕ್ಟರ್ ಫೆರ್ನಾಂದೀಸರೂ ಉಮೇದ್ವಾರರಾಗಿರುವರೆಂತ ಪ್ರಕಟಿಸಲ್ಪಟ್ಟಿತ್ತು. ಈ ಸಂದರ್ಭದಲ್ಲಿ ಉಮೇದ್ವಾರರೆಂದರೆ ಆ ಪದವಿಯು ತನಗೆ ಸಿಕ್ಕಬೇಕೆಂತ ಅರ್ಜಿ ಕೊಟ್ಟಿರುವವರೆಂತ ವಾಚಕರು ಗ್ರಹಿಸಿಹುದು. ಆದರೆ ಜೇಯರ್‌ಮೇನರ ಚುನಾವಣೆ ಕ್ರಮ

ವನ್ನು ತಿಳಿದರೆ ಹೀಗೆ ಗ್ರಹಿಸಲು ಆಸ್ಪದವಿರದು. ಕೌನ್ಸಿಲಿನ ಮೆಂಬರರಲ್ಲಿ ಹಲವರು ಕೂಡಿಕೊಂಡು ತಮಗೆ ಯುಕ್ತತೋರುವ ಕೌನ್ಸಿಲಿನ ಮೆಂಬರರ ಪೈಕಿ ಒಬ್ಬರ ಅಥವಾ ಇತರ ಗೃಹಸ್ಥರೊಬ್ಬರ ಹೆಸರನ್ನು ಚೇಯರ್‌ಮೇನ್ ಪದವಿಗೆ ಬರಹಮೂಲಕ ಸೂಚಿಸುವರು. ಹೀಗೆ ಒಬ್ಬರಕ್ಕಿಂತ ಹೆಚ್ಚು ಮಂದಿ ಗೃಹಸ್ಥರ ಹೆಸರುಗಳು ಸೂಚಿಸಲ್ಪಟ್ಟರೆ ಇವರ ಪೈಕಿ ಯಾರಾದರೊಬ್ಬರು ಆರಿಸಲ್ಪಡುವರು. ಈ ರೀತಿ ಕೌನ್ಸಿಲಿನ ಮೆಂಬರರ ಪೈಕಿ ೬ ಯಾ ೭ ಜನರು ಮ॥ ರಾ॥ ವಾಸುದೇವ ಪೈಗಳವರ ಹೆಸರನ್ನು ಸೂಚಿಸಿರುತ್ತಾರೆ. ಸದರಿ ಪದವಿಯನ್ನು ವಹಿಸಿಕೊಳ್ಳಬೇಕಾಗಿ ಕೌನ್ಸಿಲಿನ ಮೆಂಬರರ ಪೈಕಿ ಕೆಲವರು ರಾ॥ ಪೈಗಳವರನ್ನು ಖಾಸಗಿಯಿಂದ ಅಪೇಕ್ಷಿಸಿದ್ದರೂ ಅವರು ಈ ವರೆಗೂ ತಮ್ಮ ಸಮ್ಮತವನ್ನು ಕೊಟ್ಟ ಹಾಗೆ ತೋರುವುದಿಲ್ಲ. ಒಳ್ಳೇ ವಿವೇಕ ಮತ್ತು ಅನುಭವಶಾಲಿಗಳೂ ಹಲವು ಜಾತಿ ಮತಸ್ಥರಿಂದ ಕೂಡಿರುವ ಈ ಪಟ್ಟಣ ಮತ್ತು ಪಟ್ಟಣಿಗರ ಸ್ಥಿತಿಗತಿಗಳನ್ನು ತಿಳಿದವರೂ ಕೌನ್ಸಿಲಿಗೆ ಚೇಯರ್‌ಮೇನ್‌ರಾಗಬೇಕಾಗಿರುವದು. ರಾ॥ ಪೈಗಳವರು ಪಟ್ಟಣ ನಿವಾಸಿಗಳ ಮೇಲಣ ಪ್ರೀತಿಯಿಂದ ಈ ಪದವಿಗೆ ತಮ್ಮ ಸಮ್ಮತಿಯನ್ನು ಕೊಟ್ಟರೆ ಉಪಕಾರವಾಗುತ್ತಿತ್ತು. ಡಿಸ್ಟ್ರಿಕ್ಟ್ ಬೋರ್ಡಿನ ವ್ಯಾಸ್ ಪ್ರೆಸಿಡೆಂಟರಾಗಲು ಪೈಗಳವರ ಸಮ್ಮತವಿರುವುದೋ ಎಂತ ಸ್ಥಳಿಕ ಅಧಿಕಾರಿಗಳು ಪೈಗಳವರನ್ನು ವಿಜ್ಞಾಪಿಸಿಕೊಂಡಲ್ಲಿ ಪೈಗಳವರು ಅನಾರೋಗ್ಯದ ದೆಸೆಯಿಂದ ಈ ಪದವಿಯನ್ನು ನಿರಾಕರಿಸಿರುವರೆಂಬುದನ್ನು ತಿಳಿದಿರುವೆವು. ಆದರೆ ಚೇಯರ್‌ಮೇನ ಹುದ್ದೆಯ ಕಾರ್ಯಭಾರದಲ್ಲಿ ಪೈಗಳವರಿಗೆ ಕೌನ್ಸಿಲರರು ತಮ್ಮ ಸಹಕಾರವನ್ನು ಕೊಟ್ಟಲ್ಲಿ ಕೌನ್ಸಿಲಿನ ಕಾರ್ಯನಿರ್ವಾಹವು ಸುಲಭವಾಗುವುದು. ಕೌನ್ಸಿಲಿನ ಮೆಂಬರರು ತಮ್ಮ ಸಹಕಾರದ ಭರವಸೆಯನ್ನು ರಾ॥ ಪೈಗಳವರಿಗೆ ಹೇಳಿ ಚೇಯರ್‌ಮೇನ ಪದವಿಯನ್ನು ಇವರು ವಹಿಸಿಕೊಳ್ಳುವಂತೆ ರಾ॥ ಪೈಗಳವನ್ನು ಪ್ರೇರೇಪಿಸಬೇಕಾಗಿ ನಮ್ಮ ಅಪೇಕ್ಷೆಯಾಗಿರುವುದು.

ಕಾಸರಗೋಡಿನಲ್ಲಿ ಕಟ್ಟಸಲ್ಪಡುವ ಮಿಶ್ಯನ್ ಸೆಕಂಡರಿ ಶಾಲಾ ಕಟ್ಟೋಣಕ್ಕೆ ತಗಲಬಹುದಾದ ಖರ್ಚಿಯಲ್ಲಿ ಸಮಾ ಅರ್ಧ ಖರ್ಚು ಅಂದರೆ ೨೬೧೦ ರೂಪಾಯಿ ಸರಕಾರದಿಂದ ಕೊಡಲ್ಪಡುವದು.

* * *

ಕಾಸರಗೋಡು. ಇಲ್ಲಿ ಹೊಸತಾಗಿ ಸ್ಥಾಪಿಸಲಿಕ್ಕಿರುವ ಮಿಶ್ಯನ್ ಸೆಕಂಡರಿ ಶಾಲಾ ಕಟ್ಟೋಣದ ಕೆಲಸವು ಕಳೆದ ವಾರದಿಂದ ಬಹು ಜರೂರಿನಿಂದ ಮುಂದರಿಯುತ್ತಲಿದೆ.

ಕಳೆದ ಸಂಚಿಕೆಗಳೊಂದರಲ್ಲಿ ಪ್ರಸ್ತಾಪಿಸಿದ್ದ ಮೇರೆಗೆ ಇಲ್ಲಿಯ ಪೋಸ್ಟು ಮಾಸ್ಟರರಾಗಿದ್ದ ರಾ॥ ಎಚ್. ರಾಮರಾಯರಿಗೆ ಮಡಿಕೇರಿಗೂ ಕರ್ನೂಲಿನ ರಾ॥ ಕೆ. ಅಪ್ಪಯ್ಯಗಾರು ಇವರಿಗೆ ಇಲ್ಲಿಗೂ ವರ್ಗವಾಗಿಯದೆ. ಸದರಿ ಗಾರುರವರು ಇದೇ ೧ನೇ ತಾರೀಕಿನಿಂದ ಚಾರ್ಜು ವಹಿಸಿಕೊಂಡಿರುವರು.

ಇಲ್ಲಿಯ ಬಾಸೆಲ್ ಮಿಶ್ಯನ್ ಠಾಣ್ಯದ ಕ್ರೈಸ್ತರು ನಿನ್ನೆಯ ದಿನ ಕದಿರು ಹಬ್ಬವನ್ನು ಸಂತೋಷದಿಂದ ಆಚರಿಸಿದರು. ಜಮೆಯಾದ ಕಾಣಿಕೆ ರೂ. ೧೬–೧೦–೭.

* * *

ಕುಂಬಳೆ:—ಈ ಮೊದಲಿನ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಇದೇ ತಾ. ೧ಕ್ಕೆ ತಬ್ದೀಲಾಗುವ ರೈಲ್ವೆ ಗಾಡಿಗಳ ಸಮಯವೂ ಮೈಲು ಗಾಡಿಯು ಕೆಲವು ಸ್ಟೇಶನುಗಳಲ್ಲಿ ನಿಲ್ಲಿಸದಿರುವ ಏಲೆವಾರಿಯೂ ಸದ್ಯಕ್ಕೆ ಜಾರಿಗೆ ಬರುವುದಿಲ್ಲವಾದುದರಿಂದ ಈ ಮೊದಲಿನಂತೆಯೇ ರೈಲುಬಂಡಿಗಳು ಆಯಾ ಸ್ಟೇಶನಿನಲ್ಲಿ ನಿಲ್ಲುತ್ತಿವೆ.

ಇಲ್ಲಿಗೆ ಸಮೀಪ ಮೊಗ್ರಾಲ್ ಸಾವುಕಾರ ಮ. ರಾ. ರಾ. ಅಬ್ದುಲ್‌ಕಾದ್ರಿ ಬ್ಯಾರಿಯವರು ದೀರ್ಘಕಾಲದಿಂದ ಪಕ್ಷವಾತ ಪೀಡಿತರಾಗಿದ್ದು ಇದೇ ತಾ. ೧ರಲ್ಲು ದೈವಾಧೀನವಾದರೆಂತ ತಿಳಿಸುವರೆ ಬಹಳ ವ್ಯಸನ ಪಡುತ್ತೇನೆ. ಇವರು ದೊಡ್ಡ ಮನೆತನದವರಾಗಿದ್ದು ಕೆಲವು ವರ್ಷಗಳ ಹಿಂದೆ ತಾಲೂಕು ಬೋರ್ಡು ಮೆಂಬರರಾಗಿದ್ದರು. ಜಾತಿ, ಮತ, ಭೇದವೆಣಿಸದೆ ದಾನ ಧರ್ಮ ಪರೋಪಕಾರದಲ್ಲಿ ನಿರತರಾಗಿದ್ದ ಇವರಿಗಿರುವ ಮೂರು ಮಂದಿ ಸುಪುತ್ರರಲ್ಲಿ ಜೇಷ್ಠರಾದ ಮ. ರಾ. ಎಮ್. ಕೆ. ಮಹಮ್ಮದ್‌ರವರು ಮೊಗ್ರಾಲ್ ಕಸಬಾ ಗ್ರಾಮದ ಪಟೇಲರಾಗಿರುವರು.

* * *

ಬಂಟವಾಳ:-ಅಯ್ಯನಾಯ್ಕನ ಓಣಿಯಿಂದ ಭಂಡಾರಬೆಟ್ಟಿಗೆ ಹೋಗುವ ದಾರಿಯಲ್ಲಿರುವ ತೂಗುಸಂಕವನ್ನು ಭದ್ರವಾದ ಸ್ಥಿತಿಯಲ್ಲಿರಗೊಡಿಸಲು ರೂ ೮೧ರ ಸೆಂಕ್ಷನು ಆದುದು ಅತಿ ಸಂತೋಷಕರದ ವಾರ್ತೆ. ಬೋರ್ಡ ಮೆಂಬರರು ರಾ॥ ಕೆ॥ ಕೃಷ್ಣರಾಯರ ಮೆಂಬರಿಕೆಯಾದಾರಭ್ಯ ಬಂಟವಾಳದ ಆಸ್ಪತ್ರಿಗೆ ಸುಂದರವಾದ ಗೇಟು, ಊರಲ್ಲೆಲ್ಲಾ ಲಾಟನುಗಳು, ಹುಡುಗಿಯರ ಶಾಲೆ, ಓಣಿಗಳ ದುರುಸ್ತಿ, ಕೊರೆಂಟಾಯಿನ್ ಗೃಹಗಳು, ಸರಕಾರಿ ಪಾಯಿಖಾನೆಗಳು, ಗುರುಪುರಕ್ಕೆ ಹೋಗುವ ಹೊಸ ಮಾರ್ಗ, ಸಂಕಗಳು, ನೂತನ ಮಹಮ್ಮದೀಯರ ಶಾಲೆ ಮುಂತಾದುವುಗಳಿಂದ ಬಂಟವಾಳವನ್ನು ನಾಗರಿಕವಾದ ಉಚ್ಛತೆಗೆ ತರಲು ಅವರ ಪ್ರಯತ್ನ ನಡಿಯುತ್ತಿದುದು ನಮ್ಮ ಅದೃಷ್ಟ. ಬೋರ್ಡಿನವರು ಸಂಸರಿ ೮೦ ರೂಪಾಯಿಯಂತೆ ವರ್ಷಂಪ್ರತಿ ವೆಚ್ಚಮಾಡುತ್ತ ಈ ಸಾಂಕುವನ್ನು 'ದುರುಸ್ತಿ' ಮಾಡಿಸುವುದಕ್ಕಿಂತ ಒಮ್ಮೆಯೇ ೨-೩ ಸಾವಿರ ರೂಪಾಯಿ ಖರ್ಚು ಮಾತ್ರ ನಡಿಸಿ ಸಾಂಕುವನ್ನು ಸ್ಥಿರಪಡಿಸುತ್ತಿದ್ದರೆ ಬೋರ್ಡಿನವರಿಗೆ ಆದಾಯವೂ ನಮಗೆ ಶಾಶ್ವತ ಉಪಕಾರವೂ ಆಗುತ್ತಿತ್ತು. ಈ ವಿಷಯ ನಾವೆಲ್ಲರೂ ಬೋರ್ಡಿನವರ ಸಹಾನುಭೂತಿಯನ್ನು ಕೋರುತ್ತೇವೆ.

ಶ್ರೀ ಕಾಶೀಮಠದ ಗುರುಶಿಷ್ಯ ಸ್ವಾಮಿಯವರು ಸೌಖ್ಯದಿಂದ ಇದ್ದಾರೆ. ಶ್ರೀಗುರುಗಳ ದೇಹಾಲಸ್ಯವೂ ಶಾಂತವಾಗುತ್ತ ಬಂದಿದೆ; ಶೀಘ್ರದಲ್ಲಿಯೇ ಪೂರ್ಣ ಗುಣಹೊಂದುವ ಹಾಗೆ ನಮ್ಮ ಶ್ರೇಯಃ ಪ್ರಾರ್ಥನೆ. ಕಾರ್ಕಳ, ಮಂಜೇಶ್ವರ, ಮೂಡಬಿದ್ರೆ, ಉಡುಪಿಯತ್ತಕಡೆಯ ಶಿಷ್ಯ ಸಮೂಹವು ತಮ್ಮ ಭಕ್ತಿಯ ಸಮರ್ಪಣೆಗಾಗಿ ಮಠಕ್ಕೆ ದಿನೇ ದಿನೇ ಬರುತ್ತಲಿದ್ದಾರೆ.

* * *

ಪಡುಬಿದ್ರೆ:—ಕುಂದಾಪುರ ತಾಲೂಕು ಬೋರ್ಡು ಮೆಂಬರರಾದ ಇಲ್ಲಿಯ ಮ. ರಾ. ರಾ. ಆದಿರಾಜಬಲ್ಲಾಳ್ ಅವರ್ಗಳ್‌ರವರ ಸೂಚನೆಯನ್ನು ಅನುಸರಿಸಿ ತಾಲೂಕು ಬೋರ್ಡು ಪ್ರೆಸಿಡೆಂಟರವರು ದಕ್ಷಿಣದಲ್ಲಿ ಮಂಗ್ಳೂರಿಗೂ ಪೂರ್ವದಲ್ಲಿ ಕಾರ್ಕಳಕ್ಕೂ ಉತ್ತರದಲ್ಲಿ ಉಡ್ಪಿಗೂ ಮಧ್ಯಕ್ಷೇತ್ರವಾಗಿರುವ ವಸಂತಪುರವೆಂಬ ಈ ಪಟ್ಟಣವು ಈಗ ದಿನೇ ದಿನೇ ವ್ಯಾಪಾರ ವಗೈರೆಗಳಿಂದ ಏಳಿಗೆಗೆ ಬರುತ್ತಿರುವುದರಿಂದ ಟೌನ್ ನೂಸೆನ್ಸ್ ಆಕ್ಟನ್ನು ಲಗಾವುಮಾಡುವ ಉದ್ದಿಶ್ಯದಿಂದ ಟೌನಿನ ಗಡಿಗಳು ವಗೈರೆ ಗೊತ್ತುಮಾಡಿ ಸರ್ವೇನಕ್ಷೆ ಇತ್ಯಾದಿ ತಯಾರಿಸಿ ರಿಪೋರ್ಟು ಮಾಡಬೇಕಾಗಿ ಫಿರ್ಕಾ ರೆವಿನ್ಯು ಇನ್ಸ್‌ಪೆಕ್ಟರ್‌ರವರಿಗೆ ಹುಕುಂ ಕೊಟ್ಟ ಮೇರೆಗೆ ಸದ್ರಿಯವರು ನಡಿಸಾಲ್ ಶ್ಯಾನಭಾಗರ ಮುಖಾಂತ್ರ ಸದ್ರಿ ಕಾರ್ಯಕ್ಕೆ ಪ್ರವರ್ತರಾಗಿದ್ದಾರೆಂತ ಕೇಳುತ್ತೇವೆ. ಇದು ನಿಜವಾದರೆ ಸಾವುಕಾರರು ವ ಇತರ ಬಂಡಿ ಮ್ಹಾಲೀಕರು ಅವರವರ ವಾಸ್ತವ್ಯ ಸಮೀಪ ಇರುವ ರಾಜಮಾರ್ಗದಲ್ಲಿ ಬಂಡಿಗಳನ್ನು ನಿರಾತಂಕವಾಗಿ ನಿಲ್ಲಿಸುವರೆ ಆಸ್ಪದ ಸಿಕ್ಕದು.

* * *

ಪುತ್ತೂರು. ಇಲ್ಲಿಯ ಶಿರೆಸ್ತದಾರ ರಾ॥ ಎಚ್. ರಾಯಪ್ಪನವರು ತಾ. 10ರಲ್ಲು ಹಾಜರಾಗಿ ತಾಲೂಕು ಶಿರೆಸ್ತದಾರ ಮರ್ತು ಕಿಣಿಯವರಿಂದ ಚಾರ್ಜು ವಹಿಸಿಕೊಂಡರು.

ಇಲ್ಲಿ ಇದೇ ತಿಂಗಳ ತಾ. 17ರ ಲಾಗಾಯತಿನಿಂದ ಪುನಹ ಮಳೆಗೆ ಆರಂಭವಾಗಿಯದೆ. ಮಜ್ಜು ಬೆಟ್ಟುಗದ್ದೆಗಳ ಬೆಳೆಗೆ ಒಳ್ಳೆಯದಾದರೂ ಬೈಲು ಗದ್ದೆಗಳ ಬೆ ಪುರಾ ಕೊಳೆಯುತ್ತದೆ. ಅಕ್ಕಿಯ ಬೆಲೆಯಂತೂ ಬಡಬಗ್ಗರಿಗೂ ಇತರರಿಗೂ ಒಂದೇ ಸಮವಾಗಿ ಬಡವರ ಗೋಳಾಟವನ್ನು ಶಾಂತಪಡಿಸುವರೆ ಶಕ್ತಿಯಿಲ್ಲ. ಅಕ್ಕಿಗೆ ಮುಡಿ ಒಂದಕ್ಕೆ ರೂಪಾಯಿ 6 ಆಗಿಯದೆ.

ಇಲ್ಲಿಯ ಆಸ್ಪತ್ರಿಯ ಸಿವಿಲ್ ಎಪೋತಿಕೆರಿಯವರಾ ಮ॥ ಸಲ್ಡಾಂಞಾರವರು ಒಂದು ವರ್ಷದ ಫರ್ಲೋ ರಜ ಪಡಕೊಂಡಿರುವುದರಿಂದ ಉಪ್ಪಿನಂಗಡಿ ದಾಕ್ತಾರ ರಾ॥ ಎಲ್ ಆನಂದ ರಾಯರು ಇಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

ಕಾಸರಗೋಡತ್ತಕಡೆ ಸರ್ಕೀಟಿಗೆ ಹೋದ ನಮ್ಮ ಡಿವಿಜನಲ್ ಡ್ಯೂಪಿಟಿ ಕಲೆಕ್ಟರರವರು ಇದೇ ತಾ. ೧ರಲ್ಲು ಇಲ್ಲಿಗೆ ಹಿಂದೆರಳಿರುವರು.

ಇಲ್ಲಿಯ ರೋಮನ್ ಕೆಥೊಲಿಕ ಇಗರ್ಜಿಗೆ ರೆವರೆಂಡ ಫಾದರ್ ಅಂತೋನಿ ಕುವೆಲರು ಅಸಿಸ್ಟಾಂಟ ಗುರುಗಳಾಗಿ ನೇಮಿಸಲ್ಪಟ್ಟು ಕಳೆದ ತಾ. ೨೭ರಲ್ಲು ಇಲ್ಲಿಗೆ ಬಂದಿರುವರು.

* * *

ಕುಂದಾಪುರ:—ಕಳೆದ ವಾರ ಶಾಲಾಇನ್ಸ್‌ಪೆಕ್ಟರರಾದ ರೆನ್ಸ್‌ಫೋರ್ಡು ದೊರೆಗಳವರು ಇಲ್ಲಿಯ ಹೈಸ್ಕೂಲನ್ನು ಸಂದರ್ಶಿಸಿದರು. ಅನಂತರ ಇಲ್ಲಿಯ ಎಲಿಮೆಂಟರಿ ಶಾಲೆಗಳನ್ನು ಸಂದರ್ಶಿಸಿ ಕಳೆದ ಮಂಗಳವಾರ ಇಲ್ಲಿಂದ ಹೊರಟು ಹೋದರು.

ಕಳೆದ ಒಂದು ಸಂಚಿಕೆಯಲ್ಲಿ ತಿಳಿಸಿದ ಗರ್ಭಕೂ ಮಾಡಿದ ಹೆಂಗಸಿಗೆ ೨ ತಿಂಗಳ ಕಠಿಣ ಸಜಾ ವಿಧಿಸಲಾಯಿತು.

ಕೊರೊನೇಶನ್ ಟ್ರಾನ್ಸಿಟ್ ಕಂಪೆನಿಯವರು ಇದೇ ತಾ. ೧ರಿಂದ ತಮ್ಮ ಗಾಡಿಗಳನ್ನು ಉಡ್ಪಿಯಿಂದ ಕುಂದಾಪುರಕ್ಕೆ ಬಿಡ ಪ್ರಾರಂಭಿಸಿರುವರು.

ಇಲ್ಲಿ ಅಕ್ಕಿಯ ಬೆಲೆ ಬಹಳ ಚಡಾವಾಗಿರುವುದು.

ಗಂಗೊಳ್ಳಿಯ ಬಂದರದ ಮಳೆಗಾಲದಲ್ಲಿ ಕೊಚ್ಚಿಕೊಂಡು ಹೋದಾಂಶದಲ್ಲಿ ಈಗ ಮರಳು ತುಂಬುತ್ತಾ ಬರುತ್ತದೆ. ಬರುವ ಮಳೆಗಾಲದೊಳಗೆ ಈ ಬಂದರವು ದುರುಸ್ತಿಯಾಗುವಂತೆ ಸರಕಾರದವರು ತಕ್ಕ ಏಲೆವಾರಿ ಮಾಡ್ಯಾರೆಂಬದಾಗಿ ನಂಬುತ್ತೇವೆ.

* * *

ಜೀನಸುಗಳ ಧಾರಣೆ, ಮಂಗಳೂರು. (ರಜಂ)

ಮಸ್ಕತಿ ಅಕ್ಕಿ	5—14—0—6—2—
ಗುಡ್ನು ಮಸ್ಕತಿ... ...	5—8—0-5—12—
ಮಸ್ಕತಿ ದುಯಂ... ...	5-10-0—5—13—
ಗಾಡಿ ಸುಗ್ಗಿ	5-5-0-5—6—
ಉಂಚು ಸುಗ್ಗಿ	5—9—0—5-12—
ಮಸ್ಕತಿ ಬೆಳ್ತಿಗೆ	6—8—
ರಂಗೂನ್ ಬೆಳ್ತಿಗೆ ಗೋಣಿ 1ರ	11—0—
ಹುರುಳಿ ಗೋಣಿ ೧, ಮುಡಿ 2ರ	6-10-
ಉಪ್ಪು ಗೋಣಿ ೧ರ	3—14—
ಕೊಬ್ರಿ ಖಂಡಿ ೧ರ ...	85—0-0-95—0—
ಕೊಬ್ರಿ ಎಣ್ಣೆ ಮಣ ೧ರ	7—0—
ಕೊಬ್ರಿ ಹಿಂಡಿ ಖಂಡಿ ೧ರ	32—8—
ಊರು ಬೆಲ್ಲ ಖಂಡಿ ೧ರ	55—0—
ಕಾಫಿ ಖಂಡಿ ೧ರ 270—0—0	275—0—
ಕಾಳು ಮೆಣಸು ಖಂಡಿ	175—0—
ಬಿಳಿ ಗೋಟು ಅಡಿಕೆ ಖಂಡಿ ೧ರ ...	75—8—
ಪಚ್ಚೆ ಹೆಸರು ಗೋಣಿ ೧ರ	11—4—
ಬೊಂಬಾಯಿ ಉದ್ದು ಗೋಣಿ ೧ರ	10-0—
ಗೋದಿ ಗೋಣಿ ೧ಕ್ಕೆ	12—0—
ಕಡಲೆ ಗೋಣಿ ೧ರ	7-8-0-7—12—
ತೊಗರಿ ಗೋಣಿ ೧ರ	8—8—
ತೊಗರಿಬೇಳೆ ಗೋಣಿ ೧ರ	11—0—0—13—0—
ಮೋರಿಸ್ ಸಕ್ಕರೆ ಮಣ ೧ರ	2—15—
ಎಳ್ಳಿಂಡಿ	31-4—

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ 6ನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವದಿವಿಮೆ ದುಬಾರೆ ಎಂಡೌಮೆಂಟ್ ಪೊಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ತೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣದಗೋಸ್ಕರ ತಿಂಗಳಿಗೆ ೨ ರೂಪಾಯಿ ೧ ರೂಪ್ಯಾ ೮ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪೆನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರೆವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ತಿಲ್ಯಾನೋ

ರಾಯ್ಮಂಡ್ ಎ. ಮಿನೇಜೆಸ್ ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.
ಟ್ರಾವಲಿಂಗ್ ಏಜಂಟ್. ಮಂಗಳೂರು, ದಕ್ಷಿಣ ಕನ್ನಡ.

ಸುಲಭ ಕ್ರಯ! ಸುಲಭ ಕ್ರಯ!! ಸುಲಭ ಕ್ರಯ!!

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವದಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ ಮನೋಉಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದುಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15ಸಾರಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕಗುಣವೂ, ಪರಿಮಳವೂ, ಕಾರವೂ ಹೋಗುವದಿಲ್ಲ. ಬುಡ್ಡಿ 1ಕ್ಕೆ ಕ್ರಯ ರೂ. 0-4-0. ವಿ. ಪಿ. ಚಾರ್ಜು 0-3-0 ಡಜನ್ 1ಕ್ಕೆ ಕ್ರಯ ರೂ. 2-8-0. ವಿ.ಪಿ. ಚಾಜು 0-6-0.



ಪುಕಟ! **Free Sample Coupon** ಪುಕಟ!!

ದಯವಿಟ್ಟು ಕೆಳಗಿನ ವಿಳಾಸಕ್ಕೆಡಾಕ್ಟ್ ಜಿ. ಬಿ. ಯವರ ಸುಗಂಧನಶ್ಯದ ಪುಡಿಯ ಮಾದಿರಿ ಬಾಟ್ಲಿ ಒಂದನ್ನು ಕಳುಹಿಸಬೇಕು.

ಹೆಸರು..

....

(Registered) ☞ ವಿಳಾಸ:—ಗುರುಬಸವ ಅಂಡುಕಂಪೆನಿ, ಮದ್ರಾಸ

ಶ್ರೀ

ಪಾರಾಯಣಕ್ಕನುಕೂಲವಾದ ಪುಸ್ತಕಗಳು:—

1. ಶ್ರೀ ಭಗವದ್ಗೀತೆ, ಟೀಕಾತಾತ್ಪರ್ಯ ಸಹಿತವಾದದ್ದು, ಚಿಕ್ಕ ಬಾಲಕರಿಗೂ ತಿಳಿಯುವಂತೆ ಬಹು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮತ್ತು ಇದು ಉತ್ತಮತರವಾದ ಕಾಗದದಲ್ಲಿದ್ದಾಗಿಯೂ, ಮುಕ್ತಾಫಲದಂತಿರುವ ಅಕ್ಷರಗಳಿಂದ ಕೂಡಿದ್ದಾಗಿಯೂ ಇರುವುದಲ್ಲದೆ, ಮಡಿಯಾಗಿರುವ ಸಮಯದಲ್ಲಿಯೂ ಪಾರಾಯಣಕ್ಕನುಕೂಲವಾಗುವಂತೆ ಉತ್ತಮವಾದ ಕಿತ್ತಾನಾರು ಬೈಂಡುಳ್ಳದ್ದಾಗಿದೆ. ಕ್ರಯ ರೂ. 1_12_0:
2. ಡಿಟ್ಟೊ ಚಿಕ್ಕ ಸೈಜು (ಮೂಲ ಮತ್ತು ತಾತ್ಪರ್ಯ ಸಹಿತವಾದದ್ದು. ರೂ 0—6—0.
3. ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ತರವಾದ ಕಿತ್ತಾನಾರು ಬೈಂಡಿನಿಂದ ಮಾಡಿರುವ ಶ್ರೀ ಶ್ರೀನಿವಾಸ ಕಲ್ಯಾಣ ಕ್ರಯ ರೂ. 1_12_0
4. ಸಂಕ್ಷೇಪ ರಾಮಾಯಣವೆಂಬ ಶ್ರೀ ಬಾಲರಾಮಾಯಣವು ಟೀಕಾ ಸಹಿತವಾದದ್ದು. ಬಹು ರಸಯುಕ್ತವಾದದ್ದು, ಉತ್ತಮವಾದ ಪ್ರತಿ ಕ್ರಯ ರೂ. 0_4_0.
5. ಟೀಕಾ ತಾತ್ಪರ್ಯ ಸಹಿತವಾದ ಶ್ರೀ ಮುಕುಂದಮಾಲಾ ಸ್ತೋತ್ರವು. ಪಾರಾಯಣಕ್ಕೆ ಬಹು ಅನುಕೂಲವಾದ ಸ್ತೋತ್ರ ಪುಸ್ತಕವು, ಭಕ್ತಿರಸದಿಂದ ತುಂಬಿದೆ. ತ್ರಿಮತಸ್ಥರೂ ಪಾರಾಯಣ ಮಾಡಬೇಕಾದ ಪುಸ್ತಕವು. ಕ್ರಯ ರೂ. 0—4—0.

ಶ್ರೀಮದ್ವಾಲ್ಮೀಕಿ ಮಹರ್ಷಿ ವಿರಚಿತವಾದ

ಶ್ರೀಮದ್ರಾಮಾಯಣ.

ವೆಂಬ ಆದಿ ಕಾವ್ಯವು. 6 ಕಾಂಡಗಳನ್ನೊಳಗೊಂಡಿರುವುದಲ್ಲದೆ, ಟೀಕಾ ಶ್ಲೋಕಗಳು ಪಾರಾಯಣ ಕ್ರಮ ಮುಂತಾದವುಗಳಿಂದ ಕೂಡಿದೆ. ಸುಂದರವಾದ ಕನ್ನಡ ಅಕ್ಷರಗಳಲ್ಲಿ ಶುದ್ಧವಾಗಿ ಅಚ್ಚಾಗಿದೆ, ಪಾರಾಯಣಕ್ಕೆ ಅನುಕೂಲವಾಗಿದೆ. ಮಡಿಗೋಸ್ಕರ ರೇಷ್ಮೆ ಪಟ್ಟೆಗಳಿಗೆ ಕಿತ್ತಾನಾರನ್ನು ಹಾಕಿದೆ. ಪುರಾತನ ಪ್ರತಿಯಾದ ಕಾರಣ ತಪ್ಪುಗಳಿಲ್ಲಾರವು. ನವರಾತ್ರಿಯ ಕಾಲವು ಸಮೀಪಿಸುತ್ತಿರುವ ಕಾರಣ ಶ್ರೀ ರಾಮ ಭಕ್ತರಾದವರೆಲ್ಲರೂ ಈ ಪುಸ್ತಕ ರತ್ನದ ಪ್ರತಿಯೊಂದನ್ನು ಸಂಗ್ರಹಿಸತಕ್ಕದು.

ಬೆಲೆ 3_0_0. ಹಾಸಲು 0_6_0.

ಎಚ್ಚ್. ಎನ್. ರಾವ್ ಬ್ರದರ್ಸ್.
ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಬೆಲೆ ಸುಲಭ! ಗುಣವಧಿಕ!! ಕನ್ನಡಿಗರೇ ಇತ್ತ ಬನ್ನಿ!!!

	ಇತರರಿಗೆ.	ಚಂದಾದಾರರಿಗೆ.
ಸಚಿತ್ರ ಕಲಾತರಂಗ	0-10—0	0—8—0
ಬಾಲಿಕಾ ನೀತಿಮಾಲಿಕೆ	0—2—6	0—2—0
ಪೇಷ್ವೆ ನಾರಾಯಣರಾವು	0—4—0	0—3—6
ವಿವೇಕಾನಂದ (ಅಚ್ಚಿನಲ್ಲಿದೆ)	0-12—0	0-10—0

ವಿಳಾಸ:— ಸ್ವದೇಶಾಭಿಮಾನಿ ಆಫೀಸು ಮಂಗಳೂರು, ಮತ್ತು
ಎಂ. ಟಿ. ವಲ್ಲಭೈಯ್ಯಂಗಾರ್ ಮಾಗಡಿ.

ಕ್ಲೆಮೆಂಟರ

ಮೆಜಿಕ್‌ಬಾಂ ತೈಲ್ಯವು.

ಈ ತೈಲ್ಯದಿಂದ ಸಕಲ ವಿಧದ ನೋವು ನಿವಾರಣೆಯಾಗುವದು. ತಲೆ ನೋವು, ವಾಯುನೋವು, ಸೆಳತ, ಗಂಟ್ಲು ನೋವು, ಬೆನ್ನು ನೋವು, ಕೀಲುಗಳ ನೋವು, ಪಾರ್ಶ್ವವಾಯು, ವಿವಿಧವಾದ ವಾಯು ರೋಗಗಳು, ಶೀತ ರೋಗಗಳು, ಸಂದುವಾತ, ಚೇಳು ಕಡಿದ ನೋವು—ಇವುಗಳೆಲ್ಲಾ ಈ ತೈಲ್ಯ ಹಚ್ಚಿದ ಮಾತ್ರದಿಂದ ಚಮತ್ಕಾರಿಕವಾಗಿ ಮಾಯವಾಗುವದು. ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪ್ರಯೋಗಿಸಿ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಇದರಷ್ಟು ಅಮೋಘವಾದ ತೈಲ್ಯವು ಬೇರೊಂದಿಲ್ಲವೆಂಬದಾಗಿ ಕಂಡುಕೊಂಡಿದ್ದಾರೆ. ಈ ಅತ್ಯುತ್ತಮವಾದ ತೈಲ್ಯವು ನೋವಿನ ಮೂಲವನ್ನು ಕಂಡುಹಿಡಿದು ಅದರ ಹುಟ್ಟಡಗಿಸಿಬಿಡುವದು.

ಕ್ರಯ ಶೀಸೆ ೧ಕ್ಕೆ ೧೨ ಆಣೆ, ಪ್ಯಾಕಿಂಗ್ ೪ ಆಣೆ. ಮೂರು ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡಲಾದೀತು. ಈ ತೈಲ್ಯವು ಎಲ್ಲಾ ವ್ಯಾಪಾರಸ್ಥರಲ್ಲಿಯೂ ವೈದ್ಯರಲ್ಲಿಯೂ ವಿಕರಿಮಾಡಲ್ಪಡುತ್ತದೆ.

ವಿಳಾಸ:— ಎಸ್. ಪೀಟರ್ಸ್.
37 ವೇದಮಲೆಪಿಳ್ಳೆ ಬೀದಿ,
ಪರಸುವಾಕಂ ವೇಪರಿ ಮದ್ರಾಸು,

ಏಜಂಟ್:— ಜಿ. ಎಸ್. ಕಣ್ಣೈಚೆಟ್ಟಿ,
ಊಲನ್‌ಕೇಪ ಮನುಫೆಕ್ಚರರ್, ತುಮಕೂರ.

ಉತ್ತಮವಾದ ಸುಗಂಧ ದ್ರವ್ಯಗಳು.

ವಿಶ್ವಾಂಜನ ಫೈನ್ ಬಾಂ ಬಾಟ್ಲಿ ೧ಕ್ಕೆ	೦-೪-೦	ಕಸ್ತೂರಿ ಬತ್ತಿ ಸೇರು ೧ಕ್ಕೆ	೩-೦-೦
ತಾಂಬೂಲ ಮಾತ್ರೆ ಬಾಟ್ಲಿ ೧ಕ್ಕೆ	೦-೩-೦	ಜವಾಜಿ ಬತ್ತಿ „	೧-೧೨-೦
ದಶಾಂಗ ಡಬ್ಬಿ ೧ಕ್ಕೆ	೦-೩-೦	ಪುಣುಗು ಬತ್ತಿ „	೧-೪-೦
ಮಹಾರಾಜಾ ತಂಬಾಕ್ ಡಬ್ಬಿ ೧ಕ್ಕೆ	೦-೨-೦	ಗುಲಾಬಿ ಬತ್ತಿ „	೧-೦-೦
ವಸಂತ ಮಾಲತಿ ಬಾಟ್ಲಿ ೧ಕ್ಕೆ	೦-೨-೦	ಪನ್ನಿರು ಬತ್ತಿ „	೦-೮-೦
ವ್ರಣಹಾರಿಯ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕಸ್ತೂರಿ ಬಿಲ್ಲೆ ತೊಲೆ ೧ಕ್ಕೆ	೨-೦-೦
ಕುಸುಮ ಮಾಲತಿ ಎಣ್ಣೆ ಬಾಟ್ಲಿ ೧ಕ್ಕೆ	೦-೮-೦	ಪುಣುಗಿನ ಬಿಲ್ಲೆ „	೧-೦-೦
ದಿಲ್‌ಬಹಾರ ಅತ್ತರ್ ಶೀಶೆ ೧ಕ್ಕೆ	೦-೪-೦	ಕೇಸರಿ ಬಿಲ್ಲೆ „	೦-೮-೦
ಹುಳದ ಮುಲಾಮು ಡಬ್ಬಿ ೧ಕ್ಕೆ	೦-೨-೦	ಅರ್ಗಜ „	೦-೧೨-೦
ವಾತಸಂಜೀವನೀ ತೈಲ ಬಾಟ್ಲಿ ೧ಕ್ಕೆ	೦-೪-೦	ಫಿತ್ನಾ „	೦-೧೨-೦
ದಿಲ್ ಕುಸುಮ ಬತ್ತಿ ಸೇರು ೧ಕ್ಕೆ	೧೦-೦-೦	ನಾಸಿಕಚೂರ್ಣ ಡಜನ್ ೧ಕ್ಕೆ	೦-೧-೦
A ಅಂಬರ್ ಬತ್ತಿ „	೬-೦-೦		

ಕೊಂಕಣಿ ಭಾಷೆಯಿಂದ ತಯಾರಿಸಲ್ಪಟ್ಟ ಚಂದ್ರಹಾಸನಾಟಕದ ಪುಸ್ತಕವು ನಮ್ಮಲ್ಲಿ ದೊರಕುತ್ತದೆ. ಕ್ರಯ ೦-೪-೦. ಬೇಕಾದವರು ಈ ವಿಳಾಸಕ್ಕೆ ಬರಕೊಳ್ಳಿರಿ. ಬಿ. ವಿ. ಪಿ. ಭಂಡಾರಕರ,

"ವಿಶ್ವಾಂಜನ ಡಿಪೊ",

ಮಂಗಳೂರು.

ದೇಶಬಾಂಧವರೇ! ಇತ್ತ! ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್

ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—45, ಹೆರಿಸನ್ ರೋಡ್, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 50,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ!! ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳೆದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲ್ಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!!

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಿಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ತರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:—ಟಿ. ಆರ್. ಪೈ ಅಂಡ್ ಬ್ರದರ್ಸ್,

ಸೋಲ್ ಏಜಂಟ್ಸ್, ಆಫೀಸು ಉಡುಪಿ, (ದ. ಕನ್ನಡ.)

ಕೊಂಕಣಿ ಭಾಷೆಯಲ್ಲಿ

ಸಂಗೀತ ಚಂದ್ರಹಾಸ ನಾಟಕ.

ಪ್ರತಿ ಒಂದಕ್ಕೆ ನಾಲ್ಕಾಣೆ.

ಪೋಸ್ಟು ಖರ್ಚು ಪ್ರತ್ಯೇಕ.

ವಿಳಾಸ:— ಬಿ. ಕೆ. ಪ್ರಭು,

ಬಂಟ್ವಾಳ ದ. ಕನ್ನಡಾ

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೋಲೆರಾ ಅಥವಾ ಉಷ್ಣಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ ರೂ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡುಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ:—ಪರಿಮಳಾಂಜನ ಡಿಪ್ಪೊ,

ಗೊಲ್ಲರಕೇರಿ ಮಂಗಳೂರು

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

(ಶ್ರೀ ಶೃಂಗೇರಿ ಮಠದವರಿಂದಲೂ, ಮೈಸೂರು ಸರಕಾರದವರಿಂದಲೂ ಪೋಷಿಸಲ್ಪಡುತ್ತಲಿದೆ) ಇದರಲ್ಲಿ:—(೧) "ದಶೋಪನಿಷತ್ತು"ಗಳಿಗೂ ಕನ್ನಡ ಕಥಾರೂಪವಾದ ತಾತ್ಪರ್ಯ. (೨) "ಶ್ರೀ ಶಂಕರಾಚಾರ್ಯ ಚರಿತ್ರ ಕಾಲವಿಚಾರ". (೩) "ಕನ್ನಡ ಭಾಷಾಮಯಧರ್ಮಸಿಂಧುಸಾರ" (೩೩೩ ವಿಷಯಗಳಿವೆ. (೪) ಸಂಧ್ಯಾವಂದನೆಯ ಅರ್ಥ ವಿಚಾರ" (ಬಹುಯುಕ್ತಿ ಪ್ರಮಾಣಗಳಿಂದೊಡಗೂಡಿದೆ) (೫) "ಬಾಲಕರ ಭಂಡಾರ" (ನೀತಿ ಕಥೆಗಳು, ನೀತಿ ಶ್ಲೋಕಗಳು, ಅಂಕೆಲಾಗ, ಬಚೆಲಾಗ, ಸಮಸ್ಯೆ, ಒಗಟೆ, ನ್ಯಾಯ ಮುಂತಾದುವುಗಳು). (೬) "ಕುಮಾರ ಸಂಭವ ಕಾವ್ಯ" ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ, ನಿಗ್ರಹ, ಧಾತುರೂಪ, ಧಾತ್ವರ್ಥ, ವಿಶೇಷಾಂಶಗಳೊಂದಿಗೆ.

(೧೨-೮-೧೯೧೧)ರಲ್ಲಿ ಆರಂಭವಾಗಿ ನಡೆಯುತ್ತಲಿದೆ. ಚಂದಾ (ವರ್ಗಣಿ) ದಾರರಿಗೆ ಹಿಂದಿನ ಸಂಚಿಕೆಗಳೆಲ್ಲ ದೊರೆಯುತ್ತವೆ.

ವಿಲಾಸ: (ಪತ್ರೆ)—-ದೊಡ್ಡ ಬೆಲೆ ನಾರಾಯಣ ಶಾಸ್ತ್ರಿ,

ಶ್ರೀ "ಶಾರದಾ" ಸಂಪಾದಕ, ಸೀಗೆ ಬೀದಿ ಬೆಂಗಳೂರು.

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ,

ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾ ಪ್ರವೇಶದಾಯಿನಿ.

ಮೊದಲನೆಯ ಪುಸ್ತಕ. ಪ್ರಥಮಾಭ್ಯಾಸಿಗಳಿಗೆ ತಕ್ಕ ಸುಲಭ ಪಾಠಗಳನೇಕವಾಗಿರುವ ಪ್ರತಿ ಇಂಗ್ಲಿಷ್ ಶಬ್ದಕ್ಕೂ ಕನ್ನಡಕ್ಷರದಲ್ಲಿ ಉಚ್ಚಾರಣೆ ಅರ್ಥ ಸಹ ಇರುವುದು. ಕ್ರಯ ಒಂದು ರೂಪಾಯಿ ಎಂಟಾಣೆ.

ಎರಡನೆಯ ಪುಸ್ತಕ. ಅಕ್ಷರಜ್ಞಾನವೂ ಶಬ್ದಜ್ಞಾನವೂ ಆದ ಸ್ವಲ್ಪ ಮಟ್ಟಿಗೆ ಇಂಗ್ಲಿಷ್ ತಿಳಿದವರಿಗೆ ಅನುಕೂಲವಾದ ಪ್ರೌಢಪಾಠಗಳುಳ್ಳದಾಗಿ ವರ್ತಕರಿಗೆ ಉಪಯೋಗವಾದ ಪಾರಿಭಾಷಿಕ ಶಬ್ದಕೋಶ ಒಂದನ್ನು ಛಾಪಿಸಿದೆ. ಕ್ರಯ ಒಂದು ರೂಪಾಯಿ ಎಂಟಾಣೆ.

ದಸರಾ ದೀಪಾವಳೀ ಮಹೋತ್ಸವದ ಜ್ಞಾಪಕಾರ್ಥವಾಗಿ ಆರು ವಾರಗಳ ಮಟ್ಟಿಗೆ ಕ್ರಯ ಕಡಮೆ ಮಾಡಿದೆ. ಅವಧಿ ಮೀರಿದ ಬಳಿಕ ಮರಳಿ ಮೊದಲಿನ ಕ್ರಯವೇ ಕೊಡಬೇಕಾಗುವುದು.

ಮೊದಲನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.

ಎರಡನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.

ಅಂಚೆವೆಚ್ಚ ಪುಸ್ತಕ ಒಂದಕ್ಕೆ ಮೂರೇ ಆಣೆ.

ಎರಡು ಪುಸ್ತಕವೂ ಒಟ್ಟಾಗಿಯಾದರೂ, ಒಂದೇ ಪುಸ್ತಕವನ್ನು ಹೆಚ್ಚಾಗಿಯಾದರೂ ಕೊಂಡುಕೊಳ್ಳುವವರಿಗೆ ಅಂಚೆ ವೆಚ್ಚ ಮಾಫಿ.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭಾರತಿ ಸಂಪಂಗಿರಾಮು,

ಪೋಸ್ಟು—ಹೊಸಕೋಟೆ, ಡಿಸ್ಟ್ರಿಕ್ಟ್—ಬೆಂಗಳೂರು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಅದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ 51 ಕವಾಳಣಿಸಿರು ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

-ದಿ. ಊಲನ್ ಮಾರ್ಟ್. ಮಂಗಳೂರು,

ದಕ್ಷಿಣ ಕನ್ನಡಾ.

ವೈದ್ಯಸಾರಸಂಗ್ರಹ (ಮೂಲಿಕಾ ಔಷಧಿ) … … … …	೩—೦—೦
ಶುಕಸಪ್ತತಿ ವೇದಾಂತ ಪೂರ್ವದ ಪ್ರತಿ … … … …	೨—೦—೦
ರಘುವಂಶ ೧ನೇ ಪರ್ವ… … … … … … …	೧—೦—೦
ಡಿಟ್ಟೊ (೨ನೇ ಪ.) ಅರ್ಥ ತಾತ್ಪರ್ಯ ಆಕಾಕ್ಷೆ ಇತ್ಯಾದಿ …	೧—೦—೦
ವಿವೇಕ ಚೂಡಾಮಣಿ … … … … …	೨—೪—೦
ಶಾಮಕುಬ್ಜ ಕಥೆ … … … … … … …	೦—೮—೦
ಚಮತ್ಕಾರ ಚಿಂತಾಮಣಿ … … … … …	೦—೧೦—೦
ಮಹಿಮ್ನ ಸ್ತೋತ್ರ (ಟೀ. ತಾ.) … … … … …	೦—೩—೦
ಮುಕುಂದಮಾಲಾ ಸ್ತೋತ್ರ (ಟೀ. ತಾ.) … … … …	೦—೪—೦
ಶಿವಗೀತಾ (ಟೀ. ತಾ. ಸಹಿತ) … … … … …	೦—೮—೦
ಶಿವಾನಂದಲಹರಿ (ಟೀ. ತಾ.) … … .. … …	೦—೬—೦
ವಿದ್ಯಾನಂದ ಮಾಸಪತ್ರಿಕೆ ಚಂದಾ … … … … …	೨—೪—೦

ಮಾದ್ರಿ ಪತ್ರಿಕೆ, ಪುಸ್ತಕ ಪಟ್ಟಿ ಉಚಿತ. ಇನ್ನೂ ಅನೇಕ ಪುಸ್ತಕಗಳು ದೊರೆಯುವವು.

ವಿಳಾಸ:—

ವಿದ್ಯಾನಂದ ಆಫೀಸು.

ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು! ಬೇಗ ಬರೆಯಿರಿ!!

ಮಧುರವಾಣೀ ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಸಾಹಸಿಕೆ … … …	0-2-6	ಮಹನೀಯರ ಚರಿತ್ರೆ …	0-10-0
ಗೃಹಿಣಿಯಾದ ಗಂಗೆ …	0-3-0	ಸಾಧನೆ … … …	0-8-0
ನಾನಕನ ಚರಿತ್ರೆ … …	0-4-0	ಮನೋರಮ … …	1-0-0
ವಿವೇಕಮಂಜರಿ 1ನೇ ಭಾಗ	0-2-0	ಭಕ್ತವಿಜಯ … …	3-4-0
ಡಿ. 2ನೇ ಭಾಗ	0-3-0	ಪಾರ್ವತಿ ಪರಿಣಯ ನಾಟಕಂ	0-8-0
ಸೌದಾಮನಿ … …	0-6-0	ಗೋಪಿಕಾ ಗೀತೆ… …	0-1-0
ವಿಶ್ವನಾಥ … … …	0-1-0	ಭಜಗೋವಿಂದಂ … …	0-1-0
ದೇವಿ ಚೌದ್‌ರಾಣಿ… …	1-4-0	ಹಾಲಾಸ್ಯ ಮಹಾತ್ಮೆ …	1-4-0
ಸಚಿತ್ರಕಲಾತರಂಗ… …	1-0-0	ವಿಷವೃಕ್ಷ… … …	1-4-0

ಇನ್ನೂ ಅನೇಕ ಪುಸ್ತಕಗಳು ಶಿಕ್ಕುವವು. ಕ್ಯಾಟಲಾಗಿಗೆ ಬೆಲೆ ಇಲ್ಲ. ಅಪೇಕ್ಷಕರು ಆತುರಿಸಿರಿ.

ವಿಳಾಸ:— ಹನುಮಾನ್ ಮತ್ತು ಕಂಪೆನಿ.

ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಶೇವಹಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಿಕ್ರಗಳನ್ನು, ದೃಷ್ಟಿಗಳನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಿಕ್ರಗಳ ಯಾವದೊಂದು ಭಾಗವು ಪಡಳು ಬಂದಲ್ಲಿ ಬೇರೆ ಸರಿಯೊದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.

ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,

ಮಂಗಳೂರು, ದ. ಕನ್ನಡ

1913ನೇ ಇಸವಿಯ ಪೊಕೆಟ್ ಡ್ಯಾರಿಗಳು.

ಮಾರಾಟಕ್ಕೆ ಸಿದ್ಧವಾಗಿವೆ.

ನೋಟು ಬೂಕು ಸ್ಯಾಜು (ದೊಡ್ಡ ಸ್ಯಾಜು) ರೂ. 0—8—0

(ಒಂದಾಣೆ ಪೆನ್ಸಿಲು ಸಹಿತ)

ಸಣ್ಣ ಸ್ಯಾಜು …. … …. … „ 0—4—0

ವಕೀಲರಿಗೂ ವಕೀಲರ ಗುಮಾಸ್ತರಿಗೂ ಬೇಕಾದ ಎಲ್ಲಾ ವಿಷಯಗಳನ್ನು ಒಳಕೊಂಡಿರುವುದಲ್ಲದೆ ಇತರರಿಗೂ ಬಹಳ ಉಪಯೋಗಕರವಾದ್ದಾಗಿರುತ್ತದೆ.

ಹೆಚ್ಚು ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ, ವ್ಯಾಪಾರಸ್ತರಿಗೂ ಧಾರಾಳ ಕಮಿಶನ್ ಕೊಡಲಾಗುವದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೂಕೊಳ್ಳಬಹುದು.

ಮ್ಯಾನೇಜರ,

ಶಾರದಾ ಛಾಪಖಾನೆ, ಮಂಗಳೂರು ದ. ಕನ್ನಡ.

CHEAP JACK

FANCY UMBRELLA MART.

ಚಿತ್ರವಿಚಿತ್ರಮಾದ ಕೊಡೆಗಳು.

ಕಂ ॥ ಧರೆಯೊಳ್ ಮೆರೆ ಮಹಾಶಯ । ರಿರಿಃ ನಾವಿನಿಸುಂದಿನಂ ಕೊಡೆಯ ವಿಕ್ರ
ಯಮಂ ॥ ಇರಿಸಿರ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿಯೆ
ವದರರಮಂ ॥೧॥ ಕೊಡುಮೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ
ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾಮಾತಿಂ । ಗೆಡೆಯಾಗಿಯೆ
ನೆರಲನೀವ ಕೊಡೆಯಿಲ್ಲಿರ್ಕುಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.

ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ವಾಯಿದೆ] ಫಾಯಿದೆಗೋಸ್ಕರವಲ್ಲ!! ಪಕ್ಕಾ ಪ್ರಸಿದ್ಧಿಗೆ!! [ಒಂದೇ ತಿಂಗಳು.

ಅತ್ತರುಗಳ ಮೇಲೆ ಗಡಿಯಾರಗಳು ಇನಾಮು.



ಪ್ರಸಿದ್ಧವಾದ ಸುರಂಗಿ, ಮಾಲತಿ, ಕೇವಡಾ ವಾಳಾ, ಗುಲಾಬ, ಮೊಗರಾ ವಹೀನಾ, ಈ ಪೈಕಿ ಯಾವದಾದರೂ ಸುಂದರವಾದ ಮರದ ಕೇಸ ಸಹಿತ ಕಾಲು ತೊಲೆಗೆ ಕ್ರಯ ರೂ. 1–4–0 ಪಕ್ಕ ಒಂದೇ ಬಾಟ್ಲಿ ತರಿಸುವವರಿಗೆ B ಮಾರ್ಕಿನ ಕಿಮ್ಮತು ರೂ. 2-4-0 ಟೇಬಲ್ ಟೈಂಪೀಸು ಮೂರು ವರುಷದ ಗ್ಯಾರಂಟಿ ಸಹಿತ ಪುಕಟ ಬಕ್ಷಿಸ!

ಸದರ ಹು ಪೈಕಿ ಖುಶಿ ಬಂದ ಅತ್ತರಗಳು ಕಿಮ್ಮತು ರೂ. 2–8–0ಯ ಎರಡು ಬಾಟ್ಲಿ ತಕ್ಕೊಂಡರೆ ಮೇಲೆ ಕಾಣಿಸಿದ ಚಿತ್ರದ ಆಕಾರದ ರಾಸ್‌ಕೋಪ್ ಸಿಸ್ಟಮ ಸರ್ವೋತ್ಕೃಷ್ಟ ಗಡಿಯಾರವು ಕಿಮ್ಮತು ರೂ. 3–8–0ಯ 5 ವರುಷದ ಗ್ಯಾರಂಟಿ ಸಹಿತ ಸಿಕ್ಕೀತು. ಸದರ ಹು ಅತ್ತರುಗಳ ಪೇಕಿ ಮೂರು ಬಾಟ್ಲಿ ಕಿಮ್ಮತು ರೂ. 3–12–0 ಪಡಕೊಂಡರೆ ಕೈಗೆ ಕಟ್ಟುವ ಲೆಡಿರಿಸ್ಟ ವಾಚ್ ಕಿಮ್ಮತು ರೂ.4–8–0 ಬಾಳುವ ಭಕ್ಷಿಸ ಕೊಡಲಾದೀತು. ಈ ಗಡಿಯಾರವು ನೋಡುವುದಕ್ಕೆ ಬಹಳ ಸುಂದರ ಇದ್ದು ಬಹಳ ವರ್ಷ ತನಕ ಬಾಳುತ್ತದೆ. ಗ್ಯಾರಂಟಿ 5 ವರುಷ.



ಮೇಲೆ ಬರದ ಯಾವದಾದರೂ ನಾಲ್ಕು ಬಾಟ್ಲಿಗಳಿಗೆ ಕಿಮ್ಮತು ರೂ. 5–0–0 ಪಡಕೊಳ್ಳುವವರಿಗೆ ಅಸ್ಸಲ ಬೆಳ್ಳಿಯ ಕಿಮ್ಮತು ರೂ. 7–0–0 ಬಾಳುವ ರಿಸ್ಟವೋಚ್ ಭಕ್ಷಿಸ ಈ ಗಡಿಯಾರ ಸಹಾ ಕೈಗೆ ಕಟ್ಟ ಅಥವಾ ಕಿಶೆಯಲ್ಲಿ ಸಹ ಇಡಬಹುದು. ಇದರ ಮುಚ್ಚಳದ ಮೇಲೆ ಅತಿ ಸುಂದರವಾದ ನಕ್ಷೆ ಮಾಡಿವಲ್ಲದೆ ನೋಡುವರೆ 200 ರೂಪಾಯಿ ಕ್ರಯ ಬಾಳುವದು ಕಂಡುಬರುತ್ತದೆ. ಗ್ಯಾರಂಟಿ 5 ವರುಷ ಶಿವಾಯ ಚರ್ಮದ ಪಟ್ಟೆಯು ಪುಕಟ.

ಸ್ಪೆಶಲ ಇನಾಮು—ಒಂದು ಸಾರಿ ಶಾಯಿ ತುಂಬಿಸಿದ್ದರೆ 1000ಶಬ್ದ ಬರಿಯುವಷ್ಟು, ಸ್ವತಂತ್ರ ಪೇನು ಮೊದಲು 200 ಗಿರಾಯಿಕಿಗಳಿಗೆ ಪುಕಟ ಒಂದೇ ಸಾರಿ ಮೂರು ಗಡಿಯಾರ ತಕ್ಕೊಳ್ಳುವವರಿಗೆ ಟ ಕ: ಮಾಫಿ ವ 6 ಗಡಿಯಾಳ ಪಡಕೊಂಡರೆ ಒಂದು ಇನಾಮು. ಆದದರಿಂದ ಈ ಬಹು ಅಮೂಲ್ಯ ಸವಲತಿಯ ಪಾಯಿದೆ ಪಡಕೊಳ್ಳಿರಿ.

R. Mahabare & Co, *Girgam No. 4 Bombay.*
ಆರ್. ಮಹಾಬರೆ ಮತ್ತು ಕಂಪೆನಿ, ಗಿರಗಾಂ ಮುಂಬಯಿ ನಂ. 4.

ರೇಷ್ಮೆ ಪೀತಾಂಬರ್ ಕಂಪೆನಿ, ಬನಾರಿಸ್ ಪಟ್ಟಣ.

ಪ್ರಸಿದ್ಧವಾದ

ರೇಷ್ಮೆ ಬಟ್ಟೆಗಳು! **ಪೀತಾಂಬರದ ಶೀರೆಗಳು!!**

ಒಪ್ಪಲ್ಪಡದೆ ಇದ್ದರೆ ವಾಪಾಸು ತೆಗೆದುಕೊಳ್ಳಲ್ಪಡುವುದು.

ಪೀತಾಂಬರದ ಶೀರೆಗಳು.

ಬನಾರಸ್ ಪೀತಾಂಬರದ ಶೀರೆಗಳು:—೧೭ ಮೊಳ ಉದ್ದ ೨॥ ಮೊಳ ಅಗಲ, ಸೆರಗೂ ಅಂಚು ಉತ್ತಮವಾದ ಜರತಾರಿ ಉಳ್ಳದ್ದು. ಕೆಂಪು, ಹಸರು, ಊದಾ ಮತ್ತು ಗುಲಾಬೀ ರಂಗುವುಳ್ಳ, ಅಂಚುಗಳು, ಒಳಭಾಗವು ಸಾದಾ, ಸಾಮಾನ್ಯವಾದ ಶೀರೆಗಳಿಗೆ ಬೆಲೆಯು ೨೦ರಿಂದ ೩೫ ರೂಪಾಯಿನ ವರೆಗೂ ಇರುವುದು. ಅತ್ಯುತ್ತಮವಾದವುಗಳಿಗೆ ೪೦ರಿಂದ ೭೦ರ ವರೆಗೂ ಬೆಲೆಯಾಗುವುದು.

ಪೀತಾಂಬರದ ಬೂಟಾ ಶೀರೆಗಳು.

ಪೀತಾಂಬರದ ಬೂಟಾ ಶೀರೆಗಳು ಮೈದಾನದಲ್ಲಿ ಜರಿತಾರಿ ಹುವ್ವುಗಳು ಅಥವಾ ಬೂಟಾಗಳು ಇರುವವು. ಇವುಗಳಲಿ ಸಾಮಾನ್ಯವಾದ ಶೀರೆಗಳಿಗೆ ೨೫ರಿಂದ ೩೫ ರೂಪಾಯಿನ ವರೆಗೂ ಆಗುವುದು. ಉತ್ತಮವಾದವುಗಳಿಗೆ ೪೦ ರೂಪಾಯಿಗಳಿಂದ ೫೦೦ರೂಪಾಯಿಗಳ ವರೆಗೂ ಆಗುವುದು.

ಪೀತಾಂಬರದ ಕಣಗಳು.

ಜರತಾರಿ ಅಂಚು, ಮೈದಾನದಲಿ ಹೂವಿನ ಕೆಲಸ, ರಂಗು ಕೆಂಪು, ಹಸರು, ಊದಾ ಮತ್ತು ಗುಲಾಬಿ, ಸಾದಾ ಮೈದಾನವುಳ್ಳ ಕಣ ಒಂದಕ್ಕೆ ೨ ರೂಪಾಯಿನಿಂದ ೭ ರೂಪಾಯಿ ವರೆಗೂ ಕ್ರಯವಾಗುವುದು. ಬೂಟಾ ಮೈದಾನವುಳ್ಳದ್ದು ಕಣ ೧ಕ್ಕೆ ೮॥ ರೂಪಾಯಿನಿಂದ ೨೫ ರೂಪಾಯಿನ ವರೆಗೂ ಆಗುವುದು.

ರುಮಾಲುಗಳು ಅಥವಾ ಪೇಟಾಗಳು.

ಎಲ್ಲಾ ರಂಗಿನ ರುಮಾಲುಗಳು ಮತ್ತು ಪೇಟಾಗಳು ೨೫ ರೂಪಾಯಿ ಮೊದಲ್ಗೊಂಡು ೧೦೦ ರೂಪಾಯಿನ ವರೆಗೂ ಬೆಲೆಯುಳ್ಳವುಗಳಾಗಿರುತ್ತವೆ.

ಮಕ್ಕಳ ಆಟದ ಪಾತ್ರೆಗಳು.

ಚಿಕ್ಕದಾಗಿಯೂ, ಸುಂದರವಾಗಿಯೂ, ಹೊಳೆಯತಕ್ಕವುಗಳಾಗಿಯೂ ಇರುತ್ತವೆ. ಇವುಗಳಲ್ಲಿ ದೊಡ್ಡದಾಗಿರತಕ್ಕ ಪಾತ್ರೆಗಳ ಸೆಟ್ಟಿಗೆ ೪ ರೂಪಾಯಿ ಚಿಕ್ಕ ಸೆಟ್ಟಿಗೆ ೨ ರೂಪಾಯಿ.

ಬನಾರಸ್ ಪಟ್ಟಣದಲ್ಲಿರತಕ್ಕ ರೇಷ್ಮೆ ಪಿತಾಂಬರ ಕಂಪೆನಿ ಮ್ಯಾನೇಜರಿಗೆ ಬರೆದುಕೊಂಡರೆ ಇದರ ತಪಶೀಲುವಾರು ಕ್ಯಾಟಲಾಗು ಕೊಡಲ್ಪಡುವುದು.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸು

ನಮ್ಮ ಏಜಂಟರು:— 1. ಮೆಸ್ಸರ್ಸ್, ರಫಯೆಲ್ ಎಂಡ್ ಕೊ., ಬ್ರಿಟೋಬಿಲ್ಡಿಂಗ್ಸ್ ಮಂಗಳೂರು
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಆಯುರ್ವೇದೋದಯ ಔಷಧಾಲಯ, ೧೭೭, ಚೀನಾಬಜಾರ್ ರೋಡ್, ಮದ್ರಾಸ್

ಮದನಮಂಜರಿ ಮಾತ್ರೆಗಳು.

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾತ ಬಲವನ್ನು ಕೊಟ್ಟು ಸ್ವಪ್ನಸ್ಖಲಿತಮೂತ್ರದೊಡನೆ ಇಂದ್ರಿಯ ಸ್ರವಿಸುವದು ಮುಂತಾದ ಸಕಲ ವೀರ್ಯ ಪಿಂಡರೋಗಗಳನ್ನು ನಿರ್ಮೂಲಮಾಡುವದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಧವಾದ ದೋಷಗಳನ್ನು ಕ್ರಮಪಡಿಸುವವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ, ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನೂ ದೀರ್ಘಾಯುಸ್ಸನ್ನೂ ಮುಖಕ್ಕೆ ಒಳ್ಳೇಕಾಂತಿಯನ್ನೂ ಉಂಟು ಮಾಡುತ್ತದೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಅವಶ್ಯಕವಾದ ಸಕಲ ಪಂಚಭೂತಗಳು ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೪೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧–೦–೦.

ಬಿಟ್ಟಿ! ಪುಗಸಟೆ!

ವೈದ್ಯವಿದ್ಯ.

ಸಂಪೂರ್ಣಾರೋಗ್ಯವನ್ನೂ ದೀರ್ಘಾಯುವನ್ನೂ, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲಗು, ಕನ್ನಡ, ಇಂಗ್ಲೀಷು ಮುಂತಾದ ೮ ಭಾಷೆಗಳಲ್ಲಿ ದೊರೆಯುವದು. ಕೋರಿದವರಿಗೆ ಕ್ರಯವು ಅಂಚೆಹಾಸಲು ಸಹ ಇಲ್ಲದೆ ಮುಫತ್ತಾಗಿ ರವಾನಿಸಲ್ಪಡುವದು. ಜಾಗ್ರತೆ ನಿಮ್ಮ ವಿಳಾಸವನ್ನು ತಿಳುಹಿಸಿ. ಈ ವರಿಗೂ ೩೦೦೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ದಿವಸವೇ ಒಂದು ಕಾರ್ಡು ಬರೆಯಿರಿ.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಚೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ, ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ

ಡಾಕ್ಟರ್ ಪೆರೇರರ ಸಿದ್ಧೌಷಧಗಳು.

ಮೂತ್ರ ರೋಗದ ಔಷಧ—ಈ ಔಷಧವು ಅತ್ಯಾದ್ಭುತವಾದದ್ದು. ಮೂತ್ರ ರೋಗದ ಯಾವ ಅಂತಸ್ಥಿನಲ್ಲಿಯೂ ಈ ಔಷಧ ಸೇವನೆಯು ಗುಣಕಾರಿ. ರಾಜಕುರು ಇತ್ಯಾದಿ ಸಂದರ್ಭಗಳಲ್ಲಿ ಎರಡು ದಿವಸ ಪ್ರಯೋಗಿಸುವ ಮಾತ್ರದಿಂದ ಇದರ ಮಹತ್ವವು ನಿಮಗೆನೇ ಖಾತ್ರಿಯಾಗುವುದು.

ನಾಲ್ಕು ಆಣೆ ಸ್ಟೇಂಪು ಕಳುಹಿಸಿದಲ್ಲಿ ನಮೂನೆ ಕಳುಹಿಸೋಣಾಗುವುದು.

ನಾಯಿಕೆಮ್ಮು ಔಷಧ—ಇದರಿಂದ 12 ದಿವಸಗಳೊಳಗೆ ನಾಯಿಕೆಮ್ಮು ಸಂಪೂರ್ಣ ಗುಣವಾಗುವುದು.

ನೇವಸದ ಔಷಧ—ನೇವಸದಿಂದ ಪೀಡಿತರಾದವರಿಗೆ ಯಾವ ಅಂತಸ್ಥಿನಲ್ಲಿಯೂ ಇದು ರಾಮಬಾಣದಂತಿದೆ.

ಮೋಹ ಸಂಬಂಧವಾದ ರೋಗಗಳಿಗೆ ಔಷಧ—ಸರ್ವ ವಿಧದ ಮೋಹ ರೋಗಗಳಿಗೆ ಇದು ದಿವ್ಯೌಷಧ.

ಪೌಷ್ಟಿದಾಯಕವಾದ ವ್ಯಾನ್—ರಕ್ತ ಇಲ್ಲದಿರುವುದು, ವ್ರಣ, ಖಜ್ಜಿ, ಬಲಹೀನ, ಮಲಬದ್ಧತೆ, ತಲೆಶಿಡಿತ, ಹೃದಯ ವೇಗವಾಗಿ ಬಡಿಯೋಣ, ಜೀರ್ಣವಾಗದಿರುವುದು, ಹೊಟ್ಟೆನೋವು ಮೊದಲಾದ ರೋಗಗಳಲ್ಲಿ ಇದು ಕೈಕಂಡ ಔಷಧವಾಗಿದೆ.

ಆಮಶಂಕೆಯ ಔಷಧ—ಈ ಔಷಧದಿಂದ ಎಂಥಾ ಆಮಶಂಕೆಯು ನಿಂತುಹೋಗುವುದೆಂಬದು ದಿಟವು.

ಎಮ್ಮಿನ ಆಯಿಂಟ್‌ಮೆಂಟ್—ವ್ರಣ, ರದ್ದು, ಖಜ್ಜಿ, ಸರ್ವ ವಿಧದ ಚರ್ಮರೋಗವು ಇದರಿಂದ ವಾಸಿಯಾಗುವುದು.

ಜ್ವರ ಮತ್ತು ಜುಲಾಬು ಮಾತ್ರೆಗಳು—ಇವು ಜ್ವರವನ್ನು ಹೊರಡಿಸಿ ಕಲಿಜೆಯನ್ನೂ ಕರುಳನ್ನೂ ಶುಚಿಮಾಡುವುದು. ಮಲೇರಿಯ ಜ್ವರಕ್ಕೆ ಇದು ಸಿದ್ಧೌಷಧವು.

J. F. Pererira & Co.
Chemists No. 6.
Calicut, Malabar.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ

ಸಾರ್ಸಾಪರಿಲಾ.



ಪೂರ್ವದ ಸ್ಥಿತಿ.



ನಂತರದ ಸ್ಥಿತಿ.

ಜಗತ್ಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು–ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ,ಬಹಳ ದಿನಗಳ ಹಳೇ ಪ್ರಮೇಹ ಇಡೀಮೈಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶರಿಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಲಾಸ:— ಪ್ರೊಪ್ರೈಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಅಪೋಶಿಟ್ ಠಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ,

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೈಮಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! **ಅಂದವಾದ ಕೂದಲುಗಳು!!**

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)

KAMINIA
OIL
Regd
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co
BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯರು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ. ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1–0–0 ಅಂಚೆಯ ವೆಚ್ಚ 0–4–0 ಬೇರೆ ತೆರಬೇಕು.
3 ಸೀಸೆಗಳಿಗೆ ರೂ. 2–10–0 ಅಂಚೆಯ ವೆಚ್ಚ 0–7–0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲ್ಯದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲ್ಯವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30–5–11 ಮೆ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ "ಕಾಮಿನಿಯಾ ಆಯಿಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28–7–11. ಮೆ. ಎ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಆಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸಂಸಮಾನವಾದ ಹೆಯರ್ ಆಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1–7–11. ಮೆ. ಸಿ. ಆರ್. ನಾಯಡು ಪ. ವ. ಡಿ. ಟಾಶಿಬ, (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರೆಯಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

Address—**Anglo Indian Drug & Chemical Co.,**
155 Jumma Musid, Market, Bombay.
ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಗಿರಗಾಂ ಮುಂಬಯಿ.

ಇವರ

ಬಾಲಾಮೃತ!

ಜ್ವರದ ಗುಳಿಗೆಗಳು!!

ನಮ್ಮ ಜ್ವರದ ಗುಳಿಗೆಗಳ ಬಗ್ಗೆ ಈ ಕೆಳಗೆ ಬರದ ಅನೇಕ ಜಗಪ್ರಸಿದ್ಧ ಡಾಕ್ಟರುಗಳು ಬೇರೆ ಬೇರೆ ರೀತಿಯಿಂದ ಪರೀಕ್ಷಿಸಿ ಬಹು ಗುಣಕಾರಿಯನ್ನುವ ಬಗ್ಗೆ ಸಿಫಾರಸು ಪತ್ರಗಳನ್ನು ಕೊಟ್ಟಿರುತ್ತಾರೆ.

ಡಾಕ್ಟರ್ ಕಾವಸಜೀ ಎದಲಜಿ ದಾದಾ ಚಾಂಜಿ, ಎಲ್. ಎಮ್. ಎಸ್. ಜೆ. ಪಿ. ಬಿಟ್ಟು ಬಿಟ್ಟು ಬರುವ ಜ್ವರಕ್ಕೆ ಅತೀ ಗುಣಕಾರಿ.

ಡಾಕ್ಟರ್ ಡಿ. ಜೆ ವೊರಾವಾಲಾ: ಎಲ್. ಎಮ್. ಎಸ್. ಸರ್ಜನ್ ಬಿಲಾಸಪುರ. ಥಂಡಿ ಜ್ವರಕ್ಕೆ ಸಂಜೀವನ.

ಡಾಕ್ಟರ್ ಕಾವಸಜೀ ಮೊಟಾಭಾಯಿ ಎಲ್. ಎಮ್. ಎಸ್. ಪಿತ್ತ ಜ್ವರಕ್ಕೆ ರಾಮಬಾಣದಂತಿರುತ್ತದೆ.

ಡಾಕ್ಟರ್ ಪ್ರೆಂಜೋನಿ ಎ. ಷಾರಿಯಾ: ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. ನಮ್ಮ ಜ್ವರದ ಗುಳಿಗೆಗಳು ಬಹಳ ಉತ್ತಮ!

ಡಾಕ್ಟರ್ ಸರ್‌ಬಾಲಚಂದ್ರಕೃಷ್ಣ ನಾಯಿಟ್, ಎಲ್. ಎಮ್. ಜೆ. ಪಿ. ದಿನಗಟ್ಲೆ ಬರುವ ಜ್ವರಕ್ಕೆ ಇದು ಮುಖ್ಯ ಔಷಧ.

ಡಾಕ್ಟರ್ ಸೊರಾಬ ಕೆ. ನರಿಮನ್ ಎಮ್. ಡಿ. ಬಿ. ಎಸ್. ಸಿ. ಮುಂಬಯಿ ಎಲ್. ಆರ್. ಸಿ. ಪಿ. (ಲಂಡನ್) ಎಮ್. ಆರ್. ಸಿ. ಎಸ್. (ಇಂಗ್ಲಂಡ್) ಡಿ. ಪಿ. ಎಚ್. (ಕೇಂಬ್ರಿಜ್) ನಮ್ಮ ಜ್ವರದ ಗುಳಿಗೆಗಳು ಬಹಳ ಗುಣಕಾರಿ.

ಡಾಕ್ಟರ್ ಕೆ. ಎಸ್. ಇಂಜಿನಿಯರ್; ಎಫ್. ಸಿ. ಎಸ್ ಲಂಡನ್ ಎಲ್. ಎಮ್. ಎಸ್. ಮುಂಬಯಿ.

ಡಾಕ್ಟರ್ ವಿ. ಎನ್. ಚಿತಳೆ ಭಾಜೇಕರ್ ಎಲ್. ಎಮ್. ಎಸ್. ಮುಂಬಯಿ ಎಫ್. ಆರ್. ಸಿ. ಎಸ್. ಎಡಿಂಬರ್ಗ್ ಡಿ. ಪಿ. ಎಚ್. ಲಂಡನ್.

ಡಾಕ್ಟರ್ ಡಬ್ಲ್ಯು. ಓಬೇಲೆಂಟಾಯಿನ್ ಎಮ್. ಡಿ. ಅಮೇರಿಕನ್ ಮಿಶನ್.

ಡಾಕ್ಟರ್ ಬಿ. ಇ, ಫಾಸವಾಲಾ ಎಲ್. ಎಮ್. ಎಸ್ ಎಫ್. ಸಿ. ಎಸ್. ಲಂಡನ್.

ಡಾಕ್ಟರ್ ಎ. ಬಿ. ಮಸಾನಿ ಎಲ್. ಎಮ್. ಎಸ್. ಮುಂಬಯಿ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.

ಡಾಕ್ಟರ್ ಗ್ಯಾಬ್ರಿಯಲ್ ಡಿಮೆಲ್ಲೊ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.

ಡಾಕ್ಟರ್ ಜಿ. ಆರ್. ತಾಂಬೆ ಎಮ್. ಎ. ಎಲ್. ಎಮ್. ಎಸ್. ಬಿ. ಎಸ್. ಸಿ.

ಡಾಕ್ಟರ್ ಪಿ. ಆರ್. ಪಿಳಗಾಂವಕರ ಎಲ್. ಆರ್. ಸಿ. ಪಿ. ಎಂಡ್ ಎಸ್. ಎಲ್. ಎಮ್. ಎಲ್. ಎಫ್. ಪಿ. ಎಂಡ್. ಎಸ್.

ಡಾಕ್ಟರ್ ಎಮ್. ಎಚ್. ಭಾಟವಡೀಕರ್ ಎಲ್. ಎಮ್. ಎಸ್. ಹೆಲ್ತ ಆಫೀಸರ್. ಡಿ. ಐ. ಟಿ.

ಡಾಕ್ಟರ್ ಎಫ್. ಎಕ್ಸ್. ಪರೇರಾ ಎಲ್. ಎಮ್. ಎಸ್.

ಡಾಕ್ಟರ್ ಕೆ. ಎಸ್. ಗೋಖಲ್ ಎಲ್. ಎಮ್. ಎಸ್. ಮುಂಬಯಿ.

ಡಾಕ್ಟರ್ ಡಿ. ಜೆ. ಮಂತ್ರಿ ಎಲ್. ಆರ್. ಸಿ. ಪಿ. (ಲಂಡನ್)

ಡಾಕ್ಟರ್ ಎ. ಬ್ರಿಟೊ ಎಲ್. ಎಮ್. ಎಸ್. ಡಾಕ್ಟರ್ ಮುರಕುಟೆ ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. (ಎಡಿನ್‌ಬರ್ಗ್).

ಬಾಲಾಮೃತ ಬಾಟ್ಲಿ ಒಂದರ 0—12—0. ಜ್ವರದ ಗುಳಿಗೆ ಬಾಟ್ಲಿ ಒಂದರ 1—0—0.

ಜಾಗ್ರತೆ! ಮೋಸ ಹೊಂದಬೇಡಿರಿ!! ಪಡಕೊಳ್ಳುವವರು ಗ. ರಾ. ಕರ್ಕಿ ಕಂಪೆನಿ, ಮುಂಬಯಿ. ಎಂತ ಕನ್ನಡದಲ್ಲಿ ಇದ್ದದ್ದನ್ನೇ ನೋಡಿ ಪಡಕೊಳ್ಳಿರಿ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ,
ಗಿರಗಾಂ ಮುಂಬಯಿ.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

M. D. RANE & Co. INDIA TRADE MARK DECCAN INK

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.
M. D. Rane & Co.,
Post, Grant Road, Bombay

ದಿ ಏಸಿಯನ್ ಕಮರ್ಶಲ್

ಎಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮುಂಬಯಿ.

ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ ಪ್ರಿಮಿಯಂ ವಗೈರೆ ಇತರ ಕಂಪೆನಿಗಿಂತಲೂ ಅತೀ ಕಡಿಮೆಯಾಗಿರುತ್ತದೆ.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂ. 17—4—0 ತೆತ್ತು ಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರುಷ ಪ್ರಾಯದಲ್ಲಿ ಒಂದು ಸಾವಿರ ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವ 14 ವರುಷ ಒಳಗಿನ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸುರು ಮಾಡಲ್ಪಟ್ಟ ಮಕ್ಕಳು ವಿಮೆಗೆ ಆರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟಲ್ಲಿ ವಿಮೆ ಮಾಡಿದ ಪೂರ್ಣ ಐವಜು ಅವರ ಬಾಧ್ಯಸ್ತರಿಗೆ ಸಿಕ್ಕುವುದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೂ ಹೆಂಗಸರನ್ನೂ 50 ವರುಷ ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 15 ವರುಷದ ಮೇಲಿನಮತ್ತು 30 ವರುಷದ ಒಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊಳ್ಳುವದಿಲ್ಲ.

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹುದಾದ 1000 ವ ಅದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾರ ತೆರಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ತೆತ್ತು ಆತನ ಪ್ರಿಮಿಯಮ್ 4ರ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡಿಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈವರಿವಿಗೆ ಕಂಡುಬರುವದಿಲ್ಲ. ಆದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದರ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟ್ ರೋಡ್ ಉಡುಪಿ
ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಕ್ಷಿಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

---

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ ಕಲಾ ಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ, ಛಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್,) ಅತೀ ಅಗ್ಗದಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಪಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.
ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ ಮಂಗಳೂರು

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತ್ರು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists*,
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:—
ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಡೋಂಗರೆ ಇವರ ಬಾಲಾಮೃತ

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದ ಅಶಕ್ತತೆಯಿಂದುಂಟಾದ ರೋಗಗಳು ಸಂಪೂರ್ಣವಾಗಿ ಇಲ್ಲದಂತಾಗುತ್ತವೆ. ನಮ್ಮ ಬಾಲಾಮೃತವನ್ನೇ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದ್ದಲ್ಲಿ ಬಾಟ್ಲಿಯ ಮೇಲಿನ ನಮ್ಮ ಲೇಬಲಿನ ಪೂರಾ ಖಾತ್ರಿ ಮಾಡಿಕೊಂಡು ತೆಗೆದುಕೊಳ್ಳಿರಿ.

ಬಾಟ್ಲಿ ಒಂದರ ಕಿಮ್ಮತು 0—12—0. ವ್ಹಿ. ಪಿ. ಖರ್ಚು 0-4-0.

K. T. Dongre & Co., ಕೆ. ಟಿ. ಡೊಂಗರೆ ಮತ್ತು ಕಂಪೆನಿ
Girgaon Bombay. ಗಿರಗಾಂ ಮುಂಬಯಿ.

Printed & Published by W. S. Kamath at the Mangalore Trading Association's Sharada press Mangaloe,

---

Reegisterd M. No. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 41

ಮಂಗಳೂರು ತಾ.11ನೇ ಶುಕ್ರವಾ
ಅಕ್ಟೋಬರ 1912.

Amrutanjan Depot, Head Office: Bombay.

ಅಮೃತಾಂಜನ ರಿಜಿಸ್ಟ್ರಿ ಮಾಡಲ್ಪಟ್ಟದೆ.
Trade Mark Registered.

ಅಮೃತಾಂಜನ ರಿಜಿಸ್ಟ್ರಿ ಮಾಡಲ್ಪಟ್ಟದೆ

AMRUTANJAN

ಅಮೃತಾಂಜನವು.

ಅಮೃತಾಂಜನವು ಎಂಥಾದ್ದು? ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟಂಥಾದ್ದಾಗಿದೆ. ಇದರಲ್ಲಿ ಅತ್ಯುತ್ತಮವಾದ ಗಿಡಮೂಲಿಕೆಗಳು ಸೇರಿಯವೆ. ಎಲ್ಲಾ ವಿಧದ ನೋವುಗಳಿಗೆ ರಾಮಬಾಣದಂತಿದೆ.

AMRUTANJAN
Best Indian
Pain Balm
Amrutanjan D
BOMBAY.

ಇದರಿಂದೇನು ಪ್ರಯೋಜನ? ಇದರಿಂದ ನಿಮ್ಮ ನರಸಂಸ್ಥಾಯದಲ್ಲಿರುವ ನೋವುಗಳೆಲ್ಲಾ ಗುಣವಾಗುವದು. ಇದು ನೋವಿನ ಮೂಲಸ್ಥಾನವನ್ನು ಕಂಡುಹಿಡಿದು ನೋವಿನಿಂದ ಬಿಡುಗಡೆ ಮಾಡಿ ನಿಮ್ಮನ್ನು ಎಂದೂ ನೋವಿಲ್ಲದವರಾಗಮಾಡುವದು. ತಲೆಸಿಡಿತ, ಬೆನ್ನುನೋವು, ವಾತ, ತುರಿ ಖಜ್ಜಿ, ಕಾಲುನೋವು, ವ್ರಣ, ಗಂಟ್ಲುನೋವು, ಕುರು, ಎಲ್ಲಾ ವಿಧದ ಕಜ್ಜಿಗಳನ್ನು ನಿವಾರಿಸುವದು. ಒಂದು ಸಲ ಪ್ರಯೋಗಿಸಿ ನೋಡಿರಿ. ಅದಿಲ್ಲದೆ ನೀವು ಒಂದು ನಿಮಿಷವಾದರೂ ಇರಲಾರಿರಿ. ಕ್ರಯ 8 ಆಣೆ.

ರಿಜಿಸ್ಟ್ರಿಯಾಗಿಯದೆ!

ರಿಜಿಸ್ಟ್ರಿಯಾಗಿಯದೆ!

ಗಜಕರ್ಣದ ಮುಲಾಮು.

ಗಜಕರ್ಣವು ಅಥವಾ ನವೆಯು ಇದು ಶರೀರದ ಮೇಲೆ ಅತಿಶಯ ಸೂಕ್ಷ್ಮ ಕ್ರಿಮಿಗಳಿಂದ ಉಂಟಾಗುತ್ತದೆ. ಈ ಚರ್ಮರೋಗವು ಬೇಗನೆ ಮೈಮೇಲೆ ಎಲ್ಲ ಕಡೆಯಲ್ಲಿ ಪಸರಿಸುತ್ತದೆ. ಈ ಮುಲಾಮು ಅದರ ಮೇಲೆ ಎರಡು ಸಾರಿ ತಾಗಿಸುವದರಿಂದ ಬಿಳೀ ಮತ್ತು ಕಪ್ಪು ನವೆಯು ಹೋಗಿ ಗಜಕರ್ಣವು ನಾಶವಾಗುವುದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯು ಬರುವದಿಲ್ಲ. ಡಬ್ಬಿ ಒಂದರ 6 ಆಣೆ.

ದಂತಮಂಜನ.

...ಗೆ ಬಲವನ್ನೂ ಬಾಯಿಗೆ ಸುಗಂಧವನ್ನೂ ಕೊಡುವ ದಂತಮಂಜನ, ಅಲ್ಪ ಬೆಲೆಯುಳ್ಳ ಮತ್ತು ಉತ್ತಮ ಗುಣಕೊ... ...ಲ್ಪಟ್ಟಿದೆ. ಇದರಿಂದ ದಿನಾಲೂ ಹಲ್ಲುಗಳನ್ನು ತಿಕ್ಕಿಸ್ವಚ್ಛ ಮಾಡುವದರಿಂದ ಹಲುಗಳ ಬಲಹೀನತೆ, ಹಲ್ಲುಗಳಿಂದ ಬರುವ ... ಹಲ್ಲುಗಳ ನೋವು, ನಗ್ಗರೆ ಸಂಪೂರ್ಣವಾಗಿ ನಿಲ್ಲುವದು. ಹಲ್ಲುಗಳು ಮುತ್ತಿನಂತೆ ಬೆಳ್ಳಗಾಗುವವು. ಲಕ್ಷಗಟ್ಟೆ...

ಡಬ್ಬಿ ಒಂದರ ಕಿಮ್ಮತು 2 ಆಣೆ.

ಗಿಯೂ ಎಲ್ಲೆಲ್ಲಿಂದ ತ...
ಈ ನಶ್ಯ ಸಾ...
ವ ನಶ್ಯಗಳಿಂದ ಬರುವ...

...ಆಸ್ಥಾನ...
...ಧೆಗಳನ್ನು ನಿವಾರಣೆ ಮಾ...
...ವೆಂಬದಾಗಿ ಕಂಡುಕೊಂಡಿ...
...ವನ್ನು ಕಂಡುಹಿಡಿದು ಅದರ...

ಕೇಶವರ್ಧಿನಿ ತೈಲ.

ಕೇಶವರ್ಧಿನಿ ತೈಲ:—ಮನೋಹ... ...ಮಾರಲ್ಪಟ್ಟವು. ಬಾಟ್ಲಿ ಒಂದರ ಕ... ಪರಿಮಳ ತೈಲ. ಇದು ಸ್ಪಿರಿಟು ಇಲ್ಲದ ಉತ್ತಮ ತೈಲ. ಇದರ ಕ್ರಯ ... 1—0—0 3 ಬಾಟ್ಲಿಗಳಿಗೆ 2—10—0. ವಿ. ಪಿ. ಪ್ರತ್ಯೇ...

...ಕೆ. ಮೂರು ಅಥವಾ ಹೆಚ್ಚು ...ಚಾರ್ಜು ಮಾಫಿಯಾಗುವದು. ಈ ತೈಲ್ಯವು ಎಲ್ಲಾ ವ್ಯಾಪಾ...ವೆ.

ರಖಂ ಅಗ್ಗಿಯೂ ಚಿಲ್ಲರೆ ಅಗ್ಗಿಯೂ ...
ವಿಳಾಸದವರಲ್ಲಿ ದೊರೆಯುವುದು:—
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ಮಂಗಳೂರು.

ವಿಳಾಸ:—
ಎಸ್. ಪೀಟರ್ಸ್.
37 ವೇದಮಲಿಪಿಳ್ಳೆ ಬೀದಿ,
ಪರಸುವಾಕಂ ವೇಪಂ ಮದ್ರಾಸು,

ಏಜಂಟ್:— ಜೆ. ಎಸ್. ಕಣ್ಣೈಚೆಟ್ಟಿ,
ಊಲನ್‌ಕೇಪ ಮೆನುಫೆಕ್ಚರರ್, ತುಮಕೂರ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಗಿರಗಾಂ ಮುಂಬಯಿ.

ಇವರ

ಬಾಲಾಮೃತ! ಜ್ವರದ ಗುಳಿಗೆಗಳು!!

ನಮ್ಮ ಜ್ವರದ ಗುಳಿಗೆಗಳ ಬಗ್ಯೆ ಈ ಕೆಳಗೆ ಬರದ ಅನೇಕ ಜಗಪ್ರಸಿದ್ಧ ಡಾಕ್ಟರುಗಳು ಬೇರೆ ಬೇರೆ ರೀತಿಯಿಂದ ಪರೀಕ್ಷಿಸಿ ಬಹು ಗುಣಕಾರಿಯನ್ನುವ ಬಗ್ಯೆ ಸಿಫಾರಸು ಪತ್ರಗಳನ್ನು ಕೊಟ್ಟಿರುತ್ತಾರೆ.

ಡಾಕ್ಟರ್ ಕಾವಸಜೀ ಎದಲಜಿ ದಾದಾ ಚಾಂಜಿ, ಎಲ್. ಎಮ್. ಎಸ್. ಜೆ. ಪಿ. ಬಿಟ್ಟು ಬಿಟ್ಟು ಬರುವ ಜ್ವರಕ್ಕೆ ಅತೀ ಗುಣಕಾರಿ.
ಡಾಕ್ಟರ್ ಡಿ. ಜೆ ನೊರಾವಾಲಾ: ಎಲ್. ಎಮ್. ಎಸ್. ಸರ್ಜನ್ ಬಿಲಾಸಪುರ. ಥಂಡಿ ಜ್ವರಕ್ಕೆ ಸಂಜೀವನ.
ಡಾಕ್ಟರ್ ಕಾವಸಜೀ ಮೊಟಾಭಾಯಿ ಎಲ್. ಎಮ್. ಎಸ್.' ಪಿತ್ತ ಜ್ವರಕ್ಕೆ ರಾಮಬಾಣದಂತಿರುತ್ತದೆ.
ಡಾಕ್ಟರ್ ಪ್ರೆಂಜೋನಿ ಎ. ಷಾರಿಯಾ: ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. ನಮ್ಮ ಜ್ವರದ ಗುಳಿಗೆಗಳು ಬಹಳ ಉತ್ತಮ.
ಡಾಕ್ಟರ್ ಸರ್‌ಬಾಲಚಂದ್ರಕೃಷ್ಣ ನಾಯಿಟ್, ಎಲ್. ಎಮ್. ಜೆ. ಪಿ. ದಿನಗಟ್ಲೆ ಬರುವ ಜ್ವರಕ್ಕೆ ಇದು ಮುಖ್ಯ ಓಷಧ.
ಡಾಕ್ಟರ್ ಸೊರಾಬ ಕೆ. ನರಿಮನ್ ಎಮ್. ಡಿ. ಬಿ. ಎಸ್. ಸಿ. ಮುಂಬಯಿ ಎಲ್. ಆರ್. ಸಿ. ಪಿ. (ಲಂಡನ್) ಎಮ್. ಆರ್. ಸಿ. ಎಸ್. (ಇಂಗ್ಲಂಡ್
ಡಿ. ಪಿ. ಎಚ್. (ಕೆಂಬ್ರಿಜ್) ನಮ್ಮ ಜ್ವರದ ಗುಳಿಗೆಗಳು ಬಹಳ ಗುಣಕಾರಿ.
ಡಾಕ್ಟರ್ ಕೆ. ಎಸ್. ಇಂಜಿನಿಯರ್; ಎಫ್. ಸಿ. ಎಸ್ ಲಂಡನ್ ಎಲ್. ಎಮ್. ಎಸ್. ಮುಂಬಯಿ.
ಡಾಕ್ಟರ್ ವಿ. ಎನ್. ಚಿತಳೆ ಭಾಜೇಕರ್ ಎಲ್. ಎಮ್. ಎಸ್. ಮುಂಬಯಿ ಎಫ್. ಆರ್. ಸಿ. ಎಸ್. ಎಡಿಂಬರ್ಗ್ ಡಿ. ಪಿ. ಎಚ್. ಲಂಡನ್.
ಡಾಕ್ಟರ್ ಡಬ್ಲ್ಯು. ಓಬೇಲೆಂಟಾಯಿನ್ ಎಮ್. ಡಿ. ಅಮೇರಿಕನ್ ಮಿಶನ್.
ಡಾಕ್ಟರ್ ಬಿ. ಇ, ಫಾಸವಾಲಾ ಎಲ್. ಎಮ್. ಎಸ್ ಎಫ್. ಸಿ. ಎಸ್. ಲಂಡನ್.
ಡಾಕ್ಟರ್ ಎ. ಬಿ. ನುಸಾನಿ ಎಲ್. ಎಮ್. ಎಸ್. ಮುಂಬಯಿ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.
ಡಾಕ್ಟರ್ ಗ್ಯಾಬ್ರಿಯಲ್ ಡಿಮೆಲ್ಲೊ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.
ಡಾಕ್ಟರ್ ಜಿ. ಆರ್. ತಾಂಬೆ ಎಮ್. ಎ. ಎಲ್. ಎಮ್. ಎಸ್. ಬಿ ಎಸ್. ಸಿ.
ಡಾಕ್ಟರ್ ಪಿ. ಆರ್. ಪಿಳಗಾಂವಕರ ಎಲ್. ಆರ್. ಸಿ. ಪಿ ಎಂಡ್ ಎಸ್. ಎಲ್. ಎಮ್. ಎಲ್. ಎಫ್. ಪಿ. ಎಂಡ್. ಎಸ್.
ಡಾಕ್ಟರ್ ಎಮ್. ಎಚ್. ಭಾಟವಡೇಕರ್ ಎಲ್. ಎಮ್. ಎಸ್. ಹೆಲ್ತ ಆಫೀಸರ್. ಡಿ. ಐ. ಟಿ.
ಡಾಕ್ಟರ್ ಜೆಫ್. ಎಕ್ಸ್. ಪರೇರಾ ಎಲ್. ಎಮ್. ಎಸ್.
ಡಾಕ್ಟರ್ ಕೆ. ಎಸ್. ಗೋಖಲ್ ಎಲ್. ಎಮ್. ಎಸ್. ಮುಂಬಯಿ.
ಡಾಕ್ಟರ್ ಡಿ. ಜೆ. ಮಂತ್ರಿ ಎಲ್. ಆರ್. ಸಿ. ಪಿ. (ಲಂಡನ್)
ಡಾಕ್ಟರ್ ಎ. ಬ್ರಿಟೊ ಎಲ್. ಎಮ್. ಎಸ್. ಡಾಕ್ಟರ್ ಮುರಕುಟೆ ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. (ಎಡಿನ್‌ಬರ್ಗ್).

ಬಾಲಾಮೃತ ಬಾಟ್ಲಿ ಒಂದರ 0—12—0. ಜ್ವರದ ಗುಳಿಗೆ ಬಾಟ್ಲಿ ಒಂದರ 1—0—0.

ಜಾಗ್ರತೆ! ಮೋಸ ಹೊಂದಬೇಡಿರಿ!! ಪಡಕೊಳ್ಳುವವರು ಗ. ರಾ. ಕರ್ಕಿ ಕಂಪೆನಿ, ಮುಂಬಯಿ. ಎಂತ ಕನ್ನಡದಲ್ಲಿ ಇದ್ದದ್ದನ್ನೇ ನೋಡಿ ಪಡಕೊಳ್ಳಿರಿ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ,
ಗಿರಗಾಂ ಮುಂಬಯಿ.

ಸ್ವದೇಶಾಭಿಮಾನಿ.

☞ ಮಂಗಳೂರು, ಶನಿವಾರ ತಾರೀಕು 12ನೇ ಒಕ್ಟೋಬರ 1912. ☜

ಸಮಾಜ ಸುಧಾರಣೆಯು.

ಸಮಾಜ ಸುಧಾರಣೆಯನ್ನು ಉಪಯುಕ್ತವಾದ ರೀತಿಗಳಲ್ಲಿ ಹ್ಯಾಗೆ ಮಾಡಬಹುದೆಂಬುದರ ವಿಷಯ ಚರ್ಚೆಯು ಮದ್ರಾಸಿನ ಸಮಾಜ ಸಂಸ್ಕಾರ ಸಂಘದವರ ಪರವಾಗಿ ಮದ್ರಾಸಿನಲ್ಲಿ ಇತ್ತಲಾಗೆ ಕೂಡಿದೊಂದು ಸಭೆಯಲ್ಲಿ ನಡೆಯಿತು. ಭಾರತ ಸೇವಾಸಂಘದ ಮೆಂಬರರಾದ ರಾ। ವಿ. ಯಸ್. ಶ್ರೀನಿವಾಸ ಶಾಸ್ತ್ರಿಯವರಿಂದ ಈ ವಾದವು ಪ್ರಾರಂಭಿಸಲ್ಪಟ್ಟಿತು. ಹಿಂದೂ ಶಾಸ್ತ್ರಾಧಾರಗಳನ್ನನುಸರಿಸಿಕೊಂಡು ಸಂಘಸುಧಾರಣೆಯನ್ನು ಕೈಕೊಳ್ಳುವುದೋ ಅಥವಾ ಈಗಿನ ನಾಗರೀಕತೆಯಿಂದ ಧೀಶಕ್ತಿಗೆ ಪ್ರಕಾಶಿತವಾದ ವಿಧಾನಗಳಲ್ಲಿ ಸುಧಾರಣೆಯನ್ನು ಸಾಧಿಸುವುದೋ—ಈ ಎರಡು ವಿಧಾನಗಳಲ್ಲಿ ಅಧಿಕ ಫಲಕಾರಿಯಾಗಿರುವ ವಿಧಾನವು ಯಾವುದು—ಇದೇ ಆ ಸಭೆಯಲ್ಲಿ ಚರ್ಚಿಸಲ್ಪಟ್ಟ ಮುಖ್ಯ ಸಂಗತಿಯಾಗಿತ್ತು. ಈಗಿನ ಕಾಲ ವಿದ್ಯಮಾನಗಳಿಗೆ ತಕ್ಕಂತೆ ಸಮಾಜದ ಏಳಿಗೆಗೆ ಬೇಕಾದ ಮಾರ್ಪಾಟಗಳನ್ನು ಮಾಡುವರೆ ಅನುಗುಣವಾದ ಆಧಾರಗಳು ಶಾಸ್ತ್ರಗಳಲ್ಲಿವೆ. ಶಾಸ್ತ್ರಗಳಲ್ಲಿ ವಿಶ್ವಾಸವುಳ್ಳವರಿಂದ ಸಹ ಸುಧಾರಣಾ ಕ್ರಮಗಳು ಅವಲಂಬಿಸಲ್ಪಟ್ಟು ಸುಧಾರಣೆಯ ಸಾಧನೆಯನ್ನು ಸರ್ವರೂ ಏಕರೀತಿಯಲ್ಲಿ ಕೈಕೊಳ್ಳುವಂತೆ ಶಾಸ್ತ್ರಾಧಾರಗಳಿಂದಲೇ ಸಮಾಜ ಸಂಸ್ಕರಣೆಯನ್ನು ಮಾಡುವುದು ಉಚಿತ. ಸುಧಾರಣೆಯು ಸಮಾಜದೇಳಿಗೆಗೆ ಅಗತ್ಯವಾಗಿ ಬೇಕಾದುದೆಂಬುದಕ್ಕೆ ತಕ್ಕ ಕಾರಣಗಳಿರುವವೆಂತ ತಿಳಿದಿದ್ದರೂ ಶಾಸ್ತ್ರಗಳ ಸಮ್ಮತಿಯು ಇದಕ್ಕೆ ಇರುವುದೋ ಏನೆಂಬುದರ ವಿಷಯ ಸಂಶಯಪಟ್ಟು ತಮ್ಮ ಆಚಾರಗಳನ್ನು ತಿದ್ದಿ ನಡಿಯಲು ಜನರಾಶಿಯಲ್ಲಿ ಅಧಿಕಾಂಶವಾಗಿರುವ ಸಾಮಾನ್ಯರು ಅಂಜುವರು. ಸುಧಾರಣೆಯಿಂದ ಸೂಚಿಸಲ್ಪಡುವ ಆಚಾರ ಭೇದಗಳು ಕಾರಣಯುಕ್ತವಾದವುಗಳೂ ಶಾಸ್ತ್ರ ಸಮ್ಮತಿಯುಳ್ಳವುಗಳೂ ಎಂತಾದರೆ ಇವುಗಳು ಹೆಚ್ಚಿನವರಿಂದ ಏಕರೀತಿಯಲ್ಲಿ ಸ್ವೀಕರಿಸಲ್ಪಡುವರೆ ಅನುಕೂಲವಾಗುವುದು. ಹೀಗೆ ರಾ। ವಿ. ಯಸ್. ಶ್ರೀನಿವಾಸ ಶಾಸ್ತ್ರಿಗಳವರು ಸುಧಾರಣೆಯನ್ನು ಶಾಸ್ತ್ರೋಕ್ತ ವಿಧಾನಗಳಲ್ಲಿ ಕೈಕೊಳ್ಳುವುದುಚಿತವೆಂತ ವಾದಿಸಿದರು.

ಆದರೆ ಶಾಸ್ತ್ರಾಧಾರಗಳು ಸುಧಾರಣೆಗೆ ಅನುಕೂಲವಾಗಿಯೂ ಪ್ರತಿಕೂಲವಾಗಿಯೂ ಇರುವವೆಂತ ಹಲವು ಸಂದರ್ಭಗಳಲ್ಲಿ ಕಾಣಬರುವುದು.. ಕನ್ನೆಯರ ಪ್ರೌಢ ವಿವಾಹಕ್ಕೆ ತಕ್ಕ ಆಧಾರಗಳು ಶಾಸ್ತ್ರಗಳಲ್ಲಿವೆ ಎಂತ ಕೆಲವರು ತೋರಿಸಿ ಕೊಡುವಾಗ ಪ್ರೌಢ ವಿವಾಹವು ಶಾಸ್ತ್ರ ಸಮ್ಮತವಾಗಿರದೆಂಬುದಕ್ಕೆ ಸಹ ಶಾಸ್ತ್ರಗಳಲ್ಲಿ ಆಧಾರಗಳು ದೊರಕುವದುಂಟು. ಸುಧಾರಣೆಗೆ ವಿರೋಧವಾದ ಈ ಶಾಸ್ತ್ರಾಧಾರಗಳೊಂದಿಗೆ ರೂಢಿಯು ಸಹ ಪ್ರತಿಕೂಲವಾಗಿರುವುದರಿಂದ ಸುಧಾರಣೆಯ ಪರವಾಗಿರುವ ಶಾಸ್ತ್ರಾಧಾರಗಳನ್ನು ಜನರು ಸ್ವೀಕರಿಸಿಕೊಳ್ಳುವುದಸಾಧ್ಯ. ಈ ವಿದ್ಯಮಾನಗಳಲ್ಲಿ ಸಮಾಜ ಸುಧಾರಣೆಯನ್ನು ಶಾಸ್ತ್ರಗಳಿಗನುಸಾರವಾಗಿ ಕೈಕೊಳ್ಳುವುದು ಫಲಕಾರಿಯಾಗದೆಂದು ಸಭೆಯಲ್ಲಿ ಕೂಡಿದವರಲ್ಲಿ ಕೆಲವರು ವಾದಿಸಿದರು.

ಸಮಾಜ ಸುಧಾರಣೆಗೆ ಇಂಥಿಂಥಾ ವಿಧಾನಗಳೇ ಉಪಯುಕ್ತವಾದವುಗಳು. ಸರ್ವರೂ ಆ ವಿಧಾನಗಳನ್ನೇ ಅನುಸರಿಸಬೇಕು. ಈ ವಿಧಾನಗಳು ಸರ್ವಸಮ್ಮತವಾಗುವಂತೆ ಜನರ ಮಹಾಸಭೆಗಳನ್ನು ಕೂಡಿಸಿ ನಿರ್ಧರಿಸಬೇಕೆಂತ ಅಲ್ಲಲ್ಲಿ ಇತ್ತಲಾಗೆ ಮಹಾಸಭೆಗಳು ಕೂಡಿಕೊಂಡು ನಡಿಸಿದ ಕಾರ್ಯವೈಭವಗಳ ಪರ್ಯವಸಾನವು ಬಹಳ ಶೋಚನೀಯವಾಗಿದೆ. ನವನಾಗರೀಕತೆಯ ಸೋಂಕನ್ನು ಸಹ ತಾಳಲಾರದ ಪಂಡಿತರಲ್ಲಿ ಕೆಲವರು, ಪಂಡಿತ ವರ್ಗವು ಸ್ವಾರ್ಥವಲ್ಲದೆ ಮತ್ತೇನೂ ತಿಳಿಯಲಾರದೆಂಬ ಅಭಿಪ್ರಾಯವುಳ್ಳ ಆಂಗ್ಲ ವಿದ್ಯಾಭ್ಯಾಸವನ್ನು ಪಡದವರಲ್ಲಿ ಕೆಲವರು, ಪಂಡಿತ ವರ್ಗದ ಸಹಾಯವಿಲ್ಲದೆ ಶಾಸ್ತ್ರಗಳನ್ನು ತಾವಾಗಿಯೇ ಪಠಿಸಿದ ಅರ್ವಾಚೀನರು ಕೆಲವರು—ಈ ಹಲವರು ಸಂಘಸುಧಾರಣೆಗೆಂತ ಮಹಾಸಭೆಗಳನ್ನು ಸೇರಿ ಸಭೆಯಲ್ಲಿ ಉತ್ಪಾತಗಳನ್ನುಂಟುಮಾಡಿ ಎಲ್ಲಾ ಅಭಿವೃದ್ಧಿ ಸಾಧನೆಗೆ ಬಾಧಕಕರವಾದ ಪರಸ್ಪರ ದ್ವೇಷಗಳನ್ನು ಬೆಳೆಸಿ ಸುಧಾರಣಾ ಕಾರ್ಯಗಳನ್ನು ಹಿಮ್ಮೆಟ್ಟಿ ಬಿಟ್ಟ ಸಾಹಸಕ್ಕೆ ದೃಷ್ಟಾಂತಗಳು ನಮ್ಮ ದೇಶದಲ್ಲಿ ಹಲವಿವೆ. ಸುಧಾರಣೆಗೆ ತಕ್ಕಂಥಾ ಶಿಕ್ಷಣವು ಜನರಲ್ಲಿಲ್ಲದ್ದರಿಂದ ಈ ಅಪದೆಶೆಯು ಪ್ರಾಪ್ತವಾಗುತ್ತಿರುವುದು. ಶಾಸ್ತ್ರಾಧಾರಗಳೂ ನವನಾಗರೀಕತೆಯಿಂದ ಪ್ರೇರೇಪಿಸಲ್ಪಡುವ ಬುದ್ಧಿ ವಿಚಾರವೂ ನಮ್ಮ ಪುರಾತನ ಇತಿಹಾಸ ಜ್ಞಾನವೂ ಸಂಘಸುಧಾರಣಾ ಸಾಧನೆಗಳಿಗೆ ಬೇಕಾದವುಗಳು. ಈ ಮೂರು ಬಗೆಯಿಂದ ಬೆರೆತಿರುವ ಶಿಕ್ಷಣ ಬಲವು ಸಾಮಾನ್ಯರಲ್ಲಿ ಪ್ರಬಲಿಸಿಕೊಂಡು ಪ್ರಜಾಭಿಪ್ರಾಯಬಲದಿಂದ ನಿಶ್ಚಿತವಾದ ಸುಧಾರಣೆಯ ವಿಧಾನಗಳೇ ಸಮಾಜದ ಏಳಿಗೆಗೆ ಹಿತಕರವಾದವುಗಳು. ಸಭೆಗಳನ್ನು ಕೂಡಿಸಿ ಆಂಗ್ಲ ಭಾಷೆಯಲ್ಲಿ ಸಂಘಸುಧಾರಣೆಯ ವಿಷಯಗಳನ್ನು ಚರ್ಚಿಸುವಾಗ ವಿದ್ಯಾವಂತರು ಸುಧಾರಣೆಯ ಸಾಧನೆಗೆ ಬೇಕಾದ ಆಂಗ್ಲ ಭಾಷೆಯಲ್ಲಿರುವ ಅರ್ವಾಚೀನ ವಿಷಯಗಳನ್ನೂ ಸಂಸ್ಕೃತ ಭಾಷೆಯಲ್ಲಿರುವ ಶಾಸ್ತ್ರ ಮಾಹಿತಿ ಮತ್ತು ನಮ್ಮ ಪುರಾತನ ಇತಿಹಾಸ ಪರಿಚಿತಿಯನ್ನೂ ದೇಶಭಾಷೆಗಳಲ್ಲಿ ಪರಿವರ್ತಿಸಿ ಸಾಮಾನ್ಯರ ಶಿಕ್ಷಣೆಬಗ್ಯೆ ಪ್ರಕಟಿಸುವುದು ಸುಧಾರಣಾ ವಿಧಾನಗಳಲ್ಲಿ ಮುಖ್ಯವಾದದ್ದೆಂತ ಮರೆಯಕೂಡದೆಂಬುದು ನಮ್ಮ ವಿಜ್ಞಾಪನೆಯು. ಸಂಘಸುಧಾರಕರು ತಮ್ಮ ಪ್ರತಿ ಸಭೆಯಲ್ಲಿಯೂ ಮೇಲಿನ ಈ ಮುಖ್ಯವಾದ ವಿಧಾನಕ್ಕೆ ಎಷ್ಟರಮಟ್ಟಿನ ಗಮನಕೊಟ್ಟಿರುವರೆಂಬುದನ್ನು ಪರ್ಯಾಲೋಚಿಸುವುದು ಅಗತ್ಯವಾಗಿರುವುದು.

ದಯಮಾಡಿ ಓದಿನೋಡಿರಿ.

ಕಳದ ಖಾನೇಶುಮಾರಿ ರಿಪೋರ್ಟಿನಲ್ಲಿ ಮಲೆಬಾರಿನಲ್ಲಿ ಒಂದು ಸಾವಿರ ಗಂಡಸರಲ್ಲಿ ೧೯೦—೩೩೦ ಜನರು ಓದು ಬರಹ ತಿಳಿದವರೆಂತಲೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಸಾವಿರ ಗಂಡಸರಲ್ಲಿ ೧೧೦—೧೫೦ ಓದು ಬರಹ ತಿಳಿದವರೆಂತಲೂ ಬರೆದಿರುತ್ತದೆ. ಸ್ತ್ರೀ ಶಿಕ್ಷಣದಲ್ಲಿಯೂ ಮಲೆಬಾರಿನಲ್ಲಿ ೧೦,೦೦೦ ಸ್ತ್ರೀಯರಲ್ಲಿ ೫೫೦ರ ಮೇಲೆ ಸ್ತ್ರೀಯರೂ, ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ೧೦,೦೦೦ ಸ್ತ್ರೀಯರಲ್ಲಿ ೧೪೫-೧೫೫ ಸ್ತ್ರೀಯರೂ ಓದುಬರಹ ಬಲ್ಲವರೆಂತ ತಿಳಿದುಬರುತ್ತದೆ. ಹೇಗೂ ವಿದ್ಯಾಭಿವೃದ್ಧಿಯಲ್ಲಿ ನಮ್ಮ ಕನ್ನಡಾ ಜಿಲ್ಲೆಯು ಮಲೆಬಾರಿಗಿಂತಲೂ ಬಹಳ ಕೀಳು ಸ್ಥಿತಿಯಲ್ಲಿರುವುದು.

ಕಳದ ಇಸವಿಯಲ್ಲಿ ಮದ್ರಾಸ್ ಗವರ್ನಮೆಂಟಿನವರು ಪ್ರಕಟಿಸಿದ ಮದ್ರಾಸ್ ಸಂಸ್ಥಾನದ ವಿದ್ಯಾಖಾತೆಯ ಆಡಳಿತೆ ರಿಪೋರ್ಟಿನ ೪೦—೪೧ನೇ ಪುಟಗಳಲಿ ಗವರ್ನಮೆಂಟಿನವರು ಬರೆದ ಅಭಿಪ್ರಾಯವನ್ನು ಸಹ ಆಲೋಚಿಸಿದರೆ ಕನ್ನಡಾ ಜಿಲ್ಲೆಯವರಾದ ನಾವು ಗೌರವ ಪಡಲಿಕ್ಕೆ ಏನೂ ಆಸ್ಪದ ಸಿಕ್ಕುವುದಿಲ್ಲ. ಶಾಲೆಗೆ ಹೋಗುವ ಪ್ರಾಯದ ಪಂಚಮ ಹುಡುಗರಲ್ಲಿ ತಿರುನೆಲ್ವೇಲಿ ಜಿಲ್ಲೆಯಲ್ಲಿ ಶೇಕಡಾ ೪೧, ಮದ್ರಾಸಿನಲ್ಲಿ ಶೇಕಡಾ ೬೮, ನಮ್ಮ ಕನ್ನಡಾ ಜಿಲ್ಲೆಯಲ್ಲಿ ಶೇಕಡಾ ೧೮ರಂತೆ ಶಾಲೆಗೆ ಹೋಗುವ ಮಕ್ಕಳಾಗಿರುತ್ತವೆ. ಮದ್ರಾಸ್ ಸಂಸ್ಥಾನದ ಎಲ್ಲಾ ಜಿಲ್ಲೆಗಳ ಸರಾಸರಿಯು ಶೇಕಡಾ ೧೧ ಆಗಿರುವುದು. ಇಡೀ ಮದ್ರಾಸ್ ಸಂಸ್ಥಾನದಲ್ಲಿ ನಮ್ಮ ಕನ್ನಡಾ ಜಿಲ್ಲೆಯು ಪಂಚಮರ ವಿದ್ಯಾಸ್ಥಿತಿ ಮಟ್ಟಿಗೆ ಅತೀ ನಿಕೃಷ್ಟ ಅವಸ್ಥೆಯಲ್ಲಿರುವುದು.

ಇನ್ನೊಂದು ಖಾನೇಶುಮಾರಿ ಬರುವಷ್ಟರಲ್ಲಿ ನಮ್ಮ ಜಿಲ್ಲೆಯು ವಿದ್ಯೆಯಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಬೇಕೆಂತಲೂ, ಇಂತಹ ಕೊರತೆ ಗವರ್ನಮೆಂಟ್ ರಿಪೋರ್ಟುಗಳಲ್ಲಿ ನಮ್ಮ ಜಿಲ್ಲೆಯ ಮೇಲೆ ಇರಕೂಡದೆಂತಲೂ ನಮ್ಮ ಕುತೂಹಲವಾಗಿರುತ್ತದೆ.

"ಪಂಚಮರ ಉದ್ಧರಣೆ ಸಾಧಿಸುವುದರಲ್ಲಿ ನಮ್ಮ ಉದ್ಧರಣೆಯನ್ನೇ ನಾವು ಮಾಡಿಕೊಳ್ಳುತ್ತೇವೆ" ಎಂತ ಬಹುಮಾನಪಟ್ಟ ಸರ್ ನಾರಾಯಣ ಗಣೇಶ ಚಂದಾವರಕಾರರು ಹೇಳಿದ ಮಾತು ನಮ್ಮ ಅನುಭವದಿಂದ ಯಥಾರ್ಥವಾದ್ದೆಂತ ತೋರುವುದು. ಪಂಚಮರ ಮಕ್ಕಳು ಶಾಲೆಗಳಿಗೆ ಹೋಗಿ ವಿದ್ಯಾಭ್ಯಾಸ ಹೊಂದುವುದನ್ನು ನೋಡಿ ಮೇಲು ಜಾತಿಯ ಕೂಲಿ ಆಳುಗಳು ಸಹ ಮತ್ಸರದಿಂದಾದರೂ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಇದು ನಮ್ಮ ಅನುಭವಕ್ಕೆ ಬಂದ ಸಂಗತಿಯಾಗಿರುತ್ತದೆ. ಹೀಗೆ ಪಂಚಮರಿಗೆ ವಿದ್ಯಾದಾನ ಕೊಡುವುದರಿಂದ ಅನ್ಯಥಾ ವಿದ್ಯೆಯ ಕಡೆಗೆ ಗಮನಕೊಡದ ಮೇಲು ಜಾತಿಯ ಜನರಲ್ಲಿಯೂ ವಿದ್ಯಾಭ್ಯಾಸಕ್ಕೆ ಉತ್ತೇಜನ ಸಿಕ್ಕುವುದು. ಪಂಚಮರಿಗೆ ವಿದ್ಯಾದಾನವೆಂದರೆ ಬರಿಯ ಓದುಬರಹಗಳನ್ನು ಕಲಿಸುವುದೆಂತ ಸಾಮಾನ್ಯವಾಗಿ ಗ್ರಹಿಸುವರು. ಆದರೆ ಇದು ಹೀಗಿರದು. ಸದ್ವರ್ತನೆಗೆ ಪಂಚಮರಲ್ಲಿ ಆಸ್ಪದ ದೊರಕುವಂತೆಯೂ ಅವರು ಅನುಸರಿಸಿಕೊಂಡಿರುವ ವೃತ್ತಿಗಳಲಿ ಅವರು ಸಮರ್ಥರಾಗಿರುವಂತೆಯೂ, ಮಿತವ್ಯಯ, ಮಿತಪಾನ ಮೊದಲಾದ ಸದ್ಗುಣಗಳು ಈ ದೀನರಲ್ಲಿ ನೆಲಸಿರುವಂತೆಯೂ ಬೇಕಾದ ಶಿಕ್ಷಣ ಯಾ ತರಬೇತಿಯನ್ನು ಕೊಡುವುದೇ ಇವರಿಗೆ ಕೊಡಬೇಕೆಂದು ಉದ್ದೇಶಿಸಿರುವ ವಿದ್ಯಾದಾನವಾಗಿರುತ್ತದೆ.

ಆದುದರಿಂದ ನಮ್ಮ ಜಿಲ್ಲೆಯ ಹಳ್ಳಿ ಪಳ್ಳಿಗಳಲ್ಲಿ ಸಾಧ್ಯವಾದ ಹಾಗೆ ಪಂಚಮ ಶಾಲೆಗಳನ್ನು ಸ್ಥಾಪಿಸಬೇಕೆಂತ ನಾವು ನಿರ್ಣಯಿಸಿದ್ದೇವೆ.

ಸ್ವದೇಶವಾತ್ಸಲ್ಯವುಳ್ಳ ಗೃಹಸ್ಥರೇ! ಕುಲಸ್ತ್ರೀಯರೇ! ನಮ್ಮ ಮಾತೃಭೂಮಿಯ ಈ ಪ್ರಯಾಸದ ಸೇವಾ ಕಾರ್ಯದಲ್ಲಿ ನೀವು ನಮಗೆ ಪ್ರೋತ್ಸಾಹಕೊಡಬೇಕೆಂತಲೂ ನಮ್ಮೊಡನೆ ಈ ಕಾರ್ಯದಲ್ಲಿ ಸಹಭಾಗಿಗಳಾಗ ಬೇಕೆಂತಲೂ ನಾವು ಆಶಿಸುತ್ತೇವೆ. ಅನಾಥ ಪಂಚಮ ಮಕ್ಕಳನ್ನು ನಿಮ್ಮ ಮಕ್ಕಳೆಂತಲೇ ಭಾವಿಸಿ ಇವರಗೋಸ್ಕರ ತಿಂಗಳಿಗೆ ಒಂದು ರೂಪ್ಯಾ, ಅಥವಾ ೮ ಆಣೆ ಯಾ ನಾಲ್ಕಾಣೆಯಾದರೂ ತಿಂಗಳು ವಂತಿಗೆಯಾಗಿ, ಇದು ಸಾಧ್ಯವಿಲ್ಲದಿದ್ದರೆ ಒಂದೆರಡು ರೂಪಾಯಿಗಳಾದರೂ ವರುಷದ ವಂತಿಗೆಯಾಗಿ ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘದವರಿಗೆ ದಯಮಾಡಿ ಕೊಡಿರಿ.

ನಮ್ಮ ಜಿಲ್ಲೆಯಿಂದ ಪರಜಿಲ್ಲೆಗಳಿಗೆ ಹೋಗಿರುವಂಥವರು ತಿಂಗಳು ವಂತಿಗೆ ನಮಗೆ ಕೊಡುವುದಾದರೆ ಪ್ರತಿ ತಿಂಗಳಿಗೂ ವಂತಿಗೆ ರವಾನಿಸುವ ತೊಂದರೆ ಅವರಿಗೆ ಆಗದಂತೆ ನಾವು ರಶೀದಿಗಳನ್ನು ೩ ತಿಂಗಳಿಗೆ ಒಮ್ಮೆ ವೆಲ್ಯುಪೇಬಲ್ ಮಾಡಿ ಕಳುಹಿಸುವೆವು. ಹೆಚ್ಚಿಗೆ ಕೊಡುವುದಕ್ಕೆ ಅನುಕೂಲವಿಲ್ಲದವರು ಕಡಿಮೆ ಕೊಡುವುದು ತಮ್ಮ ಅಭಿಮಾನಕ್ಕೆ ಕೊರತೆಯೆಂತ ತಿಳಕೊಳ್ಳಲಾಗದು. ಕಿಂಚಿತ್ತಾದರೂ ಗುಪ್ತದಾನವಾಗಿಯೂ ಕೊಡಬಹುದು. ಈ ಗುಪ್ತದಾನಗಳನ್ನು ನಮ್ಮ ವರುಷಾವಧಿ ರಿಪೋರ್ಟುಗಳಲ್ಲಿ ದಾತರ ಹೆಸರುಗಳು ಕಾಣಿಸದೆ ಕೃತಜ್ಞತೆಯಿಂದ ಪ್ರಕಟಿಸುವೆವು.

ಚಂದಾ ವೊಬಲಗು ಇತ್ಯಾದಿಗಳನ್ನು ಸಂಘದ ಸೆಕ್ರಿಟರಿಗಳಾದ ಕುದ್ಮೂಲ ರಂಗರಾಯರ ವಿಳಾಸಕ್ಕೆ ಕಳುಹಿಸುವುದು.

ಉಳ್ಳಾಲ ರಘುನಾಥಯ್ಯ.
ಗಂಗೊಳ್ಳಿ ಕೃಷ್ಣರಾವ್, (ಬಿ. ಎ. ಎಲ್. ಎಲ್. ಬಿ.)
ಶೇಷಭಟ್ಟ ಭಿಡೆ, (ಬಿ. ಎ. ಬಿ. ಎಲ್.)
ಅತ್ತಾವರ ಬಾಲಕೃಷ್ಣ ಶೆಟ್ಟಿ.
ಅಮ್ಮೆಂಬಳ ಶ್ರೀನಿವಾಸ ಪೈ, (ಬಿ. ಎ. ಬಿ. ಎಲ್.)
ಮುಂಡ್ಕೂರ ಶಿವರಾವ್, (ಎಲ್. ಆರ್. ಸಿ. ಪಿ. ಎಂಡ್ ಎಸ್. ಎಲ್. ಎಫ್. ಪಿ. ಎಂಡ್ ಎಸ್. ಎಲ್. ಎಮ್.)
ಮಂಗಳೂರು ನರ್ಸಪ್ಪ.

ಮಂಗಳೂರು,
ತಾ. 8-10-12.

ಕುದ್ಮೂಲ ರಂಗರಾವ್.
ಸೆಕ್ರಿಟೆರಿ.

~~~~~~

“ಧನ್ವಂತ್ರಿ ಮೆಡಿಕಲ್ ಸ್ಕೂಲ್” ಎಂಬ ಬೆಂಗಳೂರಿನ ಆಯುರ್ವೇದ ವಿದ್ಯಾ ಶಾಲೆಯು.

ಈ ಶಾಲಾ ಸ್ಥಾಪನೆಯ ವಿಷಯವನ್ನು ಒಳಕೊಂಡಿರುವ ಚಿಕ್ಕದೊಂದು ವಹಿಯು ನಮ್ಮ ಅವಗಾಹನೆ ಬಗ್ಯೆ ಕಳುಹಿಸಲ್ಪಟ್ಟಿರುವುದು. ಭರತಖಂಡದಲ್ಲಿ ಒಮ್ಮೆ ಪ್ರಖ್ಯಾತವಾಗಿದ್ದು ಈಗಲೂ ಸಹ ಜನ ಸಾಮಾನ್ಯರು ವಿಶೇಷವಾಗಿ ಪ್ರಿತಿಸುತ್ತಿರುವ ಆಯುರ್ವೇದವನ್ನು ಪುನರುಜ್ಜೀವಿಸಿ ಅದಕ್ಕನುಸಾರವಾದ ಚಿಕಿತ್ಸೆ ವಿಧಾನಗಳನ್ನು ಪ್ರಚಾರಕ್ಕೆ ತರುವ ಪ್ರಯತ್ನವು ಎಂದೆಂದಿಗೂ ಸ್ತುತ್ಯವಾಗಿರುವುದು. ಆಯುರ್ವೇದ ಪುನರುಜ್ಜೀವನದ ಉದ್ದೇಶದಿಂದ ಬೆಂಗಳೂರಿನ ಧನ್ವಂತ್ರಿ ಮೆಡಿಕಲ್ ಸ್ಕೂಲಿನ ಮೊದಲು ದೇಶದ ಇತರ ಕೆಲವು ಭಾಗಗಳಲ್ಲಿಯೂ ಸಹ ಆಯುರ್ವೇದ ಶಿಕ್ಷಣಾಲಯಗಳೂ, ಕೋಲೇಜುಗಳೂ, ಸಭೆಗಳೂ ಏರ್ಪಟ್ಟಿರುವುವು. ತಿರುವಾಂಕೋಡು ಸಂಸ್ಥಾನದಲ್ಲಿ ಮಹಾರಾಜರ ಸಂಸ್ಕೃತ ಕೋಲೇಜಿನೊಂದಿಗೆ ಆಯುರ್ವೇದವನ್ನು ಕಲಿಸುವ ಸಂಸ್ಥೆ ಇರುವುದು. ಜಯಪುರದಲ್ಲಿಯೂ ಮೈಸೂರಿನಲ್ಲಿಯೂ ಇಂಥಾ ಸಂಸ್ಥೆಗಳಿವೆ. ಇವುಗಳಲ್ಲದೆ ಕಾಶಿಯಲ್ಲಿ ಭಾರತ ಧರ್ಮ ಮಂಡಲದವರೂ, ಸೆಂಟ್ರಲ್ ಹಿಂದೂ ಕೋಲೇಜಿನವರೂ ಆಯುರ್ವೇದವನ್ನು ಕಲಿಸುವ ಏರ್ಪಾಡನ್ನು ಮಾಡಿರುವರು. ನಾಸಿಕದಲ್ಲಿ ಪಂಚವಟಿ ತ್ರಿಯಂಬಕ ಆಯುರ್ವೇದಿಕ್ ಕೋಲೇಜು, ಮುಂಬಾಯಿಯಲ್ಲಿ ಆರ್ಯನ್ ಮೆಡಿಕಲ್ ಸ್ಕೂಲ್, ಮದ್ರಾಸಿನಲ್ಲಿ ವೆಂಕಟರಮಣ ಡಿಸ್ಪೆನ್ಸರಿ ಮತ್ತು ಎಸ್. ಕೆ. ಡಿ. ಪಿ. ಡಿಸ್ಪೆನ್ಸರಿ ಮತ್ತು ಕೋಲೇಜು, ಕಲ್ಕತ್ತೆಯಲ್ಲಿ ಹಲವು ಜನ ಕವಿ ರಾಜರ ವೈದ್ಯ ಶಾಲೆಗಳಲ್ಲದೆ ನೆಶನಲ್ ಮೆಡಿಕಲ್ ಕೋಲೇಜಿನಲ್ಲಿಯೂ ಆಯುರ್ವೇದವನ್ನು ಕಲಿಸುತ್ತಿರುವರೆಂತ ತಿಳಿಯುತ್ತೇವೆ. ನಮ್ಮ ನೆರೆಜಿಲ್ಲೆಯಾದ ಮಲೆಬಾರಿನಲ್ಲಿ ಸಹ ಆಯುರ್ವೇದ ಪುನರುಜ್ಜೀವನಕ್ಕೋಸ್ಕರ ಒಂದು ಆರ್ಯ ವೈದ್ಯ ಸಮಾಜವಿರುವುದು. ಈ ರೀತಿ ಹಲವು ಸಂಸ್ಥೆಗಳು ದೇಶದಲ್ಲಿದ್ದರೂ ಆಯುರ್ವೇದ ಪುನರುಜ್ಜೀವನದ ಕೆಲಸವು ಸಮರ್ಪಕವಾದ ರೀತಿಯಲ್ಲಿ ನಡಿಯುವಂತೆ ತೋರುವುದಿಲ್ಲ. ಯಾವುದಾದರೊಂದು ಸಂಸ್ಥೆಯು ದೀರ್ಘಕಾಲ ಬಾಳಿ ಅದರ ಉದ್ದಿಷ್ಟ ಕರ್ತವ್ಯವನ್ನು ನೆರವೇರಿಸಬೇಕಾದರೆ ಅದಕ್ಕೆ ಹೇರಳ ಮೂಲಧನಬೇಕು. ಸ್ವಾರ್ಥವನ್ನು ಪೂರ್ಣವಾಗಿ ತ್ಯಜಿಸಿಬಿಟ್ಟು ತಮ್ಮ ಜೀವಿತಗಳನ್ನರ್ಪಿಸುವ ಮಹನೀಯರುಗಳ ಕಾರ್ಯಶ್ರಮವು ಇದಕ್ಕೆ ಅತ್ಯಗತ್ಯ. ಇವೆರಡಿದ್ದರೆ ಸಂಸ್ಥೆಗಳಲ್ಲಿ ಬೇಕಾದ ವ್ಯವಸ್ಥೆ ಮಾಡಲು ಅನುಕೂಲವಾಗುವದು. ಸುವ್ಯವಸ್ಥೆಯಿದ್ದು ಕಾರ್ಯಪ್ರಯತ್ನಗಳು ನಿರಂತರವಾಗಿ ನಡೆದು ಸಂಸ್ಥೆಗಳು ವಿಶ್ವಾಸ ಪಾತ್ರವಾದವುಗಳೆಂತ ಕಂಡು ಬಂದಲ್ಲಿ ಜನ ಸಹಾಯವು ತನ್ನಷ್ಟಕ್ಕೇನೆ ದೊರಕುವುದು. ಆಯುರ್ವೇದ ಕೊಲೇಜುಗಳ, ಶಾಲೆಗಳ ಸ್ಥಾಪನೆಗಳಿಗೆ ಸಹ ಮೂಲಧನವು ವಿಶೇಷವಾಗಿ ಬೇಕಾಗಿರುತ್ತದೆ. ವೈದ್ಯಶಾಸ್ತ್ರವನ್ನು ಅಭ್ಯಾಸಿಸುತ್ತಿರುವಾಗ ಬರಿಯ ಪುಸ್ತಕ ಪಠಣ ಮಾತ್ರ ಸಾಲದು. ವಿದ್ಯಾರ್ಥಿಗಳು ರೋಗ ಮಾಹಿತಿಯನ್ನು ಪಡಿಯುವಂತೆ ಶಾಲೆಗಳಿಗೆ ತಾಗಿರುವ ರೋಗಿಗಳ ಆರೈಕೆಗೆ ಬೇಕಾದಂಥಾ ಆಸ್ಪತ್ರೆಗಳು ಅಗತ್ಯ. ಔಷಧಿಗಳನ್ನು ಶಾಸ್ತ್ರೋಕ್ತ ವಿಧಾನಗಳಲ್ಲಿ ತಯ್ಯಾರಿಸುವಂತೆಯೂ ಆಯಾ ಧಾತು ಲಕ್ಷಣಗಳನ್ನು ಕಂಡು ಕಲಿಯುವಂತೆಯೂ ವೈದ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ರಸಾಯನ ಶಾಸ್ತ್ರ, ವನಸ್ಪತಿ ಶಾಸ್ತ್ರ ಮೊದಲಾದವುಗಳ ಮಾಹಿತಿಯನ್ನು ಪಡಿಯುವಂತೆಯೂ ನಾನಾ ವಿಧದ ಉಪಕರಣಗಳಿಂದ ಕೂಡಿ ಅನುಕೂಲವಾದ ‘ಲಿಬೋರೆಟರಿ’ಗಳೆಂಬ ಶೋಧನಾಲಯಗಳೂ ಒಳ್ಳೇ ಅನುಭವಶಾಲಿಗಳಾದ ಶಿಕ್ಷಕರ ವರ್ಗವೂ ಆಯುರ್ವೈದ್ಯ ವಿದ್ಯಶಾಲೆಗಳಿಗೆ ಅಗತ್ಯವಾದವುಗಳು. ಮೈಸೂರು ರಾಜರಂಥಾ ಸಂಸ್ಥಾನಾಧಿಪತಿಗಳೂ ಜಮೀನ್ದಾರರೂ ಇತರ ಸಂಪನ್ನ ದೇಶಾಭಿಮಾನಿಗಳೂ ಈ ವೈದ್ಯ ಶಾಲೆಗಳಿಗೆ ತಕ್ಕ ಆಶ್ರಯಕೊಟ್ಟು ಆಯುರ್ವೇದ ವಿದ್ಯೆಯನ್ನು ಈ ೨೦ನೇ ಶತಮಾನದ ವಿದ್ಯಮಾನಗಳಿಗನುಗುಣವಾಗಿ ರೂಢಿಗೆ ತಂದಲ್ಲಿ ಹಿಂದೂಸ್ಥಾನದ ಸರಕಾರದವರೂ ಸಹ ಈ ವಿದ್ಯಾಪಾಂಡಿತ್ಯವನ್ನು ಪಡದವರಿಗೆ ತಕ್ಕ ಆಶ್ರಯವನ್ನು ಕೊಡುವರೆ ಆಸ್ಪದವುಂಟಾಗುವುದು.

ಈ ಮೇಲಿನ ವಿಚಾರದಿಂದ ಬೆಂಗಳೂರಿನ ಧನ್ವಂತ್ರಿ ಮೆಡಿಕಲ್ ಸ್ಕೂಲಿನ ವಹಿಯನ್ನು ಪರಿಶೀಲಿಸಿ ನೋಡುವಾ. ಶೃಂಗಗಿರಿ ಜಗದ್ಗುರುಗಳೂ, ಮೈಸೂರು ಮಹಾರಾಜರವರೂ ಈ ಶಾಲೆಯ ಆಶ್ರಯದಾತರೆಂಬದಾಗಿ ತೋರಿಬರುತ್ತದೆ. ಮೂಲಧನದ ಪ್ರಸ್ತಾಪವೇನೂ ಈ ವಹಿಯಲ್ಲಿರುವುದಿಲ್ಲ. ವರುಷ ಒಂದಕ್ಕೆ ರೂ. 25ರ ಪ್ರಕಾರ ಈ ಶಾಲೆಗೆ ಕೊಡುವವರು ಶಾಲಾದಾನಿ, ರೂ. ೧೦ರ ಪ್ರಕಾರ ಕೊಡುವವರು ಶಾಲಾ ಮೆಂಬರರು ಆಗುವರು. ಶಾಲೆಯ ಕಾರ್ಯನಿರ್ವಾಹಕ ಕಮ್ಮಿಟಿಯ ಮೆಂಬರರಾಗಿ ರಾ. ಜಿ. ಜಿ. ನರಸಿಂಹಾಚಾರ್, ಬಿ. ಎ. ರಾ। ಟಿ. ಬಿ. ರಾಮಾಚಾರ್ ಎಮ್. ಎ, ರಾ। ಸಿ. ವಿ. ನರಸಿಂಹ ಅಯ್ಯಂಗಾರ್ ಬಿ. ಎ. ಬಿ. ಎಲ್. ಮೊದಲಾದ ಗೃಹಸ್ಥರಿರುವರು. ಡಾಕ್ಟರ್ ಪಿ. ಎಸ್. ಅಚ್ಚುತ ರಾವ್, ರಾ। ಎಮ್. ಶ್ರೀನಿವಾಸ ರಾವ್. ಎಮ್. ಡಿ; ರಾ। ಎಚ್. ವಿ. ನಂಜುಂಡಯ್ಯ ಎಮ್. ಎ. ಎಮ್. ಎಲ್; ರಾ. ವಿ. ಪಿ. ಮಾಧವರಾವ್ ಬಿ. ಎ. ಸಿ. ಐ. ಇ; ರಾ. ಕೆ. ಪಿ. ಪುಟ್ಟಣ್ಣ ಶೆಟ್ಟಿ ಮತ್ತು ಡಿಸ್ಟ್ರಿಕ್ಟ್ ಸರ್ಜನ್ ಮೊದಲಾದವರು ಶಾಲಾ ಬೋರ್ಡಿನ ಡಿರೆಕ್ಟರುಗಳಾಗಿರುವರು. ವಿದ್ವಾನ್‌ವೈದ್ಯ ಪಂಚಾನನ ವಿ. ಡಿ. ಪಂಡಿತರವರು ಶಾಲೆಯ ಮುಖ್ಯ ಉಪಾಧ್ಯಾಯರೂ ಕಾರ್ಯದರ್ಶಿಗಳೂ ಆಗಿರುತ್ತಾರೆ. ಅಧ್ಯಕ್ಷರು ಮೈಸೂರು ದಿವಾನರಾಗಿರುತ್ತಾರೆ. ಶಾಲಾ ಆಡಳಿತೆ ಬಗ್ಯೆ ಯೋಗ್ಯ ಗೃಹಸ್ಥರೇ ಶಾಲಾ ಸ್ಥಾಪಕರಿಗೆ ದೊರಕಿರುವುದನ್ನು ನೋಡಿ ಸಂತೋಷ ಪಡುತ್ತೇವೆ. ಆದರೆ ಶಾಲೆಯ ಆಶ್ರಯದಾತರಾಗಿ, ಕಾರ್ಯ ನಿರ್ವಾಹಕ ಕಮ್ಮಿಟಿಯ ಮೆಂಬರರಾಗಿ, ಬೋರ್ಡಿನ ಡಿರೆಕ್ಟರರುಗಳಾಗಿ ಸೇರಿದವರು ಶಾಲೆಗೆ ಎಷ್ಟರ ಮಟ್ಟಿನ ದ್ರವ್ಯ ಸಹಾಯ ಮಾಡಿರುವರು, ಎಷ್ಟರ ಮಟ್ಟಿನ ಕಾರ್ಯಶ್ರಮವನ್ನು ತಕ್ಕೊಳ್ಳುವರು, ಶಾಲಾ ಆಡಳಿತೆಯ ಜವಾಬ್ದಾರಿಯು ಇವರ ಮೇಲೆ ಎಷ್ಟರಮಟ್ಟಿಗಿರುವುದೆಂಬುದನ್ನು ಸಹ ಶಾಲೆಯ ಈ ವಹಿಯಲ್ಲಿ ಪ್ರಕಟಿಸಬೇಕಿತ್ತು. ಇಂಥಾ ಪ್ರಕಟಣೆಯು ಇದರಲ್ಲಿ ಇಲ್ಲದಿರುವುದರಿಂದ ಶಾಲಾ ಬಹುಮಾನಾರ್ಥವಾಗಿ ಮಾತ್ರ ಈ ಗೃಹಸ್ಥರು ಸೇರಿರುವರೆಂದು ಊಹಿಸಲು ಆಸ್ಪದವಾಗುತ್ತದೆ. ಈ ಶಾಲಾ ಸಂಸ್ಥೆಯು ರಿಜಿಸ್ಟ್ರಿಯಾಗಿದೆಂಬದಾಗಿ ತೋರಿಬರುವುದಿಲ್ಲ. ರಿಜಿಸ್ಟ್ರಿ ಮಾಡಿಸಿದರೆ ದಾನಿಗಳಾಗಿಯೂ ಮೆಂಬರರಾಗಿಯೂ ಸೇರಿರಲಿಕ್ಕೆ ಅನುಕೂಲವಾಗುವುದು. ಶಾಲಾ ವಿದ್ಯಾರ್ಥಿಗಳ ಅಭ್ಯಾಸದ ಬಗ್ಯೆ ಇಟ್ಟಿರುವ ಪಾಠಸ್ತೋಮದಲ್ಲಿ ವೈದ್ಯಶಾಸ್ತ್ರ ಪಾಂಡಿತ್ಯಕ್ಕೆ ಬೇಕಾದ ಹಲವು ವಿಷಯಗಳಿವೆ. ಆದರೆ ಈ ವಿಷಯಗಳನ್ನು ಕಲಿಸಲಿಕ್ಕೆ ನಾವು ಮೇಲೆ ಸೂಚಿಸಿರುವಂತೆ ಅನುಕೂಲವಾದ ಆಸ್ಪತ್ರೆ, ಪರಿಶೋಧನಾಲಯ ಮೊದಲಾದವುಗಳಿರುವವೆಂಬುದಾಗಿ ತೋರಿಬರುವುದಿಲ್ಲ. ವಿದ್ಯಾರ್ಥಿಗಳಾಗಿ ಆರ್ಯ ವೈದ್ಯ ಶಾಲೆಗಳಿಗೆ ಸೇರುವ ಕುತೂಹಲವು ಈಗಲೀಗ ಹೆಚ್ಚಿರುವುದರಿಂದ ಇಂಥಾ ವಿದ್ಯಾರ್ಥಿ ವರ್ಗದ ಮಾಹಿತಿ ಬಗ್ಯೆ ಎಲ್ಲಾ ವಿವರವನ್ನು ಸ್ಪಷ್ಟವಾಗಿ ಪ್ರಕಟಿಸಬೇಕಿತ್ತು.

ಹಿಂದೂಸ್ಥಾನದ ಕೆಲವು ಕಡೆಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಮೇಲೆ ಹೆಸರು ಕಾಣಿಸಿರುವ ಆಯುರ್ವೇದ ವಿದ್ಯಾ ಶಾಲೆಗಳ ಪೈಕಿ ಕೆಲವಕ್ಕೆ ತಾವು ಯಾಕೆ ವಿದ್ಯಾರ್ಥಿಗಳಾಗಿ ಸೇರಿದ್ದೇವೆಂದು ಆ ಸಂಸ್ಥೆಗಳಿಗೆ ವಿದ್ಯಾಭ್ಯಾಸದ ಬಗ್ಯೆ ಸೇರಿದವರಲ್ಲಿ ಹಲವರು ಮರುಗುತ್ತಿರುವರು. ಈ ವಿದ್ಯಾಶಾಲೆಗಳಲ್ಲಿ ವೈದ್ಯ ಶಾಸ್ತ್ರವನ್ನು ಕಲಿಯುವರೆ ಇರಬೇಕಾದ ಅನುಕೂಲತೆಗಳಿಲ್ಲವೆಂತ ಕೇಳುತ್ತೇವೆ. ಇಂಥಾ ಅಪವಾದಕ್ಕೆ ಆಸ್ಪದಕೊಡದೆ ಬೆಂಗಳೂರಿನ ಧನ್ವಂತ್ರಿ ಮೆಡಿಕಲ್ ಸ್ಕೂಲ್ ತನ್ನ ಉದ್ದಿಷ್ಟ ಕರ್ತವ್ಯವನ್ನು ನೆರವೇರಿಸಲು ವೈದ್ಯ ಪಂಚಾನನ ವಿ. ಡಿ. ಪಂಡಿತರವರ ಆರೈಕೆಯಲ್ಲಿ ದೀರ್ಘಕಾಲ ಬಾಳಬೇಕಾಗಿ ನಮ್ಮ ಅಪೇಕ್ಷೆಯಾಗಿರುವುದು.

~~~~~~

ರಾಷ್ಟ್ರ ಗೀತ.

(“ಸರಕಾರಿ ಸಹಾಯ ಹೊಂದುವ ವ ಹೊಂದದ ಎಲ್ಲಾ ಶಾಲೆಗಳಲ್ಲಿಯೂ ರಾಜಭಕ್ತಿ ರಾಷ್ಟ್ರ ಭಕ್ತಿಗಳನ್ನು ಹುಟ್ಟಿಸುವಂತಹ ಗೀತಗಳನ್ನು ಕಲಿಸಿ, ಮಕ್ಕಳು ಮುಂದೆ ಸಾಮ್ರಾಜ್ಯ ಪ್ರೇಮಿ ಜನಾಂಗವಾಗುವಂತೆ ಪ್ರಯತ್ನಿಸುವುದು ವಿದ್ಯಾ ಸಂಸ್ಥೆಗಳ ಮೂಲ ಕರ್ತವ್ಯ.”)

(ಸ್ವೆನ್ನದ ಮಾರ್ಚ್ ನೋಟು.)

ಜಯ ಜಯ ಜಯರವ ಮರುದನಿಯೇರೆ,
ಜಯಿಯಾಂಗ್ಲೇಯ ಕೇಸರಿ ಬಲಬೀರೆ,—
ಜಯ ವಿಕ್ಟೋರಿಯ ರಾಣಿ—ಶಾಸನಾ
ಶ್ರಯ—ಭಕ್ತಿ ಭೃತ ಹಿಂದುಸ್ಥಾನ್ ॥
ದಾರುಣ ವಿಪಿನದಿ ಪಕ್ಷಿ ಕೋಲಾಹಲ,
ಮೇರು ಮಂದರದ ಪವನಸುಶೀತಲ,
ನೀರದ ವಾರಿಧಿಯುಚ್ಚರಿಸಲು ಬಲ,—
‘ಭಾರತ ಮಂಗಲ ಕಂಗ್ಲಾಳವೇ ಬಲ !’ ॥ ೧ ॥

ಹಿಂದುಪಾರಸಿಯವನಪಠಾಣ
ಮುಂದೆ ಮೋಗಲಮಹಾರಾಷ್ಟ್ರಗಣ
ಚಂದ್ರಸೂರ್ಯಕುಲದಾರ್ಯ ಸಿಂಹಾಸನ
ವಿಂದಂಗ್ಲಾಳಿಕೆ,—ಹಿಂದುಸ್ಥಾನ್ !
ವೀರ ಸಿಕ್ಕರಜಪೂತಧೀರ ಬಲ
ಸೇರಿ ಘೂರ್ಕ ವಿಕ್ರಮಿಯತುಲದಲ,
ಸಾರಲಿಮುನ್ನೂರಾಯುತಜನಗಲ,—
‘ಭಾರತ ಮಂಗಲ ಕಂಗ್ಲಾಳವೆ ಬಲ !’ ॥ ೨ ॥

ವಾಕು ಜಾತಿ ಕುಲಗೋತ್ರವಿಭಿನ್ನ
ವೇಕರೀತಿಪಾಲಿತ ಪ್ರಜಾಗಣ,—
ಶೋಕವಿವರ್ಜಿತ ಭಾರತ ಸಂತಾನ !
ಲೋಕಕಂಠಮಣಿ,—ಹಿಂದುಸ್ಥಾನ್.
ಆರವಿಯಸ್ತಮಿಸದ ರಾಷ್ಟ್ರಸ್ಥಳ
ದೇರಲಿ ವೀರಧ್ವಜ ಸಿಂಹೋಜ್ವಲ !
ಬೀರಲಿ ರಾಷ್ಟ್ರಪ್ರೇಮ ಸುಖಾನಿಲ,—
‘ಭಾರತ ಮಂಗಲ ಕಂಗ್ಲಾಳವೇ ಬಲ !’ ॥ ೩ ॥

M. N. K.

~~~~~~

ವ್ಯಾಪಾರವೈಭವ.

ಅಮೇರಿಕದ ಸಂಪದ್ವೈಭವವು ಜಗದಾಶ್ಚರ್ಯಕರವಾಗಿ ಪ್ರಸಿದ್ಧವಾಗಿರುವಂತೆ ಆ ಸಂಪದಾರ್ಜನೆಯ ವಿವಿಧ ಸಾಧನಗಳೂ ಅದಕ್ಕೆ ತಕ್ಕಂತೆ ಜಗದ್ವಿಲಕ್ಷಣವಾಗಿಯೇ ಇರುತ್ತವೆ. ಅಲ್ಲಿನ ಪ್ರಸಿದ್ಧವಾದ ಒಂದು ವ್ಯಾಪಾರ ಸಂಘದ ವಿದ್ಯಮಾನವು ನಮ್ಮ ದೇಶದ ವರ್ತಕರೆಲ್ಲರಿಂದಲೂ ಶ್ರೋತವ್ಯವಾಗಿರುತ್ತದೆ. ಅದೇನೆಂದರೆ:—ಆ ದೇಶಕ್ಕೆ ಸೇರಿದ ಸಿರ್ಸ್ ಎಂಬ ಸ್ಥಳದಲ್ಲಿ ಒಂದು ಮಹತ್ತರವಾದ ವ್ಯಾಪಾರ ಸಂಘವಿರುತ್ತದೆ. ಇದಕ್ಕೆ ಜ್ಯೂಲಿಯಸ್ ರೋಜಿನ್‌ವಾಲ್ಡು ಎಂಬವನು ಮುಖ್ಯಾಧಿಕಾರಿಯು. ಈತನು ತನ್ನ ೫೦ನೇಯ ವರ್ಧಂತಿಯುತ್ಸವವನ್ನು ಮೊನ್ನೆ ತಾನೇ ಆಚರಿಸಿದನು. ಆಗ ರೂ. ೨೦,೬೩,೫೦೦ಯನ್ನು ಚಿಕಾಗೋ ವಿಶ್ವ ವಿದ್ಯಾಲಯಕ್ಕೂ ಸ್ವಜಾತಿ ಜನೋದ್ಧಾರಣಾಲಯಕ್ಕೂ ಪ್ರಜೋಪಯೋಗಕರವಾದ ಇತರ ಕಾರ್ಯಗಳಿಗೂ ಧರ್ಮ ಮಾಡಿದನು. ಇವನ ವ್ಯಾಪಾರವೆಲ್ಲವೂ ಅಂಚೆಯ ಮೂಲಕವಾಗಿಯೇ ನಡೆಯುವುದು. ಇವನ ಮತ್ತೂ ಇವನ ವರ್ತಕ ಸಂಘದ, ಅಥವಾ ಅದರಲ್ಲಿ ಕೆಲಸಮಾಡುವವರ ಮುಖವನ್ನೆಲ್ಲಾ ಲಕ್ಷಾಂತರ ಜನರು ಅಂಚೆಯ ಮೂಲಕವಾದ ಪತ್ರವ್ಯವಹಾರ ಪರಿಮುಖದಿಂದಲೇ ನೋಡಿ ವ್ಯಾಪಾರಮಾಡುತ್ತಿರುವರು. ಇಲ್ಲಿ ಒಂದು ಸಣ್ಣ ಸೂಜಿ ಮೊದಲುಗೊಂಡು ಲಕ್ಷಾಂತರ ಬೆಲೆಯ ಮಹಾ ವಸ್ತುಗಳ ವರೆಗೂ ಮಾರಾಟಕ್ಕಿಡಲ್ಪಟ್ಟಿರುವುವು. ಇಲ್ಲಿಂದ ಸಾಮಾನನ್ನು ತರಿಸಿಕೊಳ್ಳುವವರೆಲ್ಲಾ ಮುಂದಾಗಿಯೇ ಅಂಚೆಯ ಮೂಲಕ ಹಣವನ್ನು ಸಲ್ಲಿಸಿಬಿಟ್ಟು ತರಿಸಿಕೊಳ್ಳುವರು. ಹಣ ಬಂದ ದಿವಸವೇ ಅವರವರು ಕೋರಿದ್ದ ವಸ್ತುಗಳನ್ನು ಬಾಂಗಿ ಮಾಡಿ ಆ ಸಾಯಂಕಾಲದೊಳಗೇ ಅಂಚೆಗೆ ಸಲ್ಲಿಸಿಬಿಡುವರು. ಹಾಗೆ ಕಳುಹಿಸಿದ ವಸ್ತುವು ಸರಿಯಾಗಿಲ್ಲದಿದ್ದಲ್ಲಿ ಹಿಂದಿರುಗಿಸಿದರೆ, ಹಣವನ್ನು ಹಿಂದಕ್ಕೆ ಕಳುಹಿಸಿಕೊಟ್ಟು ಬಿಡುವರು. ಪ್ರತಿ ವರ್ಷದಲ್ಲೂ ೨೦ ಕೋಟಿ ರೂಪಾಯಿಗಳ ವರೆಗೆ ಈ ವರ್ತಕ ಸಂಘದಲ್ಲಿ ವ್ಯಾಪಾರವಾಗುವುದು. ಈ ಸಂಘದಲ್ಲಿ ೯ ಸಾವಿರ ಮಂದಿ ಕೆಲಸಗಾರರಿರುವರು. ಇವರಲ್ಲಿ ಕೆಲವರು ಸ್ತ್ರೀಯರೂ ಇರುವರು. ಸಂಕ್ಷಿಪ್ತಲಿಪಿಯನ್ನು ಬರೆಯುತಕ್ಕವರೇ ೧॥ ಸಾವಿರ ಮಂದಿಗಳಿರುವರು. ಅಮೇರಿಕಾ ಸಂಯುಕ್ತ ರಾಷ್ಟ್ರದ ಪ್ರತಿ ಪಟ್ಟಣದ ಹಳ್ಳಿ ಜನರೂ ಇಲ್ಲಿಂದ ಸಾಮಾನುಗಳನ್ನು ತರಿಸಿಕೊಳ್ಳುವರು. ಅಂತೂ ಪ್ರತಿ ಸಾಮಾನೂ ಅಂಚೆಯ ಮೂಲಕವೇ ಹೋಗುವುದು. ವರ್ಷಕ್ಕೊಂದು ಸಲ ಈ ಸಂಘದವರು ಪ್ರತಿಯೊಂದೂ ೧೫೦ ತೊಲ ತೂಕವುಳ್ಳ ಕ್ಯಾಟಲಾಗಿನ ೨೫ ಲಕ್ಷ ಪ್ರತಿಗಳನ್ನು ದೇಶದ ಮೇಲಿರುವ ತಮ್ಮ ವ್ಯಾಪಾರಿಗಳಿಗೆಲ್ಲಾ ಕಳುಹಿಸಿಕೊಡುವರು. ಅಂಥಾ ಕ್ಯಾಟಲಾಗಿನಲ್ಲಿ ಸಾಮಾನುಗಳ ಭಾವಚಿತ್ರವು ಒಂದು ಲಕ್ಷ ಇರುತ್ತಿರುವುವು. ಪ್ರತಿ ದಿನವೂ ಈ ಸಂಘಕ್ಕೆ ೬೦ ಸಾವಿರ ಕಾಗದಗಳು ಅಂಚೆಯಿಂದ ಬರುವುವು. ಅದರಲ್ಲಿ ಅನೇಕವು ಪದಾರ್ಥಗಳನ್ನು ಕೋರಿ ಬರೆಯಲ್ಪಟ್ಟುವುವಾಗಿರುವುವು. ಅಂಥ ಪ್ರತಿಯೊಂದು ಕಾಗದವೂ ೨೫ ರೂಪಾಯಿಗಳಿಗೆ ಕಡಿಮೆ ಇಲ್ಲದಷ್ಟು ಸಾಮಾನುಗಳಿಗಾಗಿ ಬರೆಯಲ್ಪಟ್ಟಿರುವುವು. ಆ ಕಾಗದಗಳನ್ನೆಲ್ಲಾ ಕೂಡಲೇ “ಗುಮಾಸ್ತರರು” ಹಂಚಿಕೊಂಡು, ಆಯಾ ಶಾಖೆಯ ಸಾಮಾನುಗಳನ್ನು ಅವರವರು ಬಾಂಗಿ ಕಟ್ಟಿಸಿ, ಆಯಾ ದಿನವೇ ಅಂಚೆಗೆ ಸಾಗಿಸಿ ಬಿಡುವರು. ಈ ಸಂಘದವರು ವರ್ಷ ೧ಕ್ಕೆ ಅಂಚೆಯ ತಲೆ ಚೀಟಿಗಾಗಿಯೇ ೪೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿರುವರು. ವ್ಯಾಪಾರವೆಂದರೆ ಇದೇ ಅಲ್ಲವೇ? ಮೈ. ಸ್ಟಾ.

~~~~~~

ಖುಷ್ಕಿ ಸಾಗುವಳಿ.

ನಮ್ಮ ದೇಶದಲ್ಲಿ ಖುಷ್ಕಿ ಸಾಗುವಳಿಗೆ ಸಾಮಾನ್ಯವಾಗಿ ಮಳೆ ನೀರೆ ಆಸರೆಯಾಗಿದೆ. ಆದರೆ ಪದೇಪದೇ ಸಕಾಲಕ್ಕೆ ಮಳೆಯಾಗದೆ ಇರುವದ್ದರಿಂದ ಅಂಥಾ ವರುಷಗಳಲ್ಲಿ ಫಸಲಾಗದೆ ಜನಗಳು ಬಹಳ ಕಷ್ಟನಷ್ಟಕ್ಕೆ ಗುರಿಯಾಗುತ್ತಿರುವರು. ಮುಖ್ಯವಾಗಿ ಮಳೆಯಾಗದೆ ಹೋದರೆ ಅದರ ಹಿಂದೆಯೇ ಕ್ಷಾಮವು ಅನುಸರಿಸಿ ಬರುವದು. ಮೇಲೆ ಹೇಳಿದಂತೆ ಮಳೆಯು ಖುಷ್ಕಿ ಸಾಗುವಳಿಗೆ ಆಸರೆಯಾಗಿರುವುದೇ ಇದಕ್ಕೆ ಕಾರಣ. ಆದರೆ ನಾವು ಅಪೇಕ್ಷಿಸಿದ ವೇಳೆಯಲ್ಲಿ ಮಳೆಯಾಗದಿದ್ದಾಗ್ಯೂ ಬಿದ್ದ ಅಲ್ಪಸ್ವಲ್ಪ ಮಳೆಯ ನೀರನ್ನು ಭೂಮಿಯಲ್ಲಿ ಕೂಡಿಟ್ಟಿದ್ದು ಪೈರುಗಳಿಗೆ ಒದಗುವಂತೆ ಮಾಡಬಹುದು. ಈ ಕೆಲಸವನ್ನು ಅಮೇರಿಕಾ ದೇಶದ ಸಂಯುಕ್ತ ಸಂಸ್ಥಾನದ ರೈತರು ಈಗ ಮಾಡುತ್ತಿದ್ದಾರೆ. ಪೈರನ್ನು ಇಡಲು ಮಳೆಯನ್ನೇ ನಿರೀಕ್ಷಿಸಿಕೊಂಡಿಲ್ಲದಿರುವದೇ ಈ ಕ್ರಮದ ಮುಖ್ಯಾಂಶವಾಗಿದೆ. ಈ ಕ್ರಮಕ್ಕೆ ಖುಷ್ಕಿ (Dry Farming) ಸಾಗುವಳಿ ಎಂದು ಹೆಸರಿಟ್ಟಿರುತ್ತಾರೆ. ಮೇಲ್ಕಂಡ ಕ್ರಮವನ್ನು ಈ ದೇಶದಲ್ಲಿಯೂ ಜಾರಿಯಲ್ಲಿ ತಂದರೆ ಇಲ್ಲಿನ ರೈತರು ಮತ್ತು ಇತರ ಪ್ರಜೆಗಳಿಗೆ ಬಹಳ ಕ್ಷೇಮವಾಗುವದರಲಿ ಸಂದೇಹವೇ ಇಲ್ಲ.

ಖುಷ್ಕಿ ಸಾಗುವಳಿಯೆಂದರೆ ಮಳೆಯ ನೀರನ್ನು ಭೂಮಿಯಲ್ಲಿ ಶೇಖರಿಸಿಟ್ಟು ಪೈರಿಗೆ ಆ ನೀರನ್ನು ಒದಗುವಂತೆ ಮಾಡುವುದೇ ಎಂದು ಹೇಳಬಹುದು. ಸಾಧಾರಣವಾಗಿ ಮರಳು ಕಾಡಿನ ಪ್ರದೇಶ ಹೊರ್ತು ಉಳಿದ ಪ್ರದೇಶಗಳಲ್ಲೆಲ್ಲಾ ನೀರು ಇದ್ದೇ ಇರುವದು. ಆದರೆ ಕೆಲವು ಪ್ರದೇಶಗಳಲ್ಲಿ ಅವಶ್ಯಕವಾದದ್ದಕ್ಕಿಂತಲೂ ಜಾಸ್ತಿ ನೀರಿರುವದು; ಇನ್ನು ಕೆಲವು ಪ್ರದೇಶಗಳಲ್ಲಿ ಎಷ್ಟು ಬೇಕೋ ಅಷ್ಟೇ ನೀರುಮಾತ್ರವಿರುವದು; ಮತ್ತೆ ಕೆಲವು ಪ್ರದೇಶಗಳಲ್ಲಿ ಅವಶ್ಯಕವಿರುವದಕ್ಕಿಂತಲೂ ಕಡಿಮೆ ನೀರಿರುವದು. ಅವಶ್ಯಕವಾದ್ದಕ್ಕಿಂತಲೂ ಕಡಿಮೆ ನೀರಿದ್ದರೆ ಸಾಗುವಳಿಗೆ ಎಷ್ಟು ಅನಾನುಕೂಲವೋ ಜಾಸ್ತಿ ನೀರಿದ್ದರೂ ಅಷ್ಟೇ ಅನಾನುಕೂಲವಿರುವದು. ಆದರೆ ಇಂಥಾ ಅನಾನುಕೂಲಗಳನ್ನು ಹೋಗಲಾಡಿಸಿ ಅವಶ್ಯಕವಿದ್ದಷ್ಟು ನೀರಿದ್ದರೆ ಹೊಂದಬಹುದಾದ ಪ್ರಯೋಜನವನ್ನೇ ಇತರ ಸಂದರ್ಭಗಳಲ್ಲೂ ಹೊಂದುವಂತೆ ಮಾಡುವುದೇ ಅಮೇರಿಕಾ ದೇಶಸ್ಥರು ಅನುಸರಿಸುತ್ತಿರುವ ಖುಷ್ಕಿ ವ್ಯವಸಾಯದ ಮುಖ್ಯ ಜೀವಾಳವಾಗಿದೆ.

ಈ ಕ್ರಮದಲ್ಲಿ ಎರಡು ವಿಧಗಳುಂಟು:—(೧) ಆಳವಾಗಿ ಉತ್ತು ಜಮೀನಿನ ಮಣ್ಣನ್ನು ಸಡಲಿಸುವುದು; (೨) ಆಳವಾಗಿ ಉಳುವುದರಿಂದ ಜಮೀನಿನ ಕೆಳಗಿನ ಪದರದಲ್ಲಿ ಹೋಗಿ ಸೇರತಕ್ಕ ಮಳೆಯ ನೀರು ಪೈರು ಪಚ್ಚೆಗಳಿಗೆ ಒದಗುವಂತೆ ಮೇಲ್ಭಾಗಕ್ಕೆ ಬರುವ ಹಾಗೆ ಮಾಡುವದು.

ಒಂದು ಸಾಲಿನ ಕಟಾವಾದ ಕೂಡಲೆ ಮುಂದಲ ಮಳೆಯಾಗುವದಕ್ಕೆ ಮುಂಚೆ ಜಮೀನನ್ನು ಚೆನ್ನಾಗಿ ಆಳವಾಗಿ ಉಳುತ್ತಾರೆ. ಭೂಮಿಯ ಕೆಳಗಿನ ಪದರವನ್ನು ಗಟ್ಟಿಯಾಗುವಂತೆ ಮಾಡಿ ಮೇಲ್ಭಾಗದ ಮಣ್ಣನ್ನು ಕುಂಟೆಹೊಡೆದು ಚೆನ್ನಾಗಿ ಸಡಲಿಸಿ ಪುಡಿಪುಡಿ ಮಾಡುತ್ತಾರೆ. ಸಾಧ್ಯವಾದರೆ ಜಮೀನನ್ನು ಉಳುವದು, ಕೆಳಗಿನ ಪದರವನ್ನು ಗಟ್ಟಿಮಾಡುವದು ಮತ್ತು ಕುಂಟೆ ಹೊಡೆಯುವದು ಈ ಮೂರು ಕೆಲಸಗಳನ್ನೂ ಒಂದೇ ದಿನ ಮಾಡುವುದು ಉತ್ತಮ.

ಮಳೆಯಾದೊಡನೆಯೇ ಕುಂಟೆ ಹೊಡೆದು ಮಣ್ಣನ್ನು ಪುಡಿಪುಡಿಮಾಡುತ್ತಾರೆ. ಹೀಗೆ ಮಾಡುವುದರಿಂದ ಮಳೆಯ ನೀರಿನಿಂದ ಭೂಮಿಯಲ್ಲಿ ಉಂಟಾಗಿರುವ ತನುವು ಬಿಸಲಿಗೆ ಒಣಗಿಹೋಗದೆ ಭೂಮಿಯಲ್ಲಿಯೇ ಇರುವುದು. ಇದೇ ರೀತಿಯಲ್ಲಿ ಮಳೆಯಾದಾಗಲೂ ಮತ್ತು ಜಮೀನಿನ ಮೇಲ್ಭಾಗವು ಗಟ್ಟಿಯಾದ ಸಂದರ್ಭದಲ್ಲೂ ಕುಂಟೇ ಹೊಡೆಯುತ್ತಲೇ ಇರುತ್ತಾರೆ. ಬೀಜಗಳನ್ನು ಕೂರಿಗೆಗಳಲ್ಲಿ ಹಾಕಿ ಬಹಳ ಆಳ ಅಂದರೆ ೩-೮ ಅಂಗುಲ ಆಳವಾಗಿಯೂ ಮತ್ತು ವಿರಳವಾಗಿಯೂ ಬಿತ್ತುತ್ತಾರೆ. ಬಿತ್ತನೆಯಾದನಂತರ ಪುನಃ ಕುಂಟೆ ಹೊಡೆಯುತ್ತಾರೆ.

ಈ ವ್ಯವಸಾಯ ಕ್ರಮದಲ್ಲಿ ಒಂದು ಕಾಲು ಹದ ಮಳೆಯಾದಾಗ್ಯೂ ಪೈರಿಗೆ ಬಹಳ ಪ್ರಯೋಜನವಾಗುವುದು. ಯಾವದಾದರೊಂದು ಪ್ರದೇಶದಲ್ಲಿ ಮಳೆಯು ಬಹಳ ಕಡಿಮೆಯಾದರೆ ಬೀಜಗಳನ್ನು ದೂರ ದೂರವಾಗಿ ನೆಡಬೇಕು. ಪೈರುಗಳ ಮಧ್ಯ ಬಿಡತಕ್ಕ ಜಾಗಗಳಲ್ಲಿ ಇತರ ಬೆಳೆಗಳನ್ನು ಇಡಲು ಅನುಕೂಲವಾಗುತ್ತದೆ. ಈ ಕ್ರಮದಲ್ಲಿ ಕೆಲವು ಸಂದರ್ಭಗಳಲ್ಲಿ ಉತ್ಪತ್ತಿಯು ಬಹಳವಾಗಿ ಆಗುವುದುಂಟು. ಆದರೆ ಸದಾ ಕಾಲದಲ್ಲೂ ಹೀಗೆ ಹೆಚ್ಚು ಉತ್ಪತ್ತಿಯೇ ದೊರೆಯುವುದೆಂದು ಹೇಳಲಾಗುವುದಿಲ್ಲ. ಯಾವ ಬೆಳೆಯೂ ಆಗದೇ ಇರತಕ್ಕ ಪ್ರದೇಶದಲ್ಲಿ ಅಲ್ಪಸ್ವಲ್ಪ ಬೆಳೆಯನ್ನಾದರೂ ತೆಗಿಯಬೇಕೆಂಬುವುದೇ ಈ ವ್ಯವಸಾಯ ಕ್ರಮದ ಮುಖ್ಯೋದ್ದೇಶವಾಗಿದೆ.

ಕಿ. ಗೆ.

* * *

ಪತ್ರವ್ಯವಹಾರ.

ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.

ಮಂಗಳೂರು ಹೂವಿನ ಯಾ ಕಾಯಿಪಲ್ಯದ ಮಾರ್ಕೆಟು.

ಅಯ್ಯಾ,

ನಮ್ಮ ಮುನಿಸಿಪಾಲಿಟಿಯಲ್ಲಿ ಜನರಿಗೆ ಒಳ್ಳೇ ಕಾಯಿಪಲ್ಯ, ಹಣ್ಣುಹಂಪಲುಗಳು ಮುಂತಾದವುಗಳನ್ನು ಒದಗಿಸಿಕೊಡಲು ತೇರು ಬೀದಿಯಲ್ಲಿ ಒಂದು ಮಾರ್ಕೆಟಿರುವುದು. ಈ ಮಾರ್ಕೆಟಿನ ಸೌಕರ್ಯಗಳು ನಮಗೆ ತಿಳಿದೇ ಇದೆ.

ಇಂಥಾ ಪ್ರತಿ ಒಂದು ಮಾರ್ಕೆಟಿನ ಸುಸ್ಥಿತಿ, ಆರೋಗ್ಯ ಸ್ಥಿತಿ ಹೆಚ್ಚಾಗಿ ಮುನಿಸಿಪಲ್ ಕೌನ್ಸಿಲು ಮೂಲಕ ನೇಮಕಪಟ್ಟ ಕಂಟ್ರಾಕ್ಟರರ ಮೇಲೆ ಹೊಂದಿರುತ್ತದೆ. ಕಂಟ್ರಾಕ್ಟರರು ಗೇಟು ಹಣ ಮಾತ್ರ ದಿಟ್ಟಿಸಿ ನೋಡುವದಲ್ಲ; ಕೌನ್ಸಿಲು ನಿಯಮಗಳ ಪ್ರಕಾರ ಆಯಾ ಮಾರ್ಕೆಟಿನ ವ್ಯಾಪಾರಿಗಳ ವ ಅಲ್ಲಿ ಬರುವ ಗಿರಾಕಿಗಳ ಸೌಕರ್ಯಗಳನ್ನು ಸಹ ನೋಡಬೇಕೆಂತ ತೋರುತ್ತದೆ. ಪ್ರತಿ ಕಂಟ್ರಾಕ್ಟರರು ಆಯಾ ಮಾರ್ಕೆಟುಗಳಿಗೆ ಸಂಬಂಧವಾದ ಕೆಲವು ನಿಯಮಗಳಿಗೆ ಒಳಪಟ್ಟಿರುತ್ತಾರೆಂತ ಕಾಣುತ್ತದೆ. ಹೀಗಿರುತ್ತಾ ತೇರು ಬೀದಿಯಲ್ಲಿರುವ ಹೂವಿನ ವ ಕಾಯಿಪಲ್ಯದ ಮಾರ್ಕೆಟಿನ ಸ್ಥಿತಿ ಏನೆಂತ ಹೇಳಲಿ.! ಕೆಲವು ತಿಂಗಳ ಹಿಂದೆ ಈ ಮಾರ್ಕೆಟನ್ನು ಸೆಂಟ್ರಲ್ ವಾರ್ಡಿನ ಮುನಿಸಿಪಾಲ್ ಕೌನ್ಸಿಲರುಗಳು, ನಮ್ಮ ಪ್ರೀತಿ ಪಾತ್ರರಾದ ಮಾಜಿ ಚೆಯರಮೇನರು, ಗತರಾದ ಸೆಕ್ರಿಟೆರಿಗಳನ್ನು ಸಂದರ್ಶನೆ ಮಾಡಿ ಕೆಲವು ಏರ್ಪಾಡುಗಳನ್ನು ಮಾಡಿದರು. ಕಂಟ್ರಾಕ್ಟರರಿಗೂ ಸೂಚನೆ ಕೊಟ್ಟಿದ್ದರು. "ವೆಜಿಟೆಬಲ್" "ಫ್ಲವರ್" ಷ್ಟೋಲ್ಸ್‌ಗಳೆಂತ ೨ ಸ್ಯಾನ್ ಬೋರ್ಡುಗಳು ತೂಗ ಹಾಕಿಸಿದರು. ಹೂವಿನ ಮಾರಾಟದವರಿಗೆ ಮತ್ತು ಕಾಯಿಪಲ್ಯದ ವ್ಯಾಪಾರಿಗಳಿಗೆ ಬೇರೆ ಬೇರೆ ಸ್ಥಳಗಳು ನೇಮಕವಾದವು. ಹೂವಿನ ಹೆಂಗಸರು ತಕ್ಕ ಸ್ಥಳಗಳಲ್ಲಿ ನಿಲ್ಲುವಂತೆಯೂ ಆಚೆ ಈಚೆ ತಿರುಗಾಡಿ ಗಿರಾಕಿಗಳ ಪ್ರವೇಶಕ್ಕೆ ತಡೆಮಾಡದಂತೆಯೂ ಅಪ್ಪಣೆ ಕೊಡಿಸಲಾಯಿತು. ಈ ರೀತಿ ಮಾರ್ಕೆಟು ಒಳ್ಳೇ ಸುಸ್ಥಿತಿಯಲ್ಲಿರಿಸಲ್ಪಟ್ಟಿತು.

ತರುವಾಯ ಸೆಂಟ್ರಲ್ ವಾರ್ಡಿನ ಮೆಂಬರರ ಅವಧಿ ತೀರಿತು; ಸೆಕ್ರಿಟೆರಿಗಳು ದೈವಾಧೀನರಾದರು. ಚೆಯರಮೇನರಾದ ಬಹುಮಾನಪಟ್ಟ ರಾವ್ ಬಹದ್ದೂರ ನಯಂಪಳ್ಳಿ ಸುಬ್ರಾಯರು ತಮ್ಮ ಅವಧಿಯು ತೀರಿ ತಮ್ಮ ಪದವಿಯನ್ನು ಖಾಲಿಬಿಟ್ಟಿರುವರು. "ಬೆಕ್ಕು ಹೊರಗೆ ಹೋಗುತ್ತಲೆ ಇಲಿಯ ಕಾಟ ಹೆಚ್ಚಾಗುವಂತೆ" ಮಾರ್ಕೆಟಿನ ವ್ಯಾಪಾರಿಗಳ ಕಾಟ ಹೆಚ್ಚಾಯಿತು.

ತೂಗಹಾಕಿದ ಬೋರ್ಡುಗಳು ಮಾಯವಾಗಿವೆ. ಹೂವಿನ ಹೆಂಗಸರು ಬೀದಿಯಲ್ಲಿಯೂ, ಗೇಟಿನ ಬಳಿಯಲ್ಲಿಯೂ ನಿಂತು ಗಿರಾಕಿಗಳಿಗೆ ತಡೆ ಕಟ್ಟುವರು. ಕಾಯಿಪಲ್ಯದವರ ಠಾಣ್ಯ ಯಾವದೆಂತ ಇಲ್ಲ. ಕೆಲವರು ಮಾತ್ರ ಮುಂಚೆ ನೇಮಕವಾದ ಸ್ಥಳಗಳಲ್ಲಿ ಕೂತಿರುವರು. ಆದರೆ ಮಾರ್ಕೆಟೆ ಮುಂದುಗಡೆ ಬರಲಾಗುವುದಿಲ್ಲವಾದ್ದರಿಂದ ಇವರಿಗೆ ಹೆಚ್ಚು ನಷ್ಟ. ಹೆಂಗಸರನ್ನು ಆಚೆಈಚೆ ದೂಡಿಕೊಂಡು ಪೋಕ್ರಿಗಳಂತೆ ಗಿರಾಕಿಗಳು ಮಾರ್ಕೆಟನ್ನು ಪ್ರವೇಶಿಸಬೇಕು. ಅಲ್ಲಿ ವಿಕ್ರಿತಕ್ಕೆ ಸಾಮಾಗ್ರಿಗಳನ್ನು ತರುವವರೆಲ್ಲರಿಗೂ ಒಂದೇ ಸಮವಾದ ಪ್ರಯೋಜನ ದೊರಕದು. ಇಂಥಾ ದುಸ್ಥಿತಿಯನ್ನು ಪರಿಹರಿಸುವುದು ಮ್ಯುನಿಸಿಪಲ್ ಅಧಿಕಾರಿಗಳ ಕರ್ತವ್ಯವಲ್ಲವೇ?

ಸೆಂಟ್ರಲ್‌ವಾರ್ಡ್, ಮಂಗಳೂರು.
ತಾ. 7—10—12.

ಸತತದರ್ಶಿ.

* * *

ಪೋಲೀಸ್ ಅಧಿಕಾರಿಗಳಿಗೆ ಸೂಚನೆ.

ಅಯ್ಯಾ ಪತ್ರಾಧಿಪರೇ,

ರಸ್ತೆಗಳಲ್ಲಿ ಅಸಹ್ಯವಾದ ಮತ್ತು ಅಪಾಯಕರವಾದ ಯಾವುದೊಂದು ಕೃತ್ಯವಾದರೂ ಸಂಭವಿಸದಂತೆ ಪೋಲೀಸಿನವರು ಹಗಲು ರಾತ್ರೆ ಈ ಪಟ್ಟಣದಲ್ಲಿ ಬೀಟು ಮಾಡುತ್ತಿರುವರು. ನ್ಯೂಸೆನ್ಸ್ ಆಕ್ಟು ಪ್ರಕಾರ ತಪ್ಪಿತಸ್ಥರನ್ನು ಶೋಧನೆ ಮಾಡಿ ಹಿಡಿದು ಪ್ರತಿ ಸೋಮವಾರ ಹಲವು ಮೊಕದಮೆಗಳನ್ನು ಪೋಲೀಸಿನವರು ಬೆಂಚು ಮೇಜಿಸ್ಟ್ರೇಟರ ಮುಂದೆ ನಡಿಸುತ್ತಿರುವರು. ಆದರೆ ಈ ಪಟ್ಟಣದಲ್ಲಿ ಅತಿ ಸಾಮಾನ್ಯವಾಗಿರುವ ನ್ಯೂಸೆನ್ಸು ಇನ್ನೂ ಪೋಲೀಸಿನವರು ಕಂಡುಹಿಡಿದಿದ್ದಿಲ್ಲ. ಪಾರಿವಾಳಗಳನ್ನು ಕಂಡಲ್ಲಿ ಹಾರಲಿಕ್ಕೆ ಬಿಟ್ಟು, ಅವುಗಳು ಯಾವದಾದರೂ ಮನೆಗಳ ಹಂಚಿನ ಮಾಡಿನ ಮೇಲೆ ಬಂದು ಕೂತೊಡನೆ ಈ ಪಾರಿವಾಳಗಳನ್ನು ಮಾಡುಗಳಿಂದ ಓಡಿಸಲು ಕಲ್ಲುಗಳ ಮಳೆಗಳನ್ನು ಬೀದಿಗಳಲ್ಲಿ ನಿಂತು ಗರೆಯುವುದು ಇಲ್ಲಿ ವಾಡಿಕೆಯಾಗಿದೆ. ಹಂಚುಗಳು ಒಡೆದು ಹೋಗುತ್ತಿವೆಂತ ಹೇಳಿದರೆ ಈ ಮಳೆಯು ಮತ್ತಷ್ಟು ಜೋರಾಗುವುದು. ಇಷ್ಟೇ ಅಲ್ಲ; ಮನೆಗಳ ವಠಾರಗಳನ್ನು ಪ್ರವೇಶಿಸಕೂಡದೆಂದು ಹೇಳಿದರೂ ಬಲತ್ಕಾರದಿಂದ ಗೋಡೆಗಳನ್ನು ಹತ್ತಿ ಬಂದು ಪಾರಿವಾಳಗಳನ್ನು ಓಡಿಸುವ ಸಾಹಸವು ನ್ಯೂಸೆನ್ಸಿಗೆ ಮಿಕ್ಕಿರುವುದು. ಸಿಕ್ಕಿದವರ ಮನೆಗಳಿಗೆ ಕಲ್ಲುಗಳನ್ನು ಎಸೆಯುವುದು ನ್ಯೂಸೆನ್ಸ್ ಆಕ್ಟು ಪ್ರಕಾರ ತಪ್ಪಲ್ಲವೋ? ಪೋಲೀಸ್ ಅಧಿಕಾರಿಗಳು! ಈ ವಿಷಯವನ್ನು ಆಲೋಚಿಸಿ ತಕ್ಕ ನಿವೃತ್ತಿಯನ್ನು ಮಾಡುವುದು ಉಚಿತವಾಗಿದೆ.

ಪುರವಾಸಿ.

* * *

ಪ್ರೇತ ಸಂಸ್ಕಾರ ಪದ್ಧತಿ.

ಸ್ವಾಮಿ, ಸ್ವದೇಶಾಭಿಮಾನಿ ಪತ್ರ ಸಂಪಾದಕರೇ,

ತಮ್ಮ ಪತ್ರದ ಒಂದು ಮೂಲೆಯಲ್ಲಿ ನನ್ನ ಕೆಲವು ಪಂಕ್ತಿಗಳಿಗೂ ದಯಮಾಡಿ ಸ್ವಲ್ಪ ಸ್ಥಳ ಕೊಡಿರಿ.

ತಮ್ಮ ಬಾತ್ಮಿದಾರರು 'ಹೆಣನವರು' ಮತ್ತು 'ಕದಳಿ ಬಾಪ್ಪಯ್ಯನವರು' ತಮ್ಮ ಪತ್ರಿಕೆಯ ಮೂಲಕ ಪ್ರಕಟಿಸಿದ ಅಭಿಪ್ರಾಯಗಳನ್ನು ವಿವೇಚಿಸಿ ನೋಡಿದರೆ ಸ್ತ್ರೀಯರು ಪುರುಷರನ್ನೂ ಪುರುಷರು ಸ್ತ್ರೀಯರನ್ನೂ ದೂಷಿಸುವುದು ನ್ಯಾಯವೆಂತ ನನಗೆ ತೋರುವುದಿಲ್ಲ.

ಹೆಣಗಳನ್ನು ಕಂಡ ಕೂಡಲೇ ಓಡಿಹೋಗುವುದು ಪಶುಗಳ ಲಕ್ಷಣವಾಗಿರುತ್ತದೆ. ಹಿಂಡಿನಲ್ಲಿರುವ ಒಂದು ದನವು ಸತ್ತು ಹೋಗುತ್ತಲೇ ಉಳಿದ ದನಗಳು ಕಿವಿಗಳನ್ನೂ ಬಾಲಗಳನ್ನೂ ನೀಟಮಾಡಿ ಓಡಿ ಹೋಗುವುದನ್ನು ತಾವು ಕಾಣಲಿಲ್ಲವೇ. ಸರ್ವ ಪಶುಗಳಲ್ಲಿಯೂ ಇಂತಹ ಲಕ್ಷಣವುಂಟು. ಸ್ವಜಾತಿಯ ಒಂದು ಪಶು ಸಾಯುತ್ತಲೇ ಉಳಿದ ಪಶುಗಳು ಓಡಿ ಹೋಗುವವು. ಒಂದು ಸ್ತ್ರೀಗೆ ಪ್ರಾಣ ತೊಲಗುತ್ತಲೇ ಇತರ ಸ್ತ್ರೀಯರು ಓಡಿ ಹೋಗುವುದು ಏನು ಆಶ್ಚರ್ಯ?

ಒಂದು ವೇಳೆ ಸ್ತ್ರೀಯರು ಹೆಣ್ಣು ಶವವನ್ನು ಅಲಂಕರಿಸುವುದಕ್ಕೆ ಬರುತ್ತಾರೆಂತ ತಿಳಕೊಳ್ಳಿ. ಅವರು ಬಂದು ಶವವನ್ನು ಅಲಂಕರಿಸಿ ಪ್ರಯೋಜನವೇನು? ಕದಳಿ ಬಾಪ್ಪಯ್ಯನವರು ಹೆಣಗಳನ್ನು ಹೊತ್ತು ಹೆಗಲಿಗೆ ಜಡ್ಡು ಕಟ್ಟಿ ಹೋಗಿದೆ ಎಂತ ಹೇಳುತ್ತಾರಷ್ಟೆ. ಅವರ ಅನುಭವವನ್ನು ದಯಮಾಡಿ ಕೇಳಿರಿ. ತೋಟಿಗಳು ಎಮ್ಮೆ ಕರುಗಳ ಹೆಣಗಳನ್ನು ಹೇಗೆ ಹೊತ್ತುಕೊಂಡು ಹೋಗುತ್ತಾರೋ ಅದೇ ರೀತಿಯಲ್ಲಿ ಬಾಪ್ಪಯ್ಯನವರು ಇದು ವರೆಗೂ ಶವಗಳನ್ನು ಸ್ಮಶಾನಕ್ಕೆ ಹೊತ್ತುಕೊಂಡು ಹೋಗಿದ್ದರೆಂಬದು ಒಪ್ಪುವರು. ಮರಣ ಸಂಭವಿಸಿದ ಕೋಣೆಯಲ್ಲೆ ಶವವನ್ನು ಸ್ನಾನ ಮಾಡಿಸಿ ಅಥವ ಒದ್ದೆ ವಸ್ತ್ರದಿಂದ ಶರೀರವನ್ನು ಉಜ್ಜಿ ಕೋಣೆಯಲ್ಲೇ ಅಲಂಕರಿಸಿ ತಕ್ಕ ಮರ್ಯಾದೆಯಿಂದ ಶವವನ್ನು ಸ್ಮಶಾನಕ್ಕೆ ವೈಯುವ ಪದ್ಧತಿಯು ನಮ್ಮ ಜಿಲ್ಲೆಯಲ್ಲಿ ಮೇಲ್ ಜಾತಿಯ ಹಿಂದುಗಳಲ್ಲಿ ಇರುವುದಿಲ್ಲ. ಒಂದು ಸ್ತ್ರೀಯ ಶವವನ್ನು ಅಸಹ್ಯ ರೀತಿಯಿಂದ ಹೊರಗೆ ತಂದು, ಅಂಗಳದಲ್ಲಿ ಬಹಿರಂಗವಾಗಿ ಮಣೆಯಲ್ಲಿ ಕೂಂಡ್ರಿಸಿ ಸರ್ವಾಂಗ ನೀರು ಹೊಯ್ದು ಶರೀರವೆಲ್ಲವೂ ಕೂಡಿದ ಜನರ ನೋಟಕ್ಕೆ ಗುರಿಪಡಿಸಿದನಂತರ ಸ್ತ್ರೀಯರು ಆ ಶವವನ್ನು ಅಲಂಕರಿಸಿ ಪ್ರಯೋಜನವೇನು?

ಅಹಃ! ಕ್ರೈಸ್ತರ ದುರ್ವ್ಯಸನಗಳನ್ನು ನಮ್ಮ ಜನರು ಅತಿ ಸುಲಭದಲ್ಲಿ ಹಿಡಕೊಳ್ಳುತ್ತಾರೆ. ಅವರ ಕೆಲವು ಪದ್ಧತಿಗಳಲ್ಲಿರುವ ಸೌಂದರ್ಯವು ನಮ್ಮ ಕುರುಡ ಕಣ್ಣುಗಳಿಗೆ ಕಾಣುವುದೇ ಇಲ್ಲ.

ದೊಡ್ಡ ಬಾಳಪ್ಪಯ್ಯ.

* * *

ವಿದೇಶ ವೃತ್ತಾಂತ.

ಐರ್ಲಾಂಡಿಗೆ ಹೋಮ್‌ರೂಲು ಕೊಡುವುದಕ್ಕೆ ಅಲಸ್ಟರಿನವರು ಮಾಡುವ ಚಳವಳದಿಂದ ಹೋಮ್‌ರೂಲನ್ನು ಕೊಡುವುದಕ್ಕೆ ಎಂದೂ ವಿಘ್ನಬರಲಿಕ್ಕಿಲ್ಲ; ಈ ಮಸೂದೆಯು ಈ ವರ್ಷಾಂತ್ಯದೊಳಗೆ ಜಾರಿಗೆ ಬಂದೀತು ಎಂಬದಾಗಿ ಸರ್ ಇಸಾಕ್ ರಫುಸರವರು ಹೇಳುವರು.

ಅಲಸ್ಟರಿನವರು ಕಳೆದ ವಾರ ಕರಾರು ಮಾಡಿಕೊಂಡದ್ದರಿಂದ ಈ ಮಸೂದೆಯು ಹ್ಯಾಗೂ ಪ್ರಭು ಮಂದಿರದಲ್ಲಿ ಮಂಜೂರು ಪಡೆಯಲಿಕ್ಕಿಲ್ಲ ಎಂಬದಾಗಿ ಯುನ್ಯನಿಷ್ಟರು ನಂಬಿರುವರು.

ಡಬ್ಲಿನಿನ ಮತ್ತು ದಕ್ಷಿಣ ಐರ್ಲಾಂಡಿನ ಪ್ರತಿ ಒಬ್ಬನು ಹೋಮುರೂಲು - ಮಸೂದೆಯ ಬಲ ಕುಂದಿತೆಂತ ತಿಳಿದಿರುವರೆಂಬದಾಗಿ ಟ್ಯಾಮ್ಸ್ ಪತ್ರಿಕೆಯ ಡಬ್ಲಿನ್ ಬಾತ್ಮೀದಾರರು ಬರಿಯುವರು.

ಹೋಮುರೂಲು ಮಸೂದೆಯು ಕಾನೂನಾಗಿ ಜಾರಿಗೆ ಬರುವ ಮೊದಲು ಜನಸಮುದಾಯದ ಆಲೋಚನೆಯನ್ನು ಕೇಳಿಕೊಳ್ಳುವರೆ ಈ ಮಸೂದೆಯು ಜನರ ಮುಂದೆ ಇಡಲ್ಪಡುವದು ಎಂಬದಾಗಿ ಯುನ್ಯನಿಷ್ಟ ಪಕ್ಷದ ಪ್ಯೆಕ್ ಪೀಸ್ ಎಂಬವರು ಹೇಳುವರು. ಆದರೆ ಈ ಮಾತಿಗೆ ಆಧಾರವಿಲ್ಲವೆಂಬದಾಗಿ ಹೋಮ್ ಸೆಕ್ರಟರಿಯಾದ ಮೆ| ಮೆಕನ್ನರವರು ಹೇಳುವರು.

* * *

ಹಿಂದೂಸ್ಥಾನದ ಉಪ ಸೆಕ್ರಟರಿಯಾಗಿರುವ ಮೊಂಟೇಗರವರು ಹಿಂದೂಸ್ಥಾನಕ್ಕೆ ಬರುವದಕ್ಕಾಗಿ ತನ್ನ ಸಹೋದರ ಮೆ| ಲಯನೆಲ್ ಮತ್ತು ಖಾಸಗಿ ಸೆಕ್ರಟರಿಯಾಗಿರುವ ಮೆ| ಪೀಲರೊಂದಿಗೆ ತಾ. ೩ರಲ್ಲು ಮಲೋಜ ಎಂಬ ಹಡಗದಲ್ಲಿ ಪ್ರಯಾಣ ಮಾಡುವರೆ ವಿಕ್ಟೋರಿಯ ರೈಲ್ವೇ ಸ್ಟೇಶನಿನಲ್ಲಿ ಅಗ್ಗಾಡಿ ಹತ್ತಿದರು. ಸರ್ ಗ್ಯಾಪ್ಲಿಟ್‌ವುಡ್ ವಿಲ್ಸನರವರೂ, ಸರ್ ಕೃಷ್ಣ ಗುಪ್ತರವರೂ ಹಿಂದೂಸ್ಥಾನಕ್ಕೆ ಪ್ರಯಾಣಮಾಡುವವರಾಗಿದ್ದು ಅದೇ ಅಗ್ಗಾಡಿಯಲ್ಲಿದ್ದರು.

* * *

ಡಬ್ಲಿನ್ ನಾಟಕ ಮಂದಿರದಲ್ಲಿ ಪ್ರಧಾನ ಮಂತ್ರಿಯವರಾದ ಮೆ| ಅಸ್ಕ್ವಿತರವರಿಗೆ ಉರಿಯುವ ಕುರ್ಸಿಗಳನ್ನು ಬಿಸಾಡಿದ ಸಫ್ರಜೆಟ್ಟ ಸ್ತ್ರೀಯರಲ್ಲಿ ೫ ವರ್ಷಗಳ ಸಜಾವಿಧಿಸಲ್ಪಟ್ಟ ಮೇರಿ ಲೀ ಎಂಬವಳು ಉಣ್ಣದೆ ಕುಡಿಯದೆ ಇದ್ದದರಿಂದ ಬಿಡಿಸಲ್ಪಟ್ಟಳು ಎಂಬದಾಗಿ ಕಳೆದ ಸಾರಿ ತಿಳಿಸಿದ್ದೇವಷ್ಟೆ. ಅವಳೊಡನೆ ಶಿಕ್ಷೆ ಹೊಂದಿದ ಗ್ಲೇಡಿಸ್ ಇವನ್ಸಳೂ ಮೇರಿಯ ಮಾರ್ಗವನ್ನೇ ಅನುಸರಿಸಿದ್ದರಿಂದ ತಾ. ೩ರಲ್ಲು ಶೆರೆಯಿಂದ ಬಿಡಿಸಲ್ಪಟ್ಟಳು.

* * *

ಟ್ರಿಪೋಲಿ ಯುದ್ಧದ ಸಂಬಂಧ ಇಟಾಲಿಯವರಿಗೂ ತುರ್ಕರಿಗೂ ಸಂಧಾನವಾಯಿತೆಂಬ ವಾರ್ತೆಯನ್ನು ಇಟಾಲಿಯರು ಅಲ್ಲವೆಂದರೂ ಸಂಧಾನವು ಬೇಗನೇ ಅಂತ್ಯವಾಗುವ ಸಂಭವವಿದೆ ಎಂದು ತುರ್ಕರ ಮುಖ್ಯಪಟ್ಟಣವಾದ ಕನ್‌ಸ್ತಂತಿನೋಪಲಿನಲ್ಲಿ ವಾರ್ತೆ ಇದೆ.

ತುರ್ಕಿ ಸರಕಾರದವರು ಸಂಧಾನದ ವಿಷಯವಾಗಿ ಇಟಾಲಿಯರು ಕೇಳಿಕೊಂಡ ಶರ್ತಗಳಿಗೆ ಒಪ್ಪಿದ್ದಾರೆಂದೂ ಸಂಧಾನದ ಪ್ರಥಮ ಪ್ರತಿಗೆ ಔಚಿಯಲ್ಲಿ ಸಹಿ ಹಾಕುವರೆ ಕನ್‌ಸ್ತಂತಿನೋಪಲಿನಿಂದ ಸ್ಪೆಶ್ಯಲ್ ಪ್ರತಿನಿಧಿಯು ಹೋಗಿದ್ದಾರೆಂದೂ ಕನ್‌ಸ್ತಂತಿನೋಪಲಿನಿಂದ ಪಾರಿಸಿಗೆ ತಾ. ೪ರಲ್ಲು ತಂತೀ ಬಂದಿರುವದು.

* * *

ತಾ. ೫ರಲ್ಲು ಬಹುಮಾನಪಟ್ಟ ಗೋಖಲೆಯವರು ಲಂಡನಿನಿಂದ ದಕ್ಷಿಣ ಅಫ್ರೀಕಕ್ಕೆ ಹೊರಟರು. ಈ ಸಂಬಂಧ ಲಂಡನಿನಲ್ಲಿರುವ ಭಾರತೀಯರು ಸರ್ ಎಮ್. ಭವನಾಗ್ರಿಯವರ ಅಧ್ಯಕ್ಷತೆಯಲ್ಲಿ ಸಭೆಕೂಡಿ ಸ್ವಸ್ತಿವಚನವನ್ನು ನುಡಿದರು. ಗೋಖಲೆಯವರು ದಕ್ಷಿಣ ಆಫ್ರೀಕದಿಂದ ನವಂಬರ ತಾ. ೧೭ರಲ್ಲು ಹಿಂದೂಸ್ಥಾನಕ್ಕೆ ಹೊರಡುವರು.

* * *

ಅಮೇರಿಕದ ಮಾಜಿ ಪ್ರೆಸಿಡೆಂಟರಾದ ರೊಸ್‌ವೆಲ್ಟರು ೧೯೦೪ನೇ ಇಸವಿಯಲ್ಲಿ ಸ್ಟೇಂಡಾರ್ಡ್ ಓೈಲ್ ಕಂಪೆನಿಯಿಂದ ೩೦,೦೦೦ ಪವನುಗಳನ್ನು ತಕ್ಕೊಂಡಿದ್ದಾರೆಂಬದಾಗಿ ಆರೋಪಿಸಲ್ಪಟ್ಟು ಈ ಬಗ್ಗೆ ತಕ್ಕ ತನಖಿ ನಡಿಸುವರೆ ಈಗಿನ ಪ್ರೆಸಿಡೆಂಟರಾದ ಟಾಪ್ಟರವರು ಪ್ರತ್ಯೇಕ ಒಂದು ಕಮಿಷನ್ ನೇಮಿಸಿದ್ದಾರೆಂದು ತಿಳಿಸಿತ್ತಷ್ಟೆ. ರೋಸ್‌ವೆಲ್ಟರು ತಾನು ಸ್ಟೇಂಡಾರ್ಡ್ ಕಂಪೆನಿಯವರಿಂದ ಹಣ ತಕ್ಕೊಳ್ಳಲೇ ಇಲ್ಲವೆಂದೂ ಈ ವಿಷಯ ತನಗೆ ಯಾವದೊಂದು ಸಂಗತಿಯು ಗೊತ್ತಿಲ್ಲವೆಂದೂ ಹೇಳಿರುವರು.

* * *

ಮಧ್ಯ ಅಮೇರಿಕದ ನಿಕರಾಗ್ವ ಎಂಬಲ್ಲಿ ಜನರು ದಂಗೆ ಎದ್ದಿರುವರು. ತಾ. ೫ರಲ್ಲು ಅಲ್ಲಿ ಸರಕಾರ ಸೈನ್ಯದವರಿಗೂ ದಂಗೆಗಾರರಿಗೂ ಯುದ್ಧವಾಗಿ ಸರಕಾರ ಸೈನ್ಯದಲ್ಲಿ ೧೦೦ ಮಂದಿ ಹತರಾದರು ೨೦೦ ಮಂದಿ ಗಾಯಪಟ್ಟರು: ಅನಂತರ ಸರಕಾರ ಸೈನ್ಯದವರು ದಂಗೆಗಾರರನ್ನು ಸೋಲಿಸಿದರು. ದಂಗೆಗಾರರ ಮುಂದಾಳು ಪೆಟ್ಟು ತಿಂದು ಓಡಿ ಹೋದನು. ಅವನನ್ನು ಸರಕಾರ ಸೈನ್ಯದವರು ಹಿಡಿದರು. ಕಡೆಗೆ ಅವನು ಸತ್ತನು.

* * *

ತುರ್ಕೀ ಆಡಳಿತೆಗೆ ಅಸಂತೃಪ್ತಿಪಟ್ಟ ಬಾಲ್ಕಾನ ಸಂಸ್ಥಾನಗಳೆಲ್ಲಾ ಒಟ್ಟುಕೂಡಿ ಒಂದೇ ಭಾತೃಪ್ರಜಾಧಿಪತ್ಯ ಆಗಬೇಕೆಂಬದಾಗಿ ನಿರ್ಣಯ ಮಾಡಿಕೊಂಡಿರುವರು. ಆದರೆ ಇವರ ಈ ನಿರ್ಣಯಕ್ಕೆ ತುರ್ಕಿ ಸರಕಾರದವರು ಒಪ್ಪುವದಿಲ್ಲವಾದ್ದರಿಂದ ಬುಲ್ಗಾರಿಯ, ಮೊಂಟೆನಿಗ್ರೊ, ಸರ್ವಿಯ, ಗ್ರೀಕ ರಾಜ್ಯಗಳವರು ತುರ್ಕರಿಗೆ ವಿರೋಧವಾಗಿ ಸೈನ್ಯ ಕೂಡಿಸುತ್ತಿದ್ದಾರೆ. ತುರ್ಕಿಯಲ್ಲಿಯೂ ಈ ವಾರ್ತೆಯಿಂದ ದೊಡ್ಡ ಬೆಂಕಿಯುಂಟಾಗಿ ಜನರು ಮುಂದೆ ಬಂದು ಬಾಲ್ಕಾನ ಸಂಸ್ಥಾನಗಳಿಗೆ ವಿರೋಧವಾಗಿ ಯುದ್ಧಕ್ಕೆ ಹೋಗುವರೆ ತಮ್ಮನ್ನು ತಾವೇ ಒಪ್ಪಿಸಿಕೊಡುತ್ತಿದ್ದಾರೆ. ಶ್ರೇಷ್ಠ ರಾಜ್ಯಗಳವರು ಬಾಲ್ಕಾನ ಸಂಸ್ಥಾನಗಳಿಗೂ ತುರ್ಕಿಗೂ ರಾಜಿ ಮಾಡುವರೆ ಪ್ರಯತ್ನಿಸುತ್ತಿರುವರು. ಬುಲ್ಗೇರಿಯ ಸರಕಾರದವರು ಪ್ರೆಂಚ ಬೇಂಕುಗಳಲ್ಲಿ ಸಾಲ ಕೇಳಿರುವರು. ಆದರೆ ಪ್ರೆಂಚ ಸರಕಾರದವರು ಬುಲ್ಗೇರಿಯಕ್ಕಾಗಲೀ ಸರ್ವಿಯಕ್ಕಾಗಲೀ ಸಾಲ ಕೊಡಕೂಡದೆಂಬದಾಗಿ ಬೇಂಕುಗಳಿಗೆ ಹುಕುಂ ಮಾಡಿರುವರು. ತುರ್ಕರು ಗ್ರೀಕರ ಹಡಗಗಳನ್ನು ಹಿಡಿದಿರುವರು. ಬಲ್ಗ್ರೇಡಿನಲ್ಲಿ ಅಸ್ಕಬ್, ಕುಮಾನಾವೋ ಎಂಬಲ್ಲಿಯ ಸರ್ಬ್ ಎಂಬ ಪಂಗಡದವರು ದಂಗೆ ಎದ್ದು ಸಿಕ್ಕಿದ ತುರ್ಕರನ್ನು ಪಿಕ್ಕಾಸುಗಳಿಂದಲೂ ಹಾರೆಗಳಿಂದಲೂ ಹೊಡೆದು ಕೊಂದರು. ಅರ್ಜೆಂಟ್ಯಾನ್ ಶೀಮೆಯವರು ಇಂಗ್ಲಾಂಡಿನಲ್ಲಿ ಮಾಡಿಸಿದ ೪ ಯುದ್ಧ ಹಡಗಗಳನ್ನು ಗ್ರೀಕರು ಕೊಂಡುಕೊಂಡರು. ಈಗ ಸದ್ಯಾ ಕಪ್ಪುಸಮುದ್ರದಲ್ಲಿದ್ದ ಗ್ರೀಕರ ೫೦ ಹಡಗಗಳನ್ನೂ ಮರ್ಮೋರ ಸಮುದ್ರದಲ್ಲಿ ೧೦೦ ಹಡಗಗಳನ್ನು ತುರ್ಕರು ಹಿಡಿದಿರುವರು.

ಬುಲ್ಗೇರಿಯ ಮತ್ತು ಸರ್ವಿಯದವರು ತುರ್ಕಿಯವರೊಡನೆ ಮಾಡುತ್ತಿದ್ದ ರೈಲ್ವೇ ವ್ಯವಹಾರವನ್ನು ನಿಲ್ಲಿಸಿದ್ದಾರೆ.

ತುರ್ಕರು ತಾ. ೩ರಲ್ಲು ಗ್ರೀಕರ ಎರಡು ಯುದ್ಧ ಹಡಗಗಳನ್ನು ನಿಲ್ಲಿಸಿ ಅದರಲ್ಲಿದ್ದ ಕಲಾಸಿಗಳನ್ನು ಸೆರೆ ಹಿಡಿದಿರುವರು. ಭೂಖಂಡಗಳ ಆಯಾ ಬಂದರಗಳಿಗೆ ಧಾನ್ಯಗಳನ್ನು ಸಾಗಿಸುತ್ತಿರುವ ಗ್ರೀಕರ ಮತ್ತು ಬುಲ್ಗೇರಿಯದ ಕೆಲವು ಹಡಗಗಳನ್ನು ತುರ್ಕರು ಹಿಡಿದಿರುವದರಿಂದ ರೊಸ್ಟಫ್ ಎಂಬಲ್ಲಿಯ ವ್ಯಾಪಾರ ಸಂಘದವರು ರುಷ್ಯ ಮಂತ್ರಿಗೆ ತಂತೀ ಬಿಟ್ಟು ತುರ್ಕರು ಈ ಹಡಗಗಳನ್ನು ಬಿಡುವ ಹಾಗೆ ಪ್ರಯತ್ನ ಮಾಡಬೇಕೆಂದು ಕೇಳಿಕೊಂಡಿರುವರು.

ತುರ್ಕೀ ಸರಹದ್ದಿನಲ್ಲಿ ಬುಲ್ಗೇರಿಯದವರು ತುರ್ಕರ ಮೇಲೆ ಬಿದ್ದು ೨॥ ತಾಸು ಪರ್ಯಂತ ಕಾದಾಡಿ ತುರ್ಕರಿಂದ ಹಿಮ್ಮೆಟ್ಟಿಸಲ್ಪಟ್ಟರು ಎಂಬ ವಾರ್ತೆ ಬಂದಿರುವದು.

ಬುಲ್ಗೇರಿಯದ ಒಂದು ಸೈನ್ಯವು ತುರ್ಕಿ ಸರಹದ್ದಿನ ಕೊಸ್ಟಾಟ್ಸ್ ಎಂಬಲ್ಲಿ ಪರಾಭಿಯೋಗ ಮಾಡಿಯದೆ ಎಂಬದಾಗಿ ಕನ್‌ಸ್ತಂತಿನೋಪಲಿನಿಂದ ಪಾರಿಸಿಗೆ ತಂತೀ ಹೋಗಿರುವದು.

ಕನ್‌ಸ್ತಂತಿನೋಪಲಿನಲ್ಲಿ ಯುದ್ಧಕ್ಕೆ ಸನ್ನಾಹವಾಗುತ್ತಿದೆ. ಮೊಂಟೆನಿಗ್ರೊ ಸರಹದ್ದಿನಲ್ಲಿ ತುರ್ಕರಿಗೂ ಮೊಂಟೆನಿಗ್ರೊ ಸೈನೀಕರಿಗೂ ಕದನ ಪ್ರಾರಂಭವಾಗಿಯದೆ. ತುರ್ಕರು ಬೆರಾನದಲ್ಲಿ ಮೊಂಟೆನಿಗ್ರೋಯರನ್ನೂ ಹಿಮ್ಮೆಟ್ಟಿದರು ಎಂಬದಾಗಿ ವಾರ್ತೆ ಬಂದಿರುವದು.

ಬಾಲ್ಕಾನ್ ಸಂಸ್ಥಾನಗಳ ಈ ಗೊಂದಲದ ಮಧ್ಯೆ ಶ್ರೇಷ್ಠ ರಾಜ್ಯಗಳು ಪ್ರವೇಶಿಸಿ ಬೇಗನೇ ತಕ್ಕ ವಿಲೆವಾರಿ ಮಾಡಬೇಕೆಂದೂ ವಿಳಂಭ ಮಾಡಿದರೆ ಕದನಗಳು ಪ್ರಾರಂಭವಾಗಿ ಕಾರ್ಯ ಭಂಗವಾಗುವದೆಂದೂ ತುರ್ಕಿ ಮಂತ್ರಿ ಸಭೆಯವರು ಶ್ರೇಷ್ಠ ರಾಜ್ಯಗಳಿಗೆ ತಿಳಿಸಿದ್ದಾರೆ.

ಹಿಂದೂಸ್ಥಾನದಲ್ಲಿರುವ ಮುಸಲ್ಮಾನರು ಅಲ್ಲಲ್ಲಿ ಸಭೆ ಕೂಡಿ ತುರ್ಕಿಗೆ ಬಂದ ಈ ಮಹಾ ತೊಂದರೆಗಾಗಿ ಸಹಾನುಭೂತಿಯನ್ನು ಕೋರುತ್ತಿದ್ದಾರೆ.

ಮೊಂಟೆನಿಗ್ರೋದವರಿಗೂ ತುರ್ಕಿಯವರಿಗೂ ತಾ. ೮ರಲ್ಲು ಯುದ್ಧ ಪ್ರಾರಂಭವಾಯಿತು. ಕನ್‌ಸ್ತಂತಿನೋಪಲಿನಲ್ಲಿರುವ ಮೊಂಟೆನಿಗ್ರೋದ ಪ್ರತಿನಿಧಿಗಳು ಕೂಡಲೇ ಪಟ್ಟಣವನ್ನು ಬಿಟ್ಟು ಬರಬೇಕೆಂಬದಾಗಿ ಮೊಂಟೆನಿಗ್ರೋ ಸರಕಾರದವರು ಅಪ್ಪಣೆಕೊಟ್ಟಿದ್ದಾರೆ. ಮೊಂಟೆನಿಗ್ರೋಯಿನ್ನರು ಬೆರೇನವನ್ನು ಪೂರ್ಣವಾಗಿ ಮುತ್ತಿದ್ದಾರೆ. ದೊಡ್ಡ ಯುದ್ಧವು ನಡಿಯುತ್ತಿದೆ. ಡುಜುಂಬಾಲ ಎಂಬಲ್ಲಿಯೂ ತುರ್ಕರಿಗೆ ವಿರೋಧವಾಗಿ ಸರ್ವಿಯಾನರೂ ಗ್ರೀಕರೂ ಯುದ್ಧಮಾಡ ಪ್ರಾರಂಭಿಸಿದ್ದಾರೆ. ಈ ವಾರ್ತೆಯಿಂದ ಯೂರೋಪಖಂಡದಲ್ಲೆಲ್ಲಾ ದೊಡ್ಡ ಚಳವಳ ಉಂಟಾಗಿದೆ. ಸರ್ವಿಯಾನರು ೪೦೦,೦೦೦ ಸೈನೀಕರನ್ನು ಯುದ್ಧಕ್ಕೆ ತಯಾರಿಸಿರುವರು. ೧೦೦೦ ಗ್ರೀಕರು ಕನ್‌ಸ್ತಂತಿನೋಪಲನ್ನು ಬಿಟ್ಟು ಹೋದರು. ರುಷ್ಯಾಮತ್ತು ಆಸ್ಟ್ರೀಯ ಸರಕಾರದವರು ಉಭಯತರೊಳಗೆ ರಾಜಿಮಾಡುವ ಪ್ರಯತ್ನ ಮಾಡುತ್ತಲಿದ್ದಾರೆ. ಆದರೆ ರಾಜಿ ಆಗುವ ಸಂಭವ ತೋರುವದಿಲ್ಲ.

* * *

ಉತ್ತರ ಹಿಂದೂಸ್ಥಾನ.

ಮುಂಬಾಯಿ ಪಟ್ಟಣದ ಜಹಜುಗಳ ಟಪ್ಪಾಲ್ ಕಂಪೆನಿಯನ್ನು ಪ್ರಾರಂಭಿಸಬೇಕೆಂದು ದೇಶೀಯ ಹಣಗಾರರೂ ವರ್ತಕರೂ ಪ್ರಯತ್ನ ಪಡುತ್ತಿದ್ದಾರೆ. ಈ ಕಂಪೆನಿಯ ಮೂಲಧನ ೫೦ ಲಕ್ಷರೂಪಾಯಿ. ಈ ಹಣವನ್ನು ಶೇರುಗಳ ವಿಕರಿಯಿಂದ ಕೂಡಿಸುವರು. ಈ ಶೀಮೆ ಹಣಕ್ಕೆ

ಯಿಂದ ಮೂರು ಜಹಜುಗಳನ್ನು ತರಿಸಿ ಅದರಲ್ಲಿ ಹಿಂದುಗಳನ್ನೇ ಅಡಿಗೆಗೂ, ಸೇನಾವೃತ್ತಿಗೂ ನೇಮಿಸಿ ಹಿಂದುಗಳ ಪ್ರಯಾಣಕ್ಕಾಗಿ ಸಿದ್ಧಪಡಿಸುವವರಾಗಿದ್ದಾರೆ. ಇದಲ್ಲದೆ ದೇಶಾಂತರ ಪ್ರಯಾಣ ಮಾಡುವಂಥಾ ಹಿಂದುಗಳಿಗೆ ಅನುಕೂಲವಾಗುವಂತೆ ಯುರೋಪು ಖಂಡದ ಮುಖ್ಯ ನಗರಗಳಲ್ಲಿ ಹಿಂದೂ ಹೊಟೇಲುಗಳನ್ನು ಇಡಿಸಬೇಕೆಂಬದೂ ಈ ಕಂಪೆನಿಯವರ ಉದ್ದೇಶವಾಗಿದೆ.

* * *

ಹಿಂದೂಸ್ಥಾನದ ಉಪ ಸೆಕ್ರೆಟರಿಯಾಗಿರುವ ಮೆ| ಮೊಂಟೇಗರವರು ಸಿಮ್ಲಕ್ಕೆ ಇದೇ ೨೦ನೇ ತಾರೀಕಿಗೆ ಚಿತ್ತೈಸಿ ಸರ್ ಗ್ಯಾಪ್ಲೀಟ್ ವೂಡರವರ ಅತಿಥಿಯಾಗಿರುವರು. ತಾ. ೨೫ರಲ್ಲು ಸಿಮ್ಲದಿಂದ ಹೊರಟು ಪೇಶಾವರ, ಕೊಹಾತ್, ಮಾಲ್ಕಾಂಡವನ್ನು ಸಂದರ್ಶಿಸಿ ಅಲ್ಲಿಂದ ಶ್ರೀನಗರಕ್ಕೆ ಹೋಗುವರು. ಅನಂತರ ಪಂಜಾಬು, ಲಾಹೊರ್, ಅಮ್ರುತಸರವನ್ನು ಸಂದರ್ಶಿಸಿ ಅಲ್ಲಿಂದ ಖಾರಿ ಎಂಬಲ್ಲಿ ನವಂಬರ ತಾ. ೨೯ರಿಂದ ದಶಂಬರ ತಾ. ೬ರ ವರೇಗೆ ಶಿಕಾರಿ ಮಾಡುವರು. ಅಲ್ಲಿಂದ ಆಗ್ರ, ಲಕ್ನೌ, ಖಾನ್ಪುರ, ಬೆನಾರಿಸ್, ಪಾಟ್ಣಕ್ಕೆ ಹೋಗಿ ದಶಂಬರ ತಾ. ೧೬ರಲ್ಲು ಕಲ್ಕತ್ತೆಗೆ ತೆರಳುವರು. ಬಂಗಾಳದಿಂದ ಉದಯಪುರ, ಜಯಪುರ, ಗ್ವಾಲಿಯೋರ್ ಮೊದಲಾದ ದೇಶೀಯ ರಾಜ್ಯಗಳಿಗೆ ಚಿತ್ತೈಸುವರು. ಡಿಲ್ಲಿಯಲ್ಲಿ ಬರುವ ೧೮ನೇ ಜನವರಿಯಿಂದ ೨೫ರ ವರೇಗೆ ಇರುವರು. ಅಲ್ಲಿಂದ ಮಧ್ಯ ಸಂಸ್ಥಾನಗಳಲ್ಲಿ ಶಿಕಾರಿ ಮಾಡಿ ಮದ್ರಾಸ್, ಮುಂಬಾಯಿ, ಪೂನೆಗೆ ಬಂದು ಪೆಬ್ರವರಿ ತಾ.೨೨ಕ್ಕೆ ಶೀಮೆಗೆ ಹಿಂತೆರಳಲು ಹಡಗ ಹತ್ತುವರು.

* * *

ಮಿಸಿಸ್ ಪ್ಲಿನೋರ್ ಎಂಬ ಒಬ್ಬ ಯೂರೋಪಿಯನ್ ಹೆಂಗಸು ತಾನು ಕಲ್ಕತ್ತೆಯ ಬೆರಿಷ್ಟರ್ ಪಗ್ ಎಂಬವರ ಪತ್ನಿಯೆಂದು ಹೇಳಿಸಿಕೊಂಡು ಅವರ ಲೆಕ್ಕಕ್ಕೆ ಸ್ಥಳಿಕ ಗ್ರಮಫೋನ್ ಕಂಪೆನಿಯಿಂದ ಸುಮಾರು ೧೫೦ ರೂಪಾಯಿ ಕ್ರಯಬಾಳುವ ರಿಕೋರ್ಡುಗಳನ್ನು ಪಡಕೊಂಡಳು. ಆದರೆ ಬೆರಿಷ್ಟರರ ಪತ್ನಿಯು ಕಲ್ಕತ್ತೆಯಲ್ಲಿಲ್ಲ. ಇಂಗ್ಲಾಂಡಿಗೆ ಹೋಗಿದ್ದಾರೆಂಬದಾಗಿ ಆ ಕಂಪೆನಿಯವರಿಗೆ ತಿಳಿದು ಬಂದದರಿಂದ ಪೋಲೀಸಿನವರಿಗೆ ತಿಳಿಸಿದ್ದಲ್ಲಿ ಅವಳನ್ನು ಕೈದುಮಾಡಿ ಸ್ವತಃ ಜಾಮೀನಿನ ಮೇಲೆ ಬಿಟ್ಟರು. ಆದರೆ ಅವಳು ತಕ್ಕ ಸಮಯದಲ್ಲಿ ಪೋಲೀಸ್ ಕೋರ್ಟಿಗೆ ಹಾಜರಾಗದ್ದರಿಂದ ಅವಳನ್ನು ಪುನಃ ಕೈದು ಮಾಡಿದರು.

* * *

ರತಿಲಾಲನೆಂಬ ಪೋಲೀಸಿನವನನ್ನು ಕೊಲೆ ಮಾಡಿದ ಸಂಬಂಧದಲ್ಲಿ ಅನುಮಾನದಿಂದ ಹಿಡಿಯಲ್ಪಟ್ಟ ತ್ರಿಲಕನಾಥ ಚಕ್ರವರ್ತಿಯ ಮೇಲೆ ಇದ್ದ ರಾಜದ್ರೋಹ ಪಿತೂರಿಯ ತಕ್ಸೀರನ್ನು ಸರಕಾರ ಕಡೆಯ ವಕೀಲರು ಹಿಂದೆಗದು ಆತನು ಇನ್ನು ಒಂದು ವರ್ಷದ ವರೇಗೆ ಸದ್ವರ್ತನೆಯಲ್ಲಿ ನಡಿಯುತ್ತೇನೆಂಬದಕ್ಕೆ ಸಾವಿರ ರೂಪಾಯಿಗಳ ಎರಡು ಜಾಮೀನು ಕೊಡುವ ಹಾಗೆ ಅಪ್ಪಣೆ ಮಾಡುವರೆ ಮೇಜಿಸ್ಟ್ರೇಟರನ್ನು ಕೇಳಿಕೊಂಡರು.

* * *

ತಾ. ೨ರಲ್ಲು ಕಲ್ಕತ್ತೆಯ ಸರ್ಪಂಟೈನ್ ಓಣಿಯಲ್ಲಿ ಎಸ್ ಚಂದ್ರಗುಪ್ತನೆಂಬ ಒಬ್ಬ ಯುವಕನು ಕೋಣೆಯಲ್ಲಿ ಅರೆ ಪ್ರಾಣದಲ್ಲಿ ಬಿದ್ದಿದ್ದನು. ಕುತ್ತಿಗೆಯಲ್ಲಿ ಒಂದು ದೊಡ್ಡ ಗಾಯವೂ ಇತ್ತು. ಅವನ ಹೆಂಡತಿಯ ದೇಹವು ಮಂಚದ ಮೇಲೆ ಸತ್ತುಬಿದ್ದಿತ್ತು. ಗುಪ್ತನು ತನ್ನ ಹೆಂಡತಿಯ ಕುತ್ತಿಗೆಯನ್ನು ಕಡದು ಆತ್ಮಹತ್ಯ ಮಾಡಿಕೊಳ್ಳಲಿಕ್ಕೆ ತನ್ನ ಕುತ್ತಿಗೆಯನ್ನೂ ಕತ್ತರಿಸಿಕೊಂಡನು ಎಂಬದಾಗಿ ತಿಳಿದು ಬಂತು. ಗುಪ್ತನು ಅನಂತರ ಆಸ್ಪತ್ರಿಯಲ್ಲಿ ಮೃತಪಟ್ಟನು. ಅವನಿಗೆ ಕೆಲವು ಸಮಯದಿಂದ ಕೆಲಸವಲ್ಲದೆ ಬಹಳ ಕಷ್ಟಕ್ಕೊಳಗಾದ್ದರಿಂದ ಈ ಮಹಾಪಾತಕವನ್ನು ಮಾಡಿರಬೇಕೆಂದು ಊಹಿಸಲ್ಪಟ್ಟದೆ.

* * *

ಮುಂಬಾಯಿ ಸಂಸ್ಥಾನಕ್ಕೆ ಸೇರಿದ ಇಡಾರ್ ಎಂಬಲ್ಲಿಯ ಒಬ್ಬ ಐಶ್ವರ್ಯವಂತ ಬ್ರಾಹ್ಮಣನಿಗೆ ಕಥ್ಯಾವಾಡಿನ ಕೆಲವರು ಕೂಡಿ ಒಬ್ಬ ಕೂಲಿ ಕೆಲಸಮಾಡುವ ಜಾತಿಯ ಹುಡಿಗಿಯನ್ನು ಬ್ರಾಹ್ಮಣರ ಜಾತಿಯ ಹುಡಿಗಿಯೆಂದು ವಿವಾಹ ಮಾಡಿಕೊಟ್ಟು ಅವನಿಂದ ೨೧೦೦ ರೂಪಾಯಿ ಪಡಕೊಂಡಿದ್ದರು. ಆ ಬ್ರಾಹ್ಮಣನು ಈ ಹುಡಿಗಿಯನ್ನು ವಿವಾಹವಾಗಿ ಮೂರು ತಿಂಗಳಾದನಂತರ ಈ ಹುಡುಗಿಯು ೩೦೦ ರೂಪಾಯಿಯ ಆಭರಣಗಳನ್ನು ಹಿಡಕೊಂಡು ಗಂಡನಿಗೆ ಹೇಳದೆ ಕಥ್ಯಾವಾಡಿಗೆ ಪಲಾಯಣ ಮಾಡಿದಳು. ಗಂಡನು ಕೂಡ್ಲೇ ಪೋಲೀಸಿಗೆ ತಂತೀ ಕೊಟ್ಟದ್ದರಿಂದ ತಾ. ೨ರಲ್ಲು ಪೋಲೀಸಿನವರು ಅವಳನ್ನು ಹಿಡಿದರು. ಅವಳ ಹೇಳಿಕೆ ಮೇಲೆ ಪೋಲಿಸಿನವರು ಇತರ ೫ ಹೆಂಗಸರನ್ನು ಕೈದು ಮಾಡಿ ಲಾಕಪ್ಪಿನಲ್ಲಿಟ್ಟಿರುವರು.

* * *

ಅಹಮ್ಮದಬಾದಿನ ಕೋಟೀಶ್ವರರಾದ ಸರ್ ಚಿನ್ನುಬಾಯಿ ಮಾಧವಲಾಲ್ ಸಿ. ಐ. ಇ. ರವರು ಭಾರತೇಯ ಪರಿಚಾರಿಕೆಯರನ್ನೂ ಸೂಲಗಿತ್ತಿಯರನ್ನೂ ತರ್ಬೀತು ಮಾಡುವ ಒಂದು ಶಾಲೆಯನ್ನು ಸ್ಥಾಪಿಸುವದಕ್ಕಾಗಿ ಒಂದು ಲಕ್ಷದ ೧೫ಸಾವಿರ ರೂಪಾಯಿಗಳನ್ನು ಸರಕಾರಕ್ಕೆ ಕೊಟ್ಟಿರುವರು.

* * *

ಹೌರದ ಅರಳೆ ಜುಗಾರು ಬೇಂಕುಗಳು ದಿನೇ ದಿನೇ ಜನರಿಗೆ ಮೋಸ ಮಾಡುತ್ತಲಿವೆ. ತಾ. ೬ರಲ್ಲು ಇಂಥಾ ೫ಬೇಂಕುಗಳು ಮುಚ್ಚಲ್ಪಟ್ಟವು ಈಚೆಗೆ ಸಾವಿರಾರು ಜನರು ಈ ಬೇಂಕಿನಲ್ಲಿ ಹೆಚ್ಚಿನ ಬಡ್ಡಿ ಸಿಕ್ಕುತ್ತದೆಂಬ ಆಶೆಯಿಂದ ಇತರ ಬೇಂಕುಗಳಲ್ಲಿದ್ದ ತಮ್ಮ ಹಣವನ್ನು ತೆಗೆದು ಇಂಥಾ ದ್ಯೂತದ ಬೇಂಕುಗಳಲ್ಲಿ ಇಟ್ಟಿದ್ದರು. ಒಬ್ಬ ಬೇಂಕರನು ೮೦,೦೦೦ ರೂಪಾಯಿಯೊಡನೆಯೂ ಉಳಿದ ನಾಲ್ಕು ಮಂದಿ ೧೦-೫೦ಸಾವಿರ ರೂಪಾಯಿಗಳೊಡನೆಯೂ ಪರಾರಿಯಾಗಿರುವರು.

* * *

ಡಿಲ್ಲಿಯ ಗಾಜಿಬಾದ್ ಎಂಬಲ್ಲಿ ಪ್ರಖ್ಯಾತಿಪಟ್ಟ ಅಗ್ಗಾಡಿ ಕಳ್ಳನು ತಾ. ೨ನೇ ರಾತ್ರಿ ಒಬ್ಬ ಚಿಕ್ಕ ಹುಡುಗಿಯಿಂದ ಹಿಡಿಯಲ್ಪಟ್ಟನು. ಆ ದಿನ ರಾತ್ರಿ ಅಗ್ಗಾಡಿಯು ರೈಲ್ವೇ ಸ್ಟೇಶನಿಗೆ ಬಂದು ನಿಂತಾಕ್ಷಣ ಅಸಿಸ್ಟಾಂಟ ಸ್ಟೇಶನ್ ಮಾಸ್ತರರ ಒಬ್ಬ ಚಿಕ್ಕ ಹುಡಿಗಿಯು ಗಾಡಿಗೆ ಹತ್ತಿ ಇಳಿಯಲಿಕ್ಕಿರುವಾಗ ಗಾಡಿಯ ಆಸನದ ಕೆಳಗೆ ಅಡಗಿ ಕೂತಿದ್ದ ಮನುಷ್ಯನು ಅವಳ ದೃಷ್ಟಿಗೆ ಬಿದ್ದದರಿಂದ ಗಟ್ಟಿಯಾಗಿ ಕೂಗಿದಳು. ಪೋಲೀಸಿನವರು ಓಡಿಬಂದು ಆ ಮನುಷ್ಯನನ್ನು ಹಿಡಿಯಲು ಅವನ ಕೂಡೆ ಪ್ರಯಾಣಿಕರಿಂದ ಕದ್ದುಕೊಂಡ ಕೆಲವು ಸಾಮಾನುಗಳು ಸಿಕ್ಕಿದವು.

* * *

ಮೆಸ್ಸರ್ಸ್. ಬಿ. ಕೆ. ಬಾಸು ರಾಮಚಂದ್ರ, ವ್ಯಾ. ಎ. ಗೋಡ್ ಬೋಲೆ, ಎಸ್. ಎಸ್. ನೇಬ್ರು, ಬಿ. ಆರ್ ರಾವ್, ಸಿ. ರೊದ್ರಿಗೋ, ಎಸ್. ಎನ್. ರೋಯಿ ಮತ್ತು ಕೆ. ಸಿ. ಸೆನ್ ಎಂಬವರು ಈಚೆಗೆ ನಡೆದ ಇಂಡಿಯನ್ ಸಿವಿಲ್ ಪರೀಕ್ಷೆಯಲ್ಲಿ ಪಾಸಾಗಿರುವರು. ಇವರಲ್ಲಿ ರೊದ್ರಿಗೋ ಎಂಬವರು ಮಾತ್ರ ಸೀಲೋನಿನವರು, ಉಳಿದವರು ಹಿಂದೂಸ್ಥಾನವರು.

* * *

ಗೋವೆಯಲ್ಲಿ ರಾಣೆಯವರು ಪುನಃ ದಂಗೆ ಎದ್ದು, ಗೋವೆಯ ಗವರ್ನರ್ ಜನರಲರಿಗೆ ಗುಂಡು ಹೊಡೆದರೆಂದೂ ದೈವವಶಾತ್ ಅವರಿಗೆ ಅದು ತಪ್ಪಿಹೋಯಿತೆಂದೂ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದರೆ ಈ ವಾರ್ತೆಯು ಎಷ್ಟರ ಮಟ್ಟಿಗೆ ಸತ್ಯವಾದದ್ದು ಎಂಬದನ್ನು ಹೇಳಕೂಡದು. ಯಾಕಂದರೆ ಗೋವೆಯಲ್ಲಿ ಈಗ ಶಾಂತತೆಯು ನೆಲೆಗೊಂಡದೆಂದೂ ಮಳೆಗಾಲವಾದ್ದರಿಂದ ರಾಣೆಯವರು ಈಗ ಸದ್ಯಾ ಏಳುವ ಹಾಗೆ ಇಲ್ಲವೆಂದೂ ಮತ್ತೊಂದು ಪತ್ರವು ಹೇಳುತ್ತದೆ.

* * *

ಸಲ್ಫ್ಯುರಿಕ್ ಎಸಿಡ್ ಎಂಬ ರಸಾಯನದಿಂದ ವಿವಿಧ ತರದ ವಸ್ತುಗಳನ್ನು ರೂಪಿಸುವಂಥಾ ಒಂದು ರಸಾಯನ ಕಾರ್ಖಾನೆಯು ಮುಂಬಾಯಿಯಲ್ಲಿ ತೆರೆಯಲ್ಪಡುವುದು. ಈ ಕಾರ್ಖಾನೆಯನ್ನು ತೆರೆಯುವುದರಿಂದ ಹಿಂದೂಸ್ಥಾನದ ನೇಯಿಗೆ ಕಾರ್ಖಾನೆಗೆ ಬೇಕಾದ ಸಲ್ಫ್ಯುರಿಕ್ ಎಸಿಡಿನಿಂದ ತಯಾರಾಗುವ ವಸ್ತುಗಳು ಅಗ್ಗವಾಗಿ ಸಿಕ್ಕುವದು. ಬೇಸಾಯಗಾರರಿಗೂ ಭೂಮಿಯನ್ನು ಫಲವತ್ತಾಗಮಾಡುವ ಸುಲಭ ಉಪಾಯಗಳು ಈ ಹೊಸ ಕಾರ್ಖಾನೆಯಿಂದ ದೊರೆಯುವದು. ಹಿಂದೂಸ್ಥಾನದಲ್ಲಿ ರಸಾಯನದ ಮೂಲಕ ಭೂಮಿಯನ್ನು ಫಲವತ್ತಾಗಮಾಡುವ ಸಾಧನಗಳು ಈ ವರೆಗೆ ಬೇಸಾಯುಗಾರರಿಂದ ಕೈಕೊಳ್ಳಲ್ಪಡಲಿಲ್ಲವಾದರೂ ಜಪಾನ್, ಸಿಲೋನ್, ಜಾವಾ, ಚೀನ ದೇಶಗಳವರು ಇದರಿಂದ ಉಂಟಾಗುವ ಪ್ರಯೋಜನಗಳನ್ನು ಅನುಭವಿಸುತ್ತಿರುವರು. ಮುಂಬಾಯಿಯಲ್ಲಿ ಇಂಥಾ ಒಂದು ಕಾರ್ಖಾನೆಯು ತೆರೆಯೋಣಾಗುವುದರಿಂದ ನಮ್ಮ ಹಿಂದೂಸ್ಥಾನಕ್ಕೂ ಭಾಗ್ಯೋದಯವು ಬಂತೆನ್ನ ಬೇಕಾಗಿದೆ.

* * *

ಕಲ್ಕತ್ತೆಯಲ್ಲಿ ಈಚೆಗೆ ಜೀವವಿಮೇ ಕಂಪೆನಿಗಳ ಮೇಲೆ ದಾಖಲಾಗುವ ಮೊಕದಮೆಗಳು ಹೆಚ್ಚಾಗುತ್ತಾ ಬರುತ್ತಿವೆ. ತಾ. ೪ರಲ್ಲು ಕಲ್ಕತ್ತೆಯ ಹೈಕೋರ್ಟಿನಲ್ಲಿ ಅಂಥಾ ಎರಡು ಮೊಕದಮೆಗಳನ್ನು ಜಸ್ಟಿಸ್ ಚಿಟ್ಟಿಯವರು ತನಖಿ ನಡಿಸಿ "ಜೀವವಿಮೇ ಕಂಪೆನಿಗಳ ತಲೆಗೊಯಿಕ ಉಪಟಳವು ಚಿತಗೊಂಗಿನಲ್ಲಿ ಹಣ್ಣಾಯಿತು" ಎಂಬದಾಗಿ ಹೇಳಿದರು. ಇಂಡಿಯ ಇಕ್ವಿಟೆಬಲ್ ಇನ್ಸ್ಯುರೆನ್ಸ್ ಕಂಪೆನಿಯ ಮೇಲೆಯೂ ಆಲಿಪುರದ ಮುನ್ಸಿಫರಲ್ಲಿ ಒಂದು ದಾವೆಯು ದಾಖಲಾಗಿಯದೆ.

ದಕ್ಷಿಣ ಹಿಂದೂಸ್ಥಾನ

ಮೈಸೂರಿನ ದಿವಾನರಾಗಿರುವ ರಾ| ಆನಂದರಾಯರು ದಿವಾನ್ ಪದವಿಯನ್ನು ಬಿಡುವುದರಿಂದ ಇವರ ಬದಲಿಗೆ ಮೈಸೂರಿನ ಚೀಫ್ ಇಂಜಿನಿಯರರಾಗಿರುವ ರಾ| ವಿಶ್ವೇಶ್ವರಯ್ಯ ಬಿ. ಎ. ಎಮ್. ಐ. ಸಿ. ಎಸ್, ಸಿ. ಐ. ಇರವರು ದಿವಾನರಾಗಿ ನೇಮಿಸಲ್ಪಡುವರು. ಇವರು ಇದೇ ಬರುವ ನವಂಬರ ತಿಂಗಳ ತಾ. ೧೬ಕ್ಕೆ ದಿವಾನ್ ಪದವಿಯನ್ನು ವಹಿಸಿಕೊಳ್ಳುವರು. ಇವರಿಗೆ ಸರಕಾರದಿಂದ ಮಾಹೆಯಾನ ೫೦೦೦ ರೂಪಾಯಿ ತಲಬು ಕೊಡಲ್ಪಡುವದು ಎಂಬದಾಗಿ ಒಬ್ಬ ಬಾತ್ಮೀದಾರರು ಬರೆಯುವರು.

* * *

ಹೈದರಾಬಾದಿನ ಜನರಲ್ ರೆವಿನ್ಯೂ ಇಲಾಖೆಯ ಮೆ| ಎಸ್. ಹಬಿಬುದ್ದೀನ್‌ರವರು ಹೈದರಾಬಾದಿನ ಎಕೌಂಟಾಂಟ್ ಜನರಲರಾಗಿ ನೇಮಿಸಲ್ಪಟ್ಟಿರುವರು.

* * *

ಹೈದರಾಬಾದಿನಿಂದ ರೈಲ್ವೇಯಲ್ಲಿ ಮುಂಬಾಯಿಗೆ ಸಾಗಿಸಲ್ಪಡುತ್ತಿದ್ದ ೨೧,೦೦೦ ಪವನುಗಳ ಮೌಲ್ಯವಿದ್ದ

೮ ಪೆಟ್ಟಿಗೆಗಳು ಹೈದರಾಬಾದಿನಿಂದ ಈಚೆಗೆ ಗಡಿಪಾರು ಮಾಡಲ್ಪಟ್ಟವರದೆಂಬ ಅನುಮಾನದಿಂದ ಪೋಲೀಸಿನವರು ಹಿಡಿದಿರುವರು. ಆದರೆ ಸರ್ ವಿಕಾರ್ ಅಲ್‌ಮುಲ್ಕರ ಮಗಳಾಗಿರುವ ಬೇಗಮರವರು ಅದು ತನ್ನ ಆಸ್ಥಿಯೆಂದು ದಾವೆ ತಂದಿರುವುದರಿಂದ ಮೆ| ಇ. ನೋರ್ಟನರವರು ಇವರ ಕಡೆಯಲ್ಲಿ ವ್ಯವಹರಿಸುವರೆ ಹೈದರಾಬಾದಿಗೆ ಹೋಗಿರುವರು.

* * *

ಬರುವ ತಿಂಗಳ ತಾ. ೧೩ರಲ್ಲು ಮದ್ರಾಸಿನಲ್ಲಿ "ಅಲ್ ಇಂಡಿಯ ಸೆನಿಟರಿ ಕನ್ಫರೆನ್ಸ್" ಎಂಬ ಇಡೀ ಹಿಂದೂಸ್ಥಾನದ ಆರೋಗ್ಯ ಸಂಬಂಧವಾಗಿ ಆಲೋಚಿಸುವ ಸಭೆಯು ಕೂಡಿ ೬ ದಿವಸಗಳ ವರೆಗೆ ನಡೆಯುವುದು. ತಾರೀಕು ೧೮ರಲ್ಲು "ಮಲೇರಿಯ ಕನ್ಫರೆನ್ಸ್" ಚಳಿಜ್ವರ ಸಂಬಂಧವಾಗಿ ಆಲೋಚಿಸುವ ಸಭೆಯು ಕೂಡಿ ತಾ. ೨೦ಕ್ಕೆ ಅಂತ್ಯವಾಗುವುದು. ಈ ಎರಡು ಸಭೆಗಳಿಗೂ ಬಹುಮಾನಪಟ್ಟ ಸರ್. ಹಾರ್ಕೊಟ್ ಬಟ್ಲರವರು ಅಧ್ಯಕ್ಷರಾಗಿರುವರು.

* * *

ಹಿಂದೂಸ್ಥಾನಕ್ಕೆ ಬಹುದೂರವಿರುವ ಚಾ. ಕಾಫಿ, ರಬ್ಬರ್ ತೋಟಗಳಿಗೆ ಅಪ್ರಾಯಸ್ಥರನ್ನು ಕೂಲಿಯಾಳುಗಳಾಗಿ ತಕ್ಕೊಂಡು ಹೋಗುವ ಕೆಲಸವು ತಿನ್ನವೆಲ್ಲಿಯಲ್ಲಿ ಬಹಳ ಹೆಚ್ಚಾಗಿ ನಡಿಯುವುದರಿಂದ ಈ ವಿಷಯ ಬಹು ಜಾಗ್ರತೆತಕ್ಕೊಳ್ಳಬೇಕೆಂಬದಾಗಿ ಸರಕಾರದವರು ತಿನ್ನವೆಲ್ಲಿ ಪೋಲೀಸಿನವರಿಗೆ ಹುಕುಂಮಾಡಿರುವರು.

ದಕ್ಷಿಣ ಕನ್ನಡ.

ತಿದ್ದುಪಡಿ;—ಕಳದ ಸಂಚಿಕೆಯಲ್ಲಿ "ಮುಲ್ಕಿ ಡಿವಿಜನಿನ ಶಾಲಾ ಸುಪರ್ವ್ಯಾಸರಾದ ರಾ| ಜಮಲಾಬಾದ್ ದೇವರಾಯರು ತರ್ಬೇತು ಹೊಂದುವುದರಿಂದ" ಎಂಬ ಬದಲಿಗೆ ಜಮಲಾಬಾದ್ ದೇವರಾಯರು ಇಲ್ಲಿಯ ಟ್ರೈನಿಂಗ್ ಶಾಲೆಯ ಟೆಂಪರರಿ II ಅಸಿಸ್ಟಾಂಟರಾಗಿ ನೇಮಿಸಲ್ಪಟ್ಟವುದರಿಂದ ಎಂತ ಓದತಕ್ಕದ್ದು.

* * *

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೩ ಪ್ಲೇಗು ಮರಣಗಳಿದ್ದವು.

ಇದೇ ತಿಂಗಳ ತಾ. ೧೬ರಿಂದ ೨೧ನೇ ತಾರೀಕು ವರೆಗೆ ಮಂಗಳೂರು ಬ್ರಹ್ಮ ಸಮಾಜದ ನಾಲ್ವತ್ತೆರಡನೇ ವಾರ್ಷಿಕೋತ್ಸವ ಜರಗುವುದು. ಆ ದಿವಸಗಳಲ್ಲಿ ಜರಗುವ ಕಾರ್ಯ ಕಾಲಾನುಕ್ರಮಣಿಕೆಯನ್ನು ಈ ಕೆಳಗೆ ಕೊಟ್ಟಿರುವೆವು.

೧೬ನೇ ಒಕ್ಟೋಬರ ಬುಧವಾರ ಪ್ರಾತಃ ೬ ಘಂಟೆ ನಗರ ಸಂಕೀರ್ತನೆ, ರಾ| ಪಂಡಿತ ರಘುನಾಥ ರಾಯರ ಮನೆಯಿಂದ ಹೊರಡುವದು. ಪ್ರಾತಃ ೭| ಘಂಟೆ ದೇವಾರಾಧನೆ ಮತ್ತು ಉಪನ್ಯಾಸ, ಕನ್ನಡದಲ್ಲಿ. ೧೭ನೇ ಒಕ್ಟೋಬರ ಬೃಹಸ್ಪತಿವಾರ ಸಾಯಂಕಾಲ ೩॥ ಘಂಟೆಗೆ ಕುಲಸ್ತ್ರೀಯರ ಸಭೆಯು. ಸಾಯಂಕಾಲ ೬ ಘಂಟೆ ಭಜನೆ ಮತ್ತು ಧರ್ಮ ವಿಷಯ ಸಂಭಾಷಣೆ. ೧೮ನೇ ಒಕ್ಟೋಬರ ಶುಕ್ರವಾರ ಪ್ರಾತಃ ೭ ಘಂಟೆ ಸಂಸ್ಕೃತದಲ್ಲಿ ದೇವಾರಾಧನೆ ಮತ್ತು ಕೊಂಕಣಿಯಲ್ಲಿ ಉಪನ್ಯಾಸ. ಸಾಯಂಕಾಲ ೪ ಘಂಟೆ ಬಾಲಕರ ಪರಿತೋಷಣೆ ಮತ್ತು ಧರ್ಮೋಪದೇಶ ಶಾಲೆಯ ವರ್ಧಂತಿ. ೧೯ನೇ ಒಕ್ಟೋಬರ ಶನಿವಾರ ಪ್ರಾತಃ ೭ ಘಂಟೆ ದೇವಾರಾಧನೆ ಮತ್ತು ಉಪನ್ಯಾಸವು ಕನ್ನಡದಲ್ಲಿ. ಸಾಯಂಕಾಲ ೬॥ ಘಂಟೆ ಇಂಗ್ಲಿಷಿನಲ್ಲಿ ಭಾಷಣ. ೨೦ನೇ ಒಕ್ಟೋಬರ ಆದಿತ್ಯವಾರ. ಪ್ರಾತಃ ೭॥ ಘಂಟೆ ದೇವಾರಾಧನೆ ಹೊಸ ಪೈರಿನ ಸಂಬಂಧ ಕೃತಜ್ಞತಾ ಸಮರ್ಪಣೆ. ಸಾಯಂಕಾಲ ೭॥ ಘಂಟೆ ಸಂಗತ್ ಸಭೆಯ ವರ್ಷೋತ್ಸಹವೂ ವಿದ್ಯಾರ್ಥಿಗಳಿಗೆ ಇಂಗ್ಲಿಷಿನಲ್ಲಿ ಭಾಷಣವೂ. ೨೧ನೇ ಒಕ್ಟೋಬರ ಪ್ರಾತಃ ೭ ಘಂಟೆ ಶಾಂತಿವಚನವು.

ಮುನ್ಸಿಪಲ್ ಆಫೀಸಿನಲ್ಲಿ ನಿನ್ನೆ ದಿನ ಬೆಳಿಗ್ಯೆ ಚೇಯರ್ಮೇನರ ಚುನಾವಣೆಯು ನಡಿಯಿತು. ಮ. ರಾ. ರಾ. ಅ. ವಾಸುದೇವಪೈಗಳವರ ಹೆಸರಲ್ಲಿ ೮ ಓಟುಗಳೂ ಡಾಕ್ಟರ್ ಫೆರ್ನಾಂದೀಸರಿಗೆ ೬ ಓಟುಗಳೂ ದೊರಕಿದ್ದರಿಂದ ಚುನಾವಣೆಯನ್ನು ಪುನಹಾ ಇದೇ ತಿಂಗಳ ಅಖೈರಿಗೆ ಇಟ್ಟಿರುತ್ತಾರೆ.

ಇಲ್ಲಿಂದ ವರ್ಗಾಯಿಸಲ್ಪಟ್ಟ ಇಲ್ಲಿಯ ಆಕ್ಟಿಂಗ್ ಡಿಸ್ಟ್ರಿಕ್ಟ್ ಕಲೆಕ್ಟರ್ ಮೆ| ಫೊದರಿಂಗೆಮ್ ದೊರೆಗಳವರು ಒಂದು ತಿಂಗಳ ರಜೆಯನ್ನು ಪಡದಿರುವರು.

ಮಂಗಳೂರು ರೋಮನ್ ಕೆಥೊಲಿಕ ಪ್ರೊವಿಡೆಂಟ ಫಂಡಿಗೆ ಇದೇ ಇಸವಿಯ ಆಕ್ಟು ೫ ಮತ್ತು ೬ನೇ ಪ್ರಕಾರ ಪಂಡನ್ನು ರಿಜಿಸ್ಟ್ರಿಮಾಡಬೇಕೆಂತಲೂ ಫಂಡಿನ ಸದಸ್ಯರ ಭದ್ರತೆಗಾಗಿ ಆಕ್ಟು ಮೇರೆಗೆ ತಕ್ಕ ಮೊಬಲಗನ್ನು ವ್ಯಾಸರಾಯ ಪ್ರಭುಗಳ ಕೂಡೆ ಠೇವಣಾತಿ ಇಡಬೇಕೆಂತಲೂ, ಅಥವಾ ಈ ಫಂಡಿನವರು ಮೇಲೆ ಹೇಳಿದ ಆಕ್ಟುಗಳಿಂದ ವಿನಾಯತಿ ಪಡಿಯಬೇಕೆಂದೂ ಮದ್ರಾಸಿನ ರಿಜಿಸ್ಟ್ರಾರ್ ಜನರಲರವರು ತಿಳಿಯಪಡಿಸಿರುತ್ತಾರೆ. ಈ ವಿಷಯಗಳನ್ನು ಪರ್ಯಾಲೋಚಿಸುವರೆ ಫಂಡಿನವರ ವಿಶೇಷ ಮಹಾ ಸಭೆಯು ಸೆಂಟ್ ಆಲೊಸಿಯಸ್ ಕೋಲೇಜಿನ ಸಭಾ ಮಂದಿರದಲ್ಲಿ ಬರುವ ತಿಂಗಳ ೩ನೇ ತಾರೀಕಿನಲ್ಲಿ ಕೂಡುವುದು.

ಬೆಂಗಳೂರಿನ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಯೋಗೇಶ್ವರಾನಂದರವರು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಇದೇ ತಿಂಗಳ ತಾ. ೧೩ನೇ ಆದಿತ್ಯವಾರದಿಂದ ಈ ಕೆಳಗಿನ ವಿಷಯಗಳ ಕುರಿತು ಭಾಷಣಗಳನ್ನು ಕೊಡುವರಾಗಿ ತಿಳಿಯುತ್ತೇವೆ.

ತಾ. ೧೩ ಆದಿತ್ಯವಾರ ಶ್ಯಾಮ ಘಂಟೆ ೫ಕ್ಕೆ "ಅದ್ವೈತ." ತಾ. ೧೬ನೇ ಬುಧವಾರ ಶ್ಯಾಮ ಘಂಟೆ ೫.೪೫ಕ್ಕೆ "ವೇದಾಂತದ ಪ್ರಧಾನ ಬೋಧೆಗಳು." ತಾ. ೧೯ನೇ ಶನಿವಾರ ಶ್ಯಾಮ ಘಂಟೆ ೫-೪೫—"ಓಂ" ಸರ್ವರೂ ಈ ಉಪನ್ಯಾಸಗಳನ್ನು ಕೇಳಲು ಆಮಂತ್ರಿಸಲ್ಪಟ್ಟಿರುತ್ತಾರೆ.

ಈಗ ಬೆಜ್ವಾಡದಲ್ಲಿ ಸಿವಿಲ್ ಎಪೊತಿಕೆರಿಯಾಗಿರುವ ಬೆನಗಲ್ ರಾಘವೇಂದ್ರರಾಯರ ಮಗ ಮೆ| ಬೆನಗಲ್ ರಾಮರಾಯರು ಕಳೆದ ಐ. ಸಿ. ಎಸ್. ಪರೀಕ್ಷೆಯಲ್ಲಿ ಪಾಸಾಗಿರುವರು.

ಮದ್ರಾಸಿನ ಡಬ್ಲ್ಯು ಇ. ಸ್ಮಿತ್ ಕಂಪೆನಿಯ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿರುವ ನಯನ ವೈದ್ಯರಾದ ಡಾಕ್ಟರ್ ಎ. ರಾಮ ಕಮತರವರಿಂದ ನಯನ ರೋಗ ಚಿಕಿತ್ಸೆ ಹೊಂದಲು ಹೆಚ್ಚಿನ ಜನರು ಬರುತ್ತಿರುವುದರಿಂದ ಅವರು ಇನ್ನೂ ಇಲ್ಲಿಯೇ ಇದ್ದು ನಯನ ರೋಗದ ಚಿಕಿತ್ಸೆ ಮಾಡುತ್ತಲಿದ್ದಾರೆ. ಇವರು ಬೇಗನೇ ಇಲ್ಲಿಯ ರೋಗಿಗಳ ಚಿಕಿತ್ಸೆಯನ್ನು ತೀರಿಸಿಕೊಂಡು ಸದ್ಯಾ ಉಡ್ಪಿಗೆ ಹೋಗಬೇಕೆಂದಿರುವರು. ಉಡುಪಿ ಪಟ್ಟಣ ಜನರು ಮಾತ್ರವಲ್ಲ; ಆಜುಬಾಜಿನ ಹಳ್ಳಿಪಳ್ಳಿಗಳ ಜನರು ಸಹಾ ಇವರಲ್ಲಿಗೆ ಬಂದು ಕಣ್ಣು ರೋಗ ಪರಿಹರಿಸಿಕೊಳ್ಳಬಹುದು. ಇವರು ಈ ಜಿಲ್ಲೆಯವರಾಗಿರುವುದರಿಂದ ಜಿಲ್ಲೆಯ ಬಡ ಜನರ ಪ್ರಯೋಜನಾರ್ಥಕ್ಕಾಗಿ ಬೆಳಿಗ್ಗೆ ೮ ಘಂಟೆಯಿಂದ ೯ ಘಂಟೆಯ ವರೆಗೆ ಧರ್ಮಾರ್ಥವಾಗಿ ನಯನ ರೋಗ ಚಿಕಿತ್ಸೆ ನಡಿಸುವರು. ಆದ್ದರಿಂದ ಮದ್ರಾಸಿಗೆ ಹೋಗಲನುಕೂಲವಾದ ಬಡಜನರು ಹೆಚ್ಚಿನ ಶ್ರಮವಿಲ್ಲದೆ ಇವರಿಂದ ತಂತಮ್ಮ ಕಣ್ಣು ನೋವುಗಳನ್ನು ಪರಿಹರಿಸಿಕೊಳ್ಳಬಹುದು.

ಇದೇ ಕಳದ ಮೇ ತಿಂಗಳ ಅಂತ್ಯದಲ್ಲಿ ಸ್ಥಾಪಿಸಲ್ಪಟ್ಟ ಮಹಲ್ಲ ಪುಸ್ತಕಾಲಯದಲ್ಲಿ ಈಗ ಸುಮಾರು ೨೫೦ ಪುಸ್ತಕಗಳೂ, ೨೦ ವೃತ್ತ ಪತ್ರಗಳೂ ಸಾಧಾರಣರ ಉಪಯೋಗಾರ್ಥವಾಗಿ ಇವೆ. ಗ್ರಾಹಕರ ಸಂಖ್ಯೆಯು ಈಗ ೯೦೦ ಮಟ್ಟಿಗೆ ಇದೆ. ಈ ನಾಲ್ಕು ತಿಂಗಳಲ್ಲಿ ಸುಮಾರು ೮ ಸಾವಿರ ಜನರು ಪುಸ್ತಕಗಳನ್ನು ಓದಿರುವರು. ಎಳೇ ಹುಡುಗರ ಕಿಂಡರಗಾರ್ಟನ್ ಕ್ರಮದಂತೆ ಪ್ರಕಾಶಿಸಲ್ಪಟ್ಟ ಅನೇಕ ಪುಸ್ತಕಗಳನ್ನೂ ಸದ್ಯದಲ್ಲಿಯೇ ಇಡುವರಾಗಿ ಕೇಳುತ್ತೇವೆ.

ಕೆನರಾ ಹ್ಯಾಸ್ಕೂಲಿನ ವಿದ್ಯಾರ್ಥಿ ಭವನದ "ಹೊಸ್ಟೆಲ್ ಯುನಿಯನಿನ" ವರ್ಷಾವಧಿ ವರ್ಧಂತಿಯು ಬರುವ ತಾ. ೧೯ನೇ ಶನಿವಾರಕ್ಕೆ ಜರಗುವುದು.

ಮಂಗಳೂರ ಶಾಲೆಗಳ ಆಟಗಳ ಪರಸ್ಪರ ಪಂದ್ಯವು ಜರಗಿಯದೆ. ಜೂನಿಯರರ ಕ್ರಿಕೆಟ್ ಪಂದ್ಯದಲ್ಲಿ ಸೆಂಟ್ ಆಲೋಸಿಯಸ್ ಕಾಲೇಜಿನವರು ಗೆದ್ದರು. ಸೀನಿಯರ್ ಪಂದ್ಯದಲ್ಲಿ ಗವರ್ನಮೆಂಟ ಕಾಲೇಜಿನವರು ಗೆದ್ದರು. ಹಿಂದೂ ಕ್ಲಬ್ಬಿನವರಿಗೂ ಎಕ್ಸಲೇಜನ್ಸ್ ಕ್ಲಬ್ಬಿನವರಿಗೂ ನಡದ ಪಂದ್ಯಾಟದಲ್ಲಿ ಹಿಂದೂ ಕ್ಲಬ್ಬಿನವರು ಗೆದ್ದಿರುವರು.

ಬಾಸೆಲ್ ಮಿಶ್ಯನ್ ಕ್ರೈಸ್ತ ಯುವಕರನ್ನು ಕೈಗಾರಿಕೆಯಲ್ಲಿ ವೃದ್ಧಿಗೆ ತರುವದಕ್ಕೆ ಉಡ್ಪಿಯಲ್ಲಿರುವ ಮಿಶ್ಯನ್ ಅನಾಥ ಶಾಲೆಯಲ್ಲಿಯೇ ಕ್ರೈಸ್ತ ಮಕ್ಕಳಿಗೆ ಕೈಗಾರಿಕೆಯ ಮಾಹಿತಿಯನ್ನು ಕೊಡುವದರಿಂದ ಸುಲಸಾಧ್ಯವಾದೀತೆಂಬ ಆಲೋಚನೆಯಿಂದ ಸರ್ವ ವಿಧದ ಕೈಗಾರಿಕೆಯ ತರ್ಬೀತು ಪಡೆಯುವ ಹಾಗೆ ಉಡ್ಪಿ ಮಿಶ್ಯನ್‌ಹ್ಯಾಸ್ಕೂಲಿನಲ್ಲಿ ಡ್ರೊಯಿಂಗ್ ಮಾಸ್ತರರಾಗಿದ್ದ ಮೆ| ಜಿ. ಅಂಚನರವರು ಇಲ್ಲಿಗೆ ಕಳುಹಿಸಲ್ಪಟ್ಟಿದ್ದರು. ಇವರು ಈಗ ೫-೬ ತಿಂಗಳುಗಳಿಂದ ಇಲ್ಲಿಯ ಮಿಶ್ಯನ್ ಜಪ್ಪು ಕಾರ್ಖಾನೆಯಲ್ಲಿ ಆವೆ ಮಣ್ಣಿನ ಪಾತ್ರೆಗಳನ್ನು ಮಾಡುವ ತರ್ಬಿತನ್ನೂ, ಮಿಶ್ಯನ್ ಕಬ್ಬಿಣ ಕಾರ್ಖಾನೆಯಲ್ಲಿ ಕಬ್ಬಿಣ ಮತ್ತು ಮರದ ಕೆಲಸದ ಮಾಹಿತಿಯನ್ನೂ, ಜೋಶುವ ಅಂಡ್ ಸನ್ಸ್ ಬ್ಯಾಂಡಿಂಗ್ ಆಫೀಸಿನಲ್ಲಿ ಪುಸ್ತಕಗಳನ್ನು ಬ್ಯಾಂಡ್ ಮಾಡುವ ಮಾಹಿತಿಯನ್ನೂ ಪಡೆದು ಈಗ ತಾನೇ ಮೈಸೂರಿನ ದಸರಾ ವಸ್ತುಪ್ರದರ್ಶನ ನೋಡುವರೆ ಹೋಗಿರುವರು. ಅಲ್ಲಿಂದ ಕೊಡಗಿಗೆ ಹೋಗಿ ನಾರಿನ ಕೈಗಾರಿಕೆಯ ತರ್ಬೀತು ಪಡೆದು ಬೆಂಗಳೂರಿಗೆ ಹಿಂತೆರಳಿ ಅಲ್ಲಿಯ ಗವರ್ನಮೆಂಟ್ ಇಂಡಸ್ಟ್ರಿಯಲ್ ಶಾಲೆಯಲ್ಲಿ ತರ್ಬೀತು ಹೊಂದುವರು. ಇವರ ಖರ್ಚನ್ನು ಬಾಸೆಲ್ ಮಿಶ್ಯನಿನವರೇ ನೋಡುವರು. ಮೆ| ಅಂಚನರು ತರ್ಬೀತು ಪಡೆದು ಬಂದನಂತರ ಉಡ್ಪಿ ಅನಾಥ ಶಾಲೆಯಲ್ಲಿ ಕೈಗಾರಿಕೆಯು ಕಲಿಸಲ್ಪಡುವದೆಂದು ತಿಳಿಯುತ್ತೇವೆ.

ಒಬ್ಬ ಬಂಗ್ರಮಂಜೇಶ್ವರ ಬಾತ್ಮೀದಾರರಿಂದ:-ಬಂಗ್ರಮಂಜೇಶ್ವರ ಸಾಹುಕಾರ ರಾಮ ಕಮ್ತಿಯರ ಮಕ್ಕಳಿಗೂ ಸೋದರ ಅಳಿಯ ನಾಗಪ್ಪ ಬಾಳಿಗರಿಗೂ ಕೆಲವು ಸಮಯದಿಂದಿದ್ದ ದ್ವೇಷದ ಮೂಲಕ ಸದರಿ ರಾಮ ಕಮ್ತಿಯರ ಮಗ ವಿಟ್ಟಪ್ಪ ಕಮ್ತಿಯರು ಕೆಲವು ಮಾಪಿಳೆಯವರ ಸಹಾಯದಿಂದ ಕಳದ ತಿಂಗಳ ತಾ. ೮ನೇ ಆದಿತ್ಯವಾರ ಬೆಳಿಗ್ಯೆ ಪೇಟೆಯಲ್ಲಿರುವ ಅವರ ಅಂಗಡಿಯ ಬಳಿಯ ರಸ್ತೆಯಲ್ಲಿ ಸದರಿ ನಾಗಪ್ಪ ಬಾಳಿಗರಿಗೆ ಕತ್ತಿಯಿಂದ ತಲೆಗೂ ಕೈಗೂ ಅಪಾಯಕರವಾದ ಜಖಂಗಳನ್ನು ಮಾಡಿದ್ದರಿಂದ ಅದೇ ತಿಂಗಳ ತಾ.೧೬ಕ್ಕೆ ನಾಗಪ್ಪ ಬಾಳಿಗರು ಮೃತಪಟ್ಟರು. ಹೀಗೆ ಆರೋಪಿಸಲ್ಪಟ್ಟ ತಪ್ಪುಗಳ ಸಬಬಿನ ಮೇಲೆ ಕಾಸರಗೋಡು ಸಬ್‌ಮೇಜಿಸ್ಟ್ರೇಟರ ಮುಂದೆ ಈ ಮೊಕದಮೆಯ ತನಖಿಯು ನಿನ್ನೆ ಇಟ್ಟಿತ್ತು. ಮುದ್ದೈಯಾಲೆರ ಪೈಕಿ ರಾಮ ಕಮ್ತಿಯರ ಮಗ ವಾಸುದೇವ ಕಮ್ತಿಯವರನ್ನು ಇವರಿಗೆ ಸಹಾಯ ಮಾಡಿದ ಇಬ್ಬರು ಮಾಪಿಳ್ಳೆಯರನ್ನೂ ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರು. ಮುದ್ದೈಯಾಲೆರನ್ನು ಜಾಮೀನಿನ ಮೇಲೆ ಬಿಡಲಿಲ್ಲವೆಂತ ಕೇಳುತ್ತೇವೆ. ರಾಮ ಕಮ್ತಿಯರ ಮಗ ವಿಟ್ಟಪ್ಪ ಕಮ್ತಿ ಪರಾರಿಯಾಗಿರುವರಂತೆ.

* * *

ಕಾಸರಗೋಡು. ಇಲ್ಲಿಯ ಬಾಸೆಲ್ ಮಿಶ್ಯನಿನ ಶಾಲಾ ಮೆನೇಜರರಾಗಿರುವ ಮೆ| ಸಿ. ಡೂರ್ ಧೊರೆಗಳು ನಿನ್ನೆ ಬ್ರಹಸ್ಪತಿವಾರ ಇಲ್ಲಿ ಹೊಸತಾಗಿ ಕಟ್ಟ ತೊಡಗಿರುವ ಹೊಸ ಸೆಕೆಂಡರಿ ಶಾಲಾ ಕಟ್ಟೋಣಕ್ಕೆ ಅಸ್ತಿವಾರ ಕಲ್ಲನ್ನಿಟ್ಟರು.

* * *

ಕರ್ವಪಾಡಿ:—ಈ ಗ್ರಾಮದ ಗುಬ್ಬ್ಯಯ ಎಂಬಲ್ಲಿ ಕಳದ ವಾರ ಶುಮಾರು ಮಧ್ಯಾಹ್ನ ಸಮಯಕ್ಕೆ ಒಬ್ಬ ಹೊಲೆಯನ ಗುಡಿಸಲಿಗೆ ಬೆಂಕಿ ತಗಲಿ ಈ ಗುಡಿಸಲೂ ಹೆತ್ತಿರ ಇರುವ ದನಗಳ ನಾಲ್ಕು ಕೊಟ್ಟಿಗೆಗಳೂ ಸುಟ್ಟು ಭಸ್ಮವಾದವು.

ಸದ್ರಿ ಹೊಲೆಯನ ಗುಡಿಸಿಲೊಳಗೆ ಇದ್ದ ಇಬ್ಬರು ಮಕ್ಕಳು ಮನೆಯಿಂದ ಹೊರಗೆ ಬರಲಿಕ್ಕೆ ಸಾಧ್ಯವಾಗದೆ ಒಬ್ಬರಿಗೊಬ್ಬರು ತಬ್ಬಿಕೊಂಡು ಪ್ರಾಣವನ್ನು ಬಿಟ್ಟಿರುವರು ಎಂಬದನ್ನು ತಿಳಿಸಲು ವಿಷಾದಿಸುತ್ತೇನೆ.

* * *

ಬಂಟವಾಳ. ಬೋರ್ಡಿನವರು ಹೊಸತಾಗಿ ಮಾಪಿಳ್ಳೆ ಹುಡುಗರಿಗಾಗಿ ತಾ. ೧ರಲ್ಲು ಹಲವು ಮಾನ್ಯ ಗೃಹಸ್ಥರೆದುರಿಗೆ ತೆರೆದ ಮಾಫಿ ಎಲಿಮೆಂಟರಿ ಶಾಲೆಯು ಪ್ರಯತ್ನವು ಸುತ್ಯಾರ್ಹವಾದುದು. ಈ ಶಾಲೆಗೆ ಹುಡುಗರು ಹೆಚ್ಚುತ್ತಲಿರುವುದರಿಂದ ಒಬ್ಬ ಮಹಮ್ಮದಿ ಉಪಾಧ್ಯಾಯರನ್ನೂ ತಕ್ಕ ಕಟ್ಟೋಣವನ್ನೂ ಬೋರ್ಡಿನವರು ಅನುಕೂಲಿಸುವರಾಗಿ ನಂಬುತ್ತೇವೆ. ಅಶಿಕ್ಷಿತ ಮಹಮ್ಮದೀಯರಿಗಾಗಿ ಪ್ರಯಾಸಪಡುವ ಬೋರ್ಡಿನವರಿಗೆ ಎಲ್ಲರ ಕೃತಜ್ಞತೆಯು ಇದೆ.

ಶ್ರೀ ಕಾಶೀ ಮಠದ ವರದೇಂದ್ರ ಸ್ವಾಮಿಯವರು ಸುಖಾರೋಗ್ಯ ಹೊಂದುತ್ತಲಿದ್ದಾರೆ. ಅನ್ಯ ಸ್ಥಳಗಳಿಂದ ಜಾತಿಯ ಗೃಹಸ್ಥರು ಭೇಟಿಕೊಡಲು ಬರುತ್ತಲಿದ್ದಾರೆ. ಸ್ವಾಮಿಯರ ಆರೋಗ್ಯ ಲಾಭಕ್ಕಾಗಿ ಡಾಕ್ಟರ್ ಶೇಷಭಟ್ಜಯವರೂ ಶ್ರೀಯುತ ಸರ್ವೋತ್ತಮ ಕಾಮತರೂ ಕಷ್ಟಪಡುತ್ತಲಿದ್ದಾರೆ. ಇವರ ಶುಶ್ರೂಷೆಯು ಸುಫಲಿತವಾಗಲೆಂದು ನಾವು ಪ್ರಾರ್ಥಿಸುವೆವು.

* * *

ಗುರುಪುರ:—ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣರ ಶಾಲೆಗೆ ಈ ವರೇಗೆ ಒಬ್ಬರೇ ಉಪಾಧ್ಯಾಯರು ಇದ್ದರು. ಈಗ ಶ್ರೀ ದೇವಸ್ಥಾನದ ಮುಕ್ತೇಸರರು ಇನ್ನೊಬ್ಬ ಅಸಿಸ್ಟಾಂಟ್ ಉಪಾಧ್ಯಾಯರನ್ನು ನೇಮಿಸಿರುತ್ತಾರೆ. ಈ ಮುಕ್ತೇಸರರು ವ ಇತರ ನಿವಾಸಿಕರು ಈ ಶಾಲೆಯ ವಿಷಯದಲ್ಲಿ ಹೆಚ್ಚು ಜಾಗ್ರತೆಯೂ ಪ್ರಯತ್ನವೂ ತೆಗೆದುಕೊಳ್ಳುವದರಿಂದ ಈ ಶಾಲೆಯು ಯೋಗ್ಯ ಸ್ಥಿತಿಯಲ್ಲಿ ನಡಿಸಲ್ಪಡುತ್ತದೆಂಬದನ್ನು ತಿಳಿಸಲು ಸಂತೋಷಪಡುತ್ತೇವೆ.

ನಮ್ಮಲ್ಲಿ ಬ್ರೇಂಚ್ ಪೊಸ್ಟುಮಾಸ್ತರ್ ಕೆಲಸ ನೋಡುತ್ತಿದ್ದವರನ್ನು ಸದ್ರಿ ಇಲಾಖೆಯವರು ತೆಗೆದು ಮಿಶನ್ ಶಾಲಾ ಹೆಡ್‌ಮಾಸ್ತರರಿಗೆ ಆ ಕೆಲಸವನ್ನು ಕೊಟ್ಟಿರುತ್ತಾರೆ.

* * *

ಯರ್ಮಾಳ:—ಸುಮಾರು ಎಂಟು ವರ್ಷಗಳಿಂದ ಈ ಊರಲ್ಲಿದ್ದ ಬ್ರೇಂಚ್ ಪೋಸ್ಟಾಪೀಸನ್ನು ಇದೇ ತಿಂಗಳ ಒಂದನೇ ತಾರೀಕಿನಿಂದ ಮುಚ್ಚಿ ಬಿಡುವರೆ ಟಪ್ಪಾಲ್ ಮೇಲಾಧಿಕಾರಿಗಳು ಹುಕುಂ ಕೊಟ್ಟಿರುವುದರಿಂದ ಈ ಊರ ಜನರಿಗೆ ಟಪ್ಪಾಲ್ ಸಂಬಂಧವಾಗಿ ಉಂಟಾಗುವ ತೊಂದರೆಗಳನ್ನು ಹೇಳಿ ಪೂರೈಸದು. ಈ ಊರಿನಿಂದ ಪಡುಬಿದ್ರೆ ಟಪ್ಪಾಲು ಆಫೀಸು ೩ ಮೈಲು ದೂರವೂ ಕಾಪು ಪೋಸ್ಟಾಫೀಸು ೪|| ಮೈಲು ದೂರವೂ ಇದೆಯಾದ್ದರಿಂದ ಚೀಟುಗಳು ರಿಜಿಸ್ತ್ರಿ ಮನಿಯಾರ್ಡರು ಮುಂತಾದ್ದು ಆಗಬೇಕಾದರೆ ಊರ ಜನರು ಅಷ್ಟು ದೂರ ನಡಿಯಬೇಕಾಗುವುದು. ಆದ್ದರಿಂದ ಪುನಃ ಟಪ್ಪಾಲ್ ಮೇಲಾಧಿಕಾರಿಗಳು ಈ ಸಂಬಂಧ ತಕ್ಕ ನಿಗಾ ಕೊಟ್ಟು ಜನರ ಪ್ರಯೋಜನಾರ್ಥವಾಗಿ ಬ್ರೇಂಚ್ ಟಪ್ಪಾಲ್ ಆಫೀಸನ್ನು ತೆರೆಯ ಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುವೆವು.

ಇದೇ ತಾ. ೧ರಿಂದ ಇಲ್ಲಿ ಒಂದು ಮಹಮ್ಮದೀಯರ ಬೋರ್ಡು ಹಿಂದುಸ್ಥಾನಿ ಶಾಲೆಯು ತೆರೆಯಲ್ಪಟ್ಟಿರುವದು. ಈ ಶಾಲೆಗೆ ಉಡ್ಪಿ ಹಿಂದೂಸ್ಥಾನಿ ಶಾಲೆಯ Iನೇ ಮಾಸ್ತರಾದ ಸೇಕ್ ಇಸ್ಮಯೇಲ್‌ಸಾಹೇಬರೆಂಬವರು ಹೆಡ್ ಮಾಸ್ತರರಾಗಿ ನೇಮಿಸಲ್ಪಟ್ಟಿರುವರು.

ಪಾಂಗಾಳ ಹಿಂದು ಎಲಿಮೆಂಟರಿ ಶಾಲೆಗೆ- ಶಾಲೆಗಳ ಸರ್ಕಲ್ ಇನ್ಸಪೆಕ್ಟರರವರು ತಾ.೨ರಲ್ಲು ಚಿತ್ತೈಸಿ ಶಾಲೆಯ ಸ್ಥಿತಿಗತಿಗಳನ್ನು ಪರೀಕ್ಷಿಸಿ ಸಂತೋಷಗೊಂಡು ಮುಲ್ಕಿಗೆ ಹೋಗುವವರಾದರು.

* * *

ಸುರತಕಲ್. ಇದೇ ತಾ. ೩ರಲ್ಲು ಇಲ್ಲಿಯ ಸೇಕ್ರೆಡ್ ಹಾರ್ಟ ಎಲಿಮೆಂಟರಿ ಶಾಲೆಯಲ್ಲಿ ಶಾಲಾ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಅಸಿಸ್ಟಾಂಟ ಇನ್ಸ್‌ಪೆಕ್ಟರರು, ರೇಂಜಿನ ಸುಪರವ್ಯಾಸರು ವ ೩೪ಜನ ಉಪಾಧ್ಯಾಯರು ನೆರೆದು ಬಂದ ಉಪಾಧ್ಯಾಯರ ಸಂಘವು ಕೂಡಿತ್ತು. ಸದ್ರಿ ಶಾಲಾ ವಿದ್ಯಾರ್ಥಿಗಳ ಆಟ ಪಾಟ ಚುರುಕುತನಗಳಿಗೆ ಸಭಿಕರು ಸಂತೋಷಪಟ್ಟರು. ಪ್ರತಿ ಶಾಲೆಯಲ್ಲಿಯೂ ಬಾಲಕ ದರ್ಜೆಯ ಪಾಠವನ್ನು ಹೆಡ್ ಮಾಸ್ತರರೇ ಅಥವ ಹೊಸತಾಗಿ ತರಬೇತು ಹೊಂದಿದವರು ವಹಿಸಿಕೊಳ್ಳುವುದು ಯೋಗ್ಯವೆಂದು ಶಾಲಾ ಇನ್ಸಪೆಕ್ಟರರು ಭಾಷಣ ಕೊಟ್ಟು ಸಭೆಯನ್ನು ಮುಕ್ತಾಯಪಡಿಸಿದರು.

* * *

ಪುತ್ತೂರು. ಇಲ್ಲಿಯ ಸಬ್ ರಿಜಿಸ್ತ್ರಾರರಾದ ರಾ| ಎಮ್. ಲಕ್ಷ್ಮಣರಾಯರಿಗೆ ಬಂಟವಾಳಕ್ಕೂ ಕುಂದಾಪುರದಿಂದ ರಾ| ಎಮ್. ಬಾಬುರಾಯರಿಗೆ ಇಲ್ಲಿಗೂ, ರಾ| ಟಿ. ಎಮ್. ಭಂಡಾರಿಗಳಿಗೆ ವಿಟ್ಲದಿಂದ ಮಂಜೇಶ್ವರಕ್ಕೂ ಮೂಡಬಿದ್ರೆಯಿಂದ ರಾ| ಎಮ್. ಮಂಗೇಶ ರಾಯರಿಗೆ ವಿಟ್ಲಕ್ಕೂ ವರ್ಗವಾಗಿರುವದು.

ನಮ್ಮ ಡಿವಿಜನಲ್ ಡ್ಯೂಪಿಟಿ ಕಲೆಕ್ಟರರವರು ಸದ್ಯಾ ರಜೆ ತಕ್ಕೊಳ್ಳಲಿಕ್ಕಿದ್ದಾರೆಂಬದಾಗಿ ಕೇಳುತ್ತೇವೆ.

ಕುಂದಾಪುರ ಡಿವಿಜನಲ್ ಮೆಜಿಸ್ಟ್ರೇಟ ಕೋರ್ಟಿನಿಂದ ಇಲ್ಲಿಯ ಡಿವಿಜನಲ್ ಕೋರ್ಟಿಗೆ ಜಿಲ್ಲಾ ಕಲೆಕ್ಟರರವರಿಂದ ರವಾನಿಸಲ್ಪಟ್ಟ ಮೊಕದಮೆಯು ಇದೇ ತಾ. ೪ರಿಂದ ಇಲ್ಲಿ ತನಖಿಗೆ ಪ್ರಾರಂಭವಾಗಿ ತಾ. ೮ರ ವರೆಗೆ ನಡೆದು ಪ್ರೊಸಿಕ್ಯೂಶನ್ ಕಡೆಯಿಂದ ೩ ಸಾಕ್ಷಿಗಳ ವಿಚಾರಣೆಯು ತೀರಿತು. ಮುಂದಿನ ವಿಚಾರಣೆಯು ಇದೇ ತಾ. ೨೨ಕ್ಕೆ ಮಂಗಳೂರು ಮೊಕ್ಕಾಮಿನಲ್ಲಿ ನಡೆಯುವುದು.

ನಮ್ಮ ಡಿವಿಜನಲ್ ಆಫೀಸರರು ಇದೇ ತಾ. ೧೦ರಲ್ಲು ಉಪ್ಪಿನಂಗಡಿ, ತಾ. ೧೧-೧೨ ಬೆಳ್ತಂಗಡಿ. ೧೩-೧೬ ಉಪ್ಪಿನಂಗಡಿ, ೧೭-೧೮ ಪುತ್ತೂರು, ೧೯-೨೦ ಮಾಣಿ, ೨೧-೨೩ ಮಂಗಳೂರು ಈ ರೀತಿ ಮೊಕ್ಕಾಂ ಮಾಡುವರು.

* * *

ಕಾರ್ಕಳ. ತಾಲೋಕು ಕಚ್ಚೇರಿಯನ್ನು ಇಲ್ಲಿಗೆ ತರಲು ಸರ್ವರೂ ಏಕ ಹಸ್ತರಾಗಿ ಮಾಡಿದ ಸಾಹಸವನ್ನು ಶ್ಲಾಘಿಸುತ್ತ ನಾವು ಇರುವಷ್ಟರಲ್ಲಿಯೇ, ಸಾಲು ಮರದ ಕಡೆಯಲ್ಲಿ ಕಚ್ಚೇರಿಯನ್ನು ಇರಗೊಡಿಸಬೇಕೆಂದು ಕೆಲವರೂ, ಕೋರ್ಟು ಸಮೀಪ ಇರಗೊಡಿಸಬೇಕೆಂದು ಕೆಲವರೂ ಚಳವಳಮಾಡುತ್ತಿದ್ದಾರೆ. ಸಾಲು ಮರದ ಸಮೀಪ ಇರಿಸಿದ್ದಲ್ಲಿ ಊರು ಅತ್ತ ಹಬ್ಬಿ ಬಿಡಾರದವರಿಗೂ ಅಂಗಡಿಯವರಿಗೂ ಉಪಕಾರವಾಗುವುದೆಂಬ ಸ್ವಾರ್ಥವಿದೆ ನಿಜ; ಆದರೆ ಸರಕಾರಿ ಕಟ್ಟೋಣಗಳಿಂದ ಸ್ಥಳವನ್ನು ಬಿಟ್ಟು ಅತ್ತ ಹೊಸತಾಗಿ ಇರಿಸುವುದು ಅನುಚಿತವೆಂದು ಹೇಳಬೇಕಾಗಿದೆ.

ಇದರಲ್ಲಿ ಮಗ್ನವಾಗಿರುವ ಕಾರ್ಕಳದವರ ಸಾಹಸವನ್ನು ವಿದ್ಯಾಭ್ಯಾಸದ ಕಡೆಗೆ ತಿದ್ದುವುದಾದರೆ ಹೆಚ್ಚಿನ ಆನಂದವಾಗುತ್ತಿತ್ತು. ಬೋರ್ಡು ಎಲಿಮೆಂಟರಿ ಶಾಳೆಗೆ ಸ್ಥಳ ಸಂಕೋಚತೆಯಿಂದಲೂ, ಬೇಕಾದ ಕರಿಹಲಿಗೆ, ಚಿತ್ರ, ಗಡಿಯಾರ ಮುಂತಾದವುಗಳಿಲ್ಲದರಿಂದಲೂ ಸಂಭವಿಸುವ ಅಪಾಯಗಳು ಇಷ್ಟೇ ಎಂದೆಣಿಸಲಾಗದು. ಸೆಕೆಂಡರಿ ಶಾಲೆಯು ನಮ್ಮ ರಾ| ಗಣಪಯ್ಯನವರ ಕಾಲಕ್ಕಿಂತಲೂ ಶಿಕ್ಷಣೆಯಲ್ಲಿ ಹಿಂದೆ ಬಿದ್ದಿದೆ ಎನ್ನಬೇಕು. ಇಬ್ಬರು ಇನ್ನೂ ತರಬೇತಾಗದ ಉಪಾಧ್ಯಾಯರಿದ್ದಾರೆ. ಈ ಎರಡೂ ಶಾಲೆಗಳ ಗದ್ದಲವು ನಮ್ಮ ಬೋರ್ಡು ಮೆಂಬರರಿಗೆ ಕೇಳಿಸದಿದ್ದದು ಆಶ್ಚರ್ಯ! ಬೋರ್ಡಿನ ಮಹಾನುಭಾವರು ಒಂದೆರಡು ವಾರಕ್ಕೊಮ್ಮೆ ಈ ಶಾಲೆಗಳನ್ನು ಸಂದರ್ಶಿಸುವುದೆಂತಾದರೆ ಈ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಸಂಪತ್ತು ಬಂದಂತಾಗಿ, ಮಹನೀಯರಿಗೂ ಪುಣ್ಯ ಬರುವುದು.

ಶ್ರೀ ದೇವಸ್ಥಾನದ ಕಡೆಯಿಂದ ಸ್ಥಾಪಿಸಲ್ಪಟ್ಟ ಬಾಲಿಕಾ ಪಾಠಶಾಲೆಯು ರಿಕೊಗ್ನ್ಯೈಜ್ ಆಗಿದ್ದು, ಉತ್ತಮ ಸ್ಥಿತಿಯಲ್ಲಿದೆ ಎಂದು ತಿಳಿಸಲು ಸಂತೋಷ. ದೇವಸ್ಥಾನಗಳ ಹಣವು ಹೆಚ್ಚಿನ ಮಟ್ಟಿಗೆ ಅಫಲಿತವಾಗುವುದನ್ನು ನಿರ್ಮೂಲಿಸಲು ಇಂತಹ ಶಾಲೆಗಳನ್ನು ನಿರ್ಮಾಣಮಾಡಿಸುವುದೇ ಹತ್ತು ಸಮಸ್ತರ ಕರ್ತವ್ಯ. ಈ ಬಾಲಿಕೆಯರ ವಿದ್ಯಾ ಸಾಫಲ್ಯದಿಂದ ಜಾತಿಯ ವೃಂದವೆಲ್ಲಕ್ಕೂ ಯಶಸ್ಸುಂಟಾಗುವುದರಿಂದ, ಈ ವಿದ್ಯಾಲಯದ ಕಡೆಗೆ ನಮ್ಮ ಚಿರಸಹಾನುಭೂತಿ ಇರುವುದು. ಜಾತಿಯ ವ ಜನಾಂಗದ ಏಳಿಗೆಯನ್ನು ಹಾರೈಸುವವರು ಯಾರು ತಾನೆ ಈ ಶಾಲೆಯ ಕಡೆಗೆ ಉದಾಸೀನರಾಗುವರು?

* * *

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಮಸ್ಕತಿ ಅಕ್ಕಿ	6—0—0—6—4—0
ಗುಡ್ಡು ಮಸ್ಕತಿ... ...	5—10—0-5—14—0
ಮಸ್ಕತಿ ದುಯಂ... ...	5-11-0—5—14—0
ಗಾಡಿ ಸುಗ್ಗಿ	5-6-0-5—8—0
ಉಂಚು ಸುಗ್ಗಿ	5—11—0—5-14—6
ಮಸ್ಕತಿ ಬೆಳ್ತಿಗೆ	6—10—0
ರಂಗೂನ್ ಬೆಳ್ತಿಗೆ ಗೋಣಿ 1ರ	11—0—0
ಹುರುಳಿ ಗೋಣಿ ೧, ಮುಡಿ 2ರ	6-12-0
ಉಪ್ಪು ಗೋಣಿ ೧ರ	3—14—0
ಕೊಬ್ರಿ ಖಂಡಿ ೧ರ ...	90—0-0-95—9—0
ಕೊಬ್ರಿ ಎಣ್ಣೆ ಮಣ ೧ರ	7—0—0
ಕೊಬ್ರಿ ಹಿಂಡಿ ಖಂಡಿ ೧ರ	32—8—0
ಊರು ಬೆಲ್ಲ ಖಂಡಿ ೧ರ	55—0—0
ಕಾಫಿ ಖಂಡಿ ೧ರ 270—0—0	275—0—0
ಕಾಳು ಮೆಣಸು ಖಂಡಿ	180—0—0
ಬಿಳಿ ಗೋಟು ಅಡಿಕೆ ಖಂಡಿ ೧ರ ...	85—0—0
ಪಚ್ಚೆಹೆಸರು ಗೋಣಿ ೧ರ	11—4—0
ಬೊಂಬಾಯಿ ಉದ್ದು ಗೋಣಿ ೧ರ	10—0—0
ಗೋದಿ ಗೋಣಿ ೧ಕ್ಕೆ	12—0—0
ಕಡಲೆ ಗೋಣಿ ೧ರ	7-4-0—7—8—0
ತೊಗರಿ ಗೋಣಿ ೧ರ	8—8—0
ತೊಗರಿಬೇಳೆ ಗೋಣಿ ೧ರ	11—0—0—13—0—0
ಮೋರಿಸ್ ಸಕ್ಕರೆ ಮಣ ೧ರ ...	2—15—0
ಎಳ್ಳಿಂಡಿ	31-4—0

ಎಂ. ಡಿ. ರಾಣೆ ಎಂಡ್ ಕೋ.,
ಮುಂಬಯಿ.

[illegible]ಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

[illegible]ವಿದ್ಯಾರ್ಥಿಗಳ ಶಾಯಿ ಹಾಳೆಗಳು.

[illegible]ಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. [illegible]—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.
M. D. Rane & Co.,
Post, Grant Road, Bombay

ದಿ ಏಸಿಯನ್ ಕಮರ್ಶಲ್
ಎಸ್ಯುರೆನ್ಸ್ ಕಂಪನಿ ಲಿಮಿಟೆಡ್, ಮುಂಬಯಿ.
ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದು!!
ವಗೈರೆ ಇತರ ಕಂಪೆನಿಗಿಂತಲೂ ಅತೀ ಕಡಿಮೆಯಾಗಿರುತ್ತದೆ. ವಾದ ಕೂದ[illegible]
ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿವಾದ ಅಲಂಕ[illegible]
ಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರ್ಷ ನಿಬಿಡವಾದ ಕೇಶ ರ[illegible]
ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವು ರೇಶಿಮೆಯಂತೆ ಮೆದುವಾಗಿ
ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸ್[illegible]ವ ಆಕೃತಿಯಿಂದಲಾದರೂ ಕಟ್ಟಿ
ಅರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟ[illegible]ಬೇಕು.
ಜು ಅವರ ಬಾಧ್ಯಸ್ಥರಿಗೆ ಸಿಕ್ಕುವುದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೆ[illegible] ಪ್ರವು".
ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 1[illegible]
30 ವರುಷದ ವಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊ[illegible]

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹು[illegible]ದ ಉಪ
ಅದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾ[illegible]
ಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ಕ[illegible]
ಆತನ ಪ್ರಿಮಿಯಮ್ 4ರ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡಿಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈವರಿವಿಗೆ ಕಂಡುಬರುವದಿಲ್ಲ. ಆದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದರ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟು ರೋಡ್ ಉಡುಪಿ
ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಕ್ಷಿಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

THE CANARA ARTS BUREAU.
ದಿ ಕೆನರಾ ಆರ್ಟ್ಸ್ ಬ್ಯೂರೋ
ಎಂಬ ಕಲಾ ಕೌಶಲ ಮಂದಿರ.



ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನೂ ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯು ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮುಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮುಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ವಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.
ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ, ಮಂಗಳೂರು

ನೇಜ
ಪ್ಪತಿವಾ
ಕೆಂಡರಿ ಶಾಲ

ವಾಡಿ:—ಈ ಗ್ರಾಮದ
ಕಳದ ವಾರ ಶುಮಾರು ಮಧ್ಯಾಹ
ಹೊಲೆಯನ ಗುಡಿಸಲಿಗೆ ಬೆಂಕಿ
ಹತ್ತಿರ ಇರುವ ದನಗಳ ನಾಲ್ಕು
ಭಸ್ಮವಾದವು.

ಸದ್ರಿ ಹೊಲೆಯನ ಗ

ಕ್ಷಯ ಸಂಹಾರಿ

ಸಾಧಾರಣವಾಗಿ ಎಣಿಸುವುದಾದರೆ ವಿದ್ಯಾವಂತರಲ್ಲಿ ಹೆಚ್ಚಿನ ಪಾಲಿನವರು ಸಂಗೀತಾಭ್ಯಾಸವನ್ನು ವಿಶೇಷತಃ "ಫೆಶನ್" ಎಂದು ಎಣಿಸುವುದೂ, ಗಾಯನವನ್ನು ಸರಿಯಾಗಿ ಗ್ರಹಿಸಲು ಅಶಕ್ತರಾದವರು ಕೂಡಾ ಸಂಗೀತವನ್ನು ಮೆಚ್ಚುವೆವೆಂದು ನುಡಿದು ಗೃಹಸ್ಥರೆನ್ನಿಸಿಕೊಳ್ಳುವುದೂ ಈಗಲೀಗ ಭಾರತೀಯರಲ್ಲಿ ವಾಡಿಕೆಯಾಗುತ್ತಾ ಬರುತ್ತಿದೆ. ಸಂಗೀತ ವ್ಯಾಸಂಗವನ್ನು ಅನುಕೂಲವೆಂತಾಗಲಿ, ಅಗತ್ಯವೆಂತಾಗಲೀ ಎಣಿಸದೆ ಇರುವುದರಿಂದ ಭರತಶಾಸ್ತ್ರವು ಅತೀ ಹೀನಸ್ಥಿತಿಗಿಳಿದಿದೆ. ಸಂಗೀತವು ಮನೋರಂಜಕತ್ವ ಮಾತ್ರವಲ್ಲದೆ ಹೆಚ್ಚಿನ ತಾತ್ಪರ್ಯವುಳ್ಳದೆಂದು ಎಷ್ಟು ಜನರಿಗೆ ತಿಳಿದಿರುವುದು? ಪ್ರಕೃತದಲ್ಲಿ ಎಣಿಸಲ್ಪಡುವಂತೆ ಕಿವಿಗಿಂಪೀಯುವುದು ಮಾತ್ರ ಆ ಶಾಸ್ತ್ರದ ಉದ್ದೇಶವಲ್ಲ. ಒಂದಾನೊಂದು ಕಾಲದಲ್ಲಿ ಭರತಖಂಡದಲ್ಲಿ ಸಂಗೀತಶಾಸ್ತ್ರದ ಪ್ರಚುರತೆ ಶ್ರೇಷ್ಠತ್ವಗಳಿಂದ ಭಾರತೀಯರು ಅಖಂಡ ಜನಾಂಗವಾಗಿದ್ದರು ಎಂದರೆ ಅನೇಕರಿಗೆ ವಿಸ್ಮಯವಾಗಬಹುದು. ಮಮತೆ, ದೇಶಭಕ್ತಿ, ದೇವಭಕ್ತಿ, ಸಾಹಸಗಳಿಗೆ ಪ್ರಖ್ಯಾತಿಹೊಂದಿದ ಈ ಜನಾಂಗದಲ್ಲಿ ಪ್ರಾಚೀನದಲ್ಲಿ ಈ ಶ್ಲಾಘನೀಯ ಸದ್ಗುಣಗಳು ಸಂಗೀತ ಶಾಸ್ತ್ರಕಲ್ಪಿತವಾದುವು. ಭರತಖಂಡದಲ್ಲಿ ಎಲ್ಲಾ ಕಲಾಶಾಸ್ತ್ರಗಳಂತೆ ಸಂಗೀತಶಾಸ್ತ್ರಕ್ಕೂ ಮತ ಮಹಿಮೆಯೇ ಮೂಲ. ಸಂಗೀತವು ಮತಸಂಬಂಧವಾದ ಕಾರ್ಯಗಳಲ್ಲಿ ಎಷ್ಟರ ಪ್ರಬಲತ್ವ ಪಡೆಯಿತೆಂದರೆ, ಕಡೆಗೆ ಅದು ಭಾರತೀಯರ ಸಮಾಜಿಕ, ರಾಜನೈತಿಕ ವ್ಯವಹಾರಗಳಲ್ಲಿಯೂ ಕೂಡ ತನ್ನ ಸಾಮರ್ಥ್ಯವನ್ನು ವ್ಯಕ್ತಗೊಳಿಸುತ್ತಿತ್ತು.

ಹಿಂದುಗಳ ಸಂಗೀತಾಭಿಮಾನಿಯಾದ ದೇವತೆಯು ಶ್ವೇತಪದ್ಮಪೀಠವುಳ್ಳ, ಅಲೌಕಿಕ ಸೌಂದರ್ಯ ಪ್ರಭೆಯ ಸರಸ್ವತಿ. ಒಂದು ಕೈಯಲ್ಲಿ ವೀಣೆಯೂ ಮತ್ತೊಂದರಲ್ಲಿ ಗ್ರಂಥವೂ ಇದ್ದು, ವಿದ್ಯೆ ಸಂಗೀತಕಲೆಗಳ ಅಧಿಷ್ಠಾನ ದೇವತೆಯಾಗಿ ಸರಸ್ವತಿಯು ಬಣ್ಣಿಸಲ್ಪಟ್ಟಿರುವುದರಿಂದ, ವಿದ್ಯಾವ್ಯಾಸಂಗವೂ ಗಾಯನಾಭ್ಯಾಸವೂ ಏಕಪ್ರಕಾರವಾಗಿ ವೃದ್ಧಿಸುವುದು ಯೋಗ್ಯವೆಂತಲೂ, ಅವೆರಡು ಸಮತುಲ್ಯವಾಗಿದ್ದುವೆಂದೆಣಿಸಬೇಕೆಂತಲೂ ದೇವಿಯುಪಾಸಕರ ಅಭಿಪ್ರಾಯವಿದ್ದಿರಬೇಕು. ಹಿಂದುಗಳ ಸ್ವರ್ಗವು ಪ್ರೇಮಮಯವಾದುದು; ಸಂಗೀತಮಯವಾದುದು:—ವಿಶ್ವವೆಲ್ಲವೂ ಒಂದಾಗಿ ಗಾನಗೈವುದು. ಈಶ್ವರನು ನಟರಾಜನೆನ್ನಿಸಿ, ತಾಂಡವನಾಟ್ಯವನ್ನಾಡುವನು; ಸ್ವರ್ಗೀಯ ಡಮರುವು ಆತನ ನಾಟ್ಯಕ್ಕೆ ತಾಳ ಬಡೆಯುವುದು. ನಾರದಮುನಿಯಾದರೊ, ತನ್ನ ವೀಣೆಯನ್ನು ಬಾರಿಸುತ್ತ ಹರಿನಾಮವನ್ನು ನಿರಂತರವೂ ಸ್ಮರಿಸುತ್ತಿರುವನು. ಅಪ್ಸರ ಕಿನ್ನರರು ದೇವತೆಗಳ ಗಾಯಕಮಂಡಲಿ. ಇಹಲೋಕದಲ್ಲಿ ಪುಣ್ಯಸಂಪಾದಿಸುವ ನರರಿಗೆ ಸ್ವರ್ಗಸುಖಗಳಲ್ಲಿ ಸಂಗೀತರಂಜನೆಯು ಪ್ರಾಮುಖ್ಯವಾಗಿತ್ತು.

ವೇದಗಳ ಕಾಲಕ್ಕೆ ಮೊದಲು ಆರ್ಯಜನಾಂಗದ ವಾಸ್ತವಿಕ ಇತಿಹಾಸವು ತಿಳಿದಿಲ್ಲ. ವೇದಗಳ ಪ್ರಬಂಧವು ಕ್ರಿಸ್ತ ಪೂರ್ವ ೨೦೦೦ ವರ್ಷಗಳ ಮೊದಲೇ ಆಗಿತ್ತು; ವೇದವ್ಯಾಸನು ವೇದಗಳನ್ನು ಸಂಗ್ರಹಿಸುವ ಮೊದಲೇ ಋಷಿಗಳು ವೇದಸಂಹಿತೆಗಳನ್ನು ತಮ್ಮ ದೇವತೆಗಳಿಗೆ ಹಾಡಿ ಸ್ತುತಿಸುತ್ತಿದ್ದರು. ರಾಗದಿಂದ ಬಾಯಿಪಾಠವು ಸುಲಭವಾದುದರಿಂದಲೇ ವೇದಮಂತ್ರಗಳು ಅನಾದಿಕಾಲದಿಂದ ತಂದೆಯಿಂದ ಮಗನಿಗೆ ಕಲಿಸಲ್ಪಟ್ಟು, ಸಂಸ್ಕೃತ ಮುದ್ರಣ ಲೇಖನ ಕಾಲಗಳ ವರೆಗೆ ಉಳಿದುವು. ಸಂಗೀತ ಪಾಠಕ್ಕೆ ಅನುಕೂಲವಾಗುವಂತೆ ಗಾಯಕರ ಉಪಕರಣಗಳೂ ಉಂಟಾದುವು. ವೇದಗಳಲ್ಲಿ ದುಂದುಭಿಯೆಂಬ ಭೇರಿಯು ತಾಳ ಬಡೆಯುವಂತೆಯೂ, ವೇಣುವೀಣೆಗಳು ಗಾಯಕರ ಸ್ವರಸಹಾಯ ಅನುಕೂಲಿಸುವಂತೆಯೂ ಹೇಳಲ್ಪಟ್ಟಿವೆ. ಸಾಮವೇದದ ಗಾಯನವು ಅತಿಹರ್ಷಾಸ್ಪದವಾಗಿ, ಶ್ರೋತ್ರೀಯರ ಹೃದಯವನ್ನು ತುಳುಕುತ್ತಿತ್ತು. ಸರಿಯಾಗಿ ಹಾಡಲು ತಿಳಿಯದ ಬ್ರಹ್ಮಚಾರಿಗಳು ಈಗಲೂ ಸಾಮವೇದವನ್ನು ಹಾಡುವುದನ್ನು ಕೇಳಿದರೆ ಮನೋಲ್ಲಾಸವಾಗುವುದು. ವೇದಗಳ ಕಾಲದನಂತರ ಪುರಾಣೇತಿಹಾಸಗಳ ಕಾಲವು ಬಂದಿತು. ಮಹಾ ಭಾರತದ ಅತ್ಯುತ್ತಮ ಭಾಗವೇ ಗೀತೆ; ಅದರ ಹೆಸರೇ ಅದರ ಗುಣವನ್ನು ವ್ಯಕ್ತಪಡಿಸುವುದು—ಅದು "ಭಗವಂತನ ಹಾಡು" ರಾಮಾಯಣವು ಕುಶಲವರಿಂದ ಶ್ರೀ ರಾಮನ ಸನ್ನಿಧಿಯಲ್ಲಿ ಹಾಡಿ ನಟಿಸಲ್ಪಟ್ಟಿತು. ಅನಂತರ ಭೌದ್ಧಧರ್ಮದ ಪ್ರಚುರತೆಯ ಕಾಲವು ಸಂಗೀತಕ್ಕೆ ಮಾರಿಬಡಿದಂತಾಯಿತು. ಯಾವ ರಾಜಕುಮಾರನು ಕೊನೆಗೆ ಬುದ್ಧನಾದನೊ, ಆತನೆ ಸಿದ್ಧಾರ್ಥನಾಗಿರುವಾಗ ರಾಜ ಗೃಹದ ಅಂತಃಪುರದಲ್ಲಿ ವಿಲಾಸಿನಿಯರ ಗಾಯನ ನರ್ತನವನ್ನು ಕೇಳುತ್ತಿದ್ದನೆಂದು ಅಜಂತದ ಗವಿಗಳಲ್ಲಿ ಅಂಕಿತವಾದ ಚಿತ್ರಗಳು ಇಂತಹ ಸಂಭವಗಳನ್ನು ಪ್ರಕಟಿಸುತ್ತಿವೆ. ಆದರೆ ಭೌದ್ಧ ಮತದ ಬೋಧನಾ ಕಾಲದಲ್ಲಿ ಸಂಗೀತಕ್ಕೆ ದುರ್ಮರಣವಾಯಿತು; ಭೌದ್ಧಮತಾವಲಂಬನವು ಸಂಗೀತ ಸ್ರೋತವನ್ನು ಅಡ್ಡಕಟ್ಟಿತು. ಪಾಲಿಗ್ರಂಥಗಳಲ್ಲಿ ಹೆಚ್ಚಿನವು ಗದ್ಯದಿಂದಲೇ ಬರೆಯಲ್ಪಟ್ಟಿವೆ; ಭೌದ್ಧಕಾಲದ ಕೊನೆಯಲ್ಲಿ ಮಾತ್ರ ಶಿಲ್ಪಶಾಸ್ತ್ರ, ಗೃಹರಚನಾಶಾಸ್ತ್ರ, ಚಿತ್ರಕಲಾ ಮೊದಲಾದುವು ಮತ್ತೊಮ್ಮೆ ಕೊಂಚ ಉದ್ಧರಿಸಲ್ಪಟ್ಟುವು. ಸತಾರ, ಕರತಾಳ, ಭೇರಿಮೃದಂಗಗಳು, ಕೊಳಲು ಮೊದಲಾದ ವಾದ್ಯ ಯಂತ್ರಗಳು ಮೇಲೆ ಹೇಳಿದ ಚಿತ್ರಗಳಲ್ಲಿ ಕಾಣುತ್ತಿವೆ. ಬೌದ್ಧ ಕಾಲದ ನಂತರ ರಾಜಕುಮಾರ್ತೆಯರೂ ಕೂಡ ಸಂಗೀತವನ್ನು ಅಭ್ಯಾಸಿಸುತ್ತಿದ್ದರು. ಸ್ತ್ರೀಶಿಕ್ಷಣೆಯಲ್ಲಿ ಸಂಗೀತಾಭ್ಯಾಸವು ಅಗತ್ಯವೆಂದು ಸೇರಿಸಲ್ಪಟ್ಟು, ಆ ಶಾಸ್ತ್ರವನ್ನು ಮತ ಸಂಬಂಧದಿಂದ ಸಾಮಾಜಿಕ ಸಂಬಂಧಕ್ಕೆ ಇಳಿಸಿದರು. ಈ ಕಾಲದಲ್ಲಿಯೇ ನಾಟಕಗಳುಂಟಾದುವು; ಸಂಗೀತವನ್ನು ಕಲಿಸುವ, ನಾಟಕಗಳನ್ನು ಬರೆವ ನಾಟ್ಯಾಚಾರ್ಯರುಂಟಾದರು. ಕಾಳಿದಾಸನ ಮಾಲವಿಕಾಗ್ನಿಮಿತ್ರದಲ್ಲಿ ಅಗ್ನಿಮಿತ್ರನೆಂಬ ಅರಸನು ಮಾಲವಿಕೆಯೆಂಬ ನರ್ತಕಿಯೊಡನೆ ಹೇಗೆ ಪ್ರಣಯ ಬೆಳೆಸಿದನೆಂದು ತೋರುತ್ತಿದೆ. ಮಹಮ್ಮದೀಯರ ಅಭಿಯೋಗದಿಂದ ಸಂಗೀತ ಶಾಸ್ತ್ರದ ಅವಸ್ಥೆಯು ಬದಲಾಗುತ್ತ ಬಂದಿತು. ಇಸಲಾಮಿನ ಮತಕ್ಕೆ ಸಂಗೀತದ ಹೆಸರೇ ಅನ್ಯಾಯವೆಂತಾಯಿತು. ಮೊಗಲ ಅರಸರು ಮಾತ್ರ ಸಂಗೀತವನ್ನು ಆದರಿಸಿದರು; ಅಕ್ಬರನ ಆಳಿಕೆಯಲ್ಲಿ ಸಂಗೀತ ಸಾರ್ವಭೌಮನಾದ ತಾನಸೇನನ ಮಾನದಿಂದ ಸಂಗೀತಶಾಸ್ತ್ರಕ್ಕೆ ಅಭಿಮಾನವುಂಟಾಯಿತು; ಫಾರಸಿ ಕವಿ ವರ ಸಾದಿಯು ಗಾಯನವನ್ನು ಕೇಳುತ್ತಲೆ ಕಾವ್ಯ ಬರೆಯುತ್ತಿದ್ದನು. ಅವರಂಗಜೇಬನು ಸಂಗೀತ ವಿರೋಧಿಯಾಗಿದ್ದನು; ಸಂಗೀತಗಾರರು ರಾಜಾಸ್ಥಾನದಲ್ಲಿ ಕುತೂಹಲವಾಗುವಂತೆ ಸಂಗೀತವನ್ನು ಸಮಾಧಿಗಿಳಿಸುವರಾಗಿ ಒಂದು ಶವದ ಪೆಟ್ಟಿಗೆ ತಂದು ಮೊಗಲ ಸಮ್ರಾಟನಿಗೆ ತೋರಿಸಿದರು; ಒಡನೆಯೆ, "ಸಂಗೀತವನ್ನು ಅಗಾಧವಾದ ಗನಿಯಲ್ಲಿ ಹೂಳಿರಿ! ಸಂಗೀತದ ಸ್ವರವಾಗಲಿ, ಅದರ ಒಂದೇ ಒಂದು ಮರುಧ್ವನಿಯಾಗಲಿ ನನ್ನ ಕಿವಿಗೆ ಬಾರದಿರಲಿ" ಎಂದು ಅಪ್ಪಣೆಯಾಯಿತು. ಆ ಅರಸನ ಆಳಿಕೆಯ ಫಲಿತಾಂಶವೂ, ಆತನಿಗೆ ಸಂಗೀತದಲ್ಲಿದ್ದ ಅರುಚಿಯೂ ಸ್ವಭಾವ ಸಂಬಂಧವಿದ್ದುವೇ. ಮೊಗಲರನಂತರ ಸಂಗೀತವು ಕಲಾಶಾಸ್ತ್ರವೆನ್ನಿಸದೆ, "ಫೆಶನ್" ದುರಭ್ಯಾಸಗಳ ಸಂಗಡಲೇ ಬದುಕುವುದಾಯಿತು; ಅಪ್ಸರೆಯರಲ್ಲಿದ್ದ ಸಂಗೀತವು ವೇಶ್ಯೆಯರ ಪಾಲಿಗೆ ಬಂತು.

ರಾಜಸ್ಥಾನದ ಚಾರಣರು ಮತಸಂಬಂಧ ತತ್ವಗಳನ್ನೂ, ವೀರ ಶಿರೋಮಣಿಗಳ ಉದಾತ್ತಚರಿತ್ರವನ್ನೂ ಹಾಡುತ್ತಿದ್ದು ಪರಂಪರೆಯಾಗಿ ರಾಜಸ್ಥಾನದ ಇತಿಹಾಸವನ್ನು ಉಜ್ಜೀವಿಸುತ್ತಿದ್ದರು. ವೈರಿಯ ಬಾಯಿಗೆ ತುತ್ತಾಗುವ ರಜಪೂತರೂ, ಪತಿಯ ಚಿತೆಯೇರಿ ಸಹಗಮಿಸುವ ರಜಪೂತ ಮಹಿಳೆಯೂ ಚಾರಣರ ಗಾಯನದ ಮಹತ್ವವನ್ನು ತಿಳಿಯಬಲ್ಲರು! ವೈಷ್ಣವ ಮತದಿಂದ ಸಂಗೀತದ ಉದ್ಧಾರವಾಯಿತು; ಅವರಿಗೆ ಸಂಗೀತವು ಸ್ವರ್ಗೋಲ್ಲಾಸವನ್ನೂ, ಲೋಕಪ್ರೇಮವನ್ನೂ ಬೋಧಿಸುವುದಾಯಿತು. ಶ್ರೀ ಕೃಷ್ಣನ ಬಾಲ್ಯ, ಗೋವಳತನ, ಗೋಪೀ ಪ್ರಣಯಗಳು ಗಾಯನದ ಸಕಲಸ್ಥಿತಿಗಳನ್ನೂ ಪ್ರದರ್ಶಿಸುತ್ತಿವೆ. ಜಯದೇವನ 'ಗೀತಾಗೋವಿಂದ'ವನ್ನು ಸಮೀಪಿಸುವ ಶಬ್ದರಚನೆಯ ಪದ್ಯಗ್ರಂಥವು ಲೋಕದಲ್ಲಿ ಅಪರೂಪ. ವಿದ್ಯಾಪತಿ, ಚಂಡಿದಾಸರು ಪಾರಮಾರ್ಥಿಕ ತತ್ವವನ್ನು ಸುಲಭ ಸಂಗೀತದಿಂದ ಬೋಧಿಸಿದರು. ಚೈತನ್ಯಸ್ವಾಮಿಯ ಅನಂತ ಪ್ರೇಮದ ನಿರ್ಮಲ ಭಕ್ತಿರಸವು ಪದ್ಯರೂಪವಾಗಿ ಆರ್ಯಾವರ್ತವನ್ನು ಹರಡಿದೆ. ಸರಿಗಮ ಸೂತ್ರಗಳು ಈ ಪದ್ಯಗಳಿಗೆ ನಾಟವು; ನರಜೀವಿಯ ಲೋಕಾತೀತವಾದ ಹರ್ಷದಾಹವು ಮಾತ್ರ ಈ ಕಾವ್ಯವನ್ನು ಅಮೃತದಂತೆಣಿಸುವುದು. ಬಂಗಾಲದ 'ಕೀರ್ತನೆ'ಗಳೆಂಬ ಅಸಂಖ್ಯಾತ ಪದ್ಯರತ್ನಗಳು, ಭಕ್ತರ ಮನಸ್ಸನ್ನು ಸುಖಲೋಕಕ್ಕೆ ಬೆಳಗಿಸುವ ಶುಭ್ರ ಪ್ರಕಾಶದಂತೆ ಜ್ವಲಿಸುತ್ತಿವೆ.

ಭಾರತೀಯ ಸಂಗೀತದ ಇತಿಹಾಸವು ಇಷ್ಟೇ; ಇದರೊಂದಿಗೆ ಆರ್ಯಜನಾಂಗದ ಇತಿಹಾಸವೂ ಬಂಧಿತವಾಗಿಯದೆ. ಯಾವ ಜನಾಂಗವು ದೇಹದಾರ್ಢ್ಯವಿದ್ದು ಸಾಮಾಜಿಕ, ನೈತಿಕ, ಶಾಂತತೆ ಸುಧಾರಣೆಗಳನ್ನು ಪಡೆದಿದೆಯೊ ಆ ಜನಾಂಗವು ಸಂಗೀತಪ್ರೇಮಿ. ಪಾಶ್ಚಾತ್ಯ ವಿದ್ಯೆಯ ಉದಯವಾದೊಡನೆಯೆ ಆರ್ಯರ ಸರಸ್ವತಿಯ 'ಫೆಶನ್' ಬದಲಾಯಿತು; ಸಮಯಾನುಸರಣೆಯ ಅಂಧ ಬುದ್ಧಿಯಿಂದ ಸರಸ್ವತಿಗೆ ಪಡುವಣದವರ ಉಡಿಗೆ ತೊಡಿಗೆಗಳೂ ಅಲಂಕಾರವೂ ಉಂಟಾದುವು. ಪಾಶ್ಚಾತ್ಯ ಸುಧಾರಣೆಯು ಭಾರತೀಯರನ್ನು ಹಲವು ವಿಷಯಗಳಲ್ಲಿ ಉದ್ಧರಿಸಿದೆಯಾದರೂ, ಅವರ ಅನೇಕ ಸಂಸ್ಥೆ ವಿದ್ಯಮಾನಗಳನ್ನು ಮರೆಯಿಸಿದೆ. ಭಾರತೀಯರ ಕಲಾಶಾಸ್ತ್ರಗಳಲ್ಲಿ ಮುಖ್ಯವಾಗಿ ಸಂಗೀತ ಶಾಸ್ತ್ರವು ಮೂಲೆ ಸೇರಿದೆ. ಸಂಗೀತದ ಪ್ರಾಚೀನ ಉದ್ದೇಶವು ಸ್ಮರಣೆಗೆ ಬರುವುದೇ ಅಪರೂಪವಾಗಿದೆ. ವಿಲಾಯತಿ ಮಾದರಿಯ ನಾಟಕಶಾಲೆಗಳು ಅಲ್ಲಲ್ಲಿ ಹಬ್ಬಿಕೊಂಡಿದ್ದು, ಪರದೇಶಿ ಅಲಂಕಾರದ ಸ್ವದೇಶಿ ಹಾಡುಗಳನ್ನು ಮೊಳಗಿಸುತ್ತಿವೆ.

ಹಿಂದೂಗಳ 'ರಾಗಿಣಿ'ಗಳ ಬದಲಾಗಿ ಹಲವು ತರದ ಬೊಬ್ಬಾಟದ ಕರ್ಕಶ ಕೂಗುಗಳು ಸಂಗೀತವೆನ್ನಿಸಿಕೊಳ್ಳುತ್ತಿವೆ. ನಾಟಕ ಬರೆವುದರಲ್ಲಿಯೂ, ಹಾಡುವುದರಲ್ಲಿಯೂ ಪಂಚರಂಗಿ ಸ್ವರಗಳಿಗೆ ಬರುವ ಚಪ್ಪಾಳೆಯೂ, ಶಾಸ್ತ್ರ ಸರಿಯಾಗಿ ಹಾಡುವ ರಾಗಗಳಿಗೆ ಅಸಡ್ಡೆಯೂ ಈಗಿನ ಸುಧಾರಣೆಯ ವಿದ್ಯಾ ವಿನೋದದ ಚಿನ್ಹವಾಗಿವೆ. ವಿದೇಶೀಯ ಬೇಂಡ್ ಸಾಮಾನುಗಳು ಎಲ್ಲೆಲ್ಲಿಯೂ ಗರ್ಜಿಸುತ್ತಿವೆ. ಅಯ್ಯೋ! ಹಿಂದೂ ದೇವಾಲಯಗಳ ಆರತಿ ಕಾಲದಲ್ಲಿ ಸಮ್ಮಿಳಿತವಾಗದ ಹಲವು ಮಜಭೂತು ಡೋಲು, ತಂಬಟೆ, ಮೌರಿಗಳು ಬೇಂಡು ಬಾರಿಸುತ್ತಿವೆ! ಶಂಖ ಕಹಳೆಗಳ ಶಾಸ್ತ್ರೀಯ ನಾದಗಳಿಗೆ ಸಹಾ ಈ ಸುಧಾರಣೆಯಲ್ಲಿ ಸ್ಥಳ ದೊರಿಯದು! ಹೀಗೆಯೆ ಭಾರತೀಯರು ಸಂಗೀತ ಶಾಸ್ತ್ರವನ್ನು ಮಣ್ಣು ಪಾಲಾಗಿಸುವರು. ಪ್ರತಿಯೊಂದು ಜನಾಂಗಕ್ಕೆ "ನೆಶನಲ್ ಎಂಥೆಮ್" (National anthem) ಎಂಬ ಜನಾಂಗ ಗೀತವಿದೆ. ಭಾರತೀಯರಿಗೆ ಅದಿರದು. ಎಷ್ಟು ಕಾಲದವರಿಗೆ ಜನಾಂಗದ ಸಾಮಾಜಿಕ ಧಾರ್ಮಿಕ ಪ್ರವೃತ್ತಿಗಳನ್ನು ಉಜ್ಜೀವಿಸುವ ಸಂಗೀತ ಶಾಸ್ತ್ರವು ಹೆಬ್ಬಾಗಿಲಲ್ಲಿರದೆ ಹಿಂಬಾಗಲಲ್ಲಿ ಅಡಗಿರುವುದೊ, ಅಷ್ಟು ಕಾಲದ ವರೆಗೆ ಭಾರತೀಯರು ಜನಾಂಗಗಳ ಪರಿಷದದಲ್ಲಿ ಹೆಬ್ಬಾಗಿಲಿಂದಲ್ಲ, ಹಿಂಬಾಗಲಿಂದಲೇ ಪ್ರವೇಶ ಹೊಂದ ಬೇಕಾಗುವುದು.

M. N. K.

"Trust in God and do the right."

ಅನುದಿನವು ಇಡು ಭಕ್ತಿ । ಯನು ದೇವನಡಿಯೊಳ್ ।
ಅನುಸರಿಸು ಸನ್ಮಾರ್ಗ । ವನೆ ಸತತ ಮುದದೊಳ್ ॥ ಪಲ್ಲ ॥
ಎತ್ತಲುಂ ಕತ್ತಲೆಯು । ಮುತ್ತಿರಲು ಹಾದಿಯನು ।
ಕಿತ್ತು ಬಿಡು ಭಯವನ್ನು । ಎತ್ತು ಪೌರುಷವಂ ।
ಅತ್ತಿತ್ತ ನಡುಗದಿರು । ಚಿತ್ತವನು ಸ್ಥಿರಗೊಳಿಸು ।
ಎತ್ತರದೊಳಿದೆ ತಾರೆ । ಉತ್ತಮರ ನಡೆಸಲ್ ॥ ೧ ॥

ಕಡುಭಯಂಕರಮಾಗಿ । ನಡೆಯಲಸದಳಮಾದ ।
ಕಡೆಗಾಣದಿಹ ಮಾರ್ಗ । ಪಿಡಿದು ನೀನಿರಲು ।
ಒಡಲ ಬಲ ಲೆಕ್ಕಿಸದೆ । ಬಡವಾದೆನೆಂದೆನದೆ ।
ಇಡು ಹೆಜ್ಜೆ ನಡೆ ಮುಂದೆ । ಬಿಡು ಭೀತಿ ಎಂದೂ ॥ ೨ ॥

ಸುಟ್ಟು ಕುಹಕೋಪಾಯ । ಕೆಟ್ಟ ತಂತ್ರಗಳನ್ನು ।
ಬಿಟ್ಟು ಬೆಳಕಿಗೆ ಅಂಜಿ । ಗುಟ್ಟಾಗಿರುವುದಂ ।
ಬಟ್ಟೆಯಂತ್ಯವನೆಂತೂ । ಮುಟ್ಟಲಾಪುದೊ ನೋಡು ।
ಕಟ್ಟಕಡೆಗಿರಲಿ ಜಯ । ವಟ್ಟಿರಲಿ ಸೋಲು ॥ ॥ ೩ ॥

ಕಾಮಾದಿ ವೈರಿಗಳ । ಕೋಮಲತೆ ನಂಬದಿರು ।
ಹೇಮ ಮೃಗವನು ಸೀತೆ । ಪ್ರೇಮಿಸಿದ ಸ್ಮರಿಸು ।
ನೇಮಸಿದ್ಧಾಂತವನು । ಸ್ತೋಮದಾಚರಣೆಯನು ।
ಭೂಮಿಯೊಳು ನಂಬದಿರು । ಕಾಮಿತಲಭಿಸಲು ॥ ೪ ॥

ಇದೆ ಸುರಕ್ಷಿತ ಮಾರ್ಗ । ಇದೆ ಸರಳ ಕಟ್ಟಳೆಯು ।
ಇದುವೆಯಂತಃ ಶಾಂತಿ । ಇದೆ ಮನೋಬಲವು ।
ಇದೆ ಸತ್ಪಥವ ತೋರ । ಲುದಯಿಸುವ ಧ್ರುವತಾರೆ ।
ಇದನೆ ಪರಿಸ್ಯೈ ನೀನು । ಇದನೆ ಜಪಿಸುತಿರು ॥ ೫ ॥

ಕೆಲರು ಸ್ತುತಿಮಾಡುವರು । ಕೆಲರು ಪಳಿವರು ನಿನ್ನ ।
ಕೆಲರು ದ್ವೇಷಿಪರಿನ್ನು । ಕೆಲರು ಪ್ರೀತಿಪರು ।
ಹಲವರನು ಮೆಚ್ಚಿಸುವ । ಕೆಲಸವೇತಕೆ ನಿನಗೆ ।
ಜಲಧಿ ಜಾಮಾತನನು । ಒಲಿಸು ನೀನೊಲಿಸು ॥ ॥ ೬ ॥

L. V.

ಬಿಸಿ ನೀರಿನ ಪಾದ ಜಲಕವು.

ನಮ್ಮ ಮನೆಗಳಲ್ಲಿ ಒಬ್ಬನಿಗೆ ತಲೆನೋವು, ಗಂಟ್ಲುನೋವು, ಬೆನ್ನುನೋವು, ಇತ್ಯಾದಿ ನೋವು ತಗಲಿದಾಕ್ಷಣ ಮನೆಯವರು ವೈದ್ಯರ ಬಳಿಗೆ ಓಡಿ ಔಷಧ ತರುವಯಾ ಆಯಾ ಪತ್ರಗಳಲ್ಲಿ ಎಡ್ವಾರ್ಟೈಸು ಮಾಡಿದ ಬೇನೆಹಾರಿ ಮುಲಾಮುಗಳನ್ನು ತಂದು ಹಚ್ಚುಸುವ ಪದ್ಧತಿ ಇದೆಯಷ್ಟೆ. ಆದರೆ ಇಂಥಾ ಔಷಧಗಳಿಗೂ ವೈದ್ಯರಿಗೂ ವೃಥಾ ದುಡ್ಡು ವ್ಯಯ ಮಾಡುವದಕ್ಕಿಂತ ಕೂತಲ್ಲಿಯೇ ನಮ್ಮ ನೋವುಗಳನ್ನು ಪರಿಹರಿಸಿಕೊಳ್ಳುವ ಸಾಧನಗಳು ಅನೇಕವಿವೆ.

ಒಬ್ಬನು ಪೂರ್ಣ ಆರೋಗ್ಯವಂತನಾಗಿರಬೇಕಾದರೆ ದೇಹದಲ್ಲಿ ಶುದ್ಧವಾದ ರಕ್ತ ಪ್ರಸಾರವಾಗುತ್ತಿರಬೇಕು. ರಕ್ತ ಪ್ರಸಾರಕ್ಕೆ ಎಡತಡೆಯಾದಾಕ್ಷಣ ರಕ್ತವು ಕೆಡುವುದು. ಬೆರಳಿನ ತುದಿಯನ್ನು ಒಂದು ತುಂಡು ದಾರದಿಂದ ಚೆನ್ನಾಗಿ ಬಿಗಿದರೆ ಅಲ್ಲಿದ್ದ ರಕ್ತವು ಕೆಟ್ಟು ಕಪ್ಪಗಾಗಿ ತೋರುವುದು ಎಂಬದಾಗಿ ಚಿಕ್ಕ ಬಾಲಕರಿಗೂ ಗೊತ್ತಿದ್ದ ವಿಷಯವಾಗಿದೆ. ನಮ್ಮ ಬೆರಳನ್ನು ಬಿಸಿ ನೀರಿಗೆ ಹಾಕಿದರೆ ತುಸ ಸಮಯದೊಳಗೆ ಬೆರಳು ಕೆಂಪಗಾಗುವುದು. ರಕ್ತ ನಾಡಿ ಕೂಟಗಳು ಬಿಸಿಯಿಂದ ವಿಕಾಸವಾಗಿ ಬಿಸಿನೀರು ತಗಲಿದ ಸ್ಥಳದಲ್ಲಿ ರಕ್ತವು ಹೆಚ್ಚಾಗುವುದೇ ಇದಕ್ಕೆ ಕಾರಣ. ಬಿಸಿ ತಗಲಿದ ಸ್ಥಳದಲ್ಲಿ ರಕ್ತವು ಹೆಚ್ಚಾಗುವಾಗ ದೇಹದ ಇತರ ಭಾಗದಲ್ಲಿ ರಕ್ತವು ಕಮ್ಮಿಯಾಗುತ್ತದೆ. ದೇಹದ ಯಾವ ಭಾಗಕ್ಕಾದರೂ ಬಿಸಿ ತಗಲಿಸಿ ಇತರ ಕಡೆಯ ರಕ್ತವನ್ನು ಸುಲಭವಾಗಿ ಎಳೆಯಬಹುದೆಂಬದಕ್ಕೆ ಇದು ದೃಷ್ಟಾಂತವಾಗಿದೆ. ದೇಹದಲ್ಲಿ ನೋವು ಉಂಟಾಗುವುದಕ್ಕೆ ಕೆಟ್ಟ ರಕ್ತವೇ ಕಾರಣವಾದುದರಿಂದ ಅಂಥಾ ನೋವಿರುವ ಸ್ಥಳಕ್ಕೆ ಬಿಸಿ ನೀರನ್ನು ತಗಲಿಸಿ ಸುಲಭವಾಗಿ ನೋವು ಪರಿಹಾರಮಾಡಿಕೊಳ್ಳಬಹುದು. ಇಂಥಾ ಸುಲಭಸಾಧ್ಯವಾದ ಸಾಧನಗಳಲ್ಲಿ ಒಂದು ಬಿಸಿ ನೀರಿನ ಪಾದ ಜಲಕವು.

ಇದಕ್ಕೆ ಒಂದು ದೊಡ್ಡ ಪಾತ್ರೆ, ಒಂದು ತುಂಡು ವಸ್ತ್ರ, ಒಂದು ಕಂಬಳಿ ಮತ್ತು ಬೇಕಾದಷ್ಟು ಬಿಸಿ ಮತ್ತು ತಣ್ಣೀರು ಇದ್ದರೆ ಸಾಕು.

ರೋಗಿಯನ್ನು ಒಂದು ಕುರ್ಸಿಯ ಮೇಲೆ ಕೂಡ್ರಿಸಿ ಅವನ ಕಾಲನ್ನು ತಡೆಯಕೊಡುವಷ್ಟು ಬಿಸಿ ನೀರಿರುವ ಪಾತ್ರೆಯಲ್ಲಿ ಹಾಕಿ ಕ್ರಮೇಣ ಆ ಪಾತ್ರೆಗೆ ಬಿಸಿ ನೀರು ಹೊಯ್ಯುತ್ತಾ ಇರಬೇಕು. ಹೀಗೆ ಮಾಡುತ್ತಿರುವಾಗ ನೀರು ಹೊಯ್ಯುವವನ ಕೈಯನ್ನು ಕೂಡಾ ರೋಗಿಯ ಪಾದದ ಅಡಿಯಲ್ಲಿ ಇಡುವುದು ವಿಹಿತವು. ಈ ಮಧ್ಯೆ ಕಂಬಳಿಯಿಂದ ರೋಗಿಯನ್ನು ಹೊದಿಸಿ ೧೦-೧೫ ನಿಮಿಷದನಂತರ ಕಂಬಳಿಯನ್ನು ತೆಗೆದು ತಣ್ಣೀರಿನಿಂದ ಒದ್ದೆ ಮಾಡಿ ನೀರು ಹಿಂಡಿ ತೆಗೆದ ವಸ್ತ್ರದಿಂದ ಇಡೀ ದೇಹವನ್ನು ಚೆನ್ನಾಗಿ ಒರಸಿದನಂತರ ರೋಗಿಯು ಮಲಗಿಕೊಳ್ಳಬೇಕು. ಇಂಥಾ ಪಾದ ಜಲಕದಿಂದ ಎಂತಹ ಕಠಿಣ ತರದ ಶಿರೋಭ್ರಮಣೆಯೂ ಹೋಗಿಬಿಡುವುದು. ತಲೆನೋವು ನಿವಾರಣೆಗಾಗಿ ಪಾದ ಜಲಕ ಮಾಡುವುದಾದರೆ ಕಾಲನ್ನು ಬಿಸಿನೀರಿನಲ್ಲಿಟ್ಟಿರುವಾಗಲೇ ತಲೆಗೆ ಒದ್ದೆ ವಸ್ತ್ರವನ್ನು ಸುತ್ತುವುದು ಮತ್ತಷ್ಟು ಒಳ್ಳೇಯದು. ಈ ತಣ್ಣಗಾದ ವಸ್ತ್ರವನ್ನು ತಲೆಗೆ ಸುತ್ತುವುದರಿಂದ ತಲೆಯ ರಕ್ತ ಪಾತ್ರಗಳು ಸಂಕೋಚವಾಗುತ್ತದೆ. ಅದೇ ಸಮಯದಲ್ಲಿ ಕಾಲಿನ ರಕ್ತ ಪಾತ್ರಗಳು ವಿಕಾಸವಾಗುವುದರಿಂದ ತಲೆಯಲ್ಲಿ ಸಂಚಯವಾಗಿದ್ದ ಕೆಟ್ಟ ರಕ್ತವು ಸುಲಭವಾಗಿ ಕೆಳಗಿಳಿಯುವುದು.

ಕಾಲನ್ನು ಬಿಸಿನೀರಲ್ಲಿಟ್ಟು ರಕ್ತಪಾತ್ರಗಳನ್ನು ವಿಕಾಸಮಾಡುವುದರಿಂದ ಎಂಥಾ ರೋಗವಾದರೂ ಹೋಗುತ್ತದೆಂಬದನ್ನು ಪ್ರತಿ ಮನೆಮಾತೆಯು ತಿಳಿದಿರಬೇಕು. ಶ್ವಾಸಕೋಶದಲ್ಲಿ ರಕ್ತಸಂಚಯವಾಗಿ ಒಂದು ಮಗುವಿಗೆ ಉಸುರಾಡಲು ಕಷ್ಟವಾದ ಪಕ್ಷಕ್ಕೆ ಅದರ ಕಾಲುಗಳನ್ನು ಕೆಂಪಗಾಗುವ ವರೆಗೆ ಬಿಸಿನೀರನಲ್ಲಿಡಬೇಕು. ಅನಂತರ ಕಾಲುಗಳಿಗೆ ಎಣ್ಣೆ ಹಚ್ಚಿ ಕಾಲುಗಳ ಎರಡು ಪಕ್ಕೆಗಳಲ್ಲಿಯೂ ಬಿಸಿನೀರು ತುಂಬಿಸಿದ ಕುಪ್ಪಿಗಳನ್ನು ಇಡಬೇಕು. ಇದರಿಂದ ಕೂಡ್ಲೇ ಶ್ವಾಸಕೋಶದ ರಕ್ತವು ಇಳಿದು ಹೋಗುವುದು. ಹೊಟ್ಟೆನೋವು, ಸೊಂಟನೋವು, ಇನ್ನು ದೇಹದ ಇತರ ಯಾವ ಭಾಗದಲ್ಲ್ಯಾದರೂ ರಕ್ತಸಂಚಯವಾದುದರಿಂದ ನೋವುಂಟಾದರೆ ಅಂಥಾ ನೋವುಗಳೆಲ್ಲಾ ಪಾದ ಜಲಕದಿಂದ ನಿವಾರಣೆಯಾಗುವುದು. ರಾತ್ರಿ ನಿದ್ದೆ ಹತ್ತದವರೂ ಮಲಗುವ ಮೊದಲು ಬಿಸಿನೀರಿನ ಪಾದಜಲಕವನ್ನು ಮಾಡಿ ಮಲಗಿದರೆ ಚಲೋ ನಿದ್ದೆ ಹತ್ತುವದು.

S. A.

ಪತ್ರವ್ಯವಹಾರ.

ಖಾಸ್ಗೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.

ಕಲೆಕ್ಟರ್ ದೊರೆಗಳವರ ವರ್ಗಾವರ್ಗಿಗಳು.

ಅಯ್ಯಾ ಪತ್ರಾಧಿಪರೆ,

ಕಳದ ಕೆಲವು ತಿಂಗಳುಗಳೊಳಗೆ ನಮ್ಮ ಜಿಲ್ಲೆಗೆ ಹಲವರು ಕಲೆಕ್ಟರರಾಗಿ ಬಂದು ಹೋದರು. ಅಜೀಜುದ್ದೀನ್ ಸಾಹೇಬ ಬಹದ್ದೂರರವರ ಉತ್ತರಾಧಿಕಾರಿಗಳಾಗಿ ಬಂದ ಮಿ। ಗ್ರೆಹೆಮ್ ದೊರೆಗಳವರ ಪ್ರಜಾ ಸಹಾನುಭೂತಿಯ ಆಡಳಿತೆಯು ಪ್ರಾರಂಭವಾಗುವಷ್ಟರಲ್ಲಿ ಎರಡು ಸಲ ಡ್ಯೊಗ್ ದೊರೆಗಳವರು ಗ್ರೆಹೆಮ್ ದೊರೆಗಳ ಬಗ್ಯೆ ಕಲೆಕ್ಟರರ ಕೆಲಸವನ್ನು ನಿರ್ವಹಿಸಿದರು. ಡ್ಯೊಗ್ ದೊರೆಗಳನಂತರ ಮಿ। ಮೊಸ್ಕಾರ್ಡಿ ದೊರೆಗಳ ಆಡಳಿತೆಗೆ ಪ್ರಾರಂಭವಾಯಿತು. ಇವರ ಬದಲಿಗೆ ಕೆಲವು ತಿಂಗಳುಗಳಲ್ಲಿಯೇ ಮಿ। ಫೊದರಿಂಗ್ಹೆಮ್ ದೊರೆಗಳು ಬಂದರು. ಫೊದರಿಂಗ್ಹೆಮ್

ದೊರೆಗಳು ಜಿಲ್ಲೆಯ ಪೂರ್ಣ ಮಾಹಿತಿಯನ್ನು ಪಡಿಯುವಷ್ಟರಲ್ಲಿ ಮಿ| ಕೌಚ್‌ಮೆನ್ ದೊರೆಗಳು ಇಲ್ಲಿಗೆ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ. ಕೌಚ್‌ಮೆನ್ ದೊರೆಗಳು ಸಹ ಇಲ್ಲಿ ಒಂದೆರಡು ತಿಂಗಳುಗಳ ಪರ್ಯಂತರ ಇರುವರೆಂಬ ವರ್ತಮಾನವಿದೆ.

ಕಲೆಕ್ಟರು ದೊರೆಗಳೆಂದರೆ ಜಿಲ್ಲಾ ಆಡಳಿತೆಯ ಹೆಚ್ಚು ಕಡಮೆ ಪೂರ್ಣ ಅಧಿಕಾರವಿರುವಂಥವರು. ಜಿಲ್ಲಾ ಜನರ ಕ್ಷೇಮ ವೃದ್ಧಿಯು ಹೆಚ್ಚು ಮಟ್ಟಿಗೆ ಈ ಅಧಿಕಾರಿಗಳ ಮುಖಾಂತರ ಸಾಧಿಸಲ್ಪಡುವದು. ಹೀಗಿರುತ್ತಾ ಮೂರು ತಿಂಗಳಿಗೊಬ್ಬೊಬ್ಬರು ಕಲೆಕ್ಟರರಾಗಿ ಬಂದರೆ ಜಿಲ್ಲೆಯ ಪಾಡೇನಾದೀತು? ಪ್ರಜಾ ಜನರೊಡನೆ ಬೆರೆತು ಪ್ರಜೆಗಳ ನಿಜಸಂಕಷ್ಟಗಳನ್ನು ತಿಳಕೊಂಡು ಅವುಗಳಿಗೆ ತಕ್ಕ ನಿವಾರಣೆಯನ್ನುಂಟುಮಾಡಿ ಪ್ರಜೆಗಳಿಗೂ ಆಣ್ಮರಿಗೂ ಇರುವ ವೈತ್ರೀಭಾವವನ್ನು ಹೆಚ್ಚಿಸಬೇಕೆಂದು ಸರಕಾರದವರ ಇಚ್ಛೆ. ಇಂಥಾ ಇಚ್ಛೆಯು ಮೂರು ತಿಂಗಳಿಗೊಮ್ಮೆ ಕಲೆಕ್ಟರರ ವರ್ಗಾವರ್ಗಿಗಳಿಂದ ಹೇಗೆ ನೆರವೇರುವದು? ಸರಕಾರದ ಆಡಳಿತೆ ಕ್ರಮಗಳು ಆಗಿಂದಾಗ್ಯೆ ಮಾರ್ಪಾಟ ಹೊಂದುವ ಕಾಲವು ಇದಾಗಿರುತ್ತದೆ. ಜಿಲ್ಲಾ ಜನರ ಸ್ಥಿತಿಗತಿಗಳನ್ನು ತಿಳಕೊಂಡು ಆಯಾ ಸ್ಥಳಗಳಿಗೆ ವಿಶೇಷವಾದ ಅನುಭವಗಳ ಅಭಿಪ್ರಾಯಗಳನ್ನು ಸರಕಾರದವರು ಕಲೆಕ್ಟರರ ಕೂಡೆ ವಿಚಾರಿಸಿ ತಿಳಕೊಳ್ಳುವರು. ಇಂಥಾ ಅಭಿಪ್ರಾಯಗಳನ್ನು ಸರಕಾರದವರು ಬಹಳವಾಗಿ ಆಧರಿಸುವರು. ಮೂರು ತಿಂಗಳುಗಳ ವರೆಗೆ ಇಲ್ಲಿ ವಾಸಿಸಿಕೊಳ್ಳುವ ಕಲೆಕ್ಟರರಿಗೆ ಸರಿಯಾದ ಜಿಲ್ಲಾ ಜನರಿಗೆ ಯುಕ್ತವಾದ ಅಭಿಪ್ರಾಯಗಳನ್ನು ಕೊಡಲು ಹೇಗೆ ಸಾಧ್ಯ? ಇಷ್ಟೇ ಅಲ್ಲ. ಆಫೀಸು ಕೆಲಸಗಳಲ್ಲಿ ಸಹ ಬಹಳ ತೊಂದರೆಯುಂಟಾಗುತ್ತದೆ. ಕಲೆಕ್ಟರರಾಗಿ ಬರುವ ಪ್ರತಿಯೊಬ್ಬರೂ ಕೆಲಸವನ್ನು ಮಾಡುವ ರೀತಿಯು ಅವರವರ ಸ್ವಭಾವಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುವದು. ಕಲೆಕ್ಟರರ ಆಫೀಸಿನವರೆಲ್ಲಾ ಈ ರೀತಿಗಳನ್ನು ತಿಳಕೊಂಡು ಅವುಗಳನ್ನನುಸರಿಸಿ ಕೆಲಸ ಮಾಡಬೇಕಾಗಿರುವದು. ಮೂರು ತಿಂಗಳಿಗೊಮ್ಮೆ ಈ ರೀತಿಗಳಲ್ಲಿ ಬದಲಾವಣೆಗಳುಂಟಾದರೆ ಆಫೀಸು ಕೆಲಸಗಳಲ್ಲಿ ವಿಶೇಷ ಗಲಿಬಿಲಿಯುಂಟಾಗುತ್ತದೆ.

ಇಷ್ಟೆಲ್ಲ ಅಡಚಣಿಗಳಿಗೆ ಇಂಥಾ ವರ್ಗಾವರ್ಗಿಗಳಿಂದ ಆಸ್ಪದ ದೊರಕುವದಲ್ಲದೆ ಮತ್ತೊಂದು ಕೇಡು ಸಹ ಸಂಭವಿಸುವದುಂಟು. ಮೂರು ತಿಂಗಳುಗಳ ವರೆಗೆ ತಾನಿಲ್ಲಿರುವೆನೆಂಬ ಭಾವವು ಆಫೀಸರರಲ್ಲಿ ಉಂಟಾಗುವದರಿಂದಲೂ ಅವರಿಗೆ ಆಡಳಿತೆಯ ವಿಷಯಗಳಲ್ಲಿ ಕೂಲಂಕಶ ತನಖಿಗೆ ಆಸ್ಪದ ದೊರಿಯದ್ದರಿಂದಲೂ ಆಫೀಸರರು ತಮ್ಮ ಕೆಲಸ ನಿರ್ವಾಹದ ವಿಷಯ ಅಭಾವ ತಾಳಲೂ ಬಹುದು. ಇಂಥಾ ವಿದ್ಯಮಾನಗಳಲ್ಲಿ ತನ್ನ ಕೈಕೆಳಗಿರುವ ಡಿಪ್ಯುಟಿ ಕಲೆಕ್ಟರರು, ತಹಸೀಲದಾರರು, ಪೋಲೀಸು ಅಧಿಕಾರಿಗಳು ಮೇಜಿಸ್ಟ್ರೇಟರುಗಳು, ಆರೋಗ್ಯಖಾತೆಯವರು, ಲೋಕಲ್ ಬೋರ್ಡಿನವರು ಇನ್ನು ಹಲವು ಡಿಪಾರ್ಟಮೆಂಟಿನವರು ತಂತಮ್ಮ ಉದ್ಯೋಗಗಳಲ್ಲಿ ತೃಪ್ತಿಕರವಾದ ರೀತಿಗಳಲ್ಲಿ ಕೆಲಸ ನಡಿಸುತ್ತಿರುವರೋ ಏನೆಂಬುದನ್ನು ಸ್ವತಃ ಪರಾಂಬರಿಸಲಿಕ್ಕೆ ಕಲೆಕ್ಟರ ದೊರೆಗಳಿಂದಾಗದೆ ಇವರ ಕೆಳಗಿರುವ ಆಫೀಸರರು ಇಚ್ಛಾನುವರ್ತಿಗಳಾಗುವದುಂಟು. ಆಫೀಸರರನ್ನು ಅಂಕೆಯಲ್ಲಿಡುವ ಪ್ರಜಾಭಿಪ್ರಾಯ ಬಲವು ನಮ್ಮ ಜಿಲ್ಲೆಗಿರದು. ಹೀಗಿರುತ್ತಾ ಆಫೀಸರರನ್ನು ಆಜ್ಞೋಪಿಸಬೇಕಾದ ಜಿಲ್ಲಾ ಕಲೆಕ್ಟರರ ಮೇಲ್ವಿಚಾರವು ಸರಿಯಾಗಿರುವರೆ ಆಸ್ಪದವಿಲ್ಲವಿದ್ದರೆ ಸರಕಾರದ ನೌಕರರ ತಮ್ಮಗಳಿಗೋಸ್ಕರ ಸರಕಾರದವರನ್ನು ನಿಷ್ಕಾರಣವಾಗಿ ದೂರುವ ಸಂದರ್ಭಗಳು ಒದಗುವವು.

ಜಿಲ್ಲಾ ಕಲೆಕ್ಟರರನ್ನು ಪದೇ ಪದೇ ಬದಲಾಯಿಸುವದು ಕ್ಷೇಮಕರವಲ್ಲವೆಂತ ಸರಕಾರದವರಿಗೆ ಈ ಮೂಲಕ ವಿಜ್ಞಾಪಿಸಿರುತ್ತೇನೆ. ತಮ್ಮ ವಿಧೇಯ.

M. H.

⁂

ಅಯ್ಯಾ ಪತ್ರಕರ್ತರೇ!

ತಾಲೂಕು ಆಫೀಸುಗಳ ಸಿಬಂದಿಯವರಿಗೆ ಪೇದೆಯರ ಲಾಗಾಯಿತು ಶಿರಸ್ತೆದಾರರ ವರೆಗೆ ಸಂಬಳ ಏರಿದ್ದಾಗಿ ತಮ್ಮ ಪತ್ರದಲ್ಲಿ ನಾನು ಓದಿದೆ. ಅದೇ ರೀತಿ ನಮ್ಮ ತಾಲೂಕಿಗೂ ಆ ಹುಕುಂ ಜ್ಯಾರಿಗೆ ಬಂದಿರುವದು. ಸೆಟ್ಲಮೆಂಟ ಆದ ಲಾಗಾಯಿತು ತಾಲೂಕು ಸಿಬಂದಿಯವರಿಗೆ ಕೆಲಸ ಹೆಚ್ಚಿಯದೆಂಬ ಬಗ್ಯೆ ಅನುಮಾನವೇತಕ್ಕೆ? ನಮ್ಮ ತಾಲೂಕಿಗೆ ಸೆಟ್ಲಮೆಂಟಿನಲ್ಲಿ ೧೮೭ ಗ್ರಾಮಗಳು ಇದ್ದು ೧೩೪ ಪಟೇಲರು, ೩೩ ಶ್ಯಾನಭಾಗರು ಮುಂತಾದ ಗ್ರಾಮ ಸಿಬಂದಿ ಇದ್ದು ಸೆಟ್ಲಮೆಂಟ ತೀರ್ವೆ ವಸೂಲಿಯು ರೆವಿನ್ಯೂ ತೀರ್ವೆಗಿಂತಲೂ ದುಬಾರೆ ಆಗಿಯೂ, ಅಬ್ಕಾರಿ, ಫೋರೆಸ್ಟ ರೆವಿನ್ಯು ಮುಂತಾದ ವಸೂಲಿಯು ಮುಂಚಿನಗಿಂತಲೂ ಜಾಸ್ತಿಯಾಗಿಯದಲ್ಲದೆ ಹಳೆ ರೂಪಾಯಿಗಳನ್ನು ಹೆಕ್ಕಿತೆಗಿಯುವ ಕೆಲಸವು ಸಹ ಹೆಚ್ಚಾಗಿಯದೆ. ಹೀಗಿರುತ್ತಾ ಸರಾಫರಿಗೆ ಸಂಬಳ ಹೆಚ್ಚಿಸಲಿಕ್ಕೆ ಹ್ಯಾಗೆ ಮರೆತುಬಿಟ್ಟರೋ ತಿಳಿಯದು. ಈ ವಿಷಯವು ಗವರ್ನಮೆಂಟಿನವರ ಚಿತ್ತಕ್ಕೆ ಬಾರದೆ ಇದ್ದರೆ ಸ್ಥಳಿಕ ಮೇಲಾಧಿಕಾರಿಗಳು ಇನ್ನಾದರೂ ಈ ವಿಷಯವನ್ನು ಗವರ್ನಮೆಂಟಿನವರ ಚಿತ್ತಕ್ಕೆ ತಂದು ತಾಲೂಕು ಸಿಬಂದಿಯನ್ನು ಏಕರೀತಿ ನಡಿಸುವರೆಂದು ಅಪೇಕ್ಷಿಸುವೆನು. ಪಟ್ಟಣಿಗ.

ಪುತ್ತೂರು, ತಾರೀಕು 15—10—1912.

⁂

ಪಶ್ಚಿಮ ಕರಾವಳಿಯ ವರ್ಗದಾರರ ಪ್ರತಿನಿಧಿಯಾಗಿ ಮದ್ರಾಸು ನ್ಯಾಯವಿಧಾಯಕ ಸಭೆಯನ್ನು ಸೇರಲು ಪ್ರಯತ್ನಿಸುವ ಉಮೇದ್ವಾರರಲ್ಲೊಬ್ಬರಾದ ವೇಂಗಾಯಿಲ್ ಕೆ. ರಾಮನ್ ನಾಯರವರು ಈ ಕೆಳಗಿನ ವಿಷಯವನ್ನು ಪ್ರಕಟಣೆ ಬಗ್ಯೆ ಕಳುಹಿಸಿರುವರು:—

ಅಯ್ಯಾ,

ಪಶ್ಚಿಮ ತೀರದ ಜಮೀನುದಾರರ ಪ್ರತಿನಿಧಿಯಾಗಿ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಈಗ ಖಾಲಿ ಬೀಳಲಿಕ್ಕಿರುವ ಸ್ಥಳಕ್ಕೆ ನೇಮಕ ಪಡುವರೆ ಉಮೇದ್ವಾರನಾಗಿ ನಿಲ್ಲುವನೆಂತ ನಿಶ್ಚಯಿಸಿರುವದರಿಂದ, ವಾಡಿಕೆಪ್ರಕಾರ, ನಿಮ್ಮೆಲ್ಲರಿಗೆ ನನ್ನ ಪರಿಚಯ ಹತ್ತುವಂತೆ ತಿಳಿಯಪಡಿಸುವ ಅಗತ್ಯವು ಬಂದಿರುತ್ತದೆ.

ಉತ್ತರ ಮಲಬಾರಿನ ಒಂದು ದೊಡ್ಡ ತಾರ್ವಾಡಿನ ಕಾರ್ಣವನಾಗಿದ್ದು, ನನ್ನ ಆಸ್ತಿಗೆ ದೊಡ್ಡ ದೊಡ್ಡ ಕೆಲವು ದೇವಸ್ವಗಳು ಸೇರಿರುತ್ತವಲ್ಲದೆ, ಬೇರೆ ವಿಸ್ತೀರ್ಣವಾದ ಆಸ್ತಿಗಳು ಕೂಡಿರುವ ಅನೇಕ ಇತರ ದೇವಸ್ವಗಳ ವ್ಯಾನೇಜರನಾಗಿರುತ್ತೇನೆ. ನಾನು ನನ್ನ ಆಸ್ತಿಯಲ್ಲಿ ವಾಸಸ್ಥನಾಗಿದ್ದು ನನ್ನ ಹೆಚ್ಚಿನ ಸಮಯವನ್ನೂ ಪ್ರಯತ್ನಗಳನ್ನೂ ನನ್ನ ರೈತರ ಸಂಗಡವೇ ಕಳೆಯುತ್ತೇನಲ್ಲದೆ, ಅವರ ಜೀವನದ ಮ ಒಳ್ಳೇ ಸ್ಥಿತಿಯ ವಿಷಯದಲ್ಲಿ ಹೆಚ್ಚಿನ ಪ್ರಯತ್ನ ಪಡುತ್ತೇನೆ. ಮೇಲ್‌ಚಾರ್ತಕ್ರಮವನ್ನು ನಿರಾಕರಿಸುವವನಲ್ಲವಿದ್ದರೂ, ಈ ವಿಧಿಯನ್ನು ನಾನು ಕಾರ್ಣವನಾಗಿರುವ ಈ ೩ ವರ್ಷಗಳಲ್ಲಿ ಉಪಯೋಗಿಸಿದವನಲ್ಲ. ನನ್ನ ತಾರ್ವಾಡಿನ ವಿಸ್ತೀರ್ಣವಾದ ಸ್ಥಳಗಳನ್ನಲ್ಲದೆ ನಾನು ಬೇರೆಯವರ ಕೆಳಗೆ ಅನೇಕ ಭೂಮಿಗಳನ್ನು ವಹಿಸಿದವನಾಗಿರುತ್ತಾ ರೈತರು ಅನುಭವಿಸಬೇಕಾಗುವ ಸಂಕಷ್ಟಗಳ ವಿಷಯ ಖುದ್ದಾಗಿ ತಿಳಿದಿರುತ್ತೇನೆ.

ನನ್ನ ಕೆಲವು ಆಸ್ತಿಗಳು ದಕ್ಷಿಣ ಕನ್ನಡ ಜಿಲ್ಲೆಯ ಗಡಿಯಲ್ಲಿರುವದರಿಂದಲೂ, ಮತ್ತು ಆ ಜಿಲ್ಲೆಯ ಕಾಸರಗೋಡು ತಾಲೂಕಿನ ಕೆಲವು ದೊಡ್ಡ ಜನ್ಮಿಗಳು ನನ್ನ ಸ್ನೇಹಿತರು ವ ಸಂಬಂಧಿಕರು ಆಗಿರುವದರಿಂದ ಕೂಡಾ, ಆ ಜಿಲ್ಲೆಯ ನಡಾವಳಿ, ಭೂಮಿಯ ಆಡಳಿತೆ, ವ ಇತರ ವಿಷಯಗಳನ್ನು ತಿಳಕೊಳ್ಳುವರೆ ನನಗೆ ಅನೇಕ ಅನುಕೂಲತೆಗಳಿವೆ.

ಮಲಬಾರ್ ಡಿಸ್ಟ್ರಿಕ್ಟ ಬೋರ್ಡಿನ ಮೆಂಬರನಾಗಿ ಈಗ ಸುಮಾರು ೧೫ ವರ್ಷಗಳಿಂದ ಇರುವದರಿಂದ, ಆ ಜಿಲ್ಲೆಯ ಸ್ಥಿತಿಗತಿಗಳನ್ನು ಚನ್ನಾಗಿ ಬಲ್ಲವನೆಂದು ನಾನು ಧೈರ್ಯದಿಂದ ಹೇಳಿಕೊಳ್ಳಬಹುದು.

ಮಲಬಾರ್ ಪಿತ್ರಾರ್ಜಿತ ಆಸ್ತಿಯ ವಿಷಯ ಪ್ರಕೃತ ನ್ಯಾಯವಿಧಾಯಕ ಸಭೆಯಲ್ಲಿ ಇರುವ ಬಿಲ್ (ಮಲಬಾರ್ ಇನ್ ಹೆರಿಟೆನ್ಸ ಬಿಲ್)ನ ವಿಷಯದಲ್ಲಿ ನನ್ನ ಅಭಿಪ್ರಾಯಗಳು ಬಹುಮಾನಪಟ್ಟ ರಾಜಾ ಕೆ. ಸಿ. ಮಾನವೇದನ್ ರಾಜರವರ ಅಭಿಪ್ರಾಯಕ್ಕೆ ಅನುಸರಿಸಿರುವವೆಂಬದನ್ನು ನಾನು ಮರೆಮಾಚುವ ಅಗತ್ಯವಿಲ್ಲ.

ವಿದ್ಯಾಭ್ಯಾಸದ ವಿಷಯದಲ್ಲಿಯಾದರೊ, ನಾನು ಯುನಿವರ್ಸಿಟಿ ಪರೀಕ್ಷೆಗಳನ್ನು ತೀರಿಸಿದ್ದರೂ, ನನ್ನನ್ನು ಚುನಾಯಿಸಿದ ಪಕ್ಷದಲ್ಲಿ, ನ್ಯಾಯವಿಧಾಯಕ ಸಭೆಯಲ್ಲಿ ನಡೆಯುವ ತರ್ಕಗಳನ್ನು ಸರಿಯಾಗಿ ತಿಳಕೊಳ್ಳುವದಕ್ಕೂ ನನಗೆ ವಹಿಸಿರುವ ಕೆಲಸಗಳನ್ನು ಚನ್ನಾಗಿ ನಿರ್ವಹಿಸುವದಕ್ಕೂ ನಾನು ಶಕ್ತನಾಗಿರುವೆನೆಂದು ದೃಢವಾಗಿ ತಿಳಿದಿರುವೆನು.

ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸುವದು ದೊಡ್ಡ ಭಾಷಣಗಳನ್ನು ಕೊಡಲಿಕ್ಕೆ ಯಾ ವಿಧವಿಧದ ಪ್ರಶ್ನೆಗಳನ್ನು ಕೇಳುವದಕ್ಕೆ ಮಾತ್ರವಲ್ಲವೆಂದು ನಂಬುತ್ತೇನೆ. ಹಾಗೆಂದರೆ ಈ ರೀತಿ ಭಾಷಣಗಳನ್ನು ಕೊಡುವದು ಅಪ್ರಯೋಜಕವೆಂದು ನಾನು ನೆನಸುವವನಲ್ಲ. ಆದರೆ ನಾನು ಜಿಲ್ಲಾ ಬೋರ್ಡುಗಳಲ್ಲಿ ತಿಳಿದಮಟ್ಟಿಗೆ ಈ ಸಂಗತಿಗಳಲ್ಲಿ ಮೌನವಾಗಿ ಉದ್ಯೋಗಸ್ಥರ ಹತ್ತರ ಮಾತಾಡುವದರಿಂದ ಹೆಚ್ಚಿನ ಪ್ರಯೋಜನವು ಉಂಟಾಗುವದೆಂದು ಅನುಭವ ಹೊಂದಿದ್ದೇನೆ. ಅಂತೂ ಭಾಷಣಗಳನ್ನು ಕೊಡುವ ಅಗತ್ಯ ಬಿದ್ದಲ್ಲಿ ಹಾಗೆ ಮಾತಾಡಲಿಕ್ಕೂ ಸಿದ್ಧನಾಗಿಯೇ ಇದ್ದೇನೆ.

ನನ್ನನ್ನು ಪ್ರತಿನಿಧಿಯಾಗಿ ನಿಮ್ಮೆಲ್ಲರ ಸಹಾಯದಲ್ಲಿ ಚುನಾಯಿಸಿದರೆ, ನನ್ನ ಕರ್ತವ್ಯವನ್ನು ಮನಃಪೂರ್ವಕವಾಗಿ ಪೂರೈಸುವರೆ, ನಿಮ್ಮೆಲ್ಲರ ಸಂಪೂರ್ಣ ಸಹಾಯವನ್ನು ಕೋರುತ್ತೇನೆ. ಯಾಕಂದರೆ ಹಾಗಲ್ಲದೆ ಬೇರೆ ರೀತಿಯಲ್ಲಿ ಅನುಭವ ಹೊಂದಲಿಕ್ಕೆ ಪ್ರಯತ್ನಿಸಿದ ಬೇರೆ ಎಷ್ಟು ಜನ ಪ್ರತಿನಿಧಿಗಳು ಅವು ನಿರರ್ಥಕವೆಂದು ಕಂಡಿದ್ದಾರೆ.

ಈ ರೀತಿ ನನ್ನ ಮತವನ್ನು ನಿಮ್ಮೆಲ್ಲರಿಗೆ ತಿಳಿಸಿರುತ್ತೇನೆ. ಮತ್ತು ಇದೆಲ್ಲವನ್ನು ಗಮನಕ್ಕೆ ತಂದು ನೀವು ನಿಮ್ಮ ಸಹಾಯವನ್ನು ನನಗೆ ಸಂಪೂರ್ಣವಾಗಿ ಕೊಡುವಿರೆಂದು ನಂಬಿದ್ದೇನೆ. ಇಂತಿ ನಿಮ್ಮ ಸೇವಕ.

ವೇಂಗಾಯಿಲ್ ಕೆ. ರಾಮನ್ ನಾಯರ್.

ಕಾನಾಯ್, ಕವ್ವಾಯಿ, ಉತ್ತರ ಮಲಬಾರ್.

⁂

ವಿದೇಶ ವೃತ್ತಾಂತ.

ಯುದ್ಧವಾರ್ತೆ:—ಒಕ್ಟೋಬರ ತಾ. ೧೦. ಅಲ್ಬೇನಿಯದ ಜೇಫ್ ರಿಜಬೇ ಎಂಬವನು ೪೨೦ ಮಂದಿಯೊಡನೆ ಬೆರೇನದಲ್ಲಿ ಮೊಂಟೆನಿಗ್ರೋಯನರ ವ್ಯೂಹರಚನೆಯನ್ನು ಭೇದಿಸಿ ೬ ಮೈಲು ಮುಂದಕ್ಕೆ ನುಗ್ಗಿದ್ದಾನೆಂಬ ವಾರ್ತೆ ಬಂದಿರುವದು. ತಾ ೯ ನೇ ಬೆಳಿಗ್ಯೆ ಮೊಂಟೆನಿಗ್ರೋದ ನಿಕಲಸ್ ಅರಸರೂ ಪ್ರಿನ್ಸ್ ಮಿರ್ಕೋರವರೂ ಪರಿವಾರ ಸಹಿತವಾಗಿ ಪೊದ್‌ಗೊರಿತ್ಸದ ಮಗ್ಗಲಾಗಿನ ಪರ್ವತದ ಕಡೆಗೆ ಸವಾರಿ ಮಾಡಿದರು. ಪ್ರಜಾ ಜನರು ಧನ್ಯವಾದವನ್ನಿತ್ತರು. ೮ ಗಂಟೆಗೆ ನಿಕಲಸ್ ಅರಸರ ಚಿಕ್ಕಮಗನಾದ ಕೆಪ್ಟನ್ ಪ್ರಿನ್ಸ ಪೀಟರರು ಗುಡ್ಡದ ಆಚೆ ಮಗ್ಗುಲಲ್ಲಿದ್ದ ತುರ್ಕರ ಪಾಳಯಕ್ಕೆ ಮೊದಲನೇ ಗುಂಡು ಹಾರಿಸಿದರು. ತನ್ಮಧ್ಯೆ ಬೇಂಡಿನವರು ರಾಜ ಗೀತವನ್ನು ಹಾಡುತ್ತಿದ್ದರು. ಪ್ಲೆನಿನಿತ್ಸ ಪರ್ವತದ ಬಳಿಯಲ್ಲಿದ್ದ ತುರ್ಕರಿಗೂ ಇವರಿಗೂ ಯುದ್ಧವಾಗಿ ಮಧ್ಯಾಹ್ನದೊಳಗೆ ತುರ್ಕರು ಪೂರ್ಣವಾಗಿ ಹಿಮ್ಮೆಟ್ಟಿಸಲ್ಪಟ್ಟು ಪರ್ವತ ಸರಹದ್ದನ್ನು ಬಿಟ್ಟು ಹೋದರು. ಅನಂತರ ಮೊಂಟೆನಿಗ್ರೋಯನರ ಸೈನ್ಯವು ಡೆಕ್ಕಿಚ್ ಎಂಬಲ್ಲಿ ಸುಕ್ಕಾರಿ ಎಂಬಲ್ಲಿಗೆ ಹೋಗುವ ದಾರಿಯಲ್ಲಿರುವ ಬಲವಾದ ಕೋಟೆ ಕೊತ್ತಲುಗಳಲ್ಲಿ ಪರ್ವತವನ್ನು ಮುತ್ತಿದರು. ಮಧ್ಯಾಹ್ನ ಎರಡು ಗಂಟೆಗೆ ಸುಕ್ಕಾರಿ ಸರೋವರದ ದಡದಲ್ಲಿ ತುರ್ಕರ ಸೈನ್ಯವು ಬಂದಿಳಿಯಿತು. ಮೊಂಟೆನಿಗ್ರೋಯರ ಸೈನ್ಯದ ಮುಖ್ಯಾಧಿಪತಿಯಾದ ಯುವರಾಜ ಡಾನಿಲೋರವರೂ ಪ್ರಿನ್ಸ್ ಪೀಟರರವರೂ ಆಲೋಚನೆ ಕೇಳುವರೆ ಯುದ್ಧರಂಗದಿಂದ ತಮ್ಮ ತಂದೆಯಾದ ನಿಕಲಸ್ ರಾಜರಿದ್ದೆಡೆಗೆ ಬಂದಿರುವರು.

ಹಳೇ ಸರ್ವಿಯದಲ್ಲಿ ಕೊಲೆ ಮಾಡಲ್ಪಟ್ಟ ತಮ್ಮ ಭ್ರಾತೃಗಳಿಗಾಗಿ ಸರ್ವರೂ ಸಹಾಯ ಮಾಡುವರೆ ಸಿದ್ಧವಿರುವರೆಂತ ನಂಬುತ್ತೇನೆಂತಲೂ ಮುಖ್ಯವಾಗಿ ಸರ್ವಿಯ, ಬಲ್ಗೇರಿಯ, ಗ್ರೀಕ ರಾಜಗಳವರು ತಮಗೆ ಬೆಂಬಲವಾಗಿರುವರೆಂಬ ಭರವಸವುಳ್ಳವನಾಗಿದ್ದೇನೆಂತಲೂ ನಿಕೊಲಸ್ ರಾಜರವರು ಸಾರಿಸಿದ್ದಾರೆ. ಮೊಂಟೆನಿಗ್ರೋಯನರು ಡೆಕ್ಕಿಚ್ ಎಂಬಲ್ಲಿಯ ಕೋಟೆಯನ್ನು ವಶಮಾಡಿಕೊಂಡರು. ತುರ್ಕರ ಸೇನಾಧಿಪತಿಯೂ ಹೆಚ್ಚು ಕಡಿಮೆ ಎಲ್ಲಾ ಸೈನ್ಯವೂ ಶರಣಾಗತವಾಯಿತು. ತುರ್ಕರ ೪ ಕೋವಿಗಳು ಹಿಡಿಯಲ್ಪಟ್ಟವು.

ತಾ. ೧೧. ಜೆರೆನದಲ್ಲಿ ತುರ್ಕರ ಮೇಲೆ ಬಿದ್ದ ಮೊಂಟೆನಿಗ್ರೋನರೂ ಡೊಸ್‌ಪಾದ್ ಜಲ್ಲೆಯ ಸೊಗ್‌ಚಕ್ ಯೋನಿಕೆಪ್ ಎಂಬಲ್ಲಿ ತುರ್ಕರ ಮೇಲೆ ಬಿದ್ದ ಬುಲ್ಗೇರಿಯರೂ ಹಿಮ್ಮೆಟ್ಟಲ್ಪಟ್ಟರು ಎಂಬದಾಗಿ ಕನ್‌ಸ್ತಾಂತಿನೋಪಲಿನಲ್ಲಿ ಪ್ರಕಟವಾಗಿದೆ.

ತುರ್ಕರ ಪಟ್ಟಣವಾದ ಟುಜಿಯದ ಮುಂದುಗಡೆ ತುರ್ಕರಿಗೂ ಮೊಂಟೆನಿಗ್ರೋನರಿಗೂ ಕಠಿಣ ಯುದ್ಧವಾಯಿತು. ಡೆಕ್ಕಿಚ್ ಪಟ್ಟಣವು ಬಿತ್ತು. ಮೊಂಟೆನಿಗ್ರೋಯರು ಅತಿ[illegible] ತಮ್ಮ ಬಾವಟೆಯನ್ನು ಹಾರಿಸಿದರು. ಆದರೆ ಉಭ[illegible] ಪಕ್ಷದಲ್ಲಿಯೂ ಅತಿರೇಕ ನಷ್ಟವಾಯಿತು.

ತುರ್ಕಿಯಲ್ಲಿ ಯುದ್ಧದ ಪರವಾಗಿ ಅಲ್ಲನು ಕೂಡುತ್ತಿದೆ. ಮೊಂಟೆನಿಗ್ರೋರನ್ನು ಹತೋಳಿಂದ ವರೆ ತಾವು ಯುದ್ಧ ಮಾಡುವೆವೆಂದು ಅಂಕಿನ ಮಾತು ಕೊಟ್ಟಿರುವರು. ಮೊಂಟೆನೀಗ್ರೊದಂಥಾ ನಡಿಯುವ ಕಠಿಣ ಕಾಳಗವನ್ನು ನಡಿಸುವ ಸಮಾಡಿ ಎರ್ಸಾದ್ ಪಾಶರವರು ಹೋಗಿರುವರು.

ತುರ್ಕಿ ಸರಕಾರದವರು ಮಸೆದೋನಿಯದ ಸಂಬಂಧವಾಗಿ ಮಾಡಲಿಕ್ಕಿರುವ ಬದಲಾವಣೆಗಳನ್ನು ವಿರೋಧಿಸುವ ಉದ್ದೇಶದಿಂದ ಕನ್‌ಸ್ತಂತಿನೋಪಲಿನ ೩೨೦೦ ವಿದ್ಯಾರ್ಥಿಗಳು ಆಯುಧಪಾಣಿಗಳಾಗಿ ಮೆರವಣಿಗೆ ಹೊರಟು ತುರ್ಕಿ ಪಾರ್ಲಿಮೆಂಟ್ ಸಭಾ ಮಂದಿರಕ್ಕೆ ಹೋಗಿ ಅದರ ಕಿಡಿಕಿಗಳನ್ನು ಒಡೆದು ಹಾಕಿದರು. ಗ್ರೇಂಡ್ ವಜೀರರಾದ ಮಹಮ್ಮದ್ ಮುಕ್ತಾರರು ಅವರಿಗೆ ಭಾಷಣ ಕೊಟ್ಟು ಬುದ್ಧಿವಾದವನ್ನು ಹೇಳಿ ನಿಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಟ್ಟಲ್ಲಿ ತಕ್ಕ ವಿಲೇವಾರಿ ಮಾಡುವೆನೆಂಬ ಭರವಸ ಕೊಟ್ಟು ಅವರನ್ನು ಹಿಂದಕ್ಕೆ ಕಳುಹಿಸಿ ಕೊಟ್ಟರು.

ತುರ್ಕಿ ಸುಲ್ತಾನರ ಸಹೋದರನಾದ ಪ್ರಿನ್ಸ್ ವಹಿದ್ ಎದ್ದಿನ್ ಮತ್ತು ಸೋದರಳಿಯನಾದ ಪ್ರಿನ್ಸ್ ಅಬ್ದುಲ್ ರಹಿಮ್‌ರವರು ಯುದ್ಧಕ್ಕೆ ಹೋಗುವರೆ ಮಾತು ಕೊಟ್ಟಿರುವರು. ಶ್ರೇಷ್ಠ ರಾಜ್ಯಗಳೆಲ್ಲಾ ಒಟ್ಟು ಕೂಡಿ ಬಾಲ್ಕಾನ್ ಸಂಸ್ಥಾನಗಳು ಯುದ್ಧ ಮಾಡದೆ ಕೂಡ್ಲೇ ಸಂಧಾನ ಮಾಡಿಕೊಳ್ಳಬೇಕೆಂದು ಬಾಲ್ಕಾನ್ ಸಂಸ್ಥಾನಗಳಿಗೆ ಪತ್ರಿಕೆ ಕಳುಹಿಸಿರುವರು. ಆದರೆ ಉಭಯತರೊಳಗೆ ರಾಜಿಯಾದೀತೋ ದೊಡ್ಡ ಯುದ್ಧವಾದಿತೋ ಎಂಬದನ್ನು ಈಗಲೇ ಹೇಳ ಕೂಡದು. ಗ್ರೀಕ ದೇಶದ ಯುವರಾಜರವರೂ ತೆಸ್ಸಲೇನಿಯನ್ ಸರಹದ್ದಿಗೆ ಹೊರಟಿರುವರು.

ತಾ. ೧೧. ಟುಜಿಯಲ್ಲಿ ಮೊಂಟೆನಿಗ್ರೋಯನರಿಗೂ ತುರ್ಕರಿಗೂ 6 ತಾಸುಗಳು ಯುದ್ಧ ನಡೆದನಂತರ ಮೊಂಟೆನಿಗ್ರೋಯನರು ಸುಕ್ತಾರಿಗೆ ಹೋಗುವ ದಾರಿಯನ್ನು ತೆರೆದರು. ಆದರೆ ಇವರ ಸೈನ್ಯದಲ್ಲಿ ಬಹಳ ಮಂದಿ ಹತರಾದರು.

ಒಟೊಮನ್ ಸರ್ಬ್ ಜನರು ದಂಗೆ ಎದ್ದು ಬೆರೇನದ ಮೊಂಟೆನಿಗ್ರೋರೊಂದಿಗೆ ಸೇರಿರುವರು.

ಈ ಯುದ್ಧವು ಅನಾವಶ್ಯವಾಗಿ ಉಪದ್ರ ಪಡುವ ನಮ್ಮ ಕ್ರೈಸ್ತ ಸಹೋದರರ ಪರವಾಗಿಯೂ ಅವರಿಂದ ತುರ್ಕರು ಬೆರ್ಲಿನ್ ಕಾಂಗ್ರೆಸಿನಲ್ಲಿ ಕಸಕೊಂಡ ಸ್ವಾತಂತ್ರಕ್ಕಾಗಿಯೂ ಮಾಡುವದಾಗಿರುತ್ತದೆ. ತೆಮ್ಕೂಡಲ ದಿಕ್ಕಿನ ಯೂರೋಪದಲ್ಲಿ ತುರ್ಕರ ಅಧಿಕಾರವು ಅಣಗುವ ಹಾಗೆ ಮಾಡುವದೇ ಅದಕ್ಕೆ ತಕ್ಕ ಚಿಕಿತ್ಸೆಯಾಗಿದೆಂದೂ ಈ ಸಂಬಂಧ ಇಂಗ್ಲಾಂಡ್ ಸಹಾಯ ಮಾಡಬೇಕೆಂದೂ ಬಲ್ಗೇರಿಯದ ಮಂತ್ರಿಯವರು ಆಯಾ ಪತ್ರಿಕೆಗಳಿಗೆ ಬರದಿರುವರು.

ಕಳದ ವಾರ ತುರ್ಕಿಯಲ್ಲಿ ೧೪೦,೦೦೦ ಸೈನೀಕರು ಯುದ್ಧಕ್ಕೆ ಸಿದ್ಧರಾಗಿದ್ದಾರೆ. ಇನ್ನು ಅನಟೋಲಿಯನ್ ಸೈನ್ಯವು ಬಂದು ಕೂಡಿದರೆ ಒಟ್ಟಿಗೆ ೪೦೦,೦೦೦ ಸೈನೀಕರು ಕೂಡಿದ ಹಾಗಾಗುವದು. ವಿರೋಧ ಪಕ್ಷದವರನ್ನು ಸೆರೆ ಹಿಡಿಯುವದಾಗ[illegible] ಅವರಿಗೆ ಆಶ್ರಯ ಮನೆಗಳನ್ನು ಒದಗಿಸಿ ಕೆ ಬೇಂಕು [illegible] ಈ ಯುದ್ಧದಲ್ಲಿ ಇರದೆ ಬಹಳ ಭ[illegible]ಕದ ಹಿಸೇದಾ[illegible]ಕತ್ತಿ ಯುದ್ಧವಾಗಿ ಈ ಯುದ್ಧವು ಪರಿ[illegible]ಸಿತು. ಇದು[illegible]ಂದು ತುರ್ಕಿಯರು ಹೇಳುವರು. [illegible] ಡೈರೆಕ್ಟರರುಗ[illegible] ಟೂಜಿಯ ಬಳಿಯಲ್ಲಿರುವ ರೋಗೆಮ್ [illegible]ಬವರೇ ಕಾರಣ[illegible] ಕೋಟೆಯು ಮೊಂಟೆನಿಗ್ರೋಯರ ವಶ ಸುವರೆ ಬರ್ನಾ ಲೆ[illegible] ಗಾಯಪಟ್ಟವರಿಂದ ಮೊಂಟೆನಿಗ್ರೋಯರ ತ್ತಾರೆಂತ ಪ್ರಕಟನ[illegible] ತುಂಬಿರುವದು. ನಿಕಲಸ್ ರಾಜರು ಆಸ್ಪ[illegible] ಬಳ್ಳಾರಿಯೋಗಿ ಗಾಯಪಟ್ಟವರಿಗೂ ಮೃತರಿಗೂ ಹಣೆಗೆ ಸೆಶ್ಯನ್ನು ಕೋ[illegible]ರು. ಪ್ರಿನ್ಸ ಮಿರ್ಕೋರವರು ತಾನೇ ಗಾಯಪಟ್ಟ ಒಬ್ಬನಿಂದ [illegible]ನೊಬ್ಬನನ್ನು ಹೊತ್ತುಕೊಂಡು ಆಸ್ಪತ್ರಿಗೆ ತಂದಿರುಗೆ ಹೋಗಿ ವ[illegible] ಡಿಕ್ಕಿಚ್ ಕಾಳಗದಲ್ಲಿ ಮೊಂಟೆನಿಗ್ರೋಯರಲ್ಲಿ ಅಗಲ್ ಪ್ರೈ[illegible] ಮಂದಿ ಹತರಾದರು, ೪೦೦ ಮಂದಿ ಗಾಯಪಟ್ಟರು. ಅಲ್ಲದೆ ಬೇ[illegible]

ತಾ. ೧೩. ಉತ್ತರದಲ್ಲಿರುವ ಮೊಂಟೆನಿಗ್ರೊ ಸೈನ್ಯವು ಹಳೇ ಸರ್ವಿಯದ ಬೆಲಿಪೋಲ್ಪಿ ಎಂಬ ಪಟ್ಟಣವನ್ನು ಹಿಡಿದು ಬೆಳಿಗ್ಗಿನಿಂದ ಸಾಯಂಕಾಲದ ವರೆಗೆ ಕಠಿಣ ಕಾಳಗ ಮಾಡಿದರು. ಮಧ್ಯಾಹ್ನ ೪ ಗಂಟೆಗೆ ಜಯಪ್ರದರಾಗಿ ಪಟ್ಟಣವನ್ನು ಪ್ರವೇಶಿಸಿದರು. ಅಲ್ಲಿ ಸರ್ಬ್ ಪಣಗಳವರು ಮೊಂಟೆನಿಗ್ರೋಯನರನ್ನು ಅತ್ಯಾನಂದದಿಂದ ಸ್ವೀಕರಿಸಿಕೊಂಡರು. ಪಟ್ಟಣದಲ್ಲಿ ಮೊಂಟೆನಿಗ್ರೋರ ಹಂಗಾಮಿ ಸರಕಾರವು ಸ್ಥಾಪಿಸಲ್ಪಟ್ಟಿತು.

ಗ್ರೀಕರು ೧೨೦,೦೦೦ ಸೈನಿಕರನ್ನು ಒಟ್ಟು ಕೂಡಿಸಿದ್ದಾರೆ. ತುರ್ಕಿ ಸರಕಾರದವರೂ ತಮ್ಮ ಎಲ್ಲಾ ಸೈನ್ಯವನ್ನು ಕೂಡಿಸುವರೆ ಅಪ್ಪಣೆ ಕೊಟ್ಟಿದ್ದಾರೆ.

ತಾ. ೧೪:-ಮೊಂಟೆನಿಗ್ರೋಯರು ಗಸಿಂಜೆ ಎಂಬಲ್ಲಿಯ ಸಮೀಪವಿರುವ ತುರ್ಕರ ಒಂದು ಗುಡ್ಡವನ್ನು ಹಿಡಕೊಂಡರು. ತುರ್ಕರು ಜೀವದ ಮರವೆ ಇಲ್ಲದೆ ಕಾದಾಡಿದರು. ಆದರೆ ಕಡೆಗೆ ಹಿಮ್ಮೆಟ್ಟಲ್ಪಟ್ಟರು. ತುರ್ಕರ ೪ ಕೋವಿಗಳೂ, ಅನೇಕ ರೈಫಲ್‌ಗಳೂ, ಆಯುಧ ಸಾಮಾಗ್ರಿಗಳೂ ಮೊಂಟೆನಿಗ್ರೋಯರ ವಶವಾಯಿತು. ಯುದ್ಧ ಪ್ರಾರಂಭವಾದಂದಿನಿಂದ ಇಷ್ಟರ ವರೆಗೆ ಮೊಂಟೆನಿಗ್ರೋರಲ್ಲಿ ೩೩ ಮಂದಿ ಮೃತಪಟ್ಟರು, ೮೦೦ ಮಂದಿ ಗಾಯಪಟ್ಟರು. ತಾ. ೧೪ರಲ್ಲು ಟುಜಿ ಪಟ್ಟಣವು ಮೊಂಟೆನಿಗ್ರೋಯರ ವಶವಾಯಿತು. ಮಧ್ಯಾಹ್ನ ಮೊಂಟೆನಿಗ್ರೋಯರು ಅಲ್ಲಿದ್ದ ತುರ್ಕರ ಸೈನ್ಯದ ಮೇಲೆ ಗುಂಡು ಹಾರಿಸ ಪ್ರಾರಂಭಿಸಿದರು. ಆದರೆ ತುರ್ಕರು ಬಿಳೀ ಬಾವಟೆಯನ್ನು ಏರಿಸಿ ಶರಣಾಗತರಾದರು. ತುರ್ಕರ ಅನೇಕ ಕೋವಿಗಳೂ, ೨೦೦೦ ರೈಫಲ್ ಕೋವಿಗಳೂ, ತುರ್ಕರ ೬ ಸೇನಾಂಗವೂ, ಕುದುರೆಗಳೂ, ೮೦೦ ಡೇರೆಗಳೂ, ೧೦ ದಿವಸಕ್ಕೆ ಸಾಕಾಗುವ ಆಹಾರವೂ ಮೊಂಟೆನಿಗ್ರೋರ ವಶವಾಯಿತು. ಅನಂತರ ಟುಜಿಯ ನಿವಾಸಿಗಳಾದ ಬರ್ಗರ್ಸ್ ಎಂಬವರ ಪ್ರತಿನಿಧಿಗಳು ಮೊಂಟೆನಿಗ್ರೊ ಸೈನಾಧಿಪತಿಯಾದ ಪ್ರಿನ್ಸ್ ಡೆನಿಲ್ಲೋರವರ ಬಳಿಗೆ ಬಂದು ಕ್ಷಮಾಪಣೆ ಕೇಳಿದರು. ಮೊಂಟೆನಿಗ್ರೋಯರು ಏನೊಂದು ಅಡ್ಡಿ ಇಲ್ಲದೆ ಪಟ್ಟಣವನ್ನು ಪ್ರವೇಶಿಸಿದರು. ಇವರನ್ನು ಅಲ್ಲಿಯ ಕ್ರೈಸ್ತರು ಅತಿ ಸಂತೋಷದಿಂದ ಸ್ವಾಗತ ಮಾಡಿಕೊಂಡರು. ಮೊಂಟೆನಿಗ್ರೋನರು ಕರಾನಿಯ ಎಂಬ ಪಟ್ಟಣವನ್ನು ಸುಟ್ಟುಬಿಟ್ಟರು. ಈ ಬೆಂಕಿಯಲ್ಲಿ ಅನೇಕ ಮಕ್ಕಳು ಸುಟ್ಟುಹೋದರು. ರಿಸ್ಟೋವ್ರೋಜ್ ಎಂಬಲ್ಲಿ ತುರ್ಕರು ಸರ್ವಿಯರ ಸರಹದ್ದನ್ನು ದಾಟಿ ಸರ್ವಿಯರೊಡನೆ ಯುದ್ಧಮಾಡತೊಡಗಿದರು. ಆದರೆ ಸರ್ವಿಯರು ಅವಸರದಿಂದ ಯುದ್ಧಸನ್ನದ್ಧರಾಗಿ ತುರ್ಕರೊಡನೆ ಕಾದಾಡಿ ಅವರನ್ನು ಹಿಮ್ಮೆಟ್ಟಿದರು.

ಯುದ್ಧವನ್ನು ನಿಲ್ಲಿಸಿ ಕೂಡ್ಲೇ ರಾಜಿಯಾಗಬೇಕೆಂದೂ ಮಸೆದೋನಿಯದಲ್ಲಿ ತುರ್ಕರು ತಕ್ಕ ಬದಲಾವಣೆಯನ್ನು ಮಾಡುವ ಹಾಗೆ ವಿಲೇವಾರಿಗಳನ್ನು ಮಾಡುವೆವೆಂದೂ ಶ್ರೇಷ್ಠ ರಾಜ್ಯಗಳವರು ಬಾಲ್ಕಾನ್ ಸ್ಟೇಟಿನವರಿಗೆ ಬರೆದ ಪತ್ರಕ್ಕೆ ಸ್ವಿಸ್ ಯಾ ಬೆಲ್ಜಿಯಂ ಗವರ್ನರ್ ಜನರಲರ ಕೈಕೆಳಗೆ ಮಸದೋನಿಯಕ್ಕೆ ಸ್ವಸತ್ತಾತ್ಮಕ ರಾಜ್ಯವು ದೊರಕಬೇಕು. ಸ್ಥಳಿಕ ಕೌನ್ಸಿಲುಗಳು ಸ್ಥಾಪಿಸಲ್ಪಡಬೇಕು, ಉಚಿತ ವಿದ್ಯಾಭ್ಯಾಸವು ದೊರಕಬೇಕೆಂಬಿತ್ಯಾದಿ ಶರ್ತಗಳಿಗೆ ತುರ್ಕರು ಒಪ್ಪುವದಾದರೆ ರಾಜಿಯಾಗಬಹುದೆಂಬ ಉತ್ತರವನ್ನು ಬಾಲ್ಕಾನ್ ಸ್ಟೇಟಿನವರು ತುರ್ಕಿ ಸರಕಾರದವರಿಗೆ ಕಳುಹಿಸಿರುವರು.

ತುರ್ಕರು ಹಿಡಿದ ಗ್ರೀಕರ ಹಡಗಗಳನ್ನು ೨೪ ತಾಸುಗಳೊಳಗೆ ಆಯಾ ಹಡಗ ಮಾಲಿಕರಿಗೆ ಬಿಟ್ಟುಕೊಡಬೇಕೆಂದು ಗ್ರೀಕ ಸರಕಾರದವರು ಕನ್‌ಸ್ತಂತಿನೋಪಲಿನಲ್ಲಿ

ರುವ ತಮ್ಮ ಪ್ರತಿನಿಧಿಯ ಮೂಲಕ ತುರ್ಕಿ ಸರಕಾರದವರನ್ನು ಕೇಳಿಕೊಂಡಿರುವರು.

ಬಾಲ್ಕಾನ್ ಸ್ಟೇಟಿನವರು ತುರ್ಕರಿಗೆ ವಿರೋಧವಾಗಿ ಎದ್ದದರಿಂದ ಹಿಂದೂಸ್ಥಾನದ ಮಹಮ್ಮದೀಯರು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸಭೆ ಕೂಡಿಸಿ ತಮ್ಮ ಸಹಾನುತಾಪವನ್ನು ತೋರಿಸುತ್ತಿದ್ಧಾರೆ. ತಾ. ೧೪ರಲ್ಲು ಕರಾಚಿಯಲ್ಲಿ ಕೂಡಿದ ಇಂಥಾ ಒಂದು ಸಭೆಯಲ್ಲಿ ಸಭಾಮಧ್ಯೆ ಒಬ್ಬ ಚಿಕ್ಕ ಹುಡುಗಿಯು ಎದ್ದು ನಿಂತು ತನ್ನ ಚಿನ್ನದ ಮೂಗುತಿಯನ್ನು ತೆಗೆದು ಯುದ್ಧದಲ್ಲಿ ಮಡಿದ ತುರ್ಕರ ಸಹಾಯಾರ್ಥವಾಗಿ ಹಣ ಕೂಡಿಸುವಂಥಾ ರೆಡ್ ಕ್ರಿಸೆಂಟ್ ಫಂಡಿಗೆ ಕೊಟ್ಟಳು. ಇದನ್ನು ನೋಡಿದ ಅನೇಕ ಮಹಮ್ಮದೀಯ ಹೆಂಗಸರು ತಂತಮ್ಮ ಆಭರಣಗಳನ್ನು ಈ ಫಂಡಿಗೆ ಕೊಟ್ಟುಬಿಟ್ಟರು. ಕಲ್ಕತ್ತೆಯಲ್ಲಿಯೂ ತಾ. ೧೫ರಲ್ಲು ಈ ಸಂಬಂಧ ಮಹಮ್ಮದೀಯರ ದೊಡ್ಡ ಸಭೆಕೂಡಿ ತುರ್ಕರಿಗೆ ಈ ಯುದ್ಧದಲ್ಲಿ ಜಯವಾಗಬೇಕೆಂಬ ಪ್ರಾರ್ಥನೆ ನಡಿಸಿದರು.

* * *

ಟ್ರಿಪೋಲಿ ಯುದ್ಧದ ಸಂಬಂಧವಾಗಿ ತುರ್ಕರಿಗೂ ಇಟಾಲಿಯರಿಗೂ ಔಚಿಯಲ್ಲಿ ಸಂಧಾನಶರ್ತಗಳು ನಡೆಯುತ್ತಲಿದೆ. ಈ ವಿಷಯ ತಕ್ಕ ಸೂಚನೆಗಳನ್ನು ಕೊಡುವರೆ ತುರ್ಕಿ ಸರಕಾರದ ಪ್ರತಿನಿಧಿಯು ಔಚಿಗೆ ಹೋಗಿರುವನು. ಹ್ಯಾಗೂ ಈ ಯುದ್ಧವು ಸಂಧಾನದ ಮೂಲಕ ಕೊನೆಗಾಣುವದು.

ತಾ. ೧೦ ಇಟಾಲಿಯರ ಸೈನ್ಯವು ಟ್ರಿಪೋಲಿಯ ಬೊಂಬಾ ಎಂಬಲ್ಲಿ ಇಳಿದು ತುರ್ಕರ ಕೋಟೆಕೊತ್ತಲದಂತಿದ್ದ ಬಲವಾದ ಸ್ಥಳಕ್ಕೆ ಮುಂದರಿದರು. ತುರ್ಕರು ಇವರನ್ನು ಎದುರಿಸಿ ಜೀವದ ಮರವೆ ಇಲ್ಲದೆ ಹೋರಾಡಿದರು. ಆದರೆ ಇಟಾಲಿಯರು ಆ ಸ್ಥಳವನ್ನು ವಶಮಾಡಿಕೊಂಡರು. ಇಟಾಲಿಯರಲ್ಲಿ ೪ ಮಂದಿ ಹತರಾದರು, ೫೯ ಮಂದಿ ಗಾಯಬಡೆದರು. ತುರ್ಕರಲ್ಲಿ ಅತಿರೇಕ ನಷ್ಟವುಂಟಾಯಿತು. ತುರ್ಕಿಯನ್ನು ಬಿಟ್ಟುಹೋಗಿದ್ದ ಇಟಾಲಿಯರ ಅನೇಕ ಕುಟುಂಬಗಳು ಪುನಃ ತುರ್ಕಿಗೆ ಹೋಗಲು ಪ್ರಾರಂಭಿಸಿದ್ಧಾರೆ.

ತಾ. ೧೧.—ಔಚಿಯಲ್ಲಿ ತುರ್ಕಿ ಇಟಾಲಿಯರ ಪ್ರತಿನಿಧಿಗಳೊಳಗೆ ಸಂಧಾನದ ಚರ್ಚೆ ನಡಿಯುತ್ತಿರುವಾಗ ಕಡೇ ಗಳಿಗೆಯಲ್ಲಿ ಏನೋ ಹೆಚ್ಚುಕಡಿಮೆ ಬಂದು ಸಂಧಾನವು ಮುರಿದೋಯಿತು ಎಂಬದಾಗಿ ವಾರ್ತೆ ಬಂದದೆ. ಇಟಾಲಿ ಸಮುದ್ರದಲ್ಲಿ ಈ ತನಕ ಇದ್ದ ಇಟಾಲಿಯರ ಎಡ್ಮಿರಲ್ ವಿಯಾಲ್ಸರ ಯುದ್ಧ ಹಡಗವು ಕೂಡ್ಲೇ ಆಗಿಯನ್ ಸಮುದ್ರಕ್ಕೆ ಹೋಗಲು ಸಿದ್ಧವಾಗಿರಬೇಕೆಂಬದಾಗಿ ಇಟಲಿ ಸರಕಾರದವರು ಆಜ್ಞಾಪಿಸಿರುವರು.

ಕಡೆಗೆ ಬಂದ ವಾರ್ತೆಯ ಪ್ರಕಾರ ಔಚಿಯ ಸಂದಾನವು ಮುರಿದುಹೋಗಲಿಕ್ಕಿರುವಷ್ಟರಲ್ಲಿ ತುರ್ಕಿಯಿಂದ ಹೋದ ಪ್ರತಿನಿಧಿಯು ಅಲ್ಲಿಗೆ ತಲಪಿದ್ದರಿಂದ ಪುನಃ ಈ ವಿಷಯ ಆಲೋಚನೆಗೆ ಪ್ರಾರಂಭವಾಗಿಯದೆ ಎಂಬದಾಗಿ ತಿಳಿದುಬರುತ್ತದೆ.

ಡೆರ್ನದಲ್ಲಿ ಇಟಾಲಿಯರಿಗೂ ತುರ್ಕರಿಗೂ ಪುನಃ ಯುದ್ಧವಾಗಿ ತುರ್ಕರು ಸೋಥೋದರು ಎಂಬ ವಾರ್ತೆ ಬಂದದೆ.

ತುರ್ಕಿ ಇಟಾಲಿಯರೊಳಗೆ ಆಗುವ ಸಂಧಾನದ ಚರ್ಚೆಯು ತಾ. ೧೫ರೊಳಗೆ ಕೊನೆಗಾಣದಿದ್ದರೆ ಇಟಾಲಿ ಪ್ರತಿನಿಧಿಗಳನ್ನು ಹಿಂದೆ ತರಿಸುವೆವೆಂತ ಇಟಾಲಿ ಸರಕಾರದವರು ಪ್ರಕಟಿಸಿರುವರೆಂತ ತಿಳಿದುಬರುತ್ತದೆ.

* * *

ಎಲ್ಬೆ ಎಂಬಲ್ಲಿಯ ಜರ್ಮನಿಯ ನೌಕಾವಳಿಯ ನಕ್ಷೆಗಳನ್ನು ಬ್ರಿಟಿಷರಿಗೆ ಮಾರಿದನೆಂದು ಆಪಾದಿಸಲ್ಪಟ್ಟ ಕೇಗಲ್‌ಮೇನ್ ಎಂಬವನಿಗೆ ಜರ್ಮನ್ ಸರಕಾರದವರು ೭ ವರ್ಷಗಳ ಸಜಾ ವಿಧಿಸಿದರು.

* * *

ಇಟಲಿ ಅರಸರಾದ ವಿಕ್ಟರ್ ಮಾನುವೆಲ್ ರಾಜರವರಿಗೆ ಕಳೆದ ಮಾರ್ಚಿ ತಿಂಗಳಲ್ಲಿ ಹೊಡೆಯಲು ಪ್ರಯತ್ನಪಟ್ಟ ರಾಜದ್ರೋಹಿ ಅಲ್ಬ ಎಂಬವನಿಗೆ ೩೦ ವರ್ಷಗಳ ಕಠಿಣ ಸಜಾ ವಿಧಿಸಲ್ಪಟ್ಟಿತು. (ಈ ಪೈಕಿ ೭ ವರ್ಷ ಏಕಾಂತ ಸಜೆ.)

ಉತ್ತರ ಹಿಂದೂಸ್ಥಾನ.

ಬಂಗಾಳ ಆಧಿಪತ್ಯದಲ್ಲಿ ಮಲೇರಿಯಾ ಜ್ವರದಿಂದ ೧೯೧೧-೧೨ನೇ ಇಸವಿಯಲ್ಲಿ ೧೦,೮೧,೦೦೦ ಮಂದಿ ಅಂದರೆ ಹಿಂದಿನ ವರ್ಷಕ್ಕಿಂತಲೂ ೫೦,೦೦೦ ಜನರು ಹೆಚ್ಚಾಗಿ ಮೃತಪಟ್ಟಿದ್ಧಾರೆ.

* * *

ಹಿಂದೂ ವಿಶ್ವವಿದ್ಯಾಕಲಾಶಾಲೆಯ ಫಂಡಿಗೆ ಇದೇ ಕಳೆದ ಸಪ್ತಂಬರ ತಿಂಗಳಾಂತ್ಯದ ವರೆಗೆ ೧೫,೬೧,೫೦೮ ರೂಪಾಯಿ ವಸೂಲಾಗಿರುತ್ತದೆ. ೫೦ ಲಕ್ಷರೂಪಾಯಿ ವಸೂಲಾಗಿ ಶೇವಣಿ ಆಗುವ ತನಕ ಈ ಫಂಡಿನ ಕಾರ್ಯನಿರ್ವಾಹಕ ಮೆಂಬರರು ಈ ಕಾರ್ಯವನ್ನು ಕುರಿತು ಸರಕಾರದವರ ಕೂಡೆ ಆಲೋಚಿಸುವ ಹಾಗೆ ಇಲ್ಲ.

* * *

ಬ್ರಹ್ಮಸಮಾಜದ ಮತಸ್ಥಾಪಕರಾಗಿ ಕೀರ್ತಿಶೇಷರಾದ ರಾಜಾರಾಂ ಮೊಹನ್‌ರಾಯಿರವರು ಇಂಗ್ಲಾಂಡಿಗೆ ಸೇರಿದ ಬ್ರಿಸ್ಟಲ್ ಪಟ್ಟಣದಲ್ಲಿ ಕಾಲವಾಗಿ ಅಲ್ಲಿಯೇ ಸಮಾಧಿಮಾಡಲ್ಪಟ್ಟಿದ್ಧಾರೆ. ಚಿತಗೊಂಗಿನಲ್ಲಿರುವ ಬ್ರಹ್ಮಸಮಾಜದವರು ಒಂದು ಮಹಾಸಭೆಯನ್ನು ನಡಿಸಿ ರಾಜರಾಂ ಮೊಹನ್ ರಾಯಿರವರ ದೇಹವನ್ನು ಬ್ರಿಸ್ಟಲ್ ಪಟ್ಟಣದ ಪುರಾಧ್ಯಕ್ಷರ ಅನುಜ್ಞೆಯನ್ನು ಪಡೆದು ಅಲ್ಲಿಂದ ಹಿಂದೂಸ್ಥಾನಕ್ಕೆ ತಂದು ಇಟ್ಟು ಶಾಶ್ವತವಾದ ಸಮಾಧಿಯನ್ನು ಕಟ್ಟುವದಕ್ಕೆ ಏರ್ಪಾಡು ಮಾಡಬೇಕೆಂದು ನಿಷ್ಕರ್ಷಿಸಿರುತ್ತಾರೆ.

* * *

ಬಂಗಾಳ ಪ್ರಾಂತ್ಯದ ಬ್ರಹ್ಮಪುತ್ರ ನದೀ ತೀರದಲ್ಲಿ ಒಬ್ಬ ಹುಡುಗನು ಕಾಣದೆ ಹೋಗಿದ್ದನು. ಈ ಹುಡುಗನನ್ನು ಹುಡುಕಿಕೊಂಡು ಹೋದವರು ದಾರಿಯಲ್ಲಿ ಒಂದು ದೊಡ್ಡ ಹಾವನ್ನು ಕಂಡು ಅದರ ಹೊಟ್ಟೆಯು ಉಬ್ಬಿದ್ದದರಿಂದ ಅದು ತಮ್ಮ ಹುಡುಗನನ್ನು ನುಂಗಿರಬೇಕೆಂದು ಭಾವಿಸಿ ಅದನ್ನು ಕೊಂದು ಹೊಟ್ಟೆ ತಿವಿಯಲು ಅದರೊಳಗೆ ಒಂದು ನರಿಯು ಇದ್ದಿತಂತೆ.

* * *

ಕರ್ನೆಲ್‌ಕೋಡಿ ಎಂಬ ವಿಮಾನ ಗಾಮಿಯು ಲಂಡನಿನಿಂದ ಹಿಂದೂಸ್ಥಾನಕ್ಕೆ ವಿಮಾನದ ಮೂಲಕ ಪ್ರಯಾಣ ಮಾಡಲಿಕ್ಕಿದ್ಧಾನೆಂಬದಾಗಿ ಪ್ರಕಟವಾಗಿದೆ.

* * *

ಮುಂಬಾಯಿ ಗವರ್ನರರಾದ ಸರ್ ಜೋರ್ಜ ಕ್ಲಾರ್ಕರವರ ಬದಲಿಗೆ ಯಾರು ನೇಮಿಸಲ್ಪಡುವರೆಂಬದರ ವಿಷಯ ಇನ್ನೂ ನಿಶ್ಚಯವಾದ ವಾರ್ತೆ ಇಲ್ಲ. ಚೆಲ್ಮ್ಸ್‌ಫೋರ್ಡು ಪ್ರಭುಗಳು ಈ ಹುದ್ದೆಗೆ ನೇಮಿಸಲ್ಪಡುವರೆಂದು ಕೆಲವರೂ, ಇನ್ನು ಕೆಲವರು ಬೋರ್ಡು ಅಫ್ ಟ್ರೇಡಿನ ಪ್ರೆಸಿಡೆಂಟರಾಗಿರುವ ಮಿ| ಸಿಡ್ನೆ ಬಕ್ಸ್ಟನರವರು ನೇಮಿಸಲ್ಪಡುವರೆಂದೂ ಹೇಳುವರು. ಮಿ| ಸಿಡ್ನೆಯವರೂ ಲಿಬರಲ್ ಪಕ್ಷದವರಾಗಿರುವುದರಿಂದ ಮುಂಬಾಯಿ ಗವರ್ನರರಾಗಿ ಬಂದ ಪಕ್ಷಕ್ಕೆ ಹಿಂದೂಸ್ಥಾನದ ಮುಂಬಾಯಿ, ಮದ್ರಾಸ್, ಬಂಗಾಳ ಸಂಸ್ಥಾನಗಳಲ್ಲಿಯೂ ಪ್ರಜಾಸಹಾನುಭೂತಿ ಗುಣವುಳ್ಳ ಗವರ್ನರರುಗಳು ಆದ ಹಾಗಾಯಿತು. ಆದರೆ ಮೆ| ಸಿಡ್ನೆಯವರಿಗೆ ಈ ಗವರ್ನರರ ಪದವಿಯು ಕೊಡಲ್ಪಟ್ಟರೂ ಅವರು ಇದನ್ನು ಅಂಗೀಕರಿಸುವರೇನೊ ಎಂಬ ಅನುಮಾನವಿದೆ.

* * *

ಇದೇ ಕಳೆದ ಜುಲಾಯಿ ತಿಂಗಳಲ್ಲಿ ಪುನೆಯಲ್ಲಿ ೭ ವರ್ಷದ ಟಾನಿ ಎಂಬ ಹೆಸರಿನ ಒಬ್ಬ ಹುಡುಗಿಯನ್ನು ಸಕಾರಾಮ್ ಮತ್ತು ಭಾವ್ ಎಂಬ ಇಬ್ಬರು ಕೊಂದು ಅವಳ ಕೊರಳಲ್ಲಿದ್ದ ಆಭರಣಗಳನ್ನು ಕಸಕೊಂಡರೆಂಬದಾಗಿ ಆಪಾದಿಸಲ್ಪಟ್ಟಿದ್ದರೆಂದು ತಿಳಿಸಿತ್ತಷ್ಟೆ. ಈ ಮೊಕದಮೆಯು ತನಖಿ ನಡೆದು ಇದೇ ತಾ. ೧೧ರಲ್ಲು ಮೊದಲನೇ ಆಪಾದಿತನಿಗೆ ಪಾಶಿ ಶಿಕ್ಷೆಯೂ, ಇವನಿಗೆ ಸಹಾಯಕನಾಗಿದ್ದ ಎರಡನೇ ಆಪಾದಿತನಿಗೆ ಜೀವಾಂತ ಬಂಕೋಲೆ ಶಿಕ್ಷೆಯೂ ವಿಧಿಸಲ್ಪಟ್ಟಿತು.

* * *

ಪಂಜಾಬಿನಲ್ಲಿ ಕುಡಿಕತನವು ಅತ್ಯಂತವಾಗಿ ಪ್ರಬಲವಾಗುತ್ತಿದೆ. ೧೯೧೦ನೇ ವರ್ಷದಲ್ಲಿ ೨೩,೭೮೯ ಗ್ಯಾಲನು ಬೀರೆಂಬ ಸರಾಯಿಯು ವೆಚ್ಚವಾಗಿರುವಲ್ಲಿ ೧೯೧೧ನೇ ಇಸವಿಯಲ್ಲಿ ೪೯,೪೪೧ ಗ್ಯಾಲನ್ ವೆಚ್ಚವಾಗಿಯದೆ.

* * *

ಆಂಗ್ಲೊಇಂಡಿಯನ್ನರ ವಿದ್ಯಾಸಂಬಂಧವಾಗಿ ಆಲೋಚಿಸುವರೆ ತಾ. ೧೦ರಲ್ಲು ಸಿಮ್ಲಾದಲ್ಲಿ ಕೂಡಿಬಂದ ಸಭೆಗೆ ಬಹುಮಾನಪಟ್ಟೆ ಸರ್ ಹಾರ್ಕೋಟ್ ಬಟ್ಲರವರು ಅಧ್ಯಕ್ಷರಾಗಿದ್ದು ಕಲ್ಕತ್ತೆ ಮತ್ತು ಮದ್ರಾಸಿನಲ್ಲಿರುವ ಆಂಗ್ಲೊ ಇಂಡಿಯನ್ನರ ಬಡ ತರಗತಿಯ ಜನರು ವಿದ್ಯೆಯಲ್ಲಿ ಎಷ್ಟರ ಮಟ್ಟಿನ ಅಧೋಸ್ಥಿತಿಯಲ್ಲಿರುವರೆಂಬದನ್ನು ತಿಳಿಯ ಪಡಿಸಿದಲ್ಲದೆ ಅವರಿಗೆ ವಿದ್ಯಾಭ್ಯಾಸವನ್ನು ಕೊಡುವ ಎತ್ತುಗಡೆಮಾಡುವರೆ ಇಂಡಿಯಾ ಸರಕಾರದವರು ಬಂಗಾಳ ಸರ್ಕಾರದವರಿಗೆ ೮೦,೦೦೦ ರೂಪಾಯಿ ಮತ್ತು ಮದ್ರಾಸ್ ಸರ್ಕಾರದವರಿಗೆ ೩೦,೦೦೦ ರೂಪಾಯಿ ಸೆಂಕ್ಷನ್ ಮಾಡಿದ್ಧಾರೆಂಬದಾಗಿ ಹೇಳಿದರು.

* * *

ಕಲ್ಕತ್ತೆಯಲ್ಲಿ ಅರಳೇ ಜೂಜಾಟ ಇತ್ಯಾದಿ ಜೂಜುಗಳ ಹಾವಳಿಯು ದಿನೇ ದಿನೇ ಹೆಚ್ಚಾಗುತ್ತಾ ಬರುವುದರಿಂದ ಬಂಗಾಳ ಸರ್ಕಾರದವರು ಈ ಸಂಬಂಧ ತಕ್ಕ ಕಾನೂನನ್ನು ಜಾರಿಗೆ ತರುವರೆ ಆಲೋಚಿಸಿರುವರು.

* * *

ಕಲ್ಕತ್ತೆಯ ನಿಮುಟೊಲ್ಲ ಎಂಬ ಸುಡುಗಾಡಿನಲ್ಲಿ ತಾ. ೯ರಲ್ಲು ಒಂದು ಸತಿಸಹಗಮನವು ನಡೆಯಿತು. ತಾ. ೯ನೇ ಬುಧವಾರ ಬೆಳಿಗ್ಯೆ ಕಲ್ಕತ್ತೆಯ ಬಾಬು ಅವಿನಾಶ್ ಚಂದ್ರ ಎಂಬವನು ಜ್ವರದಿಂದ ಮೃತನಾದನು. ಇವನ ೧೮ ವರ್ಷ ವಯಸ್ಸಿನ ಹೆಂಡತಿ ಶ್ರೀಮತಿ ರಾಜರಾಜೇಶ್ವರಿ ದೇವಿಯು ಮೃತದೇಹದ ಸಮೀಪ ಒಂದೇ ಒಂದು ತಟಕು ಕಣ್ಣೀರನ್ನು ಸುರಿಸದೆ ಸುಮ್ಮನೆ ಕೂತಳು. ಅನಂತರ ಶವವನ್ನು ಸುಡುವುದಕ್ಕೋಸ್ಕರ ನಿಮುಟೊಲ್ಲ ಗಟ್ಟಕ್ಕೆ ತಕ್ಕೊಂಡು ಹೋಗುವಾಗ ಇವಳು ಹಿಂದಿನಿಂದ ಹೋದಳು. ದೇಹವನ್ನು ಕಾಷ್ಠದ ಮೇಲೆ ಇಟ್ಟು ಬೆಂಕಿಕೊಟ್ಟಾಗಲೂ ಇವಳು ಕಣ್ಣೀರು ಸುರಿಸಲಿಲ್ಲ. ಅನಂತರ ಇವಳು ಫಕ್ಕನೇ ಉರಿಯುತ್ತಿರುವ ಬೆಂಕಿಗೆ ಹಾರಿದಳು. ಸಮೀಪ ನಿಂತಿದ್ದ ಜನರು ಬಹಳ ಪ್ರಯತ್ನಪಟ್ಟು ಅವಳನ್ನು ಬೆಂಕಿಯಿಂದ ಎಳದು ತೆಗೆದರು. ಆದರೆ ಅಷ್ಟರೊಳಗೆ ಅವಳ ದೇಹವು ಸುಟ್ಟು ಅರೆಪ್ರಾಣದಲ್ಲಿದ್ದಳು. ಕೂಡ್ಲೇ ಮೂರ್ಛೆ ಸ್ಥಿತಿಯಲ್ಲಿದ್ದ ಇವಳನ್ನು ಆಸ್ಪತ್ರಿಗೆ ವೈದರು. ಅಲ್ಲಿ ಇವಳು ಮೋದಂಡ ಸ್ಥಿತಿಯಲ್ಲಿದ್ಧಾಳೆ.

* * *

ಇದೇ ದಶಂಬರ ತಿಂಗಳಲ್ಲಿ ಬಾಂಕೀಪುರದಲ್ಲಿ ಜರಗಲಿಕ್ಕಿರುವ ರಾಷ್ಟ್ರೀಯ ಮಹಾಸಭೆಗೆ ಬಹುಮಾನಪಟ್ಟ ಮುಧೋಲ್ಕರರವರನ್ನು ಅಧ್ಯಕ್ಷರಾಗಿ ಆರಿಸುವರೆ ಬಿಹಾರಿನಲ್ಲಿರುವ ಕಾಂಗ್ರೆಸ್ ಕಮಿಟಿಯವರು ಮಾತ್ರ ಒಪ್ಪಲಿಲ್ಲವಾದರೂ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಮುಧೋಲ್ಕರರನ್ನು ಚುನಾಯಿಸುವದರಲ್ಲಿ ಅಭಿಮತವುಳ್ಳವರಾಗಿದ್ದದರಿಂದ ಸ್ವಾಗತ ಕಮಿಟಿಯವರೂ ಇವರ ಅಭಿಮತವನ್ನು ಒಪ್ಪಿ ಮುಧೋಲ್ಕರರನ್ನೇ ಅಧ್ಯಕ್ಷರಾಗಿ ಆರಿಸಿರುವರು. ಮುಧೋಲ್ಕರರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರೆ ಸಮ್ಮತಿಕೊಟ್ಟಿರುವರು.

* * *

ಬಹುಮಾನಪಟ್ಟ ಸರ್ ಹಾರ್ಡ್ಕೋಟ್ ಬಟ್ಲರರವರು ಲೆಪ್ಪನೆಂಟ್ ಗವರ್ನರರಾಗಿ ನೇಮಿಸಲ್ಪಡುವ ಸಂಭವವಿದೆಯೆಂದೂ ಇವರ ಬದಲಿಗೆ ಮುಂಬಾಯಿ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಮಿ| ಕ್ಲೌಡ್ ಹಿಲ್. ಸಿ. ಐ. ಇ. ಐ.ಸಿ. ಎಸ್‌ರವರು ವ್ಯಾಸರಾಯ ಕೌನ್ಸಿಲಿನ ಮೆಂಬರರಾಗುವರೆಂದೂ ಪಾರ್ಶಿ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

* * *

ಪೇಷಾವರದ ಚೆರಾಂಟ್ ಎಂಬಲ್ಲಿಯ ಮೇಜಿಸ್ಟ್ರೇಟರಾದ ಮಿ| ಬೋನ್‌ಹಾಮ್ ಕಾರ್ಟರ್ ಎಂಬವರು ರೆಜಿಮೆಂಟ್ ಬಿಸ್ತಿ ಮಹಮ್ಮದನಿಗೆ ಮರಣಾಂತಿಕವಾದ ಗಾಯಪಡಿಸಿದರು ಎಂಬ ತಕ್ಷೀರಿನ ಮೇಲೆ ಆಪಾದಿಸಲ್ಪಟ್ಟಿದ್ದರು. ಜೂನು ತಾ. ೨೭ರಲ್ಲು ಕೆಲವು ರೆಜಿಮೆಂಟಿನ ಮನೆಸೇವಕರೂ ಮೃತನೂ ನಾಜುಖಾನ್ ಎಂಬವನ ಮನೆಗೆ ಗಾಯನ ಬೈಠಕಿಗೆ ಹೋಗಿದ್ದಾಗ ಈ ಮೆಜಿಸ್ಟ್ರೇಟರು ಅಲ್ಲಿಗೆ ಬಂದು ಅವರ ಕೈಗಳನ್ನು ಮೇಲಕ್ಕೆ ಎತ್ತ ಹೇಳಿ ಗುಂಡು ಹೊಡೆದರು ಎಂಬದಾಗಿ ಪ್ರೊಸಿಕ್ಯೂಶನ್ ಕಡೆಯ ವಾದವಾಗಿತ್ತು. ನಾಜುಖಾನನ ಮನೆಯಲ್ಲಿ ಜುಗಾರು ಆಟನಡೆಯುತ್ತದೆಂಬ ವಾರ್ತೆಯಿಂದ ಆಪಾದಿಸಲ್ಪಟ್ಟ ಮೇಜಿಸ್ಟ್ರೇಟರು ೭ ಮಂದಿ ಸಾರ್ಜೆಂಟರೊಂದಿಗೆ ಆ ಸ್ಥಳಕ್ಕೆ ಹೋಗಿ ಜುಗಾರುಗಾರರನ್ನು ಹಿಡಿಯಲು ಅವರು ಇವರ ಮೇಲೆ ಬಿದ್ದದರಿಂದ ಅವರನ್ನು ಹೆದರಿಸುವದಕ್ಕಾಗಿ ಹೊಡೆದ ಗುಂಡು ತಪ್ಪಿ ಆ ಮಹಮ್ಮದನ ಮೇಲೆ ಬಿದ್ದಿರಬೇಕೆಂದು ಆಪಾದಿಸಲ್ಪಟ್ಟ ಮೇಜಿಸ್ಟ್ರೇಟರ ವಾಜ್ಮೂಲವಾಗಿತ್ತು. ಆ ದಿನ ಆ ಮನೆಯಲ್ಲಿ ಜುಗಾರಿ ಆಡಿದ್ಧಾರೆಂಬ ವಿಷಯವು ಪ್ರಮಾಣಿಸಲ್ಪಟ್ಟು ಅಲ್ಲಿ ಸಿಕ್ಕಿದ ಹಣವು ಕೋರ್ಟಿಗೆ ಹಾಜುರು ಮಾಡಲ್ಪಟ್ಟಿತು. ಅದಲ್ಲದೆ ಅಲ್ಲಿ ಮೇಜಿಸ್ಟ್ರೇಟರು ನಿಂತಿದ್ದ ಸ್ಥಳಕ್ಕೆ ಎಡಪಾರ್ಶ್ವದಲ್ಲಿ ಇದ್ದವರು ಮೇಜಿಸ್ಟ್ರೇಟರ ಮೇಲೆ ಬಿದ್ದಿದ್ದರು. ಆದರೆ ಮೇಜಿಸ್ಟ್ರೇಟರು ತನ್ನ ಬಲಪಾರ್ಶ್ವದಲ್ಲಿ ಯಾರೂ ಇಲ್ಲದನ್ನು ನೋಡಿ ಬಲದಿಕ್ಕಿಗೆ ಗುಂಡು ಹಾರಿಸಿದ್ದರು ಎಂಬದಾಗಿ ಸಾಕ್ಷಿಗಳಿಂದ ರುಜುವಾತಾಯಿತು. ಜೂರಿಗಳು ಆಪಾದಿತರು ತಪ್ಪಿತಸ್ಥರಲ್ಲವೆಂದು ಹೇಳಿದ್ದರಿಂದ ಖುಲಾಸುಮಾಡಲ್ಪಟ್ಟರು.

* * *

ನೇಶನಲ್ ಬೇಂಕ್ ಅಫ್ ಇಂಡಿಯ ಎಂಬ ಬೇಂಕಿನಲ್ಲಿ ೮೦,೦೦೦ ರೂಪಾಯಿ ಕಾಣದೆ ಹೋಗಿರುವದು ಈ ಸಂಬಂಧ ಪೋಲೀಸಿನವರು ತಾ. ೧೪ರಲ್ಲು ಸದರಿ ಬೇಂಕಿನ ಕ್ಲಾರ್ಕನಾಗಿರುವ ಎಲ್. ಎನ್. ಮುಲಿಕ್ ಎಂಬವನನ್ನು ಅನುಮಾನದಿಂದ ಹಿಡಿದರು. ಮುಲಿಕನಿಗೆ ಹೂಗ್ಲಿಯಲ್ಲಿ ಒಂದು ಔಷಧಿ ಅಂಗಡಿ ಇದೆ. ಇವನು ನೇಶನಲ್ ಬೇಂಕಿನ ಮೂಲಕ ಯೂರೋಪ ದೇಶಗಳಿಂದ ಔಷಧಿಗಳನ್ನು ತರಿಸಿ ಹಣವನ್ನು ಸಲಾಯಿಸದೆ ಬೇಂಕಿನ ಪುಸ್ತಕದಲ್ಲಿ ಹಣವು ಸಂದದೆ ಎಂದು ಬರದು ಬಂದಂಥಾ ಸಾಮಾನುಗಳನ್ನು ಪಡಕೊಂಡು ಬೇಂಕಿಗೆ ಮೋಸಮಾಡಿದನೆಂದು ತಿಳಿದುಬಂದದೆ.

* * *

ಹೌರದ ಡ್ಯುಪಿಟಿ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಕೊಕೇನ್ ಎಂಬ ಒಂದು ವಿಧದ ಅಫೀಮಿನ ಮೊಕದಮೆಯು ತನಖಿಯಾಗುವಾಗ ಡ್ಯುಪಿಟಿ ಮೆಜಿಸ್ಟ್ರೇಟರಾದ ಮಿ| ಟಿ. ಸಿ. ರೋಯಿರವರೂ ಮುದ್ದೈಯಾಲೆ ಕಡೆಯ ವಕೀಲರಾದ ಮಿ| ಎಮ್. ಸಿ. ಮಿತ್ತರರವರೂ ಒಬ್ಬರ ಮೇಲೆ ಒಬ್ಬರು ಮಾತಿನ ಮಳೆಗಳನ್ನು ಗರೆಯಿಸಿಕೊಂಡರು. ಇದರಿಂದ ಮೇಜಿಸ್ಟ್ರೇಟರು ವಕೀಲರಾದ ಮಿತ್ತರರ ಮೇಲೆ ಯಾಕೆ ದಾವೆ ತರಕೂಡದೆಂಬದಾಗಿ ಮಿತ್ತರರನ್ನು ಕೇಳಿರುವರು. ಮಿತ್ತರರು ಕೂಡಾ ಮೇಜಿಸ್ಟ್ರೇಟರಿಗೆ ನೋಟಿಸು ಬಿಟ್ಟು ಕೋರ್ಟಿನಲ್ಲಿ ತನ್ನನ್ನು ಅಪಚಾರಿಸಿದರಿಂದ ೫೦೦೦ ರೂಪಾಯಿ ಮಾನನಷ್ಟಕೊಡಬೇಕೆಂಬದಾಗಿ ಕೇಳಿಕೊಂಡಿರುವರು.

ದಕ್ಷಿಣ ಹಿಂದೂಸ್ಥಾನ.

ಇದೇ ಒಕ್ಟೋಬರ್ ತಿಂಗಳ ತಾ. ೫-೮; ೧೦-೧೪; ೨೨-೨೩ ಈ ತಾರೀಕುಗಳ ಮಧ್ಯೆ ಸಲ್ಪ ಗಾಳಿಯಿಂದ ಒಳ್ಳೆ ಮಳೆಯಾಗಿ ನದಿಗಳು ಪ್ರವಹಿಸುವದು. ಅಕ್ಟೋಬರ ತಾ. ೨೯ರಿಂದ ನವಂಬರ ೩ನೇ ತಾರೀಕಿನ ವರೆಗೆ ಒಳ್ಳೇ ಮಳೆಗರೆಯುವುದು, ನವಂಬರ ೮ರಿಂದ ೧೨ನೇ ತಾರೀಕುಗಳ ಮಧ್ಯೆ ಬಹಳವಾಗಿ ಗಾಳಿ ಮಳೆಯಾಗುವದು, ತಾ. ೧೯-೨೧, ೨೫-೩೦ ತಾರೀಕುಗಳ ಮಧ್ಯೆ ಸಾಧಾರಣ ಮಳೆಯಾಗಿ ನದಿಗಳು ಪ್ರವಹಿಸುವವು. ನವಂಬರ ೮ರಿಂದ ೧೨ನೇ ತಾರೀಕುಗಳಲ್ಲಿ ಬರುವ ಗಾಳಿ ಮಳೆಯಿಂದ ನದಿಗಳ ಸಮೀಪದಲ್ಲಿ ರೈಪ್ಪೆಯವರೂ ಜನಗಳೂ ಜಾಗ್ರತೆಯಾಗಿರಬೇಕೆಂದು ಮದ್ರಾಸ್ ಮಿಂಟ್ ಸ್ಟ್ರೀಟ್ ಮಿ| ಗಂಭಿ ಕೋಟಾ ಸುಬ್ರಹಮಣ್ಯ ಜೋಯಿಷ್ಯರು ಬರೆದಿರುವರು.

* * *

ಮೈಸೂರು ರಾಜ್ಯಕ್ಕೆ ಸೇರಿದ ಬೆಂಗಳೂರು ಕೆಂಟೊನ್‌ಮೆಂಟ್ ಬ್ರಿಟಿಷ್ ಸರ್ಕಾರದವರ ವಶದಲ್ಲಿದೆಯಷ್ಟೆ. ಇದುವರೆಗೂ ಅದರ ಹುಟ್ಟುವಳಿಯು ಬ್ರಿಟಿಷ್ ಸರಕಾರದವರಿಗೆನೇ ಸೇರುತ್ತಿತ್ತು. ಮೈಸೂರಿನ ದಿವಂಗತರಾದ ಸರ್ ಕೆ. ಶೇಷಾದ್ರಯ್ಯನವರು ಈ ವಿಚಾರದಲ್ಲಿ ಅಂದರೆ ಕೆಂಟೊನ್‌ಮೆಂಟಿನಲ್ಲಿ ಉತ್ಪತಿಯಾಗುವ ಮೊಬಲಗಿನಲ್ಲಿ ಖರ್ಚುಜಾತ ಉಳಿದ ಮೊಬಲಗು ಮೈಸೂರು ಸರಕಾರಕ್ಕೆ ಸೇರತಕ್ಕದೆಂದು ಬಹಳವಾಗಿ ಪ್ರಯತ್ನಿಸಿದರು. ಆದರೆ ಇವರ ಪ್ರಯತ್ನವು ಸಾರ್ಥಕವಾಗಲಿಲ್ಲ. ಈಗ ಈ ವಿಚಾರವು ಪುನಃ ವಿಮರ್ಶಿಸಲ್ಪಟ್ಟು ಖರ್ಚುಜಾತ ಮಿಕ್ಕ ಮೊಬಲಗು ಅಂದರೆ ಸುಮಾರು ೭೦ ಲಕ್ಷರೂಪಾಯಿಗಳು ಮೈಸೂರು ಸರಕಾರಕ್ಕೆ ಕೊಡತಕ್ಕದೆಂದು ಬ್ರಿಟಿಷ್ ಸಂಕಾರದವರು ಸನ್ಮತಿಕೊಟ್ಟಿರುವರು.

* * *

ಬರ್ಮಾ ಬೇಂಕು ದಿವಾಳಿಯಾಯಿತು. ಇದರಲ್ಲಿ ಹಣ ಹಾಕಿದ ಹಿಸೇದಾರರಲ್ಲಿ ಅನೇಕರಿಗೆ ಅತಿರೇಕ ನಷ್ಟ ಸಂಭವಿಸಿತು. ಇದು ದಿವಾಳಿಯಾಗುವದಕ್ಕೆ ಆ ಕಂಪೆನಿಯ ಡೈರೆಕ್ಟರರುಗಳಾದ ಕ್ಲಿಫರ್ಡ್ ಮತ್ತು ಮೌಲರ್ ಎಂಬವರೇ ಕಾರಣವಾದ್ದರಿಂದ ಅವರ ಮೇಲೆ ವ್ಯಾಜ ನಡಿಸುವರೆ ಬರ್ಮಾ ಲೆಪ್ಪನೆಂಟ ಗವರ್ನರರು ಆಜ್ಞೆಮಾಡಿರುತ್ತಾರೆಂತ ಪ್ರಕಟವಾಗಿಯದೆ.

* * *

ಬಳ್ಳಾರಿಯ ಪ್ಲೀಡರ್ ಮಿ. ಕೆ. ವೆಂಕಟರಾಯರು ಸೆಶ್ಶನ್ಸು ಕೋರ್ಟಿನಲ್ಲಿ ಒಂದು ವ್ಯವಹರಣೆ ನಡಿಸಲು ಒಬ್ಬನಿಂದ ೯೫ ರೂಪಾಯಿ ತಕ್ಕೊಂಡಿದ್ದಾಗ್ಯೂ ಕೋರ್ಟಿಗೆ ಹೋಗಿ ವ್ಯವಹರಣೆ ನಡಿಸದೆ ಹೋದುದಕ್ಕಾಗಿಯೂ ಲಿಗಲ್ ಪ್ರೆಕ್ಟಿಷನರ್ಸ್ ಆಕ್ಟಿಗೆ ವಿರೋಧವಾಗಿ ವಕೀಲಿ ಅಲ್ಲದೆ ಬೇರೆ ವೃತ್ತಿಗಳನ್ನು ನಡಿಸಿದ್ದರಿಂದಲೂ ಹ್ಯಾಕೋರ್ಟಿನಲ್ಲಿ ಈ ತಕ್ಷೀರುಗಳ ವಿಚಾರಣೆಯು ನಡೆದು ೯ ತಿಂಗಳ ವರೇಗೆ ವಕೀಲತನವನ್ನು ಅವರು ನಡಿಸಕೂಡದೆಂದು ಹ್ಯಾಕೋರ್ಟು ಜಡ್ಜರುಗಳು ತೀರ್ಮಾನ ಕೊಟ್ಟಿರುವರು. ಇದರ ಮೇಲೆ ಈ ವಕೀಲರು ಪ್ರಿವಿಕೌನ್ಸಿಲಿಗೆ ಅಪೀಲು ಮಾಡಿಕೊಳ್ಳಲಿಕ್ಕಿದ್ಧಾರೆ.

* * *

ಮೈಸೂರಿನಲ್ಲಿ ದಸರಾ ಮಹೋತ್ಸವು ಇದೇ ಕಳೆದ ತಾ. ೧೧ನೇ ಶುಕ್ರವಾರದಿಂದ ಪ್ರಾರಂಭವಾಗಿರುವದು. ಶ್ರೀಮನ್ಮಹಾರಾಜರವರು ಪದ್ಧತಿಯ ಪ್ರಕಾರ ಆ ದಿನ ಬೆಳಿಗ್ಯೆ ಮಂಗಳ ಸ್ನಾನವನ್ನುಮಾಡಿಕೊಂಡು ದಿವ್ಯಾವಸ್ತ್ರಾಭರಣಲಂಕೃತರಾಗಿ ೧೧|| ಗಂಟೆಗೆ ಸಭಾಂಗಣಕ್ಕೆ ಚಿತ್ತೈಸಿ ಅಲಂಕೃತವಾದ ಪೀಠದಲ್ಲಿ ಮಂಡಿಸಿ ಸರದಾರ್ ಗೋಪಾಲ ರಾಜ ಅರಸಿನವರ ಕರಾವಲಂಬನದಿಂದ ಸಿಂಹಾಸನದ ಬಳಿಗೆ ಬಂದು ಅದನ್ನು ಪೂಜಿಸಿ ಮೂರಾವೃತ್ತಿ ಪ್ರದಿಕ್ಷಿಣೆಮಾಡಿ ಧನುರ್ಲಗ್ನದಲಿ ಆರೋಹಣವನ್ನುಮಾಡಿದರು. ವಾದ್ಯಗಳು ಮೊಳಗಿದವು. ೨೧ ಗುಂಡುಗಳು ಹಾರಿಸಲ್ಪಟ್ಟವು. ಯುವರಾಜರು ಸಿಂಹಾಸನದ ಹತ್ತಿರ ಬಲಗಡೆ ಪೀಠದ ಮೇಲೆ ಮಂಡಿಸಿದರು. ಮಠಗಳಿಂದ ಬಂದ ಫಲಮಂತ್ರಾಕ್ಷತೆಯೂ ಉಡಿಗೆರೆಗಳೂ ಒಪ್ಪಿಸಲ್ಪಟ್ಟ ಮೇಲೆ ವೈದಿಕರು ಫಲಮಂತ್ರಾಕ್ಷತೆಯನ್ನು ಕೊಟ್ಟರು. ಪಟ್ಟದಾನೆ, ಕುದುರೆಗಳು ಪೂಜೆಗೊಂಡು ಕೆರೆಯ ಬಳಿಗೆ ಹೊರಟವು. ಅನಂತರ ದಿವಾನರು, ಅಳಿಯಂದಿರು, ಕೌನ್ಸಿಲರುಗಳು, ಮೊದಲಾಗಿ ನೆರೆದಿದ್ದ ದೊಡ್ಡ ಮಹನೀಯರ ಮುಜರೆಯೂ ನಡೆದುವು; ಈ ಮೊದಲಾದ ಕಾರ್ಯಗಳು ನಡೆದನಂತರ ಸಾಯಂಕಾಲ ೭|| ಗಂಟೆಗೆ ದರ್ಬಾರು ನಡೆದು ಕುಸ್ತಿ ಮದ್ದು ಸುಡುವದು ಮೊದಲಾದ ವಿನೋದಗಳು ಜರುಗಿದವು.

ದಕ್ಷಿಣ ಕನ್ನಡ.

ಮಂಗಳೂರು:—ಇಲ್ಲಿಯ ಜಿಲ್ಲಾ ಕಲೆಕ್ಟರರಾಗಿ ನೇಮಿಸಲ್ಪಟ್ಟ ಮಿ| ಕೌಚ್‌ಮೇನ್ ದೊರೆಗಳವರು ಈ ದಿನ ಸಾಯಂಕಾಲದ ಮೈಲ್ ಭಂಡಿಯಲ್ಲಿ ಇಲ್ಲಿಗೆ ಬಂದು ತಲ್ಪುವರೆಂದೂ ನಾಳೆ ದಿನ ಚಾರ್ಜುವಹಿಸಿಕೊಳ್ಳುವರೆಂದೂ ಕೇಳುತ್ತೇವೆ.

ಕುಂದಾಪುರ ಡಿವಿಜನಲ್ ಆಫೀಸರರು ಇಲ್ಲಿರುವರು.

ರಾ| ಮುಲ್ಕಿ ಬಂಗ್ಲೆ ನಾರಾಯಣ ಕಾಮತರವರು ಅಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತೆ ಮೊಕ್ತೇಸರ್ ರಾ| ಗೋಪಾಲ ಕುಡ್ವ ಮೊದಲಾದವರ ಮೇಲೆ ಮಾಡಿದ ಮಾನನಷ್ಟದಾವೆಯಲ್ಲಿ ಕಾಶೀ ಮಠದ ಶ್ರೀ ಪಾದಂಗಳವರ ವಿಚಾರಣೆಯು ಬಂಟವಾಳದಲ್ಲಿ ಡಿಪ್ಯುಟಿ ಮೇಜಿಸ್ಟ್ರೇಟರಿಂದಲೇ ಮಾಡಲ್ಪಟ್ಟಿತು.

ಮುಂಬಯಿಯ ಎಸ್ಯಿಯನ್ ಕೊಮರ್ಶಿಯಲ್ ಎಸ್ಸುರೆನ್ಸ್ ಕಂಪೆನಿಯವರು ೧೯೧೨ನೆಯ ವಿಮೆ ಆಕ್ಟಿಗನುಗುಣವಾಗಿ ಬೇಕಾದ ಭದ್ರತೆಯ ಶೇವಣಾತಿಯನ್ನು ಇಂಡಿಯಾ ಗವರ್ನಮೆಂಟಿನವರ ಕೂಡೆ ಇಟ್ಟಿದ್ದಾರೆಂಬದಾಗಿ ಈ ಕಂಪೆನಿಯ ಪಶ್ಚಿಮ ಕರಾವಳಿಯ ಏಜಂಟರಾದ ರಾ| ಕೆ. ಎಸ್. ಕೃಷ್ಣರಾಯರವರು ತಿಳಿಸಿರುವರು.

ಮುಂಬಯಿಯ ಸ್ವದೇಶಿ ಇನ್ಸುರೆನ್ಸ ಕಂಪೆನಿಯವರು ವಿಮೆ ಆಕ್ಟ ಪ್ರಕಾರ ರೂ. ೨೫೦೦೦ರದ ಶೇವಣಾತಿಯನ್ನು ಸರಕಾರದವರ ಕೂಡೆ ಕಂಪೆನಿಯವರ ಭದ್ರತೆಗಾಗಿ ಇಟ್ಟಿರುವರಲ್ಲದೆ ಸರಕಾರದವರ ಕೂಡೆ ಇರುವ ಈ ಶೇವಣಾತಿಯ ಮೊಬಲಗನ್ನು ೨ಲಕ್ಷಕ್ಕೆ ಹೆಚ್ಚಿಸಬೇಕೆಂತ ನಿರ್ಣಯಿಸಿರುವರು. ಕೊಮರ್ಸ್ ಎಂಬ ಪತ್ರಿಕೆಯ ಇನ್ಸುರೆನ್ಸ್ ಕಮಿಶನರವರು ಈ ಸ್ವದೇಶಿ ವಿಮೆ ಕಂಪೆನಿಯು ನಡಿಸಲ್ಪಡುವ ವಿಧಾನಗಳನ್ನೂ ಈ ಕಂಪೆನಿಯು

ವಿಮೇದಾರರನ್ನು ಆರಿಸುವುದರಲ್ಲಿ ತೋರಿಸುವ ಜಾಗರೂಕತೆ ಮೊದಲಾದ್ದನ್ನೂ ಪರಿಶೀಲಿಸಿ ಹಿಂದುಸ್ಥಾನದ ಇತರ ಕೆಲವು ಸ್ವದೇಶಿ ವಿಮೆ ಕಂಪೆನಿಗಳನ್ನು ಬಿಟ್ಟುಬಿಟ್ಟು ಈ ಕಂಪೆನಿಯುಲ್ಲಿ ವಿಮೇದಾರರಾಗಿ ಸೇರುವುದುಚಿತವೆಂಬೀ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿರುವರು.

ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಾಗಿರುವ ರಾ| ವೇಣುಗೋಪಾಲ ಚೆಟ್ಟಿಯವರು ಬರುವ ನವಂಬರ ತಿಂಗಳ ಅಂತ್ಯದೊಳಗೆ ಇಲ್ಲಿಂದ ಮಲೆಬಾರ ಜಿಲ್ಲೆಗೆ ವರ್ಗಾಯಿಸಲ್ಪಡುವರೆಂಬ ಆಧಾರವಿಲ್ಲದ ವರ್ತಮಾನವು ಪಟ್ಟಣದಲ್ಲೆಲ್ಲಾ ಹಬ್ಬಿರುವುದು.

ಕಳೆದ ಅಗೋಸ್ತು ತಿಂಗಳ ತಾ. ೨೬ರಲ್ಲಿ ಜಿಲ್ಲಾ ವ್ಯವಸಾಯ ಸಂಘದ ಕಾರ್ಯನಿರ್ವಾಹಕ ಕಮಿಟಿಯವರು ಸಭೆ ಸೇರಿದ ವೃತ್ತಾಂತವನ್ನು ಅಕ್ಟೋಬರ ತಿಂಗಳ ೧೮ನೇ ತಾರೀಕಿನಲ್ಲಿ ಪ್ರಕಟವಾಗುವ ಸ್ವದೇಶಾಭಿಮಾನಿಯ ಬಗ್ಯೆ ಕಳುಹಿಸಿಕೊಟ್ಟಿರುವರು. ಸಭೆ ಕೂಡಿದ ಒಂದೆರಡು ತಿಂಗಳುಗಳನಂತರ ಇಂಥಾ ವೃತ್ತಾಂತಗಳನ್ನು ಪ್ರಕಟಣೆಗೆ ಕಳುಹಿಸುವುದಕ್ಕಿಂತ ಸಭೆ ಕೂಡಿದ ಒಂದೆರಡು ದಿನಗಳಲ್ಲಿಯೇ ಇವುಗಳನ್ನು ಪ್ರಕಟಣೆ ಬಗ್ಯೆ ಕಳುಹಿಸುವುದುಚಿತ. ವೃತ್ತಾಂತದಲ್ಲಿ ವಿಶೇಷ ಸಮಾಚಾರಗಳೇನೂ ಇರುವುದಿಲ್ಲ. ಮಂಗಳೂರು ಪಟ್ಟಣದ ನೆರೆಗ್ರಾಮಗಳಲ್ಲಿರುವ ದನಗಳ ಪ್ರಯೋಜನಾರ್ಥವಾಗಿ ರೂ.೧೦೦ಕ್ಕೆ ಕ್ರಯದಲ್ಲಿ ಮೀರದ ಒಂದು ಹೋರಿಯನ್ನು ತಕ್ಕೊಂಡು ಅದನ್ನು ಉರ್ವದ ಮಾದರಿ ಹೊಲಗಳಿರುವಲ್ಲಿರಗೊಡಿಸಬೇಕೆಂದು ನಿರ್ಣಯಿಸಿರುತ್ತಾರೆ.

ಬರುವ ನವಂಬರ ತಿಂಗಳ ಒಂದನೇ ತಾರೀಕಿನಿಂದ ಒಂದು ವರುಷದ ಪರಿಯಂತರ ವಿದ್ಯಾಖಾತೆಯಲ್ಲಿ ೪೮ ಜನ ಸಬ್ ಅಸಿಸ್ಟಾಂಟ್ ಇನ್ಸಪೆಕ್ಟರರನ್ನು ಹೆಚ್ಚಾಗಿ ನೇಮಿಸಬೇಕೆಂಬುವ ವಿಷಯವು ಮದ್ರಾಸು ಸರಕಾರದವರಿಂದ ಅಂಗೀಕರಿಸಲ್ಪಟ್ಟಿರುವುದು.

ಮಂಗಳೂರು ಗೌಡಸಾರಸ್ವತ ಬ್ರಾಹ್ಮಣರ ಪಂಚಾಯತ ಸಭೆಯಿಂದ ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನಡಿಸಲ್ಪಡೋಣಾದ ಸಂಸ್ಕೃತ ವಿದ್ಯಾಶಾಲೆಯು ಮುಗಿದು ಹೋದನಂತರ ೧೯೧೦ನೇ ಇಸವಿ ದಶಂಬರ ತಿಂಗಳಿನಿಂದ ಮಂಗಳೂರು ಜೋಡು ಮಠದ ಶ್ರೀ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ ವೇದಮೂರ್ತಿ ಪದ್ಮನಾಭ ಭಟ್ಟರವರು ಬ್ರಹ್ಮವಿದ್ಯಾ ಪ್ರಭೋಧಿನಿ ಪಾಠಶಾಲಾ ಎಂಬ ಹೆಸರಲ್ಲಿ ಸಂಸ್ಕೃತ ವಿದ್ಯಾಶಾಲೆಯನ್ನು ಹಲವು ಗ್ರಹಸ್ಥರ ಉದಾರಾಶ್ರಯದಿಂದ ನಡಿಸಿ ಬರುತ್ತಿರುವ ವಿಷಯವನ್ನು ಗೌಡಸಾರಸ್ವತ ಬ್ರಾಹ್ಮಣ ವೃಂದವು ತಿಳಿದಿರಲು ಸಾಕು. ಈ ಶಾಲಾಭಿವೃದ್ಧಿ ಬಗ್ಯೆ ಕಳೆದ ಬುಧವಾರದಿಂದ ಆ ಶಾಲೆಯಲ್ಲಿ ಶಾರದಾಪೂಜೆಯು ನಡಿಯುತ್ತಿರುವುದು. ಶಾಲೆಯಲ್ಲಿ ಸಂಸ್ಕೃತ ಶಿಕ್ಷಣವನ್ನು ಇನ್ನಷ್ಟು ಸಮರ್ಪಕವಾದ ರೀತಿಯಲ್ಲಿ ಕೊಡಲಿಕ್ಕೆ ಬೇಕಾದ ಏರ್ಪಾಡನ್ನು ಮಾಡಲು ಶಾಲಾ ಸ್ಥಾಪಕರು ನಿರ್ಣಯಿಸಿರುವುದರಿಂದ ಜಾತಿ ಗ್ರಹಸ್ಥರುಗಳಿಂದ ಹೆಚ್ಚಿನ ಸಹಾಯವು ನಿರೀಕ್ಷಿಸಲ್ಪಟ್ಟಿರುತ್ತದೆ.

ಬರುವ ತಾ. ೨೦ನೇ ಆದಿತ್ಯವಾರ ಶ್ಯಾಮ ಘಂಟೆ ೬-೩೦ಕ್ಕೆ ಇಲ್ಲಿಯ ಬ್ರಹ್ಮಸಮಾಜದವರ ಮಂದಿರದಲ್ಲಿ ರಾ| ಕುದ್ಮೂಲ ರಂಗರಾಯರವರ "ಭರತಖಂಡದಲ್ಲಿ ವಿದ್ಯಾರ್ಥಿಗಳ ಜೀವಿತವು" ಎಂಬೀ ವಿಷಯದ ಉಪನ್ಯಾಸವಿರುವುದು. ಸರ್ವರೂ ಈ ಉಪನ್ಯಾಸವನ್ನು ಕೇಳಲು ಬರಬೇಕಾಗಿ ವಿಜ್ಞಾಪಿಸೋಣಾಗಿರುತ್ತದೆ.

ಮೇಜಿಸ್ಟ್ರೇಟ ಕೋರ್ಟಿನ ಪೇದೆ ಸೈಯದ್ ಇಮಾಮನ ಅಳಿಯ ಸೈದು ಎಂಬವನಿಗೆ ಒಂದು ವಾಚು ಕಳವು ಮಾಡಿದ್ದನೆಂಬ ತಕ್ಸೀರಿನ ಮೇಲೆ ಮೇಜಿಸ್ಟ್ರೇಟರು ೩ ತಿಂಗಳ ಸಜೆಯನ್ನು ವಿಧಿಸಿದ್ದರೆಂಬದಾಗಿ ಹಿಂದಿನ ಸಂಚಿಕೆಯೊಂದರಲ್ಲಿ ಪ್ರಕಟಿಸಿತ್ತಷ್ಟೆ. ಡಿಪ್ಯುಟಿ ಮೇಜಿಸ್ಟ್ರೇಟರಲ್ಲಿ ಅಪೀಲು ಮಾಡಿದ್ದಲ್ಲಿ ಸದರಿ ಸಜೆಯಿಂದ ಇವನಿಗೆ ಖುಲಾಸುಪಡಿಸಿದರು.

ಮಂಗಳೂರು ತಾಲೂಕಿನ ಹೆಜಮಾಡಿ ಗ್ರಾಮದಲ್ಲಿ ಇತ್ತಲಾಗೆ ಕೋಲೆರಾ ರೋಗವು ತಲೆದೋರಿಯದೆ. ಕಳೆದ ತಾ. ೯ರಿಂದ ೧೪ರ ವರೆಗೆ ೧೧ ಜನರಿಗೆ ತಗಲಿ ೭ ಜನರು ಮೃತಪಟ್ಟರು.

ಬೊಂಡಂತಿಲ ಗ್ರಾಮದಲ್ಲಿ ಶಿಡುಬುರೋಗವು ತಲೆದೋರಿಯದೆ.

ನಿನ್ನೆ ದಿನ ಇಲ್ಲಿಯ ಸೆಂಟ ಅಲೋಸಿಯಸ್ ಕೋಲೇಜಿನ ಕ್ರಿಕೆಟ್ ಕ್ಲಬ್ಬಿನವರಿಗೆ ಮತ್ತು ತಲಚೇರಿ ಕ್ಲಬ್ಬಿನವರಿಗೆ ಉಂಟಾದ ಮೇಲಾಟದಲ್ಲಿ ಕೋಲೇಜಿನವರು ಗೆದ್ದರು.

ಈ ದಿನ ಗವರ್ನಮೆಂಟ್ ಕೋಲೇಜಿ ಮತ್ತು ಹಿಂದೂ ಕ್ರಿಕೆಟ್ ಕ್ಲಬಿನವರಿಗೆ ಕೊರೊನೇಶನ್ ಕಪ್ಪಿನ ಪಂದ್ಯಾಟವು ನಡೆಯುವದು.

ಇಲ್ಲಿಯ ಕೆನರಾ ಹೈಸ್ಕೂಲಿನ ವಿದ್ಯಾರ್ಥಿ ಭವನದಲ್ಲಿ ಭವನ ಸ್ಥಾಪಕರಾದ ಕೀರ್ತಿಶೇಷ ಅ. ಸುಬ್ಬರಾಯ ಪೈಗಳವರ ಭಾವಚಿತ್ರ ಒಂದನ್ನು ಇದೇ ಶನಿವಾರ ತಾ. ೧೯ರಲ್ಲಿ ಪ್ರಾತಃಕಾಲ ಪ್ರತಿಷ್ಠಿಸುವರು. ಚಿತ್ರವು ರಾ| ಪಾವಂಜೆ ಗೋಪಾಲಕೃಷ್ಣಯ್ಯನವರಿಂದ ಅಂಕಿತವಾದುದು.

ಒಬ್ಬ ಬಾತ್ಮೀದಾರರಿಂದ:—ತಾ. ೧೬ನೇಯ ಬುಧವಾರ ಬಲ್ಮಠ ಶಾಂತಿ ದೇವಾಲಯದಲ್ಲಿ ಕ್ರೈಸ್ತರ ಕದಿರು ಹಬ್ಬವು ಜರುಗಿತು. ಪ್ರಾತಃ ೭ ಗಂಟೆಗೆ ಸಭಿಕರು ಫಲಾದಿಗಳನ್ನು ದೇವಾಲಯಕ್ಕೆ ಅರ್ಪಿಸಿದರು; ನಂತರ ರೆ| ಸೋನ್ಸರವರು ಕಾಲೋಚಿತವಾದ ಭಾಷಣ ಮಾಡಿದರು. ಮೊಲೆಗೂಸುಗಳಿಂದ ಹಳೆಯ ಮುದುಕರ ವರೆಗಿನ ಎಲ್ಲ ಭಕ್ತರು ದೇವರಿಗೆ ಸ್ತೋತ್ರಾರ್ಪಣೆ ಮಾಡಲು ಉತ್ಸಾಹದಿಂದ ನೆರೆದು ಬಂದಿಹರೆಂಬುದನ್ನು ಅಂತಹರ ಮುಖಪ್ರೇಕ್ಷಣದಿಂದ ತಿಳಿವುದೆಂಬಿತ್ಯಾದಿ ವಾಕ್ಯಗಳು ಪ್ರಸಂಗದಲ್ಲಿದ್ದದ್ದನ್ನು ನೋಡುವಾಗ ಹರಿಕಥೆಯಲ್ಲಿ ಕಾಲಕ್ಕೊದಗಿ ಬರುವ ಬರೇ ವಾಕ್‌ಡಂಭದ ನೆನಪಾಗುತ್ತಿತ್ತು. ತನ್ಮಧ್ಯ ಬಲ್ಮಠದ ಟ್ರೈನಿಂಗ್ ವ ಬೋರ್ಡಿಂಗ್ ಶಾಲಾ ಸ್ತ್ರೀಸಮೂಹದ "ಲಲಿತಾ ಗಾಯನ ಮಂಡಲಿ"ಯವರು ಹಾಡಿದ ಉಚ್ಛ ಸಂಗೀತವು ಮನೋರಂಜಕವಾದುದೆಂಬುದಕ್ಕೆ ಉಲ್ಲಾಸದಿಂದ ನಿಂತು ಕೇಳುತ್ತಿದ್ದ ಸಭಿಕರೇ ಸಾಕ್ಷಿ. ಇಂತಹ ನೂತನ ಏರ್ಪಾಡು ವರ್ಷಂಪ್ರತಿಯ ದೇವಾಲಯದ ಉತ್ಸಾಹಕಾರ್ಯಗಳಲ್ಲಿ ತಲೆದೋರುವ ಹಾಗೆ ಅನೇಕರು ಕೋರಿರುವುದರಿಂದ ಆ ಬಾಲೆಯರಿಗೆ ಉತ್ತೇಜನವಾಗುವುದೇನೋ ನಿಜ. ಅಪರಾಹ್ನದಲ್ಲಿ ೨೩ ತರದ ಆಟವ್ಯಾಯಾಮಗಳ ಪಂದ್ಯಾಟವು ನಡೆದು, ರೆ| ಬ್ಲೂಮರವರ ಭಾಷಣವಾಗಿ, ಮಿಸ್ಸೆಸ್ ಮೆಲಿವ್ ದೊರೆಸಾನಿಯವರು ಇನಾಮುಗಳನ್ನು ಹಂಚಿ, ಮೆ|ಜೆ. ಹರ್ಬರ್ಟರು ಧನ್ಯವಾದಗಳನ್ನು ಹೇಳಿದನಂತರ ರಾಷ್ಟ್ರಗೀತೆಯನ್ನು ಹಾಡಿ, ಉತ್ಸಹವು ಮುಗಿಯಿತು. ಈ ದಿನ ಅರ್ಪಣೆಯಲ್ಲಿ ಕೂಡಿಬಂದ ಹಣ ರೂ. ೧೬೦. ಈ ಸಂದರ್ಭದಲ್ಲಿ ಮೆ. ಇ. ಪೆರ್ಲರವರು ಹತ್ತೆಂಟು ರೂಪಾಯಿ ಖರ್ಚುಮಾಡಿ ಬಾಲಕರ ಬಾಯಿ ಶೀಯಾಗ ಮಾಡಿದ ಕೃತ್ಯವು ಶ್ಲಾಘ್ಯವೂ ಅನುಸರಣೀಯವೂ ಆಗಿದೆ. ಮು. ನ. ಕಾ.

WANTED.

"Wanted a trained School-mistress for the Hindu Girl's School Karkul. Monthly salary Rs. 12. Apply with testimonials to

The Secretary"

ಕಾಸರಗೋಡು:—ಪರಸ್ಪರ ಸಹಾಯಕ ಸಂಘಗಳ ಇನ್ಸ್ಪೆಕ್ಟರರವರು ತಾ.೧೫ರಲ್ಲು ಇಲ್ಲಿಗೆ ಚಿತ್ತೈಸಿರುವರು. ಇಲ್ಲಿ ಒಂದು ಪರಸ್ಪರ ಸಹಾಯಕ ಸಂಘವು ಅಗತ್ಯವೆಂತಾದ್ದರಿಂದ ಅದನ್ನು ಸ್ಥಾಪಿಸ ಪ್ರಯತ್ನಿಸುತ್ತಲಿರುವ ಇವರಿಗೆ ಸ್ಥಳಿಕ ಮಹನೀಯರೂ, ವಕೀಲ ಮಹಾಶಯರೂ ತಕ್ಕ ಉದಾರಾಶ್ರಯವನ್ನಿತ್ತು ಸಂಘವು ಇಲ್ಲಿ ಸ್ಥಾಪಿಸಲ್ಪಡುವಂತೆ ತಮ್ಮ ಕೈಲಾದಷ್ಟು ಸಹಾಯಮಾಡುವರಾಗಿ ಹಾರೈಸುತ್ತೇವೆ.

ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರಿಯಲ್ಲಿ ವಾರಕೊಂದಾವರ್ತಿ ಎಂಬಂತೆ ದಾಕ್ತರುಗಳಿಗೆ ವರ್ಗಾವರ್ಗಿಗಳು ನಡೆಯುತ್ತಿತ್ತು. ಆದರೆ ಮೊನ್ನೆ ದಿನ ಅಸಿಸ್ಟಾಂಟ ಸರ್ಜನರಾಗಿರುವ ಮೆ| ಕಾಮರಾಯರು ಖಾಯಂ ದಾಕ್ತರರಾಗಿ ಬಂದು ಚಾರ್ಜು ತೆಗೆದುಕೊಂಡಿರುವರು.

ಇಲ್ಲಿಯ ರೈಲ್ವೆ ಸ್ಟೇಶನಿನ ಹತ್ತರ ಹೊಳೆ ದಡದಲ್ಲಿ ಒಬ್ಬ ಮಾಪಿಳ್ಳೆ ಸಾವಕಾರರು ಒಂದು ಹಂಚಿನ ಖಾರಕಾನೆಯನ್ನು ಕಟ್ಟಿಸುತ್ತಲಿರುವರು.

* * *

ಪುತ್ತೂರು:—ಇದೇ ತಿಂಗಳ ತಾ. ೧೫ರಲ್ಲು ಇಲ್ಲಿ ಪೊಳಲಿ ಚಿತ್ರಕಲಾ ನಾಟಕ ಕಂಪೆನಿಯ ಶೂರಶೇಕರ ನಾಟಕವಾದಾಗ್ಯೆ ಇಲ್ಲಿಯ ಪಟ್ಟಣದ ನಿವಾಸಿಕರಿಂದ ತಯಾರಿಸಿದ ಚಿನ್ನದ ಬಹುಮಾನ ಪದಕ (ಮೆಡಲು)ಗಳು ಇಲ್ಲಿಯ ಸ್ಟೇಶನರಿ ಸಬ್ ಮೇಜಿಸ್ಟ್ರೇಟರವರಾದ ಮ| ರಾ| ರಾ| ಬಿ. ವೆಂಕಟ್ರಮಣಯ್ಯರವರಿಂದ ಉಡ್ಪಿ ದಾಸಾಚಾರ್ಯ, ಮುಲ್ಕಿ ಶ್ರೀನಿವಾಸ್ ಕಮ್ತಿ, ಸುಬ್ಬಣ್ಣ ಬಟ್ಟ, ಯು. ಗೋಪಾಲ ಆಚಾರ್ಯ ಮತ್ತು ವಿಟ್ಲ ಗಣಪತಿ ಮಂಜುನಾಥ ಇವರಿಗೆ ಕೊಡೋಣಾಯಿತು. ಇಲ್ಲಿಯ ನಾಟಕದವರು ಬರುವ ಆದಿತ್ಯವಾರ ಇಲ್ಲಿಂದ ಮುಲ್ಕಿ ಯತ್ತ ಕಡೆ ಹೋಗುವರಂತೆ.

ಉಪ್ಪಿನಂಗಡಿ ತಾಲೂಕು ಸುಬ್ರಮಣ್ಯ ಗ್ರಾಮದ ಕುಳುಗುಂದದಲ್ಲಿ ವರುಷಂಪ್ರತಿ ಆಗುವ ಜಾನುವಾರ ಸಂತೆಯು ವಾಡಿಕೆ ಪ್ರಕಾರ ಬರುವ ನವಂಬರ ತಿಂಗಳ ತಾ. ೨೩ಕ್ಕೆ ಶುರುವಾಗಿ ಡಿಸೆಂಬರ ತಿಂಗಳ ವರೆಗೆ ಇರುವುದಾಗಿ ಪ್ರಕಟವಾಗಿದೆ.

ಇಲ್ಲಿಯ ಲೋಕಲ್ ಕ್ರೆಡಿಟ್ ಸಹಾಯಕ ಸಂಘದವರಿಗೆ ಪ್ರತ್ಯೇಕ ಆಫೀಸಿಲ್ಲದೆ ಮೆಂಬರರಿಗೆ ಬಹಳ ತೊಂದರೆ ಉಂಟಾಗುತ್ತಿತ್ತು. ಇಲ್ಲಿಯ ಸಾಹುಕಾರ ಮ| ರಾ| ರಾ| ಮಂಜೇಶ್ವರ ರಂಗನ್ನಾಯಕರು ತನ್ನ ಬಾಬ್ತು ಇಲ್ಲಿಯ ರೋಮನ ಕಥೋಲಿಕ ಇಗರ್ಜಿಯ ಎದುರಿರುವ ಕಟ್ಟೋಣದ ಮೇಲ್ಮಾಳಿಗೆಯನ್ನು ಡಿಸೆಂಬರ ವರೆಗೆ ಬಾಡಿಗೆ ಇಲ್ಲದೆ ಕೊಡಲಿಕ್ಕೆ ಒಪ್ಪಿದ್ದರಿಂದ ಇದೇ ತಿಂಗಳ ಪ್ರಾರಂಭದಿಂದ ಇಲ್ಲಿ ಸಂಘದ ಆಫೀಸು ತೆರೆಯೋಣಾಗಿರುವದು. ಇವರು ಮಾಡಿದ ಈ ಉಪಕಾರಕ್ಕೆ ಮೆಂಬರರು ಕೃತಜ್ಞತೆವುಳ್ಳವರಾಗಿರುವರು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಮಸ್ಕತಿ ಅಕ್ಕಿ	5—14—0-6—2—0
ಗುಡ್ಡು ಮಸ್ಕತಿ... ...	5—6—0—5—14—0
ಮಸ್ಕತಿ ದುಯಂ... ...	5-11-0—5—13—0
ಗಾಡಿ ಸುಗ್ಗಿ	5-6-0-5—8—0
ಉಂಚು ಸುಗ್ಗಿ	5—11—0—5-14—0
ಮಸ್ಕತಿ ಬೆಳ್ತಿಗೆ	6—10—0
ಹೊಸ ಗುಡ್ಡುರಾಶಿ	4-12-7--4-14-0
ಹೊಸ ಭತ್ತ	2—1—9-2—2—0
ರಂಗೂನ್ ಬೆಳ್ತಿಗೆ ಗೋಣಿ 1ರ	11—6—0
ಹುರುಳಿ ಗೋಣಿ ೧, ಮುಡಿ 2ರ	6-12-0
ಉಪ್ಪು ಗೋಣಿ ೧ರ	3—14—0
ಕೊಬ್ರಿ ಖಂಡಿ ೧ರ ...	90—0-0-95—0—0
ಕೊಬ್ರಿ ಎಣ್ಣೆ ಮಣ ೧ರ	7—0—0
ಕೊಬ್ರಿ ಹಿಂಡಿ ಖಂಡಿ ೧ರ	32—8—0
ಊರು ಬೆಲ್ಲ ಖಂಡಿ ೧ರ	55—0—0
ಕಾಫಿ ಖಂಡಿ ೧ರ 270—0—0	275—0—0
ಕಾಳು ಮೆಣಸು ಖಂಡಿ	180—0—0
ಬಿಳಿ ಗೋಟು ಅಡಿಕೆ ಖಂಡಿ ೧ರ ...	85—0—0
ಪಚ್ಚೆಹೆಸರು ಗೋಣಿ ೧ರ	11—4—0
ಬೊಂಬಾಯಿ ಉದ್ದು ಗೋಣಿ ೧ರ	10—0—0
ಗೋದಿ ಗೋಣಿ ೧ಕ್ಕೆ	12—0—0
ಕಡಲೆ ಗೋಣಿ ೧ರ	7-4-0—7—8—0
ತೊಗರಿ ಗೋಣಿ ೧ರ	8—8—0
ತೊಗರಿಬೇಳೆ ಗೋಣಿ ೧ರ	11—0—0--13—0—0
ಮೋರಿಸ್ ಸಕ್ಕರೆ ಮಣ ೧ರ	2—14—0
ಎಳ್ಳಿಂದಿ	31-4—0

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ 6ನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವದಿವಿಮೆ ದುಬಾರೆ ಎಂಡೌಮೆಂಟ್ ಪೊಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ತೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯ ಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣದಗೋಸ್ಕರ ತಿಂಗಳಿಗೆ ೨ ರೂಪಾಯಿ ೧ ರೂಪ್ಯಾ ೮ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪೆನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರೆವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ತಿಲ್ಯಾನೋ
ರಾಯ್ಮಂಡ್ ಎ. ಮಿನೇಜಸ್ ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.
ಟ್ರಾವಲಿಂಗ್ ಏಜಂಟ್. ಮಂಗಳೂರು, ದಕ್ಷಿಣ ಕನ್ನಡ.

ಸುಲಭ ಕ್ರಯ! ಸುಲಭ ಕ್ರಯ!! ಸುಲಭ ಕ್ರಯ!!

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವದಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ ಮನೋಉಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದು ಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15ಸಾರಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕಗುಣವೂ, ಪರಿಮಳವೂ, ಕಾರವೂ ಹೋಗುವದಿಲ್ಲ. ಬುಡ್ಡಿ 1ಕ್ಕೆ ಕ್ರಯ ರೂ. 0-4-0. ವಿ. ಪಿ. ಚಾರ್ಜು 0-3-0 ಡಜನ್ 1ಕ್ಕೆ ಕ್ರಯ ರೂ. 2-8-0. ವಿ.ಪಿ. ಚಾರ್ಜು 0-6-0.

ಪುಕಟ! **Free Sample Coupon** ಪುಕಟ!!

ದಯವಿಟ್ಟು ಕೆಳಗಿನ ವಿಳಾಸಕ್ಕೆ ಡಾಕ್ಟರ್ ಜಿ. ಬಿ. ಯವರ ಸುಗಂಧನಶ್ಯದ ಪುಡಿಯ ಮಾದರಿ ಬಾಟ್ಲಿ ಒಂದನ್ನು ಕಳುಹಿಸ ಬೇಕು.

ಹೆಸರು ....

....

(Registered) ☞ ವಿಳಾಸ:—ಗುರುಬಸವ ಅಂಡು ಕಂಪೆನಿ, ಮದ್ರಾಸು

ಶ್ರೀ

ಪಾರಾಯಣಕ್ಕನುಕೂಲವಾದ ಪುಸ್ತಕಗಳು:—

1. ಶ್ರೀ ಭಗವದ್ಗೀತೆ, ಟೀಕಾತಾತ್ಪರ್ಯ ಸಹಿತವಾದದ್ದು, ಚಿಕ್ಕ ಬಾಲಕರಿಗೂ ತಿಳಿಯುವಂತೆ ಬಹು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮತ್ತು ಇದು ಉತ್ತಮ ತರವಾದ ಕಾಗದವುಳ್ಳದ್ದಾಗಿಯೂ, ಮುಕ್ತಾಫಲದಂತಿರುವ ಅಕ್ಷರಗಳಿಂದ ಕೂಡಿದ್ದಾಗಿಯೂ ಇರುವದಲ್ಲದೆ, ಮಡಿಯಾಗಿರುವ ಸಮಯದಲ್ಲಿಯೂ ಪಾರಾಯಣಕ್ಕನುಕೂಲವಾಗುವಂತೆ ಉತ್ತಮವಾದ ಕಿತ್ತಾನಾರು ಬೈಂಡುಳ್ಳದ್ದಾಗಿದೆ. ಕ್ರಯ ರೂ. 1_12_0:
2. ಡಿಟ್ಟೊ ಚಿಕ್ಕ ಸೈಜು (ಮೂಲ ಮತ್ತು ತಾತ್ಪರ್ಯ ಸಹಿತವಾದದ್ದು. ರೂ 0-6-0.
3. ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ತರವಾದ ಕಿತ್ತಾನಾರು ಬೈಂಡಿನಿಂದ ಮಾಡಿರುವ ಶ್ರೀ ಶ್ರೀನಿವಾಸ ಕಲ್ಯಾಣ ಕ್ರಯ ರೂ. 1_12_0
4. ಸಂಕ್ಷೇಪ ರಾಮಾಯಣವೆಂಬ ಶ್ರೀ ಬಾಲರಾಮಾಯಣವು ಟೀಕಾ ಸಹಿತವಾದದ್ದು. ಬಹು ರಸಯುಕ್ತವಾದದ್ದು, ಉತ್ತಮವಾದ ಪ್ರತಿ ಕ್ರಯ ರೂ. 0_4_0.
5. ಟೀಕಾ ತಾತ್ಪರ್ಯ ಸಹಿತವಾದ ಶ್ರೀ ಮುಕುಂದಮಾಲಾ ಸ್ತೋತ್ರವು. ಪಾರಾಯಣಕ್ಕೆ ಬಹು ಅನುಕೂಲವಾದ ಸ್ತೋತ್ರ ಪುಸ್ತಕವು, ಭಕ್ತಿರಸದಿಂದ ತುಂಬಿದೆ. ಶ್ರೀಮತಸ್ಥರೂ ಪಾರಾಯಣ ಮಾಡಬೇಕಾದ ಪುಸ್ತಕವು ಕ್ರಯ ರೂ. 0-4-0.

ಶ್ರೀಮದ್ವಾಲ್ಮೀಕಿ ಮಹರ್ಷಿ ವಿರಚಿತವಾದ

ಶ್ರೀಮದ್ರಾಮಾಯಣ.

ವೆಂಬ ಆದಿ ಕಾವ್ಯವು. 6 ಕಾಂಡಗಳನ್ನೊಳಗೊಂಡಿರುವದಲ್ಲದೆ, ಟೀಕಾ ಶ್ಲೋಕಗಳು ಪಾರಾಯಣ ಕ್ರಮ ಮುಂತಾದವುಗಳಿಂದ ಕೂಡಿದೆ. ಸುಂದರವಾದ ಕನ್ನಡ ಅಕ್ಷರಗಳಲ್ಲಿ ಶುದ್ಧವಾಗಿ ಅಚ್ಚಾಗಿದೆ. ಪಾರಾಯಣಕ್ಕೆ ಅನುಕೂಲವಾಗಿದೆ. ಮಡಿಗೋಸ್ಕರ ರೇಷ್ಮೆ ಪತ್ರಿಕೆಗೆ ಕಿತ್ತಾನಾರನ್ನು ಹಾಕಿದೆ. ಪುರಾತನ ಪ್ರತಿಯಾದ ಕಾರಣ ತಪ್ಪುಗಳಿಲ್ಲಾರವು. ನವರಾತ್ರಿಯ ಕಾಲವು ಸಮೀಪಿಸುತ್ತಿರುವ ಕಾರಣ ಶ್ರೀರಾಮ ಭಕ್ತರಾದವರೆಲ್ಲರೂ ಈ ಪುಸ್ತಕ ರತ್ನದ ಪ್ರತಿಯೊಂದನ್ನು ಸಂಗ್ರಹಿಸತಕ್ಕದ್ದು.

ಬೆಲೆ 3_0_0. ಹಾಸಲು 0_6_0

ಎಚ್. ಎನ್. ರಾವ್ ಬ್ರದರ್ಸ್.
ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಸನ್ 1913ನೇ ಇಸವಿಯ



"ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು."

ಈ ವರೆಗೆ ತಾವು ಉಪಯೋಗಿಸಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ೪೦ ಪೌಂಡು ಗ್ಲೇಜು ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿರುತ್ತದೆ:—

ದೇಹ ಸೌಖ್ಯ ವಿಚಾರದಲ್ಲಿ ಪ್ರತಿ ಒಬ್ಬರೂ ತಿಳಿಯಬೇಕಾದ ಸಾಧಕ ಬಾಧಕಗಳು, ಪಂಚಾಂಗ, ಕ್ಯಾಲೆಂಡರ್, ರಾಹುಕಾಲ, ಗುಳಿಕಕಾಲ, ಸಂವತ್ಸರ ಫಲ, ಗ್ರಹಣ, ಶಕುನಭಾಗ ಪ್ರಯಾಣ ವಿಷಯ ಜಾತಕಕರ್ಮ ಮೊದಲು ಷೋಡಷ ಕರ್ಮಕ್ಕೆ ಬೇಕಾದ ಲಗ್ನಾದಿಗಳು. ಶ್ರೀ ಕೃಷ್ಣ ಚಕ್ರ ಇವೇ ಮುಂತಾದ ಸಂಗತಿಗಳು ಸುಲಭವಾಗಿ ತಿಳಿಯುವಂತೆ ಬರೆದಿರುತ್ತೆ.

ಕೋರ್ಟು ಪೇಜು ಆಕ್ಟು ಪೋಸ್ಟಾಫೀಸಿನ ಸಂಗತಿ ಸ್ಟಾಂಪಾಕ್ಟು, ಇವುಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗುವ ಮತ್ತಾವ ಡೈರಿಯಲ್ಲಿ ಹೇಳದಿರುವ ಹೊಸ ವಿಷಯಗಳನ್ನು ಸೇರಿಸಿಧೆ. ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆಗಳ ಚಾರ್ಜು, ರೈಲ್ ಹೊರಡುವ ಕಾಲ ಲಗ್ಗೇಜ್, ಅಳತೆ ತೂಕ ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರುಗಳ ತಲಬು, ಸರಕಾರಿ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲಿಷು ಇಸವಿಗಳು, ಹಣದ ಬಡ್ಡಿ ತಲಬು ಜಂತ್ರಿ ಪಟ್ಟಿ ಕೂಡಾ ಇವೆ. ದೋಬೀ ಲೆಖ್ಖಾ, ಹಾಲು ಕೊಡುವವನ ಲೆಖ್ಖಾ, ಮುಖ್ಯ ವಿಷಯ ಜ್ಞಾಪಕ ವಿಚಾರ ಜಮಾ ಖರ್ಚು ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ.

"ಬೇಕಾದವರು ಈಗಲೇ ಬರೆದು ತರಿಸಿಕೊಳ್ಳಿರಿ".

No. 1. ಸಣ್ಣ ಸೈಜು ಸಾದಾ ಡೈರಿ 1ಕ್ಕೆ	0-4-0
No.2. ಸಣ್ಣ ಸೈಜು ಪೆನ್‌ಸಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ1ಕ್ಕೆ	0-6-0
No. 3. ದೊಡ್ಡ ಸೈಜು ಸಾದಾ ಡೈರಿ 1ಕ್ಕೆ	0-6-0
No.4.ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳಹಾಕಿರುವ ಪ್ಲಾಪ್ ಡೈರಿ 1ಕ್ಕೆ	0-8-0

ಟಪ್ಪಾಲು ಖರ್ಚು ಬೇರೆ.

ಒಂದು ಸೈಜಿನ ಹತ್ತು ಡೈರಿಗಳನ್ನು ಒಟ್ಟಾಗಿ ತರಿಸಿದರೆ ಒಂದು ಇನಾಮು. ೨೫ ಡೈರಿಗಳಿಗಿಂತ ಹೆಚ್ಚಾಗಿ ತರಿಸತಕ್ಕವರಿಗೆ ರೂಪಾಯಿ ಒಂದಕ್ಕೆ 0-2-6ಯಂತೆ ಕಮಿಷನ್ ಕೊಡಲಾಗುತ್ತದೆ. ತಮ್ಮ ವಿಳಾಸವು ಬಾಲ ಅಕ್ಷರದಲ್ಲಿರಲಿ.

ದೊರೆಯುವ ವಿಳಾಸ:—

"ಶ್ರೀ ಸೀತಾರಾಘುವ ವೈದ್ಯಶಾಲಾ"
ಮೈಸೂರು.

ಉತ್ತಮವಾದ ಸುಗಂಧ ದ್ರವ್ಯಗಳು.

ವಿಶ್ವಾಂಜನ ಸ್ಪೆನ್ ಬಾಂ ಬಾಟ್ಲಿ ೧ಕ್ಕೆ	೦-೪-೦	ಕಸ್ತೂರಿ ಬತ್ತಿ ಸೇರು ೧ಕ್ಕೆ	೩-೦-೦
ತಾಂಬೂಲ ಮಾತ್ರೆ ಬಾಟ್ಲಿ ೧ಕ್ಕೆ	೦-೩-೦	ಜವಾಜಿ ಬತ್ತಿ ,,	೧-೧೨-೦
ದಶಾಂಗ ಡಬ್ಬಿ ೧ಕ್ಕೆ	೦-೩-೦	ಪುಣುಗು ಬತ್ತಿ ,,	೧-೪-೦
ಮುಶಾಂಜಾ ತಂಬಾಕ್ ಡಬ್ಬಿ ೧ಕ್ಕೆ	೦-೨-೦	ಗುಲಾಬಿ ಬತ್ತಿ ,,	೧-೦-೦
ವಸಂತ ಮಾಲತಿ ಬಾಟ್ಲಿ ೧ಕ್ಕೆ	೦-೨-೦	ಪನ್ನೀರು ಬತ್ತಿ ,,	೦-೮-೦
ವೃಣಹಾರಿಯ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕಸ್ತೂರಿ ಬಿಲ್ಲೆ ತೊಲೆ ೧ಕ್ಕೆ	೨-೦-೦
ಕುಸುಮ ಮಾಲತಿ ಎಣ್ಣೆ ಬಾಟ್ಲಿ ೧ಕ್ಕೆ	೦-೮-೦	ಪುಣುಗಿನ ಬಿಲ್ಲೆ ,,	೧-೦-೦
ದಿಲ್‌ಜಾರ ಅತ್ತರ್ ಶೀಶೆ ೧ಕ್ಕೆ	೦-೪-೦	ಕೇಸರಿ ಬಿಲ್ಲೆ ,,	೦-೮-೦
ಹುಳದ ಮುಲಾಮು ಡಬ್ಬಿ ೧ಕ್ಕೆ	೦-೨-೦	ಅರ್ಗಜ ,,	೦-೧೨-೦
ವಾತಸಂಜೀವನೀ ತೈಲ ಬಾಟ್ಲಿ ೧ಕ್ಕೆ	೦-೪-೦	ಫಿತ್ನಾ ,,	೦-೧೨-೦
ದಿಲ್ ಕುಸುಮ ಬತ್ತಿ ಸೇರು ೧ಕ್ಕೆ	೧೦-೦-೦	ನಾಸಿಕಚೂರ್ಣ ಡಜನ್ ೧ಕ್ಕೆ	೦-೧-೦
A ಅಂಬರ್ ಬತ್ತಿ ,,	೬-೦-೦		

ಕೋಂಕಣಿ ಭಾಷೆಯಿಂದ ತಯಾರಿಸಲ್ಪಟ್ಟ ಚಂದ್ರಹಾಸನಾಟಕದ ಪುಸ್ತಕವು ನಮ್ಮಲ್ಲಿ ದೊರಕುತ್ತದೆ. ಕ್ರಯ ೦-೪-೦. ಬೇಕಾದವರು ಈ ವಿಳಾಸಕ್ಕೆ ಬರಕೊಳ್ಳಿರಿ. ಬಿ. ವಿ. ಪಿ. ಭಂಡಾರಕರ,

"ವಿಶ್ವಾಂಜನ ಡಿಪೊ",
ಮಂಗಳೂರು.

ದೇಶಬಾಂಧವರೇ! ಇತ್ತ! ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್

ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—45, ಹೆರಿಸನ್ ರೋಡ್, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 50,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹನಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ!! ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲ್ಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!!

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಿಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ತರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಯೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:—ಟಿ. ಆರ್. ಪೈ ಅಂಡ್ ಬ್ರದರ್ಸ್,
ಸೋಲ್ ಏಜಂಟ್ಸ್, ಆಫೀಸು ಉಡುಪಿ, (ದ. ಕನ್ನಡ.)

ಕೊಂಕಣಿ ಭಾಷೆಯಲ್ಲಿ

ಸಂಗೀತ ಚಂದ್ರಹಾಸ ನಾಟಕ.

ಪ್ರತಿ ಒಂದಕ್ಕೆ ನಾಲ್ಕಾಣೆ.

ಪೋಸ್ಟು ಖರ್ಚು ಪ್ರತ್ಯೇಕ.

ವಿಳಾಸ:— ಬಿ. ಕೆ. ಪ್ರಭು,
ಬಂಟ್ವಾಳ ದ. ಕನ್ನಡಾ

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೋಲೆರಾ ಅಥವಾ ಉಖ್ಖಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ ರೂ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡುಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಕಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

ಆಯುರ್ವೇದೋಕ್ತ ಔಷಧಗಳ ವಿಶೇಷತ್ವವನ್ನು ಶ್ಲಾಘಿಸಿ ಸುಂದರಯ್ಯರರವರು ಮಾಡಿದ ಭಾಷಣವು ಪಾಶ್ಚಾತ್ಯ ವೈದ್ಯ ಶಿಕ್ಷಣವನ್ನು ಪಡದು ಡಾಕ್ಟರರಾಗಿರುವ ಭಾರತೀಯರಿಗೂ ಸಹ ಉಪಯುಕ್ತ ಸೂಚನೆಗಳಿಂದ ಕೂಡಿರುವುದು. ಉಷ್ಣವಲಯಗಳಲ್ಲಿ ವಾಸಿಸಿಕೊಂಡಿರುವವರಿಗೆ ವಿಶೇಷವಾಗಿ ತಗಲುವ ಜ್ವರ ಮೊದಲಾದ ರೋಗಗಳಿಗೆ ತಕ್ಕದಾದ ಔಷಧಿಗಳನ್ನು ಕಂಡುಹಿಡಿಯಲು ಪಾಶ್ಚಾತ್ಯ ವೈದ್ಯ ವಿದ್ಯಾ ಪಾಂಡಿತ್ಯವನ್ನು ಪಡದ ಹಲವು ಡಾಕ್ಟರರುಗಳು ಪರಿಶೋಧನೆಗಳನ್ನು ಪ್ರಕೃತ ನಡಿಸುತ್ತಿರುವರು. ಉಷ್ಣವಲಯಕ್ಕೆ ವಿಶೇಷವಾದ ರೋಗಗಳಿಗೆ ಬೇಕಾದ ಚಿಕಿತ್ಸೆಯು ಅನೇಕ ಶತಮಾನಗಳಿಂದ ಉಷ್ಣವಲಯದಲ್ಲಿ ವಾಸಿಸಿಕೊಂಡಿರುವ ಭಾರತೀಯರ ವೈದ್ಯ ಶಾಸ್ತ್ರಗಳಲ್ಲಿರುವುದೋ ಎಂತ ಈ ಶಾಸ್ತ್ರ ಶೋಧನೆಗಳಿಂದ ಸಹ ನಿರ್ಧರಿಸತಕ್ಕದೆಂದು ಸುಂದರಯ್ಯರರವರು ಸೂಚಿಸಿರುತ್ತಾರೆ. ಇಂಥಾ ಶೋಧನೆಯು ಅಗತ್ಯವಾಗಿರುವುದು. ಹಿಂದೂಸ್ಥಾನದ ಇತರ ಕೆಲವು ಕಡೆಗಳಲ್ಲಿ ಮಾಡಿದಂತೆ ಆಂಗ್ಲ ವಿದ್ಯಾ ಪಾಂಡಿತ್ಯವನ್ನು ಪಡದವರು ಹಕೀಮರನ್ನೂ ವೈದ್ಯರನ್ನೂ ನಿಂದೆಗೂ ಪರಿಹಾಸ್ಯಕ್ಕೂ ಗುರಿಮಾಡಬಾರದೆಂದು ಸುಂದರಯ್ಯರರವರು ಹೇಳಿರುವರು. ಪಾಶ್ಚಾತ್ಯ ವಿದ್ಯಾಪಂಡಿತರ ಬಳಿಸಾರಲಾರದ ಸಾವಿರಾರು ರೋಗಿಗಳು ಹಕೀಮರಿಂದಲೂ ವೈದ್ಯರಿಂದಲೂ ಚಿಕಿತ್ಸೆಗಳನ್ನು ಮಾಡಿಸಿಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳುವರಲ್ಲದೆ ಭರತಖಂಡದ ಪ್ರಾಚೀನ ವೈದ್ಯ ವಿದ್ಯಾಸಂಗ್ರಹವು ಇವರ ಮೂಲಕವೇ ಈ ತನಕ ಉಳಿದಿರುವುದು. ಪೌರ್ವಾತ್ಯ ಮತ್ತು ಪಾಶ್ಚಾತ್ಯ ವೈದ್ಯ ವಿದ್ಯಾ ಸಂಯೋಗದಿಂದುಂಟಾಗುವ ಪ್ರಯೋಜನವು ಭಾರತೀಯರಿಗೆ ತಕ್ಕದ್ದಾಗಿರುವುದೆಂಬುದು ಸುಂದರಯ್ಯರರವರ ಅಭಿಪ್ರಾಯ. ಇಂಥಾ ಸಂಯೋಗವು ನೆರವೇರುವಂತೆ ತಮ್ಮ ಪೂರ್ಣ ಸಮಯವನ್ನು ಈ ಉದ್ದೇಶಕ್ಕೆ ವಿನಿಯೋಗಿಸುವ ಪಂಡಿತರೂ ಇನ್ನು ಹಲವು ಅನುಕೂಲತೆಗಳೂ ಬೇಕಾಗಿವೆ. ಮದ್ರಾಸು ಆಯುರ್ವೇದ ಪ್ರಚಾರಿಣಿ ಸಭೆಯು ದೇಶವತ್ಸಲರ ಉದಾರಾಶ್ರಯವನ್ನು ಪಡೆದು ಮೇಲಿನ ಉದ್ದೇಶವನ್ನು ನೆರವೇರಿಸಬೇಕೆಂಬುದು ನಮ್ಮ ಕೋರಿಕೆಯಾಗಿರುವುದು.

ಪೋಲೀಸು ಫೌಜಿಗೆ ಬುದ್ಧಿವಾದ.

ಪೋಲೀಸಿನವರು ಹಳ್ಳಿಗಳಲ್ಲಿ ವಾಸಿಸಿಕೊಂಡಿರುವ ಜನರ ವಿಶ್ವಾಸ ಪಾತ್ರರಾಗಬೇಕು; ಒಳ್ಳೇ ಚಾಲಿಯ ಮತ್ತು ನಿಯತವಂತರಾದ ಜನರ ರಕ್ಷಕರಾಗಿರುವವರಲ್ಲದೆ ಭಯಾನಕರಲ್ಲ ಎಂಬೀ ಭಾವವು ಜನರಲ್ಲಿ ಉಂಟಾಗುವಂತೆ ಪೋಲೀಸಿನವರು ವರ್ತಿಸಬೇಕು—ಈ ವಿಧವಾದ ಬುದ್ಧಿವಾದವನ್ನು ಇನ್ನು ಸ್ವಲ್ಪ ಸಮಯದಲ್ಲಿಯೇ ಕೆಲಸದಿಂದ ನಿವೃತ್ತರಾಗುವ ಈಗಿನ ಆಕ್ಟಿಂಗ್ ಗವರ್ನರ್ ದೊರೆಗಳವರಾದ ಬಹುಮಾನಪಟ್ಟ ಸರ್. ಮರ್ರೆ ಹೆಮ್ಮಿಕ್‌ರವರು ಈ ಸಂಸ್ಥಾನದ ಪೋಲೀಸು ಫೌಜಿನವರೆಲ್ಲರಿಗೂ ಕೊಟ್ಟಿರುವರು.

ಖಾವಂದರವರು ಈ ತಿಂಗಳ ತಾ. ೧೯ರಲ್ಲಿ ಉತ್ತರಾರ್ಕಾಡು ಜಿಲ್ಲೆಯ ವೆಲ್ಲೂರು ಪಟ್ಟಣವನ್ನು ಸಂದರ್ಶಿಸಿದಾಗ ಪೋಲೀಸು ಫೌಜಿನವರಿಗೆ ಈ ಬುದ್ಧಿವಾದವನ್ನು ಕೇಳುವ ಸಂದರ್ಭವು ದೊರಕಿತು. ಪೋಲೀಸು ಆಫೀಸರರನ್ನು ತರಬೇತು ಮಾಡುವ ಶಾಲೆಯೊಂದು ವೆಲ್ಲೂರಿನಲ್ಲಿರುವುದೆಂಬುದನ್ನು ವಾಚಕರು ತಿಳಿದಿರಲಿಕ್ಕೆ ಸಾಕು. ಗವರ್ನರ ದೊರೆಗಳವರನ್ನು ಸನ್ಮಾನಿಸಲು ಸಂಸ್ಥಾನದ ಪೋಲೀಸು ಆಫೀಸರರನೇಕರು ಆ ಶಾಲೆಯ ಬಳಿ ನೆರದಿದ್ದರು.

ಪೋಲೀಸು ಆಫೀಸರರು ಮಾತ್ರವಲ್ಲ; ಆಯಾ ಸ್ಟೇಶನುಗಳಲ್ಲಿರುವ ಪ್ಯಾದೆಗಳು ಸಹ ಗವರ್ನರ ದೊರೆಗಳು ಅಪ್ಪಣೆ ಕೊಡಿಸಿದ ಮೇಲಿನ ಬುದ್ಧಿವಾದವನ್ನು ಚನ್ನಾಗಿ ಮನನ ಮಾಡಿಕೊಳ್ಳತಕ್ಕದ್ದು. ಪೋಲೀಸು ಇಲಾಖೆಯ ಕುಂದುಕಗಳ್ಯಾವವು, ಅವನ್ನೆಲ್ಲಾ ಸರಿಪಡಿಸುವುದು ಹೇಗೆಂದು ವಿಚಾರಿಸಿಕೊಂಡು ಈಗ ಹಿಂದುಸ್ಥಾನದಲ್ಲಿ ಉತ್ತಮ ತರದ್ದೆಂದೆಣಿಸಿಕೊಂಡಿರುವ ವೆಲ್ಲೂರಿನ ಪೋಲೀಸು ಟ್ರೈನಿಂಗ್ ಶಾಲೆಯು ಹಿಂದೆ ಸರ್ ಹೆಮ್ಮಿಕ್‌ರವರಿಂದಲೇ ಸ್ಥಾಪಿಸಲ್ಪಟ್ಟಿತು. ಪೋಲೀಸು ಇಲಾಖೆಯಲ್ಲಿ ಬೇಕಾದ ಮಾರ್ಪಾಟಗಳು ಯಾವ್ಯಾವವೆಂದು ಸರ್ ಹೆಮ್ಮಿಕ್‌ರವರು ಪೋಲೀಸು ಇಲಾಖೆಯ ಇನ್ಸ್ಪೆಕ್ಟರ್ ಜನರಲರಾಗಿದ್ದಾಗ ಸೂಚಿಸಿದ್ದರು. ಪೋಲೀಸು ಇಲಾಖೆಯ ಅನುಭವವು ಪೂರ್ಣವಾಗಿ ಉಳ್ಳ ಗವರ್ನರ ದೊರೆಗಳವರು ಅಪ್ಪಣೆ ಕೊಡಿಸಿದ ಮಾತುಗಳು ಸರ್ವಮಾನ್ಯವಾಗಿರುತ್ತವೆ. ಕಳೆದ ಹತ್ತು ವರುಷಗಳಿಂದ ಪೋಲೀಸು ಇಲಾಖೆಯಲ್ಲಾದ ಏರ್ಪಾಡುಗಳಿಂದ ಪೋಲೀಸು ಫೌಜು ಉತ್ತಮ ತರಗತಿಗೆ ಬಂದಿದೆಂದು ದೊರೆಗಳವರು ಹೇಳಿದ ಮಾತು ಯತಾರ್ಥವಾಗಿದೆ. ಹಳೆ ಶಿಬಂದಿಗೆ ಸೇರಿದ ಒಬ್ಬಿಬ್ಬ ಆಫೀಸರರು ಅಲ್ಲಲ್ಲಿ ತಮ್ಮ ದೀರ್ಘ ಕಾಲದ ದುಷ್ಟತ್ವವನ್ನು ಈಗಲೂ ಪೂರ್ಣವಾಗಿ ಬಿಟ್ಟುಬಿಡಲಾರರಾದರೂ ಕ್ರಮಶಃ ಪೋಲೀಸು ಪೌಜು ಈಗಿನ ಏರ್ಪಾಡುಗಳಿಂದ ಉತ್ತಮ ತರಗತಿಗೆ ಬಂದಿದೆಂಬುದು ಖರೆ. ತಕ್ಷೀರುಗಳು ನಡಿಯದಂತೆ ಮಾಡುವುದು ಮಾತ್ರ ಪೋಲೀಸಿನವರ ಕರ್ತವ್ಯವೆಂತ ಗ್ರಹಿಸಿದರೆ ಸಾಲದು. ತಕ್ಷೀರುಗಳನ್ನು ತಗ್ಗಿಸಲೂ ರಾಜಭಕ್ತಿಯನ್ನು ಹುಟ್ಟಿಸಲೂ ತಕ್ಕ ಪ್ರೋತ್ಸಾಹವನ್ನು ಪೋಲೀಸಿನವರು ತಮ್ಮ ವರ್ತನೆಯಿಂದ ಮಹಾಜನರಲ್ಲಿ ಉಂಟುಮಾಡತಕ್ಕದ್ದು. ಸಂಸ್ಥಾನದ ಸರ್ವ ಆಡಳಿತೆಯ ಜಬಾಬುದಾರಿಯುಳ್ಳ ಅಧಿಕಾರಿ ಶ್ರೇಷ್ಠರು ಹೇಳಿದ ಬುದ್ಧಿ ಮಾತುಗಳನ್ನು ಕಾರ್ಯರೂಪುಗೊಳಿಸಲು ಪೋಲೀಸಿನವರು ಹೆಚ್ಚೆಚ್ಚಾಗಿ ಪ್ರಯತ್ನಿಸಿ ಪ್ರಜಾ ಕ್ಷೇಮಚಿಂತನೆಯ ಯತಾರ್ಥ ಭಾವವನ್ನು ತೋರಿದರೆ ಪ್ರಜಾ ಸಹಕಾರವು ಇವರ ಕಾರ್ಯಸಾಧನೆಗಳಲ್ಲಿ ದೊರಕದಿರದು.

‘ಪೆಶನು’ಗಳ ಕೃತಕ ಜೀವನವು.

ಮರಗಿಡಗಳು ಬೇರುಗಳ ಮೂಲಕ ಭೂಮಿಯ ಅಡಿಯಿಂದ ಸ್ವಭಾವಸಿದ್ಧವಾದಂಥಾ ಆಹಾರವನ್ನು ಹೀರಿಕೊಂಡು ಬದುಕುತ್ತವೆ. ಅವುಗಳಿಗೆ ಬೇರು, ಕಾಂಡ, ಎಲೆ, ಕೊಂಬೆ ಇತ್ಯಾದಿ ನೈಸರ್ಗಿಕವಾದ ಅಂಗೋಪಾಂಗಗಳು ಇವೆ. ಹಾಗೆಯೇ ಸೃಷ್ಟಿಯ ಇತರ ಎಲ್ಲಾ ವಸ್ತುಗಳಲ್ಲಿ ಶಿರೋಮಣಿಯೆಂದೆಣಿಸಿಕೊಳ್ಳುವ ಮನುಷ್ಯರಿಗೂ ಸ್ವಭಾವಸಿದ್ಧವಾದಂಥಾ ನೈಸರ್ಗಿಕ ಅಂಗೋಪಾಂಗಗಳಿವೆ. ಆದರೆ ಮನುಷ್ಯರು ಈ ಸ್ವಭಾವಿಕವಾದ ಅಂಗಾಂಗಗಳನ್ನು ಕೃತಕವಾದವುಗಳಿಂದ ಶೃಂಗರಿಸಿಕೊಳ್ಳುವುದರಲ್ಲಿ ಹೆಚ್ಚಿನ ಅಭಿಮಾನವುಳ್ಳವರಾಗಿರುವುದು ಈಗಲೀಗ ರೂಢಿಯಾಗುತ್ತಾ ಬರುತ್ತಿದೆ. ಇಂಥಾ ಕೃತಕ ಜೀವನವು ಗಂಡಸರಿಗಿಂತಲೂ ಹೆಂಗಸರಲ್ಲಿ ಹೆಚ್ಚಾಗಿ ಕಂಡುಬರುವದು. ಕೂದಲುಗಳನ್ನು ವಿವಿಧ ತರವಾಗಿ ಜಡೆಕಟ್ಟಿ ಅಲಂಕರಿಸುವುದು, ಕೃತಕ ಹಲ್ಲುಗಳನ್ನು ಇಟ್ಟುಕೊಳ್ಳುವುದು, ಮುಖವನ್ನು ‘ಪೌಡರ್’ ಎಂಬಿತ್ಯಾದಿ ಬಿಳೀ ಧೂಳಿನಿಂದ ಅಂಟಿಸಿ ವರ್ಣ ಬದಲಾಯಿಸಿಕೊಳ್ಳುವದು, ಟೊಂಕಗಳನ್ನು ಸಪೂರ ಯಾ ಅಗಲವಾಗಿ ಬೆಳಿಸುವದು–ನಡುವುಗಳನ್ನು ಕಟಿಬಂಧ (ಬೆಲ್ಟು)ಗಳಿಂದಲೂ ಮೈಯನ್ನು ಸಣ್ಣಂಗಿಗಳಿಂದಲೂ ಬಂಧಿಸಿ ತಮ್ಮ ದೇಹವನ್ನು ಕಡಬಿಗನ ಹುಳದ ದೇಹದಂತೆ ಮಾಡಿಕೊಳ್ಳುವದು, ಕಾಲಿಗೆ ಪಾದಕ್ಕಿಂತಲೂ ಸಪೂರವಾದ ಪಾದರಕ್ಷೆಗಳನ್ನು ಹಾಕಿ ಪಾದಗಳನ್ನು ಸಂಕೋಚಮಾಡಿಕೊಳ್ಳುವದು, ಇವೆಲ್ಲಾ ಮನುಷ್ಯರಿಗೆ ಇರುವ ಸಹಜವಾದ ರೂಪ ಆಕಾರಗಳನ್ನು ಬದಲಾಯಿಸಿಕೊಳ್ಳುವುದಕ್ಕಾಗಿ ಕಲ್ಪಿಸಿಕೊಂಡ ‘ಪೆಶನು’ಗಳೆಂಬ ಕೃತಕ ಸಾಧನಗಳಾಗಿವೆ. ಮನುಷ್ಯನ ದೇಹವು ಬಹು ಅಂದಚಂದವಾಗಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟದೆ. ಅದಕ್ಕೆ ಸಹಜವಾದ ಚಂದವಿದೆ. ಇದನ್ನು ‘ಪೆಶನು’ಗಳೆಂಬ ಮನುಷ್ಯರ ಕೃತಕ ಡಂಭಾಚಾರವು ಹಾಳುಮಾಡುತ್ತಿದೆ. ಮೇಲೆ ಹೇಳಿದ ಇಂಥಾ ಪೆಶನುಗಳಿಂದ ಅನೇಕ ಗಂಡಸರೂ ಹೆಂಗಸರೂ ತಮ್ಮ ನೈಸರ್ಗಿಕವಾದ ಅಂದಚಂದಗಳನ್ನು ಕೆಡಿಸಿಕೊಂಡು ವಿಕಾರವನ್ನು ಹೊಂದುತ್ತಿದ್ದಾರೆಂಬದು ತಿಳಿದ ವಿಷಯವೇ ಆಗಿದೆ. ನಾವು ನೈಸರ್ಗಿಕ ಗುಣಗಣಗಳಿಗನುಸಾರವಾಗಿ ನಡೆಯಲು ಪ್ರಯತ್ನಿಸಿದರೆ ಈಗ ಲೋಕದಲ್ಲಿ ತಲೆದೋರುತ್ತಿರುವ ಹೊಸ ಹೊಸ ವಿಧದ ರೋಗಗಳೂ, ಮರಣ ಸಂಖ್ಯೆಯೂ ಕಮ್ಮಿಯಾದೀತೆಂಬ ಮಾತಿಗೆ ಅನುಮಾನವಿರದು.

ಈಗಿನ ಕಾಲದಲ್ಲಿ ದಿನೇ ದಿನೇ ಹೊಸತಾಗಿ ಅಂಕುರಿಸುತ್ತಿರುವ ರೋಗಗಳಿಗೆ ಈ ‘ಪೆಶನು’ಗಳೆಂಬ ಕೃತಕ ಡಂಭಾಚಾರವೇ ಮೂಲಕಾರಣವಾಗಿದೆ ಎಂಬದು ಪ್ರಖ್ಯಾತ ವೈದ್ಯರ ಅಭಿಪ್ರಾಯ. ಉಣ್ಣುವುದರಲ್ಲಿ ಪೆಶನು, ಕುಡಿಯುವುದರಲ್ಲಿ ಪೆಶನು, ಆಹಾರದಲ್ಲಿ ಪೆಶನು, ಉಡಿಗೆತೊಡಿಗೆಯಲ್ಲಿ ಪೆಶನು, ಪೆಶನುಗಳ ರಾಶಿಯೇ ನಮ್ಮ ದೇಹವನ್ನು ಕಾಡಿಸುತ್ತಿವೆ. ಕಪ್ಪು ರೊಟ್ಟಿಯು ಗೋಧಿಯಲ್ಲಿರುವ ಎಲ್ಲಾ ಸತ್ವಗಳನ್ನು ಕೂಡಿದ್ದಾಗಿರುತ್ತದೆ. ಗೋಧಿಯ ಉಮಿ ವಿನಹಾ ಎಲ್ಲಾ ಸತ್ವಗಳು ಈ ರೊಟ್ಟಿಯಲ್ಲಿವೆ. ಆದರೆ ಪೆಶನಿಗನುಸಾರವಾಗಿ ನೋಡುವುದಾದರೆ ಈ ರೊಟ್ಟಿಯನ್ನು ಜನರು ತುಚ್ಛೀಕರಿಸುವರು. ಗೋಧಿಯ ಸಾರವು ಹೋದ ಬಿಳೀ ರೊಟ್ಟಿಯೇ ಈಗಿನ ಮೇಜುಗಳಿಗೆ ಅಗತ್ಯವಾದ್ದು. ತದ್ರೀತಿ ಎಲ್ಲಾ ಸತ್ವಗಳನ್ನು ಒಳಕೊಂಡಿರುವ (ಕಪ್ಪು) ಕಜೆ ಅಕ್ಕಿಯು ಈ ಪೆಶನಿಗೆ ಒಪ್ಪದು; ಸಾರ ವಿಸರ್ಜಿತವಾದ ಬಿಳೀ ಅಕ್ಕಿಯೇ ಇದಕ್ಕೆ ರುಚಿಯಾಗಿದೆ. ನೀರು ಸ್ವಭಾವಿಕವಾದಂಥಾ ಪಾನವಾಗಿದ್ದು ಮನುಷ್ಯನ ನರಸಂಸ್ಥೆಯವನ್ನೆಲ್ಲಾ ಬಲಪಡಿಸುವಂಥಾ ‘ಜೀವರಸ’ವಾಗಿದೆ. ಆದರೆ ಈ ಪೆಶನು ಅದನ್ನು ರಸಾತಳಕ್ಕೆ ಅಟ್ಟಿಬಿಟ್ಟು ‘ವ್ಯಾನ್’, ವಿಸ್ಕಿ, ಸ್ಪಾಟು, ಕಾಫಿ, ಚಾ ಮೊದಲಾದ ಪಾನಕಗಳನ್ನು ಮೇಜಿಯ ಮೇಲೆ ಉಚ್ಚಸ್ಥಾನದಲ್ಲಿ ತಂದಿಟ್ಟಿದೆ. ಇದರಿಂದ ಮನುಷ್ಯನ ಜೀವಮಾನವೇ ಕೆಟ್ಟು ಅಧೋಗತಿಗೆ ಇಳಿಯುತ್ತಿದೆಂಬದು ಸಮಾಜಸುಧಾರಕರಿಗೆ ತಿಳಿದ ವಿಷಯವೇ ಆಗಿದೆ.

ಈಗಿನ ಕಾಲದಲ್ಲಿ ಮಕ್ಕಳನ್ನು ಪೋಷಿಸುವ ವಿಧಾನವನ್ನು ತುಸ ನೋಡುವಾ. ಮಕ್ಕಳಿಗೆ ತಾಯಿಯ ಹಾಲಿಗಿಂತ ಪುಷ್ಟಿದಾಯಕವಾದ ಆಹಾರವು ಮತ್ತೊಂದಿಲ್ಲ. ಆದರೆ ತಾಯಿಯು ತನ್ನ ಸಣ್ಣ ಪುಟ್ಟ ಮಗುವಿಗೆ ಮೊಲೆಹಾಲನ್ನುಣ್ಣಿಸುವದು ಈ ಪೆಶನು ನೋಡಲಾರದು. ಈ ಪೆಶನು ತಾಯಿಯ ಮೊಲೆಹಾಲನ್ನು ಬುಡದಲ್ಲೇ ಹಿಂಡಿ ತೆಗೆದಿರುವದರಿಂದ ಮಗುವಿಗೆ ಬೇಕಾದಷ್ಟು ಹಾಲು ತಾಯಿಯ ಮೊಲೆಯಲ್ಲಿ ದೊರಕದು. ಒಂದಿಷ್ಟು ಇದ್ದ ಹಾಲನ್ನು ಸಹಾ ಇದು ಕೆಡಿಸಿ ಬಿಟ್ಟಿರುವದು. ಆದ್ದರಿಂದ ತಾಯಿಯು ತನ್ನ ಮೊಲೆಹಾಲಿನ ಬದಲಿಗೆ ದನದ ಹಾಲನ್ನು ಮಗುವಿಗೆ ಕೊಡ ಪ್ರಾರಂಭಿಸುವಳು. ಮಗುವಿನ ಆರೈಕೆಯನ್ನು ತಾನು ಸ್ವತಃ ನೋಡಿಕೊಳ್ಳುವ ಬದಲಿಗೆ ಆ ಬಡ ಪಾಪದ ಪ್ರಾಣಿಯನ್ನು ಪರಿಚಾರಿಕೆಯರ ಕೈಯಲ್ಲಿ ಹಾಕಿ ಬಿಟ್ಟು ನಾಟ್ಯರಂಗಗಳಿಗೋ ಆಟಪಾಟಗಳಿಗೋ ಹೋಗುವಳು. ಅಯ್ಯೋ! ಇದು ಪೆಶನಿನ ಮಹಾ ದೋಷವಲ್ಲವೇ? ದನದ ಹಾಲು ದನದ ಕರುವಿಗೆ ಉತ್ತಮ, ಕತ್ತೆಯ ಹಾಲು ಕತ್ತೇ ಮರಿಗೆ ಉತ್ಕೃಷ್ಟ, ಆಡಿನ ಹಾಲು ಆಡಿನ ಮರಿಗೆ ಒಳ್ಳೆಯದಲ್ಲದೆ ಚಿಕ್ಕ ಪುಟ್ಟ ಮಗುವಿಗೆ ಎಂದೂ ಒಳ್ಳೇಯದಲ್ಲವು.

ತಾಯಿಯ ಮೊಲೆಹಾಲು ಮಕ್ಕಳಿಗೆ ದೊರಕುವುದು ದುರ್ಲಭವಾಗುತ್ತಾ ಬರುವುದರಿಂದ ಮಕ್ಕಳ ಮರಣಸಂಖ್ಯೆಯು ಈಗಲೀಗ ಬಹಳ ಹೆಚ್ಚಾಗುತ್ತಾ ಬರುತ್ತದೆ ಎಂಬದನ್ನು ವೈದ್ಯರು ಪರಿಶೋಧಿಸಿ ತಿಳಕೊಂಡಿರುವರು. ತಾಯಿಯ ಹಾಲುಂಡ ಮಕ್ಕಳಲ್ಲಿ ಒಂದು ಮಗು ಸಾಯುವುದಾದರೆ ದನದ ಹಾಲುಂಡ ಮಕ್ಕಳಲ್ಲಿ ೫ ಮಂದಿ ಸಾಯುವರು. ತಾಯಿಯ ಹಾಲಿನಲ್ಲಿ ಮಗುವಿಗೆ ಸ್ವಭಾವಕ್ಕನುಗುಣವಾಗಿ ದೊರಕುವ ಲೋಲೆ ಇತ್ಯಾದಿ ಶರ್ಕರ ಪಿಷ್ಟಾದಿ ವಸ್ತುಗಳು ದನದ ಯಾ ಆಡಿನ ಹಾಲಿನಲ್ಲಿ ಮಕ್ಕಳಿಗೆ ಸರಿಯಾಗಿ ದೊರಕದು. ಲೋಕವೇನೆಂದು ತಿಳಿಯದ ಈ ಪುಟ್ಟ ಮಕ್ಕಳು ಸಹಾ ಈ ಪೆಶನಿಂದ ಬಂಧಿಸಲ್ಪಡುವ ಹಾಗಾಯಿತಲ್ಲವೇ?

ಈ ವಿವಿಧವಾದ ಪೆಶನುಗಳೇ ಮನುಷ್ಯರನ್ನು ಅಧೋಗತಿಗಿಳಿಸುವ ಕೃತಕ ಜೀವನವಾಗಿದೆ. ಇಂಥಾ ಕೃತಕ ಜೀವನದಿಂದ ಎಂದೂ ಒಳ್ಳಿತಾಗದು. ಇದರಿಂದ ನಮ್ಮ ದೇಹವು ಪಾಡುಪಡುವುದೇ ಹೊರತು ನಮಗಿರುವ ನೈಸರ್ಗಿಕವಾದ ಅಂದಚಂದ, ಗುಣಗಣಗಳಿಗಿಂತ ಹೆಚ್ಚಿನ ಸೌಭಾಗ್ಯವನ್ನು ಸರ್ವಥಾ ಹೊಂದದು. ನಾವು ಎಷ್ಟರಮಟ್ಟಿಗೆ ಸ್ವಭಾವ ಗುಣಗಣಗಳನ್ನು ಬಿಟ್ಟು ದೂರ ಹೋಗಿ ಈ ಪೆಶನುಗಳೆಂಬ ಕೃತಕ ಡಂಭಾಚಾರವನ್ನು ಅಪ್ಪಿಕೊಳ್ಳುತ್ತೇವೋ ಅಷ್ಟಕ್ಕೆ ನಮಗೆ ನೆಲೆಯಾದ ದೇಹ ಪ್ರಕೃತಿಯೂ ನೆಲೆಯಾದ ಮನೋರಥವೂ ಇರಲಾರದು.

S. A.

ಸಭಾಪತಿರಾಯರಿಗೆ ಹಿಡಿದ ಚಿಂತೆ.

ಚಿತ್ರ ಪ್ರದರ್ಶನವು.

ಸಭಾಪತಿರಾಯರು ಕಂಕುಳದಲ್ಲಿ ಪುಸ್ತಕ ಹಿಡಕೊಂಡು ಸ್ವಜಾತಿ ಸ್ನೇಹಿತರೊಡನೆ ದರ್ಮರಾಯರಲ್ಲಿಗೆ ಬರುತ್ತಾರೆ.

ದರ್ಮರಾಯ—ಓಹೋಹೋ! ಏನು ಬಂದಿರಿ? ಏನು ವಿಶೇಷ, ಶುಭ ವರ್ತಮಾನವಷ್ಟೆ!

ಸಭಾಪತಿರಾಯರು—ತಮ್ಮ ಭೇಟಿಗೆ ಬಂದಿದ್ದೇವೆ. ಶುಭ ವರ್ತಮಾನವೇ ಸರಿ—ಯಾಕಪ್ಪಾ ಗಾಬ್ರಿಯಾಗುತ್ತೀರಿ?

ಧ. ಪರ ಊರಿನಿಂದ ಕೆಟ್ಟ ವರ್ತಮಾನ ಬಂದ ವಿನಹ ಆಮಂತ್ರಣವಿಲ್ಲದೆ ಸ್ವಜಾತಿ ಗ್ರಹಸ್ತರು ಹೋಗುವ ರಿವಾಜು ನಮ್ಮ ಊರಲ್ಲಿ ಇಲ್ಲವಷ್ಟೆ. ಆದುದರಿಂದ ನಾನು ಕೇಳಿದ್ದು–ಏನು ಬರೋಣದ ಉದ್ದೇಶವೇನು?

ಸ. ಧರ್ಮರಾಯರೇ ನಮ್ಮ ಜಾತಿಯಲ್ಲಿ ಅನಾಥರಾಗಿ ಯಾರಾದರೂ ಸತ್ತರೆ ಹೆಣಕ್ಕೆ ಕೇಳುವವರಿಲ್ಲ. ಪ್ರೇತ ಸಂಸ್ಕಾರದ ಖರ್ಚಿಗೆ ಉಪಾಯವಿಲ್ಲದೆ ಯಾರಾದರೂ ಸ್ವಜಾತಿಯವರಲ್ಲಿ ಸಹಾಯ್ಯ ಬೇಡಲಿಕ್ಕೆ ಹೋಗಬೇಕಾಗುತ್ತದೆ. ಆದುದರಿಂದ ಒಂದು ಫಂಡು ಮಾಡುತ್ತೇವೆ. ಸ್ವಜಾತಿ ಗ್ರಹಸ್ತರಿಂದ ಹಣ ವಸೂಲು ಮಾಡಿ ಬಡ್ಡಿಗೆ ಇಡುವೆವು. ಅನಾಥರಾಗಿ ಯಾರೂ ಸತ್ತರೆ ಬಡ್ಡಿ ಐವಜಿನಿಂದ ಸಂಸ್ಕಾರದ ಖರ್ಚಿಗೆ ಕೊಡುವೆವು. ಈ ಫಂಡಿಗೆ ತಾವು ಕೂಡಾ ವಂತಿಗೆ ಕೊಡಬೇಕಾಗಿ ಬಂದಿದ್ದೇವೆ.

ಧ. ಅನಾಥನಾಗಿ ಸತ್ತವನ ಹೆಣಕ್ಕೆ ಕೇಳುವವರಿಲ್ಲವೇ? ನಮ್ಮ ಜಾತಿಯಲ್ಲಿ ಜೀವಂತನಾಗಿರುವವನಿಗೆ ಕೇಳುವವರಿದ್ದಾರೇನು?

ಸ. ಕುತರ್ಕ ಮಾಡಬೇಡಿ ಧರ್ಮರಾಯರೇ, ಮರಣವೆಂಬದು ಸರ್ವರಿಗೂ ಉಂಟಷ್ಟೇ.

ಧ. ಖರೆ, ತಮ್ಮ ಮಾತು ಖರೆ! ನನಗೂ ಮರಣ ಉಂಟು. ಪರಂತು ನಾನು ಸತ್ತ ತರುವಾಯ ನನ್ನ ಹೆಣಕ್ಕೆ ಏನು ಗತಿ ಎಂಬ ಚಿಂತೆ ನನಗೆ ಇರುವುದಿಲ್ಲ. ನನ್ನ ಹೆಂಡತಿಗೂ ಅಪ್ರಾಯಸ್ತ ಮಕ್ಕಳಿಗೂ ಏನು ಗತಿಯಪ್ಪಾ, ಜೆಪ್ಪು ಸೆಮಿನೆರಿಯೊ, ಅಥವಾ ಬಲ್ಮಠವೊ? ಇದೇ ಚಿಂತೆ ಹಿಡಿದದೆ. ಅದಿರಲಿ, ನಮ್ಮ ಜಾತಿಯಲ್ಲಿ ಅನಾಥರು ಕಾಹಿಲೆಯಲ್ಲಿ ಬಿದ್ದು ಸಾಯುತ್ತಾರೊ? ಆರೋಗ್ಯ ಸ್ಥಿತಿಯಲ್ಲಿ ಸಾಯುತ್ತಾರೊ?

ಸ. ಅಯ್ಯಾ ಚೇಷ್ಟೆ ಮಾಡಬೇಡಿ, ಹತ್ತು ರೂಪಾಯಿಯಾದರೂ ತಮ್ಮ ವಂತಿಗೆಯಾಗಿ ಕೊಡಿರಿ.

ಧ. ಚೇಷ್ಟೆ ಮಾಡಿದ್ದಲ್ಲಪ್ಪಾ, ಚೇಷ್ಟೆ ಮಾಡಿದ್ದಲ್ಲ. ಅನಾಥನಾದವನು ಆರೋಗ್ಯದಲ್ಲಿರುವಾಗ ಹೇಗೂ ಪರಸೇವೆ ಮಾಡಿ ಜೀವನ ಮಾಡುತ್ತಾನೆ. ಕಾಹಿಲೆ ಹಿಡಿದ ನಂತರ ಆತಗೆ ಕೇಳುವವರಿಲ್ಲವಷ್ಟೇ. ಆತನು ಮಲಗುವುದು ಎಲ್ಲಿ? ಆತನು ಪ್ರಾಣ ಬಿಡುವ ವರೇಗೆ ಆತನ ಬಾಯಿಯಲ್ಲಿ ಗಂಜಿನೀರಾದರೂ ಹಾಕುವದು ಯಾರು? ಸಭಾಪತಿರಾಯರೇ, ಜೀವಂತ ಅನಾಥರಿಗೆ ರೋಗ ಹಿಡಿದಾಗ ಅವರಿಗೆ ಆಶ್ರಯಸ್ಥಾನ ಸಿಕ್ಕುವಂತೆ ಒಂದು ಸಂಸ್ಥೆ ಮಾಡಿರಿ. ಹೆಣದ ಚಿಂತೆ ಅನಂತರ ಮಾಡುವಾ.

ಸ. ಅಯ್ಯಾ ಜೀವ ಇರುವಂತವರು ಹೇಗೂ ಸುಧಾರಿಸಿಕೊಳ್ಳುತ್ತಾರೆ. ಹೆಣಕ್ಕೆ ಜೀವ ಇಲ್ಲವಾದುದರಿಂದ ಸಾಮರ್ಥ್ಯವಿಲ್ಲ. ಆದುದರಿಂದ ನಾವೇ ಸಹಾಯ ಮಾಡಬೇಕು.

ಧ. ಹೆಣಕ್ಕೆ ಜೀವವೂ ಇಲ್ಲ, ದುಃಖವೂ ಇಲ್ಲ, ಚಿಂತೆಯೂ ಇಲ್ಲ, ಸಂತೋಷವೂ ಇಲ್ಲ, ಭಯವೂ, ಹಸಿವೆಯೂ, ತೃಷೆಯೂ ಇಲ. ಅದು ವೇದಾಂತ ಆಚರಿಸುವಂಥಾದಾದ್ದರಿಂದ ಅದಕ್ಕೆ ಇದ್ದ ಸಾಮರ್ಥ್ಯ ಜೀವಂತರಾಗಿರುವ ಯಾರಿಗೂ ಇಲ್ಲ. ಅನಾಥನ ಹೆಣವು ಜೀವಂತ ಅರಸನಿಗಿಂತಲೂ ಹೆಚ್ಚು ಸಾಮರ್ಥ್ಯ ಇರುವಂಥಾದ್ದಲ್ಲವೇ? ಇದುವರೆಗೆ ಯಾರ ಹೆಣವಾದರೂ ಹೊಂಡಕ್ಕಾಗಲೀ ಸ್ಮಶಾನಕ್ಕೆ ಆಗಲೀ ಗತಿ ಹೊಂದಿಸಲಿಕ್ಕೆ ಯಾರೂ ಇಲ್ಲದೆ ಕೊಳತು ದುರ್ವಾಸನೆ ಹುಟ್ಟಿದ್ದು ಕೇಳಿಯಾದರೂ ಬಲ್ಲಿರಾ?

ಸ. ನಮಗೆ ಲೆಕ್ಚರು ಬೇಡಾ–ಹಣ ಬೇಕು–ಜೀವಂತರ ಚಿಂತೆ ನಮಗಿಲ್ಲ–ತಮ್ಮ ವಂತಿಗೆ ಕಿಂಚಿತ್ತಾದರೂ ಖುಶಿ ಇದ್ದರೆ ಕೊಡಿರಿ.

ಧ. ಅಯ್ಯಾ, ಫಂಡಿನ ಹಣವೂ ಬಡ್ಡಿಯೂ ಬ್ಯಾಂಕಿನಲ್ಲಿ ಇರುವುದು. ಯಾರ ಹೆಸರಲ್ಲಿ ಫಂಡು ಬ್ಯಾಂಕಿನಲ್ಲಿ ಲೇವಣಾತಿ ಮಾಡುತ್ತೀರೋ ಆತನು ಮಂಗಳೂರಲ್ಲಿ ಹಾಜರು ಇಲ್ಲದ ವೇಳೆಯಲ್ಲಿ ಅಥವಾ ಆತನ ಪೆಟ್ಟಿಗೆಯಲ್ಲಿ ಖಾಸಗಿ ಹಣವಾದರೂ ಇಲ್ಲದ ವೇಳೆಯಲ್ಲಿ ಅನಾಥ ಸ್ವಜಾತಿಯವನು ಪ್ರಾಣಬಿಡಬಾರದು–ಪ್ರಾಣ ಬಿಡುವ ಒಂದು ದಿನ ಮುಂಚಿತವಾಗಿಯಾದರೂ ಕಮ್ಮಿಟಿ ಮೆಂಬರರು ಸಭೆ ಕೂಡಿ ಪ್ರೇತ ಸಂಸ್ಕಾರಕ್ಕೆ ಇಂತಿಷ್ಟೇ ಹಣ ಕೊಡಬೇಕು ಎಂತ ನಿರ್ಣಯಿಸುವ ಹಾಗೆ ಪ್ರಾಣ ಬಿಡುವವನು ಮುಂಚಿತವಾಗಿ ನೋಟೀಸು ಕೊಡಬೇಕು ಎಂತ ರೂಲು ಮಾಡಿದ್ದೀರೋ?

ಸ. ಇನ್ನೂ ಚೇಷ್ಟೆ ಮಾಡುತ್ತೀರೇ?

ಧ. ಚೇಷ್ಟೆ ಮಾಡುವದಿಲ್ಲಪ್ಪಾ, ಚೇಷ್ಟೆ ಮಾಡುವದಿಲ್ಲ. ಯಾವ ಸತ್ಕಾರ್ಯದಲ್ಲಿಯೂ ನಮ್ಮ ಜಾತಿಯವರಿಗೆ ಅನುಕಂಪ ಉಂಟಾಗುವುದಿಲ್ಲ. ದಾನಧರ್ಮವೆಂಬದು ಘಟ್ಟ-ಹತ್ತಿ ಹೋಗಿಯದೆ. ಅಪರೂಪವಾಗಿ ಅನಾಥ ಸ್ವಜಾತಿಯವನು ಸತ್ತರೆ ಅನ್ಯಥಾ ಧರ್ಮ ಮಾಡದವರು ಕಿಂಚಿತ್ತಾದರೂ ಹಣ ಸಹಾಯ ಕೊಟ್ಟು ಪ್ರೇತ ಸಂಸ್ಕಾರವನ್ನು ಹೇಗೂ ಮಾಡುತ್ತಾರೆ. ನೀವು ಒಂದು ಫಂಡು ಎಂತ ಮಾಡಿ ಇಂತಹ ಧರ್ಮಕ್ಕೂ ಹಾನಿ ಮಾಡುತ್ತೀರಿ. ಫಂಡು ಉಂಟೆಂತ ದಾನ ಯಾರೂ ಕೊಡಲಾರರು. ಫಂಡಿನ ಕಮ್ಮಿಟಿಯವರಿಗೆ ನೋಟೀಸು ಕೊಡದೆನೇ ಅನಾಥ ರೋಗಿ ಸಾಯುವನು. ಸರಿ ಸರಿ, ಊಟಕ್ಕೆ ಇಲ್ಲದ ಉಪ್ಪಿನಕಾಯಿಯ ಹಾಗೆ ನಿಮ್ಮ ಫಂಡು.........ಕ್ಕೆ ಸರಿಯಾಗುವುದು. ಅಯ್ಯಾ ಸಭಾಪತಿ ರಾಯರೇ, ಹೆಣದ ಚಿಂತೆ ಬಿಡಿ. ಜೀವಂತರ ಚಿಂತೆ ಮಾಡಿ. ತಂದೆ ತಾಯಿ ಇಲ್ಲದ ಮಕ್ಕಳೂ ಅಸಹಾಯ ಅವಸ್ಥೆಯಲ್ಲಿರುವ ಸ್ವಜಾತಿಯ ರೋಗಿಗಳೂ ಜೆಪ್ಪು ಅಥವಾ ಬಲ್ಮಠದ ಕಡೆಗೆ ದೃಷ್ಟಿ ಇಡದಂತೆ ಆಶ್ರಯ ಕೊಡುವ ಒಂದು ಸಂಸ್ಥೆ ಮಾಡಿರಿ. ಹತ್ತು ಅಲ್ಲ; ನೂರು ರೂಪಾಯಿ ನಾನು ಕೊಡುವೆನು.

ಜೀವಂತ ಹೆಣ.

* * *

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ).

ದಾನಪಡೆದವರು ಧರ್ಮಮಾಡಲಾಗದೆ?

ದಾನಗಳಲ್ಲಿ ವಿದ್ಯಾದಾನವು ಅತಿಶ್ರೇಷ್ಟವಾದುದೆನ್ನುವರು. ಅದರಲ್ಲಿಯೂ ಉಚಿತವಾಗಿ ವೇತನರೂಪವಾಗಿ, ವಿದ್ಯಾದಾನವನ್ನು ಪಡದವರು 'ಡಬ್ಬಲ್' ದಾನಪಡೆದಂತಾಯಿತು. ಆದರೆ ಶಾಸ್ತ್ರಗಳಲ್ಲಿ ದಾನಮಾಡುವಾತನಿಗೆ ಎಷ್ಟರ ಪುಣ್ಯವಿದೆಯೊ, ಅಷ್ಟರ ಕೊರತೆಯೇ ದಾನಪಡೆದವರಿಗೆ ಇರುವುದರಿಂದ, ದಾನಗ್ರಹಣಮಾಡಿದವರ ಬಗ್ಯೆ ನಾನಾ ಪ್ರಾಯಶ್ಚಿತ್ತಗಳು ಹೇಳಲ್ಪಟ್ಟಿವೆ. ಇಂತಹ ಪ್ರಾಯಶ್ಚಿತ್ತಗಳನ್ನು ಮಾಡುವವರ ಸಂಖ್ಯೆಯು ಎಲ್ಲಾ ವರ್ಗಗಳಲ್ಲಿಯೂ ಕಡಿಮೆಯಾಗಿದ್ದು, ವಿಶೇಶತಃ ವಿದ್ಯಾದಾನ ಹೊಂದಿದವರಲ್ಲಿಯೂ ಕೂಡ ಈ ಅಭಾವವು ಇರುವುದು. ಪರಂತು, ವಿದ್ಯಾಗೌರವಯುತರಾದವರಲ್ಲಿ ಇಂತಹ ಊನತ್ವವು ಅತಿ ನಿಂದನೀಯವೆನ್ನಬೇಕು. ಹೀಗಿರುತ್ತಾ, ಮೊದಲು ಉಚಿತವಾಗಿ ಕಲಿತವರು ಈಗ ತಾನೆ ಯಾವುದೊಂದು ಪದವಿಗಳನ್ನೇರಿ ಇರುವಾಗ, ತಮ್ಮ ಪುಕ್ಕಟೆಯಾಗಿ ಪಡೆದ ವಿದ್ಯೆಯ ಬಹುಮಾನ ವ ಅಭಿಮಾನ ಕೃತಜ್ಞತೆ ವ ಧರ್ಮಬುದ್ಧಿಗಳು ಇವರಲ್ಲಿರುವುದಾದರೆ, ಈ ಉಪಕಾರವನ್ನು ಮರೆಯದೆ ಕೈಲಾದಷ್ಟು ಧರ್ಮಮಾಡಲು ಪ್ರಯತ್ನಿಸುವುದು ಯೋಗ್ಯವೆಂದರೆ ಯಾರೂ ಅಲ್ಲಗಳೆಯರು.

ಒಂದಾನೊಂದು ಕಾಲೇಜಿನ ವರ್ಧಂತಿಯ ಕಾಲದಲ್ಲಿ ಸಭಾಧ್ಯಕ್ಷರು ಅಂದ ಮಾತುಗಳು ನನಗೆ ನೆನಪಾಗಿ ಮಂಗಳೂರಿನ ಕೆನರಾ ಹ್ಯಾಸ್ಕೂಲಿನಿಂದ ಉಚಿತ ಶಿಕ್ಷಣೆಹೊಂದಿದವರೆಲ್ಲರಿಗೆ ಈ ಸಂಗತಿಯನ್ನು ತಿಳಿಯಿಸಬೇಕೆಂದು ಹೀಗೆ ತಮಗೆ ಬಿನ್ನವಿಸಿದೆನು. ಕಳೆದ ೨೦ ವರ್ಷಗಳಿಂದ ಸಾವಿರಾರು ವಿದ್ಯಾರ್ಥಿಗಳು ಈ ಶಾಲೆಯಿಂದ ಉಚಿತ ಶಿಕ್ಷಣೆಯನ್ನು ಹೊಂದಿದರೆಂದರೆ ಅತಿಶಯೋಕ್ತಿಯಾಗದು. ಅಂತಹರಲ್ಲಿ ಹಲವರು ವಕೀಲರೊ, ಸರಕಾರಿ ಉದ್ಯೋಗಸ್ಥರೊ, ಶ್ರೀಮಂತ ವ್ಯಾಪಾರಿಗಳೊ ಆಗಿ ತಮ್ಮ ಪದವಿಯಲ್ಲಿ ಸುಖದಿಂದಿರುವರು. ಇವರಲ್ಲಿ ಬರೇ ಸ್ವಲ್ಪ ಮಂದಿ ಮಾತ್ರ ಇನಾಮುಗಳನ್ನೂ, ವೇತನಗಳನ್ನೂ ಏರ್ಪಡಿಸಿರ ಬಹುದು. ಮಿಕ್ಕ ಸೇಕಡಾ ೯೯ ಮಂದಿ ಪಡೆದ ವಿದ್ಯಾದಾನದ ಚಿರ ಮರೆಯಲಾಗದ ಉಪಕಾರವನ್ನು ಮರೆತಿರುವರು. ಶಾಲಾ ಇಲಾಖೆಯವರ ನಿಯಮಗಳಂತೂ ಸೆಕೆಂಡರಿ (ಹ್ಯಾ)ಸ್ಕೂಲುಗಳನ್ನು ಪೀಡಿಸುತ್ತಿವೆ. ಇದೇ ದಾನಪಡೆದವರಿಗಿರುವ ಅಮೂಲ್ಯ ಸಂಧರ್ಭ. ಮಹಾಶಯರೆ, ಒಮ್ಮೆ ನಿಮ್ಮ ಹಳೆಯ ಶಾಲೆಯ ಕಡೆಗೆ ಮಾತೃಭಾವದ ಮಮತೆಯನ್ನು ಬೀರಿರಿ! ಇಷ್ಟು ದಿನವೂ ವಿದ್ಯಾದಾಯಿನಿಯನ್ನು ಮರೆತ ಅಪರಾಧಕ್ಕಾಗಿ ತ್ವರೆಯಿಂದ ಪ್ರಾಯಶ್ಚಿತ್ತಮಾಡಿರಿ! ತಾವು ಕೃತಘ್ನರೆಂದು ಅನ್ಯರು ತಮಗೆ ಅನ್ನದಂತೆ ಮಾಡಲು ತಾವು ಶೀಘ್ರದಲ್ಲಿಯೇ ವ್ಯವಸ್ಥೆಮಾಡುವಿರೆಂದು ನಂಬುವ

ನ. ಕಾ.

* * *

ಅಯ್ಯಾ ಪತ್ರಿಕಾಕರ್ತರೇ,

ಪಂಜ ಇಲ್ಲಿ ಕಲಮಡಕ, ಪಂಬತ್ತಾಡಿ, ಎಣ್ಮೂರು ವಗೈರೆ ಗ್ರಾಮಗಳಿಗೆಲ್ಲಾ ಕಲಮಡಕ ಗ್ರಾಮದಲ್ಲಿ ಒಂದು ಬೋರ್ಡು ಎಲಿಮೆಂಟರಿ ಶಾಲೆ ಇತ್ತು. ಅದನ್ನು ಇದೇ ಕಳೆದ ಮೇ ತಿಂಗಳಲ್ಲಿ ಸುಳ್ಯ ಸಂಪಾಜೆಗೆ ವೈಯ್ಯೋಣಾಯಿತು. ಅಂದಿನಿಂದ ಈವರೆಗೆ ಮೂರು ನಾಲ್ಕು ಸಾರಿ ಶಾಲಾ ಅಧ್ಯಕ್ಷರಿಗೆ ಸದರಿ ಗ್ರಾಮದ ರಹಿತರು ಮನವಿ ಮಾಡಿಕೊಂಡಲ್ಲಿ ಯಾವ ಉತ್ತರವೂ ಬರಲಿಲ್ಲ. ಶಾಲೆ ಕಟ್ಟೋಣ ಕಟ್ಟಲಿಕ್ಕೆ ಇಲ್ಲಿಯ ನಿವಾಸಿಕರು ಬೆದರುತ್ತಾರೆ. ಆದುದರಿಂದ ದಯಾಳುಗಳಾದ ಬೋರ್ಡಿನವರು ಗರೀಬರಾದ ನಮ್ಮ ಅರಿಕೆಯನ್ನು ಕೇಳಿ ಇಲ್ಲಿ ಒಂದು ಶಾಲೆಯನ್ನು ತೆರೆಯುವರೆಂದು ನಂಬಿರುತ್ತೇನೆ.

ಪಂಬತ್ತಾಡಿ ಗ್ರಾಮದ ಒಬ್ಬ ಬಡ ರಹಿತ.

* * *

ವಿದೇಶ ವೃತ್ತಾಂತ.

ಯುದ್ಧ ವಾರ್ತೆ:—ತಾ. ೧೫. ತುರ್ಕರ ಸೈನ್ಯವು ಗಸಿಂಜೆಗೆ ತಲಪಿ ಅಲ್ಲಿದ್ದ ಮೊಂಟನಿಗ್ರೊಯರನ್ನು ಹಿಂದಕ್ಕೆ ಓಡಿಸಿಬಿಟ್ಟಿತು. ಈಗ ಮೊಂಟೆನಿಗ್ರೊ ಸೀಮೆಯಲ್ಲಿ ಕದನಗಳು ನಡಿಯುತ್ತಿವೆ. ಮೊಂಟೆನಿಗ್ರೋದ ಪ್ರಿನ್ಸ್ ಪೀಟರರವರು ಹಿಡೆಲ್‌ಬರ್ಗಿನ ತನ್ನ ಹಳೇ ಶಾಲೆಗೆ ತಂತೀ ಬಿಟ್ಟು ತಮಗೆ ೧೦,೦೦೦ ತುರ್ಕರು ಶೆರೆಸಿಕ್ಕಿ ದೊಡ್ಡ ಜಯವಾಯಿತು ಎಂಬದಾಗಿ ತಿಳಿಸಿರುವರು.

ಮಸೆದೋನಿಯದ ಸಂಬಂಧವಾಗಿ ಬಾಲ್ಕನ ಸ್ಟೇಟುಗಳು ತುರ್ಕಿ ಸರಕಾರ್ರದವರಿಗೆ ಕಳುಹಿಸಿ ಕೊಟ್ಟ ಉತ್ತರವನ್ನಾಗಲೀ ಗ್ರೀಕ್ ಸರಕಾರದವರು ಕಳುಹಿಸಿ ಕೊಟ್ಟ ಖಂಡಿತ ಪತ್ರವನ್ನಾಗಲೀ ತುರ್ಕಿ ಸರಕಾರದವರು ಗಣ್ಯ ಮಾಡುವದಿಲ್ಲವೆಂದೂ ಅದಕ್ಕೆ ಉತ್ತರ ಕೂಡಾ ಕೊಡುವ ಹಾಗೆ ಇಲ್ಲವೆಂದೂ ತಿಳಿದು ಬರುತ್ತದೆ. ಬಲ್ಗ್ರೇಡ್ ಮತ್ತು ಸೊಫಿಯದಲ್ಲಿರುವ ತುರ್ಕಿ ಮಂತ್ರಿಗಳು ಹಿಂದೆ ಕರೆಯಿಸಲ್ಪಟ್ಟಿರುವರು. ೧೫ನೇ ಸಾಯಂಕಾಲ ೫೦೦ ತುರ್ಕರು ತಾವ್ರೊಸ್ಟ್ ಜಿಲ್ಲೆಯಲ್ಲಿ ಬುಲ್ಗೇರಿಯರ ಮೇಲೆ ಬಿದ್ದರು. ತಾ. ೧೪ನೇ ದಿನವೆಲ್ಲಾ ಸರ್ವಿಯದ ಸರಹದ್ದಿನಲ್ಲಿ ತುರ್ಕರಿಗೂ ಸರ್ವಿಯರಿಗೂ ಯುದ್ಧ ನಡೆಯುತ್ತಿತ್ತು. ತುರ್ಕರಲ್ಲಿ ೩೦೦೦ ಮಂದಿ ಇದ್ದರು. ಸರ್ವಿಯರಲ್ಲಿ ೨೪ ಮಂದಿ ಹತರಾದರು. ೪ ಮಂದಿ ಗಾಯಪಟ್ಟರು.

ತಾ. ೧೬:–ಟುಜಿ ಮತ್ತು ಸ್ಕುಟಾರಿಯ ಮಧ್ಯೆ ಇರುವ ಹೌಮ್ ಕೋಟೆಯೂ ಅದರಲ್ಲಿದ್ದ ೬೨ ಆಫೀಸರರ ಸಹಿತವಾದ ದುರ್ಗರಕ್ಷಕ ಸೈನ್ಯವೂ ಮೊಂಟೆನಿಗ್ರೋಯರ ವಶವಾಯಿತು. ಡಿಕ್ಟಿಚ್ ಮತ್ತು ಟುಜಿಯಲ್ಲಿ ಶೆರೆಯಾದ ತುರ್ಕಿ ಸೈನೀಕರನ್ನು ಮೊಂಟೆನಿಗ್ರೋದ ನಿಕಲೊಸ್ ಅರಸರು ಆದರದಿಂದ ಬರ ಮಾಡಿಕೊಂಡು ಅವರಿಗೆ ಕೈಕೊಟ್ಟು ವಂದಿಸಿ ಅವರವರ ಆಯುಧಗಳನ್ನು ಎತ್ತಿಕೊಳ್ಳಲಿಕ್ಕೆ ಹೇಳಿದರು.

ತಾ. ೧೭. ಮೊಂಟೆನಿಗ್ರೊಯರು ನಿನ್ನೆ ಬೆರೇನವನ್ನು ಹಿಡಿದು ೧೪ ಫಿರಂಗಿಗಳನ್ನು ವಶ ಮಾಡಿಕೊಂಡರು. ೭೦೦ ಮಂದಿಯನ್ನು ಶೆರೆ ಹಿಡಿದರು. ಈ ಯುದ್ಧದಲ್ಲಿ ಮೊಂಟೆನಿಗ್ರೋಯರಲ್ಲಿ ೧೦ ಮಂದಿ ಹತರಾದರು, ೩೦ ಮಂದಿ ಗಾಯವೊಡೆದರು.

ಬಲ್ಗೇರಿಯರು ಮತ್ತು ಸರ್ವಿಯ ಸಂಸ್ಥಾನಗಳು ತುರ್ಕಿ ಸರಕಾರದವರಿಗೆ ಕಳುಹಿಸಿ ಕೊಟ್ಟ ಪತ್ರಗಳು ಉತ್ತರ ಕೊಡಲಿಕ್ಕೆ ಅಯೋಗ್ಯವಾದವುಗಳೆಂದು ತುರ್ಕಿ ಸರಕಾರದವರು ಟೀಕಿಸಿರುವರು. ಈ ಸಣ್ಣ ಸಂಸ್ಥಾನಗಳು ಶ್ರೇಷ್ಠ ರಾಜ್ಯಗಳವರನ್ನು ಸಹಾ ಲಕ್ಷಮಾಡದೆ ಹೋದದ್ದರಿಂದ ಸಂಧಾನವು ಶ್ರೇಷ್ಠ ರಾಜ್ಯಗಳ ಮುಖಾಂತರವೇ ಆಗಬೇಕೆಂದು ತುರ್ಕೀ ಸರಕಾರದ ಕೋರಿಕೆಯಾಗಿದೆ.

ತುರ್ಕಿಯರ ಯುದ್ಧ ಹಡಗಗಳು ಡರ್ಡನೆಲ್ಸಿನಿಂದ ಬೊಸ್ಪರಸಿಗೆ ಹೋಗಿರುವವು. ಬುಲ್ಗೇರಿಯದ ಕರಾವಳಿಗೆ ದೌಡುಮಾಡುವುದು ಈ ಹಡಗಗಳನ್ನು ಕಳುಹಿಸಿದ ಉದ್ದೇಶವಾಗಿರಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಟರ್ಕಿಯವರು ಹಿಡಿದ ಗ್ರೇಕ ಸಾಹುಕಾರರ ಹಡಗಗಳನ್ನು ಬಿಟ್ಟು ಕೊಡುವರೆ ನಿಷ್ಕರ್ಷಿಸಿರುವರು.

ತಾ. ೧೭:–ತುರ್ಕಿಯವರು ಸರ್ವಿಯ ಮತ್ತು ಬುಲ್ಗೇರಿಯದವರೊಡನೆ ಯುದ್ಧ ಪ್ರಾರಂಭ ಮಾಡಿದರು. ಬುಲ್ಗೇರಿಯದ ಅರಸನು ನಿಸಿ ಎಂಬಲ್ಲಿಗೆ ಹೋಗಿರುವರು. ಸರ್ವಿಯರು ಪ್ರಿಜಿಪೋಲ್ಜಿ ಎಂಬಲ್ಲಿ ಅಲ್ಬಾನಿಯರನ್ನು ಸೋಲಿಸಿದರು. ಅಲ್ಬಾನಿಯರಲ್ಲಿ ೨೦೦ ಮಂದಿ ಹತರಾದರು. ಸರ್ವಿಯರೂ ತುರ್ಕರ ಸಂಗಡ ಯುದ್ಧ ಪ್ರಾರಂಭ ಮಾಡಿದ್ದೇವೆಂದು ಸಾರಿಸಿದ್ಧಾರೆ.

ಯುದ್ಧಕ್ಕೆ ಪ್ರವೇಶವಾಗದ ಸ್ತ್ರೀಪುರುಷರ ಜೀವದ ಮತ್ತು ಆಸ್ತಿಯ ವಿಷಯ ಜಾಗ್ರತೆ ತಕ್ಕೊಳ್ಳಬೇಕೆಂದೂ ಮುಖ್ಯವಾಗಿ ಹೆಂಗಸರು ಮಕ್ಕಳನ್ನು ದಯಾದೃಷ್ಟಿಯಿಂದ ನೋಡಬೇಕೆಂದೂ ತುರ್ಕಿ ಸುಲ್ತಾನರು ರಾಜಶಾಸನ ಹೊರಡಿಸಿರುವರು.

ಕಠಿಣ ಕಾಳಗವಾದನಂತರ ತಾ. ೧೬ನೇ ಸಾಯಂಕಾಲ ಬೆರಾನದಲ್ಲಿ ತುರ್ಕರು ಶರಣಾಗತರಾದರು. ಈ ಯುದ್ಧದಲ್ಲಿ ೭೦೦೦ ತುರ್ಕರು ತಲೆತಪ್ಪಿಸಿಕೊಂಡು ಓಡಿ ಹೋದರು. ೧೨೦೦ ಮಂದಿ ಮೊಂಟೆನಿಗ್ರೊಯರಿಗೆ ಸಿಕ್ಕಿಬಿದ್ದರು. ೧೪ ಕ್ರುಪ್ ಕೋವಿಗಳೂ ಆಯುಧ ಸಾಮಾಗ್ರಿಗಳೂ ೨ ತಿಂಗಳಿಗೆ ಸಾಕಾಗುವ ಆಹಾರ ಜೀನಸುಗಳೂ ಮೊಂಟೆನಿಗ್ರೊಯರಿಗೆ ಸಿಕ್ಕಿತು. ಮೊಂಟೆನಿಗ್ರೊಯರು ಪಟ್ಟಣವನ್ನು ಪ್ರವೇಶಿಸುತ್ತಲೇ ಅಲ್ಲಿಯ ನಿವಾಸಿಗಳು ಸಂತೋಷದಿಂದ ಕಂಬನಿಸುರಿಸುತ್ತಾ ಸ್ವಾಗತ ಮಾಡಿಕೊಂಡರು.

ಮೊಂಟೆನಿಗ್ರೊ ಆಸ್ಪತ್ರೆಗಳಲ್ಲಿ ಸ್ಥಳವಿಲ್ಲದೆ ಹೋಗಿಯದೆ. ಅದಲ್ಲದೆ ಶೆರೆ ಹಿಡಿಯಲ್ಪಟ್ಟ ಸಾವಿರಾರು ತುರ್ಕರನ್ನು ಸಾಕುವ ಪ್ರಸಂಗವೂ ಮೊಂಟೆನಿಗ್ರೋಯರಿಗೆ ಭಾರವಾಗಿಯೇ ಇದೆ.

ತುರ್ಕಿಯವರು ಬಾಡಿಗೆಗೆ ಹಿಡಿದಿದ್ದ ರುಮೇನಿಯದ 'ಪ್ರಿನ್ಸೆಸ್ ಮೇರಿ' ಎಂಬ ಹಡಗವನ್ನು ಬುಲ್ಗೇರಿಯರು ಹಿಡಿದರು. ಆದರೆ ರೊಮೇನಿಯ ಸರಕಾರದವರು ಹಡಗವನ್ನು ಬಿಡಬೇಕೆಂದು ಬಲ್ಗಾರಿಯ ಸರಕಾರದವರನ್ನು ಕೇಳಿಕೊಂಡದ್ದರಿಂದ ಹಡಗವು ಬಿಡಲ್ಪಟ್ಟಿತು.

ತುರ್ಕಿ ಮತ್ತು ಗ್ರೇಕರಿಗೂ ಯುದ್ಧ ಪ್ರಾರಂಭವಾಯಿತು. ತುರ್ಕರ ಮಂತ್ರಿಯು ಅಥೇನ್ಸ್ ಪಟ್ಟಣವನ್ನು ಬಿಟ್ಟು ಹೋದನು.

ಯುದ್ಧ ಕಾಲದಲ್ಲಿ ದರ್ಡೆನೆಲ್ಸನ್ನು ವ್ಯಾಪಾರದ ಹಡಗಗಳಿಗೆ ಮುಚ್ಚ ಕೂಡದೆಂದು ರುಷ್ಯರು ತುರ್ಕಿ ಸರಕಾರದವರಿಗೆ ಪತ್ರ ಬರದಿರುವರು.

ತಾ. ೧೯:–ಟರ್ಕಿ ಕರಾವಳಿಯನ್ನು ಅಡ್ಡ ಕಟ್ಟುವೆವೆಂದು ಗ್ರೇಕ ಸರಕಾರದವರು ಶ್ರೇಷ್ಠ ರಾಜ್ಯಗಳಿಗೆ ತಿಳಿಸಿದ್ದಾರೆ. ತುರ್ಕಿಗೆ ಸೇರಿರುವ ಕ್ರೇತ ದ್ವೀಪದ ಪ್ರಜೆಗಳ ಸೈನ್ಯದ ಒಂದು ಭಾಗವು ಗ್ರೇಕರ ಮುಖ್ಯ ಪಟ್ಟಣವಾದ ಅಥೇನ್ಸಿಗೆ ಬಂದು ಗ್ರೇಕರಿಗೆ ಸೇರಿರುವದು.

ತಾ. ೨೦:–ಅಲ್ಬಾನಿನ ಸೈನ್ಯಾಧಿಪತಿಯಾದ ಹಸೀಮಬೇರವರು ತನ್ನ ಕೈಕೆಳಗಿದ್ದ ೨೦೦೦ ಅಲ್ಬಾನಿಯರೊಡನೆ ಬೆರೇನಕ್ಕೆ ಬಂದು ಅದನ್ನು ಮೊಂಟೆನಿಗ್ರೋಯರಿಂದ ಹಿಂದೆ ಪಡಕೊಳ್ಳಲು ಪ್ರಯತ್ನಿಸಿದರು. ಆದರೆ ಮೊಂಟೆನಿಗ್ರೊಯರು ಅವರ ಸೈನ್ಯವನ್ನು ಸೋಲಿಸಿ ೨೮೦ ಮಂದಿಯನ್ನು ಶೆರೆ ಹಿಡಿದರು. ಮೊಂಟೆನಿಗ್ರೊಯರು ಎರಡು ದಿವಸಗಳ ಯುದ್ಧಮಾಡಿ ಪಾಲ್ವ ಎಂಬ ಸ್ಥಳವನ್ನೂ ಹಿಡಿದರು. ಗಸಿಂಜೆಯೂ ಮೊಂಟೆನಿಗ್ರೊಯರ ವಶವಾಯಿತು.

ಮೆಲ್‌ರೂನ ಎಂಬಲ್ಲಿ ಗ್ರೀಕರು ತುರ್ಕರ ಮೇಲೆ ಬಿದ್ದಿರುವರು. ಯುದ್ಧ ನಡೆಯುತ್ತಿದೆ. ಬುಲ್ಗೇರಿಯರ ೩ ಸೈನ್ಯವು ಅಡ್ರಿನೋಪಲಿನಲ್ಲಿರುವ ತುರ್ಕರ ೨೦,೦೦೦ ದುರ್ಗಪಾಲಕ ಸೈನ್ಯದೊಡನೆ ಯುದ್ಧ ಮಾಡಲು ಹೋಗಿಯದೆ. ಅಲ್ಲಿ ದೊಡ್ಡ ಯುದ್ಧ ಪ್ರಾರಂಭವಾಯಿತು. ಅಡ್ರಿನೋಪಲಿನ ರೈಲ್ವೇಯ ಕಡೆಗೆ ಹೋಗುವ ತುರ್ಕರ ಮುಖ್ಯ ಸ್ಥಳವಾದ ಮುಸ್ತಾಪಪಾಶ ಎಂಬ ಸ್ಥಳವನ್ನು ಬುಲ್ಗೇರಿಯರು ವಶಮಾಡಿಕೊಂಡರು. ಪಿಲಿಪೊಪ್ಪೊಲಿಸ್ ಎಂಬಲ್ಲಿರುವ ಪ್ರಾಮುಖ್ಯವಾದ ಎರಡು ರೈಲ್ವೇ ಸಂಕಗಳನ್ನು ಬುಲ್ಗೇರಿಯರು ಕಡದು ಹಾಕಿರುವರು.

ಸರ್ವಿಯರು ವಶ ಮಾಡಿಕೊಂಡ ತುರ್ಕರ ಪಟ್ಟಣವಾದ ಪ್ರಿಜಿಪೂಜಿ ಎಂಬ ಪಟ್ಟಣವನ್ನು ತುರ್ಕರು ಪುನಃ ತೆಗೆದುಕೊಂಡು ಸರ್ವಿಯರನ್ನು ಸರಹದ್ದಿನಿಂದ ಅಟ್ಟಿಬಿಟ್ಟರೆಂದೂ ಸರ್ವಿಯರಲ್ಲಿ ಅಪರಿಮಿತವಾದ ನಷ್ಟವಾಗಿಯದೆಂದೂ ಕನ್‌ಸ್ತಂತಿನೋಪಲಿನಲ್ಲಿ ವಾರ್ತೆ ಇದೆ.

ಸರ್ವಿಯರ ಒಂದು ಸೈನ್ಯವು ಬುಲ್ಗೇರಿಯರ ಸೈನ್ಯದೊಡನೆ ಸೇರುವದು. ಉಳಿದ ಮೂರು ಸೈನ್ಯವು ಹಳೇ ಸರ್ವಿಯಕ್ಕೆ ದಂಡೆತ್ತಿಕೊಂಡು ಹೋಗಿಯದೆ. ಅಲ್ಲಿ ದೊಡ್ಡ ಯುದ್ಧ ಪ್ರಾರಂಭವಾಗಿಯದೆ. ಸರ್ವಿಯರು ಪ್ರಿಸ್ತೀನ ಎಂಬ ದೊಡ್ಡ ಪಟ್ಟಣವನ್ನು ಹಿಡಕೊಂಡರು. ಈ ವಾರ್ತೆಯು ನಿಜವಲ್ಲವೆಂದೂ ಅವರು ಒಂದು ಸಣ್ಣ ಪಟ್ಟಣವನ್ನು ಮಾತ್ರ ಹಿಡದಿದ್ದಾರೆಂದೂ ತುರ್ಕರು ಹೇಳುವರು.

ತುರ್ಕರ ದೇಶದ ವ್ರಾನಿಯದ ಸುತ್ತಮುತ್ತಲಿರುವ ಕಂದಕಗಳೆಲ್ಲಾ ಸರ್ವಿಯರ ಕೈಸೇರಿಯದೆ ಎಂಬದಾಗಿ ಸರ್ವಿಯದಲ್ಲಿ ವಾರ್ತೆ ಇದೆ. ತುರ್ಕಿಯರ ಯುದ್ಧ ಹಡಗವು ವಾರ್ನ ಮತ್ತು ಬರ್ಗಾಸನ್ನು ಅಡ್ಡಕಟ್ಟಿರುವದು.

ಮಸೆದೋನಿಯದ ಪ್ರಿನ್ ಎಂಬ ಜಿಲ್ಲೆಯ ೨೦೦೦ ಮಂದಿ ಒಕ್ಕಲಿಗರು ಆಯುಧ ಪಾಣಿಗಳಾಗಿ ತುರ್ಕರಿಗೆ ವಿರೋಧವಾಗಿ ಎದ್ದಿರುವರು. ಇವರ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತಿದೆ.

ತುರ್ಕಿ ಸೈನ್ಯದಲ್ಲಿರುವ ೨೫ ವರ್ಷದ ಮೇಲಿನ ಕ್ರೈಸ್ತರು ಕೆಲಸದಿಂದ ನಿವೃತಿ ಮಾಡಲ್ಪಟ್ಟಿರುವರು.

ಬುಲ್ಗೇರಿಯರು ಈ ಯುದ್ಧದಲ್ಲಿ ಜಯ ಪ್ರಧರಾದರೆ ತಮಗೆ ಕೇಡಾದೀತೆಂಬ ಭಯದಿಂದ ರುಮೇನಿಯರು ವ್ಯೂಹ ಕೂಡಿಸುತ್ತಿದ್ದಾರೆ.

ತಾ. ೨೧. ಬುಲ್ಗೇರಿಯರ ಮುಖ್ಯ ಸೈನ್ಯವು ಅಡ್ರಿನೋಪಲಿಗೆ ಹೋಗುತ್ತಿರುವಾಗ ಮತ್ತೊಂದು ಸೈನ್ಯವು ಸೊಫಿಯದ ದಕ್ಷಿಣ ಭಾಗದತ್ತ ಕಡೆ ಮುಂದರಿದು ಸ್ಟುಮ ಮತ್ತು ವೆಸ್ಟ ಕಣಿವೆಗಳಿಗೆ ಹೋಗಿಯದೆ. ಮೂರನೇ ಒಂದು ಸೈನ್ಯವು ಬರ್ಗಾಸ್ ದಕ್ಷಿಣದಲ್ಲಿರುವ ಟರ್ನೊವೊ ಎಂಬಲ್ಲಿದೆ. ಇಷ್ಟರ ವರೆಗೆ ಬಲ್ಗೇರಿಯರು ಹಿಮ್ಮೆಟ್ಟಲ್ಪಡಲಿಲ್ಲ. ಆದರೆ ತುರ್ಕರು ಎಲ್ಲಾ ಕಡೆಯಲ್ಲಿಯೂ ಹಿಮ್ಮೆಟ್ಟಲ್ಪಡುತ್ತಿದ್ದಾರೆ.

ಮುಸ್ತಾಪ ಪಾಶದಲ್ಲಿ ತುರ್ಕರು ೨೦೦ ಟನ್ ಆಹಾರ ಸಾಮಾಗ್ರಿಗಳನ್ನೂ ಹೆಚ್ಚಾದ ಯುದ್ಧ ಸಾಮಾಗ್ರಿಗಳನ್ನೂ ಬಿಟ್ಟು ಯುದ್ಧರಂಗದಿಂದ ಓಡಿ ಹೋಗಿರುವರು.

ತಾ. ೨೦ರಲ್ಲು ಈ-ಯುದ್ಧದ ಸಂಬಂಧ ಸಹತಾಪ ತೋರಿಸುವುದಕ್ಕಾಗಿ ಮುಂಬಾಯಿಯಲ್ಲಿ ೫೦೦೦ ಮಂದಿ ನೆರೆದ ಒಂದು ಮುಸಲ್ಮಾನರ ಮಹಾ ಸಭೆಯು ಕೂಡಿತು.

* * *

ತಾ. ೧೯ರಲ್ಲು ಪಿಲಿಪೈನ್ ದ್ವೀಪದಲ್ಲಿ ಸುಂಟರ ಗಾಳಿಯು ಬೀಸಿ ೪೦೦೦ ಮಂದಿ ಮೃತಪಟ್ಟರು. ಉಂಟಾದ ನಷ್ಟ ೧೦ ಮಿಲಿಯ ಪವನುಗಳಿಗೆ ಮಿಕ್ಕಿರುವದು. ಅದೇ ದ್ವೀಪದ ಲೈಟ್ ಎಂಬಲ್ಲಿ ೨೦೦೦ ಮನೆಗಳು ನೆಲಸಮವಾದವು. ಸುಮಾರು ಮಿಲಿಯ ಪವನುಗಳು ಉತ್ಪತ್ತಿಯಾಗುವ ಪೈರು ಹಾಳಾಯಿತು.

* * *

ಅಮೇರಿಕದ ಯುನೈಟೆಡ್ ಸ್ಟೇಟಿನ ಮಾಜಿ ಪ್ರೆಸಿಡೆಂಟರಾದ ರೊಸ್‌ವೆಲ್ಟರವರು ಮಿಲ್‌ವಾಕಿ ಎಂಬಲ್ಲಿಗೆ ಭಾಷಣ ಕೊಡಲಿಕ್ಕೆ ಹೋಗುವಾಗ ಯಾರೋ ಅವರಿಗೆ

ಗುಂಡು ಹೊಡೆದರು. ರೊಸ್‌ವೆಲ್ಟರವರು ಈ ಪೆಟ್ಟನ್ನು ಸಹಿಸಿಕೊಂಡು ವೈದ್ಯರನ್ನು ಪರೀಕ್ಷಿಸ ಬಿಡದೆ ಮುಂದಕ್ಕೆ ಹೋದರು. ಗುಂಡಿನ ಏಟಿನಿಂದ ಇವರ ದೇಹದ ರಕ್ತವು ಹೋಗಿ ಬಲಹೀನವಾಗಿದ್ದರೂ ಇವರು ಒಂದು ತಾಸು ಭಾಷಣ ಕೊಟ್ಟರು. ಅನಂತರ ವೈದ್ಯರು ಶಸ್ತ್ರ ಪ್ರಯೋಗ ಮಾಡುವಾಗಲೂ ಇವರು ರಾಜಕೀಯ ವಿಷಯಗಳನ್ನು ಕುರಿತು ವೈದ್ಯರ ಕೂಡೆ ಮಾತನ್ನಾಡುತ್ತಿದ್ದರು. ಇವರಿಗೆ ಗುಂಡು ಹೊಡೆದವನು ಒಬ್ಬ ಬೆವೇರಿಯದ ಗುತ್ತೆದಾರನು. ಇವನು ಹುಚ್ಚನಂತೆ ಇದ್ದಾನೆ. ರೊಸ್‌ವೆಲ್ಟರನ್ನು ಕೊಲ್ಲಲು ಒಂದು ವಾರದಿಂದ ಪ್ರಯತ್ನ ಮಾಡುತ್ತಿದ್ದೆನು ಎಂಬದಾಗಿ ಅರಿಕೆ ಮಾಡಿರುವನು. ರೊಸ್‌ವೆಲ್ಟರು ಹೊಟೇಲಿನಿಂದ ಮೋಟೊರು ಗಾಡಿಗೆ ಹತ್ತಲಿಕ್ಕಿರುವಾಗ ಈ ಗಾತುಕನು ಅವರಿಗೆ ಗುರಿ ಇಟ್ಟು ಗುಂಡು ಹಾರಿಸಿದನು. ಗುಂಡು ಇವರ ಮೈಮೇಲಿದ್ದ ಭಾರವಾದ ಸೈನ್ಯದ ಅಂಗಿಯನ್ನು ತೂರಿಕೊಂಡು ಅಂಗೀ ಜೇಲದಲ್ಲಿದ್ದ ಇವರ ಭಾಷಣದ ಹಸ್ತ ಪತ್ರಿಕೆಯನ್ನು ದಾಟಿ ಎಡ ದಿಕ್ಕಿನ ಎದೆಯೊಳಗೆ ನಾಟಿ ಇವರ ದಪ್ಪನಾದ ಸ್ನಾಯುಗಳೊಳಗೆ ಹೊತುಬಿಟ್ಟಿತು. ರೊಸ್‌ವೆಲ್ಟರ ಸೆಕ್ರಟರಿಯು ಗಾತುಕನನ್ನು ಹಿಡಿದು ನೆಲಕ್ಕೆ ಅಪ್ಪಳಿಸಿದರು. ರೊಸ್‌ವೆಲ್ಟರು ಗಾಡಿಗೆ ಹತ್ತಿ ಸಭೆಗೆ ತಡವಾದ್ದರಿಂದ ಬೇಗನೇ ಹೋಗುವ ಎಂದೂ ತನಗೆ ಗಾಯವಾಗಲಿಲ್ಲವೆಂದೂ ಹೇಳಿದರು. ಆದರೆ ಸೆಕ್ರಟರಿಯು ಮೇಲಂಗಿಯಲ್ಲಿ ತೂತಾಗಿಯದೆ ಎಂದು ಹೇಳಲು ರೊಸ್‌ವೆಲ್ಟರು ಆದ ಗಾಯವು ದೊಡ್ಡದಲ್ಲವೆಂದರು. ಸಭೆ ಕೂಡತಕ್ಕ ಸ್ಥಳಕ್ಕೆ ಮುಟ್ಟಿದಾಕ್ಷಣ ರೊಸ್‌ವೆಲ್ಟರು ಸಭಾಸದನಕ್ಕೆ ಹತ್ತಿ ತನಗೆ ದಾರಿಯಲ್ಲಿ ಬಂದೊದಗಿದ ವಿಪತ್ತನ್ನು ಹೇಳಿ ದೀರ್ಘ ಭಾಷಣ ಕೊಡಲಿಕ್ಕೆ ಅಸಕ್ತನಾಗಿದ್ದೇನೆಂದರು. ರೊಸ್‌ವೆಲ್ಟರ ಒಳ ಅಂಗಿಯು ರಕ್ತದಿಂದ ಮುದ್ದೆಯಾಗಿತ್ತು. ಗಾಯವು ೩ ಅಂಗುಲ ಗಾತ್ರವಿತ್ತು. ಆದರೆ ಇವರ ಸ್ನಾಯುಗಳು ಬಹಳ ಉಬ್ಬಿ ಬಲವುಳ್ಳವುಗಳಾಗಿದ್ದದರಿಂದ ರೊಸ್‌ವೆಲ್ಟರ ಜೀವ ಉಳಿಯುವ ಹಾಗಾಯಿತು. ರೊಸ್‌ವೆಲ್ಟರು ಆಸ್ಪತ್ರಿಯಲ್ಲಿ ೧೦ ದಿವಸ ಶೈತೋಪಚಾರ ಹೊಂದಬೇಕಾಗುವದು.

ಉತ್ತರ ಹಿಂದೂಸ್ಥಾನ.

ಬರೋಡ ಮಹಾರಾಜರಾದ ಗಾಯಕವಾಡರು ದೇಶೀಯ ರಾಜರುಗಳ ಪೈಕಿ ಅಗ್ರಗಣ್ಯರೆಂದೆಣಿಸಲ್ಪಟ್ಟಿರುವರು. ಇವರು ಯೂರೋಪು ಮತ್ತು ಅಮೇರಿಕಾ ಖಂಡಗಳಲ್ಲೆಲ್ಲಾ ಸಂಚಾರ ಮಾಡಿಕೊಂಡು ಆ ದೇಶಗಳ ಮಾಹಿತಿಯನ್ನು ಪಡಕೊಂಡು ಬಂದಿರುವರಲ್ಲದೆ ಹಿಂದೂಸ್ಥಾನದ ಎಲ್ಲಾ ಭಾಗಗಳನ್ನು ಸಂದರ್ಶಿಸಿರುವರು. ಇವರ ರಾಜ್ಯಭಾರದಲ್ಲಿ ಪ್ರಜಾ ನೆಮ್ಮದಿಗೆ ಸ್ವಲ್ಪವೂ ಭಂಗಬಾರದಂತೆ ನೋಡಿಕೊಂಡು ಪ್ರಜೆಗಳ ಕ್ಷೇಮ ಚಿಂತನೆಯಲ್ಲಿದ್ದು ಪುರೋಭಿವೃದ್ಧಿಗೆ ಬೇಕಾದ ಸೌಲಭ್ಯಗಳನ್ನು ಮಾಡಿ ಕೊಟ್ಟಿರುವರು. ವಿದ್ಯಾಭ್ಯಾಸಕ್ಕೆ ಬರೋಡೆಯು ಇಂಡಿಯಾ ಸರಕಾರದವರು ಮೊದಲ್ಗೊಂಡು ಇತರ ಎಲ್ಲಾ ದೇಶೀಯ ರಾಜಭಾರಗಳಿಗೂ ಮೇಲುಪಂಕ್ತಿಯಾಗಿರುವದು. ಕಡ್ಡಾಯ ಮತ್ತು ಉಚಿತ ಪ್ರ್ಯಾಮರಿ ವಿದ್ಯಾಭ್ಯಾಸದ ಜಾರಿಯು ಈ ರಾಜ್ಯದಲ್ಲಿ ಮಾತ್ರವಿರುವುದು. ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ಇವರು ಕೊಟ್ಟಿರುವಷ್ಟು ಪ್ರೋತ್ಸಾಹವು ಇತರ ಯಾವ ದೇಶೀಯ ರಾಜರುಗಳಿಂದಲೂ ಕೊಡಲ್ಪಟ್ಟಿಲ್ಲ.

* * *

ವಂಗ ವಿಭಜನೆಯ ದಿವಸವು ಈ ಸಾರಿ ಕಲ್ಕತ್ತೆಯಲ್ಲಿ ಅಷ್ಟೊಂದು ಆಡಂಬರದಿಂದ ಆಚರಿಸಲ್ಪಡಲಿಲ್ಲ. ಕೆಲವು ಮಂದಿ ಮಾತ್ರ ಒಂದು ಸಣ್ಣ ಸಭೆಕೂಡಿ ಆಚರಿಸಿದರು.

* * *

ಕರಾಚಿಯ ಕಮಾಲ್ ಎಂಬ ಗ್ರಾಮದಲ್ಲಿ ಪೋಲೀಸಿನವರೂ ಒಬ್ಬ ಸಬ್ ಇನ್‌ಸ್ಪೆಕ್ಟರನೂ ಕೂಡಿ ಅಲ್ಲಿಯ ಒಬ್ಬ ಜಮೀನ್ದಾರನನ್ನು ಹೆದರಿಸಿ ೩೦೦ ರೂಪಾಯಿ ತಿಂದಿದ್ದಾರೆಂಬದಾಗಿ ಆಪಾದಿಸಲ್ಪಟ್ಟಿರುವರು. ಆ ಗ್ರಾಮದಲ್ಲಿ ಒಂದು ಕಳವು ನಡೆದಾಗ ಪೋಲೀಸಿನವರು ಅಲ್ಲಿಗೆ ಹೋಗಿ ಕಳ್ಳರನ್ನು ಪತ್ತೆಮಾಡಿ ಕೊಡುವರೆ ಸಹಾಯ ಮಾಡಬೇಕೆಂದು ಸದರಿ ಜಮೀನ್ದಾರನನ್ನು ಕೇಳಿಕೊಂಡರು. ಆದರೆ ಇದು ಈ ಜಮೀನ್ದಾರನಿಂದ ಸಾಧ್ಯವಾಗದ್ದರಿಂದ ಇತರ ಜಮೀನ್ದಾರರು ಪೋಲೀಸಿನವರಿಗೆ ಸಹಾಯ ಮಾಡಿ ಕಳ್ಳರನ್ನು ಪತ್ತೆಮಾಡಿ ಕೊಟ್ಟರು. ಅನಂತರ ಪೋಲೀಸಿನವರು ಈ ಜಮೀನ್ದಾರನ ಬಳಿಗೆ ಪುನಃ ಹೋಗಿ ನೀನು ಕಳ್ಳರಿಗೆ ಆಶ್ರಯ ಕೊಟ್ಟಿರುತ್ತಿ ಎಂಬದಾಗಿ ಪೋಲೀಸ್ ಸುಪರಿಂಟೆಂಡೆಂಟರವರಿಗೆ ರಿಪೋರ್ಟು ಮಾಡುತ್ತೇವೆಂದು ಹೆದರಿಸಿ ಆತನಿಂದ ೩೦೦ ರೂಪಾಯಿ ತೆಗೆದುಕೊಂಡರು ಎಂಬದಾಗಿ ಆಪಾದಿಸಲ್ಪಟ್ಟಿರುವರು.

* * *

ಇದೇ ತಿಂಗಳ ತಾ. ೧೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೨೦೫ ಮಂದಿಗೆ ಪ್ಲೇಗ ಬೇನೆಯು ಸೊಂಕಿ ೧೫೬೧ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿಯಲ್ಲಿ ೮೧೦; ಮದ್ರಾಸ್ ೫೯; ಬಂಗಾಳ ೫; ಬಿಹಾರ್ ೫೬; ಸಂಯುಕ್ತ ಸಂಸ್ಥಾನ ೧೪೬; ಪಂಜಾಬು ೨೦; ಬರ್ಮ ೧೫; ಮಧ್ಯ ಸಂಸ್ಥಾನ ೪; ಮೈಸೂರು ೧೦೬; ಹೈದರಾಬಾದು ೨೧೮; ಮಧ್ಯ ಹಿಂದೂಸ್ಥಾನ ೨೩; ರಜಪುತಾನ ೧೦೦ ಮರಣಗಳಾದವು.

* * *

ಹಿಂದೂಸ್ಥಾನದ ಪೋಸ್ಟಾಫೀಸುಗಳ ೧೯೧೧-೧೨ನೇ ಇಸವಿಯ ವರದಿಯು ಪ್ರಕಟವಾಗಿರುವದು. ಇದರಲ್ಲಿ ತೋರುವ ಕೆಲವು ವಿಷಯಗಳಿಂದ ಪೋಸ್ಟಾಪೀಸುಗಳ ಕೆಲಸದ ಮಹತ್ವವು ತಿಳಿದುಬರುವದು. ೧೯೧೧-೧೨ನೇ ವರ್ಷಾಂತ್ಯದಲ್ಲಿ ಪೋಸ್ಟಾಫೀಸಿನಲ್ಲಿ ಕೆಲಸ ಮಾಡುವವರ ಸಂಖ್ಯೆ ೯೨,೭೫೫; ಪೋಸ್ಟಾಫೀಸುಗಳ ಸಂಖ್ಯೆ ೧೮,೮೦೧; ಇಡೀ ವರ್ಷದಲ್ಲಿ ೯೬೫ ಮಿಲಿಯ ಪಾರ್ಸೆಲುಗಳು, ಈ ಪೈಕಿ ೨೨ ಮಿಲಿಯ ರಿಜಿಸ್ಟರ್ಡ್ ಪಾರ್ಸೆಲುಗಳು ಕೊಡೋಣಾದವು. ಕಾಗದಗಳಿಗೆ ಹಚ್ಚುವ ಉದ್ದೇಶಕ್ಕಾಗಿಯೇ ೧,೭೦೦,೦೦೦ ಪವನುಗಳ ಚೀಟುಗಳು ಕೊಂಡುಕೊಳ್ಳೋಣಾಯಿತು. 27⅛ ಮಿಲಿಯ ಮನಿ ಆರ್ಡರುಗಳು ಮಾಡಲ್ಪಟ್ಟವು. ಈ ಮನಿಯಾರ್ಡರುಗಳ ಒಟ್ಟು ಮೊಬಲಗು 32⅓ ಮಿಲಿಯ ಪವನುಗಳು. 6⅓ನೇ ಮಿಲಿಯ ಪವನುಗಗು ವ್ಯಾಪಾರಸ್ಥರು ವಿ. ಪಿ. ಮೂಲಕ ಕಳುಹಿಸಿದ ಸಾಮಾನುಗಳ ಮೂಲಕ ಕಳುಹಿಸೋಣಾಯಿತು. 1¾ ಮಿಲಿಯ ಇನ್ಶೂರು ಮಾಡಿದ ಸಾಮಾನುಗಳು (ಸುಮಾರು 31¾ ಮಿಲಿಯ ಪವನು ಕ್ರಯಬಾಳುವಂಥವುಗಳು) ಕಳುಹಿಸೋಣಾಯಿತು. ೯,೫೬೨ ರಾತ್ಲ ಕ್ವಾಯಿನಾನು ಔಷಧ ಮಾರಲ್ಪಟ್ಟಿತು. ಪೋಸ್ಟು ಆಫೀಸಿನ ಮೂಲಕ ತಂತೀ ವಾರ್ತೆಗಳನ್ನು ಕಳುಹಿಸಿದ್ದರಿಂದ ೨೮೦,೬೩೬ ಪವನುಗಳು ದೊರಕಿದವು. ಇಂಥಾ ಆಫೀಸುಗಳಲ್ಲಿ ೮೮,೬೭೮ ಪವನು ಖರ್ಚು ಆಯಿತು. ೧೯೧೨ನೇ ಇಸವಿ ಮಾರ್ಚಿ ೩೧ನೇಗೆ ಪೋಸ್ಟಾಪೀಸುಗಳಲ್ಲಿ ೧,೫೦೦,೮೫೪ ಸೇವಿಂಗ್ ಬೇಂಕ್ ಪುಸ್ತಕಗಳು ತೆರೆಯೋಣಾದವು. ಇವುಗಳಲ್ಲಿ ಒಟ್ಟು ೧೨॥ ಮಿಲಿಯ ಪವನುಗಳಿವೆ. ಗವರ್ನಮೆಂಟ್ ಪ್ರೊಮಿಸರಿ ನೋಟಿನ ಮೇಲೆ ೫೧೭,೧೫೪ ಪವನುಗಳು ಪೋಸ್ಟಾಫೀಸ್ ಮತ್ತು ಎಕೌಂಟಾಂಟ್ ಜನರಲರ ಭದ್ರತೆಯಲ್ಲಿವೆ. ೩೨,೦೭೫ ಪೋಸ್ಟಲ್ ಲ್ಯಾಫ್ ಇನ್ಶೂರೆನ್ಸಿನ ವಿಮಾಪತ್ರಗಳು ಇವೆ. ಇವೆಲ್ಲಾ ಒಟ್ಟಿಗೆ ೨,೦೨೨,೫೩೨ ಪವನುಗಳಿಗೆ ವಿಮೇಮಾಡಲ್ಪಟ್ಟವುಗಳು. ವರ್ಷದಲ್ಲಿ ಆದ ಒಟ್ಟು ಹುಟ್ಟು ೨,೧೯೯,೨೦೦ ಪವನು; ಖರ್ಚು ೨,೦೫೯,೩೫೬ ಪವನು. ಲಂಡನಿನಿಂದ ಮುಂಬಾಯಿಗೆ ೧೩ ದಿವಸ, ೫ ಗಂಟೆ, ೪೫ ನಿಮಿಷದೊಳಗೆ ಟಪ್ಪಾಲು ಬಂದು ತಲಪುತ್ತದೆ. ವರ್ಷದ ಸರಾಸರಿ ಲೆಕ್ಕ ನೋಡುವುದಾದರೆ ೧೩ ದಿವಸ ೯ ಗಂಟೆ ೩೫ ನಿಮಿಷದೊಳಗೆ ಲಂಡನ್ ಟಪ್ಪಾಲು ಬಂದು ತಲಪುತ್ತದೆ. ಮುಂಬಾಯಿಂದ ಲಂಡನಿಗೆ ೧೨ ದಿವಸ ೨೨ ಗಂಟೆ, ೪೫ ಮಿನಿಟುಗಳಲ್ಲಿ ಟಪ್ಪಾಲು ತಲಪುತ್ತದೆ. ವರ್ಷದ ಸರಾಸರಿ ನೋಡುವದಾದರೆ ೧೬ ದಿವಸ ೯ ಗಂಟೆ ೧೦ ನಿಮಿಷಗಳಲ್ಲಿ ತಲಪುತ್ತದೆ ಎಂದು ತಿಳಿದುಬರುತ್ತದೆ.

* * *

ತಾ. ೧೮ನೇ ದಿನ ಬೆಳಿಗ್ಯೆ ಮಲೋಜ ಹಡಗವು ಮುಂಬಾಯಿ ಬಂದರಕ್ಕೆ ಬಂದು ತಲಪಿತು. ಈ ಹಡಗದಲ್ಲಿದ್ದ ಹಿಂದೂಸ್ಥಾನದ ಉಪ ಸೆಕ್ರಟರಿಯಾದ ಮಿ| ಮೊಂಟೇಗರವರೂ ಅವರ ಸಹೋದರರೂ, ಸರ್. ಕೆ. ಸಿ. ಗುಪ್ತರವರೂ ಬಂದರಕ್ಕೆ ಇಳಿದರು. ಸರ್ ಗ್ಯಾ ಫ್ಲೀಟ್‌ವುಡ್ ವಿಲ್ಸನರು ಕೂಡ್ಲೇ ಸಿಮ್ಲಕ್ಕೆ ಹೊರಟರು. ಮೊಂಟೇಗರವರು ರಾತ್ರಿ ಸಿಮ್ಲಕ್ಕೆ ಹೊರಡುವರು. ಸರ್. ಕೆ. ಸಿ. ಗುಪ್ತರವರು ಅದೇ ಸ್ಟೀಮರಿನಲ್ಲಿ ನೆಟ್ಟಗೆ ಕಾಶ್ಮೀರಕ್ಕೆ ಹೋಗುವರೆಂದು ತಿಳಿದುಬರುತ್ತದೆ.

* * *

ಕಲ್ಕತ್ತೆಯಲ್ಲಿ ತಿಂಗಳಿಗೆ ಒಮ್ಮೆ ರಚಿಸೋಣಾಗುವ ಮೊಡರ್ನ ರಿವ್ಯೂ ಎಂಬ ಗ್ರಂಥದ ಇದೇ ಅಕ್ಟೊಬರ ತಿಂಗಳ ಸಂಚಿಕೆಯಲ್ಲಿ ಮೋರಿಸ್‌ನಲ್ಲಿ ಬೆರಿಸ್ಟರ್ ಆಗಿರುವ ಮನಿಲಾಲ್ ಡಾಕ್ಟರ್ ಎಮ್. ಎ. ಎಲ್. ಎಲ್. ಬಿ. ಎಂಬವರು ತನ್ನ ಆಫ್ರಿಕದ ಅನುಭವವನ್ನು ಪ್ರಕಟಿಸಿದ್ದಾರೆ. ಭಾರತೀಯರು ಗೋರಾ ಜನರ ಒಟ್ಟಿಗೆ ರೈಲುಗಾಡಿಯಲ್ಲಿ ಕೂತುಕೊಳ್ಳಕೂಡದು. ಆಫ್ರಿಕದ ಕಾಡುಜನರಾದ ನಿಗ್ರೊ ಎಂಬ ಜನರ ಬಗ್ಗೆ ಪ್ರತ್ಯೇಕವಾಗಿ ಮಾಡಿಟ್ಟ ರೈಲುಗಾಡಿಗಳಲ್ಲಿ ಭಾರತೀಯರು ಪ್ರಯಾಣ ಮಾಡಬೇಕು. ಯಾವ ಹೊಟೇಲಿನಲ್ಲಿಯೂ ಭಾರತೀಯರಿಗೆ ಆಶ್ರಯ ಸಿಕ್ಕದು. ಯಾವ ನಾಟಕಕ್ಕೂ ಹೋಗುವರೆ ಟಿಕೇಟು ಶಿಕ್ಕದು. ಗೋರಾ ಕ್ಷೌರಿಕನು ಭಾರತೀಯರಿಗೆ ಕ್ಷೌರಮಾಡಲಾರನು. ರೈಲ್ವೇ ಪೋರ್ಟರರೂ, ಪೋಲೀಸ್ ಕನ್ಸ್‌ಟೇಬಲರೂ ಎಲ್ಲವರೂ ಭಾರತೀಯರಿಗೆ ಕೂಲಿ ಎಂಬ ಹೆಸರಿನಿಂದ ಕರಿಯುವುದೇ ವಾಡಿಕೆ ಇದೆ. ಭಾರತೀಯರ ಸಾಮಾನು ತೂಕಮಾಡಿ ಚೀಟು ಅಂಟಿಸುವಾಗ ಫಲಾನಾ ಕೂಲಿಯ ಸಾಮಾನು ಎಂತ ಬರೆಯುತ್ತಾರೆ.

ದಕ್ಷಿಣ ಹಿಂದೂಸ್ಥಾನ.

೧೯೧೧ನೇ ಇಸವಿಯ ಅಂತ್ಯದಲ್ಲಿ ಮೈಸೂರಿನ ವೈದ್ಯ ಇಲಾಖೆಯಲ್ಲಿ ಒಟ್ಟಿಗೆ ೧೪೯ ಆಸ್ಪತ್ರಿಗಳಿದ್ದವು. ಈ ಆಸ್ಪತ್ರಿಗಳಲ್ಲಿ ಒಟ್ಟಿಗೆ ೧೧,೭೮೧ ಮಂದಿ ಔಷಧೋಪಚಾರ ಹೊಂದಿದರು. ಈ ಪೈಕಿ ೧೦,೬೪೯ ಮಂದಿ ಆಸ್ಪತ್ರಿಯ ಒಳಗೆನೇ ಇದ್ದು ಆರೈಕೆಮಾಡಲ್ಪಟ್ಟವರು. ಔಷಧೋಪಚಾರ ಹೊಂದಿದವರ ಒಟ್ಟು ಸಂಖ್ಯೆಯಲ್ಲಿ ೫೪೩,೨೮೦ ಗಂಡಸರು ೨೪೬,೪೬೧ ಹೆಂಗಸರು, ೩೭೨,೦೫೯ ಮಕ್ಕಳು. ಒಳರೋಗಿಗಳಲ್ಲಿ ೬,೫೪೩ ಮಂದಿ ಪೂರ್ಣ ಗುಣಪಟ್ಟು ಹೋದರು. ೧೦೫೪ ಮಂದಿ ಪೂರ್ಣ ಗುಣಹೊಂದುವ

ಮೊದಲೇ ಹಿಂದೆರಳಿದರು. ೭೫೬ ಮಂದಿ ಆಸ್ಪತ್ರಿಗಳಲ್ಲಿಯೇ ಮೃತಪಟ್ಟರು. ಉಳಿದ ೬೬ ಮಂದಿ ಶೈತೋಪಚಾರ ಹೊಂದುತ್ತಿದ್ದಾರೆ. ೮೦ ಸಿಡುಬು, ೬೨ ವಾಂತಿಭೇದಿ ೨೧೬,೫೭೯ ಚಳಿಜ್ವರದ ರೋಗಿಗಳು ಔಷಧೋಪಚಾರ ಹೊಂದಿದರು. ೩೫,೨೯೧ ಮಂದಿಗೆ ಶಸ್ತ್ರ ಪ್ರಯೋಗವು ನಡಿಸಲ್ಪಟ್ಟಿತು. ಈ ಪೈಕಿ ೨೦,೩೩೦ ಮಂದಿ ಪೂರ್ಣ ಗುಣಹೊಂದಿದರು, ೧೪,೯೭೨ ಮಂದಿ ತಕ್ಕಷ್ಟು ಗುಣಹೊಂದಿ ಹೋದರು, ೩೦ ಮಂದಿ ಪೂರ್ಣ ಗುಣ ಹೊಂದುವ ಮೊದಲೇ ಹೊರಹೋದರು, ೮೬ ಮಂದಿ ಮೃತಪಟ್ಟರು. ಉಳಿದ ೪೮ ಮಂದಿ ಆಸ್ಪತ್ರಿಯಲ್ಲೇ ಇನ್ನೂ ಚಿಕಿತ್ಸೆ ಹೊಂದುತ್ತಿದ್ದಾರೆ. ಆಸ್ಪತ್ರಿಗಳಿಗೆಲ್ಲಾ ಒಟ್ಟಿಗೆ ೧೯೧೧ನೇ ಇಸವಿಯಲ್ಲಿ ೪,೦೨,೩೫೫ ರೂಪಾಯಿ ಖರ್ಚಾಯಿತು. ಇದಲ್ಲದೆ ಮೈಸೂರಲ್ಲಿ ೩೬ ಹಿಂದೂ ವೈದ್ಯಶಾಲೆಗಳು, ೩೪ ಯುನಾನಿ ಔಷಧಾಲಯಗಳು ಇವೆ. ಇವುಗಳಲ್ಲಿ ಒಟ್ಟಿಗೆ ೨೫೭,೬೪೫ ಮಂದಿ ಶೈತೋಪಚಾರ ಹೊಂದಿದರು. ಈ ಪೈಕಿ ೨೫೧,೧೨೬ ಮಂದಿ ಪೂರ್ಣ ಗುಣಹೊಂದಿದರು. ೧೭,೯೩೭ ಮಂದಿ ತಕ್ಕಷ್ಟು ಉಪಶಮ ಹೊಂದಿದರು, ೩೯೦ ಮಂದಿ ಮೃತಪಟ್ಟರು. ೩೨೬೭ ಮಂದಿ ಔಷದೋಪಚಾರ ಹೊಂದುತ್ತಾ ಇದ್ದಾರೆ.

* * *

ತಾ. ೧೯ರಲ್ಲು ಮೈಸೂರು ಮಹಾರಾಜರವರು ದರ್ಬಾರು ನಡಿಸಿ ಮೈಸೂರು ದಿವಾನ್ ಪದವಿಯಿಂದ ನಿವೃತರಾಗುವ ರಾ| ಆನಂದರಾವ್, ಸಿ. ಐ, ಇ ರವರಿಗೆ ಪ್ರಧಾನ ಶಿರೋಮಣಿ ಎಂಬ ಬಿರುದನ್ನು ದಯಪಾಲಿಸಿದರು. ಮಹಾರಾಜರ ಪರವಾಗಿ ಸರ್ದಾರ್ ಕಾಂತರಾಜರ ಸರಿಂದ ೪೦೦೦ ರೂಪಾಯಿ ಕ್ರಯಬಾಳುವ ಒಂದು ಕಂಠಮಣಿಯೂ ಅಮೌಲ್ಯವಾದ ಒಂದು ಶಾಲು ಇತ್ಯಾದಿಗಳೂ ಕೊಡೋಣಾದವು.

* * *

ತಿನ್ನವೆಲ್ಲಿಯಲ್ಲಿ ಕಲೆಕ್ಟರರಾಗಿದ್ದ ಎಷ್ ದೊರೆಗಳನ್ನು ಕೊಂದ ರಾಜದ್ರೋಹ ಮೊಕದಮೆಯಲ್ಲಿ ಮದ್ರಾಸ್ ಹ್ಯಾಕೋರ್ಟಿನವರಿಂದ ೭ ವರ್ಷಗಳ ಕಠಿಣ ಸಜಾ ವಿಧಿಸಲ್ಪಟ್ಟ ನೀಲಕಂಠ ಯಾ ಬ್ರಹ್ಮಚಾರಿಗೆ ಇನ್ನು ಉಳಿದ ಶಿಕ್ಷೆಯು ಸಾಧಾರಣ ಸಜೆಯಾಗಿ ಪರಿಣಮಿಸಬೇಕೆಂದು ಮದ್ರಾಸ್ ಗವರ್ನರರವರು ಆಜ್ಞಾಪಿಸಿರುವರು.

* * *

ಮದ್ರಾಸ್ ಗವರ್ನರರಾಗಿ ನೇಮಿಸಲ್ಪಟ್ಟ ಪೆಂಟಲೇಂಡ ಪ್ರಭುಗಳು ಇದೇ ತಿಂಗಳ ತಾ. ೨೬ರಲ್ಲು ಕೊಲೊಂಬಕ್ಕೆ ಬಂದು ತಲಪಿ ತಾ. ೨೭ನೇ ಸಾಯಂಕಾಲ ಯಾ ೨೮ನೇ ಬೆಳಿಗ್ಯೆ ಮದ್ರಾಸಿಗೆ ಬಂದು ತಲಪುವರೆಂದು ತಿಳಿದು ಬರುತ್ತದೆ.

* * *

ಮೈಸೂರು ಸರಕಾರದವರು ತಮ್ಮ ದೇಶದಲ್ಲಿ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವನ್ನು ಕೊಡುವರೆ ನಿಶ್ಚಯಿಸಿದ್ದಾರೆಂಬದನ್ನು ತಿಳಿಯಲು ಸಂತೋಷಪಡುತ್ತೇವೆ. ಪ್ರತಿ ಒಬ್ಬನು ೬ ವರ್ಷ ಪ್ರಾಯರಿಂದ ೧೧ ವರ್ಷದ ವರೆಗೆ ವಿದ್ಯಾಭ್ಯಾಸಮಾಡಬೇಕೆಂಬ ಕಟ್ಟುಮಾಡಲ್ಪಡುವದು. ಆದರೆ ಸದ್ಯಾ ದೇಶದ ಎಲ್ಲಾ ಭಾಗದಲ್ಲಿಯೂ ಈ ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆ ತರುವ ಹಾಗಿಲ್ಲ, ತಮ್ಮ ಮಕ್ಕಳಿಗೆ ಕಡ್ಡಾಯ ವಿದ್ಯಾಭ್ಯಾಸವನ್ನು ಕೊಡಲುಪೂರ್ಣ ಅಸಂದರ್ಭವಾದವರು ತಕ್ಕ ಕಾರಣಗಳನ್ನು ಕೊಟ್ಟರೆ ರಿಯಾಯತಿಯೂ ಮಾಡಲ್ಪಡುವುದು. ಆದರೆ ತಕ್ಕ ಕಾರಣವಿಲ್ಲದೆ ಮಕ್ಕಳನ್ನು ಶಾಲೆಗೆ ಕಳುಹಿಸದವರಿಗೆ ಪ್ರಥಮಾಸಾರಿ ಎಚ್ಚರಿಸಿ ಬಿಡುವರು. ಮತ್ತೂ ಮಕ್ಕಳನ್ನು ಕಳುಹಿಸದ ಹೆತ್ತವರಿಗೆ ೨ ರೂಪಾಯಿ ಜುರುಮಾನೆ ವಿಧಿಸಲ್ಪಡುವದು. ಇದರನಂತರವೂ ಕಳುಹಿಸದವರಿಗೆ ೧೦ ರೂಪಾಯಿ ಜುರುಮಾನೆವಿಧಿಸಲ್ಪಡುವುದು ಎಂಬಿತ್ಯಾದಿ ವಿಧಿಗಳು ಈ ಕಾನೂನಿನಲ್ಲಿ ಸೇರಿಯವೆ. ಈ ಕಡ್ಡಾಯ ಮತ್ತು ಉಚಿತ ಪ್ರ್ಯಾಮರಿ ವಿದ್ಯಾಭ್ಯಾಸವನ್ನು ಮೈಸೂರಲ್ಲಿ ಜಾರಿಗೆ ತರಲು ಧಾವತಿ ಪಟ್ಟ ರಾ. ಎಚ್. ವಿ. ನಂಜುಂಡೈಯ್ಯನವರಿಗೂ, ದಿವಾನರಾದ ರಾ. ಟಿ. ಆನಂದರಾಯರಿಗೂ ಪ್ರಜಾಮಂದಿ ಕೃತಜ್ಞರಾಗಿರುವರು

* * *

ಮೈಸೂರು ದಿವಾನ್‌ಗಿರಿಯಿಂದ ನಿವೃತ್ತರಾಗುವ ರಾ. ಟಿ. ಆನಂದರಾಯರವರಿಗೆ ಮೈಸೂರು ಸರಕಾರದಿಂದ ಮಾಹೆಯಾನ ೧೦೦೦ ರೂಪಾಯಿಗಳ ವರ್ಷಾಸನವು ಕೊಡಲ್ಪಡುವದು. ಇವರ ಬಹುಮಾನದ ಚಿನ್ಹೆಯಾಗಿ ಅವರ ಗೇಟನ್ನು ಕಾಯುವರೆ ಒಬ್ಬ ಪಾಳೆಯದವನೂ ಇವರು ವಿಶೇಷ ಮಹಾನುಭಾವರು ಎಂಬದನ್ನು ತೋರಿಸುವದಕ್ಕಾಗಿ ಒಬ್ಬ ಸೇವಕನೂ, ರಾಜರಿಂದ ಮನ್ನಣೆ ಪಡೆದಿರುವವರೆಂಬದನ್ನು ದೃಢಪಡಿಸುವದಕ್ಕಾಗಿ ಇವರ ಜೀವಕಾಲವೆಲ್ಲಾ ಇವರನ್ನು ಪ್ರತಿದಿನವೂ ನೋಡುವರೆ ಒಬ್ಬ ವೈದ್ಯರೂ ಸರಕಾರ ಖರ್ಚಿನಿಂದ ನೇಮಿಸಲ್ಪಡಬೇಕೆಂಬ ಅನುಮತವು ಮಹಾರಾಜರವರಿಂದ ದೊರಕಿರುವುದು. ಇದಲ್ಲದೆ ಇವರ ಗುಣಾತಿಶಯವನ್ನು ಮನ್ನಿಸುವದಕ್ಕಾಗಿ ಇನ್ನು ಅನೇಕ ಬಹುಮಾನ ಪತ್ರಗಳು ಪ್ರಜಾಪ್ರತಿನಿಧಿ ಸಭೆಯು ಕೂಡುವಾಗ ಕೊಡೋಣಾಗುವವು.

ದಕ್ಷಿಣ ಕನ್ನಡ.

ನೋಟೀಸು.

"ಮಂಗಳೂರು ಊಲನ್ ಮಾರ್ಟ್"ನ ರಾ| ಸಿ. ಆರ್. ಕಾಮತರವರು ದಸರಾ ಪ್ರದರ್ಶನದ ಸಂಬಂಧ ಮೈಸೂರಿಗೆ ತೆರಳಿರುವುದರಿಂದ ಅವರಲ್ಲಿಗೆ ಬರಬಹುದಾದ ಎಲ್ಲಾ ವ್ಯವಹಾರವು ಅವರು ಮಂಗಳೂರಿಗೆ ಪುನಹಾ ಸೇರಿದೊಡನೆ ಕೈಕೊಳ್ಳಲಾಗುವುದೆಂದೂ ಅಷ್ಟರವರೆಗಿನ ತಡವನ್ನು ಕ್ಷಮಿಸಬೇಕಾಗಿಯೂ ವಿನಂತಿ.

K.

ಕಾಸರಗೋಡು.

ನಿನ್ನೆ ಮಂಗಳವಾರ ಬೆಳಿಗ್ಗಿನ ಮೈಲ್ ಭಂಡಿಯಲ್ಲಿ ಟಿಕೇಟಿಲ್ಲದೆ ಪ್ರಯಾಣ ಮಾಡುತ್ತಾ ಇಲ್ಲಿಯ ಸ್ಟೇಶನಿನಲ್ಲಿ ಲೈನ್ ಟಿಕೇಟ್ ಇನ್‌ಸ್ಪೆಕ್ಟರನಿಂದ ಹಿಡಿಯಲ್ಪಟ್ಟು ಇಳಿಸಲ್ಪಟ್ಟ ಸನ್ಯಾಸಿಯೊಬ್ಬನು ತನ್ನನ್ನು ಇಳಿಸಿದ್ದಕ್ಕಾಗಿ ಸಿಟ್ಟುಗೊಂಡು—"ಈ ಬಂಡಿಯು ಕೆಲವು ತಾಸುಗಳ ತನಕ ಇನ್ನೊಂದು ಸ್ಟೇಶನಿಗೆ ಹೋಗದಿರಲಿ. ನೀನು ಇಲ್ಲಿ ಕಾಯುತ್ತಾ ಇರು." ಎಂಬಿತ್ಯಾದಿ ಮಾತುಗಳನ್ನು ಹೇಳಿದನಂತೆ. ಬಂಡಿಯು ಯಥಾರೀತಿ ಕ್ಲಪ್ತ ಸಮಯದಲ್ಲಿ ಹೊರಟು ಸ್ಟೇಶನನ್ನು ಬಿಟ್ಟು ಒಂದೆರಡು ಫರ್ಲಂಗ್ ದೂರ ಹೋಗುವುದರೊಳಗೆ ಇಂಜಿನ್ ಒಡೆದು ಹಿಂದೆ ನೂಕಲ್ಪಟ್ಟು ೧೦॥ ಗಂಟೆಗೆ ತಾನೇ ಹೋಗಬೇಕಾಯಿತು. ಇದು ನಿಜವಾಗಿ ಸನ್ಯಾಸಿಯ ಶಾಪದಿಂದಲೋ ಯಾ ಇತರ ಕಾರಣದಿಂದಲೋ ತಿಳಿಯದು.

* * *

ಪುತ್ತೂರು:—ಕ್ರೆಡಿಟ ಸಹಾಯ ಸಂಘಗಳ ಇನ್‌ಸ್ಪೆಕ್ಟರರು ತಾ. ೧೯ರಲ್ಲು ಇಲ್ಲಿಗೆ ತಲಪಿ ಇಲ್ಲಿಯ ಸಂಘದ ಲೆಕ್ಕ ಪರಿಶೋಧಿಸಿ ಹಿಂತೆರಳಿರುವರು.

ಕ್ರೆಡಿಟ್ ಸಂಘದ ರೀತಿಯಲ್ಲಿ ಭತ್ತವನ್ನು ಸಹಾಸಾಲಕೊಡುವ ಸಂಘವನ್ನು ಇಲ್ಲಿಯ ವಕೀಲರಾಗಿರುವ ರಾ| ಬೆಳ್ತಂಗಡಿ ಮಂಗೇಶರಾಯರು ರಾ| ಜಮಿನ್ದಾರ ಬ್ರಹ್ಮಯ್ಯ ಸೆಟ್ಟರವರ ಸಹಾಯದಿಂದ ಸ್ಥಾಪಿಸಿರುವರು. ಈ ವರೆಗೆ ಕೂಡಿದ ಮೆಂಬರರಿಂದ ೩೦ ಮುಡಿ ಅಕ್ಕಿ ಜಮೆಯಾಗಿರುವದು. ಐದು ಮುಡಿ ಭತ್ತ ಸಾಲ ಸಿಕ್ಕಬೇಕಾದರೆ ಪ್ರತಿ ಮೆಂಬರನು ಒಂದು ಮುಡಿ ಭತ್ತ ಮತ್ತು ಪ್ರವೇಶ ಹಾಸಲಾಗಿ ನಾಲ್ಕಾಣೆ ತೆರಬೇಕಾಗುವದು.

ಇಲ್ಲಿಯ ಕ್ರೆಡಿಟ್ ಸಂಘದ ಆಫೀಸು ರಾ| ಮಂಜೇಶ್ವರ ರಂಗನ್ಯಾಕರ ಮಾಳಿಗೆಯಲ್ಲಿ ಮಾಡಿದಾಗ್ಯೂ ಮೆಂಬರರಿಗೆ ಹತ್ತಲಿಕ್ಕೂ ಇಳಿಯಲಿಕ್ಕೂ ಪ್ರಯಾಸವಾದ್ದರಿಂದಲೂ ಸ್ಥಳ ಸಂಕೋಚದ ದೆಶೆಯಿಂದಲೂ ಇದೇ ತಾ. ೧೮ರಿಂದ ಸ್ಟ್ಯಾಂಪು ವೆಂಡರರಾದ ತಿಮ್ಮರ್ಸಪೈಗಳ ಒಂದು ಕಟ್ಟೋಣದಲ್ಲಿ ಈ ಆಫೀಸು ತೆರೆಯೋಣಾಗಿರುವುದು.

ಪುತ್ತೂರು ಸೆಂಟರಿನಲ್ಲಿ ಆಗತಕ್ಕ ಗ್ರಾಮಉದ್ಯೋಗಸ್ಥರ ಪರೀಕ್ಷೆಯು ನವಂಬರ ತಾ. ೧೮ನೇ ಸೋಮವಾರ ಪುತ್ತೂರು ಡಿವಿಜನ್ ಆಫೀಸಿನಲ್ಲಿ ಪ್ರಾರಂಭವಾಗುವದು.

ರಾ| ಸಾಹುಕಾರ ಜನಾರ್ಧನ ಭಟ್ಟರವರು ತಾಲೂಕು ಬೋರ್ಡು ಮೆಂಬರರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಗವರ್ನಮೆಂಟ ಹುಡುಗಿಯರ ಶಾಲೆಯ ಹೆಡ್ ಮಿಸ್ಟ್ರೆಸ್ ಎ. ಶಿಕೇರರವರಿಗೆ ಮಂಗಳೂರಲ್ಲಿ ತೆರೆಯೋಣಾಗುವ ಗವರ್ನಮೆಂಟ ಹುಡಿಗಿಯರ ಟ್ರೈನಿಂಗ್ ಶಾಲೆಗೆ ವರ್ಗವಾಗಿರುವದು. ಇವರಿಗೆ ಸ್ವಸ್ತಿ ವಚನವನ್ನಾಡುವರೆ ತಾ. ೧೮ರಲ್ಲು ಸಭೆಕೂಡಿತು. ಸಭೆಯಲ್ಲಿ ಹಲವು ಸರಕಾರಿ ಉದ್ಯೋಗಸ್ಥರೂ ಇತರ ಗೃಹಸ್ಥರೂ ಹಾಜರಿದ್ದರು. ಇಲ್ಲಿಯ ಮುನ್ಸಿಪರು ಇಂಗ್ಲಿಷಿನಲ್ಲಿ ಒಂದು ಭಾಷಣವನ್ನು ಕೊಟ್ಟರು.

ಇಲ್ಲಿಯ ಶ್ರೀ ಶಾರದಾ ವಾಚಕ ಮಂದಿರದ ಪಂಚಮ ವಾರ್ಷಿಕೋತ್ಸವು ಇದೇ ತಾ. ೨೦ನೇ ಆದಿತ್ಯವಾರ ಬಹಳ ವಿಜೃಂಭಣೆಯಿಂದ ಜರಗಿತು. ಈ ಸಭೆಗೆ ಇಲ್ಲಿಯ ಮುನ್ಸೀಪರು ಅಧ್ಯಕ್ಷರಾಗಿದ್ದು ಪ್ರೋತ್ಸಾಹಯುಕ್ತವಾದ ಭಾಷಣ ಕೊಟ್ಟರು.

* * *

ಮುಂಡಾಜೆ:—ಉಪ್ಪಿನಂಗಡಿ ತಾಲೂಕು ಫಜಿರಡ್ಕ ಮಾಗಣೆ ಮುಂಡಾಜೆ ಗ್ರಾಮದ ಮ. ರಾ. ರಾ. ಗುಂಡಿ ಪದ್ಮನಾಭ ಭಟ್ಟರಲ್ಲಿ ಮೈಸೂರು ಶೀಮೆಯ ಗಾಡಿ ಎತ್ತುಗಳ ಜಾತಿಯ ೬-೮ ದನಗಳಿರುತ್ತವೆ. ಈ ಜಾತಿಯ ಒಂದು ದನವು ಗಬ್ಬವಾಗಿದ್ದದ್ದು ಇದೇ ಕಳದ ತಾ. ೧೫ರಲ್ಲು ಒಂದು ಗಂಡು ಕರುಹಾಕಿತು. ಆ ಮೇಲೆ ಈ ದಿನ ಬೆಳಿಗ್ಯೆ (೨೧-೧೦-೧೨) ಪುನಹಾ ಮತ್ತೊಂದು ಗಂಡು ಕರುವನ್ನು ಈದದೆ. ಎರಡನೇ ಕರು ಮೊದಲನೇಯದಕ್ಕಿಂತ ಸ್ವಲ್ಪ ಬಲವಾಗಿದೆ; ಮತ್ತು ಪುಷ್ಟಿಯಾಗಿದೆ. ಪ್ರಥಮದ ಕರು ಬಿಳಿದು, ಎರಡನೇದು ಕಪ್ಪು.

* * *

ಸಾಂತೂರು:—ಇದೇ ತಿಂಗಳ ತಾ. ೧೭ನೇ ಬೃಹಸ್ಪತಿವಾರ ಇಲ್ಲಿಯ ಕೊಪ್ಲ ಶಾಲೆಯ ಮುಖ್ಯೋಪಾಧ್ಯಾಯರು ಶಾರದಾ ಪೂಜಾ ಸಂಬಂಧ ಒಂದು ಸಭೆ ಕೂಡಿಸಿದರು. ಈ ಸಭೆಗೆ ಊರ ಗೃಹಸ್ಥರೂ ಆಜುಬಾಜಿನ ಶಾಲಾ ಉಪಾಧ್ಯಾಯರೂ ಕಾರ್ಕಳ ರೇಂಜಿನ ಶಾಲೆಗಳ ಸುಪರ್‌ವ್ಯಾಸರರೂ ಹಾಜರಿದ್ದರಲ್ಲದೆ ಬೊಳ್ಮಣ್ಣದ ರೋಮನ್ ಕೆಥೊಲಿಕ ಗುರುಗಳೂ ಶಾಲಾ ಉಪಾಧ್ಯಾಯರೂ ವಿಧ್ಯಾರ್ಥಿಗಳೂ ಚಿತ್ತೈಸಿದ್ದರು. ಸಭೆಯಲ್ಲಿ ಬೊಳ್ಮಣ್ಣ ಚರ್ಜಿನ ಗುರುಗಳು ಅಧ್ಯಕ್ಷರಾಗಿದ್ದು ಕಾಲೋಚಿತವಾದ ಭಾಷಣ ಕೊಟ್ಟರು. ತನ್ಮಧ್ಯೆ ಕೊಪ್ಪಲ ಶಾಲಾ ಮಕ್ಕಳು ಹಾಡಿತೋರಿಸಿದ ಗಾಯನಗಳೂ ಇತರ ನಟನೆಗಳೂ ಸಭಿಕರನ್ನು ಆಹ್ಲಾದ ಪಡಿಸುವದಾಯಿತು. ಶಾಲಾ ಸುಪರ್‌ವ್ಯಾಸರರು ಕೂಡಾ ಒಂದು ಭಾಷಣವನ್ನು

ಕೊಟ್ಟು, ಈಗಿನ ಪ್ರಜಾಸಹಾನುಭೂತಿಯ ಬ್ರಿಟಿಷ್ ಸರಕಾರದ ಕೈ ಕೆಳಗೆ ಯಾವ ಆಚಾರ ಪದ್ಧತಿಗಳನ್ನು ಶಾಲೆಗಳಲ್ಲಿ ಆಚರಿಸುವದಕ್ಕೂ ಅಡ್ಡಿ ಇಲ್ಲವೆಂಬದನ್ನು ಶ್ರುತಪಡಿಸಿದರು. ಅನಂತರ ಬೆಳ್ಳಿ ಬಂಡಸಾಲೆ ಶಾಲಾ ಮುಖ್ಯೋಪಧ್ಯಾಯ ಬಿ. ದಾಸಪ್ಪಯ್ಯನವರ ಒಂದು ಭಾಷಣವಾಯಿತು. ಕಡೆಗೆ ಕೂಡಿದ ಸಭಿಕರು ತಾಂಬೂಲಾದಿಗಳನ್ನು ಸ್ವೀಕರಿಸಿ ಅಗಲಿದರು. ಈ ಸಂದರ್ಭದಲ್ಲಿ ಕೊಪ್ಪಲ ಶಾಲಾ ಮುಖ್ಯೋಪಧ್ಯಾಯರು ತಕ್ಕೊಂಡ ಪರಿಶ್ರಮವು ಶ್ಲಾಘನೀಯವಾಗಿದೆ.

* * *

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೨ ಪ್ಲೇಗು ಮರಣಗಳಿದ್ದವು.

ಈ ವರ್ಷ ಇಲ್ಲಿಯ ಮರ್ಚಂಟ್ಸ್ ಕ್ಲಬ್ಬಿನವರಿಗೂ ಗವರ್ನಮೆಂಟ್ ಕೋಲೆಜಿನವರಿಗೂ ಕೊರೊನೇಶನ್ ಕಪ್ಪಿಗಾಗಿ ಉಂಟಾದ ಮೇಲಾಟದಲ್ಲಿ ಮರ್ಚಂಟ್ಸ್ ಕ್ಲಬ್ಬಿನವರು ಗೆದ್ದರು.

ಇಲ್ಲಿಗೆ ಡಿಸ್ಟ್ರಿಕ್ಟ್ ಕಲೆಕ್ಟರರಾಗಿ ನೇಮಕಪಟ್ಟ ಮೆ| ಎಮ್. ಇ. ಕೌಚ್‌ಮೆನ್ ದೊರೆಗಳವರು ಕಳದ ತಾ. ೧೮ನೇ ಶುಕ್ರವಾರ ಮೈಲ್‌ಟ್ರೈನ್‌ನಲ್ಲಿ ಬಂದಿರುವರು. ಆ ದಿನ ಇವರನ್ನು ಸ್ವಾಗತಮಾಡುವ ಬಗ್ಯೆ ಮೆ| ಫೊದರಿಂಗಾಮ್ ದೊರೆಗಳೂ, ಮೆ| ಚಾರ್ಲಿಮೋರ್ಗನ್ ದೊರೆಗಳೂ, ಕುಂದಾಪುರ ಡಿವಿಜನಲ್ ಆಫೀಸರರೂ, ರಾವ್ ಬಹದ್ದೂರ ರಗಡೆ ರಾಮರಾಯರೂ; ಮೆ| ಚಂತನರವರೂ ಮೆ| ಗೋಪಾಲನ್ ನಾಯರರೂ, ಮ| ರಾ| ರಾ| ಎ. ವಾಸುದೇವ ಪೈಗಳವರೂ ಮ| ರಾ| ರಾ| ಎಮ್. ವೆಂಕಟರಾಯರೂ, ಡಾಕ್ಟರ್ ಎಲ್. ಪಿ. ಪೆರ್ನಾಂದಿಸರು ವಗ್ಯೆರೆ ಇನ್ನೂ ಹಲವು ಹುದ್ದೇದಾರರೂ ರೈಲ್ವೆ ಸ್ಟೇಶನ್ನಿನಲ್ಲಿ ಹಾಜರಿದ್ದರು.

ಇಲ್ಲಿಯ ಕಲೆಕ್ಟರ್ ಕಚೇರಿಯ ಇಂಗ್ಲಿಷ್ ಹೆಡ್ ಕ್ಲಾರ್ಕರಾಗಿದ್ದು ಇತ್ತಲಾಗೆ ಪೆನ್ಶನ್ ಪಡದ ಮ| ರಾ| ರಾ| ಒಂಭತ್ತುಕೆರೆ ರಾಮರಾಯರು ಕಳದ ತಾ. ೨೨ನೇ ರಾತ್ರೆ ಪರವನ್ನೈದಿದರೆಂಬದನ್ನು ತಿಳಿಸಲು ವಿಷಾದಿಸುತ್ತೇವೆ.

ತಾ. ೨೨ನೇ ಬೆಳಿಗ್ಯೆ ಇಲ್ಲಿಂದ ಬಿಟ್ಟ ಮೈಲ್ ಗಾಡಿಯು ಕಾಸರಗೋಡಿಗೆ ತಲಪುವಷ್ಟರಲ್ಲಿ ಇಂಜಿನು ಹಾಳಾಗಿ ೧೦ ಘಂಟೆ ತನಕ ಕಾಸರಗೋಡಿನಲ್ಲಿಯೇ ಇದ್ದು ಪುನಹಾ ಇಲ್ಲಿಂದ ಇಂಜಿನ್ ತಕ್ಕೊಂಡು ಹೋದನಂತರ ಮುಂದಕ್ಕೆ ನಡಯಿತೆಂತ ಕೇಳುತ್ತೇವೆ.

ಇದೇ ತಾ. ೨೩ರಲ್ಲು ಇಲ್ಲಿ ಗವರ್ನಮೆಂಟ್ ಹುಡುಗಿಯರ ಟ್ರೈನಿಂಗ್ ಶಾಲೆಯು ಲ್ಯಾಟ್‌ಹೌಸು ಗುಡ್ಡದಲ್ಲಿರುವ ಮಿಸೆಸ್ ಲೊಬೋರವರ ಬಂಗ್ಲೆಯಲ್ಲಿ ತೆರೆಯೋಣಾಗಿರುವದು. ಪುತ್ತೂರಿನ ಗವರ್ನಮೆಂಟ ಹುಡುಗಿಯರ ಶಾಲೆಯ ಹೆಡ್ ಮಿಸ್ಟ್ರೆಸಾಗಿದ್ದ ಮಿಸ್ ಎ. ಶಿಕೇರರವರೂ, ಇಲ್ಲಿಯ ಮಿಸೆಸ್ ಎರ್ನೆಸ್ಟರವರೂ ಆ ಶಾಲೆಯಲ್ಲಿ ಕೆಲಸ ಪ್ರಾರಂಭ ಮಾಡಿರುವರು. ಈ ವರ್ಷಾಂತ್ಯದ ವರೆಗೆ ಮೊಡೆಲ್ ಕ್ಲಾಸುಗಳು ಮಾತ್ರ ತೆರೆಯೋಣಾಗಿ ಬರುವ ವರ್ಷ ಪ್ರಾರಂಭದಿಂದ ಟ್ರೈನಿಂಗ್ ಕ್ಲಾಸುಗಳು ತೆರೆಯೋಣಾಗುವದೆಂದು ತಿಳಿಯುತ್ತೇವೆ. ಈಗ ತೆರೆಯೋಣಾಗಿರುವ ಮೊಡೆಲ್ ಕ್ಲಾಸುಗಳಿಗೆ ಮೇಲೆ ಹೇಳಿದ ಇಬ್ಬರು ಉಪಾಧ್ಯಾಯಿನಿಯರಲ್ಲದೆ ಬಿ. ಜಿ. ಎಮ್. ಬ್ರಾಹ್ಮಣ ಹುಡುಗಿಯರ ಶಾಲೆಯ ಮಿಸ್. ವಾಟ್ಸ, ಮಿಸ್. ಪೀಟರ್ಸ್ ಮತ್ತು ಮಿಸೆಸ್ ಕವಿ ಶ್ರೀದೇವಿ ಬಾಯಿರವರೂ ನೇಮಿಸಲ್ಪಟ್ಟಿರುವರು.

ಹಜೂರು ಶಿರಸ್ತೆದಾರರಾದ ಮ| ರಾ| ರಾ| ಮ. ವೆಂಕಟರಾವ್‌ರವರು ಬರುವ ನವಂಬರ ತಿಂಗಳ ತಾ. ೧೫ರಿಂದ ೬ ತಿಂಗಳ ರಜೆಯನ್ನು ಪಡೆಯುವುದರಿಂದ ಕಾರ್ಕಳ ತಹಸೀಲದಾರರಾದ ಮ| ರಾ| ರಾ| ರಾಮವರ್ಮರಾಜರವರು ಆಕ್ಟಿಂಗ್ ಹಜೂರು ಶಿರಸ್ತೆದಾರರಾಗಿ ನೇಮಿಸಲ್ಪಡುವರು. ಮೆ| ಕಾಸ್ಟಲಿನೊರವರ ರಜೆ ಮುಗಿದೊಡನೆ ಇವರು ಕಾರ್ಕಳ ತಾಲೂಕು ತಹಸೀಲದಾರರಾಗಿ ಕೆಲಸ ನೋಡುವರು.

ಪುತ್ತೂರು ಡಿವಿಜನಲ್, ಆಫೀಸರರು ಈ ತಿಂಗಳ ತಾ. ೨೫ರಿಂದ ಒಂದು ತಿಂಗಳ ರಜೆಯ ಮೇಲೆ ಹೋಗುವುದರಿಂದ ಇವರ ಚಾರ್ಜನ್ನು ಮಂಗಳೂರು ಡಿವಿಜನಲ್ ಆಫೀಸರರು ವಹಿಸಿಕೊಳ್ಳುವರು.

ಕುಂದಾಪುರ ಡಿವಿಜನಲ್ ಆಫೀಸರರು ಎರಡು ತಿಂಗಳ ರಜೆಯನ್ನು ಅಪೇಕ್ಷಿಸಿರುವರೆಂತ ತಿಳಿಯುತ್ತೇವೆ.

ಸೈಂಟ್ ಯಲೋಸಿಯಸ್ ಕೋಲೇಜಿನ ವಿದ್ಯಾರ್ಥಿಭವನದ ಬಗ್ಯೆ ಕೋಲೇಜಿನವರು ಇತ್ತಲಾಗೆ ತಕ್ಕೊಂಡ ಮನೆಗಳ ಕ್ರಿಯದ ಮೊಬಲಗಿನಲ್ಲಿ ರೂ. ೫೦೪೩ ಸರಕಾರದವರಿಂದ ಕೊಡೋಣಾಗುವುದು.

ಕಳದ ಸಂಚಿಕೆಯಲ್ಲಿ ಸೂಚಿಸಲ್ಪಟ್ಟಂತೆ ಕೆನರಾ ಹ್ಯಾಸ್ಕೂಲಿನ ವಿದ್ಯಾರ್ಥಿಭವನದ ವಿದ್ಯಾರ್ಥಿಗಳ ಸಭೆಯ ವರ್ಧಂತಿ ಸಂಭ್ರಮವು ಇಲ್ಲಿಯ ಸಬ್‌ಜಡ್ಜರಾದ ಮ| ರಾ| ರಾ| ಡಿ. ರಾಘವೇಂದ್ರ ರಾಯರ ಅಧ್ಯಕ್ಷತೆಯಲ್ಲಿ ಕಳದ ಶನಿವಾರ ದಿನ ನಡೆಯಿತು. ಕಾಶಿ ಮಠದ ಶ್ರೀ ವರದೇಂದ್ರ ತೀರ್ಥರವರನ್ನು ಸ್ತುತಿಸಿ ರಾ| ಎಮ್. ಎನ್. ಕಾಮತರವರಿಂದ ಕವನಿಸಲ್ಪಟ್ಟ ಹಾಡುಗಳು ಹಾಡಲ್ಪಟ್ಟ ಮೇಲೆ ವಿದ್ಯಾರ್ಥಿಗಳ ಸಭೆಯವರು ಕಳದ ವರುಷದಲ್ಲಿ ನಡೆಸಿದ ಕಾರ್ಯ ವೃತ್ತಾಂತವು ಸಭಿಕರಿಗೆ ಓದಿ ಹೇಳೋಣಾಯಿತು. ನಂತರದಲ್ಲಿ ಸಭಿಕರನ್ನು ವಿನೋದಗೊಳಿಸಲು ಒಂದು ಇಂಗ್ಲಿಸು ಫಾರ್ಸನ್ನೂ ರಾ| ಎಮ್. ಎನ್. ಕಾಮತರವರಿಂದ ತಯ್ಯಾರಿಸಲ್ಪಟ್ಟ 'ಧೃವವಿಜಯ'ದ ಎರಡು ಅಂಕಗಳನ್ನು ವಿದ್ಯಾರ್ಥಿಗಳು ಆಡಿ ತೋರಿಸಿದರು. ನಾಟಕ ರಚನೆಯೂ ಆಯಾ ಪಾತ್ರಗಳ ನಟನೆಯೂ ತೃಪ್ತಿಕರವಾಗಿತ್ತು. ಸಭಾಧ್ಯಕ್ಷರ ಭಾಷಣದನಂತರ ಸ್ವರ್ಗಸ್ತ ಅಮ್ಮೆಂಬಳ ಸುಬ್ರಾಯ ಪೈಗಳ ಸ್ಮರಣೆಯ ಹಾಡನ್ನೂ ರಾಷ್ಟ್ರ ಮತ್ತು ರಾಜಗೀತಗಳನ್ನೂ ಹಾಡಿ ಸಭೆಯು ಮುಕ್ತಾಯವಾಯಿತು. ಇದೇ ದಿನ ಪಾತಃಕಾಲ ವಿದ್ಯಾರ್ಥಿಭವನದಲ್ಲಿ ಸುಬ್ರಾಯ ಪೈಗಳವರ ಭಾವಚಿತ್ರವು ಮ| ರಾ| ರಾ| ಮಾಜಿ ಡಿಪ್ಯುಟಿ ಕಲೆಕ್ಟರ್ ವರ್ಕಾಡಿ ರಾಮರಾಯರಿಂದ ಪ್ರತಿಷ್ಟಿಸಲ್ಪಟ್ಟ ಸಂದರ್ಭದಲ್ಲಿ ಡಿಪ್ಯುಟಿ ಕಲೆಕ್ಟರ್ ಮ| ರಾ| ರಾ| ಅಮ್ಮೆಂಬಳ ಉಪೇಂದ್ರಪೈಗಳು ಭವನದ ವಿದ್ಯಾರ್ಥಿಗಳಿಗೂ ಇತರ ಕೆಲವು ಗ್ರಹಸ್ತರಿಗೂ ತಮ್ಮ ಖರ್ಚಿನಿಂದ ಫಲಹಾರವನ್ನು ಕೊಡಿಸಿದರು. ಈ ಎಲ್ಲಾ ಕಾರ್ಯಗಳು ಸಾಂಗವಾಗಿ ನೆರವೇರುವಂತೆ ಸರ್ವ ಶ್ರಮವನ್ನು ವಹಿಸಿಕೊಂಡ ವಿದ್ಯಾರ್ಥಿಭವನದ ಸುಪರಿಂಟೆಂಡೆಂಟರಾದ ಮ| ರಾ| ರಾ| ಅರ್ಕಳ ಶ್ರೀನಿವಾಸರಾವ್ ಬಿ. ಎ. ಎಲ್. ಟಿ ಯವರ ಕಾರ್ಯ ಪ್ರಯತ್ನಗಳು ಸ್ತುತ್ಯವಾಗಿರುವವು.

ಗಣಪತಿ ಸೆಕಂಡರಿ ಶಾಲೆಯಲ್ಲಿ ಇದೇ ಅಕ್ಟೋಬರ ತಾ. ೨೦ನೇ ಆದಿತ್ಯವಾರ ಸಾಯಂಕಾಲ ಗಂಟೆ ೫||ಗೆ ಸರಿಯಾಗಿ ಸಬ್‌ಜಡ್ಜರಾದ ರಾ| ಡಿ. ರಾಘವೇಂದ್ರ ರಾವ್ ಪಂತುಲುಗಾರುರವರ ಅಧ್ಯಕ್ಷತೆಯಲ್ಲಿ ವಿದ್ಯಾದಶಮಿ ಉತ್ಸವವು ಜರುಗಿತು. ಅಪೂರ್ವವಾದ ಮಳೆಯ ಬಿರಿಸಿನಿಂದ ಸಭಾಸದನವು ಪೂರ್ಣ ತುಂಬಲು ಏನೊಂದು ಅಭ್ಯಂತರವಾಗಲಿಲ್ಲ. ಎಳೆಯ ಬಾಲಕರನೇಕರು ಶ್ಲೋಕರೂಪದಿಂದ ಹಾಡಿದ ದೇವತಾಸ್ತೋತ್ರಗಳು ಕಿವಿಗೆ ಇಂಪನ್ನೂ, ದಶಭುಜಾದೇವಿಯ ಪುತ್ಥಳಿಯು ಕಣ್ಣಿಗೆ ಆಶ್ಚರ್ಯವನ್ನೂ ಉಂಟುಮಾಡಿದುವು. ಬಾಲಕ ದರ್ಜೆಯ ಹಲವು ಮಕ್ಕಳು ಮೃದುನುಡಿಯಿಂದ ಏಕಕಂಠರಾಗಿ ಅಭಿನಯಿಸಿ ಹಾಡಿದ "ಪ್ರಾರ್ಥನೆ"ಯಿಂದ ಸಭಿಕರು ಸಂತೋಷಪಟ್ಟರು. ಇಂಗ್ಲಿಷು ಬಾಯಿಪಾಠವನ್ನು ಹೇಳಿದ ಆರೆಟು ವರ್ಷ ಪ್ರಾಯದ ಹುಡುಗನು ಆಂಗ್ಲ ಭಾಷೆಯ ಉಚ್ಛಾರದಿಂದ ಕಣ್ಣು ಕೈಗಳ ಅಭಿನಯದಿಂದ ಸಭಿಕರನ್ನು ವಿಸ್ಮಯಗೊಳಿಸಿದನು.

ನಂತರ ಶಾಲಾ ಮುಖ್ಯೋಪಾಧ್ಯಾಯರು ಓದಿದ ರಿಪೋರ್ಟಿನಲ್ಲಿ ಶಾಲಾ ಆಡಳಿತೆದಾರರಲ್ಲಿ ಬದಲಾವಣೆಗಳು ಆಗಲಿಲ್ಲವೆಂದೂ, ಶಾಲೆಗಾಗಿ ಕೊಂಡುಕೊಳ್ಳಲಿಕ್ಕಿರುವ ಎರಡು ಎಕ್ರೆ ಸ್ಥಳವು ಶಾಲಾ ಇನ್ಸ್‌ಪೆಕ್ಟರ್ ದೊರೆಗಳಿಂದ ಮಂಜೂರು ಪಡೆದಿದೆಯಾದ್ದರಿಂದ ಈ ಸಂಬಂಧ ಸರಕಾರಿ ಗ್ರೇಂಟ್ ದೊರಕುವರೆ ವಿಘ್ನಗಳು ಬಾರವೆಂದೂ, ಶಾಲೆಯಲ್ಲಿ ೨೨೨ ವಿದ್ಯಾರ್ಥಿಗಳು ತರ್ಬೀತು ಹೊಂದಿದ ಉಪಾದ್ಯಾಯರುಗಳಿಂದ ಶಿಕ್ಷಣೆ ಪಡೆಯುತ್ತಿದ್ದಾರೆಂಬಿತ್ಯಾದಿ ವಿಷಯಗಳೂ ತಿಳಿದು ಬಂತು. ಶಾಲಾ ವರದಿಯು ಓದಿದ ನಂತರ ವಿದ್ಯಾರ್ಥಿಗಳಿಗೆ ಇನಾಂ ಹಂಚೋಣಾಗಿ, ಮಕ್ಕಳು ಒಂದು ಚಲೋ ನಾಟಕವಾಡಿದನಂತರ ಅಧ್ಯಕ್ಷರು ಕಾಲೋಚಿತ ಭಾಷಣವನ್ನು ಕೊಟ್ಟರು. ಕಡೆಗೆ ಅಧ್ಯಕ್ಷರಿಗೂ ಕೂಡಿ ಬಂದ ಗೃಹಸ್ಥರಿಗೂ ರಾ| ಗೊಂಗೊಳ್ಳಿ ಕೃಷ್ಣರಾವ್ ಬಿ. ಎ. ಎಲ್. ಎಲ್. ಬಿ. ರವರು ಧನ್ಯವಾದವನ್ನಿತ್ತನಂತರ ಸಭೆಯು ಅಗಲಿತು.

ವಿವಿಧ ವಿಷಯಗಳು.

ಹಡಗಪ್ರಯಾಣ ಮಾಡುವಾಗ ವಾಕರಿಗೆ ಉಂಟಾಗದ ಹಾಗೆ ಹಡಗದ ಹತ್ತಿದ ಕೂಡಲೇ ಅರ್ಧ ನಿಂಬೆ ಹಣ್ಣು ಚೀಪಬೇಕು; ಸ್ವಲ್ಪ ತಡದು ಉಳಿದ ಅರ್ಧವನ್ನು ಚೀಪಬೇಕು. ಇದೇ ಸುಲಭ ಚಿಕಿತ್ಸೆ.

* * *

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಮಸ್ಕತಿ ಅಕ್ಕಿ	5—14—0-6—2—0
ಗುಡ್ಡು ಮಸ್ಕತಿ... ...	5—6—0-5—12—0
ಮಸ್ಕತಿ ದುಯಂ... ...	5-10-0—5—13—0
ಗಾಡಿ ಸುಗ್ಗಿ	5-3-0-5—4—0
ಉಂಚು ಸುಗ್ಗಿ	5—10—0—5-12—0
ಮಸ್ಕತಿ ಬೆಳ್ತಿಗೆ	6—10—0
ಹೊಸ ಗುಡ್ಡುರಾಶಿ	4-9-0—4-12—0
ಹೊಸ ಭತ್ತ	2—1—9-2—2—0
ರಂಗೂನ್ ಬೆಳ್ತಿಗೆ ಗೋಣಿ 1ರ	11—6—0
ಹುರುಳಿ ಗೋಣಿ ೧, ಮುಡಿ 2ರ	6-12-0
ಉಪ್ಪು ಗೋಣಿ ೧ರ	3—14—0
ಕೊಬ್ರಿ ಖಂಡಿ ೧ರ ...	90-0-0-95-0-0
ಕೊಬ್ರಿ ಎಣ್ಣೆ ಮಣ ೧ರ	7—0—0
ಕೊಬ್ರಿ ಹಿಂಡಿ ಖಂಡಿ ೧ರ	32-8-0
ಊರು ಬೆಲ್ಲ ಖಂಡಿ ೧ರ	55—0—0
ಕಾಫಿ ಖಂಡಿ ೧ರ 270-0-0	275—0—0
ಕಾಳು ಮೆಣಸು ಖಂಡಿ	180-0-0
ಬಿಳಿ ಗೋಟು ಅಡಿಕೆ ಖಂಡಿ ೧ರ ...	85-0—0
ಪಚ್ಚೆಹೆಸರು ಗೋಣಿ ೧ರ	11-4-0
ಬೊಂಬಾಯಿ ಉದ್ದು ಗೋಣಿ ೧ರ	10-0—0
ಗೋದಿ ಗೋಣಿ ೧ಕ್ಕೆ	12—0-0
ಕಡಲೆ ಗೋಣಿ ೧ರ	7-4-0-7—8—0
ತೊಗರಿ ಗೋಣಿ ೧ರ	8-8-0
ತೊಗರಿಬೇಳೆ ಗೋಣಿ ೧ರ	11-0-0--13-0-0
ಮೋರಿಸ್ ಸಕ್ಕರೆ ಮಣ ೧ರ	2—14—0
ಎಳ್ಹಿಂಡಿ	35-0-0

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.
M. D. Rane & Co.,
Post, Grant Road, Bombay

ಡಿ ಏಸಿಯನ್ ಕಮರ್ಶಲ್

ಎಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮುಂಬಯಿ.

ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ ಪ್ರಿಮಿಯಂ ವಗ್ಯೆರೆ ಇತರ ಕಂಪೆನಿಗಿಂತಲೂ ಅತೀ ಕಡಿಮೆಯಾಗಿರುತ್ತದೆ.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂ. 17—4—0 ತೆತ್ತುಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರುಷ ಪ್ರಾಯದಲ್ಲಿ ಒಂದು ಸಾವಿರ ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವ 14 ವರುಷ ಒಳಗಿನ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸುರು ಮಾಡಲ್ಪಟ್ಟ ಮಕ್ಕಳು ವಿಮೆಗೆ ಅರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟಲ್ಲಿ ವಿಮೆ ಮಾಡಿದ ಪೂರ್ಣ ಐವಜು ಅವರ ಬಾಧ್ಯಸ್ತರಿಗೆ ಸಿಕ್ಕುವುದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೂ ಹೆಂಗಸರನ್ನೂ 50 ವರುಷ ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 15 ವರುಷದ ಮೇಲಿನ ಮತ್ತು 30 ವರುಷದ ಒಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊಳ್ಳುವದಿಲ್ಲ.

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹುದಾದ 1000 ವ ಅದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾರ ತೆರಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ತೆತ್ತು ಆತನ ಪ್ರಿಮಿಯಮ್ 4ರ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡಿಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈ ವರಿವಿಗೆ ಕಂಡುಬರುವದಿಲ್ಲ. ಆದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದರ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟು ರೋಡ್ ಉಡುಪಿ

ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಕ್ಷಿಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

ಹಿಂದುಸ್ಥಾನ ಕೊಒಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್—30 ದಲ್ಹೌಸಿ ಸ್ಕೋಯರ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ.
ಪ್ರತಿಜ್ಞಾತ ಮೂಲಧನ—ರೂ, 865,000,00
ಆಗತ ಮೂಲಧನ—ರೂ. 915,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗ್ಯೆರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸೀದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತಪಡಿಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರನಾಯ್ಕರು,
ಸೊಸ್ಯಾಯಿಟಿಯ ಏಜಂಟರು.
ಶ್ರಮಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌಂ ಮಠದ ಬಳಿ,
ಮಂಗಳೂರು.

ಕ್ಲೆಮೆಂಟರ ಮೆಜಿಕ್‌ಬಾಂ ತೈಲ್ಯವು.

ಈ ತೈಲ್ಯದಿಂದ ಸಕಲ ವಿಧದ ನೋವು ನಿವಾರಣೆಯಾಗುವದು. ತಲೆ ನೋವು ವಾಯುನೋವು, ಸೆಳತ, ಗಂಟ್ಲು ನೋವು, ಬೆನ್ನು ನೋವು, ಕೀಲುಗಳ ನೋವು, ಪಾರ್ಶ್ವವಾಯು, ವಿವಿಧವಾದ ವಾಯು ರೋಗಗಳು, ಶೀತ ರೋಗಗಳು, ಸಂದುವಾತ, ಚೇಳು ಕಡಿದ ನೋವು—ಇವುಗಳೆಲ್ಲಾ ಈ ತೈಲ್ಯ ಹಚ್ಚಿದ ಮಾತ್ರದಿಂದ ಚಮತ್ಕಾರಿಕವಾಗಿ ಮಾಯವಾಗುವವು ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪ್ರಯೋಗಿಸಿ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಇದರಷ್ಟು ಅಮೋಘವಾದ ತೈಲ್ಯವು ಬೇರೊಂದಿಲ್ಲವೆಂಬದಾಗಿ ಕಂಡುಕೊಂಡಿದ್ದಾರೆ. ಈ ಅತ್ಯುತ್ತಮವಾದ ತೈಲ್ಯವು ನೋವಿನ ಮೂಲವನ್ನು ಕಂಡುಹಿಡಿದು ಅದರ ಹುಟ್ಟಡಗಿಸಿಬಿಡುವದು.

ಕ್ರಯ ಸೀಸೆ ಒಂದಕ್ಕೆ ೧೨ ಆಣೆ, ಪ್ಯಾಕಿಂಗ್ ೪ ಆಣೆ. ಮೂರು ಅಥವಾ ಹೆಚ್ಚು ಬುಟ್ಲ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡಲಾದೀತು. ಈ ತೈಲ್ಯವು ಎಲ್ಲಾ ವ್ಯಾಪಾರಸ್ತರಲ್ಲಿಯೂ ವೈದ್ಯರಲ್ಲಿಯೂ ಬಿಕರಿಮಾಡಲ್ಪಡುತ್ತದೆ.

ವಿಳಾಸ:— ಎಸ್. ಪೀಟರ್ಸ್.
ಏಜಂಟ್:— ಜೆ. ಎಸ್. ಕಣ್ಣೈಚೆಟ್ಟಿ, 37 ವೇದಮಲೆಪಿಳ್ಳೆ ಬೀದಿ,
ಊಲನ್‌ಶೀಪ ಮ್ಯನುಫೆಕ್ಚರರ್, ತುಮಕೂರ. ಪೆರಸುವಾಕಂ ವೇಪರಿ ಮದ್ರಾಸು.

ಒಂದೇ ಕಥೆ! ಅಪೂರ್ವ ಗ್ರಂಥ!! ದೊಡ್ಡ ಕಥೆ!!!

ಪ್ರತಾಪಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಟರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿ ಹೋಗುತ್ತವೆ." ಎಂಬ ನೀತಿ; (೨) ಸ್ತ್ರೀಧರ್ಮ, ಸ್ತ್ರೀಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು, ಆಶ್ರಮಾದಿ ವರ್ಣನೆಗಳು; (೬) ಮನುಷ್ಯ ಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿ ನೋಡಿದರೆ ಸ್ವಾರಸ್ಯವು ಗೊತ್ತಾಗುವುದು. ಕ್ರಯ ೧ ರೂ. ಟಪ್ಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅನ್ಯೃತಸಾರ.

1882ನೇ ಇಸವಿ ಇಂಡಿಯನ್ ಕಂಪೇನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ನಿಯಮಿತ ಮೂಲಧನ ರೂ. 10,00,000.
ಪ್ರತಿಜ್ಞಾತ ಮೂಲಧನ ರೂ. 85,00,00.
ಆಗತ ಮೂಲಧನ ರೂ. 10,6450.
ಭಂಡವಾಳ ರೂ. 12,60,000.
ವಿಮೆ ಮಾಡಿರುವವರ ಸಂಖ್ಯೆ 76,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ.

ಸ್ವದೇಶಿಲ್ಯಾಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ.ಕೆ.ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ॥ ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್, ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ತಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಸೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂ ಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯುಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20–6–0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಶಕ್ಕೆ ಬರಿಯುವುದು.

ಕೊಟ್ಟಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ಯವ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬವನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕ್ರೃತ್, ಪ್ಲೀಹ, ಹೃದಯ ಅಸ್ಥಿಗ್ರಸರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ. ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1–8–0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:—
ಯವ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸುಲಭ ಕ್ರಯ! ಪರೀಕ್ಷಿಸಿರಿ!! ಸಂತೋಷ ಪಡುವಿರಿ!!!

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ. ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2–4–0 ಮಾತ್ರ. 5 ವರುಷಗಳ ಗ್ಯಾರೆಂಟಿ.

SUPERIOR WATCH Co.
Rs. 2/4.
Rs. 2/4.
POST BOX No. 167
MADRAS, E.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡಿಯುತ್ತದೆ. ಸಾವಿರಗಟ್ಟಳೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ ಸೈಜು ಕಂಪೆನ್‌ಸೇಷನ್ ಬ್ಯಾಲನ್ಸು. ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಕ್ರಯ ರೂ. 5–12–0. ಇದನ್ನು ಜುಲಾಯಿ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಘಂಟೆಗೊಂದ್ರಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪಿಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:— ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲ ಔಷಧಕ್ಕೆ ರೂಪಾಯಿ 4–8–0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಆಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

"ಅಮೇರಿಕದ ವಿಶಿಷ್ಟತೆ."

પ્રો. જેમ્સની વિજળીક શક્તિની ગોળીઓ.
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ-ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತವೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ದೊರತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನುಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಕಾಸವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2–0–0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮಿ.ಜೀ.ಸಿ. ಬ್ರೀತೋ(ಪೊಂಡಾ-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮಿ. ಜಿ. ಆರ್. ಗಾಯಕವಾಡ, (ಸಕ್ರಿಯ ಮಾಮಲತದಾರರು—ವಿ.ಪಿ. ದ್ವಾರಾ ಅದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳಉತ್ತಮವಿದೆ.

ನೇ. ಸಾಕು, ಸಾಕು! ನಿನ್ನ ಭಕ್ತರ ಅವಸ್ಥೆಯು ನನಗೆ ತಿಳಿದೇ ಇದೆ. ಕೃಷಿಕರಾದರೂ ನಿರಾತಂಕವಾಗಿ ಹೊರಗೊಳ್ಳಿರುವರು; ಆರೋಗ್ಯಭಾಗ್ಯವುಳ್ಳವರು. ಆದರೆ ಕಮ್ಮಾರಸಾಲೆ, ಕಾರಖಾನೆ ಗಿರಣಿಗಳ ನಿನ್ನ ಕಿಂಕರರು ಅಂಧಕೂಪಗಳಲ್ಲಿ ನಿಸ್ಸತ್ವ ರೋಗಿಗಳಾಗಿಹರು. ಸಂಜೆಯಲ್ಲಿ ಗಿರಣಿಯಿಂದ ಹೊರ ಬೀಳುವಾಗ ಅವರು ಭೂತಗಳೊ ಪ್ರೇತಗಳೊ ಎಂದು ಭಾಸವಾಗುವುದು. ಅವರಿಗೆ ಕಾಯಕಷ್ಟದಿಂದ ಚಿರಮರಣವೇ ಹೊರತು, ಮಾನಸಿಕ ಉಲ್ಲಾಸವಾಗಲೀ ಪುಷ್ಟತೆಯಾಗಲೀ ಇರದು,—

ಸು. ಮತ್ತು ನಿನ್ನವರು ಸಾಹುಕಾರರ ಹತೋಟಿಯಲ್ಲಿದ್ದು, ವ್ಯಾಪಾರ ತಂತ್ರಗಳಲ್ಲಿ ಸಿಲುಕಿ, ನಿರಾಧಾರಿಗಳಾಗುವಾಗ ಅವರನ್ನು ನೀನು ವಿಚಾರಿಸುವುದೆಂದರೆಲ್ಲಿ? ದೊಡ್ಡ ಕಾರಖಾನೆಗಳ ಮ್ಹಾಲಿಕರ ಸ್ಥಿತಿಯನ್ನು ಇವರ ಸ್ಥಿತಿಯೊಂದಿಗೆ ಹೋಲಿಸು.

ನೇ. ಅದು ಗೊತ್ತಿದೆ ತಾನೇ! ಬಡಬಗ್ಗರನ್ನು ಯಂತ್ರಗಳಲ್ಲಿ ಹಾಕಿ, ಕಾಯಿಸಿ ಹಿಂಡಿ, ಬಡೆದು, ಪುಡಿಗೈದು, ದ್ರವೀಕರಿಸಿ, ಶ್ರೀಮಂತರಾಗುವ ನಿನ್ನ ಮ್ಹಾಲಿಕರ ಸುದ್ದಿ ತೆಗೆವುದಿಲ್ಲವೇಕೆ? ಒಬ್ಬನ ದೊರೆತನ, ಸಾವಿರರ ಭಿಕ್ಷಾವೃತ್ತಿ, ಗುಲಾಮಿ. ಇದಲ್ಲವೆ ನಿನ್ನ ಪ್ರಭಾವ!

ಸು. ಸಿಟ್ಟೇಕಣ್ಣ! ನನಗಾದರೂ ಆ ಸಾವಿರರ ಹಿತವೇ ಚಿರವಾಂಛೆ. ಪರಂತು ನೀವು ಬಯಸಿದಂತೆ ಆಗಬೇಕೆಂದರೆ ಕಾಲಬೇಕು. ಲಕ್ಷ್ಮಿಯ ದೃಷ್ಟಿಯು ನನ್ನ ಭಕ್ತರ ಕಡೆಗೆ ಮೆಲ್ಲಮೆಲ್ಲನೆ ಬೀರುವುದು. ನನ್ನ ಭಕ್ತರು ಗಪ್ಪ ಹೊಡೆದು, ಬಡವರ ತಲೆ ಮುರಿದರೂ ತಾವು ಮೆರೆವರು. ನಿನ್ನವರಲ್ಲಿ ಸುಳ್ಳಿಲ್ಲ, ಧನವೂ ಇಲ್ಲ, ಆತ್ಮಪ್ರತ್ಯಯವೂ ಇಲ್ಲ. ಆದುದರಿಂದ ಈ ಭಕ್ತಪ್ರಜೆಗಳನ್ನು ಪುನಹ ಹಂಚಿಕೊಂಡರಾಗದೆ?

ನೇ. ನಿನ್ನ ಭಕ್ತರದೋಷಗಳೂ ಹಾಗೆಯೇ ನನಗೆ ತಿಳಿವುವು. ನಿನ್ನವರು ಹಣದಾಸರು; ಒಂದಕ್ಕೆ ಸೊನ್ನೆ ಕೂಡಿಸಿ ಕೋಟಿ ಮಾಡುವುದೇ ಹೊರತು ಅನ್ಯಶ್ರದ್ಧೆ ಅವರಲ್ಲಿಲ್ಲ. ಹ್ಯಾಗೂ ಹಣ ಕೂಡಿಸುವುದೇ ಅವರ ಧರ್ಮವೂ, ಪುರುಷಾರ್ಥವೂ, ದೇವರೂ. ಸಂಪನ್ನರ ಸ್ಥಿತಿಯೇ ಹೀಗೆ. ಜನ್ಮಾಂತರವೂ ಬಡವರನ್ನು ಮುರಿದು, ಪಶುಗಳಿಗಿಂತ ಕೀಳಾಗಿ ವರ್ತಿಸಿ, ನಿನ್ನ ರಾಜ್ಯದಲ್ಲಿ ಬಾಳುವುದು,—ಇದೇ ಅವರ ಜೀವನ.

ಸು. ಮೊದಲೇನೋ ಹೀಗಿತ್ತು ನಿಜ. ಆದರೆ ಈಗ ತಾನೇ ಎಲ್ಲೆಲ್ಲಿಯೂ ಶಾಲೆ, ಆಸ್ಪತ್ರೆ, ಛತ್ರ, ಭಾವಿ, ಸಮಾಜ ಹಿತದ ಸಂಸ್ಥೆಗಳೆಲ್ಲ ನನ್ನವರ ಏರ್ಪಾಡು. ಇದನ್ನು ಆಲೋಚಿಸಿದರೆ ಅವರ ಜೀವನದ ಮತ್ತೊಂದು ಕಡೆಯ ಸುಖದರ್ಶನ.

ನೇ. ನಿನ್ನ ರಾಜ್ಯದ ವರ್ತಮಾನಗಳನ್ನು ಓದಲು ನನಗೆ ಬರಹ ಬಾರದು; ಕೇಳಿಯಾದರೂ ತಿಳಿಯೆನೆ! 'ದಿವಾಳಿ' ಹಬ್ಬವು ಎಷ್ಟು ಪರಿಷ್ಕಾರವಾಗಿ ನಿಮ್ಮೂರಲ್ಲಿ ಗಳಿಗೆಗಳಿಗೆಗೂ ನಡೆವುದಲ್ಲ! ಅಲ್ಲಲ್ಲಿ ಮುಷ್ಕರ ಹಿಡಿದ ಜನಸ್ತೋಮ! ಎಂತಹ ಸೌಭಾಗ್ಯ!

ಸು. ಅದು ಒಳ್ಳೆಯ ಲಕ್ಷಣ; ನನ್ನ ಭಕ್ತರು ಎಷ್ಟು ಐಕ್ಯರಾಗಿರುವರೆಂದು ತಿಳಿ. ತಮ್ಮ ಸುಖದುಃಖಗಳನ್ನೆಲ್ಲ ಅವರು ಸರಿಯಾಗಿ ಹಂಚಿಕೊಳ್ಳುವರು. ಈಗ ಸಮಾಧಾನಕರ ಸ್ಥಿತಿಯು ಅವರಲ್ಲಿ ಇಲ್ಲದಿದ್ದರೂ, ಒಂದೆರಡು ಶತಾಬ್ದಗಳಲ್ಲಿ ಅವರ ಸುಧಾರಣೆಯನ್ನು ನೀನೇ ನೋಡುವೆ!

ನೇ. ಪರಂತು ನನ್ನನ್ನು ಹಿಯ್ಯಾಳಿಸುವುದೇಕೆ? ಚಾಕರಿ ಪಿಶಾಚ ಹಿಡಿದ ಯಾವನೊಬ್ಬನಿಗೂ ಇಂತಹದೇ ಅವಸ್ಥೆ. ಆ ಪಿಶಾಚವನ್ನು ಹೊರಡಿಸಿದಲ್ಲದೆ ಉನ್ನತಿಯುಂಟಾಗದು, ತ್ರಾಣವೂ ಬಾರದು.

ಸು. ಆದರೆ ಇವರೇ ಸಂಪೂರ್ಣ ಸತ್ವ ರಹಿತರಾದುದರಿಂದಲೇ ಆ ಪಿಶಾಚನ ಕೈ ಸೇರುವರು! ನನ್ನನ್ನು ಭಜಿಸಿದರೆಂದರೆ ಅವರ ಮೈಯಲ್ಲಿ ಹೊಸ ಮಾಂಸ ರಕ್ತಗಳಾಗುವುವು.

ನೇ. ನೀನು ಅವರ ತೃಷ್ಣೆಯನ್ನು ಹೋಗಲಾಡಿಸಿ ದುರಾಚಾರಿಗಳಾಗಿ ಮಾಡುವೆ; ಆದರೆ ಅವರು ಕಲ್ಯಾಣ ಹೊಂದಬೇಕೆಂಬುದೇ ನನ್ನ ಇಚ್ಛೆ. ಒಳ್ಳೆಯದು; ನೀನೆಣಿಸಿದಂತೆ ಕೆಲವರ ವೃತ್ತಿ ಬದಲಾವಣೆಯಿಂದ ಮಂಗಲವಾಗುವುದೆನ್ನುವೆಯಾ?

ಸು. ನಾನೆನ್ನುವುದೇನಂದರೆ, ನಿನ್ನ ಭಜನೆಯಿಂದ ನಷ್ಟವಾಗಿ ನಿರಾಧಾರಿಗಳಾದ ಅನೇಕರನ್ನು ನನ್ನ ಯೋಗ್ಯತೆಗನುಸಾರವಾಗಿ ನನ್ನ ಭಕ್ತರಾಗಿ ಮಾಡುವುದಾದರೆ ಆರ್ಯಾವರ್ತಕ್ಕೆ ಮಂಗಲ!

ನೇ ನನ್ನ ಮತವೇನೆಂದರಿದೆಯಾ,—ಕೃಷಿಕರಿಗೆ ಸುಶಿಕ್ಷಣೆ ದೊರಕುವುದಾದರೆ ಶಾಸ್ತ್ರೀಯ ಜ್ಞಾನದ ಅರಿವಿನಿಂದ ತಮ್ಮ ವೃತ್ತಿಯಲ್ಲಿ ಸುಧಾರಿಸಿ ಉಪಯೋಗ ಹೊಂದುವರು. ಅವರ ಸ್ಥಿತಿಯೂ ಒಳ್ಳೆಯದಾಗುವುದು.

ಸು. ಆದರೂ, ಅಣ್ಣ, ನೀನು ಎಷ್ಟೇ ಜ್ಞಾನಭರಿತನಾದರೂ ಈ ಪ್ರಜೆಯನ್ನು ನಾವು ಪುನಃ ಪಾಲುಮಾಡಿಕೊಳ್ಳಲಾಗದೆ? ಇಷ್ಟು ಕಾಲ ನೀನಂತೂ ಹೆಚ್ಚಿನವರನ್ನು ಪಾಲಿಸಿದ್ದೆ. ಈಗ ಕೆಲವರನ್ನು ನನಗೊಪ್ಪಿಸಿ ಮಿಕ್ಕವರನ್ನು ತಿದ್ದಿಸು, ಮಂಗಲವಾಗದಿದ್ದರೆ ಪುನಹ ಬದಲಾಯಿಸಬಹುದು. ಪ್ರಯತ್ನ ಮಾಡೋಣ, ಈಶ್ವರನು ಕರುಣಿಸುವನು.

M. N. K.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ).

ದೀಪಾವಳಿ ಸಮ್ಮಂಧವಾಗಿ ವಿಜ್ಞಾಪನೆ.

ಸ್ವದೇಶಾಭಿಮಾನಿಯ ಇದೇ ತಿಂಗಳ ೨೫ನೇ ತಾರೀಕಿನ ಸಂಚಿಕೆಯಲ್ಲಿ "ಸಭಾಪತಿರಾಯರಿಗೆ|ಹಿಡಿದ ಚಿಂತೆ" ಎಂಬ ಶಿರನಾಮೆಯ ಕೆಳಗೆ ಪ್ರಕಟಿಸಿದ ಸಂವಾದದಲ್ಲಿ ಪ್ರೇತ ಸಂಸ್ಕಾರದ ಕುರಿತು ಬಾತ್ಮಿದಾರರ ಅಭಿಪ್ರಾಯ ಹೇಗಿದ್ದಾಗ್ಯೂ ಅವರ ಲೇಖನದಲ್ಲಿ ಒಂದು ಉತ್ತಮ ಸೂಚನೆ ಇರುವುದು. ಸಭಾಪತಿರಾಯರು ಯಾವ ಜಾತಿಯವರೋ ನಾನು ಅರಿಯೆನು. ಪರಂತು ಈ ಸೂಚನೆಯಿಂದ ನಮ್ಮ ಜಾತಿಯವರಿಗೆ ಪ್ರಯೋಜನ ಸಿಕ್ಕಬೇಕೆಂತ ನಾನು ಆಶಿಸುತ್ತೇನೆ.

ನಮ್ಮ ಜಾತಿಯು ಮಹಾ ವಿಸ್ತಾರವಾದಂಥಾದ್ದು. ಕುರುಡರೂ, ಅಪಂಗುಲರೂ, ಬುದ್ಧಿ ಸ್ವಸ್ತತೆಯಿಲ್ಲದವರೂ, ಜೀವನಾಸ್ಪದವಿಲ್ಲದ ರೋಗಿಗಳೂ, ತಂದೆ ತಾಯಿ ಇಲ್ಲದ ಅನಾಥ ಮಕ್ಕಳೂ ಬಹು ಮಂದಿ ಇದ್ದಾರೆ. ಪರಂತು ಇವರಿಗೆ ಆಶ್ರಯಸ್ಥಾನವಾಗಿ ಒಂದಾದರೂ ಸಂಸ್ಥೆ ಎಲ್ಲಿಯೂ ಇರುವುದಿಲ್ಲ. ಮುಖ್ಯ ಪಟ್ಟಣವಾದ ಮಂಗಳೂರಲ್ಲಿ ಆದರೂ ನಮ್ಮ ಪ್ರಿಯರಾಗಿದ್ದ ದಿವಂಗತ ಸುಬ್ರಾಯ ಪೈಗಳ ಸ್ಮಾರಕವಾಗಿ ಒಂದು ಅನಾಥಾಶ್ರಮವೆಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸುವುದು ಅಗತ್ಯವು. ಜಾತಿಭೇದ ಆಚರಿಸದ ಕ್ರೈಸ್ತರು ಸಹ ಇಂತಹ ಸಂಸ್ಥೆ ಇಟ್ಟಿರುವಾಗ ಜಾತ್ಯಾಭಿಮಾನ ವಿಶೇಷವಾಗಿ ಪಡುವ ನಾವು ಇಂತಹ ಸಂಸ್ಥೆ ಇದು ವರೇಗೂ ಇಡದೇ ಇದ್ದದ್ದು ನಮ್ಮ ಅಪರಾಧವೇಸರಿ.

ದಿವಂಗತ ಸುಬ್ರಾಯ ಪೈಗಳು ಅನಾಥ ಪಂಚಮರ ಕಡೆಗೆ ಸಹ ಕನಿಕರವುಳ್ಳವರಾಗಿಯೂ ಇವರ ಉದ್ಧರಣೆ ನಮ್ಮ ಪತಿತ ದೇಶದ ಉದ್ಧರಣೆಗೆ ಅಗತ್ಯವಾದ ಕಾರ್ಯವೆಂತಲೂ ಭಾವಿಸಿ ತನ್ನ ಮನೆಯಲ್ಲೇ ಸಭೆ ಕೂಡಿಸಿ ಮಂಗಳೂರಲ್ಲಿ ಒಂದು ನಿರಾಶ್ರಿತ ಜನ ಸಹಾಯಕ ಸಂಘವನ್ನು ಸ್ಥಾಪಿಸಿದರು. ತದನಂತರ ನಮ್ಮ ಸ್ವಜಾತಿಯ ಅನಾಥರ ಪ್ರಯೋಜನದ ಬಗ್ಯೆ ಒಂದು ಆಶ್ರಮ ಸ್ಥಾಪಿಸಬೇಕಾಗಿ ಆಗಾಗ್ಯೆ ಹೇಳುತ್ತಲೇ ಇದ್ದರು. ಇದು ಬಹು ಜನರು ತಿಳಿದ ಸಂಗತಿಯಾಗಿರುತ್ತದೆ.

ಆದುದರಿಂದ ನನ್ನ ವಿಜ್ಞಾಪನೆ ಏನೆಂದರೆ:—ಸ್ವಜಾತ್ಯಾಭ್ಯುದಯದ ಬಗ್ಯೆ ಬರುವ ನರಕ ಚತುರ್ದಶಿಯಿಂದ ಕಾರ್ತಿಕ ಪೌರ್ಣಮಿ ವರೇಗೆ ಇರುವ ದೀಪಾವಳಿ ದಿವಸಗಳಲ್ಲಿ ಸಾಹುಕಾರರೂ, ಅಂಗಡಿಗಾರರೂ, ವರ್ಗದಾರರೂ ಮತ್ತು ಇತರ ಗೃಹಸ್ಥರೂ ಸಹ ಪಟಾಕಿಗಳ ಬಗ್ಗೆಯೂ ವೈದಿಕರಲ್ಲದ ವೈಗಳ್ಳರಿಗೆ ದಕ್ಷಿಣೆ ಕೊಡುವ ಬಗ್ಗೆಯೂ ಇತರ "ಕುಶಾಲ್" ಕಾರ್ಯಗಳ ಬಗ್ಗೆಯೂ ವ್ರಯಮಾಡುವ ಹಣದಿಂದ ಒಂದು ರೂಪಾಯಿ ಅಥವಾ ಎಂಟು ಆಣೆ ಪ್ರಕಾರ ವಂತಿಗೆಯನ್ನು ತಮ್ಮ ತಮ್ಮ ಊರುಗಳಲ್ಲಿರುವ ದೇವಸ್ಥಾನಗಳಲ್ಲಿ ವಸೂಲು ಕೊಟ್ಟು ಹಾಗೆ ಜಮೆಯಾಗುವ ಹಣವನ್ನು ನಮ್ಮ ಮಂಗಳೂರ ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರರಿಗೆ ರವಾನಿಸಬಹುದು. ಅದೇ ರೀತಿ ಮಂಗಳೂರಲ್ಲಿರುವ ನಮ್ಮ ಸ್ವಜಾತಿ ನಿವಾಸಿಕರು ತಮ್ಮ ಯಥಾನುಶಕ್ತಿ ವಂತಿಗೆಯನ್ನು ಮಂಗಳೂರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ವಸೂಲು ಕೊಡಬಹುದು. ಈ ರೀತಿ ಕೆಲವು ವರುಷಗಳಲ್ಲಿ ಜಮೆಯಾಗುವ ಹಣವಿನಿಂದ ಮೇಲೆ ವಿವರಿಸಿದಂತಹ ಅನಾಥಾಶ್ರಮವು ಸಾಧ್ಯವಾಗುವುದು.

ದೇಶೋನ್ನತಿ ಬಗ್ಯೆ—ದಿವಂಗತ ಸುಬ್ರಾಯಪೈಗಳ ಸ್ಮಾರಕವಾಗಿ ಅನಾಥ ಪಂಚಮರ ಬಗ್ಯೆ ಒಂದು ಭಾವಿಯನ್ನು ಕಟ್ಟಿಸಬೇಕಾಗಿ ನಿರಾಶ್ರಿತ ಜನಸಹಾಯಕ ಸಂಘದ ಕಮ್ಮಿಟಿಯವರು ಕಳೆದ ವರುಷ ಮಾಡಿದ ನಿರ್ಣಯವನ್ನು ಸಂಘದ ಸೆಕ್ರಟರಿಯವರಾದ ರಾ| ಕುದ್ಮುಲ ರಂಗರಾಯರು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದ್ದರು. ಆ ತರದಲ್ಲಿ ಪ್ರಕಟಿಸಿ ಒಂದುವರೆ ವರುಷವಾದಾಗ್ಯೂ ರೂಪಾಯಿ ಹದಿನೈದು ಮಾತ್ರ ವಸೂಲು ಆಗಿಯದೆಂತ ಮೊನ್ನೆ ದಿನ ನಾನು ಆ ಸಂಘದವರ ಆಫೀಸಿನಲ್ಲಿ ಕೇಳಿ ತಿಳಕೊಂಡೆ. ಆದುದರಿಂದ ನಮ್ಮ ಮಂಗಳೂರ ನಿವಾಸಿಕರಾದರೂ ದೀಪಾವಳಿ ಕಾಲದಲ್ಲಿ ೪ ಆಣೆ ಅಥವಾ ೨ ಆಣೆಯಂತೆ ನಿರಾಶ್ರಿತ ಜನಸಹಾಯಕ ಸಂಘಕ್ಕೆ ವಸೂಲು ಕೊಟ್ಟರೆ ದೇಶೋನ್ನತಿ ಕಾರ್ಯಕ್ಕೆ ಪ್ರೋತ್ಸಾಹ ಕೊಟ್ಟ ಹಾಗೆ ಆಗುವುದು. ಅದಲ್ಲದೆ ನಮ್ಮ ಸುಬ್ರಾಯಪೈಗಳ ಸ್ಮಾರಕವಾಗಿ ಕಟ್ಟಿಸಬೇಕಾಗಿ ನಿರ್ಣಯಿಸಿದ ಭಾವಿಯೂ ಪೂರ್ಣವಾಗುವುದು.

ಹಲವರ ಹುಲ್ಲು ಕಡ್ಡಿಗಳು ಒಬ್ಬನ ತಲೆಹೊರೆ ಎಂಬ ಗಾದೆಯಂತೆ ಕಿಂಚಿತ್ತು ವಂತಿಗೆಗಳಿಂದಲೇ ಮಹತ್ಕಾರ್ಯಗಳು ಸಾಧ್ಯವಾಗುವವು.

ಮಂಗಳೂರು.
ತಾ. 27—10—1912. } ಗೌಡ ಸಾರಸ್ವತ ಬ್ರಾಹ್ಮಣ.

* * *

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ರಾ. ಎಚ್. ರಾಮಯ್ಯ ಸೆಟ್ರು ಈ ಕೆಳಗಿನ ವಿವಾಹ ವೃತ್ತಾಂತವನ್ನು ಪ್ರಕಟಣೆ ಬಗ್ಯೆ ಕಳುಹಿಸಿರುತ್ತಾರೆ.

ಇದೇ ಕಳೆದ ತಾರೀಕು ೨೭ನೇ ಆದಿತ್ಯವಾರವು ಒಂದು ಸುದಿನವೆಂದೇ ಹೇಳಬೇಕು. ಆ ದಿವಸ ಮಂಗಳೂರಲ್ಲಿರುವ ವಕೀಲ್ ಮ. ರಾ. ರಾ. ಪಿ. ಸಂಜೀವ, ಯಮ್. ಎ. ಬಿ. ಯಲ್ ರವರ ವಿವಾಹದ ಮಹೋತ್ಸವವು ಅತೀ ಸಂಭ್ರಮದಿಂದ ನಡೆಯಿತು. ಹ್ಯಾಗಂದರೆ:-ಇವರು ಆಂಗ್ಲಾಳದಲ್ಲಿ ಮತ್ತು ಅಮೇರಿಕದಲ್ಲಿ ಸುಮಾರು ಹದಿಮೂರು ವರುಷಗಳ ವರೇಗೆ ಇದ್ದು ಬಿ. ಎ. ಮತ್ತು ಯಂ. ಡಿ. ಪರೀಕ್ಷೆಗಳನ್ನು ಪಾಸಾಗಿ ಹೆಚ್ಚಿನ ಗೌರವವನ್ನು ಹೊಂದಿದ ಶೆಣ್ವೈ ಜಾತಿಯು ಸೌ ಚೆಂಪಾಬ್ಬಾ ಸುಂತನ್‌ಕರ್ ಎಂಬ ಕನ್ನಿಕೆಯನ್ನು ವರಿಸಿದರು. ಮದುವೆ ಮಹೋತ್ಸವವು ಮದುಮಗನ ಮನೆಯಲ್ಲಿ ಸಂತೋಷದಿಂದ ಹಗಲು ೩ ಘಂಟೆಗೆ ಸುಮುಹೂರ್ತದಲ್ಲಿ ಜರುಗಿತು. ಈ ಮಹೋತ್ಸಹವನ್ನು ಮ. ರಾ. ರಾ. ಕೆ. ರಂಗರಾಯರು ೧೮೭೨ನೇ ಇಸವಿಯ ೩ ನೇ ಆಕ್ಟಿನ ಪ್ರಕಾರ ನೆರವೇರಿಸಿದರು. ನಂತರ ವರನು ವರಳಿಗೆ ಹೂಮಾಲೆಯನ್ನು ಕೊರಳಿಗೆ ಹಾಕಿ, ವರಳು ವರನಿಗೆ ಹೂಮಾಲೆಯನ್ನು ಕೊರಳಿಗೆ ಹಾಕಿದ ಮೇಲೆ ವರನು ಒಂದು ಸಣ್ಣ ಭಾಷಣ ಮಾಡಿದರು. ಅದು ಏನಂದರೆ—ತಾನು ಇಷ್ಟು ತನಕ ಆರೋಗ್ಯ ಸಂಬಂಧ ಡಾಕ್ಟರ ಆಲೋಚನೆ ಪ್ರಕಾರ ಪ್ರೀತಿಸಿಕೊಂಡು ಇದ್ದ ಹೆಂಗಸನ್ನು ಮನೆಯಲ್ಲಿ ಇನ್ನು ಮುಂದೆಯೂ ಸಂರಕ್ಷಿಸಲಿಕ್ಕೂ ತನ್ನಿಂದ ಅವಳಲ್ಲಿ ಜನಿಸಿದ ಮಕ್ಕಳನ್ನು ತನ್ನ ಚಿರಂಜೀವಿಗಳಂತೆಯೇ ಸರ್ವಸ್ವಕ್ಕೆ ಹಕ್ಕುದಾರರಾಗಿ ಇರಲಿಕ್ಕೂ ಒಪ್ಪಿಕೊಂಡ ಈ ವಿದ್ಯಾವತೀಯಾದ ಸೌಭಾಗ್ಯವತಿಯು ನನಗೆ ಲಭಿಸಿದ್ದು ನನ್ನ ಪೂರ್ವ ಪುಣ್ಯವೆ!. ಆ ಮೇಲೆ ವಕೀಲ್ ಮ. ರಾ. ರಾ. ಎಮ್. ಎನ್. ಪ್ರಭು. ಬಿ. ಎ. ಬಿ. ಎಲ್. ರವರು ಒಂದು ಚಿಕ್ಕ ಉಪನ್ಯಾಸ ಕೊಟ್ಟರು. ಏನೆಂದರೆ—ಮದುಮಗನು ಮತ್ತು ತಾನು ಶಾಲೆಗಳಲ್ಲಿ ಸಹಪಾಠಿಗಳಾಗಿಯೂ, ಈಗಲೂ ವಕೀಲ್ ಕೆಲಸದಲ್ಲಿ ಸಹೋದರರಂತೆ ಅನ್ಯೋನ್ಯದಿಂದ ಅತೀ ಸ್ನೇಹಿತರಾಗಿದ್ದೆವು. ಇವರು ಈ ವಿದ್ಯಾವತಿಯಾದ ಸುಂದರೀಮಣಿಯನ್ನು ವರಿಸಿಕೊಂಡದಕ್ಕೆ ತಾನು ಹೆಚ್ಚಿನ ಸಂತೋಷಪಡುತ್ತೇನೆ. ಶ್ರೀ ಪರಮಾತ್ಮರು ಇವರಿಗೆ ಸದಾ ಕಾಲವೂ ಆನಂದಮಾಡಲಿ! ಎಂದು ಆಶೀರ್ವದಿಸಿದರು. ಹೆಸರುಗೊಂಡ ಮ. ರಾ. ರಾ. ವಿಲ್ಯಾಟ್ ಅಲ್ಲಿಖಾನ್ ಸಾಹೇಬರು ತನ್ನ ಸಂಗೀತಗಳಿಂದ ಸಭಿಕರನ್ನು ಹರುಷಗೊಳಿಸಿದರು. ಆ ಮೇಲೆ ಸಭಿಕರು ಫಲಹಾರವನ್ನು ತೀರಿಸಿ ತಾಂಬೂಲವನ್ನು ಸ್ವೀಕರಿಸಿ, ವಧೂವರರನ್ನು ಆಶೀರ್ವದಿಸಿ ತಂತಮ್ಮ ಗೃಹಾಭಿಮುಖರಾದರು.

ಅಲ್ಲಿ ನೆರೆದ ಸಭಿಕರಲ್ಲೊಬ್ಬ,

H. Ramaya Shetty.
Dt. Board Member
South Canara.

* * *

ಪಂಚಮರ ವಿನಂತಿ.

ಮ| ರಾ| ರಾ| ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘದ ಸೆಕ್ರಿಟರಿ ರಂಗರಾಯರ ಸನ್ನಿಧಾನಕ್ಕೆ.

ತಮ್ಮ ದೀನ ಸೇವಕರಾದ ಕಂಕನಾಡಿ ತುಕ್ರನ ಮಗ ಅಂಗರ ೧. ಉರ್ವ ಐತನ ಮಗ ಕೋಟಿಯಾನೆ ವಾಮಾನ ೧. ಸೇಡಿಗುಡ್ಡೆ ನೊಂಗ್ರನ ಮಗ ಪುದ್ದು ೧. ಬೆಂದೂರು ಐತುನ ಮಗ ಬಸವ ೧ ಕೂಡ ೪ ಜನರು ಬೇಡಿಕೊಳ್ಳುವ ಆಶೀರ್ವಾದ.

ತಾವು ನಮ್ಮ ಜಾತಿಯವರ ಉಪಯೋಗದ ಬಗ್ಯೆ ಮೊದಲು ಬೋಳೂರಲ್ಲಿಟ್ಟ ಶಾಲೆಯಲ್ಲಿಯೂ ನಂತರ ನಿರಾಶ್ರಿತ ಜನ ಸಹಾಯಕ ಸಂಘದವರ ಕಡೆಯಿಂದ ಮಂಗಳೂರ ಕೋರ್ಟು ಗುಡ್ಡೆಯಲ್ಲಿಟ್ಟ ಶಾಲೆಯಲ್ಲಿಯೂ ನಾವು ಸ್ವಲ್ಪ ಕನ್ನಡ ವಿದ್ಯೆಯನ್ನು ಕಲಿತು ಸ್ಕೂಲ್ ಮಾಸ್ತರು ಉದ್ಯೋಗಕ್ಕೆ ತರಬೇತು ಹೊಂದುವದಕೋಸ್ಕರ ಮಂಗಳೂರ ಗವರ್ನಮೆಂಟು ಟ್ರೈನಿಂಗು ಶಾಲೆಯನ್ನು ಶೇರಿದ್ದೇವೆ. ನಮಗೆ ಪ್ರತಿ ಒಬ್ಬನಿಗೂ ತಿಂಗಳು ಒಂದಕ್ಕೆ ರೂಪಾಯಿ ೮—೦—೦ ವೇತನ ಸಿಕ್ಕುತ್ತದೆ.

ತಾವು ಕೂಡಾ ನಮ್ಮ ಹಿತಚಿಂತಕರೂ ಉಪಕಾರಿಗಳೂ ಆದ ಕೆಲವು ಗೃಹಸ್ಥರೂ ಇದೇ ತಿಂಗಳು ೧೨ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದ ವಿಜ್ಞಾಪನೆಯನ್ನು ಓದಿ ನೋಡಿ ನಮ್ಮ ಜನರ ಉದ್ಧರಣೆಗೋಸ್ಕರ ಈ ಉದಾರ ಗೃಹಸ್ಥರು ಮಾಡುವ ಧರ್ಮಕಾರ್ಯದಲ್ಲಿ ನಾವು ತಮ್ಮ ಸೇವಕರಾಗಿ ನಮ್ಮ ಯಥಾನುಶಕ್ತಿ ಸೇವೆ ನಾವು ಕೂಡ ಮಾಡಬೇಕಾಗಿ ಆಶೆವುಳ್ಳವರಾಗಿದ್ದೇವೆ. ಆದರೆ ನಾವು ಅತೀ ಬಡವರಾದದರಿಂದ ತಿಂಗಳಿಗೆ ೨ ಆಣೆ ಪ್ರಕಾರವಾದರೂ ವಂತಿಗೆ ಕೊಡುವುದಕ್ಕೆ ನಮಗೆ ಸಾಧ್ಯವಿಲ್ಲವಾದಾಗ್ಯೂ ನಮಗೆ ಸಿಕ್ಕುವ ಅಲ್ಪ ಸಂಬಳದಿಂದ ರೂಪಾಯಿ ೧ಕ್ಕೆ ೧ ಪೈ ಪ್ರಕಾರವಾದರೂ ನಾವು ಕೊಡಬೇಕೆಂತ ಶ್ರೀ ದೇವರ ಮುಂದೆ ಪ್ರಮಾಣ ಮಾಡಿ ನಿರ್ಣಯ ಮಾಡಿದ್ದೇವೆ. ಸೇತು ಬಂಧನದಲ್ಲಿ ಹನುಮಂತ ಮೊದಲಾದ ದೊಡ್ಡ ವೀರರೂ ದೊಡ್ಡ ದೊಡ್ಡ ಪರ್ವತಗಳನ್ನು ಹಾಕುವಾಗ ಚನಿಲು ಭಕ್ತಿಯಿಂದ ಮಾವಿನ ಗೊರಟು ಹಾಕಿದಂತೆ ನಾವು ಕೊಡುವ ಕಾಣಿಕೆಯು ನಾವು ಕ್ರಮವಾಗಿ ಕೊಟ್ಟು ರಶೀದಿ ಪಡಕೊಳ್ಳಲಿಕ್ಕೆ ಅದು ಬಹು ಅಲ್ಪವಾದುದರಿಂದ ಡಬ್ಬಿಯಲ್ಲಿ ಹಾಕುವಂತೆ ಒಂದು ಬೀಗ ಇರುವ ಡಬ್ಬಿ ಸಂಘದ ಆಫೀಸಿನಲ್ಲಿ ಇಡಿಸಬೇಕಾಗಿ ನಾವು ಪ್ರಾರ್ಥಿಸುತ್ತೇವೆ.

ತಮ್ಮ ಅತ್ಯಂತ ವಿಧೇಯ ಸೇವಕರಾದ

K. Angara. *K. Basava*
Urva, Koty alias Vamana. *C. Puddu.*

* * *

ವಿದೇಶ ವೃತ್ತಾಂತ.

ಯುದ್ಧ ವಾರ್ತೆ:—ಇಟಲಿ ಮತ್ತು ಟರ್ಕಿಯವರಿಗೆ ಟ್ರಿಪೊಲಿಯ ಸಂಬಂಧ ಆದ ಸಂಧಾನವು ಔಚಿಯಲ್ಲಿ ತಾ. ೧೮ರಲ್ಲು ಸಹಿಮಾಡಲ್ಪಟ್ಟಿತು. ಈ ಸಂಧಾನವು ಬ್ರಿಟಿಷ್ ಸರಕಾರದವರಿಂದ ಮನ್ನಿಸಲ್ಪಟ್ಟಿತು.

ಒಕ್ಟೋಬರ ತಾ. ೨೧:—ಎಲ್ಯನೋರದಲ್ಲಿ ತುರ್ಕರ ೭ ಫಿರಂಗಿಗಳೂ ಮುಸ್ತಾಪ ಪಾಶದಲ್ಲಿ ೫ ಫಿರಂಗಿಗಳೂ ಬಲ್ಗೇರಿಯರ ಕೈಸೇರಿತು. ಸರ್ವಿಯರು ವರಾನಿಯದ ದಕ್ಷಿಣ ಭಾಗದಲ್ಲಿರುವ ಬುಜನೋವಾತ್ಜ್ ಎಂಬ ಸ್ಥಳವನ್ನು ಹಿಡಕೊಂಡಿದ್ದಾರೆ. ಪ್ರಿಸ್ತೀನಕ್ಕೆ ಹೋಗುವ ದಾರಿಯಲ್ಲಿರುವ ಪೊಡುಜೆವೊ ಎಂಬೀ ಸ್ಥಳವನ್ನು ಸರ್ವಿಯರು ವಶಮಾಡಿಕೊಂಡರು. ತುರ್ಕರು ಅಲ್ಲಿ ವಿವಿಧ ಆಯುಧ ಸಾಮಾಗ್ರಿಗಳನ್ನೂ, ಎತ್ತು, ಕುದುರೆಗಳನ್ನೂ ಬಿಟ್ಟು ಓಡಿಹೋದರು.

ಬಲ್ಗೇರಿಯರು ಅಡ್ರಿಯನೋಪಲಿಗೆ ಮುತ್ತಿಗೆ ಹಾಕಬೇಕೆಂದಿರುವರು. ಅಡ್ರಿಯನೋಪಲಿನಲ್ಲಿರುವ ತುರ್ಕರ ಗವರ್ನರರು ಈ ಪಟ್ಟಣಕ್ಕೆ ಮುತ್ತಿಗೆ ಬೀಳಬಹುದಾದ್ದರಿಂದ ಆಹಾರದ ಸಂಬಂಧ ಈಗಲೇ ಮುಂಜಾಗ್ರತೆಯಿಂದಿರಬೇಕೆಂದು ಅಲ್ಲಿಯ ಪ್ರಜೆಗಳಿಗೆ ಎಚ್ಚರಿಸಿದ್ದಾರೆ. ವರ್ನ ಮತ್ತು ಬರ್ಗಸ್ ಬಂದರಗಳನ್ನು ಹಡಗಗಳು ಹೋಗದ ಹಾಗೆ ಅಡ್ಡಕಟ್ಟುವೆವೆಂದು ಶ್ರೇಷ್ಠ ರಾಜ್ಯಗಳಿಗೆ ತುರ್ಕರು ತಿಳಿಸಿದ್ದಾರೆ. ವರ್ನದಿಂದ ಹೊರಟ ಬಲ್ಗೇರಿಯರ ಟೊರ್ಪೆಡೋ ಎಂಬ ಯುದ್ಧ ಹಡಗವು ತುರ್ಕಿಯ ಯುದ್ಧ ಹಡಗಗಳೊಂದಿಗೆ ಕಾದಾಡಿತು. ಒಂದು ಯುದ್ಧ ಹಡಗವು ಈ ಟೊರ್ಪೆಡೋದಿಂದ ಪೆಟ್ಟು ತಿಂದು ಸ್ವಲ್ಪ ಹಾಳಾಗಿ ಕೂಡ್ಲೇ ಹಿಂದಕ್ಕೆ ಹೋಯಿತು. ಅಷ್ಟರಲ್ಲಿ ತುರ್ಕರ ಎಲ್ಲಾ ಯುದ್ಧ ಹಡಗಗಳು ಹಿಂದಕ್ಕೆ ಹೋದ್ದರಿಂದ ಬಲ್ಗೇರಿಯರ ಈ ಟೊರ್ಪೆಡೋ ಏನೊಂದು ಹಾಳಾಗದೆ ಹಿಂದಕ್ಕೆ ತಿರುಗಿತು. ಅನಂತರ ತುರ್ಕರು ಬಾಲ್ಚಿಚಿಕ್ ಎಂಬಲ್ಲಿಗೆ ಗುಂಡು ಹಾರಿಸಲು ಪ್ರಾರಂಭಿಸಿದರು. ತುರ್ಕರ ಯುದ್ಧ ಹಡಗಗಳು ಬಲ್ಗೇರಿಯ ಕರಾವಳಿಯನ್ನು ಸುತ್ತುತ್ತಿವೆ. ಈ ಹಡಗಗಳು ವರ್ನದ ಬಳಿಯಲ್ಲಿರುವ ಕೆಲವು ಬಂದರಗಳಿಗೆ ಗುಂಡು ಹಾರಿಸುತ್ತಿವೆ. ತುರ್ಕರು ಈ ವ್ಯಾಪಾರ ಬಂದರಗಳಿಗೆ ಗುಂಡು ಹಾರಿಸ ಪ್ರಾರಂಭಿಸಿರುವುದರಿಂದ ಬಲ್ಗೇರಿಯರು ಬಹಳ ಸಿಟ್ಟುಗೊಂಡಿರುವರು. ಗ್ರೀಕರು ೪ ತಾಸು ಕಾದಾಡಿ ಎಲಸೋನವನ್ನು ಹಿಡಕೊಂಡರು. ಇಲ್ಲಿಯ ಗ್ರೀಕರ ಸೈನ್ಯಕ್ಕೆ ಗ್ರೀಕ ಯುವರಾಜರು ಸೇನಾಧಿಪತಿಯಾಗಿದ್ದರು. ಎಲಸೋನದಲ್ಲಿ ಯುದ್ಧವಾಗುತ್ತಿದೆಂದೂ ೧೫೦೦ ಮಂದಿ ಗ್ರೀಕರು ಈ ಯುದ್ಧದಲ್ಲಿ ಮಡಿದರೆಂದೂ ಕನ್‌ಸ್ತಂತಿನೋಪಲಿನಲ್ಲಿ ಪ್ರಕಟವಾಗಿದೆ. ಗ್ರೀಕರ ಅರಸರೂ ಸರಹದ್ದುಗಳಿಗೆ ಹೊರಟು ಹೋಗಿರುವರು. ಈ ತಿಂಗಳಾಂತ್ಯದೊಳಗೆ ತುರ್ಕರ ೭೦೦,೦೦೦ ಸೈನೀಕರು ಯುದ್ಧರಂಗದಲ್ಲಿರುವರೆಂದು ತಿಳಿದು ಬರುತ್ತದೆ.

ತುರ್ಕಿ ರಾಜ್ಯಗಳಲ್ಲಿರುವ ಕ್ರೈಸ್ತ ಜನರು ಈ ಯುದ್ಧ ಸಮಯದಲ್ಲಿ ರಾಜಭಕ್ತಿಯುಳ್ಳವರಾಗಿದ್ದ ಪಕ್ಷದಲ್ಲಿ ಅವರಿಗೆ ತುರ್ಕರಿಂದ ಯಾವದೊಂದು ತರದ ಕೇಡಾಗದೆಂದು ತುರ್ಕಿ ಸರಕಾರದವರು ಪ್ರಕಟಿಸಿರುತ್ತಾರೆ.

ತಾ. ೨೨:-ಸರ್ವಿಯದ ಅರಸರು ಪರಿವಾರ ಸಹಿತ ವ್ರಾನಿಯಕ್ಕೆ ಹೋಗಿರುವರು. ಇಬರ್ ತಗ್ಗಿನಲ್ಲಿದ್ದ ಸರ್ವಿಯರ ಸೈನ್ಯವು ರಸ್ಕ ಎಂಬಲ್ಲಿ ತುರ್ಕರೊಡನೆ ಕಾದಾಡಿತು. ಉಭಯತರೊಳಗೂ ಕಠಿಣ ಯುದ್ಧವಾಗಿ ಬಹಳ ಮಂದಿ ಹತರಾದರು. ಸ್ಟುಮ ತಗ್ಗಿನ ಮಾರ್ಗವಾಗಿ ಮುಂದರಿದ ಸರ್ವಿಯರ ಸೈನ್ಯವು ಸಲೋನಿಕ ಮತ್ತು ಕನ್‌ಸ್ತಂತಿನೋಪಲಿನ ಮಧ್ಯೆ ಇರುವ ರೈಲ್ವೇ ಸಮೀಪ ಸರಹದ್ದಿಗೆ ೪೫ ಮೈಲು ದಕ್ಷಿಣದಲ್ಲಿರುವ ಲಿಪಿಂಟೆಜ ಎಂಬ ಪಟ್ಟಣಕ್ಕೆ ಮುಟ್ಟಿಯದೆ. ಕರ್ಕ್‌ಕೆಲ್ಲೇಸ ಎಂಬಲ್ಲಿ ಕಠಿಣ ಯುದ್ಧ ನಡಿಯುತ್ತಿದೆ. ತುರ್ಕರು ಬಲ್ಗೇರಿಯರ ಎರಡು ಸ್ಥಳಗಳನ್ನು ಹಿಡಕೊಂಡರು. ಆದರೆ ಬಹಳ ನಷ್ಟಪಟ್ಟರು.

ಎಲಸೋನ ಎಂಬಲ್ಲಿಗೆ ಪಶ್ಚಿಮ ದಿಕ್ಕಿಗೆ ಇರುವ ಡಿಸ್ಕಾಟ ಎಂಬಲ್ಲಿ ಕಠಿಣ ಯುದ್ಧವಾಗಿ ಗ್ರೀಕರು ಜಯಪ್ರಧರಾದರು. ತುರ್ಕರು ಪಲಾಯನ ಮಾಡಿದರು. ಎಲಸೋನದಲ್ಲಿ ತುರ್ಕರು ಒಂದು ಮಿಲಿಯ ತೋಟೆಗಳನ್ನೂ ಯುದ್ಧದ ನಕ್ಷೆಗಳನ್ನೂ, ಗಾಡಿಗಳನ್ನೂ, ಡೇರೆಗಳನ್ನೂ ಬಿಟ್ಟು ಓಡಿ ಹೋಗಿರುವರು. ಈ ಯುದ್ಧದಲ್ಲಿ ಗ್ರೀಕರಲ್ಲಿ ೧೯ ಮಂದಿ ಮೃತಪಟ್ಟರು. ೭೫ ಮಂದಿ ಗಾಯಪಟ್ಟರು.

ತಾ. ೨೩:—ಗ್ರೀಕರು ವೆಮೊಸಿನ ಮುಖ್ಯ ಪಟ್ಟಣವನ್ನು ಸ್ವಲ್ಪ ಸಮಯದೊಳಗೆ ವಶಮಾಡಿಕೊಂಡು ೪೫ ತುರ್ಕರನ್ನು ಶೆರೆ ಹಿಡಿದರು. ತುರ್ಕರಿಗೆ ಸಾಮಾನುಗಳನ್ನು ಕೊಂಡೊಯ್ಯುತ್ತಿದ್ದ ಒಂದು ಬ್ರಿಟಿಷ್ ಹಡಗವನ್ನು ಗ್ರೀಕರು ಹಿಡಿದಿರುವರು. ತುರ್ಕರು ಕವಾರ್ನದಲ್ಲಿ ಗುಂಡು ಹಾರಿಸ ಪ್ರಾರಂಭಿಸಿರುವರು. ಇಲ್ಲಿರುವ ಜನರು ಹೆಚ್ಚು ಕಡಿಮೆ ಗ್ರೀಕರಾಗಿರುವರು.

ಲಿವರ್‌ಪೂಲಿನಿಂದ ಕೊರ್ಫು, ಪತ್ರಾಸ್, ಸಿರಿಯ, ಕನ್‌ಸ್ತಂತಿನೋಪಲ್, ಕಪ್ಪು ಸಮುದ್ರಕ್ಕೆ ಹೋಗುತ್ತಿದ್ದ ಅನೇಕ ಹಡಗಗಳು ಈ ಯುದ್ಧದ ದೆಶೆಯಿಂದ ನಿಲ್ಲಿಸಲ್ಪಟ್ಟದೆ.

ಈ ಯುದ್ಧಕ್ಕೆ ಸಹಾನುತಾಪವನ್ನು ತೋರಿಸುವರೆ ಕಲ್ಕತ್ತೆಯಲ್ಲಿ ತಾ. ೨೨ರಲ್ಲು ಮುಸಲ್ಮಾನರು ಒಂದು ದೊಡ್ಡ ಸಭೆ ಕೂಡಿಸಿ ಯುದ್ಧದಲ್ಲಿ ಹತಶೇಷರಾದವರಿಗೂ ಅವರ ಕುಟುಂಬಕ್ಕೂ ಸಹಾಯ ಮಾಡುವ ರೆಡ್ ಕ್ರಿಸೆಂಟ್ ಫಂಡಿಗೆ ೧೦ಸಾವಿರ ರೂಪಾಯಿ ವಂತಿಗೆ ಕೂಡಿಸಿದರು. ಕೂಲಿಯವರು ಕೂಡಾ ತಮ್ಮ ಒಂದು ತಿಂಗಳ ಸಂಬಳವನ್ನು ಈ ಫಂಡಿಗೆ ಕೊಡುತ್ತೇವೆಂದು ಒಪ್ಪಿಗೆ ಕೊಟ್ಟರು.

ಕಠಿಣ ಯುದ್ಧವಾದನಂತರ ಸರ್ವಿಯರು ಪ್ರಿಸ್ತೀನ ಪಟ್ಟಣವನ್ನು ಸೇರಿ ಕೊಂಡರು. ಮುಂದಿನ ಯುದ್ಧಕ್ಕೆ ಬೀಗದ ಕೈಯಂತಿರುವ ನೋವಿಬಜಾರ್ ಎಂಬ ಪಟ್ಟಣವೂ ಸರ್ವಿಯರ ಕೈ ಸೇರಿತು. ಈ ಯುದ್ಧವು ೩ದಿನಗಳ ವರೆಗೆ ನಡೆಯಿತು. ಉಭಯತರೂ ಜೀವದ ಮರವೆ ಇಲ್ಲದೆ ಕಾದಾಡಿದರು. ಸರ್ವಿಯರಲ್ಲಿ ಗಾಯಪಟ್ಟ ೧೮೦ ಮಂದಿ ಬಲ್ಗ್ರೇಡಿಗೆ ಕಳುಹಿಸಲ್ಪಟ್ಟರು. ಕರ್ಕ್‌ಕೆಲ್ಲೇಸದಿಂದ ನೋವಿ ಬಜಾರಿನ ವರೆಗೆ ಇರುವ ಸ್ಥಳಗಳಲ್ಲೆಲ್ಲಾ ಕಠಿಣ ಯುದ್ಧ ನಡೆಯುತ್ತಿದೆ. ತುರ್ಕರು ಎಲ್ಲಾ ಕಡೆಯಲ್ಲಿಯೂ ಹಿಮ್ಮೆಟ್ಟಲ್ಪಡುತ್ತಿದ್ದಾರೆ. ಬಲ್ಗೇರಿಯರು ಅಡ್ರಿನೋಪಲಿನ ಕಡೆಗೆ ಮುಂದೊತ್ತುತ್ತಿದ್ದು ಅರ್ಡ ಎಂಬಲ್ಲಿಗೆ ಬಂದು ತಲಪಿದ್ದಾರೆ. ಇಲ್ಲಿದ್ದ ತುರ್ಕರು ಪಲಾಯನ ಮಾಡಿದರು. ಯುದ್ಧದಲ್ಲಿ ೧೦೦ಮಂದಿ ಮಡಿದರು. ೧೬೦ಮಂದಿ ಬಲ್ಗೇರಿಯರಿಗೆ ಸೆರೆಯಾದರು. ಬಲ್ಗೇರಿಯರು ಕಠಿಣ ಯುದ್ಧಮಾಡಿ ಈಶಾನ್ಯ ದಿಕ್ಕಿನಲ್ಲಿರುವ ಕೆಲವು ತುರ್ಕರ ಸ್ಥಳಗಳನ್ನು ತೆಗೆದುಕೊಂಡರು. ತುರ್ಕರು ಧೈರ್ಯ ಕುಂದಿದವರಾಗಿ ಯುದ್ಧರಂಗದಿಂದ ಪಲಾಯನ ಮಾಡಿದರು.

ತಾ. ೨೪:—ಮುಸ್ತಾಪ ಪಾಶದ ಸಮೀಪವಿರುವ ಕಡಿಕೆನ್ನಿ ಎಂಬಲ್ಲಿ ಆದ ಯುದ್ಧದಲ್ಲಿ ತುರ್ಕರಲ್ಲಿ ೭೩ ಮಂದಿ ಹತರಾದರು. ೭೪ ಮಂದಿ ಶೆರೆಬಿದ್ದರು; ೫ ಮೆಶಿನ್ ಫಿರಂಗಿಗಳು ಬಲ್ಗೇರಿಯರಿಗೆ ದೊರಕಿದವು. ಈಗ ಬಲ್ಗೇರಿಯರು ಅಡ್ರಿನೋಪಲಿಗೆ ತೋಪು ಹಾರಿಸಲು ಪ್ರಾರಂಭಿಸಿದ್ದಾರೆ.

ಗ್ರೀಕರು ಮಸೆದೋನಿಯಕ್ಕೆ ಒಳನುಗ್ಗಿದ್ದಾರೆ. ಅಲ್ಲಿ ಸರ್‌ಫಿಡ್ಜೆ ಎಂಬಲ್ಲಿ ತುರ್ಕರಿಗೂ ಗ್ರೀಕರಿಗೂ ದೊಡ್ಡ ಯುದ್ಧವಾಯಿತು. ತುರ್ಕರ ೨೨ ಪಟಲಾಮುಗಳೂ ೭ ವ್ಯೂಹಗಳೂ ಹಿಮ್ಮೆಟ್ಟಲ್ಪಟ್ಟವು. ಗ್ರೀಕರು ಸರ್‌ಫಿಡ್ಜೆಯನ್ನು ವಶಮಾಡಿ ಅಲಿಕಮೊನ್ ಎಂಬ ನದಿಯ ಮೇಲಿರುವ ಸಂಕವನ್ನು ಅತಿಕ್ರಮಿಸಿದರು. ತುರ್ಕರ ೨೨ ಫಿರಂಗಿಗಳೂ ಅನೇಕ ಮಂದಿ ತುರ್ಕಿ ಸೈನಿಕರೂ ಸೆರೆಹಿಡಿಯಲ್ಪಟ್ಟರು.

ಬಲ್ಗೇರಿಯರು ಕಪ್ಪು ಸಮುದ್ರದ ಕರಾವಳಿಯ ಮಾರ್ಗವಾಗಿಯೂ ತುರ್ಕಿಗೆ ದೌಡುಮಾಡಿರುವರು. ಈ ಮೂಲಕ ವಸಿಲಿಕೊ ಮತ್ತು ಮಲ್‌ಕೊಟ್ರನೇವಾ ಎಂಬೀ ಸ್ಥಳಗಳನ್ನು ಅತಿಕ್ರಮಿಸಿ ಅಲ್ಲಿಂದ ವಿಸ ಎಂಬಲ್ಲಿಗೆ ಮುಂದರಿದರು. ಅದಲ್ಲದೆ ಕಪ್ಪು ಸಮುದ್ರದ ಕರಾವಳಿ ಮಾರ್ಗವಾಗಿ ತುರ್ಕರ ಸೈನ್ಯವು ಬಾರದ ಹಾಗೆ ತಡೆಯುವರೆ ಕರಾವಳಿಯಲ್ಲಿಯೇ ಒಂದು ಸೈನ್ಯವು ಕಾಯುತ್ತಿದೆ.

ಬಲ್ಗೇರಿಯರು ಅಡ್ರಿನೋಪಲಿಗೆ ಹತ್ತರವಿರುವ ತುರ್ಕರ ಬಲವಾದ ಕೋಟೆ ಪಟ್ಟಣವಾದ ಕರ್ಕ್ ಕೆಲ್ಲೇಸವನ್ನು ತಾ. ೨೪ರಲ್ಲು ನೆಲಸಮ ಮಾಡಿದರು. ಸಾವಿರಾರು ತುರ್ಕರು ಬಲ್ಗೇರಿಯರ ಶೆರೆಯಾದರು. ಈ ಕೋಟೆಗೆ ಹತ್ತರವಾಗಿ ಬಲ್ಗೇರಿಯರು ತಮ್ಮ ಹೊಸ ಕೋಟೆಯನ್ನು ಕಟ್ಟಿಸ ಪ್ರಾರಂಭಿಸಿದ್ದಾರೆ. ಅನೇಕ ಫಿರಂಗಿಗಳೂ ಯುದ್ಧ ಸಾಮಾಗ್ರಿಗಳೂ ಬಲ್ಗೇರಿಯರ ಕೈಸೇರಿತು. ಪ್ರಿಪೋಲಾಟ್ ದಕ್ಷಿಣದಲ್ಲಿ ಸರ್ವಿಯರಿಗೂ ತುರ್ಕರಿಗೂ ಆದ ಯುದ್ಧದಲ್ಲಿ ೧೦೩೦ ತುರ್ಕರು ಮಡಿದರು. ಸರ್ವಿಯರಲ್ಲಿ ಬಹಳ ಮಂದಿ ಹತರಾದರು. ಕುಮನಾವೋ ಎಂಬಲ್ಲಿ ತುರ್ಕರು ಸರ್ವಿಯರ ೪ ಪಟಲಾಮುಗಳನ್ನು ಸೋಲಿಸಿದರು. ಸರ್ವಿಯರಲ್ಲಿ ಅತಿರೇಕ ನಷ್ಟವುಂಟಾಯಿತು. ಆದರೆ ಕಡೆಗೆ ಸರ್ವಿಯರು ಕಮನಾವೋ ಕೋಟೆಯನ್ನು ಮೂರು ದಿವಸ ಕಠಿಣ ಕಾಳಗ ಮಾಡಿ ವಶ ಮಾಡಿಕೊಂಡರು. ಸೈನ್ಯೀಜವೂ ಸರ್ವಿಯರ ಕೈಸೇರಿತು.

ಸರ್‌ಪಿಡ್ಜೆಯಲ್ಲಿ ೭೦ ಗ್ರೀಕರು ತುರ್ಕರಿಂದ ಕೊಲೆ ಮಾಡಲ್ಪಟ್ಟರು. ತುರ್ಕರು ಸಿಕ್ಕಿ ಸಿಕ್ಕಿದ ಕ್ರೈಸ್ತರನ್ನು ಕೊಂದುಬಿಡುತ್ತಾರೋ ಏನೋ ಎಂಬ ಭಯವು ಗ್ರೀಕರಿಗೆ ಹಿಡಿದಿದೆ. ಮೊಂಟೆನಿಗ್ರೋಯರು ಸ್ಕುತಾರಿಗೆ ೮॥ ಮೈಲು ದೂರದಲ್ಲಿರುವ ಸ್ಥಳಕ್ಕೆ ತಲಪಿದ್ದಾರೆ.

ತಾ. ೨೫:—ಮೊಂಟೆನಿಗ್ರೋಯರು ಸ್ಕುತಾರಿಯನು ಮುತ್ತಿಗೆ ಹಾಕಿರುವರು. ತಾ. ೨೪ನೇ ಬೆಳಿಗ್ಯೆ ಒಂದು ಸೈನ್ಯವು ಸ್ಕುತಾರಿಯ ಮೇಲೆ ಬಿತ್ತು. ಆದರೆ ತುರ್ಕಿಯರ ಫಿರಂಗಿಗಳ ಪೆಟ್ಟಿಗೆ ಎದುರು ನಿಲ್ಲಲಾರದೆ ಹಿಮ್ಮೆಟ್ಟಲ್ಪಟ್ಟರು. ಆದರೆ ಕೂಡಲೇ ಪುನಃ ಸ್ಕುತಾರಿಯನ್ನು ಹಿಡಿಯಲು ಎತ್ತುಗಡೆ ಮಾಡುತ್ತಿದ್ದಾರೆ. ಮೊಂಟೆನಿಗ್ರೋಯರ ಯುವರಾಜರಿಗೆ ೧೦ ಗಜ ದೂರದಲ್ಲಿಯೇ ಒಂದು ಗುಂಡು ಸಿಡಿಯಿತು. ಆದರೆ ದೈವವಶಾತ್ ಅಪಾಯವಾಗಲಿಲ್ಲ. ಕರ್ಕ್ ಕೆಲ್ಲೇಸದಲ್ಲಿಯೂ ಅದರ ಸಮೀಪದಲ್ಲಿಯೂ ಬಲ್ಗೇರಿಯರಿಗೂ ತುರ್ಕರಿಗೂ ಆದ ಯುದ್ಧದಲ್ಲಿ ಬಲ್ಗೇರಿ

ಯರಲ್ಲಿ ಕಮ್ಮಿಯೆಂದರೆ ೩೦೦೦ ಮಂದಿ ಮಡಿದರು ಎಂಬದಾಗಿ ವಾರ್ತೆ ಬಂದದೆ. ಕರ್ಕ್‌ಕೆಲ್ಲೇಸ್ ವಶವಾದ್ದರಿಂದ ಅಡ್ರಿನೋಪಲನ್ನು ಹಿಡಿಯುವರೆ ಇನ್ನು ಹೆಚ್ಚು ಕಷ್ಟವಿಲ್ಲವೆಂಬದಾಗಿ ಬಲ್ಗೇರಿಯರ ಪ್ರತೀಕ್ಷೆಯಾಗಿದೆ. ಇತ್ತಕಡೆ ತುರ್ಕರು ಅಡ್ರಿನೋಪಲಿನಲ್ಲಿ ತಮ್ಮ ಎಲ್ಲಾ ಸೈನ್ಯವನ್ನು ಕೂಡಿಸುತ್ತಿದ್ದಾರೆ. ಎರಡು ತಿಂಗಳಿಗೆ ಬೇಕಾದ ಆಹಾರ ಸಾಮಾಗ್ರಿ ಇಲ್ಲದವರು ಅಡ್ರಿನೋಪಲನ್ನು ಬಿಟ್ಟು ಹೋಗಬೇಕೆಂಬದಾಗಿ ತುರ್ಕರು ಪ್ರಕಟಸಿರುವುದರಿಂದ ಅನೇಕರು ಅಡ್ರಿನೋಪಲನ್ನು ಬಿಟ್ಟು ಕನ್‌ಸ್ತಂತಿನೋಪಲಿಗೆ ಹೋಗುತ್ತಿದ್ದಾರೆ.

ಸರ್ವಿಯರು ಕುಮಾನಾವೋದಲ್ಲಿ ಜಯಪ್ರಧರಾಗಿ ಈಗ ಉಸ್ಕುಬ್ ಎಂಬಲ್ಲಿಗೆ ಮುಂದರಿಯುತ್ತಿದ್ದಾರೆ. ಅಲ್ಲಿ ತುರ್ಕರ ಬಹಳ ಬಲವುಳ್ಳ ಸೈನ್ಯವಿದೆ. ಆದರೆ ಸರ್ವಿಯರಿಗೆ ನೋವಿಬಜಾರಿನಲ್ಲಿಯೂ ಬಲ್ಗೇರಿಯರಿಗೂ ಗ್ರೀಕರಿಗೂ ಇತರ ಕಡೆಗಳಲ್ಲಿ ಜಯಗಳು ಆಗುತ್ತಾ ಬಂದದರಿಂದ ಸರ್ವಿಯರು ಎದೆಗುಂದದೆ ಉಸ್ಕ್ಯಾಬನ್ನು ಹಿಡಿಯಲಿಕ್ಕಿದ್ದಾರೆ.

ಕುಮಾನಾವೋದಲ್ಲಿ ೩ ದಿವಸಗಳ ವರೆಗೆ ಯುದ್ಧ ನಡೆದಿತ್ತು. ಈ ಯುದ್ಧದಲ್ಲಿ ೨೫,೦೦೦ ತುರ್ಕ ಸೈನೀಕರು ಸರ್ವಿಯರಿಗೆ ಎದುರು ನಿಂತು ಕಠಿಣ ಕಾಳಗ ಮಾಡಿದರು. ಆದರೆ ಹಿಮ್ಮೆಟ್ಟಲ್ಪಟ್ಟರು. ೫೦೦೦ ತುರ್ಕರು ಯುದ್ಧದಲ್ಲಿ ಮಡಿದರು. ೧೨ ಫಿರಂಗಿಗಳೂ ಹೆಚ್ಚಿನ ಆಯುಧ ಸಾಮಾಗ್ರಿಗಳೂ ಸರ್ವಿಯರ ಕೈಸೇರಿತು. ಸರ್ವಿಯರ ಸೈನ್ಯಕ್ಕೆ ಸರ್ವಿಯರ ಯುವರಾಜರಾದ ಅಲೆಕ್ಷಂದರರು ಸೈನಾಧಿಪತಿಯಾಗಿದ್ದರು. ಸರ್ವಿಯರ ಮೂರನೇ ಸೈನ್ಯವು ಪ್ರಿಸ್ಟೀನಕ್ಕೆ ವಾಯುವ್ಯದಲ್ಲಿರುವ ವೌಚಿತ್ರಿನನ್ನೂ ತೆಮ್ಮೊಡಲಲ್ಲಿರುವ ಗಿಲಾನ್ ಪಟ್ಟಣವನ್ನೂ ಹಿಡಕೊಂಡಿತು.

ಮಸೆದೋನಿಯರ ಆರ್ಟ ಎಂಬಲ್ಲಿ ಗ್ರೀಕರು ಹಿಮ್ಮೆಟ್ಟಲ್ಪಟ್ಟರು. ತುರ್ಕರು ಇಲ್ಲಿ ಗ್ರೀಕರನ್ನು ವಿಸ್ಮಯ ಪಡಿಸಿ ಹಿಂದಕ್ಕೆ ಅಟ್ಟಿದರು.

ಗ್ರೀಕ ಯುವರಾಜರು ಸೈನ್ಯದ ಜನರಲರಾಗಿದ್ದು ಸರ್‌ಫಿಡ್ಜೆಯನ್ನು ವಶ ಮಾಡಿಕೊಂಡು ಪಟ್ಟಣವನ್ನು ಪ್ರವೇಶಿಸಿದರು. ಅಲ್ಲಿಯ ಕ್ರೈಸ್ತರೂ ಸೈನೀಕರೂ ಧನ್ಯವಾದವನ್ನಿತ್ತರು. ಗ್ರೀಕರು ಅನಂತರ ಸರ್‌ಫಿಡ್ಜೆಗೆ ೧೮ ಮೈಲು ವಾಯುವ್ಯದಲ್ಲಿರುವ ಕೊಜಾನಿಯನ್ನು ಕಷ್ಟವಿಲ್ಲದೆ ಹಿಡಕೊಂಡರು.

ಕರ್ಕ್‌ಕೆಲ್ಲೇಸ್‌ನಲ್ಲಿ ಶತ್ರುಗಳೊಡನೆ ಕಾದಾಡಲು ತಯಾರಾಗಿದ್ದ ತುರ್ಕರ ಸೈನ್ಯವು ಬಾಬ ಎಸ್ಕಿ ಎಂಬ ಸ್ಥಳವನ್ನು ಮುಖ್ಯ ಠಾಣ್ಯವಾಗಿಮಾಡಿಕೊಂಡದೆ. ಅಲ್ಲಿ ೧೩೦,೦೦೦ ತುರ್ಕೀ ಸೈನೀಕರು ಇರುವರೆಂದು ತಿಳಿದು ಬಂದದೆ. ಕರ್ಕ್‌ಕೆಲ್ಲೇಸದಲ್ಲಿ ಹತಶೇಷರಾದವರು ಕನ್‌ಸ್ತಂತಿನೋಪಲಿಗೆ ಬರುತ್ತಿದ್ದಾರೆ. ತಾ. ೨೫ರಲ್ಲು ಒಂದೇ ಟ್ರೈನಿನಲ್ಲಿ ೧೫೦೦ ಮಂದಿ ಕನ್‌ಸ್ತಂತಿನೋಪಲಿಗೆ ಬಂದರು. ಇವರಲ್ಲಿ ಹೆಚ್ಚಿನವರು ಮುದುಕರು, ಅಶಕ್ತರು, ಹೆಂಗಸರು, ಮಕ್ಕಳೂ ಆಗಿರುತ್ತಾರೆ. ಕನ್‌ಸ್ತಂತಿನೋಪಲಿನಲ್ಲಿ ಇವರ ಸಂರಕ್ಷಣಾರ್ಥವಾಗಿ ತಕ್ಕ ಏಲೆವಾರಿ ಆಗುತ್ತಿದೆ.

ಸ್ಕುತಾರಿಯು ಮೊಂಟೆನಿಗ್ರೋಯರ ಕೈಸೇರುವದು ಎಂಬದು ನಿಜ, ಯಾಕಂದರೆ ಅದನ್ನು ಕಾಪಾಡುವದಕ್ಕಾಗಿ ಬೇಕಾದ ಸೈನ್ಯವು ಅಲ್ಲಿಲ್ಲ. ಒಮ್ಮೆ ಬಲ್ಗೇರಿಯರನ್ನು ಬಡೆದು ಬಿಟ್ಟರೆ ಮತ್ತೆ ಗ್ರೀಕರನ್ನೂ ಮೊಂಟೆನಿಗ್ರೋಯರನ್ನೂ ಮಕ್ಕಳ ಆಟದಂತೆ ಬಡೆದು ಬಿಡಬಹುದು. ಅಸ್ಕಾಬಿನ ವಿಷಯ ಅಷ್ಟೊಂದು ಭಯವಿಲ್ಲ. ಅಲ್ಲಿ ಜೆಕ್ಕಿ ಪಾಶನ ಕೈಕೆಳಗೆ ಮೂರು ಬೆಂಬಲವೂ, ಕುಪ್ರುಲ್ಲಿಯಲ್ಲಿ ಸೆಡ್ ಪಾಶನ ಕೈಕೆಳಗೆ ೫ ಬೆಂಬಲವೂ ಇದೆ. ಒಟ್ಟಿಗೆ ೧೫೦,೦೦೦ ಸೈನಿಕರಿದ್ದಾರೆ ಎಂಬದಾಗಿ ತುರ್ಕರ ಯುದ್ಧ ಮಂತ್ರಿಯು ಹೇಳಿರುವರು.

ಕ್ರೇತ ದ್ವೀಪದಲ್ಲಿ ಗ್ರೀಕರು ತಮ್ಮ ಗವರ್ನರ್ ಜನರಲರನ್ನು ನೇಮಿಸಿದರು.

ತಾ. ೨೫ರಲ್ಲು ಮುಂಬಾಯಿಯ ಮುಸಲ್ಮಾನರು ಸಹಾತಾಪವನ್ನು ತೋರಿಸುವರೆ ಒಂದು ದೊಡ್ಡ ಸಭೆ ಕೂಡಿಸಿದಲ್ಲಿ ರೆಡ್‌ಕ್ರಿಸೆಂಟ್ ಫಂಡಿಗೆ ಒಂದು ಲಕ್ಷ ೫೦ ಸಾವಿರ ರೂಪಾಯಿ ಕೂಡಿತು.

ತುರ್ಕಿ ಮತ್ತು ಬಾಲ್ಕಾನ್ ಸಂಸ್ಥಾನಗಳಿಗೆ ಬಂದೊದಗಿರುವ ಈ ಯುದ್ಧದಲ್ಲಿ ಬ್ರಿಟಿಷ್ ಪ್ರಜೆಗಳು ತಟಸ್ಥರಾಗಿರ ಬೇಕೆಂದು ಬ್ರಿಟಿಷ್ ಸರಕಾರದವರು ರಾಜಶಾಸನ ಹೊರಡಿಸಿದ್ದಾರೆ.

ತಾ. ೨೬:—ಬಲ್ಗೇರಿಯರು ಅಡ್ರಿನೋಪಲಿಗೆ ೩॥ ಮೈಲು ದೂರಕ್ಕೆ ಬಂದು ತಲಪಿ ಪಟ್ಟಣಕ್ಕೆ ತೋಪು ಹಾರಿಸುತ್ತಿದ್ದಾರೆ. ಪಟ್ಟಣದ ಒಂದು ಭಾಗವು ಉರಿಯುತ್ತಿದೆ. ಅಡ್ರಿನೋಪಲಿನ ಮೂರು ಕೋಟೆಗಳೂ ೧೫೦೦ ಸೈನೀಕರೂ ಬಲ್ಗೇರಿಯರ ಕೈ ಸೇರಿತು.

ಕರ್ಕ್‌ಕೆಲ್ಲೇಸದಲ್ಲಿ ಬಲ್ಗೇರಿಯರಿಗೆ ತುರ್ಕರ ೨ ವಾಯುನಾವೆಗಳೂ. ಒಟ್ಟಿಗೆ ೫೮ ಫಿರಂಗಿಗಳೂ ದೊರಕಿತಲ್ಲದೆ ೧೨೦೦ ಮಂದಿ ಸೆರೆಯಾದರು. ಕರ್ಕ್‌ಕೆಲ್ಲೇಸದ ದಕ್ಷಿಣದಲ್ಲಿ ದೊಡ್ಡ ಯುದ್ಧ ನಡಿಯುತ್ತಿದೆ.

ಮಸೆದೋನಿಯಕ್ಕೆ ಬೀಗದ ಕೈಯಂತಿದ್ದ ಉಸ್ಕ್ಯಾಬನ್ನು ಸರ್ವಿಯರು ಹಿಡಿದರು. ಉಸ್ಕ್ಯಾಬು ಕೋಟೆಯು ಬಿತ್ತು. ಸರ್ವಿಯರ ಮುಖ್ಯ ಉದ್ದೇಶವು ಇದರಿಂದ ಕೈಗೂಡಿತು. ಈ ಹಪ್ತೆಯು ಯೂರೋಪು ಖಂಡದ ಇತಿಹಾಸದಲ್ಲಿ ಮುಖ್ಯ ವಾರವಾಗಿದೆ. ಮಸೆದೋನಿಯಕ್ಕೆ ಬೀಗದ ಕೈಯಂತಿರುವ ಉಸ್ಕ್ಯಾಬು ಸರ್ವಿಯರ ಕೈಸೇರಿತು. ಇತ್ತಕಡೆ ಬಲ್ಗೇರಿಯರು ಅಡ್ರಿನೋಪಲನ್ನು ವಶಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಮತ್ತೊಂದು ಕಡೆಯಲ್ಲಿ ಗ್ರೀಕರು ಸಲೋನಿಕಕ್ಕೆ ೪೦ ಮೈಲು ದೂರದಲ್ಲಿರುವ ವರಿಯ ಎಂಬಲ್ಲಿದ್ದಾರೆ. ಒಂದು ಕಡೆಯಲ್ಲಿ ಮೊಂಟೆನಿಗ್ರೋಯರ ಸ್ಕುತಾರಿಯನ್ನು ಹಿಡಿಯ ಪ್ರಯತ್ನಿಸುತ್ತಿದ್ದಾರೆ. ಇವರ ಪ್ರಯತ್ನಗಳೆಲ್ಲಾ ಕೈಗೂಡುವಂತೆ ತೋರುವುದರಿಂದ ಇದು ಇತಿಹಾಸದ ವಿಶೇಷ ವಾರ ಎಂದೆಣಿಸಿಕೊಳ್ಳುತ್ತದೆ.

* * *

ಡಾಕ್ಟರ್ ರಾಮಲಾಲ ಸರ್ಕಾರ ಎಂಬವರು ಚೀನಿ ರಾಜ್ಯದ ಕುರಿತು ಪ್ರಬಾಸಿ ಎಂಬ ವರ್ತಮಾನ ಪತ್ರದಲ್ಲಿ ಈ ಮೇರೆಗೆ ಬರಿಯುತ್ತಾರೆ:-ಚೀನಿ ಜನರು ತಾವು ಸಹ ಒಂದು ವಿಶೇಷ ನಾಗರಿಕತೆ ಹೊಂದಿದ ಬಲೀಯ ಜನಾಂಗವಾಗಬೇಕೆಂಬ ಕುತೂಹಲವುಳ್ಳವರಾಗಿ ಆಶ್ಚರ್ಯದ ಸಾಹಸ ಮಾಡುತ್ತಾರೆ. ಎರಡು ವರುಷಗಳ ಮೊದಲು ಹುಡಿಗಿಯರು ಪರಗೃಹಸ್ತರ ಮುಂದೆ ಬರುತ್ತಿದ್ದಿಲ್ಲ, ಅಡಗುತ್ತಿದ್ದರು. ಈಗ ವಿವಾಹವಾಗದ ಹುಡುಗಿಯರನ್ನೂ ವಿವಾಹವಾದ ಹುಡುಗಿಯನ್ನೂ ವಶ್ತಾಯದಿಂದ ಶಾಲೆಗೆ ಕಳುಹಿಸುತ್ತಾರೆ. ಗಂಡುಮಕ್ಕಳನ್ನಾಗಲೀ ಹೆಣ್ಣುಮಕ್ಕಳನ್ನಾಗಲೀ ಶಾಲೆಗೆ ಕಳುಹಿಸದ ಹೆತ್ತವರಿಗೆ ಜುರುಮಾನೆಮಾಡುತ್ತಾರೆ. ಹುಡುಗಿಯರ ಕಾಲಡಿ ಬೆಳಿಯಬಾರದೆಂದು ಚಿಕ್ಕ ವಯಸ್ಸಿನಲ್ಲಿ ಕಬ್ಬಿಣದಿಂದಕಟ್ಟುವ ಪದ್ಧತಿ ಇತ್ತು, ಈ ಪದ್ಧತಿ ರದ್ದು ಮಾಡುವ ಉದ್ದೇಶ ಹುಡಿಗಿಯರ ಕಾಲಡಿ ಕಟ್ಟಿದರೆ ಹೆತ್ತವರಿಗೆ ಶಿಕ್ಷೆ ಕೊಡುವರೆ ಕಾನೂನುಮಾಡಿದ್ದಾರೆ. ದೇವಸ್ಥಾನಗಳಲ್ಲಿದ್ದ ವಿಗ್ರಹಗಳನ್ನೆಲ್ಲ ನಾಶಮಾಡಿ ದೇವಸ್ಥಾನದ ಕಟ್ಟೋಣಗಳಲ್ಲಿ ಶಾಲೆಗಳನ್ನುಮಾಡಿದ್ದಾರೆ. ದೇಶದಲ್ಲಿ ಐಶ್ವರ್ಯವೂ ವಿದ್ಯಾಸಂಪದವೂ ಹೆಚ್ಚಾಗಬೇಕೆಂತಲೂ, ತಮ್ಮ ದೇಶವು ಹೇಗೂ ಪರ ಜನರ ಕೈಯಲ್ಲಿ ಬೀಳಬಾರದೆಂತಲೂ ಸ್ವದೇಶ ಭಾಷೆಯಲ್ಲಿ ಚಿಕ್ಕ ಪುಸ್ತಕಗಳನ್ನು ಛಾಪಿಸುತ್ತಾರೆ. ಲೆಕ್ಚರುಗಳನ್ನು ಕೊಡುತ್ತಾರೆ. ಸ್ತ್ರೀಯರನ್ನು ಸೈನ್ಯದ ಇಲಾಖೆಯಲ್ಲಿ ಕೂಡಾ ಶೇರಿಸಿ ಕೊಳ್ಳುತ್ತಾರೆ.

ಉತ್ತರ ಹಿಂದೂಸ್ಥಾನ.

ಬಂಗಾಳ ಬೇಂಕಿನ ಅಸಿಸ್ಟಾಂಟರಾಗಿದ್ದ ಮೆ| ಎನ್. ಏಂಡರ್ ಮತ್ತು ಕಲ್ಕತ್ತೆಯ ಮೆ| ಕೆಂಬೆಲ್ ಎಂಬವರ ಪತ್ನಿಯು ಮೌಂಟು ಆಬ ಎಂಬಲ್ಲಿ ಆತ್ಮಹತ್ಯ ಮಾಡಿಕೊಂಡಿದ್ದಾರೆಂಬ ಭಯಂಕರ ವಾರ್ತೆಯು ಕಲ್ಕತ್ತೆಗೆ ಬಂದಿರುವದು. ಕೆಂಬೆಲ್ಲರ ಪತ್ನಿಯು ಏಂಡರ ಮೋಹಪಾಶದಲ್ಲಿ ಬಿದ್ದು ಅವರೊಡನೆ ಎಲ್ಲಿಗೋ ಹೋಗಿಬಿಟ್ಟಳು. ಕೆಂಬೆಲ್ಲರು ಗುಪ್ತ ಪೊಲೀಸ್ ಇಲಾಖೆಯವರ ಮೂಲಕ ಅವರಿಬ್ಬರ ಪತ್ತೆ ನಡಿಸುತ್ತಲಿದ್ದರು. ಏಂಡರರು ಮೌಂಟು ಆಬುವಿನಿಂದ ಮುಂಬಾಯಿಂದ ಒಂದು ರಿವೋಲ್ವರ್ ತರಿಸಿದರು. ಈ ವಾರ್ತೆಯು ಗುಪ್ತ ಪೊಲೀಸಿನವರಿಗೆ ತಿಳಿದು ಕೆಂಬಲ್ಲರಿಗೆ ವರದಿಮಾಡಲು ಕೆಂಬಲ್ಲರು ಇದೇ ಕಳದ ತಾ. ೧೦ರಲ್ಲು ಮೌಂಟು ಆಬುಗೆ ಹೋದರು. ಅಲ್ಲಿ ಕೆಂಬಲ್ಲರು ಏಂಡರರು ಇದ್ದ ಬಂಗ್ಲೆಯ ಕಡೆ ಸವಾರಿ ಮಾಡುತ್ತಾ ಹೋಗುವಾಗ ಬಂಗ್ಲೆಯ ಮುಂದುಗಡೆಯ ಉದ್ಯಾವನದಲ್ಲಿದ್ದ ಕೆಂಬೆಲ್ಲರ ಪತ್ನಿಯು ಗಂಡನು ದೂರದಿಂದ ಬರುತ್ತಿರುವದನ್ನು ನೋಡಿ ಏಂಡರರು ಇದ್ದ ಕೋಣೆಯೊಳಗೆ ಓಡಿಹೋಗಿ "ಅವನು ಬರುತ್ತಾನೆ, ನಾನು ಅವನ ಮುಖ ನೋಡಲಾರೆನು, ನನಗೆ ಗುಂಡು ಹೊಡಿ" ಎಂದು ಹೇಳಿದಳಂತೆ. ಏಂಡರರು "ನಾನು ನಿನಗೆ ಗುಂಡು ಹೊಡೆಯಲಾರೆನು. ಇಗೋ, ಇಲ್ಲಿ ರಿವೊಲ್ವರ್ ಇದೆ, ನೀನೆ ಹೊಡಕೋ" ಎಂದು ಹೇಳಲು ಅವಳು ರಿವೋಲ್ವರ್ ತಕ್ಕೊಂಡು ಅದರ ಬಾಯಿಯನ್ನು ತನ್ನ ಬಾಯಿಗೆ ಇಟ್ಟು ಪಾರುಮಾಡಲಿಕ್ಕೆ ಏಂಡರರ ಹತ್ತರ ಹೇಳಿದಳು. ಏಂಡರರು ಪಾರುಮಾಡಿ ಅನಂತರ ರಿವೋಲ್ವರನ್ನು ತನ್ನ ಬಾಯಿಗೆ ಇಟ್ಟು ಪಾರುಮಾಡಿ ತಾನೂ ಆತ್ಮಹತ್ಯ ಮಾಡಿಕೊಂಡರು. ಕೆಂಬೆಲ್ಲರು ಕೋಣೆಯೊಳಗೆ ಆದ ಗುಂಡಿನ ಶಬ್ದವನ್ನು ಕೇಳಿ ಕೋಣೆಯೊಳಗೆ ಹೋಗಲು ಅವರ ಪತ್ನಿಯು ಮೃತಳಾಗಿದ್ದಳು. ಏಂಡರರು ಅರೆ ಪ್ರಾಣದಲ್ಲಿದ್ದರು. ೫ ನಿಮಿಷದನಂತರ ಅವರೂ ಸತ್ತುಹೋದರು. ಏಂಡರರು ಕೆಲಸದ ಜಾಣ್ಮೆಯಿಂದ ಕಲ್ಕತ್ತೆಯಲ್ಲಿ ಹೆಸರು ಪಡದವರಲ್ಲದೆ ಯೊರ್ಕ್‌ಶಯರಿನ ಮಾಜಿ ಪಟ್ಟಣ ಪಾಲಕರ ಮಗನು.

* * *

ಈ ವರ್ಷ ಮುಂಬಾಯಿ ಸಂಸ್ಥಾನದಲ್ಲಿ ಬರ ಬಿದ್ದಾಗ ಇದರ ನಿವಾರಣಾರ್ಥವಾಗಿ ಸರಕಾರದವರು ತಕ್ಕೊಂಡ ಪ್ರಯತ್ನಗಳು ಎಷ್ಟಿಷ್ಟೆಂಬದು ಈ ಕೆಳಗಿನ ಸಂಗತಿಯಿಂದ ಗೊತ್ತಾಗುವದು. ಅಹಮ್ಮದಬಾದ್ ಜಿಲ್ಲೆಯಲ್ಲಿ ಸರಕಾರದವರು ೬॥ಮಿಲಿಯ ರಾತ್ತಲ ಹುಲ್ಲು ಹಂಚಿದರು. ಇದರಲ್ಲಿ ಅರ್ಧಾಂಶ ಸರಕಾರದ ಕಾಡುಗಳಿಂದಲೇ ಕೊಡಲ್ಪಟ್ಟಿತು. ೧೯೧೧ನೇ ಅಗೋಸ್ತು ತಿಂಗಳಿಂದ ಇದೇ ವರ್ಷದ ಜುಲಾಯಿ ತಿಂಗಳ ವರೇಗೆ ಅಹಮ್ಮದಬಾದ್ ಜಿಲ್ಲೆಯ ಒಟ್ಟು ಜನ ಸಂಖ್ಯೆಯಲ್ಲಿ ೨೬,೩೩೯ ಮಂದಿ ಮೃತಪಟ್ಟರು. ಆದರೆ ಅಷ್ಟೇ ಸಮಯದಲ್ಲಿ ೩೨,೩೪೧ ಜನನವಾಯಿತು. ೧೯೧೦ನೇ ಇಸವಿಯಲ್ಲಿ ದನಕರುಗಳ ಖಾನೆಶುಮಾರಿ ಮಾಡಿದಲ್ಲಿ ಆ ಜಿಲ್ಲೆಯಲ್ಲಿ ೩ ಲಕ್ಷದ ೨೩ ಸಾವಿರದ ೧೪೫ ದನಕರುಗಳು ಇದ್ದವು. ಆದರೆ ಇದೇ ವರ್ಷದ ಸಪ್ತಂಬರ ತಿಂಗಳಲ್ಲಿ ಮಾಡಿದ ಖಾನೆಶುಮಾರಿಯನ್ನು ನೋಡುವಾಗ ೩ ಲಕ್ಷದ ೪೭ ಸಾವಿರದ ೧೩೭ ದನಕರುಗಳು ಇವೆ. ಈ ಸಂಖ್ಯೆಯನ್ನು ನೋಡುವಾಗ ದೇಶದಲ್ಲಿ ಬರ ಬಿದ್ದಿದ್ದರೂ ಸರಕಾರದವರ ಪ್ರಯತ್ನದಿಂದ ಜನರ ಸಂಖ್ಯೆಯಾಗಲೀ ಮೃಗ ಪಶ್ವಾದಿಗಳ ಸಂಖ್ಯೆಯಾಗಲೀ ಕಮ್ಮಿಯಾಗಲಿಲ್ಲ ಎಂದು ತಿಳಿದುಬರುತ್ತದೆ.

* * *

ನಾಗಪುರದಲ್ಲಿರುವ ಡಾಕ್ಟರ್ ಶಾದ್ರೆಯವರ ಆಸ್ಪತ್ರಿಯು ತಾ. ೨೧ರಲ್ಲು ಸುಟ್ಟುಹೋಯಿತು. ಆಸ್ಪತ್ರಿಯಲ್ಲಿದ್ದ ೫ ರೋಗಿಗಳು ಸುಟ್ಟುಹೋದರು.

* * *

ಇದೇ ಕಳದ ಒಕ್ಟೋಬರ ತಾ. ೧೯ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೩೩೧೭ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೮೩೯ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೯೭೭; ಮದ್ರಾಸ್ ೫೪; ಬಂಗಾಳ ೩; ಬಿಹಾರ್ ಮತ್ತು ಒರಿಸ್ಸ ೩೫; ಸಂಯುಕ್ತ ಸಂಸ್ಥಾನ ೧೪೧; ಪಂಜಾಬು ೧೭; ಬರ್ಮಾ ೨೩; ಮಧ್ಯ ಸಂಸ್ಥಾನ ೪೦; ಮಧ್ಯ ಹಿಂದೂಸ್ಥಾನ ೩೭; ರಜಪುತಾನ ಮತ್ತು ಮಾರ್‌ವಾರ್ ೨೪೦; ಮೈಸೂರು ೧೨೧ ಮರಣಗಳಾದವು.

* * *

ಸ್ಥಾಪಿಸಲಿಕ್ಕಿರುವ ಹಿಂದೂ ವಿಶ್ವವಿದ್ಯಾಕಲಾಶಾಲೆಗಾಗಿ ಈ ತನಕ ೧೭ ಲಕ್ಷದ ೧೮ ಸಾವಿರ ರೂಪಾಯಿ ಕೂಡಿರುವದು.

* * *

ಮಧ್ಯ ಹಿಂದುಸ್ಥಾನದ ಮೂರು ವಿಧದ ಜೈನಮತಸ್ಥರು ಕಾಳಿದೇವತೆಯ ಪೂಜೆ ಬಗ್ಯೆ ಕುರಿ ಕೋಣ ಮೊದಲಾದ ಪ್ರಾಣಿಗಳನ್ನು ಕೊಲ್ಲುವ ಕ್ರೂರ ಪದ್ಧತಿ ನಿಲ್ಲಿಸಬೇಕೆಂತ ದೇಶೀಯ ಸಂಸ್ಥಾನಗಳಿಗೆ ಅರ್ಜಿಮಾಡಿದ್ದಾರೆ.

ದಕ್ಷಿಣ ಹಿಂದೂಸ್ಥಾನ.

ಬರ್ಮದ "ಬರ್ಮ ಕ್ರಿಟಿಕ್" ಎಂಬ ಪತ್ರದ ಸಂಪಾದಕರಾಗಿದ್ದ ಮೆ|ಸಿ. ಅರ್ನೊಲ್ಡರವರ ಮೇಲೆ ಸ್ಥಳಿಕಡ್ಯುಪಿಟಿ ಕಮಿಷನರಾದ ಸಿ. ಪಿ. ಅಂಡ್ರುರವರು ಮಾಡಿದ ಮಾನನಷ್ಟ ಮೊಕದಮೆಯಲ್ಲಿ ಮೆ| ಅರ್ನೊಲ್ಡರವರಿಗೆ ಒಂದು ವರ್ಷದ ಸಜಾ ವಿಧಿಸಲ್ಪಟ್ಟಿತು. ಮೆ| ಅರ್ನೋಲ್ಡರವರಿಗೆ ಶಿಕ್ಷೆ ವಿಧಿಸಿದ್ದು ನ್ಯಾಯವಲ್ಲವೆಂಬದಾಗಿ ಆಯಾ ಪತ್ರಗಳು ಘೋರ್ಗರೆಯುತ್ತಿವೆ. ಹಿಂದೂಸ್ಥಾನದಿಂದಲೂ ಇತರ ಕಡೆಯಿಂದಲೂ ಈಗ ಶೆರೆಯಲ್ಲಿರುವಮೆ|ಅರ್ನೊಲ್ಡರವರಿಗೆ ಸಹತಾಪ ಪತ್ರಗಳು ಹೋಗುತ್ತಿವೆ. ಈ ಮೊಕದಮೆಯು ಪುನಃ ಚೀಫ್ ಕೋರ್ಟಿನ ಫುಲ್ ಬೇಂಚಿಯಲ್ಲಿ ತನಖಿಯಾಗಬೇಕೆಂದೂ, ಇವರು ನಿರಾಕರಿಸಿದರೆ ಪ್ರಿವಿ ಕೌನ್ಸಿಲಿನಲ್ಲಿ ತನಖಿಯಾಗಬೇಕೆಂದೂ ಅರ್ನೊಲ್ಡರ ಕಡೆಯ ವಕೀಲರು ಚೀಫ್ ಕೋರ್ಟಿನವರನ್ನು ಕೇಳಿಕೊಂಡಿದ್ದಾರೆ. ಅಷ್ಟರ ತನಕ ಅರ್ನೊಲ್ಡರವರನ್ನು ಬಿಡಬೇಕೆಂತ ವ್ಯಾಸರಾಯ ಪ್ರಭುಗಳಿಗೆ ವಿಜ್ಞಾಪನೆ ಪತ್ರಿಕೆಯನ್ನು ಮಾಡಿಕೊಳ್ಳುವರೆ ರಂಗೂನಿನ ಜನರು ಪ್ರಯತ್ನಿಸುತ್ತಿದ್ದಾರೆ. ಈ ವಿಜ್ಞಾಪನಾ ಪತ್ರಿಕೆಗೆ ಈ ವರೆಗೆ ೨೦,೦೦೦ ಮಂದಿ ಸಹಿ ಮಾಡಿರುವರು.

* * *

ಮದ್ರಾಸಿನ ರಾ. ಜಿ. ನಾರಾಯಣಯ್ಯ ಎಂಬವರು ತನ್ನ ಮಕ್ಕಳಾದ ಜಿ. ಕೃಷ್ಣಮೂರ್ತಿ ಮತ್ತು ಜಿ. ನಿತ್ಯಾನಂದ ಎಂಬ ತನ್ನ ಇಬ್ಬರು ಮಕ್ಕಳನ್ನು ದೈವಜ್ಞಾನ (ಥಿಯೊಸಫಿ) ಸಭೆಯ ಪ್ರೆಸಿಡೆಂಟರಾದ ಮಿಸೆಸ್ ಅನ್ನಿ ಬಿಸೆಂತರ ವಶ ಕೊಟ್ಟಿದ್ದರು. ಆ ಸಮಯದಲ್ಲಿ ಜಿ. ನಾರಾಯಣಯ್ಯನವರಿಗೆ ಈ ಥಿಯೊಸಫಿ ಮತದ ಮೇಲೆಯೂ ಅದರ ಪ್ರೆಸಿಡೆಂಟರಾದ ಮಿಸೆಸ್ ಅನ್ನಿ ಬಿಸೆಂತರ ಮೇಲೆಯೂ ಬಹಳ ಹೆಚ್ಚಿನ ನಂಬಿಕೆಯೂ ವಾತ್ಸಲ್ಯವೂ ಇತ್ತು. ಆದರೆ ಕ್ರಮೇಣ ತನ್ನ ಮಗ ಕೃಷ್ಣಮೂರ್ತಿಯು ದುರ್ನಡತೆಗೆ ನಡಿಸಲ್ಪಡುತ್ತಾನೆಂಬದಾಗಿ ಇವರಿಗೆ ತಿಳಿದು ಬಂದದರಿಂದ ಈ ಸಂಗತಿಯನ್ನು ಅನ್ನಿ ಬಿಸೆಂತರಿಗೆ ತಿಳಿಸಲು ಅವರು ಅವರನ್ನು ಇಂಗ್ಲಾಂಡಿಗೆ ಕರಕೊಂಡು ಹೋದರು. ಅನಂತರ ಅಲ್ಲಿಯೂ ತನ್ನ ಮಕ್ಕಳು ಕೆಟ್ಟುಹೋಗುವ ಸಂದರ್ಭದಲ್ಲಿದ್ದಾರೆಂದು ಇವರಿಗೆ ತಿಳಿದು ಬಂದದರಿಂದ ತನ್ನ ಮಕ್ಕಳನ್ನು ಹಿಂದಕ್ಕೆ ಕೊಡಬೇಕೆಂದು ಇವರು ಅನ್ನಿ ಬಿಸೆಂತರರಿಗೆ ಪತ್ರ ಬರೆದರು. ಆದರೆ ಅವರು ಹಿಂದಕ್ಕೆ ಕೊಡದ್ದರಿಂದ ತನ್ನ ಮಕ್ಕಳನ್ನು ಹಿಂದೆ ಕೊಡಿಸಬೇಕೆಂತ ಜಿ. ನಾರಾಯಣಯ್ಯರು ಚೆಂಗಲ್ಪಟ್ಟ ಡಿಸ್ಟ್ರಿಕ್ಟ್ ಜಡ್ಜ ಕೋರ್ಟಿನಲ್ಲಿ ಅನ್ನಿ ಬಿಸೆಂತರ ಮೇಲೆ ದಾವೆ ತಂದಿದ್ದಾರೆ.

* * *

ಮದ್ರಾಸ್ ಗವರ್ನರರಾದ ಪೆಂಟಲೆಂಡ ಪ್ರಭುಗಳು ತಾ. ೨೯ನೇ ಮಧ್ಯಾನ್ಹ ಮದ್ರಾಸಿಗೆ ತಲಪುವರೆಂದು ಪ್ರಕಟವಾಗಿತ್ತು. ಆದರೆ ೨೯ನೇ ತಾ. ರಾತ್ರಿ ೮ ಗಂಟೆಯ ವರೆಗೆ ಅವರು ಪ್ರಯಾಣಮಾಡುತ್ತಿದ್ದ ಹಡಗವು ಮದ್ರಾಸ್ ಬಂದರಕ್ಕೆ ಬಂದು ತಲಪಲಿಲ್ಲ.

ದಕ್ಷಿಣ ಕನ್ನಡ.

ಕಾಸರಗೋಡು:—ಕಳದ ಶನಿವಾರ ತಾಲೂಕಿನ ಉಪಾಧ್ಯಾಯರ ತ್ರೈಮಾಸಿಕ ಸಮ್ಮೇಳವು ಜರಗಿತು. ಆಯಾ ಉಪಾಧ್ಯಾಯರು ಪಾಠ ವಗೈರೆ ಕೊಟ್ಟ ತರುವಾಯ ಪರಸ್ಪರ ಸಹಾಯಕ ಸಂಘದ ವಿಷಯ ಚರ್ಚೆಯಾಗಿ ಬೇಗನೇ ಅಂಥಾದೊಂದು ಸಂಘವನ್ನು ಈ ತಾಲೂಕಿನ ಉಪಾಧ್ಯಾಯರೊಳಗೂ ಸ್ಥಾಪಿಸಬೇಕೆಂದು ನಿಷ್ಕರ್ಷಿಸಿಸಲಾಯಿತು.

ಕಳದ ಮಂಗಳವಾರ ಇಲ್ಲಿಯ ಪೇಟೆ ಮಧ್ಯದಲ್ಲಿ ಪೋಲೀಸ್ ಸ್ಟೇಶನಿಗೆ ಸಮೀಪವಿರುವ ಮಾಮುಂಞಿ ಎಂಬ ಸಾಹುಕಾರರ ಜೌಳಿ ಅಂಗಡಿಯಲ್ಲಿ ನಿರ್ಭೀತಿಯಿಂದ ತಿರಿಗಿ ಕಳವಾಯಿತೆಂದು ಕೇಳುವಾಗ ಬಹಳ ಆಶ್ಚರ್ಯವಾಗುತ್ತದೆ. ಸ್ವಲ್ಪ ಸಮಯಕ್ಕೆ ಹಿಂದೆ ಇದೇ ರೀತಿ ಕಳವು ನಡೆದರೂ ಈಚೆಗೆ ತಮ್ಮಣೆಯಾಗಿತ್ತು. ಆದರೆ ತಿರಿಗಿ ಹಳೇ ರೀತಿಯ ಕಳವು ಪ್ರಾರಂಭವಾಗುವುದನ್ನು ಪೋಲೀಸ್ ಮೇಲಾಧಿಕಾರಿಗಳು ಗಮನಕ್ಕೆ ತಂದು ತಕ್ಕ ಬಂದೋಬಸ್ತಿ ಮಾಡುವರೆಂದು ನಂಬುತ್ತೇವೆ.

* * *

ಪುತ್ತೂರು:—ಇಲ್ಲಿಯ ಡಿವಿಜನಲ್ಲಿ ಡಿಪುಟ್ಯೆ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಖಿ ನಡಿಯುತ್ತಿದ್ದ ಮೊಕದಮೆಯ ತನ್ಕಿಯು ಇದೇ ಬರುವ ದಶಂಬರ ತಾ. ೩ಕ್ಕೆ ಮಂಜೆಶ್ವರ ಮೊಕ್ಕಾಮಿನಲ್ಲಿ ಇಡಲ್ಪಟ್ಟಿರುವದು.

ಈ ಮೊದಲು ಇಲ್ಲಿ ದಾಕ್ತಾರಾಗಿದ್ದು ವರ್ಗಪಟ್ಟು ಹೋದ ಮ| ರಾ| ರಾ| ಸಿ. ರಾಮಕಮತ್ತರವರು ತಿರಿಗಿ ಇಲ್ಲಿಗೆ ವಾಪಾಸು ಬರುವದಾಗಿ ವದಂತಿ ಇರುವದು.

ತಿದ್ದುಪಡಿ:—೪೨ನೇ ಸಂಚಿಕೆಯಲ್ಲಿ "ಕುಳಗುಂದ ಜಾನ್ವಾರ ಸಂತೆಯು ದಶಂಬರ ತಿಂಗಳ ವರೆಗೆ" ಎಂಬದರ ಓದಲಾಗಿ ದಶಂಬರ ತಾ. ೮ರ ವರೆಗೆ ನಡೆಯುವದೆಂದು ಓದತಕ್ಕದ್ದು.

ಬರೆಮಾರು:—ಪುತ್ತೂರು ಇಗರ್ಜೆಯ ಗುರುಗಳಾದ ರೆವೆರೆಂಡ ಪಾದರ ಸೋಜರವರ ತಾಯಿ ಕಠಿಣ ಕಾಹಿಲೆಯಲ್ಲಿದ್ದವರು ಇದೇ ಅಕ್ಟೋಬರ ತಾ. ೨೧ರಲ್ಲು ತನ್ನ ೫೫ನೇ ವಯುಸ್ಸಿನಲ್ಲಿ ಪರವನ್ನೈದಿದರು. ಇವರ ಶವ ಸಂಸ್ಕಾರಕ್ಕೆ ಬಂಟ್ವಾಳದ ಗುರುಗಳಾದ ರೆವೆರೆಂಡ ಪಾದರ ಅರೆಂಜಾ ಮೊದಲಾದ ಗುರುಗಳೂ ಇನ್ನು ಸ್ವಜಾತಿಯ ಹಲವು ಗೃಹಸ್ಥರೂ ಬಂದಿದ್ದರು.

ಮಂಗಳೂರು.

೮ನೇ ಸರ್ಕಲಿನ ಶಾಲೆಗಳ ಆಕ್ಟಿಂಗ್ ಇನ್ಸ್‌ಪೆಕ್ಟರರಾಗಿರುವ ರೆನ್ಸ್‌ಫೋರ್ಡು ದೊರೆಗಳು ೧ನೇ ಸರ್ಕಲಿನ ಆಕ್ಟಿಂಗ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವುದರಿಂದ ಯುರೋಪಿಯನ್ ಮತ್ತು ಟ್ರೈನಿಂಗ್ ಶಾಲೆಗಳ ಇನ್ಸ್‌ಪೆಕ್ಟರರಾಗಿರುವ ಮೆ| ಆರ್. ಲಿಟ್ಲ್‌ಹೈಲ್ಸ್ ದೊರೆಗಳು ೮ನೇ ಸರ್ಕಲಿನ ಆಕ್ಟಿಂಗ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಲ್ಯಾಟ್ ಹೌಸು ಗುಡ್ಡದಲ್ಲಿ ತೆರೆಯಲ್ಪಟ್ಟ ಗವರ್ನಮೆಂಟ ಹುಡಿಗಿಯರ ಟ್ರೈನಿಂಗ್ ಶಾಲೆಯಲ್ಲಿ ಈಗ ೪ನೇ ದರ್ಜೆಗಳ ವರೆಗೆ ಮೊಡೆಲ್ ಕ್ಲಾಸುಗಳು ತೆರೆಯಲ್ಪಟ್ಟಿರುರುವವು. ಬರುವ ವರ್ಷದಿಂದ ೭ನೇ ಕ್ಲಾಸುಗಳ ವರೆಗೆ ಹ್ಯಾಯರ್ ಎಲಿಮೆಂಟರಿ ಮೊಡೆಲ್ ಕ್ಲಾಸುಗಳೂ ಈ ಶಾಲೆಯಲ್ಲಿ ತೆರೆಯೋಣಾಗುವುದೆಂದು ಕೇಳುತ್ತೇವೆ. ಶಾಲೆಯಲ್ಲಿ ಬಾಲಕ ದರ್ಜೆಯಿಂದ ೪ನೇ ದರ್ಜೆಯ ವರೆಗೆ ಒಂದಾಣೆ ಶಾಲಾ ಫೀಸು ಮಾತ್ರ ವಸೂಲುಮಾಡಲಾಗುತ್ತದೆ.

ಕಳದ ವಾರ ಇಲ್ಲಿಯ ಸನ್ಯಾಸಿ ಗುಡ್ಡೆಯಲ್ಲಿ ವಿಶೇಷವಾದೊಂದು ಅವಗಡವು ಸಂಭವಿಸಿತು. ಸನ್ಯಾಸಿ ಗುಡ್ಡೆಯಲ್ಲಿ ವಾಸಿಸುವ ಒಂದು ಪ್ರೊಟೆಸ್ಟಾಂಟ ಕ್ರೈಸ್ತರ ಮನೆಯಲ್ಲಿ ಮುದ್ದವ್ವ ಎಂಬ ಹೆಂಗಸು ಭಾವಿಯಿಂದ ನೀರೆಳಿಯುವಾಗ ಕಾಲುಜಾರಿ ಫಕ್ಕನೇ ಭಾವಿಗೆ ಬಿದ್ದಳು. ಇವಳ ಬೊಬ್ಬೆ ಕೇಳಿ ಸುತ್ತಮುತ್ತಲಿನಿಂದ ಜನರೆಲ್ಲರೂ ಭಾವಿಯ ಬಳಿಯಲ್ಲಿ ಕೂಡಿದರು. ಆದರೆ ಭಾವಿಯು ಬಹಳ ಆಳತರವಾಗಿದ್ದು ಕತ್ತಲೆ ಕವಿದಿದ್ದದರಿಂದ ಯಾರೂ ಇಳಿಯಲಿಕ್ಕೆ ಧೈರ್ಯಪಡಲಿಲ್ಲ. ಈ ವಾರ್ತೆಯು ನೇಯುವ ಕಾರ್ಖಾನೆಗೆ ತಲಪುತ್ತಲೇ ಅಲ್ಲಿಂದಲೂ ಹಲವರು ಆ ಸ್ಥಳಕ್ಕೆ ಓಡಿದರು. ಆದರೆ ಯಾರೂ ಇಳಿಯಲು ಧೈರ್ಯಪಡಲಿಲ್ಲವೆಂಬದನ್ನು ನೋಡಿದಾಕ್ಷಣ ಸದರಿ ಕಾರ್ಖಾನೆಯ ಎಜಕಿಯೇಲ್ ಲೋಬೊ ಎಂಬವರು ತೊಟ್ಟಿದ್ದ ವಸ್ತ್ರ ಸಹಾ ತೆಗೆಯದೆ ಯಾರೋ ಇತರರು ಭಾವಿಗೆ ಇಳಿಸಿದ್ದ ಏಣಿಯ ಮೇಲೆ ಕಾಲನ್ನಿಡಲು ಏಣಿ ತುಂಡಾಗಿ ಕೆಳಗೆ ಬಿದ್ದು ಭಾವಿಯ ಮತ್ತೊಂದು ಪಾರ್ಶ್ವಕ್ಕೆ ತಾಗಿ ಎದೆಗೂ ತಲೆಗೂ ಪೆಟ್ಟಾಗಿ ಮುಣುಗಿದರು. ಮೇಲಿದ್ದವರೆಲ್ಲರೂ ಇವರ ಆಶೆಯನ್ನೂ ಬಿಟ್ಟು ಚಿಂತಿಸುತ್ತಿರುವಷ್ಟರಲ್ಲಿ ಸದರಿ ಲೋಬರು ಆ ಹೆಂಗಸನ್ನು ಮೇಲಕ್ಕೆ ತಂದರು. ಕಡೆಗೆ ಇಬ್ಬರನ್ನೂ ಬಹಳ ಸಾಹಸದಿಂದ ಮೇಲಕ್ಕೆ ತೆಗೆಯ ಬೇಕಾಯಿತು. ಹೆಂಗಸಿಗೆ ಹೆಚ್ಚಿನ ಅಪಾಯವಾಗಲಿಲ್ಲ. ಆದರೆ ಅವಳನ್ನು ಸಂರಕ್ಷಿಸ ಇಳಿದ ಲೋಬರಿಗೆ ಏಣಿ ಮುರಿದು ಆಪದೆಶೆ ಸಂಭವಿಸಿದ್ದರಿಂದ ಕೆಲವು ದಿವಸ ಕೆಲಸಕ್ಕೆ ಹಾಜರಾಗ ಕೊಡದಷ್ಟು ಎದೆಗೂ ಬೆನ್ನಿಗೂ ಪೆಟ್ಟಾಗಿತ್ತು. ಇತರರ್ಯಾರೂ ಭಾವಿಗೆ ಇಳಿಯ ಧೈರ್ಯಪಡದೆ ಇದ್ದ ಕಾಲದಲ್ಲಿ ಧೈರ್ಯದಿಂದಲೂ ತನ್ನ ಜೀವದಾಶೆ ಇಲ್ಲದೆಯೂ ಬಡ ಹೆಂಗಸಿನ ಪ್ರಾಣವನ್ನು ರಕ್ಷಿಸ ಪ್ರಯತ್ನಪಟ್ಟು ಆಪದೆಶೆಯನ್ನು ಹೊಂದಿದ ಲೋಬರಲ್ಲಿರುವ ಇಂಥಾ ಶೂರತನವು ತಕ್ಕ ರೀತಿಯಲ್ಲಿ ಪ್ರೋತ್ಸಾಹ ಹೊಂದ ಬೇಕಾಗಿದೆ.

ಇದೇ ಕಳದ ೨೭ನೇ ಆದಿತ್ಯವಾರ ಬಾಸೆಲ್ ಮಿಶ್ಯನ್ ಪ್ರೆಸಿಡೆಂಟರೂ ಮುನ್ಸಿಫಲ್ ಕೌನ್ಸಿಲ್ಲರೂ ಆಗಿರುವ ರೆವರೆಂಡ್ ಶೊಸ್ಸರ್ ದೊರೆಗಳವರು ಅವರ ಪತ್ನಿ, ಮಗುವಿನ

ಸಹಿತ ಜಡ್ಕಾ ಅವಗಡಕ್ಕೆ ಗುರಿಯಾದರು. ಆದಿತ್ಯವಾರ ನಾಲ್ಕು ಗಂಟೆಯನಂತರ ದೊರೆಗಳು ಪತ್ನಿ ಮತ್ತು ಮಗು ಸಹಿತ ತನ್ನ ಜಡ್ಕಾ ಬಂಡಿಯಲ್ಲಿ ಕೂತು ಪೇಟೆಯ ಕಡೆ ಸವಾರಿ ಮಾಡುವಾಗ ಮೆಸರ್ಸ್ ಪೆರಿ ಕಂಪೆನಿಯ ಬ್ರೇಂಚ್ ಆಫೀಸಿನ ಸಮೀಪ ಕಚ್ಚಾಡಿಕೊಳ್ಳುತ್ತಿದ್ದ ಕೆಲವು ಹಂದಿಗಳು ಗಾಡಿಗೆ ಅಡ್ಡಲಾಗಿ ಓಡಿ ಬಂದದರಿಂದ ಕುದುರೆಯು ಬೆಚ್ಚಿಬಿದ್ದು ಗಾಡಿಯು ಮಗಚಿ, ದೊರೆಗಳಿಗೂ, ಅವರ ಪತ್ನಿಯವರಿಗೂ ಸಾಧಾರಣ ಪೆಟ್ಟಾಯಿತೆಂದೂ ಗಾಡಿ ಪುಡಿ ಆಯಿತೆಂದೂ ತುಸ ಹೆಚ್ಚು ಕಡಮೆಯಾಗುತ್ತಿದ್ದರೆ ದೊಡ್ಡ ಅವಗಡವಾಗುವ ಸಂಭವವಿತ್ತೆಂದೂ ಕೇಳುತ್ತೇವೆ. ಬೀದಿಗಳಲ್ಲಿ ಅಲೆದಾಡುತ್ತಿರುವ ಹಂದಿಗಳನ್ನು ಕೊಲ್ಲಬೇಕೆಂಬದಾಗಿ ಇದ್ದ ನಿಯಮವು ಇತ್ತಲಾಗೆ ಅಡಿಗೆ ಬಿದ್ದದರಿಂದ ಈ ಹಂದಿಗಳಿಂದ ತೊಂದರೆಗಳು ಸಂಭವಿಸುತ್ತಿವೆಂಬದಕ್ಕೆ ಮೊನ್ನೆ ಸಂಭವಿಸಿದ ಅವಗಡವೇ ಒಂದು ದೃಷ್ಟಾಂತವಾಗಿದೆ.

ಮುಂಬಾಯಿಯಲ್ಲಿ ಮೋಗೇರ ಜಾತ್ಯಭಿವೃದ್ಧಿಗಾಗಿ ಸ್ವರ್ಗಸ್ಥರಾದ ರಾ| ಕಣ್ಣಂಗಾರ ಪಂಜಿ ಮರಕಾಲನವರ ಜೇಷ್ಠ ಪುತ್ರರಾದ ರಾ| ರಾಮ ಮರಕಾಲರವರಿಂದ ಸ್ಥಾಪಿಸಲ್ಪಟ್ಟಿರುವ ಭಾರತ ಶ್ರವಣ ಮಂಡಳಿಯವರು ಈ ಪರಿಧಾವಿ ಸಂವತ್ಸರದಲ್ಲಿ ಶ್ರವಣಮಾಡುತ್ತಿದ್ದ ಶಂಕರಸಂಹಿತೆಯೆಂಬ ಪುರಾಣವನ್ನು ಇದೇ ಆಶ್ವೀಜ ಶುದ್ಧ ೯ನೇ ಶನಿವಾರ ವಿಧಿ ಪೂರ್ವಕ ಬಹಳ ವಿಜೃಂಭಣೆಯಿಂದ ಸಮಾಪ್ತಗೊಳಿಸಿದರೆಂತ ಒಬ್ಬ ಮುಂಬಾಯಿ ಬಾತ್ಮಿದಾರರು ತಿಳಿಸುವರು.

ಮ. ರಾ. ರಾ. ಕಿಲ್ಪಾಡಿ ಶಿವರಾವ್ ಬಿ. ಎ. ಯವರು ಹೊಸದುರ್ಗದ ಆಕ್ಟಿಂಗ್ ಡಿಪ್ಯುಟಿ ತಹಸೀಲ್ದಾರರಾಗಿ ನೇಮಕಪಟ್ಟಿರುವರು.

ಮಂಗಳೂರಿನ ಬಂದರದ ಸಾಹುಕಾರರಲ್ಲಿ ಹಲವರು ಮುನಿಸಿಪಲ್ ಕೌನ್ಸಿಲಿಗೆ ತಮ್ಮ ಪ್ರತಿನಿಧಿಯಾಗಿ ಸರಕಾರದವರಿಂದ ನೇಮಕ ಪಡುವ ಮೆಂಬರುತನವು ಇಲ್ಲಿಯ ಮದ್ರಾಸ್ ಬೇಂಕಿನ ಏಜಂಟರಾದ ಮೆ| ಬಕ್ಲೆಯವರಿಗೆ ಕೊಡೋಣಾಗಬೇಕೆಂತ ಒಂದು ಮನವಿಯನ್ನು ಮಾಡಿರುವರಾಗಿ ತಿಳಿಯುತ್ತೇವೆ.

ಈ ಸಂಚಿಕೆಯ ಪತ್ರವ್ಯವಹಾರ ಸಂಗ್ರಹದಲ್ಲಿ ಪಂಚಮ ವಿದ್ಯಾರ್ಥಿಗಳಿಂದಲೇ ಬರಿಯೋಣಾದ 'ಪಂಚಮರ ವಿನಂತಿ'ಯನ್ನು ಪ್ರಕಟಿಸಿರುತ್ತೇವೆ. ವಾಚಕರು ಅದನ್ನು ದಯಮಾಡಿ ಓದಬೇಕಾಗಿದೆ. ತಮಗೆ ತಾವು ಸಹಾಯ ಮಾಡಿಕೊಳ್ಳಲು ನಿರ್ಧರಿಸಿಕೊಂಡಿರುವ ಈ ಪಂಚಮರಿಗೆ ಪರಮೇಶ್ವರನ ಸಹಾಯವು ಸದಾ ಇರಲಿ.

ಇಲ್ಲಿಯ ವಕೀಲರಾಗಿರುವ ರಾ| ಪಿ. ಸಂಜೀವ ಎಮ್. ಎ. ಬಿ. ಎಲ್‌ರವರು ಮಿಸ್. ಚಂಪಾಬಾಯಿ ಸುಂತನ್‌ಕರ್. ಬಿ. ಎ. ಎಮ್ ಡಿ. ಎಂಬವರನ್ನು ಕಳದ ಆದಿತ್ಯವಾರ ವಿವಾಹ ಮಾಡಿಕೊಂಡರು. ವಿವಾಹವು ಸಿವಿಲ್ ವಿವಾಹಗಳ ಸರಕಾರ ಕಡೆ ರಿಜಿಸ್ಟ್ರಾರರಾದ ರಾ| ಕುದ್ಮೂಲ ರಂಗರಾಯರಿಂದ ರಿಜಿಸ್ಟ್ರಿ ಮಾಡಲ್ಪಟ್ಟದೆ. ವಿವಾಹ ವೃತಾಂತವನ್ನು ಪತ್ರವ್ಯವಹಾರ ಸಂಗ್ರಹದಲ್ಲಿ ಪ್ರಕಟಿಸಿರುವೆವು.

ಮಂಗಳೂರಿನ ಸರ್ವ ಜಾತಿಪುತಸ್ಥರ ಬಗ್ಯೆ ಕೊಸ್ಮೊಪೊಲಿಟನ್ ಕ್ಲಬ್ಬ್ ಎಂಬುದು ಈ ತಿಂಗಳ ೧ನೇ ತಾರೀಕಿನಿಂದ ಮಾರ್ಕೆಟು ಬಳಿಯಿರುವ ಒಂದು ದೊಡ್ಡ ಬಂಗ್ಲೆಯಲ್ಲಿ ತೆರಿಯಲ್ಪಡುವುದು. ಡಿಸ್ಟ್ರಿಕ್ಟ್ ಜಡ್ಜರು, ಸಬ್ ಜಡ್ಜರು ಮೊದಲಾದ ಸರಕಾರಿ ಆಫೀಸರರೂ, ವಕೀಲರೂ ಸಾವುಕಾರರೂ ಈ ಕ್ಲಬ್ಬಿನ ಮೆಂಬರರಾಗಿ ಸೇರಿರುತ್ತಾರೆ.

ಮಂಗಳೂರು ಡಿವಿಜನಲ್ ಆಫೀಸರರು ಪುತ್ತೂರು ಡಿವಿಜನಲ್ ಆಫೀಸಿನ ಚಾರ್ಜನ್ನು ಸಹ ವಹಿಸಿಕೊಂಡು ಮಂಜೇಶ್ವರ ಅತ್ತಕಡೆ ಸರ್ಕೀಟಿನ ಮೇಲೆ ಹೋಗಿರುವರು.

ಕಳದ ವಾರದಲ್ಲಿ ನಡದ ಮುನ್ಸಿಪಲ್ ಚೇಯರ್ ಮೇನರ ಚುನಾವಣೆಯಲ್ಲಿ ಮೆ| ಫರ್ನಾಂಡೀಸರಿಗಾಗಲಿ ಮ| ರಾ| ರಾ| ಅಮ್ಮೆಂಬಳ ವಾಸುದೇವ ಪೈಗಳಿಗಾಗಲಿ ಬೇಕಾದ ಓಟುಗಳು ಸಿಕ್ಕದೆ ಇದ್ದದ್ದರಿಂದ ಚುನಾವಣೆಯು ಪುನಹ ಮುಂದರಿಸಿಡೋಣಾಗಿದೆ.

ಗೋಳಿಕಟ್ಟೆ ವಾರ್ಡಿನ ಮುನ್ಸಿಪಲ್ ಕೌನ್ಸಿಲಿನ ಮೆಂಬರಿಕೆಗೆ ಉಮೇದ್ವಾರರಾಗಿ ನೇಮಿಸಲ್ಪಟ್ಟ ಮೆ| ಮಾರ್ಟಿನ್ ಪ್ಯಾಸ್ ಮತ್ತು ರಾವ್ ಬಹದ್ದೂರ್ ಎನ್. ಸುಬ್ಬರಾವ್‌ರವರ ಪೈಕಿ ಮೆ| ಮಾರ್ಟಿನ್ ಪ್ಯಾಸರವರು ತಮ್ಮ ನೇಮಕವನ್ನು ಹಿಂತೆಗದ್ದರಿಂದ ಎನ್. ಸುಬ್ಬರಾವ್‌ರವರೇ ಗೋಳಿಕಟ್ಟೆ ವಾರ್ಡಿನ ಮೆಂಬರರಾಗಿ ಆರಿಸಲ್ಪಟ್ಟಿರುವರು.

ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನ ವ್ಯಾಸ್ ಪ್ರೆಸಿಡೆಂಟರಾಗಿ ಬಹುಮಾನಪಟ್ಟ ರಾವ್ ಬಹದ್ದೂರ್ ಎನ್. ಸುಬ್ರಾವ್‌ರವರು ನೇಮಿಸಲ್ಪಡುವರೆಂಬ ವರ್ತಮಾನವಿರುವುದು.

ಇಲ್ಲಿಯ ಹೆಸರುವಾಸಿಯಾದ ಜವಳಿ ವ್ಯಾಪಾರದ ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿಯ ಪಾಲುಗಾರರಲ್ಲೊಬ್ಬರೂ, ಈ ಕಂಪೆನಿಯನ್ನು ಬಹಳ ಉತ್ತಮ ತರಗತಿಗೆ ತರಲು ವಿಶೇಷ ಶ್ರಮಪಟ್ಟವರೂ ಆದ ರಾ| ಕುಳೂರು ದಾಮೋದರ ನ್ಯಾಕರವರು ಕಳದ ವಾರ ಮದ್ರಾಸಿನಲ್ಲಿ ವಿಷಮ ಜ್ವರದಿಂದ ದೈವಾಧೀನರಾದರೆಂಬುದನ್ನು ತಿಳಿಸಲು ವಿಷಾದ ಪಡುವೆವು.

ಮುನ್ಸಿಪಲ್ ಕೌನ್ಸಿಲಿನ ಸೆಕ್ರೆಟೆರಿಯಾಗಿ ಆರಿಸಲ್ಪಟ್ಟ ಮೆ| ಸಿಕೇರರವರ ನೇಮಕವೂ ಸೆಂಟ್ರಲ್ ವಾರ್ಡಿನ ಮೆಂಬರರಾಗಿ ಆರಿಸಲ್ಪಟ್ಟ ರಾ| ಹುಂಡಿ ಪುರುಷೋತ್ತಮ ಕಾಮತ್, ರಾ| ನಗರ ಗಣಪತಿ ರಾಯರ ನೇಮಕಗಳೂ ಸರಕಾರಿ ಮಂಜೂರಾತಿ ಬಗ್ಯೆ ಕಲೆಕ್ಟರರ ಆಫೀಸನ್ನು ಸೇರಿ ಬಹಳ ದಿನಗಳಾದರೂ ಈ ತನಕ ಈ ನೇಮಕಗಳು ಸರಕಾರದವರಿಂದ ಪ್ರಕಟಿಸಲ್ಪಡದಿರುವುದರಿಂದ ಈ ವಿಷಯಗಳಲ್ಲಿ ನಾನಾ ವಿಧದ ವರ್ತಮಾನಗಳು ಪಟ್ಟಣದಲ್ಲಿ ಹಬ್ಬುತ್ತಲಿವೆ.

ಮದ್ರಾಸಿನ ಮೆಸರ್ಸ್ ಡಬ್ಲ್ಯು. ಇ. ಸ್ಮಿತ್. ಕಂಪೆನಿಯ ಪರವಾಗಿ ಬಂದ ನಯನ ವೈದ್ಯರಾದ ಡಾಕ್ಟರ್. ವಿ. ರಾಮ ಕಾಮತ್‌ರವರು ಈ ತಿಂಗಳ ಪ್ರಥಮ ವಾರದೊಳಗೆ ಉಡ್ಪಿಯಲ್ಲಿ ತಮ್ಮ ಆಫೀಸನ್ನು ತೆರಿಯುವರು.

ರಾ| ಕುದ್ಮೂಲ ರಂಗರಾಯರ ಪುತ್ರಿ ಕುಮಾರ ಮಂಗಲಂ ಜಮೀನುದಾರಿಣಿಯವರಾದ ರಾದಾ ಬಾಯಿಯವರು ವಿಲಾಯತಿಯ ಒಕ್ಸ್‌ಫರ್ಡಿನ ಸೋಮರ್‌ವಿಲ್ಲೆ ಕೊಲೇಜನ್ನು ವಿದ್ಯಾಭ್ಯಾಸಕೋಸ್ಕರ ಸೇರಿರುವರಾಗಿ ತಿಳಿಯುತ್ತೇವೆ.

ಮೂಡಬಿದ್ರೆಯ ಕೆಲವು ಪ್ರತಿನಿಧಿಗಳು ಕಲೆಕ್ಟರರಾದ ಮೆ| ಕೌಚ್‌ಮೇನ್ ದೊರೆಗಳವರನ್ನು ಸಂದರ್ಶಿಸಲು ಹೋಗಿದ್ದರೆಂಬದಾಗಿ ಕೇಳುತ್ತೇವೆ.

ಮದ್ರಾಸು ಗವರ್ನರರಾದ ಲೋರ್ಡ್ ಪೆಂಟ್ ಲೆಂಡ್ ದೊರೆಗಳವರ ಆಗಮವವು.

ತಾ. ೩೦ನೇ ಬುಧವಾರ ಪೆಂಟ್‌ಲೆಂಡ್ ಪ್ರಭುಗಳು ಈ ಸಂಸ್ಥಾನದ ಗವರ್ನರ್ ಪದವಿಯನ್ನು ವಹಿಸಿಕೊಂಡರೆಂಬದನ್ನು ತಿಳಿಸಲು ಸಂತೋಷಪಡುತ್ತೇವೆ.

* * *

ವಿವಿಧ ವಿಷಯಗಳು.

* * *

ಹೊಲ್ಯಾಂಡ ದೇಶದಲ್ಲಿ ವಿವಾಹವಾಗದ ಹೆಂಗಸರಿಗೆ ೪೦ನೇ ವಯಸ್ಸಿನಲ್ಲಿ ಸರಕಾರದಿಂದ ವರ್ಷಾಶನವು ದೊರಕುವದು. ಈ ವರ್ಷಾಶನವು ಸಿಕ್ಕಬೇಕಾದರೆ ೧೩ನೇ ವಯಸ್ಸಿನಿಂದ ಆ ಫಂಡಿಗೆ ಸ್ವಲ್ಪ ವಂತಿಗೆ ಕೊಡಬೇಕಾಗುವುದು. ತನ್ನದ್ಯ ವಂತಿಗೆ ಕೊಡುತ್ತಿರುವ ಸ್ತ್ರೀಯು ವಿವಾಹವಾದರೆ ತಾನು ಹಾಕುತ್ತಾ ಬಂದ ವಂತಿಗೆಯ ಹಕ್ಕನ್ನು ಕೇಳಕೂಡದು.

* * *

ಬ್ರಿಟಿಷ್ ದ್ವೀಪಗಳಲ್ಲಿ ಕೆಲವು ಸಂಗತಿಗಳಲ್ಲಿ ಇನ್ನೂ ಮೂಡಭಕ್ತಿಯು ಹರಡಿಕೊಂಡಿದೆ. ಮಕ್ಕಳಿಗೆ ನಾಯಿಕೆಮ್ಮು ಆದರೆ ಅವರ ಹೆಗ್ಗತ್ತಿನಿಂದ ಕೂದಲನ್ನು ಕತ್ತರಿಸಿ ಅದರಲ್ಲಿ ಮಾಂಸದ ಬಾಡನ್ನು ಸುತ್ತಿ ನಾಯಿಗೆ ಹಾಕುವರು. ಇದರಿಂದ ಮಗುವಿನಕೆಮ್ಮು ನಿಂತುಹೋಗಿ ನಾಯಿಗೆ ಅಂಟುವುದಂತೆ. ಕೋರ್ನ್‌ವಾಲ್ ಎಂಬಲ್ಲಿ ನಾಯಿ ಕೆಮ್ಮಿನ ಮಕ್ಕಳಿಗೆ ಚೆನ್ನಾಗಿ ರೊಟ್ಟಿ ಮತ್ತು ಬೆಣ್ಣೆ ತಿನ್ನಿಸಿ ಹಾಸರ ಕತ್ತೆಯ ಅಡಿಯಲ್ಲಿ ಮೂರಾವೃತ್ತಿ ದಾಟಿಸುವ ಪದ್ಧತಿಯಿದೆ. ಕರಡಿಯ ಮೇಲೆ ಮಕ್ಕಳನ್ನು ಸವಾರಿ ಮಾಡಿಸಿದರೆ ನಾಯಿಕೆಮ್ಮು ತಗಲುವುದೇ ಇಲ್ಲವೆಂಬದಾಗಿ ಲಂಕೆಶಯರಿನಲ್ಲಿ ಮಾತಿದೆ.

* * *

ಈಚೆಗೆ ಕೆನಡಾ ದೇಶದಲ್ಲಿ ೬ ಅಡಿ ೬ ಅಂಗುಲ ಎತ್ತರ, ೧೧ ಅಡಿ ಉದ್ದವಿರುವ ಒಂದು ಕೋಣವು ಸಿಕ್ಕಿರುವುದು. ಈ ವರೆಗೆ ಇಷ್ಟು ದೊಡ್ಡ ಪರಿಮಾಣದ ಕೋಣವು ದೊರಕಲಿಲ್ಲ.

* * *

ಜಪಾನರು ತಮ್ಮ ಹೆಮ್ಮಕ್ಕಳನ್ನು ವಿವಾಹಮಾಡಿ ಕೊಟ್ಟ ಕೂಡಲೇ ಅವರಿಗೆ ಶ್ರಾದ್ಧಕ್ರಿಯೆಯನ್ನೂ ನಡಿಸಿಬಿಡುವರು.

* * *

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಮಸ್ಕತಿ ಅಕ್ಕಿ ...	... 5—14—0-6—4—0
ಗುಡ್ಡು ಮಸ್ಕತಿ...	... 5—6—0—5—15—0
ಮಸ್ಕತಿ ದುಯಂ...	... 5-10-0—5—13—0
ಗಾಡಿ ಸುಗ್ಗಿ	... 5-0-0-5—4—0
ಉಂಚು ಸುಗ್ಗಿ	5—10—0—5-12—0
ಮಸ್ಕತಿ ಬೆಳ್ತಿಗೆ	6—10—0
ಹೊಸ ಗುಡ್ಡುರಾಶಿ	4-9-0—4-12—0
ಹೊಸ ಭತ್ತ	2—1—6-2—2—0
ರಂಗೂನ್ ಬೆಳ್ತಿಗೆ ಗೋಣಿ 1ರ	11—6—0
ಹುರುಳಿ ಗೋಣಿ ೧, ಮುಡಿ 2ರ	6-12-0
ಉಪ್ಪು ಗೋಣಿ ೧ರ	3—14—0
ಕೊಬ್ರಿ ಖಂಡಿ ೧ರ ...	90—0-0-95—0—0
ಕೊಬ್ರಿ ಎಣ್ಣೆ ಮಣ ೧ರ	7—0—0
ಕೊಬ್ರಿ ಹಿಂಡಿ ಖಂಡಿ ೧ರ	32—8—0
ಊರು ಬೆಲ್ಲ ಖಂಡಿ ೧ರ	55—0—0
ಕಾಫಿ ಖಂಡಿ ೧ರ 270—0—0	275—0—0
ಕಾಳು ಮೆಣಸು ಖಂಡಿ	180—0—0
ಬಿಳಿ ಗೋಟು ಅಡಿಕೆ ಖಂಡಿ ೧ರ ...	85—0—0
ಪಚ್ಚೆ ಹೆಸರು ಗೋಣಿ ೧ರ	11—4—0
ಬೊಂಬಾಯಿ ಉದ್ದು ಗೋಣಿ ೧ರ	10—0—0
ಗೋದಿ ಗೋಣಿ ೧ಕ್ಕೆ	12—0—0
ಕಡಲೆ ಗೋಣಿ ೧ರ	7-4-0—7—8—0
ತೊಗರಿ ಗೋಣಿ ೧ರ	8—8—0
ತೊಗರಿಬೇಳೆ ಗೋಣಿ ೧ರ	11—0—0—13—0—0
ಮೋರಿಸ್ ಸಕ್ಕರೆ ಮಣ ೧ರ	2—14—0
ಎಳ್ಳಿಂಡಿ	35—0—0

* * *

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದರೆ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್

ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

પ્રો. જેમ્સની વિજળીક શક્તિની ગોળીઓ.
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका.

"ಅಮೇರಿಕದ ವಿಶಿಷ್ಟತೆ."

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಶಕ್ತಿಪಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯ ಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಕ್ಷೀಣದೆಶೆಯೂ ಈ ಮುತ್ತುಗಳನ್ನು ಸೇವಿಸುವದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲೀಪ ಪದಾರ್ಥಗಳಿರುವದರಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ [illegible] ಬುದ್ಧಿಶಕ್ತಿಯು [illegible] ಚೇತನವು [illegible] ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ ಆರೋಗ್ಯ ಕಾಲದಲ್ಲಿ [illegible] ಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ನಾಡಿ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು [illegible] ಸ್ಪಷ್ಟವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40-ಗುಳಿಗೆಗಳಿವೆ.

ನಾವು ಕೇಳಿಕೊಳ್ಳದ ನಮಗೆ ಹಲವು ಮಹಾಶಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

[illegible] ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದ [illegible] ದೊರಕಲಿಲ್ಲವು. [illegible] ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿರಿ.

[illegible] ಬಿ. ಎಲ್. [illegible] (ಸ್ವಂತ ಹೊಲಗದ್ದೆ ದಾರರು)—ವಿ.ಪಿ. ದ್ವಾರಾ ಅದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. [illegible]

The Anglo Indian Drug & Chemical Company,
155, Market, Jumma Musid Bombay.

[illegible]—[illegible], ಮಂಗಳೂರು

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವನನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಡೋಂಗರೆ ಇವರ ಬಾಲಾಮೃತ

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದ ಅಶಕ್ತತೆಯಿಂದುಂಟಾದ ರೋಗಗಳು ಸಂಪೂರ್ಣವಾಗಿ ಇಲ್ಲದಂತಾಗುತ್ತವೆ. ನಮ್ಮ ಬಾಲಾಮೃತವನ್ನೇ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದ್ದಲ್ಲಿ ಬಾಟ್ಲಿಯ ಮೇಲಿನ ನಮ್ಮ ಲೇಬಲಿನ ಪೂರಾ ಖಾತ್ರಿ ಮಾಡಿಕೊಂಡು ತೆಗೆದುಕೊಳ್ಳಿರಿ.

ಬಾಟ್ಲಿ ಒಂದರ ಕಿಮ್ಮತು 0—12—0. ವ್ಹಿ. ಪಿ. ಖರ್ಚು 0-4-0.

K. T. Dongre & Co, ಕೆ. ಟಿ. ಡೊಂಗರೆ ಮತ್ತು ಕಂಪೆನಿ
Girgaon Bombay. ಗಿರಗಾಂ ಮುಂಬಯಿ

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

M.D.RANE & Co. INDIA TRADE MARK DECCAN INK

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0, ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಹಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ದಿ ಏಸಿಯನ್ ಕಮರ್ಶಲ್

ಎಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮುಂಬಯಿ.

ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ ಪ್ರಿಮಿಯಂ ವಗೈರೆ ಇತರ ಕಂಪೆನಿಗಳಿಂತಲೂ ಅತೀ ಕಡಿಮೆಯಾಗಿರುತ್ತದೆ.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂ. 17—4—0 ತೆತ್ತು ಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರುಷ ಪ್ರಾಯದಲ್ಲಿ ಒಂದು ಸಾವಿರ ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವ 14 ವರುಷ ಒಳಗಿನ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸೂರು ಮಾಡಲ್ಪಟ್ಟ ಮಕ್ಕಳು ವಿಮೆಗೆ ಅರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟಲ್ಲಿ ವಿಮೆ ಮಾಡಿದ ಪೂರ್ಣ ಐವಜು ಅವರ ಬಾಧ್ಯಸ್ಥರಿಗೆ ಸಿಕ್ಕುವದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೂ ಹೆಂಗಸರನ್ನೂ 50 ವರುಷ ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 15 ವರುಷದ ಮೇಲಿನ ಮತ್ತು 30 ವರುಷದ ಒಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊಳ್ಳುವದಿಲ್ಲ.

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹುದಾದ 1000 ವ ಅದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾರ ತೆರಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ತೆತ್ತು ಆತನ ಪ್ರಿಮಿಯಮ್ 4೦ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡಿಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈ ಪರಿವಿಗೆ ಕಂಡುಬರುವದಿಲ್ಲ. ಅದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದಂ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟು ರೋಡ್ ಉಡುಪಿ

ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಕ್ಷಿಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

---

ಹಿಂದುಸ್ಥಾನ ಕೋಒಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್—30 ದಲ್ಹೌಸಿ ಸ್ಕೋಯರ್ ಕಲ್ಕತ್ತ.
ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್
1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.
ನಿಯಮಿತ ಮೂಲಧನ—ರೂ. ಒಂದು ಕೋಟಿ.
ಪ್ರತಿಜ್ಞಾತ ಮೂಲಧನ—ರೂ, 865,000;00
ಆಗತ ಮೂಲಧನ—ರೂ. 915,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸೀದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತಪಡಿಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರನ್ಯಾಕರು,
ಸೊಸ್ಯಾಟಿಯ ಏಜಂಟರು.
ತ್ರಿಶುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

ಕ್ಲೆಮೆಂಟರ ಮೆಜಿಕ್‌ಬಾಂ ತೈಲ್ಯವು.

ಈ ತೈಲ್ಯದಿಂದ ಸಕಲ ವಿಧದ ನೋವು ನಿವಾರಣೆಯಾಗುವದು. ತಲೆ ನೋವು ವಾಯುನೋವು, ಸೆಳತ, ಗಂಟ್ಲು ನೋವು, ಬೆನ್ನು ನೋವು, ಕೀಲುಗಳ ನೋವು, ಪಾರ್ಶ್ವವಾಯು, ವಿವಿಧವಾದ ವಾಯು ರೋಗಗಳು, ಶೀತ ರೋಗಗಳು, ಸಂದುವಾತ, ಚೇಳು ಕಡಿದ ನೋವು—ಇವುಗಳೆಲ್ಲಾ ಈ ತೈಲ್ಯ ಹಚ್ಚಿದ ಮಾತ್ರದಿಂದ ಚಮತ್ಕಾರಿಕವಾಗಿ ಮಾಯವಾಗುವವು ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪ್ರಯೋಗಿಸಿ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಇದರಷ್ಟು ಅಮೋಘವಾದ ತೈಲ್ಯವು ಬೇರೊಂದಿಲ್ಲವೆಂಬುದಾಗಿ ಕಂಡುಕೊಂಡಿದ್ದಾರೆ. ಈ ಅತ್ಯುತ್ತಮವಾದ ತೈಲ್ಯವು ನೋವಿನ ಮೂಲವನ್ನು ಕಂಡುಹಿಡಿದು ಅದರ ಹುಟ್ಟಡಗಿಸಿಬಿಡುವದು.

ಕ್ರಯ: ಸೀಸೆ ಒಂದಕ್ಕೆ ೧೨ ಆಣೆ, ಪ್ಯಾಕಿಂಗ್ ೪ ಆಣೆ. ಮೂರು ಅಥವಾ ಹೆಚ್ಚು ಬುಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದಲ್ಲದೆ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡಲಾದೀತು. ಈ ತೈಲ್ಯವು ಎಲ್ಲಾ ವ್ಯಾಪಾರಸರಲ್ಲಿಯೂ ವೈದ್ಯರಲ್ಲಿಯೂ ಬಿಕರಿಮಾಡಲ್ಪಡುತ್ತದೆ.

ವಿಳಾಸ:— ಎಸ್. ಪೀಟರ್ಸ್,
ಏಜಂಟ್:— ಜೆ. ಎಸ್. ಕಣ್ಣೈಚೆಟ್ಟಿ, 37 ವೇದಮಲೆಪಿಳ್ಳೆ ಬೀದಿ,
ಊಲನ್‌ಕೇಪ ಮ್ಯನುಫೆಕ್ಚರರ್, ತುಮಕೂರ. ಪರಸುವಾಕಂ ವೇಪರಿ ಮದ್ರಾಸು!

ಒಂದೇ ಕಥೆ! ಅಪೂರ್ವ ಗ್ರಂಥ!! ದೊಡ್ಡ ಕಥೆ!!

ಪ್ರತಾಪಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿ ಹೋಗುತ್ತವೆ" ಎಂಬ ನೀತಿ; (೨) ಸ್ತ್ರೀಧರ್ಮ, ಸ್ತ್ರೀಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು, ಆರಾಮಾದಿ ವರ್ಣನೆಗಳು; (೬) ಮನುಷ್ಯ ಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿ ನೋಡಿದರೆ ಸ್ವಾರಸ್ಯವು ಗೊತ್ತಾಗುವುದು. ಕ್ರಯ ೧ ರೂ. ಟಪ್ಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೇನ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ನಿಯಮಿತ ಮೂಲಧನ ರೂ. 10,00,000.
ಪ್ರತಿಜ್ಞಾತ ಮೂಲಧನ ರೂ. 85,00,00.
ಆಗತ ಮೂಲಧನ ರೂ. 10,6450.
ಭಂಡವಾಳ ರೂ. 12,00,000.
ವಿಮೆ ಮಾಡಿರುವವರ ಸಂಖ್ಯೆ 76,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ.

ಸ್ವದೇಶಿಲ್ಯಾಫ್‌ಎಶ್ಯುರೆನ್ಸ್‌ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜೆ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಸನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೆದಾರರ ಡಿರೆಕ್ಟರರವರು. ಮಿ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)--ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿತೆಯ ಹಕ್ಕುದಾರರಾಗಿರುವ ವಿಮೆದಾರರಿಗೆ ಕೊಡೋಣಾಗುವುದು.

ವಿಮೆ ನೊಬಲಗುಗಳನ್ನು ವಾರೀಸದಾರರು ಪಡಿಯುವರೆ ಆಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂ ಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19-1-0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20--6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೆ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಟ್ಟಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ರರಣೆಲೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆಯುತ್ತಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ—
ಯಮ್. ವಿ ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸುಲಭ ಕ್ರಯ! ಪರೀಕ್ಷಿಸಿರಿ!! ಸಂತೋಷ ಪಡುವಿರಿ!!!

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ. ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2—4—0 ಮಾತ್ರ. 5 ವರುಷಗಳ ಗ್ಯಾರೆಂಟಿ.

SUPERIOR WATCH Co.
Rs. 2/4.
Rs. 2/4.
POST BOX No. 167
MADRAS, E.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟಿದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡಿಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕೆ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸ್. ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಕ್ರಯ ರೂ. 5-12-0. ಇದನ್ನು ಜುಲಾಯಿ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಘಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪಿಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:— ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್, ನಂ. 167, ಮದರಾಸು

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾವರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿ ಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ವೈದ್ಯಸಾರಸಂಗ್ರಹ (ಮೂಲಿಕಾ ಔಷಧಿ)	೩—೦—೦
ಶುಕಸಪ್ತತಿ ವೇದಾಂತ ಪೂರ್ವದ ಪ್ರತಿ	೨—೦—೦
ರಘುವಂಶ ೧ನೇ ಪರ್ವ...	೧—೦—೦
ಡಿಟ್ಟೊ (೨ನೇ ಪ.) ಅರ್ಥ ತಾತ್ಪರ್ಯ ಆಕಾಕ್ಷೆ ಇತ್ಯಾದಿ ...	೧—೦—೦
ವಿವೇಕ ಚೂಡಾಮಣಿ	೨—೪—೦
ಶಾಮಕುಬ್ಜ ಕಥೆ	೦—೮—೦
ಚಮತ್ಕಾರ ಚಿಂತಾಮಣಿ	೦—೧೦—೦
ಮಹಿಮ್ನ ಸ್ತೋತ್ರ (ಟೀ. ತಾ.)	೦—೩—೦
ಮುಕುಂದಮಾಲಾ ಸ್ತೋತ್ರ (ಟೀ. ತಾ.)	೦—೪—೦
ಶಿವಗೀತಾ (ಟೀ. ತಾ. ಸಹಿತ)	೦—೮—೦
ಶಿವಾನಂದಲಹರಿ (ಟೀ. ತಾ.)	೦—೬—೦
ವಿದ್ಯಾನಂದ ಮಾಸಪತ್ರಿಕೆ ಚಂದಾ	೨—೪—೦

ಮಾದ್ರಿ ಪತ್ರಿಕೆ, ಪುಸ್ತಕ ಪಟ್ಟಿ ಉಚಿತ. ಇನ್ನೂ ಅನೇಕ ಪುಸ್ತಕಗಳು ದೊರೆಯುವವು.

ವಿಳಾಸ:—
ವಿದ್ಯಾನಂದ ಆಫೀಸು.
ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು! ಬೇಗ ಬರೆಯಿರಿ!!

ಮಧುರವಾಣೀ ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಸಾಹಸಿಕೆ	0-2-6	ಮಹನೀಯರ ಚರಿತ್ರೆ ...	0-10-0
ಗೃಹಿಣಿಯಾದ ಗಂಗೆ ...	0-3-0	ಸಾಧನೆ	0-8-0
ನಾನೆಕನ ಚರಿತ್ರೆ	0-4-0	ಮನೋರಮ	1-0-0
ವಿವೇಕಮಂಜರಿ 1ನೇ ಭಾಗ	0-2-0	ಭಕ್ತವಿಜಯ	3-4-0
ಡಿ. 2ನೇ ಭಾಗ	0-3-0	ಪಾರ್ವತಿ ಪರಿಣಯ ನಾಟಕಂ	0-8-0
ಸೌದಾಮಿನಿ	0-6-0	ಗೋಪಿಕಾ ಗೀತೆ... ...	0-1-0
ವಿಶ್ವನಾಥ	0-1-0	ಭಜಗೋವಿಂದಂ	0-1-0
ದೇವಿ ಚೌದರಾಣಿ... ...	1-4-0	ಹಾಲಾಸ್ಯ ಮಹಾತ್ಮೆ ...	1-4-0
ಚಿತ್ರಕಲಾತರಂಗಿ... ...	1-0-0	ವಿಷವೃಕ್ಷ...	1-4-0

ಇನ್ನೂ ಅನೇಕ ಪುಸ್ತಕಗಳು ಶಿಕ್ಕುವವು. ಕ್ಯಾಟಲಾಗಿಗೆ ಬೆಲೆ ಇಲ್ಲ. ಅಪೇಕ್ಷಕರು ಅರ್ಜಿಸಿರಿ.

ವಿಳಾಸ:— ಹನುಮಾನ್ ಮತ್ತು ಕಂಪೆನಿ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯುವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ಒಡೆದು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿ ಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ

1913ನೇ ಇಸವಿಯ ಪೋಕೆಟ್ ಡ್ಯಾರಿಗಳು.

ಮಾರಾಟಕ್ಕೆ ಸಿದ್ಧವಾಗಿವೆ.

ನೋಟು ಬೂಕು ಸ್ಯಾಜು (ದೊಡ್ಡ ಸ್ಯಾಜು) ರೂ. 0—8—0
(ಒಂದಾಣೆ ಪೆನ್ಸಿಲು ಸಹಿತ)
ಸಣ್ಣ ಸ್ಯಾಜು .... „ 0—4—0

ವಕೀಲರಿಗೂ ವಕೀಲರ ಗುಮಾಸ್ತರಿಗೂ ಬೇಕಾದ ಎಲಾ ವಿಷಯಗಳನ್ನು ಒಳಕೊಂಡಿರುವುದಲ್ಲದೆ ಇತರರಿಗೂ ಬಹಳ ಉಪಯೋಗಕರವಾದ್ದಾಗಿರುತ್ತದೆ.

ಹೆಚ್ಚು ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ, ವ್ಯಾಪಾರಸ್ಥರಿಗೂ ಧಾರಾಳ ಕಮಿಶನ್ ಕೊಡಲಾಗುವದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಮ್ಯಾನೇಜರ,
ಶಾರದಾ ಛಾಪಖಾನೆ, ಮಂಗಳೂರು ದ. ಕನ್ನಡ.

CHEAP JACK

FANCY UMBRELLA MART.

ಚಿತ್ರವಿಚಿತ್ರಮಾದ ಕೊಡೆಗಳು.

ಕಂ॥ ಧರೆಯೊಳ್ ಮೆರೆ ಮಹಾಶಯ । ರಿರಃ ನಾವಿನಿಸುಂದಿನಂ ಕೊಡೆಯ ವಿಕ್ರ
ಯಮಂ ॥ ಇರಿಸಿರ್ದ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿದು
ವದರರಮಂ ॥೧॥ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ
ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾವಾತಿಂ । ಗೆಡೆಯಾಗಿರು
ನೆರಲನೀವ ಕೊಡೆಯಿಲ್ಲಿಕುರ್ಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಗಿರಗಾಂ ಮುಂಬಯಿ.

ಇವರ

ಬಾಲಾಮೃತ! ಜ್ವರದ ಗುಳಿಗೆಗಳು!!

ನಮ್ಮ ಜ್ವರದ ಗುಳಿಗೆಗಳ ಬಗ್ಯೆ ಈ ಕೆಳಗೆ ಬರದ ಅನೇಕ ಜಗಪ್ರಸಿದ್ಧ ಡಾಕ್ಟರುಗಳು ಬೇರೆ ಬೇರೆ ರೀತಿಯಿಂದ ಪರೀಕ್ಷಿಸಿ ಬಹು ಗುಣಕಾರಿಯನ್ನುವ ಬಗ್ಯೆ ಸಿಫಾರಸು ಪತ್ರಗಳನ್ನು ಕೊಟ್ಟಿರುತ್ತಾರೆ.

ಡಾಕ್ಟರ್ ಕಾವಸಜೀ ಎದಲಜಿ ದಾದಾ ಚಾಂಜಿ, ಎಲ್. ಎಮ್. ಎಸ್. ಜೆ. ಪಿ. ಬಿಟ್ಟು ಬಿಟ್ಟು ಬರುವ ಜ್ವರಕ್ಕೆ ಅತೀ ಗುಣಕಾರಿ.

ಡಾಕ್ಟರ್ ಡಿ. ಜೆ ಮೊರಾವಾಲಾ: ಎಲ್. ಎಮ್. ಎಸ್. ಸರ್ಜನ್ ಬಿಲಾಸಪುರ. ಥಂಡಿ ಜ್ವರಕ್ಕೆ ಸಂಜೀವನ.

ಡಾಕ್ಟರ್ ಕಾವಸಜೀ ಮೊಟಾಭಾಯಿ ಎಲ್. ಎಮ್. ಎಸ್. ಪಿತ್ತ ಜ್ವರಕ್ಕೆ ರಾಮಬಾಣದಂತಿರುತ್ತದೆ.

ಡಾಕ್ಟರ್ ಪ್ರೆಂಜೋನಿ ಎ. ಷಾರಿಯಾ: ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. ನಮ್ಮ ಜ್ವರದ ಗುಳಿಗೆಗಳು ಬಹಳ ಉತ್ತಮ.

ಡಾಕ್ಟರ್ ಸರ್‌ಬಾಲಚಂದ್ರಕೃಷ್ಣ ನಾಯಿಟ್, ಎಲ್. ಎಮ್. ಜೆ. ಪಿ. ದಿನಗಟ್ಟಿ ಬರುವ ಜ್ವರಕ್ಕೆ ಇದು ಮುಖ್ಯ ಔಷಧ.

ಡಾಕ್ಟರ್ ಸೊರಾಬ ಕೆ. ನರಿಮನ್ ಎಮ್. ಡಿ. ಬಿ. ಎಸ್. ಸಿ. ಮುಂಬಯಿ ಎಲ್. ಆರ್. ಸಿ. ಪಿ. (ಲಂಡನ್) ಎಮ್. ಆರ್. ಸಿ. ಎಸ್. (ಇಂಗ್ಲಂಡ್) ಡಿ. ಪಿ. ಎಚ್. (ಕೇಂಬ್ರಿಜ್) ನಮ್ಮ ಜ್ವರದ ಗುಳಿಗೆಗಳು ಬಹಳ ಗುಣಕಾರಿ.

ಡಾಕ್ಟರ್ ಕೆ. ಎಸ್. ಇಂಜಿನಿಯರ್; ಎಫ್. ಸಿ. ಎಸ್ ಲಂಡನ್ ಎಲ್. ಎಮ್. ಎಸ್. ಮುಂಬಯಿ.

ಡಾಕ್ಟರ್ ವಿ. ಎನ್. ಚಿತಳೆ ಭಾಜೇಕರ್ ಎಲ್. ಎಮ್. ಎಸ್. ಮುಂಬಯಿ ಎಫ್. ಆರ್. ಸಿ. ಎಸ್. ಎಡಿಂಬರ್ಗ್ ಡಿ. ಪಿ. ಎಚ್. ಲಂಡನ್.

ಡಾಕ್ಟರ್ ಡಬ್ಲ್ಯು. ಓಬೇಲೆಂಟಾಯಿನ್ ಎಮ್. ಡಿ. ಅಮೇರಿಕನ್ ಮಿಶನ್.

ಡಾಕ್ಟರ್ ಬಿ. ಇ. ಫಾಸವಾಲಾ ಎಲ್. ಎಮ್. ಎಸ್ ಎಫ್. ಸಿ. ಎಸ್. ಲಂಡನ್.

ಡಾಕ್ಟರ್ ಎ. ಬಿ. ಮಸಾನಿ ಎಲ್. ಎಮ್. ಎಸ್. ಮುಂಬಯಿ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.

ಡಾಕ್ಟರ್ ಗ್ಯಾಬ್ರಿಯಲ್ ಡಿಮೆಲ್ಲೊ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.

ಡಾಕ್ಟರ್ ಜಿ. ಆರ್. ತಾಂಬೆ ಎಮ್. ಎ. ಎಲ್. ಎಮ್. ಎಸ್. ಬಿ. ಎಸ್. ಸಿ.

ಡಾಕ್ಟರ್ ಪಿ. ಆರ್. ಪಿಳಗಾಂವಕರ ಎಲ್. ಆರ್. ಸಿ. ಪಿ. ಎಂಡ್ ಎಸ್. ಎಲ್. ಎಮ್. ಎಲ್. ಎಫ್. ಪಿ. ಎಂಡ್. ಎಸ್.

ಡಾಕ್ಟರ್ ಎಮ್. ಎಚ್. ಭಾಟವಡೇಕರ್ ಎಲ್. ಎಮ್. ಎಸ್. ಹೆಲ್ತ ಆಫೀಸರ್. ಡಿ. ಐ. ಟಿ.

ಡಾಕ್ಟರ್ ಎಫ್. ಎಕ್ಸ್. ಪರೇರಾ ಎಲ್. ಎಮ್. ಎಸ್.

ಡಾಕ್ಟರ್ ಕೆ. ಎಸ್. ಗೋಖಲ್ ಎಲ್. ಎಮ್. ಎಸ್. ಮುಂಬಯಿ.

ಡಾಕ್ಟರ್ ಡಿ. ಜೆ. ಮಂತ್ರಿ ಎಲ್. ಆರ್. ಸಿ. ಪಿ. (ಲಂಡನ್)

ಡಾಕ್ಟರ್ ಎ. ಬ್ರಿಟೊ ಎಲ್. ಎಮ್. ಎಸ್. ಡಾಕ್ಟರ್ ಮುರಕುಟ ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. (ಎಡಿನ್‌ಬರ್ಗ್).

ಬಾಲಾಮೃತ ಬಾಟ್ಲಿ ಒಂದರ 0—12—0. ಜ್ವರದ ಗುಳಿಗೆ ಬಾಟ್ಲಿ ಒಂದರ 1—0—0.

ಜಾಗ್ರತೆ! ಮೋಸ ಹೊಂದಬೇಡಿರಿ!! ಪಡಕೊಳ್ಳುವವರು ಗ. ರಾ. ಕರ್ಕಿ ಕಂಪೆನಿ, ಮುಂಬಯಿ. ಎಂತ ಕನ್ನಡದಲ್ಲಿ ಇದ್ದದ್ದನ್ನೇ ನೋಡಿ ಪಡಕೊಳ್ಳಿರಿ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ,

ಗಿರಗಾಂ ಮುಂಬಯಿ.

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ 6ನೇ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವಿಮೆ ದುಬಾರೆ ಎಂಡೌಮೆಂಟ್ ಪೋಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ತೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯ ಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣದಗೋಸ್ಕರ ತಿಂಗಳಿಗೆ ೨ ರೂಪಾಯಿ ೧ ರೂಪಾಯಿ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪೆನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರೆವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ಟಿಲ್ಯಾನೋ

ರಾಯ್ಮಂಡ್ ಎ. ಮಿನೇಜಸ್ ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.
ಟ್ರಾವಲಿಂಗ್ ಏಜಂಟ್. ಮಂಗಳೂರು, ದಕ್ಷಿಣ ಕನ್ನಡ.

—o—

ಸುಲಭ ಕ್ರಯ! ಸುಲಭ ಕ್ರಯ!! ಸುಲಭ ಕ್ರಯ!!

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವದೆಂದರೆ:— ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ ಮನೋಉಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದುಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15ಸಾರಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕಗುಣವೂ, ಪರಿಮಳವೂ, ಕಾರವೂ ಹೋಗುವದಿಲ್ಲ. ಬುಡ್ಡಿ 1ಕ್ಕೆ ಕ್ರಯ ರೂ. 0-4-0. ವಿ. ಪಿ. ಚಾರ್ಜು 0-3-0 ಡಜನ್ 1ಕ್ಕೆ ಕ್ರಯ ರೂ. 2-8-0. ವಿ.ಪಿ. ಚಾರ್ಜು 0-6-0.

ಪುಕಟ! **Free Sample Coupon** ಪುಕಟ!!

ದಯವಿಟ್ಟು ಕೆಳಗಿನ ವಿಳಾಸಕ್ಕೆ ಡಾಕ್ಟರ್ ಜಿ. ಬಿ. ಯವರ ಸುಗಂಧನಶ್ಯದ ಪುಡಿಯ ಮಾದಿರಿ ಬಾಟ್ಲಿ ಒಂದನ್ನು ಕಳುಹಿಸ ಬೇಕು.

ಹೆಸರು...

....

Registered. ☞ ವಿಳಾಸ:—ಗುರುಬಸವ ಅಂಡು ಕಂಪೆನಿ, ಮದ್ರಾಸು.

ಶ್ರೀ

ಪಾರಾಯಣಕ್ಕನುಕೂಲವಾದ ಪುಸ್ತಕಗಳು:—

1. ಶ್ರೀ ಭಗವದ್ಗೀತೆ, ಟೀಕಾತಾತ್ಪರ್ಯ ಸಹಿತವಾದದ್ದು, ಚಿಕ್ಕ ಬಾಲಕರಿಗೂ ತಿಳಿಯುವಂತೆ ಬಹು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮತ್ತು ಇದು ಉತ್ತಮ ತರವಾದ ಕಾಗದವುಳ್ಳದ್ದಾಗಿಯೂ ಮುತ್ತಿನಂತಿರುವ ಅಕ್ಷರಗಳಿಂದ ಕೂಡಿದ್ದಾಗಿಯೂ ಇರುವುದಲ್ಲದೆ, ಮಡಿಯಾಗಿರುವ ಸಮಯದಲ್ಲಿಯೂ ಪಾರಾಯಣಕ್ಕನುಕೂಲವಾಗುವಂತೆ ಉತ್ತಮವಾದ ಕಿತ್ತಾನಾರು ಬೈಂಡು ಳ್ಳದ್ದಾಗಿದೆ. ಕ್ರಯ ರೂ. 1—12—0.
2. ಡಿಟ್ಟೋ ಚಿಕ್ಕ ಸೈಜು (ಮೂಲ ಮತ್ತು ತಾತ್ಪರ್ಯ ಸಹಿತವಾದದ್ದು. ರೂ 0—6—0
3. ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ತರವಾದ ಕಿತ್ತಾನಾರು ಬೈಂಡಿನಿಂದ ಮಾಡಿರುವ ಶ್ರೀ ಶ್ರೀನಿವಾಸ ಕಲ್ಯಾಣ ಕ್ರಯ ರೂ. 1—12—0
4. ಸಂಕ್ಷೇಪ ರಾಮಾಯಣವೆಂಬ ಶ್ರೀ ಬಾಲರಾಮಾಯಣವು ಟೀಕಾ ಸಹಿತವಾದದ್ದು. ಬಹು ರಸಯುಕ್ತವಾದದ್ದು, ಉತ್ತಮವಾದ ಪ್ರತಿ ಕ್ರಯ ರೂ. 0—4—0.
5. ಟೀಕಾ ತಾತ್ಪರ್ಯ ಸಹಿತವಾದ ಶ್ರೀ ಮುಕುಂದಮಾಲಾ ಸ್ತೋತ್ರವು. ಪಾರಾಯಣಕ್ಕೆ ಬಹು ಅನುಕೂಲವಾದ ಸ್ತೋತ್ರ ಪುಸ್ತಕವು, ಭಕ್ತಿರಸದಿಂದ ತುಂಬಿದೆ. ಶ್ರೀಮತಸ್ತರೂ ಪಾರಾಯಣ ಮಾಡಬೇಕಾದ ಪುಸ್ತಕವು. ಕ್ರಯ ರೂ. 0—4—0.

ಶ್ರೀಮದ್ವಾಲ್ಮೀಕಿ ಮಹರ್ಷಿ ವಿರಚಿತವಾದ

ಶ್ರೀಮದ್ರಾಮಾಯಣ.

ವೇದ ಆದಿ ಕಾವ್ಯವು. 6 ಕಾಂಡಗಳನ್ನೊಳಗೊಂಡಿರುವುದಲ್ಲದೆ, ಪೀಠಿಕಾ ಶ್ಲೋಕಗಳು ಪಾರಾಯಣ ಕ್ರಮ ಮುಂತಾದವುಗಳಿಂದ ಕೂಡಿದೆ. ಸುಂದರವಾದ ಕನ್ನಡ ಅಕ್ಷರಗಳಲ್ಲಿ ಶುದ್ಧವಾಗಿ ಅಚ್ಚಾಗಿದೆ ಪಾರಾಯಣಕ್ಕೆ ಅನುಕೂಲವಾಗಿದೆ. ಮಡಿಗೋಸ್ಕರ ರಕ್ಷಾ ಪತ್ರಗಳಿಗೆ ಕಿತ್ತಾನಾರನ್ನು ಹಾಕಿದೆ. ಪುರಾತನ ಪ್ರತಿಯಾದ ಕಾರಣ ತಪ್ಪುಗಳಿರಲಾರವು. ನವರಾತ್ರಿಯ ಕಾಲವು ಸಮೀಪಿಸುತ್ತಿರುವ ಕಾರಣ ಶ್ರೀರಾಮ ಭಕ್ತರಾದವರೆಲ್ಲರೂ ಈ ಪುಸ್ತಕ ರತ್ನದ ಪ್ರತಿಯೊಂದನ್ನು ಸಂಗ್ರಹಿಸತಕ್ಕದ್ದು.

ಬೆಲೆ 3—0—0. ಹಾಸಲು 0—6—0

ಎಚ್. ಎನ್. ರಾವ್ ಬ್ರದರ್ಸ್.

ಚಿಕ್ಕ ಪೇಟೆ, ಬೆಂಗಳೂರು ಸಿಟಿ

ಸನ್ 1913ನೇ ಇಸವಿಯ



"ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು."

ಈ ವರೆಗೆ ತಾವು ಉಪಯೋಗಿಸಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವ ಹಸನಾದ ೪೦ ಪೌಂಡು ಗ್ಲೇಜು ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿರುತ್ತದೆ:—

ದೇಹ ಸೌಖ್ಯ ವಿಚಾರದಲ್ಲಿ ಪ್ರತಿ ಒಬ್ಬರೂ ತಿಳಿಯಬೇಕಾದ ಸಾಧಕ ಬಾಧಕಗಳು, ಪಂಚಾಂಗ, ಕ್ಯಾಲೆಂಡರ್, ರಾಹುಕಾಲ, ಗುಳಿಕಕಾಲ, ಸಂವತ್ಸರ ಫಲ, ಗ್ರಹಣ ಶಕುನಭಾಗ ಪ್ರಯಾಣ ವಿಷಯ ಜಾತಕಕರ್ಮ ಮೊದಲು ಷೋಡಷ ಕರ್ಮಕ್ಕೆ ಬೇಕಾದ ಲಗ್ನಾದಿಗಳು. ಶ್ರೀ ಕೃಷ್ಣ ಚಕ್ರ ಇವೇ ಮುಂತಾದ ಸಂಗತಿಗಳು ಸುಲಭವಾಗಿ ತಿಳಿಯುವಂತೆ ಬರೆದಿರುತ್ತೆ.

ಕೋರ್ಟು ಪೇಜು ಆಕ್ಟು ಪೋಸ್ಟಾಫೀಸಿನ ಸಂಗತಿ ಸ್ಟಾಂಪಾಕ್ಟು ಇವುಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗುವ ಮತ್ತಾವ ಡೈರಿಯಲ್ಲಿ ಹೇಳದಿರುವ ಹೊಸ ವಿಷಯಗಳನ್ನು ಸೇರಿಸಿದೆ. ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆಗಳ ಚಾರ್ಜು, ರೈಲ್ ಹೊರಡುವ ಕಾಲ ಲಗ್ಗೇಜ್, ಅಳತೆ ತೂಕ ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರುಗಳ ತಲಬು, ಸರಕಾರಿ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲಿಷು ಇಸವಿಗಳು, ಹಣದ ಬಡ್ಡಿ ತಲಬು ಜಂತ್ರಿ ಪಟ್ಟಿ ಕೂಡಾ ಇವೆ. ದೋಬೀ ಲೆಖ್ಖಾ, ಹಾಲು ಕೊಡುವವನ ಲೆಖ್ಖಾ, ಮುಖ್ಯ ವಿಷಯ ಜ್ಞಾಪಕ ವಿಚಾರ ಜಮಾ ಖರ್ಚು ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ.

"ಬೇಕಾದವರು ಈಗಲೇ ಬರೆದು ತರಿಸಿಕೊಳ್ಳಿರಿ".

No. 1. ಸಣ್ಣ ಸೈಜು ಸಾದಾ ಡೈರಿ 1ಕ್ಕೆ	0-4-0
No.2. ಸಣ್ಣ ಸೈಜು ಪೆನ್‌ಸಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ 1ಕ್ಕೆ	0-6-0
No. 3. ದೊಡ್ಡ ಸೈಜು ಸಾದಾ ಡೈರಿ 1ಕ್ಕೆ	0-6-0
No.4. ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳಹಾಕಿರುವ ಫ್ಲಾಪ್ ಡೈರಿ 1ಕ್ಕೆ	0-8-0

ಟಪ್ಪಾಲು ಖರ್ಚು ಬೇರೆ.

ಒಂದು ಸೈಜಿನ ಹತ್ತು ಡೈರಿಗಳನ್ನು ಒಟ್ಟಾಗಿ ತರಿಸಿದರೆ ಒಂದು ಇನಾಮು. ೫೦ ಡೈರಿಗಳಿಗಿಂತ ಹೆಚ್ಚಾಗಿ ತರಿಸತಕ್ಕವರಿಗೆ ರೂಪಾಯಿ ಒಂದಕ್ಕೆ 0-2-6ಯಂತೆ ಕಮಿಷನ್ ಕೊಡಲಾಗುತ್ತದೆ. ತಮ್ಮ ವಿಳಾಸವು ಬಾಲ ಅಕ್ಷರದಲ್ಲಿರಲಿ.

ದೊರೆಯುವ ವಿಳಾಸ:—

"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

ಜರ್ಮನ್ ಜೇಬು ದೀಪ.

ಬೆಲೆ ರೂ. 1—15—0

ಈ ನಕ್ಷೆಯಲ್ಲಿ ಕಾಣಿಸಿರುವ ಜರ್ಮನ್ ಜೇಬು ದೀಪಗಳು ಜರ್ಮನ್ ದೇಶದ ಶಾಸ್ತ್ರಜ್ಞರಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟು ಈಗ ತಾನೆ ನಮ್ಮ ಹಿಂದೂ ದೇಶಕ್ಕೆ ಕಳುಹಿಸಿರುತ್ತಾರೆ. ಇದು ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕೀ ಕಡ್ಡಿ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆಳಿನಿಂದ ವತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ನೋಡುವವರಿಗೆ ಆಶ್ಚರ್ಯವಾಗುವಹಾಗೆ ಹತ್ತಿ ಉರಿಯುತ್ತೆ.



ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದ ಕಡ್ಡಿ ಅವಶ್ಯಕವೇವಿರುವದಿಲ್ಲ. ಎಷ್ಟು ವರುಷಗಳಾದರೂ ದೀಪವು ಕೆಡುವದಿಲ್ಲ. ಜನರಿಗೆ ಇದು ಬಹಳ ಉಪಯೋಗ ಇದು ಇತರ ದೀಪಗಳನ್ನು ಹಚ್ಚುವದಕ್ಕೂ ಪ್ರಯಾಣಮಾಡುವಾಗ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಜಾಗ್ರತೆ ದೀಪವನ್ನು ಉಪಯೋಗಿಸುವದಕ್ಕೂ ಚುರುಟು ಬೀಡಿ ಮೊದಲಾದವುಗಳನ್ನು ಹಚ್ಚುವದಕ್ಕೂ ಬಹಳ ಉಪಯೋಗವಾದದ್ದು. ಇದನ್ನು ಸುಲಭವಾಗಿ ಉಪಯೋಗಿಸಬಹುದು. ಇದರಿಂದ ಯಾವ ಕೆಡಕು ಉಂಟಾಗುವದಿಲ್ಲ.

ವಿಳಾಸ.

N. S. Bhattachar,
Nungumbaukum
Madras.

ಎನ್. ಎಸ್. ಭಟ್ಟಾಚಾರ್.
ನುಂಗಂಬಾಕಂ. ಮದ್ರಾಸು

ಪ್ರಸಿದ್ಧವಾದ

ರೇಷ್ಮೆ ಬಟ್ಟೆಗಳು! **ಪೀತಾಂಬರದ ಶೀರೆಗಳು!!**

ಒಪ್ಪಲ್ಪಡದೆ ಇದ್ದರೆ ವಾಪಾಸು ತೆಗೆದುಕೊಳ್ಳಲ್ಪಡುವುದು.

ಪೀತಾಂಬರದ ಶೀರೆಗಳು.

ಬನಾರಸ್ ಪೀತಾಂಬರದ ಶೀರೆಗಳು:—೧೭ ಮೊಳ ಉದ್ದ ೨॥ ಮೊಳ ಅಗಲ, ಸೆರಗೂ ಅಂಚು ಉತ್ತಮವಾದ ಜರತಾರಿ ಉಳ್ಳದ್ದು. ಕೆಂಪು, ಹಸರು, ಊದಾ ಮತ್ತು ಗುಲಾಬೀ ರಂಗುವುಳ್ಳ ಅಂಚುಗಳು, ಒಳಭಾಗವು ಸಾದಾ, ಸಾಮಾನ್ಯವಾದ ಶೀರೆಗಳಿಗೆ ಬೆಲೆಯು ೨೦ರಿಂದ ೩೫ ರೂಪಾಯಿನ ವರೆಗೂ ಇರುವುದು. ಅತ್ಯುತ್ತಮವಾದವುಗಳಿಗೆ ೪೦ರಿಂದ ೨೦೦ರ ವರೆಗೂ ಬೆಲೆಯಾಗುವುದು.

ಪೀತಾಂಬರದ ಬೂಟಾ ಶೀರೆಗಳು.

ಪೀತಾಂಬರದ ಬೂಟಾ ಶೀರೆಗಳು ಮೈದಾನದಲ್ಲಿ ಜರಿತಾರಿ ಹುವ್ವುಗಳು ಅಥವಾ ಬೂಟಾಗಳು ಇರುವವು. ಇವುಗಳಲ್ಲಿ ಸಾಮಾನ್ಯವಾದ ಶೀರೆಗಳಿಗೆ ೨೫ರಿಂದ ೩೫ ರೂಪಾಯಿನ ವರೆಗೂ ಆಗುವುದು. ಉತ್ತಮವಾದವುಗಳಿಗೆ ೪೦ ರೂಪಾಯಿಗಳಿಂದ ೩೦೦ರೂಪಾಯಿಗಳ ವರೆಗೂ ಆಗುವುದು.

ಪೀತಾಂಬರದ ಕಣಗಳು.

ಜರತಾರಿ ಅಂಚು, ಮೈದಾನದಲ್ಲಿ ಹೂವಿನ ಕೆಲಸ, ರಂಗು ಕೆಂಪು, ಹಸರು, ಊದಾ ಮತ್ತು ಗುಲಾಬಿ, ಸಾದಾ ಮೈದಾನವುಳ್ಳ ಕಣ ಒಂದಕ್ಕೆ ೨ ರೂಪಾಯಿನಿಂದ ೨ ರೂಪಾಯಿ ವರೆಗೂ ಕ್ರಯವಾಗುವುದು. ಬೂಟಾ ಮೈದಾನವುಳ್ಳದ್ದು ಕಣ ೧ಕ್ಕೆ ೮॥ ರೂಪಾಯಿನಿಂದ ೨೫ ರೂಪಾಯಿನ ವರೆಗೂ ಆಗುವುದು.

ರುಮಾಲುಗಳು ಅಥವಾ ಪೇಟಾಗಳು.

ಎಲ್ಲಾ ರಂಗಿನ ರುಮಾಲುಗಳು ಮತ್ತು ಪೇಟಾಗಳು ೨೫ ರೂಪಾಯಿ ಮೊದಲ್ಗೊಂಡು ೧೦೦ ರೂಪಾಯಿನ ವರೆಗೂ ಬೆಲೆಯುಳ್ಳವುಗಳಾಗಿರುತ್ತವೆ.

ಮಕ್ಕಳ ಆಟದ ಪಾತ್ರೆಗಳು.

ಚಿಕ್ಕದಾಗಿಯೂ, ಸುಂದರವಾಗಿಯೂ, ಹೊಳೆಯತಕ್ಕವುಗಳಾಗಿಯೂ ಇರುತ್ತವೆ. ಇವುಗಳಲ್ಲಿ ದೊಡ್ಡದಾಗಿರತಕ್ಕ ಪಾತ್ರೆಗಳ ಸೆಟ್ಟಿಗೆ ೪ ರೂಪಾಯಿ ಚಿಕ್ಕ ಸೆಟ್ಟಿಗೆ ೨ ರೂಪಾಯಿ.

ಬನಾರಸ್ ಪಟ್ಟಣದಲ್ಲಿರತಕ್ಕ ರೇಷ್ಮೆ ಪಿತಾಂಬರ ಕಂಪೆನಿ ಮ್ಯಾನೇಜರಿಗೆ ಬರೆದುಕೊಂಡರೆ ಇದರ ತಪಶೀಲುವಾರು ಕ್ಯಾಟಲಾಗು ಕೊಡಲ್ಪಡುವುದು.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸು

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯಿಲ್ ಎಂಡ್ ಕೊ, ಬ್ರಿಟೋಬಿಲ್ಡಿಂಗ್ಸ್
ಮಂಗಳೂರು
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಆಯುರ್ವೇದೋದಯ ಔಷಧಾಲಯ, ೧೭೭, ಜೇನಾಬಜಾರ್ ರೋಡ್, ಮದ್ರಾಸ್

ಮದನಮಂಜರಿ ಮಾತ್ರೆಗಳು.

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖಲಿತ ಮೂತ್ರದೊಡನೆ ಇಂದ್ರಿಯ ಸ್ರವಿಸುವದು ಮುಂತಾದ ಸಕಲ ಧಾತು ಪಿಂಡರೋಗಗಳನ್ನು ನಿರ್ಮೂಲಮಾಡುವದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಧವಾದ ದೋಷಗಳನ್ನು ಕ್ರಮಪಡಿಸುವವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ, ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನೂ ದೀರ್ಘಾಯುಸ್ಸನ್ನೂ ಮುಖಕ್ಕೆ ಒಳ್ಳೇಕಾಂತಿಯನ್ನೂ ಉಂಟು ಮಾಡುತ್ತವೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಅವಶ್ಯಕವಾದ ಸಕಲ ಪಂಚಭೂತಗಳು ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ.- ೪೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧-೦-೦.

ಬಿಟ್ಟಿ! ಪುಗಸಟೆ!

ವೈದ್ಯವಿದ್ಯ.

ಸಂಪೂರ್ಣಾರೋಗ್ಯವನ್ನೂ, ದೀರ್ಘಾಯುವನ್ನೂ, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲಗು, ಕನ್ನಡ, ಇಂಗ್ಲೀಷು ಮುಂತಾದ ೮ ಭಾಷೆಗಳಲ್ಲಿ ದೊರೆಯುವದು. ಕೋರಿದವರಿಗೆ ಕ್ರಯವು ಅಂಚೆಹಾಸಲು ಸಹ ಇಲ್ಲದೆ ಮುಫತ್ತಾಗಿ ರವಾನಿಸಲ್ಪಡುವದು. ಜಾಗ್ರತೆ ತಮ್ಮ ವಿಳಾಸವನ್ನು ತಿಳುಹಿಸಿ. ಈ ವರಿಗೂ ೩೦೦೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ದಿವಸವೇ ಒಂದು ಕಾರ್ಡು ಬರೆಯಿರಿ.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ—ನರಸಿಂಹ ಲಕ್ಷ್ಮಣಪಾಲ
[illegible] ಮಂಗಳೂರು ದ. ಕ.

Registered No. M. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ
ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 45

ಮಂಗಳೂರು ತಾ. 9ನೇ ಶನಿವಾರ
ನವಂಬರ 1912.

Amrutanjan Depot, Head Office: Bombay.

ಅಮೃತಾಂಜನ ರಿಜಿಸ್ಟ್ರಿ ಮಾಡಲ್ಪಟ್ಟದೆ. **ಅಮೃತಾಂಜನ ರಿಜಿಸ್ಟ್ರಿ ಮಾಡಲ್ಪಟ್ಟದೆ**

Trade Mark Registered.

AMRUTANJAN

ಅಮೃತಾಂಜನವು.

ಅಮೃತಾಂಜನವು ಎಂಥಾದ್ದು? ಇದು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟಂಥಾದ್ದಾಗಿದೆ. ಇದರಲ್ಲಿ ಅತ್ಯುತ್ತಮವಾದ ಗಿಡಮೂಲಿಕೆಗಳು ಸೇರಿಯವೆ. ಎಲ್ಲಾ ವಿಧದ ನೋವುಗಳಿಗೆ ರಾಮಬಾಣದಂತಿದೆ.

ಇದರಿಂದೇನು ಪ್ರಯೋಜನ? ಇದರಿಂದ ನಿಮ್ಮ ನರಸಂಸ್ಥಾಯದಲ್ಲಿರುವ ನೋವುಗಳೆಲ್ಲಾ ಗುಣವಾಗುವದು. ಇದು ನೋವಿನ ಮೂಲಸ್ಥಾನವನ್ನು ಕಂಡುಹಿಡಿದು ನೋವಿನಿಂದ ಬಿಡುಗಡೆ ಮಾಡಿ ನಿಮ್ಮನ್ನು ಎಂದೂ ನೋವಿಲ್ಲದವರಾಗಮಾಡುವದು. ತಲೆಸಿಡಿತ, ಬೆನ್ನುನೋವು, ವಾತ, ತುರಿ ಖಜ್ಜಿ, ಕಾಲುನೋವು, ವ್ರಣ, ಗಂಟ್ಟುನೋವು, ಕುರು, ಎಲ್ಲಾ ವಿಧದ ಕಜ್ಜಿಗಳನ್ನು ನಿವಾರಿಸುವದು. ಒಂದು ಸಲ ಪ್ರಯೋಗಿಸಿ ನೋಡಿರಿ. ಅದಿಲ್ಲದೆ ನೀವು ಒಂದು ನಿಮಿಷವಾದರೂ ಇರಲಾರಿರಿ. ಕ್ರಯ 8 ಆಣೆ.



ರಿಜಿಸ್ಟ್ರಿಯಾಗಿಯದೆ! ರಿಜಿಸ್ಟ್ರಿಯಾಗಿಯದೆ!

ಗಜಕರ್ಣದ ಮುಲಾಮು.

ಗಜಕರ್ಣವು ಅಥವಾ ನವೆಯು ಇದು ಶರೀರದ ಮೇಲೆ ಅತಿಶಯ ಸೂಕ್ಷ್ಮ ಕ್ರಿಮಿಗಳಿಂದ ಉಂಟಾಗುತ್ತದೆ. ಈ ಚರ್ಮರೋಗವು ಬೇಗನೆ ಮೈಮೇಲೆಲ್ಲ ಕಡೆಯಲ್ಲಿ ಪಸರಿಸುತ್ತದೆ. ಈ ಮುಲಾಮು ಅದರ ಮೇಲೆ ಎರಡು ಸಾರಿ ಹಾಗಿಸುವದರಿಂದ ಬಿಳೀ ಮತ್ತು ಕಪ್ಪು ನವೆಯು ಹೋಗಿ ಗಜಕರ್ಣವು ನಾಶವಾಗುವುದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯು ಬರುವದಿಲ್ಲ. ಡಬಿ ಒಂದರ 6 ಆಣೆ.

ದಂತಮಂಜನ.

ಹಲ್ಲಿಗೆ ಬಲವನ್ನೂ ಬಾಯಿಗೆ ಸುಗಂಧವನ್ನೂ ಕೊಡುವ ದಂತಮಂಜನ, ಅಲ್ಪ ಬೆಲೆಯುಳ್ಳ ಮತ್ತು ಉತ್ತಮ ಗುಣಕೊಡುವ ಈ ದಂತಮಂಜನವು ಹಲವು ಔಷಧಿಗಳಿಂದ ತಯಾರಿಸಲ್ಪಟ್ಟಿದೆ. ಇದರಿಂದ ದಿನಾಲೂ ಹಲ್ಲುಗಳನ್ನು ತಿಕ್ಕಿಸ್ವಚ್ಛ ಮಾಡುವದರಿಂದ ಹಲುಗಳ ಬಲಹೀನತೆ, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ ಹಲ್ಲುಗಳಿಂದ ಬರುವ ಕೀವು, ಹಲ್ಲುಗಳ ನೋವು, ವಗೈರೆ ಸಂಪೂರ್ಣವಾಗಿ ನಿಲ್ಲುವದು. ಹಲ್ಲುಗಳು ಮುತ್ತಿನಂತೆ ಬೆಳ್ಳಗಾಗುವವು. ಲಕ್ಷಗಟ್ಲೆ ಡಬ್ಬಿಗಳು ಮಾರಲ್ಪಟ್ಟವು.

ಡಬ್ಬಿ ಒಂದರ ಕಿಮ್ಮತು 2 ಆಣೆ.

ಕೇಶವರ್ಧಿನಿ ತೈಲ.

ಕೇಶವರ್ಧಿನಿ ತೈಲ:—ಮನೋಹರವಾದ ಪರಿಮಳ ತೈಲ. ಇದು ಸ್ಪಿರಿಟು ಇಲ್ಲದ ಉತ್ತಮ ತೈಲ. ಇದರ ಕ್ರಯ ಕಮ್ಮಿ ಗುಣ ಹೆಚ್ಚು. ಸಾವಿರಾರು ಬಾಟ್ಲಿ ಮಾರಲ್ಪಟ್ಟವು. ಬಾಟ್ಲಿ ಒಂದರ ಕಿಮ್ಮತು 1—0—0 3 ಬಾಟ್ಲಿಗಳಿಗೆ 2—10—0. ವಿ. ಪಿ. ಪ್ರತ್ಯೇಕ.

ರಖಂ ಆಗಿಯೂ ಚಿಲ್ಲರೆ ಆಗಿಯೂ ಈ ಕೆಳಗಿನ
ವಿಳಾಸದವರಲ್ಲಿ ದೊರೆಯುವುದು:—
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ಮಂಗಳೂರು

ವಿಳಾಸ:— ಅಮೃತಾಂಜನ ಡಿಪ್ಪೊ,
109 ಫ್ರೆಯರ್ ರೋಡ್,
ಫೋರ್ಟು, ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ,

೧೦. ವಾಸಾವ ಲೇಹ. ಕೆಮ್ಮು, ಗುಲ್ಮುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists.*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಚರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಡೋಂಗರೆ ಇವರ ಬಾಲಾಮೃತ

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದ ಅಶಕ್ತತೆಯಿಂದುಂಟಾದ ರೋಗಗಳು ಸಂಪೂರ್ಣವಾಗಿ ಇಲ್ಲದಂತಾಗುತ್ತವೆ. ನಮ್ಮ ಬಾಲಾಮೃತವನ್ನೇ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದ್ದಲ್ಲಿ ಬಾಟ್ಲಿಯ ಮೇಲಿನ ನಮ್ಮ ಲೇಬಲಿನ ಪೂರಾ ಖಾತ್ರಿ ಮಾಡಿಕೊಂಡು ತೆಗೆದುಕೊಳ್ಳಿರಿ.

ಬಾಟ್ಲಿ ಒಂದರ ಕಿಮ್ಮತು 0—12—0. ವ್ಹಿ. ಪಿ. ಖರ್ಚು 0-4-0.

K. T. Dongre & Co., ಕೆ. ಟಿ. ಡೊಂಗರೆ ಮತ್ತು ಕಂಪೆನಿ
Girgaon Bombay. ಗಿರಗಾಂ ಮುಂಬಯಿ

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್.-ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

"ಅಮೇರಿಕದ ವಿಶಿಷ್ಟತೆ."


પ્રો. જેમ્સની વિજળીક શાક્તિની ગોળીઓ.
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್"ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ನಾಡಿಣ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವ ದೃಷ್ಟಿಯು ಪ್ರಭೆಯನ್ನುಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮಿ.ಜೇ.ಸಿ. ಟ್ರೀಡೋ(ಪೊಂಡಾ-ಗೋವೆ)ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದನಾನು ಹೊಂದಿದ ಆರೋಗ್ಯಸುಖವು ದೇರೆ ಯಾವ ಇತರ ಮದ್ದುಗಳಿಂದಲಾದ ರೂಪದಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮಿ. ಜಿ. ಆರ್. ಗಾಯಕವಾಡ, (ಸಕ್ರಿಯ ಮಾಮುಲತದಾರರು—ಎ.ಪಿ. ದ್ವಾರಾ ಆದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳಉತ್ತಮವಿದೆ.

The Anglo Indian Drug & Chemical Company,
155, Market, Jumma Musid BOMBAY.

ಏಜಂಟರು:—ದಿ. ಊಲನ್‌ವಾರ್ಟ್. ಮಂಗಳೂರು

ಉತ್ತಮವಾದ ಸುಗಂಧ ದ್ರವ್ಯಗಳು.

ವಿಶ್ವಾಂಜನ ಷೈನ್ ಬಾಂ ಬಾಟ್ಲಿ ೧ಕ್ಕೆ	೧-೪-೦	ಕಸ್ತೂರಿ ಬತ್ತಿ ಸೇರು ೧ಕ್ಕೆ	೩-೦-೦
ತಾಂಬೂಲ ಮಾತ್ರೆ ಬಾಟ್ಲಿ ೧ಕ್ಕೆ	೦-೩-೦	ಜವಾಜಿ ಬತ್ತಿ ,,	೧-೧೨-೦
ದಶಾಂಗ ಡಬ್ಬಿ ೧ಕ್ಕೆ	೦-೩-೦	ಪುಣುಗು ಬತ್ತಿ ,,	೧-೪-೦
ಮಹಾರಾಜಾ ತಂಬಾಕ್ ಡಬ್ಬಿ ೧ಕ್ಕೆ	೦-೨-೦	ಗುಲಾಬಿ ಬತ್ತಿ ,,	೧-೦-೦
ವಸಂತ ಮಾಲತಿ ಬಾಟ್ಲಿ ೧ಕ್ಕೆ	೦-೨-೦	ಪನ್ನೀರು ಬತ್ತಿ ,,	೦-೮-೦
ವ್ರಣಹಾರಿಯ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕಸ್ತೂರಿ ಬಿಲ್ಲೆ ತೊಲೆ ೧ಕ್ಕೆ	೨-೦-೦
ಕುಸುಮ ಮಾಲತಿ ಎಣ್ಣೆ ಬಾಟ್ಲಿ ೧ಕ್ಕೆ	೦-೮-೦	ಪುಣುಗಿನ ಬಿಲ್ಲೆ ,,	೧-೦-೦
ದಿಲ್‌ದಾರ ಅತ್ತರ್ ಶೀಶೆ ೧ಕ್ಕೆ	೦-೪-೦	ಕೇಸರಿ ಬಿಲ್ಲೆ ,,	೦-೮-೦
ಹುಳದ ಮುಲಾಮು ಡಬ್ಬಿ ೧ಕ್ಕೆ	೦-೨-೦	ಅರ್ಗಜ ,,	೦-೧೨-೦
ವಾತಸಂಜೀವನೀ ತೈಲ ಬಾಟ್ಲಿ ೧ಕ್ಕೆ	೦-೪-೦	ಫಿತ್ನಾ ,,	೦-೧೨-೦
ದಿಲ್ ಕುಸುಮ ಬತ್ತಿ ಸೇರು ೧ಕ್ಕೆ	೧೦-೦-೦	ನಾಸಿಕಚೂರ್ಣ ಡಜನ್ ೧ಕ್ಕೆ	೦-೧-೦
A ಅಂಬರ್ ಬತ್ತಿ ,,	೬-೦-೦		

ಕೊಂಕಣಿ ಭಾಷೆಯಿಂದ ತಯಾರಿಸಲ್ಪಟ್ಟ ಚಂದ್ರಹಾಸನಾಟಕದ ಪುಸ್ತಕವು ನಮ್ಮಲ್ಲಿ ದೊರಕುತ್ತದೆ. ಕ್ರಯ ೦-೪-೦. ಬೇಕಾದವರು ಈ ವಿಳಾಸಕ್ಕೆ ಬರಕೊಳ್ಳಿರಿ. ಬಿ. ವಿ. ಪಿ. ಭಂಡಾರಕರ,

"ವಿಶ್ವಾಂಜನ ಡಿಪೊ",
ಮಂಗಳೂರು.

ದೇಶಬಾಂಧವರೇ! ಇತ್ತ! ಗಮನಿಸಿ!!
ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!
ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—45, ಹೆರಿಸನ್ ರೋಡ್, ಕಲ್ಕತ್ತಾ.
ಮೂಲಧನ 10,00,000 ವಿಮೆದಾರರ ಸಂಖ್ಯೆ 50,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ!! ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳೆದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!!

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಿಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ತರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:—ಟಿ. ಆರ್. ಪೈ ಅಂಡ್ ಬ್ರದರ್ಸ್,
ಸೋಲ್ ಏಜಂಟ್ಸ್, ಆಫೀಸು ಉಡುಪಿ, (ದ. ಕನ್ನಡ.)

ಕೊಂಕಣಿ ಭಾಷೆಯಲ್ಲಿ

ಸಂಗೀತ ಚಂದ್ರಹಾಸ ನಾಟಕ.

ಪ್ರತಿ ಒಂದಕ್ಕೆ ನಾಲ್ಕಾಣೆ.
ಪೋಸ್ಟು ಖರ್ಚು ಪ್ರತ್ಯೇಕ.

ವಿಳಾಸ:— ಬಿ. ಕೆ. ಪ್ರಭು,
ಬಂಟ್ವಾಳ ದ. ಕನ್ನಡಾ

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೊಲೆರಾ ಅಥವಾ ಉಬ್ಬಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ ರೂ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ನೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡುಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

(ಶ್ರೀ ಶ್ರಂಗೇರಿ ಮಠದವರಿಂದಲೂ, ಮೈಸೂರು ಸರಕಾರದವರಿಂದಲೂ ಪೋಷಿಸಲ್ಪಡುತ್ತಲಿದೆ) ಇದರಲ್ಲಿ:—(೧) "ದಶೋಪನಿಷತ್ತು"ಗಳಿಗೂ ಕನ್ನಡ ಕಥಾರೂಪವಾದ ತಾತ್ಪರ್ಯ. (೨) "ಶ್ರೀ ಶಂಕರಾಚಾರ್ಯ ಚರಿತ್ರ ಕಾಲವಿಚಾರ". (೩) "ಕನ್ನಡ ಭಾಷಾಮಯಧರ್ಮಸಿಂಧುಸಾರ" (೩೫೩ ವಿಷಯಗಳಿವೆ. (೪) ಸಂಧ್ಯಾವಂದನೆಯ ಅರ್ಥ ವಿಚಾರ" (ಬಹುಯುಕ್ತಿ ಪ್ರಮಾಣಗಳಿಂದೊಡಗೂಡಿದೆ) (೫) "ಬಾಲಕರ ಭಂಡಾರ" (ನೀತಿ ಕಥೆಗಳು, ನೀತಿ ಶ್ಲೋಕಗಳು, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯೆ, ಒಗಟೆ, ನ್ಯಾಯ ಮುಂತಾದುವುಗಳು). (೬) "ಕುಮಾರ ಸಂಭವ ಕಾವ್ಯ" ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ ನಿಗ್ರಹ, ಧಾತುರೂಪ. ಧಾತ್ವರ್ಥ, ವಿಶೇಷಾಂಶಗಳೊಂದಿಗೆ.

(೧೨-೮-೧೯೧೧)ರಲ್ಲಿ ಆರಂಭವಾಗಿ ನಡೆಯುತ್ತಲಿದೆ. ಚಂದಾ (ವರ್ಗಣಿ) ದಾರರಿಗೆ ಹಿಂದಿನ ಸಂಚಿಕೆಗಳೆಲ್ಲ ದೊರೆಯುತ್ತವೆ.

ವಿಳಾಸ: (ಪತ್ರೆ)--ದೊಡ್ಡ ಬೆಲೆ ನಾರಾಯಣ ಶಾಸ್ತ್ರಿ,
ಶ್ರೀ "ಶಾರದಾ" ಸಂಪಾದಕ, ಸೀಗೆ ಬೇಲಿ ಬೆಂಗಳೂರು.

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ,
ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾ ಪ್ರವೇಶದಾಯಿನಿ.

ಮೊದಲನೆಯ ಪುಸ್ತಕ. ಪ್ರಥಮಾಭ್ಯಾಸಿಗಳಿಗೆ ತಕ್ಕ ಸುಲಭ ಪಾಠಗಳನೇಕವಾಗಿರುವ ಪ್ರತಿ ಇಂಗ್ಲಿಷ್ ಶಬ್ದಕ್ಕೂ ಕನ್ನಡಕ್ಷರದಲ್ಲಿ ಉಚ್ಚಾರಣೆ ಅರ್ಥ ಸಹ ಇರುವುದು. ಕ್ರಯ ಒಂದು ರೂಪಾಯಿ ಎಂಟಾಣೆ.

ಎರಡನೆಯ ಪುಸ್ತಕ. ಅಕ್ಷರಜ್ಞಾನವೂ ಶಬ್ದಜ್ಞಾನವೂ ಆದ ಸ್ವಲ್ಪ ಮಟ್ಟಿಗೆ ಇಂಗ್ಲಿಷ್ ತಿಳಿದವರಿಗೆ ಅನುಕೂಲವಾದ ಪ್ರೌಢಪಾಠಗಳುಳ್ಳದಾಗಿ ವರ್ತಕರಿಗೆ ಉಪಯೋಗವಾದ ಪಾರಿಭಾಷಿಕ ಶಬ್ದಕೋಶ ಒಂದನ್ನು ಛಾಪಿಸಿದೆ. ಕ್ರಯ ಒಂದು ರೂಪಾಯಿ ಎಂಟಾಣೆ.

ದಸರಾ ದೀಪಾವಳೀ ಮಹೋತ್ಸವದ ಜ್ಞಾಪಕಾರ್ಥವಾಗಿ ಆರು ವಾರಗಳ ಮಟ್ಟಿಗೆ ಕ್ರಯ ಕಡಮೆ ಮಾಡಿದೆ. ಅವಧಿ ಮೀರಿದ ಬಳಿಕ ಮರಳಿ ಮೊದಲಿನ ಕ್ರಯವೇ ಕೊಡಬೇಕಾಗುವುದು.

ಮೊದಲನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.
ಎರಡನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.
ಅಂಚೆವೆಚ್ಚ ಪುಸ್ತಕ ಒಂದಕ್ಕೆ ಮೂರೇ ಆಣೆ.

ಎರಡು ಪುಸ್ತಕವೂ ಒಟ್ಟಾಗಿಯಾದರೂ, ಒಂದೇ ಪುಸ್ತಕವನ್ನು ಬೇರ್ಪಾಗಿಯಾದರೂ ಕೊಂಡುಕೊಳ್ಳುವವರಿಗೆ ಅಂಚೆ ವೆಚ್ಚ ಮಾಫಿ.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭಾರತಿ ಸಂಪಂಗಿರಾಮ,
ಭಾಷಾನಿಧಿ ಕಾರ್ಯಾಲಯ,
೧೨೦ ಗುಡುಮ್ಮೆಯನ ಪೇಟೆ, ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶನಿವಾರ ತಾರೀಕು 9ನೇ ನವಂಬರ 1912.

ಆರೋಗ್ಯಪಾಲನೆ.

ಜನಪದವು ಹೆಚ್ಚಿರುವ ಪಟ್ಟಣಗಳಲ್ಲಿಯೂ ಕಡಮೆಯುಳ್ಳ ಹಳ್ಳಿಗಳಲ್ಲಿಯೂ ಅಂಟುರೋಗಗಳ ಹಾವಳಿಯು ಹಿಂದೂಸ್ಥಾನದಲ್ಲಿ ಒಂದೇ ಪ್ರಕಾರವಾಗಿರುವುದು. ಮುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ವೃತ್ತಾಂತಗಳನ್ನು ನೋಡಿದರೆ ವಾಂತಿಭೇದಿ, ಸಿಡುಬುರೋಗ, ವಿಷಮಜ್ವರ ಮೊದಲಾದ ಸಾಂಕ್ರಾಮಿಕ ರೋಗಗಳ ಪ್ರಸ್ತಾಪಗಳಿಲ್ಲದ ವಂದಿಗಳು ಕಡಮೆ. ಆರೋಗ್ಯಪಾಲನೆಗೆ ಬೇಕಾದ ಏರ್ಪಾಡುಗಳು ಸಮಗ್ರವಾಗಿ ನಮ್ಮಲ್ಲಿಲ್ಲ. ಸರಕಾರದವರು ಇತ್ತಲಾಗೆ ಈ ಏರ್ಪಾಡುಗಳಿಗೆ ತಕ್ಕ ಲಕ್ಷ್ಯವನ್ನು ಕೊಡುತ್ತಿರುವರಾದರೂ ಸಾಮಾನ್ಯ ಶಿಕ್ಷಣ ಬಲವು ಜನರಲ್ಲಿಲ್ಲದ್ದರಿಂದ ಜನರ ಸಹಕಾರವು ಇಂಥಾ ಏರ್ಪಾಡುಗಳಿಗೆ ದೊರಿಯುವುದು ಅಪರೂಪವಾಗಿರುವುದು.

ರೋಗ ಸಂಭವವು ಪೂರ್ಣವಾಗಿ ವಿಧಿವಶವಾಗಿರುವುದು. ನಮ್ಮ ಸಾಧನೆಗಳಿಂದೇನೂ ಆಗತಕ್ಕದ್ದಿಲ್ಲ. ಇಂಥಾ ರೋಗಪ್ರಾಪ್ತಿಗಳಿಗೆ ಪ್ರತಿಕೂಲವಾದ ಸಾಧನೆಗಳನ್ನು ನಡಿಸುವುದರಿಂದ ಇನ್ನಷ್ಟು ರೋಗಬಾಧೆಯು ಹೆಚ್ಚುವುದೆಂತ ಸಹ ಗ್ರಹಿಸುವವರು ಸಾಮಾನ್ಯರಲ್ಲಿ ಹಲವರಿರುವರು. ನವೀನ ಶೋಧನೆಗಳ ಮೂಲಕ ದೇಶದ ಸಾಂಪತ್ತಿಕ ಅಭಿವೃದ್ಧಿಯನ್ನು ಸಾಧಿಸುವ ಪಾಶ್ಚಾತ್ಯ ದೇಶಗಳಲ್ಲಿ ಕಳೆದ ನೂರಾರು ವರುಷಗಳಿಂದ ರೋಗ ನಿವೃತಿ ಉಪಾಯಗಳೂ ಸಹ ಕಲ್ಪಿಸಲ್ಪಟ್ಟಿರುವುದರಿಂದ ರೋಗಪ್ರಾಪ್ತಿಯು ಪೂರ್ಣ ವಿಧಿವಶವಾಗಿರುವುದೆಂಬೀ ಭಾವನೆಯು ಆ ದೇಶದವರಲ್ಲಿ ಮಾಜುತ್ತ ಬಂದಿರುವುದು. ಕಣ್ಣುಗಳಿಗೆ ಗೋಚರವಾಗುವ ಮನುಷ್ಯನ ಪ್ರಾಣಕ್ಕಿರುವ ವೈರಿಗಳ ನಿಗ್ರಹವನ್ನು ಪಾಶ್ಚಾತ್ಯರು ಸಾಧಿಸಿರುವರಲ್ಲದೆ ಕಣ್ಣಿಗೆ ಗೋಚರವಾಗದಿರುವ ಅಣುರೂಪಗಳಲ್ಲಿರುವ ವೈರಿಗಳನ್ನು ಸಹ ಆಟೋಪದಲ್ಲಿಟ್ಟು ಆರೋಗ್ಯ ಭಾಗ್ಯವನ್ನು ಪೂರ್ಣವಾಗಿ ಕೈವಶಮಾಡಿಕೊಳ್ಳುವ ಸಾಹಸವನ್ನು ಸಹ ನಡಿಸಿರುತ್ತಾರೆ. ಕಾಡುಗಳಲ್ಲಿರುವ ಹಿಂಸ್ರಜಂತುಗಳಿಗಿಂತಲೂ ಮಿಲಿಯ ಕಟ್ಟಳೆಯಲ್ಲಿ ಅಧಿಕವಾಗಿ ನಭೋಮಂಡಲದಲ್ಲಿರುವ ಅಸಂಖ್ಯಾತ ನಕ್ಷತ್ರ ರಾಶಿಗಳೋಪಾದಿಯಲ್ಲಿರುವ ವೈರಿಗಳು ಮನುಷ್ಯ ಪ್ರಾಣಕ್ಕೆ ಅಣುರೂಪದಲ್ಲಿರುವರೆಂತ ಸೂಕ್ಷ್ಮದರ್ಶಕ ಯಂತ್ರಗಳಿಂದ ಪಾಶ್ಚಾತ್ಯರು ಕಂಡುಕೊಂಡಿರುವರು. ಒಂದು ಇಂಚು ಸ್ಥಳದಲ್ಲಿ ರೋಗೋದ್ಭವ ಕಾರಣಗಳಾಗಿರುವ ಈ ಅಣುಗಳು ಮಿಲಿಯ ಕಟ್ಟಳೆಯಲ್ಲಿರುವವೆಂತ ಇವರು ತಿಳಿದಿರುತ್ತಾರೆ. ಕಾಡುಮೃಗಗಳು ಸಹ ಮನುಷ್ಯನನ್ನು ನೋಡಿ ಓಡಿಹೋಗುತ್ತಿವೆಯಾದರೂ ಈ ರೋಗ ಅಣುಗಳು ಮನುಷ್ಯನು ಕುಡಿಯುತ್ತಿರುವ ನೀರು ಮತ್ತು ಉಸುರಾಡುತ್ತಿರುವ ವಾಯುವನ್ನು ಸೇರಿಕೊಂಡು ಆತನಿಗೆ ತಿಳಿಯದ ರೀತಿಯಲ್ಲಿ ಆತನ ಶರೀರವನ್ನೆಲ್ಲಾ ಆಕ್ರಮಿಸಿಕೊಳ್ಳುವವು. ವಾಯು ಮತ್ತು ನೀರಿನ ಮೂಲಕವಲ್ಲದೆ ಈ ಅಣುಗಳು ಮನೆಗಳಲ್ಲಿ ಅಡ್ಡಾಡುತ್ತಿರುವ ನೊಣ ನುಸಿ ಮೊದಲಾದವುಗಳ ಸುಂಡಿಲು ಇತ್ಯಾದಿಗಳನ್ನು ಸೇರಿಕೊಂಡು ಆಹಾರದ ಮೂಲಕ ನಮ್ಮ ದೇಹಗಳನ್ನೊಳನುಗ್ಗುವವು. ಈ ವಿವರಗಳನ್ನೆಲ್ಲಾ ತಿಳಕೊಂಡಿರುವ ಪಾಶ್ಚಾತ್ಯರು ರೋಗ ಅಣುಗಳನ್ನು ಸಹ ಅಳಿಸಿಬಿಟ್ಟು ಸಾಂಪತ್ತಿಕ ಅಭಿವೃದ್ಧಿಗೆ [illegible]ಗೆ ಆರೋಗ್ಯ ಪಾಲನೆಯನ್ನು ಯೋಗ್ಯವಾದ ರೀತಿಯಲ್ಲಿ ಮಾಡುತ್ತಲಿದ್ದಾರೆ.

ಸಾಂಪತ್ತಿಕ ಅಭಿವೃದ್ಧಿಗೆ ಕೈಗಾರಿಕೆಗಳು ಅಗತ್ಯವೆಂತ ಕೈಗಾರಿಕೆಗಳ ಮೇಲ್ಮೆಯ ಪ್ರಯತ್ನಗಳನ್ನು ನಾವು ಪಾಶ್ಚಾತ್ಯರಂತೆಯೇ ತೊಡಗಿರುವೆವು. ಆರೋಗ್ಯ ಪಾಲನೆಯ ಸಾಧನೆಯನ್ನು ಅವರಂತೆಯೇ ಕೈಕೊಳ್ಳಬೇಕಾಗಿದೆ. ಸಂಪತ್ತನ್ನು ಸಂಗ್ರಹಿಸಲು ದೇಹಪುಷ್ಟಿಯು ಬೇಕಾಗಿರುವುದು. ದೇಹಪುಷ್ಟಿಗೆ ಆರ್ಯೋಗ್ಯವೇ ಮೂಲ.

ಸೂರ್ಯ ಪ್ರಕಾಶವೂ ಶುದ್ಧವಾದ ವಾಯು ಸಂಚಾರವೂ ಎಲ್ಲಾ ರೋಗ ಅಣುಗಳನ್ನು ಸಾಧಾರಣವಾಗಿ ನಾಶಮಾಡಲು ಸಾಕಾಗಿರುವವು. ಬಿಸಿಲಿಲ್ಲದ ದಿನಗಳು ಉಷ್ಣವಲಯದಲ್ಲಿರುವ ಹಿಂದೂಸ್ಥಾನದಲ್ಲಿ ಬಹಳ ಕಡಮೆ. ಸೂರ್ಯ ಪ್ರಕಾಶವು ಹಳ್ಳಿ ಪಟ್ಟಣಗಳಲ್ಲಿರುವ ವಾಸ್ತವ್ಯಗಳಲ್ಲಿ ಸರಿಯಾಗಿರಗೊಡಿಸುವುದು ನಿವಾಸಿಕರಿಗೆ ಸಾಧ್ಯ. ಹಾಗೆಯೇ ಶುದ್ಧ ವಾಯುವಿನ ಸುಳಿವನ್ನು ಮನೆಗಳಲ್ಲಿಯೂ ವಾಸ್ತವ್ಯದ ವಟಾರಗಳಲ್ಲಿಯೂ ಇರಗೊಳಿಸುವುದು ಅಗತ್ಯ. ಮಲಗುವ ಕೋಣೆಗಳ ಬಾಗಿಲು ಕಿಟಕಿಗಳೆಲ್ಲವನ್ನು ಮುಚ್ಚಿ ಬಿಟ್ಟು ಬಾಗಿಲು ಕಿಟಕಿಗಳಲ್ಲಿರುವ ರಂಧ್ರಗಳಿಗೆ ವಸ್ತ್ರ ಚಿಂದಿಗಳನ್ನಿಟ್ಟು ಮಲಗುವ ವಾಡಿಕೆಯು ಈ ದೇಶದ ಸಾಮಾನ್ಯರಲ್ಲಿ ಹೆಚ್ಚಾಗಿದೆ. ಈ ದುರಭ್ಯಾಸದಿಂದ ಕ್ಷಯರೋಗ ಮೊದಲಾದವುಗಳಿಗೆ ಆಸ್ಪದ ದೊರಕುವುದೆಂಬುದನ್ನು ತಿಳಕೊಳ್ಳಬೇಕಾಗಿದೆ. ಆರೋಗ್ಯಕ್ಕೆ ಅಪಾಯವನ್ನು ತಂದುಕೊಳ್ಳುವ ವಿಧಾನಗಳು ಇನ್ನೂ ಹಲವು ನಮ್ಮಲ್ಲಿರುವವು. ಆರೋಗ್ಯ ಪಾಲನೆಗೆ ಬೇಕಾದ ಶಿಕ್ಷಣ ಪ್ರಸರಣೆಯೇ ಇದಕ್ಕೆ ತಕ್ಕ ನಿವಾರಣೋಪಾಯ. ಪ್ರಾಯಮರಿ ಶಾಲೆಗಳಲ್ಲಿ ಇಂಥಾ ಶಿಕ್ಷಣಕ್ಕೆ ತಕ್ಕದಾದ ಏರ್ಪಾಡು ಮಾಡುವುದರಿಂದ ಈ ಶಾಲೆಗಳಲ್ಲಿ ಶಿಕ್ಷಣೆ ಪಡದವರ ವರ್ತನೆಗಳ ಮೂಲಕ ಅವರ ಅಶಿಕ್ಷಿತ ನೆರೆಯವರೂ ಬಂಧು ಜನರೂ ಆರೋಗ್ಯ ಪಾಲನೆಯ ಮಾಹಿತಿಯನ್ನು ತಿಳಿಯುವರು. ಇಂಥಾ ಶಿಕ್ಷಣ ಪ್ರಸರಣೆಯ ಏರ್ಪಾಡಲ್ಲದೆ ಪ್ರಜಾ ಮುಂದಾಳುಗಳು ಸಹ ಪ್ರಜಾ ಸಾಮಾನ್ಯರ ಆರೋಗ್ಯ ಪಾಲನೆಯಲ್ಲಿ ಶ್ರಮಪಡಬೇಕಾಗಿರುವುದು. ಮುಂಬಾಯಿಯ ಸಂಪನ್ನ ದೇಶವತ್ಸಲರಾದ ಮೆ| ರತನ ಟಾಟಾರವರು ಕ್ಷಯರೋಗ ನಿವಾರಣೆ ಬಗ್ಗೆ ವಿಶೇಷ ಹಣ ಸಹಾಯಕೊಟ್ಟು ಒಂದು ಸಂಘವನ್ನು ಏರ್ಪಡಿಸಿರುತ್ತಾರೆ. ಈ ಸಂಘಕ್ಕೆ ಮುಂಬಾಯಿಯ ಗವರ್ನರರ ಪ್ರೋತ್ಸಾಹವು ಇರುವದು. ಇದೇ ರೀತಿಯಲ್ಲಿ ಆರೋಗ್ಯ ವಿಷಯಗಳನ್ನು ಜನರಿಗೆ ತಿಳಿಯಹೇಳಲೂ ರೋಗಗಳ ಹಾವಳಿಗೆ ತಡೆಯನ್ನು ಕಟ್ಟಲೂ ಕಾರ್ಯ ಸಾಧನೆಯ ಪ್ರಜಾಜನರ ಸಂಘಗಳು ಅಲ್ಲಲ್ಲಿ ಬೇಕಾಗಿರುವವು. ಆರೋಗ್ಯ ಪಾಲನೆಯ ಮಾಹಿತಿಯು ಕಡ್ಡಾಯ ಶಿಕ್ಷಣದೊಂದಿಗೆ ಜನರಿಗೆ ಪ್ರಾಪ್ತವಾಗುವಂತೆ ಮಾಡುವುದು ಸರಕಾರದವರ ಕರ್ತವ್ಯವಾಗಿರುವಾಗ ರೋಗಗಳಿಂದ ಬಳಲುತ್ತಿರುವವರ ಆರೈಕೆ ಮೊದಲಾದವುಗಳನ್ನು ನೋಡಿಕೊಂಡು ಈ ಮೂಲಕ ರೋಗಗಳ ಹಾವಳಿಯನ್ನು ಆಟೋಪದಲ್ಲಿರಿಸಲು ಪ್ರಯತ್ನಿಸುವುದು ಸಂಪನ್ನ ಪ್ರಜಾ ವರ್ಗದ ಹಂಗಾಗಿರುವುದು. ಇದಕ್ಕೆ ಬೇಕಾದ ಔದಾರ್ಯ ದಾನಶೀಲತೆಯು ನಮ್ಮಲ್ಲಿರುತ್ತದೆ. ಆರೋಗ್ಯದಲ್ಲಿರುವ ಸಾವಿರಾರು ಜನ ವೈಗಳ್ಳರ ಪೋಷಣೆಯು ನಮ್ಮಿಂದಾಗುತ್ತಿರುವುದು. ಹೀಗೆ ವ್ಯಯವಾಗುತ್ತಿರುವ ಹಣದ ಕೆಲವಂಶವನ್ನಾದರೂ ರೋಗಿಗಳ ಪರಾಂಬರಿಕೆ ಬಗ್ಗೆ ವಿನಿಯೋಗಿಸಿದರೆ ಆರೋಗ್ಯ ಪಾಲನೆಯ ಪ್ರಯತ್ನಗಳಲ್ಲಿ ಸರಕಾರದವರಿಗೆ ತಕ್ಕ ಸಹಕಾರವನ್ನಿತ್ತಂತಾಗುವುದು.

ಮಂಗಳೂರು 'ಕೊಸ್ಮೊಪೊಲಿಟನ್ ಕ್ಲಬ್'.

ಕಳೆದ ವಾರದ ಸಂಚಿಕೆಯಲ್ಲಿ ಸೂಚಿಸಲ್ಪಟ್ಟಂತೆ ಎಲ್ಲಾ ಜಾತಿಗಳ ಆಫೀಸರರು, ಆಫೀಸರಲ್ಲದಿರುವ ವಕೀಲ ಸಾವುಕಾರರು ಈ ಮೊದಲಾದವರ ಪ್ರಯೋಜನಾರ್ಥವಾಗಿ ಕೊಸ್ಮೊಪೊಲಿಟನ್ ಕ್ಲಬ್ ಕಳೆದ ವಾರ ಮಂಗಳೂರಲ್ಲಿ ಏರ್ಪಡಿಸಲ್ಪಟ್ಟಿತು. ಆಯಾ ವೃತ್ತಿಗಳಲ್ಲಿರುವ ಒಂದೇ ಪಟ್ಟಣವಾಸಿಗಳು ಅನ್ಯೋನ್ಯದಲ್ಲಿರುವುದು ಪುರಾಭಿವೃದ್ಧಿಗೆ ಅಗತ್ಯವಾಗಿರುವುದರಿಂದ ಪರಸ್ಪರ ಸ್ನೇಹಭಾವನೆಗಳಿಗೆ ಅವಕಾಶಕೊಡುವ ಇಂಥಾದೊಂದು ಕ್ಲಬ್ ನಮ್ಮ ಪಟ್ಟಣಕ್ಕೆ ಅಗತ್ಯವೆಂತ ಸ್ವದೇಶಾಭಿಮಾನಿಯಲ್ಲಿ ಈ ಮೊದಲು ಸಂದರ್ಭ ದೊರಕಿದ್ದಂತೆ ಪ್ರಸ್ತಾಪಿಸಿರುವೆವು. ಸಾಮಾನ್ಯ ಶಿಕ್ಷಣದ ಸ್ಥಿತಿಯು ಈ ಜಿಲ್ಲೆಯಲ್ಲಿ ಹೇಗಿದ್ದರೂ ಉಚ್ಚ ಶಿಕ್ಷಣವನ್ನು ಪಡದವರ ಸಂಖ್ಯೆಯು ನಮ್ಮಲ್ಲಿ ಇತರ ಹಲವು ಪ್ರಾಂತ್ಯಗಳಿಗಿಂತ ಅಧಿಕವಾಗಿದೆ. ಇಂಥಾ ಪಟ್ಟಣದಲ್ಲಿ ಈ ತನಕ ಮೇಲೆ ಹೆಸರು ಕಾಣಿಸಿರುವ ಕ್ಲಬ್ಬಿನಂಥಾ ಸಂಸ್ಥೆಯು ಇಲ್ಲದೆ ಇದ್ದದ್ದು ಒಂದು ಕೊರತೆಯಾಗಿತ್ತು. ಮಂಗಳೂರು ಕೊಸ್ಮೊಪೊಲಿಟನ್ ಕ್ಲಬ್ ಸ್ಥಾಪನೆಯಿಂದ ಈ ಕೊರತೆಯನ್ನು ಕಳೆದು ಬಿಟ್ಟಿರುತ್ತೇವೆ.

ಕ್ಲಬ್ ಸ್ಥಾಪನೆಯ ದಿವಸ ಕ್ರೈಸ್ತ ಹಿಂದೂ ವಕೀಲರಲ್ಲದೆ ಡಿಸ್ಟ್ರಿಕ್ ಜಡ್ಜರಾದ ಮ| ರಾ| ರಾ| ವೇಣು ಗೋಪಾಳ ಚೆಟ್ಟಿಯವರು, ಸಬ್ ಜಡ್ಜರಾದ ಮ| ರಾ| ರಾ| ಡಿ. ರಾಘುವೇಂದ್ರ ರಾಯರವರು, ಡಿಸ್ಟ್ರಿಕ್ಟ್ ಮುನ್ಸಿಫರಾದ ಮ| ರಾ| ರಾ| ಎಮ್. ಜಿ. ಕೃಷ್ಣರಾವ್‌ರವರು, ಖಜಾನಾ ಡಿಪ್ಯುಟಿ ಕಲೆಕ್ಟರ್ ಮ| ರಾ| ರಾ| ರಾವ್ ಬಹದ್ದೂರ್. ಸಿ. ಗೋಪಾಲನ್ನಾಯರ್, ಹೆಡ್ ಕ್ವಾಟರ್ಸ್ ಡಿಪ್ಯುಟಿ ಕಲೆಕ್ಟರ್, ಮ| ರಾ| ರಾ| ಕೆ. ಚಂತನ್, ಮಾಜಿ ಸಬ್ ಜಡ್ಜರಾದ ಸುಜೀರ ರಘುನಾಥಯ್ಯ, ಮಾಜಿ ಡಿಸ್ಟ್ರಿಕ್ಟ್ ಜಡ್ಜರಾದ ದಿವಾನ್ ಬಹದ್ದೂರ್ ಮ| ರಾ| ರಾ| ಮುಂಡಪ್ಪ ಬಂಗೇರರವರು, ಮಾಜಿ ಡಿಪ್ಯುಟಿ ಕಲೆಕ್ಟರ್ ಮ| ರಾ| ರಾ| ವರ್ಕಾಡಿ ರಾಮರಾವ್, ಮಾಜಿ ಹಜೂರ್ ಶಿರಸ್ತೆದಾರ್ ಮ| ರಾ| ರಾ| ಅಮ್ಮೆಂಬಳ ವಾಸುದೇವ ಪೈ, ಮ| ರಾ| ರಾ| ನೆಲ್ಲಿಕಾಯಿ

ವೆಂಕಟರಾವ್, ಕೆನರಾ ಹ್ಯಾಸ್ಕೂಲಿನ ಹೆಡ್ ಮಾಸ್ತರ್, ಮ| ರಾ| ರಾ| ಎ. ವಾಸುದೇವ ರಾವ್, ಗಣಪತಿ ಸೆಕಂಡರಿ ಶಾಲೆಯ ಹೆಡ್ ಮಾಸ್ತರರಾದ ಬಿ. ಮಂಗೇಶರಾವ್ ಮೊದಲಾದ ಗೃಹಸ್ತರು ಸಹ ಹಾಜರಿದ್ದರು. ಹಿಂದೊಮ್ಮೆ ಆಗಿಹೋದ ಇಂಥಾದೊಂದು ಮಂಗಳೂರು ಯುನಿಯನ್ ಕ್ಲಬ್ಬಿನ ವಿಷಯ ಬಹುಮಾನಪಟ್ಟ ರಾವ್ ಬಹದ್ದೂರ್ ಸುಬ್ಬರಾವ್‌ರವರು ಪ್ರಸ್ತಾಪಿಸಿದ ಮೇಲೆ ಹ್ಯಾಕೋರ್ಟು ವಕೀಲರಾದ ಮ| ರಾ| ರಾ| ಯು. ಸಿ. ಕೃಷ್ಣ ಭಟ್ಟರವರು ಈ ಕ್ಲಬ್ ಒಂದು ಶಾಶ್ವಿತ ಸಂಸ್ಥೆಯಾಗಿ ಬಾಳುವಂತೆ ಎಲ್ಲಾ ಜಾತಿ ಮತಸ್ಥರ ಪ್ರತಿನಿಧಿಗಳು ಇದರಲ್ಲಿ ಸೇರಿರಬೇಕೆಂಬುದನ್ನು ತಮ್ಮ ಭಾಷಣದಲ್ಲಿ ಬಹಳ ಒತ್ತಿಕೊಂಡು ಹೇಳುವವರಾದರು. ಪ್ರಕೃತ ಕಾಲದಲ್ಲಿ ಕ್ಲಬ್‌ಗಳೆಂಬವು ಅಪರೂಪ ಸಂಸ್ಥೆಗಳಲ್ಲ. ಪ್ರತಿ ಪಟ್ಟಣಗಳಲ್ಲೆಂಬಂತೆ ಇವುಗಳು ಇರುವವು. ಇಂಥಾ ಕ್ಲಬ್‌ಗಳಲ್ಲಿ ಆಫೀಸರರು ತಮ್ಮ ಹುದ್ದೆಗಳಿಗೆ ವಿಶೇಷವಾದ ಗೌರವ ಭಾವನೆಗಳಿಂದಿರದೆ ಈ ಕ್ಲಬ್ಬಿನ ಎಲ್ಲಾ ಮೆಂಬರರೊಡನೆ ಸಮಾನತ್ವದ ಭಾವನೆಗಳಿಂದಿರಬೇಕೆಂಬದಾಗಿ ಡಿಸ್ಟ್ರಿಕ್ ಜಡ್ಜರವರು ಸಭಿಕರನ್ನು ವಿಜ್ಞಾಪಿಸಿಕೊಂಡರು. ಕ್ಲಬ್ಬಿನ ವ್ಯವಸ್ಥಾಕ್ರಮ ಮೊದಲಾದವುಗಳನ್ನು ಮಾಡಲು ಈ ತಿಂಗಳ ತಾ. ೧೨ರಲ್ಲಿ ಕ್ಲಬ್ಬಿನ ಮೆಂಬರರೆಲ್ಲರು ತಿರಿಗೊಮ್ಮೆ ಸಭೆ ಸೇರುವರು.

ಮಂಗಳೂರಲ್ಲಿ ಹಲವು ವರುಷಗಳನಂತರ ಎರಡನೇ ಸಲ ಸ್ಥಾಪಿಸಲ್ಪಟ್ಟ ಈ ಕ್ಲಬ್ ಸಜೀವವಾಗಿ ದೀರ್ಘಕಾಲ ಬಾಳಲಿ. ಯುನಿಯನ್ ಕ್ಲಬ್ಬಿಗೆ ಸಂಬಂಧಪಟ್ಟ ರೂ. ೪೦೦೦ವು ಠೇವಹಾತಿಯಲ್ಲಿರುವುದೆಂದೂ ಇದು ಬೇಗನೇ ವಿಕ್ಟೋರಿಯಾ ಮೆಮೋರಿಯಲ್ ಹೋಲ್ ಎಂಬ ಪಟ್ಟಣ ಸಭಾಮಂದಿರವನ್ನು ಕಟ್ಟಿಸುವುದರಲ್ಲಿ ವಿನಿಯೋಗಿಸಲ್ಪಡುವುದೆಂದೂ ಈ ಸಂದರ್ಭದಲ್ಲಿ ತಿಳಿಯುತ್ತೇವೆ.

ಬಾಲ್ಯ.

(ಚೌಪದಿ.)

ಚಿಕ್ಕ ಶಿಶುವಾಗಿದ್ದ ಕಾಲವಿತ್ತೊಂದು |
ಲೆಕ್ಕಿಸಲ್ಕೊಡಲಿತ್ತು ಅಡಿಯೆರಡು ಬಂದು ||
ಫಕ್ಕನದಸ್ಮರಿಸೆ ಬೀಳ್ವುದು ಅಶ್ರುಬಿಂದು |
ಮಿಕ್ಕ ಸ್ಮರಣೆಯು ಕೊಡದು ಆತೋಷವೆಂದೂ || ೧ ||

ಅಂದು ತಾಯಿಯ ತೋಳುಗಳೊಳಾಡುತಿದ್ದೆ |
ಅಂದು ತಂದೆಯ ಕಾಲ ಕುದುರೆ ಮಾಡಿದ್ದೆ ||
ಅಂದ ವಿದ್ಯೆಯು ದುಃಖವೇನೆನ್ನುತಿದ್ದೆ |
ಅಂದು ಭಯ ಕಾಮ ಲೋಭವನರಿಯದಿದ್ದೆ || ೨ ||

ಆಗಲೀ ಧರೆ ಕಾಣಿಸಿತು ಚಿಕ್ಕದಾಗಿ |
ಆಗಳಿದನರಿಯುನಾ ಬಹು ಕೆಟ್ಟದಾಗಿ ||
ಆಗಸವನೋಡೆ, ತಾರೆಯು ಮಿನುಗಲಾಗಿ |
ಆಗದಿರೆ ಪಿಡಿಯಲದನಳುತಿದ್ದೆ ಕೂಗಿ || ೩ ||

ಬೆಟ್ಟದಗ್ರದೊಳ್ ಕಂಡು ಹೊಳೆವ ಚಂದ್ರನನು |
ಥಟ್ಟನೆಂದೆನು ಅಲ್ಲಿ ನಾ ಪೋಗಲೇನು? ||
ಬಟ್ಟಲಂತಿಹ ಮಂಡಲದೊಳಿರುವುದೇನು |
ದಿಟ್ಟಸಲದರ ಸೊಬಗು ಪರಿಮಾಣಗಳನು || ೪ ||

ಸಂಜೆಯಾಗಲು ಪಶ್ಚಿಮಾಬ್ಧಿ ನೋಡಿದೆನು |
ಅಂಜದದರೊಡಲ ಸೂರ್ಯನು ಪ್ರವೇಶಿಪನು ||
ಮುಂಜಾನೆ ಕಾಣಲವನೇ ಪ್ರಭಾಕರನು |
ರಂಜಿಸುತ ಮೂಡಣಾಕಾಶ ಬೆಳಗಿಪನು || ೫ ||

ಆರು ರಚಿಸಿದರೆನ್ನನಾ ಸೂರ್ಯನನ್ನು |
ಆರೀಲೋಕದ ಪಿತನೊ ಅವನ ನೆನಸಿದೆನು ||
ಆರ ಸರದಿಂ ಹರಿದ ಮೌಕ್ತಿಕಗಳಿನ್ನೂ |
ಮೀರಿ ಮೆರೆಯುವವೊ ಬೆಳಗಿಸುತಾಗಸವನು || ೬ ||

ತೊದಲು ನುಡಿಯಿಂದಾಗಲೇ ಪ್ರಾರ್ಥಿಸಿದೆನು !
ಮೊದಲು ಮಾತೆಯು ಕಲಸಿದಂದದಲಿ ನಾನು ||
"ಒದಗಿಸೈ ದೇವಸದ್ಬುದ್ಧಿ ಗುಣಗಳನು |
ವಿಧಿಸೆನಗೆ; ನಿನ್ನನೇ ನಾನನುಸರಿಪೆನು" || ೭ ||

ಶುಭವಾಗಲೆಂದೆ ಮಾತಾ ಪಿತರುಗಳಿಗೆ |
ಶುಭವಾಗಲೆಂದೆ ಸೋದರಿ ಸೋದರಂಗೆ ||
ಶುಭವೆನ್ನ ದೇಶಕ್ಕೆ ಶುಭವು ರಾಜನಿಗೆ |
ಶುಭವು ಜರೆದಾರಿದ್ರ್ಯವನುಭವಿಸುವರಿಗೆ || ೮ ||

ಎಲ್ಲಿಯಾ ಬಾಲ್ಯದಾಶುಭ ದಿನಗಳೆಲ್ಲಿ! |
ಎಲ್ಲಿಯಾ ಸಂತೋಷ ಶಾಂತಿ ಇನ್ನೆಲ್ಲಿ! ||
ಇಲ್ಲವೆಲ್ಲಿಯು ಹೊರತು ಈ ಸ್ಮರಣೆಯಲ್ಲಿ |
ನಿಲ್ಲಿಸಿದ ನಿಲ್ಲಿಸೈ ದೇವ ಎನ್ನಲ್ಲಿ! || ೯ ||

L. V.

ಮುಕ್ತಿಪೌಜಿನ ಗತಿಸಿದ ಜನರಲ್ ಬೂತರವರು.

ಶ್ರೀಮದಾಂಗ್ಲ ಸಮ್ರಾಟ ಜಾರ್ಜ್ ದೊರೆಯವರು ಜನರಲ್ ಬೂತರ ಮರಣ ವಾರ್ತೆಯನ್ನು ಕೇಳಿದೊಡನೆ ಪ್ರಪಂಚದ ಎಲ್ಲಾ ಕಡೆಗಳಿಂದಲೂ ಬೂತರಿಗೋಸ್ಕರ ದುಃಖಪಡುತ್ತಿರುವವರೊಡನೆ ತಾನೂ ಸಹಭಾಗಿಯಾಗಿದ್ದೇನೆಂದು ತಿಳಿಸಲು ಕಳುಹಿಸಿದ ತಂತೀ ವರ್ತಮಾನದಿಂದ ಕೀರ್ತಿ ಶೇಷರ ಜೀವನದ ಸೂಕ್ಷ್ಮವಿಚಾರವೂ ಮಹತ್ವವೂ ವ್ಯಕ್ತವಾಗುತ್ತಿವೆ. ಹೇಗೆಂದರೆ,—"ಇವರ ಮರಣದಿಂದ ಜನಾಂಗಕ್ಕೆ ಅಪಾರವಾದ ನಷ್ಟ ಉಂಟಾಗಿರುವುದು; ಇವರು ಏರ್ಪಡಿಸಿದ ಸಂಘವು ಅತ್ಯಂತ ಘನವಾದುದು. ಬಡವರಿಗೆ ನಿತ್ಯ ಸ್ನೇಹಿತರಾಗಿದ್ದ ಇವರು ಅವರಿಗೆ ಕಾರ್ಯತಃ ಸಹಾಯಮಾಡುವುದರಲ್ಲಿಯೇ ತನ್ನ ಜೀವಮಾನವನ್ನು ಕಳೆದರು. ಇವರ ಸತ್ಕಾರ್ಯಗಳ ಫಲವು ಉತ್ತರೋತ್ತರ ವ್ಯಕ್ತವಾಗುತ್ತಿದೆ. ಪ್ರಪಂಚದ ಎಲ್ಲಾ ಕಡೆಗಳಿಂದಲೂ ಇವರಿಗಾಗಿ ಗೋಳಾಡುವ ಸಮೂಹದೊಂದಿಗೆ ನಾನೂ ಸೇರಿ, ಪ್ರಕೃತ ಸಂಭವಿಸಿರುವ ವಿಪತ್ತಿನಲ್ಲಿ ನಿಜವಾಗಿಯೂ ಭಾಗಿಯಾಗಿದ್ದೇನೆ."

ಇಂತಹ ಉಚ್ಚಶ್ಲಾಘನೆಯ ಕಾರಣವಾದ ಮಹತ್ಕಾರ್ಯಗಳ್ಯಾವುವು, ಅವುಗಳನ್ನು ಬೂತರು ಸಾಧಿಸಿದುದು ಹೇಗೆ, ಈ ಮಹನೀಯರ ಜೀವನ ಪುರಾಣದಿಂದ ನಾವು ಎಂತಹ ಅನುಭವಗಳನ್ನು ಸಂಗ್ರಹಿಸಬಹುದು, ಎಂಬುದನ್ನು ಕೊಂಚ ಪರ್ಯಾಲೋಚಿಸುವ.

ಪತಿತರಾದ ಜನಾಂಗವೆಂದರೆ, ನಾವಾದರೊ ಅಸ್ಪೃಷ್ಟ ಜಾತಿಯ ಪಂಚಮರೆಂದು ಮಾತ್ರ ಎಣಿಸುತ್ತೇವೆ. ಜಾತಿಯ ತಾರತಮ್ಯಗಳಿಂದ ಮಾತ್ರ ಜನಾಂಗದ ಒಂದು ಶಾಖೆಯು ಪತಿತವಾಗುವುದಿಲ್ಲ; ನೀತಿ ತಪ್ಪಿ ನಡೆವ ಉಚ್ಚಜಾತಿಯವರೂ ಅನಾಥ ದರಿದ್ರ ಅಶಿಕ್ಷಿತ ನಿರ್ಗತಿಕರೂ ಏಕೆ ಈ ತರಗತಿಯಲ್ಲಿ ಸೇರಿರಲಾಗದು? ಸಂಪರ್ಕವಿರುವುದರಿಂದ ಮಾತ್ರ ಜನಾಂಗದ ಏಳಿಗೆಯಾಗದು; ಮಹನೀಯರು 'ಜಾತಿ'ಯನ್ನಲ್ಲ, ಜನಾಂಗವನ್ನೆ ತಮ್ಮ ವ್ಯವಸಾಯ ಕ್ಷೇತ್ರವಾಗೆಣಿಸಿ, ಇಕ್ಕಟ್ಟಾದ ತಮ್ಮ ದೃಷ್ಟಿಯನ್ನು ದಿಗಂತದವರಿಗೂ ವಿಸ್ತರಿಸುವರು. ಇದರಿಂದಲೇ ಅವರು 'ಅನಾಥ ಬಂಧುಗಳೂ ದೀನ ರಕ್ಷಕರೂ.' ಜನಾಂಗದಲ್ಲಿ ಅತಿದರಿದ್ರ, ಅರ್ಧಭೋಜಕ, ವ್ಯಭಿಚಾರಿ, ಮದ್ಯಪಾಯಿ, ಜೂಜುಗಾರ, ಮೋಜುಗಾರ, ದುಂದುಗಾರ, ಚಿರಕೈದಿ, ಮುಂತಾದ ಅಧಃಪತರಾದವರಿಗೆ ಬೇಕಾದ ಆಹಾರ, ನಿದ್ರೆ, ಓದುಬರಹ, ಶೌಚ, ಉದ್ಯೋಗ, ಭಗವದ್ಧ್ಯಾನ, ಸನ್ಮಾರ್ಗಾವಲಂಬನಗಳನ್ನು ಒದಗಿಸುವ ಸೌಕರ್ಯಗಳನ್ನು ಮಾಡಿಕೊಟ್ಟುದರಿಂದ ಬೂತರವರು ಪ್ರಜಾ ಕ್ಷೇಮಸಾಧಕರಾದರು. ಇವರು ೩೪ ವರ್ಷಗಳ ಹಿಂದೆ ಸ್ಥಾಪಿಸಿದ "ಸಲ್ವೇಶನ್ ಆರ್ಮಿ" (ಮುಕ್ತಿಪೌಜು)ವೆಂಬುದು ಈಗ ೮೯೭೨ ಉಪಸಂಘಗಳಿಂದಲೂ ೨೧,೨೦೩ ಸದಸ್ಯರಿಂದಲೂ, ಪ್ರಪಂಚದ ೫೫ ಬೇರೆ ಬೇರೆ ದೇಶಗಳಲ್ಲಿ ಪಸರಿಸಿರುವುದು. ಈ ಸಂಘಕ್ಕೆ ಈಗತಾನೆ ೧೫ ಶಾಖೆಗಳಿರುವವು; ಇವೂ ಮದ್ಯಪಾನ ದಮನ, ಧೂಮಪಾನ ನಿರ್ಮೂಲನ, ಗಾಯನ, ಮಿತವ್ಯಯ ದ್ರವ್ಯಸಂಚಯನ, ಖೈದಿಗಳಿಗೆ ಬೋಧನ, ದುಷ್ಟ ಪಾಪಿಗಳ ಮಾನಸಾಂತರಕರಣ, ಚಿಕಿತ್ಸಾ ಯೋಜನ, ಅನ್ನ ವಸ್ತ್ರದಾನ, ಆಂದೋಲನಗಳ ಸಮಾಧಾನ, ದರಿದ್ರರ ಸಂಘೀಕರಣ, ದಾನಶೇಖರಣ, ವಾರ್ತಾಕರಣ, ತಪ್ಪಿ ಹೋದವರ ಶೋಧನ, ತಸ್ಕರೋದ್ಧರಣ ಮೊದಲಾದ ವಿವಿಧೋಪಾಯಗಳಿಂದ ಸಮಾಜೋನ್ನತಿಯ ಚಿರ ಶ್ಲಾಘನಕರ ಸಾಧನಗಳನ್ನು ಈಗಲೂ ಮಾಡುತ್ತಿರುವವು.

ಸ್ವಾರ್ಥವನ್ನು ನೀಗಿ, ಪರಹಿತವನ್ನು ಸಾಧಿಸಿ, ದೇವರ ಅಪೂರ್ವ ಪ್ರೇಮಮಯ ಆಶೀರ್ವಾದಗಳನ್ನು ಹೊಂದಿ, ಕೃತಾರ್ಥರಾಗಬೇಕೆಂಬುದೇ ಇವರ ಮೂಲಸೂತ್ರವಾದುದರಿಂದ, ಇವರು 'ಪಾದ್ರಿ' ಗಳಲ್ಲ. 'ಪಾದ್ರಿಗಳು' ಅನುಕೂಲಸ್ಥರಿಗೂ ದೇವಾಲಯಗಳಲ್ಲಿ ಆರಾಧಿಸುವವರಿಗೂ ತಮ್ಮ ಶಾಸ್ತ್ರ ಪ್ರಸಾರಮಾಡುವವರು; ಇವರಾದರೋ ಭಗವಂತನ ಮಹಿಮೆಯನ್ನು ಎಲ್ಲೆಲ್ಲಿಯೂ ತಕ್ಕಂತೆ ಸಾರಿ, ಅಲ್ಲಲ್ಲಿಯ ಉಡುಪು ಪದ್ಧತಿಗಳನ್ನು ಕೈಕೊಂಡು ದರಿದ್ರರೊಡನೆ ತಮ್ಮ ವಾಸಗೈವರು.

ಈ ಸಂಘದ ವರದಿಗಳನ್ನೋದಿದರೆ ಕೆಲವು ಅಂಕೆಗಳ ತಂಡತಂಡಗಳೇ ತೋರುವುವು:—ಅನ್ನ ಛತ್ರಗಳಲ್ಲಿ ಕೊಟ್ಟ ಊಟಗಳು ೮॥ ಕೋಟಿ; ಮನೆಯಿಲ್ಲದವರಿಗೆ ಒದಗಿಸಿದ ಮನೆಗಳು ೩। ಕೋಟಿ; ಕೆಲಸವಿಲ್ಲದವರಿಗೆ ಮಾಡಿಕೊಟ್ಟ ಕೆಲಸಗಳು ೨॥। ಲಕ್ಷ; ಪೋಷಿಸಿ ಸನ್ಮಾರ್ಗಕ್ಕೆ ತಂದ ಹುಟ್ಟು ಬದ್ಧಚಾಲರು ೧೦ ಸಾವಿರ; ವ್ಯಭಿಚಾರ ವಿಮುಕ್ತೆಯರಾಗಿ ಮಾಡಿದ ಸ್ತ್ರೀಯರ ಸಂಖ್ಯೆ ೫೦ ಸಾವಿರ; ಸಹಾಯಮಾಡಿದ ಸಂಸಾರಗಳು ೧೨॥ ಲಕ್ಷ; ನೀತಿಸಾರಿದ ಮನೆಗಳು ೭। ಲಕ್ಷ; ಮದ್ಯಪಾನ ನಿರ್ಮೂಲನಕ್ಕಾಗಿ ಭೇಟಿ ಕೊಟ್ಟ ಸಾರಾಯಿ ಅಂಗಡಿಗಳು ೬ ಲಕ್ಷ; ಉಪಚರಿಸಲ್ಪಟ್ಟ ರೋಗಿಗಳು ೧॥ ಲಕ್ಷ. ಈ ಸಂಖ್ಯೆಗಳಲ್ಲಿ ಎಷ್ಟೋ ಜನರು ಸುರಿಸಿದ ಬೆವರಿನ ಪ್ರವಾಹವೂ, ಎಷ್ಟೋ ಕುಟುಂಬಗಳ ಉದ್ಧಾರವೂ ಅಡಕವಾಗಿಯದೆ!

ಇಷ್ಟೆಲ್ಲ ಕೆಲಸವನ್ನು ಸಿದ್ಧಿಮಾಡಕೊಂಡ ಬೂತರವರು,—"ಸ್ವಪ್ರಯೋಜನದ ಮೂಲಕ ಮೋಕ್ಷವು ಎಂದಿಗೂ ಲಭಿಸದು. ಸ್ವಾರ್ಥವೇ ಬಡತನ, ಅವಿದ್ಯೆಗಳ ತವರು. ಸ್ವಾರ್ಥತೆಯನ್ನು ಮರ್ದಿಸಿ, ಸಾವಕಾಶದಿಂದ ಖಂಡಿತವಾಗಿ, ಸಹೋದರನಾದ ಮಾನವನನ್ನು ಪ್ರೀತಿಸುತ್ತ ಜನಾಂಗ ಕ್ಷೇಮಕ್ಕಾಗಿ ಆತ್ಮಸಮರ್ಪಣೆ ಮಾಡುವುದು ಜನ್ಮಸಾರ್ಥಕ್ಯ!" ಎಂದು ಶಂಖಧ್ವನಿಯಿಂದ ಸಾರಿರುವ ಈ ವಾಕ್ಯವನ್ನು ಸಮಾಜ ಹಿತೇಚ್ಛುಗಳು ಮರೆಯಲಾರರು.

ಬೂತರವರು ೧೮೨೯ನೇಯ ಇಸವಿಯಲ್ಲಿ ಜನಿಸಿದುದರಿಂದ ಅವರಿಗೆ ಮರಣಕಾಲದಲ್ಲಿ ೮೩ನೆಯ ವರ್ಷ ನಡೆಯುತ್ತಲಿತ್ತು. ಇವರು ಮಾಂಸಾಹಾರವನ್ನೂ ಮದ್ಯಪಾನವನ್ನೂ ಹೊಗೆಸುತ್ತುಗಳನ್ನೂ ತ್ಯಜಿಸಿದ್ದರು. ಇವರ ಕಷ್ಟಾರ್ಜನೆಯ ಲಕ್ಷಾಂತರ ಪವನುಗಳಲ್ಲಿ ಮರಣಕಾಲದಲ್ಲಿ ಬರೇ ಆರು ಸಾವಿರ ರೂಪಾಯಿ ಮಾತ್ರ ಇವರ ಮಕ್ಕಳಿಗೆ ಉಳಿದಿತ್ತು. ಈಗ ಆ ಮುಕ್ತಿದಲದ ಮೇಲಾಧಿಕಾರವನ್ನು ಅವರ ಪುತ್ರ ಬ್ರಾಮವೆಲ್ ಬೂತರವರು ಅಲಂಕರಿಸಿರುವರು.

ಹಿಂದೂ ಸಮಾಜದಲ್ಲಿ ಏರ್ಪಾಡುಗಳು ಗರ್ಭಾವಸ್ಥೆಯಲ್ಲಿಯೇ ಯುಗಾಂತರ ಬಂಧನೆಯನ್ನು ಹೊಂದುತ್ತಿವೆ; ಹಲವು ಸಾರಿ ಗರ್ಭಸ್ರಾವವಾದುದೂ ಉಂಟು; ಹಲವರು ಸಮಾಜ ಸುಧಾರಣೆಯೆಂದು ಹಣವೆತ್ತಿ ಮೆಲ್ಲನೆ ಮಾಯವಾದ್ದೂ ಇದೆ; ಸುಧಾರಣೆಗೆ ಎದುರಾಡುವ ದಳವು ಸುಧಾರಕರಿಗಿಂತಲೂ ಮಿಗಿಲಾಗಿದ್ದು, ವರ್ಣ ಭೇದಗಳನ್ನು ಕಾಪಾಡುತ್ತಾ, ಕೀಳು ಮೇಲು ವರ್ಗಗಳ ಮಧ್ಯದಲ್ಲಿ ಕ್ಲೇಷಕರ ಶೋಚನೀಯ ವ್ಯಂಗಗಳ ಮತ್ತು ಹಿಂಸ್ರಕ ದೂಷಣಗಳ ಅಪಾರ ಸಾಗರಗಳನ್ನು ಕಲ್ಪಿಸುತ್ತಾ ಕಾಲಸ್ರೋತವನ್ನೂ ಜನಾಂಗ ಚರಿತೆಯನ್ನೂ ಹಿಂದಕ್ಕೆ ಪುರಾಣಗಳ ಕಾಲಕ್ಕೆ ದೂಡುತ್ತ ಅರ್ಭಟಿಸುತ್ತಿದೆ. ಇತ್ತಂಡದವರೂ ಬೂತರವರ ಜೀವನ ಚರಿತೆಯ ವಿಚಾರಗಳನ್ನು ಸರಿಯಾಗಿ ಆಲೋಚಿಸಿ ನಡೆವುದೊಳ್ಳೆಯದು.

ಜನರಲರು ಅಕ್ಲಾಂತ ಪರಿಶ್ರಮಿ, ಸದಾ ಹಾಸ್ಯೋಜ್ವಲ, ಮತ್ತು ಅತಿ ಮಧುರ ಪ್ರಕೃತಿಯ ವ್ಯಕ್ತಿ. ಗರ್ವ ಅಹಂಕಾರಗಳಿಗೆ ಇವರ ಚರಿತೆಯಲ್ಲಿ ಎಡೆಯಿಲ್ಲ. ಪರಂತು ಅವರೊಡನೆ ಪೃಥ್ವಿಯ ಮುಖ್ಯ ರಾಜರೂ, ಸಾಹಿತ್ಯರ ರಾಜನೀತಿಕ ದಾರ್ಶನಿಕ ಪುರುಷರೂ ಅತಿ ಅಗ್ರಹಭಾವದಿಂದ ಆಲಾಪ ಮಾಡಿದ್ದರು. ಇವರು ಭೂಮಿಯನ್ನು ಅನೇಕ ಸಾರಿ ಪರಿಭ್ರಮಣ ಮಾಡಿದ್ದರು. ಸುಮ್ಮನೆ 'ಧರ್ಮನೇತ'ರಾಗಿರದೆ, ಅಸಂಖ್ಯ ನರನಾರಿಯರ ಆಶಾಹೀನ, ಲಕ್ಷ್ಯಹೀನ, ಅಂಧಕಾರ ಹೃದಯದಲ್ಲಿ ಆನಂದೋಜ್ವಲ ದೀಪವನ್ನು ಬೆಳಗಿಸಿದ್ದರು. ಮೃತ್ಯುವು ಮಹಜ್ಜೀವನದ ಪ್ರವಾಹವನ್ನು ತಡಿಸಿದುದಂತೂ ನಿಜ,—ಅವರ ಮಾತುಗಳನ್ನೂ ಕಾರ್ಯಗಳನ್ನೂ ಅಡಗಿಸಲು ದುರ್ಬಲವಾಗಿರುವುದು. ಶತ ಶತಾಬ್ಧಿಗಳ ರಾಶಿಯನ್ನು ಬೇಧಿಸುತ್ತ ಈ ಅನುಸರಣೀಯ ಸ್ವಾರ್ಥ ತ್ಯಾಗವೂ ಪತಿತರ ಉದ್ಧಾರವೂ ಮಾನವಾಂತಃಕರಣವನ್ನು ತನ್ನ ಉಜ್ವಲಾಲೋಕದಿಂದ ಉದ್ಭಾಸಿತವಾಗಿ ಮಾಡುವುದೂ ನಿಶ್ಚಯ.

M. N. K.

ಮಕ್ಕಳ ಪೋಷಣೆ.

ಒಂದು ದೇಶದ ಉನ್ನತಿಯು ಆ ದೇಶದ ಮಕ್ಕಳ ದೇಹಾರೋಗ್ಯದ ಮೇಲೆ ಹೊಂದಿಕೊಂಡಿರುತ್ತದೆ. ಭವಿಷತ್ಕಾಲದಲ್ಲಿ ಕಾಯಪುಷ್ಟರಾದ ಬೇಸಾಯಗಾರರು, ಕಮ್ಮಾರರು, ವಿದ್ವಾನ್ ಮಹಾಜನರು, ರಾಜನೀತಿವಿಶಾರದರು, ಯುದ್ಧರಂಗದಲ್ಲಿ ಹೋಗಿ ಕಾದಾಡುವ ರಣಧೀರರು ಬೇಕೆಂತಾದರೆ ದೇಶದಲ್ಲಿ ಈಗಲಿರುವ ಮಕ್ಕಳು ತಕ್ಕ ರೀತಿಯಲ್ಲಿ ಪೋಷಿಸಲ್ಪಡಬೇಕು. ಮಕ್ಕಳ ಪೋಷಣವು ತಾಯಿಯ ಮೇಲೆ ಹೊಂದಿಕೊಂಡಿರುತ್ತದೆಂಬದಾಗಿ ಕಳೆದ ಸಂಚಿಕೆಯಲ್ಲಿ ತಿಳಿಸಿದೆವು. ಮಕ್ಕಳಿಗೆ ಕೊಡುವ ಆಹಾರವು ಅದರ ದೇಹಕ್ಕೆ ಸೇರಿಕೊಂಡು ದೇಹವು ಬೆಳೆಯಬೇಕಾದರೆ ಕೊಡುವಂಥಾ ಆಹಾರವು ಯಾವಕಾಲದಲ್ಲಿ ಕೊಡತಕ್ಕದೆಂಬದನ್ನು ತಿಳಿಯುವದೂ ಅವಶ್ಯವು.

ದನದ ಕರುವು ತನ್ನ ತಾಯಿಯ ಹೊಟ್ಟೆಯಿಂದ ಹೊರ ಬಂದಾಕ್ಷಣ ಆಹಾರ ತಕ್ಕೊಳ್ಳ ಪ್ರಾರಂಭಿಸುತ್ತದೆ. ಈ ಲೋಕಕ್ಕೆ ಕಾಲಿಟ್ಟ ಪ್ರಥಮ ತಾಸಿನಲ್ಲಿಯೇ ಅದು ತಾಯಿಯ ಮೊಲೆಯುಣ್ಣಲು ತೊಡಗುತ್ತದೆ. ತದ್ರೀತಿ ಒಂದು ಮಗು ಸಹಾ ತಾಯಿಯ ಗರ್ಭಜೀಲದ ಹೊರ ಬಂದಾಕ್ಷಣ ತಾಯಿಯ ಮೊಲೆಯಿಂದ ಸಿಕ್ಕುವಂಥಾ ಹಾಲನ್ನು ಅದಕ್ಕೆ ತಿನ್ನಿಸುವದು ಪ್ರಥಮ ಕರ್ತವ್ಯವಾಗಿದೆ. ಪ್ರಥಮ ದಿನದಲ್ಲಿಯೇ ಮಗುವಿಗೆ ಮೊಲೆಹಾಲುಣ್ಣಿಸಲಿಕ್ಕೆ ತಾಯಿಯ ಸ್ತನದಲ್ಲಿ ತಕ್ಕಷ್ಟು ಹಾಲಿರಬೇಕಲ್ಲವೋ ಎಂಬದಾಗಿ ಕೆಲವರು ಪ್ರಶ್ನೆ ಮಾಡಬಹುದು. ಆದರೆ ಸ್ತನದಲ್ಲಿ ಪೂರ್ಣ ಹಾಲು ತುಂಬದಿದ್ದರೂ ಇದ್ದ ಹಾಲನ್ನು ಕೊಟ್ಟು ಮಗುವಲ್ಲಿ ಶಕ್ತಿಯನ್ನು ಹುಟ್ಟಿಸುವದು ಅವಶ್ಯ. ಮಗುವಿಗೆ ಬಾಲ್ಯಕಾಲದ ಪ್ರತಿ ನಿಮಿಷ, ತಾಸು, ದಿವಸಗಳು ಅದರ ಬೆಳವಣಿಕೆಗೆ ಅತಿ ಶ್ರೇಷ್ಠವಾದವುಗಳಾಗಿರುವುದರಿಂದ ಆದಷ್ಟು ಬೇಗ ಮಗುವಿಗೆ ಮೊಲೆಯುಣ್ಣಿಸುವದು ಒಳ್ಳೇದು.

ಸಣ್ಣ ಮಕ್ಕಳಿಗೆ ದಿನವೆಲ್ಲಾ ಹಾಲುಣ್ಣಿಸಲೂ ಪ್ರಾಯಸ್ಥರಂತೆ ದಿವಸಕ್ಕೆ ಮೂರಾವೃತಿ ಆಹಾರಕೊಡುವ ನಿಯಮನ್ನೇ ಮಾಡಲೂ ಕೂಡದು. ಮಗುವು ಹುಟ್ಟಿ ೪-೬ ವಾರಗಳ ವರೆಗೆ ೨ ತಾಸಿಗೊಮ್ಮೆ, ೬-೮ ವಾರಗಳಿಂದ ೨-೪ ತಿಂಗಳ ವರೆಗೆ ೨॥ ತಾಸು, ೪-೧೦ ತಿಂಗಳಿಂದ ೧೦-೧೨ ತಿಂಗಳ ವರೆಗೆ ೩ ತಾಸುಗಳಿಗೊಮ್ಮೆ ಹಾಲುಣ್ಣಿಸಬೇಕು. ಅದಕ್ಕೆ ಬಾಲ್ಯಪ್ರಾಯದಲ್ಲಿ ಕರಗುವ ಶಕ್ತಿಯು ಹೆಚ್ಚಿರುವುದರಿಂದ ಹೀಗೆ ಆಹಾರ ಕೊಡುವುದರಿಂದ ದೇಹವು ಬೇಗನೇ ಬೆಳಿಯುವುದು. ಆಹಾರ ಕೊಡುವ ಮೇಲಿನ ಕಾಲ ನಿಯಮ ಪಟ್ಟಿಯು ಸರ್ವಸಾಧಾರಣವಾದ್ದದ್ದಾಗಿದೆ. ಆದರೆ ಎಲ್ಲಾ ಮಕ್ಕಳಲ್ಲಿಯೂ ಈ ಕ್ರಮವನ್ನೇ ಅನುಸರಿಸಲಾಗದು. ಆಯಾ ಮಗುವಿನ ದೇಹರಚನೆಗನುಸಾರವಾಗಿ ಮತ್ತು ತಾಯಿಯ ಮೊಲೆಹಾಲಿನ ಪರಿಮಾಣವನ್ನು ಅನುಸರಿಸಿ ಆಹಾರ ಕೊಡುವ ಕಾಲವನ್ನು ತಾಯಿಯಂದಿಯರೇ ನಿಯಮಿಸಿಕೊಳ್ಳುವುದು ಅವಶ್ಯವು.

ಬೆಳಿಗ್ಯೆ ೬ ಗಂಟೆಯಿಂದ ರಾತ್ರಿ ೧೦ ಗಂಟೆಯ ವರೆಗೆ ಮಾತ್ರ ಮಕ್ಕಳಿಗೆ ಅಗಾಗ್ಯೆ ಹಾಲುಣ್ಣಿಸುವುದು ಹಿತವು. ರಾತ್ರಿ ೧೦ ಗಂಟೆಯ ನಂತರ ಹಾಲುಣ್ಣಿಸಲೇ ಕೂಡದು. ಮೊಲೆಯಲ್ಲಿ ಹಾಲು ವೃದ್ಧಿಯಾಗುತ್ತಾ ಬರುವಾಗ ಹಗಲಲ್ಲಿ ಎರಡು ತಾಸಿಗೊಮ್ಮೆ, ರಾತ್ರಿ ಒಂದೇಸಾರಿ ಮಾತ್ರ ಮಗುವಿಗೆ ಹಾಲುಣ್ಣಿಸಬೇಕು. ಮಗುವು ೬ ವಾರ ಪ್ರಾಯಕ್ಕೆ ಮುಟ್ಟುವ ವರೆಗೆ ಈ ಕ್ರಮವನ್ನು ಅನುಸರಿಸುವುದು ಒಳ್ಳೇದು. ಅನಂತರ ೨॥ ತಾಸಿಗೊಮ್ಮೆ ಮೊಲೆಯುಣ್ಣಿಸುವ ಕ್ರಮವನ್ನು ಅನುಸರಿಸಬೇಕು. ಒಂದು ದಿನದ ೨೪ತಾಸುಗಳಲ್ಲಿ ೮ ಸಾರಿಗಿಂತ ಹೆಚ್ಚಿಗೆ ಸಾರಿ ಹಾಲುಣ್ಣಿಸಕೂಡದು. ಮಗುವಿಗೆ ೪ತಿಂಗಳು ಪ್ರಾಯವಾಗುವಾಗ ಮೂರು ತಾಸಿಗೊಂದಾವರ್ತಿ ಹಾಲುಣ್ಣಿಸಬೇಕು, ಅಂದರೆ ದಿವಸದಲ್ಲಿ ೬ ಸಾರಿ, ೧೦ ತಿಂಗಳು ಪ್ರಾಯವಾಗುವಾಗ ದಿವಸಕ್ಕೆ ೫ ಸಾರಿ. ಮಾತ್ರ ಹಾಲುಣ್ಣಿಸುವುದು ಒಳ್ಳೇಯದು. ಮಗುವಿಗೆ ೪-೫ ತಿಂಗಳು ಪ್ರಾಯವಾಗುವಾಗ ರಾತ್ರಿಗೆ ಕೊಡುವ ಆಹಾರವನ್ನೂ ನಿಲ್ಲಿಸಬಹುದು. ರಾತ್ರಿಗೆ ತಾಯಿಗೆ ಪೂರ್ಣ ವಿಶ್ರಾಂತಿ ಇರುವುದು ಅಗತ್ಯವು. ರಾತ್ರಿಗೆ ತಾಯಿಗೆ ವಿಶ್ರಾಂತಿ ಇಲ್ಲದೆ ಇದ್ದರೆ ತಾಯಿಯ ಹಾಲು ಕೆಟ್ಟುಹೋಗುವುದು.

ಈ ಕ್ರಮವನ್ನನುಸರಿಸದೆ ಮಗು ಕೂಗಿದಾಗ ಯಾ ತಾಯಿಗೆ ಸಮಯವಿದ್ದಾಗ ಹಾಲುಣ್ಣಿಸುವುದು ಸರ್ವಥಾ ಯೋಗ್ಯವಲ್ಲ. ಕ್ರಮ ತಪ್ಪಿ ಹಾಲನ್ನುಣ್ಣಿಸುವುದರಿಂದ ಕೆಟ್ಟ ಹಾಲು ಮಗುವಿಗೆ ಸಿಕ್ಕಿದಂತಾಗಿ ಮಗುವಿನ ಜೀರ್ಣ ಶಕ್ತಿಯು ಕೆಟ್ಟುಹೋಗುವುದು. ದಿವಸಕ್ಕೆ ೬-೮ ಸಾರಿಗಿಂತ ಹೆಚ್ಚು ಸಾರಿ ಮಗುವಿಗೆ ಹಾಲುಣ್ಣಿಸುವುದಾದರೆ ತಾಯಿಯ ಹಾಲಿನಲ್ಲಿ ಕೂಡಿರುವ ನೀರು ಕಮ್ಮಿಯಾಗಿ ಮಗುವಿಗೆ ಘನೀಭೂತವಾದ ಹಾಲು ದೊರೆದಂತಾಗುವುದು. ಇತ್ತಕಡೆಯಲ್ಲಿ ತಾಯಿ ಬಹಳ ತಡವಾಗಿ ಇಚ್ಛೆ ಬಂದಾಗ ಮಗುವಿಗೆ ಹಾಲನ್ನು ಕೊಡುವುದಾದರೆ ಮೊಲೆಯ ಹಾಲಿನಲ್ಲಿ ನೀರು ಹೆಚ್ಚಾಗಿ ಹಾಲಿನಲ್ಲಿರುವ ಪೌಷ್ಟಿಕ ಪದಾರ್ಥವು ಕಮ್ಮಿಯಾಗುವುದು. ಇಂಥಾ ಹಾಲನ್ನು ಮಗುವು ಉಣ್ಣಿಸುವುದಾದರೆ ಅದರ ದೇಹವು ಪೌಷ್ಟಿಕವಾಗಿ ಬೆಳೆಯದು. ಈ ಕಾರಣಗಳಿಂದ ಮಗುವಿಗೆ ಹಾಲುಣ್ಣಿಸುವರೆ ಮೇಲೆ ಹೇಳಿದ ನಿಯಮವನ್ನೇ ಮಾಡಿಕೊಳ್ಳುವುದು ವಿಹಿತವು. ಒಬ್ಬ ತಾಯಿಯು ಬಹಳ ಹೆಚ್ಚು ಸಾರಿ ಮಗುವಿಗೆ ಹಾಲನ್ನುಣ್ಣಿಸುವುದರಿಂದ ಅದರ ಜೀರ್ಣ ಶಕ್ತಿಯು ಕೆಡುತ್ತದೆಂದೂ ಬಹಳ ಕಮ್ಮಿ ಸಾರಿ ಕೊಡುವುದರಿಂದ ಅದಕ್ಕೆ ಪೌಷ್ಟಿಕ ಹಾಲು ದೊರೆಕದಂತಾಗುವುದೆಂದೂ ಪ್ರತಿ ತಾಯಿಯು ಮರೆಯಲಾಗದು.

ಪಾಶ್ಚಾತ್ಯ ದೇಶಗಳವರು ಈಗಿನ ಮಕ್ಕಳೇ ಭವಿಷತ್ಕಾಲದ ರಾಷ್ಟ್ರೀಯ ಉನ್ನತಿಗೆ ಮುಖ್ಯ ಕರಣಗಳೆಂಬದನ್ನು ಅರಿತಿರುವುದರಿಂದ ಮಕ್ಕಳ ಪೋಷಣೆಗೆ ತಕ್ಕೊಳ್ಳುವಷ್ಟು ಜಾಗ್ರತೆಯನ್ನು ಇತರ ವಿಷಯಗಳಿಗೆ ತಕ್ಕೊಳ್ಳುವುದಿಲ್ಲ. ಮಕ್ಕಳನ್ನು ಪೋಷಿ

ಸುವ ವಿಧಾನವನ್ನು ಕಲಿಸಿಕೊಡುವ ಹೆಮ್ಮಕ್ಕಳ ಶಾಲೆಗಳನ್ನು ತಮ್ಮ ದೇಶದಲ್ಲಿ ತೆರೆದು ಈ ಉದ್ದೇಶಕ್ಕಾಗಿ ಹೆಮ್ಮಕ್ಕಳನ್ನು ತರ್ಬಿತು ಮಾಡುವರು. ಒಂದು ದೇಶದಲ್ಲಿ ಒಳ್ಳೇ ಕಾಯಪುಷ್ಟರಾದ, ಒಳ್ಳೇ ಮೆದುಳು ಉಳ್ಳ ಮಕ್ಕಳು ಇರುವುದೇ ಆ ದೇಶದ ಭವಿಷ್ಯೋನ್ನತಿಯ ಲಕ್ಷಣವಾಗಿದೆ. ಇಂಥಾ ಮಕ್ಕಳನ್ನು ದೇಶದಲ್ಲಿ ಹರಡಿಸುವ ಭಾರವು ತಾಯಿಯಂದಿಯರದಾಗಿರುವುದರಿಂದ ತಾಯಿಯಂದಿಯರು ಮಕ್ಕಳ ಪೋಷಣೆಯ ವಿಷಯ ಬಾಲ್ಯದಲ್ಲಿಯೇ ಹೆಚ್ಚಿನ ಲಕ್ಷವಿಡುವುದು ಅಗತ್ಯವಾಗಿದೆ.

S. A.

ಮೆಣಸಿನ ಕಾಯಿನ ವ್ಯವಸಾಯ.

ಬೊಂಬಾಯಿ ಅಧಿಪತ್ಯದ ಸೂರಟ್ ಸಮೀಪದಲ್ಲಿರತಕ್ಕ ಕೆಲವು ಗ್ರಾಮಗಳಲ್ಲಿ ಖುಷ್ಕಿ ಜಮೀನುಗಳಲ್ಲಿ ಮೆಣಸಿನ ಕಾಯನ್ನು ವಿಶೇಷವಾಗಿ ಬೆಳೆಯುತ್ತಾರೆ. ಅಲ್ಲಿನವರು ಅನುಸರಿಸುತ್ತಿರುವ ವ್ಯವಸಾಯ ಕ್ರಮವು ಹ್ಯಾಗಂದರೆ:—ಇದನ್ನು ಬೆಳೆಯತಕ್ಕ ಜಮೀನುಗಳಲ್ಲಿ ಸಣ್ಣ ಸಣ್ಣ ಸುಣ್ಣ ಕಲ್ಲುಗಳು ನುಣುಪಾದ ಮರಳು ಮತ್ತು ಜೇಡಿ ಮಣ್ಣಿನೊಡನೆ ಬೆರತಿರುವವು. ಇಂಥಾ ಜಮೀನುಗಳಲ್ಲಿ ಉಳುವುದು ಬಹಳ ಅನುಕೂಲವಾಗಿರುವುದು ಮಾತ್ರವಲ್ಲದೆ ಇಲ್ಲಿ ನೀರು ಸಹಾ ಬಹಳ ಚೆನ್ನಾಗಿ ಬಸಿದುಹೋಗುವುದು.

ಜಮೀನಿಗೆ ವರುಷ ತಪ್ಪಿ ವರುಷ ಎಕರೆಗೆ ೨೦ ಗಾಡಿಯಂತೆ ಕೊಟ್ಟಿಗೆ ಗೊಬ್ಬರವನ್ನು ಹಾಕುತ್ತಾರೆ. ಇದಲ್ಲದೆ ಪ್ರತಿ ವರುಷವೂ ಹರಳು ಹಿಂಡಿಯನ್ನು ಗೊಬ್ಬರವಾಗಿ ಹಾಕುತ್ತಾರೆ. ನಂತರದಲ್ಲಿ ಎರಡು ಮೂರಾವರ್ತಿ ಕುಂಟೆ ಹೊಡಿಯುತ್ತಾರೆ. ಮೊದಲು ಮಳೆಯಾದನಂತರ ಜಮೀನನ್ನು ಎರಡು ವೇಳೆ ಉಳುತ್ತಾರೆ.

ಮೇ ತಿಂಗಳು ಎರಡನೇ ವಾರದಲ್ಲಿ ಎಕರೆಗೆ ೧೪ ಪೌಂಡು ಬೀಜದಂತೆ ಅಗೆ ಹಾಕುತ್ತಾರೆ. ಬೀಜಗಳು ಮೊಳೆತು ಸೊಸಿಗಳು ಸುಮಾರು ಎರಡು ಅಂಗುಲ ಎತ್ತರವಾದಾಗ್ಯೆ ಅಗೇಪಾತಿನಲ್ಲಿನ ಕಳೆಗಳನ್ನೆಲ್ಲಾ ಕಿತ್ತು ಹಾಕುವರು. ಅವಶ್ಯವಿದ್ದರೆ ಇನ್ನೂ ಒಂದೆರಡಾವರ್ತಿ ಕಳೆ ಕೀಳುವುದುಂಟು.

ಮೊದಲು ಮಳೆಯು ಆದನಂತರ ಸೊಸಿಗಳನ್ನು ಕಿತ್ತು ಇಪ್ಪತ್ತೊಂದು ಅಂಗುಲಗಳ ದೂರವಾಗಿ ನಾಟಿ ಹಾಕುತ್ತಾರೆ. ಸೊಸಿಗಳು ಉದ್ದವಾಗಿ ಬೆಳದಿದ್ದರೆ ಕುಡಿಯನ್ನು ಕತ್ತರಿಸಿ ಬಿಡುವರು. ಹೀಗೆ ಮಾಡುವುದರಿಂದ ಸೊಸಿಗಳು ಜಾಗ್ರತೆಯಾಗಿ ಬೇರು ಬಿಡುವವು.

ಅಗತೆ:—ಮಳೆಯು ನಿಂತ ಕೂಡಲೇ ಹರಳು ಹಿಂಡಿಯ ಗೊಬ್ಬರವನ್ನು ಹಾಕುವರು. ಎಕರೆಗೆ ಸುಮಾರು ೨೮ ಮಣ ಹರಳು ಹಿಂಡಿಯು ಬೇಕಾಗುವುದು. ಸೊಸಿಗಳ ಬೇರಿಗೆ ಸ್ವಲ್ಪವೂ ಘಾಸಿಯಾಗದಂತೆ ಅವುಗಳ ಸುತ್ತಲೂ ಗುಂಡಾಗಿ ಅಗೆದು ಗುಂಡಿ ಮಾಡಿ ಗುಂಡಿಯಲ್ಲಿ ಹರಳು ಹಿಂಡಿಯ ಪುಡಿಯನ್ನು ಸಮವಾಗಿ ಹರವಿ ಮೇಲೆ ಮಣ್ಣನ್ನು ಮುಚ್ಚುತ್ತಾರೆ. ಹೀಗೆ ಗೊಬ್ಬರವನ್ನು ಹಾಕಿದ ತರುವಾಯ ಜಮೀನನ್ನು ಅಗತೆಮಾಡಿ ಕಳೆಗಳನ್ನೆಲ್ಲಾ ಕೀಳುತ್ತಾರೆ. ಸಾಮಾನ್ಯವಾಗಿ ನಾಲ್ಕಾವರ್ತಿ ಅಗತೆಮಾಡಿ ಮೂರಾವರ್ತಿ ಕಳೆಯನ್ನು ಕೀಳುತ್ತಾರೆ. ಗಿಡಗಳಲ್ಲಿ ಹೂವು ಬಿಡಲು ಪ್ರಾರಂಭವಾದಾಗ್ಯೆ ಪ್ರತಿ ಗಿಡದ ಸುತ್ತಲೂ ನೇಗಿಲಿನ ಗೆರೆಯ ಒಂದೊಂದು ಚೌಕವಾಗುವಂತೆ ಉಳುತ್ತಾರೆ.

ಅಗೆ ಹಾಕಿದ ಮೂರು ತಿಂಗಳಿಗೆ ಸರಿಯಾಗಿ ಮೊದಲನೇ ಆವರ್ತಿ ಕಾಯನ್ನು ಬಿಡಿಸುತ್ತಾರೆ. ಇದಾದ ಮೇಲೆ ೨೦ ದಿನಗಳಿಗೊಂದಾವರ್ತಿ ಕಾಯನ್ನು ಬಿಡಿಸುವರು. ಹಸಿ ಮೆಣಸಿನ ಕಾಯನ್ನೇ ಮಾರುವುದಾದರೆ ಮೇಲ್ಕಂಡ ರೀತಿಯಲ್ಲಿ ಐದಾವರ್ತಿ ಕಾಯನ್ನು ಕೀಳುವರು. ಆದರೆ ಹಣ್ಣನ್ನು ಬಿಡಿಸುವುದಾದರೆ ಹಸುರು ಕಾಯನ್ನು ಎರಡು ಸಲ ಮಾತ್ರ ಕೊಯ್ಯುವರು.

ಸೊಸಿಗಳಿಗೆ ಸಾಮಾನ್ಯವಾಗಿ ಕಂಬಳಿ ಹುಳುಗಳು ಮುತ್ತುವುದುಂಟು. ಕೆಲವು ಸಂದರ್ಭಗಳಲ್ಲಿ ಗಿಡಗಳಿಗೆ ಒಂದು ತೆರಹೆ ರೋಗ ತಗಲಿ ಎಲೆಗಳು ಸುರುಳಿ ಸುತ್ತಿಕೊಂಡು ಉದುರಿ ಹೋಗುತ್ತವೆ. ಇದರಿಂದ ಗಿಡಗಳ ಬೆಳವಳಿಕೆಯು ಕಮ್ಮಿಯಾಗಿ ಸರಿಯಾಗಿ ಹೂವು ಬಿಡುವುದಿಲ್ಲ.

ಈ ವ್ಯವಸಾಯದಲ್ಲಿ ಒಂದು ಎಕರೆ ಜಮೀನಿನ ಸಾಗುವಳಿಗೆ ಒಟ್ಟು ೬೪ ರೂಪಾಯಿಗಳು ಖರ್ಚಾಗುವುದೆಂದೂ ೧೮೫ ರೂಪಾಯಿನ ಉತ್ಪತ್ತಿಯು ದೊರೆಯುವುದೆಂದೂ ಗೊತ್ತಾಗುತ್ತದೆ. ಅಂತೂ ಎಕರೆಗೆ ೪೫ ರೂಪಾಯಿ ನಿವ್ವಳ ಆದಾಯವು ಸಿಕ್ಕುವುದು.

ರಿ. ಗ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ).

ಬಡ ಕ್ಲಾರ್ಕರ ಗೋಳು.

ಅಯ್ಯಾ ಪತ್ರಾಧಿಪರೇ,

ಸರಕಾರಿ ಆಫೀಸುಗಳ ಎಲ್ಲಾ ಕ್ಲಾರ್ಕರುಗಳ ಸಿಬಂದಿಗೆ ಸಂಬಳವು ಜೀನಸುಧಾರಣೆ ವಾಸಿಗಳು ಕಡಮೆಯಾಗಿದ್ದ ಕಾಲದಲ್ಲಿ ನೇಮಿಸಲ್ಪಟ್ಟಿದ್ದದರಿಂದ ಧಾರಣೆ ವಾಸಿಗಳು ಹೆಚ್ಚಾಗಿದ್ದ ಈ ಕಾಲದಲ್ಲಿ ಹೀಗೆ ನೇಮಿಸಲ್ಪಟ್ಟ ಸಂಬಳವು ಸಾಲದೆಂತ ಸರಕಾರದವರು ಅಭಿಪ್ರಾಯಪಟ್ಟು ಇತ್ತಲಾಗೆ ಸಂಬಳಗಳನ್ನೆಲ್ಲಾ ಹೆಚ್ಚಿಸಿರುವರು. ಇದಲ್ಲದೆ ಆಫೀಸುಗಳಲ್ಲಿ ಕೆಲಸವು ಹೆಚ್ಚಿರುವದರಿಂದ ಕೆಲವು ಹೊಸ ಇಸಂಗಳನ್ನು ನಿರ್ಮಿಸಿ ಹೊಸ ಕ್ಲಾರ್ಕುಗಳನ್ನು ನೇಮಿಸಿರುವರು. ಹೀಗೆ ಇತ್ತಲಾಗೆ ಜಾರಿಗೆ ಬಂದ ತಾಲೂಕು ಆಫೀಸುಗಳ ಸಿಬಂದಿಗಳ ಹೊಸ ನೇಮಕಗಳು ಸಂಬಳ ಬಡ್ತಿ ಮೊದಲಾದವುಗಳಿಂದ ರೆವಿನ್ಯು ಇಲಾಖೆಯ ಕೆಳ ನೌಕರರ ಸ್ಥಿತಿಯು ಒಳ್ಳೆಯದಾಗಿರುವದು. ಆದರೆ ಕ್ಲಾರ್ಕರ ವಿದ್ಯಮಾನಗಳನ್ನಾಗಲಿ, ತಾಲೂಕು ಆಫೀಸು, ಹಜೂರು ಆಫೀಸು ಮೊದಲಾದವುಗಳ ಕೆಲಸದಡಚಣೆಯನ್ನಾಗಲಿ ಸರಿಯಾಗಿ ಪರ್ಯಾಲೋಚಿಸದೆ ವರ್ಗಾವರ್ಗಿಗಳು ಈ ಹೊಸ ನೇಮಕಗಳ ಮೂಲಕ ಮಾಡಲ್ಪಟ್ಟಿರುವುದರಿಂದ ಸಂಬಳ ಹೆಚ್ಚಿಸೋಣಾದ್ದರಿಂದ ಸಿಕ್ಕುವ ಪ್ರಯೋಜನಗಳು ಬಹಳ ಮಟ್ಟಿಗೆ ಕಡಮೆಯಾಗಿ ಹೋಗಿವೆ. ಹ್ಯಾಗಂದರೆ ಹಜೂರು ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ರೂ. ೨೦ರ ಕ್ಲಾರ್ಕನೊಬ್ಬನಿಗೆ ರೂ. ೨೫ರ ಮೇಲೆ ಕಾರ್ಕಳ ಅಥವಾ ಕುಂದಾಪುರ ಅತ್ತಕಡೆ ವರ್ಗವಾಗಿರುವುದೆಂದು ನೆನಸುವಾ. ಮಂಗಳೂರಲ್ಲಿ ಕುಟುಂಬದ ಪಾಲನೆ ಬಗ್ಯೆ ಕುಟುಂಬದ ಇತರ ಸಹೋದರರು ಮೊದಲಾದ ಮೆಂಬರರು ದುಡಿಯುತ್ತಿದ್ದು ಇಂಥವರ ಸಹಕಾರದಿಂದ ರೂ. ೨೫ರ ಸಂಬಳದಲ್ಲಿ ಕಾಲಕ್ಷೇಪ ಮಾಡಲಿಕ್ಕೆ ಅನುಕೂಲವಾಗಿತ್ತು. ಈಗ ಇಂಥಾ ಕ್ಲಾರ್ಕರುಗಳಿಗೆ ಇತರ ಊರುಗಳಿಗೆ ವರ್ಗವಾಗಿರುವುದರಿಂದ ಪ್ರತ್ಯೇಕ ಬಿಡಾರ ಮಾಡಿಕೊಳ್ಳುವ ಅಗತ್ಯವು ಬಂದೊದಗಿರುವುದು. ಹೀಗೆ ಪ್ರತ್ಯೇಕ ಬಿಡಾರಕ್ಕೆ ಪರವೂರುಗಳಲ್ಲಿ ಸಿಕ್ಕುವ ಸಂಬಳವು ಸಾಲದು. ಇದೇ ರೀತಿ ರೂಪಾಯಿ ೨೦ ಯಾ ೨೫ ಮೊದಲಾದ ತರಗತಿಗಳಲ್ಲಿ ತಾಲೂಕು ಆಫೀಸುಗಳಲ್ಲಿರುವವರಿಗೆ ಮಂಗಳೂರಿಗೆ ವರ್ಗವಾಗಿರುವುದರಿಂದ ಪ್ಲೇಗು ಗಲಾಟೆಯು ಇರುವ ಮಂಗಳೂರಲ್ಲಿ ಈ ಕ್ಲಾರ್ಕರುಗಳ ಸಂಬಳವು ಮನೆಬಾಡಿಗೆ ಮೊದಲಾದವುಗಳಿಗೆ ಸಾಲದು. ಇನ್ನೂ ಈ ಕ್ಲಾರ್ಕರುಗಳ ಮಕ್ಕಳು ಮೊದಲಾದವರು ಶಾಲೆಗೆ ಹೋಗತಕ್ಕವರಿದ್ದರೆ ಎರಡು ಬಿಡಾರಗಳ ಖರ್ಚು ಈ ಅಲ್ಪ ಸಂಬಳದ ಕ್ಲಾರ್ಕರು ನಡಿಸಬೇಕಾಗಿರುವುದು. ಆಫೀಸು ಕೆಲಸಗಳಲ್ಲಿ ಸಹ ಕೆಲವು ಕಾಲದ ವರೆಗೆ ಈ ಸಂಪೂರ್ಣ ವರ್ಗಾವರ್ಗಿಗಳಿಂದ ಕೆಲಸದಲ್ಲಿ ಗಲಾಟೆ ಇರುವದು. ಆಫೀಸು ಕೆಲಸಗಳಲ್ಲಿ ಎಲ್ಲಾ ಜವಾಬ್ದಾರಿಯು ಅಧಿಕ ಸಂಬಳದ ಹುದ್ದೆದಾರರ ಮೇಲಿರುತ್ತಾ ಅಲ್ಪ ಸಂಬಳದವರನ್ನು ಹೀಗೆ ಒಂದೂರಿಂದ ಇನ್ನೊಂದೂರಿಗೆ ವರ್ಗಾಯಿಸುವದರಿಂದ ಪ್ರಯೋಜನವೇನೂ ಇರದು. ಜಿಲ್ಲಾ ಕಲೆಕ್ಟರ ದೊರೆಗಳವರು ಈ ವಿಷಯವನ್ನು ಪುನರಾಲೋಚಿಸಬೇಕಾಗಿ ವಿಜ್ಞಾಪನೆ.

A. B.

ಮುನ್ಸಿಫ್ ಕೋರ್ಟುಗಳ ಸಮ್ಮನ್ಸು ಜಾರಿ.

ಅಯ್ಯಾ,

ಮುನ್ಸಿಫ್ ಕೋರ್ಟುಗಳಿಂದ ಜಾರಿಯಾಗುವ ಸಮ್ಮನ್ಸುಗಳನ್ನು ತರುವ ಪ್ಯಾದೆಯರು ಸಮ್ಮನ್ಸು ಜಾರಿಯಾಗ ತಕ್ಕ ವ್ಯಕ್ತಿಯನ್ನು ಹುಡುಕಿ ಆತನಿಗೆನೇ ಸಮ್ಮನ್ಸು ಜಾರಿಮಾಡಬೇಕೆಂಬ ವಿಧಿ ಇದೆಯೋ? ಇಲ್ಲವೆ ಸಮ್ಮನ್ಸು ಜಾರಿಯಾಗ ತಕ್ಕ ವ್ಯಕ್ತಿಯನ್ನು ಹುಡುಕುವ ಪ್ರಯಾಸವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ದಾರಿಯಲ್ಲಿ ಸಿಕ್ಕಿದ ಯಾರೊಬ್ಬ ವ್ಯಕ್ತಿಯ ಸಾಕ್ಷಿ ಹಾಕಿಸಿ ಸಮ್ಮನ್ಸುಗಳನ್ನು ಯಾರ್ಯಾರ ತೋಟದ ತೆಂಗಿನ ಮರಗಳಿಗೆ ಹಚ್ಚ ಬಹುದು ಯಾ ಹರದು ಬಿಸಾಡಬಹುದೆಂಬ ಕ್ರಮವು ಜಾರಿಯಲ್ಲಿದೆಯೋ? ಈ ವಿಷಯ ಬಲ್ಲವರು ತಿಳಿಸಿದ್ದಲ್ಲಿ ಕೃತಜ್ಞನಾಗುತ್ತಿದ್ದೆನು.

H.

ವಿದೇಶ ವೃತ್ತಾಂತ.

ಯುದ್ಧ ವಾರ್ತೆ:—ಒಕ್ಟೋಬರ ತಾ. ೨೮. ಬಾಲ್ಕಾನ್ ಯುದ್ಧದಲ್ಲಿ ಬಾಲ್ಕಾನ್ ಸಂಸ್ಥಾನಗಳಿಗೆ ಜಯವಾದರೆ ಬಲ್ಗೇರಿಯವು ಕಪ್ಪು ಸಮುದ್ರದ ವರೆಗೂ ಸರ್ವಿಯವು ಅಡ್ರಿಯಾಟಿಕ್ ಮತ್ತು ಮೊಂಟೆನಿಗ್ರೊ ಸರಹದ್ದಿನ ನೋವಿ ಬಜಾರ್ ವರೆಗೂ ವಿಸ್ತರಿಸಲ್ಪಡುವದೆಂದೂ ಮಸೆದೋನಿಯ ಮತ್ತು ಅಲ್ಬಾನಿಯವು ಡೇನಿಸ್ ಮತ್ತು ಸ್ವೀದೆನ್ ಪ್ರಿನ್ಸರಿಗೆ ಕೊಡಲ್ಪಡುವುದೆಂದೂ ಡೈಲಿ ಮೈಲ್ ಎಂಬ ಪತ್ರಿಕೆಯು ಹೇಳುವದು.

ತುರ್ಕಿಯ ಸುಲ್ತಾನರು ಯುದ್ಧನಡಿಯುವ ಸರಹದ್ದಿಗೆ ಹೋಗಲಿಚ್ಛೈಸಿರುವರು. ಆದರೆ ಇತರರಿಂದ ಆತಂಕಿಸಲ್ಪಟ್ಟಿರುವರು.

ಬಲ್ಗೇರಿಯರು ಬಾಬಎಸ್ಕಿಯನ್ನು ಹಿಡಿದಿರುತ್ತಾರೆ. ಇದು ಕನ್‌ಸ್ತಂತಿನೋಪಲಿಗೆ ಹೋಗುವ ಮುಖ್ಯ ದಿಕ್ಕಿನಲ್ಲಿರುವ ಸ್ಥಳವಾಗಿದ್ದು ಅಡ್ರಿನೋಪಲಿಗೆ ೬೦ ಮೈಲು ದಕ್ಷಿಣದಲ್ಲಿರುವ ಕೋಟೆ ಸ್ಥಳವಾಗಿದೆ. ಕರ್ಕ್‌ಕಿಲ್ಲಿಸದಲ್ಲಿ ಹಿಂದಟ್ಟಲ್ಪಟ್ಟ ತುರ್ಕಿ ಸೈನ್ಯವು ಹೋಗಿ ನೆಲೆಗೊಂಡಿದ್ದ ಬನರ್‌ಹಿಸರ್ ಎಂಬ ಸ್ಥಳವೂ ಬಲ್ಗೇರಿಯರ ಕೈಸೇರಿತು. ಬಾಬಎಸ್ಕಿಯಲ್ಲಿ ಬಲ್ಗೇರಿಯರು ತುರ್ಕರ ಸಹಾಯಾರ್ಥವಾಗಿ ಬಂದಿದ್ದ ಹೊಸ ಯುದ್ಧ ಸಾಮಾಗ್ರಿಗಳ ಒಂದು ಅಗ್ಗಾಡಿಯನ್ನೇ ಹಿಡಿದರು. ಬಲ್ಗೇರಿಯರು ಈಗ ಕನ್‌ಸ್ತಂತಿನೋಪಲಿನಿಂದ ಅಡ್ರಿನೋಪಲಿಗೂ, ಸಲೋನಿಕಕ್ಕೂ ಬರುವ ರೈಲ್ವೇ ಲ್ಯಾನುಗಳನ್ನು ಕಡಿದು ಹಾಕುವ ಪ್ರಯತ್ನದಲ್ಲಿದ್ದಾರೆ. ಅಡ್ರಿನೋಪಲಿನಲ್ಲಿರುವ ತುರ್ಕರ ಸೈನ್ಯವು ಸಾಯುವ ತನಕವೂ ಕಾದಾಡಲು ಶಪಥ ಹಾಕಿಕೊಂಡದೆ. ಬಲ್ಗೇರಿಯರು ಬಾಬಎಸ್ಕಿಯನ್ನು ತೆಗೆದುಕೊಂಡನಂತರ ಕನ್‌ಸ್ತಂತಿನೋಪಲಿನಿಂದ ಅಡ್ರಿನೋಪಲಿಗೆ ಬರುತ್ತಿದ್ದ ತುರ್ಕರ ಸೈನ್ಯವೂ, ಇತರ ಸಾಮಾಗ್ರಿಗಳೂ ಇದ್ದ ಒಂದು ಮಿಲಿಟರಿ ಅಗ್ಗಾಡಿಯನ್ನು ಹಿಡಿದರು. ಲೂಲು ಬರ್ಗಸ್ ಮತ್ತು ಕನ್‌ಸ್ತಂತಿನೋಪಲಿಗೆ ಮಧ್ಯೆ ಇರುವ ಕೆಟ್ರೋಲು ಎಂಬಲ್ಲಿಯ ನದಿಯ ರೈಲ್ವೇ ಸಂಕವನ್ನು ಬಲ್ಗೇರಿಯರು ಕಡಿದು ಹಾಕಿದರು. ಅಡ್ರಿನೋಪಲಿನಲ್ಲಿದ್ದ ತುರ್ಕಿ ಸೈನ್ಯದ ಒಂದಾಂಶವು ಡಿಮಿಟೋಸಿಯ ಎಂಬಲ್ಲಿಗೆ ಹೋಗಿರುವರು. ಉಳಿದಾಂಶವೂ ಬಲ್ಗೇರಿಯರಿಂದ ಹೆಚ್ಚಿನ ಪೆಟ್ಟು ತಿಂದಿರುವದು. ಒಂದು ಇಡೀ ಸೇನೆಯು ಬಲ್ಗೇರಿಯರಿಗೆ ಶರಣಾಗತವಾಗಿರುವರು.

ತಾ. ೨೯:—ತುರ್ಕರ ಒಂದು ಸೈನ್ಯವು ಮತ್ತೊಂದು ಸೈನ್ಯವನ್ನು ನೋಡಿ ಶತ್ರುಗಳ ಸೈನ್ಯವೆಂದೆಣಿಸಿ ಅದರ ಮೇಲೆ ಬಿತ್ತು. ಆದರೆ ಅದು ತಮ್ಮ ಸೈನ್ಯವೇ ಎಂದು ಗೊತ್ತಾಗುವ ವರೆಗೆ ಬಹಳ ನಷ್ಟಪಟ್ಟಿತು. ಕಪ್ಪು ಸಮುದ್ರದ ಮಾರ್ಗವಾಗಿ ಬಲ್ಗೇರಿಯದ ಕರಾವಳಿಗೆ ಇಳಿಯುವ ಉದ್ದೇಶದಿಂದ ತುರ್ಕರ ಎರಡು ಸೈನ್ಯವು ಹೊರಟದೆ. ಪಶ್ಚಿಮದಲ್ಲಿದ್ದ ಬಲ್ಗೇರಿಯರ ಸೈನ್ಯವು ಮಸೆದೋನಿಯದ ಅಡ್ರಿನೋಪಲ್ ಎಂಬದಾಗಿ ಕರೆಯಲ್ಪಡುವ ಇಸ್ಟಿಪ್ ಎಂಬ ಸ್ಥಳವನ್ನು ಕಷ್ಟವಿಲ್ಲದೆ ವಶಮಾಡಿ ಕೊಂಡಿತು. ದಕ್ಷಿಣದ ಬಲ್ಗೇರಿಯರ ಸೈನ್ಯವು ಸ್ಟ್ರುಮ ಕಣಿವೆಯಲ್ಲಿದ್ದ ಕೆಸ್ನಪಾಸ್ ಎಂಬ ಹಾದಿಯನ್ನು ಹಿಡಕೊಂಡದೆ.

ಸರ್ವಿಯರು ಉಸ್ಕಬನ್ನು ಹಿಡಕೊಂಡ ಸಂದರ್ಭದಲ್ಲಿ ರುಷ್ಯದ ಅರಸರಾದ ಜ್ಸಾರರವರು ಸರ್ವಿಯರ ಅರಸರಾದ ಪೀಟರ್ಸರಿಗೆ ಅಭಿನಂದಿಸಿರುವರು ಎಂಬದಾಗಿ ತಿಳಿದುಬರುತ್ತದೆ. ರುಷ್ಯ ರೆಡ್ ಕ್ರಿಸೆಂಟ್ ಫಂಡಿನವರು ಯುದ್ದದಲ್ಲಿ ಗಾಯಪಟ್ಟ ಬಾಲ್ಕಾನ್ ಸಂಸ್ಥಾನಗಳ ಸೈನೀಕರ ಸಹಾಯಾರ್ಥವಾಗಿ ೧೦೦,೦೦೦ ಪವನು ಕೂಡಿಸಿರುವರು. ಮೊಂಟೆನಿಗ್ರೋಯರು ಸ್ಕುತಾರಿಗೆ ಗುಂಡು ಹಾರಿಸಲು ಪ್ರಾರಂಭಿಸಿದ್ದಾರೆ. ಫಲಿತಾಂಶವು ತಿಳಿದುಬರಲಿಲ್ಲ.

ಗ್ರೀಕರ ಸೈನ್ಯವು ಸಲೋನಿಕಕ್ಕೆ ೪೦ ಮೈಲು ದೂರದಲ್ಲಿರುವ ವರಿಯಕ್ಕೆ ಮುಂದರಿಯುತ್ತಿದೆ.

ಉಸ್ಕಬೂ ಅದರ ಆಜುಬಾಜಿನಲ್ಲಿರುವ ಎಲ್ಲಾ ಪಟ್ಟಣಗಳ ತುರ್ಕರೂ ಸರ್ವಿಯರಿಗೆ ಶರಣಾಗತರಾಗಿರುವರು.

ತುರ್ಕರಿಗೂ ಬಲ್ಗೇರಿಯರಿಗೂ ಆದ ಯುದ್ಧವು ಬಹು ಕಠಿಣ ತರವಾಗಿತ್ತು. ಉಭಯತರೂ ಜೀವದ ಮರವೆ ಇಲ್ಲದೆ ಕಾದಾಡಿದರು. ಕೊಜಾನ ಎಂಬಲ್ಲಿಯೂ ಯುದ್ಧವಾಗಿ ಬಲ್ಗೇರಿಯರು ಜಯಪ್ರಧರಾದರು.

ತಾ. ೩೦:—ಅಡ್ರಿನೋಪಲಿನ ಹೊರಗೆ ಈಗ ನಡೆಯುತ್ತಿರುವ ಯುದ್ಧದ ವಿಷಯ ಬಲ್ಗೇರಿಯರು ವಾರ್ತೆ ಕೊಡಲಿಲ್ಲ. ಆದರೆ ತುರ್ಕಿ ಸೇನಾಧಿಪತಿಯಾದ ನೈಜಾಮ್ ಪಾಶರವರು ಕಳದ ಸೋಮವಾರದಿಂದ ಕಠಿಣ ಕಾಳಗ ಪ್ರಾರಂಭವಾಗಿಯದೆ. ತುರ್ಕರು ಜಯಪ್ರಧರಾಗುತ್ತಿದ್ದಾರೆಂಬದಾಗಿ ಕನ್‌ಸ್ತಂತಿನೋಪಲಿಗೆ ತಂತೀ ಬಿಟ್ಟಿರುವರು.

ಕರ್ಕ್‌ಕಿಲ್ಲೀಸ ಮತ್ತು ವಿಜದ ಮಧ್ಯೆ ಆದ ಯುದ್ಧದಲ್ಲಿ ಬಲ್ಗೇರಿಯರು ಅತಿರೇಕ ನಷ್ಟಪಟ್ಟಿರುವರು ಎಂದು ನೈಜಾಮ್ ಪಾಶರವರು ತಿಳಿಸಿರುವರು.

ಕಿಪುರಿಲಿ ಎಂಬಲ್ಲಿ ಸರ್ವಿಯರು ಯುದ್ಧ ಮಾಡಿ ತುರ್ಕರನ್ನು ಸೋಲಿಸಿ ಕೋಟೆಯನ್ನು ಕೆಡವಿದರು. ಈ ಯುದ್ಧವನ್ನು ಅಶ್ವ ಸೇನೆಯ ಸೇನಾಧಿಪತಿಯಾದ ಸರ್ವಿಯ ಅರಸರ ಸಹೋದರನಾದ ಪ್ರಿನ್ಸ್ ಅರ್ಸನಿ ಎಂಬವರು ನಡಿಸಿದರು. ಕುಮನಾವೊ ಎಂಬಲ್ಲಿ ಆದ ಯುದ್ಧದಲ್ಲಿ ತುರ್ಕರಲ್ಲಿ ೮೦,೦೦೦ ಸೈನೀಕರಿದ್ದರು. ಈ ಪೈಕಿ ೬,೦೦೦ ಸೈನೀಕರು ಹತರಾದರು. ಎರಡು ಸಾವಿರ ಮಂದಿ ಗಾಯವೊಡೆದರು. ಈ ತನಕ ಸರ್ವಿಯರು ಪ್ರಿಜಿಪೊಲಿ, ನೊವಾವರೊಸ್, ಸೆಂಟೀಜ, ನೋವಿಬಜಾರ್, ಮೆಟ್ರೊವಿಟ್ಟ, ಔಜಿತ್ರಿನ್, ಪ್ರಿಸ್ತೀನ, ಪ್ರೆಸೋವೊ, ಗಿಲಾನ್, ಫೆರಿಸೊವಿಚ್, ಕುಮಾನಾವೋ, ಎಗ್ರಿಪಲಾಂಕ, ಕರಟೊವೋ, ಕೊಟಾನ, ಉಸ್ಕಬ್, ಕಿಪುರಿಲಿ, ಇಸ್ಟಿಪ್ ಎಂಬೀ ಪಟ್ಟಣಗಳನ್ನು ವಶ ಮಾಡಿಕೊಂಡರು. ಸುಮಾರು ೨೦೦ ಫಿರಂಗಿಗಳೂ ಸಾವಿರ ರೈಫಲ್ ಕೋವಿಗಳೂ ಇವರ ಕೈಸೇರಿತು. ಹಿಡಿಯಲ್ಪಟ್ಟ ಪಟ್ಟಣಗಳ ನಿವಾಸಿಗಳು (ಮಹಮ್ಮದೀಯರು ಸಹಾ) ಸರ್ವಿಯರ ಅಧಿಕಾರವನ್ನು ಒಪ್ಪಿರುವರು. ಈ ಪಟ್ಟಣಗಳ ಎಲ್ಲಾ ವಹಿವಾಟುಗಳು ಈಗ ಸರ್ವಿಯದ ಮುಖ್ಯ ಪಟ್ಟಣವಾದ ಬಗ್ಗ್ರೇಡಿನ ಕೂಡೆ ನಡೆಯುತ್ತಿದೆ. ಬಲ್ಗೇರಿಯರು ಕೂಡಾ ತಾವು ವಶ ಮಾಡಿಕೊಂಡ ಪಟ್ಟಣಗಳಲ್ಲಿ ತಮ್ಮ ಬೇಂಕ್ ಏಜಂಟರನ್ನು ನೇಮಿಸಿದ್ದಾರೆ.

ನೋವಿ ಬಜಾರಿನಲ್ಲಿರುವ ಪ್ಲೆವ್ಲೆಜೆಯನ್ನು ಮೊಂಟಿನಿಗ್ರೋಯರು ವಶ ಮಾಡಿಕೊಂಡರು.

ತಾ. ೩೦:—ತಾ. ೨೯ನೇ ಪ್ರಾತಃಕಾಲದಿಂದ ದೊಡ್ಡ ಯುದ್ಧ ನಡಿಯುತ್ತಿದೆಂಬದಾಗಿ ಅಡ್ರಿನೋಪಲಿನ ಸೇನಾಧಿಪತಿಯಾದ ನೈಜಾಮ್ ಪಾಶರವರು ತಿಳಿಸುವರು. ಒಂದೊಂದು ಪಕ್ಷದಲ್ಲಿ ೧೫೦,೦೦೦ ಸೈನೀಕರಿರುವರು. ಅಡ್ರಿನೋಪಲಿನ ತುರ್ಕಿ ಸೈನ್ಯವು ಪಶ್ಚಿಮ ದಿಕ್ಕಿನಲ್ಲಿರುವ ಬಲ್ಗೇರಿಯರೊಡನೆ ಕಾದಾಡಿ ಅವರನ್ನು ಹರಾಜಕ್ಕಿ ಮತ್ತು ಕೆಮಾಲ್‌ಕ್ಯ ಕಡೆಗೆ ಅಟ್ಟಬಿಟ್ಟಿತೆಂದು ವಾರ್ತೆ ಬಂದಿರುವದು. ವಿಜ ಎಂಬಲ್ಲಿ ತುರ್ಕರಿಗೂ ಬಲ್ಗೇರಿಯರಿಗೂ ಆದ ಯುದ್ಧದಲ್ಲಿ ಬಲ್ಗೇರಿಯರು ಹಿಮ್ಮೆಟ್ಟಲ್ಪಟ್ಟರು. ೮೦೦ ಮಂದಿ ಯುದ್ಧರಂಗದಲ್ಲಿ ಮಡಿದರು. ಎಂಬದಾಗಿ ನೈಜಾಮ್ ಪಾಶರವರು ತಿಳಿಸುವರು. ಆದರೆ ತಾ. ೩೧ರಲ್ಲು ಬಲ್ಗೇರಿಯರ ಕಡೆಯಿಂದ ಬಂದ ವಾರ್ತೆಯನ್ನು ನೋಡುವುದಾದರೆ ನೈಜಾಮ್ ಪಾಶರವರ ವಾರ್ತೆಯು ಆಧಾರವಿಲ್ಲವೆಂದು ತಿಳಿದು ಬರುತ್ತದೆ.

ತಾ. ೩೧:—ಎರಡು ದಿವಸ ಯುದ್ಧ ಮಾಡಿದನಂತರ ಬಲ್ಗೇರಿಯರ ಸೈನ್ಯವು ತುರ್ಕರನ್ನು ಪೂರ್ಣವಾಗಿ ಸೋಲಿಸಿಬಿಟ್ಟಿತು. ತುರ್ಕರು ದಿಕ್ಕು ತೋರದವರಾಗಿ ಹಿಮ್ಮೆಟ್ಟಲ್ಪಟ್ಟರು. ಬಲ್ಗೇರಿಯರು ಅಡ್ರಿನೋಪಲಿನ ವಾಯವ್ಯ ದಿಕ್ಕಿನಲ್ಲಿ ತೋಪು ಹಾರಿಸ ಪ್ರಾರಂಭಿಸಿದ್ದಾರೆ. ಬಲ್ಗೇರಿಯರ ಯುನಿಫೋರ್ಮು ಇಲ್ಲದ ಹೊಸ ಸೈನ್ಯವು ರಾತ್ರಿಗೆ ಬಂದು ತಲಪಿ ರಾತ್ರೆ ೮ ಘಂಟೆಗೆ ಫಿರಂಗಿಗಳನ್ನು ಹಾರಿಸ ತೊಡಗಿಯದೆ. ಇದಾಗಿ ೯೦ ನಿಮಿಷಗಳನಂತರ ಮೂಡಲು ದಿಕ್ಕಿನಲ್ಲಿ ಬಲ್ಗೇರಿಯರ ಕಾಲಾಳು ಸೈನ್ಯವು ಎರ್ಜೆನ್ ನದಿಯ ಬಳಿಯಲ್ಲಿದ್ದ ತುರ್ಕರ ಸೈನ್ಯವನ್ನು ಅತಿಕ್ರಮಿಸಿಯದೆ. ಅನಂತರ ಬಲ್ಗೇರಿಯರು ತುರ್ಕರ ಲೂಲು ಬರ್ಗದ ಕೋಟೆಯನ್ನು ಹಿಡಿದರು ಎಂಬದಾಗಿ ವಾರ್ತೆ ಬಂದಿರುವದು.

ಕರ್ಕ್‌ಕಿಲ್ಲಿಸದಲ್ಲಿ ತುರ್ಕರಿಗೂ ಬಲ್ಗೇರಿಯರಿಗೂ ಆದ ಯುದ್ಧವು ಬಹು ಕಡು ತರವಾಗಿತ್ತು. ತುರ್ಕ ಸೈನೀಕರು ದಿಗಿಲುಗೊಂಡು ಪಲಾಯನ ತೆಗೆಯುತ್ತಿರುವಾಗ ಸೇನಾಧಿಪತಿಯಾದ ಮುಕ್ತೇರ್ ಪಾಶರವರು ರಿವೋಲ್ವರಿನಿಂದ ತನ್ನ ಸೈನೀಕರನ್ನು ಹೊಡದು ಕೆಡವಿದರು. ಪ್ರಿನ್ಸ್ ಅಜೀಜರೂ ಪಲಾಯನ ತೆಗೆದನಂತರ ಮುಕ್ತೇರ್ ಪಾಶರೂ ಅಬ್ದುಲ್ಲರವರೂ ತಂತಮ್ಮ ಸೈನೀಕರಿಗೆ ಹಿಮ್ಮೆಟ್ಟಲು ಅಪ್ಪಣೆ ಕೊಟ್ಟರು. ಆದರೆ ಹಿಲ್ಮಿ ಪಾಶರವರು ಇವರೊಡನೆ ಬೇಗನೇ ಸೇರದೆ ತನ್ನ ಸೈನೀಕರಿಗೂ ದಿಗಿಲು ಹಿಡಿದನಂತರ ಓಡಲಿಕ್ಕೆ ಅಪ್ಪಣೆ ಮಾಡಿದರು. ತನ್ಮಧ್ಯೆ ಬಲ್ಗೇರಿಯರಿಗೆ ಇವರು ಪಲಾಯನ ಮಾಡಿದ ಸಂಗತಿಯು ಗೊತ್ತಾಗದೆ ಪಟ್ಟಣದ ಒಳನುಗ್ಗುವುದಕ್ಕೆ ೯ ತಾಸು ತಡಮಾಡಿದರು.

ಸ್ಕುತಾರಿಗೆ ಪಶ್ಚಿಮ ಭಾಗದ ಒಂದು ತುರ್ಕರ ಸೈನ್ಯವು ಶರಣಾಗತರಾದೆವೆಂದು ತೋರಿಸುವರೆ ಬಿಳೀ ಬಾವಟೆಯನ್ನು ಏರಿಸಿದರು. ಮೊಂಟೆನಿಗ್ರೋಯರು ಇದನ್ನು ನಂಬಿ ತಮ್ಮ ಸೈನ್ಯವನ್ನು ಮುಂದಕ್ಕೆ ಹೋಗಲು ಅಪ್ಪಣೆಕೊಟ್ಟರು. ಆದರೆ ತುರ್ಕರು ಕೂಡಲೇ ಫಿರಂಗಿ ಹಾರಿಸ ಪ್ರಾರಂಭಿಸಿ ೩೦೦ ಮೊಂಟೆನಿಗ್ರೋಯರನ್ನು ಕೊಂದು ಬಿಟ್ಟರು. ಅನಂತರ ಮೊಂಟೆನಿಗ್ರೋಯರು ಶತ್ರುಗಳನ್ನು ಸುತ್ತು ಹಾಕಿ ಆ ತುರ್ಕಿ ಸೈನ್ಯವನ್ನು ನಿರ್ನಾಮಮಾಡಿಬಿಟ್ಟರು.

ತುರ್ಕರಿಗೂ ಸರ್ವಿಯರಿಗೂ ಕುಮಾನಾವೊದಲ್ಲಿ ಯುದ್ಧವಾದನಂತರ ತುರ್ಕರ ಮುಂದಾಳುಗಳು ತಂತಮ್ಮೊಳಗೆ ಭೇದವನ್ನು ಕಲ್ಪಿಸಿಕೊಂಡದ್ದರಿಂದ ಕುಪ್ರಿರಿಲಿಯಲ್ಲಿ ತುರ್ಕರು ಬೇಗನೇ ಹಿಮ್ಮೆಟ್ಟಲ್ಪಡುವ ಹಾಗಾಯಿತೆಂದೂ ತುರ್ಕರ ಮೊನಾಸ್ಟರ್ ಆರ್ಮಿ ಎಂಬ ಸೈನ್ಯದ ಸೈನಾಧಿಪತಿಯು ತನ್ನ ಹುದ್ದೆದಾರರಿಂದಲೇ ಕೊಲ್ಲಲ್ಪಟ್ಟನು ಎಂಬದಾಗಿಯೂ ತಿಳಿದು ಬರುತ್ತದೆ.

ಗ್ರೀಕರು ವರಿಯ ಎಂಬ ಪಟ್ಟಣವನ್ನು ಅತಿಕ್ರಮಿಸಿದ್ದಾರೆ. ಮೊನಿಸ್ಟರಿಗೆ ಆಗುತ್ತಿದ್ದ ರೈಲ್ವೇ ವಹಿವಾಟುಗಳು ನಿಲ್ಲಿಸಲ್ಪಟ್ಟದೆ.

ಅಡ್ರಿನೋಪಲಿನ ಎರಡು ಮಗ್ಗುಲಲ್ಲಿಯೂ ಯುದ್ಧ ಪ್ರಾರಂಭವಾಗಿಯದೆ. ಬಲ ಪಾರ್ಶ್ವದಲ್ಲಿ ಬಲ್ಗೇರಿಯರ ಬಲವಾದ ಎರಡು ದೊಡ್ಡ ಸೇನೆಯಿದೆ. ಇಲ್ಲಿಂದ ಅಶ್ವಾಬಲವು ಲೂಲು ಬರ್ಗಸ್ ಮತ್ತು ಟಿಟ್ರೋಲಿಗೆ ಹೋಗುವ ಎತ್ತುಗಡೆ ಮಾಡುತ್ತಿದೆ. ಬಲ್ಗೇರಿಯರು ಟೆಚಿಪಿಲಿಕೆನ್ನಿಯಿಂದ ಹಿಂದಟ್ಟಲ್ಪಟ್ಟರು. ಅಲ್ಲಿ ದೊಡ್ಡ ಅಡವಿಗಳು

ಇದ್ದು ಸರಿಯಾದ ಮಾರ್ಗವು ಇಲ್ಲದ್ದರಿಂದ ಬಲ್ಗೇರಿಯರ ಪೂರ್ವ ಸೇನೆಯು ತಡೆಯಲ್ಪಟ್ಟಿತು. ಆದರೆ ಕೂಡಲೇ ಬಹು ಪ್ರಯತ್ನದಿಂದ ಮುಂದಕ್ಕೆ ಹೋಯಿತು. ಅದ್ರಿನೋಪಲಿನಲ್ಲಿ ತುರ್ಕರ ಮರೆಹೊಕ್ಕಿದ ೧೦೦,೦೦೦ ಮುಸಲ್ಮಾನರು ಇದ್ದಾರೆ. ಲೂಲು ಬರ್ಗಸಿನಲ್ಲಿ ೩ ದಿವಸಗಳ ತನಕ ಕಠಿಣ ಯುದ್ಧ ನಡೆದು ನೈಜಾಮ್ ಪಾಶರ ಮುಖ್ಯ ಸೇನೆಯು ಅಟ್ಟಲ್ಪಟ್ಟಿತು. ತುರ್ಕರು ಅತಿರೇಕ ನಷ್ಟಪಟ್ಟು ದಿಕ್ಕು ದಿಕ್ಕಿಗೆ ಓಡಿಹೋದರು. ಈ ಮೂರು ದಿವಸಗಳ ಯುದ್ಧದಲ್ಲಿ ಬಲ್ಗೇರಿಯರು ತುರ್ಕರನ್ನು ಕೋಟೆ ಕೊತ್ತಲಗಳ ಸ್ಥಳದಿಂದ ಓಡಿಸಿ ಅತಿರೇಕ ಫಿರಂಗಿಗಳನ್ನೂ ಇತರ ಯುದ್ಧ ಸಾಮಾಗ್ರಿಗಳನ್ನೂ ಹಿಡಕೊಂಡರು. ಈಗ ಬಲ್ಗೇರಿಯರು ಎದೆಗುಂದಿ ಓಡುತ್ತಿರುವ ತುರ್ಕರನ್ನು ಬೆನ್ನಟ್ಟುತ್ತಿದ್ದಾರೆ. ಬಲ್ಗೇರಿಯರಿಗೆ ಈ ಕದನದಲ್ಲಿ ಹೆಚ್ಚಿನ ನಷ್ಟವಾಗಲಿಲ್ಲ. ನೈಜಾಮ್ ಪಾಶರವರು ಯುದ್ಧದಲ್ಲಿ ಮಡಿದರೆಂಬ ವಾರ್ತೆ ಬಂದದೆ. ಅದ್ರಿನೋಪಲಿನ ಮೇಲಿನಿಂದ ಗುಂಡುಹಾರಿಸ ಹೋಗಿದ್ದ ವಿಮಾನಗಾಮಿಯನ್ನು ಬಲ್ಗೇರಿಯರು ಫಿರಂಗಿ ಹಾರಿಸಿ ಕೆಳಗೆ ಕೆಡವಿದರು. ಅದ್ರಿನೋಪಲಿನಲ್ಲಿ ತುರ್ಕರ ೪೦೦,೦೦೦ ಸೈನೀಕರಿದ್ದಾರೆ.

ತುರ್ಕರ ಸೈನ್ಯವು ಬಲ್ಗೇರಿಯದ ಬರ್ಗಸ್ ರೇವಿಗೆ ಗುಂಡು ಹಾರಿಸುತ್ತಿದೆಂದೂ ಸೈನ್ಯವು ದಡಕ್ಕಿಳಿದಿದೆಂದೂ ವಾರ್ತೆ ಇದೆ.

ತುರ್ಕರು ಬಲ್ಗೇರಿಯರನ್ನೂ ಅವರ ಸಣ್ಣ ಸಣ್ಣ ಗ್ರಾಮಗಳನ್ನೂ ಸುಟ್ಟುಹಾಕುತ್ತಿದ್ದಾರೆಂಬದಾಗಿ ಬಲ್ಗೇರಿಯರು ಹೇಳುವರು. ಇತ್ತಕಡೆ ಬಲ್ಗೇರಿಯರು ತುರ್ಕರ ಪಟ್ಟಣಗಳನ್ನೂ ನಿವಾಸಿಗಳನ್ನೂ ಕಂಡ ಕಡೆ ಸುಟ್ಟುಹಾಕುತ್ತಿದ್ದಾರೆಂಬದಾಗಿ ತುರ್ಕರು ಹೇಳುವರು. ತುರ್ಕಿಯಲ್ಲಿ ಯುನ್ಯನಿಷ್ಟರು ದಂಗೆ ಏಳುವ ಸಂಭವವಿದೆಂದು ತಿಳಿದು ಬರುತ್ತದೆ.

ನವಂಬರ ತಾ. ೧:—ಸರ್ವಿಯರು ಮಸೆದೋನಿಯರ ಪ್ರಿಜಿರೆಂಡನ್ನು ತೆಗೆದುಕೊಂಡರು. ಮತ್ತೊಂದು ಸೇನೆಯು ಪ್ರಿಲಿಪ್ ಮಾರ್ಗವಾಗಿ ಮೊನಾಸ್ಟಿರಿಗೆ ಮುಂದರಿಯುತ್ತಿದೆ. ಅಲ್ಲಿ ಇವರು ಗ್ರೀಕರಿಗೆ ಕೂಡುವರು. ತನ್ಮಧ್ಯೆ ಗ್ರೀಕರು ಗ್ರೇವೆನ ಮತ್ತು ಕೈಲಾರ್ ಪಟ್ಟಣಗಳನ್ನು ತೆಗೆದುಕೊಂಡರೆಂಬ ವಾರ್ತೆ ಬಂದಿರುವದು. ಮೊಂಟೆನಿಗ್ರೋಯರು ಇಪೆಕನ್ನು ವಶ ಮಾಡಿಕೊಂಡರು. ಗ್ರೀಕರ ನೌಕಾವಳಿಯು ತಾಸೊಸು ಮತ್ತು ಇಂಬ್ರೊಸು ದ್ವೀಪಗಳನ್ನು ಹಿಡಕೊಂಡದೆ.

ಐಗುಪ್ತದ ರೆಡ್ ಕ್ರಿಸೆಂಟ್ ಫಂಡಿಗೆ ಕಿಚನರ್ ಪ್ರಭುಗಳು "ಕಿಚನರ್ ಪಾಶ" ಎಂಬ ದಸ್ಕತು ಹಾಕಿ ೧೦೦ ಪವನು ವಂತಿಗೆ ಕೊಟ್ಟಿರುವರು.

ಯುದ್ಧರಂಗದಿಂದ ಕನ್‌ಸ್ತಂತಿನೋಪಲಿಗೆ ಬಹು ಭಯಂಕರ ವಾರ್ತೆ ಬಂದಿರುವುದರಿಂದ ಮಂತ್ರಿ ಸಭೆಯು ಕೂಡಿ ಬೆಳಿಗ್ಗಿನಿಂದ ಮಧ್ಯಾನ್ಹದ ವರೆಗೆ ಅಗಲಲಿಲ್ಲವೆಂದೂ ಸಂಧಾನದ ವಿಷಯ ಆಲೋಚನೆ ನಡಿಯುತ್ತಿದೆಂದೂ ಲಂಡನಿಗೆ ತಂತೀ ಬಂದಿರುವದು.

ತಾ. ೨ ತಾ. ೩ರಲ್ಲು ಬಲ್ಗೇರಿಯರು ಅದ್ರಿನೋಪಲಿನ ಈಶಾನ್ಯ ದಿಕ್ಕಿನಲ್ಲಿರುವ ತುರ್ಕಿ ಸೈನ್ಯವನ್ನೆಲ್ಲಾ ಪೂರ್ಣವಾಗಿ ಸೋಲಿಸಿದರು. ತಾ. ೩೧ರಲ್ಲು ಅದ್ರಿನೋಪಲಿನ ಬಲಕಡೆಯಲ್ಲಿದ್ದ ತುರ್ಕರೊಡನೆ ಕಠಿಣ ಯುದ್ಧವಾಯಿತು. ಇದರಲ್ಲಿಯೂ ತುರ್ಕರು ಎದೆಗುಂದಿದವರಾಗಿ ಸಿಕ್ಕಿದ ಕಡೆ ಓಡಿಹೋದರು. ಬಲ್ಗೇರಿಯರು ಅವರ ಬೆನ್ನಟ್ಟುತ್ತಿದ್ದಾರೆ. ತುರ್ಕರಿಗೆ ಈ ಯುದ್ಧದಲ್ಲಿ ಅಪರಿಮಿತ ನಷ್ಟವಾಗಿರುವುದು. ತುರ್ಕರು ಓಡಿಹೋಗುವಾಗ ಸಿಕ್ಕಿ ಸಿಕ್ಕಿದ ಗ್ರಾಮಗಳಿಗೆ ಬೆಂಕಿಕೊಟ್ಟು ಅಲ್ಲಿದ್ದ ಕ್ರೈಸ್ತರನ್ನು ಕೊಂದುಹಾಕಿರುವರು.

ಬಲ್ಗೇರಿಯರು ಈಗ ಕನ್‌ಸ್ತಂತಿನೋಪಲಿಗೆ ೨೫ ಮೈಲು ದೂರದಲ್ಲಿದ್ದಾರೆ. ಕನ್‌ಸ್ತಂತಿನೋಪಲಿನಲ್ಲಿ ಸಮಾಧಾನವನ್ನು ನೆಲೆಗೊಳಿಸುವುದೇ ತಮ್ಮ ಉದ್ದೇಶವೆಂದೂ ಈ ಉದ್ದೇಶವನ್ನು ನೆರವೇರಿಸಲಿಕ್ಕೆ ಬೇಕಾದಷ್ಟೆ ಸಮಯ ಮಾತ್ರ ತಾವು ಆ ಸ್ಥಳವನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳುವೆವೆಂದೂ ಬಲ್ಗೇರಿಯರು ಹೇಳಿರುವರು.

ಬಲ್ಗೇರಿಯರು ಡೆಮೊಟಿಕವನ್ನೂ ಸ್ಟ್ರುಮಿಂಟಿಜವನ್ನೂ ವಶಮಾಡಿಕೊಂಡರು.

ಬ್ರಿಟಿಷರ ಒಂದು ಯುದ್ಧ ನಾವೆಯೂ, ಒಂದು ಪ್ರೆಂಚರ ಯುದ್ಧ ನಾವೆಯೂ, ಸಲೋನಿಕಕ್ಕೆ ಹೋಗಿರುವದು. ತುರ್ಕರು ಅಲ್ಲಿರುವ ಕ್ರೈಸ್ತರನ್ನು ಅಮಾನುಷ ರೀತಿಯಿಂದ ಕೊಂದುಹಾಕುವ ಸಂಭವವು ಬರಲಿಕ್ಕೆ ಸಾಕೆಂಬ ಭಯವೇ ಈ ಯುದ್ಧ ಹಡಗಗಳು ಅಲ್ಲಿಗೆ ಹೋಗಲಿಕ್ಕೆ ಕಾರಣ.

ಕರ್ಕಿಕಿಲ್ಲಿಸದಲ್ಲಿ ಕಾದಾಡಿದ ೩೦೦೦ ಕ್ರೈಸ್ತ ಸೋಲ್ಜರರನ್ನು ತುರ್ಕರು ಕನ್‌ಸ್ತಂತಿನೋಪಲಿನಲ್ಲಿ ಗುಂಡು ಹೊಡೆದು ಕೊಂದರು.

ಇನ್ನು ಮುಂದಕ್ಕೆ ಯುದ್ಧದ ಹೆಚ್ಚಿನ ಕೆಟ್ಟ ವಾರ್ತೆಯು ಮುಟ್ಟಿದಾಕ್ಷಣ ಎಲ್ಲಾ ಕ್ರೈಸ್ತರನ್ನು ಹತಮಾಡಿಬಿಡಬೇಕೆಂಬದಾಗಿ ಆಲೋಚಿಸುವ ಗುಪ್ತ ಸಭೆಗಳು ಕನ್‌ಸ್ತಂತಿನೋಪಲಿನಲ್ಲಿ ಕೂಡುತ್ತಿದೆಂದು ವಾರ್ತೆ ಬಂದದೆ. ಆದರೆ ಸರಕಾರದವರು ಈ ವಿಷಯ ಮುಂಜಾಗ್ರತೆ ತಕ್ಕೊಳ್ಳುತ್ತಿದ್ದಾರೆ. ಆಸ್ಟ್ರಿಯದ ಒಂದು ಯುದ್ಧ ಹಡಗವೂ ಸಲೋನಿಕಕ್ಕೆ ಹೋಗಿಯದೆ.

ಉತ್ತರ ಮಸೆದೋನಿಯದಲ್ಲಿ ಸರ್ವಿಯರ ಸೈನ್ಯದ ಹೆಚ್ಚಿನ ಅವಶ್ಯಕತೆಯು ಇಲ್ಲದ್ದರಿಂದ ಸರ್ವಿಯರ ಒಂದು ಸೈನ್ಯವು ಅದ್ರಿನೋಪಲಿನಲ್ಲಿರುವ ಬಲ್ಗೇರಿಯ ಸೈನ್ಯಕ್ಕೆ ಕೂಡಲು ಹೋಗಿಯದೆ. ಗ್ರೀಕರ ಒಂದು ಟೋರ್ಪೇಡೋ ಹಡಗವು ಸಲೋನಿಕ ಕೊಲ್ಲಿಯಲ್ಲಿದ್ದ ತುರ್ಕರ ಯುದ್ಧ ನಾವೆಯನ್ನು ಆಶ್ಚರ್ಯ ರೀತಿಯಲ್ಲಿ ಮುಣುಗಿಸಿ ಬಿಟ್ಟಿತು. ಗ್ರೀಕರು ಸಮೊತ್ರೇಸ್ ದ್ವೀಪವನ್ನೂ ಹಿಡಕೊಂಡರು.

ಈ ಯುದ್ಧವನ್ನು ಕೊನೆಗಾಣಿಸುವರೆ ಶ್ರೇಷ್ಠ ರಾಜ್ಯಗಳು ಕೈಹಾಕಿದ್ದಾರೆ. ಬಾಲ್ಕಾನ್ ಸಂಸ್ಥಾನಗಳೂ ತುರ್ಕರ ಸಂಗಡ ಸಂಧಾನಮಾಡಿಕೊಳ್ಳುವರೆ ಒಪ್ಪಿದ್ದಾರೆ. ಆದರೆ ಶ್ರೇಷ್ಠ ರಾಜ್ಯಗಳ ಮಧ್ಯಸ್ಥಿಕೆ ಇಲ್ಲದೆ ಸಂಧಾನ ಮಾಡಿಕೊಳ್ಳುವೆವು ಎಂದು ಹೇಳಿದ್ದಾರೆ.

ಬಲ್ಗೇರಿಯರು ಅದ್ರಿನೋಪಲಿಗೆ ಮುತ್ತಿಗೆ ಹಾಕಿದ್ದಾರೆ. ಅದ್ರಿನೋಪಲಿನ ಪೂರ್ವ ಕಡೆಯ ಬಲವಾದ ಎರಡು ಕೋಟೆಗಳಿಗೆ ಬುಧವಾರ ದಿನವೆಲ್ಲಾ ಬಲ್ಗೇರಿಯರು ತೋಪುಹಾರಿಸಿದರು. ಬುಧವಾರ ರಾತ್ರಿ ಕಠಿಣ ಯುದ್ಧ ನಡೆಯಿತು. ತುರ್ಕರು ಜೀವದ ಮರವೆ ಇಲ್ಲದೆ ಕಾದಾಡಿದರು. ಬಲ್ಗೇರಿಯರು ಕೂಡಾ ಬಹಳ ಅತ್ಯಾಶಕ್ತಿಯಿಂದ ಕಾದಾಡುತ್ತಿದ್ದಾರೆ. ಅದ್ರಿನೋಪಲ್ ಹಿಡಿಯಲ್ಪಟ್ಟಿತು ಎಂಬ ವಾರ್ತೆ ಬಂದದೆ. ಆದರೆ ಈ ವರದಿಯು ದೃಢೀಕರಿಸಲ್ಪಡಲಿಲ್ಲ.

ತಾ. ೩. ಅದ್ರಿನೋಪಲಿಗೆ ಬಲ್ಗೇರಿಯರು ತೋಪು ಹಾರಿಸ ಪ್ರಾರಂಭಿಸಿದ್ದಾರೆ.

ಗ್ರೀಕ ಸೈನೀಕರು ಕೊಜಾನಿ ಮತ್ತು ಮೊನಾಸ್ಟಿರಿನ ಮಾರ್ಗವಾಗಿ ಮುಂದರಿಯುತ್ತಿದ್ದಾರೆ. ಮಾಲ್ಬಾಂಕೊದಲ್ಲಿರುವ ತುರ್ಕರ ಬಲವಾದ ದುರ್ಗವನ್ನು ಗ್ರೀಕರು ಹಿಡಕೊಂಡರು. ಅಲ್ಲಿ ತುರ್ಕರಲ್ಲಿ ೧೨,೦೦೦ ಮಂದಿ ಸತ್ತರು. ೧೨ ಫಿರಂಗಿಗಳು ಗ್ರೀಕರ ಕೈ ಸೇರಿತು. ಇದಕ್ಕೆ ಮುಂದಿನ ರಾತ್ರಿ ತುರ್ಕರೂ ಅಲ್ಬಾನಿಯರೂ ಗ್ರೀಕರ ಸೈನ್ಯ ಇಳಿದಿದ್ದ ಸ್ಥಳಕ್ಕೆ ಬಿದ್ದು ೧೨೦ ಗ್ರೀಕ ಸೈನೀಕರನ್ನು ಕೊಂದರು. ಕೈಲಾರ್ ಎಂಬಲ್ಲಿ ತುರ್ಕರು ಗ್ರೀಕರಿಗೆ ಶರಣಾಗತರಾದನಂತರ ಪುನಃ ಗ್ರೀಕರ ಮೇಲೆ ಬಿದ್ದು ೫೮ ಮಂದಿಯನ್ನು ಕೊಂದು ೨೬೬ ಮಂದಿಯನ್ನು ಗಾಯಪಡಿಸಿದರು. ಗ್ರೀಕರು ಈ ಶತ್ರುಗಳಲ್ಲಿ ೪೦೦ ಮಂದಿಯನ್ನು ಕೈದುಮಾಡಿ ವಿಚಾರಣೆಗೆ ಗುರಿಮಾಡಿರುತ್ತಾರೆ.

ಸಲೋನಿಕ ಸಂಸ್ಥಾನದ ಎನಿಡ್ಜೆ ಎಂಬದನ್ನು ಗ್ರೀಕರು ವಶಮಾಡಿಕೊಂಡರು. ವೊಡೇನದ ಬಳಿಯಲ್ಲಿ ಗ್ರೀಕರು ಪೂರ್ಣವಾಗಿ ಸೋಲಿಸಲ್ಪಟ್ಟರು. ಗ್ರೀಕರ ೧೦ ಫಿರಂಗಿಗಳು ತುರ್ಕರ ಕೈಸೇರಿತು. ಗ್ರೀಕರ ಯುವರಾಜರು ಪಲಾಯಣ ಮಾಡಿದರು ಎಂಬದಾಗಿ ಕನ್‌ಸ್ತಂತಿನೋಪಲಿನಲ್ಲಿ ವಾರ್ತೆ ಇದೆ. ಈ ವಾರ್ತೆಯು ಸುಳ್ಳು ಎಂಬದಾಗಿ ಗ್ರೀಕರು ಪ್ರಕಟಿಸಿರುತ್ತಾರೆ.

ಕರ್ಕಿಕಿಲ್ಲಿಸವು ಬಿದ್ದನಂತರ ತುರ್ಕರು ತಮ್ಮ ೧೫ ಸೈನ್ಯದ ಕ್ರೈಸ್ತ ಸೋಲ್ಜರರನ್ನು ಒಂದು ಮನೆಯಲ್ಲಿ ಮುಚ್ಚಿಹಾಕಿ ಕೊಂದು ಬಿಟ್ಟರು. ಅದಲ್ಲದೆ ಒಬ್ಬ ಬಲ್ಗೇರಿಯ ಪಾದ್ರಿಯ ಮೂಗನ್ನು ಕಡಿದು ಕಣ್ಣನ್ನು ಕಿತ್ತು ಅವನ ದೇಹದ ಮೇಲೆ ಕ್ರೈಸ್ತ ಹೆಂಗಸರನ್ನೂ ಮಕ್ಕಳನ್ನೂ ಕೊಂದರು ಎಂಬ ಭಯಂಕರ ವಾರ್ತೆ ಬಂದಿರುವುದು.

ತುರ್ಕರು ಬಾಬ ಎಸ್ಕಿಯಿಂದ ಓಡಿಹೋಗುವಾಗಲೂ ಗ್ರೀಕರ ಗ್ರಾಮಗಳಲ್ಲಿ ೨೦೦ ಕ್ರೈಸ್ತರನ್ನೂ ಅಯಿವಾಲಿ ಗ್ರಾಮದ ಎಲ್ಲಾ ಹೆಂಗಸು ಮಕ್ಕಳನ್ನೂ ಕೊಲೆ ಮಾಡಿದರು. ಗರ್ಭಿಣಿಯಾದ ಒಬ್ಬ ಹೆಂಗುಸನ್ನು ಕಡಿದುಹಾಕಿ ಅವಳ ಮಗುವನ್ನು ತುಂಡು ತುಂಡುಮಾಡಿದರು. ಇತರರನ್ನೂ ಅಮಾನುಷ ರೀತಿಯಲ್ಲಿ ಕೊಂದಿರುವರು.

ಇಸ್ಸ ಬೋಲೆಟ್‌ನಾಟ್ಜ ಎಂಬಲ್ಲಿಯ ಒಬ್ಬ ಪ್ರಖ್ಯಾತ ಮುಖ್ಯಸ್ಥನು ೧೫,೦೦೦ ಹಿಂಬಾಲಕರೊಂದಿಗೆ ಸರ್ವಿಯರಿಗೆ ಶರಣಾಗತನಾಗಿರುವನು.

ಮೊಂಟೆನಿಗ್ರೋಯರು ಸ್ಕುತಾರಿಯಲ್ಲಿ ಹಿಮ್ಮೆಟ್ಟಲ್ಪಟ್ಟರು. ಮೊಂಟೆನಿಗ್ರೋಯರಲ್ಲಿ ೨೦೦೦ ಮಂದಿ ಹತರಾದರು. ೬ ಫಿರಂಗಿಗಳು ತುರ್ಕರ ಕೈಸೇರಿತು ಎಂಬದಾಗಿ ಕನ್‌ಸ್ತಂತಿನೋಪಲಿನಲ್ಲಿ ವಾರ್ತೆ ಇದೆ. ಕರ್ಕಿಕಿಲ್ಲೀಸ ಮತು ಅದ್ರಿನೋಪಲಿನಿಂದ ಬಂದು ತುರ್ಕರ ಮರೆಸೇರಿದ ೧೦,೦೦೦ ಮಂದಿ ಕನ್‌ಸ್ತಂತಿನೋಪಲಿನಲ್ಲಿದ್ದಾರೆ. ಪ್ರತಿ ಒಂದು ರಾಜ್ಯಗಳ ಒಂದು ಯುದ್ಧ ಹಡಗವು ಮಾತ್ರ ಡರ್ಡೆನೆಲ್ಸಿನಲ್ಲಿ ದಾಟಿ ಹೋಗಬಹುದೆಂದು ತುರ್ಕಿ ಸರಕಾರದವರು ಅಪ್ಪಣೆಮಾಡಿರುವರು. ಈ ಯುದ್ಧವನ್ನು ರಾಜಿಯಿಂದ ಕೊನೆಗಾಣಿಸಬೇಕೆಂದು ತುರ್ಕಿ ಸರಕಾರದವರು ಶ್ರೇಷ್ಠ ರಾಜ್ಯಗಳನ್ನು ಕೇಳಿಕೊಂಡಿರುವರು.

ಬ್ರಿಟಿಷರ ಯುದ್ಧ ಹಡಗಳು ಮೆಡಿಟರೇನಿಯನಿಗೆ ಹೊರಡಲು ಸಿದ್ಧವಾಗಿದೆಂದು ವಾರ್ತೆ ಬಂದದೆ. ಬ್ರಿಟಿಷರ ಎರಡು ಯುದ್ಧ ಹಡಗಗಳು ಕನ್‌ಸ್ತಂತಿನೋಪಲಿಗೆ ಹೋಗಿಯದೆ.

* * *

ಬಹುಮಾನಪಟ್ಟ ಗೋಖಲೆಯವರು ಈಗ ದಕ್ಷಿಣ ಆಫ್ರೀಕದ ಜೋಹನ್ನೆಸ್‌ಬರ್ಗಿನಲ್ಲಿರುವರು. ಅವರು ಅಲ್ಲಿ ತಲಪಿದಾಗ ಪಟ್ಟಣಪಾಲಕರಿಂದಲೂ ಅನೇಕ ಪಟ್ಟಣಿಗರಿಂದಲೂ ಬಹು ಸಂಭ್ರಮದಿಂದ ಸ್ವಾಗತ ಮಾಡಲ್ಪಟ್ಟರು. ರೈಲ್ವೇ ಸ್ಟೇಶನಿನಲ್ಲಿ ಬಹು ಚಿತ್ರಖಚಿತವಾದ ವಿಶೇಷ ಕಮಾನು ಬಿಡಿಸಲ್ಪಟ್ಟಿತ್ತು. ಹಲವು ಬಹುಮಾನ ಪತ್ರಗಳು ಇವರಿಗೆ ಅರ್ಪಿಸಲಾಯಿತು. ಈ ಪೈಕಿ ಬ್ರಿಟಿಷ್ ಇಂಡಿಯನ್ ಎಸೋಷಿಯೇಶನಿನವರು ಚಿತ್ರ ಬಿಡಿಸಲ್ಪಟ್ಟ ಚಿನ್ನದ ಕರಡಿಗೆಯಲ್ಲಿ ಬಹುಮಾನ ಪತ್ರವನ್ನು ಒಪ್ಪಿಸಿದರು. ಗೋಖಲೆಯವರು ಹೋದ ಹೋದಲ್ಲಿ ಸರಕಾರದವರಿಂದಲೂ ಬಿಳೀ ಜನರಿಂದಲೂ ಬಹಳವಾಗಿ ಸತ್ಕರಿಸಲ್ಪಟ್ಟಿರುವರು. ದಕ್ಷಿಣ ಆಫ್ರೀಕದ ಭಾರತೀಯರ ವಿಷಯವಾಗಿ ತಿಳಕೊಳ್ಳುವರೆ ಎಲ್ಲಾ ಸೌಕರ್ಯಗಳು ಇವರಿಗೆ ಲಭಿಸಿರುವದು.

* * *

ಜರ್ಮನ್ ಚಕ್ರವರ್ತಿನಿಯವರು ಈಚೆಗೆ ಉರ್ವೆಲಿ ಎಂಬಲ್ಲಿಯ ತನ್ನ ಅರಮನೆಗೆ ಹೋಗಿದ್ದಾಗ ಆ ಗ್ರಾಮದ ಎಲ್ಲಾ ಚಿಕ್ಕ ಬಾಲಕಿಯರ ಶಾಲೆಗಳನ್ನು ಸಂದರ್ಶಿಸಿದರು. ಒಂದು ಶಾಲೆಯಲ್ಲಿ ಒಬ್ಬ ಚಿಕ್ಕ ಹುಡುಗೆಯ ಚಾತುರ್ಯವನ್ನು ನೋಡಿ ಚಕ್ರವರ್ತಿನಿಯು ಬಹಳವಾಗಿ ಮೆಚ್ಚಿ "ನಿನಗೆ ಏನು ಬೇಕೋ ಅದನ್ನು ಕೇಳಿಕೋ, ನಾನು ಅದನ್ನು ನಿನಗೆ ಕೊಡುವೆನು" ಎಂಬದಾಗಿ ಹೇಳಿದರು. ಈ ಚಿಕ್ಕ ಹುಡುಗಿಯು ಉತ್ತರವನ್ನು ಇತರ ಎಲ್ಲಾ ಬಾಲಕಿಯರು ಆತುರದಿಂದ ಕಾಯುತ್ತಿದ್ದರು. ಚಿಕ್ಕ ಹುಡುಗಿಯು ಸ್ವಲ್ಪ ಆಲೋಚಿಸಿ ಫಕ್ಕನೇ "ನಮ್ಮ ಶಾಲೆಯಲ್ಲಿ ಪ್ರೆಂಚ್ ಪಾಠ ಕಲಿಸುವರೆ ಅಪ್ಪಣೆ ಕೊಡಬೇಕು" ಎಂದಳು. ಇದು ರಾಜಕೀಯ ವಿಷಯ ಅಂದರೆ ಜರ್ಮನ್ ಶಾಲೆಗಳಲ್ಲಿ ಜರ್ಮನಿನ ಮೇಲೆಯೇ ಹೆಚ್ಚು ಮನಸ್ಸನ್ನು ಕೊಟ್ಟು ಪ್ರೆಂಚನ್ನು ಅಣಗಿಸಬೇಕೆಂಬ ನಿಯಮವಿದ್ದದರಿಂದ ಚಕ್ರವರ್ತಿನಿಯು ಏನುಮಾಡಬೇಕೆಂದು ತಿಳಿಯಲಾರದೆ ಹೋದರು. ಆದರೆ ತಾನು ಕೊಟ್ಟ ಭಾಷೆಯನ್ನು ಪೂರೈಸುವದಕ್ಕಾಗಿ "ಆದೀತು" ಎಂದರು. ಹುಡುಗಿಯು ತಲೆಬಗ್ಗಿಸಿ ವಂದಿಸಿದಳು. ಮರುದಿನವೇ ಆ ಶಾಲೆಯಲ್ಲಿ ಪ್ರೆಂಚ್ ಪಾಠವು ಕೊಡಲು ಪ್ರಾರಂಭವಾಯಿತು. ಅಂದಿನಿಂದ ಈಗ ವಾರಕ್ಕೆ ೩ ಪ್ರೆಂಚ್ ಪಾಠಗಳು ಆ ಶಾಲೆಯಲ್ಲಿ ಕೊಡೋಣಾಗುತ್ತವೆ.

* * *

"ಬರ್ಮ ಕ್ರಿಟಿಕ್" ಪತ್ರದ ಸಂಪಾದಕರಾದ ಮೆ| ಅರ್ನೋಲ್ಡರವರಿಗೆ ಶಿಕ್ಷೆ ವಿಧಿಸಲ್ಪಟ್ಟ ಸಂಬಂಧದಲ್ಲಿ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆ ನಡೆಯಿತು. ಈ ಸಂಬಂಧದಲ್ಲಿ ಇಂಡಿಯ ಸ್ಟೇಟ್ ಸೆಕ್ರಟರಿಯಾದ ಕ್ರೂ ಪ್ರಭುಗಳವರು ಈ ಮೊಕದಮೆಯ ಇಡೀ ವರದಿಯನ್ನು ಕಳುಹಿಸುವರೆ ಇಂಡಿಯಾ ಸರಕಾರದವರನ್ನು ಕೇಳಿಕೊಂಡಿದ್ದೇನೆಂದರು.

ಉತ್ತರ ಹಿಂದೂಸ್ಥಾನ.

ಕಳದ ತಿಂಗಳ ತಾ. ೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೬೨೮ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೨೨೮೬ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಲ್ಲಿ ೫೯೬; ಮದ್ರಾಸ್ ೬೨; ಬಂಗಾಳ ೨; ಬಿಹಾರ್ ೪೦; ಸಂಯುಕ್ತ ಸಂಸ್ಥಾನ ೧೯೬; ಪಂಜಾಬು ೩೩; ಬರ್ಮಾ ೧೪; ಮಧ್ಯ ಸಂಸ್ಥಾನ ೩೪; ಮೈಸೂರು ೯೩೧; ಹೈದರಾಬಾದ್ ೧೬೫; ಮಧ್ಯ ಹಿಂದೂಸ್ಥಾನ ೨೨; ರಜಪುತಾನ ೨೬೬ ಮರಣಗಳಾದವು.

* * *

ತಾ. ೩೧ರಲ್ಲು ಬಂಗಾಳ, ಒರಿಸ್ಸದಲ್ಲಿ ಕಠಿಣ ಗಾಳಿ ಮಳೆ ಸುರಿಯ ಪ್ರಾರಂಭವಾದ್ದರಿಂದ ೧೭೦ ಪ್ರಯಾಣಿಕರಿದ್ದ "ಸಿಟಿ ಅಫ್ ಯೊರ್ಕ್" ಎಂಬ ಹಡಗವೂ ೧೨೦ ಪ್ರಯಾಣಿಕರಿದ್ದ "ಸಿಮ್ಲ" ಎಂಬ ಹಡಗವೂ ಮುಂದರಿಯಲಿಕ್ಕಾಗದೆ ನಿಲ್ಲಿಸಲ್ಪಟ್ಟಿದೆ. ತಾ. ೧ರಲ್ಲು ಕಲ್ಕತ್ತೆಯಲ್ಲಿ ಕಠಿಣ ಬಿರುಗಾಳಿ ಮಳೆ ಬಂದದೆ. ರಾತ್ರಿಯೆಲ್ಲಾ ಕಠಿಣ ಮಳೆ ಮತ್ತು ಗಾಳಿ. ಬೆಳಿಗ್ಯೆಯೂ ಗಾಳಿಮಳೆ ನಿಲ್ಲಲಿಲ್ಲ.

* * *

ಮದ್ರಾಸಿನ ಆಕ್ಟಿಂಗ್ ಗವರ್ನರರಾಗಿದ್ದ ಸರ್ ಮುರ್ರೆ ಹೆಮ್ಮಿಕರವರು ಪತ್ನಿ ಮತ್ತು ಇಬ್ಬರು ಹೆಮ್ಮಕ್ಕಳ ಸಹಿತ ತಾ. ೧ರಲ್ಲು ಮುಂಬಾಯಲ್ಲಿ ಶೀಮೆಗೆ ಹೋಗುವರೆ ಹಡಗ ಹತ್ತಿದರು.

* * *

ಕೆಲವು ದಿವಸಗಳ ಹಿಂದೆ ಕರಾಚಿಯ ಜಮರಾವ್ ಕೆನಲಿನಲ್ಲಿರುವ ಒಬ್ಬ ಪಂಜಾಬಿ ಜಮೀನ್ದಾರನ ಮೂಗನ್ನೇ ಕೆಲವು ದುಷ್ಟ ಜನರು ಕೂಡಿ ಕತ್ತರಿಸಿ ಹಾಕಿದ್ದರು. ಈಗ ಪುನಃ ತಾ. ೩೧ರಲ್ಲು ಅಲ್ಲಿಯ ಪ್ರಮುಖ ಪಂಜಾಬಿ ಜಮೀನ್ದಾರರಾದ ಸರ್‌ದಾರ್ ಅನನಾನ್ ಸಿಂಘ್ ಎಂಬವರನ್ನು ಯಾರೋ ಅಮಾನುಷ ರೀತಿಯಲ್ಲಿ ಕೊಂದು ದಿಗಿರಿ ಎಂಬಲ್ಲಿ ಸುಟ್ಟುಹಾಕಿದರು. ಇವರು ಮಿರ್ ಪುರಖಾನ್ ಎಂಬಲ್ಲಿಂದ ಕೌಚೇಲೋ ಎಂಬಲ್ಲಿಗೆ ರೈಲ್ವೇಯಲ್ಲಿ ಪ್ರಯಾಣಮಾಡುತ್ತಿದ್ದು ಕೌಚೇಲೋ ಸ್ಟೇಶನಿನಲ್ಲಿ ಇಳಿದರು. ಮಧ್ಯ ದಾರಿಯಲ್ಲಿ ಕೆಲವರು ಅವರನ್ನು ಸುತ್ತುಹಾಕಿ ಅರಳಿಯ ಗದ್ದೆಯಲ್ಲಿ ಕೊಂದು ಸುಟ್ಟುಹಾಕಿದರು. ಅದೇ ಸ್ಟೇಶನಿನಲ್ಲಿ ಇಳಿದ ಮತ್ತೊಬ್ಬ ಜಮೀನ್ದಾರನು ಅನುಮಾನದಿಂದ ಕೈದುಮಾಡಲ್ಪಟ್ಟಿರುವನು.

* * *

ಸರಕಾರ ಆಫೀಸುಗಳಲ್ಲಿ ಕೆಲಸಮಾಡುವ ಮಹಮ್ಮದೀಯರಿಗೆ ಪ್ರತಿ ಶುಕ್ರವಾರ ಮಧ್ಯಾಹ್ನದ ನಂತರ ೨ ತಾಸುಗಳ ರಜೆಯು ಕೊಡುವ ನಿಯಮನ್ನು ಜಾರಿಗೆ ತರುವರೆ ಲಾಹೋರಿನ ಅಂಜುಮಾನ್ ಇಟ್ಟೆಹಾದ್ ಸಂಘದವರು ಸರಕಾರಕ್ಕೆ ವಿಜ್ಞಾಪನೆ ಮಾಡಬೇಕೆಂತ ನಿಷ್ಕರ್ಷಿಸಿರುವರು.

* * *

ಕರಾಚಿಯ ಒಬ್ಬ ವಕೀಲನು ತನ್ನ ಎದುರ್ಗಡೆಯ ವಕೀಲನು ಕೋರ್ಟಿನಿಂದ ಹೊರಗೆ ಹೋದಕಾಲದಲ್ಲಿ ಅವನ ದಾಕ್ಲೆಗಳನ್ನು ಅಪಹರಿಸಿದನೆಂಬದಾಗಿ ಆಪಾದಿಸಲ್ಪಟ್ಟು ಕೈದು ಮಾಡಲ್ಪಟ್ಟಿರುವನು.

* * *

ಇದೇ ಕಳದ ತಾ. ೩೦ರಲ್ಲು ಗಂಗಾ ನದಿಯ ಜೂಸಿ ಎಂಬಲ್ಲಿ ೬೩೮೦ ಅಡಿ ಉದ್ದದ ಒಂದು ರೈಲ್ವೇ ಸೇತುವೆಯು ಸರ್ ಜೇಮ್ಸ್ ಮೆಸ್ಟನರವರಿಂದ ತೆರೆಯಲ್ಪಟ್ಟಿತು. ಅಲ್ಲಹಾಬಾದಿನ ೩ ರೈಲ್ವೇ ಸೇತುವೆಗಳಲ್ಲಿ ಇದೇ ದೊಡ್ಡದು. ಈ ಹೊಸ ಸೇತುವೆಯನ್ನು ಕಟ್ಟಿ ತೀರಿಸುವರೆ ೩ ವರ್ಷಕಾಲ ಬೇಕಾಯಿತು. ಸುಮಾರು ೪೦ ಲಕ್ಷ ರೂಪಾಯಿ ಖರ್ಚು ತಗಲಿತು.

* * *

ಮುಂಬಾಯಿ ಸರಕಾರದ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಮೆ| ಚೌಬಾಲರ ಬದಲಿಗೆ ಮೆ| ಪ್ರಭಶಂಕರ್ ಡಿ. ಪಟ್ಟಾನಿ ಸಿ. ಐ. ಇ. ರವರು ನೇಮಿಸಲ್ಪಟ್ಟಿರುವರು. ಮೆ| ಪಟ್ಟಾನಿಯವರು ಕೆಲವು ವರ್ಷಗಳಿಂದ ಭವನಗರದ ದಿವಾನರಾಗಿದ್ದು ಹೆಸರು ಪಡೆದವರಾಗಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಮೈಸೂರು ಮಹಾರಾಜರವರೂ ಯುವರಾಜರವರೂ ತಾ. ೨ನೇ ಶನಿವಾರ ಮಡಿಕೇರಿಗೆ ಬಂದಿರುವರು. ಮಡಿಕೇರಿಯಲ್ಲಿ ೬ ದಿವಸಗಳ ವರೆಗೆ ಇರುವರು. ಮೈಸೂರು ಮಹಾರಾಜರವರು ಮಡಿಕೇರಿಯನ್ನು ಸಂದರ್ಶಿಸಿದ್ದು ಇದೇ ಪ್ರಥಮ ಸಾರಿ.

* * *

ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಈ ಸಾರಿ ೩೬ ಚಿನ್ನದ ಪದಕಗಳೂ, ೨೬ ಬೆಳ್ಳಿ ಪದಕಗಳೂ, ೨೪ ಕಂಚಿನ ಪದಕಗಳೂ, ೬ ಒನರೆಬಲ್ ಮೆನ್ಶನ್ ಎಂಬ ಬಹುಮಾನ ಪತ್ರಗಳೂ ಕೊಡೋಣಾದವು.

ದಕ್ಷಿಣ ಕನ್ನಡ.

ಪುತ್ತೂರು. ಇಲ್ಲಿಯ ಕಾಯಂ ಪೋಸ್ಟುಮಾಸ್ತರ ಮೆ| ಡೆನಿಸ್ ಲೋಬರು ೨ ತಿಂಗಳ ರಜೆ ಪಡೆದ್ದರಿಂದ ಅವರ ಚಾರ್ಜನ್ನು ತಾ. ೧ರಲ್ಲು ರಾ| ಮಂಜುನಾಥ ಶ್ಯಾನುಭಾಗರು ವಹಿಸಿಕೊಂಡಿರುವರು.

ನಮ್ಮ ಇಲ್ಲಿಯ ರೋಮನ್‌ಕಥೊಲಿಕ ಇಗರ್ಜಿಯನ್ನು ಪೂರ್ಣ ಹೊಸತ್ತಾಗಿ ಕಟ್ಟುವದಕ್ಕೆ ಇಲ್ಲಿ ಬಂದ ಗುರುಗಳಾದ ರೆವೆರೆಂಡ ಪಾದರ ಪಿ. ಎನ್. ಸೋಜರವರು ಏರ್ಪಾಡುಮಾಡಿ ಅದರ ಕೆಲಸವನ್ನು ಇದೇ ತಾ. ೪ರಿಂದ ಆರಂಭಿಸಿರುವರು.

* * *

ಪೆರ್ಡಾಲ:—ಇಲ್ಲಿ ಇದೇ ತಾ. ೩ರಲ್ಲು ವಿದ್ಯೋದಯ ಎಂಬ ಹೆಸರಿನಿಂದ ಒಂದು ಸಂಸ್ಕೃತ ಶಾಲೆಯು ಬಹು ವಿಜೃಂಭಣೆಯಿಂದ ಮ. ರಾ. ರಾ. ಹೊನ್ನಾವರ ಹಳದಿಪುರ ಪಂಡಿತ ವಿಷ್ಣು ಶಾಸ್ತ್ರಿಗಳವರು; ಮಹೋಪಾಧ್ಯಾಯರಾದ ಕೆ. ಎಸ್. ಪರಮೇಶ್ವರ ಶಾಸ್ತ್ರಿಗಳವರ ಅಧ್ಯಕ್ಷತೆಯಿಂದ ತೆರೆಯಲ್ಪಟ್ಟಿತು.

* * *

ಪಾಣೆಮಂಗಳೂರು:—ದಯಾಳು ಸರಕಾರದವರು ಇಲ್ಲಿ ಹೊಸ್ತಾಗಿ ಕಟ್ಟಿಸಿದ ಮಾಪಿಳಾ ಬೋರ್ಡ ಎಲಿಮೆಂಟರಿ ಶಾಲಾ ಕಟ್ಟೋಣದ ಪ್ರತಿಷ್ಠೆಯು ಇದೇ ನವಂಬರ ೧ನೇ ತಾರಿಕಿಗೆ ಬಂಟ್ವಾಳ II ಕ್ಲಾಸ್ ಮೇಜಿಸ್ಟ್ರೇಟರವರ ಅಧ್ಯಕ್ಷಸ್ಥಾನದಲ್ಲಿ ಆಚರಿಸೋಣಾಯಿತು.

* * *

ಬಂಟವಾಳ:—ಇಲ್ಲಿಯ ಮೇಜಿಸ್ಟ್ರೇಟ ಕೋರ್ಟಿನಲ್ಲಿ ಸುಮಾರು ೨॥ ತಿಂಗಳಿಂದ ತನಕಿಯಾಗುತ್ತಿದ್ದ ಪಾಣೆಮಂಗಳೂರು ಪೋಸ್ಟಾಫೀಸಿನ ಕಳವಿನ ಮೊಕದಮೆಯು ಇದೇ ತಾ. ೪ಕ್ಕೆ ಅಂತ್ಯವಾಗಿ ೩ ಜನ ಮುದ್ದೈ ಆಲೆರಿಗೆ ಆರಾರು ತಿಂಗಳು ಕಠಿಣ ಸಜಾ ವಿಧಿಸಲ್ಪಟ್ಟಿತು.

ಇಲ್ಲಿಯ ಮಿಶನ್ ಸೆಕೆಂಡರಿ ಶಾಲೆಯವರು ಹೊಸ್ಟೆಲಿಗಾಗಿ ಸ್ಥಳ ಪಡಕೊಳ್ಳುತ್ತಾರೆಂತ ವರ್ತಮಾನ ಕೇಳಿ ಸಂತೋಷಪಡುತ್ತೇವೆ.

ಇಲ್ಲಿ ಹಸಿ ಮೀನು ಮಾರುವ ತಕ್ಕ ಸ್ಥಳವಿಲ್ಲದೆ ಮೀನು ಮಾರಾಟದವರು ಅಗಾಗ್ಯೆ ನ್ಯೂಸನ್ಸ್ ಆಕ್ಟಿನ ಮೇರೆಗೆ ಜುರುಮಾನೆ ಹೊಂದುವದರಿಂದ ದಯಾಳು ಸರಕಾರದವರು ಒಂದು ಸ್ಥಳವನ್ನು ಆರಿಸಿ ಸಣ್ಣ ಕಟ್ಟೋಣ ಕಟ್ಟಿಸಿ ಕೊಟ್ಟರೆ ಮಹಾ ಉಪಕಾರವಾಗುತ್ತಿತ್ತು. ಇದಕ್ಕೆ ಇಲ್ಲಿಯ ಬೋರ್ಡು ಮೆಂಬರವರು ತುಂಬಾ ಸಹಾಯಮಾಡುವರು ಎಂತ ಹಾರೈಸುತ್ತೇವೆ.

* * *

ಯರ್ಮಾಳ. ಪೋಸ್ಟಲ್ ಇಲಾಖೆಯ ಸುಪರಿಂಟೆಂಡೆಂಟರವರಿಗೆ ಊರ ಜನರು ಇಲ್ಲಿ ಪುನಃ ಬ್ರೆಂಚಾಫೀಸನ್ನು ತೆರೆಯುವರೆ ಹುಕುಂ ಕೊಡಬೇಕೆಂದು ತಂತಿ ಬಿಟ್ಟಲ್ಲಿ ಜನರಲವರಿಗೆ ಬರೆದು ಹಿಂದಿನಿಂದ ಹುಕುಂ ಕೊಡುವೆನು ಎಂದು ಉತ್ತರ ಶಿಕ್ಕಿರುತ್ತದೆ.

* * *

ವಿಜ್ಞಾಪನೆ:—ನಮ್ಮ ಟ್ರೆವಲಿಂಗ್ ಏಜಂಟರಾದ ರಾ| ಕೆ. ವಾಸುದೇವ ಪೈಗಳು ಚಂದಾದಾರರಿಂದ ಚಂದಾಹಣವನ್ನು ವಸೂಲುಮಾಡುವರೆಯೂ ಹೊಸ ಚಂದಾದಾರರನ್ನು ಸಂಗ್ರಹಿಸುವರೆಯೂ ಮುಲ್ಕಿ, ಉಡುಪಿ, ಕುಂದಾಪುರ, ಗಂಗೊಳ್ಳಿ ಮೊದಲಾದ ಪ್ರಾಂತ್ಯಗಳಿಗೆ ಹೊರಟಿರುವರು. ಚಂದಾದಾರರೆಲ್ಲರೂ ಚಂದಾಹಣವನ್ನು ಇವರ ಕೈಯ ವಸೂಲು ಕೊಡಬೇಕಾಗಿಯೂ ಹೊಸ ಚಂದಾದಾರರನ್ನು ಸಂಗ್ರಹಿಸುವುದರಲ್ಲಿ ಸಹಾಯಮಾಡಬೇಕಾಗಿಯೂ ವಿಜ್ಞಾಪಿಸುತ್ತೇವೆ.

~~~~~~

ಮಂಗಳೂರು:-ಮುನಿಸಿಪಾಲಿಟಿಯಲ್ಲಿ ಕಳದ ವಾರ ೨ ಪ್ಲೇಗು ಮರಣಗಳಿದ್ದವು.

ಮದ್ರಾಸ್ ಬೇಂಕಿನ ಏಜಂಟರಾದ ಮೆ| ಬಕ್ಲೆಯವರು ಮೆ| ಎ. ಜೆಕ್ಸನರ ಬದಲಿಗೆ ಮುನಿಸಿಪಾಲ್ ಕೌನ್ಸಿಲಿನ ಸರಕಾರ ಕಡೆಯ ಮೆಂಬರರಾಗಿ ನೇಮಿಸಲ್ಪಟ್ಟಿದ್ಧಾರೆ ಎಂದು ತಿಳಿಯುತ್ತೇವೆ.

ಲೇಂಡ್‌ರಿಕೋರ್ಡು ತಹಸೀಲದಾರರಾದ ಮೆ| ಡಿ. ಆನಂದರಾಯರು ೨೫ ದಿವಸಗಳ ಪ್ರಿವಿಲೆಜ್ ರಜೆ ಪಡಕೊಂಡಿರುವುದರಿಂದ ಇವರ ಬದಲಿಗೆ ರಾ| ಕಿಲ್ಪಾಡಿ ಶಿವರಾಯರವರು ನೇಮಿಸಲ್ಪಟ್ಟಿರುವರು.

ಪಶುವೈದ್ಯರಾದ ಮೆ| ಕೆ. ರಾಘವೇಂದ್ರರಾಯರು ಮೂರು ತಿಂಗಳ ರಜೆಗೆ ಬರಕೊಂಡಿರುವುದರಿಂದ ಮೆ| ಕೆ. ವಿಶ್ವನಾಥರವರು ಈ ಜಿಲ್ಲೆಗೆ ವರ್ಗಾಯಿಸಲ್ಪಟ್ಟಿದ್ಧಾರೆ.

ಪುತ್ತೂರು ಡಿವಿಜನ್ ಆಫೀಸರರ ಚಾರ್ಜಿಯಲ್ಲಿರುವ ಇಲ್ಲಿಯ ಡಿವಿಜನಲ್ ಆಫೀಸರರು ಕುಂಬಳೆಯಲ್ಲಿ ಮೊಕ್ಕಾಂ ಮಾಡಿರುತ್ತಾರೆ.

ಸರ್ಕೀಟನಲ್ಲಿರುವ ಜಿಲ್ಲಾ ಕಲೆಕ್ಟರವರು ಈ ತಿಂಗಳಾಂತ್ಯಕ್ಕೆ ಇಲ್ಲಿಗೆ ಹಿಂದೆರಳುವರು.

ಮಂಗಳೂರು ಪಟ್ಟಣಕ್ಕೆ ಮರೋಳಿಯಿಂದ ನೀರು ಒದಗಿಸಿಕೊಡುವ ವಿಷಯವು ಸರಕಾರದವರ ಆಲೋಚನೆಯಲ್ಲಿದೆಂದು ತಿಳಿಸಿತ್ತಷ್ಟೆ. ಈ ಸಂಬಂಧ ಪೂರ್ಣ ತನಖಿ ನಡಿಸಿ ವರದಿ ಮಾಡಬೇಕೆಂದು ಸೆನಿಟೆರಿ ಆಫೀಸರರಿಗೆ ಸರಕಾರದವರು ಹುಕುಂ ಮಾಡಿರುವರು.

ಮಾಗಣೆ ಶಾನುಭೋಗರವರಿಗೆ ಸರ್ವೇ ಮಾಹಿತಿಯನ್ನು ಕೊಡುವರೆ ಉಡ್ಪಿಯಲ್ಲಿ ಒಂದು, ಇಲ್ಲಿ ಒಂದು, ಹೀಗೆ ಎರಡು ಟ್ರೈನಿಂಗ್ ಶಾಲೆಗಳು ಈ ತಿಂಗಳಲ್ಲಿ ತೆರೆಯಲ್ಪಡುವವು.

ಸೆಂಟ್ರಲ್ ವಾರ್ಡಿನ ಮುನ್ಸಿಫಲ್ ಕೌನ್ಸಿಲ್ಲರಾಗಿ ನೇಮಿಸಲ್ಪಟ್ಟ ರಾ| ಹುಂಡಿ ಪುರುಷೋತ್ತಮಕಾಮತ್ ಮತ್ತು ರಾ| ನಗರ ಗಣಪತಿ ರಾಯರವರ ನೇಮಕಗಳು ಸರಕಾರದಿಂದ ಮಂಜೂರಾತಿ ಪಡದಿರುವದು.

ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ಇಲ್ಲಿಂದ ಆಭರಣಾದಿಗಳನ್ನು ಕಳುಹಿಸಿದ ಇಲ್ಲಿಯ ಪಂಜೆ ನಾರಾಯಣ ರಾಯರಿಗೆ ಒಂದು ಚಿನ್ನದ ಬಹುಮಾನ ಪದಕವು ದೊರಕಿರುವುದು ಎಂದು ತಿಳಿಸಲು ಸಂತೋಷಪಡುತ್ತೇವೆ.

ಕಾಸರಗೋಡು ರೆವಿನ್ಯು ಇನ್ಸಪೆಕ್ಟರ್ ರಾ| ಗುಂಡಿಲ ಅನಂತಯ್ಯನವರ ಬದಲಿಗೆ ರಾ| ಮುಲ್ಕಿ ಸುಬ್ಬರಾವ್‌ರವರು ಶಂಕರನಾರಾಯಣದಿಂದ ಕಾಸರಗೋಡಿಗೆ ವರ್ಗಾಯಿಸಲ್ಪಟ್ಟಿರುವರು.

ರಾ| ಕಾರ್ಕಳ ಸ್ಟೊರ ಪ್ರಭುಗಳು ಕಾಸರಗೋಡು ತಾಲೂಕು ಆಫೀಸಿನ ಸೆಕೆಂಡ್ ಕ್ಲಾರ್ಕರಾಗಿ ನೇಮಕಪಟ್ಟಿರುವುದರಿಂದ ಬೆಳ್ತಂಗಡಿ ರೆವಿನ್ಯು ಇನ್ಸಪೆಕ್ಟರರಾಗಿ ರಾ| ಗುರುಪುರ ಶೇಷಗಿರಿ ಪ್ರಭು ಬಿ. ಎ ರವರು ನೇಮಕಪಟ್ಟಿರುವರು.

ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ಇಲ್ಲಿಯ ಆರ್ಟಿಸ್ಟ್ ಎ. ರಾಜಪ್ಪ ಎಂಬವರು ಕಳುಹಿಸಿದ ಸ್ಯಾನ್ ಬೋರ್ಡು, ಆವೆ ಮಣ್ಣಿನ ಕೆಲಸಗಳು, "ವೂಡ್‌ಬ್ಯಲ್" ಎಂಬ ಮರದ ಅತ್ಯುತ್ತಮವಾದ ಎಣ್ಣೆ ಇವುಗಳಿಗೆ ಪ್ರದರ್ಶನದಲ್ಲಿ ಒಂದು ಬೆಳ್ಳಿಯ ಪದಕವೂ, ೨ ಕಂಚಿಯ ಪದಕವೂ ಒಂದು ಬಹುಮಾನ ಪತ್ರವೂ ಸಿಕ್ಕಿರುವುದೆಂಬದನ್ನು ತಿಳಿಸಲು ಸಂತೋಷ ಪಡುತ್ತೇವೆ. ರಾ| ಎ. ರಾಜಪ್ಪನವರು ಈ ತನ್ನ ಕೈಗಾರಿಕೆಯಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಹೊಂದ ಬೇಕಾದರೆ ಇಲ್ಲಿಯ ಮಹಾಜನರ ಪ್ರೋತ್ಸಾಹವು ಅಗತ್ಯವಿದೆ. ಆದ್ದರಿಂದ ಸರ್ವರೂ ಇವರಿಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿ ಹಾರೈಸುವೆವು.

ಪಾವಂಜೆ ಗ್ರಾಮದ ಪಟೇಲ್ ಎಚ್. ಜಿಯಾವುದ್ಧೀನ್ ಅಸ್ಸದಿಯವರು ಮುಲ್ಕಿ ಸ್ಟೇಶನ್ ಎಫ್. ಐ. ನಂಬ್ರ $\frac{1}{12}$ (ಯೆಕ್ಸಪ್ಲೊ ಜೀವ್ಸ ಆಕ್ಟಿನ ಮೇರೆಗೆ) ನೇ ಮೊಕದಮೆಯಲ್ಲಿ ಮೆಹನತ್ತು ಪಟ್ಟು ಪೋಲೀಸಿನವರಿಗೆ ಸಹಾಯಮಾಡಿದ್ದರು. ಇದು ಇತರ ಪಟೇಲರುಗಳಿಂದ ಸಹಾ ಅನುಸರಿಸತಕ್ಕಂಥಾದ್ದಾಗಿರುವದರಿಂದ ಈ ಬಗ್ಯೆ ಪೋಲೀಸ್ ಸುಪರಿಂಟೆಂಡೆಂಟರವರು ಇವರಿಗೆ ಬಹುಮಾನಾರ್ಥವಾಗಿ ಒಂದು ಪತ್ರವನ್ನು ಬರೆದು ಕಳುಹಿಸಿರುವರು.

ಡಿಸ್ಟ್ರಿಕ್ಟ ಬೋರ್ಡು ಮೆಂಬರ್ ಎಚ್. ರಾಮಯ್ಯಶೆಟ್ಟಿ ರಾ| ವಕೀಲ ಪಿ. ಸಂಜೀವನವರ ವಿವಾಹದ ಕುರಿತು ಇದೇ ತಿಂಗಳ ೧ನೇ ತಾರೀಕಿನ ಸಂಚಿಕೆಯಲ್ಲಿ ಪ್ರಕಟಿಸಿದ ವೃತ್ತಾಂತದಲ್ಲಿ "ಈ ಮಹೋತ್ಸಹವನ್ನು ಮ. ರಾ. ರಾ. ಕೆ. ರಂಗರಾಯರು ೧೮೭೨ನೇ ಇಸವಿಯ ೩ನೇ ಆಕ್ಟಿನ ಪ್ರಕಾರ ನೆರವೇರಿಸಿದರು" ಎಂತ ಬರೆದಿರುವ ಕಾರಣ ರಂಗರಾಯರು ಯಾವ ಯಾವ ಕಾರ್ಯಗಳನ್ನು ಮಾಡಿದರು ಎಂಬದನ್ನು ವಿವರಿಸಬೇಕೆಂತ ಮಂಗಳೂರು ಬ್ರಹ್ಮಸಮಾಜದ ಮೆಂಬರರಿಂದ ಬರಹ ಮೂಲಕ ಕೇಳಲ್ಪಟ್ಟಿದ್ದಾರೆ.

ನಯನ ವೈದ್ಯರಾದ ಡಾಕ್ಟರ್ ರಾಮ ಕಾಮತರವರು ಉಡ್ಪಿಯ ಮುಸಾಫ್ರಿ ಬಂಗ್ಲೆಯಲ್ಲಿ ತಾ. ೧೧ರಲ್ಲು ತಮ್ಮ ಆಫೀಸನ್ನು ತೆರೆಯುವುದರಿಂದ ನಯನ ರೋಗಿಗಳು ಅವರನ್ನು ಸದರಿ ಬಂಗ್ಲೆಯಲ್ಲಿ ಕಾಣಬಹುದು.

ಮ| ರಾ| ರಾ| ನಿಟ್ಟೆಗುತ್ತಿನ ಬೆಮ್ರು ಅಡ್ಯಾಂತಾಯರ ಮೊಮ್ಮಗ ಮಾಲಿಂಗ ಅಡ್ಯಾಂತಾಯರು ಸುರಕ್ಷಿತವಾಗಿ ವಿಲಾಯತಿಗೆ ತಲ್ಪಿ ಎಡಿನ್‌ಬರ್ಗ್ ಯುನಿವರ್ಸಿಟಿಯನ್ನು ಶೇರಿರುತ್ತಾರೆಂಬ ತಂತಿ ವರ್ತಮಾನ ಬಂದಿರುತ್ತದೆ. ಇವರು ಎಡಿನ್‌ಬರ್ಗ್ ಯುನಿವರ್ಸಿಟಿಯ (B. Sc.) ಬಿ. ಎಸ್‌ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕೆಂಬ ಅಭಿಲಾಷೆಯಿಂದ ಹೋಗಿರುತ್ತಾರೆ. ಈ ಜಿಲ್ಲೆಯ ಬಂಟರಲಿ ವಿದ್ಯಾಭ್ಯಾಸವನ್ನು ಪಡೆಯುವರೆ ವಿಲಾಯತಿಗೆ ಹೋದವರಲ್ಲಿ ಮಾಲಿಂಗ ಅಡ್ಯಾಂತಾಯರು ಪ್ರಥಮರು. ಇವರು ಹೋದ ಕಾರ್ಯದಲ್ಲಿ ಸಫಲಹೊಂದಿ ಅವರ ಜಾತಿಗೂ ನಮ್ಮ ದೇಶಕ್ಕೂ ಕೀರ್ತಿಯನ್ನು ತರಬೇಕೆಂಬದೇ ನಮ್ಮ ಅಪೇಕ್ಷೆಯಾಗಿದೆ.

~~~~~~

ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈಗಳವರ ಸ್ಮಾರಕ ದಿನವು.

ವಿಜ್ಞಾಪನೆ.

ಈ ತಿಂಗಳ ತಾರೀಕು ೧೯ನೇ ಮಂಗಳವಾರ ದಿನ ಮಂಗಳೂರಿನ ಕೆನರಾ ಹ್ಯಾಸ್ಕೂಲಿನಲ್ಲಿ ಸುಬ್ರಾವ್ ಮೆಮೊರಿಯಲ್ ಕಮ್ಮಿಟಿಯವರು ಸುಬ್ರಾಯ ಪೈಗಳವರ ಸ್ಮಾರಕ ದಿನವನ್ನಾಚರಿಸಬೇಕೆಂದು ನಿರ್ಣಯಿಸಿರುವರು. ಈ ದಿನಾಚರಣೆ ಬಗ್ಯೆ ತಾ. ೧೯ನೇಯ ಅಪರಾನ್ಹ ಕೆನರಾ ಹ್ಯಾಸ್ಕೂಲಿಗೆ ಸರ್ವರೂ ದಯಮಾಡಿ ಬರಬೇಕೆಂತ ಅಪೇಕ್ಷಿಸೋಣಾಗಿಯದೆ.

S. Narasing Nayak,
Secretary.
SUBBA RAU MEMORIAL FUND.

~~~~~~

ವಿವಿಧ ವಿಷಯಗಳು.

~~~~~~

ಲೀಲಾವತಿ ಗಣಿತ ವಿದ್ಯೆಯಲ್ಲಿಯೂ, ಗಾರ್ಗಿಯು ವಿವಿಧ ತರದ ವಿದ್ಯೆಯಲ್ಲಿಯೂ, ಮೀರಾಬ್ಯಾ, ಜೆಬೂನಿಸಾ, ಮೀರಿ, ಮೊದಲಾದವರು ಧರ್ಮಜ್ಞಾನದಲ್ಲಿಯೂ, ನೂರ್‌ಜಿಹಾನ್, ಅಹಲ್ಯಾಬ್ಯಾ, ಜಂಡನ್‌ದೇಶದ ಮಹಾರಾಣಿ ಚಂದ್ರಾವತಿ ಮೊದಲಾದವರು ರಾಜ್ಯಾಡಳಿತೆ ನಡಿಸುವುದರಲ್ಲಿಯೂ ಖ್ಯಾತಿಹೊಂದಿದ ಮಹಾನೀಯರಾಗಿದ್ದರು ಎಂತ ಮಧ್ಯ ಹಿಂದುಸ್ಥಾನದ ಸಿ. ಯನ್. ಜಟ್ಸಿ ಎಂಬವರು ವರ್ತಮಾನ ಪತ್ರದಲ್ಲಿ ಪ್ರಕಟ ಪಡಿಸಿದ ತನ್ನ ಲೇಖನದಲ್ಲಿ ಹೇಳುತ್ತಾರೆ.

~~~~~~

ಮದ್ರಾಸಿನ ಲೋರ್ಡ್ ಬಿಶೊಪ್ ವ್ಯಾಟ್‌ಹೆಡ್ ದೊರೆಗಳು ಕೇಂಬ್ರಿಜ್ ಪಟ್ಟಣದಲ್ಲಿ ಭಾಷಣ ಮಾಡುವಾಗ ಹಿಂದೂಸ್ಥಾನದಲ್ಲಿ ದೇಶೀಯ ಕ್ರೈಸ್ತರಲ್ಲಿ ಸರಾಸರಿ ಮೇಲೆ ೫ರಲ್ಲಿ೪ ಜನರು ಬ್ರಾಹ್ಮಣರಲ್ಲದವರೆಂತಲೂ ಹಿಂದುಗಳು ಕೀಳು ಜಾತಿಯವರನ್ನು ಅಪ್ರೀತಿಯಿಂದ ನಡಿಸುತ್ತಾರಾದ್ದರಿಂದ ಅವರು ಹೆಚ್ಚಾಗಿ ಮೊದಲು ಮಹಮ್ಮದಿ ಮತಕ್ಕೆ ಉತ್ತರ ಹಿಂದುಸ್ಥಾನದಲ್ಲಿ ಶೇರಿದಂತೆ ಈಗ ಕ್ರೈಸ್ತಮತಕ್ಕೆ ಶೇರುತ್ತಾರೆಂತಲೂ ಇನ್ನು ಮುಂದೆಯೂ ಬ್ರಾಹ್ಮಣರಲ್ಲದವರೇ ಕ್ರೈಸ್ತಮತಕ್ಕೆ ಶೇರುವುದು ಅಧಿಕವಾಗುವುದೆಂತಲೂ, ೭೦ ವರುಷಗಳ ಹಿಂದೆ ಬ್ರಾಹ್ಮಣ ಕುಲದವರೂ ಬೇರೆ ಮೇಲ್ಜಾತಿಯವರೂ ಕ್ರೈಸ್ತಮತಕ್ಕೆ ಶೇರುವದಾಗಿ ಮಾಡಿದ ಕೋರಿಕೆ ಸಫಲವಾಗಲಿಲ್ಲವೆಂತಲೂ ಅಭಿಪ್ರಾಯ ಹೇಳಿದರು.

~~~~~~

ಜೇನಸುಗಳ ಧಾರಣೆ, ಮಂಗಳೂರು. (ರಖಂ)

ಮಸ್ಕತಿ ಅಕ್ಕಿ	5—14—0-6—6—0
ಗುಡ್ಡು ಮಸ್ಕತಿ... ...	5—10—0-6—0—0
ಮಸ್ಕತಿ ದುಯಂ... ...	5-10-0—6—0—0
ಗಾಡಿ ಸುಗ್ಗಿ	5-0-0-5—2—0
ಉಂಚು ಸುಗ್ಗಿ	5—12—0—5-14—0
ಮಸ್ಕತಿ ಬೆಳ್ತಿಗೆ	6—12—0
ಹೊಸ ಗುಡ್ಡುರಾಶಿ	4-12-0—4-15—0
ಹೊಸ ಭತ್ತ	2—1—6-2—2—0
ರಂಗೂನ್ ಬೆಳ್ತಿಗೆ ಗೋಣಿ 1ರ	11—6—0
ಹುರುಳಿ ಗೋಣಿ ೧, ಮುಡಿ 2ರ	6-10-0 6-12-0
ಉಪ್ಪು ಗೋಣಿ ೧ರ	3—14—0
ಕೊಬ್ರಿ ಖಂಡಿ ೧ರ ...	90-0-0-95—0-0
ಕೊಬ್ರಿ ಎಣ್ಣೆ ಮಣ ೧ರ	7—0—0
ಕೊಬ್ರಿ ಹಿಂಡಿ ಖಂಡಿ ೧ರ	32-8-0
ಊರು ಬೆಲ್ಲ ಖಂಡಿ ೧ರ	55—0—0
ಕಾಫಿ ಖಂಡಿ ೧ರ 270-0-0	275—0—0
ಕಾಳು ಮೆಣಸು ಖಂಡಿ	180-0-0
ಬಿಳಿ ಗೋಟು ಅಡಿಕೆ ಖಂಡಿ ೧ರ ...	85-0—0
ಪಚ್ಚೆಹೆಸರು ಗೋಣಿ ೧ರ	11-4-0
ಬೊಂಬಾಯಿ ಉದ್ದು ಗೋಣಿ ೧ರ	10-0—0
ಗೋದಿ ಗೋಣಿ ೧ಕ್ಕೆ	12—0—0
ಕಡಲೆ ಗೋಣಿ ೧ರ	7-4-0-7—8—0
ತೊಗರಿ ಗೋಣಿ ೧ರ	8-8-0
ತೊಗರಿಬೇಳೆ ಗೋಣಿ ೧ರ	11-0-0--13-0-0
ಮೋರಿಸ್ ಸಕ್ಕರೆ ಮಣ ೧ರ	2—14—0
ಎಳ್ಳಿಂಡಿ	35-0-0

~~~~~~













ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಸುಲಭ ಕ್ರಯಗಳು ! ಪರೀಕ್ಷಿಸಿರಿ !! ಸಂತೋಷ ಪಡುವಿರಿ !!!

ವ್ಯಾಪಾರಸ್ಥರುಗಳಿಗೆ ಕೊಡುವ ಕ್ರಯಗಳಿಗೆ ಬಿಕರಿ.

ರಾಸ್ಕೋಪ್ ಸಿಷ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ಇದು ಎಂದೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ, ಚಕ್ರಗಳಲಿ ಕೆಂಪುಗಳು ಕೆತ್ತಲ್ಪಟ್ಟು ಹಿಂಭಾಗದಲ್ಲಿ ಗ್ಲಾಸುಡೋಮು ಇದು ನೋಡಲಿಕ್ಕೆ ಬಹು ರಮಣೀಯವಾಗಿದೆ. ಬಹು ಮಜಬೂತಾದ ದೀರ್ಘಕಾಲ ಬಾಳಿಕೆಗೆ ಬರುವ ಮತ್ತು ಕಾಲವನ್ನು ಸರಿಯಾಗಿ ತೋರಿಸುವ ಘಡಿಯಾರವು. ಇದಕ್ಕೆ ೫ ವರುಷಗಳ ಗ್ಯಾರಂಟಿ. ಬೇರೆ ಕಂಪೆನಿಯವರು ಇದಕ್ಕಿಂತ ಕಮ್ಮಿ ಬೆಲೆಯ ಘಡಿಯಾರವನ್ನು ರೂ. 2-8-0 3—8—0 ಬೆಲೆಗೆ ಮಾರುತ್ತಾರೆ. ಕಾರಣ ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತೃಪ್ತಿಯಾಗಿಯೂ ಸಂತೋಷವಾಗಿಯೂ ಇರುವದು.

ಕ್ರಯ ರೂ. 2-8—0. ವಿ. ಪಿ. ಪಿ. ಚಾರ್ಜು ರೂ. 0—4—0.

ಸ್ವೀಸ್ ಮೇಡ್ ರೈಲ್ವೆ ರೆಗ್ಯುಲೇಟರ್ ಲೀವರ್ ಜ್ಯುವೆಲ್ಡ್ ವಾಚ್.

ಇದು ಎಲ್ಲಾ ದೇಶದಲ್ಲಿಯೂ ಬಹಳ ಪ್ರಸಿದ್ಧವಾದ ಘಡಿಯಾರವು. ಇದು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹಳ ಉತ್ತಮವಾದ್ದೆಂದು ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇದು ಆಯುಷ್ಯಪರಿಮಿತಿ ಇರುವದು. ಇದು ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುವದು. ಇದು ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟುದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುವವು. ಇದಕ್ಕೆ ಒಳಗಿನ ಗ್ಲಾಸು ಡೋಮ ಸಹಾ ಇರುವದು. ಇದಕ್ಕೆ ೫ ವರುಷಗಳ ಗ್ಯಾರಂಟ್ಟಿ.

ಕ್ರಯ ರೂ. 3—8—0 ವಿ. ಪಿ. ಪಿ. ಚಾರ್ಜು ರೂ. 0-4-0.

ಲೇಡಿಸ್ ಸಿಲ್ವರ್ ಜ್ಯುವೆಲ್ಡ್ ವಾಚ್.

ಈ ಘಡಿಯಾರವು ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿರುವವು. ಇದು ಕಾಲವನ್ನು ಸರಿಯಾಗಿ ತೋರಿಸುತ್ತದೆ. ಉಪಯೋಗಕ್ಕೆ ಯೋಗ್ಯವಾದದ್ದು. ಇದನು ಕೈಯಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಇಂಥಾ ವಾಚನ್ನು ಇಷ್ಟು ಕಡಮೆ ಕ್ರಯಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದಕ್ಕೆ ಗ್ಯಾರಂಟಿ ೫ ವರುಷಗಳು.

ಕ್ರಯ ರೂ. 6—0—0 ವಿ. ಪಿ. ಪಿ. ಚಾರ್ಜು ರೂ. 0—6—0.

ಪೋಲಾರ್ ಲೀವರ್ ವಾಚ್.

(ವಾರಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು)

ಇದು ಬಹಳ ಆಶ್ಚರ್ಯಕರವಾದ ಎಂಟು ದಿವಸಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು. ಇದು ಬಹಳ ಗಟ್ಟಿತರವಾದದ್ದು ಇದು ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಬಂಗಾರದ ಪದಕಗಳನ್ನು ಹೊಂದಿರುತ್ತದೆ. ಇದು ಶುದ್ಧ (ಚೊಕ್ಕ) ಬೆಳ್ಳಿಯಿಂ ಮಾಡಲ್ಪಟ್ಟಿರುತ್ತದೆ. ಇಂಥಾ ರಮಣೀಯವಾದ ಮತ್ತು ಆಶ್ಚರ್ಯಕರವಾದ ಗಡಿಯಾರವನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕದಯಿಸಲ್ಪಟ್ಟಿಲ್ಲವು. ಇದನ್ನು ಪ್ರತಿ ಒಬ್ಬರು ತರಿಸಿಕೊಂಡು ಸಂತೋಷಪಡುವಿರೆಂದು ನಂಬುತ್ತೇವೆ. ಇದಕ್ಕೆ ಗ್ಯಾರಂಟಿ ೧೦ ವರುಷಗಳು.

ಕ್ರಯ ರೂ. 10—0—0. ವಿ. ಪಿ, ಪಿ. ಚಾರ್ಜು ರೂ. 0—8—0.

ಟೇಬಲ್ ಟ್ಯಾಂಪೀಸು ಘಡಿಯಾರಗಳು.

ಇವುಗಳು ಬಹಳ ಕಡಿಮೆ ಕ್ರಯದವುಗಳಾಗಿರುವದಲ್ಲದೆ ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಮನೋಹರವಾಗಿಯೂ ಇರುವವು. ಇವುಗಳು ಅನೇಕ ಸಂವತ್ಸರಗಳ ವರಿವಿಗೆ ಬಾಳಿಕೆ ಬರುವವು. ಈ ಘಡಿಯಾರಗಳನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲಿಯೂ ಅವಶ್ಯ ಇಡಬೇಕಾದ್ದು.

ನಂಬರ್ ೧. ತಾರೀಕುಗಳನ್ನು ತೋರಿಸುವ ಮತ್ತು ಅಲಾರಂ ಸಹ ಇರುವ ಕ್ಯಾಲಂಡರ್ ಅಲಾರು ಟ್ಯಾಂಫೀಸು ೧ಕ್ಕೆ ಕ್ರಯ ರೂ. 2-8-0 ವಿ. ಪಿ. ಪಿ. ಚಾರ್ಜು 0—6—0. ನಂಬರ್ ೨. ತಾರೀಕುಗಳು ಇಲದ ಬರೀ ಅಲಾರಂ ಟ್ಯಾಂಫೀಸು ೧ಕ್ಕೆ ಕ್ರಯ ರೂ. 2-0-0 ವಿ.ಪಿ. ಚಾರ್ಜು 0-6-0. ನಂಬರ್ ೩. ತಾರೀಕು ಮತ್ತು ಅಲಾರಂ ಇಲ್ಲದ ಸಾದಾ ಟ್ಯಾಂಫೀಸ ೧ಕ್ಕೆ ಕ್ರಯ ರೂ. 1-4-0 ವಿ. ಪಿ. ಪಿ. ಚಾರ್ಜು 0-6-0.

ಕ್ಯಾರೇಜು ಕ್ಲಾಕು ಘಡಿಯಾರಗಳು.

ಇವು ಬಹಳ ರಮ್ಯವಾದವುಗಳು ಮತ್ತು ಮನೋಹರವಾದವುಗಳು. ಅನೇಕ ವರುಷಗಳ ವರಿಗೂ ಬಾಳಿಕೆ ಬರತಕ್ಕವುಗಳು. ಇವು ಉತ್ತಮ ತರದ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿ ಸೈಡು ಗ್ಲಾಸುಗಳು ಸಹ ಇರುವವು. ಇವನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲ್ಲಿಯೂ ಮತ್ತು ಇತರ ಕಾರ್ಯಾಲಯಗಳಲಿಯೂ ಇಡುವದಕ್ಕೆ ಯೋಗ್ಯವಾದವುಗಳು.

ನಂಬರ್ ೧. ಘಂಟೆ, ಅರ್ಧ ಘಂಟೆ ಹೊಡೆಯುವದು. ಮತ್ತು ಅಲಾರಂ ಸಹ ಇರುವದು ೧ಕ್ಕೆ ಕ್ರಯ ರೂ. 5-0-0. ವಿ.ಪಿ.ಪಿ. ಚಾರ್ಜು ರೂ.0-10-0 ನಂಬರ್ ೨. ಘಂಟೆ, ಅರ್ಧಘಂಟೆ ಮಾತ್ರ ಹೊಡೆಯುವದು ರೂ. 4-8-0 ವಿ.ಪಿ.ಪಿ. ಚಾರ್ಜು 0-8-0. ನಂಬರ್ ೩. ಕಾಲವನ್ನು ಮಾತ್ರ ತೋರಿಸಿ 15 ನಿಮಿಷಗಳ ವರಿಗೂ ವಾದ್ಯವನ್ನು ಬಾರಿಸುವದು. ರೂಪಾಯಿ 5-0-0 ವಿ. ಪಿ. ಪಿ. ಚಾರ್ಜು 0—10—0 ನಂಬರ್ ೪. ಘಂಟೆಘಂಟೆಗೆ ವಾದ್ಯವನ್ನು ಬಾರಿಸುವದು. ರೂ. 5-8-0 ವಿ. ಪಿ. ಪಿ. ಚಾರ್ಜು ರೂ. 0—10—0

ನಿಕ್ಕಲ್ ಬೆಳ್ಳಿ ಗಡಿಯಾರದ ಸರಪಣಿ.

ಇದು ಎಂದೆಂದಿಗೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ನೋಡುವದಕ್ಕೆ ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ೧ಕ್ಕೆ ಕ್ರಯ ರೂ. 0--8--0 ವಿ. ಪಿ. ಪಿ. ಚಾರ್ಜು ರೂ. 0--4--0.

ಎಲೆಕ್ಟ್ರಿಕ್ ಭಂಗಾರದ ಘಡಿಯಾರದ ಸರಪಣಿ.

ಇದು ಎಂದಿಗೂ ಭಂಗಾರದಂತೆ ಹೊಳಿಯುವ ಘಡಿಯಾರದ ಸರಪಣಿ. ಬಹಳ ಉತ್ತಮ ರಖಂ ೧ಕ್ಕೆ ಕ್ರಯ ರೂ. 1--0--0 ವಿ.ಪಿ.ಪಿ. ಚಾರ್ಜು ರೂ. 0--4--0.

ಶುದ್ಧ ಬೆಳ್ಳಿಯ ಘಡಿಯಾರದ ಸರಪಣಿ.

ಇದು ೧ನೇ ನಂಬರ್ ಚೊಕ್ಕ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಕೆಲಸ ಬಹಳ ನಾಜೂಕಾಗಿಯೂ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ೧ಕ್ಕೆ ಕ್ರಯ ರೂ. 3—0--0 ವಿ. ಪಿ. ಪಿ. ಚಾರ್ಜು ರೂ. 0--4--0.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಆಂಡು ಕಂಪೆನಿ,
ನಂಬರ್ ೨೦, ಶಿಂಗಣನ್ ಬೀದಿ, ಪಾರು ಟೌನ್, ಪೋಸ್ಟು, ಮದ್ರಾಸ್
~~~~~~

ಡಾಕ್ಟರ್ ಪೆರೇರರ ಸಿದ್ಧೌಷಧಗಳು.

ಮೂತ್ರ ರೋಗದ ಔಷಧ—ಈ ಔಷಧವು ಅತ್ಯಾದ್ಭುತವಾದದ್ದು. ಮೂತ್ರ ರೋಗದ ಯಾವ ಅಂತಸ್ಥಿನಲ್ಲಿಯೂ ಈ ಔಷಧ ಸೇವನೆಯು ಗುಣಕಾರಿ. ರಾಜಕುರು ಇತ್ಯಾದಿ ಸಂದರ್ಭಗಳಲ್ಲಿ ಎರಡು ದಿವಸ ಪ್ರಯೋಗಿಸುವ ಮಾತ್ರದಿಂದ ಇದರ ಮಹತ್ವವು ನಿಮಗೆನೇ ಖಾತ್ರಿಯಾಗುವುದು.

ನಾಲ್ಕು ಆಣೆ ಸ್ಟೇಂಪು ಕಳುಹಿಸಿದಲ್ಲಿ ನಮೂನೆ ಕಳುಹಿಸೋಣಾಗುವುದು.

ನಾಯಿಕೆಮ್ಮು ಔಷಧ—ಇದರಿಂದ 12 ದಿವಸಗಳೊಳಗೆ ನಾಯಿಕೆಮ್ಮು ಸಂಪೂರ್ಣ ಗುಣವಾಗುವುದು.

ನೇವಸದ ಔಷಧ—ನೇವಸದಿಂದ ಪೀಡಿತರಾದವರಿಗೆ ಯಾವ ಅಂತಸ್ಥಿನಲ್ಲಿಯೂ ಇದು ರಾಮಬಾಣದಂತಿದೆ.

ಮೋಹ ಸಂಬಂಧವಾದ ರೋಗಗಳಿಗೆ ಔಷಧ—ಸರ್ವ ವಿಧದ ಮೋಹ ರೋಗಗಳಿಗೆ ಇದು ದಿವ್ಯೌಷಧ.

ಪೌಷ್ಟಿದಾಯಕವಾದ ವ್ಯಾನ್—ರಕ್ತ ಇಲ್ಲದಿರುವುದು, ವ್ರಣ, ಖಜ್ಜಿ, ಬಲಹೀನ, ಮಲಬದ್ಧತೆ, ತಲೆಸಿಡಿತ, ಹೃದಯ ವೇಗವಾಗಿ ಬಡಿಯೋಣ, ಜೀರ್ಣವಾಗದಿರುವುದು, ಹೊಟ್ಟೆನೋವು ಮೊದಲಾದ ರೋಗಗಳಲ್ಲಿ ಇದು ಕೈಕಂಡ ಔಷಧವಾಗಿದೆ.

ಆಮಶಂಕೆಯ ಔಷಧ—ಈ ಔಷಧದಿಂದ ಎಂಥಾ ಆಮಶಂಕೆಯು ನಿಂತುಹೋಗುವುದೆಂಬದು ದಿಟವು.

ಎಮ್ಮಿನ ಒೖಂಟ್‌ಮೆಂಟ್—ವ್ರಣ, ರದ್ದು, ಖಜ್ಜಿ, ಸರ್ವ ವಿಧದ ಚರ್ಮರೋಗವು ಇದರಿಂದ ವಾಸಿಯಾಗುವುದು.

ಜ್ವರ ಮತ್ತು ಜುಲಾಬು ಮಾತ್ರೆಗಳು—ಇವು ಜ್ವರವನ್ನು ಹೊರಡಿಸಿ ಕಲಿಜೆಯನ್ನೂ ಕರುಳನ್ನೂ ಶುಚಿಮಾಡುವುದು. ಮಲೇರಿಯ ಜ್ವರಕ್ಕೆ ಇದು ಸಿದ್ಧೌಷಧವು.

J. F. Pererira & Co.
Chemists No. 6.
Calicut, Malabar.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷೀಸು ಸಿಕ್ಕಿರುತ್ತವೆ

ಸಾರ್ಸಾಪರಿಲಾ.


ಪೂರ್ವದ ಸ್ಥಿತಿ.


ನಂತರದ ಸ್ಥಿತಿ.

ಜಗತ್ಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಆದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು–ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ,ಬಹಳ ದಿನಗಳ ಹಳೇ ಪ್ರಮೇಹ ಇಡೀಮೈಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶಿರಿಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಳಾಸ:— ಪ್ರೊಪ್ರ್ಯಾಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೋಸಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮಮಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)

KAMINIA
OIL
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co
BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ. ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1–0–0 ಅಂಚೆಯ ವೆಚ್ಚ 0–4–0 ಬೇರೆ ತೆರಬೇಕು.
3 ಸೀಸೆಗಳಿಗೆ ರೂ. 2–10–0 ಅಂಚೆಯ ವೆಚ್ಚ 0–7–0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲ್ಯದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲ್ಯವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30—5—11 ಮೆ. ನೇಗಿನವಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ "ಕಾಮಿನಿಯಾ ಓೖಯಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28—7—11. ಮೆ. ಎ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓೖಯಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓೖಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11. ಮೆ. ಸಿ. ಆರ್. ನಾಯುಡು ಪಿ. ವ. ಡಿ. ಟಾಸಿಬ, (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವವರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

Address—**Anglo Indian Drug & Chemical Co.,**
155 Jumma Musid, Market, Bombay.
ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ **6**ನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ. ಇದರಲ್ಲಿ ದೃಡವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವದಿವಿಮೆ ದುಬಾರೆ ಎಂಡೌಮೆಂಟ್ ಪೊಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ತೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯ ಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣದಗೋಸ್ಕರ ತಿಂಗಳಿಗೆ ೨ ರೂಪಾಯಿ ೧ ರೂಪ್ಯಾ ೮ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪೆನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರಾವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ಟಿಲ್ಯಾನೋ
ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.
ಮಂಗಳೂರು, ದಕ್ಷಿಣ ಕನ್ನಡ.

ಸುಲಭ ಕ್ರಯ! ಸುಲಭ ಕ್ರಯ!! ಸುಲಭ ಕ್ರಯ!!

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದ ಪುಡಿ.



ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವದೆಂದರೆ:—ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದಲಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ ಮನೋಉಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದುಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದ್ದರೆ 15ಸಾರಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕಗುಣವೂ, ಪರಿಮಳವೂ, ಕಾರವೂ ಹೋಗುವದಿಲ್ಲ. ಬುಡ್ಡಿ 1ಕ್ಕೆ ಕ್ರಯ ರೂ. 0–4–0. ವಿ. ಪಿ. ಚಾರ್ಜು 0–3–0 ಡಜನ್ 1ಕ್ಕೆ ಕ್ರಯ ರೂ. 2–8–0. ವಿ.ಪಿ. ಚಾರ್ಜು 0–6–0.

ಪುಕಟ! **Free Sample Coupon** ಪುಕಟ!!

ದಯವಿಟ್ಟು ಕೆಳಗಿನ ವಿಳಾಸಕ್ಕೆ ಡ್ಯಾಕ್ಟರ್ ಜಿ. ಬಿ. ಯವರ ಸುಗಂಧನಶ್ಯದ ಪುಡಿಯ ಮಾದರಿ ಬಾಟ್ಲಿ ಒಂದನ್ನು ಕಳುಹಿಸ ಬೇಕು.

ಹೆಸರು..

....

Registered) ☞ ವಿಳಾಸ:—ಗುರುಬಸವ ಅಂಡು ಕಂಪೆನಿ, ಮದ್ರಾಸು.

ಶ್ರೀ

ಪಾರಾಯಣಕ್ಕನುಕೂಲವಾದ ಪುಸ್ತಕಗಳು:—

1. ಶ್ರೀ ಭಗವದ್ಗೀತೆ, ಟೀಕಾತಾತ್ಪರ್ಯ ಸಹಿತವಾದದ್ದು, ಚಿಕ್ಕ ಬಾಲಕರಿಗೂ ತಿಳಿಯುವಂತೆ ಬಹು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮತ್ತು ಇದು ಉತ್ತಮ ತರವಾದ ಕಾಗದವುಳ್ಳದ್ದಾಗಿಯೂ ಮುಕ್ತಾಫಲದಂತಿರುವ ಅಕ್ಷರಗಳಿಂದ ಕೂಡಿದ್ದಾಗಿಯೂ ಇರುವುದಲ್ಲದೆ, ಮಡಿಯಾಗಿರುವ ಸಮಯದಲ್ಲಿಯೂ ಪಾರಾಯಣಕ್ಕನುಕೂಲವಾಗುವಂತೆ ಉತ್ತಮವಾದ ಕಿತ್ತಾನಾರು ಬೈಂಡು ಳ್ಳದ್ದಾಗಿದೆ. ಕ್ರಯ ರೂ. 1–12–0:
2. ಡಿಟ್ಟೊ ಚಿಕ್ಕ ಸೈಜು (ಮೂಲ ಮತ್ತು ತಾತ್ಪರ್ಯ ಸಹಿತವಾದದ್ದು. ರೂ 0–6–0
3. ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ತರವಾದ ಕಿತ್ತಾನಾರು ಬೈಂಡಿನಿಂದ ಮಾಡಿರುವ ಶ್ರೀ ಶ್ರೀನಿವಾಸ ಕಲ್ಯಾಣ ಕ್ರಯ ರೂ. 1–12–0
4. ಸಂಕ್ಷೇಪ ರಾಮಾಯಣವೆಂಬ ಶ್ರೀ ಬಾಲರಾಮಾಯಣವು ಟೀಕಾ ಸಹಿತವಾದದ್ದು. ಬಹು ರಸಯುಕ್ತವಾದದ್ದು, ಉತ್ತಮವಾದ ಪ್ರತಿ ಕ್ರಯ ರೂ. 0–4–0.
5. ಟೀಕಾ ತಾತ್ಪರ್ಯ ಸಹಿತವಾದ ಶ್ರೀ ಮುಕುಂದಮಾಲಾ ಸ್ತೋತ್ರವು. ಪಾರಾಯಣಕ್ಕೆ ಬಹು ಅನುಕೂಲವಾದ ಸ್ತೋತ್ರ ಪುಸ್ತಕವು, ಭಕ್ತಿರಸದಿಂದ ತುಂಬಿದೆ. ತ್ರಿಮತಸ್ಥರೂ ಪಾರಾಯಣ ಮಾಡಬೇಕಾದ ಪುಸ್ತಕವು. ಕ್ರಯ ರೂ. 0–4–0.

ಶ್ರೀಮದ್ವಾಲ್ಮೀಕಿ ಮಹರ್ಷಿ ವಿರಚಿತವಾದ

ಶ್ರೀಮದ್ರಾಮಾಯಣ.

ವೆಂಬ ಆದಿ ಕಾವ್ಯವು. 6 ಕಾಂಡಗಳನ್ನೊಳಗೊಂಡಿರುವುದಲ್ಲದೆ, ಪೀಠಿಕಾ ಶ್ಲೋಕಗಳು ಪಾರಾಯಣ ಕ್ರಮ ಮುಂತಾದವುಗಳಿಂದ ಕೂಡಿದೆ. ಸುಂದರವಾದ ಕನ್ನಡ ಅಕ್ಷರಗಳಲ್ಲಿ ಶುದ್ಧವಾಗಿ ಅಚ್ಚಾಗಿದೆ ಪಾರಾಯಣಕ್ಕೆ ಅನುಕೂಲವಾಗಿದೆ. ಮಡಿಗೋಸ್ಕರ ರಕ್ಷಾ ಪತ್ರಗಳಿಗೆ ಕಿತ್ತಾನಾರನ್ನು ಹಾಕಿದೆ. ಪುರಾತನ ಪ್ರತಿಯಾದ ಕಾರಣ ತಪ್ಪುಗಳಿರಲಾರವು. ನವರಾತ್ರಿಯ ಕಾಲವು ಸಮೀಪಿಸುತ್ತಿರುವ ಕಾರಣ ಶ್ರೀ ರಾಮ ಭಕ್ತರಾದವರೆಲ್ಲರೂ ಈ ಪುಸ್ತಕ ರತ್ನದ ಪ್ರತಿಯೊಂದನ್ನು ಸಂಗ್ರಹಿಸತಕ್ಕದ್ದು.

ಬೆಲೆ 3–0–0. ಹಾಸಲು 0–6–0

ಎಚ್. ಎನ್. ರಾವ್ ಬ್ರದರ್ಸ್.
ಚಿಕ್ಕ ಪೇಟೆ, ಬೆಂಗಳೂರು ಸಿಟಿ

ಸನ್ 1913ನೇ ಇಸವಿಯ



"ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು."

ಈ ವರೆಗೆ ತಾವು ಉಪಯೋಗಿಸಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವ ಮ ಹಸನಾದ ೪೦ ಪೌಂಡು ಗ್ಲೇಜು. ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಜಟ್ಟಿಯ) ಬೈಂಡು ಮಾಡಿರುತ್ತದೆ:—

ದೇಹ ಸೌಖ್ಯ ವಿಚಾರದಲ್ಲಿ ಪ್ರತಿ ಒಬ್ಬರೂ ತಿಳಿಯಬೇಕಾದ ಸಾಧಕ ಬಾಧಕಗಳು, ಪಂಚಾಂಗ, ಕ್ಯಾಲೆಂಡರ್, ರಾಹುಕಾಲ, ಗುಳಿಕಕಾಲ, ಸಂವತ್ಸರ ಫಲ, ಗ್ರಹಣ ಶಕುನಭಾಗ ಪ್ರಯಾಣ ವಿಷಯ ಜಾತಕಕರ್ಮ ಮೊದಲು ಷೋಡಷ ಕರ್ಮಕ್ಕೆ ಬೇಕಾದ ಲಗ್ನಾದಿಗಳು. ಶ್ರೀ ಕೃಷ್ಣ ಚಕ್ರ ಇವೇ ಮುಂತಾದ ಸಂಗತಿಗಳು ಸುಲಭವಾಗಿ ತಿಳಿಯುವಂತೆ ಬರೆದಿರುತ್ತೆ.

ಕೋರ್ಟು ಪೇಜು ಆಕ್ಟು ಪೋಸ್ಟಾಫೀಸಿನ ಸಂಗತಿ ಸ್ಟಾಂಪಾಕ್ಟು ಇವುಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗುವ ಮತ್ತಾವಡೈರಿಯಲ್ಲಿ ಹೇಳದಿರುವ ಹೊಸವಿಷಯಗಳನ್ನು ಸೇರಿಸಿಧೆ. ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆಗಳ ಚಾರ್ಜು, ರೈಲ್ ಹೊರಡುವ ಕಾಲ ಲಗ್ಗೇಜ್, ಅಳತೆ ತೂಕ ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರುಗಳ ತಲಬು, ಸರಕಾರಿ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲಿಷು ಇಸವಿಗಳು, ಹಣದ ಬಡ್ಡಿ ತಲಬು ಜಂತ್ರಿ ಪಟ್ಟಿ ಕೂಡಾ ಇವೆ. ದೋಬೀ ಲೆಖ್ಖಾ, ಹಾಲು ಕೊಡುವವನ ಲೆಖ್ಖಾ, ಮುಖ್ಯ ವಿಷಯ ಜ್ಞಾಪಕ ವಿಚಾರ ಜಮಾ ಖರ್ಚು ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ.

"ಬೇಕಾದವರು ಈಗಲೇ ಬರೆದು ತರಿಸಿಕೊಳ್ಳಿರಿ".

No. 1. ಸಣ್ಣ ಸೈಜು ಸಾದಾ ಡೈರಿ 1ಕ್ಕೆ	0–4–0
No.2. ಸಣ್ಣ ಸೈಜು ಪೆನ್‌ಸಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ1ಕ್ಕೆ	0–6–0
No. 3. ದೊಡ್ಡ ಸೈಜು ಸಾದಾ ಡೈರಿ 1ಕ್ಕೆ	0–6–0
No.4.ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳಹಾಕಿರುವ ಪ್ಲಾಪ್ ಡೈರಿ 1ಕ್ಕೆ	0–8–0

ಟಪ್ಪಾಲು ಖರ್ಚು ಬೇರೆ.

ಒಂದು ಸೈಜಿನ ಹತ್ತು ಡೈರಿಗಳನ್ನು ಒಟ್ಟಾಗಿ ತರಿಸಿದರೆ ಒಂದು ಇನಾಮು. ೨೫ ಡೈರಿಗಳಿಗಿಂತ ಹೆಚ್ಚಾಗಿ ತರಿಸತಕ್ಕವರಿಗೆ ರೂಪಾಯಿ ಒಂದಕ್ಕೆ 0–2–6ಯಂತೆ ಕಮಿಷನ್ ಕೊಡಲಾಗುತ್ತದೆ. ತಮ್ಮ ವಿಳಾಸವು ಬಾಲ ಅಕ್ಷರದಲ್ಲಿರಲಿ.

ದೊರೆಯುವ ವಿಳಾಸ:—
"ಶ್ರೀ ಸೀತಾರಾಘವ ವೈದ್ಯಶಾಲಾ"
ಮೈಸೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಗಿರಗಾಂ ಮುಂಬಯಿ.

ಇವರ

ಬಾಲಾಮೃತ! ಜ್ವರದ ಗುಳಿಗೆಗಳು!!

ನಮ್ಮ ಜ್ವರದ ಗುಳಿಗೆಗಳ ಬಗ್ಯೆ ಈ ಕೆಳಗೆ ಬರದ ಅನೇಕ ಜಗಪ್ರಸಿದ್ಧ ಡಾಕ್ಟರುಗಳು ಬೇರೆ ಬೇರೆ ರೀತಿಯಿಂದ ಪರೀಕ್ಷಿಸಿ ಬಹು ಗುಣಕಾರಿಯನ್ನುವ ಬಗ್ಯೆ ಸಿಫಾರಸು ಪತ್ರಗಳನ್ನು ಕೊಟ್ಟಿರುತ್ತಾರೆ.

ಡಾಕ್ಟರ್ ಕಾವಸಜೀ ಎದಲಜಿ ದಾದಾ ಚಾಂಜಿ, ಎಲ್. ಎಮ್. ಎಸ್. ಜೆ. ಪಿ. ಬಿಟ್ಟು ಬಿಟ್ಟು ಬರುವ ಜ್ವರಕ್ಕೆ ಅತೀ ಗುಣಕಾರಿ.

ಡಾಕ್ಟರ್ ಡಿ. ಜೆ ಮೊರಾವಾಲಾ: ಎಲ್. ಎಮ್. ಎಸ್. ಸರ್ಜನ್ ಬಿಲಾಸಪುರ. ಥಂಡಿ ಜ್ವರಕ್ಕೆ ಸಂಜೀವನ.

ಡಾಕ್ಟರ್ ಕಾವಸಜೀ ಮೊಟಾಭಾಯಿ ಎಲ್. ಎಮ್. ಎಸ್. ಪಿತ್ತ ಜ್ವರಕ್ಕೆ ರಾಮಬಾಣದಂತಿರುತ್ತದೆ.

ಡಾಕ್ಟರ್ ಪ್ರೆಂಜೋನಿ ಎ. ಷಾರಿಯಾ: ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. ನಮ್ಮ ಜ್ವರದ ಗುಳಿಗೆಗಳು ಬಹಳ ಉತ್ತಮ್ಮ!

ಡಾಕ್ಟರ್ ಸರ್ ಬಾಲಚಂದ್ರಕೃಷ್ಣ ನಾಯಿಟ್, ಎಲ್. ಎಮ್. ಜೆ. ಪಿ. ದಿನಗಟ್ಲೆ ಬರುವ ಜ್ವರಕ್ಕೆ ಇದು ಮುಖ್ಯ ಓಷಧ.

ಡಾಕ್ಟರ್ ಸೊರಾಬ ಕೆ. ನರಿಮನ್ ಎಮ್. ಡಿ. ಬಿ. ಎಸ್. ಸಿ. ಮುಂಬಯಿ ಎಲ್. ಆರ್. ಸಿ. ಪಿ. (ಲಂಡನ್) ಎಮ್. ಆರ್. ಸಿ. ಎಸ್. (ಇಂಗ್ಲಂಡ್) ಡಿ. ಪಿ. ಎಚ್. (ಕೆಂಬ್ರಿಜ್) ನಮ್ಮ ಜ್ವರದ ಗುಳಿಗೆಗಳು ಬಹಳ ಗುಣಕಾರಿ.

ಡಾಕ್ಟರ್ ಕೆ. ಎಸ್. ಇಂಜಿನಿಯರ್; ಎಫ್. ಸಿ. ಎಸ್ ಲಂಡನ್ ಎಲ್. ಎಮ್. ಎಸ್. ಮುಂಬಯಿ.

ಡಾಕ್ಟರ್ ವಿ. ಎನ್. ಚಿತಳೆ ಭಾಜೇಕರ್ ಎಲ್. ಎಮ್. ಎಸ್. ಮುಂಬಯಿ ಎಫ್. ಆರ್. ಸಿ. ಎಸ್. ಎಡಿಂಬರ್ಗ ಡಿ. ಪಿ. ಎಚ್. ಲಂಡನ್.

ಡಾಕ್ಟರ್ ಡಬ್ಲ್ಯು. ಓಬೇಲೆಂಟಾಯಿನ್ ಎಮ್. ಡಿ. ಅಮೇರಿಕನ್ ಮಿಶನ್.

ಡಾಕ್ಟರ್ ಬಿ. ಇ, ಫಾಸವಾಲಾ ಎಲ್. ಎಮ್. ಎಸ್ ಎಫ್. ಸಿ. ಎಸ್. ಲಂಡನ್.

ಡಾಕ್ಟರ್ ಎ. ಬಿ. ಮಸಾನಿ ಎಲ್. ಎಮ್. ಎಸ್. ಮುಂಬಯಿ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.

ಡಾಕ್ಟರ್ ಗ್ಯಾಬ್ರಿಯಲ್ ಡಿಮೆಲ್ಲೊ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.

ಡಾಕ್ಟರ್ ಜಿ. ಆರ್. ತಾಂಬೆ ಎಮ್. ಎ. ಎಲ್. ಎಮ್. ಎಸ್. ಬಿ. ಎಸ್. ಸಿ.

ಡಾಕ್ಟರ್ ಪಿ. ಆರ್. ಪಿಳಗಾಂವಕರ ಎಲ್. ಆರ್. ಸಿ. ಪಿ. ಎಂಡ್ ಎಸ್. ಎಲ್. ಎಮ್. ಎಲ್. ಎಫ್. ಪಿ. ಎಂಡ್. ಎಸ್.

ಡಾಕ್ಟರ್ ಎಮ್. ಎಚ್. ಭಾಟವಡೀಕರ್ ಎಲ್. ಎಮ್. ಎಸ್. ಹೆಲ್ತ ಆಫೀಸರ್. ಡಿ. ಐ. ಟಿ.

ಡಾಕ್ಟರ್ ಎಫ್. ಎಕ್ಸ್. ಪರೇರಾ ಎಲ್. ಎಮ್. ಎಸ್.

ಡಾಕ್ಟರ್ ಕೆ. ಎಸ್. ಗೋಖಲ್ ಎಲ್. ಎಮ್. ಎಸ್. ಮುಂಬಯಿ.

ಡಾಕ್ಟರ್ ಡಿ. ಜಿ. ಮಂತ್ರಿ ಎಲ್. ಆರ್. ಸಿ. ಪಿ. (ಲಂಡನ್)

ಡಾಕ್ಟರ್ ಎ. ಬ್ರಿಟೊ ಎಲ್. ಎಮ್. ಎಸ್. ಡಾಕ್ಟರ್ ಮುರಕುಟೆ ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. (ಎಡಿನ್‌ಬರ್ಗ).

ಬಾಲಾಮೃತ ಬಾಟ್ಲಿ ಒಂದರ 0—12—0. ಜ್ವರದ ಗುಳಿಗೆ ಬಾಟ್ಲಿ ಒಂದರ 1—0—0.

ಜಾಗ್ರತೆ! ಮೋಸ ಹೊಂದಬೇಡಿರಿ!! ಪಡಕೊಳ್ಳುವವರು ಗ. ರಾ. ಕರ್ಕಿ ಕಂಪೆನಿ, ಮುಂಬಯಿ. ಎಂತ ಕನ್ನಡದಲ್ಲಿ ಇದ್ದದ್ದನ್ನೇ ನೋಡಿ ಪಡಕೊಳ್ಳಿರಿ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ,
ಗಿರಗಾಂ ಮುಂಬಯಿ.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಹಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾವರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇವರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿ ಯಾವರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವದೋ ಆಗ್ಯೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ವೈದ್ಯಸಾರಸಂಗ್ರಹ (ಮೂಲಿಕಾ ಔಷಧಿ)	೩—೦—೦
ಶುಕಸಪ್ತತಿ ವೇದಾಂತ ಪೂರ್ವದ ಪ್ರತಿ	೨—೦—೦
ರಘುವಂಶ ೧ನೇ ಪರ್ವ...	೧—೦—೦
ಡಿಟ್ಟೊ (೨ನೇ ಪ.) ಅರ್ಥ ತಾತ್ಪರ್ಯ ಆಕಾಕ್ಷೆ ಇತ್ಯಾದಿ ...	೧—೦—೦
ವಿವೇಕ ಚೂಡಾಮಣಿ	೨—೪—೦
ಶಾಮಕುಬ್ಜ ಕಥೆ	೦—೮—೦
ಚಮತ್ಕಾರ ಚಿಂತಾಮಣಿ	೦—೧೦—೦
ಮಹಿಮ್ನ ಸ್ತೋತ್ರ (ಟೀ. ತಾ.)	೦—೩—೦
ಮುಕುಂದಮಾಲಾ ಸ್ತೋತ್ರ (ಟೀ. ತಾ.)	೦—೪—೦
ಶಿವಗೀತಾ (ಟೀ. ತಾ. ಸಹಿತ)	೦—೮—೦
ಶಿವಾನಂದಲಹರಿ (ಟೀ. ತಾ.)	೦—೬—೦
ವಿದ್ಯಾನಂದ ಮಾಸಪತ್ರಿಕೆ ಚಂದಾ	೨—೪—೦

ಮಾದ್ರಿ ಪತ್ರಿಕೆ, ಪುಸ್ತಕ. ಪಟ್ಟಿ ಉಚಿತ. ಇನ್ನೂ ಅನೇಕ ಪುಸ್ತಕಗಳು ದೊರೆಯುವವು.

ವಿಳಾಸ:—
ವಿದ್ಯಾನಂದ ಆಫೀಸು.
ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು! ಬೇಗ ಬರೆಯಿರಿ!!

ಮಧುರವಾಣೀ ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಸಾಹಸಿಕೆ	0-2-6	ಮಹನೀಯರ ಚರಿತ್ರೆ ...	0-10-0
ಗೃಹಿಣಿಯಾದ ಗಂಗೆ ...	0-3-0	ಸಾಧನೆ	0-8-0
ನಾನಕನ ಚರಿತ್ರೆ	0-4-0	ಮನೋರಮ	1-0-0
ವಿವೇಕಮಂಜರಿ 1ನೇ ಭಾಗ	0-2-0	ಭಕ್ತವಿಜಯ	3-4-0
ಡಿ. 2ನೇ ಭಾಗ	0-3-0	ಪಾರ್ವತಿ ಪರಿಣಯ ನಾಟಕಂ	0-8-0
ಸೌದಾಮಿನಿ	0-6-0	ಗೋಪಿಕಾ ಗೀತೆ... ...	0-1-0
ವಿಶ್ವನಾಥ	0-1-0	ಭಜಗೋವಿಂದಂ	0-1-0
ದೇವಿ ಚೌದ್‌ರಾಣಿ... ...	1-4-0	ಹಾಲಾಸ್ಯ ಮಹಾತ್ಮೆ ...	1-4-0
ಸಚಿತ್ರಕಲಾತರಂಗ... ...	1-0-0	ವಿಷವೃಕ್ಷ...	1-4-0

ಇನ್ನೂ ಅನೇಕ ಪುಸ್ತಕಗಳು ಸಿಕ್ಕುವವು. ಕ್ಯಾಟಲಾಗಿಗೆ ಬೆಲೆ ಇಲ್ಲ. ಅಪೇಕ್ಷಕರು ಅತುರಿಸಿರಿ.

ವಿಳಾಸ:— ಹನುಮಾನ್ ಮತ್ತು ಕಂಪೆನಿ,
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೀವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ಒಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿ ಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ

1913ನೇ ಇಸವಿಯ ಪೊಕೆಟ್ ಡ್ಯಾರಿಗಳು.

ಮಾರಾಟಕ್ಕೆ ಸಿದ್ಧವಾಗಿವೆ.

ನೋಟು ಬೂಕು ಸ್ಯಾಜು (ದೊಡ್ಡ ಸ್ಯಾಜು)	ರೂ. 0—8—0
(ಒಂದಾಣೆ ಪೆನ್ಸಿಲು ಸಹಿತ)	
ಸಣ್ಣ ಸ್ಯಾಜು	„ 0—4—0

ವಕೀಲರಿಗೂ ವಕೀಲರ ಗುಮಾಸ್ತರಿಗೂ ಬೇಕಾದ ಎಲಾ ವಿಷಯಗಳನ್ನು ಒಳಕೊಂಡಿರುವುದಲ್ಲದೆ ಇತರರಿಗೂ ಬಹಳ ಉಪಯೋಗಕರವಾದ್ದಾಗಿರುತ್ತದೆ.

ಹೆಚ್ಚು ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ, ವ್ಯಾಪಾರಸ್ತರಿಗೂ ಧಾರಾಳ ಕಮಿಶನ್ ಕೊಡಲಾಗುವದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಮ್ಯಾನೇಜರ,
ಶಾರದಾ ಛಾಪಖಾನೆ, ಮಂಗಳೂರು ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡುಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿ ಸಿಕ್ಕುವುದು.

CHEAP JACK

FANCY UMBRELLA MART.

ಚಿತ್ರವಿಚಿತ್ರಮಾದ ಕೊಡೆಗಳು.

ಕಂ ‖ ಧರೆಯೊಳ್ ಮೆರೆ ಮಹಾಶಯ । ರಿರಃ ನಾವಿನಿಸುಂದಿನಂ ಕೊಡೆಯ ವಿಕ್ರ
ಯಮಂ ‖ ಇರಿಸಿರ್ದ್ದೊಡುಂ ವಿಮುಖರಾ । ಗಿರುವ್ರದೇನಚ್ಚರಿಯೊ । ತಿಳಿದು
ವದರಂರಮಂ ‖೧‖ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ
ದುರ್ಜನರುಮಂ ಪಳಿವೋಲ್ ‖ ಕೊಡೆಕೊಡೆ ಯೆಂಬಾಮಾತಿಂ । ಗೆಡೆಯಾಗಿಯೆ
ನೆರಲನೀವ ಕೊಡೆಯಿಲ್ಲಿರ್ಕುಂ ‖ ೨ ‖

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತರ ವ. ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಇಡೀ ಜಿಲ್ಲೆಯಲ್ಲಿ ಅತ್ಯುತ್ತಮವಾದ ಮತ್ತು ಅಗ್ಗವಾದ ಔಷಧಾಲಯ!

P. M. KAMATH & CO.

Chemists and Druggists.

ಪಿ. ಎಮ್. ಕಾಮತ್ ಮತ್ತು ಕಂಪೆನಿ.

ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್.

ಇವರು ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ಬಳಿ ಹೊಸ ಕೋರ್ಟು ರಸ್ತೆಯಲ್ಲಿ ಗತ ಎ. ಎಲ್. ಕೃಷ್ಣ ಪೈಗಳು ಕೆಮಿಸ್ಟ ಶೋಪು ಕೆಲವು ಕಾಲ ಇಟ್ಟಿದ್ದ ವಿಶಾಲವಾದ ಕಟ್ಟೋಣದಲ್ಲೇ ಹೊಸ ಕೆಮಿಸ್ಟ್ ಶೋಪ್ ಯಾನೆ ಔಷಧಾಲಯವನ್ನು ಇಟ್ಟಿರುತ್ತಾರೆಂದು ಸರ್ವ ಜನರಿಗೂ ಆದರಪೂರ್ವಕ ತಿಳಿಸೋಣಾಗುತ್ತದೆ.

ಪಿ. ಎಮ್. ಕಾಮತ್ ಮತ್ತು ಕಂಪೆನಿಯವರ ಹೊಸ ಔಷಧಾಲಯದಲ್ಲಿ ಎಲ್ಲಾ ತರದ ಔಷಧಗಳನ್ನೂ, ಕೆಳಗೆ ಕಾಣಿಸಿದ ಇತರ ಸಾಮಾನುಗಳನ್ನೂ (Burgoyne & Burbidges) ಎಂಬ ಪ್ರಖ್ಯಾತಿಗೊಂಡ ಕಾರ್ಖಾನೆಯಿಂದ ಹೊಸತಾಗಿ ಇತ್ತಲಾಗೆ ತರಿಸಿ ಅವರ ಮೇಲ್ಕಂಡ ಹೊಸ ಕೋರ್ಟು ರಸ್ತೆಯಲ್ಲಿರುವ ಔಷಧಾಲಯದಲ್ಲಿ ಕಮ್ಮಿ ಕ್ರಯದಲ್ಲಿ ಮಾರಾಟಕ್ಕೆ ಇಟ್ಟಿರುತ್ತಾರೆ.

1. ಔಷದಗಾರರಿಗೆ ಮತ್ತು ಶಸ್ತ್ರವೈದ್ಯರಿಗೆ ಅವಶ್ಯಕವಾದ ಉಪಕರಣಗಳು, ಶಿಶುಗಳಿಗೆ ಹಾಲು ಕುಡಿಸುವ ಬಾಟ್ಲಗಳು, ಪಿಚ್ಕರಿಗಳು, ಔನ್ಸ್ ಗ್ಲಾಸುಗಳು, ಸಾಬೂನು ಮತ್ತು ಇತರ ಪರಿಮಳ ದ್ರವ್ಯಗಳು, ಥರ್ಮೋಮೆಟರಗಳು ಲೆಕ್ಟೊಮೆಟರಗಳು ವಗೈರೆ.

2. ಪ್ರಯಾಣಸ್ಥರಿಗೆ ಅವಶ್ಯಕವಾದ ಸಾಮಾನುಗಳು, ವೋಚು, ಮತ್ತು ಸಣ್ಣ ಟ್ರ್ಯಾಂಫೀಸುಗಳು, ಥರ್ಮೊ ಬಾಟ್ಲಗಳು, ಹೊಲಿಗೆ ಯಂತ್ರಗಳು ವಗೈರೆ.

3. ಆರಾರೂಟ್, ಬಾರ್ಲಿ, ಬಿಸ್ಕೂಟು, ಊಕ್ಕೊ, ಚಾ, ಕೊಕೊ ವಾಹುಡಿ, ಶಿಶುಗಳಿಗೆ ಅಸ್ವಸ್ಥದವರಿಗೂ ಬೇಕಾದ ಆಹಾರಗಳು ವಗೈರೆ ಅನೇಕ ವಿಧದ ಸಾಮಾನುಗಳು ದೊರಕುವವು.

ಅಹೋರಾತ್ರಿ ಎಲ್ಲಾ ಸಮಯಗಳಲ್ಲಿ ತರಬೇತು ಹೊಂದಿದ ಕಂಪೌಂಡರನು ಬಹಳ ಜಾಗ್ರತೆಯಿಂದ ಎಲ್ಲಾ ಔಷಧಗಳನ್ನು ತಯ್ಯಾರಿಸಿಕೊಡುವನು.

TRIAL ORDERS SOLICITED.

ವಿಳಾಸ:—

ಪಿ. ಎಮ್. ಕಾಮತ್ ಮತ್ತು ಕಂಪೆನಿ.
ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್
ಕೋರ್ಟು ಹೊಸ ರಸ್ತೆ ಮಂಗಳೂರು.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕ್ರುತ್, ಪ್ಲೀಹ, ಹೃದಯ ಅಸ್ಯಗ್ವರಣೀಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ — ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸುಲಭ ಕ್ರಯ! . ಪರೀಕ್ಷಿಸಿರಿ!! ಸಂತೋಷ ಪಡುವಿರಿ!!!

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ. ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2—4—0 ಮಾತ್ರ. 5 ವರುಷಗಳ ಗ್ಯಾರೆಂಟಿ.

SUPERIOR WATCH Co.
Rs. 2/4.
Rs. 2/4.
POST BOX No. 167
MADRAS, E.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟಿದು- ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡಿಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು. ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಕ್ರಯ ರೂ. 5-12-0. ಇದನ್ನು ಜುಲಾಯಿ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಘಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪಿಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:— ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೇಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.
ನಿಯಮಿತ ಮೂಲಧನ ರೂ. 10,00,000.
ಪ್ರತಿಜ್ಞಾತ ಮೂಲಧನ ರೂ. 85,00,00.
ಆಗತ ಮೂಲಧನ ರೂ. 10,6450.
ಭಂಡವಾಳ ರೂ. 12,00,000.
ವಿಮೆ ಮಾಡಿರುವವರ ಸಂಖ್ಯೆ 76,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ.

ಹಿಂದುಸ್ಥಾನ ಕೊಓಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್—30 ದಲ್ಹೌಸಿ ಸ್ಕೋಯರ್ ಕಲ್ಕತ್ತ.
ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್
1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.
ನಿಯಮಿತ ಮೂಲಧನ—ರೂ. ಒಂದು ಕೋಟಿ.
ಪ್ರತಿಜ್ಞಾತ ಮೂಲಧನ—ರೂ, 865,000,00
ಆಗತ ಮೂಲಧನ—ರೂ. 915,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸೀದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತಪಡಿಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವದಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರನ್ಯಾಕರು,
ಸೊಸ್ಯಾಟಿಯ ಏಜಂಟರು.
ತ್ರಿಶುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

ದಿ ಏಸಿಯನ್ ಕಮರ್ಶಲ್

ಎಸ್ಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮುಂಬಯಿ.

ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ ಪ್ರಿಮಿಯಂ ವಗೈರೆ ಇತರ ಕಂಪೆನಿಗಿಂತಲೂ ಅತೀ ಕಡಿಮೆಯಾಗಿರುತ್ತದೆ.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂ. 17—4—0 ತೆತ್ತು ಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರುಷ ಪ್ರಾಯದಲ್ಲಿ ಒಂದು ಸಾವಿರ ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವ 14 ವರುಷ ವಳಗಿನ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸುರು ಮಾಡಲ್ಪಟ್ಟ ಮಕ್ಕಳು ವಿಮೆಗೆ ಆರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟಲ್ಲಿ ವಿಮೆ ಮಾಡಿದ ಪೂರ್ಣ ಐವಜು ಅವರ ಬಾಧ್ಯಸ್ತರಿಗೆ ಸಿಕ್ಕುವುದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೂ ಹೆಂಗಸರನ್ನೂ 50 ವರುಷ ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 15 ವರುಷದ ಮೇಲಿನ ಮತ್ತು 30 ವರುಷದ ವಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊಳ್ಳುವದಿಲ್ಲ.

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹುದಾದ 1000 ವ ಆದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾರ ತೆರಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ತೆತ್ತು ಆತನ ಪ್ರಿಮಿಯಮ್ 4ರ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡಿಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈ ವರಿವಿಗೆ ಕಂಡುಬರುವದಿಲ್ಲ. ಆದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದರ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟು ರೋಡ್ ಉಡುಪಿ
ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಖ್ಖಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

---

ಕ್ಲೆಮೆಂಟರ ಮೆಜಿಕ್‌ಬಾಂ ತೈಲ್ಯವು.

ಈ ತೈಲ್ಯದಿಂದ ಸಕಲ ವಿಧದ ನೋವು ನಿವಾರಣೆಯಾಗುವದು. ತಲೆ ನೋವು ವಾಯುನೋವು, ಸೆಳತ, ಗಂಟ್ಲು ನೋವು, ಬೆನ್ನು ನೋವು, ಕೀಲುಗಳ ನೋವು, ಪಾರ್ಶ್ವ ವಾಯು, ವಿವಿಧವಾದ ವಾಯು ರೋಗಗಳು, ಶೀತ ರೋಗಗಳು, ಸಂದುವಾತ, ಚೇಳು ಕಡಿದ ನೋವು—ಇವುಗಳೆಲ್ಲಾ ಈ ತೈಲ್ಯ ಹಚ್ಚಿದ ಮಾತ್ರದಿಂದ ಚಮತ್ಕಾರಿಕವಾಗಿ ಮಾಯವಾಗುವವು ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪ್ರಯೋಗಿಸಿ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಇದರಷ್ಟು ಅಮೋಘವಾದ ತೈಲ್ಯವು ಬೇರೊಂದಿಲ್ಲವೆಂಬದಾಗಿ ಕಂಡುಕೊಂಡಿದ್ದಾರೆ. ಈ ಅತ್ಯುತ್ತಮವಾದ ತೈಲ್ಯವು ನೋವಿನ ಮೂಲವನ್ನು ಕಂಡುಹಿಡಿದು ಅದರ ಹುಟ್ಟಡಗಿಸಿಬಿಡುವದು.

ಕ್ರಯ ಸೀಸೆ ಒಂದಕ್ಕೆ ೧೨ ಆಣೆ, ಪ್ಯಾಕಿಂಗ್ ೪ ಆಣೆ. ಮೂರು ಅಥವಾ ಹೆಚ್ಚು ಬುಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದ್ದು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡಲಾದೀತು. ಈ ತೈಲ್ಯವು ಎಲ್ಲಾ ವ್ಯಾಪಾರಸ್ಥರಲ್ಲಿಯೂ ವೈದ್ಯರಲ್ಲಿಯೂ ಬಿಕರಿಮಾಡಲ್ಪಡುತ್ತದೆ.

ವಿಳಾಸ:—

ಏಜಂಟ್:— ಜೆ ಎಸ್. ಕಣ್ಣೈಚೆಟ್ಟಿ,
ಊಲನ್‌ಕೇಪ ಮ್ಯನುಫೆಕ್ಚರರ್, ತುಮಕೂರ.

ಎಸ್. ಪೀಟರ್ಸ್,
37 ವೇದಮಲೆಪಿಳ್ಳೆ ಬೀದಿ,
ಪರಸುವಾಕಂ ವೇಪರಿ ಮದ್ರಾಸು!

ಒಂದೇ ಕಥೆ! ಅಪೂರ್ವ ಗ್ರಂಥ!! ದೊಡ್ಡ ಕಥೆ!!

ಪ್ರತಾಪಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಟರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿ ಹೋಗುತ್ತವೆ." ಎಂಬ ನೀತಿ; (೨) ಸ್ತ್ರೀಧರ್ಮ, ಸ್ತ್ರೀಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು, ಆರಾಮಾದಿ ವರ್ಣನೆಗಳು; (೬) ಮನುಷ್ಯ ಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿ ನೋಡಿದರೆ ಸ್ವಾರಸ್ಯವು ಗೊತ್ತಾಗುವುದು. ಕ್ರಯ ೧ ರೂ. ಟಪ್ಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಜರ್ಮನ್ ಜೇಬು ದೀಪ.

ಬೆಲೆ ರೂ. 1—15—0



ಈ ನಕ್ಷೆಯಲ್ಲಿ ಕಾಣಿಸಿರುವ ಜರ್ಮನ್ ಜೇಬು ದೀಪಗಳು ಜರ್ಮನ್ ದೇಶದ ಶಾಸ್ತ್ರಜ್ಞರಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟು ಈಗ ತಾನೆ ನಮ್ಮ ಹಿಂದೂ ದೇಶಕ್ಕೆ ಕಳುಹಿಸಿರುತ್ತಾರೆ. ಇದು ವಿದ್ಯುಶ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕೀ ಕಡ್ಡಿ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ನೋಡುವವರಿಗೆ ಆಶ್ಚರ್ಯವಾಗುವಹಾಗೆ ಹತ್ತಿ ಉರಿಯುತ್ತೆ.

ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದ ಕಡ್ಡಿ ಅವಶ್ಯಕವೇವಿರುವದಿಲ್ಲ. ಎಷ್ಟು ವರುಷಗಳಾದರೂ ದೀಪವು ಕೆಡುವದಿಲ್ಲ. ಜನರಿಗೆ ಇದು ಬಹಳ ಉಪಯೋಗ. ಇದು ಇತರ ದೀಪಗಳನ್ನು ಹಚ್ಚುವದಕ್ಕೂ ಪ್ರಯಾಣಮಾಡುವಾಗ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಜಾಗ್ರತೆ ದೀಪವನ್ನು ಉಪಯೋಗಿಸುವದಕ್ಕೂ ಚುರುಟು ಬೀಡಿ ಮೊದಲಾದವುಗಳನ್ನು ಹಚ್ಚುವದಕ್ಕೂ ಬಹಳ ಉಪಯೋಗವಾದದ್ದು. ಇದನ್ನು ಸುಲಭವಾಗಿ ಉಪಯೋಗಿಸಬಹುದು. ಇದರಿಂದ ಯಾವ ಕೆಡಕು ಉಂಟಾಗುವದಿಲ್ಲ.

ವಿಳಾಸ.

N. S. Bhattachar,
Nungumbaukum
Madras.

ಎನ್. ಎಸ್. ಭಟ್ಟಾಚಾರ್.
ನುಂಗಂಬಾಕಂ. ಮದ್ರಾಸು

———o———

ಪ್ರಸಿದ್ಧವಾದ

ರೇಷ್ಮೆ ಬಟ್ಟೆಗಳು! **ಪೀತಾಂಬರದ ಶೀರೆಗಳು!!**

ಒಪ್ಪಲ್ಪಡದೆ ಇದ್ದರೆ ವಾಪಾಸು ತೆಗೆದುಕೊಳ್ಳಲ್ಪಡುವುದು.

ಪೀತಾಂಬರದ ಶೀರೆಗಳು.

ಬನಾರಸ್ ಪೀತಾಂಬರದ ಶೀರೆಗಳು:—೧೭ ಮೊಳ ಉದ್ದ ೨|| ಮೊಳ ಅಗಲ, ಸೆರಗೂ ಅಂಚು ಉತ್ತಮವಾದ ಜರತಾರಿ ಉಳ್ಳದ್ದು. ಕೆಂಪು, ಹಸರು, ಊದಾ ಮತ್ತು ಗುಲಾಬೀ ರಂಗುವುಳ್ಳ ಅಂಚುಗಳು, ಒಳಭಾಗವು ಸಾದಾ, ಸಾಮಾನ್ಯವಾದ ಶೀರೆಗಳಿಗೆ ಬೆಲೆಯು ೨೦ರಿಂದ ೩೫ ರೂಪಾಯಿನ ವರೆಗೂ ಇರುವುದು. ಅತ್ಯುತ್ತಮವಾದವುಗಳಿಗೆ ೪೦ರಿಂದ ೨೦೦ರ ವರೆಗೂ ಬೆಲೆಯಾಗುವುದು.

ಪೀತಾಂಬರದ ಬೂಟಾ ಶೀರೆಗಳು.

ಪೀತಾಂಬರದ ಬೂಟಾ ಶೀರೆಗಳು ಮೈದಾನದಲ್ಲಿ ಜರಿತಾರಿ ಹುವ್ವುಗಳು ಅಥವಾ ಬೂಟಾಗಳು ಇರುವವು. ಇವುಗಳಲ್ಲಿ ಸಾಮಾನ್ಯವಾದ ಶೀರೆಗಳಿಗೆ ೨೫ರಿಂದ ೩೫ ರೂಪಾಯಿನ ವರೆಗೂ ಆಗುವುದು. ಉತ್ತಮವಾದವುಗಳಿಗೆ ೪೦ ರೂಪಾಯಿಗಳಿಂದ ೩೦೦ರೂಪಾಯಿಗಳ ವರೆಗೂ ಆಗುವುದು.

ಪೀತಾಂಬರದ ಕಣಗಳು.

ಜರತಾರಿ ಅಂಚು, ಮೈದಾನದಲ್ಲಿ ಹೂವಿನ ಕೆಲಸ, ರಂಗು ಕೆಂಪು, ಹಸರು, ಊದಾ ಮತ್ತು ಗುಲಾಬಿ, ಸಾದಾ ಮೈದಾನವುಳ್ಳ ಕಣ ಒಂದಕ್ಕೆ ೨ ರೂಪಾಯಿನಿಂದ ೨ ರೂಪಾಯಿ ವರೆಗೂ ಕ್ರಯವಾಗುವುದು. ಬೂಟಾ ಮೈದಾನವುಳ್ಳದ್ದು ಕಣ ೧ಕ್ಕೆ ೮|| ರೂಪಾಯಿನಿಂದ ೨೫ ರೂಪಾಯಿನ ವರೆಗೂ ಆಗುವುದು.

ರುಮಾಲುಗಳು ಅಥವಾ ಪೇಟಾಗಳು.

ಎಲ್ಲಾ ರಂಗಿನ ರುಮಾಲುಗಳು ಮತ್ತು ಪೇಟಾಗಳು ೨೫ ರೂಪಾಯಿ ಮೊದಲ್ಗೊಂಡು ೧೦೦ ರೂಪಾಯಿನ ವರೆಗೂ ಬೆಲೆಯುಳ್ಳವುಗಳಾಗಿರುತ್ತವೆ.

ಮಕ್ಕಳ ಆಟದ ಪಾತ್ರೆಗಳು.

ಚಿಕ್ಕದಾಗಿಯೂ, ಸುಂದರವಾಗಿಯೂ, ಹೊಳೆಯತಕ್ಕವುಗಳಾಗಿಯೂ ಇರುತ್ತವೆ. ಇವುಗಳಲ್ಲಿ ದೊಡ್ಡದಾಗಿರತಕ್ಕ ಪಾತ್ರೆಗಳ ಸೆಟ್ಟಿಗೆ ೪ ರೂಪಾಯಿ ಚಿಕ್ಕ ಸೆಟ್ಟಿಗೆ ೨ ರೂಪಾಯಿ.

ಬನಾರಸ್ ಪಟ್ಟಣದಲ್ಲಿರತಕ್ಕ ರೇಷ್ಮೆ ಪಿತಾಂಬರ ಕಂಪೆನಿ ಮ್ಯಾನೇಜರಿಗೆ ಬರೆದುಕೊಂಡರೆ ಇದರ ತಪಶೀಲುವಾರು ಕ್ಯಾಟಲಾಗು ಕೊಡಲ್ಪಡುವುದು.

* * *

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುಷ್ಯವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು. ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸು

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ಬ್ರಿಟೊಬಿಲ್ಡಿಂಗ್ಸ್ ಮಂಗಳೂರು
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು.

ರಾಜವೈದ್ಯ ನಾರಾಯಣಜೀ ಕೇಶವಜೀ,

ಆಯುರ್ವೇದೋದಯ ಔಷಧಾಲಯ, ೧೭೭, ಚೀನಾಬಜಾರ್ ರೋಡ್, ಮದ್ರಾಸ್.

ಮದನಮಂಜರಿ ಮಾತ್ರೆಗಳು.

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖಲಿತ ಮೂತ್ರದೊಡನೆ ಇಂದ್ರಿಯ ಸ್ರವಿಸುವದು ಮುಂತಾದ ಸಕಲ ವ್ಯಾಧಿ ಪಿಂಡರೋಗಗಳನ್ನು ನಿರ್ಮೂಲಮಾಡುವವಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಗವಾದ ದೋಷಗಳನ್ನು ಕ್ರಮಪಡಿಸುವವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ, ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನೂ ದೀರ್ಘಾಯುಸ್ಸನ್ನೂ ಮುಖಕ್ಕೆ ಒಳ್ಳೇಕಾಂತಿಯನ್ನೂ ಉಂಟು ಮಾಡುತ್ತದೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಅವಶ್ಯಕವಾದ ಸಕಲ ಪಂಚಭೂತಗಳು ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೪೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧-೦-೦.

ಬಿಟ್ಟಿ! ಪುಗಸಟೆ!

ವೈದ್ಯವಿದ್ಯ.

ಸಂಪೂರ್ಣಾರೋಗ್ಯವನ್ನೂ, ದೀರ್ಘಾಯುವನ್ನೂ, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲಗು, ಕನ್ನಡ, ಇಂಗ್ಲೀಷು ಮುಂತಾದ ೮ ಭಾಷೆಗಳಲ್ಲಿ ದೊರೆಯುವದು. ಕೋರಿದವರಿಗೆ ಕ್ರಯವು ಅಂಚೆಹಾಸಲು ಸಹ ಇಲ್ಲದೆ ಮುಫತ್ತಾಗಿ ರವಾನಿಸಲ್ಪಡುವದು. ಜಾಗ್ರತೆ ನಿಮ್ಮ ವಿಳಾಸವನ್ನು ತಿಳುಹಿಸಿ. ಈ ವರಿಗೂ ೩೦೦೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ದಿವಸವೇ ಒಂದು ಕಾರ್ಡು ಬರೆಯಿರಿ.

* * *

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಆರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

* * *

Printed & Published by V. S Kamath at the Mangalore Trading Association's Sharada Press, Mangalore,

---

Registered No. M. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ
ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 46

ಮಂಗಳೂರು ತಾ. 15ನೇ ಶುಕ್ರವಾರ
ನವಂಬರ 1912.

Amrutanjan Depot, Head Office: Bombay.

ಅಮೃತಾಂಜನ! ಅಮೃತಾಂಜನ!

Trade Mark Registered.

AMRUTANJAN

ಇದರಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಎದನೋವು, ಸೊಂಟದ ನೋವು ಮುಂತಾದ ಅನೇಕ ತರದ ನೋವುಗಳು ಖಾತ್ರಿಯಿಂದ ನಿಲ್ಲುವವು.

ಈ ಅಮೃತಾಂಜನದಿಂದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುತ್ತವೆ. ದಯಮಾಡಿ 4000 ಬಾಟ್ಲಿಗಳನ್ನು ರವಾನಿಸಿ ಕೊಡಿರಿ.

ಡಬ್ಲ್ಯು. ಮೆಕ್ಸವೆಲ್ಲ ಮೈನಾರ್ಡ್,
ನ್ಯೂ ಬ್ರಿಜ್, ಡಮ್‌ಫ್ರಿಸ್,
ಸ್ಕೊಟ್‌ಲಂಡ್.

ಬಾಟ್ಲಿ ಒಂದರ ಕಿಮ್ಮತು 8 ಆಣೆ. ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ಸಿಕ್ಕುವದು.

ಹತ್ತು ಲಕ್ಷ ದೊಡ್ಡ ಸೈಜು ಪೋಸ್ಟ್ ಕಾರ್ಡುಗಳು.

ಈ ಕಾರ್ಡುಗಳು ಬೆಳ್ಳಗಾಗಿಯೂ, ಬರೆಯುವದಕ್ಕೆ ನಯವಾಗಿಯೂ ಇವೆ. ವ್ಯಾಪಾರಸ್ಥರೂ, ಉಪಾಧ್ಯಾಯರೂ, ಹುಡುಗರೂ ಕೊಂಡುಕೊಳ್ಳುವ ಬಗ್ಯೆ ಅರ್ಧ ಕ್ರಯಕ್ಕಿಂತಲೂ ಕಮ್ಮಿಯಿಂದ ರವಾನಿಸುತ್ತೇವೆ. (500 ಕಾರ್ಡಿಗಿಂತ ಕಮ್ಮಿ ರವಾನಿಸಲಾರೆವು.) ಮುಂಚಿನ ಕ್ರಯ 1,000ಕ್ಕೆ 2 ರೂಪಾಯಿ 8 ಆಣೆ, ಈಗಿನ ಕ್ರಯ 1,000ಕ್ಕೆ 15 ಆಣೆ, 500ಕ್ಕೆ 8 ಆಣೆ. ವಿ. ಪಿ. ಖರ್ಚು 1,000ಕ್ಕೆ 13 ಆಣೆ, 500ಕ್ಕೆ 7 ಆಣೆ.

1913ನೇ ವರ್ಷದ ಅಮೃತಾಂಜನದ

ಕ್ಯಾಲಂಡರ್.

AMRUTANJAN
Best Indian Pain Balm
Amrutanjan D
BOMBAY.

ನಾಲ್ಕು ರೂಪಾಯಿಯ ಔಷಧ ತರಿಸಿಕೊಂಡವರಿಗೆ ಪುಕಸಾಟೆಯಾಗಿ ರವಾನಿಸಲ್ಪಡುವದು. ಇತರರಿಗೆ 1ಕ್ಕೆ ವಿ. ಪಿ. ಸಮೇತ ೬ ಆಣೆ. 10ಕ್ಕೆ ವಿ. ಪಿ. ಸಮೇತ 1-8-0. ಇದು ಸುಂದರವಾಗಿ, ನೋಡುವದಕ್ಕೂ ರಜೆಯ ದಿವಸಗಳನ್ನು ತಿಳಕೊಳ್ಳುವದಕ್ಕೂ ಉಪಯುಕ್ತವಾಗಿರುತ್ತದೆ.

ದಂತಮಂಜನ! ದಂತಮಂಜನ! ದಂತಮಂಜನ ಡಬ್ಬಿ ಒಂದಕ್ಕೆ 2 ಆಣೆ.
ಗಜಕರ್ಣದ ಮುಲಾಮು! ತತ್‌ಕ್ಷಣ ಗುಣ! ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ 6 ಆಣೆ.

ವಿಳಾಸ:— ಅಮೃತಾಂಜನ ಡಿಪೊ,
109 ಫ್ರೆಯರ್ ರೋಡ್,
ಫೋರ್ಟು, ಮುಂಬಯಿ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಗಿರಗಾಂ ಮುಂಬಯಿ.

ಇವರ

ಬಾಲಾಮೃತ! ಜ್ವರದ ಗುಳಿಗೆಗಳು!!

ನಮ್ಮ ಜ್ವರದ ಗುಳಿಗೆಗಳ ಬಗ್ಗೆ ಈ ಕೆಳಗೆ ಬರದ ಅನೇಕ ಜಗಪ್ರಸಿದ್ಧ ಡಾಕ್ಟರುಗಳು ಬೇರೆ ಬೇರೆ ರೀತಿಯಿಂದ ಪರೀಕ್ಷಿಸಿ ಬಹು ಗುಣಕಾರಿಯನ್ನುವ ಬಗ್ಗೆ ಸಿಫಾರಸು ಪತ್ರಗಳನ್ನು ಕೊಟ್ಟಿರುತ್ತಾರೆ.

ಡಾಕ್ಟರ್ ಕಾವಸಜೀ ಎದಲಜಿ ದಾದಾ ಚಾಂಜಿ, ಎಲ್. ಎಮ್. ಎಸ್. ಜಿ. ಪಿ. ಬಿಟ್ಟು ಬಿಟ್ಟು ಬರುವ ಜ್ವರಕ್ಕೆ ಅತೀ ಗುಣಕಾರಿ.

ಡಾಕ್ಟರ್ ಡಿ. ಜಿ ಮೊರಾವಾಲಾ: ಎಲ್. ಎಮ್. ಎಸ್. ಸರ್ಜನ್ ಬಿಲಾಸಪುರ. ಥಂಡಿ ಜ್ವರಕ್ಕೆ ಸಂಜೀವನ.

ಡಾಕ್ಟರ್ ಕಾವಸಜೀ ಮೊಟಾಭಾಯಿ ಎಲ್. ಎಮ್. ಎಸ್. ಪಿತ್ತ ಜ್ವರಕ್ಕೆ ರಾಮಬಾಣದಂತಿರುತ್ತದೆ.

ಡಾಕ್ಟರ್ ಪ್ರೆಂಜೋನಿ ಎ. ಪಾರಿಯಾ: ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. ನಮ್ಮ ಜ್ವರದ ಗುಳಿಗೆಗಳು ಬಹಳ ಉತ್ತಮ್ಮ,

ಡಾಕ್ಟರ್ ಸರ್‌ಬಾಲಚಂದ್ರಕೃಷ್ಣ ನಾಯಿಟ್, ಎಲ್. ಎಮ್. ಜಿ. ಪಿ. ದಿನಗಟ್ಲೆ ಬರುವ ಜ್ವರಕ್ಕೆ ಇದು ಮುಖ್ಯ ಓಷಧ.

ಡಾಕ್ಟರ್ ಸೊರಾಬ ಕೆ. ನರಿಮನ್ ಎಮ್. ಡಿ. ಬಿ. ಎಸ್. ಸಿ. ಮುಂಬಯಿ ಎಲ್. ಆರ್. ಸಿ. ಪಿ. (ಲಂಡನ್) ಎಮ್. ಆರ್. ಸಿ. ಎಸ್. (ಇಂಗ್ಲಂಡ್ ಡಿ. ಪಿ. ಎಚ್. (ಕೆಂಬ್ರಿಜ್) ನಮ್ಮ ಜ್ವರದ ಗುಳಿಗೆಗಳು ಬಹಳ ಗುಣಕಾರಿ.

ಡಾಕ್ಟರ್ ಕೆ. ಎಸ್. ಇಂಜಿನಿಯರ್; ಎಫ್. ಸಿ. ಎಸ್ ಲಂಡನ್ ಎಲ್. ಎಮ್. ಎಸ್. ಮುಂಬಯಿ.

ಡಾಕ್ಟರ್ ವಿ. ಎನ್. ಚಿತಳೆ ಭಾಜೇಕರ್ ಎಲ್. ಎಮ್. ಎಸ್. ಮುಂಬಯಿ ಎಫ್. ಆರ್. ಸಿ. ಎಸ್. ಎಡಿಂಬರ್ಗ್ ಡಿ. ಪಿ. ಎಚ್. ಲಂಡನ್.

ಡಾಕ್ಟರ್ ಡಬ್ಲ್ಯು. ಓಬೇಲೆಂಟಾಯಿನ್ ಎಮ್. ಡಿ. ಅಮೇರಿಕನ್ ಮಿಶನ್.

ಡಾಕ್ಟರ್ ಬಿ. ಇ, ಘಾಸವಾಲಾ ಎಲ್. ಎಮ್. ಎಸ್ ಎಫ್. ಸಿ. ಎಸ್. ಲಂಡನ್.

ಡಾಕ್ಟರ್ ಎ. ಬಿ. ಮಸಾನಿ ಎಲ್. ಎಮ್. ಎಸ್. ಮುಂಬಯಿ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.

ಡಾಕ್ಟರ್ ಗ್ಯಾಬ್ರಿಯಲ್ ಡಿಮೆಲ್ಲೊ ಎಮ್. ಡಿ. ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್.

ಡಾಕ್ಟರ್ ಜಿ. ಆರ್. ತಾಂಬೆ ಎಮ್. ಎ. ಎಲ್. ಎಮ್. ಎಸ್. ಬಿ. ಎಸ್. ಸಿ.

ಡಾಕ್ಟರ್ ಪಿ. ಆರ್. ಪಿಳಗಾಂವಕರ ಎಲ್. ಆರ್. ಸಿ. ಪಿ. ಎಂಡ್ ಎಸ್. ಎಲ್. ಎಮ್. ಎಲ್. ಎಫ್. ಪಿ. ಎಂಡ್. ಎಸ್.

ಡಾಕ್ಟರ್ ಎಮ್. ಎಚ್. ಭಾಟವಡೀಕರ್ ಎಲ್. ಎಮ್. ಎಸ್. ಹೆಲ್ತ ಆಫೀಸರ್. ಡಿ. ಐ. ಟಿ.

ಡಾಕ್ಟರ್ ಎಫ್. ಎಕ್ಸ್. ಪರೇರಾ ಎಲ್. ಎಮ್. ಎಸ್.

ಡಾಕ್ಟರ್ ಕೆ. ಎಸ್. ಗೋಖಲ್ ಎಲ್. ಎಮ್. ಎಸ್. ಮುಂಬಯಿ.

ಡಾಕ್ಟರ್ ಡಿ. ಜಿ. ಮಂತ್ರಿ ಎಲ್. ಆರ್. ಸಿ. ಪಿ. (ಲಂಡನ್)

ಡಾಕ್ಟರ್ ಎ. ಬ್ರಿಟೊ ಎಲ್. ಎಮ್. ಎಸ್. ಡಾಕ್ಟರ್ ಮುರಕುಟ ಎಲ್. ಆರ್. ಸಿ. ಪಿ. ಎಲ್. ಆರ್. ಸಿ. ಎಸ್. (ಎಡಿನ್‌ಬರ್ಗ್).

ಬಾಲಾಮೃತ ಬಾಟ್ಲಿ ಒಂದರ 0—12—0. ಜ್ವರದ ಗುಳಿಗೆ ಬಾಟ್ಲಿ ಒಂದರ 1—0—0.

ಜಾಗ್ರತೆ! ಮೋಸ ಹೊಂದಬೇಡಿರಿ!! ಪಡಕೊಳ್ಳುವವರು ಗ. ರಾ. ಕರ್ಕಿ ಕಂಪೆನಿ, ಮುಂಬಯಿ. ಎಂತ ಕನ್ನಡದಲ್ಲಿ ಇದ್ದದ್ದನ್ನೇ ನೋಡಿ ಪಡಕೊಳ್ಳಿರಿ.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ,
ಗಿರಗಾಂ ಮುಂಬಯಿ.

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಸುಲಭ ಕ್ರಯಗಳು! ಪರೀಕ್ಷಿಸಿರಿ !! **ಸಂತೋಷ ಪಡುವಿರಿ !!!**

ವ್ಯಾಪಾರಸ್ಥರುಗಳಿಗೆ ಕೊಡುವ ಕ್ರಯಗಳಿಗೆ ಬಿಕರಿ.

ರಾಸ್ಕೋಪ್ ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ಎಂದೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ, ಚಕ್ರಗಳಲಿ ಕೆಂಪುಗಳು ಕೆತ್ತಲ್ಪಟ್ಟು ಹಿಂಭಾಗದಲ್ಲಿ ಗ್ಲಾಸುಡೋಮು ಇದು ನೋಡಲಿಕ್ಕೆ ಬಹು ರಮಣೀಯವಾಗಿದೆ. ಬಹು ಮಜಬೂತಾದ ದೀರ್ಘಕಾಲ ಬಾಳಿಕೆಗೆ ಬರುವ ಮತ್ತು ಕಾಲವನ್ನು ಸರಿಯಾಗಿ ತೋರಿಸುವ ಘಡಿಯಾರವು. ಇದಕ್ಕೆ ೫ ವರುಷಗಳ ಗ್ಯಾರಂಟಿ. ಬೇರೆ ಕಂಪೆನಿಯವರು ಇದಕ್ಕಿಂತ ಕಮ್ಮಿ ಬೆಲೆಯ ಘಡಿಯಾರವನ್ನು ರೂ. 2-8-0 3—8—0 ಬೆಲೆಗೆ ಮಾರುತ್ತಾರೆ. ಕಾರಣ ಮೋಸ ಪಡಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತೃಪ್ತಿಯಾಗಿಯೂ ಸಂತೋಷವಾಗಿಯೂ ಇರುವದ

ಕ್ರಯ ರೂ. 2—8—0. ವಿ. ಪಿ. ಪಿ. ಚಾರ್ಜು ರೂ. 0—4—0.

ಸ್ವೀಸ್ ಮೇಡ್ ರೈಲ್ವೆ ರೆಗ್ಯುಲೇಟರ್ ಲೀವರ್ ಜ್ಯುವೆಲ್ಡ್ ವಾಚ್.

ಇದು ಎಲ್ಲಾ ದೇಶದಲ್ಲಿಯೂ ಬಹಳ ಪ್ರಸಿದ್ಧವಾದ ಘಡಿಯಾರವು. ಇದು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹಳ ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇದು ಆಯುಪರಿಮಿತಿ ಇರುವದು. ಇದು ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುವದು. ಇದು ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟಿದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುವವು. ಇದಕ್ಕೆ ವಳಗಿನ ಗ್ಲಾಸು ಡೋಮು ಸಹಾ ಇರುವದು. ಇದಕ್ಕೆ ೫ ವರುಷಗಳ ಗ್ಯಾರಂಟಿ.

ಕ್ರಯ ರೂ. 3—8—0 ವಿ. ಪಿ. ಪಿ. ಚಾರ್ಜು ರೂ. 0-4-0.



ಲೇಡಿಸ್ ಸಿಲ್ವರ್ ಜ್ಯುವೆಲ್ಡ್ ವಾಚ್.



ಈ ಘಡಿಯಾರವು ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿರುವವು. ಇದು ಕಾಲವನ್ನು ಸರಿಯಾಗಿ ತೋರಿಸುತ್ತದೆ. ಉಪಯೋಗಕ್ಕೆ ಯೋಗ್ಯವಾದದ್ದು. ಇದನು ಕೈಯಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಇಂಥಾ ವಾಚನ್ನು ಇಷ್ಟು ಕಡಿಮೆ ಕ್ರಯಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದಕ್ಕೆ ಗ್ಯಾರಂಟಿ ೫ ವರುಷಗಳು.

ಕ್ರಯ ರೂ. 6—0—0 ವಿ. ಪಿ. ಪಿ. ಚಾರ್ಜು ರೂ. 0—6—0.

ಪೋಲಾರ್ ಲೀವರ್ ವಾಚ್.

(ವಾರಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು)



ಇದು ಬಹಳ ಆಶ್ಚರ್ಯಕರವಾದ ಎಂಟು ದಿವಸಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು. ಇದು ಬಹಳ ಗಟ್ಟಿತರವಾದದ್ದು ಇದು ಅಮೇರಿಕಾ, ಅಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಬಂಗಾರದ ಪದಕಗಳನ್ನು ಹೊಂದಿರುತ್ತದೆ. ಇದು ಶುದ್ಧ (ಚೊಕ್ಕ) ಬೆಳ್ಳಿಯಿಂ ಮಾಡಲ್ಪಟ್ಟಿರುತ್ತದೆ. ಇಂಥಾ ರಮಣೀಯವಾದ ಮತ್ತು ಆಶ್ಚರ್ಯಕರವಾದ ಗಡಿಯಾರವನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದನ್ನು ಪ್ರತಿ ಒಬ್ಬರು ತರಿಸಿಕೊಂಡು ಸಂತೋಷಪಡುವಿರೆಂದು ನಂಬುತ್ತೇವೆ. ಇದಕ್ಕೆ ಗ್ಯಾರಂಟಿ ೧೦ ವರುಷಗಳು.

ಕ್ರಯ ರೂ. 10—0—0. ವಿ. ಪಿ, ಪಿ. ಚಾರ್ಜು ರೂ. 0—8—0.

ಟೇಬಲ್ ಟ್ಯಾಂಪೀಸು ಘಡಿಯಾರಗಳು.



ಇವುಗಳು ಬಹಳ ಕಡಿಮೆ ಕ್ರಯದವುಗಳಾಗಿರುವದಲ್ಲದೆ ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಮನೋಹರವಾಗಿಯೂ ಇರುವವು. ಇವುಗಳು ಅನೇಕ ಸಂವತ್ಸರಗಳ ವರಿವಿಗೆ ಬಾಳಿಕೆ ಬರುವವು. ಈ ಘಡಿಯಾರಗಳನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲಿಯೂ ಅವಶ್ಯ ಇಡಬೇಕಾದ್ದು.

ನಂಬರ್ ೧. ತಾರೀಕುಗಳನ್ನು ತೋರಿಸುವ ಮತ್ತು ಅಲಾರಂ ಸಹ ಇರುವ ಕ್ಯಾಲಂಡರ್ ಅಲಾರು ಟ್ಯಾಂಪೀಸು ೧ಕ್ಕೆ ಕ್ರಯ ರೂ. 2-8-0 ವಿ. ಪಿ. ಪಿ. ಚಾರ್ಜು 0—6—0. ನಂಬರ್ ೨. ತಾರೀಕುಗಳು ಇಲ್ಲದ ಬರೀ ಅಲಾರಂ ಟ್ಯಾಂಪೀಸು ೧ಕ್ಕೆ ಕ್ರಯ ರೂ. 2-0-0 ವಿ.ಪಿ. ಚಾರ್ಜು 0-6-0. ನಂಬರ್ ೩. ತಾರೀಕು ಮತ್ತು ಅಲಾರಂ ಇಲ್ಲದ ಸಾದಾ ಟ್ಯಾಂಪೀಸ ೧ಕ್ಕೆ ಕ್ರಯ ರೂ. 1-4-0 ವಿ. ಪಿ. ಪಿ. ಚಾರ್ಜು 0-6-0.

ಕ್ಯಾರೇಜು ಕ್ಲಾಕು ಘಡಿಯಾರಗಳು.



ಇವು ಬಹಳ ರಮ್ಯವಾದವುಗಳು ಮತ್ತು ಮನೋಹರವಾದವುಗಳು. ಅನೇಕ ವರುಷಗಳ ವರಿಗೂ ಬಾಳಿಕೆ ಬರತಕ್ಕವುಗಳು. ಇವು ಉತ್ತಮ ತರದ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿ ಸೈಡು ಗ್ಲಾಸುಗಳು ಸಹ ಇರುವವು. ಇವನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲ್ಲಿಯೂ ಮತ್ತು ಇತರ ಕಾರ್ಯಾಲಯಗಳಲಿಯೂ ಇಡುವದಕ್ಕೆ ಯೋಗ್ಯವಾದವುಗಳು.

ನಂಬರ್ ೧. ಘಂಟೆ, ಅರ್ಧ ಘಂಟೆ ಹೊಡೆಯುವದು. ಮತ್ತು ಅಲಾರಂ ಸಹ ಇರುವದು ೧ಕ್ಕೆ ಕ್ರಯ ರೂ. 5-0-0. ವಿ.ಪಿ.ಪಿ. ಚಾರ್ಜು ರೂ.0-10-0 ನಂಬರ್ ೨. ಘಂಟೆ, ಅರ್ಧಘಂಟೆ ಮಾತ್ರ ಹೊಡೆಯುವದು ರೂ. 4-8-0 ವಿ.ಪಿ.ಪಿ. ಚಾರ್ಜು 0-8-0. ನಂಬರ್ ೩. ಕಾಲವನ್ನು ಮಾತ್ರ ತೋರಿಸಿ 15 ನಿಮಿಷಗಳ ವರಿಗೂ ವಾದ್ಯವನ್ನು ಬಾರಿಸುವದು. ರೂಪಾಯಿ 5-0-0 ವಿ. ಪಿ. ಪಿ. ಚಾರ್ಜು 0—10—0. ನಂಬರ್ ೪. ಘಂಟೆಘಂಟೆಗೆ ವಾದ್ಯವನ್ನು ಬಾರಿಸುವದು. ರೂ. 5-8-0 ವಿ. ಪಿ. ಪಿ. ಚಾರ್ಜು ರೂ. 0—10—0

ನಿಕ್ಕಲ್ ಬೆಳ್ಳಿ ಗಡಿಯಾರದ ಸರಪಣಿ.

ಇದು ಎಂದೆಂದಿಗೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ನೋಡುವದಕ್ಕೆ ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ೧ಕ್ಕೆ ಕ್ರಯ ರೂ. 0--8--0 ವಿ. ಪಿ. ಪಿ. ಚಾರ್ಜು ರೂ. 0--4--0.

ಎಲೆಕ್ಟ್ರಿಕ್ ಭಂಗಾರದ ಘಡಿಯಾರದ ಸರಪಣಿ.

ಇದು ಎಂದಿಗೂ ಭಂಗಾರದಂತೆ ಹೊಳೆಯುವ ಘಡಿಯಾರದ ಸರಪಣಿ. ಬಹಳ ಉತ್ತಮ ರಖಂ ೧ಕ್ಕೆ ಕ್ರಯ ರೂ. 1--0--0 ವಿ.ಪಿ.ಪಿ. ಚಾರ್ಜು ರೂ. 0--4--0.

ಶುದ್ಧ ಬೆಳ್ಳಿಯ ಘಡಿಯಾರದ ಸರಪಣಿ.

ಇದು ೧ನೇ ನಂಬರ್ ಚೊಕ್ಕ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಕೆಲಸ ಬಹಳ ನಾಜೂಕಾಗಿಯೂ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ೧ ಕ್ಕೆ ಕ್ರಯ ರೂ. 3—0—0 ವಿ. ಪಿ. ಪಿ. ಚಾರ್ಜು ರೂ. 0--4--0. ವಿಳಾಸ:—

ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ,
ನಂಬರ್ ೨೦, ಶಿಂಗಣನ್ ಬೀದಿ, ಪಾರ್ಕುಟೌನ್, ಪೋಸ್ಟು, ಮದ್ರಾಸ್

ಡಾಕ್ಟರ್ ಪೆರೇರರ ಸಿದ್ಧೌಷಧಗಳು.

ಮೂತ್ರ ರೋಗದ ಔಷಧ—ಈ ಔಷಧವು ಅತ್ಯಾದ್ಭುತವಾದದ್ದು. ಮೂತ್ರ ರೋಗದ ಯಾವ ಅಂತಸ್ಥಿನಲ್ಲಿಯೂ ಈ ಔಷಧ ಸೇವನೆಯು ಗುಣಕಾರಿ. ರಾಜಕುರು ಇತ್ಯಾದಿ ಸಂದರ್ಭಗಳಲ್ಲಿ ಎರಡು ದಿವಸ ಪ್ರಯೋಗಿಸುವ ಮಾತ್ರದಿಂದ ಇದರ ಮಹತ್ವವು ನಿಮಗೆನೇ ಖಾತ್ರಿಯಾಗುವುದು.

ನಾಲ್ಕು ಆಣೆ ಸ್ಟೇಂಪು ಕಳುಹಿಸಿದಲ್ಲಿ ನಮೂನೆ ಕಳುಹಿಸೋಣಾಗುವುದು.

ನಾಯಿಕೆಮ್ಮು ಔಷಧ—ಇದರಿಂದ 12 ದಿವಸಗಳೊಳಗೆ ನಾಯಿಕೆಮ್ಮು ಸಂಪೂರ್ಣ ಗುಣವಾಗುವುದು.

ನೇವಸದ ಔಷಧ—ನೇವಸದಿಂದ ಪೀಡಿತರಾದವರಿಗೆ ಯಾವ ಅಂತಸ್ಥಿನಲ್ಲಿಯೂ ಇದು ರಾಮಬಾಣದಂತಿದೆ.

ಮೋಹ ಸಂಬಂಧವಾದ ರೋಗಗಳಿಗೆ ಔಷಧ—ಸರ್ವ ವಿಧದ ಮೋಹ ರೋಗಗಳಿಗೆ ಇದು ದಿವ್ಯೌಷಧ.

ಪೌಷ್ಟಿದಾಯಕವಾದ ವ್ಯಾನ್—ರಕ್ತ ಇಲ್ಲದಿರುವುದು, ವ್ರಣ, ಖಜ್ಜಿ, ಬಲಹೀನ, ಮಲಬದ್ಧತೆ, ತಲೆಶಿಡಿತ, ಹೃದಯ ವೇಗವಾಗಿ ಬಡಿಯೋಣ, ಜೀರ್ಣವಾಗದಿರುವುದು, ಹೊಟ್ಟೆನೋವು ಮೊದಲಾದ ರೋಗಗಳಲ್ಲಿ ಇದು ಕೈಕಂಡ ಔಷಧವಾಗಿದೆ.

ಆಮಶಂಕೆಯ ಔಷಧ—ಈ ಔಷಧದಿಂದ ಎಂಥಾ ಆಮಶಂಕೆಯು ನಿಂತುಹೋಗುವುದೆಂಬದು ದಿಟವು.

ಎಮ್ಮಿನ ಆೖಂಟ್‌ಮೆಂಟ್—ವ್ರಣ, ರದ್ದು, ಖಜ್ಜಿ, ಸರ್ವ ವಿಧದ ಚರ್ಮರೋಗವು ಇದರಿಂದ ವಾಸಿಯಾಗುವುದು.

ಜ್ವರ ಮತ್ತು ಜುಲಾಬು ಮಾತ್ರೆಗಳು—ಇವು ಜ್ವರವನ್ನು ಹೊರಡಿಸಿ ಕಲಿಜೆಯನ್ನೂ ಕರುಳನ್ನೂ ಶುಚಿಮಾಡುವುದು. ಮಲೇರಿಯ ಜ್ವರಕ್ಕೆ ಇದು ಸಿದ್ಧೌಷಧವು.

J. F. Pererira & Co.
Chemists No. 6.
Calicut, Malabar.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ

ಸಾರ್ಸಾಪರಿಲಾ.



ಪೂರ್ವದ ಸ್ಥಿತಿ.



ನಂತರದ ಸ್ಥಿತಿ.

ಜಗತ್ಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು-ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ,ಬಹಳ ದಿನಗಳ ಹಳೇ ಪ್ರಮೇಹ ಇಡೀಮೈಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶರಿಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಳಾಸ:— ಪ್ರೊಪ್ರ್ಯಾಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೋಶಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)

KAMINIA
OIL
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co
BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ. ಮತ್ತು, ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲ್ಯದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲ್ಯವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30—5—11 ಮ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ „ಕಾಮಿನಿಯಾ ಆೖಯಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28—7—11. ಮ. ವಿ. ಡಿ. ಮೂದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ „ಕಾಮಿನಿಯಾ ಆೖಯಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಆೖಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11. ಮ. ಸಿ. ಆರ್. ನಾಯುಡು ಪ. ವ. ಡಿ. ಟಾಶಿಬ, (ಬರ್ಮಾ)—ನನ್ನ ಮಿತ್ರರು „ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

Address—**Anglo Indian Drug & Chemical Co.,**
155 Jumma Musid, Market, Bombay.
ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 15ನೇ ನವಂಬರ 1912.

ಒಬ್ಬರಿಗೊಬ್ಬರು ಸಹಾಯಮಾಡುವುದರಿಂದ ದೇಶಾಭಿವೃದ್ಧಿಯು ಹೇಗೆ ಸಾಗುವುದು.

ಪರಸ್ಪರ ಸಹಾಯವನ್ನು ಕ್ರಮಗೊಳಿಸಿ ಅದು ನಿರಂತರವಾಗಿರುವಂತೆ ವ್ಯವಸ್ಥೆಗೊಳಿಸಿದ್ದಲ್ಲಿ ದೇಶಾಭಿವೃದ್ಧಿಯು ಹೇಗೆ ಸಾಗುವುದೆಂಬುದು "ಕುಒಪರೇಟಿವ್ ಕ್ರೆಡಿಟ್ ಸೊಸ್ಯಾಟಿಸ್" ಎಂಬ ಪರಸ್ಪರ ಸಹಾಯಕ ಸಂಘಗಳ ಬ್ಯಾಂಕು ಮೊದಲಾದವುಗಳ ಸ್ಥಾಪನೆಗಳ ವೃತ್ತಾಂತದಿಂದ ವ್ಯಕ್ತವಾಗುವುದು. ಹಿಂದುಸ್ಥಾನದ ಆಯಾ ಕಡೆಗಳ ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರರುಗಳು ಸಿಮ್ಲದಲ್ಲಿ ಕಳದ ತಿಂಗಳಲ್ಲಿ ಸಭೆ ಸೇರಿದ್ದರು. ಆ ಸಭಾಧ್ಯಕ್ಷರು ಹಿಂದೂಸ್ಥಾನದ ಪರಸ್ಪರ ಸಹಾಯಕ ಸಂಘಗಳ ಅಭಿವೃದ್ಧಿಯನ್ನು ಕುರಿತು ಮಾತಾಡಿದ್ದರು. ಪರಸ್ಪರ ಸಹಾಯದ ಪ್ರಯೋಜನವನ್ನು ಜನರು ತಿಳಕೊಳ್ಳುತ್ತ ಬರುತ್ತಿರುವರೆಂತ ಇವರ ಭಾಷಣದಿಂದ ತಿಳಿಯಬಹುದು. ೧೯೦೭ನೇ ವರುಷದಲ್ಲಿ ಪ್ರಜಾ ಜನರ ಪರಸ್ಪರ ಸಹಾಯಾರ್ಥವಾಗಿ ಸ್ಥಾಪಿಸಲ್ಪಟ್ಟ ಈ ಸಂಘಗಳ ಸಂಖ್ಯೆಯು ಹಿಂದೂಸ್ಥಾನದಲ್ಲಿ ೮೪೩ ಆಗಿತ್ತು. ಪ್ರಕೃತ ಈ ಸಂಖ್ಯೆಯು ೮೧೭೭ ಆಗಿರುತ್ತದೆ. ಸಂಘಕ್ಕೆ ಸೇರಿದ ಮೆಂಬರರ ಸಂಖ್ಯೆಯು ೯೧,೦೦೦ದಿಂದ ೪೦೩,೦೦೦ಕ್ಕೆ ಹೆಚ್ಚಿರುತ್ತದೆ. ಇದೇ ರೀತಿ ಸಂಘದ ವ್ಯಾಪಾರಗಳಿಗೆ ಧಾರಾಳವಾಗಿ ಭಂಡವಾಳವು ಸಹ ದೊರಕಿರುತ್ತದೆ. ಸಂಘಕ್ಕೆ ಸೇರಿದ ಮೆಂಬರುಗಳಿಗೆ ಹಣವನ್ನು ಕಡಿಮೆ ದರದ ಬಡ್ಡಿಯಲ್ಲಿ ಕೊಡುವುದು ಈ ಕ್ರೆಡಿಟ್ ಸೊಸ್ಯಾಟಿಗಳ ಕ್ರಮವಾಗಿರುವುದೆಂದು ವಾಚಕರು ತಿಳಿದಿರಬಹುದು. ಹೀಗೆ ಕಡಿಮೆದರದ ಬಡ್ಡಿಯಲ್ಲಿ ರೈತರು ಮೊದಲಾದ ಜನರಿಗೆ ಹಣವು ಸಾಲವಾಗಿ ಕೊಡೋಣಾದ್ದರಿಂದ ಈ ರೈತರುಗಳಿಗೆ ಬಡ್ಡಿರೂಪವಾಗಿ ನಷ್ಟವಾಗುವ ಹಣದಲ್ಲಿ ಸೇಕಡಾ ೧೦ರಂತೆ ಉಳಿದಿರಬಹುದಾಗಿ ತಿಳಿದು ಬರುತ್ತದೆ. ಅಂದರೆ ಸಂಘದ ಬ್ಯಾಂಕುಗಳು ಕೊಡುವ ಒಂದು ಕೋಟಿ ರೂಪಾಯಿಗಳ ಸಾಲದಲ್ಲಿ ೧೦ ಲಕ್ಷ ರೂಪಾಯಿಗಳು ಉಳಿದಂತಾಯಿತು. ಪರಸ್ಪರ ಸಹಾಯಕ ಸಂಘಗಳಿಂದ ದೊರಿಯುವ ದ್ರವ್ಯಲಾಭದ ಹೊರತು ಇತರ ಪ್ರಯೋಜನಗಳು ಸಹ ಇರುವವೆಂತ ರಿಜಿಸ್ಟ್ರಾರರುಗಳ ಈ ಸಭಾವೃತ್ತಾಂತದಿಂದ ತಿಳಿಯುತ್ತೇವೆ. ಸಿವಿಲ್ ದಾವೆಗಳ ಸಂಖ್ಯೆಯಲ್ಲಿ ಪರಸ್ಪರ ಸಹಾಯಕ ಸಂಘ ಸ್ಥಾಪನೆಗಳ ಕಾರಣದಿಂದ ಒಂದು ಜಿಲ್ಲೆಯಲ್ಲಿ ೧೧೦೦ ದಾವೆಗಳು ಕಡಿಮೆಯಾಗಿರುವವು. ರೋಗ ನಿವಾರಣೆಯೂ ವಿದ್ಯಾಭಿವೃದ್ಧಿಯೂ ಈ ಸಂಘಗಳ ಮೂಲಕ ಸಾಧ್ಯವಾಗಿರುವುದು. ಪರಸ್ಪರ ಸಹಾಯಕ ಬೇಂಕು ಮೊದಲಾದವುಗಳಿಗೆ ಮೆಂಬರರಾಗಿ ಸೇರುವುದರಿಂದ ಜನರು ಮಿತವ್ಯಯವನ್ನು ಕಲಿತು ಒಬ್ಬರಿಗೊಬ್ಬರ ನಂಬಿಕೆಗೆ ಪಾತ್ರರಾಗುವಂತೆ ನಡಿಯುವರು. ಈ ಮೂಲಕ ಜನಸಾಮಾನ್ಯರಲ್ಲಿ ಸದ್ವರ್ತನೆಗೆ ಅವಕಾಶವು ದೊರಕುತ್ತದೆ. ಪರಸ್ಪರ ಸಹಾಯಕ ಸಂಘದ ಈ ಪ್ರಯೋಜನಗಳು ಕ್ರಮವಾಗಿ ಕಾರ್ಯರೂಪುಗೊಳ್ಳುತ್ತಿರುವವೆಂತ ರಿಜಿಸ್ಟ್ರಾರರ ಸಭೆಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವ್ಯಕ್ತಗೊಳಿಸಿರುವರು. ವ್ಯವಸಾಯ ಅಭಿವೃದ್ಧಿಯನ್ನು ಪರಸ್ಪರ ಸಹಾಯಕ ಸಂಘಗಳ ಮೂಲಕ ಸಾಧಿಸುವ ವಿಷಯವು ಪ್ರಕೃತ ಈ ಎರಡು ಶಾಖೆಗಳ ಅಧಿಕಾರಿಗಳ ಆಲೋಚನೆಯಲ್ಲಿರುವುದು. ಆಯಾ ಬೆಳೆಗಳಿಗೆ ಬೇಕಾದ ದವಸುಧಾನ್ಯಗಳ ಬೀಜಗಳು ರೈತರಿಗೆ ಸುಲಭವಾಗಿ ದೊರಿಯೋಣಾಗುವಂತೆ ಪರಸ್ಪರ ಸಹಾಯಕ ಸಂಘಗಳು ಕೆಲವು ಕಡೆಗಳಲ್ಲಿ ಸ್ಥಾಪಿಸಲ್ಪಟ್ಟವೆ. ಇತರ ವ್ಯವಸಾಯ ಸಾಹಿತ್ಯಗಳು ಸುಲಭವಾಗಿ ದೊರಿಯುವಂತೆಯೂ ರೈತರುಗಳಿಂದ ಬೆಳೆಸೋಣಾಗುವ ದವಸು ಧಾನ್ಯಗಳು ಪರಸ್ಪರ ಸಹಾಯಕ ಸಂಘಗಳ ಕ್ರಮಗಳಲ್ಲಿ ಕೂಡಿಸಲ್ಪಟ್ಟು ಒಳ್ಳೇ ಲಾಭಕರವಾದ ದರಗಳಲ್ಲಿ ಮಾರಲ್ಪಡುವಂತೆಯೂ ಪರಸ್ಪರ ಸಹಾಯದ ವ್ಯವಸಾಯ ಸಂಘಗಳು ಸ್ಥಾಪಿಸೋಣಾದರೆ ಕೃಷಿಕರಿಗೆಲ್ಲಾ ಮಹದುಪಕಾರವಾಗುವುದು. ಇಂಥಾ ದವಸು ಧಾನ್ಯಗಳ ಒಂದು ಸಂಘವು ನಮ್ಮ ಜಿಲ್ಲೆಯ ಪುತ್ತೂರಲ್ಲಿ ಇದೇ ತಾ. ೮ರಲ್ಲು ಸ್ಥಾಪಿಸಲ್ಪಟ್ಟಿರುವುದು. ನಮ್ಮ ಸಂಸ್ಥಾನದಲ್ಲಿರುವ ಇಂಥಾ ಸಂಘಗಳಲ್ಲಿ ಇದೇ ಎರಡನೇದು. ಜನಸಂಖ್ಯೆಯಲ್ಲಿ ಮುಕ್ಕಾಲಂಶಕ್ಕಿಂತ ಅಧಿಕವಾಗಿರುವ ಕೃಷಿಕರಿಗೆ ಇಂಥಾ ಸಂಘಗಳಿಂದ ಒಳ್ಳಿತಾಗುವುದರಿಂದ ದೇಶಾಭ್ಯುದಯವು ತನ್ನಷ್ಟಕ್ಕನೆ ಸರ್ವತ್ರ ಪ್ರಾಪ್ತಿಸುವುದು.

ಆರೋಗ್ಯಪಾಲನೆ.

ಆರೋಗ್ಯಪಾಲನೆಯ ಏರ್ಪಾಡುಗಳ ಹೆಚ್ಚಿನ ಅವಶ್ಯಕತೆಯು ಹಿಂದೂಸ್ಥಾನದಲ್ಲಿರುವುದೆಂಬುದರ ವಿಷಯ ಮದ್ರಾಸಿನ ಸೆನಿಟರಿ ಕಮಿಷನರಾಗಿದ್ದ ಡಬ್ಲ್ಯು. ಜಿ. ಕಿಂಗ್ ಮತ್ತು ಕಲ್ಕತ್ತೆಯ ಹೆಲ್ತ್ ಆಫೀಸರರಾಗಿದ್ದ ಡಬ್ಲ್ಯು ಜೆ. ಸಿಮ್ಸನ್ ಎಂಬವರು ಟ್ಯಾಮ್ಸ್ ಪತ್ರಿಕೆಗೆ ಒಂದು ಲೇಖನವನ್ನು ಬರದಿರುವರು. ಹಿಂದೂಸ್ಥಾನದಲ್ಲಿರುವ ಆಂಗ್ಲೇಯ ಮತ್ತು ಭಾರತೀಯ ಸಿಪಾಯರಲ್ಲಿಯೂ ಜೈಲುಗಳಲ್ಲಿರುವ ಕೈದಿಗಳಲ್ಲಿಯೂ ಮೃತಪಟ್ಟವರ ಸಂಖ್ಯೆಯ ಸರಾಸರಿಯನ್ನು ಇತ್ತಲಾಗೆ ನಿರ್ಣಯಿಸಿರುವ ಮೇರೆಗೆ ಸಿಪಾಯಿ ಮತ್ತು ಸೋಲ್ಜರರ ಸಂಖ್ಯೆಯು ಸಾವಿರಕ್ಕೆ ಸಾಧಾರಣ ೫ರಂತೆಯೂ ಕೈದಿಗಳ ಸಂಖ್ಯೆಯು ಸಾವಿರಕ್ಕೆ ೧೭ರಂತೆಯೂ ಇರುತ್ತದೆ. ಸರಕಾರದವರ ಆರೈಕೆಯಲ್ಲಿಲ್ಲದ ಸಿಪಾಯಿ ಮತ್ತು ಕೈದಿಗಳಲ್ಲದ ಇತರ ನಿವಾಸಿಕರಲ್ಲಿ ಮರಣ ಸಂಖ್ಯೆಯು ಅಧಿಕವಾಗಿರುವುದು. ಒಂದು ಮೈಲು ವಿಸ್ತೀರ್ಣಕ್ಕೆ ಸರಾಸರಿ ಮೇಲೆ ಅತ್ಯಧಿಕವಾಗಿರುವ ಮರಣ ಸಂಖ್ಯೆಯು ೮೧ಕ್ಕೆ ಮಿಕ್ಕಿದೆ. ೧೯೧೦ನೇ ವರುಷದಲ್ಲಿ ಸರಾಸರಿ ಮೇಲೆ ಹಿಂದೂಸ್ಥಾನದ ನಿವಾಸಿಕರ ಮರಣಸಂಖ್ಯೆಯನ್ನು ನೋಡಿದ್ದಲ್ಲಿ ಇದು ಹೆಚ್ಚುಕಡಿಮೆ ಮೈಲಿಗೆ ೩೩ರಂತಿರುವುದು. ಈ ಸಂಖ್ಯೆಯು ಆಂಗ್ಲಾಳ ಮತ್ತು ವೇಲ್ಸ್ ದೇಶಗಳ ಸರಾಸರಿಯ ಇಮ್ಮಡಿಯಾಗಿರುವುದು. ಜೈಲುಗಳಲ್ಲಿಯೂ ಸಿಪಾಯರಲ್ಲಿಯೂ ಸರಕಾರದವರು ಆರೋಗ್ಯ ಏರ್ಪಾಡುಗಳ ಜ್ಯಾರಿಯನ್ನು ಸರಿಯಾಗಿ ನಡಿಸಿದ್ದರಿಂದ ಸಿಪಾಯರ ಮತ್ತು ಕೈದಿಗಳ ಮರಣಸಂಖ್ಯೆಯು ಕಡಿಮೆಯಾಗಿರುವದೆಂದೂ ಅದೇ ರೀತಿ ಈ ಏರ್ಪಾಡುಗಳ ಜ್ಯಾರಿಯು ಇತರ ನಿವಾಸಿಕರಲ್ಲಿಲ್ಲದ್ದರಿಂದ ಮರಣ ಸಂಖ್ಯೆಯು ಇವರಲ್ಲಿ ಹೆಚ್ಚಲು ಕಾರಣವೆಂದೂ ಮಿ। ಕಿಂಗ್‌ರವರ ಲೇಖನದಲ್ಲಿ ವಾದಿಸಲ್ಪಟ್ಟಿರುತ್ತದೆ. ೧೯೦೮ರಿಂದ ೧೯೧೧ರ ವರೆಗೆ ನಾಲ್ಕು ವರ್ಷಗಳಲ್ಲಿ ಮಲೆಜ್ವರ, ಜ್ವರ, ಪ್ಲೇಗು ವಾಂತಿಭೇದಿಗಳಿಂದ ಹಿಂದೂಸ್ಥಾನದಲ್ಲಿ ಮಡಿದವರ ಸಂಖ್ಯೆಯು ೧೭ ಮಿಲಿಯವಾಗಿರುವುದು. ಇಂಡಿಯದ ಸರಕಾರದವರು ಆರೋಗ್ಯರಕ್ಷಣೆ ಬಗ್ಯೆ ಇತ್ತಲಾಗೆ ಮಾಡಿದ ಏರ್ಪಾಡುಗಳು ಸ್ತುತ್ಯವಾಗಿವೆ. ಆದರೆ ಈ ಬಗ್ಯೆ ಸರಕಾರದವರು ಏರ್ಪಡಿಸಿದ ಸಿಬಂದಿಯು ವಿಸ್ತಾರವಾದ ಹಿಂದೂಸ್ಥಾನಕ್ಕೆ ಸಾಲದು. ಪ್ರಕೃತ ಮಾಡಿರುವ ಆರೋಗ್ಯ ರಕ್ಷಣೆಯ ಸಿಬಂದಿ ಏರ್ಪಾಡು ಹಿಂದೂಸ್ಥಾನದ ೧,೧೫೩,೮೮೮ ಚದರ ಮೈಲುಗಳ ವಿಸ್ತೀರ್ಣದಲ್ಲಿರುವ ೧೭ ಮಿಲಿಯ ನಿವಾಸಿಕರಿಗೆ ಮಾತ್ರ ಸಾಕಾಗಿರುವುದು. ಅಂದರೆ ಮಿಕ್ಕುಳಿದ ೨೨೭ ಮಿಲಿಯ ನಿವಾಸಿಕರಿಗೆ ಈ ಏರ್ಪಾಡುಗಳ ಪ್ರಯೋಜನವು ಪ್ರಕೃತ ದೊರೆಯದು. ಜೀವನಕಾಲದ ಸರಾಸರಿಯು ಅಂದರೆ ಆಯುಷ್ಯಕಾಲದ ಸರಾಸರಿಯು ಇಲ್ಲಿಯ ಜನರಿಗೆ ೨೨॥ ವರುಷಗಳಂತಿರುವುದು. ಆಂಗ್ಲಾಳದ ನಿವಾಸಿಕರ ಈ ಸರಾಸರಿಯು ೪೨ ವರುಷಗಳಾಗಿರುತ್ತವೆ. ಈ ವಿದ್ಯಮಾನಗಳಲ್ಲಿ ಜನಸಾಮಾನ್ಯರಲಿ ಶಿಕ್ಷಣ ಮೂಲಕ ಆರೋಗ್ಯ ರಕ್ಷಣೆಯ ಏರ್ಪಾಡುಗಳ ಮಾಹಿತಿಯನ್ನು ಬೀರುವ ಅವಶ್ಯಕತೆಯು ಅಧಿಕವಾಗಿರುವುದೆಂದು ಡಾಕ್ಟರ್ ಕಿಂಗ್‌ರವರು ತಮ್ಮ ಲೇಖನದಲ್ಲಿ ವಾದಿಸುತ್ತಾರೆ.

ಸಂಸ್ಕೃತ ವಿದ್ಯಾಭ್ಯಾಸದ ಸ್ಥಿತಿಯು.

ಪುರಾತನ ಕಾಲದ ನಮ್ಮ ನಾಗರಿಕತೆಯ ವಿಷಯ ನಾವು ಆಗಿಂದಾಗ್ಯೆ ಗೌರವ ಪಡುತ್ತಿರುವೆವು. ಆದರೆ ಈ ನಾಗರಿಕತೆಗೆ ಮೂಲವಾದ ಸಂಸ್ಕೃತ ವಾಙ್ಮಯದ ಪರಿಚಿತಿಯನ್ನು ಮಾಡಿಕೊಳ್ಳುವ ನಮ್ಮ ಪ್ರಯತ್ನಗಳು ಈ ಗೌರವಕ್ಕೆ ತಕ್ಕಂತಿಲ್ಲ. ಹಿಂದುಗಳು ಹಿಂದೂಸ್ಥಾನದಲ್ಲಿ ಬಹಳವಾಗಿದ್ದಾರೆ. ಮಹಮ್ಮದೀಯರಿಗಿಂತಲೂ ಹಿಂದುಗಳ ಸಂಖ್ಯೆಯು ನಾಲ್ಕು ಪಾಲಷ್ಟು ಇದೆ. ಆದರೆ ಅರಬಿ ಮತ್ತು ಪರ್ಸಿಯನ್ ವಿದ್ಯಾಭ್ಯಾಸಕ್ಕೆ ಮಹಮ್ಮದೀಯರು ಪ್ರಯತ್ನ ಪಡುವಂತೆ ಹಿಂದುಗಳು ಸಂಸ್ಕೃತ ವಿದ್ಯಾಭ್ಯಾಸವನ್ನು ಪಡಿಯುವುದರಲ್ಲಿ ಪ್ರಯತ್ನಪಡುವುದಿಲ್ಲ. ಸಂಸ್ಕೃತ ವಿದ್ಯಾಪಾಂಡಿತ್ಯವನ್ನು ಪಡದವರ ಸಂಖ್ಯೆಯು ಅರಬಿ ಮತ್ತು ಪರ್ಸಿಯನ್ ಭಾಷೆಗಳ ಪಾಂಡಿತ್ಯ ಪಡದ

ವರಿಗಿಂತ ಸೇಕಡಾ ೫೦ರಂತೆ ಕಡಮೆಯಾಗಿರುವುದು. ಅರಬಿ ಮತ್ತು ಪರ್ಸಿಯನ್ ಭಾಷೆಗಳನ್ನು ಕಲಿಸಲು ಶಾಲೆ ಮೊದಲಾದವುಗಳು ಬ್ರಿಟಿಷ ಹಿಂದೂಸ್ಥಾನದಲ್ಲಿ ೧೪೬೦ ಇರುವಾಗ ಸಂಸ್ಕೃತ ವಿದ್ಯಾ ಸಂಸ್ಥೆಗಳು ೧೫೨೪ ಇರುವವು. ಅರಬಿ ಮತ್ತು ಪರ್ಸಿಯನ್ ಭಾಷೆಗಳ ಪಂಡಿತರು ೩೧,೩೪೭ ಜನರಿರುವಾಗ ಸಂಸ್ಕೃತ ಪಂಡಿತರ ಸಂಖ್ಯೆಯು ೨೦,೬೧೦ ಆಗಿರುವುದು. ಮಹಮ್ಮದೀಯರಿಗೆ ಕೊರಾನ್ ಎಂಬ ಅವರ ಶಾಸ್ತ್ರವನ್ನು ಕಲಿಸಲು ೭೩೫೭ ಹುಡುಗರ ಪಾಠಶಾಲೆಗಳೂ ಹುಡುಗಿಯರ ಬಗ್ಗೆ ೧,೩೦೫ ಕೊರಾನ್ ಪಾಠಶಾಲೆಗಳೂ ಇವೆ. ಇವುಗಳಲ್ಲಿ ಪಾಠಗಳನ್ನು ಕಲಿಯುವ ಹುಡುಗರ ಸಂಖ್ಯೆಯು ೧೪೧,೪೬೦ ಮತ್ತು ಹುಡುಗಿಯರ ಸಂಖ್ಯೆಯು ೨೩,೯೬೪ ಆಗಿರುವುದು. ಆದರೆ ಈ ರೀತಿಯಲ್ಲಿಯೇ ಹಿಂದುಗಳಿಗೆ ಹಿಂದೂ ಶಾಸ್ತ್ರಗಳನ್ನು ಕಲಿಸುವ ಯಾವ ಏರ್ಪಾಡುಗಳೂ ಇರುವುದಿಲ್ಲ. ಲಕ್ಷ ಕಟ್ಟಳೆಯಲ್ಲಿ ದ್ರವ್ಯ ಸಂಗ್ರಹವಿರುವ ಅನೇಕ ಹಿಂದೂ ದೇವಸ್ಥಾನಗಳಿವೆ. ಬ್ರಾಹ್ಮಣರಲ್ಲಿ ತಾವು ಶ್ರೇಷ್ಠರು ತಾವು ಶ್ರೇಷ್ಠರೆಂದು ಬ್ರಾಹ್ಮಣ ಶಾಖೆಗಳಲ್ಲಿ ಹಲವರು ಸೆಣದಾಡುತ್ತಿರುವರು. ಆದರೆ ಹಿಂದೂ ಶಾಸ್ತ್ರವನ್ನು ಕಲಿಸಲು ಸಮರ್ಪಕವಾದ ಏರ್ಪಾಡುಗಳು ಇಲ್ಲದಿರುವುದು ಶೋಚನೀಯವಾದ ವಿಷಯವು.

ಜೀವನ ಸಪ್ತಾಂಕ.

(ಶೇಕ್ಸಪೀಯರ್ ಕವಿ ಸಾರ್ವಭೌಮನ ಕವಿತಾನುಸರಣ.)

ಇಳೆಯ ರಂಗಸ್ಥಳದೊಳಿಳಿದು ನರಕುಲವು
ಹಲವು ನಟನನೆಗೆ ನಲಿದು, ತೋರಿಗೆಲವು,
ತೊಲಗುವೇಳಂಕನಾಟಕೆಯ ಜೀವನವ
ತಿಳಿದು, ಸೂತ್ರಾತ್ಮಪದತಳದೊಳಿಡು ಮನವ. ॥ ೧ ॥
ಮಲಮೂತ್ರಗಳೊಳಳಲುತುಗುಳುತಿರೆ ಜೊಲ್ಲಂ,
ಅಳುತ, ನಗುತಾಳಿ ಮೆಲ್ಲುತೆ ಕೆಸರ ಧೂಳಂ,
ಮೊಲೆಗುಡಿದು, ಬಳಗಮೋಹಿಸೆ ದಾದಿಕರದಿ
ಕಳೆವುದುಯ್ಯಲೊಳೆಳೆಯ ಲೀಲಾಂಕ ಭರದಿ. ॥ ೨ ॥
ಗೆಳೆಯರೊಳುಧೂಳಾಟಕೆಳಸುತಾಕಳಿಸಿ,
ಅಲಸಗಣ್ಣಿಂ, ನಡೆ ವಿಳಂಬದಿಂ ಬೆಳೆಸಿ,
ಅಳುಕುತೈಗಳನ ಕೋಲನು ಪಲವುಕಾಲ
ಕಳೆವ ವಿದ್ಯಾಗೌರವದೆ ಗ್ರಂಥಲೋಲ! ॥ ೩ ॥
ಮೊಳೆಯೆ ತಾರುಣ್ಯದಲರೆಳೆ ಮೀಸೆ ಮೊಗದೆ,
ತಲೆಗೆ ಬಾಸಿಂಗವಿಡಲುಮ್ಮಳಿಸಿ ಸೊಗದೆ,
ಅಳಿಯಪದ ಭೋಗೇಚ್ಛೆಗಳಿಗಳಿಗೆ ಬೆಳೆದು
ಕಳವಳಿಸುವನು ಹೃದಯಬಲ ತೇಜ ಕಳೆದು. ॥ ೪ ॥
ಕುಲವಧುವಕೂಡಿ, ತುಳುಕುತೆ ದರ್ಪಬಲದೆ,
ಇಳೆಯನೆಳಗದಿರಂತೆ ಪಳಿವ ದುಶ್ಚಲದೆ;
ಬಲೆಯೊಡ್ಡಿಸೆಳೆವ ಭವವನೆ ಭವ್ಯಮೆಂದು,
ತಿಳಿಯದಲೆ ನಂಬಿ ಸಿಲುಕುವನು ತಾಮುಂದು. ॥ ೫॥
ಕಲುಕನ್ನತರುವಳಲು, ಲಲನೆಮುನಿದಳಲು,
ಹಲವು ಮಕ್ಕಳತಂಟೆಯಳಲು, ಉರದಳಲು,
ಬಳಿಸಾರೆ ಹಲವಳಲಕಣ್ಜಲ ಪ್ರವಾಹಂ,—
ತಳೆವನಾಕ್ಷಣಭಕ್ತಿ, ಕಳೆದುವ್ಯಾಮೋಹಂ. ॥ ೬ ॥
ಕಳೆಗುಂದಿ, ಸಡಿಲುದೊವಲಿಂ, ಬಳುಕಿ, ಬಾಗಿ,
ಬಿಳಿಗೂದಲುದಿಸೆ, ತಲೆನಡುಗೆ ಹಣ್ಣಾಗಿ,
ನೆಳಲಂತೆ ಬಡವಾಗಿ, ಬಲಕೆ ಕೋಲ್ಪಿಡಿದೂ,
ಎಳೆದು ಕಾಲ್ನಡೆದು ಕನ್ನಡಿಕಣ್ಣಡರ್ದೂ. ॥ ೭ ॥
ತಳೆಯುತೆರಡನೆ ಬಾಲ್ಯವ ಸಹಾಯನಾಗಿ,
ಗಲಗದ್ಗದದೆ, ರುಜೆಗೆ ಚಿರನಿಲಯನಾಗಿ,
ಮುಳುಗುವನು ಕಾಲಾಬ್ಧಿಯೊಳು ಖಿನ್ನಪ್ರಾಣಂ,—
ತಳದೇಳದಿಯ ಹಾಸಿನೆಸೆವ ನಿರ್ವಾಣಂ. ॥ ೮ ॥

M. N. K.

ವಿವಾಹವಂದರೇನು?

ಸಮಸ್ತ ಜೀವರಾಶಿಗಳೊಳಗೆಲ್ಲಾ ಅಮೋಘವಾದ ಸೃಷ್ಟಿಯೇ ಮನುಷ್ಯನು. ಈ ಮನುಷ್ಯನ ಅರ್ಧಾಂಗಿಯು ಹೆಂಗಸು. ಗಂಡಸಿಗೆ ಹೇಗೆ ಶುದ್ಧವಾದ ಮನಸ್ಸು, ಸತ್ಯ, ವಿದ್ಯಾಸಾಧನ, ನೀತಿನ್ಯಾಯ ಮೊದಲಾದ ಸುಗುಣಗಳಿವೆಯೋ ಹಾಗೆಯೇ ಹೆಂಗಸಿಗೂ ಈ ಸುಗುಣಗಳಿವೆ. ಗಂಡಸಿನ ಸುಖದುಃಖಗಳಿಗೆ ಹೆಂಗಸೇ ಕಾರಣಳು. ಇವಳೇ ಪ್ರಜಾಭಿವೃದ್ಧಿಗೆ ಮೂಲ ಪುರುಷಳು. ಅಂದರೆ ಸರಿ ಸಮಾನವಾದ ಗುಣಗಳುಳ್ಳ ಗಂಡಸೂ ಹೆಂಗಸೂ ವಿವಾಹ ವಿಧಿಯಿಂದ ಗೃಹಸ್ಥಾಶ್ರಮಿಗಳಾಗಿ ಪ್ರಜಾಭಿವೃದ್ಧಿಯನ್ನು ಉಂಟುಮಾಡಬೇಕಾಗಿ ಸೃಷ್ಟಿಸಲ್ಪಟ್ಟಿರುವರು. ಆದರೆ ಈ ವಿವಾಹನುಹತ್ವವನ್ನು ಜನ ಸಾಮಾನ್ಯರು ಅರಿಯದೆ ವಿವಾಹವನ್ನುಮಾಡಿಕೊಳ್ಳುವುದರಿಂದ ಪ್ರಜಾಭಿವೃದ್ಧಿಯಾಗುವುದರ ಬದಲಿಗೆ ಪ್ರಜೆಯು ದಿನೇ ದಿನೇ ಅಧೋಗತಿಗಿಳಿಯುತ್ತಿರುವದು.

ವಿವಾಹವಂದರೇನು ಎಂಬ ಪ್ರಶ್ನೆಯನ್ನು ಜನಸಾಮಾನ್ಯರಿಗೆ ಮಾಡಿದ ಕ್ಷಣದಲ್ಲಿ "ವರದಕ್ಷಿಣೆ, ಪಟ್ಟೆ ಪಿತಾಂಬರ ಶೀರೆ, ಆಭರಣ, ಮನೆಯಲ್ಲಿ ಸಾವಿರಾರು ಜನರಿಗೆ ಭೋಜನ, ಉತ್ಸಾಹ" ಮೊದಲಾದ ಶಬ್ದಗಳ ತಂಡೋಪತಂಡಗಳು ಹೊರಬೀಳುವವಲ್ಲದೆ ವಿವಾಹದ ಮಹತ್ವವು ಹೊರಬೀಳದು. ನಮ್ಮ ಹಿಂದುಗಳಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರಿಂದ ಹಿಡಿದು ಶೂದ್ರರ ವರೆಗೂ ಪ್ರತಿಯೊಬ್ಬ ಹೆಂಗಸೂ ವಿವಾಹವನ್ನು ಮಾಡಿಕೊಳ್ಳಲೇ ಬೇಕಾಗಿರುವದು. ಹುಡುಗಿಯು ಕುಂಟಾಗಲಿ, ಕುರುಡಿಯಾಗಲಿ, ಅವಲಕ್ಷಣದವಳಾಗಲಿ ವಿವಾಹವಾಗಿಯೇ ತೀರಬೇಕು. ಹೆಂಗಸಾದವಳು ಮುದುಕನಾಗಲೀ, ವಯೋವಂತನಾಗಲೀ, ಬಡವನಾಗಲೀ, ಐಶ್ವರ್ಯವಂತನಾಗಲೀ, ರೋಗಿಯಾಗಲೀ ಆರೋಗಿಯಾಗಲೀ ಇರುವ ಪುರುಷನನ್ನು ವಿವಾಹವಾಗಲೇಬೇಕಾದ್ದರಿಂದ ವರದಕ್ಷಿಣೆ, ಭೋಜನ ಇತ್ಯಾದಿ ಶಬ್ದಗಳೇ ವಿವಾಹದ ಗುರುತ್ವವನ್ನು ವಹಿಸಿಕೊಳ್ಳುವ ಹಾಗಾಯಿತು. ಆದರೆ ನಿಜವಾದ ವಿವಾಹವು ವರದಕ್ಷಿಣೆಯಲ್ಲ, ಪಟ್ಟೆ ಪಿತಾಂಬರ ಶೀರೆಗಳಲ್ಲ, ಆಭರಣವಲ್ಲ. ಎರಡು ವ್ಯಕ್ತಿಗಳು ಒಂದಕ್ಕೊಂದು ಸೇರುವದು. ಒಂದು ಹೊಸ ಗ್ರಹಸ್ಥಾಶ್ರಮಕ್ಕೆ ಸೇರಿ ಹೊಸ ಸಂಸಾರವನ್ನು ಹೂಡುವದು. ಈ ವಿವಾಹದಿಂದ ತಮ್ಮ ಮನೆಯವರಿಗೂ ಊರಿನವರಿಗೂ ನೆರೆಹೊರೆಯವರಿಗೂ ದೇಶಕ್ಕೂ ಮೇಲ್ಮೆಯನ್ನುಂಟುಮಾಡುವದು. ಇದು ವಿವಾಹದಿಂದುಂಟಾಗತಕ್ಕ ಫಲಿತಾಂಶವೆಂತಾದರೆ ಆ ಸಂಸಾರವನ್ನು ಹೂಡತಕ್ಕವರಿಬ್ಬರಿಗೂ ಹೆಚ್ಚಿನ ಜವಾಬ್ದಾರಿಯು ಇದೆ. ಇಂಥಾ ಜವಾಬ್ದಾರಿಯನ್ನು ಹೊರಲು ಪತಿಪತ್ನಿಯರು ಸಿದ್ಧರಾಗಬೇಕಾದರೆ ಉಭಯತರೂ ದೇಹದಾರ್ಢ್ಯ, ಬುದ್ಧಿ ಚತುರತೆ, ನೀತಿಮಾರ್ಗವನ್ನವಲಂಬಿಸಿದವರಾಗಿರಬೇಕು. ಪತ್ನಿಯು ಹೆಂಗಸಿಗೆ ಸ್ವಭಾವಿಕವಾದ ಗುಣಗಳುಳ್ಳ ಸ್ತ್ರೀಯೇ ಆಗಿರಬೇಕು. ತನ್ನ ಸುತ್ತಮುತ್ತಲಿರುವವರ ಅವಶ್ಯಕತೆಯನ್ನು ತಿಳಿದುಕೊಳ್ಳಲು ಶಕ್ತಳಾದವಳಾಗಿಯೂ ಇತರರ ಕಷ್ಟಗಳಲ್ಲಿ ಅನುತಾಪಪಟ್ಟು ಅವುಗಳಲ್ಲಿ ಭಾಗಿಯಾಗಿ ಅವರಿಗೆ ಸಮಾಧಾನ ಉಂಟುಮಾಡಿ, ಮನೆಕೆಲಸಗಳನ್ನು ತಾನಾಗಿ ಮಾಡಿ ಅವುಗಳಲ್ಲಿ ಸಂತೋಷವನ್ನೂ ಮನೋಲ್ಲಾಸವನ್ನೂ ಹೊಂದುವಂಥವಳಾಗಿರಬೇಕು. ಇಂಥಾ ಗುಣಗಣಗಳಿಂದ ಒಬ್ಬಳು ಕೂಡಿರಬೇಕಾದರೆ ಅವಳು ದೇಹದಾರ್ಢ್ಯವನ್ನೂ ಚಿತ್ತಸ್ಥೈರ್ಯವನ್ನೂ ಹೊಂದಿದವಳಾಗಿರಬೇಕು. ಶುದ್ಧವಾಗಿಯೂ ಆರೋಗ್ಯವಾಗಿಯೂ ಜೀವಿಸುತ್ತಿರಬೇಕು. ಕಾರ್ಯದುರಂಧರತೆ, ನಿದ್ರೆ, ವ್ಯಾಯಾಮ ಮತ್ತು ವಿಶ್ರಾಂತಿ ಇವುಗಳನ್ನು ಸಕಾಲದಲ್ಲಿ ನಡಿಸುತ್ತಿರಬೇಕು. ದೇಹವನ್ನು ಶುಚಿಯಾದ ಆರೋಗ್ಯವಾದ ಆಹಾರ ಪಾನಾದಿಗಳಿಂದ ಬೆಳೆಯಿಸಿ ಅದರ ಬೆಳವಣಿಗೆಗೆ ಬಾಧಕವಿಲ್ಲದ ಮತ್ತು ಆರೋಗ್ಯಕರವಾದ ಶಿಶುಗಳನ್ನು ಪ್ರಸವಿಸುವುದಕ್ಕೆ ಯೋಗ್ಯವಾದ ರೀತಿಯ ಚಂದವಾದ ಮತ್ತು ಮಿತವಾದ ಉಡುಪು ಧರಿಸುವವಳಾಗಿರಬೇಕು. ಮಿತಾನುಭವ, ಮನೋನಿಗ್ರಹ, ಮನೆಕೆಲಸದಲ್ಲಿ ಕುಶಲತ್ವ, ಮೊದಲಾದ ಗುಣಗಳಿದ್ದು ಮನೆಕೆಲಸವನ್ನು ವಿಚಕ್ಷಣೆಯಿಂದ ತಾನಾಗಿ ಮಾಡಿ ಮನೇಕೆಲಸವು ಮರ್ಯಾದೆಕರವೆಂದು ಭಾವಿಸಿ ತಾನೇ ಮಾಡಿಕೊಳ್ಳುವವಳಾಗಿರಬೇಕು. ಚಿಕ್ಕ ಮಕ್ಕಳ ಪೋಷಣೆ, ರೋಗಪೀಡಿತರ ಶೈತೋಪಚಾರ ಮೊದಲಾದ ಶಿಕ್ಷಣೆಯನ್ನು ಪಡದವಳಾಗಿರಬೇಕು. ಗಂಡನ ಹಿತಾಹಿತಗಳನ್ನು ತಿಳಿದುಕೊಂಡು ಅವಳಿಗೆ ಸಹಾಯಕಳಾಗಿರಲಿಕ್ಕೆ ಬೇಕಾದ ಗುಣಗಣಗಳು ಕೂಡಿದವಳಾಗಿರಬೇಕು. ಪುರುಷನ ಸೌಖ್ಯವೂ ದುಃಖವೂ ಹೆಂಗಸಿನಿಂದಲೇ ಉಂಟಾಗತಕ್ಕದ್ದಾಗಿದೆ. ಪುರುಷನ ಸುಖದುಃಖಗಳನ್ನು ಹೆಚ್ಚಿಸುವದಕ್ಕೂ ಕಮ್ಮಿ ಮಾಡುವದಕ್ಕೂ ಹೆಂಗಸಲ್ಲದೆ ಮತ್ತೆ ಬೇರೊಂದಿಲ್ಲ. ಈ ಸಂದರ್ಭದಲ್ಲಿ ಪತಿಗೂ ಪತ್ನಿಗೆ ಇರತಕ್ಕ ಗುಣಗಳೇ ಇರಬೇಕು. ದೇಹ ಶ್ರಮಪಟ್ಟು ಚನ್ನಾಗಿ ಕಾಯಕಷ್ಟ ಮಾಡುವಂಥವನು, ಕೇವಲ ಧನಸಂಪಾದನೆ ಮತ್ತು ಸುಖಾನ್ವೇಷಣೆ—ಇವುಗಳನ್ನು ತ್ಯಜಿಸಿ ಜನಸಾಮಾನ್ಯರ ಕ್ಷೇಮಾಸಕ್ತನಾಗಿ ಅದಕ್ಕಾಗಿ ತನ್ನ ಬುದ್ಧಿಬಲವನ್ನು ಉಪಯೋಗಿಸಿ, ತನ್ನ ಮಕ್ಕಳನು ಸರ್ವಜನಹಿತೇಚ್ಛುಗಳಾಗಿ ತರ್ಬೀತುಮಾಡ ಶಕ್ತಿಯುಳ್ಳವನು, ಶುದ್ಧವಾಗಿಯೂ ಗಂಭೀರವಾಗಿಯೂ ಜೀವಿಸುವಂಥವನು, ಶಮದಮಾದಿಗಳಿಂದ ಕೂಡಿದವನಾಗಿರಬೇಕು. ಈ ಮೊದಲಾದ ಗುಣಗಳಿಲ್ಲದ ಪತಿಪತ್ನಿಯರು ಸಂಯೋಗವಾಗುವುದಾದರೆ ಅಂಥಾದ್ದು ನಿಜವಾದ ವಿವಾಹವೆಂದೆಣಿಸಲ್ಪಡಲಿಕ್ಕಿಲ್ಲ.

ಒಂದು ದೇಶದ ಉನ್ನತೋನ್ನತಿಯು ಆ ದೇಶದ ಮಕ್ಕಳ ಮೇಲೆ ಹೊಂದಿಕೊಂಡಿರುತ್ತದೆ. ದೇಶದ ಅಭ್ಯುದಯಕ್ಕೆ ಕಾರಣಭೂತರಾದ ಮಕ್ಕಳು ದೇಶದಲ್ಲಿ ಹಬ್ಬಬೇಕಾದರೆ ಮೇಲೆ ಹೇಳಿದ ಗುಣಗಣಗಳುಳ್ಳ ಪತಿ ಪತ್ನಿಯರು ಗೃಹಸ್ಥಾಶ್ರಮನ್ನು ಸೇರಬೇಕು. ಒಂದು ದೇಶದ ಮೇಲ್ಮೆಗೆ ಗೃಹಸ್ಥಾಶ್ರಮವೇ ಕಾರಣವೆಂತಾದ ಮೇಲೆ ಪ್ರತಿ ಒಬ್ಬನು ವಿವಾಹದ ಮಹತ್ವವನ್ನರಿತುಕೊಂಡು ಸರಿಸಮಾನವಾದ ಗುಣಗಳುಳ್ಳ ಪತಿಪತ್ನಿಯರು ಸಂಯೋಗವಾಗುವಂತೆ ಪ್ರಯತ್ನಪಡುವದು ಧರ್ಮವಾಗಿದೆ. ವಿವಾಹವು ಪರಮಾತ್ಮನಿಂದ ಮನುಷ್ಯರಿಗೆ ಕೊಡಲ್ಪಟ್ಟ ಒಂದು ವರಪ್ರಧಾನವಾಗಿದೆಂದೂ ಇದೇ ಇಹಪರ ಸಾಧನಗಳ ಕರಣವಾಗಿದೆಂದೂ ಯಾರು ನಂಬಿ ವಿವಾಹವನ್ನು ಮಾಡಿಕೊಳ್ಳುತ್ತಾನೋ ಆ ವಿವಾಹವು ನಿಜವಾದ ವಿವಾಹವೆಂದೆಣಿಸಲ್ಪಟ್ಟು ತನ್ನ ಕುಟುಂಬದ, ದೇಶದ, ಜನಾಂಗದ ಉನ್ನತೋನ್ನತಿಯ ಸಾಧನವಾಗುವದು.

S. A.

ಬಾಳೆಹಣ್ಣು.

ಬಾಳೆಹಣ್ಣಿನಲ್ಲಿ ಅವಶ್ಯಕವಾದ ಆಹಾರ ಪದಾರ್ಥಗಳೆಲ್ಲವೂ ಕೂಡಿರುತ್ತವೆ. ಇದು ಬಹಳ ಪುಷ್ಟಿಕರವಾದ ಆಹಾರವಾಗಿದೆ. ಮತ್ತು ಇದು ಇತರ ಯಾವ ವಿಧವಾದ ಆಹಾರಗಳಿಗಿಂತಲೂ ಬಹಳ ಜಾಗ್ರತೆಯಾಗಿ ಅಂದರೆ ಸುಮಾರು ೧॥ ಘಂಟೆ ಕಾಲದೊಳಗಾಗಿ ಜೀರ್ಣವಾಗುತ್ತದೆ. ಅಲ್ಲದೆ ಇದಕ್ಕೆ ಬಹಳ ದಪ್ಪನಾದ ಶಿಪ್ಪೆಯಿರುವುದರಿಂದ ಯಾವ ವಿಧವಾದ ಸೊಂಕೂ ತಗಲುವುದಿಲ್ಲ. ಸೇಬಿನ ಹಣ್ಣಿನ ಸಿಪ್ಪೆಯನ್ನು ತಿನ್ನುವಂತೆ ಇದರ ಸಿಪ್ಪೆಯನ್ನು ತಿನ್ನಲಾಗುವುದಿಲ್ಲವಾದ್ದರಿಂದ ಈ ಹಣ್ಣನ್ನು ತಿನ್ನುವುದರಿಂದ ಇತರ ಹಣ್ಣುಗಳನ್ನು ತಿನ್ನುವುದರಿಂದ ಶರೀರಕ್ಕೆ ಸೇರಬಹುದಾದ ಕೊಳೆ ಮತ್ತು ಕ್ರಿಮಿಗಳ ಭಯವಿರುವುದಿಲ್ಲ. ಈ ಹಣ್ಣಿನ ವಿಷಯವಾಗಿ ಒಬ್ಬ ಪ್ರಸಿದ್ಧರಾದ ಇಂಗ್ಲಿಷು ವೈದ್ಯರು ಹೇಳಿರುವುದೇನಂದರೆ:—"ನಮ್ಮ ಪಾಠಶಾಲೆಗಳಲ್ಲಿರುವ ಹುಡುಗರು ಆಗಾಗ್ಯೆ ಬಾಳೆಹಣ್ಣನ್ನು ತಿನ್ನಬೇಕೆಂಬುದೇ ನನ್ನ ಅಪೇಕ್ಷೆ. ಈ ಹಣ್ಣಿನಲ್ಲಿ ಪುಷ್ಟಿಕರವಾದ ಪದಾರ್ಥಗಳೆಲ್ಲವೂ ಸೇರಿರುತ್ತವೆ. ನಮ್ಮ ನಿತ್ಯಗಟ್ಲೆಯ ಆಹಾರದೊಡನೆ ಈ ಹಣ್ಣನ್ನು ಒಂದಾಗಿ ಇಟ್ಟುಕೊಳ್ಳುವುದು ಬಹಳ ಪ್ರಯೋಜನಕರವಾದದ್ದಾಗಿದೆ."

ಬಾಳೇಹಣ್ಣಿನ ಹಿಟ್ಟು:—ಬಾಳೆಕಾಯಿಯು ಹಣ್ಣಾಗಲು ಆರಂಭವಾಗುವುದಕ್ಕೆ ಅಂದರೆ ಪಿಷ್ಟಾಂಶವು ಸಕ್ಕರೆಯಾಗುವುದಕ್ಕೆ ಮೊದಲು ಕಾಯಿಗಳನ್ನು ಕಿತ್ತು ಕುದಿಯುತ್ತಿರುವ ನೀರಿನಲ್ಲಿ ೫ ನಿಮಿಷಗಳಕಾಲ ಹಾಕಿದರೆ ಸಿಪ್ಪೆಯನ್ನು ಸುಲಭವಾಗಿ ಒಡೆದುಹಾಕಬಹುದು. ನಂತರ ಅದನ್ನು ಸಣ್ಣನಾದ ಹೋಳುಗಳನ್ನಾಗಿ ಮಾಡಿ ಬಿಸಲಿನಲ್ಲಿ ಚನ್ನಾಗಿ ಒಣಗಿಸಬೇಕು. ಹೋಳುಗಳಾಗಿ ಕತ್ತರಿಸಲು ಉಕ್ಕಿನ ಚೂರಿಗಳನ್ನು ಖಂಡಿತವಾಗಿಯೂ ಉಪಯೋಗಿಸಬಾರದು. ಆದರೆ ನಿಕ್ಕಲಿನ ಚೂರಿಯನ್ನು ಧಾರಾಳವಾಗಿ ಉಪಯೋಗಿಸಬಹುದು. ನಂತರ ಇದನ್ನು ಹಿಟ್ಟಿನಂತೆ ಪುಡಿಮಾಡಿ ಮಾರಬಹುದು. ಹಿಟ್ಟನ್ನು ಒಳಭಾಗಕ್ಕೆಲ್ಲಾ ಕಾಗದವು ಅಂಟಿಸಲ್ಪಟ್ಟ ಪೆಟ್ಟಿಗೆಯಲ್ಲಿ ತುಂಬಿಡಬಹುದು. ಈ ಹಿಟ್ಟು ಆಗತಾನೆ ಕೊಯಲ್ಪಟ್ಟ ಬಾಳೆಹಣ್ಣಿನ ವಾಸನೆಯುಳ್ಳದ್ದಾಗಿರುವುದಲ್ಲದೆ ಬಹಳ ಮಧುರವಾಗಿಯೂ ಇರುವುದು. ಈ ಹಿಟ್ಟಿನಿಂದ ಬಿಸ್ಕತ್ತನ್ನೂ ಮತ್ತು ಗೋಧಿಹಿಟ್ಟಿನೊಡನೆ ಬೆರಸಿ ರೊಟ್ಟಿಯನ್ನೂ ತಯಾರಿಸಬಹುದು.

ರೆ. ಗೆ.

ದರಬಾರು ಇನಾಮು ಪರೀಕ್ಷೆ, ಪುತ್ತೂರು.

ಈ ಪರೀಕ್ಷೆಯು ಈ ತಿಂಗಳ ಪ್ರಥಮ ವಾರದಲ್ಲಿ ಆಗುವದೆಂತ ಮೊದಲು ಪ್ರಕಟಿಸೋಣಾಗಿತ್ತು. ಆದರೆ ಪರೀಕ್ಷೆಗೆ ಸ್ಪರ್ಧಿಸಲು ಅರ್ಜಿಗಳು ತಕ್ಕ ಸಮಯದಲ್ಲಿ ನಮ್ಮ ಕೈಸೇರದೆ ಇದ್ದದರಿಂದ ಇದುವರೇಗೆ ಪರೀಕ್ಷೆಗೆ ದಿವಸ ನಿರ್ಣಯಿಸಲು ಅನುಕೂಲವಾಗಲಿಲ್ಲ. ೧೬ ಶಾಲೆಗಳಿಂದ ಮಾತ್ರ ಅರ್ಜಿಗಳು ಬಂದವೆ. ಸ್ಪರ್ಧಿಸುವ ವಿಧ್ಯಾರ್ಥಿಗಳ ಸಂಖ್ಯೆಯು ಬಹಳ ಕಡಿಮೆ. ಹೀಗಾಗಿ ಮೊದಲು ಪ್ರಕಟಿಸಿದಂತೆ ಎಲ್ಲಾ ಸ್ಥಳಗಳಲ್ಲಿ ಪರೀಕ್ಷೆ ನಡಿಸುವ ಅಗತ್ಯ ತೋರುವದಿಲ್ಲ.

ಆದುದರಿಂದ ಇದೇ ಬರುವ ನವಂಬರ ತಾರೀಕು ೨೬ನೇ ಮಂಗಳವಾರ ಪೂರ್ವಾಹ್ನ ೧೦ ಘಂಟೆಗೆ ಪುತ್ತೂರು, ವಿಟ್ಲ, ಪಂಜ—ಈ ೩ ಮೊಕ್ಕಾಂಗಳಲ್ಲಿ ಬೋರ್ಡ ಶಾಲಾ ಕಟ್ಟೋಣಗಳಲ್ಲಿ ಪರೀಕ್ಷೆಯು ಜರಗುವದು. ಅರ್ಜಿಗಳು ಕಳುಹಿಸಿದ ಶಾಲಾ ಮಾಸ್ತರುಗಳು ವಿದ್ಯಾರ್ಥಿಗಳನ್ನು ಆಯಾಯ ಮೊಕ್ಕಾಂಗಳಲ್ಲಿ ಪರೀಕ್ಷೆಗೆ ತಕ್ಕ ಸಮಯದಲ್ಲಿ ಹಾಜರಾಗುವಂತೆ ದಯಮಾಡಿ ವಿಲೆವಾರಿ ಮಾಡಬೇಕಾಗಿ ಅಪೇಕ್ಷಿಸುತ್ತೇವೆ. ವಿದ್ಯಾರ್ಥಿಗಳು ಬರುತ್ತಾ ಕಾಗದ ಮುಂತಾದ್ದನ್ನು ತಾವೇ ಒದಗಿಸಿಕೊಳ್ಳಬೇಕೆಂಬದು ನೆನಪಿರಲಿ.

ಪುತ್ತೂರು.
ತಾ. 12-11-1912.

ಕೇಯೂರ ಸುಬ್ಬರಾವ್,
ಮೊಳಹಳ್ಳಿ ಶಿವರಾವ್,
ಕಾರ್ಯದರ್ಶಿಗಳು,
ಪುತ್ತೂರು ವರ್ಗದಾರರ ಸಂಘ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ

ಕಾರ್ಕಳ ತಾಲೂಕು ಆಫೀಸು.

ಅಯ್ಯಾ ಪತ್ರಾಧಿಪರೇ,

ಮೂಡಬಿದ್ರೆ ತಾಲೂಕು ಆಫೀಸು ಹ್ಯಾಗೂ ಕಾರ್ಕಳ ತಾಲೂಕಾಫೀಸಾಯಿತೆಂತ ಸಂತೋಷಪಟ್ಟೆವು. ಕಾರ್ಕಳದವರೆಲ್ಲರ ಐಕ್ಯಸಾಧನೆಯಿಂದ ಇದು ನೆರವೇರಿತು. ಕಾರ್ಕಳ ತಾಲೂಕಾಫೀಸನ್ನು ಎಲ್ಲಿ ಕಟ್ಟಿಸಬೇಕೆಂಬ ವಿಷಯ ಭಿನ್ನಾಭಿಪ್ರಾಯವು ಉಂಟಾಗಿದೆ. ಕಾರ್ಕಳ ಮುನ್ಸಿಫ ಕೋರ್ಟಿನ ಸಮೀಪ ತಾಲೂಕಾಫೀಸನ್ನು ಕಟ್ಟಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟಿರುವರು. ಕಾರ್ಕಳ ವೆಂಕಟರಮಣ ದೇವಸ್ಥಾನ ದಾಟಿ ಕುಕ್ಕುಂದೂರು ಅತ್ತಕಡೆ ತಾಲೂಕಾಫೀಸನ್ನು ಕಟ್ಟಿಸಬೇಕೆಂತ ಇನ್ನು ಕೆಲವರ ಅಭಿಪ್ರಾಯ. ಹೀಗಿದ್ದು ಕಾರ್ಕಳ ತಾಲೂಕಾಫೀಸು ಎಲ್ಲಿ ಕಟ್ಟಿಸಬೇಕೆಂಬ ವಿಷಯ ಇನ್ನೂ ನಿರ್ಣಯಿಸಲ್ಪಡಲಿಲ್ಲ.

ಕಾರ್ಕಳ ತಾಲೂಕು ಆಫೀಸು ಕಟ್ಟಡದ ಆಲೋಚನೆಯು ಈ ರೀತಿ ನಡಿಯುತ್ತಿರುವಾಗ ಕಾರ್ಕಳ ತಾಲೂಕನ್ನು ಮಂಗಳೂರು ಡಿವಿಜನಿಗೆ ಸೇರಿಸಬೇಕೆಂಬ ಪ್ರಸ್ತಾಪವು ಎದ್ದಿರುವದೆಂದು ತಿಳಿಯುತ್ತೇವೆ. ಈ ಪ್ರಸ್ತಾಪವು ಸಹ ಸಮಯೋಚಿತವಾದದ್ದೇ.

ಸಾವಿರಕಟ್ಟಳೆಯಲ್ಲಿ ಹಣ ಖರ್ಚು ಮಾಡಿ ಸರಕಾರದವರು ಆಫೀಸುಗಳನ್ನು ಕಟ್ಟಿಸುವಾಗ ಕಕ್ಷಿಗಾರರ ಅನುಕೂಲತೆಗಾಗಿ ಅದನ್ನು ತಾವು ಹೇಳಿದ್ದಲ್ಲಿ ಕಟ್ಟಿಸಬೆಕೆಂಬ ವಕೀಲರ ಸೂಚನೆಯೊಂದನ್ನೇ ಲಕ್ಷ್ಯಕ್ಕೆ ತಂದುಕೊಂಡು ಅವರ ಸೂಚನೆ ಪ್ರಕಾರ ಆಫೀಸುಗಳನ್ನು ಕಟ್ಟಿಸುವದು ಯುಕ್ತವಲ್ಲ. ಊರಿನ ಇತರ ವಿದ್ಯಮಾನಗಳನ್ನು ಸಹ ಸರಕಾರದವರು ತಿಳಕೊಂಡೇ ಸರಕಾರಿ ಕಟ್ಟೋಣಗಳನ್ನು ಕಟ್ಟಿಸಬೇಕಾಗಿರುತ್ತದೆ. ಕಾರ್ಕಳ ಪಟ್ಟಣ ಅಂದರೆ ಪ್ರಕೃತ ಇಕ್ಕಡೆಗಳಲ್ಲಿ ಕೆಲವು ಮನೆ ಮತ್ತು ಅಂಗಡಿಗಳಿರುವ ಒಂದು ಸಣ್ಣ ಮಾರ್ಗದ ವಿನಹ ಮತ್ತ್ಯಾವದೂ ಇಲ್ಲ. ಇಂಥಾ ಪಟ್ಟಣವನ್ನು ದೊಡ್ಡದಾಗಿಯೂ ಆರೋಗ್ಯಕರವಾಗಿಯೂ ಮಾಡಬೇಕಾಗಿರುವದು. ಈ ಕಾರಣದಿಂದ ತಾಲೂಕು ಆಫೀಸನ್ನು ಈಗಿನ ಪಟ್ಟಣದ ಹೊರಪ್ರಾಂತ್ಯದಲ್ಲಿಯೇ ಇರಿಸುವದು ಯುಕ್ತವಾಗಿರುವದು. ರಾಮಸಮುದ್ರದ ಮತ್ತು ಮುನ್ಸೀಫ ಕೋರ್ಟಿನ ಸಮೀಪ ಇದನ್ನು ಕಟ್ಟಿಸುವದು ಯುಕ್ತವಲ್ಲ. ಯಾಕಂದರೆ ಈ ಸ್ಥಳವು ಮಿಲಿಟರಿ ಸರ್ವೆ ಪ್ರಕಾರ ಪ್ರತ್ಯೇಕಿಸಿಡಲ್ಪಟ್ಟಿರುವುದು. ಅದಲ್ಲದೆ ರಾಮಸಮುದ್ರದತ್ತಕಡೆ ದೊಡ್ಡ ಕಾಡು ಸಹ ಇರುವದರಿಂದ ತಾಲೂಕಾಫೀಸು ಅಲ್ಲಿ ಕಟ್ಟಿಸಿದ್ದಲ್ಲಿ ಪಟ್ಟಣ ವಿಸ್ತಾರವಾಗುವದಕ್ಕೆ ಉಪಾಯವಿಲ್ಲ. ವಕೀಲರ ಅನುಕೂಲತೆಯೊಂದನ್ನೇ ಗ್ರಹಿಸಿಕೊಂಡು ಮುನ್ಸೀಫ ಕೋರ್ಟಿನ ಹತ್ತರ ತಾಲೂಕು ಆಫೀಸನ್ನು ಕಟ್ಟಿಸುವದು ಯೋಗ್ಯವಲ್ಲ. ಕುಕ್ಕುಂದೂರ ಪ್ರಾಂತ್ಯದಲ್ಲಿ ಸಹ ಇದನ್ನು ಇರಗೊಡಿಸುವದು ಉಚಿತವಲ್ಲ. ಯಾಕಂದರೆ ಕಾರ್ಕಳ ತಾಲೂಕು ಆಫೀಸಿನ ಚೆಕ್‌ಬಂದಿಗೆ ಸೇರಿದ ಗ್ರಾಮಸ್ಥರಿಗೆ ಆಗಿಂದಾಗ್ಯೆ ಬರಲು ಇದು ಯೋಗ್ಯ ಸ್ಥಳವಲ್ಲ. ಅದಲ್ಲದೆ ಈ ಪ್ರಾಂತ್ಯದಲ್ಲಿ ಪಟ್ಟಣವು ಬೆಳಿಯುವುದರಿಂದ ಈಗಿನ ಕಾರ್ಕಳ ಪಟ್ಟಣಕ್ಕೆ ಪ್ರಯೋಜನವಿರದು. ಹೀಗೆ ಈ ಎರಡು ಸ್ಥಳಗಳು ತಾಲೂಕು ಆಫೀಸು ಕಟ್ಟಲಿಕ್ಕೆ ಯೋಗ್ಯವಲ್ಲವೆಂಬುದು ನಮ್ಮ ಅಭಿಪ್ರಾಯ.

ಮೂಡಬಿದ್ರೆಯಿಂದ ತಾಲೂಕು ಆಫೀಸನ್ನು ತೆಗೆದುಹಾಕಿದ್ದರಿಂದ ಆ ಪ್ರಾಂತ್ಯದ ನಿವಾಸಿಕರಲ್ಲಿ ಬಹಳ ನಿರಾಶೆಯು ಉಂಟಾಗಿರುವದು. ಹಲವು ವರುಷಗಳಿಂದ ತಾಲೂಕು ಆಫೀಸು ಮೂಡಬಿದ್ರೆಯಲ್ಲಿ ಸ್ಥಾಪಿಸಲ್ಪಡುವದೆಂದು ಹೆಚ್ಚಿನ ಆಶೆಯಲ್ಲಿದ್ದ ಜನರೆಲ್ಲರು ಆಶಾಭಂಗರಾಗಿರುವರು. ಈ ವಿದ್ಯಮಾನಗಳಲ್ಲಿ ಮೂಡಬಿದ್ರೆ ನಿವಾಸಿಕ

ರಲ್ಲಿ ತೃಪ್ತಿಯುಂಟಾಗುವಂತೆಯೂ ಕಾರ್ಕಳ ಪಟ್ಟಣವು ವಿಸ್ತಾರವಾಗಿ ಬೆಳಿಯುವರೆ ಅಸ್ಪದ ದೊರಕುವಂತೆಯೂ ತಕ್ಕ ಸ್ಥಳವನ್ನು ಆರಿಸಿ ಅಲ್ಲಿ ಆಫೀಸನ್ನು ಕಟ್ಟಿಸಬೇಕೆಂಬದೇ ನಮ್ಮ ಸೂಚನೆಯಾಗಿರುತ್ತದೆ. ಕಾರ್ಕಳದಿಂದ ಮೂಡಬಿದ್ರೆಯು ಹತ್ತು ಮೈಲುಗಳ ದೂರದಲ್ಲಿರುವುದು. ಮೂಲ್ಕಿ ಮತ್ತು ಮೂಡಬಿದ್ರೆ ಮಾರ್ಗಗಳು ಕಾರ್ಕಳದಲ್ಲಿ ಬಂದು ಕೂಡುವ ಸ್ಥಳದಿಂದ ಮಣ್ಣಪ್ಪು ಪ್ರಾಂತ್ಯದತ್ತಕಡೆಯಲ್ಲಿ ಹೊಸ ಆಫೀಸನ್ನು ಕಟ್ಟಿಸಿದರೆ ಅನುಕೂಲವಾಗಬಹುದು. ಈ ಪ್ರಾಂತ್ಯದಲ್ಲಿರುವ ಆಫೀಸು ಮೂಡಬಿದ್ರೆಯತ್ತಕಡೆಯವರಿಗೆ ಹತ್ತಿರವಾಗುವದಲ್ಲದೆ ಕಾರ್ಕಳ ಪಟ್ಟಣವು ಸಹ ಯೋಗ್ಯರೀತಿಯಲ್ಲಿ ವಿಸ್ತಾರವಾಗುವರೆ ಉಪಾಯ ದೊರಕುವದು.

ಕಾರ್ಕಳ ತಾಲೂಕನ್ನು ಕುಂದಾಪುರ ಡಿವಿಜನಿಗೆ ಸೇರಿಸಿದ್ದರಿಂದ ಉಂಟಾದ ಅನಾನುಕೂಲತೆಗಳು ಒಂದೊಂದಾಗಿಯೇ ಆಫೀಸರರ ಅನುಭವಕ್ಕೆ ಬರುತ್ತಿರುವವೆಂದು ಕೇಳುತ್ತೇವೆ. ಈ ಪ್ರಾಂತ್ಯದಲ್ಲಿ ಪ್ರಕೃತ ಜಾರಿಯಲ್ಲಿರುವ ಪೋಲೀಸು ಇಲಾಖೆಯ ಚಕಬಂದಿಗಳು, ಮೆಜಿಸ್ತ್ರೇಟ ಇಲಾಖೆಯ ಆಡಳಿತೆಯ ಅಡಚಣೆಗಳು ಈಗ ಪ್ರತ್ಯಕ್ಷವಾಗಿವೆ. ಕುಂದಾಪುರ ಡಿವಿಜನ್ ಮೆಜಿಸ್ತ್ರೇಟರಿಂದ ಹೊಸ ಕಾರ್ಕಳ ತಾಲೂಕಿಗೆ ಸೇರಿರುವ ಗ್ರಾಮಗಳಲ್ಲಿ ಸರಿಯಾದ ಮೇಲ್ವಿಚಾರವನ್ನು ನಡಿಸುವುದು ಸಾಧ್ಯವಲ್ಲ. ಈ ಡಿವಿಜನಿನ ರೆವಿನ್ಯೂ ಇಲಾಖೆಯಲ್ಲಿ ಸಹ ಇಂಥಾ ಅಡಚಣೆಗಳು ಇನ್ನು ಬೇಗನೆ ಆಫೀಸರರಿಗೆ ಕಾಣಬಾರದೆ ಇರವು. ಆದ್ದರಿಂದ ಹೊಸ ತಾಲೂಕು ಆಫೀಸಿನ ಕಟ್ಟಡವನ್ನು ಕಟ್ಟಿಸುವಾಗ ಈ ವಿಷಯಕ್ಕೆ ಸಹ ಸರಕಾರದವರು ಲಕ್ಷ್ಯಕೊಡಬೇಕಾಗಿರುವದು.

ಇತಿ
ಕಾರ್ಕಳ ನಿವಾಸಿ.

* * *

ಅಯ್ಯಾ

ಈ ಕೆಳಗಿನ ವಿಜ್ಞಾಪನೆಯನ್ನು ತಮ್ಮ ಪತ್ರದಲ್ಲಿ ಪ್ರಕಟಿಸಬೇಕಾಗಿ ಬೇಡಿಕೊಳ್ಳುತ್ತೇನೆ:—

ಕಾಶೀ ಮಠದ ಶ್ರೀಮತ್ ವರದೇಂದ್ರ ತೀರ್ಥಸ್ವಾಮಿಯರಿಗೊಂದು ವಿಜ್ಞಾಪನೆಯು:—

ಶ್ರೀಯವರು ನಮ್ಮ ಜಿಲ್ಲೆಗೆ ಬಂದಂದಿನಿಂದ ಆರೋಗ್ಯವನ್ನು ಪಡಿಯುತ್ತಿರುವರೆಂಬದನ್ನು ಕೇಳಲು ಸಂತೋಷಪಡುತ್ತೇನೆ. ಶ್ರೀಯವರ ಮಠವನ್ನು ಸೇರಿರುವ ಶಿಷ್ಯವರ್ಗದವರಿಗೆ ಕಳದ ಒಂದೆರಡು ವರುಷಗಳಿಂದ ಪ್ರಾಪ್ತವಾಗಿರುವ ಅಪದೆಶೆಯನ್ನು ಶ್ರೀಯವರು ತಿಳಿದಿರಲು ಸಾಕು. ಪರಿಷದಗಳೆಂಬ ಮಹಾಸಭೆಯಿಂದ ಉಂಟಾದ ವಿಶೇಷ ಪ್ರಯೋಜನಗಳೊಂದಿಗೆ ಕೆಲವು ಹಾನಿಯೂ ಕಾಶೀಮಠವನ್ನು ಸೇರಿದವರಲ್ಲಿ ಉಂಟಾಗಿರುವುದು. ಈ ಹಾನಿಯಿಂದ ಮುಲ್ಕಿ ಶ್ರೀ ವೆಂಕಟರಮಣ ದೇವರ ಭಂಡಾರದಿಂದ ಈ ತನಕ ಐದಾರು ಸಾವಿರ ರೂಪಾಯಿಗಳೂ ರಾ॥ ಬಂಗ್ಲೆಕಾರರ ಐದಾರು ಸಾವಿರ ರೂಪಾಯಿಗಳೂ ಅಂದರೆ ಕಾಶೀಮಠದ ಶಿಷ್ಯವರ್ಗದವರಿಗೆ ಒಟ್ಟಾರೆಯಲ್ಲಿ ಹತ್ತು ಯಾ ಹದಿನೆರಡು ಸಾವಿರ ರೂಪಾಯಿಗಳ ನಷ್ಟವು ಉಂಟಾಗಬಹುದೆಂಬ ಸಂಗತಿಯು ಶ್ರೀ ಸ್ವಾಮಿಯವರಿಗೆ ವಿದಿತವಾಗಿರಲು ಸಾಕು. ಇಷ್ಟಲ್ಲದೆ ಈ ನ್ಯಾಯದಿಂದ ಒಂದೇ ಮಠವನ್ನು ಸೇರಿರುವವರಲ್ಲಿ ಹಲವು ತಂಡಗಳುಂಟಾಗಿ ಇನ್ನೂ ದುಸ್ಸಾಧನೆಗಳು ಹೆಚ್ಚುವ ಸಂಭವಗಳು ಅಧಿಕವಾಗುತ್ತಲಿವೆ. ಹಿಂದೆ 'ಜಾತಿಯ ನ್ಯಾಯ'ದ ಸಾಧನೆಗಳಿಂದ ಎಷ್ಟು ಮನೆಗಳು ಅಳಿದುಹೋದವು, ಎಂಥಾ ಅನರ್ಥಗಳುಂಟಾದವೆಂಬದರೆಲ್ಲರ ಅನುಭವವು ಶ್ರೀಯವರ ಚಿತ್ತಕ್ಕೆ ಗೊತ್ತಿಲ್ಲದ ವಿಷಯವಲ್ಲ. ಹೀಗಿರುತ್ತಾ ಶ್ರೀ ಪಾದಂಗಳವರು ಈ ಜಿಲ್ಲೆಯನ್ನು ಬಿಟ್ಟುಹೋಗುವ ಮೊದಲೇ ಸಾಧ್ಯವಾಗುವ ರೀತಿಯಲ್ಲಿ ತಿರಿಗೊಮ್ಮೆ ಎದ್ದಿರುವ 'ಜಾತಿ ನ್ಯಾಯ'ವನ್ನು ತೀರಿಸಿಬಿಡುವ ಪ್ರಯತ್ನಮಾಡುವುದು ಶಿಷ್ಯವರ್ಗದ ಕ್ಷೇಮವನ್ನು ಸಾಧಿಸುವ ಶ್ರೀ ಪಾದಂಗಳವರ ಕರ್ತವ್ಯವಾಗಿರಬೇಕೆಂಬದಾಗಿ ನಾನು ಇಲ್ಲಿ ಪ್ರತ್ಯೇಕವಾಗಿ ಸೂಚಿಸಬೇಕೆಂತಿಲ್ಲ. ತಮ್ಮ ಹೊರತು ಪರಿಷದಗಳು ಏರ್ಪಡಿಸಲ್ಪಟ್ಟವಾದ್ದರಿಂದ ಪರಿಷದದಿಂದ ಉಂಟಾದ ಫಲಕ್ಕೆ ತಾವು ಜವಾಬ್ದಾರರಲ್ಲವೆಂಬುವ ಭಾವವನ್ನು ಶ್ರೀಯವರು ಮನಸ್ಸಿಗೆ ತಂದುಕೊಳ್ಳಲು ಆಸ್ಪದವಿರಬಹುದು. ಆದರೆ ಮುಲ್ಕಿಯಲ್ಲಿ ಎದ್ದಿರುವ ನ್ಯಾಯಕ್ಕೂ ಪರಿಷದಕ್ಕೂ ಎಷ್ಟರಮಟ್ಟಿನ ಸಂಬಂಧವಿರುವುದೆಂಬುದನ್ನು ವಿಷದಪಡಿಸುವ ಕಾಲವು ಈಗ ಉಚಿತವಲ್ಲ. ಕೋರ್ಟಿನಲ್ಲಿ ಈ ವಿಷಯಗಳ ವ್ಯವಹರಣೆಗಳು ನಡಿಯುತ್ತಿರುವದರಿಂದ ಈ ವಿಷಯವನ್ನು ವಿಸ್ತಾರವಾಗಿ ಪ್ರಸ್ತಾಪಿಸುವರೆ ಉಪಾಯವಿರದು. ಶ್ರೀ ಪಾದಂಗಳವರೇ ಸರಿಯಾಗಿ ಪರ್ಯಾಲೋಚಿಸಿದ್ದಲ್ಲಿ ಪ್ರಕೃತ ನ್ಯಾಯದ ಅಂತರಂಗವನ್ನು ತಿಳಿಯಬಹುದು. ಹ್ಯಾಗೂ ಸರಕಾರದ ಕೋರ್ಟು ದ್ವಾರಗಳನ್ನು ಸೇರಿದ ನ್ಯಾಯದಲ್ಲಿ ಶ್ರೀಪಾದಂಗಳವರು ಪ್ರವೇಶವಾಗಬೇಕೆಂಬದು ನನ್ನ ವಿಜ್ಞಾಪನೆಯಲ್ಲ. ಈ ನ್ಯಾಯವನ್ನು ಮುಲ್ಕಿಯಲ್ಲಿ ಚನ್ನಾಗಿ ಬೆಳಸಬೇಕೆಂದು ಕೆಲವರ ಮನಸ್ಸಿನಲ್ಲಿ ನಾಟಿರುವುದು. ಇಂಥವರು ಇತ್ತಲಾಗೆ ಜಾತಿನ್ಯಾಯದ ಮತ್ತೊಂದು ಸಾಧನೆಯನ್ನು ಅಧಿಕವಾಗಿ ಮಾಡಬೇಕೆಂದು ನಿರ್ಣಯಿಸಿರುತ್ತಾರೆ. ಹೀಗೆಮಾಡಲು ಬಿಡುವದು ಶ್ರೀಪಾದಂಗಳವರಿಗಾಗಲಿ ಕಾಶೀಮಠದ ಶಿಷ್ಯ ವರ್ಗಕ್ಕಾಗಲಿ ಕ್ಷೇಮಕರವಲ್ಲದ್ದರಿಂದ ಜಾತಿ ನ್ಯಾಯದ ಈ ಅಧಿಕ ಸಾಧನೆಯು ಆಗದಂತೆ ಮಾಡುವದು ಶ್ರೀ ಪಾದಂಗಳವರ ಕೈಸೇರಿರುವದು. ಶ್ರೀ ಪಾದಂಗಳವರಿಗೆ ಈ ವಿಷಯ ಹೆಚ್ಚಿಗೆ ಬರಕೊಳ್ಳಲು ಶಕ್ತನಲ್ಲನಾದ್ದರಿಂದ ಶ್ರೀಯವರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ ಈ ವಿಜ್ಞಾಪನೆಯನ್ನು ಇಲ್ಲಿಗೆ ಸಮಾಪ್ತಗೊಳಿಸಿರುವೆನು.

ಕಾಶೀಮಠದ ಶಿಷ್ಯರಲ್ಲೊಬ್ಬ.

* * *

ಅಯ್ಯಾ ಪತ್ರ ಸಂಪಾದಕರೇ,

ತಮ್ಮ ಮರಟೆ ಹಲ್ಲಯ್ಯನವರು ಒಂದೇ ಬಾರಿ ಒಂದು ದರ್ಜನು ಸಲಾಮೋ, ನಮಸ್ಕಾರವೋ ಯೋಗ್ಯವಾದುದನ್ನು ನನ್ನಿಂದ ಪಾವತಿ ಪಡೆದು ರಶೀದಿ ಕೊಡಲಿ. ಅವರಿಗೆ ಲಟಭಂಗಿ ಸಾಹೇಬರು ಒಂದು ಅಮಾವಾಸ್ಯೆ ಸಿಕ್ಕಿದರು; ತೋಫಿನಿಂದ ಸಾಹೇಬರ ಸವಾರಿ ಈ ದೀಪಾವಳಿ ಅಮಾವಾಸ್ಯೆ ಹಗಲಲ್ಲೇ ನನಗೆ ದೊರಕಿತು! ತೋಫಿಗೆ ಕಪ್ಪು ಬೆಳೆದು ಸಾಹೇಬರಿಗೆ ಎಂದೆಂದಿಗೂ ಅಮಾವಾಸ್ಯೆಯಂತಾಗಿ, ಈಗ ಅವರು ಹಗಲೂ ರಾತ್ರಿಯೂ ಅವರಂತಹರಿಗೆ ಮಾತ್ರ ಗೋಚರಿಸುತ್ತಾರೆ. ನನ್ನನ್ನು ಕಂಡೊಡನೆಯೆ ಮಹಾಶ್ರದ್ಧೆಯಿಂದ ನಾನು ಗಡ್ಡ ಮೀಸೆ ಬೋಳಿಸಬೇಕೆಂತಲೂ, ಗಿಡ್ಡ ಇಜಾರು ಸಿಕ್ಕಿಸಬೇಕೆಂತಲೂ ನನ್ನನ್ನು ಬೋಧಿಸಿದರು. ಕಾರಣವಾದರೋ ಒಂದೆರಡು ದಿನದ ಮೊದಲು ಪಂದ್ಯದಲ್ಲಿ ಯಾರೋ ತಾವು ಎಳೆಯಪ್ರಾಯದವರಂತೆ ಕಾಣಿಸಲು ಮಾಡಿದ ವಿಲೆವಾರಿ ಇಷ್ಟೆ ಇತ್ತಂತೆ ಎಂತಲೂ, ಈ ಹೊಸ ಉಪಾಯಕ್ಕೆ ನಾನು ಒಪ್ಪಿದರೆ, ನಿಮ್ಮಾಣೆ, ನಾನು ಹುಡುಗನೆಂದು ಪ್ರಮಾಣ ಮಾಡಿ ಪಂದ್ಯದಲ್ಲಿ ಮಡಲು ಹೊರಬಹುದಿತ್ತೆಂತಲೂ(ಆದರೆ ಜಾತಿಯಲ್ಲಿ "ಯುರೇಶಿಯನ"ನೆಂದು ಹೇಳಿರಬೇಕಿತ್ತೆಂತಲೂ) ನನಗೆ ಗುಟ್ಟು ಗುಣುಗುಣು ಹೇಳಿದರು. ಇದಲ್ಲದೆ ಸಾಹೇಬರು—ಮರಟೆ ಹಲ್ಲಯ್ಯನವರು ಹ್ಯಾಗೂ ಇವರು ಕಂಗಲೂರ ಪ್ರೇತಪುರದ ಮುನಿಸಿಪಾಲಿಟಿಯ ಅಧ್ಯಕ್ಷರೆಂದು ಸಾರಿರುವರು,—ಇನ್ನೊಂದು ಅತಿ ಸೂಕ್ಷ್ಮ ಗುಟ್ಟು ತಿಳಿಸಿದರು. ಬರೆಯಲೋ ಬೇಡವೋ? ಓಡ್ಯಾಟಗಳಲ್ಲಿ ಕಡೆಯವನಾದರೆ, ಅವನನ್ನು ಗೆದ್ದವನೆಂತ ಎಣಿಸಿಕೊಳ್ಳುತ್ತಾರೆಂತಲೂ, ಮತ್ತು ಸಾಹೇಬರೂ ನಾನೂ ಒಮ್ಮೆ, ಓಡಬಹುದೆಂತಲೂ ಹೇಳಿದರು. ಡೇರೆಯಲ್ಲಿ ಈ ಸಮಯ ಹಲವು ಕುರ್ಚಿಗಳೂ, ೩-೪ ಕಪ್ಪುಗಳೂ ಇದ್ದವು. ಕುರ್ಚಿಗೆ ಆಣೆ ಟಕ್ಕಾರ ಹಾಕಿದರು. ನನಗಿಂತಲೂ ಟಕ್ಕಾರಿನವರು ಇದ್ದಾರೆ. ಕ್ರಿಕೆಟಿನವರಿಗೆ ಕಪ್ಪು ಕೊಡುವುದನ್ನು ನೋಡಲು ನಾನೂ ಸಾಹೇಬರೂ ಕುತೂಹಲದಿಂದ ನಿಂತೆವು. ಕಪ್ಪು ಕಪ್ಪಾಗಿತ್ತು; ಕ್ರಿಕೆಟಿನವರಿಗೆ ಅಂಧಕಾರ, ಓಡ್ಯಾಟದವರ ಹಾಹಾಕಾರ, ಕಡೇಗೆ ಬಂದರೂ ಗೆದ್ದವರ ಚೀತ್ಕಾರ, ಒಟ್ಟಾರೆ ಜಮ್ಖಾನದ ಬಹಿಷ್ಕಾರ, ಇದನ್ನು ಬರೆದ ನನ್ನದೊಂದು ನಮಸ್ಕಾರ.

(ದಸ್ಕತು) ಓ. ಭೈರೂ.

* * *

ಟಪ್ಪಾಲ್ ಮೇಲಾಧಿಕಾರಿಗೆ ಬಿನ್ನಹ.

ಅಯ್ಯಾ,

ಇಲ್ಲಿ ಸುಮಾರು ಎಂಟು ವರ್ಷಗಳಿಂದ ಇದ್ದ ಬ್ರೇಂಚಾಫೀಸನ್ನು ಟಪ್ಪಾಲು ಇಲಾಖೆಯವರು ಕಳದ ತಿಂಗಳಿಂದ ಮುಚ್ಚಿಬಿಟ್ಟದ್ದರಿಂದ ಈ ಊರ ಜನರಿಗೂ ಮುಂಬಾಯಿ ಮತ್ತು ಇತರ ಪ್ರಾಂತ್ಯಗಳಿಗೆ ಹೋಗಿ ಕೆಲಸ ಮಾಡುತ್ತಿರುವ ನಮ್ಮೂರ ಜನರಿಗೂ ಉಂಟಾಗಿರುವ ತೊಂದರೆಗಳನ್ನು ಹೇಳಿ ತೀರದು. ಇಲ್ಲಿ ಟಪ್ಪಾಲು ಆಫೀಸು ಇರುವಾಗ ಒಂದು ವಾರದೊಳಗೆ ಮುಂಬಾಯಿಗೆ ತಲಪುತ್ತಿದ್ದ ಪತ್ರಗಳು ಈಗ ಒಂದು ಮಾಸದೊಳಗೂ ತಲಪುವದಿಲ್ಲ ಎಂಬದಾಗಿ ತಿಳಿಯಲು ವಿಷಾದಿಸುತ್ತೇವೆ. ಅದಲ್ಲದೆ ರಿಜಿಸ್ಟ್ರಿ,ಮನಿಆರ್ಡರುಗಳು ಆಗಬೇಕಾದರೆ ಯಾ ಚೀಟುಗಳು ಸಿಕ್ಕಬೇಕಾದರೆ ಈ ಊರ ಜನರು ತಮ್ಮ ಕೆಲಸಗಳನ್ನು ಬಿಟ್ಟು ಇಲ್ಲಿಗೆ ೩॥ ಮೈಲು ದೂರದಲ್ಲಿರುವ ಪಡುಬಿದ್ರೆ ಯಾ ೪॥ ಮೈಲು ದೂರದಲ್ಲಿರುವ ಕಾಫಿಗೆ ಹೋಗಬೇಕಾಗುತ್ತದೆ. ಬಡಜನರು ಈ ಉದ್ದೇಶಕ್ಕಾಗಿ ತಮ್ಮ ಕೆಲಸಬಿಟ್ಟು ದೂರ ಹೋಗಬೇಕಾದುದರಿಂದ ಹಲವು ವಿಧದ ನಷ್ಟಕ್ಕೆ ಗುರಿಯಾಗುತ್ತಾರೆಂಬದನ್ನು ಬೇರೆ ಹೇಳಬೇಕೆಂದಿಲ್ಲ. ಆದ್ದರಿಂದ ಟಪ್ಪಾಲು ಮೇಲಾಧಿಕಾರಿಗಳು ಈ ನಮ್ಮ ಬಡ ಬಿನ್ನಹಕ್ಕೆ ನಿಗಾ ಕೊಟ್ಟು ಪುನಃ ಇಲ್ಲಿ ಬ್ರೇಂಚಾಫೀಸನ್ನು ತೆರೆಯಬೇಕಾಗಿ ಬೇಡಿಕೊಳ್ಳುವ,

ಎರ್ಮಾಳ ನಿವಾಸಿ, ವೈ. ಕೆ.

ವಿದೇಶ ವೃತ್ತಾಂತ.

ಬಾಲ್ಕಾನ್ ಯುದ್ಧವಾರ್ತೆ:—ಶ್ರೇಷ್ಠ ರಾಜ್ಯಗಳವರು ಮಧ್ಯಸ್ಥರಾಗಿ ಸೇರಿ ಈ ಯುದ್ಧವನ್ನು ನಿಲ್ಲಿಸಬೇಕೆಂದು ತುರ್ಕಿ ಸರಕಾರದವರು ಶ್ರೇಷ್ಠ ಸರಕಾರಗಳವರನ್ನು ಕೇಳಿಕೊಂಡಿರುವರೆಂದು ತಿಳಿಸಿತ್ತಷ್ಟೆ. ಈ ಯುದ್ಧವನ್ನು ರಾಜಿಯಿಂದ ತೀರಿಸಬೇಕೆಂದು ಶ್ರೇಷ್ಠ ರಾಜ್ಯಗಳವರೂ ಆಲೋಚನೆಮಾಡಿರುವರು. ಮಧ್ಯಸ್ಥಿಕೆಮಾಡುವಾಗ ಶ್ರೇಷ್ಠ ರಾಜ್ಯಗಳವರು ತಮ್ಮ ಲಾಭವನ್ನು ನೋಡಿಕೊಳ್ಳಬಾರದು ಎಂಬದಾಗಿ ಪ್ರಾನ್ಸಿನ ವಿದೇಶಿ ಮಂತ್ರಿಯವರು ಕೊಟ್ಟ ಸೂಚನೆಯನ್ನು ಆಸ್ಟ್ರೀಯ ಮತ್ತು ಜರ್ಮನ್ ರಾಜ್ಯಗಳವರ ಹೊರತು ಇತರ ರಾಜ್ಯಗಳವರು ಅಂಗೀಕರಿಸಿರುವರು.

ಈ ಯುದ್ಧದ ಮಧ್ಯೆ ಶ್ರೇಷ್ಠ ರಾಜ್ಯಗಳವರು ಕೈಹಾಕಿ ಇದಕ್ಕಾಗುವ ಖರ್ಚನ್ನು ಬಾಲ್ಕಾನ್ ಸಂಸ್ಥಾನಗಳ ಮೇಲೆ ಹೊರಿಸಬೇಕೆಂದು ತುರ್ಕಿ ಸರಕಾರದವರು ಪ್ರೆಂಚ ಸರಕಾರದವರನ್ನು ಕೇಳಿಕೊಂಡಿರುವರು. ಇದು ಇಂಟರ್‌ನೇಶನಲ್‌ಲೋ ಎಂಬ ಕಾನೂನಿಗೆ ವಿರೋಧವಾಗಿರುವುದರಿಂದ ತಾವು ಕೈ ಹಾಕಲಾರೆವು; ಆದರೆ ಮಧ್ಯಸ್ಥಿಗೆ ಮಾಡುವರೆ ತಮ್ಮಿಂದಾದಷ್ಟು ಪ್ರಯತ್ನಮಾಡುವೆವೆಂದು ಪ್ರೆಂಚ ಸರಕಾರದವರು ಉತ್ತರ ಕೊಟ್ಟಿರುವರು.

ಜರ್ಮನರ ಎರಡು ಯುದ್ಧ ಹಡಗಗಳೂ ಆಸ್ಟ್ರೀಯದ ೬ ಯುದ್ಧ ಹಡಗಗಳೂ ಸೈಪ್ರಸ್ ದ್ವೀಪಕ್ಕೂ ಪಲೆಸ್ತೀನಕ್ಕೂ ಮಧ್ಯೆ ಇರುವ ಲೆವಂಟ್ ಸಮುದ್ರಕ್ಕೆ ಹೋಗಿರುವದು.

ತಾ. ೪:—ಲೂಲ್ ಬರ್ಗಸಿನ ದಕ್ಷಿಣ ಕಡೆಯಲ್ಲಿ ಆದ ಯುದ್ಧದಲ್ಲಿ ತುರ್ಕರಲ್ಲಿ ೨೦ ಸಾವಿರ ಮಂದಿ ಮಡಿದರು. ಈಗ ಬಲ್ಗೇರಿಯರು ಚಟ್ಲಾಜ ಎಂಬಲಿಗೆ ತಮ್ಮ ವ್ಯೂಹವನ್ನು ನಡಿಸುತ್ತಲಿದ್ದಾರೆ.

ಇಲ್ಲಿ ತುರ್ಕರು ಹಿಮ್ಮೆಟ್ಟಲ್ಪಟ್ಟರೆ ಕನ್‌ಸ್ತಂತಿನೋಪಲಿಗೆ ಬಲ್ಗೇರಿಯರು ಮುಂದರಿಯುವುದೇನೋ ನಿಜ. ಕುಮಾನಾವೋ ಯುದ್ಧದಲ್ಲಿ ತುರ್ಕರು ಸೋಘೋಗಲು ಕಾರಣಭೂತನಾದ ಜನರಲ್ ಕಾದ್ರಿ ಪಾಶನನ್ನು ಸಂಕೋಲೆ ಹಾಕಿ ಕನ್‌ಸ್ತಂತಿನೋಪಲಿಗೆ ಕಳುಹಿಸಿದ್ದಾರೆ.

ಈ ಯುದ್ಧವನ್ನು ಸಂಧಾನದ ಮೂಲಕ ತೀರಿಸುವರೆ ಶ್ರೇಷ್ಠ ರಾಜ್ಯಗಳವರು ಕೈಹಾಕುವುದರಲ್ಲಿ ಬಾಲ್ಕಾನ್ ಸಂಸ್ಥಾನಗಳಿಗೆ ಒಪ್ಪಿಗೆ ಇಲ್ಲವೆಂದೂ, ಈ ಯುದ್ಧವು ಪ್ರಾರಂಭವಾಗುವ ಮೊದಲೇ ಮುಂದಿನ ಎಲ್ಲಾ ವಿಲೆವಾರಿಗಳು ಬಾಲ್ಕಾನ್ ಸಂಸ್ಥಾನಗಳೊಳಗೆ ಮಾಡಲ್ಪಟ್ಟದೆಂದೂ ತಿಳಿದು ಬರುತ್ತದೆ.

ಬಲ್ಗೇರಿಯರು ಕಠಿಣ ಯುದ್ಧಮಾಡಿ ಸಲೋನಿಕ ಕನ್‌ಸ್ತಂತಿನೋಪಲ್ ರೈಲ್ವೇ ದಾರಿಯಲ್ಲಿದ್ದ ಬಕ್ ಎಂಬ ಕೋಟೆಯನ್ನು ಹಿಡಕೊಂಡರು.

ಗ್ರೀಕರ ಒಂದು ದೊಡ್ಡ ಸೈನ್ಯವು ಚಾಲಿಸ್ಸಿನ ಈಶಾನ್ಯ ದಿಕ್ಕಿನಲ್ಲಿರುವ ಸ್ಟಾವ್ರೊಸ್ ಎಂಬಲ್ಲಿ ಇಳಿದು ಪೊಲಿಗ್ರೊಸ್ ಎಂಬ ಪಟ್ಟಣವನ್ನು ವಶಮಾಡಿಕೊಂಡು ಅಲ್ಲಿಂದ ಸಲೋನಿಕಕ್ಕೆ ಮುಂದರಿಯುತ್ತಿದೆ.

ಸುಕ್ಕಾರಿಯಲ್ಲಿ ಕಠಿಣ ಮಳೆ ಗರೆದು ನೆರೆ ಬಂದಿರುವುದರಿಂದ ಮೊಂಟೆನಿಗ್ರೊಯರು ಇನ್ನೂ ಸ್ಕುತಾರಿಯನ್ನು ತಕ್ಕೊಳ್ಳಲಿಲ್ಲ. ತುರ್ಕರು ತುರಬೊಸ್ ಎಂಬ ಪಟ್ಟಣವನ್ನು ಪುನಃ ತಮ್ಮ ವಶಮಾಡಿಕೊಂಡರು.

ಗ್ರೀಕರು ಪಹರ ಎಂಬ ದ್ವೀಪವನ್ನು ವಶಮಾಡಿಕೊಂಡು ತಾವು ತೆಗೆದುಕೊಂಡ ದ್ವೀಪಗಳಿಗೆ ಗವರ್ನರರನ್ನು ನೇಮಿಸಿದರು.

ತಾ. ೫. ಅಸ್ಯದ ತುರ್ಕಿಯಲ್ಲಿದ್ದ ತುರ್ಕರ ಸೈನ್ಯವು ಕನ್‌ಸ್ತಂತಿನೋಪಲಿಗೆ ಬರುತ್ತಿದೆ. ತಾ. ೪ರಲ್ಲು ೧,೫೦೦ ಸೈನೀಕರು ಕನ್‌ಸ್ತಂತಿನೋಪಲಿನಲ್ಲಿ ಇಳಿದರು.

ಸಂಧಾನಮಾಡುವ ವಿಷಯ ಪ್ರಾನ್ಸ್ ಮಂತ್ರಿಯು ಕೊಟ್ಟ ಸಲಹೆಗೆ ಶ್ರೇಷ್ಠ ರಾಜ್ಯಗಳವರು ಯುದ್ಧ ನಡಿಸುವ ರಾಜ್ಯಗಳವರಲ್ಲಿ ಒಬ್ಬರಾದರೂ ಮಧ್ಯಸ್ಥಿಗೆ ಮಾಡಬೇಕೆಂದು ಕೇಳುವ ವಿನಹಾ ತಾವು ಕೈ ಹಾಕುವುದು ಸಾಧ್ಯವಲ್ಲ ಎಂಬದಾಗಿ ಉತ್ತರ ಕೊಟ್ಟಿರುವರು.

ಸರ್ವಿಯರ ಸೈನ್ಯವು ಬಲ್ಗೇರಿಯದವರಿಗೆ ಕೂಡಿಕೊಳ್ಳಲು ಅಡ್ರಿನೋಪಲಿಗೆ ಹೋಗುತ್ತಿದೆ. ಸಿರಾಯಿ ಮತ್ತು ಟಿಚೋರ್ಲು ಎಂಬಲ್ಲಿ ಯುದ್ಧ ಪ್ರಾರಂಭವಾಗಿಯದೆ. ಲೂಲು ಬರ್ಗಸ್ ಬಲ್ಗೇರಿಯರ ವಶವಾದ ನಂತರ ಬಲ್ಗೇರಿಯರ ಸೈನ್ಯವು ೨ ದಿವಸಗಳ ವಿಶ್ರಾಂತಿ ತಕ್ಕೊಂಡು ಚಟಾಲ್ಜಕ್ಕೆ ಮುಂದರಿಯ ಪ್ರಾರಂಭಿಸಿಯದೆ.

ಮಸೆದೋನಿಯ ವಾಲಂಟಿಯರರ ೮ ಸೇನೆಯು ಯುದ್ಧರಂಗಕ್ಕೆ ಹೊರಟಿರುವದು. ಈ ಸೇನೆಯಲ್ಲಿ ಅರ್ಮೀನಿಯರೂ ರುಷ್ಯರೂ ಇರುವರು.

ಚೋರ್ಲು ಎಂಬಲ್ಲಿದ್ದ ಬಲ್ಗೇರಿಯರ ಸೇನೆಗೆ ಅಡ್ರಿನೋಪಲಿನಿಂದ ಸೇನೆಯು ಬಂದು ಕೂಡುವದು. ಇದರ ಬದಲಿಗೆ ಅಡ್ರಿನೋಪಲಿಗೆ ಸರ್ವಿಯರ ಸೇನೆಯು ಹೋಗುವದು.

ಜನರಲ್ ಕುಸ್ಸಂಚಿಪ್ ಮರ್ಮೋರ ಸಮುದ್ರದ ಕರಾವಳಿಯಲ್ಲಿ ತನ್ನ ಸೇನೆಯನ್ನು ನಡಿಸುತ್ತಾ ಚಟಾಲ್ಜದ ಡಿಮಿಟ್ರೇಪ್ ಕಡೆಗೆ ಮುಂದರಿಯುತ್ತಿದ್ದಾರೆ.

ಸೆರಾಯಿ ಮತ್ತು ಟೊಚ್ರೋಲ್ ಎಂಬಲ್ಲಿ ಆದ ಯುದ್ಧದಲ್ಲಿ ತುರ್ಕರು ಲೂಲು ಬರ್ಗಸಿನಲ್ಲಿ ಪಟ್ಟ ನಷ್ಟಕ್ಕಿಂತಲೂ ಹೆಚ್ಚಿನ ನಷ್ಟಪಟ್ಟರು. ಬಲ್ಗೇರಿಯರಲ್ಲಿಯೂ ಹೆಚ್ಚಿನ ನಷ್ಟವಾಯಿತು.

ಸರ್ವಿಯರು ಮಸೆದೋನಿಯದ ದಾರಿಯಲ್ಲಿದ್ದ ತುರ್ಕರ ಎಲ್ಲಾ ಕೋಟೆ ಕೊತ್ತಲ ಪಟ್ಟಣಗಳನ್ನು ಹಿಡಕೊಂಡಾದ್ದರಿಂದ ಇನ್ನು ಮುಂದಕ್ಕೆ ಬಲ್ಗೇರಿಯರಿಗೂ ಗ್ರೀಕರಿಗೂ ಮೊಂಟೆನಿಗ್ರೊಯರಿಗೂ ಸಹಾಯಮಾಡುವರು. ತುರ್ಕರ ಅತಿರೇಕ ಸೈನ್ಯವು ಚಟ್ಲಾಜದಲ್ಲಿ ಬಂದು ಸೇರುತ್ತಿದೆ.

ತಾ. ೬:—ಸರ್ವಿಯ ಮತ್ತು ಮೊಂಟೆನಿಗ್ರೊ ಸೇನೆಯು ಒಟ್ಟು ಕೂಡಿ ಡಿಯಕೋವ ಎಂಬಲ್ಲಿಗೆ ಮುಂದರಿಯುತ್ತಿದೆ.

ಸಲೋನಿಕ ಬಂದರದಲ್ಲಿ ತುರ್ಕರು ಹಾಕಿದ ಸಿಡಿಮದ್ದಿಗೆ ಗ್ರೀಕರ ಒಂದು ಹಡಗವು ತಾಗಿ ಸಿಡಿದು ಹೋಯಿತು.

ತಾ. ೬:–ಬ್ರಿಟಿಷರ ಕಿಂಗ್ ಎಡ್ವರ್ಡ್, ಜೀಲೊಂಡಿಯ, ಹಿಂದೂಸ್ಥಾನ್ ಮತ್ತು ಆಫ್ರೀಕ ಎಂಬೀ ಯುದ್ಧಹಡಗಗಳು ಮಾಲ್ಟದಿಂದ ಕನ್‌ಸ್ತಂತಿನೋಪಲಿಗೆ ಹೋಗಿಯದೆ. ಹಿಬ್ರನಿಯ, ಕೊಮನ್‌ವೆಲ್ತ್, ಡೊಮಿನಿಯನ್ ಎಂಬೀ ಹಡಗಗಳು ಮಾಲ್ಟದಲ್ಲಿಯೇ ಇದ್ದು ಮುಂದರಿಯಲು ಹುಕುಂ ಕಾಯುತ್ತಿವೆ. ಎಡ್ಮಿರಲ್ ಸರ್ ಎ. ಬರ್ಕ್ಲೆ ಮಿಲ್ನೆಯವರು ಕಿಂಗ್ ಎಡ್ವರ್ಡ್ ಹಡಗದೊಂದಿಗೆ ಕನ್‌ಸ್ತಂತಿನೋಪಲಿಗೆ ಹೋಗಿರುವರು. ಗುಡ್‌ಹೋಪ್ ಮತ್ತು ಡಾರ್ಟ್ ಮೌತು ಎಂಬೀ ಕ್ರೂಝರ್ ನಾವೆಗಳು ಮರೆ ಹೊಕ್ಕೊಂಡವರನ್ನು ಸೇರಿಸಿಕೊಳ್ಳಲು ಟರ್ಕಿಗೆ ಹೋಗಿಯವೆ. ಅವಶ್ಯವಿದ್ದರೆ ಈ ಕ್ರೂಝರ್ ನಾವೆಗಳು ಬ್ಲೂಜೆಕೆಟ್ ಎಂಬೀ ಸೈನೀಕರನ್ನು ದಡಕ್ಕೆ ಇಳಿಸುವವು. ರುಷ್ಯರ ಮತ್ತು ಪ್ರೆಂಚರ ಕ್ರೂಝರ್ ನಾವೆಗಳೂ ಅಸ್ಟ್ರಿಯದ ಇನ್ನೊಂದು ನಾವೆಯೂ ಕನ್‌ಸ್ತಂತಿನೋಪಲಿಗೆ ತಲಪಿಯವೆ.

ತಾ. ೭:–ಬಲ್ಗೇರಿಯರು ತುರ್ಕರ ವ್ಯೂಹ ರಚನೆಯನ್ನು ಹೊಡೆಯುತ್ತಾ ಕನ್‌ಸ್ತಂತಿನೋಪಲಿಗೆ ನುಗ್ಗುವ ಸಂಭವವು ತೋರುವುದರಿಂದ ಕನ್‌ಸ್ತಂತಿನೋಪಲಿನ ಸ್ಥಿತಿಯು ಭಯಾಸ್ಪದದ್ದಾಗಿದೆ. ಆದಕಾರಣ ಶ್ರೇಷ್ಠ ರಾಜ್ಯಗಳು ತಂತಮ್ಮ ಹಡಗಗಳನ್ನು ಕನ್‌ಸ್ತಂತಿನೋಪಲಿನತ್ತಕಡೆ ಕಳುಹಿಸಿರುವರು. ಕ್ರೈಸ್ತರನ್ನು ಕೊಲೆಮಾಡುವ ಸಂಭವವು ಕಂಡಾಕ್ಷಣ ಬ್ಲೂಜೆಕೆಟ್ ಎಂಬ ಸೈನೀಕರನ್ನು ದಡಕ್ಕಿಳಿಸಬೇಕೆಂದು ಬ್ರಿಟಿಷರು ಹುಕುಂ ಕೊಟ್ಟಿರುವರು ಎಂಬದಾಗಿ ಪ್ರಕಟವಾಗಿದೆ. ಬಲ್ಗೇರಿಯರಿಗೆ ಕನ್‌ಸ್ತಂತಿನೋಪಲ್ ಬೇಡ ಎಂಬದಾಗಿ ಬಲ್ಗೇರಿಯ ಮಂತ್ರಿ ಸಭೆಯ ಪ್ರೆಸಿಡೆಂಟರು ಹೇಳಿರುವರು.

ಕುಮನಾವೊದಲ್ಲಿ ಸೋಲಿಸಲ್ಪಟ್ಟ ತುರ್ಕಿ ಸೇನೆಯು ಕೊಪ್ರೂಲು ಮತ್ತು ಪ್ರಿಲಿಪ್ ಎಂಬೀ ಸ್ಥಳದ ಪರ್ವತಗಳ ಮಧ್ಯೆಕೂಡಿ ಸರ್ವಿಯರೊಡನೆ ಕಾದಾಡಿತು. ಸರ್ವಿಯರ ಫಿರಂಗಿ ಸೈನ್ಯವು ಸಿದ್ಧವಾಗಿರದ್ದರಿಂದ ಅದಕ್ಕೆ ಈ ಯುದ್ಧದಲ್ಲಿ ಸೇರಲಿಕ್ಕಾಗಲಿಲ್ಲ. ಆದರೆ ಕಾಲಾಳು ಸೈನ್ಯವು ತುರ್ಕ ಫಿರಂಗಿಯಿಂದ ಹೊರಟ ಗುಂಡಿನೇಟನ್ನು ಲಕ್ಷ್ಯಮಾಡದೆ ತುರ್ಕರ ಸೇನೆಯೊಳನುಗ್ಗಿ ಸನೀನುಗಳ ಮೂಲಕ ಅವರನ್ನು ಹತ ಬಡದು ಪೂರ್ಣವಾಗಿ ಸೋಲಿಸಿಬಿಟ್ಟಿತು.

ಸರ್ವಿಯರು ಕುಶಾವೊವನ್ನೂ ಮೊನಾಸ್ಟಿರನ್ನೂ ತೆಗೆದುಕೊಂಡರು.

ಗ್ರೀಕರೂ ಸರ್ವಿಯರೂ ಸಲೋನಿಕಕ್ಕೆ ಬಹು ಸಮೀಪದಲ್ಲಿದ್ದಾರೆ. ಸಲೋನಿಕದಲ್ಲಿ ೧೫,೦೦೦ ತುರ್ಕ ಸೇನೆಯೂ ೧೫,೦೦೦ ಮರೆಹೊಕ್ಕೊಂಡವರೂ ಇದ್ದಾರೆ. ಸಲೋನಿಕದ ವಾಲಿಯು ಸ್ವಘಾತಮಾಡಿಕೊಂಡನು. ಅಲ್ಲಿದ್ದ ತುರ್ಕಿ ಸೈನೀಕರು ಆಹಾರವಿಲ್ಲದೆ ರೊಟ್ಟಿಗಾಗಿ ತಮ್ಮ ತಮ್ಮ ಆಯುಧಗಳನ್ನು ಮಾರಿದ್ದರಿಂದಲೂ ಮೇಲಾಫೀಸರರಿಗೆ ಅವಿಧೇಯರಾಗಿ ನಡಕೊಂಡದ್ದರಿಂದಲೂ ಅವರಲ್ಲಿ ಅನೇಕರನ್ನು ಗುಂಡುಹೊಡೆದು ಕೊಂದರು.

ಮಸೆದೋನಿಯದಲ್ಲಿದ್ದ ಬಲ್ಗೇರಿಯರು ಡಿಮಿರ್ ಹಿಸ್ಸಾರಿಗೆ ಮುಂದರಿಯುತ್ತಲಿದ್ದಾರೆ. ಬಲ್ಗೇರಿಯರು ಕನ್‌ಸ್ತಂತಿನೋಪಲಿಗೆ ಮುಂದರಿಯುವುದಾದರೆ ಸುಲ್ತಾನರೂ ತುರ್ಕಿ ಸರಕಾರವೂ ಆಸ್ಯ ಮೈನರಿಗೆ ಹೋಗುವುದೆಂದೇ ತಿಳಿದುಬರುತ್ತದೆ. ಚಟ್ಲಾಜದಲ್ಲಿರುವ ತುರ್ಕರ ಸೈನ್ಯವು ಒಳ್ಳೇ ಕ್ರಮದಲ್ಲಿದೆಂದೂ ಅಲ್ಲಿ ಬಲಕಡೆಯಲ್ಲಿದ್ದ ಸೇನೆಯು ಮಾತ್ರ ಆಹಾರದ ಕೊರತೆಯಿಂದ ದಂಗೆ ಎದ್ದಿರುವುದೆಂದೂ ತಿಳಿದುಬರುತ್ತದೆ. ಆದರೆ ಅಲ್ಲಿಗೆ ರೈಲ್ವೇಗಾಡಿಯಲ್ಲಿ ರೊಟ್ಟಿ ಕಳುಹಿಸಿರುವುದರಿಂದ ದಂಗೆಯು ಅಷ್ಟರಲ್ಲಿಯೇ ಶಾಂತವಾಗಿದೆ.

ತುರ್ಕರ ಸೇನೆಯಲ್ಲಿ ತಕ್ಕ ಕ್ರಮವಿಲ್ಲದಿರುವುದೆ. ಅವರು ಪ್ರತಿ ಒಂದು ಕದನದಲ್ಲಿ ಸೋಲುವ ಹಾಗಾಯಿತು. ಸೈನೀಕರೆಲ್ಲರೂ ಬಹಳ ಧೈರ್ಯಶಾಲಿಗಳು, ಅವರಿಗೆ ಬೇಕಾದಷ್ಟು ತೋಪಿಗಳು ಇವೆ. ಆದರೆ ತಕ್ಕ ಆಹಾರವೂ ತಕ್ಕ ಆಫೀಸರರೂ ಇಲ್ಲ.

ಬಲ್ಗೇರಿಯರ ರಾತ್ರಿಕಾಲದ ಯುದ್ಧವು ಅತ್ಯದ್ಭುತವಾದದ್ದು ಎಂಬದಾಗಿ ವರ್ಣಿಸಲ್ಪಟ್ಟದೆ.

೧೦ ರುಷ್ಯ ವಿಮಾನ ಗಾಮಿಗಳು ಬಲ್ಗೇರಿಯಕ್ಕೆ ಹೊರಟಿರುವರು.

ಗ್ರೀಕರ ಹಡಗುಪಡೆಯು ಟೆನಿಡೊಸನ್ನು ವಶ ಮಾಡಿಕೊಂಡಿತು.

ಬುನಾರ್ ಹಿಸ್ಸಾರ್ ಮತ್ತು ಲೂಲು ಬರ್ಗಸಿನಲ್ಲಿ ಆದ ಯುದ್ಧದಲ್ಲಿ ಬಲ್ಗಾರಿಯರಲ್ಲಿ ೧೫,೦೦೦ ಸೈನೀಕರು ಮಡಿದರು. ಬಲ್ಗೇರಿಯರು ತಾ. ೫ರಲ್ಲು ವಿಜ ಮತ್ತು ರೊಡೊಸ್ಟೊವನ್ನು ವಶಮಾಡಿಕೊಂಡರು. ತಾ. ೩. ೪. ೫. ೬ರಲ್ಲಿ ಆದ ಯುದ್ಧವು ಬಲ್ಗೇರಿಯರ ಮಕ್ಡೆನ್ ಯುದ್ಧವೆಂದು ವರ್ಣಿಸಲ್ಪಡುತ್ತದೆ. ಈ ದಿವಸಗಳಲ್ಲಿ ಆದ ಯುದ್ಧದಲ್ಲಿ ನೈಜಾಮ್‌ಪಾಶರ ಕೈಕೆಳಗಿದ್ದ ಸೇನೆಯು ಬಹು ಶೂರತನದಿಂದ ಕಾದಾಡಿ ಬಲ್ಗೇರಿಯರ ಸೇನೆಯ ಮಧ್ಯ ಭಾಗವನ್ನೇ ಚದರಿಸಿಬಿಡಬೇಕೆಂದು ಪ್ರಯತ್ನಿಸಿತು. ಆದರೆ ಬಲ್ಗೇರಿಯರು ಬಹು ಪ್ರಯತ್ನದಿಂದ ತುರ್ಕ ಸೇನೆಯನ್ನು ಅಟ್ಟಬಿಟ್ಟರು.

ತುರ್ಕಿಯಲ್ಲಿ ಈಗ ಹಿಮ ಬೀಳುವುದರಿಂದಲೂ ಮಳೆ ಬರುವುದರಿಂದಲೂ ಸೇನೆಯನ್ನು ಮುಂದರಿಸುವುದು ಬಲ್ಗೇರಿಯರಿಗೆ ಬಹಳ ಪ್ರಯಾಸವಾಗಿದೆ.

ಅಡ್ರಿನೋಪಲ್ ಬಲ್ಗೇರಿಯರಿಗೆ ಶರಣಾಗತವಾಯಿತು. ಕನ್‌ಸ್ತಂತಿನೋಪಲನ್ನು ತೆಗೆದುಕೊಳ್ಳುವ ಮೊದಲೇ ಶ್ರೇಷ್ಠ ರಾಜ್ಯಗಳವರು ಈ ಯುದ್ಧಕ್ಕೆ ಪ್ರವೇಶಿಸಿ ಬಿಡುವರೆನೋ ಎಂಬ ಹೆದರಿಕೆಯಿಂದ ಬಲ್ಗೇರಿಯರು ಈ ಸಂಗತಿ ಬಯಲುಪಡಿಸಲಿಲ್ಲ ಎಂಬದಾಗಿ ಬುಕಾರೆಸ್ಟಿನಿಂದ ಒಬ್ಬ ಬಾತ್ಮೀದಾರರು ಡೈಲಿ ಮೈಲ್ ಎಂಬ ಪತ್ರಿಕೆಗೆ ಬರದಿರುವರು. ಆದರೆ ಈ ವಾರ್ತೆಯು ದೃಢೀಕರಿಸಲ್ಪಡಲಿಲ್ಲ.

ತಾ. ೮:—ಅಡ್ರಿನೋಪಲಿನಲ್ಲಿ ವಿಷಮಜ್ವರವು ಪ್ರಾರಂಭವಾಗಿಯದೆ. ಮಸೆದೋನಿಯದಲ್ಲಿಯೂ ಮೊಂಟೆನಿಗ್ರೋದಲ್ಲಿಯೂ ಬಹಳ ಹಿಮ ಬಿದ್ದದೆ.

ಬಲ್ಗೇರಿಯರು ಚಟ್ಲಾಜ ಲ್ಯಾನನ್ನು ವಶಮಾಡಿಕೊಳ್ಳಲು ಮುಂದರಿಯುತ್ತಿದ್ದಾರೆ. ತುರ್ಕರು ಮುಖ್ಯ ಸ್ಥಳಗಳಿಂದ ಈಗಲೇ ಹಿಂದಕಟ್ಟಲ್ಪಟ್ಟಿದ್ದಾರೆ. ಬಲ್ಗೇರಿಯರು ಚಟ್ಲಾಜಿನ ಉತ್ತರ ಕಡೆಯಲ್ಲಿರುವ ಡೆರ್ಕೊ ಎಂಬಲ್ಲಿಗೆ ತಲಪಿದ್ದಾರೆ.

ಗ್ರೀಕರು ತಾ. ೬ರಲ್ಲು ವಾರ್ಡರ್ ನದಿಯನ್ನು ದಾಟಿ ಸಲೋನಿಕಕ್ಕೆ ಮುಂದರಿದರು. ೧೫,೦೦೦ ತುರ್ಕರು ಗ್ರೀಕರಿಗೆ ಎದುರಾಗಿ ಯುದ್ಧಮಾಡಿದರು. ಆದರೆ ಅಷ್ಟೊಂದು ಕಠಿಣ ತರವಾಗಿರಲಿಲ್ಲ. ತಾ. ೮ರಲ್ಲು ಸಲೋನಿಕವು ಹೆಚ್ಚಿನ ಕಷ್ಟವಿಲ್ಲದೆ ಗ್ರೀಕರ ವಶವಾಯಿತು. ಇದರಿಂದ ಅಥೆನ್ಸಿನಲ್ಲಿ ಜಯೋತ್ಸವವು ಮಾಡಲ್ಪಟ್ಟಿತು. ದೇವಾಲಯಗಳಲ್ಲಿ ಗಂಟೆ ಬಾರಿಸಿ ಪಟ್ಟಣಗಳನ್ನು ಶೃಂಗರಿಸಿ ದೀಪೋತ್ಸವ ಮಾಡಿದರು.

ಅಲ್ಬಾನಿಯರ ಪ್ರಿಟೆಂಡರ್ ಪ್ರಿನ್ಸ್ ಜೆಸಿಕ ಎಂಬವನು ಅಥೆನ್ಸಿಗೆ ಬಂದು ತನಗೆ ಮುಖ್ಯ ಠಾಣ್ಯದಲ್ಲಿ ಕೆಲಸ ಕೊಡಬೇಕೆಂದು ಗ್ರೀಕ ಮಂತ್ರಿಯನ್ನು ಕೇಳಿಕೊಂಡನು. ಆದರೆ ಮಂತ್ರಿಯು ತಾನರಿಯೆನೆಂದರು.

ಮೊಂಟೆನಿಗ್ರೋಯರು ಡಿಯಾಕೋವವನ್ನು ವಶಮಾಡಿಕೊಂಡರು. ಸ್ಕುಟಾರಿಯ ದಕ್ಷಿಣದಲ್ಲಿಯ ಮೊಂಟೆನಿಗ್ರೋಯರ ಸೈನ್ಯವು ಅಲ್ಲಿ ನೆರೆಬಂದದರಿಂದಲೂ ಬೇಕಾದಷ್ಟು ಆಹಾರ ದೊರಕದ್ದರಿಂದಲೂ ಹಿಂದಕ್ಕೆ ಹೋದರು. ಯುದ್ಧರಂಗದಲ್ಲಿ ಗಾಯವೊಡೆದು ಕನ್‌ಸ್ತಂತಿನೋಪಲಿಗೆ ಬಂದವರಲ್ಲಿ ವಾಂತಿಭೇದಿಯು ಪ್ರಾರಂಭವಾಗಿರುವುದು.

ಬ್ರಿಟಿಷ್ ರೆಡ್ ಕ್ರಿಸೆಂಟ್ ಸಂಘದವರು ಯುದ್ಧದಲ್ಲಿ ಗಾಯಪಟ್ಟ ತುರ್ಕರ ಸಹಾಯಾರ್ಥವಾಗಿ ಸ್ಪೆಶ್ಯಲ್ ದಾಕ್ತಾರರನ್ನೂ ಪರಿಚಾರಿಕೆಯರನ್ನೂ ಕನ್‌ಸ್ತಂತಿನೋಪಲಿಗೆ ಕಳುಹಿಸಿಕೊಟ್ಟಿರುವರು. ಆಘಖಾನರವರು ೧೦೦ ಪವನು ವಂತಿಗೆ ಕೊಟ್ಟಿರುವರು. ಈ ಸಂಘವು ಕನ್‌ಸ್ತಂತಿನೋಪಲಿಗೆ ಪುನಃ ಒಂದು ಆಸ್ಪತ್ರಿ ಸಿಬಂಧಿಯನ್ನು ಕಳುಹಿಸುವುದು.

ತುರ್ಕಿ ಸೇನಾಧಿಪತಿಯಾಗಿರುವ ನೈಜಾಮ ಪಾಶರವರು ಸೈನ್ಯವು "ಮರಣ ಅಥವಾ ಜಯ" ಎಂಬ ಆದರ್ಶ ವಾಕ್ಯವನ್ನಿಟ್ಟುಕೊಂಡು ಯುದ್ಧಮಾಡಲು ನಿಷ್ಕರ್ಷಿಸಿಯದೆಂದು ತುರ್ಕಿ ಸರಕಾರಕ್ಕೆ ತಿಳಿಸಿರುವರು. ಇದರಿಂದ ಮಂತ್ರಿ ಸಭೆಯು ಕೂಡಿ ಯುದ್ಧವನ್ನು ಮುಂದರಿಸಬೇಕೆಂತ ಸಹಿಮಾಡಿದ ಪತ್ರಿಕೆಯನ್ನು ಪ್ರಧಾನ ಮಂತ್ರಿಗೆ ಒಪ್ಪಿಸಿರುವದು. ಅದಲ್ಲದೆ ಟಾಲಟ್ ಬೇ ಮತ್ತು ಪ್ರಿನ್ಸ್ ಸೈಯದ್ ಹಾಲಿಮ್‌ರವರು ಪ್ರಧಾನ ಮಂತ್ರಿಗೆ ಭೇಟಿ ಕೊಟ್ಟು ಈ ಯುದ್ಧಕ್ಕೆ ಯುನ್ಯನಿಷ್ಟರ ಅನುಮೋದನೆಯು ಇದೆ ಎಂದು ಹೇಳಿರುವರು.

ಮರೆಹೊಕ್ಕೊಂಡವರನ್ನು ಆಸ್ಯ ಮೈನರಿಗೆ ಕಳುಹಿಸಿ ಕೊಡುವರೆ ತುರ್ಕಿ ಸರಕಾರದವರು ಆಲೋಚಿಸಿರುವರು.

ಈ ಯುದ್ಧಕ್ಕೆ ಕೈಹಾಕಬೇಕೆಂದು ಶ್ರೇಷ್ಠ ರಾಜ್ಯಗಳವರನ್ನು ತುರ್ಕರು ಕೇಳಿಕೊಂಡ ಪತ್ರವು ಶ್ರೇಷ್ಠ ರಾಜ್ಯಗಳವರಿಂದ ತಳ್ಳಲ್ಪಟ್ಟಿರುವದು. ಆದರೆ ಮಧ್ಯಸ್ಥಿಗೆ ಮಾಡಬೇಕೆಂಬದಾಗಿ ಕೇಳಿಕೊಂಡ ವಿಷಯವನ್ನು ಕುರಿತು ಶ್ರೇಷ್ಠ ರಾಜ್ಯಗಳವರು ಆಲೋಚನೆ ಮಾಡುತ್ತಿದ್ದಾರೆ.

ಬಾಲ್ಕ್ಯಾನ್ ಸಂಸ್ಥಾನಗಳು ಅಭಿಯೋಗಮಾಡಿದ ತುರ್ಕರ ದೇಶಗಳನ್ನು ಹಂಚಿಕೊಳ್ಳುವ ಸಂಬಂಧ ಆಯಾ ಪತ್ರಗಳಲ್ಲಿ ಚರ್ಚಿಸ ಪ್ರಾರಂಭವಾಗಿದೆ. ಆಸ್ಟ್ರೀಯದ ಒಂದು ಪತ್ರವು ಸರ್ವಿಯರು ಅಡ್ರಿನೋಪಲಿಗೆ ಹೋದದ್ದೇ ಕಾನೂನಿಗೆ ವಿರೋಧವೆಂದು ಹೇಳುವುದು. ರುಮೇನಿಯದವರು ತಟಸ್ಥರಾಗಿ ನಿಂತದ್ದರಿಂದ ಬಾಲ್ಕ್ಯಾನ್ ಸಂಸ್ಥಾನಗಳು ಅಭಿಯೋಗಮಾಡಿದ ದೇಶಗಳಲ್ಲಿ ಒಂದು ಪಾಲನ್ನು ರುಮೇನಿಯರಿಗೂ ಕೊಡಬೇಕೆಂದು ರುಷ್ಯ ಆಸ್ಟ್ರಿಯ ಮತ್ತು ರುಮೇನಿಯ ಮಂತ್ರಿಯವರು ಕೂಡಿದ ಒಂದು ಸಭೆಯಲ್ಲಿ ಚರ್ಚೆ ನಡೆದಿರುವದು.

ತುರ್ಕರು ಈ ಯುದ್ಧಕ್ಕೆ ಪ್ರವೇಶವಾಗಲು ರುಮೇನಿಯರನ್ನು ಕೇಳಿಕೊಂಡಿರುವರೆಂದು ತಿಳಿದುಬರುತ್ತದೆ.

ಹಿಂದೂಸ್ಥಾನದಲ್ಲಿದ್ದ ಮುಸಲ್ಮಾನರು ರೆಡ್‌ಕ್ರಿಸೆಂಟ್ ಫಂಡಿಗೆ ಸಾವಿರಗಟ್ಲೆ ಹಣ ಕೂಡಿಸುತ್ತಿದ್ದಾರೆ. ಈ ತನಕ ಮುಂಬಾಯಿಂದ ೫೦,೦೦೦ ರೂಪಾಯಿ ಕನ್‌ಸ್ತಂತಿನೋಪಲಿಗೆ ಕಳುಹಿಸಲ್ಪಟ್ಟಿತು. ದಿವಸಕ್ಕೆ ೧೫,೦೦೦ ರೂಪಾಯಿ ಪ್ರಕಾರ ಈ ಫಂಡಿಗೆ ಜಮೆಯಾಗುತ್ತಿದೆ. ಕರಾಚಿ ಫಂಡಿನಲ್ಲಿ ಈ ವರೆಗೆ ೨೮,೨೬೬ ರೂಪಾಯಿ ಜಮೆಯಾಯಿತು.

ಮುಸಲ್ಮಾನರ ವಿಶ್ವವಿದ್ಯಾಕಲಾಶಾಲೆಗಾಗಿ ಕೂಡಿಸಿದ ಹಣದಲ್ಲಿ ೨೦೦,೦೦೦ ಪವನು ಈ ಫಂಡಿಗೆ ಕೊಡುವುದು ಚಿತವೆಂತ ಆಘಖಾನರವರು ಸೂಚನೆ ಕೊಟ್ಟಿರುವರೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ತಾ. ೯. ಸಲೋನಿಕದಲ್ಲಿ ೨೫,೦೦೦ ತುರ್ಕರು ಗ್ರೀಕರಿಗೆ ಶರಣಾಗತರಾದರು. ಸಲೋನಿಕವು ಶರಣಾಗತವಾಗುವ ಮೊದಲು ಕ್ರೈಸ್ತರಲ್ಲಿ ಅನೇಕರು ಕೊಲೆಮಾಡಲ್ಪಟ್ಟರೆಂಬ ವಾರ್ತೆಗೆ ಆಧಾರವಿಲ್ಲವೆಂಬದಾಗಿ ಗ್ರೀಕರ ಯುವರಾಜರವರು ತಿಳಿಸುವರು. ಈಗ ಗ್ರೀಕ ದೇಶದಲ್ಲಿ ೫೯,೦೦೦ ಶೆರೆಹಿಡಿಯಲ್ಪಟ್ಟ ತುರ್ಕರಿರುವರು. ಇವರಲ್ಲಿ ೨೦೦೦ ಮಂದಿ ಮೊಂಟೆನಿಗ್ರೋಯರಿಂದ ಕಳುಹಿಸಲ್ಪಟ್ಟವರು. ಗ್ರೀಕ ಮಂತ್ರಿಯಾದ ರೆಕ್ಟಿವಾನ್‌ರವರು ಸಲೋನಿಕದ ಗವರ್ನರರಾಗಿ ನೇಮಿಸಲ್ಪಟ್ಟಿದ್ದಾರೆ. ಗ್ರೀಕರ ನೌಕಾವಳಿಯು ಕನ್‌ಸ್ತಂತಿನೋಪಲಿಗೆ ಮುಂದರಿಯುತ್ತಿದೆ. ಇವರು ಬಲ್ಗೇರಿಯರಿಗೆ ಕನ್‌ಸ್ತಂತಿನೋಪಲಿನಲ್ಲಿ ಕೂಡುವರು.

ಅಡ್ರಿನೋಪಲಿನ ಸಮೀಪ ತಾ. ೮ರಲ್ಲು ಆದ ಯುದ್ಧದಲ್ಲಿ ತುರ್ಕರು ಬಲ್ಗೇರಿಯರನ್ನು ಸೋಲಿಸಿದರೆಂದೂ ಈ ಯುದ್ಧವು ತುರ್ಕಿ ಇತಿಹಾಸದಲ್ಲಿ ಅತೀ ವಿಶೇಷವಾದ ಯುದ್ಧವಾಗಿತ್ತೆಂದೂ ಅಡ್ರಿನೋಪಲಿನ ವಾಲಿಯು ವರದಿ ಮಾಡಿರುವರು. ಆದರೆ ಇದು ದೃಢೀಕರಿಸಲ್ಪಡಲಿಲ್ಲ.

ಅಡ್ರಿನೋಪಲಿನ ಹೊರಗಡೆ ಇದ್ದ ೨ ಕೋಟೆಗಳು ತುರ್ಕರಿಗೆ ವಶವಾಯಿತು. ಇನ್ನು ಅಡ್ರಿನೋಪಲ್ ವಶವಾಗಲಿಕ್ಕೆ ಹೆಚ್ಚಿನ ತಡವಿಲ್ಲವೆಂಬದಾಗಿ ವಾರ್ತೆ ಬಂದಿರುವದು.

ತಾ. ೧೦ ಚಟ್ಲಾಜ ಲ್ಯಾನಿನ ಉತ್ತರ ಕಡೆಯ ಮುಖ್ಯ ಕೋಟೆಯನ್ನು ಬಲ್ಗೇರಿಯರು ವಶಮಾಡಿಕೊಂಡರು. ಇಲ್ಲಿ ತುರ್ಕರು ಸಾಯುವ ತನಕ ಯುದ್ಧಮಾಡಿದರು. ಈಗ ಬಲ್ಗೇರಿಯರು ಕನ್‌ಸ್ತಂತಿನೋಪಲಿಗೆ ೨೦ ಮೈಲು ದೂರದಲ್ಲಿದ್ದಾರೆ. ಚಟ್ಲಾಜದಲ್ಲಿ ಆದ ಯುದ್ಧವು ಈ ವರೆಗೆ ನಡೆದ ಯುದ್ಧಗಳಲ್ಲೆಲ್ಲಾ ಕಠಿಣತರವಾಗಿತ್ತು ಎಂಬದಾಗಿ ಸ್ಟೇಟ್ಸ್‌ಮೇನ್ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ತಾ. ೧೧:—ಬಲ್ಗೇರಿಯರು ಕನ್‌ಸ್ತಂತಿನೋಪಲಿಗೆ ಹೋಗಲಿಕ್ಕಿರುವುದರಿಂದಲೂ ಆಸ್ಟ್ರಿಯವು ಸಲೋನಿಕದಲ್ಲಿ ತನ್ನ ಹಕ್ಕನ್ನು ಸ್ಥಾಪಿಸಲಿಕ್ಕಿರುವದರಿಂದಲೂ ಈ ಯುದ್ಧವು ದೊಡ್ಡ ಯುದ್ಧವಾಗಿ ಪರಿಣಮಿಸಿ ಶ್ರೇಷ್ಠ ರಾಜ್ಯಗಳು ಸಹಾ ಸೇರುವ ಹಾಗಾಗುತ್ತದೋ ಏನೋ ಎಂಬದಾಗಿ ಆಯಾ ಪತ್ರಿಕೆಗಳು ಅಭಿಪ್ರಾಯ ಪಡುವವು.

ತುರ್ಕರ ಮೂರು ಯುದ್ಧ ಹಡಗಗಳು ಚಟ್ಲಾಜಿನ ಸೇನೆಗೆ ಸೇರಿಕೊಳ್ಳುವರೆ ಕಪ್ಪು ಸಮುದ್ರಕ್ಕೆ ಹೋಗಿರುವದು.

ಮರ್ಮೋರ ಕರಾವಳಿಯಲ್ಲಿರುವ ಸಿಲ್ವಿರಿ ಎಂಬ ಪಟ್ಟಣವನ್ನು ತುರ್ಕ ಸೈನೀಕರು ಸುಟ್ಟುಹಾಕಿ ಕ್ರೈಸ್ತರನ್ನು ಕೊಲೆಮಾಡಿದರೆಂಬ ವಾರ್ತೆ ಬಂದಿರುವದು.

ಕನ್‌ಸ್ತಂತಿನೋಪಲಿನಲ್ಲಿ ಈಗ ೧೦ ಸಾವಿರ ಮಂದಿ ಗಾಯವೊಡೆದ ಸೈನೀಕರಿದ್ದಾರೆ. ಇವರೆಲ್ಲಾ ಸ್ವಲ್ಪ ಸ್ವಲ್ಪ ಗಾಯಪಟ್ಟವರು. ಹೆಚ್ಚಿಗೆ ಗಾಯವೊಡೆದವರನ್ನು ಯುದ್ಧರಂಗದಲ್ಲಿಯೇ ಬಿಟ್ಟಿರುವರು. ಅನೇಕರು ಆಹಾರವೂ ನೀರೂ ಇಲ್ಲದೆ ಮೃತಪಟ್ಟಿರುವರು. ಮರೆಹೊಕ್ಕೊಳ್ಳಲಿಕ್ಕೆ ದಿವಸಕ್ಕೆ ಸಾವಿರಾರು ಜನರು ಕನ್‌ಸ್ತಂತಿನೋಪಲಿಗೆ ಬರುತ್ತಿದ್ದಾರೆ. ಅವರಿಗೆ ತಮ್ಮ ಗ್ರಾಮಗಳಿಗೆ ಪುನಃ ಹೋಗಲು ಮನಸ್ಸಿಲ್ಲ. "ಯೂರೋಪು ನಮಗಲ್ಲ, ಸರಕಾರವು ನಮಗೆ ಆಸ್ಯ ಮೈನರಿನಲ್ಲಿ ಸ್ಥಳಕೊಟ್ಟರೆ ನಾವು ಅಲ್ಲಿಗೆ ಹೋಗಿ ಸುಖದಿಂದಿರುವೆವು" ಎಂದು ಅವರು ಹೇಳಿಕೊಳ್ಳುತ್ತಿದ್ದಾರೆ.

ಈ ತನಕವಾದ ಯುದ್ಧದಿಂದ ಯಾವದೊಂದು ಫಲಿತಾಂಶವು ತೋರಿ ಬರಲಿಲ್ಲ. ಈಗ ಶತ್ರುಗಳು ಕನ್‌ಸ್ತಂತಿನೋಪಲಿನ ಹೆಬ್ಬಾಗಲಾದ ಚಟ್ಲೆಜಿನಲ್ಲಿದ್ದಾರೆ. ಕನ್‌ಸ್ತಂತಿನೋಪಲಿನ ಭವಿಷ್ಯವು ಇಲ್ಲಿ ಆಗುವ ಯುದ್ಧದಿಂದ ಗೊತ್ತಾಗುವುದು. ಆದ್ದರಿಂದ ಪ್ರಜೆಗಳು ಈಗ ಯಾವದೊಂದು ವಿಧವಾಗಿ ಭಯಪಡುವ ಹಾಗಿಲ್ಲ ಎಂಬದಾಗಿ ತುರ್ಕಿ ಮಂತ್ರಿಯು ಡಂಗುರ ಹೊರಡಿಸಿರುವರು.

ಮಾಲ್ಟದಲ್ಲಿದ್ದ ಬ್ರಿಟಿಷರ ಹಿಬ್ರಾನಿಯ, ಕೊಮನ್‌ವೆಲ್ತ್, ಡೊಮಿನಿಯಲ್ ಎಂಬ ಯುದ್ಧ ಹಡಗಳೂ, ಬ್ಲೇಕ್ ಪ್ರಿನ್ಸ್ ಮತ್ತು ಕಂಬರ್‌ಲೇಂಡ್ ಎಂಬ ಕ್ರೂಝರ್ ನಾವೆಗಳೂ ಕನ್‌ಸ್ತಂತಿನೋಪಲಿಗೆ ಹೊರಟಿರುವದು.

ಸರ್ವಿಯದಿಂದ ಶೆರೆ ಹಿಡಿಯಲ್ಪಟ್ಟ ತುರ್ಕಿ ಸೇನೆಯ ೬೦,೦೦೦ ಮಂದಿಯೊಳಗೆ ವಿಷಮ ಜ್ವರವು ಸೊಂಕಿಯದೆಂದು ವಾರ್ತೆ ಬಂದದೆ.

ರುಷ್ಯಾ ಸರಕಾರದವರು ವ್ಯೂಹಕೂಡಿಸುತ್ತಿದ್ದಾರೆಂಬದಾಗಿ ತಿಳಿದು ಬರುತ್ತದೆ.

ಆಘಖಾನರವರು ಮುಸಲ್ಮಾನ್ ಯುನಿವರ್ಸಿಟಿಗೆ ಕೂಡಿಸಿದ ಹಣವನ್ನು ರೆಡ್‌ಕ್ರಿಸೆಂಟ್ ಫಂಡಿಗೆ ಕೊಡಬೇಕೆಂದು ಸೂಚಿಸಿದ್ದಾರೆಂಬ ಮಾತಿಗೆ ಆಧಾರವಿಲ್ಲವೆಂದೂ ಯುನಿವರ್ಸಿಟಿಗೆ ಕೂಡಿದ ಹಣವು ಇತರ ಕೆಲಸಗಳಿಗೆ ಪ್ರಯೋಗಿಸಲ್ಪಡ ಕೂಡದೆಂದೂ ಆಘಖಾನರವರೇ ಪ್ರಕಟಿಸಿರುವರು.

ತುರ್ಕಿಗೆ ಹಿಂದೂಸ್ಥಾನದಿಂದಲೂ ಮುಸಲ್ಮಾನ ದಾಕ್ತರರುಗಳೂ, ಡ್ರೇಸರರೂ ಕಳುಹಿಸಲ್ಪಡುವರು. ಹೈದರಾಬಾದಿನ ನೈಜಾಮರವರು ರೆಡ್‌ಕ್ರಿಸೆಂಟ್ ಫಂಡಿಗೆ ೧೦೦೦ ಪವನು, ಮಂತ್ರಿಯವರು ೪೦೦ ಪವನು ವಂತಿಗೆ ಕೊಟ್ಟಿರುವರು.

ಕಲ್ಕತ್ತ ಮುಂಬಾಯಿ, ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈ ಉದ್ದೇಶಕ್ಕಾಗಿ ಸಭೆಯು ಕೂಡಿ ಹಣ ಕೂಡಿಸುತ್ತಿದ್ದಾರೆ.

ಹಿಂದೂಸ್ಥಾನದಲ್ಲಿರುವ ಮುಸಲ್ಮಾನ್ ಬೇಂಕಿನವರು ತುರ್ಕಿ ಸರಕಾರದವರಿಗೆ ಸಾಲಕೊಡಲು ನಿಷ್ಕರ್ಷಿಸಿರುವರು. ಇದಕ್ಕೆ ವ್ಯಾಸರಾಯ ಪ್ರಭುಗಳ ಅಪ್ಪಣೆಯು ದೊರಕಿರುವದು.

* * *

ಸರ್. ಎಫ್. ಪೊನೊಸೊನ್ಬಿಯವರು ಮುಂಬಾಯಿ ಗವರ್ನರರಾಗಿ ನೇಮಿಸಲ್ಪಟ್ಟಿದ್ದಾರೆಂಬದಾಗಿ ಡೈಲಿ ಮೈಲ್ ಪತ್ರಿಕೆಯು ಹೇಳುವದು. ಆದರೆ ಇನ್ನೂ ಈ ವಿಷಯ ನಿಶ್ಚಯವಾಗಲಿಲ್ಲವೆಂಬದಾಗಿ ಇಂಡಿಯಾ ಆಫೀಸಿನಲ್ಲಿ ಹೇಳುವರು. ಇಂಡಿಯಾ ಆಫೀಸಿನಲ್ಲಿ ಈ ವಿಷಯವು ಇನ್ನೂ ಸರಕಾರ ಕಡೆಯಿಂದ ಪ್ರಕಟಿಸಲ್ಪಡದಿದ್ದರೂ ಸರ್ ಎಫ್. ಪೊನೊಸೊನ್ಬಿಯವರು ಮುಂಬಾಯಿ ಗವರ್ನರರಾಗಿ ಆರಿಸಲ್ಪಟ್ಟಿದ್ದಾರೆಂಬ ವಾರ್ತೆ ನಿಜ ಎಂದು ರೂಟರ್ಸ್ ಏಜನ್ಸಿಯವರು ಹೇಳುವರು.

* * *

ಅಮೇರಿಕದ ಯುನೈಟೆಡ್ ಸ್ಟೇಟಿನ ಪ್ರೆಸಿಡೆಂಟರಾಗಿ ಡಾಕ್ಟರ್ ವಿಲ್ಸನರವರು ಆರಿಸಲ್ಪಟ್ಟರು. ಇವರಿಗೆ ಮಾಜಿ ಪ್ರೆಸಿಡೆಂಟರಾದ ರೊಸ್‌ವೆಲ್ಟರಿಗಿಂತಲೂ, ಟಾಫ್ಟರಿಗಿಂತಲೂ ಹೆಚ್ಚಿಗೆ ಓಟುಗಳು ದೊರಕಿರುವದು. ವಿಲ್ಸನರಿಗೆ ೬,೧೯೨,೦೦೦ ಓಟುಗಳು, ರೊಸ್‌ವೆಲ್ಟರಿಗೆ ೪,೧೯೪,೦೦೦, ಟಾಫ್ಟರವರಿಗೆ ೩,೫೮೬,೦೦೦ ಓಟುಗಳು ದೊರಕಿತು.

ಉತ್ತರ ಹಿಂದೂಸ್ಥಾನ.

ಮುಂಬಾಯಿ ಗವರ್ನರರಾದ ಸರ್ ಜೋರ್ಜ್ ಕ್ಲಾರ್ಕರವರ ಕೆಲಸದ ಅವಧಿಯು ಇನ್ನೊಂದು ವರ್ಷಕ್ಕೆ ಹೆಚ್ಚಿಸಲ್ಪಟ್ಟದೆಂದು ತಿಳಿದುಬರುತ್ತದೆ.

* * *

ಬಂಗಾಳದಲ್ಲಿ ಕಳದವಾರ ಸುಂಟರಗಾಳಿ ಬೀಸಿತ್ತೆಂದು ತಿಳಿಸಿತ್ತಷ್ಟೆ. ಈ ಸುಂಟರ ಗಾಳಿಯಿಂದ ಫರಿಡ್‌ಪುರ ಜಿಲ್ಲೆಯಲ್ಲಿ ೪ ಮಂದಿ ಹತರಾದರು. ೪೦ ಮಂದಿ ಗಾಯಪಟ್ಟರು. ಇತರ ಗ್ರಾಮಗಳಲ್ಲಿಯೂ ಜೀವನಷ್ಟವಾಗಿಯದೆ ಎಂಬದಾಗಿ ವರದಿ ಬಂದಿರುವದು. ಇದರಿಂದ ಪೈರುಗಳಿಗೆ ಅತಿರೇಕ ನಷ್ಟ ಸಂಭವಿಸಿರುವದು.

* * *

ಸಿಮ್ಲದಲ್ಲಿ ಹೆಸರುವಾಸಿಯಾದ ಪ್ರಹಲಾದ್‌ಪೂರಿ ಎಂಬ ದೇವಸ್ಥಾನದೊಳಗೆ ಯಾರೋ ಕಳ್ಳರು ನುಗ್ಗಿ ಅಲ್ಲಿದ್ದ ದೇವತೆಯ ಪ್ರತಿ ರೂಪದ ಬೆಳ್ಳಿಯ ಕಿರೀಟವನ್ನು ಕಳಚಿ ಪ್ರತಿರೂಪವನ್ನು ಒಂದು ಭಾವಿಗೆ ಬಿಸಾಡಿರುವರು.

* * *

ಕೆಲವು ದಿವಸಗಳ ಹಿಂದೆ ನಾರಾಯಣಗಂಜಿಯ ಪೋಲೀಸಿನವರು ಮೆಮನ್‌ಸಿಂಘಿನ ಮುನ್ಸಿಫರಾದ ಮದನಮೋಹನ್‌ಶಾಹರವರ ಮಗನಾದ ಕಾಲಿಕುಮಾರ್ ಶಾಹ ಎಂಬ ಹುಡುಗನನ್ನು ಕೈದುಮಾಡಿದ್ದರು. ಇವನು ಡಕ್ಕಾ ಕೊಲೇಜಿಯಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಯು. ಈತನನ್ನು ಯಾವ ತಕ್ಸೀರಿನ ಮೇಲೆ ಕೈದುಮಾಡಿದರು ಎಂಬದಾಗಿ ತಿಳಿಯಲಿಲ್ಲ. ಪೋಲೀಸಿನವರು ಅವನನ್ನು ಈಗ ಬಿಟ್ಟಿರುತ್ತಾರೆ.

* * *

ಕಳದ ಜೂನು ತಿಂಗಳಲ್ಲಿ ಬಂಗಾಳ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳವರು ಹೋಗುತ್ತಿದ್ದ ಅಗ್ಗಾಡಿಯನ್ನು ಕೆಡವಲು ಪ್ರಯತ್ನಿಸಿದ್ದರಿಂದ ಈ ಸಾರಿ ಕಾರ್ಮಿಖಯೇಲ್ ಪ್ರಭುಗಳು ಘಾಮು ಎಂಬಲ್ಲಿಂದ ಸಿಲ್ಲಿಗೂರು ಎಂಬಲ್ಲಿಗೆ ಪ್ರಯಾಣಮಾಡುವಾಗ ಏನೊಂದು ಅವಗಡವು ಆಗದ ಹಾಗೆ ಅಲ್ಲಲ್ಲಿ ಬಹು ಜಾಗ್ರತೆಯಿಂದ ಪೋಲೀಸಿನವರು ಪಹರೆ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಪೋಲೀಸಿನವರು ಒಬ್ಬ ಬಂಗಾಳಿ ಯುವಕನನ್ನು ಅನುಮಾನದಿಂದ ಕೈದು ಮಾಡಿರುವರು.

* * *

ಇದೇ ತಿಂಗಳ ತಾ. ೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೪೧೦ ಮಂದಿಗೆ ಪ್ಲೇಗ ಬೇನೆಯು ಸೊಂಕಿ ೧೮೭೫ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೮೮೨; ಮದ್ರಾಸ್ ೫೯; ಬಂಗಾಳ ೫; ಬಿಹಾರ್ ಮತ್ತು ಒರಿಸ್ಸ ೨೧; ಸಂಯುಕ್ತ ಸಂಸ್ಥಾನ ೧೬೩; ಪಂಜಾಬು ೪೯; ಬರ್ಮ ೧೦; ಮಧ್ಯ ಸಂಸ್ಥಾನ ೩೫; ಮೈಸೂರು ೧೧೦; ಹೈದರಾಬಾದ್ ೧೧೨; ಮಧ್ಯ ಹಿಂದೂಸ್ಥಾನ ೯; ರಜಪುತಾನ ೪೨೦ ಮರಣಗಳಾದವು.

ದಕ್ಷಿಣ ಹಿಂದೂಸ್ಥಾನ.

ಫೋರೆಸ್ಟ್ ಕಮಿಟಿಯವರು ಇದೇ ತಿಂಗಳ ತಾ. ೧೩, ೧೪, ೧೫, ೧೬ರಲ್ಲು ಚೆಂಗಲ್ಪಟ್ಟ್ ಜಿಲ್ಲೆಯಲ್ಲಿ ರೈತರ ಹಾಲಾಹವಾಲೆಗಳನ್ನು ಕೇಳುತ್ತಿದ್ದಾರೆ.

* * *

ಇದೇ ತಾ. ೫ರಲ್ಲು ಹೈದರಾಬಾದಿನ ಸುಡ್ಡಾರ್ ಬಜಾರಿನಲ್ಲಿ ರಾಜಬ್ಬಾಲಿಯವರ ಬಂಡಶಾಲೆಯಲ್ಲಿದ್ದ ಸಿಡಿಮದ್ದು ಆಕಸ್ಮತ್ತಾಗಿ ಸಿಡಿದು ೧೦೦ ಮಂದಿ ಕೊಲ್ಲಲ್ಪಟ್ಟರು. ೨೦೦ ಮಂದಿ ಗಾಯವೊಡೆದರು. ೩ ಸೋಲ್ಜರರು ಸಹಾ ಈ ಅನಾಹುತಕ್ಕೆ ಗುರಿಯಾದರು.

* * *

ಬೆಂಗಳೂರು ಸಿಟಿ ಮತ್ತು ಸ್ಟೇಶನಿನಲ್ಲಿ ಟ್ರಾಮು ಗಾಡಿಗಳನ್ನು ಪ್ರಯೋಗಿಸುವ ಆಲೋಚನೆಯು ಇಂಡಿಯಾ ಸರಕಾರದಿಂದ ಮಂಜೂರಾತಿ ಪಡೆದಿರುವದು. ಈ ಕೆಲಸವನ್ನು ನೆರವೇರಿಸುವುದಕ್ಕೆ ಬೇಕಾದ ಸಾಹಿತ್ಯವನ್ನು ಅಮೇರಿಕ ಮತ್ತು ಯೂರೋಪುದೇಶದಿಂದ ತರಿಸಿಕೊಳ್ಳುವರು. ಈ ಕೆಲಸವು ತೀರಲಿಕ್ಕೆ ೧೩ ತಿಂಗಳು ಹಿಡಿಯುವವು.

* * *

ಮೈಸೂರು ಸರಕಾರದ ಸೇವಿಂಗ್ಸ್ ಬೇಂಕುಗಳಲ್ಲಿ ಒಂದು ವರ್ಷದಲಿ ಒಬ್ಬನ ಹೆಸರಿನಲ್ಲಿ ೨೦೦೦ ರೂಪಾಯಿಗಿಂತಲೂ ಹೆಚ್ಚಿಗೆ ತೆಗೆದುಕೊಳ್ಳಕೂಡದೆಂಬ ನಿಯಮವನ್ನು ಇಂಡಿಯಾ ಸರಕಾರದವರು ರದ್ದುಮಾಡಿ ಒಬ್ಬನ ಹೆಸರಿನಲ್ಲಿ ೨೦೦೦ಕ್ಕಿಂತಲೂ ಹೆಚ್ಚು ಹಣ ತೆಗೆದುಕೊಳ್ಳಬಹುದೆಂಬ ಹುಕುಂ ಮಾಡಿರುವರು.

* * *

ಕರೂರು ಮುನಿಸಿಪಾಲಿಟಿಯ ಕಾರ್ಯಗಳು ತೃಪ್ತಿಕರವಾಗಿ ನಡೆಯಿಸಲ್ಪಡುವುದಿಲ್ಲವೆಂಬದನ್ನು ಮದ್ರಾಸ್ ಸರಕಾರದವರು ಕಂಡು ಆ ಮುನಿಸಿಪಾಲಿಟಿಯಲ್ಲಿರುವ ಕುಂದುಕೊರತೆಗಳನ್ನು ಸರಿಮಾಡಿ ಒಳ್ಳೇತಾಗಿ ಅದರ ಕಾರ್ಯಗಳನ್ನು ನಡಿಸದಿದ್ದರೆ ನಿಮಗೆ ವಹಿಸಿರುವ ಸ್ಥಳಿಕ ಸರಕಾರದ ಸಾತಂತ್ರ್ಯವನ್ನು ವಜಾಮಾಡಬೇಕಾಗುವದೆಂದು ಆ ಮುನಿಸಿಪಾಲಿಟಿಯನ್ನು ಎಚ್ಚರಿಸಿರುವರು.

* * *

ಮೈಸೂರು ದಿವಾನರಾಗಿ ನೇಮಿಸಲ್ಪಟ್ಟ ವಿಶ್ವೇಶ್ವರಯ್ಯನವರು ತಾ. ೧೦ರಲ್ಲು ದಿವಾನ್ ಕೆಲಸವನ್ನು ವಹಿಸಿಕೊಂಡರು.

* * *

ಇದೇ ತಾ. ೧೧ರಲ್ಲು ಮದ್ರಾಸಿನಲ್ಲಿ 'ಆಲ್ ಇಂಡಿಯ ಸೆನಿಟರಿ ಕನ್ಫರೆನ್ಸ್' ಎಂಬ ಆರೋಗ್ಯ ಸಂಬಂಧವಾಗಿ ಆಲೋಚಿಸುವ ಸಭೆಯು ಕೂಡಿತು. ಈ ಸಭೆಗೆ ಸರ್ ಹಾರ್ಕೊಟು ಬಟ್ಲರವರು ಅಧ್ಯಕ್ಷರಾಗಿದ್ದರು. ಸಭೆಗೆ ಸಿಲೋನ್, ಮದ್ರಾಸ್, ಮುಂಬಾಯಿ, ಬಂಗಾಳ, ಬರ್ಮ, ಬಿಹಾರ್ ಒರಿಸ್ಸ, ಅಸ್ಸಾಮು ಹೈದರಾಬಾದ್, ಮೈಸೂರು ಮೊದಲಾದ ಪ್ರಾಂತ್ಯಗಳಿಂದ ಪ್ರತಿನಿಧಿಗಳುಕೂಡಿ ಬಂದಿದ್ದರು.

ದಕ್ಷಿಣ ಕನ್ನಡ.

ಆಯುರ್ವೇದಿಕ್ ವೈದ್ಯರಾದ ಮೆಸ್ಸರ್ ಜೆ. ಮುಳಿಯಿಳ್ ಎಂಡ್ ಸನ್ಸ್ ಕಾಸರಗೋಡು, ಇವರ ಔಷಧಿಗಳ ಪಟ್ಟಿಯನ್ನು ಈ ಸಂಚಿಕೆಯೊಂದಿಗೆ ವಾಚಕರ ಅವಗಾಹನೆ ಬಗ್ಗೆ ಇಟ್ಟಿರುವೆವು.

* * *

ಕಾಸರಗೋಡು:—ಮೊನ್ನೆ ಸೋಮವಾರ ದಿನ ಸಾಯಂಕಾಲ ನಮ್ಮ ಕಾಸರಗೋಡು ಪಟ್ಟಣದಲ್ಲಿ ಒಂದು ಬೈಸಿಕಲಿನ ಅವಗಡವು ಸಂಭವಿಸಿತು. ಇಲ್ಲಿಯ ಯುವಕರೊಬ್ಬರು ಹೊಸದಾಗಿ ಬೈಸಿಕಲಿನಲ್ಲಿ ಸವಾರಿಮಾಡುವುದಕ್ಕೆ ಕಲಿಯುತ್ತಿದ್ದಾಗ ಪಟ್ಟಣದ ಮಧ್ಯೆ ಹೆಚ್ಚಿನ ಜನಸ್ತೋಮವಿದ್ದ ಸ್ಥಳದಲ್ಲಿ ಓಡಿಸಿದರು. ಆಗ ಅದು ಒಬ್ಬ ಮುದುಕನ ಮೈಗೆ ತಾಗಿ ಅವನು ಕೆಳಗೆ ಬಿದ್ದು ವಿಶೇಷ ಗಾಯಹೊಂದಿದನು. ಅಷ್ಟರಲ್ಲಿ ಅಲ್ಲಿ ನೂರಾರು ಜನರು ಕೂಡಿದರು. ಸಮೀಪದಲ್ಲಿ ಹಾದುಹೋಗುತ್ತಿದ್ದ ಒಬ್ಬ ಪೊಲೀಸ್ ಸಬ್‌ಇನ್ಸಪೆಕ್ಟರವರು ಸದರಿಯವರನ್ನು ಸ್ಟೇಶನಿಗೆ ಕರೆದುಕೊಂಡು ಹೋದರು. ಮೋದಂಡ ಸ್ಥಿತಿಯಲ್ಲಿದ್ದ ಈ ಮುದುಕನನ್ನು ಆಸ್ಪತ್ರಿಗೆ ವೈದರು. ಕಡೆಗೆ ಅಪರಾಧಿಯಿಂದ ಹತ್ತು ರೂಪಾಯಿಗಳನ್ನು ಮುದುಕನಿಗೆ ಕೊಡಿಸಿ ಅಪರಾಧಿಯನ್ನು ಬಿಟ್ಟು ಬಿಟ್ಟರೆಂದು ಕೇಳುತ್ತೇವೆ. ಪೊಲೀಸಿನವರು ಅವರನ್ನು ವಿಚಾರಣೆಗೆ ಗುರಿಪಡಿಸದೆ ಬಿಟ್ಟುಬಿಟ್ಟದ್ದರಿಂದ ಇನ್ನು ಮುಂದೆ ಕೂಡಾ ಬೈಸಿಕಲ್ ಸವಾರರು ಜನಸ್ತೋಮವಿರುವ ಸ್ಥಳದಲ್ಲಿ ಓಡಿಸಿ ಹೆಚ್ಚಿನ ಅವಗಡಕ್ಕೆ ಎಡೆ ಕೊಡುವರೋ ಎಂಬ ಭಯವಿದೆ.

ಕಳೆದ ಸಂಚಿಕೆಗಳೊಂದರಲ್ಲಿ ಪ್ರಸ್ತಾಪಿಸಿದ ಮೈಲ್ ಬಂಡಿಯನ್ನು ಮಾತೊಂದರಿಂದ ನಿಲ್ಲಿಸಿ ಬಿಟ್ಟನೆಂದು ಹೇಳಿದ ಅದೇ ಸನ್ಯಾಸಿಯು ಮೊನ್ನೆ ಶನಿವಾರ ಇಲ್ಲಿ ಪರವಶೈದಿದನು. ಈತನು ಬಹಳ ಭಕ್ತಿವಂತ ಮನುಷ್ಯನಾಗಿದ್ದನೆಂತ ಎಲ್ಲರೂ ಅಭಿಪ್ರಾಯಪಡುತ್ತಾರೆ. ಈತನು ಸಾಯುವ ಮುಂಚೆ ತಾನು ಇಷ್ಟೇ ಹೊತ್ತಿಗೆ ಸಾಯುತ್ತೇನೆಂದು ಮುಂತಿಳಿಸಿ ಅದೇ ಸಮಯದಲ್ಲಿ ಸತ್ತು ಹೋದದ್ದನ್ನೂ ಇನ್ನು ಅನೇಕ ಸಂಗತಿಗಳು ಮುಂತಿಳಿಸಿದಂತೆ ನಡದದ್ದನ್ನೂ ನೋಡುವಾಗ ಬಹಳ ಆಶ್ಚರ್ಯವಾಗುತ್ತದೆ. ಈತನು ಸಾಯುವ ಸಮಯದಲ್ಲಿಯೂ ಮುಂಚೆಯೂ ಇವನನ್ನು ಅರಿತಿದ್ದ

ಮೆ| ಬೆಡ್ವಾರ್ ಎಂಬ ಪಾರ್ಶಿ ಶ್ರೀಮಂತರು ಇವನ ಶವ ಸಂಸ್ಕಾರವನ್ನು ಭಾರೀ ಆಡಂಬರದಿಂದ ಮಾಡಿಸಿದರು. ಈತನ ಸಮಾಧಿಯ ಮೇಲೆ ಬತ್ತಿ ಇಡುತ್ತೇನೆಂದು ಹರಿಕೆ ಹೇಳಿಕೊಂಡ ರೋಗಿಷ್ಠರು ಸ್ವಸ್ಥರಾಗುತ್ತಾರೆಂದೂ, ಸದ್ರಿ ಸನ್ಯಾಸಿಯು ಈಗ ಉಡುಪಿಯಲ್ಲಿರುತ್ತಾನೆಂದೂ ಊರ ಜನರು ಆಡುತ್ತಿರುವ ಮಾತುಗಳು ಎಷ್ಟರ ಮಟ್ಟಿಗೆ ಸತ್ಯವೆಂದು ತಿಳಿಯದು.

~~~~~~

ಪುತ್ತೂರು;—ಲೋಕಲ್ ಕ್ರೆಡಿಟ್ ಸಂಘದ ಆಫೀಸಿನಲ್ಲಿ ಭತ್ತದ ಸಂಘಕ್ಕೋಸ್ಕರ ಕೂಡಿದ ಭತ್ತವು ಇದೇ ತಾ. ೮ರಲ್ಲು ರಾ| ಬ್ರಹ್ಮಯ್ಯ ಸೆಟ್ಟರಲ್ಲಿಗೆ ವೈಯಲ್ಪಟ್ಟಿತು. ಅಲ್ಲಿ ಇಲ್ಲಿಯ ಡಿಸ್ಟ್ರಿಕ್ ಮುನ್ಸಿಫರಾದ ರಾ| ಕೆ. ಅಪ್ಪಾಜಿ ರಾಯರ ಅಧ್ಯಕ್ಷತೆಯಲ್ಲಿ ಸಭೆಕೂಡಿತು. ಸಭೆಯಲ್ಲಿ ಸಂಘದ ರಿಜಿಸ್ಟ್ರಾರರು ಕಳುಹಿಸಿದ ಕ್ರಮಗಳನ್ನು ಓದಿಹೇಳಿದನಂತರ ಸಂಘದ ಉದ್ದೇಶಗಳನ್ನು ಕುರಿತು ಅಧ್ಯಕ್ಷರು ಚಲೋ ಭಾಷಣವನ್ನು ಕೊಟ್ಟರು. ಕಡೆಗೆ ಸಂಘದ ಕಾರ್ಯನಿರ್ವಾಹಕ ಮೆಂಬರರು ನೇಮಿಸಲ್ಪಟ್ಟು ಸಭೆಯು ಅಗಲಿತು.

ಸುಬ್ರಮಣ್ಯದಲ್ಲಿ ಆಗುವ ಷಷ್ಠಿ ಜಾತ್ರೆಗೆ ಇದೇ ತಿಂಗಳ ತಾ. ೨೮ರಿಂದ ದಶಂಬರ ೧೫ರ ವರೆಗೂ, ಧರ್ಮಸ್ಥಳದಲ್ಲಿ ಆಗುವ ದೀಪೋತ್ಸವಕ್ಕೆ ನವಂಬರ ತಾ. ೨೮ರಿಂದ ದಶಂಬರ ತಾ. ೮ರ ವರೆಗೂ ಪ್ಲೇಗು ಸೊಂಕಿದ ಸ್ಥಳಗಳಿಂದ ಯಾತ್ರಸ್ಥರು ಬರಕೂಡದೆಂದು ಸರಕಾರದವರು ಪ್ರಕಟಿಸಿರುವರು.

~~~~~~

ಯರ್ಮಾಳ:—ಇಲ್ಲಿ ಪುನಃ ಬ್ರೇಂಚ್ ಪೋಸ್ಟಾಫೀಸು ಸ್ಥಾಪಿಸುವರೆ ಅನುಕೂಲವಿಲ್ಲವೆಂಬದಾಗಿ ಪೋಸ್ಟು ಮಾಸ್ಟರ್ ಜನರಲವರಿಂದ ಉತ್ತರ ಬಂದಿರುವದು.

~~~~~~

ಮಂಗಳೂರು:—ಕೆನರಾ ಬೇಂಕಿನ ಸ್ಥಾಪಕರಾದ ಅ. ಸುಬ್ರಾಯ ಪೈಗಳವರ ಜನನ ದಿನವನ್ನಾಚರಿಸುವ ಬಗ್ಯೆ ಬರುವ ತಾ. ೧೯ನೇ ಮಂಗಳವಾರ ಬೇಂಕಿಗೆ ರಜೆ ಇರುವದು.

ನಿನ್ನೆ ದಿನ ನಡದ ಮುನಿಸಿಪಾಲ್ ಚೇಯರ್‌ಮೇನರ ಚುನಾವಣೆಯಲ್ಲಿ ಮೆ. ಎಲ್. ಪಿ. ಫೆರ್ನಾಂದಿಸರಿಗಿಂತಲೂ ರಾ. ಅ. ವಾಸುದೇವ ಪೈಗಳಿಗೆ ೪ ಓಟುಗಳು ಹೆಚ್ಚಿಗೆ ಸಿಕ್ಕಿದ್ದರಿಂದ ಮ| ರಾ| ರಾ| ವಾಸುದೇವಪೈಗಳವರು ಚೇಯರಮೇನರ ಪದವಿಗೆ ಆರಿಸಲ್ಪಟ್ಟಿರುವರು.

ಸಬ್ ಮೇಜಿಸ್ಟ್ರೇಟರವರಾದ ಮೆ| ಎಸ್. ಎಸ್. ಎಸ್. ಸಲ್ಡಾಂಞರವರಿಗೆ ಇದೇ ತಿಂಗಳ ತಾ. ೭ರಿಂದ ಒಂದು ವರ್ಷದ ಫರ್ಲೋ ರಜೆ ಕೊಡಲ್ಪಟ್ಟಿರುವುದು.

ಇಲ್ಲಿಯ ಮುನಿಸಿಪಾಲ್ ಸೆಕ್ರಟರಿಯಾಗಿ ಆರಿಸಲ್ಪಟ್ಟ ಮೆ| ಜೆ. ಸಿಕೇರರವರ ನೇಮಕವು ಸರಕಾರದಿಂದ ಮಂಜೂರಾತಿ ಪಡೆದಿರುವದು.

ಇಲ್ಲಿಯ ಹಜೂರು ಶಿರೆಸ್ತದಾರರಾಗಿ ನೇಮಿಸಲ್ಪಟ್ಟ ಮೆ| ಕೆ. ರಾಮ ವರ್ಮರಾಜ ಬಿ. ಎ ರವರು ಇದೇ ತಾ. ೧೪ರಲ್ಲು ಕೆಲಸಕ್ಕೆ ಹಾಜರಾಗಿರುವರು.

ಪದವಿನ ಸುಂಕದ ಕಚ್ಚೆಯ ಕಂಟ್ರಾಕ್ಟರನು ಒಂದು ಬೈಸಿಕಲಿಗೆ ೨ ಆಣೆ ತಕ್ಕೊಳ್ಳುವುದರ ಬದಲಿಗೆ ೪ ಆಣೆ ತಕ್ಕೊಂಡದ್ದರಿಂದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಅವನಿಗೆ ಜುರುಮಾನೆ ವಿಧಿಸಿರುವರೆಂತ ತಿಳಿಯುತ್ತೇವೆ.

ಕಳೆದವಾರ ಮುನಿಸಿಪಾಲಿಟಿಯಲ್ಲಿ ೧ ಪ್ಲೇಗು ಮರಣವಾಯಿತು.

ಕಳದ ವಾರ ನಡೆದ ಇಲ್ಲಿಯ ಶಾಲೆಗಳ ಆಟದ ಪಂದ್ಯದಲ್ಲಿ ಕಿರಿಯರ ಪಂದ್ಯದಲ್ಲಿ ಅಲೋಸಿಯಸ್ ಕಾಲೇಜಿನವರು ಗೆದ್ದು ಬಹುಮಾನ ಪಾತ್ರೆಯನ್ನು ಹೊಂದಿದರು. ಅನಂತರ ನಡೆದ ಹಿರಿಯರ ಪಂದ್ಯಾಟದಲ್ಲಿ ಪಕ್ಷಪಾತವು ನಡೆಯಿತೆಂಬ ಆಧಾರದ ಮೇಲೆ ಮಿಶ್ಯನ್ ಹ್ಯಾಸ್ಕೂಲಿನ ಮತ್ತು ಕೆನರಾ ಹ್ಯಾಸ್ಕೂಲಿನ ಹಿರಿ ಪಂದ್ಯಾಟದವರು ಒಗ್ಗಟ್ಟಾಗಿ ಆಟರಂಗವನ್ನು ಬಿಟ್ಟು ಹಿಂದೆರಳಿದರು ಎಂಬದಾಗಿ ತಿಳಿಯುತ್ತೇವೆ.

ಇಲ್ಲಿಯ ಕದ್ರಿ ಸ್ಯೆಂಟ್ ಕ್ಸೇವಿಯರ್ಸ್ ಎಲಿಮೆಂಟರಿ ಶಾಲೆಯ ೫-೬-೭ನೇ ತರಗತಿಗಳು ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರ ಸಿಫಾರಸಿನ ಮೇಲೆ ಮದ್ರಾಸು ವಿದ್ಯಾಖಾತೆಯ ನಿಯಮಗನುಸಾರವಾಗಿ ಮಂಜೂರುಮಾಡಲ್ಪಟ್ಟಿರುವುದು.

ಪಶ್ಚಿಮ ತೀರದ ಜಮೀನುದಾರರ ಪ್ರತಿನಿಧಿಯಾಗಿ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಈಗ ಖಾಲಿಬೀಳಲಿಕ್ಕಿರುವ ಸ್ಥಳಕ್ಕೆ ಬಹುಮಾನಪಟ್ಟ ಎನ್. ಸುಬ್ಬರಾಯರವರು ಉಮೇದ್ವಾರರಾಗಿ ಈ ಸಾರಿ ನಿಲ್ಲುವುದಿಲ್ಲವೆಂದೂ ವೇಂಗಾಯಿಲ್ ಕೆ. ರಾಮನ್ ನಾಯನರರು ಈ ನೇಮಕಕ್ಕೆ ಉಮೇದ್ವಾರರಾಗಿರುವರೆಂದೂ ತಿಳಿಯುತ್ತೇವೆ. ವೇಂಗಾಯಿಲ್ ಕೆ. ರಾಮನ್‌ನಾಯನರು ಉತ್ತರ ಮಲಬಾರಿನ ದೊಡ್ಡ ತಾರ್ವಾಡಿನ ಕಾರ್ಣವನಾಗಿದ್ದು ವಿಸ್ತೀರ್ಣವಾದ ಆಸ್ತಿಗಳು ಕೂಡಿರುವ ದೇವಸ್ವಗಳುಳ್ಳವರಾಗಿ ರೈತರು ಪಡುವ ಕಷ್ಟನಷ್ಟಗಳನ್ನು ಅನುಭವದಿಂದ ತಿಳಿದಿರುವವರು, ಸುಮಾರು ೧೫ ವರ್ಷಗಳಿಂದ ಮಲಬಾರ್ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರರಾಗಿದ್ದು ಜಿಲ್ಲೆಯ ಸ್ಥಿತಿಗತಿಗಳನ್ನು ಬಲ್ಲವರು, ಇವರ ಆಸ್ತಿಗಳು ಈ ಜಿಲ್ಲೆಯ ಗಡಿಯಲ್ಲಿರುವುದರಿಂದ ನಮ್ಮ ಜಿಲ್ಲೆಯ ನಡಾವಳಿ, ಭೂಮಿಯ ಆಡಳಿತೆ ಮೊದಲಾದವುಗಳನ್ನು ತಿಳಕೊಳ್ಳುವರೆ ಅನುಕೂಲತೆಯುಳ್ಳವರಾಗಿರುವದರಿಂದ ನಮ್ಮ ಜಿಲ್ಲೆಯ ಓಟರ್ರುರು ಇವರ ಪರವಾಗಿ ತಮ್ಮ ಅನುಮತಿಯನ್ನು ಕೊಡುವರೆಂದು ನಂಬುತ್ತೇವೆ.

ಮೆ. ವಕೀಲ ಪಿ. ಸಂಜೀವನವರ ವಿವಾಹದ ಕುರಿತು ಡಿಸ್ಟ್ರಿಕ್ಟ ಬೋರ್ಡ್ ಮೆಂಬರ್ ರಾಮಯ್ಯಶೆಟ್ರು ಪ್ರಕಟಿಸಿದ ವೃತ್ತಾಂತದ ಸಂಬಂಧವಾಗಿ ಮಂಗಳೂರು ಬ್ರಹ್ಮಸಮಾಜದ ಮೆಂಬರರು ಸೆಕ್ರಿಟರಿ ಮೆ| ಕುದ್ಮುಲ ರಂಗರಾಯರಿಗೆ ಕೇಳಿದ್ದಲ್ಲಿ ಕಾನೂನು ಪ್ರಕಾರ ಸದರಿ ವಿವಾಹ ರಿಜಿಸ್ಟ್ರಿ ಬಗ್ಯೆ ಹೋಗಲಿಕ್ಕೆ ತಾನು ಬದ್ಧನಾಗಿದ್ದ ಕಾರಣ ತಾನು ವಿವಾಹಕ್ಕೆ ಹೋಗಿದ್ದೆಂತಲೂ, ತಾನಾಗಲೀ ಇತರ ಯಾರೂ ಆಗಲೀ ಧರ್ಮ ಸಂಬಂಧವಾದ ಕರ್ಮಾಂಗ ಯಾವದೂ ನಡಿಸಲಿಲ್ಲವೆಂತಲೂ ೧೮೭೨ನೇ ಆಕ್ಟು ಪ್ರಕಾರ ದೃಢೀಕರಣ ಪತ್ರಕ್ಕೆ ವಧುವರರ ಮತ್ತು ಸಾಕ್ಷಿಗಾರರ ದಸ್ಕತುಗಳು ತೆಗೆದುಕೊಂಡು ವಧುವರರ ಅನುಮತಿ ಪಡೆದು ವಿವಾಹವನ್ನು ತಾನು ರಿಜಿಸ್ಟ್ರಿ ಮಾಡಿದ್ದೆಂತಲೂ ಮೆ| ರಾಮಯ್ಯ ಶೆಟ್ರು ಪ್ರಕಟಿಸಿದ ಲೇಖನವು ವಾಚಕರಲ್ಲಿ ತಪ್ಪು ಗ್ರಹಿಕೆಯುಂಟು ಮಾಡುವ ಸ್ವಭಾವದ್ದೆಂತಲೂ ಉತ್ತರ ಬರೆದಿರುತ್ತಾರೆ.

ಬಹುಮಾನಪಟ್ಟ ರಾವ್ ಬಹದ್ದೂರ್ ಎನ್. ಸುಬ್ರಾಯರವರು ಡಿಸ್ಟ್ರಿಕ್ಟ್ ಬೋರ್ಡಿನ ವ್ಯಾಸ್ ಪ್ರೆಸಿಡೆಂಟರಾಗಿಯೂ ಇಲ್ಲಿಯ ಟ್ರೆಜರಿ ಡ್ಯೆಪಿಟಿ ಕಲೆಕ್ಟರರಾಗಿರುವ ರಾವ್ ಬಹದ್ದೂರ್ ಸಿ. ಗೋಪಾಲನ್ ನಾಯರರು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ನಿನ್ನೆಯ ದಿನ ನಡೆದ ಶಾಲೆಗಳ ಜಿಮ್ನಸ್ಟಿಕ್ ಪಂದ್ಯಾಟದಲ್ಲಿ ಮಿಶ್ಯನ್ ಹ್ಯಾಸ್ಕೂಲಿನ ಜೂನಿಯರ್ ಕ್ಲಬ್ಬಿನವರು ಜಯಪ್ರದರಾದರು.

ಸರಕಾರಿ ಮೊಕದಮೆಗಳಲ್ಲಿ ವ್ಯವಹರಿಸುವ ವಕೀಲರಿಗೆ ಮೊಕದಮೆಯ ಫಲಿತಾಂಶ ಹೇಗಾದರೂ ರೆಗ್ಯುಲೇಷನ್ ಫೀಸು ಸಲ್ಲತಕ್ಕದ್ದೆಂಬದಾಗಿ ಸರಕಾರದವರು ನಿರ್ಣಯಿಸಿರುವರು.

ಉಡುಪಿ ಮತ್ತು ಕಾರ್ಕಳದ ಜಮಾಬಂದಿಯನ್ನು ಈ ವರ್ಷ ಜಿಲ್ಲಾ ಕಲೆಕ್ಟರ್ ದೊರೆಗಳವರೇ ನಡಿಸುವರು.

ಈ ವರ್ಷ ಸರಕಾರದಿಂದ ಸೆಂಟ್ ಅಲೋಸಿಯಸ್ ಕಾಲೇಜಿಗೆ ೧೨,೦೦೦ ರೂಪಾಯಿ, ಬಿ. ಜಿ. ಯಂ. ಹ್ಯಾಸ್ಕೂಲಿಗೆ ೧೮೦೦ ರೂಪಾಯಿ, ಗಣಪತಿ ಮಿಡ್ಲ್ ಸ್ಕೂಲಿಗೆ ೬೦೦ ರೂಪಾಯಿ, ಉಡುಪಿ ಬಿ. ಜಿ. ಯಂ. ಹ್ಯಾಸ್ಕೂಲಿಗೆ ೮೦೦ ರೂಪಾಯಿ ಟೀಚಿಂಗ್ ಗ್ರಾಂಟು ದೊರಕುವದು.

ನೋಟಿಸು.

~~~~~~

ಲೋಕ ಪ್ರಸಿದ್ಧವಾದ ಕೌಂಟು ಮತ್ತೆಯಿಯವರ ಇಲೆಕ್ಟ್ರೋ ಹೊಮಿಯೊಪೆತಿಕ್ ಔಷಧಗಳನ್ನು ಕೆಳಗೆ ನಮೂದಿಸಿದ ಏಜಂಟರ ಮುಖಾಂತರ ಪಡಕೊಳ್ಳಬಹುದು.

ವಿಳಾಸ:—

A. Fernandes.
The Mangalore Mattei Agency.
Kankanady P. O. Mangalore.

~~~~~~

ವಿವಿಧ ವಿಷಯಗಳು.

ವಿಲಾಯತಿಯ ಬ್ಯಾಬಲ್ ಸೊಸ್ಯಾಟಿಯವರ ಕಳದ ವರುಷದ ರಿಪೋರ್ಟಿನಲ್ಲಿ ಸದರಿ ಸೊಸ್ಯಾಟಿಯವರು ಕಳದ ವರುಷದಲ್ಲಿ ೭,೪೪೮,೫೨೮ ಪುಸ್ತಕಗಳನ್ನು ಛಾಪಿಸಿದರೆಂತಲೂ, ಬ್ಯಾಬಲು ಭೂಲೋಕದ ೪೪೦ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟದೆ ಎಂತಲೂ, ಇಡೀ ವರುಷದಲ್ಲಿ ಈ ಸಂಬಂಧವಾಗಿ ಎರಡುವರೆ ಲಕ್ಷ ಪವನುಗಳು ಅಂದರೆ ೩೭॥ ಲಕ್ಷ ರೂಪಾಯಿ ಖರ್ಚಾಯಿತೆಂತಲೂ ತೋರುತ್ತದೆ. ನಾವು ಗೌರವ ಪಡುವ ವೇದಗಳೂ ಉಪನಿಷತ್ತುಗಳೂ ವಿಲಾಯತಿಯ ಭಾಷೆಗಳಲ್ಲಿ ವಿಲಾಯತಿಯವರು ತರ್ಜುಮೆ ಮಾಡಿದ್ದಾಗ್ಯೂ ನಾವು ನಮ್ಮ ಸ್ವದೇಶಿ ಭಾಷೆಗಳಾದ ಮಾರಾಟಿ, ಕನ್ನಡ, ಮಲೆಯಾಳಿ ತೆಲಗು ಮೊದಲಾದ ಭಾಷೆಗಳಲ್ಲಿ ಇದು ವರೆಗೂ ಪೂರ್ಣ ತರ್ಜುಮೆ ಮಾಡಿದ್ದಿಲ್ಲ. ಇದು ನಮ್ಮ ದೇಶದ ದುರ್ದಶೆಯೇ ಎಂದೆನ್ನಬೇಕು.

~~~~~~

ಜೀನಸುಗಳ ಧಾರಣೆ, ಮಂಗಳೂರು. (ರಜಂ)

ಮಸ್ಕತಿ ಅಕ್ಕಿ	5—14—0-6—6—0
ಗುಡ್ಡು ಮಸ್ಕತಿ... ...	5—10—0-6—0—0
ಮಸ್ಕತಿ ದುಯಂ... ...	5-10-0—6—0—0
ಗೌಡಿ ಸುಗ್ಗಿ	5-0-0-5—2—0
ಉಂಚು ಸುಗ್ಗಿ	5—12—0—5-14—6
ಮಸ್ಕತಿ ಬೆಳ್ತಿಗೆ	6—12—0
ಹೊಸ ಗುಡ್ಡುರಾಶಿ	4-10-0—4-15—0
ಹೊಸ ಭತ್ತ	2—1—9-2—2—6
ರಂಗೂನ್ ಬೆಳ್ತಿಗೆ ಗೋಣಿ 1ರ	11—6—0
ಹುರುಳಿ ಗೋಣಿ ೧, ಮುಡಿ 2ರ	6-10-0 6-12-0
ಉಪ್ಪು ಗೋಣಿ ೧ರ	3—8—0
ಕೊಬ್ರಿ ಖಂಡಿ ೧ರ ...	105-0-0
ಕೊಬ್ರಿ ಎಣ್ಣೆ ಮಣ ೧ರ	7—0—0
ಕೊಬ್ರಿ ಹಿಂಡಿ ಖಂಡಿ ೧ರ	32-0-0
ಊರು ಬೆಲ್ಲ ಖಂಡಿ ೧ರ	50—0—0
ಕಾಫಿ ಖಂಡಿ ೧ರ 270-0-0	275—0—0
ಕಾಳು ಮೆಣಸು ಖಂಡಿ	180—0—0
ಬಿಳಿ ಗೋಟು ಅಡಿಕೆ ಖಂಡಿ ೧ರ ...	86-0—0
ಪಚ್ಚೆಹೆಸರು ಗೋಣಿ ೧ರ	11-4-0
ಬೊಂಬಾಯಿ ಉದ್ದು ಗೋಣಿ ೧ರ	11-0—0
ಗೋದಿ ಗೋಣಿ ೧ಕ್ಕೆ	12—0—0
ಕಡಲೆ ಗೋಣಿ ೧ರ	8—0-0
ತೊಗರಿ ಗೋಣಿ ೧ರ	8-8-0
ತೊಗರಿಬೇಳೆ ಗೋಣಿ ೧ರ 11-0-0	13-0-0
ಮೋರಿಸ್ ಸಕ್ಕರೆ ಮಣ ೧ರ	2—13—0
ಎಳ್ಳಿಂಡಿ	35-0-0

~~~~~~

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

પ્રો. જેમ્સની વિજળીક શક્તિની ગોળીઓ
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका

"ಅಮೇರಿಕದ ವಿಶಿಷ್ಟತೆ."

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ—ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ| ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ.—ರೋಗದಿಂದ ಮುರಿದು ಹೋದ ಅಥವಾ ಬಸವಳದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಹೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನುಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮೆ.ಜೀ.ಸಿ. ಬ್ರೀತೋ(ಪೊಂಡಾ-ಗೋವೆ)ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮಿ. ಜೆ. ಆರ್. ಗಾಯಿಕವಾಡ, (ಸತ್ರಿಯ ಮಾಮಲತದಾರರು—ಎ.ಪಿ. ದ್ವಾರಾ ಅದಷ್ಟುಶೀಘ್ರದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳಉತ್ತಮವಿದೆ.

The Anglo Indian Drug & Chemical Company,
155, Market, Jumma Musid BOMBAY.

ಏಜಂಟರು:—ಡಿ. ಊಲನ್‌ವಾರ್ಟ್, ಮಂಗಳೂರು
~~~~~~

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾವಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. **ಪ್ರಮೇಹರಿಪು ಬಿಂದು.** ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. **ಕಾಮೇಶ್ವರ ಮಾತ್ರೆ.** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. **ಸರಳಭೇದಿ ಮಾತ್ರೆ.** ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. **ವಾಸಾವ ಲೇಹ.** ಕೆಮ್ಮು, ಗುಲ್ಮಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. **ವಾತಮುರಾರಿ ಬಾಮ್.** ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ **ಸವ್ವೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವನನ್ನುಂಟುಮಾಡುವದು. ತೊಲೆಗೆ ೧ ರೂ.

೧೫. **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಡೋಂಗರೆ ಇವರ ಬಾಲಾಮೃತ

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದ ಅಶಕ್ತತೆಯಿಂದುಂಟಾದ ರೋಗಗಳು ಸಂಪೂರ್ಣವಾಗಿ ಇಲ್ಲದಂತಾಗುತ್ತವೆ. ನಮ್ಮ ಬಾಲಾಮೃತವನ್ನೇ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದ್ದಲ್ಲಿ ಬಾಟ್ಲಿಯ ಮೇಲಿನ ನಮ್ಮ ಲೇಬಲಿನ ಪೂರಾ ಖಾತ್ರಿ ಮಾಡಿಕೊಂಡು ತೆಗೆದುಕೊಳ್ಳಿರಿ.

ಬಾಟ್ಲಿ ಒಂದರ ಕಿಮ್ಮತು 0—12—0. ವ್ಹಿ. ಪಿ. ಖರ್ಚು 0-4-0.

K. T. Dongre & Co., ಕೆ. ಟಿ. ಡೊಂಗರೆ ಮತ್ತು ಕಂಪೆನಿ
Girgaon Bombay. ಗಿರಗಾಂ ಮುಂಬಯಿ

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೇನಿ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.
ನಿಯಮಿತ ಮೂಲಧನ ರೂ. 10,00,000.
ಪ್ರತಿಜ್ಞಾತ ಮೂಲಧನ ರೂ. 85,00,00.
ಆಗತ ಮೂಲಧನ ರೂ. 10,6450.
ಭಂಡವಾಳ ರೂ. 12,00,000.
ವಿಮೆ ಮಾಡಿರುವವರ ಸಂಖ್ಯೆ 76,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ. ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ.

ಹಿಂದುಸ್ಥಾನ ಕೊಒಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್--30 ದಲ್ಹಾಸಿ ಸ್ಕ್ವೇಯರ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟಿದ್ದಾಗಿರುತ್ತದೆ.
ನಿಯಮಿತ ಮೂಲಧನ—ರೂ. ಒಂದು ಕೋಟಿ.
ಪ್ರತಿಜ್ಞಾತ ಮೂಲಧನ—ರೂ, 865,000,00
ಆಗತ ಮೂಲಧನ—ರೂ. 915,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸೀದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತಪಡಿಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವದಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರನ್ಯಾಕರು,
ಸೊಸ್ಯಾಟಿಯ ಏಜಂಟರು.
ಶ್ರೀಬಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

ದಿ ಏಸಿಯನ್ ಕಮರ್ಶಲ್

ಎಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮುಂಬಯಿ.

ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ ಪ್ರಿಮಿಯಂ ವಗೈರೆ ಇತರ ಕಂಪೆನಿಗಿಂತಲೂ ಅತೀ ಕಡಿಮೆಯಾಗಿರುತ್ತದೆ.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂ. 17—4—0 ತೆತ್ತು ಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರುಷ ಪ್ರಾಯದಲ್ಲಿ ಒಂದು ಸಾವಿರ ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವ 14 ವರುಷ ವಳಗಿನ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸುರು ಮಾಡಲ್ಪಟ್ಟ ಮಕ್ಕಳು ವಿಮೆಗೆ ಆರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟಲ್ಲಿ ವಿಮೆ ಮಾಡಿದ ಪೂರ್ಣ ಐವಜು ಅವರ ಬಾಧ್ಯಸ್ತರಿಗೆ ಸಿಕ್ಕುವುದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೂ ಹೆಂಗಸರನ್ನೂ 50 ವರುಷ ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 15 ವರುಷದ ಮೇಲಿನ ಮತ್ತು 30 ವರುಷದ ವಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊಳ್ಳುವದಿಲ್ಲ.

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹುದಾದ 1000 ವ ಅದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾರ ತೆರಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ತೆತ್ತು ಆತನ ಪ್ರಿಮಿಯಮ್ 4ರ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡಿಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈ ವರಿವಿಗೆ ಕಂಡುಬರುವದಿಲ್ಲ. ಆದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದರ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟ್ ರೋಡ್ ಉಡುಪಿ
ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಕ್ಷಿಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

---

ಕ್ಲೆಮೆಂಟರ ಮೆಜಿಕ್‌ಬಾಂ ತೈಲ್ಯವು.

ಈ ತೈಲ್ಯದಿಂದ ಸಕಲ ವಿಧದ ನೋವು ನಿವಾರಣೆಯಾಗುವದು. ತಲೆ ನೋವು ವಾಯುನೋವು, ಸೆಳತ, ಗಂಟ್ಲು ನೋವು, ಜನ್ನು ನೋವು, ಕೀಲುಗಳ ನೋವು, ಪಾರ್ಶ್ವ ವಾಯು, ವಿವಿಧವಾದ ವಾಯು ರೋಗಗಳು, ಶೀತ ರೋಗಗಳು, ಸಂದುವಾತ, ಚೇಳು ಕಡಿದ ನೋವು—ಇವುಗಳೆಲ್ಲಾ ಈ ತೈಲ್ಯ ಹಚ್ಚಿದ ಮಾತ್ರದಿಂದ ಚಮತ್ಕಾರಿಕವಾಗಿ ಮಾಯವಾಗುವವು ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪ್ರಯೋಗಿಸಿ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಇದರಷ್ಟು ಅಮೋಘವಾದ ತೈಲ್ಯವು ಬೇರೊಂದಿಲ್ಲವೆಂಬದಾಗಿ ಕಂಡುಕೊಂಡಿದ್ದಾರೆ. ಈ ಅತ್ಯುತ್ತಮವಾದ ತೈಲ್ಯವು ನೋವಿನ ಮೂಲವನ್ನು ಕಂಡುಹಿಡಿದು ಅದರ ಹುಟ್ಟಡಗಿಸಿಬಿಡುವದು.

ಕ್ರಯ ಸೀಸೆ ಒಂದಕ್ಕೆ ೧೨ ಆಣೆ, ಪ್ಯಾಕಿಂಗ್ ೪ ಆಣೆ. ಮೂರು ಅಥವಾ ಹೆಚ್ಚು ಬುಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡಲಾದೀತು. ಈ ತೈಲ್ಯವು ಎಲ್ಲಾ ವ್ಯಾಪಾರಸರಲ್ಲಿಯೂ ವೈದ್ಯರಲ್ಲಿಯೂ ಬಿಕರಿಮಾಡಲ್ಪಡುತ್ತದೆ.

ವಿಳಾಸ:—
ಏಜಂಟ್:— ಜೆ. ಎಸ್. ಕಣ್ಣೈಚೆಟ್ಟಿ, ಎಸ್. ಪೀಟರ್ಸ್.
ಜೂಲನ್‌ಕೇಪ ಮ್ಯಾನುಫೆಕ್ಚರರ್, ತುಮಕೂರ. 37 ವೇದಮಲೆಪಿಳ್ಳೆ ಬೀದಿ, ಪರಸುವಾಕಂ ವೇಪರಿ ಮದ್ರಾಸು!

ಒಂದೇ ಕಥೆ! ಅಪೂರ್ವ ಗ್ರಂಥ!! ದೊಡ್ಡ ಕಥೆ!!

ಪ್ರತಾಪಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಟರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿ ಹೋಗುತ್ತವೆ" ಎಂಬ ನೀತಿ; (೨) ಸ್ತ್ರೀಧರ್ಮ, ಸ್ತ್ರೀಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು, ಆರಾಮಾದಿ ವರ್ಣನೆಗಳು; (೬) ಮನುಷ್ಯ ಯತ್ನಕ್ಕೆ ವಿರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿ ನೋಡಿದರೆ ಸ್ವಾರಸ್ಯವು ಗೊತ್ತಾಗುವುದು. ಕ್ರಯ ೧ ರೂ. ಟಪ್ಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಇಡೀ ಜಿಲ್ಲೆಯಲ್ಲಿ ಅತ್ಯುತ್ತಮವಾದ ಮತ್ತು ಅಗ್ಗವಾದ ಔಷಧಾಲಯ!

P. M. KAMATH & CO.

Chemists and Druggists.

ಪಿ. ಎಮ್. ಕಾಮತ್ ಮತ್ತು ಕಂಪೆನಿ.

ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್.

ಇವರು ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ಬಳಿ ಹೊಸ ಕೋರ್ಟು ರಸ್ತೆಯಲ್ಲಿ ಗತ ಎ. ಎಲ್. ಕೃಷ್ಣ ಪೈಗಳು ಕೆಮಿಸ್ಟ ಶೋಪು ಕೆಲವು ಕಾಲ ಇಟ್ಟಿದ್ದ ವಿಶಾಲವಾದ ಕಟ್ಟೋಣದಲ್ಲೇ ಹೊಸ ಕೆಮಿಸ್ಟ್ ಶೋಪ್ ಯಾನೆ ಔಷಧಾಲಯವನ್ನು ಇಟ್ಟಿರುತ್ತಾರೆಂದು ಸರ್ವ ಜನರಿಗೂ ಆದರಪೂರ್ವಕ ತಿಳಿಸೋಣಾಗುತ್ತದೆ.

ಪಿ. ಎಮ್. ಕಾಮತ್ ಮತ್ತು ಕಂಪೆನಿಯವರ ಹೊಸ ಔಷಧಾಲಯದಲ್ಲಿ ಎಲ್ಲಾ ತರದ ಔಷಧಗಳನ್ನೂ, ಕೆಳಗೆ ಕಾಣಿಸಿದ ಇತರ ಸಾಮಾನುಗಳನ್ನೂ (Burgoyne & Burbidges) ಎಂಬ ಪ್ರಖ್ಯಾತಿಗೊಂಡ ಕಾರ್ಖಾನೆಯಿಂದ ಹೊಸತಾಗಿ ಇತ್ತಲಾಗೆ ತರಿಸಿ ಅವರ ಮೇಲ್ಕಂಡ ಹೊಸ ಕೋರ್ಟು ರಸ್ತೆಯಲ್ಲಿರುವ ಔಷಧಾಲಯದಲ್ಲಿ ಕಮ್ಮಿ ಕ್ರಯದಲ್ಲಿ ಮಾರಾಟಕ್ಕೆ ಇಟ್ಟಿರುತ್ತಾರೆ.

1. ಔಷದಗಾರರಿಗೆ ಮತ್ತು ಶಸ್ತ್ರವೈದ್ಯರಿಗೆ ಅವಶ್ಯಕವಾದ ಉಪಕರಣಗಳು, ಶಿಶುಗಳಿಗೆ ಹಾಲು ಕುಡಿಸುವ ಬಾಟ್ಲಗಳು, ಪಿಚ್ಕಾರಿಗಳು, ಔನ್ಸ್ ಗ್ಲಾಸುಗಳು, ಸಾಬೂನು ಮತ್ತು ಇತರ ಪರಿಮಳ ದ್ರವ್ಯಗಳು, ಥರ್ಮೋಮೆಟರಗಳು ಲೆಕ್ಟೋಮೆಟರಗಳು ವಗೈರೆ.

2. ಪ್ರಯಾಣಸ್ಥರಿಗೆ ಅವಶ್ಯಕವಾದ ಸಾಮಾನುಗಳು, ಪೋಚು, ಮತ್ತು ಸಣ್ಣ ಟ್ಯಾಂಫೀಸುಗಳು, ಥರ್ಮೊ ಬಾಟ್ಲಗಳು, ಹೊಲಿಗೆ ಯಂತ್ರಗಳು ವಗೈರೆ.

3. ಆರಾರೂಟ್, ಬಾರ್ಲಿ, ಬಿಸ್ಕೂಟು, ಒಕ್ಕೊ, ಚಾ, ಕೊಕೊವಾಹುಡ್ಡಿ, ಶಿಶುಗಳಿಗೆ ಅಸ್ವಸ್ಥದವರಿಗೂ ಬೇಕಾದ ಆಹಾರಗಳು ವಗೈರೆ ಅನೇಕ ವಿಧದ ಸಾಮಾನುಗಳು ದೊರಕುವವು.

ಅಹೋರಾತ್ರಿ ಎಲ್ಲಾ ಸಮಯಗಳಲ್ಲಿ ತರಬೇತು ಹೊಂದಿದ ಕಂಪೌಂಡರನು ಬಹಳ ಜಾಗ್ರತೆಯಿಂದ ಎಲ್ಲಾ ಔಷಧಗಳನ್ನು ತಯ್ಯಾರಿಸಿಕೊಡುವನು.

TRIAL ORDERS SOLICITED.

ವಿಳಾಸ:—

ಪಿ. ಎಮ್. ಕಾಮತ್ ಮತ್ತು ಕಂಪೆನಿ.
ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್
ಕೋರ್ಟು ಹೊಸ ರಸ್ತೆ ಮಂಗಳೂರು.

* * *

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅನ್ನಗ್ರರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಆತನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ. ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸುಲಭ ಕ್ರಯ! ಪರೀಕ್ಷಿಸಿರಿ!! ಸಂತೋಷ ಪಡುವಿರಿ!!!

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ. ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2—4—0 ಮಾತ್ರ. 5 ವರುಷಗಳ ಗ್ಯಾರೆಂಟಿ.

SUPERIOR WATCH Co.
Rs. 2/4.
Rs. 2/4.
POST BOX No. 167
MADRAS, E.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟಿದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡಿಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕೆ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು. ಬಹು ಬಲಿಷ್ಟವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟೆ ಸಹಿತ. ಕ್ರಯ ರೂ. 5-12-0. ಇದನ್ನು ಜುಲಾಯಿ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಘಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪಿಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:— ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಸೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ 6ನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವದಿವಿಮೆ ದುಬಾರೆ ಎಂಡೌಮೆಂಟ್ ಪೋಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ತೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯ ಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣದಗೋಸ್ಕರ ತಿಂಗಳಿಗೆ ೨ ರೂಪಾಯಿ ೧ ರೂಪ್ಯಾ ೮ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪೆನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರೆವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ತಿಲ್ಯಾನೋ
ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.
ಮಂಗಳೂರು, ದಕ್ಷಿಣ ಕನ್ನಡ.

ಸ್ವದೇಶಿಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಓಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ॥ ಜೋರ್ಜಕಿಂಗ್ ಎಫ್. ಎಫ್. ಎ ಎಫ್, ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

* * *

ಶ್ರೀ

ಪಾರಾಯಣಕ್ಕನುಕೂಲವಾದ ಪುಸ್ತಕಗಳು:—

1. ಶ್ರೀ ಭಗವದ್ಗೀತೆ, ಟೀಕಾತಾತ್ಪರ್ಯ ಸಹಿತವಾದದ್ದು, ಚಿಕ್ಕ ಬಾಲಕರಿಗೂ ತಿಳಿಯುವಂತೆ ಬಹು ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮತ್ತು ಇದು ಉತ್ತಮ ತರವಾದ ಕಾಗದವುಳ್ಳದ್ದಾಗಿಯೂ ಮುಕ್ತಾಫಲದಂತಿರುವ ಅಕ್ಷರಗಳಿಂದ ಕೂಡಿದ್ದಾಗಿಯೂ ಇರುವುದಲ್ಲದೆ, ಮಡಿಯಾಗಿರುವ ಸಮಯದಲ್ಲಿಯೂ ಪಾರಾಯಣಕ್ಕನುಕೂಲವಾಗುವಂತೆ ಉತ್ತಮವಾದ ಕಿತ್ತಾನಾರು ಬೈಂಡುಳ್ಳದ್ದಾಗಿದೆ. ಕ್ರಯ ರೂ. 1—12—0:
2. ಡಿಟ್ಟೊ ಚಿಕ್ಕ ಸೈಜು (ಮೂಲ ಮತ್ತು ತಾತ್ಪರ್ಯ ಸಹಿತವಾದದ್ದು. ರೂ 0—6—0
3. ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ತರವಾದ ಕಿತ್ತಾನಾರು ಬೈಂಡಿನಿಂದ ಮಾಡಿರುವ ಶ್ರೀ ಶ್ರೀನಿವಾಸ ಕಲ್ಯಾಣ ಕ್ರಯ ರೂ. 1—12—0
4. ಸಂಕ್ಷೇಪ ರಾಮಾಯಣವೆಂಬ ಶ್ರೀ ಬಾಲರಾಮಾಯಣವು ಟೀಕಾ ಸಹಿತವಾದದ್ದು. ಬಹು ರಸಯುಕ್ತವಾದದ್ದು, ಉತ್ತಮವಾದ ಪ್ರತಿ ಕ್ರಯ ರೂ. 0—4—0.
5. ಟೀಕಾ ತಾತ್ಪರ್ಯ ಸಹಿತವಾದ ಶ್ರೀ ಮುಕುಂದಮಾಲಾ ಸ್ತೋತ್ರವು. ಪಾರಾಯಣಕ್ಕೆ ಬಹು ಅನುಕೂಲವಾದ ಸ್ತೋತ್ರ ಪುಸ್ತಕವು, ಭಕ್ತಿರಸದಿಂದ ತುಂಬಿದೆ. ಶ್ರಿಮತಸ್ತರೂ ಪಾರಾಯಣ ಮಾಡಬೇಕಾದ ಪುಸ್ತಕವು. ಕ್ರಯ ರೂ. 0—4—0.

ಶ್ರೀಮದ್ವಾಲ್ಮೀಕಿ ಮಹರ್ಷಿ ವಿರಚಿತವಾದ

ಶ್ರೀಮದ್ರಾಮಾಯಣ.

ವೆಂಬ ಆದಿ ಕಾವ್ಯವು. 6 ಕಾಂಡಗಳನ್ನೊಳಗೊಂಡಿರುವುದಲ್ಲದೆ, ಪೀಠಿಕಾ ಶ್ಲೋಕಗಳು ಪಾರಾಯಣ ಕ್ರಮ ಮುಂತಾದವುಗಳಿಂದ ಕೂಡಿದೆ. ಸುಂದರವಾದ ಕನ್ನಡ ಅಕ್ಷರಗಳಲ್ಲಿ ಶುದ್ಧವಾಗಿ ಅಚ್ಚಾಗಿದೆ ಪಾರಾಯಣಕ್ಕೆ ಅನುಕೂಲವಾಗಿದೆ. ಮಡಿಗೋಸ್ಕರ ರಕ್ಷಾ ಪತ್ರಗಳಿಗೆ ಕಿತ್ತಾನಾರನ್ನು ಹಾಕಿದೆ. ಪುರಾತನ ಪ್ರತಿಯಾದ ಕಾರಣ ತಪ್ಪುಗಳಿರಲಾರವು. ನವರಾತ್ರಿಯ ಕಾಲವು ಸಮೀಪಿಸುತ್ತಿರುವ ಕಾರಣ ಶ್ರೀರಾಮ ಭಕ್ತರಾದವರೆಲ್ಲರೂ ಈ ಪುಸ್ತಕ ರತ್ನದ ಪ್ರತಿಯೊಂದನ್ನು ಸಂಗ್ರಹಿಸತಕ್ಕದು.

ಬೆಲೆ 3—0—0, ಹಾಸಲು 0—6—0

ಎಚ್. ಎನ್. ರಾವ್ ಬ್ರದರ್ಸ್.
ಚಿಕ್ಕ ಪೇಟೆ, ಬೆಂಗಳೂರು ಸಿಟಿ

ಸನ್ 1913ನೇ ಇಸವಿಯ



"ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು."

ಈ ವರೆಗೆ ತಾವು ಉಪಯೋಗಿಸಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವ ಹಸನಾದ ೪೦ ಪೌಂಡು ಗ್ಲೇಜು ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿರುತ್ತದೆ:—

ದೇಹ ಸೌಖ್ಯ ವಿಚಾರದಲ್ಲಿ ಪ್ರತಿ ಒಬ್ಬರೂ ತಿಳಿಯಬೇಕಾದ ಸಾಧಕ ಬಾಧಕಗಳು, ಪಂಚಾಂಗ, ಕ್ಯಾಲೆಂಡರ್, ರಾಹುಕಾಲ, ಗುಳಿಕಕಾಲ, ಸಂವತ್ಸರ ಫಲ, ಗ್ರಹಣ ಶಕುನಭಾಗ ಪ್ರಯಾಣ ವಿಷಯ ಜಾತಕಕರ್ಮ ಮೊದಲು ಷೋಡಷ ಕರ್ಮಕ್ಕೆ ಬೇಕಾದ ಲಗ್ನಾದಿಗಳು. ಶ್ರೀ ಕೃಷ್ಣ ಚಕ್ರ ಇವೇ ಮುಂತಾದ ಸಂಗತಿಗಳು ಸುಲಭವಾಗಿ ತಿಳಿಯುವಂತೆ ಬರೆದಿರುತ್ತೆ.

ಕೋರ್ಟು ಪೇಜು ಆಕ್ಟು, ಪೋಸ್ಟಾಫೀಸಿನ ಸಂಗತಿ ಸ್ಟಾಂಪಾಕ್ಟು, ಇವುಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗುವ ಮತ್ತಾವ ಡೈರಿಯಲ್ಲಿ ಹೇಳದಿರುವ ಹೊಸ ವಿಷಯಗಳನ್ನು ಸೇರಿಸಿದೆ. ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆಗಳ ಚಾರ್ಜು, ರೈಲ್ ಹೊರಡುವ ಕಾಲ ಲಗ್ಗೇಜ್, ಅಳತೆ ತೂಕ ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರುಗಳ ತಲಬು, ಸರಕಾರಿ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲಿಷು ಇಸವಿಗಳು, ಹಣದ ಬಡ್ಡಿ ತಲಬು ಜಂತ್ರಿ ಪಟ್ಟಿ ಕೂಡಾ ಇವೆ. ದೋಬೀ ಲೆಖ್ಖಾ, ಹಾಲು ಕೊಡುವವನ ಲೆಖ್ಖಾ, ಮುಖ್ಯ ವಿಷಯ ಜ್ಞಾಪಕ ವಿಚಾರ ಜಮಾ ಖರ್ಚು ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ.

"ಬೇಕಾದವರು ಈಗಲೇ ಬರೆದು ತರಿಸಿಕೊಳ್ಳಿರಿ".

No. 1. ಸಣ್ಣ ಸೈಜು ಸಾದಾ ಡೈರಿ 1ಕ್ಕೆ	0–4–0
No.2. ಸಣ್ಣ ಸೈಜು ಪೆನ್‌ಸಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ 1ಕ್ಕೆ	0–6–0
No. 3. ದೊಡ್ಡ ಸೈಜು ಸಾದಾ ಡೈರಿ 1ಕ್ಕೆ	0–6–0
No.4. ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳಹಾಕಿರುವ ಪ್ಲಾಪ್ ಡೈರಿ 1ಕ್ಕೆ	0–8–0

ಟಪ್ಪಾಲು ಖರ್ಚು ಬೇರೆ.

ಒಂದು ಸೈಜಿನ ಹತ್ತು ಡೈರಿಗಳನ್ನು ಒಟ್ಟಾಗಿ ತರಿಸಿದರೆ ಒಂದು ಇನಾಮು. ೨೫ ಡೈರಿಗಳಿಗಿಂತ ಹೆಚ್ಚಾಗಿ ತರಿಸತಕ್ಕವರಿಗೆ ರೂಪಾಯಿ ಒಂದಕ್ಕೆ 0–2–6ಯಂತೆ ಕಮಿಷನ್ ಕೊಡಲಾಗುತ್ತದೆ. ತಮ್ಮ ವಿಳಾಸವು ಬಾಲ ಅಕ್ಷರದಲ್ಲಿರಲಿ.

ದೊರೆಯುವ ವಿಳಾಸ:—

"ಶ್ರೀ ಸೀತಾರಾಘವ ವೈದ್ಯಶಾಲಾ"
ಮೈಸೂರು.

ಜರ್ಮನ್ ಜೇಬು ದೀಪ.

ಬೆಲೆ ರೂ. 1—15—0



ಈ ನಕ್ಷೆಯಲ್ಲಿ ಕಾಣಿಸಿರುವ ಜರ್ಮನ್ ಜೇಬು ದೀಪಗಳು ಜರ್ಮನ್ ದೇಶದ ಶಾಸ್ತ್ರಜ್ಞರಿಂದ ಹೊಸದಾಗಿ ಕಂಡು ಹಿಡಿಯಲ್ಪಟ್ಟು ಈಗ ತಾನೆ ನಮ್ಮ ಹಿಂದೂ ದೇಶಕ್ಕೆ ಕಳುಹಿಸಿರುತ್ತಾರೆ. ಇದು ವಿದ್ಯುಶ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕೀಕಡ್ಡಿ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ವತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ನೋಡುವವರಿಗೆ ಆಶ್ಚರ್ಯವಾಗುವಹಾಗೆ ಹತ್ತಿ ಉರಿಯುತ್ತೆ.

ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದ ಕಡ್ಡಿ ಅವಶ್ಯಕವೇವಿರುವದಿಲ್ಲ. ಎಷ್ಟು ವರುಷಗಳಾದರೂ ದೀಪವು ಕೆಡುವದಿಲ್ಲ. ಜನರಿಗೆ ಇದು ಬಹಳ ಉಪಯೋಗ ಇದು ಇತರ ದೀಪಗಳನ್ನು ಹಚ್ಚುವದಕ್ಕೂ ಪ್ರಯಾಣಮಾಡುವಾಗ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಜಾಗ್ರತೆ ದೀಪವನ್ನು ಉಪಯೋಗಿಸುವದಕ್ಕೂ ಚುರುಟು ಬೀಡಿ ಮೊದಲಾದವುಗಳನ್ನು ಹಚ್ಚುವದಕ್ಕೂ ಬಹಳ ಉಪಯೋಗವಾದದ್ದು. ಇದನ್ನು ಸುಲಭವಾಗಿ ಉಪಯೋಗಿಸಬಹುದು. ಇದರಿಂದ ಯಾವ ಕೆಡಕು ಉಂಟಾಗುವದಿಲ್ಲ.

ವಿಳಾಸ.

N. S. Bhattachar,
Nungumbaukum
Madras.

ಎನ್. ಎಸ್. ಭಟ್ಟಾಚಾರ್.
ನುಂಗಂಬಾಕಂ. ಮದ್ರಾಸು

ಪ್ರಸಿದ್ಧವಾದ

ರೇಷ್ಮೆ ಬಟ್ಟೆಗಳು! **ಪೀತಾಂಬರದ ಶೀರೆಗಳು!!**

ಒಪ್ಪಲ್ಪಡದೆ ಇದ್ದರೆ ವಾಪಾಸು ತೆಗೆದುಕೊಳ್ಳಲ್ಪಡುವುದು.

ಪೀತಾಂಬರದ ಶೀರೆಗಳು.

ಬನಾರಸ್ ಪೀತಾಂಬರದ ಶೀರೆಗಳು:—೧೭ ಮೊಳ ಉದ್ದ ೨॥ ಮೊಳ ಅಗಲ, ಸೆರಗೂ ಅಂಚು ಉತ್ತಮವಾದ ಜರತಾರಿ ಉಳ್ಳದ್ದು. ಕೆಂಪು, ಹಸರು, ಊದಾ ಮತ್ತು ಗುಲಾಬೀ ರಂಗುವುಳ್ಳ ಅಂಚುಗಳು, ಒಳಭಾಗವು ಸಾದಾ, ಸಾಮಾನ್ಯವಾದ ಶೀರೆಗಳಿಗೆ ಬೆಲೆಯು ೨೦ರಿಂದ ೩೫ ರೂಪಾಯಿನ ವರೆಗೂ ಇರುವುದು. ಅತ್ಯುತ್ತಮವಾದವುಗಳಿಗೆ ೪೦ರಿಂದ ೨೦೦ರ ವರೆಗೂ ಬೆಲೆಯಾಗುವುದು.

ಪೀತಾಂಬರದ ಬೂಟಾ ಶೀರೆಗಳು.

ಪೀತಾಂಬರದ ಬೂಟಾ ಶೀರೆಗಳು ಮೈದಾನದಲ್ಲಿ ಜರಿತಾರಿ ಹುವ್ವುಗಳು ಅಥವಾ ಬೂಟಾಗಳು ಇರುವವು. ಇವುಗಳಲ್ಲಿ ಸಾಮಾನ್ಯವಾದ ಶೀರೆಗಳಿಗೆ ೨೫ರಿಂದ ೩೫ ರೂಪಾಯಿನ ವರೆಗೂ ಆಗುವುದು. ಉತ್ತಮವಾದವುಗಳಿಗೆ ೪೦ ರೂಪಾಯಿಗಳಿಂದ ೫೦೦ರೂಪಾಯಿಗಳ ವರೆಗೂ ಆಗುವುದು.

ಪೀತಾಂಬರದ ಕಣಗಳು.

ಜರತಾರಿ ಅಂಚು, ಮೈದಾನದಲ್ಲಿ ಹೂವಿನ ಕೆಲಸ, ರಂಗು ಕೆಂಪು, ಹಸರು, ಊದಾ ಮತ್ತು ಗುಲಾಬಿ, ಸಾದಾ ಮೈದಾನವುಳ್ಳ ಕಣ ಒಂದಕ್ಕೆ ೨ ರೂಪಾಯಿನಿಂದ ೨ ರೂಪಾಯಿ ವರೆಗೂ ಕ್ರಯವಾಗುವುದು. ಬೂಟಾ ಮೈದಾನವುಳ್ಳದ್ದು ಕಣ ೧ಕ್ಕೆ ೮॥ ರೂಪಾಯಿನಿಂದ ೨೫ ರೂಪಾಯಿನ ವರೆಗೂ ಆಗುವುದು.

ರುಮಾಲುಗಳು ಅಥವಾ ಪೇಟಾಗಳು.

ಎಲ್ಲಾ ರಂಗಿನ ರುಮಾಲುಗಳು ಮತ್ತು ಪೇಟಾಗಳು ೨೫ ರೂಪಾಯಿ ಮೊದಲ್ಗೊಂಡು ೧೦೦ ರೂಪಾಯಿನ ವರೆಗೂ ಬೆಲೆಯುಳ್ಳವುಗಳಾಗಿರುತ್ತವೆ.

ಮಕ್ಕಳ ಆಟದ ಪಾತ್ರೆಗಳು.

ಚಿಕ್ಕದಾಗಿಯೂ, ಸುಂದರವಾಗಿಯೂ, ಹೊಳೆಯತಕ್ಕವುಗಳಾಗಿಯೂ ಇರುತ್ತವೆ. ಇವುಗಳಲ್ಲಿ ದೊಡ್ಡದಾಗಿರತಕ್ಕ ಪಾತ್ರೆಗಳ ಸೆಟ್ಟಿಗೆ ೪ ರೂಪಾಯಿ ಚಿಕ್ಕ ಸೆಟ್ಟಿಗೆ ೨ ರೂಪಾಯಿ.

ಬನಾರಸ್ ಪಟ್ಟಣದಲ್ಲಿರತಕ್ಕ ರೇಷ್ಮೆ ಪಿತಾಂಬರ ಕಂಪೆನಿ ಮ್ಯಾನೇಜರಿಗೆ ಬರೆದುಕೊಂಡರೆ ಇದರ ತಪಶೀಲುವಾರು ಕ್ಯಾಟಲಾಗು ಕೊಡಲ್ಪಡುವುದು.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸು

ನಮ್ಮ ಏಜಂಟರು:— 1. ಮೆಸ್ಸರ್ಸ್, ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್ಸ್, ಮಂಗಳೂರು
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಆಯುರ್ವೇದೋದಯ ಔಷಧಾಲಯ, ೧೭೭, ಚೀನಾಬಜಾರ್ ರೋಡ್, ಮದ್ರಾಸ್

ಮದನಮಂಜರಿ ಮಾತ್ರೆಗಳು.

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖಲಿತ ಮೂತ್ರದೊಡನೆ ಇಂದ್ರಿಯ ಸ್ರವಿಸುವದು ಮುಂತಾದ ಸಕಲ ವಿಧ ಪಿಂಡರೋಗಗಳನ್ನು ನಿರ್ಮೂಲಮಾಡುವದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಗವಾದ ದೋಷಗಳನ್ನು ಕ್ರಮಪಡಿಸುವವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ, ಇವುಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನೂ ದೀರ್ಘಾಯುಸ್ಸನ್ನೂ ಮುಖಕ್ಕೆ ಒಳ್ಳೇಕಾಂತಿಯನ್ನೂ ಉಂಟು ಮಾಡುತ್ತದೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಆವಶ್ಯಕವಾದ ಸಕಲ ಪಂಚಭೂತಗಳು ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೪೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧–೦–೦.

ಬಿಟ್ಟಿ! ಪುಗಸಟೆ!

ವೈದ್ಯವಿದ್ಯ.

ಸಂಪೂರ್ಣಾರೋಗ್ಯವನ್ನೂ, ದೀರ್ಘಾಯುವನ್ನೂ, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲುಗು, ಕನ್ನಡ, ಇಂಗ್ಲೀಷು ಮುಂತಾದ ೮ ಭಾಷೆಗಳಲ್ಲಿ ದೊರೆಯುವದು. ಕೋರಿದವರಿಗೆ ಕ್ರಯವು ಅಂಚೆಹಾಸಲು ಸಹ ಇಲ್ಲದೆ ಮುಫತ್ತಾಗಿ ರವಾನಿಸಲ್ಪಡುವದು. ಜಾಗ್ರತೆ ನಿಮ್ಮ ವಿಳಾಸವನ್ನು ತಿಳುಹಿಸಿ. ಈ ವರಿಗೂ ೩೦೦೦೦೦ ಪ್ರತಿಗಳು ಕೊಡಲ್ಪಟ್ಟವೆ. ಈ ದಿವಸವೆ ಒಂದು ಕಾರ್ಡು ಬರೆಯಿರಿ.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲಾವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಆದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ವೈದ್ಯಸಾರಸಂಗ್ರಹ (ಮೂಲಿಕಾ ಔಷಧಿ)	೩—೦—೦
ಶುಕಸಪ್ತತಿ ವೇದಾಂತ ಪೂರ್ವದ ಪ್ರತಿ	೨—೦—೦
ರಘುವಂಶ ೧ನೇ ಪರ್ವ...	೧—೦—೦
ಡಿಟ್ಟೊ (೨ನೇ ಪ.) ಅರ್ಥ ತಾತ್ಪರ್ಯ ಆಕಾಕ್ಷೆ ಇತ್ಯಾದಿ ...	೧—೦—೦
ವಿವೇಕ ಚೂಡಾಮಣಿ	೨—೪—೦
ಶಾಮಕುಬ್ಜ ಕಥೆ	೦—೮—೦
ಚಮತ್ಕಾರ ಚಿಂತಾಮಣಿ	೦—೧೦—೦
ಮಹಿಮ್ನ ಸ್ತೋತ್ರ (ಟೀ. ತಾ.)	೦—೩—೦
ಮುಕುಂದಮಾಲಾ ಸ್ತೋತ್ರ (ಟೀ. ತಾ.)	೦—೪—೦
ಶಿವಗೀತಾ (ಟೀ. ತಾ. ಸಹಿತ)	೦—೮—೦
ಶಿವಾನಂದಲಹರಿ (ಟೀ. ತಾ.)	೦—೬—೦
ವಿದ್ಯಾನಂದ ಮಾಸಪತ್ರಿಕೆ ಚಂದಾ	೨—೪—೦

ಮಾದ್ರಿ ಪತ್ರಿಕೆ, ಪುಸ್ತಕ ಪಟ್ಟಿ ಉಚಿತ. ಇನ್ನೂ ಅನೇಕ ಪುಸ್ತಕಗಳು ದೊರೆಯುವವು.

ವಿಳಾಸ:—
ವಿದ್ಯಾನಂದ ಆಫೀಸು.
ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು! **ಬೇಗ ಬರೆಯಿರಿ!!**

ಮಧುರವಾಣೀ ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಸಾಹಸಿಕೆ	0-2-6	ಮಹನೀಯರ ಚರಿತ್ರೆ ...	0-10-0
ಗೃಹಿಣಿಯಾದ ಗಂಗೆ ...	0-3-0	ಸಾಧನೆ	0-8-0
ನಾನಕನ ಚರಿತ್ರೆ	0-4-0	ಮನೋರಮ	1-0-0
ವಿವೇಕಮಂಜರಿ 1ನೇ ಭಾಗ	0-2-0	ಭಕ್ತವಿಜಯ	3-4-0
ಡಿ. 2ನೇ ಭಾಗ	0-3-0	ಪಾರ್ವತಿ ಪರಿಣಯ ನಾಟಕಂ	0-8-0
ಸೌದಾಮನಿ	0-6-0	ಗೋಪಿಕಾ ಗೀತೆ... ...	0-1-0
ವಿಶ್ವನಾಥ	0-1-0	ಭಜಗೋವಿಂದಂ	0-1-0
ದೇವಿ ಚೌದ್‌ರಾಣಿ... ...	1-4-0	ಹಾಲಾಸ್ಯ ಮಹಾತ್ಮೆ ...	1-4-0
ಸಚಿತ್ರಕಲಾತರಂಗ... ...	1-0-0	ವಿಷವೃಕ್ಷ...	1-4-0

ಇನ್ನೂ ಅನೇಕ ಪುಸ್ತಕಗಳು ಶಿಕ್ಕುವವು. ಕ್ಯಾಟಲಾಗಿಗೆ ಬೆಲೆ ಇಲ್ಲ. ಅಪೇಕ್ಷಕರು ಅತುರಿಸಿರಿ.

ವಿಳಾಸ:— ಹನುಮಾನ್ ಮತ್ತು ಕಂಪೆನಿ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಶೀವಜಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ಒಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ

1913ನೇ ಇಸವಿಯ ಪೊಕೆಟ್ ಡ್ಯಾರಿಗಳು.

ಮಾರಾಟಕ್ಕೆ ಸಿದ್ಧವಾಗಿವೆ.

ನೋಟು ಬೂಕು ಸ್ಯಾಜು (ದೊಡ್ಡ ಸ್ಯಾಜು) ರೂ. 0—8—0
(ಬಂದಾಣಿ ಪೆನ್ಸಿಲು ಸಹಿತ)
ಸಣ್ಣ ಸ್ಯಾಜು .... „ 0—4—0

ವಕೀಲರಿಗೂ ವಕೀಲರ ಗುಮಾಸ್ತರಿಗೂ ಬೇಕಾದ ಎಲಾ ವಿಷಯಗಳನ್ನು ಒಳಕೊಂಡಿರುವುದಲ್ಲದೆ ಇತರರಿಗೂ ಬಹಳ ಉಪಯೋಗಕರವಾದ್ದಾಗಿರುತ್ತದೆ.

ಹೆಚ್ಚು ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ, ವ್ಯಾಪಾರಸ್ತರಿಗೂ ಧಾರಾಳ ಕಮಿಶನ್ ಕೊಡಲಾಗುವದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಮ್ಯಾನೇಜರ,
ಶಾರದಾ ಛಾಪಖಾನೆ, ಮಂಗಳೂರು ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡುಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿ ಸಿಕ್ಕುವುವು.

CHEAP JACK

FANCY UMBRELLA MART.

ಚಿತ್ರವಿಚಿತ್ರಮಾದ ಕೊಡೆಗಳು.

ಕಂ॥ ಧರೆಯೊಳ್ ಮೆರೆ ಮಹಾಶಯ । ರಿರಃ ನಾವಿನಿಸುಂದಿನಂ ಕೊಡೆಯ ವಿಕ್ರ
ಯಮಂ ॥ ಇರಿಸಿರ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿಯೆ
ವದರರಮಂ ॥೧॥ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ
ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾಮಾತಿಂ । ಗೆಡೆಯಾಗಿದೆ
ನೆರಲನೀವ ಕೊಡೆಯುಲ್ಲಿರ್ಕುಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಉತ್ತಮವಾದ ಸುಗಂಧ ದ್ರವ್ಯಗಳು.

ವಿಶ್ವಾಂಜನ ಪೈನ್ ಬಾಂ ಬಾಟ್ಲಿ ೧ಕ್ಕೆ	೧-೪-೦	ಕಸ್ತೂರಿ ಬತ್ತಿ ಸೇರು ೧ಕ್ಕೆ	೩-೦-೦
ತಾಂಬೂಲ ಮಾತ್ರೆ ಬಾಟ್ಲಿ ೧ಕ್ಕೆ	೦-೩-೦	ಜವಾಜಿ ಬತ್ತಿ ,,	೧-೧೨-೦
ದಶಾಂಗ ಡಬ್ಬಿ ೧ಕ್ಕೆ	೦-೩-೦	ಪುಣುಗು ಬತ್ತಿ ,,	೧-೪-೦
ಮಹಾರಾಜಾ ತಂಬಾಕ್ ಡಬ್ಬಿ ೧ಕ್ಕೆ	೦-೨-೦	ಗುಲಾಬಿ ಬತ್ತಿ ,,	೧-೦-೦
ವಸಂತ ಮಾಲತಿ ಬಾಟ್ಲಿ ೧ಕ್ಕೆ	೦-೨-೦	ಪನ್ನಿರು ಬತ್ತಿ ,,	೦-೮-೦
ವೃಣಹಾರಿಯ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕಸ್ತೂರಿ ಬಿಲ್ಲೆ ತೊಲೆ ೧ಕ್ಕೆ	೨-೦-೦
ಕುಸುಮ ಮಾಲತಿ ಎಣ್ಣೆ ಬಾಟ್ಲಿ ೧ಕ್ಕೆ	೦-೮-೦	ಪುಣುಗಿನ ಬಿಲ್ಲೆ ,,	೧-೦-೦
ದಿಲ್‌ದಾರ ಅತ್ತರ್ ಶೀಶೆ ೧ಕ್ಕೆ	೦-೪-೦		
ಹುಳದ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕೇಸರಿ ಬಿಲ್ಲೆ ,,	೦-೮-೦
ವಾತಸಂಜೀವನೀ ತೈಲ ಬಾಟ್ಲಿ ೧ಕ್ಕೆ	೦-೪-೦	ಅರ್ಗಜ ,,	೦-೧೨-೦
ದಿಲ್ ಕುಸುಮ ಬತ್ತಿ ಸೇರು ೧ಕ್ಕೆ	೧೦-೦-೦	ಶಿಕ್ಕಾ ,,	೦-೧೨-೦
A ಅಂಬರ್ ಬತ್ತಿ ,,	೬-೦-೦	ನಾಸಿಕಚೂರ್ಣ ಡಜನ್ ೧ಕ್ಕೆ	೦-೧-೦

ಕೊಂಕಣಿ ಭಾಷೆಯಿಂದ ತಯಾರಿಸಲ್ಪಟ್ಟ ಚಂದ್ರಹಾಸನಾಟಕದ ಪುಸ್ತಕವು ನಮ್ಮಲ್ಲಿ ದೊರಕುತ್ತದೆ. ಕ್ರಯ ೦-೪-೦. ಬೇಕಾದವರು ಈ ವಿಳಾಸಕ್ಕೆ ಬರಕೊಳ್ಳಿರಿ. ಬಿ. ವಿ. ಪಿ. ಭಂಡಾರಕರ,

"ವಿಶ್ವಾಂಜನ ಡಿಪೊ", ಮಂಗಳೂರು.

ದೇಶಬಾಂಧವರೇ! ಇತ್ತ! ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಸ್ಯುರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—45, ಹೆರಿಸನ್ ರೋಡ್, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 50,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸಂಹೋಲಿಸಿ ನೋಡಿ!! ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲೈಫ್ ಎಸ್ಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳೆದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!!

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಿಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ತರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:—ಟಿ. ಆರ್. ಪೈ ಅಂಡ್ ಬ್ರದರ್ಸ್,

ಸೋಲ್ ಏಜಂಟ್ಸ್, ಆಫೀಸು ಉಡುಪಿ, (ದ. ಕನ್ನಡ.)

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗೆದುಕೊಂಡರೆ ಕೋಲರಾ ಅಥವಾ ಉಷ್ಣಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ ರೂ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಸುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡುಜ್ವರ ಸಹ 2 ಡೋಸುಗಳನ್ನು ತೆಗೆದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ, ಗೊಲ್ಲರಕೇರಿ ಮಂಗಳೂರು

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ ,, ,,	6-0-0	B ಅರಗಜ ,, ,,	1-0-0
ಕಸ್ತೂರಿ ಬತ್ತಿ ,, ,,	3-0-0	ಕಸ್ತೂರಿ ಬಿಲ್ಲೆ ,, ,,	2-0-0
ಜವಾಜಿ ಬತ್ತಿ ,, ,,	2-0-0	ಜವಾಜಿ ಬಿಲ್ಲೆ ,, ,,	1-0-0
ಪುಣಗಿನ ಬತ್ತಿ ,, ,,	1-8-0	ಕೇಸರಿ ಬಿಲ್ಲೆ ,, ,,	0-8-0
A ಪನ್ನೀರ್ ಬತ್ತಿ ,, ,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ ,, ,,	0-6-0	ದಶಾಂಗ ಡಬ್ಬಿ 1ಕ್ಕೆ	0-4-0

ವಿಳಾಸ:— ಮೇನೇಜರ್, "ಸುಗಂಧವಿಲಾಸ ಮಂಗಳೂರು.

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

(ಶ್ರೀ ಶ್ರಂಗೇರಿ ಮಠದವರಿಂದಲೂ, ಮೈಸೂರು ಸರಕಾರದವರಿಂದಲೂ ಪೋಷಿಸಲ್ಪಡುತ್ತಲಿದೆ) ಇದರಲ್ಲಿ:—(೧) "ದಶೋಪನಿಷತ್ತು"ಗಳಿಗೂ ಕನ್ನಡ ಕಥಾರೂಪವಾದ ತಾತ್ಪರ್ಯ. (೨) "ಶ್ರೀ ಶಂಕರಾಚಾರ್ಯ ಚರಿತ್ರ ಕಾಲವಿಚಾರ". (೩) "ಕನ್ನಡ ಭಾಷಾಮಯಧರ್ಮಸಿಂಧುಸಾರ" (೩೫೩ ವಿಷಯಗಳಿವೆ. (೪) ಸಂಧ್ಯಾವಂದನೆಯ ಅರ್ಥ ವಿಚಾರ" (ಬಹುಯುಕ್ತಿ ಪ್ರಮಾಣಗಳಿಂದೊಡಗೂಡಿದೆ) (೫) "ಬಾಲಕರ ಭಂಡಾರ" (ನೀತಿ ಕಥೆಗಳು, ನೀತಿ ಶ್ಲೋಕಗಳು, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯೆ, ಒಗಟೆ, ನ್ಯಾಯ ಮುಂತಾದುವುಗಳು). (೬) "ಕುಮಾರ ಸಂಭವ ಕಾವ್ಯ" ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ ನಿಗ್ರಹ, ದಾತುರೂಪ, ಧಾತ್ವರ್ಥ, ವಿಶೇಷಾಂಶಗಳೊಂದಿಗೆ.

(೧೨-೮-೧೯೧೧)ರಲ್ಲಿ ಆರಂಭವಾಗಿ ನಡೆಯುತ್ತಲಿದೆ. ಚಂದಾ (ವರ್ಗಣಿ) ದಾರರಿಗೆ ಹಿಂದಿನ ಸಂಚಿಕೆಗಳೆಲ್ಲ ದೊರೆಯುತ್ತವೆ.

ವಿಳಾಸ: (ಪತ್ರೆ)—-ದೊಡ್ಡ ಬೆಲೆ ನಾರಾಯಣ ಶಾಸ್ತ್ರಿ,

ಶ್ರೀ "ಶಾರದಾ" ಸಂಪಾದಕ, ಸೀಗೆ ಬೇಲಿ ಬೆಂಗಳೂರು.

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ,

ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾ ಪ್ರವೇಶದಾಯಿನಿ.

ಮೊದಲನೆಯ ಪುಸ್ತಕ. ಪ್ರಥಮಾಭ್ಯಾಸಿಗಳಿಗೆ ತಕ್ಕ ಸುಲಭ ಪಾಠಗಳನೇಕವಾಗಿರುವ ಪ್ರತಿ ಇಂಗ್ಲಿಷ್ ಶಬ್ದಕ್ಕೂ ಕನ್ನಡಕ್ಷರದಲ್ಲಿ ಉಚ್ಚಾರಣೆ ಅರ್ಥ ಸಹ ಇರುವುದು. ಕ್ರಯ ಒಂದು ರೂಪಾಯಿ ಎಂಟಾಣೆ.

ಎರಡನೆಯ ಪುಸ್ತಕ. ಅಕ್ಷರಜ್ಞಾನವೂ ಶಬ್ದಜ್ಞಾನವೂ ಆದ ಸ್ವಲ್ಪ ಮಟ್ಟಿಗೆ ಇಂಗ್ಲಿಷ್ ತಿಳಿದವರಿಗೆ ಅನುಕೂಲವಾದ ಪ್ರೌಢಪಾಠಗಳುಳ್ಳದಾಗಿ ವರ್ತಕರಿಗೆ ಉಪಯೋಗವಾದ ಪಾರಿಭಾಷಿಕ ಶಬ್ದಕೋಶ ಒಂದನ್ನು ಛಾಪಿಸಿದೆ. ಕ್ರಯ ಒಂದು ರೂಪಾಯಿ ಎಂಟಾಣೆ.

ದಸರಾ ದೀಪಾವಳೀ ಮಹೋತ್ಸವದ ಜ್ಞಾಪಕಾರ್ಥವಾಗಿ ಆರು ವಾರಗಳ ಮಟ್ಟಿಗೆ ಕ್ರಯ ಕಡಮೆ ಮಾಡಿದೆ. ಅವಧಿ ಮೀರಿದ ಬಳಿಕ ಮರಳಿ ಮೊದಲಿನ ಕ್ರಯವೇ ಕೊಡಬೇಕಾಗುವುದು.

ಮೊದಲನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.

ಎರಡನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.

ಅಂಚೆವೆಚ್ಚ ಪುಸ್ತಕ ಒಂದಕ್ಕೆ ಮೂರೇ ಆಣೆ.

ಎರಡು ಪುಸ್ತಕವೂ ಒಟ್ಟಾಗಿಯಾದರೂ, ಒಂದೇ ಪುಸ್ತಕವನ್ನು ಹೆಚ್ಚಾಗಿಯಾದರೂ ಕೊಂಡುಕೊಳ್ಳುವವರಿಗೆ ಅಂಚೆ ವೆಚ್ಚ ಮಾಫಿ.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭಾರತಿ ಸಂಪಂಗಿರಾಮು,
ಭಾಷಾನಿಧಿ ಕಾರ್ಯಾಲಯ,
೧೨೦ ಗುಡುಮ್ಮೆಯನ ಪೇಟೆ, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press Mangalore,

---

Registered No. M. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ
ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 47

ಮಂಗಳೂರು ತಾ. 22ನೇ ಶುಕ್ರವಾರ
ನವಂಬರ 1912.

Amrutanjan Depot, Head Office: Bombay.

ಅಮೃತಾಂಜನ! ಅಮೃತಾಂಜನ!

Trade Mark Registered.

AMRUTANJAN

ಇದರಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಎದೆನೋವು, ಸೊಂಟದ ನೋವು ಮುಂತಾದ ಅನೇಕ ತರದ ನೋವುಗಳು ಖಾತ್ರಿಯಿಂದ ನಿಲ್ಲುವವು.

ಈ ಅಮೃತಾಂಜನದಿಂದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುತ್ತವೆ. ದಯಮಾಡಿ 4000 ಬಾಟ್ಲಿಗಳನ್ನು ರವಾನಿಸಿ ಕೊಡಿರಿ.

ಡಬ್ಲ್ಯು. ಮೆಕ್ಸವೆಲ್ಲ ಮೈನಾರ್ಡ್,
ನ್ಯೂ ಬ್ರಿಜ್, ಡಮ್‌ಫ್ರಿಸ್,
ಸ್ಕೋಟ್‌ಲಂಡ್.

ಬಾಟ್ಲಿ ಒಂದರ ಕಿಮ್ಮತು 8 ಆಣೆ. ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ಸಿಕ್ಕುವದು.

ಹತ್ತು ಲಕ್ಷ ದೊಡ್ಡ ಸೈಜು ಪೋಸ್ಟ ಕಾರ್ಡುಗಳು.

ಈ ಕಾರ್ಡುಗಳು ಬೆಳ್ಳಗಾಗಿಯೂ, ಬರೆಯುವದಕ್ಕೆ ನಯವಾಗಿಯೂ ಇವೆ. ವ್ಯಾಪಾರಸ್ಥರೂ, ಉಪಾಧ್ಯಾಯರೂ, ಹುಡುಗರೂ ಕೊಂಡುಕೊಳ್ಳುವ ಬಗ್ಗೆ ಅರ್ಧ ಕ್ರಯಕ್ಕಿಂತಲೂ ಕಮ್ಮಿಯಿಂದ ರವಾನಿಸುತ್ತೇವೆ. (500 ಕಾರ್ಡಿಗಿಂತ ಕಮ್ಮಿ ರವಾನಿಸಲಾರೆವು.) ಮುಂಚಿನ ಕ್ರಯ 1,000ಕ್ಕೆ 2 ರೂಪಾಯಿ 8 ಆಣೆ, ಈಗಿನ ಕ್ರಯ 1,000ಕ್ಕೆ 15 ಆಣೆ, 500ಕ್ಕೆ 8 ಆಣೆ. ವಿ. ಪಿ. ಖರ್ಚು 1,000ಕ್ಕೆ 13 ಆಣೆ, 500ಕ್ಕೆ 7 ಆಣೆ.

1913ನೇ ವರ್ಷದ ಅಮೃತಾಂಜನದ ಕ್ಯಾಲಂಡರ್.

AMRUTANJAN BO
AMRUTANJ
Best Indian
Pain Balm
Amrutanjan D
BOMBAY.

ನಾಲ್ಕು ರೂಪಾಯಿಯ ಔಷಧ ತರಿಸಿಕೊಂಡವರಿಗೆ ಪುಕಸಾಟೆಯಾಗಿ ರವಾನಿಸಲ್ಪಡುವದು. ಇತರರಿಗೆ 1ಕ್ಕೆ ವಿ. ಪಿ. ಸಮೇತ 4 ಆಣೆ. 10ಕ್ಕೆ ವಿ. ಪಿ. ಸಮೇತ 1-8-0. ಇದು ಸುಂದರವಾಗಿ, ನೋಡುವದಕ್ಕೂ ರಜೆಯ ದಿವಸಗಳನ್ನು ತಿಳಕೊಳ್ಳುವದಕ್ಕೂ ಉಪಯುಕ್ತವಾಗಿರುತ್ತದೆ.

ದಂತಮಂಜನ! ದಂತಮಂಜನ! ದಂತಮಂಜನ ಡಬ್ಬಿ ಒಂದಕ್ಕೆ 2 ಆಣೆ.
ಗಜಕರ್ಣದ ಮುಲಾಮು! ತತ್‌ಕ್ಷಣ ಗುಣ! ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ 6 ಆಣೆ.

ವಿಳಾಸ:— ಅಮೃತಾಂಜನ ಡಿಪೊ,
109 ಫ್ರೆಯರ್ ರೋಡ್,
[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists*,
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original
BABA
BUDAN-GHIRY
COFFEE POWDER
PROPRIETORS
J.S.SOUZA & Co
MANGALORE

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಡೋಂಗರೆ ಇವರ ಬಾಲಾಮೃತ

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದ ಅಶಕ್ತತೆಯಿಂದುಂಟಾದ ರೋಗಗಳು ಸಂಪೂರ್ಣವಾಗಿ ಇಲ್ಲದಂತಾಗುತ್ತವೆ. ನಮ್ಮ ಬಾಲಾಮೃತವನ್ನೇ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದ್ದಲ್ಲಿ ಬಾಟ್ಲಿಯ ಮೇಲಿನ ನಮ್ಮ ಲೇಬಲಿನ ಪೂರಾ ಖಾತ್ರಿ ಮಾಡಿಕೊಂಡು ತೆಗೆದುಕೊಳ್ಳಿರಿ.

ಬಾಟ್ಲಿ ಒಂದರ ಕಿಮ್ಮತು 0—12—0. ವ್ಹಿ. ಪಿ. ಖರ್ಚು 0-4-0.

K. T. Dongre & Co, ಕೆ. ಟಿ. ಡೊಂಗರೆ ಮತ್ತು ಕಂಪೆನಿ
Girgaon Bombay. ಗಿರಗಾಂವ ಮುಂಬಯಿ

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದರೆ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

"ಅಮೇರಿಕದ ವಿಶಿಷ್ಟತೆ."


પ્રો. જેમ્સની વિજળીક શક્તિની ગોળીઓ.
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್"ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ—ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳು ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ.— ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಬೆಳಕು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. „ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನುಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳವೆ

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮ. ಜೇ. ಸಿ. ಬ್ರಿತೋ(ಪೊಂಡಾ-ಗೋವೆ)ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮ. ಜೆ. ಆರ್. ಗಾಯಕವಾಡ, (ಸಕ್ರಿಯ ಮಾಮಲತದಾರರು—ವಿ.ಪಿ. ದ್ವಾರಾ ಆದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳಉತ್ತಮವಿದೆ.

The Anglo Indian Drug & Chemical Company,
155, Market, Jumma Musid BOMBAY.

ಏಜಂಟರು:—ಡಿ. ಊಲನ್‌ಮಾರ್ಟ್, ಮಂಗಳೂರು

ಡಾಕ್ಟರ್ ಪೆರೇರರ ಸಿದ್ಧೌಷಧಗಳು.

ಮೂತ್ರ ರೋಗದ ಔಷಧ—ಈ ಔಷಧವು ಅತ್ಯಾದ್ಭುತವಾದದ್ದು. ಮೂತ್ರ ರೋಗದ ಯಾವ ಅಂತಸ್ಥಿನಲ್ಲಿಯೂ ಈ ಔಷಧ ಸೇವನೆಯು ಗುಣಕಾರಿ. ರಾಜಕುರು ಇತ್ಯಾದಿ ಸಂದರ್ಭಗಳಲ್ಲಿ ಎರಡು ದಿವಸ ಪ್ರಯೋಗಿಸುವ ಮಾತ್ರದಿಂದ ಇದರ ಮಹತ್ವವು ನಿಮಗೆನೇ ಖಾತ್ರಿಯಾಗುವುದು.

ನಾಲ್ಕು ಆಣೆ ಸ್ಟೇಂಪು ಕಳುಹಿಸಿದಲ್ಲಿ ನಮೂನೆ ಕಳುಹಿಸೋಣಾಗುವುದು.

ನಾಯಿಕೆಮ್ಮಿನ ಔಷಧ—ಇದರಿಂದ 12 ದಿವಸಗಳೊಳಗೆ ನಾಯಿಕೆಮ್ಮು ಸಂಪೂರ್ಣ ಗುಣವಾಗುವುದು.

ನೇವಸದ ಔಷಧ—ನೇವಸದಿಂದ ಪೀಡಿತರಾದವರಿಗೆ ಯಾವ ಅಂತಸ್ಥಿನಲ್ಲಿಯೂ ಇದು ರಾಮಬಾಣದಂತಿದೆ.

ಮೋಹ ಸಂಬಂಧವಾದ ರೋಗಗಳಿಗೆ ಔಷಧ—ಸರ್ವ ವಿಧದ ಮೋಹ ರೋಗಗಳಿಗೆ ಇದು ದಿವ್ಯೌಷಧ.

ಪೌಷ್ಟಿದಾಯಕವಾದ ವ್ಯಾನ್—ರಕ್ತ ಇಲ್ಲದಿರುವುದು, ವ್ರಣ, ಖಜ್ಜಿ, ಬಲಹೀನ, ಮಲಬದ್ಧತೆ, ತಲೆಶಿಡಿತ, ಹೃದಯ ವೇಗವಾಗಿ ಬಡಿಯೋಣ, ಜೀರ್ಣವಾಗದಿರುವುದು, ಹೊಟ್ಟೆನೋವು ಮೊದಲಾದ ರೋಗಗಳಲ್ಲಿ ಇದು ಕೈಕೆಂಡ ಔಷಧವಾಗಿದೆ.

ಆಮಶಂಕೆಯ ಔಷಧ—ಈ ಔಷಧದಿಂದ ಎಂಥಾ ಆಮಶಂಕೆಯು ನಿಂತುಹೋಗುವುದೆಂಬದು ದಿಟವು.

ಎಮ್ಮಿನ ಒಯಿಂಟ್‌ಮೆಂಟ್—ವ್ರಣ, ರದ್ದು, ಖಜ್ಜಿ, ಸರ್ವ ವಿಧದ ಚರ್ಮರೋಗವು ಇದರಿಂದ ವಾಸಿಯಾಗುವುದು.

ಜ್ವರ ಮತ್ತು ಜುಲಾಬು ಮಾತ್ರೆಗಳು—ಇವು ಜ್ವರವನ್ನು ಹೊರಡಿಸಿ ಕಲಿಜೆಯನ್ನೂ ಕರುಳನ್ನೂ ಶುಚಿಮಾಡುವುದು. ಮಲೇರಿಯ ಜ್ವರಕ್ಕೆ ಇದು ಸಿದ್ಧೌಷಧವು.

J. F. Pererira & Co.
Chemists No. 6.
Calicut, Malabar.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ

ಸಾರ್ಸಾಪರಿಲಾ.

ಜಗತ್ಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ, ಬಹಳ ದಿವಸಗಳ ಹಳೇ ಪ್ರಮೇಹ ಇಡೀಮೈ ಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶರಿಕೆ ಹೊಡಿಯೋಣ ವಗೈರೆ.


ಪೂರ್ವದ ಸ್ಥಿತಿ.

ನಂತರದ ಸ್ಥಿತಿ.

ಬಾಟ್ಲಿ ಒಂದರ ಕಿಮ್ಮತ್ತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಳಾಸ:— ಪ್ರೊಪ್ರಾಯಿಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೋಶಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.
ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆಮಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)

KAMINIA
OIL
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co
BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ. ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ಗಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.
3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲ್ಯದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲ್ಯವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30—5—11 ಮೆ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ „ಕಾಮಿನಿಯಾ ಓಯಿಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28—7—11. ಮೆ. ವಿ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ „ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11. ಮೆ. ಸಿ. ಆರ್. ನಾಯುಡು ಪ. ವ. ಡಿ. ಟಾಸಿಬ, (ಬರ್ಮಾ)—ನನ್ನ ಮಿತ್ರರು „ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

Address—**Anglo Indian Drug & Chemical Co.,**
155 Jumma Musid, Market, Bombay.

ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 22ನೇ ನವಂಬರ 1912.

ಪ್ರಜಾಕ್ಷೇಮಾರ್ಥಕ ಸಭೆಯ ದ್ವಿತೀಯ ಸಮ್ಮೇಲನ.

(ಸೆನಿಟೆರಿ ಕೊನ್ಫರೆನ್ಸ್.)

ಪ್ರಜಾಕ್ಷೇಮ ಕಾಂಕ್ಷಿಯಾದ ಇಂಡಿಯಾ ಸರಕಾರವು ಪ್ರಜಾರೋಗಾರ್ಥ ಏರ್ಪಾಡುಗಳನ್ನು ವಿಮರ್ಶಿಸಲು ಕಳದ ೧೯೧೧ನೇ ನವಂಬರ ತಾ. ೮ರಲ್ಲು ಪ್ರಥಮತಃ ಮುಂಬಾಯಿಯಲ್ಲಿ ಸಭೆಗೂಡಿಸಿದಂತೆ, ಇದೇ ತಿಂಗಳ ತಾ. ೧೧ರಿಂದ ತಾ. ೧೬ರ ವರೆಗೆ ಬಹುಮಾನಪಟ್ಟ ಮೆ। ಬಟ್ಲರವರ ಅಧ್ಯಕ್ಷತೆಯಲ್ಲಿ ಸದರಿ ಸಭೆಯ ದ್ವಿತೀಯ ಸಮ್ಮೇಲನವು ಮದರಾಸು ಸರಕಾರ ಮಂದಿರದಲ್ಲಿ ಜರುಗಿತು. ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ೭೦ಕ್ಕೆ ಮಿಕ್ಕಿ ವಿದ್ವಾಂಸ ಪ್ರತಿನಿಧಿಗಳೆಲ್ಲರೂ ಸೇರಿದ್ದರು. "ಪ್ರಜಾಕ್ಷೇಮಕ್ಕೆ ಹೆಚ್ಚಿನ ಉತ್ತೇಜನ ದೊರೆಯುವಂತೆ ಸರಕಾರವು ಪ್ರಯತ್ನಿಸುತ್ತಿದೆ; ಆರೋಗ್ಯರಕ್ಷಣೆಯ ಸಲುವಾಗಿ ಹಲವು ವಿದ್ಯಮಾನಗಳನ್ನು ವಿಮರ್ಶಿಸಲು ನೆರವೇರಿಸಲ್ಪಟ್ಟ ಈ ಸಭೆಗೆ ಎಲ್ಲಾ ಪ್ರಾಂತ್ಯಗಳಿಂದಲೂ ಸದಸ್ಯರಾಗಲು ಅಪೇಕ್ಷಿಸುವ ವಿದ್ವಾಂಸರ ಸಂಖ್ಯೆಯೂ ಹೆಚ್ಚುತ್ತಿದೆ. ಚರ್ಚಿಸಲ್ಪಡುವ ಏರ್ಪಾಡುಗಳ ಕುರಿತು ಉಪನ್ಯಾಸಕರ ಸಂಖ್ಯೆಯು ಧಾರಾಳವಾಗಿರುವುದರಿಂದ ಪ್ರಥಮಸಮ್ಮೇಲನದಂತೆ ಎರಡು ದಿನಗಳಲ್ಲಿ ಈ ಸಭೆಯು ಮುಗಿಯದೆ ಆರು ದಿನಗಳ ವರೆಗೂ ಕೂಡಬೇಕಾಗಿದೆ. ಎರಡು ವಿಶೇಷವಾದ ಸಂಗತಿಗಳು ಇಂದು ನಮಗೆ ಗೋಚರಿಸುತ್ತಿವೆ:—ಇಂಡಿಯಾ ಸರಕಾರಕ್ಕೆ ಸೆನಿಟೆರಿ ಕಮಿಶನರರೊಬ್ಬರ ನೇಮಕವೂ, ಆರೋಗ್ಯ ರಕ್ಷಣೆಯ ಪರವಾದ ಏರ್ಪಾಡಿನ ಪುನರೇರ್ಪಾಟವೂ, ಇಂಡಿಯಾ ಸೆಕ್ರೆಟರಿಯವರಿಂದ ವಿಧಾಯಿಸಲ್ಪಟ್ಟಿವೆ. ರೋಗಾಣುಗಳ ಗುಣ ವಿಮರ್ಶೆಯನ್ನೂ, ಪ್ರಾಂತ್ಯಸಂಚಾರ ಕಾರ್ಯವನ್ನೂ ವಿಂಗಡಿಸಿ, ಸೆನಿಟೆರಿ ಇಲಾಖೆಯು ಸಂಪೂರ್ಣ ಪ್ರಯೋಜನಕಾರಿಯಾಗಿ ಪರಿಣಮಿಸುವಂತೆ ವ್ಯವಸ್ಥೆಯಾಗಿರುವುದು. ಸಂಸ್ಥಾನಗಳ ಸರಕಾರಗಳು ತಮಗೆ ತಕ್ಕಂತೆ ಮೇಲುದ್ಯೋಗಸ್ಥರನ್ನು ಚುನಾಯಿಸುವ ಅಧಿಕಾರವನ್ನು ಪಡೆದಿರುವುವು, ಮಾತ್ರವಲ್ಲ, ಡಿಪ್ಯುಟಿ ಕಮಿಶನರ ಇಸಂಗಳು ಹೆಚ್ಚಿಸಲ್ಪಟ್ಟಿವೆ. 'ಇಂಡಿಯನ್ ಮೆಡಿಕಲ್ ಸರ್ವಿಸ್'ನಿಂದ ಮಾತ್ರ ಆಫಿಸರರನ್ನು ಆರಿಸುವುದನ್ನು ಬಿಟ್ಟು ಇವುಗಳನ್ನು ದೇಶೀಯ ಉದ್ಯೋಗಸ್ಥರಿಂದಲೇ ಭರಾಯಿಸಬಹುದು. ಅಲ್ಲಲ್ಲಿ ಪಟ್ಟಣಗಳ ಪ್ರಾಮುಖ್ಯತೆಗಳಿಗನುಸಾರವಾಗಿ ಇನ್ಸಪೆಕ್ಟರರನ್ನು ನಿಯಮಿಸುವ ಹಾಗೆಯೂ, ಇಂತಹರ ವೇತನವು ಸರಿಯಾಗಿ ಸಲ್ಲುವಹಾಗೆ ಹಣದ ಅಭಾವವಿರದಂತೆ ಇಂಡಿಯಾ ಸರಕಾರವು ಧನಸಹಾಯ ಮಾಡುವಂತೆಯೂ ನಿಶ್ಚಯಿಸಲ್ಪಟ್ಟಿದೆ. ಮುನ್ಸಿಪಾಲಿಟಿಗಳ ಸೆನಿಟೆರಿ ಆಫೀಸರರ ಸಂಬಳದ ಅರ್ಧದಷ್ಟು ಧನಸಹಾಯವು ಸರಕಾರದಿಂದ ಬರುವುದು. ವಾಂತಿಭೇದಿ, ಕಾಲಜ್ವರ, ಯುಲ್ಲೊಫೀವರ್ ಎಂಬ ಜ್ವರ, ಆನೆಕಾಲು ಆಮಾತಿಸಾರ, ಶ್ವಾಸಕೋಶಗಳ ರೋಗ, ಮುಂತಾದ ಪ್ರಜಾಕ್ಷೇಮ ಹಾನಿಕರವಾದ ರೋಗಗಳ ಪರಿಶೋಧನೆ ನಿವಾರಣೆ ವ ದಮನಕ್ಕಾಗಿ ಹೆಚ್ಚಿನ ಶ್ರಮವನ್ನು ವಹಿಸಿರುವರು. ಮಲೆಜ್ವರವನ್ನು ನಿರ್ಮೂಲಿಸಲು ಮಾಡಬೇಕಾದ ಏರ್ಪಾಡುಗಳಿಗೆ ೫ ಲಕ್ಷ ರೂಪಾಯಿಗಳ ಸಂಕ್ಷನು ಆಗಿಯದೆ. (ಇದರಿಂದ ಮದ್ರಾಸು ಪ್ರಾಂತ್ಯಕ್ಕೆ ೨೮,೦೦೦ ರೂಪಾಯಿಗಳು ವಿಂಗಡಿಸಲ್ಪಟ್ಟಿವೆ.) ಈಗ ಇಲ್ಲಿ ಪ್ರಸ್ತಾಪಿಸಲ್ಪಡುವ ಸಂಗತಿಗಳಲ್ಲಿ ಪಟ್ಟಣಗಳನ್ನು ಆರೋಗ್ಯ ಶಾಸ್ತ್ರಕ್ಕನುಸಾರವಾಗಿ ಕಟ್ಟಿಸುವಿಕೆ, ಮನೆಗಳಲ್ಲಿ ಗಾಳಿಬೆಳಕುಗಳು ತಕ್ಕ ರೀತಿಯಲ್ಲಿರುವ ಹಾಗೆ ಮಾಡಬೇಕಾದ ಏರ್ಪಾಡು, ಹಳ್ಳಿ ಪಟ್ಟಣಗಳ ನಿವಾಸಿಕರಿಗೆ ಬೇಕಾದ ಶುದ್ಧ ನೀರಿನ ಸೌಕರ್ಯ, ಸಂಚಾರಿಸುವ ಆಸ್ಪತ್ರಿಗಳ ವ್ಯವಸ್ಥೆ, ವಿದ್ಯಾ ಮತ್ತು ಆರೋಗ್ಯ ಇಲಾಖೆಗಳ ಪರಸ್ಪರ ಸಂಬಂಧ, ಯಾತ್ರಿಕರಿಗೆ ಒದಗಿಸಬೇಕಾದ ಸಹಾಯ, ಪ್ರಾಚೀನ ಭ್ರಾಂತಿಭಾವನೆಗಳನ್ನು ಹೋಗಲಾಡಿಸುವಂತೆ ಆರೋಗ್ಯ ಸಂಬಂಧವಾದ ವಿದ್ಯಾಪ್ರಚಾರ, ಸಾಂಕ್ರಾಮಿಕ ರೋಗಗಳ ಸಂಶೋಧನೆ, ಪ್ರಜೆಗಳು ಈ ಸಂಬಂಧ ಸರಕಾರಕ್ಕೆ ತೋರಿಸಲಗತ್ಯವಾದ ಸಹಕಾರ,—ಮುಂತಾದವುಗಳೇ ಪ್ರಾಮುಖ್ಯವಾಗಿವೆ. ಇವುಗಳನ್ನು ಸರಿಯಾಗಿ ವಿಮರ್ಶಿಸಿ ಜಾರಿಗೆ ತಂದರೆ ಪ್ರಜಾಹಿತಕಾಂಕ್ಷಿಯಾದ ಸರಕಾರದ ಉದಾರ ಪರಿಶ್ರಮವು ಧನ್ಯವಾಗುವುದೆಂದು ತನ್ನ ನಂಬಿಕೆ" ಎಂದು ಮಾನ್ಯ ಅಧ್ಯಕ್ಷರು ಅಪ್ಪಣೆಕೊಡಿಸಿದರು. ಆರು ದಿನಗಳ ಸಭೆಯ ವೃತ್ತಾಂತವನ್ನೆಲ್ಲ ವಿವರಿಸಿ ಬರೆಯಲು ಸ್ಥಳದ ಅಭಾವವಿದ್ದುದರಿಂದ ಸೂಕ್ಷ್ಮ ವಿಚಾರದಿಂದಲೇ ಅದನ್ನು ಸಂಗ್ರಹಿಸಿ ವಿಮರ್ಶಿಸುವೆವು.

ಸಮ್ಮೇಲನದಲ್ಲಿ ಪ್ರಕಾಶಿಸಲ್ಪಟ್ಟ ವ್ಯಾಖ್ಯಾನಗಳನ್ನೂ ಉಪನ್ಯಾಸಗಳನ್ನೂ ನೋಡಿದರೆ, ಆರೋಗ್ಯ ರಕ್ಷಣಾರ್ಥವಾಗಿ ಅಗತ್ಯವಾದ ವಿಶೇಷ ಏರ್ಪಾಡುಗಳ ಪೈಕಿ ಅನೇಕವು ಪಟ್ಟಣದಲ್ಲಿಯ ಪಟ್ಟಣಿಗರಿಗೆ ಸಂಬಂಧವುಳ್ಳವುಗಳಲ್ಲದೆ ಗ್ರಾಮ ನಿವಾಸಿಕರ ಸೌಕರ್ಯಕ್ಕಾಗಿ ಹೆಚ್ಚಿನ ಅಗತ್ಯದ ವ್ಯವಸ್ಥೆಗಳ ಕುರಿತು ಚರ್ಚಿಸಲಿಲ್ಲವೆಂದು ತಿಳಿವುದು. ಪಟ್ಟಣಗಳಲ್ಲಿ ಶುದ್ಧವಾದ ನೀರು, ವೈದ್ಯ ಸಹಾಯ, ಆರೋಗ್ಯ ಶಾಸ್ತ್ರ ಮೂಲ ತತ್ವಗಳ ತಿಳುವಳಿಕೆಯನ್ನು ಹಬ್ಬಿಸುವಿಕೆ, ಅಂಟುರೋಗಗಳ ನಿವಾರಣೆ ಮೊದಲಾದವುಗಳ ಕುರಿತು ತಕ್ಕಷ್ಟು ಚರ್ಚೆ ನಡೆದುದಲ್ಲದೆ, ಮಲೆ ನಾಡುಗಳಲ್ಲಿ ಹೊಸ ತರದ ಭಾವಿಗಳನ್ನು ತೋಡಿಸಿ ಸುತ್ತಲೂ ನೀರನ್ನು ಕೊಳೆಯಿಸುವ ಕಾಡುಗಳನ್ನು ಕಡಿಸಿ, ಅತ್ಯಗತ್ಯವಾದ ಔಷಧೋಪಚಾರಗಳನ್ನು ಮುಟ್ಟಿಸಿ, ಮನೆ ವಸ್ತ್ರ ಮೈಗಳನ್ನು ಚೊಕ್ಕಟವಿಡುವಂತೆ ಬೋಧಿಸಿ, ಭೂತ ಪಿಶಾಚಿಗಳ ಮೇಲಣ ನಂಬಿಕೆಯನ್ನು ಹೋಗಲಾಡಿಸುವ ಹಾಗೆ ವೈದ್ಯರು ಸಮಯೋಚಿತವಾಗಿ ಚಿಕಿತ್ಸೆಯನ್ನು ಮಾಡುವಂತೆ ಏರ್ಪಡಿಸಿ, ಗ್ರಾಮ ನಿವಾಸಿಕರ ಆರೋಗ್ಯವನ್ನು ಕಾಪಾಡಿಸುವಂತಹ ವಿಷಯಗಳ ಚರ್ಚೆಯು ಹಿಂದೆ ಬಿದ್ದುಹೋಯಿತು. ಪಟ್ಟಣಗಳಲ್ಲಿಯಂತೂ ಅಲ್ಲಲ್ಲಿ ಹವೆಯ ತೊಡಕಿರದ ಉದ್ಯಾನಗಳನ್ನಿಟ್ಟು, ಹಾಲು ಮೀನು ಮಾಂಸ ಕಾಯಿಪಲ್ಯಗಳೇ ಮುಂತಾದ ಆಹಾರ ಪದಾರ್ಥಗಳನ್ನು ಸರಿಯಾಗಿ ಶುದ್ಧವಿರುವಂತೆ ಪರೀಕ್ಷಿಸಿ ಕ್ಷೇಮಕ್ಕೆ ಹಾನಿಕರವಾಗುವ ಇಕ್ಕಟ್ಟಿನಿಂದ ಮನೆಗಳನ್ನು ದೂರದೂರವಾಗಿಡಿಸಿ, ವಿದ್ಯಾಲಯಗಳಲ್ಲಿ ದೇಹ ಪ್ರಕೃತಿ ಆಹಾರ ಶುಚಿತ್ವ ಆರೋಗ್ಯ ಸಂಬಂಧವಾದ ತಿಳುವಳಿಕೆಯನ್ನು ಹರಡಿಸಿ, ಅತ್ಯಗತ್ಯವಾದ ಸುಲಭ ಚಿಕಿತ್ಸೆಗಳು ಮನೆ ಮನೆಗಳಲ್ಲಿ ಎಂಬಂತೆ ಇರಗೊಡಿಸುವಂತೆ ಬೋಧಿಸುವ ಸರಕಾರದ ಏರ್ಪಾಡು ಕ್ಷೇಮಕರವೂ ಸಂತೋಷಕರವೂ ಆಗಿದೆ. 'ಸ್ವದೇಶಾಭಿಮಾನಿ'ಯ ಪ್ರತಿ ಸಂಚಿಕೆಯಲ್ಲಿ ಎಂಬಂತೆ ಈ ವಿಷಯಗಳ ಕುರಿತು ಸರ್ವಸಾಧಾರಣರ ತಿಳುವಳಿಕೆಯ ಬಗ್ಯೆ ಲೇಖನಗಳನ್ನು ಬರೆದಿರುವೆವು. ತಮ್ಮ ಹಿತವನ್ನು ಬಯಸುತ್ತ ಜೀವನವನ್ನು ಕಾಪಾಡುವ ಉದಾರ ಸರಕಾರಕ್ಕೆ, ಕೃತಜ್ಞತೆಯುಳ್ಳ ಪ್ರಜೆಯು ಸಹಕಾರಿಯಾಗದಿರದು.

ಬಂಗಾಳದಲ್ಲಿ ಪ್ರಖ್ಯಾತ ಕವಿರಾಜರು ಪ್ರಕಾಶಿಸಿ ಸುಲಭ ದರದಲ್ಲಿ ವಿಕ್ರಯಿಸುವ "ಗ್ರಹಚಿಕಿತ್ಸೆ" ಎಂಬ ವಿಸ್ತಾರ ಪುಸ್ತಕವನ್ನು ಅಲ್ಲಿಯ ಮಕ್ಕಳೂ ಹೆಂಗಸರೂ ಓದುತ್ತ ತಮ್ಮ ತಮ್ಮ ಸ್ವಾಸ್ಥ್ಯವನ್ನು ಕಾಪಾಡುತ್ತಿರುವ ಕಾಲದಲ್ಲಿ, ನಮ್ಮ ದೇಶ ಭಾಷೆಯಲ್ಲಿ ನಂಬಿಗೆಗರ್ಹವಾಗಿ ಪ್ರಕಟಿಸಲ್ಪಟ್ಟ ಸುಲಭ ದರದ ಸಂಪೂರ್ಣ ವೈದ್ಯ ಪುಸ್ತಕಗಳು ಇಲ್ಲವೆಂಬುದರಿಂದಲೇ ನಾವು ಆರೋಗ್ಯಪಾಲನೆಗಾಗಿ ಪಡುವ ಧಾವತಿಯು ಹೊರಬೀಳುವುದೆಂಬುದು ಶೋಚನೀಯ. ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರುಗಳು ಎಲ್ಲ 'ಶಾಸ್ತ್ರ'ಗಳಿಗಿಂತಲೂ ಹೆಚ್ಚಾಗಿ ಆರೋಗ್ಯ ಶಾಸ್ತ್ರಗಳ ಮೂಲತತ್ವಗಳನ್ನು ಹೃದಯಂಗಮವಾಗುವಂತೆ ಮಕ್ಕಳಿಗೆ ಹೇಳಿಕೊಟ್ಟು ವರ್ಗದಲ್ಲಿ ಚೊಕ್ಕಟತ್ವವನ್ನು ಸ್ಥಾಪಿಸುವುದು ಬರುವ ಜನಾಂಗದ ಆರೋಗ್ಯಭಾಗ್ಯಕ್ಕೆ ಹಿತಕರ. ಮಂಗಳೂರು ಮೊದಲಾದ ಪಟ್ಟಣಗಳಲ್ಲಿ ಆಹಾರಪಾನಾದಿಗಳ ಶುಚಿತ್ವವನ್ನು ಕಾಪಾಡುವ ಭಾರವು ಮುನಿಸಿಪಲ್ ಸಿಬಂದಿಯವರನ್ನು ಹೊಂದಿರುವುದು. ಅಂಟುರೋಗಗಳನ್ನು ನಿವಾರಿಸಲು ಪ್ರಜೆಗಳು ಸರಕಾರಕ್ಕೆ ಮೊರೆಯಿಡುವ ಮೊದಲೇ ತಂತಮ್ಮ ಕೇರಿಗಳನ್ನು ಸ್ವಚ್ಛವಿಡುವಂತೆ ಜನಸಾಮಾನ್ಯರನ್ನು ಸರಿಯಾಗಿ ಬೋಧಿಸುವ ಕರ್ತೃತ್ವವು ವೈದ್ಯ ಇಲಾಖೆಯವರಿಗೆ ಮುಟ್ಟಿರುವುದು. ಪ್ರಜಾಹಿತಚಿಂತನೆಗಾಗಿ ಧಾವತಿಪಡುವ ಸರಕಾರವು ಪ್ರಜಾಧನವನ್ನು ಆರೋಗ್ಯರಕ್ಷಣೆಗೆ ವಿನಿಯೋಗಿಸುವುದರಲ್ಲಿ ದುಂದುಗಾರಿಕೆಯನ್ನು ತೋರಿಸಿರುವರೆಂತ ನಂಬುತ್ತೇವೆ; ಮತ್ತು ಪಟ್ಟಣಿಗರ ಆರೋಗ್ಯ ಸಾಧನಕ್ಕಾಗಿ ಪಡುವ ಶ್ರಮದ ಒಂದು ಪಾಲನ್ನು ಹಳ್ಳಿಯವರಿಗಾಗಿಯೂ ವ್ಯಯಿಸಿದ್ದಲ್ಲಿ ಮೂಲೆಸೇರಿರುವ ಗ್ರಾಮಗಳಿಗೆ ಮಹದುಪಕಾರವಾಗುವುದು.

ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯಪೈಗಳ ಜನನ ದಿನಾಚರಣೆಯು.

ಕಳೆದ ಸಂಚಿಕೆಗಳಲ್ಲಿ ಸೂಚಿಸಲ್ಪಟ್ಟಂತೆ ಕೀರ್ತಿಶೇಷ ಅ. ಸುಬ್ರಾಯಪೈಗಳವರ ಜನ್ಮ ದಿನವು ಯೋಗ್ಯರೀತಿಯಲ್ಲಿ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ತಾ. ೧೯ನೇ ಪರಾಹ್ಣ ೩ ಗಂಟೆಗೆ ಆಚರಿಸಲ್ಪಟ್ಟಿತು. ಸದರಿ ಶಾಲೆ ಉಪಶಾಲೆಗಳ ಬಾಲಕ ಬಾಲಕಿಯರೆಲ್ಲರಿಗೆ ಮಿಠಾಯಿ, ಹೂಗಳನ್ನು ಹಂಚಿ ತೀರಿದೊಡನೆಯೆ, ಕೀರ್ತಿಶೇಷರ ಸುಪರಿಚಿತರಾದ ಅನೇಕ ಗ್ರಹಸ್ಥರು ಸಭೆಗೂಡಿ, ಭಗವತ್ಪ್ರಾರ್ಥನೆಯೊಂದಿಗೆ ವರ್ಧಂತಿಯಾಚರಣೆಯನ್ನು ಪ್ರಾರಂಭಿಸಿದರು. ವಿದ್ಯಾರ್ಥಿಯರಿಬ್ಬರು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಕೀರ್ತಿಶೇಷರ ಜೀವನವನ್ನುದ್ದೇಶಿಸಿ ಭಾಷಣ ಮಾಡಿದರು. ಕೆನರಾ ಬಾಲಿಕಾಶಾಲೆಯ ಬಾಲಿಕೆಯರು ರಾ. ರಾ. ಎಮ್. ಎನ್. ಕಾಮತರು ಭುವನೇಂದ್ರ ಸ್ವಾಮಿಯರ ಪರವಾಗಿಯೂ, ಕೀರ್ತಿಶೇಷರಪರವಾಗಿಯೂ ರಚಿಸಿದ ಸರಳ ಗಾನಗಳು ಕಾಲೋಚಿತ ಆನಂದವನ್ನಿತ್ತವು. ಮಂಜೇಶ್ವರದ ಸರಸ್ವತೀ ವಿದ್ಯಾಲಯದ ಎಳೆಯ ವಿದ್ಯಾರ್ಥಿನಿಯರ ಸ್ತೋತ್ರಗಳೆರಡೂ ನಟನೆಯಿಂದಲೂ ಗಾಯನದಿಂದಲೂ ಸಭಿಕರಿಗೆ ಅತಿ ಹರ್ಷವನ್ನುಂಟುಮಾಡಿದುವು. ನಂತರ ಶ್ರೀಯುತ ಎಮ್. ವೆಂಕಟರಾಯರು ಕೀರ್ತಿಶೇಷರ ಜೀವನ ಚರಿತ್ರೆಯಿಂದ ನಮ್ಮ ತರುಣರಿಗೆ ಆದರ್ಶವಾದ ಸಂಗತಿಗಳನ್ನು ಕನ್ನಡದಿಂದಲೇ ವಿವರಿಸಿ ಹೇಳಿದರು. ಸತ್ಯಸಂಕಲ್ಪ, ಧರ್ಮಸಾಧನ, ಸ್ವಾರ್ಥತ್ಯಾಗ ಈ ಮೂರು ಭಿತ್ತಿಗಳನ್ನಾಧರಿಸಿದ್ದಲ್ಲಿ ಮಹನೀಯರಂತಹ ಉಜ್ವಲ ಉದಾರಶ್ರೇಯಸ್ಕರ ಗುಣಗಳು ಅಂಕುರಿಸಿ, ನಮ್ಮೆಲ್ಲರಿಗೆ ಮಂಗಲವಾಗುವುದಾಗಿ ಈ ಭಾಷಣದ ಸಾರಾಂಶವಾಗಿತ್ತು. ಕೆನರಾ ಹ್ಯಾಸ್ಕೂಲಿನ ಕನ್ನಡ ಪಂಡಿತರು ಕಂದಗಳಿಂದಲೂ, ಸಂಸ್ಕೃತ ಪಂಡಿತರು ವೃತ್ತರೂಪದಿಂದಲೂ ಕೀರ್ತಿಶೇಷರ ಜೀವನವನ್ನು ಕೊಂಡಾಡಿದರು. ರಾತ್ರಿಯಲ್ಲಿ ಶಾಲಾಭವನವು ದೀಪಾವಳಿಯಿಂದ ಕಂಗೊಳಿಸುತ್ತಿತ್ತು.

ಮಹನೀಯರಿಗೆ ಮರಣವಿಲ್ಲ, ಅಂತಹರ ಜನ್ಮ ದಿನಗಳೇ ಆಚರಣೆಗೆ ಯೋಗ್ಯವಾಗಿದ್ದು ಆಯಾ ಸಮಾಜದವರಿಗೆ ಉತ್ಸಾಹ ದಿನಗಳಾಗಿವೆ. ಕೀರ್ತಿಶೇಷ ಸತ್ಪುರುಷರ ಸ್ಮರಣೆಯೊಂದಿಗೆ ಅವರ ಚರಿತ್ರೆಯನ್ನು ಪಾವನಗೊಳಿಸುವ ಸದ್ಗುಣಗಳನ್ನು ಮಿಕ್ಕವರು ಸರಿಯಾಗಿ ಗ್ರಹಿಸಿ, ಕೀರ್ತಿಶೇಷರ ಅಗಲಿಕೆಯಿಂದಾದ ಅಭಾವವನ್ನು ತಿದ್ದುವಂತೆ ಪರಿವರ್ತಿಸಲು ಬದ್ಧರಾಗಿರುವರು. ಮಹಾತ್ಮರು ದಿನಂಪ್ರತಿಯೂ ಹುಟ್ಟುವಂತಿಲ್ಲ. ಶತಾಬ್ದಿಯಲ್ಲೊಮ್ಮೆ ಎಂಬಂತೆ ಅಲ್ಲಲ್ಲಿ ಅವತರಿಸುವ ಇವರ ಸ್ಮರಣೆಯೊಂದಿಗೆ ನಮ್ಮ ಸಹಾನುಭೂತಿ ಪ್ರದರ್ಶನದಿಂದ ಮಾತ್ರ ನಾವು ಕೃತಕೃತ್ಯರೆಂದು ಎಣಿಸಲಾಗುವುದಿಲ್ಲವಾದ್ದರಿಂದ, ಅವರು ಚಲಿಸಿ ಹೋದ ಸತ್ಪಥದಲ್ಲಿ ಅನುಗಾಮಿಯರಾಗುವಂತೆ ನಾವೂ ಸಾಹಸಪಡಬೇಕೆಂಬುದನ್ನು ಮರೆಯಲು ಅನುಕೂಲವಿಲ್ಲ. ಇಂತಹ ಅಮೂಲ್ಯ ಆಚರಣೆಗಳಿಂದ ಸಮಾಜವು ಉಪಕಾರ ಹೊಂದುವಂತೆ ಸ್ವರ್ಗಸ್ಥರ ಸಲುವಾಗಿ ನೆರವೇರತಕ್ಕ ಗೌಡಸಾರಸ್ವತ ಜಾತಿವೃಂದದ ಅಭಿವೃದ್ಧಿ ಕಾರ್ಯಗಳು ತ್ವರ್ಯದಲ್ಲಿಯೇ ಪೂರ್ಣತ್ವ ಹೊಂದುವ ಹಾಗೆ, ಮೆಮೋರಿಯಲ್ ಫಂಡಿಗೆ ಸಹಾಯಕರೂ ಚಂದಾದಾರರೂ ತಮ್ಮ ವಾಗ್ದತ್ತ ಧನ ಸಾಹಸಗಳನ್ನು ಸಲ್ಲಿಸಿ, ತಮ್ಮ ಸಹಕಾರದಿಂದ ಕೀರ್ತಿಶೇಷರ ಜೀವನ ಕಾರ್ಯವಾದ ವಿದ್ಯಾಪ್ರಸರಣೆಗೆ ಸಹಾಯದಾತರಾಗಿ ಅವರ ಶಾಶ್ವತ ಸ್ಮಾರಕವನ್ನು ಕೈಗೂಡಿಸುವರೆಂದು ನಮ್ಮ ದೃಢನಂಬುಗೆ.

ಈ ವರ್ಷದ ರಾಷ್ಟ್ರೀಯ ಕೊಂಗ್ರೆಸಿನ ಅಧ್ಯಕ್ಷರು.

ಬಹುಮಾನಪಟ್ಟ ರಾವ್‌ಬಹದೂರ್ ರಂಗನಾಥ ನರಸಿಂಗ ಮುಧೋಳಕರರು ಈ ವರ್ಷ ಬಂಕೀಪುರದಲ್ಲಿ ಬರುವ ದಶಂಬರದ ಕಡೆಯ ವಾರದಲ್ಲಿ ಕೂಡುವ ರಾಷ್ಟ್ರೀಯ ಕೊಂಗ್ರೆಸಿನ ಅಧ್ಯಕ್ಷಸ್ಥಾನವನ್ನಲಂಕರಿಸಲು ಸಮ್ಮತಿಸಿರುವರು. ಮಿ। ಗೋಖಲೆಯವರು ತಮ್ಮ ಅನಾನುಕೂಲತೆಯನ್ನು ಮೊದಲೇ ಪ್ರಕಟಿಸಿದ್ದುದರಿಂದ ಇವರ ಮೇಲೆ ಅಧ್ಯಕ್ಷಸ್ಥಾನವನ್ನು ವಹಿಸುವ ಭಾರವು ಬಿತ್ತು. ಕಳೆದ ಕಾಲು ಶತಮಾನದಿಂದ ಹಿಂದುಸ್ಥಾನದ ಸುಧಾರಕರಲ್ಲಿ ಅತಿ ಪರಿಶ್ರಮಪಟ್ಟು ತನ್ನ ತನುಮನವನ್ನರ್ಪಿಸಿದುದರ ಫಲವು ಈಗ ಇವರಿಗೆ ಪ್ರಾಪ್ತಿಸಿದಂತಾಯಿತು. ರಾವ್‌ಬಹದ್ದೂರರು ಮುಂಬಾಯಿ ಪ್ರಾಂತ್ಯದ ಧುಲಿಯ ಎಂಬಲ್ಲಿ ೧೮೫೭ರಲ್ಲಿ ಜನಿಸಿ, ೧೮೮೨ರಿಂದ ಅಮರಾವತಿಯಲ್ಲಿ ಮುಖ್ಯ ವಕೀಲರಾಗಿದ್ದು, ಮಧ್ಯ ಪ್ರಾಂತ್ಯದ ವಿಶೇಷ ರಾಷ್ಟ್ರೀಯ, ಸಾಮಾಜಿಕ ಕಾರ್ಯಗಳಲ್ಲಿ ಮುಂದಾಳುಗಳಾಗಿದ್ದರು. ಇವರ ಸಾಹಸದಿಂದ ಬಿಹಾರದಲ್ಲಿ ಕೈಗಾರಿಕೆಗಳು ಹುಟ್ಟಿದುವು; ಔದ್ಯೋಗಿಕ ಶಿಕ್ಷಣದ ಶಾಲೆಗಳೂ ತೆರೆಯಲ್ಪಟ್ಟುವು. ೧೯೦೬ ಔದ್ಯೋಗಿಕ ಪರಿಷದವು ಪ್ರಾರಂಭವಾಯಿತು; ಅಂದಿನಿಂದ ಈ ವರೆಗೆ ಆ ಸಂಸ್ಥೆಯು ಇವರ ಕಾರ್ಯದರ್ಶಿತ್ವದಿಂದಲೇ ಮೆರೆಯುತ್ತಿದೆ. ೧೮೮೮ರಲ್ಲಿ ಅವರು ಅಲ್ಲಹಾಬಾದಿನಲ್ಲಿ ಜರುಗಿದ ಕೊಂಗ್ರೆಸಿಗೆ ಪ್ರತಿನಿಧಿಗಳಾಗಿದ್ದು, ವರ್ಷಂಪ್ರತಿಯೂ ಕೊಂಗ್ರೆಸಿಗೆ ಹಾಜರಾಗಿ ತನ್ನ ವಕ್ತೃತೆಯಿಂದಲೂ, ಸೂಚನೆಗಳಿಂದಲೂ ಕೊಂಗ್ರೆಸಿನ ಕಾರ್ಯಗಳನ್ನು ಸಾಧ್ಯವಾದಷ್ಟು ಸಾಂಗವಾಗ ಮಾಡಿರುವರು. ೧೮೯೦ರಲ್ಲಿ ಬಾಬು ಸುರೇಂದ್ರನಾಥ ಬೆನರ್ಜಿಯರೊಂದಿಗೆ ಇವರೂ ವಿಲಾಯತಿಗೆ ತೆರಳಿ ಇಂಡಿಯದ ನ್ಯಾಯವಿಧಾಯಕ ಸಭೆಗಳ ಪರಿಷ್ಕರಣಕ್ಕಾಗಿ ಕೊಂಗ್ರೆಸಿನ ಪರವಾಗಿ ಪೇಚಾಡಿದರು. ೧೯೦೭ರಲ್ಲಿ ಸುರಾತಿನ ಕೊಂಗ್ರೆಸಿನಲ್ಲಿ ಹಾನಿಕರವಾದ ಹಲವು ಕಾರ್ಯಗಳು ನಡೆದುದರಿಂದ ಸೌಮ್ಯಪಕ್ಷವನ್ನು ಸಂಪೂರ್ಣ ಬಲದಿಂದ ಸೇರಿದರು. ಮಾನ್ಯ ಮೋರ್ಲೆಯವರ ಸುಧಾರಣಾ ಕ್ರಮದಿಂದ ಏರ್ಪಾಡಾದ ಹೊಸ ನ್ಯಾಯವಿಧಾಯಕ ಸಭೆಯಲ್ಲಿ ಇವರು ಪ್ರಥಮತಃ ಸ್ಥಾನ ಪಡೆದರು. ಹಿಂದೂ ಸಮಾಜಕ್ಕೆ ಅಲಂಕಾರ ಪ್ರಾಯರಾದ ಇವರ ಅಧ್ಯಕ್ಷತೆಯಿಂದ ಜರಗುವ ಕೊಂಗ್ರೆಸಿನ ಈ ಅಧಿವೇಷನದಿಂದ ದೇಶಕ್ಕೆ ಹಿತಕರವಾದ ಪ್ರೇರೇಪಣೆಗಳುಂಟಾಗುವುದಾಗಿ ನಾವು ಹಾರೈಸುವೆವು.

ಸಂಗಮ ತರಣ.

(ಟೆನಿಸನನ Crossing the Bar ಗೀತಾನುಸರಣ.)

(ಪೂರ್ವಿ ರಾಗ).

ರವಿಯಸ್ತಮಯ; ಸಂಜೆ; ನವತಾರೆಯಭ್ಯುದಯ,
ಕಿವಿಗಿನಿದು ಕರೆಯುತಿರಲಶರೀರವಾಣಿ!
ತವೆಶಾಂತ ಸಂಗಮದ ರವ ಘೋಷಿಸಲು,—‘ವಿಜಯ!’
ಭವತರಣಕೇರುತಿಳಿಸುವೆನೆನ್ನ ದೋಣಿ! ॥ ೧ ॥
ತುಂಬಿ, ಭರದುಯ್ಯಾಲೆಯಂ ಬಿಡದೆ, ತೂಗುತಲೆ,
ಯಂಬುಧಿಯು ಘೋರಿಡದೆ ಬಿಳುನೊರೆಯಲಿ,
ಸಂಭ್ರಮದಿ ತವುರುಮನೆಯಂ ಬಳಲಿ ಹಿಗ್ಗುತಲೆ
ಹಿಂಬರುವೆನಗೆ ಸ್ವಾಗತಮ ನೊರೆಯಲಿ! ॥ ೨ ॥
ಬೆಳಗೆ ಸಂಧ್ಯಾ ರಾಗ,—ಮೊಳಗೆ ದೇಗುಲ ಗಂಟೆ,
ಇಳೆಗಿಳಿಯಲಿರುಳ ಕತ್ತಲೆಯ ಬಲೆಪರದೆ;
ಕಳೆವೆ ಬಳಗದ ಗೃಹವಿದಾಯ ಕಳವಳ ತಂಟೆ;—
ಜಲಸಂಗಮದಗಾಧದಲೆ ಕಳೆದ ಭರದೆ! ॥ ೩ ॥
ತೆರೆಗಳಟ್ಟುಳಿಯೆನ್ನ ಸೆರೆವಿಡಿದು, ಯುಗಜನ್ಮ
ಪರಿಧಿಗಳ ಹೊರಗೊಯ್ಯುಲಭಯವೆನಗೆ,—
ಪರತೀರದಲಿ, ಪುಣ್ಯಕರದಿನಪ್ಪುವ ಪೂರ್ಣ
ಕರುಣಚಿನ್ಮಯ ಮೂರ್ತಿಯುದಯಮಿನುಗೆ! ॥ ೪ ॥

M. N. K.

‘ಎಲ್ಲವೂ ಕಲಿಮಹಿಮೆ’ಯೋ?

ಒಂದು ದೇಶದ ಭವಿಷ್ಯೋನ್ನತಿಯ ಕರಣಗಳ್ಯಾವವು ಎಂಬ ಪ್ರಶ್ನೆಯು ನಾಗರಿಕತನ ಹೊಂದಿದ ಪ್ರತಿ ಒಂದು ದೇಶದಲ್ಲಿರುವ ಮುಖ್ಯ ಪ್ರಶ್ನೆಯಾಗಿದೆ. ಈಗಿನ ಕಾಲದ ಮಕ್ಕಳೇ ಮುಂದಿನ ಜನಾಂಗದ ಏಳಿಗೆಯ ಕರಣಗಳು ಎಂಬದೇ ಆ ಪ್ರಶ್ನೆಗೆ ತಕ್ಕ ಉತ್ತರವಾಗಿದೆ. ಒಳ್ಳೇ ವಕೀಲರು, ವೈದ್ಯರು, ವ್ಯಾಪಾರಸ್ಥರು, ಬೇಸಾಯಗಾರರು ಒಂದು ದೇಶದಲ್ಲಿ ಹಬ್ಬಿ ದೇಶವು ಉನ್ನತೋನ್ನತಿಯನ್ನು ಹೊಂದಬೇಕಾದರೆ ಕಾಯಪುಷ್ಟರೂ, ನೆಲೆಯಾದ ಚಿಚ್ಛಕ್ತಿಯೂ ಉಳ್ಳ ಮಕ್ಕಳು ದೇಶದಲ್ಲಿ ಹಬ್ಬಿರಬೇಕು. ನೆಲೆಯಾದ ದೇಹವೂ ನೆಲೆಯಾದ ಮನಸ್ಸೂ ಪರಸ್ಪರ ಕೂಡಿಕೊಂಡು ಇರದ ಮಕ್ಕಳಿಂದ ಮುಂದಿನ ದೇಶೋನ್ನತಿಯನ್ನು ಬಯಸಲಾಗದು. ನಮ್ಮ ದೇಶದ ಮಕ್ಕಳಲ್ಲಿ ದಿನೇ ದಿನೇ ಶಕ್ತಿಯೂ ಬುದ್ಧಿಯೂ ಕಡಿಮೆಯಾಗುತ್ತಾ ಬರುತ್ತದೆ ಎಂಬದಾಗಿ ನಾವು ಅನುಭವದಿಂದ ತಿಳಕೊಂಡಿರುವೆವು. ಇದು ನಮ್ಮ ದೇಶೋನ್ನತಿಯ ಲಕ್ಷಣವಲ್ಲ. ಲೋಕವೇನೆಂದರಿಯದ ಸಣ್ಣ ಪುಟ್ಟ ಮಗುವು ಲೋಕದಲ್ಲಿ ಕಾಲಿಟ್ಟ ಪ್ರಥಮ ಅಂತಸ್ಥಿನಲ್ಲಿ ಬಲಹೀನವಾಗಿದ್ದರೆ ಅದು ಮುಂದಕ್ಕೆ ಲೋಕವೆಂಬ ಮಹಾಸಾಗರದ ಮಧ್ಯೆ ದಾಟ ಹೋಗುತ್ತಿರುವಾಗ ನಾನಾ ವಿಧದ ಪರಿತಾಪಗಳನ್ನು ಅನುಭವಿಸಿ ಮಧ್ಯ ಕಾಲದಲ್ಲಿಯೇ ನಿಷ್ಪ್ರಯೋಜನವಾಗಿ ಮುಣುಗಿಹೋಗುವುದೇನೋ ನಿಜ. ಇಂಥಾ ವಿಪತ್ತು ನಮ್ಮ ದೇಶಕ್ಕೆ ಸಂಭವಿಸಲು ಕಾರಣವೇನು? ನಮ್ಮ ಮಕ್ಕಳಲ್ಲಿ ಬಲವೂ ಬುದ್ಧಿಯೂ ಕಡಿಮೆಯಾಗುತ್ತಾ ಬರಲು ಹೇತುವೇನು? ಎಂಬ ಪ್ರಶ್ನೆಯನ್ನು ಮಾಡಿದ ಕ್ಷಣದಲ್ಲಿ ಜನಸಾಮಾನ್ಯರು "ಎಲ್ಲವೂ ಕಲಿಯುಗದ ಮಹಿಮೆ" ಎಂಬ ಉತ್ತರವನ್ನು ಕೊಡುವರು. ಈ ಮಾತು ನಿಜವೋ? ಸರ್ವಥಾ ನಿಜವಲ್ಲ. ಭತ್ತದ ಫಸಲು ಒಳ್ಳೆಯದಾಗಬೇಕಾದರೆ ಒಳ್ಳೆಯ ಬೀಜವನ್ನು ಬಿತ್ತಬೇಕು. ಒಳ್ಳೆಯ ಬೀಜವನ್ನು ಬಿತ್ತಿದರೆ ಪುಷ್ಟಿಯಾದ ಸಸಿಯು ಅಂಕುರಿಸಿ ಬಲವಾಗಿ ಬೆಳೆದು ತಕ್ಕ ಫಲವು ಬರುವದು. ತಕ್ಕ ಬೀಜ ಹಾಕದಿದ್ದರೆ ಒಳ್ಳೆಯ ಫಲವಾಗಲಾರದು. ತದ್ರೀತಿ ಬುದ್ಧಿವಂತನೂ ಆರೋಗ್ಯವಂತನೂ ಶಕ್ತಿವಂತನೂ ಆದ ಮನುಷ್ಯನಿಗೆ ಬುದ್ಧಿಯೂ ಶಕ್ತಿಯೂ ಇಲ್ಲದ ಸ್ತ್ರೀಯನ್ನು ಮದುವೆ ಮಾಡಿದರೆ ಅಂಥವನಿಗೆ ಹುಟ್ಟುವ ಮಕ್ಕಳು ತಂದೆಗಿಂತ ಬುದ್ಧಿಯಲ್ಲಿಯೂ ಆರೋಗ್ಯದಲ್ಲಿಯೂ ಬಹಳ ಕಡಿಮೆಯಾಗುವರು. ತಂದೆಯೂ ತಾಯಿಯೂ ಇಬ್ಬರೂ ಬಲಿಷ್ಠರಾಗಿಯೂ ಬುದ್ಧಿವಂತರಾಗಿಯೂ ಇದ್ದರೆ ಅಂತಹರಿಂದ ಹುಟ್ಟುವ ಮಕ್ಕಳು ಬಲಿಷ್ಠರಾಗಿಯೂ ಬುದ್ಧಿವಂತರಾಗಿಯೂ ಇರುವರು. ಆದರೆ ನಮ್ಮಲ್ಲಿ ಸ್ತ್ರೀಯು ವಿವಾಹವಾಗಿ ತೀರಬೇಕೇ ಎಂಬ ನಿಯಮವಿರುವುದರಿಂದ ಗಂಡೂ ಹೆಣ್ಣೂ ಬಹಳ ಚಿಕ್ಕವರಾಗಿರುವಾಗಲೇ-ಗಂಡೂ ಹೆಣ್ಣೂ ಯೌವನಸ್ಥರಾಗುವುದಕ್ಕೆ ಮುಂಚಿತವಾಗಿಯೇ ಅವರನ್ನು ಗೃಹಸ್ಥಾಶ್ರಮದಲ್ಲಿ ಬಂಧಿಸಿ ಬಿಡುವುದರಿಂದ ಅವರಿಂದ ಹುಟ್ಟುವ ಮಕ್ಕಳು ದುರ್ಬಲರೂ, ಬುದ್ಧಿಹೀನರೂ ಆಗುತ್ತಾ ಬರುತ್ತಾರೆ. ಸಾಧಾರಣವಾಗಿ ಬಾಲವಿವಾಹದ ರೂಢಿಯು ನಮ್ಮಲ್ಲಿ ಹೆಚ್ಚಿರುವುದರಿಂದ ಜೊತೆಯಾದ ದಾಂಪತ್ಯದಲ್ಲಿ ಗಂಡು ಬಲವಾಗಿಯೂ ಹೆಣ್ಣು ಬಲಹೀನವಾಗಿಯೂ ಇರುತ್ತದೆಂಬದು ಎಲ್ಲರೂ ಒಪ್ಪತಕ್ಕ ಮಾತು. ಒಂದು ವೇಳೆ ಇಂಥಾ ಪತಿ ಪತ್ನಿಯರು ಸಮಾನ ಗುಣಗಣಗಳಿಂದ ಕೂಡಿದ್ದರೂ ಅವರು ಪ್ರಾಯಯುತರಾಗುವ ಮುಂಚೆಯೇ ಗೃಹಸ್ಥಾಶ್ರಮವನ್ನು ಸೇರುವುದರಿಂದ ಸರಿಯಾದ ಫಲವುಂಟಾಗಲಾರದು. ಇಂಥವರಿಂದ ಹುಟ್ಟಿದ ಮಕ್ಕಳು ದೊಡ್ಡವರಾಗಿ ಬೆಳೆದ ಮೇಲೆ ಅವರು ವಿವಾಹವಾಗಿ ಮಕ್ಕಳನ್ನು ಪಡೆದರೆ ಆ ಮಕ್ಕಳು ಹೆತ್ತವರಿಗಿಂತಲೂ ಶಕ್ತಿಯಲ್ಲಿಯೂ ಬುದ್ಧಿಯಲ್ಲಿಯೂ ಕಡಿಮೆಯವರಾಗುವರು. ಹೀಗೆ ಇವರಿಂದ ಹುಟ್ಟಿದ ಮಕ್ಕಳು ಮತ್ತಷ್ಟು ಶಕ್ತಿಯಿಲ್ಲದವರಾಗಿ ದೇಶವು ಕ್ರಮೇಣ ಅಧೋಗತಿಗಿಳಿಯುವದು. ಇಂತಹ ಬಾಲ ವಿವಾಹವು ದೇಶದ ಮುಂದಿನ ಅಭಿವೃದ್ಧಿಗೆ ಮಹಾ ಕೇಡನ್ನುಂಟು ಮಾಡುವಂಥಾದ್ದಾಗಿದೆ. ಹಿಂದೂ ಶಾಸ್ತ್ರದಲ್ಲಿ ಬಾಲ ವಿವಾಹ ವಿಧಿ ಇರುವುದರಿಂದ ಬಾಲ ವಿವಾಹ ಪದ್ಧತಿಯೂ ನಮ್ಮಲ್ಲಿ ರೂಢಿಯಲ್ಲಿದೆಂದು ಕೆಲವರು ವಾದಿಸಬಹುದು. ಆದರೆ ಹಿಂದೂ ಶಾಸ್ತ್ರವನ್ನು ಪರಿಶೀಲಿಸಿದರೆ ಆದರಲ್ಲಿ ಬಾಲ ವಿವಾಹ ವಿಧಿಯು ಹೇಳಲ್ಪಟ್ಟಿಲ್ಲವೆಂಬದು ಕೆಳಗಿನ ದೃಷ್ಟಾಂತದಿಂದ ವ್ಯಕ್ತವಾಗುವುದು.

"ಋತುಮತಿಯಾದ ಕುಮಾರಿಯು ಮೂರು ವರ್ಷಗಳ ಪರಿಯಂತರ ಕಾದಿರಲಿ. ಆ ಮೇಲೆ ತನಗೆ ಸದೃಶನಾದ ಪತಿಯನ್ನು ಹೊಂದಲಿ" ಎಂತ ಮನುಸ್ಮೃತಿಯಲ್ಲಿಯೂ "ಋತುಮತಿಯಾದ ಕುಮಾರಿಯು ಮೂರು ವರ್ಷಗಳ ಕಾಲ ಕಾದಿರಬೇಕು. ಆ ಬಳಿಕ ಅವಳು ತನಗೆ ಸಮಾನನಾದ ಪತಿಯನ್ನು ಹೊಂದಬಹುದು" ಎಂತ ವಸಿಷ್ಠಸ್ಮೃತಿಯಲ್ಲಿಯೂ ಹೇಳಲ್ಪಟ್ಟಿದೆ. ಇದನ್ನು ಬಿಟ್ಟು ಪುರಾಣೇತಿಹಾಸಗಳಲ್ಲಿ ವಿಚಾರ ಮಾಡಿದರೂ ಋತುಮತಿ ವಿವಾಹ ಪದ್ಧತಿಯೇ ಯೋಗ್ಯವೆಂದು ವಿಧಿಸಲ್ಪಟ್ಟಿದೆ. "ವರನು ೩೨ ವರ್ಷದ ವಯಸ್ಸಿನವನಾಗಿಯೂ ಕನ್ಯೆಯು ೧೯ ವರ್ಷದ ವಯಸ್ಸಿನವಳಾಗಿಯೂ ಇದ್ದರೆ ೬ ರಾತ್ರಿಗಳ ಪರಿಯಂತರ ನಿಯಮದಿಂದಿರಬೇಕು. ಕನ್ಯೆಯು ೨೦ ವರ್ಷದವಳಾಗಿದ್ದರೆ ಮೂರು ದಿನ ತನಕ ನಿಯಮದಿಂದಿರಬೇಕು. ಅದಕ್ಕೆ ಮೇಲ್ಪಟ್ಟ ವಯಸ್ಸಿನವಳು ಒಂದು ದಿವಸ ನಿಯಮದಿಂದಿರತಕ್ಕದ್ದು" ಎಂತ ಬ್ರಹ್ಮಪುರಾಣದಲ್ಲಿಯೂ 'ಋತುಮತಿಯಾದ ಕನ್ಯೆಯು ೩ ವರ್ಷಗಳ ವರೆಗೆ ಕಾದಿರಬೇಕು. ನಾಲ್ಕನೆಯ ವರ್ಷವಾಗುತ್ತಲೇ ಆಕೆಯು ಗಂಡನನ್ನು ತಾನೇ ಸಂಪಾದಿಸಬಹುದು" ಎಂತ ಮಹಾ ಭಾರತ ಅನುಶಾಸನಿಕ ಪರ್ವ ಅಧ್ಯಾಯ ೪೪ರಲ್ಲಿಯೂ "ಮಹಾ ಪ್ರಾಜ್ಞನು ಮಹಾ ಕುಲದಲ್ಲಿ ಹುಟ್ಟಿದವಳಾಗಿಯೂ ಲಕ್ಷಣಗಳಿಂದ ಪ್ರಶಸ್ತಳಾಗಿಯೂ ತರುಣಿಯಾಗಿಯೂ ಇರುವ ಕನ್ಯೆಯನ್ನು ಮದುವೆಯಾಗಲು ಅರ್ಹನಾಗುತ್ತಾನೆಂತ ಅನುಶಾಸನಿಕ ಪರ್ವದ ೧೦೪ನೇ ಅಧ್ಯಾಯದಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ. ಸಭ್ರುವೆಂಬ ಬ್ರಾಹ್ಮಣ ಹೆಂಗಸು ಬಹಳ ವರ್ಷಗಳ ತಪಸ್ಸು ಮಾಡಿ ಹೆಚ್ಚು ವಯಸ್ಸಾದ ಬಳಿಕ ಗಾಲನನ್ನು ಮದುವೆಯಾದಳು ಎಂದು ಮಹಾ ಭಾರತದ ಶಲ್ಯ ಪರ್ವದ ಗದಾ ಯುದ್ಧ ಪರ್ವ ೫೧ನೇ ಅಧ್ಯಾಯದಲ್ಲಿ ವಿದಿತವಾಗುತ್ತದೆ. ದುಷ್ಯಂತೋಪಾಖ್ಯಾನದಲ್ಲಿ ಮುಂದೆ ಬರುವ ಶಕುಂತಲೆಯು ಮದುವೆಯಾದಾಗ ಋತುಮತಿಯಾದ ಯೌವನೆಯಾಗಿದ್ದಳೆಂದು ನಮಗೆ ತೋರಿಬರುತ್ತದೆ.

ನಮ್ಮ ಶಾಸ್ತ್ರ ಪುರಾಣೇತಿಹಾಸಗಳೇ ಋತುಮತಿ ವಿವಾಹ ಪದ್ಧತಿಯನ್ನು ಬೋಧಿಸುವಾಗ ಬಾಲವಿವಾಹ ಪದ್ಧತಿಯಿಂದ ನಾವು ಬಂಧಿಸಲ್ಪಟ್ಟು ನಮ್ಮ ದೇಶದ ಅಧೋಗತಿಗೆ ಮಾರ್ಗವನ್ನು ಮಾಡಿಕೊಡುವುದು ನ್ಯಾಯವಲ್ಲ. ವಿವಾಹ ಮಾಡಿಕೊಳ್ಳುವುದರಲ್ಲಿ ವಿವೇಚನೆಯನ್ನು ಉಪಯೋಗಿಸಿ, ಬಾಲವಿವಾಹ ಪದ್ಧತಿಯನ್ನು ತ್ಯಜಿಸಿದರೆ ನಮ್ಮ ದೇಶದಲ್ಲಿ ಭವಿಷ್ಯದಲ್ಲಿ ಹುಟ್ಟುವ ಮಕ್ಕಳು ಧೃಡಕಾಯರಾಗುವುದರಲ್ಲಿಯೂ ಕಳಕೊಂಡ ನಮ್ಮ ಹಿರಿಯರ ಬುದ್ಧಿ ಚಾತುರ್ಯವನ್ನು ಪುನಃ ಗಳಿಸಿಕೊಳ್ಳುವುದರಲ್ಲಿಯೂ ಸಂದೇಹವಿರದು. ನಮ್ಮ ಬಾಲಕರು ಬುದ್ಧಿಯಲ್ಲಿಯೂ, ಆರೋಗ್ಯದಲ್ಲಿಯೂ ದಿನೇ ದಿನೇ ಅಧೋಗತಿಯನ್ನು ಹೊಂದಿ ತುಂಬೇ ಗಿಡಕ್ಕೆ ಏಣಿ ಹಾಕಿ ಹತ್ತತಕ್ಕಂಥವರು ಎಂದು ಕರೆಯಲ್ಪಡಲೂ 'ಎಲ್ಲವೂ ಕಲಿಯುಗದ ಮಹಿಮೆ' ಎಂದು ಹೇಳಲೂ, ಮಾರ್ಗವಿರದು.

ಒಂದು ಸಮಾಜವು ಸಣ್ಣ ಸಣ್ಣ ಕುಟುಂಬಗಳಿಂದ ಕ್ರೋಢೀಕರಣವಾಗಿದೆ. ಸಮಾಜದ ಭವಿಷ್ಯೋನ್ನತಿಯು ಆಯಾ ಕುಟುಂಬದ ಯಜಮಾನನನ್ನು ಹೊಂದಿಕೊಂಡಿರುತ್ತದೆ. ಮನೆಯ ಯಜಮಾನರು ವಿವಾಹವು ಬರೇ ಭೋಗತೃಷ್ಣೆಯನ್ನು ಪರಿಹರಿಸಿಕೊಳ್ಳುವುದಕ್ಕಾಗಿಯೇ ಇದೆ ಎಂದು ಭಾವಿಸುವುದಾದರೆ ಇಂಥಾ ಸಂಯೋಗದಿಂದ ಬಲಹೀನರೂ ಅಜ್ಞಾನಿಗಳೂ ಆದ ಮಕ್ಕಳು ದೇಶದಲ್ಲಿ ಹರಡಿಕೊಂಡು ಬಡತನವೂ ದುಶ್ಚಾಳಿಯೂ ಅಭಿವೃದ್ಧಿಯಾಗಿ ಅಧೋಗತಿಯನ್ನು ಹೊಂದುವುದೇನೋ ನಿಜ. ಪರಂತು ವಿವಾಹ ವಿಚಾರವನ್ನು ಮಾಡಿ ವಿವಾಹವನ್ನು ಮಾಡಿಕೊಳ್ಳುವುದಾದರೆ ದೇಶದ ಏಳಿಗೆಗೆ ಸರಾಗ ಮಾರ್ಗವನ್ನು ಮಾಡಿಕೊಟ್ಟಂತಾಗುವುದು.

S. A.

ಮನೋಬಲದ ಅವಶ್ಯಕತೆ.

"ಮನಮೇವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬಂತೆ ಮನಸ್ಸೇ ಬಂಧಮೋಕ್ಷಕ್ಕೂ, ಸುಖ ದುಃಖಗಳಿಗೂ ಸ್ವಾಸ್ಥ್ಯ ಆಮಯಗಳಿಗೂ ಕಾರಣ ಭೂತವಾದುದೆಂದು ತಿಳಿದವರಲ್ಲಿ ಎಷ್ಟೋ ಮಂದಿ ತಮ್ಮ ದೇಹದ ವಿವಿಧ ಬೇನೆ ನಿವಾರಣಕ್ಕಾಗಿ ಮನಶಕ್ತಿಯನ್ನು ಉಪಯೋಗಿಸಿಕೊಳ್ಳದಿರುವುದು ಶೋಚನೀಯವಲ್ಲವೇ? ಶಸ್ತ್ರ ವೈದ್ಯರು ಕ್ಲೋರೋಫೋರ್ಮನ್ನು ಉಪಯೋಗಿಸುವ ಬದಲಿಗೆ ಚಿತ್ತಶಕ್ತಿಯಿಂದ ರೋಗಿಗಳ ಮನಸ್ಸಿಗೆ ಸೂಚನೆ ಪ್ರೇರೇಪಣೆಗಳ ಮೂಲಕ ಕ್ಲೋರೋಫೋರ್ಮಿನ ಉದ್ದೇಶವನ್ನೇ ಪೂರೈಸುವರು; ಹೃದ್ರೋಗ (Heart Disease) ಹಿಡಿದ ಬಡ ರೋಗಿಗಳಿಗೂ, ಗರ್ಭಿಣಿಯರಿಗೂ ವೈದ್ಯರು ಪ್ರತಿಕೂಲವಾದ ಪ್ರೇರೇಪಣೆಗಳಿಂದ ರೋಗಗಳನ್ನು ದೂರವಾಗಗೊಡಿಸುವರು. ರೋಗಿಯ ವಿಶ್ವಾಸದಿಂದ ಉಂಟಾಗುವ ಪರಿಣಾಮವು ವೈದ್ಯನ ಪ್ರೌಢತೆಗಿಂತಲೂ ಔಷಧದ ಬಲಕ್ಕಿಂತಲೂ ಹೆಚ್ಚಿನದು." ಆದುದರಿಂದ ದೇಹದ ಅಂಗಾಂಗಗಳ ಮೇಲೆ ಮನಶಕ್ತಿಯನ್ನು ಸರಿಯಾಗಿ ವಿನಿಯೋಗಿಸಲು ಕಲಿವುದು ಸ್ವಾಸ್ಥ್ಯಾಭಿಲಾಷಿಯರ ಕರ್ತವ್ಯ.

ಮನೋ ಶಾಂತತೆಯಿಲ್ಲದೆ ದೇಹದಲ್ಲಿ ತೇಜಗುಂದುವುದು; ಕುಟುಂಬದಲ್ಲಿ ಸಂಪತ್ತು ಸುಖಗಳಿರವು; ರಾಜ್ಯದಲ್ಲಿ ವಿರಾಮವಿರದು;-ಇದೇ "ಶಾಂತಿಃ ಶಾಂತಿಃ ಶಾಂತಿಃ ಎಂಬ ಸ್ವಸ್ತಿ ವಚನದ ತತ್ವವೆಂದರಿಯಬೇಕು. ತನ್ನಲ್ಲಿ ವಿಶ್ವಾಸ, ಭಕ್ತಿ,ನಂಬಿಗೆಯಿದ್ದಲ್ಲಿ ವ್ಯಕ್ತಿಯಲ್ಲಿ ಶಾಂತತೆ ನೆಲೆಗೊಳ್ಳುವುದು; ವಿಶ್ವಾಸವಿದ್ದಲ್ಲಿ ಪ್ರೇಮಕ್ಕೆ ಎಡೆ ಇದೆ; ಪ್ರೇಮವು ನಮ್ಮಲ್ಲಿಲ್ಲದೆ ಹೋದರೆ ಸಮಾಜದಲ್ಲಿ ಪರಸ್ಪರ ವಿಶ್ವಾಸವು ಬೆಳೆಯದು. ಮನೋಲ್ಲಾಸ, ಸದಿಚ್ಛೆ, ಧೈರ್ಯ ಮುಂತಾದವು ವಿಶ್ವಾಸ ಜನ್ಯವಾದವು; ಇವುಗಳಿಂದಲೇ ಲೋಕಾತೀತವಾದ ಆನಂದವೂ ಉಜ್ವಲವಾದ ಚಿಂತನೆಗಳೂ ಹುಟ್ಟುವವು. ಇವುಗಳು ಜೀವನಕ್ಕೆ ಹಿತಕರವಾಗಿ ಆಯುಷ್ಯ ವೃದ್ಧಿಗೆ ಹೇತುಗಳೂ ಸ್ಮಶಾನವನ್ನು ದೂರದಲ್ಲಿಡುವುವೂ ಆಗಿವೆ. ಪ್ರೇಮಮಯ ಜೀವಿಯು ಎಂದು ತಾನೇ ರೋಗಿಯಾಗಿದ್ದನು? ದೃಢಚಿತ್ತನಾಗಿ ಸಾಹಸಿಯಾದವನು ಯಾವ ಕೆಲಸವನ್ನು ತಾನೆ ತೊರದಿರುವನು? ತಾಯಿಯು ಮಗುವನ್ನೂ ಪತ್ನಿಯು ಪತಿಯನ್ನೂ ಅಹೋರಾತ್ರಿಯೂ ತನ್ನ ಪ್ರೇಮ ಬಲದಿಂದ ಉಪಕಾರಿಯಾಗಿರುವಂತೆ ಸಹಾಯಕವಾದ ಮತ್ತಾವುದಿದೆ? ವೀರ ಪುರುಷರ ಜೀವನ ಸಾರ್ಥಕ್ಯದ ಮೂಲವು ವಿಶ್ವಾಸ, ಸಾಹಸ ಪ್ರೇಮವೇ!

ಆದರೆ ಮಾನವಕುಲದ ದುರ್ಭಾಗ್ಯದಿಂದ ದುರಾಶೆ, ದುರ್ಬಲತೆ, ಸಂಶಯ, ಭಯ ಮತ್ಸರ, ಚಿರಚಿಂತೆ, ಪಶ್ಚಾತ್ತಾಪ, ನಿರಾಶೆಗಳ ಬೀಜಗಳು ನಮ್ಮಲ್ಲಿ ಬಿತ್ತಲ್ಪಟ್ಟಿವೆ! ಇವುಗಳ ಲಕ್ಷಣವೇ ಮೃತ್ಯುಕಾಲ ಸೂಚನೆ. ಕ್ಷುದ್ರ ಬೀಜದಲ್ಲಿ ಮಹಾ ಅಶ್ವತ್ಥದ ಸ್ಥೂಲತೆಯು ಅಡಕವಾಗಿರುವಂತೆ ಒಂದೆರಡು ಜೀವಾಣುಗಳಲ್ಲಿ ದೇಶಕ್ಷೋಭದ ಪ್ಲೇಗಿನ ದಾರುಣತ್ವವು ಅಡಗಿರುವಂತೆ, ಈ ಹೀನಗುಣಗಳೇ ಮನುಷ್ಯ ಜಾತಿಗೆ ದುಸ್ಸಹ ಪೀಡೆಗಳ ಕಾರಣವಾದುವು.

ಸ್ವಾವಲಂಬನದಿಂದ ಸಾಹಸವು ಹುಟ್ಟುವಂತೆ ಸಂಶಯದಿಂದ ಭಯವು ಹುಟ್ಟುವುದು; ವಿಶ್ವಾಸದಿಂದ ಅನ್ಯರಕಡೆಗೆ ನಮ್ಮ ಪ್ರೇಮ ಬೆಳೆವಂತೆ ಭಯದಿಂದ ಅನ್ಯರೊಂದಿಗೆ ದ್ವೇಷವೂ ಬೆಳೆಯಲು ಎಡೆಯಿದೆ.

ಪ್ರತಿಯೊಬ್ಬ ವ್ಯಕ್ತಿಯ ಮೋರೆಯ ಮೇಲೆ ಕ್ರೋಧ, ಮತ್ಸರ, ಅಸೂಯೆಗಳ ಭಾವವು ಅಂಕುರಿಸಿರುವುದು. ಹೆಚ್ಚಿನ ಆತುರತೆ, ಚಿಂತೆ, ಬೇಸರಗಳಿಂದ ಜೀವನದ ವಿಕಾಸತ್ವವು ಮುದುರಿ, ಪ್ರಾಣಿಯು ನಿಸ್ತೇಜನಾಗಿ ಕ್ಷುದ್ರನಾಗುವನು; ಪಶ್ಚಾತ್ತಾಪವೂ ನಿರಾಶೆಯೂ ಆತ್ಮಹತ್ಯದ ಕಡೆಗೆ ವ್ಯಕ್ತಿಯನ್ನು ನಡಿಸುವುವು. ಮಾನಸಿಕ ತಾಪತ್ರಯಗಳು ದೇಹಕ್ಕೆ ಗಂಡಾಂತರಗಳನ್ನು ಆಕರ್ಷಿಸುವುವು. ಕೋಪದಿಂದ ಉದ್ದೀಪ್ತವಾದ ಹೃದಯ ಗುಂಡಿಗೆಯು ಕ್ಷಣದಲ್ಲಿಯೇ ನಿಂತು, ಹಲವರು ಅಕಾಲಮರಣ ಹೊಂದಿರುವರು; ತಾಯಿಯ ಕ್ರೋಧದಿಂದ ದೂಷಿತವಾದ ಮೊಲೆಯ ಹಾಲು ಕುಡಿದ ಮಗುವಿಗೆ ಜಾಡ್ಯದ ಸಂಭವವಿದೆ. ತಮ್ಮಲ್ಲಿರುವ ಪುರುಷತ್ವದ ತೇಜೋಬಲವನ್ನು ವೃಥಾ ದುರಾಲೋಚನ, ವಿಷಯಾಸಕ್ತಿ, ದುರ್ಗುಣಗಳ ಇಚ್ಛಾಪೂರ್ತಿಗಾಗಿ ಒಪ್ಪಿಸುವಷ್ಟಕ್ಕೆ, ವ್ಯಕ್ತಿಗಳು ದುರ್ಬಲರಾಗಿ ಹತಾಶರಾಗಿ ಜೀರ್ಣದೇಹಿಗಳಾಗಿ ನಾಶಹೊಂದುವರೆಂಬುದಕ್ಕೆ ಸಂಶಯವಿಲ್ಲ.

ಇಷ್ಟೆಲ್ಲ ವಿಚಾರದಿಂದ ತಿಳಿದುಬರುವಂತೆ ಜೀವನ ಸಾರ್ಥಿಕ್ಯಕ್ಕಾಗಿ ಪೇಚಾಡುವರೆಲ್ಲರು ಶುದ್ಧ ಮನಸ್ಕರಾಗಿ, ನಿರ್ಮಲ ಸ್ವಭಾವದಿಂದ ತಮ್ಮ ಮನಸ್ಸಿನ ಪ್ರವೃತ್ತಿಗಳ ಬಲದಿಂದ ದೈಹಿಕ ಧೃಡತೆಯನ್ನು ಘನೀಕರಿಸುವುದಾದರೆ ನಮ್ಮ ಮತಗೌರವವು ಉಳಿದಂತಾಗುವುದು; ನರಕುಲ ರಕ್ಷಣೆಯೂ ಸಾಧ್ಯವಾಗುವುದು;—ಮಾತ್ರವಲ್ಲ, ಧರ್ಮವನ್ನು ಕಾಪಾಡುವ ಶ್ರೇಯಸ್ಸೂ ಲಭಿಸುವುದು.

K.

ಗೋವಾ ದೇಶದ ತೆಂಗು ವ್ಯವಸಾಯ.

ಗೋವಾ ದೇಶದಲ್ಲಿ ವ್ಯವಸಾಯಕ್ಕೆ ತಂದಿರುವ ಪ್ರದೇಶಗಳಲ್ಲಿ ಹೆಚ್ಚು ಭಾಗವು ತೆಂಗಿನ ತೋಟಗಳಾಗಿವೆ. ಈ ತೋಟಗಳಲ್ಲಿ ತೆಂಗಿನ ಫಸಲು ಮುಖ್ಯವಾದದ್ದಾಗಿಯೂ ಹಲಸು ಮಾವು ಸಹಕಾರಿ ಫಸಲುಗಳಾಗಿಯೂ ಇರುತ್ತವೆ. ಎತ್ತರ ಪ್ರದೇಶಗಳಲ್ಲಿ ನಿಂತು ಸುತ್ತಲೂ ನೋಡಿದರೆ ಸಮುದ್ರ ತೀರದ ಗ್ರಾಮಗಳೆಲ್ಲಾ ತೆಂಗು ತೋಟಗಳಿಂದ ತುಂಬಿರುತ್ತೆ. ತೆಂಗು ಪ್ರದೇಶಗಳ ಜಮೀನುಗಳಲ್ಲಿ ಮೂರುತರಹೆ ಗುಣದ ಜಮೀನುಗಳು ಕಂಡುಬರುತ್ತವೆ. ಮರಳು ಭೂಮಿ, ಕೆಂಪು ಭೂಮಿ, ಕೆಂಪು ಮಣ್ಣು ಮತ್ತು ಮರಳು ಮಿಶ್ರವಾದ ಭೂಮಿ.

ಈ ತೋಟಗಳು ಪ್ರಾಯಶಃ ಸಮುದ್ರತೀರದಿಂದ ಒಂದೆರಡು ಮೈಲಿ ಬಿಟ್ಟು ಆಚೆಗೆ ೧೫ ಮೈಲಿ ವರಿವಿಗೂ ಹಬ್ಬಿರುತ್ತವೆ. ಜಮೀನುಗಳು ಮರಳು ಪ್ರದೇಶಗಳಾಗಿಯೂ, ಕೆಂಪು ಮಣ್ಣು ಉಳ್ಳವುಗಳಾಗಿಯೂ ಇರುತ್ತವೆ. ಗೋವಾ ದೇಶದ ಹವಾ ತೆಂಗಿನ ವ್ಯವಸಾಯಕ್ಕೆ ತಕ್ಕುದಾಗಿರುತ್ತೆ.

ಬಿತ್ತನೆ ನೆಡುವದು:—ಚನ್ನಾಗಿ ಬಲಿತು ದಪ್ಪನಾಗಿರುವ ಕಾಯಿಗಳನ್ನು ಬಿತ್ತನೆಗೆ ಉಪಯೋಗಿಸುತ್ತಾರೆ. ಈ ಕಾಯಿಗಳು ಇಳಿಕಿದ್ದು ಆಗಬೇಕೆ ಹೊರತು ಕೆಡವಿದ್ದು ಕೂಡದು. ಕಾಯಿಗಳನ್ನು ಸೆಪ್ಟಂಬರ್ ತಿಂಗಳಲ್ಲಿ ಪಾತಿಗಳಲ್ಲಿ ೨—೩ ಅಂಗುಲ ಅಂತರ ಬಿಟ್ಟು ನಡಬೇಕು. ಮೊಳಿಕೆಯು ಚನ್ನಾಗಿ ಎದ್ದು ಸಸಿಯು ಸುಮಾರು ೯ ಅಂಗುಲ ಎತ್ತರ ಬೆಳೆದ ಮೇಲೆ ನಾಟಿಹಾಕುವದಕ್ಕೆ ಸರಿಯಾಗಿರುತ್ತೆ. ಸಾಧಾರಣವಾಗಿ ಸಸಿಯು ನಾಟುವದಕ್ಕೆಲಾಯಖಾಗಲು ೯ ತಿಂಗಳು ಬೇಕು. ಬಿತ್ತನೆಯು ಚನ್ನಾಗಿದ್ದು ಪಾತಿಯು ಚನ್ನಾಗಿದ್ದಲ್ಲಿ ೬ ತಿಂಗಳು ಸಾಕಾಗುತ್ತೆ. ಏಪ್ರೆಲ್ ತಿಂಗಳಲ್ಲಿ ೩ ಅಡಿ ಉದ್ದ, ೩ ಅಡಿ ಅಗಲ, ೩ ಅಡಿ ಆಳವುಳ್ಳ ಗುಣಿಗಳನ್ನು ತೋಡಿ ತೆಂಗಿನ ಸಸಿಗಳನ್ನು ನಾಟಿಹಾಕಬೇಕು. ಒಂದು ಸಸಿಯಿಂದ ಮತ್ತೊಂದು ಸಸಿಗೆ ೧೨ ಅಡಿ ಅಂತರವಿರಬೇಕು. ಕೆಂಪುಮಣ್ಣಿನ ಭೂಮಿಯಾಗಿದ್ದರೆ ಗುಣಿಯ ತಳಕ್ಕೆ ಮರಳು, ಎಲೆಗೊಬ್ಬರ, ಬೂದಿ ಕುರಿಗೊಬ್ಬರ ಮುಂತಾದವುಗಳನ್ನು ಮಣ್ಣಿನ ಜೊತೆಗೆ ಸೇರಿಸಿ ಹಾಕಬೇಕು. ೫ ವರ್ಷಗಳ ತನಕ ಗೊಬ್ಬರ ಹಾಕತಕ್ಕ ಅವಶ್ಯಕವಿಲ್ಲ. ಉಪ್ಪನ್ನು ಹಾಕುವ ವಾಡಿಕೆಯುಂಟು. ಹೀಗೆ ಮಾಡುವದರಿಂದ ಗಿಡಗಳು ಅನೇಕ ವರ್ಷಗಳು ಫಲಿಸುತ್ತವೆ. ಆದರೆ ಗಿಡಗಳಿಗೆ ಅನೇಕ ಕಾಲ ಗೊಬ್ಬರವನ್ನೇ ಹಾಕದೆ ಬಿಟ್ಟು ಬಿಟ್ಟರೆ ಕಾಯಿ ಸಣ್ಣನಾಗಿ ಫಲವು ಕಮ್ಮಿಯಾಗುತ್ತೆ. ಕೆಲವು ಕಡೆ ಮೀನು ಗೊಬ್ಬರವನ್ನು ಗಿಡಕ್ಕೆ ಒಂದು ಗೂಡೆಯಂತೆ ಹಾಕುತ್ತಾರೆ. ಬುಡದಿಂದ ಒಂದು ಅಡಿ ಬಿಟ್ಟು ಈ ಗೊಬ್ಬರವನ್ನು ಮಣ್ಣಿನೊಂದಿಗೆ ಸೇರಿಸಿ ಹಾಕುತ್ತಾರೆ. ಪ್ರಾಯಶಃ ಮರಳು ಜಮೀನುಗಳಿಗೆ ಈ ಗೊಬ್ಬರವನ್ನು ಹಾಕುವದು. ಕೆಂಪುಮಣ್ಣಿನ ಗಟ್ಟಿ ಭೂಮಿಗಳಿಗೆ ಬೂದಿ, ಮರಳು, ಕುರಿಗೊಬ್ಬರ ಇವುಗಳನ್ನು ಸೇರಿಸಿ ಹಾಕುತ್ತಾರೆ. ೩ ವರ್ಷಕ್ಕೊಂದಾವರ್ತಿ ಹಾಕುವ ವಾಡಿಕೆ. ಗೊಬ್ಬರ ಹಾಕುವದರಿಂದ ಗಿಡವು ಹೆಚ್ಚು ಫಲಕಾರಿಯಾಗಿ ಬೇಕಾದಷ್ಟು ಕಾಯಿಗಳು ಬಿಡುತ್ತವೆ. ಉಪ್ಪನ್ನು ಹಾಕುವದರಿಂದ ಫಲಿಸುವ ಗುಣವು ಹೆಚ್ಚಾಗುತ್ತೆ.

ತೆಂಗಿನ ಗಿಡಗಳನ್ನು ನಾಶಮಾಡುವ ಕ್ರಿಮಿಗಳು:—ಇಲಿಗಳು ಕೆಡಕನ್ನುಂಟುಮಾಡುತ್ತವೆ; ಆದರೆ ಗಿಡಗಳನ್ನು ನಾಶಮಾಡುವದರಲ್ಲಿ ಬೀಟಲ್ ಎಂಬ ಹುಳುವು ಬಹಳಕೆಟ್ಟದ್ದು. ಗಿಡದ ದಂಟಿನೊಳಗೆ ಕೊರೆದುಕೊಂಡು ಹೋಗಿ ಗಿಡವನ್ನು ಸಮೂಲವಾಗಿ ನಾಶಮಾಡುತ್ತೆ. ಗಿಡದಂಟನ್ನು ಸಲಾಕಿಯಿಂದ ಕೊರೆದು ಬಾಗಿದ ತಂತಿಯಿಂದ ಒಳಗಿನಿಂದ ಈ ಹುಳವನ್ನು ತೆಗೆದು ಕೊಲ್ಲುತ್ತಾರೆ. ಕೆಲವುವೇಳೆ ಹೀಗೆ ಮಾಡುವದು ಸಾಧ್ಯವಿಲ್ಲ.

ಗೋವಾದೇಶದಲ್ಲಿ ವಿಶೇಷವಾಗಿ ಪೈರು ಮಾಡಬಹುದಾದ ಫಸಲುಗಳಲ್ಲಿ ಮೊದಲನೇದು ಮಾವು, ಎರಡನೇದು ತೆಂಗು. ತೆಂಗಿನ ಗಿಡಗಳಿಗೆ ತಗಲುವ ವ್ಯಾಧಿಗಳಿಗೆ ರೈತರು ಪರಿಹಾರಗಳನ್ನು ತಿಳಿದುಕೊಂಡಿರುವದರಿಂದಲೂ, ಮತ್ತು ತೆಂಗಿನ ಫಸಲಿಗೆ ಹೆಚ್ಚು ಗಿರಾಕಿ ಉಂಟಾಗಿರುವದರಿಂದಲೂ ತೆಂಗು ವ್ಯವಸಾಯವು ಬಹಳ ಮಟ್ಟಿಗೆ ರೂಢಿಗೆ ಬರುತ್ತಿದೆ.

(ಕಿ. ಗೆ.)

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಸ್ವಾಮಿ ಪತ್ರಕರ್ತರೇ,

ಮಂಗಳೂರಿನಲ್ಲಿರುವ ಸಾರಸ್ವತ ಜಾತಿಯ ಪೋಟ ಭೇದಗಳೊಳಗೆ ಸಮಾಜ ಸುಧಾರಣೆಯ ಪ್ರಕರಣದಲ್ಲಿ ವೈಷ್ಣವ ಪೋಟ ಭೇದವು ಎಂದಿಗೂ ಮುಂದಕ್ಕೆ ಬರಲಾರದು ಎಂದು ಕೆಲವರ ಮಾತು ಯಾವಾಗಲೂ ಕೇಳುತ್ತಾ ಇರುತ್ತದೆ. ಉದಾಹರಣೆಯಾಗಿ ಮಂಗಳೂರಿನ ವೈಷ್ಣವರು ಸಂಯುಕ್ತ ಪರಿಷದಕ್ಕೆ ಹೋಗದೆ ಇದ್ದದ್ದನ್ನು ತರುತ್ತಾರೆ. ವೈಷ್ಣವರಲ್ಲಿ ಬಹು ಜನ ಸಮಾಜವು ಪುರಾಣ ಮತವಾದಿಯಾದರೂ ಅವರೊಳಗೆ ಧೈರ್ಯದಿಂದ ಸುಧಾರಣೆಯ ಕೆಲಸಕ್ಕೆ ಸೇರುವವರು ಒಬ್ಬೊಬ್ಬರಾಗಿ ಎದುರು ಬೀಳುತ್ತಾರೆ. ಈ ವಿಷಯವಾಗಿ ನಿಮ್ಮ ಸಾರಸ್ವತ ವಾಚಕರಿಗೆ ತಿಳಿಸಲಿಕ್ಕೆ ಯೋಗ್ಯವಾದಂಥಾ ಒಂದು ವಾರ್ತೆ ಇದೆ.

ಇಲ್ಲಿಯ ಪ್ರಸಿದ್ಧ ನಿವಾಸಿಕರಾದ ರಾವ್ ಸಾಹೇಬ ಅನಂತಕೃಷ್ಣ ಪೈಗಳವರು Bombay Social Reform Association ಅಂದರೆ ಬೊಂಬಾಯಿ ಸುಧಾರಕ ಸಮಾಜದ ಕಾರ್ಯ ನಿರ್ವಾಹಕ ಕಮಿಟಿಯ ಮೆಂಬರರಾಗಿದ್ದಾರೆ. ಈ ಸಮಾಜದ ಮೆಂಬರರಾಗಬೇಕಾದರೆ ಎಲ್ಲಾ ಜಾತಿಯವರೊಡನೆ ಸಹಭೋಜನ ಮಾಡುವದರಲ್ಲಿಯೂ ಮಿಶ್ರವಿವಾಹ (Inter-caste marriage) ಮಾಡುವದರಲ್ಲಿಯೂ ತನ್ನ ಪೂರ್ಣ ಅನುಮತಿ ಇದೆ ಎಂದು ಪ್ರತಿಜ್ಞೆ ಬರದು ಕೊಡಬೇಕು. ಹಾಗೆ ಬರದುಕೊಟ್ಟು, ಸರ್.. ಎನ್. ಜಿ. ಚಂದಾವರ್‌ಕಾರ್ ಸಾಹೇಬರವರು ಅಧ್ಯಕ್ಷರಾಗಿದ್ದ ಈ ಸಂಸ್ಥೆಯಲ್ಲಿ ರಾವ್ ಸಾಹೇಬ್ ಪೈಗಳವರು ಮೆಂಬರರಾಗಿದ್ದಾರೆ.

ಈ ಸಂಸ್ಥೆಯ ತರ್ಪಿನಲ್ಲಿ ಸಮಸ್ತ ಜಾತಿಯ ಹಿಂದುಗಳ (ಅಸ್ಪೃಶ್ಯ ಹಿಂದುಗಳ ಕೂಡಾ) ಸಹಭೋಜನಗಳು ಆಗಿಂದಾಗ್ಯೆ ಆಗುತ್ತಾ ಇವೆ; ಮತ್ತು ಆ ಸಂಸ್ಥೆಯ ಆಶ್ರಯವಾಗಿ ಅನೇಕ ಮಿಶ್ರವಿವಾಹಗಳೂ, ಪುನರ್ವಿವಾಹಗಳೂ ಕೂಡಾ ಆಗಿವೆ. ಇದೇ ದಿವಸ ಬೆಳಿಗ್ಯೆ ನಾನು ರಾವ್ ಸಾಹೇಬ್ ಅನಂತ ಕೃಷ್ಣ ಪೈಗಳವರನ್ನು ಒಂದು ಪುನರ್ವಿವಾಹದ ಸಮಾರಂಭದಲ್ಲಿ ಪ್ರಮುಖರಾಗಿ ಛಂದಗಾಣಿಸಿದ್ದನ್ನು ನೋಡಿದೆ. ಇವೆಲ್ಲಾ ಬಹಳ ಹರ್ಷಕರವಾದ ಗೋಷ್ಟಿಗಳೇ ಸರಿ. ಮತ್ತು ಅವುಗಳು ಪುರಾತನ ಮತದಲ್ಲಿ ಮಗ್ನವಾದಂಥಾ ವೈಷ್ಣವ ಬಹು ಜನ ಸಮಾಜವನ್ನು ಎಚ್ಚರಿಸುವ ಸಂಗತಿಗಳೇ. ಇನ್ನಾದರೂ ರಾವ್‌ಸಾಹೇಬ್ ಪೈಗಳವರಂಥಾ ಸುಶಿಕ್ಷಿತರಾದ ಸ್ವಜಾತಿಯ ಪ್ರಮುಖರು ತೋರಿಸಿಕೊಟ್ಟ ಮಾರ್ಗಕ್ಕೆ ಅನುಸರಿಸಿ ಹೋಗಲಿಕ್ಕೆ ವೈಷ್ಣವ ಬಹು ಜನವು ಹೋದೀತೋ ಮತ್ತು ಸಮಾಜ ಸುಧಾರಣೆಗೋಸ್ಕರ ಕಳಕಳ ಪಟ್ಟೀತೋ, ಯಾ ಸಂಯುಕ್ತ ಪರಿಷದದಂಥಾ ಶ್ರೇಯಸ್ಕರವಾದ ಸುಧಾರಣೆಗೆ ಪ್ರಯತ್ನಪಡುವವರಿಗೆ ಬಹಿಷ್ಕಾರ ಮಾಡಿದ ಹಾಗೆ ರಾವ್‌ಸಾಹೇಬ್ ಪೈಗಳವರಂಥಾ ಸ್ವಜಾತಿಯ ಮಹನೀಯರಿಗೆ "ನಿಕಾಲೋ" ಮಾಡುವದು ಒಳ್ಳೇದು ಎಂದು ಬಹುಜನಸಮಾಜವು ಠರಾವನ್ನು ಮಾಡುತ್ತದೋ ಎಂದು ನೋಡಬೇಕು.

ನವಂಬರ 12.
ಮುಂಬಯಿ.

ತಮ್ಮ ನಮ್ರ ಸೇವಕ,
ಒಬ್ಬ ಬೊಂಬಾಯಿ ಪುರವಾಸಿ.

* * *

ವಿದೇಶ ವೃತ್ತಾಂತ.

ಅಮೇರಿಕದ ನ್ಯೂಓರ್ಲೀನ್ಸ್ ಎಂಬಲ್ಲಿ ಒಂದು ರೈಲ್ವೇ ಅವಗಡವು ಸಂಭವಿಸಿ ೩೦ ಮಂದಿ ಮೃತಪಟ್ಟರು. ೫೦ ಮಂದಿ ಗಾಯವೊಡೆದರು.

* * *

ಯುನೈಟೆಡ್ ಸ್ಟೇಟಿನಲ್ಲಿ ಬ್ರಿಟಿಷ ರಾಯಭಾರಿಯಾಗಿರುವ ಮೆ| ಬ್ರೈಸ್ ಎಂಬವರು ಬೇಗನೇ ಕೆಲಸದಿಂದ ನಿವೃತ್ತರಾಗಲಿಕ್ಕಿದ್ದಾರೆ. ಇವರ ಬದಲಿಗೆ ಸ್ವೀಡೆನಿನ ಬ್ರಿಟಿಷ್ ಮಂತ್ರಿಯಾಗಿರುವ ಸರ್ ಸಿ. ಎ. ಸ್ಪ್ರಿಂಗ್‌ರವರು ನೇಮಿಸಲ್ಪಡುವರು.

* * *

ತಾ. ೧೩ರಲ್ಲು ಸ್ಪಾನಿಯದ ಪ್ರಧಾನ ಮಂತ್ರಿಯವರು ಸ್ಥಳಿಕ ಮಂತ್ರಿ ಸಭೆಯನ್ನು ನಡಿಸಲಿಕ್ಕೆ ಸಭೆಗೆ ಹೋಗುತ್ತಿರುವಾಗ ಮಾರ್ಟಿನ್ ಎಂಬ ಒಬ್ಬ ಯುವಕನು ದಾರಿಯಲ್ಲಿ ಅವರಿಗೆ ಗುಂಡು ಹೊಡೆದು ಕೊಂದನು. ಅನಂತರ ಘಾತುಕನು ಸ್ವಘಾತ ಮಾಡಿಕೊಂಡನು.

* * *

ದಕ್ಷಿಣ ಆಫ್ರೀಕಕ್ಕೆ ಹೋಗಿರುವ ಬಹುಮಾನಪಟ್ಟ ಗೋಖಲೆಯವರು ಪ್ರಿಟೋರಿಯಕ್ಕೆ ಹೋಗಿ ಜನರಲ್ ಬೋಥ, ಜನರಲ್ ಸ್ಮಟ್ಸ್ ಮತ್ತು ಮೆ| ಫಿಶರ್‌ರೊಡನೆ ಅಲ್ಲಿರುವ ಭಾರತೀಯರ ಪರವಾಗಿ ಮಾತನ್ನಾಡಿರುವರು. ತಾ. ೧೫ರಲ್ಲು ಗ್ಲಾಡ್‌ಸ್ಟನ್ ಪ್ರಭುಗಳವರಲ್ಲಿ ಇವರಿಗೆ ಆಮಂತ್ರಣವಿತ್ತು. ಗೋಖಲೆಯವರು ತಾ. ೧೭ರಲ್ಲು ಡೆಲಗೋವಕ್ಕೆ ಹೋಗಿ ತಾ. ೧೯ರಲ್ಲು ಹಿಂದೂಸ್ಥಾನಕ್ಕೆ ಹೊರಡುವರು.

* * *

ಯುದ್ಧ ವಾರ್ತೆ:—ಯುದ್ಧವನ್ನು ನಿಲ್ಲಿಸಿ ಸಂಧಾನವಾಗಬೇಕೆಂತ ತುರ್ಕರು ಸೀದಾ ಬಲ್ಗೇರಿಯರಿಗೆ ಬರಕೊಂಡಿರುವರು. ನೈಜಾಮ್ ಪಾಶರವರು ಈ ಸಂಬಂಧ ಬಲ್ಗೇರಿಯರ ಮುಖ್ಯ ಠಾಣ್ಯಕ್ಕೆ ಹೊರಟು ಹೋಗಿರುವರೆಂಬ ವಾರ್ತೆ ಬಂದದೆ.

ಬಲ್ಗೇರಿಯರ ಸೈನಿಕರಲ್ಲಿ ವಾಂತಿಭೇದಿಯು ತಲೆದೋರಿರುವುದರಿಂದಲೂ ಮಳೆ ಗರೆಯುವುದರಿಂದಲೂ ಬಲ್ಗೇರಿಯರು ತಮ್ಮೊಳಗೆ ನಿಷ್ಕರ್ಷಿಸಿಕೊಂಡಷ್ಟು ಬೇಗ ಮುಂದರಿಯಲಾರದೆ ಹೋದರು. ಶೇಷ ರಾಜ್ಯಗಳವರೆಲ್ಲಾ ಒಟ್ಟು ಕೂಡಿ ಆಲೋಚಿಸಿ ಸಂಧಾನದ ವಿಷಯ ತುರ್ಕರ ವಿಜ್ಞಾಪನೆಗೆ ನಿಗಾ ಕೊಡಬೇಕೆಂದು ಬಲ್ಗೇರಿಯ ಮಂತ್ರಿಯನ್ನು ಕೇಳಿಕೊಂಡಿರುವರು. ಬಲ್ಗೇರಿಯ ಮಂತ್ರಿಯು ಈ ಸಂಬಂಧ ಇತರ ಬಾಲ್ಕಾನ್ ಸಂಸ್ಥಾನಗಳೊಡನೆ ಮಾತನ್ನಾಡಿ ಉತ್ತರಕೊಡುವೆನೆಂದು ಶ್ರೇಷ್ಠ ರಾಜ್ಯಗಳಿಗೆ ತಿಳಿಸಿರುವರು.

ಕಳೆದ ಆದಿತ್ಯವಾರ ಬಲ್ಗೇರಿಯರು ಅಡ್ರಿನೋಪಲಿಗೆ ತೋಪು ಹಾರಿಸಿದ್ದನ್ನು ನೋಡಿದ ಡೈಲಿ ಟೆಲಗ್ರಾಪ್ ಪತ್ರಿಕೆಯ ಬಾತ್ಮೀದಾರರು ಆ ನೋಟವು ಅತೀ ಭಯಂಕರವಾಗಿತ್ತು. ನೂರಾರು ಗುಂಡುಗಳು ಗುಡುಗುಮಿಂಚಿನಂತೆ ಳ ದಿಕ್ಕುಗಳಿಂದಲೂ ಹಾರುತ್ತಿತ್ತು. ತುರ್ಕರು ಇದಕ್ಕೆ ಎದುರಾಗಿ ಗುಂಡು ಹಾರಿಸಲು ಪ್ರಯತ್ನಿಸಿದರೂ ಬಲ್ಗಾರಿಯರ ಗುಂಡಿನ ಬಲಕ್ಕೂ ಅವರ ಸಮೃತ್ತ್ವವಾದ ಗುಂಡಿನ ಪೆಟ್ಟಿಗೂ ಎದುರು ನಿಲ್ಲಲಾರದೆ ಹೋದರು. ಬಲ್ಗೇರಿಯರಿಗೆ ಬೇಕಾದಷ್ಟು ಆಯುಧ ಸಾಮಾಗ್ರಿಗಳು ಇವೆ. ಅಡ್ರಿನೋಪಲಿನ ಸುತ್ತಲಿರುವ ಗದ್ದೆಗಳಲ್ಲಿ ಅವರ ಸಾವಿರಾರು ಕುರಿಗಳೂ, ದನಕರುಗಳೂ ಇವೆ. ಅದಲ್ಲದೆ ದಿನಾಲೂ ಹೊಸ ರೊಟ್ಟಿ, ಕಾಯಿಪಲ್ಯ ಇತ್ಯಾದಿ ಆಹಾರ ಸಾಮಾಗ್ರಿಗಳು ಅವರಿಗೆ ಬರುತ್ತಲಿವೆ ಎಂಬದಾಗಿ ಬರೆಯುವರು.

ಕನ್‌ಸ್ತಂತಿನೋಪಲಿನಲ್ಲಿ ವಾಂತಿಭೇದಿಯು ಸೊಂಕಿರುವುದು. ಸೈನೀಕರಲ್ಲಿ ೧೦೦ ಮಂದಿ ಇದಕ್ಕೆ ತುತ್ತಾದರು. ಮರೆಹೊಕ್ಕೊಂಡವರಲ್ಲಿ ಇದಕ್ಕಿಂತಲೂ ಹೆಚ್ಚಿಗೆ ಮಂದಿಗೆ ಸೊಂಕಿರುವುದು.

ತುರ್ಕರ ಯುದ್ಧ ಹಡಗಗಳು ಚಟಲ್ಜದಲ್ಲಿ ಬಲ್ಗೇರಿಯರ ಸೈನ್ಯದ ಮೇಲೆ ಗುಂಡು ಹಾರಿಸಿ ಅವರಿಗೆ ಅತಿರೇಕ ನಷ್ಟ ಪಡಿಸಿರುವರುವದು.

ತಾ. ೧೫:—ತಾ. ೧೩ರಲ್ಲು ಅಡ್ರಿನೋಪಲ್ ಬಿದ್ದದೆ ಎಂಬ ವಾರ್ತೆ ಬಂದಿರುವುದು. ತಾ. ೧೩ನೇ ಮಧ್ಯಾನ್ಹದಿಂದ ಆ ಸ್ಥಳದಿಂದ ಕನ್‌ಸ್ತಂತಿನೋಪಲಿಗೆ ನಡಿಯುತ್ತಿದ್ದ ತಂತೀ ಇಲ್ಲದ ಟೆಲಗ್ರಾಪ್ ವ್ಯವಹಾರವು ನಿಲ್ಲಿಸಲ್ಪಟ್ಟದೆ.

ಕನ್‌ಸ್ತಂತಿನೋಪಲಿನಲ್ಲಿ ವಾಂತಿಭೇದಿಯ ಹಾವಳಿಯು ಹೆಚ್ಚಾಗಿ ದಿವಸಕ್ಕೆ ೫೦೦-೬೦೦ ಮಂದಿ ಮೃತಪಡುತ್ತಿದ್ದಾರೆ. ಈ ವರೆಗೆ ೬೦೦೦ಕ್ಕಿಂತ ಹೆಚ್ಚಿಗೆ ಮಂದಿ ಇದಕ್ಕೆ ಆಹುತಿಯಾದರು.

ಸಲೋನಿಕದಲ್ಲಿದ್ದ ಗ್ರೀಕರ ಸೇನೆಯು ಮೊನಾಸ್ಟಿರಿಗೆ ಹೊರಟಿರುವದು. ಗ್ರೀಕ ಯುವರಾಜರೂ ಆ ಸೇನೆಯ ಸೈನಾಧಿಪತಿಯಾಗಿ ಅಲ್ಲಿಗೆ ಹೋಗಿರುವರು. ಮೊನಾಸ್ಟಿರಿನ ಹೊರಗೆ ಕದನಗಳು ಪ್ರಾರಂಭವಾಗಿವೆ.

ಮೊಂಟೆನಿಗ್ರೋಯರು ಸ್ಕುತಾರಿಗೆ ಪುನಃ ಗುಂಡು ಹಾರಿಸಲು ಪ್ರಾರಂಭಿಸಿದ್ದಾರೆ. ಮೊಂಟೆನಿಗ್ರೋಯರ ಒಂದು ಕಾಲ್ಬಲವು ಬಾರ್ಡನ್‌ಜೊಲ್ಲು ಎಂಬಲ್ಲಿಯ ಕೋಟೆಯಲ್ಲಿದ್ದ ತುರ್ಕರ ಮೇಲೆ ಬಿದ್ದು ಅವರನ್ನು ಅಟ್ಟಿಬಿಟ್ಟಿತು.

ತಾ. ೧೬:-ಬಲ್ಗೇರಿಯರು ಚಟಲ್ಜದ ಮಧ್ಯಭಾಗಕ್ಕೆ ಮುಂದೊತ್ತಿ ಬಂದು ಕದನ ಪ್ರಾರಂಭಿಸಿದ್ದಾರೆ. ಚಟಲ್ಜ ಲ್ಯಾನಿನ ಆಯಾ ಕಡೆಗಳಲ್ಲಿ ತೋಪುಗಳ ಶಬ್ದ ಕೇಳ ಪ್ರಾರಂಭವಾಗಿದೆ. ಕನ್‌ಸ್ತಂತಿನೋಪಲಿಗೆ ಗುಂಡಿನ ಶಬ್ದವು ಬಹಳವಾಗಿ ಕೇಳ ಪ್ರಾರಂಭವಾದ್ದರಿಂದ ಪಟ್ಟಣದಲ್ಲಿಯ ಜನರು ಭಯಾಕ್ರಾಂತರಾಗಿರುವರು. ಕದನವು ಸೂರ್ಯಾಸ್ತಮಾನವಾಗಿ ಒಂದು ತಾಸಿನವರೆಗೆ ನಡೆಯಿತು. ಬಲ್ಗೇರಿಯರ ೩ ಸೇನೆಯು ಹಿಮ್ಮೆಟ್ಟಲ್ಪಟ್ಟಿತು ಎಂದು ನೈಜಾಮ ಪಾಶರವರು ತಿಳಿಸುವರು. ಚಟಲ್ಜಕ್ಕೆ ತುರ್ಕರ ನೂರಾರು ಸೈನಿಕರು ಪುನಃ ಹೋಗಿರುವರು. ಕೆಲವು ಸಾವಿರ ಮಂದಿ ಚಟಲ್ಜದಿಂದ ಪಟ್ಟಣಕ್ಕೆ ಹಿಂತಿರುಗಿರುವರು.

ಯುದ್ಧಕ್ಕಿಂತಲೂ ಈಗ ವಾಂತಿಭೇದಿಯ ಉಪಟಳವು ಹೆಚ್ಚಾಗಿದೆ. ದಿವಸಕ್ಕೆ ೧೦೦೦ಕ್ಕೆ ೫೦ರಂತೆ ಸಾಯುತ್ತಿದ್ದಾರೆ. ಸಾನ್ ಸ್ಟೇಪಾನೋ ಎಂಬಲ್ಲಿಗೆ ತಲಪಿದ ೩೦೦೦ ರೋಗಿಗಳು ೨೪ ತಾಸುಗಳಿಗಿಂತಲೂ ಹೆಚ್ಚು ಸಮಯ ನೀರೂ ಆಹಾರವೂ ಇಲ್ಲದೆ ಅಗ್ಗಾಡಿಯಲ್ಲಿಯೇ ಬಿದ್ದಿದ್ದರು. ಅವರಿಗೆ ಶೈತೋಪಚಾರಮಾಡಲು ೪ ದಾಕ್ತರರು ಮಾತ್ರ ಇದ್ದರು.

ಬಲ್ಗೇರಿಯರು ಚಟಲ್ಜ ಲ್ಯಾನಿನಲ್ಲಿ ಯುದ್ಧ ಮಾಡುತ್ತಿರುವುದರಿಂದ ಅಡ್ರಿನೋಪಲಿನಲ್ಲಿ ಈಗ ಸರ್ವಿಯರ ಸೈನ್ಯವು ಇದ್ದು ಅದಕ್ಕೆ ಮುತ್ತಿಗೆಹಾಕಿರುವುದು. ಅಲ್ಲಿದ್ದ ೨ ತುರ್ಕರ ಪಡೆಯು ಬಹಳ ನಷ್ಟಪಟ್ಟು ಹಿಮ್ಮೆಟ್ಟಲ್ಪಟ್ಟಿತು.

ಕಳೆದ ಶುಕ್ರವಾರ ಸರ್ವಿಯರಿಗೆ ಮೊನಾಸ್ಟಿರಲ್ಲಿ ದೊಡ್ಡ ಜಯವಾಯಿತು.

ಸಾನ್ ಗ್ಲೊವಾಸಿಡಿ ಮೆಡೂವ ಎಂಬಲ್ಲಿ ಮೊಂಟೆನಿಗ್ರೋಯರು ೩೦೦೦ ತುರ್ಕ ಸೈನೀಕರನ್ನು ಹಿಮ್ಮೆಟ್ಟಿ ಪಟ್ಟಣವನ್ನು ವಶಮಾಡಿಕೊಂಡರು.

ಸ್ಕುತಾರಿ ಮತ್ತು ಕಾಕರಿಕ್ ಮಧ್ಯೆ ಇದ್ದ ತುರ್ಕರ ಸೇನೆಯ ಸಂಗಡ ಕಾದಾಡಿದ ಮೊಂಟೆನಿಗ್ರೋಯರ ೬ ಸೇನೆಯು ಸೋಲಿಸಲ್ಪಟ್ಟು ಓಡಿಹೋಯಿತು. ಮೊಂಟೆನಿಗ್ರೋಯರಲ್ಲಿ ೧೦೦ ಮಂದಿ ಹತರಾದರು. ಪುನಃ ಮೊಂಟೆನಿಗ್ರೋಯರು ಮುಂದೊತ್ತಿ ಬಂದು ಕಾಲ್ಬಲವು ಪಟ್ಟಣದ ಮೈದಾನು ಸ್ಥಳದಲ್ಲಿ ತುರ್ಕರ ಸೇನೆಯ ಮಧ್ಯೆನುಗ್ಗಿ ಸನೀನು ಯುದ್ಧಮಾಡಿ ಅವರನ್ನು ಹಿಮ್ಮೆಟ್ಟಿತು.

ಗ್ರೀಕರ ಹಡಗುಪಡೆಯು ಮೌಂಟು ಆತೋಸು ಎಂಬ ಅರ್ಧ ದ್ವೀಪವನ್ನು ವಶ ಮಾಡಿಕೊಂಡಿರುವದು.

ತುರ್ಕರು ಸಂಧಾನವಾಗಬೇಕೆಂದು ಕೇಳಿಕೊಂಡಿರುವುದರಿಂದ ಬಾಲ್ಕಾನ್ ಸಂಸ್ಥಾನಗಳು ಸಂಧಾನದ ಶರ್ತಗಳನ್ನು ತುರ್ಕಿಗೆ ಬೇಗನೇ ಕಳುಹಿಸಿಕೊಡುವುದೆಂದೂ ಈ ಶರ್ತಗಳಿಗೆ ಒಪ್ಪಲಿಕ್ಕೆ ತುರ್ಕರಿಗೆ ೨೪ ತಾಸಿಗಿಂತ ಹೆಚ್ಚಿಗೆ ಸಮಯ ಕೊಡುವಹಾಗಿಲ್ಲವೆಂದೂ ತಿಳಿದುಬರುತ್ತದೆ. ಕನ್‌ಸ್ತಂತಿನೋಪಲ್ ಮತ್ತು ಡರ್ಡನೆಲ್ಸನ್ನು ಬಲ್ಗೇರಿಯರು ಸುಲ್ತಾನರಿಗೆನೇ ಬಿಟ್ಟುಕೊಡುವ ಹಾಗಿದ್ದಾರೆ.

* * *

ವಿನ್‌ಕೋನ್‌ಸಿನ್ ಎಂಬ ವಿಶ್ವವಿದ್ಯಾಕಲಾ ಶಾಲೆಗೆ ಎರಡು ವರ್ಷಗಳ ಹಿಂದೆ ೬೮ ವರ್ಷ ವಯಸ್ಸಿನ ಒಬ್ಬ ಹೆಂಗಸು ವಿದ್ಯಾಭ್ಯಾಸ ಪಡೆಯುವರೆ ಸೇರಿದ್ದಳು. ೧೯೧೫ನೇ ಇಸವಿಯಲ್ಲಿ ಡಿಗ್ರಿ ಪಡೆಯುವೆನೆಂಬ ನಿರೀಕ್ಷೆಯು ಅವಳಿಗಿದೆ. ಕೊಲೇಜಿಯಲ್ಲಿ ಇತರ ಚಿಕ್ಕಪ್ರಾಯದ ವಿದ್ಯಾರ್ಥಿಗಳಂತೆಯೇ ಚುರುಕಾಗಿಯೂ ಆರೋಗ್ಯವಾಗಿಯೂ ಇರುವಳು.

* * *

ಐಗುಪ್ತದಲ್ಲಿ ರಾಜದ್ರೋಹಕರವಾದ ಮಾತುಗಳು ತುಂಬಿದ ಕಾರ್ಡುಗಳನ್ನು ಹಂಚಿದ ವಿದ್ಯಾರ್ಥಿಗೆ ೧೦ ವರ್ಷಗಳ ಸಜಾ ವಿಧಿಸಲಾಯಿತು.

* * *

ಚೀನ ದೇಶದ ಹಂಕೋಪಟ್ಟಣದಲ್ಲಿ ನೇಶನಲ್ ಸಾಲ್ವೇಶನ್ ಸೊಸ್ಯಾಟಿ ಎಂಬ ಒಂದು ಸಂಘವು ಉಂಟಾಗಿದೆ. ಸ್ವದೇಶಿ ವಸ್ತುಗಳನ್ನು ಅಂದರೆ ಚೀನದಲ್ಲಿ ಉಂಟಾದ ವಸ್ತುಗಳನ್ನೇ ಪ್ರಯೋಗಿಸಬೇಕೆಂಬದೇ ಈ ಸಂಘದ ಉದ್ದೇಶವಾಗಿದೆ. ಚಾಂಗ್‌ಪೇನ್ ಎಂಬವನು ಈ ಸಂಘದ ಪರವಾಗಿ ಒಂದು ಭಾಷಣವನ್ನು ಮಾಡುತ್ತಿರುವಾಗ ಫಕ್ಕನೇ ತನ್ನ ಬೆರಳನ್ನು ಕ್ಯೊದು ಬಂದ ರಕ್ತದಿಂದ "ದಯಮಾಡಿ ಸ್ವದೇಶಿ ವಸ್ತುಗಳನ್ನೆ ಪ್ರಯೋಗಿಸಿರಿ" ಎಂದು ದೊಡ್ಡಾಕ್ಷರದಲ್ಲಿ ಬರದನು. ಇದನ್ನು ನೋಡಿದ ೧೬ ವರ್ಷದ ವಯಸ್ಸಿನ ಹುಡುಗನೊಬ್ಬನು ತನ್ನ ಬೆರಳನ್ನೂ ಕತ್ತರಿಸಿ "ಯಾರು ಸ್ವದೇಶಿ ವಸ್ತುಗಳನ್ನು ಪ್ರಯೋಗಿಸದೆ ವಿದೇಶಿ ವಸ್ತುಗಳನ್ನು ಉಪಯೋಗಿಸುತ್ತಾನೋ ಅಂಥವನು ಗುಲಾಮನು" ಎಂಬದಾಗಿ ರಕ್ತದಿಂದ ಬರದನು. ಇದನ್ನು ಕೂಡಿದ್ದ ಸಭಿಕರು ನೋಡಿ ಚಕಿತರಾಗಿ "ದಯಮಾಡಿ ಸ್ವದೇಶಿ ವಸ್ತುಗಳನ್ನು ಪ್ರಯೋಗಿಸಿರಿ" ಎಂಬ ಮಾತನ್ನು ಆದರ್ಶವಾಗಿಟ್ಟುಕೊಂಡು ನಡಿಯದಂಥವರು ವಿದೇಶಿಯವರ ಗುಲಾಮರು ಎಂಬದಾಗಿ ನಿರ್ಣಯಿಸಿದರು.

* * *

ಲೋಕದಲ್ಲಿರುವ ಪೋಸ್ಟು ಆಫೀಸುಗಳಲ್ಲಿ ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿರುವ ಒಂದು ಪೋಸ್ಟು ಆಫೀಸೇ ಬಹಳ ದೊಡ್ಡದು. ಇದರಲ್ಲಿ ೩೦೦,೦೦೦ ಮಂದಿ ಕೆಲಸಮಾಡುವರು. ತಾಸು ಒಂದಕ್ಕೆ ೮೦೦,೦೦೦ ಪತ್ರ

ಗಳು ಇದರಲ್ಲಿ ಬಟ್ವಾಡೆಯಾಗುವದು. ದಿವಸಕ್ಕೆ ೨೫೦,೦೦೦ ಮನಿಯಾರ್ಡರುಗಳು ತಕ್ಕೊಳ್ಳಲ್ಪಡುವವು. ದಿವಸಕ್ಕೆ ೧೧೫,೦೦೦ ಕಾಗದಗಳೂ ಪಾರ್ಸೆಲುಗಳೂ ರಿಜಿಸ್ಟ್ರಿಯಾಗುವವು. ಪ್ರತಿ ತಾಸಿಗೆ ಸಾವಿರಸಾವಿರ ಟನ್ ಭಾರವುಳ್ಳ ಕಾಗದ ಕಟ್ಟುಗಳು ರೈಲು ಗಾಡಿಗೆ ಕಳುಹಿಸಲ್ಪಡುವವು.

* * *

ಅಮೇರಿಕ ಸರಕಾರದವರು ತಂತೀ ಇಲ್ಲದ ಟೆಲಗ್ರಾಫನ್ನು ಸ್ಥಾಪಿಸುವುದಕ್ಕಾಗಿ ವಾಸಿಂಗ್ಟನ್ ನಗರದ ಸಾನು ಪ್ರದೇಶದಲ್ಲಿ ೬೦೦ ಅಡಿ ಎತ್ತರದ ಮತ್ತು ೪೫೦ ಅಡಿ ಎತ್ತರದ ಎರಡು ಗೋಪುರಗಳನ್ನು ಕಟ್ಟಿಸ ಆಲೋಚಿಸಿರುವರು. ಇದರಿಂದ ಪಟ್ಟಣದಿಂದ ೩,೦೦೦ ಮೈಲು ದೂರದವರೆಗೆ ಅಟ್ಲಾಂತಿಕ ಸಾಗರದಲ್ಲಿ ತಿರುಗಾಡುವ ಹಡಗಗಳೊಡನೆ ಪತ್ರವ್ಯವಹಾರ ನಡಿಸಲಿಕ್ಕಾಗುವದು. ಇದರಿಂದ ವಾಸಿಂಗ್ಟನಿನಲ್ಲಿರುವ ನೌಕಾವಳಿ ಇಲಾಖೆಯುವರಿಗೆ ಉತ್ತರ ದ್ರುವದಿಂದ ವಿಶ್ವ ದ್ರೇಖೆಯುವರೆಗೆ ಇರುವ ಸ್ಥಳದ ವರೇಗೆ ಪತ್ರವ್ಯವಹಾರ ನಡಿಸಲಾಗುವದು.

* * *

ಕಳದ ವರ್ಷ ಇಂಗ್ಲಾಂಡ್ ಮತ್ತು ವೇಲ್ಸಿನಲ್ಲಿ ೨೭೪,೫೭೭ ವಿವಾಹಗಳೂ, ೮೮೧,೪೮೧ ಜನನಗಳೂ, ೫೨೭,೮೭೪ ಮರಣಗಳೂ ಸಂಭವಿಸಿತು.

* * *

ಭೂಲೋಕದಲ್ಲಿ ಇನ್ನೂ ಕಂಡುಕೊಳ್ಳದ ೨೦ ಮಿಲಿಯ ಎಕ್ರೆಸ್ಥಳ ಇವೆ ಎಂದು ಭೂಗೋಳ ಶಾಸ್ತ್ರಜ್ಞರು ಹೇಳುವರು. ಈ ಪೈಕಿ ೬,೫೦೦,೦೦೦ ಎಕ್ರೆ ಆಫ್ರೀಕದಲ್ಲಿಯೂ ೧,೫೦೦,೦೦೦ ಎಕ್ರೆ ಉತ್ತರ ಅಮೇರಿಕದಲ್ಲಿಯೂ ಇವೆ ಎಂಬದಾಗಿ ಅವರು ಹೇಳುತ್ತಾರೆ.

* * *

ಸ್ವಿಜರ್ ಲೇಂಡಿನಲ್ಲಿ ಈಚೆಗೆ ಒಂದು ಅಪೂರ್ವವಾದ ವಿವಾಹವು ಜರುಗಿತು. ೪೨ ವರ್ಷಗಳ ಹಿಂದೆ ಸ್ವಿಜರ್ ಲೇಂಡಿನಲ್ಲಿ ಒಂದು ಸಂಭಾವಿತ ಕುಟುಂಬದವನು ಒಬ್ಬ ಹುಡುಗಿಯನ್ನು ವಿವಾಹ ಮಾಡಿಕೊಳ್ಳುವರೆ ಮಾತು ಕೊಟ್ಟಿದ್ದನು. ಆದರೆ ಅದೇ ವರ್ಷ ಜರ್ಮನಿಗೂ ಪ್ರಾನ್ಸಿಗೂ ಯುದ್ಧ ತೊಡಗಿದ್ದರಿಂದ ಇವನು ಯುದ್ಧಕ್ಕೆ ಹೋಗಬೇಕಾಯಿತು. ಅಲ್ಲಿ ಅವನು ಮೂರಾವೃತ್ತಿ ಮದುವೆಯಾದನು. ಮೂರು ಹೆಂಡರೂ ಮೃತಪಟ್ಟರು. ಇತ್ತಕಡೆ ಇಲ್ಲಿ ಆ ಹೆಂಗಸು ಮೂರಾವೃತ್ತಿ ವಿವಾಹಮಾಡಿಕೊಂಡಳು. ಅವಳ ಮೂರು ಗಂಡಂದಿಯರೂ ಸತ್ತುಹೋದರು. ಈಚೆಗೆ ಇಬ್ಬರೂ ಒಬ್ಬರನ್ನೊಬ್ಬರು ಕಳೆತುಕೊಂಡು ೪೨ ವರ್ಷದ ಹಿಂದಿನ ತಮ್ಮ ವಿವಾಹ ನಿಶ್ಚಯವನ್ನು ಜ್ಞಾಪಕಕ್ಕೆ ತಂದು ಪುನಃ ವಿವಾಹ ಮಾಡಿಕೊಂಡರು.

ಉತ್ತರ ಹಿಂದೂಸ್ಥಾನ.

ಡಿಲ್ಲಿ ನಗರವನ್ನು ಬರೇ ಆಚಾರವಿಧಿಯ ಮತ್ತು ಗವರ್ನರ್ ಜನರಲರ ಚಳಿಕಾಲದ ಮುಖ್ಯ ಠಾಣ್ಯವಾಗಿರಗೊಡಿಸಬೇಕು, ಬೇಸಿಗೆ ಕಾಲದ ಶ್ರೇಷ್ಠ ಸರಕಾರದ ನ್ಯಾಯವಿಧಾಯಕ ಸಭೆಯನ್ನು ಸಿಮ್ಲದಲ್ಲಿ ಜರುಗಿಸಬೇಕು. ಎಲ್ಲಾ ಇಲಾಖೆಯು ಮುಖ್ಯ ಠಾಣ್ಯಗಳು ಕಲ್ಕತ್ತೆಯಲ್ಲಿಯೇ ಇರಬೇಕೆಂಬದಾಗಿ ಬಂಗಾಳದ ವಾಣಿಜ್ಯ ಸಂಘದವರು ಸ್ಟೇಟ್ ಸೆಕ್ರಟರಿಯವರಿಗೆ ಮಾಡಿಕೊಂಡಿದ್ದ ವಿಜ್ಞಾಪನೆಗೆ ಈ ಬದಲಾವಣೆಗಳನ್ನು ಮಾಡಲು ಸಾಧ್ಯವಿಲ್ಲವೆಂಬ ಉತ್ತರ ಬಂದಿರುವದು.

* * *

ಕಲ್ಕತ್ತೆಯ ದಿಬ್ರು ನದಿಯನ್ನು ೪೫ ಮಂದಿ ಮಹರಾಷ್ಟ್ರ ಸಿಪಾಯರು ತೆಪ್ಪದಲ್ಲಿ ದಾಟುತ್ತಿರುವಾಗ ತೆಪ್ಪವು ಮುಣುಗಿ ೮ ಸಿಪಾಯರು ಮುಣುಗಿಹೋದರು ಎಂಬ ವಾರ್ತೆ ಬಂದಿರುವದು.

* * *

ಡಕ್ಕದ ಬೆತ್ತೂರಿ ಎಂಬಲ್ಲಿಯ ಒಬ್ಬ ಹಣ ಬಡ್ಡಿಗೆ ಕೊಡುವ ಅಬ್ದುಲ್ ಗಾಫೂರ್ ಎಂಬವನ ಮನೆಗೆ ತಾ. ೧೨ರಲ್ಲು ೧೨ ಮಂದಿ ದಕಾಯಿತರು ನುಗ್ಗಿ ಅವನನ್ನು ಹೊರಗೆ ಎಳದು ಕೊಂದುಹಾಕಿದರು. ಮತ್ತೊಂದು ಕೋಣೆಯಲ್ಲಿ ಮಲಗಿದ್ದ ಮೃತನ ಪತ್ನಿ ಮತ್ತು ಮಕ್ಕಳು ಎಚ್ಚರವಾಗಿ ಹೊರಬರಲು ಅವರನ್ನು ದಕಾಯಿತರು ಹೆದರಿಸಿ ಹೊರಗೆ ಓಡಿಸಿಬಿಟ್ಟು ಮನೆಯಲ್ಲಿದ್ದ ೧೫೦ ರೂಪಾಯಿಗಳನ್ನೂ ವಿವಿಧ ಸಾಮಾನುಗಳನ್ನೂ ಎತ್ತಿಕೊಂಡು ಹೋದರು.

* * *

ಡೇರಗಾಜಿಖಾನ್ ಎಂಬಲ್ಲಿ ಭತ್ತದ ಪೈರು ಬೆಳೆಯಿಸುವುದರಿಂದ ಪಟ್ಟಣದ ಆರೋಗ್ಯಕ್ಕೆ ಕೆಡಕಾಗುತ್ತದೆಂದು ಸೆನಿಟರಿ ಆಫೀಸರರು ವಂದಿ ಮಾಡಿರುವುದರಿಂದ ಇನ್ನು ಮುಂದೆ ಡೇರಗಾಜಿಖಾನಿನ ಅಜುಬಾಜಿನಲ್ಲಿ ಭತ್ತದ ಪೈರು ಬೆಳೆಯಿಸಕೂಡದೆಂದು ಲೆಪ್ಟನೆಂಟ್ ಗವರ್ನರರು ಹುಕುಂ ಮಾಡಿರುವರು.

* * *

ಚಿತಗೊಂಗಿನ ಡೂಮ್ ರೈಲ್ವೇ ಸ್ಟೇಶನಿನ ಸಮೀಪ ಸುಮಾರು ೬ ಮೈಲುಗಳ ವಿಸ್ತೀರ್ಣದ ಸ್ಥಳದಲ್ಲಿ ಭೂಕಂಪವಾಗಿಯದೆಂದು ವಾರ್ತೆ ಬಂದಿರುವದು. ೨ ವರ್ಷಗಳ ಹಿಂದೆ ಇದೇ ಸ್ಥಳದಲ್ಲಿ ಕಠಿಣ ಭೂಕಂಪವಾಗಿ ಅತಿರೇಕ ನಷ್ಟವಾಗಿರುವುದರಿಂದ ಅಲ್ಲಿಯ ಜನರಿಗೆ ಭಯ ಹಿಡಿದದೆ.

* * *

ಸಮಾರಿಯ ಗಾಟ್ ಎಂಬಲ್ಲಿ ಇಬ್ಬರು ಭಾರತೀಯ ಸ್ತ್ರೀಯರು ರೈಲ್ವೆಯ ೩ನೇ ತರಗತಿಯ ಗಾಡಿಯಲ್ಲಿ ಪ್ರಯಾಣ ಮಾಡುತ್ತಿರುವಾಗ ಗಾಡಿಯಲ್ಲಿ ಫಕ್ಕನೇ ಶಬ್ದವಾದ್ದರಿಂದ ಎಚ್ಚತ್ತು ನೋಡಲು ಒಬ್ಬ ಗಡ್ಡದ ಮುದೀ ಮನುಷ್ಯನನ್ನು ಗಾಡಿಯಲ್ಲಿ ಕಂಡು ಕೂಗುವಷ್ಟರಲ್ಲಿ ಆ ಮನುಷ್ಯನು ಇಬ್ಬರಿಗೂ ಚೆನ್ನಾಗಿ ಹೊಡೆದನು. ಆ ಪೈಕಿ ಒಬ್ಬ ಯುವಕಳು ಪುನಃ ಕೂಗಿ ಬಂಡೀ ನಿಲ್ಲಿಸುವ ಸರಪಣಿಯನ್ನು ಎಳೆಯ ಪ್ರಯತ್ನಿಸಲು ಅವನು ಅವಳನ್ನು ಹಿಡಿದು ಗಾಡಿಯಿಂದ ಹೊರಗೆ ಬಿಸಾಡಿದನು. ರೈಲ್ವೆ ಲೈನಿನಲ್ಲಿ ಬಿದ್ದಿದ್ದ ಇವಳ ಹೆಣವು ಮರುದಿನ ರೈಲ್ವೇ ಕೆಲಸದವರಿಗೆ ಸಿಕ್ಕಿತು. ಮತ್ತೊಬ್ಬ ಹೆಂಗಸು ತನ್ನ ಸಹಪ್ರಯಾಣಿಕಳಿಗೆ ಸಂಭವಿಸಿದ ಆಪದೆಶೆಯನ್ನು ನೋಡಿ ಕೂಗದೆ ಸುಮ್ಮಗಾದ್ದರಿಂದ ಆ ಮನುಷ್ಯನು ಇವರ ಗಾಡಿಯಲ್ಲಿದ್ದ ಆಭರಣವನ್ನೆಲ್ಲಾ ಅಪಹರಿಸಿ ಪಲಾಯನ ತೆಗೆದನು. ಅವನು ಹೋದನಂತರ ಮತ್ತೊಂದು ಸ್ಟೇಶನಿನಲ್ಲಿ ಗಾಡಿ ನಿಲ್ಲಲು ಈ ಹೆಂಗಸು ಬೊಬ್ಬಿಟ್ಟಳು. ಗಾಡಿಯಲ್ಲೆಲ್ಲಾ ಕಳ್ಳನನ್ನು ಹುಡುಕಾಡಿದರೂ ಅವನ ಸುಳುವು ಕಾಣಲಿಲ್ಲ.

* * *

ಬೆಲ್ಗಾಮ್ ಜಿಲ್ಲೆಯಲ್ಲಿ ವ್ಯವಹರಿಸುತ್ತಿದ್ದ ದೇಶ ಪಾಂಡೆ ಮತ್ತು ಕಾನ್‌ಮಾಡಿ ಎಂಬ ಇಬ್ಬರು ವಕೀಲರು ಒಟ್ಟಿಗೆ ಕೂಡಿ ಒಬ್ಬ ನಿರಕ್ಷರಕುಕ್ಷಿಯಾದ ಹೆಂಗಸಿನ ಆಸ್ತಿಯನ್ನು ಮೋಸದಿಂದ ಪಡಕೊಂಡಿದ್ದಾರೆಂಬದಾಗಿ ಆಪಾದಿಸಲ್ಪಟ್ಟದ್ದರಿಂದ ಮುಂಬಾಯಿ ಹ್ಯಾಕೋರ್ಟಿನ ಜಸ್ಟಿಸ್ ಬೆಚ್ಲರವರೂ ಜಸ್ಟಿಸ್ ರಾವ್‌ರವರೂ ಈ ಮೊಕದಮೆಯನ್ನು ತನಖಿನಡಿಸಿ ದೇಶಪಾಂಡೆಯನ್ನು ೨ ವರ್ಷಕ್ಕೂ ಕಾನ್‌ಮಾಡಿಯನ್ನು ಒಂದು ವರ್ಷಕ್ಕೂ ವಕೀಲ ವೃತ್ತಿಯಿಂದ ಅಮಾನತುಮಾಡಿದರು.

* * *

ಇದೇ ತಿಂಗಳ ತಾ. ೯ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೦೮೮ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೭೮೪ ಮಂದಿ ಮೃತಪಟ್ಟರು. ಈ ಪೈಕಿ ಡಿಲ್ಲಿಯಲ್ಲಿ ೨; ಮುಂಬಾಯಿ ೫೩೨; ಮದ್ರಾಸ್ ೧೩೦; ಬಂಗಾಳ ೮; ಬಿಹಾರ್ ೨೭; ಸಂಯುಕ್ತ ಸಂಸ್ಥಾನ ೩೨೯; ಪಂಜಾಬು ೬೮; ಬರ್ಮ ೫; ಮಧ್ಯ ಸಂಸ್ಥಾನ ೩೮; ಮೈಸೂರು ೧೦೧; ಹೈದರಾಬಾದ್ ೧೧೧; ಮಧ್ಯ ಹಿಂದೂಸ್ಥಾನ ೨೮; ರಜಪುತಾನ ೪೦೮ ಮರಣಗಳಾದವು.

* * *

ಮೂವತ್ತು ವರ್ಷಗಳ ಹಿಂದೆ ಹಿಂದೂಸ್ಥಾನದಲ್ಲಿ ೬೫೧ ಛಾಪಖಾನೆಗಳು ಇದ್ದವು. ಈ ಛಾಪಖಾನೆಗಳಲ್ಲಿ ೩೨೮ ವರ್ತಮಾನ ಪತ್ರಗಳು, ೩೨೮ ಕಾಲಾವಧಿಯ ಪತ್ರಗಳೂ ೫೭೪ ಇಂಗ್ಲಿಷ್ ಭಾಷೆಯ ಪುಸ್ತಕಗಳೂ ೪೩೪೬ ದೇಶೀಯ ಭಾಷೆಯ ಪುಸ್ತಕಗಳೂ ಮುದ್ರಿಸಲ್ಪಡುತ್ತಿತ್ತು. ಈಗಲಾದರೋ ೨೬೫೧ ಛಾಪಖಾನೆಗಳು, ೬೫೬ ದಿನಾವಹಿ ವಾರ್ತೆ ಪತ್ರಿಕೆಗಳು, ೧೯೦೨ ಕಾಲಾವಧಿಯ ಪತ್ರಿಕೆಗಳು, ೧೫೭೮ ಇಂಗ್ಲಿಷು ಭಾಷೆಯ ಪುಸ್ತಕಗಳು, ೧೦,೭೬೩ ದೇಶೀಯಭಾಷೆಯ ಪುಸ್ತಕಗಳು ಅಚ್ಚಾಗುತ್ತಿವೆ. ಈ ಪೈಕಿ ಮುಂಬಾಯಲ್ಲಿ ೧೪೧; ಸಂಯುಕ್ತ ಸಂಸ್ಥಾನದಲ್ಲಿ ೧೦೮; ಮದ್ರಾಸ್ ೧೦೪; ಪಂಜಾಬು ೯೮; ಬಂಗಾಳ ೯೬ ವರ್ತಮಾನ ಪತ್ರಗಳು ಇವೆ.

* * *

ತುರ್ಕರಿಗೂ ಬಾಲ್ಕಾನ್ ಸಂಸ್ಥಾನಗಳಿಗೂ ನಡೆಯುತ್ತಿರುವ ಈ ಯುದ್ಧದ ಸಮಯ ಹಿಂದೂಗಳೂ ಮುಸಲ್ಮಾನರೊಡನೆ ಸಹತಾಪ ಪಟ್ಟು ಯುದ್ಧದಲ್ಲಿ ಗಾಯಪಟ್ಟವರ ಸಂರಕ್ಷಣಾರ್ಥವಾಗಿ ಸಹಾಯ ಮಾಡುತ್ತಿರುವುದರಿಂದ ಈ ಸಾರಿ ನಡೆಯುವ ಬಕ್ರೀದ್ ಹಬ್ಬದ ಸಮಯ ದನಗಳನ್ನು ಸಂಹರಿಸಬಾರದೆಂದು ಕಲ್ಕತ್ತೆಯ ಮುಸಲ್ಮಾನರು ಆಲೋಚಿಸಿರುವರು. ಮುರ್ಶಿದಾಬಾದಿನ ನವಾಬರು ಬಕ್ರೀದ್ ಸಮಯ ದನಗಳನ್ನು ಕೊಲ್ಲಬಾರದೆಂದು ಪ್ರಕಟಿಸಿರುತ್ತಾರೆ. ಜೆಸ್ಸೋರಿನಲ್ಲಿಯೂ ನವಾಬರು ಇದೇ ಹುಕುಂ ಮಾಡಿರುವರು.

* * *

ಬಹುಮಾನಪಟ್ಟ ಗೋಖಲೆಯವರು ಆಫ್ರೀಕದಿಂದ ದಶಂಬರ ೧೦ರಲ್ಲು ಮುಂಬಾಯಿಗೆ ತಲಪುವರು.

* * *

ಬಾಲಗಂಗಾದರ ತಿಲಕರ ದೇಹಸ್ಥಿತಿಯು ಸಮರ್ಪಕವಾಗಿಲ್ಲವೆಂದೂ ಅವರಿಗೆ ಬಹು ಮೂತ್ರವ್ಯಾಧಿಯು ಹೆಚ್ಚಿ ಅದರಿಂದ ತುಂಬಾ ತೊಂದರೆಪಡುತ್ತಿರುವರೆಂದೂ ಅಮೃತ ಬಜಾರ್ ಪತ್ರಿಕೆಯಲ್ಲಿ ಪ್ರಕಟವಾಗಿದೆ.

* * *

ಹಿಂದೂಸ್ಥಾನಕ್ಕೆ ಚಿತ್ತೈಸಿರುವ ಹಿಂದೂಸ್ಥಾನದ ಉಪ ಸೆಕ್ರಟರಿಯಾಗಿರುವ ಮೆ| ಮೊಂಟೇಗರವರು ಈಗ ಲಾಹೋರನ್ನು ಸಂದರ್ಶಿಸುತ್ತಿದ್ದಾರೆ.

* * *

ತಾ. ೧೬ರಲ್ಲು ಲಾಹೋರಿನಲ್ಲಿ ಭೂಕಂಪವಾಗಿರುವದು. ಭೂಮಿಯು ಬಹಳ ಜೋರಿನಿಂದ ಅದರಿದ್ದರಿಂದ ಜನರು ಹೆದರಿ ತಂತಮ್ಮ ಮನೆಗಳಿಂದ ಹೊರಗೆ ಬಂದಿದ್ದರು.

* * *

ಡಕ್ಕಾದಲ್ಲಿ ದಕಾಯಿತರ ಉಪಟಳವು ಹೆಚ್ಚೆಚ್ಚಾಗುತ್ತಾ ಬರುತ್ತದೆ. ತಾ. ೧೨ರಲ್ಲು ಆಯುಧಪಾಣಿಗಳಾದ ೨೦ ದಕಾಯಿತರು ಪಿ. ಚರಣನಂದಿ ಎಂಬವರ ಮನೆಗೆ ನುಗ್ಗಿ ಸುಮಾರು ೧೬,೦೦೦ ರೂಪಾಯಿ ಕ್ರಯಬಾಳುವ ಒಡವೆಗಳನ್ನು ಎತ್ತಿ ಹಾಕಿದರು. ಈ ದಕಾಯಿತರು ಯೌವ್ವನ ಪ್ರಾಯದವರಾಗಿದ್ದರು ಎಂದು ತಿಳಿದುಬರುತ್ತದೆ.

ಅಂದೇ ಡಕ್ಕ ಜಿಲ್ಲೆಯ ಭವನಿಪುರ ಗ್ರಾಮದಲ್ಲಿ ಮತ್ತೊಂದು ದಕಾಯತಿ ನಡೆಯಿತು. ರಜನಿಕಾಂತ ಚಕ್ರವರ್ತಿಯವರು ಹಣ ವಸೂಲುಮಾಡುವರೆ ಆ ಗ್ರಾಮಕ್ಕೆ ಹೋಗಿದ್ದರು. ಮಧ್ಯ ರಾತ್ರಿಯಲ್ಲಿ ಆಯುಧ ಧರಿಸಿದ ಸುಮಾರು ೨೫ ದಕಾಯಿತರು ಅವರು ಉಳಕೊಂಡಿದ್ದ ಮನೆಯನ್ನು ಮುತ್ತಿ ಅವರಿಗೆ ಚೆನ್ನಾಗಿ ಹೊಡೆದು ಬೀಗದ ಕೈ ಕೇಳಿದರು. ಅನಂತರ ಸಮೀಪದ ಗದ್ದೆಗೆ ಎಳದು ಹಾಕಿ ಅವರು ಮೂರ್ಛಿತರಾಗಿರುವಾಗ ಅವರಲ್ಲಿದ್ದ ನಗದಿ ರೂ. ೫೦ನ್ನು ತೆಗೆದು ಪರಾರಿಯಾದರು. ಪೋಲೀಸಿನವರು ಪತ್ತೆತರದೂದು ನಡಿಸುತ್ತಿದ್ದಾರೆ.

* * *

ಹಿಂದೂಸ್ಥಾನದಲ್ಲಿ ಚಿನ್ನದ ನಾಣ್ಯವನ್ನು ಟಂಕಹೊಡೆಯಿಸಬೇಕೆಂಬದಾಗಿ ಸ್ಟೇಟ್ ಸೆಕ್ರಟರಿಯವರು ಬಜಿಟ್ ಭಾಷಣದಲ್ಲಿ ಕೊಟ್ಟ ಸೂಚನೆಗಳು ಇನ್ನೂ ಇಂಡಿಯ ಸರಕಾರದವರ ಆಲೋಚನೆಯಲ್ಲಿದೆ. ಸ್ಟೇಟ್ ಸೆಕ್ರಟರಿಯವರು ಈ ಸಂಬಂಧ ತನ್ನ ಮೂರು ಅಭಿಪ್ರಾಯಗಳನ್ನು ಕೊಟ್ಟಿರುವರು. ಒಂದನೇದು ಮೋರ ಎಂಬಲ್ಲಿ ಇಂಗ್ಲಾಂಡಿನ ಟಂಕ ಶಾಲೆಯ ಒಂದು ಶಾಖೆಯನ್ನು ಸ್ಥಾಪಿಸಿ ಅದನ್ನು ಇಂಗ್ಲಾಂಡ್ ಟಂಕಶಾಲೆಯ ಅಧೀನದಲ್ಲಿರಿಸುವದು. ಇದಕ್ಕೆ ಹಿಂದೂಸ್ಥಾನದವರ ಅಭಿಮತವಿಲ್ಲ. ಎರಡನೇದು ಹಿಂದೂಸ್ಥಾನದಲ್ಲಿಯೇ ೧೦ ರೂಪಾಯಿ ಕ್ರಯಬಾಳುವ ಚಿನ್ನದ ನಾಣ್ಯಗಳನ್ನು ಟಂಕ ಹೊಡಿಸುವರೆ ಒಂದು ಟಂಕಶಾಲೆಯನ್ನು ಸ್ಥಾಪಿಸುವದು. ಈ ಆಲೋಚನೆಯನ್ನು ಮುಂಬಾಯಿ, ಕರಾಚಿ, ಉತ್ತರ ಹಿಂದೂಸ್ಥಾನದವರು ಅನುಮೋದಿಸಿರುವರು. ಈ ಹತ್ತು ರೂಪಾಯಿಯ ಚಿನ್ನದ ನಾಣ್ಯಗಳು ಮಧ್ಯಮ ತರಗತಿಯ ಜನರಲ್ಲಿ ಬಹಳ ಬಳಿಕೆಯನ್ನು ಹೊಂದುವುದೆಂದೂ ಇದರಿಂದ ಇಂಗ್ಲಾಂಡಿನ ಟಂಕಶಾಲೆಯ ಅಧಿಕಾರಿಗಳೊಡನೆ ನಿಷ್ಪ್ರಯೋಜನವಾಗಿ ವ್ಯವಹಾರ ನಡಿಸುವ ಅವಶ್ಯ ಇರದ್ದರಿಂದ ಈ ಆಲೋಚನೆಯು ಒಳ್ಳೇದೆಂದೂ ಮುಂಬಾಯಿ ಇತ್ಯಾದಿ ಪಟ್ಟಣಗಳ ಜನರ ಅಭಿಪ್ರಾಯ. ಮೂರನೇದಾಗಿ ಕೆಲವು ಕಾಲ ೧೦ ರೂಪಾಯಿ ಕ್ರಯಬಾಳುವ ಚಿನ್ನದ ನಾಣ್ಯವನ್ನು ಹೊಡಿಸಿ ಅನಂತರ ಪವನನ್ನೇ ಟಂಕ ಹೊಡಿಸುವರೆ ಪಾರ್ಲಿಮೆಂಟಿನವರ ಸಮ್ಮತವನ್ನು ಪಡೆಯುವರೆ ಪ್ರಯತ್ನಿಸುವದು ಎಂಬದಾಗಿದೆ.

ದಕ್ಷಿಣ ಹಿಂದೂಸ್ಥಾನ.

ಥಿಯೊಸಫಿ ಮತದ ಪ್ರೆಸಿಡೆಂಟರಾದ ಮಿಸೆಸ್ ಅನ್ನಿಬೀಸೆಂತರ ಮೇಲೆ ಮದ್ರಾಸಿನ ಜಿ. ನಾರಾಯಣಯ್ಯನವರು ಚೆಂಗಲ್ಪಟ್ಟ್ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಮಾಡಿದ ದಾವೆಯನ್ನು ಮದ್ರಾಸ್ ಹ್ಯಾಕೋರ್ಟಿನಲ್ಲಿ ತನಖಿ ನಡಿಸಬೇಕೆಂದು ಮುದ್ದೈಯು ಮದ್ರಾಸ್ ಹ್ಯಾಕೋರ್ಟಿನಲ್ಲಿ ಮನವಿ ಮಾಡಿಕೊಂಡದ್ದರಿಂದ ಈ ಮೊಕದಮೆಯು ಮದ್ರಾಸ್ ಹ್ಯಾಕೋರ್ಟಿನಲ್ಲಿ ತನಖಿಯಾಗುವದು.

* * *

ಬರ್ಮ ಕ್ರಿಟಿಕ್ ಪತ್ರದ ಸಂಪಾದಕರಾದ ಅರ್ನೋಲ್ಡರವರ ಪರವಾಗಿ ಅಪೀಲು ಮಾಡುವರೆ ಚೀಫ್ ಕೋರ್ಟಿನವರನ್ನು ಕೇಳಿಕೊಂಡ ಮನವಿಯು ತಳ್ಳಿಹಾಕಲ್ಪಟ್ಟಿರುವುದರಿಂದ ಈ ಅಪೀಲು ಪ್ರಿವಿ ಕೌನ್ಸಿಲಿನಲ್ಲಿಯಾದರೂ ತನಖಿಯಾಗಬೇಕೆಂದು ಅರ್ನೋಲ್ಡರವರ ಕಡೆಯ ವಕೀಲರು ನಿಷ್ಕರ್ಷಿಸಿರುವರು. ಈ ಸಂಬಂಧ ಪ್ರಿವಿ ಕೌನ್ಸಿಲಿನಲ್ಲಿ ವಾದಿಸುವ ವಕೀಲರಿಗೆ ಬೇಕಾದ ಸಲಹೆಗಳನ್ನು ಕೊಡುವರೆ ಮೆ| ಸಿ. ಹೆಮ್ಮಿನ್ ಎಂಬ ವಕೀಲರು ಶೀಮೆಗೆ ಹೋಗುವರು.

ಈ ಮೊಕದಮೆಯು ಉದ್ಭವಿಸಲು ಕಾರಣವಾದ ಮೆಕ್‌ಕ್ರೊಮಿಕರ ಮೊಕದಮೆಯನ್ನು ಪುನಃ ಚೀಫ್ ಕೋರ್ಟಿನಲ್ಲಿ ತನಖಿ ನಡಿಸುವರೆ ಹುಕುಂ ಕೊಡಬೇಕೆಂಬದಾಗಿ ಮೆ| ಎನ್. ಎಮ್. ಕವಾಸ್ಜಿಯವರು ಮುದ್ದೈ ಪಾತಿಮ ಬೀಬಿಯ ಕಡೆಯಿಂದ ರಂಗೂನ್ ಚೀಫ್ ಕೋರ್ಟಿನವರನ್ನು ಕೇಳಿಕೊಂಡಿರುವರು. ಕೆಪ್ಟನ್ ಮೆಕ್‌ಕ್ರೊಮಿಕರು ಪಾತಿಮ ಬೀಬಿಯ ಮಗಳನ್ನು ಅವಳು ತನ್ನ ಮನೆಯ ಮುಂದುಗಡೆ ಆಡುತ್ತಿರುವಾಗ ಬಲತ್ಕಾರದಿಂದ ಎತ್ತಿಕೊಂಡು ಹೋಗಿರುತ್ತಾರೆ. ಪಾತಿಮಳು ತನ್ನ ಮಗಳನ್ನು ಹಿಂದೆ ಪಡೆಯಲು ಎರಡು ತಿಂಗಳು ಮಾಡಿದ ಪ್ರಯತ್ನಗಳು ವ್ಯರ್ಥವಾಗಿ ಅನಂತರ ಅವರ ಮೇಲೆ ಮೊಕದಮೆಯನ್ನು ಹೂಡಿದನಂತರ ಮಾತ್ರ ಪೋಲೀಸಿನವರ ಸಹಾಯದಿಂದ ಅವಳು ಮೆಕ್‌ಕ್ರೊಮಿಕರ ಮನೆಯಿಂದ ಬಿಡಿಸಲ್ಪಟ್ಟಳು. ಮೆಕ್‌ಕ್ರೊಮಿಕರು ಹುಡುಗಿಯನ್ನು ಬಲತ್ಕಾರದಿಂದ ಕೆಟ್ಟ ಕೆಲಸಕ್ಕಾಗಿ ಉಪಯೋಗಿಸಲು ಎತ್ತಿಕೊಂಡು ಹೋಗಿದ್ದಾರೆಂಬದಕ್ಕೆ ಬಲವಾದ ರುಜುವಾತು ಇರುವುದರಿಂದ ಮೆಕ್‌ಕ್ರೊಮಿಕರನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಅಂಡ್ರೂರವರು ಖುಲಾಸು ಪಡಿಸಿದ್ದು ನ್ಯಾಯವಲ್ಲವಾದ್ದರಿಂದ ಪುನಃ ಚೀಫ್ ಕೋರ್ಟಿನಲ್ಲಿ ಈ ಮೊಕದಮೆಯು ತನಖಿ ಆಗಬೇಕೆಂದು ಕವಾಸ್ಜಿಯವರು ವಾದಿಸಿದರು. ಜಡ್ಜರು ತೀರ್ಮಾನವನ್ನು ಮುಂದಿಟ್ಟಿರುವರು.

* * *

ರಾಜಕೀಯೋದ್ಯೋಗ ಸಭೆಯ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟ ಇಸ್ಲಿಂಗ್ಟನ್ ಪ್ರಭುಗಳವರು ದಶಂಬರ ತಿಂಗಳಾಂತ್ಯಕ್ಕೆ ನ್ಯೂಜಿಲಾಂಡಿನಿಂದ ನೆಟ್ಟಗೆ ಕೊಲೊಂಬಕ್ಕೆ ಬರುವರು. ಅಲ್ಲಿಂದ ಮದ್ರಾಸಿಗೆ ಹೋಗಿ ಅಲ್ಲಿ ದಶಂಬರ ತಾ. ೨೮ರಿಂದ ೧೫ ದಿವಸಗಳ ವರೆಗೆ ಇದ್ದು ಈ ಸಂಬಂಧ ಸಭೆ ಕೂಡಿಸುವರು. ಅನಂತರ ಬರ್ಮಕ್ಕೆ ಹೋಗಿ ಅಲ್ಲಿ ಈ ಸಂಬಂಧ ತನಖಿ ನಡಿಸಿದ ನಂತರ ಬಂಗಾಳಕ್ಕೆ ಹೋಗುವರು ಎಂಬದಾಗಿ ತಿಳಿದು ಬರುತ್ತದೆ.

* * *

ಮೈಸೂರು ದೇಶದ ಚಾಮರಾಜ ನಗರಕ್ಕೆ 5-6 ಮೈಲು ದೂರದಲ್ಲಿರುವ ಕಣ್ಣೇಗಾಲವೆಂಬ ಊರಿನಲ್ಲಿ ಒಂದು ಭಯಂಕರವಾದ ಡಕಾಯಿತಿ ನಡೆದಿರುವುದು. ಇದೇ ತಿಂಗಳ ತಾ. ೬ರಲ್ಲು ಟಿ. ನರಸೀಪುರ ತಾಲೂಕು ಮಾಗೂರು ಎಂಬ ಊರಿನಿಂದ ಸುಮಾರು ೧೦೦೦ ಜನಗಿಂತ ಹೆಚ್ಚು ಮಂದಿ ಕತ್ತಿ, ಈಟಿ, ಗುಂಡುಗೊಡಲಿ, ಮೊಚ್ಚು ದೊಣ್ಣೆ ಮುಂತಾದ ಆಯುಧಗಳೊಂದಿಗೂ ತಮುಟೆ ಕಹಳೆಗಳೊಂದಿಗೂ ಏಕಾಏಕಿ ಕಣ್ಣೇಗಾಲವೆಂಬ ಗ್ರಾಮಕ್ಕೆ ನುಗ್ಗಿ ದಾರಿಯಲ್ಲಿ ಸಿಕ್ಕಿದವರನ್ನು ಹೊಡೆದು, ನಾಯಿಗಳು ಬೊಗಳಿದರೆ ಅವುಗಳನ್ನು ಭರ್ಜಿಯಿಂದ ತಿವಿದು, ಹೆಂಗಸರನ್ನು ಮಾನಭಂಗ ಮಾಡಿ, ಪ್ರತಿ ಮನೆಗೆ ನುಗ್ಗಿ, ಅವರವರ ಆಸ್ತಿ ಪಾಸ್ತಿಗಳನ್ನು ತೆಗೆದು, ಮನೆಗಳಿಗೆ ಬೆಂಕಿ ಕೊಟ್ಟು, ಹೊರಟು ಹೋದರು. ಮೂರು ಮಂದಿಯನ್ನು ಕೊಂದರು. ಆ ಊರಿನವರಲ್ಲಿ ಕೆಲವರು ಬಹು ಸಾಹಸದಿಂದ ತಪ್ಪಿಸಿಕೊಂಡು ೬ ಮೈಲು ದೂರದಲ್ಲಿರುವ ಚಾಮನಗರಕ್ಕೆ ಓಡಿಬಂದು ಪೋಲೀಸ್-ಆಫೀಸರರಿಗೆ ತಿಳಿಸಲು ಇವರು ತಕ್ಷಣವೇ ಆ ಗ್ರಾಮಕ್ಕೆ ಹೋಗಲು ದಂಗೆಗಾರರು ಯಾರೂ ಇರಲಿಲ್ಲ. ಆದರೆ ಉರಿಯುತ್ತಿರುವ ಮನೆಗಳೂ, ಸತ್ತು ಬಿದ್ದ ಹೆಣಗಳೂ, ಅರ್ಧ ಪ್ರಾಣದಲ್ಲಿ ನರಳುತ್ತಿರುವವರೂ ಮಾತ್ರ ಇದ್ದರು. ಅನಂತರ ಅಲ್ಲಿಗೆ ಪೋಲೀಸ್ ಸುಪರಿಂಟೆಂಡೆಂಟ್ ಮೊದಲಾದವರು ಬಂದು ತನಖಿ ನಡಿಸುತ್ತಿದ್ದಾರೆ. ಈ ದೊಂಬಿಯಾದದ್ದಕ್ಕೆ ಜನರು ನಾನಾ ವಿಧವಾಗಿ ಕಾರಣಗಳನ್ನು ಹೇಳುವರು. ಕಣ್ಣೇಗಾಲದಲ್ಲಿ ಅಗಸರಿಗೂ ತೊರೇರವರಿಗೂ ವೈಮನಸ್ಸು ಹುಟ್ಟಿದ್ದರಿಂದ ತೊರೇರವರು ಅಗಸರಿಗೆ ಯಾವ ವಿಧದ ಸಹಾಯವನ್ನೂ ಮಾಡಕೂಡದೆಂದು ಕಟ್ಟು ಮಾಡಿಕೊಂಡರು. ಆ ಊರಲ್ಲಿದ್ದ ಬ್ರಾಹ್ಮಣರು ಅಗಸರಿಗೆ ಸಹಾಯವಾಗಿ ನಿಂತರು. ಈ ವಿಷಯವಾಗಿ ಬ್ರಾಹ್ಮಣರಿಗೂ ತೊರೇರವರಿಗೂ ಮಾತುಕಥೆ ನಡೆದು ವಿರೋಧ ಬೆಳೆಯಿತು. ಈ ಬ್ರಾಹ್ಮಣರ ಜಮೀನುಗಳನ್ನು ತೊರೇರವರು ಮಾಡಿಕೊಂಡಿದ್ದರು. ಆದರೆ ತೊರೇರವರು ಫಸಲನ್ನು ಕೊಯ್ಯದ ಹಾಗೆ ಬ್ರಾಹ್ಮಣರು ಅಡ್ಡಿ ಮಾಡಿ ಇತರರಿಂದ ಫಸಲನ್ನು ಕೊಯ್ಯುಸುತ್ತೇವೆಂದು ಹೇಳಿ ಮಾಗೂರಿನಿಂದ ೪೦-೫೦ ಆಳುಗಳನ್ನು ಕರೆಸಿ ಫಸಲನ್ನು ಕೊಯಿಸಿದರು. ಈ ಕೂಲಿಯಾಳುಗಳಿಗೆ ತೊರೇರವರು ಹೊಡೆದು ಓಡಿಸಿದರು. ಇವರು ಹೋಗಿ ಮಾಗೂರಿನಲ್ಲಿ ಮೊರೆಯಿಟ್ಟ ಕಾರಣ ಆ ಊರಿನವರೆಲ್ಲಾ ಸಿಟ್ಟುಗೊಂಡು ಗುಂಪು ಕೂಡಿ ಬಂದು ಈ ಭಯಂಕರ ಕೃತ್ಯ ನಡಿಸಿದರಂತೆ.

ದಕ್ಷಿಣ ಕನ್ನಡ.

ನೋಟೀಸು.

ಕೆಳಗೆ ಕಾಣಿಸಿದ ರಿಕಾರ್ಡುಗಳು ಗೈರುವಿಲೆಯಾದ್ದರಿಂದ ಶಿಕ್ಕಿದವರು ಅವುಗಳನ್ನು ಈ ಕೆಳಗೆ ದಸ್ಕತುಮಾಡಿದ ನನಗೆ ತಂದುಕೊಟ್ಟಲ್ಲಿ ಅವರಿಗೆ 4—0—0 ರೂಪಾಯಿಗಳು ಇನಾಮಾಗಿ ಕೊಡಲ್ಪಡುವದು.

(1) ತಾ. 24-4-98ಲ್ಲು ಮಂಜೈಶೆಟ್ಟಿಗೆ ಆಗರ ಮನ್ವೆಲಪ್ರಭು ಬರಕೊಟ್ಟ ರೂಪಾಯಿ 70—0—0ರ ಡಿಮಾಂಡ್ ನೋಟು 1

(2) ಮಂಜೈ ಶೆಟ್ಟಿಯಿಂದ ಆದ ನೋಟಿನ ಪಾವತಿ ರಶೀದಿ 1

(3) ದೈಲಬೆಟ್ಟು ಸುಬ್ಬಂಣಭಟ್ರಿಗೆ ಮನ್ವೆಲ್‌ಪ್ರಭು ರೂಪಾಯಿ 50—0—0ಕ್ಕೆ ಬರಕೊಟ್ಟ ಮೈಸಾಲ ದಸ್ತಾವೇಜು 1

(4) ತಾ. 12-8-76ಲ್ಲು ದೂಜಿ ಮಿರಾಂದನಿಂದ ಮನ್ವೆಲ್‌ಪ್ರಭು ಬರಕೊಂಡ ಮಂಗ್ಳೂರು ಸಬ್ ರಿ. ಆಫೀಸು ನಂಬ್ರ $\frac{1879}{6\text{-}2\text{-}76}$ನೇ ರಿಜಿಸ್ತ್ರಿ ಕ್ರಯಚೀಟು . . 1

ಕೂಡಾ 4 ದಸ್ತಾವೇಜುಗಳಾಗಿರುತ್ತವೆ.

Kallamundkur.
Date. 15—11—1912. } **M. Nemi Raja.**

* * *

ಬಂಟವಾಳ. ಕಳೆದ ಫೆಬ್ರವರಿಯಲ್ಲಿ ಇಲ್ಲಿಯ ಒಬ್ಬ ಸಾಹುಕಾರರಿಗೆ ಗಟ್ಟದಿಂದ ಬರುತ್ತಿದ್ದ ಜೀನಸು ಗಾಡಿಯಿಂದ ಚಾರ್ಮಾಡಿಯ ಪೋಲೀಸಿನವನೊಬ್ಬನು ಎರಡು ಪನ್ನೀರು ಜಂಬುನೀರಳಿಗಳನ್ನು ತೆಗೆದ ಕಾರಣ, ಇಲ್ಲಿಯ ಜಿಲ್ಲಾ ಸುಪರಿಂಟೆಂಡೆಂಟರು ವಿಚಾರಣೆಯಿಂದ ಆತನನ್ನು ಪುತ್ತೂರು ಡಿವಿಜನ್ ಡಿಪ್ಯುಟಿ ಕಲೆಕ್ಟರವರೆದುರಿಗೆ ಪ್ರೊಸಿಕ್ಯೂಶನ್ ನಡೆಯಿಸಿದ್ದಲ್ಲಿ ರೂಪಾಯಿ ೫ರ ಜುರುಮಾನೆವಿಧಿಸೋಣಾಯಿತು.

ಇಲ್ಲಿ ಬೆಕ್ಕುಗಳಿಗೆ ಒಂದು ತರದ ಸಾಂಕ್ರಾಮಿಕ ಜಾಡ್ಯವು ತಲೆದೋರಿಯದೆ. ಕೆಲವು ಮಾರೀಪೂಜೆಯ ಸನ್ನಾಹಕ್ಕೆ ಇದೊಂದು ಸೂಚನೆಯೆಂದೂ, ಇತರರು ಮೀನುಗಳ ದೋಷವೆಂದೂ ಎಣಿಸಿರುವರು. ಜಿಲ್ಲಾ ವೈದ್ಯರಿಗೆ ಒಂದು ಮೃತ ಬೆಕ್ಕನ್ನು ಕಳುಹಿಸಿದ್ದಾರೆ.

ಜೋರ್ಡಿನವರು ಸ್ಥಾಪಿಸಿದ ಹೊಸ ಮಾಪಿಳ್ಳೆಯರ ಶಾಲೆಗೆ ಮಹಮ್ಮದೀಯ ತರಬೇತಾದ ಉಪಾಧ್ಯಾಯರೊಬ್ಬರು ಈ ತಿಂಗಳಲ್ಲೇ ಬರುವರು.

ಭಂಡಾರ ಬೆಟ್ಟಿನ ಎಲಿಮೆಂಟರಿ ಶಾಲೆಯ ಸಮೀಪವಾಗಿ ಒಂದು ಹೋಲನ್ನು ಕಟ್ಟಿಸುವರೆ ತೊಡಗಿದ್ದಾರೆ. ಇದು ಶ್ರೀ ಮಧ್ವರದೇಂದ್ರ ಸ್ವಾಮಿಯರ ಹೆಸರಲ್ಲಿ ಕಟ್ಟಿಸಲ್ಪಡುವುದಾಗಿಯೂ, ಮುಂದಿನ ಶಿಕ್ಷಣಾಲಯವಾಗಿ ಉಪಯೋಗಿಸಲ್ಪಡುವುದಾಗಿಯೂ ತಿಳಿದು ಸಂತೋಷಪಡುತ್ತೇವೆ.

ಶಾಲಾ ಇನ್ಸಪೆಕ್ಟರ ಮೆ| ಲಿಟ್ಲಹೈಲ್ಸರವರು ಬಿ. ಜಿ. ಎಮ್ ಶಾಲೆಯನ್ನು ಸಂದರ್ಶಿಸಿ ತೆರಳಿರುವರು. ಸಂದರ್ಶನೆಯ ಫಲಿತಾಂಶವನ್ನು ಇನ್ನೊಮ್ಮೆ ತಿಳಿಯಿಸುವೆವು.

* * *

ಪುತ್ತೂರು. ಇಲ್ಲಿಂದ ಬಂಟವಾಳಕ್ಕೆ ವರ್ಗಪಟ್ಟ ಸಬ್ ರಿಜಿಸ್ತ್ರಾರ ರಾ| ಲಕ್ಷ್ಮಣರಾಯರು ೨ ತಿಂಗಳ ರಜೆ ಪಡಕೊಳ್ಳುವರಾಗಿ ತಿಳಿಯುತ್ತೇವೆ.

ಸುಬ್ರಮಣ್ಯ ಷಷ್ಠಿ ಜಾತ್ರೆ ಸಂಬಂಧ ನಮ್ಮ ತಾಲೂಕು ತಹಶೀಲದಾರ ಮೆ| ಬಿ. ಅಲ್ಬುಕರ್ಕರವರು ತಾ. ೧೯ರಲ್ಲು ಕಚೇರಿ ಶಿಬಂದಿ ಸಮೇತ ಸುಬ್ರಮಣ್ಯಕ್ಕೆ ಹೋಗಿರುವರು.

ಕುಳಗುಂದ ಜಾನುವಾರು ಸಂತೆಗೆ ಬರುವ ಜಾನುವಾರು ಪ್ರತಿ ಒಂದಕ್ಕೆ ಆಣೆ ೨ರಂತೆ ಮಾರಾಟ ಮಾಡುವವರಿಂದ ವಸೂಲು ಮಾಡೋಣಾಗುವದೆಂದು ಪ್ರಕಟಿಸಿರುವರು.

ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ ಮ| ರಾ| ರಾ| ಆರ್. ಸುಬ್ಬರಾವ್‌ರವರು ಇದೇ ತಾ. ೧೫ರಲ್ಲು ಇಲ್ಲಿಗೆ ತಲ್ಪಿ ತಾ. ೧೬, ೧೭, ೧೮ರ ವರೇಗೆ ಇಲ್ಲಿಯ ಪೋಲೀಸ್ ಸ್ಟೇಶನಿನ ರಿಕಾರ್ಡು ತನಕಿ ಮಾಡಿ ತಾ. ೧೯ರಲ್ಲು ಇಲ್ಲಿಂದ ಮಂಗಳೂರಿಗೆ ಹೋಗಿರುವರು.

* * *

ಬರಿಮಾರ. ಇಲ್ಲಿಯ ಇಗರ್ಜಿಯ ವರುಷಾವದಿ ತಿಥುಲಾರ ಹಬ್ಬವು ಇದೇ ತಿಂಗಳ ತಾ. ೨೦ರಲ್ಲು ಬಹು ವಿಜೃಂಭಣೆಯಿಂದ ಜರಗಿತು. ಬಂಟವಾಳ ವಿಕಾರರಾದ ರೆವೆರೆಂಡ್ ಫಾದರ್ ಆರೆಂಜಾರವರೂ, ಕರಿಂಗಾರ, ಪುತ್ತೂರು, ಪೊಣಂಗಿಲ ಗುರುಗಳೂ ಬಂದಿದ್ದರು.

* * *

ಆಯುರ್ವೇದೋದಯ ಔಷಧಾಲಯ, ೧೬೭, ಚೀನಾಬಜಾರ್ ರೋಡ್, ಮದ್ರಾಸ

ಮದನಮಂಜರಿ ಮಾತ್ರೆಗಳು.

ಈ ಮಾತ್ರೆಗಳು ನಿಮ್ಮ ದೇಹದಲ್ಲಿರುವ ರಕ್ತವನ್ನು ಶುದ್ಧಿ ಮಾಡಿ ವೃದ್ಧಿಪಡಿಸಿ, ಆಶ್ಚರ್ಯಕರವಾದ ಬಲವನ್ನು ಕೊಟ್ಟು ಸ್ವಪ್ನಸ್ಖಲಿತ ಮೂತ್ರದೊಡನೆ ಇಂದ್ರಿಯ ಸ್ರವಿಸುವದು ಮುಂತಾದ ಸಕಲ ವ್ಯಾಧಿಂದರೋಗಗಳನ್ನು ನಿರ್ಮೂಲಮಾಡುವದಲ್ಲದೆ ಹೆಂಗಸರ ಮಾಸಿಕ ರಜಸ್ಸಿನಲ್ಲುಂಟಾಗುವ ಸಕಲ ವಿಗವಾದ ದೋಷಗಳನ್ನು ಕ್ರಮಪಡಿಸುವವು. ಈ ಮಾತ್ರೆಗಳು ಅಜೀರ್ಣ, ಮಲಬಂಧ, ಅರುಚಿ, ಇತ್ಯಾದಿಗಳನ್ನು ನಿಶ್ಶೇಷವಾಗಿ ಹೋಗಲಾಡಿಸಿ ಪೂರ್ಣಾರೋಗ್ಯವನ್ನೂ ದೀರ್ಘಾಯುಸ್ಸನ್ನೂ ಮುಖಕ್ಕೆ ಒಳ್ಳೇಕಾಂತಿಯನ್ನೂ ಉಂಟು ಮಾಡುತ್ತದೆ. ಮುಖ್ಯವಾಗಿ ಸ್ತ್ರೀಪುರುಷರಿಗೆ ಆವಶ್ಯಕವಾದ ಸಕಲ ಪಂಚಭೂತಗಳು ಈ ಮಾತ್ರೆಗಳಲ್ಲಿ ಮೂರ್ತಿಮತ್ತಾಗಿವೆ. ೪೦ ಮಾತ್ರೆಗಳಿರುವ ಡಬ್ಬಿ ಕ್ರಯ ರೂ. ೧-೦-೦.

ಬಿಟ್ಟಿ! ಪುಗಸಟೆ!

ವೈದ್ಯವಿದ್ಯೆ.

ಸಂಪೂರ್ಣಾರೋಗ್ಯವನ್ನೂ ದೀರ್ಘಾಯುವನ್ನೂ, ಶಾಶ್ವತವಾದ ಸುಖವನ್ನು ಹೊಂದಿ ಸಕಲ ದುರವಸ್ಥೆಗಳಿಂದಲೂ ತಪ್ಪಿಸಿಕೊಳ್ಳುವದಕ್ಕೆ ಲೋಕಪ್ರಸಿದ್ಧವಾದ ನಮ್ಮ ವೈದ್ಯವಿದ್ಯೆ ಎಂಬ ಪುಸ್ತಕವನ್ನು ಓದಿರಿ. ಈ ಪುಸ್ತಕವು ಅರವ, ತೆಲಗು, ಕನ್ನಡ, ಇಂಗ್ಲೀಸು ಮುಂತಾದ ೮ ಭಾಷೆಗಳಲ್ಲಿ ದೊರೆಯುವದು. ಕೋರಿದವರಿಗೆ ಕ್ರಯವು ಅಂಚೆಹಾಸಲು ಸಹ ಇಲ್ಲದೆ ಮುಫತ್ತಾಗಿ ರವಾನಿಸಲ್ಪಡುವದು. ಜಾಗ್ರತೆ ನಿಮ್ಮ ವಿಳಾಸವನ್ನು ತಿಳುಹಿಸಿ. ಈ ವರಿಗೂ ೩೦೦೦೦೦ ಪ್ರತಿಗಳು ಕೊಡಲ್ಪಟ್ಟಿವೆ. ಈ ದಿವಸವೇ ಒಂದು ಕಾರ್ಡು ಬರೆಯಿರಿ.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣೆ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 29ನೇ ನವಂಬರ 1912.

ಮತಸಂಬಂಧವಾದ ನೀತಿ ಶಿಕ್ಷಣೆಯು.

ಮನೋಶಕ್ತಿಗಳ ವಿಕಾಸತೆ, ದೈಹಿಕ ಪುಷ್ಟೀಕರಣ, ನೈತಿಕ ಬೋಧನಗಳೆಂಬ ಮೂರು ಶಾಖೆಗಳನ್ನೊಳಕೊಂಡ ವಿದ್ಯಾಕಲ್ಪತರುವು ಇಂದು ಭಾರತೀಯರಿಗೆ ದಯಾಳು ಸರಕಾರದ ಉದಾರ ಪೋಷಣದಿಂದ ಆಶ್ರಯವನ್ನೂ ಕಾಮನೆಗಳನ್ನೂ ಆದರಹಸ್ತದಿಂದ ಕೊಡುತ್ತಿದೆ. ಪರಂತು ವಿದ್ಯಾಸಂಸ್ಥೆಗಳಲ್ಲಿ ಹನ್ನೆರಡಾಣೆಯ ಪಾಲು ಮಾನಸಿಕ ವಿಕಾಸತೆಯನ್ನೂ, ಮೂರಾಣೆಯ ಪಾಲು ದೈಹಿಕ ಪುಷ್ಟತೆಯನ್ನೂ, ಬರೇ ಒಂದು ಆಣೆಯ ಪಾಲು ನೈತಿಯ ಬೋಧನೆಯನ್ನೂ ವಿದ್ಯಾರ್ಥಿಯರಿಗೆ ಸಲ್ಲಿಸುತ್ತಿರುವುದು ವಿದ್ಯಾವ್ಯಾಸಂಗಕ್ಕೆ ನಿಂದನೀಯವಾದುದೆಂದು ಹಲವರು ಅನ್ನುತ್ತಿದ್ದು, ಈಚೆಗೆ ಕೆಲವು ವರ್ಷಗಳಿಂದ ನಿಮ್ನಗತಿ ಹೊಂದಿದ ಮತ ಸಂಬಂಧವಾದ ನೀತಿ ಶಿಕ್ಷಣೆಯನ್ನು ಉತ್ತೇಜಿಸಿ, ವಿದ್ಯಾಗೌರವವನ್ನು ತಕ್ಕುದಾದ ಭೂಷಣದಿಂದ ಸುಶೋಭಿತವಾಗಿ ಮಾಡಲು ಅಲ್ಲಲ್ಲಿ ಚಳವಳಗಳು ತೊಡಗಿವೆ. ಇತಿಹಾಸವನ್ನು ನೋಡಿದರೆ ನೀತಿಶಿಕ್ಷಣೆಯನ್ನು ಮೂಲೆಗೊತ್ತಿದ ಜನಾಂಗಗಳೂ ಸೀಮೆಗಳೂ ಅಪಾರ ಕೆಡುಕನ್ನು ತಮಗೆ ತಾವೇ ಕಲ್ಪಿಸಿಕೊಡುವವೆಂತಲೂ, ಧರ್ಮ ಬಲವಿಲ್ಲದೆ ಬರೇ ದೇಹ ಬಲವೂ ಮನೋಬಲವೂ ಪರಿಣಾಮದಲ್ಲಿ ಊನತ್ವ ಹೊಂದುವುದೆಂತಲೂ ತಿಳಿದು ಬರುತ್ತಿದೆ. ಮತದ ಮೂಲ ತತ್ವಗಳನ್ನಾಧರಿಸಿ ನೀತಿ ಶಿಕ್ಷಣವನ್ನೀಯುವುದು ವಿದ್ಯಾರ್ಥಿಗಳಿಗೆ ಅತಿ ಹಿತಕರವೆಂದು ಒಂದು ತಂಡದವರೂ, ಮತ ಸೂತ್ರಗಳನ್ನು ಒಂದೆಡೆಯಲ್ಲಿಟ್ಟು ಬರೇ ಸಾಮಾನ್ಯ ವ್ಯವಹಾರಿಕ ನೀತಿಯನ್ನು ಕಲಿಸಿದರೆ ಸಾಕೆಂದು ಒಂದು ತಂಡದವರೂ ತರ್ಕಿಸುವರೇ ಹೊರತಾಗಿ ನೀತಿ ಶಿಕ್ಷಣೆಯನ್ನು ಶಾಲೆಗಳ ಪಾಠ ವಿಷಯಗಳಲ್ಲೊಂದಾಗಿ ಸೇರಿಸುವುದು ಅಗತ್ಯವೆನ್ನುವವರು ಬರೇ ವಿರಳ. ಭಾರತೀಯ ವಿದ್ಯಾನಿದಾನಕ್ಕನುಸಾರವಾಗಿಯಾದರೋ ಪ್ರಾಚೀನ ಕಾಲದಿಂದಲೂ ಗುರುಶಿಷ್ಯಸಾಂಪ್ರದಾಯಿಕವಾಗಿ ವಿದ್ಯಾಬೋಧೆಯಾಗುತ್ತಿದ್ದುದರಿಂದ ಮತ ಶಿಕ್ಷಣಕ್ಕೆ ಪ್ರಾಥಮಿಕ ವಿಶೇಷತ್ವವಿತ್ತಲ್ಲದೆ ಮತ ಶಿಕ್ಷಣವೂ ಅನ್ಯ ಶಿಕ್ಷಣಭಾಗವೂ ಸಮ್ಮಿಳಿತವಾಗಿಯೇ ಇದ್ದುವು.

ಆದರೆ, ಈಗ ತಾನೆ ವರದಕ್ಷಿಣೆಯ ಮತ್ತು ಯುನಿವರ್ಸಿಟಿಯ ಪ್ರಬಲತ್ವದಿಂದ ನೀತಿಮತ ಶಿಕ್ಷಣೆಗಳು ಮೂಲೆಹೊಂದಿವೆ; ಡಿಗ್ರಿಗಳನ್ನು ಪಡೆದು ಬಹುಮಾನ ಹೊಂದಬೇಕೆಂಬ ಅಭಿಲಾಷೆಯೂ, ಅಂತಹ ಪರೀಕ್ಷೆಗಳಿಗೆ ಓದತಕ್ಕ ಗ್ರಂಥ ಸಂಖ್ಯೆಯೂ, ಕಾಠಿಣ್ಯವೂ ಹೆಚ್ಚಿದ್ದ ಕಾರಣ, ಬರೇ ಮತಶಿಕ್ಷಣೆಗೆ ಸಮಯ ದೊರಿಯುವುದಿಲ್ಲ,—ಮಾತ್ರವಲ್ಲ, ಇಂತಹ ಬೋಧನೆಕೊಟ್ಟಲ್ಲಿ ಕೂಡ ವಿದ್ಯಾರ್ಥಿಗಳು ವರ್ಗದಿಂದ ಮಾಯವಾಗುವುದೂ, ಆ ವಿಷಯದಲ್ಲಿ ಪರೀಕ್ಷೆಯನ್ನು ಉದಾಸೀನಭಾವದಿಂದ ದೂಪಿಸುವುದೂ, ನಮ್ಮ ಗೋಚರಕ್ಕೆ ಹಲವು ಕಡೆಗಳಲ್ಲಿ ಬಂದಿದೆ. ಸರಕಾರವಂತೂ ಮತಶಿಕ್ಷಣೆಯಲ್ಲಿ ಕೈಹಾಕದು ಎಂಬ ಸಂಗತಿಯಿಂದ ನಾವು ಅಸಡ್ಡೆ ತೋರಿಸದೆ ಮತಶಿಕ್ಷಣವನ್ನೂ ನೀತಿ ಬೋಧೆಯನ್ನೂ ಏಕೀಕರಿಸುವ ಪ್ರಯತ್ನಗಳನ್ನು ನಡೆಯಿಸುವುದಾದರೆ ನೀತಿ ಬೋಧನೆಯ ಕಡೆಗೆ ನಾವು ತೋರಿಸುವ ಅಸಡ್ಡೆಯು ನಿರ್ಮೂಲವಾಗುವುದು. ಮತ ಸೂತ್ರಗಳಲ್ಲಿ ಬೇರು ನೀಡದ ನೀತಿ ಶಿಕ್ಷಣೆಯು ದೂಷಿತವಾಗಿರುವುದು; ಧರ್ಮಶಾಸನಗೊಳ್ಳಿಸುವ ಪರಾತ್ಪರ ಪುರುಷನ ಪರವಾಗಿ ಅಮೂಲ್ಯ ತತ್ವಗಳನ್ನು ಬೋಧಿಸುವ ಮತವೇ ನೀತಿಯ ಸಾಕುತಾಯಿ. 'ದೇವರ ಭಯವೇ ಜ್ಞಾನದ ಆರಂಭ'; ವಿವೇಕವೇ ಜ್ಞಾನದ ಅಗ್ರಸೋಪಾನ; ನೀತಿಯಿಂದ ಪ್ರವರ್ತಿಸುವುದೇ ವಿವೇಕ ಜೀವನ, ಎಂದಾದ ಮೇಲೆ ಮತವನ್ನೂ ನೀತಿಯನ್ನೂ ಪ್ರತ್ಯೇಕಿಸುವುದು ಬಲುಕಷ್ಟ.

ಸೀಮೆಯಲ್ಲಿರುವ ಎಲ್ಲಾ ಮತಾವಲಂಬಿಗಳಿಗೂ ಒಪ್ಪುವಂತೆ ಮತ ಶಿಕ್ಷಣೆಯ ಏರ್ಪಾಡು ಹೇಗೆ ಸಾಧ್ಯವಾಗುವುದೆಂದು ನಾವು ಎದೆಗುಂದಲಾಗದು; ಎಲ್ಲಾ ಮತಗಳಿಗೂ ಸಾಮಾನ್ಯವಾದ ಮೂಲ ನೀತಿ ಸೂತ್ರಗಳನ್ನು ಸಂಗ್ರಹಿಸಿ, ಪರಸ್ಪರ ಜಾತಿ ವಿವಾದಗಳನ್ನು ಬೆಳೆಯಿಸುವ ತರ್ಕಾಸ್ಪದಗಳಿಂದ ದೂರರಾಗಿ, ತಕ್ಕಂತೆ ನೀತಿ ಸಾರುವುದಾದರೆ ಎಲ್ಲಾ ಮತಸ್ಥರಿಗೂ ನೀತಿ ಶಿಕ್ಷಣೆಯ ಅಭಿರುಚಿ ಹತ್ತುವುದು. ದಯೆ, ಯಥಾರ್ಥತೆ, ಸ್ಥೈರಣೆ, ತ್ಯಾಗ, ಸೌಮ್ಯಭಾವ, ಭಕ್ತಿ, ವಿಷಯವ್ಯಾಮೋಹದಮನಗಳೆಂಬ ಗುಣಗಳು ಎಲ್ಲಾ ಮತಗಳಲ್ಲಿಯೂ ಪುರಾಣ ಇತಿಹಾಸಗಳಲ್ಲಿಯೂ ಪುಣ್ಯ ಜೀವನರೂಪವಾಗಿ ತೋರುತ್ತಿವೆ. ಇವುಗಳ ತಾತ್ಕಾಲಿಕ ಬೋಧೆಯಿಂದ ನೀತಿ ಶಿಕ್ಷಣೆಯನ್ನು ನಿರಾತಂಕವಾಗಿ ತೊಡಗಬಹುದು.

ಶಾಲಾ ಮಕ್ಕಳ ಹೆತ್ತವರೂ ರಕ್ಷಕರೂ ನೀತಿ ಬೋಧೆಯನ್ನು ಕೈಗೊಂಡಲ್ಲಿ ಉಪಕಾರವಾಗುವುದಾದರೂ, ಜೀವನದ ಪೇಚಾಟದಲ್ಲಿ ಇವರು ನೀತಿ ಬೋಧೆಗೆ ಸಮಯಗಾಣದೆ ಇದ್ದರೆ ಮಕ್ಕಳು ನೀತಿಯನ್ನು ಎಲ್ಲಿ ಕಲಿತುಗೊಳ್ಳುವರು? ಅನ್ಯ ವಿಷಯಗಳನ್ನು ಶಾಲೆಯಲ್ಲಿ ಕಲಿಯುವ ಮಕ್ಕಳಿಗೆ ನೀತಿಯನ್ನೂ ಉಪಾಧ್ಯಾಯರು ಆದುದರಿಂದಲೇ ಹೇಳಿಕೊಡಬೇಕಾಗಿದೆ. ಉಪಾಧ್ಯಾಯರು ತಮ್ಮ ಸದ್ವರ್ತನೆಯಿಂದಲೇ ನೀತಿಯನ್ನು ಬಲವತ್ತಾಗಿ ಬೋಧಿಸಿ ವಿದ್ಯಾಮಂಡಲವನ್ನು ನೀತಿ ಮಂಡಲವಾಗಿ ಪರಿವರ್ತಿಸುವುದು ನೀತಿ ಶಿಕ್ಷಣೆಯ ಪ್ರಥಮ ಅಂಕ. ನೀತಿ ವಿಷಯಗಳನ್ನು ಪ್ರಸಂಗರೂಪವಾಗಿ ಕೊಡುವುದರಿಂದ ಪ್ರಯೋಜನವಾಗದು. ಅನುಕೂಲವಾಗೊದಗುವ ಸಂದರ್ಭಗಳನ್ನು ಅಮೂಲ್ಯವೆಂದೆಣಿಸಿ, ಉಪಾಧ್ಯಾಯರು ಸದ್ವರ್ತನೆಯನ್ನು ವರ್ಗದ ಬಾಲಕರಿಗೆ ಪ್ರತ್ಯಕ್ಷರೂಪದಲ್ಲಿ ತೋರಿಸುವುದಕ್ಕಿಂತ ಹೆಚ್ಚಿನ ಸಾಧನೆಯು ಅಗತ್ಯವಿಲ್ಲ. ಉಪಾಧ್ಯಾಯರು ಮನಶ್ಶಾಸ್ತ್ರವನ್ನು ಸರಿಯಾಗಿ ಗ್ರಹಿಸಿಕೊಂಡು, 'ಜ್ಞಾನವೃಕ್ಷದ ಬೇರ'ನ್ನು ಅಡಗಿಸಿಟ್ಟು, ತಮ್ಮ ವರ್ಗವನ್ನೇ ಧರ್ಮಕ್ಷೇತ್ರವಾಗೆಣಿಸಿ ಕಾರ್ಯವನ್ನು ನಿರ್ವಹಿಸುವುದಾದರೆ, ಮಕ್ಕಳ ತಿದ್ದುವಿಕೆಯ ಏರ್ಪಾಡು ಸಂಪೂರ್ಣವಾಯಿತೆನ್ನಬಹುದು. ಹಿಂದೂ ಮಕ್ಕಳ ನೀತಿ ಶಿಕ್ಷಣಕ್ಕಾಗಿ ಅನ್ಯದೇಶೀಯ ಭಾವನೆಗಳಿಂದ ಶಾಸ್ತ್ರಗಳಿಂದ ಸಂಗ್ರಹ ಮಾಡುವ ಅಗತ್ಯ ತೋರುವುದಿಲ್ಲ. ಪ್ರತ್ಯಕ್ಷದಲ್ಲಿ ಪುರಾಣೇತಿಹಾಸಗಳಿಂದ ನೀತಿ ಬೋಧಕ ಚರಿತ್ರೆಗಳನ್ನು ಹೇಳಿಕೊಟ್ಟು, ಓದಿಸಿ, ಮುಖ್ಯ ಭಾಗಗಳನ್ನು ಬಾಯಿಪಾಠ ಮಾಡಿಸಿ, ಅಂತಹ ಜ್ಞಾನ ಬೋಧಕ ಆಖ್ಯಾನಗಳನ್ನು ನಟಿಸಿ, ಗುರುಹಿರಿಯರಿಗೆ ಮರ್ಯಾದೆಯನ್ನೂ ಸಾಮಾನ್ಯರಲ್ಲಿ ಪ್ರೇಮಭಾವವನ್ನೂ, ಸಮಾಜ ಸಾಮ್ರಾಜ್ಯ ಭಕ್ತಿಗಳನ್ನೂ ಎಳೇ ಹೃದಯಗಳಲ್ಲಿ ಚನ್ನಾಗಿ ನಾಟುವಂತೆ ಕಲಿಸುತ್ತ ಬಂದರೆ ಭಾರತೀಯ ನೀತಿ ಶಿಕ್ಷಣೆಯ ಪ್ರಶ್ನೆಗೆ ಸಮರ್ಪಕ ಉತ್ತರ ದೊರೆದಂತಾಯಿತು.

ಬಹುಮಾನಪಟ್ಟ ಮೆ। ಗೋಖಲೆಯವರ ಆಫ್ರಿಕದ ಸಂದರ್ಶನೆ.

ಹಿಂದೂ ಭ್ರಾತೃವೃಂದವು ದಕ್ಷಿಣಾಫ್ರಿಕದಲ್ಲಿ ಪಡೆಯುತ್ತಿರುವ ಸಂಕಷ್ಟಗಳನ್ನು ಕಣ್ಣಾರೆ ವಿಮರ್ಶಿಸಿ ಉದ್ಧಾರೋಪಾಯಗಳನ್ನು ಕಲ್ಪಿಸುವಂತೆ ದಕ್ಷಿಣಾಫ್ರಿಕಕ್ಕೆ ಅಕ್ಟೋಬರದ ಕಡೆಯ ವಾರದಲ್ಲಿ ತಲ್ಪಿದ ಮೆ। ಗೋಖಲೆಯವರು ಇದೇ ತಾ. ೨೦ರಲ್ಲಿ ಹಿಂದೂಸ್ಥಾನಕ್ಕೆ ಮರಳಿ ಹೊರಟಿರುವರು. ಗೋಖಲೆಯವರಿಗೆ ಮಹಾರಾಜರಿಗೂ ಮಿಗಿಲಾದ ಆಮಂತ್ರಣವು ಅಲ್ಲಿ ದೊರೆಯಿತು; ದಕ್ಷಿಣಾಫ್ರಿಕದ ಸಂಯುಕ್ತ ರಾಷ್ಟ್ರದ ರಾಜಕೀಯ ಸಭೆಯಮಂತ್ರಿವರ್ಯರೆಲ್ಲರಿಗೂ ಇವರು ಭೇಟಿಕೊಟ್ಟು, ಹಿಂದೂಗಳು ಅಲ್ಲಿ ಪಡೆಯುವ ಸಂಕಷ್ಟಗಳನ್ನೂ ಅವುಗಳ ನಿವಾರಣೆಯ ಕುರಿತು ಮಾಡಬೇಕಾದ ವ್ಯವಸ್ಥೆಯನ್ನೂ ಸೂಚಿಸಿ, ಈಗ ಅತಿ ತೀಕ್ಷ್ಣವಾಗಿಟ್ಟ ಆಡಳಿತೆಯನ್ನು ಮೃದುವಾಗಗೊಡಿಸಲು ಪೇಚಾಡಿದರು. ನೆಟಾಲ್ ಪ್ರಾಂತ್ಯದಲ್ಲಿ ಹಿಂದೂಗಳು ಪಡೆವ ಕಷ್ಟಗಳು ಧಾರಾಳವಾಗಿವೆ ಎಂದೂ, ಸ್ತ್ರೀಯರನ್ನೂ, ಕುಟುಂಬಿಗರನ್ನೂ ಸರಕಾರದ ಆಳುಗಳು ಭಂಗಗೊಳಿಸುತ್ತಾರೆಂದೂ, ವ್ಯಾಪಾರಿಗಳಿಗೆ ತಮ್ಮ ಕಸಬು ಅಸಹನೀಯವಾದ ತೊಂದರೆಗಳಿಂದ ಕೂಡಿದಂತೆ ತೋರಲಾಸ್ಪದವಿದೆಯೆಂದೂ, ಆಗಾಗ್ಯೆ ಹಿಂದೂಸ್ಥಾನಕ್ಕೆ ವಿಜ್ಞಾಪನೆಗಳು ದಕ್ಷಿಣಾಫ್ರಿಕದಿಂದ ಬರುತ್ತಿದ್ದುವು. ಈ ಸಂಕಷ್ಟಗಳೆಲ್ಲವೂ ಬ್ರಿಟಿಷ್ ಸಾಮ್ರಾಜ್ಯದ ಎಲ್ಲೆಡೆಗಳಲ್ಲಿಯೂ ಸಮದೃಷ್ಟಿಯ ನ್ಯಾಯಪಾಲನೆಯಿಲ್ಲದೆ ನಿವಾರಣ ಹೊಂದವೆಂದು ಗೋಖಲೆಯವರ ಅಭಿಪ್ರಾಯ. ಮೂರು ವಾರಗಳ ಸಮಯವನ್ನು ಗೋಖಲೆಯವರು ಭ್ರಮಣ, ಸಂಕಷ್ಟ ಶೋಧನದಲ್ಲಿಯೇ ಕಳೆದು ತಮ್ಮ ಅಮೂಲ್ಯ ಅನುಭವದಿಂದ ಪಾಲಕರಿಗೂ ಪಾಲಿತರಿಗೂ ಮಧ್ಯಸ್ಥರಾಗೆಂಬಂತೆ ವರ್ತಿಸಿದರು. ಇವರು ಹಿಂದೂಸ್ಥಾನಕ್ಕೆ ಮರಳಿ ಬಂದನಂತರ ಇಂಡಿಯಾ ಸರಕಾರದವರಿಗೆ ತನ್ನ ಅಭಿಮತವನ್ನು ತಿಳಿಸಿ, ಭ್ರಾತೃಗಳ ಸುಖಕಾಂಕ್ಷೆಯನ್ನು ಪೂರೈಸಲು ಪ್ರಯತ್ನಿಸದೆ ಇರಲಾರರು. ಇದರಿಂದ ಆಫ್ರಿಕ ಭ್ರಮಣದ ಪರಿಣಾಮವು ಅತಿ ತೃಪ್ತಿಕರವಾಗುವುದೆಂಬುದನ್ನು ನಾವು ಬೇರೆ ಹೇಳಬೇಕೆಂತಿಲ್ಲ. ಇಂತಹ ನೀತಿ ಯುದ್ಧರಣದ ಕಷ್ಟಕಾರ್ಯದಲ್ಲಿ ಈಶ್ವರ ಸಹಾಯವು ದೊರೆತು, ಇವರ ಪ್ರಯತ್ನಗಳು ಶ್ರೇಯೋಫಲಿತವಾಗಲೆಂದು ನಮ್ಮ ಕೋರಿಕೆ.

ಕೆನರಾ ಬಾಲಿಕಾ ವಿದ್ಯಾಮಂದಿರದ ವರ್ಧಂತಿಯು.

ಹಿಂದೆ ಪ್ರಸ್ತಾಪಿಸಿದಂತೆ ತಾ. ೨೫ನೇಯ ಪರಾಹ್ನ ೫ ಘಂಟೆಗೆ ಸರಿಯಾಗಿ ಶ್ರೀ ಮಧ್ವನೇಂದ್ರ ಸಭಾಸದನದಲ್ಲಿ ಕೆನರಾ ಬಾಲಿಕಾ ಶಾಲೆಯ ವರ್ಧಂತಿಯು ನೆರವೇ

ರಿತು. ಕೊಂಚ ಮಳೆಯಿಂದಲೂ ಶ್ರೀ ದೇವಸ್ಥಾನದ ಜಾತ್ರೆಯ ಭೋಜನಾದಿಗಳಿಂದಲೂ ತಡೆ ಹೊಂದದೆ ಹಿಂದೂ ಮಹಿಳೆಯರನೇಕರು ಕಳೆದ ವರ್ಷದಂತೆಯೇ ಸಭೆಯನ್ನಲಂಕರಿಸಿದರು. ಮಿಸ್ಸೆಸ್ ಮೆಲಿಮರವರು ಅಧ್ಯಕ್ಷಸ್ಥಾನವನ್ನು ವಹಿಸಿದೊಡನೆಯೇ ಅನೇಕ ಗೀತಾದಿಗಳಿಂದ ಬಾಲಿಕೆಯರು ಸಭಿಕರಿಗೆ ತಮ್ಮ ಗಾಯನ ಚತುರತೆಯನ್ನು ತೋರಿಸಿದನಂತರ ಕಳೆದ ಶಾಲಾ ವರ್ಷದ ವರದಿಯನ್ನು ಓದಿ ಹೇಳಲಾಯಿತು. ವಿದ್ಯಾರ್ಥಿನಿಯರು ಕಳೆದ ವರ್ಷಕ್ಕಿಂತ ಹೆಚ್ಚಿಗೆ ಇದ್ದಾರೆ. ಪರಂತು ಕ್ಲಾಸುಗಳಲ್ಲಿ ಮುಂದರಿದಂತೆ ವಿವಾಹ ಕಾಲ ಬಂದೊಡನೆಯೇ ಹಿರಿಯರು ಮಕ್ಕಳನ್ನು ಶಾಲೆಗೆ ಕಳುಹಿಸದೆ ಮೇಲ್ದರ್ಜೆಯ ಬಾಲಿಕೆಯರು ಆರೇ ಮಂದಿ. ಶಾಲೆಗೆ ಉತ್ತೇಜನವಾಗಿ ಮಂಜೇಶ್ವರದ ಭಾಗೀರಥಿ ಯಾನೆ ತುಳಸಮ್ಮ ಭಟಿನಿಯವರು ಕೆನರಾ ಬೇಂಕಿನ ಎರಡು ಶೇರುಗಳನ್ನು ಪಡಿಯಲು ಕೊಟ್ಟ ರೂಪಾಯಿ ೧೦೨—೮—೦ನ್ನೂ, ಕಾರ್ಕಳ ವಕೀಲ ಚೆರ್ಡಪ್ಪಯ್ಯನವರ ವಿಧವೆ ಸರಸ್ವತಿಯಮ್ಮನವರು ಉಚಿತಗಳಿಗಾಗಿ ಕೊಟ್ಟ ರೂಪಾಯಿ ೨೫ನ್ನೂ, ಹಲವು ಇನಾಮುಗಳನ್ನೊದಗಿಸಿದ ರಾ| ಪಾಂಗಾಳ ಗೋಪಾಲನಾಯ್ಕರ ಪತ್ನಿ ಶ್ರೀಮತಿ ಗಿರಿಜಮ್ಮನವರನ್ನೂ ವಂದಿಸಿ, ಶ್ರೀ ಕಾಶೀ ಮಠದ ಉಭಯ ಶ್ರೀಪಾದಂಗಳವರು ಮಂಗಳೂರಿನಿಂದ ಬಂಟವಾಳಕ್ಕೆ ವಿಜಯಿಸುವ ಕಾಲದಲ್ಲಿ ಶಾಲೆಗೆ ಇನಾಂ ಕೊಟ್ಟು ಮಕ್ಕಳನ್ನಾಶೀರ್ವದಿಸಿದುದಕ್ಕೂ, ಸರಕಾರವು ರೂಪಾಯಿ ೩೦೦ನ್ನು ಗ್ರೇಂಟಾಗಿ ದಯಾಭಾವದಿಂದಿತ್ತುದ್ದಕ್ಕೂ ಕೃತಜ್ಞತೆಗಳನ್ನು ಸಮರ್ಪಿಸಿ ವರದಿಯು ಮುಗಿಯಿತು. ಅಮ್ಮೆಂಬಳ ಸುಬ್ರಾಯ ಪೈಗಳ ಸ್ಮಾರಕ ಇನಾಮುಗಳು ಎಮ್. ಭವಾನಿ ಬಾಯಿ; ಎಮ್. ರತ್ನಿ ಬಾಯಿ; ಎಮ್. ರಮಾ ಬಾಯಿ; ಕೆ. ಗಂಗಾ ಬಾಯಿ; ಎಮ್. ಆರ್. ಜೆನ್ನಿ ಬಾಯಿ; ಎಮ್. ಲಕ್ಷ್ಮಿ ಬಾಯಿ; ಪಿ. ಶಾರದಾ ಬಾಯಿ; ಬಿ. ರಾಜೀವಿ ಬಾಯಿ; ಎಸ್. ಗಿರಿಜಾ ಬಾಯಿ; ಎಮ್. ಕಾವೇರಿ ಬಾಯಿ; ಯು. ರಾಜೀವಿ ಬಾಯಿ; ಈ ೧೧ ಜನ ಬಾಲಿಕೆಯರಿಗೆ ಕೊಡಲ್ಪಟ್ಟವೆ. ವಿದ್ಯಾರ್ಥಿನಿಯರು ಹೆಚ್ಚುತ್ತಾ ಬಂದು ಶಾಲಾ ಕಟ್ಟೋಣವು ವಿಸ್ತಾರವಾಗಲು ಅಗತ್ಯವಿರುವುದರಿಂದ ಶಾಲಾಧಿಕಾರಿಗಳು ಉದಾರಾಶ್ರಯವನ್ನು ಪ್ರಾರ್ಥಿಸಿರುವರು.

ಸ್ತ್ರೀಯರ ಏಳಿಗೆಯೇ ಸಮಾಜದ ಏಳಿಗೆಯೆಂದು ತಿಳಿದವರು ತಮ್ಮ ಉದಾರಾಶ್ರಯದಿಂದ ಇಂತಹ ಪಾಠಶಾಲೆಗಳನ್ನು ಪೋಷಿಸಿ ಸೀಮೆಗೆ ಸೌಭಾಗ್ಯವನ್ನೊದಗಿಸುವರೆಂದು ನಾವು ಮುಕ್ತಕಂಠರಾಗಿ ಹೇಳುವೆವು. ಹಿಂದೂ ಸಮಾಜವು ಈಚೆಗೆ ತಕ್ಕ ಮಟ್ಟಿಗೆ ಸುಧಾರಣೆ ಹೊಂದುತ್ತ ಬಂದಿದೆಯಾದರೂ, ನವನಾಗರೀಕತೆಯಲ್ಲಿ ಪಾಶ್ಚಾತ್ಯರ ಏರ್ಪಾಡುಗಳು, ಉಡಿಗೆ, ಆಹಾರ, ಅಭ್ಯಾಸಗಳ ಮೂಲಕ ನಮ್ಮ ಸಮಾಜವನ್ನು ಸೇರದೆ ದೂರವಾಗಿರುವಂತಹ ವ್ಯವಸ್ಥೆಯನ್ನು ನಡೆಯಿಸಿ, ಆರ್ಯ ಮಹಿಳೆಯ ಭೂಷಣವಾದ ಬಾಲ್ಯದ ಲಾಲಿತ್ಯ, ಕೌಮಾರ್ಯದ ಸುಶೀಲತ್ವ, ದಾಂಪತ್ಯದ ಪಾತಿವ್ರತ್ಯ ಗೃಹಸ್ವಾಸ್ಥ್ಯ, ಮಾತೃತ್ವದ ಮಹತ್ವ, ಮುಂತಾದ ಚಿರ ಘನಚರಿತೆಯ ಸ್ತ್ರೀತ್ವದ ಸುಲಕ್ಷಣಗಳು ಊನಗೊಳ್ಳದೆ ಬೆಳೆವಂತಹ ವಿದ್ಯಾದಾನವನ್ನು ಕೊಡುವುದು ಬಾಲಿಕಾಶಾಲೆಗಳ ಕರ್ತವ್ಯ. ಇಂತಹ ಯಶಃಕರವಾದ ಕರ್ತವ್ಯವನ್ನು ಕೈಕೊಂಡ ಸಮಾಜೋಪಕಾರಿ ಸಂಸ್ಥೆಗೆ ಪುಸ್ತಕಸಂಗ್ರಹ, ಉದ್ಯೋಗೋಪಕರಣ, ವ್ಯಾಯಾಮಸ್ಥಳ ಮುಂತಾದವುಗಳಿಗಾಗಿ ಕುಲಸ್ತ್ರೀಯರೂ ಕುಲಾಭಿಮಾನಿಗಳೂ ಅರ್ಥಸಹಾಯ ಮಾಡಿ ಪುಣ್ಯಗಳಿಸುವರೆಂದು ನಮ್ಮ ನಂಬುಗೆ.

ಬಾಲಕಿಯರ ಮನವೆ.

(ಕೆನರಾ ಬಾಲಿಕಾ ಶಾಲೆಯ ವರ್ಧಂತಿಯ ದಿವ ಹಾಡಲ್ಪಟ್ಟುದು.)

ಉತ್ಕಂಠಿತ ಕಿತಿ . . . . . ಎಂಬಂತೆ.

ಭೂಧರಜೆಯೆ, ವಿದ್ಯಾದಾನವ ಸಮ್ಮೋದದೀವ ಸಾಧುಗಳಂ ನೀ
ನಾದರಿಸಾಶೀರ್ವಾದವಿತ್ತು ಪೊರೆ ಮೇದಿನಿಯೊಳ್ ಚಿರ ದಿನರಜನೀ ॥
ವರ್ಧಿಸಲಾರ್ಯರುದಾರಗುಣ
ವಿದ್ಯಾಪ್ರಸರಣ ಹಿತಕರಣ
ವಿದ್ಯೆಯಭ್ಯುದಯ ಜಯರವ ಮೊಳಗಿ ಸಮೃದ್ಧಿ ಬೆಳಗಲಿಳೆಯಂ
ಜನನೀ ॥ ೧ ॥
ಭಾರತೀಯ ಪರಿವಾರಕೆ ಶಾರದೆ,—ತಾರೆಲೆ ವಿದ್ಯಾತೇಜ ಬಲ!
ಭಾರತನಾರಿ ಬಾಯಾರಿ ಚೀರುವಳು ತೋರದೆ ವಿದ್ಯಾಮೃತಸಲಿಲ!
ಕೋರುವೆ ವಾರ್ಯರ ಸಹಕಾರ
ಸಾರಿ ವಿನಂತಿಸುವೆವಪಾರ
ಭಾರತೀಯರುದ್ಧಾರಕೆ ಸಾರಲುದಾರ ಧಾರ್ಮಿಕರ ಅರ್ಥಬಲ ॥ ೨ ॥
ಪಾತಿವ್ರತ್ಯವು ಭಕ್ತಿಭರಿತಹೃದಸ್ಫೂರ್ತಿಯು ಗೃಹಸ್ವಾಸ್ಥ್ಯವು ಸುಮನ
ಪ್ರೀತಿಯುಜ್ವಲನ ಮುಕ್ತಿಸಾಧನ ಚಿದಾತ್ಮಸಮರ್ಪಣ ಸಹಗಮನ ॥
'ಸ್ತ್ರೀತ್ವದ ಜೀವನಸ್ರೋತವಿದು
ಕೀರ್ತಿಭಾರತಕೆ ಸತ್ಯವಿದು
ಅರ್ತಿಯಿನದರಿಂ ಭ್ರಾತೃ ಭಗಿನಿಯರೆ ನಿತ್ಯವೀವುದಬಲೆಗೆ ವಿದ್ಯಾಧನ ॥ ೩ ॥

M. N. K.

ಕಮಲಪುರದ ಮೊಹನಲಾಲನೂ ವಿಲಾಸವತಿಯೂ.

"ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು".

ಕಮಲಪುರದ ಮಹೇಂದ್ರಲಾಲನಿಗೆ ಒಬ್ಬನೇ ಕುಮಾರನು. ಅವನ ಹೆಸರು ಮೊಹನಲಾಲನು; ಅವನ ಸೊಬಗಿನ ವಿಚಾರವು ಮನಸ್ಸಿನಲ್ಲಿ ಬಂದ ಮಾತ್ರದಿಂದ ಅಂತರಂಗದಲ್ಲಿ ಉಂಟಾಗುವ ಚಲನೆಗಳನ್ನು ವರ್ಣಿಸಿ ತೀರದು. ಪರಂತು ಗುಣಗಳು ಮಾತ್ರ ಎಷ್ಟು ಮಾತ್ರಕ್ಕೂ ಸೊಬಗಿಗೆ ತಕ್ಕುದಲ್ಲವು. ಅವನಿಗೀಗ ೨೦ನೇಯ ವಯಸ್ಸು. ನಾಲ್ಕು ಬಾರಿ ಸ್ಕೂಲು ಫೈನಲ್ ಪರೀಕ್ಷೆಗೆ ಹೋಗಿದ್ದನು. ಈ ವರ್ಷ ೫ನೇಯ ಸಾರಿ. ಪಿತನ ಮೋಹದಲ್ಲಿ ಬೆಳೆದ ಮುದ್ದು; ಆಚಾರ ಪದ್ಧತಿಗಳಲ್ಲಿ ಪಾಶ್ಚಿಮಾತ್ಯ ಜನರ 'ಪೆಶನು' ಇವನಲ್ಲಿ ಶೋಭಿಸುತ್ತಿತ್ತು. ಮನೆಯ ಭಕ್ಷಭೋಜ್ಯಾದಿಗಳು ಇವನಿಗೆ ಮೆಚ್ಚದು. ಕಾಪಿ, ಚಾ, ವಿಸ್ಕಿ, ಬ್ರಾಂದಿ ಎಂದರೆ ಇವನಿಗೆ ಅತಿ ಪ್ರೀತಿ. ಜಗತ್ತಿನ ಚಾಂಡಾಲತನವೆಲ್ಲಾ ಇವನಲ್ಲಿ ಸಿಂಹಾಸನಾರೂಢವಾಗಿತ್ತೆಂದರೆ ಅತಿಶಯೋಕ್ತಿಯಾಗಲಾರದು.

ಮೊಹನಲಾಲನ ೨೦ನೇ ವಯಸ್ಸಿನಲ್ಲಿ ತಂದೆಯು ಪರವಸ್ಥೈದಿದನು. ಮಗನ ಚಾಂಡಾಲತನವನ್ನು ಸಹಿಸುವ ಭಾರವು ತಾಯೊಬ್ಬಳ ಮೇಲೆಯೇ ಬಿತ್ತು. ಆದರೆ ಹೇಳಿ ಪ್ರಯೋಜನವೇನು? ಚಿಕ್ಕಂದಿನಿಂದಲೇ ಸ್ವೇಚ್ಛೆಯಿಂದ ಬೆಳದವನಾದ್ದರಿಂದ ಗಿಡವಾದ ಮೇಲೆ ಬೊಗ್ಗಿಸುವದು ಕಷ್ಟಸಾಧ್ಯವಾಗಿತ್ತು. ಸ್ವಲ್ಪ ಹೇಳಿದರೆ ತಾಯಿಗೆ ಕಣ್ಣರಳಿಸಿ ನೋಡುವನು; ಹೆಚ್ಚಿಗೆ ಹೇಳಿದರೆ ಬಡಿಯ ಬರುವನು. ದೇಶಾಂತರಕ್ಕೆ ಹೋಗಿ ಬಿಡುವೆನೆಂದೂ ಹೆದರಿಸುವನು.

ಮಾರ್ಚ ತಿಂಗಳು ಬಂದಿತು. ಪರೀಕ್ಷೆಯ ಹೋಲಿಗೆ ಮೊಹನಲಾಲನ ಸವಾರಿ ಬೆಳೆಯಿತು. ಜೂನ್ ತಿಂಗಳಲ್ಲಿ ಪರೀಕ್ಷೆಯ ಪರಿಣಾಮವು ಸರ್ವರಿಗೂ ಗೊತ್ತಾಯಿತು. ಆದರೆ ಮೊಹನಲಾಲನ ಹೆಸರನ್ನು ಗಜೇಟಿನಲ್ಲಿ ಅಚ್ಚು ಹಾಕಿಸುವರೆ ಪರೀಕ್ಷಾಕರ್ತರು ಮರೆತುಬಿಟ್ಟರು. ತಾಯಿಯು ಮಗನನ್ನು ಕೇಳಿದಳು. ಹೆಂಗಸರಿಗೆಲ್ಲಾ ಈ ವಿಚಾರವು ಯಾಕೆಂದು ತಾಯಿಯನ್ನು ಬೆದರಿಸಿದನು. ಆದರೆ ಹೇಗೋ ಇತರರಿಂದ ಮಗನ ಪರೀಕ್ಷೆಯ ಫಲಿತಾಂಶವನ್ನು ತಾಯಿಯು ಗೊತ್ತುಮಾಡಿಕೊಂಡು ಮಗನು ಪರೀಕ್ಷೆಯಲ್ಲಿ ನಾಪಾಸಾದನಲ್ಲಾ! ತಂದೆಯು ಗಳಿಸಿಟ್ಟ ಅರ್ಧ ಆಸ್ತಿಯು ಇಷ್ಟರಲ್ಲಿಯೇ ವೇಶ್ಯೆಯರ ಪಾಲುಮಾಡಿ ಬಿಟ್ಟನಲ್ಲಾ! ಇವನ ದುಶ್ಚಾಳಿಯಿಂದ ವಂಶದ ಗೌರವವೇ ಅಳಿದು ಹೋಗುವ ಹಾಗೆ ಬಂದಿತಲ್ಲಾ! ಮುಂದಕ್ಕೇನು ಗತಿ! ಎಂದು ಬಾಯಿ ಬಾಯಿ ಬಡಕೊಳ್ಳ ಹತ್ತಿದಳು. ಇವಳ ಮೊರೆಯನ್ನು ಕೇಳಿದ ನೆರೆಹೊರೆಯ ಹೆಂಗಸರು ಅವನ ಕೊರಳಿಗೆ ಒಂದು ಹೆಣ್ಣು ಕಟ್ಟಿಬಿಟ್ಟರೆ ಮುಂದೆ ಶುಭವಾಗುವುದೆಂದು ತಾಯಿಗೆ ಬೋಧಿಸಿದರು. ಆದರೆ ಈ ಚಾಂಡಾಲನಿಗೆ ಹೆಣ್ಣು ಕೊಡುವವರ್ಯಾರು? ಹೆಣ್ಣು ಕೇಳುವ ಬಗೆ ಹೇಗೆ?

ಹೀಗಿರುವಾಗ ಮೊಹನಲಾಲನ ತಂದೆಯ ಗೌರವವನ್ನು ದೂರದಿಂದ ಕೇಳಿದ ಒಬ್ಬ ಗೃಹಸ್ಥನು ಮೊಹನಲಾಲನ ತಾಯಿಯ ಕೂಡೆ ಮಾತನ್ನಾಡಿ ತನ್ನ ಮಗಳಾದ ವಿಲಾಸವತಿಯನ್ನು ಅವನಿಗೆ ಕೊಡಲು ನಿಶ್ಚಯಿಸಿದನು. ("ದೂರದಿಂದ ಬೆಟ್ಟ ನುಣ್ಣಗೆ" ಎಂಬ ನಾಣ್ಣುಡಿಯನ್ನು ವಾಚಕರು ಮರೆಯಲಾಗದು) ಹೇಗೂ ಮೊಹನಲಾಲನಿಗೆ ಹೆಣ್ಣು ಗೊತ್ತಾಯಿತು. ವಿವಾಹವು ನೆರವೇರಿತು; ವಿಲಾಸವತಿಯು ಸ್ವಲ್ಪ ದಿವಸಗಳಲ್ಲಿಯೇ ಮೊಹನಲಾಲನ ಮನೆ ಸೇರಿದಳು. ವಿಲಾಸವತಿಯ ರೂಪಲಾವಣ್ಯವು ಪ್ರಪಂಚದಲ್ಲಿ ಇನ್ನೊಂದು ಕಡೆ ದೊರೆಯುವಂತಿಲ್ಲ. ಗುಣಗಳಾದರೋ ರೂಪಕ್ಕೆ ತಕ್ಕಂಥವುಗಳಾಗಿಯೇ ಇದ್ದುವು. ವಿದ್ಯಾ ಸಂಪನ್ನಳು, ಗುರುಹಿರಿಯರಲ್ಲಿ ಭಕ್ತಿ ತುಂಬಿದವಳು. ವಿದ್ಯಾಭ್ಯಾಸದಿಂದ ಬರುವ ಪ್ರಯೋಜನಗಳನ್ನು ಸಾಮಾನ್ಯ ಹೆಂಗಸರ ಹಾಗೆ ಇವಳು ಮಾಡಿಕೊಂಡು "ಅಲ್ಪ ವಿದ್ಯೆ ಮಹಾ ಗರ್ವ" ಎಂಬಂತೆ ನಡಕೊಳ್ಳಲಿಲ್ಲ. ಅತ್ತೆಯನ್ನೂ ಸೊಸೆಯನ್ನೂ ನೋಡಿದರೆ ತಾಯಿ ಮಗಳೆಂದೇ ತೋರುತ್ತಿತ್ತು. ಗೃಹ ಕಾರ್ಯಗಳಲ್ಲಂತೂ ಅತ್ಯಂತ ನಿಪುಣೆ. ಮನೆ ಕೆಲಸವಂತೂ ತಾನಾಗಿಯೇ ಮಾಡುವಳು; ಆಳುಗಳ ಕೂಡೆ ಬಿರುನುಡಿಯಾಡಳು. ಪ್ರೀತಿಯ ಮಾತುಗಳು ಎಂಬದು ಅವಳ ತುಟಿಯಲ್ಲಿಯೇ ಬುಗ್ಗೆಯಂತೆ ಹರಿಯುತ್ತಿತ್ತು. ಅತ್ತೆಯ ಅಪ್ಪಣೆಯಿಲ್ಲದೆ ಯಾವ ಕೆಲಸವನ್ನೂ ಮಾಡಳು.

ಮೊಹನಲಾಲನ ದುರ್ನಡತೆಗಳೆಲ್ಲವೂ ವಿಲಾಸವತಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಮುಖದಿಂದಾಗಲೀ ಕಾರ್ಯದಿಂದಲಾಗಲೀ ತೋರ್ಪಡಿಸಳು. ಸಮಯ ಒದಗಿದಾಗ ಸಾಮ್ಯರೂಪವಾಗಿ ಮೃದು ನುಡಿಯಿಂದ ಅವನಿಗೆ ಕೆಲವು ನೀತಿ ವಚನಗಳನ್ನು ಹೇಳುವಳು. ಅವನು ಸಿಟ್ಟಿನಲ್ಲಿದ್ದರೆ ಇವಳು ಹಸನ್ಮುಖಿಯಾಗುವಳು. ಸಿಡುಮೋರೆ ಎಂದೂ ತೋರಿಸಳು. ಹೊಡೆದರೆ ಮತ್ತಷ್ಟು ಪ್ರೀತಿಸುವಳು. ಇಂತಹ ಪ್ರೀತಿಗೂಡಿದ ಪತ್ನಿಯ ಗುಣದಿಂದ ಮೋಹನಲಾಲನಲ್ಲಿ ಕ್ರಮೇಣ ಬದಲಾವಣೆಗಳು ತೋರಿದುವು. ವೇಶ್ಯಾಂಗನೆಯರ ಮನೆಗೆ ದೂರವಾದನು. ಹೊಟೇಲುಗಳನ್ನು ತ್ಯಜಿಸಿದನು. ವಿಸ್ಕಿ ಬ್ರಾಂದಿ ಸಾರಾಯಿಗೆ ಬಹಿಷ್ಕಾರ ಹಾಕಿ ಮನೆಯಲ್ಲೇ ಇದ್ದುಕೊಂಡು ಮನೆ ಕೆಲಸದಲ್ಲಿ ನಿರತನಾದನು. ಇದರಿಂದ ವೇಶ್ಯಾಂಗನೆಯರು ವಿಲಾಸವತಿಗೆ ಬೈಗಳ ಮಳೆ ಸುರಿಸಿದರು. ಹೊಟೇಲಿನವರೂ ಹಿಂದಿನ ಗೆಳೆಯರೂ ಮೊಹನಲಾಲನಿಗೂ ವಿಲಾಸವತಿಗೂ ಭೇದವನ್ನು ಕಲ್ಪಿಸುವ ಸಾಧನೆಗಳನ್ನು ಹುಡುಕುವ ಕೆಲಸದಲ್ಲಿ ನಿರತರಾದರು.

ಪರಾಹ್ನಃ! ಸೂರ್ಯನು ಸಮುದ್ರಾಭಿಮುಖವಾಗಿ ಹಿಂತಿರುಗಿದ್ದನು. ಕತ್ತಲೆಯ ಮೊಬ್ಬು ಮುಸುಕಿಕೊಂಡಿತ್ತು. ವಿಲಾಸವತಿಯು ಮನೆಯ ಕೆಲಸ ತೀರಿಸಿ ಜಗಲಿ ಮೇಲೆ ಕುಳಿತ್ತಿದ್ದಳು. ಮೊಹನಲಾಲನು ಮತ್ತೊಂದು ಕಡೆ ಆಗ ತಾನೇ ಬಂದಿದ್ದ ಒಬ್ಬ ಹಿಂದಿನ ಗೆಳೆಯನ ಕೂಡೆ ಮಾತನ್ನಾಡುತ್ತಿದ್ದನು. ಅಷ್ಟರಲ್ಲಿ ಹೊರಗಿನಿಂದ ಒಬ್ಬನು ವಿಲಾಸವತಿಯು ಕುಳಿತ್ತಿದ್ದ ಜಗಲಿಯ ಸಮಿಪ ಬಂದು ವಿಲಾಸವತಿಯ ಕಿವಿಯಲ್ಲಿ ಏನನ್ನೋ ಹೇಳಿ ಓಡಿಹೋದನು. ಇವನು ಊರಲ್ಲಿ ಮಹಾ ಚಾಂಡಾಲನೆಂಬ ಹೆಸರು ಪಡೆದಿದ್ದನು. ಕೂಡಲೇ ಮೊಹನಲಾಲನ ಕೂಡೆ ಮಾತನ್ನಾಡುತ್ತಿದ್ದ ಗೆಳೆಯನು ಮೊಹನಲಾಲನ ಭುಜವನ್ನು ತಟ್ಟಿ, ಎಲೋ! ನಿನ್ನ ಹೆಂಡತಿಯ ಕೂಡೆ ಮುಸುಸಂಜೆಯಲ್ಲಿ ಮಾತಾನಾಡಿದವನ್ಯಾರೆಂದು ಬಲ್ಲೆಯಾ! ಎಂದನು. ಮೊಹನಲಾಲನು ಸಿಟ್ಟಿನಿಂದ ನಡುಗಿದನು. ಹಲ್ಲುಗಳನ್ನು ಕಟಕಟನೇ ಕಡಿಯ ಹತ್ತಿದನು. ಎಲೋ, ಚಾಂಡಾಲನಿ! ನಿನ್ನ ದುಷ್ಟತನವನ್ನು ನೋಡಿ ನನ್ನ ಹೃದಯವು ಒಡೆದು ಹೋಯಿತು. ದುಷ್ಟೆ! ನಿನ್ನ ಅಪರಾಧಕ್ಕೆ ಸರಿಯಾದ ಶಿಕ್ಷೆಯೇ ಇಲ್ಲ ಎಂದು ಹೇಳಿ ಕತ್ತಿಯನ್ನು ಎಳೆದು ಅವಳನ್ನು ಚೂರುಚೂರಾಗಿ ಕತ್ತರಿಸಿದನು. ವಿಲಾಸವತಿಯೆಂತೂ ಈ ದುಷ್ಟಮಯವಾದ ಇಹವನ್ನಗಲಿದಳು. ಈ ಮಧ್ಯೆ ನೆರಮನೆಗೆ ಹೋಗಿದ್ದ ಮೊಹನಲಾಲನ ತಾಯಿಯು ಮನೆಗೆ ಬಂದು ಸೊಸೆಗೆ ತಟ್ಟಿದ ಅಪದೆಶೆಯನ್ನು ನೋಡಿ ಹೃದಯ ಒಡೆದು ಅಲ್ಲಿಯೇ ಮೂರ್ಛಿತಳಾಗಿ ಪರವಸ್ಥೈದಿದಳು. ಈ ಇಬ್ಬರ ಕೊಲೆಗೆ ಕಾರಣವು ಮೊಹನಲಾಲನಿಗೂ ಅವನ ಗೆಳೆಯನಿಗೂ ಅಲ್ಲದೆ, ಮತ್ಯಾರಿಗೂ ತಿಳಿಯದು.

ಒಂದೆರಡು ತಿಂಗಳು ಕಳೆಯಿತು. ಹಿಂದಿನ ಗೆಳೆಯರೆಲ್ಲರೂ ಪುನಃ ಒಬ್ಬೊಬ್ಬರಾಗಿಯೇ ಬಂದು ಸೇರಿದರು. ವಿಲಾಸವತಿಯ ಸುಗುಣದಿಂದ ಕಳಕೊಂಡ ದುರ್ಗುಣಗಳೆಲ್ಲವೂ ಪುನಃ ಮೊಹನಲಾಲನಲ್ಲಿ ಬಿಡಾರಮಾಡಿತು. ವಿಲಾಸವತಿಯ ಸುವ್ಯವಸ್ಥೆಯಲ್ಲಿ ಕೂಡ ಹಾಕಿದ ದ್ರವ್ಯವೆಲ್ಲವೂ ವೇಶ್ಯೆಯರ ಕೈಸೇರಿತು. ಮನೆಯೂ ಹಾಳಾಯಿತು. ಅಂಗಡಿಯಲ್ಲಿ ಸಾಲ ದೊರೆಯಲಾರದು, ಊಟಕ್ಕೆ ತತ್ವಾರ. ಸಮಾನ ಗುಣಗಳುಳ್ಳ ಚಾಂಡಾಲ ಗೆಳೆಯರು ಕೂಡಾ ಒಬ್ಬೊಬ್ಬರಾಗಿಯೇ ಇವನನ್ನು ಬಿಟ್ಟಗಲಿದರು. ಇಂತಹ ಗರೀಬ ಸ್ಥಿತಿಯಲ್ಲಿರುವ ಕಾಲದಲ್ಲಿ ಮೊಹನಲಾಲನಿಗೆ ಮತ್ತೊಂದು ಭಯಂಕರವಾದ ಸಂಕಟವು ಬಂದೊದಗಿತು.

ಮೊಹನಲಾಲನ ಗೆಳೆಯನಾಗಿದ್ದ ಬಲೇಂದ್ರನು ಒಬ್ಬನನ್ನು ಕೊಂದು ಪಾಶಿ ಶಿಕ್ಷೆಯನ್ನು ಹೊಂದಿದನು. ಇವನನ್ನು ಗಲ್ಲಕ್ಕೆ ಹಾಕುವ ಕಾಲದಲ್ಲಿ ತಾನು ಇಷ್ಟರವರೆಗೆ ವರೆಗೆ ಮಾಡಿದ ಅಪರಾಧವನ್ನೆಲ್ಲಾ ಹೇಳಿದನು. ಅದರಲ್ಲಿ ಮೊಹನಲಾಲನಿಗೂ ವಿಲಾಸವತಿಗೂ ಭೇದವನ್ನು ಕಲ್ಪಿಸುವುದಕ್ಕೆ ತಾನು ಮಾಡಿದ ಯತ್ನವನ್ನು ಹೇಳಿ ಮೊಹನಲಾಲನು ಅವಳ ಸಚ್ಛೀಲವನ್ನರಿತವನಾದರೂ ಶಿಟ್ಟಿನಿಂದ ಅವಳನ್ನು ಕೊಂದು ಹಾಕಿದನೆಂದೂ ತಿಳಿಸಿದನು. ಮಾರಣೇ ದಿನ ಪೊಲೀಸಿನವರು ಮೊಹನಲಾಲನನ್ನು ಹುಡುಕಿ ಬಂದು ಅವನಿಗೆ ಕೈಬಳೆ ಜೋಡಿಸಿದರು. ಅಹಾ! ನಿರ್ಭಾಗ್ಯನಾದ ಮೊಹನಲಾಲನು. ಪತಿವ್ರತೆಯಾದ ಹೆಂಡತಿಯನ್ನು ವಿಚಾರಿಸದೆ ಕೊಂದ ಮೊಹನಲಾಲನು ತನ್ನ ಅಪರಾಧವನ್ನು ತಿಳಿದನು. ಗಳಗಳನೇ ನಿಟ್ಟುಸುರಿಟ್ಟನು; ಪರಂತು ಆಗಿ ಹೋದ ಕಾರ್ಯಕ್ಕೆ ಎಣಿಸಿ ಫಲವೇನು? ಇದ್ದುದನ್ನು ಇದ್ದ ಹಾಗೆ ಅರಿಕೆ ಮಾಡಿದನು. ಜಡ್ಜರು ಮೊಹನಲಾಲನಿಗೆ ಪಾಶೀ ಶಿಕ್ಷೆಯನ್ನು ವಿಧಿಸಿದರು. ಹೆಂಡತಿಯನ್ನು ನಿಷ್ಕಾರಣವಾಗಿ ಕೊಂದ ಮೊಹನಲಾಲನ ಕರ್ಮಕ್ಕೆ ತಕ್ಕ ಫಲವು ಲಭಿಸಿತು.

ಕ. ಐ.

'ಆರ್ಯನ್ ಬ್ರದರ್ ಹುಡ್' ಎಂಬ ಆರ್ಯ ಭ್ರಾತೃಗಳ ಸಮಿತಿಯು.

ಹಿಂದಿನ ಒಂದು ಸಂಚಿಕೆಯಲ್ಲಿ ತಿಳಿಸಿದಂತೆ ಇದೇ ನವಂಬರ ತಾ॰ ೯ರಲ್ಲಿ ಆರ್ಯ ಭ್ರಾತೃಗಳ ಸಮಿತಿಯು ಮುಂಬಾಯಿಯಲ್ಲಿ ಕೂಡಿತು. ಈ ಸಭೆಗೆ ಮುಂಬಾಯಿ ಹ್ಯಾಕೋರ್ಟು ಜಡ್ಜರಾದ ಸರ್ ನಾರಾಯಣ ಚಂದಾವರ್‌ಕರ್‌ರವರು ಅಧ್ಯಕ್ಷರಾಗಿದ್ದು ಮಾಡಿದ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುವೆವು.

ಸದ್ಯಾ ವರ್ಣಭೇದವನ್ನು ನಮ್ಮ ಆರ್ಯ ಭ್ರಾತೃ ಸಂಘದವರು ವೇದೋಪನಿಷದ್ಭಗವದ್ಗೀತಾದಿ ಪ್ರಮಾಣ ವಚನಾಧಾರದಿಂದಲೇ ಖಂಡಿಸುತ್ತಿದ್ದಾರೆ. ಕೆಲವರು ಇದನ್ನು ಸುಳ್ಳೆಂದು ಹೇಳುತ್ತಾರೆ. ಮತ್ತೆ ಕೆಲವರು ನಮ್ಮ ಶಾಸ್ತ್ರಗಳು ಹಿಂದೂ ಸಂಘವನ್ನು ನಿರ್ಮೂಲ ಮಾಡಿದವೆಂತಲೂ ಅವುಗಳನ್ನು ಆದರಿಸಿರುವುದು ಯುಕ್ತವಲ್ಲವೆಂತಲೂ, ಯುಕ್ತಾಯುಕ್ತ ವಿಮರ್ಶೆಯಿಂದ ನಡೆಯುವುದೇ ವಿಹಿತವೆಂತಲೂ ಹೇಳುತ್ತಾರೆ. ಈ ವಿವಾದಗಳೆಲ್ಲವೂ ಕಳೆದ ೮೦ ವರ್ಷಗಳಿಂದಲೂ ನಡೆಯುತ್ತಲೇ ಇವೆ. ಕಾಲಾನುಗುಣವಾದ ಮಾರ್ಪಾಟಗಳನ್ನು ಮಾಡಿಕೊಳ್ಳುತ್ತಿರುವ ನಾವು ಶಾಸ್ತ್ರ ಪ್ರಮಾಣಗಳನ್ನಂಗೀಕರಿಸಿಯೇ ನಡೆಯಬೇಕು. ನಮ್ಮಲ್ಲಿ ನಾಲ್ಕು ವರ್ಣಗಳು ಪೂರ್ವದಲ್ಲಿ ಆರ್ಯರ ಸ್ಥಿತಿಗತಿಗೆ ತಕ್ಕಂತೆ ಏರ್ಪಡಿಸಲ್ಪಟ್ಟುವು. ಆ ಕಾಲದಲ್ಲಿ ವರ್ಣಭೇದಗಳು ವೃತ್ತಿಭೇದವನ್ನನುಸರಿಸಿ ಕಲ್ಪಿಸಲ್ಪಟ್ಟುವು. ಈಗಲಾದರೊ ಅವುಗಳ ಅನ್ವರ್ಥತೆಯೂ ಶಕ್ತಿಯೂ ನಷ್ಟವಾಗಿ ಹೋಗಿದೆ. ನಾಲ್ಕು ವರ್ಣಗಳಿಗೆ ಪ್ರತಿಯಾಗಿ ಸಾವಿರಾರು ವರ್ಣಗಳು ಹುಟ್ಟಿವೆ. ಅವುಗಳಲ್ಲೂ ಏಕಮತ್ಯವಿಲ್ಲದೆ ಹೋಗಿದೆ. ಹೀನ ವರ್ಣದವರು ಉತ್ತಮ ವರ್ಣಸ್ಥರಾಗಬಹುದೆಂದು ಶಾಸ್ತ್ರಗಳು ಹೇಳುತ್ತಿವೆ. ಈ ವರ್ಣಗಳೆಲ್ಲವೂ ಈಗ ಕರ್ಮಗಳನ್ನನುಸರಿಸದೆ ಜನ್ಮಸಿದ್ಧವಾದುವೆಂದೇ ಏರ್ಪಡುತ್ತಲಿವೆ.

ಈಗಿನ ಕಾಲದಲ್ಲಿ ಈ ವರ್ಣಭೇದಗಳಿಂದ ಪ್ರಯೋಜನವೇನು? ಪೂರ್ವದಲ್ಲಿ ಜನಗಳೊಳಗೆ ವಿದ್ಯೆಯೂ ಬುದ್ಧಿಯೂ ಅಷ್ಟು ಪ್ರಸರಿಸದೆ ಇರುವ ಕಾಲದಲ್ಲಿ ಜನಗಳ ಮೇಲೆ ಯಾವುದೋ ಒಂದು ಅಧಿಕಾರವು ಬೇಕಾಗಿದ್ದಿತು. ಮನುವು ನಮ್ಮ ಧರ್ಮಶಾಸ್ತ್ರಗಳನ್ನು ರಚಿಸಿದನು. ಆದುದರಿಂದ ಮನುಷ್ಯನು ಶಾಸ್ತ್ರಗಳಿಗಿಂತಲೂ ದೊಡ್ಡವನು. ವರ್ಣ ನಿಯಮಗಳು ಸದ್ಯ ಕಾಲಕ್ಕೆ ನಿಷ್ಪ್ರಯೋಜಕಗಳಾಗಿವೆ. ನಮ್ಮ ಬುದ್ಧಿಯಲ್ಲಿಯೂ ಶಕ್ತಿಯಲ್ಲೂ ಎಷ್ಟೋ ಸ್ವಾತಂತ್ರ್ಯವನ್ನನುಭವಿಸುವ ಕಾಲದಲ್ಲಿ ನಾವು ಜೀವಿಸುತ್ತಲಿದ್ದೇವೆ. ಇಂಥ ಈ ಕಾಲದಲ್ಲಿ ವರ್ಣಭೇದದಿಂದಾಗುವ ಲಾಭವಾವುದನ್ನೂ ನಾವು ಕಾಣೆವು. ಅದು ಯಾವ ಅಧಿಕಾರವನ್ನೂ ನಡೆಯಿಸಲಾರದು. ಪ್ರತಿಯೊಂದು ಕುಲದಲ್ಲಿಯೂ ಬದಲಾವಣೆಯು ಪ್ರಬಲಿಸಿದೆ. ಅವರವರಿಷ್ಟ ಬಂದ ಕಡೆ ಭೋಜನ ಮಾಡುತ್ತಿದ್ದಾರೆ. ಕುಡಿಯುತ್ತಿದ್ದಾರೆ. ವರ್ಣಭೇದದ ಅಧಿಕಾರವೇನೂ ಕಂಡು ಬರುವುದಿಲ್ಲ. ನಮ್ಮಲ್ಲಿ ಎಷ್ಟೋ ಜನರು ಹೊರಗೆ ಒಂದು ವೇಷವನ್ನೂ ಒಳಗೆ ಒಂದು ವೇಷವನ್ನೂ ಧರಿಸಿಕೊಳ್ಳುತ್ತಿದ್ದಾರೆ. ವಿದ್ಯೆಯಾಗಲಿ ಸ್ವಾತಂತ್ರ್ಯವಾಗಲಿ ಪ್ರಬಲಿಸದೆ ಇದ್ದ ಕಾಲದಲ್ಲಿ ವರ್ಣಭೇದವು ಪ್ರಯೋಜನಕಾರಿಯಾಗಿದ್ದಿರಬಹುದು. ಆ ಕಾಲದಲ್ಲಿ ಇದು ಅಧರ್ಮವನ್ನೂ ಅಕ್ರಮ ಪ್ರವರ್ತನವನ್ನೂ ವಿರೋಧಿಸಿರಬಹುದು. ಆದರೆ ಈಗ ಅದು ಏನುಮಾಡುತ್ತಿದೆ? ಹೊರಗೆ ಆಚಾರವಂತನಂತೆ ತೋರ್ಪಟ್ಟು, ಒಳಗೆ ಏನು ಮಾಡಿದರೂ ಭಯವಿಲ್ಲ. ವರ್ಣಗಳಿಂದ ಯಾವತರದ ಪ್ರಯೋಜನವೂ ಇಲ್ಲ, ಅದು ನಮ್ಮನ್ನು ನರುಕಿ ಶಿಥಿಲಗೊಳಿಸಿ ಬಿಟ್ಟಿದೆ.

"ಬುದ್ಧ-ಬಸವ-ಗುರುನಾನಕ್-ರಾಮಾನುಜ ಮೊದಲಾದ ಮಹನೀಯರೇ ಎಷ್ಟೋ ಪ್ರಯತ್ನಪಟ್ಟರೂ ಈ ವಿಷಯದಲ್ಲಿ ಏನನ್ನೂ ಮಾಡಲಾರದೆ ಹೋಗಿರುವಲ್ಲಿ ನೀವು ವರ್ಣಭೇದವನ್ನು ಅಣಗಿಸಬಲ್ಲಿರಾ?" ಎಂದು ಅನೇಕರು ಪ್ರಶ್ನೆ ಮಾಡುತ್ತಿದ್ದಾರೆ. ಇದು ನಿಜವೇ. ಆದರೆ ಈಗ ಅನೇಕ ವ್ಯವಹಾರಗಳು ನಮಗೆ ಈ ವಿಷಯದಲ್ಲಿ ಸಹಾಯಮಾಡುತ್ತಲಿವೆ. ಹೊಗೆಬಂಡಿಗಳು, ಟ್ರಾಂಬಂಡಿಗಳು, ಪಾಠಶಾಲೆಗಳು, ವಿದೇಶಯಾತ್ರೆಗಳು—ಇವೆಲ್ಲವೂ ವರ್ಣಸಾಂಕರ್ಯಕ್ಕೆ ಸಹಾಯಗೊಳಿಸುತ್ತಲಿವೆ. ೩೦ ವರ್ಷಗಳ ಕೆಳಗೆ ನಮ್ಮ ಬ್ರಾಹ್ಮಣರು ವಿದೇಶಿಯರೊಡನೆ ಕುಳಿತು ಭೋಜನಮಾಡುತ್ತಿದ್ದರೆ ಬಹಿಷ್ಕಾರ ಹಾಕುತ್ತಿದ್ದರು. ಈಗ ಎಷ್ಟು ನಿರ್ಭಯವಾಗಿ ಔತಣದೂಟಣಗಳನ್ನು ಮಾಡುವುದಿಲ್ಲ? ಕಳೆದ ಜನವರಿ ತಿಂಗಳಲ್ಲಿ ಎಲ್ಲಾ ವರ್ಣದವರೂ ಕೂಡಿ ಬಹುಶಃ ೩೦೦ ಮಂದಿ ಹಿಂದೂಗಳು ಇಲ್ಲಿ ಒಂದೇ ಕಡೆ ಕುಳಿತು ಭೋಜನಮಾಡಿರುವರು.

ಈ ವರ್ಣಭೇದವನ್ನು ನಿರಸನಮಾಡುವುದು ಬಹು ಕಷ್ಟವು. ಕಷ್ಟವಿರುವ ಕೆಲಸಗಳಲ್ಲೇ ನಮ್ಮ ನೀತಿಯೂ, ಧೈರ್ಯವೂ ಪ್ರಕಾಶಕ್ಕೆ ಬರಬೇಕು. ನಾವು ಗೆದ್ದರೂ ಸರಿ, ಸೋತರೂ ಸರಿ ಪ್ರಯತ್ನಗೊಳ್ಳದೆ ಇರಬಾರದು. ಈಗ ನಮ್ಮ ಪ್ರಯತ್ನಗಳು ಅಲ್ಪವಾಗಿರಬಹುದು. ಆದರೆ ಅಲ್ಪ ಪ್ರಯತ್ನದಿಂದಲೇ ಮಹತ್ಕಾರ್ಯಗಳೆಲ್ಲವೂ ಸಾಧ್ಯವಾಗಿವೆ. ಆದುದರಿಂದಲೇ ದೊಡ್ಡ ದೊಡ್ಡ ರಾಷ್ಟ್ರಗಳು ಸ್ಥಾಪಿಸಲ್ಪಟ್ಟಿವೆ. ಅದು ಕಾರಣ ಕೃಷಿಮಾಡಿರಿ, ನಿರುತ್ಸಾಹಗೊಳ್ಳಬೇಡಿರಿ. ನಾವು ಭಕ್ತಿ ಪೂರ್ವಕವಾಗಿ ಈ ಕೆಲಸದಲ್ಲಿ ಕೈಹಾಕಿದ್ದೇವೆ. ಈ ಕಾರ್ಯದಲ್ಲಿ ನಮಗೆ ಜಯವು ದೊರೆಯದೆ ತಪ್ಪುವುದಿಲ್ಲ.

ನನ್ನ ಗುಣದೋಷಗಳನ್ನು ಕೇಳುವಿರಾ.

ಮಹಾಸ್ವಾಮಿ! ನಾನು ಪಂಚಭೂಖಂಡಗಳ ಎಲ್ಲೆಡೆಗಳಲ್ಲಿಯೂ ಮೆರೆವೆನು. ತಿರಿದುಂಬುವ ಭಿಕ್ಷುಕರು, ದಿನವೆಲ್ಲಾ ಕಾಯಕಷ್ಟಮಾಡಿ ಹೊಟ್ಟೆ ಹೊರಕೊಳ್ಳುವ ಮಧ್ಯಮರು, ಕೊತುಣ್ಣುವ ಶ್ರೀಮಂತರು, ಸರ್ವ ಜನರೂ ನನ್ನ ಆಶ್ರಯದಾತರು. ನನ್ನಲ್ಲಿ ಬಡವ, ದೊಡ್ಡವ, ಅಸ್ಪೃಶ್ಯ, ಸ್ಪೃಶ್ಯ, ಜಾತಿವಿಜಾತಿ ಎಂಬ ಭೇದಾನುಭೇದಗಳೂ ಮತಮಾತ್ಸರ್ಯಗಳೂ ಇಲ್ಲ. ಆದರೂ ನನ್ನಲ್ಲಿ ಸಾಧಕಕರವಾದ ಗುಣಗಳು ಅತಿ ಕಡಿಮೆಯೆಂದೂ ಬಾಧಕಕರ ಗುಣಗಳು ವಿಪರೀತ ಹೆಚ್ಚಾಗಿವೆಯೆಂದೂ ನನ್ನನ್ನು ದೂಷಿಸುವವರು ಅನೇಕರಿರುವರು. ಲಾಲಿಸಿರಿ.

ಪ್ರಾಕೃತಿಕ ರಸಾಯನ ಕಲಾಶಾಸ್ತ್ರ ಕೈಗಾರಿಕೆಗಳಿಗೆ ನನ್ನ ಉಪಯೋಗವಿಲ್ಲದ್ದಾಗದು. ನೀರಿಗಿಂತಲೂ ಕಡಿಮೆ ಉಷ್ಣತೆಯಲ್ಲಿ ಕುದಿವೆನು. ನೀರು ಎಣ್ಣೆಯಂತೆ ಸಾಧಾರಣ ಶೀತದಿಂದ ಗಡ್ಡೆಕಟ್ಟೆನು. ಸುಲಭವಾಗಿ ಉರಿವೆನು; ನಾನು ಧಾತುಗಳನ್ನೂ ಪ್ರಾಣಿ ದೇಹಗಳನ್ನೂ ನೀರಿನಂತೆ ಸಹಜೀಕರಿಸಿ ಹಾಳು ಮಾಡುವಂಥವನಲ್ಲ. ಇದರಿಂದಲೇ ಶಾಲೆಗಳಲ್ಲಿ, ಆಸ್ಪತ್ರೆಗಳಲ್ಲಿ, ವಸ್ತುಪ್ರದರ್ಶನಾಲಯಗಳಲ್ಲಿ ನನ್ನಲ್ಲಿ ಪ್ರಾಣಿಗಳ ದೇಹಗಳನ್ನೂ ಉದ್ಭಿಜಗಳನ್ನೂ ನೆನೆಹಾಕುವರು. ನನ್ನಲ್ಲಿ ನೆನೆಹಾಕಿದ ಪದಾರ್ಥಗಳು ಅನೇಕ ಕಾಲದ ವರೆಗೆ ರೂಪಾಂತರ ಹೊಂದವು. ಜೀವಿತ ವಸ್ತುಗಳು ನನ್ನಲ್ಲಿ ಸಾಯುವವು. ಸತ್ತ ವಸ್ತುಗಳು ನನ್ನಲ್ಲಿ ಬಾಳುವವು. ಹೊಮಿಯೋಪಥಿಯ ಟಿಂಚರು, ಮೊಟೋರ್ ಬಂಡಿಗಳ ಪೆಟ್ರೋಲು, ಸಿರ್ಕ, ಸುಗಂಧದ್ರವಗಳು ನಾನಿಲ್ಲದೆ.ಆಗಲಾರವು. ಇಂಥಾ ಸಾವಿರಾರು ವಿಧದ ಪ್ರಯೋಜನಗಳು ನನ್ನಿಂದ ಉಂಟಾಗುತ್ತಿರುವುದರಿಂದ ನಾನು ಲೋಕೋಪಕಾರಿಯೆಂಬದಕ್ಕೆ ಸಂದೇಹವೇನು?

ಮಹಾಸ್ವಾಮಿ, ಇಂಗ್ಲಾಂಡಿನಲ್ಲಿ ವರುಷಂಪ್ರತಿ ದವಸಧಾನ್ಯಗಳಿಗಾಗಿ ೪೦,೦೦೦,೦೦೦ ಪವನು ವೆಚ್ಚ ಮಾಡುವಲ್ಲಿ ನನಗಾಗಿ ೧೬೦,೦೦೦,೦೦೦ ಪವನು ದುಂದುವೆಚ್ಚಮಾಡುವರು. ಅಮೇರಿಕದ ಸಂಯುಕ್ತಸಂಸ್ಥಾನದಲ್ಲಿ ದವಸಧಾನ್ಯಕ್ಕಾಗಿ ೭೫೦,೯೦೦,೦೦೦ ಪವನು ಖರ್ಚು ಮಾಡುವಲ್ಲಿ ನನಗಾಗಿ ೧,೦೦೦,೦೦೦,೦೦೦ ಪವನು ಖರ್ಚು ಮಾಡುವರು. ಅಹಾ! ಇದು ನನ್ನ ಭಾಗ್ಯವಲ್ಲವೇ? ನಾನಿಲ್ಲದೆ ಹೋಗುತ್ತಿದ್ದರೆ ಸರಕಾರಕ್ಕೆ ಹುಟ್ಟುವಳಿ ಕಮ್ಮಿಯಾಗುತ್ತಿತ್ತು. ಒಂದು ಇಲಾಖೆಯೇ ಇಲ್ಲದಂತಾಗಿ ಸಾವಿರಾರು ಮಂದಿಯ ಜೀವನಕ್ಕೆ ಮಾರ್ಗವಿಲ್ಲದಂತಾಗುತ್ತಿತ್ತು. ಬಂದಿಖಾನೆಗಳು ಖಾಲಿ ಬೀಳುತ್ತಿದ್ದವು. ನನ್ನಂತಹ ಉಪಕಾರಿ ಬೇರೆ ಇಲ್ಲವೆಂದೇ ಹಿಗ್ಗಿಕೊಂಡರೆ ನನ್ನ ತಪ್ಪಾದಿತೇ? ಅಲ್ಲ, ಅಲ್ಲ! ಆದರೂ ನನ್ನಲ್ಲಿ ಒಂದು ದೋಷವಿದೆ. ನನ್ನ ದೋಷವನ್ನು ಹೇಳದೆ ಗುಣಗಣಗಳನ್ನೇ ಹೊಗಳಿಬಿಟ್ಟರೆ ನೀವು ನನ್ನನ್ನು ಅಹಂವಾದಿ ಎಂದು ಕರೆಯುವಿರಲ್ಲವೇ?

ಮಕ್ಕಳೇ, ಯೌವನಸ್ಥರೇ, ಕಿವಿಗೊಡಿರಿ. ನನ್ನನ್ನು ಪಾನಾದಿಗಳೊಡನೆ ಉಪಯೋಗಿಸಿದ ಮಾತ್ರದಿಂದ ನಾನು ವಿಷವಾಗಿ ಪರಿಣಮಿಸಿ, ನಿಮ್ಮ ಮೆದುಳಿನ, ದೇಹದ, ಸರ್ವ ನರಸಂಸ್ಥಾಯಗಳ ಬಲಗುಂದಿಸಿ ಬಿಡುವೆನು. ಇದೊಂದೇ ಕಾರಣದಿಂದ ಪ್ರಕೃತ ಸಭ್ಯತೆಯಲ್ಲಿ ನನ್ನ ಉಪಯೋಗಗಳಿಗಿಂತ ಅಪಕಾರಗಳು ಧಾರುಣರೂಪದಿಂದ ಪ್ರಚಾರಗೊಂಡಿವೆ. ಮನುಷ್ಯ ಕುಲದ ಅಪಾರ‌ಜೀವ ನಷ್ಟಕ್ಕೂ ದೇಹದ ಹಾವಳಿಗೂ ನನ್ನನ್ನು ಸೇವಿಸುವದೇ ಕಾರಣ! ನನ್ನ ಸೇವಕರ ಅವಯವ ಅಂಗಾಂಗಗಳನ್ನು ಸವೆದು ಗುಣ ನೀತಿಗಳನ್ನು ಕುರುಡಿಸಿ, ಬಿಡಾರ ವ್ಯವಹಾರ, ಓದುಬರಹ, ಆಹಾರ ನಿದ್ರೆಗಳ ಅನುಕೂಲತೆಗಳನ್ನು ರಸಾತಳಕ್ಕೆ ಅಟ್ಟಿ, ಜೀವನ ಸ್ವರ್ಗದಲ್ಲಿ ನರಕವನ್ನು ನಿರ್ಮಿಸುವುದರಲ್ಲಿ ಶ್ರೇಷ್ಠ ಅಧಿಕಾರವು ನನ್ನದೇ! ನನ್ನ ಸೇವನೆಯಿಂದ ಹಲವು ನವೀನ ರೋಗಗಳು ಅಂಕುರಿಸುವವು. ಸಾಧಾರಣ ರೋಗಗಳು ನನ್ನ ಸೇವಕರಿಗೆ ತಟ್ಟಿದರೆ ಗುಣವು ಕಷ್ಟಸಾಧ್ಯ. ನನ್ನ ಸೇವಕರು ಹೆಚ್ಚಿನ ಕೆಲಸ ಮಾಡಲಾಪರು. ಶೀತ ದೇಶಗಳಲ್ಲಿ ನನ್ನಿಂದ ಹೆಚ್ಚಿನ ಉಪಕಾರವಿದೆಂದು ಹಲವರು ಚಿಂತಿಸಿ ನನ್ನ ಸೇವಾಸಕ್ತರಾದುದುಂಟು. ಇದು ಶುದ್ಧ ತಪ್ಪು ಗ್ರಹಿಕೆ. ಮೈ ಬೆಚ್ಚಗಾಗುವದೇನೋ ನಿಜ; ಪರಂತು ಕೊಂಚ ಕಾಲದಲ್ಲಿಯೇ ಮೈಯು ಮುಂಚಿಗಿಂತಲೂ ತಣ್ಣಗಾಗಿ ಪುನಃ ಪುನಃ ನನ್ನ ಗಾಳಿಯನ್ನು ಶ್ವಾಸಿಸುವ ಅಭ್ಯಾಸವು ಸೊಂಕಿಬಿಡುವುದು. ಎಲ್ಲಾ ತರದ ದುಷ್ಟ ಅಭ್ಯಾಸಗಳಿಗಿಂತ ನನ್ನ ಅಭ್ಯಾಸವನ್ನು ನಿವಾರಿಸಲು ಅತಿ ಕಷ್ಟ. ನನ್ನಂತಹ ಪೀಡಕ ಪಿಶಾಚಿ ಬೇರೊಂದಿಲ್ಲ. ಪೀಡೆ ಬೇನೆಗಳಿಂದ ವಿರಾಮ ಹೊಂದಲು ನನ್ನಿಂದ ಸುಲಭಸಾಧ್ಯವೆಂಬ ಭ್ರಾಂತಿ ಭಾವನೆಯನ್ನು ಬಿಟ್ಟು ಬಿಡಿರಿ. ನನ್ನಿಂದ ವಿಹಾರ ವಿಶ್ರಾಂತಿ ಸುಖ ನಿದ್ರೆಗಳು ಅಂಕುರಿಸಲಾರದು.

ಮಹನೀಯರೇ, ನನ್ನ ಬಲೆಗೆ ಒಂದು ಸಲ ಸಿಕ್ಕಿಬಿದ್ದವರು ಬಿಡಿಸಿಕೊಳ್ಳುವುದು ಕಷ್ಟಸಾಧ್ಯ! ನನ್ನ ದುರ್ಗಣಗಳನ್ನು ನಿಮ್ಮ ಪುತ್ರ ಪುತ್ರಿಯರಿಗೆ ಬೋಧಿಸಿರಿ. ದೇಹದ ಶಿಥಿಲತೆಯನ್ನೇ, ಜೀರ್ಣತ್ವವನ್ನೇ, ಕುಲದ ಜನಾಂಗದ ಕೇಡನ್ನೇ, ನೀತಿ ಮಾರ್ಗದಲ್ಲಿ ಕಂದಕಗಳನ್ನೇ ಕಲ್ಪಿಸುವ, ಗೃಹಸ್ವಾಸ್ಥ್ಯದ ನಿರ್ಮೂಲವನ್ನೇ ಸಾಧಿಸುವ, ಪೀಳಿಗೆಗಳ ವರೆಗೂ ಮನೋಕಾಯಗಳ ಕ್ಷೀಣತೆಯನ್ನುಂಟು ಮಾಡುವ, ದಾರಿದ್ರ್ಯ ಬರಗಾಲ ಧರ್ಮಾಂಧತೆಗಳ ತಾಯಿಬೇರಾದ ನನ್ನ ಬಲೆಗೆ ನಿಮ್ಮ ಪುತ್ರ ಪುತ್ರಿಯರು ಬಲಿಬೀಳದ ಹಾಗೆ ನನ್ನನ್ನು ದೂರೀಕರಿಸಿ ನಿಮ್ಮ ಕುಟುಂಬವು, ಜನಾಂಗವು, ದೇಶವು ಸೌಭಾಗ್ಯದಿಂದ ತುಳುಕುವ ಹಾಗೆ ಮಾರ್ಗವನ್ನು ಕಲ್ಪಿಸಲಾರಿರಾ! ನನ್ನನ್ನು ಒಂದು ಸಲ ಚುಂಬಿಸಿದ ಮಾತ್ರದಿಂದ:—

ಒಂದು ದ್ರಾಮಿಗೆ ‹ದೋಸ್ತಿ' ಬಂದಿಸಿದನೆನ್ನ।
ಒಂದರಿಂದೆರಡು ಮೂರನು ಕುಡಿದು ಮುನ್ನ॥
ಕುಡಿದಷ್ಟು ಬಾಯಾರೆ ಕುಡಿದೆನಿನ್ನೊಂದು
ಕಡೆಗೆ ನಡುಗುತನಡದೆ ಗಡಂಗಾಯ್ತು ಹಿಂದು॥
ಸೇರಿ ಮನೆದ್ವಾರವನು, ತೋರದಲೆ ಗೇಟು,
ಕೇರಿಕೇರಿಯ ಸುತ್ತಿದೆನು ದೂರವಷ್ಟು॥
ಮರಳೆರಡು ಗಂಟೆ ಕಾಲಕೆ 'ಗೇಟು' ಸೇರ್ದೆ,
ತಿರುಗಿತಾಕ್ಷಣ ಮನೆಯು, ಹೊಸ್ತಿಲಲೆ ಬಿದ್ದೆ॥
ಅತ್ತಲಿಹ ‹ಪೋಲಿಸ್' ಎತ್ತುತ್ತ ತನ್ನ,—
ಇತ್ತ ಬಾ, ಜಟ್ಕದೊಳು ಹಿತ್ತಲಿಗೆ ನಿನ್ನ॥
ಕೊಂಡೊಯ್ವೆನೆಂದೆತ್ತಿ ಗಾಡಿ ಸೇರಿಸಿದಾ
ಪುಂಡನೆಂದೆನ್ನನವ ಜೈಲ ಸೇರಿಸಿದಾ॥
ಮರುದಿನ ಖಚೇರಿಯೊಳು ತೆರಲಾಯ್ತು ದಂಡ,
ಅರಿತೆನೆಷ್ಟರ ಸುಖವ ತರುವುದಾಹೆಂಡ॥

ನಾನೇ ಅಲ್ಕಹೋಲು,-ಮಧ್ಯ, ಸಾರಾಯಿ, ಹೆಂಡ! ನನ್ನಲ್ಲಿ ಗುಣಕ್ಕಿಂತಲೂ ದೋಷಗಳು ಹೆಚ್ಚಾಗಿರುವುದರಿಂದ ಬಾಲಕರೇ, ಯುವಕರೇ, ಯುವತಿಯರೇ ಮುಟ್ಟಿದರೆ ಮುನಿಯುವ ನನಗೆ ಬಹಿಷ್ಕಾರ ಹಾಕಿ, ನಿಮ್ಮ ಮನೆಗಳಲ್ಲಿಯೂ ದೇಶದಲ್ಲಿಯೂ ಸಮಾಧಾನವನ್ನು ನೆಲೆಗೊಳಿಸಿ ದೇಶೋನ್ನತಿಯನ್ನು ಸಾಧಿಸಿರಿ.

S. A.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಅಯ್ಯಾ ಪತ್ರಕರ್ತರೇ,

ಹಂಪನಕಟ್ಟೆಯಿಂದ ಬಲ್ಮಠಕ್ಕೆ ಹೋಗುವ ದಾರಿಯಲ್ಲಿ—ಕಥೋಲಿಕ ಕ್ಲಬ್ಬನ್ನು ದಾಟಿ ಮುಂದಕ್ಕೆ ಹೋಗುತ್ತಲೇ ಎಡ ಪಾರ್ಶ್ವದಲ್ಲಿರುವ ಮೆಖಾನಿಕಲ್ ಆಫೀಸಿನ ಹಿಂದಿನ ದರೆಯು ಕುಸಿದು ಬಿದ್ದು ಒಂದೆರಡು ಪಕ್ಷಗಳು ಕಳೆದುವು. ಕುಸಿದು ಬಿದ್ದ ಮಣ್ಣುಕಲ್ಲಿನ ರಾಶಿಯು ರಾಜ ರಸ್ತೆಯ ಎರಡು ಪಕ್ಕಗಳಲ್ಲಿಯೂ ರಾಶಿ ಹಾಕಲ್ಪಟ್ಟವೆ. ಕಳದ ಶುಕ್ಲಪಕ್ಷದಲ್ಲಿ ಈ ಮಣ್ಣಿನ ರಾಶಿಯು ದೂರದಿಂದ ಪ್ರಯಾಣಿಕರಿಗೆ ಪ್ರೇತಗಳಂತೆ ಭಾಸವಾಗುತ್ತಿದ್ದರೂ ಅಷ್ಟೊಂದು ಕೇಡಾಗುತ್ತಿದ್ದಿಲ್ಲ. ಆದರೆ ಇದು ಕೃಷ್ಣಪಕ್ಷವು; ಗಾಡಾಂಧಕಾರ, ಅದರಲ್ಲಿಯೂ ಮಳೆಯ ಮೋಡ, ಮಾರ್ಗದ ಇಕ್ಕಡೆಗಳಲ್ಲಿಯೂ ಎತ್ತರವಾದ ದರೆಗಳಲ್ಲಿ ಮರಗಳು ತುಂಬಿರುವುದರಿಂದ ಆ ದಾರಿಯ ಅಂಧಕಾರವನ್ನು ಹೇಳಿ ತೀರದು. ಇಂಥಾ ದಾರಿಯಲ್ಲಿ ಹಾಕಿದ ಮಣ್ಣಿನ ರಾಶಿಯ ಬಳಿ ಒಂದೇ ಒಂದು ಮಿಣಿಮಿಣಿ ದೀಪವಾದರೂ ಇಲ್ಲದಿರುವುದರಿಂದ ಪ್ರಯಾಣಿಕರು ಈ ಪಕ್ಷದಲ್ಲಿ ಆ ಮಣ್ಣಿನ ರಾಶಿಗೆ ನಮಸ್ಕರಿಸುವ ಪರಿಣಾಮವು ಬಂದೊದಗಿಯದೆ. ಆದ್ದರಿಂದ ಮುನಿಸಿಪಾಲಿಟಿಯವರು ಯಾ ಇದಕ್ಕೆ ಸಂಬಂಧಪಟ್ಟವರು ಆ ಮಣ್ಣಿನ ರಾಶಿಯ ಬಳಿ ಅಪಾಯ ಸೂಚಕವಾದ ಒಂದು ಕೆಂಪು ದೀಪವನ್ನು ಇಡಿಸಿ ಪ್ರಯಾಣಿಕರಿಗೆ ಬಂದೊದಗುವ ತೊಂದರೆಗಳನ್ನು ಹೋಗಲಾಡಿಸಬೇಕೆಂದು ವಿಜ್ಞಾಪಿಸುವ.

ಮಂಗಳೂರು.
ತಾ. 27—11—12.

ಪುರವಾಸಿ.

ವಿದೇಶ ವೃತ್ತಾಂತ.

ಯುದ್ಧವಾರ್ತೆ:—ತಾ. ೧೮:—ಗ್ರೀಕರ ಯುವರಾಜರು ನಡಿಸುತ್ತಿದ್ದ ಸೇನೆಯು ಒಸ್ತ್ರಾವವನ್ನು ವಶಮಾಡಿಕೊಂಡು ಮೊನಾಸ್ಟಿರಿಗೆ ಮುಂದರಿಯಿತು. ನಿಕಾರಿಯ ಎಂಬ ದ್ವೀಪವನ್ನೂ ಗ್ರೀಕರು ವಶಮಾಡಿಕೊಂಡರು. ಮೊನಾಸ್ಟಿರ್ ತಾ. ೧೮ರಲ್ಲು ಶರಣಾಗತವಾಯಿತು. ೪೦,೦೦೦ ತುರ್ಕ ಸೈನೀಕರು ಶೆರೆಹಿಡಿಯಲ್ಪಟ್ಟರು. ಶೆರೆಹಿಡಿಯಲ್ಪಟ್ಟವರಲ್ಲಿ ೩ ಮಂದಿ ಪಾಶರೂ ಇದ್ದರು.

ತಾ. ೧೯:—ಕಪ್ಪು ಸಮುದ್ರವು ಬಹಳ ರಭಸವಾಗಿದ್ದದರಿಂದ ತುರ್ಕರ ಹಡಗುಪಡೆಯು ಕೆಲಸಮಾಡಲಾರದೆ ಹೋಯಿತು. ಚಟಲ್ಜದಲ್ಲಿ ಬಲ್ಗೇರಿಯರ ಕಾಲ್ಬಲವನ್ನು ತುರ್ಕರ ಸೇನೆಯು ಹಿಂದಕ್ಕಟ್ಟಿತು, ಎಡಪಾರ್ಶ್ವದಲ್ಲಿ ತುರ್ಕರ ಸೇನೆಯ ಮೇಲೆ ಬಿದ್ದ ಬಲ್ಗೇರಿಯರು ಹೆಚ್ಚಿನ ನಷ್ಟಪಟ್ಟು ಹಿಮ್ಮೆಟ್ಟಲ್ಪಟ್ಟರು. ೪೦೦ ಮಂದಿ ಹತರಾದರು. ೨ ಮೆಶಿನ್‌ಗನ್ ಎಂಬ ಫಿರಂಗಿಗಳನ್ನು ಬಿಟ್ಟುಹೋದರು ಎಂತ ನೈಜಾಮ್ ಪಾಶರವರು ತಿಳಿಸುವರು. ತಾ. ೧೯ರಲ್ಲು ಬಲ್ಗೇರಿಯರ ಕಾಲ್ಬಲವು ತುರ್ಕರ ಗುಂಡಿನ ಎದುರಿಗೆ ನಿಲ್ಲಲಾರದೆ ಹಿಂದಕ್ಕೆ ಹೋಯಿತು. ತುರ್ಕರು ಅವರನ್ನು ಹಿಮ್ಮೆಟ್ಟಿ ಕಂದಕಗಳಲ್ಲಿದ್ದ ಬಲ್ಗೇರಿಯರನ್ನು ಓಡಿಸಿ ಅವರ ಅನೇಕ ಕೋವಿಗಳನ್ನೂ ಇತರ ಯುದ್ಧಸಾಹಿತ್ಯಗಳನ್ನೂ ಹಿಡಕೊಂಡರು.

ಮೊನಾಸ್ಟಿರಿನಲ್ಲಿ ಯುದ್ಧವು ೩ ದಿವಸಗಳ ವರೆಗೆ ನಡೆಯಿತು, ತುರ್ಕರಲ್ಲಿ ೧೦,೦೦೦ ಮಂದಿ ಹತರಾದರು. ನೂರಾರು ಕೋವಿಗಳೂ, ಆಯುಧ ಸಾಮಾಗ್ರಿಗಳೂ ಆಹಾರ ಜೀನಸುಗಳೂ ಸರ್ವಿಯರಿಗೆ ದೊರಕಿದವು.

ಸರ್ವಿಯರೂ ಮೊಂಟೆನಿಗ್ರೋಯರೂ ಒಟ್ಟುಕೂಡಿ ಅಲ್ಲೆಸೋ ಎಂಬದನ್ನು ವಶಮಾಡಿಕೊಂಡರು. ಸರ್ವಿಯರು ಸ್ಕುತಾರಿಯ ಆಜುಬಾಜಿನಲ್ಲಿರುವ ಪಟ್ಟಣಗಳಲ್ಲಿರುವ ತುರ್ಕರ ಸೇನೆಯನ್ನು ಓಡಿಸಿರುವರು. ಅಲೆಸ್ಸೊದಲ್ಲಿ ಸಾಯಂಕಾಲದೊಳಗೆ ತುರ್ಕರ ಸೇನೆಯು ಶರಣಾಗತವಾಯಿತು.

ಯುದ್ಧವನ್ನು ನಿಲ್ಲಿಸಿ ಸಂಧಾನವಾಗಬೇಕೆಂಬದಾಗಿ ತುರ್ಕರು ಕೇಳಿಕೊಂಡ ಪ್ರಕಾರ ಬಾಲ್ಕ್ಯಾನ ಸಂಸ್ಥಾನಗಳು ತಂತಮ್ಮೊಳಗೆ ಆಲೋಚಿಸಿಕೊಂಡು ಸಂಧಾನದ ಶರ್ತಗಳನ್ನು ತುರ್ಕಿ ಸರಕಾರಕ್ಕೆ ಕಳುಹಿಸಿಕೊಟ್ಟಿರುವರು.

ತಾ. ೨೦:—ಚಟಲ್ಜದ ಯುದ್ಧದ ವಿಶಯವಾಗಿ ಬಲ್ಗೇರಿಯರು ಹೆಚ್ಚಿನ ವಾರ್ತೆ ಕೊಡಲಿಲ್ಲ. ಆದರೆ ತುರ್ಕರ ಸೇನಾಧಿಪತಿಯಾದ ನೈಜಾಮ್ ಪಾಶರವರು ಎಡಪಾರ್ಶ್ವದಲ್ಲಿದ್ದ ಬಲ್ಗೇರಿಯರ ಸೇನೆಯು ಪೂರ್ಣವಾಗಿ ಸೋಲಿಸಲ್ಪಟ್ಟು ಹಿಂದಕ್ಕೆ ಹೋಯಿತು. ಬಲ್ಗೇರಿಯರಲ್ಲಿ ೫೦೦ ಮಂದಿ ಹತರಾದರು. ಬಲ್ಗೇರಿಯರಿಗೆ ೩ ದಿವಸಗಳಿಂದ ಆಹಾರವಿಲ್ಲವೆಂಬದಾಗಿ ಶೆರೆಹಿಡಿಯಲ್ಪಟ್ಟವರು ಹೇಳುವರು ಎಂಬಿತ್ಯಾದಿ ವಾರ್ತೆ ಕಳುಹಿಸಿರುವರು.

ತುರ್ಕರ ನೌಕಾವಳಿಯು ಬಲ್ಗೇರಿಯರ ಸೇನೆಯ ಮೇಲೆ ಗುಂಡು ಹಾರಿಸಿ ಅವರನ್ನು ಬರ್ಮಾನ್ನಿ ಮತ್ತು ಕಾರಬುರನಿನಿಂದ ೧೦ ಮೈಲು ದೂರಕ್ಕೆ ಹಿಂದಕ್ಕಟ್ಟಿಬಿಟ್ಟಿತು ಎಂಬ ವಾರ್ತೆ ಬಂದಿರುವುದು

ತಾ. ೨೧:—ಮೊನಾಸ್ಟಿರ್ ಸರ್ವಿಯರ ವಶವಾದದ್ದೂ ಯುವರಾಜರು ಪಟ್ಟಣವನ್ನು ಪ್ರವೇಶಿಸಿದ್ದೂ ನಿಜ. ಆದರೆ ೪೦,೦೦೦ ಮಂದಿ ಶೆರೆಹಿಡಿಯಲ್ಪಟ್ಟರು ಎಂಬ ವಾರ್ತೆಯು ನಿಜವಲ್ಲ. ತುರ್ಕರ ಸೇನೆಯು ಹೆಚ್ಚಿನ ಆಯುಧ ಸಾಮಾಗ್ರಿಗಳನ್ನು ಬಿಟ್ಟು ಮೊನಾಸ್ಟಿರಿನಿಂದ ಪಲಾಯಣ ತೆಗೆದಿರುವದು. ಆದರೆ ಶರಣಾಗತವಾಗಲಿಲ್ಲ ಎಂಬದಾಗಿ ಸರ್ವಿಯರ ಮುಖ್ಯ ಪಟ್ಟಣವಾದ ಬಲ್ಗ್ರೇಡಿನಲ್ಲಿ ಪ್ರಕಟವಾಗಿದೆ.

ಉಸ್ಕುಬಿನಲ್ಲಿದ್ದ ಆಸ್ಟ್ರೀಯರ ಕೌನ್ಸಲ್ಲರನ್ನು ಆಸ್ಟ್ರೀಯ ಸರಕಾರದೊಂದಿಗೆ ಪತ್ರವ್ಯವಹಾರ ನಡಿಸಲಿಕ್ಕೆ ಸರ್ವಿಯರು ಅಡ್ಡಿಮಾಡಿದ್ದರು. ಇದಕ್ಕೆ ಮುಖ್ಯ ಕಾರಣವು ಸರ್ವಿಯರು ಅಲ್ಬಾನಿಯರನ್ನು ಅಮಾನುಷ ರೀತಿಯಲ್ಲಿ ಪೀಡಿಸಿ ಕೊಂದದ್ದೇ ಎಂಬದಾಗಿ ಆಯಾ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಸರ್ವಿಯರು ಅಲ್ಬಾನಿಯರನ್ನು ಕ್ರೂರವಾಗಿ ಹಿಂಸಿಸಿ ಕೊಲ್ಲಲಿಲ್ಲ, ಆದರೆ ಯುದ್ಧದ ಮಧ್ಯೆ ಅವರು ಕೊಲ್ಲಲ್ಪಟ್ಟಿರಬೇಕೆಂತ ಸರ್ವಿಯ ಸರಕಾರದವರು ಪ್ರಕಟಿಸಿರುತ್ತಾರೆ. ಈ ವಿಷಯ ತಕ್ಕ ವಿಚಾರ ನಡಿಸುವರೆ ಆಸ್ಟ್ರೀಯದಿಂದ ರಾಯಭಾರಿಯು ಉಸ್ಕುಬಿಗೆ ಹೋಗಿರುವನು.

ಯುದ್ಧವನ್ನು ನಿಲ್ಲಿಸುವ ಬಲ್ಗೇರಿಯರ ಶರ್ತವು ತುರ್ಕರಿಗೆ ಕೈವರ್ತಿಸಲ್ಪಟ್ಟಿತು. ಈ ವಿಷಯ ಬಲ್ಗೇರಿಯರ ರಾಯಭಾರಿಗಳ ಕೂಡೆ ಮಾತನ್ನಾಡುವರೆ ತುರ್ಕರ ಪರವಾಗಿ ನೈಜಾಮ್ ಪಾಶ, ಇಜೆಟ್‌ಪಾಶ, ಸಾದನ್ ಬೇಯವರು ನೇಮಿಸಲ್ಪಟ್ಟಿರುವರು.

ಸರ್ವಿಯರು ಮೊನಾಸ್ಟಿರಿನ ಆಜುಬಾಜಿನಲ್ಲಿ ಯುದ್ಧ ಮಾಡುತ್ತಲಿದ್ದಾರೆ. ಇಷ್ಟರವರೇಗೆ ೫೦೦೦ ಸೈನೀಕರೂ, ೪೭ ಫಿರಂಗಿಗಳೂ ಹಿಡಿಯಲ್ಪಟ್ಟವು. ಈ ಯುದ್ಧದಲ್ಲಿ ೨೦,೦೦೦ ತುರ್ಕರು ಕೊಲ್ಲಲ್ಪಟ್ಟರು. ಸರ್ವಿಯರಲ್ಲಿ ಸ್ವಲ್ಪ ಮಂದಿ ಹತರಾದರು. ಆದರೆ ಅವರಿಗೆ ಇದು ಬಹಳ ಹೆಚ್ಚಿಗೆಯೇ ಸೈ. ಮೊನಾಸ್ಟಿರಿನಿಂದ ಪಲಾಯನ ತೆಗೆದ ೩೦,೦೦೦ ತುರ್ಕಿ ಸೈನೀಕರು ಫ್ಲೋರಿನಕ್ಕೆ ಹೋಗಿರುವರು. ಅಲ್ಲಿಗೆ ಗ್ರೀಕರ ಸೇನೆಯು ಹೋಗಿ ಆ ಪಟ್ಟಣವನ್ನು ವಶಮಾಡಿಕೊಂಡು ಅನೇಕ ಆಯುಧ ಸಾಮಾಗ್ರಿಗಳನ್ನು ಹಿಡಕೊಂಡಿತು.

ಕನ್‌ಸ್ತಂತಿನೋಪಲಿನಲ್ಲಿ ವಾಂತಿಭೇದಿಯ ಹಾವಳಿಯು ಬಹಳ ಹೆಚ್ಚಿಗೆ ಆಗಿಯದೆ. ಸಾನ್ ಸ್ಟೇಪಾನದ ವಾಂತಿಭೇದಿಯ ಹಂದರದಲ್ಲಿ ನೂರಾರು ಜನರು ಸಾಯುತ್ತಾರೆ. ಸಾವಿರಾರು ಜನರು ಅಸ್ವಸ್ಥದಲ್ಲಿ ವೈದ್ಯ ಸಹಾಯವಿಲ್ಲದೆ ನರಳುತ್ತಿದ್ದಾರೆ. ಸೈಂಟ್‌ಸೋಪಿಯದ ಮಸೀದಿಯಲ್ಲಿ ೨೦೦೦ ಮಂದಿ ವಾಂತಿಭೇದಿಯವರು ಇದ್ದಾರೆ.

ತುರ್ಕಿ ಸರಕಾರದವರು ಬಲ್ಗೇರಿಯರ ಶರ್ತಕ್ಕೆ ಒಪ್ಪದೆ ಯುದ್ಧವನ್ನು ಮುಂದರಿಸುವರೆ ನೈಜಾಮ್ ಪಾಶರವರಿಗೆ ಹುಕುಂ ಮಾಡಿದ್ದಾರೆ. ಯುದ್ಧ ನಿಲ್ಲಿಸಬೇಕಾದರೆ ಅಡ್ರಿನೋಪಲ್ ಮತ್ತು ಸ್ಕುತಾರಿಯು ಶರಣಾಗತವಾಗಬೇಕು, ಕಪ್ಪು ಸಮುದ್ರದಿಂದ ತುರ್ಕರ ಹಡಗುಪಡೆಯು ಹಿಂದೆ ಕರೆಯಿಸಲ್ಪಡಬೇಕು, ಚಟಲ್ಜಕ್ಕೆ ಸೈನ್ಯ ಕಳುಹಿಸುವುದನ್ನು ನಿಲ್ಲಿಸಬೇಕೆಂಬದೇ ಬಲ್ಗೇರಿಯರ ಶರ್ತವಾಗಿದೆ.

ಅಡ್ರಿನೋಪಲಿನಲ್ಲಿ ತುರ್ಕರ ಕಡೆಯ ಸೈನಾಧಿಪತಿಯ ಶೂರತನಕ್ಕಾಗಿ ಅವನಿಗೆ ಘಾಜಿ ಎಂಬ ಬಿರುದು ಕೊಡಲ್ಪಟ್ಟಿರುವದು.

ವರ್ನಕ್ಕೆ ೪೦ ಮೈಲು ದೂರದಲ್ಲಿ ಬಲ್ಗೇರಿಯರ ೪ ಟೊರ್ಪೆಡೋ ದೋಣಿಗಳು ತುರ್ಕರ ಹಮಾಡಿಯ ಎಂಬ ಹಡಗದ ಮೇಲೆ ಬಿತ್ತು. ಆದರೆ ಪ್ರಯೋಜನವಾಗದೆ ಪೆಟ್ಟುತಿಂದು ಹಿಂದೆರಳಿತು. ೨ ಟೋರ್ಪೆಡೋ ದೋಣಿಗಳು ಮುಣುಗಿಸಲ್ಪಟ್ಟಿತೆಂತ ಹಮಾಡಿಯ ಹಡಗದ ಕೆಪ್ಟಾನನು ಕನ್‌ಸ್ತಂತಿನೋಪಲಿಗೆ ತಂತೀ ಬಿಟ್ಟಿರುವನು.

ಆಸ್ಟ್ರೀಯದ ಚಕ್ರವರ್ತಿಯಾದ ಪ್ರಾನ್ಸಿಸ್ ಜೋಸೆಪರವರು ಮಾಡಿದ ಭಾಷಣದಲ್ಲಿ ಬಲ್ಗೇರಿಯರ ಸಾಮಾರ್ಥ್ಯಕ್ಕೆ ತಾನು ಆಶ್ಚರ್ಯಪಡುತ್ತೇನೆಂದೂ ಯದ್ಧದಲ್ಲಿ ತುರ್ಕರಿಗೆ ಇಂಥಾ ಅಪಜಯಗಳು ಆಗಲಿಕ್ಕೆ ಕಾರಣವೇನೆಂದು ತನಗೆ ತಿಳಿಯುವುದಿಲ್ಲವೆಂದೂ ಹೇಳಿದರು. ಮತು ಆಸ್ಟ್ರೀಯ ಕೌನ್ಸಲ್ಲರ ವಿಷಯವಾಗಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದ ವಾರ್ತೆಗಳು ಅತ್ಯುಕ್ತಿಯಾಗಿರಬೇಕೆಂದೂ ಈ ವಿಷಯವು ಸಮಾಧಾನದಿಂದ ಇತ್ಯರ್ಥವಾಗುವದೆಂದೂ ಅಪ್ಪಣೆವಿತ್ತರು.

ತಾ. ೨೨:—ಬಲ್ಗೇರಿಯರು ಡೆಡಾಗಾಚ್ ಮತ್ತು ಮಲ್ಲರವನ್ನು ಆತಿಕ್ರಮಿಸಿದರು. ಇದರಿಂದ ಕನ್‌ಸ್ತಂತಿನೋಪಲಿಗೆ ಹೋಗುವರೆ ಪೂರ್ವಕಡೆಯಲ್ಲಿ ಮಾರ್ಗ ತೆರೆದಂತಾಯಿತು.

ಅಡ್ರಿನೋಪಲಿನಲ್ಲಿದ್ದ ತುರ್ಕಿ ಸೇನೆಯು ಬಲ್ಗೇರಿಯರು ಹಿಡಕೊಂಡ ಕಾರ್ಟಲಿಜ್ಜಿ ಎಂಬ ಕೋಟೆಯನ್ನು ಪುನಃ ಪಡೆಯಲು ಪ್ರಯತ್ನಮಾಡಿತು. ಆದರೆ ಹಿಮ್ಮೆಟ್ಟಲ್ಪಟ್ಟಿತು. ೩೫೦ ಮಂದಿ ಮೃತಪಟ್ಟರು.

ಗ್ರೀಕರ ೧೧ ಯುದ್ಧ ಹಡಗಗಳು ಮಿಥಲೇನಕ್ಕೆ ಹೋಗಿ ಇಳಿದದೆ. ಗ್ರೀಕರ ಯುವರಾಜರು ಫ್ಲೋರಿನದಲ್ಲಿದ್ದ ೩೦,೦೦೦ ತುರ್ಕರನ್ನು ಅಟ್ಟಿಬಿಟ್ಟು ಪಟ್ಟಣಕ್ಕೆ ಪ್ರವೇಶಿಸಿದರು.

ಸರ್ವಿಯರು ಫ್ಲೋರಿನಕ್ಕೆ ಉತ್ತರದಲ್ಲಿ, ಮೊನಾಸ್ಟಿರಿಗೆ ದಕ್ಷಿಣದಲ್ಲಿರುವ ರೆಸ್ನವನ್ನು ವಶಮಾಡಿಕೊಂಡರು. ಅಲೆಸ್ಸಿಯೋದಲ್ಲಿ ೧೦೦೦ ಮಂದಿ ತುರ್ಕಸೈನಿಕರನ್ನೂ ಫಿರಂಗಿಗಳನ್ನೂ ಹಿಡಿದರು. ಅಲೆಸ್ಸಿಯೋಕ್ಕೆ ಸರ್ವಿಯರು ಅಭಿಯೋಗಮಾಡಿದ ವಿಷಯವು ಬಹಳ ಹೊಗಳಿಕೆಗೆ ಕಾರಣವಾಗಿದೆ. ಅಲೆಸ್ಸಿಯೋ ಪರ್ವತಗಳಿಂದ ಸುತ್ತಲ್ಪಟ್ಟ ಪಟ್ಟಣವು. ಬಹಳ ಚಳಿಯಿತ್ತು. ಹಿಮವು ೧ ಗಜ ಎತ್ತರಕ್ಕೆ ಬಿದ್ದಿತ್ತು. ಅದರ ಮೇಲೆ ಫಿರಂಗಿಗಳನ್ನು ದೂಡಿಕೊಂಡು ಹೋಗಬೇಕಾಯಿತು.

ತಾ. ೨೪:—ಚಟಲ್ಜದಲಿ ಯುದ್ಧ ನಡಿಯುವದಿಲ್ಲ. ಬಲ್ಗೇರಿಯರ ಸೈನ್ಯದಲ್ಲಿ ವಾಂತಿಭೇದಿಯ ಹಾವಳಿಯು ಹೆಚ್ಚಾಗಿ ಬಹಳ ಕಷ್ಟದಿಂದಿದ್ದಾರೆಂಬದಾಗಿ ಕನ್‌ಸ್ತಂತಿನೋಪಲಿನಿಂದ ವಾರ್ತೆ ಬಂದಿರುವುದು.

ತಾ. ೨೩ನೇ ಬೆಳಿಗ್ಯೆ ೫ ಗಂಟೆಗೆ ಚಟಲ್ಜದಲ್ಲಿ ತುರ್ಕರ ಒಂದು ಸೇನೆಯು ಬಲ್ಗೇರಿಯರ ಮೇಲೆ ಬಿದ್ದು ನಷ್ಟಪಟ್ಟು ಹಿಮ್ಮೆಟ್ಟಲ್ಪಟ್ಟಿತು ಎಂಬದಾಗಿ ಸೋಫಿಯದಲ್ಲಿ ಪ್ರಕಟವಾಗಿದೆ.

ಕಳದ ಶುಕ್ರವಾರ ಮತ್ತು ಶನಿವಾರ ಅಡ್ರಿನೋಪಲ್ ಕೋಟೆಯಿಂದ ತುರ್ಕರು ಬಲ್ಗೇರಿಯರ ಕಂದಕಗಳಿಗೆ ಫಿರಂಗಿಹಾರಿಸಿದರು.

ಗ್ರೀಕರು ಫ್ಲೋರಿನವನ್ನು ತಕ್ಕೊಂಡನಂತರ ಪಿಸೊದೊರಿ‌ಎಂಬದನ್ನು ವಶಮಾಡಿ ತುರ್ಕರ ೨೦ ಫಿರಂಗಿಗಳನ್ನು ಹಿಡಕೊಂಡರು. ಸರ್ವಿಯರು ಒಚ್ರಿಡವನ್ನು ವಶಮಾಡಿಕೊಂಡರು. ಮೊನಾಸ್ಟಿರಿನಿಂದ ಪಲಾಯನ ಮಾಡುತ್ತಿದ್ದ ತುರ್ಕಿ ಸೇನೆಯೊಂದಿಗೆ ಗ್ರೀಕರು ಯುದ್ಧಮಾಡಿ ೧೨೦೦ ಮಂದಿಯನ್ನೂ ೧೯ ಫಿರಂಗಿಗಳನ್ನೂ ಶೆರೆಹಿಡಿದರು. ಮೊನಾಸ್ಟಿರಿನಲ್ಲಿ ಸರ್ವಿಯರಿಗೂ ತುರ್ಕರಿಗೂ ಆದ ಯುದ್ಧವು ಬಹಳ ಭಯಂಕರವಾಗಿತ್ತು. ಈ ತನಕ ಆದ ಯುದ್ಧದಲ್ಲಿ ಇದೇ ಬಹಳ ರಕ್ತಚೆಲ್ಲುವಿಕೆಯ ಯುದ್ಧವಾಗಿತ್ತು. ಮೊನಾಸ್ಟಿರಿನ ಮಧ್ಯದಲ್ಲಿ ಯುದ್ಧಮಾಡಿದ ಫೆಥಿಪಾಶನು ಹಿಡಿಯಲ್ಪಟ್ಟು ಕೊಲ್ಲಲ್ಪಟ್ಟನು. ಗ್ರೀಕರ ಒಂದು ಟೊರ್ಪೆ

ಡೋ ದೋಣಿಯು ಸ್ಮಿರ್ನಕ್ಕೆ ೬೬ ಮೈಲು ದೂರದಲ್ಲಿಯ ಆವಲಿ ಎಂಬಲ್ಲಿ ತುರ್ಕರ ಒಂದು ಗನ್‌ಬೋಟನ್ನು ಮುಣುಗಿಸಿ ಬಿಟ್ಟಿತು.

ತುರ್ಕರು ಬಲ್ಗೇರಿಯರ ಶರ್ತಗಳಿಗೆ ಒಪ್ಪುವಹಾಗಿಲ್ಲವೆಂಬ ವಾರ್ತೆ ಬಂದದರಿಂದ ಮೊಂಟೆನಿಗ್ರೋಯರು ಪುನಹ ಸ್ಕುತಾರಿಯ ಮುತ್ತಿಗೆ ಕೆಲಸವನ್ನು ಪ್ರಾರಂಭಿಸಿರುವರು.

ಆಸ್ಯದಿಂದ ತುರ್ಕಿಯರಿಗೆ ಸೇನೆಯು ಬಂದುಕೂಡಿರುವುದರಿಂದ ತುರ್ಕರ ಸೈನ್ಯಬಲವು ಈಗ ಒಳ್ಳೇ ಸ್ಥಿತಿಯಲ್ಲಿದೆ ಎಂಬ ವಾರ್ತೆಯಿದೆ. ತುರ್ಕರು ಡರ್ದೆನೆಲ್ಸಿನಿಂದ ಯುದ್ಧ ಮಾಡಲಿಕ್ಕಿದ್ದಾರೆ.

ತುರ್ಕರು ಬಲ್ಗೇರಿಯರ ಶರ್ತಗಳಿಗೆ ಹ್ಯಾಗೂ ಒಪ್ಪುವರು ಎಂಬದಾಗಿ ಬಲ್ಗೇರಿಯರಿಗೆ ದೃಢವಿದೆ. ಶ್ರೇಷ್ಠ ರಾಜ್ಯಗಳಿಗೆ ನೋವಾಗ ಬಾರದೆಂಬದಾಗಿ ಈ ತನಕ ಬಲ್ಗೇರಿಯರು ಕನ್‌ಸ್ತಂತಿನೋಪಲಿಗೆ ಹೋಗಲಿಲ್ಲವೆಂದೂ ತುರ್ಕರು ಈ ಶರ್ತಗಳಿಗೆ ಒಪ್ಪದಿದ್ದರೆ ತುರ್ಕರನ್ನು ಯೂರೋಪಿನಿಂದ ಹೊರಡಿಸಿ ಬಿಡುವದು ನಿಶ್ಚಯವೆಂದೂ 'ಮಿರ್' ಎಂಬ ಪತ್ರವು ಹೇಳುತ್ತದೆ.

ತಾ. ೨೫. ತುರ್ಕರ ಪ್ರತಿನಿಧಿಗಳು ಬಲ್ಗೇರಿಯರ ಮುಖ್ಯ ಠಾಣ್ಯಕ್ಕೆ ತಲಪಿರುವರು. ತುರ್ಕರು ಶರ್ತಗಳಿಗೆ ಒಪ್ಪದಿದ್ದರೆ ಬಾಲ್ಕಾನ್ ಸಂಸ್ಥಾನಗಳ ಎಲ್ಲಾ ಸೈನ್ಯವು ಒಟ್ಟಾಗಿ ಕನ್‌ಸ್ತಂತಿನೋಪಲಿಗೆ ನುಗ್ಗಲಿಕ್ಕಿದೆ ಎಂದು ತಿಳಿದುಬರುತ್ತದೆ.

ಕನ್‌ಸ್ತಂತಿನೋಪಲಿನಲ್ಲಿ ಯೂನ್ಯನಿಷ್ಟರಲ್ಲಿ (ಸರಕಾರದ ವಿರೋಧ ಪಕ್ಷದವರು) ಕೆಲವು ಮಂದಿ ಕೈದು ಮಾಡಲ್ಪಟ್ಟಿರುವರು. ಈ ಪೈಕಿ ೪ ಮಂದಿ ಕೆಲಸ ನಿವೃತ್ತರಾದ ಮಂತ್ರಿಗಳು.

* * *

ಜಮಾಯಿಕದಲ್ಲಿ ತಾ. ೨೧ರಲ್ಲು ಕಠಿಣ ಬಿರುಗಾಳಿ ಬೀಸಿ ಎರಡು ಪಟ್ಟಣಗಳೇ ಹಾರಿಹೋದವು. ಉಸಿಯ ಗ್ರೀನ್, ಮತ್ತು ಸವನ್ನ ಲಾ ಮಾರ್ ದ್ವೀಪಗಳು ನೆರೆಯಿಂದ ಮುಣುಗಿಹೋಗಿ ಅನೇಕ ಜೀವ ನಷ್ಟವಾಯಿತು. ೪೨ ಮಂದಿಯ ಹೆಣವು ಮೊಂಟೆಗೋ ಅಖಾತದ ಕರೆ ಸೇರಿತ್ತು. ಬಾಳೆ ಹಣ್ಣು ಮತ್ತು ಇತರ ಪೈರುಗಳೆಲ್ಲವೂ ಹಾಳಾದವು. ರೈಲ್ವೆ ಮತ್ತು ಟೆಲಗ್ರಾಫ್ ವ್ಯವಹಾರಗಳು ನಿಲ್ಲಿಸಲ್ಪಟ್ಟಿರುವುವು.

* * *

ಮಿ| ಕಾರ್ನೆಜಿಯವರ ಸಂರಕ್ಷಣೆಯಲ್ಲಿರುವ ನ್ಯೂಯೊರ್ಕಿನ ಮುನಿಸಿಪಾಲಿಟಿಯವರು ಅಮೇರಿಕದ ಮಾಜಿ ಪ್ರೆಸಿಡೆಂಟರವರಿಗೆ ಮತ್ತು ಅವರ ವಿಧವೆಯರಿಗೆ ವರ್ಷ ಒಂದಕ್ಕೆ ೨೫.೦೦೦ ಡೋಲರ್ ವರ್ಷಾಶನ ಕೊಡುವರೆ ನಿಷ್ಕರ್ಷಿಸಿರುವರು·

* * *

ಜಪಾನಿಯರ ನಿಸಿನ್ ಎಂಬ ಯುದ್ಧ ಹಡಗದಲ್ಲಿ ಸಿಡಿತ ಉಂಟಾಗಿ ೧೭ ಮಂದಿ ಕಠಿಣ ಗಾಯಪಟ್ಟರು. ೯ ಮಂದಿ ಸಾಧಾರಣ ಗಾಯಪಟ್ಟರು.

ಉತ್ತರ ಹಿಂದೂಸ್ಥಾನ.

ಇದೇ ನವಂಬರ ತಿಂಗಳ ೧೫ನೇ ತಾರೀಕಿಗೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೮೫೫ ಮಂದಿ ಪ್ಲೇಗ ಬೇನೆಯಿಂದ ಮೃತಪಟ್ಟರು. ಈ ಪೈಕಿ ಡಿಲ್ಲಿ ಆಜುಬಾಜಿನ ಗ್ರಾಮಗಳಲ್ಲಿ ೨; ಮುಂಬಾಯಿ ಸಂಸ್ಥಾನ ೬೩೩; ಮದ್ರಾಸ್ ೧೦೮; ಬಂಗಾಳ ೪; ಬಿಹಾರ್ ೫೪; ಸಂಯುಕ್ತ ಸಂಸ್ಥಾನ ೫೨೮; ಪಂಜಾಬು ೧೦೩; ಬರ್ಮ ೬; ಮಧ್ಯ ಸಂಸ್ಥಾನ ೪೬; ಮೈಸೂರು ೨೧೨; ಹೈದರಾಬಾದ್ ೧೫೩; ಮಧ್ಯ ಇಂಡಿಯ ೪; ರಜಪುತಾನ ೩೯೦ ಮರಣಗಳಾದವು.

* * *

ಹೌರ ಜಿಲ್ಲೆಯ ಉಲುಬರಿಯ ಎಂಬಲ್ಲಿ ಬಕ್ರೀದ್ ಹಬ್ಬದ ದಿವಸ ಹಿಂದೂಗಳೊಳಗೂ ಮಹಮ್ಮದೀಯರೊಳಗೂ ಭಯಂಕರ ದಂಗೆ ನಡೆಯಿತೆಂಬ ವಾರ್ತೆ ಬಂದಿರುವದು. ಹೌರದಿಂದ ಆ ಸ್ಥಳಕ್ಕೆ ಪೋಲೀಸ್ ಡ್ಯುಪಿಟಿ ಸುಪರಿಂಟೆಂಡೆಂಟರವರೂ ೫೦ ಆಯುಧಪಾಣಿಗಳಾದ ಪೋಲೀಸಿನವರೂ ಹೋಗಿರುವರು.

* * *

ತಾ. ೧೯ನೇ ಮಂಗಳವಾರ ಕೆಲವು ಯೂರೋಪಿಯನ್ ಸರದಾರರೂ ಯೂರೋಪಿಯನ್ ಹೆಂಗಸರೂ ಮಕ್ಕಳೂ ಭಾರತೀಯ ವಿದ್ಯಾರ್ಥಿಗಳೂ ಸಿಬ್‌ಪುರ 'ಕೊಲೇಜ್ ಗಾಟಿಗೆ' ದೋಣಿಯಲ್ಲಿ ಪ್ರಯಾಣಮಾಡುತ್ತಿರುವಾಗ ದೋಣಿಯು ಕವಚಿ ಮುಣುಗಿಹೋಯಿತು. ಆ ದೋಣಿಯಲ್ಲಿ ೫೦ ಮಂದಿ ಇದ್ದರು. ಈ ಪೈಕಿ ಎಷ್ಟು ಮಂದಿ ಮೃತಪಟ್ಟರೆಂಬ ನಿಜ ಸಂಖ್ಯೆಯು ಗೊತ್ತಾಗಲಿಲ್ಲ. ೪ ಯೂರೋಪಿಯಾನರ ಮತ್ತು ೪ ಹಿಂದುಗಳ ಹೆಣವು ಮಾತ್ರ ದೊರಕಿರುವದು. ೧೯ ಮಂದಿಯ ಹೆಣ ಸಿಕ್ಕಲಿಲ್ಲ. ಈ ಅವಗಡದಲ್ಲಿ ರಕ್ಷಿಸಲ್ಪಟ್ಟ ಯುವಜನಸಮಾಜದ ಸೌಂಡರ್ ಮತ್ತು ಎಲಿಯೊಟ್ ಎಂಬವರು ತಮ್ಮ ದೋಣಿಯು ಹಾದು ಹೋಗುತ್ತಿರುವಾಗ ಅದರ ಸಮೀಪ ಹಾದು ಹೋಗುತ್ತಿದ್ದ ಒಂದು ಹಡಗದ ನೀರಿನ ಹೊಡತವು ಈ ದೋಣಿಗೆ ಬಡದು ದೋಣಿಯು ಮುಣುಗಿತು ಎಂಬದಾಗಿ ಹೇಳುವರು. ತಾ. ೨೦ರಲ್ಲು ಪುನಃ ೪ ಯೂರೋಪಿಯಾನರ ಮತ್ತು ೪ ಹಿಂದೂಗಳ ದೇಹವು ಸಿಕ್ಕಿರುವದು. ಆದರೆ ೧೯ ವಿದ್ಯಾರ್ಥಿಗಳ ದೇಹವು ದೊರಕಲಿಲ್ಲ.

* * *

ಖಾನ್‌ಪುರದಲ್ಲಿ ರಘುನಾಥ ಪ್ರಸಾದ ಎಂಬವರ ಪತ್ನಿಯು ಎಕ್ಸ್‌ಪ್ರೆಸ್ ಅಗ್ಗಾಡಿಯ ೨ನೇ ತರಗತಿಯ ಗಾಡಿಯಲ್ಲಿ ಕುಳಿತು ಪ್ರಯಾಣಮಾಡುತ್ತಿರುವಾಗ ಒಬ್ಬ ಮನುಷ್ಯನು ಆ ಗಾಡಿಯೊಳಗೆ ಹಾರಿ ಅವಳ ಪರಿಚಾರಿಕೆಯನ್ನು ಹೊಡದು ೨೦೦೦ ರೂಪಾಯಿಗಳ ವಸ್ತ್ರಾಭರಣಗಳಿದ್ದ ಒಂದು ಪೆಟ್ಟಿಗೆಯನ್ನು ಕಿಡಿಕಿಯ ಹೊರಗೆ ಬಿಸಾಡಿ ಪರಾರಿಯಾಗಿರುವನು. ಪೋಲೀಸಿನವರು ಪತ್ತೆತರದೂದು ನಡಿಸುತ್ತಿದ್ದಾರೆ.

* * *

ಫೆಜಾಬಾದಿನ ಅಯೋಧ್ಯ ನಗರದಲ್ಲಿ ಬಕ್ರೀದ್ ಹಬ್ಬದ ದಿವಸ ಹಿಂದೂಗಳಿಗೂ ಮುಸಲ್ಮಾನರಿಗೂ ಕಠಿಣ ದಂಗೆ ನಡೆದಿರುವದು. ಆಯುಧಪಾಣಿಗಳಾದ ಸೋಲ್ಜರರು ಇಬ್ಬರು ಹಿಂದೂಗಳನ್ನು ಗುಂಡುಹೊಡೆದು ಕೊಂದರು. ಕೆಲವರಿಗೆ ಸನೀನುಗಳಿಂದ ತಿವಿದರು. ೫೦ ಹಿಂದುಗಳು ಕೈದುಮಾಡಲ್ಪಟ್ಟರು. ಒಬ್ಬ ಮಹಮ್ಮದೀಯರವನೂ ಕೊಲ್ಲಲ್ಪಟ್ಟನು. ೧೫ ಮಂದಿ ಮಹಮ್ಮದೀಯರು ಗಾಯಪಟ್ಟಿರುವರು. ಹಲವು ಬೈರಾಗಿಗಳು ಮೃತಪಟ್ಟಿರುವರೆಂಬ ವಾರ್ತೆ ಆ ಪಟ್ಟಣದಲ್ಲೆಲ್ಲಾ ಹಬ್ಬಿಯದೆ. ಕೆಲವು ಬೈರಾಗಿಗಳು ಪೋಲೀಸಿನವರಿಂದ ಕೈದು ಮಾಡಲ್ಪಟ್ಟಿರುವರು. ಅಯೋಧ್ಯ ಮತ್ತು ಫೆಜಾಬಾದಿನಲ್ಲಿ ಹಿಂದೂಗಳ ಅಂಗಡಿಗಳು ಮುಚ್ಚಲ್ಪಟ್ಟಿವೆ. ಅಯೋಧ್ಯೆಯಲ್ಲಿ ಈ ವರ್ಷ ಬಕ್ರೀದ್ ಹಬ್ಬದ ಸಮಯ ದಂಗೆಯಾಗುವುದೆಂಬದಾಗಿ ಮೊದಲೇ ತಿಳಿದುಬಂದದರಿಂದ ಡ್ಯುಪಿಟಿ ಕಮಿಷನರು ತಾ. ೧೬ರಲ್ಲು ಹಿಂದೂಗಳ ಮತ್ತು ಮಹಮ್ಮದೀಯರ ಒಂದು ಸಭೆಕೂಡಿಸಿದ್ದರು. ಆದರೆ ಈ ಸಭೆಯು ಈ ವಿಷಯ ಏನಾದರೊಂದು ಅಂತಿಮ ನಿರ್ಣಯವನ್ನು ಮಾಡದನೇ ಅಗಲಿತು. ಅನಂತರ ಮಹಮ್ಮದೀಯರು ೭ ಕಡೆಗಳಲ್ಲಿ ದನಗಳನ್ನು ಕೊಲ್ಲುವರೆ ಅಪ್ಪಣೆಕೊಡಬೇಕೆಂದು ಡ್ಯುಪಿಟಿ ಕಮಿಷನರಿಗೆ ಮನವಿಮಾಡಿದರು. ಈ ಪೈಕಿ ೬ ಸ್ಥಳದಲ್ಲಿ ದನಗಳನ್ನು ಕೊಲ ಬಹುದೆಂಬ ಅಪ್ಪಣೆ ದೊರಕಿತು. ತಾ. ೨೦ರಲ್ಲು ಹಿಂದೂ ಬೈರಾಗಿಗಳು ಕೂಡಿ ಮಹಮ್ಮದೀಯರು ಅರ್ಪಿಸಲಿಕ್ಕಿದ್ದ ದನಗಳನ್ನು ಕೆಲವು ಕಡೆಗಳಲ್ಲಿ ಕಳವು ಮಾಡಿಬಿಟ್ಟರು. ಇದರಿಂದ ಉಭಯತರೊಳಗೆ ದೊಡ್ಡ ಜಟಾಪಟಿಯಾಯಿತು. ಅಲ್ಲಿದ್ದ ಪೋಲೀಸ್ ಪಡೆಯಿಂದ ಈ ದಂಗೆಯನ್ನು ನಿಲ್ಲಿಸಲಾಗದೆ ಹೋದ್ದರಿಂದ ಡ್ಯುಪಿಟಿ ಕಮಿಷನರು ರೆಜಿಮೆಂಟನ್ನು ತರಿಸಿದರು. ರೆಜಿಮೆಂಟಿನವರು ಗುಂಪಿನ ಮಧ್ಯೆ ನುಗ್ಗಿ ದಂಗೆಯನ್ನು ಅಣಗಿಸುವರೆ ಕಲ್ಲುಗಳನ್ನೂ, ಇಟ್ಟಿಗೆಗಳನ್ನೂ ಕೋವಿಯನ್ನೂ ಪ್ರಯೋಗಿಸಿದರು. ಇದರಿಂದ ಒಬ್ಬ ಮಹಮ್ಮದೀಯನೂ ಇಬ್ಬರು ಹಿಂದುಗಳೂ ಮೃತಪಟ್ಟರು. ತಾ. ೨೧ರಲ್ಲು ಪೋಲೀಸ್ ಸಹಾಯದಿಂದ ೩ ಕಡೆಗಳಲ್ಲಿ ಮಹಮ್ಮದೀಯರು ದನಗಳನ್ನು ಕೊಂದರು. ಈಗ ದಂಗೆಯು ನಿಂತಿದ್ದರೂ ಪೋಲೀಸಿನವರಿಂದ ಬೈರಾಗಿಗಳ ಸಿಟ್ಟನ್ನು ತಡೆಯುವದು ಕಷ್ಟಸಾಧ್ಯವಾದ್ದರಿಂದ ಸೇನೆಯು ಆ ಸ್ಥಳಕ್ಕೆ ಕರೆಯಿಸಲ್ಪಟ್ಟದೆ. ಅಯೋಧ್ಯದ ಈ ದಂಗೆಯ ವಾರ್ತೆಯು ಫೆಜಾಬಾದಿಗೆ ತಲಪುತ್ತಲೇ ಫೆಜಾಬಾದಿಗೆ ಒಂದೆರಡು ಮೈಲು ದೂರದಲ್ಲಿಯೂ ದಂಗೆಯಾಗುವ ಸಂಭವವಿದೆ ಎಂದು ತಿಳಿದುಬಂದದರಿಂದ ಫೆಜಾಬಾದಿನಲ್ಲಿಯೂ ಪೋಲೀಸಿನವರು ಮಾರ್ಗಗಳಲ್ಲಿ ರೋಂದುಮಾಡಿ ಶಾಂತತೆಯನ್ನು ನೆಲೆಗೊಳಿಸಿದರು. ಆದರೆ ತಾ. ೨೧ರಲ್ಲು ಕೆಲವು ಕಸಾಯಿಗಳು ದನಗಳನ್ನು ಯಜ್ಞ ಮಾಡಲಿಕ್ಕೆ ಕೊಂಡ್ಹೋಗುವಾಗ ದಾರಿಯಲ್ಲಿ ಬೊಬ್ಬಿಡುತ್ತಾ ಹೋದ್ದರಿಂದ ಅಲ್ಲಿ ಪುನಃ ಹಿಂದೂಗಳಿಗೂ ಮಹಮ್ಮದೀಯರಿಗೂ ಜಟಾಪಟಿಯಾಗಿ ಒಬ್ಬ ಮಹಮ್ಮದೀಯನ ತಲೆಯು ಒಡೆದು ಹೋಗಿರುವದು.

* * *

ಬೆನಾರಸಿನ ಚೆಟಾಗಂಜಿ ಎಂಬಲ್ಲಿಯೂ ಬಕ್ರೀದ್ ಹಬ್ಬದ ದಿನ ದನಗಳನ್ನು ಕೊಲ್ಲುವ ಸಂಬಂಧ ಹಿಂದೂಗಳಿಗೂ ಮಹಮ್ಮದೀಯರಿಗೂ ವೈಮನಸ್ಸುಂಟಾಗಿ ದೊಡ್ಡ ದಂಗೆ ನಡೆಯುವ ಸಂಭವವಿತ್ತು. ಆದರೆ ಪೋಲೀಸಿನವರ ಯತ್ನದಿಂದ ಶಾಂತವಾಯಿತು. ಇಲ್ಲಿ ಪೋಲೀಸಿನವರಿಂದ ಕೈದುಮಾಡಲ್ಪಟ್ಟ ೭ ಮಂದಿಯನ್ನು ತಾ. ೨೨ರಲ್ಲು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಖುಲಾಸುಮಾಡಿದರು.

* * *

ತಾ. ೨೨ರಲ್ಲು ಮುಂಬಾಯಲ್ಲಿ ಬಲವಾದ ಬಿರುಗಾಳಿ ಬೀಸಿ ವಿಶೇಷವಾದ ಅವಗಡವು ಸಂಭವಿಸಿತು. ಬಂದರದಲ್ಲಿದ್ದ ಅನೇಕ ದೋಣಿಗಳೂ, ಹಡಗಗಳೂ ಮುಣುಗಿಹೋಗಿ ಜೀವನಷ್ಟವೂ ಉಂಟಾಯಿತು. ಇಂಥಾ ಸುಂಟರಗಾಳಿಯು ಈಚೆಗೆ ಮುಂಬಾಯಲ್ಲಿ ಉಂಟಾದದ್ದಿಲ್ಲ.

* * *

ಅಹಮ್ಮದನಗರದಲ್ಲಿ ೧೧ ವರ್ಷದ ನಾನಿ ಎಂಬ ಹುಡುಗಿಯು ಕೊಲ್ಲಲ್ಪಟ್ಟಿದ್ದಳಷ್ಟೆ. ಇವಳ ಆಭರಣವು ವಾದವ ವಲಾದ್ ಬಾಪಂಜಿ ಎಂಬವನ ಕೈಯಲ್ಲಿ ಸಿಕ್ಕಿದ್ದರಿಂದ ಇವನೇ ಈ ಕೊಲೆಗೆ ಕಾರಣವಾಗಿರಬೇಕೆಂದು ಅಪಾದಿಸಲ್ಪಟ್ಟಿದ್ದನು. ಆದರೆ ಎಸ್ಸೆಸ್ಸರುಗಳ ಅಭಿಪ್ರಾಯದ ಪ್ರಕಾರ ಅವನು ಕೊಲೆಗಾರನಲ್ಲವೆಂದು ಜಡ್ಜರು ಅಭಿಪ್ರಾಯಪಟ್ಟು ಅವನಿಗೆ ೩ ವರ್ಷದ ಸಜಾವಿಧಿಸಿದರು. ಮುಂಬಾಯಿ ಸರಕಾರದವರು ಈ ತೀರ್ಮಾನದ ಮೇಲೆ ಮುಂಬಯಿ ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡಲ್ಲಿ

ಹ್ಯಾಕೋರ್ಟಿನವರು ಸೆಶ್ಯನ್ಸ್‌ಜಡ್ಜರವರ ತೀರ್ಮಾನವನ್ನು ರದ್ದುಮಾಡಿ ಅಪಾದಿತನಿಗೆ ಪಾಶಿ ಶಿಕ್ಷೆಯೆಂಬ ತೀರ್ಮಾನ ಮಾಡಿದರು.

* * *

ತಾ. ೧೮ರಲ್ಲು ಡಕ್ಕದ ಕೋಲ ಎಂಬಲ್ಲಿಯ ಪೋಸ್ಟಾಫೀಸಿಗೆ ಆಯುಧಪಾಣಿಗಳಾದ ದಕಾಯಿತರು ನುಗ್ಗಿ ೧೦೦೦ ರೂಪಾಯಿಗಳನ್ನು ಎತ್ತಿಹಾಕಿದರು.

* * *

ಹಿಂದೂಸ್ಥಾನದ ಮಾಜಿ ವ್ಯಾಸರಾಯರಾಗಿದ್ದ ಕರ್ಜನ್ ಪ್ರಭುಗಳ ಪ್ರತಿಮೆಯನ್ನು ಇಡುವರೆ ಕಲ್ಕತ್ತೆಯಲ್ಲಿ ಒಂದು ಹಂಗಾಮಿ ಸ್ಥಳವು ಆರಿಸೋಣಾಗಿರುವದು. ಖಾಯಂ ಆಗಿ ಈ ಪ್ರತಿಮೆಯನ್ನು ಎಲ್ಲಿ ಇಡುವುದೆಂಬ ವಿಷಯವು ಇನ್ನೂ ನಿಷ್ಕರ್ಷಿಸಲ್ಪಡಲಿಲ್ಲ.

* * *

ದಶಂಬರ ತಿಂಗಳಲ್ಲಿ ಕೂಡಲಿಕ್ಕಿರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರಿಗೆ ಒಂದು ಚಿತ್ರಖಚಿತವಾದ ಕಸೂತಿ ತೆಗೆದ ಕಂಠಮಾಲೆಯು ಕೊಡಲ್ಪಡುವದು.

* * *

ಹತ್ತಿ ಜುಗಾರಿಯು ಬಂಗಾಳದಲ್ಲಿ ಹೆಚ್ಚೆಚ್ಚಾಗುತ್ತಾ ಬಂದು ಪ್ರಜಾನೆಮ್ಮದಿಗೆ ಹಾನಿಕರವಾಗಿ ಪರಿಣಮಿಸುವುದರಿಂದ ಇದರ ದಮನಕ್ಕಾಗಿ ಬಂಗಾಳ ಸರಕಾರದಿಂದ ಏರ್ಪಟ್ಟ ಮಸೂದೆ ಇಂಡಿಯಾ ಸರಕಾರದ ಆಲೋಚನೆಯಲ್ಲಿರುವುದು.

* * *

ಪೂರ್ವ ಬಂಗಾಳದ ಸ್ಟೇಟ್ ರೈಲ್ವೇಯ ಸುಪರ್‌ವ್ಯಾಸಿಂಗ್ ಸ್ಟೇಶನ್ ಮಾಸ್ತರರಾದ ಮಿ| ಡಿ' ಸಿಲ್ವ ಎಂಬವರು ಸ್ಟೇಶನಿನಲ್ಲಿ ಒಂದು ನಾಯಿಗೆ ಹಾರಿಸಿದ ಕೋವಿಯು ರೈಲ್ವೆ ಮೈಲ್ ಸರ್ವಿಸಿನ ಫಜಿಜುದ್ದೀನ್ ಎಂಬವನ ಮೇಲೆ ಹಾರಿ ಅವನು ಗಾಯಪಟ್ಟಿರುವನು. ಈ ಮೊಕದಮೆಯನ್ನು ಸ್ಥಳೀಕ ಸಬ್ ಡಿವಿಜನಲ್ ಆಫೀಸರರು ನಡೆಯಿಸಿ ಸ್ಟೇಶನ್ ಮಾಸ್ತರರು ಗುಂಡು ಹಾರಿಸಿದ್ದರೆಂಬದಕ್ಕೆ ತಕ್ಕ ರು ಜುವಾತಿಲ್ಲವೆಂಬದಾಗಿ ಅವರನ್ನು ಖುಲಾಸು ಪಡಿಸಿದ ಕಾರಣ ಪೋಸ್ಟಲ್ ಮೇಲಾಧಿಕಾರಿಗಳು ಆ ಮೊಕದಮೆಯನ್ನು ಪುನಃ ತನಖಿ ನಡಿಸಬೇಕೆಂದು ಬಂಗಾಳ ಸರಕಾರಕ್ಕೆ ಮನವಿ ಮಾಡಿಕೊಂಡಿರುವರು.

* * *

ತಾ. ೨೨ನೇ ಸಾಯಂಕಾಲ ಸೆರಂಪುರದ ಮಿ| ಎನ್. ಬೆನರ್ಜಿ ಬ್ಯಾರ್ ಎಟ್-ಲಾರವರು ಕೋರ್ಟಿನ ಮುಂದೆ ಕೈದುಮಾಡಲ್ಪಟ್ಟರು. ಮಿ| ಬೆನರ್ಜಿಯವರು ತನ್ನ ಇಬ್ಬರು ಮಕ್ಕಳ ರಕ್ಷಕರಾಗಿ ಮತ್ತು ಎಕ್ಸಿಕ್ಯೂಟರರಾಗಿ ನೇಮಿಸಲ್ಪಟ್ಟಿದ್ದರು. ಈ ಸಂಬಂಧವಾದ ಲೆಕ್ಕವನ್ನು ಬೆನರ್ಜಿಯವರು ಆಲಿಪುರದ ಡಿಸ್ಟ್ರಿಕ್ಟ್ ಜಡ್ಜರ ಮುಂದೆ ಹಾಜರುಪಡಿಸಬೇಕಿತ್ತು. ಆದರೆ ಇವರು ಇದಕ್ಕೆ ತಪ್ಪಿದ್ದರಿಂದ ಡಿಸ್ಟ್ರಿಕ್ಟ್ ಜಡ್ಜರು ವಾರಾಂಟಿನಿಂದ ಇವರನ್ನು ಹಿಡಿಸಿದರು. ಇದು ಡಿಸ್ಟ್ರಿಕ್ಟ್ ಜಡ್ಜರಿಂದ ಪೋಲೀಸ್ ಮೂಲಕ ಕಳುಹಿಸಲ್ಪಟ್ಟ ವಾರಾಂಟ್ ಆದ್ದರಿಂದ ಸೆರಂಪುರದ ಮುನ್ಸಿಫರಿಗೆ ಇವರನ್ನು ವಾರಾಂಟಿನಿಂದ ಬಿಡಿಸುವರೆ ಆಗದೆಹೋಯಿತು. ಮಿ| ಎನ್. ಬೆನರ್ಜಿಯವರು ಸಬ್‌ಜಡ್ಜರಾಗಿದ್ದರು. ಕೆಲಸ ನಿವೃತ್ತರಾಗುವ ಕಾಲದಲ್ಲಿ ಡಿಸ್ಟ್ರಿಕ್ಟ್ ಜಡ್ಜರಾಗಿ ಕೆಲಸ ನೋಡುತ್ತಿದ್ದರು. ಈಗ ನಾಲ್ಕು ವರ್ಷಗಳಿಂದ ಬೇರಿಷ್ಟರಾಗಿ ವ್ಯವಹರಿಸುತ್ತಿದ್ದವರು.

* * *

ರಾಜಕೀಯೋದ್ಯೋಗ ಸಭೆಯ ಸೆಕ್ರಟರಿಯವರಾಗಿ ನೇಮಿಸಲ್ಪಟ್ಟ ಮಿ| ಮೊಂಟಗೋ ಬಟ್ಲರವರ ಜ್ಯೋಂಟ್ ಸೆಕ್ರಟರಿಯಾಗಿ ಮಿ| ರಸ್ಸೆಲ್ ಸ್ಕೋಟ್ ಎಂಬವರು ನೇಮಿಸಲ್ಪಟ್ಟಿರುವರು.

* * *

ಸ್ವದೇಶಿ ವಸ್ತುಗಳ ಬಹಿಷ್ಕಾರ ದಿವಸದಲ್ಲಿ ಮೆರವಣಿಗೆ ಮಾಡಕೂಡದೆಂಬ ಪೋಲೀಸ್ ಕಮಿಷನರ ಅಪ್ಪಣೆಯನ್ನು ಮೀರಿ ನಡೆದ ಲಿಕಾತ್ ಹುಸೇನರಿಗೆ ೧೦೦ ರೂಪಾಯಿ ಜುರುಮಾನೆ ವಿಧಿಸಲ್ಪಟ್ಟಿತೆಂದು ತಿಳಿಸಿತ್ತಷ್ಟೆ. ಇವರು ಹ್ಯಾಕೋರ್ಟಿಗೆ ಅಪೀಲುಮಾಡಿಕೊಂಡದ್ದರಿಂದ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ತೀರ್ಮಾನವನ್ನು ಯಾಕೆ ರದ್ದು ಪಡಿಸಕೂಡದೆಂದು ಹ್ಯಾಕೋರ್ಟಿನ ಜಸ್ಟಿಸರು ಕೇಳಿರುವರು.

ದಕ್ಷಿಣ ಹಿಂದೂಸ್ಥಾನ.

ತಾ. ೨೨ರಲ್ಲು ಮದ್ರಾಸಿನಲ್ಲಿ ಯುನಿವರ್ಸಿಟಿ ಡಿಗ್ರಿಯನ್ನು ಕೊಡುವ ಸಮಾರಂಭವು ನಡೆಯಿತು. ೧೨೦೦ ಮಂದಿಗೆ ಡಿಗ್ರಿಗಳು ಕೊಡಲ್ಪಟ್ಟವು. ಈ ಪೈಕಿ ೯ ಮಂದಿ ಹೆಂಗಸರು. ಹೆಂಗಸರಲ್ಲಿ ಹೆಚ್ಚಿನವರು ಭಾರತೀಯ ಕ್ರೈಸ್ತರಾಗಿದ್ದರು.

* * *

ಬರ್ಮದಲ್ಲಿ ಸಾವಿರ ರೂಪಾಯಿಯ ಕಳ್ಳನೋಟುಗಳನ್ನು ಚಲಾವಣೆ ಮಾಡಿದ ಎಕ್ಸೈಸ್ ಇನ್ಸ್‌ಪೆಕ್ಟರ್ ಡಬ್ಲ್ಯು. ಜಿ. ಹೆಂಡರ್ಸನರಿಗೆ ತಾ. ೨೨ರಲ್ಲು ಬಹಳ ಕಠಿಣ ಶಿಕ್ಷೆಯು ವಿಧಿಸಲಾಯಿತು. ಜಸ್ಟಿಸ್ ಪಾರ್ಲೆಟರವರು ತೀರ್ಮಾನವನ್ನು ಹೇಳುವಾಗ ಅಪಾದಿತನು ಮಾಡಿದ ತಕ್ಷೀರು ಇಡೀ ಸಮಾಜಕ್ಕೂ ದೇಶಕ್ಕೂ ಕುಂದನ್ನೂ ಅವಮರ್ಯಾದೆಯನ್ನೂ ತರುವಂಥಾದಾಗಿದೆ ಎಂದು ಹೇಳಿ ಒಂದನೇ ತಕ್ಷೀರಿನಮೇಲೆ ೭ ವರ್ಷ ಕಠಿಣ ಸಜ ಮತ್ತು ರೂ. ೮೦೦ ಜುರುಮಾನೆ. ಎರಡನೇ ತಕ್ಷೀರಿನ ಮೇಲೆ ಏಳುವರ್ಷ ಸಜಾ ಮತ್ತು ೫೦೦ ರೂಪಾಯಿ ಜುರುಮಾನೆ; ಮೂರನೇ ತಕ್ಷೀರಿಗೆ ೭ ವರ್ಷ ಸಜಾ ಮತ್ತು ೬೦೦ ರೂ. ಜುರುಮಾನೆ ವಿಧಿಸಿದರು. ಜುರುಮಾನೆ ಕೊಡತಪ್ಪಿದರೆ ಒಂದೊಂದು ತಕ್ಷೀರಿನ ಮೇಲೆ ಇನ್ನೊಂದೊಂದು ವರ್ಷ ಹೆಚ್ಚಿಗೆ ಸಜಾ ಅನುಭವಿಸಬೇಕಾಗುವದು.

ದಕ್ಷಿಣ ಕನ್ನಡ.

ಮೆಸ್ಸರ್ಸ್, ಬಾಬುರಾವ್ ಎಂಡ್ ಸನ್, ಮಂಗಳೂರು ಇವರಿಂದ ಕಳುಹಿಸೋಣಾದ 'ದಿ ಆಯೋನಿಕ್ ಫಾರ್‌ಮೆಸಿ (ಫ್ರೊಫೆಸರ್ ಗಜ್ಜಾರ್ಸ್) ಗಿರ್ಗಾಮ್, ಮುಂಬಾಯಿ ಇವರ ಔಷಧ ಪಟ್ಟಿಯನ್ನು ವಾಚಕರ ಅವಗಾಹನೆ ಬಗ್ಯೆ ಈ ಪತ್ರಿಕೆಯೊಂದಿಗೆ ಇಟ್ಟಿರುವೆವು.

* * *

ಬಂಟ್ವಾಳ:—ಇಲ್ಲಿಗೆ ಹೊಸತಾಗಿ ವರ್ಗಾಯಿಸಲ್ಪಟ್ಟ ಅಸಿಸ್ಟಾಂಟ ಸರ್ಜನರಾದ ಕೃಷ್ಣಸ್ವಾಮಿ ಅಯ್ಯರವರು ಇದೇ ತಿಂಗಳ ತಾ. ೨೫ಕ್ಕೆ ಸಬ್‌ಅಸಿಸ್ಟಾಂಟ ಸರ್ಜನರಾದ ಶೇಷಭಟ್ಟರಿಂದ ಚಾರ್ಜು ವಹಿಸಿಕೊಂಡರು.

ಬಂಟ್ವಾಳ ಮಿಶನ್ ಸೆಕಂಡರಿ ಶಾಲೆಗೆ ಪರೀಕ್ಷೆಗೆ ಬಂದಿರುವ ೮ನೇ ಸರ್ಕಲಿನ ಇನ್ಸಪೆಕ್ಟರಾದ ಲಿಟ್ಲಹೈಲ್ಸ ದೊರೆಗಳು ಇಲ್ಲಿಯ ಮಾಪಿಳಾ ಬೋರ್ಡು ಶಾಲೆಯನ್ನೂ ಹಿಂದೂ ಎಲಿಮೆಂಟರಿ ಶಾಲೆಯನ್ನೂ ನೋಡಿಕೊಂಡು ಹೋದರು.

ಇಲ್ಲಿಯ ಸಾವಕಾರ ಕೃಷ್ಣಪ್ರಭುಗಳ ಮಕ್ಕಳು ಗಣಪತಿಪ್ರಭು ನರಸಿಂಹ ಪ್ರಭುಗಳವರ ದೊಡ್ಡ ಮನೆಯ ಪಶ್ಚಿಮ ಭಾಗಕ್ಕೆ ಇದೇ ತಿಂಗಳ ತಾ. ೨೪ಕ್ಕೆ ಹಗಲು ೩ ಗಂಟೆಗೆ ಬೆಂಕಿಬಿದ್ದು ಹೆಚ್ಚಿನ ನಷ್ಟವಾಗುವಷ್ಟರಲ್ಲಿ ಸಬ್ ಇನ್ಸ್‌ಪೆಕ್ಟರರಾದ ಶಾಂತರಾಮರಾಯರು ಶತ ಪ್ರಯತ್ನಮಾಡಿ ನೊಂದಿಸಿಬಿಟ್ಟರು. ಬೆಂಕಿ ಹ್ಯಾಗೆಬಿತ್ತೆಂತ ಇನ್ನೂ ತಿಳಿಯಲಿಲ್ಲ.

ಉತ್ಥಾನದ್ವಾದಶಿಯ ದಿನ ಇಲ್ಲಿಯ ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನದ ಆಡಳಿತೆಯಧಿಕಾರವು ಬದಲಾಯಿತು. ಅತಿ ಪರಿಶ್ರಮದಿಂದ ದೇವಸ್ಥಾನದ ಆಡಳಿತೆಯನ್ನು ೧೬ ವರ್ಷಗಳಿಂದ ಅತ್ಯುಚ್ಚರೀತಿಯಲ್ಲಿ ನಡೆಯಿಸಿ ಇಂದು ಸ್ವಜಾತಿ ಸಮಾಜವನ್ನು ಚಿರಕೃತಜ್ಞತೆಗೊಪ್ಪಿಸಿದ ರಾ| ಸರ್ವೋತ್ತಮಬಾಳಿಗರು ಅಧಿಕಾರದ ಬೀಗದಕೈಗಳನ್ನು ಕೆಳಗಿಟ್ಟು, ಪ್ರಾಯವಿಶೇಷದಿಂದ ಅಬಲರಾದಕಾರಣ ಈ ಅಧಿಕಾರವನ್ನು ಇತರರು ನಡೆಯಿಸುವುದಾಗಿ ತಿಳಿಯಿಸಿದರು. ನೆರೆದು ಬಂದವರಲ್ಲಿ ರಾ| ಲಕ್ಷ್ಮಣಬಾಳಿಗರೂ, ಮಾಧವಬಾಳಿಗರೂ ಏಕರಾಗಿ ಆಡಳಿತೆಯನ್ನು ನಡೆಯಿಸುವಂತೆ ವಿಲೇವಾರಿಯಾಯಿತು.

ರಾ| ಸರ್ವೋತ್ತಮಬಾಳಿಗರ ಹೆಸರು ಜ್ಞಾತಿವರ್ಗಕ್ಕೆ ಅಪರಿಚಿತವಾದುದಲ್ಲ. ಸಮಾಜಹಿತಕರವಾದ ಕಾರ್ಯಗಳಲ್ಲಿ ಅನೇಕವನ್ನು ಇವರು ಗೌರವದಿಂದ ಪೂರೈಸಿ, ತನ್ನ ನಿಪುಣತೆಯಿಂದ ದೇವಸ್ವದ ಬಾಳಿಕೆಯನ್ನು ಸಂಪದ್ಯುಕ್ತವಾಗಿಡಿಸಿದರು. ಇವರು ಸಾಹಸದಿಂದ ಪ್ರಾರಂಭಿಸಿದ ಶಾಲಾ ಏರ್ಪಾಡು ಇನ್ನೂ ಮುನ್ನಡೆಯಲು ಅವಕಾಶಗೊಡದಂತೆ ತ್ವರ್ಯದಲ್ಲಿ ಆಡಳಿತೆಯ ಉತ್ತರಾಧಿಕಾರಿಗಳು ಅನುವರ್ತಿಸಿ, ಸಮಾಜ ಹಿತೇಚ್ಛುವಾದ ವಿದ್ಯಾಪ್ರಸಾರಕ್ಕೆ ಶೀಘ್ರ ಪೂರ್ಣತೆಯನ್ನೊದಗಿಸುವರಾಗಿ ನಂಬುತ್ತೇವೆ.

* * *

ಪುತ್ತೂರು:—ಇಲ್ಲಿಯ ಸೂಲಗಿತ್ತಿ ಮಿಸ್ಸೆಸ್ ಜೋರ್ಜಿನರವರು ೨ ತಿಂಗಳ ರಜೆ ಪಡಕೊಳ್ಳುವರಂತೆ. ಆದರೆ ಈ ಎರಡುತಿಂಗಳ ಕಾಲಕ್ಕೆ ಬದಲಿ ಸೂಲಗಿತ್ತಿಯರು ನೇಮಿಸಲ್ಪಡುವುದಿಲ್ಲವೆಂಬ ವಾರ್ತೆಯಿಂದ ಇಲ್ಲಿಯ ಗರ್ಭಿಣಿ ಹೆಂಗಸರು ವಿಶಾದಪಡುತ್ತಿರುವರು. ಈ ವಿಷಯ ತಾಲೂಕು ಬೋರ್ಡು ಪ್ರೆಸಿಡೆಂಟರು ತಕ್ಕ ನಿಗಾಕೊಡಬೇಕಾಗಿ ಕೋರುತ್ತೇವೆ.

ಇಲ್ಲಿಗೆ ಮಿ| ವೊನ್ಸಫೊಲ್ ಎಂಬವರು ಕಾಯಂ ಪೋಸ್ಟುಮಾಸ್ತರರಾಗಿ ಬಂದಿರುತ್ತಾರೆ.

ಸುಬ್ರಮಣ್ಯದಲ್ಲಿ ಜಾನುವಾರುಗಳು ಬಹಳವಾಗಿ ಬಂದಿವೆ ಎಂದು ಕೇಳುತ್ತೇವೆ.

ಆರಿಯಪ್ಪು ಗ್ರಾಮದ ಮುಲ್ಕಿ ಐತು ಎಂಬವನಿಗೆ ತಾ. ೨೪ರಲ್ಲು ಯಾರೋ ಮುರ್ತೆ ಕತ್ತಿಯಿಂದ ಹೊಡೆದು ಕೊಂದಿದ್ದರು. ಇವನ ಶವವನ್ನು ಇಲ್ಲಿಗೆ ತಂದಿರುವರು. ಅನುಮಾನದ ಮೇಲೆ ಗುರುವ ಎಂಬವನನ್ನು ಪೋಲೀಸಿನವರು ಕೈದುಮಾಡಿರುತ್ತಾರೆ.

ಇಲ್ಲಿಯ ಸಬ್ ರಿಜಿಸ್ಟ್ರಾರರಾದ ರಾ| ಲಕ್ಷ್ಮಣರಾಯರು ಆಫೀಸು ಹೆಡ್‌ಕ್ಲಾರ್ಕರಿಗೆ ಚಾರ್ಜ ವಹಿಸಿಕೊಟ್ಟು ೨ ತಿಂಗಳ ರಜೆ ಮೇಲೆ ಹೋಗಿರುವರು.

ಖಜನಾ ಡ್ಯುಪಿಟಿ ಕಲೆಕ್ಟರರು ಇಲ್ಲಿಯ ಖಜಾನೆ ತನಖಿ ನಡಿಸುವರೆ ತಾ. ೨೫ರಲ್ಲು ಚಿತ್ತೈಸಿರುವರು.

* * *

ಅರ್ಳದ ಒಬ್ಬ ಬಾತ್ಮೀದಾರರಿಂದ:—ಈ ತಿಂಗಳ ೧೫ನೇ ತಾರೀಕಿಗೆ ಸಾಯಂಕಾಲ ೮ನೇ ಸರ್ಕಲ್ ಶಾಲೆಗಳ ಇನ್ಸ್‌ಪೆಕ್ಟರ್ ಮಿ| ಲಿಟ್ಲ್‌ಹೇಲ್ಸ್ ಸಾಹೇಬರವರು ನಮ್ಮ ಗ್ರಾಮದಲ್ಲಿರುವ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸುವುದಕ್ಕೆ ಬಂದಿದ್ದರು. ಶಾಲೆಯ ಮೆನೇಜರ್ ಮತ್ತು ಅರ್ಳಗ್ರಾಮದ ಪಟೇಲರೂ ಮಂಗ್ಳೂರು ತಾಲೂಕು ಬೋರ್ಡು ಮೆಂಬರರೂ ಆಗಿರುವ ಮಹಾರಾಜೇಶ್ರೀ ಗುಮ್ಮಣ್ಣ ಶೆಟ್ಟರು ಸಾಹೇಬರನ್ನೂ ಅವರ ಜತೆಯಲ್ಲಿ ಬಂದಿದ್ದ ದಕ್ಷಿಣಕನ್ನಡ ಶಾಲೆಗಳ ಅಸಿಸ್ಟಾಂಟ ಇನ್ಸ್‌ಪೆಕ್ಟರ್ ರಾಯಬಹದ್ದೂರ ಮ. ರಘುನಾಥರಾಯರನ್ನೂ ಛಂದಗಾಣಿಸಿ ಶಾಲೆಗೆ ಕರತಂದನಂತರ, ಅದೇ ರಾತ್ರೆ ೮ ಗಂಟೆಗೆ ಶಾಲೆಯ ಮಕ್ಕಳು 'ಲಕ್ಷ್ಮೀಸರಸ್ವತಿ ಸಂವಾದ'ವೆಂಬ ನಾಟಕವನ್ನು

ಆದಿ ಆಮಂತ್ರಿಕರಿಗೆಲ್ಲ ಸಂತೋಷಗೊಳಿಸಿದರು. ಮರುದಿನ ಸಾಹೇಬರೂ ಅಸಿಸ್ಟಾಂಟ ಇನ್ಸ್‌ಪೆಕ್ಟರರೂ ಶಾಲೆಯನ್ನು ಸಂದರ್ಶಿಸಿದರು. "ಇಂಥ ಉತ್ತಮ ಸ್ಥಿತಿಯಲ್ಲಿರುವ ಶಾಲೆಯನ್ನು ನೋಡಲಿಕ್ಕೆ ತನಗೆ ಸಂದರ್ಭದೊರಕಿದುದು ಸಂತೋಷಕರವಾಗಿದೆ. ಮೆನೇಜರರು ಇದನ್ನು ಹ್ಯಾಯರ್ ಎಲಿಮೆಂಟರಿ ಅಂದರೆ ಏಳನೇ ದರ್ಜೆವರೆಗಿನ ಶಾಲೆಯಾಗಿ ಏರ್ಪಡಿಸಲಿಕ್ಕೆ ಪ್ರಯತ್ನಪಡುತ್ತಾರೆಂತಲೂ ಅದಕ್ಕೆ ಅಗತ್ಯವಿರುವ ಕಟ್ಟೋಣವನ್ನು ತಮ್ಮ ಸ್ವಂತ ಖರ್ಚಿನಿಂದ ಕಟ್ಟಿಸುವುದಕ್ಕೆ ಉದ್ಯುಕ್ತರಾಗಿದ್ದಾರೆಂತಲೂ ಕೇಳಿ ತುಂಬಾ ಆನಂದವಾಗಿದೆ. ಇಲ್ಲಿ ವ್ಯವಸಾಯ ಸಂಬಂಧವಾದ ಜ್ಞಾನವನ್ನು ಮಕ್ಕಳಿಗೆ ಕೊಡಬೇಕೆಂದು ಮಾಡುವ ಪ್ರಯತ್ನಗಳು ಶ್ಲಾಘನೀಯವಾಗಿವೆ" ಎಂಬ ರೀತಿಯಾಗಿ ಅಭಿಪ್ರಾಯವನ್ನು ಸಾಹೇಬರವರೂ ಅಸಿಸ್ಟಾಂಟ ಇನ್ಸ್‌ಪೆಕ್ಟರವರೂ ಕೊಟ್ಟಿದ್ದಾರೆ.' ಈ ಶಾಲೆಗೆ ಸಂಬಂಧಪಟ್ಟ ಬೋರ್ಡಿಂಗ್ ಹೌಸಿನಲ್ಲಿ ೨೦ ಮಂದಿ ಜೈನ ವಿದ್ಯಾರ್ಥಿಗಳೂ ಊಟ ಉಪಚಾರಗಳ ಖರ್ಚು ಇಲ್ಲದೆ ಸಹಾಯ ಹೊಂದುತ್ತಾರೆ. ಈ ವರ್ಷ ೫ನೇ ದರ್ಜೆಯನ್ನು ಪ್ರಾರಂಭಿಸಿಯದೆ. ಈಗಿರುವ ಕಟ್ಟೋಣಕ್ಕೆ ಸುಮಾರು ೩ ಸಾವಿರ ರೂಪಾಯಿ ಖರ್ಚುತಗಲಿದ್ದರೂ ಅದರಲ್ಲಿ ಸಾಕಷ್ಟು ಸ್ಥಳವಿಲ್ಲವೆಂಬದರಿಂದ ಕಟ್ಟೋಣವನ್ನು ತೀರಾ ಬಿಚ್ಚಿ ಹೊಸತಾಗಿ ಕಟ್ಟಿಸುವುದಕ್ಕೆ ಶೆಟ್ಟರು ಸಾಮಾಗ್ರಿಗಳನ್ನು ತಯಾರಿಸುತ್ತಲಿದ್ದಾರೆ. ಶಾಲೆಯಲ್ಲಿ ಉತ್ಸಾಹವುಳ್ಳ ಉಪಾಧ್ಯಾಯರು ಇರುವುದಲದೆ ಮೆನೇಜರರೂ ಸ್ವತಃ ವಿದ್ಯಾವ್ಯಾಸಂಗವುಳ್ಳವರಾಗಿ ಮಕ್ಕಳ ಶ್ರೇಯೋಭಿವೃದ್ಧಿಯ ವಿಷಯದಲ್ಲಿ ಸದಾ ಚಿಂತಿಸುತ್ತಲಿದ್ದಾರೆ. ದಕ್ಷಿಣ ಕನ್ನಡದಲ್ಲಿ ಇವರಂತಹ ಮತ್ತು ಇವರಿಗೆ ಮಿಕ್ಕಿದ ಧನಾಢ್ಯರು ಇದ್ದಾರೆ. ಆದರೆ ಬಡಜನರಿಗೆ ವಿದ್ಯಾಲಾಭವನ್ನು ದೊರಕಿಸುವುದಕ್ಕೆ ಹಣದ ಗಂಟನ್ನು ಬಿಚ್ಚುವುದರಲ್ಲಿ ಇವರೇ ಮುಂದಾಳಾಗಿರುವರು.

~~~~~~

ಮುಲ್ಕಿ. ಇಲ್ಲಿಯ ಸುಬ್ರಾಯ ಭಟ್ಟರಿಗೆ ಏನೋ ಕಾರಣದಿಂದ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಪೂಜೆ ನಡೆಯಿಸಕೂಡದೆಂತ ದೇವಸ್ಥಾನದ ಮೊಕ್ತೇಸರರು ಆಜ್ಞಾಪಿಸಿದ್ದರಂತೆ. ತಾ. ೨೫ನೇ ಓಕ್ಲಿ ಉತ್ಸವದ ದಿನ ಪೂಜೆ ನಡಿಸುವ ಬಗ್ಯೆ ಸದರಿ ಭಟ್ಟರವರು ಡಿವಿಜನಲ್ ಆಫೀಸರರಿಗೆ ಮನವಿ ಮಾಡಿ ಪೋಲೀಸ್ ಸಹಾಯ ಕೇಳಿಕೊಂಡಲ್ಲಿ ಈ ಸಂಬಂಧ ಮುಲ್ಕಿಗೆ ಬಂದಿದ್ದ ಸಬ್ ಮೇಜಿಸ್ಟ್ರೇಟರು ದೇವಸ್ಥಾನದಲ್ಲಿ ಪೂಜೆ ನಡೆಯಿಸಕೂಡದೆಂತ ಭಟ್ಟರಿಗೆ ಹುಕುಂ ಮಾಡಿದಲ್ಲದೆ ಆ ದಿನದ ಓಕ್ಲಿ ಉತ್ಸವವನ್ನೇ ನಿಲ್ಲಿಸಿದರು. ಇಲ್ಲಿ ದಂಗೆಯಾಗಬಹುದೆಂಬ ಭಾವನೆಯಿಂದ ಆಫೀಸರರು ಕೈಕೊಂಡ ಈ ಜಾಣತನದ ಕೃತ್ಯವು ಶ್ಲಾಘನೀಯವಾದುದಾದರೂ ವರ್ಷಂಪ್ರತಿ ನಡೆಯುವ ಓಕ್ಲಿ ಉತ್ಸವ ದಮನದಿಂದ ದೇವತಾ ಪೂಜೆಗೆ ಭಂಗವಾದುದು ನಮ್ಮೂರ ಭಕ್ತಜನರ ಪುಣ್ಯವೆಂದೇ ಹೇಳಬೇಕು.

ಇಲ್ಲಿಯ ಪಲ್ಮಾರ್ ಮೊದಲಾದ ಗ್ರಾಮಗಳಲ್ಲಿ ವಾಂತಿಭೇದಿ ರೋಗವು ತಲೆದೋರಿಯದೆ.

~~~~~~

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೫ ಪ್ಲೇಗ ಮರಣಗಳಿದ್ದವು.

ಮೆ| ಜೆ. ಡಬ್ಲ್ಯು. ವೆಲ್ಸ್, ಐ. ಸಿ. ಎಸ್‌ರವರು ಕುಂದಾಪುರ ಡಿವಿಜನಿನ ಅಸಿಸ್ಟಾಂಟ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ಪುತ್ತೂರು ಡಿವಿಜನಲ್ ಆಫೀಸರಾದ ಮೆ| ಪಿ. ಕುಂಞಾಯಿನ್ ಸಾಹೇಬರವರಿಗೆ ಹೆಚ್ಚಿಗೆ ಒಂದು ಹಪ್ತೆಯ ಪ್ರಿವಿಲೆಜ್ ರಜೆಯು ಶಿಕ್ಕಿರುತ್ತದೆ.

ಕಲೆಕ್ಟರ್ ಕಚೇರಿಯ I ಎಕೌಂಟಾಂಟರಾದ ಮೆ| ಎ. ಎಲ್. ಸಾಲ್ಡಾಂಞರವರು ೧೯೧೩ನೇ ಮಾರ್ಚಿ ತಾ. ೩ರಿಂದಲೂ ತಾಲೂಕು ಆಫೀಸಿನ ಹೆಡ್ ಕ್ಲಾರ್ಕರಾಗಿರುವ ಮೆ| ಎಸ್. ಡೇಸರು ಇದೇ ದಶಂಬರ ತಾ. ೧ರಿಂದಲೂ ಪೆನ್ಶನ ಪಡಕೊಳ್ಳಬೇಕಾಗಿ ಹುಕುಂ ಬಂದಿರುತ್ತದೆ.

ಇಲ್ಲಿಯ ಡಿವಿಜನಲ್ ಆಫೀಸಿನ II ಕ್ಲಾರ್ಕರಾಗಿರುವ ಮೆ| ಪಿ. ಎಸ್. ಫೆರ್ನಾಂಡಿಸರಿಗೆ ಕುಂದಾಪುರಕ್ಕೂ ಅಲ್ಲಿಯ II ಕ್ಲಾರ್ಕರಾಗಿದ್ದ ರಾ| ಕೆ. ಚಂದು ಭಂಡಾರಿಗಳವರಿಗೆ ಮಂಗಳೂರಿಗೂ ವರ್ಗವಾಗಿರುವುದಾಗಿ ತಿಳಿಯುತ್ತೇವೆ.

ತಾಲೂಕಾಫೀಸಿನ ಹೊಸ ಸ್ಕೀಮಿನ ಪ್ರಕಾರ ಸಂಬಳ ಹೆಚ್ಚಿದವರಿಗೆ ಈ ವರೆಗೆ ಶಿಕ್ಕುತ್ತಿದ್ದ ಮಂಗಾಯಿ ಬತ್ತೆಯು ರದ್ದು ಮಾಡಲ್ಪಟ್ಟಿರುತ್ತದೆ.

೫ ಮೈಲುಗಳಿಗಿಂತಲೂ ದೂರದಿಂದ ಸೆಶ್ಶನ್ಸ್ ಕೋರ್ಟಿಗೆ ಹಾಜರಾಗಬಹುದಾದ ಎಸ್ಸೆಸರರಿಗೆ ಮತ್ತು ಜೂರಿಯವರಿಗೆ ಪ್ರಯಾಣದ ಖರ್ಚು ಬಗ್ಯೆ ಭತ್ತೆಯನ್ನು ಗವರ್ನಮೆಂಟಿನವರು ಸೆಂಕ್ಶನ್ ಮಾಡಿರುತ್ತಾರೆ.

ಇಲ್ಲಿಯ ಬೆಂಚ್ ಮೇಜಿಸ್ಟ್ರೇಟರಾಗಿರುವ ರಾ. ಕೆ. ಸುಲಾಯ, ಜಮೀನ್ದಾರ ರಾ. ಎ. ಬಾಲಕೃಷ್ಣಸೆಟ್ಟಿ, ತಾಲೂಕುಬೋರ್ಡು ಮೆಂಬರ್ ರಾ| ಎಚ್. ಕೊರಗಪ್ಪ ಮೊದಲಾದ ಕೆಲವು ಗೃಹಸ್ಥರು ಕೂಡಿ ನಾಲ್ಕನೇ ವರ್ಣದವರ ಅಭಿವೃದ್ಧಿಗಾಗಿ ಇಲ್ಲಿ ಒಂದು ವ್ಯಾಪಾರ ಸಂಘವನ್ನು ಏರ್ಪಡಿಸಲಿಕ್ಕಿದ್ದಾರೆಂದೂ ಈ ವಿಷಯ ಆಲೋಚಿಸುವರೆ ಇದೇ ಬರುವ ಆದಿತ್ಯವಾರ ತಾ. ೧ರಲ್ಲು ಪರಾನ್ಹ ೪ ಗಂಟೆಗೆ ಮಂಗಳೂರು ಪೋಲೀಸ್ ಸ್ಟೇಶನ್ ಎದುರಿನ ಶಾಫಿನ ಉಪ್ಪರಿಗೆಯ ಮೇಲೆ ಸಭೆ ಕೂಡುವುದೆಂದೂ ತಿಳಿಯುತ್ತೇವೆ.

ಪೋಲೀಸ್ ಇನ್ಸ್‌ಪೆಕ್ಟರ್ ಮ. ರಾ. ಕುಳ್ಯಾ ಶ್ರೀನಿವಾಸ ಕಿಣಿಯವರ ಮೇಲಿನ ಮೊಕದಮೆಯ ಡಿಪಾರ್ಟಮೆಂಟಿನ ತನ್ಕಿಯು ಸಹಾ ತೀರ್ಮಾನವಾಗಿ ಸದರಿಯವರಿಗೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಇನ್ಸ್‌ಪೆಕ್ಟರರಾಗಿ ವರ್ಗಾಯಿಸಲ್ಪಟ್ಟು ಅಲ್ಲಿಯ ಚಾರ್ಜನ್ನು ವಹಿಸಿಕೊಂಡಿರುವರು.

ಸರ್ಕೀಟಿನಲ್ಲಿದ್ದ ಜಿಲ್ಲಾ ಕಲೆಕ್ಟರವರು ಕಳದ ತಾ. ೨೫ಕ್ಕೆ ಇಲ್ಲಿಗೆ ಬಂದಿರುವರು.

ಪೋಲೀಸ್ ಇಲಾಖೆಯ ಡಿಪ್ಯುಟಿ ಇನ್ಸ್‌ಪೆಕ್ಟರ್ ಜನರಲರಾದ ಮೆ| ಸಿ. ಡಿ. ಜೆ. ಕಾರ್ಮಿಕಯೇಲ್ ದೊರೆಗಳವರು ಕಳದ ತಾ. ೨೪ಕ್ಕೆ ಇಲ್ಲಿಗೆ ತಲ್ಪಿ ತಾ. ೨೫ರಲ್ಲು ರಿಜರ್ವ ಪೋಲೀಸ್ ಇಲಾಖೆಯನ್ನೂ ೨೬ರಲ್ಲು ಟೌನ್ ಪೋಲೀಸ್ ಇಲಾಖೆಯನ್ನೂ ತಾ. ೨೭-೨೮ರಲ್ಲು ತಾಲೂಕು ವ ಪೋಲೀಸ್ ಆಫೀಸನ್ನೂ ತನ್ಕಿ ಮಾಡಿ ಇಲ್ಲಿಯ ಪೋಲೀಸ್ ಸುಪರಿಂಟೆಂಡೆಂಟರಾದ ಎ. ಸುಬ್ಬರಾವ್ ಗಾರುಗಳವರ ಕೆಲಸಕ್ಕೆ ಸಂತುಷ್ಟರಾಗಿ ಒಳ್ಳೇ ಅಭಿಪ್ರಾಯವನ್ನು ಬರದಿರುವುದಾಗಿ ತಿಳಿಯುತ್ತೇವೆ. ಈ ದಿನ ದೊರೆಗಳವರು ಬಂಟವಾಳ ಅತ್ತಕಡೆ ತೆರಳುವರು.

ಇಲ್ಲಿಯ ಎನ್. ಆನಂದನ್‌ಬ್ರದರ್ಸ್ ಕಂಪೆನಿಗೆ ದುರುಸ್ತಿಗೆ ಬಂದಿದ್ದ ಒಂದು ಕಳ್ಳ ವಾಚನ್ನು ಅವರು ಹಿಡಿದು ಕೊಟ್ಟದಕ್ಕಾಗಿ ಸರಕಾರದಿಂದ ನಾಲ್ಕು ರೂಪಾಯಿ ಉಡಿಗೆರೆ ಕೊಡೋಣಾಗಿರುವದು.

ಗವರ್ನಮೆಂಟ್ ಹುಡಿಗಿಯರ ಟ್ರೈನಿಂಗ್ ಶಾಲೆಗೆ ಪುನಃ ಇಬ್ಬರು ಉಪಾಧ್ಯಾಯಿನಿಯರು ನೇಮಿಸಲ್ಪಟ್ಟಿರುವರು. ಈ ಶಾಲೆಯಲ್ಲಿ ಬಾಲಕದರ್ಜೆಯಿಂದ ೪ನೇ ದರ್ಜೆಯವರೆಗೂ ಕಲಿಯುವ ಬಾಲಕಿಯರಿಂದ ತಿಂಗಳಿಗೆ ಒಂದಾಣೆ ಮಾತ್ರ ವಸೂಲುಮಾಡುವುದರಿಂದ ಬಡವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವರೆ ಸುಲಭ ಉಪಾಯ ದೊರಕಿದಂತಾಯಿತು.

ಇಲ್ಲಿಯ ಅನಂತಕಾಮತ್ ಶ್ರೀನಿವಾಸಕಾಮತ್ ಎಂಬವರು ದಿನೇ ದಿನೇ ಅಧೋಗತಿಗಿಳಿಯುತ್ತಿರುವ ಹಿಂದೂ ಸಂಗೀತ ವಿದ್ಯೆಯನ್ನು ಉಚ್ಛ್ರೇಯಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ಇಲ್ಲಿ ಕಳದ ಶುಕ್ರವಾರ ಒಂದು ಸಂಗೀತ ಧರ್ಮವಿದ್ಯಾಲಯವನ್ನು ಸ್ಥಾಪಿಸಿದ್ಧಾರೆಂತ ತಿಳಿಯಲು ಸಂತೋಷಪಡುತ್ತೇವೆ. ಈ ವಿದ್ಯಾಲಯದಲ್ಲಿ ಧರ್ಮಾರ್ಥವಾಗಿ ಸಂಗೀತ ವಿದ್ಯೆ ಕಲಿಯಬಹುದು. ಇವರ ಉದ್ದೇಶವು ಸದಾ ನಿರತವಾಗುವಂತೆ ಧರ್ಮ ಬುದ್ಧಿಯುಳ್ಳವರೆಲ್ಲರೂ ಇವರಿಗೆ ಉದಾರಾಶ್ರಯವನ್ನು ಕೊಡುವರೆಂದು ಹಾರಯಿಸುತ್ತೇವೆ.

ಒಬ್ಬ ಬಾತ್ಮೀದಾರರಿಂದ. ದಿವಂಗತರಾದ ಕೀರ್ತಿಶೇಷ ಅರಸಪ್ಪನವರ ೩೬ನೇ ವರ್ಷದ ಮರಣ ದಿನವನ್ನು ಆಚರಿಸುವ ಬಗ್ಯೆ ಆತ್ಮವಿದ್ಯಾಸಾಧಕ ಸಂಗತ್ಸಭೆಯು ಇದೇ ತಿಂಗಳ ೧೮ನೇ ತಾರೀಕು ಸೋಮವಾರ ದಿವಸ ಸಾಯಂಕಾಲ ೬॥ಗಂಟೆ ಸಮಯಕ್ಕೆ ಗೊಲ್ಲರ ಕೇರಿಯಲ್ಲಿರುವ ಮ. ರಾ. ರಾ. ಯನ್. ಆನಂದನವರ ಮನೆಯಲ್ಲಿ ನೆರದು ಬಂತು. ಮ| ರಾ| ರಾ| ಉಳ್ಳಾಲ ರಘುನಾಥಯ್ಯನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ನಮ್ಮ ಪಟ್ಟಣದ ಕೆಲವು ಸಂಭಾವಿತ ಗೃಹಸ್ಥರೂ, ಉದ್ಯೋಗಸ್ಥರೂ, ಹಿತಚಿಂತಕರೂ ಆ ದಿವಸ ಅಲ್ಲಿ ಕೂಡಿಬಂದಿದ್ದರು. ಕೆಲವು ಕೀರ್ತನೆಗಳನ್ನು ಹಾಡಿದನಂತರ ಸಂಗತ್ಸಭೆಯ ಇಬ್ಬರು ಮೆಂಬರರು ಕೀರ್ತಿಶೇಷ ಅರಸಪ್ಪನವರ ಜೀವನ ಚರಿತ್ರೆಯ ಮುಖ್ಯಾಂಶಗಳನ್ನು ಕೂಡಿ ಬಂದ ಸಭಿಕರಿಗೆ ತಿಳಿಸಿ, ಅವರು ತನ್ನ ಸ್ವಜಾತಿ ಉದ್ಧರಣಾರ್ಥವಾಗಿ ಪಟ್ಟ ಕಷ್ಟ ಹಿಂಸೆಗಳನ್ನು ವರ್ಣಿಸಿ, ಅವರ ಜೀವನ ಚರಿತ್ರೆಯಿಂದ ತಿಳಿದುಕೊಳ್ಳ ತಕ್ಕ ಕೆಲವು ಬುದ್ಧಿವಾದಗಳನ್ನು ವಿವರಿಸಿ ಹೇಳಿದರು. ನಂತರ ಅಧ್ಯಕ್ಷರು ಅರಸಪ್ಪನವರು ಬ್ರಹ್ಮಧರ್ಮವನ್ನು ಮಂಗಳೂರಿಗೆ ತರಿಸಲಿಕ್ಕೆ ಪಟ್ಟ ಕಷ್ಟಶ್ರಮವನ್ನೂ, ಅವರು ಸ್ವಜಾತಿ ಗೃಹಸ್ಥರಿಗೆ ತೋರಿಸಿದ ಉಪಕಾರಗಳನ್ನೂ, ಅವರ ಉದಾರತೆಯನ್ನೂ, ಅಸ್ವಾರ್ಥತೆಯನ್ನೂ, ನಿಶ್ಚಲವಾದ ಭಕ್ತಿಯನ್ನೂ ಉದಾಹರಿಸಿ ಅರ್ಥಗರ್ಭಿತವಾದ ಮತ್ತು ಸುರಸವಾದ ಭಾಷಣವನ್ನು ಮಾಡಿದರು.

~~~~~~

ವಿವಿಧ ವಿಷಯಗಳು.

~~~~~~

ಸೊನ್ನೆಬರ್ಗ್ ಎಂಬ ಪಟ್ಟಣದಲ್ಲಿ ೪೦,೦೦೦ ಮಂದಿ ಆಟದ ಸಾಮಾನುಗಳನ್ನು ಮಾಡುವ ವೃತ್ತಿಯನ್ನೇ ಕೈಕೊಂಡವರಿರುವರು. ಇವರು ವರ್ಷ ಒಂದಕ್ಕೆ ೨೪ ಮಿಲಿಯ ಆಟದ ಸಾಮಾನುಗಳನ್ನು ಮಾಡುವರು.

~~~~~~

ಪಾರಿಸ್ ನಗರದ ಬ್ವೊಯ್ಸ್ ಡಿ ಬೊಲೋನ್ ಎಂಬ ಸ್ಥಳದಲ್ಲಿ ೨ ಅಡಿ ಎತ್ತರವಿರುವ ಒಂದು ದನವಿದೆ. ಎತ್ತರಕ್ಕೆ ಸರಿಯಾಗಿ ಅದರ ದೇಹಪ್ರಕೃತ್ತಿಯೂ ಕೋಡುಗಳೂ ಇವೆ.

~~~~~~

ಬಹಳ ದೂರ ನಡೆದು ಯಾ ಕೆಲಸಮಾಡಿ ಕಾಲುಗಳು ಬಹಳ ದಣಿದಿದ್ದರೆ ಬಿಸಿನೀರಿಗೆ ತುಸ ಉಪ್ಪುಹಾಕಿ ಕಾಲುಗಳನ್ನು ಜಲಕಮಾಡಿಸಿದರೆ ಆಯಾಸ ನಿವಾರಣೆಯಾಗುವುದು.

~~~~~~

ಕಾಲಿನ ಬೂಟೂಸುಗಳೂ, ಸಾಪಾಸುಗಳೂ ಮಳೆಗಾಲದಲ್ಲಿ ಉಪಯೋಗಿಸಬೇಕಾದರೆ ಅದನ್ನು ಬಿಸಿಮಾಡಿ, ಬಿಸಿಯಾಗಿರುವಾಗಲೇ ಗೋಪಾಳ ವಾರ್ನಿಸ್ ಬಳಿದುಬಿಟ್ಟರೆ ಅದು ನೀರನ್ನು ಎಳೆದು ಕೊಳ್ಳದು.

~~~~~~

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲ ಔಷಧಕ್ಕೆ ರೂಪಾಯಿ 4—8—0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:— ಕಲ್ಲಿ ಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದರಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿ ಕೋಟೆ

પ્રો. જેમ્સની વિજળીક શક્તિની ગોળીઓ.
PROF. JAMES' ELECTRO TONIC PEARLS.
प्रो.जेम्स याची विद्युत शक्ति वर्धक गुटीका.

"ಅಮೇರಿಕದ ವಿಶಿಷ್ಟತೆ."

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್"ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯ ಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿ ಗೈಯಲಾಪ ಪದಾರ್ಥಗಳಿರುವದರ—ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಉಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ.— ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ದೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲ ವಾಗಿ ದೃಷ್ಟಿಯು ಪ್ರಭೆಯನ್ನುಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಯನ್ನು ಪ್ರದರ್ಶಿಸುವ ಹಣೆ, ಮಾತೃತ್ವ ಮಹತ್ವದ ಸೂಚನೆಯುಳ್ಳ ಒಡಲು, ಪಾತಿವ್ರತ್ಯದ ಪುಣ್ಯ ಜೀವನ, ಭಕ್ತಿಮಯವಾದ ಕಣ್ಣನೋಟ, ಹೃದಯದಲ್ಲಿ ತುಂಬಿ ತುಳುಕುವ ಪ್ರೇಮ,—ಇವೇ ಮೊದಲಾದ ಸಲ್ಲಕ್ಷಣಗಳು ಕುರೂಪಿ ಕೃಷ್ಣ ವರ್ಣದ ಪಾಮರ ಸ್ತ್ರೀಯಲ್ಲಿಯೂ ಕೂಡಾ ಆಕೆಯು ರೋಗವಾಸನೆಯಿಲ್ಲದೆ ಇರುವುದಾದರೆ ಮಾತ್ರ ಸಂಪೂರ್ಣ ಬಲದಿಂದ ತೋರುವುವು. ದೈವಬಲದ ವರದಿಂದ ಲೋಕದಲ್ಲಿ ಸೌಂದರ್ಯವು ಪುಣ್ಯ ಕರ್ಮಿಗಳಲ್ಲಿ ಮಾತ್ರ ಇರುತ್ತಿತ್ತೆಂಬ ಪ್ರಾಚೀನರ ಭಾವನೆಯು ಗ್ರೀಕ (ಯವನ) ರಲ್ಲಿ ಹೆಚ್ಚಾಗಿ ನೆಲೆಗೊಂಡಿತ್ತು. ಗ್ರೀಕ ದಾರ್ಶನಿಕರಲ್ಲಿ ಹಲವರು ಲಾವಣ್ಯವು ಅಲ್ಪ ಜೀವನದ ಸೌಭಾಗ್ಯ, ಸೃಷ್ಟಿಯ ವಿಶೇಷ ಪಕ್ಷಪಾತ, ಅಪರೂಪ ಸಾಮ್ರಾಜ್ಯಾಧಿಕಾರ, ನರಪ್ರಾಣಿಗಳನ್ನು ಸೆಳೆದ ಬಲೆ, ಅಪರಿಚಿತರನ್ನು ಆಪ್ತರಾಗಿಸುವ ಯೋಗ್ಯತಾ ಪತ್ರವೆಂದೂ, ಮಿಕ್ಕವರು ಸೌಂದರ್ಯವೆಂಬುದೊಂದು ಗಂಡಾಂತರವೆಂದೂ ಕೃತ್ರಿಮ ಮೂಲವೆಂದೂ ಹೇಳಿರುವರು. ಪ್ರೇಮಮಯವಾದ ಜಗತ್ತಿನಲ್ಲಿ ಸೃಷ್ಟಿಗೆ ಆತ್ಮವೇ ಸೌಂದರ್ಯವು. ಗೃಹಸ್ಥ ಮಾರ್ಗದಲ್ಲಿ ಪ್ರೇಮೋಜ್ವಲ ಸೌಂದರ್ಯವೇ ಸಂಸಾರದ ದುಸ್ತರ ಪಥದ ಮೇಲೆ ಬೀಳುವ ಶುಭ್ರ ಬೆಳಕು.

ಕುಶಲ್ವತ, ಉಲ್ಲಾಸಿತ ಮನಸ್ಸು, ಕಾರ್ಯ ಚತುರತೆಗಳು ಆರೋಗ್ಯದ ಎರಡನೆಯ ಲಕ್ಷಣ. ಬಂಜರುಗಳನ್ನು ಉದ್ಯಾನಗಳಾಗಿ ಮಾಡುವುದೂ, ಜನಾಂಗದ ವ್ಯವಹಾರಗಳಿಗೆ ಎಲ್ಲಾ ತರದ ಅನುಕೂಲತೆಗಳನ್ನೊದಗಿಸುವುದೂ ಬರ್ಬರರಿಗೆ ಸಭ್ಯತೆಯನ್ನು ದಾನಮಾಡುವುದೂ ಚತುರತೆಯ ಫಲ. ಅಕ್ಲಾಂತ ಪರಿಶ್ರಮದಿಂದಲೇ ಆರೋಗ್ಯವು ಬಲಿತಾಗುವುದು. ಕಾಯಕಷ್ಟದಿಂದ ಆರೋಗ್ಯವನ್ನು ಸಂಪಾದಿಸಿ, ಮತ್ತು ಕಾಯಕಷ್ಟದಿಂದಲೇ ಅದನ್ನು ಕಾಪಾಡಬೇಕಾಗಿದೆ. ಆರೋಗ್ಯವು ನಮ್ಮ ಜೀವನದ ಮೂಲಧನವಾದುದರಿಂದ ಅದನ್ನು ಸ್ಥಿರಪಡಿಸಿ ಭದ್ರತೆಯಿಂದಿಟ್ಟು ಬಡ್ಡಿಗೆ ಬಡ್ಡಿಹೊಂದುವ ಹಾಗೆ ಪರಿಶ್ರಮದಿಂದ ಅದನ್ನು ಜತನಗೊಳಿಸಬೇಕು; ಹಾಗಲ್ಲದೆ ಮಾನಸಿಕ ಪ್ರವೃತ್ತಿಯಿಂದ ಆರೋಗ್ಯವನ್ನು ವ್ಯಯಿಸುತ್ತ ಇದ್ದರೆ, ಕಡೆಗೆ ಮೂಲಧನದಲ್ಲಿಯ ಒಂದೇ ಒಂದು ಚಿಕ್ಕಾಸಾದರೂ ಉಳಿಯದ ದಿನ ಬರುವುದು,—ಇದೇ ದೈಹಿಕ ಸಂಪತ್ತಿನ 'ದಿವಾಳಿ.' ಆದುದರಿಂದ ಈ ದುರ್ಗತಿ ಬಂದೊದಗದಂತೆ ಇಂದಿನಿಂದಲೇ ಕ್ರಮದಿಂದ ಕೊಂಚ ಪರಿಶ್ರಮಿಸಲು ಪ್ರಯತ್ನಿಸಿ, ಪರಿಶ್ರಮ ಸಾಹಸದಿಂದ ಕರ್ಮಯೋಗಿಗಳಾಗಲು ಪೇಚಾಡುವ!.

ಪುಷ್ಟತೆಯೂ ಬಲವೂ ಆರೋಗ್ಯ ಭಾಗ್ಯದ ಮೂರನೆಯ ಲಕ್ಷಣ, ಜನಾಂಗಗಳ ಇತಿಹಾಸದಿಂದ ಉನ್ನತಿಕೆಯು ಕುಲದ ಪುಷ್ಟತೆಯನ್ನಾದರಿಸಿದಂತೆ ತಿಳಿವುದು. ಪುರಾಣ ಪುರುಷರೂ ಕಾದಂಬರಿಯ ನಾಯಕರೂ ದೇಹ ಬಲದಿಂದಲೇ ಸರ್ವಸಾಧನೆಗಳನ್ನೂ ನಡೆಯಿಸಿದಂತೆ ಅರಿಯುತ್ತೇವೆ. ಮುಂದಾಳುಗಳಾಗುವವರು ಕಾಯಬಲವಿಲ್ಲದೆ ಮನೋಬಲದಿಂದ ಮಾತ್ರ ಅಷ್ಟೊಂದು ಸಾರ್ಥಕತೆಯನ್ನು ಹೊಂದುವಂತಿಲ್ಲ. ಸಾರಾಂಶವೇನೆಂದರೆ, ದೃಢ ಮನಸ್ಕರಾಗಿ, ಚಿರಕಾರ್ಯಶಾಲಿಗಳಾದವರು ಧರ್ಮ ಪ್ರವೃತ್ತಿಯಿಂದ ತಮ್ಮ ಜೀವನವನ್ನು ದೀರ್ಘಗೊಳಿಸಿ, ಪರಮಾತ್ಮನಿತ್ತ ಜನ್ಮವನ್ನು ಸಾರ್ಥಕಗೊಳಿಸಿರುವುದರಿಂದಲೂ, ರೋಗ ಚಿಕಿತ್ಸೆಗಳಿಗಿಂತಲೂ ರೋಗ ನಿವಾರಣೆಯೇ ಹಿತಕಾರಿಯಾದುದರಿಂದಲೂ, ಆರೋಗ್ಯ ಸೂಚಕಗಳಾದ ಸಲ್ಲಕ್ಷಣಗಳು ನಮ್ಮ ದೇಹ ಪ್ರಕೃತಿಯಲ್ಲಿ ಬೆಳೆವಂತೆ ವರ್ತಿಸಿದರೆ ಸಂಸಾರವು ಸಾರಮಯವಾಗುವುದು; 'ಕೊನ್ಸರೆನ್ಸ'ಗಳ ಕಾರ್ಯವು ಕೈಗೂಡುವುದು; ಪ್ರಜಾ ಕ್ಷೇಮಕ್ಕೆ ಪೇಚಾಡುವ ಸರಕಾರಕ್ಕೆ ನಾವು ಸಹಕಾರಿಗಳಾದಂತಾಗುವುದು.

M. N. K.

ಕಮಲಪುರದ ಸಾರ್ವಜನಿಕ ಸಭೆ.

ಶಾಂತವಾಗಿ ಹರಿಯುವ ವೈತರಣೀ ನದಿಯ ದಡದಲ್ಲಿರುವ ಕಮಲಪುರದಲ್ಲಿ ಪ್ರತಿಫಲಿಸುತ್ತಲಿದ್ದ ಶಾಂತ ಸ್ವಭಾವವು ಇಂದಿಗೆ ಮಾಯವಾಗಿತ್ತು. ಊರಲ್ಲೆಲ್ಲ ಗಲಭೆ. ಎಲ್ಲರ ಬಾಯಿಯಲ್ಲಿಯೂ ರಾಯ್ ಬಹದ್ದೂರ ಚುಮ್‌ಚುಮ್ ಲಾಲರ ಭಾಷಣದ ಚರ್ಚೆ. (ಚುಮ್‌ಚುಮ್ ಲಾಲರು ಹಿಂದೂಸ್ಥಾನದಲ್ಲಿ ಪ್ರಸಿದ್ಧವಾದ ಸ್ವದೇಶಾಭಿಮಾನಿ ಸಂಘದ ಮೆಂಬರರು; ಊರೂರುಗಳಲ್ಲಿ ಸಂಚರಿಸಿ ಜನರಿಗೆ ಸ್ವದೇಶ ವಾತ್ಸಲ್ಯದ ವಿಷಯವಾಗಿ ಬೋಧೆಕೊಡುವುದರಲ್ಲಿ ದೀಕ್ಷೆ ಹಿಡಿದವರು) ಈ ದಿನ ಅವರ ಅಧ್ಯಕ್ಷತೆಯಲ್ಲಿ ಕಮಲಪುರದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿತ್ತು.

ಸಾಯಂಕಾಲ ನಿಶ್ಚಯಿಸಿದ ತಾಸಿಗೆ (೫ ಘಂಟೆಗೆ) ೨ ಘಳಿಗೆ ಮುಂಚಿತವಾಗಿಯೇ (ಇದು ಕಮಲಪುರದಲ್ಲಿ ವಿಶೇಷವೇ ಸರಿ!) ಟೌನ್ ಹೋಲನಲ್ಲಿ ಜನರೆಲ್ಲಾ ತುಂಬಿ ಹೋಗಿದ್ದರು. ಬಂದವರಲ್ಲಿ ಎಲ್ಲಾ ಜಾತಿಗಳ ಪ್ರಮುಖ ಗೃಹಸ್ಥರು ಹಾಜರಿದ್ದರು. (ಅವರ ಹೆಸರನ್ನು ಹೇಳದೆ ಹೋದರೆ ಅವರಿಗೆ ಸಿಟ್ಟಾದೀತು!)

ಖಾನಸಾಹೇಬ ಆವುಜಿ ಜಾವುಜಿ ಸೇಟ್, ಹುಂಡಿ ಸಾವುಕಾರರು, ರಾಯ ಸಾಹೇಬ ಅರವಿಂದ ಚರಣ ಬಾಬು ಇನ್ಸೂರೆನ್ಸ್ ಕಂಪೆನಿಗಳ ಏಜಂಟರು, ಶ್ರೀಯುತ ರತ್ನ ಗರ್ಭರಾಯರು ಜಮೀನುದಾರರು, ಶ್ರೀಯುತ ಗುಂಡಾಚಾರ್ಯರು ಜಿಲ್ಲೆಯ ದೇವಸ್ಥಾನಗಳ ಕಮ್ಮಿಟಿ ಮೆಂಬರರು, ಶ್ರೀಯುತ ಯಶವಂತರಾವ್ ಕೇಶವರಾವ್ ಬಿ. ಎ. ಎಲ್. ಎಲ್. ಬಿ. ಗವರ್ನಮೆಂಟ ಪ್ಲೀಡರ್, ಮೆ| ಎಚ್. ಪಿ. ಪಿ. ಸಾಲ್ದಾಂಞರು ಬಿ. ಎ. ಬಿ. ಎಲ್. ಹ್ಯಾಕೋರ್ಟು ವಕೀಲರು, ತಣ್ಣೀರ ತೋಟದ ಜನಾರ್ದನ ಶ್ಯಾನಭೋಗರು ಮುಂಬಾಯಿ ಕೊಚ್ಚಿ ಮುಂತಾದ ಬಂದರುಗಳಿಗೆ ವಿಶೇಷ ವ್ಯಾಪಾರ ನಡಿಸುವ ವರ್ತಕರು, ಇನ್ನೂ ಅನೇಕರು ಹಾಜರಿದ್ದರು.

ಅಧ್ಯಕ್ಷರು ತಮ್ಮ ಆಸನವನ್ನು ಅಲಂಕರಿಸಿದೊಡನೆ ಗಂಭೀರ ಧ್ವನಿಯಿಂದ "ಅಯ್ಯಾ ಮಹಾ ಪುರುಷರುಗಳಿರಾ, ಈ ದಿನ ಈ ಊರಿನ ಎಲ್ಲಾ ಪ್ರಾಮುಖ ಗೃಹಸ್ಥರು ಇಲ್ಲಿ ಸೇರಿ ತನಗೆ ಅಧ್ಯಕ್ಷಸ್ಥಾನವನ್ನು ಸೇರಲಿಕ್ಕೆ ಅರಿಸಿದ ಕಾರಣ ನಾನು ನಿಮಗೆ ಧನ್ಯವಾದವನ್ನು ಮಾಡುತ್ತೇನೆ. ನಾನು ಹಲವು ಊರುಗಳನ್ನು ಸಂಚರಿಸಿ ಜನರಲ್ಲಿ ಮಾತೃ ಭೂಮಿಯ ಮೇಲಣ ಪ್ರೇಮವು ವರ್ಧಿಸುವುದಕ್ಕೆ ಪ್ರಯತ್ನಪಡುತ್ತಲಿದ್ದೇನೆ. ಆದರೆ ಗದ್ದೆಯಲ್ಲಿ ಗೊಬ್ಬರ ಚೆನ್ನಾಗಿದ್ದರೆನೇ ಫಲ ಚೆನ್ನಾಗಿ ಬಂದೀತು. ಹಾಗೆಯೇ ತಮ್ಮಲ್ಲಿ ವಿದ್ವತ್ತ್ ಸಂಪತ್ತಿ ತುಂಬಾ ಇರುವುದರಿಂದ ಈ ಊರಿನಲ್ಲಿ ನನ್ನ ಪ್ರಯತ್ನ ಸಫಲವಾದೀತು ಎಂದು ನನಗೆ ಭರವಸೆ ಇದೆ. ತಾವುಗಳೆಲ್ಲರೂ ಏಕ ಮನಸ್ಸಿನಿಂದ ಇಂದಿಗೆ ಇಲ್ಲಿ ಕೂಡಿದ್ದೆ ನನ್ನ ಆ ಭರವಸೆಯ ನಿದರ್ಶನವಾಗಿವೆ. ಈಗ ರಾಯ ಬಹದ್ದೂರ ಅರವಿಂದ ಚರಣ ಬಾಬು ಇವರು ತನ್ನ ಪ್ರಥಮ ಸೂಚನೆಯನ್ನು ಸಭೆಯ ಮುಂದೆ ಇಡಲಿ" ಎಂದು ಸಂಕ್ಷೇಪ ಭಾಷಣಮಾಡಿ ಕುಳಿತರು.

ಕೈಚಪ್ಪಾಳೆಯ ರಭಸವೂ, ಹೋಲಿನ ಒಂದು ಭಾಗದಲ್ಲಿ ಗುಂಪು ಗುಂಪಾಗಿ ಸೇರಿದ ಶಾಲಾ ಹುಡುಗರ ಕೋಲಾಹಲವೂ ಶಾಂತವಾದನಂತರ ಅರವಿಂದ ಬಾಬು ಅರ್ಧ ತಾಸಿನ ವರೆಗೆ ಭಾಷಣ ಮಾಡಿದರು. (ಸ್ಥಳ ಸಂಕೋಚದ ಭಯದಿಂದ ಸಾರಾಂಶವನ್ನು ಮಾತ್ರ ಇಲ್ಲಿ ಬರಿಯುತ್ತೇನೆ.) "ಅಯ್ಯಾ ಅಧ್ಯಕ್ಷರೇ, ನಮ್ಮ ಈಚೆಗೆ ಹಲವು ವರುಷಗಳಿಂದಲೂ ಬೇರೆ ಬೇರೆ ಜಾತಿಯವರಿಗೆ ಕಾರಣಾಂತರದಿಂದ ವೈಮನಸ್ಸುಂಟಾಗಿರುವುದು ಶೋಚನೀಯವಾಗಿದೆ. ಕೋರ್ಟ ಕಚೇರಿಗಳಲ್ಲಿ ತಮ್ಮವರಿಗೆ ಕೆಲಸಕೊಡಿಸುವರೆಂದು ಕೆಲವರ ಆಕ್ಷೇಪ. ಇಂಜಿನಿಯರ್ ಇಲಾಖೆಯಲ್ಲಿ ತಮ್ಮವರಿಗೆ ದೊಡ್ಡ ದೊಡ್ಡ ಕಂಟ್ರಾಕ್ಟುಗಳನ್ನು ಕೊಟ್ಟು ಬಿಡುವರೆಂದು ಇನ್ನೂ ಕೆಲವರಲ್ಲಿ ಹೊಟ್ಟೆಯುರಿ. ಪಾಶ್ಚಾತ್ಯ ವಿದ್ಯೆಯನ್ನು ಕಲಿತವರು ತಮ್ಮ ಅಶೀಕ್ಷಿತ ಜನರನ್ನು ತುಚ್ಛೀಕರಿಸುವರೆಂದು ಅಶೀಕ್ಷಿತರ ವಿವಾದ. ಪರೀಕ್ಷೆಗಳಲ್ಲಿ ಉತ್ತೀರ್ಣರಾಗದಿದ್ದರೂ ತಮಗೆ ದೊಡ್ಡ ಸರಕಾರಿ ಉದ್ಯೋಗಗಳೇ ಇಲ್ಲವೆಂದು ಇನ್ನೂ ಕೆಲವರು ಚರ್ಚಿಸುತ್ತಿರುವರು. ಶೀಕ್ಷಿತರು ಹೊಸ ಹೊಸ ಅಭಿಪ್ರಾಯಗಳನ್ನು ಪಾಶ್ಚಾತ್ಯರ ಗ್ರಂಥಗಳಿಂದ ತಿಳಿದು ತಮ್ಮ ಜಾತಿಮತ ಕಟ್ಟಳೆಗಳನ್ನು ನಾಶ ಪಡಿಸಲಿಕ್ಕೆ ಉದ್ಯುಕ್ತರಾಗಿರುವರೆಂದು ಇನ್ನೂ ಕೆಲವರ ಚರ್ಚೆ. ಹೀಗೆ ಹಲವು ಚರ್ಚೆಗಳಿಂದ ವರ್ತಮಾನ ಪತ್ರಿಕೆಗಳಲ್ಲಿ ಬಾತ್ಮಿಗಳು, ಕೋರ್ಟು ಕಚೇರಿಗಳಲ್ಲಿ ದುವ್ಯಾರ್ಜ್ಯಗಳು, ಒಬ್ಬರನ್ನು ನೋಡಿದರೆ ಇನ್ನೊಬ್ಬರಿಗೆ ಹುಬ್ಬು ಗಂಟು, ಇವುಗಳೆಲ್ಲ ದೇಶದ ಜನರನ್ನು ಕಾಡಿಸುತ್ತಿರುವುವು. ಹೀಗೆ ನಮ್ಮಲ್ಲಿ ಭಿನ್ನ ಬುದ್ಧಿಯಿರುವುದರಿಂದ ಯಾವುದೊಂದು ರೀತಿಯಲ್ಲಿ ದೇಶೋನ್ನತಿಯ ಕೆಲಸಗಳನ್ನು ಕೈಕೊಳ್ಳಲಿಕ್ಕೆ ನಮಗೆ ಮನಸ್ಸು ಬರಲಾರದು. ಬೇರೆ ಊರುಗಳಲ್ಲಿ ಅನೇಕ ವಿಧದ ಸಭೆಗಳನ್ನು ಏರ್ಪಡಿಸಿ ಮಾತೃ ಭೂಮಿಯ ಸೇವೆಗೆ ಜನರು ಹೆಜ್ಜೆಹಾಕಿರುವರು. ಆದ್ದರಿಂದ ನಾವು ನಮ್ಮ ದುರಾಗ್ರಹಗಳನ್ನು ಬಿಟ್ಟು ದೇಶಾಭಿವೃದ್ಧಿಯ ಕಡೆಗೆ ಚಿಂತಿಸುವ ಹಾಗೆ ಈ ಸಾರ್ವಜನಿಕ ಸಭೆಯನ್ನು ಏರ್ಪಡಿಸಬೇಕೆಂದು ನನ್ನ ಪ್ರಥಮ ಸೂಚನೆಯಾಗಿದೆ" ಎಂದು ಹೇಳಿ ತಮ್ಮ ಸ್ಥಾನವನ್ನು ಸೇರಿದರು.

ಅನಂತರ ಶ್ರೀಯುತ ರತ್ನ ಗರ್ಭರಾಯರು (ಇವರಿಗೆ ಯುನಿವರ್ಸಿಟಿ ಡಿಗ್ರಿಗಳನ್ನು ಹೊಂದಿದವರನ್ನು ನೋಡಿದರೆ ತಿರಸ್ಕಾರ; ಇವರು ಮೂರುನಾಲ್ಕು ಸಲ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಸಾಧಿಸಲಾರದೆ ತನ್ನ ಹೇರಳ ಆಸ್ತಿಯನ್ನೇ ನೋಡಿಕೊಂಡಿರುವವರು.) ಎದ್ದು ನಿಂತು, "ಜನರು ದ್ರವ್ಯಾನುಕೂಲವಿಲ್ಲದೆನೆ ಬಿ. ಎ. ಎಮ್. ಎ. ಪರೀಕ್ಷೆಗಳನ್ನು ಕಟ್ಟಿಕೊಂಡು ಎಲ್ಲರೂ ಸರಕಾರಿ ಕೆಲಸಕ್ಕೆ ಒದ್ದಾಡುವುದರಿಂದ ಇಷ್ಟೆಲ್ಲಾ ಹೊಟ್ಟೆಯುರಿಗೆ ಕಾರಣ. ಇವರು ಬೇರೆ ಸದ್‌ವೃತ್ತಿಗಳಿಗೆ ಒಂದಿಷ್ಟು ಮನಸ್ಸು ಕೊಟ್ಟರೆ ಜನರಿಗೆ ಎಷ್ಟೋ ಉಪಕಾರವಾಗುವುದು." ಎನ್ನುವಷ್ಟರಲ್ಲಿ ಜನಾರ್ಧನ ಶಾನಭೋಗರು ಎದ್ದುನಿಂತು "ಸರಿ, ಸರಿ, ನನ್ನೊಬ್ಬ ಹುಡುಗನಿಗೆ ಫೀಸು, ಪುಸ್ತಕಗಳ ಖರ್ಚು, ಮಧ್ಯಾಹ್ನ ಕಾಫಿ ಖರ್ಚು, ಹೇಟ್ ಬೂಟ್ ಎಂತ ಹೋದರೆ ತಿಂಗಳಿಗೆ ಸುಮಾರು ೨೦ ರೂಪಾಯಿ ತಗಲುತ್ತದೆ. ಶಾಲೆಗೆ ಹೋಗುವವರು ಹೆಚ್ಚಿ ನನ್ನ ಬಂಡಶಾಲೆಯಲ್ಲಿ ಲೆಕ್ಕ ಬರಿಯಲಿಕ್ಕೆ ಯಾರೂ ದೊರಕುವುದಿಲ್ಲ" ಎಂದರು.

ಅಷ್ಟರಲ್ಲಿ ಅಧ್ಯಕ್ಷರು ಎದ್ದು ನಿಂತು ನಸುನಗುತ್ತ "ಒಬ್ಬೊಬ್ಬರೇ ಮಾತನ್ನಾಡಿದರೆ ಚೆನ್ನಾಗಿದೆ" ಎಂದರು. ರತ್ನ ಗರ್ಭರಾಯರು ಪುನಃ "ಈ ಸಾರ್ವಜನಿಕ ಸಭೆಯಲ್ಲಿ ಆಗಾಗ ಬೇರೆ ಬೇರೆ ವಿಷಯಗಳನ್ನು ಚರ್ಚಿಸುವುದಕ್ಕೂ ದೇಶೋನ್ನತಿಯ ಕೆಲಸಕ್ಕೆ ಕೈಹಾಕಲಿಕ್ಕೂ ಸಾಧ್ಯವಿರುವುದರಿಂದ ಇಂಥಾ ಸಭೆಯನ್ನು ಏರ್ಪಡಿಸಲಿಕ್ಕೆ ಇನ್ನೂ ತಡ ಮಾಡಬಾರದೆಂದು ಸೂಚಿಸಿದರು.

ಯಶವಂತರಾಯರು ಅನಂತರ ಎದ್ದು ನಿಂತು (ಇವರ ಜಾತಿಯವರೇ ಕೋರ್ಟು ಕಚೇರಿಗಳಲ್ಲಿ ತುಂಬಿಹೋಗಿರುವರೆಂದು ಜನರೆಲ್ಲ ಗುಣ ಗುಟ್ಟುತ್ತಿದ್ದರು.) "ಅಯ್ಯಾ ಸಭಿಕರೇ, ಈ ಪ್ರಥಮ ಸೂಚನೆಗೆ ನನ್ನ ಅನುಮೋದನೆ ಇದೆ. ಆದರೆ ಸರಕಾರಿ ಕೆಲಸಗಳ ವಿಷಯವಾಗಿ ಆಗಾಗ ಚರ್ಚೆ ಬರುವುದು ನನಗೆ ಜಿಗುಪ್ಸೆ ಉಂಟುಮಾಡುತ್ತಿದೆ. ನಮ್ಮ ಜಿಲ್ಲೆಯ ಅಸಂಖ್ಯಾತ ಜನರಲ್ಲಿ ವಿದ್ಯೆ ಕಲಿಯುವವರು ಶೇಕಡಾ ೭ಕ್ಕೆ ಮಿಕ್ಕಿರುವುದಿಲ್ಲ. ಇದರಲ್ಲಿ ಇಲ್ಲಿ ಕೆಲಸಕ್ಕೆ ಪ್ರಯತ್ನಪಡುವವರು ಬಹಳ ಕೊಂಚ ಮಂದಿ. ಅನೇಕರು ಪರದೇಶಗಳಿಗೆ ಹೋಗಿ ಉನ್ನತ ಪದವಿಗಳನ್ನು ಹೊಂದಿ ಹೇರಳ ಧನಘಳಿಸಿ ಇಲ್ಲಿಗೆ ವೃದ್ಧಾಪ್ಯದಲ್ಲಿ ಬರುತ್ತಲಿದ್ದಾರೆ. ಇದನ್ನು ನೋಡಿದರೆ ನಮ್ಮ ಊರಿನವರಿಗೆ ಕೂಪಮಂಡೂಕದಂತೆ ಇರುವುದಕ್ಕೆ ಮನಸ್ಸಿಲ್ಲವೆಂಬದು ಸ್ಪಷ್ಟವಾಗುವುದು. ಹೀಗಿರುವಾಗ ನಾವು ಇಲ್ಲಿ ಉಳಿಯುವ ಕೆಲವು ಮಂದಿಗಳ ಬಗ್ಯೆ ಜಗಳವೆತ್ತಿ ನಮ್ಮ ಮುಂದಿನ ಏಳಿಗೆಯನ್ನು ಮುರಿದು ಬಿಡುವುದು ಉಚಿತವಲ್ಲ. ನಮ್ಮ ಈ ಊರಿನ ಜನರು ಪರ ಊರುಗಳಿಗೆ ಹೋಗಿ ಬೇರೆ ಬೇರೆ ಜನರ ಸ್ಥಿತಿಗತಿ, ವೃತ್ತಿ ವ್ಯಾಪಾರ, ಕಸಬು ಕೈಗಾರಿಕೆಗಳನ್ನು ಕಲಿತುಕೊಳ್ಳಲಿಕ್ಕೆ ಎಡೆ ಕೊಡುವುದು, ಅವರಿಗೆ ಆಗಾಗ ಬೋಧನೆಕೊಡುವುದಕ್ಕೆ ನಮ್ಮ ಅಧ್ಯಕ್ಷರಂತಹವರನ್ನು ಕರೆಯಿಸಿ ಈ ಇಂಥಾ ಸಭೆಗಳನ್ನು ಏರ್ಪಡಿಸುವುದು ಯೋಗ್ಯವೆಂದು ನನಗೆ ಬೋಧೆಯಾಗುತ್ತದೆ" ಎಂದರು.

ಪ್ರಥಮ ಸೂಚನೆಗೆ ಆಕ್ಷೇಪವಿರುವವರು ಕೈಯೆತ್ತಬಹುದೆಂದು ಅಧ್ಯಕ್ಷರ ಅಪ್ಪಣೆಯಾಯಿತು. ಯಾರೂ ಚರ್ಚೆ ಎತ್ತಲಿಲ್ಲ; ಪ್ರಥಮ ಸೂಚನೆಯು ಮಂಜೂರಾಯಿತು.

ಈ ಸಭೆಯ ಕೆಲಸಗಳು ಸರಿಯಾಗಿ ಜರಗುವುದಕ್ಕೆ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದೂ ಅಷ್ಟರ ವರೆಗೆ ಯೋಗ್ಯ ಬಾಡಿಗೆಯನ್ನು ಕೊಟ್ಟು ಹಂಗಾಮಿ ಕಟ್ಟೋಣವನ್ನು ಚುನಾಯಿಸಬೇಕೆಂದೂ ಎರಡನೇ ಸೂಚನೆಯಾಗಿತ್ತು. ಇದನ್ನು ಖಾನ ಸಾಹೇಬ ಆವುಜಿ ಜಾವುಜಿ ಸೇಟರು ಸಭೆಯ ಮುಂದಿಟ್ಟರು. ಇವರು ಯೋಗ್ಯವಾದ ಕಟ್ಟಡಕ್ಕೆ ೧೦,೦೦೦ ರೂಪಾಯಿ ಸಂಗ್ರಹಿಸಬೇಕೆಂದೂ (ಜನಾರ್ಧನ ಶ್ಯಾನಭಾಗರು ಇದೇನಪ್ಪಾ ಇಷ್ಟು ಹಣಕೊಡುವವರು ಯಾರು, ಇದರ ಬಡ್ಡಿ ಎಷ್ಟಾಯಿತು, ವಿಚಾರವಿಲ್ಲವೆ?) ಅಷ್ಟರ ವರೆಗೆ ಕಮಲಪುರದ ಬಂದರಿನ ಪಕ್ಕದಲ್ಲಿರುವ ಜಮ್ಮಾ ಮಸೀದಿಯ ಬಳಿಯಲ್ಲಿ ತನ್ನ ಭಂಡಸಾಲೆ ಮೇಲುಪ್ಪರಿಗೆಯು ವಾಯುವಿಹಾರಕ್ಕೂ ಅನುಕೂಲವಾಗಿರುವುದರಿಂದ ಅದನ್ನು ನಿಮ್ಮ ವಶ ಇರಿಸಿರುವೆನೆಂದೂ ಸೂಚಿಸಿದರು.

ಜನಾರ್ಧನ ಶ್ಯಾನಭಾಗರು ಪುನಃ ಎದ್ದು ನಿಂತು:—"ಬಾಡಿಗೆ ಏನು ಕೇಳುತ್ತೀರಿ, ಸೆಟ್ರೆ!" ಎಂದರು. "ನನಗೆ ಬಾಡಿಗೆ ಬೇಕಿಲ್ಲ" ಎನ್ನುವಷ್ಟರಲ್ಲಿ ಗುಂಡಾಚಾರ್ಯರು ಎದ್ದು ನಿಂತು:—"ಅದೆಲ್ಲಾ ಬಲ್ಲೆ, ತಮಗೆ ಮಸೀದಿಗೆ ಆಗಾಗ ಹೋಗುವುದಕ್ಕೆ ಆ ಸ್ಥಳ ಅನುಕೂಲವೇ ಸರಿ. ಆದರೆ ಹಿಂದುಗಳು ಮುಖ್ಯವಾಗಿ ನಮ್ಮಂಥ ಬ್ರಾಹ್ಮಣರುಗಳೇ ಹೆಚ್ಚು ಮಂದಿ ಮೆಂಬರುಗಳಿರುವುದರಿಂದ ಅವರಿಗೆ ಅನುಕೂಲವಾದ ಸ್ಥಳ ನಮ್ಮ ದುರ್ಗಾಂಬಾ ದೇವಸ್ಥಾನದ ಹೊಸ ಉಪ್ಪರಿಗೆಯಲ್ಲವೇ! ಅದಕ್ಕೆ ಬೀದಿಯಿಂದಲೇ ಮೇಲೆ ಹತ್ತುವದಕ್ಕೆ ಮೆಟ್ಟುಗಳಿವೆ. ನೀವು ನಮ್ಮ ದೇವಸ್ಥಾನದೊಳಗೆ ಬರಬೇಕೆಂತಲೇ ಇಲ್ಲ: ಆ ಸ್ಥಳಕ್ಕೆ ಅಲ್ಲಿ ಪ್ಲೇಗಿನ ಹಾವಳಿ ಬರುವ ಮುಂಚೆ ತಿಂಗಳಿಗೆ ೧೦ ರೂಪಾಯಿ ಬಾಡಿಗೆ ಶಶಾಂಕ ನಾಟಕ ಮಂಡಳಿಯವರಿಂದ ತಪ್ಪದೆ ಬರುತ್ತಲಿತ್ತು. ಬಾಡಿಗೆ ಇಲ್ಲವೆಂದು ಎಲ್ಲಿಯಾದರೂ ಸೇರಿಕೊಳ್ಳುವುದೇ?" ಅಂದರು.

ಜನಾರ್ಧನ ಶಾನಭಾಗರು:—ಮಹಾಸ್ವಾಮಿ! ಅಲ್ಲಿಗಿಂತಲೂ ನಮ್ಮ ದೇವಸ್ಥಾನದ ರಥದ ಕೊಟ್ಟಿಗೆಯ ಮೇಲುಪ್ಪರಿಗೆ ಒಳ್ಳೇದಲ್ಲವೆ. ಅದನ್ನು ಗುಡಿಸುವವರೂ ಸಹ ಇಲ್ಲದೆ ಈಗ ದೇವಸ್ಥಾನದ ವಾದ್ಯದವರು ತಮ್ಮ ಆಫೀಸು ಮಾಡಿದ್ದಾರೆ. ದೇವಸ್ಥಾನದ ಆಡಳಿತೆಯವರಿಗೆ ಹೇಳಿ ಆ ಸ್ಥಳ ಖಾಲಿಮಾಡಿಸುತ್ತೇನೆ. ಅಲ್ಲಿ ಕುಳಿತರೆ ಇಡೀ ಬೀದಿಯೆಲ್ಲ ಕಾಣುವುದು. ಲಕ್ಷ ದೀಪದ ಸಮಯದಲ್ಲಿ ಎಷ್ಟೋ ಮಂದಿ ಅಲ್ಲಿ ರಾತ್ರೆಯಲ್ಲಿ ಕುಳಿತು ತಮಾಷೆ ನೋಡುತ್ತಲಿದ್ದಾರೆ. ಅದನ್ನು ನಾಲ್ಕೇ ರೂಪಾಯಿ ಬಾಡಿಗೆಗೆ ನಾನು ಮಾಡಿಸಿಕೊಡುತ್ತೇನೆ" ಎನ್ನುವಷ್ಟರಲ್ಲಿ ಕೆಳಗೆ ಕುಳಿತವರಲ್ಲಿ ಕೆಲವರು ಗುಣುಗುಟ್ಟ ಹತ್ತಿದರು.

ಈ ವರೆಗೆ ಯಾವದೊಂದು ಸೂಚನೆಯಲ್ಲಿ ತನ್ನದಾಗಲಿ ತನ್ನ ಜಾತಿಯ ಇತರ ಗೃಹಸ್ಥರ ಹೆಸರನ್ನಾಗಲಿ ಸೇರಿಸಲಿಲ್ಲವೆಂದು ಅಲ್ಲೆ ಉರಿದು ಬೀಳುತ್ತಿದ್ದ ಮೆ| ಯಚ್. ಪಿ. ಪಿ. ಸಾಲ್ದಾಂಞರು (ಕುತ್ಸಿತರು ಇವರ ಹೆಸರಿನ ಪ್ರಥಮ ಅಕ್ಷರಗಳಿಗೆ ಸರಿಯಾಗಿ "ಹಲವು ಪರಿ ಪೇಳಿದರೂ ಸಾಲದಂಞ" ಎಂದು ಇವರನ್ನು ಸಂಬೋಧಿಸುತ್ತಿದ್ದರು) ಫಕ್ಕನೆ ಎದ್ದು ನಿಂತು:—"ಅಯ್ಯಾ ಸಭಿಕರೆ, ಸಭೆಯ ಕಟ್ಟೋಣದ ಚುನಾವಣೆಯಲ್ಲಿ ನಿಮ್ಮ ಜಾತಿ ಮತದ ಅನುಕೂಲತೆಗಳನ್ನು ನೋಡುವುದು ಯೋಗ್ಯವಲ್ಲ. ವಾಯು ವಿಹಾರ, ಲೆಕ್ಚರ್ ರೂಮ್, ರೀಡಿಂಗ್ ರೂಮ್, ಕ್ಲಬ್ ಇವುಗಳೆಲ್ಲ ಸೇರಿ ಇರಬೇಕಾದರೆ ಚಾವುಟೆ ಕಟ್ಟೆಯ ಬಳಿಯ ಸರಕಾರಿ ಸ್ಥಳವನ್ನು ಸರಕಾರದಿಂದ ಪಡಕೊಂಡು ನಾವು ಕಟ್ಟೋಣವನ್ನು ಕಟ್ಟಿಸಬೇಕು. ಇಲ್ಲವಾದರೆ ನಮ್ಮ ಜಾತಿಯವರು ಯಾರೂ ನಿಮ್ಮ ಸಭೆಗೆ ಸೇರಲಾರರೆಂದು ಖಂಡಿತವಾಗಿಯೂ ಹೇಳುತ್ತೇನೆ" ಎಂದರು.

ಕ್ಲಬ್ಬ್ ಎಂಬ ಮಾತು ಬರುತ್ತಲೇ ಗುಂಡಾಚಾರ್ಯರು:—ಸ್ವಾಮಿ, ಕ್ಲಬ್ಬ್ ಎಂಬ ಮಾತು ಎತ್ತಬೇಡಿರಿ, ಕ್ಲಬ್ಬ್ ಎಂದರೆ ಅನ್ನಾಹಾರಾದಿಗಳ ಅನುಕೂಲತೆ ಇರಬೇಕು. ಅದಕ್ಕೆ ಬ್ರಾಹ್ಮಣರಿಗೆ ಬೇರೆ ಸ್ಥಳ, ಅದರಲ್ಲಿ ಬೇರೆಬೇರೆ ವಿಧದ ಬ್ರಾಹ್ಮಣರ ಬಗ್ಗೆ ಬೇರೆ ಬೇರೆ ಕೋಣೆಗಳು ಇರಬೇಕಾಗುವುದು. ಬ್ರಾಹ್ಮಣರ ಕೋಣೆ ಮತ್ತು ಇತರರ ಕೋಣೆಗಳಿಗೂ ಮಾಡು ಸಹ ಒಂದಾಗಬಾರದು, ಇದಕ್ಕೆಲ್ಲ ೧೦,೦೦೦ ರೂಪಾಯಿ ಸಾಕಾಗದು" ಎಂದರು.

ಜನಾರ್ಧನ ಶಾನಭಾಗರು: (ಇವರಿಗೆ ಇಂಗ್ಲಿಷ ತಿಳಿಯದು, ಆದರೆ ಸಲ್ದಾಂಞರು ಉಪಯೋಗಿಸಿದ ಇಂಗ್ಲಿಷ ಶಬ್ದಗಳ ಅಭಿಪ್ರಾಯವನ್ನು ಇತರರಿಂದ ತಿಳಿದು)—"ಅಯ್ಯಾ, ವರ್ತಮಾನ ಪತ್ರಿಕೆಗಳಿಂದ ನಮಗೇನು ಪ್ರಯೋಜನ? ನಾವು ಹೆಚ್ಚು ಹಣವಂತಿಗೆ ಕೊಟ್ಟು ನಿಮಗೆ ಸುಲಭವಾಗಿ ಪತ್ರಿಕೆಗಳನ್ನು ಓದುವ ಏರ್ಪಾಡು ಮಾಡಬೇಕೆ?"

ಯಶವಂತರಾವ್:—"ಈ ಅಶೀಕ್ಷಿತರ ಅಜ್ಞಾನಕ್ಕೆ ಏನೆಂತ ಹೇಳಲಿ! ವರ್ತಮಾನ ಪತ್ರಿಕೆಗಳಿಂದಲೇ ಬೇರೆ ಬೇರೆ ಊರುಗಳಲ್ಲಿನ ಸಮಾಚಾರವು ನಮಗೆ ತಿಳಿದುಬರುವುದು. ನಮಗಿಂತ ಮುಂದಾಳಾಗಿರುವವರ ಅಭಿಪ್ರಾಯವನ್ನು ನಾವು ತಿಳಿದು ಅವರಂತೆ ನಟಿಸಬಹುದು."

ಜನಾರ್ಧನ:—ಸರಿಸರಿ, ಹಾಗಾಗಿಯೇ ಸುಳ್ಳು ವರ್ತಮಾನಗಳನ್ನು ನಂಬಿ, ಜಾತಿಮತ ದೇವರು ದೇವಸ್ಥಾನಗಳ ಮೇಲೆ ಜನರಿಗೆ ಪ್ರೇಮವು ಕಡಿಮೆಯಾಗಿ, "ಪರಿಷದವಂತೆ! ನಿರಾಶ್ರಿತ ಜನರ ಸಂಘವಂತೆ!" ಸಭೆಕೂಡಿಸಿ ನಮ್ಮಂಥವರಿಗೆ ಅಶೀಕ್ಷಿತರೆಂದು ತುಚ್ಛಿಕಾರ ಮಾಡುತ್ತಲಿದ್ದಾರೆ. ಅಂಥ ಚರ್ಚೆಗಳಿಗೋಸ್ಕರ ಈ ಸಭೆಯನ್ನು ಏರ್ಪಡಿಸುವುದಾದರೆ ನಾನು ಚಿಕ್ಕಾಸು ಕೊಡಲಾರೆ" ಎಂದು ಹೆಗಲ ಮೇಲಿನ ಧೋತ್ರಗಳನ್ನು ಸವರಿಸಿ, ಕೊಡೆಯನ್ನು ಕಂಕುಳಿಗೇರಿಸಿ ನೆಟ್ಟಗೆ ಹೊರಕ್ಕಿಳಿದರು. ಆವುಜಿ ಜಾವುಜಿಯವರಿಗೆ ಮಶೀದಿಗೆ ಹೋಗುವ ಸಮಯ ಬಂತೆಂದು ಹೇಳಿ ಅವರು ಅಧ್ಯಕ್ಷರಿಂದ ಅಪ್ಪಣೆ ಪಡದು ಅಂಗಳದಲ್ಲಿಳಿದರು. ಗುಂಡಾಚಾರ್ಯರು ಸಂಧ್ಯಾವಂದನೆಗೆ ಸಮಯ ಬಂತೆಂದು ಹೋಗಿಬಿಟ್ಟರು. ಸಾಲ್ದಾಂಞರು ತಮ್ಮ ಚುನಾವಣೆಗೆ ಮುಷ್ಕರ ಹಿಡಿದರು. ಉಳಿದ ಜನರೆಲ್ಲ ಅವರ ಜಾತಿಯ ಶಿಖಾಮಣಿಗಳ ಹಿಂದೆ ತಂಡತಂಡವಾಗಿ ಕೂಡಿ ಈ ವಿಷಯವನ್ನು ಚರ್ಚಿಸಲಾರಂಭಿಸಿದರು.

ಅರವಿಂದಚರಣ ಬಾಬು ಮೆಲ್ಲಗೆ ಎದ್ದು ಅಧ್ಯಕ್ಷರಬಳಿಗೆ ಬಂದು "ಇನ್ನೂ ಈ ಚರ್ಚೆ ತೀರುವಂತಿಲ್ಲ, ನಾವು ವಿದೇಶಿಯರು ಊರಿನವರಿಗೆ ಬೇಕಿಲ್ಲವಾದರೆ ನಾವು ಏನುಮಾಡಬಹುದು. ನಾವು ಮೆಲ್ಲಗೆ ಏಳೋಣ" ಎಂದು ಕಿವಿಯಲ್ಲಿ ಉಸುರಿದರು.

ಅಧ್ಯಕ್ಷರು ಎದ್ದುನಿಂತು "ಸಮಯ ೮ ಗಂಟೆಗೆ ಮೀರಿದ್ದರಿಂದ ಸಭೆಯನ್ನು ಮುಂದರಿಸಿಡಲಾಯಿತು. ಮುಂದಿನ ಸಭೆಗೆ ದಿನವನ್ನು ಆರಿಸಿ ನೋಟಿಸು ಕೊಡೋಣಾಗುವುದು" ಎಂದು ಅಧ್ಯಕ್ಷಸ್ಥಾನದಿಂದ ಕೆಳಗೆ ಇಳಿದು ಅರವಿಂದ ಬಾಬುವಿನ ಜತೆಯಲ್ಲಿ ಮಾತಾಡುತ್ತ ಹೋದರು. ಸಭೆಯು ಅಂದಿಗೆ ಮುಕ್ತಾಯವಾಯಿತು.

ಮುಂದಿನ ವೃತ್ತಾಂತವನ್ನು ಹಿಂದಿನಿಂದ ತಿಳಿಸುವೆನು.

ಬಾತ್ಮಿದಾರ.

ರೈತರಿಗೆ ಅತೀ ಲಾಭಕರವಾದ ವಿಷಯವು.

ಈ ಜಿಲ್ಲೆಯಲ್ಲಿ ಕಬ್ಬಿನ ರಸವನ್ನು ಸಣ್ಣ ಸಣ್ಣ ಬಣಲೆಗಳಲ್ಲಿ ಕಾಯಿಸಿ ಬೆಲ್ಲವನ್ನು ಮಾಡುವರು. ಹೀಗೆ ಮಾಡುವದರಿಂದ ಬೆಲ್ಲವನ್ನು ಮಾಡಲಿಕ್ಕೆ ಹೆಚ್ಚಿನ ಜನರೂ ಹೆಚ್ಚಿನ ಕಟ್ಟಿಗೆಯೂ ಬೇಕಾಗುತ್ತದೆ. ಒಂದು ದಿವಸಕ್ಕೆ ೨-೩ ಮಣಗಳನ್ನು ಮಾಡಲಿಕ್ಕೆ ಪ್ರಯಾಸವಾಗುತ್ತದೆ. ಒಂದು ಎಕ್ರೆಯಲ್ಲಿ ಕಬ್ಬು ನೆಟ್ಟವನು ಸಾಧಾರಣ ೩೨ ರೂಪಾಯಿಗಳ ಕಟ್ಟಿಗೆಯನ್ನು ಕೊಂಡುಕೊಳ್ಳಬೇಕಾಗುತ್ತದೆ. ರೈತರ ಈ ನಷ್ಟವನ್ನೂ ಕಷ್ಟವನ್ನೂ ಒಂದು ನೂತನವಾದ ಒಲೆಯಿಂದಲೂ ಐದಾರು ಫೂಟ್ ಅಗಲವಿರುವ ಕಬ್ಬಿಣದ ತಗಡಿನ ಪಾತ್ರೆಯಿಂದಲೂ ಪರಿಹರಿಸ ಬಹುದು.. ಈ ನೂತನವಾದ

ಒಲೆಯನ್ನು ರೈತರು ಬಹು ಸುಲಭದಿಂದ ಮಾಡಬಹುದು. ಕಬ್ಬಿನ ನೀರನ್ನು ಕುದಿಸಿ ಬೆಲ್ಲ ಮಾಡುವ ಪಾತ್ರೆಯನ್ನು ಸಾಧಾರಣ ೨೫ ರೂಪಾಯಿಗಳಿಗೆ ಮಂಗಳೂರು ಹಂಪನಕಟ್ಟೆಯಲ್ಲಿ ಕಬ್ಬಿಣದ ಕೆಲಸ ಮಾಡುವ ದಾಸ ಮಾಬೆನರು ಮಾಡಿಕೊಡುತ್ತಾರೆ. ಕಳೆದ ವರುಷ ಮಂಗಳೂರು ತಾಲೂಕು ಬಂಗ್ರಕೂಳೂರು ಗ್ರಾಮದ ಒಬ್ಬ ರೈತನು ಈ ನೂತನವಾದ ಕ್ರಮವನ್ನು ಮಾಡುವರೆ ಹೆಚ್ಚಿನ ಅಧೈರ್ಯದಿಂದ ಒಪ್ಪಿಕೊಂಡನು. ಈ ರೈತನು ಈ ಕ್ರಮದಿಂದ ತನ್ನ ಬೆಲ್ಲವನ್ನು ಬಹು ಸುಲಭದಿಂದ ಮಾಡಿದನು. ಇದನ್ನು ಕಂಡು ನೆರೆಹೊರೆಯ ಬೇರೆ ನಾಲ್ಕೈದು ರೈತರು ಪಾತ್ರಗಳನ್ನು ಕೊಂಡುಕೊಂಡು ಈ ಸುಲಭ ಕ್ರಮದಿಂದ ಬೆಲ್ಲಮಾಡಿದರು. ಜಾಗ್ರತೆಯಿಂದ ಈ ಕ್ರಮದಿಂದ ಬೆಲ್ಲಮಾಡಿದರೆ ಕಟ್ಟಿಗೆಯು ಅವಶ್ಯವಿಲ್ಲ. ಕಬ್ಬಿನ ರಸ ಹಿಂಡಿದ ಕಸವನ್ನು ಒಣಗಿಸಿ, ಇದರಿಂದಲೇ ರಸವನ್ನು ಕಾಯಿಸಿ ಬೆಲ್ಲಮಾಡಬಹುದು. ಈ ರೈತರು ಈ ನೂತನ ಕ್ರಮದಿಂದ ಬೆಲ್ಲ ಮಾಡಿದ್ದಲ್ಲದೆ, ಅದೇ ಒಲೆಯಲ್ಲಿಯೂ ಪಾತ್ರದಲ್ಲಿಯೂ ತಮ್ಮ ಭತ್ತವನ್ನು ಬೇಯಿಸಿ, ಅಕ್ಕಿ ಮಾಡಿ ಹೆಚ್ಚಿನ ಪ್ರಯೋಜನವನ್ನು ಹೊಂದಿರುತ್ತಾರೆ. ಈ ಊರಿನಲ್ಲಿ ವಾಡಿಕೆಯಾಗಿರುವ ಕ್ರಮದಲ್ಲಿ ಒಂದು ಮುಡಿ ಅಕ್ಕಿಯ ಭತ್ತವನ್ನು ಬೇಯಿಸಲಿಕ್ಕೆ ಬೇಕಾಗುವ ಕಟ್ಟಿಗೆಯಿಂದ, ಇಲ್ಲವೆ ಒಣ ಎಲೆಗಳಿಂದ ಈ ನೂತನ ಕ್ರಮಕ್ಕನುಸಾರವಾಗಿ ಮೂರು ನಾಲ್ಕು ಮುಡಿ ಅಕ್ಕಿಯ ಭತ್ತವನ್ನು ಬೇಯಿಸಲಿಕ್ಕೆ ಆಗುತ್ತದೆಂತ ಈ ರೈತರು ಅಭಿಪ್ರಾಯ ಪಡುತ್ತಾರೆ. ಈ ಪಾತ್ರೆಗಳಲ್ಲಿ ಒಮ್ಮೆಗೆ ಮೂರು ನಾಲ್ಕು ಮುಡಿಯ ಭತ್ತವನ್ನು ಬೇಯಿಸಲಿಕ್ಕೆ ಆಗುತ್ತದೆ. ಇಲ್ಲಿ ವಾಡಿಕೆಯಲ್ಲಿರುವ ಕ್ರಮದಿಂದ ಮೂರು ನಾಲ್ಕು ಮುಡಿಯ ಭತ್ತವನ್ನು ಸಣ್ಣ ಸಣ್ಣ ಗುಡಾಣಗಳಲ್ಲಿ ಹಲವು ಸಾರಿ ಬೇಯಿಸಬೇಕಾಗುತ್ತದೆ. ವರುಷಕ್ಕೆ ಮುನ್ನೂರು ನಾಲ್ನೂರು ಮುಡಿ ಅಕ್ಕಿ ಮಾಡುವ ರೈತರಿಗೆ ಇದರಿಂದ ಹೆಚ್ಚಿನ ಪ್ರಯೋಜನವು ದೊರೆಯುವದು. ಅದಲ್ಲದೆ ನೆರೆಹೊರೆಯಲ್ಲಿರುವ ಸಣ್ಣ ರೈತರು ಒಟ್ಟಿಗೆ ಕೂಡಿ ಒಂದು ಪಾತ್ರೆಯನ್ನು ಕೊಂಡುಕೊಂಡು ಎಲ್ಲರೂ ಪ್ರಯೋಜನವನ್ನು ಹೊಂದಬಹುದು. ಇದಲ್ಲದೆ ಈ ಜಿಲ್ಲೆಯಲ್ಲಿ ತಾಳೆ ಮತ್ತು ತೆಂಗಿನ ಮರದ ಹೆಂಡದಿಂದ ಹೆಚ್ಚಿನ ಬೆಲ್ಲವಾಗುವದರಿಂದ ಈ ಬೆಲ್ಲವನ್ನು ಕೂಡಾ ಈ ನೂತನ ಕ್ರಮದಿಂದ ಮಾಡಿ ಹೆಚ್ಚಿನ ಲಾಭವನ್ನು ಪಡೆಯಬಹುದು. ಈ ವರುಷ ಬಂಗ್ರ ಕೂಳೂರಿನಲ್ಲಿಯೂ ನೆರೆಹೊರೆಯ ಗ್ರಾಮಗಳಲ್ಲಿಯೂ ಕಬ್ಬು ಸಾಗುವಳಿಯ ಹೆಚ್ಚಿನ ರೈತರು ಈ ನೂತನವಾದ ಅಗುಳ್ವೆಯನ್ನೂ ಪಾತ್ರವನ್ನೂ ಮಾಡಿರುತ್ತಾರೆ. ಕುತೂಹಲವಿದ್ದ ರೈತರು ಇದನ್ನು ನೋಡಿ ತಮ್ಮ ಹಳ್ಳಿಗಳಲ್ಲಿ ಕೂಡ ಇವುಗಳನ್ನು ಮಾಡಿ ಹೆಚ್ಚಿನ ಪ್ರಯೋಜನವನ್ನು ಹೊಂದಬಹುದು. ಈ ವಿಷಯದಲ್ಲಿ ಹೆಚ್ಚಿನ ಅನುಭವಬೇಕೆಂದಿರುವವರು ಈ ಕೆಳಗಿನ ವಿಳಾಸಕ್ಕೆ ಬರದ್ದಲ್ಲಿ ಅವರಿಗೆ ಅನುಭವವು ಸಂತೋಷದಿಂದ ಕೊಡೋಣಾಗುವದು.

K. T. Alva.

Ag. Asstt. Manager Taliparamba, Malabar.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಅಯ್ಯಾ ಪತ್ರಕರ್ತರೇ,

ಉಪ್ಪಿನಂಗಡಿ ತಾಲೂಕು ಶೀರಾಡಿ ರಸ್ತೆಯಿಂದ ಚಾರ್ಮಾಡಿ ರಸ್ತೆಗೆ ಕೂಡುವ ಒಳದಾರಿಯು ಸುಮಾರು ೨೦ ವರ್ಷಗಳ ಹಿಂದೆ ದಯಾಳು ಸರಕಾರದಿಂದ ರಸ್ತೆಯಾಗಿ ಮಾಡಲ್ಪಟ್ಟಿತು. ಆದರೆ ಅನಂತರ ಆ ರಸ್ತೆಯನ್ನು ಸರಕಾರದವರಾಗಲೀ ಊರವರಾಗಲೀ ದುರುಸ್ತಿಮಾಡಿಸದೆ ಹೋದ್ದರಿಂದ "ಬರಬರುತ್ತಾ ರಾಯನ ಕುದುರೆ ಕತ್ತೆಯಾಯಿತು" ಎಂಬ ಲೋಕೋಕ್ತಿಯ ಪರಿಣಾಮವು ಈ ದಾರಿಗೆ ಬಂದೊದಗಿ ಈಗ ಕಾಡುಗಿಡಗಳಿಂದ ತುಂಬಿಹೋಗಿಯದೆ. ಶೀರಾಡಿ ಮತ್ತು ಚಾರ್ಮಾಡಿ ಮಧ್ಯೆ ನಮ್ಮ ಪಟ್ರಮೆ ಗ್ರಾಮವು ಇದೆ. ಶೀರಾಡಿಯಿಂದ ನಮ್ಮಲ್ಲಿಗೆ ಬರತಕ್ಕ ಮಾರ್ಗವು ಹೀಗೆ ನಾದುರುಸ್ತಿ ಸ್ಥಿತಿಯಲ್ಲಿರುವುದರಿಂದ ಅಕ್ಕಿ ಇತ್ಯಾದಿ ಸಾಹಿತ್ಯಗಳನ್ನು ತಲೆ ಹೊರೆಯಲ್ಲಿಯೇ ಸಾಗಿಸಿಕೊಂಡು ಬರಬೇಕಾಗಿದೆ. ಗಾಡಿ ಹೊಡೆಯಲು ಅನುಕೂಲವಾಗಿ ಆ ದಾರಿಯು ಇಲ್ಲ. ತಲೆಹೊರೆ ಹೊರುವ ಕೂಲಿಯಾಳುಗಳು ನಮ್ಮಲ್ಲಿ ಬಹು ಕಡಿಮೆ. ಇದರಿಂದ ಸರಕಾರಿ ನೌಕರರು ಸರ್ಕಿಟಿಗೆ ಬಂದ ಸಮಯ ಕೂಲಿಯಾಳುಗಳು ಸಿಕ್ಕುವುದು ಬಹಳ ಕಷ್ಟವಾಗಿದೆಯಾದ್ದರಿಂದ ನಮಗೆ ಈ ರಸ್ತೆಯನ್ನು ಸರಿಮಾಡಿಕೊಡುವುದರಿಂದ ಹೆಚ್ಚಿನ ಪ್ರಯೋಜನವಿದೆಂದು ಪ್ರತ್ಯೇಕ ಹೇಳಬೇಕೆಂತಿಲ್ಲ. ಈ ವಿಷಯ ತಮ್ಮ ಹಾಲಹವಾಲೆಗಳನ್ನು ಹೇಳಿಕೊಂಡು ಪಟ್ರಮೆ ಗ್ರಾಮದ ರೈತರು ಜಿಲ್ಲಾ ಕಲೆಕ್ಟರ್ ದೊರೆಗಳವರಿಗೆ ಅರ್ಜಿಮಾಡಿಕೊಂಡಿದ್ದರು. ದೊರೆಗಳವರು ನಮ್ಮ ಅರ್ಜಿಯನ್ನು ಲೋಕಲ್ ಫಂಡು ಇಲಾಖೆಯವರಿಗೆ ಕಳುಹಿಸಿಕೊಟ್ಟಿರುವುದರಿಂದ ಕಳೆದ ತಾ. ೨೫ರಲ್ಲು ಅಸಿಸ್ಟಾಂಟ ಇಂಜಿನಿಯರರೂ ಓವರ್ಶಿಯರರೂ ಇಲ್ಲಿಗೆ ಚಿತ್ತೈಸಿ ತನಖಿ ನಡಿಸಿಹೋಗಿರುತ್ತಾರೆ. ಇವರ ತನಖಿಯಿಂದ ತಕ್ಕ ಫಲಿತಾಂಶವು ಬರಬೇಕೆಂದು ಅಪೇಕ್ಷಿಸುವ.

ಪಟ್ರೆಗ್ರಾಮದ ರೈತರಲ್ಲೊಬ್ಬ.

ಮಂಗಳೂರು ಮೈದಾನಿನಲ್ಲಿ.

ಇಂದು ರಾತ್ರಿ! ಇಂದು ರಾತ್ರಿ!

ಮೂರೇ ರಾತ್ರಿ ಮಾತ್ರ.

ದಶಂಬರ ತಾ. ೬ನೇ ಶುಕ್ರವಾರ ೧೯೧೨.

ದೇಖಾವೆಗಳ ಮೊದಲನೇ ರಾತ್ರಿ. 8—30 ಗಂಟೆಗೆ ಭಾರೀ ಆಟ.

ಭಾರತೇಯ ಭೀಮ ಪರಾಕ್ರಮಿಯೆಂದು ಹೆಸರು ಹೊಂದಿದ

ಪ್ರೊಫೆಸರ್ ರಾಮಮೂರ್ತಿಯವರು

ರಾಜರಿಂದಲೂ, ಶ್ರೀಮಂತರಿಂದಲೂ, ಪ್ರಮುಖ ದೇಶೀಯ ರಾಜರಿಂದಲೂ, 132 ಚಿನ್ನದ ಪದಕಗಳನ್ನೂ ಇತರ ಬಹುಮಾನಗಳನ್ನೂ ಹೊಂದಿದವರು. ಚೀನ ಜಾಪಾನು ದೇಶಗಳಿಗೆ ಹೋಗುತ್ತಿರುವ ಸಂದರ್ಭದಲ್ಲಿ ತನ್ನ ಹೆಸರುವಾಸಿಯಾದ ಕುಸ್ತಿ ಕಸರತು ಆಟದ ಕಂಪೆನಿಯವರೊಡನೆ ಕೂಡಿ ಇಲ್ಲಿಗೆ ಬಂಧಿರುವರು.

S. LAFRENAIS,
Representative.

ವಿದೇಶ ವೃತ್ತಾಂತ.

ಯುದ್ಧ ವಾರ್ತೆ:—ಕಳೆದ ತಾ. ೨೫ರಲ್ಲು ಬಲ್ಗೇರಿಯರ ಮತ್ತು ತುರ್ಕಿಯರ ಪ್ರತಿನಿಧಿಗಳು ಸಂಧಾನದ ಪ್ರಸ್ತಾಪ ಮಾತನ್ನಾಡುವರೆ ಸಭೆಕೂಡಿದರು.

ಮೊನಾಸ್ಟಿರನ್ನು ಸರ್ವಿಯರು ವಶ ಮಾಡಿಕೊಂಡನಂತರ ಕಳೆದ ತಾ. ೨೫ರ ವರೇಗೆ ೧೦ ಸಾವಿರ ತುರ್ಕರು ಶರಣಾಗತರಾದರು. ಶರಣಾಗತರಾಗುವವರ ಸಂಖ್ಯೆ ದಿನೇ ಹೆಚ್ಚುತ್ತಾ ಬರುತ್ತದೆ.

ತಾ. ೨೬:--ಅಡ್ರಿನೋಪಲಿನ ತುರ್ಕಿ ಸೈನೀಕರು ಕೋಟೆಯಿಂದ ಹೊರಗೆ ಬಂದು ಬಲ್ಗೇರಿಯರ ಮೇಲೆ ಬಿದ್ದರು. ಆದರೆ ಬಹಳ ನಷ್ಟಪಟ್ಟು ಹಿಮ್ಮೆಟ್ಟಿಸಲ್ಪಟ್ಟರು. ಗ್ರೀಕರು ಚ್ಯೊಸ್ ಎಂಬ ಪಟ್ಟಣವನ್ನು ವಶಮಾಡಿಕೊಂಡರು.

ಬಲ್ಗೇರಿಯರಲ್ಲಿ ಯುದ್ಧ ಪ್ರಾರಂಭವಾದಂದಿನಿಂದ ಈತನಕ ೧೦೦,೦೦೦ ಮಂದಿ ಮಡಿದರು. ಇದು ಬಲ್ಗೇರಿಯರ ಒಟ್ಟು ಜನಸಂಖ್ಯೆಯನ್ನು ನೋಡುವುದಾದರೆ ಬಹಳ ಹೆಚ್ಚಿನ ನಷ್ಟವೇ ಸೈ. ಬಲ್ಗೇರಿಯರ ೧೭ ವರ್ಷ ಪ್ರಾಯದ ಹುಡುಗರನ್ನು ೩ ವಾರಗಳ ಡ್ರಿಲ್‌ಮಾಡಿಸಿ ಸರಹದ್ದಿಗೆ ಕಳುಹಿಸಿ ಕೊಟ್ಟಿರುವರು.

ಕನ್‌ಸ್ತಂತಿನೋಪಲಿನಲ್ಲಿ ವಿರೋಧಪಕ್ಷದ ಸುಮಾರು ೪೦೦ ಮಂದಿ ತುರ್ಕರನ್ನು ಕೈದುಮಾಡಿ ಗಡಿಪಾರುಮಾಡಿರುವರು. ಇವರಲ್ಲಿ ೩ ಮಂದಿ ಸೇನೆಯ ಜನರಲರು.

ಸರ್ವಿಯರಿಗೂ ಆಸ್ಟ್ರೀಯದವರಿಗೂ ವಿರೋಧ ಬೆಳೆಯುವ ಸಂಭವವಿರುವುದರಿಂದ ತುರ್ಕರಿಗೆ ತುಸ ಜೀವ ಬಂದಂತಾಗಿದೆ. ಕನ್‌ಸ್ತಂತಿನೋಪಲಿನಲ್ಲಿರುವ ಆಸ್ಟ್ರೀಯದ ಪ್ರಜೆಗಳನ್ನು ಆಸ್ಟ್ರೀಯಕ್ಕೆ ಹಿಂದೆ ಕರಿಸಿರುವರು. ಕನ್‌ಸ್ತಂತಿನೋಪಲಿನಲ್ಲಿರುವ ಆಯಾದೇಶಗಳ ಪ್ರತಿನಿಧಿಗಳು ಕೂಡ್ಲೇ ಸಂಧಾನವಾಗುವುದು ವಿಹಿತವೆಂದು ತುರ್ಕಿ ಸರಕಾರಕ್ಕೆ ಸಲಹೆಕೊಟ್ಟಿದ್ದಾರೆ.

ಸರ್ವಿಯರು ಡುರಾಜೋವನ್ನು ವಶಮಾಡಿಕೊಳ್ಳಲಿಕ್ಕಿರುವುದರಿಂದ ಆಸ್ಟ್ರೀಯದವರು ಸರ್ವಿಯರ ಮೇಲೆ ಬಹಳ ಶಿಟ್ಟುಗೊಂಡಿರುವರು. ಇದನ್ನು ಸರ್ವಿಯರು ವಶಮಾಡಿ ಕೊಂಡಾಕ್ಷಣ ಉಭಯತರೊಳಗೆ ಯುದ್ಧವಾಗಬಹುದೆಂದು ಆಯಾ ಪತ್ರಗಳು ಹೇಳುತ್ತವೆ. ಸರ್ವಿಯರು ಡುಚಾರಾವೊಗೆ ೭ ಮೈಲು ದೂರದಲ್ಲಿದ್ದಾರೆಂದು ಆಸ್ಟ್ರಿಯದ ಒಂದು ಹಡಗದವರು ಆಸ್ಟ್ರಿಯಕ್ಕೆ ತಂತಿಮೂಲಕ ತಿಳಿಸಿದ್ದಾರೆ. ಆಸ್ಟ್ರಿಯ ಮತ್ತು ಸರ್ವಿಯದವರಿಗೆ ತಾಗಿಬಂದರೆ ದೊಡ್ಡ ಯುದ್ಧವಾಗಿ ಶ್ರೇಷ್ಠರಾಜ್ಯಗಳು ಸೇರಬೇಕಾದೀತಾದ್ದರಿಂದ ಎಲ್ಲವನ್ನೂ ಸಮಾಧಾನದಲ್ಲಿಯೇ ಇತ್ಯರ್ಥಮಾಡಬೇಕೆಂತ ಶ್ರೇಷ್ಠ ರಾಜ್ಯಗಳವರು ಆಲೋಚಿಸಿದ್ದಾರೆ. (ದುರಾಜೊವು ಅಲ್ಬಾನಿಯದ ಮುಖ್ಯ ಪಟ್ಟಣ.)

ತಾ. ೨೭:--ಸಂಧಾನದ ಪ್ರಸ್ತಾಪವನ್ನು ಕುರಿತು ಚರ್ಚಿಸುವ ಸಭೆ ಇನ್ನೂ ಆಗಲಿಲ್ಲ. ತುರ್ಕಿ ಸರಕಾರದವರು ಬಾಲ್ಕನ್ ಸಂಸ್ಥಾನಗಳೊಡನೆ ಸೇರಿ ಭ್ರಾತೃ ರಾಜ್ಯವಾಗಲಿಕ್ಕೆ ಒಪ್ಪಲಿಕ್ಕಿದ್ದಾರೆಂಬ ಒಂದು ವಿಶೇಷ ವಾರ್ತೆ ಸೊಫಿಯ ಮತ್ತು ಕನ್‌ಸ್ತಂತಿನೋಪಲಿನಿಂದ ಬಂದಿರುವದು.

ಅಲ್ಬಾನಿಯರಿಗೆ ಸ್ವಸತ್ತಾತ್ಮಕ ರಾಜ್ಯಕೊಡುವರೆ ಶ್ರೇಷ್ಠ ರಾಜ್ಯಗಳವರು ಸಮ್ಮತಿಸಿದ್ದಾರೆ. ಅಲ್ಬಾನಿಯರಿಗೆ ಸ್ವಸತ್ತಾತ್ಮಕ ರಾಜ್ಯವನ್ನು ಕೊಡುವುದರಿಂದ ಸರ್ವಿಯರೊಡನೆ ಇನ್ನೊಂದು ಶ್ರೇಷ್ಠ ರಾಜ್ಯವು ಖಡ್ಗಹಿಡಕೊಂಡು ನಿಲ್ಲುವಹಾಗಾದೀತು ಎಂತ ಜರ್ಮನಿಯ ಒಂದು ಪತ್ರಿಕೆಯು ಹೇಳುತ್ತದೆ. ಡುರ್‍ಜ್ಜಾವೊದಲ್ಲಿ ಅಲ್ಬಾನಿಯರು ತಮ್ಮ ಬಾವಟೆಯನ್ನು ಏರಿಸಿ ಸ್ವಸತ್ತಾತ್ಮಕ ರಾಜ್ಯವನ್ನು ಸಾರಿದ್ಧಾರೆ ಎಂಬದಾಗಿ ಡೈಲಿ ಟೆಲಗ್ರಾಫ್ ಪತ್ರಿಕೆಯು ಹೇಳುತ್ತದೆ.

ಚಟಲ್ಜದಲ್ಲಿ ತುರ್ಕರ ೧೦೦,೦೦೦ ಸೈನೀಕರಿದ್ದಾರೆ. ಕೆಲವು ದಿವಸಗಳೊಳಗೆ ಒಟ್ಟಿಗೆ ೧೩೦,೦೦೦ ಸೈನೀಕರು ಚಟಲ್ಜದಲ್ಲಿ ಬಂದು ಸೇರುವರು. ಬೇಕಾದ ಹೊಸ ಆಹಾರ ಸಾಮಾಗ್ರಿಗಳೂ ಅಲ್ಲಿಗೆ ಹೋಗುತ್ತಿದೆ. ಆದ್ದರಿಂದ ರಾಜಿಯಾಗುವ ಸಂಭವವಿಲ್ಲವೆಂದು ಕನ್‌ಸ್ತಂತಿನೋಪಲಿನಲ್ಲಿ ವಾರ್ತೆ ಹಬ್ಬಿಯದೆ.

ಅಡ್ರಿನೋಪಲಿನ ಸುಲ್ತಾನ್ ಸೇಲಿಮ್ ಮಸೀದಿಯ ಆಜುಬಾಜು ಸ್ಥಳವು ಬೆಂಕಿಯಿಂದ ಉರಿಯುತ್ತಿದೆ. ಅಡ್ರಿನೋಪಲಿನಲ್ಲಿ ಬರವೂ ಪ್ರಾರಂಭವಾದ್ದರಿಂದ ಬೇಗನೇ ಅಡ್ರಿನೋಪಲ್ ವಶವಾದೀತೆಂತ ಬಲ್ಗೇರಿಯರು ಹೇಳುವರು. ವಿಮಾನದ ಮೂಲಕ ಸಿಡಿಮದ್ದನ್ನು ಬಿಸಾಡಿದ್ದೇ ಪಟ್ಣವು ಉರಿಯುತ್ತಿರಲು ಕಾರಣ.

ಅಲ್ಬಾನಿಯರು ಸ್ವರಾಜ್ಯವನ್ನು ಸಾರಿ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಿದ್ಧಾರಲ್ಲದೆ ಇದನ್ನು ಮಂಜೂರು ಮಾಡುವರೆ ಶ್ರೇಷ್ಠ ರಾಜ್ಯಗಳನ್ನು ಕೇಳಿಕೊಂಡಿದ್ದಾರೆ.

ಸಲೋನಿಕದಿಂದ ೧೨ ಸಾವಿರ ಬಲ್ಗೇರಿಯ ಸೈನೀಕರು ಡೆಡೆಗಾಚ್ ಎಂಬಲ್ಲಿಗೆ ಕಳುಹಿಸಲ್ಪಟ್ಟರು.

ತಾ. ೨೯:—ಡೆಮೋಟಿಕದಲ್ಲಿ ಬಹಳ ಕಠಿಣ ಕಾಳಗವಾಗಿ ತುರ್ಕರ ಎರಡು ಸೇನೆಯು ಬಲ್ಗೇರಿಯರ ಶರಣಾಗತವಾಯಿತು. ಶರಣಾಗತರಾದವರಲ್ಲಿ ಇಬ್ಬರು ಪಾಶರು, ೨೫೨ ಹುದ್ದೆದಾರರು, ೮,೮೦೦ ಮಂದಿ ಸೈನೀಕರು ಇದ್ದರು. ಅದಲ್ಲದೆ ಕೆಲವು ಫಿರಂಗಿಗಳೂ ಒಂದು ಸಾವಿರ ಕುದುರೆಗಳೂ ಬಲ್ಗೇರಿಯರ ಕೈಸೇರಿದವು.

ಬಲ್ಗೇರಿಯರು ಈಗ ಅಡ್ರಿನೋಪಲಿಗೆ ಬಹಳ ಹತ್ತರ ಸೇರಿರುವರು. ಅಲ್ಲಿರುವ ಆಯಾ ರಾಜ್ಯಗಳ ಕೌನ್ಸೆಲ್ಲರು ತಮ್ಮ ಬಾವಟೆಗಳನ್ನು ಏರಿಸಿದ್ದಾರೆ.

ಸರ್ವಿಯರು ಡಿಬ್ರವನ್ನು ವಶಮಾಡಿಕೊಂಡು ಡುರಾಜೋವನ್ನು ಅತಿಕ್ರಮಿಸಿದರು.

ತಾ. ೨:—ಡೆಡಾಗಚಿಗೆ ಬಲ್ಗೇರಿಯರ ಸೇನೆಯು ತಲಪುವ ಮೊದಲು ಅಲ್ಲಿಗೆ ಹೋಗಿದ್ದ ಬಲ್ಗೇರಿಯರ ಕೊವೆಟಾಜಿಸರು ಅಲ್ಲಿ ಒಟ್ಟಿಗೆ ೫೦೦ ಮಂದಿಯನ್ನು ಕೊಂದು ಹಾಕಿ ಪಟ್ಟಣವನ್ನು ಸೂರೆಸುಲಿಗೆ ಮಾಡಿದರೆಂಬ ಭಯಂಕರ ವಾರ್ತೆ ಬಂದಿರುವದು. ಕೊಲ್ಲಲ್ಪಟ್ಟವರಲ್ಲಿ ಕೆಲವರು ಕ್ರೈಸ್ತರೂ ಸೇರಿದ್ದರು. ಯುದ್ಧವನ್ನು ನಿಲ್ಲಿಸುವರೆ ಕೂಡಿದ ಪ್ರತಿನಿಧಿ ಸಭೆಯಲ್ಲಿ ಬಲ್ಗೇರಿಯರೂ, ಸರ್ವಿಯರೂ, ಮೊಂಟೆನಿಗ್ರೋಯರೂ ಪತ್ರಿಕೆಗೆ ಸಹಿಮಾಡಿದರು. ಆದರೆ ಗ್ರೀಕರು ಯುದ್ಧವನ್ನು ನಿಲ್ಲಿಸುವುದು ಸರಿಯಲ್ಲವೆಂದು ಹೇಳಿ ಸಹಿಮಾಡಲಿಲ್ಲ ಎಂಬ ವಾರ್ತೆ ಬಂದಿರುವದು.

~~~~~~

ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಒಂದು ಅಪೂರ್ವ ವಿವಾಹವು ನಡೆಯಿತು. ವಿಮಾನ ಗಾಮಿಯಾದ ಮಿ। ಸ್ಮಿತ್ ಎಂಬವನು ಇಂಡಿಯಾನ ದೇಶಕ್ಕೆ ಸೇರಿದ ಫೋರ್ಟ್‌ವೈನಿ ನಿವಾಸಸ್ಥಳಾದ ಮಿಸ್ ಎಮಿಯಕೋರ್ಟ್ ಎಂಬವಳನ್ನು ವರಿಸಿ ಉಭಯತರೂ ಲಗ್ನವಾಗಲು ಸಮ್ಮತಿಸಿದ್ದರು. ಆದರೆ ವಧುವಿನ ತಂದೆತಾಯಿಗಳು ವರನ ಕಸಬು ಅಪಾಯಕರವಾದುದರಿಂದ ಅವನನ್ನು ಲಗ್ನವಾಗುವುದರಲ್ಲಿ ತಮಗೆ ಸಮಾಧಾನವಿಲ್ಲವೆಂದು ತಮ್ಮ ಮಗಳಿಗೆ ಬಹಳವಾಗಿ ಹೇಳಿದರು. ಆದರೂ ಅವಳು ತನ್ನ ತಂದೆ ತಾಯಿಗಳ ಮಾತಿಗೆ ಕಿವಿಗೊಡದೆ ಅವನಲ್ಲಿ ವ್ಯಾಮೋಹಿತಳಾಗಿದ್ದಳು. ಹೀಗಿರಲು ಒಂದು ದಿನ ವರನು ತನ್ನ ವಿಮಾನದಲ್ಲಿ ಕುಳಿತು ವಧುವಿನ ಮನೆಗೆ ಸ್ವಲ್ಪ ದೂರದಲ್ಲಿ ಇಳಿದನು. ವಧುವಾದರೋ ತನ್ನ ಪ್ರಾಣಪ್ರಿಯನನ್ನೆ ಎದುರು ನೋಡುತ್ತಿದ್ದು ಅವನು ಬಂದಕೂಡಲೇ ಅಲ್ಲಿಗೆ ಹೋಗಿ ಇಬ್ಬರೂ ವಿಮಾನದಲ್ಲಿ ಕುಳಿತು ಅಂತರಿಕ್ಷದಲ್ಲಿ ೭೫ ಮೈಲುಗಳ ವರೆಗೆ ಸಂಚರಿಸಿ ಹಿಲ್ಸಾಡೇಲ್ ಎಂಬಲ್ಲಿ ಇಳಿದು ಇಬ್ಬರೂ ವಿವಾಹಿತರಾದರು. ವಿವಾಹದನಂತರ ಈ ಶುಭವಾರ್ತೆಯು ವಧುವಿನ ತಂದೆ ತಾಯಿಗಳಿಗೆ ತಂತಿಮೂಲಕ ತಿಳಿಸಲ್ಪಟ್ಟಿತು. ಇದಕ್ಕೆ "ಚಿಂತೆಯಿಲ್ಲ, ಇಬ್ಬರೂ ಮನೆಗೆ ಬರಬಹುದು" ಎಂಬ ಪ್ರತ್ಯುತ್ತರ ವಧುವಿನ ತಂದೆ ತಾಯಿಗಳು ಕೊಟ್ಟರು.

* * *

ನ್ಯೂಯೊರ್ಕಿಗೆ ಸೇರಿದ ಪಿಲಡೆಲ್ಫಿಯಾ ಎಂಬ ಊರಲ್ಲಿ ಎಡಿಸನ್ ಫ್ರಾನ್ಸಿಸ್ ಎಂಬೊಬ್ಬನು ೧೦ ಮಂದಿಯನ್ನು ಮದಿವೆಮಾಡಿಕೊಂಡ ತಕ್ಷೀರಿಗಾಗಿ ಕೈದುಮಾಡಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾನೆ. ಅವನಿಗೆ ಈಗ ೩೯ ವರ್ಷ ವಯಸ್ಸು. ೧೮ನೇ ವಯಸ್ಸಿನಲ್ಲಿ ಮೊದಲನೇ ವಿವಾಹ ಮಾಡಿಕೊಂಡನಂತೆ.

~~~~~~

ಇಂಗ್ಲೆಂಡಿನ ಬ್ರಿಟಿಷ್ ಎಲಕ್ಟ್ರಿಕ್ ಆಟೆಮೆಟಿಕ್ ಮೆಶಿನ್ ಎಂಬ ವಿದ್ಯುಚ್ಛಕ್ತಿ ಕಂಪೆನಿಯವರು ಒಂದು ಹೊಸ ತರದ ಯಂತ್ರವನ್ನು ತಯಾರು ಮಾಡಿರುವರು. ಇದನ್ನು ರೈಲ್ವೇ ಸ್ಟೇಶನುಗಳಲ್ಲಿಟ್ಟು ಯಂತ್ರದ ಒಂದು ಭಾಗದಲ್ಲಿ ದುಡ್ಡನ್ನು ಹಾಕಿದರೆ ಹೋಗಬೇಕಾದ ಊರಿಗೆ ತಾನೇ ಟಿಕೇಟುಗಳನ್ನು ಛಾಪಿಸಿಕೊಡುತ್ತದೆ. ಇದರಿಂದ ರೈಲ್ವೇ ಅಧಿಕಾರಿಗಳಿಗೆ ತುಂಬಾ ಪ್ರಯೋಜನವಲ್ಲದೆ ಖರ್ಚು ಸಹ ಕಡಿಮೆಯಾಗುತ್ತದೆ.

~~~~~~

ಮೊಂಗೋಲಿಯ ದೇಶದಲ್ಲಿ ರಷ್ಯಾದವರ ವ್ಯಾಪಾರವು ನಿರಾತಂಕವಾಗಿ ನಡೆಯುವಂತೆ ಉಭಯ ರಾಜ್ಯಗಳವರೂ ಸಂಧಾನ ಮಾಡಿಕೊಂಡಿರುವರು.

* * *

ಯೂರೋಪು ಖಂಡದ ಬಿಲ್ಬಾವೊ ಎಂಬಲ್ಲಿ ಸಿನಪೊಟಗ್ರಾಫ್ ಯಂತ್ರದ ಮೂಲಕ ಚಿತ್ರವನ್ನು ತೋರಿಸುತ್ತಿದ್ದ ಒಂದು ಆಟರಂಗದಲ್ಲಿ ತಾ. ೨೫ನೇ ರಾತ್ರಿ ಫಕ್ಕನೇ ಬೆಂಕಿಯುಂಟಾಯಿತೆಂಬ ಭಾವನೆಯಿಂದ ಅಲ್ಲಿ ಕೂಡಿದ್ದ ಜನರು ಕಕ್ಕಾಬಿಕ್ಕಿಯಾಗಿ ೫೨ ಮಂದಿ ಮೃತಪಟ್ಟರು. ೧೦೦ ಮಂದಿ ಗಾಯವೊಡೆದರು. ಆದರೆ ನಿಜವಾಗಿ ಆ ಸ್ಥಳದಲ್ಲಿ ಬೆಂಕಿಯಾಗಿರಲಿಲ್ಲ.

~~~~~~

ಬರ್ಮದ ಕ್ರಿಟಿಕ್ ಪತ್ರದ ಸಂಪಾದಕರಾದ ಮಿ। ಅರ್ನೊಲ್ಡರವರಿಗೆ ಶಿಕ್ಷೆವಿಧಿಸಲ್ಪಟ್ಟ ಸಂಬಂಧ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಪ್ರಸ್ತಾಪ ನಡೆಯಿತು. ಈ ಸಂದರ್ಭದಲ್ಲಿ ಅರ್ನೊಲ್ಡರು ಪ್ರಿವಿಕೌನ್ಸಿಲಿಗೆ ಮನವಿ ಮಾಡಿಕೊಂಡಿರುವುದರಿಂದ ಪ್ರಿವಿಕೌನ್ಸಿಲಿನ ತೀರ್ಮಾನದ ಫಲಿತಾಂಶವನ್ನು ತಿಳಿಯುವ ತನಕ ಸ್ಟೇಟ್ ಸೆಕ್ರಟರಿಯವರು ಕೈಹಾಕಲಿಕ್ಕೆ ಆಗುವುದಿಲ್ಲವೆಂದೂ ಅಪೀಲ್ ಮಾಡುವರೆ ಪ್ರೀವಿಕೌನ್ಸಿಲಿನಲ್ಲಿ ಹುಕುಂ ದೊರಕಿದರೆ ಅರ್ನೊಲ್ಡರವರು ಜಾಮೀನಿನ ಮೇಲೆ ಬಿಡಲ್ಪಡುವರೆಂದೂ ಸ್ಟೇಟ್

ಸೆಕ್ರೆಟರಿಯ ಪರವಾಗಿ ಮೆ| ಬೇಕರರವರು ಉತ್ತರವಿತ್ತರು.

* * *

ತಾ. ೨೭ರಲ್ಲು ಇಂಗ್ಲಾಂಡಿನಲ್ಲಿ ಭಯಂಕರವಾದ ಸುಂಟರಗಾಳಿಯು ಬೀಸಿ ೧೭ ಮಂದಿ ಮೃತಪಟ್ಟರು. ಅನೇಕ ಗೋಡೆಗಳೂ, ಚಿಮಿಣಿಗಳೂ ಬಿದ್ದು ಹೋಯಿತಲ್ಲದೆ ನೂರಾರು ಹಡಗಗಳು ಒಡೆದವು. ಇಂಗ್ಲಿಷ್ ಚೆನಲಿನಲ್ಲಿ ೫ ಹಡಗಗಳು ಮುಣುಗಿದವು.

* * *

ತಾ. ೨೭ರಲ್ಲು ಫ್ರಾನ್ಸಿನ ಅಲಿಯಸ್ ಎಂಬಲ್ಲಿ ಒಂದು ಕಲ್ಲಿದ್ದಲಿನ ಗಣಿಯಲ್ಲಿ ಅನಾಹುತವುಂಟಾಗಿ ೨೪ ಮಂದಿ ಕೊಲ್ಲಲ್ಪಟ್ಟರು.

* * *

ಮೊಂಗೋಲಿಯರ ಮತ್ತು ರುಷ್ಯಾನರ ಸಂಧಾನದಿಂದ ಚೀನಿಯರು ಶಿಟ್ಟುಗೊಂಡಿರುವರಲ್ಲದೆ ಚೀನದ ಸಾಹುಕಾರರು ರಷ್ಯಾನರ ಬೇಂಕುಗಳಿಗೆ ಬಹಿಷ್ಕಾರ ಹಾಕಿ ಅವುಗಳಲ್ಲಿರುವ ತಂತಮ್ಮ ಹಣವನ್ನು ಹಿಂದೆ ತೆಗೆಯುತ್ತಿದ್ದಾರೆ.

* * *

ಇಂಗ್ಲಾಂಡಿನ ಬೇಂಕಿನಿಂದ ಅಲೆಕ್ಷಂಡ್ರಿಯಕ್ಕೆ ಕಳುಹಿಸಲ್ಪಟ್ಟ ಐದ್ಯೆದುಸಾವಿರ ಪವನುಗಳು ತುಂಬಿದ ೪೦ ಪೆಟ್ಟಿಗೆಗಳು ಅಲೆಕ್ಷಾಂಡ್ರಿಯಕ್ಕೆ ತಲಪಿದನಂತರ ತೆರೆಯಲ್ಪಟ್ಟಲ್ಲಿ ಎರಡು ಪೆಟ್ಟಿಗೆಗಳಲ್ಲಿ ಬರೇ ಸೀಸದಗಟ್ಟಿ ಮಾತ್ರ ತುಂಬಿತ್ತು. ದಾರಿಯಲ್ಲಿ ದಕಾಯಿತರು ಇದನ್ನು ಕಳವು ಮಾಡಿರಬೇಕೆಂದು ಊಹಿಸಲ್ಪಟ್ಟಿದೆ.

* * *

ಪ್ರಿನ್ಸ್ ಆಫ್ ವೇಲ್ಸರವರು ಒಕ್ಸ್‌ಫೋರ್ಡು ವಿಶ್ವವಿದ್ಯಾಕಲಾಶಾಲೆಯಲ್ಲಿ ವ್ಯಾಸಂಗವನ್ನು ತೀರಿಸಿದನಂತರ ಜೋರ್ಜ ಸಾರ್ವಭೌಮರು ಅವರನ್ನು ಹಿಂದೂಸ್ಥಾನವನ್ನು ಸಂದರ್ಶಿಸುವರೆ ಕಳುಹಿಸುವರೆಂದೂ, ಬರುವ ಬೇಸಿಗೆಕಾಲದ ರಜೆ ಕಾಲದಲ್ಲಿ ಪ್ರಿನ್‌ಅಫ್ ವೇಲ್ಸರವರು ಕೆನಡಾದೇಶವನ್ನು ಸಂದರ್ಶಿಸುವರೆಂದೂ ಪಾಲ್‌ಮಾಲ್ ಗಜೆಟಿನಲ್ಲಿ ಪ್ರಕಟವಾಗಿದೆ.

* * *

ಲಂಡನಿನ ಪೋಲಿಸ್ ಕಮಿಷನರಾದ ಸರ್ ಎಡ್ವರ್ಡ್ ಹೆನ್ರಿಯವರಿಗೆ ಒಬ್ಬನು ಕಳೆದ ತಾ. ೨೭ರಲ್ಲು ಗುಂಡು ಹೊಡೆದನು. ಘಾತುಕನು ಹಿಡಿಯಲ್ಪಟ್ಟನು. ಸರ್ ಎಡ್ವರ್ಡ್ ಹೆನ್ರಿಯವರ ಕೂಡೆ ಅವನು ಒಂದು ಒಂಟಿಕುದುರೆ ಗಾಡಿಗೆ ಲೈಸೆನ್ಸ್‌ಕೇಳಿದ್ದನು. ಆದರೆ ಅವರು ಕೊಡದ್ದರಿಂದ ಈ ಕೃತ್ಯವನ್ನು ನಡಿಸಿದನೆಂದು ತಿಳಿದು ಬರುತ್ತದೆ.

* * *

ಸಿಂಘಾಪುರದಲ್ಲಿ ವಕೀಲರಾಗಿದ್ದು ಈಚೆಗೆ ಶೀಮೆಗೆ ಹೋಗಿದ್ದ ಡಿಲೆ ಎಂಬವರು ಕಳೆದ ತಾ. ೨೮ರಲ್ಲು ಸ್ವಘಾತಮಾಡಿಕೊಂಡರು. ಇವರು ಸ್ವಘಾತ ಮಾಡಿಕೊಂಡ ಕಾರಣವು ಅಪೂರ್ವವಾದದ್ದಾಗಿದೆ. ಇವರೊಡನೆ ಗೋಲ್ಫು ಎಂಬ ಆಟವನ್ನು ಆಗ್ಗಾಗ್ಗೆ ಆಡುತ್ತಿದ್ದ ಸೆಫೀಲ್ಡ್ ಸಾಹುಕಾರನ ಹೆಂಡತಿ ಮಿಸೆಸ್ ಮೊವಿಲ್ ಎಂಬವಳು ೩ ದಿವಸಗಳಿಂದ ಇವರಿಗೆ ಕಾಣಸಿಕ್ಕದ್ದರಿಂದ ಅವಳ ಹೆಸರಿಗೆ ೩೦,೦೦೦ ಪವನಿನ ಆಸ್ತಿಯನ್ನು ಬರದಿಟ್ಟು ಇವರು ಆತ್ಮಹತ್ಯ ಮಾಡಿಕೊಂಡರು.

* * *

ಇಂಗ್ಲಾಂಡಿನ ಪಾರ್ಲಿಮೆಂಟ ಸಭೆಯ ಹಕ್ಕು ಸ್ವಾತಂತ್ರ್ಯಗಳಿಗಾಗಿ ಪೇಚಾಡುವ ಸಫ್ರಜೆಟ್ಟ ಸ್ತ್ರೀಯರ ಉಪಟಳವು ಪುನಃ ಹೆಚ್ಚಾಗುತ್ತಿದೆ. ಕಳೆದ ತಾ. ೨೯ರಲ್ಲು ಲಂಡನ್ ನಗರದಲ್ಲಿಯೇ ಸಾವಿರಾರು ಟಪ್ಪಾಲು ಕಾಗದಗಳನ್ನು ಹರಿದುಹಾಕಿದರು. ಇನ್ನು ನೊಟಿಂಗ್ಹಾಮ್, ನ್ಯುಕೆಸ್ಲ್ ಇತ್ಯಾದಿ ಸ್ಥಳಗಳಲ್ಲಿಯೂ ಇಂಥಾ ಗೊಂದಲವು ನಡೆಯಿತು. ಅಬರ್ಡೀನಿನ ಗಾಯನ ಸಭಾಸದನದಲ್ಲಿ ಲೊಲ್ಯೊಡ್ ಜೋರ್ಜರವರ ಭಾಷಣವನ್ನು ಆತಂಕಿಸುವರೆ ಪ್ರಯತ್ನಮಾಡಿದ ಸಫ್ರಜೆಟ್ಟ ಸ್ತ್ರೀಯರನ್ನು ಪೋಲಿಸಿನವರು ಕೈದುಮಾಡಿದಲ್ಲಿ ಅವರ ಕೂಡೆ ಸಿಡಿಮದ್ದುಗಳು ದೊರಕಿದವು. ಕೈದುಮಾಡಲ್ಪಟ್ಟವರಲ್ಲಿ ಒಬ್ಬಳು ಬರೇ ಚಿಕ್ಕಪ್ರಾಯದ ಹುಡುಗಿ.

* * *

ಸಪ್ತಂಬರ ತಿಂಗಳಲ್ಲಿ ಜೋರ್ಜ ಸಾರ್ವಭೌಮರ ಪ್ರತಿರೂಪ ಇರುವ ರೂಪಾಯಿಗಳು ಟಂಕ ಹೊಡೆಯಿಸಲ್ಪಡಲು ಪ್ರಾರಂಭವಾಯಿತೆಂದೂ ನವಂಬರ ತಾ. ೯ರ ವರೆಗೆ ೪೭,೯೦೦,೦೦೦ ರೂಪಾಯಿಗಳು ಟಂಕ ಹೊಡೆಯಿಸಲ್ಪಟ್ಟಿತೆಂದೂ ಮೆ| ಎಚ್. ಬೇಕರವರು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿದರು.

* * *

ಉತ್ತರ ಹಿಂದೂಸ್ಥಾನ.

ಡಿಲ್ಲಿ ಪಟ್ಟಣ ಪ್ರವೇಶವು ಇದೇ ತಾ. ೨೩ರಲ್ಲು ಆಗುವುದು. ಈ ಸಂದರ್ಭದಲ್ಲಿ ವ್ಯಾಸರಾಯ ನ್ಯಾಯವಿಧಾಯಕ ಸಭೆಯ ಮೆಂಬರರು ವ್ಯಾಸರಾಯರಿಗೆ ಒಂದು ಬಹುಮಾನ ಪತ್ರವನ್ನು ಒಪ್ಪಿಸುವರು.

* * *

ಪೂನೆಯ ಖೆಡ್ ತಾಲೂಕಿನ ಡಾವ್ಡಿ ಗ್ರಾಮದ ಒಬ್ಬ ಮಹಮ್ಮದೀಯನು, ಒಬ್ಬ ಅಕ್ಕಸಾಲಿಗನು, ಇಬ್ಬರು ಮಹರಾಷ್ಟ್ರರು ಕೂಡಿ ಒಬ್ಬ ದರ್ಜಿಯನ್ನು ಕೊಂದಿರುವರೆಂಬ ಅನುಮಾನದಿಂದ ಹಿಡಿಯಲ್ಪಟ್ಟಿರುವರು. ಕೊಲ್ಲಲ್ಪಟ್ಟ ದರ್ಜಿಯು ಆಪಾದಿತರ ಪತ್ನಿಯರ ಕೂಡೆ ಸಂಸರ್ಗದಲ್ಲಿದ್ದನೆಂಬ ಅನುಮಾನದಿಂದ ಆ ನಾಲ್ವರೂ ದರ್ಜಿಗೆ ಹಗೆಯಾಳುಗಳಾಗಿದ್ದರು. ಈ ಹಗೆ ತೀರಿಸುವುದಕ್ಕಾಗಿ ಒಂದು ಉತ್ಸವದ ದಿನ ಆ ದರ್ಜಿಯನ್ನು ಪುಸಲಾಯಿಸಿ ಒಟ್ಟಿಗೆ ಕರಕೊಂಡು ಆ ಗ್ರಾಮದ ಒಂದು ಏಕಾಂತ ಸ್ಥಳಕ್ಕೆ ತಕ್ಕೊಂಡುಹೋಗಿ ಅಲ್ಲಿದ್ದ ಒಂದು ಹಾಳುಬಿದ್ದ ಮನೆಯ ಕಂಭಕ್ಕೆ ಅವನನ್ನು ಕಟ್ಟಿದನಂತರ ಆಪಾದಿತರಲ್ಲಿ ಒಬ್ಬನು ಕತ್ತಿಯಿಂದ ಅವನ ಕುತ್ತಿಗೆ ಕಡದನೆಂತಲೂ ಬಳಿಕ ಅವಸರದಿಂದ ಹೆಣವನ್ನು ಅಲ್ಲಿಯೇ ಮನೆಯಲ್ಲಿ ಹೂಣಿಟ್ಟರೆಂತಲೂ ಪೋಲೀಸಿನವರಿಗೆ ರುಜುವಾತು ಸಿಕ್ಕಿರುವುದು. ಈ ಕೃತ್ಯವು ನಡೆದು ೧೫ ದಿವಸಗಳ ವರೆಗೂ ದರ್ಜಿಯು ತನ್ನ ಮನೆಗೆ ಬಾರದ್ದರಿಂದ ಅವನ ಮನೆಯವರು ಆಪಾದಿತರನ್ನು ವಿಚಾರಿಸಲು ಅವನು ಈ ಗ್ರಾಮದ ಸಮೀಪದ ಮತ್ತೊಂದು ಸ್ಥಳದಲ್ಲಿದ್ದಾನೆಂದೂ ಬೇಗನೇ ಬಂದಾನೆಂದೂ ಹೇಳಿದರು. ಆದರೆ ಕಟ್ಟಕಡೆಗೆ ಅವನ ದೇಹವು ಸಿಕ್ಕಿತಲ್ಲದೆ ಅದರ ಸಮೀಪ ಆಪಾದಿತರು ಅವಸರದಲ್ಲಿ ಬಿಟ್ಟು ಬಂದ ಅವರ ಅಂಗಿ ಮೊದಲಾದ ಸಾಹಿತ್ಯಗಳು ದೊರಕ್ಕಿದ್ದರಿಂದ ಪೋಲೀಸಿನವರು ಅವರನ್ನು ಕೈದುಮಾಡಿರುವರು.

* * *

ಕಲ್ಕತ್ತೆಯ ಮೆಸರ್ಸ್ ವಾಂಟನ್ ಕಂಪೆನಿಯಿಂದ ಮುರ್ಶಿದಾಬಾದಿಗೆ ಕಳುಹಿಸಿಕೊಟ್ಟ ರೈಫಲ್ ಕೋವಿಯ ೫೦೦ ತೋಟೆಗಳು ಕಳವಾಗಿ ಹೋಗಿರುವುದು. ಈ ಪಾರ್ಸಿಲ್ ಬೊಲ್ಪಂಗ ಸ್ಟೇಶನಿಗೆ ತಲಪಿದಾಗ ಅದನ್ನು ಸ್ಟೇಶನ್ ಮಾಸ್ತರರ ಕೋಣೆಯಲ್ಲಿ ಇಟ್ಟಿದ್ದರು. ಅಲ್ಲಿಂದ ಯಾರೋ ಅದನ್ನು ಎತ್ತಿಹಾಕಿದರು.

* * *

ಸರಕಾರ ಕೆಲಸಗಳಲ್ಲಿರುವ ಮುಸಲ್ಮಾನರಿಗೆ ಶುಕ್ರವಾರ ದಿವಸ ಮಸೀದಿಗೆ ಹೋಗುವರೆ ರಜೆಕೊಡಬೇಕೆಂದು ಬಂಗಾಳದ ಮುಸಲ್ಮಾನ ಸಂಘದವರು ಗವರ್ನರರಾದ ಕಾರ್ಮಿಖಯೆಲ್ ಪ್ರಭುಗಳವರಿಗೆ ವಿಜ್ಞಾಪನೆಮಾಡಿಕೊಂಡಿದ್ದರು ಎಂದು ತಿಳಿಸಿತಷ್ಟೆ. ಕಾರ್ಮಿಖಯೇಲ್ ಪ್ರಭುಗಳು ಈ ವಿಜ್ಞಾಪನೆಗೆ ತನ್ನ ಅನುಮತಿ ಕೊಟ್ಟಿರುವರು.

* * *

ಕಲ್ಕತ್ತೆಯಲ್ಲಿ ಅಗ್ಗಾಡಿ ಕಳ್ಳರ ಉಪದ್ರವು ದಿನೇ ದಿನೇ ಹೆಚ್ಚೆಚ್ಚಾಗುತ್ತಾ ಬರುತ್ತಿದೆ. ತಾ. ೪ರಲ್ಲು ಈಸ್ಟ್ ಇಂಡಿಯನ್ ರೈಲ್ವೆ ಗಾಡಿಯು ನಡಿಯುತ್ತಿರುವಾಗ ಒಬ್ಬ ಕಳ್ಳನು ಹೆಂಗಸರ ಗಾಡಿಗೆ ನುಗ್ಗಿ ಹೆಂಗಸನ್ನು ಕಿಟಕಿಯ ಹೊರಗೆ ಬಿಸಾಡಿ ಅವಳ ಸೊತ್ತನ್ನು ಹಿಡಕೊಂಡು ಪರಾರಿಯಾದನು. ಅನಂತರ ಗಾಯ ಎಂಬಲ್ಲಿಯೂ ಒಬ ಹೆಂಗಸು ಹೆಂಗಸರ ಗಾಡಿಯಲ್ಲಿ ಪ್ರಯಾಣಮಾಡುತ್ತಿರುವಾಗ ಒಬ್ಬ ಮುದೀ ಮನುಷ್ಯನು ಗಾಡಿಯೊಳಗೆ ಹೋಗಿ ಒಬ್ಬ ಹೆಂಗಸನ್ನು ಹೊರಗೆ ಬಿಸಾಡಿ ಅವಳ ಸಾಮಾನುಗಳನ್ನು ಕಳವುಮಾಡಿ ಗಾಡಿಯಿಂದ ಹಾರಿಹೋಗಿರುವನು.

* * *

ಅಲ್ಲಹಾಬಾದಿನ ಕಾಯಸ್ಥ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಮೆ| ಡಿ. ಪ್ರಸಾದ ಎಮ್. ಪಿ.ರವರು ಕಳೆದ ತಾ. ೨೫ರಲ್ಲು ಶಾಲೆಗೆ ಹೋಗಿ ಸಾಯಂಕಾಲ ೪ ಗಂಟೆಯ ವರೆಗೆ ಕಲಿಸಿ ಮನೆಗೆ ಹಿಂತೆರಳಿದ್ದರು. ಪೂರ್ಣ ಸೌಖ್ಯದಿಂದಿದ್ದರು. ಮರುದಿನ ಬೆಳಿಗ್ಯೆ ಅವರು ಕಾಣದ್ದರಿಂದ ಅವರನ್ನು ಹುಡುಕ ಪ್ರಾರಂಭಿಸಲು ಅವರು ತನ್ನ ಆಫೀಸಿನ ನೆಲದ ಮೇಲೆ ಕುಳಿತ್ತಿದ್ದರು. ಆದರೆ ಅಲ್ಲಿಯೇ ಮೃತಪಟ್ಟಿದ್ದರು.

* * *

ಮುಂಬಾಯಿ ಪಟ್ಟಣದಲ್ಲಿ ೫ ಮೈಲು ಸುತ್ತಿನೊಳಗಾಗಿ ಯಾರೂ ವಿಮಾನದಲ್ಲಿ ಕುಳಿತು ಸಂಚಾರಮಾಡಕೂಡದೆಂಬ ಕಾನೂನು ಜಾಂಗೆ ಬಂದಿರುವುದು.

* * *

ಕಳೆದ ವರ್ಷ ಕಲ್ಕತ್ತಾ ಮತ್ತು ಮುಂಬಾಯಿ ಟಂಕಶಾಲೆಗಳಲ್ಲಿ ೭೨|| ಲಕ್ಷ ರೂಪಾಯಿಗಳು ಟಂಕ ಹೊಡಿಸಲ್ಪಟ್ಟಿತು. ೨೬,೧೦,೦೦೦ ರೂಪಾಯಿನ ನಿಕ್ಕಲ್ ನಾಣ್ಯಗಳನ್ನು ಟಂಕಾ ಹಾಕಿದ್ದರಿಂದ ಸರಕಾರಕ್ಕೆ ೨೪,೩೫,೩೩೮ ರೂಪಾಯಿ ಲಾಭ ದೊರೆಯಿತು. ಮತ್ತು ತಾಂಬ್ರದ ಕಲಾಹೆ, ಮೊದಲಾದ ಸಣ್ಣ ನಾಣ್ಯಗಳನ್ನು ೯,೨೫.೬೨೫ ರೂಪಾಯಿಗೆ ಟಂಕಾ ಹಾಕಿಸಿದಲ್ಲಿ ಸರಕಾರಕ್ಕೆ ೬೦೧, ೬೭೧ ರೂಪಾಯಿ ಲಾಭವಾಗಿರುತ್ತದೆ.

* * *

ಜೋರ್ಜಸಾರ್ವಭೌಮರ ಪ್ರತಿ ರೂಪವಿರುವ ೫||×೩|| ಅಂಗುಲ ಪರಿಮಾಣದ ಒಂಟಿ ಮತ್ತು ಜೋಡಿ ಪೋಸ್ಟು ಕಾರ್ಡುಗಳು ತಯಾರಾಗಿವೆ. ಈಗಿನ ಸಣ್ಣ ಪರಿಮಾಣದ ಕಾರ್ಡುಗಳು ಮುಗಿದು ಹೋದ ಕೂಡ್ಲೇ ಇವುಗಳು ಮಾರಲ್ಪಡುವವು. ಇದರ ಬೆಲೆಯು ಕಾಲಾಣೆಯೇ ಆಗಿರುತ್ತದೆ. ವಿಳಾಸ ಬರೆಯುವ ಹೊರ ಭಾಗದಲ್ಲಿ ಅರ್ಧ ಭಾಗಕ್ಕೆ ಮೇಲಿನಿಂದ ಕೆಳಗಿನ ತನಕ ಗೀಟುಹಾಕಿ ವಿಭಾಗಮಾಡಿ ಎಡ ಭಾಗದಲ್ಲಿ ವಿಷಯಗಳನ್ನು ಬರೆಯಲಿಕ್ಕೆ ಸ್ಥಳವು ಬಿಡಲ್ಪಟ್ಟಿದೆ.

* * *

ರೈಲ್ವೇ ಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದ ವಕೀಲ್ ಮಹೀಂದ್ರನಾಥ ಭಟ್ಟಾಚಾರ್ಜಿಯವರು ಸೆರಂಪುರದ ಸಮೀಪ ಅಗ್ಗಾಡಿಯಿಂದ ಬಿದ್ದು ಮೂರ್ಛೆಹೊಂದಿದರು. ಇವರನ್ನು ಕೂಡ್ಲೇ ಆಸ್ಪತ್ರಿಗೆ ವೈದು ಶೈತೋಪಚಾರ ನಡಿಸಿದರೂ ಅವರು ಆಸ್ಪತ್ರಿಯಲ್ಲಿ ಮೃತಪಟ್ಟರು.

* * *

ಡಕ್ಕದಲ್ಲಿ ಡ್ಯೂಪಿಟಿ ಮೇಜಿಸ್ಟ್ರೇಟರಾಗಿದ್ದ ಯಮಿನಿ ಮೊಹನ್‌ದಾಸ ಬಾಬುರವರ ಮನೆಗೆ ಆಗ್ಗಾಗ್ಯೆ ಕೆಲವು ವಿದ್ಯಾರ್ಥಿಗಳು ಬರುತ್ತಿದ್ದರು. ಒಂದು ದಿನ ಒಬ್ಬನು ಒಂದು ಪೆಟ್ಟಿಗೆಯನ್ನು ಇವರ ಮನೆಯಲ್ಲಿ ಬಿಟ್ಟು ಹೋದನು. ಇದರಿಂದ ಮೊಹನ್‌ದಾಸರವರಿಗೆ ಸಂಶಯ ಹುಟ್ಟಿ ಆಫೀಸರರಿಗೆ ತಿಳಿಸಲು ಅವರು ತಾ. ೨೮ರಲ್ಲು ಇವರ ಮನೆಯನ್ನು ತನಖಿ ನಡಿಸಿದಾಗ ಆ ಪೆಟ್ಟಿಗೆಯಲ್ಲಿ ೫೦೦ ತೋಟೆಗಳೂ, ಇನ್ನು ಅನೇಕ ಕಾಗದ ಪತ್ರಾದಿಗಳೂ ಇದ್ದುವು. ಈ ಸಂದರ್ಭದಲ್ಲಿ ಇಬ್ಬರು ವಿದ್ಯಾರ್ಥಿಯರು ಕೈದುಮಾಡಲ್ಪಟ್ಟರು. ಒಬ್ಬನು ಯಮಿನಿ ಮೊಹನ್‌ದಾಸರ ಮಗನು, ಇವರು ಮೇಜಿಸ್ಟ್ರೇಟರ ಮುಂದೆ ತಮ್ಮ ವಾಜ್ಮೂಲವನ್ನು ಕೊಡಲಿಲ್ಲ. ಆದರೆ ತಾವು ಏನೊಂದೂ ಮರೆಮಾಜದೆ ಹೇಳುವೆವೆಂದು ಪ್ರಮಾಣಮಾಡಿರುವರು. ಈ ಕೋವಿ ತೋಟೆಗಳೊಡನೆ ೩೦ ಸೇರು ಬೆಳ್ಳಿಯ ಆಭರಣಗಳೂ ಇದ್ದವು.

* * *

ಕಳೆದ ತಾ. ೨೯ರಲ್ಲು ಖಾನ್‌ಪುರದಲ್ಲಿ ಆಯುರ್ವೇದಿಕ್ ವೈದ್ಯರ ಸಮ್ಮೇಲನವು ಕೂಡಿತು. ಈ ಸಭೆಗೆ ಕವಿರಾಜ ಯೋಗಿಂದ್ರನಾಥ್ ಎಮ್ ಎ. ರವರು ಅಧ್ಯಕ್ಷರಾಗಿದ್ದು ಆಯುರ್ವೇದಿಕ್ ಮತ್ತು ಇದರ ಶಸ್ತ್ರವೈದ್ಯ, ಸೂಲಿಗಿತ್ತಿಯರ ಕೆಲಸ ಇತ್ಯಾದಿಗಳ ಹಿಂದಿನ ಕಾಲದ ಶ್ರೇಷ್ಠತ್ವವನ್ನೂ ಈಗಿನ ಕಾಲದ ಅಧೋಗತಿಯನ್ನೂ ತೋರಿಸಿ ೧|| ತಾಸು ಅರ್ಥಗರ್ಭಿತವಾದ ಭಾಷಣಮಾಡಿದರು.

* * *

ಮುಂಬಾಯಿ ಗವರ್ನರ್ ದೊರೆಗಳ ಆಲೋಚನಾ ಸಭೆಯ ಮೆಂಬರರಾದ ಬಹುಮಾನಪಟ್ಟ ಮೆ| ಚೌಬಾಲರವರು ತಾ. ೧೪ರಲ್ಲು ಮೆ| ಪಟ್ಟಾಣಿಯವರಿಗೆ ಚಾರ್ಜು ವಹಿಸಿಕೊಟ್ಟರು. ಮೆ| ಚೌಬಾಲರು ರಾಜಕೀಯೋದ್ಯೋಗ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟಿರುವರು.

* * *

ಡಾಕ್ಟರ್ ರಾಷ್‌ಬಿಹಾರಿ ಘೋಷರವರು ಸ್ಥಾಪಿಸಲಿಕ್ಕಿರುವ ಹಿಂದೂ ವಿಶ್ವವಿದ್ಯಾಕಲಾಶಾಲೆಗೆ ಒಂದು ಲಕ್ಷ ರೂಪಾಯಿ ವಂತಿಗೆ ಕೊಟ್ಟಿರುವರು.

* * *

ದಕ್ಷಿಣ ಹಿಂದೂಸ್ಥಾನ.

ಹಿಂದೂಸ್ಥಾನದ ಸೆಕ್ರೆಟರಿಯವರ ಕೌನ್ಸಿಲ್ ಸೆಕ್ರೆಟರಿಯಾಗಿರುವ ಸರ್. ಕೆ. ಜಿ. ಗುಪ್ತ ಕೆ. ಸಿ. ಎಸ್, ಐ. ಸಿ. ಎಸ್‌ರವರು ರಂಗೂನನ್ನು ಸಂದರ್ಶಿಸಿ ಅಲ್ಲಿಂದ ಮಂಡಲೆಗೆ ಹೋಗಿ ಪುನಃ ರಂಗೂನಿಗೆ ಬಂದಿರುವರು. ತಾ. ೨ರಲ್ಲು ರಂಗೂನಿನಿಂದ ಕಲ್ಕತ್ತೆಗೆ ಪ್ರಯಾಣಮಾಡಿರುವರು.

* * *

ಬರ್ಮದ ಕ್ರಿಟಿಕ್ ಪತ್ರದ ಸಂಪಾದಕರಾದ ಮೆ| ಅರ್ನೋಲ್ಡರವರ ಮೇಲಿನ ಮೊಕದಮೆಯ ತೀರ್ಮಾನದ ನಕಲನ್ನು ಕೂಡ್ಲೇ ಕಳುಹಿಸಿಕೊಡಬೇಕೆಂದು ಬರ್ಮದ ಲೆಪ್ಪನೆಂಟ ಗವರ್ನರರು ಕೇಳಿಕೊಂಡ ಪ್ರಕಾರ ಚೀಫ್ ಕೋರ್ಟಿನವರು ನಕಲನ್ನು ಸ್ಥಳೀಕ ಸರಕಾರಕ್ಕೆ ಕಳುಹಿಸಿಕೊಟ್ಟಿರುವರು. ಸ್ಥಳೀಕ ಸರಕಾರದವರು ಇಂಡಿಯಾ ಸರಕಾರಕ್ಕೆ ಕಳುಹಿಸಿ ಕೊಡುವರು. ಇಂಡಿಯಾ ಸರಕಾರದವರು ಇದನ್ನು ಸ್ಟೇಟ್ ಸೆಕ್ರೆಟರಿಯವರಿಗೆ ಕಳುಹಿಸಿಕೊಡುವರು.

* * *

ಕೆಪ್ಟನ್ ಮೆಕ್‌ಕ್ರೊಮಿಕರ ಮೇಲಿನ ಮೊಕದಮೆಯನ್ನು ಪುನಃ ತನಖಿನಡಿಸಬೇಕೆಂದು ಮುದ್ದೈ ಪಾತಿಮಬೀಬಿ ಬರ್ಮದ ಫುಲುಬೇಂಚಿಗೆ ಮಾಡಿಕೊಂಡ ಮನವಿಯು ತಳ್ಳಿಹಾಕಲ್ಪಟ್ಟಿತು.

* * *

ಮದ್ರಾಸಿನ ಬಂದಿಖಾನೆಯಲ್ಲಿ ನವಂಬರ ತಾ. ೨೭ರಲ್ಲು ಬಂದಿವಾನರ ಒಂದು ದಂಗೆ ಎದ್ದಿತು. ಆ ಬಂದಿಖಾನೆಯಲ್ಲಿ ಸರಕಾರದವರು ರಾಗಿಯ ಬದಲಿಗೆ ಅನ್ನವನ್ನು ಕೊಡಲು ಪ್ರಾರಂಭಿಸಿದ್ದೇ ಈ ಕಲಹಕ್ಕೆ ಕಾರಣ. ತಾ. ೨೭ರಲ್ಲು ಬಂದಿಖಾನೆಯ ಸುಪರಿಂಟೆಂಡೆಂಟರಾದ ಕೆಪ್ಟನ್ ಜೆ. ಪಿ. ಕೆಮೊರೋನ್, ಐ. ಎಮ್. ಎಸ್‌ರವರು ಪಿತೂರಿಯ ಗುಟ್ಟನ್ನೇನೂ ಅರಿಯದೆ ಜೈಲರರೊಡನೆ ವಾರ್ಡುಗಳನ್ನು ನೋಡಿಕೊಂಡು ಅಚ್ಚು ವಾರ್ಡಿಗೆ ಸಮೀಪಿಸಿದಾಗ್ಯೆ ಪಿತೂರಿಯ ಮುಂದಾಳುಗಳಾದ ೬ ಮಂದಿ ಇವರ ಮೇಲೆ ಬಿದ್ದರು. ಸುಪರಿಂಟೆಂಡೆಂಟರ ತಲೆಗೆ ಪೆಟ್ಟಾಯಿತು. ಕೂಡಲೇ ಜೈಲರರು ಸುಪರಿಂಟೆಂಡೆಂಟರರಿಗೆ ಮಧ್ಯ ನಿಂತು ಎದುರಿಸಿದರು. ಅವರಿಗೂ ಪೆಟ್ಟು ಬಿತ್ತು. ಈ ಗದ್ದಲ ಕೇಳಿ ವಾರ್ಡರರೂ ಇತರ ನೌಕರರೂ ಓಡಿಬಂದರು. ಗಾಭರಿ ಘಂಟೆ ಬಾರಿಸಲಾಯಿತು. ಹೆಚ್ಚೆಚ್ಚು ಸೆರೆಯವರು ಕಲಹಗಾರರನ್ನು ಸೇರಿಕೊಂಡರು. ಕೂಡ್ಲೇ ವಾರ್ಡರರು ಕಲಹ ಶ್ರೇಷ್ಟರಲ್ಲಿ ಒಬ್ಬನಿಗೆ ಗುಂಡು ಹೊಡೆದು ಕೊಂದರು. ಇನ್ನು ಕೆಲವು ಕೋವಿಬಿಟ್ಟು ಇಬ್ಬರು ಸತ್ತರು. ಇದನ್ನು ಕಂಡು ಸೆರೆಯವರು ಹೆದರಿ ಓಡಿದರು. ಅನಂತರ ಆಯುಧಪಾಣಿಗಳಾದ ಪೋಲೀಸಿನವರು ಬಂದು ಬಂದೋಬಸ್ತಿ ಮಾಡಿದರು. ಈ ವಿಷಯ ಚೀಫ್ ಪ್ರೆಸಿಡೆನ್ಸಿ ಮೇಜೀಸ್ಟ್ರೇಟರು ಹೆಚ್ಚಿನ ತನಖಿ ನಡಿಸ ಪ್ರಾರಂಭಿಸಿದ್ದಾರೆ.

* * *

ದಕ್ಷಿಣ ಕನ್ನಡ.

ಕಾಸರಗೋಡು:—ಮಾಯಾ ವಿದ್ಯೆಯಲ್ಲಿ ಪ್ರವೀಣರಾಗಿರುವ ಮೆ| ಮಾರ್ಕ್ವೆಸ್ ಹೆಂಡ್‌ಕಫ್ ಎಂಬವರು ಇಲ್ಲಿಗೂ ಬಂದು ಒಂದೆರಡು ದಿನ ತನ್ನ ವಿಶೇಷ ಚಮತ್ಕಾರಗಳನ್ನು ತೋರಿಸಿ ಮಂಗಳೂರಿನತ್ತ ಕಡೆ ಹೋಗಿರುವರು.

ಅಬ್ಕಾರಿ ಇಲಾಖೆಯ ಅಸಿಸ್ಟಾಂಟ ಕಮಿಶ್ನಂ ದೊರೆಗಳು ಮೊನ್ನೆ ಇಲ್ಲಿಗೆ ಬಂದು ೮ನೇ ತಾರೀಕಿನವರೆಗೆ ಇಲ್ಲಿ ಮೊಕ್ಕಾಂ ಮಾಡುವರು.

ಬಾಲಿಕಾ ಶಾಲಾ ಇನ್ಸ್‌ಪೆಕ್ಟರ್ ದೊರೆಗಳು ಇದೇ ಬ್ರಹಸ್ಪತಿವಾರ ಇಲ್ಲಿಗೆ ಬಂದು ಶುಕ್ರವಾರ ಇಲ್ಲಿನ ಶಾಲೆಯನ್ನು ಸಂದರ್ಶಿಸಲಿಚ್ಛೈಸಿರುವರು.

* * *

ಮುಂಬಾಯಿ ಬಾತ್ಮೀದಾರರಿಂದ:-ಮುಂಬಾಯಿಯ ಮೋಗೆರರ ಹೋಬಳಿ ಎಂಬ ಸಮಾಜದ ಅಧೋಗತಿಯನ್ನು ತಿಳಿದು ಹೋಬಳಿಯ ಖಜಾನ್ಜಿಯಾದ ಕದ್ಕೆಪುಟ್ಟ ಮರಕಲ ಮೊದಲಾದ ೧೧ ಜನರು ಸೇರಿ ಕಳೆದ ತಾ. ೩ರಲ್ಲು ಈ ಸಭೆಯನ್ನು ಕರೆಯಿಸಿ ಒಂದು ವರ್ಷದ ಜಮಾಖರ್ಚನ್ನು ಲೆಕ್ಕಮಾಡಿದರು. ಈ ಸಭೆಯಲ್ಲಿ ಹೋಬಳಿಯ ಮತ್ತು ಉಪಹೋಬಳಿಯ ಮೂರು ಮಂದಿ ಮುಖ್ಯಸ್ಥರು ರಾಜಿನಾಮೆ ಕೊಟ್ಟರು ಎಂತ ತಿಳಿಯುತ್ತೇನೆ.

* * *

ಮಂಗಳೂರು.

ಭಾರತೀಯ ಭೀಮಪರಾಕ್ರಮಶಾಲಿ ಎಂದು ಹೆಸರು ಪಡೆದ ಪ್ರೊಫೆಸರ್ ರಾಮಮೂರ್ತಿಯವರು ತನ್ನ ಕುಸ್ತಿ ಆಟದವರೊಂದಿಗೆ ಇಲ್ಲಿಗೆ ಬಂದು ಇಂದೇ ರಾತ್ರಿ ೮|| ಗಂಟೆಗೆ ಮೈದಾನಿನಲ್ಲಿ ಭಾರೀ ಆಟವನ್ನು ಆಡಬೇಕೆಂದಿರುವರು. ಪ್ರೊಫೆಸರ್ ರಾಮಮೂರ್ತಿಯವರು ಪಾಶ್ಚಿಮಾತ್ಯ ದೇಶಗಳನ್ನು ಸಂದರ್ಶಿಸಿ ತನ್ನ ಪರಾಕ್ರಮವನ್ನು ತೋರಿಸಿ ಹೆಸರು ಪಡೆದಿರುವರು. ಇವರಿಗೆ ಪಾಶ್ಚಾತ್ಯ ದೇಶಗಳ ರಾಜರುಗಳಿಂದಲೂ ಶ್ರೀಮಂತರಿಂದಲೂ ನಮ್ಮ ದೇಶದ ದೇಶೀಯ ರಾಜರಿಂದಲೂ ವ್ಯಾಸರಾಯಪ್ರಭು, ಗವರ್ನರ್ ದೊರೆಗಳಿಂದಲೂ ಒಟ್ಟಿಗೆ ೧೩೨ ಚಿನ್ನದ ಬಹುಮಾನ ಪದಕಗಳು ಸಿಕ್ಕಿರುವದು. ಭಾರತೀಯ ಭೀಮನೆಂದು ಕರೆಯಲ್ಪಡುವ ಪ್ರೊಪೆಸರ್ ರಾಮಮೂರ್ತಿಯವರಿಗೆ ನಮ್ಮಲ್ಲಿಯೂ ತಕ್ಕ ಪ್ರೋತ್ಸಾಹವು ಸಿಕ್ಕುವುದೆಂತ ನಂಬುತ್ತೇವೆ.

ಇದೇ ಕಳೆದ ತಾ. ೩೦ರಲ್ಲು ಇಲ್ಲಿಯ ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಮಂಗಳೂರು ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಸಮ್ಮೇಲನವು ಜರುಗಿತು. ಈ ಸಮ್ಮೇಲನಕ್ಕೆ ಮಂಗಳೂರು ರೇಂಜಿನ ಶಾಲೆಗಳ ಸುಪರ್‌ವ್ಯಾಸರರಾದ ರಾ| ಯು. ಮಂಗೇಶರಾಯರು ಅಧ್ಯಕ್ಷರಾಗಿದ್ದು ಉಪಾಧ್ಯಾಯರಲ್ಲಿ ಹೊಸ ಜೀವವನ್ನುಂಟುಮಾಡುವಂಥಾ ಈಗಿನ ಕಾಲದ ಪಾಠ ಕ್ರಮಗಳನ್ನು ಹೇಳಿಕೊಟ್ಟರು. ಇಂಥಾ ಸಮ್ಮೇಲನವು ಈ ವರೆಗೆ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರವರಿಂದ ಕರೆಯಿಸಲ್ಪಡುತ್ತಿತ್ತು. ಆದರೆ ಇನ್ನು ಮುಂದೆ ಇದನ್ನು ಉಪಾಧ್ಯಾಯರೇ ಕರೆಯಿಸಬೇಕೆಂಬದಾಗಿ ರಾ| ಯು. ಮಂಗೇಶರಾಯರು ಆಲೋಚಿಸಿ ಇದಕ್ಕಾಗಿ ಉರ್ವ ಕಥೊಲಿಕಶಾಲೆ, ಬಜಾರ್ ಮಿಶ್ಯನ್‌ಶಾಲೆ, ಕದ್ರಿ ಸೆಂಟ್ ಕ್ಸವಿಯರ್ಸ್‌ಶಾಲೆ, ಬೋಳಾರ ಮುನ್ಸಿಪಾಲ್ ಶಾಲೆಗಳ ಹೆಡ್‌ಮಾಸ್ತರರನ್ನು ಆರಿಸಿ ಇವರೇ ತಂತಮ್ಮೊಳಗೆ ಆಲೋಚಿಸಿ ಆಯಾ ಸಮಯಗಳಲ್ಲಿ ತಮ್ಮ ಶಾಲೆಗಳಲ್ಲಿ ಉಪಾಧ್ಯಾಯರ ಸಮ್ಮೇಲನವನ್ನು ಕರೆಯಿಸಬೇಕೆಂಬ ಹಂಚಿಕೆ ಮಾಡಿರುವರು.

ಭಾವಿಗಳಿಗೆ ನೀರು ಒದಗಬಹುದಾದ ಸ್ಥಳಗಳನ್ನು ಶೋಧಿಸುವುದು ಅವಶ್ಯವೆಂತ ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನವರು ಆಲೋಚಿಸಿ ಮಹೇಲ ಕೃಷ್ಣ ನ್ಯಾಕ ಎಂಡ್ ಸನ್ಸ್‌ರವರ "ಆರ್ಟಿಸಿಯನ್ ವೆಲ್ ಬೋರಿಂಗ್ ಕೊ" ಎಂಬ ಭಾವಿ ತೋಡುವ ಕಂಪೆನಿಯವರನ್ನು ಈ ಉದ್ದೇಶಕ್ಕಾಗಿ ನೇಮಿಸಿರುವರು. ಸದರಿ ಕಂಪೆನಿಯವರು ಒಬ್ಬ ವೈಜ್ಞಾನಿಕರನ್ನು ಕಟಿಲಿಗೆ ಕಳುಹಿಸಿರುವರು. ತಾ. ೯ರಲ್ಲು ಇವರು ಉಡುಪಿಗೆ ಹೋಗಿ ಕಲ್ಯಾಣಪುರ, ಕುಂಜಾಲ್, ಕಾರ್ಕಳ, ಹೆಬ್ರಿ:ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ಸುಮಾರು ೧೦ ದಿವಸಗಳನ್ನು ಅತ್ತಕಡೆ ಕಳೆಯುವರು. ನೀರು ಬುಗ್ಗೆಗಳುಳ್ಳ ಸ್ಥಳಗಳ್ಯಾವುವೆಂಬುದನ್ನು ತಿಳಕೊಳ್ಳಲಪೇಕ್ಷಿಸುವ ಆಯಾ ಸ್ಥಳಗಳ ಜನರು ಇವರಿಂದ ತಕ್ಕ ಅನುಭವವನ್ನು ಪಡೆಯಬಹುದು.

ಬೈಸಿಕಲ್ ಕಳ್ಳರ ಹಾವಳಿಯು ಈಚೆಗೆ ನಮ್ಮ ಪಟ್ಟಣದಲ್ಲಿ ಇದ್ದಿಲ್ಲವೆಂದೇ ಹೇಳಬೇಕು. ಆದರೆ ತಾ. ೩ನೇ ಮಂಗಳವಾರ ಸಾಯಂಕಾಲ ಮೆ| ಜಿ. ಹೆರ್ಬರ್ಟರು ಮತ್ತು ಮೆ| ಎಲ್. ಜೋಶುವರವರು ತಮ್ಮ ಬೈಸಿಕಲುಗಳನ್ನು ಹಂಪನಕಟ್ಟೆಯ ಸಿಸಿಲ್ ಹೊಟೇಲಿನ ಕೆಳಗೆ ಇಟ್ಟು ಮೇಲೆಹೋಗಿ ಕೆಳಗೆ ಬರುವಾಗ ಮೆ| ಹೆರ್ಬರ್ಟರ ಸ್ಯಾಕಲಿನ ಗಾಳಿಹಾಕುವ ಪಂಪನ್ನೂ, ಮೆ| ಜೋಶುವರ ಸ್ಯಾಕಲಿನ ಗಂಟೆಯ ತಲೆಯನ್ನೂ ಯಾರೋ ಎತ್ತಿಹಾಕಿರುವರೆಂದು ತಿಳಿಯುತ್ತೇವೆ.

ಕಾರ್ಕಳ ಸಬ್ ಮೇಜಿಸ್ಟ್ರೇಟರಿಂದ ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ಖೂನಿ ಮೊಕದಮೆಯು ತನಖಿಯು ಕಳೆದ ಸೋಮವಾರ ಪ್ರಾರಂಭವಾಯಿತು. ಈ ಮೊಕದಮೆಯಲ್ಲಿ ಫರೋಕಿ ಬುಡನ್‌ಸಾಹೇಬ್ ಮತ್ತು ಇತರರಿಬ್ಬರು

ಕಾರ್ಕಳ ಕಸಬೆಯ ಬಿಜಿಲು ಎಂಬ ಹೆಂಗಸನ್ನು ಕೊಂದಿದ್ದಾರೆಂಬದಾಗಿ ಇಂಡಿಯನ್ ಪಿನಲ್‌ಕೋಡಿನ ೩೦೨ನೇ ಪ್ರಕರಣದ ಮೇಲೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಸರಕಾರಿ ಕಡೆಯ ವಕೀಲರು ಆಪಾದಿತರ ಮೇಲೆ ಇರುವ ಆಪಾದನೆಗೆ ಆಧಾರವಿಲ್ಲದ್ದರಿಂದ ಅವರ ಮೇಲಿರುವ ಚಾರ್ಜನ್ನು ತೆಗೆದುಹಾಕಬೇಕೆಂದು ಜಡ್ಜರನ್ನು ಕೇಳಿಕೊಂಡದ್ದರಿಂದ ಜಡ್ಜರು ಆಪಾದಿತರನ್ನು ಖುಲಾಸುಪಡಿಸಿದರು.

ಕಾಸರಗೋಡು ಸಬ್ ಮೆಜಿಸ್ಟ್ರೇಟರಿಂದ ಸೆಶ್ಶನ್ಸಿಗೆ ಕಮಿಟ್‌ಮಾಡಲ್ಪಟ್ಟ ಮಂಜೇಶ್ವರ ಖೂನಿ ಮೊಕದಮೆಯು ನಿನ್ನೆಯ ದಿನ ವಿಚಾರಣೆಗೆ ಪ್ರಾರಂಭವಾಗಿಯದೆ. ಈ ಮೊಕದಮೆಯಲ್ಲಿ ಎಟ್ಟಿಳ್ ಕಾಮತ್ ಎಂಬವರು ನಾಗಪ್ಪ ಬಾಳಿಗ ಎಂಬವರನ್ನು ಚೂರಿಯಿಂದ ತಿವಿದುದರಿಂದ ಅವರು ಮೃತಪಟ್ಟರೆಂಬದಾಗಿ ಇಂಡಿಯನ್ ಪಿನಲ್‌ಕೋಡಿನ ೩೦೪ನೇ ಪ್ರಕರಣದ ಮೇಲೆ ಆಪಾದಿಸಲ್ಪಟ್ಟಿರುವರು.

ಮಂಗಳೂರು ಮುನ್ಸಿಪಲ್ ಚೇಯರ್ಮೇನ್‌ರಾಗಿ ಆರಿಸಲ್ಪಟ್ಟ ಮ| ರಾ| ರಾ| ಅಮ್ಮೆಂಬಳ ವಾಸುದೇವ ಪೈಗಳವರ ಚುನಾವಣೆಯು ಮಂಜೂರಾಗತಕ್ಕದಲ್ಲವೆಂಬ ವಿಷಯವನ್ನು ಮನವಿ ಮೂಲಕ ಕಲೆಕ್ಟರ ದೊರೆಗಳ ಪರಾಂಬರಿಕೆ ಬಗ್ಯೆ ಕೆಲವರು ತಂದಿರುವರಾಗಿ ಕೇಳುತ್ತೇವೆ. ಸರಕಾರಿ ಕಡೆಯಿಂದ ಮುನ್ಸಿಪಲ್ ಕೌನ್ಸಿಲರಾಗಿ ನೇಮಿಸಲ್ಪಟ್ಟ ರಾ| ಇಸಾಸೆಟ್ರ ಮೆಂಬರುತನದ ವಾಯಿದೆಯು ಚೇಯರ್ಮೇನರ ಚುನಾವಣೆಯ ಮೊದಲೇ ಮುಗಿದಿರುವುದರಿಂದ ಹೀಗೆ ವಾಯಿದೆ ಮುಗಿದ ಮೆಂಬರರು ರಾ| ಪೈಗಳವರಿಗೆ ಕೊಟ್ಟ ವೋಟು ದೋಷಕರವೆಂತ ಈ ಮನವಿಯಲ್ಲಿ ಸೂಚಿಸಿರುವದಾಗಿ ಕೇಳಿರುವೆವು. ಹೀಗೆ ಮುನ್ಸಿಪಲ್ ಕೌನ್ಸಿಲಿನೊಳಗಿನ ಕಡದಾಟವು ಇನ್ನೂ ಮುಂದೆ ಸಾಗುತ್ತಾ ಇರುವುದು.

ಮುಲ್ಕಿ ರಾ| ಬಂಗ್ಲೆನಾರಾಯಣ ಕಾಮತ್‌ರವರು ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತೆ ಮೊಕ್ತೇಸರರಾದ ರಾ| ಗೋಪಾಳಕುಡ್ವ ಮೊದಲಾದವರ ಮೇಲೆ ಮಾಡಿದ ಮಾನನಷ್ಟದ ದಾವೆಯಲ್ಲಿ ಡಿವಿಜನಲ್ ಮೇಜಿಸ್ಟ್ರೇಟರು ಮುದ್ದೈಯಾಲೆಗಳನ್ನು ಖುಲಾಸುಪಡಿಸಿರುವರು.

ಒಬ್ಬ ಮುಂಬಯಿ ಬಾತ್ಮೀದಾರರಿಂದ.

ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣರ ಪರಿಷದ.

(ವಸಯಿ.)

ಕಳದ ವರುಷ ಸಾವಂತವಾಡಿಯಲ್ಲಿ ಕೂಡಿದ ಪರಿಷದದಲ್ಲಿ ನಿರ್ಣಯಿಸಿದ ಮೇರೆಗೆ ಈ ವರುಷ ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣರ ಪರಿಷದವು ಈ ತಿಂಗಳ ತಾ. ೨೮, ೨೯, ೩೦, ಶನಿವಾರ, ಆದಿತ್ಯವಾರ, ಸೋಮವಾರ ದಿನಗಳಲ್ಲಿ ವಸಯಿ (ಬೆಸಿನ್) ಎಂಬಲ್ಲಿ ಕೂಡುವುದು. ಕೊಲ್ಹಾಪುರ ಸಂಸ್ಥಾನದ ಹೆಡ್ ಕಲೆಕ್ಟರ್ ರಾವ್ ಬಹದ್ದೂರ್ ರಾಮಚಂದ್ರ ರಘುನಾಥ ಶಿರ್ಗಾಂವಕಾರ್ ಬಿ. ಎ. ಎಲ್. ಎಲ್. ಬಿಯವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರೆ ಆರಿಸಲ್ಪಟ್ಟಿರುವರು. ವಸಯಿಯಲ್ಲಿ ಕೂಡುವ ಪರಿಷದಕ್ಕೆ ಬರುವ ಪ್ರತಿನಿಧಿ ಮತ್ತು ಅತಿಥಿಗಳ ಸೌಕರ್ಯಗಳನ್ನು ನೋಡಿಕೊಳ್ಳಲು ಯೋಗ್ಯರಾದ ಮಾನವಂತ ಗೃಹಸ್ಥರ ಆಮಂತ್ರಣ ಸಭೆಯು ಏರ್ಪಡಿಸಲ್ಪಟ್ಟಿರುವುದು. ಪ್ರತಿನಿಧಿಗಳ ಫೀಸು ರೂ. ೩, ಪ್ರೇಕ್ಷಕರ ಫೀಸು ರೂ. ೧ ಆಗಿರುತ್ತದೆ. ಊಟ ಸರಬರಾಯಿಗಳನ್ನು ಬಯಸುವವರು ದಿನ ಒಂದಕ್ಕೆ ರೂ. ೧ರ ಪ್ರಕಾರ ಕೊಟ್ಟರೆ ಊಟದ ಏಲೆವಾರಿ ಮಾಡಲಾದೀತು. ವಸಯಿ ಎಂಬುದು ಇತಿಹಾಸ ಪ್ರಸಿದ್ಧ ಸ್ಥಳವಾಗಿರುತ್ತದೆ. ಮುಂಬಯಿಂದ ಒಂದು ತಾಸಿನಲ್ಲಿ ವಸಯಿಗೆ ತಲ್ಪಬಹುದು. ಪರಿಷದದ ಉದ್ದೇಶಗಳಲ್ಲಿ ಸಹಾನುಭೂತಿಯುಳ್ಳ ಏಕೀ ಸಾರಸ್ವತ ಸಮಾಜದ ಗೃಹಸ್ಥರೆಲ್ಲರೂ ತಮ್ಮ ಪ್ರತಿನಿಧಿಗಳನ್ನು ಆಯಾ ಪ್ರಾಂತ್ಯಗಳಲ್ಲಿ ಆರಿಸಿಕೊಂಡು ಪರಿಷದಕ್ಕೆ ಬರುವವರ ಹೆಸರುಗಳನ್ನು ಈ ತಿಂಗಳ ತಾ. ೧೫ರೊಳಗೆ ಆಮಂತ್ರಣ ಸಭೆಯವರಿಗೆ ತಿಳಿಸಬೇಕಾಗಿರುವುದು. ಆಮಂತ್ರಣ ಸಭೆಯವರ ತಂತೀ ವಿಳಾಸವು "ಯುನಿಯನ್" ಬೆಸಿನ್, ಮುಂಬಯಿ ಎಂತಲೂ ಟಪ್ಪಾಲ್ ವಿಳಾಸವು;—ಕಾರ್ಯದರ್ಶಿ ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣರ ಪರಿಷದ. ಬೆಸಿನ್ ಪೋಸ್ಟು, ಥಾನಾ ಜಿಲ್ಲೆ.

1913ನೇ ವರುಷದ ಪರಿಷದವನ್ನು ಕಾರವಾರಿಗೆ ಆಮಂತ್ರಿಸುವ ಹೆಚ್ಚಿನ ಸಂಭವವಿರುವುದು.

* * *

ಕುಂದಾಪುರ. ಕಳದ ಶುಕ್ರವಾರ ೮ನೇ ರಾತ್ರಿ ದೀಪೋತ್ಸವ ದಿನ ಇಲ್ಲಿಯ ಅಂತ್ರೈ ಸೆಟ್ಟಿಯವರ ಬೈಸಿಕಲನ್ನು ಡೋಬಿ ಅಚ್ಚು ಎಂಬವನು ಕದ್ದು ಸಮೀಪದಲ್ಲಿದ್ದ ಹಾಡಿಯಲ್ಲಿ ಗುಣಿ ತೆಗದು ಬಚ್ಚಿಟ್ಟಿದ್ದಾನೆಂತ ಆಪಾದಿಸಲ್ಪಟ್ಟಿರುವನು. ಈ ಕಳವನ್ನು ಹಿಡಿಯಲು ಸಬ್‌ಇನ್ಸ್‌ಪೆಕ್ಟರ್ ಶಿವ ಭಟ್ಟರವರು ತಕ್ಕೊಂಡ ಮೆಹನತ್ತು ಸ್ತುತ್ಯವಾದದ್ದಾಗಿದೆ.

* * *

ವಿವಿಧ ವಿಷಯಗಳು.

ನಿತ್ಯದಲ್ಲಿಯೂ ಶುದ್ಧವಾದ ವಜ್ರವನ್ನು ಧಾರಣಮಾಡುವವನಿಗೆ ವಿಷ, ಅಗ್ನಿ, ಹುಲಿ, ಕಳ್ಳ, ನೀರು ಮುಂತಾದವುಗಳಿಂದ ಉಂಟಾಗುವ ಭಯವಿಲ್ಲ. ಮತ್ತು ಅಥರ್ವಣ ಸಂಬಂಧಪಟ್ಟ ಕೆಲಸಗಳಿಗೆ ಬಹಳ ಅನುಕೂಲವಾಗುವದು. ಉತ್ತಮವಾದ ವಜ್ರವನ್ನು ಧರಿಸುವವನಿಗೆ ಆಯುಸ್ಸು, ಧನ ಧಾನ್ಯ, ಪಶುಗಳು ಮುಂತಾದುವು ಸಮೃದ್ಧಿಯನ್ನು ಹೊಂದುವದು.

* * *

ಟ್ರಾನ್ಸವಾಲ್ ಸಜ್ಜಿಯೆಂಬ ಒಂದು ಹೊಸ ತರಹೆ ಸಜ್ಜೆಯ ಪೈರನ್ನು ಕೊಯಿಂಬತ್ತೂರು ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಬೆಳೆಯುತ್ತಾರೆ. ಇದು ನಾಟು ಸಜ್ಜಿಗಿಂತಲೂ ತ್ವರ್ಯದಲ್ಲಿ ಬೆಳೆಯುವದು. ಇದಕ್ಕೆ ಹೆಚ್ಚು ಬೆಲೆಯು ದೊರಕುತ್ತೆ. ನಾಡು ಸಜ್ಜಿಗಿಂತಲೂ ಇದರಲ್ಲಿ ಹೊಟ್ಟು ಕಮ್ಮಿ ಇರುವದರಿಂದ ಜನರು ವಿಶೇಷವಾಗಿ ಪಸಂದು ಮಾಡುತ್ತಾರೆ. ಈ ಪೈರನ್ನು ಖುಷ್ಕಿ ಅಥವಾ ತರಿ ಫಸಲಾಗಿ ಬೆಳೆಯಬಹುದು.

* * *

ಮುಸುಕಿನ ಜೋಳವನ್ನು ಉಷ್ಣ ದೇಶಗಳಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಈ ಪೈರನ್ನು ಎಲ್ಲಾ ತರಹೆ ಜಮೀನುಗಳಲ್ಲಿ ಬೆಳೆಯ ಬಹುದಾದ್ದರಿಂದಲೂ ಇದಕ್ಕೆ ವಿಶೇಷವಾಗಿ ಗಿರಾಕಿ ಇರುವದರಿಂದಲೂ ಈ ಪೈರನ್ನು ಅನೇಕರು ಬೆಳೆಯುತ್ತಾರೆ.

ಈ ಪೈರನ್ನು ನಾನಾವಿಧವಾಗಿ ಉಪಯೋಗಿಸಬಹುದಾದ್ದರಿಂದ ಯಾವಾಗ್ಯೂ ಇದಕ್ಕೆ ಗಿರಾಕಿಯು ಇರುತ್ತೆ. ಮೃಗಗಳಿಗೂ, ಕೋಳಿ ಮುಂತಾದ ಪ್ರಾಣಿಗಳಿಗೂ ಧ್ಯಾನವನ್ನು ಹಾಗೆಯೇ ತಿನ್ನಿಸುತ್ತಾರೆ. ಮೈದಾಹಿಟ್ಟು, ಸ್ಟಾರ್ಚ್ ಮುಂತಾದವುಗಳನ್ನು ತಯಾರ್ಮಾಡುವದಕ್ಕೂ ಉಪಯೋಗಿಸುತ್ತಾರೆ. ಕಡ್ಡಿ ಮತ್ತು ಎಲೆಗಳನ್ನು ದನಗಳಿಗೆ ಮೇವಾಗಿ ಉಪಯೋಗಿಸುತ್ತಾರೆ. ಈ ಧಾನ್ಯವು ಹೆರಳವಾಗಿ ಇಂಗ್ಲೆಂಡ್ ದೇಶಕ್ಕೆ ಹೋಗುತ್ತಿರುವದರಿಂದ ಈ ಪೈರನ್ನು ಉತ್ತಮ ತರಹೆ ವ್ಯವಸಾಯ ಕ್ರಮಗಳನ್ನು ಅನುಸರಿಸಿ ಬೆಳೆಸಿದರೆ ಬಹಳ ಮಟ್ಟಿಗೆ ಆದಾಯ ಉಂಟು.

ಯವಕ್ಷಾರ ಗೊಬ್ಬರಗಳನ್ನು ಹಾಕಿ ಪೈರು ಮಾಡಿದ್ದರಲ್ಲಿ ಉತ್ಪತ್ತಿಯು ಬಹಳಮಟ್ಟಿಗೆ ಹೆಚ್ಚಿತು. ಯಾವ ತರಹೆ ಗೊಬ್ಬರದಿಂದ ಹೆಚ್ಚು ಫಾಯಿದೆ ಉಂಟಾಗುತ್ತೆಂದು ಅಜಮಾಯಿಷಿ ಮಾಡಿದ್ದರಲ್ಲಿ ನೈಟ್ರೇಟ್ ಆಫ್ ಸೋಡವನ್ನು ಪೊಟಾಷ್ ಜೊತೆಯಲ್ಲಿ ಸೇರಿಸಿ ಹಾಕುವದರಿಂದ ಹೆಚ್ಚು ಗುಣವುಂಟೆಂದು ಕಂಡು ಬರುತ್ತೆ.

* * *

ಒಯಾಹು ಎಂಬ ಒಂದು ಹೊಸ ತರಹೆಯ ಮಾವಿನ ಗಿಡಗಳನ್ನು ಹಾವಾಯಿನ ವ್ಯವಸಾಯ ಶಾಲೆಯಲ್ಲಿ ಬೆಳೆಯುತ್ತಿದ್ದಾರೆಂದು ತಿಳಿಯಬರುತ್ತದೆ. ಈ ಗಿಡದ ಹಣ್ಣುಗಳಲ್ಲಿ ಪ್ರಾಯಕವಾಗಿ ಬೀಜವೇ ಇರುವುದಿಲ್ಲವಂತೆ. ಈ ಹಣ್ಣು ಬಹಳ ದಪ್ಪನಾಗಿಯೂ ಮತ್ತು ನೋಡಲು ಬಹಳ ಅಂದವಾಗಿಯೂ ಮತ್ತು ರುಚಿಯಾಗಿಯೂ ಇರುವುದಂತೆ. ಇದರ ಓಟೆಯು ಅತಿತೆಳುವಾಗಿರುವುದು. ಮತ್ತು ತಿರುಳು ಬಹಳವಾಗಿರುವುದು. ಈ ಹಣ್ಣುಗಳಲ್ಲಿ ಮಾವಿನ ಹಣ್ಣುಗಳಿಗೆ ಮುತ್ತ ತಕ್ಕ ಹೇನುಗಳಿರುವುದಿಲ್ಲವಂತೆ. ಸರಿಯಾದ ಕೃಷಿಯಿಂದ ಇನ್ನು ಸ್ವಲ್ಪ ಕಾಲದಲ್ಲಿ ಈ ಹಣ್ಣಿನಲ್ಲಿ ಬೀಜವೇ ಇಲ್ಲದಂತೆ ಮಾಡಬಹುದೆಂದು ಅಭಿಪ್ರಾಯ ಪಡುತ್ತಾರೆ. ಒಂದೊಂದು ಹಣ್ಣು ೧ ಶೇರು ಮೊದಲ್ಗೊಂಡು ೫|| ಸೇರಿನ ವರಿವಿಗೂ ತೂಗುತ್ತದೆ. ಶಿಪ್ಪೆಯು ಸುಮಾರಾಗಿ ದಪ್ಪನಾಗಿಯೂ ಒರಟಾಗಿಯೂ ಮತ್ತು ಸುಲಭವಾಗಿ ತೆಗಿಯಲಾಗದಂಥಾದ್ದಾಗಿಯೂ ಇರುತ್ತದೆ. ತಿರುಳು ದಪ್ಪನಾಗಿಯೂ, ರಸವತ್ತಾಗಿಯೂ ಮತ್ತು ನಾರುಳ್ಳದ್ದಾಗಿಯೂ ಇರುವುದು. ಹಣ್ಣು ರುಚಿಯಾಗಿಯೂ ಮತ್ತು ಮಧುರವಾಗಿಯೂ ಇರುತ್ತದೆ.

* * *

ಈಚಿಗೆ ತೆಂಗನ್ನು ಬೆಳೆಯತಕ್ಕ ದೇಶಗಳಲ್ಲೆಲ್ಲಾ ಜನರು ತೆಂಗಿನ ವ್ಯವಸಾಯದ ವಿಷಯದಲ್ಲಿ ಹೆಚ್ಚು ಮುತವರ್ಜಿಯನ್ನು ವಹಿಸುತ್ತಿದ್ದಾರೆ. ಜಂಜಿಬಾರ್ ಎಂಬ ಸ್ಥಳದಲ್ಲಿ ಇದುವರಿವಿಗೂ ಲವಂಗ, ಮೆಣಸು, ದಾಲಚಿನ್ನಿ ಮತ್ತು ಇತರ ಮಸಾಲೆ ಸಾಮಾನುಗಳನ್ನೇ ವಿಶೇಷವಾಗಿ ಬೆಳೆಯುತ್ತಿದ್ದರು. ಮುಖ್ಯವಾಗಿ ಪ್ರಪಂಚದಲ್ಲೆಲ್ಲಾ ವರ್ಷಂಪ್ರತಿಯಲ್ಲೂ ಮಾರಾಟವಾಗುತ್ತಿರುವ ಲವಂಗದ ಪೈಕಿ ಮುಕ್ಕಾಲುಪಾಲು ಜಾಂಜಿಬಾರಿನಿಂದ ಸರಬರಾಜು ಆಗುತ್ತಿದೆ. ಈಗ ಇಲ್ಲಿನವರು ಇದುವರಿವಿಗೂ ಲವಂಗವನ್ನು ಬೆಳೆಯುತ್ತಿದ್ದ ಜಮೀನಿನಲೆಲ್ಲಾ ತೆಂಗನ್ನು ಬೆಳೆಸಲು ಆರಂಭಿಸಿದ್ದಾರೆ. ಕಾಲಕ್ರಮದಲ್ಲಿ ಇಲ್ಲಿನ ಲವಂಗದ ತೋಟಗಳೆಲ್ಲಾ ತೆಂಗಿನ ತೋಟಗಳಾಗುವಂತೆ ತೋರುತ್ತದೆ. ಇದರಿಂದ ಇನ್ನು ಮುಂದೆ ಲವಂಗದ ಸರಬರಾಜು ಕಡಿಮೆಯಾಗುವುದರಿಂದ ಲವಂಗದ ಖರೀದಿಯು ಏರಿ ಹೋಗುತ್ತದೆಂಬುವುದಕ್ಕೆ ಅನುಮಾನವೇಇಲ್ಲ. ಸದ್ಯದಲ್ಲಿ ಇಂಡಿಯಾ ದೇಶದಲ್ಲಿ ಲವಂಗವನ್ನ ಸ್ವಲ್ಪ ಮಟ್ಟಿಗೆ ಮಾತ್ರ ಬೆಳೆಯುತ್ತಿದಾರೆ ಆದರೆ ಇನ್ನು ಮುಂದೆ ಈ ವ್ಯವಸಾಯವನ್ನು ಹೆಚ್ಚಿಸಿದಲ್ಲಿ ತುಂಬಾ ಲಾಭ ದೊರೆಯುವುದರಲ್ಲಿ ಸಂಶಯವಿಲ್ಲ.

* * *

ಅಮೇರಿಕದ ಕೋಟ್ಯಾಧಿಪತಿಯಾದ ರೊಕ್‌ಫೆಲ್ಲರಿಗೆ ೧೮೦,೦೦೦,೦೦೦ ಪವನುಗಳ ಅಸ್ತಿಯಿದೆ. ದಿವಸದ ಆದಾಯವು ೪೦,೩೨೦ ಪವನುಗಳು! ೧೮೫೫ನೇ ಇಸವಿಯಲ್ಲಿ ಅವರಿಗೆ ೧೦೦೦ ಪವನುಗಳ ಅಸ್ತಿ ಮಾತ್ರ ಇತ್ತು. ಇಷ್ಟರ ವರೆಗೆ ರೊಕ್‌ಫೆಲ್ಲರರು ೩೪,೯೦೦,೦೦೦ ಪವನುಗಳನ್ನು ಧರ್ಮಕಾರ್ಯಗಳಿಗೆ ಕೊಟ್ಟಿರುವರು.

* * *

ಸರಕಾರದ ಬರವಸೆಗಳುಳ್ಳ

ಇಂಡಿಯ ಇಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

1882ನೇ ಇಸವಿ ಇಂಡಿಯನ್ ಕಂಪೇನಿಸ್ VIನೇ ಆಕ್ಟು ಪ್ರಕಾರ ರಿಜಿಸ್ಟ್ರಿಯಾಗಿಯದೆ.

ನಿಯಮಿತ ಮೂಲ ದ್ರವ್ಯವು 10,00,000.

(ದ್ರವ್ಯವನ್ನು ಸರಕಾರ ಜವಾಬ್ದಾರಿಯಲ್ಲಿ ಇಟ್ಟಿರುತ್ತದೆ.)

ಈ ಕಂಪೆನಿಯು ಪ್ರಖ್ಯಾತಿಪಟ್ಟ ಪೋಷಕರಿಂದಲೂ ಸಮರ್ಥರಾದ ಡೈರೆಕ್ಟರರಿಂದಲೂ ನಡೆಯಿಸಲ್ಪಡುತ್ತಿರುವುದು. ಮತ್ತು ಇದು ಪ್ರಖ್ಯಾತಿಪಟ್ಟ ಜೀವ ವಿಮೆ ಸಂಗಗಳಲ್ಲಿ ಒಂದಾಗಿರುವದಲ್ಲದೆ, ಪ್ರೀಮಿಯಂ ವಗೈರೆ ಇತರ ಕಂಪೆನಿಗಿಂತಲೂ ಬಹಳ ಕಡಿಮೆಯಾಗಿ, ಸಿಕ್ಕುವಂಥಾ ಲಾಭವು ಅತಿ ಹೆಚ್ಚಾಗಿರುತ್ತದೆ.

ಎಲ್ಲಾ ಪಟ್ಟಿಗಳ ಅನುಸಾರವಾಗಿ 18 ವರುಷಗಳ ಮೇಲಿನ ಮತ್ತು 45 ವರುಷ ಪ್ರಾಯದ ಕೆಳಗಿನ ಗಂಡಸರನ್ನು, ಯಾ ಹೆಂಗಸರನ್ನು ಸೇರಿಸಿಕೊಳ್ಳುತ್ತಾರೆ. ಉದಾಹರಣೆ:—25 ವರುಷ ಪ್ರಾಯದವನೊಬ್ಬನು 50ನೇ ವರುಷದಲ್ಲಿ 5000 ರೂಪಾಯಿ ಮತ್ತು ಅದರ ಮೇಲಿನ ನಫೆಯು ಸಿಕ್ಕಬೇಕಾದರೆ ವರುಷ ಒಂದಕ್ಕೆ ರೂಪಾಯಿ 213—7—0 ಪ್ರಕಾರ ಕೊಡುತ್ತಾ ಬರಬೇಕು. ಆದರೆ ಅಷ್ಟೇ ವರುಷದವನು ಸದರಿ ಹಣವು ಅವನ ಯಾ ಅವಳ ನಂತರದಲ್ಲಿ, ಅವರಿಂದ ಅಧಿಕಾರ ಪಟ್ಟ ಯಾ ವಾರಿಸ್ದಾರರಿಗೆ ಸಿಕ್ಕುವದಾದರೆ ವರುಷ ಒಂದಕ್ಕೆ ರೂಪಾಯಿ 133—7—0 ಪ್ರಕಾರ ತೆರಬೇಕು.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂಪಾಯಿ 32—12—0 ಕೊಡುತ್ತಾ ಬಂದಲ್ಲಿ ಆ ಗಂಡಿನ ಅಥವಾ ಹೆಂಗಸಿನ 20ನೇ ವರುಷ ಪ್ರಾಯದಲ್ಲಿ 1000 ರೂಪಾಯಿ ಕೊಡಲಾದೀತು. ಈ ಪಟ್ಟಿಯನ್ನು ಅನುಸರಿಸುವ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇಲ್ಲ. ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೆ ಒಂದು ಸಾರಿಯೂ, ಆರು ತಿಂಗಳಿಗೆ ಒಂದಾವರ್ತಿಯಾಗಿಯೂ, ವರ್ಷಾವದಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಿಂದ ಸೂಚನಾಪತ್ರಗಳನ್ನು ತರಿಸಿಕೊಳ್ಳಬಹುದು.

☞ ಸಬ್ ಏಜಂಟರು ಬೇಕು. ☜

ಚನ್ನಾಗಿ ಕೆಲಸ ಮಾಡುವ ನಂಬಿಗೆಯುಳ್ಳ ಏಜಂಟರು ಪ್ರತಿ ಸ್ಥಳಗಳಲ್ಲಿಯೂ ಬೇಕು. ತಿಂಗಳು ಒಂದರ 25 ರೂಪಾಯಿ ಲಾಗಾಯಿತು 50 ರೂಪಾಯಿ ವರೇಗೆ ಆಯಾಯ ಕೆಲಸಕ್ಕನುಗುಣವಾಗಿ ಸಂಬಳವು ಕೊಡಲಾದೀತು. ಕೆಳಗಿನ ವಿಳಾಸಕ್ಕೆ ಬರಿಯಬೇಕು.

ಮುಖ್ಯ ಅಧಿಕಾರಸ್ಥಾನ,
ಕಲ್ಕತ್ತ.

ಕೆ. ಆರ್. ಹೆಬ್ಬಾರ್,
ಕನ್ನಡ ಮಲಬಾರು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರು.
ಉಡುಪಿ ಪೋಸ್ಟು.

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ,

ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾ ಪ್ರವೇಶದಾಯಿನಿ.

ಮೊದಲನೆಯ ಪುಸ್ತಕ. ಪ್ರಥಮಾಭ್ಯಾಸಿಗಳಿಗೆ ತಕ್ಕ ಸುಲಭ ಪಾಠಗಳನೇಕವಾಗಿರುವ ಪ್ರತಿ ಇಂಗ್ಲಿಷ್ ಶಬ್ದಕ್ಕೂ ಕನ್ನಡಕ್ಷರದಲ್ಲಿ ಉಚ್ಚಾರಣೆ ಅರ್ಥ ಸಹ ಇರುವುದು. ಕ್ರಯ ಒಂದು ರೂಪಾಯಿ ಎಂಟಾಣೆ.

ಎರಡನೆಯ ಪುಸ್ತಕ. ಅಕ್ಷರಜ್ಞಾನವೂ ಶಬ್ದಜ್ಞಾನವೂ ಆದ ಸ್ವಲ್ಪ ಮಟ್ಟಿಗೆ ಇಂಗ್ಲಿಷ್ ತಿಳಿದವರಿಗೆ ಅನುಕೂಲವಾದ ಪ್ರೌಢಪಾಠಗಳುಳ್ಳದಾಗಿ ವರ್ತಕರಿಗೆ ಉಪಯೋಗವಾದ ಪಾರಿಭಾಷಿಕ ಶಬ್ದಕೋಶ ಒಂದನ್ನು ಛಾಪಿಸಿದೆ. ಕ್ರಯ ಒಂದು ರೂಪಾಯಿ ಎಂಟಾಣೆ.

ದಸರಾ ದೀಪಾವಳೀ ಮಹೋತ್ಸವದ ಜ್ಞಾಪಕಾರ್ಥವಾಗಿ ಆರು ವಾರಗಳ ಮಟ್ಟಿಗೆ ಕ್ರಯ ಕಡಮೆ ಮಾಡಿದೆ. ಅವಧಿ ಮೀರಿದ ಬಳಿಕ ಮರಳಿ ಮೊದಲಿನ ಕ್ರಯವೇ ಕೊಡಬೇಕಾಗುವುದು.

ಮೊದಲನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.

ಎರಡನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.

ಅಂಚೆವೆಚ್ಚ ಪುಸ್ತಕ ಒಂದಕ್ಕೆ ಮೂರೇ ಆಣೆ.

ಎರಡು ಪುಸ್ತಕವೂ ಒಟ್ಟಾಗಿಯಾದರೂ, ಒಂದೇ ಪುಸ್ತಕವನ್ನು ಹೆಚ್ಚಾಗಿಯಾದರೂ ಕೊಂಡುಕೊಳ್ಳುವವರಿಗೆ ಅಂಚೆ ವೆಚ್ಚ ಮಾಫಿ.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭಾರತಿ ಸಂಪಂಗಿರಾಮು,
ಭಾಷಾನಿಧಿ ಕಾರ್ಯಾಲಯ,
೧೨೦ ಗುಡುಮ್ಮಯನ ಪೇಟೆ, ಬೆಂಗಳೂರು ಸಿಟಿ.

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

(ಶ್ರೀ ಶೃಂಗೇರಿ ಮಠದವರಿಂದಲೂ, ಮೈಸೂರು ಸರಕಾರದವರಿಂದಲೂ ಪೋಷಿಸಲ್ಪಡುತ್ತಲಿದೆ)

ಇದರಲ್ಲಿ:—(೧) "ದಶೋಪನಿಷತ್ತು"ಗಳಿಗೂ ಕನ್ನಡ ಕಥಾರೂಪವಾದ ತಾತ್ಪರ್ಯ. (೨) "ಶ್ರೀ ಶಂಕರಾಚಾರ್ಯ ಚರಿತ್ರ ಕಾಲವಿಚಾರ". (೩) "ಕನ್ನಡ ಭಾಷಾಮಯಧರ್ಮಸಿಂಧುಸಾರ" (೩೫೩ ವಿಷಯಗಳಿವೆ. (೪) ಸಂಧ್ಯಾವಂದನೆಯ ಅರ್ಥ ವಿಚಾರ" (ಬಹುಯುಕ್ತಿ ಪ್ರಮಾಣಗಳಿಂದೊಡಗೂಡಿದೆ) (೫. "ಬಾಲಕರ ಭಂಡಾರ" (ನೀತಿ ಕಥೆಗಳು, ನೀತಿ ಶ್ಲೋಕಗಳು, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯೆ, ಒಗಟಿ, ನ್ಯಾಯ ಮುಂತಾದುವುಗಳು). (೬) "ಕುಮಾರ ಸಂಭವ ಕಾವ್ಯ" ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ, ನಿಗ್ರಹ, ದಾತುರೂಪ, ಧಾತ್ವರ್ಥ, ವಿಶೇಷಾಂಶಗಳೊಂದಿಗೆ.

(೧೨-೮-೧೯೧೧)ರಲ್ಲಿ ಆರಂಭವಾಗಿ ನಡೆಯುತ್ತಲಿದೆ. ಚಂದಾ (ವರ್ಗಣಿ) ದಾರರಿಗೆ ಹಿಂದಿನ ಸಂಚಿಕೆಗಳೆಲ್ಲ ದೊರೆಯುತ್ತವೆ.

ವಿಲಾಸ: (ಪತ್ತೆ)--ದೊಡ್ಡ ಬೆಲೆ ನಾರಾಯಣ ಶಾಸ್ತ್ರಿ,
ಶ್ರೀ "ಶಾರದಾ" ಸಂಪಾದಕ, ಸೀಗೆ ಬೀದಿ ಬೆಂಗಳೂರು.

ಹೆಸರು ಪಡೆದ ಸಾಲಿಯ್ಯಾಸ್ ಶಾಯಿಪುಡಿ.

ಸಾಲಿಯ್ಯಾಸ್ ಎಂಬ ಈ ಶಾಯಿಗೆ ೭೫ಕ್ಕಿಂತಲೂ ಹೆಚ್ಚಿನ ಪದಕಗಳು ದೊರಕಿದ್ದು ಮೈಸೂರು ಮತ್ತು ಹೈದರಾಬಾದ್ ಸರಕಾರಗಳಿಂದ ಪ್ರೋತ್ಸಾಹಿಸಲ್ಪಟ್ಟಿದೆ.



ಶಾಲೆಗಳಲ್ಲಿ ಉಪಯೋಗಿಸುವ ಬಗ್ಯೆ ಇದಕ್ಕಿಂತ ಉತ್ಕೃಷ್ಟವಾದ ಶಾಯಿ ಮತ್ತೊಂದಿಲ್ಲ. ೫೦ ಔನ್ಸು ಶಾಯಿಯನ್ನು ಮಾಡಬಹುದಾದ ಡಬ್ಬಿ ಒಂದಕ್ಕೆ ೦—೧—೦ ಆಣೆ ಮಾತ್ರ. ಟಪ್ಪಾಲು ಚಾರ್ಜು ೧ರಿಂದ ೧೨ರ ವರೆಗೆ ೦—೪—೦. ನಮ್ಮಲ್ಲಿ ಇದು ವಿನಹಾ ವಿವಿಧ ನಮೂನೆಯ ಶಾಯಿಗಳಿವೆ. ಅಲಿಮಿನಿಯಂ ಪಾತ್ರೆಗಳೂ, ಬನಿಯನುಗಳೂ, ಉಲನ್ ಶ್ಯಾಲುಗಳೂ, ದಾರಗಳೂ, ವಾಚುಗಳೂ, ಔಷಧಿಗಳೂ, ಅತ್ತರುಗಳೂ, ಇಟಾಲಿಯನ್ ಟೋಪಿಗಳೂ ನಮ್ಮಲ್ಲಿ ದೊರೆಯುವವು. ೧೯೧೩ನೇ ಇಸವಿಯ ಡ್ಯಾರಿಗಳು ಈಗ ತಾನೇ ಬಂದಿವೆ. ಕ್ರಯ ೦—೪—೦ ಮತ್ತು ೦—೬—೦. ವ್ಯಾಪಾರಸ್ಥರಿಗೆ ಧಾರಾಳ ಕಮಿಷನ್ ದೊರಕುವದು.

ದಿ. ಊಲನ್ ಮಾರ್ಟ್.
ಜನರಲ್ ಮರ್ಚೆಂಟ್ಸ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! ಬಾಲಾಮೃತ. ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂರುಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0-12-0 ಮೂರು ಬಾಟ್ಲಿಗಳಿಗೆ 2-0-0 12 ಬಾಟ್ಲಿಗಳಿಗೆ 7-0-0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಆತ್ಯಾಶ್ಚರ್ಯಕಾರಕ. ಅನೇಕ ಜನರು ನಿರಾಶೆಹೊಂದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1-0-0 4 ಬಾಟ್ಲಿಗಳಿಗೆ 3-0-0 12 ಬಾಟ್ಲಿಗಳಿಗೆ 8-0-0

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩. ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ. ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ. ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು	ರೂ. ೦-೪-೦
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ ೧-೪-೦
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ.	„ ೦-೪-೦
ರೋಯಲ್ ಇಂಡಿಯನ್ ಬಾಂ:=ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	„ ೦-೮-೦

ವಿಲಾಸ:—

ಗಣೇಶ ರಾಮಚಂದ್ರ ಕರ್ಕಿ, ಕಂಪೆನಿ,
ಗಿರಗಾಂ ಮುಂಬಯಿ.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ

ಸಾರ್ಸಾಪರಿಲಾ.


ಪೂರ್ವದ ಸ್ಥಿತಿ.


ನಂತರದ ಸ್ಥಿತಿ.

ಜಗಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ,ಬಹಳ ದಿನಗಳ ಹಳೇ ಪ್ರಮೇಹ ಇಡೀಮೈಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶೆರಿಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಳಾಸ:— ಪ್ರೊಪ್ರ್ಯಾಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೊಶಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)


KAMINIA
Regd
OIL
Regd
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co
BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ. ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲ್ಯದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲ್ಯವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30—5—11 ಮೆ. ನೇಗಿನಹಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ «ಕಾಮಿನಿಯಾ ಓೈಯಲ್» ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28—7—11. ಮೆ. ಪಿ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನಾರಗುಡಿ—ತಾವು ಕಳುಹಿಸಿಕೊಟ್ಟ «ಕಾಮಿನಿಯಾ ಓೈಯಲ್» ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓೈಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11. ಮೆ. ಸಿ. ಆರ್. ನಾಯಡು ಪ. ವ. ಡ. ಟಾಶಿಬ, (ಬರ್ಮಾ)—ನನ್ನ ಮಿತ್ರರು «ಕಾಮಿನಿಯಾ» ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರೆಯಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಇತರ ಕಡೆಯಿಂದ ಎಣ್ಣೆಯನ್ನು ಕೊಂಡುಕೊಳ್ಳುವವರು «ಕಾಮಿನಿಯಾ» ಎಂಬ ಗುರ್ತವನ್ನು ಚೆನ್ನಾಗಿ ಕಂಡುಹಿಡಿಯದೆ ಮೋಸಹೋದಲ್ಲಿ ನಾವು ಜವಾಬ್ದಾರರಲ್ಲ.

Address—**Anglo Indian Drug & Chemical Co.,**
155 Jumma Musid, Market, Bombay.
ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ 6ನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವದಿವಿಮೆ ದುಬಾರೆ ಎಂಡೌಮೆಂಟ್ ಪೊಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ತೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯ ಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣದಗೋಸ್ಕರ ತಿಂಗಳಿಗೆ ೨ ರೂಪಾಯಿ ೩ ರೂಪ್ಯಾ ೮ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪೆನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರೆವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ತಿಲ್ಯಾನೋ
ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.
ಮಂಗಳೂರು, ದಕ್ಷಿಣ ಕನ್ನಡ.

ಧಾತುಪೌಷ್ಟಿಕ ಲೇಹವು.

ಸ್ವದೇಶಿ! (ಗುಣವಾಗದಿದ್ದರೆ ಹಣ ಪರತ!!) ಸ್ವದೇಶಿ!!!

ಎರಡನೇದವರ ಛಪಕೆದಾರ ಜಾಹಿರಾತಿಗೆ ಮರುಳಾಗಿ ಮೋಸಹೋಗ ಬೇಡಿರಿ. ಒಮ್ಮೆ ಈ ಲೇಹವನ್ನು ಸೇವನೆ ಮಾಡುವದರಿಂದ ಜನನೇಂದ್ರಿಯದ ಶಿಥಿಲತೆ, ನಪುಂಸಕತ್ವ, ಹಳೆಜ್ವರ ಅಶಕ್ತತೆ, ಸ್ವಪ್ನಾವಸ್ಥೆ, ಧಾತುಪತನ, ಎದೆನೋವು, ಕಟಿಶೂಲೆ ವಾತರೋಗ, ರಕ್ತ ಉದ್ರೇಕ, ಕಫ, ಕೆಮ್ಮು ದಮ್ಮು, ಮೇಹಸಂಬಂಧಿ ಧಾತು ಹೋಗೋಣ ಇತ್ಯಾದಿಗಳು ಗುಣವಾಗಿ ಇಂದ್ರಿಯದ ಶಿಥಿಲತೆ, ತೆಳ್ಳಗಾವಿನದ ಧಾತು ನಿರ್ಬಲತೆ, ಸೃಷ್ಟಿನೇಮಕದ ವಿರುದ್ಧ ತ್ವರೆಯಿಂದ ಉಂಟಾದ ನಪುಂಸಕತ್ವ ಇವು ನಾಸಿಯಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ಕಾಮೋತ್ತೇಜಕ, ರಕ್ತಶುದ್ಧಿ ವ ವೃದ್ಧಿ, ದೇಹ ಕಾಂತಿ, ಗರ್ಮಿ, ಹುಣ್ಣುಗಳು, ತಲೆಶೂಲೆ, ಹೊಟ್ಟೆಶೂಲೆ ಮುಂತಾದವು ಅತಿತ್ವರೆ ಖಾತ್ರಿಯಿಂದ ಗುಣವಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ ರತಿವಿಲಾಸಕ್ಕೆ ಪೂರ್ಣ ಶಕ್ತಿಯೂ, ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆ ವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ೩—೮—೦ ೮೦ ತೊಲೆಗೆ ೬-೦-೦ ಟ. ಖ. ಬೇರೆ. ಅನುಪಾನ ಪತ್ರಿಕೆ ಔಷಧಿ ಸಂಗಡಲೆ ರವಾನಿಸುವೆವು.

ವಿಳಾಸ:—ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡಾ.

ಬೆಲೆ ಸುಲಭ! ತ್ವರೆ ಮಾಡಿರಿ!! ಬಹಳ ವಿಷಯಗಳು!!!

ಸರ್ವ ಜ್ಯೋತಿಷ್ಯರತ್ನ.

ವೆಂಬ ಹೊಸ ಗ್ರಂಥವು.

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವುದಕ್ಕೆ ತಕ್ಕ ಜೋತಿಷ ಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವುವು. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಮರಾಠಿ, ಹಿಂದಿ ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ, ಲಗ್ನಭಾಗ, ಮೂಹೂರ್ತ ಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವುದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವುದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯವಾದವರಿಗೂ ವಿಷದವಾಗಿ ತಿಳಿಯುವಂತಿರುವುದು.

ಈ ಪುಸ್ತಕದ ಬೆಲೆ ರೂ. ೨. ಟಪ್ಪಾಲ್ ಹಾಸಲು ೪ ಆಣೆ.

ನಮ್ಮ ವಿಳಾಸ:—ಶ್ರೀ ಶಿವಲಿಂಗಂ ಶೆಟ್ಟಿ.
ಕರ್ನಾಟಕ ಬುಕ್‌ಡಿಪೋ ಏಜಂಟ್, ಬಳ್ಳಾರಿ.

READY FOR SALE

A MANUAL OF

GENERAL ENGLISH

3rd Edition, Thoroughly Revised

For the use of the 2nd 3rd & 4th Forms
WITH
Nemurous exercises on each Chapter and question papers up to date
ಸುಣ್ಣವನ್ನು ವಿಶೇಷವಾಗಿ ಜಮಿನಾನುಗಳಿಗೆ ಗೊಬ್ಬರಕ್ಕಾಗಿ ಉಪಯೋಗಿಸುತ್ತಾರೆ. ಇದು ಪೈರಿನ ಬೆಳವಳಿಕೆಗೆ ಹ್ಯಾಗೆ ಸಹಕಾರಿಯಾಗುತ್ತೆಂಬ ವಿಚಾರವು ತಿಳಿಯದೆ ಇರೋಣದರಿಂದ ಮನಸ್ಸಿಗೆ ಬಂದ ಹಾಗೆ ಉಪಯೋಗಿಸುತ್ತಾರೆ. ಹೀಗೆ ಮಾಡದೆ ಯಾವ ಯಾವ ಜಮಿನಾನಿಗೆ ಎಷ್ಟೆಷ್ಟು ಬೇಕಾಗುತ್ತದೋ ಅಷ್ಟೇ ಉಪಯೋಗಿಸಬೇಕು. ಪೈರಿನ ಬೆಳವಳಿಕೆಗೆ ಬೇಕಾಗುವ ನಾನಾ ತರಹೆ ಸಸ್ಯಾಹಾರಗಳು ಎಲ್ಲಾ ತರಹೆ ಜಮಿನಾನುಗಳಲ್ಲಿಯೂ ಇರುತ್ತೆ. ಇವುಗಳಲ್ಲಿ ಯಾವದೊಂದು ಇಲ್ಲದಿದ್ದರೂ ಜಮಿನಾನು ಫಲಕಾರಿಯಾಗಿರುವದಿಲ್ಲ. ಅಲ್ಲದೆ ಇವುಗಳು ಸಾಧಾರಣವಾಗಿ ಇರಬೇಕಾದ್ದಕ್ಕಿಂತ ಕಮ್ಮಿಯಾಗಿದ್ದ ಪಕ್ಷದಲ್ಲಿ ಫಸಲುತ್ಪತ್ತಿಯು ತಕ್ಕಂತೆ ಕಮ್ಮಿಯಾಗುತ್ತೆ, ಆದರೆ ಸುಣ್ಣವು ಇಲ್ಲದಿರುವಂಥಾ ಭೂಮಿಯೇ ಇಲ್ಲ. ಯಾಕಂದರೆ, ಸುಣ್ಣದ ಮಿಶ್ರಗಳು ಎಲ್ಲೆಲ್ಲಿಯೂ ವಿಶೇಷವಾಗಿ ಭೂಮಿಯಲ್ಲಿ ವ್ಯಾಪಿಸಿಕೊಂಡಿರುತ್ತವೆ.

ಒಳ್ಳೇ ಗೊಬ್ಬರಗಳು ಪೈರಿನ ಬೆಳವಳಿಕೆಯನ್ನು ವೃದ್ಧಿಗೊಳಿಸುವದಲ್ಲದೆ ಫಸಲುತ್ಪತ್ತಿಯನ್ನು ಜಾಸ್ತಿಮಾಡುತ್ತೆ. ಸುಣ್ಣವನ್ನು ಉಪಯೋಗಿಸುವದರಿಂದ ಈ ಎರಡು ಪ್ರಯೋಜನಗಳನ್ನೂ ಹೊಂದಬಹುದು.

ಪೈರಿಗೆ ಸಸ್ಯಾಹಾರವು ಒದಗಬೇಕಾದರೆ ಅದು ದ್ರವರೂಪವಾಗಿ ಇರಬೇಕು. ಎಲ್ಲಾ ತರಹೆ ಜಮಿನಾನುಗಳಲ್ಲೂ ಸಜೀವ ಪದಾರ್ಥಗಳು ನಾನಾ ತರಹೆ ಭೇದಗಳನ್ನು ಹೊಂದುತ್ತಾ ಇರುತ್ತವೆ. ಜೌಗು ಪ್ರದೇಶಗಳಲ್ಲೂ, ಭೂಸಾರ ಕಮ್ಮಿಯಾಗಿರುವ ಪ್ರದೇಶಗಳಲ್ಲಿಯೂ ಸಜೀವ ಪದಾರ್ಥಗಳು ಸುಲಭದಲ್ಲಿ ಭೇದವನ್ನು ಹೊಂದುವದಿಲ್ಲ. ಇಂಥಾ ಪ್ರದೇಶಗಳಿಗೆ ಸುಣ್ಣವನ್ನು ಉಪಯೋಗಿಸಿದರೆ ಜಮಿನಾನಿನಲ್ಲಿ ಅಡಗಿರುವ ಸಸ್ಯಾಹಾರವು ಪೈರಿಗೆ ಸುಲಭದಲ್ಲಿ ದೊರಿಯುತ್ತೆ. ಕೆಲವು ವೇಳೆ ಇತರ ಲೋಹ ಮಿಶ್ರಣಗಳೊಂದಿಗೆ ಸೇರಿ ಪೈರಿಗೆ ಉಂಟಾಗುವ ಕೆಡಕುಗಳನ್ನು ತಪ್ಪಿಸುತ್ತೆ.

ಜಿಗಟಾದ ಜೇಡಿಮಣ್ಣಿನ ಜಮಿನಾನುಗಳಿಗೆ ಸುಣ್ಣವನ್ನು ಹಾಕುವದರಿಂದ ಗಡಸು ಹೋಗಿ ನೀರು ಮತ್ತು ಘಾಳಿ ಹೋಗುವಂತೆ ಭೂಮಿಯು ಸಡಲುತ್ತೆ.

ಭೂಸಾರವನ್ನು ಜಾಸ್ತಿಮಾಡಲು ಉಪಯೋಗಿಸುವ ಸಂದರ್ಭಗಳಲ್ಲಿ ಸುಣ್ಣವನ್ನು ಸುಟ್ಟನಂತರ ಒಡನೆ ಭೂಮಿಯೊಳಗೆ ಹರವಿ ಉತ್ತುಬಿಡಬೇಕು.

ಹೀಗೆ ಮಾಡದೆ ಸುಣ್ಣದ ರಾಶಿಯನ್ನು ತಿಂಗಳಗಟ್ಲೆ ನಿಲ್ಲಿಸಿಬಿಟ್ಟರೆ ಕಾರ್ಬಾನಿಕ್ ಆಸಿಡ್ ವಾಯುವನ್ನು ಹೀರಿ ಸುಣ್ಣವು ಕಲ್ಲು ಆಗಿಹೋಗುತ್ತೆ. ಅದಲ್ಲದೆ ಸುಣ್ಣವನ್ನು ಜಾಸ್ತಿಯಾಗಿ ಉಪಯೋಗಿಸುವದರಿಂದ ಸಸ್ಯಾಹಾರವನ್ನು ಹೇರಳವಾಗಿ ಒದಗಿಸಿ ಮುಂದಿನ ಸಾಲುಗಳಲ್ಲಿ ಭೂಸಾರವು ಕಮ್ಮಿಯಾಗಿ ಫಸಲುತ್ಪತ್ತಿಯು ಕಮ್ಮಿಯಾಗಿ ಹೋಗುತ್ತೆ.

ದನದ ಗೊಬ್ಬರದ ಜತೆಯಲ್ಲಿ ಸುಣ್ಣವನ್ನು ಸೇರಿಸಿ ಉಪಯೋಗಿಸುವದು ವಾಡಿಕೆ. ಇದರಿಂದ ಅಮೋನಿಯಾ ವಾಯುವು ಆವಿ ರೂಪವಾಗಿ ಹೊರಟುಹೋಗುವದರಿಂದ ಗೊಬ್ಬರದ ಗುಣವು ಕಮ್ಮಿಯಾಗಿ ಹೋಗುತ್ತೆ.

ರೆ. ಗೆ.

⁂

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಅಯ್ಯಾ ಪತ್ರಕರ್ತರೇ,

ಕಳೆದ ಕಾರ್ತಿಕ ಶು. ೧೧ನೇ ದಿನ ಹರಿನಾಮಸ್ಮರಣೆಯಿಂದಲೂ ರಾತ್ರೆ ಸಂಕೀರ್ತನೆಯಿಂದಲೂ ನಿದ್ದೆಗೆಟ್ಟು, ಮರುದಿನ ಬೆಳಗ್ಗೆ ಸ್ನಾನ ಅನುಷ್ಠಾನಗಳನ್ನು ತೀರಿಸಿ, ಉಂಡು, ಮನೆಹೊರಗಣ ತಿಟ್ಟೆಯಲ್ಲಿ ಮಲಗಿಬಿಟ್ಟೆನು. ಅಲ್ಲೆ ನನಗೆ ನಿದ್ದೆಹತ್ತಿತು. ಆಗ ಈ ಕೆಳಗೆ ವಿವರಿಸಿದಂತೆ ಸ್ವಪ್ನವೊಂದು ಕಂಡಿತು. ಅದರ ಅಭಿಪ್ರಾಯವನ್ನು ಹಲವರೊಡನೆ ವಿಚಾರಿಸಿದರೂ ಅರ್ಥ ಸ್ಪಷ್ಟವಾಗಲಿಲ್ಲ. ಕಂಡ ಕನಸು ಏನೆಂದರೆ:—

ಇಂದ್ರಲೋಕದಲ್ಲಿ ಅತ್ರಿ, ನಾರದ, ವಿಶ್ವಾಮಿತ್ರ, ವಾಲ್ಮೀಕಿ, ಭಾರದ್ವಾಜ ಮುಂತಾದ ಹಲವು ಋಷಿಗಳು ದೇವಸ್ತುತಿಯನ್ನು ಹಾಡುತ್ತಲೂ, ಭಾಗವತ ಅಧ್ಯಯನ ಮಾಡುತ್ತಲೂ ಇದ್ದರಂತೆ. ಇನ್ನೊಂದು ಕಡೆಯಲ್ಲಿ ಭೀಷ್ಮ, ಬಲಿ, ಭಗದತ್ತ ಮೊದಲಾದ ಅನೇಕಾನೇಕ ವೀರ ಶಿರೋಮಣಿಗಳು ವೀರಸ್ವರ್ಗದ ಸುಖವನ್ನು ಪಡೆಯುತ್ತಲೇ ಇದ್ದರು. ಅಷ್ಟರಲ್ಲಿ ಧರ್ಮದ ವಿಷಯವಾಗಿ ಪ್ರಸ್ತಾಪ ಬಂತು. ಆಗ ಕಲಿಯುಗದಲ್ಲಿ ಧರ್ಮನಾಶವೇ ಆಗುವುದೆಂತಲೂ ವರ್ಣಸಾಂಕರ್ಯ ಮೊದಲಾದವುಗಳಿಗೆ ಎಡೆಸಿಕ್ಕುವುದೆಂತಲೂ ತ್ರಿಕಾಲಜ್ಞರಾದ ವೇದವ್ಯಾಸರು ಹೇಳಿದರು. "ಇದಕ್ಕೆ ಕೊನೆಗಾಣುವ ಬಗೆಯೇನು?" ಎಂದು ಕೆಲವರು ಕೇಳಿದರು. ಆಗ"… … … … … ಸಂಭವಾಮಿ ಯುಗೆಯುಗೇ" ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹಿಂದೆ ಹೇಳಿರುವನು. ಇದೇ ಉಪಾಯವಲ್ಲದೆ ಬೇರೆ ಕಾಣಲಿಲ್ಲ" ಎಂದು ವ್ಯಾಸರು ಉತ್ತರವನ್ನಿತ್ತರು. ಅಷ್ಟರಲ್ಲಿ ದೇವಲೋಕಕ್ಕೆ ವರ್ತಮಾನ ಪತ್ರಿಕೆಯಂತಿರುವ ನಾರದರು "ಮಹಾಸ್ವಾಮಿ! ಯಾವ ಧರ್ಮನಾಶವೂ ಹಾಗಿರಲಿ, ಕಮಲಪುರದಲ್ಲಿ ಈಗ ಆಗುವ ಸರ್ವನಾಶಕ್ಕೆ ಏನೆಂತ ಹೇಳಬೇಕು! ನಾರಾಯಣ! ಹರಿ! ಗೋವಿಂದ" ಎಂದರು. ಅಷ್ಟರಲ್ಲಿ ಈ ಸಮಾಚಾರವನ್ನು ಕೇಳಲಿಕ್ಕೆ ಕುತೂಹಲಚಿತ್ತರಾಗಿ ಭೀಷ್ಮ ಮೊದಲಾದವರೂ ಸಹಾ ನಾರದರ ಮುಂದೆ ಗುಂಪಾಗಿ ಕೂಡಿದರು. ನಾರದರು ನೆರೆದ ಜನಗಳಿಗೆ ಆಶ್ಚರ್ಯವೂ ಇನ್ನಷ್ಟು ಹೆಚ್ಚಾಗುವಂತೆ ಸುಮ್ಮನೆ ಏನನ್ನೊ ಆಲೋಚಿಸುವಂತೆ ನಟಿಸಿ, ಕಡೆಗೆ "ತ್ರಿಕಾಲಜ್ಞರಿಗೆ ಬೇರೆ ವಿವರ ಹೇಳಬೇಕೆಂದಿಲ್ಲ. ಆದರೆ ಧರ್ಮವೈರಿಗಳಾದವರು ಮಾಯಾವಿ ವೇಷದಿಂದ ದೇವಸ್ಥಾನಗಳನ್ನೂ ವಶಮಾಡಿಕೊಂಡು ಕಮಲಪುರದಲ್ಲಿ ಆಗಾಗ ಸಾಂಗವಾಗಿ ನಡೆಯುವ ಸಂತರ್ಪಣೆಗಳ ಮೂಲಕವಾಗಿಯೆ ಜನರ ಜಾತಿ ಕೆಡಿಸಬೇಕೆಂದಿರುವರು. ಇಂಥ ಕುಹಕಿಗಳನ್ನು ಈ ಮೊದಲು ೩ ಯುಗಗಳಲ್ಲಿಯೂ ಕಂಡಿಲ್ಲ. ಆದರೆ ಮಾಡತಕ್ಕದ್ದೇನಿದೆ? ರಾಜ್ಯವು ಹಿಂದೂಗಳಲ್ಲದವರ ಪಾಲಾದ ಮೇಲೆ ಅಂಥ ರಾಜರು ಧರ್ಮಸಂಸ್ಥಾಪನೆಗೆ ದೀಕ್ಷಾಬದ್ಧರಾಗುವರೆ? ಸರ್ವನಾಶವಾಯಿತು ಹರೆ! ಗೋವಿಂದ!" ಎಂದು ಸುಮ್ಮಗಾದರು. ವಿಶ್ವಾಮಿತ್ರರು ಏನು! ಏನು! ಧರ್ಮವೂ ಹೋಯಿತೆ? ಕಮಲಪುರವು ಧರ್ಮ ವಿಚ್ಛಿನ್ನರಾದವರ ಪಾಲಾಯಿತೆ? ಆ ಪುರವನ್ನೇ ಏತಕ್ಕೆ ನಾಶಮಾಡಬಾರದು. ನನ್ನ ತಪೋಬಲದ ಪುಣ್ಯವೆಲ್ಲ ಅಂದೇ ಹರಿಶ್ಚಂದ್ರನಿಗೆ ದಾರೆ ಎರದು ಬಿಟ್ಟೆನಲ್ಲ! ಇಲವಾದರೆ ಕಮಲಪುರವನ್ನೆ ತಲೆಕೆಳಗೆ ಮಾಡುತ್ತಿದ್ದೆನಲ್ಲ ಎಂದು ಕಿಡಿಕಿಡಿಯಾದರು. ಆಗ ವ್ಯಾಸರು "ಮಹಾಸ್ವಾಮಿ, ತಾವು ಇಷ್ಟು ಸಿಟ್ಟಾಗಬೇಡಿರಿ, ಪ್ರತಿಯೊಂದು ಯುಗದಲ್ಲಿಯೂ ಶ್ರೀ ಕೃಷ್ಣಮೂರ್ತಿಯು ಧರ್ಮವಿರೋಧಿಗಳ ನಿಗ್ರಹಕ್ಕೂ ಶಿಷ್ಟರ ಪಾಲನೆಗೂ ಜನ್ಮವೆತ್ತುವೆನೆಂದು ಹೇಳಿರುವನು. ಆದರೆ ಆ ವರೆಗೆ ನಾವು ಆಗಾಗ ಭೂಲೋಕದಲ್ಲಿ ಜನ್ಮವೆತ್ತಿ ಶ್ರೀಕೃಷ್ಣನ ಸದುದ್ದೇಶಕ್ಕೆ ಪ್ರಯತ್ನಪಡುತ್ತಲೇ ಇರಬೇಕಾಗಿದೆ" ಎಂದರು. ಅಷ್ಟರಲ್ಲಿ "ಕ್ಹಿಕ್!" ಎಂದು ಒಂದು ನಗುಕೇಳಿಸಿತು. ನೋಡಲಾಗಿ ಹನುಮನಾಯಕನು ನಗುತ್ತಿದ್ದನು. ಎಲ್ಲರಿಗೂ ಸಿಟ್ಟಾಗದೆ ಇರುವುದೇ? 'ಹಲ್ಲು ಕಿಸಿಯುತ್ತಿಯೇನು' ಎಂದು ವಿಶ್ವಾಮಿತ್ರರು ಕೇಳಿದರು. "ಸ್ವಾಮಿ! ಶ್ರೀಕೃಷ್ಣಮೂರ್ತಿಯು ಜನ್ಮವೆತ್ತುವ ವಿಚಾರವು ಮದ್ರಾಸ್ ಹ್ಯಾಕೋರ್ಟಿನಲ್ಲಿ ತನಖೆಗೆ ಆಗಲೇ ಬಂದಿದೆ. ಇನ್ನೂ ನಾವು ಭೂಲೋಕಕ್ಕೆ ಹೊರಡುವುದೇ ನೋಡಬೇಕಲ್ಲ" ಎಂದನು. ಕೋತಿಯ ಮಾತಿಗೆ ಎಲ್ಲರೂ ನಕ್ಕುಬಿಟ್ಟರು. ಅನಂತರ ಕಮಲಪುರದ ವಿಚಾರವು ಪುನಃ ನೆನಪಿಗೆ ಬಂತು. ಕಡೆಗೆ ಭೀಷ್ಮ ಮೊದಲಾದ ವೀರರೂ ವಿಶ್ವಾಮಿತ್ರ, ಭಾರದ್ವಾಜ, ಅತ್ರಿ ಮೊದಲಾದ ಋಷಿಗಳೂ ಭೂಲೋಕಕ್ಕೆ ಇಳಿದು ಈ ಸರ್ವ ನಾಶವನ್ನು ತಡೆಯಬೇಕೆಂದು ಮಂತ್ರಾಲೋಚನೆ ಮಾಡಿದರು. ಈ ಸಲ ಕಮಲಪುರದ ಪುಂಡುತನವನ್ನು ಅಡಗಿಸುವುದಕ್ಕೆ ಭೀಷ್ಮಾಚಾರ್ಯರು ತಾವೇ ಬದ್ಧಕಂಕಣರಾಗಿದ್ದರು. ಹನುಮನಾಯಕನು ಅವರ ಹಿಂದೆಯೆ ಬಂದುದು ಯಾರಿಗೂ ಗೊತ್ತಾಗಲಿಲ್ಲ. ಎಲ್ಲರೂ ಕಮಲಪುರದ ಉಕ್ಕಡ ಬಳಿಯಲ್ಲಿರುವ ವಿನಾಯಕ ಗುಡಿಯಲ್ಲಿ ಇಳಿದು ಗೂಢಚಾರರ ಮೂಲಕ ವರ್ತಮಾನ ತರಿಸಿದರು. ಧರ್ಮವಿರೋಧಿಗಳು ಧರ್ಮವಿಚ್ಛಿನ್ನರಿಂದ ಗುಪ್ತವಾಗಿಯೇ ಚಂದಾಯೆತ್ತಿ ಬ್ರಾಹ್ಮಣ ಸಮಾರಾಧನೆ ದೀಪೋತ್ಸವದ ಕೆಲಸವನ್ನು ನೆರವೇರಿಸುವರೆಂದೂ ಧರ್ಮನಿರತರಾದ ಕೆಲವರು ಏನು

ಮಾಡಬೇಕೆಂದು ತೋಚದೆ ಕಂಗೆಟ್ಟಿರುವರೆಂದೂ-ತಿಳಿದು ಬಂತು. ವಿಶ್ವಾಮಿತ್ರರು ಉರಿದು ಬೀಳುತ್ತಿದ್ದರು. ಅತ್ರಿ, ಭಾರಧ್ವಾಜ ಮುಂತಾದವರು "ಶ್ರೀಕೃಷ್ಣಮೂರ್ತಿಯ ಆಗಮನವನ್ನು ಕಾಯಲೇ! ಅಥವಾ ಹಿಂದಕ್ಕೆ ದೇವ ಲೋಕಕ್ಕೆ ತೆರಳಲೇ ಎಂದು" ಆಲೋಚನೆ ಮಾಡುತ್ತಿದ್ದರು. ಆದರೆ ಭೀಷ್ಮಾಚಾರ್ಯರೇನು ಸಾಮಾನ್ಯರೆ? ಇಂತಹ ಹುಲು ಮನುಷ್ಯರಿಗೆ ಬೆದರಿ ಹೋಗುವ ಕಾಲವುಂಟೇ? ಅವರು ಆ ಕ್ಷಣವೇ ಕಮಲ ಪುರದಲ್ಲಿ ಧರ್ಮನಿರತರಾದವರು ಎಷ್ಟು ಮಂದಿ ಇರುವರೆಂದು ತಿಳಿದು ಅವರನ್ನು ಬರ ಮಾಡಿ, ಆಲೋಚನೆ ಮಾಡ ಹತ್ತಿದರು. ಅಷ್ಟರಲ್ಲಿ ಹನುಮನಾಯಕನು ಪುನಃ "ಸ್ವಾಮಿ, ದ್ವಾಪರದ ಶಸ್ತ್ರಾಸ್ತ್ರಗಳು ಈಗ ಇಲ್ಲಿ ನಡೆಯಲಾರವು. ಅವುಗಳಿಗೆ ಈಗಿನ ಸರಕಾರದವರು ಲೈಸನ್ಸು ಕೊಡುವುದಿಲ್ಲ. ಬೇರೇನಾದರೂ ಉಪಾಯ ಹುಡುಕಿರಿ" ಎಂದು ಕೈಮುಗಿದನು. ಈ ಕೋತಿ ಇಲ್ಲಿಗೂ ಬಂದು ಬಿಟ್ಟಿದೆಯಲ್ಲ ಎಂದು ಒಮ್ಮೆ ಭೀಷ್ಮಾಚಾರ್ಯರಿಗೆ ಕಣ್ಣು ಕೆಂಡದಂತಾಯಿತು. ಆದರೆ ಅವರು ವಿಚಾರಶೀಲರು; ಶಾಸ್ತ್ರ ಬಲ್ಲವರು, ಪಾರಮಾರ್ಥ ತಿಳಿದವರು. ತರ್ಕಶಾಸ್ತ್ರದಿಂದ ಈ ಕುಹಕಿಗಳನ್ನು ಗೆಲ್ಲುವೆನೆಂದು ನಿಶ್ಚಯಿಸಿ, ಧರ್ಮನಿರತರು ಆ ಕುಹಕಿಗಳನ್ನೂ ಕೂಡಿಸಿ ಸಭೆಮಾಡಬೇಕೆಂದು ಕೆಲವು ಮಾತುಗಳಿಂದಲೇ ಬ್ರಾಹ್ಮಣ ಸಂತರ್ಪಣೆಯ ಕಾರ್ಯವನ್ನು ತತ್ಕಾಲಕ್ಕೆ ನಿಲ್ಲಿಸಿ, ಅವರ ಪಂಥ ಜಯಿಸದಂತೆ ಮಾಡಬೇಕೆಂದು ಮುಂದಟ್ಟು ಮಾಡಿದರು.

ಸಭೆ ನೆರೆಯಿತು. ಕುಹಕಿಗಳೂ ಧರ್ಮ ನಿರತರೂ ತಂಡ ತಂಡವಾಗಿ ಬಂದರು. ಚರ್ಚೆ ನಡೆಯುತ್ತಾ ಇರುವಲ್ಲಿ ಫಕ್ಕನೆ ಯಾರೊ ಒಳಗೆ ಬಂದಂತಾಯಿತು. ನೋಡುವಷ್ಟರಲ್ಲಿ ಶಿಖಂಡಿಯು ಬಂದಿದ್ದನು. ಎಲ್ಲರೂ ತಟಸ್ಥರಾದರು. ಶಿಖಂಡಿಯೂ ಭೀಷ್ಮಾಚಾರ್ಯರಂತೆ ವೇಷಪಲ್ಲಟಮಾಡಿದ್ದನು. ಭೀಷ್ಮಾಚಾರ್ಯರ ವ್ಯಥೆ ಹೇಳಿ ತೀರದು. ಈ ಯುಗದಲ್ಲಿಯೂ ಶಿಖಂಡಿಯು ತನ್ನ ಬೆನ್ನು ಬಿಡುವುದಿಲ್ಲವಲ್ಲ ಎಂದು ಅವರಿಗೆ ತೋರಿತು. ಶಿಖಂಡಿಯೂ ರವಷ್ಟಾದರೂ ಚರ್ಚೆಯಲ್ಲಿ ಹಿಮ್ಮೆಟ್ಟಲಿಲ್ಲ. ಶಿಖಂಡಿಯೊಡನೆ ಯುದ್ಧ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ ಭೀಷ್ಮಾಚಾರ್ಯರು ಸುಮ್ಮಗಾದರು. ಕುಹಕಿಗಳ ಹಟ ನೆರವೇರಿತು.

ಸಮಾರಾಧನೆ ತೀರಿತು. ಊಟ ಉತ್ಸವಗಳಲ್ಲಿ ಲೋಪ ಬರಲಿಲ್ಲ. ಆದರೆ ನಿರಾಶೆಯಾದ ಭೀಷ್ಮಾಚಾಯರು ಹನುಮನಾಯಕನ ಕಡೆಗೆ ನೋಡದೆ ಸಭೆಯಿಂದ ಎದ್ದು ತನ್ನೊಡನೆ ಬಂದ ಭಾರಧ್ವಾಜ, ಅತ್ರಿ, ವಿಶ್ವಾಮಿತ್ರ ಮುಂತಾದವರನ್ನೊಡಗೂಡಿ ಸ್ವರ್ಗ ಲೋಕಕ್ಕೆ ತೆರಳಿದರು." ಇಷ್ಟರಲ್ಲಿ ಮಗುವಿನ ಕೂಗು ಕೇಳಿ ನಾನು ಎಚ್ಚೆತ್ತೆನು. ಸ್ವಲ್ಪ ಹೊತ್ತಿನ ವರೆಗೆ ನಾನು ಸ್ವರ್ಗದಿಂದ ಇಳಿದು ಬಂದುದಕ್ಕೆ ಮತ್ತು ಬಂದ ಮಹಾಪುರುಷರ ಭೇಟಿ ಮಾಡಿಸದೆ ಇದ್ದುದಕ್ಕೆ ವ್ಯಸನವಾಯಿತು. ಅದರೆ ಇದೆಲ್ಲ ಕನಸೆಂದು ತಿಳಿದ ಮೇಲೆ ನನ್ನ ಮರುಳು ಹೋಯಿತು.

ಕಮಲ ಪುರವಾಸಿ.

* * *

An Appeal.

To the Editor of the "Swadeshabhimani"

Dear sir,

Though the information published in your paper by a "Bombay Resident" regarding Rao Saheb A. K. Pai's joining the ranks of social reformers is somewhat strange, it must appear as none the less gratifying to many like myself who have believed that not much time will lapse before the leaders of the Gowd Saraswat Community in Canara will see the futility of their lagging behind in the march for progress. It is an open secret that most of the English educated leaders of the community, such at least as have travelled abroad, do not personally observe the caste rules in regard to eating and drinking. But when questioned why they object to interdining at the conference, the reply generally is that they object not on their own account, but on account of their less educated and more conservative castemen. But this attitude is a mistaken one for unless some lead by marching forward, how can there be any progress at all? Moreover, generally such attitude betokens timidity and love of mob applause rather than any genuine concern for the well-being of the community. It is, therefore, most gratifying that a leader of the type of Rau Saheb Pai should boldly come forward to demonstrate the way to true progress. It is to be hoped that his example will be followed by other leaders in Mangalore and South Canara. I appeal to Mr. A. Shrinivas Pai and other enlightened leaders like him to be no longer indifferent to the claims of conscience and progress, but to boldly lead the way. The community lags behind only because its leaders for one reason or other choose to remain behind. From what one knows of the present state of feeling in the community regarding problems of interdining and intermarriamge, one ay safely predict that if only leaders like Mr. Pai march forward, members would follow suit without raising any caste howl. The reactionary elements gain the upper hand, only because of the timid attitude of the leaders towards social reform. I close this with an appeal to all the leaders as well as rank and file of the various branches of the Saraswat community to espouse the cause of the United Parishad at Bassein and to come as delegates in as many numbers as possible. That the Dis-united (ಬೇಕಿ) Parishad is too lifeless to meet this year is a significant sign of the truth of the axiom that progress means life and stagnation death.

R.

* * *

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{889}{1912}$

ವಾದಿರು.

೧. ನಾಗಪ್ಪ ಐತಾಳ
೨. ಸುಬ್ರಾಯ ಐತಾಳ
೩. ಸುಬ್ರಾಯ ಐತಾಳ
೪. ನರಸಿಂಹ ಐತಾಳ
೫. ಮಹಾಬಲ ಮಧ್ಯಸ್ತ
೬. ಕಾಶಿ ಹೆಂಗಸು
೭. ಸೋಮಯ್ಯ
೮. ಪುಟ್ಟಯ್ಯ
೯. ಸುಬ್ರಾಯ ಭಟ್ಟ
೧೦. ಮಹಾಬಲ ಹೊಳ್ಳ
೧೧. ಮಾರ್ಶ್ಯಾಲ್ ಭುತ್ತೇಲಾ

ಪ್ರತಿವಾದಿ. ಕಾಳಿಂಗ ಐತಾಳ

ಈ ಮೂಲಕ ಸರ್ವ ಜನರಿಗೆ ತಿಳಿಯ ಪಡಿಸುವದೇನಂದರೆ:—

ಹಡಲು ಗ್ರಾಮದ ಸರ್ವೆ ನಂಬ್ರ $\frac{44}{1}$, $\frac{44}{3}$ ನೇ ಸ್ಥಳಗಳು ತಾವು ಕೂಡಾ ಹಡಲುಗ್ರಾಮಸ್ಥರ ಭೂಮಿ ಉಪಯೋಗದ ಬಗ್ಯೆ ಮಾಮೂಲ್ ಪ್ರಕಾರ ಚಂಡೆ ಮಣ್ಣು ವ ದೊರೆಹುಲ್ಲು ಕೊಂಡುಹೋಗುವ ಬಗ್ಯೂ ಸದರಿ ಗ್ರಾಮದಲ್ಲಿ ಮಾಮೂಲ ಮೇರೆಗೆ ಕಟ್ಟತಕ್ಕ ಕಟ್ಟುಗಳನ್ನು ಕಟ್ಟುವ ಬಗ್ಯೂ ಭೂಮಿ ಕಿನಾರೆಯಲ್ಲಿರುವ ಗದ್ದೆಗಳಿಗೆ ಉಪ್ಪುನೀರು ಏರದಂತೆ ಮಣ್ಣು ಹಾಕುವ ಬಗ್ಯೂ ಮಾಮೂಲ್ ಮೇರೆಗೆ ಮಾಡಿಬರುವ ಉಪಯೋಗಕ್ಕೆ ಅನುಕೂಲವಾಗುವ ಹಾಗೆ ಗ್ರಾಮಸ್ಥರ ಕಡೆಯಿಂದ ಪ್ರತಿವಾದಿ ತಂದೆ ಸುಬ್ಬ ಐತಾಳನ ಹೆಸರಲ್ಲಿ ದರ್ಕಾಸ್ತಿಗೆ ಪಡದು ಅದರ ಉಪಯೋಗ ತಾವು ವಗ್ಯೆರೆ ಗ್ರಾಮಸ್ಥರು ಪಡಿಯುತ್ತಿದ್ದೆವು. ಆದಕ್ಕೆ ಅಭ್ಯಂತರವಾಗುವ ಹಾಗೆ ಪ್ರತಿವಾದಿಯು ೧೯೧೧ನೇ ಇಸವಿ ಅಕ್ಟೋಬರ ತಿಂಗಳಲ್ಲಿ ಆಗಮೆ ಮಾಡಿದ್ದಾನೆ. ಆದ್ದರಿಂದ ಆ ಆಗಮೆ ತೆಗಿಸಿ ಹಾಕಿ ಆತ ಹಾಗೆ ಇನ್ನು ಮುಂದೆ ಮೇಲೆ ಕಾಣಿಸಿದ ಉಪಯೋಗಕ್ಕೆ ಅಭ್ಯಂತರ ಮಾಡದ ಹಾಗೆ ಆತಗೆ ಶಾಶ್ವತ ಇಂಜಂಕ್ಷನ್ ಕೊಡಬೇಕಾಗಿ ವಾದಿರು ಗ್ರಾಮಸ್ಥರ ಕಡೆಯಿಂದ ದಾವಾ ದಾಕಲು ಮಾಡಿ ಆ ವ್ಯಾಜ್ಯವನ್ನು ಹಡಲು ಗ್ರಾಮಸ್ಥರ ಕಡೆಯಿಂದ ನಡಿಸುವ ಬಗ್ಯೆ ಹುಕುಂ ಕೊಡಬೇಕಾಗಿ ಅರ್ಜಿಕೊಟ್ಟಿದ್ದಾರೆ; ಸದರಿ ಅರ್ಜಿ ತನ್ನಿಯು ೧೯೧೨ನೇ ಇಸವಿ ದಶಂಬರ ತಿಂಗಳ ೧೮ಕ್ಕೆ ಇಟ್ಟಿದೆ. ಆ ಕುರಿತು ಆಕ್ಷೇಪವುಳ್ಳವರು ಯಾ ಕಕ್ಷಿಯಲ್ಲಿ ಸೇರಲಿಕ್ಕೆ ಅಪೇಕ್ಷೆಯುಳ್ಳವರು ಆ ದಿವಸ ಹಗಲು ೧೦ ಘಂಟೆಗೆ ಕೋರ್ಟು ಮುಂದೆ ಪ್ಲೀಡರ್ ಮೂಲಕ ಯಾ ಸ್ವತಃ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಕುಂದಾಪುರ.
ತಾ. 4—12—12.

K. Narayan Shenai
Pleader for Plantiffs.

* * *

ವಿದೇಶ ವೃತ್ತಾಂತ.

ಯುದ್ಧವಾರ್ತೆ:-ಗ್ರೀಕರನ್ನು ಬಿಟ್ಟು ಬಲ್ಗೇರಿಯರೂ, ಮೊಂಟೆನಿಗ್ರೋಯರೂ, ಸರ್ವಿಯರೂ ತಾತ್ಕಾಲಿಕ ಯುದ್ಧವನ್ನು ನಿಲ್ಲಿಸುವರೆ ಒಪ್ಪಿಕೊಂಡರೆಂದು ಕಳೆದ ಸಂಚಿಕೆಯಲ್ಲಿ ತಿಳಿಸಿತ್ತಷ್ಟೇ. ಗ್ರೀಕರು ಯುದ್ಧ ನಿಲ್ಲಿಸುವ ಪತ್ರಿಕೆಗೆ ಸಹಿ ಮಾಡದಿರುವುದರಿಂದ ಬಲ್ಗೇರಿಯ ಮತ್ತು ಇತರ ಸಂಸ್ಥಾನಗಳಿಗೆ ಗ್ರೀಕರ ಮೇಲೆ ವೈಮನಸ್ಸುಂಟಾಗಿಯದೆ ಎಂಬದಾಗಿ ಆಯಾ ಪತ್ರಗಳು ಹೇಳುತ್ತವೆ. ಈ ಸಂಬಂಧ ಫ್ರಾನ್ಸ್ ಮಂತ್ರಿಯವರು ಗ್ರೀಕರನ್ನು ಎಚ್ಚರಿಸಿರುವರು. ಸಂಧಾನ ಸಭೆಯು ಇದೇ ತಾ. ೧೩ರಲ್ಲು ಲಂಡನಿನಲ್ಲಿ ಕೂಡುವದು.

ತಾ. ೪:—ಅಡ್ರಿನೋಪಲಿನಲ್ಲಿ ಬೇಕಾದ ರೈಪಲ್‌ಗಳೂ ಯುದ್ಧ ಸಾಮಾಗ್ರಿಗಳೂ ಇವೆ ಎಂದೂ ಅಂತ್ಯದ ವರೆಗೆ ಕಾದಾಡುವೆವೆಂದೂ ತಾ. ೨ರಲ್ಲು ಅಲ್ಲಿಯ ಸೇನಾಧಿಪತಿಯು ಕನ್‌ಸ್ತಂತಿನೋಪಲಿಗೆ ತಿಳಿಸಿರುವನು.

ತಾ. ೨ರಲ್ಲು ಸ್ಕುತಾರಿಯ ಕೋಟೆಯಿಂದ ತುರ್ಕರ ಸೈನೀಕರು ಹೊರಬಿದ್ದು ಮೊಂಟೆನಿಗ್ರೋಯರೊಡನೆ ಕಾದಾಡಿದರು. ಆದರೆ ಬಹಳ ನಷ್ಟಪಟ್ಟು ಹಿಮ್ಮೆಟ್ಟಲ್ಪಟ್ಟರು.

ಯುದ್ಧಮಾಡುತ್ತಿರುವ ರಾಜ್ಯಗಳ ಸೈನ್ಯವು ಸಂಧಾನ ಸಭೆಯು ಕೂಡಿ ಅಗಲುವ ವರೆಗೆ ಇದ್ದಲ್ಲಿಯೇ ಇರಬೇಕು, ಮುತ್ತಿಗೆ ಹಾಕಲ್ಪಟ್ಟ ಕೋಟೆಗಳಿಗೆ ತುರ್ಕರು ತಮ್ಮ ಹೊಸ ಸೈನೀಕರನ್ನು ಕಳುಹಿಸಿಕೊಡಕೂಡದು. ಆದರೆ ಬಲ್ಗೇರಿಯರು ಕಪ್ಪು ಸಮುದ್ರದ ಮತ್ತು ಅಡ್ರಿನೋಪಲಿನ ಮಾರ್ಗವಾಗಿ ಯುದ್ಧ ನಿಲ್ಲಿಸಿದನಂತರ ೧೦ ದಿವಸಗಳ ವರೆಗೆ ಆಹಾರ ತರಿಸಿಕೊಳ್ಳಬಹುದು. ತುರ್ಕರು ಅಡ್ರಿನೋಪಲಿಗೆ ಮತ್ತು ಸ್ಕುತಾರಿಗೆ ದಿನಂಪ್ರತಿ ಆಹಾರ ಸಾಮಾಗ್ರಿಗಳನ್ನುಕಳುಹಿಸಬಹುದೆಂಬದೇ ಯುದ್ಧವನ್ನು ತಾತ್ಕಾಲಿಕ ನಿಲ್ಲಿಸಿದರ ಶರ್ತವಾಗಿದೆ.

ಗ್ರೀಕ, ಬಲ್ಗೇರಿಯ, ಮೊಂಟೆನಿಗ್ರೋ, ಸರ್ವಿಯ ಸಂಸ್ಥಾನದೊಳಗಿನ ಪರಸ್ಪರ ಮಿತ್ರತ್ವಕ್ಕೆ ಏನೊಂದೂ ಕುಂದು ಬರಲಿಲ್ಲವೆಂದು ಗ್ರೀಕ ಸರಕಾರದವರು ಪ್ರಕಟಿಸಿರುವರು.

ಬಲ್ಗೇರಿಯದ ಪೆರ್ಡಿನಾಂಡ್ ಅರಸರವರು ಚಟಲ್ಜದಿಂದ ಸೋಫಿಯಕ್ಕೆ ಹಿಂತೆರಳಿರುವರು. ಅಲ್ಲಿ ಹೋದನಂತರ ಸಂಧಾನ ಪ್ರತಿನಿಧಿಗಳನ್ನು ಆರಿಸಿ ಲಂಡನಿಗೆ ಕಳುಹಿಸುವರು.

ಸಂಧಾನವು ಆಗುವುದರೊಳಗೆ ತುರ್ಕರು ತಮ್ಮ ಸೇನೆಯನ್ನು ಕೂಡಿಸಿ ಬಲಪಡಿಸಿಕೊಂಡರೆ ಸಂಧಾನವು ಆಗದೆ ಹೋದ ಪಕ್ಷಕ್ಕೆ ಹೆಚ್ಚಿನ ಕೇಡಾದೀತಾದ್ದರಿಂದ ಅವರು ಸೈನ್ಯವನ್ನು ಕೂಡಿಸದ ಹಾಗೆ ಅಡ್ಡಿಮಾಡುವುದಕ್ಕಾಗಿ ತಾವು ತಾತ್ಕಾಲಿಕ ಯುದ್ಧವನ್ನು ನಿಲ್ಲಿಸುವ ಪತ್ರಿಕೆಗೆ ಸಹಿ ಮಾಡಲಿಲ್ಲವೆಂದೂ ಲಂಡನಿನಲ್ಲಿ ಕೂಡುವ ಪ್ರತಿನಿಧಿ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವೆವೆಂದೂ ಗ್ರೀಕ ಸರಕಾರದವರು ಪ್ರಕಟಿಸಿರುತ್ತಾರೆ.

ಕ್ರೈಸ್ತರನ್ನು ತುರ್ಕರ ಬಂಧದಿಂದ ಬಿಡಿಸುವುದೇ ಈ ಯುದ್ಧವನ್ನು ತೊಡಗಿದ ಉದ್ದೇಶವಾಗಿತ್ತು. ಈ ಉದ್ದೇಶವು ನೆರವೇರಿದ್ದರಿಂದ ಮುಂದೆ ಯುದ್ಧ ನಡಿಸುವುದು ಅವಶ್ಯವಿಲ್ಲ. ಕ್ರೈಸ್ತರನ್ನು ಬಾಲ್ಕಾನ್ ಸಂಸ್ಥಾನಗಳವರು ತುರ್ಕರ ಕೈಯಿಂದ ಬಿಡಿಸಿ ಆಯಿತು ಎಂಬದನ್ನು ತುರ್ಕರು ತಿಳಕೊಂಡಿರುವರು. ಗ್ರೀಕರು ತಾತ್ಕಾಲಿಕ ಯುದ್ಧ ನಿಲ್ಲಿಸುವ ಪತ್ರಿಕೆಗೆ ಸಹಿಮಾಡದ್ದರಿಂದ ಬಾಲ್ಕಾನ ಸಂಸ್ಥಾನಗಳೊಳಗೆ ಇದ್ದ ಸ್ನೇಹಕ್ಕೂ ಒಕ್ಕಟ್ಟಿಗೂ ಕುಂದು ಬಂತೆಂತ ಎಣಿಸಲಾಗದು. ತಮ್ಮೊಳಗಿನ ಪರಸ್ಪರ ಐಕ್ಯವು ಎಂದಿನಂತೆಯೇ ಇದೆ ಎಂತ ಬಲ್ಗೇರಿಯ ಸರಕಾರದವರು ಪ್ರಕಟಿಸಿರುವರು.

ಅಲ್ಬಾನಿಯದ ವಲೋನಿಯ ಎಂಬ ಪಟ್ಟಣವನ್ನು ಹಿಡಿಯಲಿಕ್ಕೆ ಗ್ರೀಕರನ್ನು ಬಿಡಲಾರವೆಂತ ಇಟಲಿ ಮತ್ತು ಆಸ್ಟ್ರೀಯ ಮಂತ್ರಿಗಳು ಗ್ರೀಕರಿಗೆ ತಿಳಿಸಿದ್ದಾರೆಂತ 'ಟ್ರಿಬ್ಯೂನು' ಪತ್ರಿಕೆಯಲ್ಲಿ ಪ್ರಕಟವಾಗಿದೆ.

ತಾ. ೬ ಡರ್ಡೆನೆಲ್ಸಿನಲ್ಲಿರುವ ತುರ್ಕರ ಹಡಗುಪಡೆಗೆ ಎಗಿಯನ್ ಸಮುದ್ರದಲ್ಲಿರುವ ಗ್ರೀಕರ ಹಡಗು ಪಡೆಯೊಡನೆ ಕಾದಾಡಲು ಅಪ್ಪಣೆಯಾಗಿಯದೆ. ಗ್ರೀಕರು ತಾ. ೬ ರಲ್ಲು ಜನೀನಕ್ಕೆ ತೋಪು ಹಾರಿಸ ತೊಡಗಿರುವರು.

ಲಂಡನಿನಲ್ಲಿ ಕೂಡಲಿಕ್ಕಿರುವ ಸಂಧಾನ ಸಭೆಗೆ ತುರ್ಕ ಬಲ್ಗೇರಿಯ, ಸರ್ವಿಯ, ಮೊಂಟೆನಿಗ್ರೋಯರ ಪ್ರತಿನಿಧಿಗಳು ನೇಮಿಸಲ್ಪಟ್ಟಿರುವರು. ತಾ. ೧೩ನೇ ಶುಕ್ರವಾರ ಕೂಡಬೇಕೆಂದಿದ್ದ ಸಂಧಾನ ಸಭೆಯು ಒಂದೆರಡು ದಿನ ತಡವಾಗಿ ಕೂಡುವುದೆಂಬ ವಾರ್ತೆ ಬಂದಿರುವದು.

ತಾ. ೭:--ಸಂಧಾನ ಸಭೆಯು ಲಂಡನಿನ ಸೈಂಟ್ ಜೇಮ್ಸ್ ಅರಮನೆಯಲ್ಲಿ ಕೂಡುವದು. ಸಂಧಾನ ಸಭೆಗೆ ಬಾಲ್ಕಾನ ಸಂಸ್ಥಾನಗಳ ಪ್ರತಿನಿಧಿಗಳು ನೇಮಿಸಲ್ಪಟ್ಟಿದ್ದಾರೆ. ಗ್ರೀಕರೂ ತಮ್ಮ ಪ್ರತಿನಿಧಿಗಳನ್ನು ನೇಮಿಸಿರುವರು.

ಎಪಿರಸಿನಲ್ಲಿ ಗ್ರೀಕರು ಸೆಂಟಿಕ್ಯುರಾಂಟಿ, ಡೆಲ್ವೀನೋ, ಅರ್ಗಿರೋಕಾಸ್ಟ್ರೊ ಎಂಬ ಮೂರು ಪಟ್ಟಣಗಳನ್ನು ವಶ ಮಾಡಿಕೊಂಡರು.

ಅಲ್ಬಾನಿಯರು ಸ್ವಸತ್ತಾತ್ಮಕ ರಾಜ್ಯವನ್ನು ಸಾರಿ ವಲೋನದಲ್ಲಿ ಮಂತ್ರಿಸಭೆಯನ್ನು ಸ್ಥಾಪಿಸಿದರು. ವಲೋನ ಅಖಾತವೂ ಸಸೆನೋ ಎಂಬ ದ್ವೀಪವೂ ಗ್ರೀಕರಿಗೆ ಸೇರಿರುತ್ತದೆಂಬದನ್ನು ತಾವು ಎಂದೂ ಅಂಗೀಕಾರ ಮಾಡಲಾರೆವೆಂದು ಇಟಾಲಿ ಮತ್ತು ಆಸ್ಟ್ರೀಯ ಸರಕಾರದವರು ಗ್ರೀಕರಿಗೆ ತಿಳಿಸಿರುವರೆಂತ ಇಟಲಿ ಮಂತ್ರಿಯವರು ಪ್ರಕಟಿಸಿದ್ದಾರೆ.

ಅಡ್ರಿನೋಪಲಿನಿಂದ ತಾ. ೩ರಲ್ಲು ವಾಲಿಯು ಕನ್‌ಸ್ತಂತಿನೋಪಲಿಗೆ ತಂತೀಬಿಟ್ಟು ಶತ್ರುಗಳು ನಾಲ್ಕು ಕಡೆಯಿಂದಲೂ ಪಟ್ಟಣದ ಮೇಲೆ ಬಿದ್ದರು. ಆದರೆ ಬಹಳ ನಷ್ಟಪಟ್ಟು ಹಿಮ್ಮೆಟ್ಟಲ್ಪಟ್ಟರು. ಕದನವು ೬ ತಾಸುಗಳ ವರೆಗೆ ನಡೆಯಿತು ಎಂತ ತಿಳಿಸಿರುವನು.

ತಾ. ೮:-ಅಡ್ರಿನೋಪಲಿನಲ್ಲಿ ಇನ್ನು ೧೫ ದಿವಸಕ್ಕೆ ಮಾತ್ರ ಸಾಕಾಗುವ ಆಹಾರವಿದೆ ಎಂದು ತಿಳಿದುಬರುತ್ತದೆ.

ತಾ. ೯:—ಮೊನಾಸ್ಟಿರಿನಲ್ಲಿ ಸರ್ವಿಯರಿಗೆ ದೊರಕಿದ ತುರ್ಕರ ಆಹಾರ ಸಾಮಾಗ್ರಿಯ ಒಟ್ಟು ಬೆಲೆ ೬೦೦,೦೦೦ ಪವನು ಎಂಬದಾಗಿ ಬಲ್ಗ್ರೇಡಿನಲ್ಲಿ ಪ್ರಕಟವಾಗಿದೆ.

ಯುದ್ಧವನ್ನು ತಾತ್ಕಾಲಿಕ ನಿಲ್ಲಿಸುವರೆ ಸಹಿಮಾಡಲ್ಪಟ್ಟಿದ್ದರೂ ಸ್ಕುತಾರಿಯ ಟಾಬ್ರೊಸ್ ಕೋಟೆಯಲ್ಲಿರುವ ತುರ್ಕಿ ಸೈನೀಕರು ಮೊಂಟೆನಿಗ್ರೋಯರ ಮೇಲೆ ಗುಂಡಿನ ಮಳೆಗರೆಯಿಸಿದರು. ಮೊಂಟೆನಿಗ್ರೋಯರು ಅವರಿಗೆ ಎದುರಾಗಿ ಗುಂಡು ಹಾರಿಸದೆ ಯುದ್ಧವನ್ನು ನಿಲ್ಲಿಸುವ ಪತ್ರಿಕೆಗೆ ಸಹಿಮಾಡಲ್ಪಟ್ಟಿದೆಂಬದಾಗಿ ನೈಜಾಮ್ ಪಾಶರವರಿಂದ ಬಂದಿದ್ದ ತಂತೀಯನ್ನು ತುರ್ಕರಿಗೆ ತೋರಿಸಿದರು. ಆದರೆ ಅವರು ನಂಬದೆ ಪುನಃ ಗುಂಡುಹಾರಿಸ ಪ್ರಾರಂಭಿಸಿದರು.

ಕನ್‌ಸ್ತಂತಿನೋಪಲಿನಲ್ಲಿ ವಾಂತಿಬೇಧಿಯಿಂದ ೨೦ ದಿವಸದೊಳಗೆ ೧೦೦೦ಕ್ಕಿಂತ ಹೆಚ್ಚುಮಂದಿ ಮೃತಪಟ್ಟರು.

ಸರ್ವಿಯದ ಕೆಲವು ಹೆಸರುವಾಸಿಯಾದ ಸಾಹುಕಾರರು ಅಡ್ರಿಯಾಟಿಕಿನಲ್ಲಿ ಸರ್ವಿಯರ ಹಕ್ಕನ್ನು ಎಂದೂ ಬಿಡಬಾರದೆಂತ ಸರ್ವಿಯದ ಅರಸನಿಗೆ ಮನವಿ ಮಾಡಿಕೊಂಡಿರುವರು.

* * *

ಟ್ರಿಪೋಲಿಯಲ್ಲಿದ್ದ ತುರ್ಕರ ಸೇನೆಯು ತಾ. ೮ರಲ್ಲು ಟ್ರಿಪೊಲಿಯಿಂದ ಹೊರಟಿತು.

* * *

ಲಂಡನಿನ ನೊರ್ಥ್ ಈಸ್ಟರ್ನ್ ರೈಲ್ವೇಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಇಂಜಿನ್ ಡ್ರ್ಯಾವರನು ಕುಡಿದು ಮತ್ತನಾದ್ದರಿಂದ ಶಿಕ್ಷೆ ವಿಧಿಸಲ್ಪಟ್ಟನು. ಅನಂತರ ರೈಲ್ವೆ ಅಧಿಕಾರಿಗಳು ಪುನಃ ಅವನನ್ನು ಕೆಲಸಕ್ಕೆ ಸೇರಿಸದ್ದರಿಂದ ತಾ. ೭ರಲ್ಲು ೩೦೦೦ ರೈಲ್ವೆ ಕೆಲಸಗಾರರು ಮುಷ್ಕರ ಹಿಡಿದಿರುವರು. ಕಲ್ಲಿದ್ದಲಿನ ಗಣಿಗಳಲ್ಲಿ ಕೆಲಸಮಾಡುವವರು ಮುಷ್ಕರ ಹಾಕುವ ಹಾಗೆ ಇದ್ದಾರೆ. ಮುಷ್ಕರ ಹಿಡಿದವರು ಇನ್ನೂ ತಮ್ಮ ಹಟವನ್ನು ಬಿಡದೆ ಇರುವುದರಿಂದಲೂ ಮುಷ್ಕರಗಾರರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಬರುವುದರಿಂದಲೂ ರೈಲ್ವೆ ಅಧಿಕಾರಿಗಳಿಗೆ ಭಯಾಸ್ಪದಕ್ಕೆ ಕಾರಣವಾಗಿದೆ.

* * *

ಹೈದರಾಬಾದಿನ ನೈಜಾಮರವರು ಬ್ರಿಟಿಷ್ ಸೇನೆಯ ಒನರರಿ ಕರ್ನೆಲರಾಗಿ ನೇಮಿಸಲ್ಪಟ್ಟಿರುವರು.

* * *

ಉತ್ತರ ಬೋರ್ನಿಯೋದ ಗವರ್ನರರವರು ಸಿಂಘಾಪುರದಲ್ಲಿ ಕುದುರೆ ಸವಾರಿಮಾಡುತ್ತಿರುವಾಗ ಕೆಳಬಿದ್ದು ಕೂಡ್ಲೇ ಮೃತಪಟ್ಟರು.

* * *

ಚೀನದಲ್ಲಿ ಎಲ್ಲಾ ಅಪೀಮು ಅಂಗಡಿಗಳನ್ನು ಚೀನ ಸರಕಾರದವರು ಬಲತ್ಕಾರದಿಂದ ಮುಚ್ಚಿಸಿದ್ದಾರೆ. ಈಗ ಅಪೀಮು ಸರಕಾರ ಡಿಪೋದಲ್ಲಿ ಮಾತ್ರ ದೊರೆಯುವುದು.

* * *

ಬ್ರಿಟಿಷ್ ನೌಕಾವಳಿಯವರ ಸಂಬಳವು ಹೆಚ್ಚಿಸಲ್ಪಟ್ಟಿರುವದು.

* * *

ಆಂಗ್ಲೊ ಇಂಡಿಯನ್ ಟೆಂಪರೆನ್ಸ್ ಎಸೋಷಿಯೇಶನ್ ಎಂಬ ಮದುಪಾನ ನಿವಾರಣಾ ಸಂಘದ ಪರವಾಗಿ ಕೆಲವು ಪ್ರತಿನಿಧಿಗಳು ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯವರಾದ ಕ್ರೂ ಪ್ರಭುಗಳವರಿಗೆ ಭೇಟಿಕೊಟ್ಟು ಹಿಂದೂಸ್ಥಾನದಲ್ಲಿ ಮಧುಪಾನವು ಧರ್ಮ ವಿರುದ್ಧವಾದ್ದಾಗಿದೆ, ಆದರೆ ಈಗಿನ ಲೈಸನ್ಸ್ ಕ್ರಮದಿಂದ ಮದುಪಾನ ಸೇವಕರು ಹಿಂದೂಸ್ಥಾನದಲ್ಲಿ ಹೆಚ್ಚಾಗುತ್ತಾ ಬರುವುದರಿಂದ ಈ ವಿಷಯ ತಕ್ಕ ತನಖಿನಡಿಸಿ ಬದಲಾವಣೆಗಳನ್ನು ಮಾಡಬೇಕು, ಮುಖ್ಯವಾಗಿ ಮದುಪಾನ ಮಾರುವುದಕ್ಕೆ ಕೋಡೋಣಾಗುವ ಲೈಸನ್ಸುಗಳ ಸಂಖ್ಯೆಯನ್ನು ತಗ್ಗಿಸಬೇಕು, ಅವುಗಳನ್ನು ಮಾರುವ ಸಮಯವನ್ನು ಕಮ್ಮಿ ಮಾಡಿ ರಾತ್ರಿಗೆ ಬೇಗನೇ ಅಂಗಡಿಗಳನ್ನು ಮುಚ್ಚುವ ಕ್ರಮವನ್ನು ಏರ್ಪಡಿಸಬೇಕು, ಪ್ರತಿ ಮುನಿಸಿಪಾಲಿಟಿಯಲ್ಲಿ ಈ ಇಲಾಖೆಯವರಿಗೆ ಸಲಹೆಕೊಡುವ ಕಮಿಟಿಗಳನ್ನು ಏರ್ಪಡಿಸಿ ಆಯಾ ಪಟ್ಟಣಗಳಲ್ಲಿ ಎಷ್ಟು ಲೈಸನ್ಸುಗಳನ್ನು ಕೊಡಬಹುದೆಂಬ ಅನುಮತಿಯನ್ನು ಅಂತಹ ಕಮಿಟಿಗಳಿಂದ ಪಡೆಯಬೇಕು, ಅಂಗಡಿಗಳನ್ನು ಏಲಂಹಾಕಿ ಲೈಸನ್ಸುಕೊಡುವ ಪದ್ಧತಿಯನ್ನು ರದ್ದುಮಾಡಬೇಕು, ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಲೈಸನ್ ಕೊಡುವ ಅಧಿಕಾರವನ್ನು ತೆಗೆದು ಆಯಾ ಸ್ಥಳಗಳ ಕಮಿಟಿಗಳಿಗೆ ಯಾ ಪಟ್ಟಣದ ಇತರ ಅಧಿಕಾರಿಗಳಿಗೆ ಕೊಡಬೇಕು ಎಂಬದಾಗಿ ವಿಜ್ಞಾಪನೆ ಮಾಡಿಕೊಂಡರು.

* * *

ಕಲಿಫೋರ್ನಿಯದ ರೆಡ್ಡಿಂಗ್ ಎಂಬಲ್ಲಿ ಈಚೆಗೆ ಮೃತಪಟ್ಟ ಜೋನ್ ಬ್ರೊಡ್ ಹಸ್ಟ್ಸ್ ಎಂಬವನು ೨ ತಿಂಗಳ ವರೆಗೆ ಅನ್ನಕೋಶವಿಲ್ಲದೆ ಬದುಕಿದ್ದನು. ಅವನ ಅನ್ನ

ಕೋಶವನ್ನು ವೈದ್ಯರು ಶಸ್ತ್ರ ಪ್ರಯೋಗ ಮಾಡಿ ಅವನಿಗೆ ತಿಳಿಯದ ಹಾಗೆ ತೆಗೆದಿದ್ದರು.

* * *

೧೯೧೧ನೇ ಇಸವಿಯಲ್ಲಿ ಬ್ರಿಟಿಷ್ ಟಂಕ ಶಾಲೆಯಲ್ಲಿ ೨,೪೦೧ ಟನ್ ಪೆನ್ಸ್ ನಾಣ್ಯಗಳು, ೭೧॥ ಟನ್ ಅರ್ಧ ಪೆನ್ಸ್‌ಗಳು ೧೫॥ ಟನ್ ಫಾರ್ದಿಂಗುಗಳು ಟಂಕ ಹೊಡೆಯಿಸಲ್ಪಟ್ಟವು. ಇವುಗಳ ಒಟ್ಟು ಬೆಲೆ ೧೫೦,೩೦೫ ಪವನುಗಳು. ೩೬,೧೪೮,೨೧೧ ಚಿನ್ನದ ನಾಣ್ಯಗಳೂ ೪೩,೯೩೫,೪೫೯ ಬೆಳ್ಳಿಯ ನಾಣ್ಯಗಳೂ ಟಂಕ ಹೊಡೆಯಲ್ಪಟ್ಟವು. ಕಿರೀಟಧಾರಣೋತ್ಸವದ ಬಹುಮಾನ ಪದಕಗಳಿಂದ ೬ ಸಾವಿರ ಪವನುಗಳ ಲಾಭವು ಈ ಟಂಕ ಶಾಲೆಗೆ ದೊರಕಿತು.

* * *

ರೆವರೆಂಡ್ ಜೋನ್ ಎಚ್. ಹೆರಿಸ್ ಎಂಬವರು ವ್ಯಾಟ್‌ಫೀಲ್ಡಿನಲ್ಲಿ ಈಚೆಗೆ ಕೊಟ್ಟ ಭಾಷಣದಲ್ಲಿ ಒಂದು ಟನ್ ರಬ್ಬರಿನ ಕ್ರಯ ೧೦ ಮಂದಿ ಮನುಷ್ಯರಿಗೆ ಸರಿ ಎಂಬದಾಗಿ ಹೇಳಿದರು. ೧೯೧೦ನೇ ಇಸವಿಯಲ್ಲಿ ೪೦೦೦ ಟನ್ ರಬ್ಬರ್ ದೊರಕಿತು. ಈ ೪೦೦೦ ಟನ್ ರಬ್ಬರ್ ಸಿಕ್ಕಬೇಕಾದರೆ ಆ ತೋಟದಲ್ಲಿ ಕೆಲಸ ಮಾಡುತ್ತಿದ್ದ ೪೦,೦೦೦ ಭಾರತೀಯರು ಸತ್ತರು! ೪,೦೦೦ ಟನ್ ರಬ್ಬರಿನ ಕ್ರಯ ೧,೨೦೦,೦೦೦ ಪವನುಗಳು. ಕಿಂಗ್ ಲಿಯೋಪೋಲ್ಡರವರು ೨೧,೦೦೦,೦೦೦ ಪವನು ಕ್ರಯ ಬಾಳಬಹುದಾದ ೭೦,೦೦೦ ಟನ್ ರಬ್ಬರ್ ಬಟ್ಟಿ ಇಳಿಸಿದಾಗ ಟನಿಗೆ ೧೫೦ ರಿಂದ ೧೭೨ ಮಂದಿಯಂತೆ ಜೀವ ಕಳಕೊಂಡರು ಎಂಬದಾಗಿ ತಿಳಿದು ಬರುತ್ತದೆ ಎಂದು ಹೇಳಿದರು.

* * *

ಕುರುಡರು ಸಂಕ್ಷಿಪ್ತಲಿಪಿಯನ್ನು ಬರಿಯಲಿಕ್ಕಾಗುವ ಹಾಗೆ ಒಂದು ವಿಧದ ಟ್ಯಾಪ್‌ರೈಟಿಂಗ್ ಯಂತ್ರವು ತಯಾರಿಸಲ್ಪಟ್ಟದೆ. ಕುರುಡರು ಈ ಯಂತ್ರದಲ್ಲಿ ೬ ವಾರ ಅಭ್ಯಾಸ ಮಾಡಿದನಂತರ ನಿಮಿಷಕ್ಕೆ ೧೦೦ ಶಬ್ದಗಳಂತೆ ಬರಿಯಲಾಪರು.

ಉತ್ತರ ಹಿಂದೂಸ್ಥಾನ.

ಮುಂಬಾಯಿಯಲ್ಲಿ ದಿಯೊಲಾಲಿ ಮೋಟೋರ್ ಅವಘಡದ ಮೊಕದಮೆಯಲ್ಲಿ ಮುದ್ದೈಗೆ ಮುದ್ದೈಯಾಲೆಯು ಖರ್ಚು ಸಹಿತ ೩೪,೦೦೦ ರೂಪಾಯಿ ಪರಿಹಾರ ದ್ರವ್ಯವಾಗಿ ಕೊಡಬೇಕೆಂದು ಜಡ್ಜರು ತೀರ್ಮಾನಕೊಟ್ಟರು. ೮೦೦೦ ರೂಪಾಯಿ ವೈದ್ಯರ ಫೀಸು, ೧೦,೦೦೦ ರೂಪಾಯಿ ಮುದ್ದೈಯು ಪಟ್ಟನೋವಿಗೆ, ೨೦,೦೦೦೦.ರೂಪಾಯಿ ಈ ಅವಗಡದಿಂದ ಮುದ್ದೈಯು ಕೆಲಸಮಾಡಲಿಕ್ಕಾಗದೆ ಪಟ್ಟ ನಷ್ಟಕ್ಕಾಗಿ ಎಂತ ಕೋರ್ಟಿನವರು ತೀರ್ಮಾನಿಸಿದರು.

* * *

ಶಾಲೆಗಳಲ್ಲಿ ಮತಸಂಬಂಧವಾದ ನೀತಿಶಿಕ್ಷಣವು ಅಗತ್ಯವೋ ಏನೆಂಬದರ ವಿಷಯ ಜನಸಾಮಾನ್ಯರ ಆಲೋಚನೆಯನ್ನು ತಿಳಕೊಳ್ಳುವರೆ ಬಂಗಾಳ ಸರಕಾರದವರು ತಾ. ೪ರಲ್ಲು ಕಲ್ಕತ್ತೆಯಲ್ಲಿ ಒಂದು ಸಭೆಯನ್ನು ಕರೆಯಿಸಿದರು. ಈ ಸಭೆಗೆ ಮೆ| ಆರ್. ನಾಥನ್‌ರವರು ಅಧ್ಯಕ್ಷರಾಗಿದ್ದರು. ಕ್ರೈಸ್ತರು, ಹಿಂದೂಗಳು, ಮಹಮ್ಮದೀಯರು ಈ ಮೂರು ಮತಗಳವರಿಗೆ ಹುದುವಾಗಿ ಈ ಮತಶಿಕ್ಷಣದ ವಿಷಯವು ಆಲೋಚಿಸಲ್ಪಡಬೇಕಾದ್ದರಿಂದ ಇದಕ್ಕೆ ಸರಿಯಾಗಿ ೩ ಉಪ ಕಮಿಟಿಗಳು ನೇಮಿಸಲ್ಪಟ್ಟು ಸಭೆಯು ಅಗಲಿತು.

* * *

ಸಿಬ್‌ಪುರದ ಇಂಜಿನಿಯರಿಂಗ್ ಕಾಲೇಜು ಮತ್ತು ಕಲ್ಕತ್ತೆಯ ಮೆಡಿಕಲ್ ಕಾಲೇಜುಗಳನ್ನು ಬಂಗಾಳದ ಸರಕಾರದವರು ಡಕ್ಕದಲ್ಲಿ ಸ್ಥಾಪಿಸಲು ಆಲೋಚಿಸಿರುವ ಡಕ್ಕ ಯುನಿವರ್ಸಿಟಿಗೆ ಕೂಡಿಸಲಿಕ್ಕಿದ್ದಾರೆಂಬದಾಗಿ 'ಇಂಗ್ಲಿಷ್ ಮೇನ್' ಎಂಬ ಪತ್ರಿಕೆಯು ಹೇಳುವದು.

* * *

ಪಂಜಾಬು ಲೆಪ್ಟನೆಂಟ ಗವರ್ನರರಾದ ಸರ್ ಲುಯಿಸ್ ಡೇನ್ಸ್‌ರವರ ಬದಲಿಗೆ ಸದ್ಯಾ ಬು‍ಡೈಯರ್ ಐ. ಸಿ. ಎಸ್‌ರವರು ನೇಮಿಸಲ್ಪಟ್ಟರುವರು.

* * *

ದಯಾಸ್ಥ ಪಾಠಶಾಲೆಯ ಮುಖ್ಯೋಪಧ್ಯಾಯರಾದ ದಿನೇಶ್ ಪ್ರಸಾದರವರು ಅಕಸ್ಮಾತ ಮರಣಪಟ್ಟರೆಂದು ಕಳದ ಸಂಚಿಕೆಯಲ್ಲಿ ತಿಳಿಸಿತ್ತಷ್ಟೆ. ಇವರು ಹೃದಯ ರೋಗದಿಂದ ಫಕ್ಕನೇ ಈ ಅಪಮೃತ್ಯುವನ್ನು ಹೊಂದಿದರೆಂತ ತಿಳಿದುಬರುತ್ತದೆ.

* * *

ಸ್ವಾಮಿ ಅಭೇದಾನಂದರವರಿಂದ ಇಂಗ್ಲಿಷ್ ಭಾಷೆಯಲ್ಲಿ ಬರೆಯಲ್ಪಟ್ಟು ನ್ಯೂಯೊರ್ಕಿನಲ್ಲಿರುವ ವೇದಾಂತ ಸೊಸ್ಯಾಟಿಯವರಿಂದ ಪ್ರಚಾರವಾಗುವ "ಭರತಖಂಡವೂ ಜನರೂ" (India and her people) ಎಂಬ ಪುಸ್ತಕದಲ್ಲಿ ಬ್ರಿಟಿಷ್ ರಾಜಾಂಗಕ್ಕೆ ವಿರೋಧವಾದ ಕೆಲವು ಮಾತುಗಳು ಸೇರಿರುವುದೆಂದು ಆ ಪುಸ್ತಕವನ್ನೂ ಮತ್ತು ಅನಂತವಾಮ ಬಾರ್ವೆಯವರಿಂದ ಮಹಾರಾಷ್ಟ್ರ ಭಾಷೆಯಲ್ಲಿ ಬರೆಯಲ್ಪಟ್ಟು ಪೂನದ ಚಿತ್ರಶಾಲಾ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟ "ವೇಣಿ ಸಂಹಾರ" ಎಂಬ ಪುಸ್ತಕವನ್ನೂ ಮುಂಬಾಯಿ ಸರಕಾರದವರು ತಮ್ಮ ಪ್ರಾಂತ್ಯದಲ್ಲಿ ಯಾರೂ ತರಿಸಿ ಓದಕೂಡದೆಂದು ಹುಕುಂ ಮಾಡಿರುವರು.

* * *

ಜಗತ್ಸಿ ಆಶ್ರಮದ ದಂಗೆ ಮೊಕದಮೆಯಲ್ಲಿ ಸೆಶ್ಶನ್ಸ್ ಜಡ್ಜರವರಿಂದ ಶಿಕ್ಷೆವಿಧಿಸಲ್ಪಟ್ಟ ಸ್ವಾಮಿ ದಯಾನಂದ್ ಮತ್ತು ಇತರ ೧೦ ಸನ್ಯಾಸಿಗಳು ಕಲ್ಕತ್ತೆಯ ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡಲ್ಲಿ ಹ್ಯಾಕೋರ್ಟಿನವರು ಇವರ ಅಪೀಲನ್ನು ತಳ್ಳಿಹಾಕಿ ಜಡ್ಜರ ತೀರ್ಮಾನವನ್ನೇ ಕಾಯಂ ಮಾಡಿದರು.

* * *

ಪಂಜಾಬು ಸರಕಾರದ ನ್ಯಾಯವಿಧಾಯಕ ಸಭೆಯ ಮೆಂಬರುತನಕ್ಕೆ ಉಮೇದ್ವಾರರಾಗಿ ಲಜಪತ್ ರಾಯಿರವರು ನಿಂತಿದ್ದರು. ಆದರೆ ಇತರ ಕೆಲವು ಹಿಂದೂಗಳೂ ಇವರಿಗೆ ವಿರೋಧವಾಗಿ ಉಮೇದ್ವಾರರಾಗಿ ನಿಂತದ್ದರಿಂದ ಇವರು ತನ್ನ ಉಮೇದ್ವಾರಿಕೆಯನ್ನು ಹಿಂತೆಗದಿರುವರು.

* * *

ಪೂಸಾ ಪಟ್ಟಣದಲ್ಲಿರುವ ಇಂಪೀರಿಯಲ್ ಕ್ರಿಮಿಶಾಸ್ತ್ರಜ್ಞರಾದ ಮೆ| ಟಿ. ಬೈನ್‌ಬ್ರಿಗೆಯವರು ಹಿಂದೂಸ್ಥಾನದ ಹಳ್ಳಿಗಳ ಪ್ರತಿ ಹಳ್ಳಿಯಲ್ಲಿಯೂ ಏರಿ ರೇಷ್ಮೆ ಹುಳುಗಳನ್ನು ಸಾಕುವದು ಬಹು ಸುಲಭವೆಂದು ಅಭಿಪ್ರಾಯಪಟ್ಟಿರುತ್ತಾರೆ. ಹರಳೆಲೆಯೇ ಈ ರೇಷ್ಮೆಹುಳುಗಳಿಗೆ ಆಹಾರವಾಗಿದೆ. ಪ್ರತಿ ರೈತನೂ ಅವುಗಳನ್ನು ಸುಲಭವಾಗಿ ಸಾಕಿ ರೇಷ್ಮೆಯನ್ನು ತೆಗೆದು ಮಾರಿ ಆದಾಯವನ್ನು ಹೊಂದಬಹುದು. ಅದಲ್ಲದೆ ಆ ರೇಷ್ಮೆ ವ್ಯವಸಾಯವು ಮನೆಯಲ್ಲಿರತಕ್ಕ ಹೆಂಗಸರು ಮಕ್ಕಳಿಗೂ ಕೆಲಸವನ್ನು ಒದಗಿಸಿಕೊಡತಕ್ಕವುಗಳಾಗಿವೆ. ಈ ರೇಷ್ಮೆಬಟ್ಟೆಯು ಹತ್ತಿ ಬಟ್ಟೆಗಿಂತ ಹೆಚ್ಚು ಬಾಳಿಕೆ ಬರುವಂಥಾದ್ದಾಗಿಯೂ ಹಳ್ಳಿಗಳಲ್ಲಿ ಉಪಯೋಗಿಸಲ್ಪಡುವ ಮಗ್ಗಗಳಲ್ಲಿ ಸುಲಭವಾಗಿ ನೇಯಲ್ಪಡಬಹುದಾಗಿಯೂ ಇದೆ. ಹುಳುಗಳನ್ನು ಸಾಕುವದಕ್ಕೆ ಹೆಚ್ಚು ಖರ್ಚುತಗಲುವದಿಲ್ಲ ಎಂಬದಾಗಿ ಅವರು ಹೇಳುವರು.

* * *

ತಾ. ೫ನೇ ರಾತ್ರಿ ಡಕ್ಕದ ಪೋಲಿಸಿನವರು ತ್ರಿಮರೇಂದ್ರ ಚಂದ್ರರೋಯಿ, ತ್ರಿಪುದೇಶ ಚಂದ್ರರೋಯಿ, ಟಾಕೂರು ಡಾಸಡಾರಿ ಎಂಬ ಮೂರು ಯುವಕರನ್ನು ಟಾಕಂ'ಬಂದಿ ಎಂಬ ದೇವಸ್ಥಾನದಲ್ಲಿ ಕೈದುಮಾಡಿರುವರು. ಇವರು ಅಲ್ಲಿರಲು ಕಾರಣವೇನೆಂಬದಾಗಿ ಪೋಲೀಸಿನವರು ಕೇಳಿದಲ್ಲಿ ಅವರು ತಕ್ಕ ಉತ್ತರವನ್ನು ಕೊಡದ್ದರಿಂದ ಪೋಲೀಸಿನವರು ಅವರನ್ನು ಕೈದುಮಾಡಿದರು. ಮೊದಲನೇಯ ಇಬ್ಬರು ಅಗರ್‌ಟಲ ಎಂಬಲ್ಲಿಂದ ಗಡಿಪಾರುಹೊಂದಿ ಡಕ್ಕದಲ್ಲಿ ಬಂದು ವಾಸಿಸಿದ ರಾಜ ಹರಿಚಂದ್ರರೋಯಿ ಎಂಬವರ ಮೊಮ್ಮಕ್ಕಳು. ಮೂವರೂ ಜಾಮೀನಿನ ಮೇಲೆ ಬಿಡಲ್ಪಟ್ಟಿದ್ದಾರೆ.

* * *

ಹಿಂದೂಸ್ಥಾನದ ಉಪ ಸೆಕ್ರಿಟರಿಯಾಗಿರುವ ಮೆ| ಮೊಂಟೇಗರವರು ಅಲ್ಲಾಹಾಬಾದಿಗೆ ಹೋಗಿ ಅಲ್ಲಿ ಚೀಫ್ ಜಸ್ಟಿಸರವರ ಅಥಿತಿಯಾಗಿರುವರು. ಅಲ್ಲಿಂದ ಬೆನಾರಸಿಗೆ ಚಿತ್ತೈಸುವರು.

* * *

ಇದೇ ಕಳೆದ ನವಂಬರ ತಾ. ೩೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೬೭೧ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೨೧೬೧ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ಮತ್ತು ಮದ್ರಾಸಿನಲ್ಲಿ ೧೧೪; ಬಂಗಾಳ ೮; ಬಿಹಾರ್ ೧೬೫; ಸಂಯುಕ್ತ ಸಂಸ್ಥಾನ ೪೧೭; ಪಂಜಾಬು ೮೬; ಬರ್ಮ ೬; ಮಧ್ಯ ಸಂಸ್ಥಾನ ೪೩; ಮೈಸೂರು ೧೪೧; ಹೈದರಾಬಾದ್ ೧೦೮; ರಾಜಪುತಾನ ೩೬೦ ಮರಣಗಳಾದವು.

* * *

ಮೈಸೂರು ಹಿಂದಿನ ರಾಜಕುಟುಂಬದ ಪ್ರಿನ್ಸ್ ಗುಲಾಮ್ ಮಹಮ್ಮದ್ ಎಂಬವರು ಬರುವ ವರ್ಷದಿಂದ ಕಲ್ಕತ್ತೆಯ ಶೆರಿಫರಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ಕೆಲವು ಸಮಯ ಟೋಲಿಗಂಜ್ ಮುನಿಸಿಪಾಲಿಟಿಯ ಚೇಯರ್ ಮೇನರಾಗಿದ್ದರು.

ದಕ್ಷಿಣ ಕನ್ನಡ.

ಪುತ್ತೂರು:—ಖಜಾನಾ ಡಿಪ್ಯುಟಿ ಕಲೆಕ್ಟರವರು ಇಲ್ಲಿಯ ತಾಲೂಕು ಖಜಾನೆಯ ತನಖಿ ನಡಿಸಿ ದಶಂಬರ ತಾ. ೧ರಲ್ಲು ವಾಪಾಸು ಮಂಗ್ಳೂರಿಗೆ ಹಿಂತೆರಳಿರುವರು;

ರಜೆಯ ಮೇಲೆ ಹೋದ ನಮ್ಮ ಡಿವಿಜನಿನ ಡಿಪ್ಯುಟಿ ಕಲೆಕ್ಟರ್ ಮೆ| ಪಿ. ಕುಂಞಾಯಾನ್ ಸಾಹೇಬರವರು ತಾ. ೨ರಲ್ಲು ಹಾಜರಾಗಿ ಚಾರ್ಜು ವಹಿಸಿಕೊಂಡಿರುವರು.

ಇಲ್ಲಿಯ ಡಿವಿಜನ್ ಡಿಪ್ಯುಟಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಖಿ ನಡಿಯುತ್ತಿದ್ದ ಉಡ್ಪಿ ಮೊಕದಮೆಯು ತಾ. ೨೬ಕ್ಕೆ ಹೊಸದುರ್ಗ ಮೊಕ್ಕಾಮಿನಲ್ಲಿಡಲ್ಪಟ್ಟಿರುವದು.

ಆರಿಯಾಪ್ಪು ಗ್ರಾಮದ ಬಿಲ್ಲ ಮುಲ್ಕಿ ಐತು ಎಂಬವನನ್ನು ಖೂನಿಮಾಡಿದನೆಂಬದಾಗಿ ಆಪಾದಿಸಲ್ಪಟ್ಟ ಬಿಲ್ಲಗುರುವ ಎಂಬವನ ಮೇಲಿನ ಮೊಕದಮೆಯು ಸೆಶ್ಶನ್ಸಿಗೆ ಕಮಿಟ್ ಆಗಿರುವದು.

ಜಿಲ್ಲಾ ಸರ್ಜನರವರು ತಾ. ೨ರಲ್ಲು ಇಲ್ಲಿಗೆ ತಲಪಿ ತಾ. ೩ರಲ್ಲು ಆಸ್ಪತ್ರಿ ತನಖಿಯನ್ನು ನಡಿಸಿ ತಾ. ೪ಕ್ಕೆ ಸುಳ್ಯಕ್ಕೆ ಹೋಗಿ ತಾ. ೫ರಲ್ಲು ಸುಳ್ಯ ಆಸ್ಪತ್ರಿ ತನಖಿಯನ್ನು ತೀರಿಸಿ ತಾ. ೭ರಲ್ಲು ಉಪ್ಪಿನಂಗಡಿ ಆಸ್ಪತ್ರಿಯ ತನಖಿಯನ್ನು ಮಾಡಿ ಪುತ್ತೂರಿಗೆ ಬಂದು ಮಂಗ್ಳೂರಿಗೆ ಹೋಗಿರುವರು.

ಇಲ್ಲಿಯ ಕಾಯಂ ರಿಜಿಸ್ತ್ರಾರರಾದ ರಾ| ಎಮ್. ಬಾಬುರಾಯರವರು ತಾ. ೪ರಲ್ಲು ಹಾಜರು ಆಗಿ ಚಾರ್ಜು ವಹಿಸಿಕೊಂಡಿರುವರು.

ಸುಬ್ರಮಣ್ಯಕ್ಕೆ ಹೋದ ನಮ್ಮ ತಾಲೂಕು ತಹಸೀಲದಾರರು ಪುತ್ತೂರಲ್ಲಿ ತಾ. ೯ರಲ್ಲು ನಡಿಯುವ ನ್ಯಾಯವಿಧಾಯಕ ಸಭೆಯ ಮೆಂಬರುತನದ ಚುನಾವಣೆಯ ಓಟಿನ ಸಂಬಂಧ ಇಲ್ಲಿಗೆ ವಾಪಾಸು ಬರುವದರಿಂದ ಇಲ್ಲಿಯ ಸ್ಪೇಶನರಿ ಸಬ್ ಮೇಜಿಸ್ಟ್ರೇಟರವರು ತಾ.೩ರಲ್ಲು ಇಲ್ಲಿಂದ ಸುಬ್ರಮಣ್ಯಕ್ಕೆ ಹೋಗಿರುವರು.

ಇದೇ ತಾ. ೩ರಲ್ಲು ಇಲ್ಲಿಯ ಕೆಲವು ಹೊಲೆಯರು ಕೂಡಿ ಜಮೀನ್ದಾರ ಸೋಮಯ್ಯ ಶೆಟ್ಟರ ಕೆಲಸದ ಗೌಡ ಕುಂಞ ಎಂಬವನನ್ನು ಹಿಡಿದು ಕಟ್ಟಿ ಹೊಡದ್ದರಿಂದ ಧಾರಿ ದೊಡ್ಡ ಡೊಂಬಿ ನಡದು ಹೊಲೆಯರನೇಕರಿಗೆ ಜಖಂ ಆಗಿಯದೆ. ಕೆಲವು ಜನ ಹೊಲೆಯರನ್ನು ಪೋಲೀಸಿನವರು ಕೈದುಮಾಡಿ ಜಾಮೀನಿನ ಮೇಲೆ ಬಿಟ್ಟಿರುವರು.

ಸರ್ಕೀಟಿನ ಮೇಲೆ ಇದ್ದ ನಮ್ಮ ಡಿವಿಜನಿನ ಡಿಪ್ಯುಟಿ ಕಲೆಕ್ಟರವರು ತಾ. ೯ರಲ್ಲು ಇಲ್ಲಿ ಬಂದು ತಲ್ಪಿದರು.

ಶೇಂದಿ ಮುರ್ತೆಮಾಡುವ ತಾಳಿ ಮರಗಳ ಕೊಂಬುಗಳಿಗೆ ಒಂದು ಜಾತಿಯ ನೊಣಗಳು ಶೇರಿ ಕೊಂಬುಗಳನ್ನೂ ಶೇಂದಿಯನ್ನೂ ಹಾಳುಮಾಡುತ್ತವಾದ್ದರಿಂದ ಶೇಂದಿಯು ಕಡಿಮೆಯಾಗಿಯದೆ. ಮುರ್ತೆದಾರರೂ ಅಂಗಡಿಗಾರರೂ ಬೊಬ್ಬಿಡುವರು. ಶೇಂದಿಗೆ ದುರ್ವಾಸನೆಯು ವಿಪರೀತವಾದ್ದರಿಂದ ಕುಡಿಕರಿಗೆ ಅಸಹ್ಯಕರವಾಗಿರುವದೆಂತಲೂ ನೊಣಗಳು ಬಿದ್ದ ಶೇಂದಿ ಕುಡಿಯುವುದರಿಂದ ಜನರಿಗೆ ಏನಾದರೂ ಸೋಂಕು ತಗಲಲಿಕ್ಕೆ ಸಾಕೆಂತಲೂ ಹೇಳುವರು.

ಇಲ್ಲಿಯ ಡಿವಿಜನಲ್ ಆಫೀಸಿನಲ್ಲಿ ತಾ ೯ರಲ್ಲು ನ್ಯಾಯವಿಧಾಯಕ ಸಭೆಯ ಮೆಂಬರರ ಚುನಾವಣೆಯು ನಡಿಯಿತು.

ಸುಬ್ರಮಣ್ಯದಲ್ಲಿ ಈ ವರೆಗೆ ೨೦,೦೦೦ ಜಾನುವಾರುಗಳು ಬಂದದ್ದಾಗಿಯೂ ಸರಕಾರಕ್ಕೆ ರೂಪಾಯಿ ೨೫೦೦ ಜಮೆ ಆದ್ದಾಗಿಯೂ ತಿಳಿಯುತ್ತೇವೆ. ಕಾಲುಕುಂಟೆ ಮೊದಲಾದ ಜಾನುವಾರು ರೋಗದಿಂದ ಅನೇಕ ಜಾನುವಾರುಗಳು ಖಾಲಿಯಾದವು. ಅನೇಕರ ಜಾನುವಾರು ತಂತಮ್ಮ ಮನೆಗೆ ಮುಟ್ಟುವ ಮೊದಲೇ ಸತ್ತದರಿಂದ ಖರೀದಿಗೆ ಪಡಕೊಂಡವರಿಗೆ ಸಹ ಜಾನುವಾರು ರೋಗದಿಂದ ಹೆಚ್ಚಿನ ನಷ್ಟ ವುಂಟಾಗಿದ್ದಾಗಿ ಕೇಳುತ್ತೇವೆ.

* * *

ಕಾಸರಗೋಡು. ನಮ್ಮ ಪಟ್ಟಣದಲ್ಲಿ ಅನೇಕ ವರುಷಗಳಿಂದೀಚೆಗೆ ಒಂದು ಪಂಚಮರ ಶಾಲೆಯು ನಡೆದು ಬರುತ್ತಲಿದೆ. ಆದರೆ ಈ ಶಾಲೆಗೆ ಊರ ಮಹನೀಯರಿಂದ ಹೆಚ್ಚಿನ ಪ್ರೋತ್ಸಾಹವು ದೊರಕಿದಂತೆ ತೋರುವುದಿಲ್ಲ. ಮ. ರಾ. ರಾ. ಜಿ. ರೋಬರ್ಟ್ಸರವರು ಪಟ್ಟಣಿಗರಿಂದ ವಂತಿಗೆ ವಸೂಲು ತೆಗೆದು ಪಂಚಮರ ವಿದ್ಯಾರ್ಥಿಗಳಿಗೆ ಅಂಗಿವಸ್ತ್ರಗಳನ್ನು ಕೊಡಿಸಬೇಕೆಂದು ಪ್ರಯತ್ನ ಪಡುತ್ತಿರುವರು. ಈ ಕಾರ್ಯದಲ್ಲಿ ಅವರಿಗೆ ಎಲ್ಲರ ಪ್ರೋತ್ಸಾಹವು ದೊರಕುವುದಾಗಿ ನಂಬುತ್ತೇವೆ.

ಇಲ್ಲಿಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಮೊಕ್ತೇಸರಿ ಹಕ್ಕಿನ ವಿಷಯ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ ವ್ಯಾಜ್ಯವು ನಡೆಯುತ್ತಲಿದೆ.

ಮೂಡಬಿದ್ರೆ ನಾರಾಯಣ ಹೆಗ್ಗಡೆಯರ ನಾಟಕ ಕಂಪೆನಿಯು ಇಲ್ಲಿಗೆ ಬಂದು ಈ ದಿನ ಪ್ರಥಮ ನಾಟಕವನ್ನಾಡುವರು.

ನಮ್ಮ ಪಟ್ಟಣದಲ್ಲಿಯೂ ನೆರೆ ಗ್ರಾಮಗಳಲ್ಲಿಯೂ ವಾಂತಿಭೇದಿ ರೋಗವು ತಲೆದೋರಿಯದೆ. ಜನರು ಆರೋಗ್ಯದ ಮಟ್ಟಿಗೆ ಹೆಚ್ಚಿನ ಜಾಗ್ರತೆಯಿಂದಿರುವುದು ತುಂಬಾ ಅವಶ್ಯಕವು.

ಜಿಲ್ಲಾ ಕಲೆಕ್ಟರ ದೊರೆಗಳವರ ಸವಾರಿಯು ಈ ದಿನ ಇಲ್ಲಿಗೆ ಚಿತ್ತೈಸಿ ೧೪ನೇ ತಾರೀಕು ವರೆಗೆ ಇಲ್ಲಿಯೇ ಮೊಕ್ಕಾಂ ಮಾಡುವರು.

* * *

ಕಾರ್ಕಳ. ಬಿಜಿಲು ಹೆಂಗುಸನ್ನು ಕೊಂದವರೆಂದು ಆಪಾದಿಸಲ್ಪಟ್ಟವರನ್ನು ಜಡ್ಜರವರು ಖುಲಾಸು ಪಡಿಸಿದ ಮೇಲೆ, ಆ ಕೊಲೆ ಪಾತಕ ನಡಿಸಿದವರನ್ನು ಪೋಲೀಸಿನವರು ಹುಡುಕಿ ವಿಚಾರಣೆಗೆ ಗುರಿ ಪಡಿಸದೆ ಇರಲಾರರೆಂದು ನಂಬುತ್ತೇವೆ.

ಹಿಂದೂ ಬಾಲಿಕಾ ಶಾಲೆಯ ಕಟ್ಟೋಣವು ಇನ್ನೆರಡು ತಿಂಗಳಲ್ಲಿಯೇ ಮುಗಿಯುವುದು.

ತಾಲೂಕು ಕಚೇರಿಯ ಕಟ್ಟಡವು ಕುಕ್ಕುಂದೂರು ಮಾರ್ಗದಲ್ಲಿ ಆಗುವುದಾಗಿ ತಿಳಿದು ಪಟ್ಟಣ ವಿಸ್ತಾರಕ್ಕೂ ವ್ಯಾಪಾರಕ್ಕೂ ನಿವಾಸ ಸ್ಥಳಕ್ಕೂ ಅನುಕೂಲತೆಯಾಗುವುದರಿಂದ ಸಂತೋಷಕ್ಕೆ ಎಡೆಯಿದೆ.

* * *

ಮೂಡಬಿದ್ರೆ. ಬಂದ ತಾಲೂಕು ಕಚೇರಿಯು ಕಳೆದು ಹೋದದ್ದೇ ಬಡವರ ದುರ್ಭಾಗ್ಯವೆಂದೆಣಿಸುತ್ತ ಇರುವಷ್ಟರಲ್ಲಿ, ಇಲ್ಲಿಯ ಇದ್ದದೊಂದು ದೇವಾಲಯದ ಜಾತ್ರೆಗಳೆಲ್ಲ ಒಂದೊಂದಾಗಿ ನಿಂತು ಈಗ ತಾನೆ ಕಾರ್ತೀಕೋತ್ಸವವೂ ಕೂಡಾ ಇಲ್ಲದೆ ಹೋಯಿತು. ನಮ್ಮನ್ನು ದುರ್ಭಾಗ್ಯದ ಆವರಣದಿಂದ ಬಿಡಿಸಿ, ವೇಶ್ಯೆ 'ಬೇಗಾರಿ'ಗಳಿಂದ ಉದ್ಧರಿಸಿ, ದೇವ ಪೂಜಾದಿಗಳನ್ನು ಸಾಂಗ ರೀತ್ಯಾ ನಡೆಯಿಸುವ ಧಾರವು ಜಾತಿಯ ಮುಖಂಡರ ಮೇಲಿದೆಯೆಂದು ಅವರು ಮರೆತ್ತಿದ್ದುದು ಅನ್ಯಾಯವಲ್ಲವೇ?

* * *

ಬಂಟವಾಳ. ಅಯ್ಯನಾಯ್ಕನ ಓಣಿಯ ತೂಗು ಸಂಕದ ದುರುಸ್ತಿಗೆ ಬೋರ್ಡಿನವರು ೮೧ ರೂಪಾಯಿ ಸೆಂಕ್ಷನು ಮಾಡಿದ್ದರೂ ಸಂಕವು ಇನ್ನೂ ಇದ್ದಂತೆಯೇ ಇದೆ. ಸಂಕವು ಬಾಲಕರಿಗೆ ನಿರಾತಂಕವಾಗಿ ಹೋಗಗೊಡದಿರುವ ಸಂಕಟವನ್ನು ಬೋರ್ಡಿನವರು ನಿವಾರಿಸಲು ಇನ್ನೂ ಅಸಡ್ಡೆಗೊಳ್ಳರೆಂದು ನಂಬಿರುವೆವು.

ತಾ. ೧೨ನೇ ಬ್ರಹಸ್ಪತಿವಾರ ದಿನ ಸಂಜೆಯಲ್ಲಿ ಟೆಂಪಲ್ ಸೆಕಂಡರಿ ಶಾಲೆಯ ವಿದ್ಯಾರ್ಥಿಗಳು ದರ್ಬಾರಿನ ದಿನಾಚರಣೆಯನ್ನು ತಕ್ಕಂತೆ ಕೈಗೊಂಡರು. ಹುಡುಗರಲ್ಲಿ ಹಲವರು ಬ್ರಿಟಿಷರ ಆಗಮನದಿಂದ ನಮ್ಮ ದೇಶಕ್ಕೆ ಉಂಟಾದ ಶ್ರೇಯಸ್ಸನ್ನು ತಿಳಿಯಿಸಿ, ಅನ್ಯರಾಜತ್ವ ಕಾಲಗಳಲ್ಲಿದ್ದ ದೂಷಿತ ಕಟ್ಟಳೆಗಳನ್ನೂ ಈಗಿನ ಶ್ಲಾಘನೀಯ ವ್ಯವಸ್ಥೆಗಳನ್ನೂ ಹೋಲಿಸಿದರು. ಸಾಮ್ರಾಜ್ಯದ ಏಳಿಗೆಗಾಗಿಯೂ ಸಮ್ರಾಟಕುಲದ-ಸೌಭಾಗ್ಯ ಅಭಿವೃದ್ಧಿಗಳಿಗಾಗಿಯೂ ಪ್ರಾರ್ಥಿಸಿ, ಮಕ್ಕಳಿಗೆ ಮಿಷ್ಟಾಹಾರವು ಹಂಚೋಣಾಯಿತು. ಹೆಡ್ ಮಾಸ್ತರ ರಾ| ಎಮ್. ಎನ್ ಕಾಮತರವರು ಬ್ರಿಟಿಷರ ಆಳಿಕೆಯಿಂದ ಜಾತಿ ವರ್ಗಕ್ಕೆ ಉಂಟಾದ ಶ್ರೇಯಸ್ಸನ್ನು ಕುರಿತು ಮಕ್ಕಳಿಗೆ ಹೃದಯಂಗಮವಾಗುವಂತೆ ಬೋಧಿಸಿದನಂತರ, ಕೃತಜ್ಞತಾ ಸೂಚಕವಾಗಿ ಕಾಲೋಚಿತವಾದ ರಾಷ್ಟ್ರ ಗೀತೆಯನ್ನೂ, ರಾಜ ಗೀತೆಯನ್ನೂ ಹಾಡಿ ವರ್ಧಂತಿಯು ಮುಗಿಯಿತು.

ಮಂಗಳೂರು.

ಇಂಗ್ಲಿಷ್ ಭಾಷೆಯಲ್ಲಿ ಈ ಸಂಚಿಕೆಯಲ್ಲಿ ಪ್ರಕಟವಾದ ಬಾತ್ಮಿಯಲ್ಲಿ ವ್ಯಕ್ತಗೊಳಿಸಿದ ವಿಜ್ಞಾಪನೆಯ ವಿಷಯವು ಇನ್ನು ಸದ್ಯದಲ್ಲಿ ಕೂಡುವ ಸಂಯುಕ್ತ ಗೌಡಸಾರಸ್ವತ ಪರಿಷದದಾದ್ದರಿಂದಲೂ ಬಾತ್ಮಿಯು ಈ ಸಂಚಿಕೆಯು ಅಚ್ಚಾಗುತ್ತಿರುವಾಗ ಬಂದು ತಲಪಿದ್ದರಿಂದಲೂ ಈ ಬಾತ್ಮಿಯನ್ನು ಭಾಷಾಂತರಿಸಲಿಕ್ಕೆ ಸಮಯವಿಲ್ಲದೆ ಈ ಸಂಚಿಕೆಯಲ್ಲಿ ಇಂಗ್ಲಿಷಿನಲ್ಲಿಯೇ ಪ್ರಕಟಿಸಬೇಕಾಯಿತು. ಇದಲ್ಲದೆ ಇಂಗ್ಲಿಷಿನಲ್ಲಿಯೇ ಇದನ್ನು ಪ್ರಕಟಿಸಬೇಕೆಂತ ಪತ್ರವ್ಯವಹಾರಕರ ಅಪೇಕ್ಷೆ ಸಹ ಆಗಿತ್ತು.

ಇಂಗ್ಲಿಷ್ ಲೇಖನಗಳನ್ನು ಇಂಗ್ಲಿಷ್ ಭಾಷೆಯಲ್ಲಿಯೇ ಈ ಪತ್ರದಲ್ಲಿ ಪ್ರಕಟಿಸುವುದು ನಮಗೆ ಯುಕ್ತ ತೋರದ್ದರಿಂದ ಅವುಗಳನ್ನು ಭಾಷಾಂತರಿಸಿ ಪ್ರಕಟಿಸಬೇಕಾಗಿರುವುದರಿಂದಲೂ ಇಂಥಾ ಬಾತ್ಮಿಗಳ ಪತ್ರವು ಪ್ರಕಟವಾಗುವ ಒಂದೆರಡು ದಿವಸಗಳ ಮುಂಚಿತವಾಗಿಯೇ ನಮಗೆ ಬಂದು ತಲ್ಪುವಂತೆ ಅವುಗಳನ್ನು ಕಳುಹಿಸತಕ್ಕದ್ದಾಗಿರುತ್ತದೆ. ಹೀಗೆ ಕ್ಲುಪ್ತಕಾಲದಲ್ಲಿ ಬಂದು ಸೇರದ ಬಾತ್ಮಿಗಳನ್ನು ಇನ್ನು ಮುಂದೆ ಪ್ರಕಟಿಸಲಶಕ್ಯರಾಗಿರುವೆವು. ಈ ಇಂಗ್ಲಿಷ್ ವಿಜ್ಞಾಪನೆಯ ಮುಖ್ಯ ಸಾರಾಂಶವೇನಂದರೆ:—

ಒಂದೇ ಜಾತಿಯ ಶಾಖೋಪಶಾಖೆಗಳಲ್ಲಿ ಸಹಪಂಕ್ತಿ ಭೋಜನ, ವಿವಾಹ ಇತ್ಯಾದಿ ಸುಧಾರಣಾ ಕಾರ್ಯಗಳಲ್ಲಿ ಸಮಾಜ ಮುಂದಾಳುಗಳು ಮಾರ್ಗದರ್ಶಿಗಳಾದರೆ ಸಾಮಾನ್ಯರು ಇಂಥಾ ವರ್ತನೆಯನ್ನು ಗುಲ್ಲಿಲ್ಲದೆ ಅನುಸರಿಸುವರೆಂಬುದು ಸಮಾಜದ ಈಗಿನ ಯತಾರ್ಥ ಭಾವನೆಗಳಿಂದ ತಿಳಕೊಳ್ಳಬಹುದು. ಹೀಗಿರುತ್ತಾ ಅಶಿಕ್ಷಿತ ಸಾಮಾನ್ಯರ ಶ್ಲಾಘನೆಯನ್ನು ಪಡಿಯುವ ಉದ್ದೇಶದಿಂದ ಶಿಕ್ಷಿತರು ತಾವು ಪೂರ್ವಾಚಾರ ಪದ್ಧತಿಯವರೆಂತ ತೋರಿಸಿಕೊಳ್ಳುವುದು ಯುಕ್ತವಲ್ಲ. ಶಿಕ್ಷಿತರ ಇಂಥಾ ಅಯುಕ್ತ ವರ್ತನೆಯಿಂದ ಸಮಾಜದಲ್ಲಿ ಹೆಚ್ಚಿನ ಅನರ್ಥಗಳು ಸಂಭವಿಸುತ್ತಲಿವೆ. ಆದ್ದರಿಂದ ಮ. ರಾ. ರಾ. ಅಮ್ಮೆಂಬಳ ಶ್ರೀನಿವಾಸ ಪೈಗಳಂಥಾ ಕನ್ನಡಾ ಪ್ರಾಂತ್ಯದ ಗೌಡಸಾರಸ್ವತ ಬ್ರಾಹ್ಮಣ ಮುಂದಾಳುಗಳು, ರಾವ್‌ಸಾಹೇಬ ಅಮ್ಮೆಂಬಳ ಅನಂತಕೃಷ್ಣ ಪೈಗಳವರು ಸಂಘಸುಧಾರಕರನ್ನು ಸೇರಿರುವ ಉದಾಹರಣೆಯನ್ನನುಸರಿಸಿ ಈ ವರುಷ ವಸಯಿಯಲ್ಲಿ ಕೂಡುವ ಸಂಯುಕ್ತ ಪರಿಷದಕ್ಕೆ ಪ್ರತಿನಿಧಿಗಳಾಗಿ ಬಂದು ಸೇರಬೇಕಾಗಿ ವಿಜ್ಞಾಪಿಸಲ್ಪಟ್ಟಿರುತ್ತದೆ.

ಪ್ಲೇಗ್ ಸರ್ಕಲ್ ಇನ್ಸ್‌ಪೆಕ್ಟರರಾದ ರಾ| ಯು. ಶಿವರಾಯರು ಸುಬ್ರಮಣ್ಯ ಜಾತ್ರೆಯ ಪ್ಲೇಗ ಡ್ಯೂಟಿಯ ಮೇಲೆ ಕಳುಹಿಸಲ್ಪಟ್ಟಿದ್ದರು. ಇವರ ೨೫ ದಿವಸಗಳ ಗೈರ್ಹಾಜರು ಕಾಲದಲ್ಲಿ ಇವರ ಬದಲಿಗೆ ಇಲ್ಲಿ ಪ್ಲೇಗು ಇನ್ಸ್‌ಪೆಕ್ಟರರು ನೇಮಿಸಲ್ಪಡದೆ ಇದ್ದದರಿಂದ ಇಲ್ಲಿ ಪ್ಲೇಗು ಇನ್ಸ್‌ಪೆಕ್ಟರರ ಅವಶ್ಯಕತೆಯು ಎಷ್ಟರಮಟ್ಟಿಗೆ ಇದೆ ಎಂಬದನ್ನು ತಿಳಿಯಬಹುದು.

ಇದೇ ತಾ. ೧ರಲ್ಲು ತಾಲೂಕು ಖಚೇರಿಯ ಬಳಿಯಲ್ಲಿರುವ ರಾ| ಕಂಡಿಗೆ ವೆಂಕ್ಟೇಶ ಪ್ರಭುಗಳವರ ಮನೆಯಲ್ಲಿ ರಾಮಚಂದ್ರನ್ಯಾಕರಿಗೂ ಶಾಬ ನ್ಯಾಕರಿಗೂ ತಬ್ಲೆಜಲ್ಸಾ ನಡೆದು ಶಾಬ ನ್ಯಾಕರು ಗೆದ್ದರೆಂತ ಒಬ್ಬ ಬಾತ್ಮೀದಾರರು ಬರೆದು ತಿಳಿಸಿರುವರು.

ಸೆಂಟ್ ಕ್ಸೆವಿಯರ್ಸ್ ಶಾಲೆಯ ಪ್ರೋತ್ಸಾಹಕರಾದ ಸೈಂಟ್ ಫ್ರಾನ್ಸಿಸ್ಕೊ ವೀರಭಕ್ತರ ಹಬ್ಬವು ತಾ. ೮ರಲ್ಲು ಬಿಜೈ ಇಗರ್ಜಿಯಲ್ಲಿ ನಡೆಯಿತು. ಬಿಜೈ ಇಗರ್ಜಿ ಗುರುಗಳಾದ ಫಾದರ್ ನೊರೆಂಞರ ಅಧ್ಯಕ್ಷತೆಯಲ್ಲಿ ಸಾಯಂಕಾಲ ಶಾಲೆಯಲ್ಲಿ ಕೂಡಿದ ಸಭೆಯಲ್ಲಿ ಹೆಡ್‌ಮಾಸ್ತರರು ಶಾಲೆಯ ರಿಪೋರ್ಟನ್ನು ಓದಿಹೇಳಿದರು. ಅನಂತರ

ಶಾಲೆಯ ಮಕ್ಕಳು ಕೊಂಕಣಿ ಭಾಷೆಯಲ್ಲಿ "ತಾನು ನೆನಸಿದ ಕೇಡು ತನಗೆ ಬಂತು" ಎಂಬ ನಾಟಕವನ್ನು ಆಡಿ ತೋರಿಸಿದರು.

ರೋಮಪುರಕ್ಕೆ ಹೋಗಿದ್ದ ಇಲ್ಲಿಯ ಬಿಶೋಪರಾದ ರ್ಯಾಟ್ ರೆವರೆಂಡ್ ಡಾಕ್ಟರ್ ಪಿ. ಪೆರನಿಯವರು ಇದೇ ಮಂಗಳವಾರ ಮಂಗಳೂರು ಬಂದರದಲ್ಲಿ ಇಳಿದರು. ಇಲ್ಲಿಯ ರೋಮನ್ ಕಥೋಲಿಕರು ಅವರನ್ನು ಬಂದರದಲ್ಲಿ ಸ್ವಾಗತಮಾಡಿಕೊಂಡು ಮೆರವಣಿಗೆಯಿಂದ ಕರೆತಂದರು.

ನಿನ್ನೆಯ ದಿನ ಡಿಲ್ಲಿ ಕಿರೀಟಧಾರಣೋತ್ಸವದ ಜ್ಞಾಪಕಾರ್ಥವಾಗಿ ಇಲ್ಲಿಯ ಪಂಚಮರ ಶಾಲೆಯ ವಿದ್ಯಾರ್ಥಿಗಳು ರಾಜ ರಾಣಿಯರ ಚಿತ್ರಪಟವನ್ನು ಮಂಟಪದಲ್ಲಿ ಇರಿಸಿ ಗಾಯನಮಾಡುತ್ತಾ ಪಟ್ಟಣದ ಬೀದಿ ಬೀದಿಯಲ್ಲಿ ಮೆರವಣಿಗೆಮಾಡಿ ರಾಜಭಕ್ತಿಯನ್ನು ತೋರ್ಪಡಿಸಿದರು.

ಕಳದ ಸೋಮವಾರ ಮೇಲುಟ್ರೇನು ಬರುತ್ತಿದ್ದಾಗ್ಯೆ ಸುಮಾರು ೩೦ ವರ್ಷಪ್ರಾಯದ ಒಬ್ಬ ಹಿಂದೂ ಉಳ್ಳಾಲ ಸಂಕದ ಬಳಿಯಲ್ಲಿ ರೈಲ್ವೇ ಲ್ಯಾನಿನಮೇಲೆ ಮಲಗಿದ್ದು ಅವನ ತಲೆಯು ದೇಹದಿಂದ ಎಂಗಡವಾಗಿತ್ತು. ಅವನು ಬೇಕೆಂತ ಆತ್ಮಹತ್ಯ ಮಾಡಿಕೊಂಡನೋ ಇಲ್ಲವೇ ಅಕಸ್ಮಾತ್ತಾಗಿ ಗಾಡಿಯಿಂದ ಬಿದ್ದನೋ ಏನೆಂಬದಾಗಿ ತಿಳಿಯದು.

ಈ ಸಂಸ್ಥಾನದ ಹೆಂಗಸು ಮಕ್ಕಳ ಆಸ್ಪತ್ರಿಗೆ ಪ್ರತ್ಯೇಕಿಸಿಡಲ್ಪಟ್ಟ ಹೆಚ್ಚಿನ ೩೦,೦೦೦ ರೂಪಾಯಿ ಗ್ರೇಂಟಿನಲ್ಲಿ ಇಲ್ಲಿಯ ಹೆಂಗಸರ ಮಕ್ಕಳ ಆಸ್ಪತ್ರಿಗೆ ೮೦೦ ರೂಪಾಯಿ ದೊರಕಿರುವದು.

ಇದೇ ತಾ. ೧೧ನೇ ಬುಧವಾರ ಕೆನರಾ ಹ್ಯಾಸ್ಕೂಲಿಗೆ ಒಂದು ವಿಶೇಷ ದಿನವಾಗಿತ್ತು. ಕೆನರಾ ಹ್ಯಾಸ್ಕೂಲಿಗೆ ಮಾತ್ರವೇ ಅಲ್ಲ; ಕೆನರಾ ಹ್ಯಾಸ್ಕೂಲಿಗೆ ಆ ದಿನ ಬಂದಿದ್ದ ಪಟ್ಟಣಿಗರೆಲ್ಲರಿಗೂ ಮಹಾ ದಿನವಾಗಿತ್ತೆಂದು ಹೇಳಿದರೆ ಹೆಚ್ಚಾಗದು. ಕೆನರಾ ಹ್ಯಾಸ್ಕೂಲಿನಲ್ಲಿ ಆ ದಿನ ಡಿಲ್ಲಿ ಕಿರೀಟಧಾರಣೋತ್ಸವದ ಜ್ಞಾಪಕಾರ್ಥವಾಗಿ ಮಹಾ ಸಭೆಯು ಕೂಡಿತ್ತು. ಸಭೆಗೆ ಜಿಲ್ಲಾ ಜಡ್ಜರಾದ ವೇಣುಗೋಪಾಲ ಚೆಟ್ಟಿಯವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಭಾರತೀಯ ಭೀಮ ಪರಾಕ್ರಮಶಾಲಿಯಾದ ಪ್ರೊಫೆಸರ್ ರಾಮ ಮೂರ್ತಿಯವರು ದೇಹಬಲ ಪರಿಶ್ರಮವನ್ನು ಕುರಿತು ಸುಮಾರು ೨ ತಾಸುಗಳ ವರೆಗೆ ಹೃದಯಂಗಮವಾದ ಭಾಷಣಕೊಟ್ಟು, ಸಭಿಕರನ್ನು ಸಂತೋಷಗೊಳಿಸಿದರು. ಮನುಷ್ಯನಿಗೆ ಆರೋಗ್ಯವೇ ಮುಖ್ಯವಾದದ್ದು. ಇಂತಹ ಆರೋಗ್ಯವು ಲಭಿಸಬೇಕಾದರೆ ಏಕಾಗ್ರಚಿತ್ತವು ಅವಶ್ಯ. ಏಕಾಗ್ರಚಿತ್ತವಿಲ್ಲದೆ ಯಾವ ಕೆಲಸವೂ ಸಾಧ್ಯವಾಗದು. ಪ್ರಾಣಾಯಾಮವೂ ವ್ಯಾಯಾಮವೂ ಅವಶ್ಯ. ಪ್ರಾಣಾಯಾಮದಿಂದ ನಾವು ಪ್ರಾಣವಾಯು ಮೊದಲಾದ ವಾಯುಗಳನ್ನು ಹೀರಿಕೊಳ್ಳುತ್ತೇವೆ. ಇದರಿಂದ ರಕ್ತವು ಶುದ್ಧವಾಗಿ ದೇಹದಲ್ಲೆಲ್ಲಾ ಸರಿಯಾಗಿ ಚಲಿಸುತ್ತದೆ. ವ್ಯಾಯಾಮವನ್ನು ಮಾಡುವಾಗ ಏಕಾಗ್ರತೆಯು ಇಲ್ಲದಿದ್ದರೆ ಪ್ರಯೋಜವಿಲ್ಲ. ಶಾಲೆಗಳಲ್ಲಿ ಆಡುವ ಜಿಮ್ನಾಸ್ಟಿಕ್ ಹೊಕಿ, ಕ್ರಿಕೆಟ್ ಮೊದಲಾದ ಆಟಗಳಲ್ಲಿ ಬಾಲಕರು ಏಕಾಗ್ರತೆಯನ್ನು ಪ್ರಯೋಗಿಸದೆ ಮಾಡುವುದರಿಂದ ಅದರಿಂದ ಹೆಚ್ಚಿನ ಪ್ರಯೋಜನವಾಗದು. ಸರ್ವಕ್ಕೂ ಆರೋಗ್ಯವೇ ಮುಖ್ಯವಾದದ್ದು. ಆರೋಗ್ಯದಿಂದ ನಮ್ಮ ದೇಹವೂ ಮನಸ್ಸೂ ಅಭಿವೃದ್ಧಿ ಹೊಂದಿ ನಮ್ಮ ಗುಣನಡತೆಯೂ ಒಳ್ಳೇದಾಗುವುದು. ವ್ಯಾಯಾಮವನ್ನು ಸೂರ್ಯ ಮೂಡುವ ಮೊದಲು ಮಾಡಿ ತೀರಿಸಬೇಕು. ವ್ಯಾಯಾಮ ಮಾಡಿದನಂತರ ಬೆವರು ಆರಿದ ಬಳಿಕ ತಣ್ಣೀರು ಜಲಕ ಮಾಡಬೇಕು. ಮಾಂಸಾಹಾರವು ಒಳ್ಳೇದಲ್ಲ. ಶಾಕಾಹಾರವು ಒಳ್ಳೇಯದು. ಬಾಲವಿವಾಹ ಪದ್ಧತಿಯ ಕೆಡಕು, ಮೊದಲಾದ ಉಪದೇಶದಿಂದ ಕೂಡಿದ ಅರ್ಥಗರ್ಭಿತವಾದ, ಸರ್ವರಿಗೂ ಪ್ರಯೋಜನಕರವಾದ ಭಾಷಣವನ್ನು ಕೊಟ್ಟರು. ಭಾಷಣದ ಅಂತ್ಯದಲ್ಲಿ ಶಾಲಾವಿದ್ಯಾರ್ಥಿಗಳ ಫೂಟುಬೋಲು ಆಟಗಳಿಗಾಗಿ ತನ್ನ ಲೆಕ್ಕದಲ್ಲಿ ೧೦೦ ರೂಪಾಯಿಯನ್ನು ಕೊಡುತ್ತೇನೆಂಬದಾಗಿ ವಾಗ್ದಾನ ಮಾಡಿದರು. ಕಡೆಗೆ ರಾ| ಅಮ್ಮೆಂಬಳ ಶ್ರೀನಿವಾಸ ಪೈಗಳವರು ಪ್ರೊಫೆಸರರಲ್ಲಿ ಕಂಡು ಬಂದ ದೇಶವಾತ್ಸಲ್ಯವನ್ನು ಹೊಗಳಿ, ಪ್ರೊಫೆಸರರಿಗೂ ಅಧ್ಯಕ್ಷರಿಗೂ ಧನ್ಯವಾದವನ್ನಿತ್ತು ಪ್ರೊಫೆಸರರು ಶಾಲೆಗೆ ಚಿತ್ತೈಯಿಸಿದ ಜ್ಞಾಪಕಾರ್ಥವಾಗಿ ಪ್ರತಿ ವರ್ಷವೂ ಹತ್ತು ರೂಪಾಯಿಯ ಒಂದು ಇನಾಂ ಕೊಡುವರೆ ಒಬ್ಬ ಗೃಹಸ್ಥರು ವಾಗ್ದಾನ ಮಾಡಿದ್ದಾರೆಂತ ತಿಳಿಯ ಪಡಿಸಿದರು.

ನಿನ್ನೆಯ ದಿನ ಇಲ್ಲಿಯ ಸೆಂಟ್ ಅಲೋಷಿಯಸ್ ಕೊಲೇಜಿನಲ್ಲಿ ವರ್ಷಾಂತಿಕ ಇನಾಂ ಹಂಚುವ ಸಮಾರಂಭವು ನಡೆಯಿತು.

ಮಂಗಳೂರು ಗವರ್ನಮೆಂಟ ಟ್ರೈನಿಂಗ್ ಶಾಲೆಯ ಸೆಂಕಡರಿ ಗ್ರೇಡ್ ವಿದ್ಯಾರ್ಥಿ ಉಪಾಧ್ಯಾಯರ ಎಲಿಮೆಂಟರಿ ಶಾಲಾ ಸಂದರ್ಶನೆಯ ವೃತ್ತಾಂತವು ಇನ್ನೊಂದು ಸಂಚಿಕೆಯಲ್ಲಿ ಪ್ರಕಟಿಸಲ್ಪಡುವದು.

ಕೆನರಾ ಹ್ಯಾಸ್ಕೂಲಿನ ವರ್ಷಾಂತಿಕ ಇನಾಂ ಹಂಚುವ ಸಮಾರಂಭವು ನಾಳೆಯ ದಿನ ಸಾಯನ್ನ ೬ ಗಂಟೆಗೆ ಜರಗುವದು. ಗವರ್ನಮೆಂಟ್ ಕಾಲೇಜಿಯ ಪ್ರಿನ್ಸಿಪಾಲರಾದ ಮೆ| ಎಚ್. ಮೆಲಿವ್ ಎಮ್. ಎ ರವರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಿರುವರು.

ನಿನ್ನೆಯ ದಿನ ಮಿಶ್ಯನ್ ಹ್ಯಾಸ್ಕೂಲಿನಲ್ಲಿ ಡಿಲ್ಲಿ ಕಿರೀಟಧಾರಣೋತ್ಸವದ ಜ್ಞಾಪಕಾರ್ಥವಾಗಿ ಸಭೆ ಕೂಡಿತು. ಈ ಸಭೆಯಲ್ಲಿ ರೆ| ಬ್ಲೂಮರವರು ರಾಜರ ಕಡೆಗಿರತಕ್ಕ ಕರ್ತವ್ಯವನ್ನು ಕುರಿತು ಭಾಷಣಕೊಟ್ಟ ನಂತರ ಶಾಲೆಯ ವಿದ್ಯಾರ್ಥಿಗಳಿಗೆ ಇನಾಂ ಹಂಚುವ ವರ್ಷಾಂತಿಕ ಸಮಾರಂಭವು ನಡೆಯಿತು. ಮಿಸೆಸ್ ಬ್ಲೂಮರವರು ವಿದ್ಯಾರ್ಥಿಗಳಿಗೆ ಇನಾಂ ಹಂಚಿದರು.

ಕಳದ ಸಂಚಿಕೆಯಲ್ಲಿ ತಿಳಿಸಿದ ಮಂಜೇಶ್ವರ ಖೂನಿ ಮೊಕದಮೆಯಲ್ಲಿ ಜಡ್ಜರು ವಿಟ್ಸಳ್ ಕಮ್ತಿಗೆ ೩ ವರುಷಗಳ ಕಠಿಣ ಸಜಾ ವಿಧಿಸಿದರು.

* * *

ಫರಂಗಿಪೇಟೆ. ಕಳದ ಅಕ್ಟೋಬರ ತಿಂಗಳಲ್ಲಿ ಪಾವುರು ಶಾಲೆಯಲ್ಲಿ ಆದ ಉಪಾಧ್ಯಾಯರ ಸಂಘದಲ್ಲಿ ಪ್ರತಿ ಸಭೆಯು ೩ ತಿಂಗಳಿಗೊಂದಾವರ್ತಿ ಆಮಂತ್ರಿಸಲ್ಪಟ್ಟ ಶಾಲೆಯಲ್ಲಿ ನಡಿಯಬೇಕೆಂದು ನಿರ್ಣಯಿಸಲ್ಪಟ್ಟಿತ್ತು. ಆ ಪ್ರಕಾರ ಇದೇ ತಿಂಗಳ ತಾ. ೭ರಲ್ಲು ಮೇರಮಜ್ಜು ಶಾಲೆಯಲ್ಲಿ ೨ನೇ ಸಭೆಯು ರೆವೆರೆಂಡ್ ಫಾದರ್ ಜೆ. ಡಿ. ಸೋಜರ ಅಧ್ಯಕ್ಷತೆಯಲ್ಲಿ ಜರಗಿತು. ಮೇರಮಜ್ಜು ಶಾಲೆಯ ವಿದ್ಯಾರ್ಥಿಗಳು ತಮ್ಮ ಗೀತಗಳು, ಕಥಾ ನಟನೆ, ಕೋಲಾಟ ಮೊದಲಾದವುಗಳಿಂದ ಸಭೆಯನ್ನು ಸಂತೋಷಗೊಳಿಸಿದರು. ಪುದು ಬೋರ್ಡು ಶಾಲೆಯ ಅಸಿಸ್ಟಾಂಟ್ ಮಾಸ್ತರ್ ಜಿ. ಅಬ್ದುಲ್ಲ ಲೆಬ್ಬದಲ್ಲಿಯೂ, ಸದರಿ ಶಾಲೆಯ ಹೆಡ್ ಮಾಸ್ತರ್ ಪರಮೇಶ್ವರಯ್ಯನವರು ರಾಮಾಯಣ ಓದಿ ಅರ್ಥ ಹೇಳುವದರಲ್ಲಿಯೂ ಮಾದರಿ ಪಾಠಗಳನ್ನು ಕೊಟ್ಟರು. ಮೇರಮಜ್ಜು ಶಾಲೆಯ ಅ. ಮಾಸ್ತರ್ ಎ. ಡಿ. ಸೋಜರೂ, ಪಾವುರು ಬೋರ್ಡು ಶಾಲೆಯ ಮಾಸ್ತರ್ ಎ. ಜೆ. ರೇಗರೂ 'ಕಾಲ ನಿಯಮ'ದ ಕುರಿತು ಚಲೋ ಉಪನ್ಯಾಸಗಳನ್ನು ಓದಿದರು. ಸಭೆಯ ಅಧ್ಯಕ್ಷರು 'ವಿದ್ಯೆ ಮತ್ತು ಸಭೆಗಳ ಅವಶ್ಯಕತೆಯ ಕುರಿತು ಚಲೋ ಭಾಷಣ ಮಾಡಿದ ಬಳಿಕ ಸದರಿ ಸಂಘದ ಸೆಕ್ರಿಟೆರಿಗಳಾದ ಎ. ರಾಮಚಂದ್ರ ಹೆಗ್ಗಡೆಯವರು ಧನ್ಯವಾದವನ್ನು ಕೊಟ್ಟು, ನೆರೆದ ಸಭಿಕರಿಗೆ ಫಲಹಾರದಿಂದ ಉಪಚರಿಸಿದರು.

* * *

ವಿವಿಧ ವಿಷಯಗಳು.

ಮೈಸೂರು ಸಂಪದಭಿವೃದ್ಧಿ ಸಮಾಜಕ್ಕೆ ಸೇರಿದ ಕೈಗಾರಿಕೆ ಮತ್ತು ವ್ಯವಸಾಯದ ಕಮಿಟಿಯು ಮೆಂಬರುಗಳ ಕೋರಿಕೆಯ ಪ್ರಕಾರ ೩ ಕಬ್ಬಿನ ಆಲೆಗಳನ್ನು ಕೊಂಡುಕೊಂಡು ಚಿಕ್ಕ ಬಳ್ಳಾಪುರ ಕುಣಿಗಲ್ ಮತ್ತು ಶ್ರೀರಂಗಪಟ್ಟಣ ಈ ಮೂರು ಸ್ಥಳಗಳಲ್ಲಿಯೂ ಒಂದೊಂದು ಸಕ್ಕರೆಯನ್ನು ತಯಾರ್ಮಾಡತಕ್ಕ ಕಾರ್ಖಾನೆಗಳನ್ನಿಟ್ಟು ಕಬ್ಬಿನ ಸಾಗುವಳಿಯನ್ನು ವೃದ್ಧಿ ಪಡಿಸುವುದಕ್ಕಾಗಿ ಘನವನ್ನು ಹೊಂದಿದ ಮೈಸೂರು ಶ್ರೀಮನ್ಮಹಾರಾಜಾ ಸರಕಾರದವರು ೪೫,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

* * *

ಉತ್ತರ ಕೆರೋಲಿನಾ (North Carolina) ವ್ಯವಸಾಯ ಶಾಲೆಯಲ್ಲಿ ಹೇಸರು ಕತ್ತೆಗಳು ಮತ್ತು ದನಗಳಿಗೆ ಹತ್ತಿ ಬೀಜದ ಹಿಂಡಿಯನ್ನು ತಿನ್ನಿಸಿ ಅಜಮಾಯಿಸಿ ನೋಡಲು ಕೆಳಗೆ ಕಂಡ ವಿಷಯಗಳು ತಿಳಿಯಬರುತ್ತವೆ:—

ಒಟ್ಟು ಆಹಾರದ ಶೇಕಡ ಹತ್ತುಭಾಗ ಅಂದರೆ ದಿನಕ್ಕೆ ರಾಶಿಗೆ ೧೪ ಅಥವಾ ೨ ಪೌಂಡು ತೂಕಕ್ಕೆ ಜಾಸ್ತಿಯಾಗದಂತೆ ಹತ್ತಿ ಬೀಜದ ಹಿಂಡಿಯನ್ನು ತೌಡಿನ ಜತೆಯಲ್ಲಿ ಚನ್ನಾಗಿ ಕಲಸಿ ತಿನ್ನಿಸಿದರೆ ಏನೂ ಕೆಡಕುಂಟಾಗುವುದಿಲ್ಲ. ಇದಕ್ಕಿಂತಲೂ ಜಾಸ್ತಿಯಾಗಿ ತಿನ್ನಿಸಿದರೆ ರಾಸುಗಳು ದಿನೇ ದಿನೇ ತೂಕದಲ್ಲಿ ಕಡಿಮೆಯಾಗುವುವಲ್ಲದೆ ಕೆಲಸಮಾಡತಕ್ಕ ಎತ್ತುಗಳು ಮೊದಲಿನಷ್ಟು ಕೆಲಸವನ್ನು ಮಾಡಲಾರದಂತಾಗುವುವು. ಅಲ್ಲದೆ ಸ್ವಲ್ಪ ಕಾಲನಂತರ ಈ ಹಿಂಡಿಯನ್ನು ಹೇರಳವಾಗಿ ಹಾಕಿದರೆ ದನಗಳು ತಿನ್ನುವುದೇ ಇಲ್ಲ. ಮೇಲ್ಕಂಡ ವ್ಯವಸಾಯ ಶಾಲೆಯ ಸುತ್ತಮುತ್ತಲ ಗ್ರಾಮಗಳ ರೈತರ ಅನುಭವವು ಸಹಾ ಇದೇ ರೀತಿಯಾಗಿದೆ. ಈ ಹಿಂಡಿಯನ್ನು ಹೆಚ್ಚಾಗಿ ತಿನ್ನಿಸಿದರೆ ದನಗಳ ಕಣ್ಣುಗಳು ಬಲಹೀನವಾಗುವುವಲ್ಲದೆ ಕೆಲವು ಸಂದರ್ಭಗಳಲ್ಲಿ ದನಗಳು ಕುರುಡಾಗುವುದೂ ಉಂಟೆಂದು ಕೆಲವು ರೈತರು ಹೇಳುತ್ತಾರೆ. ಆದರೆ ಮಿತವಾಗಿ ಈ ಹಿಂಡಿಯನ್ನು ತಿನ್ನಿಸಿದರೆ ಗುಣವೇ ಹೊರ್ತು ಅವಗುಣವೇನೂ ಇಲ್ಲವೆಂದು ತಿಳಿಯ ಬರುತ್ತದೆ.

* * *

ಲಿಂಕೋನ್ ಎಂಬ ಪಟ್ಟಣದಲ್ಲಿ ೧೦೨೩ ಮಂದಿಗೆ ಒಬ್ಬ ಪೋಲೀಸಿನವನಂತೆ ಇರುವನು. ಆದರೆ ಇತರ ಪಟ್ಟಣಗಳಲ್ಲಿ ಸರಾಸರಿ ೭೦೨ ಮಂದಿಗೆ ಒಬ್ಬ ಪೋಲೀಸಿನವನಂತೆ ಇದ್ದಾನೆ.

* * *

ಇಂಗ್ಲಾಂಡಿನಲ್ಲಿ ಬೆಕ್ಕುಗಳಿಗಾಗಿ ಕಟ್ಟಿಸಲ್ಪಟ್ಟಿರುವ ೪೫ ವಿಹಾರ ಮಂದಿರಗಳು ಇವೆ. ಒಕ್ಟೋಬರ ತಿಂಗಳ ೧ನೇ ತಾರೀಕು "ಬೆಕ್ಕುಗಳ ದಿವಸ" ಎಂಬದಾಗಿ ಆಚರಿಸಲ್ಪಡುವುದು.

* * *

ಕಲಿಫೋರ್ನಿಯದಲ್ಲಿ ಒಬ್ಬ ಹೆಂಗಸು ವರ್ಷದ ಆರು ತಿಂಗಳಲ್ಲಿ ೬,೨೦೦ ಪಾತ್ರಗಿತ್ತಿ (Butterfly)ಗಳನು ಸಾಕಿ ವಾರಕ್ಕೆ ೧೩ ಪವನಿನಂತೆ ಸಂಪಾದನೆ ಮಾಡುತ್ತಾಳೆ.

* * *

ಟೆಕ್ಸಾಸ್ ಎಂಬಲ್ಲಿಯ ಫೋರ್ಟು ವರ್ತಿನಲ್ಲಿರುವ ಒಬ್ಬ ಮನುಷ್ಯನು ಕಬ್ಬಿಣದಿಂದ ಮಾಡಿದ ಕೃತಕ ದಂತೆಗಳನ್ನು ಇಟ್ಟುಕೊಂಡಿರುವನು. ಈ ದಂತ ಸಾಲಿನ ಭಾರವೇ ೫ ಔನ್ಸ್ ಇದೆ.

* * *

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಸುಲಭ ಕ್ರಯಗಳು! ಪರೀಕ್ಷಿಸಿರಿ !! ಸಂತೋಷ ಪಡುವಿರಿ !!!

ವ್ಯಾಪಾರಸ್ಥರುಗಳಿಗೆ ಕೊಡುವ ಕ್ರಯಗಳಿಗೆ ಬಿಕರಿ.

ರಾಸ್ಕೋಪ್ ಸಿಷ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ಇದು ಎಂದೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಹಿಂಭಾಗದಲ್ಲಿ ಗ್ಲಾಸುಡೋಮು ಇದು ನೋಡಲಿಕ್ಕೆ ಬಹು ರಮಣೀಯವಾಗಿದೆ. ಬಹು ಮಜಬೂತಾದ ದೀರ್ಘಕಾಲ ಬಾಳಿಕೆಗೆ ಬರುವ ಮತ್ತು ಕಾಲವನ್ನು ಸರಿಯಾಗಿ ತೋರಿಸುವ ಘಡಿಯಾರವು. ಇದಕ್ಕೆ ೫ ವರುಷಗಳ ಗ್ಯಾರಂಟಿ. ಬೇರೆ ಕಂಪೆನಿಯವರು ಇದಕ್ಕಿಂತ ಕಮ್ಮಿ ಬೆಲೆಯ ಘಡಿಯಾರವನ್ನು ರೂ. 2-8-0 3—8—0 ಬೆಲೆಗೆ ಮಾರುತ್ತಾರೆ. ಕಾರಣ ಮೋಸ ಪಡಬೇಡಿರಿ. ನಮ್ಮಲ್ಲಿ ಕರಿಸಿಕೊಂಡರೆ ತೃಪ್ತಿಯಾಗಿಯೂ ಸಂತೋಷವಾಗಿಯೂ ಇರುವದ

ಕ್ರಯ ರೂ. 2—8—0. ಏ. ಪಿ. ಪಿ. ಚಾರ್ಜು ರೂ. 0—4—0.

ಸ್ವೀಸ್ ಮೇಡ್ ರೈಲ್ವೆ ರೆಗ್ಯುಲೇಟರ್ ಲೀವರ್ ಜ್ಯುವೆಲ್ಡ್ ವಾಚ್.

ಇದು ಎಲ್ಲಾ ದೇಶದಲ್ಲಿಯೂ ಬಹಳ ಪ್ರಸಿದ್ಧವಾದ ಘಡಿಯಾರವು. ಇದು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹಳ ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇದು ಆಯುಪರಿಮಿತಿ ಇರುವದು. ಇದು ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುವದು. ಇದು ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುವವು. ಇದಕ್ಕೆ ಒಳಗಿನ ಗ್ಲಾಸು ಡೋಮ ಸಹಾ ಇರುವದು. ಇದಕ್ಕೆ ೫ ವರುಷಗಳ ಗ್ಯಾರಂಟ್ಟಿ.

ಕ್ರಯ ರೂ. 3—8—0 ಏ. ಪಿ. ಪಿ. ಚಾರ್ಜು ರೂ. 0-4—0.

ಲೇಡಿಸ್ ಸಿಲ್ವರ್ ಜ್ಯುವೆಲ್ಡ್ ವಾಚ್.

ಈ ಘಡಿಯಾರವು ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿರುವವು. ಇದು ಕಾಲವನ್ನು ಸರಿಯಾಗಿ ತೋರಿಸುತ್ತದೆ. ಉಪಯೋಗಕ್ಕೆ ಯೋಗ್ಯವಾದದ್ದು ಇದನು ಕೈಯಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಇಂಥಾ ವಾಚನ್ನು ಇಷ್ಟು ಕಡಿಮೆ ಕ್ರಯಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದಕ್ಕೆ ಗ್ಯಾರಂಟಿ ೫ ವರುಷಗಳು.

ಕ್ರಯ ರೂ. 6—0—0 ಏ. ಪಿ. ಪಿ. ಚಾರ್ಜು ರೂ. 0—6—0.

ಪೋಲಾರ್ ಲೀವರ್ ವಾಚ್.

(ವಾರಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು)

ಇದು ಬಹಳ ಆಶ್ಚರ್ಯಕರವಾದ ಎಂಟು ದಿವಸಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು. ಇದು ಬಹಳ ಗಟ್ಟಿತರವಾದ ಇದು ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಬಂಗಾರದ ಪದಕಗಳನ್ನು ಹೊಂದಿರುತ್ತದೆ. ಇದು ಶುದ್ಧ (ಚೊಕ್ಕ) ಬೆಳ್ಳಿಯಿಂ ಮಾಡಲ್ಪಟ್ಟಿರುತ್ತದೆ. ಇಂಥಾ ರಮಣೀಯವಾದ ಮತ್ತು ಆಶ್ಚರ್ಯಕರವಾದ ಗಡಿಯಾರವನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕಿ ಯಿಸಲ್ಪಟ್ಟಿಲ್ಲವು. ಇದನ್ನು ಪ್ರತಿ ಒಬ್ಬರು ತರಿಸಿಕೊಂಡು ಸಂತೋಷಪಡುವಿರೆಂದು ನಂಬುತ್ತೇವೆ. ಇದಕ್ಕೆ ಗ್ಯಾರಂಟಿ ೧೦ ವರುಷಗಳು.

ಕ್ರಯ ರೂ. 10—0—0. ಏ. ಪಿ, ಪಿ. ಚಾರ್ಜು ರೂ. 0—8—0.

ಟೇಬಲ್ ಟ್ಯಾಂಪೀಸು ಘಡಿಯಾರಗಳು.

ಇವುಗಳು ಬಹಳ ಕಡಿಮೆ ಕ್ರಯದವುಗಳಾಗಿರುವದಲ್ಲದೆ ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಮನೋಹರವಾಗಿಯೂ ಇರುವವು. ಇವುಗಳು ಅನೇಕ ಸಂವತ್ಸರಗಳ ವರಿವಿಗೆ ಬಾಳಿಕೆ ಬರುವವು. ಈ ಘಡಿಯಾರಗಳನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲಿಯೂ ಅವಶ್ಯ ಇಡಬೇಕಾದ್ದು.

ನಂಬರ್ ೧. ತಾರೀಕುಗಳನ್ನು ತೋರಿಸುವ ಮತ್ತು ಅಲಾರಂ ಸಹ ಇರುವ ಕ್ಯಾಲಂಡರ್ ಅಲಾರು ಟ್ಯಾಂಪೀಸು ೧ಕ್ಕೆ ಕ್ರಯ ರೂ. 2-8-0 ಏ. ಪಿ. ಪಿ. ಚಾರ್ಜು 0—6—0. ನಂಬರ್ ೨. ತಾರೀಕುಗಳು ಇಲ್ಲದ ಬರೀ ಅಲಾರಂ ಟ್ಯಾಂಪೀಸು ೧ಕ್ಕೆ ಕ್ರಯ ರೂ. 2-0-0 ಏ.ಪಿ. ಚಾರ್ಜು 0-6-0. ನಂಬರ್ ೩. ತಾರೀಕು ಮತ್ತು ಅಲಾರಂ ಇಲ್ಲದ ಸಾದಾ ಟ್ಯಾಂಪೀಸ ೧ಕ್ಕೆ ಕ್ರಯ ರೂ. 1-4-0 ಏ. ಪಿ. ಪಿ. ಚಾರ್ಜು 0-6-0.

ಕ್ಯಾರೇಜು ಕ್ಲಾಕು ಘಡಿಯಾರಗಳು.

ಇವು ಬಹಳ ರಮ್ಯವಾದವುಗಳು ಮತ್ತು ಮನೋಹರವಾದವುಗಳು. ಅನೇಕ ವರುಷಗಳ ವರಿಗೂ ಬಾಳಿಕೆ ಬರತಕ್ಕವುಗಳು. ಇವು ಉತ್ತಮ ತರದ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿ ಸೈಡು ಗ್ಲಾಸುಗಳು ಸಹ ಇರುವವು. ಇವನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲ್ಲಿಯೂ ಮತ್ತು ಇತರ ಕಾರ್ಯಾಲಯಗಳಲಿಯೂ ಇಡುವದಕ್ಕೆ ಯೋಗ್ಯವಾದವುಗಳು.

ನಂಬರ್ ೧. ಘಂಟೆ, ಅರ್ಧ ಘಂಟೆ ಹೊಡೆಯುವದು, ಮತ್ತು ಅಲಾರಂ ಸಹ ಇರುವದು ೧ಕ್ಕೆ ಕ್ರಯ ರೂ. 5-0-0. ಏ. ಪಿ. ಪಿ. ಚಾರ್ಜು ರೂ.0-10-0 ನಂಬರ್ ೨. ಘಂಟೆ, ಅರ್ಧಘಂಟೆ ಮಾತ್ರ ಹೊಡೆಯುವದು ರೂ. 4-8-0 ಏ.ಪಿ.ಪಿ. ಚಾರ್ಜು 0-8-0. ನಂಬರ್ ೩. ಕಾಲವನ್ನು ಮಾತ್ರ ತೋರಿಸಿ 15 ನಿಮಿಷಗಳ ವರಿಗೂ ವಾದ್ಯವನ್ನು ಬಾರಿಸುವದು. ರೂಪಾಯಿ 5-0-0 ಏ. ಪಿ. ಪಿ. ಚಾರ್ಜು 0—10—0 ನಂಬರ್ ೪. ಘಂಟೆಘಂಟೆಗೆ ವಾದ್ಯವನ್ನು ಬಾರಿಸುವದು. ರೂ. 5-8-0 ಏ. ಪಿ. ಪಿ. ಚಾರ್ಜು ರೂ. 0—10—0

ನಿಕ್ಕಲ್ ಬೆಳ್ಳಿ ಗಡಿಯಾರದ ಸರಪಣಿ.

ಇದು ಎಂದೆಂದಿಗೂ ಕಪ್ಪಾಗದಂಥ ಒಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ನೋಡುವದಕ್ಕೆ ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ೧ಕ್ಕೆ ಕ್ರಯ ರೂ. 0--8--0 ಏ. ಪಿ. ಪಿ. ಚಾರ್ಜು ರೂ. 0--4--0.

ಎಲೆಕ್ಟ್ರಿಕ್ ಭಂಗಾರದ ಘಡಿಯಾರದ ಸರಪಣಿ.

ಇದು ಎಂದಿಗೂ ಭಂಗಾರದಂತೆ ಹೊಳಿಯುವ ಘಡಿಯಾರದ ಸರಪಣಿ. ಬಹಳ ಉತ್ತಮ ರಖಂ ೧ಕ್ಕೆ ಕ್ರಯ ರೂ. 1--0--0 ಏ.ಪಿ.ಪಿ. ಚಾರ್ಜು ರೂ. 0--4--0.

ಶುದ್ಧ ಬೆಳ್ಳಿಯ ಘಡಿಯಾರದ ಸರಪಣಿ.

ಇದು ೧ನೇ ನಂಬರ್ ಚೊಕ್ಕ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಕೆಲಸ ಬಹಳ ನಾಜೂಕಾಗಿಯೂ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ ೧ಕ್ಕೆ ಕ್ರಯ ರೂ. 3—0—0 ಏ. ಪಿ. ಪಿ. ಚಾರ್ಜು ರೂ. 0--4--0. ವಿಳಾಸ:—

ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ,
ನಂಬರ್ ೨೦, ಶಿಂಗಣನ್ ಬೀದಿ, ಸಾರ್ಕುಟೌನ್, ಪೋಸ್ಟು, ಮದ್ರಾಸ್

ಉತ್ತಮವಾದ ಸುಗಂಧ ದ್ರವ್ಯಗಳು.

ವಿಶ್ವಾಂಜನ ಪ್ಲೈನ್ ಬಾಂ ಬಾಟ್ಲಿ ೧ಕ್ಕೆ	೦-೪-೦	ಕಸ್ತೂರಿ ಬತ್ತಿ ಸೇರು ೧ಕ್ಕೆ	೩-೦-೦
ತಾಂಬೂಲ ಮಾತ್ರೆ ಬಾಟ್ಲಿ ೧ಕ್ಕೆ	೦-೩-೦	ಜವಾಜಿ ಬತ್ತಿ ,,	೧-೧೨-೦
ದಶಾಂಗ ಡಬ್ಬಿ ೧ಕ್ಕೆ	೦-೩-೦	ಪುಣುಗು ಬತ್ತಿ ,,	೧-೪-೦
ಮಹಾರೀಜಾ ತಂಬಾಕ್ ಡಬ್ಬಿ ೧ಕ್ಕೆ	೦-೨-೦	ಗುಲಾಬಿ ಬತ್ತಿ ,,	೧-೦-೦
ವಸಂತ ಮಾಲತಿ ಬಾಟ್ಲಿ ೧ಕ್ಕೆ	೦-೨-೦	ಪನ್ನೀರು ಬತ್ತಿ ,,	೦-೮-೦
ವೃಣಹಾರಿಯ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕಸ್ತೂರಿ ಬಿಲ್ಲೆ ತೊಲೆ ೧ಕ್ಕೆ	೨-೦-೦
ಕುಸುಮ ಮಾಲತಿ ಎಣ್ಣೆ ಬಾಟ್ಲಿ ೧ಕ್ಕೆ	೦-೮-೦	ಪುಣುಗಿನ ಬಿಲ್ಲೆ ,,	೧-೦-೦
ದಿಲ್‌ದಾರ ಅತ್ತರ್ ಶೀಶೆ ೧ಕ್ಕೆ	೦-೪-೦	ಕೇಸರಿ ಬಿಲ್ಲೆ ,,	೦-೮-೦
ಹುಳದ ಮುಲಾಮು ಡಬ್ಬಿ ೧ಕ್ಕೆ	೦-೨-೦	ಅರ್ಗಜ ,,	೦-೧೨-೦
ವಾತಸಂಜೀವನೀ ತೈಲ ಬಾಟ್ಲಿ ೧ಕ್ಕೆ	೦-೪-೦	ಫಿತ್ನಾ ,,	೦-೧೨-೦
ದಿಲ್ ಕುಸುಮ ಬತ್ತಿ ಸೇರು ೧ಕ್ಕೆ	೧೦-೦-೦	ನಾಸಿಕಚೂರ್ಣ ಡಜನ್ ೧ಕ್ಕೆ	೦-೧-೦
A ಅಂಬರ್ ಬತ್ತಿ ,,	೬-೦-೦		

ಕೊಂಕಣಿ ಭಾಷೆಯಿಂದ ತಯಾರಿಸಲ್ಪಟ್ಟ ಚಂದ್ರಹಾಸನಾಟಕದ ಪುಸ್ತಕವು ನಮ್ಮಲ್ಲಿ ದೊರಕುತ್ತದೆ. ಕ್ರಯ ೦-೪-೦. ಬೇಕಾದವರು ಈ ವಿಳಾಸಕ್ಕೆ ಬರಕೊಳ್ಳಿರಿ. ಬಿ. ವಿ. ಪಿ. ಭಂಡಾರಕರ,

"ವಿಶ್ವಾಂಜನ ಡಿಪೊ", ಮಂಗಳೂರು.

ದೇಶಬಾಂಧವರೇ! ಇತ್ತ! ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್

ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—45, ಹೆರಿಸನ್ ರೋಡ್, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 50,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ!! ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!!

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಿಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ತರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:—ಟಿ. ಆರ್. ಪೈ ಅಂಡ್ ಬ್ರದರ್ಸ್,

ಸೋಲ್ ಏಜಂಟ್ಸ್, ಆಫೀಸು ಉಡುಪಿ, (ದ. ಕನ್ನಡ.)

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೊಲೆರಾ ಅಥವಾ ಉಷ್ಣಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ ರೂ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ, ಗೊಲ್ಲರಕೇರಿ ಮಂಗಳೂರು

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ ,, ,,	6-0-0	B ಅರಗಜ ,, ,,	1-0-0
ಕಸ್ತೂರಿ ಬತ್ತಿ ,, ,,	3-0-0	ಕಸ್ತೂರಿ ಬಿಲ್ಲೆ ,, ,,	2-0-0
ಜವಾಜಿ ಬತ್ತಿ ,, ,,	2-0-0	ಜವಾಜಿ ಬಿಲ್ಲೆ ,, ,,	1-0-0
ಪುಣಗಿನ ಬತ್ತಿ ,, ,,	1-8-0	ಕೇಸರಿ ಬಿಲ್ಲೆ ,, ,,	0-8-0
A ಪನ್ನೀರ್ ಬತ್ತಿ ,, ,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ ,, ,,	0-6-0	ದಶಾಂಗ ಡಬ್ಬಿ 1ಕ್ಕೆ	0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು.

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಡೈರಿ ಮುಫತ್! ಬೇಗ ಬರೆಯಿರಿ!!

ಡೈರಿ ಬಹುಮಾನ.

ಈ ಡಿಶಂಬರ್ ಆಖ್ಯೆರಿನ ವರಿವಿಗೆ ಮಾತ್ರ ನಾವು ಈ ಕೆಳಗೆ ಕಂಡ I,II,III ನೇ ನಂಬರು ಪುಸ್ತಕಗಳನ್ನು ಒಟ್ಟಾಗಿ 1 ರೂಪಾಯಿನ ಬೆಲೆಗೆ ತರಿಸಿಕೊಳ್ಳುವವರಿಗೆ 1913ನೆ ಇಸವಿಯ ಅತ್ಯುತ್ಕೃಷ್ಟವೂ ಸುಂದರವೂ ಆದ ಒಂದು ಪಾಕೆಟ್ ಡೈರಿಯು ಬಹುಮಾನವಾಗಿ ಕೊಡುವೆವು.

I ಶೋಭನೆ:—"ಶೋಭನಾ" ಎಂಬ ಬಂಗಾಳಿ ನಾವೆಲಿನ ಕನ್ನಡ ಭಾಷಾಂತರ. ಅತ್ಯುತ್ತಮ ನೀತಿಗಳನ್ನೊಳಗೊಂಡಿದೆ. ಬೆಲೆ ೦—೧೨—೦.

II. ಯಾಮಿನಿ:—ನಾವೆಲ್ ಒಂದು ಬಂಗಾಳಿ ಉಪನ್ಯಾಸವನ್ನವಲಂಬಿಸಿ ಬರೆಯಲ್ಪಟ್ಟು ಸಂಸಾರದಲ್ಲಿ ದುಷ್ಟರ ಸಹವಾಸದಿಂದುಂಟಾಗುವ ಕೇಡುಗಳೂ, ದುಶ್ಚರಿತ್ರರಿಗೆ ಸಂಭವಿಸಬಹುದಾದ ಅನರ್ಥ ಪರಂಪರೆಗಳೂ ಮನಕರಗುವಂತೆ ವರ್ಣಿತವಾಗಿವೆ. ಬೆಲೆ ೦—೩—೦.

III. ಶ್ರೀ ಸದಾಶಿವೇಂದ್ರ ಸರಸ್ವತಿ:—ಈ ಮಹನೀಯರ ಜನ್ಮ ಚರಿತ್ರೆಯು ಲಲಿತವಾದ ಭಾಷಾ ಶೈಲಿಯಿಂದ ವರ್ಣಿಸಲ್ಪಟ್ಟು ಶ್ರೀಯವರ ಮಹಿಮೆಯನ್ನು ಪೂರ್ಣವಾಗಿ ವರ್ಣಿಸುತ್ತದೆ. ಬೆಲೆ ೦—೧—೦.

ನವೀನ ಪುಸ್ತಕಗಳೂ ಕಾದಂಬರಿಗಳೂ.		ಮ॥ ಬಿ. ವೆಂಕಟಾಚಾರ್ಯರಿಂದ ರಚಿಸಲ್ಪಟ್ಟ ಹೊಸ ಕಾದಂಬರಿಗಳು.	
ಮುದ್ರಾಮಂಜೂಷ [ಚತುರ್ಥ ಮುದ್ರಣ]	1.9.0	ನೀರದೆ [ಸಿದ್ಧವಾಗಿದೆ]	0.8.0
ಶ್ರೀ ಶುಕಸಪ್ತತೀ ಕಥೆಗಳು	1.8.0	ಪರಿಮಳ [ದ್ವಿತೀಯ ಮುದ್ರಣ]	0.10.0
ಸಟೀಕ ಜೈಮಿನಿ ಮಹಾಭಾರತ	4.8.0	ದುರ್ಗೇಶ ನಂದಿನಿ ,,	1.4.0
ಶ್ಯಾಮಕುಬ್ಜ [ಕಥೆ]	0.8.0	ದೇವೀಚೌದುರಾಣಿ ,,	1.4.0
ಕುಮುದಿನಿ [ಬಂಗಾಳಿ ನಾವೆಲ್]	0.6.0	ಭ್ರಾಂತಿವಿಲಾಸ ,,	0.8.0
ಯಾಮಿನಿ ,,	0.3.0	ಸಾಧನೆ	0.8.0
ಶೋಭನೆ ,,	0.12.0	ಚಿತ್ರವಿಚಿತ್ರಾವಳಿ	0.8.0
ಪ್ರಿಯಂವದೆ [ಕಥೆ]	0.8.0	ಕೃಷ್ಣಕಾಂತನ ಉಯಿಲು	1.0.0
ವೇಷಧಾರಿಣಿಯಾದ ಸನ್ಯಾಸಿನಿ ,,	0.8.0	ಮನೋರಮ [ಪತ್ತೇದಾರಿ ಕಥೆ]	1.0.0
		ವಿಷ ವೃಕ್ಷ ,, ದ್ವಿ॥ ಮು॥	1.4.0
		ಭಾರತ ಮಹಿಳಾ	0.9.0
		ಚಿರತ್ನ ನಾಟಕರತ್ನ	0.8.0

ಇತ್ಯಾದಿ [ಪುಸ್ತಕದ ಪಟ್ಟಿ ಮುಫತ್ತು]

ಕೃಶಾನು ವಿಶ್ವಾವಸು ಸಂವಾದ. ಬೆಲೆ ೦—೧೦—೦

ವಿಶ್ವಗುಣಾದರ್ಶವೆಂಬ ಸಂಸ್ಕೃತ ಗ್ರಂಥದ ಕನ್ನಡ ಭಾಷಾಂತರ—ಅಭಿಪ್ರಾಯವು:—"... ಇದರ ಪರಿವರ್ತನ ಶೈಲಿಯು ಸುಲಭವಾಗಿಯೂ ಸರಳವಾಗಿಯೂ ಗಂಭೀರವಾಗಿಯೂ ಇದೆ ..."—ಮ॥ ಬಿ. ಸೂರ್ಯನಾರಾಯಣರಾವ್,

B. A. M. R. A. S.

ಮುಫತ್:—ಎಸ್. ಟಿ. ಎ. ಕಂಪೆನಿಯವರ ಪರಿಮಳ [Scents] ಗಳನ್ನು ಅವರ ಕೆಟಲಾಗಿನ ಆರ್ಡರ ಖರೀದಿಗೆ ಅಪೇಕ್ಷಿಸುವವರು [Free coupen] ಫ್ರೀ ಕೂಪನ್ ಬಗ್ಗೆ ಅರ್ಧ ಆಣೆ ಟಪ್ಪಾಲ್ ಚೀಟಿಯೊಡನೆ ನಮಗೆ ತಮ್ಮ ಹೆಸರು ವಿಳಾಸದೊಡನೆ ಬರೆಯಿರಿ.

ನಮ್ಮ ವಿಳಾಸ:— ಯಂ. ಸುಬ್ಬರಾವ್,

ಶಂಕರಪುರಂ, ಬೆಂಗಳೂರು ಸಿಟಿ.

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ 6ನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ, ಇದರಲ್ಲಿ ದೃಡವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವದಿವಿಮೆ ದುಬಾರೆ ಎಂಡೌಮೆಂಟ್ ಪೊಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ತೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯ ಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣದಗೋಸ್ಕರ ತಿಂಗಳಿಗೆ ೨ ರೂಪಾಯಿ ೧ ರೂಪ್ಯಾ ೮ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪೆನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟ್ಯಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರೆವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ತಿಲ್ಯಾನೋ

ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.

ಮಂಗಳೂರು, ದಕ್ಷಿಣ ಕನ್ನಡ.

ಧಾತುಪೌಷ್ಟಿಕ ಲೇಹವು.

ಸ್ವದೇಶಿ! (ಗುಣವಾಗದಿದ್ದರೆ ಹಣ ಪರತ!!) ಸ್ವದೇಶಿ!!!

ಎರಡನೇದವರ ಛಪಕೆದಾರ ಜಾಹಿರಾತಿಗೆ ಮರುಳಾಗಿ ಮೋಸಹೋಗ ಬೇಡಿರಿ. ಒಮ್ಮೆ ಈ ಲೇಹವನ್ನು ಸೇವನೆ ಮಾಡುವದರಿಂದ ಜನನೇಂದ್ರಿಯದ ಶಿಥಿಲತೆ, ನಪುಂಸಕತ್ವ, ಹಳೆಜ್ವರ ಅಶಕ್ತತೆ, ಸ್ವಪ್ನಾವಸ್ಥೆ, ಧಾತುಪತನ, ಎದೆನೋವು, ಕಟಿಶೂಲೆ ವಾತರೋಗ, ರಕ್ತ ಉದ್ರೇಕ, ಕಫ, ಕೆಮ್ಮು, ದಮ್ಮು, ಮೇಹಸಂಬಂಧಿ ಧಾತು ಹೋಗೋಣ ಇತ್ಯಾದಿಗಳು ಗುಣವಾಗಿ ಇಂದ್ರಿಯದ ಶಿಥಿಲತೆ, ತೆಳ್ಳಗಾವಿನದ ಧಾತು ನಿರ್ಬಲತೆ, ಸೃಷ್ಟಿನೇಮಕದ ವಿರುದ್ಧ ತ್ವರೆಯಿಂದ ಉಂಟಾದ ನಪುಂಸಕತ್ವ ಇವು ವಾಸಿಯಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ಕಾಮೋತ್ತೇಜಕ, ರಕ್ತಶುದ್ಧಿ ವ ವೃದ್ಧಿ, ದೇಹಕಾಂತಿ, ಗರ್ಮಿ, ಹುಣ್ಣುಗಳು, ತಲೆಶೂಲೆ, ಹೊಟ್ಟೆಶೂಲೆ ಮುಂತಾದವು ಅತಿತ್ವರೆ ಖಾತ್ರಿಯಿಂದ ಗುಣವಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ ರತಿವಿಲಾಸಕ್ಕೆ ಪೂರ್ಣ ಶಕ್ತಿಯೂ, ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆ ವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ೩—೮—೦ ೮೦ ತೊಲೆಗೆ ೬-೦-೦ ಟ. ಖ. ಬೇರೆ. ಅನುಪಾನ ಪತ್ರಿಕೆ ಔಷಧಿ ಸಂಗಡಲೆ ರವಾನಿಸುವೆವು.

ವಿಳಾಸ:—ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡಾ.

ಬೆಲೆ ಸುಲಭ! ತ್ವರೆ ಮಾಡಿರಿ!! ಬಹಳ ವಿಷಯಗಳು!!!

ಸರ್ವ ಜ್ಯೋತಿಷ್ಯರತ್ನ.

ವೆಂಬ ಹೊಸ ಗ್ರಂಥವು.

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವುದಕ್ಕೆ ತಕ್ಕ ಜೋತಿಷ ಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವುವು. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಮರಾಠಿ, ಹಿಂದಿ ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ, ಲಗ್ನಭಾಗ, ಮೂಹೂರ್ತ ಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯೆಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರದಿರುವುದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೦೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವುದು. ಜ್ಯೋತಿಷ್ಕರಿಗೆ ಅಲ್ಲದೆ ಸಾಮಾನ್ಯವಾದವರಿಗೂ ವಿಷದವಾಗಿ ತಿಳಿಯುವಂತಿರುವುದು.

ಈ ಪುಸ್ತಕದ ಬೆಲೆ ರೂ. ೨. ಟಪ್ಪಾಲ್ ಹಾಸಲು ೪ ಆಣೆ.

ನಮ್ಮ ವಿಳಾಸ:—ಶ್ರೀ ಶಿವಲಿಂಗಂ ಶೆಟ್ಟಿ.

ಕರ್ನಾಟಕ ಬುಕ್‌ಡಿಪೋ ಏಜಂಟ್, ಬಳ್ಳಾರಿ.

READY FOR SALE

A MANUAL OF

GENERAL ENGLISH

3rd Edition, Thoroughly Revised

For the use of the 2nd 3rd & 4th Forms

WITH

Nemurous exercises on each Chapter and question papers up to date

by

C. CHENNAKESAVAIYA B. A.

Price 1-0-0 **Postage 0-3-0**

Postage free for 3 Copies.

Apply Sharp to:—

H. N. Row & Brothers,

Publishers, Chickpet, Bangalore City.

OR

THE WOOLLEN MART,

Mangalore,

ಸನ್ 1913ನೇ ಇಸವಿಯ



"ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು."

ಈ ವರೆಗೆ ತಾವು ಉಪಯೋಗಿಸಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವ ಹಸನಾದ ೪೦ ಪೌಂಡು ಗ್ಲೇಜು ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿರುತ್ತದೆ:—

ದೇಹ ಸೌಖ್ಯ ವಿಚಾರದಲ್ಲಿ ಪ್ರತಿ ಒಬ್ಬರೂ ತಿಳಿಯಬೇಕಾದ ಸಾಧಕ ಬಾಧಕಗಳು, ಪಂಚಾಂಗ, ಕ್ಯಾಲೆಂಡರ್, ರಾಹುಕಾಲ, ಗುಳಿಕಕಾಲ, ಸಂವತ್ಸರ ಫಲ, ಗ್ರಹಣ ಶಕುನಭಾಗ ಪ್ರಯಾಣ ವಿಷಯ ಜಾತಕಕರ್ಮ ಮೊದಲು ಷೋಡಷ ಕರ್ಮಕ್ಕೆ ಬೇಕಾದ ಲಗ್ನಾದಿಗಳು. ಶ್ರೀ ಕೃಷ್ಣ ಚಕ್ರ ಇವೇ ಮುಂತಾದ ಸಂಗತಿಗಳು ಸುಲಭವಾಗಿ ತಿಳಿಯುವಂತೆ ಬರೆದಿರುತ್ತೆ.

ಕೋರ್ಟು ಪೇಜು ಆಕ್ಟು, ಪೋಸ್ಟಾಫೀಸಿನ ಸಂಗತಿ ಸ್ಟ್ಯಾಂಪಾಕ್ಟು, ಇವುಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗುವ ಮತ್ತಾವ ಡೈರಿಯಲ್ಲಿ ಹೇಳದಿರುವ ಹೊಸ ವಿಷಯಗಳನ್ನು ಸೇರಿಸಿಧೆ. ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆಗಳ ಚಾರ್ಜು, ರೈಲ್ ಹೊರಡುವ ಕಾಲ ಲಗ್ಗೇಜ್, ಅಳತೆ ತೂಕ ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರುಗಳ ತಲಬು, ಸರಕಾರಿ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲಿಷು ಇಸವಿಗಳು, ಹಣದ ಬಡ್ಡಿ ತಲಬು ಜಂತ್ರಿ ಪಟ್ಟಿ ಕೂಡಾ ಇವೆ ದೋಬೀ ಲೆಖ್ಖಾ, ಹಾಲು ಕೊಡುವವನ ಲೆಖ್ಖಾ, ಮುಖ್ಯ ವಿಷಯ ಜ್ಞಾಪಕ ವಿಚಾರ ಜಮಾ ಖರ್ಚು ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ.

"ಬೇಕಾದವರು ಈಗಲೇ ಬರೆದು ತರಿಸಿಕೊಳ್ಳಿರಿ".

No. 1. ಸಣ್ಣ ಸೈಜು ಸಾದಾ ಡೈರಿ 1ಕ್ಕೆ	0-4-0
No. 2. ಸಣ್ಣ ಸೈಜು ಪೆನ್‌ಸಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ 1ಕ್ಕೆ	0-6-0
No. 3. ದೊಡ್ಡ ಸೈಜು ಸಾದಾ ಡೈರಿ 1ಕ್ಕೆ	0-6-0
No. 4. ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳಹಾಕಿರುವ ಪ್ಲಾಪ್ ಡೈರಿ 1ಕ್ಕೆ	0-8-0

ಟಪ್ಪಾಲು ಖರ್ಚು ಬೇರೆ.

ಒಂದು ಸೈಜಿನ ಹತ್ತು ಡೈರಿಗಳನ್ನು ಒಟ್ಟಾಗಿ ತರಿಸಿದರೆ ಒಂದು ಇನಾಮು. ೨೫ ಡೈರಿಗಳಿಗಿಂತ ಹೆಚ್ಚಾಗಿ ತರಿಸತಕ್ಕವರಿಗೆ ರೂಪಾಯಿ ಒಂದಕ್ಕೆ 0-2-6ಯಂತೆ ಕಮಿಶನ್ ಕೊಡಲಾಗುತ್ತದೆ. ತಮ್ಮ ವಿಳಾಸವು ಬಾಲ ಅಕ್ಷರದಲ್ಲಿರಲಿ.

ದೊರೆಯುವ ವಿಳಾಸ:—

"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತವೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3-4-0. ಅರ್ಧ ಬಾಟ್ಲಿಗೆ 1-12-0.

ದಿ. ಊಲನ್ ವಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ವೈದ್ಯಸಾರಸಂಗ್ರಹ (ಮೂಲಿಕಾ ಔಷಧಿ) … … … …	೩—೦—೦
ಶುಕಸಪ್ತತಿ ವೇದಾಂತ ಪೂರ್ವದ ಪ್ರತಿ … … … …	೨—೦—೦
ರಘುವಂಶ ೧ನೇ ಪರ್ವ… … … … … … …	೧—೦—೦
ಡಿಟ್ಟೊ (೨ನೇ ಪ.) ಅರ್ಥ ತಾತ್ಪರ್ಯ ಆಕಾಕ್ಷೆ ಇತ್ಯಾದಿ …	೧—೦—೦
ವಿವೇಕ ಚೂಡಾಮಣಿ … … … … … …	೨—೪—೦
ಶಾಮಕುಬ್ಜ ಕಥೆ … … … … … … …	೦—೮—೦
ಚಮತ್ಕಾರ ಚಿಂತಾಮಣಿ … … … … … …	೦-೧೦—೦
ಮಹಿಮ್ನ ಸ್ತೋತ್ರ (ಟೀ. ತಾ.) … … … … …	೦—೩—೦
ಮುಕುಂದಮಾಲಾ ಸ್ತೋತ್ರ (ಟೀ. ತಾ.) … … … …	೦—೪—೦
ಶಿವಗೀತಾ (ಟೀ. ತಾ. ಸಹಿತ) … … … … …	೦—೮—೦
ಶಿವಾನಂದಲಹರಿ (ಟೀ. ತಾ.) … … .. … …	೦—೬—೦
ವಿದ್ಯಾನಂದ ಮಾಸಪತ್ರಿಕೆ ಚಂದಾ … … … … …	೨—೪—೦

ಮಾದ್ರಿ ಪತ್ರಿಕೆ, ಪುಸ್ತಕ ಪಟ್ಟಿ ಉಚಿತ. ಇನ್ನೂ ಅನೇಕ ಪುಸ್ತಕಗಳು ದೊರೆಯುವವು.

ವಿಳಾಸ:—
ವಿದ್ಯಾನಂದ ಆಫೀಸು.
ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು! **ಬೇಗ ಬರೆಯಿರಿ!!**

ಮಧುರವಾಣೀ ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಸಾಹಸಿಕೆ … … …	0-2-6	ಮಹನೀಯರ ಚರಿತ್ರೆ …	0-10-0
ಗೃಹಿಣಿಯಾದ ಗಂಗೆ …	0-3-0	ಸಾಧನೆ … … …	0-8-0
ನಾನಕನ ಚರಿತ್ರೆ … …	0-4-0	ಮನೋರಮ … …	1-0-0
ವಿವೇಕಮಂಜರಿ 1ನೇ ಭಾಗ	0-2-0	ಭಕ್ತವಿಜಯ … …	3-4-0
ಡಿ. 2ನೇ ಭಾಗ	0-3-0	ಪಾರ್ವತಿ ಪರಿಣಯ ನಾಟಕಂ	0-8-0
ಸೌದಾಮನಿ … …	0-6-0	ಗೋಪಿಕಾ ಗೀತೆ… …	0-1-0
ವಿಶ್ವನಾಥ … … …	0-1-0	ಭಜಗೋವಿಂದಂ … …	0-1-0
ದೇವಿ ಚೌದ್‌ರಾಣಿ… …	1-4-0	ಹಾಲಾಸ್ಯ ಮಹಾತ್ಮೆ …	1-4-0
ಸಚಿತ್ರಕಲಾತರಂಗ… …	1-0-0	ವಿಷವೃಕ್ಷ… … …	1-4-0

ಇನ್ನೂ ಅನೇಕ ಪುಸ್ತಕಗಳು ಶಿಕ್ಕುವವು. ಕ್ಯಾಟಲಾಗಿಗೆ ಬೆಲೆ ಇಲ್ಲ. ಅಪೇಕ್ಷಕರು ಆತುರಿಸಿರಿ.

ವಿಳಾಸ:— ಹನುಮಾನ್ ಮತ್ತು ಕಂಪೆನಿ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೀವಜಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕುಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ.

1913ನೇ ಇಸವಿಯ ಪೋಕೆಟ್ ಡ್ಯಾರಿಗಳು.

ಮಾರಾಟಕ್ಕೆ ಸಿದ್ಧವಾಗಿವೆ.

ನೋಟು ಬೂಕು ಸ್ಯಾಜು (ದೊಡ್ಡ ಸ್ಯಾಜು) (ಒಂದಾಣೆ ಪೆನ್ಸಿಲು ಸಹಿತ)	ರೂ.	0—8—0
ಸಣ್ಣ ಸ್ಯಾಜು …. … …. …	,,	0—4—0

ವಕೀಲರಿಗೂ ವಕೀಲರ ಗುಮಾಸ್ತರಿಗೂ ಬೇಕಾದ ಎಲಾ ವಿಷಯಗಳನ್ನು ಒಳಕೊಂಡಿರುವುದಲ್ಲದೆ ಇತರರಿಗೂ ಬಹಳ ಉಪಯೋಗಕರವಾದ್ದಾಗಿರುತ್ತದೆ.

ಹೆಚ್ಚು ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ, ವ್ಯಾಪಾರಸ್ತರಿಗೂ ಧಾರಾಳ ಕಮಿಶನ್ ಕೊಡಲಾಗುವದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಮ್ಯಾನೇಜರ,
ಶಾರದಾ ಛಾಫಖಾನೆ, ಮಂಗಳೂರು ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡುಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿ ಸಿಕ್ಕುವುವು.

CHEAP JACK

FANCY UMBRELLA MART.

ಚಿತ್ರವಿಚಿತ್ರವಾದ ಕೊಡೆಗಳು.

ಕಂ ॥ ಧರೆಯೊಳ್ ಮೆರೆ ಮಹಾಶಯ । ರಿರ್ಃ ನಾವಿನಿಸುಂದಿನಂ ಕೊಡೆಯ ವಿಕ್ರ
ಯಮಂ ॥ ಇರಿಸಿರ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿಯೆ
ವದರರಮಂ ॥ ೧ ॥ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ
ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾವಾತಿಂ । ಗೆಡೆಯಾಗಿಯೆ
ನೆರಲನೀವ ಕೊಡೆಯಿಲ್ಲಿರ್ಕುಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

Printed & Published by V. S. Kamath at the Mangalore Trading Association's Sharada Press Mangalore,

---

Registered M· No· 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 51

ಮಂಗಳೂರು ತಾ. 20ನೇ ಶುಕ್ರವಾರ
ದಶಂಬರ 1912.

Amrutanjan Depot, Head Office: Bombay.

ಅಮೃತಾಂಜನ! ಅಮೃತಾಂಜನ!

Trade Mark Registered.

ಇದರಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಎದೆನೋವು, ಸೊಂಟದ ನೋವು ಮುಂತಾದ ಅನೇಕ ತರದ ನೋವುಗಳು ಖಾತ್ರಿಯಿಂದ ನಿಲ್ಲುವವು.

ಹಲವು ಜನರು ನಮ್ಮ ಗಿರಾಕಿಗಳಿಗೆ ಅಮೃತಾಂಜನ ಎಂಬದಾಗಿ ತಕಾರಿ ಬಾಮ್‌ಗಳನ್ನು ಕೊಟ್ಟು ಠಕಾಯಿಸುವದರಿಂದ ಅಮೃತಾಂಜನವನ್ನು ನಮ್ಮ ರಿಜಿಸ್ಟರ್ಡ್‌ವುಳ್ಳ ಬಾಟ್ಲಿಗಳಲ್ಲಿ ತುಂಬಿಸಿ ಅಮೃತಾಂಜನದ ಬಾಟ್ಲಿಗಳನ್ನು ಸುಂದರವಾದ ಮತ್ತು ಹಲವು ಭಾಷೆಗಳಿಂದ ಕೂಡಿರುವ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಿರುತ್ತೇವೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ. ಎಲ್ಲಾ ಔಷಧಾಲಯುಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ಸಿಕ್ಕುವದು.

ಹತ್ತು ಲಕ್ಷ ದೊಡ್ಡ ಸೈಜು ಪೋಸ್ಟ್ ಕಾರ್ಡುಗಳು.

ಈ ಕಾರ್ಡುಗಳು ಬೆಳ್ಳಗಾಗಿಯೂ, ಬರೆಯುವದಕ್ಕೆ ನಯವಾಗಿಯೂ ಇವೆ. ವ್ಯಾಪಾರಸರೂ, ಉಪಾಧ್ಯಾಯರೂ, ಹುಡುಗರೂ ಕೊಂಡುಕೊಳ್ಳುವ ಬಗ್ಗೆ ಅರ್ಧ ಕ್ರಯಕ್ಕಿಂತಲೂ ಕಮ್ಮಿಯಿಂದ ರವಾನಿಸುತ್ತೇವೆ. (500 ಕಾರ್ಡಿಗಿಂತ ಕಮ್ಮಿ ರವಾನಿಸಲಾರೆವು.) ಮುಂಚಿನ ಕ್ರಯ 1,000ಕ್ಕೆ 2 ರೂಪಾಯಿ 8 ಆಣೆ, ಈಗಿನ ಕ್ರಯ 1,000ಕ್ಕೆ 15 ಆಣೆ, 500ಕ್ಕೆ 8 ಆಣೆ. ವಿ. ಪಿ. ಖರ್ಚು 1,000ಕ್ಕೆ 13 ಆಣೆ, 500ಕ್ಕೆ 7 ಆಣೆ.

1913ನೇ ವರ್ಷದ ಅಮೃತಾಂಜನದ ಕ್ಯಾಲಂಡರ್.

AMRUTANJAN BO
AMRUTANJ
Best Indian Pain Balm
Amrutanjan D
BOMBAY.

ನಾಲ್ಕು ರೂಪಾಯಿಯ ಔಷಧ ತರಿಸಿಕೊಂಡವರಿಗೆ ಪುಕಸಾಟಿಯಾಗಿ ರವಾನಿಸಲ್ಪಡುವದು. ಇತರರಿಗೆ 1ಕ್ಕೆ ವಿ. ಪಿ. ಸಮೇತ 4 ಆಣೆ. 10ಕ್ಕೆ ವಿ. ಪಿ. ಸಮೇತ 1-8-0. ಇದು ಸುಂದರವಾಗಿ, ನೋಡುವದಕ್ಕೂ ರಜೆಯ ದಿವಸಗಳನ್ನು ತಿಳಕೊಳ್ಳುವದಕ್ಕೂ ಉಪಯುಕ್ತವಾಗಿರುತ್ತದೆ.

ದಂತಮಂಜನ! ದಂತಮಂಜನ! ದಂತಮಂಜನ ಡಬ್ಬಿ ಒಂದಕ್ಕೆ 2 ಆಣೆ.
ಗಜಕರ್ಣದ ಮುಲಾಮು! ತತ್‌ಕ್ಷಣ ಗುಣ! ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ 6 ಆಣೆ.

ಅಮೃತಾಂಜನ ಸಿಕ್ಕುವ ಸ್ಥಳ.
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್ ಮಂಗಳೂರು.
ಪೆರ್ಲ್ ಎಂಡ್ ಸನ್ಸ್. ,,
ಇಬ್ರಾಹಿಮ್ ಎಲಾಯಿಸ್. ,,
ಎಮ್. ಪ್ಯಾಸ್. ,,

ವಿಳಾಸ:—
ಅಮೃತಾಂಜನ ಡಿಪೋ,
109 ಫ್ರೆಮರ್ ರೋಡ್,
ಫೋರ್ಟು, ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮, ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಡೋಂಗರೆ ಇವರ ಬಾಲಾಮೃತ

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದ ಅಶಕ್ತತೆಯಿಂದುಂಟಾದ ರೋಗಗಳು ಸಂಪೂರ್ಣವಾಗಿ ಇಲ್ಲದಂತಾಗುತ್ತವೆ. ನಮ್ಮ ಬಾಲಾಮೃತವನ್ನೇ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದ್ದಲ್ಲಿ ಬಾಟ್ಲಿಯ ಮೇಲಿನ ನಮ್ಮ ಲೇಬಲಿನ ಪೂರಾ ಖಾತ್ರಿ ಮಾಡಿಕೊಂಡು ತೆಗೆದುಕೊಳ್ಳಿರಿ.

ಬಾಟ್ಲಿ ಒಂದರ ಕಿಮ್ಮತು 0—12—0. ವ್ಹಿ. ಪಿ. ಖರ್ಚು 0-4-0.

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರೆ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

પ્રો. જેમ્સની વિજળીક શક્તિની ગોળીઓ.
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका.

"ಅಮೇರಿಕದ ವಿಶಿಷ್ಟತೆ."

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್"ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ. ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೆಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣತೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಆಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗಿವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ದೊರತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ನಾಡಿಚಲನೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನುಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮಿ.ಜೇ.ಸಿ. ಬ್ರಿಟೋ(ಪೊಂಡಾ-ಗೋವೆ)ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯುಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮಿ. ಜೆ. ಆರ್. ಗಾಯಿಕವಾಡ, (ಸಕ್ರಿಯ ಮಾಮುಲತದಾರರು—ವಿ.ಪಿ. ದ್ವಾರಾ ಆದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳಉತ್ತಮವಿದೆ. ಒಮ್ಮೆಗೆಯೇ ಇಡೀ ಶೀಶೆ ತರಿಸುವರೇ ಈ ಔಷಧಿಯ ಗುಣ ದೋಶದ ನಂಬಿಕೆ ಇಲ್ಲದಾದ್ದಲ್ಲಿ ನಾಲ್ಕಾಣೆಯ ಸ್ಟಾಂಪು ರವಾನಿಸಿದ್ದಲ್ಲಿ 2 ದಿನಕ್ಕಾಗುವ ಔಷಧಿಯ ಶೀಶೆ 1ನ್ನು ಮುಫತ್ತಾಗಿ ಕಳುಹಿಸುವೆವು.

The Anglo Indian Drug & Chemical Company,
155, Market, Jumma Musid BOMBAY

ಏಜಂಟರು:—ದಿ. ಊಲನ್‌ಮಾರ್ಟ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೊಕುಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಕಚ್ಚಿಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0-12-0 ಮೂರು ಬಾಟ್ಲಿಗಳಿಗೆ 1-0-0 12 ಬಾಟ್ಲಿಗಳಿಗೆ 7-0-0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. [illegible] ಅನೇಕ ಜನರು [illegible] ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1-0-0 4 ಬಾಟ್ಲಿಗಳಿಗೆ 3-0-0 12 ಬಾಟ್ಲಿಗಳಿಗೆ 8-0-0

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ.೩|| ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ. ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು- ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ತಾಗಿಸುವದರೊಳಗೆ ಗುಣವಾಗುವದು	ರೂ. 0-4-0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ 1-4-0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ.	„ 0-4-0
ರೋಯಲ್ ಇಂಡಿಯನ್ ಬಾಂ:=ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	„ 0-8-0

ವಿಲಾಸ:—

ಗಣೇಶ ರಾಮಚಂದ್ರ ಕರ್ಕಿ, ಕಂಪೆನಿ,
ಗಿರಗಾಂ ಮುಂಬಯಿ.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಸಿಸು ಸಿಕ್ಕಿರುತ್ತವೆ.

ಸಾರ್ಸಾಪರಿಲಾ.

ಪೂರ್ವದ ಸ್ಥಿತಿ.

ನಂತರದ ಸ್ಥಿತಿ.

ಜಗಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ, ಬಹಳ ದಿನಗಳ ಹಳೇ ಪ್ರಮೇಹ ಇಡೀಮೈಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ[illegible] ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶಿರಿಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತ್ತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಳಾಸ:— ಪ್ರೊಪ್ರ್ಯಾಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೋಸಿಟ್ ಟಾಕೂರ್ ದ್ವಾರ್ ಪೋಸ್ಟ್ ಆಫೀಸು, ಮುಂಬಾಯಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



KAMINIA
Regd OIL Regd
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co.
BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶಗಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ. ಮತ್ತು, ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ಗಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2-10-0 ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲ್ಯದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲ್ಯವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30-5-11 ಮೆ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ „ಕಾಮಿನಿಯಾ ಓೈಯಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28-7-11. ಮೆ. ವಿ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ „ಕಾಮಿನಿಯಾ ಓೈಯಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓೈಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1-7-11. ಮೆ. ಸಿ. ಆರ್. ನಾಯುಡು ಪ. ವ. ಡಿ. ಟಾಸಿಬ, (ಬರ್ಮಾ)—ನನ್ನ ಮಿತ್ರರು „ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಇತರ ಕಡೆಯಿಂದ ಎಣ್ಣೆಯನ್ನು ಕೊಂಡುಕೊಳ್ಳುವವರು „ಕಾಮಿನಿಯಾ" ಎಂಬ ಗುರ್ತವನ್ನು ಚೆನ್ನಾಗಿ ಕಂಡುಹಿಡಿಯದೆ ಮೋಸಹೋದಲ್ಲಿ ನಾವು ಜವಾಬ್ದಾರರಲ್ಲ.

Address—**Anglo Indian Drug & Chemical Co.,**
155 Jumma Musid, Market, Bombay.
ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 20ನೇ ದಶಂಬರ 1912.

ಸಮಾಜ ಸೇವೆ.

ಅವಿಭಕ್ತ ಕುಟುಂಬದ ದಿನಗಳು ಮುಗಿದವು. ಜೀವನಾರ್ಥ ಕಲಹವು ದಿನೇ ದಿನೇ ಕಠಿಣವಾಗುವದರಿಂದಾಗಲಿ, ಸ್ವಾರ್ಥ ಬಲದಿಂದಾಗಲಿ, ನವಸುಧಾರಣೆಯ ಪ್ರಾಬಲ್ಯದಿಂದಾಗಲಿ, ಅಥವಾ ಯಜಮಾನನ ಅಧಿಕಾರವನ್ನು ಶಿರಸಾವಹಿಸಿಕೊಳ್ಳುವ ದೈನ್ಯಭಾವದ ಅಭಾವದ ದೆಶೆಯಿಂದಲಾಗಲಿ, ಅಣ್ಣ ತಮ್ಮಂದಿಯರು ಹೆಂಡರು ಮಕ್ಕಳ ಸಮೇತ ತಂದೆಯ ಮನೆಯಲ್ಲಿ ಒಟ್ಟಿಗೆ ಇರುವದು ಅಸಾಧ್ಯವಾಗಿದೆ. ಈಗಿನ ಕುಟುಂಬ ಪದ್ಧತಿಯಿಂದ ಪ್ರತಿಯೊಬ್ಬನು ಸ್ವಾವಲಂಬನ ಸ್ವಾತಂತ್ರ್ಯವನ್ನು ಕಲಿತು ತನ್ನ ಉದರ ನಿರ್ವಾಹವನ್ನು ತಾನೇ ಮಾಡುವಂತಾಗುವದು. ಇವುಗಳೊಂದಿಗೆ ಯುವಕರು ಅಪಸ್ವಾರ್ಥವನ್ನೂ ತಿರಸ್ಕಾರ ಶೀಲವನ್ನೂ ಕಲಿಯದೆ ಆಪತ್ಕಾಲಕ್ಕೆ ಬಾಂಧವರಿಗೆ ಕೈಕೊಡುವದು ಇನ್ನೂ ತಮ್ಮ ಧರ್ಮವಾಗಿದೆ ಎಂಬದನ್ನು ಮರೆಯದೆ ಇದ್ದರೆ ಈ ಮಾರ್ಪಾಟದಿಂದ ಕೆಡಕು ಉಂಟಾಗದೆಂದು ಕೋರಬಹುದು.

ಇಂಗ್ಲಿಷ್ ಶಿಕ್ಷಣದ ಬಲದಿಂದಲೂ ರೈಲ್ವೆ ಸ್ಟೀಮರುಗಳ ಮೂಲಕ ಜನರು ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೂ ಪರದೇಶಕ್ಕೂ ಪ್ರಯಾಣ ಮಾಡುವದು ಸುಲಭಸಾಧ್ಯವಾದ್ದರಿಂದಲೂ ಜಾತಿ ಬಂಧವು ಸಡಿಲಾಗುತ್ತಾ ಬಂದದೆ. ಇಬ್ಬರು ಗೃಹಸ್ಥರೊಳಗೆ ಅನ್ಯೋನ್ಯ ಸ್ನೇಹ ಬೆಳದರೆ ಅವರ ಜಾತಿಭೇದದಿಂದ ಈಗ ಸಂಪರ್ಕಕ್ಕೆ ತೊಡಕಾಗುವುದಿಲ್ಲ. ಅಥವಾ ಜಾತಿ ವೈಷಮ್ಯವು ಶಿಥಿಲವಾದ್ದರಿಂದ ಅನ್ಯೋನ್ಯ ಸ್ನೇಹವು ಸಾಧ್ಯವಾಗಿದೆ. ಆದರೆ ಜಾತಿಭೇದವು ಪೂರಾ ಅಳಿದುಹೋಗುವ ದಿನವೂ ಜನಾಂಗ ಭಾವವು ಪ್ರಾಮುಖ್ಯ ಆಶಯವಾಗುವ ದಿನವೂ ಬಹು ದೂರವಿದೆ. ಇದಲ್ಲದೆ ದುರ್ದೈವದಿಂದ ಕೆಲವು ಸಂದರ್ಭಗಳಲ್ಲಿ ಜಾತಿ ವೈಷಮ್ಯವು ಇನ್ನೂ ಬಲವಾಗಿದೆ ಅಥವಾ ಬಲಹೊಂದುತ್ತದೆ ಎಂದು ಕಂಡು ಬರುವದು. ನ್ಯಾಯವಿಧಾಯಕ ಸಭೆಯ ಚುನಾವಣೆ ಸಮಯದಲ್ಲಿ, ಮುನಿಸಿಪಲ್ ಚುನಾವಣೆ ಸಮಯದಲ್ಲಿ ಅಥವಾ ಸರಕಾರಿ ಉದ್ಯೋಗದ ಹೋರಾಟಗಳಲ್ಲಿ ಹಿಂದು ಮಹಮ್ಮದೀಯರು, ಮೇಲು ಕೀಳು ಜಾತಿಗಳು, ಸ್ವಜಾತಿ ಪರಜಾತಿಗಳು ಎಂಬ ಭಾವವು ಮೇಲಕ್ಕೆ ಎದ್ದು ಶೋಚನೀಯ ಪರಿಣಾಮಕ್ಕೆ ಕಾರಣವಾಗುವದು. ಹ್ಯಾಗೂ ಜಾತಿಯೆಂಬ ಸಂಸ್ಥೆಯು ಇನ್ನೂ ಸಜೀವವಿರುವದರಿಂದ ಅದರ ಮೂಲಕ ಸಮಾಜ ಸೇವೆಯನ್ನು ಸಾಧಿಸಬಹುದು.

ಬಾಹ್ಯಾವರಣಕ್ಕೆ ತಕ್ಕಂತೆ ವರ್ತಿಸುವದು ಬಾಳುವಿಕೆಗೆ ಅವಶ್ಯಕ. ಐಸ್‌ಲೇಂಡ ಮೊದಲಾದ ನೀರು ಗಡ್ಡೆ ಕಟ್ಟುವ ಪ್ರದೇಶಗಳಲ್ಲಿ ಜನರು ಉಡುವ ವಸ್ತ್ರ, ತಿನ್ನುವ ಆಹಾರ, ಕುಡಿಯುವ ದ್ರವಗಳೂ ಆಫ್ರಿಕದಂತಹ ಉಷ್ಣ ಪ್ರದೇಶಗಳಲ್ಲಿಯ ಜನರ ಅಶನ ವಸನ ಪಾನಗಳಿಂದ ಬೇರೆಯಾಗಬೇಕು. ಹಾಗೆಯೇ ಸಾಮಾಜಿಕ ವಿಷಯಗಳಲ್ಲಿಯೂ ಬಾಹ್ಯ ವಿದ್ಯಮಾನಗಳಿಗೆ ತಕ್ಕಂತೆ ಸಮಾಜದಲ್ಲಿ ಬದಲಾವಣೆಗಳನ್ನು ತರಬೇಕು. ಇಂತಹ ಸಮಯಾನುಸಾರ ಬದಲಾವಣೆಗಳಿಂದಲೇ ಆರ್ಯ ಕುಲವು ವೇದಗಳ ಕಾಲದಿಂದ ಇಂದಿನ ವರೆಗೂ ರಕ್ಷಿಸಲ್ಪಟ್ಟಿತು ಎಂದು ಚರಿತ್ರೆಯಿಂದ ಸ್ಪಷ್ಟವಾಗುತ್ತದೆ. ಪ್ರಕೃತ ಕಾಲಚಿನ್ಹೆಗಳಿಗನುಸಾರವಾಗಿ ಸ್ವಜಾತಿಯಲ್ಲಿ ಮಾರ್ಪಾಟಗಳನ್ನು ಆಯಾ ಜಾತಿಯ ಮುಂದಾಳು ಮಾಡದಿದ್ದರೆ ತಮ್ಮ ಪೂರ್ವಜರ ನೇಮಕ್ಕೆ ಭಂಗವಾಗುವದು. ಆರ್ಯರು ಅನಾದಿಯಿಂದ ಗಳಿಸಿದ ಯಶಸ್ಸು ಉಳಿಯಬೇಕಾದರೆ ಆರ್ಯರಲ್ಲಿ ಉತ್ತಮರೆನಿಸಿದ ಬ್ರಾಹ್ಮಣ ಕುಲವು ಬಾಳಬೇಕಾದರೆ ಅವರಲ್ಲಿ ದೃಢಕಾಯರಾದ ಜ್ಞಾನ ಸಂಪನ್ನರಾದ ಯುವಕರು ಹೆಚ್ಚೆಚ್ಚಾಗಿ ಹುಟ್ಟಬೇಕು. ಈಗಿನ ದಿನಗಳು ದೇಹ ಬುದ್ಧಿ ಬಲಗಳುಳ್ಳವರದು. ಬಾಲವಿವಾಹದಿಂದ ತದ್ವಿಪರೀತ ಪರಿಣಾಮವಾಗುವದು. ಕೈಮೀರಿ ಖರ್ಚು ಮುಟ್ಟಿಸಿ ಯೋಗ್ಯ ವರನಿಗೆ ಕೊಡುವಷ್ಟು ಅವಧಿ ದೊರಕದೆ ವಧುವಿನ ತಂದೆಗೆ ನಷ್ಟ ಕಷ್ಟ ಚಿಂತೆ. ವರನು ದುಡಿಯುವ ಮೊದಲೆ ಸಂಸಾರ ಭಾರ ಬಂದದರಿಂದ ಕುಗ್ಗುವನು. ವಧುವಿಗೆ ಮದುವೆ ಏನೆಂದು ತಿಳಿಯುವ ಮುಂಚೆ ಚಿಕ್ಕ ಪ್ರಾಯದಲ್ಲಿ ತಾಯಿಯ ಮನೆಯನ್ನು ಬಿಟ್ಟು ಅತ್ತೆಯ ಮನೆಗೆ ಹೋಗಬೇಕಾಗಿ ಬರುವದರಿಂದ ಅವಳ ಬೆಳವಣಿಗೆಯು ತೀರುವದು. ಅವಳ ಕೋಮಲ ಹೃದಯವು ಅನೇಕ ಚಿಂತೆಗಳಿಂದ ಜೀರ್ಣವಾಗುವದು. ವರನು ಇನ್ನೂ ಹುಡುಗನಾಗಿರುವಾಗ ವಧುವಿನ ಬಾಲ್ಯವು ಪೂರ್ಣ ಕಳೆಯುವ ಮುಂಚೆ ಇವರು ತಂದೆತಾಯಿಗಳೆನಿಸುವರು. ಇಂಥವರಲ್ಲಿ ಹುಟ್ಟುವ ಮಕ್ಕಳು ಎಷ್ಟು ದೃಢದೇಹಿಗಳಾಗುವರು, ಜೀವನ ಕಲಹದಲ್ಲಿ ಹ್ಯಾಗೆ ಜಯಶಾಲಿಗಳಾಗುವರು ಎಂಬದನ್ನು ಊಹಿಸಬಹುದು. ಈ ಗಲಾಟೆಯಲ್ಲಿ ಬಾಲಿಕಾ ಶಿಕ್ಷಣದ ಮಾತು ಬೇಡ. ವಿದ್ಯಾ ಶಾಸ್ತ್ರಗಳ ತೌರುಮನೆಯಾದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದಕ್ಕಾಗಿ ಬ್ರಾಹ್ಮಣ ಬಾಲೆಗೆ ವಿದ್ಯೆ ದೊರಕದು. ದ್ವಿಜೇತರರ ಹುಡುಗಿಯರು ಉಚ್ಚ ಶಿಕ್ಷಣವನ್ನಾದರೂ ಹೊಂದುವದು ಸುಲಭ. ಈಗ ಅಲ್ಲಲ್ಲಿ ನೆರೆಯುವ ಪರಿಷದಗಳು ಈ ಪ್ರೌಢ ವಿವಾಹದ ವಿಷಯವನ್ನು ಕೈಕೊಳ್ಳುವದು ಅತ್ಯಗತ್ಯ ಕರ್ತವ್ಯವಾಗಿದೆ. ಇಂತಹ ವಿಷಯಗಳಲ್ಲಿ ಆಯಾ ಜಾತಿಯ ಗುರುಗಳು ಸಹಕಾರಿಗಳಾದರೆ ಕಾರ್ಯವು ಸುಲಭದಲ್ಲಿ ಸಿದ್ಧಿಸುವದು. ಯಾಕಂದರೆ ಪೂರ್ವದಿಂದ ಹಿಂದೂ ಸಮಾಜದ ಕಟ್ಟಳೆಗಳು ಶಾಸ್ತ್ರೀಯ ಅಸ್ತಿವಾರದಲ್ಲಿ ಕಟ್ಟಲ್ಪಟ್ಟವು. ಪ್ರೌಢ ವಿವಾಹ ಪದ್ಧತಿಯಿಂದ ಕನ್ಯಾವಿತಂತುಗಳು ಬಹುಶ್ಯ ಅದೃಶ್ಯವಾಗುವರು. ಸಂಸಾರದಲ್ಲಿ ಕುರುಡರು, ಮೂಕರು ಯಾ ಮಹಾರೋಗ ಪೀಡಿತರಾದ ಹುಡುಗಿಯರಿರುವರು ಅಥವಾ ವಿವಾಹವೇ ಬೇಡವೆಂಬ ಮನಸ್ಸಿನವರಿರುವರು. ಆದ್ದರಿಂದ ವಿವಾಹಕ್ಕೆ ಅಯೋಗ್ಯರಾದ ಅಥವಾ ವಿವಾಹವನ್ನೊಲ್ಲದ ಹುಡಿಗಿಯರಿಗೆ ಮದುವೆಯನ್ನು ಕಡ್ಡಾಯವಾದ ಸಂಸ್ಕಾರವೆಂದಿಡಬಾರದು.

ಬಾಲ್ಯದಲ್ಲಿ ಗಂಡನನ್ನು ಕಳಕೊಂಡು ಸಹಾಯಹೀನರಾಗಿ ಕಷ್ಟಪಡುವ ಗತಿಯಿಲ್ಲದ ವಿಧವೆಗಳಿರುವರು. ಮಕ್ಕಳು ಹುಟ್ಟುವ ಮುಂಚೆ ವೈಧವ್ಯ ಪ್ರಾಪ್ತವಾಗಿ ಪ್ರೀತಿಸಲಿಕ್ಕೆ ತಂದೆತಾಯಿಗಳಾಗಲಿ ಅಕ್ಕತಂಗಿಯರಾಗಲಿ ಇಲ್ಲದ ವಿಧವೆಯರಿರುವರು. ಸ್ತ್ರೀ ಸಮಾಜ ಸೇವೆಗೆ ಇವರು ಯೋಗ್ಯ ಜನವಾಗಿರುವರು. ಇಂಥವರನ್ನು ತಕ್ಕ ರೀತಿಯಲ್ಲಿ ತರಬೇತು ಮಾಡಲಿಕ್ಕೆ ಒಂದು ಗೃಹವನ್ನು ಸ್ಥಾಪಿಸುವ ವಿಷಯವು ಪರಿಷದಗಳ ಇನ್ನೊಂದು ಉದ್ದೇಶವಾಗಿರತಕ್ಕದ್ದು. ಯೋಗ್ಯರಾದ ಆದರೆ ಅನುಕೂಲವಿಲ್ಲದ ಹುಡುಗರಿಗೆ ಉಚ್ಚ ಶಿಕ್ಷಣ ಔದ್ಯೋಗಿಕ ಶಿಕ್ಷಣ, ಇತ್ಯಾದಿಗಳನ್ನು ಒದಗಿಸಿಕೊಡುವ ಭಾರವನ್ನು ಪರಿಷದಗಳು ವಹಿಸತಕ್ಕದ್ದು.

ದೇವಾಲಯಗಳ ವಿಷಯವಾದರೊ ಈಗ ಇಂಗ್ಲಿಷು ಕಲಿತವರು ದೇವಾಲಯಗಳ ಕಡೆ ಕಣ್ಣೆತ್ತಿನೋಡುವದಿಲ್ಲವೆಂಬ ಮಾತು ಎಲ್ಲರು ಕೇಳಿರಬಹುದು. ಆದರೆ ಈಗಲೀಗ ಯುವಕರಲ್ಲಿ ಸನಾತನಧರ್ಮದಲ್ಲಿ ಹೊಸ ವಿಶ್ವಾಸವು ಹುಟ್ಟುತ್ತಲಿದೆ. ಪುರಾತನ ಶಾಸ್ತ್ರ ಪರಿಶೋಧೆಯಲ್ಲಿ ಕುತೂಹಲವುಂಟಾಗಿದೆ. ಮತ್ತು ಮನುಷ್ಯನ ಹೃದಯದಲ್ಲಿ ಪರಮಾತ್ಮನ ಸಮಾಗಮ ತೃಷ್ಣೆಯೂ ಪರಲೋಕದಲ್ಲಿ ವಿಶ್ವಾಸವೂ ಎಷ್ಟರ ವರೆಗೆ ಇರುವದೋ ಅಷ್ಟರ ವರೆಗೆ ದೇವಾಲಯಗಳ ಅವಶ್ಯಕತೆ ಇರುವದು. ಆದರೆ ದೇವಾಲಯಗಳು ಸಹ ದೇವರ ಮನೆಗಳಾಗುವಂತೆ ಅಧಿಕಾರಿಗಳು ಪ್ರಯತ್ನಿಸತಕ್ಕದ್ದು. ವೇದಶಾಸ್ತ್ರಧ್ಯಯನಗಳ ಆಲಯವು ದೇವಾಲಯದಲ್ಲಿರತಕ್ಕದ್ದು. ಈಗ ಬರೇ ಸಂಸ್ಕೃತ ಪಾಂಡಿತ್ಯಕ್ಕೆ ಗಿರಾಕಿ ಇಲ್ಲದ್ದರಿಂದ ವಿಚಕ್ಷಣ ಯುವಕರು ಇಂಗ್ಲಿಷ ವಿದ್ಯೆಯನ್ನೇ ಖಾಯಸುಮಾಡುವರು. ಹೀಗಾಗಿ ಬಹುಮಟ್ಟಿಗೆ ಶಾಸ್ತ್ರ ಪುರಾಣಗಳು ಪುರಾತನ ವಿಷಯಗಳಾಗಿವೆ. ದ್ರವ್ಯಾನುಕೂಲವಿರುವ ಪ್ರತಿಯೊಂದು ದೇವಾಲಯದಲ್ಲಿ ಯೋಗ್ಯ ಪಂಡಿತರನ್ನು ನೇಮಿಸಿ ಒಂದು ಪಾಠಶಾಲೆಯನ್ನು ಸ್ಥಾಪಿಸುವದರಿಂದ ಬ್ರಾಹ್ಮಣಿಕೆಯು ಉಳಿಯುವದು. ದೇವಾಲಯಗಳಿಗೆ ಗೌರವ ಬರುವರೆ ಫಲಾನಾ ಪಾಂಡಿತ್ಯ ಇಲ್ಲದ ವೈದಿಕನು ದೇವಾಲಯದಲ್ಲಿ ಅರ್ಚಕನಾಗಬಾರದು. ಫಲಾನಾ ಯೋಗ್ಯತೆ ಇಲ್ಲದವನು ಪೌರೋಹಿತ್ಯ ನಡಿಸಕೂಡದೆಂದು ಕಟ್ಟು ಇಡಬೇಕು. ಇದಲ್ಲದೆ ಶಾಸ್ತ್ರಾಧ್ಯಯನಕ್ಕೆ ಉತ್ತೇಜನ ದೊರಕುವಂತೆ ಯೋಗ್ಯರೀತಿ ಪಾಂಡಿತ್ಯ ಹೊಂದಿದವರಿಗೆ ತಕ್ಕ ಬಹುಮಾನವನ್ನೂ ವೇತನವನ್ನೂ ಕೊಡತಕ್ಕದ್ದು. ಬಹುಕಾಲದಿಂದ ರಕ್ಷಿಸಿಬಂದ ಬ್ರಾಹ್ಮಣಿಕೆಯನ್ನು ಈ ಮೂಲಕ ಉಳಿಸಬಹುದೆಂದು ಕೋರುತ್ತೇವೆ.

ಮುಖ್ಯವಾಗಿ ಸಮಾಜಸೇವೆಯ ಮಾರ್ಗಗಳು ಆಯಾ ಕಾಲವನ್ನು ಅನುಸರಿಸಿ ಇರುವವಾದರೂ ಸೇವಾಭಾವವು ಯಾವ ಕಾಲದಲ್ಲಿಯೂ ಒಂದೇಯಾಗಿದೆ. ಅದು ಅಹಂಕಾರ ವಿರಹಿತ ಶುದ್ಧ ಪರಾರ್ಥ ಭಾವವಾಗಿದೆ. ಸಮಾಜವು ಸಾಗುವದು ಇಂತಹ ಭಾವ ಪ್ರೇರಿತರಾದ ಜನರಿಂದಲೇ. ಪರೋಪಕಾರವನ್ನು ಅತಿ ಶ್ರೇಷ್ಠವೆಂದು ಪೂರ್ವಜರು ನಿರ್ಣಯಿಸಲಿಕ್ಕೆ ಇದೇ ಕಾರಣವಾಗಿದೆ. "ಪರೋಪಕಾರಾಯ ಪುಣ್ಯಾಯ ಪಾಪಾಯ ಪರ ಪೀಡನಂ". "ಪರೋಪಕಾರಾರ್ಥಮಿದಂ ಶರೀರಂ". ದಿಗಂತ ವಿಶ್ರಾಂತ ಆಂಗ್ಲ ಸಾಮ್ರಾಜ್ಯದ ಸಾರ್ವಭೌಮನ ನಿರ್ದೇಶವಾಕ್ಯ (motto) ವು "ನಾನು ಸೇವೆಗೈಯ್ಯುತ್ತೇನೆ" ಎಂಬದೇ.

ಭಾರತೀಯ ಮಕ್ಕಳಲ್ಲಿರುವ ವಿಚಾರ ಶೀಲತೆಯು.

ಭಾರತೀಯ ಮಕ್ಕಳಲ್ಲಿ "ವಿಚಾರಶೀಲತೆಯು ಇದೆಯೋ ಇಲ್ಲವೋ ಎಂಬ ಪ್ರಶ್ನೆ ಮಾಡಿದಲ್ಲಿ ಪ್ರಕೃತ ವಿಚಾರಶೀಲತೆಯು 'ಇದೆ' ಎಂಬ ಉತ್ತರವು ದೊರಕುವುದು. ಆದರೆ ನಿಜವಾಗಿ ನೋಡಿದಲ್ಲಿ ಅವರಲ್ಲಿ ವಿಚಾರಶೀಲತೆಯು ಇಲ್ಲ; ಒಂದು ತರದ ಕುತೂಹಲವು ಮಾತ್ರ ಇದೆ ಎಂದು ಹೇಳಬಹುದು. ಹಳ್ಳಿಯ ಒಂದು ಮಗುವನ್ನು ಪಟ್ಟಣಕ್ಕೆ ತಂದರೆ 'ಅದೇನು? ಇದೇನು?' ಎಂಬ ನಿಷ್ಪ್ರಯೋಜನವಾದ ಪ್ರಶ್ನೆಗಳನ್ನು ಮಾಡುವುದೇ ಅಲ್ಲದೆ ಆ ವಸ್ತುವು ಹಾಗೆ ಹೀಗೆ ಇರಲು ಕಾರಣವೇನು? ಅದು ಹ್ಯಾಗೆ ಮಾಡಲ್ಪಟ್ಟಿತು? ಅದರ ರಚನಾಕ್ರಮ ಮೊದಲಾದವುಗಳ ವಿಷಯ ಪ್ರಶ್ನೆಯನ್ನೇ ಮಾಡದು. ಇಂತಹ ಮಕ್ಕ

ಳನ್ನು ಒಬ್ಬರು ಪೇಟೆಯಲ್ಲಿ ನೋಡಿದರೆ 'ಯುನಿಫೋರ್ಮು ಡ್ರೆಸ್' ಧರಿಸದ ಗುಪ್ತಪೋಲೀಸಿನವನು ಮಾಡುವ ಅನುಮಾನದಿಂದ ತುಂಬಿದ ಕುತೂಹಲದ ಪ್ರಶ್ನೆಗಳ ನೆನಪಾಗಬಹುದು. ಪೇಟೆಯ ಮಕ್ಕಳಲ್ಲಿಂತೂ ವಿಚಾರ ಶೀಲವು ಬಹು ಕಮ್ಮಿ. ಹಳ್ಳಿ ಮಕ್ಕಳಲ್ಲಿರುವ ಕುತೂಹಲವು ಕೂಡಾ ದಿನೇ ದಿನೇ ಇವರಲ್ಲಿ ರಸಾತಳಕ್ಕಿಳಿಯುತ್ತಿದೆ. ಅವರು ದಿನೇ ದಿನೇ ಹೊಸ ಹೊಸ ವಸ್ತುಗಳನ್ನು ಪೇಟೆಯಲ್ಲಿ ನೋಡುವರು. ಆದರೆ ಹಳ್ಳಿಯ ಮಕ್ಕಳಷ್ಟು ಕೂಡಾ ಕುತೂಹಲದಿಂದ ನೋಡುವ ಶೀಲವು ಇವರಲ್ಲಿ ಇಲ್ಲ. ದೇಶದ ಏಳಿಗೆಗೆ ಕಾರಣಭೂತರಾದ ಮಕ್ಕಳಲ್ಲಿ ಇಂತಹ ವಿಚಾರಶೀಲತೆಯು ಇಲ್ಲದಿರುವುದರಿಂದ ಸಮಾಜಗಳಿಂದಲೇ ವಿಚಾರಶೀಲತೆಯು ಕಳೆದು ಹೋಗಿ ಕುತೂಹಲವು ಮಾತ್ರ ಅಳಿದುಳಿದದೆ! ಸಮಾಜದ ಉಚ್ಚತರಗತಿಯವರಲ್ಲಿ ಸಹಾ ಅವರು ಯೂರೋಪಿಯ ಮರ್ಜಿಯನ್ನು ಅನುಸರಿಸದವರಾಗಿದ್ದರೆ, ಒಬ್ಬ ಗುರುತುಪರಿಚಿತಿ ಇಲ್ಲದ ಮನುಷ್ಯನನ್ನು ಕಂಡಾಕ್ಷಣ ಕುತೂಹಲದಿಂದ ನಿನ್ನ ಕೆಲಸವೇನು? ಸಂಬಳವೇನು? ಎಂಬ ಪ್ರಶ್ನೆಯನ್ನು ಮಾಡುವರು. ನಮ್ಮ ಭಾರತೇಯರ ಮೊದಲನೇ ಪ್ರಶ್ನೆಯು "ನಿನ್ನ ತಲಬು ಏನು?" ಎಂಬದಾಗಿರುತ್ತದೆ ಎಂಬದು ನಮ್ಮ ಅನುಭವಸಿದ್ಧಾಂತವಾಗಿದೆ. ಇದು ವಿಚಾರ ಶೀಲವಲ್ಲ; ಬರೇ ಕುತೂಹಲವಷ್ಟೇ. ಯೂರೋಪಿಯಾನರ ಬಾಯಿಂದ ಇಂತಹ ಪ್ರಶ್ನೆಯು ಹೊರಡದು. ಒಬ್ಬರನ್ನು ನೋಡಿದೊಡನೆ 'ಸಂಬಳವೇನು' ಎಂದು ಕೇಳುವವರು ಅವರಲ್ಲಿ ತುಚ್ಛರೆಂದೆಣಿಸಲ್ಪಡುವರು.

ಒಂದು ವಸ್ತುವನ್ನು ನೋಡಿದಾಕ್ಷಣ ಅದು ಹ್ಯಾಗೆ ಮಾಡಲ್ಪಟ್ಟಿತು ಎಂಬಿತ್ಯಾದಿ ಸಂಗತಿಗಳನ್ನು ಪರಿಶೋಧಿಸಿ ತಿಳಕೊಳ್ಳುವದೇ ವಿಚಾರ ಶೀಲತೆಯು. ಇಂತಹ ವಿಚಾರ ಶೀಲತೆಯು ನಮ್ಮ ಭಾರತೇಯ ಮಕ್ಕಳಲ್ಲಿ ಇಲ್ಲವೆಂತಲ್ಲ. ಪರಂತು ಇಂತಹ ಶೀಲವು ಬಾಲ್ಯದಲ್ಲಿಯೇ ಮುದುರಿಹೋಗಿರುವುದು. ನಮ್ಮ ಪಟ್ಟಣಕ್ಕೆ ರೈಲು ಬಂಡಿ ಬಂದು ೫-೬ ವರ್ಷಗಳು ಕಳೆದವು. ದಿವಸಕ್ಕೆ ಹಲವು ಸಾರಿ ಗಾಡಿಗಳು ಅತ್ತಿತ್ತ ಚಲಿಸುತ್ತಿವೆ. ಈ ಗಾಡಿಯನ್ನು ನೋಡಿದ ಸಾವಿರಾರು ಬಾಲಕರೂ, ಯುವಕರೂ, ಮುದುಕರೂ ಇರಬಹುದು. ಅದನ್ನು ಕುತೂಹಲದಿಂದ ಕಣ್ಣುಬಾಯಿಬಿಟ್ಟು ನೋಡಿ "ಅಹಾ! ರೈಲು ಬಂಡಿ ಓಡುತ್ತದೆ, ನೋಡಿ ನೋಡಿ ಬಂತು; ಕಲಿಯುಗದಲ್ಲಿ ಏನೆಲ್ಲಾ ಮಾಡುತ್ತಾರಾಪ್ಪಾ" ಎಂದು ಹೇಳುವ ಜನರು ಹೆಚ್ಚಿನವರಲ್ಲದೆ ಅದು ಚಲಿಸಲು ಕಾರಣವೇನು ಎಂಬ ಪ್ರಶ್ನೆಯನ್ನು ಮಾಡಿಕೊಂಡು ಇದಕ್ಕೆ ತಕ್ಕ ಉತ್ತರವನ್ನು ಸಂಪಾದಿಸಿಕೊಂಡವರು ಬರೇ ವಿರಳವೆನ್ನಬೇಕು. 'ಸಾಯನ್ಸ್' ಕಲಿತ ಶಾಲಾ ಮಕ್ಕಳನ್ನು ಪ್ರಶ್ನಿಸಿದಲ್ಲೂ ಸೇಕಡಾ ೯೯ ಮಂದಿ ಇದರ ನಿಜವಾದ ಉತ್ತರವನ್ನು ಕೊಡುವರೋ ಏನೆಂಬದನ್ನು ಶಾಲಾ ಮೇಲಾಧಿಕಾರಿಗಳೇ ಬಲ್ಲರು.

ಪರಂತು, ಯೂರೋಪಿಯ ಮಕ್ಕಳ ಸ್ವಭಾವವನ್ನು ನೋಡುವುದಾದರೆ ಅವರಲ್ಲಿ ವಿಚಾರ ಶೀಲತೆಯು ತುಂಬಿ ತುಳುಕುತ್ತಿದೆ. ಅವರು ಯಾವಾಗಲೂ ಒಂದು ವಸ್ತುವನ್ನು ನೋಡಿದಾಕ್ಷಣ ಸುಮ್ಮನೆ ಇರರು. ಹಡಗಕ್ಕೆ ಹತ್ತಿದಾಕ್ಷಣ ಅವರ ಮಕ್ಕಳು ಯಂತ್ರಗಳು ಇರುವ ಕೋಣೆಗೆ ಹೋಗಿ ಯಂತ್ರಗಳನ್ನು ಪರೀಕ್ಷಿಸುವರು. ಒಂದು ಗಡಿಯಾರವನ್ನು ನೋಡಿದಾಕ್ಷಣ ಅದರ ಚಕ್ರ ನಡಿಯಲು ಕಾರಣವೇನು, ಮುಳ್ಳು ತಿರುಗಲು ಕಾರಣವೇನೆಂಬಿತ್ಯಾದಿ ವಿಷಯಗಳನ್ನು ತಮ್ಮ ತಂದೆ ತಾಯಿಯವರ ಹತ್ತರ ವಿಚಾರಿಸಿ ತಿಳಕೊಳ್ಳದೆ ಸುಮ್ಮನಿರರು. ನಮ್ಮ ದೇಶಗಳಲ್ಲಿ ಸಹಾ ಈ ನವನಾಗರಿಕತನದ ಕಾಲದಲ್ಲಿ ಯೂರೋಪಿಯಾನರಿಂದ ರಚಿಸಲ್ಪಟ್ಟ ಗಡಿಯಾರಗಳು ಮನೆಗೊಂದು ಎಂಬಂತೆ ಇದೆ. ಆದರೆ ಗಡಿಯಾರವನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೋಧಿಸಿ ಅದರ ರಚನೆ, ಚಲನೆ ಇತ್ಯಾದಿಗಳ ಕ್ರಮವನ್ನು ತಿಳಕೊಂಡ ಮಕ್ಕಳೂ, ಯುವಕರೂ, ಪ್ರಾಯವಯಸ್ಕರೂ ಎಷ್ಟು ಮಂದಿ ಸಿಕ್ಕ್ಯಾರೆಂಬದನ್ನು ಹೇಳಲು ಅಸಾಧ್ಯ. ಯೂರೋಪಿಯಾನರ ಮಕ್ಕಳಲ್ಲಿ ಬಾಲ್ಯದಲ್ಲಿಯೇ ವಿಚಾರಶೀಲತೆಯು ಇರುವುದರಿಂದ ಅವರು ದೊಡ್ಡವರಾಗುತ್ತಾ ವಿವಿಧವಾದ, ನಮ್ಮ ದೇಶದವರಿಂದ ಗ್ರಹಿಸಲಸಕ್ಯವಾದ, ಹೊಸ ಹೊಸ ಯಂತ್ರಗಳನ್ನು ನಿರ್ಮಿಸಿ ನಮ್ಮನ್ನು ರೋಮಾಂಚನ ಪಡಿಸುತ್ತಿರುವರು. ಇಂತಹ ವಿಚಾರಶೀಲತೆಯು ನಮ್ಮ ದೇಶೀಯರಲ್ಲಿ ಇಲ್ಲದಿರುವುದರಿಂದ ದೇಶವು ಅಧೋಗತಿಯನ್ನು ಹೊಂದಲು ಕಾರಣವಾಯಿತೆಂದು ಹೇಳಬೇಕು. ನಮ್ಮ ಪೂರ್ವಜರಲ್ಲಿ ಈ ವಿಚಾರಶೀಲತೆಯು ಇತ್ತು. ಆದರೆ ಈಗಲೀಗ ಅದು ಅಧಃಪತನವನ್ನು ಹೊಂದಿತು. ಕಳಕೊಂಡ ಈ ವಿಚಾರಶೀಲತೆಯು ಪುನಃ ಅಭಿವೃದ್ಧಿಗೆ ತರುವ ಭಾರವು ಮಕ್ಕಳ ಹೆತ್ತವರ ಮೇಲೆ ಹೊಂದಿಕೊಂಡಿದೆ. ಪರಂತು ಈ ಕೆಲಸವನ್ನು ಪೂರೈಸಲು ಜೀವನದ ಪೇಚಾಟದಲ್ಲಿ ಹೆತ್ತವರಿಗೆ ಅಸಾಧ್ಯವಾದುದರಿಂದ ಈ ಭಾರವು ಶಾಲಾ ಉಪಾಧ್ಯಾಯರಿಗೆ ಸೇರಿರುತ್ತದೆ. ಶಾಲಾ ಉಪಾಧ್ಯಾಯರು ಶಾಲೆಗಳಲ್ಲಿ ಈಗ ರೂಢಿಗೆ ಬಂದಿರುವ ಕಿಂಡರ್‌ಗಾರ್ಟನ್ ಕ್ರಮವನ್ನು ತಕ್ಕ ರೀತಿ ಅನುಸರಿಸುವುದಾದರೆ ಮಕ್ಕಳಲ್ಲಿ ವಿಚಾರಶೀಲತೆಯು ಬಲವಾಗಿ ಬೇರೂರಿ ದೇಶದ ಮುಂದಿನ ಏಳಿಗೆಯು ಸುಲಭಸಾಧ್ಯವಾಗುವದು. ಶಾಲೆಗಳಲ್ಲಿ ಕಲಿಯುವ ಮಕ್ಕಳಲ್ಲಿ ಅಂಟಿಕೊಂಡಿರುವ ಬರೇ 'ಸರ್ಟಿಫಿಕೇಟು' ಎಂಬ ಬೀಜದ ಸೋಂಕು ಹೋಗುವಂತೆ ಪೇಚಾಡುವುದು ಉಪಾಧ್ಯಾಯರ ಕರ್ತವ್ಯವು. ಇಂತಹ ಉದ್ದೇಶವನ್ನು ನೆರವೇರಿಸಬೇಕಾದರೆ ಕಿಂಡರ್‌ಗಾರ್ಟನ್ ಪಾಠ ಕ್ರಮಕ್ಕಿಂತ ಸುಲಭ ಉಪಾಯವು ಬೇರೊಂದಿಲ್ಲ. ಆದುದರಿಂದ ಉಪಾಧ್ಯಾಯರು ದೇಶದ ಏಳಿಗೆಯನ್ನು ಬಯಸಿ 'ಬಿಟ್ಟೀ ಸೇವೆ' ಮಾಡದೆ, ಪರಿಶ್ರಮದಿಂದ ದೇಶದ ಸೇವೆಯನ್ನು ಕೈಕೊಂಡು ತಮ್ಮ ಉದ್ಯೋಗದಲ್ಲಿ ಮುಂದರಿಯುವುದಾದರೆ ಮಕ್ಕಳಲ್ಲಿ ವಿಚಾರಶೀಲತೆಯು ಹೆಚ್ಚುವುದು. ಇದರಿಂದ ನಮ್ಮ ದೇಶದವರ ಬಾಯಿ ಮೊಸರಾಗುವುದು. ಉಪಾಧ್ಯಾಯರು ಇಹದಲ್ಲಿ ತಕ್ಕ ಪ್ರತಿಫಲವನ್ನು ಹೊಂದದಿದ್ದರೂ ಅವರ ಕೀರ್ತಿಯು ಅನವರತ ಬೆಳಗುವುದು. ಕ್ಷಣದಲ್ಲಿ ಗುಡ್ಡವನ್ನು ಕಡ್ಡಿಯನ್ನಾಗಿಯೂ ಕಡ್ಡಿಯನ್ನು ಗುಡ್ಡವನ್ನಾಗಿಯೂ ಮಾಡುವಂತಹ ಸರ್ವಶಕ್ತನಾದ ಪರಮಾತ್ಮನು ಇವರ ಅತ್ಯುತ್ಕೃಷ್ಟವಾದ ಕೆಲಸಕ್ಕೆ ಇಹಪರದಲ್ಲಿ ತಕ್ಕ ಪ್ರತಿಫಲವನ್ನು ಕೊಡದೆ ಇರಲಾರನು.

S. A.

* * *

ಮುಖಶುದ್ಧಿಯೂ ಧೂಮಪಾನವೂ.

ಆಹಾರವನ್ನುಂಡನಂತರ ಬಾಯಿಯಲ್ಲಿ ಭುಕ್ತದ್ರವ್ಯದ ಒಂದಿಷ್ಟು ರುಚಿಯೂ ಗಂಧವೂ ಅನೇಕ ಹೊತ್ತಿನವರಿಗಿದ್ದು, ಚನ್ನಾದ ಮುಕಪ್ರಕ್ಷಾಲನೆಯಿಂದ ಕೂಡ ಹೋಗದಿರುವುದು. ಖಾದ್ಯ ಪದಾರ್ಥಗಳು ಸರಿಯಾಗಿ ಪಾಕವಾಗದಿದ್ದಲ್ಲಿ ಅಥವಾ ಯಕೃತಿನ ಕ್ರಿಯೆಯು ಅಪೂರ್ಣವಾದ್ದಲ್ಲಿ ಬಾಯಿಯು ನಾರುವುದು. ಆದುದರಿಂದ ತಾಂಬೂಲ, ಗಂಧಸರಕು, ತಂಬಾಕು ಮುಂತಾದುವುಗಳ ಸೇವನೆಯಿಂದ ಈ ದುರ್ಗಂಧವನ್ನು ಹೋಗಲಾಡಿಸುವುದುಂಟು.

ತಾಂಬೂಲ ಸೇವನೆಯಿಂದ ಉಗುಳು ಹೆಚ್ಚಿ, ಮನಸ್ಸಿನ ತೇಜವೇರುತ್ತ, ಜೀರ್ಣವಾಗಲು ಕಷ್ಟಹೊಂದುವ ಆಹಾರಕ್ಕೆ ಸಹಾಯವಾಗುವುದು. ಆಮ್ಲಾಧಿಕ್ಯದಿಂದುಂಟಾಗುವ ಅಜೀರ್ಣರೋಗಶಮನಕ್ಕೆ ತಾಂಬೂಲ ಸೇವನೆಯು ಉಪಕಾರಿ. ತಾಂಬೂಲದಲ್ಲಿ ವಾಯುನಿಸ್ಸಾರಕ, ಪಚನನಿವಾರಕ, ಗುಣವಿರುವುದರಿಂದ ಭುಕ್ತದ್ರವ್ಯಗಳು ಅಕಾಲಪಚನೆಹೊಂದದಂತೆ ತಡೆಯಾಗಿ ಹೊಟ್ಟೆಯುಬ್ಬುವಿಕೆ ಮೊದಲಾದ ಅಜೀರ್ಣಘಟಿತ ಉಪದ್ರಗಳು ಉಪಶಮೆ ಹೊಂದುವುವು. ಅಧಿಕವಾಗಿ ಅಡಕೆಯನ್ನುಪಯೋಗಿಸಿದ್ದಲ್ಲಿ ಕ್ಷುಧಾಮಾಂದ್ಯವೂ ವಾಂತಿಯೂ ಉಂಟಾಗುವ ಸಂಭವ.

ತಾಂಬೂಲದ ವಿಪರೀತವ್ಯವಹಾರವು ಅನಿಷ್ಟಕರ. ಮುಖವು ಅಪರಿಷ್ಕಾರವಾಗಿ, ಕೆಂಪುಜೊಲ್ಲು ತೊಡಿಗೆಗಳ ಮೇಲೆ ಸುರಿದು, ಗೃಹಸ್ಥರೆದುರಿಗೆ ಅಸಭ್ಯತೆ ಪ್ರಕಾಶವಾಗುವ ಪ್ರಮಾದವಾಗುವುದು; ಕ್ಷುಧಾಮಾಂದ್ಯವೂ ಪರಿಪಾಕ ಶಕ್ತಿಹೀನತೆಯೂ ಉಂಟಾಗುವುವು. ಸುಣ್ಣದ ಕೊರೆಯುವಿಕೆಯಿಂದ ವಸಡುಗಳು ಸವೆದು ಹಲ್ಲುಗಳು ಅಲುಗಲು ಕಾರಣವಿದೆ.

ತಂಬಾಕನ್ನು ವಿವಿಧ ರೂಪದಿಂದ ಎಲ್ಲೆಲ್ಲಿಯೂ ಸೇವಿಸುತ್ತಿರುವರು. ಪ್ರಥಮದಲ್ಲಿ ಈ ಪದಾರ್ಥ ಸೇವನೆಗೆ ಬಹಿಷ್ಕಾರವಿದ್ದರೂ, ವಹಾಬಿಮುಸಲ್ಮಾನರೂ ಸಿಕ್ಖರೂ ಹೊರತಾಗಿ ಎಲ್ಲಾ ಸಮಾಜವನ್ನು ತುಂಬಾಕು ವಶೀಕರಿಸಿಕೊಂಡಿದೆ.

ತಂಬಾಕಿನಲ್ಲಿ 'ನಿಕೋಟಿನ್' ಎಂಬ ಅತಿತೀಕ್ಷ್ಣವಾದ ವಿಷ ಪದಾರ್ಥವೊಂದಿದೆ. ಇದರೊಂದು ಬಿಂದುವೂ ಹೊಟ್ಟೆಸೇರಿದರೆ ದುರ್ಭಾಗ್ಯಕ್ಕೆ ಕಾರಣವಾಗುವುದು. ಹೊಗೆಸೊಪ್ಪನ್ನು ಜಗಿಯುವವರು ಉಗುಳನ್ನು ಉಗುಳಿ ಈ ವಿಷಯವನ್ನು ಪರಿಹರಿಸುವರಾದರೂ, ಕೆಲವು ಸಾರಿ ಇದರ ನಂಜು ತಲೆಗೇರಿದಾಗ ಉಂಟಾಗುವ ಪ್ರಬಲ ಅವಸ್ತೆಯನ್ನು ಒಮ್ಮೆ ಇವರು ಅನುಭವಿಸುವುದಾದರೆ ಮತ್ತೆ ಅದನ್ನು ಮರೆಯರು. ಧೂಮಪಾನದಿಂದ ಈ ವಿಷಯು ದಗ್ಧವಾಗುವುದು.

ತಂಬಾಕನ್ನು 'ಹುಕಾ' 'ಗುಡುಗುಡಿ'ಗಳ ರೂಪದಿಂದ ಸೇವಿಸುವುದು ಸಾಧಾರಣತಃ ಕ್ಷೇಮಕರವಾದರೂ, ಮಾದಕದ್ರವ್ಯಗಳ ವರ್ಜನವು ಅತಿ ಹಿತಕರವಾದುದರಿಂದ, ಬಾಲಕರೂ ಯುವಕರೂ ಇದನ್ನು ತ್ಯಜಿಸುವುದು ವಾಂಛನೀಯ. ಚುರುಟು, ಸಿಗಾರೇಟು, ಬೀಡಿಗಳಿಂದ ಕಂಠಪ್ರದಾಹ, ಅಜೀರ್ಣ, ಹೃದಯ ದುರ್ಬಲತೆ, ಕ್ಷಯರೋಗಾದಿಗಳು ತಲೆದೋರುವುದಕ್ಕೆ ಎಡೆಯಿದೆ. 'ಪ್ಯಾಪಿ'ನಿಂದ ಸೇವಿಸುವುದು ಅತೀ ಹಾನಿಕರ; ನಿಕೋಟಿನ್' ಮಾತ್ರವಲ್ಲದ ಇನ್ನೊಂದು ವಿಷವೂ ಇದರಿಂದ ನಾಲಗೆಯನ್ನು ಸೇರುವುದು. ಸಾಧಾರಣ ೨೦ ವರ್ಷ ಪ್ರಾಯದ ಮೊದಲು ತಂಬಾಕು ಸೇವನೆಯು ಅನುಚಿತ; ನಸ್ಯಗ್ರಹಣವು ನಿತಾಂತ ಕದರ್ಯ ಅಭ್ಯಾಸ.

M. N. K.

ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆ.

ಜಿಲ್ಲೆಯಲ್ಲಿನ ಕೆಲವು ಎಲಿಮೆಂಟರಿ ಶಾಲೆಗಳನ್ನು ಸಂದರ್ಶಿಸಿ ಅಲ್ಲಿ ನಡೆಯುತ್ತಿರುವ ಕೆಲಸದ ಮಾಹಿತಿಯನ್ನು ಹೊಂದಬೇಕೆಂಬ ಆತುರತೆಯಿಂದ ಇಲ್ಲಿಯ ಗವರ್ನಮೆಂಟ್ ಟ್ರೈನಿಂಗ್ ಶಾಲಾ ಸೆಕೆಂಡರಿ ಗ್ರೇಡ್ ವಿದ್ಯಾರ್ಥಿ ಉಪಾಧ್ಯಾಯರುಗಳಾದ ನಾವು, ಎಂಟನೇ ಸರ್ಕಲ್ ಶಾಲಾ ಇನ್ಸ್‌ಪೆಕ್ಟರವರ ಹುಕುಂ ಮೇರೆಗೆ ಸದರಿ ಶಾಲಾ ಉಪಾಧ್ಯಾಯರಾದ ಮ. ರಾ. ರಾ. ಕೆ. ಗೋಪಾಲರಾವ್ ಬಿ. ಎ. ಯಲ್. ಟಿ.ಯವರ ಜೊತೆಯಲ್ಲಿ ಇದೇ ತಿಂಗಳ ತಾರೀಕು ೬ನೇ ಶುಕ್ರವಾರ ಮಧ್ಯಾಹ್ನ ಸುಮಾರು ೨ ಗಂಟೆ ಸಮಯಕ್ಕೆ ಮಂಗಳೂರನ್ನು ಬಿಟ್ಟು ಸಂಜೆ ೬॥ ಗಂಟೆಗೆ ಕಿನ್ನಿಕಂಬಳವನ್ನು ಸೇರುವವರಾದೆವು. ಮುಲ್ಕಿ ಶಾಲಾ ಸುಪರ್‌ವ್ಯಾಜರರಾದ ಮ. ರಾ. ರಾ. ರಾಮಚಂದ್ರ ಕಮ್ತಿಯವರು ಗುರ್ಪೂರದಲ್ಲಿಯೇ ನಮ್ಮನ್ನು ಕೂಡಿದರು. ಮಾರಣೆ ದಿನ ಸುಪರ್‌ವ್ಯಾಜರರೊಂದಿಗೆ ಅಲ್ಲಿಯ ಶಾಲೆಯನ್ನು ಸಂದರ್ಶಿಸಿ ಅಲ್ಲಿಯ ಹೆಡ್‌ಮಾಸ್ತರರಾಗಿರುವ ಮ. ರಾ. ರಾ. ಬಾಗ್ಲೋಡಿ ರಾಮರಾಯರು ಶ್ರಮಪಟ್ಟು ಬಹುಜಾಗ್ರತೆಯಿಂದ ಬೆಳಸಿರುವ ತೋಟವನ್ನು ನೋಡಿ ಪ್ರಕೃತಿ ಜ್ಞಾನವನ್ನು ಮಕ್ಕಳು ಸರಿಯಾಗಿ ಹೊಂದಲು ಪ್ರತಿ ಶಾಲೆಗೆ ಇಂಥಾ ಒಂದು ತೋಟವು ಅತ್ಯಗತ್ಯವೆಂದು ಅಭಿಪ್ರಾಯಪಟ್ಟೆವು. ತೋಟದ ಯಾವತ್ತು ಕೆಲಸವನ್ನು ಸಾಧ್ಯವಾದ ಮಟ್ಟಿಗೆ ಮಕ್ಕಳೇ ಸಂತೋಷದಿಂದ ಮಾಡುತ್ತಾರೆಂದೂ ತಾವೇ ಪ್ರೀತಿಯಿಂದ ಬೆಳೆಯಿಸಿದ ತೋಟವು ಹಾಳಾಗದಂತೆ ತಕ್ಕ ಜಾಗ್ರತೆ ತಕ್ಕೊಳ್ಳುತ್ತಾರೆಂದೂ ಕೇಳಿ ಪ್ರತಿ ಶಾಲೆಯಲ್ಲಿಯೂ ಮಕ್ಕಳು ಉಪಾಧ್ಯಾಯರಿಗೆ ಸಹಾಯಮಾಡಿದ್ದಲ್ಲಿ ತೋಟವನ್ನು ಚಲೋ ರೀತಿಯಲ್ಲಿ ಬೆಳೆಯಿಸಲು ಸಾಧ್ಯವಿದೆ ಎಂದೂ ಕಣ್ಣಾರೆ ನೋಡಿದೆವು. ಶಾಲಾ ಉಪಾಧ್ಯಾಯರಲ್ಲೊಬ್ಬರು ಅಳತೆ, ಭಾರ, ಇವುಗಳ ವಿಷಯದಲ್ಲಿ ಕೊಟ್ಟ ಪಾಠವನ್ನು ನೋಡಿ ಬಹಳ ಮಟ್ಟಿಗೆ ಸಂತೋಷಪಟ್ಟೆವು.

ಇಲ್ಲಿಂದ ಅದೇ ದಿನ ಸಾಯಂಕಾಲ ೬ ಗಂಟೆಗೆ ಬಜಪೆಯನ್ನು ಸೇರುವವರಾದೆವು. ರವಿವಾರ ದಿನ ಇಲ್ಲಿ ಪ್ರಖ್ಯಾತಿಪಟ್ಟ ಜೋಗಿನಲ್ಲಿ ಸ್ನಾನಮಾಡುವಂಥವರಾಗಿ ಅದೇ ದಿನ ರಾತ್ರಿ ಮೂಡಬಿದ್ರೆಗೆ ಹೊರಟೆವು.

ಸೋಮವಾರ ಮೂಡಬಿದ್ರಿಯಲ್ಲಿ ಹೆಸರುಗೊಂಡ ಪೂರ್ಣವಾಗಿ ಶಿಲಾಮಯವಾಗಿರುವ ಬಸ್ತಿಗಳನ್ನು ನೋಡಿ, ಅಲ್ಲಿ ಕಾಣ ಬರುವ ಶಿಲೆಯಲ್ಲಿ ಕೆತ್ತಿದ ಪ್ರತಿಮೆಗಳನ್ನೂ ಶಿಲೆಯಿಂದ ರಚಿಸಲ್ಪಟ್ಟ ಕಂಭಗಳನ್ನೂ ಶಿಲಾದ್ವಾರಗಳನ್ನೂ ನೋಡಿ ಆಶ್ಚರ್ಯಪಟ್ಟು ಶಿಲ್ಪ ಶಾಸ್ತ್ರದಲ್ಲಿ ಹಿಂದೂಸ್ತಾನದ ನಮ್ಮ ಪೂರ್ವಜರು ಎಷ್ಟರ ಮಟ್ಟಿನ ಚತುರತೆಯನ್ನು ಹೊಂದಿದ್ದರೆಂದೂ ಎಷ್ಟರ ಮಟ್ಟಿನ ನಾಗರೀಕತೆಯನ್ನು ಪಡೆದಿದ್ದರೆಂದೂ ಕಣ್ಣಾರೆ ಕಾಣುವವರಾದೆವು. ಇದು ಅಲ್ಲದೆ ಅಲ್ಲಿಯ ಜೈನ ಸಂಸ್ಕೃತ ಶಾಲೆಯನ್ನು ಸಂದರ್ಶಿಸಿ, ಅಲ್ಲಿಂದ ಅದೇ ದಿನ ಸಾಯಂಕಾಲ ಹೊರಟವರು ಮಾರಣೆ ದಿನ ಪ್ರಾತಃಕಾಲ ೮॥ ಗಂಟೆಗೆ ಸರಿಯಾಗಿ ಅರ್ಕವನ್ನು ಬಂದು ಸೇರಿದೆವು. ಮಂಗಳೂರು ಶಾಲಾ ಸುಪರ್‌ವ್ಯಾಜರು, ಮ. ರಾ. ರಾ. ಉ. ಮಂಗೇಶರಾವ್ ಬಿ. ಎ. ಯಲ್. ಟಿ. ಇಲ್ಲಿ ಹಾಜರಿದ್ದರು. ಇವರ ಜೊತೆಯಲ್ಲಿ ನಾವೆಲ್ಲರೂ ಶಾಲೆಯನ್ನು ಸಂದರ್ಶಿಸಿ ಶಾಲಾ ಕಟ್ಟೋಣವನ್ನೂ, ಅಲ್ಲಿರುವ ಸಾಹಿತ್ಯಸಾಮಗ್ರಿಗಳನ್ನೂ ನೋಡಿ ಸಂತೋಷಪಟ್ಟೆವು. ಚಿತ್ರಬಿಡಿಸುವುದರಲ್ಲಿ ಮಕ್ಕಳು ತೋರಿಸಿದ ಕೈಕೌಶಲ್ಯವನ್ನೂ ಆವೆಯ ಮಣ್ಣಿನಿಂದ ನಮ್ಮ ಮುಂದೆ ಮಕ್ಕಳು ತಯಾರಿಸಿದ ವಸ್ತುಗಳ ಪ್ರತಿಮೆಗಳನ್ನೂ ನೋಡಿ ಆಶ್ಚರ್ಯಪಡುವವರಾದೆವು. ಸುಪರವ್ಯಾಜರವರು ನಮ್ಮ ಅಪೇಕ್ಷೆ ಮೇರೇಗೆ ಗಣಿತದಲ್ಲಿ ಎರಡು ಮಾದರಿ ಪಾಠಗಳನ್ನು ಕೊಡುವವರಾದರು. ರಾತ್ರೆ ಎಂಟರಿಂದ—ಒಂಭತ್ತುವರೆ ಗಂಟೆವರೇಗೆ ಶಾಲಾ ಮಕ್ಕಳು ಧನ ಮಿತ್ರವೆಂಬ ನಾಟಕವನ್ನು ಆಡಿ ಪ್ರೇಕ್ಷಕರನ್ನು ಸಂತೋಷಪಡಿಸಿದರು. ನಾಟಕ ಮುಗಿದೊಡನೆಯೇ ಮ. ರಾ. ರಾ. ಕೆ. ಗೋಪಾಲರಾಯರವರು ಬಹು ಚಲೋದಾಗಿ ಮಕ್ಕಳು ನಾಟಕವನ್ನು ಆಡಿದ್ದಕ್ಕೆ ಅವರನ್ನು ಪ್ರೋತ್ಸಾಹಿಸಿ, ನಾಟಕದಲ್ಲಿ ಅಡಗಿರುವ ನೀತಿಯನ್ನು ಮಕ್ಕಳಿಗೆ ವಿವರಿಸಿ ಹೇಳಿ ಚಿಕ್ಕ ಮಕ್ಕಳ ನೀತಿ ನಡತೆಯು ಹೇಗಿರತಕ್ಕದ್ದು ಎಂಬುದರ ವಿಷಯ ಮಕ್ಕಳಿಗೆ ಚಲೋ ಬುದ್ಧಿವಾದವನ್ನು ಹೇಳಿದರು. ಸ್ವಲ್ಪ ಮಾತುಗಳಲ್ಲಿಯೇ ವಿದ್ಯೆಯ ಮಹತ್ವವನ್ನು ವರ್ಣಿಸಿ, ಶಾಲಾ ಮೆನೇಜರರಾದ ಮ. ರಾ. ರಾ. ಅ. ಗುಮ್ಮಣ್ಣ ಶೆಟ್ಟಿಗಳವರು ವಿದ್ಯೆಯ ಮಹತ್ವವನ್ನು ಚೆನ್ನಾಗಿ ಅರಿತಿರುವರೆಂತಲೂ ಈ ಕಾರಣದಿಂದ ಬೇರೆಯವರಿಗೆ ಕೂಡಾ ಒಳ್ಳೇ ವಿದ್ಯಾದಾನಮಾಡಬೇಕೆಂಬ ಅಭಿಲಾಷೆಯಿಂದ ತುಂಬಿದ್ದು ಶಾಲೆಯಲ್ಲಿ ಎಲ್ಲಾ ತರದ ಅನುಕೂಲತೆಯನ್ನು ಏರ್ಪಡಿಸಿರುವರೆಂತಲೂ ಹೀಗೆ ಹೆಚ್ಚಿನ ಪ್ರಯತ್ನದಿಂದ ಅವರು ಸಾಧಿಸುವ ಕೆಲಸದಲ್ಲಿ ಅವರಿಗೆ ಎಲ್ಲರೂ ಸಹಾಯಕರಾಗಬೇಕೆಂದೂ, ಅವರ ಈ ಪ್ರಯತ್ನಗಳಲ್ಲಿ ಶ್ರೀ ಈಶ್ವರನು ಜಯವನ್ನೂ, ಆಯುರಾರೋಗ್ಯವನ್ನೂ ಅವರಿಗೆ ಈಯಲೆಂದೂ ಪ್ರಾರ್ಥಿಸಿದರು. ಶಾಲೆಗೆ ಸಂಬಂಧಪಟ್ಟ ಬೋರ್ಡಿಂಗ್ ಹೌಸಿನಲ್ಲಿರುವ ಮಕ್ಕಳನ್ನು ಧರ್ಮಾರ್ಥವಾಗಿ ಪೋಷಿಸಿ, ತಂದೆಯ ಹಾಗೆ ಮಕ್ಕಳ ಜಾಗ್ರತೆಯನ್ನು ತೆಗೆದುಕೊಳ್ಳುವದನ್ನು ನೋಡಿ ಅತ್ಯಾನಂದಪಟ್ಟು, ಮ. ರಾ. ರಾ. ಗುಮ್ಮಣ್ಣ ಶೆಟ್ರ ಘನ ಸ್ವಭಾವವನ್ನೂ ಮೃದು ನಡತೆಯನ್ನೂ ಶ್ಲಾಘಿಸುವವರಾದೆವು.

ಇಲ್ಲಿಂದ ತಾ. ೧೧ನೇ ಬೆಳಿಗ್ಯೆ ಹೊರಟವರು ಬಂಟ್ವಾಳಕ್ಕೆ ಬಂದು ಅಲ್ಲಿನ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಸೇರಿದ ಬಂಡಾರಿಬೆಟ್ಟು ಹಿಂದೂ ಶಾಲೆಯನ್ನು ಸಂದರ್ಶಿಸಿ, ಮಾನಸಿಕ ಗಣಿತದಲ್ಲಿ ಮಕ್ಕಳು ಹೊಂದಿರುವ ಅಭಿವೃದ್ಧಿಯನ್ನು ನೋಡಿ ಸಂತೋಷಪಟ್ಟೆವು.

ಅಲ್ಲಿಂದ ಹೊರಟು ಮಂಗಳೂರು ಟ್ರೈನಿಂಗ್ ಶಾಲೆಯಲ್ಲಿ ಈ ದಿವಸ ಅತೀ ಸಂಭ್ರಮದಿಂದ ಆಚರಿಸಲ್ಪಟ್ಟ ಡಿಲ್ಲಿ ದರ್ಬಾರು ದಿವಸದ ಆಚರಣೆಯಲ್ಲಿ ಭಾಗಿಗಳಾದೆವು. ಈ ಎಲ್ಲಾ ಸಂದರ್ಭಗಳಲ್ಲಿ ನಮಗೆ ಸಹಾಯಮಾಡಿರುವ ಶಾಲಾ ಸಬ್ ಅಸಿಸ್ಟಾಂಟ್ ಮ. ರಾ. ರಾ. ಕೃಷ್ಣರಾವ್. ಬಿ. ಎ. ಯವರಿಗೂ ಸುಪರವ್ಯಾಜರರಾದ ಮ. ರಾ. ರಾ. ಎಚ್. ರಾಮಚಂದ್ರ ಕಮ್ತಿ ಮತ್ತು ಮ. ರಾ. ರಾ. ಉ. ಮಂಗೇಶರಾಯರಿಗೂ. ನಮ್ಮ ಪ್ರಿಯ ಉಪಾಧ್ಯಾಯರಾಗಿರುವ ಮ. ರಾ. ರಾ. ಯಮ್. ಬಾಬು ಬಿ. ಎ. ಯಲ್. ಟಿ. ಮತ್ತು ಮ. ರಾ. ರಾ. ಕೆ. ಗೋಪಾಲರಾಯರಿಗೂ ನಾವು ಸಂದರ್ಶಿಸಿದ ಶಾಲಾ ಮೆನೇಜರರಿಗೂ ಉಪಾಧ್ಯಾಯರರಿಗೂ ನಮ್ಮ ಮನಃಪೂರ್ವಕವಾದ ಮತ್ತು ಕೃತಜ್ಞಾಭಾವದಿಂದ ತುಂಬಿರುವ ವಂದನೆಗಳನ್ನು ಈ ಮೂಲಕ ಅರ್ಪಿಸುತ್ತೇವೆ.

ಮಂಗಳೂರು,
ತಾ. 15—12—12.

U. G. K.
for pupil teachers of the Secondary grade.

* * *

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಎಚ್ಚರಿಕೆ.

ಅಯ್ಯಾ ಪತ್ರಿಕಾಕರ್ತರೇ,

ಒಂದೇ ಜಾತಿಯ ಶಾಖೋಪಶಾಖೆಗಳಲ್ಲಿ ಸಹಪಂಕ್ತಿ ಭೋಜನ, ವಿವಾಹ ವಗ್ಯೆರೆ ಮಾಡಿಕೊಂಡು ಗೌಡಸಾರಸ್ವತರು ಬೇಗನೇ ಸುಧಾರಣೆ ಹೊಂದಬೇಕೆಂತ ಮ. ರಾ. ರಾ. ಅಮ್ಮೆಂಬಳ ಶ್ರೀನಿವಾಸ ಪೈಗಳಿಗೆ ವೀಳ್ಯ ಕೊಟ್ಟು ಒಬ್ಬ ಬಾತ್ಮೀದಾರರು ತಮ್ಮ ಪತ್ರದ ಕಳದ ವಾರದ ಸಂಚಿಕೆಯಲ್ಲಿ ಬರದ್ದು ನೋಡಿದೆ. ನಾನು ಅದೇ ಜಾತಿಯ ಒಬ್ಬ ಅಶಿಕ್ಷಿತ ಪುಕ್ಕಿ. ಸಂಯುಕ್ತ ಪರಿಷದಕ್ಕೆ ಅಶಿಕ್ಷಿತ ಪುಕ್ಕಿ ಮನುಷ್ಯರು ಹೋದರೆ ನಂತರ ಇಲ್ಲಿಗೆ ಬಂದು ಉಂಡರೂ ಉಣ್ಣಲಿಲ್ಲವೆಂತ ಹೇಳಿ, ಜಾತಿಯಲ್ಲಿ ಕಲಹ ಎಬ್ಬಿಸಿ, ಕ್ರಿಮಿನಲ್ ಸಿವಿಲ್ ವ್ಯವಹರಣೆಗಳನ್ನು ನಡಿಸಿ ಹೇರಳ ಹಣ ದುರ್ವ್ಯಯ ಮಾಡಿ ಸುಧಾರಣೆಗೆ ತೊಂದರೆ ಪಡಿಸ್ಯಾರೆಂಬದರಿಂದ ಬಾತ್ಮೀದಾರರು ಪೈಗಳಂಥವರು ಮುಂದಾಳುಗಳಾಗಿ ಮಾರ್ಗದರ್ಶಿಗಳಾಗಬೇಕೆಂತ ಸೂಚಿಸಿದ್ದಾಗಿರಬೇಕು. ಇಷ್ಟರ ಮಟ್ಟಿಗೆ ಸೂಚನೆ ಶ್ಲಾಘ್ಯಕರವಾದ್ದೇ ಸರಿ. ಪಾಶ್ಚಾತ್ಯ ವಿದ್ಯಾಸಂಪನ್ನರಿಗೆ ಇರುವಷ್ಟು ದೂರದೃಷ್ಟಿಯು ನನ್ನಂಥ ಅಶಿಕ್ಷಿತನಿಗಿಲ್ಲ. ನನ್ನಂಥವನಿಗೆ ಎಷ್ಟು ಆಲೋಚಿಸಿದ್ದಾಗ್ಯೂ ಅಂಥ ಸಹಪಂಕ್ತಿ ಭೋಜನದಿಂದ ಶಾಖೋಪಶಾಖೆಗಳ ಶಾಕಪಾಕಗಳ ರುಚಿ ತಕ್ಕಷ್ಟು ಶಿಕ್ಕಬಹುದಲ್ಲದೆ ಬೇರೆ ಸುಧಾರಣೆ ಹ್ಯಾಗೆ ಶಿಕ್ಕೀತೆಂಬದು ಮಂದಬುದ್ಧಿಗೆ ತಿಳಿಯುವದಿಲ್ಲ. ಉತ್ತರದೇಶದ ಪಾಕಶಾಸ್ತ್ರ ಮಾಹಿತಿ ಸ್ವಲ್ಪ ಶಿಕ್ಕಲಿಕ್ಕೆ ಅನುಕೂಲ ಇದ್ದಾಗ್ಯೂ ದಕ್ಷಿಣ ದೇಶದ ದೇವಸ್ಥಾನಗಳಲ್ಲಿ ವ ನನ್ನ ಬಂಧು ಬಾಂಧವರಲ್ಲಿ ಈ ವರೆಗೆ ದೊರತ್ತಿದ್ದ ಭೋಜನಗಳಿಗೆ ಲೋಪಬಂದೀತೆಂಬ ಭಯ ಉಂಟಾಗುತ್ತದೆ. ರಾ. ಶ್ರೀನಿವಾಸಪೈಗಳು ಕರಕೊಂಡು ಹೋದರೆ ನನಗೂ ಹೋಗಬೇಕೆಂಬ ಮನಸ್ಸುಂಟು. ನಾಲಿಗೆ ರುಚಿ ಬಗ್ಯೆ ನಾನೊಬ್ಬನೇ ಹೋದರೆ "ಕಾಲ್‌ಪಣವುದಾ ಪುಚ್ಚೆಗ್ ಮುಕ್ಕಾಲ್ ಪಣವುದಾ ನೆಯಿ" ಎಂಬಂತೆ ಆದೀತು. ಮ. ರಾ. ರಾ. ಅಮ್ಮೆಂಬಳ ಪೈಗಳವರು ಹೋಗಬಹುದು. ಆದರೆ ಅವರು ಅಶೀಕ್ಷಿತ ಸ್ವಜಾತಿ ಜನಸ್ತೋಮವು ತನ್ನನ್ನು ಹಿಂಬಾಲೀಸಿತೆಂಬ ಧೈರ್ಯಪಡಬಾರದು. ಪೈಗಳವರು ಆ ಮಹಾಸಭೆಯಲ್ಲಿ ಊಟ ಮಾಡುವ ಮುಂಚೆ ೧೯೧೧ನೇ ಇಸವಿ ದಶಂಬರ ಆಖೈರ ವರೆಗೆ ಸದರಿ ಪರಿಷದದಲ್ಲಿ ಉಂಡ ಮಾತ್ರದಿಂದ ಸುಧಾರಣೆ ಯಾರ್‍ಯಾರು ಯಾವ್ಯಾವ ರೀತಿಯಲ್ಲಿ ಹೊಂದಿದ್ದಾರೆಂತ ಪ್ರಥಮತ ನೋಡಿಕೊಳ್ಳುವದು ಒಳ್ಳೇದು. ನಮ್ಮ ಜಿಲ್ಲೆಯಿಂದ ಹೋದ

ವರು ಅಂಥ ಸುಧಾರಣೆ ಹೊಂದಿದ್ದು ನಾವು ಕಂಡಿದ್ದ ಪಕ್ಷದಲ್ಲಿ ರಾ| ಪೈಗಳವರನ್ನು ಪೀಡಿಸುತ್ತಿದ್ದಿಲ್ಲ. ಆದರೆ ಊಟದಿಂದ ಸುಧಾರಣೆ ಹೊಂದಿದವರು ಇತರ ಜಿಲ್ಲೆಯವರು ಸಭೆಗೆ ಬರಲಿಕ್ಕೆ ಸಾಕು. ಆ ಸುಧಾರಣೆ ಎಂಬದು ಯಾವ ನಮೂನೆದು, ಯಾವಾಗ ಶಿಕ್ಕಿತು--ಉಂಡ ಕೂಡಲೇ ಶಿಕ್ಕಿತೋ—ವಾಪಾಸು ಹೋಗುತ್ತ ದಾರಿಯಲ್ಲಿ ಶಿಕ್ಕಿತೋ–ಮನೆಗೆ ಹೋದ ನೇಲೆ ಶಿಕ್ಕಿತೋ ಯಾ ಇನ್ನು ಮುಂದೆ ಕಾಲಕ್ರಮೇಣ ಶಿಕ್ಕುವಂತಾದ್ದೋ ನೋಡಿ ನಮಗೆ ತಪಶೀಲು ವಿವರಿಸಿ ಮುಂದಟ್ಟುಮಾಡಬೇಕಾಗಿ ನಮ್ಮ ಪ್ರಾರ್ಥನೆ. ನನಗೆ ಮುಂದಟ್ಟಾದರೆ ನನ್ನ ಮಕ್ಕಳನ್ನು ಶಾಲೆಗೆ ಕಳುಹಿಸುವಂಥಾದ್ದು ಹ್ಯಾಸ್ಕೂಲ್, ಬಾಲಿಕಾಶಾಲಾ, ಹೊಸ್ಟೆಲ್, ಕೆನರಾ ಬೇಂಕು ಇವುಗಳ ಅಭಿವೃದ್ಧಿಗೆ ಮನಸ್ಸು ಕೊಡುವಂತಾದ್ದು ಇದೆಲ್ಲ ರಗಳೆ ಬೇಡವಷ್ಟೇ; ಸಹಪಂಕ್ತಿ ಭೋಜನದಿಂದ ಸರ್ವ ಸುಧಾರಣೆ ಶಿಕ್ಕುವಂತಾದ್ದು ಸುಲಭ ಉಪಾಯವಷ್ಟೇ. ನಾವು ಸಹಾ ಮುಂದಾಳುಗಳು ಮಾರ್ಗದರ್ಶಿಗಳಾಗಿ ತೋರಿಸಿದ ಆ ಮಾರ್ಗಕ್ಕೆ ಹೋಗುವದು ಉತ್ತಮ ಎಂತ ಆಲೋಚಿಸುವೆವು.

ಪಾಶ್ಚಾತ್ಯ ವಿದ್ಯಾನಿಪುಣರಾದವರ ದೃಷ್ಟಿಗೆ ತೋರುವಂತಾದ್ದು ಅಶಿಕ್ಷಿತರಾದ ನಮ್ಮ ಕಣ್ಣಿಗೆ ಕಾಣುವದಿಲ್ಲವೆಂಬದು ನಿಜ. ಅವರು ವಿದ್ಯಾಬಲ ಎಂಬ ಕುದುರೆ ಮೇಲೆ ಸವಾರಿ ಮಾಡುವ ತುರುಫ ಸವಾರರು. ನಾವು ಪ್ಯಾದಳಕ್ಕೆ ಸಂಬಂಧಪಟ್ಟವರು. ಅವರು ಮಾರ್ಗದರ್ಶಿಗಳಾಗಿ ಮುಂದೆ ಹೋಗುವಂತಾದ್ದೂ ನಾವು ಅವರನ್ನು ಹಿಂಬಾಲಿಸುವಂತಾದ್ದೂ ಸಹಜವಾದ್ದು. ಆದರೆ ಅವರು ತಮ್ಮ ಕುದುರೆ "ಗೆಲ್ಲೊಪಿನಲ್ಲಿ" ಬಿಟ್ಟರೆ ನಾವು ಸೋಲುವದೇ ಸರಿ. ಅವರು ಉಡುಪಿಗೆ ಮುಟ್ಟುವಾಗ ನಾವು ಕೂಳೂರು ಕಡವಿಗೆ ಮುಟ್ಟೆವು. ತನ್ಮಧ್ಯ ನಮಗೆ ದಾರಿ ತೋರಿಸಲಿಕ್ಕೆ ಮುಂದಾಳುಗಳಿಲ್ಲದೆ ಬೇರೆ ತುರುಫ ಸವಾರರು ಬಂದು ನಮ್ಮನ್ನು ಬೇರೆ ದಾರಿಗೆ ಕೊಂಡುಹೋದರೆ ನಾವು ಪರಸ್ಪರ ಒಬ್ಬರಿಗೊಬ್ಬರು ತಪ್ಪಿಯೇ ಹೋದೇವು. "ಗೆಲ್ಲೊಪಿನಲ್ಲಿ" ಹೋಗುವಾಗ ದಾರಿಯಲ್ಲಿರುವ ಹೊಂಡಗಳು, ಅಜುಬಾಜ ಖಣಿಗಳು ಕಾಣಶಿಕ್ಕದೆ ಗಂಡಾಂತರದಲ್ಲಿ ಬೀಳಬೇಕಾದೀತು. ಇದರ ವಿನಹ ಈ ಓಡ್ಯಾಟವು ಮೈದಾನಿನಲ್ಲಿ ಪಂಥಮಾಡಿ ಇನಾಂ ತಾನೇ ಹೊಂದುವ ಬಗ್ಯೆ ಸ್ವಾರ್ಥದಿಂದ ಮಾಡುವಂತಾದ್ದಲ್ಲವಷ್ಟೇ. ಇದು ಅಶಿಕ್ಷಿತ ಮಹಾ ಸಮೂಹದ ಒಳ್ಳಿತಕ್ಕೆ ಅವರಿಗೆ ಸುಧಾರಣೆ ಮಾರ್ಗ ತೋರಿಸುವ ಬಗ್ಯೆ ಮಾಡುವ ಸವಾರಿ. ಆ ಸ್ತೋಮದಲ್ಲಿ ಮುದುಕರು, ಬಾಲರು ಭಾರಿ ಸ್ತ್ರೀಸಮೂಹವೂ ಉಂಟು. ಕುದುರೆ ಲಗಾಂ ಪಡಕೊಳ್ಳಲಿಕ್ಕೆ ಅನುಕೂಲವಿಲ್ಲದ ತರುಣರು ಇದ್ದಾರೆ. ಕುದುರೆ ನೋಡಿ ಹೆದರುವವರೂ ಇದ್ದಾರೆ. ಅವರನ್ನೆಲ್ಲಾ ಹಿಂದೆ ಬಿಟ್ಟು ತಾವೇ ಮುಂದರಿಸಿದರೆ ಪಾಯಿದಳದ ಬಲ ತುರುಫ ಸವಾರರಿಗೆ ತಪ್ಪೀತಷ್ಟೇ. ಹಾಗೆ ಮಾಡದೆ ತಾವು ಹೇರಳ ವಿದ್ಯಾಬಲದಿಂದ ಅರಬಿಯನ್, ಆಸ್ಟ್ರೇಲಿಯನ್ ಕುದುರೆಸವಾರಿ ಮಾಡಿ ಸುಧಾರಣಾ ಮಾರ್ಗ ನೋಡುವಹಾಗೆ ತಕ್ಕಷ್ಟಾದರೂ ವಿದ್ಯೆ, ಪ್ಯಾದಳಕ್ಕೆ ಕೊಟ್ಟು ಅವರ ಕಣ್ಣುಗಳನ್ನು ತೆರಿಸಿ ಊರ ತಟ್ಟುಗಳ ಮೇಲಾದರೂ ಅವರು ಸವಾರಿ ಮಾಡಿ ಹಿಂಬಾಲಿಸುವಂತೆ ನೋಡುವಂತಾದ್ದು ಅವಶ್ಯಕಾಣದೆ ಅವಸರದಿಂದ ಕಾರ್ಯ ಕೆಡಿಸಿಕೊಂಡರೆ ಪ್ರಯೋಜನವುಂಟೇ? "ತಾಳಿದವ ಬಾಳ್ಯಾನಲ್ಲವೇ" ತನಗೆ ಸ್ವತಃ ಜಾತಿಪದ್ಧತಿಗೆ ವಿರೋಧವಾಗಿ ಏನಾದರೂ ಮಾಡಲಿಕ್ಕೆ ಆಕ್ಷೇಪವಿಲ್ಲವೆಂಬುದರಿಂದ ಅಂಥಾದ್ದನ್ನು ಬಹಳವಾಗಿ ಮಾಡಿ ಅಶಿಕ್ಷಿತ ಜಾತಿ ಸಮೂಹಕ್ಕೆ ಕೆಣಕಿಸಿ "ಪಾಳ್ಯದೊಳಗೆ ಕಡದಾಟ" "ಮನೆ ಮನೆ ಬಡದಾಟ" ಮಾಡುವಂತಾದ್ದು ಶ್ಲಾಘ್ಯವೇ? ಮಹಾ ಸಮೂಹವು ಮೌನವಾಗಿ ಹಿಂಬಾಲಿಸುವ ಸಂಭವ ಉಂಟೇ? ನಮಗಿಂತಲೂ ಹೆಚ್ಚು ಸುಧಾರಣೆ ಹೊಂದಿದವರಲ್ಲಿ ಆ ಪ್ರಕಾರ ಹಿಂಬಾಲಿಸಿದ್ದು ನಮಗೆ ಕಾಣುತ್ತದೋ, ಅನುಭವಕ್ಕೆ ವಿರೋಧವಾಗಿ ನಡಕೊಳ್ಳುವಂತಾದ್ದು ಸರಿಯೋ, ಬಾತ್ಮೀದಾರರೇ ಆಲೋಚಿಸಲಿ. ಮ. ರಾ. ರಾ. ಅಮ್ಮೆಂಬಳ ಪೈಗಳವರಿಗೆ ಉತ್ತೇಜನಕೊಟ್ಟದ್ದು ನಮಗೆ ಸಂತೋಷವೇ. ಯಾಕಂದರೆ ಅವರು ಅವರ ಕುದುರೆ "ಗೆಲ್ಲೊಪಿನಲ್ಲಿ" ಬಿಡಲಿಕ್ಕಿಲ್ಲ. ಫಲಾಫಲಿತಗಳನ್ನು ಆಲೋಚಿಸದೆ ಯಾವ ಕೃತ್ಯವೂ ಮಾಡರು. ಅವರ ಮನೆಯವರಿಗೆ ತುಂಬಾ ಅನುಭವ ಉಂಟು. ಅಶಿಕ್ಷಿತ ಜನರ ವ ಅವರ ವಶ ಇರುವ ದೇವಸ್ಥಾನಗಳ ಸಹಾಯವು ಈಗ ಜಾರಿಯಲ್ಲಿರುವ ಮತ್ತು ಸುಧಾರಣೆಯ ನಿಜವಾದ ಮಾರ್ಗಗಳೆಂತ ಅವರೇ ಹುಡುಕಿ ತೆಗದ ಸಂಸ್ಥೆಗಳಿಗೆ ಅಗತ್ಯ ಉಂಟೆಂಬದು ಅವರು ಬಲ್ಲರು. ಈ ವರೆಗೆ ಸಂಪಾದಿಸಿದಷ್ಟು ಸ್ವಲ್ಪವೂ ನಾಶವಾಗುವಂತೆ ಅವರು ಮಾಡಲಿಕ್ಕಿಲ್ಲವೆಂಬ ವಿಶ್ವಾಸ ನಮಗೆ ತುಂಬಾ ಅದೆ. ಮಲಬಾರ ನಾಯರರು ನಮ್ಮ ಜಿಲ್ಲಾ ಬಂಟರು, ವಗ್ಯೆರೆರು ಸುಧಾರಣೆ ಹೊಂದಿದ್ದಾರೆ. ಹೊಂದಲಿಕ್ಕೆ ಪ್ರಯತ್ನಿಸುತ್ತಾರೆ. ಬ್ರಾಹ್ಮಣರು ಅವರ ಸಹಪಂಕ್ತಿ ಭೋಜನವನ್ನು ಮಾಡಿದ್ದಾರೋ ನೋಡಿರಿ.

ನಮ್ಮ ಬಂದರದಲ್ಲಿ ಊರ ತಟ್ಟುಗಳ ಮೇಲೆ ಸವಾರಿ ಮಾಡುವ ಕೆಲವು ಗೃಹಸ್ಥರಿದ್ದಾರೆ. ಅವರಿಗೆ ಬಾತ್ಮಿ ಸಂಗತಿಗಳು ಹೇಳಿ ನಾವು ಸಹಾ ಒಂದು ಬಾಯಿ ಉಂಡು ಬಂದು ಸುಧಾರಣೆ ಹೊಂದುವಾ ಎಂದು ಕೇಳಿದೆ. ಅವರು ಫಕ್ಕನೆ ನಕ್ಕುಬಿಟ್ಟರು—ನನಗೆ ನಾಚಿಕೆ ಆಯಿತು. ಏನಯ್ಯ ನಗುತ್ತೀರಿ? ಎಂತ ಕೇಳಿದೆ. ಉಂಡ ಮಾತ್ರದಿಂದ ಸುಧಾರಣೆ ಶಿಕ್ಕುವದೆಂತ ನಂಬಬೇಡ. ಸಹಪಂಕ್ತಿ ಭೋಜನದಿಂದ ಸಂಪ್ರೀತಿ ಹೆಚ್ಚುತ್ತದೆ. ಜನಾಂಗ ಒಂದೇ ಆಗುತ್ತದೆಂಬ ದೊಡ್ಡ ದೊಡ್ಡ ಮಾತುಗಳು ತಾನೂ ಕೇಳಿದ್ದೇನೆ. ಅದೆಲ್ಲಾ ಅನುಭವ ಸಿದ್ಧವಾದ್ದಲ್ಲ–ಕ್ರೈಸ್ತ ಮಹಮ್ಮದಿ ಮತಗಳಲ್ಲಿ ಜಾತಿ ಭೇದ ಇಲ್ಲವಷ್ಟೇ! ಅವರಿಗೆ ತಮ್ಮ ತಮ್ಮ ಮತದಲ್ಲಿ ಸಹಪಂಕ್ತಿ ಭೋಜನಗಳಿಗೆ ಆಕ್ಷೇಪ ಇಲ್ಲವಷ್ಟೇ. ಆದರೆ ಅವರು ಯೋಗ್ಯತಾನುಸಾರ ಸಹಪಂಕ್ತಿ ಭೋಜನ ಮಾಡುತ್ತಾರೆ ಹೊರತು ಮನಸ್ವಿ ಮಾಡುವದಿಲ್ಲ. ಇಂಗ್ಲಿಷರು, ಫ್ರೆಂಚರು, ಜರ್ಮನಿಯರು, ಇತಲಿಯವರು, ರುಷ್ಯರು ಇವರು ತಮ್ಮೊಳಗೆ ಸಹಪಂಕ್ತಿ ಭೋಜನ ಮಾಡುತ್ತಾರೆ. ಆದರೆ ಅವರೊಳಗೆ ಭಾರೀ ಯುದ್ಧಗಳು ನಡಿಯಲಿಲ್ಲವೇ. ಅವರೆಲ್ಲರೂ ಒಂದೇ ಜನಾಂಗವೋ? ಅವರ ವ ಮಹಮ್ಮದಿಯವರ ನಾಗರೀಕತನಕ್ಕೆ ಭೇದಯಿಲ್ಲವೋ? ಅಷ್ಟು ದೂರವ್ಯಾಕೆ? ನಮ್ಮ ಜಾತಿಯಲ್ಲಿ ಸಹಪಂಕ್ತಿ ಭೋಜನ ಉಂಟಷ್ಟೇ. ಒಂದೇ ಮನೆಯಲ್ಲಿರುವ ಸಹೋದರರು ಹೆತ್ತವರು ಮಕ್ಕಳು ಸಹಪಂಕ್ತಿ ಭೋಜನ ಮಾಡುತ್ತಾರಷ್ಟೇ. ಇವರು ವೈಮನಸ್ಸಿನಲ್ಲಿರುವ ಸಂಗತಿಗಳಿಲ್ಲವೋ ಅವರೊಳಗೆ ಶಿವಿಲ್ ಕ್ರಿಮಿನಲ್ ವ್ಯವಹರಣೆ ನಡಿಯುವದಿಲ್ಲವೋ? ಆದ್ದರಿಂದ ಸಹಪಂಕ್ತಿ ಭೋಜನದಿಂದ ಸಂಪ್ರೀತಿ ಉಂಟಾಗುತ್ತದೆ. ಎಲ್ಲರೂ ಒಂದೇ ಜನಾಂಗವಾಗುತ್ತದೆ. ಸುಧಾರಣೆ ಶಿಕ್ಕುತ್ತದೆಂಬದು ನಿಜವಲ್ಲ. ಅದು ನಿಜವಾದರೆ ವಿದ್ವಾನ್ ಮಂಡಳಿಯವರು ಸ್ಥಾಪಿಸಿದ "ನೇಶನಲ್ ಕೊಂಗ್ರೆಸ್ಸಿನಲ್ಲಿ" ಅಂಥ ನಿರ್ಣಯ ಮಾಡುತ್ತಿದ್ದರು. ತಾನು ಅಂಥ ನಿರ್ಣಯ ಕಾಣಲಿಲ್ಲ. ಶೀಮೆಗೆ ಹೋಗಿ ಐ. ಸಿ. ಎಸ್. ಐ. ಎಮ್. ಎಸ್. ಪರೀಕ್ಷೆ ಆದರೂ ಪಾಸಾಗಿ ಬಂದರೆ ತನ್ನ ಆಕ್ಷೇಪ ಇಲ್ಲ. ಜಾತಿ ಕೆಟ್ಟರೂ ಸುಖ ಪಡಿಯಬೇಕೆಂತ ಉಂಟಷ್ಟೇ. ಜಾತಿಗೂ ಅದೊಂದು ಅಭಿಮಾನ. ಹುಡುಗರ ವಿದ್ಯಾಭ್ಯಾಸದ ಬಗ್ಯೆ ಶಾಲೆಗಳು, ಅಲ್ಲಲ್ಲಿ ಸ್ಥಾಪಿಸುವದು, ಬಾಲಿಕಾ ಶಿಕ್ಷಣ, ಬಾಲವಿವಾಹ ತ್ಯಜನ, ಜಾತಕ ಸಂಘಟನೆ, ಶಕ್ತಿಗೆ ಮೀರಿದ ವರದಕ್ಷಿಣೆ ಸಾಂಪ್ರದಾಯ, ಪಾಶ್ಚಾತ್ಯರಿಂದ ಅಂಟುವ ದುರಭ್ಯಾಸಗಳು, ವಿವಾಹ ಉಪನಯನ ಮುಂತಾದ ಕಾರ್ಯಗಳಲ್ಲಿ ವ ದೇವಸ್ಥಾನಗಳಲ್ಲಿ ಹಣ ದುರ್ವ್ಯಯ ಇಂಥಾದ್ದರ ನಿವಾರಣೆ, ಅನಾಥ ವಿಧವೆಯರು ಅನಾಥ ಬಾಲಕರು ಇವರ ರಕ್ಷಣೋಪಾಯ, ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವದು, ಮರ್ಯಾದೆಯಿಂದ ಜೀವನ ಮಾಡಲಿಕ್ಕೆ ಈಗ ಇರುವ ಉದ್ಯೋಗಗಳಲ್ಲದೆ ಬೇರೆ ಮಾರ್ಗಗಳುಂಟೋ ಪರಿಶೋಧಿಸುವದು, ಕೈಗಾರಿಕೆಗೆ ಹೆಚ್ಚು ತಾತ್ಪರ್ಯ ಕೊಡುವದು, ಒಂದು ಮುಡಿ ಭತ್ತ ಬೆಳಿಯುವಲ್ಲಿ ೫ ಕಳಶಿಗೆ ಬೆಳಿಸಲಿಕ್ಕೆ ಪ್ರಯತ್ನಿಸುವಂತಾದ್ದು ಇವೇ ಮುಂತಾದ್ದು ಸುಧಾರಣೆಯ ನಿಜವಾದ ಮಾರ್ಗಗಳು ವಿನಹಾ ಜಾತಿ ಪದ್ಧತಿಗೆ ವಿರೋಧವಾದ ಸಹಪಂಕ್ತಿ ಭೋಜನಗಳಲ್ಲ. ಅಂತರಂಗದಿಂದ ಒಂದು ಕೃತ್ಯ ಮಾಡುತ್ತೇವೆಂಬದರಿಂದ ಅದನ್ನೇ ಬಹಿರಂಗವಾಗಿ ಮಾಡುವದು ಯುಕ್ತವಲ್ಲ. ಬಚ್ಚಲಿನ ಡ್ರೆಸಿನಲ್ಲಿ ಬೀದಿಗೆ ಹೋಗಬಹುದೋ? ತೋಟದಲ್ಲಿ ಮನಸ್ವಿ ಮಲಮೂತ್ರ ವಿಸರ್ಜನೆ ಮಾಡಬಹುದಾದರೆ ರಸ್ತೆಯಲ್ಲಿ ಮಾಡಬಹುದೋ? ವಿನೋದಕ್ಕೆ ಭಂಡಪದಗಳು ಮನೆಯಲ್ಲಿ ಹಾಡುತ್ತೇವಾದರೆ ಬೀದಿಯಲ್ಲಿ ಹಾಡಬಹುದೋ? ಆಲೋಚಿಸಿರಿ ಅಂದರು. ಹಾಗಾದರೆ ಬಾತ್ಮೀದಾರರು ಹೇಳುವ ಸಹಪಂಕ್ತಿ ಭೋಜನದಿಂದ ಪ್ರಯೋಜನ ಏನೂ ಇಲ್ಲವೋ ಕೇಳಿದೆ. ಏನೂ ಇಲ್ಲವೆಂತಲ್ಲ, ತನ್ನ ಹೆಸರು ಒಂದು ರೀತಿಯಲ್ಲಿ ಪ್ರಸಿದ್ಧಪಡಿಸಿಕೊಳ್ಳಬಹುದು. ವಿವಿಧ ಕಲಹಗಳಿಗೆ ಬೀಜ ನಡಬಹುದು. ತನ್ನ ಮನೆಗೆ ನಂತರ ಅಶಿಕ್ಷಿತ ನೆಂಟರಿಷ್ಟರು ಬರಲಿಕ್ಕಿಲ್ಲವಾದ್ದರಿಂದ ನಿತ್ಯಕಟ್ಲೆ ಖರ್ಚು ದವಸಗಳಿಗೆ ಧಾರಣೆ ಏರಿದ ಈ ಸಮಯದಲ್ಲಿ ಕಮ್ಮಿ ಮಾಡಿಕೊಳ್ಳಬಹುದು. ಆದರೆ ತನ್ನ ಜಾತಿ ಹೆಸರು ಯಾವದೆಂತ ಹೇಳಲಿಕ್ಕೆ ಸ್ವಲ್ಪ ಕಷ್ಟವಾದೀತು ಅಂದರು. ವಿವಾಹ ವಯಸ್ಸಿನ ನನ್ನ ಮಕ್ಕಳಿಗೆ ಸಂಯುಕ್ತ ಪರಿಷದಕ್ಕೆ ಬರುವ ಸುಧಾರಣಾ ಮಹನೀಯರಲ್ಲಿ ನೆಂಟಸ್ತನ ಶಿಕ್ಕೀತೋ ಕೇಳಿದೆ. ಅದು ನಂಬಬೇಡ; ನಿನ್ನ ಮಗನು ಎಮ್. ಎ. ಬಿ. ಎ. ಎಮ್. ಎಲ್. ಬಿ. ಎಲ್. ಈ ಪರೀಕ್ಷೆಗಳಲ್ಲಿ ಯಾವದು ಪಾಸಾಗಿದ್ದಾನೆಂತ ಕೇಳುವರು. ಹೆಣ್ಣಾದರೆ ಆಕೆಗೆ ಇಂಗ್ಲಿಷ, ಮರಾಠಿ, ಪಾಕಶಾಸ್ತ್ರ, ಹಾರಮೋನಿಯಮ್, ಫಿಡ್ಲ್ ವಗ್ಯೆರೆ ಬರುತ್ತದೋ? ಎಷ್ಟು ಸಾವಿರ ರೂಪಾಯಿ ವರದಕ್ಷಿಣೆ ಕೊಡುವಿ ಎಂತ ಕೇಳ್ಯಾನು. ಮಕ್ಕಳಿಗೆ ವಿದ್ಯಾಭ್ಯಾಸ ಇಲ್ಲ—ವರದಕ್ಷಿಣೆ ಕೊಡಲಿಕ್ಕೆ ಇಲ್ಲ—ಉಂಡು ಸುಧಾರಣೆ ಹೊಂದಿದ್ದೆನೆಂತ—ಹೇಳಿದರೆ ಸರ್ವಥಾ ಕೇಳಲಿಕ್ಕಿಲ್ಲ. ನೀನು ಸುಧಾರಣೆ ಮಹನೀಯರರ ಅಶಿಕ್ಷಿತ ನೌಕರರಲ್ಲಿ ನೆಂಟಸ್ತನ ಮಾಡಬೇಕಾದೀತು, ಯಾ ನಿನ್ನ ಮಕ್ಕಳು ಬ್ರಹ್ಮಚಾರಿ ಯಾ ಸನ್ಯಾಸಿನಿಗಳಾಗಿ ಸಾಯಬೇಕಾದೀತು ಎಂತ ದೊಡ್ಡ ಲೆಕ್ಚರು ಕೊಟ್ಟರು. ಇವರ ಹೆಸರಿಗೆ "ಮಾಮಲ್" "ಮಾಬಲ್" "ಬಾಬಲ್" ಎಂಬ ಬಾಲ ಯಾವದಾದರೂ ಇಲ್ಲವಾದರೂ ಇವರಲ್ಲಿ ವಿಚಾರ ಉಂಟೆಂತ ಗ್ರಹಿಸಿ ತಟಸ್ತನಾಗಿ ಅವರನ್ನು ನಮಸ್ಕರಿಸಿ ಮನೆಗೆ ಹೋದೆ.

ನಾನೊಬ್ಬ ಅಶಿಕ್ಷಿತ ಪುಕ್ಕಿ.

* * *

ವಿದೇಶ ವೃತ್ತಾಂತ.

* * *

ಲಂಡನಿನ ಸಫ್ರಜೆಟ್ಟ ಸ್ತ್ರೀಯರು ಲಂಡನಿಗೆ ಬೆಂಕಿ ಬಿದ್ದದೆ ಎಂಬ ಸುಳ್ಳು ವರ್ತಮಾನ ಹಬ್ಬಿಸಿ ಜನರನ್ನೆಲ್ಲಾ ಹೆದರಿಸುವ ಒಂದು ಹೊಸ ವಿಧಾನವನ್ನು ಕಲ್ಪಿಸಿರುವರು. ತಾ. ೪ರಲ್ಲು ಇಂತಹ ಒಬ್ಬ ಹೆಂಗಸು ಕೈದುಮಾಡಲ್ಪಟ್ಟಳು. ಇವಳಿಗೆ ೨೦ ಪವನು ಜುರುಮಾನೆ ವಿಧಿಸಲ್ಪಟ್ಟಿತು. ಇದಕ್ಕೆ ತಪ್ಪಿದರೆ ೨ ತಿಂಗಳ ಸಜಾ ವಿಧಿಸಲ್ಪಟ್ಟಿತು. ಇವಳು ಬಂದಿಖಾನೆಗೆ ಹೋದಳು. ಇಂತಹ ಉಪದ್ರವು ದಿನೇ ದಿನೇ ಹೆಚ್ಚಾಗುತ್ತಾ ಹೋಗುತ್ತದೆ. ಬೆಂಕಿ ಆರಿಸುವ ಯಂತ್ರ ಇಲಾಖೆಯವರಿಗೆ "ಹೆಂಗಸರಿಗೆ ಓಟುಬೇಕು. ನೀವು ನಮ್ಮನ್ನು ಅಣಗಿಸಲಾರಿರಿ" ಎಂಬ ಪತ್ರಗಳು ಬರುತ್ತಲಿವೆ.

* * *

ಮಧ್ಯ ಹಿಂದೂಸ್ಥಾನದ ಸೇನೆಯ ಕೆಪ್ಟನ್ ಎಕ್ಫೋರ್ಡು ಎಂಬವರು ಪರ್ಶಿಯಾಕ್ಕೆ ಕಳುಹಿಸಲ್ಪಟ್ಟಿದ್ದರು. ಇವರು ಶಿರಾಜಿನ ಸವಿಾಪ ಅಲ್ಲಿಯ ಪಣಗಳವರಿಂದ ಕೊಲ್ಲಲ್ಪಟ್ಟರು ಎಂಬ ವಾರ್ತೆ ಬಂದದೆ. ಕೆಪ್ಟನ್ ಏಕ್ಫೋರ್ಡು ಮತ್ತು ಮೆಜರ್ ಕೆಟ್ಲ್ವೆಲ್ ಎಂಬವರು ೨೬ ಸವಾರರೊಡನೆ ದಶತಾರ್ಕನ್ ಎಂಬಲ್ಲಿಗೆ ಬೇಟೆಗೆ ಹೋಗಿದ್ದಾಗ ಬೊವೇರ ಮಾಥಿಸ್ ಎಂಬ ಪಣಗಳವರಲ್ಲಿ ಸುಮಾರು ೧೦೦ ಮಂದಿ ಇವರ ಮೇಲೆ ಬಿದ್ದರು. ಕೆಪ್ಟನ್ ಎಕ್ಫೋರ್ಡರು ಕೊಲ್ಲಲ್ಪಟ್ಟರು. ರೆಜಿಮೆಂಟಿನ ಅನೇಕ ವೇಸರ ಕತ್ತೆಗಳೂ, ಬುಸ್ಸಯರಿಗೆ ಆ ಮಾರ್ಗವಾಗಿ ಹೋಗುತ್ತಿದ್ದ ವ್ಯಾಪಾರಸ್ಥರ ಬೀಡಿಕೆಯೆಲ್ಲವೂ ಕೊಳ್ಳೆಹೊಡೆಯಲ್ಪಟ್ಟಿತು.

* * *

ಲಂಡನಿನ ನೊರ್ದ್ಈಸ್ಟರ್ನ್ ರೈಲ್ವೆ ಕೆಲಸದವರು ಮುಷ್ಕರ ಹಾಕಿದ್ದರೆಂದು ತಿಳಿಸಿತ್ತಷ್ಟೆ. ಆದರೆ ಈಗ ಕೆಲಸಗಾರರೊಳಗೂ ರೈಲ್ವೇ ಮಾಲಿಕರೊಳಗೂ ಇದ್ದ ಭೇದವು ತಕ್ಕ ರೀತಿಯಲ್ಲಿ ಕೊನೆಗಾಣುವ ಹಾಗೆ ಇದೆ.

* * *

ರಾಜಕೀಯೋದ್ಯೋಗ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟ ಮೆ| ರಾಮ್ಸೆ ಮೆಕ್ಡೊನಾಲ್ಡರವರು ತಾ. ೧೨ರಲ್ಲು ಲಂಡನಿನಿಂದ ಮಾರ್ಸೆಲಿಸಿಗೆ ಹೊರಟರು. ಅಲ್ಲಿ 'ಮೆಕೆದೋನಿಯ' ಎಂಬ ಹಡಗ ಹತ್ತಿ ಹಿಂದೂಸ್ಥಾನಕ್ಕೆ ಬರುವರು.

* * *

ಲಂಡನ್ ಪಟ್ಟಣದ ಲೀಜೆಂಸ್ಕಿ ಎಂಬವರೊಬ್ಬರು ಮೃತಪಟ್ಟರು. ಇವರು ಬಿಗಿಸಿಕೊಂಡಿದ್ದ ಕೃತಕ ಹಲ್ಲಿನ ಚಿನ್ನದ ತಂತಿಯಲ್ಲಿ ಸ್ವಲ್ಪ ಭಾಗವು ಊಟಮಾಡುವಾಗ ಹೇಗೋ ಹೊಟ್ಟೆಗೆ ಸೇರಿತು. ಅದನ್ನು ಹೊರ ತೆಗೆಯಲಿಕ್ಕಾಗದೆ ಅವರು ಮೃತಪಟ್ಟರು.

* * *

ಅಮೇರಿಕದ ಚಿಕಾಗೋ ಪಟ್ಟಣದಲ್ಲಿ ಮಿಸ್ ಎತೆಲ್ ಸ್ಮಿತ್ತ್ ಎಂಬ ಒಬ್ಬ ಚಿಕ್ಕ ಹುಡುಗಿಯು ಬೀದಿಯಲ್ಲಿ ಹೋಗುತ್ತಿದ್ದಾಗ ಎದುರಿಗೆ ಬರುತ್ತಿದ್ದ ಒಂದು ಮೊಟೊರ್ ಗಾಡಿಗೆ ಅವಳು ಸಿಕ್ಕಿಕೊಂಡು ಅವಳ ತೊಡೆಯ ಅರ್ಧ ಭಾಗದ ಚರ್ಮವೆಲ್ಲಾ ಸುಲಿದು ಹೋಯಿತು. ಇದನ್ನು ಕಂಡ ವಿಲಿಯಂ ರಸ್ಸೆಲ್ ಎಂಬ ಒಬ್ಬ ಕುಂಟ ಹುಡುಗನು ಅಲ್ಲಿಗೆ ಬಂದು ಕತ್ತರಿಸಿಹೋದ ಆ ಹುಡುಗಿಯ ತೊಡೆಗೆ ತನ್ನ ತೊಡೆಯ ಚರ್ಮ ಮಾಂಸಗಳನ್ನು ಕೊಯ್ದು ಅಂಟಿಸಿ ಅವಳ ಜೀವ ಉಳಿಸಬೇಕೆಂದು ದಾಕ್ತರರನ್ನು ಕೇಳಿಕೊಂಡನು. ಅದಕ್ಕವರು ನಿನ್ನ ತೊಡೆಯ ಚರ್ಮವನ್ನು ಕತ್ತರಿಸಿ ತೆಗೆದರೆ ನೀನು ಸಾಯಬೇಕಾಗುವದು ಎಂದು ಹುಡುಗನಿಗೆ ಹೇಳಿದರು. ಅದಕ್ಕವನು ತಾನು ಸತ್ತುಹೋದರೂ ಚಿಂತಿಲ್ಲ. ಹುಡುಗಿಯು ಬಚಾವಾಗಬೇಕೆಂದು ಹಟ ಹಿಡಿದದ್ದರಿಂದ ವೈದ್ಯರು ಅವನ ತೊಡೆಯಿಂದ ೧೫೦ ಚದರ ಅಂಗುಲದ ಮಾಂಸ ಕೊಯ್ದು ಆ ಹುಡುಗಿಯ ತೊಡೆಗೆ ಅಂಟಿಸಿ ಸರಿ ಮಾಡಿದರು. ಅವಳು ಬದುಕಿದಳು. ಆದರೆ ಹುಡುಗನು ಶಸ್ತ್ರಪ್ರಯೋಗ ಮಾಡಿ ಮಾಂಸ ತೆಗೆದ ಸ್ವಲ್ಪ ಹೊತ್ತಿನಲ್ಲೇ ಕಾಲವಾದನು. ತಾನು ತಿಳಿಯದೆ ಇಂತಹ ಕೆಲಸವನ್ನು ಮಾಡಿದೆನೆಂದು ಹೇಳಿ ಬಹಳ ದುಃಖದಿಂದ ಆ ಹುಡುಗನು ಪ್ರಾಣಬಿಟ್ಟನಂತೆ.

* * *

ಪಿ ಎಂಡ್ ಒ ಕಂಪೆನಿಯ ಮಲೋಜ ಹಡಗದಲ್ಲಿ ಮುಂಬಾಯಿಗೆ ೩೦೦,೦೦೦ ಪವನು ಬರುತ್ತಲಿದೆ.

* * *

ಹವನ್ನದಲ್ಲಿ ಈ ವರ್ಷ ೨,೧೫೦,೦೦೦–೨,೩೫೫,೦೦೦ ಟನ್ ಸಕ್ಕರೆಯಾಗಬಹುದೆಂದು ಅಂದಾಜಾಗಿಯದೆ. ಅಲ್ಲಿ ಸಕ್ಕರೆ ಮಾಡುವ ೧೫೦ ಕಾರ್ಖಾನೆಗಳು ಇವೆ.

* * *

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಸರ್ ಎಡ್ವರ್ಡ್ ಗ್ರೇರವರು ಸಿರಾಜಿನಲ್ಲಿ ಕೆಪ್ಟನ್ ಎಕ್ಫೋರ್ಡರವರು ಕೊಲ್ಲಲ್ಪಟ್ಟ ಸಂಬಂಧ ಸರಕಾರದವರು ತಕ್ಕ ವಿಚಾರ ನಡಿಸುವರೆಂದು ಹೇಳಿದರು.

* * *

ರಾಜಕೀಯೋದ್ಯೋಗ ಸಭೆಯ ಮೆಂಬರರೆಲ್ಲರೂ ಹಿಂದೂಸ್ಥಾನಕ್ಕೆ ಬರಲು ತಾ. ೧೨ರಲ್ಲು ಹಡಗ ಹತ್ತಿದರು.

* * *

ಬ್ರಿಟಿಷ್ ಸಾಮ್ರಾಜ್ಯದ ನೌಕಾಬಲವನ್ನು ಹೆಚ್ಚಿಸುವರೆ ೭ ಮಿಲಿಯ ಪವನುಗಳನ್ನು ಬ್ರಿಟಿಷ್ ಸರಕಾರದವರಿಗೆ ಕೊಡತಕ್ಕದ್ದು ಎಂಬದಾಗಿ ಕೆನಡಾ ದೇಶದ ಮಂತ್ರಿಯಾದ ಮೆ| ಬೋರ್ಡೆನರು ಕೆನಡಾ ಮಂತ್ರಿ ಸಭೆಯಲ್ಲಿ ಕಳದ ವಾರ ಹೇಳಿದ್ದರು. ಈ ಆಲೋಚನೆಯನ್ನು ನ್ಯೂಜಿಲೇಂಡಿನ ಮಂತ್ರಿಯವರು ಸಹಾ ಹೊಗಳಿ, ಕೆನಡಾ, ಆಸ್ಟ್ರೇಲಿಯ, ನ್ಯೂಜಿಲೇಂಡ್, ದಕ್ಷಿಣ ಆಫ್ರಿಕ, ಹಿಂದೂಸ್ಥಾನ ಇವೆಲ್ಲವೂ ಪರಸ್ಪರ ಒಟ್ಟಾಗಿ ಬ್ರಿಟಿಷ್ ನೌಕಾವಳಿಯನ್ನು ಹೆಚ್ಚಿಸಿ ಅದು ಲೋಕದ ಎಲ್ಲಾ ಸಾಗರಗಳಲ್ಲಿ ಶ್ರೇಷ್ಠವೆಂದೆನ್ನಿಸಲ್ಪಡುವ ಹಾಗೆ ಮಾಡುವುದು ವಿಹಿತವೆಂದು ಹೇಳಿರುವರು.

ತಾ. ೧೩ರಲ್ಲು ಕೆನಡಾ ಪಾರ್ಲಿಮೆಂಟ್ ಸಭೆಯು ಕೂಡಿದಾಗ ಮೆ| ಬೋರ್ಡೆನರ ನೌಕಾವಳಿ ಮಸೂದೆಯಲ್ಲಿ ತುಸ ಬದಲಾವಣೆಯನ್ನು ಮಾಡಬೇಕೆಂಬ ಆಲೋಚನೆಯು ಸರ್ ವಿಲ್ಫ್ರಿಡ್ ಲುರಿಯರ್ ಎಂಬವರಿಂದ ಸಭಾ ಮುಂದಿಡೋಣಾಯಿತು. ಮೆ| ಬ್ರೊಡೆನರವರು ಶ್ರೇಷ್ಠವಾದ ಡ್ರೆಡ್ನೊಟುಗಳೆಂಬ ಯುದ್ಧ ಹಡಗಗಳನ್ನು ಮಾಡಿಸಿ ಬ್ರಿಟಿಷ್ ಸರಕಾರಕ್ಕೆ ಕೊಡಬೇಕೆಂದು ಹೇಳಿದ್ದರು. ಆದರೆ ವಿಲ್ಫ್ರಿಡರು ಕೆನಡಾ ನೌಕಾವಳಿಯನ್ನು ಅತ್ಲಾಂತಿಕ ಮತ್ತು ಶಾಂತ ಸಾಗರದಲ್ಲಿ ಕೆನಡಾ ಸರಕಾರದ ಆಡಳಿತೆಯೊಳಗೆ ಇಡುವ ವಿಲೆವಾರಿ ಮಾಡಿ, ಗ್ರೇಟ್ ಬ್ರಿಟಾನಿಗೆ ಅವಶ್ಯಬಿದ್ದಾಗ ಕೊಡುವುದು ಒಳ್ಳೇದು ಎಂಬ ತಿದ್ದುಪಡಿ ಮಾಡಬೇಕೆಂದು ಹೇಳಿದರು. ಇವರು ತನ್ನ ಭಾಷಣದಲ್ಲಿ ಕೆನಡಾಕ್ಷೆಸರಕಾರದವರು ಬ್ರಿಟಿಷರಿಗೆ ನೌಕಾವಳಿಯನ್ನು ಹೆಚ್ಚಿಸುವರೆ ವಂತಿಗೆ ಕೊಡುತ್ತೇವೆಂದು ಹೇಳಿದ್ದು ನ್ಯಾಯವಲ್ಲವೆಂಬದಾಗಿ ಖಂಡಿಸಿದರು. ಆದರೆ ಇವರ ಆಲೋಚನೆಗೆ ಇತರ ಮೆಂಬರರು ಒಪ್ಪದೆ ಮೆ|ಬೊರ್ಡೆನರ ಮಸೂದೆಯನ್ನೇ ಅನುಮೋದಿಸಿ 'ರೂಲ್ ಬ್ರಿಟಾನಿಯ' ಎಂಬ ಗಾಯನವನ್ನು ಹಾಡಿ ಬಹಳ ಸಂತೋಷ ಮಾಡಿದರು.

* * *

ಲಂಡನಿನ ಲೀವರ್ಪೂಲಿನಲ್ಲಿ ಒಂದು ವಿಚಿತ್ರವಾದ ಸಂಗತಿಯು ನಡೆಯಿತು. ಪ್ರಾಪ್ತ ವಯಸ್ಕನಾದ ಒಬ್ಬ ಕೂಲಿಯವನು ಅದೇ ಸ್ಥಳದಲ್ಲಿದ್ದ ಒಬ್ಬ ಜವಾಹಿರಿ ವ್ಯಾಪಾರಸ್ಥನ ಮಾಳಿಗೆಯ ಕಿಟಕಿಗಳನ್ನು ಚೂರು ಚೂರಾಗಿ ಮಾಡಿ ತನ್ನ ಕೈಗಳನ್ನು ಒಳ ಹಾಕಿ ಅಲ್ಲಿದ್ದ ಚಿನ್ನಾಭರಣಗಳನ್ನು ಹಿಡಿ ತುಂಬಾ ಹಿಡಿದು "ಇಗೋ ನೋಡಿ" ಎಂದು ಕೂಗಿಕೊಳ್ಳುತ್ತಾ ಮಾರ್ಗದಲ್ಲಿ ಬಿಸಾಡಿದನು. ಅಷ್ಟರಲ್ಲಿ ಜನರ ಗುಂಪು ಬೀದಿ ತುಂಬಾ ಕೂಡಿ ದಾರಿಯಲ್ಲಿ ಬಿದ್ದಿದ್ದ ಆಭರಣಗಳನ್ನು ಹಿಡಕೊಂಡು ಕೆಲವರು ಹೋಗಿಯೇ ಬಿಟ್ಟರು. ಕೆಲವರು ಅಂಗಡಿ ಯಜಮಾನನಿಗೆ ಒಪ್ಪಿಸಿದರು. ಅಂಗಡಿ ಯಜಮಾನನು ಅಷ್ಟರಲ್ಲಿ ಪೋಲೀಸಿಗೆ ತಿಳಿಸಿದ್ದಲ್ಲಿ ಪೋಲೀಸಿನವರು ಬಂದು ಅಪರಾಧಿಯನ್ನು ಕೈದುಮಾಡಿದರು. ಅಪರಾಧಿಯು ತನಗಾಗಿ ಒಂದೇ ಒಂದು ನಗವನ್ನಾದರೂ ಇಟ್ಟುಕೊಳ್ಳಲಿಲ್ಲ. ಈ ರೀತಿಯಾದರೂ ಕೆಲವರಿಗೆ ಸಹಾಯ ಮಾಡಬೇಕೆಂತ ಹೀಗೆ ಮಾಡಿದೆನು ಎಂದು ಹೇಳುತ್ತಾನೆ. ಈ ಕಳವಿನಲ್ಲಿ ೫೦ ಉಂಗುರಗಳೂ, ೪೦ ಬ್ರೆಸ್ಲೆಟ್ಗಳೆಂಬ ನಗಗಳೂ, ೩೦ ಕಂಠಾಭರಣಗಳೂ, ೧೭ ಕ್ರೈಸ್ಟಿಡುಗಳೂ ನಷ್ಟವಾದವು.

* * *

ಬುಡ್ಡಾಪೆಸ್ಟಿನ ಚಕ್ರವರ್ತಿಯವರಾದ ಫ್ರಾನ್ಸಿಸ್ ಜೋಸೆಫರವರಿಗೆ ಬೆಳಿಗ್ಯೆ ೩॥ ಘಂಟೆಗೆ ಎದ್ದೇಳಿ ಕೂಡ್ಲೇ ಬೆಳಗ್ಗಿನ ಆಹಾರ ತೀರಿಸುವ ಅಭ್ಯಾಸ. ಆದ್ದರಿಂದ ಮನೇ ಸೇವಕರೂ ಬೇಗನೇ ಎದ್ದು ಅಡಿಗೆ ಮಾಡಬೇಕಾಗಿದೆ. ಈಚೆಗೆ ಒಂದು ದಿನ ಅಡಿಗೆಭಟ್ಟನು ಚಕ್ರವರ್ತಿಯವರಿಗೆ ಊಟಕ್ಕೆ ಘಂಟೆ ಬಾರಿಸಿ ಅಡಿಗೆ ಕೋಣೆಗೆ ಹೋಗಲು ಅವನು ತಯಾರಿಸಿದ್ದ ಎರಡು ಒಳ್ಳೇ ಪದಾರ್ಥಗಳು ಕಾಣದೆ ಹೋಗಿತ್ತು. ಇವನು ಗಾಭರಿ ಮತ್ತು ಆಶ್ಚರ್ಯಪಟ್ಟು ಈ ವಿಷಯವನ್ನು ಅರಮನೆಯ ಗುಪ್ತ ಪೋಲೀಸಿನವನಿಗೆ ತಿಳಿಸಲು ಅವನು ಅರಮನೆಯ ಸುತ್ತಲೂ ಪಹರೆ ಇಟ್ಟು ಒಳಗೆಲ್ಲಾ ಪ್ರತಿ ಮೂಲೆ ಸಂದುಗಳಲ್ಲಿ ಹುಡುಕಲು ಉಪಕ್ರಮಿಸಿದನು. ಒಂದು ಕಡೆ ನೆಲದ ಮೇಲೆ ಬೂಟ್ಸಿನ ಹೆಜ್ಜೆ ಗುರ್ತುಗಳು ಕಂಡು ಬಂತು. ಈ ಪದಾರ್ಥಗಳನ್ನು ಹಾಕಿದ್ದ ಬಿಳೀ ಬಣ್ಣದ ಡ್ರಾವಿನ ಮೇಲೆ ಒಂದು ಕಪ್ಪು ಬೆಟ್ಟಿನ ಗುರ್ತು ಕಂಡು ಬಂತು. ಹೀಗೆ ಪತ್ತೆದಾರನು ಈ ಗುರ್ತು ಹಿಡಕೊಂಡು ಹೋಗುತ್ತಿರುವಲ್ಲಿ ಕದ್ದ ಕಳ್ಳನು ಚಕ್ರವರ್ತಿಯವರಿಗಾಗಿ ತಯಾರಿಸಿಟ್ಟಿದ್ದ ಪದಾರ್ಥಗಳನ್ನು ಕೋಣೆಯ ಒಂದು ಕಡೆ ಕೂತು ತಿನ್ನುತ್ತಾ ಇದ್ದವನನ್ನು ಕಂಡು ಕೈದುಮಾಡಿ ವಿಚಾರಣೆಗೆ ಗುರಿಮಾಡಿದರು.

* * *

ರುಷ್ಯ ದೇಶದ ಯುವರಾಜರು ಕೆಲವು ಸಮಯದಹಿಂದೆ ಒಂದು ಅವಗಡಕ್ಕೆ ಸಿಕ್ಕಿ ಈಗ ಆರೋಗ್ಯವನ್ನು ಕಳಕೊಂಡಿರುವುದರಿಂದ ತ್ಸಾರರ ಸೋದರಅಳಿಯನಾದ ಗ್ರೇಂಡ್ ಡ್ಯೂಕ್ ದಿಮಿತ್ರಿ ಎಂಬವರನ್ನು ಯುವರಾಜರಾಗಿ ಮಾಡಿ ಅವರಿಗೆ ತ್ಸಾರರ ಹಿರೇ ಮಗಳಾದ ಒಲ್ಗ ಎಂಬವಳನ್ನು ವಿವಾಹಮಾಡಿ ಕೊಡುವ ಆಲೋಚನೆ ನಡದದೆ ಎಂಬದಾಗಿ ತಿಳಿದು ಬರುತ್ತದೆ. ಗ್ರೇಂಡ್ ಡ್ಯೂಕ್ ದಿಮಿತ್ರಿ ೧೮೯೧ನೇ ಇಸವಿಯಲ್ಲಿಯೂ ಗ್ರೇಂಡ್ ಡಚೆಸ್ ಒಲ್ಗರವರು ೧೮೯೫ರಲ್ಲಿಯೂ ಜನಿಸಿದರು.

* * *

ಯುದ್ಧವಾರ್ತೆ:—ಗ್ರೀಕ್, ಸರ್ವಿಯ, ಮೊಂಟಿನಿಗ್ರೋ, ಬಲ್ಗೇರಿಯ ತುರ್ಕಿಯರ ಸಂಧಾನ ಪ್ರತಿನಿಧಿಗಳು ಲಂಡನಿಗೆ ಬಂದು ತಲಪಿರುವರು. ಸಂಧಾನ ಸಭೆಯು ಕೂಡುವ ದಿನ ಸರ್ ಎಡ್ವರ್ಡ್ ಗ್ರೇರವರು ಈ ಪ್ರತಿನಿಧಿಗಳನ್ನು ಸ್ವಾಗತ ಮಾಡಿಕೊಳ್ಳುವರು.

ಲಂಡನಿನ ಪಟ್ಟಣಪಾಲಕರು ಈ ಪ್ರತಿನಿಧಿಗಳನ್ನು ಔತಣಕ್ಕೆ ಆಮಂತ್ರಿಸಬೇಕೆಂದಿರುವರು. ಸಂಧಾನ ಸಭೆ ಕೂಡುವ ಸೆಂಟ್ ಜೇಮ್ಸ್ ಅರಮನೆಯು ಬಹು ವಿಚಿತ್ರವಾದ ಪಠಗಳಿಂದ ಶೃಂಗರಿಸಲ್ಪಟ್ಟಿದೆ. ಸಂಧಾನ ಸಭೆ ಕೂಡುವ ಕೋಣೆಯಲ್ಲಿ ೨೦ ಆಸನಗಳ ಸಹಿತವಾದ ೧ ದೊಡ್ಡ ಮೇಜೂ ಚಾರ್ಲ್ಸ್ ಅರಸರ ಕಾಲದ ಪ್ರಿವಿ ಕೌನ್ಸಿಲಿನವರ ಶಾಯಿದವತಿಗಳೂ, ಮತ್ತು ಇಕ್ಕಡೆಗಳಲ್ಲಿರುವ ಸೆಕ್ರೆಟರಿಗಳ ಮೇಜುಗಳಲ್ಲಿ ನಕ್ಷೆಗಳೂ ಇಡಲ್ಪಟ್ಟಿವೆ. ಪ್ರತಿನಿಧಿಗಳಿಗೆ ಚುರುಟು ಸೇದುವರೆ, ಸರಸಸಲ್ಲಾಪ ಮಾಡುವರೆ, ಫಲಹಾರ ತಕ್ಕೊಳ್ಳುವರೆ ಇತರ ಕೋಣೆಗಳೂ ಇವೆ.

ಸಂಧಾನ ಸಭೆಯ ಚಿನ್ನೆಗಳು ಅಷ್ಟೊಂದು ಒಳ್ಳೇಯದಾಗಿಲ್ಲ ಎಂಬದಾಗಿ ಪ್ರಕಟವಾಗಿದೆ.

ಬಲ್ಗೇರಿಯ ಪ್ರತಿನಿಧಿಯಾದ ಡಾಕ್ಟರ್ ಡೆನಿಫರವರು ಲಂಡನಿಗೆ ಹೋಗುತ್ತಿರುವಾಗ ಪತ್ರಪ್ರತಿನಿಧಿಗಳು ಅವರಿಗೆ ಭೇಟಿಕೊಟ್ಟಲ್ಲಿ ಅಡ್ರಿನೋಪಲ್ ಬಲ್ಗೇರಿಯರಿಗೆ ಶರಣಾಗತವಾಗಿಯದೆಂದು ತುರ್ಕರು ಒಪ್ಪದಿದ್ದರೆ ಯುದ್ಧವು ಪುನಃ ಪ್ರಾರಂಭವಾಗುವದು ಎಂದು ಹೇಳಿರುವರು. ಇತ್ತಕಡೆ ತುರ್ಕ ಪ್ರತಿನಿಧಿಯಾದ ರಶಿದ್ ಪಾಶರವರು ತುರ್ಕರ ಸ್ಥಿತಿಯು ಬಹಳ ಒಳ್ಳೇ ರೀತಿಯಲ್ಲಿರುವದರಿಂದ ಸಂಧಾನದ ಶರ್ತಗಳು ತಮಗೆ ಅನುಕೂಲವಾಗಿರದಿದ್ದರೆ ಸಂಧಾನಕ್ಕೆ ಒಪ್ಪುವ ಹಾಗಿಲ್ಲವೆಂದು ಹೇಳಿರುವರು.

ಅಡ್ರಿಯಾಟಿಕ್ ಬಂದರದ ಹಕ್ಕಿನ ವಿಷಯ ಸರ್ವಿಯ ಪತ್ರಗಳು ಆಸ್ಟ್ರೀಯದವರನ್ನು ಬಹಳವಾಗಿ ಖಂಡನೆಮಾಡುತ್ತಲಿವೆ. ಅಡ್ರಿಯಾಟಿಕ್ ಬಂದರದ ವಿಷಯ ಸಂಧಾನ ಸಭೆಯಲ್ಲಿ ಚರ್ಚೆಯಾಗಬಾರದೆಂತ ಆಸ್ಟ್ರೀಯದವರ ಅಪೇಕ್ಷೆಯೆಂದೂ ಇಟಾಲಿಯರು ಆಸ್ಟ್ರೀಯದ ಈ ಅಪೇಕ್ಷೆಯನ್ನು ಖಂಡಿಸಿದ್ದಾರೆಂದೂ ಟ್ರಿಬ್ಯೂನ್ ಪತ್ರಿಕೆಯು ಹೇಳುತ್ತದೆ.

ಎಫಿರಸ್ ಎಂಬಲ್ಲಿ ತುರ್ಕರಿಗೂ ಗ್ರೀಕರಿಗೂ ಕಠಿಣ ಕಾಳಗ ನಡೆಯುತ್ತಿದೆ. ಈ ಕಾಳಗದಲ್ಲಿ ಗ್ರೀಕ ಸೈನೀಕರಲ್ಲಿ ೨೦೦ ಮಂದಿ ಗಾಯ ವೊಡೆದರು ಎಂದು ಅಥೆನ್ಸಿನಲ್ಲಿ ಪ್ರಕಟವಾಗಿದೆ.

ಗ್ರೀಕರು ತಾತ್ಕಾಲಿಕ ಯುದ್ಧ ನಿಲ್ಲಿಸುವ ಪತ್ರಿಕೆಗೆ ಸಹಿ ಮಾಡುವ ವಿನಹಾ ಅವರ ಪ್ರತಿನಿಧಿಗಳನ್ನು ಲಂಡನ್ ಸಂಧಾನ ಸಭೆಯಲ್ಲಿ ಭೇಟಿ ಕೊಡ ಕೂಡದೆಂದು ತುರ್ಕಿ ಪ್ರತಿನಿಧಿಗಳಿಗೆ ತುರ್ಕಿ ಸರಕಾರದಿಂದ ಅಪ್ಪಣೆಯಾಗಿರುವುದು.

ಗ್ರೀಕರ ಪ್ರತಿನಿಧಿಗಳಿಗೆ ಸಂಧಾನ ಸಭೆಯಲ್ಲಿ ಭೇಟಿ ಕೊಡಬಹುದೆಂದು ಕನ್‌ಸ್ತಂತಿನೋಪಲಿನಿಂದ ಲಂಡನಿನಲ್ಲಿರುವ ತುರ್ಕಿ ಸಂಧಾನ ಪ್ರತಿನಿಧಿಗಳಿಗೆ ತಾ. ೧೫ರಲ್ಲು ತಂತೀ ಬಂದಿರುವುದು.

ತಾ. ೧೪ರಲ್ಲು ಗ್ರೀಕರು ಎಟಿರೋಚನ್ ಎಂಬ ತುರ್ಕರ ಪಟ್ಟಣವನ್ನು ಹಿಡಕೊಂಡರು. ಜೆನೀನದ ಸಮೀಪ ಗ್ರೀಕರನ್ನು ತುರ್ಕರು ಸೋಲಿಸಿದರು. ಗ್ರೀಕರು ಜೆನೀನದ ದಕ್ಷಿಣ ದಿಕ್ಕಿನಲ್ಲಿರುವ ಪರಮಾಥಿಯವನ್ನು ಹಿಡಕೊಂಡರು. ಇಲ್ಲಿ ಒಂದು ಇಡೀ ದಿನ ಕಠಿಣ ಕಾಳಗ ನಡೆಯಿತು. ಎಟಿರೋಚನ್ ಎಂಬಲ್ಲಿ ತುರ್ಕರು ೩೦ ಫಿರಂಗಿಗಳಸಹಿತ ಕಂದಕಗಳಲ್ಲಿ ಸೇರಿಕೊಂಡು ಗ್ರೀಕರನ್ನು ಎದುರಿಸಿದರು. ಗ್ರೀಕರಲ್ಲಿ ಕೆಲವು ನಿಮಿಷದೊಳಗೆ ೨೦೦ ಮಂದಿ ಮಡಿದರು, ಆದರೆ ಗ್ರೀಕರು ಧೈರ್ಯಗೆಡದೆ ಮುಂದೊತ್ತಿ ತುರ್ಕರ ಮೇಲೆಬಿದ್ದು ಅವರನ್ನು ಸೋಲಿಸಿ ೭ ಫರಂಗಿಗಳನ್ನು ಹಿಡಕೊಂಡರು.

ತಾ. ೧೬ ಸಂಧಾನ ಸಭೆಯು ತಾ. ೧೭ರಲ್ಲು ಪ್ರಾರಂಭವಾಯಿತು. ಪ್ರಥಮತಾ ತುರ್ಕ ಪ್ರತಿನಿಧಿಗಳು ಸೆಂಟ್ ಜೇಮ್ಸ್ ಅರಮನೆಗೆ ಚಿತ್ತೈಸಿದರು. ಅನಂತರ ಸರ್ವಿಯ, ಮೊಂಟೆನಿಗ್ರೋ, ಬಲ್ಗೇರಿಯ, ಗ್ರೀಕ್ ಪ್ರತಿನಿಧಿಗಳು ಬಂದರು. ಸರ್ ಎಡ್ವರ್ಡ್ ಬೇಕರವರು ಇವರನ್ನು ಸ್ವಾಗತ ಮಾಡಿಕೊಂಡು ಸ್ವಾಗತ ಭಾಷಣವನ್ನು ಮಾಡಿ ಸಂಧಾನವಾಗುವ ಅವಶ್ಯಕತೆಯನ್ನು ತೋರಿಸಿಕೊಟ್ಟರು. ಅನಂತರ ಸರ್ ಎಡ್ವರ್ಡ್ ಗ್ರೇಯರವರನ್ನು ಆಯಾ ರಾಜಗಳ ಪ್ರತಿನಿಧಿಗಳು ಸಂಧಾನ ಸಭೆಯ ಒನರರಿ ಪ್ರೆಸಿಡೆಂಟರಾಗಿ ಮಾಡಿದರು.

* * *

ಪರ್ಶಿಯದಲ್ಲಿ ಕೆಪ್ಟನ್ ಎಕ್‌ಫೋರ್ಡರನ್ನು ಕೊಂದವರನ್ನು ಹಿಡಿದು ಕಠಿಣಶಿಕ್ಷೆಗೆ ಗುರಿಮಾಡದಿದ್ದ ಪಕ್ಷಕ್ಕೆ ಕೂಡ್ಲೇ ತಾವು ತಕ್ಕ ವಿಲೆವಾರಿ ಮಾಡುವೆವೆಂದು ಬ್ರಿಟಿಷ್ ಸರಕಾರದವರು ಪರ್ಶಿಯಾ ಸರಕಾರದವರಿಗೆ ತಿಳಿಸಿರುವರು. ಪರ್ಶಿಯಾ ಸರಕಾರದವರು ಕೂಡ್ಲೇ ತಕ್ಕ ವಿಲೆವಾರಿ ಮಾಡುವೆವೆಂದು ಬ್ರಿಟಿಷ್ ಸರಕಾರದವರಿಗೆ ಉತ್ತರಕೊಟ್ಟಿರುವರು.

* * *

ಉತ್ತರ ಹಿಂದೂಸ್ಥಾನ.

ಇದೇ ತಾ. ೯ಕ್ಕೆ ಅಂತ್ಯವಾಗುವ ವಾರದಲ್ಲಿ ಕರಾಚಿಯಿಂದ ೩೯೯,೩೬೮ ಹಂಡ್ರುಟ್‌ವೇಟ್ ಗೋಧಿಯು ಪರದೇಶಗಳಿಗೆ ಕಳುಹಿಸಲ್ಪಟ್ಟಿತು. ಇದೇ ಜನವರಿಯಿಂದ ಈ ತನಕ ಒಟ್ಟಿಗೆ ೨೬೧,೯೫೫,೨೫ ಹಂಡ್ರುಟ್‌ವೇಟ್ ಗೋಧಿಯು ರಪ್ತಾಯಿತು.

* * *

ದಕ್ಷಿಣ ಆಫ್ರೀಕಕ್ಕೆ ಹೋಗಿದ್ದ ಬಹುಮಾನಪಟ್ಟ ಗೋಖಲೆಯವರು ಇದೇ ತಾ. ೧೪ನೇ ಸಾಯಂಕಾಲ ಮುಂಬಾಯಿ ಅಪಲ್ಲೊ ಬಂದರದಲ್ಲಿ ಹಡಗದಿಂದಿಳಿದರು ಬಂದರಿಗೆ ಮುಂಬಾಯಿಯ ಮಾನ್ಯಗೃಹಸ್ಥರನೇಕರು ಬಂದಿದ್ದು ಗೋಖಲೆಯವರನ್ನು ಸ್ವಾಗತಮಾಡಿಕೊಂಡರು. ಅಂಜುಮಾನ್ ಇಸ್ಲಾಮಿಯದ ಪ್ರೆಸಿಡೆಂಟರು ಗೋಖಲೆಯವರಿಗೆ ಪುಷ್ಪಮಾಲೆಯನ್ನು ಹಾಕಿದನಂತರ ಗೋಖಲೆಯವರು ಕೂಡಿದ ಜನಸಂದಣಿಯ ಧನ್ಯವಾದದೊಡನೆ ಬಂದರದಿಂದ ಮಲಬಾರ್ ಹಿಲ್ಲಿನಲ್ಲಿರುವ ಮಾಜಿ ಸೆರಿಫರ ಬಂಗ್ಲೆಗೆ ಹೋದರು. ಅಲ್ಲಿ ಅತಿಥಿಗಳಾಗಿರುವರು.

* * *

ದಕ್ಷಿಣ ಮಹರಾಷ್ಟ್ರ ರೈಲ್ವೆಯ ಚೀಫ್ ಇಂಜಿನಿಯರರಾಗಿದ್ದ ಮೆ. ಎ. ಜೆ. ಹಡ್ಲ್‌ಸ್ಟನ್‌ರವರು ತಾ. ೧೩ನೇ ಬೆಳಿಗ್ಯೆ ಧಾರವಾಡದಲ್ಲಿ ಪರವನ್ನೈದಿದರು. ಇವರ ಆರೋಗ್ಯವು ಕೆಲವು ಸಮಯದಿಂದೀಚೆಗೆ ಕೆಟ್ಟಿತ್ತು. ಆದ್ದರಿಂದ ಬರುವ ಪೆಬ್ರುವರಿಗೆ ಇಂಗ್ಲಾಂಡಿಗೆ ರಜೆಯ ಮೇಲೆ ಹೋಗಬೇಕೆಂದಿದ್ದರು. ಆದರೆ ಥಕ್ಕನೇ ಇವರ ಆರೋಗ್ಯವು ಪೂರ್ಣವಾಗಿ ಕೆಟ್ಟುಹೋಗಿ ಮೃತಪಟ್ಟರು.

* * *

ಮುಂಬಾಯಿಯ ಕುದುರೆಲಾಯ ಒಂದಕ್ಕೆ ತಾ. ೧೪ರಲ್ಲು ಬೆಂಕಿಬಿದ್ದು ೧೪ ಕುದುರೆಗಳು ಸುಟ್ಟುಹೋದವು. ಒಂದು ಅರೆ ಪ್ರಾಣದಲ್ಲಿರುವುದು. ಒಟ್ಟಿಗೆ ಈ ಕುದುರೆ ಮಾಲೀಕರಿಗೆ ಆದ ನಷ್ಟ ೬೦,೦೦೦ ರೂಪಾಯಿ. ಬೆಂಕಿ ಆರಿಸುವ ಯಂತ್ರ ಕೆಲಸದವರೂ ಪೋಲೀಸಿನವರೂ ಭಗೀರಥ ಪ್ರಯತ್ನಮಾಡಿ ಬೇಗನೇ ಬೆಂಕಿ ಆರಿಸಿದಲ್ಲದೆ ಇತರ ಲಾಯಗಳ ಕುದುರೆಗಳನ್ನೆಲ್ಲಾ ಬಹು ಬೇಗನೇ ಬಿಚ್ಚಿ ಹೊರಬಿಟ್ಟರು. ಇಲ್ಲವಾದರೆ ಈ ಲಾಯದ ಎದುರಿಗೆ ಇದ್ದ ಇತರ ೭ ಲಾಯಗಳ ಕುದುರೆಗಳೂ ಸುಟ್ಟುಹೋಗಿ ಬಹಳ ನಷ್ಟವಾಗುವ ಸಂಭವವಿತ್ತು.

* * *

ಕಲ್ಕತ್ತೆಯ ಟೊಲಿಗಂಜಿಯಲ್ಲಿ ತಾ. ೧೩ನೇ ಬೆಳಿಗ್ಯೆ ಆಯುಧಪಾಣಿಗಳಾದ ೨೫ ಮಂದಿ ದಕಾಯಿತರು ಒಂದು ಮನೆ ನುಗ್ಗುವಾಗ ಪೋಲೀಸಿನವರಿಂದ ತಡೆಯಲ್ಪಟ್ಟಲ್ಲಿ ದಕಾಯಿತರು ಪೋಲೀಸಿನವರೊಂದಿಗೆ ಕಾದಾಡಿದರು. ಪೋಲೀಸ್ ಡ್ಯುಪಿಟಿ ಕಮಿಷನರಾದ ಮೆಸ್ಸರ್ ನೊಮೆನ್ ಮತ್ತು ಬ್ರೊಮೇಜರವರು ಗಾಯಪಟ್ಟರು. ಆದರೂ ಬಹಳ ಕಷ್ಟದಿಂದ ೧೭ ದಕಾಯಿತರನ್ನು ಪೋಲೀಸಿನವರು ಕೈದುಮಾಡಿದರು.

* * *

ಬಾಲ್ಕಾನ್ ಯುದ್ಧದಲ್ಲಿ ಗಾಯಪಟ್ಟ ತುರ್ಕರ ಸಹಾಯಾರ್ಥವಾಗಿ ಹಿಂದೂಸ್ಥಾನದಲ್ಲಿ ಕೂಡಿಸಿದ 'ಲೇಡಿ ಲೌತರ್ಸ್' ಎಂಬ ಫಂಡಿಗೆ ೫೧ ಸಾವಿರ ರೂಪಾಯಿ ಜಮೆಯಾಯಿತು. ಈ ಫಂಡಿಗೆ ವ್ಯಾಸರಾಯರವರು ೧೦೦೦ ರೂಪಾಯಿ, ಭವಲ್‌ಪುರ ಸ್ಟೇಟಿನಿಂದ ೧೫ ಸಾವಿರ ರೂಪಾಯಿ, ಇನ್ನು ಹೈದರಾಬಾದ್ ಮೊದಲಾದ ಇತರ ಸ್ಥಳಗಳಿಂದ ಉಳಿದ ಹಣವು ಜಮೆಯಾಯಿತು.

* * *

ಸ್ಥಾಪಿಸಲಿಕ್ಕಿರುವ ಹಿಂದೂ ವಿಶ್ವವಿದ್ಯಾಕಲಾಶಾಲೆಯ ಪ್ರಥಮ ವಾರ್ಷಿಕ ಸಭೆಯು ತಾ. ೧೨ರಲ್ಲು ಅಲ್ಲಹಬಾದಿನಲ್ಲಿ ಕೂಡಿತು. ಈ ಫಂಡಿಗೆ ೧ ಲಕ್ಷರೂಪಾಯಿಯಿಂದ ೫ ಲಕ್ಷರೂಪಾಯಿ ಕೊಡುತ್ತೇವೆಂದು ವಾಗ್ದಾನಮಾಡಿದ ೧೭ ಮಂದಿ; ೫೦೦ ರೂಪಾಯಿಗಳ ವಾಗ್ದಾನಮಾಡಿದ ೮೦೦ ಮಂದಿ; ಇದಕ್ಕಿಂತಲೂ ಕಮ್ಮಿ ಮೌಲ್ಯವನ್ನು ವಾಗ್ದಾನ ಮಾಡಿದ ೧೦,೦೦೦ ಮಂದಿ ಇದ್ದಾರೆ. ಇದಲ್ಲದೆ ವರ್ಷಂಪ್ರತಿ ಖಾಯಂ ವಂತಿಗೆಕೊಡುವರೆ ವಾಗ್ದಾನಮಾಡಿದ ಒಟ್ಟು ಮೌಲ್ಯವು ೧೨,೦೦೦ ರೂಪಾಯಿಗಳಾಗುವದು. ವಾಗ್ದಾನ ಮಾಡಿದ ಹಣವೆಲ್ಲವೂ ಒಟ್ಟಾದರೆ ೬೭ ಲಕ್ಷರೂಪಾಯಿಯಾಗುವದು. ಈ ವರೇಗೆ ವಸೂಲಾದ ಹಣ ೭ ಲಕ್ಷರೂಪಾಯಿ. ವಾಗ್ದಾನ ಮಾಡಿದವರಲ್ಲಿ ದೇಶೀಯರೂ, ಯೂರೋಪಿಯಾನರೂ ಕೆಲವು ಯೂರೋಪಿಯ ಹುದ್ದೆದಾರರೂ ಸೇರಿರುವರು ಎಂಬದಾಗಿ ತಿಳಿದು ಬಂತು. ಮುಂದಿನ ವರ್ಷಕ್ಕೂ ದರ್ಭಂಗ ಮಹಾರಾಜರವರು ಈ ಫಂಡಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು.

* * *

ಬರುವ ವರ್ಷದ ರಾಷ್ಟ್ರೀಯ ಸಭೆಯು ಕರಾಚಿಯಲ್ಲಿ ಕೂಡಬೇಕೆಂಬ ಆಲೋಚನೆಯಾಗಿರುವುದು.

* * *

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಕ್ರಿಸ್ಚಿಯನ್ ಕಾಲೇಜಿಯ ಇಂಗ್ಲಿಷ್ ಪ್ರೊಫೆಸರರಾದ ರೆವರೆಂಡ್ ಐ. ಎಮ್. ಕ್ರೇಗ್ ಎಮ್. ಎ. ಬಿ. ಡಿರವರು ತಾ. ೯ರಲ್ಲು ಪರವನ್ನೈದಿದರು. ಇವರು ಸೋಮವಾರ ಬೆಳಿಗ್ಯೆ ಮದ್ರಾಸ್ ಜನರಲ್ ಆಸ್ಪತ್ರಿಯಲ್ಲಿ ಶಸ್ತ್ರಪ್ರಯೋಗ ಮಾಡಿಸಿದ್ದರು. ರಾತ್ರಿ ೮ ಗಂಟೆಗೆ ಇವರು ಮೃತಪಟ್ಟರು. ಮೃತರು ಕಳೆದ ವರ್ಷ ಜುಲ್ಯಾ ತಿಂಗಳಲ್ಲಿ ಇಂಗ್ಲಾಂಡಿನಿಂದ ಬಂದು ಕಾಲೇಜಿಯ ಪ್ರೊಫೆಸರರಾಗಿ ನೇಮಿಸಲ್ಪಟ್ಟು ಬಹಳ ಬುದ್ಧಿವಂತರೆಂದು ಹೆಸರು ಪಡೆದಿದ್ದರು.

* * *

ಮೈಸೂರು ಯುವರಾಜರು ಸದ್ಯಾ ಯೂರೋಪಿಗೆ ಪ್ರಯಾಣ ಮಾಡಲಿಕ್ಕಿದ್ದಾರೆಂದೂ ಈ ಸಂಬಂಧ ತಕ್ಕ

ಏರ್ಪಾಡುಗಳನ್ನು ಮಾಡುವರೆ ಹಜೂರು ಸೆಕ್ರೆಟರಿಯವರು ಮುಂಬಾಯಿಗೆ ಹೋಗಿದ್ದಾರೆಂದೂ ತಿಳಿದುಬರುತ್ತದೆ.

* * *

ಕೊಲಂಬದ ಗವರ್ನರವರ ಆರೋಗ್ಯವು ಕೆಲವು ಸಮಯದಿಂದೀಚೆಗೆ ಕೆಟ್ಟು ಹೋಗಿತ್ತು. ಈಗ ಗುಣ ಹೊಂದುತ್ತಾ ಬರುತ್ತಾರೆ. ಆದರೆ ಕೆಲಸಕ್ಕೆ ಹಾಜರಾಗುವಷ್ಟು ಆರೋಗ್ಯವಿಲ್ಲದಿರುವುದರಿಂದ ಗವರ್ನರ್ ಪದವಿಗೆ ರಾಜಿನಾಮೆ ಕೊಟ್ಟಿರುವರು. ಇವರ ಬದಲಿಗೆ ಆಕ್ಟಿಂಗ್ ಗವರ್ನರರಾಗಿ ಮೆ| ಬೂತ್ ಎಂಬವರು ನೇಮಿಸಲ್ಪಟ್ಟಿರುತ್ತಾರೆ.

* * *

ಬರ್ಮ ಕ್ರಿಟಿಕ್ ಪತ್ರಸಂಪಾದಕರಾದ ಮೆ| ಅರ್ನೊಲ್ಡರ ಮೇಲಿದ್ದ ಕ್ರಿಮಿನಲ್ ಮೊಕದಮೆಯಲ್ಲಿ ಅವರಿಗೆ ಒಂದು ವರ್ಷದ ಸಾಧಾರಣ ಸಜೆವಿಧಿಸಲ್ಪಟ್ಟಿತ್ತಷ್ಟೆ. ಈಗ ಇವರ ಮೇಲೆ ಕೆಪ್ಟನ್ ಫಿನ್ನೆಯವರು ಇದೇ ಸಂದರ್ಭದಲ್ಲಿ ೧೫೦೦ ರೂಪಾಯಿಯ ಮಾನನಷ್ಟ ದಾವೆಯನ್ನು ತಂದಿರುವರು. ಮೆ| ಅರ್ನೊಲ್ಡರ ಮೇಲಿನ ಕ್ರಿಮಿನಲ್ ಮೊಕದಮೆಯ ಅಪೀಲ್ ತನಖಿಗೆ ಪ್ರಿವಿ ಕೌನ್ಸಿಲಿನವರ ಅಪ್ಪಣೆಪಡೆಯುವ ವರೆಗೆ ಈ ಮಾನನಷ್ಟ ದಾವೆಯ ತನಖಿಯನ್ನು ಹಿಂದಕ್ಕೆ ಇಡಬೇಕೆಂದು ಮೆ| ಅರ್ನೊಲ್ಡರ ಕಡೆಯ ವಕೀಲರು ಹೈಕೋರ್ಟನ್ನು ಕೇಳಿಕೊಂಡರು. ಆದರೆ ಮುದ್ದೈಕಡೆಯ ವಕೀಲರು ಆಕ್ಷೇಪ ತೆಗೆದ್ದರಿಂದ ಬರುವ ಎಪ್ರೀಲ್ ತಿಂಗಳತನಕ ಮಾತ್ರ ಈ ದಾವೆಯ ತನಖಿಯು ಹಿಂದಕ್ಕಿಡೋಣಾಯಿತು.

* * *

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ನೇರಡೆ ಎಂಬ ಗ್ರಾಮದಲ್ಲಿ ಕೆಲವು ದಿವಸಗಳ ಹಿಂದೆ ವಾಂತಿಭೇದಿ ರೋಗವು ಸೋಂಕಿ ಆ ಗ್ರಾಮದ ಕರಣೀಕರ ಹೆಂಡತಿಯೇ ಮುಂತಾಗಿ ಬಹಳ ಜನ ಸತ್ತರು. ಆದ್ದರಿಂದ ಸದರಿ ಗ್ರಾಮಸ್ಥರೆಲ್ಲರೂ ಒಟ್ಟುಸೇರಿ ಕರಣೀಕನೇ ಈ ಮಾರಿಯನ್ನು ಇಲ್ಲಿಗೆ ತಂದಿದ್ದಾನೆಂತಲೂ ಅವನನ್ನು ಅಲ್ಲಿಯ ಗ್ರಾಮದೇವತೆಗೆ ಬಲಿ ಕೊಡಬೇಕೆಂತಲೂ ನಿಶ್ಚಯಿಸಿಕೊಂಡು ಗ್ರಾಮಸ್ಥರೆಲ್ಲರೂ ಅವನ ಮನೆಗೆ ನುಗ್ಗಿದರು. "ನಾನು ನಿರಾಪರಾಧಿ, ನನ್ನನ್ನು ಕೊಲ್ಲಬೇಡಿ" ಎಂದು ಕರಣೀಕನೂ ತಮ್ಮ ಸರ್ವಸ್ವವನ್ನು ತೆಗೆದುಕೊಂಡು ತಂದೆಯ ಪ್ರಾಣವನ್ನು ಉಳಿಸಬೇಕೆಂತ ಅವನ ಮಗಳೂ ಮೊರೆ ಇಟ್ಟರೂ ಗ್ರಾಮಸ್ಥರು ಕೇಳದೆ ಆ ಕರಣೀಕನನ್ನು ಸದರಿ ಗ್ರಾಮದ ಮುತ್ಯಾಲಮ್ಮ ದೇವಸ್ಥಾನಕ್ಕೆ ಎಳೆದುಕೊಂಡು ಹೋಗಿ ಸ್ನಾನಮಾಡಿಸಿ ಆತನ ಮುಖಕ್ಕೆ ಕುಂಕುಮಾ ಬಳಿದು ಕುತ್ತಿಗೆಗೆ ಬೇವಿನಸೊಪ್ಪನ್ನು ಕಟ್ಟಿ ಆ ದೇವತೆಗೆ ಅಡ್ಡಬೀಳಿಸಿದನಂತರ ಎಲ್ಲರೂ ಸೇರಿ ಅವನನ್ನು ಕೊಡ್ಲಿಯಿಂದ ಕಡದು ಕೊಂದರು.

* * *

ದಕ್ಷಿಣ ಕನ್ನಡ.

ಖಾಸಗಿ ಇಸ್ತಿಹಾರು.

ಕಾಸರಗೋಡ ತಾಲೂಕು ಚಿತ್ತಾರಿ ಗ್ರಾಮದ ರವಹೇಶ್ವರದಲ್ಲಿರುವ ಆಲತ್ತುಂಗಾಟ್ಲ ಕುಂಞಿ ಅಳಿಯನೂ ಮಾಣಿಕ್ಕೆ ಮಗ ತರವಾಟ ಕಾರ್ನವ ಮತ್ತು ಆಡಳಿತೆದಾರ ಕೊಟ್ಟನೂ ಇದರಿಂದ ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದರೆ:—ನಾನು ಮರಿಮಕ್ಕತಾಯಕಟ್ಟು ಆಚರಿಸಿ ಬರುವ ಮಲಯಾಳಿ ಬಿಲ್ಲ ಜಾತಿಯವನಾಗಿರುತ್ತೇನೆ. ನನ್ನ ಕುಟುಂಬಕ್ಕೆ ಹೆಚ್ಚಿನ ಆಸ್ತಿ ಇದ್ದು ಅವುಗಳು ಬೇರೆ ಬೇರೆಯವರಿಗೆ ಇಲ್ದಾರವಾರ ಕ್ರಯ ಮೂಲಗೇಣಿ ಮುಂತಾದರ ಮುಖಾಂತರ ಪರಾಧೀನವಾಗಿ ಈಗ ಚಿತ್ತಾರಿಗ್ರಾಮದ ಸರ್ವೆ ನಂಬ್ರ $\frac{121}{5}$ನೇ ಪೈಕಿ ಸುಮಾರು ೫೦ ಸೆಂಟ್ಸ್ ವಿಸ್ತೀರ್ಣದ ಬಾಗಾಯಿತು, ಇದರಲ್ಲಿನ ಕಟ್ಟೋಣ, ಭಾವಿ, ಕಳೆರಿ, ಮತ್ತು ಆರು ಜಾನುವಾರುಗಳು, ಚರಸೊತ್ತುಗಳು ಮಾತ್ರ ನಮ್ಮ ಕುಟುಂಬದ ಸಮಷ್ಟಿ ಹಕ್ಕಿನದ್ದಾಗಿದ್ದು ಅದರ ಉತ್ಪತ್ತಿಯಿಂದ ತೀರ್ವೆಯು ಕಳದು ಬಾಕಿಯಿರುವ ಉತ್ಪತ್ತಿಯಿಂದಲೂ ನಮ್ಮ ಕುಟುಂಬದ ಮೆಂಬರರಿಂದ ಕಾಲಂಪ್ರತಿ ವಸೂಲಾಗುವ ವಂತಿಗೆ ಐವೇಜಿನಿಂದಲೂ ಕೂಡಾ ಕಾಲಂಪ್ರತಿ ನಡಿಯುವ ದೈವದೇವರ ವಿನಿಯೋಗಗಳು ಆಸ್ತಿ ಮೇಲೆ ಯಾವ ಸಾಲ ಹೊಂದಿಸದೆ ನಾನು ನನ್ನ ನಂತರ ಅದೇ ಶರ್ತಪ್ರಕಾರ ನನ್ನ ಚಿಕ್ಕತಾಯಿ ಬೆಳ್ಳಚ್ಚಿ ಮಗ ಕೊಳ್ತೂರು ಗ್ರಾಮದಲ್ಲಿರುವ ಚೋಯಿಯು ನಡಿಸಿಬರಬೇಕಾಗಿ ನಾನು ಮತ್ತು ಸದ್ರಿ ಚೋಯಿ ಕೂಡಾ ೬ ಜನರು ಹೊಸದುರ್ಗ ಸಬ್‌ರಿಜಿಸ್ತ್ರಿ ಆಫೀಸಿನ ೧೯೧೦ನೇ ಇಸವಿ ಜೂನ್ ತಾರೀಕು ೧೫ರಲ್ಲು ರಿಜಿಸ್ತ್ರಿ ನಿಶಿಂ ಮಾಡಿಕೊಂಡ ತಹನಾಮೆ ಪ್ರಕಾರ ನಾನು ಅದರ ಆಡಳಿತೆ ನಡಿಸಿಬರುವಲ್ಲಿ ನಾನು ವಯೋವೃದ್ಧನಾಗಿ ಅದರ ಆಡಳಿತೆ ನಡಿಸಿಬರಲಿಕ್ಕೆ ಸಾಧ್ಯವಲ್ಲದ್ದರಿಂದ ಇನ್ನು ಮುಂದೆ ಸದ್ರಿ ಎಲ್ಲಾ ಆಡಳಿತೆಗಳು ಸದ್ರಿ ಚೋಯಿಯು ನಡಿಸಿಬರಬೇಕಾಗಿ ಈ ಮೂಲಕ ನಾನು ನಿಶ್ಚಯಿಸಿ ನನ್ನ ಸ್ವಾಧೀನಯಿರುವ ಮೇಲೆ ಹೇಳಿದ ಬಾಗಾಯಿತು ಕಟ್ಟೋಣಗಳು ಮನೆ, ಭಾವಿ, ಚರಸೊತ್ತುಗಳು ಜಾನುವಾರುಗಳು ಆರು ಸಹಾ ಈಗಲೇ ನಾನು ಸದ್ರಿ ಚೋಯಿಯ ಸ್ವಾಧೀನಬಿಟ್ಟು ಕೊಟ್ಟಿರುತ್ತೇನೆ ಎಂಬ ಸಂಗತಿ ಎಲ್ಲವರು ತಿಳಿದಿರಬೇಕು.

ತಾ. 11–12–12.
ಹೊಸದುರ್ಗ. } ||| ಇದು ಕೊಟ್ಟನ ರುಜು.

* * *

ಫರಂಗಪೇಟೆ:—ಮೇರಮಜ್ಜು ಶಾಲೆಯಲ್ಲಿ ತಾ. ೧೧ನೇ ದಿನ ಡಿಲ್ಲಿ ದರ್ಬಾರ್ ದಿನಾಚರಣೆಯನ್ನು ವಿದ್ಯಾರ್ಥಿಗಳು ವಿನೋದಗಳಿಂದ ಆಚರಿಸಿದರು. ಬೆಳಿಗ್ಯೆ ೭ ಗಂಟೆಗೆ ಸುಂದರವಾಗಿ ಪುಷ್ಪಾದಿಗಳಿಂದ ಅಲಂಕರಿಸಲ್ಪಟ್ಟ ಶಾಲಾ ಕಟ್ಟೋಣದಲ್ಲಿ ವಿದ್ಯಾರ್ಥಿಗಳೆಲ್ಲಾ ಸೇರಿ, ಗೀತಗಳಿಂದಲೂ ಆಟಗಳಿಂದಲೂ ವಿನೋದಗೊಂಡ ತರುವಾಯ ಹತ್ತರದ ಹಳ್ಳದಲ್ಲಿ ಈಜಾಟದ ಸ್ಪರ್ಧೆಯನ್ನು ನಡೆಸಿದರು. ಹಳ್ಳವೆಲ್ಲಾ ಮಕ್ಕಳ ವಿವಿಧ ಕಾಗದ ಮಡಚುವಿಕೆಗಳಿಂದ ಶೋಭಿಸುತ್ತಿತ್ತು. ನಂತರ ಮೆರವಣಿಗೆಯಿಂದ ಮಕ್ಕಳು ಶಾಲೆಯನ್ನು ಸೇರಿ ಅಲ್ಲಿ ಸದ್ರಿ ಶಾಲೆಯ ಹೆಡ್ ಮಾಸ್ತರ್ ಎ. ರಾಮಚಂದ್ರ ಹೆಗ್ಡೆಯವರು 'ವಿದ್ಯಾಭ್ಯಾಸದ ಕಡೆಗೆ ರಾಜರಿಗೂ ಸರಕಾರಕ್ಕೂ ಇರುವ ಪ್ರೀತಿಯನ್ನೂ ಇಂಥಾ ಉತ್ಕೃಷ್ಟವಾದ ಸರಕಾರದಿಂದ ಪ್ರಜೆಗಳಾದ ನಮಗೆ ದೊರಕುವ ಲಾಭಗಳನ್ನೂ ಚನ್ನಾಗಿ ವಿವರಿಸಿ ಹೇಳಿದರು. ಮಕ್ಕಳಿಗೆಲ್ಲಾ ಸಕ್ಕರೆಯನ್ನು ಹಂಚಿ ಸಾಮ್ರಾಜ್ಯದ ಅಭಿವೃದ್ಧಿಗಾಗಿಯೂ ಚಕ್ರವರ್ತಿ ಚಕ್ರವರ್ತಿನಿಯವರ ಆಯುರಾರೋಗ್ಯ, ಸಂಪತ್ತಿಗಾಗಿಯೂ ಪ್ರಾರ್ಥಿಸಿ ರಾಜಗೀತೆಯನ್ನು ಹಾಡಿ ವರ್ಧಂತಿಯನ್ನು ಮುಗಿಸಿದರು.

ಪುದು ಬೋರ್ಡು ಮಾಪಿಳ್ಳಾ ಶಾಲೆಯಲ್ಲಿಯೂ ಈ ದರ್ಬಾರಿನ ದಿನವು ಹೆಚ್ಚಿನ ವಿಜ್ರಂಭಣೆಯಿಂದ ಸದರಿ ಶಾಲೆಯ ಕಟ್ಟೋಣದಲ್ಲಿ ಜರಗಿತು.

* * *

ಪುತ್ತೂರು:—ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರವರು ದಶಂಬರ ತಿಂಗಳಲ್ಲಿ ತಾ. ೧೬ ಮಂಗ್ಳೂರು, ೧೭ ಮಾಣಿ, ೧೮ರಿಂದ ೨೧ ಉಪ್ಪಿನಂಗಡಿ, ೨೨ರಿಂದ ೨೩ ಪುತ್ತೂರು, ೨೪ರಿಂದ ೨೫ ಮಂಜೇಶ್ವರ ೨೬ರಿಂದ ೩೧ರ ವರೆಗೆ ಹೊಸದುರ್ಗ, ಈ ಮೊಕ್ಕಾಂ ಮೇರೆಗೆ ಸರ್ಕಿಟು ಬೆಳಿಸುವರು.

ಸುಬ್ರಮಣ್ಯದ ಜಾನುವಾರು ಸಂತೆಗೆ ಈ ವರೆಗೆ ೨೦,೪೧೮ ಜಾನುವಾರುಗಳು ಬಂದದ್ದಾಗಿಯೂ ಸರಕಾರಕ್ಕೆ ರೂಪಾಯಿ ೨೫೫೨–೮–೦ ಜಮೆಯಾದ್ದಾಗಿಯೂ ತಿಳಿಯುತ್ತೇವೆ.

ಮಾಡ್ನೂರು (ಕಾವು) ಇಲ್ಲಿ ಮಿನೇಜಕಲ್ಲು ಮಾರಾಠಿ ನಾಣ್ಣನ್ಯಾಕ ಎಂಬವನ ೨ ಕೋಣಗಳು ಇದೇ ತಾ. ೧೪ರಲ್ಲು ಒಂದೇ ಸಾರಿ ಹುಲಿಯಿಂದ ಕೊಲ್ಲಲ್ಪಟ್ಟಿತು. ಈ ಗ್ರಾಮದಲ್ಲಿ ಹುಲಿಯ ಉಪದ್ರಗಳು ದಿನೇದಿನೇ ಹೆಚ್ಚುತ್ತಾ ಬಂದವೆ.

* * *

ಬಂಟವಾಳ:—ತಾ. ೧೨ರಲ್ಲು ಲೋಕಲ್‌ಫಂಡ್ ಹುಡಿಗಿಯರ ಶಾಲೆಯಲ್ಲಿ ಡಿಲ್ಲೀ ಕಿರೀಟಧಾರಣೋತ್ಸವ ಜ್ಞಾಪಕಾರ್ಥವಾದ ಪ್ರಥಮ ವಾರ್ಷಿಕೋತ್ಸವವು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ವಾರ್ಷಿಕೋತ್ಸವಕ್ಕೆ ಡಿಸ್ಟ್ರಿಕ್ಟ್ ಬೋರ್ಡ್‌ಮೆಂಬರರಾದ ರಾ| ಕೊಂಬರ್‌ಬೈಲ್ ಕೃಷ್ಣರಾಯರೂ ಇತರ ಹಲವು ಗೃಹಸ್ಥರೂ ಹಾಜರಿದ್ದರು. ಕೊಂಬರ್‌ಬೈಲ್ ಕೃಷ್ಣರಾಯರು ಮಕ್ಕಳಿಗೆ ರಾಜಭಕ್ತಿ ಸಂಬಂಧವಾಗಿ ಉಪದೇಶಮಾಡಿ ಮಕ್ಕಳಿಗೆ ತನ್ನ ಸ್ವತಃ ಖರ್ಚಿಯಿಂದ ಮೂರುಮಣ ಮಿಠಾಯಿ ಹಂಚಿಸಿದರು.

ಇದೇ ತಿಂಗಳ ತಾ. ೧೨ಕ್ಕೆ ಡಿಲ್ಲಿದರ್ಬಾರಿನ ದಿನವನ್ನು ಬಂಟವಾಳ ಮಿಶ್ಶನ್ ಸೆಕೆಂಡರಿಶಾಲೆಯಲ್ಲಿ ಬಹು ವಿಜೃಂಭಣೆಯಿಂದ ಆಚರಿಸಿದರು. ಆ ದಿನ ಪೂರ್ವಾಹ್ನ ೧೦ ಗಂಟೆಯಿಂದ ೧೨ ಗಂಟೆವರೆಗೆ ಹಾಡುಗಳೂ ಕೋಲಾಟವೂ ನಡೆದ ನಂತರ ಶಾಲೆ ಹೆಡ್‌ಮಾಸ್ತರರಾದ ಜಿ. ಕೃಷ್ಣರಾಯರು ನಮ್ಮ ರಾಜರ ವಿಷಯವಾಗಿಯೂ ಅವರ ಆಳುವಿಕೆ ವಿಷಯವಾಗಿಯೂ ಸುರಸವಾದ ಭಾಷಣ ಕೊಟ್ಟು ಇಂಗ್ಲೀಷರ ಆಳುವಿಕೆಗೂ, ರಾಜರ ಆಯುರಾರೋಗ್ಯಕ್ಕೂ ಪ್ರಾರ್ಥಿಸಿದ ಬಳಿಕ ಹುಡುಗರಿಂದ ರಾಜಗೀತ ಹಾಡಿಸಿ ಮಕ್ಕಳಿಗೂ ಅಲ್ಲಿ ನೆರೆದ ಮಾನ್ಯಗೃಹಸ್ಥರಿಗೂ ಮಿಠಾಯಿ ಹಂಚಿದರು.

ಇಲ್ಲಿ ಪಟ್ಟಣದ ದಕ್ಷಿಣಭಾಗಕ್ಕೆ ಸಣ್ಣ ಮಸೀದಿ ಸಮೀಪ ದೊಡ್ಡಿಯಬಳಿ ಮೀನುಮಾರುವ ಶೆಡ್ಡುಗಳನ್ನು ಕಟ್ಟಿಸುವರೆ ಸರಕಾರದವರು ನಿಶ್ಚಯಿಸಿದ್ದರು. ಮೊನ್ನೆ ದಿನ ಡಿಪ್ಯುಟಿ ಕಲೆಕ್ಟರವರು ಬಂದು ಸ್ಥಳನೋಡಿ ಇನ್ನು ಮೂರು ಫರ್ಲಂಗ್ ದಕ್ಷಿಣಕ್ಕೆ ಬಸ್ತಿಪಡ್ಪಿನಲ್ಲಿ ಕಟ್ಟಿಸುವ ಆಲೋಚನೆಮಾಡಿರುವರೆಂತ ವರ್ತಮಾನ ಕೇಳುತ್ತೇವೆ. ನಾಲ್ಕು ದಿಕ್ಕಿನಿಂದಲೂ ವ್ಯಾಪಾರಸಾಪಾರಕ್ಕೆ ಬಂದು ಸುಳಿದಾಡುವ ಪೇಟೆ ಮಧ್ಯಸ್ಥಳವನ್ನು ಬಿಟ್ಟು ೧ ಮೈಲು ದೂರಕ್ಕೆ ಸದ್ರಿ ಶೆಡ್ಡನ್ನು ಕಟ್ಟಿಸಿದರೆ ಹಳ್ಳಿಯಿಂದ ವ್ಯಾಪಾರಕ್ಕಾಗಿ ಬಂದ ಜನ ಅಷ್ಟುದೂರಕ್ಕೆ ಹೋಗಿ ವಾಪಾಸು ಬರುವದು ಜನರಿಗೆ ಬಹು ಪ್ರಯಾಸವಾಗಿದೆ. ಅದಲ್ಲದೆ ಮೀನು ವ್ಯಾಪಾರಸ್ಥರು ಕೈಯಿಂದ ದುಡ್ಡು ಕೊಟ್ಟು ತಂದ ಮೀನು ಅಂದೇ ಮಾರದಿದ್ದರೆ ನಷ್ಟಕ್ಕೆ ಗುರಿಯಾಗುವರು. ಆದದರಿಂದ ಹೆಚ್ಚು ಜನಸಂಚಾರದ ಸ್ಥಳಕ್ಕೆ ಹತ್ತಿರವೇ ಮೀನುಶೆಡ್ಡನ್ನು ಕಟ್ಟಿಸಿದರೆ ಸರ್ವರಿಗೂ ಪ್ರಯೋಜನಕರವಾಗಿರುವದು.

ಶ್ರೀ ವರದೇಂದ್ರ ತೀರ್ಥಸ್ವಾಮಿಯರ ಜಾಡ್ಯವು ಭಗಂದರವಲ್ಲ, ನಾಡೀವ್ರಣವೆಂಬುದಾಗಿ ಈಗ ತಿಳಿದುಬಂದಿದೆ.

(ಸೆಪ್ಟಿಕ್ ಎಬ್ಸೆಸ್.) ವಿಶೇಷವಾದ ನೋವು ಇಲ್ಲದೆಯಿದ್ದರೂ, ವ್ರಣವು ಇನ್ನೂ ವಾಸಿಯಾಗಿರದೆ, ಚಳಿಯು ತೊಡಗಿದಂದಿನಿಂದ ಕೀವೂ ಉಂಟಾಗಿ ಶ್ರೀಯವರನ್ನು ಬಾಧಿಸುತ್ತಿದೆ. ಪ್ರವೀಣ ಡಾ| ಕೆ. ರಾಮಸ್ವಾಮಿ ಅಯ್ಯರವರು ಚಿಕಿತ್ಸೆಗಾಗಿ ಪರಿಶ್ರಮ ಪಡುತ್ತಿರುವುದರಿಂದ, ಶ್ರೀಯವರು ಇನ್ನೂ ೨–೩ ತಿಂಗಳು ಹವೆ ಬದಲಾಯಿಸಿಕೊಳ್ಳದೆ ಬಂಟವಾಳದಲ್ಲಿಯೇ ಇದ್ದಲ್ಲಿ ಜಾಡ್ಯವು ಸಂಪೂರ್ಣ ಗುಣವಾಗುವುದಾಗಿ ನಂಬಿ, ಅಂತೆಯೆ ಊರವರು ಗುರುಗಳನ್ನು ಪ್ರಾರ್ಥಿಸಿರುವರು.

* * *

ವರ್ಕಾಡಿ:—ಇಲ್ಲಿಯ ಸುಂಕದಕಟ್ಟೆ ಎಂಬಲ್ಲಿ ಇದೇ ಕಳೆದ ತಾ. ೧೧ನೇ ಬುಧವಾರ ದಿವಸ ಸಂತೆ ತೆರಿಯುವರೆ ತಹಸೀಲದಾರ ರಾ| ದೇವಪ್ಪ ಪುಂಜರವರ ಹುಕುಂ ಬಂದು ತಲ್ಪಿಯದೆಂದು ವರ್ಕಾಡಿ ಪಟೇಲ ಶಂಕರನ್ಯಾಕರು ಹುಕುಮನ್ನು ಸರ್ವಜನರಿಗೂ ತೋರಿಸಿ ಸದ್ರಿ ಸಂತೆಯನ್ನು ಬಹು ವಿಜೃಂಭಣೆಯಿಂದ ನಡಿಸಬೇಕೆಂಬ ಕುತೂಹಲದಲ್ಲೇ ಇರುತ್ತಿದ್ದರು. ಆದರೆ ತಹಸೀಲದಾರರವರಿಗೆ ಆ ದಿನ ಬರುವರೆ ಅನಾನುಕೂಲವೆಂದು ತಿಳಿದುಬಂದದ್ದರಿಂದ ಪಟೇಲ ಮತ್ತು ಸ್ಥಳೀಕ ಗೃಹಸ್ಥರೂ ಬಹಳ ಕರಕರೆ ಪಡಬೇಕಾಯಿತು.

* * *

ಉಡ್ಪಿ:—ತಾ. ೧೨ನೇ ಬೃಹಸ್ಪತಿವಾರ ಇಲ್ಲಿಯ ಎಲಿಮೆಂಟರಿ ಬೋರ್ಡು ಶಾಲೆಯಲ್ಲಿಯೂ, ಸೆಕಂಡರಿ ಶಾಲೆ, ಆದಿ ಉಡ್ಪಿ ಎಲಿಮೆಂಟರಿಶಾಲೆ, ಮಿಶ್ಯನ್ ಹ್ಯಾಸ್ಕೂಲಿನಲ್ಲಿಯೂ ಡಿಲ್ಲಿ ಕಿರೀಟಧಾರಣೋತ್ಸವು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಉಡ್ಪಿ ಶಾಲೆಗಳ ಸುಪರ್ ವ್ಯಾಸರರಾದ ರಾ| ಮಂಜೇಶ್ವರ ರಘುನಾಥರಾಯರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಮತ್ತು ಆದಿ ಉಡ್ಪಿ ಶಾಲೆಯಲ್ಲಿ ಈ ದಿನ ಹಾಜರಿದ್ದು ಕಾಲೋಚಿತ ಭಾಷಣವನ್ನು ಕೊಟ್ಟರು. ಮಿಶ್ಯನ್ ಹ್ಯಾಸ್ಕೂಲಿನ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಈ ದಿನದ ಜ್ಞಾಪಕಾರ್ಥವಾಗಿ ಕಾಪಿನಲ್ಲಿರುವ ದೀಪಸ್ತಂಭವನ್ನು ನೋಡುವರೆ ಅಲ್ಲಿಗೆ ಹೋಗಿ ಅಲ್ಲಿಯ ವಿಶೇಷತೆಯನ್ನು ನೋಡಿ ಹಿಂದೆರಳಿದರು.

* * *

ಬಾತ್ಮೀದಾರರಿಗೆ ವಿಜ್ಞಾಪನೆ:-ಶ್ರೀ ವೆಂಕಟರಮಣಸ್ವಾಮಿ ಹಿಂದೂ ಎಲಿಮೆಂಟರಿ ಶಾಲೆಯ ಇನಾಂ ಹಂಚೋಣವೂ ಡಿಲ್ಲಿ ದರ್ಬಾರ್ ಆಚರಣೆಯೂ—ಕಾರ್ಕಳ ಬಾಲಿಕಾ ಪಾಠಶಾಲೆಯ ಡಿಲ್ಲಿ ದರ್ಬಾರ್ ಆಚರಣೆ—ಮುಲ್ಕಿ ಬೋರ್ಡು ಶಾಲೆಯ ಮತ್ತು ಶೆಶನಲ್ ಟ್ರೈನಿಂಗ್ ಶಾಲೆಯ ಡಿಲ್ಲಿ ದರ್ಬಾರಾಚರಣೆ—ಪಾವೂರು, ಕಾರ್ಕಳ ಸೆಕಂಡರಿ ಶಾಲೆಯ ಡಿಲ್ಲಿ ದರ್ಬಾರಾಚರಣೆ—ಈ ಬಾತ್ಮಿಗಳು ಈ ವಾರದ ಪತ್ರಿಕೆಯು ಅಚ್ಚಾಗುತ್ತಿರುವಾಗಲೇ ಬಂದು ತಲಪಿದ್ದರಿಂದ ಪ್ರಕಟಿಸಲು ಅನಾನುಕೂಲವಾಯಿತೆಂತ ತಿಳಿಸಲು ವಿಷಾದಿಸುತ್ತೇವೆ. ಮೇಲ್ಕಂಡ ಶಾಲೆಗಳಲ್ಲಿ ಈ ಉತ್ಸವವು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿರುವುದು.

* * *

ಮಂಗಳೂರು.

* * *

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿರುವ ಕೆನರಾಹ್ಯಾಸ್ಕೂಲಿನಲ್ಲಿ ಪ್ರೊಫೆಸರ್ ರಾಮಮೂರ್ತಿಯವರಿದ್ದು ನಡದ ವೃತ್ತಾಂತವು ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆ ಮತ್ತು ಕೆನರಾ ಹ್ಯಾಸ್ಕೂಲಿನವರು ಒಟ್ಟು ಕೂಡಿಕೊಂಡು ಏರ್ಪಡಿಸಿದ ಚಕ್ರವರ್ತಿಗಳ ಕಿರೀಟಧಾರಣೆಯ ದಿನವನ್ನಾಚರಿಸಿದ ಸಂಭ್ರಮದ ವೃತ್ತಾಂತವಾಗಿದೆಂತ ವಾಚಕರು ತಿಳಕೊಳ್ಳಬೇಕಾಗುವುದು.

ಸಂಯುಕ್ತ ಪರಿಷದದ ಸಹ ಪಂಕ್ತಿಭೋಜನ ವಿವಾಹಗಳ ಸುಧಾರಣೆಯ ಕುರಿತು ಒಬ್ಬ ಲೇಖಕರ 'ಎಚ್ಚರಿಕೆ' ಎಂಬ ಲೇಖನವನ್ನು ಪತ್ರವ್ಯವಹಾರ ಸಂಗ್ರಹದಲ್ಲಿ ಪ್ರಕಟಿಸಿರುವೆವು. ಪರಿಷದಗಳಿಗೆ ಸಂಬಂಧಪಟ್ಟವರೆಲ್ಲರೂ ಈ ಲೇಖನವನ್ನು ಓದಬೇಕಾಗಿ ವಿಜ್ಞಾಪನೆ.

ಮುನಿಸಿಪಲ್ ಕೌನ್ಸಿಲಿನ ತಂಡಗಳ ಕಡದಾಟ ನಿವಾರಣೆ ಬಗ್ಯೆ ಮಾಜಿ ಡಿಸ್ಟ್ರಿಕ್ಟ್ ಜಡ್ಜ ಮ| ರಾ| ರಾ| ದಿವಾನ್ ಬಹದ್ದೂರ್ ಮುಂಡಪ್ಪ ಬಂಗೇರರವರನ್ನು ಮುನಿಸಿಪಲ್ ಚೇಯರ್‌ಮೇನರಾಗಿ ನೇಮಿಸುವಂತೆ ಶಿಫಾರಸು ಆಗಿದೆಂಬದಾಗಿ ಕೇಳುತ್ತೇವೆ.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಇಂಗ್ಲಿಷ್ ಬಾತ್ಮಿಯನ್ನು ಬರದ 'R' ಎಂಬ ಗೃಹಸ್ಥರೂ ವ ಅವರ ಅಭಿಪ್ರಾಯವುಳ್ಳ ಇತರರೂ ಆ ಇಂಗ್ಲಿಷ್ ಬಾತ್ಮಿಯಲ್ಲಿ ಪ್ರಸ್ತಾಪಿಸಿದ ವಿಷಯಗಳನ್ನು ಮ| ರಾ| ರಾ| ಅಮ್ಮೆಂಬಳ ಶ್ರೀನಿವಾಸ ಪೈಗಳ ಕೂಡೆ ಮೊಕ್ತಾ ಮಾತನಾಡಬಹುದಾಗಿ ನಮಗೆ ತಿಳಿಸೋಣಾಗಿದೆ. ಹೀಗೆ ಮಾತನಾಡಲು ಅಪೇಕ್ಷೆಯುಳ್ಳವರು ಒಂದು ದಿನ ಮುಂಚಿತವಾಗಿ ನಮಗೆ ತಿಳಿಸಿದ್ದಲ್ಲಿ ಸ್ವದೇಶಾಭಿಮಾನಿಯ ಆಫೀಸಿನಲ್ಲಿಯೇ ಪೈಗಳವರು ಇಂಥಾ ಗೃಹಸ್ಥರುಗಳಿಗೆ ಮಾತನಾಡಲು ಸಿಕ್ಕುವರು.

ಕಳೆದ ವಾರದ ಸಂಚಿಕೆಯಲ್ಲಿ ತಿಳಿಸಿದಂತೆ ಕೆನರಾ ಹ್ಯಾಸ್ಕೂಲಿನ ವಾರ್ಷಿಕ ಇನಾಂ ಹಂಚುವ ಸಮಾರಂಭವು ಕಳೆದ ಶನಿವಾರ ಗವರ್ನಮೆಂಟ ಕಾಲೇಜಿಯ ಪ್ರಿನ್ಸಿಪಾಲರಾದ ಮೆ| ಮೆಲಿಮ್ ದೊರೆಗಳ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು.

ನಾಳೆಯ ದಿನ ಮಿಶ್ಯನ್ ಹ್ಯಾಸ್ಕೂಲಿನ ವಾರ್ಷಿಕ ಇನಾಂ ಹಂಚುವ ಸಮಾರಂಭವು ನಡೆಯುವುದು.

ಕಲೆಕ್ಟರ್ ದೊರೆಗಳು ಬರುವ ವಾರ ಸೋಮವಾರ ವರೆಗೆ ಇಲ್ಲಿದ್ದು ನಂತರ ಸರ್ಕೀಟು ಮೇಲೆ ಹೋಗುವರಾಗಿ ಕೇಳುತ್ತೇವೆ.

ಶ್ರೀ ಕಾಶೀ ಮಠಕ್ಕೆ ಸೇರಿದ ಈ ಜಿಲ್ಲೆಯ ಗೌಡಸಾರಸ್ವತರ ಸಭೆಯು ಇದೇ ತಾ. ೨೦ರಲ್ಲು ಕೆಲವು ಜಾತಿ ವಿಷಯಗಳನ್ನು ಪರ್ಯಾಲೋಚಿಸುವರೆ ಕೆನರಾ ಹ್ಯಾಸ್ಕೂಲಿನಲ್ಲಿ ಕೂಡುವುದೆಂದು ತಿಳಿಯುತ್ತೇವೆ.

ಮದ್ರಾಸ್ ನ್ಯಾಯ ವಿಧಾಯಕಸಭೆಯ ಮೆಂಬರುತನದ ಚುನಾವಣೆಯಲ್ಲಿ ದಕ್ಷಿಣ ಕನ್ನಡಾ ಮತ್ತು ಮಲಬಾರು ಜಿಲ್ಲೆಯ ಪರವಾಗಿ ನಿಂತ ಉಮೇದ್ವಾರರಲ್ಲಿ ರಾ| ರಾಮನ್ ಮೆನೊನರಿಗೆ ೧೫೪ ಓಟುಗಳು ದೊರಕಿರುವುದು. ಇತರ ಉಮೇದ್ವಾರರಿಗೆ ಇವರಿಗಿಂತ ಕಡಿಮೆ ಓಟುಗಳು ದೊರಕಿರುತ್ತವೆ.

ಮೆ| ಜಿ. ಡಬ್ಲ್ಯು. ಪ್ರೈಸ್ಲಿ. ಐ. ಸಿ. ಎಸ್.ರವರು ನಮ್ಮ ಜಿಲ್ಲೆಯ ಅಸಿಸ್ಟಾಂಟ್ ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ತಾರೀಕು ೧೨ನೇ ಬೃಹಸ್ಪತಿವಾರ ದಿವಸ ಮಂಗಳೂರ ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ೫ನೇ ಜೋರ್ಜ ಚಕ್ರವರ್ತಿಯವರ ಕಿರೀಟಧಾರಣೆಯ ಮಹೋತ್ಸವದ ಜ್ಞಾಪಕ ದಿನವು ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಪ್ರಾತಃಕಾಲ ೭||ಯಿಂದ ೮|| ಘಂಟೆಯ ವರೆಗೆ ಮೊಡೆಲ್ ಶಾಲಾ ಮಕ್ಕಳ ಹಲವು ತರದ ಪಂದ್ಯಾಟಗಳು ನೋಟಕರಿಗೆ ನೇತ್ರಾನಂದವನ್ನುಂಟು ಮಾಡಿದವು. ನಂತರ ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚಲ್ಪಟ್ಟಿತು. ಮಂಗಳೂರು ರೇಂಜ್ ಶಾಲೆಗಳ ಸಬ್ ಅಸಿಸ್ಟೆಂಟ್ ಇನ್ಸ್ಪೆಕ್ಟರ್ ಮ. ರಾ. ರಾ. ನಾರಾವಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಅಪರಾಹ್ನ ಎರಡು ಘಂಟೆಗೆ ಸರಿಯಾಗಿ ವಿದ್ಯಾರ್ಥಿ ಉಪಾಧ್ಯಾಯರ ಮತ್ತು ಶಾಲಾ ಬಾಲಕ ಬಾಲಕಿಯರ ಸಮ್ಮೇಳನವು ಜರಗಿತು. ಮೊಡೆಲ್ ಶಾಲಾ ಮುಖ್ಯೋಪಾಧ್ಯಾಯರು ರಾಜಭಕ್ತಿಯ ಕುರಿತು ಸುರಸವಾದ ಭಾಷಣವನ್ನು ಮಾಡಿದರು. ಬೆಳಿಗ್ಯೆ ಪಂದ್ಯಾಟದಲ್ಲಿ ಗೆದ್ದ ಮಕ್ಕಳಿಗೆ ಪಾರಿತೋಷಿಕಗಳನ್ನು ಅಧ್ಯಕ್ಷರು ಹಂಚಿಕೊಟ್ಟ ನಂತರ ಸಾರ್ವಭೌಮರ ದರ್ಬಾರ್ ಮಹೋತ್ಸವವನ್ನು ಯೋಗ್ಯವಾದ ರೀತಿಯಲ್ಲಿ ಆಚರಿಸುವ ಅವಶ್ಯಕತೆಯನ್ನೂ ಚಕ್ರವರ್ತಿಯವರು ತೋರಿಸಿರುವ ಉಪಕಾರಗಳನ್ನೂ ವಿವರಿಸಿ ಅರ್ಥಗರ್ಭಿತವಾದ ಭಾಷಣವನ್ನು ಮಾಡಿದರು.

ತಾ. ೧೨ರಲ್ಲು ಡಿಲ್ಲಿ ಕಿರೀಟಧಾರಣೋತ್ಸವದ ಜ್ಞಾಪಕಾರ್ಥವಾಗಿ ಮಂಗಳೂರು ಕಸಾಯಿಗಲ್ಲಿ ಮುನಿಸಿಪಾಲ್ ಹಿಂದೂಸ್ಥಾನಿ ಶಾಲೆಯಲ್ಲಿ ಒಂದು ಸಭೆ ಕೂಡಿತು. ಈ ಸಭೆಗೆ ಮುನಿಸಿಪಾಲ್ ಕೌನ್ಸಿಲ್ಲರಾದ ರಾ| ಜೆ. ಎ. ಕವಿಯವರು ಅಧ್ಯಕ್ಷರಾಗಿದ್ದರು. ಶಾಲಾ ಮಕ್ಕಳು ಆಡಿ ತೋರಿಸಿದ ನಟನೆಗಳಿಗೆ ಅಧ್ಯಕ್ಷರು ಮೆಚ್ಚಿ ತನ್ನ ಸ್ವಂತ ಖರ್ಚಿನಿಂದ ಅವರಿಗೆ ಫಲಹಾರಗಳನ್ನು ಕೊಡಿಸಿದರು. ನಂತರ ಸದರಿ ಶಾಲೆಯ ಹೆಡ್ ಮಾಸ್ತರವರು ರಾಜರ ವಿಷಯವಾಗಿ ಹಿಂದೂಸ್ಥಾನಿ ಭಾಷೆಯಲ್ಲಿ ಮಕ್ಕಳಿಗೆ ಚಲೋ ಉಪನ್ಯಾಸಮಾಡಿ ಎಳೇ ಹೃದಯಗಳಲ್ಲಿ ರಾಜಭಕ್ತಿಯನ್ನು ಬಿತ್ತಿದರು.

* * *

ನೋಟಿಸು.

* * *

ಈ ಮೂಲಕ ತಿಳಿಯಪಡಿಸುವದೇನಂದರೆ:—ಮೆಸರ್ಸ್ ಬಿ. ಎಸ್. ನ್ಯಾಕ ಎಂಡ್ ಕೋ, ಉಡ್ಪಿ, ದಕ್ಷಿಣಕನ್ನಡ, ಇವರು ಉತ್ತರ ಮತ್ತು ದಕ್ಷಿಣಕನ್ನಡ ಜಿಲ್ಲೆ ಮತ್ತು ಮೈಸೂರು ಕೊಡಗುದೇಶಗಳಲ್ಲಿ ದಿ ಯುನಿವರ್ಸಲ್ ಎಸ್ಸೂರೆನ್ಸ್ ಕಂಪೆನಿ, ಲಿಮಿಟೆಡ್ ಎಂಬ ಜೀವವಿಮೆ ಕಂಪೆನಿಯ ಚೀಫ್ ಏಜಂಟರಾಗಿ ನೇಮಿಸಲ್ಪಟ್ಟಿದ್ದಾರೆ. ಈ ಕಂಪೆನಿಯ ಇತರ ಎಲ್ಲಾ ಏಜಂಟರು ಅವರ ಕೆಳಗೆ ಕೆಲಸಮಾಡತಕ್ಕದ್ದು. ಕಂಪೆನಿಯ ಏಜಂಟರಾಗಲು ಅಪೇಕ್ಷಿಸುವವರು ಅವರಿಗೆ ಬರಕೊಂಡು ಕಂಪೆನಿಯ ಕ್ರಮ ಇತ್ಯಾದಿಗಳ ಮಾಹಿತಿಯನ್ನು ಪಡೆಯಬಹುದು. ಈ ತನಕ ಏಜಂಟರಾಗಿದ್ದ ಮೆಸ್ಸರ್. ಟಿ. ಆರ್. ಪೈ'ಬ್ರದರ್ಸ್, ಉಡ್ಪಿ. ಇವರು ಸರಿಯಾದ ಕೆಲಸಮಾಡದ್ದರಿಂದಲೂ ನಮ್ಮ ಕಂಪೆನಿಯ ಕೆಲಸದ ಮಧ್ಯೆ ನಮ್ಮ ಕ್ರಮಕ್ಕೆ ವಿರೋಧವಾಗಿ ಇತರ ಕಂಪೆನಿಗಳ ಕೆಲಸಮಾಡಿದ್ದರಿಂದಲೂ ಅವರ ಏಜನ್ಸಿಯನ್ನು ಅಮಾನತು ಪಡಿಸೋಣಾಗಿದೆ.

ಜೆ. ಸರ್‌ಕಾರ್.
ಸೆಕ್ರಿಟರಿ.

* * *

Notice.

* * *

A grand Money-making Scheme!

A marvellous plan! A regular gold-mine! No capital required! No hard labour necessary! Proposition easy and interesting!

Apply sharp enclosing postage for reply to

U. B. Shankernarayan Rau.
Car Street, Mangalore.

* * *

ವಿವಿಧ ವಿಷಯಗಳು.

* * *

ಅರ್ಧ ಬಾಟ್ಲೆ ದನದ ಹಾಲು ಒಂದು ರಾತ್ಲ ಮಾಂಸ ೮ ಮೊಟ್ಟೆಗಳ ಸತ್ವಕ್ಕೆ ಸಮಾನವಾಗಿದೆ.

* * *

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಸುಲಭ ಕ್ರಯಗಳು! ಪರೀಕ್ಷಿಸಿರಿ !! **ಸಂತೋಷ ಪಡುವಿರಿ !!!**

ವ್ಯಾಪಾರಸ್ಥರುಗಳಿಗೆ ಕೊಡುವ ಕ್ರಯಗಳಿಗೆ ಬಿಕರಿ.

ರಾಸ್ಕೋಪ್ ಸಿಷ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ಎಂದೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ತಯಾರಿಸಿ, ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟು ಹಿಂಭಾಗದಲ್ಲಿ ಗ್ಲಾಸುಡೋಮು ಇದು ನೋಡಲಿಕ್ಕೆ ಬಹು ರಮಣೀಯವಾಗಿದೆ. ಬಹು ಮಜಬೂತಾದ ದೀರ್ಘಕಾಲ ಬಾಳಿಕೆಗೆ ಬರುವ ಮತ್ತು ಕಾಲವನ್ನು ಸರಿಯಾಗಿ ತೋರಿಸುವ ಘಡಿಯಾರವು. ಇದಕ್ಕೆ ೫ ವರುಷಗಳ ಗ್ಯಾರಂಟಿ. ಬೇರೆ ಕಂಪೆನಿಯವರು ಇದಕ್ಕಿಂತ ಕಮ್ಮಿ ಬೆಲೆಯ ಘಡಿಯಾರವನ್ನು ರೂ. 2–8–0 3–8–0 ಬೆಲೆಗೆ ಮಾರುತ್ತಾರೆ. ಕಾರಣ ಮೋಸ ಪಡಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತೃಪ್ತಿಯಾಗಿಯೂ ಸಂತೋಷವಾಗಿಯೂ ಇರುವಿ.

ಕ್ರಯ ರೂ. 2–8–0. ವಿ. ಪಿ. ಪಿ. ಚಾರ್ಜು ರೂ. 0–4–0.

ಸ್ವೀಸ್ ಮೇಡ್ ರೈಲ್ವೆ ರೆಗ್ಯುಲೇಟರ್ ಲೀವರ್ ಜ್ಯುವೆಲ್ಡ್ ವಾಚ್.



ಇದು ಎಲ್ಲಾ ದೇಶದಲ್ಲಿಯೂ ಬಹಳ ಪ್ರಸಿದ್ಧವಾದ ಘಡಿಯಾರವು. ಇದು ಕಾಲವನ್ನು ಸರಿಯಾಗಿ ತೋರಿಸುವದರಲ್ಲಿ ಬಹಳ ಉತ್ತಮವಾದದ್ದೆಂದು ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇದು ಆಯುಪರಿಮಿತಿ ಇರುವದು. ಇದು ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುವದು. ಇದು ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ೫ರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುವವು. ಇದಕ್ಕೆ ಒಳಗಿನ ಗ್ಲಾಸು ಡೋಮ ಸಹಾ ಇರುವದು. ಇದಕ್ಕೆ ೫ ವರುಷಗಳ ಗ್ಯಾರಂಟಿ.

ಕ್ರಯ ರೂ. 3–8–0 ವಿ. ಪಿ. ಪಿ. ಚಾರ್ಜು ರೂ. 0–4–0.

ಲೇಡಿಸ್ ಸಿಲ್ವರ್ ಜ್ಯುವೆಲ್ಡ್ ವಾಚ್.



ಈ ಘಡಿಯಾರವು ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿರುವವು. ಇದು ಕಾಲವನ್ನು ಸರಿಯಾಗಿ ತೋರಿಸುತ್ತದೆ. ಉಪಯೋಗಕ್ಕೆ ಯೋಗ್ಯವಾದದ್ದು. ಇದನು ಕೈಯಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಇಂಥಾ ವಾಚನ್ನು ಇಷ್ಟು ಕಡಿಮೆ ಕ್ರಯಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದಕ್ಕೆ ಗ್ಯಾರಂಟಿ ೫ ವರುಷಗಳು.

ಕ್ರಯ ರೂ. 6–0–0 ವಿ. ಪಿ. ಪಿ. ಚಾರ್ಜು ರೂ. 0–6–0.

ಪೋಲಾರ್ ಲೀವರ್ ವಾಚ್.

(ವಾರಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು)



ಇದು ಬಹಳ ಆಶ್ಚರ್ಯಕರವಾದ ಎಂಟು ದಿವಸಕ್ಕೊಂದಾವರ್ತಿ ಬೀಗ ಕೊಡುವ ಘಡಿಯಾರವು. ಇದು ಬಹಳ ಗಟ್ಟಿತರವಾದ ಇದು ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಬಂಗಾರದ ಪದಕಗಳನ್ನು ಹೊಂದಿರುತ್ತದೆ. ಇದು ಶುದ್ಧ (ಚೊಕ್ಕ) ಬೆಳ್ಳಿಯಿಂ ಮಾಡಲ್ಪಟ್ಟಿರುತ್ತದೆ. ಇಂಥಾ ರಮಣೀಯವಾದ ಮತ್ತು ಆಶ್ಚರ್ಯಕರವಾದ ಗಡಿಯಾರವನ್ನು ಇಷ್ಟು ಕಡಿಮೆ ಕ್ರಯಕ್ಕೆ ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದನ್ನು ಪ್ರತಿ ಒಬ್ಬರು ತರಿಸಿಕೊಂಡು ಸಂತೋಷಪಡುವಿರೆಂದು ನಂಬುತ್ತೇವೆ. ಇದಕ್ಕೆ ಗ್ಯಾರಂಟಿ ೧೦ ವರುಷಗಳು.

ಕ್ರಯ ರೂ. 10–0–0. ವಿ. ಪಿ. ಪಿ. ಚಾರ್ಜು ರೂ. 0–8–0.

ಟೇಬಲ್ ಟ್ಯಾಂಪೀಸು ಘಡಿಯಾರಗಳು



ಇವುಗಳು ಬಹಳ ಕಡಿಮೆ ಕ್ರಯದವುಗಳಾಗಿರುವದಲ್ಲದೆ ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಮನೋಹರವಾಗಿಯೂ ಇರುವವು. ಇವುಗಳು ಅನೇಕ ಸಂವತ್ಸರಗಳ ವರಿವಿಗೆ ಬಾಳಿಕೆ ಬರುವವು. ಈ ಘಡಿಯಾರಗಳನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲಿಯೂ ಅವಶ್ಯ ಇಡಬೇಕಾದ್ದು.

ನಂಬರ್ ೧. ತಾರೀಕುಗಳನ್ನು ತೋರಿಸುವ ಮತ್ತು ಅಲಾರಂ ಸಹ ಇರುವ ಕ್ಯಾಲಂಡರ್ ಅಲಾರು ಟ್ಯಾಂಫೀಸು ೧ಕೆ ಕ್ರಯ ರೂ. 2-8-0 ವಿ. ಪಿ. ಪಿ. ಚಾರ್ಜು 0–6–0. ನಂಬರ್ ೨. ತಾರೀಕುಗಳು ಇಲ್ಲದ ಬರೇ ಅಲಾರಂ ಟ್ಯಾಂಫೀಸು ೧ಕ್ಕೆ ಕ್ರಯ ರೂ. 2-0-0 ವಿ.ಪಿ. ಚಾರ್ಜು 0-6-0. ನಂಬರ್ ೩. ತಾರೀಕು ಮತ್ತು ಅಲಾರಂ ಇಲ್ಲದ ಸಾದಾ ಟ್ಯಾಂಫೀಸೆ ೧ಕ್ಕೆ ಕ್ರಯ ರೂ. 1-4-0 ವಿ. ಪಿ. ಪಿ. ಚಾರ್ಜು 0-6-0.

ಕ್ಯಾರೇಜು ಕ್ಲಾಕು ಘಡಿಯಾರಗಳು.



ಇವು ಬಹಳ ರಮ್ಯವಾದವುಗಳು ಮತ್ತು ಮನೋಹರವಾದವುಗಳು. ಅನೇಕ ವರುಷಗಳ ವರಿಗೂ ಬಾಳಿಕೆ ಬರತಕ್ಕವುಗಳು. ಇವು ಉತ್ತಮ ತರದ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ಚಿತ್ರವಿಚಿತ್ರವಾದ ಕೆಲಸಗಳಿಂದ ಕೂಡಿ ಸೈಡು ಗ್ಲಾಸುಗಳು ಸಹ ಇರುವವು. ಇವನ್ನು ಪ್ರತಿ ಒಬ್ಬರು ತಮ್ಮ ಮನೆಗಳಲ್ಲಿಯೂ, ಸ್ಕೂಲುಗಳಲ್ಲಿಯೂ, ಅಂಗಡಿಗಳಲ್ಲಿಯೂ ಮತ್ತು ಇತರ ಕಾರ್ಯಾಲಯಗಳಲಿಯೂ ಇಡುವದಕ್ಕೆ ಯೋಗ್ಯವಾದವುಗಳು.

ನಂಬರ್ ೧. ಘಂಟೆ, ಅರ್ಧ ಘಂಟೆ ಹೊಡೆಯುವದು. ಮತ್ತು ಅಲಾರಂ ಸಹ ಇರುವದು ೧ಕ್ಕೆ ಕ್ರಯ ರೂ. 5-0-0. ವಿ. ಪಿ.ಪಿ. ಚಾರ್ಜು ರೂ.0-10-0 ನಂಬರ್ ೨. ಘಂಟೆ, ಅರ್ಧಘಂಟೆ ಮಾತ್ರ ಹೊಡೆಯುವದು ರೂ. 4-8-0 ವಿ.ಪಿ.ಪಿ. ಚಾರ್ಜು 0-8-0. ನಂಬರ್ ೩. ಕಾಲವನ್ನು ಮಾತ್ರ ತೋರಿಸಿ 15 ನಿಮಿಷಗಳ ವರಿಗೂ ವಾದ್ಯವನ್ನು ಬಾರಿಸುವದು. ರೂಪಾಯಿ 5-0-0 ವಿ. ಪಿ. ಪಿ. ಚಾರ್ಜು 0–10–0· ನಂಬರ್ ೪. ಘಂಟೆಘಂಟೆಗೆ ವಾದ್ಯವನ್ನು ಬಾರಿಸುವದು. ರೂ. 5-8-0 ವಿ. ಪಿ. ಪಿ. ಚಾರ್ಜು ರೂ. 0–10–0

ನಿಕ್ಕಲ್ ಬೆಳ್ಳಿ ಗಡಿಯಾರದ ಸರಪಣಿ.

ಇದು ಎಂದೆಂದಿಗೂ ಕಪ್ಪಾಗದಂಥ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟು ನೋಡುವದಕ್ಕೆ ಬಹಳ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ. ೧ಕ್ಕೆ ಕ್ರಯ ರೂ. 0--8--0 ವಿ. ಪಿ. ಪಿ. ಚಾರ್ಜು ರೂ. 0--4--0.

ಎಲೆಕ್ಟ್ರಿಕ್ ಭಂಗಾರದ ಘಡಿಯಾರದ ಸರಪಣಿ.

ಇದು ಎಂದಿಗೂ ಭಂಗಾರದಂತೆ ಹೊಳಿಯುವ ಘಡಿಯಾರದ ಸರಪಣಿ. ಬಹಳ ಉತ್ತಮ ರಖಂ ೧ಕ್ಕೆ ಕ್ರಯ ರೂ. 1--0--0 ವಿ.ಪಿ.ಪಿ. ಚಾರ್ಜು ರೂ. 0--4--0.

ಶುದ್ಧ ಬೆಳ್ಳಿಯ ಘಡಿಯಾರದ ಸರಪಣಿ.

ಇದು ೧ನೇ ನಂಬರ್ ಚೊಕ್ಕ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಕೆಲಸ ಬಹಳ ನಾಜೂಕಾಗಿಯೂ ರಮಣೀಯವಾಗಿಯೂ ಮನೋಹರವಾಗಿಯೂ ಇರುತ್ತದೆ 9 ಕ್ಕೆ ಕ್ರಯ ರೂ. 3–0--0 ವಿ. ಪಿ. ಪಿ. ಚಾರ್ಜು ರೂ. 0--4--0. ವಿಳಾಸ:—

ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ,
ನಂಬರ್ ೨೦ ಶಿಂಗಣನ್ ಬೀದಿ, ಜಾರ್ಜುಟೌನ್, ಪೋಸ್ಟು, ಮದ್ರಾಸ್

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಷ್ಟೆ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಬಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಬಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3-4-0. ಅರ್ಧ ಬಾಟ್ಲಿಗೆ 1-12-0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ

ವೈದ್ಯಸಾರಸಂಗ್ರಹ (ಮೂಲಿಕಾ ಔಷಧಿ)	೩—೦—೦
ಶುಕಸಪ್ತತಿ ವೇದಾಂತ ಪೂರ್ವದ ಪ್ರತಿ	೨—೦—೦
ರಘುವಂಶ ೧ನೇ ಪರ್ವ...	೧—೦—೦
ಡಿಟ್ಟೊ (೨ನೇ ಪ.) ಅರ್ಥ ತಾತ್ಪರ್ಯ ಆಕಾಕ್ಷೆ ಇತ್ಯಾದಿ ...	೧—೦—೦
ವಿವೇಕ ಚೂಡಾಮಣಿ	೨—೪—೦
ಶಾಮಕುಬ್ಜ ಕಥೆ	೦—೮—೦
ಚಮತ್ಕಾರ ಚಿಂತಾಮಣಿ	೦—೧೦—೦
ಮಹಿಮ್ನ ಸ್ತೋತ್ರ (ಟೀ. ತಾ.)	೦—೩—೦
ಮುಕುಂದಮಾಲಾ ಸ್ತೋತ್ರ (ಟೀ. ತಾ.)	೦—೪—೦
ಶಿವಗೀತಾ (ಟೀ. ತಾ. ಸಹಿತ)	೦—೮—೦
ಶಿವಾನಂದಲಹರಿ (ಟೀ. ತಾ.)	೦—೬—೦
ವಿದ್ಯಾನಂದ ಮಾಸಪತ್ರಿಕೆ ಚಂದಾ	೨—೪—೦

ಮಾದ್ರಿ ಪತ್ರಿಕೆ, ಪುಸ್ತಕ ಪಟ್ಟಿ ಉಚಿತ. ಇನ್ನೂ ಅನೇಕ ಪುಸ್ತಕಗಳು ದೊರೆಯುವವು.

ವಿಳಾಸ:—
ವಿದ್ಯಾನಂದ ಆಫೀಸು.
ಬೆಂಗಳೂರು ಸಿಟಿ.

ಹೊಸ ವರ್ಷ! ಇನಾಂ!

ಮಧುರವಾಣಿ.

ಹೊಸ ಪುಸ್ತಕಗಳು!! ಬಹುಮಾನ!!

ಮಧುರವಾಣಿಯ ವಾರ್ಷಿಕ ಚಂದಾ 1_8_0.

1913ನೆಯ ಜನವರಿ 31ನೆಯ ತಾರೀಕಿನೊಳಗಾಗಿ ಚಂದಾದಾರರಾಗುವವರಿಗೆ ಮಾತ್ರ ಹೊಸ ವರ್ಷದ ಕ್ಯಾಲೆಂಡರ್ ಮತ್ತು ಟಪ್ಪಾಲ್ ಖರ್ಚು ಸಹ ರೂ. 1_4_0.

ಉತ್ತಮ ಗ್ರಂಥಗಳು.

ಕೃಷ್ಣಾಕುಮಾರಿ	0_14_0	ಭ್ರಾಂತಿವಿಲಾಸ (ನಾವಿಲ್) .	0-10-0
(ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ.)		ಸಾಧನೆ (ನಾವಿಲ್) . .	0-8-0
ನಾನಕನ ಚರಿತ್ರೆ	0_6_0	ಪರಿಮಳಾ (ನಾವಿಲ್) . .	0-10-0
ವಿವೇಕಮಂಜರಿ 1ನೆ ಭಾಗ . .	0_3_0	ಮನೋರಮಾ . . .	1-0-0
,, 2ನೆ ಭಾಗ . .	0-8-0	ವಿಲಕ್ಷಣ ದೈವಘಟನೆ . .	0-4-0
(ಉಪನ್ಯಾಸಗಳ ಪುಸ್ತಕ)		ಭಕ್ತವಿಜಯ	3-4-0
ಸಾಹಸಿಕೆ (ನಾವಿಲ್)	0_2_0	ಜೈಮಿನಿ ಭಾರತ . . .	1-0-0
ಗೃಹಿಣಿಯಾದ ಗಂಗೆ (ಕಥೆ) . .	0_3_0	ಗೋಪಿಕಾಗೀತೆ . . .	0-1-0
ಕುಣುಕು ಮಿಣುಕು	0_2_0	ಭಜಗೋವಿಂದಂ . . .	0-1-0
(ಹಾಸ್ಯರಸ ಪ್ರಧಾನವಾದ ಪುಸ್ತಕ)		ಉಲಾಯಶಾಸ್ತ್ರೀ . . .	0-1-0
ನೀರದೆ (ನಾವಿಲ್)	0_8_0	ಹೊಸ ವರ್ಷದ ಪಂಚಾಂಗ.	0-1-0

N. B. ಮಧುರವಾಣಿಯ ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. ಒಂದಾಣೆಯ (0-1-0) ಸ್ಟಾಂಪನ್ನೂ ಕಳುಹಿಸುವವರಿಗೆ ಹೊಸ ವರ್ಷದ ಕ್ಯಾಲೆಂಡರ್ ಬಹುಮಾನ.

ಹನುಮಾನ್ ಕಂಪೆನಿ,
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳೆನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಕೀವಹಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ

1913ನೇ ಇಸವಿಯ ಪೊಕೆಟ್ ಡ್ಯಾರಿಗಳು.

ಮಾರಾಟಕ್ಕೆ ಸಿದ್ಧವಾಗಿವೆ.

ನೋಟು ಬೂಕು ಸ್ಯಾಜು (ದೊಡ್ಡ ಸ್ಯಾಜು) ರೂ. 0-8-0
(ಒಂದಾಣೆ ಪೆನ್ಸಿಲು ಸಹಿತ)
ಸಣ್ಣ ಸ್ಯಾಜು .... ,, 0-4-0

ವಕೀಲರಿಗೂ ವಕೀಲರ ಗುಮಾಸ್ತರಿಗೂ ಬೇಕಾದ ಎಲಾ ವಿಷಯಗಳನ್ನು ಒಳಕೊಂಡಿರುವುದಲ್ಲದೆ ಇತರರಿಗೂ ಬಹಳ ಉಪಯೋಗಕರವಾದ್ದಾಗಿರುತ್ತದೆ.

ಹೆಚ್ಚು ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ, ವ್ಯಾಪಾರಸ್ತರಿಗೂ ಧಾರಾಳ ಕಮಿಶನ್ ಕೊಡಲಾಗುವದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಮ್ಯಾನೇಜರ,
ಶಾರದಾ ಛಾಪಖಾನೆ, ಮಂಗಳೂರು ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡುಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿ ಸಿಕ್ಕುವವು.

CHEAP JACK

FANCY UMBRELLA MART.

ಚಿತ್ರವಿಚಿತ್ರಮಾದ ಕೊಡೆಗಳು.

ಕಂ ॥ ಧರೆಯೊಳ್ ಮೆರೆ ಮಹಾಶಯ । ರಿರಃ ನಾವಿನಿಸುಂದಿನಂ ಕೊಡೆಯ ವಿಕ್ರ
ಯಮಂ ॥ ಇರಿಸಿರ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿಯೆ
ವದರರಮಂ ॥೧॥ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ
ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾಮಾತಂ । ಗೆಡೆಯಾಗಿಯೆ
ನೆರಲನೀವ ಕೊಡೆಯಿಲ್ಲಕುರ್ಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಕಾರ್ಯಸಿದ್ಧಿಯು ಯಾರಿಗೆ ಸಾಧ್ಯ?

ಬಲಭರಿತವಾದ ನರಸಂಸ್ಥಾಯವಿದ್ದು ಧಾತುಪುಷ್ಟಿಯುಳ್ಳ ಆರೋಗ್ಯ ದೃಢಕಾಯರಿಗೆ ಎಲ್ಲಾ ಪ್ರಯತ್ನಗಳಲ್ಲಿ ಜಯವು ಸಾಧ್ಯವಾಗಿರುವುದು. ಶಕ್ತಿ ಒಂದಿದ್ದಲ್ಲಿ ಸಾವಿರಾರು ಜನರು ತಮ್ಮ ಪ್ರಯತ್ನಗಳಲ್ಲಿ ಜಯಶೀಲರಾಗುತ್ತಿದ್ದರು. ಇಂಥಾ ಶಕ್ತಿಯೂ ಧಾತುಪುಷ್ಟಿಯೂ

"ನರ್ವಟೋನ್" (Nervetone).

ಎಂಬ ಧಾತುವರ್ಧಕ ಔಷಧಿಯ ಉಪಯೋಗದಿಂದ ಅನಾರೋಗ್ಯವುಳ್ಳ ಸರ್ವರಿಗೂ ದೊರಕಲು ಅನುಕೂಲವಿರುವುದು. ಅಬಲತೆ, ದೇಹದಲ್ಲಿ ಜಡತನ, ರಕ್ತಹೀನತೆ, ನಿದ್ರಾಭಂಗ ಮೊದಲಾದ ನರಸಂಸ್ಥಾಯದ ಬಲಹೀನತೆಗಳಿಂದುಂಟಾದ ಸರ್ವ ರೋಗಗಳಿಗೂ ಈ ಔಷಧಿಯು ಬಹಳ ಗುಣಕಾರಿಯಾಗಿರುವುದು. ಈ ಔಷಧಿಯ ಉಪಯೋಗದ ಅನುಭವವುಳ್ಳ ಡಾಕ್ಟ್ರರರು ಅನೇಕ ಶಿಫಾರಸು ಪತ್ರಗಳನ್ನು ಕೊಟ್ಟಿರುವರು.

"ನಾನು ಚಿಕಿತ್ಸೆ ನಡಿಸುತ್ತಿದ್ದ ರೋಗಿಗಳು ಹಲವರಿಂದ ಈ ಔಷಧಿಯನ್ನು ಉಪಯೋಗಿಸಿ ನೋಡಿದ್ದಲ್ಲಿ ಇದು ನರಸಂಸ್ಥಾಯಗಳಿಗೆ ಬಲಕೊಡುವ ಒಳ್ಳೇ ಔಷಧಿಯೆಂತ ಕಂಡುಬಂದಿರುವುದು.........". ಈ ರೀತಿ ಮದ್ರಾಸಿನ ಡಾಕ್ಟರ್ ಪಿ. ಕೆ. ಕೃಷ್ಣರಾಯರು ಬರೆದಿರುತ್ತಾರೆ.

ಔಷಧಿಯು ವಿಲಾಯತಿಯ ಸಿ. ಆರ್. ಹಾರ್ಕರ್ ಸ್ಟೆಗ್ ಮತ್ತು ಮೊರ್ಗೆನ್ ಕಂಪೆನಿಯವರಿಂದ ತಯ್ಯಾರಿಸಲ್ಪಡುತ್ತದೆ.

ಔಷಧಿಯು ದೊರಕುವ ಮದ್ರಾಸು ಏಜಂಟರ ವಿಳಾಸ:—

ರಾಜಾ ಡಿ. ಮೊನೇಮುತ್ತು ಕಂಪೆನಿ,
11 ಬಂದರರಸ್ತೆ ಮದ್ರಾಸು.

ಮಂಗಳೂರಲ್ಲಿ ಮೆಸ್ಸರ್ಸ್ ಕೆ. ವಿಟ್ಟಳರಾವ್ ಎಂಡ್ ಕೊ, ಇವರಲ್ಲಿ ದೊರಕುವದು.

ಪಟ್ಟುಪೀತಾಂಬರ ಕಂಪೆನಿ, ಕಾಶಿ.

ಪ್ರಸಿದ್ಧವಾದ

ರೇಷ್ಮೆ ಬಟ್ಟೆಗಳು! **ಪೀತಾಂಬರದ ಶೀರೆಗಳು!!**

ಒಪ್ಪಲ್ಪಡದೆ ಇದ್ದರೆ ವಾಪಾಸು ತೆಗೆದುಕೊಳ್ಳಲ್ಪಡುವುದು.

ಪೀತಾಂಬರದ ಶೀರೆಗಳು.

ಬನಾರಸ್ ಪೀತಾಂಬರದ ಶೀರೆಗಳು:—೧೬ ಮೊಳ ಉದ್ದ ೨॥ ಮೊಳ ಅಗಲ, ಶೆರಗೂ ಅಂಚು ಉತ್ತಮವಾದ ಜರತಾರಿ ಉಳ್ಳದ್ದು. ಕೆಂಪು, ಹಸರು, ಊದಾ ಮತ್ತು ಗುಲಾಬೀ ರಂಗುವುಳ್ಳ ಅಂಚುಗಳು, ಒಳಭಾಗವು ಸಾದಾ, ಸಾಮಾನ್ಯವಾದ ಶೀರೆಗಳಿಗೆ ಬೆಲೆಯು ೨೦ರಿಂದ ೩೫ ರೂಪಾಯಿನ ವರೆಗೂ ಇರುವುದು. ಅತ್ಯುತ್ತಮವಾದವುಗಳಿಗೆ ೪೦ರಿಂದ ೨೦೦ರ ವರೆಗೂ ಬೆಲೆಯಾಗುವುದು.

ಪೀತಾಂಬರದ ಬೂಟಾ ಶೀರೆಗಳು.

ಪೀತಾಂಬರದ ಬೂಟಾ ಶೀರೆಗಳು ಮೈದಾನದಲ್ಲಿ ಜರಿತಾರಿ ಹುವ್ವುಗಳು ಅಥವಾ ಬೂಟಾಗಳು ಇರುವವು. ಇವುಗಳಲ್ಲಿ ಸಾಮಾನ್ಯವಾದ ಶೀರೆಗಳಿಗೆ ೨೫ರಿಂದ ೩೫ ರೂಪಾಯಿನ ವರೆಗೂ ಆಗುವುದು. ಉತ್ತಮವಾದವುಗಳಿಗೆ ೪೦ ರೂಪಾಯಿಗಳಿಂದ ೨೦೦ ರೂಪಾಯಿಗಳ ವರೆಗೂ ಆಗುವುದು.

ಪೀತಾಂಬರದ ಕಣಗಳು.

ಜರತಾರಿ ಅಂಚು, ಮೈದಾನದಲ್ಲಿ ಹೂವಿನ ಕೆಲಸ, ರಂಗು ಕೆಂಪು, ಹಸರು, ಊದಾ ಮತ್ತು ಗುಲಾಬಿ, ಸಾದಾ ಮೈದಾನವುಳ್ಳ ಕಣ ಒಂದಕ್ಕೆ ೨ ರೂಪಾಯಿನಿಂದ ೨ ರೂಪಾಯಿ ವರೆಗೂ ಕ್ರಯವಾಗುವುದು. ಬೂಟಾ ಮೈದಾನವುಳ್ಳದ್ದು ಕಣ ೧ಕ್ಕೆ ೮॥ ರೂಪಾಯಿನಿಂದ ೨೫ ರೂಪಾಯಿನ ವರೆಗೂ ಆಗುವುದು.

ರುಮಾಲುಗಳು ಅಥವಾ ಪೇಟಾಗಳು.

ಎಲ್ಲಾ ರಂಗಿನ ರುಮಾಲುಗಳು ಮತ್ತು ಪೇಟಾಗಳು ೨೫ ರೂಪಾಯಿ ಮೊದಲ್ಗೊಂಡು ೧೦೦ ರೂಪಾಯಿನ ವರೆಗೂ ಬೆಲೆಯುಳ್ಳವುಗಳಾಗಿರುತ್ತವೆ.

ಮಕ್ಕಳ ಆಟದ ಪಾತ್ರೆಗಳು.

ಚಿಕ್ಕದಾಗಿಯೂ, ಸುಂದರವಾಗಿಯೂ, ಹೊಳೆಯತಕ್ಕವುಗಳಾಗಿಯೂ ಇರುತ್ತವೆ. ಇವುಗಳಲ್ಲಿ ದೊಡ್ಡದಾಗಿರತಕ್ಕ ಪಾತ್ರೆಗಳ ಸೆಟ್ಟಿಗೆ ೪ ರೂಪಾಯಿ ಚಿಕ್ಕ ಸೆಟ್ಟಿಗೆ ೨ ರೂಪಾಯಿ.

ಬನಾರಸ್ ಪಟ್ಟಣದಲ್ಲಿರತಕ್ಕ ರೇಷ್ಮೆ ಪಿತಾಂಬರ ಕಂಪೆನಿ ಮ್ಯಾನೇಜರಿಗೆ ಬರೆದುಕೊಂಡರೆ ಇದರ ತಪಶೀಲುವಾರು ಕ್ಯಾಟಲಾಗು ಕೊಡಲ್ಪಡುವುದು.

ವಿಳಾಸ:— ಮ್ಯಾನೇಜರು, The Manager,
ಪಟ್ಟುಪೀತಾಂಬರ ಕಂಪೆನಿ, ಕಾಶಿ. *Silk Pitambar Co, Benares.*

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸು

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್ಸ್ ಮಂಗಳೂರು
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು.

ಇನಾಂ! ಇನಾಂ!!

ವೈದ್ಯವಿದ್ಯ.

144 ಪುಟಗಳುಳ್ಳದ್ದು ಇನಾಂ.

ಬಾಲಕರಿಗೆ ಉಪಾಧ್ಯಾಯನು, ಯೌವನಸ್ಥರಿಗೆ ನೀತಿ ಭೋಧಕನು, ಸ್ತ್ರೀಯರುಗಳಿಗೆ ಸೂಲಗಿತ್ತಿ ವೃದ್ಧರಿಗೂ ರೋಗಿಷ್ಟರಿಗೂ ರಾಜ ವೈದ್ಯನು.

ಈ ಶ್ರೇಷ್ಠವಾದ ಸಣ್ಣ ಗ್ರಂಥದಲ್ಲಿ ಮಾನವರು ಮುಖ್ಯವಾಗಿ ಗಮನಿಸತಕ್ಕ ಆಯುರ್ವೇದ ಶಾಸ್ತ್ರೋಕ್ತ ಪದ್ಧತಿಗಳನ್ನು ವಿವರಿಸಲ್ಪಟ್ಟಿದೆ. ಇದನ್ನು ಓದುವದರಲ್ಲಿ ಆಬಾಲವೃದ್ಧರು ಆಯುಃ ಪ್ರಮಾಣ ಪರಿಯಂತರ ಸುಖವಂತರಾಗಿರುವದು. ನಿಶ್ಚಯವು.

ಸೌಖ್ಯವು, ಸಂಪತ್ತು, ದೀರ್ಘಾಯುವು ಕೊಡತಕ್ಕ ಸುಲಭವಾದ ಮಾರ್ಗವನ್ನು ತಿಳುಹಿಸಿ ನಿಮ್ಮಗಳನ್ನು ಯಾವ ಜೀವವು ಸುಖವಾಗಿಟ್ಟಿರುವದು.

"ಆಲಸ್ಯಂ ಅಮೃತಂ ವಿಷಂ"

ತ್ವರೆಮಾಡಿರಿ! ಬಿಡಬ್ಯಾಡಿ!! ಅಂಚೆಹಾಸಲು ಇಲ್ಲದೆ ಈ ಗ್ರಂಥವನ್ನು ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ರಾಜವೈದ್ಯ ನಾರಾಯಣಜೀ ಕೇಶವಜೀ.
177 ಚೈನಾಬಜಾರು ರೋಡು, ಮದರಾಸು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ

ಉತ್ತಮವಾದ ಸುಗಂಧ ದ್ರವ್ಯಗಳು.

ವಿಶ್ವಾಂಜನ ಪೈನ್ ಬಾಂ ಬಾಟ್ಲಿ ೧ಕ್ಕೆ	೦-೪-೦	ಕಸ್ತೂರಿ ಬತ್ತಿ ಸೇರು ೧ಕ್ಕೆ	೩-೦-೦
ತಾಂಬೂಲ ಮಾತ್ರೆ ಬಾಟ್ಲಿ ೧ಕ್ಕೆ	೦-೩-೦	ಜವಾಜಿ ಬತ್ತಿ ,,	೧-೧೨-೦
ದಶಾಂಗ ಡಬ್ಬಿ ೧ಕ್ಕೆ	೦-೩-೦	ಪುಣುಗು ಬತ್ತಿ ,,	೧-೪-೦
ಮಹಾರಾಜಾ ತಂಬಾಕ್ ಡಬ್ಬಿ ೧ಕ್ಕೆ	೦-೨-೦	ಗುಲಾಬಿ ಬತ್ತಿ ,,	೧-೦-೦
ವಸಂತ ಮಾಲತಿ ಬಾಟ್ಲಿ ೧ಕ್ಕೆ	೦-೨-೦	ಪನ್ನೀರು ಬತ್ತಿ ,,	೦-೮-೦
ಮೃಣಹಾರಿಯ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕಸ್ತೂರಿ ಬಿಲ್ಲೆ ತೊಲೆ ೧ಕ್ಕೆ	೨-೦-೦
ಕುಸುಮ ಮಾಲತಿ ಎಣ್ಣೆ ಬಾಟ್ಲಿ ೧ಕ್ಕೆ	೦-೮-೦	ಪುಣುಗಿನ ಬಿಲ್ಲೆ ,,	೧-೦-೦
ದಿಲ್‌ದಾರ ಅತ್ತರ್ ಶೀಶೆ ೧ಕ್ಕೆ	೦-೪-೦		
ಹುಳದ ಮುಲಾಮು ಡಬ್ಬಿ ೧ಕ್ಕೆ	೦-೨-೦	ಕೇಸರಿ ಬಿಲ್ಲೆ ,,	೦-೮-೦
ವಾತಸಂಜೀವನೀ ತೈಲ ಬಾಟ್ಲಿ ೧ಕ್ಕೆ	೦-೪-೦	ಅರ್ಗಜ ,,	೦-೧೨-೦
ದಿಲ್ ಕುಸುಮ ಬತ್ತಿ ಸೇರು ೧ಕ್ಕೆ	೧೦-೦-೦	ಫಿತ್ನಾ ,,	೦-೧೨-೦
A ಅಂಬರ್ ಬತ್ತಿ ,,	೬-೦-೦	ನಾಸಿಕಚೂರ್ಣ ಡಜನ್ ೧ಕ್ಕೆ	೦-೧-೦

ಕೊಂಕಣಿ ಭಾಷೆಯಿಂದ ತಯಾರಿಸಲ್ಪಟ್ಟ ಚಂದ್ರಹಾಸನಾಟಕದ ಪುಸ್ತಕವು ನಮ್ಮಲ್ಲಿ ದೊರಕುತ್ತದೆ. ಕ್ರಯ ೦-೪-೦. ಬೇಕಾದವರು ಈ ವಿಳಾಸಕ್ಕೆ ಬರಕೊಳ್ಳಿರಿ. ಬಿ. ವಿ. ಪಿ. ಭಂಡಾರಕರ,

"ವಿಶ್ವಾಂಜನ ಡಿಪೊ", ಮಂಗಳೂರು.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ ಹ್ಯಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬೇಕ್, 2. ಕೆಂಪು, 3. ಹಸುರು. 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ್ತ

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲ ಚಾರ್ಜು ವಿನಹಾ), ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ,

ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ

M. D. Rane & Co,
Post, Grant Road, Bomby.

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೊಲೆರಾ ಅಥವಾ ಉಷ್ಣಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ ರೂ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿ ಜ್ವರ, ಏಕಾಹಿಕ, ದ್ವಾಹಿಕ, ತ್ರಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ, ಗೊಲ್ಲರಕೇರಿ ಮಂಗಳೂರು

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ ,, ,,	6-0-0	B ಅರಗಜ ,, ,,	1-0-0
ಕಸ್ತೂರಿ ಬತ್ತಿ ,, ,,	3-0-0	ಕಸ್ತೂರಿ ಬಿಲ್ಲೆ ,, ,,	2-0-0
ಜವಾಜಿ ಬತ್ತಿ ,, ,,	2-0-0	ಜವಾಜಿ ಬಿಲ್ಲೆ ,, ,,	1-0-0
ಪುಣಗಿನ ಬತ್ತಿ ,, ,,	1-8-0	ಕೇಸರಿ ಬಿಲ್ಲೆ ,, ,,	0-8-0
A ಪನ್ನೀರ್ ಬತ್ತಿ ,, ,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ ,, ,,	0-6-0	ದಶಾಂಗ ಡಬ್ಬಿ 1ಕ್ಕೆ	0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು.

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಡೈರಿ ಮುಫತ್! ಬೇಗ ಬರೆಯಿರಿ!!

ಡೈರಿ ಬಹುಮಾನ.

ಈ ಡಿಶಂಬರ್ ಆಖೈರಿನ ವರಿವಿಗೆ ಮಾತ್ರ ನಾವು ಈ ಕೆಳಗೆ ಕಂಡ I,II,III ನೇ ನಂಬರು ಪುಸ್ತಕಗಳನ್ನು ಒಟ್ಟಾಗಿ 1 ರೂಪಾಯಿನ ಬೆಲೆಗೆ ತರಿಸಿಕೊಳ್ಳುವವರಿಗೆ 1913ನೆ ಇಸವಿಯ ಅತ್ಯುತ್ಕೃಷ್ಟವೂ ಸುಂದರವೂ ಆದ ಒಂದು ಪಾಕೆಟ್ ಡೈರಿಯನ್ನು ಬಹುಮಾನವಾಗಿ ಕೊಡುವೆವು.

I ಶೋಭನೆ :—"ಶೋಭನಾ" ಎಂಬ ಬಂಗಾಳಿ ನಾವೆಲಿನ ಕನ್ನಡ ಭಾಷಾಂತರು ಅತ್ಯುತ್ತಮ ನೀತಿಗಳನ್ನೊಳಗೊಂಡಿದೆ. ಬೆಲೆ ೦—೧೨—೦.

II. ಯಾಮಿನಿ:—ನಾವೆಲ್. ಒಂದು ಬಂಗಾಳಿ ಉಪನ್ಯಾಸವನ್ನವಲಂಬಿಸಿ ಬರೆಯಲ್ಪಟ್ಟು ಸಂಸಾರದಲ್ಲಿ ದುಷ್ಟರ ಸಹವಾಸದಿಂದುಂಟಾಗುವ ಕೇಡುಗಳೂ, ದುಶ್ಚರಿತ್ರರಿಗೆ ಸಂಭವಿಸಬಹುದಾದ ಅನರ್ಥ ಪರಂಪರೆಗಳೂ ಮನಕರಗುವಂತೆ ವರ್ಣಿತವಾಗಿವೆ. ಬೆಲೆ ೦—೩—೦.

III. ಶ್ರೀ ಸದಾಶಿವೇಂದ್ರ ಸರಸ್ವತಿ:—ಈ ಮಹನೀಯರ ಜನ್ಮ ಚರಿತ್ರೆಯು ಲಲಿತವಾದ ಭಾಷಾ ಶೈಲಿಯಿಂದ ವರ್ಣಿಸಲ್ಪಟ್ಟು ಶ್ರೀಯವರ ಮಹಿಮೆಯನ್ನು ಪೂರ್ಣವಾಗಿ ವರ್ಣಿಸುತ್ತದೆ. ಬೆಲೆ ೦—೧—೦.

ನವೀನ ಪುಸ್ತಕಗಳೂ ಕಾದಂಬರಿಗಳೂ.		ಮ॥ ಬಿ. ವೆಂಕಟಾಚಾರ್ಯರಿಂದ ರಚಿಸಲ್ಪಟ್ಟ ಹೊಸ ಕಾದಂಬರಿಗಳು.	
ಮುದ್ರಾಮಂಜೂಷ [ಚತುರ್ಥ ಮುದ್ರಣ]	1.9.0	ನೀರದೆ [ಸಿದ್ಧವಾಗಿದೆ]	0.8.0
		ಪರಿಮಳ [ದ್ವಿತೀಯ ಮುದ್ರಣ]	0.10.0
ಶ್ರೀ ಶುಕಸಪ್ತತೀ ಕಥೆಗಳು	1.8.0	ದುರ್ಗೇಶ ನಂದಿನಿ ,,	1.4.0
ಸಟೀಕ ಜೈಮಿನಿ ಮಹಾಭಾರತ	4.0.0	ದೇವೀಚೌಧುರಾಣಿ ,,	1.4.0
		ಭ್ರಾಂತಿವಿಲಾಸ ,,	0-8-0
ಶ್ಯಾಮಕುಬ್ಜ [ಕಥೆ]	0.8.0	ಸಾಧನೆ	0.8.0
ಕುಮುದಿನಿ [ಬಂಗಾಳಿ ನಾವೆಲ್]	0.6.0	ಚಿತ್ರವಿಚಿತ್ರಾವಳಿ	0.8.0
ಯಾಮಿನಿ ,,	0.3.0	ಕೃಷ್ಣಕಾಂತನ ಉಯಿಲು	1.0.0
ಶೋಭನೆ ,,	0.12.0	ಮನೋರಮ [ಪತ್ತೇದಾರಿ ಕಥೆ]	1.0.0
ಪ್ರಿಯಂವದೆ [ಕಥೆ]	0.8.0	ವಿಷ ವೃಕ್ಷ ,, ದ್ವಿ॥ ಮು॥	1.4.0
		ಭಾರತ ಮಹಿಳಾ	0.9.0
ವೇಷಧಾರಿಣಿಯಾದ ಸನ್ಯಾಸಿನಿ ,,	0.8.0	ಚಿರತ್ನ ನಾಟಕರತ್ನ	0.8.0

ಇತ್ಯಾದಿ [ಪುಸ್ತಕಗಳ ಪಟ್ಟಿ ಮುಫತ್ತು]

ಕೃಶಾನು ವಿಶ್ವಾವಸು ಸಂವಾದ. ಬೆಲೆ ೦—೧೦—೦

ವಿಶ್ವಗುಣಾದರ್ಶವೆಂಬ ಸಂಸ್ಕೃತ ಗ್ರಂಥದ ಕನ್ನಡ ಭಾಷಾಂತರ—ಅಭಿಪ್ರಾಯವು:—" . . . ಇದರ ಪರಿವರ್ತನ ಶೈಲಿಯು ಸುಲಭವಾಗಿಯೂ ಸರಳವಾಗಿಯೂ ಗಂಭೀರವಾಗಿಯೂ ಇದೆ . . . "—ಮ॥ ಬಿ. ಸೂರ್ಯನಾರಾಯಣರಾವ್,

B. A. M. R. A. S.

ಮುಫತ್:—ಎಸ್. ಟಿ. ಎ. ಕಂಪೆನಿಯವರ ಪರಿಮಳ [Scents] ಗಳನ್ನು ಅವರ ಕೆಟಲಾಗಿನ ಆರ್ಡರ ಖರೀದಿಗೆ ಅಪೇಕ್ಷಿಸುವವರು [Free coupen] ಫ್ರೀ ಕೂಪನ್ ಬಗ್ಗೆ ಅರ್ಧ ಆಣೆ ಟಪ್ಪಾಲ್ ಚೀಟಿಯೊಡನೆ ನಮಗೆ ತಮ್ಮ ಹೆಸರು ವಿಳಾಸದೊಡನೆ ಬರೆಯಿರಿ.

ನಮ್ಮ ವಿಳಾಸ:— ಯಂ. ಸುಬ್ಬರಾವ್,

ಶಂಕರಪುರಂ, ಬೆಂಗಳೂರು ಸಿಟಿ.

ಸರಕಾರದ ಭದ್ರತೆಯುಳ್ಳ

ದಿ ಕೆಪಿಟಲ್ ಎಸ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

8 ಹೇರ್ ಸ್ಟ್ರೀಟ್ ಕಲ್ಕತ್ತಾ.

1882ನೇ ಇಸವಿ ಇಂಡಿಯನ್ ಕಂಪೆನಿಯ 6ನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ೧,೦೦೦,೦೦೦ ಹತ್ತು ಲಕ್ಷ ರೂಪಾಯಿ. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ. ಗಂಡಸರೂ ಹೆಂಗಸರೂ ಕೂಡ ಸಾಧಾರಣ ಜೀವವಿಮೆ ಜೀವಮಾನವದಿವಿಮೆ ದುಬಾರೆ ಎಂಡ್‌ಮೆಂಟ್ ಪೊಪ್ಯುಲರ್ ಯೆಸ್ಯೂರೆನ್ಸ್ ಎಂಬ ತಿಂಗಳಿಗೆ ೧ ರೂಪಾಯಿ ಮಾತ್ರ ಕೆರತಕ್ಕ ವಿಮೆ ಸಂಘಗಳಿಗೆ ಸುಲಭ ದರದಲ್ಲಿಯೇ ಸೇರಬಹುದು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವಂತೆ ವೈದ್ಯ ಪರೀಕ್ಷೆಯಿಲ್ಲದೆ ಮದುವೆಗೋಸ್ಕರ ಮತ್ತು ಮರಣದಗೋಸ್ಕರ ತಿಂಗಳಿಗೆ ೨ ರೂಪಾಯಿ ೧ ರೂಪ್ಯಾ ೮ ಆಣೆ ಮೇರೆಗೆ ಪಾವತಿ ಮಾಡಿ ಸಹಾಯ ಧನವನ್ನು ಪಡಿಯುವ ೧ನೇ ೨ನೇ ೩ನೇ ಕ್ಲಾಸುಗಳುಳ್ಳ ಒಂದು ಪ್ರೊವಿಡೆಂಟ ತರಗತಿಯು ಸಹ ಏರ್ಪಡಿಸಿರುತ್ತದೆ.

ಕಂಪನಿಯ ಶರ್ತಗಳ ಸಾರಾಂಶವನ್ನು ತಿಳಿಯ ಅಪೇಕ್ಷಿಸುವವರು ಒಂದಾಣೆ ಸ್ಟಾಂಪು ರವಾನಿಸಿದರೆ ಕಂಪನಿಯ ರೂಲ್ ಪುಸ್ತಕವನ್ನು ಕಳುಹಿಸೋಣಾಗುವದು. ಬೇರೆ ಕಂಪನಿಗಳಲ್ಲಿ ಸೇರುವ ಮೊದಲು ನಮ್ಮ ದರಗಳನ್ನೂ ಪ್ರಯೋಜನಗಳನ್ನೂ ತಿಳಕೊಳ್ಳಿರಿ.

ಮದ್ರಾಸು ಸಂಸ್ಥಾನ, ಮೈಸೂರು, ತಿರುವಾಂಕೋಡು, ಕೊಚ್ಚಿ ರಾಜ್ಯಗಳ ಪಟ್ಟಣಗಳಲ್ಲಿ ನಂಬಿಕೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರೂ, ಟ್ರೆವಲಿಂಗ್ ಏಜಂಟರೂ, ಸಬ್ ಏಜಂಟರೂ ಬೇಕು. ಅವರಿಗೆ ಸಂಬಳ ವ ಧಾರಾಳ ಕಮಿಷನ್ ಕೊಡಲಾಗುವದು.

ವಿಳಾಸ:— ವಿ. ಇ. ಯೆ. ಕಾಸ್ತಿಲ್ಯಾನೋ

ಮದ್ರಾಸು ಸಂಸ್ಥಾನದ ಮುಖ್ಯ ಏಜಂಟರು.

ಮಂಗಳೂರು, ದಕ್ಷಿಣ ಕನ್ನಡ.

ಧಾತುಪೌಷ್ಟಿಕ ಲೇಹವು.

ಸ್ವದೇಶಿ! (ಗುಣವಾಗದಿದ್ದರೆ ಹಣ ಪರತ!!) ಸ್ವದೇಶಿ!!!

ಎರಡನೇದವರ ಭಪಕೆದಾರ ಜಾಹಿರಾತಿಗೆ ಮರುಳಾಗಿ ಮೋಸಹೋಗ ಬೇಡಿರಿ. ಒಮ್ಮೆ ಈ ಲೇಹವನ್ನು ಸೇವನೆ ಮಾಡುವದರಿಂದ ಜನನೇಂದ್ರಿಯದ ಶಿಥಿಲತೆ, ನಪುಂಸಕತ್ವ, ಹಳೆಜ್ವರ ಅಶಕ್ತತೆ, ಸ್ವಪ್ನಾವಸ್ಥೆ, ಧಾತುಪತನ, ಎದೆನೋವು, ಕಟಿಶೂಲೆ ವಾತರೋಗ, ರಕ್ತ ಉದ್ರೇಕ, ಕಫ, ಕೆಮ್ಮು ದಮ್ಮು, ಮೇಹಸಂಬಂಧಿ ಧಾತು ಹೋಗೋಣ ಇತ್ಯಾದಿಗಳು ಗುಣವಾಗಿ ಇಂದ್ರಿಯದ ಶಿಥಿಲತೆ, ತೆಳ್ಳಗಾವಿನದ ಧಾತು ನಿರ್ಬಲತೆ, ಸೃಷ್ಟಿನೇಮಕದ ವಿರುದ್ಧ ತ್ವರೆಯಿಂದ ಉಂಟಾದ ನಪುಂಸಕತ್ವ ಇವು ವಾಸಿಯಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ಕಾಮೋತ್ತೇಜಕ, ರಕ್ತಶುದ್ಧಿ ವ ವೃದ್ಧಿ, ದೇಹ ಕಾಂತಿ, ಗರ್ಮಿ, ಹುಣ್ಣುಗಳು, ತಲೆಶೂಲೆ, ಹೊಟ್ಟೆಶೂಲೆ ಮುಂತಾದವು ಅತಿತ್ವರೆ ಖಾತ್ರಿಯಿಂದ ಗುಣವಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ ರತಿವಿಲಾಸಕ್ಕೆ ಪೂರ್ಣ ಶಕ್ತಿಯೂ, ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆ ವರೆಗೆ ಬೇಕಾಗುವದು. ಕಿಮ್ಮತ್ತು ೪೦ ತೊಲೆಗೆ ೩—೮—೦ ೮೦ ತೊಲೆಗೆ ೬—೦—೦ ಟ. ಖ. ಬೇರೆ. ಅನುಪಾನ ಪತ್ರಿಕೆ ಔಷಧಿ ಸಂಗಡಲೆ ರವಾನಿಸುವೆವು.

ವಿಳಾಸ:—ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡಾ.

ಬೆಲೆ ಸುಲಭ! ತ್ವರೆ ಮಾಡಿರಿ!! ಬಹಳ ವಿಷಯಗಳು!!!

ಸರ್ವ ಜ್ಯೋತಿಷ್ಯರತ್ನ.

ವೆಂಬ ಹೊಸ ಗ್ರಂಥವು.

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವುದಕ್ಕೆ ತಕ್ಕ ಜೋತಿಷ ಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವುವು. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಮರಾಠಿ, ಹಿಂದಿ ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ, ಲಗ್ನಭಾಗ, ಮೂಹೂರ್ತ ಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರದಿರುವುದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವುದು. ಜ್ಯೋತಿಷ್ಕರಿಗೆ ಅಲ್ಲದೆ ಸಾಮಾನ್ಯವಾದವರಿಗೂ ವಿಶದವಾಗಿ ತಿಳಿಯುವಂತಿರುವುದು.

ಈ ಪುಸ್ತಕದ ಬೆಲೆ ರೂ. ೨. ಟಪ್ಪಾಲ್ ಹಾಸಲು ೪ ಆಣೆ.

ನಮ್ಮ ವಿಳಾಸ:—ಶ್ರೀ ಶಿವಲಿಂಗಂ ಶೆಟ್ಟಿ.

ಕರ್ನಾಟಕ ಬುಕ್‌ಡಿಪೋ ಏಜಂಟ್, ಬಳ್ಳಾರಿ.

READY FOR SALE

A MANUAL OF

GENERAL ENGLISH

3rd Edition, Thoroughly Revised

For the use of the 2nd 3rd & 4th Forms

WITH

Nemurous exercises on each Chapter and question papers up to date

by

C. CHENNAKESAVAIYA B. A.

Price 1-0-0 **Postage 0-3-0**

Postage free for 3 Copies.

Apply Sharp to:—

H. N. Row & Brothers,
Publishers, Chickpet, Bangalore City

OR

THE WOOLLEN MART,
Mangalore

ಸನ್ 1913ನೇ ಇಸವಿಯ



"ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು"

ಈ ವರೆಗೆ ತಾವು ಉಪಯೋಗಿಸಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂ ಹಸನಾದ ೪೦ ಪೌಂಡು ಗ್ಲೇಜು ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿರುತ್ತದೆ:—

ದೇಹ ಸೌಖ್ಯ ವಿಚಾರದಲ್ಲಿ ಪ್ರತಿ ಒಬ್ಬರೂ ತಿಳಿಯಬೇಕಾದ ಸಾಧಕ ಬಾಧಕಗಳು, ಪಂಚಾಂಗ, ಕ್ಯಾಲೆಂಡರ್, ರಾಹುಕಾಲ, ಗುಳಿಕಕಾಲ, ಸಂವತ್ಸರ ಫಲ, ಗ್ರಹಣ ಶಕುನಭಾಗ ಪ್ರಯಾಣ ವಿಷಯ ಜಾತಕಕರ್ಮ ಮೊದಲು ಷೋಡಷ ಕರ್ಮಕ್ಕೆ ಬೇಕಾದ ಲಗ್ನಾದಿಗಳು. ಶ್ರೀ ಕೃಷ್ಣ ಚಕ್ರ ಇವೇ ಮುಂತಾದ ಸಂಗತಿಗಳು ಸುಲಭವಾಗಿ ತಿಳಿಯುವಂತೆ ಬರೆದಿರುತ್ತೆ.

ಕೋರ್ಟು ಪೇಜು ಆಕ್ಟು ಪೋಸ್ಟಾಫೀಸಿನ ಸಂಗತಿ ಸ್ಟಾಂಪಾಕ್ಟು ಇವುಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗುವ ಮತ್ತಾವ ಡೈರಿಯಲ್ಲಿ ಹೇಳದಿರುವ ಹೊಸ ವಿಷಯಗಳನ್ನು ಸೇರಿಸಿಧೆ. ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆಗಳ ಚಾರ್ಜು, ರೈಲ್ ಹೊರಡುವ ಕಾಲ ಲಗ್ಗೇಜ್, ಅಳತೆ ತೂಕ ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರುಗಳ ತಲಬು, ಸರಕಾರಿ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲಿಷು ಇಸವಿಗಳು, ಹಣದ ಬಡ್ಡಿ ತಲಬು ಜಂತ್ರಿ ಪಟ್ಟಿ ಕೂಡಾ ಇವೆ ದೋಬೀ ಲೆಖ್ಖ, ಹಾಲು ಕೊಡುವವನ ಲೆಖ್ಖಾ, ಮುಖ್ಯ ವಿಷಯ ಜ್ಞಾಪಕ ವಿಚಾರ ಜಮಾ ಖರ್ಚು ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ.

"ಬೇಕಾದವರು ಈಗಲೇ ಬರೆದು ತರಿಸಿಕೊಳ್ಳಿರಿ".

No. 1. ಸಣ್ಣ ಸೈಜು ಸಾದಾ ಡೈರಿ 1ಕ್ಕೆ	0–40–
No.2. ಸಣ್ಣ ಸೈಜು ಪೆನ್‌ಸಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ 1ಕ್ಕೆ	0-6-0
No. 3. ದೊಡ್ಡ ಸೈಜು ಸಾದಾ ಡೈರಿ 1ಕ್ಕೆ	0-6-0
No.4. ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳಹಾಕಿರುವ ಪ್ಲಾಪ್ ಡೈರಿ 1ಕ್ಕೆ	0-8-0

ಟಪ್ಪಾಲು ಖರ್ಚು ಬೇರೆ.

ಒಂದು ಸೈಜಿನ ಹತ್ತು ಡೈರಿಗಳನ್ನು ಒಟ್ಟಾಗಿ ತರಿಸಿದರೆ ಒಂದು ಇನಾಮು. ೨೫ ಡೈರಿಗಳಿಗಿಂತ ಹೆಚ್ಚಾಗಿ ತರಿಸತಕ್ಕವರಿಗೆ ರೂಪಾಯಿ ಒಂದಕ್ಕೆ 0-2-6ಯಂತೆ ಕಮಿಷನ್ ಕೊಡಲಾಗುತ್ತದೆ. ತಮ್ಮ ವಿಳಾಸವು ಬಾಲ ಅಕ್ಷರದಲ್ಲಿರಲಿ.

ದೊರೆಯುವ ವಿಳಾಸ:—

"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

ಇಡೀ ಜಿಲ್ಲೆಯಲ್ಲಿ ಅತ್ಯುತ್ತಮವಾದ ಮತ್ತು ಅಗ್ಗವಾದ ಔಷಧಾಲಯ!

P. M. KAMATH & CO.

Chemists and Druggists.

ಪಿ. ಎಮ್. ಕಾಮತ್ ಮತ್ತು ಕಂಪೆನಿ.

ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್.

ಇವರು ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ಬಳಿ ಹೊಸ ಕೋರ್ಟು ರಸ್ತೆಯಲ್ಲಿ ಗತ ಎ. ಎಲ್. ಕೃಷ್ಣ ಪೈಗಳು ಕೆಮಿಸ್ಟ ಶೋಪು ಕೆಲವು ಕಾಲ ಇಟ್ಟಿದ್ದ ವಿಶಾಲವಾದ ಕಟ್ಟೋಣದಲ್ಲೇ ಹೊಸ ಕೆಮಿಸ್ಟ್ ಶೋಪ್ ಯಾನೆ ಔಷಧಾಲಯವನ್ನು ಇಟ್ಟಿರುತ್ತಾರೆಂದು ಸರ್ವ ಜನರಿಗೂ ಆದರಪೂರ್ವಕ ತಿಳಿಸೋಣಾಗುತ್ತದೆ.

ಪಿ. ಎಮ್. ಕಾಮತ್ ಮತ್ತು ಕಂಪೆನಿಯವರ ಹೊಸ ಔಷಧಾಲಯದಲ್ಲಿ ಎಲ್ಲಾ ತರದ ಔಷಧಗಳನ್ನೂ, ಕೆಳಗೆ ಕಾಣಿಸಿದ ಇತರ ಸಾಮಾನುಗಳನ್ನೂ (Burgoyne & Burbidges) ಎಂಬ ಪ್ರಖ್ಯಾತಿಗೊಂಡ ಕಾರ್ಖಾನೆಯಿಂದ ಹೊಸತಾಗಿ ಇತ್ತಲಾಗೆ ತರಿಸಿ ಅವರ ಮೇಲ್ಕಂಡ ಹೊಸ ಕೋರ್ಟು ರಸ್ತೆಯಲ್ಲಿರುವ ಔಷಧಾಲಯದಲ್ಲಿ ಕಮ್ಮಿ ಕ್ರಯದಲ್ಲಿ ಮಾರಾಟಕ್ಕೆ ಇಟ್ಟಿರುತ್ತಾರೆ.

1. ಔಷದಗಾರರಿಗೆ ಮತ್ತು ಶಸ್ತ್ರವೈದ್ಯರಿಗೆ ಅವಶ್ಯಕವಾದ ಉಪಕರಣಗಳು, ಶಿಶುಗಳಿಗೆ ಹಾಲು ಕುಡಿಸುವ ಬಾಟ್ಲಿಗಳು, ಪಿಚ್ಕಾರಿಗಳು, ಔನ್ಸ್ ಗ್ಲಾಸುಗಳು, ಸಾಬೂನು ಮತ್ತು ಇತರ ಪರಿಮಳ ದ್ರವ್ಯಗಳು, ಥರ್ಮೋಮೆಟರಗಳು ಲೆಕ್ಟೊಮೆಟರಗಳು ವಗೈರೆ.

2. ಪ್ರಯಾಣಸ್ಥರಿಗೆ ಅವಶ್ಯಕವಾದ ಸಾಮಾನುಗಳು, ವೋಚು, ಮತ್ತು ಸಣ್ಣ ಟ್ರ್ಯಾಂಫೀಸುಗಳು, ಥರ್ಮೋ ಬಾಟ್ಲಿಗಳು, ಹೊಲಿಗೆ ಯಂತ್ರಗಳು ವಗೈರೆ.

3. ಆರಾರೂಟ್, ಬಾರ್ಲಿ, ಬಿಸ್ಕೂಟು, ಕೊಕ್ಕೊ, ಚಾ, ಕೊಲಾಹುಡಿ, ಶಿಶುಗಳಿಗೆ ಅಸ್ವಸ್ಥದವರಿಗೂ ಬೇಕಾದ ಆಹಾರಗಳು ವಗೈರೆ ಅನೇಕ ವಿಧದ ಸಾಮಾನುಗಳು ದೊರಕುವವು.

ಅಹೋರಾತ್ರಿ ಎಲ್ಲಾ ಸಮಯಗಳಲ್ಲಿ ತರಬೇತು ಹೊಂದಿದ ಕಂಪೌಂಡರನು ಬಹಳ ಜಾಗ್ರತೆಯಿಂದ ಎಲ್ಲಾ ಔಷಧಗಳನ್ನು ತಯ್ಯಾರಿಸಿಕೊಡುವನು.

TRIAL ORDERS SOLICITED.

ವಿಳಾಸ:—

ಪಿ. ಎಮ್. ಕಾಮತ್ ಮತ್ತು ಕಂಪೆನಿ.
ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್
ಕೋರ್ಟು ಹೊಸ ರಸ್ತೆ ಮಂಗಳೂರು.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಫುಪ್ಫುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ಧರಣಿಲೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನಿ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ. ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸತವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸುಲಭ ಕ್ರಯ! ಪರೀಕ್ಷಿಸಿರಿ!! ಸಂತೋಷಪಡುವಿರಿ!!!

ರಾಸ್ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ. ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2—4—0 ಮಾತ್ರ. 5 ವರುಷಗಳ ಗ್ಯಾರೆಂಟಿ.


SUPERIOR WATCH Co.
Rs 2/4.
Rs 2/4.
POST BOX No. 167
MADRAS, E.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟಿದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡಿಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು. ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಕ್ರಯ ರೂ. 5-12-0. ಇದನ್ನು ಜುಲಾಯಿ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಘಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪಿಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:— ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನಿಯು VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.
ನಿಯಮಿತ ಮೂಲಧನ ರೂ. 10,00,000.
ಪ್ರತಿಜ್ಞಾತ ಮೂಲಧನ ರೂ. 85,00,00.
ಆಗತ ಮೂಲಧನ ರೂ. 10,6450.
ಭಂಡವಾಳ ರೂ. 12,00,000.
ವಿಮೆ ಮಾಡಿರುವವರ ಸಂಖ್ಯೆ 76,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ.

ಹಿಂದುಸ್ಥಾನ ಕೊಓಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್—30 ದಲ್ಹೌಸಿ ಸ್ಕ್ವೇಯರ್ ಕಲ್ಕತ್ತ.
ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್
1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.
ನಿಯಮಿತ ಮೂಲಧನ—ರೂ. ಒಂದು ಕೋಟಿ.
ಪ್ರತಿಜ್ಞಾತ ಮೂಲಧನ—ರೂ, 865,000,00
ಆಗತ ಮೂಲಧನ—ರೂ. 915,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸೀದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತಪಡಿಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯುಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರನ್ನಾಯಕರು,
ಸೊಸ್ಯಾಟಿಯ ಏಜಂಟರು.
ತ್ರಿಶುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌಂ ಮಠದ ಬಳಿ,
ಮಂಗಳೂರು.

ದಿ ಏಸಿಯನ್ ಕಮರ್ಶಲ್

ಎಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮುಂಬಯಿ.

ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ ಪ್ರಿಮಿಯಂ ವಗೈರೆ ಇತರ ಕಂಪೆನಿಗಿಂತಲೂ ಅತೀ ಕಡಿಮೆಯಾಗಿರುತ್ತದೆ.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂ. 17—4—0 ತೆತ್ತು ಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರುಷ ಪ್ರಾಯದಲ್ಲಿ ಒಂದು ಸಾವಿರ ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವ 14 ವರುಷ ವಳಗಿನ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸುರು ಮಾಡಲ್ಪಟ್ಟ ಮಕ್ಕಳು ವಿಮೆಗೆ ಆರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟಲ್ಲಿ ವಿಮೆ ಮಾಡಿದ ಪೂರ್ಣ ಐವಜು ಅವರ ಬಾಧ್ಯಸ್ತರಿಗೆ ಸಿಕ್ಕುವುದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೂ ಹೆಂಗಸರನ್ನೂ 50 ವರುಷ ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 15 ವರುಷದ ಮೇಲಿನ ಮತ್ತು 30 ವರುಷದ ವಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊಳ್ಳುವದಿಲ್ಲ.

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹುದಾದ 1000 ವ ಅದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾರ ತೆರಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ತೆತ್ತು ಆತನ ಪ್ರಿಮಿಯಮ್ 4ರ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡಿಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈ ವರಿವಿಗೆ ಕಂಡುಬರುವದಿಲ್ಲ. ಆದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದರ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟು ರೋಡ್ ಉಡುಪಿ
ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಕ್ಷಿಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

---

ಕ್ಲೆಮೆಂಟರ ಮೆಜಿಕ್‌ಬಾಂ ತೈಲ್ಯವು.

ಈ ತೈಲ್ಯದಿಂದ ಸಕಲ ವಿಧದ ನೋವು ನಿವಾರಣೆಯಾಗುವದು. ತಲೆ ನೋವು ವಾಯುನೋವು, ಸೆಳತ, ಗಂಟ್ಲು ನೋವು, ಬೆನ್ನು ನೋವು, ಕೀಲುಗಳ ನೋವು, ಪಾರ್ಶ್ವವಾಯು, ವಿವಿಧವಾದ ವಾಯು ರೋಗಗಳು, ಶೀತ ರೋಗಗಳು, ಸಂದುವಾತ, ಚೇಳು ಕಡಿದ ನೋವು—ಇವುಗಳೆಲ್ಲಾ ಈ ತೈಲ್ಯ ಹಚ್ಚಿದ ಮಾತ್ರದಿಂದ ಚಮತ್ಕಾರಿಕವಾಗಿ ಮಾಯವಾಗುವವು. ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರ ಪ್ರಯೋಗಿಸಿ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಇದರಷ್ಟು ಅಮೋಘವಾದ ತೈಲ್ಯವು ಬೇರೊಂದಿಲ್ಲವೆಂಬದಾಗಿ ಕಂಡುಕೊಂಡಿದ್ದಾರೆ. ಈ ಅತ್ಯುತ್ತಮವಾದ ತೈಲ್ಯವು ನೋವಿನ ಮೂಲವನ್ನು ಕಂಡುಹಿಡಿದು ಅದರ ಹುಟ್ಟಡಗಿಸಿಬಿಡುವದು.

ಕ್ರಯ ಸೀಸೆ ಒಂದಕ್ಕೆ ೧೨ ಆಣೆ, ಪ್ಯಾಕಿಂಗ್ ೪ ಆಣೆ. ಮೂರು ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡಲಾದೀತು. ಈ ತೈಲ್ಯವು ಎಲ್ಲಾ ವ್ಯಾಪಾರಸ್ತರಲ್ಲಿಯೂ ವೈದ್ಯರಲ್ಲಿಯೂ ಬಿಕರಿಮಾಡಲ್ಪಡುತ್ತದೆ.

ವಿಳಾಸ:— ಎಸ್. ಪೀಟರ್ಸ್.
ಏಜಂಟ್:— ಜಿ. ಎಸ್. ಕಣ್ಣೈಚೆಟ್ಟಿ, 37 ವೇದಮಲೆಪಿಳ್ಳೆ ಬೀದಿ,
ಜೂಲನ್‌ಕೇಪ ಮ್ಯಾನುಫೆಕ್ಚರರ್, ತುಮಕೂರ. ಪರಸುವಾಕಂ ವೇಪರಿ ಮದ್ರಾಸು!

ಒಂದೇ ಕಥೆ! ಅಪೂರ್ವ ಗ್ರಂಥ!! ದೊಡ್ಡ ಕಥೆ!!!

ಪ್ರತಾಪಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿ ಹೋಗುತ್ತವೆ." ಎಂಬ ನೀತಿ; (೨) ಸ್ತ್ರೀಧರ್ಮ, ಸ್ತ್ರೀಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು, ಆರಾಮಾದಿ ವರ್ಣನೆಗಳು; (೬) ಮನುಷ್ಯ ಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿ ನೋಡಿದರೆ ಸ್ವಾರಸ್ಯವು ಗೊತ್ತಾಗುವುದು. ಕ್ರಯ ೧ ರೂ. ಟಪ್ಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಸರಕಾರದ ಬರವಸೆಗಳುಳ್ಳ

ಇಂಡಿಯ ಇಕ್ವಿಟೇಬಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

1882ನೇ ಇಸವಿ ಇಂಡಿಯನ್ ಕಂಪೇನಿಸ್ VIನೇ ಆಕ್ಟು ಪ್ರಕಾರ ರಿಜಿಸ್ಟ್ರಿಯಾಗಿಯದೆ.

ನಿಯಮಿತ ಮೂಲ ದ್ರವ್ಯವು 10,00,000.

(ದ್ರವ್ಯವನ್ನು ಸರಕಾರ ಜವಾಬ್ದಾರಿಯಲ್ಲಿ ಇಟ್ಟಿರುತ್ತದೆ.)

ಈ ಕಂಪೆನಿಯು ಪ್ರಖ್ಯಾತಿಪಟ್ಟ ಪೋಷಕರಿಂದಲೂ ಸಮರ್ಥರಾದ ಡೈರೆಕ್ಟರರಿಂದಲೂ ನಡೆಯಿಸಲ್ಪಡುತ್ತಿರುವುದು. ಮತ್ತು ಇದು ಪ್ರಖ್ಯಾತಿಪಟ್ಟ ಜೀವ ವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ, ಪ್ರೀಮಿಯಂ ವಗೈರೆ ಇತರ ಕಂಪೆನಿಗಿಂತಲೂ ಬಹಳ ಕಡಿಮೆಯಾಗಿ, ಸಿಕ್ಕುವಂಥಾ ಲಾಭವು ಅತಿ ಹೆಚ್ಚಾಗಿರುತ್ತದೆ.

ಎಲಾ ಪಟ್ಟಿಗಳ ಅನುಸಾರವಾಗಿ 18 ವರುಷಗಳ ಮೇಲಿನ ಮತ್ತು 45 ವರುಷ ಪ್ರಾಯದ ಕೆಳಗಿನ ಗಂಡಸರನ್ನು, ಯಾ ಹೆಂಗಸರನ್ನು ಸೇರಿಸಿಕೊಳ್ಳುತ್ತಾರೆ. ಉದಾಹರಣೆ:—25 ವರುಷ ಪ್ರಾಯದವನೊಬ್ಬನು 50ನೇ ವರುಷದಲ್ಲಿ 5000 ರೂಪಾಯಿ ಮತ್ತು ಅದರ ಮೇಲಿನ ನಫೆಯು ಸಿಕ್ಕಬೇಕಾದರೆ ವರುಷ ಒಂದಕ್ಕೆ ರೂಪಾಯಿ 213—7—0 ಪ್ರಕಾರ ಕೊಡುತ್ತಾ ಬರಬೇಕು. ಆದರೆ ಅಷ್ಟೇ ವರುಷದವನು ಸದರಿ ಹಣವು ಅವನ ಯಾ ಅವಳ ನಂತರದಲ್ಲಿ, ಅವರಿಂದ ಅಧಿಕಾರ ಪಟ್ಟ ಯಾ ವಾರಿಸ್ದಾರರಿಗೆ ಸಿಕ್ಕುವದಾದರೆ ವರುಷ ಒಂದಕ್ಕೆ ರೂಪಾಯಿ 133—7—0 ಪ್ರಕಾರ ತೆರಬೇಕು.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂಪಾಯಿ 32—12—0 ಕೊಡುತ್ತಾ ಬಂದಲ್ಲಿ ಆ ಗಂಡಿನ ಅಥವಾ ಹೆಂಗಸಿನ 20ನೇ ವರುಷ ಪ್ರಾಯದಲ್ಲಿ 1000 ರೂಪಾಯಿ ಕೊಡಲಾದೀತು. ಈ ಪಟ್ಟಿಯನ್ನು ಅನುಸರಿಸುವ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇಲ. ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ ಮೂರು ತಿಂಗಳಿಗೆ ಒಂದು ಸಾರಿಯೂ, ಆರು ತಿಂಗಳಿಗೆ ಒಂದಾವರ್ತಿಯಾಗಿಯೂ, ವರ್ಷಾವದಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಿಂದ ಸೂಚನಾಪತ್ರಗಳನ್ನು ತರಿಸಿಕೊಳ್ಳಬಹುದು.

☞ ಸಬ್ ಏಜಂಟರು ಬೇಕು. ☜

ಚನ್ನಾಗಿ ಕೆಲಸ ಮಾಡುವ ನಂಬಿಗೆಯುಳ್ಳ ಏಜಂಟರು ಪ್ರತಿ ಸ್ಥಳಗಳಲ್ಲಿಯೂ ಬೇಕು. ತಿಂಗಳು ಒಂದರ 25 ರೂಪಾಯಿ ಲಾಗಾಯಿತು 50 ರೂಪಾಯಿ ವರೇಗೆ ಆಯಾಯ ಕೆಲಸಕ್ಕನುಗುಣವಾಗಿ ಸಂಬಳವು ಕೊಡಲಾದೀತು. ಕೆಳಗಿನ ವಿಳಾಸಕ್ಕೆ ಬರಿಯಬೇಕು.

ಮುಖ್ಯ ಅಧಿಕಾರಸ್ಥಾನ,
ಕಲ್ಕತ್ತ.

ಕೆ. ಆರ್. ಹೆಬ್ಬಾರ್,
ಕನ್ನಡ ಮಲಬಾರು ಮತ್ತು ಮೈಸೂರು ಪ್ರಾಂತ್ಯಕ್ಕೆ ಮುಖ್ಯ ಏಜಂಟರು.
ಉಡುಪಿ ಪೋಸ್ಟು.

THE SELF ENGLISH STUDY.

ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ,

ಬೋಧಕರ ಸಹಾಯವಿಲ್ಲದೆ ತಾವಾಗಿ ಇಂಗ್ಲೀಷನ್ನು ಕಲಿಯುವ

ಆಂಗ್ಲಭಾಷಾ ಪ್ರವೇಶದಾಯಿನಿ.

ಮೊದಲನೆಯ ಪುಸ್ತಕ. ಪ್ರಥಮಾಭ್ಯಾಸಿಗಳಿಗೆ ತಕ್ಕ ಸುಲಭ.ಪಾಠಗಳನೇಕವಾಗಿರುವ ಪ್ರತಿ ಇಂಗ್ಲಿಷ್ ಶಬ್ದಕ್ಕೂ ಕನ್ನಡಕ್ಷರದಲ್ಲಿ ಉಚ್ಚಾರಣೆ ಅರ್ಥ ಸಹ ಇರುವುದು. ಕ್ರಯ ಒಂದು ರೂಪಾಯಿ ಎಂಟಾಣೆ.

ಎರಡನೆಯ ಪುಸ್ತಕ. ಅಕ್ಷರಜ್ಞಾನವೂ ಶಬ್ದಜ್ಞಾನವೂ ಆದ ಸ್ವಲ್ಪ ಮಟ್ಟಿಗೆ ಇಂಗ್ಲಿಷ್ ತಿಳಿದವರಿಗೆ ಅನುಕೂಲವಾದ ಪ್ರೌಢಪಾಠಗಳುಳ್ಳದಾಗಿ ವರ್ತಕರಿಗೆ ಉಪಯೋಗವಾದ ಪಾರಿಭಾಷಿಕ ಶಬ್ದಕೋಶ ಒಂದನ್ನು ಛಾಪಿಸಿದೆ. ಕ್ರಯ ಒಂದು ರೂಪಾಯಿ ಎಂಟಾಣೆ.

ದಸರಾ ದೀಪಾವಳೀ ಮಹೋತ್ಸವದ ಜ್ಞಾಪಕಾರ್ಥವಾಗಿ ಆರು ವಾರಗಳ ಮಟ್ಟಿಗೆ ಕ್ರಯ ಕಡಮೆ ಮಾಡಿದೆ. ಅವಧಿ ಮೀರಿದ ಬಳಿಕ ಮರಳಿ ಮೊದಲಿನ ಕ್ರಯವೇ ಕೊಡಬೇಕಾಗುವುದು.

ಮೊದಲನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.

ಎರಡನೆಯ ಪುಸ್ತಕ ಕ್ರಯ ಒಂದೇ ಒಂದು ರೂಪಾಯಿ.

ಅಂಚೆವೆಚ್ಚ ಪುಸ್ತಕ ಒಂದಕ್ಕೆ ಮೂರೇ ಆಣೆ.

ಎರಡು ಪುಸ್ತಕವೂ ಒಟ್ಟಾಗಿಯಾದರೂ ಒಂದೇ ಪುಸ್ತಕವನ್ನು ಹೆಚ್ಚಾಗಿಯಾದರೂ ಕೊಂಡುಕೊಳ್ಳುವವರಿಗೆ ಅಂಚೆ ವೆಚ್ಚ ಮಾಫಿ.

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!!

ಭಾರತಿ ಸಂಪಂಗಿರಾಮು,
ಭಾಷಾನಿಧಿ ಕಾರ್ಯಾಲಯ,
೧೨೦ ಗುಡುಮ್ಮೆಯನ ಪೇಟೆ, ಬೆಂಗಳೂರು ಸಿಟಿ.

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

(ಶ್ರೀ ಶೃಂಗೇರಿ ಮಠದವರಿಂದಲೂ, ಮೈಸೂರು ಸರಕಾರದವರಿಂದಲೂ ಪೋಷಿಸಲ್ಪಡುತ್ತಲಿದೆ.

ಇದರಲ್ಲಿ:—(೧) „ದಶೋಪನಿಷತ್ತು"ಗಳಿಗೂ ಕನ್ನಡ ಕಥಾರೂಪವಾದ ತಾತ್ಪರ್ಯ. (೨) „ಶ್ರೀ ಶಂಕರಾಚಾರ್ಯ ಚರಿತ್ರ ಕಾಲವಿಚಾರ". (೩) „ಕನ್ನಡ ಭಾಷಾಮಯಧರ್ಮಸಿಂಧುಸಾರ" (೩೫೩ ವಿಷಯಗಳಿವೆ. (೪) ಸಂಧ್ಯಾವಂದನೆಯ ಅರ್ಥ ವಿಚಾರ" (ಬಹುಯುಕ್ತಿ ಪ್ರಮಾಣಗಳಿಂದೊಡಗೂಡಿದೆ) (೫. „ಬಾಲಕರ ಭಂಡಾರ" (ನೀತಿ ಕಥೆಗಳು, ನೀತಿ ಶ್ಲೋಕಗಳು, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯೆ, ಒಗಟೆ, ನ್ಯಾಯ ಮುಂತಾದುವುಗಳು). (೬) „ಕುಮಾರ ಸಂಭವ ಕಾವ್ಯ" ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ ನಿಗ್ರಹ, ದಾತುರೂಪ. ಧಾತ್ವರ್ಥ, ವಿಶೇಷಾಂಶಗಳೊಂದಿಗೆ.

(೧೨-೮-೧೯೧೦)ರಲ್ಲಿ ಆರಂಭವಾಗಿ ನಡೆಯುತ್ತಲಿದೆ. ಚಂದಾ (ವರ್ಗಣಿ) ದಾರರಿಗೆ ಹಿಂದಿನ ಸಂಚಿಕೆಗಳೆಲ್ಲ ದೊರೆಯುತ್ತವೆ.

ವಿಲಾಸ: (ಪತ್ತೆ)—-ದೊಡ್ಡ ಬೆಲೆ ನಾರಾಯಣ ಶಾಸ್ತ್ರಿ,
ಶ್ರೀ „ಶಾರದಾ" ಸಂಪಾದಕ, ಸೀಗೆ ಬೀದಿ ಬೆಂಗಳೂರು.

ಹೆಸರು ಪಡೆದ ಸಾಲಿಯ್ಯಾಸ್ ಶಾಯಿಪುಡಿ.

ಸಾಲಿಯ್ಯಾಸ್ ಎಂಬ ಈ ಶಾಯಿಗೆ ೭ಕ್ಕಿಂತಲೂ ಹೆಚ್ಚಿನ ಪದಕಗಳು ದೊರಕಿದ್ದು ಮೈಸೂರು ಮತ್ತು ಹೈದರಾಬಾದ್ ಸರಕಾರಗಳಿಂದ ಪ್ರೋತ್ಸಾಹಿಸಲ್ಪಟ್ಟದೆ.

SALIANS
BLUE-BLACK
INK

ಶಾಲೆಗಳಲ್ಲಿ ಉಪಯೋಗಿಸುವ ಬಗ್ಯೆ ಇದಕ್ಕಿಂತ ಉತ್ಕೃಷ್ಟವಾದ ಶಾಯಿ ಮತ್ತೊಂದಿಲ್ಲ. ೨೬ ಔನ್ಸು ಶಾಯಿಯನ್ನು ಮಾಡಬಹುದಾದ ಡಬ್ಬಿ ಒಂದಕ್ಕೆ ೦—೧—೦ ಆಣೆ ಮಾತ್ರ. ಟಪ್ಪಾಲು ಚಾರ್ಜು ೧೨ರಿಂದ ೧೮ರ ವರೆಗೆ ೦—೪—೦. ನಮ್ಮಲ್ಲಿ ಇದು ವಿನಹಾ ವಿವಿಧ ನಮೂನೆಯ ಶಾಯಿಗಳಿವೆ. ಅಲಿಮಿನಿಯಂ ಪಾತ್ರೆಗಳೂ, ಬನಿಯನುಗಳೂ, ಉಲನ್ ಶ್ಯಾಲುಗಳೂ, ದಾರಗಳೂ, ವಾಚುಗಳೂ, ಔಷಧಿಗಳೂ, ಅತ್ತರುಗಳೂ, ಇಟಾಲಿಯನ್ ಟೋಪಿಗಳೂ ನಮ್ಮಲ್ಲಿ ದೊರೆಯುವವು. ೧೯೧೩ನೇ ಇಸವಿಯ ಡ್ಯಾರಿಗಳು ಈಗ ತಾನೇ ಬಂದಿವೆ. ಕ್ರಯ ೦—೪—೦ ಮತ್ತು ೦—೬—೦. ವಸ್ತ್ರಕ್ಕೆ ರಂಗು ಹಾಕುವ ಸೋಪು 1ಕ್ಕೆ 0-1-6 ನೀಲಗಿರಿ ತೈಲ್ಯದ ಶೀಸೆ 1ಕ್ಕೆ 0-5-0 ಎಲ್ಲಾ ತರದ ಉಲನ್ ಸಾಕ್ಸ ಮಾರಾಟಕ್ಕೆ ಸಿದ್ಧವಿದೆ.ವ್ಯಾಪಾರಸ್ಥರಿಗೆ ಧಾರಾಳ ಕಮಿಷನ್ ದೊರಕುವದು.

ದಿ.ಊಲನ್ ಮಾರ್ಟ್
ಜನರಲ್ ಮಾರ್ಚೆಂಟ್, ಮಂಗಳೂರು.

Printed & Published by V. S. Kamath at the Mangalore Trading Association's Sharada Press Mangalore,

---

Registered M. No. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಸೇರಿ ರೂ. 2-1-0.

ಪ್ರತಿ ಶುಕ್ರವಾರವೂ
ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.



ಪುಸ್ತಕ 6. ಸಂಚಿಕೆ 52

ಮಂಗಳೂರು ತಾ. 27ನೇ ಶುಕ್ರವಾರ
ದಶಂಬರ 1912.

Amrutanjan Depot, Head Office: Bombay.

ಅಮೃತಾಂಜನ! ಅಮೃತಾಂಜನ!

ಇದರಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಎದೆನೋವು, ಸೊಂಟದ ನೋವು ಮುಂತಾದ ಅನೇಕ ತರದ ನೋವುಗಳು ಖಾತ್ರಿಯಿಂದ ನಿಲ್ಲುವವು.

Trade Mark Registered.

AMRUTANJAN

ಹಲವು ಜನರು ನಮ್ಮ ಗಿರಾಕಿಗಳಿಗೆ ಅಮೃತಾಂಜನ ಎಂಬದಾಗಿ ತಕಾರಿ ಬಾಮ್‌ಗಳನ್ನು ಕೊಟ್ಟು ಠಕಾಯಿಸುವದರಿಂದ ಅಮೃತಾಂಜನವನ್ನು ನಮ್ಮ ರಿಜಿಸ್ಟರ್ಡ್‌ವುಳ್ಳ ಬಾಟ್ಲಿಗಳಲ್ಲಿ ತುಂಬಿಸಿ ಅಮೃತಾಂಜನದ ಬಾಟ್ಲಿಗಳನ್ನು ಸುಂದರವಾದ ಮತ್ತು ಹಲವು ಭಾಷೆಗಳಿಂದ ಕೂಡಿರುವ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಿರುತ್ತೇವೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ. ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ಸಿಕ್ಕುವದು.

ಹತ್ತು ಲಕ್ಷ ದೊಡ್ಡ ಸೈಜು ಪೋಸ್ಟ್ ಕಾರ್ಡುಗಳು.

ಈ ಕಾರ್ಡುಗಳು ಬೆಳ್ಳಗಾಗಿಯೂ, ಬರೆಯುವದಕ್ಕೆ ನಯವಾಗಿಯೂ ಇವೆ. ವ್ಯಾಪಾರಸ್ಥರೂ, ಉಪಾಧ್ಯಾಯರೂ, ಹುಡುಗರೂ ಕೊಂಡುಕೊಳ್ಳುವ ಬಗ್ಯೆ ಅರ್ಧ ಕ್ರಯಕ್ಕಿಂತಲೂ ಕಮ್ಮಿಯಿಂದ ರವಾನಿಸುತ್ತೇವೆ. (500 ಕಾರ್ಡಿಗಿಂತ ಕಮ್ಮಿ ರವಾನಿಸಲಾರೆವು.) ಮುಂಚಿನ ಕ್ರಯ 1,000ಕ್ಕೆ 2 ರೂಪಾಯಿ 8 ಆಣೆ, ಈಗಿನ ಕ್ರಯ 1,000ಕ್ಕೆ 15 ಆಣೆ, 500ಕ್ಕೆ 8 ಆಣೆ. ವಿ. ಪಿ. ಖರ್ಚು 1,000ಕ್ಕೆ 13 ಆಣೆ, 500ಕ್ಕೆ 7 ಆಣೆ.

1913ನೇ ವರ್ಷದ ಅಮೃತಾಂಜನದ ಕ್ಯಾಲಂಡರ್.

AMRUTANJAN BO
AMRUTANJA
Best Indian Pain Balm
Amrutanjan D
BOMBAY.

ನಾಲ್ಕು ರೂಪಾಯಿಯ ಔಷಧ ತರಿಸಿಕೊಂಡವರಿಗೆ ಪುಕಸಾಟೆಯಾಗಿ ರವಾನಿಸಲ್ಪಡುವದು. ಇತರರಿಗೆ 1ಕ್ಕೆ ವಿ. ಪಿ. ಸಮೇತ 4 ಆಣೆ. 10ಕ್ಕೆ ವಿ. ಪಿ. ಸಮೇತ 1-8-0. ಇದು ಸುಂದರವಾಗಿ, ನೋಡುವದಕ್ಕೂ ರಜೆಯ ದಿವಸಗಳನ್ನು ತಿಳಕೊಳ್ಳುವದಕ್ಕೂ ಉಪಯುಕ್ತವಾಗಿರುತ್ತದೆ

ದಂತಮಂಜನ! ದಂತಮಂಜನ! ದಂತಮಂಜನ ಡಬ್ಬಿ ಒಂದಕ್ಕೆ 2 ಆಣೆ.

ಗಜಕರ್ಣದ ಮುಲಾಮು! ತತ್‌ಕ್ಷಣ ಗುಣ! ಗಜಕರ್ಣದ ಮುಲಾಮು ಡಬ್ಬಿ ಒಂದಕ್ಕೆ 6 ಆಣೆ.

ಅಮೃತಾಂಜನ ಸಿಕ್ಕುವ ಸ್ಥಳ.
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್ ಮಂಗಳೂರು.
ಪೆರ್ಲ್ ಎಂಡ್ ಸನ್ಸ್. „
ಇಬ್ರಾಹಿಮ್ ಎಲಾಯಿಸ್. „
ಎಮ್. ಪ್ಯಾಸ್. „

ವಿಳಾಸ:—
ಅಮೃತಾಂಜನ ಡಿಪೋ,
109 ಫ್ರೆಮರ್ ರೋಡ್,
ಫೋರ್ಟ್, ಮುಂಬಯಿ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ. ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3–4–0. ಅರ್ಧ ಬಾಟ್ಲಿಗೆ 1–12–0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ವೈದ್ಯಸಾರಸಂಗ್ರಹ (ಮೂಲಿಕಾ ಔಷಧಿ)	೩—೦—೦
ಶುಕಸಪ್ತತಿ ವೇದಾಂತ ಪೂರ್ವದ ಪ್ರತಿ	೨—೦—೦
ರಘುವಂಶ ೧ನೇ ಪರ್ವ...	೧—೦—೦
ಡಿಟ್ಟೊ (೨ನೇ ಪ.) ಅರ್ಥ ತಾತ್ಪರ್ಯ ಆಕಾಕ್ಷೆ ಇತ್ಯಾದಿ ...	೧—೦—೦
ವಿವೇಕ ಚೂಡಾಮಣಿ	೨—೪—೦
ಶಾಮಕುಬ್ಜ ಕಥೆ	೦—೮—೦
ಚಮತ್ಕಾರ ಚಿಂತಾಮಣಿ	೦-೧೦—೦
ಮಹಿಮ್ನ ಸ್ತೋತ್ರ (ಟೀ. ತಾ.)	೦—೩—೦
ಮುಕುಂದಮಾಲಾ ಸ್ತೋತ್ರ (ಟೀ. ತಾ.)	೦—೪—೦
ಶಿವಗೀತಾ (ಟೀ. ತಾ. ಸಹಿತ)	೦—೮—೦
ಶಿವಾನಂದಲಹರಿ (ಟೀ. ತಾ.)	೦—೬—೦
ವಿದ್ಯಾನಂದ ಮಾಸಪತ್ರಿಕೆ ಚಂದಾ	೨—೪—೦

ಮಾದ್ರಿ ಪತ್ರಿಕೆ, ಪುಸ್ತಕ ಪಟ್ಟಿ ಉಚಿತ. ಇನ್ನೂ ಅನೇಕ ಪುಸ್ತಕಗಳು ದೊರೆಯುವವು.

ವಿಳಾಸ:—
ವಿದ್ಯಾನಂದ ಆಫೀಸು.
ಬೆಂಗಳೂರು ಸಿಟಿ.

* * *

ಹೊಸ ವರ್ಷ! ಇನಾಂ! **ಮಧುರವಾಣಿ.** ಹೊಸ ಪುಸ್ತಕಗಳು!! ಬಹುಮಾನ!!

ಮಧುರವಾಣಿಯ ವಾರ್ಷಿಕ ಚಂದಾ 1_8_0.

1913ನೆಯ ಜನವರಿ 31ನೆಯ ತಾರೀಕಿನೊಳಗಾಗಿ ಚಂದಾದಾರರಾಗುವವರಿಗೆ ಮಾತ್ರ ಹೊಸ ವರ್ಷದ ಕ್ಯಾಲೆಂಡರ್ ಮತ್ತು ಟಪ್ಪಾಲ್ ಖರ್ಚು ಸಹ ರೂ. 1_4_0.

ಉತ್ತಮ ಗ್ರಂಥಗಳು.

ಕೃಷ್ಣಾಕುಮಾರಿ . . .	0_14_0	ಭ್ರಾಂತಿವಿಲಾಸ (ನಾವಿಲ್) .	0–10–0
(ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ.)		ಸಾಧನೆ (ನಾವಿಲ್) . .	0–8–0
ಶಾನಕನ ಚರಿತ್ರೆ	0_6_0	ಪರಿಮಳಾ (ನಾವಿಲ್) . .	0–10–0
ವಿವೇಕಮಂಜರಿ 1ನೆ ಭಾಗ . .	0_3_0	ಮನೋರಮಾ . . .	1–0–0
,, 2ನೆ ಭಾಗ . .	0–8–0	ವಿಲಕ್ಷಣ ದೈವಘಟನೆ . .	0–4–0
(ಉಪನ್ಯಾಸಗಳ ಪುಸ್ತಕ)		ಭಕ್ತವಿಜಯ	3–4–0
ಸಾಹಸಿಕೆ (ನಾವಿಲ್) . . .	0_2_0	ಜೈಮಿನಿ ಭಾರತ . . .	1–0–0
ಗೃಹಿಣಿಯಾದ ಗಂಗೆ (ಕಥೆ) . .	0_3_0	ಗೋಪಿಕಾಗೀತೆ . . .	0–1–0
ಕುಣುಕು ಮಿಣುಕು	0_2_0	ಭಜಗೋವಿಂದಂ . . .	0–1–0
(ಹಾಸ್ಯರಸ ಪ್ರಧಾನವಾದ ಪುಸ್ತಕ)		ಉಪಾಯಶಾಸ್ತ್ರ . . .	0–1–0
ಶೀರದಿ (ನಾವಿಲ್)	0_8_0	ಹೊಸ ವರ್ಷದ ಪಂಚಾಂಗ.	0–1–0

N. B. ಮಧುರವಾಣಿಯ ಮಾದರಿ ಸಂಚಿಕೆಗೂ, ಕ್ಯಾಟಲಾಗಿಗೂ ಬೆಲೆಯಿಲ್ಲ. ಒಂದಾಣೆಯ (0–1–0) ಸ್ಟಾಂಪನ್ನೂ ಕಳುಹಿಸುವವರಿಗೆ ಹೊಸ ವರ್ಷದ ಕ್ಯಾಲೆಂಡರ್ ಬಹುಮಾನ.

ಹನುಮಾನ್ ಕಂಪೆನಿ,
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ,

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೀವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ಪಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ

1913ನೇ ಇಸವಿಯ ಪೊಕೆಟ್ ಡ್ಯಾರಿಗಳು.

ಮಾರಾಟಕ್ಕೆ ಸಿದ್ಧವಾಗಿವೆ.

ನೋಟು ಬೂಕು ಸ್ಯಾಜು (ದೊಡ್ಡ ಸ್ಯಾಜು) ರೂ. 0–8–0
(ಒಂದಾಣೆ ಪೆನ್ಸಿಲು ಸಹಿತ)
ಸಣ್ಣ ಸ್ಯಾಜು .... ,, 0–4–0

ವಕೀಲರಿಗೂ ವಕೀಲರ ಗುಮಾಸ್ತರಿಗೂ ಬೇಕಾದ ಎಲಾ ವಿಷಯಗಳನ್ನು ಒಳಕೊಂಡಿರುವುದಲ್ಲದೆ ಇತರರಿಗೂ ಬಹಳ ಉಪಯೋಗಕರವಾದ್ದಾಗಿರುತ್ತದೆ.

ಹೆಚ್ಚು ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ, ವ್ಯಾಪಾರಸ್ತರಿಗೂ ಧಾರಾಳ ಕಮಿಶನ್ ಕೊಡಲಾಗುವದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಮ್ಯಾನೇಜರ,
ಶಾರದಾ ಛಾಪಖಾನೆ, ಮಂಗಳೂರು ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡುಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿ ಸಿಕ್ಕುವವು.

CHEAP JACK

FANCY UMBRELLA MART.

ಚಿತ್ರವಿಚಿತ್ರವಾದ ಕೊಡೆಗಳು.

ಕಂ॥ ಧರೆಯೊಳ್ ಮೆರೆ ಮಹಾಶಯ । ರಿರಃ ನಾವಿನಿಸುಂದಿನಂ ಕೊಡೆಯ ವಿಕ್ರ
ಯಮಂ ॥ ಇರಿಸಿರ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿಯೆ
ವದರರಮಂ ॥೧॥ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ
ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾಮಾತಿಂ । ಗೆಡೆಯಾಗಿಯೆ
ನೆರಲನೀವ ಕೊಡೆಯಿಲ್ಲಿರ್ಕುಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

* * *

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಜಾಲ, ಮುಂಬಯಿ.

ಅತ್ಯುಪಯುಕ್ತವಾದ ಕೆಲವು ಪುಸ್ತಕಗಳು.

ಕುಮುದಾ	0—8—0
ಮಹಾರಾಣಿ ಗೃಹಶೀಲೆ	0—2—0
ಮುಕ್ತಹಾರ	0—1—6
ಸನಾತನ ಧರ್ಮ ಪ್ರಶ್ನೋತ್ತರ...	0—1—6
ಕೃಷ್ಣಜನ್ಮ ನಾಟಕ	0—4—0
ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನೆ	0—3—0
ಪ್ರಾತಃರಾಹ್ನಿಕ ಪದ್ಧತಿ	0—3—0
ದೇವಪೂಜಾ ಪದ್ಧತಿ	0—3—0
ಬ್ರಹ್ಮಯಜ್ಞ ವೈಶ್ವದೇವ	0—3—0
ವಿಷ್ಣು ಸಹಸ್ರನಾಮ ಕೃಷ್ಣಾಷ್ಟೋತ್ತರ ನಾಮಾವಳಿ ...	0—2—6
ವಾಯುಸ್ತುತಿ	0—2—0
ದ್ವಾದಶ ಸ್ತೋತ್ರ	0—2—0
ಲಕ್ಷ್ಮೀ ಶೋಭಾನೆ ಹಾಡು	0—2—0
ಪುರಂದರ ದಾಸರ ಕೀರ್ತನೆಗಳು ಭಾಗ 1	0—6—0
ಹರಿಭಕ್ತಿಸಾರ	0—1—0
ತುಲಸೀ ಸಂಕೀರ್ತನೆ	0—2—0
ಉದಯರಾಗ	0—4—0
ಸ್ವಪ್ನಪದ; ಮಧ್ವನಾಮ	0—2—0
ಇಂಗ್ಲಿಷ ರಶೀದಿ 50 ಫೋರ್ಮುಗಳ ಪುಸ್ತಕ	0—6—0
ಕನ್ನಡ ರಶೀದಿ 25 ಫೋರ್ಮುಗಳ ಪುಸ್ತಕ	0—3—0
ಗೇಣಿ ರಶೀದಿ 25 ಫೋರ್ಮುಗಳ ಪುಸ್ತಕ	0—3—0
ಪರ್ಮಿಟು ಫೋರ್ಮು 100ಕ್ಕೆ	0-10—0
ಗೇಣಿಚೀಟು ಫೋರ್ಮು 100ಕ್ಕೆ	0-10—0
ಪ್ರೊಮಿಸರಿ ನೋಟು ಫೋರ್ಮು 100ಕ್ಕೆ	0—6—0
ಚೆಕ್‌ರೋಲ್ 25 ಪುಟಗಳ ಪುಸ್ತಕ	0—8—0
,, 50 ,, ...	0-14—0
,, 100 ,, ...	1—8—0

ಲಗ್ನ ಪತ್ರಿಕೆಗಳು, ಲೆಟರ ಪೇಪರುಗಳು, ಬಿಲ್‌ಫೋರ್ಮುಗಳು, ವಿಜಿಟಿಂಗ್ ಕಾರ್ಡುಗಳು, ಅರ್ಜಿಗಳು ವಗ್ಯೆರೆ ಎಲ್ಲಾ ತರದ ಛಾಪೆಯ ಕೆಲಸಗಳನ್ನು ಬಹಳ ಅಗ್ಗವಾದ ದರದಲ್ಲಿ ಮಾಡಿಕೊಡುವರು. ದರಗಳಿಗೂ ಇತರ ಎಲ್ಲಾ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ನಾಣ್ಯವಾದ ಗಡಿಯಾರ! ಬಹು ಸುಲಭ ಕ್ರಯ!!

ಪಾಕೆಟ್ ಲಿವರ್ ವಾಚ್.

ಇದರ ಕ್ರಯ 6 ಬಹುಮಾನಗಳ ಸಮೇತ 3 ರೂಪಾಯಿ ಮಾತ್ರ.

5 ವರುಷಗಳ ಗ್ಯಾರಂಟಿ.



ಇದು ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಲಿವರ್ ಕೆಲಸದಿಂದಲೂ ನಾಣ್ಯವಾದ ಮತ್ತು ಬಲವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೆ ಹೊಸದಾಗಿ ತರಿಸಿರುತ್ತೇವೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಭರವಸೆಯಾದ ಮಾಲು. ಸುಂದರವಾದದ್ದು. ಅನೇಕ ವರುಷ ಪರಂಪರೆ ಬಾಳಿಕೆ ಬರುವಂಥಾ ಗಡಿಯಾರ.

ಇದರ ಆರು ಬಹುಮಾನಗಳ ತಪಸೀಲು.

1. ಸುಂದರವಾದ ಗಡಿಯಾರದ ಸರಪಣಿ, 2. ದಿಕ್ಕನ್ನು ತೋರಿಸುವ ಉತ್ತರಮುಖಿ, 3. ನಾಣ್ಯವಾದ ಕರವಸ್ತ್ರ, 4. ಲೆವೆಂಡರ್ ಎಂಬ ಪರಿಮಳ ದ್ರವ್ಯ, 5. ಸರ್ಪಾಕಾರದ ಉಂಗುರ, 6. ಹಾವು ಡಬ್ಬಿ.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ. ನಮ್ಮ ವಿಳಾಸ:—
ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರ್ 7. ಕೋಪ್ ವೆಂಕಟಾಚಲೈಯರ್ ಬೀದಿ, ಮದ್ರಾಸು.

ಔಷಧಿಗಳನ್ನು ತರಿಸಿಕೊಳ್ಳುವವರು ಕಳದ ಹದಿನಾರು ವರುಷಗಳಿಂದಿರುವ ಈ ಕಂಪೆನಿ ವಿಳಾಸಕ್ಕೆ ಬರಕೊಳ್ಳಲು ಮರೆತುಬಿಡಬೇಡಿರಿ.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ರಥಬೀದಿ ಮಂಗಳೂರು.

THE MANGALORE TRADING ASSOCIATION,

CHEMISTS PRINTERS & GENERAL MERCHANTS.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕು ಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಕಟ್ಟಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0-12-0 ಮೂರು ಬಾಟ್ಲಿಗಳಿಗೆ 1-0-0 12 ಬಾಟ್ಲಿಗಳಿಗೆ 7-0-0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಹಳೇ ಶ್ಲಾಘ್ಯನಾದವು. ಆಶ್ಚರ್ಯಕಾರಕ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1-0-0 4 ಬಾಟ್ಲಿಗಳಿಗೆ 3-0-0 12 ಬಾಟ್ಲಿಗಳಿಗೆ 8-0-0

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ.೩॥. ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ,ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ. ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ. ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ತಾಗಿಸುವದರೊಳಗೆ ಗುಣವಾಗುವದು	ರೂ. 0-4-0
ಸರ್ಸಪರೀಲಾ:— ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	,, 1-4-0
ದಂತ ಚೂರ್ಣ:— ಹಲ್ಲುಗಳು ಘಟ್ಟಿಯಾಗುತ್ತವೆ.	,, 0-4-0
ರೋಯಲ್ ಇಂಡಿಯನ್ ಬಾಂ:= ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	,, 0-8-0

ವಿಲಾಸ:—

ಗಣೇಶ ರಾಮಚಂದ್ರ ಕರ್ಕಿ, ಕಂಪೆನಿ,
ಗಿರಗಾಂ ಮುಂಬಯಿ.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ.

ಸಾರ್ಸಾಪರಿಲಾ.


ಪೂರ್ವದ ಸ್ಥಿತಿ.

ನಂತರದ ಸ್ಥಿತಿ.

ಜಗತ್ಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ,ಬಹಳ ದಿನಗಳ ಹಳೇ ಪ್ರಮೇಹ ಇಡೀ ಮೈ ಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶಿರಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಳಾಸ:— ಪ್ರೊಪ್ರಾಯಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೋಸಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.
ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆಮಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

“ಕಾಮಿನಿಯಾ ತೈಲವು”.

(ರಿಜಿಸ್ಟರ್ಡ್)


KAMINIA
OIL
Regd
Regd
delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co
BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ “ಕಾಮಿನಿಯಾ” ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ. ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದು ಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ ಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2-10-0 ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲ್ಯದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲ್ಯವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30-5-11 ಮೆ. ನೇಗಿನಹಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ “ಕಾಮಿನಿಯಾ ಓಯಿಲ್” ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28-7-11. ಮೆ. ವಿ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ “ಕಾಮಿನಿಯಾ ಓಯಿಲ್” ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1-7-11. ಮೆ. ಸಿ. ಆರ್. ನಾಯುಡು ಪ. ವ. ಡಿ. ಟಾಶಿಬಿ, (ಬರ್ಮಾ)—ನನ್ನ ಮಿತ್ರರು “ಕಾಮಿನಿಯಾ” ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಇತರ ಕಡೆಯಿಂದ ಎಣ್ಣೆಯನ್ನು ಕೊಂಡುಕೊಳ್ಳುವವರು “ಕಾಮಿನಿಯಾ” ಎಂಬ ಗುರ್ತವನ್ನು ಚೆನ್ನಾಗಿ ಕಂಡುಹಿಡಿಯದೆ ಮೋಸಹೋದಲ್ಲಿ ನಾವು ಜವಾಬ್ದಾರರಲ್ಲ.

Address—**Anglo Indian Drug & Chemical Co.,**
155 Jumma Musid, Market, Bombay.
ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 27ನೇ ದಶಂಬರ 1912.

ನವವರ್ಷ (1913).

ಅತೀತವು ಕಳೆದು ನೂತನವು ಇನ್ನೊಮ್ಮೆ ಇಂದು ಮೂಡುತ್ತಿದೆ. ಮಹಾಕಾಲಸ್ರೋತದಲ್ಲಿ ಇದೊಂದು ವಿರಾಟ ಪರಿವರ್ತನ. ಅಂತರ್ಯದಲ್ಲಿ ಇಷ್ಟು ಕಾಲವೂ ಯಾವ ಯುಗಾದಿಯ ಮಹಾ ಮುಹೂರ್ತವನ್ನು ಕಾಯುತ್ತಲಿದ್ದೆವೊ, ಇಂದೇ ಆ ಶುಭದಿನಾಗಮನ! ಪುರಾತನವಾದದನ್ನು ಮರೆತು ನೂತನವನ್ನು ಪ್ರತಿಷ್ಠಿಸಿ, ‘ಪ್ರಾಚೀನ’ವನ್ನು ತೊರೆದು ‘ನವೀನ’ವನ್ನು ತೊಟ್ಟುಕೊಳ್ಳುತ್ತಲಿದ್ದೇವೆ. ಅರ್ಥಹೀನ, ಉದ್ಯಮಹೀನ, ಉದ್ದೇಶಹೀನವಾದ ಅತೀತದ ಪಾಷಾಣದ್ವಾರವನ್ನು ತೊರೆದು, ಯುಗಯುಗಾಂತರಗಳ ಎಷ್ಟೋ ಆನಂದ, ಎಷ್ಟೋ ವಿಷಾದ, ಜನನ ಮರಣ, ಘಟನ, ಧ್ವಂಸೀಕರಣಗಳನ್ನು ಧರಿಸಿಕೊಂಡಿದ್ದು, ದಿಗಂತ ವ್ಯಾಪ್ತವಾದ ಅಪೂರ್ವ ಸೌಂದರ್ಯದ ಅರುಣೋಜ್ವಲ ಆಶಾಕಿರಣಗಳನ್ನು ತರಂಗತರಂಗವಾಗಿ ಹಾರಿಸುತ್ತ, ನವಮೋಹನ ಮುಖದಲ್ಲಿ ನವನಗೆ ಬೀರುತ್ತ, ಉತ್ಸಾಹದ ಅಮೃತವನ್ನು ಧಾರೆಗೆರೆದು, ಹಿಮಗಾಲವು ಕೊನೆಗಾಣುವಷ್ಟರಲ್ಲಿಯೇ ನವಹರ್ಷದಿಂದ ನವವರ್ಷವು ಬರುತ್ತಿದೆ! ಹದಿನೆರಡು ಮಾಸಗಳ ನಿದ್ರಾಲಸ್ಯದಿಂದ ಒರಗಿದ್ದ ಧರಣಿಯು ಚಿರಮಾತೃತ್ವದ ಮಾತೃಸ್ನೇಹದಿಂದ, ಅಹಲ್ಯೆಯು ಶಿಲೆಯಿಂದೆದ್ದಂತೆ ಪ್ರಾಣಮಯಿಯಾಗಿ ಎದ್ದೇಳಿರುವಳು. ಜನ್ಮಜನ್ಮಾಂತರದ ವಿಷಣ್ಣತೆಗೆ ಪೂರ್ಣಾಹುತಿಯನ್ನು ಮೊದಲೇ ಕೊಟ್ಟು, ಪ್ರಕೃತಿಯು ಪ್ರೇಮಪುಳುಕಿತೆಯಾಗಿ ಇಂದು ಪುಷ್ಪಶಯ್ಯೆಯಲ್ಲಿ ಪವಡಿಸಿ, ನವವರ್ಷಕ್ಕೆ ಸ್ವಾಗತಗೀತೆಯನ್ನು ಅತ್ಯಾದರದಿಂದ ಹಾಡುತ್ತಿಹಳು. ಎಲ್ಲೆಲ್ಲಿಯೂ ಸಜೀವತೆ, ಜೀವನಶಕ್ತಿಯ ಮಹೋತ್ಸಹ!

ಯುಗಾದಿಯು ಮೂಡುತ್ತಿದೆ, ಯುಗಾದಿಯು ಕಳೆದುಹೋಗುತ್ತಿದೆ. ಪರಂತು ನಾವೇನು ಮಾಡುತ್ತಿರುವೆವು? ವರ್ತಮಾನ ಕಾಲವು ಅತೀತದ ಕಡೆಗೆ ಚಲಿಸುತ್ತಿರಲು ಅದರ ಕಾಲ್ಹೆಜ್ಜೆಗಳನ್ನು ಎಣಿಸುತ್ತ ‘ಕಾಲಕ್ಷೇಪ’ ಮಾಡುವೆವಲ್ಲದೆ, ಆಶಿಸಿದ ಭೋಗಗಳ ಸಾವಿರ ಸ್ಮರಣೆಗಳು, ಜಾಡ್ಯದಲ್ಲಿರುವ ಇಚ್ಛೆಗಳ ಆಯುತ ಸ್ವಪ್ನಗಳು, ಆಕಾಂಕ್ಷೆಗಳ ಅಸಂಖ್ಯ ದಂಡುಗಳು ಚಿರಕಾಲವೂ ನಮ್ಮ ಕಣ್ಣುಗಳಿಂದ ಕಂಬನಿಗಳನ್ನು ಸುರಿವಂತೆ ಮಾಡುತ್ತಿವೆ. ಆದರೂ ಇಂದು ನೂತನ ವರ್ಷವು ಬರುತ್ತಿದೆ ಎಂಬುದೊಂದು ಕಾರಣಭಾರದಿಂದ ನೂತನ ಆಶೆಗಳು ಅರಳುತ್ತಿರುವ ನಮ್ಮ ಹೃದಯವು ಮಾನವಕುಲದ ಭ್ರಾತೃಗಣದೊಂದಿಗೆ ಯುಗಾದಿಯನ್ನು ಅಭಿವಂದಿಸುತ್ತಿದೆ.

ಬಾ, ಈಪ್ಸಿತ ನವವರ್ಷವೆ! ಸುಖ, ಶಾಂತಿ, ಪ್ರೀತಿ, ಸೌಭಾಗ್ಯಗಳನ್ನು ಅಂಜಲಿಯಲ್ಲಿ ಹಿಡಿದು ಬಾ! ನಿನ್ನ ಆಗಮನದಿಂದ ದೀನದೇಶವು ಪುಣ್ಯಪರ್ವಕಾಲದ ಪ್ರಮೋದದಲ್ಲಿ ಪೂರ್ಣತ್ವಹೊಂದಿದೆ! ದೈನಿಕಸ್ಮೃತಿ (ಡೈರಿ) ಲೇಖಕರು ನೂತನ ಪುಸ್ತಕವನ್ನು ಇಂದು ತೆರೆವರು, ಕಳೆದ ವತ್ಸರದ ಮನೋಭ್ರಾಂತಿಗಳೆಲ್ಲ ಮಾಯವಾಗಿವೆ.

ಮನುಷ್ಯನು ನೂತನವನ್ನು ಚಿರಕಾಲವೂ ಆಶಿಸುತ್ತಿಹನು. ವರ್ಷರಾಜನೆ, ನಿನ್ನನ್ನು ವಂದಿಸಿ ನಾವೂ ಇಂದು ಜೀವನದ ಹೊಸ ಪುಸ್ತಕವನ್ನು ತೆರೆದಿಹೆವು. ಪುರಾತನದ ಸಕಲ ಜೀರ್ಣತೆಗಳನ್ನು ನಾವು ಪರಿಹರಿಸುವಂತೆ ನಮಗೆ ಬಲವಿರಲು ಆಶೀರ್ವದಿಸು! ಗತಸಂವತ್ಸರದಲ್ಲಿ ಉಂಟಾದ ನಮ್ಮ ಎಷ್ಟೋ ಭ್ರಾಂತಿ ಮರವೆಗಳು ಇಂದು ಪಿಶಾಚತ್ವವನ್ನು ತಾಳಿ, ಆಲಸ್ಯದಿಂದ ನಾವು ವಿನಿಯೋಗಿಸದಿದ್ದ ಹಲವು ವಿದ್ಯಮಾನಗಳು ರಾಕ್ಷಸ ರೂಪದಿಂದ ಬೆಳೆದು, ಮನಸಾಕ್ಷಿಯನ್ನಣಗಿಸಿದ ಎಷ್ಟೋ ಸಂದರ್ಭಗಳು ಭೀಮಭಯಂಕರವಾಗಿ ಪರಿಣಮಿಸಿ, ಆತ್ಮೀಯರಿಷ್ಟರಿಗೆ ತಿಳಿದೂ ತಿಳಿಯದಂತೆ ಕೊಟ್ಟ ವ್ಯಥೆಗಳು ದಾರುಣರೂಪದಿಂದೆದ್ದು, ಗರ್ಜಿಸಿ ಏಕಕಾಲದಲ್ಲಿಯೆ ನಮ್ಮನ್ನು ಸುತ್ತಿ ಬರುತ್ತ ಪೀಡಿಸುವಾಗ, ನಿನ್ನ ಹಸಾದದಿಂದ ಈ ಪ್ರೇತಸೈನ್ಯವನ್ನು ಧ್ವಂಸೀಕರಿಸುವ ಬಲವು ನಮಗೆ ಬರಲಿ! ಇನ್ನು ಈ ಜೀವನದ ನೂತನಪುಟಗಳಲ್ಲಿ ಕಲಂಕವೆಂಬ ಮಸಿಯ ಮಚ್ಚೆಗಳು ಬೀಳದಿರಲಿ! ನೂತನ ವರ್ಷದಲ್ಲಿ ಹಗೆಯುವರನ್ನು ಕೂಡ ಆಲಿಂಗಿಸುವಂತಹ ನೂತನಪ್ರೇಮವೂ, ಉದ್ಯಮವೂ ನಮ್ಮಲ್ಲಿ ಅಂಕುರಿಸಲಿ!

ಪೂರ್ಣಸುಖ, ಪೂರ್ಣಸ್ವಾಸ್ಥ್ಯ, ಪೂರ್ಣಜ್ಞಾನ, ಪೂರ್ಣಸತ್ವ, ಪೂರ್ಣತತ್ವಗಳು ದೇಶದ ಎಲ್ಲೆಡೆಗಳಲ್ಲಿಯೂ ರಾಜಿಸಲಿ! ಸರಸ್ವತೀನದೀತೀರದಲ್ಲಿ, ಹಿಮಾಲಯದ ಆಶ್ರಮದಲ್ಲಿ ಒಂದು ದಿನ ಧ್ವನಿತವಾದ ಮಹಾತತ್ವದ ಮರ್ಮವನ್ನು ಹಿಂದೂಗಳು ಮರೆಯದಿರಲಿ! ಆ ವೇದಧ್ವನಿಯನ್ನು ಘೋಷಿಸುತ್ತಿರುವ ಋಷಿಯರ ಪರಿಷತ್ತು, ಆ ಹೋಮಧೂಮ ಮೇಘಗಳ ಸಂಚಾರಮಂಡಲ, ಆ ಮುನಿಕನ್ಯೆಯರಿಂದ ಸೇವಿಸಲ್ಪಟ್ಟ ಲತಾವಿತಾನಗಳು, ಆ ನಾರೀಸಮೂಹದ ಉಜ್ವಲಗುಣರತ್ನಗಳು, ಆ ಪುರುಷ ಪುಂಗವರ ಉಚ್ಚಕಂಠದನಿಗಳು,—ಇನ್ನೊಮ್ಮೆ ನಮ್ಮ ಗೋಚರಕ್ಕೆ ಬರಲಿ.

ಪುನರ್ಮನಃ ಪುನರಾಯುರ್ಮ ಆಗನ್ ॥
ಪುನಃ ಪ್ರಾಣಃ ಪುನರಾತ್ಮಾ ತ ಆಗನ್ ॥
ಪುನಶ್ಚಕ್ಷುಃ ಪುನಃಶ್ರೋತ್ರಂ ಮ ಆಗನ್ ॥

ಆರ್ಯರ ಆ ಮನಸ್ಸು, ಆ ಆಯುಸ್ಸು, ಆ ಪ್ರಾಣವು, ಆ ಆತ್ಮನು, ಆ ಕಣ್ಣು ಆ ಕಿವಿಗಳು,—ಯಾವುವು ನಮಗೆ ಮರೆಯಾಗಿವೆಯೊ,—ಅವೆಲ್ಲವೂ ಮರಳಿ ನಮ್ಮ ಗೋತ್ರಗಳನ್ನು ಸೇರಲಿ! ವರ್ಷರಾಜನೆ, ನಿನ್ನ ಚರಣದಲ್ಲಿ ಇದೇ ನಮ್ಮ ಅಂತರ್ಯ ಪ್ರಾರ್ಥನೆ.

ವ್ಯಾಸರಾಯ ಪ್ರಭುಗಳ ಮೇಲೆ ನಡಿಸಿದ ಭಯಂಕರವಾದ ಸಿಡಿಮದ್ದಿನ ತೋಟೆಯ ದುಷ್ಕೃತ್ಯವು.

ಡಿಲ್ಲಿಪಟ್ಟಣದಲ್ಲಿ ಹಿಂದೂಸ್ಥಾನದ ರಾಜಧಾನಿಯನ್ನು ಪ್ರತಿಷ್ಠಾಪಿಸುವ ಸಂಭ್ರಮ ಮಹೋತ್ಸವ ಸಂದರ್ಭದಲ್ಲಿ ವ್ಯಾಸರಾಯ ಪ್ರಭುಗಳು ಸಾಮಂತರಾಜರೊಡನೆ ಡಿಲ್ಲಿ ಪಟ್ಟಣವನ್ನು ಪ್ರವೇಶಿಸುವ ಮೆರವಣಿಗೆಯಲ್ಲಿದ್ದಾಗ ಈ ತಿಂಗಳ ತಾ· ೨೩ರಲ್ಲಿ ಯಾರೋ ಘಾತುಕರು ಪ್ರಭುಗಳ ಮೇಲೆ ನಡಿಸಿದ ದುಡುಕುತನದ ವೃತ್ತಾಂತವು ಅತಿ ವಿಷಾದಕರವಾಗಿರುವುದು. ಪ್ರಜಾಭಿಪ್ರಾಯವನ್ನು ಮನ್ನಿಸಿ ಇದಕ್ಕನುಸಾರವಾಗಿ ರಾಜ್ಯದಾಡಳಿತೆಯಲ್ಲಿ ಬೇಕಾದ ಮಾರ್ಪಾಟಗಳಾಗ ಬೇಕೆಂದು ವಿಶೇಷ ಔದಾರ್ಯವನ್ನು ತೋರಿಸಿ ಪ್ರಜಾಜನರೆಲ್ಲರ ಪ್ರೀತಿಗೆ ಪಾತ್ರರಾದ ವ್ಯಾಸರಾಯರ ಮೇಲೆ ನಡಿಸಿದ ಈ ಅತ್ಯಾಚಾರವು ಬುದ್ಧಿಭ್ರಂಶರಾದವರಿಂದಲೇ ನಡದದ್ದಾಗಿರಬೇಕು. ವಂಗವಿಭಜನೆಯನ್ನು ರದ್ದುಪಡಿಸಿ ಬಂಗಾಳ ಮಹಾಜನರಲ್ಲಿ ಐಕ್ಯಕ್ಕೆ ಆಸ್ಪದಕೊಟ್ಟು ಮನೋವಿಕಲ್ಪವು ಪ್ರಜೆಗಳನ್ನು ಬಿಟ್ಟುಹೋಗುವಂತೆ ಪ್ರಜಾಜನರೆಲ್ಲರಿಗೂ ಮೈತ್ರೀಭಾವದಿಂದ ಪ್ರಭುಗಳು ಕೈನೀಡಿರುವರು. ವಿದ್ಯಾಪ್ರಸರಣೆಗೆ ಪ್ರಭುಗಳ ಆಗಮನದಂದಿನಿಂದ ವಿಶೇಷ ಪ್ರೋತ್ಸಾಹವು ದೊರಕಿದೆ. ಹೆಚ್ಚಿನ ಜವಾಬುದಾರಿಕೆಯ ಹುದ್ದೆಗಳು ದೇಶೀಯರಿಗೆ ಕೊಡೋಣಾಗುವ ವಿಷಯವು ಪರ್ಯಾಲೋಚಿಸಲ್ಪಡುವಂತೆ ಒಂದು ಕಮಿಟಿಯು ಪ್ರಕೃತ ಏರ್ಪಡಿಸಲ್ಪಟ್ಟಿರುವುದು. ಇಂಥಾ ಸಮಯದಲ್ಲಿ ಅಣ್ಮರಿಗೆ ಎರಡನ್ನು ಬಗೆದ ಕೃತಘ್ನ ಪಾಪಿಯು ಕಡುನೀಚನಾಗಿರಬೇಕು. ವ್ಯಾಸರಾಯ ಪ್ರಭುಗಳ ಆಡಳಿತೆಯಿಂದ ದೇಶದ ರಾಜಕೀಯ ತಂಡಗಳೆಲ್ಲವುಗಳಲ್ಲಿ ಪೂರ್ಣತೃಪ್ತಿಯು ಇರುವುದರಿಂದ ಈ ಭಯಂಕರ ಕೃತ್ಯವನ್ನು ಮಾಡಿದವನು ರಾಜಕೀಯ ತಂಡಗಳಿಗೆ ಸಂಬಂಧಪಟ್ಟವನಲ್ಲವೆಂತ ಊಹಿಸಬಹುದು. ದೈವಯೋಗದಿಂದ ಭಯಂಕರವಾದ ಈ ಆಪತ್ತಿನಿಂದ ಹಾರ್ಡಿಂಗ ಪ್ರಭುಗಳು ರಕ್ಷಿಸಲ್ಪಟ್ಟದಕ್ಕೆ ಸರ್ವರೂ ಕೃತಜ್ಞರಾಗಿರುವರು. ಹಿಂದೂಸ್ಥಾನದ ಮುಂದಿನ ಅಭ್ಯುದಯವು ಇವರ ಮೂಲಕ ಇನ್ನೂ ಮುಂದೆ ಸಾಗಬೇಕಾಗಿರುವುದು.

ಭೂವ್ಯವಸಾಯವೇ ಹಿಂದೂಸ್ಥಾನಕ್ಕೆ ಯಾಕೆ ತಕ್ಕುದಾದ ವೃತ್ತಿಯು?

ಒಬ್ಬ ಭಾರತೀಯ ವಿದ್ಯಾರ್ಥಿಯು ವಸ್ತ್ರ ಕೈಗಾರಿಕೆಯ ಮಾಹಿತಿಯನ್ನು ಅಂಗ್ಲಾಳದಲ್ಲಿ ಕಲಿಯಬೇಕೆಂತ ಅಪೇಕ್ಷಿಸಿ ಲೆಂಕಷಯರಿನ ಒಬ್ಬ ಕಾರ್ಖಾನೆ ಮಾಲಿಕನಿಗೆ ತನಗೆ ಕಾರ್ಖಾನೆಯಲ್ಲಿ ಪ್ರವೇಶ ದೊರಕಬೇಕಾಗಿ ಬರಕೊಂಡಿದ್ದನು. ಈ ಕಾರ್ಖಾನೆಯ ಮಾಲಿಕನಿಂದ ಭಾರತೀಯ ವಿದ್ಯಾರ್ಥಿಗೆ ಕೊಡೋಣಾದ ಉತ್ತರವು ‘ಟ್ಯಾಮ್ಸ್ ಒಫ್ ಇಂಡಿಯಾ’ ಎಂಬ ಪತ್ರಿಕೆಯಲ್ಲಿ ಇತ್ತಲಾಗೆ ಪ್ರಕಟಿಸೋಣಾಗಿಯದೆ. ಅದರ ಮುಖ್ಯ ಸಾರಾಂಶವೇನಂದರೆ:—ವಿದ್ಯಾರ್ಥಿಯು ಬರಕೊಂಡ ಕಾಗದವನ್ನು ಚನ್ನಾಗಿ ಪರ್ಯಾಲೋಚಿಸಿ ನೋಡಿದ್ದಲ್ಲಿ ಕಾರ್ಖಾನೆಯಲ್ಲಿ ಆತನಿಗೆ ಪ್ರವೇಶ ದೊರಕಲು ಸಾಧ್ಯವಿರದು. ಅಂಗ್ಲಾಳದ ಕಾರ್ಖಾನೆಗಳಲ್ಲಿ ತಯಾರಾದ ವಸ್ತ್ರಗಳು ಹಿಂದೂಸ್ಥಾನದಲ್ಲಿ ಬಿಕರಿಯಾಗಬೇಕಾದ್ದರಿಂದ ಹಿಂದೂಸ್ಥಾನದಲ್ಲಿ ವಸ್ತ್ರ ಕಾರ್ಖಾನೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಸಹಾಯ ಕೊಡುವುದು ಅಂಗ್ಲಾಳಕ್ಕೆ ನಷ್ಟಕರವಾಗಿದೆ. ಹಿಂದೂಸ್ಥಾನದ ಜನರಿಗೂ ಹಿಂದೂಸ್ಥಾನಕ್ಕೂ ಒಳ್ಳಿತಾಗಬೇಕೆಂಬುದು ಅಂಗ್ಲೇಯರ ಅಪೇಕ್ಷೆ. ಉಷ್ಣವಾದ ಹವಾಗುಣವುಳ್ಳ ಹಿಂದೂಸ್ಥಾನಕ್ಕೆ ದೆಂಕಿಯ ಉಷ್ಣವುಳ್ಳ ಕಾರ್ಖಾನೆಗಳು ತಕ್ಕವಲ್ಲ. ಭೂವ್ಯವಸಾಯವೇ ಹಿಂದೂಸ್ಥಾನದಲ್ಲಿ ನಡಿಯಬೇಕಾದ ವೃತ್ತಿ. ಅಂಗ್ಲಾಳದಲ್ಲಿ ಬೆಳಿಸಲು ಸಾಧ್ಯವಿಲ್ಲದ ಅನೇಕ ಭೂಉತ್ಪತ್ತಿಯನ್ನು ಹಿಂದೂಸ್ಥಾನದಿಂದ ತರಿಸಿಕೊಳ್ಳಬೇಕಾಗಿರುವುದು. ಈ ಭೂಉತ್ಪತ್ತಿಯ ರಫ್ತು ವ್ಯಾಪಾರದ ಸೌಕರ್ಯಗಳನ್ನು ಹೆಚ್ಚಿಸಬೇಕಾಗಿದೆ ಹೊರತು ಕಾರ್ಖಾನೆಗಳನ್ನು ಹಿಂದೂಸ್ಥಾನದಲ್ಲಿ ಸ್ಥಾಪಿಸುವಂತೆ ಮಾಡಿ ಲೆಂಕಷಯರಿನ ವಸ್ತ್ರಗಳು ಹಿಂದೂಸ್ಥಾನದಲ್ಲಿ ಅಗತ್ಯವಿಲ್ಲದಂತೆ ಮಾಡುವುದು ಎಂದೂ ಸಲ್ಲದು. ಈ ಕಾರಣಗಳಿಂದ ಭೂವ್ಯವಸಾಯವೇ ಹಿಂದೂಸ್ಥಾನಕ್ಕೆ ತಕ್ಕುದಾದ ವೃತ್ತಿ ಎಂತ ವಾದಿಸಲ್ಪಟ್ಟಿರುವುದು.

ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಆಯುರ್ವೇದದ [illegible] ತಯಾರಿಸಲ್ಪಟ್ಟದ್ದು ಬಹು ಗುಣಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಮಕ್ಕಳ ಅನೇಕ ವಿಕಾರಗಳು ಕೆಮ್ಮು, ದಮ್ಮು, ಅಜೀರ್ಣ, ಗೂರಲು [illegible], [illegible], ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವವು. ಮಕ್ಕಳು ಪುಷ್ಟರಾಗುತ್ತಾರೆ. [illegible] ಹೆಚ್ಚಿಗೆ ಬಾಟ್ಲಿಗಳು ಮಾರಲ್ಪಟ್ಟಿವೆ. ಬಾಟ್ಲಿ ಒಂದರ 0-12-0 ಮೂರು ಬಾಟ್ಲಿಗಳಿಗೆ 1-0-0 12 ಬಾಟ್ಲಿಗಳಿಗೆ 7-0-0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ [illegible] ಅನೇಕ ಪ್ರಕಾರದ ಜ್ವರಗಳ ಮೇಲೆ [illegible] [illegible]. ಅನೇಕ ಜನರು [illegible] ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಖಾತ್ರಿ. ಬಾಟ್ಲಿ ಒಂದರ 1-0-0 4 ಬಾಟ್ಲಿಗಳಿಗೆ 3-0-0 12 ಬಾಟ್ಲಿಗಳಿಗೆ 8-0-0

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ [illegible] ೧೨ ಬಾಟ್ಲಿಗೆ ೯ ರೂ.

[illegible], ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, [illegible], [illegible] ಅಶಕ್ತತೆ, [illegible] [illegible] [illegible] [illegible], [illegible] ವಾಯು, [illegible], [illegible] ಇವೆಲ್ಲ ಖಾತ್ರಿಯಿಂದ ಗುಣ. [illegible] ಶಕ್ತಿವರ್ಧಕ, [illegible], [illegible].

[illegible] ರೂ. 0-4-0
[illegible] — [illegible] „ 1-4-0
[illegible] — [illegible] „ 0-4-0
[illegible] — [illegible] „ 0-8-0

ವಿಳಾಸ:—

ಗಣೇಶ ರಾಮಚಂದ್ರ ಕರ್ಕೀ, ಕಂಪೆನಿ,
ಗಿರಗಾಂ ಮುಂಬಯಿ.

ಮುಂಬಯಿ, ಕಾಶಿ, ಸುರತ, ನಂದರಪುರ, ಅಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷೀಸು ಸಿಕ್ಕಿರುತ್ತವೆ

ಸಾರ್ಸಾಪರಿಲಾ.

ರೋಗದ ಸ್ಥಿತಿ.

[illegible] ಸ್ಥಿತಿ.

ಜಗತ್ಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. [illegible] (ಗರ್ಮಿ) ಮತ್ತು ಅದರ ಮೂಲಕ ಉಂಟಾಗುವ [illegible] ಭಯಂಕರ ರೋಗಗಳು—ಅಂದರೆ ಮುಖ್ಯವಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ [illegible], [illegible], ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋದು, ಮಾತನಾಡಲು ಆಗದೇ ಇರೋದು, ಮೈಮೇಲೆ ಹಾಗೆಯೇ ಸಂಧಿವಾತ, ಗಂಡಮಾಲೆ [illegible] ಮೇಲೆ ಹುಣ್ಣು ಏಳೋದು, ಮೈಮೇಲೆ ಬೊಕ್ಕೆ ಏಳೋದು, ಅಂಗೈ ಅಂಗಾಲುಗಳ ಮೇಲಿನ [illegible] ಕಪ್ಪು ಕಲೆಗಳು ಬೀಳೋದು, ನೆತ್ತಿಗೆ [illegible] ಬೀಳೋದು, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋದು, ಮೂಗು ತಲೆ ಮತ್ತು ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋದು, ಕೂದಲು ಉದುರೋದು, [illegible] ಹೋಗೋದು [illegible].

ಬಾಟ್ಲಿ ಒಂದರ ಕಿಮ್ಮತ್ತು 1-4-0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4-12-0.

ವಿಳಾಸ:— ಪ್ರೊಪ್ರೈಟರ್,
ಗೋವಿಂದರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
[illegible] ಮುಂಬಯಿ.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ! ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೃದುವಾಗಿ ಚಕಚಕಿಸುತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟಿನಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

“ಕಾಮಿನಿಯಾ ತೈಲವು”.

(ರಿಜಿಸ್ಟರ್ಡ್)

KAMINIA
OIL
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY C°
BOMBAY

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೃದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ. ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ, ರೂ. 2-10-0 ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಟಿಕೇಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಕೆಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

[illegible] ಸಿವಿಲ್ ಸರ್ಜನರಾದ ಡಾಕ್ಟರ್ [illegible] ಈ ತೈಲದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯಾ ತೈಲವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಂದಲೂ ಉತ್ಕೃಷ್ಟವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30-5-11 ಮಿ. [illegible] ಬ್ರದರ್ಸ್ [illegible] ಬೆಳಗಾಂ, [illegible] "ಕಾಮಿನಿಯಾ ತೈಲ" ಇದರಿಂದ ಕೂದಲುಗಳು ಬೆಳೆದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. [illegible] ಕೂದಲುಗಳಿಗೆ ಇದು ಮೂಲಕಾರಣವಾಗಿದೆ. [illegible] ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28-7-11. ಮಿ. [illegible], [illegible]—[illegible] "ಕಾಮಿನಿಯಾ ತೈಲ" ಅತ್ಯಂತ [illegible] ಎಲ್ಲಾ ತೈಲಗಳಲ್ಲಿ ಇದು ಪ್ರಥಮ [illegible]. ಮತ್ತು ಇದಕ್ಕೆ [illegible] ಬೇರೆ ಇಲ್ಲ ಎಂದು ನನ್ನ ಅಭಿಪ್ರಾಯವಾಗಿದೆ.

1-7-11. ಮಿ. [illegible] (ಬರ್ಮಾ)—ನನ್ನ [illegible] "ಕಾಮಿನಿಯಾ" ತೈಲ [illegible] ಮಾಡುವದರಿಂದ [illegible] 6 [illegible] ವಿ. ಪಿ. ಮೂಲಕ ರವಾನಿಸಬೇಕು.

[illegible] "ಕಾಮಿನಿಯಾ" ಎಂಬ ಗುರ್ತವನ್ನು [illegible] ನಾವು ಜವಾಬ್ದಾರರಲ್ಲ.

Address—**Anglo Indian Drug & Chemical Co.,**
155 Jumma Musid, Market, Bombay.
ಸೋಲ್ ಏಜೆಂಟ್ಸ್—ದಿ. ಊಲನ್‌ಮಾರ್ಟ್, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 27ನೇ ದಶಂಬರ 1912.

ನವವರ್ಷ (1913).

ಅತೀತವು ಕಳೆದು ನೂತನವು ಇನ್ನೊಮ್ಮೆ ಇಂದು ಮೂಡುತ್ತಿದೆ. ಮಹಾಕಾಲ ಸ್ರೋತದಲ್ಲಿ ಇದೊಂದು ವಿರಾಟ ಪರಿವರ್ತನ. ಅಂತರ್ಯದಲ್ಲಿ ಇಷ್ಟು ಕಾಲವೂ ಯಾವ ಯುಗಾದಿಯ ಮಹಾ ಮುಹೂರ್ತವನ್ನು ಕಾಯುತ್ತಲಿದ್ದೆವೊ, ಇಂದೇ ಆ ಶುಭದಿನಾಗಮನ! ಪುರಾತನವಾದದನ್ನು ಮರೆತು ನೂತನವನ್ನು ಪ್ರತಿಷ್ಠಿಸಿ, ‘ಪ್ರಾಚೀನವನ್ನು ತೊರೆದು ‘ನವೀನ’ವನ್ನು ತೊಟ್ಟುಕೊಳ್ಳುತ್ತಲಿದ್ದೇವೆ. ಅರ್ಥಹೀನ, ಉದ್ಯಮಹೀನ, ಉದ್ದೇಶಹೀನವಾದ ಅತೀತದ ಪಾಷಾಣದ್ವಾರವನ್ನು ತೊರೆದು, ಯುಗಯುಗಾಂತರಗಳ ಎಷ್ಟೋ ಆನಂದ, ಎಷ್ಟೋ ವಿಷಾದ, ಜನನ ಮರಣ, ಘಟನ, ಧ್ವಂಸೀಕರಣಗಳನ್ನು ಧರಿಸಿಕೊಂಡಿದ್ದು, ದಿಗಂತ ವ್ಯಾಪ್ತವಾದ ಅಪೂರ್ವ ಸೌಂದರ್ಯದ ಅರುಣೋಜ್ವಲ ಆಶಾಕಿರಣಗಳನ್ನು ತರಂಗತರಂಗವಾಗಿ ಹಾರಿಸುತ್ತ, ನವಮೋಹನ ಮುಖದಲ್ಲಿ ನವನಗೆ ಬೀರುತ್ತ, ಉತ್ಸಾಹದ ಅಮೃತವನ್ನು ಧಾರೆಗೆರೆದು, ಹಿಮಗಾಲವು ಕೊನೆಗಾಣುವಷ್ಟರಲ್ಲಿಯೇ ನವಹರ್ಷದಿಂದ ನವವರ್ಷವು ಬರುತ್ತಿದೆ! ಹದಿನೆರಡು ಮಾಸಗಳ ನಿದ್ರಾಲಸ್ಯದಿಂದ ಒರಗಿದ್ದ ಧರಣಿಯು ಚಿರಮಾತೃತ್ವದ ಮಾತೃಸ್ನೇಹದಿಂದ, ಅಹಲ್ಯೆಯು ಶಿಲೆಯಿಂದೆದ್ದಂತೆ ಪ್ರಾಣಮಯಿಯಾಗಿ ಎದ್ದೇಳಿರುವಳು. ಜನ್ಮಜನ್ಮಾಂತರದ ವಿಷಣ್ಣತೆಗೆ ಪೂರ್ಣಾಹುತಿಯನ್ನು ಮೊದಲೇ ಕೊಟ್ಟು, ಪ್ರಕೃತಿಯು ಪ್ರೇಮಪುಳುಕಿತೆಯಾಗಿ ಇಂದು ಪುಷ್ಪಶಯ್ಯೆಯಲ್ಲಿ ಪವಡಿಸಿ, ನವವರ್ಷಕ್ಕೆ ಸ್ವಾಗತಗೀತೆಯನ್ನು ಅತ್ಯಾದರದಿಂದ ಹಾಡುತ್ತಿಹಳು. ಎಲ್ಲೆಲ್ಲಿಯೂ ಸಜೀವತೆ, ಜೀವನಶಕ್ತಿಯ ಮಹೋತ್ಸಹ!

ಯುಗಾದಿಯು ಮೂಡುತ್ತಿದೆ, ಯುಗಾದಿಯು ಕಳೆದುಹೋಗುತ್ತಿದೆ. ಪರಂತು ನಾವೇನು ಮಾಡುತ್ತಿರುವೆವು? ವರ್ತಮಾನ ಕಾಲವು ಅತೀತದ ಕಡೆಗೆ ಚಲಿಸುತ್ತಿರಲು ಅದರ ಕಾಲ್ಗೆಜ್ಜೆಗಳನ್ನು ಎಣಿಸುತ್ತ ‘ಕಾಲಕ್ಷೇಪ’ ಮಾಡುವೆವಲ್ಲದೆ, ಆಶಿಸಿದ ಭೋಗಗಳ ಸಾವಿರ ಸ್ಮರಣೆಗಳು, ಜಾಡ್ಯದಲ್ಲಿರುವ ಇಚ್ಛೆಗಳ ಆಯುತ ಸ್ವಪ್ನಗಳು, ಆಕಾಂಕ್ಷೆಗಳ ಅಸಂಖ್ಯ ದಂಡುಗಳು ಚಿರಕಾಲವೂ ನಮ್ಮ ಕಣ್ಣುಗಳಿಂದ ಕಂಬನಿಗಳನ್ನು ಸುರಿವಂತೆ ಮಾಡುತ್ತಿವೆ. ಆದರೂ ಇಂದು ನೂತನ ವರ್ಷವು ಬರುತ್ತಿದೆ ಎಂಬುದೊಂದು ಕಾರಣಭಾರದಿಂದ ನೂತನ ಆಶೆಗಳು ಅರಳುತ್ತಿರುವ ನಮ್ಮ ಹೃದಯವು ಮಾನವಕುಲದ ಭ್ರಾತೃಗಣದೊಂದಿಗೆ ಯುಗಾದಿಯನ್ನು ಅಭಿವಂದಿಸುತ್ತಿದೆ.

ಬಾ, ಈಪ್ಸಿತ ನವವರ್ಷವೆ! ಸುಖ, ಶಾಂತಿ, ಪ್ರೀತಿ, ಸೌಭಾಗ್ಯಗಳನ್ನು ಅಂಜಲಿಯಲ್ಲಿ ಹಿಡಿದು ಬಾ! ನಿನ್ನ ಆಗಮನದಿಂದ ದೀನದೇಶವು ಪುಣ್ಯಪರ್ವಕಾಲದ ಪ್ರಮೋದದಲ್ಲಿ ಪೂರ್ಣತ್ವಹೊಂದಿದೆ! ದೈನಿಕಸ್ಮೃತಿ (ಡೈರಿ) ಲೇಖಕರು ನೂತನ ಪುಸ್ತಕವನ್ನು ಇಂದು ತೆರೆವರು, ಕಳೆದ ವತ್ಸರದ ಮನೋಭ್ರಾಂತಿಗಳೆಲ್ಲ ಮಾಯವಾಗಿವೆ.

ಮನುಷ್ಯನು ನೂತನವನ್ನು ಚಿರಕಾಲವೂ ಆಶಿಸುತ್ತಿಹನು. ವರ್ಷರಾಜನೆ, ನಿನ್ನನ್ನು ವಂದಿಸಿ ನಾವೂ ಇಂದು ಜೀವನದ ಹೊಸ ಪುಸ್ತಕವನ್ನು ತೆರೆದಿಹೆವು. ಪುರಾತನದ ಸಕಲ ಜೀರ್ಣತೆಗಳನ್ನು ನಾವು ಪರಿಹರಿಸುವಂತೆ ನಮಗೆ ಬಲವಿರಲು ಆಶೀರ್ವದಿಸು! ಗತಸಂವತ್ಸರದಲ್ಲಿ ಉಂಟಾದ ನಮ್ಮ ಎಷ್ಟೋ ಭ್ರಾಂತಿ ಮರವೆಗಳು ಇಂದು ಪಿಶಾಚತ್ವವನ್ನು ತಾಳಿ, ಆಲಸ್ಯದಿಂದ ನಾವು ವಿನಿಯೋಗಿಸದಿದ್ದ ಹಲವು ವಿದ್ಯಮಾನಗಳು ರಾಕ್ಷಸ ರೂಪದಿಂದ ಬೆಳೆದು, ಮನಸಾಕ್ಷಿಯನ್ನಣಗಿಸಿದ ಎಷ್ಟೋ ಸಂದರ್ಭಗಳು ಭೀಮಭಯಂಕರವಾಗಿ ಪರಿಣಮಿಸಿ, ಆತ್ಮೀಯರಿಷ್ಟರಿಗೆ ತಿಳಿದೂ ತಿಳಿಯದಂತೆ ಕೊಟ್ಟ ವ್ಯಥೆಗಳು ದಾರುಣರೂಪದಿಂದೆದ್ದು, ಗರ್ಜಿಸಿ ಏಕಕಾಲದಲ್ಲಿಯೆ ನಮ್ಮನ್ನು ಸುತ್ತಿ ಬರುತ್ತ ಪೀಡಿಸುವಾಗ, ನಿನ್ನ ಹಸಾದದಿಂದ ಈ ಪ್ರೇತಸೈನ್ಯವನ್ನು ಧ್ವಂಸೀಕರಿಸುವ ಬಲವು ನಮಗೆ ಬರಲಿ! ಇನ್ನು ಈ ಜೀವನದ ನೂತನಪುಟಗಳಲ್ಲಿ ಕಲಂಕವೆಂಬ ಮಸಿಯು ಮಚ್ಚೆಗಳು ಬೀಳದಿರಲಿ! ನೂತನ ವರ್ಷದಲ್ಲಿ ಹಗೆಯವರನ್ನು ಕೂಡ ಆಲಿಂಗಿಸುವಂತಹ ನೂತನಪ್ರೇಮವೂ, ಉದ್ಯಮವೂ ನಮ್ಮಲ್ಲಿ ಅಂಕುರಿಸಲಿ!

ಪೂರ್ಣಸುಖ, ಪೂರ್ಣಸ್ವಾಸ್ಥ್ಯ, ಪೂರ್ಣಜ್ಞಾನ, ಪೂರ್ಣಸತ್ವ, ಪೂರ್ಣತತ್ವಗಳು ದೇಶದ ಎಲ್ಲೆಡೆಗಳಲ್ಲಿಯೂ ರಾಜಿಸಲಿ! ಸರಸ್ವತೀನದೀತೀರದಲ್ಲಿ, ಹಿಮಾಲಯದ ಆಶ್ರಮದಲ್ಲಿ ಒಂದು ದಿನ ಧ್ವನಿತವಾದ ಮಹಾತತ್ವದ ಮರ್ಮವನ್ನು ಹಿಂದೂಗಳು ಮರೆಯದಿರಲಿ! ಆ ವೇದಧ್ವನಿಯನ್ನು ಘೋಷಿಸುತ್ತಿರುವ ಋಷಿಯರ ಪರಿಷತ್ತು, ಆ ಹೋಮಧೂಮ ಮೇಘಗಳ ಸಂಚಾರಮಂಡಲ, ಆ ಮುನಿಕನ್ಯೆಯರಿಂದ ಸೇವಿಸಲ್ಪಟ್ಟ ಲತಾವಿತಾನಗಳು, ಆ ನಾರೀಸಮೂಹದ ಉಜ್ವಲಗುಣರತ್ನಗಳು, ಆ ಪುರುಷ ಪುಂಗವರ ಉಚ್ಚ ಕಂಠಧ್ವನಿಗಳು,—ಇನ್ನೊಮ್ಮೆ ನಮ್ಮ ಗೋಚರಕ್ಕೆ ಬರಲಿ.

ಪುನರ್ಮನಃ ಪುನರಾಯುರ್ಮ ಆಗನ್ ॥
ಪುನಃ ಪ್ರಾಣಃ ಪುನರಾತ್ಮಾ ತ ಆಗನ್ ॥
ಪುನಶ್ಚಕ್ಷುಃ ಪುನಃಶ್ರೋತ್ರಂ ಮ ಆಗನ್ ॥

ಆರ್ಯರ ಆ ಮನಸ್ಸು, ಆ ಆಯುಸ್ಸು, ಆ ಪ್ರಾಣವು, ಆ ಆತ್ಮನು, ಆ ಕಣ್ಣು ಆ ಕಿವಿಗಳು,—ಯಾವವು ನಮಗೆ ಮರೆಯಾಗಿವೆಯೊ,—ಅವೆಲ್ಲವೂ ಮರಳಿ ನಮ್ಮ ಗೋತ್ರಗಳನ್ನು ಸೇರಲಿ! ವರ್ಷರಾಜನೆ, ನಿನ್ನ ಚರಣದಲ್ಲಿ ಇದೇ ನಮ್ಮ ಅಂತರ್ಯ ಪ್ರಾರ್ಥನೆ.

ವ್ಯಾಸರಾಯ ಪ್ರಭುಗಳ ಮೇಲೆ ನಡಿಸಿದ ಭಯಂಕರವಾದ ಸಿಡಿಮದ್ದಿನ ತೋಟೆಯ ದುಷ್ಕೃತ್ಯವು.

ಡಿಲ್ಲಿಪಟ್ಟಣದಲ್ಲಿ ಹಿಂದೂಸ್ಥಾನದ ರಾಜಧಾನಿಯನ್ನು ಪ್ರತಿಷ್ಠಾಪಿಸುವ ಸಂಭ್ರಮ ಮಹೋತ್ಸವ ಸಂದರ್ಭದಲ್ಲಿ ವ್ಯಾಸರಾಯ ಪ್ರಭುಗಳು ಸಾಮಂತರಾಜರೊಡನೆ ಡಿಲ್ಲಿ ಪಟ್ಟಣವನ್ನು ಪ್ರವೇಶಿಸುವ ಮೆರವಣಿಗೆಯಲ್ಲಿದ್ದಾಗ ಈ ತಿಂಗಳ ತಾ· ೨೩ರಲ್ಲಿ ಯಾರೋ ಘಾತುಕರು ಪ್ರಭುಗಳ ಮೇಲೆ ನಡಿಸಿದ ದುಡುಕುತನದ ವೃತ್ತಾಂತವು ಅತಿ ವಿಷಾದಕರವಾಗಿರುವುದು. ಪ್ರಜಾಭಿಪ್ರಾಯವನ್ನು ಮನ್ನಿಸಿ ಇದಕ್ಕನುಸಾರವಾಗಿ ರಾಜ್ಯದಾಡಳಿತೆಯಲ್ಲಿ ಬೇಕಾದ ಮಾರ್ಪಾಟಗಳಾಗಬೇಕೆಂದು ವಿಶೇಷ ಔದಾರ್ಯವನ್ನು ತೋರಿಸಿ ಪ್ರಜಾಜನರೆಲ್ಲರ ಪ್ರೀತಿಗೆ ಪಾತ್ರರಾದ ವ್ಯಾಸರಾಯರ ಮೇಲೆ ನಡಿಸಿದ ಈ ಅತ್ಯಾಚಾರವು ಬುದ್ಧಿಭ್ರಂಶರಾದವರಿಂದಲೇ ನಡದದ್ದಾಗಿರಬೇಕು. ವಂಗವಿಭಜನೆಯನ್ನು ರದ್ದುಪಡಿಸಿ ಬಂಗಾಳ ಮಹಾಜನರಲ್ಲಿ ಐಕ್ಯಕ್ಕೆ ಆಸ್ಪದಕೊಟ್ಟು ಮನೋವಿಕಲ್ಪವು ಪ್ರಜೆಗಳನ್ನು ಬಿಟ್ಟುಹೋಗುವಂತೆ ಪ್ರಜಾಜನರೆಲ್ಲರಿಗೂ ಮೈತ್ರೀಭಾವದಿಂದ ಪ್ರಭುಗಳು ಕೈನೀಡಿರುವರು. ವಿದ್ಯಾಪ್ರಸರಣೆಗೆ ಪ್ರಭುಗಳ ಆಗಮನದಂದಿನಿಂದ ವಿಶೇಷ ಪ್ರೋತ್ಸಾಹವು ದೊರಕಿದೆ. ಹೆಚ್ಚಿನ ಜವಾಬುದಾರಿಕೆಯ ಹುದ್ದೆಗಳು ದೇಶೀಯರಿಗೆ ಕೊಡೋಣಾಗುವ ವಿಷಯವು ಪರ್ಯಾಲೋಚಿಸಲ್ಪಡುವಂತೆ ಒಂದು ಕಮಿಟಿಯು ಪ್ರಕೃತ ಏರ್ಪಡಿಸಲ್ಪಟ್ಟಿರುವುದು. ಇಂಥಾ ಸಮಯದಲ್ಲಿ ಅಣ್ಮರಿಗೆ ಎರಡನ್ನು ಬಗೆದ ಕೃತಘ್ನ ಪಾಪಿಯು ಕಡುನೀಚನಾಗಿರಬೇಕು. ವ್ಯಾಸರಾಯ ಪ್ರಭುಗಳ ಆಡಳಿತೆಯಿಂದ ದೇಶದ ರಾಜಕೀಯ ತಂಡಗಳೆಲ್ಲವುಗಳಲ್ಲಿ ಪೂರ್ಣತೃಪ್ತಿಯು ಇರುವುದರಿಂದ ಈ ಭಯಂಕರ ಕೃತ್ಯವನ್ನು ಮಾಡಿದವನು ರಾಜಕೀಯ ತಂಡಗಳಿಗೆ ಸಂಬಂಧಪಟ್ಟವನಲ್ಲವೆಂತ ಊಹಿಸಬಹುದು. ದೈವಯೋಗದಿಂದ ಭಯಂಕರವಾದ ಈ ಆಪತ್ತಿನಿಂದ ಹಾರ್ಡಿಂಗ ಪ್ರಭುಗಳು ರಕ್ಷಿಸಲ್ಪಟ್ಟದಕ್ಕೆ ಸರ್ವರೂ ಕೃತಜ್ಞರಾಗಿರುವರು. ಹಿಂದೂಸ್ಥಾನದ ಮುಂದಿನ ಅಭ್ಯುದಯವು ಇವರ ಮೂಲಕ ಇನ್ನೂ ಮುಂದೆ ಸಾಗಬೇಕಾಗಿರುವುದು.

ಭೂವ್ಯವಸಾಯವೇ ಹಿಂದೂಸ್ಥಾನಕ್ಕೆ ಯಾಕೆ ತಕ್ಕುದಾದ ವೃತ್ತಿಯು?

ಒಬ್ಬ ಭಾರತೀಯ ವಿದ್ಯಾರ್ಥಿಯು ವಸ್ತ್ರ ಕೈಗಾರಿಕೆಯ ಮಾಹಿತಿಯನ್ನು ಅಂಗ್ಲಾಳದಲ್ಲಿ ಕಲಿಯಬೇಕೆಂತ ಅಪೇಕ್ಷಿಸಿ ಲಿಂಕಷಯರಿನ ಒಬ್ಬ ಕಾರ್ಖಾನೆ ಮಾಲಿಕನಿಗೆ ತನಗೆ ಕಾರ್ಖಾನೆಯಲ್ಲಿ ಪ್ರವೇಶ ದೊರಕಬೇಕಾಗಿ ಬರಕೊಂಡಿದ್ದನು. ಈ ಕಾರ್ಖಾನೆಯ ಮಾಲಿಕನಿಂದ ಭಾರತೀಯ ವಿದ್ಯಾರ್ಥಿಗೆ ಕೊಡೋಣಾದ ಉತ್ತರವು ‘ಟ್ಯಾಮ್ಸ್ ಒಫ್ ಇಂಡಿಯಾ’ ಎಂಬ ಪತ್ರಿಕೆಯಲ್ಲಿ ಇತ್ತಲಾಗೆ ಪ್ರಕಟಿಸೋಣಾಗಿಯದೆ. ಅದರ ಮುಖ್ಯ ಸಾರಾಂಶವೇನಂದರೆ:—ವಿದ್ಯಾರ್ಥಿಯು ಬರಕೊಂಡ ಕಾಗದವನ್ನು ಚನ್ನಾಗಿ ಪರ್ಯಾಲೋಚಿಸಿ ನೋಡಿದ್ದಲ್ಲಿ ಕಾರ್ಖಾನೆಯಲ್ಲಿ ಆತನಿಗೆ ಪ್ರವೇಶ ದೊರಕಲು ಸಾಧ್ಯವಿರದು. ಅಂಗ್ಲಾಳದ ಕಾರ್ಖಾನೆಗಳಲ್ಲಿ ತಯಾರಾದ ವಸ್ತ್ರಗಳು ಹಿಂದೂಸ್ಥಾನದಲ್ಲಿ ಬಿಕರಿಯಾಗಬೇಕಾದ್ದರಿಂದ ಹಿಂದೂಸ್ಥಾನದಲ್ಲಿ ವಸ್ತ್ರ ಕಾರ್ಖಾನೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಸಹಾಯ ಕೊಡುವುದು ಅಂಗ್ಲಾಳಕ್ಕೆ ನಷ್ಟಕರವಾಗಿದೆ. ಹಿಂದೂಸ್ಥಾನದ ಜನರಿಗೂ ಹಿಂದೂಸ್ಥಾನಕ್ಕೂ ಒಳ್ಳೇದಾಗಬೇಕೆಂಬುದು ಆಂಗ್ಲೇಯರ ಅಪೇಕ್ಷೆ. ಉಷ್ಣವಾದ ಹವಾಗುಣವುಳ್ಳ ಹಿಂದೂಸ್ಥಾನಕ್ಕೆ ದೆಂಕಿಯ ಉಷ್ಣವುಳ್ಳ ಕಾರ್ಖಾನೆಗಳು ತಕ್ಕವಲ್ಲ. ಭೂವ್ಯವಸಾಯವೇ ಹಿಂದೂಸ್ಥಾನದಲ್ಲಿ ನಡಿಯಬೇಕಾದ ವೃತ್ತಿ. ಅಂಗ್ಲಾಳದಲ್ಲಿ ಬೆಳಸಲು ಸಾಧ್ಯವಿಲ್ಲದ ಅನೇಕ ಭೂಉತ್ಪತ್ತಿಯನ್ನು ಹಿಂದೂಸ್ಥಾನದಿಂದ ತರಿಸಿಕೊಳ್ಳಬೇಕಾಗಿರುವುದು. ಈ ಭೂಉತ್ಪತ್ತಿಯ ರಫ್ತು ವ್ಯಾಪಾರದ ಸೌಕರ್ಯಗಳನ್ನು ಹೆಚ್ಚಿಸಬೇಕಾಗಿದೆ. ಹೊರತು ಕಾರ್ಖಾನೆಗಳನ್ನು ಹಿಂದೂಸ್ಥಾನದಲ್ಲಿ ಸ್ಥಾಪಿಸುವಂತೆ ಮಾಡಿ ಲಿಂಕಷಯರಿನ ವಸ್ತ್ರಗಳು ಹಿಂದೂಸ್ಥಾನದಲ್ಲಿ ಅಗತ್ಯವಿಲ್ಲದಂತೆ ಮಾಡುವುದು ಎಂದೂ ಸಲ್ಲದು. ಈ ಕಾರಣಗಳಿಂದ ಭೂವ್ಯವಸಾಯವೇ ಹಿಂದೂಸ್ಥಾನಕ್ಕೆ ತಕ್ಕುದಾದ ವೃತ್ತಿ ಎಂತ ವಾದಿಸಲ್ಪಟ್ಟಿರುವುದು.

ಅನುಸರಣೀಯು ಹಿಂದೂ ಸ್ತ್ರೀಶಿಕ್ಷಣ.

(ಹಿಂದೂ ಬಾಲಿಕಾ ಶಾಲೆಗಳ ಆಡಳಿತೆಯವರಿಗೊಂದು ವಿಜ್ಞಾಪನೆ)

"ಸ್ತ್ರೀಯರು ಸಮಾಜದಲ್ಲಿ ತಮ್ಮ ಸ್ಥಾನವನ್ನರಿತು, ಜನ್ಮಭೂಮಿಯ ಕಡೆಗೂ ಪುರಾತನ ಸನಾತನ ಧರ್ಮದ ಕಡೆಗೂ ತಮ್ಮ ಕರ್ತೃತ್ವವನ್ನು ತಿಳಿದು, ತಮ್ಮ ಕುಟುಂಬಕ್ಕೆ ಹಿತಕರವಾದ ಆದರ್ಶಗಳನ್ನು ಕಂಡು, ಪ್ರೇಮಗಂಧ ಪೂರಿತವಾದ ತಮ್ಮ ಹೃದಯ ಕಮಲವನ್ನು ಅರಳಿಸಿ ದೇಶೋನ್ನತಿಯನ್ನೂ ಸಮಾಜೋಪಕಾರವನ್ನೂ ಬಯಸುವ ದಿನವೇ ಸ್ತ್ರೀತ್ವದ ಮಹತ್ವವು ವ್ಯಕ್ತವಾಗುವುದು; ಸ್ತ್ರೀಶಿಕ್ಷಣೆಯ ಸುಪರಿಣಾಮವೂ ಮಹಿಳಾತತ್ವವೂ ಅಂದು ಜಗತ್ತಿಗೆ ಹಠಾತ್ತಾಗಿ ಬೋಧಿಸಲ್ಪಡುವುದು" ಎಂಬೀ ವಾಕ್ಯಗಳನ್ನು ಬರೆದ ಭಗಿನೀ ನಿವೇದಿತೆಯು ಭಾರತೀಯರನ್ನು ಬಿಟ್ಟು ತೆರಳಿಹೋದರೂ, ಆಕೆಯ, ಅಕ್ಲಾಂತ ಪರಿಶ್ರಮಜಲದಿಂದ ಸ್ತ್ರೀಶಿಕ್ಷಣಾ ಬೀಜವು ಸರಿಯಾಗಿ ಅಂಕುರಿಸಿ, ಮುಂದಿನ ಶ್ರೇಯೋತರುವು ದಿನೇ ದಿನೇ ಬಲಗೊಂಡು ಬೆಳೆಯುತ್ತಿದೆ. ನಿವೇದಿತೆಯು ಸ್ತ್ರೀಶಿಕ್ಷಣವೇ ಸಮಾಜೋನ್ನತಿಯ ಪ್ರಥಮತತ್ವವೆಂದು ಸ್ಥಾಪಿಸಿದ ವಿದ್ಯಾಲಯವು ಇಂದು ಅನ್ಯಹಸ್ತದಿಂದ ಪಾಲಿತವಾದರೂ, ಆಕೆಯು ವಿದ್ಯಾದಾತರ ಮುಂದಿಟ್ಟ ಆದರ್ಶವು ಸೀಮೆಯಲ್ಲೆಲ್ಲಾ ರೂಪುಗೊಳ್ಳುತ್ತ ಬರುತ್ತಿದೆ.

ಕ್ರೈಸ್ತ ಅಥವಾ ಅನ್ಯಮತದ ಶಿಕ್ಷಕರು ಹಿಂದೂ ಬಾಲಿಕಾ ವಿದ್ಯಾಲಯಗಳಿಗೆ ಯೋಗ್ಯರಲ್ಲ; ಹಿಂದೂ ಧರ್ಮದ ಪಕ್ಷಪಾತವಾಗಲಿ, ಹಿಂದೂ ಸ್ತ್ರೀಧರ್ಮತತ್ವವಾಗಲಿ, ಭಕ್ತಿಮಾರ್ಗವಾಗಲಿ ಅವರಿಗೆ ತಿಳಿಯದು. ತಮ್ಮ ಜೀವನದಿಂದ ಪವಿತ್ರತೆಯನ್ನು ಸಾಧಿಸಿ, ತಮ್ಮ ಆತ್ಮಸಮರ್ಪಣೆಯಿಂದ ಸದ್ಬೋಧನೆಯನ್ನೀಯುವುದರಲ್ಲಿ ಆಸಕ್ತರಾಗಿ, ಸಮಾಜ ಸೇವೆಗಾಗಿ ತರಬೇತು ಹೊಂದಿದ ಹಿಂದೂ ಮಹಿಳೆಯರೇ ಬೇಕಾದರೂ, ಹಿಂದೂ ಉಪಾಧ್ಯಾನಿಯರ ಅಭಾವದೆಸೆಯಿಂದ ಅನ್ಯಮತದವರಿಂದ ಶಿಕ್ಷಣೆಕೊಡಿಸುವಲ್ಲಿ ಕನಿಷ್ಠಪಕ್ಷಕ್ಕೆ ಶಾಲೆಯ ಆಡಳಿತೆಯ ಭಾಗವು ಚಿರಕಾಲವೂ ಹಿಂದೂಗಳ ಕೈಯಲ್ಲಿಯಾದರೂ ಇರಲೇ ಬೇಕು. ಆಡಳಿತೆಯನ್ನೂ ಶಿಕ್ಷಣೆಯನ್ನೂ ಅನ್ಯರಿಗೊಪ್ಪಿಸಿ ನಮ್ಮ ಬಾಲಕಿಯರನ್ನು ತಕ್ಕಂತೆ ಬೋಧಿಸುವೆವೆಂಬ ಸಂಕಲ್ಪವು ಬರೇ ಸುಳ್ಳು. ಉಪಾಧ್ಯಾಯಿನಿಯರಾದರೊ, ಸ್ತ್ರೀಶಿಕ್ಷಣದ ಮಹದುದ್ದೇಶವನ್ನೂ ಉಪಕಾರವನ್ನೂ ಅರಿತವರಾಗಿ, ವಿದ್ಯಾಪ್ರಸಾರದ ಪಕ್ಷಪಾತಿಗಳಾಗಿದ್ದು ಸನಾತನ ಋಷಿಗಳ ಧರ್ಮ, ನೀತಿ, ಮತಸಂಬಂಧ ತಿಳುವಳಿಕೆಯಿಂದ ಆಶ್ರಮಪಾಲಿಕೆಯರಂತಿರುವುದು ಉಚಿತ. ಕಳೆದ ಐವತ್ತು ವರ್ಷಗಳಿಂದ ಹಿಂದೂ ಯುವಕರಲ್ಲಿ ವಿದ್ಯಾಭ್ಯಾಸದಿಂದುಂಟಾದ ಊನತ್ವಗಳನ್ನು ಈಗ ತಿಳಿದು ಇರುವ ಹಿಂದೂ ಸಮಾಜವು ಸ್ತ್ರೀಶಿಕ್ಷಣೆಯನ್ನು ದಾನಮಾಡುವಲ್ಲಿ ಆ ಊನತ್ವಗಳು ಮೊಳೆಯದಂತಹ ಪಥಾನುಚಾರಿಯಾಗಬೇಕೆಂಬುದು ಅಗತ್ಯ. ಹಿಂದೂ ಮತವನ್ನು ಕಾಪಾಡುವ ಕೋಟೆಯಂತೆ ಸ್ತ್ರೀಧರ್ಮವಿರಲು, ಸಮಾಜ ವ ಮತಪಾಲಕರು ಸ್ತ್ರೀಧರ್ಮವನ್ನು ತಿದ್ದಿ ರೂಢಿಸುವಂತಹ ಶಿಕ್ಷಣವನ್ನು ಬಹಿಷ್ಕರಿಸಿದರೆ, ಸೀಮೆ ಮತ ಗೋತ್ರಗಳು ಹೇಗೆ ಉದ್ಧಾರಹೊಂದುವುವು?

ಕುಲೀನ ಕುಲದ ಬಾಲಕಿಯರ ವಿದ್ಯಾಭ್ಯಾಸವು ಬಾಲವಿವಾಹ ರೂಢಿಯಿರುವ ಈ ಸೀಮೆಯಲ್ಲಿ ಸಾಧಾರಣವಾಗಿ ಬಾಲಕಿಯ ೧೨ನೆಯ ವರ್ಷಪ್ರಾಯದಲ್ಲಿ ಮುಗಿಯುವುದು. ಕನ್ಯೆಯ ಮತ್ತು ವರನ ಮನೆಯವರು ಏಕಮನಸ್ಕರಾಗಿ, ವಿವಾಹಿತ ಬಾಲಿಕೆಯನ್ನು ಮತ್ತೂ ಶಾಲೆಗೆ ಕಳುಹಿಸುವುದಾದರೆ, ಯೌವನ ಕಾಲದಲ್ಲಿ ದೇಹ ಸಂತಾನ ಗೃಹಕೃತ್ಯ ಶುಶ್ರೂಷೆ ಮೊದಲಾದ ಧರ್ಮತತ್ವೋಪದೇಶಗಳಿಗೆ ಮಾರ್ಗವಾಗಿ, ಹಲವು ಅಪಾಯಗಳು ನಿರ್ಮೂಲ ಹೊಂದುತ್ತಿದ್ದುವು. ಆದರೆ ಇಂತಹ ಉದಾರ ದೀರ್ಘದರ್ಶಿಗಳು ವಿರಳವಾದ ನಮ್ಮ ಸಮಾಜದಲ್ಲಿ ವಿವಾಹದ ಮೊದಲೇ ತಕ್ಕಂತೆ ಸಕಲ ಉಪಯುಕ್ತ ತತ್ವಗಳನ್ನು ಸೂಕ್ಷ್ಮದಿಂದ ಬೋಧಿಸಿ ಮುಂದಿನ ವ್ಯಾಸಂಗವನ್ನು ದೊರಿಯುವ ಗ್ರಂಥಗಳನ್ನೂ ಮಾರ್ಗವನ್ನೂ ಮಕ್ಕಳಿಗೆ ಹೇಳಿಕೊಡುವುದು ಇಂತಹ ಶಾಲೆಗಳ ನಿರ್ದಿಷ್ಟ ಕರ್ತವ್ಯವಾಗಿರಬೇಕು.

[illegible]

ಬಾಲೋದ್ಯಾನ (ಕಿಂಡರಗಾರ್ಟನ) ಕ್ರಮವನ್ನನುಸರಿಸುವ ಶಾಲೆಗಳಿಗೆ ೩ ವರ್ಷ ಪ್ರಾಯದ ಮಕ್ಕಳೂ (ತಾಯಿಯ ಮನೆಗೆಲಸಗಳಿಗೆ ಅಡ್ಡಿಯಾಗದ ರೀತಿಯಿಂದ) ಬರುವುದುಂಟು. ಅನುಸರಣಶಕ್ತಿಯು ಕುತೂಹಲತೆಯಿಂದ ಲವಲವಿಸುತ್ತಿರುವ ಆ ಕಾಲದಲ್ಲಿ ಅಷ್ಟು ಎಳೆಯ ಮಕ್ಕಳು ತಾಯೊಡನೆ ಆದಷ್ಟು ಹೆಚ್ಚು ಕಾಲ ಸಮಯ ಕಳೆದು ಸನ್ಮಾರ್ಗವನ್ನು ಕಲಿವುದನ್ನು ತೊರೆದು, ಅಡಿಗೆ ಕೋಣೆಯಲ್ಲಿ ಆಕೆಯನ್ನು ಬಾಧಿಸುವದೆಂಬ ಒಂದು ನೆವದಿಂದ ಮಾತ್ರ ಶಾಲೆಗೆ ತಳ್ಳಲ್ಪಡುವುದು ಕಿಂಡರಗಾರ್ಟನ ಸ್ಥಾಪಕರ ಒಂದು ಉದ್ದೇಶವಾಗಿರಲಿಲ್ಲ. ಐದು ವರ್ಷ ಪ್ರಾಯದ ಮೊದಲ್ಗೊಂಡು ಬಾಲಕಿಯರ ದರ್ಜೆಯ ಪಾಠಗಳನ್ನು ಆರಂಭಿಸಿದರೆ ೧೩ ವರ್ಷ ಪ್ರಾಯದವರಿಗೂ ಸಾಂಗವಾಗಿ ಕಲಿತುಕೊಳ್ಳುವಷ್ಟು ಶಿಕ್ಷಣವು ನಮ್ಮ ಮಕ್ಕಳಿಗೆ ದೊರೆತರೆ ಸಾಕು, ಕನ್ನಡ ವ ಮರಾಠಿ ಭಾಷಾಪಾಠಗಳು, ಸರಲಕಾವ್ಯ, ಸ್ತ್ರೀಧರ್ಮ, ಭೂಗೋಲತತ್ವ, ಪುರಾತನ ಹಿಂದೂ ಇತಿಹಾಸ, ಸಮಗ್ರಭಾರತೇತಿಹಾಸದ ಸಂಕಲನ, ಚಿತ್ರಾದಿಲೇಖನ, ವ್ಯಾಯಾಮ, ನೀತಿಬೋಧೆ, ಪಾಕ ವ ಸಂಗೀತಶಾಸ್ತ್ರ, ಗೃಹಕೃತ್ಯೋಪಕಾರಿ ಗಣಿತ, ಶೌಚ, ದೇಹರಚನಾ ಶಾಸ್ತ್ರ, ಆರೋಗ್ಯ ಕ್ರಮಗಳನ್ನು ಸರಿಯಾಗಿ ಆಯಾ ತರಗತಿಗಳಿಗೆ ತಕ್ಕಂತೆ ಬೋಧಿಸಬೇಕಾಗಿದೆ. ಉಪಾಧ್ಯಾಯಿನೆಯರು ಇವೆಲ್ಲವನ್ನೂ "ಪುರಾಣದ ಬದನೆಕಾಯಿ"ಗಳಂತೆ ಕಲಿಸದೆ, ಪ್ರತ್ಯಕ್ಷರೂಪದಲ್ಲಿ ಕಲಿಸುವುದೊಳ್ಳೆಯದು. ಪ್ರೇಮಮಯವಾನ ಶಾಂತಸ್ವಭಾವದ ಬಾಲಿಕಾ ಸಮೂಹಕ್ಕೆ ಪ್ರೇಮವು ಪರಮಶಿಕ್ಷೆಯಲ್ಲದೆ, ಬೆತ್ತವಲ್ಲವೆಂಬುದನ್ನು ಉಪಾಧ್ಯಾಯಿನಿಯರು ಮರೆಯಲಾಗದು. ಗುರುದೇವತಾ ಭಕ್ತಿಗಳು ಮೊಳೆವಂತೆ ಬಾಲಕಿಯರನ್ನು ದೇವಾಲಯಗಳಿಗೆ ಕರೆದುಹೋಗುವುದೂ, ಅವರೊಡನೆ ಪ್ರಾರ್ಥಿಸುವುದೂ, ದೇವಾಲಯದ ಉತ್ಸಹ ಸಮಾರಾಧನೆ ಕಾಲಗಳಲ್ಲಿ ಬೊಬ್ಬಿಟ್ಟು ಚೀರುವ ರೂಢಿಯಿಂದ ತಿದ್ದಿಸುವುದೂ, ಸುತ್ತಲೂ ನಡೆವ ತಮಾಶೆ ವಿಜೃಂಭಣೆಗಳಲ್ಲಿ ಮನವಿಡದಂತೆ ಸ್ವಕಾರ್ಯ ಶೀಲತೆಯನ್ನು ಕಲಿಸುವುದೂ, ಆರತಿ ರಂಗವಲ್ಲಿ, ತುಲಸೀವೃಂದಾವನಗಳನ್ನು ಶೃಂಗರಿಸುವುದೂ, ಅಸ್ವಸ್ಥೆಯರಾದ ವಿದ್ಯಾರ್ಥಿನಿಯರನ್ನು ಭೇಟಿಕೊಡುವುದೂ, ಉಡಿಗೆ ತೊಡಿಗೆ ತಲೆಗೂದಲು, ಬೊಟ್ಟು, ಭಂಗಾರುಗಳನ್ನು ಸ್ತ್ರೀಯರ ಮೃದು ಮಧುರತೆಗೆ ಯುಕ್ತವಾದಂತಿಡಲು ಕಲಿಸಿ ಹಳೆಯ ಪದ್ಧತಿಯನ್ನು ತ್ಯಜಿಸದೆ ಸುಧಾರಿಸುವುದೂ, ದುಷ್ಟಶಬ್ದಗಳು ದೂಷಿತಯೋಚನಾ ಭ್ರಾಂತಿಗಳು ಮನಗೊಳ್ಳದಂತೆ ಒಂದು ಪತಿವ್ರತಾಮಣಿಯ ಜೀವನವನ್ನು ಆದರ್ಶವಾಗಿಡುವುದೂ, ಸಮಯದ ಉಪಯೋಗ ನಿಯಮಿತ ಕಾಲದ ಭೋಜನ ನಿದ್ರೆವ್ಯಾಯಾಮಗಳನ್ನು ತೋರಿಸಿಕೊಡುವುದೂ, ಸ್ನೇಹಭಾವ, ಸ್ವಚ್ಛಂದತೆ, ಮಿತವ್ಯಯ ಕಲಿಸುವುದೂ,—ಮುಂತಾದ ಸಾವಿರಾರು ಕೆಲಸಗಳಲ್ಲಿಯೂ ಉಪಾಧ್ಯಾಯಿನಿಯ ಶೀಲವೇ ಅತ್ಯುಚ್ಚ ಶಿಕ್ಷಣ. ಶಾಲೆಯ ಮೇಲೆ ಪ್ರೇಮವು ಬೆಳೆವಂತೆಯೂ, ಸ್ನೇಹಭಾವವೂ ಸಹಕಾರವೂ ಸ್ವಾರ್ಥತ್ಯಾಗವೂ ಹೆಚ್ಚುವಂತೆಯೂ, ತಕ್ಕಷ್ಟು ಸಂದರ್ಭಗಳನ್ನು ಮಕ್ಕಳಿಗೆ ಉಪಾಧ್ಯಾಯಿನಿಯರೇ ಒದಗಿಸಿಕೊಡಬೇಕು. ಉಪಾಧ್ಯಾಯಿನಿಯರ ಮಂಡಲಿಯಲ್ಲಿ ಯಾವುದೊಂದು ತೆರದ ಪರಸ್ಪರ ದ್ವೇಷಾಸೂಯೆಗಳು ಇರಲೇ ಬಾರದು. ಇದ್ದರೂ ಮಕ್ಕಳಿಗೆ ಅವುಗಳ ಸೂಕ್ಷ್ಮವು ತಿಳಿಯಲಾಗದು. ಪಾಠಗಳನ್ನು ದೇಶಭಾಷೆಯಲ್ಲಿ ಹೇಳಿಕೊಡುವುದೂ, ವಿವರಣೆಗಳನ್ನು ಮಾತ್ರ ಭಾಷೆಗಳಲ್ಲಿ ಹೇಳುವುದೂ ಉತ್ತಮ; ಛಾಪಾ ಪುಸ್ತಕಗಳ ಮೇಲೆ ಹೆಚ್ಚಿನ ನಿರ್ಭರರಾಗಿ ಉಪಾಧ್ಯಾಯಿನಿಯರಾಗಲಿ ಮಕ್ಕಳಾಗಲಿ ಇರಲಾಗದು. ಪುರಾಣಗಳಿಂದ ಪುಣ್ಯಚರಿತೆಗಳನ್ನು ವಾರಕ್ಕೊಮ್ಮೆಯಾದರೂ ಚನ್ನಾಗಿ ಬೋಧಿಸಬೇಕು. ಅಂಗ್ಲ ವಿದ್ಯಾಭ್ಯಾಸವು ಶಾಲಾ ಪಾಠಗಳ ಹೊರಗಾಗಿ, ಅಪೇಕ್ಷಿತ ವಿದ್ಯಾರ್ಥಿನಿಯರಿಗೆ ಮಾತ್ರ ಸಂದರೆ ಒಳ್ಳೇಯದು. ಮುಖ ಕೈಕಾಲುಗಳನ್ನೂ ತೊಳೆಯದೆ, ಕೂದಲನ್ನು ಸರಿಯಾಗಿ ಕಟ್ಟದೆ, ಉಡುಪನ್ನು ತಕ್ಕಂತೆ ಧರಿಸದೆ, ಬೊಟ್ಟಿರದೆ ಶಾಲೆಗೆ ಬರುವ ಹಿಂದೂ ಬಾಲಿಕೆಯರನ್ನು ಮೇಲ್ದರ್ಜೆಯ ಬಾಲಕಿಯರು ಪ್ರೀತಿಯಿಂದ ತಾವಾಗಿಯೇ ತಿದ್ದಬೇಕು. ನಾಲಗೆಯೇ ಬಲವಾಗುಳ್ಳ ಸ್ತ್ರೀಜಾತಿಗೆ ನಾಲಗೆಯನ್ನು ಆಳ ಕಲಿಸುವುದಕ್ಕಿಂತ ಹೆಚ್ಚಿನ ಶಿಕ್ಷಣವಿಲ್ಲ; ಪ್ರಬಂಧ ರಚನೆ ಮತ್ತು ದಿನವಹಿ (ಡೈರಿ) ಬರೆಯುವುದರಿಂದ ಈ ದುರ್ಬಲವು ಕ್ಷೀಣವಾಗಿ ಭಾಷಾಶೈಲಿಗೂ, ಪ್ರತೀಕ್ಷೆಗೂ, ಸಮಯದ ಸಫಲತೆಗೆ ಹಿತವಾಗುವುದು. ಹಬ್ಬದ ದಿನಗಳಲ್ಲಿ ಅಕಾಲಭೋಜನ ವಿಪರೀತ ಭಕ್ಷಣದಿಂದುಂಟಾಗುವ ದುಸ್ಥಿತಿಯನ್ನು ವಿವರಿಸಿ, ಹಬ್ಬದ ಆಚರಣೆಯ ಕಡೆಗೆ ಮಾತ್ರವಲ್ಲದೆ ಅನ್ಯ ಹರಟೆಗಳ ಕಡೆಗೆ ಅವರ ಮನಸ್ಸು ಸೇರದಂತೆ ಪ್ರಯತ್ನಿಸಿದರೆ, ಕಾರ್ಯಾಸಕ್ತಿ, ಭಕ್ತಿ, ಏಕಾಗ್ರತೆಗಳು ಮೂಡುವುವು.

ಸ್ಥಳ ಸಂಕೋಚತೆಯಿಂದ ಅತ್ಯುಪಯುಕ್ತವಾಗಿ ತೋರಿದ ಶಾಲಾ ಏರ್ಪಾಡನ್ನು ಸೂಚಿಸಿರುವೆವು ಹೊರತು, ಇಷ್ಟೆಲ್ಲವೂ ಸ್ತ್ರೀಶಿಕ್ಷಣದ ಮೂಲತತ್ವ ಮಾತ್ರವೆಂದು ತಿಳಿಸಿ ಸಮಗ್ರ ವಿಮರ್ಶೆಯನ್ನು ಮತ್ತೊಮ್ಮೆ ಆಲೋಚಿಸುವೆವೆಂದು ಈಗ ವಿನಂತಿ.

ಸೋಮಾರಿಯ ತಕರಾರು.

ಒಬ್ಬ ಮನುಷ್ಯನಿಗೆ ಪ್ರತಿನಿತ್ಯವೂ ಮಲಗಿ ಏಳಲಿಕ್ಕೆ ಬಹಳ ಹೊತ್ತಾಗುತಿತ್ತು. ಹೀಗಾಗಲು ಕಾರಣವೇನೆಂದು ಕೇಳಲು ಆತನು ಸ್ನೇಹಿತನಿಗೆ ಹೇಳಿದ್ದೇನಂದರೆ "ಮುಂಜಾನೆ ಎದ್ದರೆ ನನ್ನ ಕಿವಿಯ ಹತ್ತಿರ ವಿವಾದದ ಕಚ್ಚಾಟವು ಪ್ರಾರಂಭವಾಗುತ್ತದೆ. ನನಗೆ ಇಬ್ಬರು ಪುತ್ರರು, ಒಬ್ಬನ ಹೆಸರು ಉದ್ಯೋಗ ಮತ್ತೊಬ್ಬನ ಹೆಸರು ಆಲಸ್ಯ. ಅವರಿಬ್ಬರೂ ನಾನೇಳುವ ಸಮಯದಲ್ಲಿ ತಲೆ ಹತ್ತಿರ ಬಂದು ಕೂತುಕೊಂಡು, ತಮ್ಮ ತಮ್ಮ ಹೇಳಿಕೆಯನ್ನು ಹೇಳಲು ತೊಡಗುತ್ತಾರೆ. ಒಬ್ಬನು ನಾನೇಳಬೇಕೆಂತಲೂ, ಮತ್ತೊಬ್ಬನು ನಾನು ಮಲಗಿದಲ್ಲೇ ಹೊರಳಾಡಿರಬೇಕೆಂತಲೂ ಹೇಳುವನು. ಅವರಿಬ್ಬರೂ ತಂತಮ್ಮ ಆಗ್ರಹವನ್ನು ಪ್ರತಿಪಾದಿಸಲು ಕಾರಣಗಳನ್ನು ಹೇಳಿ ನನ್ನನ್ನು ಮೆಚ್ಚಿಸುವ ಪ್ರಯತ್ನ ಮಾಡುವರು. ಎರಡು ಪಕ್ಷದ ಹೇಳಿಕೆಯನ್ನೂ ಶಾಂತವಾಗಿ ಆಲೈಸಿ ಕೇಳುವದು ನಿಷ್ಪಕ್ಷಪಾತಿಯಾದವನ ಕರ್ತವ್ಯವಾದುದರಿಂದ ನಾನು ಅದನ್ನೆಲ್ಲಾ ಕೇಳುತ್ತಿರುವಾಗ ಮಧ್ಯಾನ್ಹ ಊಟದ ಹೊತ್ತು ಹ್ಯಾಗಾಯಿತೆಂದು ನನಗೆ ತಿಳಿಯುವದಿಲ್ಲ. ಇದರಲ್ಲಿ ನನ್ನ ದೋಷವೇನು?"

ರಕ್ತಚಲನೆಯೂ ಶ್ವಾಸೋಚ್ಛ್ವಾಸವೂ.

ಮನುಷ್ಯರಿಗೆ ಆರೋಗ್ಯವೇ ಅವಶ್ಯ. ಆರೋಗ್ಯವಿಲ್ಲದ ಮನುಷ್ಯನು ವ್ಯರ್ಥವೆಂದೇ ಹೇಳಬೇಕು. ಪರಂತು, ಒಳ್ಳೇ ಆರೋಗ್ಯವನ್ನು ಒಬ್ಬನು ಸಂಪಾದಿಸಿಕೊಳ್ಳಬೇಕಾದರೆ ಅವನ ದೇಹದಲ್ಲಿ ಒಳ್ಳೇ ರಕ್ತವು ತುಂಬಿರಬೇಕು. ರಕ್ತವೇ ಜೀವದ ಬುಗ್ಗೆ. ಶುದ್ಧವಾದ ವಾಯು, ಆಹಾರಗಳಿಂದ ರಕ್ತವು ದೇಹದಲ್ಲಿ ಹೆಚ್ಚಿ, ದೇಹದ ಪ್ರತಿ ಒಂದು ಭಾಗಕ್ಕೆ ಸರಿಯಾಗಿ ಹರಿದು ನರಸಂಸ್ಥ್ಯೆಯುವನ್ನೆಲ್ಲಾ ಬಲ ಪಡಿಸುವದು. ರಕ್ತವು ದೇಹದಲ್ಲಿ ಸರಿಯಾಗಿ ಚಲಿಸುವುದರಿಂದ ಒಳ್ಳೇ ಆರೋಗ್ಯವು ಲಭಿಸುವುದು. ರಕ್ತಚಲನೆಗೆ ಅಡ್ಡಿಯಾದಾಕ್ಷಣ ಆರೋಗ್ಯವು ಕೆಡುವುದು. ರಕ್ತವು ಸರಿಯಾಗಿ ಚಲಿಸಬೇಕಾದರೆ ಸರಿಯಾಗಿ ಶ್ವಾಸೋಚ್ಛ್ವಾಸ ಮಾಡಬೇಕು. ಸರಿಯಾಗಿ ಶ್ವಾಸಿಸುವುದರಿಂದ ನಮ್ಮ ಶ್ವಾಸಕೋಶಗಳು ಪ್ರಾಣವಾಯುವಿನಿಂದ ತುಂಬಿ ರಕ್ತವು ಶುದ್ಧವಾಗುವದು. ರಕ್ತವು ದೇಹದ ಎಲ್ಲಾ ಸಂದುಗೊಂದುಗಳಿಗೆ ಹರಿದು ಜೀವದ ಬುಗ್ಗೆಯಾಗಿ ಪರಿಣಮಿಸುವದು. ಸ್ನಾಯುಗಳು ಬಲವಾಗಿ, ಹಸಿವೆಯು ಹುಟ್ಟಿ, ಜೀರ್ಣ ಶಕ್ತಿಯು ಹೆಚ್ಚುವುದು. ಒಳ್ಳೇ ಜೀರ್ಣಶಕ್ತಿಯೂ ಸರಿಯಾದ ನಿದ್ದೆಯೂ ಉಳ್ಳವನೇ ಆರೋಗಿಯು. ಇಂತಹನಿಗೆ ವಿವಿಧ ರೋಗಗಳು ಸೋಂಕಲಾರವು. ಆದುದರಿಂದ ನಮ್ಮ ಶ್ವಾಸಕೋಶಗಳಿಗೆ ಸರಿಯಾದ ಕೆಲಸವನ್ನೂ ಸ್ವಾತಂತ್ರ್ಯವನ್ನೂ ಕೊಡಬೇಕು. ಅವುಗಳಿಗೆ ಸರಿಯಾದ ಸ್ವಾತಂತ್ರ್ಯವನ್ನು ಕೊಡುವುದರಿಂದ ಅದರ ಬಲವು ಹೆಚ್ಚುವದು. ಆದರೆ ಅವುಗಳು ನಾವು ಉಡುವ ತೊಡುವ ವಸ್ತ್ರಗಳಿಂದ ಯಾ ಸರಿಯಾದ ಶ್ವಾಸೋಚ್ಛ್ವಾಸ ಮಾಡದಿರುವುದರಿಂದ ಅಮುಕಿಸಲ್ಪಟ್ಟರೆ ಅವುಗಳು ಸೂತ್ರದ ಗೊಂಬೆಗಳಂತಾಗಿ ದಿನೇ ದಿನೇ ಮುದುರಿ ಹೋಗುವುದು. ಶ್ವಾಸಕೋಶಗಳು ಮುದುರಿದಾಕ್ಷಣ ಅದರೊಡನೆ ನಮ್ಮ ದೇಹವೂ ಮುದುರಿ ಕೃಶವಾಗುವುದು. ರಕ್ತವು ಚಲಿಸದು. ಶ್ವಾಸಕೋಶದ ಮೂಲಕವಾಗಿ ಹೊರಗೆ ಹೋಗಬೇಕಾದ ವಿಷ ವಾಯುವು ದೇಹದಿಂದ ಹೊರಹೋಗದೆ ರಕ್ತವು ಕೆಡುವುದು. ರಕ್ತವು ಕೆಡುವುದರಿಂದ ಜೀರ್ಣಕೋಶ, ಯಕೃತು, ಮೆದುಳು ಇವೆಲ್ಲವೂ ಪಾಡುಪಟ್ಟು ಗುಂಡಿಗೆ ವೇಗವಾಗಿ ಬಡಿಯುವುದು, ಅಜೀರ್ಣ, ತಲೆಸಿಡಿತ, ಶೀತ ನೆಗಡಿ ಮೊದಲಾದ ರೋಗಗಳು ನಮ್ಮನ್ನು ಬಾಧಿಸ ತೊಡಗುವವು. ಕೊನೆಗೆ ವಿವಿಧ ರೋಗಗಳು ನಮ್ಮಲ್ಲಿ ಸಿಂಹಾಸನಾರೂಢವಾಗಿ ನಾವು ಯಮಪುರದ ದ್ವಾರವನ್ನು ಸೇರುವುದೇನೋ ನಿಜ; ಪರಂತು, ವಾಯುವನ್ನು ಸರಿಯಾಗಿ ಶ್ವಾಸೋಚ್ಛ್ವಾಸ ಮಾಡುವುದರಿಂದ ಇಂತಹ ಅನಾರೋಗ್ಯವು ನಮಗೆ ತಟ್ಟದು.

ಶ್ವಾಸೋಚ್ಛ್ವಾಸವನ್ನು ಮಾಡುವುದರಲ್ಲಿಯೂ ಸರಿಯಾದ ಕ್ರಮವನ್ನು ಅನುಸರಿಸಬೇಕು. ಸರ್ವಸಾಧಾರಣವಾಗಿ ಹೆಚ್ಚಿನವರು ಬಾಯಲ್ಲಿ ಶ್ವಾಸಬಿಡುವರು. ಬಾಯಲ್ಲೇ ಶ್ವಾಸ ತಕ್ಕೊಳ್ಳುವರು. ಇದು ಒಳ್ಳೇಯದಲ್ಲ. ನಮಗೆ ಬಾಯಿ ಉಣ್ಣಲಿಕ್ಕೆ; ಮೂಗು ಶ್ವಾಸಿಸಲಿಕ್ಕೆ ಎಂಬದನ್ನು ಸರ್ವರೂ ಅರಿತವರಾಗಿರಬೇಕು. ಬಾಯಿಯಿಂದ ಅನ್ನಕೋಶಕ್ಕೂ ಮೂಗಿನಿಂದ ಶ್ವಾಸನಾಳಗಳಿಗೂ ದ್ವಾರಗಳಿವೆ. ಇವು ಪ್ರತಿಯೊಂದೂ ಅದಕ್ಕೆ ಅನುಗುಣವಾದ ಕಾರ್ಯವನ್ನು ಮಾಡುವವು. ಬಾಯಿಯು ಆಹಾರದ ದೊಡ್ಡ ದೊಡ್ಡ ಕಬಳಗಳನ್ನು ನುಂಗಬೇಕಾದ್ದರಿಂದ ಅದು ಅಗಲವಾಗಿರುತ್ತದೆ. ಗಾಳಿಯು ಶ್ವಾಸನಾಳಗಳಲ್ಲಿ ಹೋಗುವುದಕ್ಕೆ ಮುಂಚಿತವಾಗಿ ಅದನ್ನು ಶೋಧಿಸಿ ಶುದ್ಧಮಾಡಿ ಒಳಗೆ ಹೋಗುವುದಕ್ಕೆ ಅನುಕೂಲವಾಗುವಂತೆ ಮೂಗು ಉದ್ದವಾಗಿಯೂ ಸಣ್ಣವಾಗಿಯೂ ಇರುವ ನಾಳಗಳಿಂದ ಉಂಟಾಗಿದೆ. ಬಾಯಿಂದ ಶ್ವಾಸಿಸುವುದರಿಂದ ವಿವಿಧ ತರದ ರೋಗಗಳು ಹುಟ್ಟುವವು. ಇದರಿಂದ ನೆಗಡಿಗೆ ಗುರಿಯಾಗುವ ಸಂಭವವು ಬಹಳವಿದೆ. ಶ್ವಾಸನಾಳಗಳನ್ನು ಪ್ರವೇಶಿಸುವ ಗಾಳಿಯು ಶೀತವಾಗಿಯೂ ಆವಿರಹಿತವಾಗಿಯೂ ಕಸಕಡ್ಡಿಯೂ ಅಪಾಯವಾದ ಅಣುಪ್ರಾಣಿಗಳು ಉಳ್ಳದ್ದಾಗಿಯೂ ಇರುವುದರಿಂದ ಬಾಯಿಂದ ಶ್ವಾಸಿಸುವುದಾದರೆ ಇವು ಸುಲಭವಾಗಿ ಒಳಸೇರಿ ರೋಗಗಳನ್ನು ಹುಟ್ಟಿಸುವವು. ಆದರೆ ಮೂಗಿನಲ್ಲಿ ಅವು ಪ್ರವೇಶಮಾಡಲು ಅಡ್ಡಿಯಾಗುತ್ತದೆ.

ಸರಿಯಾದ ಶ್ವಾಸೋಚ್ಛ್ವಾಸವನ್ನು ಮಾಡಿದರೆ ಆರೋಗ್ಯವೂ ದೇಹಪುಷ್ಟಿಯೂ ಲಭಿಸುವುದರಲ್ಲಿ ಸಂದೇಹವಿಲ್ಲವಾದುದರಿಂದ ಶ್ವಾಸೋಚ್ಛ್ವಾಸದ ವಿಷಯಕ್ಕೆ ಪ್ರತಿಯೊಬ್ಬನು ಲಕ್ಷಕೊಡುವುದು ಅವಶ್ಯವಾಗಿದೆ.

ಕತ್ತಾಳೆ ನಾರು.

ಈಚೆಗೆ ಹಗ್ಗ ಬಟ್ಟೆ, ಹುರಿ ಮೊದಲಾದ ಪದಾರ್ಥಗಳನ್ನು ಮಾಡುವುದಕ್ಕೆ ಕತ್ತಾಳೆ ನಾರು ಬಹಳವಾಗಿ ಮಾರಾಟವಾಗುತ್ತಿದೆ. ಆದ್ದರಿಂದ ದಕ್ಷಿಣ ಅಮೇರಿಕಾ, ಹಾವಾಯಿ ಪೂರ್ವ ಆಫ್ರಿಕಾ ಮೊದಲಾದ ಸ್ಥಳಗಳಲ್ಲಿ ಇದನ್ನು ಹೇರಳವಾಗಿ ಬೆಳೆಯುತ್ತಿದ್ದಾರೆ. ಕತ್ತಾಳೆ ಗಿಡಗಳ ಎಲೆಗಳು ೪—೬ ಅಡಿ ಉದ್ದವಾಗಿರುತ್ತವೆ. ಈ ಗಿಡದ ಮಧ್ಯಭಾಗದಲ್ಲಿ ಗಿಡವನ್ನು ನೆಟ್ಟ ೭—೮ ವರುಷಗಳ ತರುವಾಯ ಒಂದು ಕಂಭವು ಹೊರಡುವುದು. ಮತ್ತು ಈ ಕಂಭದ ತುದಿಯಲ್ಲಿ ಹೂವುಗಳು ಬಿಡುವುವು. ಕಂಭವು ಹೊರಡುವುದರಿಂದ ನಾರು ಕಡಿಮೆ ದರ್ಜೆಯದಾಗುವುದು. ಆದ್ದರಿಂದ ಕಂಭವು ಸಮಾರು ಮೂರುಅಡಿ ಎತ್ತರವಾಗಿರುವಾಗ್ಯೆ ಅದನ್ನು ಕತ್ತರಿಸುವುದಲ್ಲದೆ ಸುತ್ತಮುತ್ತಲಿರುವ ಸೊಸಿಗಳನ್ನೆಲ್ಲಾ ಕತ್ತರಿಸಿ ಹಾಕಬೇಕು.

ಗಿಡಗಳನ್ನು ನೆಟ್ಟ ನಾಲ್ಕನೇ ವರುಷದಲ್ಲಿ ಬುಡದಲ್ಲಿರತಕ್ಕ ಮೊದಲು ಬಿಟ್ಟ ಪಟ್ಟೆಗಳನ್ನು ಕತ್ತರಿಸಿ ಅವುಗಳಿಂದ ನಾರನ್ನು ತೆಗಿಯುತ್ತಾರೆ. ನಂತರದಲ್ಲಿ ಆರು ತಿಂಗಳಿಗೊಂದಾವರ್ತಿಯಂತೆ ಗಿಡಗಳನ್ನು ನೆಟ್ಟು ೮ ವರುಷವಾಗುವ ವರಿವಿಗೂ ಪಟ್ಟೆಗಳನ್ನು ಕತ್ತರಿಸಬಹುದು. ಎಂಟು ವರುಷಗಳ ನಂತರದಲ್ಲಿ ಪಟ್ಟೆಗಳು ಶಿಕ್ಕುವುದಿಲ್ಲವಾದ್ದರಿಂದ ಗಿಡಗಳನ್ನು ಕತ್ತರಿಸಿ ಹೊಸ ಗಿಡಗಳನ್ನು ನೆಡಬೇಕು.

ಮದರಾಸು ಆಧಿಪತ್ಯದಲ್ಲಿ ವರುಷಕ್ಕೆ ಸುಮಾರು ೨೩ ಹದ ಮಳೆಯಾಗತಕ್ಕ ಪ್ರದೇಶದಲ್ಲಿ ಬಹಳ ಕಮ್ಮಿ ದರ್ಜೆಯ ಕೆಂಪಾದ ಮತ್ತು ನುರುಜುಗಲ್ಲಿನಿಂದ ಕೂಡಿದ ಜಮೀನಿನಲ್ಲಿ ಕತ್ತಾಳೆಯನ್ನು ಬೆಳದು ನೋಡಲಾಗಿ ಎಕರೆಯೊಂದಕ್ಕೆ ೩೦೦ ಪೌಂಡು ನಾರು ಉತ್ಪತ್ತಿಯಾಯಿತೆಂದು ತಿಳಿಯಬರುತ್ತದೆ. ಅಮೇರಿಕಾ ದೇಶದಲ್ಲಿ ಎಕರೆಗೆ ೮೦೦ ಪೌಂಡಿನಷ್ಟು ಉತ್ಪತ್ತಿಯಾಗಿರುವುದೂ ಉಂಟು.

ಕತ್ತಾಳೆಯು ಸ್ವಲ್ಪ ಮಟ್ಟಿಗೆ ಜಿಗಟು ಮಣ್ಣಿನ ಪ್ರದೇಶಗಳಲ್ಲಿ ಬಹಳ ಉತ್ಕೃಷ್ಟವಾಗಿ ಬೆಳೆಯುವುದು. ಆದರೆ ಇದು ಸುಮಾರಾಗಿ ಶೀತ ಹವಾವಾದ ಸ್ಥಳಗಳಲ್ಲೂ ಚೆನ್ನಾಗಿ ಬೆಳೆಯುವುದೆಂದು ಹೇಳಬಹುದು. ಅಲ್ಲದೆ ಇದು ಭೂಸಾರವನ್ನು ಕಡಿಮೆ ಮಾಡುವುದಿಲ್ಲ. ಇತರ ಯಾವ ವಿಧವಾದ ಬೆಳೆಗಳಿಗೂ ಉಪಯೋಗವಾಗಿಲ್ಲದ ಜಮೀನುಗಳಲ್ಲಿ ಕತ್ತಾಳೆಯು ಬಹಳ ಚನ್ನಾಗಿ ಬೆಳೆಯುವುದು. ಎಕರೆಗೆ ಸರಾಸರಿ ೧೦೮೯ ಗಿಡಗಳನ್ನು ನೆಡಬಹುದು. ಆದರೆ ಮೇಲೆ ಹೇಳಿದ ಮದರಾಸು ಆಧಿಪತ್ಯದ ಕತ್ತಾಳೆ ಗಿಡಗಳ ಹೊಲದಲ್ಲಿ ಎಕರೆಗೆ ೯೦೦ ಗಿಡಗಳನ್ನು ಮಾತ್ರ ನೆಟ್ಟಿದ್ದಾರೆ.

ಕಿ. ಗೆ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಪುತ್ತೂರು, ತಾ. 24—12—12.

ಅಯ್ಯಾ ಪತ್ರಿಕಾಕರ್ತರೇ,

ನಿವಾಸಿಕರಿಗೆ ಬೇಕಾದ ಮನೆ ವಗೈರೆ ಕಟ್ಟೋಣಗಳ ಕೆಲಸವು ಈ ಸಮಯದಲ್ಲಿಯೇ ಪ್ರಾರಂಭಿಸಲ್ಪಡುತ್ತದೆ. ರಿಜರ್ವಕಾಡುಗಳಿಂದ ಕಟ್ಟೋಣಗಳಿಗೆ ಬೇಕಾದ ಮರ ಇತ್ಯಾದಿಗಳು ಸಿಕ್ಕುವದಿಲ್ಲ. ರೆವಿನ್ಯುಕಾಡು ಅಥವಾ ಕುಮ್ಕಿಯಿಂದ ಮರ ಬಿದಿರು ಇತ್ಯಾದಿ ಸಿಕ್ಕಬೇಕಾದರೆ ಪರ್ಮಿಟಿನ ಬಗ್ಗೆ ತಾಲೂಕು ಆಫೀಸಿಗೆ ಅರ್ಜಿ ಬರಕೊಳ್ಳಬೇಕು. ಇಂಥಾ ಅರ್ಜಿಗಳು ಗ್ರಾಮ ಉದ್ಯೋಗಸ್ಥರು ತನಿಖಿ ನಡಿಸಿ ರೆವಿನ್ಯು ಇನ್ಸಪೆಕ್ಟರರ ತನಖಿ ನಂತರ ತಾಲೂಕು ಆಫೀಸನ್ನು ಸೇರಬೇಕು. ಅಂದರೆ ತಾಲೂಕಾಫೀಸಿನಿಂದ ಅರ್ಜಿಗಳು ತೆರಳುವಾಗ ಒಂದು ತಿಂಗಳು ಗ್ರಾಮಾಧಿಕಾರಿಗಳ ತನಖಿಗೆ ಒಂದೆರಡು ತಿಂಗಳು, ನಂತರ ಹಲವು ರೆವಿನ್ಯು ಕೆಲಸಗಳುಳ್ಳ ರೆವಿನ್ಯು ಇನ್ಸಪೆಕ್ಟರರ ತನಖಿಗೆ ಒಂದೆರಡು ತಿಂಗಳು, ಹೀಗೆ ಇಷ್ಟು ವಿಳಂಬವಾದ ಮೇಲೆ ಅರ್ಜಿಯು ಹ್ಯಾಗೂ ತಾಲೂಕು ಆಫೀಸಿಗೆ ಬಂದು ಸೇರುತ್ತದೆ. ತಾಲೂಕು ಆಫೀಸಿನಲ್ಲಿ ಪೊರೆಸ್ಟ ಕ್ಲಾರ್ಕರು ನೂರು ಬಗೆಯ ಕೆಲಸಗಳಲ್ಲಿರುವದರಿಂದ ಅಲ್ಲಿ ಸಹ ತೊಂದರೆ.

ಪೋರೆಸ್ಟ್ ಕ್ಲಾರ್ಕರು ಅನೇಕ ಸಾರಿ ಆಫೀಸಿನಲ್ಲಿರುವದಿಲ್ಲ; ಸರ್ಕೀಟಿನ ಮೇಲಿರುವರು. ಕುತ್ತಿ ಕಿಮ್ಮತು ಹಣ ಕಟ್ಟಲಿಕ್ಕೂ ಪರ್ಮಿಟು ಪಡಿಯಲಿಕ್ಕೂ ಬಂದವರು ತಾಲೂಕು ಆಫೀಸಿನ ಬಾಗಿಲುಗಳನ್ನು ಕಾಯುತ್ತಿರಬೇಕು. ಹೀಗೆ ಕಮ್ಮೋಣಗಳನ್ನು ಕಟ್ಟಿಸುವದು ಬಹಳ ಅಸಾಧ್ಯವಾಗಿ ಬಂದಿರುತ್ತದೆ. ಮೇಲಾಧಿಕಾರಿಗಳು ಜನರ ಈ ಅಡಚಣೆಗಳಿಗೆ ಲಕ್ಷ್ಯಕೊಡಬೇಕು. ತಾಲೂಕು ಆಫೀಸಿನ ಪೋರೆಸ್ಟ್ ಕ್ಲಾರ್ಕರನ್ನು ಸರ್ಕೀಟಿನ ಮೇಲೆ ಕಳುಹಿಸುವುದು ನಿಲ್ಲಿಸಿದರೆ ಜನರಿಗೆ ಉಪಕಾರವಾಗುತ್ತಿತ್ತು.

ಪುತ್ತೂರು ರೈತ.

ಟಪ್ಪಾಲು ಇಲಾಖೆಯ ಅನರ್ಥಗಳು.

ಪುತ್ತೂರು, ತಾ. 24—12—12.

ಸ್ವಾಮಿ,

ಪುತ್ತೂರು ಪಟ್ಟಣಕ್ಕೆ ಬಂದ ಪೋಸ್ಟುಮಾಸ್ಟರರಿಗೆ ಕನ್ನಡ ಬರಹ ಅರಿಯದು. ಟೌನ್ ಬಟ್ವಾಡೆ ಪೇದೆಗಳು ಕೆಲಸಮಾಡುವ ರೀತಿಯಾದರೋ ಹೇಳಿತೀರದು. ಟಪ್ಪಾಲು ಆಫೀಸಿನಲ್ಲಿ ಎರಡು ಜನ ಪೇದೆಯರಿರುತ್ತಾರೆ. ಒಬ್ಬನು ಅದ್ಲಾಬದ್ಲಿ ನೋಡಲಿಕ್ಕೆ ಕಳುಹಿಸಲ್ಪಡುವನು. ಮತ್ತೊಬ್ಬನು ಕಾಹಿಲೆಯಲ್ಲಿರುವನು. ಈಗ ಇರುವ ಪೇದೆಗಳಿಗೆ ಜನರ ಪರಿಚಿತಿಯೇ ಇಲ್ಲ. ಹೀಗಾಗಿ ಒಬ್ಬನ ಕಾಗದಗಳು ಇನ್ನೊಬ್ಬನಿಗೆ ಕೈಸೇರುತ್ತಿವೆ. ಕ್ಲುಪ್ತಕಾಲದಲ್ಲಿ ಕಾಗದ ಕಾರ್ಡುಗಳು ಬಟ್ವಾಡೆಯಾಗುವದಿಲ್ಲ. ತಾ. ೨೧ರಲ್ಲಿ ಸಿಕ್ಕಬೇಕಾದ ಸ್ವದೇಶಾಭಿಮಾನಿಯು ಈ ವರೆಗೆ ಬಟ್ವಾಡೆಯಾದ್ದಿಲ್ಲ. ಹಳ್ಳಿಗಳಲ್ಲಿ ಸ್ವದೇಶಾಭಿಮಾನಿಯನ್ನು ಟಪ್ಪಾಲುದ್ವಾರಾ ೧೫ ದಿವಸಗಳಲ್ಲಾದರೂ ಪಡಿಯಬೇಕಾದರೆ ಒಳ್ಳೇ ಪುಣ್ಯವುಳ್ಳವರಾಗಬೇಕು. ಈ ಅನರ್ಥಗಳು ಕಡಿಮೆಯಾಗಲು ಉಪಾಯವಿಲ್ಲವೋ?

ಪಟ್ಟಣ ನಿವಾಸಿಕ.

ಸುಧಾರಣಾ ಸಂಭಾಷಣೆ.

ಅಯ್ಯಾ ಪತ್ರಿಕಾಕರ್ತರೇ,

ಮಂಗಳೂರಿನಿಂದ ಒಬ್ಬ ಗೌಡಸಾರಸ್ವತ ವ್ಯಾಪಾರಸ್ಥರು ಬೊಂಬಾಯಿಗೆ ಸಮುದ್ರ ಮಾರ್ಗವಾಗಿ ಹೋಗುತ್ತಾ, ಕಾರ್ವಾರಿನ ಬಂದರದಿಂದ ಬೊಂಬಾಯಿ ಇಲಾಖಾ ಒಬ್ಬ ಸುಧಾರಣಾ ಗೃಹಸ್ಥರು ಜಹಜ ಹತ್ತಿ, ಗೋವೆಯಲ್ಲಿ ಸುಧಾರಣಾ ಗೃಹಸ್ಥರು ಇಳಿಯುವ ವರೆಗೆ ಅವರೊಳಗೆ ಆದ ಸಂಭಾಷಣವನ್ನು ಸದರಿ ಸಾವಕಾರರು ಬೊಂಬಾಯಿಯಿಂದ ವಾಪಸು ಬಂದ ಮೇಲೆ ನನ್ನ ಕೂಡೆ ಹೇಳಿದ್ದನ್ನು ಸಂಬಂಧಪಟ್ಟವರೆಲ್ಲವರ ವಾಚಕದ ಬಗ್ಗೆ ತಮ್ಮ ಬೆಲೆಯುಳ್ಳ ಪತ್ರಿಕೆಯಲ್ಲಿ ಛಾಪಿಸುವರೆ ಅಪೇಕ್ಷಿಸುತ್ತೇನೆ.

ಸು. ಗ್ರ. ತಮ್ಮನ್ನು ಮುಂಚೆ ಮಂಗಳೂರು ಬಂದರದಲ್ಲಿ ಕಂಡಹಾಗೆ ನೆನಪು. ಕ್ಷೇಮವೋ? ಎಲ್ಲಿಗಿದು ಪ್ರಯಾಣ.

ಗೌ. ಸಾ. ತಮ್ಮ ನೆನಪು ಸರಿ. ನಾನು ಮುಂಬಾಯಿಗೆ ವ್ಯಾಪಾರದ ಬಗ್ಗೆ ಹೋಗುತ್ತೇನೆ. ತಮ್ಮ ಪರಿಚರ್ಯ ಶಿಕ್ಕಲಿಲ್ಲ. ಹತ್ತರ ಇರುವ ಜವಾನರನ್ನು ನೋಡಿದರೆ ಮುಂಬಾಯಿ ಇಲಾಖೆಯಲ್ಲಿ ದೊಡ್ಡ ಉದ್ಯೋಗದಲ್ಲಿರಬೇಕೆಂತ ಕಾಣುತ್ತದೆ. ಬಾಲಾಪ್ಯದಲ್ಲಿ ಸವಾರಿ ಮಂಗಳೂರಲ್ಲಿ ಇತ್ತೋ?

ಸು. ಗ್ರ. ಸರಿ. ನಾನು ಈಗ ಇಲ್ಲಿ ಮಾಮಲತಿ ಕೆಲಸ ನೋಡುತ್ತೇನೆ. ಸಂಯುಕ್ತ ಪರಿಷದಕ್ಕೆ ಹೋಗುತ್ತೇನೆ. ಕನ್ನಡಾ ಜಿಲ್ಲೆಯಿಂದ ಎಷ್ಟು ಜನರು ಬರುವ ಹಾಗೆ ಇದ್ದಾರೆ? ತಾವು ಪರಿಷದಕ್ಕೆ ಬಂದು ನಂತರ ಮುಂಬಾಯಿಗೆ ಹೋಗಬಹುದಷ್ಟೆ?

ಗೌ. ಸಾ. ನನ್ನಂಥ ಬಡ ವ್ಯಾಪಾರಸ್ಥನು ಆ ಮಹಾಸಭೆಗೆ ಬಂದೇನು ಉಪಯೋಗ, ಸ್ವಾಮಿ? ನಮ್ಮಲ್ಲಿಯೂ ಈಗ ತಕ್ಕಷ್ಟು ಸುಧಾರಣೆಹೊಂದಿದ ಪಾಶ್ಚಾತ್ಯ ವಿದ್ಯಾನಿಪುಣರು ಇದ್ದಾರೆ. ಹಣವಂತರೂ ಇದ್ದಾರೆ. ಅವರು ಹೋಗಲಿಕ್ಕೆ ಸಾಕೋ.ಏನೋ? ಒಬ್ಬರಿಗೆ ಆಮಂತ್ರಣವೂ ಬಂದದೆ. ಅವರೆಲ್ಲಾ ಸುಧಾರಣೆ ಹೊಂದಿ ಬಂದಮೇಲೆ ನಮಗೆ ಅವರು ಮಾರ್ಗದರ್ಶಿಗಳಾಗುವರು. ಆದರೆ ಸಮುದ್ರದಲ್ಲಿ ಇಳಿದ ಹೆಜ್ಜೆಗಳು ಮಾತ್ರ ಕಂಡರೆ ನಾವು ಜಂಬೂಕ ನ್ಯಾಯವೇ ಅನುಸರಿಸಬೇಕಾದೀತು. ಅದಿರಲಿ, ಸ್ವಾಮಿ, ನಮ್ಮಲ್ಲಿ ಅಶಿಕ್ಷಿತ ಜನಸಮೂಹ ಹೆಚ್ಚು ಉಂಟಷ್ಟೇ; ನಾವು ಯಾಕೆ ಸಂಯುಕ್ತ ಪರಿಷದಕ್ಕೆ ಹೋಗಿ ಶಾಖೋಪಶಾಖೆಗಳ ಹತ್ತರ ಸಹಪಂಕ್ತಿ, ಭೋಜನ, ವಿವಾಹ ವಗ್ಯೆರೆ ಮಾಡಬೇಕೆಂತ ಅಪೇಕ್ಷಿಸುತ್ತೀರಿ. ಹಾಗೆ ಮಾಡಿದ್ದರಿಂದ ಪ್ರಯೋಜನ, ನಮಗೋ ಅವರಿಗೋ?. ಯಾರಿಗೆ ಸುಧಾರಣೆ ಶಿಕ್ಕುತ್ತದೆ? ತಾವಾದರೂ ದಯಮಾಡಿ ವಿವರಿಸುವಿರಾ? “ರೋಟಿಬೇಟಿ” ಅನ್ನುತ್ತಾರಷ್ಟೇ. ರೋಟಿ ಅಂದರೆ ಸಹಪಂಕ್ತಿ, ಭೋಜನವೋ, “ಬೇಟಿ” ಅಂದರೆ “ನೆಂಟಸ್ತನವೋ,” ಈಗ ರೋಟಿ ಸಂಗತಿ ಮುಂಚೆ ಮಾತಾಡುವಾ. ಸಹಪಂಕ್ತಿ, ಭೋಜನ ಆಗಬೇಕೆಂತ ತಾವು ಹೇಳುವಂಥಾದ್ಯಾಕೆ? ಮತ್ತು ಹಾಗೆ ಭೋಜನ ಮಾಡಿದವರ ಹೆಸರುಗಳು, ಚಿತ್ರಗಳು ಛಾಪಿಸುವಂಥಾದ್ಯಾಕೆ? ಅಂಥಾ ಪ್ರಕಟಪಡಿಸುವಿಕೆ ಇಲ್ಲವಾದರೆ ಅನೇಕರು ಬಂದಾರಷ್ಟೇ. ಪ್ರಕಟಣೆಗಳಿಂದ ಅನಾಹುತಗಳು ಬರುತ್ತಾವಷ್ಟೇ.

ಸು. ಗ್ರ. ಶಿಟ್ಟಿಲ್ಲವಾದರೆ ಹೇಳುತ್ತೇನೆ. ಹ್ಯಾಗೂ ಗೋವೆ ಬಂದರು ಬರುವ ವರೆಗೆ ನನಗೂ ಬೇಜಾರವೇ. ಇಂಗ್ಲಿಷ್ ವಿದ್ಯಾಭ್ಯಾಸ ಇಲ್ಲದವರ ಮನಸ್ಸಿಗೆ ಹೋಗುವದು ಪ್ರಯಾಸವೇ ಸರಿ.

ಗೌ. ಸಾ. ಸ್ವಾಮಿ, ಶಿಟ್ಟೇನೂ ಇಲ್ಲ. “ಬಡವನ ಶಿಟ್ಟು ದವಡೆಗೆ ಕೇಡಲ್ಲವೇ” ಬೇಜಾರ ಹೋಗಲಿಕ್ಕಾದರೂ ಮಾತಾಡಬಹುದಷ್ಟೆ.

ಸು. ಗ್ರ. ಸಹಪಂಕ್ತಿ ಭೋಜನ ವಗ್ಯೆರೆಯಿಂದ ಎಲ್ಲರಿಗೂ ಸುಧಾರಣೆ ಉಂಟು. ನೋಡಿ ನಿಮ್ಮ ಜಾತಿಸಮೂಹ ಹೆಚ್ಚುಂಟು. ಆದರೆ ನಿಮ್ಮಲ್ಲಿ “ಎಕ್ಸಕ್ಲುಸೀವನೆಸ್” ಎಂತ ಇಂಗ್ಲಿಷ್ ಮಾತಿನಲ್ಲಿ ಹೇಳುತ್ತಾರೆ. ಅದು ಹೆಚ್ಚುಂಟು. “ಪರೋಪಕಾರಾಯ ಮಿದಂ ಶರೀರಂ” ಎಂಬದು ನೀವು ಆಲೋಚಿಸುವದಿಲ್ಲ. ಸುಧಾರಣೆ ಹೊಂದಿದ ಮುಂಬಾಯಿ ಇಲಾಖಾ ಜಾತಿಗಳಲ್ಲಿ ಜನಸಂಖ್ಯೆ ಬಹು ಕಮ್ಮಿ. ಅಡಿಗೆ ಬಗ್ಯೆ ಜನ ಶಿಕ್ಕದೆ ಅವರು ಪಡುವ ಕಷ್ಟಗಳು ಹೇಳಿತೀರದು. ಬಾಕಿ ಅತ್ಯಾವಶ್ಯಕ ಕೆಲಸಗಳಿಗೂ ಜನಸಹಾಯ ಶಿಕ್ಕುವದಿಲ್ಲ. ಜನಸಂಖ್ಯೆ ಕಮ್ಮಿ ಇರುವ ಶಾಖೆಗಳು ಮತ್ತು ನಿಮ್ಮ ಸ್ತೋಮವೂ ಒಂದೇ ಆದರೆ ಅವರ ಅನೇಕ ಕಷ್ಟಗಳು ನಿಮ್ಮಿಂದ ನಿವಾರಣೆ ಆದೀತು. ಅವರ ಸಂಪರ್ಕದಿಂದ ನೀವು ಸುಧಾರಣೆ ಹೊಂದಬಹುದು. ಪ್ರಸಿದ್ಧಪಡಿಸದಿದ್ದರೆ ಪುನಹಾ ಹೋಗಿ ಅದೇ ಅಶಿಕ್ಷಿತ ಸಮೂಹದಲ್ಲಿ ಕೂಡಿದರೆ ಎಲ್ಲಾ ಪ್ರಯತ್ನ ನಿರರ್ಥಕವಾದೀತು.

ಗೌ. ಸಾ. ಒಂದು ಸಂಗತಿ ತಿಳಿಯಿತು. ಇನ್ನೊಂದು ತಿಳಿಯಲಿಲ್ಲ. ನಾವು ಸುಧಾರಣೆ ಹೊಂದುವದೆಂಬದು ಹ್ಯಾಗೆ? ಪರೋಪಕಾರಕ್ಕೆ ಬೀಳಬೇಕೆಂಬದು ನಿಜ.

ಸು. ಗ್ರ. ತಾವು ಈಗ ಮುಂಬಾಯಿಗೆ ಹೋಗುತ್ತಾ ಮೂರು ದಿವಸ ವ್ಯರ್ಥ ಉಪವಾಸ ತೆಗದು ದೇಹದಂಡನ ಮಾಡಿ ಕೊಳ್ಳುತ್ತೀರಷ್ಟೇ. ಸುಧಾರಣೆ ಹೊಂದಿದ ಮೇಲೆ ನೀವು ಬಹಳವಾಗಿ ಉಣ್ಣಬಹುದು. ನಿಮ್ಮ ಮಕ್ಕಳನ್ನು ಶೀಮೆಗೆ ಕಳುಹಿಸಿ ದೊಡ್ಡ ಪರೀಕ್ಷೆಗಳನ್ನು ಪಾಸ್‌ಮಾಡಿಸಿ ದೊಡ್ಡ ದೊಡ್ಡ ಉದ್ಯೋಗಗಳನ್ನು ಹೊಂದಬಹುದು. ಬಾಲವಿವಾಹ ಮಾಡದೆ ಇರಬಹುದು. ಹೀಗೆ ಅನೇಕ ವಿಧದಲ್ಲಿ ಸುಧಾರಣೆ ಹೊಂದಬಹುದು.

ಗೌ. ಸಾ. ಸರಿ. ಅದೆಲ್ಲಾ ನಾವು ನಮ್ಮಷ್ಟಕ್ಕೆ ಮಾಡಬಹುದಷ್ಟೇ. ಈಗ ನಮ್ಮಲ್ಲಿ ಅನೇಕ ತರುಣರು ದೇಹಾಭಿವೃದ್ಧಿ ವಗ್ಯೆರೆ ಮಾಡಿಕೊಂಡು ಸುಧಾರಣಾ ಮಾರ್ಗಕ್ಕೆ ಹೋಗುತ್ತಲಿದ್ದಾರೆ. ಬಾಯಿಗೆ “ಬೀಡಿ” ತಲೆಗೆ “ಕ್ರೊಫ್” ಎದೆಗೆ “ಓಪನ್ ಕೊಲ್ಲರ್” ತಲೆಗೆ “ಟೋಪಿ” ಕಾಲಿಗೆ “ಬೂಟ್ಸ್” ಇದೆಲ್ಲಾ ಮಾಡುತ್ತಾರೆ. “ಕೊರೊನೇಶನ್ ಕಪ್” ನಮಗೆ ಶಿಕ್ಕಿಯದೆ. ಮನೋವೃದ್ಧಿ ಬಗ್ಯೆ “ಹ್ಯಾಸ್ಕೂಲು” ಉಂಟು. ವ್ಯಾಪಾರ ಅಭಿವೃದ್ಧಿ ಬಗ್ಯೆ “ಬೇಂಕ್” ಉಂಟು. ಇದೆಲ್ಲಾ ಸಾಲದೆ? ಜಹಜಿನಲ್ಲಿ, ರೈಲ್ವೇ ಸ್ಟೇಶನುಗಳಲ್ಲಿ ತಿಂಡಿತೀನಿ ಬಗ್ಯೆ, “ಸಂಯುಕ್ತ ರೋಟಿ ಸರ್ಟಫಿಕೆಟ್” ಬೇಕೇ? ಆ ರೋಟಿ ಸಂಬಂಧ ನಮ್ಮ ಜಿಲ್ಲೆಯಲ್ಲಿ ಈಗ 2 ವರುಷಗಳಿಂದ ಎಲ್ಲಾ ತರದ ಅನಾಹುತಗಳು ಆದದ್ದು ತಮಗೆ ಗೋಚರ ಇರಬಹುದಷ್ಟೇ.

ಸು. ಗ್ರ. ಅದೆಲ್ಲಾ ನಮಗೆ ಠಾವುಕ ಅದೆ. ಅದಕ್ಕೆ ಕಾರಣವು ನಿಮ್ಮ “ಅವಿವೇಕವು”. ನಿಮಗೆ “ದೇವದರುಷನ” “ವ್ಯಾಪಾರ” ವಗ್ಯೆರೆ ಹಲವು ವಿಧಗಳಿಂದ ಹಣ ಘಳಿಸಲಿಕ್ಕೆ ಗೊತ್ತು ಇರುವದಾದರೂ ನಿಮ್ಮಲ್ಲಿ “ಏಕತ್ವ” ಇಲ್ಲ. “ಅವಿವೇಕ” ಹೆಚ್ಚುಂಟು. ನಿಮ್ಮಷ್ಟು ಜನಸ್ತೋಮವೂ, ಹಣವೂ, ಐಶ್ವರ್ಯವುಳ್ಳ ದೇವಸ್ಥಾನಗಳೂ ಇದ್ದರೆ ನಾವೇನೇನೆಲ್ಲಾ ಸುಧಾರಣಾ ಕ್ರಮಗಳನ್ನು ಏರ್ಪಡಿಸುತ್ತಿದ್ದೆವು? ಹಣ ನಿಮ್ಮಲ್ಲಿ, ಆಲೋಚನೆ ನಮ್ಮಲ್ಲಿ ಆಯಿತಷ್ಟೇ. ಮಾತಾಡಿ ಫಲವೇನು?

ಗೌ. ಸಾ. ಅದು ಒಪ್ಪಬೇಕಾದ ಮಾತು. ಆದರೆ ಸಂಯುಕ್ತ ರೋಟಿಯಿಂದ ಇದ್ದಷ್ಟು ಏಕತ್ವಕ್ಕೆ ಹಾನಿ ಬರುತ್ತದಷ್ಟೇ. “ವಿವೇಕ” ಹೆಚ್ಚಿದಂತೆ ತೋರುವದಿಲ್ಲವಷ್ಟೇ ಸ್ವಾಮಿ.

(ಸಶೇಷ)

ವಿದೇಶ ವೃತ್ತಾಂತ.

ಕ್ರಿಸ್ಟ್‌ಮಸ್ ಹಬ್ಬದ ದಿನ (ತಾ. ೨೫ರಲ್ಲು) ಪ್ರತಿವರ್ಷವೂ ಲಂಡನಿನಲ್ಲಿ ವರ್ತಮಾನ ಪತ್ರಿಕೆಗಳು ಪ್ರಕಟಿಸಲ್ಪಡುತ್ತಿದ್ದವು. ಆದರೆ ಈ ವರ್ಷ ತಾ. ೨೫ರಲ್ಲು ಲಂಡನಿನಲ್ಲಿ ಯಾವ ವರ್ತಮಾನಪತ್ರಗಳೂ ಪ್ರಕಟವಾಗುವದಿಲ್ಲ.

* * *

ತುರ್ಕಿಸ್ಥಾನದ ಮರ್ಸ್ವ ಎಂಬಲ್ಲಿ ಪ್ಲೇಗ್ ರೋಗವು ಸೋಂಕಿಯದೆಂಬದಾಗಿ ಬುಕಾರೆಸ್ಟಿನ ಒಬ್ಬ ಬಾತ್ಮೀದಾರರು ಬರದಿರುವರು.

* * *

ಅಮೇರಿಕದ ಜೊಸೆಫ್ ಗಿರ್‌ಸ್ಟ್ ಎಂಬವನು ಕೆಲಸ ಮಾಡದೆ ಮನೆಯಲ್ಲೇ ಇರಬೇಕೆಂಬ ಒಂದು ತೀರ್ಮಾನವನ್ನು ಈಚೆಗೆ ಅಲ್ಲಿಯ ಜಡ್ಜರು ಕೊಟ್ಟರು ಇಂತಹ ತೀರ್ಮಾನವು ಅಮೇರಿಕದ ಇತಿಹಾಸದಲ್ಲಿ ಮೊದಲನೇದಾಗಿದೆ. ಜೋಸೆಫ್ ಎಂಬವನು ಕಾಯಕಷ್ಟ ಮಾಡಿ ಹೊಟ್ಟೆ ಹೊರಕೊಳ್ಳುವಂಥವನು. ಇವನು ಹಣ ಇದ್ದ ಒಬ್ಬ ಹೆಂಗಸನ್ನು ಮದುವೆಯಾದನು. ಇವಳು ಈಚೆಗೆ ಗಂಡನ ಮೇಲೆ ಒಂದು ಪಿರ್ಯಾದು ದಾಖಲು ಮಾಡಿ ಗಂಡನು ಕೆಲಸಕ್ಕೆ ಹೋಗದ ಹಾಗೆ ಅವನಿಂದ ಮುಚ್ಚಳಿಕೆ ಬರಿಸಬೇಕೆಂದು ಜಡ್ಜರನ್ನು ಕೇಳಿಕೊಂಡಳು. ಜಡ್ಜರು “ನಿನ್ನ ಗಂಡನು ಮಿತಿಮೀರಿ ಕೆಲಸ ಮಾಡದ ಹಾಗೆ ಕಟ್ಟುಮಾಡಬೇಕೆಂತ ಕೇಳುತ್ತಿಯೋ?” “ಇಲ್ಲ, ಆ ಕೆಲಸವು ಅವನಿಗೆ ಒಪ್ಪುವಂಥಾದ್ದಲ್ಲ. ಆದ್ದರಿಂದ ಅವನು ಅದನ್ನು ನಿಲ್ಲಿಸಬೇಕು ಎಂದು ಕಟ್ಟು ಮಾಡಬೇಕು; ಅವನು ಎರಕ ಹೊಯ್ಯುವ ಕೆಲಸದವನು. ಕೆಲಸ ಬಹಳ ಒಳ್ಳೇದೇ ಸೈ. ಆದರೆ ಅವನು ತನಗೆ ಸಿಕ್ಕಿದ ಹಣದಿಂದ ಚನ್ನಾಗಿ ಕುಡಿದು ಮನೆಗೆ ಬಂದು ನನಗೆ ಹೊಡೆಯುತ್ತಾನೆ. ನನಗೆ ಬೇಕಾದಷ್ಟು ಹಣವಿದೆ. ಅದು ನನ್ನ ಮತ್ತು ಅವನ ಜೀವನ ಸಾಗಿಸಲಿಕ್ಕೆ ಸಾಕು” ಎಂಬದಾಗಿ ಅವನ ಹೆಂಡತಿಯು ಜಡ್ಜರಿಗೆ ಉತ್ತರ ಕೊಟ್ಟಳು. ಜಡ್ಜರು ಅವನು ಇನ್ನು ಮುಂದೆ ಕೆಲಸಕ್ಕೆ ಹೋಗದೆ ಮನೆಯಲ್ಲೇ ಇರಬೇಕೆಂಬ ತೀರ್ಮಾನವನ್ನು ಕೊಟ್ಟರು.

* * *

ಲಂಡನಿನ ಫುಲ್‌ಹ್ಯಾಂ ಎಂಬ ಸ್ಥಳದಲ್ಲಿ ಎಂದು ಕಾರ್ಖಾನೆಯಲ್ಲಿ ಗುಮಾಸ್ತನಾಗಿದ್ದ ೧೯ ವರ್ಷ ಪ್ರಾಯದ ವಿಲಿಯಂ ಬ್ರೌನ್ ಎಂಬವನು ಥೆಮ್ಸ್ ನದಿಯ ದಡದ ಮೇಲೆ ಸತ್ತು ಬಿದ್ದಿದ್ದನು. ಇವನ ಶವ ಪರೀಕ್ಷೆ ಕಾಲದಲ್ಲಿ ಇವನ ಅಂಗೀ ಜೇಬದಲ್ಲಿ ಮಿಸ್ ಪ್ಲಾರೆನ್ಸ್‌ಗ್ರೀನ್ ಹ್ಯಾಮ್ ಎಂಬವಳ ಒಂದು ಚಿತ್ರಪಟವೂ ಅವಳಿಗೆ ಬರೆದಿದ್ದ ಒಂದು ಪತ್ರವೂ ಸಿಕ್ಕಿತು. ಆ ಕಾಗದದಲ್ಲಿ “ಇನ್ನು ನನಗೆ ಜೀವಿಸಲು ಬೇಸರಿಕೆಯಾಗುತ್ತದೆ. ಇಗೋ, ಇದೇ ನಿನಗೆ ನನ್ನ ಕೊನೆಯ ಕಾಗದ; ನಿನ್ನನ್ನು ಕಾಣದೆ ಇರುವುದಕ್ಕಿಂತ ಸಾಯುವದೇ ಲೇಸು. ಆದುದರಿಂದ ಇಗೋ ಇದೇ ನನ್ನ ಅಂತ್ಯದ ಕಾಗದ” ಹೀಗೆಂದು ಬರೆದಿದ್ದಿತು. ಆ ಚಿತ್ರ ಪಟದ ಸಂಗಡ “ಈ ಪಟವನ್ನು ನನ್ನ ಶವದ ಜೊತೆಯಲ್ಲೇ ಇಟ್ಟು ಹೂಳಬೇಕೆಂದು ಬರೆದಿತ್ತು. ಮಿಸ್ ಪ್ಲಾರೆನ್ಸ್ ಗ್ರೀನ್ ಎಂಬಾಕೆಗೆ ಈ ಸಂಗತಿಯು ತಿಳಿದಾಕ್ಷಣ ಆಕೆಯು ತನ್ನನ್ನು ಮತ್ತೊಬ್ಬನಿಗೆ ಕೊಟ್ಟು ಲಗ್ನವಾಗುವ ಸಂದರ್ಭವು ಆತನಿಗೆ ತಿಳಿದುದ್ದರಿಂದ ಆತನು ಹೀಗೆ ಮಾಡಿರಬೇಕೆಂದೂ ಅವನು ತನ್ನನ್ನು ಲಗ್ನವಾಗಲು ಇಚ್ಛಿಸಿದನೆಂಬದನ್ನು ತಾನು ಭಾವಿಸಲೇ ಇಲ್ಲವೆಂದೂ ಹೇಳಿದಳು. ಜೂರಿಯವರು ಆತನು ಚಿತ್ತಭ್ರಮೆಯಿಂದ ಆತ್ಮಹತ್ಯ ಮಾಡಿಕೊಂಡನೆಂದು ತೀರ್ಮಾನಿಸಿದರು.

* * *

ಪಾರಿಸ್ ನಗರದಲ್ಲಿ ಚೆಲುವೆಯೆಂದು ಹೆಸರು ಪಡೆದ ಪ್ರಸಿದ್ಧ ನಾಟ್ಯಗಾರಳಾಗಿದ್ದ ಲಾನ್ಸಲ್ಮೆ ಎಂಬವಳ ಆಭರಣಗಳು ಕಳೆದ ತಿಂಗಳಲ್ಲಿ ಪಾರಿಸ್ ನಗರದಲ್ಲಿ ಏಲಂ ಮಾಡಲಾಯಿತು. ಒಂದು ಮುತ್ತಿನ ಕಂಠಿಯು ೩೦೧೨ ಪವನು ಅಂದರೆ ೪೫,೧೮೦ ರೂಪಾಯಿಗೆ ಬಿಕರಿಯಾಯಿತು. ಪಚ್ಚೆ ಮತ್ತು ವಜ್ರದ ಒಂದು ಪದಕವು ೯೫೦ ಪವನಿಗೂ, ಒಂದು ನೀಲ ಮಣಿಯ ಉಂಗುರವು ೪೦೨ ಪವನುಗಳಿಗೂ ಮತ್ತು ಎರಡು ವಜ್ರದ ಕೈಬಳೆಗಳು ೪೨೪ ಪವನುಗಳಿಗೂ ಹರಾಜು ಮಾಡಲ್ಪಟ್ಟಿತು.

* * *

ಯುದ್ಧವಾರ್ತೆ:—ತಾ. ೧೬ರಲ್ಲು ತುರ್ಕರ ನೌಕಾವಳಿಯು ಡರ್ಡೆನೆಲ್ಸ್ ಮತ್ತು ಇಂಬ್ರೊಸು ಎಂಬದರ ಮಧ್ಯೆ ಗ್ರೀಕರ ಯುದ್ಧ ನಾವೆಗಳಿಗೆ ಗುಂಡು ಹಾರಿಸಿತು. ಗ್ರೀಕರ ಕ್ರೂಝರ್ ಜೋರ್ಜಿಯೋ ಸೆವರೊಫ್ ಎಂಬ ನಾವೆಗೆ ಕೆಲವು ಗುಂಡುಗಳು ತಾಗಿದನಂತರ ಗ್ರೀಕರು ಪಿರಾಯುಸ್ ಎಂಬಲ್ಲಿಗೆ ಪಲಾಯಣ ತೆಗೆದರು ಎಂಬದಾಗಿ ತುರ್ಕರು ಹೇಳುವರು. ಆದರೆ ಗ್ರೀಕರು ತುರ್ಕರು ಕೋಟೆಗಳ ಮಧ್ಯೆ ತಮ್ಮನ್ನು ಕಾಪಾಡಿಕೊಂಡು ಕಡೆಗೆ ಹಿಂದಕ್ಕೆ ಓಡಿದರು. ತಮ್ಮಲ್ಲಿ ೫ ಮಂದಿ ಹತರಾದರೆಂಬದಾಗಿ ಹೇಳುವರು.

ಸಂಧಾನ ಸಭೆಯು ಕೂಡಿರುವುದು. ಸಭೆಯಲ್ಲಿ ನಡೆದ ವಿಷಯುಗಳೆಲ್ಲವೂ ಗುಪ್ತವಾಗಿಯೇ ಇಡಲ್ಪಡುವುದು. ಗ್ರೀಕರು ತಾತ್ಕಾಲಿಕ ಯುದ್ಧ ನಿಲ್ಲಿಸುವ ಪತ್ರಿಕೆಗೆ ಸಹಿ ಮಾಡದಿರುವುದರಿಂದ ತುರ್ಕರ ಪ್ರತಿನಿಧಿಗಳು ಈ ವಿಷಯ ಹ್ಯಾಗೆ ನಡಕೊಳ್ಳಬೇಕೆಂಬದಾಗಿ ತುರ್ಕೀ ಸರಕಾರದವರನ್ನು ಕೇಳಿರುವರು. ಅಲ್ಲಿಂದ ತಕ್ಕ ಸಲಹೆಗಳು ಬರುವ ವರೆಗೆ ತುರ್ಕ ಪ್ರತಿನಿಧಿಗಳು ಮುಂದರಿಯಲಿಕ್ಕಾಗುವುದಿಲ್ಲವೆಂದು ಹೇಳಿದುದರಿಂದ ಸಭೆಯು ತಾ. ೧೯ಕ್ಕೆ ಹಿಂದಕ್ಕಿಡಲ್ಪಟ್ಟಿತು. ಬಾಲ್ಕಾನ ಸಂಸ್ಥಾನಗಳ ಸಂಧಾನ ಶರ್ತಗಳನ್ನು ತಮಗೆ ಕೈವರ್ತಿಸಬಹುದೆಂದು ತುರ್ಕ ಪ್ರತಿನಿಧಿಗಳು ಕೇಳಿಕೊಂಡರು. ಆದರೆ ಯುದ್ಧ ತೊಡಗಿರುವ ನಾಲ್ಕು ಸಂಸ್ಥಾನಗಳೊಡನೆ ತುರ್ಕಿಗೆ ಸಂಧಾನವಾಗುವದೆ ಅಸಂದರ್ಭವಾಗುವುದಾದರೆ ಸಂಧಾನವು ಎಂದೂ ಸಂಧಾನವಲ್ಲ. ಆದ್ದರಿಂದ ಈ ವಿಷಯ ತುರ್ಕೀ ಸರಕಾರದ ಸಲಹೆಗಳು ಬರುವ ವರೆಗೆ ತಾವು ಶರ್ತಗಳನ್ನು ಕೊಡಲಾರೆವೆಂದು ಬಾಲ್ಕಾನ ಸಂಸ್ಥಾನಗಳವರು ಹೇಳಿರುವರು.

ಗ್ರೀಕರು ತಾ. ೧೮ರಲ್ಲು ಬಿಜಾನಿ ಕೋಟೆಗೆ ಗುಂಡು ಹಾರಿಸಲು ಪ್ರಾರಂಭಿಸಿದರು. ತುರ್ಕರು ಘರು ಗುಂಡು ಹಾರಿಸಲಿಲ್ಲ. ಕೋಟೆಯೊಳಗಿನ ಮದ್ದು ತುಂಬಿಸಿಟ್ಟಿದ್ದ ಕೊಠಡಿಯು ಸಿಡಿದು ಹೋಗಿರುವುದು. ಕೋಟೆಯು ಬೇಗನೇ ವಶವಾದಿತೆಂತ ನಿರೀಕ್ಷಿಸಲ್ಪಟ್ಟದೆ. ಈ ಕೋಟೆಯು ಗ್ರೀಕರ ವಶವಾದರೆ ಜೆನೀನಕ್ಕೆ ಹೋಗಲು ಮಾರ್ಗ ತೆರೆದಂತಾಗುವದು.

ತಾ. ೧೯ರಲ್ಲು ಸಂಧಾನ ಸಭೆ ಕೂಡಿದಾಗ ತುರ್ಕರ ಪ್ರತಿನಿಧಿಗಳು ತುರ್ಕೀ ಸರಕಾರದಿಂದ ಇನ್ನೂ ತಕ್ಕ ಸಲಹೆ ಬಾರದಿರುವುದರಿಂದ ಸಭೆಯನ್ನು ಶನಿವಾರದ ವರೆಗೆ ಮುಂದರಿಸಿಡಬೇಕೆಂದು ಹೇಳಿದರು. ಇದರಿಂದ ಇವರು ಬೇಕೆಂತಲೇ ಹೀಗೆ ವಿಳಂಬ ಮಾಡುತ್ತಾರೆಂಬದಾಗಿ ಬಾಲ್ಕಾನ್ ಸಂಸ್ಥಾನಗಳ ಪ್ರತಿನಿಧಿಗಳು ಭಾವಿಸಿ ತುರ್ಕ ಪ್ರತಿನಿಧಿಗಳ ಸೂಚನೆಗಳೊಂದಕ್ಕೂ ಈ ವರೆಗೆ ಒಪ್ಪಲಿಲ್ಲ.

ಜನೀನದ ಬಳಿಯಲ್ಲಿ ತುರ್ಕರಿಗೂ ಗ್ರೀಕರಿಗೂ ಆದ ಯುದ್ಧದಲ್ಲಿ ಗ್ರೀಕರು ಸೋತುಹೋದರು. ಯುದ್ಧವು ೬ ತಾಸುಗಳ ಸಮಯ ನಡೆಯಿತು. ಗ್ರೀಕರಲ್ಲಿ ೪೦೦ ಮಂದಿ ಹತರಾದರು. ೧೨೫ ಮಂದಿ ಘಾಯವೊಡೆದರು ಎಂಬದಾಗಿ ತುರ್ಕರು ಪ್ರಕಟಿಸಿರುವರು.

ತಾ. ೨೦:—ತಾ. ೧೬ರಲ್ಲು ಡರ್ಡೆನೆಲ್ಸಿನಲ್ಲಿ ಆದ ಯುದ್ಧದಲ್ಲಿ ತುರ್ಕರ ಎಡ್ಮಿರಲ್ ಹಲಿಲ್ ಪಾಶ ಮತ್ತು ಇತರ ೪ ಹುದ್ದೆದಾರರು ಹತರಾದರು. ತುರ್ಕರ ಯುದ್ಧ ಹಡಗವು ಹಾಳಾಯಿತು. ಇತರ ೩ ತುರ್ಕರ ಯುದ್ಧ ಹಡಗಗಳು ಪೆಟ್ಟು ತಿಂದಿರುವುದು ಎಂಬದಾಗಿ ಗ್ರೀಕರು ಪ್ರಕಟಿಸಿರುವರು.

ತುರ್ಕರು ಮಿಥೇಲೇನದಲ್ಲಿ ಕ್ರೈಸ್ತರನ್ನು ಕೊಂದು ಹಾಕಿದರೆಂದೂ ಗ್ರೀಕರು ತುರ್ಕರನ್ನು ಹಿಂದಟ್ಟುತ್ತಿದ್ದಾರೆಂದೂ ವಾರ್ತೆ ಬಂದಿರುವುದು.

ಬಲ್ಗೇರಿಯದ ಪೆರ್ಡಿನಾಂದ್ ಅರಸರು ಮಸೆಡೋನಿಯ ಮತ್ತು ತೆರೇಸದಲ್ಲಿ ಪ್ರಯಾಣಮಾಡುತ್ತಿರುವರು. ತಾ. ೨೦ರಲ್ಲು ಸಲೋನಿಕಕ್ಕೆ ಹೋಗಿ ಗ್ರೀಕ ಅರಸರಿಗೆ ಭೇಟಿಕೊಟ್ಟು ಉಭಯತರೂ ಒಟ್ಟಿಗೆ ತಮ್ಮ ಭಾವಚಿತ್ರಗಳನ್ನು ತೆಗೆಯಿಸಿದರು.

ಬಾಲ್ಕಾನ್ ಸಂಸ್ಥಾನಗಳೆಲ್ಲವೂ ಬಹಳ ಮಿತ್ರತ್ವದಲ್ಲಿದೆಂದೂ ಸಂಧಾನ ಶರ್ತಗಳನ್ನು ಬಹಳ ಚಲೋ ರೀತಿಯಿಂದ ತಯಾರಿಸಿರುವರೆಂದೂ ತಯಾರಿಸಿದ ಶರ್ತಗಳನ್ನು ಬದಲಾಯಿಸುವ ಹಾಗೆ ಇಲ್ಲವೆಂದೂ ತಿಳಿದು ಬರುತ್ತದೆ.

ಆಸ್ಟ್ರೀಯದವರ ವ್ಯೂಹ ರಚನೆಯು ಪೂರ್ಣವಾಗಿ ತೀರಿತು.

ತಾ. ೨೧:—ಶನಿವಾರ ದಿನ ಕೂಡಿದ ಸಂಧಾನ ಸಭೆಯಲ್ಲಿ ಗ್ರೀಕರು ತಾತ್ಕಾಲಿಕ ಯುದ್ಧನಿಲ್ಲಿಸುವ ವಿಷಯವಾಗಿಯೂ ಅದ್ರಿನೋಪಲಿನ ವಿಷಯವಾಗಿಯೂ ಚರ್ಚಿಸಲಾಯಿತು. ಬಾಲ್ಕಾನ ಸಂಸ್ಥಾನಗಳು ಮುತ್ತಿಗೆಹಾಕಿರುವ ಎಲ್ಲಾ ಪಟ್ಟಣಗಳಿಗೆ ಆಹಾರವನ್ನು ಒದಗಿಸಿ ಕೊಡುವರೆ ಅಪ್ಪಣೆ ಕೊಡಬೇಕೆಂಬದಾಗಿ ತುರ್ಕರ ಅಪೇಕ್ಷೆಯಾಗಿದೆ.

ಅದ್ರಿನೋಪಲಿನ ತುರ್ಕರ ಸೈನಿಕರಿಗೆ ಆಹಾರವನು ಒದಗಿಸಿಕೊಡುವ ವಿಲೆವಾರಿ ಮಾಡದೆ ತಾತ್ಕಾಲಿಕ ಯುದ್ಧ ನಿಲ್ಲಿಸಿದಕ್ಕಾಗಿ ತುರ್ಕಿ ಸೈನೀಕರೊಳಗೆ ತುರ್ಕಿ ಸರಕಾರದ ಕಡೆಗೆ ವೈಮನಸ್ಸು ಉಂಟಾಗಿದೆ. ತುರ್ಕಿ ಸೈನ್ಯದ ಹುದ್ದೆದಾರರು ಸಂಧಾನ ಸಭೆಯನ್ನು ನಿಲ್ಲಿಸಿ ಯುದ್ಧವನ್ನು ಪುನಃ ತೊಡಗಬೇಕೆಂಬ ಕುತೂಹಲದಲ್ಲಿರುವರು.

ಪ್ರಿಜಿರೆಂಡ್ ಎಂಬಲ್ಲಿಯ ಆಸ್ಟ್ರೀಯ ಕೌನ್ಸೆಲ್ಲರನ್ನು ಸರ್ವಿಯರು ಸರಿಯಾಗಿ ನಡಿಸಲಿಲ್ಲವೆಂಬದಾಗಿ ಆಸ್ಟ್ರೀಯದವರು ಈ ವಿಷಯ ಸರ್ವಿಯರ ಮೇಲೆ ಬಹಳವಾಗಿ ಸಿಟ್ಟುಗೊಂಡು ತನಖಿ ನಡಿಸುವರೆ ತಮ್ಮ ಪ್ರತಿನಿಧಿಯನ್ನು ಪ್ರಿಜಿಲೆಂಡಿಗೆ ಕಳುಹಿಸಿದ್ದರು. ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದ ವಾರ್ತೆಯು ಅತ್ಯುಕ್ತಿಯಾಗಿತ್ತೆಂದೂ ಸರ್ವಿಯರಿಂದ ಕೌನ್ಸೆಲ್ಲರಿಗೆ ತುಸ ತೊಂದರೆಯಾಗಿದೆಂದೂ ಇವರು ತನಖಿನಡಿಸಿ ಪ್ರಕಟಿಸಿದ್ದರಿಂದ ಸರ್ವಿಯದ ಮಂತ್ರಿಯವರು ಆಸ್ಟ್ರೀಯ ಮಂತ್ರಿಯ ಕೂಡೆ ಈ ವಿಷಯ ಕ್ಷಮಾಪಣೆ ಕೇಳಿದ್ದಾರೆ.

ಅಲ್ಬಾನಿಯಕ್ಕೆ ಸ್ವಸತ್ತಾತ್ಮಕ ಅಧಿಕಾರವನ್ನು ಸುಲ್ತಾನರ ಕೈಕೆಳಗೆ ಕೊಡುವುದೆಂದೂ ಸುಲ್ತಾನರು ಮಾತ್ರ ಈ ವಿಶಯ ಶ್ರೇಷ್ಠರಾಜ್ಯಗಳ ಕೆಳಗೆ ಇರಬೇಕೆಂದೂ ಶ್ರೇಷ್ಠ ರಾಜ್ಯಗಳ ರಾಯಭಾರಿಗಳು ಆಲೋಚಿಸಿರುವರು. ಸರ್ವಿಯರಿಗೆ ಮಾತ್ರ ಅಲ್ಬಾನಿಯರ ಬಂದರಗಳಲ್ಲಿ ಪೂರ್ಣ ಸ್ವಾತಂತ್ರ್ಯವು ಕೊಡಲ್ಪಡಬೇಕೆಂಬದಾಗಿ ಅವರ ಆಲೋಚನೆಯಾಗಿದೆ.

ಮಿಥೆಲೇನದ ತುರ್ಕಿ ಸೈನೀಕರು ತಾ. ೨೨ರಲ್ಲು ಗ್ರೀಕರಿಗೆ ಶರಣಾಗತರಾದರು. ಅನಂತರ ಎಪಿರಸಿನ ಗ್ರೀಕರು ಗೊರಿಟಜ ಎಂಬ ಪಟ್ಟಣವನ್ನು ಹಿಡಕೊಂಡರು. ಜನೀನವನ್ನು ಗ್ರೀಕರು ಬೇಗನೇ ಹಿಡಕೊಳ್ಳುವ ಸಂಭವವಿದೆ.

ಉತ್ತರ ಹಿಂದೂಸ್ಥಾನ.

ಇದೇ ತಾ. ೧೪ಕ್ಕೆ ಅಂತ್ಯವಾಗುವ ವಾರದಲ್ಲಿ ೨೮೭೬ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೨೮೨೫ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ೫೦೦; ಮದ್ರಾಸ್ ೨೪೨; ಬಂಗಾಳ ೮; ಬಿಹಾರ್ ೧೮೪; ಸಂಯುಕ್ತ ಸಂಸ್ಥಾನ ೧೦೪೯; ಪಂಜಾಬು ೬೬; ಬರ್ಮ ೧೬; ಮಧ್ಯಸಂಸ್ಥಾನ ೧೧; ಮೈಸೂರು ೧೦೦; ಹೈದರಾಬಾದ್ ೪೧೯; ಮಧ್ಯ ಹಿಂದೂಸ್ಥಾನ ಮತ್ತು ರಜಪುತಾನ ೨೧೫ ಮರಣಗಳಾದವು.

ಕಲ್ಕತ್ತಾ ಪಟ್ಟಣದಲ್ಲಿ ಆನಂದ ಮೋಹನ್ ರೋಯಿ ಎಮ್. ಎ. ಎಂಬ ಒಬ್ಬ ಜಮೀನುದಾರನೂ ಜೀವನಕೃಷ್ಣ ಸರ್ಕಾರ್ ಎಂಬವನೂ ಸೇರಿ ಕರೆನ್ಸಿನೋಟುಗಳನ್ನು ತಯಾರುಮಾಡಿದ್ದರೆಂಬ ಮೊಕದಮೆಯು ಒಂದು ವರುಷದಿಂದ ತನಿಖೆಯಾಗುತ್ತಿದ್ದು ಕಳೆದವಾರ ಮೇಜಿಸ್ಟ್ರೇಟರು ಮೊದಲನೇ ಅಪರಾಧಿಗೆ ೫ ವರುಷವೂ ಎರಡನೇಯವನಿಗೆ ೪ ವರುಷವೂ ಕಠಿಣ ಸಜಾವಿಧಿಸಿದರು.

ಬೇಂಡ್ಸ್ ಮತಾರಾಮ್ ಯುಗಾಂತರ್ ಮತ್ತು ಯುಗಾಂತರ್ ಎಂಬ ಬಂಗಾಳಿ ಭಾಷೆಯಲ್ಲಿ ಪ್ರಕಟವಾಗುವ ಎರಡು ಪಹಿಗಳಲ್ಲಿ ರಾಜದ್ರೋಹಕರವಾದ ಲೇಖನಗಳು ಇವೆ ಎಂಬದರಿಂದ ಸರಕಾರದವರು ಅದಕ್ಕೆ ಮುಟ್ಟುಗೋಲು ಹಾಕಿದ್ದಾರೆ.

ತೋಮಸ್ ಕುಕ್ ಎಂಡ್ ಸನ್ಸ್ ಎಂಬ ಕಂಪೆನಿಯಲ್ಲಿ ಬೇಂಕ್ ಇಲಾಖೆಯ ಅಸಿಸ್ಟಾಂಟ್ ಖಜಾಂಜಿಯಾದ ಬೆಪಿನ್ ಬಿಹಾರಿ ಚಕ್ರವರ್ತಿಯವರು ಸುಮಾರು ೨೦,೦೦೦ ರೂಪಾಯಿ ಸ್ವತಃ ಉಪಯೋಗಿಸಿಕೊಂಡಿದ್ದಾರೆಂಬದಾಗಿ ಆಪಾದಿಸಲ್ಪಟ್ಟಿರುವರು.

ಮುಂಬಾಯಿ ಗವರ್ನರರಾಗಿ ಸರ್ ಎಫ್, ಪೊನ್ಸೆಂಬಿಯವರು ನೇಮಿಸಲ್ಪಡುತ್ತಾರೆಂಬ ವಾರ್ತೆ ನಿರಾಧಾರವಾದದ್ದು ಎಂದು ತಿಳಿದುಬರುತ್ತದೆ.

ಸುಂದರದಾಸ ಎಂಬ ಹೆಸರಿನವನು ಕಲ್ಕತ್ತೆಯ ಹಾಜಿ ಖಾನುಮೂಸ ಎಂಬ ಕಂಪೆನಿಯ ಕರಾಚಿಯ ಬ್ರೇಂಚ್ ಆಫೀಸಿನ ಪ್ರತಿನಿಧಿಯೆಂದು ಹೇಳಿ 'ಪೀಪ್‌ಲ್ ಬೇಂಕ್ ಆಫ್ ಇಂಡಿಯ' ಎಂಬ ಬೇಂಕಿನ ಮೇನೇಜರರಿಗೆ ಒಂದು ಹುಂಡಿಯನ್ನು ಕೊಟ್ಟು ಅವರಿಂದ ೧೦ ಸಾವಿರ ರೂಪಾಯಿ ಪಡಕೊಂಡು ಹೋದನು. ಕೆಲವು ದಿವಸದನಂತರ ಪೀಪ್‌ಲ್ ಬೇಂಕ್ ಆಫ್ ಇಂಡಿಯದ ಮೇನೇಜರರು ಕಲ್ಕತ್ತೆಯ ಖಾನುಮೂಸ ಕಂಪೆನಿಯವರ ಕೂಡೆ ಈ ವಿಷಯವನ್ನು ತಿಳಿಸಲು ಅವರು ತಮಗೆ ಕರಾಚಿಯಲ್ಲಿ ಬ್ರೇಂಚ್ ಆಫೀಸ್ ಇಲ್ಲವೆಂದು ಹೇಳಿದ್ದರಿಂದ ಈಗ ಈ ಮೋಸಕೃತ್ಯವು ಪೋಲೀಸಿನವರಿಗೆ ವರದಿ ಆಗಿರುವದು.

ಮುರ್ಶಿದಾಬಾದಿನ ಒಂದು ಗ್ರಾಮದಲ್ಲಿ ತಾ. ೧೮ರಲ್ಲು ದರೋಡೆಯಿತರು ಒಬ್ಬ ಬಂಗಾಳಿ ಹೆಂಗಸಿನ ಮನೆಗೆ ನುಗ್ಗಿ ಅವಳ ಇಬ್ಬರು ಸೇವಕರನ್ನು ಕೊಂದು, ಹೆಂಗಸಿನ ಕೊರಳು ಹಿಸಿಕಿ ೫೦೦೦ ರೂಪಾಯಿ ಕ್ರಯ ಬಾಳಬಹುದಾದ ಆಭರಣಗಳ ಸಹಿತ ಪರಾರಿಯಾಗಿರುವರು.

ಹಿಂದೂಸ್ಥಾನದ ಉಪಸೆಕ್ರಟರಿಯಾಗಿರುವ ಮೆ| ಮೊಂಟೇಗರವರು ಈ ವಾರ ಕಲ್ಕತ್ತೆಯ ಸರಕಾರ ಮಂದಿರದಲ್ಲಿ ಅತಿಥಿಯಾಗಿರುವರು.

ಮಿಡ್ನಾಪುರದ ಮೊಕದಮೆಯಲ್ಲಿ ಪೋಲಿಸ್ ಹರವಡಿಗನಾಗಿದ್ದ ಅಬ್ದುಲು ರಹಿಮಾನನ ಮನೆಯೊಳಗೆ ಯಾರೋ ದುಶ್ಮಾನರು ಒಂದು ಸಿಡಿಮದ್ದನ್ನು ಇಟ್ಟಿದ್ದರು. ಅದು ಅವನ ಮಗಳು ಮಲಗಿದ್ದ ಕೋಣೆಯಲ್ಲಿ ಸಿಡಿಯಿತು. ಆದರೆ ಅವಳಿಗೆ ದೈವವಶಾತ್ ಅಪಾಯವಾಗಲಿಲ್ಲ.

ಬಂಗಾಳದ ಗವರ್ನರರಾಗಿರುವ ಕಾರ್ಮಿಖಯೇಲ್ ಪ್ರಭುಗಳವರು ಬಂಗಾಳದ ಆಸ್ಯಾಟಿಕ್ ಸೊಸ್ಯಾಟಿಯ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು.

ಮಕ್ಕಾ ಜಾತ್ರೆಯಿಂದ ಹಿಂದಿರುಗಿದ ೧೭,೦೦೦ ಮಂದಿ ಯಾತ್ರಸ್ಥರಲ್ಲಿ ೫೪ ಮಂದಿಗೆ ಸಿಡುಬುರೋಗ ತಗಲಿರುವದು.

ಗ್ಲೆಸ್‌ಸೊನ್ನರ್ ಪ್ರಭುಗಳವರು ಮುಂಬಾಯಿ ಗವರ್ನರರಾಗಿ ನೇಮಿಸಲ್ಪಡುವರೆಂಬ ಒಂದು 'ಹೊಸ ವಾರ್ತೆ ಹಬ್ಬಿತ್ತು. ಈ ವಾರ್ತೆಗೂ ಆಧಾರವಿಲ್ಲ. ಆದರೆ ಪ್ರಧಾನ ಮಂತ್ರಿಯವರಾದ ಮೆ| ಅಸ್ಕ್ವಿತರವರ ಭಾವನೆಂಟರಾದ ಸರ್ ಎಡ್ವರ್ಡ್ ಟೆನ್ನಾಂಟರವರು ಮುಂಬಾಯಿ ಗವರ್ನರರಾಗಿ ನೇಮಿಸಲ್ಪಡುವರೆಂಬದಾಗಿ 'ಪಾಯೊನಿಯರ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಒಟ್ಟಾರೆ ಮುಂಬಾಯಿ ಗವರ್ನರರಾಗಿ ಯಾರು ಬರುವರೆಂಬದಾಗಿ ಇನ್ನೂ ತಿಳಿದುಬರಲಿಲ್ಲ.

ಕೊಹತಿನಿಂದ ರಾವಲ್‌ಪಿಂಡಿಗೆ ರೈಲ್ವೇ ಬಂಡಿಯು ಹೊರಡಲಿಕ್ಕಿರುವಾಗ ಒಬ್ಬ ರೈಲ್ವೇ ಕೂಲಿಯವನು ಬಂಡಿಗೆ ಹಾಕಲು ರೈಲ್ವೇ ಹಣವನ್ನು ತಂದನು. ಕೂಡ್ಲೇ ನಿಲ್ದಾಣದಲ್ಲಿ ನಿಂತಿದ್ದ ಒಬ್ಬನು ಅವನನ್ನು ಹೆದರಿಸಿ ಕೋವಿ ತೋರಿಸಿದ್ದರಿಂದ ಅವನು ಹಣವನ್ನು ಅಲ್ಲಿಯೇ ಹಾಕಿ ಓಡಿಹೋದನು. ಅನಂತರ ಅಸಿಸ್ಟಾಂಟ್ ಸ್ಟೇಶನ್‌ಮಾಸ್ತರರೂ ಮತ್ತೊಬ್ಬನೂ ಹಣವನ್ನು ಎತ್ತಿ ಗಾರ್ಡನಿಗೆ ಕೊಡಹೋಗಲು ಕೆಲವರು ಸ್ಟೇಶನ್ ಮಾಸ್ತರರ ಮೇಲೆ ಬಿದ್ದು ಅವರಿಗೆ ಹೊಡೆದು ಸುಮಾರು ೩೦೦ ರೂಪಾಯಿ ಎತ್ತಿಕೊಂಡು ಓಡಿಹೋದರು.

ಹಿಂದೂಸ್ಥಾನದ ಉಪ ಸೆಕ್ರಟರಿಯವರಾದ ಮೆ| ಮೊಂಟೇಗರವರು ತಾ. ೨೦ರಲ್ಲು ಕಲ್ಕತ್ತೆಗೆ ಚಿತ್ತೈಸಿದರು. ಅಂದೇ ಸಾಯಂಕಾಲ ಕಲ್ಕತ್ತೆಯ ಕ್ಲಬ್ಬಿನವರು ಅವರನ್ನೂ ಸರ್ ಕೃಷ್ಣಗುಪ್ತರವರನ್ನೂ ಆಮಂತ್ರಿಸಿದರು. ಮೆ| ಮೊಂಟೇಗರವರು ಕ್ಲಬ್ಬಿನಲ್ಲಿ ಚಿತ್ತೈಸಿದಾಗ ಕ್ಲಬ್ಬಿನವರು ಅವರನ್ನು ಸ್ವಾಗತ ಮಾಡಿಕೊಂಡರು. ಮೆ| ಮೊಂಟೇಗರವರು ತಾನು ಹಿಂದೂಸ್ಥಾನದಲ್ಲಿ ಭಾಷಣ ಕೊಡುವುದಿಲ್ಲವೆಂಬ ಕ್ರಮವನ್ನು ಅನುಸರಿಸಬೇಕಾದ್ದರಿಂದ ಈ ರಾತ್ರಿಯಲ್ಲಿಯೂ ಅದೇ ಕ್ರಮವನ್ನು ಅನುಸರಿಸಬೇಕಾಗಿಯದೆಂದೂ ನೀವು ನನ್ನನ್ನು ಆದರಪೂರ್ವಕವಾಗಿ ಆಮಂತ್ರಿಸಿದಕ್ಕೆ ಕೃತಜ್ಞನಾಗಿದ್ದೇನೆಂದೂ ಹೇಳಿದರು.

ಆಗ್ರದಲ್ಲಿ ಮಿಸೆಸ್ ಕ್ಲಾರ್ಕಳನ್ನು ಕೊಂದ ಮೊಕದಮೆಯಲ್ಲಿ ಅನುಮಾನಿಸಲ್ಪಟ್ಟ ಇಬ್ಬರು ತಾ. ೨೧ರಲ್ಲು ಆಗ್ರ ಸಿಟಿಯಲ್ಲಿ ಹಿಡಿಯಲ್ಪಟ್ಟರು. ಈ ಕೊಲೆಯಲ್ಲಿ ಮಿಸೆಸ್ ಕ್ಲಾರ್ಕಳ ಗಂಡನಾದ ಲೆಪ್ಟನೆಂಟ ಕ್ಲಾರ್ಕನೂ ಮತ್ತು ಮಿಸೆಸ್ ಫಲ್ಹಾಮಳೂ ಸೇರಿದ್ದಾರೆಂಬದಾಗಿ ಕೈದು ಮಾಡಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ. ವಿಚಾರಣೆಯು ಪ್ರಾರಂಭವಾಗಿಯದೆ. ಮಿಸೆಸ್ ಫಲ್ಹಾಮಳಿಗೂ ಲೆಪ್ಟನೆಂತ್ ಕ್ಲಾರ್ಕನಿಗೂ ಸ್ನೇಹಬೆಳದ್ದರಿಂದ ಮೊಡಲಾಗಿ ಈ ಇಬ್ಬರೂ ಕೂಡಿ ಮೆ| ಫಲ್ಹಾಮರಿಗೆ ವಿಷಪ್ರಯೋಗಮಾಡಿ ಕೊಂದರೆಂಬದಾಗಿ ಸರಕಾರ ಕಡೆಯ ಸಾಕ್ಷಿಗಾರರ ವಾಜ್ಮೂಲದಿಂದಲೂ ಇವರ ಮನೆಯಲ್ಲಿ ಸಿಕ್ಕಿದ ಕಾಗದ ಪತ್ರಾದಿಗಳಿಂದಲೂ ತಿಳಿದುಬರುತ್ತದೆ. ಅನಂತರ ಲೆಪ್ಟನೆಂತ ಕ್ಲಾರ್ಕನು ತನ್ನ ಹೆಂಡತಿಯನ್ನೇ ಮಿಸೆಸ್ ಫಲ್ಹಾಮಳಿಗಾಗಿ ಕೊಲ್ಲಿಸಿರಬೇಕೆಂದು ಆಪಾದಿಸಲ್ಪಟ್ಟಿದ್ದಾನೆ. ಲೆಪ್ಟನೆಂತ ಕ್ಲಾರ್ಕನು ಆಯಾ ಔಷಧಿ ಅಂಗಡಿಗಳಿಂದ ಈ ಉದ್ದೇಶಕ್ಕಾಗಿ ಕೊಂಡುಕೊಂಡ ವಿಷಪದಾರ್ಥಗಳ ಲೆಕ್ಕವೂ ಕೋರ್ಟಿಗೆ ಹಾಜರಾಗಿರುವುದು.

ವ್ಯಾಸರಾಯಿ ಪ್ರಭುಗಳ ಮೇಲೆ ನಡಿಸಿದ ಸಿಡಿಮದ್ದಿನ ತೋಟೆಯ ಅತ್ಯಾಚಾರವು.—ತಾ. ೨೩ರಲ್ಲು ವ್ಯಾಸರಾಯರವರ ಸ್ಪೆಶ್ಯಲ್ ಟ್ರೈನ್ ಡಿಲ್ಲಿಯ ಸೆಂಟ್ರಲ್ ಸ್ಟೇಶನಿಗೆ ತಲಪಿತು. ವ್ಯಾಸರಾಯರನ್ನು ಸ್ವಾಗತಮಾಡಿಕೊಳ್ಳುವರೆ ದೊಡ್ಡ ಜನಸಂದಣಿಯು ರೈಲ್ವೆ ನಿಲ್ದಾಣದಲ್ಲಿ ಕೂಡಿತ್ತು. ಪಂಜಾಬಿನ ಲೆಪ್ಟನೆಂಟ ಗವರ್ನರ್, ಕಾಶ್ಮೀರದ ಮಹಾರಾಜ, ಡಿಲ್ಲಿಯ ಚೀಫ್ ಕಮಿಶನರ್ ಶ್ರೇಷ್ಟನ್ಯಾಯನಿರ್ಮಾಣಕ ಸಭೆಯ ಮೆಂಬರರು ಮೊದಲಾದ ಹುದ್ದೆದಾರರೂ ಕೂಡಿದ್ದರು. ಡಿಲ್ಲಿ ಮುನಿಸಿಪಾಲಿಟಿಯವರು ವ್ಯಾಸರಾಯರವರನ್ನು ಸ್ವಾಗತಮಾಡಿಕೊಂಡು ಬಹುಮಾನ ಪತ್ರವನ್ನು ಓದಿದರು. ವ್ಯಾಸರಾಯರವರೂ ತಕ್ಕ ಉತ್ತರವನ್ನು ದಯಪಾಲಿಸಿದರು. ಅಲ್ಲಿಂದ ಮೆರವಣಿಗೆ ಹೊಂಟು ಚಂದನಚೌಕಕ್ಕೆ ಹೋಗುತ್ತಲೇ ಒಂದು ಮನೆಯಿಂದ ಯಾರೋ ವ್ಯಾಸರಾಯರಿಗೆ ಗುರಿಇಟ್ಟು ಒಂದು ಬೋಂಬನ್ನು ಬಿಸಾಡಿದರು. ಬೋಂಬು ವ್ಯಾಸರಾಯರ ತೋಳಿಗೆ ತಾಗಿತು, ಹೆಚ್ಚಿನ ಪೆಟ್ಟಾಗಲಿಲ್ಲ ಆದರೆ ವ್ಯಾಸರಾಯರ ಹಿಂದಗಡೆ ಇದ್ದ ಒಬ್ಬ ಜಮೇದಾರನು ಇದರಿಂದ ಕೊಲ್ಲಲ್ಪಟ್ಟನು. ಇನ್ನೊಬ್ಬನಿಗೆ ೮ ಗಾಯಗಳಾದವು. ವ್ಯಾಸರಾಯರು ಕೂಡ್ಲೇ ಆನೆಯಿಂದ ಇಳಿಸಲ್ಪಟ್ಟು ಮೋಟೋರ್ ಗಾಡಿಯಲ್ಲಿ ಆಸ್ಪತ್ರಿಗೆ ಹೋದರು. ವ್ಯಾಸರಾಯರ ಪತ್ನಿಯವರು ವ್ಯಾಸರಾಯರ ಮಂದಿರಕ್ಕೆ ಹೋದರು. ಮೆರವಣಿಗೆಯನ್ನು ಸರ್ ಗ್ಯಾಪ್ಲಿಟ್ ವುಡ್ ವಿಲ್ಸನರು ನಡಿಸಿದರು. ಪೋಲೀಸಿನವರು ಕೂಡ್ಲೇ ಆ ಮನೆಯನ್ನು ಸುತ್ತಿ ಕೆಲವು ಮಂದಿಯನ್ನು ಕೈದು ಮಾಡಿದರು.

ವ್ಯಾಸರಾಯರವರಿಗೆ ಬೋಂಬು ಬಿದ್ದ ವಾರ್ತೆಯು ಅಂದೇ ಜೋರ್ಜ ಸಾರ್ವಭೌಮರಿಗೂ ಇಂಡಿಯಾ ಆಫೀಸಿಗೂ ತಂತೀ ಮೂಲಕ ತಿಳಿಸಲ್ಪಟ್ಟಿತು. ಲಂಡನಿನ ಪತ್ರಿಕೆಗಳಲ್ಲೆಲ್ಲಾ ಅಂದೇ ಸಹತಾಪಪಡುವ ಲೇಖನಗಳು ಪ್ರಕಟಿಸಲಾದವು. ಜೋರ್ಜ ಸಾರ್ವಭೌಮರವರಿಗೆ ವ್ಯಾಸರಾಯರವರ ಪತ್ನಿಯವರು ತಂತೀಬಿಟ್ಟು ಈ ವಾರ್ತೆಯನ್ನು ತಿಳಿಸಿದರು. ಸಾರ್ವಭೌಮರು ಇವರಿಗೆ ಸಹತಾಪದ ಉತ್ತರವನ್ನು ಕಳುಹಿಸಿದರು.

ವ್ಯಾಸರಾಯರವರಿಗೆ ದಾಕ್ತರರು ಸಾಯಂಕಾಲ ಕ್ಲೊರಫೊರ್ಮು ಕೊಟ್ಟು ಶಸ್ತ್ರಪ್ರಯೋಗ ಮಾಡಿ ಬಲ ತೋಳಿನಿಂದ ೩ ಸಣ್ಣ ಮೊಳೆಗಳನ್ನೂ ಧೂಳಿನಂತಹ ಸಣ್ಣ ಸಣ್ಣ ಕಬ್ಬಿಣದ ಚೂರುಗಳನ್ನೂ ಹೊರತೆಗೆದರು.

ವ್ಯಾಸರಾಯರು ಆನೆಯ ಮೇಲೆ ಕೂತು ಮೆರವಣಿಗೆ ಮಾಡುವಾಗ ಚಂದನಚೌಕದ ಸಮೀಪ ಬರುತ್ತಲೇ ಬೊಂಬು ಅವರ ಆಸನ ಮತ್ತು ಅವರಿಗೆ ಛತ್ರಚಾಮರಗಳನ್ನು ಹಿಡಿದಿದ್ದವನ ಮಧ್ಯೆಬಿದ್ದು ಸಿಡಿಯಿತು. ಚಾಮರ ಹಿಡಿದವನು ಕೂಡ್ಲೇ ಕೊಲ್ಲಲ್ಪಟ್ಟನು. ಆದರೆ ಆಸನವುತಡೆದ್ದರಿಂದ ಬೊಂಬಿನ ಸಿಡಿತವು ವ್ಯಾಸರಾಯರ ಬಲತೋಳಿಗೂ ಕುತ್ತಿಗೆಯ ಬಲಪಾರ್ಶ್ವಕ್ಕೂ ತಾಗಿತು. ಸೊಂಟದಲ್ಲಿಯೂ ಸಾಧಾರಣ ತರದ ೪ ಗಾಯಗಳಾಗಿವೆ. ತೋಳಿನ ಗಾಯವು ೪ ಅಡಿ ಉದ್ದವಿದೆ. ವ್ಯಾಸರಾಯರವರ ಪತ್ನಿಯವರೂ ಸಿಡಿತ ಆದೊಡನೆ ಆಸನದ ಮುಂದಕ್ಕೆ ಬಿದ್ದರು. ಆದರೆ ಬೊಂಬು ಅವರಿಗೆ ತಗಲಲಿಲ್ಲ. ವ್ಯಾಸರಾಯರ ಹಿಂದೆ ಇದ್ದ ಇನ್ನೊಬ್ಬ ಪರಿಚಾರಕನಿಗೆ ಮುಖತುಂಬಾ ಗಾಯಗಳಾಗಿವೆ.

ತಾ. ೨೪:—ವ್ಯಾಸರಾಯರಿಗೆ ಶಸ್ತ್ರಪ್ರಯೋಗ ಮಾಡಿದ ರಾತ್ರಿ ಅವರಿಗೆ ರಾತ್ರಿಯೆಲ್ಲಾ ನಿದ್ರೆ ಹತ್ತಲಿಲ್ಲ. ಮೊರ್ಫಿಯ ಎಂಬ ಔಷಧಕೊಟ್ಟು ಅವರಿಗೆ ನೋವು ತಿಳಿಯದ ಹಾಗೆ ಮಾಡಬೇಕಾಯಿತು. ರಾತ್ರಿಯಲ್ಲಿ ಸ್ವಲ್ಪ ಜ್ವರವೂ ಇತ್ತು. ಆದರೆ ಬೆಳಿಗ್ಯೆ ಜ್ವರಇರಲಿಲ್ಲ.

ಹಿಂದೂಸ್ಥಾನದ ಎಲ್ಲಾ ಕಡೆಗಳಿಂದಲೂ ಸಹತಾಪ ಸೂಚಕವಾದ ಪತ್ರಗಳು ವ್ಯಾಸರಾಯರವರ ಸೆಕ್ರಟರಿಗಳ ಮೂಲಕ ವ್ಯಾಸರಾಯ ಪ್ರಭುಗಳಿಗೆ ಹೋಗುತ್ತಿದೆ.

ದಕ್ಷಿಣ ಹಿಂದೂಸ್ಥಾನ.

ಮೈಸೂರು ಸಂಸ್ಥಾನದ ಎರಡನೇ ಕೌನ್ಸಿಲ್ಲರ್ ದಳವಾಯಿ ದೇವರಾಜೇ ಅರಸಿನವರು ತಾ. ೧೭ನೇ ಮಂಗಳವಾರ ಬೆಂಗಳೂರಿನ ತಮ್ಮ ಬಂಗ್ಲೆಯಲ್ಲಿ ಕಾಲವಾದರೆಂಬ ವಾರ್ತೆಯನ್ನು ತಿಳಿಸಲು ವಿಷಾದಪಡುವೆವು. ಮಂಗಳವಾರ ಮಧ್ಯಾಹ್ನ ಅವರು ಪದ್ಧತಿಯಂತೆ ಆಫೀಸಿಗೆ ಹೋಗಿ ಕುರ್ಚಿಯ ಮೇಲೆ ಕುಳಿತು ಕೆಲಸಮಾಡುತ್ತಿರುವಲ್ಲಿ ಪಾರ್ಶ್ವವಾಯು ಅಕಸ್ಮಾತ್ತಾಗಿ ಪ್ರಾಪ್ತವಾಯಿತೆಂದೂ ಕೂಡಲೇ ಅವರನ್ನು ಅಲ್ಲಿಂದ ಬಂಗ್ಲೆಗೆ ಸಾಗಿಸಿ ಡಾಕ್ಟರುಗಳನ್ನು ಕರಿಸಿ ಎಷ್ಟೋ ಚಿಕಿತ್ಸೆಯನ್ನು ಮಾಡಿದಾಗ್ಯೂ ಸಾಧ್ಯವಾಗದೆ ಬೆಳಗಿನ ಹೊತ್ತಿಗೆ ತೀರಿಹೋದರೆಂದೂ ಪ್ರಕಟವಾಗಿದೆ. ಈ ಅಕಸ್ಮಿತ ಮರಣವು ಶ್ರೀಮನ್ ಕುಹಾರಾಜರವರಿಗೂ ರಾಜ ಮನೆತನದವರಿಗೂ ಮೈಸೂರು ಸಂಸ್ಥಾನದ ಸಕಲ ಪ್ರಜೆಗಳಿಗೂ ಬಹಳ ದುಃಖವನ್ನುಂಟುಮಾಡಿರುತ್ತದೆ.

ರಂಗೂನ್ ಸ್ಟೀಮ್ ನೆವಿಗೇಶನ್ ಕಂಪೆನಿ, ಲಿಮಿಟೆಡ್, ಎಂಬ ಒಂದು ಹಡಗ ಕಂಪೆನಿಯು ಈಚೆಗೆ ಸ್ಥಾಪಿಸಲ್ಪಟ್ಟಿತ್ತು. ಈ ಕಂಪೆನಿಯ ಪಾಲು ಮಾಲೀಕರು ತಾ. ೧೯ರಲ್ಲು ರಂಗೂನಿನ 'ವಿಕ್ಟೋರಿಯ ಸಭಾಸದನದಲ್ಲಿ ಸಭೆ ಕೂಡಿ ಮೂರು ವರ್ಷಗಳ ಲೆಕ್ಕವನ್ನು ಪರಿಶೋಧಿಸಿ ಮುಂದಕ್ಕೆ ಈ ಕಂಪೆನಿಯನ್ನು ನಡಿಸುವುದು ಅಸಾಧ್ಯವೆಂದು ನಿಷ್ಕರ್ಷಿಸಿ ಮೆ ಎಸ್. ಎಸ್. ಹಾಲ್ಕರ್, ಎಡ್ವೊಕೇಟರನ್ನು ಲಿಕ್ವಿಡೇಟರರಾಗಿ ನೇಮಿಸಿರುವರು.

ದಕ್ಷಿಣ ಕನ್ನಡ.

ನೋಟಿಸು.

ಮುಂಬಾಯಿ ಬಿಳೀಗೋಧಿ ಪುಡಿಯನ್ನು ತಯಾರಿಸಬಹುದಾದ ಮತ್ತು ತಾಸಿಗೆ ಒಂದು ಚೀಲ ಗೋಧಿಯನ್ನು ಪುಡಿಮಾಡ ಶಕ್ತಿಯುಳ್ಳ ಒಂದು ಯಂತ್ರವು ಮಾರಾಟಕ್ಕಿದೆ. ಈ ಯಂತ್ರದ ಮಾಲ್ಹೀಕರು ಇಂತಹ ಒಂದು ದೊಡ್ಡ ಯಂತ್ರವನ್ನು ತರಿಸಲಿಕ್ಕಿರುವುದರಿಂದ ಈ ಸಣ್ಣ ಯಂತ್ರವನ್ನು ಮಾರಲಿಕ್ಕಿದ್ದಾರೆ. ಆದುದರಿಂದ ಸ್ವಲ್ಪ ಬಂಡವಾಳವಿರುವವರು ಈ ಸಣ್ಣ ಯಂತ್ರವನ್ನು ಪಡೆಕೊಂಡು ಹೆಚ್ಚಿನ ಲಾಭವನ್ನು ಪಡೆಯಬಹುದು. ದಿವಸಕ್ಕೆ ಈ ಯಂತ್ರದಿಂದ ೮ ರೂಪಾಯಿಗಳ ನಿವ್ವಳ ಆದಾಯವನ್ನು ಪಡೆಯಬಹುದು.

ಬೇಕಾದವರು:—"X"
C/o ದಿ. ಸ್ವದೇಶಾಭಿಮಾನಿ, ಮಂಗಳೂರು.
ಈ ವಿಳಾಸಕ್ಕೆ ಬರೆಯಬಹುದು.

ಬಾತ್ಮೀದಾರರಿಗೆ ನೋಟೀಸು:—ಟಿ. ಆರ್. ಪೈ. ಅಂಡ್ ಬ್ರದರ್ಸ್—ಲೇಖನವು ವಿಳಂಬವಾಗಿ ತಲಪಿದ್ದರಿಂದ ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು.

ಕಾಸರಗೋಡು:—ಇಲ್ಲಿಯ ಮಿಶ್ಯನ್ ಹುಡುಗಿಯರ ಶಾಲೆಯ ವಾರ್ಷಿಕೋತ್ಸವವು ಕಳೆದ ಶನಿವಾರ ದಿನ ಬಹಳ ವಿಜೃಂಭಣೆಯಿಂದ ನಡೆಯಿತು. ಪಟ್ಟಣದ ಅನೇಕ ವಕೀಲರೂ ಇತರ ಮಾನ್ಯಗೃಹಸ್ಥರೂ ಮಾತ್ರವಲ್ಲದೆ ಹೆಚ್ಚು ಮಂದಿ ಸ್ತ್ರೀಯರು ಕೂಡಾ ಹಾಜರಿದ್ದರು. ಮ. ರಾ. ರಾ. ಕೆ. ಪಿ. ಪದ್ಮನಾಭಯ್ಯನವರನ್ನು ಸಭೆಯ ಅಧ್ಯಕ್ಷರನ್ನಾಗಿ ಆರಿಸಿದ ತರುವಾಯ ಶಾಲಾ ರಿಪೋರ್ಟನ್ನು ಓದಿ ಹೇಳಲಾಯಿತು. ಅನಂತರ ಶಾಲಾ ಮಕ್ಕಳು ಇಂಪಾದ ಅಭಿನಯ ಗೀತಗಳಿಂದಲೂ ನಟನೆಗಳಿಂದಲೂ ಸಂಭಾಷಣೆಗಳಿಂದಲೂ ಸಭಿಕರನ್ನು ಸಂತೋಷಗೊಳಿಸಿದರು.

ಕುಂಬಳೆ:—ಇಲ್ಲಿಗೆ ಸಮೀಪ ಮಡಿಮೊಗ್ರು ಗ್ರಾಮದಲ್ಲಿ ಕೆಲವು ದಿವಸಗಳ ಹಿಂದೆ ಮದಿವೆಯಾಗದ ಒಬ್ಬ ಮಾಪಿಳ್ಳೆ ಹೆಂಗಸು ಗಂಡು ಶಿಶುವನ್ನು ಹೆತ್ತು ತಕ್ಷಣವೇ ಅದನ್ನು ಕೊಂದು ಹೂಣಿಟ್ಟನಂತರ ತನ್ನಿಗೆ ಪೋಲಿಸಿನವರು ಬರುತ್ತಾರೆಂಬ ಭೀತಿಯಿಂದ ಪುನಹಾ ಮಣ್ಣಿನಿಂದ ತೆಗೆದು ಸಣ್ಣ ಹೋಳುಗಳಾಗಿಮಾಡಿ ಬೆಂಕಿಯಲ್ಲಿ ಸುಟ್ಟು ಅದನ್ನು ವಸ್ತ್ರದಲ್ಲಿ ಕಟ್ಟಿ ಒಂದು ಕಡೆಯಲ್ಲಿ ಬಚ್ಚಿಟ್ಟದನ್ನು ಪೋಲಿಸಿನವರು ತಲಾಶಿಯಿಂದ ಹಿಡಿದು ಅವಳನ್ನೂ ಈ ಕೃತ್ಯಕ್ಕೆ ಸಹಾಯಕಳಾದ ಅವಳ ಅಕ್ಕಳನ್ನೂ ಸಹಾ ಸದರಿ ತಕ್ಷೀರು ನಡಿಸಿದರೆಂಬ ಕಾರಣದಿಂದ ಕೈದು ಮಾಡಿಕೊಂಡ್ಹೋದನಂತರ ಇಬ್ಬರನ್ನೂ ಜಾಮೀನಿನಲ್ಲಿ ಬಿಟ್ಟಿರುವದಾಗಿ ಕೇಳುತ್ತೇವೆ.

ಮ. ನಾರಾಯಣ ಹೆಗ್ಗಡೆಯವರ ನಾಟಕ ಕಂಪೆನಿಯವರು ಕಾಸರಗೋಡಿನಿಂದ ಹೊರಟ ನಂತರ ಇಲ್ಲಿಗೆ ಬಂದಲ್ಲಿ ಊರವರು ಇತರ ನಾಟಕದವರನ್ನು ಮನ್ನಿಸಿದಂತೆಯೇ ಇವರನ್ನು ಪ್ರೋತ್ಸಾಹಿಸದಿರಲಾರರೆಂತ ನಂಬುತ್ತೇವೆ.

ಇದೇ ಬರುವ ಜನವರಿ ತಿಂಗಳ ಪ್ರಾರಂಭದಿಂದ ರೈಲ್ವೆ ಗಾಡಿಗಳ ಸಮಯವು ಬದಲಾಗುವದೆಂಬ ವದಂತಿಯಿದೆ.

ಮಂಜೇಶ್ವರ:—ಮಂಜೇಶ್ವರ ಟಪ್ಪಾಲ ಆಫೀಸಿನ ತೆಂಕುದಿಕ್ಕಿನಲ್ಲಿದ್ದು ವಿಷಜಂತುಗಳಿಗೆ (ಹಾವು, ಮಂಡಲಿ, ವಗ್ಯೆರೆ) ಆಶ್ರಯ ಸ್ಥಾನವಾಗಿದ್ದ ಗೋಳಿಮರ ಕೆಲವು ವರುಷಗಳ ಮೊದಲೇ ಕಡದು ತೆಗೆದಿದ್ದರೂ ಆ ಮರವಿದ ಸ್ಥಳದಲ್ಲಿರುತ್ತಿದ್ದ ಬಿಲಗಳು ಹಾಗೆ ಇನ್ನೂ ಇರುವದರಿಂದ್ದ ಹಪ್ತೆಗೆ ಒಂದೆರಡು. ವಿಷಜಂತುಗಳು ಹೊರಗಾಗುತ್ತಲೇ ಇರುತ್ತವೆ. ಅವುಗಳ ಬಾಧೆ ಜನರಿಗೆ ಉಂಟಾಗದಂತೆ ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ. ರಾತ್ರೆ ಕತ್ತಲೆ ಸಮಯ ಆ ಸ್ಥಳಕ್ಕೆ ಎದುರಾಗಿರುವ ಗೋಡೆ ಹತ್ತರ ಅಡಗಿ ನಿಲ್ಲುವವರು ತಮಗೆ ಆ ವಿಷಜಂತುಗಳಿಂದ ಅಪಾಯವಾಗದಂತೆ ಜಾಗ್ರತೆ ತೆಗೆದುಕೊಳ್ಳುವದು ಎಹಿತವು..

ಜಂಟವಾಳ:—ಶ್ರೀವೆಂಕಟರಮಣ ಸ್ವಾಮಿ ಹಿಂದೂ ಎಲಿಮೆಂಟರಿಶಾಲೆಯ ಇನಾಮು ಹಂಚೋಣವು ದರಬಾರು ದಿನ ಶ್ಯಾಮಗಂಟೆ ೪ಕ್ಕೆ ಶ್ರೀಕಾಶೀಮಠ ಸಂಸ್ಥಾನದ ಗುರುಶಿಷ್ಯರುಗಳ ಸಮಕ್ಷ ಜರಗಿತು. ಗುರುಮಠದಿಂದ ಹೊರಟ ಮೆರವಣಿಗೆಯ ಮುಂದಕ್ಕೆ ದೇವಸ್ಥಾನದ ಸೆಕೆಂಡರಿಶಾಲೆಯ ವಿದ್ಯಾರ್ಥಿಗಳು ಸಾಲುಗಟ್ಟಿ ನಡೆವುತ್ತಿರಲು, ದೀವಟಿಗೆ ಬಿರುದಾವಳಿಗಳೊಡನೆ ಶ್ರೀಗಳವರ ಸ್ವಾರಿಗಳೂ ಎರಡು ವಾಹನಗಳನ್ನೇರಿ ಬಿಜಯಂಗೈದರು. ಭಂಡಾರಬೆಟ್ಟಿನ ಭವನವನ್ನು ಪ್ರವೇಶಿಸಿದೊಡನೆ, ಅಲ್ಲಿ ನೆರೆದಿದ್ದ ಸಭೆಯು ಎದ್ದು ಶ್ರೀಗಳವರಿಗೆ ಸ್ವಾಗತಗೈದು, ಮಕ್ಕಳು ಸಂಗೀತಹಾಡುತ್ತಾ ಗುರುಗಳನ್ನೂ ದೇವರನ್ನೂ ಸ್ತುತಿಸಿದರು. ಶಾಲೆಯ (೧೯೧೦-೧೯೧೨) ಮೂರು ವರುಷಗಳ ವರದಿಗಳು ಓದಿಹೇಳಲಾಗಿ, ಪರೀಕ್ಷಾಕರ್ತರ ಅಭಿಪ್ರಾಯಗಳೂ ಏನೊಂದೂ ಮರೆಮಾಜಿಲ್ಲದೆ ಸಭೆಯವರಿಗೆ ವಿವರಿಸಿ ಹೇಳಲಾದುವು. ವರದಿಯಿಂದ ಶಾಲೆಯಲ್ಲಿ ೧೩೩ರಿಂದ ೧೯೪ರ ವರೆಗೆ ಮಕ್ಕಳ ಸಂಖ್ಯೆಯು ಏರಿದ್ದು, ಎಲ್ಲಾ ತರಬೇತಾದ ಉಪಾಧ್ಯಾಯರಿಂದ ಸಾಕಷ್ಟು ಉಪಕರಣಗಳೊಂದಿಗೆ, ಅತಿತೃಪ್ತಿಕರವಾದ ರೀತಿಯಲ್ಲಿ ಎಲಿಮೆಂಟರಿ ಶಿಕ್ಷಣವು ಚೆನ್ನಾಗಿಸಾಗಿದ್ದು, ಶಾಲಾ ಮುಖ್ಯೋಪಾಧ್ಯಾಯರಿಗೂ ಶಾಲಾ ಆಡಳಿತೆದಾರರಾದ ಕೆನರಾ ಹ್ಯಾಸ್ಕೂಲಿನ ಬೋರ್ಡಿನವರಿಗೂ ಯಶಸ್ಸು ಬಂದಿದೆ ಎಂಬ ಅಭಿಪ್ರಾಯದ ಶಾಲಾ ಸಬ್ ಅಸಿಸ್ಟಾಂತರವರ ಅಭಿಪ್ರಾಯವು ತಿಳಿದುಬಂತು. ಮುಂಚೆ ೨೦೦ ರೂಪಾಯಿ ಪಡೆಯುತ್ತಿದ್ದ ಈ ಶಾಲೆಗೆ ಈ ವರ್ಷ ೩೦೦ ರೂಪಾಯಿ ಗ್ರೇಂಟುಸಿಕ್ಕಿದ್ದು, ಮೆ| ಲಿಟ್ಲ್‌ಹೈಲ್ಸರವರು ಇನ್ನೂ ಗ್ರೇಂಟ ಹೆಚ್ಚಿಸಿಕೊಡಬೇಕೆಂದು ಅಭಿಪ್ರಾಯಪಟ್ಟಿದ್ದಾರಾಗಿಯೂ ಒಟ್ಟಾರೆಯ ಮೇಲೆ ಈ ಜಿಲ್ಲೆಯಲ್ಲಿ ದೇವಸ್ಥಾನಗಳಿಂದ ಸ್ಥಾಪಿತವಾದ ಎಲ್ಲಾ ಶಾಲೆಗಳಲ್ಲಿ ಈ ಶಾಲೆಯು ಅತ್ಯುಚ್ಛ ಶಿಕ್ಷಣವನ್ನೂ ಅತ್ಯುಚ್ಛ ಏರ್ಪಾಡನ್ನೂ ಹೊಂದಿದೆಂದು ನಿರ್ಧರಿಸಲು ಅನುಕೂಲವಾಯಿತು. ನಂತರ ಶ್ರೀಗುರುಗಳವರು ಮಕ್ಕಳಿಗೆ ಇನಾಂಹಂಚಿದರು. ಮಕ್ಕಳು 'ಶಾಂಡವನ ಕಥೆ'ಯನ್ನು ನಾಟಕರೂಪವಾಗಿ, ಒಂದು ನಕಲಿಯೊಡನೆ ಆಡಿ ಸಭಿಕರನ್ನು ಸಂತೋಷಗೊಳಿಸಿದರು. ಬೋರ್ಡುಮೆಂಬರ ರಾ| ಕೆ. ಕೃಷ್ಣರಾಯರು ಗುರುವು, ದೇವರು, ಹೆತ್ತವರು, ಹಿರಿಯರು, ಅರಸನು, ರಾಷ್ಟ್ರವು, ಉಪಾಧ್ಯಾಯರು ಮುಂತಾದವರ ಕಡೆಗೆ ತಾವು ತೋರಿಸಬೇಕಾದ ಭಕ್ತಿಧರ್ಮವನ್ನು ಮಕ್ಕಳ ಮನಸ್ಸಿಗೆ ನಾಟುವಂತೆ ಸುಲಭ ಕನ್ನಡದಲ್ಲಿ ಬೋಧಿಸಿದರು. ಶ್ರೀಗುರುಗಳವರು ಆ ದಿನದ ಉತ್ಸಾಹದಿಂದ ತಮಗುಂಟಾದ ಆನಂದವನ್ನು ಪ್ರದರ್ಶಿಸಿ, ಮಕ್ಕಳಿಗೆ ಮೇಲಾದ ವಿದ್ಯೆಯನ್ನು ದಾನವೀಯುವ ಈ ವಿದ್ಯಾಮಂಡಲಿಯನ್ನು ಆಶೀರ್ವದಿಸಿ, ದೇವಳ ಕಡೆಯ ಉಭಯ ಶಾಲೆಗಳ ಇನಾಮು ಹಂಚುವಿಕೆಯ ಸಹಾಯದ್ರವ್ಯವಾಗಿ ೧೦ ರೂಪಾಯಿಗಳನ್ನು ಹರ್ಷದಿಂದಿತ್ತು ಮತಸಂಬಂಧ ನೀತಿಶಿಕ್ಷಣೆಯನ್ನು ಸಹ ಬೋಧಿಸುವುದು ಉಚಿತವೆಂದು ಸೂಚಿಸಿದರು. ಮಕ್ಕಳಿಗೆ ಮಿಠಾಯಿ ಹಂಚೋಣಾಗಿ, ಜಯಧ್ವನಿಯಿಂದ ರಾಜಗೀತೆಯನ್ನು ಹಾಡಿ ಸಭೆಯು ಮುಕ್ತಾಯವಾಯಿತು.

ಪುತ್ತೂರು. ಖಜಾನಾ ಚಾರ್ಜು ಡಿ| ಕಲೆಕ್ಟರವರು ಇಲ್ಲಿಯ ತಾಲೂಕು ಖಜಾನೆ ತನಕೆ ತೀರಿಸಿ ದಶಂಬರ ತಾ. ೧೯ಲ್ಲು ವಾಪಸು ಮಂಗಳೂರಿಗೆ ಹಿಂತೆರಳಿರುವರು.

ಇಲ್ಲಿಯ ಲೋಕಲ್ ಕ್ರೆಡಿಟ್ ಸಹಾಯಕ ಸಂಘಕ್ಕೆ ಆರಿಸಿದ ಪಂಚಾಯತಿ ಮೆಂಬರರ ಸಹಾಯಾರ್ಥವಾಗಿ ಕೆಲವು ಮೆಂಬರರ ಚುನಾವಣೆ ಬಗ್ಗೆ ಮ. ರಾ. ರಾ. ವಕೀಲ ಬೈಂದೂರ ರಾಮರಾಯರವರ ಅಧ್ಯಕ್ಷತೆಯಲ್ಲಿ ಇದೇ ಕಳದ ನವಂಬರ ತಾ. ೩೦ರಲ್ಲು ಮಹಾ ಸಭೆಯು ನೆರೆದು ಮೆ. ಪಿಯದಾದ್ ಫೆರ್ನಾಂದಿಸ, ಕಂಬಳಬೆಟ್ಟು ಸುಬ್ರಾವ್, ಯೆಳ್ತಿಮಾರ ನರ್ಸಯ್ಯ ಶ್ಯಾನಭಾಗ, ಯೆಲಿಯಣ್ಣ ಪೂಜಾರಿ, ಸೊಮ್ಮಯ ಶೆಟ್ಟಿ, ಯೆಳ್ತಿಮಾರ ಕೃಷ್ಣಯ್ಯ ಶ್ಯಾನಭಾಗ, ಕೊಗ್ಗ ಮಲ್ಯ ಇವರನ್ನು ಮೆಂಬರರಾಗಿ ವೋಟು ಮೂಲಕ ಆರಿಸಲಾಯಿತು.

ಉಪ್ಪಿನಂಗಡಿ ತಾಲೂಕಿನ ವರುಷಾವಧಿ ಜಮಾಬಂದಿಯು ೧೯೧೩ನೇ ಇಸವಿ ಜನವರಿ ತಾ. ೮ರಿಂದ ೧೫ರ ವರೆಗೆ ವಿಟ್ಲ, ೧೭ರಿಂದ ೨೪ರ ವರೆಗೆ ಸುಳ್ಯ, ೨೭ರಿಂದ ಫೆಬ್ರವರಿ ೪ರ ವರೆಗೆ ಪುತ್ತೂರು, ಫೆಬ್ರವರಿ ೬ರಿಂದ ೧೨ರ ವರೆಗೆ ಬೆಳ್ತಂಗಡಿ ಮೊಕ್ಕಾಂಗಳ ಮೇರೆಗೆ ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರವರಿಂದ ಮಾಡಲ್ಪಡುವದು.

ಇಲ್ಲಿಯ ಡಿವಿಜನ್ ಡಿಪ್ಯುಟಿ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಇದೇ ದಶಂಬರ ತಾ. ೨೬ಕ್ಕೆ ಹೊಸದುರ್ಗ ಮೊಕ್ಕಾಮಿಗೆ ತನಖಿಗೆ ಇಟ್ಟಿದ್ದ ಉಡ್ಪಿ ಶೇಶಗಿರಿ ಶ್ಯಾನಭಾಗ ವಗೈರೆರ ಮೇಲಿನ ಮೊಕದಮೆಯು ಕ್ರಿಸ್ತಮಸ್ ರಜೆ ಸಂಬಂಧ ೧೯೧೩ನೇ ಜನವರಿ ತಾ. ೬ಕ್ಕೆ ವಿಟ್ಲ ಮೊಕ್ಕಾಮಿಗೆ ತನಖಿಗೆ ಇಟ್ಟಿರುವದಾಗಿ ಕೇಳುತ್ತೇವೆ.

ಶಿರಾಡಿ ತಿಕ್ಯ ಗ್ರಾಮದ ಮಾರಿಹೊಲೆಯು ಕಾಂತರ ಎಂಬವನನ್ನು ಕೊಂದದ್ದಾಗಿ ಕುರಮೆರ ಗೌಡ ಚನ್ನ ಎಂಬವನನ್ನು ಅನುಮಾನದ ಮೇಲೆ ಕೈದು ಮಾಡಿ ರಿಮಾಂಡಿನಲ್ಲಿಟ್ಟಿರುವರು. ಹೊಲೆಯನ ಶವವನ್ನು ಇಲ್ಲಿಯ ಆಸ್ಪತ್ರಿಗೆ ತಾ. ೨೧ಲ್ಲು ತಂದಿತ್ತು. ಪೊಲೀಸ್ ತನಕಿ ನಡಿಯುತ್ತದೆ.

ಸೆಟ್ಲಮೆಂಟ ಆಗುವ ಕಾಲದಲ್ಲಿ ವರ್ಗಕ್ಕೆ ಸೇರಿದ ಸಣ್ಣ ನಾಗಬನಗಳೂ, ಕೆರೆಗಳೂ, ಬಂಡೆಕಲ್ಲುಗಳುಳ್ಳ ಸ್ಥಳಗಳೂ ಪಟ್ಟಾದಾರರ ಅಪೇಕ್ಷೆ ಮೆರೇಗೆ ವರ್ಗ ಸ್ಥಳದಿಂದ ವಿಂಗಡಿಸಿ ಪರಂಬೋಕಿಗೆ ದಾಕಲು ಮಾಡಲ್ಪಟ್ಟಿವೆ ಇಂತಹ ಪರಂಬೊಕುಗಳನ್ನು ಪುನಹ ತಮ್ಮ ಪಟ್ಟೆಗೆ ದಾಖಲು ಮಾಡಲಿಕ್ಕೆ ಪಟ್ಟೆದಾರರು ತಹಸಿಲ್‌ದಾರರರಿಗೆ ಬರಕೊಳ್ಳಬೇಕಾಗಿಯೂ ಲಗ್ತಿ ಪಟ್ಟೆದಾರರ ಆಕ್ಷೇಪ ಇಲ್ಲವಾದರೆ ಸರಕಾರದವರ ವ ಹತ್ತು ಜನರ ಪ್ರಯೋಜನಕ್ಕೆ ಭಾದಕವಿಲ್ಲದಿದ್ದರೆ ಅರಿಕೆ ನಡಿಸಲಾದೀತೆಂತ ಪ್ರಕಟಿಸಿರುವರು.

ಉಪ್ಪಿನಂಗಡಿ ತಾಲೂಕಿನ ಕಡಬ ಮತ್ತು ಶಿರಾಡಿ ಪ್ರಾಂತ್ಯದಲ್ಲಿ ಮನುಷ್ಯರನ್ನು ತಿಂದು ಉಪದ್ರಿಸುವ ಹುಲಿಯನ್ನು ನಾಶಪಡಿಸುವ ಬಗ್ಯೆ ರೂಪಾಯಿ ಎಪ್ಪತ್ತು ಇನಾಂ ಕೊಡೋಣಾದೀತೆಂತ ಪ್ರಕಟಿಸಿರುವರು.

ಕಳ್ಮಕಾರ ಗ್ರಾಮದ ಹತ್ತರ ಒಬ್ಬ ಮನುಷ್ಯನನ್ನು ಒಂದು ಕಾಡಾನೆಯು ಕೊಂದುಹಾಕಿದ್ದಾಗಿ ತಿಳಿದುಬಂದಿರುವುದರಿಂದ ಈ ಕಾಡಾನೆಯನ್ನು ಗುಂಡು ಹಾಕಿ ಕೊಂದವನಿಗೆ ಅದರ ದಂತಗಳು ಕೊಡೋಣಾದೀತೆಂತ ಗವರ್ನಮೆಂಟಿನವರ ಹುಕುಂ ಆಗಿರುವದು.

ಸುಬ್ರಮಣ್ಯ ಕಸಬಾ ಗ್ರಾಮದ ಕನ್ನಡಿ ಹಳ್ಳದ ಸಮೀಪ ಲೋಕಲ್‌ಫಂಡ ರಸ್ತೆಯ ಹತ್ತರ ಬಹುಕಾಲದ ಒಂದು ಸಮಾಧಿಯಿರುತ್ತದೆ. ಹಳ್ಳದಿಂದ ಗಾಡಿಗಳು ಪಾರಾಗಲಿಕ್ಕೆ ತೊಂದರೆ ಉಂಟಾದಾಗ್ಯೆ ಗಾಡಿಗಾರರು ಹರಿಕೆ ಕೊಟ್ಟರೆ ಗಾಡಿಗಳು ತೊಂದರೆಯಿಲ್ಲದೆ ಹತ್ತುವದೆಂಬ ವರ್ತಮಾನ ಹಬ್ಬಿ ಸುಬ್ರಮಣ್ಯ ದೇವಸ್ಥಾನದ ಮೊಕ್ತೇಸರ ರಾ। ಪಿ. ಭೋಜರಾಯರು ಸಮಾಧಿಯು ಒಬ್ಬ ಹಿಂದೂ ಸನ್ಯಾಸಿದ್ದೆಂತಲೂ ಹಲವು ಮಾಪಿಳ್ಳೆಯರು ಕೂಡಿಕೊಂಡು ನಿಶಾನಿಬಾವಟೆ, ಪತಾಕೆಗಳನ್ನು ಸಮಾಧಿ ಮೇಲೆ ಇಟ್ಟು ಊದ್ಬತ್ತಿ ಲೋಭಾನ ಮುಂತಾದ್ದು ಹಾಕಿ ಮಾಪಿಳ್ಳೆರ ಸಮಾಧಿಯೆಂತ ಚರ್ಚಿಸುತ್ತಿರುತ್ತಾ ಸುಬ್ರಮಣ್ಯಕ್ಕೆ ಹೋದ ನಮ್ಮ ಮೆಜಿಸ್ಟ್ರೇಟರವರು ಸಮಾಧಿಯು ಪೋರೆಷ್ಟು ನಿಜವಿಗೆ ಲಗ್ತಿಯಿರುವುದರಿಂದ ಯಾರೊಬ್ಬರು ಊದ್ಬತ್ತಿ ಲೊಭಾನ ಬೆಂಕೆಯಿಂದ ಉರಿಸಕೂಡದೆಂದು ಹುಕುಂ ಮಾಡಿರುವುದಾಗಿ ಕೇಳುತ್ತೇವೆ.

ಬೆಳ್ಳಾರೆ ಕಸಬೆಯ ಗುಳಿಗ ಗುಡ್ಡೆ ಎಂಬಲ್ಲಿ ಲೋಕಲ್‌ಫಂಡ ಬಂಗ್ಲೆ ಕಟ್ಟುವರೆ ಕಂಟ್ರಾಕ್ಟರ್ ದುಗ್ಗಯ ಮೇಸ್ತ್ರಿಯವರು ತೆಗದ ಅಡಿಪಾಯಕ್ಕೆ ಓವರ್ಶಿಯರು ಬಂದಾಗ್ಗೆ ಬುನಾದಿಕಲ್ಲು ಇಟ್ಟು ತೆಂಗಿನಕಾಯಿ ಹೊಡಿಸಿದ ಕೂಡ್ಲೆ ಕಂಟ್ರಾಕ್ಟರು ಸ್ಮೃತಿತಪ್ಪಿ ಬಿದ್ದವರಿಗೆ ೩ ದಿನಗಳ ಪರಿಯಂತರ ಸ್ಮೃತಿ ಬಾರದೆ ಇದ್ದದರಿಂದ ಅವರನ್ನು ಅವರ ಊರಿಗೆ ಕೊಂಡುಹೋಗಿರುವರೆಂಬದಾಗಿ ಕೇಳುತ್ತೇವೆ.

* * *

ಮಂಗಳೂರು. ಕುದುರೆಮುಖಕ್ಕೆ ಹೋಗಿರುವ ಕಲೆಕ್ಟರ ದೊರೆಗಳು ಜನವರಿ ತಾ. ೨ನೇಗೆ ಇಲ್ಲಿಗೆ ಬರುವರು.

ಮ. ರಾ. ರಾ. ಕಿಲ್ಪಾಡಿ ಶಿವರಾಯರಿಗೆ ಹೊಸದುರ್ಗಕ್ಕೂ ಮೆ. ಮರಿಯಾನ್ ಪ್ಯಾಸರಿಗೆ ಬಂಟವಾಳಕ್ಕೂ ಡಿಪ್ಯುಟಿ ತಹಶೀಲದಾರರಾಗಿ ವರ್ಗವಾಗಿದೆ.

ಹಿಂದೂ ಟ್ರೆನ್ಸಿಟ್ ಕಂಪೆನಿಯ ಮಾಲೀಕರಾದ ರಾ. ಸುಬ್ಬಯ್ಯ ಶೆಟ್ಟರವರ ಉಡ್ಪಿ ಬೆಂಚ್ ಮೆಜಿಸ್ಟ್ರೇಟ ಹುದ್ದೆಯ ಅವಧಿಯು ಮುಗಿದಿರುವುದರಿಂದ ಈ ಹುದ್ದೆಗೆ ರಾ. ಬಡಗಬೆಟ್ಟು ರಾಮಯ್ಯ ಹೆಗ್ಗಡೆಯವರು ನೇಮಕ ಹೊಂದಿರುತ್ತಾರೆ.

ಮಂಗಳೂರು ಬಂದರದ ಹೊಳೆಯಿಂದ ಕೆಸರು ಮೊದಲಾದ್ದನ್ನು ತೆಗೆದು ನದಿಯು ಲೋಂಚು ಮೊದಲಾದವುಗಳ ಆಮದುರಪ್ತುಗಳಿಗೆ ತಕ್ಕ ಸ್ಥಿತಿಯಲ್ಲಿರುವಂತೆ 'ಡ್ರೆಜ್ಜರ್' ಎಂಬ ಕೆಸರುತೆಗಿಯುವ ಬೋಟನ್ನು ಇಲ್ಲಿಡುವ ಬಗ್ಯೆ ಧಕ್ಕೆಫೀಸಿನ ಕಮ್ಮಿಟಿಯವರು ಸರಕಾರದವರ ಅನುಮತಿಯನ್ನು ಕೇಳಿರುವರು.

ಸ್ಟೀಮರುಗಳಿಂದ ಬಂದಿಳಿಯುವ ಸರಕುಗಳನ್ನು ಕಳ್ಳಾಟಿಕೆಯಲ್ಲಿ ಪಡದ ಒಬ್ಬ ಮಾಪಿಳ್ಳೆಯನ್ನು ಇಲ್ಲಿಯ ಸಬ್ ಇನ್ಸಪೆಕ್ಟರರಾದ ಮಾಹಿಮ್‌ಷಾ ಚಮ್ನಾಡರವರು ಹಿಡಿದಿರುವರಾಗಿ ಕೇಳುತ್ತೇವೆ. ಸ್ಟೀಮರುಗಳಿಂದ ಬರುವ ಸಾಮಾಗ್ರಿಗಳನ್ನು ಬಹಳವಾಗಿ ಕದಿಯುವ ದುರಭ್ಯಾಸವು ಮಂಗಳೂರು ಬಂದರದಲ್ಲಿ ಹಲವು ವರುಷಗಳಿಂದಿರುವುದು. ಇಂಥಾ ದುರಭ್ಯಾಸವನ್ನು ಪೂರ್ಣವಾಗಿ ಕಿತ್ತುಬಿಡಲು ಸಾಧ್ಯವಾಗುವಂತೆ ಹಡಗಗಳು ಬಂದಿಳಿಯುವ ಸ್ಥಳಗಳನ್ನು ಕಾಯಲು ಪ್ರತ್ಯೇಕ ಪೋಲೀಸಿನವರನ್ನು ನೇಮಿಸುವುದು ಬಹಳ ಅಗತ್ಯವಾಗಿರುವುದು.

ಇದೇ ಬರುವ ಜನವರಿ ತಾ. ೧ರಿಂದ ಮಂಗಳೂರಿನಿಂದ ಮೈಲು ಗಾಡಿಯು ಬೆಳಿಗ್ಯೆ ಘ. ೬-೫೭ಕ್ಕೆ ಬಿಡುವರು. ಮೈಲು ಗಾಡಿಯು ಸಾಯಂಕಾಲ ಘ. ೬-೫೭ಕ್ಕೆ ಮಂಗಳೂರಿಗೆ ತಲಪುವದು. ಮಿಕ್ಸೆಡ್ ಎಂಬ ಲೋಕಲ್ ಗಾಡಿಯು ಮಂಗಳೂರಿನಿಂದ ಬೆಳಿಗ್ಯೆ ೧೦-೪೫ಕ್ಕೆ ಬಿಟ್ಟು ಕಲ್ಲಿಕೋಟೆಗೆ ರಾತ್ರೆ ಘ. ೮-೧೦ಕ್ಕೆ ತಲಪುವದು. ಕಲ್ಲಿಕೋಟೆಯಿಂದ ಬರುವ ಲೋಕಲು ಗಾಡಿಯು ಮಧ್ಯಾನ್ಹ ಘ. ೪-೩೫ಕ್ಕೆ ಮಂಗಳೂರಿಗೆ ತಲಪುವದು. ಪೆಟಲ್ ಎಂಬ ಮೊಟರ್ ಗಾಡಿಗಳು ಸಾಯಂಕಾಲ ಘ. ೫-೧೫ಕ್ಕೆ ಬಿಡುವರು. ವಾಪಾಸು ಹೊಸದುರ್ಗದಿಂದ ಮಂಗಳೂರಿಗೆ ತಲಪುವ ಸಮಯವು ಎಂದಿನಂತೆಯೇ ಬೆಳಿಗ್ಯೆ ಘ. ೯-೫೦ ಆಗಿರುವದು ಎಂಬದಾಗಿ ತಿಳಿಯುತ್ತೇವೆ.

ಕಳೆದವಾರ ೫ ಪ್ಲೇಗ ಮರಣಗಳಿದ್ದವು.

* * *

ಸೂಚನೆ.

ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನದ ಬಾಬ್ತು ಇದೇ ಪರಿಧಾವಿ ಸಂವತ್ಸರದ ಕಾರ್ತಿಕ ಶು ೧ (10—11—12)ರಿಂದ ಬರುವ ಪ್ರಮಾದೀಚ ಸಂವತ್ಸರದ ಆಶ್ವೀಜ ಬ. ೩೦ ವರೇಗೆ ಪ್ರತೀ ತಿಂಗಳ ಲೆಖ್ಖವನ್ನು ಪರಿಶೋಧಿಸುವುದಕ್ಕೆ ಪರಿಶೋಧಕರೊಬ್ಬರು (Auditor) ಬೇಕು. ಅಂತಹ ಪರಿಶೋಧನೆಯ ಜ್ಞಾನವೂ ಅನುಭವವೂ ಉಳ್ಳವರು ತಾ. 10—1—1913 ವಳಗೆ ಈ ಕೆಳಗೆ ದಸ್ಕತು ಮಾಡಿದವರೊಡನೆ ಮುಖತಃಪ್ರಸ್ತಾಪಿಸಿದರೆ ಯೋಗ್ಯತಾನುಸಾರವಾಗಿ ಪರಿಶೋಧನೆಯ ಪ್ರತಿಫಲ ವಗೈರೆ ಎಲ್ಲಾ ಸಂಗತಿಗಳು ನಿರ್ಣಯಿಸೋಣಾಗುವವು.

ಆಡಳಿತೆ ಮೊಕ್ತೇಸರ. ಬಂಗ್ರಮಂಜೇಶ್ವರ
ನಾರಾಯಣ ಕಮ್ತಿ.

* * *

ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈ ಮೆಮೊರಿಯಲ್ ಫಂಡಿನ ಜಮಾ ಖರ್ಚಿನ ವಿವರದ ಪಟ್ಟಿ.

(Balance Sheet).

ತಾ. 25-12-1912ರ ವರೆಗಿನ ವಂತಿಗೆ ವಸೂಲು

ಜಮಾ ರೂಪಾಯಿ	11,768—4—0
ವಸೂಲಿ ಐವಜು ಕೆನರಾ ಬೇಂಕಿನಲ್ಲಿ ಬಡ್ಡಿಗೆ ಇಟ್ಟು ಈ ವರೆಗೆ ವಸೂಲಾದ ಬಡ್ಡಿ ರೂಪಾಯಿ	785—2—0
ಜುಮುಲಾ ರೂ...	12,553—6—0

ಖರ್ಚು.

ಕೆನರಾ ಬೇಂಕಿನಲ್ಲಿ ಬಡ್ಡಿಗೆ ಹಾಕಿ ಡಿಪೋಜಿಟಿನಲ್ಲಿರುವ ರೂಪಾಯಿ.	11945-0—0
ಸದರಿ ಬೇಂಕಿನ ಕರೆಂಟ್ ಏಕೌಂಟ್ (Current Account) ನಲ್ಲಿರುವ ರೂಪಾಯಿ.	377—5—0
ಸೆಕ್ರಿಟರಿಗಳಾದ ಮ. ರಾ. ರಾ. ಸುಜೀರ ನರಸಿಂಗ ನ್ಯಾಕರವರಲ್ಲಿ ಇರುವ ರೂಪಾಯಿ	28—2—6
1911ನೇ ಇಸವಿಯಲ್ಲಿ ಮೆಮೊರಿಯಲ್ ದಿವಸದ ಆಚರಣೆ ಖರ್ಚು ರೂಪಾಯಿ...	125—0—0
1912ನೇ ಇಸವಿಯಲ್ಲಿ ಮೆಮೊರಿಯಲ್ ದಿವಸದ ಆಚರಣೆ ಖರ್ಚು ರೂಪಾಯಿ...	24-10—0
ಛಾಪೆ ಟಪ್ಪಾಲ್ ಹಾಸಲ್ ವಗೈರೆ ಚಿಲ್ಲರೆ ಸಾದಿಲವಾರ್ ಖರ್ಚು ರೂ.	53—4—6
ಜುಮುಲಾ...	12,553—6—0

V. Rama Rao.

ಕಳದ 1911ನೇ ಇಸವಿ ದಶಂಬರ ತಾರೀಕು 22ನೇಯ ಸಂಚಿಕೆಯಲ್ಲಿ ತೋರುವ ಪ್ರಕಾರ ವಂತಿಗೆ ವಾಗ್ದಾನ ಜುಮ್ಲಾ ರೂಪಾಯಿ 17,987—8—0.

ನಂತರ ವಾಗ್ದಾನ ಮಾಡಿದವರು.

ಮ. ರಾ. ರಾ. ಗುರ್ಪೂರು ಸುಬ್ರಾಯ ಶ್ಯಾನಭಾಗ ವ ಸಹೋದರರು ರೂ. 10. ಕಾರ್ಕಳ ವಕೀಲ ಮ. ರಾ. ರಾ. ಚರ್ಡಪ್ಪಯ್ಯನವರ ಹೆಂಡತಿ ಲಕ್ಷ್ಮಿ ಯಾನೆ ಸರಸ್ವತಿ ಅಮ್ಮ ರೂ. 5. ರಾ. ಸುಂಕೇರಿ ನಾರಾಯಣ ರಾಮಚಂದ್ರ ನ್ಯಾಕ ವ ಸಹೋದರರು ರೂ. 51.

ಈ ವರೇಗಿನ ಒಟ್ಟು ಜುಮುಲಾ ರೂ. 18,053-8-0.

ಇದೇ ಕಳದ ಜೂನ್ ತಾರೀಕು 28ನೇ ಸಂಚಿಕೆಯಲ್ಲಿ ತೋರುವ ಪ್ರಕಾರ ವಸೂಲಿ ಜುಮ್ಲಾ ರೂಪಾಯಿ 11,370—4—0.

ನಂತರದ ವಸೂಲಿ ವಿವರ.

ಮ. ರಾ. ರಾ. ನಿಟ್ಟೂರು ರಾಮಚಂದ್ರ ಪೈಗಳು ರೂ. 25. ರಾ. ಮಂಜೇಶ್ವರ ವೈಕುಂಠ ಭಕ್ತರು (ಝಾಡಾ) ರೂ. 250. ರಾ. ಚರ್ಡಪ್ಪಯ್ಯನವರ ಹೆಂಡತಿ ಲಕ್ಷ್ಮಿಯಾನೆ ಸರಸ್ವತಿ ಅಮ್ಮ ರೂ. 5. ರಾ. ಕಟಪಾಡಿ ಬಾಬ ಯಾನೆ ಮಂಜುನಾಥ ಕಮ್ತಿರು ರೂ. 51. ರಾ. ದೇರೆಬೈಲ ಮಾಧವಪೈಗಳು ರೂ. 5. ರಾ. ಸುಂಕೇರಿ ನಾರಾಯಣ ನ್ಯಾಕ ವ ಸಹೋದರರು ರೂ. 51. ರಾ. ಮಂಗಳೂರು ರಂಗ ವೆಂಕಟೇಶ ಪೈಗಳವರು ರೂ. 11.

ವಸೂಲಿಯ ಒಟ್ಟು ಜುಮುಲಾ ರೂ. 11,768-4-0.

ತಾ. 25—12—12. **K. P. Rama Rao,**
for Secretary.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನಿಯ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.
ನಿಯಮಿತ ಮೂಲಧನ ರೂ. 10,00,000.
ಪ್ರತಿಜ್ಞಾತ ಮೂಲಧನ ರೂ. 85,00,00.
ಆಗತ ಮೂಲಧನ ರೂ. 10,6450.
ಭಂಡವಾಳ ರೂ. 12,00,000.
ವಿಮೆ ಮಾಡಿರುವವರ ಸಂಖ್ಯೆ 76,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ.

ಹಿಂದುಸ್ಥಾನ ಕೋಒಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್—30 ಡಲ್ಹೌಸಿ ಸ್ಕ್ವೇಯರ್ ಕಲ್ಕತ್ತ.
ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್
1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.
ನಿಯಮಿತ ಮೂಲಧನ—ರೂ. ಒಂದು ಕೋಟಿ.
ಪ್ರತಿಜ್ಞಾತ ಮೂಲಧನ—ರೂ, 865,000,00
ಆಗತ ಮೂಲಧನ—ರೂ. 915,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸೀದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತಪಡಿಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವದಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರನ್ಯಾಕರು,
ಸೊಸ್ಯಾಟಿಯ ಏಜಂಟರು.
ತ್ರಿಶುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

ದಿ ಏಸಿಯನ್ ಕಮರ್ಶಲ್

ಎಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮುಂಬಯಿ.

ಮೂಲಧನ 50 ಲಕ್ಷ.

ಇದು ಪ್ರಖ್ಯಾತಿಪಟ್ಟ ಜೀವವಿಮೆ ಸಂಘಗಳಲ್ಲಿ ಒಂದಾಗಿರುವದಲ್ಲದೆ ಪ್ರಿಮಿಯಂ ವಗೈರೆ ಇತರ ಕಂಪೆನಿಗಿಂತಲೂ ಅತೀ ಕಡಿಮೆಯಾಗಿರುತ್ತದೆ.

ಒಂದು ವರುಷ ಪ್ರಾಯದ ಮಗುವಿಗೆ ವರುಷಂಪ್ರತಿ ರೂ. 17—4—0 ತೆತ್ತುಬಂದಲ್ಲಿ, ಆ ಗಂಡಿನ ಅಥವಾ ಹೆಂಗಸಿನ 40ನೇ ವರುಷ ಪ್ರಾಯದಲ್ಲಿ ಒಂದು ಸಾವಿರ ರೂಪಾಯಿ ಕೊಡಲಾದೀತು. ಈ ಪಟ್ಟಿ ಅನುಸರಿಸುವ 14 ವರುಷ ವಳಗಿನ ಮಕ್ಕಳಿಗೆ ಡಾಕ್ಟರರ ಪರೀಕ್ಷೆ ಇರುವದಿಲ್ಲಾ. ಹೀಗೆ ಇನ್ಸುರು ಮಾಡಲ್ಪಟ್ಟ ಮಕ್ಕಳು ವಿಮೆಗೆ ಆರಿಸಿದ ಪ್ರಾಯದಕ್ಕಿಂತಲೂ ಮೊದಲು ಮೃತಪಟ್ಟಲ್ಲಿ ವಿಮೆ ಮಾಡಿದ ಪೂರ್ಣ ಐವಜು ಅವರ ಬಾಧ್ಯಸ್ತರಿಗೆ ಸಿಕ್ಕುವುದು.

ಎಲ್ಲಾ ಪಟ್ಟಿಗಳ ಅನುಸಾರವಾಗಿ ಗಂಡಸರನ್ನೂ ಹೆಂಗಸರನ್ನೂ 50 ವರುಷ ಪ್ರಾಯ ಪರಿಯಂತ್ರ ಸೇರಿಸಿಕೊಳ್ಳುತ್ತಾರೆ. ಆದರೆ 15 ವರುಷದ ಮೇಲಿನ ಮತ್ತು 30 ವರುಷದ ವಳಗಿನ ಪ್ರಾಯವುಳ್ಳ ಹೆಂಗಸರನ್ನು ಶೇರಿಸಿಕೊಳ್ಳುವದಿಲ್ಲ.

20 ವರುಷ ಪ್ರಾಯದವನೊಬ್ಬನು 60ನೇ ವರುಷ ಶಿಕ್ಕಬಹುದಾದ 1000 ವ ಅದರ ಮೇಲಿನ ನಫೆ ಶಿಕ್ಕುವದಾದರೆ, ವರುಷಕ್ಕೆ ರೂ. 30-14-0 ಪ್ರಕಾರ ತೆರಬೇಕು. ಆದರೆ ಅದೇ ಪ್ರಾಯದವನು ಅಷ್ಟೆ ಸಮಯದಲ್ಲೆ ರೂ. 27-13-0 ತೆತ್ತು ಆತನ ಪ್ರಿಮಿಯಮ್ 4ರ ಸಲೆ ಬಡ್ಡಿ ಮೇಲೆ ಬಡ್ಡಿ ಕೂಡಿಸಿ 2000ಕ್ಕೆ ಕಡಿಮೆಯಾಗದಷ್ಟು ಹಣ ಪಡಿಯಬಹುದು. ಈ ಮೇಲಿನ 2 ನಮೂನೆಯ ಪಟ್ಟಿ ಬೇರೆ ಯಾವ ಕಂಪೆನಿಗಳಲ್ಲಿಯೂ ಈ ವರಿವಿಗೆ ಕಂಡುಬರುವದಿಲ್ಲ. ಆದಕಾರಣ ಕಂಪೆನಿಯವರು ಲಾಭಾಪೇಕ್ಷೆಯಿಂದ ಇರುವರೊ ಅಥವಾ ಜನರ ಪ್ರಯೋಜನಾರ್ಥವಾಗಿ ಇರುವರೊ ಎಂಬದನ್ನು ತಿಳಿಸಲು ಅಗತ್ಯವಿಲ್ಲ.

ಸಬ್ ಏಜಂಟರು ಬೇಕು.

ಚನ್ನಾಗಿ ಕೆಲಸ ಮಾಡುವವರಿಗೆ ದಿವಸ ಒಂದರ 2 ರೂಪಾಯಿಗೆ ಕಡಿಮೆಯಾಗದಷ್ಟು ಕಮಿಷನ್ ದೊರೆಯುವದು.

ಕೆ. ಎಸ್. ಕೃಷ್ಣರಾವ್,
ಕೋರ್ಟು ರೋಡ್ ಉಡುಪಿ

ಉತ್ತರಕನ್ನಡದಿಂದ ತಿರುವಾಂಕೂರು ವರೆಗಿನ ದಕ್ಷಿಣದ ಪಶ್ಚಿಮ ಕರಾವಳಿಯ ಚೀಫ್ ಏಜಂಟರು,

ಕ್ಲೆಮೆಂಟರ ಮೆಜಿಕ್‌ಬಾಂ ತೈಲ್ಯವು.

ಈ ತೈಲ್ಯದಿಂದ ಸಕಲ ವಿಧದ ನೋವು ನಿವಾರಣೆಯಾಗುವದು. ತಲೆ ನೋವು ವಾಯುನೋವು, ಸೆಳತ, ಗಂಟ್ಲು ನೋವು, ಬೆನ್ನು ನೋವು, ಕೀಲುಗಳ ನೋವು, ಪಾರ್ಶ್ವವಾಯು, ವಿವಿಧವಾದ ವಾಯು ರೋಗಗಳು, ಶೀತ ರೋಗಗಳು, ಸಂದುವಾತ, ಚೇಳು ಕಡಿದ ನೋವು—ಇವುಗಳೆಲ್ಲಾ ಈ ತೈಲ್ಯ ಹಚ್ಚಿದ ಮಾತ್ರದಿಂದ ಚಮತ್ಕಾರಿಕವಾಗಿ ವಾಸಿಯಾಗುವವು. ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರ ಪ್ರಯೋಗಿಸಿ ಮೇಲ್ಕಂಡ ಎಲ್ಲಾ ಬಾಧೆಗಳನ್ನು ನಿವಾರಣೆ ಮಾಡುವುದರಲ್ಲಿ ಇದರಷ್ಟು ಅಮೋಘವಾದ ತೈಲ್ಯವು ಬೇರೊಂದಿಲ್ಲವೆಂಬದಾಗಿ ಕಂಡುಕೊಂಡಿದ್ದಾರೆ. ಈ ಅತ್ಯುತ್ತಮವಾದ ತೈಲ್ಯವು ನೋವಿನ ಮೂಲವನ್ನು ಕಂಡುಹಿಡಿದು ಅದರ ಹುಟ್ಟಡಗಿಸಿಬಿಡುವದು.

ಕ್ರಯ: ಸೀಸೆ ಒಂದಕ್ಕೆ ೧೨ ಆಣೆ, ಪ್ಯಾಕಿಂಗ್ ೪ ಆಣೆ. ಮೂರು ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡಲಾದೀತು. ಈ ತೈಲ್ಯವು ಎಲ್ಲಾ ವ್ಯಾಪಾರಸರಲ್ಲಿಯೂ ವೈದ್ಯರಲ್ಲಿಯೂ ಬಿಕರಿಮಾಡಲ್ಪಡುತ್ತದೆ.

ವಿಳಾಸ:—
ಏಜಂಟ್:— ಜೆ. ಎಸ್. ಕಣ್ಣೈಚೆಟ್ಟಿ, ಎಸ್. ಪೀಟರ್ಸ್,
37 ವೇದಮಲೆಪಿಳ್ಳೆ ಬೀದಿ,
ಜೂಲನ್‌ಕೇಪ ಮ್ಯಾನುಫೆಕ್ಚರರ್, ತುಮಕೂರ. ವರಸುವಾಕಂ ವೇಪರಿ ಮದ್ರಾಸು

ಒಂದೇ ಕಥೆ! ಅಪೂರ್ವ ಗ್ರಂಥ!! ದೊಡ್ಡ ಕಥೆ!!

ಪ್ರತಾಪಕಂಠೀರವ ಚರಿತ್ರೆ.

ಇದರಲ್ಲಿ (೧) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿ ಹೋಗುತ್ತವೆ." ಎಂಬ ನೀತಿ; (೨) ಸ್ತ್ರೀಧರ್ಮ, ಸ್ತ್ರೀಬುದ್ಧಿ, ಕೌಶಲ್ಯ, ಸ್ತ್ರೀಯುಕ್ತಿ, ಸಾಹಸ, ಚಾತುರ್ಯ; (೩) ರಸಿಕರಿಗೆ ರಂಜನವಾಗುವಂಥಾ ಶೃಂಗಾರಾದಿ ರಸಗಳು; (೪) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾಸಂದರ್ಭಗಳು; (೫) ವನ, ಸರಸ್ಸು, ಆರಾಮಾದಿ ವರ್ಣನೆಗಳು; (೬) ಮನುಷ್ಯ ಯತ್ನಕ್ಕೆ ವಿರುದ್ಧ ಈಗಿನ ಅನುಭವಕ್ಕೆ ತಕ್ಕ ವಿಷಯಗಳು; (೭) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭವಾದ ಶೈಲಿ; (೮) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ.

ಹೀಗಿರುವುದರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವವರೆಗೂ ಬಿಡುವುದಕ್ಕೆ ಮನಸ್ಸಾಗುವುದಿಲ್ಲ. ಹೆಚ್ಚಾಗಿ ಹೇಳುವುದರಿಂದೇನು? ಓದಿ ನೋಡಿದರೆ ಸ್ವಾರಸ್ಯವು ಗೊತ್ತಾಗುವುದು. ಕ್ರಯ ೧ ರೂ. ಟಪ್ಪಾಲು ಹಾಸಲು ಬೇರೆ. ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತೆ.

ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಇಡೀ ಜಿಲ್ಲೆಯಲ್ಲಿ ಅತ್ಯುತ್ತಮವಾದ ಮತ್ತು ಅಗ್ಗವಾದ ಔಷಧಾಲಯ!

P. M. KAMATH & CO.

Chemists and Druggists.

ಪಿ. ಎಮ್. ಕಾಮತ್ ಮತ್ತು ಕಂಪೆನಿ.

ಕೆಮಿಸ್ಟ್ಸ್ ಮತ್ತು ಡ್ರುಗ್ಗಿಸ್ಟ್ಸ್.

ಇವರು ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ಬಳಿ ಹೊಸ ಕೋರ್ಟ್ರ ರಸ್ತೆಯಲ್ಲಿ ಗತ ಎ. ಎಲ್. ಕೃಷ್ಣ ಪೈಗಳು ಕೆಮಿಸ್ಟ ಶೋಪು ಕೆಲವು ಕಾಲ ಇಟ್ಟಿದ್ದ ವಿಶಾಲವಾದ ಕಟ್ಟೋಣದಲ್ಲೇ ಹೊಸ ಕೆಮಿಸ್ಟ್ ಶೋಪ್ ಯಾನೆ ಔಷಧಾಲಯವನ್ನು ಇಟ್ಟಿರುತ್ತಾರೆಂದು ಸರ್ವ ಜನರಿಗೂ ಆದರಪೂರ್ವಕ ತಿಳಿಸೋಣಾಗುತ್ತದೆ.

ಪಿ. ಎಮ್. ಕಾಮತ್ ಮತ್ತು ಕಂಪೆನಿಯವರ ಹೊಸ ಔಷಧಾಲಯದಲ್ಲಿ ಎಲ್ಲಾ ತರದ ಔಷಧಗಳನ್ನೂ, ಕೆಳಗೆ ಕಾಣಿಸಿದ ಇತರ ಸಾಮಾನುಗಳನ್ನೂ (Burgoyne & Burbidges) ಎಂಬ ಪ್ರಖ್ಯಾತಿಗೊಂಡ ಕಾರ್ಖಾನೆಯಿಂದ ಹೊಸತಾಗಿ ಇತ್ತಲಾಗೆ ತರಿಸಿ ಅವರ ಮೇಲ್ಕಂಡ ಹೊಸ ಕೋರ್ಟ್ರ ರಸ್ತೆಯಲ್ಲಿರುವ ಔಷಧಾಲಯುದಲ್ಲಿ ಕಮ್ಮಿ ಕ್ರಯದಲ್ಲಿ ಮಾರಾಟಕ್ಕೆ ಇಟ್ಟಿರುತ್ತಾರೆ.

1. ಔಷದಗಾರರಿಗೆ ಮತ್ತು ಶಸ್ತ್ರವೈದ್ಯರಿಗೆ ಅವಶ್ಯಕವಾದ ಉಪಕರಣಗಳು, ಶಿಶುಗಳಿಗೆ ಹಾಲು ಕುಡಿಸುವ ಬಾಟ್ಲಿಗಳು, ಪಿಚ್ಕಾರಿಗಳು, ಔನ್ಸ್ ಗ್ಲಾಸುಗಳು, ಸಾಬೂನು ಮತ್ತು ಇತರ ಪರಿಮಳ ದ್ರವ್ಯಗಳು, ಥರ್ಮೋಮೆಟರಗಳು ಲೆಕ್ಟೋಮೆಟರಗಳು ವಗೈರೆ.

2. ಪ್ರಯಾಣಸ್ಥರಿಗೆ ಅವಶ್ಯಕವಾದ ಸಾಮಾನುಗಳು, ಪ್ರೋಚು, ಮತ್ತು ಸಣ್ಣ ಟ್ರ್ಯಾಂಫೀಸುಗಳು, ಥರ್ನೊ ಬಾಟ್ಲಿಗಳು, ಹೊಲಿಗೆ ಯಂತ್ರಗಳು ವಗೈರೆ.

3. ಆರಾರೂಟ್, ಬಾರ್ಲಿ, ಬಿಸ್ಕೂಟು, ಕೊಕ್ಕೊ, ಚಾ, ಕೊಲಾಹುಡಿ, ಶಿಶುಗಳಿಗೆ ಅಸ್ವಸ್ಥದವರಿಗೂ ಬೇಕಾದ ಆಹಾರಗಳು ವಗೈರೆ ಅನೇಕ ವಿಧದ ಸಾಮಾನುಗಳು ದೊರಕುವವು.

ಆಹೋರಾತ್ರಿ ಎಲ್ಲಾ ಸಮಯಗಳಲ್ಲಿ ತರಬೇತು ಹೊಂದಿದ ಕಂಪಾಂಡರನು ಬಹಳ ಜಾಗ್ರತೆಯಿಂದ ಎಲ್ಲಾ ಔಷಧಗಳನ್ನು ತಯ್ಯಾರಿಸಿಕೊಡುವನು.

TRIAL ORDERS SOLICITED.

ವಿಳಾಸ:—

ಪಿ. ಎಮ್. ಕಾಮತ್ ಮತ್ತು ಕಂಪೆನಿ.
ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್
ಕೋರ್ಟ್ರ ಹೊಸ ರಸ್ತೆ ಮಂಗಳೂರು.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ಗಳಲೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಆವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಆವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ. ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:—

ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸುಲಭ ಕ್ರಯ! ಪರೀಕ್ಷಿಸಿರಿ!! ಸಂತೋಷ ಪಡುವಿರಿ!!!

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ. ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2—4—0 ಮಾತ್ರ. 5 ವರುಷಗಳ ಗ್ಯಾರೆಂಟಿ.

SUPERIOR
WATCH Co.
Rs 2/4.
Rs 2/4.
No. 167
MADRAS

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡಿಯುತ್ತದೆ. ಸಾವಿರಗಟ್ಟಿ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು. ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಕ್ರಯ ರೂ. 5-12-0. ಇದನ್ನು ಜುಲಾಯಿ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಘಂಟೆಗೊಂದಾವರ್ತಿ ಬೀಗ!ಕೊಡತಕ್ಕ ಮೇಲಾದ ಟೈಂಪಿಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:— ಸುಪೀರಿಯರ್ ವಾಚ್ ಕಂಪೆನ್ನಿ,
ಪೋಸ್ಟ್ ಬಾಕ್ಸ್ ನಂ. 167, ಮದರಾಸು

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು.

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ವನೌಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0. ಟಪ್ಪಾಲ್ ಖರ್ಚು ಬೇರೆ.

ಕ್ಷಯ ಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:— ಕಲ್ಲಿ ಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ "ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯ ರೋಗಿಗಳಿಗೆ ಪ್ರಯೋಗಿಸಿದಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯ ಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯ ರೋಗನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿ ಕೋಟೆ


પ્રો. જેમ્સની વિજળીક શાક્તિની ગોળીઓ.
PROF. JAMES' ELECTRO TONIC PEARLS.
प्रो. जेम्स याची विद्युत शक्ति वर्धक गुटीका.

"ಅಮೇರಿಕದ ವಿಶಿಷ್ಟತೆ."

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೆಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದವೆ ಅಡಗಿಹೋಗುತ್ತೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೊವ್ವನ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಪೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡಿಸ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಪುಷ್ಟವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನುಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮಿ.ಜೀ.ಸಿ. ಟ್ರೀಶೋ(ಪೊಂಡಾ-ಗೋವೆ)ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದನಾನು ಹೊಂದಿದ ಆರೋಗ್ಯಸುಖವು ದೇರೆ ಯಾವ ಇತರ ಮದ್ದುಗಳಿಂದಲಾದರೂನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮಿ. ಜಿ. ಆರ್. ಗಾಯಿಕವಾಡ, (ಸಕ್ರಿಯ ಮಾಮುಲತದಾರರು—ವಿ.ಪಿ. ದ್ವಾರಾ ಅದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳಉತ್ತಮವಿದೆ. ಒಮ್ಮೆಗೆಯೇ ಇಡೀ ಶೀಶೆ ತರಿಸುವರೇ ಈ ಔಷಧಿಯ ಗುಣ ದೋಷದ ನಂಬಿಕೆ ಇಲ್ಲದಾದ್ದಲ್ಲಿ ನಾಲ್ಕಾಣೆಯ ಸ್ಟಾಂಪು ರವಾನಿಸಿದ್ದಲ್ಲಿ 2 ದಿನಕ್ಕಾಗುವ ಔಷಧಿಯ ಶೀಶೆ 1ನ್ನು ಮುಫತ್ತಾಗಿ ಕಳುಹಿಸುವೆವು.

ಏಜಂಟರು:—ಡಿ. ಊಲನ್‌ಮಾರ್ಟ್. ಮಂಗಳೂರು.

The Anglo Indian Drug & Chemical Company,
155, Market, Jumma Musid BOMBAY

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು, ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು: ಬಾಟ್ಲಿಗೆ ೮ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.





ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಡೋಂಗರೆ ಇವರ ಬಾಲಾಮೃತ

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದ ಅಶಕ್ತತೆಯಿಂದುಂಟಾದ ರೋಗಗಳು ಸಂಪೂರ್ಣವಾಗಿ ಇಲ್ಲದಂತಾಗುತ್ತವೆ. ನಮ್ಮ ಬಾಲಾಮೃತವನ್ನೇ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದ್ದಲ್ಲಿ ಬಾಟ್ಲಿಯ ಮೇಲಿನ ನಮ್ಮ ಲೇಬಲಿನ ಪೂರಾ ಖಾತ್ರಿ ಮಾಡಿಕೊಂಡು ತೆಗೆದುಕೊಳ್ಳಿರಿ.

ಬಾಟ್ಲಿ ಒಂದರ ಕಿಮ್ಮತ್ತು 0—12—0. ವ್ಹಿ. ಪಿ. ಖರ್ಚು 0-4-0.

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ

Registered M. No. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ VIII ಮಂಗಳೂರು ತಾ. 17ನೇ ಶುಕ್ರವಾರ ಎಪ್ರಿಲ್ 1914. ಸಂಚಿಕೆ 16

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.

ಕೇಶವರ್ಧಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.

ಅಮೃತಾಂಜನ

AMRUTANJAN

ತಲೆನೋವು, ವಾತ, ಎದೆನೋವು,
ಸಂಧಿ ವಾತ, ಶಿರೋಭಾರ, ಸೊಂಟದ ನೋವು, ಕಫ,
ಅರ್ಧಾಂಗವಾಯು, ಹಲ್ಲು ನೋವು, ಘಾಯ,
ಶೀತ, ಕೆಮ್ಮು ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನು ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು **0-8-0** ಡಜನ್ ಒಂದಕ್ಕೆ **5-4-0** ವಿ. ಪಿ. ಪ್ರತ್ಯೇಕ

ಗಿರಾಕಿಗಳು ದಯಮಾಡಿ ಎಲ್ಲಾ ಔಷಧಗಳಿಗೆ ನಮ್ಮ ಮುಂಬಾಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ವಿ. ಪಿ. ಮೂಲಕ ಔಷಧಗಳನ್ನು ಈಗ ಸದ್ಯ ರವಾನಿಸುವ ಏರ್ಪಾಡು ಮಾಡಲಿಲ್ಲ.

ಅಮೃತಾಂಜನ ಡಿಪೋ,

109 ಫ್ರೇಯರ್ ರೋಡ,
ಮುಂಬಯಿ.

9 ಜಹಂಗೀರ್ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

ಪ್ರಕಟನೆ.

ಮಂಗಳೂರು ತೇರಬೀದಿಯಲ್ಲಿರುವ ಕೆ. ಯಮ್. ದಾಸಪ್ರಭುಗಳ ಬುಕ್ ಶಾಪಿನಲ್ಲಿ ಅಥವಾ ಗ್ರಂಥಕರ್ತರಿಂದ ಶೀದಾ ಕ್ರಯಕ್ಕೆ ದೊರೆಯುವ ಪುಸ್ತಕಗಳು.

ವಕೀಲ ಹಳಿಗೇರಿ ಕೃಷ್ಣರಾಯರಿಂದ ರಚಿಸಲ್ಪಟ್ಟವುಗಳು.

ಪ್ರತಿ ೧ಕ್ಕೆ ಟಪ್ಪಾಲ್ ಹಾಸಲು ವಿನಹ ಕ್ರಯ.

(೧) ಅಧ್ಯಾತ್ಮವಿಚಾರ, ಪ್ರತ್ಯಗಾತ್ಮನ ಚಿತ್ರ ಸಮೇತ ... ... ರೂ. ೨—೪—೦.

(೨) ಆ ಗ್ರಂಥ (ಅಧ್ಯಾತ್ಮವಿಚಾರ)ದ ಕುರಿತು ಮಾಧ್ವರು ಹೇಳುವ ಆಕ್ಷೇಪಣೆಗಳಿಗೆ ಉತ್ತರ. ಇದರಲ್ಲಿ ಪ್ರಸಂಗತಃ ಶ್ರೀಮದ್ಭಗವದ್ಗೀತೆ ಮೊದಲಾದ ಸ್ವದೇಶೀಯ ದೇಶೀಯ ಗ್ರಂಥಗಳ ಆಧಾರದ ಮೇಲೆ .ಮಧ್ವಮತವು ಸ್ವವಿರುದ್ಧವಾದದ್ದೆಂದು ವಗೈರೆ ತೋರಿಸೋಣಾಗಿರುತ್ತದೆ. ಕ್ರಯ ಆಣೆ ೦—೨—೦.

(೩) ಸ್ವಾಯಂಭುವ ಮನುವಂಶಾವಳಿ (ದೇವನಾಗರೀ ಅಕ್ಷರ) ಕನ್ನಡ ಉಪೋದ್ಘಾತ ಸಮೇತ ಕ್ರಯ ರೂಪಾಯಿ ೧—೦—೦.

ಈ ಪೈಕಿ ೧ನೇ ೩ನೇಯವುಗಳು ವೆಲ್ಯುಪೆಯೆಬಲ್ ಪೋಸ್ಟದ್ವಾರಾ ಕಳುಹಿಸೋಣಾಗಬಹುದು.

೨ನೇದರ ಬಗ್ಯೆ, ಅದನ್ನು ಕೊಂಡುಕೊಳ್ಳುವವರು ೨|| ಆಣೆಯ ಟಪ್ಪಾಲುಚೀಟುಗಳನ್ನು ಮುಂದಾಗಿ ಕಳುಹಿಸಬೇಕಾಗುವದು.

ಮಂಗಳೂರು ಟೌನ್‌ನಲ್ಲಿ ಕೊಂಡುಕೊಳ್ಳುವವರು ಹಾಸಲು ಕೊಡಬೇಕಾದ್ದಿಲ್ಲ.

H. Krishna Rao.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂ[illegible] ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಚಿನುಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ [illegible]ಗಿದೆ. ಕ್ರಯ 0—8—0.

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ಮರೆಯ ಬ್ಯಾಡಿರಿ. ಮರೆಯ ಬ್ಯಾಡಿರಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಶನ್ ದೊರಿಯುವದು

ಅಪಾಯವಿಲ್ಲದ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ಸೆಕೆ ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು. ಮರೆಯ ಬ್ಯಾಡಿರಿ.

3 ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14.

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ. 1—10—0. ಅಂಚೇ ಹಾಸಲು 4 ಆಣೆ.

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.
V. A. S. PANI,
No. 3, Erulappen Street, Madras.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ .ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.	ಮಂಗಳೂರು.
ಮು| ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೋಓಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಆಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ. 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್.
ತ್ರಿಶುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.


ಜೀನತಾನ
"JINTAN" Pill Case (Exact Size)
LOOKING GLASS
3 pills come out from here at each opening.
JINTAN

ಈಗಲೇ ಪರೀಕ್ಷಿಸಿ ನೋಡಿರಿ.

ಜೀನತಾನಿನ ವಿಶೇಷ ಗುಣಗಳು:—ಅತ್ಯುತ್ತಮವಾದ ಜೀರ್ಣಕಾರಿಯು, ಇದಕ್ಕೆ ಸಮಾನವಾದ ಜೀರ್ಣಕಾರಿಯು ಮುಂತ್ಪೊಂದಿರದು. ಜೀರ್ಣಶಕ್ತಿ ಕಡಮೆಯಾದ ಅನ್ನಕೋಶವು ಇದರ ಸೇವನೆಯಿಂದ ಎಂದೂ ಬಾಧಿಸಲ್ಪಡದು.

ರೋಗಗಳು ಅಂಟದಂತೆ ಮಾಡುವ ಪೂತಿನಾಶಕರ ವಿಶೇಷವಾದ ಗುಣವು ಇದಕ್ಕಿರುತ್ತದೆ. ಇದು ಉಪಯೋಗಿಸುವವರ ಶ್ವಾಸವನ್ನು ಸುವಾಸನೆಯುಳ್ಳದ್ದಾಗಿ ಮಾಡುವುದು.

ಹೊಗೆಸೊಪ್ಪು ವ ಇತರ ಮಾದಕ ಪದಾರ್ಥಗಳ ವಾಸನೆಯನ್ನು ಇದನ್ನು ಸೇವಿಸಿದ ಮಾತ್ರದಿಂದ ಪೂರ್ಣವಾಗಿ ಹೋಗಲಾಡಿಸಬಹುದು.

ಸಂಗೀತ ಹಾಡುವವರೂ, ಉಪನ್ಯಾಸಕರೂ, ಇದನ್ನು ಉಪಯೋಗಿಸಿದರೆ ಗಂಟ್ಲಿನ ನಾಳಗಳು ಶುದ್ಧವಾಗುತ್ತವೆ. ಬಾಯಿಯ ದುರ್ವಾಸನೆ ನಾಶವಾಗುವದು.

ಕ್ರಯ. 30 ಮಾತ್ರೆಗಳ್ಳುಳ್ಳ ಪೊಟ್ಟಣಕ್ಕೆ ರೂ. 0-1-6. 195 ಮಾತ್ರೆಗಳುಳ್ಳ ಡಬ್ಬಿಗೆ ರೂ. 0-8-0. 65 ಮಾತ್ರೆಗಳುಳ್ಳ ಪೊಟ್ಟಣಕ್ಕೆ 0-3-0. 455 ಮಾತ್ರೆಗಳುಳ್ಳ ಸುಂದರವಾದ ಕನ್ನಡಿ ಡಬ್ಬಿಗೆ ರೂ. 1.

ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಎಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

S. VAIDYA & Co.
Park Town, Madras.

ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮಱುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಆಂಡ್ ಕೊ. S. VAIDYA & Co.,
ಪಾರ್ಕ್ ಟೌನು, ಮದ್ರಾಸು. *Park Town, Madras.*

"ಆಯೊನಿಕ್ ಫಾರ್ಮೆಸಿ"

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗ್ರಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮೆಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co., ಎಸ್. ವೈದ್ಯಾ ಆಂಡ್ ಕೊ.
Park Town, Madras. ಪಾರ್ಕ್ ಟೌನ್ ಮದ್ರಾಸು.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ.

(*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್. ಎಸ್. ಸರ್ಜನ್. ಮಿರಾಜ್ ಆಸ್ಪತ್ರೆ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟವೆ. ಇವು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟಿಯಲ್ಲಿ ೪೦ ಮಾತ್ರೆಗಳಿವೆ, ಬಾಟ್ಲಿಗೆ ರೂ. ೧-೮-೦.

ಆರ್. ಮಾರ್ಟಿನ್ಸರ ಮೆಜಿಕ್ ಸ್ಪೆಸಿಫಿಕ್.

ಮೇಹ ಮೊದಲಾದ ರೋಗಗಳು ಎರಡೇ ಬಾಟ್ಲಿ ಸ್ಪೆಸಿಫಿಕಿನಿಂದ ಗುಣವಾಗುವಾಗ ನೀವು ನಿಮ್ಮ ಹಣವನ್ನು ಡಾಕ್ಟರರ ಚಿಕಿತ್ಸೆಗೆ ವೆಚ್ಚಮಾಡುವುದೇಕೆ? ಈ ಔಷಧಿಯನ್ನು ಒಂದೇ ಸಾರಿ ಕುಡಿಯುವ ಮಾತ್ರದಿಂದ ಮೂತ್ರ ಕೋಶದ ಉರಿಯು ನಿಂತುಹೋಗುವುದು. ಪುನಃ ತಲೆದೋರುವ ಸಂಭವವೇ ಇಲ್ಲ. ಈ ಔಷಧಿಯನ್ನು ತಕ್ಕೊಳ್ಳುವುದರಿಂದ ಯಾವದೊಂದು ಕೆಡಕು ಇಲ್ಲವೆಂಬುದು ನಿಶ್ಚಯವು. ಕ್ರಯ ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಮೆಜಿಕ್ ಮಾತ್ರೆಗಳು.

ಸ್ನಾಯುಗಳ ಬಲಹೀನತೆ, ಧಾತು ಬಲಹೀನತೆ, ಮೆದುಳಿನ ಅಶಕ್ತಿ ಇದರಿಂದ ಹುಟ್ಟುವ ವಿವಿಧ ರೋಗಗಳು ಅಂದರೆ ನಿದ್ರೆ ಬಾರದಿರುವುದು, ಕನಸು, ಕೈ ನಡುಗುವುದು, ಕಣ್ಣಿನ ಮೇಲೆ ಸಣ್ಣ ಸಣ್ಣ ಚುಕ್ಕೆಗಳು, ಚಿಂತೆ, ಮಾನಸಿಕ ಶಕ್ತಿಯು ಕುಂದು, ಮಲಬದ್ಧತೆ, ಮೊದಲಾದ ಸರ್ವ ವಿಧದ ರೋಗಗಳು ಗುಣಹೊಂದುವವು. ಎರಡು ಬಾಟ್ಲಿ ಕುಡಿಯುವುದರಿಂದ ಅತಿರೇಕ ಬಲವು ಬರುವುದು. ೩೦ ಮಾತ್ರೆಗಳುಳ್ಳ ಬಾಟ್ಲಿ ೧ಕ್ಕೆ ರೂ. ೧—೦—೦. ವಿ. ಪಿ. ಚಾರ್ಜು ೧—೩ ಬಾಟ್ಲಿ ವರೇಗೆ ೫ ಆಣೆ ಹೆಚ್ಚಿಗೆ. ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ.
ನಂಬ್ರ ಡಿ. ಫ್ರೆಯರರೋಡ್, ಮುಂಬಯಿ.

R. D. Ketely & Co.
No. D. Frere Road,
Near Wright & Co. Fort Bombay.

ಮುಳಿಯಿಲ್‌ರವರ ದಿವ್ಯೌಷಧಗಳು.

1. ಕೋಲೇರಾ ಮಾತ್ರೆ—ಇದನ್ನು ಜೇನಲ್ಲಿ ಕೊಡುವುದರಿಂದ ಉಬಾಲು ಜುಲಾಬು ಗುಣಪಡುವುದು. ಡಜನಿಗೆ ರೂ. 0—6—0.

2. ಕೋಲೇರಾ ಚೂರ್ಣ—ಈ ಚೂರ್ಣವನ್ನು ಜೇನಿನಲ್ಲಿ ಮಿಶ್ರಮಾಡಿ ಕೊಡುವ ವರೆಗೆ ರೋಗಿಯು ಬದುಕಿದ್ದರೆ ನಿಶ್ಚಯವಾಗಿ ಗುಣಪಡುವನು. ಎಷ್ಟು ಕಠಿಣತರವಾಗಿದ್ದರೂ 2 ಯಾ 3 ಸಾರಿಯ ಔಷಧಿ ಗುಣಪಡಿಸುವುದು. ಡಜನ್ ಪೊಟ್ಟಣಗಳಿಗೆ 0—12—0.

3. ಕೋಲೇರಾ ಮಿಕ್ಸ್‌ಚರ್—ಸ್ಥೂಲ ಶರೀರದ ವ ಶೀತ ಶರೀರದ ಮೇಲ್ಜಾತಿಯ ವ ಇತರ ಜಾತಿಯ ಹೆಂಗಸರಿಗೆ ಇದು ಅತಿ ಪ್ರಯೋಜನಕರವೆ. 2 ಔನ್ಸಿಗೆ ರೂ. 1—0—0.

4. ಚಂದ್ರೋದಯ ದ್ರಾವಕ—ಎಲ್ಲಾ ತರದ ಅಜೀರ್ಣಕ್ಕೆ ಸಕ್ಕರೆಯಲ್ಲಿ ಉಪಯೋಗಿಸುವುದು. 1 ಔನ್ಸಿಗೆ 1—4—0.

While Cholera was prevailing in Muliyar etc last year, I have tried the Cholera Pills prepared by Messrs Muliyil and Sons. I found them efficacious. I hope the public will appreciate it as it is cheap and gives speedy relief. (sd) A DEVAPPA PUNJA B.A.B.L.
Kasaragod, 18—3—13. Tahsildar.

5. ಪಲ್ಲೆ ಏಕ ಮಾತ್ರೆ. 6 ವಯಸ್ಸಿನ ಕೆಳಗಿನ ಮಕ್ಕಳಿಗಿರುವ ನೇವಸಕ್ಕೆ ಅತ್ಯುತ್ತಮ ಡಜನಿಗ ರೂ. 0—6—0.

6. ಸಿಂಹತ್ಯಾದಿ ಮಾತ್ರೆ, ಎಲ್ಲಾ ತರದ ಕೆಮ್ಮಿಗೆ ಜೇನು ವ ಆಡುಸೋಗೆ ರಸದಲ್ಲಿ ಸೇವಿಸುವುದು. ಡಜನಿಗೆ 0—4—0.

ನಾನು ಮಕ್ಕಳ ಶೀತ ವ ಕೆಮ್ಮಿಗೆ ಹೊಮ್ಯೋಪಥಿ ಔಷಧಿಗಳನ್ನು ಒಂದು ತಿಂಗಳು ಪ್ರಯೋಗ ಮಾಡಿದಾಗ್ಯೂ ಪ್ರಯೋಜನ ಕಂಡುಬಾರದೆ ಈ ಗುಳಿಗೆಗಳ ಸೈಕಿ ಸಿಂಹತ್ಯಾದಿ ಮತ್ತು ಪಲ್ಲೆ ಏಕ ಮಾತ್ರೆಯನ್ನು ಮೂರೇ ದಿನ ಪ್ರಯೋಗಿಸಿದ್ದಲ್ಲಿ ಥಕ್ಕನೇ ಗುಣವಾಯಿತು. ಸಣ್ಣ ಮಕ್ಕಳ ಕೆಮ್ಮು ಕಫಾದಿಗಳಿಂದ ಕಷ್ಟ ತೊಂದರೆ ಪಡುವ ಎಲ್ಲಾ ತಾಯಂದಿರಿಗೆ ಇದನ್ನು ಶಿಫಾರಸು ಮಾಡುತ್ತೇನೆ.

(sd.) P. SOANS, Pastor.
Karkal 14th June 13

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.
Muliyil & Sons, *Kasurgod, S. C.*

ಸ್ವದೇಶಾಭಿಮಾನಿ

☞ ಮಂಗಳೂರು, ಶುಕ್ರವಾರ ತಾರೀಕು 17ನೇ ಎಪ್ರಿಲ್ 1914. ☜

ಕಳೆದ ವಾರದ ವಿಶೇಷ ವೃತ್ತಾಂತ.

ದೇಶದ ಆಯಾ ಕಡೆಗಳಲ್ಲಿ ಕಳೆದ ವಾರದಲ್ಲಿ ನಡದಿರುವಂಥಾ ದೇಶೋದ್ಧಾರಕ ಪ್ರಯತ್ನಗಳ ವಿವರವನ್ನು ಪರಿಶೀಲಿಸುವುದು ಕರ್ತವ್ಯವಾಗಿರುವುದು. ಆಗ್ಯೆ ಇಂಥಾ ಪ್ರಯತ್ನಗಳು ವಿರಳವಾಗಿರುವ ಈ ಪ್ರಾಂತ್ಯದ ಶೋಚನೀಯ ಸ್ಥಿತಿಯು ವಾಚಕರಿಗೆ ವ್ಯಕ್ತವಾಗುವುದು. ದೇಶದ ಇತರ ಕಡೆಗಳಲ್ಲಿ ನಡಿಯುತ್ತಿರುವ ಪ್ರಜಾಕ್ಷೇಮಸಾಧನೆಯಲ್ಲಿ ನಮ್ಮ ಸಹಕಾರ ಸಹಾನುಭೂತಿಗಳು ಎಷ್ಟರ ಮಟ್ಟಿಗಿವೆ, ನಾವು ಮಾಡತಕ್ಕದ್ದೇನಿದೆ ಎಂಬುವ ಯೋಚನೆಯು ಈ ಮೂಲಕ ನಮ್ಮಲ್ಲಿ ಉಂಟಾಗುವುದು. ಈ ಕಾಲದಲ್ಲಿ ನಮ್ಮಲ್ಲಿಯ ವಿಶೇಷ ಸಮಾಚಾರವೇನೆಂಬುದನ್ನು ಯಾರಾದರೂ ಹಟವಿಡಿದು ಕೇಳಿದ್ದೇ ಆದರೆ ತಮ್ಮ ಹೆಮ್ಮಕ್ಕಳ ಕಿಶೆ ತುಂಬ ಜಾತಕಗಳ ಪ್ರತಿಗಳೊಡನೆ ಆಚಾರ್ಯ ಜೋಯಿಷರ ಮನೆಗಳಿಗೆ ಹೋಗಿ ವರರನ್ನು ಹುಡುಕಲಾರದೆ ತಳಮಳಗೊಳ್ಳುತ್ತಿರುವವರ ಪ್ರಸ್ತಾಪವೇ ವಿಶೇಷವೆಂತ ಹೇಳಬೇಕಾಗುವುದು. ಇಂಥವರಿಗೆ ಬಂಗಾಳೆಯಿಂದ ವಿಶೇಷ ವಾರ್ತೆಯಿರುವುದು. ಬಂಗಾಳೆಯಲ್ಲಿ ನಿತ್ಯ ಚರಣಸೇನ ಎಂಬ ವಕೀಲರ ೧೪ ವರ್ಷ ಪ್ರಾಯದ ಚಾರು ಬಾಲಾ ದೇವಿಯು ತನ್ನ ಪಿತನನ್ನು ವರದಕ್ಷಿಣೆಯ ವಿಪರ್ಯದಿಂದ ಉಳಿಸುವರೆ ಆತ್ಮಘಾತವನ್ನು ಮಾಡಿಕೊಂಡಳು. ಹೆಮ್ಮಕ್ಕಳ ಈ ಸಂಕಷ್ಟ ನಿವಾರಣಾರ್ಥವಾಗಿ ದೇಶದ ಆಯಾ ಭಾಗಗಳಲ್ಲಿ ಸಭೆ ಕೂಡಿ ಈ ವಿಷಯವು ಚರ್ಚಿಸಲ್ಪಡುವುದಾದರೂ ನಮ್ಮಿ ಪ್ರಾಂತ್ಯವು ಈ ವಿಷಯದಲ್ಲಿ ತಟಸ್ಥಭಾವವನ್ನೇ ಅವಲಂಬಿಸಿಕೊಂಡಿರುವುದು.

ಎಲ್ಲಾ ವಿಧದ ಕೋಲಾಹಲಗಳಿಗೆ ತೌರುಮನೆಯಾದ ಬಂಗಾಳೆಯಲ್ಲಿ ಗತ ವಾರದಲ್ಲಿ ನಡದ ಹಲವು ಸಮಚಾರಗಳಲ್ಲಿ ಕೊಮಿಲ್ಲಾದಲ್ಲಿ ಕೂಡಿದ ಬಂಗಾಳ ಪ್ರಾಂತಿಕ ಸಭಾ ವೃತ್ತಾಂತವು ವಿಶೇಷವಾದದ್ದಾಗಿರುವುದು. ಬಂಗಾಳದ ವಕೀಲರ ವೃಂದದಲ್ಲಿ ಸಮರ್ಥರಾದ ಬಹುಮಾನಪಟ್ಟ ವ್ಯೋಮಕೇಶ ಚಕ್ರವರ್ತಿಯವರನ್ನು ಪ್ರಾಂತಿಕ ಸಭೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಸಭಿಕರನ್ನು ವಿಜ್ಞಾಪಿಸಿಕೊಂಡು ಬಹುಮಾನಪಟ್ಟ ಸುರೇಂದ್ರನಾಥ ಬೆನರ್ಜಿಯವರು ಭಾಷಣವನ್ನು ಮಾಡಿದರು. ಈ ಭಾಷಣದಲ್ಲಿ ವಕೀಲರ ಮಹಾತ್ಮೆಯನ್ನು ಕುರಿತು ಹೇಳಿದ ಮಾತುಗಳನ್ನು ನಮ್ಮಲ್ಲಿಯ ವಕೀಲ ವೃಂದದವರೂ ತಿಳಕೊಳ್ಳಬೇಕಾಗಿದೆ. ಲೋಕ ಹಿತಕರವಾದ ಮತ್ತು ಸ್ವತಂತ್ರವಾದ ಸಾರ್ವಜನಿಕ ಭಾವವು ವಕೀಲರಿಂದಲೇ ಮೊಳೆಯತಕ್ಕದ್ದಾಗಿರುವುದು. ಪ್ರಜಾಭಿಪ್ರಾಯವೂ ಇವರಿಂದಲೇ ಹೊರಡತಕ್ಕದ್ದಾಗಿರುತ್ತದೆ. ಸಭಾಧ್ಯಕ್ಷಸ್ಥಾನವನ್ನು ವಿಶೇಷ ಸ್ವಾರ್ಥ ತ್ಯಾಗದಿಂದ ವಹಿಸಿಕೊಂಡಂಥಾ ಚಕ್ರವರ್ತಿಯವರ ಅನುಸರಣೆಯನ್ನು ವಕೀಲರೆಲ್ಲರೂ ಅನುಸರಿಸಬೇಕು. ಸುರೇಂದ್ರನಾಥ ಬೆನರ್ಜಿಯವರ ಈ ಮಾತುಗಳಿಗೆ ದೃಷ್ಟಾಂತಗಳು ಬೇಕಾದರೆ ಅವುಗಳು ಪ್ರಕೃತ ಲೋಕದ ಎಲ್ಲಾ ಕಡೆಗಳಲ್ಲಿಯೂ ನೋಡ ಸಿಕ್ಕುವವು. ಪ್ರಪಂಚದಲ್ಲಿ ಸರಕಾರಗಳ ಆಡಳಿತೆಯ ಭಾರವೆಲ್ಲವೂ ಪ್ರಕೃತ ವಕೀಲ ವರ್ಗದವರಿಂದಲೇ ನಿರ್ವಹಿಸಲ್ಪಟ್ಟಿರುವುದು. ಲೋಕದಲ್ಲಿ ಅತೀ ಶ್ರೇಷ್ಟವಾದ ಬ್ರಿಟಿಷ್ ಪಾರ್ಲಿಮೆಂಟ ಸಭೆಯ ಪ್ರಧಾನ ಮಂತ್ರಿಗಳು ಸಹ ವಕೀಲರ ತರಗತಿಯವರಾಗಿರುವರು. ಪ್ರಕೃತ ವಕೀಲರ ರಾಜ್ಯವು ಮೆರೆಯುತ್ತಿರುವುದು ಎಂಬ ಒಬ್ಬ ಪಾಶ್ಚಾತ್ಯ ಪಂಡಿತರ ಅನುಭವದ ಮಾತೂ ಸಹ ಇದೆ. ನಮ್ಮ ಜಿಲ್ಲೆಯಲ್ಲಿ ಈ ತರಗತಿಗೆ ಸೇರಿದ ವಿದ್ಯಾವಂತರ ಸಂಖ್ಯೆಯು ಕಡಿಮೆಯಾಗಿರದು. ಬೆನರ್ಜಿಯವರು ತೋರಿಸಿಕೊಟ್ಟ ಅನುಸರಣೆಯನ್ನು ಹೆಚ್ಚಿನ ಆಸಕ್ತಿಯಿಂದ ಇವರು ಕೈಕೊಳ್ಳುವುದು ಮಾತ್ರ ಇನ್ನು ಇಲ್ಲಿ ನೆರವೇರಬೇಕಾದ ಕಾರ್ಯವಾಗಿರುವುದು.

ವಕೀಲರು ಪ್ರಜಾಹಿತವನ್ನು ಹೇಗೆ ಸಾಧಿಸುತ್ತಿರುವರೆಂಬುದಕ್ಕೆ ಇನ್ನು ದೃಷ್ಟಾಂತಗಳು ಬೇಕಾದರೆ ಕಳದವಾರದಲ್ಲಿಯೇ ಈ ಸಂಸ್ಥಾನಕ್ಕೆ ಸೇರಿದ ತಂಜಾವೂರು ಜಿಲ್ಲೆಯಲ್ಲಿ ನಡದ ಜಿಲ್ಲಾ ಪರಿಷತ್ತಿನ ವೃತ್ತಾಂತದಿಂದ ತಿಳಿಯಬಹುದು. ಆ ಜಿಲ್ಲೆಗೆ ವಿಶೇಷವಾದ ಸಂಕಷ್ಟಗಳನ್ನು ಒಂದೊಂದಾಗಿಯೇ ಸಭೆಯಲ್ಲಿ ಪರ್ಯಾಲೋಚಿಸಿದ ನಂತರ ತಮಗೂ ದೇಶದ ಇತರ ಕಡೆಗಳ ಜನಗಳಿಗೂ ಸಾಮಾನ್ಯವಾಗಿರುವ ಸಂಕಷ್ಟಗಳ ನಿವಾರಣೆಯ ವಿಷಯಗಳನ್ನೂ ಸರಕಾರದವರು ಈ ಬಗ್ಯೆ ಏರ್ಪಡಿಸಬೇಕೆನ್ನುವ ಕಾನೂನು ಮಸೂದೆಯ ಪ್ರಸ್ತಾಪಗಳನ್ನೂ ಜಿಲ್ಲಾ ಸಭೆಯಲ್ಲಿ ವಾದಿಸಿದರು. ಈ ಎಲ್ಲಾ ಕೆಲಸವು ಮುಖ್ಯವಾಗಿ ವಕೀಲರಿಂದಲೇ ನಡಿಸೋಣಾಯಿತು. ಗ್ರಾಮ ಮುನ್ಸೀಫರು ಮತ್ತು ಗ್ರಾಮ ಮೇಜಿಸ್ಟ್ರೇಟರಾಗಿರುವವರನ್ನು ವರ್ಗದಾರರು ಆರಿಸಿ ತೆಗಿಯಬೇಕು, ಗ್ರಾಮದ ಸರಕಾರಿ ಮಣಿಗಾರರಿಗೆ ಈ ಅಧಿಕಾರಗಳನ್ನು ಕೊಡಕೂಡದು, ಗ್ರಾಮ ಪಂ ಳನ್ನು ಇನ್ನು ಬೇಗನೇ ಸ್ಥಾಪಿಸಬೇಕು. ಭೂಕಂದಾಯವನ್ನು ಸೆಟ್ಲುಮೆಂಟುಗಳ ಕ ಪದೇ ಪದೇ ನಿರ್ಣಯಿಸುವ ಕ್ರಮದ ತಿದ್ದುಪಡಿ, ಜಾನುವಾರುಗಳಿಗೆ ಮೇವಿ ಬಗ್ಯೆ ಬೇಕಾಗುವ ಸ್ಥಳಗಳ ಏರ್ಪಾಡು ಈ ಎಲ್ಲಾ ವಿಷಯಗಳನ್ನು ಕ್ರಮವಾಗಿ ವಾ ಪ್ರಜಾ ಸಾಮಾನ್ಯರ ಅಭಿಪ್ರಾಯಗಳನ್ನು ತಿಳಿದು ಈ ಬಗ್ಯೆ ಬೇಕಾದ ನಿರ್ಣಯಗಳನ್ನು ಸಭೆಯಲ್ಲಿ ಮಂಜೂರುಮಾಡಿದರು. ಇಂಥಾ ಸಂಕಷ್ಟಗಳು ನಮ್ಮಲ್ಲಿ ಸಾಮಾನ್ಯವಾಗಿದ್ದರೂ ಜಿಲ್ಲಾ ಸಭೆಯ ಅವಶ್ಯಕತೆಯು ಇನ್ನೂ ಇಲ್ಲಿ ಮೂಡಿರುವಂತೆ ತೋರುದಿಲ್ಲ. ಜಿಲ್ಲೆಯ ಪ್ರತಿ ಕೋರ್ಟಿನಲ್ಲಿ ಎಂಬಂತೆ ದುರ್ವ್ಯಾಜ್ಯಗಳಲ್ಲಿ ಹಲವು ದೇ ಸ್ಥಾನಗಳ ಹಣವು ನಿಷ್ಕಾರಣವಾಗಿ ವಕೀಲರ ಮೂಲಕವೇ ವ್ಯಯವಾಗುತ್ತಿರು ದಾದರೂ 'ಧರ್ಮರಕ್ಷಣ ಸಭಾ' ಎಂಬುವ ಸಂಸ್ಥೆಯ ಮೂಲಕವಾಗಲೀ ಅಥವಾ ವಸ್ಥಾನಗಳ ಕಮ್ಮಿಟಿ ಮೆಂಬರರನ್ನು ಎಚ್ಚರಿಸಿಯಾದರೂ ಧರ್ಮ ಸಂಸ್ಥೆಗಳನ್ನು ವ್ಯ ಸ್ಥೆಗೊಳಿಸುವ ಪ್ರಯತ್ನವು ಇಲ್ಲಿ ತೋರದು. ತಂಜಾವೂರಿನ ಜಿಲ್ಲಾ ಪರಿಷದದವ ಈ ವಿಷಯವನ್ನು ತಕ್ಕ ರೀತಿಯಲ್ಲಿ ಪ್ರಸ್ತಾಪಿಸಿ ತಮ್ಮಲ್ಲಿಯ ಕಮಿಟಿ ಮೆಂಬರರನ್ನು ಈ ಬಗ್ಯೆ ಎಚ್ಚರಿಸಬೇಕೆಂತ ನಿರ್ಣಯಿಸಿರುತ್ತಾರೆ. ಜಿಲ್ಲಾ ಪರಿಷತ್ತು ಎಂಬುವ ರಾಜ್ಯ ಕೀಯ ಸಭೆಯು ಮುಗಿದೊಡನೆ ಸಾಮಾಜಿಕ ವಿಷಯಗಳನ್ನು ಪ್ರಸ್ತಾಪಿಸಲು ಪ್ರತ್ಯೇ ಸಭೆಯೂ ಬ್ರಹ್ಮಜ್ಞಾನ ಸಂಘದ ಸಭೆಯೂ ಅಲ್ಲಿಯೇ ಕೂಡಿದವು.

ಬೆಜವಾಡದಲ್ಲಿ ಕೂಡಿದ ಆಂಧ್ರರ ಮಹಾಸಭೆಯ ಪ್ರಸ್ತಾಪವಿಲ್ಲದೆ ಕಳದ ವ ರದ ವಿಶೇಷ ವೃತ್ತಾಂತಗಳ ಪರಿಶೀಲನೆಯು ಸಂಪೂರ್ಣವಾಗದು. ಬಂಗಾಳಿ ಭಾ ಯನ್ನಾಡುವವರು ಹೇಗೆ ಒಂದೇ ಸಂಸ್ಥಾನದಲ್ಲಿ ಒಂದೇ ಸರಕಾರದ ಆಡಳಿತೆಯಲ್ಲಾಗಿ ವರೋ ಹಾಗೆಯೇ ತೆಲುಗು ಭಾಷೆಯನ್ನಾಡುವ ಈ ಸಂಸ್ಥಾನದಲ್ಲಿರುವ ೧೭ ಮಿಲಿಯ ಜನಸಂಖ್ಯೆ ಆಂಧ್ರರಿಗೆ ಒಂದು ಪ್ರತ್ಯೇಕ ಸಂಸ್ಥಾನವನ್ನು ಸ್ಥಾಪಿಸಿ ಈ ಸಂಸ್ಥಾನದ ಬಗ್ಯೆ ಒಂದು ಪ್ರತ್ಯೇಕ ಸರಕಾರ, ಒಬ್ಬ ಗವರ್ನರ, ನ್ಯಾಯ ವಿಧಾಯಕ ಸಭೆ ಮತ್ತು ಕಾರ್ಯನಿರ್ವಾಹಕ ಸಭೆ ಪ್ರತ್ಯೇಕ ಯುನಿವರ್ಸಿಟಿ ಮೊದಲಾದ ಏರ್ಪಾಡುಗ ಆಂಧ್ರರ ಅಭಿವೃದ್ಧಿಯ ಸಾಧನೆಗಳನ್ನು ಮಾಡಬೇಕೆಂಬುದು ಈ ಮಹಾ ಸಭೆಯ ಉದ್ದೇಶವಾಗಿದೆ.

ಪ್ರಜಾಭಿವೃದ್ಧಿಯ ಸಾಧನಗಳ ವೃತ್ತಾಂತವನ್ನು ಇಲ್ಲಿಯ ವಿದ್ಯಾವಂತರು ಪದೇ ಪದೇ ಹೀಗೆ ವೃತ್ತ ಪತ್ರಿಕೆಗಳ ಮೂಲಕ ಓದಿ ತಿಳಿಯುತ್ತಿರುವರಾದರೂ ಹೀಗೆ ಓದಿತಿ ಅನುಭವವನ್ನು ಇಲ್ಲಿ ಕಾರ್ಯ ರೂಪಗೊಳಿಸುವ ಸುಸಮಯವು ಯಾವಾಗ ಬಂದೊ ಗುವುದೋ ನೋಡಲಿಕ್ಕಿದೆ.

ಸ್ಟುಡೆಂಟ್ಸ್ ಬ್ರದರ ಹೂಡ್

ಮಂಗಳೂರಿನ ವಿದ್ಯಾರ್ಥಿ ಭ್ರಾತೃಗಳ ಸಂಘವು.

ಈ ಸಂಘದ ಕಳದ ಒಂದು ವರುಷದ ವೃತ್ತಾಂತವು ನಮ್ಮ ಹಸ್ತಗತವಾದುವುದು. ವಿಶೇಷ ಆಸಕ್ತಿಯಿಂದಲೂ ಇಂಥಾ ಆಸಕ್ತಿಗೆ ತಕ್ಕದಾದಂಥಾ ಮನಃಪೂರ್ತಿಯಿಂದಲೂ ಈ ವಿದ್ಯಾರ್ಥಿ ಸಂಘದವರು ತಮ್ಮ ಚಟುವಟಿಕೆಯನ್ನು ವ್ಯಕ್ತಗೊಳಿಸಲು ಪ್ರಯತ್ನಿಸುವರೆಂಬದು ಇವರ ಪ್ರಥಮ ವರುಷದ ವರದಿಯಿಂದ ತೋರಿಬರುತ್ತದೆ. ಪ್ರತಿ ಆದಿತ್ಯವಾರ ಈ ಸಂಘದವರು ಸಭೆ ಕೂಡುವುದರ ಹೊರತು ಕಳೆದ ವ ದಲ್ಲಿ ೨೫ ಸಲ ವಿದ್ಯಾರ್ಥಿಗಳ ಸಭೆಗಳನ್ನು ಕೂಡಿಸಿ ವಾಙ್ಮಯ ಮತ್ತು ಸಮಾಜಪ ವಾದ ವಿಷಯಗಳ ಉಪನ್ಯಾಸಗಳನ್ನೋದಿ ಬೇಕಾದ ವಾದಗಳನ್ನು ನಡಿಸಿರುವರು. ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಯವರಂಥಾ ಸದ್ಗೃಹಸ್ಥರುಗಳಿಂದ ಕಳದ ವರುಷ ಕಾಲದಲ್ಲಿ ೧೨ ಸಲ ವಿದ್ಯಾರ್ಥಿ ವೃಂದಕ್ಕೆ ನಾನಾ ಬಗೆಯ ಸದ್ಬೋಧೆಗಳನ್ನು ಸಹ ಕೊಡಿಸಿರುತ್ತಾರೆ. ದಕ್ಷಿಣ ಆಫ್ರಿಕದ ಭಾರತೀಯರ ಪರವಾಗಿ ಚಂದಾ ದ್ರವ್ಯವನ್ನು ವಿಶೇಷ ಆಸಕ್ತಿಯಿಂದ ಈ ಸಂಘದ ವಿದ್ಯಾರ್ಥಿಗಳು ಕೂಡಿಸಿದರು.

ಪಾಠಭ್ಯಾಸದೊಡನೆ ಮುಂದಿನ ಸಾರ್ಥಕ ಜೀವನಕ್ಕೆ ಅವಶ್ಯಕವಾದ ಸ ಸೇವೆಯ ಅಭ್ಯಾಸಕ್ಕೆ ಆಸ್ಪದ ಕೊಡುವ ಸಾಧನದ ಏರ್ಪಾಡು ಈ ವಿದ್ಯಾರ್ಥಿ ಸಂಘ ಕಾರ್ಯ ಕ್ರಮಗಳ ವಿವರದಲ್ಲಿ ಸೇರಿರುವುದು. ಸಂಘದ ಮೆಂಬರರು ತಮ್ಮೊಳಗೆ ಪರಸ್ಪರ ಪ್ರೀತಿಯಿಂದಿರುವುದು, ಸಂಘದ ಪರವಾಗಿರುವ ಅಭಿಮಾನವನ್ನು ಸಂಘ ಕಾರ್ಯ ಸಾಧನಗಳಲ್ಲಿ ಕಾರ್ಯತಃ ವ್ಯಕ್ತಗೊಳಿಸಿ ಸಂಘಕ್ಕೆ ಶ್ರೇಯಸ್ಸನ್ನು ತರುವುದು ಈ ಉದ್ದೇಶಗಳ ಸಾಧನಾರ್ಥವಾಗಿ ಸಂಘದ ಮೆಂಬರರಾಗಿರುವ ವಿದ್ಯಾರ್ಥಿಗ ಉದಾತ್ತ ಆದರ್ಶಗಳನ್ನು ತಮ್ಮ ಯೋಚನೆಯಲ್ಲಿರಿಸಿಕೊಳ್ಳಬೇಕೆಂಬುದನ್ನು ಒಪ್ಪಿ ಳ್ಳುವ ವಿದ್ಯಾರ್ಥಿಗಳೆಲ್ಲರೂ ಜಾತಿ ಮತ ಭೇದಗಳನ್ನು ಲೆಕ್ಕಿಸದೆ ಈ ಸಂಘದ ಮೆಂ ರರಾಗಬಹುದು.

ದ್ಯಾರ್ಥಿಗಳಲ್ಲಿ ಈ ರೀತಿ ತೋರಿಬಂದ ಆಸಕ್ತಿಯು ಸ್ತುತ್ಯವಾಗಿರುತ್ತದೆ. ಗಳ ಇಂಥಾ ಆಸಕ್ತಿಯನ್ನು ವ್ಯವಸ್ಥೆಗೊಳಿಸಿ ಈ ಸಂಘದಿಂದ ನಮ್ಮೂರಿಗೆ ಉಪಕಾರವನ್ನು ಮಾಡಿಸುವುದು ವಿದ್ಯಾವಂತರ ಕೈಸೇರಿರುವುದು. ಈ ಬಗ್ಯೆ ವಜನ ವಿದ್ಯಾರ್ಥಿಗಳ ಈ ಭ್ರಾತೃಗಳ ಸಂಘಕ್ಕೆ ಪ್ರಜಾ ಮುಂದಾಳುಗಳೂ ಸಹ ೇರುವುದು ಅಗತ್ಯವಾಗಿರುವುದು. ಆಗ್ಯೆ ಶಿಕ್ಷಣ ಬಲದಿಂದ ಸಹ ಕಳೆದು ಬಿಡಲು ಸಾಧ್ಯವಲ್ಲದ ಜಾತಿ ವೈಷಮ್ಯ ಇತ್ಯಾದಿಗಳನ್ನು ದೂರ ಅಟ್ಟಲು ಸಂಭವ ದೊರಕುವುದು.

ದ್ವಾದಶ ಜ್ಯೋತಿರ್ಲಿಂಗಗಳು.

ಹನ್ನೆರಡು ಜ್ಯೋತಿರ್ಲಿಂಗಗಳ ವರ್ಣನೆಯು ಕೆಳಗಿನ ಶ್ಲೋಕಗಳಲ್ಲಿ ಇರುತ್ತದೆ.

ಸೌರಾಷ್ಟ್ರೇ ಸೋಮನಾಥಂ ಚ-| ಶ್ರೀ ಶೈಲ್ಯಂಮಲ್ಲಿಕಾರ್ಜುನಂ ||
ಉಜ್ಜಯಿನ್ಯಾಂ ಮಹಾ ಕಾಲಂ | ಓಂಕಾರಮಮರೇಶ್ವರಮ್ ||
ಕೇದಾರಂ ಹಿಮವತ್ಪೃಷ್ಟೇ | ಡಾಕಿನ್ಯಾಂ ಭೀಮಶಂಕರಂ ||
ವಾರಾಣಸ್ಯಾಂ ತುವಿಶ್ವೇಶಂ | ತ್ರ್ಯಂಬಕ ಗೌತಮಿಾ ತಟೇ ||
ವೈಜನಾಥಂ ಚಿತಾಭೂಮೌ | ನಾಗೇಶಂ ದಾರುಕಾವನೇ ||
ಸೇತು ಬಂಧೇತು ರಾಮೇಶಂ | ಘೃಷ್ಣೇಶಂ ಚ ಶಿವಾಲಯೇ ||

ಸೋಮನಾಥಕ್ಕೆ:—ವೇರಾವಳ ಬಂದರ, ಸೋಮನಾಥ ಪಟ್ಟಣವ ಪ್ರಭಾಸ ಪಾಟಣ ಎಂತ ಮೂರು ಹೆಸರುಗಳಿರುತ್ತವೆ. ಈ ಕ್ಷೇತ್ರವು ಜುನಾಗಡದ ನಬಾಬನ ರಾಜ್ಯದಲ್ಲಿ ಕಾಠೆವಾಡದ ಸಮುದ್ರದ ತೀರದ ಮೇಲಿರುತ್ತದೆ. ಸೋಮನಾಥದ ಪ್ರಾಚೀನ ದೇವಾಲಯವನ್ನು ಮುಸಲ್ಮಾನರು ಸುಲಿದು ಅಲ್ಲಿ ಮಶೀದಿ ಕಟ್ಟಿದರು. ಆ ದೇವಾಲಯವು ಸುಣ್ಣ ಹಚ್ಚಿದ್ದು ಈಗ ಹಾಳು ಬಿದ್ದದ್ದು ಈಗಲೂ ನೋಡಬಹುದು. ಎರಡನೇ ದೇವಾಲಯವು ಅಹಲ್ಯಾಬಾಯಿಯು ಕಟ್ಟಿಸಿದ್ದು. ಅದಕ್ಕೆ ಗಾಯಕವಾಡ ಕಾರದ ನಾಮಾಂಕಿತ ದಿವಾನರಾದ ವಿಠೋಬಾ ದೇವಾಜಿಯವರು ನಾಲ್ಕು ಸಾವಿರ ರೂಪಾಯಿ ಉತ್ಪನ್ನದ ಇನಾಮು ಜಮಿಾನು ಬಿಟ್ಟಿರುತ್ತಾರೆ. ಆದುದರಿಂದ ಈ ದೇವಾಲಯಕ್ಕೆ ಚೌಘುಡಾ ವ ಬಹಳೇ ಸೇವಕ ಮಂಡಳಿಯು ಸಹಾ ಇರುತ್ತದೆ. ಇಲ್ಲಿ ಸಮುದ್ರ ಇದ್ದು ಇದೇ ತೀರ್ಥ ಸ್ಥಳವಾಗಿರುತ್ತದೆ. ಇಲ್ಲಿ ಹತ್ತರವೇ ಎರಡನೇ ಬಂದು ಹಿರಣ್ಯನದಿ ಎಂಬ ಹೆಸರಿನ ಹೊಳೆಯು ಇದ್ದು, ಈ ನದಿಯ ಮೇಲೆಯೇ ಸರ್ವಯಾದವ ವಂಶವು ನಿರ್ಮೂಲವಾಯಿತೆಂತ ಹೇಳುತ್ತಾರೆ. ಮತ್ತು ಆ ಸ್ಥಳವನ್ನು ಈಗಲೂ ತೋರಿಸುತ್ತಾರೆ. ಹಾಗೆಯೇ ಅಲ್ಲಿ ಶ್ರೀ ಕೃಷ್ಣನಿಗೆ ಬಾಣ ಹತ್ತಿದ ಸ್ಥಳವನ್ನು (ಭಲ್ಲುಕಾ [illegible]) ಮತ್ತು ಅವನು ದೇಹ ವಿಸರ್ಜನ ಮಾಡಿದ ಸ್ಥಳವನ್ನು ತೋರಿಸುತ್ತಾರೆ. ಈಗ ಅಲ್ಲಿ ನಬಾಬನು ಒಂದು ಮಶೀದಿ ಕಟ್ಟಿಸಿರುತ್ತಾನೆ. ಇದಲ್ಲದೆ ಊರೆ ಸಾವಿರಾರು ಕಲ್ಲಿನ ಶಿವಾಲಯಗಳಿರುತ್ತವೆ. ಆದ್ದರಿಂದ ಇದಕ್ಕೆ ಶಿವಪುರಿ ಎಂತ ಹೆಸರು ಒಪ್ಪುವದಲ್ಲದೆ ಅದು ಪೂರ್ವದಲ್ಲಿ ಬಹಳ ದೊಡ್ಡದಿದ್ದಿರಬೇಕೆಂತ ಅನುಮಾನ ಹೊರಡುತ್ತದೆ. ಇಲ್ಲಿ ಗನಿಯಿಂದ ಚಲೋ ಕಲ್ಲುಗಳು ಸಿಗುತ್ತವೆ. ಮತ್ತು ಅವುಗಳನ್ನು ಇಟ್ಟಿಗೆಗಳಂತೆ ಉಪಯೋಗ ಮಾಡುತ್ತಾರೆ. ಸೋಮನಾಥದ ಹೊಸ ದೇವಸ್ಥಾನದಲ್ಲಿ ನರ್ಮದೆಯೊಳಗಿನ ಎರಡು ಮೊಳ ಎತ್ತರದ ಒಂದು ಬಾಣವನ್ನು ಸ್ಥಾಪಿಸಿದ್ದಾರೆ.

ಶ್ರೀಶೈಲ್ಯ ಮಲ್ಲಿಕಾರ್ಜುನ ಲಿಂಗವು ಕೃಷ್ಣಾನದಿಯ ತೀರದಲ್ಲಿ ನಿಜಾಮ ಸರಕಾರದ ರಾಜ್ಯದಲ್ಲಿರುತ್ತದೆ. ಶ್ರೀ ಶೈಲ್ಯದ ದೇವಾಲಯವು ಸಣ್ಣದಿರುತ್ತದೆ. ಈ ಕ್ಷೇತ್ರವು ಈಗ ಕೃಷ್ಣ ರೈಲ್ವೆ ಸ್ಟೇಶನಿನಿಂದ ೫೫ ಹರದಾರಿ ದೂರ ಇರುತ್ತದೆ.

ಮಹಾಕಾಲ ಲಿಂಗವು ಉಜ್ಜಯಿನೀ ಶಹರಿನಲ್ಲಿರುತ್ತದೆ. ಈ ಪಟ್ಟಣವು ವಿಕ್ರಮಾದಿತ್ಯನ ಕಾಲಕ್ಕಿಂತಲೂ ಹಿಂದಿನದ್ದಿದ್ದು ಅದಕ್ಕೆ ೨೦೦೦ ವರ್ಷಕ್ಕಿಂತಲೂ ಹೆಚ್ಚು ಕಾಲವಾಗಿರಬೇಕು. ಈಗ ಅಲ್ಲಿ ಸಿಂದಿಯಾ ಸರಕಾರದ ಅಮಲು ಇರುತ್ತದೆ. ಅಲ್ಲಿ ಕ್ಷಿಪ್ರಾ ನದಿಯು ಇರುತ್ತದೆ. ಈ ದೇವಸ್ಥಾನವು ಜೀರ್ಣಾವಸ್ಥೆಗೆ ಬಂದಿತ್ತು. ಇದನ್ನು ಮಹದಾಜಿಸಿಂದಿಯನು ಜೀರ್ಣೋದ್ಧಾರ ಮಾಡಿದನು.

ಓಂಕಾರ ಮಾಂಧಾತಾ ಜ್ಯೋತಿರ್ಲಿಂಗದ ದೇವಸ್ಥಾನವು ನರ್ಮದೆಯಲ್ಲಿ ಒಂದು ಬಂಡೆಯ ಮೇಲಿರುತ್ತದೆ. ಈ ದೇವಾಲಯವನ್ನು ಪೂರ್ವಕಾಲದಲ್ಲಿ ಸೂರ್ಯವಂಶದ ಅರಸನಾದ ಮಾಂಧಾತನೆಂಬವನು ಕಟ್ಟಿಸಿದನೆಂತ ಹೇಳುತ್ತಾರೆ.

ಬದರೀಕೇದಾರ್ರ ಲಿಂಗವು ಹರಿದ್ವಾರದಿಂದ ಉತ್ತರಕ್ಕೆ ೧೦೦ ಹರದಾರಿ ದೂರಕ್ಕೆ ಇರುತ್ತದೆ. ಇಲ್ಲಿ ಬದರಿನಾಥನ ಪೂಜಾರಿಗಳು, ರಾವುಳ ಬ್ರಾಹ್ಮಣರೆಂಬವರಿರುತ್ತಾರೆ. ಇತ್ತಲಾಗೆ ಇಲ್ಲಿಂದ ೧೨ ಹರದಾರಿ ದೂರಕ್ಕೆ ಶಂಕರಾಚಾರ್ಯರು ಜೋತಿರ್ಮಠ ಸ್ಥಾಪಿಸಿದ್ದಾರೆ. ಅಲ್ಲಿ ಜ್ಯೋತೀಶ್ವರ ಮಹಾದೇವ ಎಂಬ ಲಿಂಗವಿರುತ್ತದೆ. ಕೇದಾರದ ಮೇಲೆ ಹಿಮವು ಬಹಳ ಬೀಳುವದರಿಂದ ಆರು ತಿಂಗಳಿಗೆ ಒಂದು ಸಾರಿ ಹಿಮವು ಕರಗುವ ವೇಳ್ಯಕ್ಕೆ ಅಲ್ಲಿ ಹೋಗಲಿಕ್ಕೆ ದಾರಿಯಾಗುತ್ತದೆ. ಮತ್ತು ಆ ವೇಳ್ಯಕ್ಕೆ ಪೂಜಾರಿಗಳು ಅಲ್ಲಿಹೋಗಿ ಬಾಗಿಲು ತೆರಿಯುವಾಗ ಯಾತ್ರಿಕರು ಸಹಾ ಅವರ ಹತ್ತರ ಹೋಗುತ್ತಾರೆ. ಮತ್ತು ಸಾಯಂಕಾಲಕ್ಕೆ ವಾಪಸು ಬಂದು ಜ್ಯೋತಿರ್ಮಠದಲ್ಲಿ ಉಳಕೊಳ್ಳುತ್ತಾರೆ. ಇದು ಗರವಾಳ ಅಥವಾ ಕಮಾವು ಎಂಬ ಪ್ರಾಂತ್ಯದಲ್ಲಿರುತ್ತದೆ. ಇಲ್ಲಿ ಕಮಿಶನರ ಸಾಹೇಬರು ಇರುತ್ತಾರೆ. ಇದು ಶ್ರೀನಗರದ ಅರಸನ ತಾಬೇದಿರುತ್ತದೆ.

ಭೀಮಾಶಂಕರ ಎಂಬ ಜ್ಯೋತಿರ್ಲಿಂಗವು ಖಂಡಾಲದ ಘಟ್ಟದ ಮೇಲಿರುತ್ತದೆ. ಇದರ ಹತ್ತಿರ ಭೀಮಾನದಿಯ ಉದ್ಗಮ ಇರುತ್ತದೆ. ಈ ದೇವಸ್ಥಾನವನ್ನು ನಾನಾ ಫಡನವೀಸನು ಕಟ್ಟಿಸಿದ್ದು. ಈ ದೇವಾಲಯವಿರುವ ಅರಣ್ಯಕ್ಕೆ ಡಾಕಿನೀವನವೆಂತ ಹೆಸರು ಇರುತ್ತದೆ.

ವಿಶ್ವನಾಥನ ದೇವಸ್ಥಾನವು ಕಾಶಿಯಲ್ಲಿರುತ್ತದೆ. ಈ ಲಿಂಗದ ಪ್ರಾಚೀನ ದೇವಸ್ಥಾನವು ಮಶೀದಿಯಾಗಿರುತ್ತದೆ. ಆದರೆ ಅದರ ಅರ್ಧಭಾಗವು ಇನ್ನೂ ಉಳಿದಿರುವದರಿಂದ ಅದರ ಸಮಿಾಪದಲ್ಲಿಯೇ ನವೀನ ವಿಶ್ವನಾಥನ ಸ್ಥಾಪನೆಯಾಗಿಯದೆ. ವಿಶ್ವನಾಥನ ದೇವಸ್ಥಾನದ ಶಿಖರವನ್ನು ರಣಜಿತಸಿಂಗನು ಭಂಗಾರದಿಂದ ಮಡಾಯಿಸಿದ್ದಾನೆ. ಅಲ್ಲಿಯೇ ಹತ್ತರದಲ್ಲಿ ಜ್ಞಾನವಾಪೀ ವಗೈರೆ ಇರುತ್ತವೆ. ಇಲ್ಲಿಂದ ಮುಂದಕ್ಕೆ ಒಂದು ಮೈಲು ದೂರಕ್ಕೆ ಮಾನಮಂದಿರ ಎಂಬ ಹೆಸರಿನ ಸವಾಯಿ ಜಯಸಿಂಗನು ಜ್ಯೋತಿಷ ಶಾಸ್ತ್ರದ ಶೋಧಕೋಸ್ಕರವಾಗಿ ಕಟ್ಟಿಸಿರುವ ವೇದಶಾಲಾ ಇರುತ್ತದೆ. ,ಕಾಶಿಯಲ್ಲಿ ಬೌದ್ಧ ಜನರ ಸಾರನಾಥ ಎಂಬ ಪ್ರಸಿದ್ಧ ಸ್ಥಳವಿರುತ್ತದೆ. ಕಾಶಿಯ ಪೂರ್ಣವಸ್ತಿಯು ಮರಾಟೆಯವರ ರಾಜ್ಯಕಾರಭಾರದಲ್ಲಿ ಆಗಿದ್ದು ಹಿಂದಿನ ಫಕ್ತ ೪ ಸ್ಥಳಗಳು ಮಾತ್ರ ಇರುತ್ತವೆ. ಬಾಕಿ ಎಲ್ಲಾ ಘಾಟಗಳು ಶಿಂದಿಯಾ, ಹೊಲಕರ ಪೇಶವೆ ಮೊದಲಾದವರು ಕಟ್ಟಿಸಿದ್ದು. ಮನೆಗಳು ಸಹ ಅದೇ ವೇಳೆಯವು ಇರುತ್ತವೆ. ಇಲ್ಲಿ ಶಿವಾಲಯಗಳು ಬಹಳ ಇರುತ್ತವೆ. ಇದರಿಂದ ಪ್ರಾಚೀನ ಕಾಲದಿಂದ ಇದು ಶಿವಪುರಿಯೇ ಆಗಿರಬೇಕೆಂತ ಅನುಮಾನವು ಹೊರಡುತ್ತದೆ. ಕಾಶೀ ಪಟ್ಟಣವು ಗಂಗೆಯ ತೀರದಲ್ಲಿ ದೊಡ್ಡ ಭವ್ಯ ಶಹರ ಇದ್ದು ಇಲ್ಲಿಯ ಎಲ್ಲಾ ಮನೆಗಳು ಕಲ್ಲಿನಿಂದ ಕಟ್ಟಿಸಿದ್ದಿರುತ್ತವೆ, ವ ಈ ಕಲ್ಲುಗಳು ಕಟ್ಟಿಗೆಯ ಹಾಗೆ ಉಪಯೋಗಕ್ಕೆ ಬರುತ್ತವೆ.

ಮುಂದರಿಯುವುದು.

ಪ್ಲೇಗಬೇನೆ ಮತ್ತು ಇಲಿಗಳು.

ನಮ್ಮ ಭರತ ಖಂಡದಲ್ಲಿ ಪ್ಲೇಗ ಮಹಾಮಾರಿಯು ಕಾಲನ್ನಿಟ್ಟ ಕಳೆದ ೧೫ವರುಷಗಳಲ್ಲಿ ಸುಮಾರು ೮ ಮಿಲಿಯ ಜನಗಿಂತಲೂ ಹೆಚ್ಚಿಗೆ ಜನರು ಈ ಮಾರಿಗೆ ತುತ್ತಾದರು. ಚೀನದ ಒಳ ಪ್ರಾಂತ್ಯದ ದೂರಕ್ಕಿರುವ ಪ್ರದೇಶಗಳ ಎತ್ತರ ಸ್ಥಳಗಳಲ್ಲಿ ಪ್ಲೇಗ ಬೇನೆಯು ಪ್ರತ್ಯಕ್ಷಕ್ಕೆ ಬಂದಂದಿನಿಂದ ಇದು ಎಲ್ಲಾ ಭೂಖಂಡಗಳಿಗೆ ಹರಡಿಕೊಂಡರೂ ಇದನ್ನು ಹತಬಡಿದು ಬಿಡುವ ಚಿಕಿತ್ಸೆಯು ಇನ್ನೂ ಕಂಡುಕೊಳ್ಳಲ್ಪಡುವುದಕ್ಕಿದೆ. ಪ್ಲೇಗಬೇನೆಯು ತಲೆದೋರಿದಾಕ್ಷಣ ಈ ಸಮ್ಮಂಧ ಪರಿಶೋಧನೆ ನಡಿಸಲು ಪ್ರಾರಂಭಿಸಿದ ಇಂಗ್ಲಿಷ ಮಹಾನುಭಾವರು ಪ್ಲೇಗ ಬೇನೆಯ ಮೂಲಕಾರಣವನ್ನು ಕಂಡು ಹಿಡಿಯುವ ಮೊದಲು ಪ್ಲೇಗಬೇನೆಗೆ ಚಿಕಿತ್ಸೆಯನ್ನು ಮಾಡೆವೆಂಬ ಹಟಹಿಡಿದರು. ಪ್ಲೇಗಬೇನೆಯು ಹೇಗೆ ಕಾಣಿಸಿಕೊಳ್ಳುತ್ತದೆ. ಈ ಸೋಂಕು ವ್ಯಾಪಿಸಿಕೊಳ್ಳುವುದು ಹೇಗೆಂಬದನ್ನು ಆ ಕಾಲದಲ್ಲಿ ಯಾರೂ ಅರಿಯದೆಹೋದರು. ಈ ಸೋಂಕು ಇಲಿಯಿಂದ ಮನುಷ್ಯನಿಗೆ ಅಂಟುತ್ತದೆಂಬದು ಕಾಲ ಕ್ರಮೇಣ ತಿಳಿದು ಬಂದರೂ ಇಲಿಯಿಂದ ಇಲಿಗೆ ಮತ್ತು ಇಲಿಯಿಂದ ಮನುಷ್ಯನಿಗೆ ಈ ರೋಗ ಸೋಂಕಿಸುವ ಮಧ್ಯಸ್ಥನು ಯಾರೆಂಬದು ಗುಪ್ತವಾಗಿಯೇ ಇತ್ತು. ಈ ವಿಷಯ ವಿಜ್ಞಾನಿಗಳು ಪರಿಶೋಧನೆ ನಡಿಸಿದ ನಂತರ ಈಗ ಸುಮಾರು ೧೦ ವರುಷಗಳಿಂದ ಇಲಿಗಳ ಮೇಲಣ ಚಿಕ್ಕಾಡೇ ಮಧ್ಯಸ್ಥನೆಂದು ಖಾತ್ರಿಯಾಯಿತು. ಚಿಕ್ಕಾಡು ಪ್ಲೇಗು ಸೋಂಕಿದ ಇಲಿಗಳ ರಕ್ತವನ್ನು ಹೀರಿಕೊಂಡು ತನಗೆ ತಾನೇ ಈ ಸೋಂಕನ್ನು ಅಂಟಿಸಿಕೊಳ್ಳುತ್ತದೆ. ಅನಂತರ ಮತ್ತೊಂದು ಇಲಿಯ ರಕ್ತವನ್ನು ಹೀರಿಕೊಳ್ಳುವಾಗ ಅದಕ್ಕೂ ಈ ಬೇನೆಯು ಸೋಂಕುತ್ತದೆ. ಹೀಗೆ ಸತ್ತ ಇಲಿಗಳನ್ನು ಚಿಕ್ಕಾಡುಗಳ ಕೂಡ್ಲೇ ಬಿಟ್ಟು ಹೋಗುವವು. ಸತ್ತ ಇಲಿಗಳನ್ನು ಬಿಟ್ಟು ಹೋಗುವ ಈ ಚಿಕ್ಕಾಡುಗಳಿಗೆ ಸಮಿಾಪ ಇಲಿಗಳು ಸಿಗದಿದ್ದರೆ ಎದುರು ಸಿಕ್ಕಿದ ಮನುಷ್ಯರನ್ನೇಕಚ್ಚುವುದು.

ಚಿಕ್ಕಾಡುಗಳಿಗೆ ಬಿಸಿ ರಕ್ತವು ಬೇಕು. ಅವುಗಳು ಪ್ಲೇಗು ಸೋಂಕಿದ ರಕ್ತವನ್ನು ಹೊಟ್ಟೆಯೊಳಗೆ ಹೀರಿಕೊಂಡಾಕ್ಷಣ ಪ್ಲೇಗು ಅಣುಗಳು ಮಿತಿ ಇಲ್ಲದೆ ಹೆಚ್ಚಾಗುತ್ತಿದೆ. ಆದರೆ ಸೂಕ್ಷ್ಮ ಪರೀಕ್ಷೆಮಾಡುವ ಹೊರತು ಹೊಟ್ಟೆಯಲ್ಲಾಗಲೀ ಮಲಾಶಯದಲ್ಲಾಗಲೀ ಈ ಅಣುಗಳು ಕಾಣಲು ಸಿಗವು. ಹೀಗೆ ಅಣುಗಳ ರಾಶಿಯು ಹೆಚ್ಚುವಾಗ ಈ ಚಿಕ್ಕಾಡುಗಳಿಗೆ ಬಾಯಾರಿಕೆಯುಂಟಾಗಿ ಇಲಿಯೂ ಮನುಷ್ಯರ ಆಶ್ರಯವನ್ನು ಹುಡುಕುವುದು. ಆದರೆ ಪ್ಲೇಗಬೇನೆಯ ಅಣುಗಳು ಈ ಹೊಸ ಅತಿಥಿಗಳನ್ನು ಸೋಂಕಿಕೊಳ್ಳುವುದು ಹೇಗೆ ಎಂಬದು ಒಂದು ಮರ್ಮವಾಗಿಯೇ ಇತ್ತು. ಈ ವಿಷಯ ಲಿಸ್ಟರ್ ವಿದ್ಯಾಶಾಲೆಯ ಕ್ರಿಮಿವಿಜ್ಞಾನರಾದ ಮೆ| ಎ. ಡಬ್ಲ್ಯು. ಬೆಕೊಟು ಮತ್ತು ಅದೇ ಶಾಲೆಯ ಡೈರೆಕ್ಟರರಾದ ಮೆ| ಜೆ. ಮರಿನ್. ಎಫ್. ಆರ್. ಎಸ್‌ರವರೂ ಚನ್ನಾಗಿ ಪರಿಶೋಧನೆ ನಡಿಸಿ ಈ ಮರ್ಮವನ್ನು ಕಂಡು ಹಿಡಿದು ಪ್ರಕಾಶಪಡಿಸಿರುವರು.

ಪ್ಲೇಗ ಅಣುಗಳು ಚಿಕ್ಕಾಡಿನ ಹೊಟ್ಟೆಯೊಳಗೆ ಸೇರಿದೊಡನೆ ಅವುಗಳು ಗಟ್ಟಿಲೇಹದಂತೆ ಒಂದುಗೂಡಿ ಅಣುಗಳ ಉತ್ಪತ್ತಿಯಾದಂತಾಗುವುದು. ಚಿಕ್ಕಾಡಿಗೆ ಇತರ ಹುಳುಗಳಂತೆಯೇ ಹೊಟ್ಟೆಯ ಬುಡದಲ್ಲಿ ಹಲ್ಲಿನಂತಹ ಅರೆಗಳಿರುವವು. ಇದು ಆಹಾರವು ಜೀರ್ಣವಾಗುವ ಸಮಯ ಮುಚ್ಚಿಕೊಳ್ಳುವುದು. ಲೇಹ್ಯದಂತೆ ಒಟ್ಟುಗೂಡಿದ ಅಣುಗಳು ಹೊಟ್ಟೆಯಿಂದ ಈ ಅರೆಯೊಳಗೆ ಸೇರಿ ಅರೆಯನ್ನು ತುಂಬುವುದು. ಕೂಡಲೇ ಈ ಅರೆಯ ಬಾಗಲು ಮುಚ್ಚಿಕೊಂಡು ಹೊಟ್ಟೆಯೊಳಗೆ ಇತರ ಆಹಾರವು ಹೋಗದಂತಾಗುವುದು. ಒಡನೆ ಚಿಕ್ಕಾಡಿಗೆ ಬಾಯಾರಿಕೆಯು ಹೆಚ್ಚಿ ತನ್ನ ಆಶೆಯನ್ನು ಪೂರೈಸಲು ಪ್ರಯತ್ನಿಸಿ ಇಲಿಯ ರಕ್ತವನ್ನು ಹೀರಿಕೊಳ್ಳುವುದು. ಆದರೆ ಹೊಟ್ಟೆಯ ನಾಳವು ಮುಚ್ಚಿಹೋದುದರಿಂದ ರಕ್ತವು ಗಂಟಲು ನಾಳದಲ್ಲಿಯೇ ಸಿಕ್ಕೊಳ್ಳುವುದು. ಈ ರಕ್ತವು ಹೊಟ್ಟೆಯೊಳಗೆ ಸೇರುವಂತೆ ಚಿಕ್ಕಾಡು ಮಾಡುವ ಒತ್ತಾಟದಿಂದ ಪ್ಲೇಗ ಅಣುಗಳು ತುಂಬಿಕೊಂಡಿದ್ದ ಅರೆಯಿಂದ ಕೆಲವು ಅಣುಗಳು ಗಂಟಲು ನಾಳಕ್ಕೆ ಸೇರಿಕೊಳ್ಳುವುದು. ಹೀಗೆ ಗಂಟಲನ್ನು ಸಡಲಿಸಿಕೊಳ್ಳುವಾಗ ರಕ್ತವು ಅರೆಯೊಳಗೆ ಸೇರುವುದು. ಗಂಟಲ ನಾಳದೊಳಗೆ ಅಣುಗುಳು ಸೇರಿಕೊಂಡದ್ದರಿಂದ ಚಿಕ್ಕಾಡು ಪುನಃ ರಕ್ತವನ್ನು ಹೀರಿಕೊಳ್ಳುವಾಗ ಈ ಅಣುಗಳು ಮನುಷ್ಯ ಯಾ ಇಲಿಗಳೊಳಗೆ ಸೋಂಕಿಕೊಳ್ಳುವುದು. ಇದೇ ಮರ್ಮ. ಆದರೆ ಈ ಸುಲಭವಾದ ಮರ್ಮವು ಹೊರ ಬೀಳಲು ಅನೇಕ ವರ್ಷಗಳು ಕಳೆದವು.

ಪ್ಲೇಗುಬೇನೆಯ ಅಣುಗಳು ಸೋಂಕಿದ ಈ ಚಿಕ್ಕಾಡುಗಳು ಪ್ಲೇಗು ಸೋಂಕಿದ ಇಲಿಗಳನ್ನು ಪುನಃ ಪುನಃ ಕಚ್ಚದೆ ಇದ್ದ ಪಕ್ಷದಲ್ಲಿ ಕೆಲವು ದಿವಸದ ನಂತರ ಇದು ಅಣುಗಳಿಲ್ಲದಂತಾಗುವುದು. ಹೊಟ್ಟೆಯ ಅರೆಯೊಳಗೆ ಸೇರಿದ್ದ ಅಣುಜೀವಿಗಳ ಲೇಹ್ಯವು ಜೀರ್ಣವಾಗಿ ಹೋಗಿ ಆಹಾರ ಸೇರಿಕ್ಕೊಳ್ಳುವ ಅರೆಯ ಬಾಗಿಲು ಸರಾಗವಾಗುವುದು. ಆದರೆ ಈ ಚಿಕ್ಕಾಡುಗಳು ಪ್ಲೇಗು ಅಣು ಸೋಂಕುವ ಮೊದಲಿದ್ದಷ್ಟು ಚುರುಕಾಗಿರವು. ತಂಪಾದ ತೇವವುಳ್ಳ ಸ್ಥಳಗಳಲ್ಲಿ ದೀರ್ಘಕಾಲ ಬದುಕುವವು. ಪರಂತು, ಉಪವಾಸ ಬಿದ್ದಿರುವ ಬಲಹೀನವಾದ ಈ ಚಿಕ್ಕಾಡುಗಳಿಗೆ ಉಷ್ಣತಾಗಿದ ಕೂಡಲೇ ಸತ್ತುಹೋಗುವವು. ಶೆಕೆಕಾಲದಲ್ಲಿ ಪ್ಲೇಗಬೇನೆಯ ಹಾವಳಿ ಕಮ್ಮಿಯಾಗಲು ಇದೇ ಕಾರಣ. ಛಳಿಕಾಲ ತೊಡಗಿದೊಡನೇ ಉಷ್ಣಕಾಲದಲ್ಲಿ ನೆಲದ ಅಡಿಯಲ್ಲಿ ಅಡಗಿ ಕುಳಿತ, ಅಳಿದುಳಿದ, ಬಾಯಾರಿಕೆಯಿಂದ ತುಂಬಿದ ಚಿಕ್ಕಾಡುಗಳು ಪುನಃ ಕಾಣಿಸಿಕೊಂಡು ಇಲಿಗಳಿಗೂ ಮನುಷ್ಯರಿಗೂ ಕಡಿಯುವವು. ಒಡನೆ ಪ್ಲೇಗ ಹಾವಳಿಯು ಹಬ್ಬುವುದು.

ಪ್ಲೇಗ ಹಾವಳಿಯಿಂದ ಹಿಂದೂಸ್ಥಾನವು ಬಿಡುಗಡೆಯಾಗುವ ಹಾಗೆ ಇದೆಯೋ ಎಂಬ ಪ್ರಶ್ನೆಯನ್ನು ಕುರಿತು ಕಡೆಗೆ ಆಲೋಚಿಸುವುದು ವಿಹಿತವಾಗಿರುವುದು. ಹಿಂದೂಸ್ಥಾನದಲ್ಲಿ ಪ್ಲೇಗು ಕಡಿಮೆಯಾಗುತ್ತಾ ಬರುತ್ತಿದೆ. ಈಗ ಹುಟ್ಟುವ ಇಲಿಗಳು ಸಹಾ ಪೇಗಬೇನೆಯ ಸೋಂಕನ್ನು ತಾಳಿಕೊಳ್ಳುವ ಶಕ್ತಿಯುಳ್ಳದ್ದಾಗಿದೆ. ಪ್ಲೇಗಿನ ಕೇಂದ್ರಸ್ಥಾನವಾದ ಮುಂಬಾಯಿ ಪಟ್ಟಣದ ೧೦೦ ಇಲಿಗಳನ್ನು ತೆಗೆದು ಪ್ಲೇಗು ಸೋಂಕು ಇರುವ ರಕ್ತವನ್ನು ಇಲಿಯ ರಕ್ತದೊಳಗೆ ಸೇರಿಸಿದ್ದಲ್ಲಿ ಶೇಕಡಾ ೫೯-೬೨ ರಂತೆ ಮಾತ್ರ ಸತ್ತವು. ಪ್ಲೇಗು ಇಲ್ಲದ ಮದ್ರಾಸಿನ ಇಲಿಗಳಲ್ಲಿ ೧೦೦ನ್ನು ತೆಗೆದು ಪ್ಲೇಗು ಸೋಂಕು ಹಾಕಿಸಿದಲ್ಲಿ ಶೇಕಡಾ ೯೭ರಂತೆ ಸತ್ತವು ಎಂದು ಪರಿಶೋಧನೆಯಿಂದ ತಿಳಿದುಬಂದಿದೆ. ಹೀಗೆ ಪ್ಲೇಗು ಹಬ್ಬಿಕೊಂಡ ಸ್ಥಳದ ಇಲಿಗಳು ಅವುಗಳನ್ನು ಸಹಿಸಿಕೊಳ್ಳುವಂತಹ ಜಾತಿಯನ್ನು ಹುಟ್ಟಿಸುವುದರಿಂದ ಕ್ರಮೇಣ ಪ್ಲೇಗು ಹಿಂದೂಸ್ಥಾನವನ್ನು ಬಿಟ್ಟು ಹೋಗಬಹುದು.

ಚರಿತ್ರೆಯನ್ನು ನೋಡುವುದಾದರೆ ಪ್ಲೇಗು ಭೂಖಂಡಗಳಲ್ಲೆಲ್ಲಾ ವ್ಯಾಪಿಸಿಕೊಂಡಿದ್ದು ಅನಂತರ ಅವುಗಳನ್ನು ಬಿಟ್ಟು ಹೋಗಿರುವುದು ಎಂತ ವ್ಯಕ್ತವಾಗುವುದು. ಗ ಸೋಂಕನ್ನು ಸಹಿಸಿಕೊಳ್ಳುವಂತಹ ಇಲಿಗಳ ಹೊಸ ವಂಶವೇ ಇದಕ್ಕೆ ಕಾರಣವೆಂತ ದೃಢೀಕರಿಸಲಾಗದಿದ್ದರೂ ಪ್ಲೇಗ ಅಣುಗಳಲ್ಲಿ ಒಂದು ಬದಲಾವಣೆಯುಂಟಾಗಿ ರೋಗದ ಹಾವಳಿಯು ಕಮ್ಮಿಯಾಗಿದ್ದಿರಬೇಕೆಂಬದು ನಿಶ್ಚಯ.

ಛಳಿಜ್ವರ.

ವಿಷ ಜ್ವರದಲ್ಲಿ ಕೂಡ ಹಿಂದೆ ವಿವರಿಸಿದ ಲಕ್ಷಣಗಳು ಕಾಣುವುವು ಮಾತ್ರವಲ್ಲ ಸಾಧಾರಣವಾಗಿ ಛಳಿಯು ಬರುವ ಕಾಲವು ಕಡಿಮೆಯಾಗಿ, ಜ್ವರವಿರುವ ಕಾಲವು ಹೆಚ್ಚಾಗುವುದು. ಸಾಮಾನ್ಯವಾಗಿ ಉಷ್ಣ ದೇಶದಲ್ಲಿ ವಿಷಜ್ವರವು ೮, ೧೨ ಘಂ ವರೆಗಾಗಲೀ ಅದಕ್ಕಿಂತ ಅಧಿಕ ಸಮಯದ ವರೆಗಾಗಲೀ ವ್ಯಾಪಿಸುವುದು. ನೊಂದು ಸಮಯದಲ್ಲಿ ಛಳಿಯೇ ಇರದು. ಬೆವರು ಮಾತ್ರವೇ ಬರುವುದು. ವಾಯ ರೋಗಿಯು ಸುಖವಾಗಿ ನಿದ್ರೆಹೋಗುವನು. ಎರಡು ಯಾ ಮೂರು ಜ್ವರವು ಬಂದನಂತರ ವಿರಾಮಕಾಲವು ಎಂದರೆ ಜ್ವರವಿಲ್ಲದ ಸಮಯವು ಕಡಿಮೆಯಾಗುವುದು. ಒಂದೊಂದು ವೇಳೆ ಜ್ವರವು ಪೂರ್ಣ ಬಿಡದೆ ಬರುವುದು. ಅಶ್ರದ್ಧೆಯನ್ನು ಮಾಡಿದರೆ ರೋಗಿಗೆ ಇತರ ಅವಯವಗಳಲ್ಲಿ ರೋಗವು ಪ್ರಾರಂಭಿಸಿ ರೋಗವು ಬಲವಾಗುತ್ತದೆ.

ಜ್ವರದ ವಿವಿಧ ದಶೆಗಳಿಗೂ ಮಲೇರಿಯಾ ಪುರುಗುಗಳ ವಿವಿಧ ದಶೆಗಳಿಗೆ ಇರುವ ಸಂಬಂಧವನ್ನು ತಿಳಿದರೆ ಚಿಕಿತ್ಸೆಮಾಡುವಲ್ಲಿ ತುಂಬಾ ಉಪಯೋಗಕರವಾಗಿ ವುದು.

೧. ಛಳಿ ಪ್ರಾರಂಭಿಸುವ ಕಾಲದಲ್ಲಿ ಮಲೇರಿಯಾ ಪುರುಗುಗಳು ತತ್ತಿಗಳನ್ನು ಇಡುತ್ತವೆ. ಮಲೇರಿಯಾ ಪುರುಗುಗಳ ತತ್ತಿಗಳು ಎಂದಿಗೆ ಉತ್ಪತ್ತಿಯಾಗುತ್ತವೋ ಅಂದಿಗೆ ಛಳಿಯು ಪ್ರಾರಂಭಿಸುವುದು.

೨. ಜ್ವರವು ತೀವ್ರವಾಗಿ ಬರುವ ಸಮಯದಲ್ಲಿ ಅನೇಕ ಮಲೇರಿಯಾ ಪುರುಗುಗಳ ತತ್ತಿಗಳು ನೂತನ ಕೆಂಪು ಕಣಗಳಲ್ಲಿ ಪ್ರವೇಶಿಸುತ್ತವೆ.

೩. ಬೆವರ್ತು ಜ್ವರವು ತಗ್ಗಿರುತ್ತಾ ಪೂರ್ಣವಾಗಿ ಬಿಟ್ಟುಹೋದ ಸಮಯದನಂತರ ಮತ್ತು ಅದಕ್ಕೆ ಪೂರ್ವವೇ ಕೆಂಪು ಕಣಗಳಲ್ಲಿ ಪ್ರವೇಶಿದ ಮಲೇರಿಯಾ ಪುರುಗುಗ ಆ ಕೆಂಪು ಕಣಗಳನ್ನು ತಿಂದು ದೊಡ್ಡದಾಗುವುವು.

ರೋಗಿಯ ರಕ್ತವನ್ನು ಸೂಕ್ಷ್ಮ ದರ್ಶನಿಯಲ್ಲಿ ಪರೀಕ್ಷೆ ಮಾಡಿದ ಮೇಲೆ ಸೂಚಿಸಲ್ಪಟ್ಟ ಸಂಗತಿಗಳೆಲ್ಲಾ ಬಯಲಾಗುವುವು.

ಅರ್ಧ ಚಂದ್ರಾಕಾರವುಳ್ಳ ಮಲೇರಿಯಾ ಪುರುಗುಗಳು ಮಾತ್ರವೇ ರಕ್ತದಲ್ಲಿದ್ದರೆ ಜ್ವರವು ಬರುವುದಿಲ್ಲ. ಒಂದಾನೊಂದು ಸಮಯದಲ್ಲಿ ದ್ವಿಖಂಡನ ವಿಧಾನದಿಂದ ದಾದ ಪುರುಗುಗಳು ರಕ್ತದಲ್ಲಿರುತ್ತಾ ಅವುಗಳ ಸಂಖೆಯು ಕಡಿಮೆಯಾಗಿದ್ದರೆ ಜ್ವರ ಬಾರದೆ ಇರುತ್ತದೆ. ಹೀಗೆ ಕೆಲವು ದಿವಸಗಳನಂತರ, ತಿಂಗಳುಗಳನಂತರ, ಸಂವ ರಗಳ ತರುವಾಯ, ಮಲೇರಿಯಾ ಪುರುಗುಗಳು ನೆತ್ತರಿನಲ್ಲಿ ಕಡಿಮೆಯಾಗಿದ್ದರೆ ಜ್ವರ ಬಾರದೆ ರೋಗಿಗೆ ವೃದ್ಧತ್ವವು ಬಂದ ಕಾರಣದಿಂದಾಗಲೀ ಶರೀರದ ದುರ್ಬಲತ್ವದಿಂದಾಗಲೀ ತಿರಿಗಿ ಮಲೇರಿಯಾ ಜ್ವರವು ಬರುವುದು. ಕೆಲವು ಯುರೋಪಿಯಾನರಿಗೆ ಹಿಂದೂ ದೇಶದಿಂದ ಅವರ ಸ್ವದೇಶಕ್ಕೆ ಹೋದ ತರುವಾಯ ಎರಡು ಯಾ ಮೂರು ವರ್ಷಗಳ ವರೆಗೆ ಯಾವ ವಿಧದ ಮಲೇರಿಯಾ ಜ್ವರವು ಬಾರದೆ ಹೋದಾಗ್ಯೂ ಅಕಸ್ಮಾತ್ತಾಗಿ ಅವರಿಗೆ ಒಂದು ಸಮಯ ಛಳಿಜ್ವರವು ಬಂದು ಅವರ ರಕ್ತದಲ್ಲಿ ಮಲೇರಿಯಾ ಪುರುಗುಗಳು ನೋಡಲಿಕ್ಕೆ ಸಿಕ್ಕುತ್ತವೆ. ಅವರ ರಕ್ತದಲ್ಲಿ ಈ ಎರಡು ಯಾ ಮೂರು ವರ್ಷಗಳ ನಂತರ ಮಲೇರಿಯಾ ಪುರುಗುಗಳು ಪ್ರವೇಶಿಸಲು ಅವಕಾಶವಿಲ್ಲದಿದ್ದಾಗ್ಯೂ ಅವರು ಹಿಂದೂಸ್ಥಾನದಲ್ಲಿರುವಾಗಲೇ ಅವರ ರಕ್ತದಲ್ಲಿ ಪುರುಗುಗಳು ಪ್ರವೇಶಿಸಿರಬೇಕು. ಅದಲ್ಲದೆ ಕೆಲವು ಮಲೇರಿಯಾ ಪುರುಗುಗಳು ರಕ್ತದಲ್ಲಿ ಇದ್ದಾಗ್ಯೂ ಜ್ವರವು ಬಾರದೆ ಹೋಗುವುದುಂಟೆಂಬದನ್ನು ರುಜು ಪಡಿಸಿರುತ್ತಾರೆ.

ಕೆಲವು ವೈದ್ಯರು ಮಾನುಷ ರಕ್ತದಲ್ಲಿ ಒಂದು ಲಕ್ಷ ಕೆಂಪು ಕಣಗಳಿಗೆ ಒಂದಕ್ಕಿಂತ ಹೆಚ್ಚು ಮಲೇರಿಯಾ ಪುರುಗುಗಳು ಇದ್ದರೆ, ಜ್ವರವು ಬರುತ್ತದೆಂಬದಾಗಿ ಊಹಿಸಿದ್ದಾರೆ. ಕೆಲವರಿಗೆ ವಂಶಪಾರಂಪರ್ಯವಾಗಿ ರೂಢಿ ಬಿದ್ದದರಿಂದ ಮಲೇರಿಯಾ ಪುರುಗುಗಳು ರಕ್ತದಲ್ಲಿ ಪ್ರವೇಶಿಸಿದರೂ ಜ್ವರವು ಬಾರದು. ಇದೇ ಕಾರಣದಿಂದ ಕೊಯವಾಂಡ್ರು ಮೊದಲಾದ ಅಡವಿ ಜಾತಿ ಜನರು ಛಳಿಜ್ವರವು ವ್ಯಾಪಿಸಿರುವ ಪ್ರದೇಶದಲ್ಲಿ ವಸತಿ ಮಾಡಿದರೂ ಈ ಜ್ವರವು ಅವರನ್ನು ಸಾಮಾನ್ಯವಾಗಿ ಬಾಧಿಸದು. ಅದೇ ಪ್ರದೇಶಕ್ಕೆ ಹೊಸತಾಗಿ ಯಾರಾದರೂ ಬಂದ ಪಕ್ಷಕ್ಕೆ ಅಂಥವರಿಗೆ ಆ ಜ್ವರವು [illegible] ಅಂಟಿಕೊಳ್ಳುವುದು.

ದೇಶದಲ್ಲಿ ಕೆಲವು ವೈದ್ಯಶಾಲೆಗಳಲ್ಲಿ ನೂರಾರು ರೋಗಿಗಳನ್ನು ವೈದ್ಯರು ದಿವಸವೂ ನೋಡುತ್ತಾರೆ. ಅಂಥಾ ಸಮಯದಲ್ಲಿ ತ್ವರೆಯಿಂದ ಕೆಲಸವನ್ನು ಮುಗಿಸುವದೇ ಮುಖ್ಯ ಕರ್ತವ್ಯವೆಂದೆಣಿಸಿ ರೋಗಿಗೆ ಸರಿಯಾದ ವೈದ್ಯವು ಜರಗಿತೋ ಇಲ್ಲವೋ ಎಂಬದನ್ನು ವಿಚಾರಿಸಲು ವಿರಾಮವಿಲ್ಲ. ಒಂದು ಸಮಯ ಒಬ್ಬಾನೊಬ್ಬ ವೈದ್ಯನು ಶ್ರದ್ಧೆಯಿಂದ ವ್ಯಾಧಿಯನ್ನು ಗ್ರಹಿಸಿದ ತರುವಾಯ ಚಿಕಿತ್ಸೆಯನ್ನು ಮಾಡುವನೆಂಬದಾಗಿ ಪ್ರತಿಜ್ಞೆಪಟ್ಟು ಕೆಲಸಮಾಡಿದರೂ ಅಂಥವನಿಗೆ ಬೇಕಾದ ಸೂಕ್ಷ್ಮದರ್ಶನ ಮೊದಲಾದ ಸಾಧನ ಸಾಮಗ್ರಿಗಳು ಸಾಮಾನ್ಯವಾಗಿ ವೈದ್ಯಶಾಲೆಯಲ್ಲಿರಲಿಕ್ಕಿಲ್ಲ. ಆದುದರಿಂದ ತನ್ನ ಹತ್ತಿರ ರೋಗಿಯು ಬಂದ ಕೂಡಲೇ ವೈದ್ಯನು ರೋಗಿಗೆ ಆಗಲೇ ಯಾವುದೋ ಒಂದು ಮದ್ದನ್ನು ಕೊಟ್ಟು ಕಳುಹಿಸಬೇಕಾಗುತ್ತದೆ.

ಜ್ವರದಿಂದ ನರಳಿಕೊಂಡು ವೈದ್ಯಕ್ಕೆ ಬರುವ ರೋಗಿಗೆ ವೈದ್ಯವು ಮಾಡಲು ಎರಡು ಪದ್ಧತಿಗಳಿವೆ. ಅವುಗಳ ಪೈಕಿ ಒಂದು ಸರಿಯಾದ ಪದ್ಧತಿಯು. ಎರಡನೇಯದು ತಪ್ಪು ಪದ್ಧತಿಯು. ಈ ದೇಶದಲ್ಲಿ ಅನೇಕ ವೈದ್ಯರು ಸಾಧಾರಣವಾಗಿ ಈ ತಪ್ಪು ಪದ್ಧತಿಯನ್ನು ಅನುಸರಿಸುತ್ತಾರೆ. ರೋಗಿಯು ವೈದ್ಯಕ್ಕೆ ಬಂದ ಕೂಡಲೇ ವೈದ್ಯನು ರೋಗಿಯನ್ನು ನೋಡಿ "ನಿನಗೆ ಯಾವ ಜ್ವರವು" ಎಂದು ಕೇಳುವನು. ರೋಗಿಯು ಕೂಡಲೇ ತನಗೆ "ಛಳಿಜ್ವರವು" ಎಂದು ಹೇಳುವನು. ವೈದ್ಯನು ತನ್ನ ಕೆಲಸದ ತೊಂದರೆಯಲ್ಲಿ ತನ್ನ ವಾಡಿಕೆ ಪ್ರಕಾರ ರೋಗಿ ಹೇಳಿದ ರೋಗದ ಕುರುಹುಗಳನ್ನು ಹಿಡಿದು ಛಳಿಜ್ವರಕ್ಕೆ "ಕ್ವಯಿನಾನ್" ಮದ್ದು ಎಂಬದಾಗಿ ಹೇಳಿ ೩ ಯಾ ೬ ಸಲ ತೆಗೆದುಕೊಳ್ಳುವದನ್ನು ಕೊಟ್ಟು ಕಳುಹಿಸುವನು. ಅದೃಷ್ಟವಶಾತ್ ರೋಗಿಯ ರೋಗವು ನಿಜವಾಗಿ ಛಳಿಜ್ವರವಾದ ಪಕ್ಷಕ್ಕೆ ಗುಣವಾಗುವುದು. ಅಲ್ಲದಿದ್ದರೆ ರೋಗಿಯು ಆ ಮದ್ದನ್ನು ತೆಗೆದುಕೊಂಡದ್ದರಿಂದ ರೋಗವು ವಿಶೇಷವಾಗಿ, ಅಥವಾ ರೋಗವೇ ಕಠಿಣವಾಗಿ ಪ್ರಾಣಾಪಾಯಕರವಾಗಿ ಪೀಡಿಸಿದರೆ, ರೋಗಿಯನ್ನು ಸರಿಯಾಗಿ ಪರೀಕ್ಷಿಸುವನು. ಒಂದೊಂದು ಸಲ ವ್ಯಾಧಿಯು ಅಸಾಧ್ಯ ಸ್ಥಿತಿಗೂ ಬರುವುದುಂಟು.

Kotekar

Adapted from the Telugu Vignanachandrika Granthamala.

ಪತ್ರವ್ಯವಹಾರ

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಅಯ್ಯಾ ಪತ್ರಿಕಾಕರ್ತರೇ.

ತಮ್ಮ ಸ್ವದೇಶಾಭಿಮಾನಿ ಪತ್ರದ ಕಳದ ತಾ. ೨೭ ಮತ್ತು ಈ ತಾ. ೩ನೆ ಸಂಚಿಕೆ [illegible] ಈ ಆನಂದ ಸಂವತ್ಸರದ ಕೆಲವು ಪಂಚಾಂಗಗಳಲ್ಲಿ ಬರೆದಿರುವ ಉಪನಯನ ಮುಹೂರ್ತಗಳ ಪೈಕಿ ಎಪ್ರಿಲ್ ತಾ ೧ನೇ ಚೈತ್ರ ಶು ೫ ಬುಧವಾರ ರೋಹಿಣಿ ಮೀನಲಗ್ನ ಮತ್ತು ಅದೇ ತಾ ೫ನೇ ಚೈತ್ರ ಶು ೯ ರವಿವಾರ ಪುಷ್ಯ ಮೀನಲಗ್ನ ಈ ಎರಡು ಮುಹೂರ್ತಗಳ ವಿಷಯವಾಗಿ "ಸಾಮಾನ್ಯ ವೈದಿಕ" ಎಂಬವರು ಬರೆದಿರುವ ಆಕ್ಷೇಪಕ್ಕೆ ಪಂಚಾಂಗ ರಚನೆಯಲ್ಲಿ ನಮ್ಮಿಂದಲೂ ಕದೀಮರಾಗಿ ಇರುವವರು ತಕ್ಕ ಸಮಾಧಾನ ಬರಿಯುವರೆಂಬ ಭಾವನೆಯಿಂದ ಅದಕ್ಕೆ ತಕ್ಕ ಸಮಾಧಾನವನ್ನು ಕಳದ ಸಂಚಿಕೆಯಲ್ಲಿ ಬರಿಯಲಿಲ್ಲ. ಬರುವ ಸಂಚಿಕೆಯಲ್ಲಿ ಈ ಪತ್ರಕ್ಕೆ ದಯವಿಟ್ಟು ಅವಕಾಶ ಕೊಡಬೇಕಾಗಿ ಅಪೇಕ್ಷಿಸುತ್ತೇನೆ.

ಆ ಲೇಖನದಲ್ಲಿ "ಲಗ್ನಸ್ಥೋಮರಣಂ ನೃಪಾದಿಹ ...... "ಎಂಬ ಪ್ರಮಾಣವನ್ನೂ ಅದರ ತಾತ್ಪರ್ಯವನ್ನೂ ಬರೆದು ಎಂಬಿತ್ಯಾದಿ ವಿಶೇಷ ಆಕ್ಷೇಪಗಳು ಕಂಡು ಬಂದವು ಎಂಬದಾಗಿ ಬರಿಯುತ್ತಾರೆ. ಅಂದರೆ ರವಿ, ಕುಜ, ಶನಿ, ರಾಹು, ಕೇತು ಹೀಗೆ ಐದು ಗ್ರಹರು ಲಗ್ನಗಳಲ್ಲಿರುವದರಿಂದ ಮಹಾ ಅನರ್ಥಕಾರಿ ಎಂಬದಾಗಿ ಅವರ ಅಭಿಪ್ರಾಯವೆಂಬದಾಗಿ ಸಾಮಾನ್ಯ ಜನರು ಭ್ರಮಿಸಬಹುದಾಗುತ್ತದೆ. ರಾಹು ಕೇತುಗಳು ಒಂದೇ ರಾಶಿಯಲ್ಲಿರುವದು ಅಸಂಗತವಾದ್ದರಿಂದ ಆ ಲಗ್ನಗಳಲ್ಲಿ ರವಿ ಮಾತ್ರ ಇದ್ದು ಆಕ್ಷೇಪಕರ್ತರ "ವಿಶೇಷ ಆಕ್ಷೇಪಗಳಿಗೆ" ಅವಕಾಶವಿಲ್ಲ. ಆ ರವಿಯೊಬ್ಬನು ಇರುವದು ಆಕ್ಷೇಪಕರವಲ್ಲ. ಹ್ಯಾಗಂದರೆ—"ನಿಶ್ಶೇಷ ದೋಷ ವಿರಹಸ್ಯ ಸುದುರ್ಲಭ ತ್ವಾತ್ಕಾಲೇ ಗುಣೌಘ ಬಹುಲೇ ವಿಬಲಾಲ್ಪದೋಷಾತ್। ಕರ್ಮಾರಭೇತ"........ಎಂಬ ಪ್ರಮಾಣರೀತ್ಯಾ ಸಮಸ್ತ ದೋಷರಹಿತವಾದ ಮುಹೂರ್ತ ಸಿಕ್ಕುವದು ದುರ್ಲಭವಾದ್ದರಿಂದ, ಅಲ್ಪದೋಷವಿದ್ದರೂ ಬಹು ಗುಣಗಳಿದ್ದರೆ ಶುಭಕರ್ಮ ಮಾಡಬಹುದು. ಅದಲ್ಲದೆ "ಅಲ್ಪ ದುರ್ಬಲ ದೋಷತ್ವಂ ಕಾಲಸ್ಯ ಪ್ರಥಮೋ ಗುಣಃ"॥ ಅಲ್ಪವಾದ ದುರ್ಬಲ ದೋಷಗಳು ಮುಹೂರ್ತಕ್ಕೆ ಇರಲೇಬೇಕು. ಹ್ಯಾಗಂದರೆ ದೀಪಕ್ಕೆ ಪ್ರಕಾಶ ಬರಬೇಕಾದರೆ ಕತ್ತಲು ಇರಲೇ ಬೇಕು. ಜಯಕ್ಕೆ ದುರ್ಬಲ ಶತ್ರು ಬೇಕು. ಹಾಗೆಯೇ ಅನೇಕ ಗುಣಗಳಿರುವ ಮುಹೂರ್ತಕ್ಕೆ ಅಲ್ಪ ದೋಷ [illegible] ಶ್ರೀಯುಸ್ಸು ಮುಹಾನ್ಸುಣಾಃ" ಅಂದರೆ ಮಹಾದೋಷಗಳು ಸರ್ವಥಾ ಇರಕೂಡದು. ಮಹಾ ದೋಷಗಳು ಯಾವವಂದರೆ "ಗುಳಿಕೋದಯ ವಿಷಘಟಿಕಾ ಚಂದ್ರಾಷ್ಟಮ ಪಾಪಸಗ್ರಹೋಷ್ಣಶಿಖಾ॥ ಅವಿಹಿತ ಸಮಾಧಿಕಾಲಾ ದಿನಾಂತ ಚಕ್ರಾರ್ಧ ಯೋಗ ವರ್ಷಾಂತಾಃ॥ ಜನ್ಮಾದ್ಯನಿಷ್ಟಭಾಂಶಾಃಕವಿಧಿಷಣಾಸ್ತಾದಯೋ ಮಹಾದೋಷಾಃ॥ ನವಿಭಿದ್ಯಂತೇ ಬಲಿಭಿಃ ಬುಧ ಶುಕ್ರ ಗುರೂದಯಾದಿಭಿಶ್ಚ ಗುಣೈಃ॥" ಮತ್ತು "ದುಷ್ಟಾನ್ ತಿಥಿರ್ಕ್ಷ ವಾರಾನಥ ವಿಷಘಟಿಕಾ ಕೃಷ್ಣಪಕ್ಷಾ ಪರಾಹ್ನಾ"॥ ಇತ್ಯಾದಿಗಳು ಮಹಾ ದೋಷಗಳು. ಇವು ಯಾವದು ಈ ಎರಡು ಲಗ್ನಗಳಲ್ಲಿಯೂ ಇರುವದಿಲ್ಲ. ಇಲ್ಲಿ ಲಗ್ನಸ್ಥರವಿಯು ದೋಷಕಾರಿಯಾಗುವದಿಲ್ಲ. ಹ್ಯಾಗಂದರೆ "ಯೇನ ಗ್ರಹೇಣ ಯತ್ಪ್ರೋಕ್ತಮಶುಭಂ ವಾಶುಭಂ ಫಲಂ॥ ಬಲೀಚೇತ್ಸಶುಭಂ ಪೂರ್ಣಂ"॥ ಎಂಬ ಪ್ರಮಾಣಾನುಸಾರ ಒಬ್ಬ ಗ್ರಹನಿಂದ ಉಕ್ತವಾದ ಫಲವು ದೋಷವಾದರೂ ಅವನು ಬಲಿಷ್ಠನಾದರೆ ಶುಭವನ್ನೇ ಕೊಡುತ್ತಾನೆ. ಈ ರವಿಯು ಮಿತ್ರಕ್ಷೇತ್ರಗತನಾಗಿ ಉಚ್ಚಾರೋಹಿಯಾದ್ದರಿಂದ ಶುಭಪ್ರದನೇ ಮತ್ತು "ಶುಭಕ್ಷೇತ್ರಗತೋವಾಪಿ ಶುಭಖೇಚರ ಸಂಯುತಃ॥ ಶುಭಗ್ರಹೇಣ ದೃಷ್ಟೋಪಿ ಶುಭದಶ್ಚಾನ್ಯಥಾಶುಭಃ॥" ಅಂದರೆ ಶುಭಕ್ಷೇತ್ರಗತ ಶುಭಗ್ರಹಯುಕ್ತ ಶುಭಗ್ರಹದೃಷ್ಟನಾದ ಗ್ರಹನು ಶುಭಪ್ರದನಾಗುವದರಿಂದ ಈ ರವಿಯು ಶುಭನಾದ ಗುರುಕ್ಷೇತ್ರಗತನಾಗಿ ೧ನೇ ಮುಹೂರ್ತಕ್ಕೆ ಶುಭನಾದ ಶುಕ್ರಯುಕ್ತ ೨ನೆ ಮುಹೂರ್ತಕ್ಕೆ ಶುಭಗ್ರಹ ಮಧ್ಯಗತನಾಗಿ ಪಾದದೃಷ್ಟಿಯಿಂದ ಗುರುದೃಷ್ಟನಾದ್ದರಿಂದ ಸಹ ಈ ರವಿಯು ಶುಭಪ್ರದನೇ ಹೊರತು ಆಕ್ಷೇಪ ಕರ್ತರು ತಿಳಿದಿರುವಂತೆ ಅಶುಭಪ್ರದನಲ್ಲ. ಅದಲ್ಲದೆ ಈ ಲಗ್ನಗಳಿಗೆ ಇರತಕ್ಕ ಬೇರೆ ಗುಣಗಳು ಯಾವವಂದರೆ "ಯೇ ಯೋಗಾಃ ಜನ್ಮನೀಷ್ಟಾಃ ಪ್ರದೀಷ್ಟಾಃ ತೇತೇಸರ್ವೇ ಚೋಪನಿತೌ ಪ್ರಶಸ್ತಾಃ"॥ ಎಂಬದಾಗಿ ಮಾಧವೀಯಲ್ಲಿ ಹೇಳಿರುತ್ತದೆ. ಅಂದರೆ ಜನ್ಮಕಾಲದಲ್ಲಿ ಯಾವ ಯಾವ ಯೋಗಗಳಿದ್ದರೆ ಪ್ರಶಸ್ತವೋ ಅವೆಲ್ಲ ದ್ವಿಜತ್ವವನ್ನು ಕೊಡುವ ಉಪನಯನ ಸಂಸ್ಕಾರದಲ್ಲಿಯೂ ನಿರ್ದೇಶಿಸಿಯದೆ. ಈ ಲಗ್ನಗಳಲ್ಲಿ ಶುರುವಿನದಕ್ಕೆ "ಶಶಾಂಕ ನಕ್ಷತ್ರ ಜಲಾಭಿವೃದ್ಧಿಃ" ಎಂಬ ಪ್ರಮಾಣದಲ್ಲಿ ತೋರುವ ಪಂಚಪೂರ್ಣಾಹ್ವಯಯೋಗ ಮಾಳವ್ಯಯೋಗ, ವಾಸಿಯೋಗ, ಚಂದ್ರಾತ್ ಅಮಲಾಯೋಗ, ವಸುಮದ್ಯೋಗ ಗುಣನಾಯಕಯೋಗ ಇವೇ ಮೊದಲಾದವೂ, ೨ನೇ ಲಗ್ನಕ್ಕೆ ಪಂಚ ಕಲ್ಯಾಣಯೋಗ, ಕೇಸರಿಯೋಗ, ಉಭಯಚರಿಯೋಗ, ಶುಭಕರ್ತರಿಯೋಗ, ವರಿಷ್ಠಯೋಗ, ಗುಣರಾಜಯೋಗ ಇವೇ ಮೊದಲಾದವು ಸಹ ಇರುತ್ತವೆ. ಹೀಗಿರುವದರಿಂದ ಈ ಎರಡು ಲಗ್ನಗಳೂ ಪ್ರಶಸ್ತವಾದವುಗಳೇ ಎಂಬದಾಗಿ ಶಾಸ್ತ್ರ ಮರ್ಯಾದಾ ತಿಳಿದವರು ಒಪ್ಪದೆ ಇರಲಾರರು. ಹೀಗಿರುತ್ತಾ ಅಲ್ಪವನ್ನು ಮಹತ್ವಮಾಡಿ ಇಲ್ಲದೆ ಇರುವ ದೋಷಗಳನ್ನು ಆರೋಪಿಸಿ ಜನರನ್ನು ತೊಂದರೆ ಪಡಿಸುವುದು ಪಂಚಾಂಗ ಕರ್ತರುಗಳೋ ಅಥವಾ ಪೂರ್ವಾಪರಗಳನ್ನು ವಿಚಾರಿಸುವಷ್ಟು ಶಕ್ತಿ ಇಲ್ಲದೆ ಕ್ರಮವಾದ ಶಾಸ್ತ್ರಾಭ್ಯಾಸವೂ ಗುರೂಪದೇಶವೂ ಇಲ್ಲದೆ, ದೋಷಗಳನ್ನೇ ಉದ್ಘೋಷಿಸುತ್ತಿರುವ ಸಾಮಾನ್ಯ ವೈದಿಕರೋ ವಾಚಕರೇ ವಿಮರ್ಶಿಮಾಡಲಿ! ಈ ತರದ ಆಕ್ಷೇಪಗಳನ್ನು ಹೇಳುತ್ತಾ ಹೋದರೆ ಯಾವ ಶುಭ ಕಾರ್ಯಗಳಿಗೂ ಮುಹೂರ್ತವೇ ದೊರಕಲಾರದು. ಆದುದರಿಂದ ಇಂಥ ವಿಷಯಗಳನ್ನು ಪ್ರಕಟಿಸಬೇಕಾದರೆ ಚನ್ನಾಗಿ ಆಲೋಚಿಸಿಕೊಳ್ಳಬೇಕು. ಬಲ್ಲವರ ಕೂಡೆ ಚರ್ಚಿಸಿ ತಿಳಕೊಳ್ಳಬೇಕು. ಹಾಗಲ್ಲದೆ ಮನಸ್ಸಿಗೆ ಬಂದದನ್ನು ಬರಿಯುವುದರಿಂದಲೇ ವೈದಿಕರ ಉಕ್ತಿಯಲ್ಲಿ ಲೌಕಿಕರಿಗೆ ಅನಾದರವೂ ಹಾಗೆಯೇ ವೈದಿಕರ ಜೀವನಕ್ಕೆ ತೊಂದರೆಯೂ ಸಂಭವಿಸುತ್ತಿರುವದು ಸಹಜವೇ ಸರಿ.

ಅತ್ತೂರು ವೆಂಕಟರಾಜ ಉಡುಪ
ಉಡುಪಿ ಪಂಚಾಗ ಕರ್ತ.

ಉಡುಪಿ,
12—4—1914.

ಏಲಂ! ಏಲಂ!! ಏಲಂ!!!

ಗತಿಸಿದ ಡರ್‌ಹೆಮ ದೊರೆಗಳ ಬಾಬ್ತು ಕುರ್ಚಿ, ಮೇಜು, ಮಂಚ ಮುಂತಾದ ಮರದ ಸಾಮಾನುಗಳೂ, ಬೆತ್ತಗಳೂ, ಗೋಡೆಗೆ ಇಡುವ ಚಿತ್ರಗಳೂ ಸ್ಟೇಂಡುಗಳೂ, ದೀಪಗಳೂ, ಮೇಜಿನ ಮೇಲೆ ಹಾಕುವ ವಸ್ತ್ರಗಳೂ, ಊಟದ ಪ್ಲೇಟುಗಳೂ, ಕಪ್ ಸೊಸರ್‌ಗಳೂ, ಇಂಗ್ಲಿಷ್ ಪುಸ್ತಕಗಳೂ, ಹೂವಿನ ಗಿಡಗಳೂ, ವ ಇತರ ಅನೇಕ ಸಾಮಾನುಗಳೂ, ಒಂದು ಗ್ರಾಮೊಫೋನ್ ಯಂತ್ರ ಮತ್ತು ಒಂದು ಗಾಡಿ ಸಹಾ ಇದೇ ತಿಂಗಳ ತಾ. ೧೯ನೇ ಆದಿತ್ಯವಾರ ಬೆಳಿಗ್ಯೆ ೯ಗಂಟೆಯಿಂದ ಸಾಯಂಕಾಲದ ವರೇಗೆ ಅತ್ತಾವರ ಇಂಗ್ಲಿಷ ಹಳೇ ಗೋರಿಯ ಸಮೀಪ ವಿರುವ ಅವರ ಬಂಗ್ಲೆಯಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು.

ಬಿ. ಬಾಬುರಾವ್ ಎಂಡ್ ಸನ್.
ಒಕ್ಸನಿಯರ್ಸ್.

ಮಂಗಳೂರು.
ತಾ. 16—4—1914.

ವಿದೇಶ ವೃತ್ತಾಂತ.

ಬರ್ಮದ ಕೆಪ್ಟನ್ ಮೆಕ್‌ಕ್ರೊಮಿಕ್ ಎಂಬ ಯೂರೋಪಿಯ ತೋಟಗಾರನು ಒಬ್ಬ ಹುಡುಗಿಯನ್ನು ದುರ್ವರ್ತನೆಗೆ ಪ್ರೇರೇಪಿಸಿದನೆಂಬ ಮೊಕದಮೆಯಲ್ಲಿ ಮೆಜಿಸ್ಟ್ರೇಟರಾದ ಅಂಡ್ರೂರವರು ಮೆಕ್‌ಕ್ರೊಮಿಕರ ಪಕ್ಷಹಿಡಿದು ಮೊಕದಮೆಯನ್ನು ತಳ್ಳಿ ಹಾಕಿದರೆಂಬ ವಿಷಯದಲ್ಲಿ ಬರ್ಮ ಕ್ರಿಟಿಕ್ ಪತ್ರದ ಸಂಪಾದಕರಾದ ಮೆ| ಅರ್ನೊಲ್ಡರವರು ಪ್ರಕಟಿಸಿದ ಲೇಖನದ ಮೇಲೆ ಮಾನನಷ್ಟ ದಾವೆಯುಂಟಾಗಿ ಅರ್ನೊಲ್ಡರಿಗೆ ಶಿಕ್ಷೆ ವಿಧಿಸಲ್ಪಟ್ಟು ಅನಂತರ ಶಿಕ್ಷೆಯ ಅವಧಿಯು ಕಮ್ಮಿ ಮಾಡಲ್ಪಟ್ಟ ವಿಷಯವು ವಾಚಕರ ಜ್ಞಾಪಕದಲ್ಲಿರಬಹುದಷ್ಟೆ. ಮೆ| ಅರ್ನೊಲ್ಡರು ತನಗಾದ ಶಿಕ್ಷೆಯ ಸಂಬಂಧ ಪ್ರಿವಿಕೌನ್ಸಿಲಿಗೆ ಮಾಡಿಕೊಂಡ ಅಪೀಲು ಸಹಾ ತಾ. ೭ರಲ್ಲು ತಳ್ಳಿಹಾಕಲ್ಪಟ್ಟಿತು.

ಹಿಂದೂಸ್ಥಾನಕ್ಕೆ ಶೀಮೆಯಿಂದ ಈಗ ವಾರಕ್ಕೆ ಒಂದಾವರ್ತಿ ಮಾತ್ರ ಟಪ್ಪಾಲು ಬರುತ್ತಿದೆಯಷ್ಟೆ. ವಾರಕ್ಕೆ ಎರಡಾವರ್ತಿ ಟಪ್ಪಾಲು ಬರುವ ಏರ್ಪಾಡು ಮಾಡುವ ಆಲೋಚನೆಯು ಸರಕಾರದವರಿಗಿರುವುದು.

ಸಣ್ಣಾಸ್ಯದಲ್ಲಿ ತುರ್ಕರು ಬದಲಾವಣೆಗಳನ್ನು ಮಾಡಿ ಅದನ್ನು ಬಲಪಡಿಸುವ ಆಲೋಚನೆಯಲ್ಲಿದ್ದಾರಷ್ಟೆ. ಈ ಸಂಬಂಧ ಜರ್ಮನ್ ಮತ್ತು ರುಷ್ಯದವರು ಕೊಟ್ಟ ಆಲೋಚನೆಯಂತೆ ತುರ್ಕಿ ಸರ್ಕಾರದವರು ವಿದೇಶಿ ರಾಜ್ಯಗಳ ಎರಡು ಇನ್ಸ್‌ಪೆಕ್ಟರ್ ಜನರಲರನ್ನು ನೇಮಿಸಲಿಕ್ಕಿದ್ದಾರೆ. ಈ ನೇಮಕಕ್ಕೆ ೫ ಜನ ಉಮೇದ್ವಾರರಿರುವರು. ಇಬ್ಬರು ಬೆಲ್ಜಾಮಿನವರು ಇಬ್ಬರು ಡಚ್ಚರು, ಒಬ್ಬ ನೋರ್ವೆಯವನು. ಈ ೫ ಜನರ ಪೈಕಿ ೨ ಜನ ಇನ್ಸ್‌ಪೆಕ್ಟರ್ ಜನರಲರಾಗಿ ನೇಮಿಸಲ್ಪಡುವರು.

ಜೋರ್ಜ ಚಕ್ರವರ್ತಿಯವರು ಚಕ್ರವರ್ತಿನಿಯವ ಕೂಡೆ ಇದೇ ತಾ. ೨೧ಕ್ಕೆ ಪಾರಿಸನ್ನು ಸಂದರ್ಶಿಸಲಿಕ್ಕಿರುವರು. ೪ ದಿವಸ ಮಾತ್ರ ಪಾರಿಸ್ ನಗರದಲ್ಲಿ ಉಳಕೊಳ್ಳುವರು. ಈ ಉದ್ದೇಶ ಚಕ್ರವರ್ತಿಗಳವರನ್ನು ಸ್ವಾಗತ ಮಾಡಿಕೊಳ್ಳಲು ಪಾರಿಸಿನಲ್ಲಿ ತಕ್ಕ ಸನ್ನಾಹ ನಡೆಯುತ್ತಿದೆ.

ಹಿಂದೂಸ್ಥಾನದ ಬಣ್ಣ ತೆಗೆದ ಕೆಲಸಗಳ ವಸ್ತು ಪ್ರದರ್ಶನವು ಲಂಡನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ವಸ್ತು ಪ್ರದರ್ಶನಾಲಯದಲ್ಲಿ ಜರುಗುವದು. ಕಲ್ಕತ್ತೆಯ ಹೊಸ ಶಾಲೆಯ ೨೦೦ ಬಣ್ಣದ ಕೆಲಸಗಳು ಈ ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಡುವವು.

ಬೆರ್ಲಿನ್ ಯೂನಿವರ್ಸಿಟಿಯ ಪಶುವಿಜ್ಞಾನ ಶಾಸ್ತ್ರಿಯಾದ ಡಾಕ್ಟರ್ ರೆಕ್‌ರವರು ಪೂರ್ವಾಫ್ರೀಕದಲ್ಲಿ ಒಬ್ಬ ಮನುಷ್ಯನ ಅಪೂರ್ವ ಅಸ್ತಿಪಂಜರವನ್ನು ಕಂಡು ಕೊಂಡಿರುವರು. ಈ ಅಸ್ತಿಪಂಜರವು ೧೦ ಅಡಿ ೫ ಅಂಗುಲ ಉದ್ದವಾಗಿರುವುದು. ಈ ಅಸ್ತಿಪಂಜರದ ಆಧಾರದಿಂದ ಮನುಷ್ಯರಿಗೆ ೧೫೦,೦೦೦ ವರ್ಷಗಳ ಪ್ರಾಯವಾಗಿದ್ದಿರಬೇಕೆಂದು ಡಾಕ್ಟರ್ ರೆಕ್ಕರವರು ಹೇಳಬಲ್ಲರು. ಆಶ್ಚರ್ಯಕರವಾದ ಈ ಅಸ್ತಿಪಂಜರವನ್ನು ಆಶ್ಚರ್ಯಕರವಾಗಿಯೇ ಜೋಪಾಸನೆ ಮಾಡಿರುವರು. ದವಡೆಯು ಉದ್ದ ಮತ್ತು ಇಕ್ಕಟ್ಟಾಗಿದ್ದು ನಿಗ್ರೋ ದವಡೆ ಎಂದು ಹೇಳಲು ಅನುಮಾನವಿಲ್ಲ. ತಲೆಯು ಹಿಂಭಾಗ ಚೆನ್ನಾಗಿ ಬೆಳದದ್ದಾಗಿದ್ದು ಎತ್ತರವಾಗಿಯೇ ಇದೆ. ಮಗ್ಗುಲಿನ ಎಲುಬು ಮತ್ತು ಎದೆಯ ಎಲುಬು ಕೋತಿಯ ಎಲುಬಿನ ಹಾಗಿದ್ದರೂ ಕಪಾಲವು ಮನುಷ್ಯನ ಹಾಗಿದೆ. ಈ ಕಪಾಲದಲ್ಲಿ ೩೬ ಹಲ್ಲುಗಳೂ ಪೂರ್ಣವಾಗಿದ್ದು ಚಂದವಾಗಿ ಜೋಪಾಸನ ಮಾಡಿಯದೆ. ಕಂಣು ಕುಣಿಯು ಮೂಗೂ ಆಫ್ರೀಕದ ಪೊದೆಯಲ್ಲಿ ವಾಸಿಸುವ ಮನುಷ್ಯರಂತಿದೆ. ಬೆನ್ನಿನಲ್ಲಿ ಮಲಗಿದ್ದು ತಲೆಯನ್ನು ಬಲಗಡೆಗೆ ತಿರುಗಿಸಿ ಕೈಗಳನ್ನು ಮುಖದ ಮೇಲೆ ಇಟ್ಟು ಕುಕ್ಕರಿಸಿದಂತೆ ಈ ಮನುಷ್ಯನು ಮಲಗಿರುವನು. ಈ ಅಸ್ತಿಪಂಜರವು ಹೂಣಲ್ಪಟ್ಟ ಹೆಣದ್ದು ಅಲ್ಲ ಎಂಬದಾಗಿ ಡಾಕ್ಟರ್ ರೆಕ್ಕರವರು ಖಂಡಿತ ಹೇಳುವರು. ಈ ಅಸ್ತಿಪಂಜರವು ಸಿಕ್ಕಿದ ಸ್ಥಳದಲ್ಲಿ ಒಮ್ಮೆ ಒಂದು ಸರೋವರವಿತ್ತು. ಆ ಸರೋವರದಲ್ಲಿ ಈ ಮನುಷ್ಯನು ಮುಣುಗಿ ಸತ್ತಿರಬೇಕೆಂಬದು ಡಾಕ್ಟರರ ಅಭಿಪ್ರಾಯ. ಈ ದೇಹದಲ್ಲಿ ತುಂಬಾ ಹ್ಯೊಗೆ ಮತ್ತು ಜೇಡಿಮಣ್ಣು ಮುಚ್ಚಿತ್ತು. ಈ ಅಸ್ತಿಪಂಜರ ಸಿಕ್ಕಿದ ಸ್ಥಳದಲ್ಲಿ ಅನಂತರ ಜ್ವಾಲಾಮುಖಿ ಪರ್ವತ ಉಂಟಾಗಿತ್ತು.

ಜಾಪಾನಿನ ಡೌಗರ್ ಮಹಾರಾಣಿಯವರು ತಾ. ೯ರಲ್ಲು ವಿಧಿವಶರಾದರು.

ಲಂಡನಿನ ಒಬ್ಬ ಸಫ್ರಜೆಟ್ಟ ಸ್ತ್ರೀಯು ಬ್ರಿಟಿಷ್ ವಸ್ತು ಪ್ರದರ್ಶನಾಲಯದ ಕೆಲವು ಕನ್ನಡಿಗಳನ್ನು ಒಡೆದು ಹಾಕಿ ನಷ್ಟಪಡಿಸಿರುವಳು. ಆಸ್ಯ ಖಂಡದ ವಸ್ತುಗಳು ಇಡಲ್ಪಟ್ಟಿದ್ದ ಅಂಕಣಗಳ ಕನ್ನಡಿಯು ಒಡೆದು ಹೋಗಿರುವುದು.

ಬಹುಮಾನಪಟ್ಟ ಗೋಖಲೆಯವರು ಕಳದ ವಾರ ಲಂಡನಿಗೆ ತಲಪಿದರು. ಪ್ರಯಾಣಕಾಲ ಅವರ ಆರೋಗ್ಯವು ಬಹಳವಾಗಿ ಕೆಟ್ಟುಹೋಗಿರುವುದಾದರೂ ಪ್ರಖ್ಯಾತ ವೈದ್ಯರ ಆರೈಕೆಯಲ್ಲಿರುವುದರಿಂದ ಬೇಗನೇ ಪುನಃ ತಕ್ಕ ಆರೋಗ್ಯವನ್ನು ಪಡೆಯಬಹುದು. ದಕ್ಷಿಣ ಆಫ್ರೀಕವನ್ನು ಸಂದರ್ಶಿಸಿ ಬಂದ ರೆವರೆಂಡ್ ಅಂಡ್ರೂಸರವರು ಕಳದ ಸೋಮವಾರ ಇವರ ಭೇಟಿ ಕೊಟ್ಟರು. ಮರುದಿನ ಡಾಕ್ಟರ್ ಮೆಥರವರು ಇವರನ್ನು ಪರೀಕ್ಷಿಸಿ ಗುಂಡಿಗೆಯು ಆರೋಗ್ಯದಲ್ಲಿ ಇಲ್ಲವೆಂದೂ ಪೂರ್ಣ ವಿಶ್ರಾಂತಿ ತಕ್ಕೊಳ್ಳಬೇಕೆಂದೂ ಹೇಳಿರುವರಲ್ಲದೆ ಡಾಕ್ಟರ್ ಡೈಸ್‌ಡೇಲ್ ಮತ್ತು (ಅರಸರ ವೈದ್ಯರಾದ) ಸರ್ ತೋಮಸ್ ಬಾರ್ಲೊರವರಿಂದ ಪರೀಕ್ಷಿಸಿ ಕೊಳ್ಳುವುದುತ್ತಮವೆಂದೂ ಹೇಳಿರುವರು.

ಕಲ್ಕತ್ತೆಯ ಪ್ರಖ್ಯಾತ ವಕೀಲರ ಮಗಳಾದ ಮಿಸ್ ದೊರ್ತಿ ಬೆನರ್ಜಿಯವರಿಗೆ ವೇಲ್ಸ್ ಯುನಿವರ್ಸಿಟಿಯಲ್ಲಿ ಬಾರ್ಡ್ ಎಂಬ ಬಿರುದು ದೊರಕಿರುವುದು. ಭಾರತೀಯ ಹೆಂಗಸರಲ್ಲಿ ಈ ಬಹುಮಾನ ದೊರಕಿದ್ದವರಲ್ಲಿ ಇವರೇ ಮೊದಲನೇಯವರು.

ಉತ್ತರ ಹಿಂದೂಸ್ಥಾನ

ದಕ್ಷಿಣ ಆಫ್ರೀಕದ ಭಾರತೀಯರ ಸಹಾಯಾರ್ಥವಾಗಿ ಕೂಡಿಸಿದ ಫಂಡಿಗೆ ಈ ವರೆಗೆ ೩೭೧೬೧೮ ರೂಪಾಯಿ ಜಮೆ ಆಗಿರುವುದು.

ಇದೇ ತಾ. ೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೫೫೩೭ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೩೪೫೭ ಮಂದಿ ಮೃತಪಟ್ಟರು. ಈ ಪೈಸ[illegible]ಕ್ತ ಸಂಸ್ಥಾನ ೫೩೪೪; ಪಂಜಾಬು ೩೧೦೭; ಮ[illegible] ೭೧೮; ಬಿಹಾರ್ ಮತ್ತು ಒರಿಸ್ಸ ೩೬೫೩; ವೆಂಗಣಿತ ೪೪; ಬಂಗಾಳ ೩೬; ಬರ್ಮ ೨೬೭; ವಾಯವ್ಯ[illegible]ದ್ದು ೨೩ ಮರಣಗಳಾದವು.

ಬಂಗಾಳ ಸರಕಾರದವರು ಡಿಸ್ಟ್ರಿಕ್ಟ್ ಮುನ್ಸಿಫ[illegible]ಭದ ಸಂಬಳವನ್ನು ರೂ ೨೦೦ರಿಂದ ೨೫೦ಕ್ಕೆ ಹೆ[illegible]ವರು.

ಅಲ್ಲಹಾಬಾದಿನ ಚೌದುರಿ ಮಹಾದೇವ ಎಂಬ ಮಹನೀಯರು ತನ್ನ ಸರ್ವ ಆಸ್ತಿಯನ್ನು ಪಾಠಶಾಲೆಗೆ ಬರೆದು ಕೊಟ್ಟಿರುವರು. ಇದೇ [illegible]ಲೆಗೆ ಮುನ್ಸಿ ಕಾಳಿಪ್ರಸಾದ ಎಂಬವರು ೪೦,೦೦[illegible]ಪಾಯಿಗಳ ಆದಾಯವಿರುವ ಆಸ್ತಿಯನ್ನು ಹಿಂದೆಯೇ [illegible]ದು ಕೊಟ್ಟಿದ್ದರು.

ಮುಂಬಾಯಿಯ ಕೊಲೋಬದ ಹತ್ತೀ ವಖಾ[illegible] ಕೊಠಡಿಗಳು ಬೆಂಕಿಯ ಪಾಲಾಗುತ್ತಿರುವುದರಿಂ[illegible] ಈ [illegible]ಳನ್ನು ಸೈನೀಕರ ಕಾವಲಿಯಲ್ಲಿಟ್ಟದೆ. ಆದರೂ [illegible] ೧೦ರಲ್ಲು ೨ ಮೂಟೆಗಳಲ್ಲಿ ಬೆಂಕಿಯು ಕಾ[illegible]ಡಿತು. ಆದರೆ ಕೂಡ್ಲೇ ಬೆಂಕಿ ಆರಿಸಲಾಯಿತು. [illegible]ಗೆ ಉಂಟಾದ ಈ ಬೆಂಕಿಯ ವಿಷಯ ವಿವಿಧ ವಾರ್ತೆ[illegible] ಕೇಳಸಿಗುತ್ತವೆ, ಪರಂತು, ಕಡೆಯ ವಾರ್ತೆಯ[illegible] ಕಾವಲಿಯ ಸೈನೀಕರು ಮೂಟೆಗಳ ಸಮೀಪ [illegible]ಕೊಳ್ಳುವ[illegible]ತಿದ್ದ ೩ ಮಂದಿ ಭಾರತೀಯ ಕೂಲಿಯಾಳುಗಳನ[illegible] ಕೈದು ಮಾಡಿರುವರೆಂತ ತಿಳಿದು ಬರುತ್ತದೆ. [illegible] ಬೆಂಕಿ ತಾಗಿದ ಹತ್ತೀ ಮೂಟೆಗಳನ್ನು ಪೊಲಿಸ್[illegible] ರು ಬಿಚ್ಚಿ ನೋಡಿದಲ್ಲಿ ಒಂದರೊಳಗೆ ಬೆಂಕಿ [illegible]ತ್ರಂತೆ.

ಮುಂಬಾಯಿಯ ಕೊಲೊಬದ ಹತ್ತೀ [illegible] ಬೆಂಕಿಯಿಂದ ಫಯರ್ ಇನ್ಶೂರು ಕಂಪೆನಿಯ[illegible] ವರೆಗೆ ಸುಮಾರು ೯೦ ಲಕ್ಷ ರೂಪಾಯಿಗಳ ನಷ್ಟ[illegible]ವುದು.

ಮಧ್ಯ ಹಿಂದೂಸ್ಥಾನ ಉತ್ತರ ಮದ್ರಾಸ್[illegible] ಅಸ್ಸಾಮ್, ಸಂಯುಕ್ತ ಸಂಸ್ಥಾನಗಳಲ್ಲಿ ಮಳೆ[illegible]ಧಾರಣವಾಗಿ ಸುರಿಯ ಹತ್ತಿದೆ. ನೌಗೊಂಗ್[illegible] ಸಟ್ಲ ೧॥ ಇಂಚು, ಇಂದೋರು ೧॥ ಇಂಚು[illegible] ಮತ್ತು ಚಂದ ॥ ಇಂಚು, ತಿರುಚಿನಾಪಳ್ಳಿ ॥[illegible] ಮದ್ರಾಸ್ ಮತ್ತು ನೆಲ್ಲೂರು ೨ ಇಂಚುಗಳ [illegible]ರುವುದು.

ಲಾಹೋರು ಮೆಡಿಕಲ್ ಕಾಲೇಜಿಯ ವಿದ್ಯಾ[illegible] ಹಾಲಹವಾಲಿಯನ್ನು ಕೇಳುವರೆ ನೇಮಿಸಲ್ಪಟ್ಟ[illegible]ನವರು ತಾ. ೯ರಲ್ಲು ಕಾಲೇಜಿ ಪ್ರಿನ್ಸಿಪಾಲರನ್ನೂ ಪ್ರೊಫೆಸರರನ್ನೂ, ಕಾಲೇಜಿಯ ದಾದಿಗಳ[illegible]ನ್ನೂ ವಿಚಾರಿಸಿದರು. ವಿಚಾರಣೆಯ ವರದಿ[illegible]ನೇ ಸರಕಾರದ ಮುಂದಿಡಲ್ಪಡುವುದು.

ಲಾಹೋರಿನ ರಾವಲ್ಪಿಂಡಿ ಡಿಸ್ಟ್ರಿಕ್ಟಿನಲ್ಲಿ [illegible] ದ್‌ಶಾ ಎಂಬವನು ಅಲ್ಲಿಯ ರಿಟೆಯರ್ಡ್ [illegible]ಸ್ಟ್ರೇಟರು ಮತ್ತು ಇನ್ನು ಕೆಲವರು ಕೂಡಿ [illegible]ನರನ್ನು ಕೊಲ್ಲಲು [illegible]

ಲದಲ್ಲಿ ಬಚ್ಚಿಡಲ್ಪಟ್ಟದೆಂದೂ ಪೋ ಗೆ ವರದಿ ಮಾಡಿ ಅವರನ್ನು ಹೊಲಕ್ಕೆ ಕರಕೊಂ ಗಿ ಹೊಲವನ್ನು ಅಗೆಯಿಸಿದನು. ಆದರೆ ವಿಚಾ ರುದ ಮಹಮ್ಮದ್‌ಶಾಹನ ಮೇಲೆ ಅನುಮಾನ ಹೆಚ್ಚಿನ ತನಕಿ ನಡಿಸಲು ತಾನೇ ಆ ಬೊಂಬನ್ನು ನೆಂದು ಮಹಮ್ಮದ್‌ಶಾಹನು ಅರಿಕೆ ಮಾಡಿದನು. ಗೆ ರಾವಲ್‌ಪಿಂಡಿಯ ಸೆಶ್ಶನ್ಸ್ ಜಡ್ಜರು ೭ ವರ್ಷಗಳ ಸಜಾ ವಿಧಿಸಿದರು.

* * *

ಸರ್. ಪಿ. ಸಿ. ಚಟರ್ಜಿ ಸಿ. ಐ. ಇರವರು ಯುನಿವ ಪರವಾಗಿ ಪಂಜಾಬು ನ್ಯಾಯ ವಿಧಾಯಕ ಸಭೆಯ ರರಾಗಿ ಆರಿಸಲ್ಪಟ್ಟಿರುವರು.

* * *

ಲಾಹೋರ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಸುಮ್ಮದಲ್ಲಿ ಶಿಕ್ಷೆ ವಿಧಿಸಲ್ಪಟ್ಟ ವಿದ್ಯಾರ್ಥಿಗಳು ಶಿಕ್ಷೆಯನ್ನು ಹಿಂದೆಗೆಯಬೇಕೆಂಬದಾಗಿ ಲೆಪ್ಟನೆಂಟ ಗವರ್ನರರವರಿ ವಿಜ್ಞಾಪಿಸಿಕೊಂಡಿರುವರು.

* * *

ಲ್ಕತೆಯ ಹೊಸ ಮಾರ್ಕೆಟಿನಲ್ಲಿ ತಾ. ೮ರಲ್ಲು ಉಂಟಾಗಿ ಸರ್ವ ಬಗೆಯ ವ್ಯಾಪಾರವಿಡುವ ವ ಎರಡು ಗೋಡೆಗಳು ಬಿದ್ದು ಹೋಯಿತು. ಗಳು ಸುಟ್ಟು ಬೂದಿಯಾದವು. ಅಂಗಡಿಗಳಲ್ಲಿದ್ದ ಇಂದ ಬೆಂಕಿಯು ಮತ್ತಷ್ಟು ಪ್ರಬಲವಾಯಿತು. ಈ ಬೆಂಕಿಯಿಂದ ೧॥ ಲಕ್ಷ ರೂಪಾಯಿಗಳ ನಷ್ಟ ವುದು.

ಕ್ತೂರು ಇನ್ಸ್‌ಪೆಕ್ಟರ ಕೊಲೆ ಮೊಕದಮೆಯಲ್ಲಿ ಸಲ್ಪಟ್ಟ ನಿರ್ಮಲಕಾಂತನ ಮೇಲಿನ ಮೊಕದ ಎಡ್ವೊಕೇಟ್ ಜನರಲವರಿಂದ ಹಿಂದೆಗೆಯಲ್ಪ ಜಡ್ಜರು ನಿರ್ಮಲಕಾಂತ ರೋಯಿಯನ್ನು ಪಡಿಸಿದರು.

* * *

ಂಬಾಯಿಯಲ್ಲಿ ತಾ. ೮ರಲ್ಲು ಸರ್ ಕರಿಂಬೊಯಿ ಮ್ ಮತ್ತು ಹಾಜಿ ಅಬ್ಬುಬೇಕರ್ ಅಬ್ದುಲ್ಲ ರಹಿ ಹತ್ತಿ ಕೊಠಡಿಗಳಿಗೆ ಬೆಂಕಿ ಬಿದ್ದು ೪೭೪೧ ೪೩೩ ಬೇಲ್ ಹತ್ತಿ ಮೂಟೆಗಳು ಸುಟ್ಟು ಹೋ ಬೆಂಕಿ ಆರಿಸುವ ಯಂತ್ರದಿಂದ ॥ತಾಸಿನಲ್ಲಿ ಬೆಂಕಿ ಯಿತು. ಆದರೂ ಸರ್ ಕರಿಂಬೋಯಿಯವ ರೂಪಾಯಿ ೬೭,೦೦೦ ಮತ್ತು ಅಬ್ಬುಬೇಕರರಿಗೆ ೦ ರೂಪಾಯಿಗಳ ನಷ್ಟವಾಯಿತು.

* * *

ಮಾನ್ಯ ಗೋಖಲೆಯವರು ಆರೋಗ್ಯ ಹೊಂದುತ್ತಿ ತ ಲಂಡನಿನಿಂದ ತಂತೀ ಬಂದಿರುವುದು.

* * *

ನಾಗಪುರದ ರಾಮಟೇಕ್ ಎಂಬಲ್ಲಿ ಒಂದು ದಕಾ ಯು ನಡೆದಿರುವುದು. ಆಯುಧಪಾಣಿಗಳಾದ ದಕಾ ರಾಮಾಜಿಮೂದಕರೆಂಬವರ ಮನೆಗೆ ನುಗ್ಗಿ ರೂಪಾಯಿ ಬೆಲೆಯ ಆಭರಣಗಳನ್ನು ಅಪಹರಿಸಿ ಹೋದರು. ಪೊಲಿಸ್ ಸುಪರಿಂಟೆಂಡೆಂಟರು ಕೂಡ ಸ್ಥಳಕ್ಕೆ ಹೋಗಿ ವಿಚಾರಿಸುವಲ್ಲಿ ೨೦ ವರ್ಷ ವಯ ಯುವಕನೊಬ್ಬನನ್ನು ಕೊಂದು ಜೇಲದೊಳಗೆ ಹಾಕಿ ನೊಳಗೆ ಹಾಕಿದ್ದು ಕಂಡುಹಿಡಿಯಲ್ಪಟ್ಟಿತು. ನುಷ್ಯವು ವಿಕಾರ ಮಾಡಲ್ಪಟ್ಟದ್ದು ದರಿಂದ ಇಂತಹ ನೆಂದು ಡು ಹಿಡಿಯುವುದು ಕಷ್ಟಸಾಧ್ಯವಾ

ನ್ಯಾಸರಾಯರಾದ ಹಾರ್ಡಿಂಜ್ ಪ್ರಭುಗಳ ಮೇಲೆ ಡಿಲ್ಲಿಯಲ್ಲಿ ಬೊಂಬು ಬಿಸಾಡಿದರೆಂಬ ಅಪರಾಧದ ಮೇಲೆ ೮೨ ಮಂದಿ ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರಷ್ಟೆ. ಈ ಸಂಬಂಧ ಅಮೇರಿಕಾ ಖಂಡದ ಸಾನ್ ಪ್ರಾನ್ಸಿಸ್ಕೊ ನಗರದಲ್ಲಿರುವ ಹರಿದಯಾಳರವರು ಹಿಡಿಯಲ್ಪಟ್ಟಿದ್ದಾರೆ. ಹರಿದಯಾಳರು ಡಿಲ್ಲಿಯಲ್ಲಿ ಶಿರಸ್ತೆದಾರರಾಗಿರುವ ಗೌರೀ ಸಾಹೇಬರ ಪುತ್ರರು. ಇವರು ಡಿಲ್ಲಿಯ ಸ್ಟಿಫನ್ಸ್ ಕಾಲೇಜಿಯಲ್ಲಿ ೧೯೦೩ನೇ ಇಸವಿಯಲ್ಲಿ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಲಾಹೋರಿಗೆ ಹೋಗಿ ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮತ್ತು ಗಣಿತ ಶಾಸ್ತ್ರ ಮತ್ತು ಸಂಸ್ಕೃತದಲ್ಲೂ ಮೊದಲನೇ ತರಗತಿಯಲ್ಲಿ ತೇರ್ಗಡೆ. ಹೊಂದಿದುದರಿಂದ ಪಂಜಾಬು ಸರಕಾರದವರಿಂದ ದ್ರವ್ಯ ಸಹಾಯ ಪಡೆದು ಇಂಗ್ಲಾಂಡಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಹೋಗಿ ಅಲ್ಲಿ ಒಕ್ಸ್‌ಫೊರ್ಡು ಯುನಿವರ್ಸಿಟಿಯಲ್ಲಿ ವಿದ್ಯಾರ್ಥಿ ವೇತನವನ್ನು ಪಡೆಯುತ್ತಿದ್ದರು. ಅಲ್ಲಿಂದ ಭರತ ಖಂಡಕ್ಕೆ ಬಂದು ಸನ್ಯಾಸಿಯಾದರು. ಬಳಿಕ ೧೯೧೧ರಲ್ಲು ಎರಡನೇ ಸಾರಿ ಇಂಗ್ಲಾಂಡಿಗೆ ಹೋಗಿ ಅಲ್ಲಿಂದ ಅಮೇರಿಕಕ್ಕೆ ಹೋಗಿ ಈಗ ಕಾಲಿಫೋರ್ನಿಯಾ ಸರ್ವ ಕಲಾನಿಧಿಯಲ್ಲಿ ಸಂಸ್ಕೃತ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದಾರೆ.

* * *

ತಾ. ೯ರಲ್ಲು ಸಿಮ್ಲಕ್ಕೆ ೩೦೦ಮೈಲು ದೂರದಲ್ಲಿ ಒಂದು ಭೂಕಂಪವುಂಟಾಗಿರುವುದೆಂತ ತಿಳಿದು ಬಂದಿದೆ.

* * *

ದಕ್ಷಿಣ ಆಫ್ರೀಕದ ಭಾರತೇಯರ ಅರಿಷ್ಟಾವಸ್ಥೆಯನ್ನು ವಿಚಾರಿಸುವರೆ ನೇಮಿಸಲ್ಪಟ್ಟ ಕಮಿಷನಿನ ಮುಂದೆ ವಾಗ್ಮೂಲ ಕೊಡುವರೆ ಇಂಡಿಯಾ ಸರಕಾರದ ಪರವಾಗಿ ಕಳುಹಿಸಲ್ಪಟ್ಟ ಸರ್ ಬೆಂಜಮಿನ್ ರೋಬರ್ಟ್ಸನರವರು ಮಾರ್ಚಿ ತಾ. ೧೭ರಲ್ಲು ಕೇಪ್ ಟೌನಿನಿಂದ ಹಿಂದೂಸ್ಥಾನಕ್ಕೆ ಹೊರಡಲಿಕ್ಕಿರುವಾಗ ಅಲ್ಲಿಯ ಪಾರ್ಲಿಮೆಂಟ ಮೆಂಬರರೂ ಭಾರತೇಯ ಮುಂದಾಳುಗಳೂ ಇದ್ದು ಬಹಳ ಸಂಭ್ರಮದಿಂದ ಅವರನ್ನು ಸಾಗ ಕಳುಹಿಸಿದರು. ಅಗ್ಗಾಡಿ ಹೊರಡುವ ಮೊದಲು ಮೆ| ಗಂಧಿಯವರು ಅವರಿಗೆ ಪುಷ್ಪ ಮಾಲೆಯನ್ನು ಹಾಕಿದರು. ಟ್ರಾನ್ಸ್‌ವಾಲನ್ನು ದಾಟಿ ಹೋಗುವಾಗಲೂ ಮುಖ್ಯ ಮುಖ್ಯ ಸ್ಟೇಶನುಗಳಲ್ಲಿ ಭಾರತೇಯರು ಹಾಜರಿದ್ದು ಧನ್ಯವಾದವನ್ನಿತ್ತರು. ಮೊಂಬಾಸ ಜಂಜೀಬಾರ್ ಮೊದಲಾದ ಸ್ಥಳಗಳಲ್ಲಿಯೂ ಭಾರತೇಯ ಪ್ರತಿನಿಧಿಗಳು ಬಂದು ಇವರಿಗೆ ಕೃತಜ್ಞತೆಯನ್ನು ತೋರಿದರು.

* * *

ಇದೇ ತಾ. ರಲ್ಲು ಅಲ್ಲಹಾಬಾದಿನಲ್ಲಿ ದಿನಾಜಪುರದ ರಾಯಿ ಬಹದ್ದೂರ್ ನಾಮದಾರ್ ಮಹರಾಜ ಗಿರ್ಜನಾಥ ರೋಯಿರವರ ಅಧ್ಯಕ್ಷತೆಯಲ್ಲಿ ಆಲ್ ಇಂಡಿಯಾ ಕಾಯಸ್ಥ ಕನ್ಫರೆನ್ಸ್ ಸಭೆಯು ಕೂಡಿ ಬಂತು. ಈ ಸಭೆಯಲ್ಲಿ ವರಶುಲ್ಕದಿಂದುಂಟಾದ ಪರಿಣಾಮವನ್ನು ಹೋಗಗೊಳಿಸಬೇಕೆಂಬ ನಿರ್ಣಯಗಳುಂಟಾದವು.

* * *

ದನಕರುಗಳ ಆರೋಗ್ಯ ಸಾಧನಾರ್ಥವಾದ ಸೊಸ್ಯಾಟಿಯ ಸಭೆಯೂ ದಿನಾಜಪುರ ಮಹಾರಾಜರ ಅಧ್ಯಕ್ಷತೆಯಲ್ಲಿ ಕೂಡಿಬರುವುದು.

* * *

ಮುಂಬಾಯಿಯಲ್ಲಿ ತಾ. ೧೪ರಲ್ಲು ಹತ್ತೀ ಮೂಟೆಗಳಿಗೆ ಬೆಂಕಿ ಬಿದ್ದು ಮಧ್ಯಾಹ್ನಕ್ಕೆ ಸುಮಾರು ೨೦೦ ಬೇಲ್ ಹತ್ತೀ ಮೂಟೆಯೂ ಮಧ್ಯಾಹ್ನದ ನಂತರ ೫೦ ಬೇಲುಗಳೂ ಸುಟ್ಟು ಹೋಯಿತು. ಈ ಬೆಂಕಿಯ ಕಾರಣಗಳನ್ನು ಗೊತ್ತು ಹಚ್ಚಿ ಮುಂದೆ ಇಂತಹ ಅನಾಹುತಗಳಾಗದಂತೆ ಸಲಹೆ ಕೊಡುವರೆ ಮುಂಬಾಯಿ ಸರಕಾರದವರಿಂದ ಒಂದು ಕಮಿಟಿಯು ನೇಮಿಸೋಹಾಗಿರುವುದು.

ದಕ್ಷಿಣ ಹಿಂದೂಸ್ಥಾನ.

ರಂಗೂನಿನ ಮೆ| ಬಿ. ಎನ್. ಬರ್ಜೊರ್ಜಿ ಎಂಬವರ ಪಂದ್ಯದ ೨೦,೦೦೦ ರೂಪಾಯಿ ಕ್ರಯಬಾಳುವ ಕುದುರೆಯು ಕಟ್ಟೆದಲ್ಲೇ ಅಕಸ್ಮಾತ್ತಾಗಿ ಅವಗಡ ಹೊಂದಿ ಅದರ ಮೂರು ಕಾಲುಗಳು ಮುರಿದು ಹೋಗಿರುವವು. ಈ ಕುದುರೆಯು ೧೯೧೨—೧೩ನೇ ಇಸವಿಗಳಲ್ಲಿ ಸೆಂಟ್ ಲಿಗರ್ ಡರ್ಬಿಗಳಲ್ಲಿ ಜಯವನ್ನು ಹೊಂದಿ ಪ್ರಖ್ಯಾತಿ ಪಡದಿತ್ತು. ಕುದುರೆಯ ಮಾಲೀಕನಿಗೆ ಈ ಅವಗಡದಿಂದ ೨೦,೦೦೦ ರೂಪಾಯಿ ನಷ್ಟವಾಯಿತು.

* * *

ಮದ್ರಾಸ್ ಆಯುರ್ವೇದ ಪ್ರಚಾರಿಣೀ ಸಭೆಯ ಪ್ರಥಮ ವಾರ್ಷಿಕೋತ್ಸವವೂ ಪಾಸಾದವರಿಗೆ ಸರ್ಟಿಫಿಕೇಟು ಮತ್ತು ಇನಾಮುಗಳನ್ನು ಕೊಡುವ ಸಮಾರಂಭವೂ ತಾ. ೮ರಲ್ಲು ಬಹುಮಾನಪಟ್ಟ ಎ. ಎಸ್. ಶಿವಸ್ವಾಮಿ ಐಯ್ಯರರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮಾರಂಭ ಸಭೆಯ ಅಧ್ಯಕ್ಷರಾದ ಸರ್. ಎಸ್. ಸುಬ್ರಮಣಯ್ಯರ್ ದಿವಾನ್ ಬಹದ್ದೂರ್ ಕೆ. ಕೃಷ್ಣಸ್ವಾಮಿರಾವ್, ಬಹುಮಾನಪಟ್ಟ ರಾವ್ ಬಹದ್ದೂರ್ ಕೇಶವಪಿಳ್ಳೆ ಮೊದಲಾದ ಮದ್ರಾಸಿನ ಅನೇಕ ಮಾನ್ಯ ಗೃಹಸ್ಥರು ಕೂಡಿ ಬಂದಿದ್ದರು. ಅಧ್ಯಕ್ಷರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ೧೪ ಮಂದಿಗೆ ವಿದ್ವಾತ್ ಸನ್ನದನ್ನೂ ಇನಾಮುಗಳನ್ನೂ ಕೊಟ್ಟು, ಈ ಸಂಸ್ಥೆಗೆ ಹಣಸಹಾಯಮಾಡಿದವರಿಗೆ ಉಪಕಾರಸ್ಮರಣೆಯನ್ನು ಹೇಳಿ ಸಭೆಯಿಂದಾದ ಉತ್ತಮ ಕೆಲಸವನ್ನು ಕೊಂಡಾಡಿ, ಈ ಸಂಸ್ಥೆಯ ಮೂಲಪುರುಷರಾದ ಪಂಡಿತ ಗೋಪಾಲಾಚಾರ್ಯರವರು ಈ ಸಭೆ ಮತ್ತು ಆಯುರ್ವೇದ ಕಾಲೇಜನ್ನು ಇರಗೊಡಿಸುವರೆ ಮಾಡಿದ ವೆಚ್ಚವನ್ನೂ ತಿಳಿಯಹೇಳಿ ಅವರನ್ನು ಹೊಗಳಿದರು. ಇತ್ತಲಾಗಿ ನ್ಯಾಯವಿಧಾಯಕ ಸಭೆಯ ಮುಂದೆ ಬಂದ ಮೆಡಿಕಲ್ ರಿಜಿಸ್ಟ್ರೇಶನ್ ಮಸೂದೆಯು ಆಯುರ್ವೇದ ಪಂಡಿತರಿಗೆ ಯಾವ ತರದ ಹಾನಿಯನ್ನೂ ಉಂಟುಮಾಡುವುದಿಲ್ಲವೆಂಬದಾಗಿ ಹೇಳಿದುದಲ್ಲದೆ ಆಯುರ್ವೇದ ಪದ್ಧತಿಯನ್ನು ಮೇಲಕ್ಕೆ ತರುವರೆ ಬೇಕಾದ ಕೆಲವು ಸಲಹೆಗಳನ್ನೂ ಕೊಟ್ಟರು.

* * *

ಕೊಯಮುತ್ತೂರು ವ್ಯವಸಾಯ ಕಾಲೇಜಿಯ ಮೂರನೇ ವರ್ಷದ ವಿದ್ಯಾರ್ಥಿಗಳಲ್ಲಿ ಪಾಸಾದವರಿಗೆ ಸನ್ನದು ಕೊಡುವ ಸಮಾರಂಭವು ತಾ. ೮ರಲ್ಲು ಡ್ಯಾರೆಕ್ಟರರಾದ ಮೆ| ಚೆಡ್‌ವಿಕ್‌ರವರಿಂದ ನಡಿಸಲ್ಪಟ್ಟಿತು. ಒಟ್ಟಿಗೆ ೯ಮಂದಿಗೆ ಸನ್ನದು ಕೊಡಲ್ಪಟ್ಟಿತು. ವ್ಯವಸಾಯದ ಉತ್ತಮ ವಿದ್ಯಾರ್ಥಿಗೆ ಸಿಗುವ ರೋಬರ್ಟ್ಸನ್ ಪ್ರ್ಯಾಜ್ ಎಂಬ ಬಹುಮಾನವು ಕೆ. ರಾಮಯ ಎಂಬವರಿಗೆ ಸಿಕ್ಕಿತು. ಇವರೇ ಕ್ಲೊಗ್‌ಸ್ಟನ್ ಪ್ರ್ಯಾಜ್ ಎಂಬ ಬಹುಮಾನವನ್ನೂ ಪಡಕೊಂಡರು. ಈ ಬಹುಮಾನವು ಮೂರು ವರುಷದ ಕೆಲಸದ ಫಲಿತಾಂಶದ ಮೇಲೆ ಕೊಡುವಂಥಾದ್ದು.

* * *

ರಿಟಯರ್ಡ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾದ ಮೆ| ಜಿ. ಚಂದ್ರನರವರ ಮಗಳು ಮಿಸ್ ಲಿಟಿಟಿಯ ಎಂಬವರಿಗೆ ಡಿಲ್ಲಿಯಲ್ಲಿ ತೆರೆಯಲ್ಪಡುವ ಹೆಂಗಸರ ಮೆಡಿಕಲ್ ಕಾಲೇಜನಲ್ಲಿ ಕಲಿಯುವರೆ ಮಾಹೆಯಾನ ರೂ. ೩೦ರ ವೇತನವು ದೊರಕುವುದೆಂತ ತಿಳಿದುಬರುತ್ತದೆ.

* * *

ಇದೇ ಕಳದ ತಾ. ೭ರಲ್ಲು ಕಲಿಕೋಟೆಯಲ್ಲಿ ಆಕಾಶದಿಂದ ಅಪೂರ್ವ ಶಬ್ದ ಕೇಳಿಸಿತು. ಇದು ಒಂದುವೇಳೆ

ಗುಡುಗು ಆಗಿರಬೇಕೆಂದು ಜನರು ಭಾವಿಸಿದರು. ಆದರೆ ಈಗ ತಿಳಿದು ಬರುವ ಪ್ರಕಾರ ಈ ಶಬ್ದದೊಡನೆ ಪೊನ್ನಾನಿ, ತಿತ್ತೂರು, ತಿರುರಂಗಾಡಿ ಕುಟ್ಟಿಪುರಂ, ಒಟ್ಟಪಾಲಂ, ಮತ್ತು ದಕ್ಷಿಣ ಮಲಬಾರಿನ ಇತರ ಕೆಲವು ಸ್ಥಳಗಳಲ್ಲಿ ೧೦೦ ರಾತಲು ಭಾರವಿರುವ ಕಲ್ಲುಗಳು ಆಕಾಶದಿಂದ ಬಿದ್ದು ಭೂಮಿಯೊಳಗೆ ೫-೬ ಅಡಿ ಆಳಕ್ಕೆ ಹೂತು ಹೋಗಿಯದೆ. ಕಲ್ಲುಗಳು ಬಿದ್ದ ರಭಸದಿಂದ ಪುಡಿಪುಡಿಯಾಗಿರುವವು. ಈ ಪೈಕಿ ಸಿಕ್ಕಿದ ೩ ಇಡೀ ಕಲ್ಲುಗಳನ್ನು ಮದ್ರಾಸಿನ ವಸ್ತುಪ್ರದರ್ಶನಾ ಶಾಲೆಗೆ ಕಳುಹಿಸಿದ್ದಾರೆ.

* * *

ಮದ್ರಾಸಿನ ಇಂಜಿನಿಯರಿಂಗ್ ಕಾಲೇಜಿಯನ್ನು ಅಭಿವೃದ್ಧಿಪಡಿಸುವರೆ ಸರಕಾರದವರು ಆಲೋಚಿಸಿ ಈ ಸಂಬಂಧ ತಕ್ಕ ಸಲಹೆ ಕೊಡುವರೆ ಒಂದು ಕಮಿಟಿಯನ್ನು ನೇಮಿಸಿರುವರು.

* * *

ಏಳನೇ ಎಡ್ವರ್ಡ್ ಚಕ್ರವರ್ತಿಯವರ ಜ್ಞಾಪಕಾರ್ಥವಾದ ಮದ್ರಾಸ್ ಫಂಡಿನಲ್ಲಿದ್ದ ಹಣವನ್ನು ಅಂದರೆ ರೂಪಾಯಿ ೨,೧೮,೫೭೭—೧೫—೭ನ್ನು ಪ್ರೊವಿನ್ಸಿಯಲ್ ಫಂಡಿನಿಂದ ಸೆಂಕ್ಶನ್ ಮಾಡಿ ಪ್ರೆಸಿಡೆನ್ಸಿ ಪಟ್ಟಣದಲ್ಲಿ ಒಂದು ಕ್ಷಯರೋಗಿಗಳ ಭಿತ್ತಿಯನ್ನು ಕಟ್ಟಿಸಿ ಅದರ ಬಗ್ಗೆ ಈ ಹಣವನ್ನು ವೆಚ್ಚಮಾಡಲು ಸಮ್ಮತಿಸಿರುವರು.

* * *

ಇದೇ ತಾ. ೧೨ರಲ್ಲು ತಂಜಾವೂರಿನಲ್ಲಿ ಸೋಶ್ಯಲ್ ಕನ್ಫರೆನ್ಸ್ ಎಂಬ ಸಾಂಸರ್ಗಿಕ ಸಭೆಯು ಕೂಡಿತು. ಈ ಸಭೆಯಲ್ಲಿ ಸರ್ ಜಸ್ಟಿಸ್ ಶಂಕರನ್ ನಾಯರರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಬಾಲವಿವಾಹ ವಿಸರ್ಜನೆ, ವರಶುಲ್ಕವನ್ನು ತೆಗೆದುಹಾಕಬೇಕು, ವಿವಾಹವಾಗಲಿಚ್ಛೈಸುವ ವಿಧವೆಯರನ್ನು ತಡೆಯಕೂಡದು, ಹೆಂಗಸರಿಗೆ ವಿದ್ಯಾಭ್ಯಾಸವನ್ನು ಕೊಡಬೇಕು, ದೇವದಾಸಿತ್ವವನ್ನು ತೊರೆಯಬೇಕು ಮೊದಲಾದ ನಿರ್ಣಯಗಳುಂಟಾದವು.

ದಕ್ಷಿಣ ಕನ್ನಡ.

ಮಿಡವಾಯಿಫ.

ಕುಮಟಾ ಮ್ಯುನಿಸಿಪಾಲಿಟಿಯಲ್ಲಿ ಒಬ್ಬ ಟ್ರೈಂಡ ಮಿಡವಾಯಿಫ ಬೇಕಾಗಿದೆ. ಸಂಬಳ ಮನೆ ಬಾಡಿಗೆ ಸಹಿತ ದರ ಮಹೆ ರೂಪಾಯಿ 22—0—0. ಸರ್ಟಿಫಿಕೇಟುಗಳ ಸಹಿತ ಅರ್ಜಿಗಳು ತಾರೀಕು 30—4—1914ನೇ ಒಳಗಾಗಿ ಬರಬೇಕು. ರಾಮಚಂದ್ರಅಣ್ಣಾಪೈ.

ಕುಮಟಾ,
ಮ್ಯುನಿಸಿಪಲ್ ಆಫೀಸು
ತಾ. 2—4—1914

ವ್ಹಾಸ್ ಪ್ರೆಸಿಡೆಂಟ.
ಕುಮಟಾ ಮ್ಯುನಿಸಿಪಾಲಿಟಿ.
ಜಿಲ್ಲಾ ಉತ್ತರ ಕನ್ನಡ.

ನೋಟೀಸು.

ಹೂವಿನ ಮಾರ್ಕೆಟು ಎದುರು ರಾ| ಉಪೇಂದ್ರ ಶ್ಯಾನಭಾಗರ ಅಂಗಡಿಯಲ್ಲಿದ್ದ ಸುಗಂಧ ವಿಲಾಸವು ಈಗ ರಾ| ವಕೀಲ್ ರಂಗಪ್ಪಭಂಡಾರಿಗಳವರ ಹೊಸ ಕಟ್ಟೋಣಕ್ಕೆ ವಯ್ಯಲ್ಪಟ್ಟಿರುತ್ತದೆ. ಗ್ರಾಹಕರು ದಯವಿಟ್ಟು ಇಲ್ಲಿಗೆ ಬಂದು ಎಂದಿನಂತೆಯೇ ಪ್ರೋತ್ಸಾಹಿಸ ಬೇಕಾಗಿ ಪ್ರಾರ್ಥನೆ.

ವ್ಯಾ. ಲಕ್ಷ್ಮಣರಾವ್,
ಪ್ರೊಪ್ರ್ಯಾಟರ್.

WANTED.

Trained F. A. or at least a trained Matric or School Final to serve as an assistant in the Ganapathy Secondary School, Mangalore. Pay according to qualifications. Apply to the Correspondent.

ನೋಟೀಸು

ಸುಬ್ರಾವ ಪೈ ಮೆಮೋರಿಯಲ್ ಫಂಡಿನ ವೇತನವನ್ನು ಪಡೆಯುವರೆ ಅರ್ಹರಾದ ಗೌಡಸಾರಸ್ವತ ಬ್ರಾಹ್ಮಣ ವರ್ಗದ ಬಡ ವಿದ್ಯಾರ್ಥಿಗಳು ಇದೇ ೧೯೧೪ನೇ ಇಸವಿ ಬರುವ ಮೇ ತಿಂಗಳ ಅಂತ್ಯದೊಳಗೆ ಛಾಪಾ ಫೋರ್ಮಿನಲ್ಲಿ ಕೆಳಗೆ ದಸ್ಕತು ಹಾಕಿದವರಿಗೆ ಅರ್ಜಿಮಾಡಿಕೊಳ್ಳತಕ್ಕದ್ದು.

Subba Rau Poi
Memorial Fund
Office,
Mangalore

M. Mukunda Rao.
Secretary.

* * *

ಪುತ್ತೂರು:—ವಿಟ್ಲದಲ್ಲಿ ಹೆಡ್‌ಕನಿಷ್ಟೆಬಲ ರಾ| ನಾರ್ಣಪ್ಪಯ್ಯನವರನ್ನು ಹೊಡೆದು ಹಿಂಸೆ ಪಡಿಸಿದ ವ ವಕೀಲ ರಾ| ವಿ. ಯಸ್. ಕೃಷ್ಣಭಟ್ಟರನ್ನು ಕೊಂದು ತಪ್ಪಿಸಿಕೊಂಡು ಹೋದ ಜೇಡರ ಕೃಷ್ಣ ಎಂಬವನನ್ನು ಅನಂತ್ತಾಡಿ ಪಟೇಲ ರಾ| ರಾ| ಮಣ್ಣರೈಗಳವರು ಮತ್ತು ಪುಂಡಿಕಾಯಿ ನಾರಾಯಣ ಭಟ್ಟರೆಂಬವರ ಸಾಹಸಪಟ್ಟು ಹಿಡಿದು ಇಲ್ಲಿಯ ಸಬ್‌ಜೈಲ್ ರಿಮಾಂಡಿನಲ್ಲಿಟ್ಟಿರುವರು.

ಶೆಕೆಕಾಲ ಆರಂಭಿಸಿತು. ಖಾಸಗಿ ಭಾವಿಗಳ ನೀರೆಂತೂ ಆರಿತ್ತಷ್ಟೆ. ಸಾವಿರಾರು ಗಾಡಿಗಾರರಿಗೂ ಸುತ್ತಮುತ್ತಲಿನ ನಿವಾಸಿಕರಿಗೂ ಹೆಚ್ಚು ಪ್ರಯೋಜನಕರವಾದ ಬೊಳ್ವಾರ ಸರಕಾರಿ ಭಾವಿಯ ನೀರು ಆರಿಹೋದದರಿಂದ ನಿವಾಸಿಕರಿಗೂ, ಗಾಡಿಯವರಿಗೂ ಬಹಳ ಸಂಕಷ್ಟವಾಗಿರುವುದು. ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರರು ಈ ವಿಷಯ ತಕ್ಕ ನಿಗಾಕೊಡಬೇಕಾಗಿದೆ.

ನಮ್ಮ ಡಿವಿಜನ ಡಿಪ್ಯುಟಿ ಕಲೆಕ್ಟರವರು ಎಪ್ರಿಲ್ ತಾ. ೧೬ರಿಂದ ೧೮ ಮಂಜೇಶ್ವರ, ೧೯ರಿಂದ ೨೧ ವಿಟ್ಲ, ಈ ಪ್ರಕಾರ ಸರ್ಕಿಟು ಬೆಳಸಿ ತಾ. ೨೨ಕ್ಕೆ ಪುತ್ತೂರಿಗೆ ಹಿಂತೆರಳುವರು.

ಮ| ರಾ| ರಾ| ಮರ್ತುಕಿಣಿಯವರು ರಾ| ಬಿ. ರಾಮಚಂದ್ರಯರವರಿಂದ ಶಿರಸ್ತೆದಾರ ಚಾರ್ಜು ವಹ್ಸಿಕೊಂಡಿರುವರು.

ಇಲ್ಲಿಂದ ವರ್ಗಪಟ್ಟ ಪೋಸ್ಟುಮಾಸ್ಟರ ಮೆ| ಪೊನ್ಸ ಫೊಲರವರ ಬದಲಿಗೆ ರಾ| ವೆಂಕಟ ಹೆಗಡೆಯವರು ಕೆಲಸದ ಮೇಲೆ ಹಾಜರು ಆಗಿರುವರು.

ಮ| ರಾ| ರಾ ಮಂಜೇಶ್ವರ ಜನಾರ್ದನಭಟ್ಟ ಮತ್ತು ಮ| ರಾ| ರಾ| ಕುಕ್ಕುಂಜೆ ತಿಮ್ಮರ್ಸ ಪೈಗಳವರು ಪುತ್ತೂರು ತಾಲೂಕಿನ ಗೌಡಸಾರಸ್ವತ ಮಠಸ್ಥಾಪನೆಗಳ ಕಮ್ಮಿಟಿ ಮೆಂಬರರಾಗಿ ನೇಮಿಸಲ್ಪಟ್ಟಿರುವರು.

ಪೋಲಿಸ್ ಇಲಾಖೆಯ ಎಲ್ಲಾ ಆಫೀಸರುಗಳಿಗೆ ಬರಕೊಳ್ಳುವ ಅರ್ಜಿಗಳಿಗೆ ಚೀಟು ಹಚ್ಚುವ ಆಗತ್ಯವಿಲ್ಲವೆಂತ ಎಲ್ಲಾ ಜನರ ತಿಳುವಳಿಕೆ ಬಗ್ಗೆ ಜಿಲ್ಲಾ ಪೋಲಿಸ್ ಆಫೀಸರು ಪ್ರಕಟಣೆ ಮೂಲಕ ತಿಳಿಸಿರುವರು.

ಕೊರೊನೇಶನ್ ಜಟ್ಕಾ ಬಂಡಿಯಲ್ಲಿ ಲೈಸನ್ಸ್‌ಕ್ಕೆ ವಿರೋಧವಾಗಿ ಎಂಟು ಜನರು ಪ್ರಯಾಣ ತಲೂ ಜಾಸ್ತಿ ಜನರನ್ನು ಕೂಂಡ್ರಿಸಿದ ಕುರಿತು ತಾಲೂಕು ತಹಶಿಲದಾರವರಿಂದ ಹಿಡಿಯಲ್ಪಟ್ಟ ನೆಯು ತಾ. ೧೫ಕ್ಕೆ ಇಲ್ಲಿಯ ಸ್ಟೇಶನರಿ ಮೇ ಕೋರ್ಟಿನಲ್ಲಿ ತನಖಿಗೆ ಇಡಲ್ಪಟ್ಟಿರುವದು.

ಬಂಟ್ವಾಳ:—ಇಲ್ಲಿಯ ಕೊಓಪರೇಟಿವ್ ಕ್ರೆಡಿ ಸಂಘದ ನೂತನ ಆಫೀಸು ಮೊನ್ನೆಯು ತಾ. ೧೦ಕ್ಕೆ ಯೋಣಾಯಿತು.

ಇಲ್ಲಿಯ ಸಬ್ ಇನ್ಸ್‌ಪೆಕ್ಟರರಾದ ರಾ| ಕ. ರಾ ಚಂದ್ರರಾಯರಿಗೆ ಇಲ್ಲಿಂದ ವರ್ಗವಾಗಿದೆ. ಅವರ ಲಿಗೆ ಇನ್ನೂ ಯಾರೂ ಬಂದುದಿಲ್ಲ.

ತೂಗು ಸಂಕದ ಒಂದು ಹಲಗೆಯು ಹೇಗೋ ಮುರಿದು ಹೋಗಿದ್ದು, ಸಂಕದಲ್ಲಿ ೧ ಅಡಿಯಷ್ಟು ಅಗಲ ಅಡಿಉದ್ದದ ಒಂದು ಬಿರುಕು ಉಂಟಾಗಿದ್ದಿತು. ಕೆಲವು ದಿನಗಳ ವರೆಗೆ ಹಾಗೆಯೆ ಇರಗೊಡಿಸಿದ್ದು ಯಾರ ತಪ್ಪೆಂದು ತಿಳಿದಿಲ್ಲ. ಶಾಲೆಗೆ ಹೋಗುವ ಳಲ್ಲಿ ಒಬ್ಬನ ಕಾಲಾದರೂ ಅದರಲ್ಲಿ ಸಿಲ್ಕಿದಿದ್ದು ಶಾಲೆಯ ಶಾಲೆಗೇ ಮಕ್ಕಳ ಹಾಜರಿಯ ವಿಷಯ ಯವುಂಟಾಗುವುದೆಂದು ತಿಳಿದುಕೊಂಡರೂ, ಬೋರ್ಡ ಸಂಕಕ್ಕೆ ಕೈ ಹಾಕಿದರೆ ಅದೊಂದು ತಪ್ಪಾದೀತೆಂ ನೆಯಿಂದ ಅದನ್ನು ದುರುಸ್ತಿಮಾಡಿಸಲು ಧೈರ್ಯ ಹೋಯಿತು. ಹಾಗೂ ಮೊನ್ನೆ ಆ ಬಿರುಕಿನ ಬಲವಾದ ಒಂದು ಹಲಗೆಯನ್ನು ದೇವಸ್ಥಾನದ ಆಡ ವರು ಹೊಡಿಸಿ ಈಗ ಸದ್ಯಕ್ಕೆ ಸಂಕವನ್ನು ನಿರಾಂತ ರಿಸಿರುವರು. ಇದು ಅವರ ಸ್ತುತ್ಯವಾದ ಕೆಲಸ. ಅಲ್ಲದೆ ಪುನಹ ಸಂಕದ ತೂಗಡಿಕೆಯು ಗಾಢವು. ಈ ಬರುತ್ತಿದೆ. ಮಳೆಗಾಲದಲ್ಲಿ ಅದು ಮತ್ತಷ್ಟು ಕರವಾಗದಂತೆ,—ಈಗ ತಾನೆ ಬೋರ್ಡಿಗೆ ದೆ ಹೆಚ್ಚಿನ ಗ್ರಾಂಟಿನಿಂದ ಅದನ್ನು ಭದ್ರವಾಗಿರಿಸುವ ಈಗಣ ಮಂಗಳೂರು ತಾಲೂಕಿನ ಮಾನ್ಯ ಪ್ರೆಸಿ ನಮಗೆ ಹಿತವನ್ನು ಬಯಸುವರಾಗಿ ಕೋರುತ್ತೇವೆ.

ಶ್ರೀ ತಿರುಮಲ ದೇವಳದ ಕಡೆಯಿಂದ ಕಟ್ಟಿಸಲ ಶಾಲಾ ಕಟ್ಟೋಣವು ಇನ್ನೊಂದು ತಿಂಗಳೊಳಗಾಗಿ ಶಕ್ಕೆ ಸಿದ್ಧವಾಗುವುದು. ಇದು ದೇವಳದ ಆ ೧ಕ್ಕೆ ರೂ ಶ್ರೇಯಸ್ಕರವಾದುದು.

ಬಂಟ್ವಾಳದಿಂದ ಒಬ್ಬ ಬಾತ್ಮೀದಾರರು ಈ ಬರೆದಿರುವರು:—ಕಳದ ಜನವರಿ ತಾ. ೩೦ರ ಸ್ವದೇ ಮಾನಿಗೆ ರಾಮಾಚಾರಿಯನ್ನು ಕೈದುಮಾಡಿದ ವೃ ವನ್ನು ಬರೆದ ಬಾತ್ಮೀದಾರರು ಈ ವಿಷಯಯುದ ನ ವಾರ್ತೆಯನ್ನು ಬರೆಯದೆ ಇದ್ದದ್ದನ್ನು ನೋಡಿ ತ ವ್ಯಸನಪಡಬೇಕಾಗಿದೆ. ರಾಮಾಚಾರಿಯು ಮುಂ ಅತ್ತಕಡೆ ಹೋಗಿ ಮರ್ಯಾದೆಯಿಂದಲೂ ನಂಬಿಕೆಯಿಂ ವೃತ್ತಿ ನಡಿಸಿಕೊಂಡಿರುತ್ತಾ. ಈತನ ತಾಯಿಗೆ ಅಸ್ವಸ್ಥವು ಪ್ರಾಪ್ತವಾದ್ದರಿಂದ ಮುಂಬಾಯಿಂದ ಹೊರಟು ಬರಬೇಕಾಯಿತು. ಆದರೆ ತಾಯಿಯ ಲೆಯು ತಕ್ಕಕಾಲದಲ್ಲಿ ಗುಣವಾಗದೆ ಇದ್ದದರಿಂದ ಬಾಯಿಗೆ ಕ್ಲುಪ್ತ ಸಮಯಕ್ಕೆ ಹೋಗಲಾಗಲಿಲ್ಲ. ವಿದ್ಯಮಾನಗಳ ಮೇಲೆ ರಾಮಾಚಾರಿಯನ್ನು ಜಾಮಿ ಮೇಲೆಬಿಡಿಸಿ ಮುಂಬಯಿಗೆ ಹೋಗಿ ಅಲ್ಲಿ ಕೋರ್ಟಿ ಜಯ ಶೀಲರಾದ ವಾರ್ತೆಯನ್ನು ತಮ್ಮ ಬಾತ್ಮೀದಾರ ಯಾಕೆತಮಗೆ ಬರೆಯಲಿಲ್ಲವೋ! ಬಾತ್ಮೀದಾರರು ಅಪೂರ್ಣ ವರ್ತಮಾನಗಳನ್ನು ಬರೆಯುವುದು ವಲ್ಲ.

ಘರಂಗಪೇಟೆ:—ಘರಂಗಪೇಟೆ ಉಪಾಧ್ಯಾಯರ ದ ೭ನೇ ಸಭೆಯು ಕುರ್ನಾಡು ಶಾಲೆಯಲ್ಲಿ ಕಳೆದ ರ ಮೇರಮಜ್ಲು ಶಾಲಾ ಹೆಡ್ ಮಾಸ್ತರ್ ಎ. ಚಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ನ ಸಭೆಗೆ ಹಲವು ಮಂದಿ ಉಪಾಧ್ಯಾಯರೂ ಗೃಹ ರೂ ನೆರೆದಿದ್ದರು. ಈ ಸಂಘದ ಸ್ಥಾಪಕರೂ ಶಾಲಾ ಪರ್‌ವ್ಯಾಜರರೂ ಅಲ್ಲದೆ ಉಪಾಧ್ಯಾಯರುಗಳ ಸಹಾ ಯಕ ಮಿತ್ರರೂ ಆಗಿದ್ದ ಮ। ರಾ। ಯು. ಮಂಗೇಶ ಯರು ಉಡ್ಪಿ ರೇಂಜಿಗೆ ಸಬ್ ಅಸಿಸ್ಟಾಂಟ್ ಇನ್ಸ್ಪೆಕ್ಟರರ ಕೆಲಸಕ್ಕೆ ಬಡ್ತಿ ಹೊಂದಿದರ ಕುರಿತು ಉಂಟಾದ ಆನಂದವನ್ನು ಸೂಚಿಸುವ ಬಗ್ಯೆ ಸಂಘದ ಕಡೆಯಿಂದ ವಂದನಾ ಪತ್ರವನ್ನು ಕಳುಹಿಸಬೇಕಾಗಿ ನಿರ್ಣಯಿಸಲ್ಪಟ್ಟಿತು. ಉಪಾಧ್ಯಾಯರ ಹಾಲಹವಾಲೆಗಳನ್ನು ಕುರಿತು ಚರ್ಚಿಸಿ, ಅಗತ್ಯವಾದವುಗಳ ವಿಮೋಚನೆ ಹೊಂದುವ ಹಾಗೆ ಅವುಗಳನ್ನು ಮಂಗಳೂರು ಉಪಾಧ್ಯಾಯರ ಸಂಘದ ಮುಂದೆ ಇಡುವ ಬಗ್ಯೆ ಒಂದು ಸಭೆಯು ಇದೇ ಮೇ ಆಖೈರಿಗೆ ಪಾವೂರು ಬೋರ್ಡು ಶಾಲೆಯಲ್ಲಿ ಜರಗಬೇಕಾಗಿ ನಿರ್ಣಯಿಸಲ್ಪಟ್ಟಿತು. ಕುರ್ನಾಡು ಶಾಲೆಯ ಹೆಡ್ಮಾಸ್ತರ್ ವೆಂಕಟರಮಣಯ್ಯರು ಮಾಡಿದ ಆತಿಥ್ಯ ಕೈಕೊಂಡು ಅಂದಿನ ಸಭೆಯು ಮುಕ್ತಾಯಗೊಂ

* * *

ಕಾಸರಗೋಡು:—ಅಡ್ಕತಬೈಲು ಮಿಶ್ಯನ್ ಶಾಲೆಯ ನೇ ವರ್ಷದ ವರ್ಧಂತಿ ಉತ್ಸವವನ್ನು ಶಾಲಾ ಉಪಾ ಯರೂ ಅರ್ಭಕರೂ ಕೂಡಿ ಬಹು ಆಡಂಬರದಿಂದ ಸಿದರು. ಶಾಲಾ ಕೋಣೆಯು ನೂರಾರು ಮಹನೀ ಯರಿಂದಲೂ ವಿದ್ಯಾರ್ಥಿಗಳ ಹೆತ್ತವರಿಂದಲೂ ನಿಬಿಡವಾಗಿ . ರಾ। ರಾ। ಕೆ. ಪಿ. ಅಚ್ಚುತರಾಯರು ಅಗ್ರಾಸೀ ಗಿದ್ದರು. ಶಾಲಾ ವಿದ್ಯಾರ್ಥಿಗಳ ಸ್ಥಂಭದ ಮೇಲಣ ಯುವಿಕೆಯೂ ಕೋಲಾಟವೂ ಬಹೂ ಆಶ್ಚರ್ಯಕರ ದ್ದುವು. ತನ್ಮಧ್ಯೆ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಬಹೂ ಆಸಕ್ತಿಯಿಂದ ಭಕ್ತವಿಜಯ ಎಂಬ ಕವನ್ನು ಆಡಿ ತೋರಿಸಿದರು. ತರುವಾಯ ಅಗ್ರಾ ರು ಕಾಲೋಚಿತ ಮಾತುಗಳನ್ನಾಡಿದ ಬಳಿಕ ರಾಜ ವನ್ನು ಹಾಡಿ ಮಿಠಾಯಿ ಹಣ್ಣು ಗಂಗೋದಕ ನ್ ಸುಪಾರಿ ಇತ್ಯಾದಿಗಳಿಂದ ಸತ್ಕರಿಸಲ್ಪಟ್ಟ ಆಮಂ ಹನೀಯರು ಒಬ್ಬರನ್ನೊಬ್ಬರು ಸಂತೋಷದಿಂದ ಗಲಿದರು.

ಇಲ್ಲಿಯ ಸೆಕೆಂಡರಿ ಶಾಲಾ ಮೆನೇಜರರಾಗಿರುವ ಮೇಯರ್ ದೊರೆಗಳು ವರ್ಗವಾಗಿ ಬರುವವಾರ ಗುವದರಿಂದ ಎಲ್ಲಾ ಮಿಶ್ಯನ್ ಶಾಲಾಮಾಸ್ತರರೂ ದೇಶಕರೂ ಕೂಡಿ ಒಂದು ಮಿತ್ರ ಚಾಪಾನಕವನ್ನು ಸಿ ಕಳೆದ ಶನಿವಾರ ಒಂದು ಭಾವಚಿತ್ರ ತೆಗಿಸಿದರು.

* * *

ಮಂಗಳೂರು:—ಇಲ್ಲಿಯ ಕೊಡಿಯಾಲಬೈಲಿನಲ್ಲಿ ವಿಯಿಂದ ನೀರನ್ನು ಎತ್ತುಗಳು ಎಳಿಯುವ ಹೊಸ ತವನ್ನು ನೋಡಲು ಕಲೆಕ್ಟರ ದೊರೆಗಳವರೂ ಇತರ ವು ಮಾನ್ಯಗ್ರಹಸ್ಥರೂ ಹೋಗಿದ್ದರು. ಯಾತವು ಳ ಚನ್ನಾಗಿ ನಡಿಯುತ್ತದೆ. ವ್ಯವಸಾಯ ಕೆಲಸಗಳ ಕೂಲಿಯಾಳುಗಳು ಸಿಕ್ಕುವುದು ದುರ್ಲಭ. ಆದ ಯೂ ನೀರನ್ನು ಸೇದಲು ಕೂಲಿಗಳು ನಿರಾಕರಿಸುವ ಭವಗಳು ಹೆಚ್ಚಾಗಿರುವುದು. ಹೀಗೆ ಒಂದುವೇಳೆ ಜನ ಸಿಕ್ಕಿದರೂ ಗದ್ದೆಯಲ್ಲಾಗುವ ಉತ್ಪತ್ತಿಯ ಮೂರನೆ ದಂಶಕ್ಕಿಂತ ಹೆಚ್ಚಿನ ಉತ್ಪತ್ತಿಯನ್ನು ಈ ಕೂಲಿಗಳಿಗೆ ಡಬೇಕಾಗುತ್ತದೆ. ಹೊಸಯಾತವನ್ನು ಉಪಯೋಗಿ ವದರಿಂದ ಎತ್ತುಗಳನ್ನು ನಡಿಸುವವನೊಬ್ಬನಿಂದಲೇ ಬೇಕಾದಂತೆ ಸೇದಲು ಸಾಧ್ಯವಾಗುತ್ತದೆ. ನೀ ಕಾಲದಲ್ಲಿ ಸುಮ್ಮನೆ ಸಾಕ ಬೇಕಾದ ವ್ಯವಸಾಯ ರ ಎತ್ತುಗಳಿಗೆ ಸಹ ಕೆಲಸ ದೊರಕಿದಂತಾಗುತ್ತದೆ. ರೈತರು ಈ ಯಾತವನ್ನು ನೋಡಿಕೊಂಡು ಇದರ ಉಪಯೋಗವನ್ನು ರೂಢಿಗೆ ತಂದಲ್ಲಿ ಹೆಚ್ಚಿನ ಪ್ರಯೋಜನವನ್ನು ಪಡಿಯುವರೆಂಬುವುದರಲ್ಲಿ ಸಂದೇಹವಿಲ್ಲ.

ಕೊವೊಪರೇಟಿವ್ ಸಹಾಯ ಸಂಘಗಳ ರಿಜಿಸ್ಟ್ರಾರರಾದ ನಾಮದಾರ್ ದಿವಾನ್ ಬಹದ್ದೂರ್ ಸ್ವಾಮಿ ಕಂಣುಪಿಳ್ಳೆಯವರಿಗೆ ಈ ತಿಂಗಳ ತಾ. ೨೦ರಿಂದ ೩ ತಿಂಗಳ ಪ್ರಿವಿಲೆಜ್ ರಜೆ ಕೊಡಲ್ಪಟ್ಟಿರುವುದು.

ರಾವ್ ಸಾಹೇಬ್ ವಿಜಯ ರಾಘವಾಚಾರ್ಯರು ಸ್ವಾಮಿ ಕಂಣುಪಿಳ್ಳೆಯವರ ರಜಾಕಾಲದಲ್ಲಿ ರಿಜಿಸ್ಟ್ರಾರರ ಕೆಲಸವನ್ನು ನೋಡುವರೆ ನೇಮಕ ಪಟ್ಟಿರುವರು.

ಮಂಗಳೂರಿನ ಸಬ್ ಕೋರ್ಟಿಗೆ ಮ। ರಾ। ರಾ। ಬಿ. ಕೃಷ್ಣರಾವ್ ಸಬ್ ಜಡ್ಜರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ. ಕೋರ್ಟು ರಜೆಯ ನಂತರ ಇವರು ಕೆಲಸಕ್ಕೆ ಹಾಜರಾಗುವರು.

ಈ ವರ್ಷದ ಬಿ. ಎ. ಒನರ್ಸ್ ಡಿಗ್ರಿಯಲ್ಲಿ ನಮ್ಮ ಜಿಲ್ಲೆಯವರಲ್ಲಿ ರಾ। ಮೂಡ್ಲಗಿರಿ ನ್ಯಾಕರವರು ಸಾಯನ್ಸ್‌ನಲ್ಲಿಯೂ ರಾ। ಉಳ್ಳಾಲ ರಘುನಾಥಯ್ಯನವರ ಮಗ ರಾ। ಉಳ್ಳಾಲ ಮಂಗೇಶರಾಯರು ಇಂಗ್ಲಿಷಿನಲ್ಲಿಯೂ ಒನರ್ಸ್ ಡಿಗ್ರಿ ಪಡೆದಿರುವರು.

ಲಾರ್ಡ್‌ಹಾರ್ಡಿಂಜ್ ಫ್ರಿಬೋರ್ಡಿಂಗ್‌ಸ್ಕೂಲು ಹರಪನಹಳ್ಳಿ ಜಿಲ್ಲಾ ಬಳ್ಳಾರಿ—ಸಪ್ಲಿಮೆಂಟನ್ನು ಈ ಸಂಚಿಕೆಯೊಂದಿಗೆ ಇಟ್ಟಿರುವೆವು.

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳೆದ ವಾರ ೫ ಪ್ಲೇಗು ಮರಣಗಳಿದ್ದವು.

ಕುಂದಾಪುರ ಡಿವಿಜನಲ್ ಆಫೀಸು:—ಕಾರ್ಕಳ ಸಬ್ ಮೇಜಿಸ್ಟ್ರೇಟ ಆಫೀಸಿನ ಆಕ್ಟಿಂಗ್ ೨ನೇ ಕ್ಲಾರ್ಕ ರಾ। ಕಸ್ತೂರಿ ವಾಸುದೇವಪೈಯವರಿಗೆ ಇದೇ ತಾ. ಫೆಬ್ರವರಿ ೭ನೇತಾರೀಕಿನಿಂದ ೩೫ ದಿವಸಗಳ ಪ್ರಿವಿಲೆಜ್ ರಜೆ ಕೊಡಲ್ಪಟ್ಟಿರುವುದು.

ರಾ। ಬಳ್ಕುಂಜೆ ವೆಂಕಟೇಶ ಶೆನೊಯಿರವರು ರಾ। ಕೆ. ವಾಸುದೇವಪೈಯವರ ಗೈರ್ಹಾಜರು ಕಾಲದಲ್ಲಿ ೨ನೇ ಕ್ಲಾರ್ಕರಾಗಿ ರೂ. ೨೦ರ ತಲಬಿನ ಮೇಲೆ ಕೆಲಸ ನೋಡಬೇಕಾಗುವದು.

ಕುಂದಾಪುರ ತಾಲೂಕು ಆಫೀಸಿನ ೭ನೇ ಕ್ಲಾರ್ಕ ರಾ। ಸಿ. ಕೃಷ್ಣರಾವರು ಸರ್ವೆ ಟ್ರೈನಿಂಗಿಗೆ ಹೋಗಿರುವುದರಿಂದ ೭ನೇ ಕ್ಲಾರ್ಕ ರಾ। ಎಮ್. ಶ್ರೀನಿವಾಸರಾಯರು ರೂ. ೨೫ನೇ ತಲಬಿನ ಮೇಲೆ ೭ನೇ ಕಾರ್ಕರಾಗಿಯೂ ಕುಂದಾಪುರ ಡಿವಿಜನಲ್ ಆಫೀಸಿನ ಕೊಪಿಸ್ಟರಾದ ರಾ। ಧರ್ಮಾಯನ್ ಸುಬ್ರಾಯರು ರೂ. ೨೦ರ ೮ನೇ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಕುಂದಾಪುರ ತಾಲೂಕು ಆಫೀಸಿನ ೨ನೇ ಕ್ಲಾರ್ಕ ರಾ। ಎಚ್. ಅನಂತಯ್ಯನವರು ಇದೇ ತಿಂಗಳು ತಾ. ೧೫ರಿಂದ ಎರಡು ತಿಂಗಳ ಪ್ರಿವಿಲೆಡ್ ರಜೆ ಪಡಕೊಂಡಿರುವುದರಿಂದ ಇವರ ಬದಲಿಗೆ ಉಡ್ಪಿ ತಾಲೂಕು ಆಫೀಸಿನ ರಾ। ಎಮ್. ವೆಂಕಟ್ರಮಣಯ್ಯರವರೂ ಉಡ್ಪಿ ತಾಲೂಕು ಆಫೀಸಿನ ೫ನೇ ಕ್ಲಾರ್ಕ ರಾ। ಎಚ್. ರಾಮರಾಯರು ೨ನೇ ಕ್ಲಾರ್ಕರಾಗಿಯೂ ರಾ। ಎನ್. ವೆಂಕಟ್ರಮಣ ಕುಡ್ವರು ೫ನೇ ಕ್ಲಾರ್ಕರಾಗಿಯೂ ರಾ। ಯು. ಹರಿಯಪ್ಪ ಶ್ಯಾನುಭಾಗರು ರಾ। ಕುಡ್ವರ ಬದಲಿಗೂ ನೇಮಿಸಲ್ಪಟ್ಟಿದ್ದಾರೆ.

ದಕ್ಷಿಣಕನ್ನಡ ಜಿಲ್ಲಾ ಕಲೆಕ್ಟರ ಆಫೀಸು:—ಕಾರ್ಕಳ ಫಿರ್ಕ ರೆವಿನ್ಯೂ ಇನ್ಸ್‌ಪೆಕ್ಟರ ಕೆಲಸದಿಂದ ಬಿಡುಗಡೆ ಹೊಂದಿದಾಕ್ಷಣ ಉಪ್ಪಿನಂಗಡಿ ತಾಲೂಕು ಆಫೀಸಿನ ೨ನೇ ಕ್ಲಾರ್ಕ ರಾ। ಎಚ್. ಕೃಷ್ಣ ಪೈಯವರಿಗೆ ೬ ತಿಂಗಳ ರಜೆ ಕೊಡಲ್ಪಟ್ಟಿರುವುದು. (ಒಂದು ತಿಂಗಳು ಐದು ದಿವಸ ಪ್ರಿವಿಲೆಜ್ ರಜೆ; ೪ ತಿಂಗಳು ೨೫ ದಿವಸ ಖಾಸಗಿ ಸಂಬಂಧ ರಜೆ.)

ಒಬ್ಬ ಪ್ರೇಕ್ಷಕರಿಂದ:—ಮಹಿಸೂರು ರತ್ನಾವಳೀ ಥಿಯೇಟ್ರಿಕಲ್ ಕಂಪೆನಿಯ ಮೆನೇಜರರಾದ ರಾ। ಎ. ವಿ. ವರದಾಚಾರ್ಯರು ಉದಾರ ಮನಸ್ಸಿನಿಂದ, ಗಣಪತಿ ಸೆಕೆಂಡರಿಶಾಲಾ ಕಟ್ಟಡದ ಸಹಾಯಾರ್ಥವಾಗಿ ಮುಂಬಯಿಯಿಂದ ಇಲ್ಲಿಗೆ ಬಂದ ಸತ್ಕಾರ್ಯೋತ್ತೇಜಕ ನಾಟಕ ಸಮಾಜದವರಿಗೆ, ತಮ್ಮ ಥಿಯೇಟರನ್ನು ಅಭಿನಯಿಸುವುದಕ್ಕೆ ಕೊಟ್ಟು, ಸೀನ್ಸು ಮುಂತಾದುವುಗಳನ್ನು ಸಿದ್ಧಪಡಿಸುವುದರಲ್ಲಿ ಮಾಡಿದ ಸಹಾಯಕ್ಕಾಗಿ ಆ ನಾಟಕ ಸಮಾಜದವರು ರಾ। ವರದಾಚಾರ್ಯರಿಗೆ ಬಹಳ ಕೃತಜ್ಞರಾಗಿರುತ್ತಾರೆ. ಆದರೆ ದೈವಯೋಗದಿಂದ ಆ ಸಮಾಜದ ಪಾತ್ರರಲ್ಲಿ ಒಬ್ಬನಿಗೆ ಉಂಟಾದ ಗೃಹಕೃತ್ಯದ ತೊಂದರೆಯಿಂದ ನಿನ್ನೆ ರಾತ್ರಿ ಅಭಿನಯಿಸತಕ್ಕ ನಾಟಕವು ನಿಂತುಹೋದುದರಿಂದ ರಾ। ವರದಾಚಾರ್ಯರಿಗೆ ತಮ್ಮಿಂದ ಒದಗಿದ ಪ್ರತಿಬಂಧಕಗಳಿಗಾಗಿ ಆ ಸಮಾಜದವರು ಬಹಳ ಪಶ್ಚಾತ್ತಾಪ ಪಡುತ್ತಾರೆ. ಪರೋಪಕಾರಕ್ಕಾಗಿ ಮುಂಬಯಿಯಿಂದ ತಮ್ಮ ತಮ್ಮ ವೃತ್ತಿಗಳಿಂದ ರಜೆಯನ್ನು ಪಡೆದು ಇಲ್ಲಿಗೆ ಬಂದಿರುವ ಸಮಾಜದ ಯುವಕರಿಗೆ ಈ ರೀತಿ ರಾ। ವರದಾಚಾರ್ಯರು ಉತ್ತೇಜನವನ್ನು ಕೊಟ್ಟುದು ತುಂಬಾ ಶ್ಲಾಘನೀಯವಾಗಿದೆ.

* * *

ಬಂಟರಯಾನೆ ನಾಡವರ ಸಂಘ:—ರಾ। ಕೋಟಿದಡಿ ಗುತ್ತು ಅಚ್ಚಣ ಶೆಟ್ರು ಅವರಲ್ಲಿ ಕಳೆದ ತಿಂಗಳಲ್ಲಿ ಆದ ನಾಗಮಂಡಲದ ಬಗ್ಯೆ ಧರ್ಮಾರ್ಥವಾಗಿ ಕೊಟ್ಟ ಮೊಬಲಗು ರೂ ೮.

ಬಿ. ಮಹಾಬಲ ಹೆಗ್ಗಡೆ.
ಕಾರ್ಯದರ್ಶಿ.

ಸ್ವದೇಶಾಭಿಮಾನಿ ಆಫೀಸಿನ ಮೆನೇಜರರ ವಿಜ್ಞಾಪನೆ.

'ಸ್ವದೇಶಾಭಿಮಾನಿ' ಆಫೀಸಿನ ರಾ। ಎಮ್. ನಾರಾಯಣ ಪ್ರಭುಗಳು ಈ ಜಿಲ್ಲೆಯ ಆಯಾ ಪ್ರಾಂತ್ಯಗಳಲ್ಲಿ ಹೊಸ ಚಂದಾದಾರರನ್ನು ಸಂಗ್ರಹಿಸುವುದಕ್ಕೂ ಚಂದಾ ಮೊಬಲಗುಗಳನ್ನು ವಸೂಲುಮಾಡಲಿಕ್ಕೂ ಈ ವಾರದಲ್ಲಿಯೇ ಇಲ್ಲಿಂದ ತೆರಳುವರು. ವಾಚಕರು ಇವರಿಗೆ ತಕ್ಕ ಸಹಕಾರವನ್ನು ಮಾಡಬೇಕಾಗಿ ಪ್ರಾರ್ಥನೆ. ನಮ್ಮ ಬಾತ್ಮೀದಾರರಾಗಲಪೇಕ್ಷಿಸುವವರು ತಮಗೆ ಬೇಕಾದ ಮಾಹಿತಿಯನ್ನು ಇವರಿಂದಲೇ ಮುಖತಃ ಪಡಿಯಬಹುದು.

* * *

ಜೀನಸುಗಳ ಧಾರಣೆ, ಮಂಗಳೂರು. (೩೫೦)

ಅವಲ್ ಮಸ್ಕತಿ ಅಕ್ಕಿ ...	5—4—0	5—10—0
ದುಯಂ „ „ ...	5—0—0	5—3—0
ಗುಡ್ಡು	4-13—0	5—0—0
ಅವಲ್ ಬೆಳ್ತಿಗೆ... ...	5—10—0	5-12—0
ಗುಡ್ಡು ಬೆಳ್ತಿಗೆ	5—2—0	5—4—0
ಹುರುಳಿ ಗೋಣಿ, ೧ರ		7—3—0
ರಂಗೂನ್ ಗೋಣಿ ೧ರ ...	9—4—0	9—6—0
ಉಪ್ಪು ಗೋಣಿ ೧ರ ...	3—4—0	3—5—0
ಕೊಬ್ರಿ ಖಂಡಿ ೧ರ ...	100-0-0	108—0—0
ಊರು ಬೆಲ್ಲ ಖಂಡಿ ೧ರ	34—0—0	35—0—0
ಗೋದಿ ಗೋಣಿ ೧ಕ್ಕೆ...		11—8—0
ಕಡಲೆ ಗೋಣಿ ೧ಕ್ಕೆ	9—0—0	9—8—0
ಉದ್ದು ಗೋಣಿ ೧ರ		10—4—0
ತೊಗರಿ ಗೋಣಿ ೧ರ...		10—8—0
ತೊಗರಿಬೆಳೆ ಗೋಣಿ ೧ರ	11-0—0	14—0—0
ಕೊಬ್ರಿ ಹಿಂಡಿ ಖಂಡಿ೧ರ	32—0—0	35—0—0
ಎಳ್ಳಿಂಡಿ ಖಂಡಿ ೧ರ	30—0—0	35—0—
ಕೊಬ್ರಿ ಎಣ್ಣೆ ಮಣ ೧ರ		7—4—
ಎಳ್ಳೆಣ್ಣೆ ಮಣ ೧ರ ...	7—2—0	7—
ಬಿಳಿಗೋಟು ಖಂಡಿ ೧ರ	86—0—0	90—
ಕಾಫಿ ಖಂಡಿ ೧ರ ...	215—0—0	22
ಯಾಲಕ್ಕಿ ಮಣ ೧ಕ್ಕೆ	40—0—0	

* * *

'ಸರ್ವಟೋನ್'

ಸ್ವಲ್ಪ ದಿವಸಗಳ ಸೇವನೆಯಿಂದ ಪಡೆದ
ಆರೋಗ್ಯಭಾಗ್ಯವನ್ನು ಇತ್ತಕಡೆ ನೋಡಿ!

ಮೆದುಳು, ನರಗಳು ಮತ್ತು ಸ್ನಾಯುಗಳು ಇದರ ಸೇವನೆಯಿಂದ ಚೇತನ ಹೊಂದುವವು. ಮೆದುಳಿನ ನರಗಳ ಮತ್ತು ಸ್ನಾಯುಗಳ ಪುಷ್ಟಿಗೆ ಬೇಕಾದ ಪದಾರ್ಥವು ಈ ಔಷಧಿ ಸೇವನೆಯಿಂದ ಒದಗಿಸಲ್ಪಟ್ಟು ರಕ್ತವಾಹಿನಿಗಳ ಮೂಲಕ ಶರೀರದ ಆಯಾ ಕಡೆಗಳಿಗೆ ವೈಯ್ಯೋಜಾಗುವುದು. ದೇಹಕ್ಕೆ ಬರಿಯ ಉದ್ದೀಪನೆಯನ್ನು ಮಾತ್ರ ಕೊಟ್ಟು ಪುಷ್ಟಿ ಕೊಡದೆ ಇರುವಂಥಾ ಅಪಾಯಕರ ಔಷಧಿಯೂ ಇದಲ್ಲ. ಇದು ಶಕ್ತಿಯನ್ನೂ ಪುಷ್ಟಿಯನ್ನುಂಟುಮಾಡುವ ಆರೋಗ್ಯಕರ ಔಷಧಿಯಾಗಿರುವುದು. ಕೆಟ್ಟುಹೋದ ಜ್ಞಾಪಕ ಶಕ್ತಿಯನ್ನುಜ್ಜೀವಿಸಲಿಕ್ಕೂ ದೇಹದಲ್ಲಿ ಚಟುವಟಿಕೆಯನ್ನುಂಟುಮಾಡಲಿಕ್ಕೂ ಶ್ರಮಸಹನಾಶಕ್ತಿಯನ್ನು ಅಭಿವೃದ್ಧಿಸಲಿಕ್ಕೂ ಈ ಕಾಲದ ಜೀವನ ಹೋರಾಟದಲ್ಲಿ ಬೇಕಾದ ತ್ರಾಣವನ್ನು ಸಂಗ್ರಹಿಸಿ ಕೊಡಲಿಕ್ಕೂ ಈ ಔಷಧಿ ತಕ್ಕದ್ದಾಗಿರುವುದು. ಮಿತಿಮೀರಿದ ಅಧ್ಯಯನ ಮೊದಲಾದ ವಿಪರೀತ ಅಭ್ಯಾಸಗಳಿಂದ ದಣಿದು ಬೆಂಡಾಗಿ ಹೋದವರಿಗೆ ಇದು ದಿವ್ಯಔಷಧಿಯಾಗಿರುತ್ತದೆ.

ಲಂಡನಿನ ಸಿ. ಆರ್. ಹಾರ್ಕರ್ ಸ್ಟೇಗ್ ಮತ್ತು ಮೋರ್ಗನ್ ಲಿಮಿಟೆಡ್, ಇವರಿಂದ ತಯ್ಯಾರಿಸಲ್ಪಟ್ಟ ಈ ಔಷಧಿಯು ಎಲ್ಲಾ ವಿಲಾಯತಿ ಔಷಧಿ ವ್ಯಾಪಾರಸ್ಥರಲ್ಲಿ ದೊರಿಯುವುದು.

ಬಾಟ್ಲಿ ಒಂದಕ್ಕೆ ಕ್ರಯ ರೂ. ೨—೮—೦. ಹಿಂದೂಸ್ಥಾನದಲ್ಲಿ ಏಜಂಟರು:—

ರಾಜಾ ಡಿ. ಮೊನೆ ಮತ್ತು ಕಂಪೆನಿ, 11 ಬಂದರ ರಸ್ತೆ ಮದ್ರಾಸು.

ಸ್ವಯಂ ವೈದ್ಯರಾಗಿರುವದು ಹೇಗೆ?

ಬಹಳ ಕಾಲ ಬದುಕಲು ಹಠವಾದ ಪೋಟಾಪೋಯ ಈಗಿನ ಕಾಲದಲ್ಲಿ ವೈದ್ಯರ ಕಾಯಿದೆಯ ಪ್ರತಿಯೊಬ್ಬ ಗಂಡಸಿಗೂ ಮತ್ತು ಹೆಂಗಸಿಗೂ ವಿಶೇಷ ಖರ್ಚಿಗೆ ಅವಕಾಶವಾಗಿರುವದು. ಹೀಗೆ ಹಾಳುಮಾಡಿಕೊಳ್ಳುವ ಖರ್ಚಿನಿಂದ ನೀವು ಕಾಪಾಡಿಕೊಳ್ಳಬೇಕಾದರೆ

ವೈದ್ಯವಿದ್ಯ

ವೆಂಬ ಪುಸ್ತಕವನ್ನು ತರಿಸಿಕೊಂಡು ಓದಿರಿ. ಇದರಿಂದ ನಿಮ್ಮಷ್ಟಕ್ಕೆ ನೀವೇ ವೈದ್ಯರಾಗಬಹುದು. ಟಪ್ಪಾಲು ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು. ಈ ದಿನವೇ ಒಂದು ಕಾರ್ಡು ಬರೆಯಿರಿ.

ರಾಜವೈದ್ಯ ನಾರಾಯಣಜೀ ಕೇಶವಜೀ
177 ಚೈನಾ ಬಜಾರುರೋಡು, ಮದರಾಸು.

MUSICAL MART
Kavi & Sons,
MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್,
ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಅಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರೆಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೫೧ ವಿಷಯಗಳು ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರ್ಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಷದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸವೆವು, ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ

ಬಹುಮಾನ! ಬಹುಮಾನ

ನಮ್ಮ ಬಿಸ್ಕುಟುಗಳು ದೇಶೀಯ ರಾಜರುಗಳಿಂದ ಪ್ರೋತ್ಸಾಹಿಸಲ್ಪಟ್ಟು ಕನ್ನೂರು ವಿಶಾಖಪಟ್ಟಣ, ಮೈಸೂರು, ನಾಗಪುರ, ಲಾಹೋರು ಮೊದಲಾದ ಊರುಗಳಲ್ಲಿ ಆದ ವಸ್ತು ಪ್ರದರ್ಶನದಲ್ಲಿ ಚಿನ್ನ ಮತ್ತು ಬೆಳ್ಳಿಯ ಪದಕಗಳನ್ನು ಪಡೆದಿವೆ ವಿಲಾಯತಿಯ ಬಿಸ್ಕುಟುಗಳಿಗೂ ನಮ್ಮ ಬಿಸ್ಕುಟುಗಳಿಗೂ ಏನೇನೂ ಭೇದವಿರದ ವಿವಿಧ ನಮೂನೆಯ ಕೇಕುಗಳು ಯಾವಾಗಲೂ ನಮ್ಮಲ್ಲಿ ತಯಾರಿವೆ.

ಎಲ್ಲಾ ಜಿಲ್ಲೆಗಳಲ್ಲಿಯೂ ನಮಗೆ ಬ್ರಾಹ್ಮಣ ಏಜಂಟರಿರುವರು.

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಹಂಪನಕಟ್ಟಾ, ಮಂಗಳ

Madeena Watch Co., Madras

ದಿ. ನ್ಯೂ ಪೆಂಡುಲಂ ವಾಚ್. **Rs, 3—15—0.**

ಇದು ಒಂದು ಆಶ್ಚರ್ಯಕರವಾದ ಘಡಿಯಾರ.


Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಮ್‌ಪೀಸಿನಂತೆ ಮೇಜಿನ ಮೇಲೂ ನಿಂದಿರಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೋಪ್ ವಾಚು ಕ್ರಯ	,,	1—12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2—12—0
ಸೆಲ್ಫ್ ಕ್ಲೊಸಿಕ್		3—15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1—13—0
ಚಿಕ್ಕ ಸೈಜು ಲೇಡಿವಾಚ್		2—15—0

ಕಾರೇಜ್ ಹಾರ್ಮೋನಿಯಂ ರೂ. 20=0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಫಿಡಲು ರೂ. 8—0—0.

ಅಡ್ರಸ್:—ಮೆಡಿನಾವಾಚ್ ಕಂಪೆನಿ,
ನಂ. ೨೧ ಆನೆಕಾರಕೋರ್ಣ ಬೀದಿ, ಜಿ. ಟಿ. ಮದ್ರಾಸು.

THE BOMBAY LIFE ASSURANCE CO. LTD.

Chairman:—The Hon'able Mr. Lalubhai Samaldas J. P.
Manager:-Mr. K. Subramani Aiyar B.A., J.P., F.S.A.A.
Consulting Actuary:-Mr. George King F. F. A., F.I.A., (Lond)

Share-holders and Policy holders are informed that the Bombay Life Assurance Co. Ltd. (formerly called The Swadeshi Life Assurance Co. Ltd.) has never had any fixed deposits with Bankers and has suffered no loss on account of the recent failure, except a small balance on current account hardly Rs. 700 (Seven hundred Rs.) in the Indian Specie Bank Ltd., and its Branches.

Apply for Agencies and other particulars to—**Messrs Kochikar Bros.**; Udipi, Chief Agents for South Canara, Malabar, Travancore and Cochin.

Bombay, 12-12-1913.
LALUBHAI SAMALADAS, *Chairman.*
K. SUBRAMANI AIYAR, *Manager.*

ಮುಂಬಯಿ ಲ್ಯಾಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

ಅಧ್ಯಕ್ಷರು:—ಬಹುಮಾನಪಟ್ಟ ರಾ| ಲಲ್ಲುಭಾಯಿ ಸಾಮಲದಾಸ್ ಜೆ. ಪಿ.
ಮ್ಯಾನೇಜರ್:—ರಾ| ಸುಬ್ರಮಣಿ ಅಯ್ಯರ್ ಬಿ. ಎ. ಜೆ. ಪಿ. ಎಫ್. ಎಸ್. ಎ. ಎ.
ಕನ್ಸಲ್ಟಿಂಗ್ ಎಕ್ಚುಯರಿ:—ಮೆ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಸ್ವದೇಶಿ ಲ್ಯಾಫ್ ಇನ್ಸುರೆನ್ಸ್ ಕಂಪೆನಿ ಎಂಬ ಈ ಮೊದಲು ಹೆಸರುಳ್ಳ ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿಯವರು ಈ ಮೂಲಕ ಈ ಕಂಪೆನಿಯ ಪಾಲುಮಾಲಿಕರಿಗೂ ವಿಮೆದಾರರಿಗೂ ತಿಳಿಯಪಡಿಸುವದೇನಂದರೆ: ಇತ್ತಲಾಗೆ ದಿವಾಳಿಯಾಗಿಹೋದ ಯಾವ ಬೇಂಕುಗಳಲ್ಲಾದರೂ ಈ ಕಂಪೆನಿಯ ಠೇವಣಾತಿಗಳಿರುವುದಿಲ್ಲ. ಮತ್ತು ಈ ಬೇಂಕುಗಳು ದಿವಾಳಿಯಾಗಿಹೋದ್ದರಿಂದ ಕಂಪೆನಿಗೆ ಯಾವ ತರದ ನಷ್ಟವೂ ಉಂಟಾಗುವುದಿಲ್ಲ. ಇಂಡಿಯನ್ ಸ್ಪೆಶಿ ಬೆಂಕ್ ಮತ್ತು ಅದರ ಶಾಖೆಗಳಲ್ಲಿ ಚಾಲ್ತಿ ಲೆಕ್ಕಾಚಾರಗಳಲ್ಲಿ ರೂ. 700 ಮಾತ್ರ ಇತ್ತು.

ಈ ಕಂಪೆನಿಯ ಏಜನ್ಸಿಗಳನ್ನು ಪಡಿಯಬೇಕೆಂದಿರುವವರು ಅಥವಾ ಇತರ ಸಂಗತಿಯನ್ನು ತಿಳಿಯಬೇಕೆಂದಿರುವವರು; ಚೀಫ್ ಏಜಂಟರಾದ ಮೆಸರ್ಸ್ ಕೊಚ್ಚಿಕರ್ ಬ್ರದರ್ಸ್ ಉಡುಪಿ ದಕ್ಷಿಣ ಕನ್ನಡ ಇವರಿಗೆ ಬರಿಯುವುದು.

ಲಲ್ಲುಭಾಯಿ ಸಾಮಲದಾಸ್,
ಅಧ್ಯಕ್ಷ.
ಕೆ. ಸುಬ್ರಮಣಿ ಅಯ್ಯರ್,
ಮ್ಯಾನೇಜರ್.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವ) ರಕ್ತಮಿತಿ ಸ್ಥಿತಿಃ ಎಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಗ್ನ್ಯ ಎಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಹಿಂದೂಸ್ಥಾನದ ಜೀವವಿಮೇ ಸಂಘಗಳಲ್ಲಿ
ಅತಿ ಭದ್ರವಾದ್ದನ್ನು ಸೂಚಿಸುವಂಥಾದ್ದು:—

ಯುನ್ಯಾಟೆಡ್ ಎಸ್ಯುರೆನ್ಸ್ ಎಂಬುವ ವಿಮೆ ಸಂಘವು.

ವಿಮೆ ಉತ್ತರಾಯಿಸುವ ಹಲವು ನೂತನ ವಿಧಾನಗಳಿಂದ ಕೂಡಿರುತ್ತದೆ. ವಿವಾಹ ಮತ್ತು ಜೀವವಿಮೆಗಳ ಸಂಘಗಳಲ್ಲಿ ಈ ತನಕ ಇಲ್ಲದ-ಅಗತ್ಯವಾಗಿ ಬೇಕಾಗಿರುವ ವಿಧಾನಗಳು ಇದರಲ್ಲಿರುವವು.

೭೫ ವರುಷಗಳ ಪ್ರಾಯದವರೂ ಸಹ ವಿಮೆ ಉತ್ತರಾಯಿಸುವ ವಿಶೇಷ ಕ್ರಮ. ೬ ತಿಂಗಳನಂತರ ವಿಮೆ ಪತ್ರವು ಸಂಪೂರ್ಣತ್ವವನ್ನು ಹೊಂದಬಹುದು.

ವಿವಾಹ ವಿಮೆಗಳಲ್ಲಿ ೧೮ ತಿಂಗಳುಗಳ ನಂತರ ವಿಮೆ ಕಂತುಗಳನ್ನು ತೆರಬೇಕೆಂತಿಲ್ಲ. ೬ ತಿಂಗಳ ನಂತರ ಈ ಸಂಬಂಧದ ವಿಮೆ ಪತ್ರವು ಸಹ ಸಂಪೂರ್ಣವಾಗಬಹುದು.

ಮೇಲೆ ಕಾಣಿಸಿದ ಪ್ರಯೋಜನಗಳ ಹೊರತು ವಿವಾಹ ಉಪನಯನ ಮತ್ತು ಜೀವವಿಮೆಗಳ ಸಾಮಾನ್ಯ ಮತ್ತು ಎನ್ಡೋವ್‌ಮೆಂಟ್ ಕ್ರಮಗಳಿಂದ ವಿಮೆದಾರರು ತೆತ್ತ ದುಬಾರೆ ಮೊಬಲಗು ದೊರಕುವ ಸಂಭವವಿರುವವು. ಸಂಘದ ಭದ್ರತೆಗೆ ತಕ್ಕುದಾಗಿ ಸುಲಭವಾದ ವಿಮೆ ದರಗಳು.

ಒಳ್ಳೇ ಕಮಿಶನ್ ಮತ್ತು ಸಂಬಳದ ಮೇಲೆ ಏಜಂಟರುಗಳು ಬೇಕಾಗಿರುವರು.

ಈ ಸಂಘದಿಂದ ವಿಮೆ ಹಣ ಪಡದವರ ಹೆಸರುಗಳ ಪಟ್ಟಿಗೂ ಏಜನ್ಸಿಗಳ ಶರ್ತಕ್ಕೂ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

B. S. Nayak & Co., ಬಿ. ಎಸ್. ನಾಯಕ್ ಎಂಡ್ ಕೊ,
Chief Agents, ಚೀಫ್ ಏಜಂಟರು,
Udipi, S, C. ಉಡುಪಿ ದ.ಕ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಹಕ್ಕಿಗ್ಗೆದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಹಕ್ಕಿಗ್ಗೆದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ್ಗ! ಅಗ್ಗ!! ‖ ಕುಟುಂಬ ಜೀವನಿ ‖ ಧರ್ಮ! ಧರ್ಮ!!

ಪ್ರಿಯ ಭಾರತಿಯ ಮಹನಿಯರೇ!

"ಎಲ್ಲಾ ರೋಗಗಳನ್ನು ಗೆಲ್ಲುವ ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬ ಪೆಟ್ಟಿಗೆಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ.

"ಅಕ್ಕರದಿಂ ಬೆಕ್ಕು ಬಂದು ಸಕ್ಕರೆಯಂ ನೆಕ್ಕಿದಂತೆ ।
ಠಕ್ಕರೆಲ್ಲಾ ಒಕ್ಕಲಿಗರ ರೊಕ್ಕವೆಲ್ಲ ಮುಕ್ಕಿ ಪೋದರ್ ‖" ಎಂಬಂತೆ

ಈಗ ಇಮಿಟೇಶನ್ ಬಳೆ ತುಂಡುಗಳು ರತ್ನವೆಂಬ ಪೆಸರಿನಿಂದ ಎಲ್ಲಿ ನೋಡಿದರೂ ತುಂಬಿ ಹೋಗಿ, ಕಲ್ಯಾಣಿಗೆ ಬ್ರಾಶ್ ಕಡಿಮೆ ಆದ ಹಾಗೆ ಈಗಿನವರು ಠಕ್ಕಿನಿಂದಲೇ ಸುಲಿಗೆಯಾದರು.

ಪ್ರಿಯ ಬಾಂಧವರೇ! ನಮ್ಮನ್ನು ಹಾಗೆ ಗ್ರಹಿಸಬೇಡಿರಿ. ಅಮೂಲ್ಯವಾದ ಮಾಣಿಕ್ಯವಾದರೂ ಹೇಮಾಶ್ರಯಬೇಕೇ ಬೇಕಾದ್ದರಿಂದ ನಮ್ಮನ್ನು ಆಶ್ರಯಕೊಡಿರಿ! ಪರೀಕ್ಷಿಸಿನೋಡಿರಿ!!

ನಮ್ಮ ವೈದ್ಯಾಲಯದಲ್ಲಿ ಸುಲಭವಾಗಿ ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ ಬಹಳ ಶೋಧನೆಯಿಂದಲೂ, ವನೌಷಧಗಳಿಂದಲೂ, ಸಿದ್ಧಕಲ್ಪ ಭೈರಾಗಿ ಪ್ರಯೋಗಗಳಿಂದಲೂ ತಯ್ಯಾರಿಸಿದ ಪೌಡರು ಮಾತ್ರೆಗಳೂ, ಲೇಹ ಚೂರ್ಣಗಳೂ, ತೈಲ್ಯ ಘೃತಗಳೂ, ಆಸವಾರಿಷ್ಟಗಳೂ, ಟೋನಿಕ್ ಅರಕ್‌ಗಳೂ ಬಡವರಿಗೆ ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಸಿಕ್ಕುತ್ತವೆ. ಕ್ರಯ ನಿರ್ಣಯಕ್ಕೆ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ; ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು. 10 ರೂಪಾಯಿಗಳ ಮೇಲೆ ಶೇಕಡಾ ರೂ. 10 ಡಿಸ್ಕೌಂಟ ಸಿಕ್ಕುವದು. ತರಿಸಿಕೊಳ್ಳಿರಿ. ಸಂಘಕ್ಕೆ ಆಶ್ರಯ ಕೊಡಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.



S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟಿ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ್
ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು

ನೋಟೀಸು.

ನೆಶನಲ್ ಇನ್ಸೂರೆನ್ಸ್ ಎಂಡ್ ಬೆಂಕಿಂಗ್ ಕಂಪೆನಿ, ಅಮೃತಸಾರ್.

ಇವರು ತಮ್ಮ ಪಾಲುಮಾಲಿಕರಿಗೂ, ಠೇವಣಾತಿ ಇಟ್ಟವರಿಗೂ ವಿಮೆದಾರರಿಗೂ ಮತ್ತು ತಮ್ಮ ಇತರ ಕಕ್ಷಿಗಾರರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಪಿಪಲ್ಸ್ ಬೇಂಕು ಒಫ್ ಇಂಡಿಯಾ ಮತ್ತು ಅಮೃತಸಾರ ಬೇಂಕು ಇವುಗಳು ತಮ್ಮ ಲೇವಾದೇವಿಗಳನ್ನು ನಿಲ್ಲಿಸಿ ಬಿಟ್ಟಿರುವುದರಿಂದ ಇತರ ಬೇಂಕುಗಳ ಪಾಲುಮಾಲಿಕರಲ್ಲಿಯೂ, ಠೇವಣಾತಿ ಇಟ್ಟವರಲ್ಲಿಯೂ ಯೋಚನೆಯು ಪ್ರಾಪ್ತವಾಗಿರಬಹುದು. ಇಂಥಾ ಯೋಚನೆಯಿಂದ ಅಂಜಿಕೆಯು ನೆಶನಲ್ ಇನ್ಸೂರೆನ್ಸ್ ಎಂಡ್ ಬೇಂಕಿಂಗ್ ಈ ಕಂಪೆನಿಯ ಪಾಲುಮಾಲಿಕ ಮೊದಲಾದವರಲ್ಲಿ ಸ್ವಭಾವಿಕವಾಗಿ ಉಂಟಾಗಿರಬಹುದಾದ್ದರಿಂದ ಅಂಥಾ ಅಂಜಿಕೆ ಯೋಚನೆ ಮೊದಲಾದವುಗಳಿಗೆ ಏನೂ ಆಸ್ಪದವಿರದೆಂಬುದಾಗಿಯೂ ಒಂದು ವೇಳೆ ಎಂಥಾ ಅಡಚಣೆಗಳು ಬಂದು ಸಂಭವಿಸಿದರೂ ಈ ಅಡಚಣೆಗಳನ್ನು ಎದುರಾಡಲು ತಕ್ಕ ಹಣ ಸಂಗ್ರಹವು ಈ ಕಂಪೆನಿಯಲ್ಲಿದೆಂಬುದಾಗಿಯೂ ಈ ಮೂಲಕ ಕಂಪೆನಿಯ ಡಿರೆಕ್ಟರರುಗಳು ದೃಢಪಡಿಸಿರುತ್ತಾರೆ. ಅದಲ್ಲದೆ ಇತ್ತಲಾಗೆ ಈ ಕಂಪೆನಿಯವರು ಒಂದು ಲಕ್ಷ ರೂಪಾಯಿಗಳ ಭದ್ರತೆಯ ಠೇವಣಾತಿಯನ್ನು ಇಂಡಿಯಾ ಸರಕಾರದವರಲ್ಲಿರಿಸಿರುವರು.

ಪಿಪಲ್ಸ್ ಬೇಂಕಿನಿಂದಾಗಲಿ ಅಮೃತಸಾರ್ ಬೇಂಕಿನಿಂದಾಗಲಿ ಈ ಕಂಪೆನಿಗೆ ಏನೊಂದು ಬರತಕ್ಕದಿಲ್ಲ. ನಮ್ಮ ಕಂಪೆನಿಯು ಮುಖ್ಯ ಆಫೀಸು ಅಮೃತಸಾರದಲ್ಲಿರುವುದರಿಂದ ಅಮೃತಸಾರ್ ಬೇಂಕು ನಮ್ಮದೋ ಏನೆಂಬುವ ಗಲಿಬಿಲಿಯು ಕೆಲವರಲ್ಲಿರುವುದು. ಅಮೃತಸಾರ್ ಬೇಂಕಿಗೂ ನಮಗೂ ಯಾವ ಸಮ್ಮಂಧವೂ ಇರುವುದಿಲ್ಲರಿ, ಅಮೃತಸಾರ ಬೇಂಕು ಪ್ರತ್ಯೇಕ ಬೇಂಕು ಆಗಿರುತ್ತದೆ ಮತ್ತು ಇದರ ಹೆಸರಲ್ಲಿ ಅಮೃತಸಾರ್ ಎಂಬುವುದನ್ನು ಕೂಡಿಸಿರುವರಾದರೂ ಇದರ ಮುಖ್ಯ ಆಫೀಸು ಲಾಹೋರಿನಲ್ಲಿರುತ್ತದೆ.

ನೆಶನಲ್ ಇನ್ಸೂರೆನ್ಸ್ ಮತ್ತು ಬೇಂಕಿಂಗ್ ಕಂಪೆನಿಯ ಡಿರೆಕ್ಟರರುಗಳು ತಮ್ಮಿಂದಾಗುವ ಯಥಾ ಯೋಗ್ಯ ಪ್ರಯತ್ನಗಳಿಂದ ಈಗಿನ ವಿದ್ಯಮಾನಗಳಲ್ಲಿ ಕಂಪೆನಿಗೆ ಏನೊಂದು ಅಪಾಯವು ಬಂದೊದಗದಂತೆ ಜಾಗರೂಕರಾಗಿರುವರೆಂಬುದಾಗಿ ಈ ಮೂಲಕ ದೃಢಪಡಿಸುತ್ತಾರಲ್ಲದೆ ಪಾಲಕ ಮೊದಲಾದವರೆಲ್ಲರೂ ಎಂದಿನಂತೆ ಈ ಕಂಪೆನಿಯಲ್ಲಿ ತುಂಬಾ ವಿಶ್ವಾಸವುಳ್ಳವರಾಗಿರುತ್ತಾರೆಂತ ದೃಢವಾಗಿ ನಂಬಿರುವರು.

ಪಿ. ಎಲ್. ರಾಜಪಾಲ್, ಬಿ. ಎ. **P. L. RAJPAL, B. A.**
ಮುಖ್ಯ ಮೇನೇಜರ್. *Chief Manag*
ಟಿ. ಎಸ್. ಆರ್. ಐಯರ್, **T. S. R. IYER,**
ಸೆಕ್ರಿಟರಿ, ಮದ್ರಾಸ್ ಬ್ರೇಂಚ್. *Secretary, Madras Branc*

Estd. 1888. ಸ್ಥಾಪನೆ 1888.

K. B. RALE & CO., (BOMBAY)

ಕೆ. ಬಿ. ರೇಳ ಕಂಪನಿಕೃತ

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilies) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂಮ ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕಲೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧. ಅಂಚೆ ವೆಚ್ಚ ೩ ಆಣೆ.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನಿಂ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪುರ ಕಮಿಷನ್.

ಕೆ. ಬಿ. ರೇಳ ಸನ್ಸ ಕಂಪನಿ, ಗಿರಗಾಂವ ನಂ. ೪ ಮುಂಬಯಿ.

KANNADA INDIAN PENAL CODE.

ಕನ್ನಡ ಇಂಡಿಯನ್ ಪೆನಲ್ ಕೋಡ್.

ಇದರಿಂದ ಮೈಸೂರ್, ಮದ್ರಾಸ್ ಬೊಂಬಾಯಿ ಜಿಲ್ಲಾ
ಕನ್ನಡ ಭಾಷಾ ವಾಚಕಮಹಾಶಯರಿಗೆ
ತಿಳಿಯಪಡಿಸುವದೇನಂದರೆ:—

ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಕಳಾನಿಧಿ ಮುದ್ರಾಕ್ಷರಶಾಲೆಯೊಳ್ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲಿಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡೆಸಬೇಕಾದ ಆಚರಣೆಗಳಂದರೆ:—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ? ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ? ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜೀಯಾಗಬಹುದೇ? ರಾಜೀಯಾಗತಕ್ಕದ್ದಲ್ಲವೇ? ಎಂಬ ತಪಶೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ರಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ರ್ತಕರುಗಳಿಗೂ, ಜಮೀನ್‌ದಾರರುಗಳಿಗೂ, ಇತರ ಸಮಸ್ತ ಕೈಕಸಬುದಾರರಿಗೂ, ುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ವಿ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು.

ವು ತಾ॥ ಕ॥ ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕ್ರಮಪ್ರವೇಶ್ಯ ಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆ ಎಳೆಯುವುದು, ಅಸಾ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಯೆ ಕ್ರಮ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟ ಭವಾಕ್ಕೆ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವುದು.

ಸಿಕ್ಕಿ ಕನ್ನಡದಲ್ಲಿ ಇದುವರಿಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು. ಕ್ರಯ ಂ ೨–೮–೦. ರಫ್ ೨–೦–೦. ಟಪ್ಪಾಲು ಚಾರ್ಜು ೦–೪–೦ ಡಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಪ್ರೊಪ್ರೈಟರ್ ಕಳಾನಿಧಿ ಪ್ರೆಸ್, ಚಿಕ್ಕಪೇಟೆ ಬೆಂಗಳೂರುಸಿಟಿ.

ದಿ ಈಸ್ಟರ್ನ್ ಮೆರಿಟೈಮ್, ಲಿಮಿಟೆಡ್

THE EASTERN MARITIME Lᴰ.

ಮೂಲಧನ ರೂ. 50,00,000. ಹೆಚ್ಚಿಸುವ ಅಧಿಕಾರವಿದೆ.

25 ರೂಪಾಯಿಗಳ 2,00,000 ಹಿಸೆಗಳು; ಪಾಲುಗಳಿಗೆ ಬರಕೊಳ್ಳುವಾಗ ರೂ. 5; ಪಾಲುಗಳನ್ನು ಪಡೆದೊಡನೆಯೇ ರೂ. 10; ಪಾಲುಗಳು ಕರೆಯಲ್ಪಟ್ಟಾಗ ರೂ. 10 ಕೊಡಬೇಕಾಗುವುದು.

ಡ್ಯಾರೆಕ್ಟರರು.

ಮೆ॥ ಸೈಯದ್ ಅಸದುಲ್ಲ ಕಾಜರಾಣಿ, ಮರ್ಚಂಟ್.
ಮೆ॥ ಲಾಲಾಮೋತಿಲಾಲ್ ದಯಾರಾಮ್ (ಜಮ್ಮು ಫ್ಲೋರ್‌ಮಿಲ್)
ಡಾಕ್ಟರ್ ವಿ. ಎನ್. ಭಜೆಕರ್.
ಮೆ॥ ದಾಮೋದರದಾಸ ಸಕಾರಾಮಸೇಟ್, (ದಾಭೋಲ್).
ಮೆ॥ ಮಿರ್ಜ ಮಹಮುದ್ ಕಶಾನಿ, (ಎಕ್ಸ್ ಒಫಿಸಿಯೊ.)

ಹಿಂದೂಸ್ಥಾನದ ಪಶ್ಚಿಮ ತೀರದಲ್ಲಿರುವ ಬಂದರಗಳಲ್ಲಿ ಅಂದರೆ—ಮುಂಬಾಯಿ, ಜೈಗಾಡ್ ಮತ್ತು ವೆಂಗುರ್ಲ, ಮಂಗಳೂರು, ಭಾವನಗರ, ಕಚ್‌ಕೊಲ್ಲಿ ಲ್ಯಾನುಗಳಲ್ಲಿ ಪ್ರಯಾಣಸ್ಥರ ಮತ್ತು ಸರಕುಗಳನ್ನು ಸರಿಯಾಗಿ ಸಾಗಿಸುವಕ್ಕೆ ಉದ್ದೇಶದಿಂದ ಹಡಗೆ ಕಂಪೆನಿಯೊಂದನ್ನು ತೆರಿಯುವ ಆಲೋಚನೆಯು ನಡೆದಿರುವುದು. ಹೆಚ್ಚಿನ ಟನ್ನೇಜ್, ಮತ್ತು ತೀವ್ರ ವೇಗವಿರುವ ಭಾರತೀಯರಿಗೆ ಬೇಕಾದ ಸೌಕರ್ಯಗಳಿರುವ ಹಡಗಗಳನ್ನು ಕಟ್ಟಿಸುವರೆ ಚಲೋ ಹಡಗ ಕಟ್ಟುವವರ ಕೂಡೆ. ಬೇಗನೇ ಓರ್ಡರ್ ಕೊಡಲ್ಪಡುವುದು. ಮಂಗಳೂರು ಲೈನು ಬರುವ ವರ್ಷದಿಂದಲೇ ಶುರುಮಾಡಲ್ಪಡುವುದು. ಹಿಸೆಗಳನ್ನು ಪಡಕೊಳ್ಳಬೇಕೆಂದಿರುವವರು ತ್ವರ್ಯದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.

ಬಿ. ಕಶಾನಿ ಮತ್ತು ಕಂಪೆನಿ,
ಮೆನೇಜಿಂಗ್ ಏಜಂಟ್ಸ್,
ಕಾಂತಾಬಿಲ್ಡಿಂಗ್, ಕಲ್ಬಾದೇವಿ ರೋಡ್ ಮುಂಬಯಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ. ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)


KAMINIA
OIL
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA PERFUMERY Cº BOMBAY

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತುಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ. ನಯವಾಗಿ ಚಕಚಕಿಸುವವು; ನಿಬಿಡವಾದ ನೀಲ ಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪು ಕೊಡುತ್ತೆ, ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ, ಸುಂಡಿನ ಹೊಟ್ಟನ್ನು ಅಣಗಿಸುತ್ತೆ, ಉತ್ತಮೊತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲರ್ಹವಾಗಿರುತ್ತೆ.

ಇದರ ಬೆಲೆ 1 ಸೀಸೆಗೆ ರೂ. 1. ಅಂಚೆಯ ವೆಚ್ಚ ಆಣೆ 4 ಬೇರೆ ತೆರಬೇಕು.
೩ ಸೀಸೆಗಳಿಗೆ ರೂ. 2—10—0. ಅಂಚೆಯ ವೆಚ್ಚ ಆಣೆ 7.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ. ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆಯು ಉತ್ತಮೋತ್ತಮವಾದದ್ದೆಂದು ತಿಳಿಯಬೇಕು. ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರಿಯುತ್ತಿದ್ದಾರೆ.

ಅಮೇರಿಕದ ಡಾಕ್ತರರ ಅವಿಶ್ರಾಂತ ಪರಿಶ್ರಮದ ಅದ್ಭುತ ಚಮತ್ಕಾರ. ಅಪೂರ್ವ ಶಕ್ತಿಯನ್ನು ಕೊಡತಕ್ಕ ಪ್ರೊ. ಜೇಮ್ಸರವರ ವಿದ್ಯುತ್ ಶಕ್ತಿವರ್ಧಕ ಗುಟಿಕಾ, ದುರ್ಬಲತೆ, ಧಾತು ಕ್ಷೀಣತೆ, ಅಗ್ನಿಮಾಂದ್ಯ, ಖಾಸಶ್ವಾಸ, ಕ್ಷಯಾದಿ ರೋಗಗಳಿಂದ ಮೃತ್ಯುವಿನ ಕೋರೆಗಳಲ್ಲಿ ಸಿಲುಕಿರುವವರಿಗೆ, ಅಥವಾ ರೋಗಗಳಿಂದ ಮುಕ್ತರಾಗಿ ಸಾಯಲಿಚ್ಛಿಸುವವರನ್ನು, ಕೆಲಕಾಲ ಪರ್ಯಂತ ಅವರ ಮೃತ್ಯುವನ್ನು ಹಿಂದಟ್ಟಿ ಅವರ ಶರೀರದಲ್ಲಿಯ ಸರ್ವ ರೋಗಗಳನ್ನು ಹೋಗಲಾಡಿಸಿ, ವಿದ್ಯುಚ್ಛಕ್ತಿಯ ಯೋಗದಿಂದ ಪುನಃ ಸ್ವರ್ಗಸುಖವನ್ನು ಅವರಿಗೆ ಕೊಡಲಾಪ ರಾಮಬಾಣದಂತಹ ಹುಸಿಯಾಗದ ಉಪಾಯವೆಂದರೆ ಪ್ರೊ. ಜೇಮ್ಸರವರ ಶಕ್ತಿವರ್ಧಕ ಗುಳಿಗೆಗಳೇ. ಸ್ಮೃತಿಶಕ್ತಿಯ ನಾಶ, ಪಚನಕ್ರಿಯೆಯ ವಿಕಾರ, ಮೇಧಾಶಕ್ತಿಯ ಮೂಢತೆ, ಮುಖರೇಖೆಯ ಪಾಂಡುತೆ, ಅಪೌರುಷತೆ, ಸ್ವಪ್ನದೋಷ, ವಾಡಿಗಳ ಶಿಥಿಲತೆ, ಇವೇ ಮೊದಲಾದ ರೋಗಗಳಿಂದ ಉಂಟಾಗುವ ಮಾನಸಿಕ ಕ್ಲೇಶ ಮತ್ತು ನಿರಾಶೆಗಳನ್ನು ಕಿತ್ತುಹಾಕಲಿಕ್ಕೆ ಉಪಲಬ್ಧವಾಗಿರುವ ಉತ್ತಮೋತ್ತಮವಾದ ಔಷಧವನ್ನು ಉಪಯೋಗಿಸಿ ಸರ್ವ ಸಂಕಷ್ಟಗಳಿಂದ ಬಿಡುಗಡೆಯನ್ನು ಹೊಂದಿ, ಈ ಮಹೋಷಧದ ಗುಣಾನುವಾದವನ್ನು ಮುಕ್ತಕಂಠವಾಗಿ ಹಾಡುತ್ತಿರುವರು; ಆದರೆ ಈ ತನಕ ಸರ್ವ ರೋಗಗಳಿಗೆ ತುತ್ತಾಗಿರುವ ಮತ್ತು ದಾರುಣವಾದ ದುಃಖಗಳಿಂದ ಅಳಲುತ್ತಿರುವ ಲಕ್ಷೋಪಲಕ್ಷ ಅಥಾಗಿ ಜನರಿಗೆ ನಮ್ಮ ವಿನಂತಿಯು ಇದೇ ಒಂದೇಯೊಂದು ಸರ್ವ ರೋಗಸಂಹಾರಿಣಿಯಾಗಿರುವ ಪ್ರೊ. ಜೇಮ್ಸರವರ ಈ ವಿದ್ಯುತ್ ಶಕ್ತಿವರ್ಧಕ ಗುಳಿಗೆಗಳನ್ನು ಸೇವಿಸಿ ನೋಡಿರಿ. ಇದಕ್ಕೆ ಸಾವಿರಾರು ಸಿಫಾರಸ್ ಪತ್ರಗಳು ಬಂದಿವೆ.

PROF. JAMES ELECTRO-TONIC PEARLS
FOR HEALTH, STRENGTH & ENERGY

40 ಗುಳಿಗೆಗಳಿರುವ ಸೀಸೆ ೧ಕ್ಕೆ ರೂ. 2—0—0.
ಟಪ್ಪಾಲು ಖರ್ಚು... ... „ 0—4—0.

ಗಜಕರ್ಣದ ಮುಲಾಮು.

ಮೂರು ಸಾರಿ ಶಾಗಿಸುವದರೊಳಗೆ ಗುಣವಾಗುವದು ಉರಿಯುವದಿಲ್ಲ. ಶೀಶೆ ೧ಕ್ಕೆ 0—4—0.

ಕಾಮಿನಿಯಾ ಕೋಲ್ಡ ಕ್ರೀಮ್.

ಇದನ್ನು ಮುಖಕ್ಕೆ ಶಾಗಿಸುವದರಿಂದ ಮುಖದ ಮೇಲಿರುವ ಮುಡನೆಗಳು, ಕಪ್ಪು ಕಲೆಗಳು ಹೋಗುವದು. ಇದಕ್ಕೆ ಪರಿಮಳವು ಇದೆ. ಶೀಶೆ ೧ಕ್ಕೆ 0—12—0.

ಕಾಮಾಟೋನ್.

ಧಾತುಪುಷ್ಟಿ, ಧಾತುವೃದ್ಧಿಯಾಗುವದು.
ಶೀಶೆ ೧ಕ್ಕೆ 2—0—0.

ಸರಸಪರಿಲಾ.

ರಕ್ತಶುದ್ಧಿಗೆ ಶೀಶೆ ೧ಕ್ಕೆ 1—0—0.

ವಿದ್ಯುಚ್ಛಕ್ತಿ ಮಾತ್ರೆ.

ಸ್ತ್ರೀಯರ ರಜೋದರ್ಶನದಲ್ಲಿ ಆಗುವ ಹೊಟ್ಟೆನೋವಿಗೆ. ೨೪ ಮಾತ್ರೆ ಶೀಶೆ ೧ಕ್ಕೆ 1—4—0.

ಓಡ್‌ಮೆನ್ಸ ಕಫಪೀಯೂಷ.

ಶ್ವಾಸ, ಖಾಸ, ಕೆಮ್ಮು ಇವುಗಳಿಗೆ ಸಿದ್ಧೌಷಧ.
ಶೀಶೆ ೧ಕ್ಕೆ 1—4—0.

ರುಬ್ಯಾಡ್.

ವಿರೇಚನಕ್ಕೆ ಔಷಧಿ 0—10—0.

ಟ್ರೀಜೋ ಟೆಬ್ಲೆಟ್ಸ್.

ಶಿರೋವೇದನೆಗೆ ದಿವ್ಯ ಔಷಧ ಶೀಶೆ ೧ಕ್ಕೆ 0–12–0.

ಕ್ಯುರೇಲಾಯಿನ್.

ಪ್ರಮೇಹಕ್ಕೆ. ಶೀಶೆ ೧ಕ್ಕೆ 1—8—0.

ಒಡ್‌ಮನ್ಸ ಮಲೇರಿಯಸ್ ಪಿಲ್ಸ್.

ಎಲ್ಲಾ ತರದ ಜ್ವರದ ಮೇಲೆ; ಶೀಶೆ ೧ಕ್ಕೆ 1—0—0.

ಕರ್ಣರೋಗ ಚಿಕಿತ್ಸಾ.

ಕಿವಿಯಲ್ಲಿ ಉಂಟಾಗುವ ಸ್ಫುರಣ, ಕಜ್ಜಿ, ಕೀವು, ಸೋರುವಿಕೆಗೆ. ಶೀಶೆ ೧ಕ್ಕೆ 0—8—0.

ದಂತಮಂಜನ.

ಡಬ್ಬಿ ೧ಕ್ಕೆ 0—2—0.

ಕಜ್ಜಿ ಮುಲಾಮು.

ಶೀಶೆ ೧ಕ್ಕೆ 0—3—0.

ಕೋಲೆರಾ ರೋಗದ ಔಷಧಿ.

ಶೀಶೆ ೧ಕ್ಕೆ 0—6—0.

ಅತೀ ಮನೋಹರವಾದ ಸುರಭಿಯು. (ರಜಿಸ್ಟರ್ಡ್)

ಒಟ್ಟೊ—ದಿಲ್ ಬಹಾರ್!!

ಈ ಸುಗಂಧ ದ್ರವವು ಮಧುರ—ಕೋಮಲ—ಚಿರಸ್ಥಾಯಿ—ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ—ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ಆಣೆ 8. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ ಆಣೆ 12. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2. ಅಂಚೆಯ ವೆಚ್ಚ ಬೇರೆ ಆಣೆ 4. ಒಟ್ಟೊ—ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0–12–0.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

ಒಂದು ತಿಂಗಳು ಮಾತ್ರ! ಬಹುಮಾನ! ತ್ವರೆಮಾಡಿರಿ!

ವಿವೇಕಚೂಡಾಮಣಿ

ಶ್ರೀಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮಾವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯವೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟ ಸಂಖ್ಯೆಗಳು ೪೪೮. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೋ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ ರೂ. ೨—೪—೦, ಹಾಸಲು ೪ ಆಣೆ.

ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಸಟೀಕಾ ಮುಕುಂದಮಾಲೆ ಸ್ತೋತ್ರ ಒಂದು, ಮಹಿಂನಾ ಸ್ತೋತ್ರ ಒಂದು ಈ ಎರಡು ಪುಸ್ತಕಗಳನ್ನು ಬಹುಮಾನವಾಗಿ ಕೊಡುತ್ತೇವೆ.

ಕಥಾಕಲ್ಪವೃಕ್ಷ.

ಪೂರ್ವಕಾಲದ ಕವೀಶ್ವರರ ವೃತ್ತಾಂತಗಳಿಂದಲೂ, ಮನೋಹರವಾದ ನೀತಿಕಥೆಗಳಿಂದಲೂ ಕೂಡಿ ಮನುಷ್ಯ, ಪಶು, ಪಕ್ಷಿ, ಕ್ರಿಮಿಕೀಟಗಳ ಸ್ವಭಾವಧರ್ಮಗಳನ್ನು ತಿಳಿಸುವ, ವಾತಾವರಣ, ವಿದ್ಯುಲ್ಲತೆ ಮುಂತಾದ ತತ್ವಗಳ ವರ್ಣನೆಯುಳ್ಳ ಮತ್ತು ಯಂತ್ರಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರಗಳನ್ನು ವರ್ಣಿಸುವ ಗ್ರಂಥ ಅತ್ಯಂತ ಉಪಯೋಗವಾದದ್ದು. ಕ್ರಯ ರೂ. ೦—೧೦—೦. ಹಾಸಲು ೦—೩—೦.

ರಘುಕುಲಚರಿತ್ರೆ.

ಕಾಳಿದಾಸ ಮಹಾಕವಿಯ ರಘುವಂಶ ಮಹಾಕಾವ್ಯವೇ «ರಘುಕುಲಚರಿತಂ" ಎಂಬ ಈ ಕಥೆ. ಮೊದಲನೇ ಭಾಗ ದಿಲೀಪನ ವಶಿಷ್ಠಾಶ್ರಮ ಪ್ರಯಾಣ, ನಂದಿನೀಧೇನುವಿನ ವರಪ್ರಸಾದ, ರಘುರಾಜಾಭಿಷೇಕ, ರಘುದಿಗ್ವಿಜಯ, ಅಜನ್ಸ್ವಯಂವರಾಭಿಗಮನ, ಸ್ವಯಂವರವರ್ಣನ, ಅಜಪಾಣಿಗ್ರಹಣ, ಅಜವಿಲಾಪ ಇಂತು ಎಂಟು ಬಗೆಯ ವಿಚಿತ್ರ ಚರಿತ್ರೆಯನ್ನೊಳಗೊಂಡಿದೆ.

ಕ್ರಯ ರೂ. ೦—೮—೦. ಹಾಸಲು ೦—೨—೦.

ಸಟೀಕಾಬ್ರಹಜ್ಜಾತಕ

ಕ್ರಯ ರೂ. ೫—೦—೦. ಹಾಸಲು ರೂ. ೦—೮—೦.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ್ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original
BABA
BUDAN-GHIRY
COFFEE POWDER
PROPRIETORS
J.C. SOUZA & Co
MANGALORE

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಬರ್ಮೀಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.

USE
UP-TO
DATE
FLORAL
Burmese Beauty
OIL
(REGD.)

ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲೆಪಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಷ್ಟು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ಯಾಸ್.

PARADISE
THE FLORAL
PERFUMERY Co.
BOMBAY 2.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟ ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಜಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಜಿಗೆ.	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್‌ಫ್ಯುಮರಿ ಕಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲುರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ	ತೊಲೆ 1ಕ್ಕೆ	2-0-0
ಅಂಬರ್ ಬತ್ತಿ	,, ,,	6-0-0	B ಅರಗಜ	,, ,,	1-0-0
ಕಸ್ತೂರಿ ಬತ್ತಿ	,, ,,	3-0-0	ಕಸ್ತೂರಿ ಬಿಲ್ಲೆ	,, ,,	2-0-0
ಜವಾಜಿ ಬತ್ತಿ	,, ,,	2-0-0	ಜವಾಜಿ ಬಿಲ್ಲೆ	,, ,,	1-0-0
ಪುಣಗಿನ ಬತ್ತಿ	,, ,,	1-8-0	ಕೇಸರಿ ಬಿಲ್ಲೆ	,, ,,	0-8-0
A ಪನ್ನೀರ್ ಬತ್ತಿ	,, ,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ		0-4-0
ಮಸಾಲಾ ಬತ್ತಿ	,, ,,	0-6-0	ದಶಾಂಗ ಡಬ್ಬಿ 1ಕ್ಕೆ		0-4-0

ಮೇನೇಜರ್, «ಸುಗಂಧವಿಲಾಸ ಮಂಗಳೂರು.

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಸ್ನೇಹಲತಾ

ಮಸ್ತಕತಾಪಹಾರಿಣೀ ತೈಲ.

ತಲೆನೋವು, ತಲೆಭಾರ, ನಿದ್ರಾಭಂಗ, ಕಣ್ಣುನೋವು, ಹೆಂಗಸರ ತಲೆಶಿಡಿತ, ತಲೆಕುತ್ತು ಪರಿಹಾರ. ಕೇಶವು ರಮ್ಯವಾಗಿ ಉದ್ದುದ್ದ ಬೆಳೆಯುವುದು. ಬಾಲ ನರೆ ಕಪ್ಪಾಗುವುದು. ಉಷ್ಣದಿಂದುಂಟಾದ ತುರಿಕಜ್ಜಿ ಮಾಗುವುದು. ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ತೈಲವನ್ನು ಒಂದು ಸಲ ಉಪಯೋಗಿಸಿ ನೋಡಿರಿ!

ಕ್ರಯ 4 ಔನ್ಸಿನ ಸೀಸೆಗೆ ೦—೧೨—೦. ಡಜನ್ ಬಾಟ್ಲಿಗಳಿಗೆ ರೂ. 8. ವಿ. ಪಿ. ಬೇರೆ.

ಇಕ್ಲಿಪ್ಸ್ ರಬ್ಬರ್ ಮೊಹರುಗಳೂ ಫೊಟೋ ಎನ್‌ಲಾರ್ಜಮೆಂಟುಗಳೂ ಅಗ್ಗ ದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಹೋಪ್ ಕೊಟೇಜು,
ಕಂಕನಾಡಿ ಪೋಸ್ಟು.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

(ಧಾತುಪೌಷ್ಟಿಕ ವಜ್ರಾಂಗಪಾಕ.)

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು, ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ. ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಶಿಗುತ್ತವೆ. ಅನುಪಾನ ಪತ್ರಿಕೆ ಬಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— ವಿ. ಎಸ್. ಮೋಡಕ,
ಕರ್ನಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ತ್ರಿಕಾಲದರ್ಶಿ ಐನ.

ಭೂತ, ವರ್ತಮಾನ, ಭವಿಷತ್ ಕಾಲದಲ್ಲಿ ಆದ, ಆಗುವ ವಿಷಯಗಳನ್ನು ತಿಳಕೊಳ್ಳಬೇಕೆಂದಿದ್ದರೆ, ನಮ್ಮ ಪ್ರಖ್ಯಾತಿಪಟ್ಟ "ತ್ರಿಕಾಲದರ್ಶಿ ಐನ"ವನ್ನು ಕೊಂಡುಕೊಳ್ಳಿರಿ. ಈ ಐನವು ಹೂತಿಟ್ಟ ನಿಧಿ ವ್ಯಾಪಾರದಲ್ಲಿ ಲಾಭ ಮತ್ತು ನಷ್ಟ, ಕೋರ್ಟಿನಲ್ಲಿ ಕಾರ್ಯಸಿದ್ಧಿ ಯಾ ಅಪಜಯ, ಪರೀಕ್ಷೆಯ ಫಲವನ್ನು ಮುಂದಾಗಿ ಹೇಳುವುದಲ್ಲದೆ ಮೃತ ಹೆತ್ತವರ ವಿಷಯವಾಗಿ ಹೆಂಡತಿ, ಮಗ, ಆಸ್ತಿ, ಕೆಲಸ, ಮನಸ್ಸಿನ ಅನುಮಾನ, ಜೀವಮಾನದಲ್ಲಿ ಎಂದಾದರೂ ನೀನು ಐಶ್ವರ್ಯವಂತನಾಗುತ್ತೀಯೋ, ಯಾ ನಿನಗೆ ದೇಶದಿಂದ, ಪರದೇಶದಿಂದ ಐಶ್ವರ್ಯವು ಬರುತ್ತದೋ ಎಂಬದನ್ನು ತಿಳಿದು ಹೇಳುವುದು. ನಿನ್ನ ದೂರದಲ್ಲಿರುವ ಸ್ನೇಹಿತರು, ಸಂಬಂಧಿಕರ ವಿಷಯವಾಗಿ ಈ ಐನವು ತಿಳಿಸುವುದು. ಪ್ರಸಿದ್ಧ ಪುರುಷರಿಂದ ಸರ್ಟಿಫಿಕೇಟುಗಳು ದೊರಕಿರುವವು.

ನಂಬ್ರ 1. ಸಾಧಾರಣ ಗ್ಲಾಸ್ ಐನ ರೂ. 2—9—0, ನಂಬ್ರ 2. ಕ್ರಿಸ್ಟಲ್, ಗ್ಲಾಸ್ ಐನ ರೂ. 3—9—0, ನಂಬ್ರ 3. ದೊಡ್ಡ ಮತ್ತು ಬಹಳ ಕಾಲ ಉಳಿಯುವ ಐನ ರೂ. 6—0—0. ಪೋಸ್ಟೇಜು ಮತ್ತು ಪೇಕಿಂಗ್ ಸಹಿತ. ಖಾಯಿಸ್ ಆಗದಿದ್ದ 1 ಮತ್ತು 2ನೇ ನಂಬ್ರದ ಐನವನ್ನು 24 ತಾಸಿನೊಳಗೆ ಹಿಂದೆ ಕಳುಹಿಸಿದರೆ ರೂ. 2 ಮತ್ತು ರೂ. 2—8—0 ಕೊಟ್ಟು ಹಿಂದೆ ತಕ್ಕೊಳ್ಳುವೆವು. ೩ನೇ ನಂಬ್ರದ ಐನವನ್ನು ಹಿಂದೆ ಪಡೆಯಲಾರೆವು.

Patel Ashabhai Vagjibhai,
Post Karamsad Dt. KAIRA,
B. B. & C. I. RAILWAY.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಶಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬ್ರಾಹ್ಮಿಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಬೇಗನೇ ಕೊಂಡುಕೊಳ್ಳಿ! ಬೇಗನೇ ಕೊಂಡುಕೊಳ್ಳಿ!!

ಇದೇ ಸುಕಾಲ!

ನಮ್ಮ ಕೂಡೆ ಪರಿಷ್ಕೃತ ಕೆಟಲಾಗುಗಳಾಗಲೀ ಸುಳ್ಳು ಸರ್ಟಿಫಿಕೇಟುಗಳಾಗಲೀ ಇಲ್ಲ. ಇತರರನ್ನು ದೂರಿ ನಮ್ಮನ್ನು ಹೊಗಳಿಕೊಳ್ಳುವುದೂ ಇಲ್ಲ. ನಮ್ಮ ವಾಚುಗಳನ್ನು ಸರ್ವರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದ ಬರೇ ಕೊಂಚ ಲಾಭದಿಂದ ನಾವು ವಾಚುಗಳನ್ನು ಮಾರುವೆವಷ್ಟೆ.

ನಂ. 1 ಪರಿಷ್ಕೃತವಾದ ಹೊಸನಮೂನೆಯ ಬೆಳ್ಳಿ ರಿಸ್ಟ್ ವಾಚು ಚರ್ಮದ ಕೈಕಟ್ಟು ಸಹಿತ, 10 ವರುಷಗಳ ಗ್ಯಾರಂಟು ರೂ. 5-8-0. ನಂ. 4 ಮಧ್ಯಮ ಸ್ಯಾಜು ಗನ್‌ಮೆಟಲ್ ವಾಚು 7 ವರುಷಗಳ ಗ್ಯಾರಂಟು ರೂ. 5-8-0. ನಂ. 5 ಲಿವರ್ ರೊಸ್ಕೊಪ್ ವಾಚು 1ನೇ ವಿಧ 20 ವರುಷಗಳ ಗ್ಯಾರಂಟು ರೂ. 7-8-0. ನಂ. 6 ಲಿವರ್ ರೊಸ್ಕೊಪ್ ವಾಚು 2ನೇ ವಿಧ 10 ವರ್ಷಗಳ ಗ್ಯಾರಂಟು ರೂ. 4-8-0. ನಂ. 10 ಎಲಾರ್ಮ್ ಟ್ಯಾಮ್‌ಪೀಸು 3 ವರುಷಗಳ ಗ್ಯಾರಂಟು ರೂ. 3-8-0. ನಂ. 11 ಬಿ ಟ್ಯಾಮ್‌ಪೀಸು 1ನೇ ವಿಧ 3 ವರುಷಗಳ ಗ್ಯಾರಂಟು ರೂ. 2-4-0. ನಂ. 13 ಕೆಲೆಂಡರ್ ಎಲಾರ್ಮ್ ಟ್ಯಾಮ್‌ಪೀಸು 6 ವರುಷಗಳ ಗ್ಯಾರಂಟು ರೂ. 4-8-0. ನಂ. 15. 8 ದಿವಸಗಳಿಗೊಂದಾವರ್ತಿ ಕೀಲಿ ಕೊಡುವ ಗನ್‌ಮೆಟಲ್ ವಾಚು 6 ವರುಷಗಳ ಗ್ಯಾರಂಟು ರೂ· 11. ನಂ· 16. 8 ದಿವಸಗಳಿಗೊಂದಾವರ್ತಿ ಕೀಲಿ ಬೆಳ್ಳಿ ವಾಚು 6 ವರುಷಗಳ ಗ್ಯಾರಂಟು ರೂ. 16-8-0. ನಂ. 17. 8 ದಿವಗಳಿಗೊಂದಾವರ್ತಿ ಕೀಲಿ ಕೊಡುವ ಜಾಪಾನ್ ಗಡಿಯಾರ ತಾರೀಕು ಸಹಾ ತೋರಿಸುವಂಥಾದ್ದು 10 ವರುಷಗಳ ಗ್ಯಾರಂಟು ರೂ. 12-8-0. ನಂ· 18. ಜೊಕರ್ ಎಲಾರ್ಮ್ ಟ್ಯಾಮ್‌ಪೀಸು 10 ವರುಷಗಳ ಗ್ಯಾರಂಟು ರೂ. 6-8-0.

ಮೇಲೆ ಹೇಳಿದ ಎಲ್ಲಾ ವಾಚು ಗಡಿಯಾರಗಳು ಗಟ್ಟಿಯಾದ ಲೋಹಗಳಿಂದ ಮಾಡಲ್ಪಟ್ಟದ್ದು. ಸಾಧಾರಣ ಲೋಹಗಳಿಂದ ಮತ್ತು ಹಿತ್ತಾಳಿಯಿಂದ ಮಾಡಲ್ಪಟ್ಟ ವಾಚು ಗಡಿಯಾರಗಳು ನಮ್ಮಿಂದಲೂ ಇತರರಿಂದಲೂ ಮೇಲೆ ಹೇಳಿದ ಕ್ರಯದ ಅರ್ಧಕ್ಕೆ ಕೊಡೋಣಾಗುವವು. ಪರಂತು, ಇವು ಗಟ್ಟಿಯಲ್ಲ.

ಬಹಳ ಅಗ್ಗ—ಕುಪನ್ ಕ್ರಮ—ಬೇಗನೇ ಕೊಂಡುಕೊಳ್ಳಿ!

6 ರೂಪಾಯಿಯ ವಾಚು, 3 ರೂಪಾಯಿಯ ಟ್ಯಾಮ್‌ಪೀಸು, ಬೀ ಟ್ಯಾಮ್‌ಪೀಸು, ಕೇಶರಂಜನ ಎಣ್ಣೆ ಇತ್ಯಾದಿಗಳು 4 ಆಣೆ 2 ಆಣೆಗೆ ದೊರೆಯುವ ವಿಧಾನವನ್ನು ಪತ್ರ ಬರೆದು ತಿಳಕೊಳ್ಳಬಹುದು.

ವಿಳಾಸ:— ನವಾಬ ಮಯಾನ್ನ ಎಂಡ್ ಕೊ.,
ವಾಚು ಮತ್ತು ಗಡಿಯಾರ ವ್ಯಾಪಾರಸ್ಥರು.
ಕಾದಿರಿ, ಅನಂತಪುರ ಡಿಸ್ಟ್ರಿಕ್ಟ್.



ಅನ್ಸೋನಿಯ ಕಂಪೆನಿಯ ಜಿನ್ಯಾನ್ ಬಿ ಟ್ಯಾಮ್‌ಪೀಸ್, ನಿಕ್ಕಲ್‌ಕೇಸ್, ಹಿಂದಿನಿಂದ ಕೀಲಿ ಕೊಡುವುದು, ಎತ್ತರಿಸಲ್ಪಟ್ಟ ಮುಖಬಿಲ್ಲೆ, ಪ್ರತಿ ಒಂದು ಕುಟುಂಬಕ್ಕೆ ಸುಲಭ ದರದಲ್ಲಿ ದೊರಿಯುವ ಉತ್ತಮ ಗಡಿಯಾರ, ಇದರ ಪ್ರಯೋಗವು ಈಗ ಸರ್ವಸಾಧಾರಣ ಎಲ್ಲರಿಗೂ ಗೊತ್ತದೆ. ಇದನ್ನು ಕೊಂಡುಕೊಳ್ಳುವವರ ಸಂಖ್ಯೆ ಪ್ರತಿದಿನವೂ ಹೆಚ್ಚಾಗುತ್ತಿದೆ.

ನಿಕ್ಕಲ್‌ಕೇಸ್ ರೂ. 2—8—0 (ದೊಡ್ಡ ಅಂಕೆ). ಎಲಾರ್ಮ್ ಸಹಿತ ರೂ. 4—8—0. ಟಪ್ಪಾಲು ಚಾರ್ಜು ಬೇರೆ.

ಸುಪಿರಿಯರ್ ರೈಲ್ವೇ ರೆಗ್ಯೂಲೇಟರ್.



ನಿಕ್ಕಲ್ ಬೆಳ್ಳಿಕೇಸ್, ಓಪನ್‌ಫೇಸ್, ಕೀಲೆಸ್, ದೊಡ್ಡ ಅಂಕೆಗಳು, ಬಲವಾದ ಮುಳ್ಳು, ನಿರ್ಭಿಡೆಯಾಗಿ ಪ್ರಯೋಗಿಸಬಹುದು. ಬಹಳವಾಗಿ ಮಾರುತ್ತಿರುವೆವು. ಅಗ್ಗ ಮತ್ತು ಚಲೋ ಗಡಿಯಾರ. ವ್ಯಾಟ್‌ಮೆಟಲ್ ಸರಪಣಿ ಸಹಿತ.

ರೂ. **2—15—0.** ಟಪ್ಪಾಲು ಚಾರ್ಜು ಬೇರೆ.

ದಿ ಬೊಂಬೆ ಪೊಪ್ಯುಲರ್ ಏಜನ್ಸಿ,
ಡಾರವಿ, ಬೊಂಬೆ.
THE BOMBAY POPULAR AGENCY,
Dharvi Bombay.

ದೇಶಬಾಂಧವರೇ! ಇತ್ತ ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್

ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 96,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ. ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲ್ಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!! ಮದುವೆಯ ಮುಂಚಿತವಾಗಿಯೇ ಸತ್ತ ಹಣದ ದುಬಾರಿ ಹಣವು ಇಲ್ಲೇ ಕೊಡಲ್ಪಡುವುದು.

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ಥರಾಡ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,
ಕನ್ನಡ, ಮೈಸೂರು ಮತ್ತು ಕೊಡಗುಸಂಸ್ಥಾನದ ಮುಖ್ಯ ಏಜಂಟರು, ಉಡುಪಿ (ದ. ಕನ್ನಡ

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲಿಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲಿಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲಿಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯೂ ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸಮೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲಿಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲಿಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ

ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಹುಷು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೇಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"
ಮೈಸೂರು.

ಡೋಂಗರೆ

ಇವರ

ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದ್ದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ, ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪ್ಪಾಲ ಖರ್ಚು 0-4-0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	200,000—0—0
Paid up Capital	175,000—0—0
Deposits	503,278—3—5
Reserve Fund	27,500—0—0

Besides the uncalled capital of Rs. 25,000/- 25%. of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6%. paid during the past years and a bonus of 1%. to 2%. paid in addition during the last three years.

Fixed Deposits of Rs. 50/-and above in multiples of Rs. 5/. received for 3, 6, 12 and 24 months @ 4, 4½, 5 and 5½%. respectively. Terms on application.

Short-notice Deposits requiring one week's notice of withdrawal after one month received @ 2½%. per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	200,000—0—0
ಆಗತ ಮೂಲ ಧನವು ,, ...	175,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	503,278—3—5
ರಕ್ಷಿತ ಧನವು	27,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಯೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. April 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ಧಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್‌ಡಿಪೊ, ಬಳ್ಳಾರಿ.

Canarese Novels Etc.

ಕನ್ನಡ ಪುಸ್ತಕಗಳು.

ಮ| ರಾ| ರಾ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಅ.		ರೂ. ಅ.
ವಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ. ಮು.	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ನವಾಬನಂದಿನಿ ಡಿಟೊ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ. ಮು.	0—3
ಸೀತಾರಾಮ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ. ಮು.	0—3
ವಿಷವೃಕ್ಷ ದ್ವಿ. ಮು.	1—4	ಯುಗುಳಾಂಗುರೀಯ ,,	0—3
ದೇವೀ ಚೌಧುರಾಣಿ-ಡಿಟೊ	1—4	ಭ್ರಾಂತಿವಿಲಾಸ ,,	0—8
ರಾಜಸಿಂಹ-(ಇತಿಹಾಸ)	1—5	ನೊಂದನುಡಿ [ಸ್ತ್ರೀನೀತಿ]	0—2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ಮೃಣ್ಮಯಿ-ಡಿಟೊ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿರತ್ನನಾಟಕರತ್ನ ಡಿಟೊ	0—7
ಮನೋರಮ [ಪತ್ತೇದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit-Bits]	0—8
ಪರಿಮಳ-ಡಿಟೊ-ದ್ವಿ. ಮು.	0.10	ನೀರದೆ [ಹೊಸ ಕಾದಂಬರಿ]	0—8
ಸಾಧನೆ. ಡಿಟೊ	0—8	ಭಾರತಮಹಿಳಾ [ಸ್ತ್ರೀನೀತಿ]	0—8
ಕೊಹಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0.11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3	ಇತ್ಯಾದಿ.	

ಶ್ರೀ ಮಾರುತೀ ಚಿತ್ರಪಠ.

ಶ್ರಿ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟ ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಅ.		ರೂ. ಅ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0—8	ನಿರ್ಭಾಗ್ಯಚಾಣಿಕ್ಯ [ಹೊಸಕಾದಂಬರಿ]	0—6
ಕ. ಕವಿಚರಿತೆ [ಪೂರ್ವಭಾಗ]	3—2	ಅನಂಗಸುಂದರಿ ಡಿಟೊ	0—8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾಮಾಧವಿ ಡಿಟೊ	0—8
ಕಲಾನಾಥ ಡಿಟೊ	0—8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0—9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0—9
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0—8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4—0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8	ಹರಿಕಥಾಮೃತಸಾರ ಡಿಟೊ	1—6
ಸನ್ಯಾಸಿ [ಹೊಸ ಕಾದಂಬರಿ]	0—6	ಚದುರಂಗಬೋಧಿನಿ	0—3
ಮೃತ್ಯು ಪರೀಕ್ಷೆ ಡಿಟೊ	0—2	ಸರ್ವೇಮ್ಯಾನ್ಯುಯಲ್	0—5
ಬೃಂದಾವನ ಡಿಟೊ	0—2	ನ್ಯಾಯದರ್ಪಣ [ಲಾ]	1—0
ಸುಮನೋರಮ ಡಿಟೊ	0—2	ವ್ಯವಹಾರ ದೀಪಿಕೆ [ಲಾ]	3—0
ಮಾಲಿನಿ ಡಿಟೊ	0—2	ಶಾಕುಂತಲ ನಾಟಕ ದ್ವಿ. ಮು.	0—9
ಪ್ರೇಮಪಿಪಾಸೆ ಡಿಟೊ	0—2	ಶೂರಸೇನಚರಿತ್ರೆ ನಾಟಕ ಡಿಟೊ	1—0
ವಿರಕ್ತಳಾದ ಸೌದಾಮಿನಿ ಡಿಟೊ	0—5	ಚಂಡಕಾಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0—2	ರಾಮವರ್ಮ ಲೀಲಾವತೀ ನಾಟಕ	0—8
ಚಾತುರ್ಯವತಿ ಡಿಟೊ	0—2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0—2	ಚಂಡೀಮದಮರ್ದನ ನಾಟಕ	0—5
ವಿಲಕ್ಷಣಶಿಕ್ಷಣ ಡಿಟೊ	0—2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0—2	ಭರ್ತೃಹರಿ ನಿರ್ವೇದ ನಾಟಕ	0—3
ಭಾನುಮತಿ ಡಿಟೊ	0—2	ನಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0—2	ಧೃನಂಜಯ [ನಾಟಕ]	0—4
ಸಂತಾಪಕ ಡಿಟೊ	0—4	ಸೀತಾಪರಿಣಯ [ನಾಟಕ]	0—4
ಚಂದ್ರಮತಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

ಎಸ್. ಟಿ. ಎ., ಬೆಂಗಳೂರು ಸಿಟಿ.

ಪ್ರಸಿದ್ಧ ಕನ್ನಡ ಗ್ರಂಥಗಳು

1. ಜಪಾನರುನ್ನತಿಗೆ ಮೂಲಾಧಾರ:—ನವನಾಗರೀಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಅತ್ಯಾಶ್ಚರ್ಯಕರವಾದೀ ಕಥೆಯನ್ನು ಓದಬೇಕು. ಇಂತಹ ಸುಬೋಧಕವಾದ ಕಣ್ಮನಗಳಿಗಾನಂದವನ್ನುಂಟುಮಾಡುವ ಗ್ರಂಥವನ್ನು ಹಿಂದೆ ನೀವು ಯಾವಾಗಲೂ ನೋಡಿಲ್ಲ. ಮೈಸೂರು ಮಹಾರಾಜರಿಗೆ "ಡೆಡಿಕೇಟ್" ಮಾಡಲ್ಪಟ್ಟಿದೆ. ಮೈಸೂರು ಮಹಾರಾಜರ, ಯುವರಾಜರ ಮತ್ತು ಕಥೆಯ ಸಂದರ್ಭಗಳಿಗನುಕೂಲಿಸುವಂತೆ, ನೇತ್ರಾನಂದಕರವಾದ 12 "ಹಾಪ್‌ಟೋನ್" ಚಿತ್ರಗಳೂ ಇದರಲ್ಲಿವೆ. ಮೈಸೂರು ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಸ್ವಧರ್ಮ ರಕ್ಷಣೆಗಾಗಿ ರಾಜನೂ, ರಾಣಿಯೂ, ಸೇನಾಪತಿಯೂ, ಸತ್ಯಜೆಯಾದ ಕುರುಬನೂ, ಪುರೋಹಿತನೇ ಮುಂತಾದವರು ಪ್ರಾಣಾರ್ಪಣವಂ ಮಾಡುವ ಸಂದರ್ಭಗಳನ್ನೂ ಮತ್ತು ಅವರುಗಳೆಲ್ಲರೂ ದೇವರುಗಳಿಂದ ಬದುಕಿಸಲ್ಪಟ್ಟ ಬಳಿಕ ರಾಜನಿಗೂ, ಕನ್ಯೆಗೂ ವಿವಾಹ ಪಟ್ಟಾಭಿಷೇಕಗಳು ನಡೆವುದನ್ನೂ, ಅವುಗಳ ಕಣ್ಣೆದುರಿಗೆ ನಡೆದಂತೆ ತೋರಿಸುವ ಫೋಟೋಗ್ರಾಫಿನ ಮೇಲೆ ನಿರ್ಮಿಸಿದ ಸಹಜ ಚಿತ್ರಗಳನೂ ನೋಡಿ ಯಾರ ಹೃದಯವು ತಾನೇ ಕರಗದೇ ಇರವುದು? ಕ್ರಯ ವಿ. ಪಿ. ಪ್ಯಾಕಿಂಗ್ ಸಹಿತ:—ಚಿನ್ನದ ಗಿಲ್ಟಿನದು ರೂ. 2—4—0; ಅವ್ವಲ್ ಗ್ಲೇಜ್ ರೂ. 1—8—0; ದುಯ್ಯಂ 1—4—0.

2 ಧರ್ಮಪದ:—17 ಕೋಟಿ ಮುಸಲ್ಮಾನರಿಗೆ "ಖೊರಾನೂ" 32 ಕೋಟಿ ಹಿಂದೂಗಳಿಗೆ "ಭಗವದ್ಗೀತೆಯೂ" 40 ಕೋಟಿ ಕ್ರಿಸ್ತರಿಗೆ "ಬೈಬಲೂ" ಹೇಗೆ ಪೂಜ್ಯವಾದ ಗ್ರಂಥಗಳೋ, 55 ಕೋಟಿ ಬೌದ್ಧರಿಗೆ ಈ ಗ್ರಂಥವು ಹಾಗಿದೆ. ಸಾವಿರಾರು ಗ್ರಂಥಗಳಿಂದ ಪಡೆವ ಜ್ಞಾನವನ್ನು ಇದೊಂದರಿಂದ ಪಡೆಯಬಹುದು. ಮೈಸೂರು ಮಹಾರಾಜರ; ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಜಪಾನ್‌ನಲ್ಲಿರುವ ಬುದ್ಧ ವಿಗ್ರಹದ ನೇತ್ರಾನಂದಕರವಾದ ಭಾವಚಿತ್ರಗಳಿವೆ. ಕ್ರಯ ವಿ. ಪಿ. ಸಹಿತ ರೂ. 1.

2. ಬೌದ್ಧಾವತಾರ:—ಲೋಕೋದ್ಧಾರಕನಾದ "ಶ್ರೀ ಗೌತಮಬುದ್ಧ ಭಗವಂತನ" ಅತ್ಯಾಶ್ಚರ್ಯಕರವಾದ ಜನ್ಮ ಚರಿತ್ರೆ. ಕ್ರಯ ವಿ. ಪಿ. ಸಹಿತ 0-6-0.

ವಿಳಾಸ:— 1. ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು,
ಚಾಮರಾಜ ಪೇಟೆ, ಮೈಸೂರು.
2. ಶ್ರೀವಾಣೀವಿಲಾಸ ಬುಕ್ ಡಿಪೋ, ಮೈಸೂರು.
3. ದಿ. ಜನರಲ್ ಏಜನ್ಸಿ, ಮೈಸೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತಕಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ಅಚ್ಚಾಗುತ್ತಲಿದೆ! ತ್ವರೆ ಪಡಿರಿ!! ಅಚ್ಚಾಗುತ್ತಲಿದೆ!!!

ರಮಾಮಾಧವ

ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸಲೇಟರ್ ಮ॥ ರಾ॥ ಬಿ. ರಾಮರಾವ್, ಎಂ. ಎ. ಎಲ್. ಎಲ್. ಬಿ.

ಇವರಿಂದ ಹನ್ನೆರಡು ವರುಷಕ್ಕೆ ಹಿಂದೆ ಕನ್ನಡಿಸಲ್ಪಟ್ಟು "ಸುವಾಸಿನೀ" ಮಾಸ ಪತ್ರಿಕೆಯಲ್ಲಿ ಅಚ್ಚಾಗಿದ್ದ ಈ ಮನೋಹರವಾದ ಕಾದಂಬರಿಯು ಅವರಿಂದಲೇ ಪರಿಶೋಧಿಸಲ್ಪಟ್ಟು ಪರಿವರ್ತಕರ ಭಾವಚಿತ್ರದೊಡನೆ ಪುಸ್ತಕರೂಪವಾಗಿ ಅಚ್ಚಾಗುತ್ತಲಿದೆ. ಇದೇ ತಿಂಗಳಲ್ಲಿ ಮಾರಾಟಕ್ಕೆ ಸಿದ್ಧವಾಗುವುದು. ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದುದಾಗಿಯೂ ಸ್ತ್ರೀಪುರುಷರೂ ಬಾಲ್ಯ ವಯಸ್ಸಿನವರೂ ಓದುವುದಕ್ಕೆ ತಕ್ಕುದಾಗಿಯೂ ಇದ್ದು, ಸಂಸಾರಿಕರು ಸುಖಿಗಳಾಗಿ ಬಾಳುವ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತಲಿದೆ. ಬೆಲೆ ಪ್ರತಿಯೊಂದಕ್ಕೆ 6 ಆಣೆ. ಅಂಚೆಯ ಹಾಸಲು ಬೇರೆ.

☞ ಎಪ್ರಿಲ್ ಅಂತ್ಯದೊಳಗಾಗಿ ತಮ್ಮ ಹೆಸರುಗಳನ್ನು ರಿಜಿಸ್ಟರು ಮಾಡುವ ಗ್ರಾಹಕರಿಗೆ ಪ್ರತಿಯೊಂದಕ್ಕೆ 4 ಆಣೆಯಂತೆ ದೊರೆಯುವುದು.

ಪುಸ್ತಕಗಳು ದೊರೆಯುವ ವಿಳಾಸ:—

ಮ್ಯಾನೇಜರ್,
ಶಾರದಾ ಪ್ರೆಸ್, ಮಂಗಳೂರು, ದ. ಕ.

ಅಚ್ಚಾಗುತ್ತಲಿರುವುದು! ಅಚ್ಚಾಗುತ್ತಲಿರುವುದು!!

ಸಾವಿತ್ರಿ ನಾಟಕ.

ಕೊಂಕಣಿ ಭಾಷೆಯಲ್ಲಿ.

ರಾ. ಕುಂಬಳೆ ನರಸಿಂಹ ಲಕ್ಷ್ಮಣ ನ್ಯಾಕರಿಂದ ವಿರಚಿಸಲ್ಪಟ್ಟದ್ದು. ಕ್ರಯ ಆಣೆ 4 ಮಾತ್ರ.

ಚಂದ್ರಹಾಸ (ಕನ್ನಡ ನಾಟಕ.)

ರಾ. ಎಮ್. ಎನ್. ಕಾಮತರವರಿಂದ ವಿರಚಿತವಾದ್ದು.

ಪ್ರಥಮ ಮುದ್ರಣದ ಸಾವಿರ ಪ್ರತಿಗಳಲ್ಲಿ ೫೫೦ ಪ್ರತಿಗಳಿಗೆ ಇದು ಮೊದಲೆ ಆರ್ಡರುಗಳು ರಿಜಿಸ್ಟರಾಗಿದೆ.

ಕ್ರಯ ಆಣೆ 4 ಮಾತ್ರ.

ಆನಂದವು! ನೂತನ ಸಂವತ್ಸರದ ಆನಂದವು!

ರಥಬೀದಿಯಲ್ಲಿ ಹೂವಿನ ಮಾರ್ಕೇಟಿನ ಸಮೀಪ

ಶುಮಾರು ೨೦ ವರುಷಗಳ ಹಿಂದೆ

ಎಸ್. ನಾಗಪ್ಪನಾಯಕ್ ಮತ್ತು ಕಂಪೆನಿ ಎಂದು ಸ್ಥಾಪಿಸಲ್ಪಟ್ಟು

ವಿಲಾಯತಿ ಔಷಧಿಗಳು, ಪರಿಮಳದ್ರವಗಳು, ಚಾ ಕೋಕೋವಾ, ಬಿಸ್ಕೂಟು,

ಕೋರ್ಟು ಫೋರ್ಮುಗಳು ಇತ್ಯಾದಿಗಳನ್ನು ಮಾರುತ್ತಲಿದ್ದು

ಇತ್ತಲಾಗೆ ಕಳೆದ ೧೨ ವರುಷಗಳಿಂದ

ಮಂಗಳೂರುಟ್ರೇಡಿಂಗ್ಎಸೋಶಿಯೇಶನ್

ಎಂಬುವ

ಹೆಸರಿನಿಂದ ಇದೇ ವ್ಯಾಪಾರವನ್ನು ನಡಿಸುವ „ಕೆಮಿಷ್ಟ ಶೋಪ್" ಇತ್ಯಾದಿ,

ಈ ಮೊದಲಿನ ಅಂಗಡಿಯ ಹತ್ತಿರವೇ ಎದುರು ಸಾಲಿನಲ್ಲಿ ಕಟ್ಟಿಸಲ್ಪಟ್ಟ

ನೂತನವಾದ ಕಟ್ಟೋಣಕ್ಕೆ ವರ್ಯ್ಯೋಣಾಗಿದೆ

ಎಂಬ

ಆನಂದವನ್ನು ಸರ್ವರೂ ತಿಳಿಯಬೇಕಾಗಿದೆ.

Printed & Published by V. S. Kamath at the Mangalore Trading Association's Sharada Press, Mangalore.

Registered M. No.498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ VIII ಮಂಗಳೂರು ತಾ. 24ನೇ ಶುಕ್ರವಾರ ಎಪ್ರಿಲ್ 1914. ಸಂಚಿಕೆ 17

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.

ಕೇಶವರ್ಧಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.

ಅಮೃತಾಂಜನ

ತಲೆನೋವು, ವಾತ, ಎದೆ ನೋವು,

ಸಂಧಿ ವಾತ, ಶಿರೋಭಾರ, ಸೊಂಟದ ನೋವು, ಕಫ,

ಅರ್ಧಾಂಗವಾಯು, ಹಲ್ಲುನೋವು, ಘಾಯ,

ಶೀತ, ಕೆಮ್ಮು ಉರಿ, ಮೊದಲಾದ

AMRUTANJAN

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನು ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು **0-8-0** ಡಜನ್ ಒಂದಕ್ಕೆ **5-4-0** ವಿ. ಪಿ. ಪ್ರತ್ಯೇಕ

ಗಿರಾಕಿಗಳು ದಯಮಾಡಿ ಎಲ್ಲಾ ಔಷಧಗಳಿಗೆ ನಮ್ಮ ಮುಂಬಾಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ವಿ. ಪಿ. ಮೂಲಕ ಔಷಧಗಳನ್ನು ಈಗ ಸದ್ಯ ರವಾನಿಸುವ ಏರ್ಪಾಡು ಮಾಡಲಿಲ್ಲ.

ಅಮೃತಾಂಜನ ಡಿಪೋ,

109 ಫ್ರೇಯರ್ ರೋಡ,
ಮುಂಬಯಿ.

೨ ಜಹಂಗೀರ್ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

Madeena Watch Co., Madras

ದಿ. ನ್ಯೂ ಪೆಂಡುಲಂ ವಾಚ್. Rs, 3—15—0.

ಇದು ಒಂದು ಆಶ್ಚರ್ಯಕರವಾದ ಘಡಿಯಾರ.

Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಪಿಸಿಸಿನಂತೆ ಮೇಜಿನ ಮೇಲೂ ನಿಂದಿರಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೊಪ್ ವಾಚು ಕ್ರಯ	,,	1--12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2--12—0
ಸೆಲ್ಫ್ ಕ್ಲೊಸಿಕ್		3--15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1--13—0
ಚಿಕ್ಕ ಸೈಜು ಲೇಡಿವಾಚ್		2–15—0

ಕಾರೇಜ್ ಹಾರ್ಮೋನಿಯಂ ರೂ. 20=0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಫಿಡಲು ರೂ. 8—0—0.

ಅಡ್ರಸ್:—ಮೆಡಿನಾವಾಚ್ ಕಂಪೆನಿ,
ನಂ. ೨೧ ಆನೆಕಾರಕೋರ್ಣ ಬೀದಿ, ಜಿ. ಟಿ. ಮದ್ರಾಸು.

THE BOMBAY LIFE ASSURANCE CO. LTD.

(Established 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

„There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co. Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A., F. I. A., (London.)

Medical Referee:—Dr. R. Row, M. D. D. Sc. London.)

Manager:-Mr. K. S. Aiyar, Esq. B. A., F. S. A. A. (London). Justice of the Peace, The Honorary Presidency Magistrate and fellow of the Bombay University.

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಬಗ್ಯೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಬಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೋಲಿಕ್ ಮಾರ್ಸ್‌ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಎಕ್ಚುಯುರಿ:—ಮೆ॥ ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ ಡಿ. ಎಸ್. ಸಿ. (ಲಂಡನ್).

ಮ್ಯಾನೇಜರ್:—ರಾ॥ ಕೆ. ಎಸ್. ಅಯ್ಯರ್ ಬಿ. ಎ. ಎಫ್. ಎಸ್. ಎ. ಎ (ಲಂಡನ್.) ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟ್ ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಉಡ್ಪಿ.

ಯುವ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ಧರ ಎಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನ್ಥೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಆತನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನು ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:—

ಯುವ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಹಿಂದೂಸ್ಥಾನದ ಜೀವವಿಮೇ ಸಂಘುಗಳಲ್ಲಿ
ಅತಿ ಭದ್ರವಾದ್ದನ್ನು ಸೂಚಿಸುವಂಥಾದ್ದು:—

ಯುನ್ಯಾಟೆಡ್ ಎಸ್ಯುರೆನ್ಸ್ ಎಂಬುವ ವಿಮೆ ಸಂಘವು.

ವಿಮೆ ಉತ್ತರಾಯಿಸುವ ಹಲವು ನೂತನ ವಿಧಾನಗಳಿಂದ ಕೂಡಿರುತ್ತದೆ. ವಿವಾಹ ಮತ್ತು ಜೀವವಿಮೆಗಳ ಸಂಘುಗಳಲ್ಲಿ ಈ ತನಕ ಇಲ್ಲದ-ಅಗತ್ಯವಾಗಿ ಬೇಕಾಗಿರುವ ವಿಧಾನಗಳು ಇದರಲ್ಲಿರುವವು.

೬೫ ವರುಷಗಳ ಪ್ರಾಯದವರೂ ಸಹ ವಿಮೆ ಉತ್ತರಾಯಿಸುವ ವಿಶೇಷ ಕ್ರಮ. ೩ ತಿಂಗಳನಂತರ ವಿಮೆ ಪತ್ರವು ಸಂಪೂರ್ಣತ್ವವನ್ನು ಹೊಂದಬಹುದು.

ವಿವಾಹ ವಿಮೆಗಳಲ್ಲಿ ೧೮ ತಿಂಗಳುಗಳ ನಂತರ ವಿಮೆ ಕಂತುಗಳನ್ನು ತೆರಬೇಕೆಂತಿಲ್ಲ. ೩ ತಿಂಗಳ ನಂತರ ಈ ಸಂಬಂಧದ ವಿಮೆ ಪತ್ರವು ಸಹ ಸಂಪೂರ್ಣವಾಗಬಹುದು.

ಮೇಲೆ ಕಾಣಿಸಿದ ಪ್ರಯೋಜನಗಳ ಹೊರತು ವಿವಾಹ ಉಪನಯನ ಮತ್ತು ಜೀವವಿಮೆಗಳ ಸಾಮಾನ್ಯ ಮತ್ತು ಎನ್ಡೋವ್‌ಮೆಂಟ್ ಕ್ರಮಗಳಿಂದ ವಿಮೆದಾರರು ತೆತ್ತ ದುಬಾರೆ ಮೊಬಲಗು ದೊರಕುವ ಸಂಭವವಿರುವವು. ಸಂಘದ ಭದ್ರತೆಗೆ ತಕ್ಕುದಾಗಿ ಸುಲಭವಾದ ವಿಮೆ ದರಗಳು.

ಒಳ್ಳೇ ಕಮಿಶನ್ ಮತ್ತು ಸಂಬಳದ ಮೇಲೆ ಏಜಂಟರುಗಳು ಬೇಕಾಗಿರುವರು.

ಈ ಸಂಘದಿಂದ ವಿಮೆ ಹಣ ಪಡದವರ ಹೆಸರುಗಳ ಪಟ್ಟಿಗೂ ಏಜನ್ಸಿಗಳ ಶರ್ತಕ್ಕೂ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

B. S. Nayak & Co., ಬಿ. ಎಸ್. ನಾಯಕ್ ಎಂಡ್ ಕೊ,
Chief Agents, ಚೀಫ್ ಏಜಂಟರು,
Udipi, S. C. ಉಡುಪಿ ದ. ಕ.

CANNADA INDIAN PENAL CODE.

ಕನ್ನಡ ಇಂಡಿಯನ್ ಪೆನಲ್ ಕೋಡ್.

ಇದರಿಂದ ಮೈಸೂರ್, ಮದ್ರಾಸ್ ಬೊಂಬಾಯಿ ಜಿಲ್ಲಾ
ಕನ್ನಡ ಭಾಷಾ ವಾಚಕಮಹಾಶಯರಿಗೆ
ತಿಳಿಯಪಡಿಸುವದೇನಂದರೆ:—

ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪುಟವಾದ ಅಕ್ಷರಗಳಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಕಳಾನಿಧಿ ಮುದ್ರಾಕ್ಷರಶಾಲೆಯೊಳ್ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲಿಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡೆಸಬೇಕಾದ ಆಚರಣೆಗಳಂದರೆ:—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ? ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ? ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜೀಯಾಗಬಹುದೇ? ರಾಜೀಯಾಗತಕ್ಕದ್ದಲ್ಲವೇ? ಎಂಬ ತಪಶೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ, ಇತರ ಸಮಸ್ತ ಕೈಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು.

ತಾ॥ ಕ॥ ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕ್ರಮಪ್ರವೇಶ್ಯ ಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆ ಎಳೆಯುವುದು, ಆಸಾಮಿಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಯೆ ಅಕ್ರಮ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವುದು.

ಕನ್ನಡದಲ್ಲಿ ಇದುವರಿಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು. ಕ್ರಯ ಗ್ಲೇಜ್ ೨—೮—೦. ರಫ್ ೨—೦—೦. ಟಪ್ಪಾಲು ಚಾರ್ಜು ೦—೪—೦. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಪ್ರೊಪ್ರೈಟರ್ ಕಳಾನಿಧಿ ಪ್ರೆಸ್, ಚಿಕ್ಕಪೇಟೆ ಬೆಂಗಳೂರುಸಿಟಿ.

ಸ್ವಯಂ ವೈದ್ಯರಾಗಿರುವದು ಹೇಗೆ?

ಬಹಳ ಕಾಲ ಬದುಕಲು ಹಠವಾದ ಪೋಟಾಪೋಟಿಯ ಈಗಿನ ಕಾಲದಲ್ಲಿ ವೈದ್ಯರ ಕಾಯಿದೆಯ ಪ್ರತಿಯೊಬ್ಬ ಗಂಡಸಿಗೂ ಮತ್ತು ಹೆಂಗಸಿಗೂ ವಿಶೇಷ ಖರ್ಚಿಗೆ ಅವಕಾಶವಾಗಿರುವದು. ಹೀಗೆ ಹಾಳುಮಾಡಿಕೊಳ್ಳುವ ಖರ್ಚಿನಿಂದ ನೀವು ಕಾಪಾಡಿಕೊಳ್ಳಬೇಕಾದರೆ

ವೈದ್ಯವಿದ್ಯ

ವೆಂಬ ಪುಸ್ತಕವನ್ನು ತರಿಸಿಕೊಂಡು ಓದಿರಿ. ಇದರಿಂದ ನಿಮ್ಮಷ್ಟಕ್ಕೆ ನೀವೇ ವೈದ್ಯರಾಗಬಹುದು. ಟಪ್ಪಾಲು ಹಾಸಲು ಸಹ ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವದು. ಈ ದಿನವೇ ಒಂದು ಕಾರ್ಡು ಬರೆಯಿರಿ.

ರಾಜವೈದ್ಯ ನಾರಾಯಣಜೀ ಕೇಶವಜೀ
177 ಜೈನಾ ಬಜಾರುರೋಡು, ಮದರಾಸು.

MUSICAL MART

Kavi & Sons,

MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್,
ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರೆಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೧ ವಿಷಯಗಳು ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರ್ಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ.

ಬಹುಮಾನ! ಬಹುಮಾನ!

ನಮ್ಮ ಬಿಸ್ಕುಟುಗಳು ದೇಶೀಯ ರಾಜರುಗಳಿಂದ ಪ್ರೋತ್ಸಾಹಿಸಲ್ಪಟ್ಟು ಕನ್ನಾನ್ನೂರ, ವಿಶಾಖಪಟ್ಟಣ, ಮೈಸೂರು, ನಾಗಪುರ, ಲಾಹೋರು ಮೊದಲಾನ ಊರುಗಳಲ್ಲಿ ಆದ ವಸ್ತು ಪ್ರದರ್ಶನದಲ್ಲಿ ಚಿನ್ನ ಮತ್ತು ಬೆಳ್ಳಿಯ ಪದಕಗಳನ್ನು ಪಡೆದಿವೆ. ವಿಲಾಯತಿಯ ಬಿಸ್ಕುಟುಗಳಿಗೂ ನಮ್ಮ ಬಿಸ್ಕುಟುಗಳಿಗೂ ಏನೇನೂ ಭೇದವಿರದು. ವಿವಿಧ ನಮೂನೆಯ ಕೇಕುಗಳು ಯಾವಾಗಲೂ ನಮ್ಮಲ್ಲಿ ತಯಾರಿವೆ.

ಎಲ್ಲಾ ಜಿಲ್ಲೆಗಳಲ್ಲಿಯೂ ನಮಗೆ ಬ್ರಾಹ್ಮಣ ಏಜಂಟರಿರುವರು.

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಹಂಪನಕಟ್ಟಾ, ಮಂಗಳೂರು.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರೆ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇವು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟಿಯಲ್ಲಿ ೫೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧–೮–೦.

ಆರ್. ಮಾರ್ಟಿನ್ಸರ ಮೆಜಿಕ್ ಸ್ಪೆಸಿಫಿಕ್.

ಮೇಹ ಮೊದಲಾದ ರೋಗಗಳು ಎರಡೇ ಬಾಟ್ಲಿ ಸ್ಪೆಸಿಫಿಕಿನಿಂದ ಗುಣವಾಗುವಾಗ ನೀವು ನಿಮ್ಮ ಹಣವನ್ನು ಡಾಕ್ಟರರ ಚಿಕಿತ್ಸೆಗೆ ವೆಚ್ಚಮಾಡುವುದೇಕೆ? ಈ ಔಷಧಿಯನ್ನು ಒಂದೇ ಸಾರಿ ಕುಡಿಯುವ ಮಾತ್ರದಿಂದ ಮೂತ್ರ ಕೋಶದ ಉರಿಯು ನಿಂತುಹೋಗುವುದು. ಪುನಃ ತಲೆದೋರುವ ಸಂಭವವೇ ಇಲ್ಲ. ಈ ಔಷಧಿಯನ್ನು ತಕ್ಕೊಳ್ಳುವುದರಿಂದ ಯಾವದೊಂದು ಕೆಡಕು ಇಲ್ಲವೆಂಬುದು ನಿಶ್ಚಯವು. ಕ್ರಯ ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಮೆಜಿಕ್ ಮಾತ್ರೆಗಳು.

ಸ್ನಾಯುಗಳ ಬಲಹೀನತೆ, ಧಾತು ಬಲಹೀನತೆ, ಮೆದುಳಿನ ಅಶಕ್ತಿ, ಇದರಿಂದ ಹುಟ್ಟುವ ವಿವಿಧ ರೋಗಗಳು ಅಂದರೆ ನಿದ್ರೆ ಬಾರದಿರುವುದು, ಕನಸು, ಕೈ ನಡುಗುವುದು, ಕಣ್ಣಿನ ಮೇಲೆ ಸಣ್ಣ ಸಣ್ಣ ಚುಕ್ಕೆಗಳು, ಚಿಂತೆ, ಮಾನಸಿಕ ಶಕ್ತಿಯ ಕುಂದು, ಮಲಬದ್ಧತೆ, ಮೊದಲಾದ ಸರ್ವ ವಿಧದ ರೋಗಗಳು ಗುಣಹೊಂದುವವು. ಎರಡು ಬಾಟ್ಲಿ ಕುಡಿಯುವುದರಿಂದ ಅತಿರೇಕ ಬಲವು ಬರುವುದು. ೩೦ ಮಾತ್ರೆಗಳುಳ್ಳ ಬಾಟ್ಲಿ ೧ಕ್ಕೆ ರೂ. ೧—೦—೦. ವಿ. ಪಿ. ಚಾರ್ಜು ೧—೩ ಬಾಟ್ಲಿ ವರೇಗೆ ೫ ಆಣೆ ಹೆಚ್ಚಿಗೆ. ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ. **R. D. Ketely & Co.**
ನಂಬ್ರ ಡಿ. ಫ್ರೇಯರರೋಡ್, ಮುಂಬಯಿ. *No. D. Frere Road,*
Near Wright & Co. Fort Bombay.

ಮುಳಿಯಿಲ್‌ರವರ ದಿವ್ಯೌಷಧಗಳು.

1. ಕೊಲೇರಾ ಮಾತ್ರೆ—ಇದನ್ನು ಜೇನಲ್ಲಿ ಕೊಡುವುದರಿಂದ ಉಬಾಲು ಜುಲಾಬು ಗುಣಪಡುವುದು. ಡಜನಿಗೆ ರೂ. 0—6—0.
2. ಕೊಲೇರಾ ಚೂರ್ಣ—ಈ ಚೂರ್ಣವನ್ನು ಜೇನಿನಲ್ಲಿ ಮಿಶ್ರಮಾಡಿ ಕೊಡುವ ವರೆಗೆ ರೋಗಿಯು ಬದುಕಿದ್ದರೆ ನಿಶ್ಚಯವಾಗಿ ಗುಣಪಡುವನು. ಎಷ್ಟು ಕಠಿಣತರವಾಗಿದ್ದರೂ 2 ಯಾ 3 ಸಾರಿಯ ಔಷಧಿ ಗುಣಪಡಿಸುವುದು. ಡಜನ್ ಪೊಟ್ಟಣಗಳಿಗೆ 0—12—0.
3. ಕೊಲೇರಾ ಮಿಕ್ಸ್ಚರ್—ಸ್ಥೂಲ ಶರೀರದ ವ ಶೀತ ಶರೀರದ ಮೇಲ್ಜಾತಿಯ ವ ಇತರ ಜಾತಿಯ ಹೆಂಗಸರಿಗೆ ಇದು ಅತಿ ಪ್ರಯೋಜನಕರವೆ. 2 ಔನ್ಸಿಗೆ ರೂ. 1—0—0.
4. ಚಂದ್ರೋದಯ ದ್ರಾವಕ—ಎಲ್ಲಾ ತರದ ಅಜೀರ್ಣಕ್ಕೆ ಸಕ್ಕರೆಯಲ್ಲಿ ಉಪಯೋಗಿಸುವುದು. 1 ಔನ್ಸಿಗೆ 1—4—0.

While Cholera was prevailing in Muliyar etc. last year, I have tried the Cholera Pills prepared by Messrs Muliyil and Sons. I found them efficacious. I hope the public will appreciate it as it is cheap and gives speedy relief. (sd) A DEVAPPA PUNJA B.A.B.L.
Kasaragod, 18—3—13. Tahsildar.

5. ಪಲ್ಲೆ ಏಕ ಮಾತ್ರೆ. 6 ವಯಸ್ಸಿನ ಕೆಳಗಿನ ಮಕ್ಕಳಿಗಿರುವ ನೇವಸಕ್ಕೆ ಅತ್ಯುತ್ತಮ ಡಜನಿಗೆ ರೂ. 0—6—0.
6. ಸಿಂಹತ್ಯಾದಿ ಮಾತ್ರೆ. ಎಲ್ಲಾ ತರದ ಕೆಮ್ಮಿಗೆ ಜೇನು ವ ಆಡುಸೋಗೆ ರಸದಲ್ಲಿ ಸೇವಿಸುವುದು. ಡಜನಿಗೆ 0—4—0.

ನಾನು ಮಕ್ಕಳ ಶೀತ ವ ಕೆಮ್ಮಿಗೆ ಹೋಮ್ಯೊಪಥಿ ಔಷಧಿಗಳನ್ನು ಒಂದು ತಿಂಗಳು ಪ್ರಯೋಗ ಮಾಡಿದಾಗ್ಯೂ ಪ್ರಯೋಜನ ಕಂಡುಬಾರದೆ ಈ ಗುಳಿಗೆಗಳ ಪೈಕಿ ಸಿಂಹತ್ಯಾದಿ ಮತ್ತು ಪಲ್ಲೆ ಏಕ ಮಾತ್ರೆಯನ್ನು ಮೂರೇ ದಿನ ಪ್ರಯೋಗಿಸಿದ್ದಲ್ಲಿ ಫಕ್ಕನೇ ಗುಣವಾಯಿತು. ಸಣ್ಣ ಮಕ್ಕಳ ಕೆಮ್ಮು ಕಫಾದಿಗಳಿಂದ ಕಷ್ಟ ತೊಂದರೆ ಪಡುವ ಎಲ್ಲಾ ತಾಯಂದಿರಿಗೆ ಇದನ್ನು ಶಿಫಾರಸು ಮಾಡುತ್ತೇನೆ.
Karkal 14th June 13. (sd,) P. SOANS, Pastor.

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.
Muliyil & Sons, *Kasargod, S. C.*

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 24ನೇ ಎಪ್ರಿಲ್ 1914

ರಾಜಕೀಯ ಚಳವಳವು.

ಪ್ರಜಾ ನಾಯಕರು ಪ್ರಜಾ ಜನಗಳ ವಿದ್ಯಮಾನಗಳನ್ನು ಪರಿಶೋಧಿಸಿಕೊಂಡು ರಾಜ್ಯದಾಡಳಿತೆಯ ವಿಚಾರವನ್ನು ಯೋಚಿಸಿಕೊಳ್ಳುತ್ತ ಜನರ ಕ್ಷೇಮಾಭಿವೃದ್ಧಿಗೆ ಬೇಕಾದಂತೆ ರಾಜಕೀಯ ಚಳವಳವನ್ನು ಯಾವ ವಿಧಾನದಲ್ಲಿ ನಡಿಸುತ್ತಿರಬೇಕೆಂತ ಮಹಾಸಭೆಗಳಲ್ಲಿ ವ್ಯಕ್ತಗೊಳಿಸುವುದುಂಟು. ಹೀಗೆ ಪ್ರಜಾನಾಯಕರಿಂದ ವ್ಯಕ್ತಗೊಳಿಸಲ್ಪಟ್ಟ ವಿಚಾರಗಳು ಪ್ರಜಾ ಸಾಮಾನ್ಯರಿಂದ ಪರ್ಯಾಲೋಚಿಸಲ್ಪಡಬೇಕಾಗಿವೆ. ಬಂಗಾಳದಲ್ಲಿ ಇತ್ತಲಾಗೆ ಕೂಡಿದ ಪ್ರಾಂತಿಕ ಮಹಾಸಭೆಯಲ್ಲಿ ಸಭಿಕರೆಲ್ಲರನ್ನು ವಿಶೇಷ ಆಸಕ್ತಿಯಿಂದ ಹುರಿದುಂಬಿಸಿದ ಸಭಾಧ್ಯಕ್ಷರ ಭಾಷಣದಲ್ಲಿ ಬಂಗಾಳದ ಹೊರಪ್ರಾಂತ್ಯದ ಭಾರತೀಯರು ಸಹ ಲಕ್ಷ್ಯಕ್ಕೆ ತಂದುಕೊಳ್ಳಬೇಕಾದಂಥಾ ಹಲವು ಅಂಶಗಳಿರುವವು. ನಮ್ಮ ಆಕಾಂಕ್ಷೆಗಳೇನು, ಇವುಗಳ ನೆರವೇರುವಿಕೆಗೆ ನಮಗಿರುವ ಕಷ್ಟಗಳು ಯಾವವು, ನಮ್ಮಲ್ಲಿ ನೂತನವಾಗಿ ಮೊಳೆತಿರುವಂಥಾ ಭಾವನೆ ಕಲ್ಪನೆಗಳಿಗೆ ತಕ್ಕಂತೆ ನಮ್ಮ ಸ್ಥಿತಿಯು ಹೇಗೆ ಮಾರ್ಪು ಹೊಂದುತ್ತಿರುವುದು, ಸರಕಾರದವರ ವರ್ತನೆಯು ಪ್ರಜಾಜನರ ಈ ನೂತನ ಸ್ಥಿತಿಗೆ ಎಷ್ಟರಮಟ್ಟಿಗೆ ಅನುಕೂಲವಾಗಿರುವುದು, ನಮ್ಮ ಆಕಾಂಕ್ಷೆಗಳೆಲ್ಲವುಗಳ ಸಿದ್ಧಿಗೆ ಸ್ವಪ್ರಯತ್ನಗಳನ್ನೇ ನಾವು ಹೇಗೆ ಅವಲಂಬಿಸಿಕೊಂಡಿರಬೇಕು—ಇಂಥಾ ಸ್ವಾವಲಂಬನೆಗೆ ತಕ್ಕದಾದಂಥಾ ರಾಜಕೀಯ ಚಳವಳವೂ ಇದನ್ನು ನಡಿಸತಕ್ಕ ಬಗೆಯು ಹೇಗೆಂಬದೂ—ಈ ಎಲ್ಲಾ ವಿಷಯಗಳನ್ನು ವಿವರಿಸಿ ವಿದ್ಯಾವಂತ ಮಹಾಜನರ ಕರ್ತವ್ಯ ಏನೆಂಬುದನ್ನು ಚಕ್ರವರ್ತಿಯವರು ಸೂಚಿಸಿರುತ್ತಾರೆ. ಸರಕಾರದವರೊಂದಿಗೆ ಸಹಕಾರ—ಈ ವಿಷಯ ವ್ಯೋಮಕೇಶರು ಅಪ್ಪಣೆಕೊಡಿಸಿದ ಮಾತುಗಳನ್ನು ಬಂಗಾಳ ಪ್ರಾಂತ್ಯದ ಸರಕಾರವು ಮಾತ್ರವಲ್ಲ, ಇತರ ಸಂಸ್ಥಾನದ ಸರಕಾರದವರೂ ಸಹ ಲಕ್ಷ್ಯಕ್ಕೆ ತಂದುಕೊಳ್ಳುವುದು ಅಗತ್ಯವಾಗಿದೆ. ಪ್ರಜಾಪ್ರತಿನಿಧಿಗಳು ನ್ಯಾಯವಿಧಾಯಕ ಸಭೆಗಳಲ್ಲಿ ಸರಕಾರದವರಿಗೆ ಸಹಕಾರ ಭಾವದಿಂದ ಅನೇಕ ಸೂಚನೆಗಳನ್ನು ಕೊಡುವರು. ಆದರೆ ಈ ಸೂಚನೆಗಳಲ್ಲೊಂದಾದರೂ ಸ್ವೀಕರಿಸಲ್ಪಡುವುದು ಅಪರೂಪ. ಪ್ರಜೆಗಳ ಸಹಕಾರವನ್ನು ಸ್ವೀಕರಿಸುವ ಯೋಚನೆಯು ಸರಕಾರದವರಿಗಿರದೆಂದು ಈ ರೀತಿ ವ್ಯೋಮಕೇಶರು ವಾದಿಸಿರುವರು. ನ್ಯಾಯವಿಧಾಯಕ ಸಭೆಗಳಲ್ಲಿ ಇಂಥಾ ತಿರಸ್ಕಾರ ಭಾವವನ್ನೇ ಸರಕಾರದವರು ತೋರಿಸಿದ್ದಲ್ಲಿ ಈ ಸಭೆಗಳ ಗೊಡವೆಗೆ ಜನರು ಹೋಗದೆ ಅವುಗಳಲ್ಲಿರುವ ಅಭಿರುಚಿಯು ಕಡಮೆಯಾಗಿ ಶಾಲಾವಿದ್ಯಾರ್ಥಿಗಳ 'ಡಿಬೇಟಿಂಗ್ ಸೊಸ್ಯಾಟಿಸ್' ಎಂಬ ಏನೂ ವರ್ಚಸ್ವವಿಲ್ಲದ ವಿನೋದ ಸಭೆಗಳ ಪರಿಣಾಮವನ್ನು ನ್ಯಾಯನಿರ್ಮಾಣ ಸಭೆಗಳು ಹೊಂದುವವೆಂಬುದಾಗಿ ಚಕ್ರವರ್ತಿಯವರು ಸೂಚಿಸಿರುತ್ತಾರೆ.

ನಮ್ಮ ಆಕಾಂಕ್ಷೆಗಳೇನು? ನಮಗೆ ಬೇಕಾದದ್ದು ಏನು? ಸಾಮಾನ್ಯರಿಗೆ ಸಹ ಮಂದಟ್ಟಾಗುವ ರೀತಿಯಲ್ಲಿ ವ್ಯೋಮಕೇಶರವರು ಇವನ್ನು ವಿವರಿಸಿರುವರು. ಆ ಕಾನೂನು ಸಲ್ಲದು, ಈ ಕಾನೂನು ಸಲ್ಲದು—ಇಂಥಿಂಥಾ ಅಧಿಕಾರ ವಿಭಜನೆಯಾಗಬೇಕು—ಈ ಏರ್ಪಾಡು ಅಗತ್ಯ ಬೇಕು—ಎಂದು ವ್ಯೋಮಕೇಶರು ತಮ್ಮ ಭಾಷಣ ಪ್ರಾರಂಭದಲ್ಲಿ ಹೇಳಿರುವುದಿಲ್ಲ. ಸಾಮಾನ್ಯರಿಂದ ಅರಿಯಲು ಕಷ್ಟಸಾಧ್ಯವಾದ ಸರಕಾರದ ಅತಿ ದೊಡ್ಡದಾದ ಸಂಸ್ಥಾವ್ಯೂಹದ ಕೊರತೆಗಳನ್ನು ವಿವರಿಸದೆ ನಮಗೆ ಬೇಕಾದದ್ದು ಏನೆಂದು ಹೇಳಿರುವರು. ಅನ್ನವಸ್ತ್ರ, ಉಳಕೊಳ್ಳಲು ತಕ್ಕ ಆಶ್ರಯ, ಮತ್ತು ಜೀವನಕ್ಕೆ ಅಗತ್ಯವಾಗಿ ಬೇಕಾಗಿರುವ ಆರೋಗ್ಯ, ಸ್ವಚ್ಛವಾದ ನೀರು ಮೊದಲಾದವುಗಳು ನಮಗೆ ಬೇಕಾದವುಗಳಾಗಿವೆ. ಇದರ ನಂತರ ವಿದ್ಯಾಭ್ಯಾಸ ಮೊದಲಾದ ಇತರ ಸನ್ನಾಹಗಳು ಮತ್ತು ಸುವ್ಯವಸ್ಥೆಯು ನಮಗೆ ಬೇಕಾಗಿವೆ. ಅಂದರೆ ಭಾರತೀಯರನ್ನು ಸುಖಸಂಪತ್ತಿನ ಜನಾಂಗವಾಗಿ ಮಾಡುವುದೇ ನಮ್ಮ ಆಕಾಂಕ್ಷೆಯಾಗಿರುವುದು. ಇದು ಹೇಗೆ ಸಾಧ್ಯ?

ಈ ಪ್ರಶ್ನೆಯ ವಿಚಾರದಲ್ಲಿ ವ್ಯೋಮಕೇಶರು ಪ್ರಜೆಗಳ ಪ್ರಕೃತ ಸ್ಥಿತಿಯನ್ನು ಪರಿಶೀಲಿಸಿರುವರು. ಬ್ರಿಟಿಷ್ ಆಣ್ಮರ ಕೈಕೆಳಗೆ ದೊರಕಿರುವ ಶಾಂತತೆಯ ಪ್ರಯೋಜನವನ್ನೂ ವಿದ್ಯಾಪ್ರಯೋಜನವನ್ನೂ ಇತರ ಪ್ರಯೋಜನಗಳನ್ನೂ ಪಡದಿರುವ ವಿದ್ಯಾವಂತರಲ್ಲಿಯೂ ಇತರರಲ್ಲಿಯೂ ರಾಷ್ಟ್ರೀಯ ಐಕ್ಯದ ಭಾವವು ವಿಕಸಿತವಾಗಿರುವುದು. ಇಂಥಾ ಆಣ್ಮರ ಕೈಕೆಳಗೆ ತಮ್ಮ ಇನ್ನು ಮುಂದಿನ ಉದ್ಧರಣೆಯನ್ನು ಸಾಧಿಸಬೇಕೆಂಬ ಸಾಧನೆಗಳು ಅಲ್ಲಲ್ಲಿ ತೋರುತ್ತಲಿವೆ. ಆಯಾ ಜಾತಿಯವರು ಜಾತಿಗಳ ಸಮಿತಿ ಪರಿಷದ ಮೊದಲಾದವುಗಳ ಮೂಲಕ ತಂತಮ್ಮ ಅಭಿವೃದ್ಧಿಯನ್ನು ಸಾಧಿಸಲು ತೊಡಗಿರುವರು. ಇದೇ ರೀತಿ ಸಾಂಪತ್ತಿಕ ಅಭಿವೃದ್ಧಿಯ ಪ್ರಯತ್ನಗಳೂ ನಡಿಯುತ್ತಲಿವೆ. ಅಲ್ಲಲ್ಲಿ ದೊಡ್ಡ ಚಿಕ್ಕ ಕೈಗಾರಿಕೆ ಕಾರಖಾನೆಗಳು ಸ್ಥಾಪಿಸಲ್ಪಟ್ಟಿವೆ. ಯಾವ ಕಾರ್ಯಗಳನ್ನು ಯಾವ ವೃತ್ತಿಗಳನ್ನು ಮಾಡಿದರೆ ನಾವು ಅಭಿವೃದ್ಧಿ ಹೊಂದುವೆವು ಎಂಬ ಸಾಹಸವೂ ಕುತೂಹಲವೂ ಜನರಲ್ಲಿ ಉಂಟಾಗಿರುವುದು. ರಾಜಕೀಯ ವಿಷಯಗಳಲ್ಲಿ ಸಹ ಜನರ ಪ್ರಗತಿಯು ಇದೇ ರೀತಿಯಾಗಿರುವುದು. ರಾಜ್ಯದಾಡಳಿತೆಯಲ್ಲಿ ಹೆಚ್ಚಿನ ಅಧಿಕಾರವು ದೇಶೀಯರಿಗೆ ಸಿಕ್ಕಬೇಕು. ಸಾಮಾನ್ಯರನ್ನು ಉದ್ಧರಿಸಿ ಅವರೊಡನೆ ಇಂಥಾ ಹಕ್ಕು ಸ್ವಾತಂತ್ರ್ಯಗಳನ್ನು ನಾವು ಸರಕಾರದವರಿಂದ ಕೇಳಿಕೊಳ್ಳಬೇಕು ಎಂತ ಸಾಹಸಪಡುವ ವಿದ್ಯಾವಂತರ ಸಂಖ್ಯೆಯೂ ಹೆಚ್ಚುತ್ತಲಿರುವುದು. ಆದರೆ ಜನರಲ್ಲಿ ಈ ನವಚೇತನದಿಂದ ಉಂಟಾದ ಲವಲವಿಕೆಗೆ ತಕ್ಕಂತೆ ಸರಕಾರದವರು ತಮ್ಮ ಆಡಳಿತೆಯ ಸಂಸ್ಥೆಯನ್ನು ಮಾರ್ಪಡಿಸುವದಿಲ್ಲ. ಯಾವುದಾದರೂ ಅವಶ್ಯವಾದ ಮಾರ್ಪಾಟಗ[illegible]ನ್ನು ಮಾಡುವಾಗ ಅವುಗಳನ್ನು ಬಹಳ ನಿಧಾನವಾಗಿಯೂ ಅಸಂತೋಷದಿಂದಲೂ ಸರಕಾರದವರು ಮಾಡುತ್ತಿರುವುದು ಪ್ರಜೆಗಳ ನಿಜವಾದ ಸಂಕಷ್ಟವೆಂತ ವ್ಯೋಮಕೇಶರವರು ವ್ಯಕ್ತಗೊಳಿಸಿರುವರು.

ಸ್ವಪ್ರಯತ್ನಗಳ ಸ್ವಾವಲಂಬನೆಯಿಂದ ಪ್ರಥಮತಾ ಈ ಸಂಕಷ್ಟನಿವಾರಣೆಯನ್ನು ಸಾಧಿಸಿಕೊಳ್ಳಬೇಕು. ಎಂದಿನ ತನಕ ನಾವು ಹೊಟ್ಟೆಗಿಲ್ಲದ ದುರ್ಬಲ, ಐಕ್ಯವಿಲ್ಲದೆ ವಿರೋಧ ಬುದ್ಧಿಯ ಅಶಿಕ್ಷಿತ ಜನಾಂಗವಾಗಿರುವವೋ ಆ ತನಕ ನಮಗೆ ತಕ್ಕ ಮನ್ನಣೆ ಇರದು. ನಮ್ಮ ಅಭಿಪ್ರಾಯಗಳನ್ನು ಯಾರೂ ಕೇಳರು. ಇಂಥಾ ದುರ್ಬಲತೆಯು ನಮ್ಮ ಸಂಕಷ್ಟವನ್ನು ಮತ್ತೂ ವಿಶೇಷವಾಗಿ ಮಾಡುವ ಮತ್ತೊಂದು ವಿದ್ಯಮಾನವಿದೆ. ಶಿಕ್ಷಿತರು ಮತ್ತು ಅಶಿಕ್ಷಿತರೊಳಗಿರುವ ಭೇದ. ನಮ್ಮ ಸ್ಥಿತಿಯು ಹೀಗಿರುತ್ತಾ ಎಂಥಾ ಮಹಾ ಸಭೆಗಳನ್ನು ಕೂಡಿಸಿ ಸರಕಾರದ ಆಡಳಿತೆಯ ಸಮ್ಮಂಧ ಹಲವು ನಿರ್ಣಯಗಳನ್ನು ಮಾಡಿದರೂ ಈ ನಿರ್ಣಯಗಳನ್ನು ಕಣ್ಣುತೆರದು ನೋಡತಕ್ಕಂಥವರು ಯಾರು? ಆದ್ದರಿಂದ ಶಿಕ್ಷಿತರು ತಮ್ಮ ತನುಮನಧನಗಳನ್ನರ್ಪಿಸಿ ತಮ್ಮ ಉದ್ಧರಣೆಗೆ ವಿಶೇಷವಾಗಿ ಸಹಾಯಕವಾದ ಸಾಮಾನ್ಯರ ಉದ್ಧರಣೆಯ ಪ್ರಯತ್ನಗಳನ್ನು ನಿರಂತರ ಮಾಡುತ್ತಿರಬೇಕು. ಶಿಕ್ಷಿತರು ಈ ರೀತಿ ಸಾಮಾನ್ಯರ ಪ್ರೀತಿಗೂ ವಿಶ್ವಾಸಕ್ಕೂ ಹೆಚ್ಚೆಚ್ಚಾಗಿ ಪಾತ್ರರಾಗುತ್ತಿರಬೇಕು. ಹೀಗೆ ಸಾಧಿಸಲ್ಪಡುವ ಐಕ್ಯ, ಸಾಂಪತ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳಿಂದ ರಾಜಕೀಯ ವಿಷಯದ ನಮ್ಮ ಆಕಾಂಕ್ಷೆಗಳೆಲ್ಲವೂ ನೆರವೇರುವವು.

ಸಾಮಾಜಿಕ ಮತ್ತು ಸಾಂಪತ್ತಿ ಅಭಿವೃದ್ಧಿಗಳು ನೆರವೇರಿದನಂತರವೇ ರಾಜಕೀಯ ವಿಷಯಗಳಿಗೆ ಕೈಹಾಕಬೇಕೆಂದು ಈ ಮೂಲಕ ಗ್ರಹಿಸಬಾರದೆಂದು ವ್ಯೋಮಕೇಶರವರು ಸೂಚಿಸಿರುತ್ತಾರೆ. ಯಾಕಂದರೆ ಸಾಂಪತ್ತಿಕ ಅಭಿವೃದ್ಧಿಯ ಹಲವು ಏರ್ಪಾಡುಗಳಿಗೆ ವಿಶೇಷ ಹಣಸಹಾಯ ಬೇಕಾಗಿದೆ. ಇಂಥಾ ಸಹಾಯವನ್ನು ಸರಕಾರದವರಿಂದ ಹೊಂದಲು ಬೇಕಾದ ರಾಜಕೀಯ ಚಳವಳವನ್ನು ಕಾಯಿದೆಶೀರ ರೀತಿಗಳಲ್ಲಿ ನಾವೆಬ್ಬಿಸುವುದು ಅಗತ್ಯ. ಸರಕಾರದ ಶಿಬಂದಿಯ ಬಹಳ ವಿಶೇಷವಾದ ಖರ್ಚನ್ನು ಮಿತಿಪಡಿಸುವುದು, ಆಯಾ ಸಂಸ್ಥಾನಗಳಿಂದ ದೊರಕಿದ ಉತ್ಪತ್ತಿಯನ್ನು ಆಯಾ ಸಂಸ್ಥಾನದ ಸರಕಾರದವರ ವಶದಲ್ಲಿಯೇ ಬಿಟ್ಟು ಪ್ರಜಾಕ್ಷೇಮಕ್ಕೆ ಅನುಕೂಲವಾದ ರೀತಿಯಲ್ಲಿ ವಿನಿಯೋಗಿಸಲ್ಪಡುವಂತೆ ಸಾಧಿಸುವುದು, ಲೋಕಲ್ ಬೋರ್ಡುಗಳಿಗೆ ಕ್ರಮವಾದ ಮತ್ತು ನಿರಂತರವಾದ ದ್ರವ್ಯಸಹಾಯವು ದೊರಕುವಂತೆ ಪ್ರಯತ್ನಿಸುವುದು, ಲೋಕಲ್ ಬೋರ್ಡುಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಿಸುವುದು—ಈ ವಿಧಾನದ ರಾಜಕೀಯ ಚಳವಳದ ಅವಶ್ಯಕತೆಯನ್ನು ಚಕ್ರವರ್ತಿಯವರು ಸೂಚಿಸಿರುವರು. ದೇಶದ ವಿದ್ಯಾವಂತ ಯುವಕರಿಗೆ ವ್ಯೋಮಕೇಶ ಚಕ್ರವರ್ತಿಯವರು ಮಾಡಿದ ವಿಜ್ಞಾಪನೆಯ ಪ್ರಸ್ತಾಪವಿಲ್ಲದೆ ಈ ಪರಿಶೀಲನೆಯು ಪೂರ್ಣವಾಗದು. ರಾಜ್ಯದಾಡಳಿತೆ ಬಗ್ಗೆ ಗ್ರಾಮ ಸಂಸ್ಥೆಗಳನ್ನು ಸ್ಥಾಪಿಸುವುದು ಅಗತ್ಯವೆಂತ ಸರಕಾರದವರು ಸಹ ಅಭಿಪ್ರಾಯಪಟ್ಟಿರುತ್ತಾರೆ. ಕುಒಪರೇಟಿವ್ ಸಂಘಗಳ ಬೆಳವಣಿಗೆಯನ್ನು ನೋಡಿದರೆ ಸಂಘ ಸಂಸ್ಥಾ ಜ್ಞಾನವು ಗ್ರಾಮಸ್ಥರಿಗೆ ನವೀನವೆಂತ ತೋರದು. ಆದ್ದರಿಂದ ಸರಕಾರದವರು ಒಂದು ವೇಳೆ ಈ ವಿಷಯವನ್ನು ಅಲಕ್ಷ ಭಾವದಿಂದ ಕಂಡರೂ ಗ್ರಾಮಗಳಲ್ಲಿ ಸುವ್ಯವಸ್ಥೆಯೂ ಸಹಕಾರವೂ ರೂಢಮೂಲವಾಗಿರುವಂತೆ ವಿದ್ಯಾವಂತ ಯುವಕರು ಪ್ರಯತ್ನಿಸಬೇಕೆಂತ ವಿಜ್ಞಾಪಿಸಿರುವರು. ಈ ವಿಜ್ಞಾಪನೆಯು ಎಲ್ಲಾ ಕಡೆಗಳಲ್ಲಿ ಕೇಳಲೆಂಬುದು ನಮ್ಮ ಅಪೇಕ್ಷೆಯಾಗಿದೆ.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇವು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟಿಯಲ್ಲಿ ೬೦ ಮಾತ್ರೆಗಳಿವೆ, ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಮೆಜಿಕ್ ಸ್ಪೆಸಿಫಿಕ್.

ಮೇಹ ಮೊದಲಾದ ರೋಗಗಳು ಎರಡೇ ಬಾಟ್ಲಿ ಸ್ಪೆಸಿಫಿಕಿನಿಂದ ಗುಣವಾಗುವಾಗ ನೀವು ನಿಮ್ಮ ಹಣವನ್ನು ಡಾಕ್ಟರರ ಚಿಕಿತ್ಸೆಗೆ ವೆಚ್ಚಮಾಡುವುದೇಕೆ? ಈ ಔಷಧಿಯನ್ನು ಒಂದೇ ಸಾರಿ ಕುಡಿಯುವ ಮಾತ್ರದಿಂದ ಮೂತ್ರ ಕೋಶದ ಉರಿಯು ನಿಂತುಹೋಗುವುದು. ಪುನಃ ತಲೆದೋರುವ ಸಂಭವವೇ ಇಲ್ಲ. ಈ ಔಷಧಿಯನ್ನು ತಕ್ಕೊಳ್ಳುವುದರಿಂದ ಯಾವದೊಂದು ಕೆಡಕು ಇಲ್ಲವೆಂಬುದು ನಿಶ್ಚಯವು. ಕ್ರಯ ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಮೆಜಿಕ್ ಮಾತ್ರೆಗಳು.

ಸ್ನಾಯುಗಳ ಬಲಹೀನತೆ, ಧಾತು ಬಲಹೀನತೆ, ಮೆದುಳಿನ ಅಶಕ್ತಿ ಇದರಿಂದ ಹುಟ್ಟುವ ವಿವಿಧ ರೋಗಗಳು ಅಂದರೆ ನಿದ್ರೆ ಬಾರದಿರುವುದು, ಕನಸು, ಕೈ ನಡುಗುವುದು, ಕಣ್ಣಿನ ಮೇಲೆ ಸಣ್ಣ ಸಣ್ಣ ಚುಕ್ಕೆಗಳು, ಚಿಂತೆ, ಮಾನಸಿಕ ಶಕ್ತಿಯ ಕುಂದು, ಮಲಬದ್ಧತೆ, ಮೊದಲಾದ ಸರ್ವ ವಿಧದ ರೋಗಗಳು ಗುಣಹೊಂದುವವು. ಎರಡು ಬಾಟ್ಲಿ ಕುಡಿಯುವುದರಿಂದ ಅತಿರೇಕ ಬಲವು ಬರುವುದು. ೩೦ ಮಾತ್ರೆಗಳುಳ್ಳ ಬಾಟ್ಲಿ ೧ಕ್ಕೆ ರೂ. ೧—೦—೦. ವಿ. ಪಿ. ಚಾರ್ಜು ೧—೩ ಬಾಟ್ಲಿ ವರೇಗೆ ೫ ಆಣೆ ಹೆಚ್ಚಿಗೆ. ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ. **R. D. Ketely & Co.**
ನಂಬ್ರ ಡಿ. ಫ್ರೆಯರರೋಡ್, ಮುಂಬಯಿ. *No. D. Frere Road,*
Near Wright & Co. Fort Bombay.

ಮುಳಿಯಿಲ್‌ರವರ ದಿವ್ಯೌಷಧಗಳು.

1. ಕೋಲೇರಾ ಮಾತ್ರೆ—ಇದನ್ನು ಜೇನಲ್ಲಿ ಕೊಡುವುದರಿಂದ ಉಬಾಲು ಜುಲಾಬು ಗುಣಪಡುವುದು. ಡಜನಿಗೆ ರೂ. 0—6—0.

2. ಕೋಲೇರಾ ಚೂರ್ಣ—ಈ ಚೂರ್ಣವನ್ನು ಜೇನಿನಲ್ಲಿ ಮಿಶ್ರಮಾಡಿ ಕೊಡುವ ವರೆಗೆ ರೋಗಿಯು ಬದುಕಿದ್ದರೆ ನಿಶ್ಚಯವಾಗಿ ಗುಣಪಡುವನು. ಎಷ್ಟು ಕಠಿಣತರವಾಗಿದ್ದರೂ 2 ಯಾ 3 ಸಾರಿಯ ಔಷಧಿ ಗುಣಪಡಿಸುವುದು. ಡಜನ್ ಪೊಟ್ಟಣಗಳಿಗೆ 0—12—0.

3. ಕೋಲೇರಾ ಮಿಕ್ಸ್ಚರ್—ಸ್ಥೂಲ ಶರೀರದ ವ ಶೀತ ಶರೀರದ ಮೇಲ್ಜಾತಿಯ ವ ಇತರ ಜಾತಿಯ ಹೆಂಗಸರಿಗೆ ಇದು ಅತಿ ಪ್ರಯೋಜನಕರವೆ. 2 ಔನ್ಸಿಗೆ ರೂ. 1—0—0.

4. ಚಂದ್ರೋದಯ ದ್ರಾವಕ—ಎಲ್ಲಾ ತರದ ಅಜೀರ್ಣಕ್ಕೆ ಸಕ್ಕರೆಯಲ್ಲಿ ಉಪಯೋಗಿಸುವುದು. 1 ಔನ್ಸಿಗೆ 1—4—0.

While Cholera was prevailing in Muliyar etc. last year, I have tried the Cholera Pills prepared by Messrs Muliyil and Sons. I found them efficacious. I hope the public will appreciate it as it is cheap and gives speedy relief. (sd) A DEVAPPA PUNJA B.A.B.L.
Kasaragod, 18—3—13. Tahsildar.

5. ಪಲ್ಲೆ ಏಕ ಮಾತ್ರೆ. 6 ವಯಸ್ಸಿನ ಕೆಳಗಿನ ಮಕ್ಕಳಿಗಿರುವ ನೇವಸಕ್ಕೆ ಅತ್ಯುತ್ತಮ ಡಜನಿಗೆ ರೂ. 0—6—0.

6. ಸಿಂಹತ್ಯಾದಿ ಮಾತ್ರೆ. ಎಲ್ಲಾ ತರದ ಕೆಮ್ಮಿಗೆ ಜೇನು ವ ಆಡುಸೋಗೆ ರಸದಲ್ಲಿ ಸೇವಿಸುವುದು. ಡಜನಿಗೆ 0—4—0.

ನಾನು ಮಕ್ಕಳ ಶೀತ ವ ಕೆಮ್ಮಿಗೆ ಹೋಮ್ಯೊಪತಿ ಔಷಧಿಗಳನ್ನು ಒಂದು ತಿಂಗಳು ಪ್ರಯೋಗ ಮಾಡಿದಾಗ್ಯೂ ಪ್ರಯೋಜನ ಕಂಡುಬಾರದೆ ಈ ಗುಳಿಗೆಗಳ ಪೈಕಿ ಸಿಂಹತ್ಯಾದಿ ಮತ್ತು ಪಲ್ಲೆ ಏಕ ಮಾತ್ರೆಯನ್ನು ಮೂರೇ ದಿನ ಪ್ರಯೋಗಿಸಿದ್ದಲ್ಲಿ ಫಕ್ಕನೇ ಗುಣವಾಯಿತು. ಸಣ್ಣ ಮಕ್ಕಳ ಕೆಮ್ಮು ಕಫಾದಿಗಳಿಂದ ಕಷ್ಟ ತೊಂದರೆ ಪಡುವ ಎಲ್ಲಾ ತಾಯಂದಿರಿಗೆ ಇದನ್ನು ಶಿಫಾರಸು ಮಾಡುತ್ತೇನೆ.
Karkal 14th June 13. (sd,) P. SOANS, Pastor.

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.
Muliyil & Sons, *Kasargod, S. C.*

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 24ನೇ ಎಪ್ರಿಲ್ 1914

ರಾಜಕೀಯ ಚಳವಳವು.

ಪ್ರಜಾ ನಾಯಕರು ಪ್ರಜಾ ಜನಗಳ ವಿದ್ಯಮಾನಗಳನ್ನು ಪರಿಶೋಧಿಸಿಕೊಂಡು ರಾಜ್ಯದಾಡಳಿತೆಯ ವಿಚಾರವನ್ನು ಯೋಚಿಸಿಕೊಳ್ಳುತ್ತ ಜನರ ಕ್ಷೇಮಾಭಿವೃದ್ಧಿಗೆ ಬೇಕಾದಂತೆ ರಾಜಕೀಯ ಚಳವಳವನ್ನು ಯಾವ ವಿಧಾನದಲ್ಲಿ ನಡಿಸುತ್ತಿರಬೇಕೆಂತ ಮಹಾಸಭೆಗಳಲ್ಲಿ ವ್ಯಕ್ತಗೊಳಿಸುವುದುಂಟು. ಹೀಗೆ ಪ್ರಜಾನಾಯಕರಿಂದ ವ್ಯಕ್ತಗೊಳಿಸಲ್ಪಟ್ಟ ವಿಚಾರಗಳು ಪ್ರಜಾ ಸಾಮಾನ್ಯರಿಂದ ಪರ್ಯಾಲೋಚಿಸಲ್ಪಡಬೇಕಾಗಿವೆ. ಬಂಗಾಳದಲ್ಲಿ ಇತ್ತಲಾಗೆ ಕೂಡಿದ ಪ್ರಾಂತಿಕ ಮಹಾಸಭೆಯಲ್ಲಿ ಸಭಿಕರೆಲ್ಲರನ್ನು ವಿಶೇಷ ಆಸಕ್ತಿಯಿಂದ ಹುರಿದುಂಬಿಸಿದ ಸಭಾಧ್ಯಕ್ಷರ ಭಾಷಣದಲ್ಲಿ ಬಂಗಾಳದ ಹೊರಪ್ರಾಂತ್ಯದ ಭಾರತೀಯರು ಸಹ ಲಕ್ಷ್ಯಕ್ಕೆ ತಂದುಕೊಳ್ಳಬೇಕಾದಂಥಾ ಹಲವು ಅಂಶಗಳಿರುವವು. ನಮ್ಮ ಆಕಾಂಕ್ಷೆಗಳೇನು, ಇವುಗಳ ನೆರವೇರುವಿಕೆಗೆ ನಮಗಿರುವ ಕಷ್ಟಗಳು ಯಾವವು, ನಮ್ಮಲ್ಲಿ ನೂತನವಾಗಿ ಮೊಳೆತಿರುವಂಥಾ ಭಾವನೆ ಕಲ್ಪನೆಗಳಿಗೆ ತಕ್ಕಂತೆ ನಮ್ಮ ಸ್ಥಿತಿಯು ಹೇಗೆ ಮಾರ್ಪು ಹೊಂದುತ್ತಿರುವುದು, ಸರಕಾರದವರ ವರ್ತನೆಯು ಪ್ರಜಾಜನರ ಈ ನೂತನ ಸ್ಥಿತಿಗೆ ಎಷ್ಟರಮಟ್ಟಿಗೆ ಅನುಕೂಲವಾಗಿರುವುದು, ನಮ್ಮ ಆಕಾಂಕ್ಷೆಗಳೆಲ್ಲವುಗಳ ಸಿದ್ಧಿಗೆ ಸ್ವಪ್ರಯತ್ನಗಳನ್ನೇ ನಾವು ಹೇಗೆ ಅವಲಂಬಿಸಿಕೊಂಡಿರಬೇಕು—ಇಂಥಾ ಸ್ವಾವಲಂಬನೆಗೆ ತಕ್ಕದಾದಂಥಾ ರಾಜಕೀಯ ಚಳವಳವೂ ಇದನ್ನು ನಡಿಸತಕ್ಕ ಬಗೆಯು ಹೇಗೆಂಬದೂ—ಈ ಎಲ್ಲಾ ವಿಷಯಗಳನ್ನು ವಿವರಿಸಿ ವಿದ್ಯಾವಂತ ಮಹಾಜನರ ಕರ್ತವ್ಯ ಏನೆಂಬುದನ್ನು ಚಕ್ರವರ್ತಿಯವರು ಸೂಚಿಸಿರುತ್ತಾರೆ. ಸರಕಾರದವರೊಂದಿಗೆ ಸಹಕಾರ—ಈ ವಿಷಯ ವ್ಯೋಮಕೇಶರು ಅಪ್ಪಣೆಕೊಡಿಸಿದ ಮಾತುಗಳನ್ನು ಬಂಗಾಳ ಪ್ರಾಂತ್ಯದ ಸರಕಾರವು ಮಾತ್ರವಲ್ಲ, ಇತರ ಸಂಸ್ಥಾನದ ಸರಕಾರದವರೂ ಸಹ ಲಕ್ಷ್ಯಕ್ಕೆ ತಂದುಕೊಳ್ಳುವುದು ಅಗತ್ಯವಾಗಿದೆ. ಪ್ರಜಾಪ್ರತಿನಿಧಿಗಳು ನ್ಯಾಯವಿಧಾಯಕ ಸಭೆಗಳಲ್ಲಿ ಸರಕಾರದವರಿಗೆ ಸಹಕಾರ ಭಾವದಿಂದ ಅನೇಕ ಸೂಚನೆಗಳನ್ನು ಕೊಡುವರು. ಆದರೆ ಈ ಸೂಚನೆಗಳಲ್ಲೊಂದಾದರೂ ಸ್ವೀಕರಿಸಲ್ಪಡುವುದು ಅಪರೂಪ. ಪ್ರಜೆಗಳ ಸಹಕಾರವನ್ನು ಸ್ವೀಕರಿಸುವ ಯೋಚನೆಯು ಸರಕಾರದವರಿಗಿರದೆಂದು ಈ ರೀತಿ ವ್ಯೋಮಕೇಶರು ವಾದಿಸಿರುವರು. ನ್ಯಾಯವಿಧಾಯಕ ಸಭೆಗಳಲ್ಲಿ ಇಂಥಾ ತಿರಸ್ಕಾರ ಭಾವವನ್ನೇ ಸರಕಾರದವರು ತೋರಿಸಿದ್ದಲ್ಲಿ ಈ ಸಭೆಗಳ ಗೊಡವೆಗೆ ಜನರು ಹೋಗದೆ ಅವುಗಳಲ್ಲಿರುವ ಅಭಿರುಚಿಯು ಕಡಮೆಯಾಗಿ ಶಾಲಾವಿದ್ಯಾರ್ಥಿಗಳ 'ಡಿಬೇಟಿಂಗ್ ಸೊಸ್ಯಾಟಿಸ್' ಎಂಬ ಏನೂ ವರ್ಚಸ್ಸವಿಲ್ಲದ ವಿನೋದ ಸಭೆಗಳ ಪರಿಣಾಮವನ್ನು ನ್ಯಾಯನಿರ್ಮಾಣ ಸಭೆಗಳು ಹೊಂದುವವೆಂಬುದಾಗಿ ಚಕ್ರವರ್ತಿಯವರು ಸೂಚಿಸಿರುತ್ತಾರೆ.

ನಮ್ಮ ಆಕಾಂಕ್ಷೆಗಳೇನು? ನಮಗೆ ಬೇಕಾದದ್ದು ಏನು? ಸಾಮಾನ್ಯರಿಗೆ ಸಹ ಮುಂದಟ್ಟಾಗುವ ರೀತಿಯಲ್ಲಿ ವ್ಯೋಮಕೇಶರವರು ಇವನ್ನು ವಿವರಿಸಿರುವರು. ಆ ಕಾನೂನು ಸಲ್ಲದು, ಈ ಕಾನೂನು ಸಲ್ಲದು—ಇಂಥಿಂಥಾ ಅಧಿಕಾರ ವಿಭಜನೆಯಾಗಬೇಕು—ಈ ಏರ್ಪಾಡು ಅಗತ್ಯ ಬೇಕು—ಎಂದು ವ್ಯೋಮಕೇಶರು ತಮ್ಮ ಭಾಷಣ ಪ್ರಾರಂಭದಲ್ಲಿ ಹೇಳಿರುವುದಿಲ್ಲ. ಸಾಮಾನ್ಯರಿಂದ ಅರಿಯಲು ಕಷ್ಟಸಾಧ್ಯವಾದ ಸರಕಾರದ ಅತಿ ದೊಡ್ಡದಾದ ಸಂಸ್ಥಾವ್ಯೂಹದ ಕೊರತೆಗಳನ್ನು ವಿವರಿಸದೆ ನಮಗೆ ಬೇಕಾದದ್ದು ಏನೆಂದು ಹೇಳಿರುವರು. ಅನ್ನವಸ್ತ್ರ, ಉಳಕೊಳ್ಳಲು ತಕ್ಕ ಆಶ್ರಯ, ಮತ್ತು ಜೀವನಕ್ಕೆ ಅಗತ್ಯವಾಗಿ ಬೇಕಾಗಿರುವ ಆರೋಗ್ಯ, ಸ್ವಚ್ಛವಾದ ನೀರು ಮೊದಲಾದವುಗಳು ನಮಗೆ ಬೇಕಾದವುಗಳಾಗಿವೆ. ಇದರ ನಂತರ ವಿದ್ಯಾಭ್ಯಾಸ ಮೊದಲಾದ ಇತರ ಸನ್ನಾಹಗಳು ಮತ್ತು ಸುವ್ಯವಸ್ಥೆಯು ನಮಗೆ ಬೇಕಾಗಿವೆ. ಅಂದರೆ ಭಾರತೀಯರನ್ನು ಸುಖಸಂಪತ್ತಿನ ಜನಾಂಗವಾಗಿ ಮಾಡುವುದೇ ನಮ್ಮ ಆಕಾಂಕ್ಷೆಯಾಗಿರುವುದು. ಇದು ಹೇಗೆ ಸಾಧ್ಯ?

ಈ ಪ್ರಶ್ನೆಯ ವಿಚಾರದಲ್ಲಿ ವ್ಯೋಮಕೇಶರು ಪ್ರಜೆಗಳ ಪ್ರಕೃತ ಸ್ಥಿತಿಯನ್ನು ಪರಿಶೀಲಿಸಿರುವರು. ಬ್ರಿಟಿಷ್ ಆಣ್ಮರ ಕೈಕೆಳಗೆ ದೊರಕಿರುವ ಶಾಂತತೆಯ ಪ್ರಯೋಜನವನ್ನೂ ವಿದ್ಯಾಪ್ರಯೋಜನವನ್ನೂ ಇತರ ಪ್ರಯೋಜನಗಳನ್ನೂ ಪಡದಿರುವ ವಿದ್ಯಾವಂತರಲ್ಲಿಯೂ ಇತರರಲ್ಲಿಯೂ ರಾಷ್ಟ್ರೀಯ ಐಕ್ಯದ ಭಾವವು ವಿಕಸಿತವಾಗಿರುವುದು. ಇಂಥಾ ಆಣ್ಮರ ಕೈಕೆಳಗೆ ತಮ್ಮ ಇನ್ನು ಮುಂದಿನ ಉದ್ಧರಣೆಯನ್ನು ಸಾಧಿಸಬೇಕೆಂಬ ಸಾಧನೆಗಳು ಅಲ್ಲಲ್ಲಿ ತೋರುತ್ತಲಿವೆ. ಆಯಾ ಜಾತಿಯವರು ಜಾತಿಗಳ ಸಮಿತಿ ಪರಿಷದ ಮೊದಲಾದವುಗಳ ಮೂಲಕ ತಂತಮ್ಮ ಅಭಿವೃದ್ಧಿಯನ್ನು ಸಾಧಿಸಲು ತೊಡಗಿರುವರು. ಇದೇ ರೀತಿ ಸಾಂಪತ್ತಿಕ ಅಭಿವೃದ್ಧಿಯ ಪ್ರಯತ್ನಗಳೂ ನಡಿಯುತ್ತಲಿವೆ. ಅಲ್ಲಲ್ಲಿ ದೊಡ್ಡ ಚಿಕ್ಕ ಕೈಗಾರಿಕೆ ಕಾರಖಾನೆಗಳು ಸ್ಥಾಪಿಸಲ್ಪಟ್ಟವೆ. ಯಾವ ಕಾರ್ಯಗಳನ್ನು ಯಾವ ವೃತ್ತಿಗಳನ್ನು ಮಾಡಿದರೆ ನಾವು ಅಭಿವೃದ್ಧಿ ಹೊಂದುವೆವು ಎಂಬ ಸಾಹಸವೂ ಕುತೂಹಲವೂ ಜನರಲ್ಲಿ ಉಂಟಾಗಿರುವುದು. ರಾಜಕೀಯ ವಿಷಯಗಳಲ್ಲಿ ಸಹ ಜನರ ಪ್ರಗತಿಯು ಇದೇ ರೀತಿಯಾಗಿರುವುದು. ರಾಜ್ಯದಾಡಳಿತೆಯಲ್ಲಿ ಹೆಚ್ಚಿನ ಅಧಿಕಾರವು ದೇಶೀಯರಿಗೆ ಸಿಕ್ಕಬೇಕು. ಸಾಮಾನ್ಯರನ್ನು ಉದ್ಧರಿಸಿ ಅವರೊಡನೆ ಇಂಥಾ ಹಕ್ಕು ಸ್ವಾತಂತ್ರ್ಯಗಳನ್ನು ನಾವು ಸರಕಾರದವರಿಂದ ಕೇಳಿಕೊಳ್ಳಬೇಕು ಎಂತ ಸಾಹಸಪಡುವ ವಿದ್ಯಾವಂತರ ಸಂಖ್ಯೆಯೂ ಹೆಚ್ಚುತ್ತಲಿರುವುದು. ಆದರೆ ಜನರಲ್ಲಿ ಈ ನವಚೇತನದಿಂದ ಉಂಟಾದ ಲವಲವಿಕೆಗೆ ತಕ್ಕಂತೆ ಸರಕಾರದವರು ತಮ್ಮ ಆಡಳಿತೆಯ ಸಂಸ್ಥೆಯನ್ನು ಮಾರ್ಪಡಿಸುವದಿಲ್ಲ. ಯಾವುದಾದರೂ ಅವಶ್ಯವಾದ ಮಾರ್ಪಾಟುಗಳನ್ನು ಮಾಡುವಾಗ ಅವುಗಳನ್ನು ಬಹಳ ನಿಧಾನವಾಗಿಯೂ ಅಸಂತೋಷದಿಂದಲೂ ಸರಕಾರದವರು ಮಾಡುತ್ತಿರುವುದು ಪ್ರಜೆಗಳ ನಿಜವಾದ ಸಂಕಷ್ಟವೆಂತ ವ್ಯೋಮಕೇಶರವರು ವ್ಯಕ್ತಗೊಳಿಸಿರುವರು.

ಸ್ವಪ್ರಯತ್ನಗಳ ಸ್ವಾವಲಂಬನೆಯಿಂದ ಪ್ರಥಮತಾ ಈ ಸಂಕಷ್ಟನಿವಾರಣೆಯನ್ನು ಸಾಧಿಸಿಕೊಳ್ಳಬೇಕು. ಎಂದಿನ ತನಕ ನಾವು ಹೊಟ್ಟೆಗಿಲ್ಲದ ದುರ್ಬಲ, ಐಕ್ಯವಿಲ್ಲದೆ ವಿರೋಧ ಬುದ್ಧಿಯ ಅಶಿಕ್ಷಿತ ಜನಾಂಗವಾಗಿರುವವೋ ಆ ತನಕ ನಮಗೆ ತಕ್ಕ ಮನ್ನಣೆ ಇರದು. ನಮ್ಮ ಅಭಿಪ್ರಾಯಗಳನ್ನು ಯಾರೂ ಕೇಳರು. ಇಂಥಾ ದುರ್ಬಲತೆಯ ನಮ್ಮ ಸಂಕಷ್ಟವನ್ನು ಮತ್ತೂ ವಿಶೇಷವಾಗಿ ಮಾಡುವ ಮತ್ತೊಂದು ವಿದ್ಯಮಾನವಿದೆ. ಶಿಕ್ಷಿತರು ಮತ್ತು ಅಶಿಕ್ಷಿತರೊಳಗಿರುವ ಭೇದ. ನಮ್ಮ ಸ್ಥಿತಿಯು ಹೀಗಿರುತ್ತಾ ಎಂಥಾ ಮಹಾ ಸಭೆಗಳನ್ನು ಕೂಡಿಸಿ ಸರಕಾರದ ಆಡಳಿತೆಯ ಸಮ್ಮಂಧ ಹಲವು ನಿರ್ಣಯಗಳನ್ನು ಮಾಡಿದರೂ ಈ ನಿರ್ಣಯಗಳನ್ನು ಕಣ್ಣುತೆರದು ನೋಡತಕ್ಕಂಥವರು ಯಾರು? ಆದ್ದರಿಂದ ಶಿಕ್ಷಿತರು ತಮ್ಮ ತನುಮನಧನಗಳನ್ನರ್ಪಿಸಿ ತಮ್ಮ ಉದ್ಧರಣೆಗೆ ವಿಶೇಷವಾಗಿ ಸಹಾಯಕವಾದ ಸಾಮಾನ್ಯರ ಉದ್ಧರಣೆಯ ಪ್ರಯತ್ನಗಳನ್ನು ನಿರಂತರ ಮಾಡುತ್ತಿರಬೇಕು. ಶಿಕ್ಷಿತರು ಈ ರೀತಿ ಸಾಮಾನ್ಯರ ಪ್ರೀತಿಗೂ ವಿಶ್ವಾಸಕ್ಕೂ ಹೆಚ್ಚೆಚ್ಚಾಗಿ ಪಾತ್ರರಾಗುತ್ತಿರಬೇಕು. ಹೀಗೆ ಸಾಧಿಸಲ್ಪಡುವ ಐಕ್ಯ, ಸಾಂಪತ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳಿಂದ ರಾಜಕೀಯ ವಿಷಯದ ನಮ್ಮ ಆಕಾಂಕ್ಷೆಗಳೆಲ್ಲವೂ ನೆರವೇರುವವು.

ಸಾಮಾಜಿಕ ಮತ್ತು ಸಾಂಪತ್ತಿ ಅಭಿವೃದ್ಧಿಗಳು ನೆರವೇರಿದನಂತರವೇ ರಾಜಕೀಯ ವಿಷಯಗಳಿಗೆ ಕೈಹಾಕಬೇಕೆಂದು ಈ ಮೂಲಕ ಗ್ರಹಿಸಬಾರದೆಂದು ವ್ಯೋಮಕೇಶರವರು ಸೂಚಿಸಿರುತ್ತಾರೆ. ಯಾಕಂದರೆ ಸಾಂಪತ್ತಿಕ ಅಭಿವೃದ್ಧಿಯ ಹಲವು ಏರ್ಪಾಡುಗಳಿಗೆ ವಿಶೇಷ ಹಣಸಹಾಯ ಬೇಕಾಗಿದೆ. ಇಂಥಾ ಸಹಾಯವನ್ನು ಸರಕಾರದವರಿಂದ ಹೊಂದಲು ಬೇಕಾದ ರಾಜಕೀಯ ಚಳವಳವನ್ನು ಕಾಯಿದೆಶೀರ ರೀತಿಗಳಲ್ಲಿ ನಾವೆಬ್ಬಿಸುವುದು ಅಗತ್ಯ. ಸರಕಾರದ ಶಿಬಂದಿಯ ಬಹಳ ವಿಶೇಷವಾದ ಖರ್ಚನ್ನು ಮಿತಿಪಡಿಸುವುದು, ಆಯಾ ಸಂಸ್ಥಾನಗಳಿಂದ ದೊರಕಿದ ಉತ್ಪತ್ತಿಯನ್ನು ಆಯಾ ಸಂಸ್ಥಾನದ ಸರಕಾರದವರ ವಶದಲ್ಲಿಯೇ ಬಿಟ್ಟು ಪ್ರಜಾಕ್ಷೇಮಕ್ಕೆ ಅನುಕೂಲವಾದ ರೀತಿಯಲ್ಲಿ ವಿನಿಯೋಗಿಸಲ್ಪಡುವಂತೆ ಸಾಧಿಸುವುದು, ಲೋಕಲ್ ಬೋರ್ಡುಗಳಿಗೆ ಕ್ರಮವಾದ ಮತ್ತು ನಿರಂತರವಾದ ದ್ರವ್ಯಸಹಾಯವು ದೊರಕುವಂತೆ ಪ್ರಯತ್ನಿಸುವುದು, ಲೋಕಲ್ ಬೋರ್ಡುಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಿಸುವುದು—ಈ ವಿಧಾನದ ರಾಜಕೀಯ ಚಳವಳದ ಅವಶ್ಯಕತೆಯನ್ನು ಚಕ್ರವರ್ತಿಯವರು ಸೂಚಿಸಿರುವರು. ದೇಶದ ವಿದ್ಯಾವಂತ ಯುವಕರಿಗೆ ವ್ಯೋಮಕೇಶ ಚಕ್ರವರ್ತಿಯವರು ಮಾಡಿದ ವಿಜ್ಞಾಪನೆಯ ಪ್ರಸ್ತಾಪವಿಲ್ಲದೆ ಈ ಪರಿಶೀಲನೆಯು ಪೂರ್ಣವಾಗದು. ರಾಜ್ಯದಾಡಳಿತೆ ಬಗ್ಯೆ ಗ್ರಾಮ ಸಂಸ್ಥೆಗಳನ್ನು ಸ್ಥಾಪಿಸುವುದು ಅಗತ್ಯವೆಂತ ಸರಕಾರದವರು ಸಹ ಅಭಿಪ್ರಾಯಪಟ್ಟಿರುತ್ತಾರೆ. ಕೂಪರೇಟಿವ್ ಸಂಘಗಳ ಬೆಳವಣಿಗೆಯನ್ನು ನೋಡಿದರೆ ಸಂಘ ಸಂಸ್ಥಾ ಜ್ಞಾನವು ಗ್ರಾಮಸ್ಥರಿಗೆ ನವೀನವೆಂತ ತೋರದು. ಆದ್ದರಿಂದ ಸರಕಾರದವರು ಒಂದು ವೇಳೆ ಈ ವಿಷಯವನ್ನು ಅಲಕ್ಷ ಭಾವದಿಂದ ಕಂಡರೂ ಗ್ರಾಮಗಳಲ್ಲಿ ಸುವ್ಯವಸ್ಥೆಯೂ ಸಹಕಾರವೂ ರೂಢಮೂಲವಾಗಿರುವಂತೆ ವಿದ್ಯಾವಂತ ಯುವಕರು ಪ್ರಯತ್ನಿಸಬೇಕೆಂತ [illegible]ಪಿಸಿರುವರು. ಈ ವಿಜ್ಞಾಪನೆಯು ಎಲ್ಲಾ ಕಡೆಗಳಲ್ಲಿ ಕೇಳಲೆಂಬುದು ನಮ್ಮ [illegible]ಗಿದೆ.

* * *

ದ್ವಾದಶ ಜ್ಯೋತಿರ್ಲಿಂಗಗಳು.

ಕಳೆದ ಸಂಚಿಕೆಯಿಂದ ಮುಂದರಿಸಿದುದು.

ಕಾಶಿಯಲ್ಲಿರುವ ಮುಖ್ಯ ದೇವತೆಗಳು ಕೆಳಗೆ ಬರದ ಶ್ಲೋಕದಲ್ಲಿ ವರ್ಣನೆ ಮಾಡಿದ ಹಾಗೆ ಇರುತ್ತವೆ.

ವಿಶ್ವೇಶಂ ಮಾಧವಂ ಧುಂಡಿಂ ದಂಡಪಾಣಿಂ ಚ ಭೈರವಮ್‖
ವಂದೇ ಕಾಶೀಂ ಗುಹಾಂ ಗಂಗಾಂ ಭವಾನೀಂ ಮಣಿಕರ್ಣಿಕಾಮ್.

ಇಲ್ಲಿ ಕಬೀರ ರಾಮಾನಂದರೊಳಗೆ ಸಂವಾದವಾದ ಸ್ಥಾನವು ಇರುತ್ತದೆ. ಹರಿಶ್ಚಂದ್ರನು ಗುಲಾಮನಾಗಿ ಚಾಕರಿಗೆ ನಿಂತ ಸ್ಥಳವು ಸಹಾ ಇರುತ್ತದೆ. ಇಲ್ಲಿ ನದಿಗೆ ಘಾಟಿಗಳು ಬಹಳ ಇರುತ್ತವೆ. ಶಹರಿನೊಳಗಿನ ರಸ್ತೆಗಳು ಅಡ್ಡಗಲ ಕಮ್ಮಿ ಇದ್ದು ಹೊಸರಾಜ ಮಾರ್ಗಗಳನ್ನು ಕಟ್ಟಿಸಿರುತ್ತಾರೆ. ಸರಕಾರಿ ಕಾರಖಾನೆಗಳು ಪಟ್ಟಣದಿಂದ ಹೊರಗೆ ದೂರ ಇರುತ್ತವೆ. ಇಲ್ಲಿ ದೊಡ್ಡ ದೊಡ್ಡ ಸಂಸ್ಕೃತ ಪಾಠಶಾಲೆಗಳು ಇರುತ್ತವೆ. ಈ ಶಾಲೆಗಳಲ್ಲಿ ಪ್ರಸಿದ್ಧ ಬಾಪುದೇವ ಶಾಸ್ತ್ರ ಬಾಳಶಾಸ್ತ್ರಿರಾನಡೆ, ಪ್ರಮದಾದಾ ಸಬಾಬು ವಗೈರೆ ದೊಡ್ಡ ದೊಡ್ಡ ವಿದ್ವಾಂಸರು ಗುರುಗಳಾಗಿರುತ್ತಾರೆ. ಕಾಶಿಯಲ್ಲಿ ಪುಸ್ತಕಾಲಯವು (Library) ಬಹಳ ಚಲೋದು ಇರುತ್ತದೆ. ಕಾಶಿಯ ಗಂಗಾನದಿಯು (ಭಾಗೀರಥಿ) ಬಹಳ ದೊಡ್ಡದಿದ್ದು ದಕ್ಷಿಣದ ೨೫ ನದಿಗಳಷ್ಟು ವಿಸ್ತೃತವಿರುತ್ತದೆ. ಶಹರದ ದಟ್ಟವಸ್ತಿಯ ದೆಶೆಯಿಂದ ನದಿಯ ನೀರು ಸ್ವಚ್ಛವಿರುವದಿಲ್ಲ. ಆದ್ದರಿಂದ ಕುಡಿಯಲಿಕ್ಕೆ ಆಚೆಕಡೆಯ ದಡೆಯಿಂದ ನೀರನ್ನು ತರುತ್ತಾರೆ. ಕಿಂವಾ ಮೇಲೆ ಹೇಳಿದ ಶಿವಾಲಯ ಘಾಟದಿಂದ ತರುತ್ತಾರೆ. ಇಲ್ಲಿ ಅನ್ನಛತ್ರಗಳು ಬಹಳ ಇರುತ್ತದೆ. ಇಲ್ಲಿ ಯಾವಾಗಲೂ ಯಾತ್ರಿಕರು ಬಹಳ ಬರುತ್ತಾರೆ. ಮತ್ತೆ ಎಲ್ಲಾ ಶಾಖೆಯ ಬ್ರಾಹ್ಮಣರು ವಾಸಿಸುತ್ತಾರೆ. ಈ ಪ್ರದೇಶವು ಬಹಳ ಚಲೋದಿದ್ದರೂ ಬೇಸಿಗೆ ಕಾಲದ ಉಷ್ಣವು ಅತಿಶಯ ಇರುತ್ತದೆ. ಭೌದ್ಧನು ಇಲ್ಲಿಯೇ ತನ್ನ ಧರ್ಮವನ್ನು ಉಪದೇಶಿಸಿದನು. ಮತ್ತು ಆ ಸ್ಥಳದಲ್ಲಿಯೇ ಲಿಪಿ ಇರುವ ಸಾರನಾಥ ಎಂಬ ಬುರುಜ ಇರುತ್ತದೆ. ಇಲ್ಲಿ ಕಸ್ತೂರಿ ಪೀತಾಂಬರ ಮತ್ತೆ ಹಿತ್ತಾಳಿ ಸಾಮಾನುಗಳ ವ್ಯಾಪಾರವು ಬಹಳ ನಡಿಯುತ್ತದೆ.

ಇಲ್ಲಿಯ ಭಾಗೀರಥಿಯು ಬಹಳ ಶೀತಲವಾಗಿಯದೆ. ಆದರಿಂದಲೇ ಕವಿಯು ಹೀಗೆ ಹೇಳುತ್ತಾನೆ.

ಪ್ರಶ್ನೆ. ಕಾ ಶೀತಲವಾಹಿನೀ ಗಂಗಾ? (ಯಾವ ಗಂಗೆಯು ಶೀತಲವಾಹಿನಿಯಾಗಿರುತ್ತದೆ?) ಉತ್ತರ. ಕಾಶೀತಲವಾಹಿನೀ ಗಂಗಾ (ಕಾಶೀ ತಲದಲ್ಲಿ ಹರಿಯುವ ಗಂಗೆಯು)

ತ್ರಿಂಬಕರಾಜ ಎಂಬ ಜ್ಯೋತಿರ್ಲಿಂಗವು ಪೂರ್ವದಲ್ಲಿ ಅಂಜನೇರಿ ಊರಿನಲ್ಲಿತ್ತು. ಅಲ್ಲಿ ಈಗಲೂ ಬಹಳ ಶಿವಾಲಯಗಳು ಇರುತ್ತವೆ. ಆದರೆ ಈ ಜ್ಯೋತಿರ್ಲಿಂಗದ ದೇವಸ್ಥಾನವು ಮುಸಲಮಾನರ ವೇಳ್ಯದಲ್ಲಿ ಸುಲಿಯಲ್ಪಟ್ಟಿತು. ನಂತರ ಸದಾಶಿವರಾವ ಭಾವುಸಾಹೇಬನು (ಪೇಶವೆಯಮನೆತನ) ತ್ರಿಂಬಕ ಊರಿನಲ್ಲಿ ಹೊಸ ಸ್ಥಳದಲ್ಲಿ ಈಗಿನ ದೇವಸ್ಥಾನವನ್ನೂ ಕಟ್ಟಿಸಿದನು. ಅದರಲ್ಲಿ ಲಿಂಗಸ್ಥಾಪನೆಯು ಇಲ್ಲದೆ ಅದರಲ್ಲಿ ಅಕ್ಕಿ ಕುಟ್ಟುವ ಹೊಂಡದ ಹಾಗೆ ಒಂದು ತಗ್ಗು ಅದೆ. ತ್ರಿಂಬಕದ ಈಚೆಕಡೆಗೆ ಅಂಜನಿ ಎಂಬ ಊರು ಇದ್ದು ಅಲ್ಲಿ ಹನುಮಂತನ ತಾಯಿಯಾದ ಅಂಜನಾದೇವಿಯು ಇರುತ್ತಿದ್ದಳು ಎಂತ ಹೇಳುತ್ತಾರೆ. ಇಲ್ಲಿಯ ದೇವಸ್ಥಾನಗಳನ್ನು ಶಾಲಿವಾಹನಶಕ ೧೦೦೦ದಲ್ಲಿ ಕಟ್ಟಿಸಿದರೆಂತ ಅಲ್ಲಿ ಲೇಖಗಳು ದೊರಕಿರುತ್ತವೆ. ಇವುಗಳ ಪೈಕಿ ಕೆಲವು ಜೈನ ಮತದವರ ದೇವಾಲಯಗಳಾಗಿರಬೇಕೆಂತ ಅನುಮಾನ ಉಂಟು. ಅದೇ ವೇಳ್ಯಕ್ಕೆ ನಾಸಿಕದ ಗುಹೆಗಳು ಸಹಾ ಕಟ್ಟಿಸಿರಬೇಕೆಂತ ಕಾಣುತ್ತದೆ. ತ್ರಿಂಬಕದಲ್ಲಿ ನಾರಾಯಣ ನಾಗಬಲಿ ಎಂಬ ಕ್ರಿಯೆಯನ್ನು ಮಾಡುವದಕ್ಕೋಸ್ಕರ ಪುಷ್ಕಳ ಮಂದಿ ಯಾತ್ರಿಕರು ಹೋಗುತ್ತಾರೆ. ಈ ಕ್ರಿಯೆಯು ಅಂದರೆ ಪ್ರೇತಕ್ಕೆ ಸದ್ಗತಿಕೊಡುವ ಕರ್ಮವಾಗಿರುತ್ತದೆ. ಯಾರಿಗಾದರೂ ತಮ್ಮ ಕುಲದವರ ಪೈಕಿ ಸತ್ತವರು ಸದ್ಗತಿ ಹೊಂದದೆ ಪಿಶಾಚಯೋನಿಯಲ್ಲಿ ಉಪದ್ರವ ಪಡುತ್ತದೆಂತ ಕಂಡುಬಂದರೆ ಅಲ್ಲಿಗೆ ಹೋಗಿ ಈ ಕ್ರಿಯೆಯನ್ನು ಮಾಡಿದರೆ ಆ ಪ್ರೇತಕ್ಕೆ ಸಂತೃಪ್ತಿ ಆಗುತ್ತದೆಂತ ಭಾವಿಕಜನರ ಶ್ರದ್ಧಾ ಇರುತ್ತದೆ.

ವೈಜನಾಥಕ್ಕೆ ಪರಳಿ ವೈಜನಾಥ ಎಂತಲೂ ಹೆಸರುಂಟು. ಈ ಜ್ಯೋತಿರ್ಲಿಂಗವು ನಿಜಾಮನ ರಾಜ್ಯದಲ್ಲಿರುತ್ತದೆ.

ಅವಂಧ್ಯಾನಾಗನಾಥ ಎಂಬ ಜ್ಯೋತಿರ್ಲಿಂಗವು ಸಹಾ ನಿಜಾಮನ ರಾಜ್ಯದಲ್ಲಿರುತ್ತದೆ.

ರಾಮೇಶ್ವರ ಲಂಕಾಪಟ್ಟಣಕ್ಕೆ ಹೊಗುವವರ ದೆಸೆಯಿಂದ ಶ್ರೀ ರಾಮಚಂದ್ರನು ಸೇತು ಅಂದರೆ ಸಮುದ್ರಕ್ಕೆ ಸಂಕವನ್ನು ಕಟ್ಟಿದನೆಂತಲೂ ಅಲ್ಲಿ ರಾಮೇಶ್ವರ ಎಂಬ ಜ್ಯೋತಿರ್ಲಿಂಗವನ್ನು ಸ್ಥಾಪಿಸಿದನೆಂತಲೂ ಪುರಾಣ ಪ್ರಸಿದ್ಧವಾದ ಆಖ್ಯಾಯಿಕೆ ಇರುತ್ತದೆ. ಈಗ ರಾಮೇಶ್ವರ ಲಿಂಗವು ದ್ವೀಪದಲ್ಲಿ ಇರುತ್ತದೆ. ಅಲ್ಲಿ ಆ ಲಿಂಗವು ದೊಡ್ಡ ದೇವಸ್ಥಾನದಲ್ಲಿರುತ್ತದೆ. ಆ ದ್ವೀಪದಲ್ಲಿ ವಸ್ತಿಯು ಸಹಾ ಪುಷ್ಕಳವಿರುತ್ತದೆ. ಸೇತುವಿನ ಹತ್ತರ ಇರುವ ಉಸುಕನ್ನು ಒಯ್ದು ಪ್ರಯಾಗದ ಹತ್ತರ ಭಾಗೀರಥಿಯಲ್ಲಿ ಹಾಕಿ ಅಲ್ಲಿಯ ಭಾಗೀರಥಿಯನ್ನೂ ಬಾಟ್ಲಿಯಲ್ಲಿ ತುಂಬಿ ಅದನ್ನು ಸೇತುವಿಗೆ ತಂದು ಆ ಗಂಗೋದಕದಿಂದ ರಾಮೇಶ್ವರನಿಗೆ ಅಭಿಷೇಕ ಮಾಡುತ್ತಾರೆ. ಹೀಗೆ ಮಾಡುವದರಿಂದ ಬಹಳ ಪುಣ್ಯವಿರುತ್ತದೆಂತ ಕಲ್ಪನೆಯಿಂದ ತಾವು ಸ್ವತಹಾ ಅಥವಾ ಬೇರೆಯವರಿಗೋಸ್ಕರವಾಗಿ ಈ ಕೆಲಸವನ್ನು ಮಾಡುವ ಜನರು ಬಹಳ ಇರುತ್ತಾರೆ. ಹೀಗೆ ಉದ್ಯೋಗ ಮಾಡುವವರಿಗೆ ಕಾವಡಿಗಾರರೆಂತ ಹೆಸರಿರುತ್ತದೆ. ಗ್ವಾಲಿಯರ, ಇಂದೂರ, ಬಡೋದಾ ಮುಂತಾದ ಊರುಗಳಲ್ಲಿ ಇಂಥಾ ಕಾವಡಿಗಾರರ ದಿವಸದ ಉತ್ಪನ್ನವು ಚಲೋದಿರುತ್ತದೆ. ಕೆಲವರು ೨೦೦ ರೂಪಾಯಿಗೆ ರಾಮೇಶ್ವರಕ್ಕೆ ಕಾವಡಿಯನ್ನೂ ತಲ್ಪಿಸುವ ಕಂಟ್ರಾಟ ತೆಗದುಕೊಳ್ಳುತ್ತಾರೆ. ಬಾಕಿಯವರು ಓಂಕಾರ ಲಿಂಗಕ್ಕೆನೇ ಅಭಿಷೇಕ ಮಾಡುತ್ತಾರೆ. ಅದಕ್ಕೆ ೫೦ ರೂಪಾಯಿ ಅಥವಾ ೬೦ ರೂಪಾಯಿ ಖರ್ಚು ಬೀಳುತ್ತದೆ. ಎಷ್ಟೋಜನರು ಕಾವಡಿ ತುಂಬಿ ಮಾರಲಿಕ್ಕೆ ಸಹಾ ತರುತ್ತಾರೆ.

ಘೃಷ್ಣೇಶ್ವರ ಎಂಬ ಜೋತಿರ್ಲಿಂಗವು ನಿಜಾಮನ ರಾಜ್ಯದಲ್ಲಿ ಔರಂಗಾಬಾದಿನ ಹತ್ತರ ವೇರುಳ ಎಂಬ ಊರಲ್ಲಿ ಇರುತ್ತದೆ. ಆ ಸ್ಥಳವು ಪೂರ್ವಕಾಲದಲ್ಲಿ ಮುರಿದು ಹೋದ್ದರಿಂದ, ಇತ್ತಲಾಗೆ ಅಹಲ್ಯಾ ಬಾಯಿಯು ಹೊಸದಾಗಿ ಜೀರ್ಣೋದ್ಧಾರ ಮಾಡಿರುತ್ತಾಳೆ. ಈ ದೇವಸ್ಥಾನದ ಹಿಂಭಾಗಕ್ಕೆ ದೊಡ್ಡ ಪರ್ವತವಿದ್ದು ಅದರಲ್ಲಿ ಅದ್ಭುತವಾದ ಗುಹೆಗಳು ಇರುತ್ತದೆ. ಈ ಗುಹೆಗಳು ಕಾರಲೆ, ಕಾನ್ಹೇರಿ, ಘಾರಾಪರಿರಿ, ಶಿವನೇರಿ, ನಾಸಿಕ ಮುಂತಾದ ಸ್ಥಳಗಳಲ್ಲಿರುವ ಗುಹೆಗಳಿಗಿಂತಲೂ ದೊಡ್ಡದಿರುತ್ತವೆ. ಇದಕ್ಕಿಂತ ದೊಡ್ಡ ಗುಹೆಗಳು ಅಜಂಟಾ ಘಟ್ಟದಲ್ಲಿ ಪರ್ಧಾಪುರದ ಗುಡ್ಡದಲ್ಲಿ ಇರುತ್ತವೆ. ಅವುಗಳಿಗೆ ಹೋಗಬೇಕಾದರೆ ಖಾನದೇಶ ಜಿಲ್ಲೆಯಲ್ಲಿ ಪಾಚೋರಾ ಸ್ಟೇಶನಿನಿಂದ ೨೦ ಹರದಾರಿ ದೂರ ಹೋಗಬೇಕು. ವೇರುಳದ ಈ ಗುಹೆಗಳಿಗೆ ಎಷ್ಟು ಖರ್ಚು ಹತ್ತಿರ ಬಹುದೆಂತ ಹೇಳುವದು ಅಸಾಧ್ಯ. ಇಲ್ಲಿ ಸುಮಾರು ೧೦-೧೫ ಗುಹೆಗಳು ಇರುತ್ತವೆ. ಇವುಗಳನ್ನೆಲ್ಲಾ ಪರ್ವತವನ್ನು ಕೊರದು ಮಾಡಿದ್ದಲ್ಲದೆ ೨೦೦೦ ವರ್ಷಗಳ ಹಿಂದೆ ಬೌದ್ಧಮತವು ಪ್ರಬಲವಾಗಿದ್ದಾಗ ಜೈನ ಅರಸರು ತಮ್ಮ ಸಾಧು ಪುರುಷರಿಗೆ ವಾಸಮಾಡುವ ದೆಸೆಯಿಂದ ಮಾಡಿಸಿರಬೇಕೆಂತ ತೋರುತ್ತದೆ. ಬೌದ್ಧರ ದೇವಸ್ಥಾನಕ್ಕೆ ಚೈತ್ಯವೆಂತಲೂ ಧರ್ಮಶಾಲೆಗೆ ವಿಹಾರವೆಂತಲೂ ಹೆಸರಿರುತ್ತದೆ. ವೇರುಳಾದ ಹತ್ತರ ದೌಲತಾಬಾದ ಎಂಬ ಕೋಟೆಯುಂಟು. ದೇವಗಿರಿ ಎಂತ ಇದರ ಪ್ರಾಚೀನ ಹೆಸರು. ಇಲ್ಲಿ ಜಾಧವ ಅರಸರು ರಾಜ್ಯಭಾರಮಾಡುತ್ತಿದ್ದರು. ಅವರಿಗೆ ಮುಸಲಮಾನರು ಪಾದಾಕ್ರಾಂತ ಮಾಡಿದರು. ಅವರ ವಂಶಜರು ಈಗ ದೇವುಳಗಾಂವ ಎಂಬಲ್ಲಿ ಇರುತ್ತಾರೆ. ಈ ವಂಶದವರಾದ ರಾಮದೇವ ಜಾಧವ, ವಜಗ ದೇವರಾವ ಜಾಧವ ಇವರು ಪ್ರಸಿದ್ಧಿ ಪುರುಷರು. ಇದೇ ಜಾಧವ ಅರಸರ ಮಂತ್ರಿಯು ಹೇಮಾಡ ಪಂತರಿದ್ದರು. ಅವರ ಹೇಮಾದ್ರಿ ಎಂಬ ಹೆಸರಿನ ಪುಷ್ಕಳ ಗ್ರಂಥಗಳು ಪ್ರಸಿದ್ಧವಾಗಿಯವೆ.

R. S. M.

ಹಾಲನ್ನು ಶುದ್ಧಿಮಾಡುವಿಕೆ.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸರಬರಾಜಾಗುವ ಹಾಲು ಸಾಮಾನ್ಯವಾಗಿ ಆರೋಗ್ಯಕರವಾದವುಗಳಾಗಿರುವುದಿಲ್ಲ. ಇವುಗಳಲ್ಲಿ ರೋಗ ಸಂಬಂಧವಾದ ಅನೇಕ ಕ್ರಿಮಿಗಳಿರುವುವು. ಸಾಮಾನ್ಯವಾಗಿ ಹಾಲಿನಲ್ಲಿರತಕ್ಕ ಮುಕ್ಕಾಲುಪಾಲು ಕ್ರಿಮಿಗಳಿಂದ ಹಾಲನ್ನು ಸೇವಿಸುವವರಿಗೆ ಯಾವ ಅಪಾಯವೂ ಇಲ್ಲದಿದ್ದಾಗ್ಯೂ ಉಳಿದ ಕೆಲವು ಕ್ರಿಮಿಗಳಿಂದ ಪ್ರಾಣಾಪತ್ತುಂಟಾಗುವ ಸಂಭವವು ಬಹಳವಾಗಿದೆ.

ಹಾಲಿನಲ್ಲಿ ವಿಷಮಶೀತ ಜ್ವರ ಮತ್ತು ಕ್ಷಯ ಇವೇ ಮೊದಲಾದ ರೋಗ ಸಂಬಂಧವಾದ ಕ್ರಿಮಿಗಳಿರುವುವು. ಮುಖ್ಯವಾಗಿ ಹಸು ಅಥವಾ ಹಸುವನ್ನು ಕರೆಯತಕ್ಕವರಿಗೆ ಮೇಲೆಹೇಳಿದ ಜಾಡ್ಯಗಳ್ಯಾವುವಾದರೂ ಇರುವ ಸಂದರ್ಭದಲ್ಲಿ ಅಂಥಾ ಹಾಲಿನಲ್ಲಿ ಆ ರೋಗ ಸಂಬಂಧವಾದ ಕ್ರಿಮಿಗಳು ಖಂಡಿತವಾಗಿಯೂ ಇದ್ದೇ ಇರುವವು. ಈ ಕ್ರಿಮಿಗಳಿಂದ ಹಾಲಿನ ರೂಪು, ಗುಣ ಮೊದಲಾದವುಗಳಲ್ಲಿ ಯಾವ ವ್ಯತ್ಯಾಸವೂ ಉಂಟಾಗುವುದಿಲ್ಲವಾದ್ದರಿಂದ ಈ ಕ್ರಿಮಿಗಳು ಹಾಲಿನಲ್ಲಿರುವುದನ್ನು ಸುಲಭವಾಗಿ ಕಂಡು ಹಿಡಿಯಲಾಗುವುದಿಲ್ಲ. ಆದರೆ ಇವುಗಳು ಮನುಷ್ಯನ ಶರೀರದಲ್ಲಿ ಸೇರಿಬಿಟ್ಟನಂತರ ಅತಿಯಾಗಿ ಹೆಚ್ಚಿ ಅವನ ಆರೋಗ್ಯಕ್ಕೆ ಬಹಳ ಕುಂದಕವನ್ನುಂಟು ಮಾಡುತ್ತವೆ. ಆದ್ದರಿಂದ ಹಾಲನ್ನು ಉಪಯೋಗಿಸುವುದಕ್ಕೆ ಮೊದಲು ಅದನ್ನು ಶುದ್ಧಿ ಮಾಡಿ ಉಪಯೋಗಿಸಬೇಕಾದದ್ದು ಅತ್ಯವಶ್ಯಕ.

ಹಾಲನ್ನು ಶುದ್ಧಿಮಾಡಲು ಅನೇಕ ಕ್ರಮಗಳಿವೆ. ಆದರೆ ಇವುಗಳಲ್ಲೆಲ್ಲಾ ಪ್ಯಾಸ್ಟಿಯರ್ (Pasteur) ಎಂಬುವವನು ಕಂಡು ಹಿಡಿದಿರ ತಕ್ಕ ಕ್ರಮವು ಅತ್ಯುತ್ತಮವಾದದ್ದಾಗಿದೆ. ಈ ಕ್ರಮಕ್ಕನುಸಾರವಾಗಿ ಹಾಲನ್ನು ಅತಿ ಬಿಸಿಯಾಗಿ ಕಾಯಿಸಿ ತಕ್ಷಣವೇ ತಣ್ಣಗಾಗುವಂತೆ ಆರಿಸುತ್ತಾರೆ. ಪ್ಯಾಸ್ಟಿಯರ್‌ರವರು ಹೇಳುವಂತೆ ಈ ಕೆಲಸವನ್ನು ಮಾಡಿದರೆ ರೋಗವನ್ನು ತರತಕ್ಕ ಕ್ರಿಮಿಗಳೆಲ್ಲವೂ ನಾಶವಾಗುವುದಲ್ಲದೆ ಹಾಲನ್ನು ಹುಳಿ ಹಿಡಿಸತಕ್ಕ ಕ್ರಿಮಿಗಳು ಸಹಾ ಹಾಲಿನ ರುಚಿಯಲ್ಲಿ ಯಾವ ಭೇದವನ್ನೂ ಮಾಡದೆ ನಾಶವಾಗುವುವು. ಮುಖ್ಯವಾಗಿ ತಾಯಿಯ ಹಾಲಿಲ್ಲದೆ ಹುಯ್ಯ ಹಾಲಿನಿಂದ ಬೆಳೆಯತಕ್ಕ ಮಕ್ಕಳಿಗೆ ಹಾಕತಕ್ಕ ಹಾಲನ್ನು ಖಂಡಿತವಾಗಿಯೂ ಪ್ಯಾಸ್ಟಿಯರವರ ಕ್ರಮಕ್ಕನುಸಾರವಾಗಿ ಶುದ್ಧಿಮಾಡಿಯೇ ಉಪಯೋಗಿಸಬೇಕು. ಇದರಲ್ಲೂ ಎರಡು ಕ್ರಮಗಳಿವೆ. ಹಾಲನ್ನು ಸೀಶೆಗಳಲ್ಲಿ ತುಂಬಿ ಶುದ್ಧಿಮಾಡುವುದು. ಒಂದು ತವರದ ಡಬ್ಬದಲ್ಲಿ ಹಾಲು ತುಂಬಲ್ಪಟ್ಟ ಸೀಶೆಗಳನ್ನು ಸಾಲಾಗಿಟ್ಟು ಹಾಲಿನ ಮಟ್ಟಕ್ಕೆ ಡಬ್ಬದಲ್ಲಿ ನೀರು ತುಂಬಿ ಒಲೆಯ ಮೇಲಿಟ್ಟು ಕಾಯಿಸಬೇಕು. ಥರ್ಮಾಮಿಟರ್ ಎಂಬ ಶಾಖದ ಅಳತೆಯನ್ನು ಕಂಡು ಹಿಡಿಯುವ ಯಂತ್ರವನ್ನು ನೀರಿನಲ್ಲಿ ಇಟ್ಟು ನೀರು ೧೫೦-೧೬೦ ಡಿಗ್ರಿ ಶಾಖ ಬರುವಷ್ಟು ಕಾದಿರುವಾಗ್ಯೆ ಡಬ್ಬವನ್ನು ಕೆಳಕ್ಕೆ ಇಳಿಸಬೇಕು. ಈ ಸೀಶೆಗಳನ್ನು ಸುಮಾರು ೨೫ ನಿಮಿಷಗಳಕಾಲ ಕಾದ ನೀರಿನಲ್ಲಿಯೇ ಬಿಟ್ಟದ್ದು ನಂತರದಲ್ಲಿ ಡಬ್ಬವನ್ನು ನಲ್ಲಿಯ ಕೆಳಗೆ ಇಟ್ಟು ನಿಧಾನವಾಗಿ ತಣ್ಣೀರನ್ನು ಬಿಡಬೇಕು. ಬಿಸಿನೀರೆಲ್ಲವೂ ಹೊರಕ್ಕೆ ಚೆಲ್ಲಿ ಹಾಲಿನ ಶಾಖವು ತಣ್ಣೀರಿನ ಶಾಖದಷ್ಟೇ ಆಗುವವರಿವಿಗೂ ತಣ್ಣೀರನ್ನು ಬಿಡುತ್ತಿರಬೇಕು. ಈ ಕ್ರಮವು ತುಂಬಾ ಖರ್ಚಿಲ್ಲದ ಮತ್ತು ಸೀಶೆಗಳು ಒಡೆಯದಂತೆ ಹಾಲು ತಣ್ಣಗೆ ಮಾಡಲ್ಪಡುವಂಥಾದ್ದಾಗಿದೆ.

ಮಕ್ಕಳಿಗೆ ಕುಡಿಸತಕ್ಕ ಹಾಲನ್ನು ಶುದ್ಧಿಮಾಡತಕ್ಕ ಕ್ರಮ.

ಇದಕ್ಕೋಸ್ಕರವಾಗಿಯೇ ತಯಾರಾಗಿರುವ ಹಾಲು ಕುಡಿಸುವ ಸೀಶೆಗಳನ್ನು ಉಪಯೋಗಿಸಬೇಕು. ಇವುಗಳು ಚೊಕ್ಕಟವಾಗಿ ತೊಳಿಯಲ್ಪಡಲು ಅನುಕೂಲಿಸುವಂತೆ ಅಗಲವಾದ ಬಾಯಿಯುಳ್ಳವುಗಳಾಗಿಯೂ ಮತ್ತು ಗುಂಡಾಗಿ ಬಗ್ಗಿರುವ ಮೂಲೆಗಳುಳ್ಳವುಗಳಾಗಿಯೂ ಇವೆ. ಶಾಖವು ಹೆಚ್ಚು ಕಡಿಮೆಯಾದರೆ ಒಡೆದು ಹೋಗದಂತೆ ಇವು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲಿ ಹಾಲನ್ನು ತುಂಬಿ ಕುದಿಯುವ ನೀರಿನಲ್ಲಿ ಇರಿಸಿ ಹಾಲು ಕಾದಮೇಲೆ ಸೀಶೆಗಳನ್ನು ಹೊರಕ್ಕೆ ತೆಗೆದು ಆರಿಸಿ ಇಟ್ಟುಕೊಂಡಿದ್ದು ಬೇಕಾದಾಗಲೆಲ್ಲಾ ಉಪಯೋಗಿಸಿಕೊಳ್ಳಬಹುದು. ಆದರೆ ಶುದ್ಧಿ ಮಾಡಲ್ಪಟ್ಟ ೨೪ ಗಂಟೆಗಳ ತರುವಾಯ ಈ ಹಾಲನ್ನು ಮಕ್ಕಳಿಗೆ ಕುಡಿಸಬಾರದು.

ಶಾಖದ ಅಳತೆಯನ್ನು ತೋರಿಸುವ ಯಂತ್ರವಿಲ್ಲದೆ ಹಾಲನ್ನು ಶುದ್ಧಿಮಾಡತಕ್ಕದ್ದು:—ಸೀಶೆಗಳನ್ನು ಚೊಕ್ಕಟವಾಗಿ ತೊಳೆದು ಅವುಗಳಲ್ಲಿ ಹಾಲನ್ನು ತುಂಬಿ ಸ್ವಲ್ಪಮಟ್ಟಿಗೆ ಸಡಿಲವಾಗಿರುವ ಬಿರಡೆಗಳನ್ನು ಹಾಕಬೇಕು. ಒಂದು ದೊಡ್ಡ ದಬರಿಯಲ್ಲಿ ಮುಕ್ಕಾಲು ಮಟ್ಟಿಗೆ ಕುದಿಯುವ ನೀರನ್ನು ತುಂಬಿಡಬೇಕು. ಸೀಶೆಗಳನ್ನೆಲ್ಲಾ ಒಂದು ತಟ್ಟೆಯಲ್ಲಿಟ್ಟು ತಟ್ಟೆಯು ನೀರಿನಲ್ಲಿ ಮುಳುಗದಂತೆ ಅದನ್ನು ಬದರಿಯಲ್ಲಿ ಐದು ನಿಮಿಷಗಳಕಾಲ ಇಟ್ಟು ಹಬೆಯು ತಪ್ಪಿಸಿಕ್ಕೊಂಡು ಹೋಗದಂತೆ ದಬರಿಯ ಬಾಯಿಗೆ ಮುಚ್ಚಳವನ್ನು ಹಾಕಬೇಕು. ನಂತರದಲ್ಲಿ ಮುಚ್ಚಳವನ್ನು ತೆಗೆದು ತಟ್ಟೆಯನ್ನು ಬಿಸಿನೀರಿನಲ್ಲಿ ಮುಣುಗಿಸಿ ಪುನಃ ಮುಚ್ಚಬೇಕು. ಹಾಲಿನ ಸೀಸೆಗಳು ಬಿಸಿನೀರಲ್ಲಿ ಸುಮಾರು ೨೫ ನಿಮಿಷಗಳಕಾಲ ಇದ್ದನಂತರ ಇವುಗಳನ್ನೆಲ್ಲಾ ತೆಗೆದು ಜಾಗ್ರತೆಯಾಗಿ ತಣ್ಣೀರಿನಲ್ಲಿ ಮುಳುಗಿಸಿ ಆರಿಸಿಟ್ಟುಕೊಂಡು ಉಪಯೋಗಿಸಬಹುದು. ಕಿ. ಗ.

ಪತ್ರವ್ಯವಹಾರ

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಲಗ್ನವಿಚಾರ.

೧.

ಸ್ವಾಮಿ,

ಕಳೆದ ಸಂಚಿಕೆಯಲ್ಲಿ ಉಡುಪರ ಪತ್ರವನ್ನು ನೋಡಿದೊಡನೆ ಕೆಲವು ವಿಚಾರಗಳು ನನ್ನಲ್ಲಿ ಹುಟ್ಟಿದವು. ಅವುಗಳೇನೆಂತ ತಮಗೆ ಬರಕೊಳ್ಳವದು ಉಚಿತವೆಂತ ತೋರಿದ್ದರಿಂದ ಅವನ್ನು ಈ ಕೆಳಗೆ ಬರಕೊಂಡಿದ್ದೇನೆ.

ಸಾಮಾನ್ಯ ವೈದಿಕರ ಮತ್ತು ಉಡುಪರ ಈ ಎರಡು ಲೇಖನಗಳನ್ನು ಓದಿದರೆ ಯಾವ ವಾದಕ್ಕೂ ನಮ್ಮ ಶಾಸ್ತ್ರಗಳಲ್ಲಿ ತಕ್ಕ ಆಧಾರಗಳಿವೆ ಎಂತ ತೋರಿಬರುತ್ತದೆ. ಉಡುಪರೂ ಸಾಮಾನ್ಯ ವೈದಿಕರೂ ಎರಡು ವರುಷಗಳ ಪರ್ಯಂತರ ಈ ವಾದವನ್ನು ಬರದರೂ ಮತ್ತು ಮತ್ತೂ ಶಾಸ್ತ್ರಾಧಾರಗಳು ಇವರುಗಳಿಗೆ ದೊರಕುವವು ಎಂಬದಕ್ಕೆ ಅನುಮಾನವಿಲ್ಲ. ಇದು ಹ್ಯಾಗೂ ಇರಲಿ. ಒಂದು ಸಂಗತಿಯು ಈ ವಾದಗಳಿಂದ ಖಚಿತವಾಗುತ್ತಿದೆ. ವೈದಿಕರು ಲೌಕಿಕರನ್ನು ನಿರ್ಬಂಧಿಸುವ ಪಾಶಗಳು ಸಡಿಲಾಗುತ್ತ ಬರುತ್ತವೆ. ಉಡುಪರು ಈಗ ಅಲ್ಪ ದೋಷಕರವೆಂತ ಹೇಳುವ ಲಗ್ನಕಾಲಗಳು ಕೆಲವು ವರುಷಗಳ ಮುಂಚೆ ಮಹಾ ದೋಷಕರವಾದವುಗಳೆಂತ ಎಣಿಸಲ್ಪಟ್ಟು ಇಂಥಾ ಲಗ್ನಗಳು ಪಂಚಾಂಗಗಳಲ್ಲಿ ತೋರಿ ಬರುವುದೇ ಅಪರೂಪವಾಗಿತ್ತು. ಈಗ ಅಲ್ಪ ದೋಷಗಳುಳ್ಳ ಲಗ್ನಗಳು ಪಂಚಾಂಗಗಳಲ್ಲಿ ತೋರಿ ಬರುವವು. ಜೋತಿಷ್ಯ ಶಾಸ್ತ್ರದಿಂದ ತೋರಿ ಬರುವ ಈ ಲಗ್ನಫಲಗಳು ಹ್ಯಾಗಿದ್ದರೂ ನಮಗೆ—ಲೌಕಿಕರಿಗೆ—ಲಗ್ನಕಾಲಗಳ ಸಂಖ್ಯೆಯು ಹೆಚ್ಚುವದರಿಂದ ಪ್ರತ್ಯಕ್ಷ ಪ್ರಯೋಜನಗಳು ಬಹಳವಿವೆ. ಸ್ವಾಮಿ, ವರುಷದ ಕೆಲವು ತಿಂಗಳುಗಳಲ್ಲಿ ಮಾತ್ರ ಲಗ್ನಗಳು ಆಗಬಹುದು. ಇತರ ತಿಂಗಳುಗಳಲ್ಲಿ ಸರ್ವಥಾ ಕೂಡದೆಂದು ಈ ವೈದಿಕರು ಹೇಳಿ ಉಂಟಾಗುವ ಅನರ್ಥಗಳಿಗೆ ಮಿತಿಯೇ ಇಲ್ಲ. ಎಲ್ಲಾ ಕಡೆಗಳಲ್ಲಿ ಉಪನಯನ ಮತ್ತು ವಿವಾಹಗಳು ಸಾಧಾರಣ ಒಂದೇ ಕಾಲದಲ್ಲಿ ಆಗುತ್ತಿರುವದರಿಂದ ಪುರೋಹಿತರ ಪುರ್ಸತು ಸಿಕ್ಕದು. ಪುರೋಹಿತರು ಬಂದರೆ ಮತ್ತೊಂದು ಕಡೆಗೆ ಹೋಗುವ ಅವಸರದಿಂದ ಉಪನಯ ವಿವಾಹವಿಧಿಗಳಲ್ಲಿ ಹಲವನ್ನು ಲೋಪಪಡಿಸಿ ವಾದ್ಯಘೋಷದಿಂದ ಮಂತ್ರಘೋಷವನ್ನು ದೂರಪಡಿಸಿಬಿಡುವರು. ವೈದಿಕರ ಉಪದ್ರವು ಹೀಗೆ, ವಾದ್ಯದವರಿಗೆ ಇಮ್ಮಡಿ ಸಂಬಳ, ಅಡಿಗೆಯವನು ಸಿಕ್ಕುವುದೇ ಇಲ್ಲ, ಅಂತೂ ವೈಶಾಖ ಮಾಸವಾದರೆ ನೀರಿನ ತತ್ವಾರ, ಮಂಗಳೂರು ಹೂ—ಇದಕ್ಕೆ ಚೀಲತುಂಬ ರೂಪಾಯಿ ಇದ್ದರೂ ಸಾಲದು. ಇಷ್ಟೆಲ್ಲ ಅಡಚಣಿಗಳು ಲಗ್ನಗಳ ಕಾಲಗಳು ಹತ್ತಿರ ಹತ್ತಿರವಾಗಿ ಸೇರುವದರಿಂದಲೆ ಪ್ರಾಪ್ತಿಸುತ್ತಿವೆ. ರವಿ, ಶನಿ, ಕೇತು, ರಾಹು ಮತ್ತು ಈ ಎಲ್ಲಾ ಪಂಚಾಂಗಗಳ ರಾಶಿಯು ಯಾವರಾಶಿ ಮೇಲೆ ಬಂದರೂ ಈ ಅರಿಷ್ಟಗಳು ಪರಿಹಾರವಾಗುವಂತಿಲ್ಲ. ಆದ್ದರಿಂದ ಈ ಎಲ್ಲಾ ವಾದಗಳು ಏನನ್ನು ಸೂಚಿಸುತ್ತಿವೆ ಎಂತ ನೋಡಿಕೊಳ್ಳಬೇಕು. ಪೂರ್ವಜರು ಆಯಾ ವಿದ್ಯಮಾನಗಳಲ್ಲಿ ಹೇಗೆ ನಡಕೊಂಡರು, ಈ ಅನುಭವದೊಡನೆ ಕಾಲ ವಿದ್ಯಮಾನಗಳನ್ನರಿತು ನಮ್ಮ ಬುದ್ಧಿಯ ಉಪಯೋಗದಿಂದ ನಾವು ಹೇಗೆ ನಡಕೊಳ್ಳಬೇಕೆಂತ ನಾವೇ ನಿರ್ಧರಿಸಕೊಳ್ಳಬೇಕು, ವಿನಹ ಜಗಳಾಡಲಿಕ್ಕೆ ಮತ್ತು ಜನರಿಗೆ ಎಲ್ಲಾ ಬಗೆಯ ಅಡಚಣಿಗಳನ್ನು ನಿರ್ಮಿಸುವುದಕ್ಕೆ ಶಾಸ್ತ್ರಗಳು ರಚಿಸಲ್ಪಟ್ಟವು ಎಂದೆನ್ನಿಸಿಕೊಳ್ಳುವಂತೆ ನಾವು ಎಂದೂ ನಡಕೊಳ್ಳ ಕೂಡದು. ಆದ್ದರಿಂದ ಪಂಚಾಂಗ ಕರ್ತರುಗಳಿಗೆ ನನ್ನ ಸೂಚನೆ ಏನಂದರೆ:—ಲಗ್ನಕಾಲಗಳ ಪಟ್ಟಿಯನ್ನು ಪಂಚಾಂಗಗಳಲ್ಲಿ ಹಾಕುವದೇ ಅಗತ್ಯವಿಲ್ಲ. ಇದರ ಬದಲಿಗೆ ಶ್ರೀ ಹರಿಯು ಆತನ ಪ್ರೇಮಮೂಲಕ ಸತ್ಕಾರ್ಯಗಳನ್ನು ಮಾಡಲು ಯಾವಾಗ ಪ್ರೇರೇಪಿಸುವನೋ ಸರ್ವರಲ್ಲಿಯೂ ಆತನ ಒಳ್ಳಿತವನ್ನು ಕಂಡು ಸರ್ವರಿಗೆ ಒಳ್ಳಿತವನ್ನೆಪೇಕ್ಷಿಸುವ ಸುಬುದ್ಧಿ ಯೋಗವು ಯಾವಾಗ ನಮಗೆ ಪ್ರಾಪ್ತವಾಗುತ್ತದೋ ಅಂಥಾ ಅನುಕೂಲವಾದ ಸಮಯದಲ್ಲಿ ಭಗವತ್ಪ್ರಾರ್ಥನೆಯಿಂದ ಕಾರ್ಯವನ್ನು ಆತನಿಗೆ ಅರ್ಪಿಸಿ ಮಾಡಿದರೆ ಯಾವ ದೋಷಗಳೂ ಬಾರವು.—ಎಂಬೀವಚನಗಳನ್ನು ಅಗತ್ಯವಿದ್ದರೆ ಶ್ಲೋಕ ರೂಪದಲ್ಲಿ ಪಂಚಾಂಗಗಳಲ್ಲಿ ಪ್ರಕಟಿಸುವದು ಉಚಿತವಾಗಿರುತ್ತದೆ.

ಮುಲ್ಕಿ, ತಾ. 19-4-14. ಸುಧಾರಣಾ ಪ್ರಿಯ.

೨.

ಪತ್ರಿಕಾಕರ್ತರೇ,

ಉಡುಪಿ ಪಂಚಾಂಗ ಕರ್ತರಾದ ಅತ್ತೂರು ವೆಂಕಟರಾಜ ಉಡುಪರು ಬರದಿರುವ ಪತ್ರವನ್ನು ಓದಿನೋಡಿದೆನು. "ಈ ಎರಡು ಲಗ್ನಗಳು ಪ್ರಶಸ್ತವಾದವುಗಳೇ ಎಂಬದಾಗಿ ಶಾಸ್ತ್ರಮರ್ಯಾದಾ ತಿಳಿದವರು ಒಪ್ಪದೆ ಇರಲಾರರು. ಅಲ್ಪವನ್ನೂ ಮಹತ್ವ ಮಾಡಿ ಇಲ್ಲದೆ ಇರುವ ದೋಷಗಳನ್ನು ಆರೋಪಿಸಿ ಜನರನ್ನು ತೊಂದರೆ ಪಡಿಸುವುದು". ಎಂಬೀತೀರ್ಮಾನವನ್ನು ಉಡುಪರು ತಮ್ಮ ವಾದಗಳ ಕೊನೆಯಲ್ಲಿ ಬರೆದಿರುವರು. ಪಂಚಾಂಗಕರ್ತರ ಈ ಉತ್ತರವನ್ನು ನೋಡಿ ಆನಂದಪಟ್ಟೆನು. ಯಾಕಂದರೆ ಈ ಲಗ್ನಗಳು ಆಕ್ಷೇಪಕರವೆಂತ ಯಾವ ಗ್ರಂಥಗಳ ಆಧಾರದಿಂದ ನಾನು ಸೂಚಿಸಿದ್ದೆನೊ ಅದೇ ಗ್ರಂಥದ ಆಧಾರದಿಂದ ಉಡುಪರು ಇವು ಆಕ್ಷೇಪಕರವಲ್ಲವೆಂತ ಬರೆದಿರುತ್ತಾರೆ. ಆ ಗ್ರಂಥದ ಹೆಸರು ಉಡುಪರು ಸೂಚಿಸಿದಂತೆ ಮಾಧವಿಯೇ ಆಗಿರುತ್ತದೆ. ಆದರೆ ಉಡುಪರು ಬರೆದಿರುವ ಶ್ಲೋಕಗಳು ಈ ಮಾಧವಿಯ ಉಪನಯನ ಅಧ್ಯಾಯದಲ್ಲಿ ತೋರುವದಿಲ್ಲ. ಬೇರೆ ಅಧ್ಯಾಯಗಳಲ್ಲಿರುತ್ತವೆ.

ನಾನು ಲಗ್ನದಲ್ಲಿ ರವಿ ಇರುವಂಥಾ ಎರಡು ಲಗ್ನ ಕಾಲಗಳ ಆಕ್ಷೇಪವನ್ನು ಬರೆದಿದ್ದೆ. ಇಂಥಾ ಆಕ್ಷೇಪಕರ ಲಗ್ನಗಳನ್ನು ಹಾಕಿದ ಪಂಚಾಂಗ ಕರ್ತರು ಉತ್ತರ ಬರಿಯದಿದ್ದನ್ನು ನೋಡಿ ಉಡುಪರು ಉತ್ತರ ಬರೆದಿರುವರು. ಉಡುಪರ ಪಂಚಾಂಗವನ್ನು ತೆರದು ನೋಡಿದ್ದಲ್ಲಿ ಇವರು ಲಗ್ನದಲ್ಲಿ ಶನಿ ಇರುವ ವೃಷಭ ಲಗ್ನ ಕಾಲಗಳನ್ನು ತಮ್ಮ ಪಂಚಾಂಗದಲ್ಲಿ ಪ್ರಕಟಿಸಿರುತ್ತಾರೆ. ಈ ಲಗ್ನಗಳು ಸಹ ನನ್ನಂಥಾ ಸಾಮಾನ್ಯನಿಗೆ ಆಕ್ಷೇಪಕರವಾಗಿಯೇ ಕಂಡು ಬರುವವು. ಯಾಕಂದರೆ ನಾನು ಇವುಗಳಿಗೆ ಆಕ್ಷೇಪ ಬರಿಯುವುದು ಮಾಧವಿಯಲ್ಲಿ ಎಲ್ಲಿಯಾದರೂ ಬರೆದಿರುವ ಶ್ಲೋಕಾಧಾರಗಳಿಂದಲ್ಲ. ಉಪನಯನ ಮುಹೂರ್ತಗಳ ಬಗ್ಯೆ ಪ್ರತ್ಯೇಕವಾಗಿರುವ ಉಪನಯನದ ಅಧ್ಯಾಯದಿಂದಲೇ ಆಗಿರುವುದು.

ಉಡುಪರು ತಮ್ಮ ವಾದಗಳ ಬಗ್ಯೆ ಅಧ್ಯಾಯ ಭೇದಗಳನ್ನು ಲೆಕ್ಕಿಸದೆ ಮಾಧವಿಯಲ್ಲಿ ಸಿಕ್ಕಿದ ಎಡೆಗಳಿಂದ ಶ್ಲೋಕಗಳನ್ನು ಎತ್ತಿ ಬರೆದಿರುತ್ತಾರೆ. ಉಡುಪಿ ಪಂಚಾಂಗ ಕರ್ತರು ವಾದಗಳನ್ನು ಆರಿಸಿ ತೆಗೆದ ಈ ವಿಧಾನವನ್ನು ನಾನೂ ಸಹ ಅನುಸರಿಸಿ ಮಾಧವಿಯನ್ನು ತೆರದು ನೋಡಿದ್ದಲ್ಲಿ ಇವರ ವಾದಗಳನ್ನು ಅಲ್ಲಗಳೆಯುವ ಶ್ಲೋಕಗಳು ಕಂಡು ಬರುತ್ತವೆ. ಇವುಗಳಿಗೆ ಉಡಪರ ಉತ್ತರವೇನು?

"ದುಷ್ಟಾಂತಿಥ್ಯರ್ಕ್ಷ ವಾರಾನಥ ವಿಷ ಘಟಿಕಾ ಕೃಷ್ಣಪಕ್ಷಾ ಪರಾಹ್ನಾ" ಎಂತ ಹೇಳಿ ಈ ಮಹಾದೋಷಗಳು ಈ ಎರಡು ಲಗ್ನಗಳಲ್ಲಿಲ್ಲವೆಂತ ಬರೆದಿರುತ್ತಾರೆ. ಆದರೆ ಉಡುಪರು ತೋರಿಸಿರುವ ಈ ಶ್ಲೋಕಗಳ ಕೊನೆ ಭಾಗದಲ್ಲಿ–ತತ್ತತ್ಕರ್ಮ ವಿಗರ್ಹಿತಾ ಗ್ರಹಗತೀಃ-ಆಯಾಯ ಸಂಸ್ಕಾರಗಳನ್ನು ಉದ್ದೇಶಿಸಿ ದೂಷಿಸಲ್ಪಟ್ಟ ಗ್ರಹ ಸ್ಥಿತಿಗಳು-ಜ್ಞಾತ್ವಾತಾನ್ ಪರಿಹೃತ್ಯ ಸೂಕ್ಷ್ಮ ಮತಯಃ ಕೂರ್ವಂತು ಸರ್ವಾಃ ಕ್ರಿಯಾಃ-ದೋಷಕರವೆಂತ ತಿಳಿದು ಇಂಥಾ ದೋಷಗಳುಳ್ಳ ಲಗ್ನಗಳನ್ನು ತ್ಯಜಿಸಿ ಜ್ಞಾನಿಗಳು ಸರ್ವ ಶುಭ ಕಾರ್ಯಗಳನ್ನು ಮಾಡಬೇಕಾಗಿರುತ್ತದೆಂತ ಅರ್ಥವುಳ್ಳ ಅಂಶವನ್ನು ಬಿಟ್ಟಿರುವರೋ ಎಂಬುದನ್ನು ಇನ್ನೊಂದು ಸಲ ನೋಡುವದು ಅಗತ್ಯವಾಗಿದೆ. ಇದೇ ಶ್ಲೋಕಗಳುಳ್ಳ ಅಧ್ಯಾಯದ ೭ನೇ ಶ್ಲೋಕಃ "ಲಗ್ನಸ್ಯ ದೋಷಾಂಸ್ತ್ಯಜ" ಇದರ ವ್ಯಾಖ್ಯಾನದಲ್ಲಿ—ಭರದ್ವಾಜ ವಚನವು—ಲಗ್ನಂತತ್ ಪರಿಹರ್ತವ್ಯಂ ಪಾಪೈರ್ದೃಷ್ಟಂ ಯುತಂ ತಥಾ—ತಥಾಚ—ನಾರದ ವಚನವು-ಕರ್ತರೀದೋಷ ದುಷ್ಟಂ ಯಲ್ಲಗ್ನಂ ತತ್ಪರಿವರ್ಜಯೇತ್‖ ಅಪಿಸೌಮ್ಯ ಗ್ರಹೈರ್ಯುಕ್ತಂ ಗುಣೈಃ ಸರ್ವೈಸ್ಸ ಮನ್ವಿತಂ‖ ಸರ್ವೆ ಪಾಪಗ್ರಹಾಯಸ್ಯ ತ್ರಿಷಡೇಕಾದಶೇಸ್ಥಿತಾಃ ‖ ತೇಷ್ವೇ ಕೋಪಿಯದಿ ಪ್ರಾಪ್ತಃ ಲಗ್ನಂ ನಿಂದಿತ ಮನ್ಯಥಾ‖ ಪುನಶ್ಚ—ಭರದ್ವಾಜ ವಚನವು—ಕೈಂದ್ರೈಶ್ಚತುರ್ಭಿಸ್ತ್ರೀತ್ರೈರ್ಹೊರಾಧಿಕ ತುಲೋಚ್ಯತೆ ತತ್ರೈವಾ ಶುಭ ಸಂಯೋಗೇನೇಷ್ಟಂ ಮನ್ಯೈಃ ಶುಭಾನ್ವಿತೈಃ- ಮುಂತಾದ ಋಷಿವಾಕ್ಯಗಳಿಂದ ಅನಂತ ಗುಣಗಳಿದ್ದರೂ ಲಗ್ನದಲ್ಲಿ ಪಾಪಗ್ರಹಗಳಿದ್ದರೆ ಅಂಥಾ ಲಗ್ನಕಾಲದಲ್ಲಿ ಶುಭಕಾರ್ಯಗಳನ್ನು ಮಾಡಕೂಡದೆಂಬ ನಿರ್ಬಂಧವಿದೆ. ಈ ನಿರ್ಬಂಧಗಳನ್ನು ಉಡುಪರು ತೆಗೆದು ಹಾಕುವ ವಿಧಾನವು ಹೇಗೆ?

ಮಾಧವಿಯಿಂದ ಕೊನೆ ಭಾಗವನ್ನು ಬಿಟ್ಟು ಕೆಲವು ಶ್ಲೋಕಗಳನ್ನು ತಮ್ಮ ಪತ್ರದಲ್ಲಿ ಹಾಕಿರುವರೆಂತ ಮೇಲೆ ಪ್ರಾಸ್ತಾಪಿಸಿದೆನಲ್ಲ. ಅದೇ ರೀತಿ ಅಗ್ರಭಾಗವನ್ನು ಬಿಟ್ಟು ಆರನೇ ಅಧ್ಯಾಯದ "ಗುಳಿಕೋದಯ…………" ಎಂಬೀ ಶ್ಲೋಕವನ್ನು ಬರದಿರುವರು. ಇದು ಸಹ ಮೇಲೆ ವಿವರಿಸಿದ ರೀತಿಯಲ್ಲಿಯೇ ವಾದ ಯುಕ್ತವಾಗಿರದು. ಕುಜ ಸೂರ್ಯಸೂನ್ವೋರ್ವಾರೊದಯಾಃ ಸರ್ವ ಗುಣೈರಭೇಧ್ಯಾಃ ಇದರಿಂದ ಶನಿ ಇರುವ ಲಗ್ನದೋಷವು ಸರ್ವ ಗುಣಗಳಿಂದಲೂ ಅಭೇದ್ಯವಾಗಿರುವುದು. ಇನ್ನು ಈ ರೀತಿ ಉಡುಪರಿಗೆ "ಅಸಂಗತ"ವೆಂತ ಕಂಡು ಬಂದದ್ದು ಮಾಧವೀ ವಚನಗಳೇ ಹೊರತು ಸಾಮಾನ್ಯ ವೈದಿಕರ ಸ್ವಕಪೋಲಕಲ್ಪಿತವಲ್ಲ. ಮಾಧವಿಯನ್ನು ಉಡುಪರು ಇನ್ನೊಮ್ಮೆ ಚನ್ನಾಗಿ ನೋಡಿಕೊಳ್ಳಬೇಕೆಂತ ವಿಜ್ಞಾಪಿಸಿಕೊಂಡು ಇಲ್ಲಿಗೆ ಈ ಲೇಖನವನ್ನು ಪ್ರಕೃತಕ್ಕೆ ಮುಗಿಸಿರುವೆನು.

ಸಾಮಾನ್ಯ ವೈದಿಕ.

* * *

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 551/1918.

ಸರ್ವೋತ್ತಮ ಭಟ್ಟಾ—ವೆಂಕಟೇಶ ಭಟ್ಟರ ಮಗ
ಕಾಸರಗೋಡು ಕಸಬೆಯಲ್ಲಿರುವವ. } ವಾದಿ.

ಮತ್ತು

ಪ್ರತಿವಾದಿರು.

1. ಗೋಪಾಲಕೃಷ್ಣ ಭಟ್ಟಾ-ರಾಮಚಂದ್ರ ಭಟ್ಟರ ಮಗ. 2. ನರಸಿಂಹ ಭಟ್ಟಾ- 1ನೇ ಪ್ರತಿವಾದಿಯ ಅಣ್ಣ ಸುಬ್ರಾಯ ಭಟ್ಟರ ಮಗ. 3. ವೆಂಕಟೇಶ ಭಟ್ಟಾ-ಅನಂತಪದ್ಮನಾಭ ಭಟ್ಟರ ಮಗ. 4. ಕೆ. ಪಿ. ಅಚ್ಚುತ್ತಯ್ಯ-ಕೆ. ಪಿ. ಅನಂತಯ್ಯನವರ ಮಗ. ೫. ವೆಂಕಟೇಶಯ್ಯ-ಸರಾಫ ಮಹಾಳಪ್ಪ ಶ್ಯಾನುಭಾಗರ ಮಗ. 6. ಅನಂತ ಶ್ಯಾನುಭಾಗ-ವಿಟ್ಲಯ್ಯ ಶ್ಯಾನುಭಾಗರ ಮಗ. 7. ಪುತ್ತು ಯಾನೆ ಅನಂತ ಶ್ಯಾನುಭಾಗ-ನಾರಾಯಣ ಶ್ಯಾನುಭಾಗರ ಮಗ. 8. ರಾಮಯ್ಯ ಶ್ಯಾನುಭಾಗ-ಸುಕಡೆ ಸುಬ್ಬ ಶ್ಯಾನುಭಾಗರ ಮಗ. 9. ವಾಮನ ಭಕ್ತ ನಾರಾಯಣಭಕ್ತರ ಮಗ. 10. ರಾಯ ಮಲ್ಯ-ಚರ್ಡಪ್ಪ ಮಲ್ಯರ ಮಗ. 11. ವೆಂಕಟೇಶ ನ್ಯಾಕ-ರಾಮ ನ್ಯಾಕರ ಮಗ. 12. ಅನಂತ ಕಮ್ತಿ-ಸುಬ್ರಾಯ ಕಮ್ತಿ ಮಗ. 13. ನಾರಾಯಣ ಪ್ರಭು-ರಾಯ ಪ್ರಭು ಮಗ. 14. ನರಸಯ್ಯ ಪ್ರಭು-ನಾರಾಯಣ ಪ್ರಭು ಮಗ. 15. ಬಪ್ಪಯ್ಯ ಕಮ್ತಿ-ಸುಬ್ಬ ಕಮ್ತಿ ಮಗ 16. ದೇವಪ್ಪ ಕಮ್ತಿ-ಶೇಷ ಕಮ್ತಿ ಮಗ. 17. ನಾರಾಯಣ ಪೈ-ಮಂಜು ಪೈ ಮಗ. 18. ವಿನಾಯಕ ಯಾನೆ ಕೃಷ್ಣ ಮಲ್ಯ-ರಾಮಚಂದ್ರ ಮಲ್ಯನ ಮಗ. 19. ಮರ್ತು ಶ್ಯಾನುಭಾಗ-ಮಂಜು ಶ್ಯಾನುಭಾಗರ ಮಗ. 20. ವಿಟ್ಠಲ ಭಕ್ತ-ಮಹಾಳಪ್ಪ ಭಕ್ತನ ಮಗ. 21. ಕೃಷ್ಣ ಶ್ಯಾನುಭಾಗ-ನರಸಯ್ಯ ಶ್ಯಾನುಭಾಗರ ಮಗ. 22. ಶ್ರೀನಿವಾಸ ಶ್ಯಾನುಭಾಗ-ಕೆಂಬಾರ ಸಾಂತಪ್ಪ ಶ್ಯಾನುಭಾಗರ ಮಗ. 23. ಕೊರಗ ಯಾನೆ ಅಣ್ಣಪ್ಪ ಶ್ಯಾನುಭಾಗ—ಕೆಂಬಾರ ಮಂಜುನಾಥ ಶ್ಯಾನುಭಾಗರ ಮಗ. 24. ಕುಂಬಳೆ ನರಸಿಂಹ ನ್ಯಾಕ-ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ವಕೀಲ. 25. ಹೊಸದುರ್ಗ ಶ್ರೀನಿವಾಸ ಕಮ್ತಿ—ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ವಕೀಲ. ಎಲ್ಲಾ ಪ್ರತಿವಾದಿರು ಕಾಸರಗೋಡು ಕಸಬೆಯಲ್ಲಿರುವವರು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ದಾಖಲಾಗಿ ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿಗೆ ಟ್ರೆನ್ಸಪರ್ ಆಗಿ ಬಂದ ಬಾಬ್ತು ಮೇಲ್ಕಂಡ ವ್ಯಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕಾಸರಗೋಡು ಶ್ರೀ ವೆಂಕಟರಮಣ ದೇವಸ್ಥಾನದ ಪರ್ಯಾಯ ಪೂಜೆ ಮತ್ತು ಪೌರೋಹಿತ್ಯ ಸಹಾ ವಾದಿಯ ಕುಟುಂಬದ ಹಕ್ಕಿನದ್ದಾಗಿ ಅವುಗಳನ್ನು ಪ್ರತಿವಾದಿರು ಅಕ್ರಮ ಸ್ವಾಧೀನ ಪಡಕೊಂಡಿರುವದರಿಂದ ಅವುಗಳ ಸ್ವಾಧೀನತೆ ಕೊಡಿಸಬೇಕೆಂತಲೂ, ಸದರಿ ಪೂಜೆಯನ್ನು ವಾದಿಯು ಮಾಡುವಲ್ಲಿ ಪ್ರತಿವಾದಿರು ಆತಂಕಿಸದಂತೆ ಅವರಿಗೆ ಶಾಶ್ವತವಾದ ಇಂಜಂಕ್ಷನ್ ಕೊಡಿಸಬೇಕಾಗಿಯೂ, 1913ನೇ ವರ್ಷದ ಹುಟ್ಟುವಳ್ಳಿಯ ರೂಪಾಯಿ 775—0—0ಕ್ಕೆ ಕೂಡಾ ಡಿಕ್ರಿ ಕೊಡಿಸಬೇಕಾಗಿ ಸಹಾ ವಾದಿಯು ದಾವಾ ಮಾಡುತ್ತಾನೆ.

ಸದರಿ ದೇವಸ್ಥಾನವು ಕಕ್ಷಿಗಾರರ ಜಾತಿಯ ಹತ್ತು ಸಮಸ್ತರ ಹಕ್ಕಿನದೆಂತ ಪ್ರತಿವಾದಿರು ಅವರ ಸ್ಟೇಟಮೆಂಟುಗಳಲ್ಲಿ ಸಾಧಿಸುವದರಿಂದ ಅವರೆಲ್ಲವರನ್ನು ಕಕ್ಷಿಯಲ್ಲಿ ಕೂಡಿಸಬೇಕಾದ್ದರಿಂದಲೂ ಮತ್ತು ಮೇಲ್ಕಂಡ ವ್ಯಾಜ್ಯವು ಕಾಸರಗೋಡು ತಾಲೂಕಿನಲ್ಲಿರುವ ಸದರಿ ಜಾತಿಯ ಎಲ್ಲಾ ಮೆಂಬರರ ಮೇಲೆ ಆಗಬೇಕಾದ್ದರಿಂದ ಸಹಾ ಸದರಿಯವರಿಗೆ ನೋಟೀಸು ಆಗಬೇಕಾಗಿ ವಾದಿಯು ಐ. ಎ. ನಂಬ್ರ 195/1914ನೇ ಅರ್ಜಿಯ ಮೂಲಕ ಜಾಹಿರು ಮಾಡಿಕೊಂಡಿದ್ದಾನೆ.

ಆದ್ದರಿಂದ ಮೇಲ್ಕಂಡ ವ್ಯಾಜ್ಯದಾಖಲಾದ ಕುರಿತು ಕಾಸರಗೋಡು ತಾಲೂಕಿನಲ್ಲಿರುವ ಗೌಡ ಸಾರಸ್ವತ ಬ್ರಾಹ್ಮಣ ಜಾತಿಯ ಎಲ್ಲಾ ಮೆಂಬರರಿಗೆ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 1ನೇ ಆರ್ಡರ್ 8ನೇ ರೂಲು ಮೇರೆಗೆ ಈ ಮೂಲಕ ನೋಟೀಸು ಕೊಡೋಣಾಗಿದೆ.

ಸದರಿ ಜಾತಿಯ ಮೆಂಬರರು 1914ನೇ ಇಸವಿ ಜೂನ್ ತಾರೀಕು 16ನೇ ಪರಾನ್ನ 10 ಘಂಟೆಗೆ ಸ್ವತಹಾ ಯಾ ಕ್ರಮವಾಗಿ ಅಧಿಕಾರ ಹೊಂದಿದ ಮುಖಾಲಿಕರ ಮೂಲಕ ತಮ್ಮನ್ನು ಕಕ್ಷಿಗಾರರಾಗಿ ಶೇರಲಿಕ್ಕೆ ಈ ಕೋರ್ಟಿಗೆ ಜಾಹಿರು ಮಾಡಿಕೊಳ್ಳಬಹುದು.

1914ನೇ ಇಸವಿ ಎಪ್ರಿಲ್ ತಿಂಗಳು 20ನೇ ತಾರೀಕಿನಲ್ಲಿ ಕೋರ್ಟಿನ ಮೊಹರು ನಿಶಿಂ ನಮ್ಮ ದಸ್ಕತಿನೊಡನೆ ಕೊಡೋಣಾಗಿ ಅದೆ.

District Munsifs' Court,
Puttur, 20th April 1914. }

C. D. J Pinto.
District Munsif.

ವಿದೇಶ ವೃತ್ತಾಂತ.

ರುಷ್ಯಾದೇಶದ ಸೆಂಟ್ ಪೀಟರ್ಸ್ ಬರ್ಗಿನಿಂದ ಚೀನದ ಮುಖ್ಯಪಟ್ಟಣವಾದ ಪೆಕಿಂಗಿಗೆ ವಾಯುವಿಮಾನದ ಮೂಲಕ ಪ್ರಯಾಣಮಾಡುವರೆ ಸನ್ನಾಹವು ನಡೆಯುತ್ತಿದೆ.

* * *

ಪನಮಾ ಕಾಲಿವೆಯು ತೆರೆಯಲ್ಪಟ್ಟರೆ ದಕ್ಷಿಣ ಅಮೇರಿಕಾ ಪಶ್ಚಿಮ ಕರಾವಳಿಯಿಂದ ಎಲ್ಲೊಫೀವರ್ ಎಂಬ ವಿಷಜ್ವರವು ಆಸ್ಯ ಖಂಡಕ್ಕೂ ಆಸ್ಯಖಂಡದಿಂದ ವಾಂತಿಭೇದಿಯು ಅಲ್ಲಿಗೂ ಹೊಗುವುದೆಂತ ಅಮೇರಿಕದ ಹಾರ್ವಾರ್ಡ್ ಪ್ರೊಪೆಸರ್ ರಿಚ್ಚಾರ್ಡರವರು ಪ್ರವಾದನೆ ಹೇಳಿರುವರು.

* * *

ಲಂಡನಿನಲ್ಲಿ ಸಪ್ರಜಿಟ್ಟೆ ಸ್ತ್ರೀಯರ ಉಪಟಳವು ಹೆಚ್ಚುತ್ತಾ ಬರುತ್ತಿದೆ. ತಾ. ೧೭ರಲ್ಲು ಯಾರ್ಮೌತಿನಲ್ಲಿ ಬ್ರಿಟಾನಿಯ ಪೆವಿಲ್ಲಿಯನ್ ಎಂಬ ರಂಗಮಂಟಪ್ಪಕ್ಕೆ ಬೆಂಕಿಕೊಟ್ಟು ಸುಟ್ಟುಹಾಕಿದರು. ಇದರಿಂದ ೧೫,೦೦೦, ಮತ್ತು ೨೦,೦೦೦ಪವನುಗಳ ನಷ್ಟಉಂಟಾಗಿರುವುದು. ಒಂದು ಪೋಸ್ಟುಕಾರ್ಡಿನಲ್ಲಿ ಮಿ| ಮೆಕನ್ನಾರು ಸಪ್ರಜಿಟ್ಟೆ ಸ್ತ್ರೀಯರ ಮುಂದಾಳಾದ ಪಂಕ್ಹರ್ಸ್ಟಳನ್ನು ಹೆಚ್ಚುಕಡಿಮೆ ಕೊಂದಂತಿರುವುದರಿಂದ ಸಾತ್ವಂತ್ರ್ಯ ಕೊಡುವ ವರೇಗೆ ನಾವು ದಯತೋರಿಸೆವು ಎಂತ ಬರದಿತ್ತು.

ಯಾರ್ಮೌತಿನ ಬೆಂಕಿಯ ವಿನಹ ಲಂಡನಿನಲ್ಲಿ ೧೭ ಸ್ಥಳಗಳಲ್ಲಿ ನಿನ್ನೆ ಬೆಂಕಿಕಾಣಿಸಿಕೊಂಡಿತು. ಇದೆಲ್ಲಾ ಸಪ್ರಜಿಟ್ಟರ ಕೃತ್ಯಗಳೆಂದು ಊಹೆಯಾಗಿದೆ.

* * *

ಅಮೇರಿಕದ ಸಂಯುಕ್ತ ಸಂಸ್ಥಾನದ ಸರಕಾರಕ್ಕೂ ಮೆಕ್ಸಿಕೋ ಸೀಮೆಯ ಸರಕಾರಕ್ಕೂ ಜಟಾಪಟಿಯಾಗುವ ಸಂಭವ ತೋರುತ್ತಿದೆ. ಮೆಕ್ಸಿಕೊದವರು ಟಂಪಿಕೋದಲ್ಲಿ ಪೆಟ್ರೊಲ್ ಒಯ್ಯಲಿಕ್ಕೆ ಸಿದ್ಧಮಾಡುತ್ತಿದ್ದ ನಾವಿಕರ ಒಂದು ಸೇನೆಯನ್ನು ಶೆರೆಹಿಡಿದು ಮುಚ್ಚಿಹಾಕಿದರು. ಸಂಯುಕ್ತ ಸರಕಾರದವರು ಎದುರಿಸಿ ತಾವು ಮಾಡಿದ ಕೆಲಸಕ್ಕೆ ಕ್ಷಮೆ ಕೇಳಬೇಕೆಂದು ಮೆಕ್ಸಿಕೋ ಸರಕಾರದವರನ್ನು ಕೇಳಿಕೊಂಡರು. ಮೆಕ್ಸಿಕೋ ಸರಕಾರದವರು ಸೆರೆಯುವರನ್ನು ಬಿಡುಗಡೆ ಮಾಡಿದರೂ ಕ್ಷಮೆ ಕೇಳಲು ಒಪ್ಪಲಿಲ್ಲ. ಇದರ ಹೊರತು ಸಂಯುಕ್ತ ಸಂಸ್ಥಾನದ ಪ್ರೆಸಿಡೆಂಟ ವಿಲ್ಸನರು ತಮ್ಮ ಅಡ್ಮಿರಲರ ಮೂಲಕ—ಮೆಕ್ಸಿಕೋವಿನ ಸೈನ್ಯಗಳು ಸಂಯುಕ್ತ ಸಂಸ್ಥಾನದ ನಿಶಾನಿಗೆ ಬಹುಮಾನಾರ್ಥವಾದ ವಂದನೆಗಳನ್ನು ಮಾಡಬೇಕೆಂದು ಕೇಳಿಕೊಂಡರು. ಆದರೆ ಮೆಕ್ಸಿಕೋ ಸರಕಾರದವರು ಇದಕ್ಕೆ ಒಪ್ಪದ್ದರಿಂದ ಅಮೇರಿಕದವರು ಅಲ್ಲಿಗೆ ತಮ್ಮ ಸೈನ್ಯ ಕಳುಹಿಸಿಕೊಟ್ಟರು. ಮೆಕ್ಸಿಕೋ ಸರಕಾರದ ಪ್ರೆಸಿಡೆಂಟ ಹುರ್ಟೇಟರು ಇದರನಂತರ ಸಂಯುಕ್ತ ಸಂಸ್ಥಾನದ ಬಹುಮಾನಾರ್ಥವಾಗಿ ೨೧ ಗುಂಡು ಹಾರಿಸುವೆವೆಂದೂ ಆದರೆ ಒಂದೊಂದು ಗುಂಡು ಹಾರಿಸಿದ ಕೂಡ್ಲೇ ಸಂಯುಕ್ತ ಸಂಸ್ಥಾನದವರು ಮೆಕ್ಸಿಕೋ ಸಂಸ್ಥಾನದ ಬಹುಮಾನಾರ್ಥವಾಗಿ ಒಂದೊಂದು ಮರುಗುಂಡು ಹಾರಿಸಬೇಕೆಂತಲೂ ಕೇಳಿಕೊಂಡರು. ಆದರೆ ಪ್ರೆಸಿಡೆಂಟ ವಿಲ್ಸನರು ಇದಕ್ಕೆ ಒಪ್ಪದೆ ಮೆಕ್ಸಿಕೋ ಸಂಸ್ಥಾನದ ೨೧ ಗುಂಡುಗಳು ಹಾರಿಸಿ ಆದನಂತರ ತಮ್ಮ ೨೧ ಗುಂಡುಗಳು ಹಾರಿಸಲ್ಪಡುವವೆಂತ ಹೇಳಿದರು. ಆದರೆ ಜನರಲ್ ಹುರೇಟರವರು ಇದಕ್ಕೆ ಒಪ್ಪದ್ದರಿಂದ ಸಂಯುಕ್ತ ಸಂಸ್ಥಾನದವರು ತಮ್ಮ ಸೇನೆಯನ್ನು ಮೆಕ್ಸಿಕೋಕ್ಕೆ ವಿರೋಧವಾಗಿ ಕಳುಹಿಸಲು ನಿರ್ಣಯಿಸಿರುವರು. ಹೀಗೆ ಮೆಕ್ಸಿಕೋದವರಿಗೂ ಸಂಯುಕ್ತ ಸಂಸ್ಥಾನದವರಿಗೂ ಯುದ್ಧವಾಗುವ ಸಂಭವ ತೋರುತ್ತಿದೆ.

* * *

೧೯೧೩ನೇ ಇಸವಿಗೆ ಅಂತ್ಯವಾಗುವ ವರುಷದಲ್ಲಿ ಲಂಡನಿನ ಸಫ್ರಜಿಟ್ಟ ಸ್ತ್ರೀಯರು ಬೆಂಕಿಕೊಟ್ಟು ಒಟ್ಟಿಗೆ ೨,೫೦,೦೦೦ ಪವನು ಬಾಳುವ ಸೊತ್ತುಗಳನ್ನು ಸುಟ್ಟು ಹಾಕಿದರೆಂತ ತಿಳಿದುಬರುತ್ತದೆ.

* * *

ಉತ್ತರ ಹಿಂದೂಸ್ಥಾನ.

ಕಳದವಾರ ಹಿಂದುಸ್ಥಾನದಲ್ಲೆಲ್ಲಾ ೧೪,೭೩೧ಮಂದಿಗೆ ಪ್ಲೇಗಬೇನೆಯು ಸೋಂಕಿ ೧೨,೧೦೪ ಮಂದಿ ಮೃತಪಟ್ಟರು. ಈ ಪೈಕಿ ಸಂಯುಕ್ತ ಸಂಸ್ಥಾನದಲ್ಲಿ ೪,೬೧೦; ಪಂಜಾಬು ೩,೧೬೪; ಬಿಹಾರ್ ೩,೧೯೧; ಮುಂಬಾಯಿ ೬೭೭; ಬಂಗಾಳ ೩೦; ಮದ್ರಾಸ್ ೨೮; ಬರ್ಮ ೧೬೪; ರಾಜಪುತಾನ ೧೫೭, ಮರಣಗಳಾದವು. ಬಾಕಿ ಮರಣ ಸಂಖ್ಯೆ ಮೈಸೂರು, ಮಧ್ಯ ಹಿಂದೂಸ್ಥಾನ, ಹೈದರಾಬಾದ್ ಮೊದಲಾದ ಪ್ರಾಂತ್ಯಗಳಲ್ಲಾದವು.

* * *

ಬರೋಡೆಯ ಗಾಯಕವಾಡ ಮಹಾರಾಜರವರು ಯೂರೋಪಿಗೆ ಹೋಗಲು ಕಳದ ಶನಿವಾರ ಮುಂಬಾಯಿಯಲ್ಲಿ ಹಡಗಹತ್ತಿದರು. ಯೂರೋಪ ಖಂಡದಲ್ಲಿ ಮಹಾರಾಜರು ೬ತಿಂಗಳಕಾಲ ಉಳಕೊಳ್ಳುವರು.

* * *

ಗುಜರಾತಿನ ರೈಲ್ವೇ ಅಂಗಳದಲ್ಲಿ ಬೆಂಕಿಬಿದ್ದು ಸುಮಾರು ಅರ್ಧಲಕ್ಷ ರೂಪಾಯಿಗಳ ನಷ್ಟಉಂಟಾಗಿರುವುದು.

ಮುಂಬಾಯಿಯ ಹೊಸ ಅಲೆಕ್ಸಾಂಡ್ರ ಬಂದರದಲ್ಲಿ ಹತ್ತೀಮೂಟೆಗಳಿಗೆ ಬೆಂಕಿಬಿದ್ದುರುವುದು. ಹತ್ತೀಮೂಟೆಗಳಿಗೆ ನಾಲ್ಕು ದಿಕ್ಕುಗಳಿಂದಲೂ ಬೆಂಕಿತಾಗಿ ಹೊಸ ನಮೂನೆಯ ನೀಲ ಕಿಡಿಗಳಿಂದ ಉರಿಯಿತ್ತಿತ್ತು.

ತಾ. ೧೬ರಲ್ಲು ಕೊಲ್ಲೇಬ ಹತ್ತಿಮೂಟೆಗಳಲ್ಲಿ ಪುನಃ ಎರಡು ಕಡೆಗಳಲ್ಲಿ ಬೆಂಕಿ ಕಾಣಿಸಿಕೊಂಡಿತು. ಇದರಿಂದ ನಷ್ಟ ಸ್ವಲ್ಪವೇ ಆಯಿತು. ಆದರೆ ರಾತ್ರಿ ತಿರಿಗಿ ಬೆಂಕಿ ಕಾಣಿಸಿಕೊಂಡು ರಾಲಿಬ್ರದರ್ಸ್ ಕಂಪೆನಿಯ ೧೨೦೦ ಬೇಲುಗಳೂ ಡಲ್‌ಪುತ್ರ ಮತ್ತು ಪಟೇಲ ಕಂಪೆನಿಯ ೬೦೦ ಬೇಲುಗಳೂ ಸುಟ್ಟುಹೋದವು. ರಾಲಿ ಬ್ರದರ್ಸಿನವರಿಗೆ ಒಟ್ಟಿಗೆ ೧೦,೦೦೦ ರೂಪಾಯಿಗಳ ನಷ್ಟವಾಯಿತು.

* * *

ಪ್ಲೇಗಬೇನೆಯು ಮುಂಬಾಯಿಯ ಪ್ರತಿಗಲ್ಲಿಯಲ್ಲೆಂಬಂತೆ ತಲೆದೋರಿರುವುದು. ಕಳದ ವಾರದಲ್ಲಿ ೨೩೩ ಮರಣಗಳಾಗಿರುವವು. ಕಳದ ೫ವರ್ಷಗಳಿಂದ ಈ ಋತುವಿನಲ್ಲಿ ಪ್ಲೇಗು ಮರಣಸಂಖ್ಯೆಯು ಸರಾಸರಿ ಇಷ್ಟೇ ಆಗಿರುವದು. ಪಟ್ಟಣದ ಅನಾರೋಗ್ಯಕರವಾದ ಪ್ರಾಂತ್ಯದಲ್ಲಿ ಇದರ ಹಾವಳಿಯು ಮಾತ್ರ ಹೆಚ್ಚಿದೆ. ಇತರ ಸಂಗತಿಯಲ್ಲಿ ನೋಡುವುದಾದರೆ ಮುಂಬಾಯಿಯ ಮರಣಸಂಖ್ಯೆಯು ಹೆಚ್ಚಿಲ್ಲವೆಂದು ಹೇಳಬೇಕು. ವಾರಕ್ಕೆ ೩೪೩ ಜನನಗಳೂ ೨೧ ಮರಣಗಳೂ ಉಂಟಾಗುತ್ತಿವೆ.

* * *

ಬಾರಿಸಾಲಿನ ಧರಖಾಲೆಎಂಬ ಗ್ರಾಮದಲ್ಲಿಯ ಫರ್ ಶಾನ್ ಎಂಬ ಒಬ್ಬ ಮಹಮ್ಮದೀಹೆಂಗಸು (ಆರ್ಮ್ ಆಕ್ಟ್) ಲ್ಯಾಸನ್ಸ್ ಇಲ್ಲದೆ ಕೋವಿಯನ್ನು ಇಟ್ಟುಕೊಂಡಿದ್ದಾಳೆಂಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವಳು. ಒಂದು ಕಳವು ಮೊಕದಮೆಯಲ್ಲಿ ಬಾರಿಸಾಲಿನ ಪೋಲೀಸಿನವರು ಆ ಗ್ರಾಮಕ್ಕೆ ಹೋಗಿ ನಸರುದ್ದೀನ ಎಂಬವನ ಮನೆಯನ್ನು ಜಡ್ತಿಮಾಡಿದರು. ಜಡ್ತಿಮಾಡುವಾಗ ನಸರುದ್ದೀನನ ಹೆಂಡತಿ ಫರ್‌ಶಾನಳು ಬೂದಿಯ ಅಡಿಯಲ್ಲಿ ಏನನ್ನೊ ಬಚ್ಚಿಡುತ್ತಿದ್ದದ್ದು ಪೋಲೀಸಿನವರ ದೃಷ್ಟಿಗೆ ಬಿತ್ತು. ಪೋಲೀಸಿನವರು ಕೂಡಲೇ ಬೂದಿಯ ಅಡಿಯಲ್ಲಿ ಪರಿಶೋಧನೆ ನಡಿಸಲು ಒಂದು ರಿವೋಲ್ವರ್ ಕಂಡು ಹಿಡಿಯಲ್ಪಟ್ಟಿತು.

* * *

ಕಲ್ಕತ್ತೆಯ ಚಿತ್ತೂರಿನ ಸನ್‌ಜೂಟ್‌ಪ್ರೆಸ್ ಎಂಬ ಸನಬುಖಾನೆಯಲ್ಲಿ ಬೆಂಕಿಯುಂಟಾಗಿ ಸುಮಾರು ಅರ್ಧ ಲಕ್ಷ ರೂಪಾಯಿಗಳ ನಷ್ಟ ಉಂಟಾಗಿರುವುದು. ಖಾನೆಯು ಎರಡು ಉಪ್ಪರಿಗೆಗಳುಲ್ಲ ಕಟ್ಟೋಣವಾಗಿದ್ದು ೧೫೦ಅಡಿ ಉದ್ದ ೪೦ಅಡಿ ಅಗಲ ವಿಸ್ತೀರ್ಣದ್ದು. ಅದಕ್ಕೆ ತಾಗಿದ್ದ ಇತರ ಖಾನೆಗಳಿಗೂ ಬೆಂಕಿತಗಲುವ ಸಂಭವವಿತ್ತು. ಆದರೆ ಚೀಫ್ ಇಂಜೆನಿಯರರ ಸಾಹಸದಿಂದ ಈ ಅವಗಡವು ಸಂಭವಿಸಲಿಲ್ಲ. ಈ ಖಾನೆಯಲ್ಲಿ ೫೦೦ ಬೇಲ್ ಸನಬು ಇತ್ತು.

* * *

ಮುಂಬಾಯಿ ಪ್ರಾಂತ್ಯದಲ್ಲಿ ಈ ವರ್ಷ ಮಾವಿನ ಹಣ್ಣಿನ ಬೆಲೆಯು ಬಹಳ ಕೆಟ್ಟಿರುವುದು. ಮಾವಿನ ಮರದ ಹೂವುಗಳು ಮಿಡಿಗಳನ್ನು ಬಿಡುವಮೊದಲು ಸಿಡಿಲು ಮಳೆಗರೆದು ಹೂಗಳು ಉದುರಿ ಹೋದವು. ಅಳಿದುಳಿದ ಹೂಗಳ ಕೆಲವು ಮಿಡಿಗಳು ಅನಂತರ ಬೀಸಿದ ಬಿಳುಸಾದ ಗಾಳಿಯಿಂದ ಕೆಳಬಿದ್ದವು. ಹೀಗೆ ಈ ವರ್ಷ ಉಪ್ಪಿನ ಕಾಯಿ ಚಟ್ನಿಗಳು ಕಳದ ವರ್ಷದ ಅರ್ದದಷ್ಟು ಇಲ್ಲವಾಗಿವೆ. ಮಾವಿನ ಮರದಲ್ಲಿ ಹೂಬಿಟ್ಟಿರುವಾಗಲೇ ಮರಗಳನ್ನು ಗುತ್ತಿಗೆ ಮಾಡಿಕೊಂಡು ಹಣ್ಣು ವ್ಯಾಪಾರಸ್ಥರಿಗೆ ಈ ವರ್ಷ ಬಹಳ ನಷ್ಟವಾಗಿರುವುದು. ಡಜನಿಗೆ ೬-೮ ರೂಪಾಯಿಗೆ ಮಾರಲ್ಪಡುತ್ತಿದ್ದ ಅತ್ಯುತ್ತಮ ಹಣ್ಣುಗಳ ಕ್ರಯವು ಈ ವರ್ಷ ರೂ ೧೫ಕ್ಕೆ ಏರಿರುವುದು. ೩-೪ ರೂಪಾಯಿಗೆ ಮಾರಲ್ಪಡುತ್ತಿದ್ದ ಹಣ್ಣುಗಳ ಕ್ರಯವು ರೂ ೧೦ಕ್ಕೆ ಏರಿಯಿದೆ.

* * *

ಭಿಕ್ಷಾಟನ ವೃತ್ತಿಯನ್ನು ನಿಲ್ಲಿಸುವ ಮಸೂದೆಯು ಬರುವ ಪಂಜಾಬು ನ್ಯಾಯವಿಧಾಯಕ ಸಭೆಯ ಮುಂದೆ ನಾಮಧಾರ್ ಶಹಾಯಿರವರಿಂದ ಇಡಲ್ಪಡುವುದು. ಭಿಕ್ಷಾಟನ ವೃತ್ತಿಯಲ್ಲೇ ಕಾಲಕ್ಷೇಪಮಾಡಿ ಸಣ್ಣ ಬಾಲಕ ಬಾಲಕಿಯರನ್ನು ಕೂಡಾ ಈ ವೃತ್ತಿಯಲ್ಲಿ ತರ್ಬೀತುಮಾಡುವ ಪದ್ಧತಿಯನ್ನು ಹೋಗಗೊಳಿಸುವ ಸಂಬಂಧ ಆಲೋಚಿಸತಕ್ಕ ಸಲಹೆಕೊಡುವರೆ ಸರಕಾರ ಹುದ್ದೆದಾರರೂ ಹುದ್ದೆದಾರರಲ್ಲದ ಮೆಂಬರರೂ ಕೂಡಿರುವ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬದೇ ಈ ಮಸೂದೆಯ ತಾತ್ಪರ್ಯವಾಗಿರುವುದು.

* * *

ಪಂಜಾಬಿನಲ್ಲಿ ಈಗ ಉರ್ದುಭಾಷೆಯ ೮ ದಿನಾವಹಿ ಪತ್ರಿಕೆಗಳಿವೆ. ೫ದಿನಾವಹಿಗಳು ಹಿಂದುಗಳಿಂದಲೂ ೩ ಮಹಮ್ಮದೀಯರಿಂದಲೂ ನಡಿಯಲ್ಪಡುತ್ತಿವೆ. ಈಚೆಗೆ ತಾನೇ ಪ್ರಚಾರಕ್ಕೆ ಬಂದ "ದೀಪಕ"ಎಂಬ ದಿನಾವಹಿ ಪತ್ರಿಕೆಯು ಸರಳದೇವಿ ಚೌದುರಾಣಿ ಎಂಬ ಹೆಂಗಸಿನಿಂದ ನಡಿಸಲ್ಪಡುತ್ತಿದೆ.

* * *

ಲಾಹೋರಿನ ಮಾರ್ವಾರ್ ಬೇಂಕು; ಲಿಮಿಟೆಡ್ ಎಂಬ ಬೇಂಕಿನ ಲೇವಾದೇವಿಯು ತಾ. ೧೫ರಿಂದ ನಿಲ್ಲಿಸಲ್ಪಟ್ಟಿರುವುದು. ಈ ಬೇಂಕನ್ನು ಕಳೆದು ಬಿಡುವ ಅಲೋ

ನಡಿಸುವರೆ ಹಿಸೆದಾರರ ಸಭೆಯು ಮೇ ತಿಂಗಳ ತಾ. ೩ರಲ್ಲು ಕೂಡುವುದು.

* * *

ಅಮೃತಸಾರಿನ ಒಬ್ಬ ಯುವಕ ಬ್ರಾಹ್ಮಣನು ಗುರುಡಾಸ ಪುರದಲ್ಲಿ ಕೆಲವು ದಿನ ಅಗ್ನಿ ಪೂಜೆಮಾಡುತ್ತಿದ್ದು ಕಡೆಗೆ ತನ್ನನ್ನು ತಾನೇ ಬೆಂಕಿಗೆ ಆಹುತಿ ಕೊಟ್ಟನು. ಈ ಯಜ್ಞದಲ್ಲಿ ಪಾಲುಗಾರಳಾಗಿದ್ದ ಅವನ ಹೆಂಡತಿಯೂ ಗಂಡನೊಡನೆಯೇ ಬೆಂಕಿಗೆ ಬಿದ್ದಳು. ಇಬ್ಬರೂ ಸುಟ್ಟು ಬೂದಿಯಾದರು. ಅವರ ಒಂದು ಚಿಕ್ಕಕೂಸು ಕೆಲಸದವರ ಕೈಯಲ್ಲಿ ಇತ್ತಂತೆ.

* * *

ಬ್ರಾಹ್ಮಣರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳಬೇಕೆಂದು ರಾವಲ್‌ಪಿಂಡಿ, ಜ್ಹೀಲಮಿನ ಬ್ರಾಹ್ಮಣ ಪ್ರತಿನಿಧಿಗಳು ಸರ್ವ ಸೇನಾಧಿಪತಿಗಳವರಿಗೆ ಭೇಟಿಕೊಟ್ಟು ಬೆಸಗೊಂಡಿರುವರು. ಸಂದರ್ಭ ಬಿದ್ದಾಗ ಈ ವಿಜ್ಞಾಪನೆಯು ನೆರವೇರಿಸಲ್ಪಡುವುದೆಂದು ಸರ್ವ ಸೇನಾಪತಿಗಳವರ ಅಪ್ಪಣೆಯಾಗಿರುವದು.

* * *

ಲಾಹೋರಿನಲ್ಲಿರುವ ಈಜಿಪ್ಷಿಯನ್ ಸಿಗರೇಟ್ ಫೇಕ್ಟರಿ ಎಂಬ ಸಿಗರೆಟ್ ಕಾರ್ಖಾನೆಗೆ ತಾ. ೧೪ರಲ್ಲು ಬೆಂಕಿ ಬಿದ್ದು ಸುಟ್ಟು ಹೋಯಿತು. ಇದರಿಂದ ಮಾಲೀಕರಿಗೆ ಬಹಳ ನಷ್ಟವಾಗಿರುವುದು.

* * *

ಲಾಹೋರಿನ 'ದೇಶ್' ಎಂಬ ಪತ್ರಿಕೆಯ ಮೇಲೆ ಅಲ್ಲಿಯ ಚೀಫ್ ಕೋರ್ಟಿನ ವಕೀಲರಾದ ಪಂಡಿತ ರಂಮಾಜಿ ದತ್ತ ಚೌದುರಿಯವರು ತಂದ ಮಾನನಷ್ಟ ಮೊಕದಮೆಯಲ್ಲಿ ಸಂಪಾದಕರಾದ ದಿನನಾಥರಿಗೆ ೩ ತಿಂಗಳು ಸಾಧಾರಣ ಸಜೆ ವಿಧಿಸಲ್ಪಟ್ಟಿತು. ಇವರು ಆಪೀಲು ಮಾಡಿಕೊಂಡದ್ದರಿಂದ ಆಪೀಲು ತನಖಿಯಾಗುವ ವರೆಗೆ ೫೦೦ ರೂಪಾಯಿ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು.

* * *

೨೪ ವರ್ಷ ವಯಸ್ಸಿನ ಅಮೇರಿಕದ ಒಬ್ಬ ಲೋಕಸಂಚಾರಿಯು ಈಚೆಗೆ ತಾನೇ ಮುಂಬಾಯಿಗೆ ಬಂದು ತಲಪಿರುವನು. ಇವನು ರುಷ್ಯದ ಸೆಂಟ್ ಪೀಟರ್ಸ್ ಬರ್ಗಿನಿಂದ ನಿಜ್ನಿನೋವಗೋರ್ಡುವರೆಗೆ ೧೨,೦೦೦ ಮೈಲುಗಳನ್ನು ೧೫ ಅಡಿ ತೇರಿನಲ್ಲಿಯೂ ಕುದುರೆಯ ಮೇಲೆ ೧೦೦೦ ಮೈಲು ದೂರ ಮೆಸಪೊಟಾಮಿಯಕ್ಕೂ ಸವಾರಿ ಮಾಡಿರುವೆನೆಂದು ಹೇಳುವನು. ಈ ಪ್ರಯಾಣದಲ್ಲಿ ತನ್ನ ಮನೆಯ ಆಶೆಯು ಹೋಗಿ ರುಷ್ಯಾ ದೇಶದ ರೈತಾಪಿ ಜನರ ಜೀವನವೇ ಒಳ್ಳೇದೆಂದು ಕಂಡಿದೆ ಎಂದು ಹೇಳುವನು. ಟರ್ಕಿ, ಪರ್ಶಿಯ ಸರಹದ್ದಿನಲ್ಲಿ ಇವನನ್ನು ತುರ್ಕರು ಗೂಢಾಚಾರ್ಯನೆಂಬ ಅನುಮಾನದ ಮೇಲೆ ಕೈದುಮಾಡಿದರೂ ಬಹಳ ಪ್ರಯತ್ನದಿಂದ ತಪ್ಪಿಸಿಕೊಂಡನಂತೆ.

* * *

ದಕ್ಷಿಣ ಅಫ್ರಿಕದ ಭಾರತೀಯರ ಹಾಲಹವಾಲೆಗಳನ್ನು ತಿಳಕೊಳ್ಳಲು ದಕ್ಷಿಣ ಆಫ್ರಿಕಕ್ಕೆ ಹೋದ ರೆವೆರೆಂಡ್ ಸಿ. ಎಫ್. ಅಂಡ್ರೂಸರವರು ಲಂಡನಿಗೆ ಹೋಗಿ ಅಲ್ಲಿಂದ ಹೊರಟು ತಾ. ೨೬ರಲ್ಲು ಮುಂಬಾಯಿಗೆ ಬಂದು ತಲಪಿದರು. ಹಡಗದಲ್ಲಿ ಇವರ ಮೊಣಗಂಟಿಗೆ ಒಂದು ಅವಗಡ ಸಂಭವಿಸಿರುವುದು. ಲಂಡನಿಗೆ ಹೋಗಿರುವ ಮಾನ್ಯ ಗೋಖಲೆಯವರ ಆರೋಗ್ಯವು ಅವರು ಲಂಡನಿಗೆ ತಲಪಿದ ಕಾಲದಲ್ಲಿ ಬಹಳ ಕೆಟ್ಟದಿತ್ತೆಂತಲೂ ತಾನು ಶೀಮೆಯನ್ನು ಬಿಡುವ ಕಾಲ ಸಲ್ಪ ಗುಣಾಂಶ ಸ್ಥಿತಿಯಲ್ಲಿದ್ದರೆಂತಲೂ ರೆ| ಅಂಡ್ರೂಸರು ಹೇಳಿರುವರು. ದಕ್ಷಿಣ ಅಫ್ರಿಕದ ಸ್ಥಿತಿಯು ಈಗ ನಿರೀಕ್ಷಾಸ್ಪದವಾಗಿದ್ದರೂ ಕೆಲವು ಸಂಗತಿಗಳಲ್ಲಿ ಮುಖ್ಯವಾಗಿ ಲ್ಯಾಸನ್ಸ್ ಸಂಬಂಧ ತೊಂದರೆಯನ್ನು ಹೋಗಗೊಳಿಸಲು ಪ್ರಯತ್ನವು ಅವಶ್ಯವೆಂದೂ, ಮೆ| ಗಂಧಿಯವರು ಅಂತಹ ಕಷ್ಟಕಾಲದಲ್ಲಿ ನಡಕ್ಕೊಂಡ ರೀತಿಯು ಹಿಂದೂಸ್ಥಾನಕ್ಕೆ ಬಹುಮಾನವನ್ನು ತರುವಂಥಾದ್ದಾಗಿದೆಂದೂ ಮೆ| ಗಂಧಿಯವರಂತಹರ ಪ್ರಯತ್ನದಿಂದಲೇ ಭಾರತೀಯರಿಗೆ ತಕ್ಕದಾದ ರಿಯಾತಿಯು ತೋರಿಸಲ್ಪಡುವ ಹಾಗಾಯಿತೆಂದೂ ಅಂಡ್ರೂಸರವರ ಅಭಿಪ್ರಾಯವಾಗಿದೆ. ದಕ್ಷಿಣ ಆಫ್ರೀಕದ ಭಾರತೀಯರು ಮೆ| ಗಂಧಿಯವರ ಮುಂದಾಳುತನದಲ್ಲಿ ಬಹಳ ಧೈರ್ಯ ಮತ್ತು ಸಹನ ಶಕ್ತಿಯನ್ನು ತೋರಿಸಿದರು. ಹಿಂದುಗಳೂ ಮಹಮ್ಮದೀಯರೂ ಪರಸ್ಪರ ಒಗ್ಗಟ್ಟಾಗಿ ಕಷ್ಟಗಳನ್ನು ತಾಳಿ ಮೆ| ಗಂಧಿಯವರೊಡನೆ ಒಂದೇ ಉದ್ದೇಶಕ್ಕಾಗಿ ಹೋರಾಡಿದರು ಎಂಬಿತ್ಯಾದಿ ಮಾತುಗಳನ್ನು ಹೇಳಿ ಮುಂಬಾಯಿಂದ ಕಲ್ಕತೆಗೆ ಹೊರಟರು. ಅಲ್ಲಿಂದ ಡಿಲ್ಲಿಗೆ ಹೋಗುವರು.

* * *

ಕಳದ ಸಂಚಿಕೆಯಲ್ಲಿ ತಿಳಿಸಿದಂತೆ ಸೆಕ್ರಟರಿ ಆಫ್ ಸ್ಟೇಟ್ ಕೌನ್ಸಿಲ್ ಮೊದಲಾದ ಹಿಂದೂಸ್ಥಾನದ ಆಡಳಿತೆ ಸಂಬಂಧ ಕೆಲವು ಬದಲಾವಣೆಗಳನ್ನು ಮಾಡಲು ಪ್ರಯತ್ನ ನಡಿಸುವಂತೆ ಇಂಗ್ಲಾಂಡಿನವರನ್ನು ಪ್ರೋತ್ಸಾಹಿಸುವರೆ ಹಿಂದೂಸ್ಥಾನದಿಂದ ರಾಷ್ಟ್ರೀಯ ಸಭೆಯ ಪರವಾಗಿ ಮಾನ್ಯ ಎಮ್. ಹೇಕೂ, ಮಾನ್ಯ ಸಚ್ಚಿದಾನಂದ ಸಿನ್ಹ; ಮಾನ್ಯ ಸಾವತ್, ಮಾನ್ಯ ಬಿ. ಎನ್. ಶರ್ಮಾ ಮತ್ತು ಮಾನ್ಯ ಮಹಮದ್ ಆಲಿಯವರು ಶೀಮೆಗೆ ಹೋಗಲು ತಾ. ೧೮ ರಲ್ಲು ಮುಂಬಾಯಲ್ಲಿ ಹಡಗ ಹತ್ತಿರುವರು. ಮಾನ್ಯ ಭೂಪೇಂದ್ರನಾಥ ಬಾಸುರವರು ಇನ್ನೊಂದು ಪಕ್ಷದ ನಂತರ ಹೋಗುವರು. ಈ ಪ್ರತಿನಿಧಿ ಮಂಡಳಿಯವರು ಸರ್ ವಿಲಿಯಂ ವೆಡ್ಡರ್ಬರ್ನ್ನರಲ್ಲಿ ತಮ್ಮ ಸರ್ವ ವಿಷಯಗಳನ್ನು ಹೇಳಿಕೊಳ್ಳುವರೆಂದೂ ಇದಕ್ಕೆ ಬೇಕಾದ ಏರ್ಪಾಡುಗಳೆಲ್ಲವನ್ನು ಅವರೇ ಮಾಡುವರೆಂದೂ ಮೆ| ಜಿನ್ನರವರು ಪತ್ರಪ್ರತಿನಿಧಿಗಳ ಕೂಡೆ ಹೇಳಿರುವರು.

* * *

ಫರಿಡಪುರ ರಾಜದ್ರೋಹ ಪಿತೂರಿ ಮೊಕದಮೆಯ ವಿಚಾರಣೆಯ ಕಾಲ ತಾರ ಪಾದಸೆನ್ ಎಂಬ ವಕೀಲರು ಕೊಟ್ಟ ವಾಗ್ಮೂಲದಿಂದ ಆಶ್ಚರ್ಯಕರವಾದ ಕೆಲವು ಗುಟ್ಟು ಹೊರಬಿದ್ದಿರುವುದು. ಮಾದರಿ ಪುರದಲ್ಲಿ ೨॥ ವರ್ಷಗಳ ಹಿಂದೆ ಒಂದು ಸಮಿತಿಯು ಸ್ಥಾಪಿಸಲ್ಪಟ್ಟಿತು. ಆಪಾದಿತನೂ ಸ್ಥಳಿಕ ಶಾಲೆಯ ವಿದ್ಯಾರ್ಥಿಗಳೂ ಈ ಸಮಿತಿಯ ಮೆಂಬರರಾಗಿದ್ದರು. ಮಾದರಿ ಪುರದ ಸಮಿತಿಯು ಫರಿಡಪುರದ ಮುಖ್ಯ ಸಂಘಕ್ಕೆ ಒಂದು ಶಾಖೆಯಾಗಿತ್ತು. ಇದಕ್ಕೆ ಇನ್ನು ಇತರ ೩ ಬ್ರೇಂಚಾಫೀಸುಗಳಿದ್ದವು. ಮಾದರಿಪುರ ಸಮಿತಿಯ ಮೆಂಬರರು ಗೋಪಾಲಪುರ ಮತ್ತು ಕಾವಿಯಕುರ ದಕಾಯಿತಿಗಳನ್ನು ನಡಿಸಿದರು. ಆಪಾದಿತ ರಶಿಕ್ ಸರ್ಕಾರ ಎಂಬವನು ಮೇಜಿಸ್ಟ್ರೇಟರಿಗೆ ಗುಂಡು ಹೊಡೆಯಲು ಮಾದರಿಪುರಕ್ಕೆ ಬಂದಿದ್ದನು. ಅವನನ್ನು ಮಾದರಿಪುರದ ಸಮಿತಿ ಮುಂದಾಳು ಡಕ್ಕಕ್ಕೆ ಕಳುಹಿಸಿದನು. ಕಳದ ಪೂಜಾ ಕಾಲದಲ್ಲಿ ಮೇಜಿಸ್ಟ್ರೇಟರಿಗೆ ಗುಂಡು ಹೊಡೆಯಲು ಇನ್ನೊಂದಾವರ್ತಿ ಪ್ರಯತ್ನವು ಮಾಡಲ್ಪಟ್ಟಿತು. ಆದರೆ ಮೇಜಿಸ್ಟ್ರೇಟರು ಆ ಕಾಲ ಮುಖ್ಯ ಠಾಣ್ಯದಲ್ಲಿರಲಿಲ್ಲ. ಈ ಸಮಿತಿಯ ಕೆಲವು ಮೆಂಬರರು ಈಗ ಫ್ರಾನ್ಸ್, ಅಮೇರಿಕ, ಜಾಪಾನ್ ಮತು ಆಸ್ಟ್ರೇಲಿಯದಲ್ಲಿ ವಿದ್ಯಾವ್ಯಾಸಂಗಮಾಡುತ್ತಿದ್ದಾರೆಂದು ಆಪಾದಿತ ರಾಜೇಂದ್ರ ಸೊಕರ್ ತನ್ನ ಕೂಡೆ ಹೇಳಿರುವನೆಂದು ವಕೀಲರು ವಾಗ್ಮೂಲ ಕೊಟ್ಟಿರುವರು. ಆಪಾದಿತರ ಮೇಲೆ ತಕ್ಕ ರುಜುವಾತಿಲ್ಲದ್ದರಿಂದ ಈ ಮೊಕದಮೆಯಲ್ಲಿ ಆಪಾದಿಸಲ್ಪಟ್ಟ ೨೩ ಆಪಾದಿತರೂ ಬಿಡಲ್ಪಟ್ಟರು.

* * *

ಚಿತ್ತೂರು ಇನ್ಸ್‌ಪೆಕ್ಟರ್ ಕೊಲೆ ಮೊಕದಮೆಯಲ್ಲಿ ಆಪಾದಿಸಲ್ಪಟ್ಟು ಬಿಡುಗಡೆ ಹೊಂದಿದ ನಿರ್ಮಲಕಾಂತರೋಯಿಯು ವಕೀಲ ಪರೀಕ್ಷೆಗೆ ಸಿದ್ಧಮಾಡುವರೆ ಇಂಗ್ಲಾಂಡಿಗೆ ಹೋಗುವನು. ನಿರ್ಮಲಕಾಂತ ರೋಯಿಯ ಕಡೆಯ ವಕೀಲರಾಗಿದ್ದ ಮೆ| ನೋರ್ಟನರವರೇ ಎಲ್ಲಾ ಖರ್ಚನ್ನು ಕೊಡುವರು. ಕಲ್ಕತೆಯ ಗ್ರೇಂಡ್ ನೇಷನಲ್ ಥಿಯೇಟರ್ ಎಂಬ ನಾಟಕ ರಂಗದಲ್ಲಿ ರೋಯಿಯ ಪರವಾಗಿ ಹಣ ಕೂಡಿಸುವರೆ ತಾ. ೧೭ರಲ್ಲು ಒಂದು ನಾಟಕವು ಆಡಲ್ಪಟ್ಟಿತು. ಇದಕ್ಕೆ ಮೆ| ನೋರ್ಟನರೂ ಇತರ ಕೆಲವು ಯೂರೋಪಿಯನ್ ಗೃಹಸ್ಥ ಗೃಹಸ್ಥೆಯರೂ ಹಾಜರಿದ್ದರು.

* * *

ಇಬ್ಬರು ಯೂರೋಪಿಯ ಬುದ್ಧ ಅರ್ಚಕರು ಕಲ್ಕತ್ತೆಗೆ ಬಂದಿರುವರು. ಇಬ್ಬರೂ ಜರ್ಮನ್ ದೇಶಸ್ಥರು. ಒಬ್ಬರು ಚಿಕ್ಕನಾಯನ್ ಟಿಲಕೊ ಮತ್ತೊಬ್ಬರು ವಾಘೊ ಎಂಬ ಬುದ್ಧ ಹೆಸರನ್ನು ಇಟ್ಟುಕೊಂಡಿರುವರು. ಈ ಪೈಕಿ ಮೊದಲನೇಯವರು ೧೧ ವರ್ಷಗಳಿಂದಲೂ ಎರಡನೇಯವರು ೪ ವರ್ಷಗಳಿಂದಲೂ ಬುದ್ಧ ಅರ್ಚಕರಾಗಿರುತ್ತಾರಂತೆ.

* * *

ಸರಕಾರದಿಂದ ಮುಟ್ಟುಗೋಳು ಹಾಕಲ್ಪಟ್ಟು ಪುನಃ ಕೇವಾಣಾತಿ ಕೊಟ್ಟು ಪ್ರಾರಂಭಿಸಲ್ಪಟ್ಟ 'ಜಮೀನ್ದಾರಿ' ಪತ್ರಿಕೆಯಲ್ಲಿ ಫೆಬ್ರವರಿ ತಾ. ೨೫. ೨೬, ೨೭ರಲ್ಲು ಪ್ರಕಟವಾದ ಲೇಖನವು ಆಕ್ಷೇಪಕರವಾದುದೆಂದು ಸರಕಾರದವರು ಅಭಿಪ್ರಾಯ ಪಟ್ಟು ಆಕ್ಷೇಪಕರವಾದುದನ್ನು ಕೂಡ್ಲೇ ಸರಿಪಡಿಸದೆ ಹೋದರೆ ಸರಕಾರದವರು ಈ ವಿಷಯ ತಕ್ಕ ನಿಗಾಕೊಡುವರೆಂತ ಪತ್ರಿಕಾ ಕರ್ತರನ್ನು ಎಚ್ಚರಿಸುವರು.

* * *

ಕಾಂಡೇಶಿನ ಜಲಗೋನ್ ಎಂಬಲ್ಲಿಯ ಮೆ| ಹೆಂಡರ್ಸನ್ ಐ. ಸಿ. ಯಸ್ ಎಂಬವರ ನಾಲ್ಕು ಮಕ್ಕಳು ಅಲ್ಲಿಗೆ ಬಂದಿದ್ದ ಸರ್ಕಸ್ ಕಂಪೆನಿಯೊಂದರ ಮೃಗಶಾಲೆಯನ್ನು ದಾಟಿ ಹೋಗಲು ಸಂಕೋಲೆ ಹಾಕಿ ಗೂಡಿನಿಂದ ಹೊರಗೆ ಕಟ್ಟಿದ್ದ ಒಂದು ಹೆಬ್ಬುಲಿಯು ಹೆಂಡರ್ಸನರ ೨ನೇ ಮಗಳನ್ನು ಹಿಡಿದು ಗಾಯ ಪಡಿಸಿತು. ಕೂಡ್ಲೆ ಆಸ್ಪತ್ರಿಗೆ ತಕ್ಕೊಂಡು ಹೋಗಿ ಶೈತ್ಯೋಪಚಾರ ನಡಿಸಿದರೂ ಹುಡುಗಿ ಸತ್ತು ಹೋದಳು. ಹೆಬ್ಬುಲಿಯನ್ನು ಹೊರಗೆ ಕಟ್ಟಿದ್ದು ಯಾರಿಗೂ ಗೊತ್ತಿಲ್ಲದ್ದರಿಂದ ಈ ಅವಗಡವು ಸಂಭವಿಸಿತು. ಪೋಲೀಸಿನವರು ಸರ್ಕಸ್ ಮೆನೇಜರರನ್ನು ಇ. ಪಿ. ಕೋಡಿನ ೩೦೪ನೇ ಪ್ರಕರಣದ ಮೇಲೆ ವಿಚಾರಣೆಗೆ ಗುರಿಪಡಿಸಿರುವರು.

* * *

ಮುಂಬಾಯಿಯ ಕೊಲೋಬದಲ್ಲಿ ತಾ. ೧೮ರಲ್ಲು ಪುನಃ ಹತೀ ಮೂಟೆಗಳಿಗೆ ಬೆಂಕಿ ಬಿದ್ದು ಸುಮಾರು ೫೦೦ ಬೇಲ್ ಹತ್ತಿ ಸುಟ್ಟು ಹೋಯಿತು.

* * *

ಕಲ್ಕತ್ತಾ ಪ್ರಾಂತದಲ್ಲಿ ಬಾಬುಹರಿದಾಸರಾಯ್ ಎಂಬವನು ಮೃತನಾದನು. ಅವನಿಗೆ ಸಂತಾನವಿರಲಿಲ್ಲ. ಶವವನ್ನು ಸ್ಮಶಾನಕ್ಕೆ ಸಾಗಿಸಿ ಚಿತೆಯ ಮೇಲೆ ಮಲಗಿಸಿದ ಕೂಡಲೇ ಹೆಂಡತಿಯು ವಿಶೇಷವಾಗಿ ಪ್ರಲಾಪಿಸಿ ಸ್ಮೃತಿ ತಪ್ಪಿದ ಸ್ಥಿತಿಯಲ್ಲಿಯೇ ಮನೆಗೆ ಹೋಗಿ ಒಂದು ಮೂಲೆ ಸೇರಿದಳು. ಗಂಡನ ಹೆಣವು ಸುಟ್ಟ ಬಳಿಕ ಬೆಂಕಿಗೆ ನೀರನ್ನು ಸುರಿದು ಆರಿಸುವುದಕ್ಕಾಗಿ ನೆಂಟರಿಷ್ಟರು ಹೆಂಡತಿಯನ್ನು ತಡಕುವಲ್ಲಿ ಆಕೆಯು ಮೂರ್ಛಿತಳಂತೆ ಕಂಡುಬಂದಳು. ಚೆನ್ನಾಗಿ ಶೋಧಿಸುವಲ್ಲಿ ಆಕೆಯು ಮೃತಳಾದಳೆಂದೇ ಗೊತ್ತಾಯಿತು. ಈ ವಾರ್ತೆಯು ಕ್ಷಣದಲ್ಲೇ ಸುತ್ತಮುತ್ತಲು ಹರಡಿಕೊಳ್ಳಲು ಹೆಂಗಸರು ಗಂಡಸರು ಮಕ್ಕಳು ಮೊದಲಾದ ಜನರು ಗುಂಪುಗುಂಪಾಗಿ ಬಂದು ಆ ಪತಿವ್ರತೆಯ ಶವವನ್ನು ಹರಿದ್ರಾಕುಂಕುಮಾದಿಗಳಿಂದ ಪೂಜಿಸಿದರು. ಬಳಿಕ ಶವವನ್ನು ದಹನಮಾಡಲು 'ಅಂಗನೆಯರು ಆ ಶವದ ಭಸ್ಮವನ್ನು ಪರಿಶುದ್ಧವಾದುದೆಂದು ಗ್ರಹಿಸಿ ಭರಣಿಗಳಲ್ಲಿಟ್ಟುಕೊಂಡರು. ಈಕೆಯ ವಯಸ್ಸು ೪೫. ಗಂಡನ ವಯಸ್ಸು ೫೮ ಆಗಿದ್ದಿತು.

* * *

ವರದಕ್ಷಿಣೆಯ ಉಪದ್ರವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಕಲ್ಕತೆಯ ದಿನಾಜಪುರದ ವಕೀಲ ನಿತ್ಯ ಚರಣ ಸೆನ್ ಎಂಬವರ ೧೪ ವರ್ಷ ವಯಸ್ಸಿನ ಚಾರುಬಾಲ ಎಂಬ ಬಾಲಿಕೆಯು ಇದೇ ತಾ. ೯ರಲ್ಲು ಅಫೀಮು ತಿಂದು ಸ್ವಗಾತಮಾಡಿಕೊಂಡಳೆಂಬ ವಾರ್ತೆ ಬಂದಿರುವುದು.

* * *

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಹ್ಯಾಕೋರ್ಟು ಜಡ್ಜರಲ್ಲೊಬ್ಬರಾದ ಬಹುಮಾನಪಟ್ಟ ಮೆ| ಎಲ್. ಸಿ. ಮಿಲ್ಲರರವರು ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜಸ್ಥಾನವನ್ನು ಸ್ವೀಕರಿಸುವರೆ ಒಪ್ಪಿರುವರೆಂತ ತಿಳಿದು ಬರುತ್ತದೆ. ಬೆಂಗಳೂರಿನ ಡೈಲಿಪೋಸ್ಟು ಎಂಬ ಪತ್ರಿಕೆಯಲ್ಲಿ ಮೆ| ಜಸ್ಟಿಸ್ ಮಿಲ್ಲರವರಿಗೆ ಮಾಹೆಯಾನ ೩೫೦೦ರೂಪಾಯಿ ಸಂಬಳ ಕೊಡಲ್ಪಡುವುದೆಂದು ಪ್ರಕಟವಾಗಿದೆ. ಜಸ್ಟಿಸ್ ಮಿಲ್ಲರವರು ಮದ್ರಾಸ್ ಸಂಸ್ಥಾನದ ಸಬ್‌ಕೋರ್ಟುಗಳನ್ನು ಸಂದರ್ಶಿಸುವ ಸ್ಪೆಶ್ಯಲ್ ಡ್ಯೂಟಿಯ ಮೇಲಿದ್ದು ಈಗತಾನೇ ತಾ. ೧೮ ರಲ್ಲು ಮದ್ರಾಸ್ ಹ್ಯಾಕೋರ್ಟಿಗೆ ಹಾಜರಾಗಿ ಆಕ್ಟಿಂಗ್‌ಜಡ್ಜರಾಗಿದ್ದ ಜಸ್ಟಿಸ್ ಸ್ಪೆನ್ಸರವರಿಂದ ಚಾರ್ಜು ತಕ್ಕೊಂಡರು.

* * *

ತಾ. ೧೬ರಲ್ಲು ಮದ್ರಾಸ್ ಸರಕಾರದ ಛಾಪಖಾನೆಯ ಕಾಸ್ಟಿಂಗ್ ಕೋಣೆಯಲ್ಲಿ ಫಕ್ಕನೇ ಬೆಂಕಿಯುಂಟಾಗಿ ಕೋಣೆಯೆಲ್ಲಾ ಬೆಂಕಿಯಿಂದ ತುಂಬಿಹೋಯಿತು. ಬಹಳ ಕಷ್ಟದಿಂದ ಅಲ್ಲಿದ್ದ ೭ಮಂದಿಯಲ್ಲಿ ಇಬ್ಬರು ತಪ್ಪಿಸಿಕೊಂಡರು. ಉಳಿದವರು ಅಶಕ್ತರಾಗಿ ಹೋದುದರಿಂದ ಸಹಾಯಕ್ಕೆ ಕೂಗಿಕೊಂಡರು. ಆಸಿಸ್ಟಾಂಟ ಸುಪರಿಂಟೆಂಡೆಂಟರವರೂ ಇತರರೂ ಕೂಡಿ ಕಿಟಕಿಯನ್ನು ಒಡೆದು ಒಬ್ಬೊಬ್ಬರನ್ನು ರಕ್ಷಿಸಿದರು. ಇತರ ಮೂರುಮಂದಿ ಸುಟ್ಟುಹೋಗಿ ಮೋದಂಡ ಸ್ಥಿತಿಯಲ್ಲಿದ್ದಾರೆ. ಈ ಕಂಪೆನಿಯಿಂದ ಸುಮಾರು ೩೦,೦೦೦ರೂಪಾಯಿಗಳ ನಷ್ಟವಾಯಿತೆಂತ ಅಂದಾಜಾಗಿದೆ.

* * *

ಮೈಸೂರು ಸಂಸ್ಥಾನದಲ್ಲಿ ಕರೆಯುವ ಹಟ್ಟಿಯನ್ನೇರ್ಪಡಿಸಿ ಉತ್ತಮವಾದ ಹಾಲುಬೆಣ್ಣೆಯನ್ನೊದಗಿಸುವವರಿಗೆ ವ್ಯವಸಾಯ ಕಮಿಟಿಯವರ ಸೂಚನೆಯ ಪ್ರಕಾರ ೧೦,೦೦೦ರೂಪಾಯಿಗಳ ವರೆಗೆ ಸುಲಭವಾದ ಬಡ್ಡಿಯಿಂದ ಸಾಲವನ್ನೂ ಹಟ್ಟಿಗಳನ್ನು ಕಟ್ಟಲು ಸ್ಥಳವನ್ನೂ, ದನಗಳು ಮೇಯಲು ಹುಲ್ಲುಗಾವಲನ್ನೂ ಉಚಿತವಾಗಿ ಕೊಡಲು ಮೈಸೂರು ಸರಕಾರದವರು ಒಡಂಬಟ್ಟಿರುವರು.

* * *

ಕಂಜೀವರಿನಲ್ಲಿ ೩೫,೦೦೦--೪೦,೦೦೦ರೂಪಾಯಿ ಖರ್ಚು ತಗಲಿಸಿ ಅಂಬಾಗಲುಗಳನ್ನು ಕಟ್ಟಿಸಿ ಮತ್ತು ಮದ್ರಾಸಿನಲ್ಲಿ ಸುಮಾರು ೬೦,೦೦೦ರೂಪಾಯಿ ಖರ್ಚುಮಾಡಿ ಶ್ರೀ ವಿಠಲನಾಥ ದೇವಮಂದಿರವನ್ನು ಕಟ್ಟಿಸಿ ಧರ್ಮಾರ್ಥಳೆಂದು ಹೆಸರು ಪಡೆದ ಗಂಗಾಬಾಯಿ ಎಂಬವರು ತಾ. ೧೨ರಲ್ಲು ವಿಧಿವಶರಾದರು. ಸಾಯುವಾಗ ಇವರಿಗೆ ೭೭ ವರ್ಷ ವಯಸ್ಸಾಗಿದ್ದಿತು.

* * *

ದಕ್ಷಿಣ ಕನ್ನಡ.

ಬೇಕಾಗಿದೆ!

ಯಾಲಕ್ಕಿ ಕೃಷಿ ಅನುಭವವುಳ್ಳ ಮತ್ತು ಲೆಖ್ಖಪತ್ರಗಳನ್ನು ಕ್ರಮವಾಗಿ ಇರಗೊಡಿಸುವ ಮಾಹೀತಿಯುಳ್ಳ ನಂಬಿಗಸ್ತ ರೈಟರು ಬೇಕಾಗಿದೆ. ಸಂಬಳ ವಗೈರೆ ಮಾಹೀತಿ ಬಗ್ಯೆ ಮೊಕ್ತಾವ ಕಾಗದ ಪತ್ರ ನಡಿಸಿ ತಿಳಿದುಕೊಳ್ಳ ಬಹುದು.

ಬಿ. ಆರ್. ಶೇಶಪ್ಪ ರೈ.
ಕಾಫಿ ಪ್ಲಾಂಟರ್,
ಭಾಗ್ಗಮಂಡಲ ಪೋಸ್ಟು,
ಕೊಡಗುಜಿಲ್ಲೆ.

ಮಂಗಳೂರು,

ಜಿಲ್ಲಾ ಕಲೆಕ್ಟರ ಅಫೀಸು ಮಂಗಳೂರು. ಮ. ರಾ. ರಾಮವರ್ಮ ರಾಜರವರು ಈ ಜಿಲ್ಲೆಗೆ ಹಿಂದೆ ಬಂದ ನಂತರ ಕಾಸರಗೋಡು ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು.

ರಾ| ರಾಮವರ್ಮ ರಾಜರವರು ಚಾರ್ಜು ತಕ್ಕೊಂಡ ನಂತರ ರಾ|. ಪಿ. ಎನ್. ಕೃಷ್ಣರಾಯರು ಕಾಸರಗೋಡಿನ ಸ್ಟೇಶನರಿ ಸಬ್‌ಮೇಜಿಸ್ಟ್ರೇಟರಾಗಿ ಕೆಲಸ ನೋಡಬೇಕಾಗುವುದು.

ದಕ್ಷಿಣ ಕನ್ನಡಾಜಿಲ್ಲಾ ಕಲೆಕ್ಟರ ಆಫೀಸಿನಲ್ಲಿ ಕೆಲಸವನ್ನು ಮಾಡಲು ಇಚ್ಛಿಸಿ ಮನವಿ ಮಾಡಿಕೊಳ್ಳುವ ಸೆಕಂಡರಿಸ್ಕೂಲ್ ಲೀವಿಂಗ್ ಸರ್ಟಿಫಿಕೇಟುಗಳುಳ್ಳಂಥವರು ತಮ್ಮ ಅರ್ಜಿಗಳ ಸಹಿತ ಸೆಕಂಡರಿ ಸ್ಕೂಲು ಸರ್ಟಿಪೀಕೇಟಿನ ಯಥಾಪ್ರತಿಯನ್ನು ಹಾಜರು ಪಡಿಸುವ ವಿನಹ ಅಂಥ ಅರ್ಜಿಗಳಿಗೆ ನಿಗಾ ಕೊಡಲಾರದೆಂತ ಜಿಲ್ಲಾ ಕಲೆಕ್ಟರ ದೊರೆಗಳವರು ಪ್ರಕಟಿಸಿರುವರು.

ಇಲ್ಲಿಗೆ ಬರುವ ಮೈಲುಟ್ರೇನಿನ ಸಮಯವನ್ನು ತಿದ್ದಬೇಕೆಂದು ದಕ್ಷಿಣ ಇಂಡಿಯಾ ರೈಲ್ವೆ ಏಜಂಟರಿಗೆ ಮದ್ರಾಸ್ ಸರಕಾರದವರು ಬರಕೊಂಡ ಪತ್ರಕ್ಕೆ—ಇದೇ ಕಳದ ಮಾರ್ಚಿ ತಾ. ೧ರಿಂದ ದಕ್ಷಿಣ ಇಂಡಿಯಾ ಮಿಾಟರ್ ಗೇಜಿನ ವಿವಿಧ ಟ್ರೇನುಗಳ ಸಮಯವನ್ನು ತಿದ್ದಬೇಕಾಗಿ ಬಂದದರಿಂದ ಮಂಗಳೂರಿಂದ ನಂಬ್ರ ೧೨ನೇ ಮೇಲ್ ಟ್ರೇನಿನ ತಿದ್ದಿದ ಸಮಯಗಳನ್ನು ಇದೇ ಬರುವ ಮೇ|. ತಾ. ೧೮ ವರೆಗೆ ಜಾರಿಗೆ ತರುವುದು ಅಸಾಧ್ಯವೆಂತ ಏಜಂಟರು ಉತ್ತರ ಕೊಟ್ಟಿರುವರು.

ರೆವಿನ್ಯೂ ಡಿವಿಜನಲ್ ಆಫೀಸರಾದ ಮೆ| ಜಿ. ಡಬ್ಲ್ಯೂ. ಪ್ರಿಸ್ಟ್ಲೀ. ಐ. ಸಿ. ಎಸ್. ದೊರೆಗಳವರ ಸರ್ಕೀಟು:—ತಾ. ೨೪ ಮಂಗಳೂರಿಂದ ಫರಂಗಪೇಟೆ, ತಾ. ೨೫ಫರಂಗಪೇಟೆ; ತಾ. ೨೬-೨೭ ಬಂಟ್ವಾಳ; ತಾ. ೨೮ ಬಟ್ವಾಳದಿಂದ ಮಂಗಳೂರು, ಮೇ ತಾ. ೧ ಮಂಗಳೂರಿಂದ ಬಜಪೆ; ತಾ. ೨-೩ ಬಜಪೆ, ತಾ. ೪-೫ ತಲಪಾಡಿ; ತಾ. ೬ ಮುಲ್ಕಿ; ತಾ. ೭-೮-೯ ಸುರತ್ಕಲ್; ತಾ. ೧೦ ಸುರತ್ಕಲ್ಲಿನಿಂದ ಮಂಗಳೂರು; ಈ ರೀತಿ ಸರ್ಕೀಟು ಬೆಳಸುವರು.

ಕುಂದಾಪುರ ಡಿವಿಜನಲ್ ಆಫೀಸ್.—ಕುಂದಾಪುರ ತಹಸೀಲದಾರ ಆಫೀಸಿನ ೨ನೇ ಕ್ಲಾರ್ಕ ರಾ| ಎಚ್. ಅಣ್ಣಪ್ಪಯ್ಯನವರು ಕಾರ್ಕಳ ತಾಲೂಕು ಆಫೀಸಿನ ಹೆಡ್ ಕಾರ್ಕರಾಗಿಯೂ ಉಡ್ಪಿತಾಲೂಕು ಆಫೀಸಿನ ೨ನೇ ಕ್ಲಾರ್ಕ ರಾ| ಎಮ್. ವೆಂಕಟ್ರಮಣಯ್ಯನವರು ಉಡ್ಪಿ ತಹಸೀಲದಾರ್ ಆಫೀಸಿನ ೨ನೇ ಕ್ಲಾರ್ಕರಾಗಿಯೂ, ೪ನೇ ಕ್ಲಾರ್ಕ ರಾ| ಜೆ. ಎಕ್ಸ್ ರೆಬೆಲ್ಲೊರವರು ಅದೇ ಆಫೀಸಿನ ೨ನೇ ಕ್ಲಾರ್ಕರಾಗಿಯೂ ಉಡ್ಪಿ ತಾಲೂಕು ಆಫೀಸಿನ ಅಬ್ಕಾರಿ ಕ್ಲಾರ್ಕ ರಾ| ಎ. ಫೆರ್ನಾಂಡಿಸರು ೪ನೇ ಕ್ಲಾರ್ಕರಾಗಿಯೂ ಆಕ್ಟಿಂಗ್ ಸ್ಪೆಶ್ಯಲ್ ಫಂಡ್ ಕ್ಲಾರ್ಕರೂ ಸಾಯಂ ದಪ್ತರ್‌ಬಂದರೂ ಆಗಿರುವ ರಾ| ಎಚ್. ರಾಘುವೇಂದ್ರಪೈಯವರು ಅಬ್ಕಾರಿ ಹೆಡ್ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ರಾ| ಎಚ್. ಅಣ್ಣಪ್ಪಯ್ಯನವರು ರಜೆಯ ಮೇಲಿರುವುದರಿಂದ ಮುಂದಿನ ಹುಕುಂ ಕೊಡುವವರೆಗೆ ರಾ| ಎಸ್. ಗೋಪಾಲರಾಯರು ಕಾರ್ಕಳ ತಹಸಿಲದಾರ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾಗಿ ಕೆಲಸ ನೋಡುವರು.

ಉಡ್ಪಿ ತಾಲೂಕು ಆಫೀಸಿನ ೬ನೇ ಕ್ಲಾರ್ಕ ರಾ| ಪಿ. ಪದ್ಮನ್ನಾಭಾಚಾರಿಯರು ಸರ್ವೆ ಟ್ರೈನಿಂಗಿಗೆ ಹೋಗಿರುವುದರಿಂದ ಕಲೆಕ್ಟರ್ ಆಫೀಸಿನ ಪರ್ಮನೆಂಟ ೧ನೇ ಲೋಕಲ್ ಒಡಿಟ್ ಕ್ಲಾರ್ಕರಾಗಿದ್ದು ಈಗ ಉಡ್ಪಿ ತಾಲೂಕು ಆಫೀಸಿನ ಆಕ್ಟಿಂಗ್ ೧೦ನೇ ಕ್ಲಾರ್ಕರಾಗಿರುವ ರಾ| ಬಿ. ಶಂಕರರಾಯರು ೬ನೇ ಕ್ಲಾರ್ಕರಾಗಿಯೂ ಅದೇ ಆಫೀಸಿನ ಹೆಡ್ ಶರಾಫರಾದ ರಾ| ಎಮ್. ದಾಸಪ್ಪರು ೧೦ನೇ ಕ್ಲಾರ್ಕರಾಗಿಯೂ ೨ನೇ ಸರಾಫರಾಗಿರುವ ರಾ| ಕೆ. ವೆಂಕಟ್ರಮಣ ಕಾಮತರು ಹೆಡ್ ಸರಾಫರಾಗಿಯೂ ರಾ| ಕೆ. ಕೃಷ್ಣರಾಯ ಶೆನೋಯಿರವರು ೨ನೇ ಸರಾಫರಾಗಿಯೂ ನೇಮಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನಲ್ ಆಫೀಸಿನ ಪರ್ಮನೆಂಟ್ ೪ನೇ ಕ್ಲಾರ್ಕರಾಗಿದ್ದು ಈಗ ಕುಂದಾಪುರ ತಾಲೂಕು ಆಫೀಸಿನ ಆಕ್ಟಿಂಗ್ ೪ನೇ ಕ್ಲಾರ್ಕರಾಗಿರುವ ರಾ| ಎ. ಜೆ ಫೆರ್ನಾಂಡಿಸರಿಗೆ ಇದೇ ತಾ. ೨೪ರಿಂದ ಒಂದು ತಿಂಗಳ ಪ್ರಿವಿಲೆಜ್ ರಜೆ ಕೊಡಲ್ಪಟ್ಟಿರುವುದು. ಇವರ ರಜೆ ಕಾಲದಲ್ಲಿ ತಾಲೂಕು ಆಫೀಸ್ ಕ್ಲಾರ್ಕರಾದ ರಾ| ಬಿ. ವಿಠಲರಾಯರು ೪ನೇ ಕ್ಲಾರ್ಕರಾಗಿಯೂ ಸ್ಟೇಶನರಿ ಮೇಜಿಸ್ಟ್ರೇಟ ಆಫೀಸಿನ ಆಕ್ಟಿಂಗ್ ಹೆಡ್‌ಕ್ಲಾರ್ಕ ರಾ| ಎ. ಆರ್. ಮೆಂಡೋಸರವರು ರಾ. ಎ. ಜೆ. ಪೆರ್ನಾಂಡಿಸರ ಬದಲಿಗೆ ಡಿವಿಜನಲ್ ಆಫೀಸಿನ ಡ್ಯೂಟಿಯಲ್ಲಿಯೂ ಇರಬೇಕಾಗುವುದು.

ಸ್ಟೇಶನರಿ ಮೇಜಿಸ್ಟ್ರೇಟ ಆಫೀಸಿನ ೨ನೇ ಕಾರ್ಕ ರಾ| ಎಸ್. ಸುಂದರರಾಯರು ರಾ| ಬಿ. ವಿಠಲರಾಯರ ಬದಲಿಗೂ ದಪ್ತರ್ ಬಂದ್ ಮಂಜಯ್ಯರು ರಾ| ಎಸ್. ಸುಂದರರಾಯರ ಬದಲಿಗೂ ಸೆಕಂಡರಿಸ್ಕೂಲು ಲೀವಿಂಗ್ ಸರ್ಟಿಫಿಕೇಟುಳ್ಳ ರಾ. ಪಿ. ಶಾಂತರಾಮರಾಯರು ರೂ. ೮ ತಲಬಿನ ಮೇಲೆ ದಪ್ತರಬಂದ್ ರಾ| ಮಂಜಯ್ಯರ ಬದಲಿಗೂ ನೇಮಿಸಲ್ಪಟ್ಟಿರುವರು.

ಮೆ| ಎಸ್. ಎಸ್. ಎಸ್. ಸಾಲ್ಡಾನರವರು ಕೆಲಸದಿಂದ ಪೆನ್ಶನು ಹೊಂದಿರುವುದರಿಂದ ರೂ. 125 ಮೇಜಿಸ್ಟ್ರೇಟ್ ಕೆಲಸಕ್ಕೆ ರಾ| ಬೋಳಾರ ಪರಮೇಶ್ವರಯ್ಯನವರು ಕಾಯಂ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತಾರೆ. ಕುಂದಾಪುರ ತಾಲೂಕು ಆಫೀಸಿನ ಇವರ ರೂ. 70ರ ತಲಬಿನ ಶಿರಸ್ತೆದಾರರ ಕೆಲಸಕ್ಕೆ ರಾ| ಬಿ. ರಘುನಾಥ ಭಂಡಾರಿಗಳೂ ರಾ| ಬಿ. ರಘುನಾಥ ಭಂಡಾರಿಗಳ ರೂ. 60ರ ಕೆಲಸಕ್ಕೆ ರಾ| ರಗಡೆ ಶಿವರಾಯರೂ, ಶಿವರಾಯರ ರೂ. 50ರ ಕೆಲಸಕ್ಕೆ ಎನ್. ವೆಂಕಟಪ್ಪನವರೂ ವೆಂಕಟಪ್ಪನವರ ರೂಪಾಯಿ 45ರ ಕೆಲಸಕ್ಕೆ ರಾ| ಬಿ. ಮಹಾಬಲೇಶ್ವರನವರೂ ಇವರ ರೂಪಾಯಿ 40ರ ಕೆಲಸಕ್ಕೆ ರಾ| ಕೆ. ಪಿ. ಕಿಣಿಗಳವರೂ, ಕಿಣಿಗಳವರ ರೂ. 35ರ ರೆವಿನ್ಯು ಇನ್ಸಪೆಕ್ಟರರ ಕೆಲಸಕ್ಕೆ ರಾ| ಎಮ್. ಸುಬ್ಬರಾವ್‌ರವರೂ ಇವರ ರೂ 30ರ ಕೆಲಸಕ್ಕೆರಾ| ಟಿ. ನರಸಿಂಗರಾವ್ ಕಾಯಂ ಮೊಕ್ರೂರಾಗಿರುತ್ತಾರೆ. ನರಸಿಂಗರಾಯರ ರೂ. 25ರ.ಕೆಲಸಕ್ಕೆ ರಾ| ನಾರಾಯಣ ಶೆಟ್ಟಿಯವರು ನೇಮಿಸಲ್ಪಟ್ಟಿರುವರು.

ಕೆನರಾ ಹ್ಯಾಸ್ಕೂಲಿನಲ್ಲಿ ವರುಷಾವಧಿ ಇನಾಮು ಹಂಚೋಣವು ಕಳೆದ ಶನಿವಾರ ತಾ. 18ರಲ್ಲು ಮ| ರಾ| ರಾ| ರಿಟಾಯರ್ಡ್ ರಾವ್ ಬಹದ್ದೂರ್ ಅತ್ತಾವರ ರಾಮಯ್ಯ ಪೂಂಜರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಜಿಲ್ಲಾ ಕಲೆಕ್ಟರ ದೊರೆಗಳವರು ತಾ. 25ರಲ್ಲು ಸರ್ಕೀಟಿನ ಮೇಲೆ ಗುರ್ಪುರಕ್ಕೆ ಹೋಗಿ 27ನೇ ತಾರೀಕಿನ ವರೇಗೆ ಅಲ್ಲಿ ಇದ್ದು ತಾ. 28ಕ್ಕೆ ಮಂಗಳೂರಿಗೆ ಹಿಂತಿರುಗಿಬರುವರು.

ಇತ್ತಲಾಗೆ ಲೋಕಲ್ ಫಂಡಿನ ಕೆಲಸದಿಂದ ನಿವೃತ್ತರಾದ ಸುಪರ್‌ವ್ಯಾಸರ ರಾ| ಬಿ. ವೈಕುಂಟಬಾಳಿಗರಿಗೆ ಪೆನ್ಶನು ಕೊಡೋಣಾಗುವ ವಿಷಯವು ಚರ್ಚೆಯಲ್ಲಿತ್ತು. ಬಾಳಿಗರಿಗೆ ಸರಕಾರ ನೌಕರರಂತೆಯೇ ಪೆನ್ಶನು ಕೊಡೋಣಾಗಬೇಕೆಂತ ಸರಕಾರದ ಹುಕುಂ ಬಂದಿರುವುದಾಗಿ ತಿಳಿಯುತ್ತೇವೆ.

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳೆದ ವಾರ ನಾಲ್ಕು ಪ್ಲೇಗು ಮರಣಗಳಿದ್ದುವು.

ಕುಒಪರೇಟಿವ್ ಕನ್ಫರೆನ್ಸ್:-ಕೊಯಂಬುತ್ತೂರು, ಮಲೆಬಾರು, ದಕ್ಷಿಣ ಕನ್ನಡ ಮತ್ತು ನೀಲಗಿರಿ ಈ ಜಿಲ್ಲೆಗಳ ಪರಸ್ಪರ ಸಹಾಯಕ ಸಂಘಗಳ ಕನ್ಫರೆನ್ಸ್ ಎಂಬುವ ಮಹಾ ಸಭೆಯು ಇದೇ ಮೇ ತಿಂಗಳ ತಾ. 15 ಮತ್ತು 16 ದಿವಸಗಳಲ್ಲಿ ಕಲ್ಲಿಕೋಟೆಯಲ್ಲಿ ಜರಗುವುದು. ಬಹುಮಾನಪಟ್ಟ ಮೆ| ಬಕ್ಲೆ ಐ. ಸಿ ಎಸ್. ದೊರೆಗಳವರು ಈ ಮಹಾ ಸಭೆಯ ಸಭಾ ಕಾರ್ಯಗಳನ್ನು ಪ್ರಾರಂಭಿಸುವರು. ಈ ಜಿಲ್ಲೆಯ ಪರಸ್ಪರ ಸಹಾಯಕ ಸಂಘದವರು ತಮ್ಮ ಸಹಕಾರದಿಂದ ಈ ಮಹಾ ಸಭೆಯ ಕಾರ್ಯಗಳನ್ನು ಕೈಗೂಡಿಸಿ ಕೊಡಬೇಕೆಂಬದಾಗಿ ವಿಜ್ಞಾಪಿಸೋಣಾಗಿರುತ್ತದೆ.

ಒಬ್ಬ ಮುಂಬಾಯಿಯ ಬಾತ್ಮೀದಾರರಿಂದ:—ವ್ಯಾಸರಾಯ ಪ್ರಭುಗಳು ಇತ್ತಲಾಗೆ ಮುಂಬಯಿಗೆ ಬಂದಾಗ ಬಂದೋಬಸ್ತಿ ಕೆಲಸಗಳಲ್ಲಿ ಪೊಲೀಸಿನವರಿಗೆ ಸಹಾಯ ಮಾಡಿದ ಈ ಜಿಲ್ಲೆಯ ರಾ| ಫಲ್ಮಾರ ವೆಂಕಟೇಶ ಕಾವ.ತರವರ ಶ್ರಮವನ್ನು ಯೋಗ್ಯರೀತಿಯಲ್ಲಿ ಶ್ಲಾಘಿಸಿ ಮುಂಬಯಿಯ ಬಹುಮಾನಪಟ್ಟ ಪೊಲೀಸ್ ಕಮ್ಮಿಶನರ್ ಮೆ| ಎಡ್ವರ್ಡ್ ದೊರೆಗಳವರು ಒಂದು ಶ್ಲಾಘನಾ ಪತ್ರವನ್ನು ಕೊಟ್ಟಿರುವರು.

ಆರೋಗ್ಯದಾಯಿನಿ ಎಂಬ ಚಿಕಿತ್ಸಾ ಭವನಕ್ಕೆ ಇದೇ ಜನವರಿ ತಿಂಗಳಿಂದ ಧರ್ಮ ಸಹಾಯ ಮಾಡಿದವರ ಹೆಸರುಗಳೂ ಮತ್ತು ಮೊಬಲಗುಗಳೂ:-ರಾ| ಡಾಕ್ತರ್ ಕೆ. ಯನ್. ಕೇಸರಿ ಮದರಾಸು ರೂ. ೬೧; ರಾ| ಯಂ. ಕೆ. ಬಸಪ್ಪ ಅವರ್ಗಳ್ ಮಲ್ಕಿ ರೂ. ೫; ರಾ| ಸಾಹುಕಾರ್ ನರ್ಸಯ್ಯ ಶೆಣೈ ಅವರ್ಗಳ್ ಮಂಜೇಶ್ವರ ರೂ. ೧೦; ಮ| ರಾ|.ರಾ| ಯಚ್. ವಿ. ಆಡವ ಅವರ್ಗಳ್ ಮದ್ರಾಸ್, ಮೆಸ್ಸರ್ಸ್ ಸಿ. ಆರೋನ್ ಎಂಡ್ ಸನ್ಸ್ ಕಣ್ಣನೂರ್, ಮ| ರಾ| ರಾ| ಯಮ್. ಸಿ. ಉಣಿಜೋಯಿ ಅವರ್ಗಳ್ ಕಣ್ಣನೂರ್, ಇವರು ರೂ. ೫ರ ಪ್ರಕಾರ. ಮ| ರಾ| ರಾ| ಯಮ್. ಆರ್. ಪೂಂಜ ಅವರ್ಗಳ್ ಮಂಗಳೂರು ರೂ. ೪; ಶ್ರೀಮತಿ ಮಂಜದಡಿ ಕಂಬಕ್ಕಬ್ಬಾ ಮಂಗಳೂರು; ಮ| ರಾ| ರಾ| ರತನ್ಜಿ ಕಾಂಜಿ ಶೇಟ್ ಮಂಗಳೂರು; ಮ| ರಾ| ರಾ| ಬಿ. ದಾಸರೈ ಅವರ್ಗಳ್ ಬಿ. ಎ. ಮದ್ರಾಸ್; ಮ| ರಾ| ರಾ| ಸಿ. ಆರ್. ರಘುನಾಥ ಪುಂಜ ಅವರ್ಗಳ್ ಬಿ. ಎ. ಮದ್ರಾಸ್; ಮ| ರಾ| ರಾ| ಬಿ. ಆರ್| ಶೆಟ್ಟಿ ಅವರ್ಗಳ್ ಮದ್ರಾಸ್; ಪಿ. ಮೆಕ್ವೀನ್ ಯಸ್‌ಕ್ವಾಯರ್ ಐ. ಸಿ. ಯಸ್. ಸಬ್ ಕಲೆಕ್ಟರ್ ತಲಚೇರಿ, ಇವರು ಒಬ್ಬೊಬ್ಬರು ರೂ. ೨ರ ಪ್ರಕಾರ. ಮ| ರಾ| ರಾ. ಡಾಕ್ತರ್ ಜಿ. ರಾಮರಾವ್. ಅವರ್ಗಳ್ ಮದ್ರಾಸ್ ರೂ. ೧-೮-೦.

ಮುಂದರಿಯುವುದು.

FANCY SALE! FANCY SALE!!

UNDER THE AUSPICES OF THE

MANGALORE MAHILA SABHA

IN AID OF THE

GANAPATHI SECONDARY SCHOOL FUND

In the Ganapathi Secondary School Hall

On the 3rd, 4th & 5th of May 1914

From 8 to 10 A. M. and 4 to 6 P. M.

The Sale is the result of the efforts of a large number of public spirited Hindu ladies of Canara who have joined together to come to the aid of this most useful institution. Nearly 500 articles have been worked and will be exhibited for sale. The public are earnestly requested to patronise and encourage this first public effort of the Hindu ladies as a body to organise a public work, and all well-wishers of the institution as well as those who are interested in the encouragement of arts will surely help this movement by their presence.

Admission will be by tickets.

Rate of admission: 1 Anna per ticket.

ಭವಿಷತ್.

ಜನ್ಮಪತ್ರಿಕಾ.

ನಿಮ್ಮ ಮಕ್ಕಳು ಹುಟ್ಟಿದ ಸಂವತ್ಸರ, ಮಾಸ, ತಿಥಿ ವಾರ, ಜನನಕಾಲವನ್ನು ಬರೆದು ಕಳುಹಿಸಿದರೆ ನಾವು ಲಗ್ನಕುಂಡಲಿ. ಅಂಶಕುಂಡಲಿ, ಮಹರ್ದಶಾ ಮೊದಲಾದವುಗಳನ್ನು ಮಾಡಿಹಾಕಿ ಶಿಶುವಿಗೆ ಹುಟ್ಟಿದ ನಕ್ಷತ್ರದೋಷ, ಬಾಲಾರಿಷ್ಟದೋಷ ವಿಚಾರವನ್ನು ಇದ್ದರೆ ಅವುಗಳ ಪರಿಹಾರಕ್ಕೆ ಶಾಂತಿ ಮಾಡುವ ಕ್ರಮಗಳನ್ನೂ ಮಾತಾಪಿತ್ರಾರಿಷ್ಟ ವಿಚಾರವನ್ನೂ ಶಿಶುವಿಗೆ ಮುಂದೆ ಇಷ್ಟನೆ ವರುಷಗಳಲ್ಲಿ ಇಂಥಾ ಕಂಟಕಗಳೇ ಬರುವ ವಿಷಯವನ್ನೂ ಶಿಶುವಿನ ಆಯುಷ್ಯ ವಿಷಯವನ್ನೂ ಸಹಾ ವಿಶದವಾಗಿ ಬರೆದು ಜನ್ಮಪತ್ರಿಕೆಯನ್ನು ತಯಾರುಮಾಡಿ ಕಳುಹಿಸುತ್ತೇವೆ.

ಬಾಲಗ್ರಹನಿವಾರಿಣೀ ಯಂತ್ರ.

ಈ ಮಹಾಯಂತ್ರವನ್ನು ಒಂದು ಬೆಳ್ಳಿ ತಾಯತದಲ್ಲಿ ಹಾಕಿ ಭದ್ರಪಡಿಸಿ ಮಕ್ಕಳಿಗೆ ಕಟ್ಟಿದರೆ ೧೨ ವರುಷದವರಿಗೂ ಬರತಕ್ಕ ಬಾಲಾರಿಷ್ಟವು ಖಂಡಿತವಾಗಿ ಪರಿಹಾರವಾಗುತ್ತೆ. ಮತ್ತು ಈ ಮಹಾಯಂತ್ರವನ್ನು ಮಕ್ಕಳಿಲ್ಲದೆ ವ್ಯಸನಪಡತಕ್ಕ ಸ್ತ್ರೀಯರಿಗೆ ಕಟ್ಟಿದರೆ ಸಂದೇಹವಿಲ್ಲದೆ ಮಕ್ಕಳ ಫಲವಾಗುತ್ತೆ. ಬಾಲಗ್ರಹನಿವಾರಿಣಿ ಯಂತ್ರ ಸಹಿತ ಜನ್ಮಪತ್ರಿಕೆಗೆ ಕ್ರಯ ರೂ. ೨.

ವಿಳಾಸ:—

ಟಿ. ಎಚ್. ಎಂ. ಸಿದ್ಧಾಂತಿಗಳು,
ಹರಪನಹಳ್ಳಿ (ಜಿಲ್ಲಾ ಬಳ್ಳಾರಿ).

ವಿವಿಧ ವಿಷಯಗಳು.

ಶುಂಠಿಯ ಮುರಬ್ಬಾವನ್ನು ಮಾಡತಕ್ಕ ವಿಧಾನವು ಹ್ಯಾಗಂದರೆ:—ಶುಂಠಿಯನ್ನೆಲ್ಲಾ ಚನ್ನಾಗಿ ನೀರಿನಲ್ಲಿ ತೊಳೆದು ನಂತರ ಮೇಲಿನ ಸಿಪ್ಪೆಯನ್ನೆಲ್ಲಾ ಹೆರೆದು ಬಿಡುವರು. ನಂತರ ಅದನ್ನು ದಬ್ಬಳದಿಂದ ಅಲ್ಲಲ್ಲೇ ಚುಚ್ಚಿ ಅಕ್ಕಿಯನ್ನು ತೊಳದು ಕಲಕಚ್ಚಿನಲ್ಲಿ ತೊಳೆಯುತ್ತಾರೆ. ಇದಾದ ಮೇಲೆ ಶುದ್ಧವಾದ ಸಕ್ಕರೆ ಮತ್ತು ನೀರಿನಲ್ಲಿ ಹಾಕಿ ಚನ್ನಾಗಿ ನೆನಿಯುವವರಿವಿಗೂ ಬೇಯಿಸಿ ಜಾಡಿಗೆಳಲ್ಲಿ ಹಾಕಿ ಮೇಲೆ ಸಕ್ಕರೆ ಪಾಕವನ್ನು ಸುರಿಯುವರು. ಒಣ ಶುಂಠಿಯ ಮುರುಬ್ಬಾವನನ್ನು ಮಾಡಬೇಕಾದರೆ ಹಸಿ ಶುಂಟಿಯನ್ನು ನೀರೆಲ್ಲಾ ಹೋಗುವಂತೆ ಒಣಗಿಸಿ ಬಿದಿರು ಚಾಪೆಗಳ ಮೇಲೆ ಸಕ್ಕರೆಯನ್ನು ಹರವಿ ಅದರ ಮೇಲೆ ಶುಂಠಿ ಕೊನೆಗಳನ್ನೆಲ್ಲಾ ಇಟ್ಟು ಚಾಪೆಯಲ್ಲಿ ಬಿಗಿಯಾಗಿ ಸುತ್ತಿಡುವರು. ಹೀಗೆ ಮಾಡಿದರೆ ಸಕ್ಕರೆಯು ಚನ್ನಾಗಿ ಸುಂಠಿಗೆಲ್ಲಾ ಮೆತ್ತಿಕೊಳ್ಳುವುದು. ಹೀಗೆ ಯಾವ ವಿಧವಾದ ಮುರುಬ್ಬಾವನ್ನು ಮಾಡಬೇಕಾದರೂ ಖಾರವು ಕಡಿಮೆಯಾಗಿರುವ ಶುಂಠಿಯನ್ನು ಉಪಯೋಗಿಸುವುದು ಒಳ್ಳೇದು. ಚೈನಾ ದೇಶದಲ್ಲಿ ಬೆಳೆಯುವ ಶುಂಠಿಯು ಸಾಮಾನ್ಯವಾಗಿ ಖಾರವು ಕಡಿಮೆಯುಳ್ಳದ್ದಾಗಿರುವುದು. ಅಲ್ಲಿನವರು ಇದನ್ನು ಬೆಳೆಯುವ ಕ್ರಮವು ಹ್ಯಾಗಂದರೆ:—ಶುಂಠಿಯ ಕೊನೆಗಳನ್ನು ಒಂದರಿಂದ ಎರಡು ಅಡಿಗಳ ದೂರವಾಗಿ ದಿಂಡುಗಳನ್ನು ಕಟ್ಟಿ ಅಲ್ಲಿ ಆರು ಅಂಗುಲಗಳ ದೂರಕ್ಕೆ ಒಂದೊಂದರಂತೆ ನೆಡುವರು. ದಿಂಡುಗಳ ನಡುವೆ ಹಳ್ಳಗಳ ನೀರನ್ನು ಕಟ್ಟಿರುತ್ತಾರೆ. ಸೊಸಿಗೆಳು ಸುಮಾರು ಮುಕ್ಕಾಲು ಅಡಿ ಎತ್ತರವಾಗಿರುವಾಗ್ಯೆ ಉಚ್ಚೆ ಅಥವಾ ಪಾಯಿಖಾನೆ ಗೊಬ್ಬರವನ್ನು ಹೇರಳವಾಗಿ ಹಾಕುತ್ತಾರೆ. ಹೀಗೆ ಎರಡು ಮೂರಾವರ್ತಿ ಮಾಡುವರು. ನೆಟ್ಟ ಸುಮಾರು ಮೂರು ತಿಂಗಳ ನಂತರದಲ್ಲಿ ಮೊದಲನೇ ಬೆಳೆಯು ಕೈಗೆ ಬರುವುದು. ಈ ಶುಂಠಿಯು ಖಾರವು ಕಡಿಮೆಯುಳ್ಳದ್ದಾಗಿಯೂ ಹೆಚ್ಚು ಮತ್ತು ಬೆಳೆಬಾಳತಕ್ಕದ್ದಾಗಿಯೂ ಇರುವುದು. ಈ ಶುಂಠಿಯೇ ಸ್ವಲ್ಪ ಬಲಿತರೆ ಅತೀ ಖಾರವಾಗಿರುವುದು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಅವಲ್ ಮಸ್ಕತಿ ಅಕ್ಕಿ ...	5—4—0	5—10—0
ದುಯಂ ,, ,, ...	5—0—0	5—3—0
ಗುಡ್ನು	4-13—0	4—15—0
ಅವಲ್ ಬೆಳ್ತಿಗೆ... ...	5—10—0	5-12—0
ಗುಡ್ನು ಬೆಳ್ತಿಗೆ	5—2—0	5—4—0
ಹುರುಳಿ ಗೋಣಿ, ೧ರ		7—3—0
ರಂಗೂನ್ ಗೋಣಿ ೧ರ ...	9—4—0	9—6—0
ಉಪ್ಪು ಗೋಣಿ ೧ರ ...	3—8—0	3—10—0
ಕೊಬ್ರಿ ಖಂಡಿ ೧ರ ...	98-0-0	105—0—0
ಊರು ಬೆಲ್ಲ ಖಂಡಿ ೧ರ	34—0—0	35—0—0
ಗೋದಿ ಗೋಣಿ ೧ಕ್ಕೆ...		11—8—0
ಕಡಲೆ ಗೋಣಿ ೧ಕ್ಕೆ	9—0—0	9—8—0
ಉದ್ದು ಗೋಣಿ ೧ರ		10—4—0
ತೊಗರಿ ಗೋಣಿ ೧ರ...		11—0—0
ತೊಗರಿಬೇಳೆ ಗೋಣಿ ೧ರ	11-0—0	14—0—0
ಕೊಬ್ರಿ ಹಿಂಡಿ ಖಂಡಿ೧ರ	32—0—0	35—0—0
ಎಳ್ಳಿಂಡಿ ಖಂಡಿ ೧ರ	30—0—0	35—0—0
ಕೊಬ್ರಿ ಎಣ್ಣೆ ಮಣ ೧ರ		7—5—0
ಎಳ್ಳೆಣ್ಣೆ ಮಣ ೧ರ ...	7—2—0	7—4—0
ಬಿಳಿಗೋಟು ಖಂಡಿ ೧ರ	90—0—0	96—0—0
ಕಾಫಿ ಖಂಡಿ ೧ರ ...	215—0—0	225—0—0
ಯಾಲಕ್ಕಿ ಮಣ ೧ಕ್ಕೆ	40—0—0	50—0—0

THE ANGLO INDIAN DRUG & CHEMICAL COMPANY, 16 MARKET BOMBAY 2.

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ. ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

KAMINIA
OIL
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co
BOMBAY

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತುಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ. ನಯವಾಗಿ ಚಕಚಕಿಸುವವು; ನಿಬಿಡವಾದ ನೀಲ ಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪು ಕೊಡುತ್ತೆ, ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ, ಸುಂಡಿನ ಹೊಟ್ಟನ್ನು ಅಣಗಿಸುತ್ತೆ, ಉತ್ತಮೊತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ,ನರೆಕೂದಲನ್ನುಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲರ್ಹವಾಗಿರುತ್ತೆ.

ಇದರ ಬೆಲೆ 1 ಸೀಸೆಗೆ ರೂ. 1. ಅಂಚೆಯ ವೆಚ್ಚ ಆಣೆ 4 ಬೇರೆ ತೆರಬೇಕು.
3 ಸೀಸೆಗಳಿಗೆ ರೂ. 2—10—0. ಅಂಚೆಯ ವೆಚ್ಚ ಆಣೆ 7.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ. ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆಯು ಉತ್ತಮೋತ್ತಮವಾದದ್ದೆಂದು ತಿಳಿಯಬೇಕು. ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರಿಯುತ್ತಿದ್ದಾರೆ.

ಅಮೇರಿಕದ ಡಾಕ್ತರರ ಅವಿಶ್ರಾಂತ ಪರಿಶ್ರಮದ ಅದ್ಭುತ ಚಮತ್ಕಾರ, ಅಪೂರ್ವ ಶಕ್ತಿಯನ್ನು ಕೊಡತಕ್ಕ **ಪ್ರೊ. ಜೇಮ್ಸರವರ ವಿದ್ಯುತ್ ಶಕ್ತಿವರ್ಧಕ ಗುಟಿಕಾ**, ದುರ್ಬಲತೆ, ಧಾತು ಕ್ಷೀಣತೆ, ಅಗ್ನಿಮಾಂದ್ಯ, ಖಾಸಶ್ವಾಸ, ಕ್ಷಯಾದಿ ರೋಗಗಳಿಂದ ಮೃತ್ಯುವಿನ ಕೋರೆಗಳಲ್ಲಿ ಸಿಲುಕಿರುವವರಿಗೆ, ಅಥವಾ ರೋಗಗಳಿಂದ ಮುಕ್ತರಾಗಿ ಸಾಯಲಿಚ್ಛಿಸುವವರನ್ನು, ಕೆಲಕಾಲ ಪರ್ಯಂತ ಅವರ ಮೃತ್ಯುವನ್ನು ಹಿಂದಟ್ಟಿ ಅವರ ಶರೀರದಲ್ಲಿಯ ಸರ್ವ ರೋಗಗಳನ್ನು ಹೋಗಲಾಡಿಸಿ, ವಿದ್ಯುಚ್ಛಕ್ತಿಯ ಯೋಗದಿಂದ ಪುನಃ ಸ್ವರ್ಗಸುಖವನ್ನು ಅವರಿಗೆ ಕೊಡಲಾಪ **ರಾಮಬಾಣದಂತಹ** ಹುಸಿಯಾಗದ ಉಪಾಯವೆಂದರೆ ಪ್ರೊ. ಜೇಮ್ಸರವರ ಶಕ್ತಿವರ್ಧಕ ಗುಳಿಗೆಗಳೇ. ಸ್ಮೃತಿಶಕ್ತಿಯ ನಾಶ, ಪಚನಕ್ರಿಯೆಯ ವಿಕಾರ, ಮೇಧಾಶಕ್ತಿಯ ಮೂಢತೆ, ಮುಖರೇಖೆಯ ಪಾಂಡುತೆ, ಅಪೌರುಷತೆ, ಸ್ವಪ್ನದೋಷ, ನಾಡಿಗಳ ಶಿಥಿಲತೆ, ಇವೇ ಮೊದಲಾದ ರೋಗಗಳಿಂದ ಉಂಟಾಗುವ ಮಾನಸಿಕ ಕ್ಲೇಶ ಮತ್ತು ನಿರಾಶೆಗಳನ್ನು ಕಿತ್ತುಹಾಕಲಿಕ್ಕೆ ಉಪಲಬ್ಧವಾಗಿರುವ ಉತ್ತಮೋತ್ತಮವಾದ ಔಷಧವನ್ನು ಉಪಯೋಗಿಸಿ ಸರ್ವ ಸಂಕಷ್ಟಗಳಿಂದ ಬಿಡುಗಡೆಯನ್ನು ಹೊಂದಿ, ಈ ಮಹೋಷಧದ ಗುಣಾನುವಾದವನ್ನು ಮುಕ್ತಕಂಠವಾಗಿ ಹಾಡುತ್ತಿರುವರು; ಆದರೆ ಈ ತನಕ ಸರ್ವ ರೋಗಗಳಿಗೆ ತುತ್ತಾಗಿರುವ ಮತ್ತು ದಾರುಣವಾದ ದುಃಖಗಳಿಂದ ಅಳಲುತ್ತಿರುವ ಲಕ್ಷೋಪಲಕ್ಷ ಅಭಾಗಿ ಜನರಿಗೆ ನಮ್ಮ ವಿನಂತಿಯು ಇದೇ ಒಂದೇಯೊಂದು ಸರ್ವ ರೋಗಸಂಹಾರಿಣಿಯಾಗಿರುವ ಪ್ರೊ. ಜೇಮ್ಸರವರ ಈ ವಿದ್ಯುತ್ ಶಕ್ತಿವರ್ಧಕ ಗುಳಿಗೆಳನ್ನು ಸೇವಿಸಿ ನೋಡಿರಿ. ಇದಕ್ಕೆ ಸಾವಿರಾರು ಸಿಫಾರಸ್ ಪತ್ರಗಳು ಬಂದಿವೆ.

PROF. JAMES
ELECTRO-TONIC
PEARLS
FOR
HEALTH, STRENGTH & ENERGY

40 ಗುಳಿಗೆಗಳಿರುವ ಸೀಸೆ ೧ಕ್ಕೆ ರೂ. 2—0—0.
ತಪ್ಪಾಲು ಖರ್ಚು... ... ,, 0—4—0.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗುಣವಾಗುವದು ಉರಿಯುವದಿಲ್ಲ. ಶೀಶೆ ೧ಕ್ಕೆ 0—4—0.

ಕಾಮಿನಿಯಾ ಕೋಲ್ಡ ಕ್ರೀಮ್.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದ ಮೇಲಿರುವ ಮುಡಮೆಗಳು, ಕಪ್ಪು ಕಲೆಗಳು ಹೋಗುವದು. ಇದಕ್ಕೆ ಪರಿಮಳವು ಇದೆ. ಶೀಶೆ ೧ಕ್ಕೆ 0—12—0.

ಕಾಮಾಟೋನ್.

ಧಾತುಪುಷ್ಟಿ, ಧಾತುವೃದ್ಧಿಯಾಗುವದು,
ಶೀಶೆ ೧ಕ್ಕೆ 2—0—0.

ಸರಸಪರಿಲಾ.

ರಕ್ತಶುದ್ಧಿಗೆ ಶೀಶೆ ೧ಕ್ಕೆ 1—0—0.

ವಿದ್ಯುಚ್ಛಕ್ತಿ ಮಾತ್ರೆ.

ಸ್ತ್ರೀಯರ ರಜೋದರ್ಶನದಲ್ಲಿ ಆಗುವ ಹೊಟ್ಟೆನೋವಿಗೆ. ೫೦ ಮಾತ್ರೆ ಶೀಶೆ ೧ಕ್ಕೆ 1—4—0.

ಓಡ್‌ಪೆನ್ಸ್ ಕಫಪೀಯೂಷ.

ಶ್ವಾಸ, ಖಾಸ, ಕೆಮ್ಮ ಇವುಗಳಿಗೆ ಸಿದ್ಧೌಷಧ.
ಶೀಶೆ ೧ಕ್ಕೆ 1—4—0.

ರುಬ್ಯಾಡ್.

ವಿರೇಚನಕ್ಕೆ ಔಷಧಿ 0—10—0.

ಟ್ರೇಜೋ ಟೆಬ್ಲೆಟ್‌ಸ್.

ಶಿರೋವೇದನೆಗೆ ದಿವ್ಯ ಔಷಧ ಶೀಶೆ ೧ಕ್ಕೆ 0-12-0.

ಕ್ಯುರೇಲಾಯಿನ್.

ಪ್ರಮೇಹಕ್ಕೆ. ಶೀಶೆ ೧ಕ್ಕೆ 1—8—0.

ಒಡ್‌ಮನ್ನ ಮಲೇರಿಯಸ್ ಪಿಲ್ಸ್.

!ಎಲ್ಲಾ ತರದ ಜ್ವರದ ಮೇಲೆ; ಶೀಶೆ ೧ಕ್ಕೆ 1—0—0.

ಕರ್ಣರೋಗ ಚಿಕಿತ್ಸಾ.

ಕಿವಿಯಲ್ಲೆ ಉಂಟಾಗುವ ಸ್ಫುರಣ, ಕಜ್ಜಿ, ಕೀವು, ಸೋರುವಿಕೆಗೆ. ಶೀಶೆ ೧ಕ್ಕೆ 0—8—0.

ದಂತಮಂಜನ.

ಡಬ್ಬಿ ೧ಕ್ಕೆ 0—2—0.

ಕಜ್ಜಿ ಮುಲಾಮು.

ಶೀಶೆ ೧ಕ್ಕೆ 0—3—0.

ಕೊಲೆರಾ ರೋಗದ ಔಷಧಿ.

ಶೀಶೆ ೧ಕ್ಕೆ 0—6—0.

ಅತೀ ಮನೋಹರವಾದ ಸುರಭಿಯು. (ರಜಿಸ್ಟರ್ಡ್)

ಒಟ್ಟೊ—ದಿಲ್ ಬಹಾರ್!!

ಈ ಸುಗಂಧ ದ್ರವವು ಮಧುರ—ಕೋಮಲ—ಚಿರಸ್ಥಾಯಿ—ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಸಲ ನಿಮ್ಮ ಕೈಬಟ್ಟೆಯಲ್ಲಿ ಪಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾದಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ—ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ಆಣೆ 8. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ ಆಣೆ 12. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2. ಅಂಚೆಯ ವೆಚ್ಚ ಬೇರೆ ಆಣೆ 4. ಒಟ್ಟೊ—ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0—12—0.

ಎಲ್ಲಾ ಸ್ಥಳಗಲ್ಲಿಯೂ ಏಜಂಟರು ಬೇಕು.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

ಒಂದು ತಿಂಗಳು ಮಾತ್ರ! ಬಹುಮಾನ! ತ್ವರೆಮಾಡಿರಿ!

ವಿವೇಕಚೂಡಾಮಣಿ

ಶ್ರೀಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯವೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟ ಸಂಖ್ಯೆಗಳು ೪೪೮. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೋ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ ರೂ. ೨—೪—೦, ಹಾಸಲು ೪ ಆಣೆ.

ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಸಟೀಕಾ ಮುಕುಂದಮಾಲೆ ಸ್ತೋತ್ರ ಒಂದು, ಮಹಿಂನಾ ಸ್ತೋತ್ರ ಒಂದು ಈ ಎರಡು ಪುಸ್ತಕಗಳನ್ನು ಬಹುಮಾನವಾಗಿ ಕೊಡುತ್ತೇವೆ.

ಕಥಾಕಲ್ಪವೃಕ್ಷ.

ಪೂರ್ವಕಾಲದ ಕವೀಶ್ವರರ ವೃತ್ತಾಂತಗಳಿಂದಲೂ, ಮನೋಹರವಾದ ನೀತಿಕಥೆಗಳಿಂದಲೂ ಕೂಡಿ ಗುನುಷ್ಯ, ಪಶು, ಪಕ್ಷಿ, ಕ್ರಿಮಿಕೀಟಗಳ ಸ್ವಭಾವಧರ್ಮಗಳನ್ನು ತಿಳಿಸುವ, ವಾತಾವರಣ, ವಿದ್ಯುಲ್ಲತೆ ಮುಂತಾದ ತತ್ವಗಳ ವರ್ಣನೆಯುಳ್ಳ ಮತ್ತು ಯಂತ್ರಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರಗಳನ್ನು ವರ್ಣಿಸುವ ಗ್ರಂಥ ಅತ್ಯಂತ ಉಪಯೋಗವಾದದ್ದು. ಕ್ರಯ ರೂ. ೦—೧೦—೦. ಹಾಸಲು ೦—೩—೦.

ರಘುಕುಲಚರಿತ್ರೆ.

ಕಾಳಿದಾಸ ಮಹಾಕವಿಯ ರಘುವಂಶ ಮಹಾಕಾವ್ಯವೇ ‚‚ರಘುಕುಲಚರಿತಂ" ಎಂಬ ಈ ಕಥೆ. ಮೊದಲನೇ ಭಾಗ ದಿಲೀಪನ ವಶಿಷ್ಠಾಶ್ರಮ ಪ್ರಯಾಣ, ನಂದಿನೀಧೇನುವಿನ ವರಪ್ರಸಾದ, ರಘುರಾಜಾಭಿಷೇಕ, ರಘುದಿಗ್ವಿಜಯ, ಅಜಸ್ವಯಂವರಾಬಿಗಮನ, ಸ್ವಯಂವರವರ್ಣನ, ಅಜಪಾಣಿಗ್ರಹಣ, ಅಜವಿಲಾಪ ಇಂತು ಎಂಟು ಬಗೆಯ ವಿಚಿತ್ರ ಚರಿತ್ರೆಯನ್ನೊಳಗೊಂಡಿದೆ.

ಕ್ರಯ ರೂ. ೦—೮—೦. ಹಾಸಲು ೦—೨—೦.

ಸಟೀಕಾಬ್ರಹಜ್ಜಾತಕ

ಕ್ರಯ ರೂ. ೫—೦—೦. ಹಾಸಲು ರೂ. ೦—೮—೦.

ವಿಳಾಸ:— ಎಚ್. ಎನ್. ರಾವ್ ಆಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು

ಬರ್ಮಿಸ್ ಬ್ಯೂಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.

USE
UP-TO
DATE
FLORAL
Burmese Beauty
OIL
(REGD.)

ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲೆಪಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಷ್ಟು ಚಲೋದಾಗಿರುವುದು. ಒಮ್ಮೆಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯುವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ಯಾಸ್.

PARADISE
THE FLORAL
PERFUMERY Co.
BOMBAY 7.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಜಿನದಕ್ಕೆ	0—8—0.
ನಡ ತರದ್ದಕ್ಕೆ	0-12—0.
ದೊಡ್ಡ ಸ್ಯಾಜಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟಿಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್‌ಫ್ಯುಮರಿ ಕಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲುರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ	ತೊಲೆ 1ಕ್ಕೆ	2-0-0
ಅಂಬರ್ ಬತ್ತಿ	,, ,,	6-0-0	B ಅರಗಜ	,, ,,	1-0-0
ಕಸ್ತೂರಿ ಬತ್ತಿ	,, ,,	3-0-0	ಕಸ್ತೂರಿ ಬಿಲ್ಲೆ	,, ,,	2-0-0
ಜವಾಜಿ ಬತ್ತಿ	,, ,,	2-0-0	ಜವಾಜಿ ಬಿಲ್ಲೆ	,, ,,	1-0-0
ಪುಣಗಿನ ಬತ್ತಿ	,, ,,	1-8-0	ಕೇಸರಿ ಬಿಲ್ಲೆ	,, ,,	0-8-0
A ಪನ್ನೀರ್ ಬತ್ತಿ	,, ,,	0-12-0	ತಾಂಬೂಲ ರತ್ನ	ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ	,, ,,	0-6-0	ದಶಾಂಗ	ಡಬ್ಬಿ 1ಕ್ಕೆ	0-4-0

ಮೇನೇಜರ್, ‚‚ಸುಗಂಧವಿಲಾಸ ಮಂಗಳೂರು.

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಸ್ನೇಹಲತಾ

ಮಸ್ತಕತಾಪಹಾರಿಣೀ ತೈಲ.

ತಲೆನೋವು, ತಲೆಭಾರ, ನಿದ್ರಾಭಂಗ, ಕಣ್ಣುನೋವು, ಹೆಂಗಸರ ತಲೆಶಿಡಿತ, ತಲೆಕುತ್ತು ಪರಿಹಾರ. ಕೇಶವು ರಮ್ಯವಾಗಿ ಉದ್ದುದ್ದ ಬೆಳೆಯುವುದು. ಬಾಲ ನರೆ ಕಪ್ಪಾಗುವುದು. ಉಷ್ಣದಿಂದುಂಟಾದ ತುರಿಕಜ್ಜಿ ಮಾಗುವುದು. ಗಿಡಮೂಲಿಕೆಗಳಿಂದಲೇ ತಯಾರಿಸಿದಈ ತೈಲವನ್ನು ಒಂದು ಸಲ ಉಪಯೋಗಿಸಿ ನೋಡಿರಿ!

ಕ್ರಯ 4 ಔನ್ಸಿನ ಸೀಸೆಗೆ 0—12—0. ಡಜನ್ ಬಾಟ್ಲಿಗಳಿಗೆ ರೂ. 8. ವಿ. ಪಿ. ಬೇರೆ.

ಸರ್ವರೋಗಪರಿಹಾರವಾದ ನೀಲಗಿರಿಯ ಯುಕಲಿಪ್ಟಸ್ ತೈಲ—ಔನ್ಸ್ ಸೀಸೆಗೆ 5 ಆಣೆ, ಡಜನಿಗೆ ರೂ. 3.

ಇಕ್ಲಿಪ್ಸ್ ರಬ್ಬರ್ ಮೊಹರುಗಳೂ ಫೊಟೋ ಎನ್‌ಲಾರ್ಜಮೆಂಟುಗಳೂ ಅಗ್ಗದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಹೋಪ್ ಕೊಟೇಜು,
ಕಂಕನಾಡಿ ಪೋಸ್ಟು.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

(ಧಾತುಪೌಷ್ಟಿಕ ವಜ್ರಾಂಗಪಾಕ.)

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ. ೩—೮—೦, ಒಮ್ಮೆಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗೆ ೪೦ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೆಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಶಿಗುತ್ತವೆ. ಅನುಪಾನ ಪತ್ರಿಕೆ ಬಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— ವಿ. ಎಸ್. ಮೋಡಕ,
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ತ್ರಿಕಾಲದರ್ಶಿ ಐನ.

ಭೂತ, ವರ್ತಮಾನ, ಭವಿಷತ್ ಕಾಲದಲ್ಲಿ ಆದ, ಆಗುವ ವಿಷಯಗಳನ್ನು ತಿಳಕೊಳ್ಳಬೇಕೆಂದಿದ್ದರೆ, ನಮ್ಮ ಪ್ರಖ್ಯಾತಿಪಟ್ಟ "ತ್ರಿಕಾಲದರ್ಶಿ ಐನ"ವನ್ನು ಕೊಂಡುಕೊಳ್ಳಿರಿ. ಈ ಐನವು ಹೂತಿಟ್ಟ ನಿಧಿ, ವ್ಯಾಪಾರದಲ್ಲಿ ಲಾಭ ಮತ್ತು ನಷ್ಟ, ಕೋರ್ಟಿನಲ್ಲಿ ಕಾರ್ಯಸಿದ್ಧಿ ಯಾ ಅಪಜಯ, ಪರೀಕ್ಷೆಯ ಫಲವನ್ನು ಮುಂದಾಗಿ ಹೇಳುವುದಲ್ಲದೆ ಮೃತ ಹೆತ್ತವರ ವಿಷಯವಾಗಿ ಹೆಂಡತಿ, ಮಗ, ಆಸ್ತಿ, ಕೆಲಸ, ಮನಸ್ಸಿನ ಅನುಮಾನ, ಜೀವಮಾನದಲ್ಲಿ ಎಂದಾದರೂ ನೀನು ಐಶ್ವರ್ಯವಂತನಾಗುತ್ತೀಯೋ, ಯಾ ನಿನಗೆ ದೇಶದಿಂದ, ಪರದೇಶದಿಂದ ಐಶ್ವರ್ಯವು ಬರುತ್ತದೋ ಎಂಬದನ್ನು ತಿಳಿದು ಹೇಳುವುದು. ನಿನ್ನ ದೂರದಲ್ಲಿರುವ ಸ್ನೇಹಿತರು, ಸಂಬಂಧಿಕರ ವಿಷಯವಾಗಿ ಈ ಐನವು ತಿಳಿಸುವುದು. ಪ್ರಸಿದ್ಧ ಪುರುಷರಿಂದ ಸರ್ಟಿಫಿಕೇಟುಗಳು ದೊರಕಿರುವವು.

ನಂಬ್ರ 1. ಸಾಧಾರಣ ಗ್ಲಾಸ್ ಐನ ರೂ. 2—9—0, ನಂಬ್ರ 2. ಕ್ರಿಸ್ಟಲ್, ಗ್ಲಾಸ್ ಐನ ರೂ. 3—9—0, ನಂಬ್ರ 3. ದೊಡ್ಡ ಮತ್ತು ಬಹಳ ಕಾಲ ಉಳಿಯುವ ಐನ ರೂ. 6—0—0. ಪೋಸ್ಟೇಜು ಮತ್ತು ಪೇಕಿಂಗ್ ಸಹಿತ. ಖಾಯಿಸ್ ಆಗದಿದ್ದ 1 ಮತ್ತು 2ನೇ ನಂಬ್ರದ ಐನವನ್ನು 24 ತಾಸಿನೊಳಗೆ ಹಿಂದೆ ಕಳುಹಿಸಿದರೆ ರೂ. 2 ಮತ್ತು ರೂ. 2—8—0 ಕೊಟ್ಟು ಹಿಂದೆ ತಕ್ಕೊಳ್ಳುವೆವು. 3ನೇ ನಂಬ್ರದ ಐನವನ್ನು ಹಿಂದೆ ಪಡೆಯಲಾರೆವು.

Patel Ashabhai Vagjibhai,
Post Karamsad Dt. KAIRA,
B. B. & C. I. RAILWAY.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಶಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0–4–0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಬೇಗನೇ ಕೊಂಡುಕೊಳ್ಳಿ! ಬೇಗನೇ ಕೊಂಡುಕೊಳ್ಳಿ!!

ಇದೇ ಸುಕಾಲ!

ನಮ್ಮ ಕೂಡೆ ಪರಿಷ್ಕೃತ ಕೆಟಲಾಗುಗಳಾಗಲೀ ಸುಳ್ಳು ಸರ್ಟಿಫಿಕೇಟುಗಳಾಗಲೀ ಇಲ್ಲ. ಇತರರನ್ನು ದೂರಿ ನಮ್ಮನ್ನು ಹೊಗಳಿಕೊಳ್ಳುವುದೂ ಇಲ್ಲ. ನಮ್ಮ ವಾಚುಗಳನ್ನು ಸರ್ವರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದ ಬರೇ ಕೊಂಚ ಲಾಭದಿಂದ ನಾವು ವಾಚುಗಳನ್ನು ಮಾರುವೆವಷ್ಟೆ.

ನಂ. 1 ಪರಿಷ್ಕೃತವಾದ ಹೊಸನಮೂನೆಯ ಬೆಳ್ಳಿ ರಿಸ್ಟ್ ವಾಚು ಚರ್ಮದ ಕೈಕಟ್ಟು ಸಹಿತ, 10 ವರುಷಗಳ ಗ್ಯಾರಂಟು ರೂ. 5-8-0. ನಂ. 4 ಮಧ್ಯಮ ಸ್ವಾಜು ಗನ್‌ಮೆಟಲ್ ವಾಚು 7 ವರುಷಗಳ ಗ್ಯಾರಂಟು ರೂ. 5-8-0. ನಂ. 5 ಲಿವರ್ ರೊಸ್ಕೊಪ್ ವಾಚು 1ನೇ ವಿಧ 20 ವರುಷಗಳ ಗ್ಯಾರಂಟು ರೂ. 7-8-0. ನಂ. 6 ಲಿವರ್ ರೊಸ್ಕೊಪ್ ವಾಚು 2ನೇ ವಿಧ 10 ವರ್ಷಗಳ ಗ್ಯಾರಂಟು ರೂ. 4-8-0. ನಂ. 10 ಎಲಾರ್ಮ್ ಟ್ಯಾಮ್‌ಪೀಸು 3 ವರುಷಗಳ ಗ್ಯಾರಂಟು ರೂ. 3-8-0. ನಂ. 11 ಬಿ ಟ್ಯಾಮ್‌ಪೀಸು 1ನೇ ವಿಧ 3 ವರುಷಗಳ ಗ್ಯಾರಂಟು ರೂ. 2-4-0. ನಂ. 13 ಕೆಲೆಂಡರ್ ಎಲಾರ್ಮ್ ಟ್ಯಾಮ್‌ಪೀಸು 6 ವರುಷಗಳ ಗ್ಯಾರಂಟು ರೂ. 4-8-0. ನಂ. 15. 8 ದಿವಸಗಳಿಗೊಂದಾವರ್ತಿ ಕೀಲಿ ಕೊಡುವ ಗನ್‌ಮೆಟಲ್ ವಾಚು 6 ವರುಷಗಳ ಗ್ಯಾರಂಟು ರೂ. 11. ನಂ. 16. 8 ದಿವಸಗಳಿಗೊಂದಾವರ್ತಿ ಕೀಲಿ ಬೆಳ್ಳಿ ವಾಚು 6 ವರುಷಗಳ ಗ್ಯಾರಂಟು ರೂ. 16-8-0. ನಂ. 17. 8 ದಿವಗಳಿಗೊಂದಾವರ್ತಿ ಕೀಲಿ ಕೊಡುವ ಜಾಪಾನ್ ಗಡಿಯಾರ ತಾರೀಕು ಸಹಾ ತೋರಿಸುವಂಥಾದ್ದು 10 ವರುಷಗಳ ಗ್ಯಾರಂಟು ರೂ. 12-8-0. ನಂ. 18. ಜೋಕರ್ ಎಲಾರ್ಮ್ ಟ್ಯಾಮ್‌ಪೀಸು 10 ವರುಷಗಳ ಗ್ಯಾರಂಟು ರೂ. 6-8-0.

ಮೇಲೆ ಹೇಳಿದ ಎಲ್ಲಾ ವಾಚು ಗಡಿಯಾರಗಳು ಗಟ್ಟಿಯಾದ ಲೋಹಗಳಿಂದ ಮಾಡಲ್ಪಟ್ಟದ್ದು. ಸಾಧಾರಣ ಲೋಹಗಳಿಂದ ಮತ್ತು ಹಿತ್ತಾಳಿಯಿಂದ ಮಾಡಲ್ಪಟ್ಟ ವಾಚು ಗಡಿಯಾರಗಳು ನಮ್ಮಿಂದಲೂ ಇತರರಿಂದಲೂ ಮೇಲೆ ಹೇಳಿದ ಕ್ರಯದ ಅರ್ಧಕ್ಕೆ ಕೊಡೋಣಾಗುವವು. ಪರಂತು, ಇವು ಗಟ್ಟಿಯಲ್ಲ.

ಬಹಳ ಅಗ್ಗ—ಕುಪನ್ ಕ್ರಮ—ಬೇಗನೇ ಕೊಂಡುಕೊಳ್ಳಿ!

6 ರೂಪಾಯಿಯ ವಾಚು, 3 ರೂಪಾಯಿಯ ಟ್ಯಾಮ್‌ಪೀಸು, ಬೀ ಟ್ಯಾಮ್‌ಪೀಸು, ಕೇಶರಂಜನ ಎಣ್ಣೆ ಇತ್ಯಾದಿಗಳು 4 ಆಣೆ 2 ಆಣೆಗೆ ದೊರೆಯುವ ವಿಧಾನವನ್ನು ಪತ್ರ ಬರೆದು ತಿಳಕೊಳ್ಳಬಹುದು.

ವಿಳಾಸ:— ನವಾಬ ಮಯಾನ್ನ ಎಂಡ್ ಕೊ.,
ವಾಚು ಮತ್ತು ಗಡಿಯಾರ ವ್ಯಾಪಾರಸ್ಥರು.
ಕಾದಿರಿ, ಅನಂತಪುರ ಡಿಸ್ಟ್ರಿಕ್ಟ್.

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.



ಅನ್ಸೋನಿಯ ಕಂಪೆನಿಯ ಜಿನ್ಯಾನ್ ಬಿ ಟ್ಯಾಮ್‌ಪೀಸ್, ನಿಕ್ಕಲ್‌ಕೇಸ್, ಹಿಂದಿನಿಂದ ಕೀಲಿ ಕೊಡುವುದು, ಎತ್ತರಿಸಲ್ಪಟ್ಟ ಮುಖಬಿಲ್ಲೆ, ಪ್ರತಿ ಒಂದು ಕುಟುಂಬಕ್ಕೆ ಸುಲಭ ದರದಲ್ಲಿ ದೊರಿಯುವ ಉತ್ತಮ ಗಡಿಯಾರ, ಇದರ ಪ್ರಯೋಗವು ಈಗ ಸರ್ವಸಾಧಾರಣ ಎಲ್ಲರಿಗೂ ಗೊತ್ತದೆ. ಇದನ್ನು ಕೊಂಡುಕೊಳ್ಳುವವರ ಸಂಖ್ಯೆ ಪ್ರತಿದಿನವೂ ಹೆಚ್ಚಾಗುತ್ತಿದೆ.

ನಿಕ್ಕಲ್‌ಕೇಸ್ ರೂ. 2—8—0 (ದೊಡ್ಡ ಅಂಕೆ). ಎಲಾರ್ಮ್ ಸಹಿತ ರೂ. 4—8—0. ಟಪ್ಪಾಲು ಚಾರ್ಜು ಬೇರೆ.

ಸುಪಿರಿಯರ್ ರೈಲ್ವೇ ರೆಗ್ಯುಲೇಟರ್.



ನಿಕ್ಕಲ್ ಬೆಳ್ಳಿಕೇಸ್, ಓಪನ್‌ಫೇಸ್, ಕೀಲೆಸ್, ದೊಡ್ಡ ಅಂಕೆಗಳು, ಬಲವಾದ ಮುಳ್ಳು, ನಿರ್ಭಿಡೆಯಾಗಿ ಪ್ರಯೋಗಿಸಬಹುದು. ಬಹಳವಾಗಿ ಮಾರುತ್ತಿರುವವು. ಅಗ್ಗ ಮತ್ತು ಚಲೋ ಗಡಿಯಾರ. ವ್ಯಾಟ್‌ಮೆಟಲ್ ಸರಪಣಿ ಸಹಿತ.

ರೂ. 2—15—0. ಟಪ್ಪಾಲು ಚಾರ್ಜು ಬೇರೆ.

ದಿ ಬೊಂಬೆ ಪೊಪ್ಯುಲರ್ ಏಜನ್ಸಿ,
ಡಾರವಿ, ಬೊಂಬೆ.
THE BOMBAY POPULAR AGENCY,
Dharvi Bombay.

ದೇಶಬಾಂಧವರೇ! ಇತ್ತ ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್
ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 96,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ. ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲ್ಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!! ಮದುವೆಯ ಮುಂಚಿತವಾಗಿಯೇ ಶೆತ್ತ ಹಣದ ದುಬಾರಿ ಹಣವು ಇಲ್ಲೀ ಕೊಡಲ್ಪಡುವುದು.

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ಥರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಷನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,
ಕನ್ನಡ, ಮೈಸೂರು ಮತ್ತು ಕೊಡಗುಸಂಸ್ಥಾನದ ಮುಖ್ಯ ಏಜಂಟರು, ಉಡುಪಿ (ದ. ಕನ್ನಡ


ಜೀನತಾನ
"JINTAN" Pill Case (Exact Size)
3 pills come out from here at each opening.
LOOKING GLASS
JINTAN

ಈಗಲೇ ಪರೀಕ್ಷಿಸಿ ನೋಡಿರಿ.

ಜೀನತಾನಿನ ವಿಶೇಷ ಗುಣಗಳು:—ಅತ್ಯುತ್ತಮವಾದ ಜೀರ್ಣಕಾರಿಯು, ಇದಕ್ಕೆ ಸಮಾನವಾದ ಜೀರ್ಣಕಾರಿಯು ಮಂತ್ತೊಂದಿರದು. ಜೀರ್ಣಶಕ್ತಿ ಕಡಮೆಯಾದ ಅನ್ನಕೋಶವು ಇದರ ಸೇವನೆಯಿಂದ ಎಂದೂ ಬಾಧಿಸಲ್ಪಡದು.

ರೋಗಗಳು ಅಂಟದಂತೆ ಮಾಡುವ ಪೂತಿನಾಶಕರ ವಿಶೇಷವಾದ ಗುಣವು ಇದಕ್ಕಿರುತ್ತದೆ. ಇದು ಉಪಯೋಗಿಸುವವರ ಶ್ವಾಸವನ್ನು ಸುವಾಸನೆಯುಳ್ಳದ್ದಾಗಿ ಮಾಡುವುದು.

ಹೊಗೆಸೊಪ್ಪುವ ಇತರ ಮಾದಕ ಪದಾರ್ಥಗಳ ವಾಸನೆಯನ್ನು ಇದನ್ನು ಸೇವಿಸಿದ ಮಾತ್ರದಿಂದ ಪೂರ್ಣವಾಗಿ ಹೋಗಲಾಡಿಸಬಹುದು.

ಸಂಗೀತ ಹಾಡುವವರೂ, ಉಪನ್ಯಾಸಕರೂ, ಇದನ್ನು ಉಪಯೋಗಿಸಿದರೆ ಗಂಟ್ಲಿನ ನಾಳಗಳು ಶುದ್ಧವಾಗುತ್ತವೆ. ಬಾಯಿಯ ದುರ್ವಾಸನೆ ನಾಶವಾಗುವದು.

ಕ್ರಯ. 30 ಮಾತ್ರೆಗಳ್ಳುಳ್ಳ ಪೊಟ್ಟಣಕ್ಕೆ ರೂ. 0-1-6. 195 ಮಾತ್ರೆಗಳುಳ್ಳ ಡಬ್ಬಿಗೆ ರೂ. 0-8-0. 65 ಮಾತ್ರೆಗಳುಳ್ಳ ಪೊಟ್ಟಣಕ್ಕೆ 0-3-0. 455 ಮಾತ್ರೆಗಳುಳ್ಳ ಸುಂದರವಾದ ಕನ್ನಡಿ ಡಬ್ಬಿಗೆ ರೂ. 1.

ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಎಂಡ್ ಕೊ,
ಪಾರ್ಕ ಟೌನ್, ಮದ್ರಾಸು.

S. VAIDYA & Co.
Park Town, Madras.

ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೋಡ್ಯಾನ್. ಹೊರಗೆ ಹಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ. ಅಗ್ನಿಮಾಂದ್ಯ, ಅತಿಸಾರ ಇವುಗಳನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್, ವೈದ್ಯಾ ಆಂಡ್ ಕೊ.
ಪಾರ್ಕ ಟೌನು, ಮದ್ರಾಸು.

S. VAIDYA & Co.,
Park Town, Madras.

"ಆಯೊನಿಕ್ ಫಾರ್ಮೆಸಿ"

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗ್ರಹೋಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು- ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮೆಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co.,
Park Town, Madras.

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ ಟೌನ್ ಮದ್ರಾಸು.

ಪ್ರಕಟನೆ.

ಮಂಗಳೂರು ತೇರಬೀದಿಯಲ್ಲಿರುವ ಕೆ. ಯಮ್. ದಾಸಪ್ರಭುಗಳ ಬುಕ್ ಶಾಪಿನಲ್ಲಿ ಅಥವಾ ಗ್ರಂಥಕರ್ತರಿಂದ ಶೀದಾ ಕ್ರಯಕ್ಕೆ ದೊರೆಯುವ ಪುಸ್ತಕಗಳು.

ವಕೀಲ ಹಳಿಗೇರಿ ಕೃಷ್ಣರಾಯರಿಂದ ರಚಿಸಲ್ಪಟ್ಟವುಗಳು.

ಪ್ರತಿ ೧ಕ್ಕೆ ಟಪ್ಪಾಲ್ ಹಾಸಲು ವಿನಹ ಕ್ರಯ.

(೧) ಆಧ್ಯಾತ್ಮವಿಚಾರ, ಪ್ರತ್ಯಗಾತ್ಮನ ಚಿತ್ರ ಸಮೇತ ... ... ರೂ. ೨-೪-೦.

(೨) ಆ ಗ್ರಂಥ (ಆಧ್ಯಾತ್ಮವಿಚಾರ)ದ ಕುರಿತು ಮಾಧ್ವರು ಹೇಳುವ ಆಕ್ಷೇಪಣೆಗಳಿಗೆ ಉತ್ತರ. ಇದರಲ್ಲಿ ಪ್ರಸಂಗತಃ ಶ್ರೀಮದ್ಭಗವದ್ಗೀತೆ ಮೊದಲಾದ ಸ್ವದೇಶೀಯ ದೇಶೀಯ ಗ್ರಂಥಗಳ ಆಧಾರದ ಮೇಲೆ ಮಧ್ವಮತವು ಸ್ವವಿರುದ್ಧವಾದದ್ದೆಂದು ವಗೈರೆ ತೋರಿಸೋಣಾಗಿರುತ್ತದೆ. ಕ್ರಯ ಆಣೆ ೦-೨-೦.

(೩) ಸ್ವಾಯಂಭುವ ಮನುವಂಶಾವಳಿ (ದೇವನಾಗರೀ ಅಕ್ಷರ) ಕನ್ನಡ ಉಪೋದ್ಘಾತ ಸಮೇತ ಕ್ರಯ ರೂಪಾಯಿ ೧-೦-೦.

ಈ ಪೈಕಿ ೧ನೇ ೩ನೇಯವುಗಳು ವೆಲ್ಯುಪೆಯಿಬಲ್ ಪೋಸ್ಟದ್ವಾರಾ ಕಳುಹಿಸೋಣಾಗಬಹುದು.

೨ನೇದರ ಬಗ್ಗೆ, ಅದನ್ನು ಕೊಂಡುಕೊಳ್ಳುವವರು ೨॥ ಆಣೆಯ ಟಪ್ಪಾಲುಚೀಟುಗಳನ್ನು ಮುಂದಾಗಿ ಕಳುಹಿಸಬೇಕಾಗುವದು.

ಮಂಗಳೂರು ಟೌನ್‌ನಲ್ಲಿ ಕೊಂಡುಕೊಳ್ಳುವವರು ಹಾಸಲು ಕೊಡಬೇಕಾದದ್ದಿಲ್ಲ.

H. Krishna Rao.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0-8-0.

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ಮರೆಯ ಬ್ಯಾಡಿರಿ. ಮರೆಯ ಬ್ಯಾಡಿರಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರಿಯುವದು

ಅಪಾಯವಿಲ್ಲದ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ಸೆಕೆ ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು. ಮರೆಯ ಬ್ಯಾಡಿರಿ.

3 ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14.

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ. 1-10-0. ಅಂಚೆ ಹಾಸಲು 4 ಆಣೆ.

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.
V. A. S. PANI,
No. 3, Erulappen Street, Madras.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2-1-0. ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.
ಮ॥ ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.

ಮಂಗಳೂರು.
ಪಾವಂಜೆ ಗೋಪಾಲಕೃಷ್ಣ
ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಓಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.
ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ. 2,22,00,000. ಫಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೋಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವದಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್,
ಶ್ರೀಕುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

Canarese Novels Etc.

ಕನ್ನಡ ಪುಸ್ತಕಗಳು.

ಮ॥ ರಾ॥ ರಾ॥ ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.
ವಂಗವಿಜೇತ ಹೊಸ ನಾವಿಲ್	1-4
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1-4
ನವಾಬನಂದಿನಿ ಡಿಟೊ 2ನೇ ಭಾಗ	1-8
ಸೀತಾರಾಮ (ಇತಿಹಾಸ)	1-8
ವಿಷವೃಕ್ಷ ದ್ವಿ. ಮು.	1-4
ದೇವೀ ಚೌಧುರಾಣಿ-ಡಿಟೊ	1-4
ರಾಜಸಿಂಹ-(ಇತಿಹಾಸ)	1-5
ಕಪಾಲಕುಂಡಲ	0.13
ಮೃಣ್ಮಯಿ-ಡಿಟೊ 2ನೇ ಭಾಗ	1-1
ಕೃಷ್ಣಕಾಂತನ ಉಯಿಲು	1-0
ಮನೋರಮ [ಪತ್ತೇದಾರಿ ಕಥೆ]	1-0
ಪರಿಮಳ-ಡಿಟೊ-ದ್ವಿ. ಮು.	0.10
ಸಾಧನೆ. ಡಿಟೊ	0-8
ಕೊಹಿನೂರು [ಇತಿಹಾಸ]	0.12
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0-3

	ರೂ. ಆ.
ಕಮಲಾ ಕಾಂತ ದ್ವಿ. ಮು.	0-2
ಲೀಲೆ [ಸಮಾಜ ಚಿತ್ರ]	0-4
ಮಾಲತಿ [ಅತಿ ಮನೋಹರ] ದ್ವಿ. ಮು.	0-3
ರಾಧಾರಾಣಿ [ಕಾದಂಬರಿ] ತೃ. ಮು.	0-3
ಯುಗುಳಾಂಗುರೀಯ ,,	0-3
ಭ್ರಾಂತಿವಿಲಾಸ ,,	0-8
ನೊಂದಸುಡಿ [ಸ್ತ್ರೀನೀತಿ]	0-2
ದಾಡಿಯ ಹೇಳಿಕೆ [ಸ್ವಾರಸ್ಯಕರ]	0-2
ವೈಜ್ಞಾನಿಕ ಪ್ರಹಸನ [ನಕಲಿ]	0-4
ಚಿರತ್ನನಾಟಕರತ್ನ ಡಿಟೊ	0-7
ಚಿತ್ರವಿಚಿತ್ರಾವಳಿ [Tit-Bits]	0-8
ನೀರದೆ [ಹೊಸ ಕಾದಂಬರಿ]	0-8
ಭಾರತಮಹಿಳಾ [ಸ್ತ್ರೀನೀತಿ]	0-8
ಅಮೃತಪುಳಿನ [ನಾವಿಲ್]	0.11

ಇತ್ಯಾದಿ.

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟ ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ 1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0-8
ಕ. ಕವಿಚರಿತೆ [ಪೂರ್ವಭಾಗ]	3-2
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0-6
ಕೈಲಾಸನಾಥ ಡಿಟೊ	0-8
ಶೋಭನೆ [ಬಂಗಾಳಿ ನಾವಿಲ್]	0.12
ಯಾಮಿನಿ [ಬಂಗಾಳೀ ನಾವಿಲ್]	0-3
ಪ್ರಿಯಂವದೆ [ಪತಿವ್ರತಾ ಕಥೆ]	0-8
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0-8
ಸನ್ಯಾಸಿ [ಹೊಸ ಕಾದಂಬರಿ]	0-6
ಮೃತ್ಯುಪರೀಕ್ಷೆ ಡಿಟೊ	0-2
ಬೃಂದಾವನ ಡಿಟೊ	0-2
ಸುಮನೋರಮ ಡಿಟೊ	0-2
ಮಾಲಿನಿ ಡಿಟೊ	0-2
ಪ್ರೇಮಪಿಪಾಸೆ ಡಿಟೊ	0-2
ವಿರಕ್ತಳಾದ ಸೌದಾಮಿನಿ ಡಿಟೊ	0-5
ಚಿತ್ರಕಳಾವತಿ ಡಿಟೊ	0-2
ಚಾತುರ್ಯವತಿ ಡಿಟೊ	0-2
ವಸುಮತಿ ಡಿಟೊ	0-2
ವಿಲಕ್ಷಣಶಿಕ್ಷಣ ಡಿಟೊ	0-2
ಪದ್ಮಿನಿ ಡಿಟೊ	0-2
ಭಾನುಮತಿ ಡಿಟೊ	0-2
ಸತೀರೋಹಿಣಿ ಡಿಟೊ	0-2
ಸಂತಾಪಕ ಡಿಟೊ	0-4
ಚಂದ್ರಮತಿ, [ಸ್ತ್ರೀನೀತಿ]	0-6

	ರೂ. ಆ.
ನಿರ್ಭಾಗ್ಯಬಾಲಿಕೆ [ಹೊಸಕಾದಂಬರಿ]	0-6
ಅನಂಗಸುಂದರಿ ಡಿಟೊ	0-8
ತಾರಾ ಸುಂದರಿ ಡಿಟೊ	0-8
ರಾಧಾಮಾಧವಿ ಡಿಟೊ	0-8
ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0-9
ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0-9
ಧರ್ಮಪದವೆಂಬ ಬುದ್ಧಗೀತೆ	0.12
ಜೈಮಿನಿಭಾರತ [ಸಟೀಕಾತಾತ್ಪರ್ಯ]	4-0
ಹರಿಕಥಾಮೃತಸಾರ ಡಿಟೊ	1-6
ಚದುರಂಗಬೋಧಿನಿ	0-3
ಸರ್ವೇಮ್ಯಾನ್ಯುಯಲ್	0-5
ನ್ಯಾಯದರ್ಪಣ [ಲಾ]	1-0
ವ್ಯವಹಾರ ದೀಪಿಕೆ [ಲಾ]	3-0
ಶಾಕುಂತಲ ನಾಟಕ ದ್ವಿ. ಮು.	0-9
ಶೂರಸೇನಚರಿತ್ರೆ ನಾಟಕ ಡಿಟೊ	1-0
ಚಂಡಕೌಶಿಕ ನಾಟಕ ಡಿಟೊ	0.12
ರಾಮವರ್ಮ ಲೀಲಾವತೀ ನಾಟಕ	0-8
ಪಾಂಚಾಲೀ ಪರಿಣಯ ನಾಟಕ	0.10
ಚಂಡೀಮದಮರ್ದನ ನಾಟಕ	0-5
ಪ್ರಬೋಧ ಚಂದ್ರೋದಯ ನಾಟಕ	0.10
ಭರ್ತೃಹರಿ ನಿರ್ವೇದ ನಾಟಕ	0-3
ನಿರುಪಮಾ [ನಾಟಕ]	0.12
ಧೃತಂಜಯ [ನಾಟಕ]	0-4
ಸೀತಾಪರಿಣಯ [ನಾಟಕ]	0-4
ಸೀತಾಸುವರ್ಣಮೃಗ [ನಾಟಕ]	0-12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

ಎಸ್. ಟಿ. ಎ, ಬೆಂಗಳೂರು ಸಿಟಿ.

ಪ್ರಸಿದ್ಧ ಕನ್ನಡ ಗ್ರಂಥಗಳು

1. **ಜಪಾನರುನ್ನತಿಗೆ ಮೂಲಾಧಾರ:**—ನವನಾಗರೀಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಅತ್ಯಾಶ್ಚರ್ಯಕರವಾದೀ ಕಥೆಯನ್ನು ಓದಬೇಕು. ಇಂತಹ ಸುಬೋಧಕವಾದ ಕಣ್ಮನಗಳಿಗಾನಂದವನ್ನುಂಟುಮಾಡುವ ಗ್ರಂಥವನ್ನು ಹಿಂದೆ ನೀವು ಯಾವಾಗಲೂ ನೋಡಿಲ್ಲ. ಮೈಸೂರು ಮಹಾರಾಜರಿಗೆ "ಡೆಡಿಕೇಟ್" ಮಾಡಲ್ಪಟ್ಟಿದೆ. ಮೈಸೂರು ಮಹಾರಾಜರ, ಯುವರಾಜರ ಮತ್ತು ಕಥೆಯ ಸಂದರ್ಭಗಳಿಗನುಕೂಲಿಸುವಂತೆ, ನೇತ್ರಾನಂದಕರವಾದ 12 "ಹಾಪ್‌ಟೋನ್" ಚಿತ್ರಗಳೂ ಇದರಲ್ಲಿವೆ. ಮೈಸೂರು ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಸ್ವಧರ್ಮ ರಕ್ಷಣೆಗಾಗಿ ರಾಜನೂ, ರಾಣಿಯೂ, ಸೇನಾಪತಿಯೂ, ಸತ್ಪ್ರಜೆಯಾದ ಕುರುಬನೂ, ಪುರೋಹಿತನೇ ಮುಂತಾದವರು ಪ್ರಾಣಾರ್ಪಣವಂ ಮಾಡುವ ಸಂದರ್ಭಗಳನ್ನೂ ಮತ್ತು ಅವರುಗಳೆಲ್ಲರೂ ದೇವರುಗಳಿಂದ ಬದುಕಿಸಲ್ಪಟ್ಟ ಬಳಿಕ ರಾಜನಿಗೂ, ಕನ್ಯೆಗೂ ವಿವಾಹ ಪಟ್ಟಾಭಿಷೇಕಗಳು ನಡೆವುದನ್ನೂ, ಅವುಗಳ ಕಣ್ಣೆದುರಿಗೆ ನಡೆದಂತೆ ತೋರಿಸುವ ಫೋಟೋಗ್ರಾಫಿನ ಮೇಲೆ ನಿರ್ಮಿಸಿದ ಸಹಜ ಚಿತ್ರಗಳನೂ ನೋಡಿ ಯಾರ ಹೃದಯವು ತಾನೇ ಕರಗದೇ ಇರವುದು? ಕ್ರಯ ವಿ. ಪಿ. ಪ್ಯಾಕಿಂಗ್ ಸಹಿತ:—ಚಿನ್ನದ ಗಿಲ್ಟಿನದು ರೂ. 2-4-0; ಅವ್ವಲ್ ಗ್ಲೇಜ್ ರೂ. 1-8-0; ದುಯ್ಯಂ 1-4-0.

2 **ಧರ್ಮಪದ:**—17 ಕೋಟಿ ಮುಸಲ್ಮಾನರಿಗೆ "ಖೊರಾನೂ" 32 ಕೋಟಿ ಹಿಂದೂಗಳಿಗೆ "ಭಗವದ್ಗೀತೆಯೂ" 40 ಕೋಟಿ ಕ್ರಿಸ್ತರಿಗೆ "ಬೈಬಲೂ" ಹೇಗೆ ಪೂಜ್ಯವಾದ ಗ್ರಂಥಗಳೋ, 55 ಕೋಟಿ ಬೌದ್ಧರಿಗೆ ಈ ಗ್ರಂಥವು ಹಾಗಿದೆ. ಸಾವಿರಾರು ಗ್ರಂಥಗಳಿಂದ ಪಡೆವ ಜ್ಞಾನವನ್ನು ಇದೊಂದರಿಂದ ಪಡೆಯಬಹುದು. ಮೈಸೂರು ಮಹಾರಾಜರ; ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಜಪಾನ್‌ನಲ್ಲಿರುವ ಬುದ್ಧವಿಗ್ರಹದ ನೇತ್ರಾನಂದಕರವಾದ ಭಾವಚಿತ್ರಗಳಿವೆ. ಕ್ರಯ ವಿ. ಪಿ. ಸಹಿತ ರೂ. 1.

2. **ಬೌದ್ಧಾವತಾರ:**—ಲೋಕೋದ್ಧಾರಕನಾದ "ಶ್ರೀ ಗೌತಮಬುದ್ಧಭಗವಂತನ" ಅತ್ಯಾಶ್ಚರ್ಯಕರವಾದ ಜನ್ಮ ಚರಿತ್ರೆ. ಕ್ರಯ ವಿ. ಪಿ. ಸಹಿತ 0-6-0.

ವಿಳಾಸ:— 1. ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು,
ಚಾಮರಾಜ ಪೇಟೆ, ಮೈಸೂರು.
2. ಶ್ರೀವಾಣೀವಿಲಾಸ ಬುಕ್ ಡಿಪೋ, ಮೈಸೂರು.
3. ದಿ. ಜನರಲ್ ಏಜನ್ಸಿ, ಮೈಸೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಚೆಳ್ಳಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	... ...	300,000—0—0
Issued Capital	... ...	225,000—0—0
Subscribed Capital	... ...	200,000—0—0
Paid up Capital	... ...	175,000—0—0
Deposits	... ...	503,278—3—5
Reserve Fund	... ...	27,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively. Terms on application.

Short-notice Deposits requiring one week's notice of withdrawal after one month received @ 2½% per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	... ...	300,000—0—0
ಹುಟ್ಟಿಬಂದ ಮೂಲ ಧನವು ,,	... ...	225,000—0—0
ಪ್ರತಿಜ್ಞಾತ ಮೂಲ ಧನವು ,,	... ...	200,000—0—0
ಆಗತ ಮೂಲ ಧನವು ,,	... ...	175,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	...	503,278—3—5
ರಕ್ಷಿತ ಧನವು	... ...	27,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. April 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ಡಿಪೋ, ಬಳ್ಳಾರಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ಬೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಆರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೇಗೆ ಪೋಸ್ಟೇಜು 4 ಆಣೆ.

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೋದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"
ಮೈಸೂರು.

ಡೋಂಗರೆ

ಇವರ

ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದ್ದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ, ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪ್ಪಾಲ ಖರ್ಚು 0-4-0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ

Estd. 1888.

K. B. RELE & CO'S,—(BOMBAY)

ಸ್ಥಾಪನೆ 1888.

ಕೆ. ಬಿ. ರೇಳೆ ಕಂಪನಿಕೃತ

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖುಗಳೂ,ವ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ನೆಚ್ಚ ೪ ಆಣೆ.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ್ತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪುರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಎಕ್ಸ್‌ಪ್ರೆಸ್ ವಾಚ್ ಕೊ.

3 ರತನ್ ಬಜಾರ್ ರೋಡ್, ಮದ್ರಾಸ್.

ಟೆಲಿಗ್ರಾಫ್ ವಿಳಾಸ: "ಎಕ್ಸಪ್ರೆಸ್" ಮದ್ರಾಸು.



ನಂಬ್ರ 224. ಈ ವಾಚು ಸುಲಭವಾಗಿ ತೆರೆಯಲ್ಪಟ್ಟು ಮುಚ್ಚಲ್ಪಡುವುದು. ಎಲ್ಲರ ಕೈಗಳಿಗೂ ಹುದುವಾಗಿದೆ. ಕೆಂಪು ಕಲ್ಲುಗಳ ಸಹಿತ 9-4-0. ನಂಬ್ರ 225. ಕಲ್ಲುಗಳಿಲ್ಲದೆ ರೂ. 8—4—0.

ನಮ್ಮ ಕೂಡೆ ನಾಜೂಕಾದ ಹೆಚ್ಚು ಕಾಲ ಬಾಳುವ ಬಹಳೇ ವಾಚುಗಳಿರುವವು ವಾಚುಗಳೆಲ್ಲವೂ ನಮಗಾಗಿಯೇ ತಯಾರಿಸಿದಂಥವುಗಳಾಗಿವೆ. ನಮ್ಮಿಂದಲೇ ಮೂರು ವರ್ಷಗಳ ಗ್ಯಾರಂಟು ಕೊಡಲ್ಪಡುವುದು. ತೃಪ್ತಿಯಾಗದಿದ್ದರೆ ಹಣ ಪರತು.



ನಂಬ್ರ 448. ನಿಕ್ಕಲ್ ಕೇಸು, 8 ದಿವಸಗಳ ಲಿವರ್ ವಾಚು ರೂ. 8—14—0. ನಂಬ್ರ 449. ಬೆಳ್ಳಿಯ ಕೇಸು ರೂ. 14.



ನಂಬ್ರ 814. ಸರ್ವರಿಂದಲೂ ಆಕರ್ಶಿಸಲ್ಪಡುವಂಥಾ ರಿಸ್ಟ್‌ವಾಚು. ಒಳ್ಳೇ ಜುವೆಲ್‌ಗಳುಳ್ಳದ್ದು. ನಿಕ್ಕಲ್ ಕೇಸ್ ರೂ. 5—14—0. ನಂಬ್ರ 815. ಸಿಲ್ವರ್ ಕೇಸ್ ರೂ. 9—12—0. ಚರ್ಮದ ಕೈಕಟ್ಟು ಮುಫತ್ತು.



"ಜೋಣ್ಸನ್" ಲಿವರ್.

15" ನಂಬ್ರ 984. ಈ ಕಾಲಕ್ಕೆ ಸರಿಯಾಗಿ ತಯಾರಿಸಿದ ಲಿವರ್. ವಾಚು. ಬಹಳ ನಾಜೂಕಾಗಿ ಮಾಡಲ್ಪಟ್ಟಿದೆ. ಒಳ್ಳೇ ಲಿವರ್ ಸ್ಟೈಲ್ ಕ್ರಯ 5—14—0.



ನಂಬ್ರ 471. ನಿಕ್ಕಲ್ ಕೇಸು. ಹೆಂಗಸರು ಉಪಯೋಗಿಸತಕ್ಕ ಲೇಡಿಸ್ ವಾಚು. ಚೆಲ ಯಾ ದಿಸ್ಟೆ ರೂ. 4—8—0. ನಂಬ್ರ 472. ಅದೇ ಬೆಳ್ಳಿಯ ಮುಚ್ಚಳದ್ದು ರೂ. 7—14—0.

ಕೊಡ್‌ಲಿವರ್ ಎಣ್ಣೆ.

Waterbury's
Metabolized
Cod Liver Oil
Compound
PLAIN

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಅದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯೊದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ್ಗ! ಅಗ್ಗ!! ‖ ಕುಟುಂಬ ಜೀವನಿ ‖ ಧರ್ಮ! ಧರ್ಮ!!

ಪ್ರಿಯ ಭಾರತಿಯ ಮಹನಿಯರೇ!

ಎಲ್ಲಾ ರೋಗಗಳನ್ನು ಗೆಲವ ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬಪೆಟ್ಟಿಗೆಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ.

"ಅಕ್ಕರದಿಂ ಚಕ್ಕ ಬಂದು ಸಕ್ಕರೆಯಂ ನೆಕ್ಕಿದಂತೆ ।
ಠಕ್ಕರೆಲ್ಲಾ ಒಳಗರ ರೊಕ್ಕವೆಲ್ಲ ಮುಕ್ಕಿ ಪೋದರ್ ‖" ಎಂಬಂತೆ

ಈಗ ಇಮಿಟೇಶನ್ ಬಳೆ ತಡುಗಳು ರತ್ನವೆಂಬ ಹೆಸರಿನಿಂದ ಎಲ್ಲಿ ನೋಡಿದರೂ ತುಂಬಿಹೋಗಿ, ಕಲ್ಯಾಣಿಗೆ ಬ್ರಾಶ್ ಕಡ್ಡಿ ಆದ ಹಾಗೆ ಈಗಿನವರು ಠಕ್ಕಿನಿಂದಲೇ ಸುಲಿಗೆಯಾದರು.

ಪ್ರಿಯ ಬಾಂಧವರೇ! ನಮ್ಮ ಹಾಗೆ ಗ್ರಹಿಸಬೇಡಿರಿ. ಅಮೂಲ್ಯವಾದ ಮಾಣಿಕ್ಯವಾದರೂ ಹೇಮಾಶ್ರಯದೇಕೆ ಬೇಕಾಂದ ನಮ್ಮನ್ನು ಆಶ್ರಯಕೊಡಿರಿ! ಪರೀಕ್ಷಿಸಿನೋಡಿರಿ!!

ನಮ್ಮ ವೈದ್ಯಾಲಯದಲ್ಲಿ ಕುಲವಾಗಿ ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ ಬಹಳ ಶೋಧನೆಯಿಂದಲೂ, ವನೌಷಧಿಗಳಿಂದಲೂ, ಸಿದ್ಧಕಲ್ಪ ಛೈರಾಗಿ ಪ್ರಯೋಗಗಳಿಂದಲೂ ತಯ್ಯಾರಿಸಿದ ಪೌಡರು ಮಾತ್ರೆಗಳೂ ಲೇಹ ಚೂರ್ಣಗಳೂ, ತೈಲ ಘೃತಗಳೂ, ಅಸವಾರಿಷ್ಟಗಳೂ, ಟೋನಿಕ್ ಅರಕ್‌ಗಳೂ ಬಡವರಿಗೆ ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಶಿಕ್ಕುತ್ತವೆ. ಕ್ರಯ ನಿರ್ಣಯಕ್ಕೆ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ; ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು. 10 ರೂಪಾಯಿಯ ಮೇಲೆ ಶೇಕಡಾ ರೂ. 10 ಡಿಸ್ಕಾಂಟ ಶಿಕ್ಕುವದು. ತರಿಸಿಕೊಳ್ಳಿರಿ. ಸಂಘಕ್ಕೆ ಆಶ್ರಯ ಕೊಡಿ.

ಎಮ್. ವಿ. ಶಂಕರ್‌ಸುಗ್ರಾಣಕಾರ್, ಮೆನೇಜರ್.

S.U.N.&Co.
BENARES CITY.
KASHI
VISHWESHVAR

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ವಿಶ್ವನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಯಸ್. ಯು. ಯನ್‌ಮುತ್ತು ಕಂಪೆನಿ, ಕಾಶಿ.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ್
ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು

ನೋಟೀಸು.

✺

ನೆಶನಲ್ ಇನ್ಸೂರೆನ್ಸ್ ಎಂಡ್ ಬೆಂಕಿಂಗ್ ಕಂಪೆನಿ, ಅಮೃತಸಾರ್.

ಇವರು ತಮ್ಮ ಪಾಲುಮಾಲಿಕರಿಗೂ, ಠೇವಣಾತಿ ಇಟ್ಟವರಿಗೂ ವಿಮೆದಾರರಿಗೂ ಮತ್ತು ತಮ್ಮ ಇತರ ಕಕ್ಷಿಗಾರರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಪಿಪಲ್ಸ್ ಬೇಂಕು ಒಫ್ ಇಂಡಿಯಾ ಮತ್ತು ಅಮೃತಸಾರ ಬೇಂಕು ಇವುಗಳು ತಮ್ಮ ಲೇವಾದೇವಿಗಳನ್ನು ನಿಲ್ಲಿಸಿ ಬಿಟ್ಟಿರುವುದರಿಂದ ಇತರ ಬೇಂಕುಗಳ ಪಾಲುಮಾಲಿಕರಲ್ಲಿಯೂ, ಠೇವಣಾತಿ ಇಟ್ಟವರಲ್ಲಿಯೂ ಯೋಚನೆಯು ಪ್ರಾಪ್ತವಾಗಿರಬಹುದು. ಇಂಥಾ ಯೋಚನೆಯಿಂದ ಅಂಜಿಕೆಯು ನೆಶನಲ್ ಇನ್ಸೂರೆನ್ಸ್ ಎಂಡ್ ಬೇಂಕಿಂಗ್ ಈ ಕಂಪೆನಿಯ ಪಾಲುಮಾಲಿಕ ಮೊದಲಾದವರಲ್ಲಿ ಸ್ವಭಾವಿಕವಾಗಿ ಉಂಟಾಗಿರಬಹುದಾದ್ದರಿಂದ ಅಂಥಾ ಅಂಜಿಕೆ ಯೋಚನೆ ಮೊದಲಾದವುಗಳಿಗೆ ಏನೂ ಆಸ್ಪದವಿರದೆಂಬುದಾಗಿಯೂ ಒಂದು ವೇಳೆ ಎಂಥಾ ಅಡಚಣೆಗಳು ಬಂದು ಸಂಭವಿಸಿದರೂ ಈ ಅಡಚಣೆಗಳನ್ನು ಎದುರಾಡಲು ತಕ್ಕ ಹಣ ಸಂಗ್ರಹವು ಈ ಕಂಪೆನಿಯಲ್ಲಿದೆಂಬುದಾಗಿಯೂ ಈ ಮೂಲಕ ಕಂಪೆನಿಯ ಡಿರೆಕ್ಟರರುಗಳು ದೃಢಪಡಿಸಿರುತ್ತಾರೆ. ಅದಲ್ಲದೆ ಇತ್ತಲಾಗೆ ಈ ಕಂಪೆನಿಯವರು ಒಂದು ಲಕ್ಷ ರೂಪಾಯಿಗಳ ಭದ್ರತೆಯ ಠೇವಣಾತಿಯನ್ನು ಇಂಡಿಯಾ ಸರಕಾರದವರಲ್ಲಿರಿಸಿರುವರು.

ಪಿಪಲ್ಸ್ ಬೇಂಕಿನಿಂದಾಗಲಿ ಅಮೃತಸಾರ್ ಬೇಂಕಿನಿಂದಾಗಲಿ ಈ ಕಂಪೆನಿಗೆ ಏನೊಂದು ಬರತಕ್ಕದಿಲ್ಲ. ನಮ್ಮ ಕಂಪೆನಿಯು ಮುಖ್ಯ ಆಫೀಸು ಅಮೃತಸಾರದಲ್ಲಿರುವುದರಿಂದ ಅಮೃತಸಾರ್ ಬೇಂಕು ನಮ್ಮದೋ ಏನೆಂಬುವ ಗಲಿಬಿಲಿಯು ಕೆಲವರಲ್ಲಿರುವುದು. ಅಮೃತಸಾರ್ ಬೇಂಕಿಗೂ ನಮಗೂ ಯಾವ ಸಮ್ಮಂಧವೂ ಇರುವುದಿಲ್ಲ. ಅಮೃತಸಾರ ಬೇಂಕು ಪ್ರತ್ಯೇಕ ಬೇಂಕು ಆಗಿರುತ್ತದೆ ಮತ್ತು ಇದರ ಹೆಸರಲ್ಲಿ ಅಮೃತಸಾರ್ ಎಂಬುವುದನ್ನು ಕೂಡಿಸಿರುವರಾದರೂ ಇದರ ಮುಖ್ಯ ಆಫೀಸು ಲಾಹೋರಿನಲ್ಲಿರುತ್ತದೆ.

ನೆಶನಲ್ ಇನ್ಸೂರೆನ್ಸ್ ಮತ್ತು ಬೇಂಕಿಂಗ್ ಕಂಪೆನಿಯ ಡಿರೆಕ್ಟರರುಗಳು ತಮ್ಮಿಂದಾಗುವ ಯಥಾ ಯೋಗ್ಯ ಪ್ರಯತ್ನಗಳಿಂದ ಈಗಿನ ವಿದ್ಯಮಾನಗಳಲ್ಲಿ ಕಂಪೆನಿಗೆ ಏನೊಂದು ಅಪಾಯವು ಬಂದೊದಗದಂತೆ ಜಾಗರೂಕರಾಗಿರುವರೆಂಬುದಾಗಿ ಈ ಮೂಲಕ ದೃಢಪಡಿಸುತ್ತಾರಲ್ಲದೆ ಪಾಲಕ ಮೊದಲಾದವರೆಲ್ಲರೂ ಎಂದಿನಂತೆ ಈ ಕಂಪೆನಿಯಲ್ಲಿ ತುಂಬಾ ವಿಶ್ವಾಸವುಳ್ಳವರಾಗಿರುತ್ತಾರೆಂತ ದೃಢವಾಗಿ ನಂಬಿರುವರು.

ಪಿ. ಎಲ್. ರಾಜಪಾಲ್, ಬಿ. ಎ.
ಮುಖ್ಯ ಮೇನೇಜರ್.

P. L. RAJPAL, B. A.
Chief Manager.

ಟಿ ಎಸ್. ಆರ್. ಐಯರ್,
ಸೆಕ್ರೆಟರಿ, ಮದ್ರಾಸ್ ಬ್ರೇಂಚ್.

T. S. R. AIYR,
Secretary, Madras Branch.

~~ಅಚ್ಚಾಗುತ್ತಲಿದೆ!~~ ತ್ವರೆ ಪಡಿರಿ!! ~~ಅಚ್ಚಾಗುತ್ತಲಿದೆ!!!~~

[illegible] ಸಿದ್ಧವಾಗಿದೆ! ಪ್ರ[illegible]!!

ರಮಾಮಾಧವ

ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸಲೇಟರ್ ಮ|| ರಾ|| ಬಿ. ರಾಮರಾವ್, ಎಂ. ಎ. ಎಲ್. ಎಲ್. ಬಿ. (ಇವರಿಂದ ಹನ್ನೆರಡು ವರುಷಕ್ಕೆ ಹಿಂದೆ ಕನ್ನಡಿಸಲ್ಪಟ್ಟು "ಸುವಾಸಿನೀ" ಮಾಸ ಪತ್ರಿಕೆಯಲ್ಲಿ ಅಚ್ಚಾಗಿದ್ದ ಈ ಮನೋಹರವಾದ ಕಾದಂಬರಿಯು ಅವರಿಂದಲೇ ಪರಿಶೋಧಿಸಲ್ಪಟ್ಟು ಪರಿವರ್ತಕರ ಭಾವಚಿತ್ರದೊಡನೆ ಪುಸ್ತಕರೂಪವಾಗಿ ಅಚ್ಚಾಗುತ್ತಲಿದೆ. ಇದೇ ತಿಂಗಳಲ್ಲಿ ಮಾರಾಟಕ್ಕೆ ಸಿದ್ಧವಾಗುವುದು.) ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದುದಾಗಿಯೂ ಸ್ತ್ರೀಪುರುಷರೂ ಬಾಲ್ಯ ವಯಸ್ಸಿನವರೂ ಓದುವುದಕ್ಕೆ ತಕ್ಕುದಾಗಿಯೂ ಇದ್ದು, ಸಂಸಾರಿಕರು ಸುಖಿಗಳಾಗಿ ಬಾಳುವ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತಲಿದೆ. ಬೆಲೆ ಪ್ರತಿಯೊಂದಕ್ಕೆ 6 ಆಣೆ. ಅಂಚೆಯ ಹಾಸಲು ಬೇರೆ.

(☞ ಎಪ್ರಿಲ್ ಅಂತ್ಯದೊಳಗಾಗಿ ತಮ್ಮ ಹೆಸರುಗಳನ್ನು ರಿಜಿಸ್ಟರು ಮಾಡುವ ಗ್ರಾಹಕರಿಗೆ ಪ್ರತಿಯೊಂದಕ್ಕೆ 4 ಆಣೆಯಂತೆ ದೊರೆಯುವುದು.)

ಪುಸ್ತಕಗಳು ದೊರೆಯುವ ವಿಳಾಸ:—
ಮ್ಯಾನೇಜರ್,
ಶಾರದಾ ಪ್ರೆಸ್, ಮಂಗಳೂರು, ದ. ಕ.

ಅಚ್ಚಾಗುತ್ತಲಿರುವುದು! ಅಚ್ಚಾಗುತ್ತಲಿರುವುದು!!

ಸಾವಿತ್ರಿ ನಾಟಕ.

ಕೊಂಕಣಿ ಭಾಷೆಯಲ್ಲಿ.
ರಾ. ಕುಂಬಳೆ ನರಸಿಂಹ ಲಕ್ಷ್ಮಣ ನ್ಯಾಕರಿಂದ ವಿರಚಿಸಲ್ಪಟ್ಟದ್ದು.
ಕ್ರಯ ಆಣೆ 4 ಮಾತ್ರ.

ಚಂದ್ರಹಾಸ (ಕನ್ನಡ ನಾಟಕ.)

ರಾ. ಎಮ್. ಎನ್. ಕಾಮತರವರಿಂದ ವಿರಚಿತವಾದ್ದು.
ಪ್ರಥಮ ಮುದ್ರಣದ ಸಾವಿರ ಪ್ರತಿಗಳಲ್ಲಿ ೫೫೦ ಪ್ರತಿಗಳಿಗೆ ಇದು ಮೊದಲೆ ಆರ್ಡರುಗಳು ಜಿಸ್ಟರಾಗಿದೆ.
ಕ್ರಯ ಆಣೆ 4 ಮಾತ್ರ.

ಆನಂದವು! ನೂತನ ಸಂವತ್ಸರದ ಆನಂದವು!

ರಥಬೀದಿಯಲ್ಲಿ ಹೂವಿನ ಮಾರ್ಕೇಟಿನ ಸಮೀಪ
ಶುಮಾರು ೨೦ ವರುಷಗಳ ಹಿಂದೆ
ಎಸ್. ನಾಗಪ್ಪನಾಯಕ್ ಮತ್ತು ಕಂಪೆನಿ ಎಂದು ಸ್ಥಾಪಿಸಲ್ಪಟ್ಟು
ವಿಲಾಯತಿ ಔಷಧಿಗಳು, ಪರಿಮಳದ್ರವಗಳು, ಚಾ ಕೋಕೋವಾ, ಸ್ಕೂಟು,
ಕೋರ್ಟು ಫೋರ್ಮುಗಳು ಇತ್ಯಾದಿಗಳನ್ನು ಮಾರುತ್ತಲಿದ್ದು
ಇತ್ತಲಾಗೆ ಕಳೆದ ೧೨ ವರುಷಗಳಿಂದ
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್
ಎಂಬುವ
ಹೆಸರಿನಿಂದ ಇದೇ ವ್ಯಾಪಾರವನ್ನು ನಡಿಸುವ „ಕೆಮಿಸ್ಟ್ಸ್ ಶೋ" ಇತ್ಯಾದಿ,
ಈ ಮೊದಲಿನ ಅಂಗಡಿಯ ಹತ್ತಿರವೇ ಎದುರು ಸಾಲಿನಲ್ಲಿ [illegible]ಸಲ್ಪಟ್ಟ
ನೂತನವಾದ ಕಟ್ಟೋಣಕ್ಕೆ ವಯೋಣಾಗಿದೆ
ಎಂಬ
ಆನಂದವನ್ನು ಸರ್ವರೂ ತಿಳಿಯಬೇಕಾಗಿದೆ.

Printed & Published by V. S. Kamath at the Mangalore Trading Association Sarada Press, Mangalore.

Registered M. No.498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ VIII ಮಂಗಳೂರು ತಾ. 1ನೇ ಶುಕ್ರವಾರ ಮೇ 1914. ಸಂಚಿಕೆ 18

ಮಂಗಳ ಕಾರ್ಯಗಳ ಬಗ್ಗೆ ಮಂಗಳೂರಿನ ಹೂವು ದೊರಿಯುವ ರಥಬೀದಿಯಲ್ಲಿ



ಮಂಗಳೂರು ಟ್ರೇಡಿಂಗ್ ಎಸೋಸಿಯೇಶನಿನ:—ಔಷಧಗಳು ಮತ್ತು ಶಾರದಾ ಛಾಪಖಾನೆ ಸ್ವದೇಶಾಭಿಮಾನಿ ಆಫೀಸುಗಳ ನೂತನ ಕಟ್ಟಡವು

ಪ್ರಕಟನೆ.

ಮಂಗಳೂರು ತೇರಬೀದಿಯಲ್ಲಿರುವ ಕೆ. ಯನ್. ದಾಸಪ್ರಭುಗಳ ಬುಕ್ ಶಾಪಿನಲ್ಲಿ ಅಥವಾ ಗ್ರಂಥಕರ್ತರಿಂದ ಶೀದಾ ಕ್ರಯಕ್ಕೆ ದೊರೆಯುವ ಪುಸ್ತಕಗಳು.

ವಕೀಲ ಹಳಿಗೇರಿ ಕೃಷ್ಣರಾಯರಿಂದ ರಚಿಸಲ್ಪಟ್ಟವುಗಳು.

ಪ್ರತಿ ೧ಕ್ಕೆ ಟಪ್ಪಾಲ್ ಹಾಸಲು ವಿನಹ ಕ್ರಯ.

(೧) ಅಧ್ಯಾತ್ಮವಿಚಾರ, ಪ್ರತ್ಯಗಾತ್ಮನ ಚಿತ್ರ ಸಮೇತ ... ... ರೂ. ೨—೪—೦.

(೨) ಆ ಗ್ರಂಥ (ಅಧ್ಯಾತ್ಮವಿಚಾರ)ದ ಕುರಿತು ಮಾಧ್ವರು ಹೇಳುವ ಆಕ್ಷೇಪಣೆಗಳಿಗೆ ಉತ್ತರ. ಇದರಲ್ಲಿ ಪ್ರಸಂಗತಃ ಶ್ರೀಮದ್ಭಗವದ್ಗೀತೆ ಮೊದಲಾದ ಸ್ವದೇಶೀಯ ದೇಶೀಯ ಗ್ರಂಥಗಳ ಆಧಾರದ ಮೇಲೆ ಮಧ್ವಮತವು ಸ್ವವಿರುದ್ಧವಾದದ್ದೆಂದು ವಗೈರೆ ತೋರಿಸೋಣಾಗಿರುತ್ತದೆ ಕ್ರಯ ಆಣೆ ೦—೨—೦.

(೩) ಸ್ವಾಯಂಭುವ ಮನುವಂಶಾವಳಿ (ದೇವನಾಗರೀ ಅಕ್ಷರ) ಕನ್ನಡ ಉಪೋದ್ಘಾತ ಸಮೇತ ಕ್ರಯ ರೂಪಾಯಿ ೧—೦—೦.

ಈ ಪೈಕಿ ೧ನೇ ೩ನೇಯವುಗಳು ವೆಲ್ಯುಪೆಯೆಬಲ್ ಪೋಸ್ಟದ್ವಾರಾ ಕಳುಹಿಸೋಣಾಗಬಹುದು.

೨ನೇದರ ಬಗ್ಯೆ, ಅದನ್ನು ಕೊಂಡುಕೊಳ್ಳುವವರು ೨॥ ಆಣೆಯ ಟಪ್ಪಾಲುಚೀಟುಗಳನ್ನು ಮುಂದಾಗಿ ಕಳುಹಿಸಬೇಕಾಗುವದು.

ಮಂಗಳೂರು ಟೌನ್‌ನಲ್ಲಿ ಕೊಂಡುಕೊಳ್ಳುವವರು ಹಾಸಲು ಕೊಡಬೇಕಾದ್ದಿಲ್ಲ.

H. Krishna Rao.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ನರೆ ಕೂದಲನ್ನಿಟ್ಟುಕೊಂಡು
ಮುದುಕರಾಗಿ ಕಾಣುವದೇಕೆ?

☞ ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪ ತರದ ಕೂದಲಿಗೆ ಹಚ್ಚುವ ಬಣ್ಣಗಳ ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷ ಪಡುವಿರಿ.

ಕ್ರಯ ಬುರುಸು ಸಮೇತ ಬಾಟ್ಲಿ 1ಕ್ಕೆ ರೂ. 1.
ಅಂಚೆ ಹಾಸಲು ಆಣೆ 0—4—0.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.
V. A. S. PANI,
No. 3, Erulappen Street, Madras.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ವರೆಮಾಡಿ ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳ:—

ಉಡುಪಿ.
ಮ॥ ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಮಂಗಳೂರು.
ಪಾವಂಜೆ ಗೋಪಾಲಕೃಷ್ಣ
ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೋಓಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ೫ ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲ—ರೂ. 10,00,000. ಉತ್ತರಿಸೋಣಾದ ವಿಮೆ—ರೂ. 2,22,00,000 ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪಾಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳ ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಿಸಬಹುದು.

ವಿಮೆಯ ಮುಂಗಡ ದರ ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಬೇಕೆನ್ನುವವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್.
ಶ್ರೀ ರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.


ಜಿನತಾನ
"JINTAN" Pill Case (Exact Size)
LOOKING GLASS
3 pills come out here at each opening
JINTAN
仁丹

ಈಗಲೇ ಪರೀಕ್ಷಿಸಿ ನೋಡಿರಿ.

ಜೀನತಾನಿನ ವಿಶೇಷ ಗುಣಗಳು:—ಅತ್ಯುತ್ತಮವಾದ ಜೀರ್ಣಕಾರಿಯು, ಇದಕ್ಕೆ ಸಮಾನವಾದ ಜೀರ್ಣಕಾರಿಯು ಮಂತ್ತೊಂದಿರದು. ಜೀರ್ಣಶಕ್ತಿ ಕಡಮೆಯಾದ ಅನ್ನಕೋಶವು ಇದರ ಸೇವನೆಯಿಂದ ಎಂದೂ ಬಾಧಿಸಲ್ಪಡದು.

ರೋಗಗಳು ಅಂಟದಂತೆ ಮಾಡುವ ಪೂತಿನಾಶಕರ ವಿಶೇಷವಾದ ಗುಣವು ಇದಕ್ಕಿರುತ್ತದೆ. ಇದು ಉಪಯೋಗಿಸುವವರ ಶ್ವಾಸವನ್ನು ಸುವಾಸನೆಯುಳ್ಳದ್ದಾಗಿ ಮಾಡುವುದು.

ಹೊಗೆಸೊಪ್ಪು ವ ಇತರ ಮಾದಕ ಪದಾರ್ಥಗಳ ವಾಸನೆಯನ್ನು ಇದನ್ನು ಸೇವಿಸಿದ ಮಾತ್ರದಿಂದ ಪೂರ್ಣವಾಗಿ ಹೋಗಲಾಡಿಸಬಹುದು.

ಸಂಗೀತ ಹಾಡುವವರೂ, ಉಪನ್ಯಾಸಕರೂ, ಇದನ್ನು ಉಪಯೋಗಿಸಿದರೆ ಗಂಟ್ಲಿನ ನಾಳಗಳು ಶುದ್ಧವಾಗುತ್ತವೆ. ಬಾಯಿಯ ದುರ್ವಾಸನೆ ನಾಶವಾಗುವದು.

ಕ್ರಯ. 30 ಮಾತ್ರೆಗಳುಳ್ಳ ಪೊಟ್ಟಣಕ್ಕೆ ರೂ. 0-1-6. 195 ಮಾತ್ರೆಗಳುಳ್ಳ ಡಬ್ಬಿಗೆ ರೂ. 0-8-0. 65 ಮಾತ್ರೆಗಳುಳ್ಳ ಪೊಟ್ಟಣಕ್ಕೆ 0-3-0. 455 ಮಾತ್ರೆಗಳುಳ್ಳ ಸುಂದರವಾದ ಕನ್ನಡಿ ಡಬ್ಬಿಗೆ ರೂ. 1.

ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಎಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.

S. VAIDYA & Co.
Park Town, Madras.

ಎಲಂಬಿಕ್ ವೆಜಿಟೆಬಲ್ ಟಾನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಆರೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಏನೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧವನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಾಗಿಯೂ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧವನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು. ಶೀತ, ಬೇಧಿ, ಹೊಟ್ಟೆನೋವು, ಕಲರಾ. ಅಗ್ನಿಮಾಂದ್ಯ, ಅತಿಸಾರ ಇವುಗಳು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ್ ಟೌನು, ಮದ್ರಾಸು.

S. VAIDYA & Co.,
Park Town, Madras.

"ಆಯೊನಿಕ್ ಫಾರ್ಮೆಸಿ"

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮೆಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co.,
Park Town, Madras.

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ್ ಟೌನ್ ಮದ್ರಾಸು.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಫುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ. ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು. 48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ. ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ.

(*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:—
ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇವು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧-೮-೦.

ಆರ್. ಮಾರ್ಟಿನ್ಸರ ಮೆಜಿಕ್ ಸ್ಪೆಸಿಫಿಕ್.

ಮೇಹ ಮೊದಲಾದ ರೋಗಗಳು ಎರಡೇ ಬಾಟ್ಲಿ ಸ್ಪೆಸಿಫಿಕಿನಿಂದ ಗುಣವಾಗುವಾಗ ನೀವು ನಿಮ್ಮ ಹಣವನ್ನು ಡಾಕ್ಟರರ ಚಿಕಿತ್ಸೆಗೆ ವೆಚ್ಚಮಾಡುವುದೇಕೆ? ಈ ಔಷಧಿಯನ್ನು ಒಂದೇ ಸಾರಿ ಕುಡಿಯುವ ಮಾತ್ರದಿಂದ ಮೂತ್ರ ಕೋಶದ ಉರಿಯು ನಿಂತುಹೋಗುವುದು. ಪುನಃ ತಲೆದೋರುವ ಸಂಭವವೇ ಇಲ್ಲ. ಈ ಔಷಧಿಯನ್ನು ತಕ್ಕೊಳ್ಳುವುದರಿಂದ ಯಾವದೊಂದು ಕೆಡಕು ಇಲ್ಲವೆಂಬುದು ನಿಶ್ಚಯವು. ಕ್ರಯ ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಮೆಜಿಕ್ ಮಾತ್ರೆಗಳು.

ಸ್ನಾಯುಗಳ ಬಲಹೀನತೆ, ಧಾತು ಬಲಹೀನತೆ, ಮೆದುಳಿನ ಅಶಕ್ತಿ, ಇದರಿಂದ ಹುಟ್ಟುವ ವಿವಿಧ ರೋಗಗಳು ಅಂದರೆ ನಿದ್ರೆ ಬಾರದಿರುವುದು, ಕನಸು, ಕೈ ನಡುಗುವುದು, ಕಣ್ಣಿನ ಮೇಲೆ ಸಣ್ಣ ಸಣ್ಣ ಚುಕ್ಕೆಗಳು, ಚಿಂತೆ, ಮಾನಸಿಕ ಶಕ್ತಿಯ ಕುಂದು, ಮಲಬದ್ಧತೆ, ಮೊದಲಾದ ಸರ್ವ ವಿಧದ ರೋಗಗಳು ಗುಣಹೊಂದುವವು. ಎರಡು ಬಾಟ್ಲಿ ಕುಡಿಯುವುದರಿಂದ ಅತಿರೇಕ ಬಲವು ಬರುವುದು. ೩೦ ಮಾತ್ರೆಗಳುಳ್ಳ ಬಾಟ್ಲಿ ೧ಕ್ಕೆ ರೂ. ೧—೦—೦. ವಿ. ಪಿ. ಚಾರ್ಜು ೧—೩ ಬಾಟ್ಲಿ ವರೇಗೆ ೫ ಆಣೆ ಹೆಚ್ಚಿಗೆ.

ವಿಳಾಸ:—
ಆರ್. ಡಿ. ಕಟ್ಲಿ ಮತ್ತು ಕಂಪೆನಿ.
ನಂಬ್ರ ಡಿ. ಪ್ರಿಯರರೋಡ್, ಮುಂಬಯಿ.

R. D. Ketely & Co.
No. D. Frere Road,
Near Wright & Co. Fort Bombay.

ಮುಳಿಯಿಲ್‌ರರ ದಿವ್ಯೌಷಧಗಳು.

1. ಕೋಲೇರಾ ಮಾತ್ರೆದನ್ನು ಜೇನಲ್ಲಿ ಕೊಡುವುದರಿಂದ ಉಬಾಲು ಜುಲಾಬು ಗುಣಪಡುವುದು. ಗೆ ರೂ. 0—6—0.

2. ಕೋಲೇರಾ ಚೂರ್ಣ ಚೂರ್ಣವನ್ನು ಜೇನಿನಲ್ಲಿ ಮಿಶ್ರಮಾಡಿ ಕೊಡುವ ವರೆಗೆ ರೋಗಿಯು ಬದುಕಿದ್ದರೆ ನಿಶ್ಚಯವಾಗಿ ಗುಣಪಡುವನು. ಎಷ್ಟು ಕಠಿಣತರವಾಗಿದ್ದರೂ 2 ಯಾ 3 ಸಾರಿ ಔಷಧಿ ಗುಣಪಡಿಸುವುದು. ಡಜನ್ ಪೊಟ್ಲಣಗಳಿಗೆ 0—12—0.

3. ಕೋಲೇರಾ ಮಿಕ್—ಸ್ಥೂಲ ಶರೀರದ ವ ಶೀತ ಶರೀರದ ಮೇಲ್ಜಾತಿಯ ವ ಇತರ ಜಾತಿಯವರಿಗೆ ಇದು ಅತಿ ಪ್ರಯೋಜನಕರವೆ. 2 ಔನ್ಸಿಗೆ ರೂ. 1—0—0.

4. ಚಂದ್ರೋದಯ್ರಾವಕ—ಎಲ್ಲಾ ತರದ ಅಜೀರ್ಣಕ್ಕೆ ಸಕ್ಕರೆಯಲ್ಲಿ ಉಪಯೋಗಿಸುವುದು. 1 1—4—0.

While Cholera wa ailing in Muliyar etc. last year, I have tried the Cholera Pills red by Messrs Muliyil and Sons. I found them efficacious. I h he public will appreciate it as it is cheap and gives speedy relie

(sd) A DEVAPPA PUNJA B.A.B.L.
Tahsildar.

Kasaragod, 18—3

5. ಪಲ್ಲಿ ಏಕ ವ 6 ವಯಸ್ಸಿನ ಕೆಳಗಿನ ಮಕ್ಕಳಿಗಿರುವ ನೇವಸಕ್ಕೆ ಅತ್ಯುತ್ತಮ ಡಜನಿಗೆ ರೂ. —0.

6. ಸಿಂಹತ್ವಾದಿ. ಎಲ್ಲಾ ತರದ ಕೆಮ್ಮಿಗೆ ಜೇನು ವ ಆಡುಸೋಗೆ ರಸದಲ್ಲಿ ಸೇವಿಸುವುದು. ಗೆ 0—4—0.

ನಾನು ಮಕ್ಕಳ ಶೀತ ವ ಹೊಮ್ಮೊಪಥಿ ಔಷಧಿಗಳನ್ನು ಒಂದು ತಿಂಗಳು ಪ್ರಯೋಗ ಮಾಡಿದಾಗ್ಯೂ ಪ್ರಯೋಜನ ಕಂಡುಬ ಗುಳಿಗೆಗಳ ಪೈಕಿ ಸಿಂಹತ್ವಾದಿ ಮತ್ತು ಪಲ್ಲಿ ಏಕ ಮಾತ್ರೆಯನ್ನು ಮೂರೇ ದಿನ ಪ್ರಯೋಗಿಸಿದ್ದ ಗುಣವಾಯಿತು. ಸಣ್ಣ ಮಕ್ಕಳ ಕೆಮ್ಮು ಕಫಾದಿಗಳಿಂದ ಕಷ್ಟ ಕೊಂಡರೆ ಪಡುವ ಎಲ್ಲಾದಿಂಗೆ ಇದನ್ನು ಶಿಫಾರಸು ಮಾಡುತ್ತೇನೆ.

(sd.) P. SOANS, Pastor.

Karkal 14th June 1

ವಿಳಾಸ:— ಮುಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.
yil & Sons, *Kasargod, S. C.*

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 1ನೇ ಮೇ 1914

ಮತಸಂಸ್ಥೆಗಳಿಂದ ವಿದ್ಯಾಸಂಸ್ಥೆಗಳಿಗೆ ದೊರಕಬೇಕಾದ ದ್ರವ್ಯ ಸಹಾಯವು.

ಪ್ರಜಾಜನರಿಂದ ಸ್ಥಾಪಿಸಲ್ಪಟ್ಟ ವಿದ್ಯಾಶಾಲೆಗಳು ದ್ರವ್ಯ ಸಹಾಯವಿಲ್ಲದೆ ಬಳಲುತ್ತಿರುವ ಕಾಲದಲ್ಲಿ ಮಠ ದೇವಸ್ಥಾನಗಳ ಹಣವು ದುರ್ವ್ಯಯವಾಗುವುದನ್ನು ನೋಡಿ ಈ ಹಣವನ್ನು ವಿದ್ಯಾಭಿವೃದ್ಧಿ ಬಗ್ಗೆ ವಿನಿಯೋಗಿಸುತ್ತಿದ್ದರೆ ಸಮಾಜದಲ್ಲಿ ಕ್ಷೇಮವುಂಟಾಗಬಹುದೆಂಬ ಭಾವನೆಯು ಸರ್ವರಲ್ಲಿಯೂ ಸ್ವಭಾವಿಕವಾಗಿ ಉಂಟಾಗುತ್ತದೆ. ಈ ಭಾವನೆ ಪ್ರಕಾರ ದುರ್ವ್ಯಯವಾಗುವ ಈ ಹಣದ ಸದ್ಯುಪಯೋಗವನ್ನು ಮಾಡಲಿರುವ ಅಭ್ಯಂತರವೇನು? ಈ ಹಣದ ದುರ್ವ್ಯಯವು ಹೀಗೆ ಆಗಲು ಕಾರಣವೇನು? ಈಗಿನ ಕಾಲದಲ್ಲಿ ಎಂಥವನಿಗಾದರೂ ವ್ಯಕ್ತವಾಗುವಂಥಾ ವಿದ್ಯಾಪ್ರಯೋಜನಗಳು ಮಠಾಧಿಪತಿಗಳಿಂದಲೂ ದೇವಸ್ಥಾನಗಳ ಅಧಿಕಾರಿಗಳಿಂದಲೂ ತಿಳಿಯಲಾರದೆ ಹೋದವೇ? ಈ ಎಲ್ಲಾ ಪ್ರಶ್ನೆಗಳಿಗೆ ಸಾಮಾನ್ಯವಾಗಿ ಒಂದುತ್ತರವು ದೊರಿಯುವುದು. ಮಠಾಧಿಪತಿಗಳ ಮತ್ತು ದೇವಸ್ಥಾನದ ಮುಕ್ತೇಸರರ ಸ್ವಾರ್ಥವೇ ಹೀಗೆ ಮತಸಂಸ್ಥೆಗಳ ಹಣವನ್ನು ವಿದ್ಯಾಕಾರ್ಯಗಳಲ್ಲಿ ವಿನಿಯೋಗಿಸುವರೆ ಇರುವ ಮುಖ್ಯವಾದ ನಿರ್ಬಂಧವು ಎಂದೆನ್ನುವರು. ಆದರೆ ಈ ವಿಷಯವನ್ನು ಅಂಗ್ಲಭಾಷಾ ಪರಿಚಿತಿಯು ಇಲ್ಲದಿದ್ದರೂ ಲೋಕದನುಭವವು ಧಾರಾಳವಾಗಿ ಉಳ್ಳವರೊಡನೆ ಚರ್ಚಿಸಿದ್ದಲ್ಲಿ ಅವರು ಸಕಾರಣಯುಕ್ತವಾದ ಕೆಲವು ಅಭ್ಯಂತರಗಳನ್ನು ವ್ಯಕ್ತಗೊಳಿಸಿರುತ್ತಾರೆ. ಇಂಥವರ ಅಭಿಪ್ರಾಯವು ಸರ್ವರಿಂದಲೂ ಮನ್ನಿಸಲ್ಪಡಬೇಕಾಗಿರುವುದರಿಂದ ಈ ಅಭಿಪ್ರಾಯಗಳನ್ನು ಶಿಕ್ಷಿತರ ಮುಂದಿಡುವುದು ಕರ್ತವ್ಯವೆಂತ ಭಾವಿಸುತ್ತೇವೆ.

ದೇವಸ್ಥಾನಗಳು ವೇದಗಳಷ್ಟೇ ಅನಾದಿಕಾಲದವುಗಳಲ್ಲ. ಇತ್ತಲಾಗೆ ೪೦೦ ಯಾ ೫೦೦ ವರುಷಗಳಿಂದ ಈ ಸಂಸ್ಥೆಗಳು ಹಿಂದೂಗಳಿಂದ ಸರ್ವತ್ರ ಸ್ಥಾಪಿಸೋಣಾಗುತ್ತಿವೆ. ಅಂದರೆ ವೇದಕಾಲದಲ್ಲಿದ್ದ ಸಮಾಜ ಸ್ಥಿತಿಯು ಮಾರ್ಪಡುತ್ತಾ ಬಂದು ಇಂಥಾ ಸಂಸ್ಥೆಗಳನ್ನು ಸ್ಥಾಪಿಸುವುದು ಸಮಾಜ ಕ್ಷೇಮಕ್ಕೆ ಅಗತ್ಯವಾದುದರಿಂದ ಹಿರಿಯರು ಈ ಸಂಸ್ಥೆಗಳನ್ನು ಸ್ಥಾಪಿಸಿದರು. ದೇವಸ್ಥಾನಗಳ ಸ್ಥಾಪನೆಯ ವ್ಯವಸ್ಥಾಕ್ರಮಗಳನ್ನು ಚನ್ನಾಗಿ ಪರೀಕ್ಷಿಸಿ ನೋಡಿದ್ದಲ್ಲಿ ಹಿಂದುಗಳಲ್ಲಿ ಅಪ್ರತಿಮವಾಗಿರುವ ದೇವಭಕ್ತಿ ಶ್ರದ್ಧೆಗಳ ಮೂಲಕ ಸಮಾಜದ್ದಿಗೆ ಬೇಕಾಗಿರುವ ಸರ್ವ ಕಾರ್ಯಗಳನ್ನೂ ನೆರವೇರಿಸಿ ಸಮಾಜರಕ್ಷಣೆಯ ಬಗ್ಗೆ ಇವುಗಳು ಸ್ಥಾಪಿಸಲ್ಪಟ್ಟವೆಂತ ವ್ಯಕ್ತವಾಗುವುದು. ಆದ್ದರಿಂದಲೇ ಹಿಂದೊಮ್ಮೆ ದೇವಸ್ಥಾನವು ಗ್ರಾಮದ ವಾದಗಳನ್ನು ತೀರಿಸುವ ಪಂಚಾಯತರು ಕೂಡುವ ಅಧಿಕಾರ ಸ್ಥಾನವೂ, ಗ್ರಾಮದ ಮಕ್ಕಳಿಗೆ ಓದುಬರಹಗಳನ್ನು ಕಲಿಸುತ್ತಿದ್ದ ಐಗಳರ ಶಾಲಾ ಸ್ಥಳವೂ, ಗತಿಲ್ಲದ ಅನಾಥರನ್ನು ಪೋಷಿಸುವ ಗೃಹವೂ, ಉತ್ಸವ ಸಮಾರಾಧನೆಗಳನ್ನೇರ್ಪಡಿಸಿ ಆಯಾ ಕಡೆಗಳಲ್ಲಿದ್ದ ಜನರೆಲ್ಲರನ್ನು ಆಗಿಂದಾಗ್ಯೆ ಒಟ್ಟುಕೂಡಿಸುತ್ತಿದ್ದ ಆಲಯವೂ, ಸಮಾಜ ಸೇವೆಯೆಲ್ಲವನ್ನು ಸರ್ವೇಶ್ವರನ ಪ್ರೀತಿಗೆ ಪಾತ್ರರಾಗಬೇಕಾದರೆ ಮಾಡಬೇಕೆಂಬ ಜ್ಞಾನ, ಭಕ್ತಿಶ್ರದ್ಧೆಗಳನ್ನು ಬೋಧಿಸುವ ಪವಿತ್ರ ಕ್ಷೇತ್ರವೂ ಆಗಿತ್ತು. ಸಮಾಜರಕ್ಷೆಯ ಇಂಥಾ ಸಂಸ್ಥೆಗಳು ತಮ್ಮನಂತರದವರಿಗೂ ಸಹ ಶಾಶ್ವತವಾದ ಪ್ರಯೋಜನಗಳನ್ನು ಕೊಡಬೇಕೆಂಬುವ ಕಾಂಕ್ಷೆಯಿಂದಲೂ ಧರ್ಮ ಬುದ್ಧಿಯಿಂದಲೂ ನಮ್ಮ ಪೂರ್ವಜರು ದೇವಸ್ಥಾನಗಳಿಗೆ ಬೇಕಾದ ದ್ರವ್ಯಸಹಾಯವನ್ನು ಕೊಟ್ಟು ಅವುಗಳನ್ನು ಸ್ಥಿರಪಡಿಸಿದರು. ಇದೇ ರೀತಿ ಮತಸ್ಥಾಪನೆಗಳು ಸಹ ಸ್ಥಾಪಿಸಲ್ಪಟ್ಟವು.

ಈಗಲಾದರೋ ಕಾಲಮಾರ್ಪಾಟದಿಂದ ಸಮಾಜ ಸ್ಥಿತಿಯು ಬದಲಾವಣೆಯನ್ನು ಹೊಂದಿರುವುದು. ಹಲವು ಕಾರಣಗಳಿಂದ ಪ್ರಕೃತ ದೇವಸ್ಥಾನಗಳಲ್ಲಿಯೂ ಗುರುಮಠಗಳಲ್ಲಿಯೂ ಕಾಣಬರುವಂಥಾದ್ದು ಹಣ ಗಂಟೇ ಹೊರತು ಮತ್ತೇನೂ ಇರದು. ಅದು ಹೇಗಂದರೆ—ನಮ್ಮ ಗೃಹಧರ್ಮದ ಶಿಷ್ಟಾರವೆಲ್ಲವನ್ನು ಪೂರ್ಣವಾಗಿ ಮರೆತುಬಿಡುವ ವಿಧಾನದಲ್ಲಿ ನಾವು ಪ್ರಕೃತ ಶಿಕ್ಷಣವನ್ನು ಹೊಂದುತ್ತಿರುವೆವು. ಈ ಶಿಕ್ಷಣ ಪ್ರಭಾವದಿಂದ ನಮ್ಮಲ್ಲಿ ಬಹಳ ಜೋರಿನಿಂದ ಹತ್ತಿರುವ ನವೀನ ಅಭ್ಯಾಸಗಳ ತೃಪ್ತಿಗೆ ಬೇಕಾದಷ್ಟು ಹಣವನ್ನು ದುಡಿಯುವ ಶಕ್ತಿಯು ಈಗಿನ ವಿದ್ಯಾಭ್ಯಾಸದಿಂದ ದೊರಿಯುವುದಿಲ್ಲ. ಆದ್ದರಿಂದ ಸರ್ವಜನ ಪ್ರಯೋಜನವಾದ ಎಂಥಾ ಕೆಲಸಕ್ಕೂ ನಮ್ಮಲ್ಲಿ ಹಣ ದೊರಕದು. ಈ ವಿದ್ಯಮಾನಗಳಲ್ಲಿ ಗುರುಮಠಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ನಮಗೆ ಪ್ರಕೃತ ಹಣವಿನ ಗಂಟು ಮಾತ್ರ ಗೋಚರವಾಗುತ್ತಿದೆ.

ವಿದ್ಯಾ ಸಂಸ್ಥೆಗಳ ಪಾಲನೆ ಬಗ್ಗೆ ಪ್ರಕೃತ ಶಿಕ್ಷಿತರು ಮತಸಂಸ್ಥೆಗಳನ್ನು ಸೇರುವ ವಿಧಾನವು ಇದಾಗಿದೆಂದು ಹೇಳುವುದರಲ್ಲಿ ಈ ಅನುಭವಸ್ಥರ ವಾದವು ಪೂರ್ಣವಾಗಿರುವುದಿಲ್ಲ. ಸಮಾಜಕ್ಕೆ ಪ್ರಕೃತ ಅಗತ್ಯವಾಗಿರುವ ವಿದ್ಯಾಸಂಸ್ಥೆಗಳನ್ನು ಪೋಷಿಸುವ ವಿಧಾನವು ಸಹ ಇವರಿಂದ ಸೂಚಿಸಲ್ಪಟ್ಟಿರುವುದು: ಮತಸಂಸ್ಥೆಗಳಿಗೂ ವಿದ್ಯಾಸಂಸ್ಥೆಗಳಿಗೂ ಇರಬೇಕಾದ ಧರ್ಮಸಮ್ಮಂಧವನ್ನು ಕಳೆದುಬಿಡದಂತೆ ಈ ಎರಡು ಸಂಸ್ಥೆಗಳನ್ನು ನಡಿಸಬೇಕೆಂಬುದು ಇವರ ಮುಖ್ಯ ತಾತ್ಪರ್ಯವಾಗಿದೆ. ಮತಸಂಸ್ಥೆಗಳು ಪ್ರಕೃತ ಧರ್ಮಸಂಸ್ಥಾಪನೆಯ ಕೆಲಸಗಳನ್ನು ಹೇಗೆ ನಡಿಸುತ್ತಿವೆ? ಈಗಿನ ವಿದ್ಯಮಾನಗಳಿಗೆ ತಕ್ಕಂತೆ ಇವುಗಳಲ್ಲಿ ಏನಾದರೂ ತಿದ್ದುಪಡಿಗಳು ಅಗತ್ಯವಿದೆಯೇ? ಧರ್ಮಸಂಸ್ಥಾಪನೆಯು ಶಾಶ್ವತವಾಗಿ ನಡಿಯುವಂತೆ ಬೇಕಾದ ಹಣಸಂಗ್ರಹವು ಮತಸಂಸ್ಥೆಗಳಲ್ಲಿರುವುದೋ? ಧರ್ಮಸಂಸ್ಥಾಪನೆಯ ಕಾರ್ಯಗಳ ಬಗ್ಯೆ ಬೇಕಾದ ಖರ್ಚು ಕಳದು ಎಷ್ಟು ಹಣ ಉಳಿಯುವುದು? ಶಿಕ್ಷಿತರು ಇಷ್ಟೆಲ್ಲ ವಿಚಾರವನ್ನು ಮಾಡುವುದಿಲ್ಲ. ಪೂರ್ಣ ಅಭಾವದಿಂದ ಮತಸಂಸ್ಥೆಗಳನ್ನು ಕಾಣುತ್ತಾರೆ. ವಿದ್ಯಾಸಂಸ್ಥೆಗಳಿಗೆ ಹಣಸಹಾಯ ಬೇಕೆಂತ ಮಾತ್ರ ಕೇಳುತ್ತಿರುವರು. ಇದೆಂದೂ ಸಲ್ಲದ ವರ್ತನೆ. ಯಾಕಂದರೆ ಈಗಿನ ಶಿಕ್ಷಣವು ಮತಸಂಸ್ಥೆಗಳ ಉತ್ಪತ್ತಿಯನ್ನು ನಿಕೃಷ್ಟಾವಸ್ಥೆಗೆ ತಂದಿದೆ. ಆಪದ್ಧನವಾಗಿರಬೇಕಾದ ಮತಸಂಸ್ಥೆಗಳ ದ್ರವ್ಯಸಂಗ್ರಹದಿಂದ ಕೆಲವಂಶವನ್ನು ವಿದ್ಯಾಸಂಸ್ಥೆಗಳಿಗೆ ಕೊಡುವುದು ಈ ವಿದ್ಯಮಾನಗಳಲ್ಲಿ ಶುಲಭಸಾಧ್ಯವಲ್ಲ. ಆದ್ದರಿಂದ ಹಿರಿಯರೂ ಯಾವರೀತಿ ನಮ್ಮ ಮತಸಂಸ್ಥೆಗಳನ್ನು ಬಲಪಡಿಸಿದರೋ ಅದೇ ರೀತಿ ಈ ಕಾಲಕ್ಕೆ ಬೇಕಾದಂಥಾ ವಿದ್ಯಾಸಂಸ್ಥೆಗಳನ್ನು ಪೋಷಿಸುವ ಸಾಧನಗಳನ್ನು ನಮ್ಮೆಲ್ಲವರಲ್ಲಿ ಸ್ವಭಾವ ಸಿದ್ಧವಾಗಿರುವ ದೇವಭಕ್ತಿ ಶ್ರದ್ಧೆಗಳನ್ನು ಉಜ್ಜೀವಿಸಿ ನಾವೆಲ್ಲರೂ ಆಸಕ್ತಿಯಿಂದ ಮಾಡಬೇಕಾಗಿರುವುದು. ಮತಸಂಸ್ಥೆಗಳಿಂದ ದೊರಕುವ ಸಹಾಯಕ್ಕೆ ಮಿತಿಯಿರುವುದು. ಆದರೆ ಆಸಕ್ತಿಯಿಂದ ನಾವು ನಡಿಸಬಹುದಾದ ಏರ್ಪಾಡಿನಿಂದ ದೊರಿಯುವ ಸಹಾಯ ಯಥೇಚ್ಛವಾಗುವುದು. ಇಂಥಾ ದ್ರವ್ಯಸಹಾಯದಿಂದಲೇ ವಿದ್ಯಾಸಂಸ್ಥೆಗಳು ಶಾಶ್ವತವಾಗಿ ಬಾಳುವಂತೆ ಉಪಾಯವಾಗುವುದು.

ಕೆನರಾ ಹ್ಯಾಸ್ಕೂಲ್, ಮಂಗಳೂರು.

ಈ ಶಾಲೆಯು ಇಲ್ಲಿಯ ಗೌಡಸಾರಸ್ವತರಿಂದ ಸ್ಥಾಪಿಸಲ್ಪಟ್ಟು ಇಂದಿಗೆ ೨೩ ವರ್ಷಗಳಾದವು. ಈಗಿನ ಕಾಲದಲ್ಲಿ ಅತ್ಯಗತ್ಯವಾಗಿ ಬೇಕಾಗಿರುವಂಥಾ ಅಂಗ್ಲಾವಿದ್ಯಾ ಪರಿಚಿತಿಯು ೨೩ವರ್ಷಗಳ ಹಿಂದೆ ಗೌಡಸಾರಸ್ವತರಲ್ಲಿ ಬಹಳ ಅಪರೂಪವಾಗಿದ್ದುದ್ದರಿಂದ ಈ ವಿದ್ಯಾಭ್ಯಾಸವು ಮುಖ್ಯವಾಗಿ ಗೌಡಸಾರಸ್ವತರಿಗೆ ಅನುಕೂಲವಾಗಿ ದೊರಕುವಂತೆ ಈ ಶಾಲೆಯು ಸ್ಥಾಪಿಸಲ್ಪಟ್ಟಿತು. ಈ ರೀತಿ ಒಂದೇ ಜಾತಿಯವರಿಂದ ಈ ಶಾಲೆಯು ಸ್ಥಾಪಿಸೋಣಾಗಿ ನಡೆಸಲ್ಪಡುವುದಾದರೂ ಇಲ್ಲಿರುವ ಇತರ ಆಯಾ ಜಾತಿ ಮತಗಳವರಿಂದ ಸ್ಥಾಪಿಸಲ್ಪಟ್ಟ ವಿದ್ಯಾಸಂಸ್ಥೆಗಳಂತೆಯೇ ಈ ಶಾಲೆಯಲ್ಲಿ ಗೌಡಸಾರಸ್ವತರಲ್ಲದ ಇತರರಿಗೂ ವಿಶೇಷ ಪ್ರಯೋಜನವು ದೊರಕುತ್ತಿದೆ. ಪ್ರಕೃತ ಎಲ್ಲಾ ಜಾತಿಮತಸ್ಥರ ವಿದ್ಯಾರ್ಥಿಗಳು ವಿದ್ಯಾಪ್ರಯೋಜನವನ್ನು ಈ ಶಾಲೆಯಿಂದ ಒಂದೇ ರೀತಿಯಲ್ಲಿ ಪಡೆಯುತ್ತಿದ್ದಾರೆ.

ಕಳದ ತಿಂಗಳ ತಾ. ೧೮ರಲ್ಲಿ ರಾವ್ ಬಹದ್ದೂರ್ ಎ. ರಾಮಯ್ಯ ಪೊಂಜರವರ ಅಧ್ಯಕ್ಷತೆಯಲ್ಲಿ ಈ ಶಾಲೆಯಲ್ಲಿ ಇನಾಮು ಹಂಚೋಣವು ನಡಿಯಿತೆಂಬುದಾಗಿ ವಾಚಕರು ಸ್ವದೇಶಾಭಿಮಾನಿಯ ಕಳದ ವಾರದ ಸಂಚಿಕೆಯ ವರ್ತಮಾನ ಸಂಗ್ರಹದಿಂದ ತಿಳಿದಿರಬಹುದು. ಇನಾಮು ಹಂಚೋಣದ ಈ ಸಂದರ್ಭದಲ್ಲಿ ೧೯೧೨—೧೩ನೇ ವರುಷಕ್ಕೆ ಅಂತ್ಯವಾಗುವ ವರುಷದ ಈ ಶಾಲಾ ವೃತ್ತಾಂತವು ಸಹ ಓದಿ ಹೇಳೋಣಾಗಿಯದೆ. ಈ ಜಿಲ್ಲೆಯಲ್ಲಿ ಪೂರ್ಣವಾಗಿ ದೇಶೀಯರ ಸಾಹಸದಿಂದಲೇ ಕಳದ ೨೩ ವರುಷಗಳಿಂದ ನಡಿಸಲ್ಪಡುವ ಇದೊಂದೇ ಹ್ಯಾಸ್ಕೂಲಿನ ವೃತ್ತಾಂತಗಳನ್ನು ಆಗಿಂದಾಗ್ಯೆ ಸ್ವಲ್ಪ ವಿಸ್ತಾರವಾಗಿ ತಿಳಿಯುವುದು ಕರ್ತವ್ಯವಾಗಿರುವುದು. ಶಾಲೆಯ ಆಡಳಿತೆಯು ಮ|| ರಾ|| ರಾ|| ದಿವಾನ್ ಬಹದ್ದೂರ್ ಅಮ್ಮೆಂಬಳ ವೆಂಕಟ್ರಮಣಪೈಗಳೇ ಮೊದಲಾದ ೭ ಜನ ಗೌಡ ಸಾರಸ್ವತ ವಿದ್ಯಾವಂತ ಅನುಭವಸ್ಥರ ಕೈಕೆಳಗಿರುವುದು. ಈ ಪೈಕಿ ರಾವ್‌ಸಾಹೇಬ ಯಮ್. ಗೋಪಾಳ ಪೈಗಳವರು ಮೃತಪಟ್ಟಿರುವುದರಿಂದ ಪ್ರಕೃತ ಆರೇ ಜನ ಬೋರ್ಡು ಮೆಂಬರರಿರುವರು. ಪೆನ್ಶನು ಹೊಂದಿದ ಸರಕಾರದ ನೌಕರರು ಮತ್ತು ವಕೀಲರಲ್ಲದೆ ಇತರ ವೃತ್ತಿಯನ್ನನುಸರಿಸುವ ಇದೇ ಜಾತಿ ಪ್ರತಿನಿಧಿಗಳು ಈ ಆಡಳಿತೆ ಬೋರ್ಡಿನಲ್ಲಿಲ್ಲದಿರುವುದು ಒಂದು ವಿಶೇಷ ಕುಂದುಕವಾಗಿರುವುದು. ವ್ಯಾಪಾರ ವೃತ್ತಿಯು ಈ ಜಾತಿಯವರ ಮುಖ್ಯ ಜೀವನ ವೃತ್ತಿಯಾಗಿರುವುದರಿಂದಲೂ

ಜಾತಿಯ ಬಹು ಪಕ್ಷವು ವ್ಯಾಪಾರಸ್ಥರೇ ಆಗಿರುವುದರಿಂದಲೂ ಈ ವರ್ಗದವರಿಂದ ಬೋರ್ಡಿಗೆ ಒಬ್ಬೊಬ್ಬ ಪ್ರತಿನಿಧಿಗಳನ್ನು ಸೇರಿಸಿಕೊಳ್ಳುವುದು ಅಗತ್ಯವಾಗಿರುವುದು. ಗೌಡ ಸಾರಸ್ವತರಲ್ಲಿರಬೇಕಾದ ಐಕ್ಯಕ್ಕೂ ಈ ಏರ್ಪಾಡು ಬಹಳ ಸಹಾಯಕರವಾಗುವುದು. ಶಾಲೆಯ ಅಧ್ಯಾಪಕ ವರ್ಗದಲ್ಲಿ ಒಬ್ಬಿಬ್ಬರ ಹೊರತು ಅಧ್ಯಾಪಕರೆಲ್ಲರು ಯುಕ್ತರೀತಿಯಲ್ಲಿ ತರಬೇತಿಯನ್ನು ಹೊಂದಿದವರಾಗಿರುವರು. ಬಿ. ಎ. ಎಲ್. ಟಿ. ಪರೀಕ್ಷೆ ಪಾಸಾದ ೭ ಜನ ಶಿಕ್ಷಕರು ಈ ಶಾಲೆಯಲ್ಲಿರುವರು. ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಹೊಂದುವ ವಿದ್ಯಾರ್ಥಿಗಳ ಸಂಖ್ಯೆಯು ೫೪೭ ಆಗಿರುತ್ತದೆ. ಈ ಸಂಖ್ಯೆಯನ್ನು ಕಳದ ಒಂದೆರಡು ವರುಷಗಳ ಸಂಖ್ಯೆಯೊಡನೆ ಸರಿಹೋಲಿಸಿದರೆ ವಿದ್ಯಾರ್ಥಿಗಳ ಸಂಖ್ಯೆಯು ತಕ್ಕ ರೀತಿಯಲ್ಲಿ ಹೆಚ್ಚುತ್ತದೆ ಎಂದು ಹೇಳಲು ಆಸ್ಪದವಿಲ್ಲ. ಶಾಲೆಯಲ್ಲಿ ಸ್ಥಳದಡಚಣೆಯು ವಿಶೇಷವಾಗಿರುವುದರಿಂದ ವಿದ್ಯಾರ್ಥಿಗಳನ್ನು ಬೇಕಾದಂತೆ ದಾಖಲು ಮಾಡಿಕೊಳ್ಳಲಾಗುವದಿಲ್ಲವೆಂತ ಶಾಲಾ ವರದಿಯಿಂದ ತೋರಿಬರುವುದು. ಸ್ಥಳದಡಚಣೆಯ ಈ ಸಂಕಷ್ಟವನ್ನು ನಿವಾರಿಸುವ ವಿಷಯಕ್ಕೆ ಬೋರ್ಡಿನವರು ವಿಶೇಷ ಗಮನ ಕೊಡಬೇಕಾಗಿದೆ. ಯಾಕಂದರೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಲು ಆಸ್ಪದವಿಲ್ಲದೆ ಇದ್ದಂತೆಯೇ ಇರುವುದಾದರೆ ಸಂಖ್ಯೆಯು ಕಡಮೆಯಾಗುವ ಸಂಭವಗಳು ಹೆಚ್ಚುವವು. ಶಾಲೆಯಲ್ಲಿ ಶಿಕ್ಷಣವು ತೃಪ್ತಿಕರವಾದ ಉತ್ತಮ ರೀತಿಯಲ್ಲಿ ಕೊಡೋಣಾಗುತ್ತಿರುವುದು. ಶಾಲೆಯ ವಿದ್ಯಾರ್ಥಿಗಳ ಪರೀಕ್ಷೆಯ ಫಲವು ಹಲವು ಮುಖ್ಯ ಮುಖ್ಯ ಪಾಠ ವಿಷಯಗಳಲ್ಲಿ ಚನ್ನಾಗಿರುವುದು. ಕನ್ನಡ ಮತ್ತು ಎಲಿಮೆಂಟರಿ ಮೆಥೆಮೆಟಿಕ್ಸ್ ಈ ವಿಷಯಗಳ ಪರೀಕ್ಷೆಯ ಫಲವು ಸಂಸ್ಥಾನದ ಸರಾಸರಿಗಿಂತ ಕಡಮೆಯಾಗಿರುವುದರಿಂದ ಈ ಪಾಠ ವಿಷಯಕ್ಕೆ ಹೆಚ್ಚಿನ ಲಕ್ಷ್ಯವು ಬೇಕಾಗಿರುವುದು. ಶಾಲೆಯ ವಿದ್ಯಾರ್ಥಿಗಳಲ್ಲಿರುವ ಇಂಗ್ಲಿಷು ಭಾಷಾಜ್ಞಾನವೂ ಉತ್ತಮ ತರಗತಿದ್ದಾಗಿರುವುದೆಂದೂ ಶಿಕ್ಷಕರು ಯೋಗ್ಯರಾಗಿರುವರೆಂದೂ ಶಾಲಾ ಇನ್ಸಪೆಕ್ಟರರು ಈ ಶಾಲೆಯ ವಿಷಯ ಅಭಿಪ್ರಾಯ ಪಟ್ಟಿರುತ್ತಾರೆ. ೬೬೪೬ ಪುಸ್ತಕಗಳಿರುವ ಪುಸ್ತಕಾಲಯವು ಈ ಶಾಲೆಗಿರುವುದಲ್ಲದೆ ಪರವೂರಿನ ವಿದ್ಯಾರ್ಥಿಗಳ ಬಗ್ಯೆ ಉಳಕೊಳ್ಳುವರೆ ಅನುಕೂಲವಾದ ವಿದ್ಯಾರ್ಥಿ ಭವನವು ಈ ಶಾಲೆಗೆ ಸೇರಿರುತ್ತದೆ. ವಿದ್ಯಾರ್ಥಿ ಭವನದಲ್ಲಿ ಸಹ ವಿಶೇಷ ಸ್ಥಳದ ಅಡಚಣೆ ಇರುವುದಾಗಿ ತಿಳಿಯುತ್ತೇವೆ.

ಶಾಲೆಯ ಆದಾಯ ವ್ಯಯಸ್ಥಿತಿಯು ತೃಪ್ತಿಕರವಾಗಿರುವುದಿಲ್ಲ. ಎಲ್ಲಾ ಬಗೆಯ ಉತ್ಪತ್ತಿಯು ಒಟ್ಟಿಗೆ ರೂ ೧೭,೭೫೪-೦-೧೦ ಆಗಿರುವಾಗ ಖರ್ಚು ರೂ ೧೮,೬೧೦-೪-೬ ಆಗಿರುವುದು. ವಿದ್ಯಾರ್ಥಿಭವನ, ಶಾಲಾ ಕಟ್ಟಡಗಳು ಮತ್ತು ಇತರ ಉಪಕರಣಗಳ ಬಗ್ಯೆ ಶುಮಾರು ೭೦೦೦ ರೂಪಾಯಿಗಳ ದ್ರವ್ಯಸಹಾಯವು ಸರಕಾರದವರಿಂದ ದೊರಕಿರುವುದು. ಇತ್ತಲಾಗೆ ಕೆಲವು ವರುಷಗಳಿಂದ ಸಿಕ್ಕದೆ ಇದ್ದ ಟೀಚಿಂಗ್ ಗ್ರ್ಯಾಂಟು ಈ ವರುಷ ಕೊಡೋಣಾದದಕ್ಕಾಗಿ ಸರಕಾರದವರನ್ನು ಶಾಲಾಧಿಕಾರಿಗಳು ವಂದಿಸಿರುವರು. ಸೆಕೆಂಡರಿ ವಿದ್ಯಾಭ್ಯಾಸದ ಕಡೆ ಸರಕಾರದವರು ಇತ್ತಿತ್ತ ವಿಶೇಷ ಆದರಣೆಯನ್ನು ತೋರಿಸುತ್ತಿರುವುದರಿಂದ ಟೀಚಿಂಗ್ ಗ್ರ್ಯಾಂಟುಗಳು ಖಾಸಗಿ ಶಾಲೆಗಳಿಗೆ ನಿರಂತವಾಗಿ ಕೊಡುವ ಏರ್ಪಾಡಿನ ಜ್ಯಾರಿಯು ಕಾಯಂಮಾಗಿ ನಡಿಯುವದೆಂತ ಕೋರಬಹುದು. ಆದರೆ ಇಂಥಾ ಸಹಾಯವನ್ನು ಹೊಂದಲು ನಾವು ಅರ್ಹರಾಗಿರುವವೆಂಬುದನ್ನು ಪ್ರಜಾಜನರು ಸಹ ಕಾರ್ಯತಃ ತೋರಿಸುವುದು ಅಗತ್ಯವಾಗಿರುವುದು. ವಿದ್ಯಾ ಸಂಸ್ಥೆಗಳಿಗೆ ಉದಾರ ಮನಸ್ಸಿನಿಂದ ಸಹಾಯಮಾಡುವುದೇ ಇಂಥಾ ಅರ್ಹತೆಯನ್ನು ವ್ಯಕ್ತಗೊಳಿಸುವ ವಿಧಾನವಾಗಿದೆ.

ಆಯಾ ಜಾತಿಮತಸ್ಥರ ಈ ವಿದ್ಯಾ ಸಂಸ್ಥೆಗಳು ಈ ಜಿಲ್ಲೆಯ ಮತ್ತು ದೇಶದ ಅಭಿವೃದ್ಧಿಗೆ ಹೇಗೆ ಸಹಾಯಕರವಾಗಿರಬೇಕೆಂಬುದನ್ನು ಇನ್ನೊಂದು ಸಂಚಿಕೆಯಲ್ಲಿ ವಾದಿಸುವೆವು.

ಆರೋಗ್ಯದಾಯಿನಿ ಔಷಧಾಲಯವು, ಮಂಗಳೂರು.

ರಾ॥ ಮೆಲೋತ್ ರಾಮನಂಬಿಯಾರ್‌ರವರಿಂದ ಸ್ಥಾಪಿಸಲ್ಪಟ್ಟ ಆರೋಗ್ಯದಾಯಿನೀ ಔಷಧಾಲಯದ ಪ್ರಥಮ ವರುಷದ ವೃತ್ತಾಂತದಿಂದ ಜನರೆಲ್ಲರು ತಿಳಕೊಳ್ಳಬೇಕಾದ ವಿಷಯಗಳಿರುವವು. ಆದರೆ ಇವುಗಳು ಯಾವವೆಂಬುದನ್ನು ಪರ್ಯಾಲೋಚಿಸುವಾಗ ಸ್ವದೇಶಾಭಿಮಾನಿಯ ಕಳೆದ ಫೆಬ್ರವರಿ ತಿಂಗಳ ೨೧ನೇ ತಾರೀಕಿನ ಸಂಚಿಕೆಯಲ್ಲಿ "ಪಂಡಿತ ಹನುಮಯ್ಯನವರು" ಈ ಔಷಧಾಲಯದ ವಿಷಯ ಬರೆದಿರುವ ಕೆಲವು ಸೂಚನೆಗಳು ವಾಚಕರ ಸ್ಮರಣೆಗೆ ಬಾರದಿರವು. ರಾ॥ ಮೆಲೋತ್ತರವರು ತಮ್ಮ ಆರೋಗ್ಯದಾಯಿನೀ ಔಷಧಾಲಯದ ವರದಿಯನ್ನು ಸಂಗ್ರಹಿಸಿ ಬರೆದ ವಿಧಾನದಲ್ಲಿ ಮಾತ್ರ ಒಂದೆರಡು ಕುಂದುಕಗಳಿದ್ದುದ್ದರಿಂದ 'ಪಂಡಿತ ಹನುಮಯ್ಯನವರಿ'ಗೆ ತನ್ನ ಸೂಚನೆಗಳನ್ನು ಬರೆಯಲು ಆಸ್ಪದ ದೊರಕಿತು. ಇಂಥಾ ಕುಂದುಕಗಳನ್ನು ತಮ್ಮ ಇನ್ನು ಮುಂದಿನ ಅನುಭವದ ಮೇಲೆ ಮೆಲೋತ್ತರವರು ತಿದ್ದುವರಾದ್ದರಿಂದ ಹನುಮಯ್ಯನವರ ಸೂಚನೆಗಳನ್ನು ಇಲ್ಲಿ ವಿಸ್ತಾರವಾಗಿ ವಾದಿಸುವುದು ನಮಗೆ ಯುಕ್ತ ಕಾಣುವುದಿಲ್ಲ. ಆದರೆ ಈ ಆರೋಗ್ಯದಾಯಿನೀ ಸ್ಥಾಪನೆಯಿಂದ ಸ್ಪಷ್ಟವಾಗಿ ವ್ಯಕ್ತಗೊಂಡಿರುವ ಜನರ ಮನೋಭಾವವನ್ನು ಸರ್ವರೂ ತಿಳಿದುಕೊಳ್ಳಬೇಕು. ದೇಶೀಯ ಔಷಧಗಳಲ್ಲಿ ಜನರಿಗೆ ಹೆಚ್ಚಿನ ವಿಶ್ವಾಸವಿರುವುದು. ಈ ಔಷಧಗಳೇ ಇವರಿಗೆ ಹೆಚ್ಚಾಗಿ ಪ್ರಿಯಕರವಾದವುಗಳು. ರೋಗಿಗಳ ಆರೈಕೆಯ ಧರ್ಮಕಾರ್ಯದಲ್ಲಿ ಜನರ ಸ್ವಭಾವ ಸಿದ್ಧವಾದ ಮತ್ತು ಸಂಪೂರ್ಣವಾದ ಸಹಾನುಭೂತಿಯು ಇರುವುದು. ಇಂಥಾ ಸಂಸ್ಥೆಗಳನ್ನು ನಡಿಸಲು ಮುಖ್ಯವಾಗಿ ಬೇಕಾಗಿರುವಂಥಾದ್ದು ಈ ಸಹಾನುಭೂತಿಯನ್ನು ಏಕೀಕರಿಸಿ ಜನರ ಸಹಾಯಕ್ಕೆ ತಕ್ಕಂತೆ ಸುವ್ಯವಸ್ಥೆಯ ಏರ್ಪಾಡಗಳಿಂದ ಕೆಲಸ ನಡಿಸುವುದೇ. ಆರೋಗ್ಯದಾಯಿನೀ ಔಷಧಾಲಯದ ವರದಿಯ ಹೆಚ್ಚಿನ ಭಾಗದಲ್ಲಿ ತೋರುವಂಥಾ ಹಣ ಸಹಾಯವನ್ನು ಕೊಟ್ಟ ಸದ್ಗೃಹಸ್ಥರ ಹೆಸರುಗಳ ವಿಸ್ತಾರವಾದ ಪಟ್ಟಿಯೂ, ಈ ಸದ್ಗೃಹಸ್ಥರು ಈ ಸಂಸ್ಥೆಗೆ ಕೊಟ್ಟಿರುವ ಶಿಫಾಸು ಪತ್ರಗಳೂ ನಾವು ಮೇಲೆ ಸೂಚಿಸಿರುವ ಅಭಿಪ್ರಾಯಗಳಿಗೆ ಬೇಕಾದಂಥಾ ದೃಷ್ಟಾಂತಗಳಾಗಿವೆ. ಮೆಲೋತ್ತರವರು ಈ ಔಷಧಾಲಯಕ್ಕೆ ಬೇಕಾದ ವ್ಯವಸ್ಥೆಯ ಸೂಚನೆಗಳನ್ನೂ ಇತರ ಸಹಕಾರಗಳನ್ನೂ ಸ್ವೀಕರಿಸಲು ಸಿದ್ಧವಿರುವರು. ಆದ್ದರಿಂದ ಈ ಸಂಸ್ಥೆಯನ್ನು ಸರ್ವರ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗಿ ಮಾಡಿ ಮೆಲೋತ್ತರವರ ಶ್ಲಾಘನೀಯವಾದ ಪ್ರಯತ್ನಗಳನ್ನು ಸಾರ್ಥಕಗೊಳಿಸುವ ಭಾರವು ಮಹಾಜನರ ಕೈಸೇರಿರುವುದು.

ಮದುವೇ ಮಾದವನೇ ಬಲ್ಲನು.

(ಸಂತಪ್ತನಾದ ಒಬ್ಬ ಕನ್ಯಾಪಿತೃವು ಬರೆದು ಕಳುಹಿಸಿದ್ದು).

ಮದುವೇ ಮಾಡಿದವನೇ ಬಲ್ಲ; ಮನೇ ಕಟ್ಟಿಸಿದವನೇ ಬಲ್ಲನು. ಈ ಇಬ್ಬರು ಬಲ್ಲವರಲ್ಲಿ ವಿಶೇಷ ತಾರತಮ್ಯದೆ. ಒಬ್ಬನು ತನ್ನ ಅಭಿಪ್ರಾಯವನ್ನು ತಿಳಿಸುತ್ತಾ ಪ್ರಲಾಪಿಸಿಕೊಳ್ಳುವನು; ಮತ್ತೊನು ತನ್ನ ಹೆಗ್ಗಳಿಕೆಯನ್ನು ಸಾರುತ್ತ ಹಿಗ್ಗಿಕೊಳ್ಳುವನು. ಮದುವೇ ಮಾಡಿದವನ, ಮಾಡಿಸಿದವನೂ, ಮಾಡಿಕೊಳ್ಳುವವನೂ ಸಂಪೂರ್ಣ ಬಲ್ಲವರೇ. 'ಬಲ್ಲವರಲ್ಲಿ ಬ್ಬನು ವಧುವಿನ ತಂದೆ. ಅವನ ಅದೃಷ್ಟವು ರತ್ನಖಚಿತವಾದದ್ದು; ಬಹು ದೂರದಿಂದಲಾದರೂ ವಧುವಿನ ತಂದೆಯ ಪರಿಚಯ ಹಿಡಿಯಲಾಗುವುದು. ಬಡವಾಗಿ ಬೆವತುಹೋದ ಶರೀರ; ಧಗಧಗೆಂದು ಉರಿಯುತ್ತ ಬೆಂದ ಮೋರೆ; ಪೊಟರೆಗಳಲ್ಲಿ ಅಡಗಿರುವ ಕಣ್ಣುಗಳು; ಮಂದವಾಗಿ ಬೀಸುವ ಗಾಳಿಯಲ್ಲಾದರೂ ಅಲುಗುತಿರುವ ಬಿಳೇ ಕೂದಲು; ಒಣಗಿದ ಬಾಯಿ; ಅಧಿಕ ಸಂಚಾರವನ್ನು ಸೂಚಿಸುವ ಪಾದದ್ವಯ,— ಅಹಹ,— ನೇಸುಟ್ಟುಹೋದ ಮೇಲೆ ಮಾಡಿನ ಬಿದಿರೊಂದು ಅರೆಬೆಂದಿದುದಿದ್ದರೆ ಅದರ ಅವಸ್ಥೆ ಹೇಗೆಯೊ, ಹಾಗೆ ನಮ್ಮಾ ವಧುವಿನ ತಂದೆ,— ಕನ್ಯಾಪಿತನು!

ಚಾಣಕ್ಯನು, ಶ್ರಾದ್ಧವು ಮೂರು ತರನಾಗಿದೆಯೆಂದು ಹೇಳಿರುವನು. ಪಿತೃಕಾರ್ಯವು ಅದೊಂದು ಬಗೆಯ ಶ್ರಾದ್ಧ; ಬೇರೆ ಕೋರ್ಟುಕಚೇರಿಗಳಲ್ಲಿ ನಡಿಯುವ ವ್ಯವಹರಣೆಯು ರೊಕ್ಕದ ಶ್ರಾದ್ಧ; ನರ, ವಿವಾಹವೆಂಬುದು ಕನ್ಯಾಪಿತನ ಶ್ರಾದ್ಧ. ವರನ ವಿಗ್ರಹವೇ ಈ ಶ್ರಾದ್ಧಕ್ಕೆ ಅಧಿವತೆ. ಕನ್ಯೆಯು ತನ್ನ ಕುಲದ ಧನ, ಮಾನ, ಭಾಗ್ಯಗಳೆಂಬ ಮೂರು ಪಿಂಡಗಳನ್ನುಳಕೊಂಡ ಪಿತನ ಗರ್ಭಪಿಂಡ. ಈ ಶ್ರಾದ್ಧಕರ್ಮವನ್ನು ಅಗತ್ಯವಾಗಿಯೂ ಕನ್ಯಾಪಕ್ಷದವರು ನಿಯಮಿತವಾದ ಕಾಲದೊಳಗಾಗಿ ನಡೆಸಲೇ ಬೇಕೆಂಬುದೊಂದು ಸಮಾಜ ನಿಯಮ. ಇಷ್ಟರಲ್ಲಿ ಪುರೋಹಿತರ 'ಕನ್ಯಾದಾನಂ ಮಹಾದಾನಂ' ಎಂಬುವಷ್ಟೊ ಮಾತ್ರವಲ್ಲದೆ, 'ಕನ್ಯಾ' ಶಬ್ದಹಿಡಿದೇ ಪಂಡಿತ ಮಹಾಶಯರ ಗೌರವಕ್ಕೆ ಅನುಕೂಲವಾದ ದಾಂಧಲೆ! ಮೃತಪ್ರಾಯರಾದ ಕನ್ಯಾಪಕ್ಷದವರು ಜೀವಿತರಾಗಿರುವುದರಿಂದ ಮಾತ್ರ, ಈ ಶ್ರಾದ್ಧವನ್ನು ವಿವಾಹ, ಲಗ್ನ, ಮದುವೆ, ಎಂಬುವ ಹೆಸರುಗಳಿಂದ ಕರು. ಅಮಂಗಲಕಾರಿಯಾದ ಈ ಏರ್ಪಾಡೇ ಈಗ 'ಮಂಗಲ 'ವೆಂದು ಅರ್ಥಗೊಂ— ಕನ್ಯಾಕುಲದ 'ಮಂಗಲ' ಸಾಧನೆಯನ್ನು ನಿಶ್ಚಯವಾಗಿಯೂ ಸಾಧಿಸುವುದರಿಂದೆ ಬೀಳುವಂತಿಲ್ಲ. ಬಲ್ಲವನಾದ ಮದುವೇ ಮಾಡಿದವನು ಇದನ್ನು ವಿವರವಾಗಿ ಸ ಬಲ್ಲನು.

ಈ ಶ್ರಾದ್ಧದಲ್ಲಿ ಪ್ರಥಮ ಪೂಜನೀಯನು.—ಗಣಪತಿಯು ಅಲ್ಲ,—ಹಣಪತಿಯು. ಹರಿವಾಣತುಂಬಾ ಹದ್ದರೆ ಪ್ರಥಮ ವಂದನೆಯು ಸಾಂಗವಾಯಿತು. ಸಭಾಸಮಿತಿಗಳಲ್ಲಿ ಮೆರೆದು ವಾಗಾಡಂಬರದಿಂದ ವರದಕ್ಷಿಣೆಯನ್ನು ಪಡೆವುದಿಲ್ಲೆಂದು ಹೇಳುವ ಮಹಾ ಜನರು,— ರೂಪಾಣ್ಯಕ್ಕೆ ಮಾತ್ರ ಮುಟ್ಟಲೊಲ್ಲರು. ಸ್ವರ್ಣಮುದ್ರೆಯನ್ನು ಕಂಡರೆ ಹೆಣದ ಸ್ಲೂ ಬಾಯ್ಬಿಡುವನು! ನೂರೊ, ಇನ್ನೂರೊ ಪವನು ಕೊಟ್ಟರಾಯ್ತು; ಸಾವಿರದವ ಇಷ್ಟು ದೊಡ್ಡ ಸಂಖ್ಯೆಯ ರೂಪಾಯಿಗಳ

ಮಾತೇ ಈಗ ಇಲ್ಲೆಂಬುದು ನಮ್ಮ ಸುಧಾರಣೆಯ ಅಪ್ರತಿಮ ಸಾಧನೆಯ ಫಲ. ಮುಗಿಲು ಸಂಖ್ಯೆಯ ನೋಟುಗಳೂ ಯಥೇಷ್ಟವಾದುವು; ನೋಟಿನ ಅಂಕೆಯು ಸಾವಿರಕ್ಕೆ ಕಡಮೆಯಾಗದಿದ್ದರಾಯ್ತು. ಮಂಗಲ ಕಾರ್ಯಗಳಲ್ಲಿ ಮುಗಿಲೇ ಮೇಲು!

ಈ ಮುಗಿಲಿನ ದೆಸೆಯಿಂದ ಕನ್ಯೆಯ ಕುಲದ ಮೇಲೇ ಮುಗಿಲು ಕವಿಯುವುದು. ಸ್ತ್ರೀ ಜಾತಕದ ಗ್ರಹಕುಂಡಲಿಯಲ್ಲಿ, ವರದಕ್ಷಿಣೆಯ ಸಂಖ್ಯಾವಾಚಕವನ್ನು ಈಗಲೀಗ ಕೆಂಪು (ಮಂಗಲಕರವಾದುದು) ಶಾಯಿಯಿಂದ ಬರೆದು, ಅಲ್ಲಿ ಇಲ್ಲಿ ಎಲ್ಲೆಲ್ಲಿಯೂ, ಗಂಡು ಹುಡುಗನ ಸುಳಿವಿದ್ದಲ್ಲಿ—ಪ್ರಕಟಿಸಿ,— ಹಲವು ಜೋಸ್ಯರ ಪಾಂಡಿತ್ಯದಿಂದ ಅದು ಉಪಯುಕ್ತವಾದುದೆಂದು ನಿರ್ಧಾರಗೊಳ್ಳಿಸಿ,— ಆಮೇಲೆ ಹರಿವಾಣದ ಸಿದ್ಧತೆಗೆ ಹೊರಡ ಬೇಕು. ವ್ಯಾಪಾರವೇ ಗೌರವವಾಗುಳ್ಳ ಈ ದಿನಗಳಲ್ಲಿ ಈ ಲಗ್ನ ಕಾರ್ಯವಾದರೂ ವ್ಯಾಪಾರದ ನಿಯಮಗಳಿಂದ ಬಿಡುಗಡೆ ಹೊಂದಿದುದಿಲ್ಲ. ಸಂಚಿಕಾರವನ್ನು ಕೊಡಲೇ ಬೇಕು. ಇದಕ್ಕೆ ಮೊದಲು ವರನ ಯೋಗ್ಯತೆ, ಕುಲೀನತ್ವ, ವಿದ್ಯಾಭ್ಯಾಸ, ರೂಪಲಾವಣ್ಯಗಳ ಕುರಿತು ಮೊಳದುದ್ದದ ಉಪನ್ಯಾಸಗಳನ್ನು ಸತ್ಯವೆಂದೇ ಕಿವಿಯಾರೆ ಕೇಳಿ ವರವಿಗ್ರಹದ ಬೆಲೆ ಕಟ್ಟ ಬೇಕು. ಈ ಬೆಲೆಯ ಸೇಕಡಾ ೨೦, ೨೫ರಂತೆ ಸಂಚಿಕಾರವನ್ನು ಸಲ್ಲಿಸಿ, ಒಮ್ಮೆಗೆ ನಿಟ್ಟುಸಿರನ್ನು ಬಿಟ್ಟು ಕನ್ಯಾಪಿತನು ಇತರ ಸನ್ನಾಹಗಳಿಗೆ ಕೈ ಹಚ್ಚಬೇಕು.

ಮದುವೆಗೆ ಎರಡೇ ದಿನಗಳಿವೆ; ಲಗ್ನಪತ್ರಿಕೆಗಳು ವಿಘ್ನೇಶ್ವರನ ಮೊಹರು ಸಮೇತ ಟಪ್ಪಾಲಿನಲ್ಲಿ ಓಡಾಡುತ್ತಿವೆ. ನೆಂಟರಿಷ್ಟರು ಎರಡು ದಿನಕ್ಕೆ ಮುಂಚಿತವಾಗಿಯೇ ಬಂದು ವಧೂವರರಿಬ್ಬರನ್ನು ಆಶೀರ್ವದಿಸಿ, ಲಗ್ನಕಾರ್ಯವನ್ನು ಚಂದಗಾಣಿಸ ಬೇಕಾಗಿ ನಮ್ಮ ಪೈಕಿಯ ಕನ್ಯಾಪಿತನ ವಿನಂತಿಗಳು. ಚಪ್ಪರವೊ, ಮೇಳದವರೊ, ವಾಲಗದವರೊ, ಊಟ ಉಪಚಾರಗಳ ಒಡಿವೆಗಳೊ, ಎಲ್ಲವೂ ಸಿದ್ಧವಾಗಿದೆ. ಜಟ್ಕಗಳೂ ಬಂಡಿಗಳೂ ಮಾರ್ಗದ ಬದಿಯಲ್ಲಿ ಓಡಾಡುತ್ತಿರುವಾಗ ಕನ್ಯಾಪಿತನ ಎದೆಯು ನೆತ್ತರು ಕಾರುತ್ತಿದೆ. ಈ ಮಧ್ಯೆ,—ಟಪ್ಪಾಲಿನವನು ಕಾಗದ ಮುಟ್ಟಿಸುವನು. ವರನ ಪಕ್ಷದವರ ಕಾಗದ, ರಿಜಿಸ್ಟರಾಗಿ ಬಂದಿದೆ. ಕಾಗದಕ್ಕೆ ಸಹಿಹಾಕುವಾಗಲೇ ಕನ್ಯಾಪಿತನ ಕೈಮುರಿಯುತ್ತಿದೆ. ಕಾಗದವನ್ನು ಒಡೆದ ನಂತರ ಮುರಿದ ಕೈಗಳೆರಡೂ ಅವನ ತಲೆಯ ಮೇಲೆ ಕುಣಿಯುತ್ತಿವೆ. ಕಣ್ಣುಗಳಿಂದ ಹೊಗೆಯೇಳುತ್ತಿದೆ. ಇದೊಂದು ಭೀಕರ ದೃಶ್ಯ. 'ಅಧಿಕವಾದ ವರದಕ್ಷಿಣೆಯನ್ನು ಸಲ್ಲಿಸದೆ ಹೋದರೆ ಲಗ್ನವು ಆಗಲಾರದು. ವರನು ಒಪ್ಪುವುದಿಲ್ಲ, ತನಗೆ ಮದುವೇ ಬೇಡವೆಂದು ಚಂಡಿ ಹಿಡಿದು ಅಳುತ್ತಾನೆ. ನಿಮ್ಮ ಸಂಚಿಕಾರದ ಹಣ ಪರತು ಮಾಡಲಾಯಿತು' ಎಂದು ಇವೇ ನಾಲ್ಕು ಪಂಕ್ತಿಗಳು ರಿಜಿಸ್ಟರಾಗಿ ಬಂದಿವೆ. ಈಗ ಕನ್ಯಾಪಿತನು ಮಾಡುವುದೇನು? ಮಾಡದೇ ಇರುವುದೂ ಏನು? ವಿಶ್ವಾಸಘಾತಕದ ವ್ಯಾಜ್ಯಕ್ಕೆ ಹೋಗಿ ಪರತ್ತಾಗಿ ಬಂದ ಸಂಚಿಕಾರದ ದ್ರವ್ಯವನ್ನು ಖರ್ಚುಮಾಡಲೊ? ನೆಂಟರಿಷ್ಟರಿಗೆ ಕಪ್ಪುಶಾಯಿಯಲ್ಲಿ ಕಾಗದಗಳನ್ನು ಛಾಪಿಸಿ ಲಗ್ನವು ಮುಂದರಿಸಲ್ಪಟ್ಟದೆಯೆಂದು ಬೇಗನೇ ತಿಳಿಸಲೊ? ಸಿದ್ಧವಾದ ಸಾಮಾನುಗಳನ್ನೆಲ್ಲ ಏಲಂ ಹಾಕಿಸಲೊ? ಅಥವ ಯಾತ್ರೆಗೆ ತೆರಳಿ ಈ ಕನ್ಯಾಶ್ರಾದ್ಧದ ಬದಲಾಗಿ ಗಯೆಗೆ ಹೋಗಿ ವರಪಿತನ ಶ್ರಾದ್ಧಮಾಡಲೊ? ಸಂಸಾರದ ತಾಪತ್ರಯಗಳನ್ನು ಅರಿತ, ಇಪ್ಪತ್ತನೆಯ ಶತಮಾನದ ವಿದ್ವಾಂಸರಾದ ವರನ ಕಡೆಯವರು, ಈ ರೀತಿಯ ವಿಕಟ ವರ್ತನೆಯಲ್ಲಿ ವಿಲಾಸಗೊಳ್ಳುವುದಾದರೆ, ಮಹಾಮಾರಿಗಳು ಇನ್ನೂ ನಿಲ್ಲಲಿಲ್ಲವೆಂದು ನಾವು ಗೋಳಾಡಬೇಕಾಗಿದೆಯೆ? ಈ ಬಗೆಯಲ್ಲಿ ಸುಟ್ಟ ಉದರದ ಕನ್ಯಾಪಿತನ ಮೂಗು ಸೊಳ್ಳೆಗಳಿಂದ ಹೊರಡುವ ಪಶ್ಚಾತ್ತಾಪದ ವಿಶ್ವಾಸದ ದೆಶೆಯಿಂದ ಸಾವಿರಾರು ಮಾರಿಗಳೂ ಹೊರಡದಿರುವುವೆ? ಇದೇ ಕನ್ಯಾಪಿತನು ಕಾಲತಪ್ಪಿ ಮಗಳಿಗೆ ಲಗ್ನ ಮಾಡಿಸಿದರೆ ಅವನ ಇಡೀ ಕುಟುಂಬಕ್ಕೆ ಬಹಿಷ್ಕಾರಹಾಕುವ ಶೀಲವುಳ್ಳ ಸಮಾಜ ಶಾಸನವು,—ಈ ವರ ಪಕ್ಷದವರ ನಿರಂಕುಶ ಪ್ರವರ್ತನಕ್ಕೆ ಯಾವ ತಡೆಯನ್ನೂ ಕಟ್ಟುವುದಿಲ್ಲ. ಆದುದರಿಂದಲೇ ನಮ್ಮ ಸಮಾಜವು 'ಬೇವಾರಿಸ್' ಆಗುತ್ತ ಬರುತ್ತಿದೆ. ಓಂ ನಮೋ ವರಪಿತಾಯ! ಸ್ವರ್ಣಮುದ್ರಾಂಕಿತೋನ್ನತಪತಾಕಾಯ! ಕನ್ಯಾಕುಲ ಪೀಡಕಾಯ! ಅತ್ಯಾಶಾವಿಲಾಸಾಯ! ಮತ್ಯಂತರರ ಹಿತಾಯ! ಕನ್ಯಾಬಲಿ ಪ್ರಿಯಾಯ, ಅನ್ಯಾಯ ಪಾಲಕಾಯ ॥ ದಯಾರಹಿತಹೃದಯಾಯ, ಲಯಕಾರಕಮನಾಯ, ವರವಿಗ್ರಹ ಪಿತಾಯ, ನಮೋನಮಸ್ತೇ॥.

ಕನ್ಯಾಪಿತ.

ತೆಂಗಿನ ವ್ಯವಸಾಯ.

ಜಮೀನನ್ನು ಹದಗೊಳಿಸುವುದು.

ಎತ್ತರವಾದ ಪ್ರದೇಶಗಳ ಜಮೀನು:—ತೆಂಗಿನ ಮರಗಳನ್ನು ಬಾಗಾಯಿತು ಜಮೀನುಗಳಲ್ಲಿ ಇತರ ಫಲವೃಕ್ಷಗಳೊಡನೆ ಬೆಳೆಯಬಹುದಾದಾಗಿಯೂ ಅದೊಂದನ್ನೇ ಬೇರೆಯಾಗಿ ಬೆಳಸುವುದು ಉತ್ತಮ. ಹೀಗೆ ಮಾಡಿದಲ್ಲಿ ಆ ವ್ಯವಸಾಯದಿಂದ ಹೊಂದಬಹುದಾದ ಪೂರ್ಣ ಪ್ರಯೋಜನವನ್ನು ಪಡೆಯ ಬಹುದು. ಸಾಮಾನ್ಯವಾಗಿ ತೆಂಗಿನ ಮರಗಳಿಗೆ ಮೇಲಿನ ಬೇರುಗಳೆಲ್ಲಾ ಹರವಿಕೊಳ್ಳಲು ವಿಶಾಲವಾದ ಪ್ರದೇಶವು ಬೇಕಲ್ಲದೆ ತೆಂಗಿನ ಗಿಡಗಳಿಗೆ ಸ್ವಲ್ಪವೂ ನೆರಳಿರಕೂಡದು ಮತ್ತು ಅವಕ್ಕೆ ಇತರ ಗಿಡಗಳ ಗೋಷ್ಠಿಯು ಸರಿ ಹೋಗುವದಿಲ್ಲ. ಒಂದು ತೆಂಗಿನ ಗಿಡವು ಮತ್ತೊಂದು ತೆಂಗಿನ ಗಿಡಕ್ಕೆ ಅತಿ ಸಮೀಪದಲ್ಲಿದ್ದಾಗ್ಯೂ ಒಂದಕ್ಕೊಂದು ಸರಿಹೋಗುವುದಿಲ್ಲ. ಇವುಗಳಿಗೆ ವಿಶೇಷ ಗಾಳಿ ಮತ್ತು ಬಿಸಿಲು ಅವಶ್ಯಕವಾಗಿರುತ್ತವೆ. ಗಿಡದ ತಾಳಿಗೆ ನೆರಳಿದ್ದಾಗ್ಯೂ ತುದಿಗೆ ಮಾತ್ರ ಪೂರ್ತಿ ಬೆಳಕಿರಬೇಕು. ಅಂದರೆ ತೆಂಗಿನ ತೋಟಕ್ಕಾಗಿ ಚುನಾಯಿಸಲ್ಪಡುವ ಪ್ರದೇಶದಲ್ಲಿ ಇರುವ ಗಿಡ ಗೆಂಟೆಗಳನ್ನೆಲ್ಲಾ ಕತ್ತರಿಸಿ ಸುಟ್ಟು ಬೇರನ್ನೆಲ್ಲಾ ಅಗೆದು ಹಾಕಬೇಕು. ನಂತರದಲ್ಲಿ ಜಮೀನನ್ನೆಲ್ಲಾ ಆಳವಾಗಿ ಉತ್ತು ಕಲ್ಲು ಕಡ್ಡಿಗಳನ್ನೆಲ್ಲಾ ತೆಗೆದು ಪಾಕುಮಾಡಿ ಮಟ್ಟಹೊಡೆದು ಗುಳಿಗಳನ್ನು ತೋಡಿ ಒಂದು ಬೇಸಿಗೆಯಲ್ಲಿ ಪೂರ್ತಾ ಗುಂಡಿಯನ್ನು ಮುಚ್ಚದೆ ಬಿಸಿಲಿಗೆ ಬಿಟ್ಟಿರಬೇಕು. ಸುಮಾರು ೨೫ ಮೊದಲ್ಗೊಂಡು ಮೂವತ್ತು ಅಡಿಗಳ ದೂರಕ್ಕೆ ಒಂದೊಂದರಂತೆ ಗುಳಿಗಳನ್ನು ಮಾಡುವುದು ಉತ್ತಮ. ಪ್ರತಿ ಗುಳಿಯೂ ಉದ್ದ ಅಗಲ ಮತ್ತು ಆಳದಲ್ಲಿ ಎರಡು ಅಡಿಗೆ ಮೇಲ್ಪಟ್ಟೂ, ನಾಲ್ಕು ಅಡಿಗೆ ಒಳಪಟ್ಟೂ ಇರಬೇಕು. ಜಿಗಟು ಜಮೀನುಗಳಲ್ಲಿ ಎರಡು ಅಡಿ ಆಳ ಉದ್ದ ಮತ್ತು ಅಗಲದ ಗುಳಿಗಳಿಗೂ ಮತ್ತು ಮರಳು ಪ್ರದೇಶದಲ್ಲಿ ನಾಲ್ಕು ಅಡಿಯವುಗಳೂ ಇದ್ದರೆ ಅನುಕೂಲ.

ತಗ್ಗು ಪ್ರದೇಶಗಳ ಜಮೀನು:—ತಗ್ಗು ಪ್ರದೇಶಗಳಲ್ಲಿರುವ ಮುಖ್ಯವಾಗಿ ನೀರು ನುಗ್ಗತಕ್ಕ ಮತ್ತು ಜೋಗು ಜಮೀನುಗಳಾದ ತೋಟಗಳಲ್ಲಿ ನೀರು ಬಸಿದು ಹೋಗಲು ದಿಂಡುಗಳನ್ನು ಕಟ್ಟಿ ಅವುಗಳ ಮಧ್ಯೆ ಜಿಗಳು ಅಥವಾ ಕಾಲುವೆಗಳನ್ನು ತೋಡುವುದು ಇದೇ ಮೊದಲಾದ ಉಪಾಯಾಂತರಗಳಿಂದ ನೀರು ಬಸಿದು ಹೋಗುವಂತೆ ಮಾಡಬೇಕು:

ಬಿತ್ತನೆಯ ಬೀಜದ ಚುನಾವಣೆ:—ಬಿತ್ತನೆಗೆ ಮಧ್ಯ ವಯಸ್ಸಿನ ಆರೋಗ್ಯವಾಗಿರತಕ್ಕ ಮತ್ತು ಹೇರಳವಾಗಿ ಫಲಬಿಡುವದೆಂದು ಗೊತ್ತಾದ ಮರಗಳ ಪೂರ್ತಿಯಾಗಿ ಬಲತಿರುವ ಕಾಯಿಗಳನ್ನೇ ಉಪಯೋಗಿಸಬೇಕು. ಕಾಯಿಗಳು ದೊಡ್ಡವಾಗಿಯೂ ಮಾಟವಾಗಿಯೂ ಮತ್ತು ಮಂದವಾಗಿ ತಿರಳುಳ್ಳವುಗಳಾಗಿಯೂ ಇರಬೇಕು. ಕಾಯಿಗಳು ದಪ್ಪನಾಗಿರುವುದನ್ನು ನೋಡಿ ಜನರು ಮೋಸ ಹೋಗುವುದುಂಟು. ಮೊಟ್ಟೆಯು ದಪ್ಪನಾಗಿದ್ದಾಗ್ಯೂ ಒಳಗಿನ ತಿರುಳು ತೆಳುವಾಗಿರುತ್ತದೆ. ಆದರಿಂದ ಬಿತ್ತನೆಗೆ ಕಾಯಿಗಳನ್ನು ಆರಿಸುವಾಗ್ಯೆ ಮಧ್ಯೆ ಮಧ್ಯೆ ಒಂದೊಂದನ್ನು ಒಡೆದು ತಿರುಳು ಮಂದವಾಗಿದೆಯೇ ಇಲ್ಲವೇ ಎಂಬದನ್ನು ಗೊತ್ತುಮಾಡಿಕೊಳ್ಳಬೇಕು. ಅಲ್ಲದೆ ಬಿತ್ತನೆಗೆ ಉಪಯೋಗಿಸಲ್ಪಡುವ ಕಾಯಿಗಳನ್ನು ಗಿಡದ ಮೇಲಿನಿಂದ ಎತ್ತಿ ಹಾಕದೆ ನಿಧಾನವಾಗಿ ಕೆಲಕ್ಕೆ ಇಳಿಸಿಕೊಳ್ಳಬೇಕು, ಹೀಗೆ ಇಳುಕಿದ ನಂತರದಲ್ಲಿ ಕಾಯಿಗಳನ್ನು ಒಂದು ತಿಂಗಳ ಕಾಲ ಇಲಿ ಮತ್ತು ಗೆಜ್ಜಲಿನ ಕಾಟವಿಲ್ಲದಿರುವ ತಂಪಾದ ಸ್ಥಳದಲ್ಲ ಇಟ್ಟಿರ ಬೇಕು.

ಒಟ್ಲುಹುಯ್ಯುವ ಕ್ರಮ:—ತೆಂಗಿನ ಕಾಯಿಗಳನ್ನು ಮೊದಲು ಒಟ್ಲು ಹಾಕಿ ನಂತರದಲ್ಲಿ ಬೇರೆ ಕಡೆ ನೆಡಬೇಕಾದಿಲ್ಲ. ತೆಂಗಿನ ಕಾಯಿಗಳು ಸಾಮಾನ್ಯವಾಗಿ ಗೆಜ್ಜಲು, ಇಲಿ ಮೊದಲಾದುಗಳ ಕಾಟವಿಲ್ಲದ ತನುವಾದ ಜಾಗದಲ್ಲಿ ಇಟ್ಟಿದ್ದರೆ ಮೊಳೆಯುವುವು. ಆದಾಗ್ಯೂ ಒಟ್ಲು ಹುಯ್ದು ಬೆಳೆದ ಸೊಸಿಗಳು ಜಾಗ್ರತೆಯಾಗಿ ಫಲಬಿಡುವುವೆಂದು ತಿಳಿಯುವುದರಿಂದ ಈ ರೀತಿಯಲ್ಲಿ ಮೊದಲು ಒಟ್ಲುಹುಯ್ದು ನಂತರ ನೆಡುವುದೇ ಉತ್ತಮವೆಂದು ಹೇಳುವರು.

ಸೊಸಿಗಳನ್ನು ಎಬ್ಬಿಸುವ ಪ್ರದೇಶವು ನೀರಿಗೆ ಸಮೀಪವಾಗಿಯೂ ಫಲವತ್ತಾದ್ದಾಗಿಯೂ, ಗೋಡು ಪ್ರದೇಶವಾದದ್ದಾಗಿಯೂ ಸುಮಾರಾಗಿ ಗಿಡಗಳ ನೆರಳು ಬೀಳತಕ್ಕದಾಗಿಯೂ ಇರಬೇಕು. ಸ್ವಭಾವದಿಂದ ಮರಗಳ ನೆರಳು ಇಲ್ಲದ ಪಕ್ಷದಲ್ಲಿ ಸುಮಾರು ಆರೇಳು ಅಡಿ ಎತ್ತರವಾಗಿ ತೆಂಗಿನ ಗರಿಯನ್ನು ಹೊದ್ದಿಸಿ ಚಪ್ಪರವನ್ನು ಹಾಕಬೇಕು. ಮೇಲೆ ಹೊದ್ದಿಸಿದ ತೆಂಗಿನ ಗರಿಗಳನ್ನು ಸೊಸಿಗಳಲ್ಲಿ ಎರಡನೇ ಗರಿಯು ಹೊರಟ ನಂತರದಲ್ಲಿ ತೆಗೆದುಬಿಡಬೇಕು. ಜಮೀನನ್ನು ಸುಮಾರು ಒಂದುವರೆ ಅಡಿ ಆಳವಾಗಿ ಅಗತೆ ಮಾಡಿ ಹೆಂಟೆಗಳನ್ನೆಲ್ಲಾ ಚನ್ನಾಗಿ ಪುಡಿಮಾಡಿ ಹತ್ತು ಹದಿನೈದು ಮಂಕರಿ ಪಳುಗಿದ ದನವಿನ ಗೊಬ್ಬರ ಬೂದಿ ಮತ್ತು ಸ್ವಲ್ಪ ತಿನ್ನುವ ಉಪ್ಪಿನ ಹರಳನ್ನು ಹಾಕಿ ಚನ್ನಾಗಿ ಮಿಶ್ರಮಾಡಬೇಕು. ನಂತರದಲ್ಲಿ ನೆಲವನ್ನು ಮಟ್ಟ ಹೊಡೆದು ಸುಮಾರು ಎರಡು ಅಡಿ ಉದ್ದಗಲ ಮತ್ತು ಒಂದು ಅಡಿ ಆಳವಾಗಿರುವ ಪಾತಿಗಳನ್ನು ಮಾಡಿ ಪಾತಿಗಳ ಮಧ್ಯೆ ಅರ್ಧ ಅಥವಾ ಮುಕ್ಕಾಲು ಅಡಿ ಆಳವಾದ ಚರಂಡಿಗಳನ್ನು ಮಾಡಬೇಕು. ಹೆಚ್ಚು ಮಳೆ ಆಗುವ ಪ್ರದೇಶಗಳಲ್ಲಿ ಚರಂಡಿಗಳನ್ನು ಒಂದು ಅಥವಾ

ಒಂದೂವರೆ ಅಡಿ ಆಳವಾಗಿ ತೋಡಬೇಕು. ನಂತರದಲ್ಲಿ ಪಾತಿಗಳ ಮಧ್ಯೆ ಗುಳಿಗಳನ್ನು ಮಾಡಿ ಒಳಗೆ ಬಿತ್ತನೆಯ ಕಾಯಿಗಳನ್ನು ಸ್ವಲ್ಪ ವಾರೆಯಾಗಿ ಜುಟ್ಟನ್ನು ಮೇಲಕ್ಕೆ ಮಾಡಿ ಇಡಬೇಕು. ನಂತರದಲ್ಲಿ ಕೊಂಚ ಕೊಂಚವಾಗಿ ಮಣ್ಣನ್ನು ಸುಮಾರು ಮೂರು ಅಂಗುಲ ಪ್ರಮಾಣ ಸುತ್ತಲೂ ಹಾಕಿ ಕಣ್ಣಿನ ಭಾಗವು ಮಾತ್ರ ಮೇಲಕ್ಕೆ ಕಾಣುವಂತೆ ಮಾಡಬೇಕು. ಗುಳಿಗಳ ಸುತ್ತಲಿರುವ ಚರಂಡಿಗಳಿಗೆ ನೀರನ್ನು ಬಿಟ್ಟು ತೇವವು ಆರದಂತೆ ನೋಡಿಕೊಳ್ಳಬೇಕು. ಬೇಸಿಗೆಯಲ್ಲಿ ಪ್ರತಿನಿತ್ಯವೂ ನೀರನ್ನು ಬಿಡಬೇಕಲ್ಲದೆ ಪಾತಿಯ ಮೇಲೆ ಕತ್ತರಿಸಿದ ಹುಲ್ಲು ಒಣಗಿದ ಎಲೆ ಇವುಗಳನ್ನು ಸುಮಾರು ಅರ್ಧ ಅಡಿ ಮಟ್ಟಕ್ಕೆ ಮುಚ್ಚಬೇಕು. ನೆಟ್ಟ ಮೂರು ತಿಂಗಳು ಮೊದಲ್ಗೊಂಡು ಆರು ತಿಂಗಳಲ್ಲಿ ಮೊಳಿಕೆಯೇಳುವುದು. ಮತ್ತು ಸೊಸಿಗಳಿಗೆ ಸುಮಾರು ಒಂದು ವರುಷ ವಯಸ್ಸಾಗಿರುವಾಗ್ಯೆ ಅವುಗಳನ್ನು ಕಿತ್ತು ತೋಟಗಳಲ್ಲಿ ನೆಡಬಹುದು. ಸೊಸಿಗಳ ಗರಿಗಳನ್ನು ದನಕರುಗಳು ತಿಂದುಬಿಟ್ಟರೆ ಅವುಗಳಲ್ಲಿ ಪುನಃ ಗರಿ ಬಿಡುವುದು ಬಹಳ ನಿಧಾನವಾಗುವುದರಿಂದ ಅವುಗಳಿಗೆ ದನಕರುಗಳ ಬಾಧೆ ಇಲ್ಲದಂತೆ ಸುತ್ತಲೂ ಒತ್ತಾಗಿ ಬೇಲಿಯನ್ನು ಹಾಕಿರಬೇಕು.

ಸೊಸಿಗಳನ್ನು ಸಾಮಾನ್ಯವಾಗಿ ಮುಂಗಾರು ಮಳೆಬಿದ್ದಾಗ್ಯೆ ಕಿತ್ತು ತೋಟದಲ್ಲಿ ನೆಡುವರು. ತೋಟದ ಜಮೀನನ್ನು ಹದಗೊಳಿಸಿಕೊಂಡು ಪಾತಿಗಳನ್ನು ಮಾಡಿ ಪ್ರತಿ ಪಾತಿಯಲ್ಲಿ ಗುಳಿಗಳನ್ನು ಮಾಡಿ ಒಂದೊಂದಕ್ಕೆ ಒಂದು ಕುಕ್ಕೆ ಬೂದಿಗೊಬ್ಬರ ಮತ್ತು ಎರಡು ಹಿಡಿ ಉಪ್ಪಿನಂತೆಹಾಕಬೇಕು. ಸ್ವಲ್ಪ ಮೋಡವಾಗಿದ್ದ ಅಥವಾ ಸೊನೇಮಳೆ ಸುರಿಯುತ್ತಿರುವ ದಿನ ಸೊಸಿಗಳನ್ನು ಮೆಲ್ಲಗೆ ಕಿತ್ತು, ಕಿತ್ತು ಹೋದ ಬೇರುಗಳನ್ನೆಲ್ಲಾ ಕಾಯಿನ ಹೊರಗಿನ ಮೊಟ್ಟೆಯ ಸಮಕ್ಕೆ ಕತ್ತರಿಸಿ ತೋಟದಲ್ಲಿ ಮಾಡಿರುವ ಗುಳಿಗಳೊಳಗಿಟ್ಟು ಕಾಯಿಯು ಪೂರ್ತಿಯಾಗಿ ಮುಚ್ಚಿ ಗರಿಯುಮಾತ್ರ ಕಾಣುವಂತೆ ಮಣ್ಣನ್ನು ಹಾಕಬೇಕು. ಬೇಸಿಗೆಯಲ್ಲಿ ಮಾತ್ರ ಸೊಸಿಗಳ ಸುತ್ತಲೂ ಸುಮಾರು ನಾಲ್ಕು ಅಂಗುಲಗಳ ಪ್ರಮಾಣ ಕತ್ತರಿಸಿದ ಹುಲ್ಲು, ಒಣಗಿದ ಎಲೆಗಳು, ಸೊಪ್ಪು ಸೆದೆ ಮೊದಲಾದವುಗಳನ್ನು ಹರವಬೇಕು. ಅಲ್ಲದೆ ಹೀಗೆ ಮೇಲೆ ಮುಚ್ಚಿದ ಸೊಪ್ಪುಸೆದೆಯನ್ನು ಆಗಾಗ್ಯೆ ತೆಗೆದು ಹುಳುಹುಬಟೆಗಳು ಸೇರದಂತೆ ನೋಡಿಕೊಳ್ಳಬೇಕು. ಮಳೆ ಬಿದ್ದು ಸೊಪ್ಪುಸೆದೆಗಳು ಕೊಳತಾಗ್ಯೆ ಅವುಗಳ ಜತೆಗೆ ಸ್ವಲ್ಪ ಬೂದಿ ಮತ್ತು ಸುಣ್ಣವನ್ನು ಹಾಕಿ ಜಮೀನಿನಲ್ಲೇ ಉತ್ತುಬಿಡಬೇಕು, ಮಳೆಯಾದ ನಂತರದಲ್ಲಿ ಪಾತಿಗಳಲ್ಲಿ ಇಂಗಿಹೋಗದೆ ನಿಂತಿರುವ ನೀರನ್ನು ಮೇಲಕ್ಕೆ ಎತ್ತಿಹಾಕಬೇಕು. ಪಾತಿಯ ಸುತ್ತಲೂ ಒಂದು ಅಡಿ ಎತ್ತರವಾಗಿ ದಿಂಡನ್ನು ಕಟ್ಟುವುದು ಉತ್ತಮ.

ಸಶೇಷ.

* * *

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

* * *

ಒರಿಯೆಂಟಲ್ ಗವರ್ನಮೆಂಟ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ.

ಪತ್ರಾಧಿಪರೇ,

ಈ ಕಂಪೆನಿಯವರಿಗೆ ವಿಮೆದಾರರು ಈ ಜಿಲ್ಲೆಯಲ್ಲಿ ಬಹಳ ಜನರಿರುತ್ತಾರೆ. ಕಂಪೆನಿಯು ದಿನೇ ದಿನೇ ಬಹಳ ಅಭಿವೃದ್ಧಿಯನ್ನು ಹೊಂದುತ್ತಿರುವುದು. ಇಂಥಾ ಅಭಿವೃದ್ಧಿಯು ವಿಮೇದಾರರು ಹೆಚ್ಚೆಚ್ಚಾಗಿ ಕೂಡುವದರಿಂದ ವರ್ಷಂಪ್ರತಿ ಹೆಚ್ಚಾಗುತ್ತಲಿರುವುದು. ಅಂದರೆ ಇಂಥಾ ಅಭಿವೃದ್ಧಿ ಸ್ಥಿತಿಯು ವಿಮೇದಾರರಿಂದಲೇ ಮುಖ್ಯವಾಗಿ ಈ ಕಂಪೆನಿಗೆ ಪ್ರಾಪ್ತವಾಗಿರುವುದು. ಆದರೆ ಕಂಪೆನಿಯ ಇಂಥಾ ಅಭಿವೃದ್ಧಿ ಸ್ಥಿತಿಯ ಪ್ರಯೋಜನವು ವಿಮೆದಾರರಿಗೆ ಹೆಚ್ಚೆಚ್ಚಾಗಿ ಸಿಕ್ಕುವಂಥಾದ್ದು ಅಗತ್ಯವಾಗಿರುವುದು. ಪ್ರಕೃತ ಕಂಪೆನಿಯ ಪಾಲು ಮಾಲಿಕರಿಗೆ ಕಂಪೆನಿಯಿಂದ ದೊರಕುವ ಮುನಾಫೆಯ ದರವು ಸೇಕಡಾ ೩೦ರಂತೆ ಆಗಿರುವುದು. ಇಂಥಾ ಮುನಾಫೆಯು ಬಹಳ ವಿಶೇಷವಾದದ್ದಾಗಿರುತ್ತದೆ. ಇದರಲ್ಲಿ ಕೆಲವು ಅಂಶ ವಿಮೇದಾರರಿಗೆ ಸಹಾ ಸಿಕ್ಕುವಂತೆ ಪ್ರಯತ್ನ ಮಾಡುವದು ಅಗತ್ಯ. ಹೆಚ್ಚುಜನ ವಿಮೆದಾರರು ಈ ಕಂಪೆನಿಗೆ ಈ ಜಿಲ್ಲೆಯಲ್ಲಿರುವುದರಿಂದ ವಿಮೆದಾರರು ಎಲ್ಲಾ ಒಟ್ಟು ಕೂಡಿಕೊಂಡು ಕಂಪೆನಿಯವರಿಂದ ತಕ್ಕ ಪ್ರಯೋಜನ ಸಿಕ್ಕುವ ವರೆಗೆ ಪದೇ ಪದೇ ಕಂಪೆನಿಯವರನ್ನು ಈ ವಿಷಯ ವಿಜ್ಞಾಪಿಸಿಕೊಳ್ಳಬೇಕು. ಈ ವಿಜ್ಞಾಪನೆಯು ಯಾವರೀತಿ ಆಗಿರಬೇಕೆಂಬ ಸೂಚನೆಗಳನ್ನು ಈ ಕೆಳಗೆ ಕೊಟ್ಟಿರುತ್ತೇನೆ. ಇದೇ ಸೂಚನೆಗಳನ್ನು ಸೇಲಮಿನ ವಿಮೆದಾರರೊಬ್ಬರು ಇಂಗ್ಲೀಸು ವರ್ತಮಾನ ಪತ್ರಗಳಲ್ಲಿ ಬರೆದು ವಿಮೆದಾರರ ತಿಳುವಳಿಕೆ ಬಗ್ಯೆ ಪ್ರಕಟಗೊಳಿಸಿರುತ್ತಾರೆ:—

ಒರಿಯೆಂಟಲ್ ಕಂಪೆನಿಯ ಈ ವರುಷದ ರಿಪೋರ್ಟಿನ ೬ನೇ ಪಾನಿನಲ್ಲಿ ೪|| ಕೋಟಿ ರೂಪಾಯಿಗಳನ್ನು ಸರಕಾರಿ ಭದ್ರತ ಪತ್ರ ಇತ್ಯಾದಿಗಳ ಮೇಲೆ ಬಹಳ ಕಡಮೆ ದರದ ಬಡ್ಡಿಯ ಭದ್ರತೆಗಳಲ್ಲಿ ವಿನಿಯೋಗಿಸಲ್ಪಟ್ಟದೆಂದು ತಿಳಿದು ಬರುತ್ತದೆ. ಆದರೆ ವಿಮೆದಾರರು ಕೊಟ್ಟ ಹಣದ ಜವಾಬ್ದಾರಿ ಮೇಲೆ ಕೊಟ್ಟ ಸಾಲಗಳು ಬರೇ 27 ಲಕ್ಷಗಳಾಗಿರುವವು. ಇತರ ಜವಾಬ್ದಾರಿಗಳ ಮೇಲೆ ಕಡಮೆ ದರದ ಬಡ್ಡಿಯಲ್ಲಿ ಕೋಟಿ ಕಟ್ಟಳೆಯ ಹಣವನ್ನು ವಿನಿಯೋಗಿಸುತ್ತಿರುವಾಗ ವಿಮೇದಾರರಿಗೆ ಕಡಮೆ ದರದ ಬಡ್ಡಿಯ ಹಣದ ಈ ಪ್ರಯೋಜನವು ಸಿಕ್ಕದಿರಲು ಕಾರಣವೇನು?

ಕಂಪೆನಿಯವರು ನಿಶ್ಚಯಿಸಿರುವ ಅತ್ಯಧಿಕ ಪ್ರಯೋಜನವುಳ್ಳ ಯಾವ ರೀತಿಗಳಲ್ಲಾದರೂ ಈ ಕಂಪೆನಿಯಲ್ಲಿ ವಿಮೆದಾರರಾಗಿ ಸೇರಿದರೆ ಕೊಟ್ಟ ಹಣಕ್ಕೆ ಸೇಕಡಾ ೫ರ ಸಲೆ ಬಡ್ಡಿಯು ಸಹ ಸಿಕ್ಕುವದಿಲ್ಲ. ಹೀಗಿರುತ್ತಾ ರೂ. ೫೦೦ರ ಕೆಳಗಣ ಸಾಲಗಳನ್ನು ವಿಮೇದಾರರಿಗೆ ಸೇಕಡಾ ೯ರ ದರದ ಬಡ್ಡಿಯಲ್ಲಿ ಕೊಡುವುದು ನ್ಯಾಯವೇ?

ಆದ್ದರಿಂದ ಕಂಪೆನಿಯವರು ವಿಮೆ ದರಗಳನ್ನು, ಮುಂದಕ್ಕೆ ವಿಮೆದಾರರಾಗಿ ಸೇರುವವರಿಗೂ ಪ್ರಕೃತ ವಿಮೆದಾರರಾಗಿರುವವರಿಗೂ ತಕ್ಕ ಪ್ರಯೋಜನ ಸಿಕ್ಕುವ ರೀತಿಯಲ್ಲಿ ಕಡಮೆ ಮಾಡಬೇಕು. ವಿಮೆದಾರರಿಗೆ ಕೊಡೋಣಾಗುವ ಮುನಾಫೆಯ ದರವನ್ನು ಹೆಚ್ಚಿಸಬೇಕು. ವಿಮೆ ಪತ್ರಗಳ ಜವಾಬ್ದಾರಿ ಮೇಲೆ ಕೊಡೋಣಾಗುವ ಹಣದ ಸರಾಸರಿಯನ್ನು ಸಹ ಹೆಚ್ಚಿಸ ಬೇಕಲ್ಲದೆ ಬಡ್ಡಿ ದರವನ್ನು ಸಹ ಸರಕಾರದ ಭದ್ರತಾ ಪತ್ರಗಳ ಬಡ್ಡಿ ದರಕ್ಕೆ ತಂದು ನಿಲ್ಲಿಸುವದು ಅಗತ್ಯ.

ವಿಮೆದಾರರಿಂದ ಸಂಗ್ರಹಿಸಲ್ಪಡುವ ಹಣದಿಂದ ಮುಖ್ಯವಾಗಿ ಕಂಪೆನಿಯ ಎಲ್ಲಾ ಕಾರ್ಯಗಳು ನಡಿಯತಕ್ಕವುಗಳಾಗಿವೆ. ಆದ್ದರಿಂದ ವಿಮೆದಾರರಿಗೆ ಹೆಚ್ಚಿನ ಪ್ರಯೋಜನಗಳನ್ನು ಕೊಡಿಸುವುದು ಕಂಪೆನಿಯ ಕರ್ತವ್ಯವಾಗಿರಬೇಕು. ಅದಲ್ಲದೆ ಕಂಪೆನಿಯ ಸ್ಥಿತಿಯು ಸಹ ಬಹಳ ಭದ್ರವಾಗಿರುವುದರಿಂದ ಈ ಎಲ್ಲಾ ರಿಯಾಯತಿಗಳನ್ನು ಕೊಡಲಿಕ್ಕೆ ಬಹಳ ಅನುಕೂಲವಾಗಿದೆ.

ಕಂಪೆನಿಯ ವಿಮೆದಾರ.

* * *

ಅಯ್ಯಾ,

ಇಲ್ಲಿಯ ಖಾಸಗಿ ಭಾವಿಗಳ ನೀರೆಂತೂ ಆರಿಹೋದ ದೆಶೆಯಿಂದ ನಿವಾಸಿಕರು ನೀರಿಗಾಗಿ ಕಷ್ಟಪಡುವದಾದಾಗ್ಯೂ ಸರಕಾರಿ ಭಾವಿಗಳ ಗತಿ ಹೇಳುವದ್ಯಾಕೆ? ಮೂರು ಲಾಟಿಗಳುಳ್ಳ ಧಾರಾಳ ನೀರುಳ್ಳ ಬಸ್ತಿಬಳಿಯ ಸರಕಾರಿ ಭಾವಿಯ ನೀರು ಆರಿದರಿಂದ ಟೌನಿನ ಹೆಚ್ಚು ಜನರಿಗೆ ನೀರಿನ ತೊಂದರೆ ಉಂಟಾಗಿದೆ. ಪಂಚಮರ ಭಾವಿಯ ನೀರು ಆರಿಹೋಗಿ ಪಂಚಮರು ನೀರಿಗಾಗಿ ಭಂಗ ಪಡುತ್ತಿರುವರು. ಸರಕಾರದವರು ಭಾವಿಗಳನ್ನು ಅಗಿಯುವದಕ್ಕೆ ಅಂದಾಜು ಮಾಡುವ ಆಳಕ್ಕೆ ಹಣ ಸೆಂಕ್ಷನ್ ಮಾಡಿದ ಮೇರೆಗೆ ಕಂಟ್ರಾಕ್ಟಿಗೆ ಪಡಕೊಂಡವರು ಶರ್ತದ ಪ್ರಕಾರ ಅಂದಾಜಿನಷ್ಟೆ ಗುಂಡಿ ಮಾಡಿ ಅಲ್ಪಸ್ವಲ್ಪ ನೀರು ಸಿಕ್ಕುತ್ತಲೇ ಕೆಲಸ ಕೈದು ಮಾಡಲು ಯತ್ನಿಸುವರು. ಅಷ್ಟರಲ್ಲಿ ಮಳೆನೀರು ಬೀಳುತ್ತಲೇ ಪೂರಾ ಕೆಲಸ ಕೈದು ಮಾಡುವದರಿಂದ ಮರು ವರ್ಷ ಬೇಸಿಗೆಕಾಲ ಅಂಥಾ ಭಾವಿಗಳಲ್ಲಿ ನೀರು ಸಿಕ್ಕುವದೆ ದುರ್ಲಭ. ಈ ರೀತಿ ಈ ಕಸಬೆಯಲ್ಲಿರುವ ಹಲವು ಭಾವಿಗಳಲ್ಲಿ ನೀರು ಸಿಕ್ಕುವದೇ ಅಪರೂಪ. ಹೀಗೆ ಅಗಿಯಲ್ಪಡುವ ಭಾವಿಗಳನ್ನು ತಕ್ಕ ಗುಂಡಿ ಮಾಡುವ ಹಾಗೆ ತಾಲೂಕು ಬೋರ್ಡಿನವರು ನಿಗಾ ಕೊಡುವಂತೆ ಕೋರುತ್ತೇವೆ.

ಪಟ್ಟಣಿಗ.

* * *

ಮ. ರಾ. ರಾ. ಸ್ವದೇಶಾಭಿಮಾನಿ ಪತ್ರಕರ್ತರ ಸನ್ನಿಧಿಗೆ.

ಅಯ್ಯಾ,

ಇತ್ತಲಾಗೆ ಸುಮಾರು ಒಂದು ತಿಂಗಳಾರಭ್ಯ ಪುತ್ತೂರು ಪಟ್ಟಣದಲ್ಲಿ ನೀರಿನ ತತ್ವಾರವು ಬಹಳವಾಗಿರುತ್ತದೆ. ಈಗ ಕುಡಿಯಲಿಕ್ಕೆ ನೀರು ದೊರಕದು. ಇನ್ನೂ ಒಂದು ಪಕ್ಷದ ವರೆಗೆ ಮಳೆಯು ಬಾರದೇ ಇದ್ದರೆ ನಮ್ಮ ಹಾಳು ಏನಾಗುವದೋ ದೇವರೇ ಬಲ್ಲ. ಪುತ್ತೂರು ಕಸಬೆಯಲ್ಲಿ ನೀರು ಇಲ್ಲವಾದಾಗ್ಯೂ ಧನಿಕರು ಹಣವನ್ನು ವೆಚ್ಚಮಾಡಿ ದೂರದಿಂದ ನೀರನ್ನು ತಂದು ತಮ್ಮ ಉಪಶಮನ ಮಾಡುವರು. ಬಡವರಿಗಂತೂ ಬಹಳ ಪ್ರಯಾಸವೇ ಸರಿ. ಜನರಿಗೆ ನೀರಿನ ತೊಂದರೆಯು ಇಷ್ಟು ಇರುವಾಗ್ಯೆ ಬಾಯಿಬಾರದ ಬಡ ಜಾನುವಾರುಗಳು ಎಷ್ಟು ಬಳಲುತ್ತವೆಂಬದನ್ನು ಪ್ರತ್ಯೇಕವಾಗಿ ಹೇಳಬೇಕೆಂತಿಲ್ಲ. ನಮ್ಮ ಪುತ್ತೂರಲ್ಲಿ ದೊಡ್ಡ ದೊಡ್ಡ ವರ್ಗದಾರರೂ ತಾಲೂಕು ಬೋರ್ಡು ಮೆಂಬರರೂ, ಸಾಹುಕಾರರೂ ಬಹಳ ಇರುತ್ತಾರೆ. ಮಧ್ಯಾನ್ನ ಹೊತ್ತಿಗೆ ದೂರದಿಂದ ಬರುವ ಜಾನುವಾರುಗಳಿಗೆ ದಾಹವನ್ನು ಶಾಂತಮಾಡಿಕೊಳ್ಳುವ ಬಗ್ಯೆ ಮಾರ್ಗದ ಬದಿಯಲ್ಲಿ ನೀರನ್ನು ಒದಗಿಸಿಕೊಟ್ಟಾದರೂ ಪುಣ್ಯವನ್ನು ಸಂಪಾದಿಸಿಕೊಳ್ಳ ಬಾರದೆ?

ಪ್ರಯಾಣಸ್ಥ.

* * *

ವಿದೇಶ ವೃತ್ತಾಂತ.

ಅಮೇರಿಕದ ಯುನ್ಯಾಟೆಡ್ ಸ್ಟೇಟ್ ಸರಕಾರದವರಿಗೂ ಮೆಕ್ಸಿಕೋ ಸರಕಾರದವರಿಗೂ ಯುದ್ಧ ಸಂಭವಿಸುವ ಹಾಗಿದೆಂದು ಕಳದ ಸಂಚಿಕೆಯಲ್ಲಿ ತಿಳಿಸಿತ್ತಷ್ಟೆ ಯುನ್ಯಾಟೆಡ್ ಸ್ಟೇಟಿನ ಪ್ರೆಸಿಡೆಂಟ್ ವಿಲ್ಸನರು ಈ ವಿಷಯವನ್ನು ಕಾಂಗ್ರೆಸ್ ಸಭೆಯ ಮುಂದೆ ಇಟ್ಟಲ್ಲಿ ಬಹುಮತದಿಂದ ಯುದ್ಧಮಾಡಬೇಕೆಂಬ ನಿರ್ಣಯವಾಯಿತು. ಇದಕ್ಕಾಗಿ ೫,೦೦೦,೦೦ ಡೋಲರುಗಳನ್ನು ವೆಚ್ಚಮಾಡಬಹುದೆಂಬ ಅನುಮತಿಯೂ ಸಿಕ್ಕಿರುವುದು. ಹೀಗೆ ಯುನ್ಯಾಟೆಡ್ ಸ್ಟೇಟಿನವರು ತಮ್ಮ ಸೇನೆಯನ್ನು ವೇರಕ್ರುಸ್ ಎಂಬಲ್ಲಿಗೆ ಕಳುಹಿಸಿಕೊಟ್ಟರು. ಅಲ್ಲಿ ಯುನ್ಯಾಟೆಡ್ ಸ್ಟೇಟಿನ ಸೇನೆಯು ಮೆಕ್ಸಿಕೋದ ಕಸ್ಟಮ್ ಹೌಸನ್ನು ಹಿಡಕೊಂಡಿತು. ಯುನ್ಯಾಟೆಡ್ ಸ್ಟೇಟಿನ ಸೇನೆಯಲ್ಲಿ ೪ ಮಂದಿ ಮೃತಪಟ್ಟರು. ೨೦ ಮಂದಿ ಗಾಯವೊಡೆದರು. ಉಭಯತರೊಳಗೆ ಒಂದು ತಾಸುಗಳ ಕಾಲ ಮಾತ್ರ ಯುದ್ಧ ನಡೆಯಿತು. ಮೆಕ್ಸಿಕೋ ಸರಕಾರ ಸೇನೆಯಲ್ಲಿ ೧೫೦ ಮಂದಿ ಮಡಿದರು. ಅಮೇರಿಕಾನರು ತಮ್ಮ ಯುದ್ಧ ಹಡಗಗಳಿಂದ ಪಟ್ಟಣಕ್ಕೆ ಹಾರಿಸಿದ ಗುಂಡುಗಳಿಂದ ಪಟ್ಟಣದ ಅನೇಕ ಮಂದಿರಗಳು ನೆಲಸಮವಾದವು. ಅನಂತರ ಅಮೇರಿಕಾನರ ಸೇನೆಯ ಎಡ್ಮಿರಲ್ ಫ್ಲೆಚರರವರು ವೇರಕ್ರುಸ್ ಪಟ್ಟಣವನ್ನು ವಶಮಾಡಿಕೊಂಡು ತಮ್ಮ ಶಾಸನವನ್ನು ಸಾರಿರುವರು. ಪಟ್ಟಣವು ಪೂರ್ಣವಾಗಿ ಅಮೇರಿಕಾನರ ವಶವಾಯಿತು. ಮೆಕ್ಸಿಕಾನರು ವೇರಕ್ರುಸನ್ನು ಬಿಟ್ಟು ಹೋಗುತ್ತಿದ್ದಾರೆ. ಅಮೇರಿಕಾನರ ೨,೭೦೦ ಮಂದಿ ಸೈನಿಕರು ಪಟ್ಟಣಕ್ಕೆ ಇಳಿದು ಮನೆಮನೆ ಜಡ್ತಿಮಾಡಿ ಆಯುಧಪಾಣಿಗಳಾದ ಮೆಕ್ಸಿಕಾನರನ್ನು ಹಿಡಿದರು. ಅಮೇರಿಕಾನರ ಸೇನೆಯ ಎಡ್ಮಿರಲ್ ಬೇಜರ್‌ರವರು ವೇರಕ್ರುಸಿನಿಂದ ಟಾಂಪಿಯಾಕೋ ಎಂಬದನ್ನು ವಶಮಾಡಿಕೊಳ್ಳುವರೆ ಹೊರಟಿರುವರು.

ಮೆಕ್ಸಿಕೋ ಪ್ರೆಸಿಡೆಂಟರಾದ ಹುರೇಟರು ಸುಮ್ಮನಿದ್ದು ಮುಂದೆ ಏನಾಗುವುದೆಂಬದನ್ನು ಕಾಯುತ್ತಿರುವರು.

ಮೆಕ್ಸಿಕೋ ದೇಶದ ಪ್ರೆಸಿಡೆಂಟರಾದ ಹುರೇಟರ ವಿರೋಧ ಪಕ್ಷದವರೂ ಹುರೇಟರಿಗೆನೇ ಸೇರಿಕೊಂಡು ಒಂದೇ ಉದ್ದೇಶದಿಂದ ಅಮೇರಿಕಾನರಿಗೆ ವಿರೋಧವಾಗಿ ಕಾದಾಡುವ ಆಲೋಚನೆ ಮಾಡಿದ್ದಾರೆಂಬ ವಾರ್ತೆ ಬಂದದೆ.

ಜರ್ಮನ್ ಹಡಗದಲ್ಲಿ ಹುರೇಟರಿಗೆ ಬರುತ್ತಿದ್ದ ಆ ಯುದ್ಧ ಸಾಮಗ್ರಿಗಳು ಅಮೇರಿಕಾನರಾದ ಹಿಡಿಯಲ್ಪಟ್ಟು ಜರ್ಮನಿಗೆನೇ ಹಿಂದೆ ಕಳುಹಿಸಲ್ಪಟ್ಟಿರುವುದು.

ಮೆಕ್ಸಿಕಾನರ ಮಾಜಿ ಕಮೇಂಡರನಾಗಿದ್ದ ಜನರಲ್ ಮ್ಯಾಸ್ ಎಂಬವನು ಬಲವಾದ ಸೇನೆಯೊಡನೆ ವೇರಕ್ರುಸಿನಲ್ಲಿರುವ ಅಮೇರಿಕಾನ ಸೇನೆಯ ಮೇಲೆ ಯುದ್ಧಮಾಡಲು ಮನಸ್ಸು ಮಾಡಿರುವನು.

ಮೆಕ್ಸಿಕೋ ದಂಗೆಗಾರರ ಪಕ್ಷದ ಜನರಲ್ ಕರಾಂಜಸ್ ಎಂಬವರು ಮೆಕ್ಸಿಕೋ ದೇಶದ ಪ್ರೆಸಿಡೆಂಟನೆಂದು ಹೇಳಿಸಿಕೊಳ್ಳುವ ಹುರೇಟನ ಅಧಿಕಾರವನ್ನು ತಾವು ಮಾನ್ಯ ಮಾಡುವುದಿಲ್ಲವಾದ್ದರಿಂದ ಅವನ ದೆಸೆಯಿಂದ ಅಮೇರಿಕಾನರು ಮೆಕ್ಸಿಕೋ ದೇಶದ ಮೇಲೆ ಯುದ್ಧ ಮಾಡುವುದು ನ್ಯಾಯವಲ್ಲವೆಂತಲೂ ಯುದ್ಧವನ್ನು ನಿಲ್ಲಿಸಬೇಕೆಂತಲೂ ತಿಳಿಸಿರುವರು. ಇದಕ್ಕೆ ಪ್ರತ್ಯುತ್ತರವಾಗಿ ಪ್ರೆಸಿಡೆಂಟ ವಿಲ್ಸನರು ತಾವು ಮೆಕ್ಸಿಕಾನರ ಮೇಲೆ ಯುದ್ಧ ಮಾಡುವುದಿಲ್ಲ, ಈ ಯುದ್ಧವು ಪ್ರೆಸಿಡೆಂಟ ಹುರೇಟನ ಮೇಲೆ ಆಗಿದೆ ಎಂತ ಹೇಳಿರುವರು.

ದಂಗೆಗಾರರ ಪಕ್ಷದವರು ಅಮೆರಿಕಾನರಿಗೆ ವಿರೋಧವಾಗಿ ಯುದ್ಧಮಾಡಲು ಹುರೇಟನೊಡನೆ ಕೂಡುವದಿಲ್ಲವೆಂತ ದಂಗೆಗಾರರ ಕಡೆಯ ಜನರಲ್ ವಿಲ್ಲರವರು ತಿಳಿಸಿರುವರು.

ಮೆಕ್ಸಿಕೋ ಪಟ್ಟಣದಿಂದ ೫೦ ಇಂಗ್ಲಿಷರು ೭೫ ಜರ್ಮನರು ೧೫೦ ಅಮೇರಿಕಾನರು ವೇರಕ್ರುಸಿಗೆ ಬಂದು ತಲಪಿರುವರು. ಪಟ್ಟವು ವಿದೇಶಿಯರು ಭಯಪಡುವ ಹಾಗೆ ಇಲ್ಲವೆಂದು ಇವರ ಹೇಳಿಕೆಯಾಗಿದೆ.

೪೭೮೦ ಅಮೇರಿಕಾನರ ಸೈನೀಕರು ವೇರಕ್ರುಸಿಗೆ ತಾ. ೨೪ರಲ್ಲು ಹೊರಟಿರುವರು. ಒಟ್ಟಿಗೆ ವೇರಕ್ರುಸಿನಲ್ಲಿ ೫೫೦೦ ಮಂದಿ ಅಮೇರಿಕಾನರು ಇಳಿದರು.

ಮೆಕ್ಸಿಕೋ ಪಟ್ಟಣದಲ್ಲಿ ಅಮೇರಿಕಾನರಿಗೆ ವಿರೋಧವಾಗಿ ಜನರ ಗುಂಪು ಕೂಡಿ ಅವರ ಬಾವಟೆಗಳನ್ನು ಕಾಲಿನ ಅಡಿಗೆ ಹಾಕಿ ಕುಣಿಯುತ್ತಿದ್ದಾರೆಂದೂ ತುಂಡು ತುಂಡು ಮಾಡಿ ಹರಿಯುತ್ತಿದ್ದಾರೆಂದೂ ಅಲ್ಲಿಂದ ವೇರಕ್ರುಸಿಗೆ ಬಂದ ವಿದೇಶಿಯರು ಹೇಳುವರು.

ಮೆಕ್ಸಿಕೋ ಪಟ್ಟಣದಲ್ಲಿರವ ಅಮೇರಿಕಾನರ ಕಟ್ಟಡಗಳಿಗೆ ಮೆಕ್ಸಿಕಾನರು ಕಲ್ಲು ಗುಂಡುಗಳನ್ನು ಬಿಸಾಡುತ್ತಿರುವುದರಿಂದ ಆ ಕಟ್ಟಡಗಳು ಮುಚ್ಚಲ್ಪಟ್ಟಿರುವವು. ೪ ಅಮೇರಿಕಾನರು ಮೆಕ್ಸಿಕೋ ಪಟ್ಟಣದಲ್ಲಿ ಕೊಲ್ಲಲ್ಪಟ್ಟರು. ವೇರಕ್ರುಸಿನಲ್ಲಿ ೧೨೬ ಮೆಕ್ಸಿಕಾನರು ಮಡಿದರು. ೨೮೫ ಮಂದಿ ಗಾಯವೊಡೆದರು.

* * *

ಐರ್ಲಾಂಡಿಗೆ ಹೋಮ್‌ರೂಲ್ ಕೊಡುವ ವಿರೋಧ ಪಕ್ಷದ ವಲಂಟಿಯರರು ಅಲಸ್ಟರಿನಲ್ಲಿ ಬಹು ಗುಪ್ತವಾಗಿ ಸನ್ನಾಹ ಮಾಡುತ್ತಲಿರುವರು. ಒಟ್ಟಿಗೆ ಈಗ ಅಲಸ್ಟರಿನಲ್ಲಿ ೭೭೦೦೦ ವಲಂಟಿಯರಿರುವರು. ತಾ. ೨೪ನೇ ರಾತ್ರಿ ಅಲಸ್ಟರಿನಲ್ಲಿ ವಲಂಟಿಯರರಿಗೋಸ್ಕರವಾಗಿ ೭೦,೦೦೦ ರೈಫಲ್ ಕೋವಿ ಇಳಿಸಲ್ಪಟ್ಟಿತು. ಇವುಗಳು ೨೦೦ ಮೋಟೋರ್‌ಕಾರಿನ ಮೇಲೆ ಒಳ ಪ್ರಾಂತ್ಯಕ್ಕೆ ಸಾಗಿಸಲ್ಪಟ್ಟಿತು. ಪೋಲಿಸಿನವರು ಅವುಗಳನ್ನು ಹಿಡಿಯಲು ಅಸಮರ್ಥರಾದರು.

* * *

ಉತ್ತರ ಹಿಂದೂಸ್ಥಾನ.

ಪಂಜಾಬು ಹಿಂದೂ ಸಭೆಯ ೬ನೇ ವಾರ್ಷಿಕೋತ್ಸವವು ಇದೇ ಕಳದ ತಾ. ೧೮-೧೯ರಲ್ಲು ಲಾಹೋರಿನಲ್ಲಿ ಕೂಡಿತು. ಈ ಸಂದರ್ಭದಲ್ಲಿ ಸ್ಥಳಿಕ ಮತ್ತು ನೆರೆ ಸ್ಥಳಗಳ ಹಿಂದೂ ಸಭೆಗಳಿಗೆ ಲಗಾವಾಗತಕ್ಕ ಕ್ರಮಗಳನ್ನು ಠರಾಯಿಸುವರೆ ಒಂದು ಸಭೆಯೂ ಹಿಂದೂ ಆಳಿಕೆಯ ಹಿಂದೂಸ್ಥಾನದ ಸಂಪೂರ್ಣ ಇತಿಹಾಸವನ್ನು ತಯಾರಿಸುವರೆ ಮತ್ತೊಂದು ಸಭೆಯೂ ಕೂಡಿರುವುದು.

* * *

ಶಾಲೆಗಳಲ್ಲಿ ಶಿಷ್ಟಾಚಾರ ವಿದ್ಯೆಯನ್ನು ಬೋಧಿಸುವ ಸಂಬಂಧ ಲಂಡನ್ ಶಿಷ್ಟಾಚಾರ ವಿದ್ಯಾಭ್ಯಾಸ ಸಭೆಯ ಮೆ| ಎಫ್. ಜೆ. ಗೌಲ್ಡರೆಂಬವರು ಕಳದ ವರ್ಷ ಲಂಡನಿನಿಂದ ಮುಂಬಾಯಿಗೆ ಬಂದು ಈ ಸಂಬಂಧ ಮುಂಬಾಯಿ ಸರಕಾರದವರ ಕೂಡೆ ಮಾತನ್ನಾಡಿ ಒಂದು ಕಮಿಟಿಯನ್ನು ಏರ್ಪಡಿಸುವರೆ ಬೆಸಗೊಂಡಿದ್ದರು. ಮುಂಬಾಯಿ ಸರಕಾರದವರು ಮೆ| ಗೌಲ್ಡರವರ ಸಲಹೆಯನ್ನು ಮಾನ್ಯ ಮಾಡಿ ಈಗ ತಾನೇ ಒಂದು ಕಮಿಟಿಯನ್ನು ಏರ್ಪಡಿಸಿರುವರು. ಈ ಕಮಿಟಿಗೆ ವಿದ್ಯಾ ಸಂಬಂಧವಾದ ಮೆಂಬರರು ಚೇಯರ್‌ಮೇನರಾಗಿಯೂ, ನಾಮದಾರ್ ಪಟ್ವಾನಿ, ಮುಂಬಾಯಿ ಬಿಷೋಪರು, ವಿದ್ಯಾಖಾತೆಯ ಡ್ಯಾರೆಕ್ಟರರು, ಡ್ಯೂಪಿಟಿ ಡ್ಯಾರೆಕ್ಟರರು, ಸರ್ ಆರ್. ಜಿ. ಭಂಡಾರ್ ಕಾರ್ ಮೊದಲಾದ ಹುದ್ದೆದಾರರು ಮತ್ತು ಹುದ್ದೆದಾರರಲ್ಲದ ಗೃಹಸ್ಥರು ಮೆಂಬರರಾಗಿರುವರು. ಈ ಕಮಿಟಿಯು ವರ್ಷಕ್ಕೊಂದಾವರ್ತಿ ಮಳೆಗಾಲದಲ್ಲಿ ಪೂನೆಯಲ್ಲಿ ಕೂಡಿ ಬರುವುದು.

* * *

ಹಿಂದೂಸ್ಥಾನದಲ್ಲಿ ಹಣ ಸಾಲಕೊಡುವವರು ಇಂತಿಷ್ಟೇ ಬಡ್ಡಿಗೆ ಸಾಲಕೊಡಬಹುದೆಂಬ ಕಾನೂನು ಇಲ್ಲದಿರುವುದರಿಂದ ಅನೇಕ ಅನರ್ಥಗಳು ಸಂಭವಿಸುವವು. ಈ ಸಂಬಂಧ ಒಂದು ಕಾನೂನನ್ನು ಜಾರಿಗೆ ತರಬೇಕೆಂಬ ವಿಷಯವು ಯುನೈಟೆಡ್ ಸಂಸ್ಥಾನದ ಪ್ರಾಂತಿಕ ಸಭೆಯವರಿಂದ ಆಗಾಗ್ಗೆ ಸರಕಾರದವರ ಚಿತ್ತಕ್ಕೆ ತರಲ್ಪಟ್ಟಿತ್ತು. ಈಗ ಇಂಡಿಯಾ ಸರಕಾರದವರು ಹಣ ಸಾಲ ಕೊಡುವವರಿಗಾಗಿರುವ ಇಂಗ್ಲಿಷ್ ಆಕ್ಟಿಗನುಸಾರವಾದ ಒಂದು ಕಾನೂನನ್ನು ಜಾರಿಗೆ ತರುವ ಆಲೋಚನೆಯಲ್ಲಿರುವರು.

* * *

ಆಲಿಪುರಕ್ಕೆ ಸೇರಿದ ಪಾಚ್ಚುಕೋಲ ಎಂಬಲ್ಲಿ ಕೆ. ಮೋಹನ್ ಮೊಂಡಾಲ್ ಎಂಬ ಶ್ರೀಮಂತರ ಮನೆಗೆ ೨೫ ಡಕಾಯಿತರು ಸ್ತ್ರೀಯರು ಇದ್ದ ಕೋಣೆಗೆ ನುಗ್ಗುವುದನ್ನು ನೋಡಿದಾಕ್ಷಣ ಮನೆ ಯಜಮಾನನು ತನ್ನ ಹಣವನ್ನೆಲ್ಲಾ ಹಿಡಕೊಂಡು ಹಿಂದಿನ ಬಾಗಲಿನಿಂದ ಹೊರಗೆ ಓಡಿ ನೆರೆಹೊರೆಯವರಿಗೆ ತಿಳಿಸಿದರು. ಗ್ರಾಮಸ್ಥರು ಕೂಡ್ಲೆ ಸಹಾಯಕ್ಕೆ ಬಂದು ಡಕಾಯಿತರ ಮೇಲೆ ಬಿದ್ದರು. ಉಭಯತರೊಳಗೆ ಕದನವಾಗಿ ಉಭಯತರಲ್ಲಿಯೂ ಗಾಯವೊಡೆದರು. ದಕಾಯಿತರು ಮನೆ ಯಜಮಾನನ ಮಾವನಿಗೆ ಹೊಡೆದು ತಮ್ಮಲ್ಲಿ ಗಾಯವೊಡೆದ ಒಬ್ಬನನ್ನೂ ೫೫ ರೂಪಾಯಿ ಇದ್ದ ಒಂದು ಪೆಟ್ಟಿಗೆಯನ್ನೂ ಹಿಡಕೊಂಡು ಪಲಾಯಣ ಮಾಡಿದರು.

* * *

ಚಿತಗೊಂಗ್ ಮುನ್ಸಿಫ್ ಕೋರ್ಟಿನಲ್ಲಿ ವ್ಯವಹರಿಸುತ್ತಿದ್ದ ಜಗತ್ ಚಂದ್ರ ಘೋಸ್ ಎಂಬ ವಕೀಲರನ್ನು ತಾ. ೨೨ನೇ ರಾತ್ರಿ ೮ ಗಂಟೆಗೆ ಅವರ ಮನೆಯಲ್ಲಿಯೇ ಯಾರೋ ಗುಂಡು ಹೊಡೆದು ಕೊಂದರು. ಹಿಂದೆ ಒಂದು ಸಲ ಇವರನ್ನು ಕೊಲ್ಲುವುದಕ್ಕಾಗಿ ಆಹಾರಕ್ಕೆ ವಿಷಹಾಕಲ್ಪಟ್ಟದ್ದಿತು. ಖಾಸಗಿ ದ್ವೇಶದಿಂದ ಈ ಕೊಲೆಯು ನಡದಿರಬೇಕು.

* * *

ಮುಂಬಾಯಿ ಮತ್ತು ಸಿಂಧಿನಲ್ಲಿ ಊರ ಮದ್ಯಗಳನ್ನು ಮಾರುತ್ತಿರುವ ಸಮಯವನ್ನು ಕಡಿಮೆ ಮಾಡಿರುವರು. ಅಂಗಡಿಗಳು ಸೂರ್ಯ ಮೂಡಿದಾಕ್ಷಣ ತೆರೆಯಲ್ಪಡಬಹುದೆಂಬ ಹುಕುಂ ರದ್ದು ಮಾಡಲ್ಪಟ್ಟು ಬೆಳಿಗ್ಯೆ ೯|| ಗಂಟೆಯಿಂದ ರಾತ್ರಿ ೮|| ಗಂಟೆಯುವರೆಗೆ ಮಾತ್ರ ತೆರೆಯುಬಹುದೆಂಬ ಹುಕುಂ ಮಾಡಲ್ಪಟ್ಟಿರುವುದು.

* * *

ಪೂನೆಯ ಸಿಟಿ ಮೇಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಒಬ್ಬ ಪಠಾನ ಕೈದಿಯು ಮೊಕದ್ದಮೆಯು ವಿಚಾರಣೆಯಾಗುತ್ತಿರುವಾಗ ಪಕ್ಕನೇ ತಪ್ಪಿಸಿಕೊಂಡು ಓಡಿ ಹೋಗಿರುವನು. ಇವನ ಪತ್ತೆಯು ಆಗೆ ಇಲ್ಲ. ಕೋರ್ಟು ತುಂಬಾ ಜನರೂ ಇವನನು ಕಾಯು

ದೂವಕೆ ಅಡಿ [illegible] ನವರೂ ಇದ್ದರೂ ಇವನು ತಪ್ಪಿಸಿಕೊಂಡು ಹು [illegible] ಳಗೆ ಬಿತ್ತ [illegible] ಬಾ ಆಶ್ಚರ್ಯಕ್ಕೆ ಕಾರಣವಾಗಿದೆ.

ಲೇಕು.

ಪರಸ್ಪ[illegible]ಾಯಕ ಸಂಘಗಳ ಮೆಂಬರರ, ಹಿಂದಿನ ಮೆಂಬರರ ಯಾ ಮೆಂಬರರ ಮತ್ತು ಸೊಸ್ಯಾಟಿಯ ಒಳ ವ್ಯಾಜಗಳನ್ನು ತೀರಿಸಿಕೊಳ್ಳುವ ಸಂಬಂಧ ಮುಂಬಾಯಿ ಸರಕಾರದವರು ಒಂದು ಪ್ರಕಟಣೆಯನ್ನು ಪ್ರಕಟಿಸಿರುವರು. ಇಂತಹ ವ್ಯಾಜಗಳುಂಟೆಂದು ರಿಜಿಸ್ತ್ರಾರರಿಗೆ ತಿಳಿದು ಬಂದರೆ ತಾನಾಗಿ ವಿಚಾರಿಸಿ ಈ ಕಲಹವನ್ನು ತೀರಿಸ ಬಹುದು. ಇಲ್ಲವೆ ಒಬ್ಬ ಪಂಚಾಯತಿಯನ್ನು ನೇಮಿಸಿ ಯಾ ಮೂವರು ಪಂಚಾಯತರಿಗೆ ಈ ಸಂಗತಿಯನ್ನು ಹೇಳಿಕೊಂಡು ಇತ್ಯರ್ಥ ಮಾಡಬಹುದು. ಈ ಮೂವರು ಪಂಚಾಯಿತರ ಪೈಕಿ ಒಬ್ಬನು ರಿಜಿಸ್ತ್ರಾರರಿಂದಲೂ ಮತ್ತಿಬ್ಬರಲ್ಲಿ ಒಬ್ಬೊಬ್ಬನು ವಾದಿ ಪ್ರತಿವಾದಿಯರಿಂದಲೂ ಆರಿಸಲ್ಪಡಬೇಕು. ರಿಜಿಸ್ತ್ರಾರರಿಗೂ ಈ ಪಂಚಾಯತರಿಗೂ ಸಿವಿಲ್ ಕೊರ್ಟಿನಂತಹ ಅಧಿಕಾರವು ಕೊಡಲ್ಪಟ್ಟು ಅವರು ಮಾಡಿದ ತೀರ್ಮಾನವೇ ಕಾಯಂ ಆಗಿ ನಿಲ್ಲುವುದು. ಈ ಕ್ರಮವು ಜಾರಿಗೆ ಬಂದರೆ ಚಿಕ್ಕ ಸಾಲಗಳಿಗಾಗಿ ಸಿವಿಲ್ ಕೊರ್ಟಿಗೆ ಹೋಗಿ ಸಮಯ ಮತ್ತು ಹಣ ವೆಚ್ಚಮಾಡುವ ಉಪದ್ರವು ನಿಲ್ಲುವುದು. ರಿಜಿಸ್ತ್ರಾರರೂ, ಪಂಚಾಯಿತರೂ ನ್ಯಾಯಾನ್ಯಾಯಗಳನ್ನು ಪರಿಶೀಲಿಸಿ ಮನಸಾಕ್ಷಿಗೆ ಸರಿಯಾದ ತಂತಮ್ಮ ನಿರ್ಣಯವನ್ನು ಕೊಡಬೇಕಾಗುವುದು.

ತಾ. ೨೪ನೇ ಬೆಳಿಗ್ಯೆ ಕಲ್ಕತ್ತೆಯ ಶ್ರೀಮಂತ ಜಮಿನ್ದಾರ ಮತ್ತು ಸಾಹುಕಾರರಾಗಿದ್ದ ಬಾಬು ಜೋಗೇಂದ್ರನಾಥ ಲಾಲ್ ಎಂಬವರು ಮೃತಪಟ್ಟರು. ಇವರು ವಿಧಿವಶರಾಗಿ ಒಂದೆರಡು ನಿಮಿಷದನಂತರ ೨೬ ವರ್ಷ ವಯಸ್ಸಿನ ಅವರ ಹೆಂಡತಿ ದೇವಿ ಜಿನದಾಸಿ ಎಂಬವರು ಶೀಮೆ ಎಣ್ಣೆ ಸುರಿದುಕೊಂಡು ಬೆಂಕಿಕೊಟ್ಟು ಆತ್ಮ ಹತ್ಯ ಮಾಡಿಕೊಂಡರು. ಇವರ ಬಂಧುಬಳಗದವರು ಮೃತನ ವಿಚಾರದಲ್ಲೇ ಇದ್ದುದರಿಂದ ಬೆಂಕಿಯು ತೋರುವ ವರೆಗೆ ವಿಧವೆಯ ಆಲೋಚನೆಯೇ ಮಾಡಲಿಲ್ಲ. ಅನಂತರ ಫಕ್ಕನೇ ಹೊಗೆ ಏಳುವುದನ್ನು ಕಂಡು ಅವಳ ಸಹಾಯಕ್ಕೆ ಹೋಗಿ ಮೂರ್ಛಾವಸ್ಥೆಯಲ್ಲಿದ್ದ ಅವಳನ್ನು ಆಸ್ಪತ್ರಿಗೆ ವೈದರು. ಆದರೆ ಅವಳು ಮೃತಪಟ್ಟಳು.

ಇದೇ ಕಳದ ತಿಂಗಳ ಎಪ್ರೀಲ್ ತಾ. ೧೮ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೩,೪೫೧ ಮಂದಿಗೆ ಪ್ಲೇಗು ಬೇನೆಯು ಸೊಂಕಿ ೧೧,೧೦೪ ಮಂದಿ ಮೃತ ಪಟ್ಟರು. ಹಿಂದಿನ ವಾರಕ್ಕಿಂತಲೂ ಈ ವಾರದಲ್ಲಿ ೧೩೪೭ ಮರಣಗಳು ಹೆಚ್ಚಿದುವು. ಸಂಯುಕ್ತ ಸಂಸ್ಥಾನದಲ್ಲಿ ೪೬೭೨; ಪಂಜಾಬು ೪೪೬೧; ಬಿಹಾರ್ ಮತ್ತು ಒರಿಸ್ಸ ೨೭೧೬; ಮುಂಬಾಯಿ ೮೪೬; ಬರ್ಮ ೨೨೧; ಬಂಗಾಳ ೩೭; ಮದ್ರಾಸ್ ೨೬; ರಜಪುತಾನ ೬೩; ಮಧ್ಯ ಹಿಂದೂಸ್ಥಾನ ೨೧ ಮರಣಗಳಾದವು.

ಟಪ್ಪಾಲು ಮತ್ತು ಟೆಲಗ್ರಾಫ್ ಇಲಾಖೆಯನ್ನು ಒಂದಾಗಿ ಕೂಡಿಸುವ ಏರ್ಪಾಡು ಇದೇ ಕಳದ ಎಪ್ರೀಲ್ ತಾ. ೧ರಿಂದ ಜಾರಿಗೆ ಬಂದಿರುವುದು. ಈ ಜಾರಿಯ ಪ್ರಕಾರ ಟೆಲಗ್ರಾಫ್ ಇಲಾಖೆಯ ಡ್ಯಾರೆಕ್ಟರ್ ಜನರಲರ ಸ್ಥಳವು ಖಾಲಿಮಾಡಲ್ಪಟ್ಟು ಪೋಸ್ಟು ಮತ್ತು ಟೆಲಗ್ರಾಫ್ ಇಲಾಖೆಗೆ ಒಬ್ಬರೇ ಡ್ಯಾರೆಕ್ಟರ್ ಜನರಲರವರು ನೇಮಿಸಲ್ಪಟ್ಟಿರುವರು. ಈ ಡ್ಯಾರೆಕ್ಟರ್ ಜನರಲರಿಗೆ ತಿಂಗಳು ೧ಕ್ಕೆ ೩೫೦೦ ರೂಪಾಯಿ ಸಂಬಳವು ಕೊಡಲ್ಪಟ್ಟು ವರ್ಷಕ್ಕೆ ೧೦೦ರಂತೆ ೪೦೦೦ ರೂಪಾಯಿ ವರೆಗೆ ಏರುವುದು.

ಶೋಲಾಪುರ ಬೇಂಕ್, ಲಿಮಿಟೆಡ್, ಎಂಬ ಬೇಂಕಿನ ಲೇವಾದೇವಿಯು ನಿಲ್ಲಿಸಲ್ಪಟ್ಟಿರುವುದು. ಈ ಬೇಂಕಿನ ಹೆಡ್ ಆಫೀಸು ಶೋಲಾಪುರದಲ್ಲಿಯೂ ಬ್ರೇಂಚಾಫೀಸು ಕೋಲ್ಹಾಪುರದಲ್ಲಿಯೂ ಇದೆ. ಕಳದ ಸಪ್ತಂಬರ ತಿಂಗಳಿಂದ ಯಥೇಷ್ಟ ಲೇವಣಾತಿಯು ಹಿಂದೆಗೆಯಲ್ಪಡುತ್ತಿದ್ದುದೇ ಈ ಬೇಂಕಿನ ಅಳಿಗಾಲಕ್ಕೆ ಕಾರಣವಾಗಿರುವುದು.

ಕರಾಚಿಯಲ್ಲಿ ಪ್ಲೇಗಬೇನೆಯು ಬಹಳ ಉಲ್ಬಣವಾಗಿರುವುದು. ಅಲ್ಲಿಯ ಪಶುಪಾಲನೋದ್ಯಾನವದಲ್ಲಿ ಕೆಲವು ಪ್ರಾಣಿಗಳು ಪ್ಲೇಗಬೇನೆಯಿಂದ ಸತ್ತು ಹೋದ್ದದರಿಂದ ಉದ್ಯಾನವವು ಮುಚ್ಚಲ್ಪಟ್ಟಿರುವುದು. ಅಲ್ಲಿಯ ಮುನ್ಸಿಪಲ್ ಆಸ್ಪತ್ರಿಯಲ್ಲಿ ಪ್ಲೇಗು ಸೋಂಕಿದ ಒಬ್ಬ ಭಾರತೀಯನನ್ನು ಆರೈಕೆ ಮಾಡುತ್ತಿದ್ದ ಹಿಲ್ಡ ಬ್ಲೇಕ್ ಎಂಬ ಯುರೋಪಿಯನ್ ದಾದಿಯೂ ಪ್ಲೇಗು ಸೋಂಕಿ ಮೃತಪಟ್ಟಳು.

ಕಲ್ಕತ್ತೆಯಲ್ಲಿ ಒಬ್ಬ ಭಾರತೀಯ ಹೆಂಗಸು ಮನೆವಾರ್ತೆ ಸಂಬಂಧ ಗಂಡನೊಡನೆ ಮಾತಿಗೆ ಮಾತುನಡಿಸಿ ಗಂಡನು ಮನೆಯಲ್ಲಿಲ್ಲದ ಕಾಲ ವಸ್ತ್ರಕ್ಕೆ ಬೆಂಕಿಹಚ್ಚಿಸಿಕೊಂಡು ಸ್ವಗಾತ ಮಾಡಿಕೊಂಡಿರುವಳು. ಅಂದೇ ಸೆನ್ ಎಂಬ ಬಂಗಾಳಿ ಯುವಕನು ತನ್ನ ವಸ್ತ್ರಕ್ಕೆ ಶೀಮೆಎಣ್ಣೆ ತಗಲಿಸಿ ಬೆಂಕಿ ಹಚ್ಚಿಸಿಕೊಂಡು ಆತ್ಮಹತ್ಯ ಮಾಡಿಕೊಂಡಿರುವನು. ಇವನ ಹೆಂಡತಿಯು ಒಂದು ವರ್ಷದ ಹಿಂದೆ ಮೃತಪಟ್ಟಿದ್ದುದರ ಪರಿತಾಪವೇ ಇವನ ಸ್ವಗಾತಕ್ಕೆ ಕಾರಣವಂತೆ.

ಮಣಿಕ ಗಂಜಿನಲ್ಲಿ ಕಠಿಣ ಬಿರುಗಾಳಿ ಬೀಸಿ ಬಹಳ ನಷ್ಟ ಉಂಟಾಗಿರುವುದೆಂಬ ವಾರ್ತೆ ಬಂದಿರುವುದು.

ಕ್ರಿಸ್ಟ್‌ಮಸ್, ಹೋಳಿ ಹಬ್ಬದಕಾಲ ಮತ್ತು ದುರ್ಗಪೂಜೆಯ ಕಾಲ ಟಪ್ಪಾಲು ಬಟವಾಡೆ ಪೇದೆಯವರು ತಾವು ಪತ್ರಗಳನ್ನು ಬಟ್ವಾಡೆ ಮಾಡುತ್ತಿರುವ ಜನರಿಂದ ಏನಾದರೂ ಇನಾಮುಗಳನ್ನು ಪಡೆಯುವ ರೂಢಿಯಿದೆಯಷ್ಟೆ. ಇಂತಹ ಅಭ್ಯಾಸವು ಬಂಗಾಳ ಪೋಸ್ಟು ಮಾಸ್ಟರ ಜನರಲವರಿಂದ ಖಂಡಿಸಲ್ಪಟ್ಟು ಈ ಹಬ್ಬಗಳ ಕಾಲ ಟಪ್ಪಾಲು ಪೇದೆಯರು ಇನಾಂ ಪಡಕೊಳ್ಳುವುದು ತಿಳಿದು ಬಂದದ್ದೇ ಆದರೆ ಅಂಥವರನ್ನು ಕೆಲಸದಿಂದ ಬರತರಪು ಮಾಡಲಾದೀತೆಂತ ತಿಳಿಸಿರುವರು.

ದಕ್ಷಿಣ ಹಿಂದೂಸ್ಥಾನ.

ಹೈದರಾಬಾದಿನಲ್ಲಿ ರಾವ್ ಬಹದ್ದೂರ್ ಸೇಟ್ ವಿಷನ್‌ದಾಸ್ ನಿಹಾಲ್‌ದಾಸ್ ಎಂಬವರ ೮ ಲಕ್ಷ ರೂಪಾಯಿ ಕ್ರಯ ಬಾಳುವ ಹತ್ತಿ ಮೂಟೆಗೆ ತಾ. ೨೧ರಲ್ಲು ಬೆಂಕಿ ಬಿತ್ತು. ಆದರೆ ಕೆಲವು ಸಾವಿರ ರೂಪಾಯಿಗಳ ಹತ್ತಿ ಸುಟ್ಟು ಹೋಗುವುದರೊಳಗೆ ಬೆಂಕಿಯು ಆರಿಸಲ್ಪಟ್ಟಿರುವುದು.

ತಿನ್ನವೆಲ್ಲಿಯ ಸೆಶ್ಯನ್ಸ್ ಜಡ್ಜ ಕೋರ್ಟಿನಲ್ಲಿ ಒಂದು ಅಪೂರ್ವ ಕ್ರೈಸ್ತ ವಿವಾಹದ ಕಟ್ಟಳೆಯು ವಿಚಾರಣೆಯಾಗಿರುವುದು. ಒಬ್ಬ ರೋಮನ್ ಕೆಥೊಲಿಕ ಹುಡುಗಿಯನ್ನು ಒಬ್ಬ ಹಿಂದೂ ತನ್ನ ಮನೆಗೆ ಕರಕೊಂಡು ಹೋಗಿ ಇಟ್ಟುಕೊಂಡು ಕ್ರೈಸ್ತ ವಿವಾಹ ಆಕ್ಟಿನ ಪ್ರಕಾರ ರಿಜಿಸ್ತ್ರಿ ಮಾಡಿಸದೆನೇ ಮದಿವೆಯಾದನೆಂಬದಾಗಿ ಅಲ್ಲಿಯ ರೆವೆರೆಂಡ್‌ಫಾದರ್ ಕೌನಸೆಲ್ಲರಿಗೆ ತಿಳಿದು ಬಂದದರಿಂದ ಅವರು ಪೋಲಿಸಿನವರಿಗೆ ವರದಿ ಮಾಡಿದರು. ಪೋಲಿಸಿನವರು ಹೊಸದಾಗಿ ವಿವಾಹವಾದ ಮದುಮಗಳನ್ನೂ ಮದುಮಗನನ್ನೂ ಅವಳ ಹೆತ್ತವರನ್ನೂ ಇನ್ನು ಇತರ ಸಂಬಂಧಿಕರನ್ನೂ ವಿಚಾರಣೆಗೆ ಗುರಿಮಾಡಿದರು. ಹುಡುಗಿಯ ಹೆತ್ತವರು ತಾವು ನಿರಾಪರಾಧಿಗಳೆಂದೂ ಹುಡುಗಿಯ ಮತ್ತು ತಮ್ಮ ಇಚ್ಛೆಗೆ ವಿರೋಧವಾಗಿ ಈ ವಿವಾಹವು ನಡಿಸಲ್ಪಟ್ಟಿತ್ತೆಂದೂ ವಾದಿಸಿದರು. ಜಡ್ಜರು ಮದುಮಗನಿಗೂ ಹುಡುಗಿಯ ತಂದೆಗೂ ಆರಾರು ತಿಂಗಳ ಶಿಕ್ಷೆಯನ್ನೂ ಹುಡುಗಿಗೆ ೨ ತಿಂಗಳ ಸಜೆಯನ್ನೂ ವಿಧಿಸಿ ಉಳಿದವರನ್ನು ಖುಲಾಸುಪಡಿಸಿದರು.

ಕೊಯಂಬುತ್ತೂರು ಡಿಸ್ಟ್ರಿಕ್ಟ್ ಸಭೆಯು ಇದೇ ಬರುವ ಜೂನ್ ತಾ. ೨೦-೨೧ರಲ್ಲು ನಾಮಧಾರ್ ರಾವ್ ಬಹದ್ದೂರ್ ಪಿ. ಕೇಶವ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಕೂಡಿ ಬರುವುದು.

ಇದೇ ಬರುವ ೨೯ನೇ ರಾಷ್ಟ್ರೀಯ ಸಭೆಗೆ ಸ್ವಾಗತ ಕಮಿಟಿಯನ್ನು ಆರಿಸುವರೆ ತಾ. ೨೩ರಲ್ಲು ಮದ್ರಾಸ್ ಸ್ಥಳಿಕ ಕಂಗ್ರೆಸ್ ಕಮಿಟಿಯವರು ಕೂಡಿ ಬಂದು ಸ್ವಾಗತ ಕಮಿಟಿಯು ರೂಪಿಸಲ್ಪಟ್ಟಿತು. ೬೬ ಗೃಹಸ್ಥರ ಹೆಸರುಗಳು ಓದಲ್ಪಟ್ಟಿತು. ಸ್ವಾಗತ ಕಮಿಟಿಯ ಮೊದಲನೇ ಸಭೆಯು ತಾ. ೨೯ರಲ್ಲು ಕೂಡಿ ಬಂತು. ಮರುದಿನ ಇದಕ್ಕೆ ಬೇಕಾದ ಕಾರ್ಯನಿರ್ವಾಹಕ ಸಭೆಯು ಆರಿಸಲಾಗುವುದು.

ಗಂಜಾಮ್ ಜಿಲ್ಲೆಯ ಡಿಸ್ತ್ರಿಕ್ಟ್ ಮತ್ತು ಸೆಶ್ಯನ್ಸ್ ಜಡ್ಜರಾಗಿರುವ ದಿವಾನ್ ಬಹದ್ದೂರ್ ಸಿ. ವಿ. ಕುಮಾರಸ್ವಾಮಿ ಶಾಸ್ತ್ರಿಯವರೂ ಮದ್ರಾಸಿನಲ್ಲಿ ಸರಕಾರ ಕಡೆಯ ವಕೀಲರಾಗಿರುವ ಬೆರಿಸ್ಟರ್ ಮೆ. ಸಿ. ಎಫ್. ನೇಪಿಯರರವರೂ ಮದ್ರಾಸ್ ಹ್ಯಾಕೋರ್ಟಿನ ಎಡಿಶನಲ್ ಟೆಂಪರರಿ ಜಡ್ಜರಾಗಿ ನೇಮಿಸಲ್ಪಟ್ಟಿರುವರೆಂಬ ವಾರ್ತೆ ಬಂದಿರ್ರುವುದು.

ದಕ್ಷಿಣ ಕನ್ನಡ.

ಬೇಕಾಗಿದೆ!

ಯಾಲಕ್ಕಿ ಕೃಷಿ ಅನುಭವವುಳ್ಳ ಮತ್ತು ಲೆಖ್ಖ ಪತ್ರಗಳನ್ನು ಕ್ರಮವಾಗಿ ಇರಗೊಡಿಸುವ ಮಾಹೀತಿಯುಳ್ಳ ನಂಬಿಗಸ್ತ ರೈಟರು ಬೇಕಾಗಿದೆ. ಸಂಬಳ ವಗ್ಯೆರೆ ಮಾಹೀತಿ ಬಗ್ಯೆ ಮೊಕ್ತಾ ವ ಕಾಗದ ಪತ್ರ ನಡಿಸಿ ತಿಳಿದುಕೊಳ್ಳ ಬಹುದು.

ಬಿ. ಆರ್. ಶೇಶಪ್ಪ ರೈ.
ಕಾಫಿ ಪ್ಲಾಂಟರ್,
ಭಾಗಮಂಡಲ ಪೋಸ್ಟು,
ಕೊಡಗುಜಿಲ್ಲೆ.

ನೋಟೀಸು.

ಉಪ್ಪಿನಂಗಡಿ ತಾಲೂಕು ಉಜ್ರೆಯಲ್ಲಿರುವ ಮಿಶ್ಯನ್ ಶಾಲೆಗೆ ಪ್ರೈಮರಿ ಗ್ರೇಡಿನ ಉಪಾಧ್ಯಾಯರೊಬ್ಬರು ಅಗತ್ಯವಿರುವದರಿಂದ, ಇದಕ್ಕೆ ಉಮೇದ್ವಾರರಾಗ ಬೇಕೆಂದಿರುವವರು ವಿಳಂಬ ಮಾಡದೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಬರಕೊಳ್ಳಬೇಕಾಗಿ ತಿಳಿಯ ಪಡಿಸುವ,

ರೆವೆರೆಂಡ್ ಟಿ. ರಿತ್ತರ್.
ಬಾಸೆಲ್ ಮಿಶ್ಯನ್,
ಪುತ್ತೂರು.

WANTED.

An experienced Book keeper.
Apply to x
C/o this paper.

ಕಾಸರಗೋಡು:—ಹುಚ್ಚು ಹಿಡಿದ ನಾಯಿಗಳ ಬಾಧೆಯನ್ನು ವಿವರಿಸಲು ಆಗುವುದಿಲ್ಲ. ವಿಷಪ್ರಯೋಗದಿಂದ ನಾಯಿಗಳನ್ನು ಕೊಲ್ಲಿಸುವಂತೆ ಸರಕಾರಿ ಹುಕುಂಮನ್ನು ಹಾರೈಸಿರುವೆವು.

ಈಚೀಚೆಗೆ ನಮ್ಮ ಊರು ನವೀನ ದೈವಗಳ ಆವಾಸಸ್ಥಾನವಾಗಿ ಪರಿಣಮಿಸಿದೆ. ಬೋಳಾರದಿಂದ ಮಾರಿಯೂ, ಕುಂಬಳೆಯಿಂದ ಆಲಿಯೂ, ಇಲ್ಲಿಗೆ ಅವಿರ್ಭೂತರಾಗಿರುವರೆಂದು ಮೂಢರು ನಂಬಿಕೊಂಡು, ಹಲವರು ಕಯ್ಗೆ ಬಂದಂತೆ ಕಾಣಿಕೆಗಳನ್ನು ಹಾಕುತ್ತಲಿದ್ದಾರೆ. ಕಾರ್ಕಳದಿಂದ ಗುಮ್ಮಟನೂ ಇಲ್ಲಿಗೆ ಸದ್ಯದಲ್ಲೇ ಬರುವನೆಂದು ವದಂತಿಯೂ ಇದೆ.

ತಾಲೂಕು ಠಾಣ್ಯವಾದ ಈ ಊರಲ್ಲಿ ಕಚ್ಚೇರಿ ಎದುರಿನ ಕಿರುದಾರಿಯ ಎರಡೂ ಪಾರ್ಶ್ವಗಳಲ್ಲಿ ಕಟ್ಟಲ್ಪಟ್ಟಿರುವ ಮುಳಿಛಾವಣಿಯ ಮನೆಗಳಿಗೆ ಬೆಂಕಿ ಹತ್ತಿದುದಾದರೆ ಊರಿಗೆಲ್ಲ ಅಪಾಯವಿದೆಯಾದರೂ, ಇಲ್ಲಿ ಕೆಲಸಕ್ಕೆ ಬೀಳುವ ನೀರು ಹಾರಿಸುವ ಯಂತ್ರವೊಂದೂ ಇಲ್ಲದಿರುವುದು ಶೋಚನೀಯವಾದುದಾಗಿದೆ. ಇದು ಇನ್ನೂ ಒದಗಿಸಲ್ಪಡದಿದ್ದುದು ಈ ಪಟ್ಟಣಿಗರ ಹಿತಸಾಧನಕ್ಕಲ್ಲ.

ನಮ್ಮ ವಿವೇಕಾನಂದ ಮಂದಿರದ ಕಾರ್ಯಭಾರವನ್ನು ಹೊತ್ತಿರುವ ಜನಗಳು, ಆ ಹೊರೆಯನ್ನು ಒಂದು ಕಡೆಯಲ್ಲಿ ಮಡಗಿಸಿ ಸುಖ ನಿದ್ದೆಗೈವಂತಿದೆ. ಅವುದೊಂದು ನವೀನ ಸಂಘವುಂಟಾದೊಡನೆಯೆ, 'ಸೋಡ'ದ ಹಾಗೆ ನ್ಯಾಸಬಿಡುತ್ತ ನಮ್ಮ ಉತ್ಸಾಹವು ಅಪೂರ್ವವಾಗಿರುವುದೂ, ಆ ಮೇಲೆ ಅದೆಲ್ಲವೂ ಕುಂದಿಹೋಗುವುದೂ ಈಗಿನ ವಾಡಿಕೆ. ವಿವೇಕಾನಂದ ಮಂದಿರದ ಪ್ರಥಮ ವರ್ಷದ ಕಾರ್ಯನಿರ್ವಾಹವನ್ನೂ ಈ ವರ್ಷದುದನ್ನೂ ಸರಿಹೋಲಿಸಿ, ಆದರ ಸದಸ್ಯರೇ ಒಮ್ಮೆಗೆ ಎಣಿಸುವುದಾದರೆ, ಸಂಘಕ್ಕೆ ಉಪಕಾರವಾಗುತ್ತಲಿದ್ದಿತು, ಮಾತ್ರವಲ್ಲ. ಆ ಘನವುಳ್ಳ ಹೆಸರಿಗೆ ಕುಂದು ಬಾರದಂತಿರಗೊಡಿಸಬಹುದಾಗಿದ್ದಿತು.

ಕಂಡ್ಲೂರು:—ಇದೇ ತಾ. ೧೮ರಲ್ಲು ಕುಂದಾಪುರ ಹುಡಿಗ್ಗಿಯರ ಶಾಲೆಯು ತೆರೆಯಲಾಯಿತು. ಈ ಸಮಾರಂಭಕ್ಕೆ ಮಾನ್ಯ ಕಲೆಕ್ಟರವರು ಸಾನಿಯವರೂ, ಮೆಜಿಸ್ಟ್ರೇಟ, ಮುನ್ಸೀಪ ಮೊದಲಾದ ಸರಕಾರ ಹುದ್ದೆದಾರರೂ, ಬೋರ್ಡ ಮೆಂಬರರಾದ ಅಂತಯ್ಯ ಸೆಟ್ಟರೂ ಇತರ ಅನೇಕ ಮಾನ್ಯ ಗೃಹಸ್ಥರೂ ಹಾಜರಿದ್ದರು. ಶಾಲೆಯಲ್ಲಿ ಬಾಲಕಿಯರು ಗಾಯನ, ಕಥಾನಾಟಕ, ಕೋಲಾಟ ಇತ್ಯಾದಿಗಳನ್ನು ಆಡಿ ಸಭಿಕರನ್ನು ಸಂತೋಷ ಪಡಿಸಿದರು. ಕಡೆಗೆ ಕಲೆಕ್ಟರ ದೊರೆಸಾನಿಯವರು ಬಾಲಕಿಯರಿಗೆ ಇನಾಮುಗಳನ್ನು ಹಂಚಿದರು. ಆ ದಿನ ಬಾಲಕಿಯರಿಗೆ ಮಿಠಾಯಿ ಹಣ್ಣು ಮೊದಲಾದವುಗಳ ಸತ್ಕಾರವು ಕಂಡ್ಲೂರು ಪಟೇಲ ರಾ। ಅಂತಯ ಸೆಟ್ಟರವರಿಂದಲೇ ಸಿದ್ಧಗೊಳಿಸಲ್ಪಟ್ಟಿತು.

ಎಡ್ವರ್ಡ್ ಚಕ್ರವರ್ತಿಯವರ ಜ್ಞಾಪಕಾರ್ಥವಾಗಿ ಕುಂದಾಪುರದಲ್ಲಿ ಕಟ್ಟಿಸುವ ಸಭಾಸದನಕ್ಕೆ ಕಂಡ್ಲೂರು ಪಟೇಲ ಅಂತಯ ಸೆಟ್ರು ಕಿಟಕಿ ಬಾಗಿಲುಗಳನ್ನು ಧರ್ಮಾರ್ಥವಾಗಿ ಒದಗಿಸಿ ಕೊಡುವರೆ ಒಪ್ಪಿರುವರು.

ಕಂಡ್ಲೂರಲ್ಲಿ ಇತ್ತಲಾಗಿ ಸಿಡುಬು ರೋಗವು ಹಾವಳಿಗೈಯ್ಯುತ್ತಿದೆ. ವೆಕ್ಸಿನೇಟರರು ಡಾಕು ಹಾಕುತ್ತಿದ್ಧಾರೆ.

ಆರೋಗ್ಯದಾಯಿನಿ ಎಂಬ ಚಿಕಿತ್ಸಾ ಭವನಕ್ಕೆ ಇದೇ ಜನವರಿ ತಾ. 1ರಿಂದ ವಂತಿಗೆ ಕೊಟ್ಟವರು.

ರೂಪಾಯಿ ೧೦ರ ಪ್ರಕಾರ ಕೊಟ್ಟವರ ಹೆಸರುಗಳು:— ಪಿ. ಯಲ್. ಮತ್ತಾಯಸ್ ಯಸಕ್ವಯರ್ ಜಮಿನ್‌ದಾರ್ ಮಂಗಳೂರು; ಮ। ರಾ। ರಾ। ತಿಮ್ಮಪ್ಪ ಶೆಟ್ಟಿ ಬಾಕ್ರಬೈಲ್; ರಾ। ಸುಜೀರ್ ನರಸಿಂಗನ್ಯಾಕ್ ಮಂಗಳೂರು; ರಾ। ದೂಮಾಳ್ವ; ರಾ। ಶ್ರೀನಿವಾಸ ಹರಿದಾಸ್ ಮಂಗಳೂರು; ಶ್ರೀಮತಿ ಸಾವಿತ್ರಿಬ್ಬಾ ಮಂಗಳೂರು; ರಾ। ಎ. ಜೆ. ಲೋಬೋ ಬಿ. ಎ ಬಿ. ಯಲ್. ಗವರ್ನಮೆಂಟ್ ವಕೀಲ್; ಪರೋಪಕಾರ ಪ್ರಿಯ ಮಂಜೇಶ್ವರ; ರಾ। ಜಾಫರ್‌ಭ್ಯೊಮೆಗ್ಗಿ ಮಂಗಳೂರು; ರಾ। ಯಸ್. ಶಂಕು ಆಳ್ವ ಮಂಗಳೂರು; ರಾ। ವಿಟ್ಠಲಪೂಂಜ ಮದ್ರಾಸ್; ರಾ। ಕೆ. ಜಗನ್ನಾಥ ಬಲ್ಲಾಳ ಮದ್ರಾಸ್; ರಾ। ಯಲ್. ಜೆ. ಸಲ್ಡಾಂಞಮಂಗಳೂರು, ರಾ। ಯನ್. ವೆಂಕಟರಾವ್ ಮಂಗಳೂರು; ಪಿ. ಬಿ. ಪಿಂತೋ ಯಸ್‌ಕ್ವಯರ್ ಮಂಗಳೂರು; ಮೆಸ್ಸರ್ಸ್ ಜೆ. ಮಿನೇಜಸ್ ಎಂಡ್ ಕಂಪೆನಿ ಮಂಗಳೂರು; ಯಮ್. ಎಸ್. ನೊರಂಞ ಯಸ್‌ಕ್ವಯರ್ ಹೋಪ್‌ಲೋಡ್ಜ ಮಂಗಳೂರು; ಮೆಸರ್ಸ್ ಹಿರ್ಜಿಯಮ್ ಎಂಡ್ ಸನ್ಸ್ ಕಣ್ಣನೂರು;

ಮುಂದರಿಯುವದು.

ಉಳ್ಳಾಲ ಹಯ್ಯತುಲ್ಲ್ ಇಸ್ಲಾಮ್ ಸಭೆಯಿಂದ:—ಇತ್ತಲಾಗೆ ಅಂದರೆ ಸುಮಾರು ಒಂದು ವರ್ಷದ ಮೇಲೆ ನಡೆದು ಬರುವ "ಉಳ್ಳಾಲ ಹಯ್ಯತುಲ್ ಇಸ್ಲಾಮ್" ಸಭೆಯ ಮೆಂಬರರು 'ತಮ್ಮ ಖಾಜಿಗುರುಗಳಾಗಿದ್ದ ಬಹುಮಾನಪಟ್ಟ ಕೋಟಿಕಳ ಮೌಲುವಿ ಬಪ್ಪಂಕುಟ್ಟಿ ತಂಗಳವರು ಇದೇ ಕಳದ ಶುಕ್ರವಾರ ದಿವಸ ರಾತ್ರಿ ಸುಮಾರು ೯ ಗಂಟೆ ಸಮಯಕ್ಕೆ ಸ್ವರ್ಗಸ್ತರಾದ ದುಃಖವಾರ್ತೆಯನ್ನು ತಿಳಿಸಲು ವಿಷಾದಿಸುತ್ತಾರೆ. ಮಹಮ್ಮದಿಯರೊಳಗೆ ಎಲ್ಲೆಲ್ಲಿಯೂ ಕೀರ್ತಿಸಲ್ಪಡುವ ಆ ಮಹಾನುಭಾವರಾದ ಖಾಜಿಯರ ಮರಣ ಸಂಗತಿಯು ದಕ್ಷಿಣ ಹಿಂದೂಸ್ಥಾನದ ಮಹಮ್ಮದಿಯರೊಳಗೆ ಉಂಟಾದ ಮಹಾ ದುಃಖಕರದ ಸಂಗತಿಯೇ ಸರಿ. ಉಳ್ಳಾಲದ ಮಹಮ್ಮದಿಯರ ಹಕೀಮರಾಗಿದ್ದ ಸದ್ರಿ ಖಾಜಿಯರ ಪದವಿಯನ್ನು ತದೋಪಾದಿಯಲ್ಲಿ ನಡಿಸಲಿಕ್ಕೂ ಅಂಥಾ ವಿದ್ಯಾಸಂಪೂರ್ಣತೆಯನ್ನು ಮಹಮ್ಮದಿ ಮತದ ಮೂಲಸ್ಥಾನವಾದ ಮಕ್ಕ ಎಂಬ ಯಾತ್ರಾ ಸ್ಥಳದಿಂದಲೇ ಪಡೆದು ಖ್ಯಾತಿಗೊಂಡ ಇತರ ಮೌಲುವಿಯರು ಬಹಳ ಕಮ್ಮಿ ಎಂಬ ಸಂಗತಿಯನ್ನು ಸರ್ವಜನರಿಗೆ ತಿಳಿಸಲು ಅಪೇಕ್ಷಿಸುತ್ತೇವೆ. ಸದ್ರಿ ಮಹಾನುಭಾವರ ಜೀವಮಾನದ ಸಂಕೋಚ ಚರಿತ್ರೆಯನ್ನು ಪ್ರಕಟಣೆ ಬಗ್ಯೆ ಕಳುಹಿಸಿಕೊಡುವೆವು.

ಮಂಗಳೂರು.

ದಕ್ಷಿಣಕನ್ನಡಾ ಜಿಲ್ಲಾ ಕಲೆಕ್ಟರ ಅಫೀಸು, ಮಂಗಳೂರು:—ರಾ। ಕೆ. ರಾಮವರ್ಮ ರಾಜರವರು ಈ ಜಿಲ್ಲೆಗೆ ಹಿಂತೆರಳಿ ಬರುವುದರಿಂದ ಈ ಕೆಳಗಿನ ನೇಮಕಗಳಿಗೆ ಹುಕುಂ ಆಗಿರುವುದು:—

ರಾ. ಕೆ. ಶ್ರೀನಿವಾಸರಾವ್, ಅವರ್ಗಳ್, II ಗ್ರೇಡ್ ಆಕ್ಟಿಂಗ್ ತಹಸೀಲದಾರರಾಗಿಯೂ V ಗ್ರೇಡ್ ತಹಸೀಲದಾರ ರಾ। ಕೆ. ರಾಮವರ್ಮ ರಾಜ ಅವರ್ಗಳವರು ರೂ. 200ರ III ಗ್ರೇಡ್ ತಹಸೀಲದಾರರಾಗಿಯೂ ಆಕ್ಟಿಂಗ್ III ಗ್ರೇಡ್ ತಹಸೀಲದಾರ ರಾ। ಡಿ. ಆನಂದರಾವ್ ಬಿ. ರವರು ರೂ೧೭೫ರ IV ಗ್ರೇಡ್ ತಹಸೀಲದಾರರಾಗಿಯೂ IV ಗ್ರೇಡ್ ತಹಸೀಲದಾರ ರಾ। ಯಮ್. ಅಚ್ಯುತಯ್ಯನವರು ರೂ. ೧೫೦ರ V ಗ್ರೇಡ್ ತಹಸೀಲದಾರರಾಗಿಯೂ ನೇಮಿಸಲ್ಪಟ್ಟಿರುವರು.

ಈ ಮೇಲಿನ ನೇಮಕವು ರಾ। ಕೆ. ರಾಮವರ್ಮ ರಾಜ, ಅವರ್ಗಳವರು, ಕಾಸರಗೋಡಿನ ಚಾರ್ಜು ತಕ್ಕೊಂಡಾಕ್ಷಣ ಜಾರಿಗೆ ಬರುವುದು.

ಮಂಗಳೂರು ಡಿವಿಜನಲ್ ಆಫೀಸರರ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾಗಿರುವ ರಾ। ಜಿ. ಮಾಧವ ಪ್ರಭುಗಳು ಬಂಟ್ವಾಳ ಆಕ್ಟಿಂಗ್ ಡ್ಯುಪಿಟಿ ತಹಸೀಲದಾರ ಕೆಲಸದಿಂದ ಬಿಡುಗಡೆಹೊಂದಿದ ತಾರೀಕಿನಿಂದ ಅವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜೆ ಕೊಡಲ್ಪಟ್ಟಿರುವುದು.

ಇದೇ ಮೇ ತಾ. ೧ರಿಂದ ಮಂಗಳೂರಿಗೆ ಸಾಯಂಕಾಲ ಗಂಟೆ ೬-೫೫ಕ್ಕೆ ತಲಪುತ್ತಿದ್ದ ಮೇಲ್‌ಟ್ರೇನು ಸಾಯಂಕಾಲ ಗಂಟೆ ೬-೫ಕ್ಕೆ ತಲಪುವುದು. ಆ ತಾರೀಕಿನಿಂದ ಮೈಲಿನಲ್ಲಿ ಬಂದ ಟಪ್ಪಾಲು ಪತ್ರಗಳ ಕಿಡಿಕಿ ಬಟವಾಡೆಯು ರಾತ್ರಿ ೭॥ ಗಂಟೆಗೆ ಪೋಸ್ಟಾಫೀಸ್ ಕಿಡಿಕಿಯಲ್ಲಿ ಮಾಡೋಣಾಗುವುವು. ಮೈಲ್ ಬಂಡಿಯಲ್ಲಿ ಹೋಗುವ ಟಪ್ಪಾಲು ಕಾಗದಗಳನ್ನು ಟಪ್ಪಾಲು ಪೆಟ್ಟಿಗೆಯಿಂದ ಕಡೆಯ ಸಾರಿ ಬೆಳಿಗ್ಯೆ ೫ ಗಂಟೆಗೆ ತೆಗೆಯೋಣಾಗುವುದು.

ಉಡ್ಪಿ ೧ನೇ ಗ್ರೇಡ್ ರೆವೆನ್ಯೂ ಇನ್ಸ್‌ಪೆಕ್ಟರ್ ರಾ। ಕೃಷ್ಣಪಾಂಡುರಂಗ ಕಿಣಿ ಬಿ. ಎ. ಎಲ್ ಎಲ್. ಬಿ; ಯವರು ರೂಪಾಯಿ ೪೦ ತಲಬಿನ ಕಲೆಕ್ಟರ ಆಫೀಸಿನ ಆಕ್ಟಿಂಗ್ ೩ನೇ ಅಕೌಂಟಾಂಟರಾಗಿ ನೇಮಿಸಲ್ಪಟ್ಟಿರುವರು.

ರಜೆಯ ಮೇಲಿರುವ ೨ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರ್ ರಾ। ಬಿ. ಗಣಪತಿರಾಯರು ರಜೆ ತೀರಿದನಂತರ ರೂ. ೩೫ರ ಮೇಲೆ ಉಡ್ಪಿಗೆ ವರ್ಗಾಯಿಸಲ್ಪಟ್ಟಿರುವರು.

ಲೋಕಲ್ ಫಂಡ್ ಆಡಿಟ್ ಶಾಖೆಯ ಹೆಡ್ ಆಕೌಂಟಾಂಟ್ ರಾ। ಬಿ. ರಾಮರಾಯರು ರಜೆಯ ಮೇಲಿರುವುದರಿಂದ ಕಲೆಕ್ಟರ ಆಫೀಸಿನ ಆಕ್ಟಿಂಗ್ ೩ನೇ ಅಕೌಂಟಾಂಟರಾದ ರಾ। ಎಮ್. ಸುಬ್ಬರಾವ್, ಬಿ. ಎರವರು ಲೋಕಲ್ ಫಂಡ್ ಆಡಿಟ್ ಶಾಖೆಯ ಹೆಡ್ ಅಕೌಂಟಾಂಟರಾಗಿ ನೇಮಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನಲ್ ಆಫೀಸು:—ಕಾರ್ಕಳ ಸಬ್ ಮೇಜಿಸ್ಟ್ರೇಟ ಆಫೀಸಿನ ೨ನೇ ಕ್ಲಾರ್ಕ ರಾ| ಕೆ. ಪುತ್ತು ಭಂಡಾರಿಯು ಇತರ ಕೆಲಸದ ಮೇಲೆ ಇರುವುದರಿಂದ ಇವರ ಬದಲಿಗೆ ಕಲೆಕ್ಟರ್ ಆಫೀಸಿನಲ್ಲಿ ಅಮೊನ್ ದೀವುಗಳ ಎಕೌಂಟೆಂಟರಾಗಿರುವ ರಾ| ಎಚ್. ಪಾಂಡುರಂಗರಾಯರು ವರ್ಗಾಯಿಸಲ್ಪಟ್ಟಿರುವರು.

ದಿ ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು—ಈ ನೂತನ ಕಂಪೆನಿಯ ಡೈರೆಕ್ಟರರ ಸಭೆಯು ಇದೇ ತಾ. ೨೮ರಲ್ಲು ರಾ| ಎನ್. ವೆಂಕಟರಾಯರ ಮನೋಹರ ವಿಲಾಸದಲ್ಲಿ ಖಾನ್‌ಸಾಹೇಬ್ ಹಾಜಿ ಅಬ್ದುಲ್ಲ ಹಾಜಿ ಖಾಸಿಂ ಸಾಹೇಬ್ ಬಹದ್ದೂರರವರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಡ್ಯಾರೆಕ್ಟರರ ಪೈಕಿ ರಾ| ಬಂಗ್ಲೆ ನಾರಾಯಣ ಕಾಮತರವರನ್ನು ಬಿಟ್ಟು ಉಳಿದ ೫ ಮಂದಿ ಡ್ಯಾರೆಕ್ಟರರೂ ಹಾಜರಿದ್ದರು. ಮೂಲಧನ ೫೦,೦೦೦ ರೂಪಾಯಿಯನ್ನು ಒಂದು ಲಕ್ಷಕ್ಕೆ ಹೆಚ್ಚಿಸಬೇಕು, ಇದೇ ಮೇ ತಿಂಗಳ ತಾ. ೨೩ಕ್ಕೆ ಹಿಸೆದಾರರ ಜನರಲ್ ಮೀಟಿಂಗನ್ನು ಕರೆಯಿಸಬೇಕು, ಮೆನೇಜಿಂಗ್ ಏಜಂಟರಾಗಿ ರಾ| ಎನ್. ವೆಂಕಟ್ರಾಯರನ್ನು ಸೇರಿಸಬೇಕು, ಬರೇ ಮೋಟರ್ ಬಂಡಿಗಳ ಚಲಾವಣೆಯನ್ನು ನಡಿಸುವುದು ಮಾತ್ರವೇ ಈ ಕಂಪೆನಿಯ ಉದ್ದೇಶವಾಗಿರಬೇಕೆಂಬ ನಿರ್ಣಯಗಳು ಕೂಡಿದ ಸಭೆಯಲ್ಲಿ ಮಂಜೂರಾದವೆಂತ ತಿಳಿಯುತ್ತೇವೆ.

ಕಾಸರಗೋಡು ಸಬ್ ಮೇಜಿಸ್ಟ್ರೇಟರಾಗಿದ್ದ ರಾ| ವರ್ಕಾಡಿ ವೆಂಕಟರಾವ್‌ರವರಿಂದ ತಳ್ಳುಪಡಿಯಾಗಿ ಹೋದ ಮಂಜೇಶ್ವರ ಸಾವಕಾರ ರಾ| ನರ್ಸಯ್ಯ ಶ್ಯಾನುಭಾಗರ ಮೇಲಣ ಫೋರ್ಜರಿ ಮೊಕದ್ದಮೆಯಲ್ಲಿ ಇಲ್ಲಿಯ ಜಿಲ್ಲಾ ಕಲೆಕ್ಟರರಲ್ಲಿ ರಿವಿಜನ್ ಅರ್ಜಿಯು ಮುದ್ದೈಯಿಂದ ದಾಖಲು ಮಾಡೋಣಾಗಿತ್ತು. ನಿನ್ನೆ ದಿನ ತನಖಿಯಿಂದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಈ ಅರ್ಜಿಯನ್ನು ತೆಗೆದುಹಾಕಿ ಸಬ್ ಮೇಜಿಸ್ಟ್ರೇಟರ ತೀರ್ಮಾನವನ್ನೇ ಕಾಯಂ ಮಾಡಿರುತ್ತಾರೆ.

ದ್ರಾವಿಡ ಬ್ರಾಹ್ಮಣರ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶವಿರುವ ದಕ್ಷಿಣಾ ಕನ್ನಡಾ ದ್ರಾವಿಡ ಬ್ರಾಹ್ಮಣರ ಸಂಘವು ಸ್ಥಾಪಿಸಲ್ಪಡುತ್ತಿದೆಂಬುದಾಗಿ ಒಬ್ಬ ಮಾನ್ಯ ಬಾತ್ಮೀದಾರರು ಬರೆದಿರುವರು. ಮಂಗಳೂರಿನಲ್ಲಿ ಈ ಜಾತಿಯ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಒಂದು ವಿದ್ಯಾರ್ಥಿ ಭವನವನ್ನು ಸ್ಥಾಪಿಸುವುದು, ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಒಂದು ದ್ರವ್ಯಸಹಾಯ ನಿಧಿಯನ್ನು ಏರ್ಪಡಿಸಿ ಯೋಗ್ಯ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಿಸುವುದು, ಅನುಕೂಲವಾದ್ದಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೋಸ್ಕರ ವಿದ್ಯಾಶಾಲೆಗಳನ್ನು ಸ್ಥಾಪಿಸುವುದು—ಈ ಮೊದಲಾದ ಉದ್ದೇಶಗಳ ವಿವರವನ್ನು ಬರೆದಿರುತ್ತಾರೆ. ಈ ಬಗ್ಯೆ ಇತ್ತಲಾಗೆ ಮ| ರಾ| ರಾ| ನೆಲ್ಲಿಕಾಯಿ ವೆಂಕಟರಾವ್‌ರವರ ಮನೆಯಲ್ಲಿ ಕೂಡಿದ ಸಭೆಯಲ್ಲಿ ರೂ. ೫೦೦೦ ವಾಗ್ದತ್ತ ಮಾಡಲ್ಪಟ್ಟಿರುವುದು. ಮ| ರಾ| ರಾ| ಹ್ಯಾಕೋರ್ಟ ವಕೀಲ ಕಲ್ಮಾಡಿ ಲಕ್ಷ್ಮೀನಾರಾಯಣರಾವ್‌ರವರು ಇದರ ಅಧ್ಯಕ್ಷರಾಗಿಯೂ ಮ| ರಾ| ರಾ| ವಕೀಲ ಭೀಡೆ ಶೇಷ ಭಟ್ಟರವರು ಈ ಸಂಘದ ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿರುವರು.

ತಲಚ್ಚೇರಿಯ ಗೌಡ ಸಾರಸ್ವತ ಬ್ರಾಹ್ಮಣರ 'ಲಿಟರರಿ ಯೂನಿಯನ್' ಎಂಬೀ ಸಂಘದ ಆರನೇ ವರುಷದ ವರ್ಧಂತಿ ಸಭೆಯು ಇದೇ ತಿಂಗಳ ತಾ. ೩ನೇ ಆದಿತ್ಯವಾರ ತಲಚ್ಚೇರಿಯಲ್ಲಿ ಜರಗುವುದು. ಮಾಜಿ ಡಿಪ್ಯುಟಿ ಕಲೆಕ್ಟರರಾದ ಮ| ರಾ| ರಾ| ವರ್ಕಾಡಿ ರಾಮರಾವ್‌ರವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವರು. "ಗೌಡ ಸಾರಸ್ವತರ ಈಗಿನ ಸ್ಥಿತಿ ಮತ್ತು ಮುಂದಿನ ಅಭಿವೃದ್ಧಿಯ ಉಪಾಯಗಳು" ಈ ವಿಷಯ ಮ| ರಾ| ರಾ| ಕೆ. ಪಿ. ಪದ್ಮನಾಭಯ್ಯ ಬಿ. ಎ. ಎಲ್. ಟಿ ಯವರ ಉಪನ್ಯಾಸವು ಈ ಸಂದರ್ಭದಲ್ಲಿರುವುದು.

ಮಂಗಳೂರು ಮಹಿಳಾ ಸಭೆಯವರು ಇಲ್ಲಿಯ ಗಣಪತಿ ಸೆಕೆಂಡರಿ ಸ್ಕೂಲು ಫಂಡಿನ ಸಹಾಯಾರ್ಥವಾಗಿ ಹಿಂದೂ ಸ್ತ್ರೀಯರಿಂದಲೇ ತಯಾರಿಸಲ್ಪಟ್ಟಿರುವ ಕಸೂತಿ ಕೆಲಸಗಳೂ, ಚಿತ್ರಗಳನ್ನಿಡುವ ಫ್ರೇಮುಗಳೂ, ಮಕ್ಕಳ ಆಟದ ಸಾಮಾನುಗಳು ಇತ್ಯಾದಿಗಳನ್ನು ಫೆನ್ಸಿಸೇಲ್ ಮೂಲಕ ವಿಕ್ರಯಿಸುವ ಏರ್ಪಾಡನ್ನು ಮಾಡಿರುತ್ತಾರೆ. ಈ ವಿಕ್ರಯ ಇದೇ ತಿಂಗಳ ತಾ. ೩ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೯ಕ್ಕೆ ಪ್ರಾರಂಭವಾಗಿ ತಾ. ೪ ಮತ್ತು ೫ನೇ ದಿವಸಗಳ ವರೇಗಿರುವುದು. ಇಲ್ಲಿಯ ಸಾವಕಾರ ಮ| ರಾ| ರಾ| ಖಾಟವ್ ರತಂಸಿ ಸೇಟರವರ ಪುಣ್ಯಸ್ತ್ರೀ ಶ್ರೀಮತಿ ಲಕ್ಷ್ಮೀ ಬಾಯಿಯವರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಲು ಸಮ್ಮತಿಸಿರುವರು. ಮಹಾ ಜನರು ಉದಾರಾಶ್ರಯವನ್ನು ಕೊಡಬೇಕಾಗಿ ವಿಜ್ಞಾಪಿಸಲ್ಪಟ್ಟಿರುವುದು.

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳದ ವಾರ ೩ ಪ್ಲೇಗು ಮರಣಗಳಿದ್ದವು.

ನೋಟೀಸು:—ಕಳದ ಸಂಚಿಕೆಯ ಪ್ರತಿಗಳೊಡನೆ ಸ್ಥಳೀಕ ಚಂದಾದಾರರ ಮಾಹಿತಿ ಬಗ್ಯೆ ಪ್ರಕಟಗೊಳಿಸಿದ ಡಾಕ್ಟರ್ ಟಿ. ಗಣೇಶ ಸುಂದರರಾವ್‌ರವರ ಸ್ಥಿರಾಸ್ತಿ ಮಾರಾಟದ ನೋಟೀಸಿನಲ್ಲಿ ಕೆಲವು ತಿದ್ದುಪಡಿಗಳು ಸೂಚಿಸೋಣಾಗಿರುವವು. ಅಡವು ದಾನ ಅಶನಾರ್ಥ ವಗ್ಯೆರೆ ಯಾವ ತರದ ನಿರ್ಬಂಧಗಳೂ ಈ ಆಸ್ತಿಯ ಮೇಲೆ ಇರವು. ಆಸ್ತಿಗಳು ಕ್ರಯ ಖಂಡಿತಕ್ಕೆ ಕೊಡೋಣಾಗುವವು. ಹೆಚ್ಚಿನ ವಿವರವನ್ನು ಮಂಗಳೂರ ಹಂಪನಕಟ್ಟೆ ರಾ| ಉಳ್ಳಾಲ ನರಸಿಂಗರಾಯರಲ್ಲಿರುವ ಡಾಕ್ಟರ್ ಟಿ. ಗಣೇಶ ಸುಂದರರಾವ್‌ರೊಡನೆ ತಿಳಿಯಬಹುದು.

ಪುತ್ತೂರು:—ಇದೇ ಎಪ್ರಿಲ್ ತಾ. ೧೮ರ ಲಾಗ್ಯಾಯಿತು ಶೆರಾಬ ಕೊಂಡುಕೊಳ್ಳುವ ಅಂಗಡಿಗಾರರಿಗೆ ಸಹಜವಾಗಿ ವೇರಹೌಸ್ ಯಾನೆ ಬಟ್ಟಿ ಕಾರ್ಖಾನೆಯಿಂದ ೨ ಡಿಗ್ರಿ ತ್ರಾಣವು, ಡಿಪೋವಿನಿಂದ ೫ ಮೈಲು ಒಳಗಿನ ಅಂಗಡಿಗಾರರಿಗೆ ೩ ಡಿಗ್ರಿ ತ್ರಾಣವು, ಡಿಪೋವಿನಿಂದ ೫ ಮೈಲು ಹೊರಪಟ್ಟ ಅಂಗಡಿಗಾರರಿಗೆ ೪ ಡಿಗ್ರಿ ತ್ರಾಣ ಕಮ್ಮಿರಿಯಾಯತಿ ಮಾಡಬಹುದೆಂದು ರೆವಿನ್ಯು ಬೋರ್ಡಿನವರು ಪ್ರಕಟಿಸಿರುವರು.

ಶೆಕೆಕಾಲದ ರಜೆ ಸಮ್ಮಂದ ಇಲ್ಲಿಯ ಮುನ್ಸಿಫ ಕೋರ್ಟ ಎಪ್ರಿಲ್ ತಾ. ೨೭ರಿಂದ ಜೂನ್ ೬ರ ವರೆಗೆ ಆರು ಹಪ್ತೆ ಮೊಕುಪು ಮಾಡಲ್ಪಟ್ಟಿರುವದು.

ಇಲ್ಲಿಯ ಹಲವು ವ್ಯಾಪಾರಸ್ತರಲ್ಲಿ ೧೯೧೪ನೇ ಇಸವಿಯಲ್ಲಿ ಮೋಹರ ಮಾಡಲ್ಪಟ್ಟ ಅಳತೆಸಾಧನಗಳು ಹಲವರಲ್ಲಿ ೧೯೧೨ರಲ್ಲಿ ಮೊಹರಮಾಡಲ್ಪಟ್ಟ ಅತೆಳಸಾಧನಗಳು ಇದ್ದು ಒಂದಕ್ಕೊಂದು ವ್ಯತ್ಯಾಸ ಇರುವದರಿಂದ ಅಳತೆಸಾಧನಗಳು ಏಕರೀತಿಯಾಗುವಂತೆ ಮೊಹರ ಹಾಕುವ ಶಿಬಂದಿಯವರು ಇಲ್ಲಿಗೆ ಬರುವುದು ಅವಶ್ಯ.

ನಮ್ಮಲ್ಲಿಯ ಹೆಚ್ಚು ಕಡಿಮೆ ಎಲ್ಲಾ ಖಾಸಗಿ ಸರಕಾರಿ ಭಾವಿಗಳ ನೀರು ಆರಿದರೂ ಮೂರು ಲಾಟೆಗಳಿದ್ದು ಧಾರಾಳ ನೀರು ಶಿಕ್ಕುತ್ತಲಿದ್ದ ಸರಕಾರದವರು ಹೆಚ್ಚು ಖರ್ಚು ಮುಟ್ಟಿಸಿದ ಬಸ್ತಿ ಬಳಿಯ ಇರುವ ಸರಕಾರಿ ಭಾವಿಯ ನೀರು ಆರಿದ್ದರಿಂದ ಪೇಟೆಯ ನಿವಾಸಿಕರು ನೀರಿಲ್ಲದೆ ಸಂಕಷ್ಟಪಡುತ್ತಿರುವರು. ಪಂಚಮರ ಭಾವಿಯ ನೀರು ಸಹಾ ಆರಿ ಹೋದದ್ದರಿಂದ ಪಂಚಮರು ನೀರಿಲ್ಲದೆ ಗೋಳಾಡುತ್ತಿರುವರು.

ಇದೇ ತಾ. ೨೦ಕ್ಕೆ ತಾಲೂಕಿಗೆ ಇರ್ಸಾಲ ಆಗತಕ್ಕ ರೂಪಾಯಿ ೧೬-೧೫-೯ನ್ನು ಇರ್ಸಾಲ ಮಾಡದೆ ಸದರಿ ಹಣವನ್ನು ಇಲ್ಲಿಯ ಹೊಟೇಲ ಕೀಫರ್ ಕರೆಂಪಾಡಿ ಬಾಳಪ್ಪ ನ್ಯಾಕರ ಕೂಡೆ ಇಡಲಿಕ್ಕೆ ಕೊಟ್ಟದ್ದು ವಾಪಾಸು ಕೊಡುವದಿಲ್ಲವೆಂತ ಜಾಲ್ಸೂರು ಗ್ರಾಮಪಟೇಲ ತಿಮ್ಮಪ್ಪ ರೈಯು ಅಲ್ಲಿಯ ಪೋಲೀಸ್ ಸ್ಟೇಶನಲ್ಲಿ ದಾಕ್ಲು ಮಾಡಿದ ಪಿರಿಯಾದಿ ಪ್ರಕಾರ ಸದರಿ ಬಾಳಪ್ಪನ್ಯಾಕರಲ್ಲಿ ಜಡ್ತಿಮಾಡಿದಲ್ಲಿ ಹಣ ಸಿಕ್ಕದೆ ಪೋಲಿಸಿನವರು ಪಿರಿಯಾದಿ ರಿಪರ್ಡ ಮಾಡುವಂತಿದೆ. ಹಣವೆಂತೂ ತಾಲೂಕು ಪ್ಯಾದೆ ಅಬ್ಬುಕಾರ್ ಸಾಹೇಬನು ಪಟೇಲರ ಮನೆಗೆ ಹೋಗಿ ವಸೂಲು ಮಾಡಿ ಖಜಾನೆಗೆ ಹಾಜುರುಪಡಿಸಿರುವನು. ತಾಲೂಕು ತಹಸೀಲ್ದಾರರವರು ಪಟೇಲರ ತನಖಿ ಮಾಡುತ್ತಿರುವರು.

ಈಗ ಎರಡು ವಾರಗಳಿಂದ ಕ್ಲಪ್ತ ತಾರೀಕಿಗೆ ತಲ್ಪತಕ್ಕ ಸ್ವದೇಶಾಭಿಮಾನಿಯು ಟಪ್ಪಾಲು ಇಲಾಖೆಯವರ ಅಶ್ರದ್ಧೆಯಿಂದ ೪-೫ ದಿವಸಗಳ ವಿಳಂಬವಾಗಿ ಎಲ್ಲಾ ಚಂದಾದಾರರಿಗೆ ಬಟ್ವಾಡೆ ಮಾಡಲ್ಪಡುವದರಿಂದ ಟಪ್ಪಾಲು ಇಲಾಖೆಯ ಮೇಲಾಧಿಕಾರಿಗಳು ತಕ್ಕನಿಗಾಕೊಡಲಾಗದೆ?

~~~~~~

ಜೀನಸುಗಳ ಧಾರಣೆ, ಮಂಗಳೂರು. (ರಖಂ)

~~~~~~

ಅವಲ್ ಮಸ್ಕತಿ ಅಕ್ಕಿ ...	5—8—0	5-13—0
ದುಯಂ „ „ ...	5—0—0	5—3—0
ಗುಡ್ಡು	4-13—0	4-15—0
ಅವಲ್ ಬೆಳ್ತಿಗೆ... ...	5—10—0	5-12—0
ಗುಡ್ಡು ಬೆಳ್ತಿಗೆ	5—2—0	5—4—0
ಹುರುಳಿ ಗೋಣಿ, ೧ರ		7—3—0
ರಂಗೂನ್ ಗೋಣಿ ೧ರ ...	9—3—0	9—4—0
ಉಪ್ಪು ಗೋಣಿ ೧ರ ...	3—8—0	3-10—0
ಕೊಬ್ರಿ ಖಂಡಿ ೧ರ ...	98-0-0	105—0—0
ಊರು ಬೆಲ್ಲ ಖಂಡಿ ೧ರ	35—0—0	40—0—0
ಗೋಧಿ ಗೋಣಿ ೧ಕ್ಕೆ...		11—8—0
ಕಡಲೆ ಗೋಣಿ ೧ಕ್ಕೆ	9—0—0	9—8—0
ಉದ್ದು ಗೋಣಿ ೧ರ		10—4—0
ತೊಗರಿ ಗೋಣಿ ೧ರ...		11—0—0
ತೊಗರಿಬೇಳೆ ಗೋಣಿ ೧ರ	11-0—0	14—0—0
ಕೊಬ್ರಿ ಹಿಂಡಿ ಖಂಡಿ೧ರ	31—0—0	33—0—0
ಎಳ್ಳಿಂಡಿ ಖಂಡಿ ೧ರ	32—8—0	40—0—0
ಕೊಬ್ರಿ ಎಣ್ಣೆ ಮಣ ೧ರ		7—5—0
ಎಳ್ಳೆಣ್ಣೆ ಮಣ ೧ರ ...	7—2—0	7—4—0
ಬೆಳಿಗೋಟು ಖಂಡಿ ೧ರ	90—0—0	96—0—0
ಕಾಫಿ ಖಂಡಿ ೧ರ ...	215—0—0	225—0—0
ಯಾಲಕ್ಕಿ ಮಣ ೧ಕ್ಕೆ	40—0—0	50—0—0

~~~~~~

CANNADA INDIAN PENAL CODE.

ಕನ್ನಡ ಇಂಡಿಯನ್ ಪೆನಲ್ ಕೋಡ್.

ಇದರಿಂದ ಮೈಸೂರ್, ಮದ್ರಾಸ್ ಬೊಂಬಾಯಿ ಜಿಲ್ಲಾ ಕನ್ನಡ ಭಾಷಾ ವಾಚಕಮಹಾಶಯರಿಗೆ ತಿಳಿಯಪಡಿಸುವದೇನಂದರೆ:—

ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪುಟವಾದ ಅಕ್ಷರಗಳಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಕಳಾನಿಧಿ ಮುದ್ರಾಕ್ಷರಶಾಲೆಯೊಳ್ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲಿಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡೆಸಬೇಕಾದ ಆಚರಣೆಗಳಂದರೆ:—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ? ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ? ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜೀಯಾಗಬಹುದೇ? ರಾಜೀಯಾಗತಕ್ಕದ್ದಲ್ಲವೇ? ಎಂಬ ತಪಶೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ, ಇತರ ಸಮಸ್ತ ಕೈಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು.

ತಾ| ಕ| ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕ್ರಮಪ್ರವೇಶ್ಯ ಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆ ಎಳೆಯುವುದು, ಆಸಾಮಿಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಯೆ ಅಕ್ರಮ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವುದು.

ಕನ್ನಡದಲ್ಲಿ ಇದುವರಿಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು. ಕ್ರಯ ಗ್ಲೇಜ್ ೨—೮—೦. ರಫ್ ೨—೦—೦. ಟಪ್ಪಾಲು ಚಾರ್ಜು ೦—೪—೦. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಪ್ರೊಪ್ರೈಟರ್ ಕಳಾನಿಧಿ ಪ್ರೆಸ್, ಚಿಕ್ಕಪೇಟೆ ಬೆಂಗಳೂರುಸಿಟಿ.

ಭವಿಷತ್ ಜನ್ಮಪತ್ರಿಕಾ.

ನಿಮ್ಮ ಮಕ್ಕಳು ಹುಟ್ಟಿದ ಸಂವತ್ಸರ, ಮಾಸ, ತಿಥಿ, ವಾರ, ಜನನಕಾಲವನ್ನು ಬರೆದು ಕಳುಹಿಸಿದರೆ ನಾವು ಲಗ್ನಕುಂಡಲಿ, ಅಂಶಕುಂಡಲಿ, ಮಹರ್ದಶಾ ಮೊದಲಾದವುಗಳನ್ನು ಮಾಡಿಹಾಕಿ ಶಿಶುವಿಗೆ ಹುಟ್ಟಿದ ನಕ್ಷತ್ರದೋಷ, ಬಾಲಾರಿಷ್ಟದೋಷ ವಿಚಾರವನ್ನು ಇದ್ದರೆ ಅವುಗಳ ಪರಿಹಾರಕ್ಕೆ ಶಾಂತಿ ಮಾಡುವ ಕ್ರಮಗಳನ್ನೂ ಮಾತಾಪಿತ್ರಾರಿಷ್ಟ ವಿಚಾರವನ್ನೂ ಶಿಶುವಿಗೆ ಮುಂದೆ ಇಷ್ಟನೆ ವರುಷಗಳಲ್ಲಿ ಇಂಥಾ ಕಂಟಕಗಳೇ ಬರುವ ವಿಷಯವನ್ನೂ ಶಿಶುವಿನ ಆಯುಷ್ಯ ವಿಷಯವನ್ನೂ ಸಹಾ ವಿಶದವಾಗಿ ಬರೆದು ಜನ್ಮಪತ್ರಿಕೆಯನ್ನು ತಯಾರುಮಾಡಿ ಕಳುಹಿಸುತ್ತೇವೆ.

ಬಾಲಗ್ರಹ ನಿವಾರಿಣೀ ಯಂತ್ರ.

ಈ ಮಹಾಯಂತ್ರವನ್ನು ಒಂದು ಬೆಳ್ಳಿ ತಾಯತದಲ್ಲಿ ಹಾಕಿ ಭದ್ರಪಡಿಸಿ ಮಕ್ಕಳಿಗೆ ಕಟ್ಟಿದರೆ ೧೨ ವರುಷದವರಿಗೂ ಬರತಕ್ಕ ಬಾಲಾರಿಷ್ಟವು ಖಂಡಿತವಾಗಿ ಪರಿಹಾರವಾಗುತ್ತೆ. ಮತ್ತು ಈ ಮಹಾಯಂತ್ರವನ್ನು ಮಕ್ಕಳಿಲ್ಲದೆ ವ್ಯಸನಪಡತಕ್ಕ ಸ್ತ್ರೀಯರಿಗೆ ಕಟ್ಟಿದರೆ ಸಂದೇಹವಿಲ್ಲದೆ ಮಕ್ಕಳ ಫಲವಾಗುತ್ತೆ. ಬಾಲಗ್ರಹ ನಿವಾರಿಣಿ ಯಂತ್ರ ಸಹಿತ ಜನ್ಮಪತ್ರಿಕೆಗೆ ಕ್ರಯ ರೂ. ೨. ವಿಳಾಸ:—

ಟಿ. ಎಚ್. ಎಂ. ಸಿದ್ಧಾಂತಿಗಳು,
ಹರಪನಹಳ್ಳಿ (ಜಿಲ್ಲಾ ಬಳ್ಳಾರಿ.)

MUSICAL MART

Kavi & Sons,

MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೊನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೊನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಅಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೧೧ ವಿಷಯಗಳ ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರ್ಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲದೆ ಸಾಮಾನ್ಯರಿಗೂ ವಿಷದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು,

ನಮ್ಮ ವಿಳಾಸ:—
ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ.

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಹಂಪನಕಟ್ಟಾ, ಮಂಗಳೂರು.
~~~~~~

Madeena Watch Co., Madras

ದಿ. ನ್ಯೂ ಪೆಂಡುಲಂ ವಾಚ್. Rs, 3—15—0.

ಇದು ಒಂದು ಆಶ್ಚರ್ಯಕರವಾದ ಘಡಿಯಾರ.



Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಪಿಸಿಸಿನಂತೆ ಮೇಜಿನ ಮೇಲೂ ನಿಂದಿರಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೊಪ್ ವಾಚು ಕ್ರಯ	,,	1--12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2--12—0
ಸೆಲ್ಫ್ ಕ್ಲೊಸಿಕ್		3--15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1--13—0
ಚಿಕ್ಕ ಸೈಜು ಲೇಡಿವಾಚ್		2-15—0

ಕಾರೇಜ್ ಹಾರ್ಮೋನಿಯಂ ರೂ. 20=0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಫಿಡಲು ರೂ. 8—0—0.

ಅಡ್ರಸ್:—ಮೆಡಿನಾವಾಚ್ ಕಂಪೆನಿ,
ನಂ. ೨೧ ಆನೆಕಾರಕೋರ್ಣ ಬೀದಿ, ಜಿ. ಟಿ. ಮದ್ರಾಸು.

THE BOMBAY LIFE ASSURANCE CO. LTD.

(Established 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

„There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co. Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A., F. I. A., (London.)

Medical Referee:—Dr. R. Row, M. D. D. Sc. London.)

Manager:-Mr. K. S. Aiyar, Esq. B. A., F. S. A. A. (London). Justice of the Peace, The Honorary Presidency Magistrate and fellow of the Bombay University.

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲ್ಯಾಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಬಗ್ಯೆ ಪೂರ್ಣ ಮತ್ತು ಯೋಗ್ಯವಾದ ಜವಾಬಷ್ಕರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಬಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್‌ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊಲಿಕ್ ಮಾರ್ಸ್ ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಎಕ್ಚುಯುಯರಿ:—ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್‌ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್).

ಮ್ಯಾನೇಜರ್:—ರಾ| ಕೆ. ಎಸ್. ಆಯ್ಯರ್ ಬಿ. ಎ. ಎಫ್. ಎಸ್. ಎ. ಎ.(ಲಂಡನ್.) ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟ್ ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಉಡ್ಪಿ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಲೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ. ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತಿ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಹಿಂದೂಸ್ಥಾನದ ಜೀವವಿಮೇ ಸಂಘಗಳಲ್ಲಿ
ಅತಿ ಭದ್ರವಾದ್ದನ್ನು ಸೂಚಿಸುವಂಥಾದ್ದು:—

ಯುನ್ಯಾಟೆಡ್ ಎಸ್ಯುರೆನ್ಸ್ ಎಂಬುವ ವಿಮೆ ಸಂಘವು.

ವಿಮೆ ಉತ್ತರಾಯಿಸುವ ಹಲವು ನೂತನ ವಿಧಾನಗಳಿಂದ ಕೂಡಿರುತ್ತದೆ. ವಿವಾಹ ಮತ್ತು ಜೀವವಿಮೆಗಳ ಸಂಘಗಳಲ್ಲಿ ಈ ತನಕ ಇಲ್ಲದ-ಅಗತ್ಯವಾಗಿ ಬೇಕಾಗಿರುವ ವಿಧಾನಗಳು ಇದರಲ್ಲಿರುವವು.

೬೫ ವರುಷಗಳ ಪ್ರಾಯದವರೂ ಸಹ ವಿಮೆ ಉತ್ತರಾಯಿಸುವ ವಿಶೇಷ ಕ್ರಮ. ೩ ತಿಂಗಳನಂತರ ವಿಮೆ ಪತ್ರವು ಸಂಪೂರ್ಣತ್ವವನ್ನು ಹೊಂದಬಹುದು.

ವಿವಾಹ ವಿಮೆಗಳಲ್ಲಿ ೧೮ ತಿಂಗಳುಗಳ ನಂತರ ವಿಮೆ ಕಂತುಗಳನ್ನು ತೆರಬೇಕೆಂತಿಲ್ಲ. ೩ ತಿಂಗಳ ನಂತರ ಈ ಸಂಬಂಧದ ವಿಮೆ ಪತ್ರವು ಸಹ ಸಂಪೂರ್ಣವಾಗಬಹುದು.

ಮೇಲೆ ಕಾಣಿಸಿದ ಪ್ರಯೋಜನಗಳ ಹೊರತು ವಿವಾಹ ಉಪನಯನ ಮತ್ತು ಜೀವವಿಮೆಗಳ ಸಾಮಾನ್ಯ ಮತ್ತು ಎನ್ಡೊವ್‌ಮೆಂಟ್ ಕ್ರಮಗಳಿಂದ ವಿಮೆದಾರರು ತೆತ್ತ ದುಬಾರೆ ಮೊಬಲಗು ದೊರಕುವ ಸಂಭವವಿರುವವು. ಸಂಘದ ಭದ್ರತೆಗೆ ತಕ್ಕುದಾಗಿ ಸುಲಭವಾದ ವಿಮೆ ದರಗಳು.

ಒಳ್ಳೇ ಕಮಿಶನ್ ಮತ್ತು ಸಂಬಳದ ಮೇಲೆ ಏಜಂಟರುಗಳು ಬೇಕಾಗಿರುವರು.

ಈ ಸಂಘದಿಂದ ವಿಮೆ ಹಣ ಪಡದವರ ಹೆಸರುಗಳ ಪಟ್ಟಿಗೂ ಏಜನ್ಸಿಗಳ ಶರ್ತಕ್ಕೂ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

B. S. Nayak & Co., ಬಿ. ಎಸ್. ನಾಯಕ್ ಎಂಡ್ ಕೊ,
Chief Agents, ಚೀಫ್ ಏಜಂಟರು,
Udipi, S. C. ಉಡುಪಿ ದ.ಕ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ಕಗ್ಯೆದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಆದರಿಂದ ಪಕ್ಕಗ್ಯೆದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲ 1ಕ್ಕೆ 3—4—0. ಅರ್ಧ ಬಾಟಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ್ಗ! ಅಗ್ಗ!! ‖ ಕುಟುಂಬ ಜೀವನಿ ‖ ಧರ್ಮ! ಧರ್ಮ!!

ಪ್ರಿಯ ಭಾರತಿಯ ಮಹನಿಯರೇ!

ಎಲ್ಲಾ ರೋಗಗಳನ್ನು ಗೆಲ್ಲುವ ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬ ಪೆಟ್ಟಿಗೆಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ.

„ಅಕ್ಕರದಿಂ ಬೆಕ್ಕು ಬಂದು ಸಕ್ಕರೆಯಂ ನೆಕ್ಕಿದಂತೆ ।
ಠಕ್ಕರೆಲ್ಲಾ ಒಕ್ಕಲಿಗರ ರೊಕ್ಕವೆಲ್ಲ ಮುಕ್ಕಿ ಪೋದರ್ ‖ " ಎಂಬಂತೆ

ಈಗ ಇಮಿಟೇಶನ್ ಬಳೆ ತುಂಡುಗಳು ರತ್ನವೆಂಬ ಪೆಸರಿನಿಂದ ಎಲ್ಲಿ ನೋಡಿದರೂ ತುಂಬಿ ಹೋಗಿ, ಕಲ್ಯಾಣಿಗೆ ಬ್ಯಾಶ್ ಕಡಿಮೆ ಆದ ಹಾಗೆ ಈಗಿನವರು ಠಕ್ಕಿನಿಂದಲೇ ಸುಲಿಗೆಯಾದರು.

ಪ್ರಿಯ ಬಾಂಧವರೇ! ನಮ್ಮನ್ನು ಹಾಗೆ ಗ್ರಹಿಸಬೇಡಿರಿ. ಅಮೂಲ್ಯವಾದ ಮಾಣಿಕ್ಯವಾದರೂ ಹೇಮಾಶ್ರಯಬೇಕೇ ಬೇಕಾದ್ದರಿಂದ ನಮ್ಮನ್ನು ಆಶ್ರಯಕೊಡಿರಿ! ಪರೀಕ್ಷಿಸಿನೋಡಿರಿ!!

ನಮ್ಮ ವೈದ್ಯಾಲಯದಲ್ಲಿ ಶುಲಭವಾಗಿ ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ ಬಹಳ ಶೋಧನೆಯಿಂದಲೂ, ವನೌಷಧಗಳಿಂದಲೂ, ಸಿದ್ಧಕಲ್ಪ ಭೈರಾಗಿ ಪ್ರಯೋಗಗಳಿಂದಲೂ ತಯ್ಯಾರಿಸಿದ ಪೌಡರು ಮಾತ್ರೆಗಳೂ, ಲೇಹ ಚೂರ್ಣಗಳೂ, ತೈಲ್ಯ ಘೃತಗಳೂ, ಆಸವಾರಿಷ್ಟಗಳೂ, ಟೊನಿಕ್ ಅರಕ್‌ಗಳೂ ಬಡವರಿಗೆ ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಶಿಕ್ಕುತ್ತವೆ. ಕ್ರಯ ನಿರ್ಣಯಕ್ಕೆ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ; ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು. 10 ರೂಪಾಯಿಗಳ ಮೇಲೆ ಶೇಕಡಾ ರೂ. 10 ಡಿಸ್ಕೌಂಟ ಶಿಕ್ಕುವದು. ತರಿಸಿಕೊಳ್ಳಿರಿ. ಸಂಘಕ್ಕೆ ಆಶ್ರಯ ಕೊಡಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S.U.N.&Co.
BENARES CITY.
KASHI
VISHWESHWAR.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ್
ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು

ನೋಟೀಸು.

ನೆಶನಲ್ ಇನ್ಶೂರೆನ್ಸ್ ಎಂಡ್ ಬೆಂಕಿಂಗ್ ಕಂಪೆನಿ, ಅಮೃತಸಾರ್.

ಇವರು ತಮ್ಮ ಪಾಲುಮಾಲಿಕರಿಗೂ, ಠೇವಣಾತಿ ಇಟ್ಟವರಿಗೂ ವಿಮೆದಾರರಿಗೂ ಮತ್ತು ತಮ್ಮ ಇತರ ಕಕ್ಷಿಗಾರರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಪಿಪಲ್ಸ್ ಬೇಂಕು ಒಫ್ ಇಂಡಿಯಾ ಮತ್ತು ಅಮೃತಸಾರ ಬೇಂಕು ಇವುಗಳು ತಮ್ಮ ಲೇವಾದೇವಿಗಳನ್ನು ನಿಲ್ಲಿಸಿ ಬಿಟ್ಟಿರುವುದರಿಂದ ಇತರ ಬೇಂಕುಗಳ ಪಾಲುಮಾಲಿಕರಲ್ಲಿಯೂ, ಠೇವಣಾತಿ ಇಟ್ಟವರಲ್ಲಿಯೂ ಯೋಚನೆಯು ಪ್ರಾಪ್ತವಾಗಿರಬಹುದು. ಇಂಥಾ ಯೋಚನೆಯಿಂದ ಅಂಜಿಕೆಯು ನೆಶನಲ್ ಇನ್ಶೂರೆನ್ಸ್ ಎಂಡ್ ಬೇಂಕಿಂಗ್ ಈ ಕಂಪೆನಿಯ ಪಾಲುಮಾಲಿಕ ಮೊದಲಾದವರಲ್ಲಿ ಸ್ವಭಾವಿಕವಾಗಿ ಉಂಟಾಗಿರಬಹುದಾದ್ದರಿಂದ ಅಂಥಾ ಅಂಜಿಕೆ ಯೋಚನೆ ಮೊದಲಾದವುಗಳಿಗೆ ಏನೂ ಆಸ್ಪದವಿರದೆಂಬುದಾಗಿಯೂ ಒಂದು ವೇಳೆ ಎಂಥಾ ಅಡಚಣೆಗಳು ಬಂದು ಸಂಭವಿಸಿದರೂ ಈ ಅಡಚಣೆಗಳನ್ನು ಎದುರಾಡಲು ತಕ್ಕ ಹಣ ಸಂಗ್ರಹವು ಈ ಕಂಪೆನಿಯಲ್ಲಿದೆಂಬುದಾಗಿಯೂ ಈ ಮೂಲಕ ಕಂಪೆನಿಯ ಡಿರೆಕ್ಟರರುಗಳು ದೃಢಪಡಿಸಿರುತ್ತಾರೆ. ಅದಲ್ಲದೆ ಇತ್ತಲಾಗೆ ಈ ಕಂಪೆನಿಯವರು ಒಂದು ಲಕ್ಷ ರೂಪಾಯಿಗಳ ಭದ್ರತೆಯ ಠೇವಣಾತಿಯನ್ನು ಇಂಡಿಯಾ ಸರಕಾರದವರಲ್ಲಿರಿಸಿರುವರು.

ಪಿಪಲ್ಸ್ ಬೇಂಕಿನಿಂದಾಗಲಿ ಅಮೃತಸಾರ್ ಬೇಂಕಿನಿಂದಾಗಲಿ ಈ ಕಂಪೆನಿಗೆ ಏನೊಂದು ಬರತಕ್ಕದಿಲ್ಲ. ನಮ್ಮ ಕಂಪೆನಿಯು ಮುಖ್ಯ ಆಫೀಸು ಅಮೃತಸಾರದಲ್ಲಿರುವುದರಿಂದ ಅಮೃತಸಾರ್ ಬೇಂಕು ನಮ್ಮದೋ ಏನೆಂಬುವ ಗಲಿಬಿಲಿಯು ಕೆಲವರಲ್ಲಿರುವುದು. ಅಮೃತಸಾರ್ ಬೇಂಕಿಗೂ ನಮಗೂ ಯಾವ ಸಮ್ಮಂಧವೂ ಇರುವುದಿಲ್ಲ. ಅಮೃತಸಾರ ಬೇಂಕು ಪ್ರತ್ಯೇಕ ಬೇಂಕು ಆಗಿರುತ್ತದೆ ಮತ್ತು ಇದರ ಹೆಸರಲ್ಲಿ ಅಮೃತಸಾರ್ ಎಂಬುವುದನ್ನು ಕೂಡಿಸಿರುವರಾದರೂ ಇದರ ಮುಖ್ಯ ಆಫೀಸು ಲಾಹೋರಿನಲ್ಲಿರುತ್ತದೆ.

ನೆಶನಲ್ ಇನ್ಶೂರೆನ್ಸ್ ಮತ್ತು ಬೇಂಕಿಂಗ್ ಕಂಪೆನಿಯ ಡಿರೆಕ್ಟರರುಗಳು ತಮ್ಮಿಂದಾಗುವ ಯಥಾ ಯೋಗ್ಯ ಪ್ರಯತ್ನಗಳಿಂದ ಈಗಿನ ವಿದ್ಯಮಾನಗಳಲ್ಲಿ ಕಂಪೆನಿಗೆ ಏನೊಂದು ಅಪಾಯವು ಬಂದೊದಗದಂತೆ ಜಾಗರೂಕರಾಗಿರುವರೆಂಬುದಾಗಿ ಈ ಮೂಲಕ ದೃಢಪಡಿಸುತ್ತಾರಲ್ಲದೆ ಪಾಲಕ ಮೊದಲಾದವರೆಲ್ಲರೂ ಎಂದಿನಂತೆ ಈ ಕಂಪೆನಿಯಲ್ಲಿ ತುಂಬಾ ವಿಶ್ವಾಸವುಳ್ಳವರಾಗಿರುತ್ತಾರೆಂತ ದೃಢವಾಗಿ ನಂಬಿರುವರು.

ಪಿ. ಎಲ್. ರಾಜಪಾಲ್, ಬಿ. ಎ. **P. L. RAJPAL,** B. A.
ಮುಖ್ಯ ಮೇನೇಜರ್. *Chief Manager.*

ಟಿ ಎಸ್. ಆರ್. ಐಯರ್, **T. S. R. AIYR,**
ಸೆಕ್ರಿಟರಿ, ಮದ್ರಾಸ್ ಬ್ರೇಂಚ್. *Secretary, Madras Branch.*

Estd. 1888. ಸ್ಥಾಪನೆ 1888.

K. B. RELE & CO'S,—(BOMBAY)

ಕೆ. ಬಿ. ರೇಳೆ ಕಂಪನಿಕೃತ

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖುಗಳೂ,ವ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆಯು.** ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ್ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಎಕ್ಸ್‌ಪ್ರೆಸ್ ವಾಚ್ ಕೊ.

3 ರತನ್ ಬಜಾರ್ ರೋಡ್, ಮದ್ರಾಸ್.

ಟೆಲಿಗ್ರಾಫ್ ವಿಳಾಸ: "ಎಕ್ಸ್‌ಪ್ರೆಸ್" ಮದ್ರಾಸು.

ನಮ್ಮ ಕೂಡೆ ನಾಜೂಕಾದ ಹೆಚ್ಚು ಕಾಲ ಬಾಳುವ ಬಹಳೇ ವಾಚುಗಳಿರುವವು. ವಾಚುಗಳೆಲ್ಲವೂ ನಮಗಾಗಿಯೇ ತಯಾರಿಸಿದಂಥವುಗಳಾಗಿವೆ. ನಮ್ಮಿಂದಲೇ ಮೂರು ವರ್ಷಗಳ ಗ್ಯಾರಂಟು ಕೊಡಲ್ಪಡುವುದು. ತೃಪ್ತಿಯಾಗದಿದ್ದರೆ ಹಣ ಪರತು.



ನಂಬ್ರ 224. ಈ ವಾಚು ಸುಲಭವಾಗಿ ತೆರೆಯಲ್ಪಟ್ಟು ಮುಚ್ಚಲ್ಪಡುವುದು. ಎಲ್ಲರ ಕೈಗಳಿಗೂ ಹುದುವಾಗಿದೆ. ಕೆಂಪು ಕಲ್ಲುಗಳ ಸಹಿತ 9-4-0. ನಂಬ್ರ 225. ಕಲ್ಲುಗಳಿಲ್ಲದೆ ರೂ. 8—4—0.

ನಂಬ್ರ 448. ನಿಕ್ಕಲ್ ಕೇಸು, 8 ದಿವಸಗಳ ಲಿವರ್ ವಾಚು ರೂ. 8—14—0. ನಂಬ್ರ 449. ಬೆಳ್ಳಿಯ ಕೇಸು ರೂ. 14.



ನಂಬ್ರ 814. ಸರ್ವರಿಂದಲೂ ಆಕರ್ಶಿಸಲ್ಪಡುವಂಥಾ ರಿಸ್ಟ್‌ವಾಚು. ಒಳ್ಳೇ ಜುವೆಲ್‌ಗಳುಳ್ಳದ್ದು. ನಿಕ್ಕಲ್ ಕೇಸ್ ರೂ. 5—14—0. ನಂಬ್ರ 815. ಸಿಲ್ವರ್ ಕೇಸ್ ರೂ. 9—12—0. ಚರ್ಮದ ಕೈಕಟ್ಟು ಮುಫತ್ತು.



"ಜೋನ್ಸನ್" ಲಿವರ್.

ನಂಬ್ರ 984. ಈ ಕಾಲಕ್ಕೆ ಸರಿಯಾಗಿ ತಯಾರಿಸಿದ ಲಿವರ್ ವಾಚು. ಬಹಳ ನಾಜೂಕಾಗಿ ಮಾಡಲ್ಪಟ್ಟದೆ. ಒಳ್ಳೇ "ಲಿವರ್" "ಸ್ಪೆಶ್ಯಲ್ ಕ್ರಯ 5—14—0.



ನಂಬ್ರ 471. ನಿಕ್ಕಲ್ ಕೇಸು. ಹೆಂಗಸರು ಉಪಯೋಗಿಸತಕ್ಕ ಲೇಡಿಸ್ ವಾಚು. ಚೀಲ ಯಾ ರಿಸ್ಟ ರೂ. 4—8—0. ನಂಬ್ರ 472. ಅದೇ ಬೆಳ್ಳಿಯ ಮುಚ್ಚಳವಿದ್ದದ್ದು ರೂ. 7—14—0.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ದೊರಕುತ್ತಿವೆ. ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



KAMINIA OIL Regd
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA PERFUMERY Co BOMBAY

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ. ನಯವಾಗಿ ಚಕಚಕಿಸುವವು; ನಿಬಿಡವಾದ ನೀಲ ಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪು ಕೊಡುತ್ತೆ, ನೆತ್ತಿ ಬುರುಡೆಯನ್ನು ಶುದ್ಧ ಮಾಡುತ್ತೆ, ಸುಂಡಿನ ಹೊಟ್ಟನ್ನು ಅಣಗಿಸುತ್ತೆ, ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲರ್ಹವಾಗಿರುತ್ತೆ.

ಇದರ ಬೆಲೆ 1 ಸೀಸೆಗೆ ರೂ. 1. ಅಂಚೆಯ ವೆಚ್ಚ ಆಣೆ 4 ಬೇರೆ ತೆರಬೇಕು.
3 ಸೀಸೆಗಳಿಗೆ ರೂ. 2—10—0. ಅಂಚೆಯ ವೆಚ್ಚ ಆಣೆ 7.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ. ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆಯು ಉತ್ತಮೋತ್ತಮವಾದದ್ದೆಂದು ತಿಳಿಯಬೇಕು. ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರಿಯುತ್ತಿದ್ದಾರೆ.

ಅಮೇರಿಕದ ಡಾಕ್ತರರ ಅವಿಶ್ರಾಂತ ಪರಿಶ್ರಮದ ಅದ್ಭುತ ಚಮತ್ಕಾರ. ಅಪೂರ್ವ ಶಕ್ತಿಯನ್ನು ಕೊಡತಕ್ಕ **ಪ್ರೊ. ಜೇಮ್ಸರವರ ವಿದ್ಯುತ್ ಶಕ್ತಿವರ್ಧಕ ಗುಟಿಕಾ,** ದುರ್ಬಲತೆ, ಧಾತು ಕ್ಷೀಣತೆ, ಅಗ್ನಿಮಾಂದ್ಯ, ಖಾಸಶ್ವಾಸ, ಕ್ಷಯಾದಿ ರೋಗಗಳಿಂದ ಮೃತ್ಯುವಿನ ಕೋರೆಗಳಲ್ಲಿ ಸಿಲುಕಿರುವವರಿಗೆ, ಅಥವಾ ರೋಗಗಳಿಂದ ಮುಕ್ತರಾಗಿ ಸಾಯಲಿಚ್ಛಿಸುವವರನ್ನು, ಕೆಲಕಾಲ ಪರ್ಯಂತ ಅವರ ಮೃತ್ಯುವನ್ನು ಹಿಂದಟ್ಟಿ ಅವರ ಶರೀರದಲ್ಲಿಯ ಸರ್ವ ರೋಗಗಳನ್ನು ಹೋಗಲಾಡಿಸಿ, ವಿದ್ಯುಚ್ಛಕ್ತಿಯ ಯೋಗದಿಂದ ಪುನಃ ಸ್ವರ್ಗ ಸುಖವನ್ನು ಅವರಿಗೆ ಕೊಡಲಾಪ **ರಾಮಬಾಣದಂತಹ** ಹುಸಿಯಾಗದ ಉಪಾಯವೆಂದರೆ ಪ್ರೊ. ಜೇಮ್ಸರವರ ಶಕ್ತಿವರ್ಧಕ ಗುಳಿಗೆಗಳೇ. ಸ್ಮೃತಿಶಕ್ತಿಯ ನಾಶ, ಪಚನ ಕ್ರಿಯೆಯ ವಿಕಾರ, ಮೇಧಾಶಕ್ತಿಯ ಮೂಢತೆ, ಮುಖರೇಖೆಯ ಪಾಂಡುತೆ, ಅಪೌರುಷತೆ, ಸ್ವಪ್ನದೋಷ, ವಾಡಿಗಳ ಶಿಥಿಲತೆ, ಇವೇ ಮೊದಲಾದ ರೋಗಗಳಿಂದ ಉಂಟಾಗುವ ಮಾನಸಿಕ ಕ್ಲೇಶ ಮತ್ತು ನಿರಾಶೆಗಳನ್ನು ಕಿತ್ತುಹಾಕಲಿಕ್ಕೆ ಉಪಲಬ್ಧವಾಗಿರುವ ಉತ್ತಮೋತ್ತಮವಾದ ಔಷಧವನ್ನು ಉಪಯೋಗಿಸಿ ಸರ್ವ ಸಂಕಷ್ಟಗಳಿಂದ ಬಿಡುಗಡೆಯನ್ನು ಹೊಂದಿ, ಈ ಮಹೋಷಧದ ಗುಣಾನುವಾದವನ್ನು ಮುಕ್ತಕಂಠವಾಗಿ ಹಾಡುತ್ತಿರುವರು; ಆದರೆ ಈ ತನಕ ಸರ್ವ ರೋಗಗಳಿಗೆ ತುತ್ತಾಗಿರುವ ಮತ್ತು ದಾರುಣವಾದ ದುಃಖಗಳಿಂದ ಅಳಲುತ್ತಿರುವ ಲಕ್ಷೋಪಲಕ್ಷ ಅಭಾಗಿ ಜನರಿಗೆ ನಮ್ಮ ವಿನಂತಿಯು ಇದೇ ಒಂದೇಯೊಂದು ಸರ್ವ ರೋಗಸಂಹಾರಿಣಿಯಾಗಿರುವ ಪ್ರೊ. ಜೇಮ್ಸರವರ ಈ ವಿದ್ಯುತ್ ಶಕ್ತಿವರ್ಧಕ ಗುಳಿಗೆಗಳನ್ನು ಸೇವಿಸಿ ನೋಡಿರಿ. ಇದಕ್ಕೆ ಸಾವಿರಾರು ಸಿಫಾರಸ್ ಪತ್ರಗಳು ಬಂದಿವೆ.



40 ಗುಳಿಗೆಗಳಿರುವ ಸೀಸೆ ೧ಕ್ಕೆ ರೂ. 2—0—0.
ತಪ್ಪಾಲು ಖರ್ಚು... ... ,, 0—4—0.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗುಣವಾಗುವದು ಉರಿಯುವದಿಲ್ಲ. ಶೀಶೆ ೧ಕ್ಕೆ 0—4—0.

ಕಾಮಿನಿಯಾ ಕೋಲ್ಡ ಕ್ರೀಮ್.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದ ಮೇಲಿರುವ ಮುಡಮೆಗಳು, ಕಪ್ಪು ಕಲೆಗಳು ಹೋಗುವದು. ಇದಕ್ಕೆ ಪರಿಮಳವು ಇದೆ. ಶೀಶೆ ೧ಕ್ಕೆ 0—12—0.

ಕಾಮಾಟೋನ್.

ಧಾತುಪುಷ್ಟಿ, ಧಾತುವೃದ್ಧಿಯಾಗುವದು.
ಶೀಶೆ ೧ಕ್ಕೆ 2—0—0.

ಸರಸಪರಿಲಾ.

ರಕ್ತಶುದ್ಧಿಗೆ ಶೀಶೆ ೧ಕ್ಕೆ 1—0—0.

ವಿದ್ಯುಚ್ಛಕ್ತಿ ಮಾತ್ರೆ.

ಸ್ತ್ರೀಯರ ರಜೋದರ್ಶನದಲ್ಲಿ ಆಗುವ ಹೊಟ್ಟೆನೋವಿಗೆ. ೨೫ ಮಾತ್ರೆ ಶೀಶೆ ೧ಕ್ಕೆ 1—4—0.

ಓಡ್‌ಮೆನ್ಸ್ ಕಫಪೇಯೂಷ.

ಶ್ವಾಸ, ಖಾಸ, ಕೆಮ್ಮು ಇವುಗಳಿಗೆ ಸಿದ್ಧೌಷಧ.
ಶೀಶೆ ೧ಕ್ಕೆ 1—4—0.

ರುಬ್ಯಾಡ್.

ವಿರೇಚನಕ್ಕೆ ಔಷಧಿ 0—10—0.

ಟ್ರೇಜೋ ಟೆಬ್ಲೆಟ್ಸ್.

ಶಿರೋವೇದನೆಗೆ ದಿವ್ಯ ಔಷಧ ಶೀಶೆ ೧ಕ್ಕೆ 0-12-0.

ಕ್ಯುರೇಲಾಯಿನ್.

ಪ್ರಮೇಹಕ್ಕೆ. ಶೀಶೆ ೧ಕ್ಕೆ 1—8—0.

ಒಡ್‌ಮನ್ಸ ಮಲೇರಿಯಸ್ ಪಿಲ್ಸ್.

ಎಲ್ಲಾ ತರದ ಜ್ವರದ ಮೇಲೆ; ಶೀಶೆ ೧ಕ್ಕೆ 1—0—0.

ಕರ್ಣರೋಗ ಚಿಕಿತ್ಸಾ.

ಕಿವಿಯಲ್ಲಿ ಉಂಟಾಗುವ ಸ್ಫುರಣ, ಕಜ್ಜಿ, ಕೀವು, ಸೋರುವಿಕೆಗೆ. ಶೀಶೆ ೧ಕ್ಕೆ 0—8—0.

ದಂತಮಂಜನ.

ಡಬ್ಬಿ ೧ಕ್ಕೆ 0—2—0.

ಕಜ್ಜಿ ಮುಲಾಮು.

ಶೀಶೆ ೧ಕ್ಕೆ 0—3—0.

ಕೊಲೆರಾ ರೋಗದ ಔಷಧಿ.

ಶೀಶೆ ೧ಕ್ಕೆ 0—6—0.

ಅತೀ ಮನೋಹರವಾದ ಸುರಭಿಯು. (ರಜಿಸ್ಟರ್ಡ್)

ಒಟ್ಟೊ—ದಿಲ್ ಬಹಾರ್!!

ಈ ಸುಗಂಧ ದ್ರವವು ಮಧುರ—ಕೋಮಲ—ಚಿರಸ್ಥಾಯಿ—ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ—ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ಆಣೆ 8. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ ಆಣೆ 12. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2. ಅಂಚೆಯ ವೆಚ್ಚ ಬೇರೆ ಆಣೆ 4. ಒಟ್ಟೊ—ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0—12—0.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

ಒಂದು ತಿಂಗಳು ಮಾತ್ರ! ಬಹುಮಾನ! ತ್ವರೆಮಾಡಿರಿ!

ವಿವೇಕಚೂಡಾಮಣಿ

ಶ್ರೀಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮಾವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯವೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟ ಸಂಖ್ಯೆಗಳು ೪೪೮. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೋ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ ರೂ. ೨—೪—೦, ಹಾಸಲು ೪ ಆಣೆ.

ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಸಟೀಕಾ ಮುಕುಂದಮಾಲೆ ಸ್ತೋತ್ರ ಒಂದು, ಮಹಿಂನಾ ಸ್ತೋತ್ರ ಒಂದು ಈ ಎರಡು ಪುಸ್ತಕಗಳನ್ನು ಬಹುಮಾನವಾಗಿ ಕೊಡುತ್ತೇವೆ.

ಕಥಾಕಲ್ಪವೃಕ್ಷ.

ಪೂರ್ವಕಾಲದ ಕವೀಶ್ವರರ ವೃತ್ತಾಂತಗಳಿಂದಲೂ, ಮನೋಹರವಾದ ನೀತಿಕಥೆಗಳಿಂದಲೂ ಕೂಡಿ ಗುನುಷ್ಯ, ಪಶು, ಪಕ್ಷಿ, ಕ್ರಿಮಿಕೀಟಗಳ ಸ್ವಭಾವಧರ್ಮಗಳನ್ನು ತಿಳಿಸುವ, ವಾತಾವರಣ, ವಿದ್ಯುಲ್ಲತೆ ಮುಂತಾದ ತತ್ವಗಳ ವರ್ಣನೆಯುಳ್ಳ ಮತ್ತು ಯಂತ್ರಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರಗಳನ್ನು ವರ್ಣಿಸುವ ಗ್ರಂಥ ಅತ್ಯಂತ ಉಪಯೋಗವಾದದ್ದು. ಕ್ರಯ ರೂ. ೦—೧೦—೦. ಹಾಸಲು ೦—೩—೦.

ರಘುಕುಲಚರಿತ್ರೆ.

ಕಾಳಿದಾಸ ಮಹಾಕವಿಯ ರಘುವಂಶ ಮಹಾಕಾವ್ಯವೇ ‹‹ರಘುಕುಲಚರಿತಂ" ಎಂಬ ಈ ಕಥೆ. ಮೊದಲನೇ ಭಾಗ ದಿಲೀಪನ ವಶಿಷ್ಠಾಶ್ರಮ ಪ್ರಯಾಣ, ನಂದಿನೀಧೇನುವಿನ ವರಪ್ರಸಾದ, ರಘುರಾಜಾಭಿಷೇಕ, ರಘುದಿಗ್ವಿಜಯ, ಅಜನ್ಸಯಂವರಾಬಿಗಮನ, ಸ್ವಯಂವರವರ್ಣನ, ಅಜಪಾಣಿಗ್ರಹಣ, ಅಜವಿಲಾಪ ಇಂತು ಎಂಟು ಬಗೆಯ ವಿಚಿತ್ರ ಚರಿತ್ರೆಯನ್ನೊಳಗೊಂಡಿದೆ.

ಕ್ರಯ ರೂ. ೦—೮—೦. ಹಾಸಲು ೦—೨—೦.

ಸಟೀಕಾಬ್ರಹಜ್ಜಾತಕ

ಕ್ರಯ ರೂ. ೫—೦—೦. ಹಾಸಲು ರೂ. ೦—೮—೦.

ವಿಳಾಸ:— ಎಚ್. ಎನ್. ರಾವ್ ಆಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original
BABA
BUDAN-GHIRY
COFFEE POWDER
PROPRIETORS
J. S. SOUZA & Co
MANGALORE

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರ

ಬರ್ಮಿಸ್ ಬ್ಯೂಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.



ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲೆಪಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವವಷ್ಟು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ಯಾಸ್.

PARADISE
THE FLORAL
PERFUMERY Co.,
BOMBAY. 2.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಜಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಜಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್‌ಫ್ಯುಮರಿ ಕೆಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಹುರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ „ „	6-0-0	B ಅರಗಜ „ „	1-0-0
ಕಸ್ತೂರಿ ಬತ್ತಿ „ „	3-0-0	ಕಸ್ತೂರಿ ಬಿಲ್ಲೆ „ „	2-0-0
ಜವಾಜಿ ಬತ್ತಿ „ „	2-0-0	ಜವಾಜಿ ಬಿಲ್ಲೆ „ „	1-0-0
ಪುಣಗಿನ ಬತ್ತಿ „ „	1-8-0	ಕೇಸರಿ ಬಿಲ್ಲೆ „ „	0-8-0
A ಪನ್ನೀರ್ ಬತ್ತಿ „ „	0-12-0	ತಾಂಬೂಲ ರತ್ನ ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ „ „	0-6-0	ದಶಾಂಗ ಡಬ್ಬಿ 1ಕ್ಕೆ	0-4-0

ಮೇನೇಜರ್, ‹‹ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಸ್ನೇಹಲತಾ

ಮಸ್ತಕತಾಪಹಾರಿಣೀ ತೈಲ.

ತಲೆನೋವು, ತಲೆಭಾರ, ನಿದ್ರಾಭಂಗ, ಕಣ್ಣುನೋವು, ಹೆಂಗಸರ ತಲೆಶಿಡಿತ, ತಲೆಕುತ್ತು ಪರಿಹಾರ. ಕೇಶವು ರಮ್ಯವಾಗಿ ಉದ್ದುದ್ದ ಬೆಳೆಯುವುದು. ಬಾಲ ನರೆ ಕಪ್ಪಾಗುವುದು. ಉಷ್ಣದಿಂದುಂಟಾದ ತುರಿಕಜ್ಜಿ ಮಾಗುವುದು. ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ತೈಲವನ್ನು ಒಂದು ಸಲ ಉಪಯೋಗಿಸಿ ನೋಡಿರಿ!

ಕ್ರಯ 4 ಔನ್ಸಿನ ಸೀಸೆಗೆ 0—12—0. ಡಜನ್ ಬಾಟ್ಲಿಗಳಿಗೆ ರೂ. 8. ವಿ. ಪಿ. ಬೇರೆ.

ಸರ್ವರೋಗಪರಿಹಾರವಾದ ನೀಲಗಿರಿಯ ಯುಕಲಿಪ್ಟಸ್ ತೈಲ—ಔನ್ಸ್ ಸೀಸೆಗೆ 5 ಆಣೆ. ಡಜನಿಗೆ ರೂ. 3. ವಿ. ಪಿ. ಚಾರ್ಜು ಪ್ರತ್ಯೇಕ.

ಇಕ್ಲಿಪ್ಸ್ ರಬ್ಬರ್ ಮೊಹರುಗಳೂ ಫೋಟೋ ಎನ್‌ಲಾರ್ಜಮೆಂಟುಗಳೂ ಅಗ್ಗ ದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಹೋಪ್‌ಕೊಟೇಜು,
ಕಂಕನಾಡಿ ಪೋಸ್ಟು.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

(ಧಾತುಪೌಷ್ಟಿಕ ವಜ್ರಾಂಗಪಾಕ.)

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು, ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ. ೩—೮—೦, ಒಮ್ಮೆಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗನಾಶಕ ಗುಳಿಗೆ ೪೦ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೆಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಸಿಗುತ್ತವೆ. ಅನುಪಾನ ಪತ್ರಿಕೆ ಬಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— ವಿ. ಎಸ್. ಮೋಡಕ,
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ತ್ರಿಕಾಲದರ್ಶಿ ಐನ.

ಭೂತ, ವರ್ತಮಾನ, ಭವಿಷತ್ ಕಾಲದಲ್ಲಿ ಆದ, ಆಗುವ ವಿಷಯಗಳನ್ನು ತಿಳಕೊಳ್ಳಬೇಕೆಂದಿದ್ದರೆ, ನಮ್ಮ ಪ್ರಖ್ಯಾತಿಪಟ್ಟ "ತ್ರಿಕಾಲದರ್ಶಿ ಐನ"ವನ್ನು ಕೊಂಡುಕೊಳ್ಳಿರಿ. ಈ ಐನವು ಹೂತಿಟ್ಟ ನಿಧಿ, ವ್ಯಾಪಾರದಲ್ಲಿ ಲಾಭ ಮತ್ತು ನಷ್ಟ, ಕೋರ್ಟಿನಲ್ಲಿ ಕಾರ್ಯಸಿದ್ಧಿ ಯಾ ಅಪಜಯ, ಪರೀಕ್ಷೆಯ ಫಲವನ್ನು ಮುಂದಾಗಿ ಹೇಳುವುದಲ್ಲದೆ ಮೃತ ಹೆತ್ತವರ ವಿಷಯವಾಗಿ ಹೆಂಡತಿ, ಮಗ, ಆಸ್ತಿ, ಕೆಲಸ, ಮನಸ್ಸಿನ ಅನುಮಾನ, ಜೀವಮಾನದಲ್ಲಿ ಎಂದಾದರೂ ನೀನು ಐಶ್ವರ್ಯವಂತನಾಗುತ್ತೀಯೋ, ಯಾ ನಿನಗೆ ದೇಶದಿಂದ, ಪರದೇಶದಿಂದ ಐಶ್ವರ್ಯವು ಬರುತ್ತದೋ ಎಂಬದನ್ನು ತಿಳಿದು ಹೇಳುವುದು. ನಿನ್ನ ದೂರದಲ್ಲಿರುವ ಸ್ನೇಹಿತರು, ಸಂಬಂಧಿಕರ ವಿಷಯವಾಗಿ ಈ ಐನವು ತಿಳಿಸುವುದು. ಪ್ರಸಿದ್ಧ ಪುರುಷರಿಂದ ಸರ್ಟಿಫಿಕೇಟುಗಳು ದೊರಕಿರುವವು.

ನಂಬ್ರ 1. ಸಾಧಾರಣ ಗ್ಲಾಸ್ ಐನ ರೂ. 2—9—0, ನಂಬ್ರ 2. ಕ್ರಿಸ್ಟಲ್, ಗ್ಲಾಸ್ ಐನ ರೂ. 3—9—0, ನಂಬ್ರ 3. ದೊಡ್ಡ ಮತ್ತು ಬಹಳ ಕಾಲ ಉಳಿಯುವ ಐನ ರೂ. 6—0—0. ಪೋಸ್ಟೇಜು ಮತ್ತು ಪೇಕಿಂಗ್ ಸಹಿತ. ಖಾಯಿಸ್ ಆಗದಿದ್ದ 1 ಮತ್ತು 2ನೇ ನಂಬ್ರದ ಐನವನ್ನು 24 ತಾಸಿನೊಳಗೆ ಹಿಂದೆ ಕಳುಹಿಸಿದರೆ ರೂ. 2 ಮತ್ತು ರೂ. 2—8—0 ಕೊಟ್ಟು ಹಿಂದೆ ತಕ್ಕೊಳ್ಳುವೆವು. 3ನೇ ನಂಬ್ರದ ಐನವನ್ನು ಹಿಂದೆ ಪಡೆಯಲಾರೆವು.

Patel Ashabhai Vagjibhai,
Post Karamsad Dt. KAIRA,
B. B. & C. I. RAILWAY.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಬೇಗನೇ ಕೊಂಡುಕೊಳ್ಳಿ! ಬೇಗನೇ ಕೊಂಡುಕೊಳ್ಳಿ!!

ಇದೇ ಸುಕಾಲ!

ನಮ್ಮ ಕೂಡೆ ಪರಿಷ್ಕೃತ ಕೆಟಲಾಗುಗಳಾಗಲೀ ಸುಳ್ಳು ಸರ್ಟಿಫಿಕೇಟುಗಳಾಗಲೀ ಇಲ್ಲ. ಇತರರನ್ನು ದೂರಿ ನಮ್ಮನ್ನು ಹೊಗಳಿಕೊಳ್ಳುವುದೂ ಇಲ್ಲ. ನಮ್ಮ ವಾಚುಗಳನ್ನು ಸರ್ವರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದ ಬರೇ ಕೊಂಚ ಲಾಭದಿಂದ ನಾವು ವಾಚುಗಳನ್ನು ಮಾರುವೆವಷ್ಟೆ.

ನಂ. 1 ಪರಿಷ್ಕೃತವಾದ ಹೊಸನಮೂನೆಯ ಬೆಳ್ಳಿ ರಿಸ್ಟ್ ವಾಚು ಚರ್ಮದ ಕೈಕಟ್ಟು ಸಹಿತ, 10 ವರುಷಗಳ ಗ್ಯಾರಂಟು ರೂ. 5-8-0. ನಂ. 4 ಮಧ್ಯಮ ಸ್ಸೈಜು ಗನ್‌ಮೆಟಲ್ ವಾಚು 7 ವರುಷಗಳ ಗ್ಯಾರಂಟು ರೂ. 5-8-0. ನಂ. 5 ಲಿವರ್ ರೊಸ್ಕೊಪ್ ವಾಚು 1ನೇ ವಿಧ 20 ವರುಷಗಳ ಗ್ಯಾರಂಟು ರೂ. 7-8-0. ನಂ. 6 ಲಿವರ್ ರೊಸ್ಕೊಪ್ ವಾಚು 2ನೇ ವಿಧ 10 ವರ್ಷಗಳ ಗ್ಯಾರಂಟು ರೂ. 4-8-0. ನಂ. 10 ಎಲಾರ್ಮ್ ಟ್ಯಾಮ್‌ಪೀಸು 3 ವರುಷಗಳ ಗ್ಯಾರಂಟು ರೂ. 3-8-0. ನಂ. 11 ಬಿ ಟ್ಯಾಮ್‌ಪೀಸು 1ನೇ ವಿಧ 3 ವರುಷಗಳ ಗ್ಯಾರಂಟು ರೂ. 2-4-0. ನಂ. 13 ಕೆಲೆಂಡರ್ ಎಲಾರ್ಮ್ ಟ್ಯಾಮ್‌ಪೀಸು 6 ವರುಷಗಳ ಗ್ಯಾರಂಟು ರೂ. 4-8-0. ನಂ. 15. 8 ದಿವಸಗಳಿಗೊಂದಾವರ್ತಿ ಕೀಲಿ ಕೊಡುವ ಗನ್‌ಮೆಟಲ್ ವಾಚು 6 ವರುಷಗಳ ಗ್ಯಾರಂಟು ರೂ. 11. ನಂ. 16. 8 ದಿವಸಗಳಿಗೊಂದಾವರ್ತಿ ಕೀಲಿ ಬೆಳ್ಳಿ ವಾಚು 6 ವರುಷಗಳ ಗ್ಯಾರಂಟು ರೂ. 16-8-0. ನಂ. 17. 8 ದಿವಗಳಿಗೊಂದಾವರ್ತಿ ಕೀಲಿ ಕೊಡುವ ಜಾಪಾನ್ ಗಡಿಯಾರ ತಾರೀಕು ಸಹಾ ತೋರಿಸುವಂಥಾದ್ದು 10 ವರುಷಗಳ ಗ್ಯಾರಂಟು ರೂ. 12-8-0. ನಂ. 18. ಜೋಕರ್ ಎಲಾರ್ಮ್ ಟ್ಯಾಮ್‌ಪೀಸು 10 ವರುಷಗಳ ಗ್ಯಾರಂಟು ರೂ. 6-8-0.

ಮೇಲೆ ಹೇಳಿದ ಎಲ್ಲಾ ವಾಚು ಗಡಿಯಾರಗಳು ಗಟ್ಟಿಯಾದ ಲೋಹಗಳಿಂದ ಮಾಡಲ್ಪಟ್ಟದ್ದು. ಸಾಧಾರಣ ಲೋಹಗಳಿಂದ ಮತ್ತು ಹಿತ್ತಾಳಿಯಿಂದ ಮಾಡಲ್ಪಟ್ಟ ವಾಚು ಗಡಿಯಾರಗಳು ನಮ್ಮಿಂದಲೂ ಇತರರಿಂದಲೂ ಮೇಲೆ ಹೇಳಿದ ಕ್ರಯದ ಅರ್ಧಕ್ಕೆ ಕೊಡೋಣಾಗುವವು. ಪರಂತು, ಇವು ಗಟ್ಟಿಯಲ್ಲ.

ಬಹಳ ಅಗ್ಗ—ಕುಪನ್ ಕ್ರಮ—ಬೇಗನೇ ಕೊಂಡುಕೊಳ್ಳಿ!

6 ರೂಪಾಯಿಯ ವಾಚು, 3 ರೂಪಾಯಿಯ ಟ್ಯಾಮ್‌ಪೀಸು, ಬೀ ಟ್ಯಾಮ್‌ಪೀಸು, ಕೇಶರಂಜನ ಎಣ್ಣೆ ಇತ್ಯಾದಿಗಳು 4 ಆಣೆ 2 ಆಣೆಗೆ ದೊರೆಯುವ ವಿಧಾನವನ್ನು ಪತ್ರ ಬರೆದು ತಿಳಕೊಳ್ಳಬಹುದು.

ವಿಳಾಸ:—ನವಾಬ ಮಯಾನ್ನ ಎಂಡ್ ಕೊ.,
ವಾಚು ಮತ್ತು ಗಡಿಯಾರ ವ್ಯಾಪಾರಸ್ಥರು.
ಕಾದಿರಿ, ಅನಂತಪುರ ಡಿಸ್ಟ್ರಿಕ್ಟ್.

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರ್‌ವಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.



ಅನ್ಸೋನಿಯ ಕಂಪೆನಿಯ ಜಿನ್ಯಾನ್ ಬಿ ಟ್ಯಾಮ್‌ಪೀಸ್, ನಿಕ್ಕಲ್‌ಕೇಸ್, ಹಿಂದಿನಿಂದ ಕೀಲಿ ಕೊಡುವುದು. ಎತ್ತರಿಸಲ್ಪಟ್ಟ ಮುಖಬಿಲ್ಲೆ, ಪ್ರತಿ ಒಂದು ಕುಟುಂಬಕ್ಕೆ ಸುಲಭ ದರದಲ್ಲಿ ದೊರಿಯುವ ಉತ್ತಮ ಗಡಿಯಾರ, ಇದರ ಪ್ರಯೋಗವು ಈಗ ಸರ್ವಸಾಧಾರಣ ಎಲ್ಲರಿಗೂ ಗೊತ್ತದೆ. ಇದನ್ನು ಕೊಂಡುಕೊಳ್ಳುವವರ ಸಂಖ್ಯೆ ಪ್ರತಿದಿನವೂ ಹೆಚ್ಚಾಗುತ್ತಿದೆ.

ನಿಕ್ಕಲ್‌ಕೇಸ್ ರೂ. 2—8—0 (ದೊಡ್ಡ ಅಂಕೆ). ಎಲಾರ್ಮ್ ಸಹಿತ ರೂ. 4—8—0. ಟಪ್ಪಾಲು ಚಾರ್ಜು ಬೇರೆ.

ಸುಪಿರಿಯರ್ ರೈಲ್ವೇ ರೆಗ್ಯೂಲೇಟರ್.



ನಿಕ್ಕಲ್ ಬೆಳ್ಳಿಕೇಸ್, ಓಪನ್‌ಫೇಸ್, ಕೀಲೆಸ್, ದೊಡ್ಡ ಅಂಕೆಗಳು, ಬಲವಾದ ಮುಳ್ಳು, ನಿರ್ಭಿಡೆಯಾಗಿ ಪ್ರಯೋಗಿಸಬಹುದು. ಬಹಳವಾಗಿ ಮಾರುತ್ತಿರುವೆವು. ಅಗ್ಗ ಮತ್ತು ಚಲೋ ಗಡಿಯಾರ. ವ್ಯಾಟ್‌ಮೆಟಲ್ ಸರಪಣಿ ಸಹಿತ.

ರೂ. 2—15—0. ಟಪ್ಪಾಲು ಚಾರ್ಜು ಬೇರೆ.

ದಿ ಬೊಂಬೆ ಪೊಪ್ಯುಲರ್ ಏಜನ್ಸಿ,
ಡಾರವಿ, ಬೊಂಬೆ.
THE BOMBAY POPULAR AGENCY,
Dharvi Bombay.

ದೇಶಬಾಂಧವರೇ! ಇತ್ತ ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್
ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 96,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ. ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೋಜಿಟ್ ಹಣವನ್ನು ಗವರ್ನಮೆಂಟಿಗೆ ಕಳದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲ್ಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!! ಮದುವೆಯ ಮುಂಚಿತವಾಗಿಯೇ ತೆತ್ತ ಹಣದ ದುಬಾರಿ ಹಣವು ಇಲ್ಲೇ ಕೊಡಲ್ಪಡುವುದು.

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಿಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ತರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,
ಕನ್ನಡ, ಮೈಸೂರು ಮತ್ತು ಕೊಡಗುಸಂಸ್ಥಾನದ ಮುಖ್ಯ ಏಜಂಟರು, ಉಡುಪಿ (ದ. ಕನ್ನಡ

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸಪ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ
ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಳಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೇಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ, ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"
ಮೈಸೂರು.

ಡೋಂಗರೆ
ಇವರ
ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದ್ದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ. ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪ್ಪಾಲ ಖರ್ಚು 0–4–0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	200,000—0—0
Paid up Capital	175,000—0—0
Deposits	503,278—3—5
Reserve Fund	27,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively. Terms on application.

Short-notice Deposits requiring one week's notice of withdrawal after one month received @ 2½% per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	200,000—0—0
ಆಗತ ಮೂಲ ಧನವು „	175,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	503,278—3—5
ರಕ್ಷಿತ ಧನವು	27,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಯೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

“ಕರೆಂಟ್ ಎಕೌಂಟ್” ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. April 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ, ನಿಮಿರಾಯನ ಶರೀರತ್ಯಾಗ, ಜನಕವಂಶ, ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್‌ಡಿಪೊ, ಬಳ್ಳಾರಿ.

Canarese Novels Etc.
ಕನ್ನಡ ಪುಸ್ತಕಗಳು.

ಮ। ರಾ। ರಾ। ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.		ರೂ. ಆ.
ವಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ. ಮು.	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ನವಾಬನಂದಿನಿ ಡಿಟೊ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ. ಮು.	0—3
ಸೀತಾರಾಮ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ. ಮು.	0—3
ವಿಷವೃಕ್ಷ— ದ್ವಿ. ಮು.	1—4	ಯುಗುಳಾಂಗುರೀಯ „	0—3
ದೇವೀ ಚೌಧುರಾಣಿ-ಡಿಟೊ	1—4	ಭ್ರಾಂತಿವಿಲಾಸ „	0—8
ರಾಜಸಿಂಹ-(ಇತಿಹಾಸ)	1—5	ನೊಂದನುಡಿ [ಸ್ತ್ರೀನೀತಿ]	0—2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ಮೃಣ್ಮಯಿ-ಡಿಟೊ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿರತ್ನನಾಟಿಕರತ್ನ ಡಿಟೊ	0—7
ಮನೋರಮ [ಪತ್ತೇದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit-Bits]	0—8
ಜಿಂವಳ-ಡಿಟೊ-ದ್ವಿ. ಮು.	0.10	ನೀರದೆ [ಹೊಸ ಕಾದಂಬರಿ]	0—8
ಸಾಧನೆ. ಡಿಟೊ	0—8	ಭಾರತಮಹಿಳಾ [ಸ್ತ್ರೀನೀತಿ]	0—8
ಕೊಹಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0.11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3	ಇತ್ಯಾದಿ.	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0—8	ನಿರ್ಭಾಗ್ಯಚಾಣಿಕ್ಯ [ಹೊಸಕಾದಂಬರಿ]	0—6
ಕ. ಕವಿಚರಿತೆ [ಪೂರ್ವಭಾಗ]	3—2	ಅನಂಗಸುಂದರಿ ಡಿಟೊ	0—8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾಮಾಧವಿ ಡಿಟೊ	0—8
ಕಲಾನಾಥ ಡಿಟೊ	0—8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0—9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0—9
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0—8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4—0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8	ಹರಿಕಥಾಮೃತಸಾರ ಡಿಟೊ	1—6
ಸನ್ಯಾಸಿ [ಹೊಸ ಕಾದಂಬರಿ]	0—6	ಚದುರಂಗಬೋಧಿನಿ	0—3
ಮೃತ್ಯು ಪರೀಕ್ಷೆ ಡಿಟೊ	0—2	ಸರ್ವೇಮ್ಯಾನ್ಯುಯಲ್	0—5
ಬೃಂದಾವನ ಡಿಟೊ	0—2	ನ್ಯಾಯದರ್ಪಣ [ಲಾ]	1—0
ಸುಮನೋರಮ ಡಿಟೊ	0—2	ವ್ಯವಹಾರ ದೀಪಿಕೆ [ಲಾ]	3—0
ಮಾಲಿನಿ ಡಿಟೊ	0—2	ಶಾಕುಂತಲ ನಾಟಕ ದ್ವಿ. ಮು.	0—9
ಪ್ರೇಮಪಿಪಾಸೆ ಡಿಟೊ	0—2	ಶೂರಸೇನಚರಿತ್ರೆ ನಾಟಕ ಡಿಟೊ	1—0
ವಿರಕ್ತಳಾದ ಸೌದಾಮಿನಿ ಡಿಟೊ	0—5	ಚಂಡಕಾಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0—2	ರಾಮವರ್ಮ ಲೀಲಾವತೀ ನಾಟಕ	0—8
ಚಾತುರ್ಯವತಿ ಡಿಟೊ	0—2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0—2	ಚಂಡೀಮದಮರ್ದನ ನಾಟಕ	0—5
ವಿಲಕ್ಷಣಶಿಕ್ಷಣ ಡಿಟೊ	0—2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0—2	ಭರ್ತೃಹರಿ ನಿರ್ವೇದ ನಾಟಕ	0—3
ಭಾನುಮತಿ ಡಿಟೊ	0—2	ನಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0—2	ಧೃವಂಜಯ [ನಾಟಕ]	0—4
[illegible]ಂತಾಪಕ ಡಿಟೊ	0—4	ಸೀತಾಪರಿಣಯ [ನಾಟಕ]	0—4
ಚಂದ್ರಮತಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—
ಎಸ್. ಟಿ. ಎ, ಬೆಂಗಳೂರು ಸಿಟಿ.

ಪ್ರಸಿದ್ಧ ಕನ್ನಡ ಗ್ರಂಥಗಳು

1. **ಜಪಾನರುನ್ನತಿಗೆ ಮೂಲಾಧಾರ:**—ನವನಾಗರೀಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಅತ್ಯಾಶ್ಚರ್ಯಕರವಾದೀ ಕಥೆಯನ್ನು ಓದಬೇಕು. ಇಂತಹ ಸುಬೋಧಕವಾದ ಕಣ್ಣಿಗಾನಂದವನ್ನುಂಟುಮಾಡುವ ಗ್ರಂಥವನ್ನು ಹಿಂದೆ ನೀವು ಯಾವಾಗಲೂ ನೋಡಿಲ್ಲ. ಮೈಸೂರು ಮಹಾರಾಜರಿಗೆ “ಡೆಡಿಕೇಟ್” ಮಾಡಲ್ಪಟ್ಟಿದೆ. ಮೈಸೂರು ಮಹಾರಾಜರ, ಯುವರಾಜರ ಮತ್ತು ಕಥೆಯ ಸಂದರ್ಭಗಳಿಗೆನುಕೂಲಿಸುವಂತೆ, ನೇತ್ರಾನಂದಕರವಾದ 12 “ಹಾಪ್‌ಟೋನ್” ಚಿತ್ರಗಳೂ ಇದರಲ್ಲಿವೆ. ಮೈಸೂರು ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಸ್ವಧರ್ಮ ರಕ್ಷಣೆಗಾಗಿ ರಾಜನೂ, ರಾಣಿಯೂ, ಸೇನಾಪತಿಯೂ, ಸತ್ಯಜಿಯಾದ ಕುರುಬನೂ, ಪುರೋಹಿತನೇ ಮುಂತಾದವರು ಪ್ರಾಣಾರ್ಪಣವಂ ಮಾಡುವ ಸಂದರ್ಭಗಳನ್ನೂ ಮತ್ತು ಅವರುಗಳೆಲ್ಲರೂ ದೇವರುಗಳಿಂದ ಬದುಕಿಸಲ್ಪಟ್ಟ ಬಳಿಕ ರಾಜನಿಗೂ, ಕನ್ಯೆಗೂ ವಿವಾಹ ಪಟ್ಟಾಭಿಷೇಕಗಳು ನಡೆವುದನ್ನೂ, ಅವುಗಳ ಕಣ್ಣೆದುರಿಗೆ ನಡೆದಂತೆ ತೋರಿಸುವ ಫೋಟೋಗ್ರಾಫಿನ ಮೇಲೆ ನಿರ್ಮಿಸಿದ ಸಹಜ ಚಿತ್ರಗಳನೂ ನೋಡಿ ಯಾರ ಹೃದಯವು ತಾನೇ ಕರಗದೇ ಇರವುದು? ಕ್ರಯ ವಿ. ಪಿ. ಪ್ಯಾಕಿಂಗ್ ಸಹಿತ:—ಚಿನ್ನದ ಗಿಲ್ಟಿನದು ರೂ. 2—4—0; ಅವ್ವಲ್ ಗ್ಲೇಜ್ ರೂ. 1—8—0; ದುಯ್ಯಂ 1—4—0.

2 **ಧರ್ಮಪದ:**—17 ಕೋಟಿ ಮುಸಲ್ಮಾನರಿಗೆ “ಖೊರಾನೂ” 32 ಕೋಟಿ ಹಿಂದೂಗಳಿಗೆ “ಭಗವದ್ಗೀತೆಯೂ” 40 ಕೋಟಿ ಕ್ರಿಸ್ತರಿಗೆ “ಬೈಬಲೂ” ಹೇಗೆ ಪೂಜ್ಯವಾದ ಗ್ರಂಥಗಳೋ, 55 ಕೋಟಿ ಬೌದ್ಧರಿಗೆ ಈ ಗ್ರಂಥವು ಹಾಗಿದೆ. ಸಾವಿರಾರು ಗ್ರಂಥಗಳಿಂದ ಪಡೆವ ಜ್ಞಾನವನ್ನು ಇದೊಂದರಿಂದ ಪಡೆಯಬಹುದು. ಮೈಸೂರು ಮಹಾರಾಜರ; ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಜಪಾನ್‌ನಲ್ಲಿರುವ ಬುದ್ಧವಿಗ್ರಹದ ನೇತ್ರಾನಂದಕರವಾದ ಭಾವಚಿತ್ರಗಳಿವೆ. ಕ್ರಯ ವಿ. ಪಿ. ಸಹಿತ ರೂ. 1.

2. **ಬೌದ್ಧಾವತಾರ:**—ಲೋಕೋದ್ಧಾರಕನಾದ “ಶ್ರೀ ಗೌತಮಬುದ್ಧ ಭಗವಂತನ” ಅತ್ಯಾಶ್ಚರ್ಯಕರವಾದ ಜನ್ಮ ಚರಿತ್ರೆ. ಕ್ರಯ ವಿ. ಪಿ. ಸಹಿತ 0-6-0.

ವಿಳಾಸ:— 1. ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು,
ಚಾಮರಾಜ ಪೇಟೆ, ಮೈಸೂರು.
2. ಶ್ರೀವಾಣೀವಿಲಾಸ ಬುಕ್ ಡಿಪೋ, ಮೈಸೂರು.
3. ದಿ. ಜನರಲ್ ಏಜನ್ಸಿ, ಮೈಸೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡೆಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.
3 ಡಬ್ಬಿಗಳಿಗೆ 1—0—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0.

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

AMRUTANJAN
BOMBAY

ತಲೆನೋವು, ವಾತ,
ಸಂಧಿ ವಾತ, ಶಿರೋಭಾರ,
ಅರ್ಧಾಂಗವಾಯು,
ಶೀತ, ಕೆಮ್ಮು

ಎದೆ ನೋವು,
ಸೊಂಟದ ನೋವು, ಕಫ,
ಹಲ್ಲು ನೋವು, ಘಾಯ,
ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನು ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು 0-8-0 ಡಜನ್ ಒಂದಕ್ಕೆ 5-4-0 ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ.
ಮರ್ಕೆಂಟಾಯಿಲ್ ಮಿಶನ್ ಬ್ರೆಂಚ್.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಪರ್ಲ್ಸ್ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.
ಕೊಚ್ಚಿಕಾರ್ ಬ್ರದರ್ಸ್.
ಕುಮಟೆ ಆರ್. ಪಿ. ಪೈ ಎಂಡ್ ಕಂಪನಿ.

ಅಮೃತಾಂಜನದ ಸೆಂಪುಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಟಿನಲ್ಲಿ ದೊರೆಯುವದು.

ಅಮೃತಾಂಜನ ಡಿಪೊ,
109 ಫ್ರೇಯರ್ ರೋಡ,
ಮುಂಬಯಿ.

Printed & Published by V. S. Kamath at the Mangalore Trading Association's Sharada Press, Mangalore,

---

Registered M. No.493

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಸಂಚಿಕೆ 19

ಪುಸ್ತಕ VIII ಮಂಗಳೂರು ತಾ. 8ನೇ ಶುಕ್ರವಾರ ಮೇ 1914.

ಮಂಗಳಕಾರ್ಯಗಳ ಬಗ್ಗೆ ಮಂಗಳೂರಿನ ಹೂವು ದೊರಿಯುವ ರಥಬೀದಿಯಲ್ಲಿ



ಮಂಗಳೂರು ಟ್ರೇಡಿಂಗ್ ಎಸೋಸಿಯೇಶನಿನ:—ಔಷಧಗಳು ದೊರೆಯುವ ಮತ್ತು ಶಾರದಾ ಛಾಪಖಾನೆ, 'ಸ್ವದೇಶಾಭಿಮಾನಿ' ಆಫೀಸುಗಳ ನೂತನ ಕಟ್ಟಡವು.

Madeena Watch Co., Madras

ದಿ. ನ್ಯೂ ಪೆಂಡುಲಂ ವಾಚ್. **Rs, 3—15—0.**

ಇದು ಒಂದು ಆಶ್ಚರ್ಯಕರವಾದ ಘಡಿಯಾರ.

Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಪಿಸಿಸಿನಂತೆ ಮೇಜಿನ ಮೇಲೂ ನಿಂದಿರಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೋಪ್ ವಾಚು ಕ್ರಯ	,,	1--12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2--12—0
ಸೆಲ್ಫ್ ಕ್ಲೋಸಿಕ್		3--15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1--13—0
ಚಿಕ್ಕ ಸೈಜು ಲೇಡಿವಾಚ್		2–15—0

ಕಾರೇಜ್ ಹಾರ್ಮೋನಿಯಂ ರೂ. 20=0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಫಿಡಲು ರೂ. 8—0—0.

ಅಡ್ರಸ್:—ಮೆಡಿನಾವಾಚ್ ಕಂಪೆನಿ,
ನಂ. ೨೧ ಆನೆಕಾರಕೋರ್ಣ ಬೀದಿ, ಜಿ. ಟಿ. ಮದ್ರಾಸು.

THE BOMBAY LIFE ASSURANCE CO. LTD.

(Established 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

„There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co. Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F .A, F. I. A., (London.)

Medical Referee:—Dr. R. Row, M. D. D. Sc. London.)

Manager:-Mr. K. S. Aiyar, Esq. B. A., F. S. A. A. (London). Justice of the Peace, The Honorary Presidency Magistrate and fellow of the Bombay University.

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲ್ಯಾಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಬಗ್ಯೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಬಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೋಲಿಕ್ ಮಾರ್ಸ್ ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಎಕ್ಚುಯುಯರಿ:—ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್‌ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್).

ಮ್ಯಾನೇಜರ್:—ರಾ| ಕೆ. ಎಸ್. ಅಯ್ಯರ್ ಬಿ. ಎ. ಎಫ್. ಎಸ್. ಎ. ಎ.(ಲಂಡನ್.) ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟ್ ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಉಡ್ಪಿ.

ಯವ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಫುಪ್ಫುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಆ ಠಿಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ. ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯವ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಹಿಂದೂಸ್ಥಾನದ ಜೀವವಿಮೇ ಸ್ಸಂಘಗಳಲ್ಲಿ
ಅತಿ ಭದ್ರವಾದ್ದನ್ನು ಸೂಚಿಸುವಂಥಾದ್ದು:—

ಯುನ್ಯಾಟೆಡ್ ಎಸ್ಯುರೆನ್ಸ್ ಎಂಬುವ ವಿಮೆ ಸಂಘವು.

ವಿಮೆ ಉತ್ತರಾಯಿಸುವ ಹಲವು ನೂತನ ವಿಧಾನಗಳಿಂದ ಕೂಡಿರುತ್ತದೆ. ವಿವಾಹ ಮತ್ತು ಜೀವವಿಮೆಗಳ ಸಂಘಗಳಲ್ಲಿ ಈ ತನಕ ಇಲ್ಲದ-ಅಗತ್ಯವಾಗಿ ಬೇಕಾಗಿರುವ ವಿಧಾನಗಳು ಇದರಲ್ಲಿರುವವು.

೬೫ ವರುಷಗಳ ಪ್ರಾಯದವರೂ ಸಹ ವಿಮೆ ಉತ್ತರಾಯಿಸುವ ವಿಶೇಷ ಕ್ರಮ. ೩ ತಿಂಗಳನಂತರ ವಿಮೆ ಪತ್ರವು ಸಂಪೂರ್ಣತ್ವವನ್ನು ಹೊಂದಬಹುದು.

ವಿವಾಹ ವಿಮೆಗಳಲ್ಲಿ ೧೮ ತಿಂಗಳುಗಳ ನಂತರ ವಿಮೆ ಕಂತುಗಳನ್ನು ತೆರಬೇಕೆಂತಿಲ್ಲ. ೩ ತಿಂಗಳ ನಂತರ ಈ ಸಂಬಂಧದ ವಿಮೆ ಪತ್ರವು ಸಹ ಸಂಪೂರ್ಣವಾಗಬಹುದು.

ಮೇಲೆ ಕಾಣಿಸಿದ ಪ್ರಯೋಜನಗಳ ಹೊರತು ವಿವಾಹ ಉಪನಯನ ಮತ್ತು ಜೀವವಿಮೆಗಳ ಸಾಮಾನ್ಯ ಮತ್ತು ಎನ್ಡೋವ್‌ಮೆಂಟ್ ಕ್ರಮಗಳಿಂದ ವಿಮೆದಾರರು ತೆತ್ತ ದುಬಾರಿ ಮೊಬಲಗು ದೊರಕುವ ಸಂಭವವಿರುವವು. ಸಂಘದ ಭದ್ರತೆಗೆ ತಕ್ಕುದಾಗಿ ಸುಲಭವಾದ ವಿಮೆ ದರಗಳು.

ಒಳ್ಳೇ ಕಮಿಶನ್ ಮತ್ತು ಸಂಬಳದ ಮೇಲೆ ಏಜಂಟರುಗಳು ಬೇಕಾಗಿರುವರು.

ಈ ಸಂಘದಿಂದ ವಿಮೆ ಹಣ ಪಡದವರ ಹೆಸರುಗಳ ಪಟ್ಟಿಗೂ ಏಜನ್ಸಿಗಳ ಶರ್ತಕ್ಕೂ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

B. S. Nayak & Co., ಬಿ. ಎಸ್. ನಾಯಕ್ ಎಂಡ್ ಕೊ,
Chief Agents, ಚೀಫ್ ಏಜಂಟರು,
Udipi, S. C. ಉಡುಪಿ ದ.ಕ.

CANNADA INDIAN PENAL CODE.

ಕನ್ನಡ ಇಂಡಿಯನ್ ಪೆನಲ್ ಕೋಡ್.

ಇದರಿಂದ ಮೈಸೂರ್, ಮದ್ರಾಸ್ ಬೊಂಬಾಯಿ ಜಿಲ್ಲಾ
ಕನ್ನಡ ಭಾಷಾ ವಾಚಕಮಹಾಶಯರಿಗೆ
ತಿಳಿಯಪಡಿಸುವದೇನಂದರೆ:—

ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಕಳಾನಿಧಿ ಮುದ್ರಾಕ್ಷರಶಾಲೆಯೊಳ್ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲಿಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡೆಸಬೇಕಾದ ಆಚರಣೆಗಳಂದರೆ:—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ? ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ? ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜೀಯಾಗಬಹುದೇ? ರಾಜೀಯಾಗತಕ್ಕದ್ದಲ್ಲವೇ? ಎಂಬ ತಪಶೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ, ಇತರ ಸಮಸ್ತ ಕೈಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು.

ತಾ| ಕ| ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕ್ರಮಪ್ರವೇಶ್ಯಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆ ಎಳಿಯುವುದು, ಆಸಾಮಿಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಯೆ ಅಕ್ರಮ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವುದು.

ಕನ್ನಡದಲ್ಲಿ ಇದುವರಿಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು. ಕ್ರಯ ಗ್ಲೇಜ್ ೨—೮—೦. ರಫ್ ೨—೦—೦. ಟಪ್ಪಾಲು ಚಾರ್ಜು ೦—೪—೦. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಪ್ರೊಪ್ರೈಟರ್ ಕಳಾನಿಧಿ ಪ್ರೆಸ್, ಚಿಕ್ಕಪೇಟೆ ಬೆಂಗಳೂರುಸಿಟಿ.

ಭವಿಷತ್ ಜನ್ಮಪತ್ರಿಕಾ.

ನಿಮ್ಮ ಮಕ್ಕಳು ಹುಟ್ಟಿದ ಸಂವತ್ಸರ, ಮಾಸ, ತಿಥಿ, ವಾರ, ಜನನಕಾಲವನ್ನು ಬರೆದು ಕಳುಹಿಸಿದರೆ ನಾವು ಲಗ್ನಕುಂಡಲಿ, ಅಂಶಕುಂಡಲಿ, ಮಹರ್ದಶಾ ಮೊದಲಾದವುಗಳನ್ನು ಮಾಡಿಹಾಕಿ ಶಿಶುವಿಗೆ ಹುಟ್ಟಿದ ನಕ್ಷತ್ರದೋಷ, ಬಾಲಾರಿಷ್ಟದೋಷ ವಿಚಾರವನ್ನು ಇದ್ದರೆ ಅವುಗಳ ಪರಿಹಾರಕ್ಕೆ ಶಾಂತಿ ಮಾಡುವ ಕ್ರಮಗಳನ್ನೂ ಮಾತಾಪಿತ್ರಾರಿಷ್ಟ ವಿಚಾರವನ್ನೂ ಶಿಶುವಿಗೆ ಮುಂದೆ ಇಷ್ಟನೆ ವರುಷಗಳಲ್ಲಿ ಇಂಥಾ ಕಂಟಕಗಳೇ ಬರುವ ವಿಷಯವನ್ನೂ ಶಿಶುವಿನ ಆಯುಷ್ಯ ವಿಷಯವನ್ನೂ ಸಹಾ ವಿಶದವಾಗಿ ಬರೆದು ಜನ್ಮಪತ್ರಿಕೆಯನ್ನು ತಯಾರುಮಾಡಿ ಕಳುಹಿಸುತ್ತೇವೆ.

ಬಾಲಗ್ರಹ ನಿವಾರಿಣೀ ಯಂತ್ರ.

ಈ ಮಹಾಯಂತ್ರವನ್ನು ಒಂದು ಬೆಳ್ಳಿ ತಾಯತದಲ್ಲಿ ಹಾಕಿ ಭದ್ರಪಡಿಸಿ ಮಕ್ಕಳಿಗೆ ಕಟ್ಟಿದರೆ ೧೨ ವರುಷದವರಿಗೂ ಬರತಕ ಬಾಲಾರಿಷ್ಟವು ಖಂಡಿತವಾಗಿ ಪರಿಹಾರವಾಗುತ್ತೆ. ಮತ್ತು ಈ ಮಹಾಯಂತ್ರವನ್ನು ಮಕ್ಕಳಿಲ್ಲದೆ ವ್ಯಸನಪಡತಕ್ಕ ಸ್ತ್ರೀಯರಿಗೆ ಕಟ್ಟಿದರೆ ಸಂದೇಹವಿಲ್ಲದೆ ಮಕ್ಕಳ ಫಲವಾಗುತ್ತೆ. ಬಾಲಗ್ರಹ ನಿವಾರಿಣಿ ಯಂತ್ರ ಸಹಿತ ಜನ್ಮಪತ್ರಿಕೆಗೆ ಕ್ರಯ ರೂ. ೨. ವಿಳಾಸ:—

ಟಿ. ಎಚ್. ಎಂ ಸಿದ್ಧಾಂತಿಗಳು,
ಹರಪನಹಳ್ಳಿ (ಜಿಲ್ಲಾ ಬಳ್ಳಾರಿ.)

MUSICAL MART

Kavi & Sons,

MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫ್ಲೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೧ ವಿಷಯಗಳ ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ.

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಯಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರ್ಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆನು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೦೮ ವಿಷಯಗಳನ್ನೊಳಗೊಂಡಿದೆ. ಪುಸ್ಕಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು,

ನಮ್ಮ ವಿಳಾಸ:—
ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ.

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ
ಹಂಪನಕಟ್ಟಾ, ಮಂಗಳೂರು.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್

ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರೆ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

ಆರ್. ವಾರ್ಟಿನ್ನರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಪೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇವು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮೊರ್ಟಿನ್ನರ ಮೆಜಿಕ್ ಸ್ಪೆಸಿಫಿಕ್.

ಮೇಹ ಮೊದಲಾದ ರೋಗಗಳು ಎರಡೇ ಬಾಟ್ಲಿ ಸ್ಪೆಸಿಫಿಕಿನಿಂದ ಗುಣವಾಗುವಾಗ ನೀವು ನಿಮ್ಮ ಹಣವನ್ನು ಡಾಕ್ಟರರ ಚಿಕಿತ್ಸೆಗೆ ವೆಚ್ಚಮಾಡುವುದೇಕೆ? ಈ ಔಷಧಿಯನ್ನು ಒಂದೇ ಸಾರಿ ಕುಡಿಯುವ ಮಾತ್ರದಿಂದ ಮೂತ್ರ ಕೋಶದ ಉರಿಯು ನಿಂತುಹೋಗುವುದು. ಪುನಃ ತಲೆದೋರುವ ಸಂಭವವೇ ಇಲ್ಲ. ಈ ಔಷಧಿಯನ್ನು ತಕ್ಕೊಳ್ಳುವುದರಿಂದ ಯಾವದೊಂದು ಕೆಡಕು ಇಲ್ಲವೆಂಬುದು ನಿಶ್ಚಯವು. ಕ್ರಯ ಬಾಟ್ಲಿಗೆ ರೂ. ೧—೮—೦.

ಆರ್. ಮೊರ್ಟಿನ್ನರ ಮೆಜಿಕ್ ಮಾತ್ರೆಗಳು.

ಸ್ನಾಯುಗಳ ಬಲಹೀನತೆ, ಧಾತು ಬಲಹೀನತೆ, ಮೆದುಳಿನ ಅಶಕ್ತಿ, ಇದರಿಂದ ಹುಟ್ಟುವ ವಿವಿಧ ರೋಗಗಳು ಅಂದರೆ ನಿದ್ರೆ ಬಾರದಿರುವುದು, ಕನಸು, ಕೈ ನಡುಗುವುದು, ಕಣ್ಣಿನ ಮೇಲೆ ಸಣ್ಣ ಸಣ್ಣ ಚುಕ್ಕೆಗಳು, ಚಿಂತೆ, ಮಾನಸಿಕ ಶಕ್ತಿಯ ಕುಂದು, ಮಲಬದ್ಧತೆ, ಮೊದಲಾದ ಸರ್ವ ವಿಧದ ರೋಗಗಳು ಗುಣಹೊಂದುವವು. ಎರಡು ಬಾಟ್ಲಿ ಕುಡಿಯುವುದರಿಂದ ಅತಿರೇಕ ಬಲವು ಬರುವುದು. ೩೦ ಮಾತ್ರೆಗಳುಳ್ಳ ಬಾಟ್ಲಿ ೧ಕ್ಕೆ ರೂ. ೧—೦—೦. ವಿ. ಪಿ. ಚಾರ್ಜು ೧—೩ ಬಾಟ್ಲಿ ವರೇಗೆ ೫ ಆಣೆ ಹೆಚ್ಚಿಗೆ. ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ. **R. D. Ketely & Co.**
ನಂಬ್ರ ಡಿ. ಫ್ರೆಯರರೋಡ್, ಮುಂಬಯಿ. *No. D. Frere Road,*
Near Wright & Co. Fort Bombay.

ಮುಳಿಯಿಲ್‌ರವರ ದಿವ್ಯೌಷಧಗಳು.

1. ಕೋಲೇರಾ ಮಾತ್ರೆ—ಇದನ್ನು ಜೇನಲ್ಲಿ ಕೊಡುವುದರಿಂದ ಉಬಾಲು ಜುಲಾಬು ಗುಣಪಡುವುದು. ಡಜನಿಗೆ ರೂ. 0—6—0.

2. ಕೋಲೇರಾ ಚೂರ್ಣ—ಈ ಚೂರ್ಣವನ್ನು ಜೇನಿನಲ್ಲಿ ಮಿಶ್ರಮಾಡಿ ಕೊಡುವ ವರೆಗೆ ರೋಗಿಯು ಬದುಕಿದ್ದರೆ ನಿಶ್ಚಯವಾಗಿ ಗುಣಪಡುವನು. ಎಷ್ಟು ಕಠಿಣತರವಾಗಿದ್ದರೂ 2 ಯಾ 3 ಸಾರಿಯ ಔಷಧಿ ಗುಣಪಡಿಸುವುದು. ಡಜನ್ ಪೊಟ್ಟಣಗಳಿಗೆ 0—12—0.

3. 'ಕೋಲೇರಾ ಮಿಕ್ಸ್‌ಚರ್—ಸ್ಥೂಲ ಶರೀರದ ವ ಶೀತ ಶರೀರದ ಮೇಲ್ಜಾತಿಯ ವ ಇತರ ಜಾತಿಯ ಹೆಂಗಸರಿಗೆ ಇದು ಅತಿ ಪ್ರಯೋಜನಕರವೆ. 2 ಔನ್ಸಿಗೆ ರೂ. 1—0—0.

4. ಚಂದ್ರೋದಯ ದ್ರಾವಕ—ಎಲ್ಲಾ ತರದ ಅಜೀರ್ಣಕ್ಕೆ ಸಕ್ಕರೆಯಲ್ಲಿ ಉಪಯೋಗಿಸುವುದು. 1 ಔನ್ಸಿಗೆ 1—4—0.

While Cholera was prevailing in Muliyar etc. last year, I have tried the Cholera Pills prepared by Messrs Muliyil and Sons. I found them efficacious. I hope the public will appreciate it as it is cheap and gives speedy relief. (sd) A DEVAPPA PUNJA B.A.B.L.
Kasaragod, 18—3—13. Tahsildar.

5. ಪಲ್ಲೆ ಏಕ ಮಾತ್ರೆ. 6 ವಯಸ್ಸಿನ ಕೆಳಗಿನ ಮಕ್ಕಳಿಗಿರುವ ನೇವಸಕ್ಕೆ ಅತ್ಯುತ್ತಮ ಡಜನಿಗೆ ರೂ. 0—6—0.

6. ಸಿಂಹತ್ಯಾದಿ ಮಾತ್ರೆ. ಎಲ್ಲಾ ತರದ ಕೆಮ್ಮಿಗೆ ಜೇನು ವ ಅಡುಸೋಗೆ ರಸದಲ್ಲಿ ಸೇವಿಸುವುದು. ಡಜನಿಗೆ 0—4—0.

ನಾನು ಮಕ್ಕಳ ಶೀತ ವ ಕೆಮ್ಮಿಗೆ ಹೋಮ್ಯೋಪತಿ ಔಷಧಿಗಳನ್ನು ಒಂದು ತಿಂಗಳು ಪ್ರಯೋಗ ಮಾಡಿದಾಗ್ಯೂ ಪ್ರಯೋಜನ ಕಂಡುಬಾರದೆ ಈ ಗುಳಿಗೆಗಳ ಪೈಕಿ ಸಿಂಹತ್ಯಾದಿ ಮತ್ತು ಪಲ್ಲೆ ಏಕ ಮಾತ್ರೆಯನ್ನು ಮೂರೇ ದಿವ ಪ್ರಯೋಗಿಸಿದ್ದಲ್ಲಿ ಥಕ್ಕನೇ ಗುಣವಾಯಿತು. ಸಣ್ಣ ಮಕ್ಕಳ ಕೆಮ್ಮು ಕಫಾದಿಗಳಿಂದ ಕಷ್ಟ ಕೊಂಡರೆ ಪಡುವ ಎಲ್ಲಾ ತಾಯಂದಿರಿಗೆ ಇದನ್ನು ಶಿಫಾರಸು ಮಾಡುತ್ತೇನೆ.

Karkal 14th June 13. (sd,) P. SOANS, Pastor.

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.

Muliyil & Sons, *Kasargod, S. C.*

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 8ನೇ ಮೇ 1914.

ಕಲ್ಲಿಕೋಟೆಯಲ್ಲಿ ಜರಗುವ ಕುಒಪರೇಟಿವ್ ಕನ್ಫರೆನ್ಸ್

ಕುಒಪರೇಟೀವ್ ಕ್ರೆಡಿಟ್ ಸೊಸ್ಯಾಟಿಗಳೆಂಬ ಪರಸ್ಪರ ಸಹಾಯಕ ಸಂಸ್ಥೆಗಳು ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲಿ ಸ್ಥಾಪಿಸಲ್ಪಟ್ಟು ಅವುಗಳ ಪ್ರಯೋಜನವು ಸರ್ವರಿಗೂ ಒಂದೇ ರೀತಿಯಲ್ಲಿ ಸಿಕ್ಕುವಂತೆ ಸಂಸ್ಥಾನದ ಜಿಲ್ಲೆಗಳಲ್ಲಿ ನಾಲ್ಕೈದನ್ನು ಒಟ್ಟುಕೂಡಿಸಿ ಈ ಬಗ್ಯೆ ಒಂದೊಂದು ಸರ್ಕಲನ್ನು ಏರ್ಪಡಿಸಿರುತ್ತಾರೆ. ಕೊಯಂಬುತ್ತೂರು, ಮಲಬಾರು, ನೀಲಗಿರಿ ಮತ್ತು ದಕ್ಷಿಣ ಕನ್ನಡ ಈ ನಾಲ್ಕು ಜಿಲ್ಲೆಗಳು ಕೊಯಂಬುತ್ತೂರು ಸರ್ಕಲಿಗೆ ಸೇರಿರುತ್ತವೆ. ಈ ನಾಲ್ಕು ಜಿಲ್ಲೆಗಳ ಪ್ರತಿನಿಧಿಗಳು ಆಗಿಂದಾಗ್ಯೆ ಒಟ್ಟು ಕೂಡಿ ತಮ್ಮ ಪ್ರಾಂತ್ಯಗಳಲ್ಲಿ ಸ್ಥಾಪಿಸೋಣಾಗಿರುವ ಮತ್ತು ಸ್ಥಾಪಿಸಲಿಕ್ಕಿರುವ ಪರಸ್ಪರ ಸಹಾಯಕ ಸಂಘಗಳ ವಿಷಯವನ್ನು ಪರ್ಯಾಲೋಚಿಸುವರು. ಈ ನಾಲ್ಕು ಜಿಲ್ಲೆಗಳ ಪ್ರತಿ ಗ್ರಾಮಗಳಲ್ಲೆಂಬಂತೆ ಈ ಸಂಸ್ಥೆಗಳನ್ನು ಸ್ಥಾಪಿಸಲು ಇರುವ ಅಭ್ಯಂತರಗಳು ಯಾವವು, ಎಷ್ಟು ಸಂಘಗಳು ಈ ತನಕ ಸ್ಥಾಪಿಸಲ್ಪಟ್ಟಿವೆ, ಮುಂದಕ್ಕೆ ಸಂಘಗಳ ಸ್ಥಾಪನೆಯ ಅಭಿವೃದ್ಧಿ ಪ್ರಯತ್ನಗಳನ್ನು ಹೇಗೆ ಕೈಕೊಳ್ಳಬೇಕು, ಸರಕಾರದವರಿಂದ ದೊರಿಯಬೇಕಾದ ಸಹಾಯವೇನು? ಪ್ರಜಾ ಸಾಮಾನ್ಯರು ಈ ವಿಷಯದಲ್ಲಿ ಹೇಗೆ ವರ್ತಿಸಬೇಕಾಗಿದೆ ಎಂಬೀ ವಿಷಯಗಳು ಇಂಥಾ ಸಭೆಗಳಲ್ಲಿ ಸಾಮಾನ್ಯವಾಗಿ ಪರ್ಯಾಲೋಚಿಸಲ್ಪಡುವವು. ಸಂಘಗಳ ಆಡಳಿತೆಯ ವಿಚಾರವೆಲ್ಲವು ಸಹ ಈ ಸಂದರ್ಭದಲ್ಲಿ ಪರಿಗ್ರಹಿಸಲ್ಪಡುವುದುಂಟು. ಸಭೆಯಲ್ಲಿ ಈ ಕಾರ್ಯವಿವರದೊಡನೆ ಇಂಥಾ ಸಂಘಗಳ ಸ್ಥಾಪನೆಯಿಂದ ಲೋಕಕಲ್ಯಾಣವು ಹೇಗೆ ಉಂಟಾಗಬಹುದೆಂಬುದನ್ನು ಸೂಚಿಸುವುದಕ್ಕೆ ನೆರದ ವಿದ್ಯಾವಂತರಿಂದ ಭಾಷಣಗಳು ಕೊಡೋಣಾಗುವವು. ಈ ವಿಧಾನದಲ್ಲಿ ಕನ್ಫರೆನ್ಸು ಸಭೆಗಳಲ್ಲಿ ಕಾರ್ಯ ಪ್ರೇರೇಪಣೆಗೆ ತಕ್ಕದಾದ ಶಿಕ್ಷಣವು ದೊರಕುತ್ತದೆ. ಕೊಯಂಬುತ್ತೂರು ಸರ್ಕಲಿನ ಇಂಥಾ ಕನ್ಫರೆನ್ಸು ಈ ತಿಂಗಳ್ಗ ತಾ. ೧೫ನೇ ೧೬ನೇ ದಿನಗಳಲ್ಲಿ ಕಲ್ಲಿಕೋಟೆಯಲ್ಲಿ ಕೂಡುವುದು.

ಹಿಂದುಸ್ಥಾನದ ಇತರ ಪ್ರಾಂತ್ಯಗಳ ಗ್ರಾಮಗಳಂತೆಯೇ ಈ ಪ್ರಾಂತ್ಯಗಳ ಗ್ರಾಮಗಳಲ್ಲಿ ಸಹ ಪರಸ್ಪರ ಸಹಾಯಕ ಸಂಘಗಳ ಬೆಳವಣಿಕೆಗೆ ತುಂಬಾ ಆಸ್ಪದವಿದೆ. ಅದ್ದಲದೆ ಈ ಪ್ರಾಂತ್ಯಗಳಲ್ಲಿ ಕಾಯಂ ಸೆಟ್ಲಮೆಂಟಿನ ಪ್ರಯೋಜನವಿಲ್ಲದ ರೈತವಾರಿ ಜಮೀನುಗಳ ಚಿಕ್ಕ ಚಿಕ್ಕ ಹಿಡುವಳಿದಾರರು ಅನೇಕರಿರುವರು. ಹಣವನ್ನು ಸಂಗ್ರಹಿಸಿಡಲಾರದ ಇಂಥವರಿಗೆ ಹಣದ ಅಡಚಣೆಯು ವಿಪರೀತವಾಗಿರುವುದರಿಂದ ಪರಸ್ಪರ ಸಹಾಯಕ ಕ್ರೆಡಿಟ್ ಸೊಸ್ಯಾಟಿಗಳ ಅವಶ್ಯಕತೆಯು ಇಲ್ಲಿ ಬಹಳವಿರುವುದು. ಪುತ್ತೂರಿನ ಕೆಲವು ಮಾನ್ಯ ಗೃಹಸ್ಥರ ಮುಖ್ಯವಾಗಿ ವಕೀಲರ ಸಾಹಸದಿಂದ ಈ ಜಿಲ್ಲೆಯ ಆಯಾ ಕಡೆಗಳಲ್ಲಿ ಕೆಲವು ಕ್ರೆಡಿಟ್ ಸೊಸ್ಯಾಟಿಗಳನ್ನು ಸ್ಥಾಪಿಸಿರುತ್ತಾರೆ. ಇವರ ಸಾಹಸದಿಂದಲೇ ಪುತ್ತೂರು ಕೆನರಾ ಸೆಂಟ್ರಲ್ ಬೇಂಕೂ ಸ್ಥಾಪಿಸಲ್ಪಟ್ಟಿರುವುದು. ಇದೇ ರೀತಿ ಪ್ರತಿ ತಾಲೂಕು ಪಟ್ಟಣಗಳಲ್ಲಿಯೂ ಮಂಗಳೂರಲ್ಲಿಯೂ ಇರುವ ವಕೀಲರೂ ಇತರ ವಿದ್ಯಾವಂತರೂ ಪ್ರಯತ್ನಪಟ್ಟರೆ ಕನಿಷ್ಟ ಪಕ್ಷ ನೂರಾರು ಸೊಸ್ಯಾಟಿಗಳನ್ನು ಒಂದೆರಡು ವರುಷ ಕಾಲದಲ್ಲಿ ಈ ಜಿಲ್ಲೆಯಲ್ಲಿ ಸ್ಥಾಪಿಸಲು ಸಾಧ್ಯವಾದೀತು. ಕೊಯಂಬುತ್ತೂರು ಸರ್ಕಲಿನ ಇನ್ನೊಂದು ಕನ್ಫರೆನ್ಸು ಈ ಜಿಲ್ಲೆಯಲ್ಲಿ ಕೂಡಬೇಕಾಗಿರುವುದರಿಂದ ಕನ್ಫರೆನ್ಸನ್ನು ಇಲ್ಲಿಗೆ ಬರಮಾಡಿಕೊಳ್ಳಲು ಸಂಘಸ್ಥಾಪನೆಗಳನ್ನು ಹೆಚ್ಚಿಸುವಂತೆ ಪ್ರಯತ್ನಿಸುವುದು—ಮುಖ್ಯವಾಗಿ ಇಷ್ಟರ ತನಕ ಈ ವಿಷಯದಲ್ಲಿ ಅಭಾವವನ್ನು ತೋರಿರುವ ಮಂಗಳೂರು ವಿದ್ಯಾವಂತರು ಜಾಗ್ರತೆಯಿಂದ ಪ್ರಯತ್ನಿಸುವುದು—ಅಗತ್ಯವಾಗಿರುವುದು. ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆಯು ಇತರ ಎಲ್ಲಾ ದೇಶಾಭಿವೃದ್ಧಿಗೆ ಹೇಗೆ ಸಹಾಯಕರವಾಗುವದೆಂದು ಇಂಗ್ಲಿಷ್ ವೃತ್ತ ಪತ್ರಗಳಲ್ಲಿ ಈ ವಿಷಯವನ್ನು ಓದುತ್ತಿರುವ ಜಾಣ್ಮರಿಗೆ ನಾವು ಸೂಚಿಸಬೇಕೆಂದಿಲ್ಲ. ದೇಶದಲ್ಲಿ ಆಗಿಂದಾಗ್ಯೆ ಕೂಡುವ ರಾಜಕೀಯ ಸಾಂಪತ್ತಿಕ ಮೊದಲಾದ ಸಭೆಗಳಲ್ಲಿ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಲು ಪ್ರಯತ್ನಿಸಿರಿ ಎಂಬ ಬೋಧೆಯು ಸರ್ವತೋಮುಖವಾಗಿ ಕೇಳಿಸುವುದು. ಆದ್ದರಿಂದ ಜಿಲ್ಲೆಯ ಇತರ ಕಡೆಗಳ ಪರಸ್ಪರ ಸಹಾಯಕ ಸಂಘಗಳ ಪ್ರತಿನಿಧಿಗಳೊಡನೆ ಮಂಗಳೂರಿನವರೂ ಸಹ ಕಲ್ಲಿಕೋಟೆಯಲ್ಲಿ ಜರಗುವ ಕನ್ಫರೆನ್ಸು ಸಭೆಗೆ ಹೋಗಿ ಈ ಪರವಾದ ಪ್ರಯತ್ನಗಳನ್ನು ಇನ್ನಾದರೂ ಮಾಡುವುದು ಕರ್ತವ್ಯವಾಗಿರುವುದು.

ಸಾಮಾನ್ಯರನ್ನು ಸಾಲದ ಅಡಚಣೆಯಿಂದ ರಕ್ಷಿಸುವುದು ಮತ್ತು ಅಲ್ಪ ಸ್ವಲ್ಪ ಹಣ ಸಂಗ್ರಹವನ್ನು ಮಾಡುತ್ತ ಆಪದ್ಧನ ಸಂಚಯವನ್ನು ಮಾಡುವ ಅಭ್ಯಾಸವನ್ನು ಸಾಮಾನ್ಯರಲ್ಲಿ ರೂಢಿಗೆ ತರುವುದು—ಈ ಎರಡು ಉದ್ದೇಶಗಳು ಕ್ರೆಡಿಟ್ ಸೊಸ್ಯಾಟಿಗಳದ್ದಾಗಿವೆ. ಇದರಲ್ಲಿ ಮೊದಲನೇ ಉದ್ದೇಶವು ನೆರವೇರುತ್ತಿರುವುದು. ಇದರಂತೆಯೇ ದ್ರವ್ಯ ಸಂಚಯದ ಎರಡನೇ ಉದ್ದೇಶವು ನೆರವೇರುವಂತೆ ಪ್ರಯತ್ನವು ಬೇಕಾಗಿದೆ. ಚಿಕ್ಕ ಚಿಕ್ಕ ವ್ಯಾಪಾರಸ್ಥರಿಗೆ ಸಂಘಗಳು ಪ್ರಕೃತ ಉಪಯೋಗಕರವಾಗಿರುವ ರೀತಿಯಲ್ಲಿಯೇ ಬಡ ಕೃಷಿಕರಿಗೆ ಸಹ ಈ ಸಂಘಗಳು ಇನ್ನೂ ಹೆಚ್ಚೆಚ್ಚಾಗಿ ಉಪಯೋಗಕರವಾಗುವ ವಿಧಾನ ಮೊದಲಾದ ವಿಷಯಗಳನ್ನು ಈ ಕನ್ಫರೆನ್ಸ ಸಭೆಯು ಮುಂದಿಟ್ಟು ಈ ವಿಷಯ ಬೇಕಾದ ಪ್ರಯತ್ನಗಳನ್ನು ನಿರ್ಣಯಿಸುವುದು ಅಗತ್ಯವಾಗಿದೆ.

ಸಭಾ ಕಾರ್ಯಗಳೆಲ್ಲವು ಸಾಂಗವಾಗಿ ನೆರವೇರಲೆಂದು ಈ ಮೂಲಕ ಅಪೇಕ್ಷಿಸುತ್ತೇವೆ.

ಮಂಗಳೂರು ಮಹಿಳಾ ಸಭಾ.

ಗಣಪತಿ ಸೆಕೆಂಡರಿ ಶಾಲೆಯ ಸಹಾಯಾರ್ಥವಾಗಿ ಈ ಸಭೆಯವರಿಂದ ಏರ್ಪಡಿಸಲ್ಪಟ್ಟ ಫೆನ್ಸಿಸೇಲಿನ ವೃತ್ತಾಂತವನ್ನು ಈ ಸಂಚಿಕೆಯ ವೃತ್ತಾಂತ ಸಂಗ್ರಹದಲ್ಲಿ ಪ್ರಕಟಿಸಿರುತ್ತೇವೆ. ಇಲ್ಲಿಯ ಹಿಂದೂ ಸ್ತ್ರೀಯರ ಈ ನೂತನ ಏರ್ಪಾಡಿನಿಂದ ರೂ. ೬೫೫—೧೧—೬ ಸಂಗ್ರಹಿಸಲ್ಪಟ್ಟಿತೆಂಬುದನ್ನು ತಿಳಿಯಲು ಸಂತೋಷಪಡುವೆವು. ಯುವತಿಯರು ವಿದ್ಯಾವಂತರಾದರೆ ಸಮಾಜದ ಏಳಿಗೆಯ ಪ್ರಯತ್ನಗಳಲ್ಲಿ ಹೇಗೆ ಸಹಕಾರಿಗಳಾಗುವರೆಂಬುದಕ್ಕೆ ಈ ಫೆನ್ಸಿ ಸೇಲಿನ ಏರ್ಪಾಡು ಒಂದು ನಿದರ್ಶನವಾಗಿರುವುದು. ಇಷ್ಟು ಹಣವನ್ನು ಒಟ್ಟು ಕೂಡಿಸುವರೆ ಫೆನ್ಸಿಸೇಲಿನ ಏರ್ಪಾಡಿನ ಶ್ರಮವು ಅಗತ್ಯವೋ? ನಾಲ್ಕೈದು ಮಂದಿ ಸಂಪನ್ನ ಸ್ತ್ರೀಯರು ಮನಸ್ಸು ಮಾಡಿದರೆ ಈ ಮೊಬಲಗನ್ನು ಶಾಲೆಗೆ ಉಚಿತವಾಗಿ ಕೊಡಬಹುದಿತ್ತೆಂಬ ವಿಚಾರವು ಕೆಲವರಲ್ಲಿ ಉಂಟಾಗಬಹುದು. ಆದರೆ ಸರ್ವಜನೋಪಕಾರದ ಸಂಸ್ಥೆಗಳಿಗೆ ಮುಖ್ಯವಾಗಿ ಬೇಕಾದದ್ದು ದ್ರವ್ಯ ಮಾತ್ರವಲ್ಲ, ಭಾವನೆ ಅಥವಾ ಆದರ್ಶಗಳು. ವಿದ್ಯಾ ಸಂಸ್ಥೆಗಳು ನಮಗೆ ಅಗತ್ಯವಾಗಿ ಬೇಕಾದಂಥವುಗಳು, ಇವುಗಳ ಸ್ಥಾಪನೆ ಮತ್ತು ಅಭಿವೃದ್ಧಿಗಳಲ್ಲಿ ನಾವು ಆಸಕ್ತಿಯಿಂದ ಪ್ರಯತ್ನಪಡಬೇಕು—ಇಂಥಾ ಭಾವನೆಯು ಸರ್ವತ್ರ ಬೇರಿ ನೆಲೆಗೊಳಿಸುವಂಥಾ ಏರ್ಪಾಡು ಮೌಲ್ಯದಲ್ಲಿ ಒಬ್ಬಿಬ್ಬರ ದ್ರವ್ಯಸಹಾಯಕ್ಕಿಂತ ಅಧಿಕವಾಗಿದೆ. ಅಲ್ಲದೆ, ಬಹುಕಾಲ ಶ್ರಮಪಟ್ಟು ತಮಗೋಸ್ಕರವಾಗಿಯೇ ತಯಾರಿಸಿದ ಕಸೂತಿಕೆಲಸ, ಮಕ್ಕಳ ಆಟದ ಸಾಮಾನು ಇತ್ಯಾದಿಗಳನ್ನು ಮಮತೆಯಿಂದ ಶಾಲೆಯ ಬಗ್ಯೆ ತಂದೊಪ್ಪಿಸಿದ ಮಂಗಳೂರು ಮಹಿಳಾ ಸಭೆಯವರ ವಿದ್ಯಾವಾತ್ಸಲ್ಯದ ವರ್ತನೆಗೆ ರೂಪಾಯಿ ಆಣೆ ಪೈಗಳಲ್ಲಿ ಬೆಲೆಕಟ್ಟಲು ಎಂದೂ ತೀರದು. ಮಹಿಳಾ ಸಭೆಯವರು ಇನ್ನು ಮುಂದಕ್ಕೆ ಸಹ ಸಮಾಜಸೇವೆಯ ಇತರ ಕರ್ತವ್ಯಗಳಲ್ಲಿ ತಮ್ಮ ಆಸಕ್ತಿಯನ್ನು ಇದೇ ರೀತಿ ವ್ಯಕ್ತಗೊಳಿಸಬೇಕೆಂಬುದು ನಮ್ಮ ವಿಜ್ಞಾಪನೆಯಾಗಿದೆ. ಮಂಗಳೂರು ಸ್ಟುಡೆಂಟ್ಸ್ ಬ್ರದರ್ ಹೂಡ್ ಎಂಬ ವಿದ್ಯಾರ್ಥಿ ಸಂಘದವರು ಮಹಿಳಾ ಸಭೆಯವರಿಗೆ ಈ ಸಂದರ್ಭದಲ್ಲಿ ಮಾಡಿದ ಸಹಾಯವು ಪ್ರಶಂಸನೀಯವಾಗಿರುವುದು.

ಕನ್ಯಾಪಿತನು ವರಪಿತನಲ್ಲವೊ?

ಸಂತಪ್ತನಾದ ಕನ್ಯಾಪಿತುವು ಬರೆದು ಕಳುಹಿಸಿದ ಲೇಖನವನ್ನು ಓದಿನೋಡಿದೊಡನೆ "ಕನ್ಯಾಪಿತನು ವರಪಿತನಲ್ಲವೋ" ಎಂಬ ಪ್ರಶ್ನೆಗೆ ಅವಕಾಶ ಉಂಟಾಗುತ್ತದೆ. "ಕಲಿಕಾಲದ ಮಹಿಮೆ" ಇದೊಂದು ಬಿಟ್ಟ ಕನ್ಯಾಪಿತುವಿನ ಪ್ರಲಾಪವು ಬಾಕಿ ಎಲ್ಲಾ ವಿಷಯಗಳಿಂದ ಪೂರ್ಣವಾಗಿರುವದು. ಕಾಲವನ್ನು ಸಹ ದೂರಲು ಏನೋ ಮರೆತು ಬಿಟ್ಟನೆಂತ ಕಾಣುತ್ತದೆ. ಕನ್ಯಾಪಿತನ ಪ್ರಲಾಪವನ್ನು ಓದಿ ನೋಡಿದರೆ ಈತನಿಗೆ ಗಂಡುಮಕ್ಕಳು ಜನಿಸದಿರಬೇಕು, ಅಥವಾ ಜನಿಸಿದ್ದರೂ ವಿವಾಹ ಪ್ರಾಯವು ಇವರಿಗೆ ಇನ್ನೂ ಪ್ರಾಪ್ತಿಸದಿರಬೇಕೆಂತ ಗ್ರಹಿಸಬೇಕು. ಯಾಕಂದರೆ ಈ ದಿನ ಕನ್ಯಾಪಿತುವಾಗಿದ್ದರೆ ನಾಳೆಯೇ ವರಪಿತನಾಗುವನೆಂಬ ಭರವಸದಿಂದ ಇಂಥಾ ಪ್ರಲಾಪವನ್ನು ವ್ಯಕ್ತಗೊಳಿಸದೆ ಒಂದು ವೇಳೆ ಸುಮ್ಮನಿರುತ್ತಿದ್ದನು. ಹ್ಯಾಗೂ ಈ ರೀತಿ ಲೇಖನಗಳನ್ನು ಬರದರೆ ಒಂದು ಪ್ರಯೋಜನ ಉಂಟು. ಈ ವಿಷಯವು ಸರ್ವರ ಲಕ್ಷ್ಯಕ್ಕೂ ತರಲ್ಪಡುವದು. ಇದೊಂದು ಉತ್ತಮಕಾರ್ಯವನ್ನು ಈ ಲೇಖನದಿಂದ ಕನ್ಯಾಪಿತುವು ಬರೆದು ನೆರವೇರಿಸಲು ಪ್ರಯತ್ನಿಸಿದ್ದಾರೆ.

ಪಶುಗಳು ಕೋಳಿಗಳು ಮೊದಲಾದ ಜೀವವಿರುವ ಪ್ರಾಣಿಗಳು ಜೀವಹೋಗುವಾಗ ಕೈಕಾಲು ಬಡಿಯುವದೂ ರೋಧನ ಮಾಡುವುದೂ ಸಹಾ ಉಂಟು. ಕನ್ಯಾಪಿತುವಿನ ಪ್ರಲಾಪವು ಸಾಧಾರಣವಾಗಿ ಈ ತರದ್ದೇ ಎಂತ ಕಾಣುತ್ತದೆ. ಪ್ರಸೂತ ವೈರಾಗ್ಯ, ಸ್ಮಶಾನ ವೈರಾಗ್ಯಗಳೆಂಬ ವೈರಾಗ್ಯಗಳೊಂದಿಗೆ ಕನ್ಯಾಪಿತುವಿನ ಪ್ರಲಾಪ ವೈರಾಗ್ಯವು ಒಂದು ಸೇರಿ ವೈರಾಗ್ಯರಾಶಿಯು ದಿನೇ ದಿನೇ ಹೆಚ್ಚುತ್ತಿರುವದು. ಇಂಥಾ ವೈರಾಗ್ಯಗಳನ್ನು ಅವಲಂಬಿಸಿ ಹಿಂದೆ ಮುನಿಗಳು ಕಾಡನ್ನು ಸೇರಿ ಸಂಸಾರವನ್ನು ತ್ಯಜಿಸಿ ಬಿಟ್ಟರು. ಬಹಳ ಕಾಲದಿಂದ ನಮ್ಮಲ್ಲಿ ಬೆಳೆದುಬಂದ ಈ ವೈರಾಗ್ಯ ರಾಶಿಯನ್ನು ಬಿಡುವದು ಯಾರಿಗೆ ತಾನೇ ಸಾಧ್ಯ? ಕಾಡುಗಳನ್ನು ಸೇರುವಾ ಅಂದರೆ ಈಗ ಕಾಡುಗಳಾಗಿದ್ದಂಥವುಗಳು ಪಟ್ಟಣಗಳಾಗಿವೆ. ಉಳಿದ ಕಾಡುಗಳು ಸರಕಾರದವರಿಂದ ಸುರಕ್ಷಿತ ಕಾಡುಗಳಾಗಿ ಮಾಡಲ್ಪಟ್ಟದ್ದರಿಂದ 'ಫೋರೆಸ್ಟ್ ಗಾರ್ಡ್' ಎಂಬ ಕಾವಲುಗಾರನು ಯಾರನ್ನೂ ಕಾಡಿನೊಳಗೆ ಕಾಲಿಡಲು ಬಿಡನು. ಆದ್ದರಿಂದ ಕಾಡುಗಳನ್ನು ಸೇರದೆ ವೈರಾಗ್ಯ ಸಾಧನೆಯನ್ನು ಮಾಡಬೇಕು. ಇಂಥಾ ಸಾಧನೋಪಾಯವು ಪರಿಪೂರ್ಣವಾಗಿ ನಮಗೆ ಪ್ರಾಪ್ತವಾಗಿರುವದು. ಮುನಿಗಳಂತೆಯೇ ಸಂಸಾರ ಸಮಾಜದ ಗೋಜಿಗೆ ನಾವು ಸರ್ವಥಾ ಹೋಗುವದಿಲ್ಲ. ಫೆ—ಮಿ—ಲಿ—ಎಂಬೀ ಮೂರು ಇಂಗ್ಲೀಷು ಅಕ್ಷರಗಳಿಂದ ಸೂಚಿತವಾದ—ನಾನು—ನನ್ನ ಹೆಂಡತಿ—ಮತ್ತು ಮಕ್ಕಳು—

ಎಂಬೀ ತ್ರಿಕರಣಗಳ ದ್ವಾರಾ ಮುಕ್ತಿಯನ್ನು ಸಾಧಿಸುತ್ತಿದ್ದೇವೆ. ಇಂಥಾ ಉಪಾಸನೆಯಿಂದ ಎಂಥಾ ಇತರ ಲೌಕಿಕ ವಿಷಯಕ್ಕೂ ಮನಸ್ಸು ಬಾರದು. ಸಮಾಜದ ಎಂಥಾ ವಿಷಯವೂ ಯಾವ ಪ್ರಯತ್ನವೂ ನಮ್ಮ ಈ ಉಪಾಸನೆಯಿಂದ ದೂರವಾಗಿರುವದು. ಈ ಉಪಾಸನೆಯ ಬಲದಿಂದ ಪ್ರಾಣಕ್ಕೆ ಮುಕ್ತಿಯು ದೊರಿಯುವ ಕಾಲದಲ್ಲಿ ಕನ್ಯಾಪಿತನ ಪ್ರಲಾಪಗಳ ಕೋಲಾಹಲವು ಪ್ರಕೃತ ಕೇಳಿಸುತ್ತಿರುವದು. ಇದರಲ್ಲಿ ಅದ್ಭುತವೇನು? ಮುನಿಗಳಿಗೆ ಕಾಡಿನಿಂದ ದೊರಕುವ ಪ್ರಯೋಜನವು ನಮ್ಮ 'ಫೆಮಿಲಿ' ಉಪಾಸನೆಯಿಂದ ದೊರಕುವದಲ್ಲ?

ಕನ್ಯಾಪಿತುವು ತಮ್ಮ ಲೇಖದಲ್ಲಿ ಸೇರಿಸುವರೆ ಬಿಟ್ಟು ಬಿಟ್ಟ 'ಕಲಿಕಾಲ ಮಹಿಮೆಯ' ಫಲವನ್ನು ಅರಿತುಕೊಂಡರೆ ಮೊದಲಿನ ರೂಪಾಯಿ ೨೦೦ರ ವರದಕ್ಷಿಣೆಯು ಈಗಿನ ೨೦೦೦ಕ್ಕೆ ಕಡಮೆಯಾಗದೆಂದು ಸಮಾಧಾನ ಉಂಟಾಗುವದು. ಕೆಲವು ವರುಷಗಳ ಮೊದಲು ಅಕ್ಕಿಗೆ ಮುಡಿ ಒಂದಕ್ಕೆ ರೂ. ೨—೪—೦ ಕ್ರಯವಿತ್ತು. ಈಗಲೂ, ಇನ್ಯಾವಾಗಲೂ ಮುಡಿಗೆ ಸೇರು ೪೨ ಆಗಿರುವದು. ಆದರೆ ಈಗ ಇದರ ಕ್ರಯವು ರೂಪಾಯಿ ೫—೮—೦ಕ್ಕೆ ಬಂದು ನಿಂತಿದೆ. ಇದಕ್ಕೇನು ಕಾರಣ? ಹೀಗೆ ಹೆಚ್ಚಿದ ಧಾರಣೆವಾಸಿ ಬಗ್ಯೆ ಯಾರನ್ನು ದೂರಬೇಕು? ಈಗಿನ ವರನಾದರೋ ಎಂಥವನೇ ಆಗಲಿ, ಶಾಲೆಗೆ ಹೋಗುತ್ತಾನೆ. ಮುಂಚಿನ ವರನಂತೆ ದೊಡ್ಡ ಗದ್ದಪ್ಪನಂತೆ ಕಾಣುವದಿಲ್ಲ! ಬೆವರು ತುಂಬುವ ಜಡೆಯೂ ತಲೆಯ ಮೇಲೆ ಈಗಿನವನಿಗಿಲ್ಲ! ಕ್ರೊಪ್ಡ್ ಹೆಡ್ಡ್ ಎಂಬ ಸುಂದರವಾಗಿ ಬೋಳಿಸಿದ ತಲೆಯುಳ್ಳ ವಾಮನ ಮೂರ್ತಿಯ ಆಕೃತಿ! ಸರದಾರರು ಸೇದುವ ಪೆಟ್ಟಿಗೆಯೊಂದಕ್ಕೆ ರೂ. ೫ರ ಸಿಗರೆಟ್ಟುಗಳನ್ನೇ ಸೇದುವನು! ದಿನ ಒಂದಕ್ಕೆ ಎಷ್ಟು ಬಾರಿಯಾದರೂ ತನ್ನ ಸ್ನೇಹಿತರನ್ನು ಬಂದ ಹಾಗೆ ಹೋಟೆಲುಗಳಿಗೆ ತಕ್ಕೊಂಡು ಹೋಗಿ ಕಾಫಿ ಕುಡಿಸುವ ಪರೋಪಕಾರಿ! ಕಾಫಿ ಹೋಟೇಲುಗಳು! ಎಂಥಾ ಪರೋಪಕಾರ ಸಂಸ್ಥೆಗಳು! ಎಷ್ಟು ಜನರಿಗೆ ಇವುಗಳಿಂದ ಜೀವನ ದೊರಕುವದು—ಇವುಗಳಿಗೆಲ್ಲಾ ವಿಶೇಷ ಪ್ರೋತ್ಸಾಹ ಕೊಡುವ ವರ್ಗವು ಯಾವದು—ಈ ಕನ್ನೆಗಳನ್ನು ಪಾಣಿಗ್ರಹಣ ಮಾಡಿಕೊಳ್ಳುವ ವರರದ್ದಾಗಿರುತ್ತದ್ದಲ್ಲ! ಇವರ ಸೌಂದರ್ಯ ವಿವರವನ್ನು ಕನ್ನೆಗಳು ಪೂರ್ಣ ತಿಳಿದದ್ದೇ ಆದರೆ ಹ್ಯಾಗೂ ಎಷ್ಟು ವರದಕ್ಷಿಣೆಯನ್ನಾದರೂ ಕೊಟ್ಟು ಇವರನ್ನೇ ತಮಗೆ ಪತಿಗಳನ್ನಾಗಿ ಮಾಡಿಕೊಡಬೇಕೆಂದು ಹಟವಿಡಿಯುವರು. ಆಹಾ! ಆ "ಚಿಕ್ಕೋಳಿ" ಹೃದಯದ ಮೇಲೆ ನೇತಾಡುವ ನೆಕ್ಟ್ಯಾ ಸೌಂದರ್ಯವೇ! ಭಂಗಾರದ ದೃಷ್ಟಿ ಚಕ್ರಗಳಿಂದ ಮಿನುಗುವ ಆ ಮೂಗಿನ ಸೌರಭವೇ-ಇಂಥಾ ವರರುಗಳಿಗೆ ವರದಕ್ಷಿಣೆ ೨೦೦ ಪವನುಗಳಂದರೆ ಅದೇನಾಶ್ಚರ್ಯ?

ಕನ್ನೆಗಳು—ತಿರುಪತಿಗೆ ಹೋಗುವಾಗ ಗೋವಿಂದ ರಾಜ ಪಟ್ಟಣದಲ್ಲಿ ದೊರಕುವ ಮರದ ಚೂರಿನಿಂದ ಮಾಡಿದ—ಗೊಂಬೆಗಳಂತಿರುವಂಥವುಗಳು! ಇವುಗಳನ್ನು ವಧುಗಳಾಗಿ ಸ್ವೀಕರಿಸಬೇಕಾದರೆ ಇವರ ಸಮ ತುಲ್ಯ ಹಿರಣ್ಯ ಕನ್ಯಾದಾನವನ್ನು ಮಾಡಿಕೊಟ್ಟರೂ ಸಾಲದು! ಪಾಣಿಗ್ರಹಣಮಾಡಿಕೊಂಡ ಮೇಲೆ—ನಾವು ಓದಿದ ಇಂಗ್ಲಿಷ್ ನಾವೆಲುಗಳಲ್ಲಿ ಮುದ್ದು ರಮಣಿಗಳ ವೃತ್ತಾಂತಗಳಿಗನುಸಾರವಾಗಿ--ನಡೆಯಬೇಕು. ಊಲನ್‌ದಾರ ಮೊದಲಾದ ಹಲವು ಸಾಹಿತ್ಯಗಳು--ಹಿಂದು ಮುಂದು ತಿರುಗಾಡಲು ಸಖಿಗಳು—ಮನೆಯಲ್ಲಿ ದಿನಕ್ಕೆ ಮೂರಾವರ್ತಿ ಕಾಫಿ—ಚಾ—ತಿಂಡಿಗಳು—ಒಂದು ಶಿಶುವು ಜನಿಸಿತೋ-ಎಷ್ಟೋ ಔಷದೋಪಚಾರಗಳು-ಕಟ್ಟ ಕಡೆಗೆ ರಮಣಿಗೆನೇ ಶ್ವಾಸಕೋಶ ಸರಿಯಿಲ್ಲ—ಈ ಹವೆ ಒಳ್ಳೇದಲ್ಲ—ಮದ್ರಾಸು, ನೀಲಗಿರಿ, ಅಥವಾ ಕೊಯಂಬುತ್ತೂರಿಗಾದರೂ ಹೋಗಲೇ ಬೇಕು—ಈ ಸಂಭ್ರಮವನ್ನೆಲ್ಲಾ ಅನುಭವಿಸಿ ಮದಿವೆಯಾದ ಐದು ವರ್ಷಗಳೊಳಗೆ ತಲೆಯೆಲ್ಲಾ ಹಣ್ಣಾಗಿ ಕ್ರೊಪಿನ ಜಡೆಯು ಬಿಳುಪಾಗುವ ಆ ಚಿಕ್ಕ ವಾಮನಾಕೃತಿಯ ವರನು ೫೦೦ ಪವನುಗಳ ವರದಕ್ಷಿಣೆಯನ್ನು ಕೇಳಿದರೂ ಅದೇನಾಶ್ಚರ್ಯ!

ಕನ್ಯಾಪಿತುಗಳೇ, ನೀವು ವರ ಪಿತುಗಳೂ ಸಹಾ ಆಗಿರುವಿರೆಂಬದನ್ನು ಮರೆಯಬೇಡಿರಿ. ವೃಥಾ ಪ್ರಲಾಪಗಳಿಂದೇನೂ ಫಲವಿಲ್ಲ. ಈ ಪ್ರಲಾಪಗಳನ್ನು ಕೇಳುವವರ‍್ಯಾರೂ ಇಲ್ಲ. ಸಾಮಾಜಿಕ ವಿಷಯಗಳಲ್ಲಿ ಸರಕಾರವು ಪ್ರವೇಶಿಸದು. ಹಂಸತೂಲಿಕಾ ತಲ್ಪಗಳ ಮೇಲೆ ಸುಖ ನಿದ್ರೆ ಮಾಡುತ್ತಿರುವ ಯೋಗೀಶ್ವರರಿಗೂ ಯಾವ ಪ್ರಲಾಪವೂ ಕೇಳಿಸದು. ಆದ್ದರಿಂದ ಸಮಾಜ ಸ್ಥಿತಿಯನ್ನು ಚನ್ನಾಗಿ ಯೋಚಿಸಿರಿ, ಯೋಚನಾ ಫಲಗಳನ್ನು ವಿವೇಕದಿಂದ ಕಾರ್ಯ ರೂಪುಗೊಳಿಸಿರಿ.

ಅತ್ರಿಗೋತ್ರಜ.

ವರದಾಚಾರ್ಯರ ರತ್ನಾವಳಿ ಥಿಯೆಟ್ರಿಕಲ್ ಕಂಪೆನಿ.

ಇದೇ ಕಳದ ತಾ. ೬ನೇ ಬುಧವಾರ ರಾತ್ರಿ ವರದಾಚಾರ್ಯರ ರತ್ನಾವಳಿ ಥಿಯೆಟ್ರಿಕಲ್ ನಾಟಕ ಮಂಡಳಿಯವರು ಆಡಿದ ರತ್ನಾವಳಿ ನಾಟಕದ ಮಧ್ಯದಲ್ಲಿ ಸೊಗಸಾದ ಒಂದು ಸಣ್ಣ ಸಮಾರಂಭವು ಜರಗಿತು. ಈ ಕಂಪೆನಿಯವರು ಬಹು ದಿವಸಗಳಿಂದ ಈ ಪಟ್ಟಣದಲ್ಲಿ ಪ್ರದರ್ಶಿಸಿದ ನಾಟಕಗಳನ್ನು ಕಂಡು ಮೋಹಿತರಾದ ಹಲವು ಮಂದಿ ಮಂಗಳೂರು ನಿವಾಸಿಕರು ನಾಟಕ ಪಾತ್ರಗಳ ಕೌಶಲ್ಯವನ್ನು ಪ್ರೋತ್ಸಾಹಿಸುವುದಕ್ಕಾಗಿಯೂ ಗುಣ ಗ್ರಹಣವನ್ನು ತೋರ್ಪಡಿಸುವುದಕ್ಕಾಗಿಯೂ ಬಾಲ ರತ್ನಾವಳಿಯನ್ನು ಆ ರಾತ್ರಿ ಆಡಿದವರಿಗೆ ಬಹುಮಾನವನ್ನು ಕೊಡಿಸುವಂತಹರಾದರು. ಈ ಕೆಲಸವನ್ನು ಮಾಡುವುದಕ್ಕೆ ಮಂಗಳೂರು ನಿವಾಸಿಕರಿಂದ ಪ್ರಾರ್ಥಿಸಲ್ಪಟ್ಟ ರಾ| ಪಂಜಿ ಮಂಗೇಶರಾಯರು ಆ ಕಾಲದಲ್ಲಿ ಅವರ ಪರವಾಗಿ ಹೀಗೆಂದರು:—

"ನಾಟಕ ಮಂಡಳಿಯ ಮಹಾಶಯರೇ, ಯಾವ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಈ ನಾಟಕ ಮಂದಿರದಲ್ಲಿ ಕೂಡಿದ್ದ ಮಂಗಳೂರು ನಿವಾಸಿಕರಿಂದ ನಾನು ಆಜ್ಞಾಪಿಸಲ್ಪಟ್ಟೆನೋ ಆ ಕಾರ್ಯಭಾರವನ್ನು ಅಲ್ಪಜ್ಞನಾದ ನನ್ನ ಮೇಲೆ ಹೊರಿಸಿದ್ದು ಆನೆಯ ಹೊರೆಯನ್ನು ಆಡಿನ ಬೆನ್ನ ಮೇಲೆ ಹೊರಿಸಿದಂತಾಯಿತು. ಈ ಸಂತೋಷಕಾರಕವಾದ ಕಾರ್ಯವನ್ನು ನೆರವೇರಿಸುವುದಕ್ಕೆ ಈ ಸಭೆಯಲ್ಲಿ ಹಲವು ಮಂದಿ ಮಹನೀಯರು ಪ್ರತ್ಯಕ್ಷವಾಗಿ ನನ್ನ ಕಣ್ಣು ಮುಂದೆ ಕಾಣುವಾಗ ಅಂಥವರನ್ನು ಬಿಟ್ಟು ನನ್ನನ್ನು ಆಯ್ದುಕೊಂಡದ್ದು ಅಷ್ಟು ಸಮಂಜಸವೆಂದು ನನಗೆ ಯಥಾರ್ಥವಾಗಿ ಕಂಡು ಬರುವುದಿಲ್ಲ. ಏಕೆಂದರೆ ಇಂತಹ ನಾಟಕಗಳಲ್ಲಿನ ಗುಣಾವಗುಣಗಳನ್ನು ವಿವೇಚಿಸಿ ಅಭಿಪ್ರಾಯವನ್ನು ಕೊಡುವುದು ಸುಲಭ ಸಾಧ್ಯವಲ್ಲ. ನಾಟಕವು ಲೋಕ ಸ್ವಭಾವವನ್ನು ಪ್ರತಿಬಿಂಬಿಸುವ ಕನ್ನಡಿ ಎಂದು ಹೇಳುವರು. ಹೀಗಿರಲು ಒಂದು ಮಂಡಳಿಯಲ್ಲಿನ ಪಾತ್ರಗಳು ತಮ್ಮ ನೈಜ ಸ್ವಭಾವವನ್ನು ತೀರಾ ಮರೆತು ಬಿಟ್ಟು ಆ ನಾಟಕದಲ್ಲಿ ಬರುವಂಥಾ ಪಾತ್ರಗಳ ಸ್ವಭಾವವನ್ನು ಹೊರಪಡಿಸುವುದು ಒಂದು ವಿಶೇಷ ತರದ ಕಲೆ ಎನ್ನುತ್ತೇವೆ. ನಾಟಕ ಕರ್ತನು ಸಾಹಿತ್ಯ ಸೂತ್ರಗಳಿಗನುಸಾರವಾಗಿಯೂ ಆಯಾಯ ಕಾಲದ ಜನಗಳ ರೀತಿ ನೀತಿಗಳಿಗೆ ಅನುಗುಣವಾಗಿಯೂ ಕಥೆಯನ್ನು ರಚಿಸುವುದಕ್ಕೆ ನಾಟಕ ಬಂಧ ಎಂದು ಹೆಸರು. ಈ ನಾಟಕ ಬಂಧಕ್ಕೆ ಆ ಕವಿಯೇ ಉತ್ತರವಾದಿಯಾಗಿರುತ್ತಾನೆ; ಅದರಲ್ಲಿದ್ದ ದೋಷಗಳು ಅವನದೇ ಎಂದು ತಿಳಿಯಬೇಕು. ಆದರೆ ನಾಟಕದ ಕವಿಯು ಸಂದರ್ಭಾನುಸಾರವಾಗಿ ಬರೆದ ಮಾತುಗಳನ್ನೂ ಮನೋವ್ಯಾಪಾರಗಳನ್ನೂ ಅಭಿನಯಗಳಿಂದಲೂ ಹಾವಭಾವಗಳಿಂದಲೂ ಹೊರಪಡಿಸುವುದು ವೇಶಧಾರಿಗಳ ಕರ್ತವ್ಯ. ಇದು ಸಹಾ ಕವಿತ್ವದಂತೆಯೇ ಒಂದು ಮಹತ್ತಾದ ವಿದ್ಯೆಯಾಗಿದೆ. ನಾಟಕಕಾರನು ಮನಸ್ಸಿನಲ್ಲಿ ಯೋಚಿನದ ಕಲ್ಪನೆಗಳನ್ನೂ ಭಾವನೆಗಳನ್ನೂ ವೇಶಧಾರಿಯು ಅಭಿನಯಗಳ ಮೂಲಕ ವ್ಯಕ್ತಪಡಿಸುವುದು ಸಾಮಾನ್ಯವಾದ ವಿದ್ಯೆಯಲ್ಲ. ನಾವು ಪ್ರಾಯಕವಾಗಿ ಈ ಎರಡು ಕಲೆಗಳ ಭೇದವನ್ನು ಅರಿಯದೆ ನಾಟಕಕಾರನ ದೋಷಗಳನ್ನು ವೇಶಧಾರಿಯ ಹೆಗಲ ಮೇಲೆ ಹೊತ್ತು ಹಾಕುವುದುಂಟು. ಇದು ಹೊರತು ಅನೇಕ ಸಂದರ್ಭಗಳಲ್ಲಿ ವೇಶಧಾರಿಗಳ ಇಂಪಾದ ಹಾಡುಗಳು ನಮ್ಮ ಕಿವಿಗಳನ್ನು ಮರುಳುಗೊಳಿಸಲು, ಮೃದಂಗ ಬಾರಿಸುವವನು ಜನೂವಟ್ಟಿನ ಮುಕ್ತಾಯದಿಂದ ನಮ್ಮನ್ನು ತಲೆದೂಗಿಸಲು, ನಾಟಕದಲ್ಲಿ ಪ್ರದರ್ಶಿಸೋಣಾಗುವ ಆಶ್ಚರ್ಯಕರವಾದ ಸೀನುಗಳ ಸೌಂದರ್ಯವು ನಮ್ಮ ಕಣ್ಣುಗಳನ್ನು ಕುಕ್ಕುತ್ತಿರಲು, ವೇಶಧಾರಿಗಳು ಮಾಡುವ ಅಭಿನಯಗಳ ಮರ್ಮವನ್ನೂ ಹಾವಭಾವಗಳ ತತ್ವವನ್ನೂ ವಿವೇಚಿಸಿ ಅವುಗಳ ಗುಣಗ್ರಹಣವನ್ನು ಮಾಡುವುದು ಬಹು ತರ ಕಷ್ಟವಾಗುತ್ತದೆ. ಸೀಯಾಳದ ನೀರಿನಲ್ಲಿ ಸಕ್ಕರೆಯನ್ನು ಬೆರಸಿ ಅದನ್ನು ಕುಡಿದರೆ ಎಳನೀರಿನ ರುಚಿಯನ್ನು ಪ್ರತ್ಯೇಕವಾಗಿ ಅನುಭವಿಸುವುದು ನಾಲಿಗೆಗೆ ಹೇಗೆ ತೊಡಕಾಗುತ್ತದೋ ಹಾಗೆಯೇ ಪಾತ್ರಗಳ ಅಭಿನಯ ಹಾವಭಾವಾದಿಗಳು ಗೀತಗಾನಗಳಲ್ಲಿಯೂ ಪರದೆಗಳ ಚಿತ್ರ ವೈಚಿತ್ರಗಳಲ್ಲಿಯೂ ಮುಳುಗಿರುವಾಗ ಅದನ್ನು ಈಚೆಗೆ ತೆಗೆದು ಪರಿಗ್ರಹಿಸುವುದು ಕಷ್ಟವಾಗುತ್ತದೆ. ನಾನು ಇದು ವರೆಗೆ ಹಲವು ನಾಟಕಗಳನ್ನು ಕಂಡದುಂಟು. ಅವುಗಳಲ್ಲಿ ವೇಶಧಾರಿಗಳ ಅಭಿನಯಗಳು ಕಲಾ ರೂಪವಾಗಿ ಅಭಿವರ್ಧಿಸಿದ್ದು ಈ ಮಂಡಳಿಯಲ್ಲಿ ಹೊರತು ಬೇರೊಂದರಲ್ಲಿ ಕಾಣಲಿಲ್ಲ. ಈ ರೀತಿಯಲ್ಲಿ ಪಾತ್ರಗಳ ನಾಟಕ ಕೌಶಲ್ಯವನ್ನು ಮಾತ್ರ ಕೊಂಡಾಡಿದ್ದರಿಂದ ಅವರಲ್ಲಿ ಸಂಗೀತ ಜ್ಞಾನವೂ ಇತರ ಸಾಹಿತ್ಯಗಳೂ ಕಡಮೆಯೆಂದಾಗಲೀ ಕುಂದುಕವುಳ್ಳವು ಎಂಬದಾಗಲೀ ನನ್ನ ಅಭಿಪ್ರಾಯವಲ್ಲ. ಯಾಕಂದರೆ ಸಂಗೀತದಲ್ಲಿ ಕಿವುಡನಾದ ನಾನು ಅದನ್ನು ಕುರಿತು ಒಂದು ಮಾತನ್ನಾಡುವುದಕ್ಕೂ ಶಕ್ತನಲ್ಲ!"

"ಬಹುಮಾನಗಳನ್ನು ಸಭಾಸದರ ಪರವಾಗಿ ಈ ಮಂಡಳಿಯವರಲ್ಲಿ ಕೆಲವರಿಗೆ ಕೊಡುವ ಈ ಒಂದು ಕೆಲಸ ಉಳಿದದೆ. ಈ ರಾತ್ರೆ ಆಡಿದ ನಾಟಕದ ಹೆಸರಿನಂತೆಯೇ ಈ ಬಾಲ ರತ್ನಾವಳಿಯಲ್ಲಿ ಯಾವ ರತ್ನವು ಅಮೂಲ್ಯವಾಗಿದೆ, ಯಾವುದು ಅಗ್ಗವಾಗಿದೆ, ಯಾವುದು ದೊಡ್ಡದಾಗಿದೆ, ಯಾವುದು ಚಿಕ್ಕದ್ದಾಗಿದೆ ಎಂದು ನಾನು ಕಂಡುಹಿಡಿಯಲಾರದವನಾಗಿದ್ದೇನೆ. ರತ್ನಗಳಲ್ಲಿ ಒಂದೊಂದಕ್ಕೂ ಅದರ ಮಟ್ಟಿಗೆ ಬೆಲೆಯು ಇದ್ದೇ ಇರುತ್ತದೆ; ಛಾಯಿಸ್ ಇದ್ದ ಹಾಗೆ ಒಬ್ಬೊಬ್ಬರು ಒಂದೊಂದನ್ನು ಮೆಚ್ಚುತ್ತಾರೆ. ಹೀಗಿರಲು ಈ ಉಪಹಾರಗಳನ್ನು ನಿವಾಸಿಕರ ಪರವಾಗಿ ನಾನು ಕೊಟ್ಟಲ್ಲಿ ಅವು ಈ ರಾತ್ರೆ ನಾಟಕವಾಡಿದ ಮಂಡಳಿಯಲ್ಲಿ ಬಾಲಕರಿಗೆಲ್ಲಾ ಮೊತ್ತವಾಗಿ ಸಲ್ಲುತ್ತವೆಂದು ತಿಳಿಯಬೇಕೆಂದು ನನ್ನ ವಿಜ್ಞಾಪನೆ. ಈ ಬಹುಮಾನಗಳು ನಿಮ್ಮಿಂದ ಸಭಿಕರ ಮನಸ್ಸಿನಲ್ಲಿ ಉಂಟಾದ ಆನಂದದ ಸ್ಮಾರಕಗಳೆಂದೂ ಮುಂದೆ ಈ ವಿದ್ಯೆಯನ್ನು ಪ್ರೋತ್ಸಾಹಿಸಲು ನಿಮಗೆ ಕೊಟ್ಟಿರುವ ಸಂಚಿಕಾರವೆಂದೂ ನೀವು ಭಾವಿಸುವುದು. ಎಲೆ, ನಾಗೇಂದ್ರ! ಹಿಂದು ಜನಗಳಲ್ಲಿ ನಾಗೇಂದ್ರನ ತಲೆಯಲ್ಲಿ ರತ್ನವಿದೆಂದು ಆಡಿಕೊಳ್ಳುತ್ತಾರೆ. ಅದು ನಿಜವಾದರೆ ನಿನ್ನ ತಲೆಯಲ್ಲಿ ಅಡಗಿರುವ ಆಭರಣವು ಮುಂದೆ ನಿನ್ನ ಕೈಯಲ್ಲಿದ್ದು ಯಾವಾಗಲೂ ಬೆಳಗುತ್ತಿರಲಿ".

"ಎಲೆ ಮರಿ! ತುಳುವ ದೇಶಕ್ಕೆ ಬಂದ ನಿನಗೆ ಮರಿ ಎಂಬ ನಿನ್ನ ಮುದ್ದು ಹೆಸರೂ ಅನಂತ ಪದ್ಮನಾಭನೆಂಬ ನಿನ್ನ ಯಥಾರ್ಥವಾದ ನಾಮವೂ ಸರ್ಪವೆಂದೇ ಅರ್ಥ ಕೊಡುವುದರಿಂದ ನಾಗೇಂದ್ರನ ವಿಷಯವಾಗಿ ನಾನು ಹೇಳಿದ ಮಾತುಗಳು ನಿನಗೂ ಚಿರಕಾಲ ಒಪ್ಪುತ್ತಿರಲಿ."

"ಎಲೆ ರಾಜೂ, ನೀನು ಈ ರಾತ್ರಿ ರತ್ನಾವಳಿಯ ವೇಶದಿಂದ ವತ್ಸರಾಜನ ಮನಸ್ಸನ್ನು ಹೇಗೆ ಸೆಳದಿಯೋ ಹಾಗೆಯೇ ಈ ನಾಟಕ ಮಂದಿರದಲ್ಲಿದ್ದ ನಮ್ಮೆಲ್ಲರ ಚಿತ್ತವನ್ನು ವಂಚಿಸಿದ್ದರಿಂದ ಇದೇ ನಿನಗೆ ಅವರು ದಯಪಾಲಿಸಿದ ಉಪಹಾರ!"

ಹೀಗೆಂದು ಹೇಳಿ ರಾ| ಪಂಜಿ ಮಂಗೇಶರಾಯರು ನಾಗೇಂದ್ರ, ಮತ್ತು ಮರಿ ಎಂಬ ಇಬ್ಬರ ಕೈಗೆ ಚಿನ್ನದ ಕಡಗಳನ್ನು ತೊಡಿಸಿ, ರಾಜು ಎಂಬವನ ಬೆರಳಿನಲ್ಲಿ ಉಂಗುರವನ್ನು ಇಟ್ಟರು.

ತದನಂತರ ನಾಟಕ ಮಂಡಳಿಯ ಪಕ್ಷವಾಗಿ ರಾ| ರಾ| ವರದಾಚಾರ್ಯರು ಸಭಿಕರನ್ನು ವಂದಿಸಿ ಮಂಗಳೂರು ನಿವಾಸಿಕರು ಈ ಪ್ರಕಾರ ತಮಗೆಲ್ಲರಿಗೂ ಕೊಟ್ಟ ಪ್ರೋತ್ಸಾಹಕ್ಕಾಗಿ ಕೃತಜ್ಞತೆಯನ್ನು ವಿಶದ ಪಡಿಸಿದರು.

ತೆಂಗಿನ ವ್ಯವಸಾಯ.

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

ಸೊಸಿಗಳನ್ನು ನೆಟ್ಟ ತರುವಾಯ ಮಾಡಬೇಕಾದ ಕಾರ್ಯಗಳು:—ಸೊಸಿಗಳನ್ನು ಚನ್ನಾಗಿ ಬೇರುಗಳು ಬಿಟ್ಟುಕೊಳ್ಳುವ ವರಿಗೆ ಪ್ರತಿ ವರುಷವೂ ಬೇಸಿಗೆಯಲ್ಲಿ ನೀರನ್ನು ಹಾಕುತ್ತಿರಬೇಕು. ಮೂರು ನಾಲ್ಕು ವರುಷಗಳ ಕಾಲ ನೀರು ಹಾಕಿದರೆ ಸಾಕೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಗಿಡಗಳ ಜೀವಿತಕಾಲದಲ್ಲೆಲ್ಲಾ ಬೇಸಿಗೆಯಲ್ಲಿ ನೀರನ್ನು ಹಾಕುತ್ತಲೇ ಇದ್ದರೆ ಹೀಚುಗಳು ಉದರುವುದು ಕಡಿಮೆ ಎಂದು ಕೆಲವು ಅನುಭವದಾರರು ಹೇಳುತ್ತಾರಾದ್ದರಿಂದ ಸಾಧ್ಯವಾದರೆ ನೀರನ್ನು ಹಾಕುತ್ತಲೇ ಇರುವುದು ಉತ್ತಮ ಪಕ್ಷವೆಂದು ತೋರುತ್ತದೆ. ಬೇಸಿಗೆಯಲ್ಲಿ ಸೊಸಿಗಳಿಗೆ ವಾರಕ್ಕೆ ಎರಡಾವರ್ತಿಯೂ ಸ್ವಲ್ಪ ದೊಡ್ಡವುಗಳಿಗೆ ಒಂದಾವರ್ತಿಯೂ ನೀರನ್ನು ಹಾಕಿದರೆ ಸಾಕಾಗಿರುತ್ತದೆ. ಆದರೆ ದೊಡ್ಡವಾಗಿ ಫಲಬಿಡುವ ಗಿಡಗಳಿಗೆ ತಿಂಗಳಿಗೊಂದಾವರ್ತಿ ಹೇರಳವಾಗಿ ನೀರನ್ನು ಹಾಕಬೇಕು.

ದುರ್ಬಲವಾಗಿರುವಂತೆ ಕಂಡುಬರುವ ಗಿಡಗಳ ಬೇರಿನ ಸುತ್ತಲೂ ಅಗತೆ ಮಾಡಿ ಇತರ ಕಸ ಕಡ್ಡಿಗಳಿಲ್ಲದ ಹಳೇದಾದ ಪಳಗಿದ ಸಗಣಿ ಗೊಬ್ಬರ ಅಥವಾ ಮೂಳೆ ಪುಡಿಯನ್ನು ಹಾಕಬೇಕು. ಬೇರುಗಳ ಮೇಲ್ಭಾಗದಲ್ಲಿ ಸ್ವಲ್ಪ ಬೂದಿ ಮತ್ತು ಉಪ್ಪನ್ನು ಹಾಕಬೇಕು. ಆರೋಗ್ಯವಾಗಿ ಬಲವಾಗಿ ಬೆಳದಿರುವ ಮರಗಳಿಗೆ ಮೇಲೆ ಹೇಳಿದ ವ್ಯವಸಾಯವೇನೂ ಅವಶ್ಯಕವಾಗಿರುವುದಿಲ್ಲ.

ಸೊಸಿಗಳನ್ನು ನೆಟ್ಟ ನಂತರ ಒಂದು ವರುಷಕಾಲ ಅವುಗಳ ಪಕ್ಕಗಳಿಂದ ಅವುಗಳಿಗೆ ಮರೆ ಮಾಡುವುದು ಒಳ್ಳೇದು. ಆದರೆ ಸೊಸಿಗಳ ಮೇಲ್ಭಾಗಕ್ಕೆ ಮಾತ್ರ ಮರೆ ಮಾಡಬಾರದು.

ಮರಗಳು ಫಲಕ್ಕೆ ಬರುವವರೆಗೂ ಅವುಗಳ ಮಧ್ಯೆ ಇತರ ಬೆಳೆಗಳನ್ನಿಡಬಹುದು. ಆದರೆ ಬುಡಗಳ ಸುತ್ತ ಮಾತ್ರ ಪೈರು ಬರಕೂಡದು. ಹಸರು ಗೊಬ್ಬರದ ಪೈರನ್ನಿಡಬೇಕು. ಇವುಗಳನ್ನು ಮಳೆಕಾಲದಲ್ಲಿ ಜಮೀನಿನಲ್ಲಿ ಉತ್ತುಬಿಡಬೇಕು. ಸೊಸಿಗಳು ಬೆಳೆದು ಗರಿಗಳು ದನಗಳಿಗೆ ನಿಲುಕಿಸದಿರುವಷ್ಟು ಎತ್ತರಕ್ಕೆ ಬಂದಾಗ್ಯೆ ರಾತ್ರಿಕಾಲದಲ್ಲಿ ಗಿಡಗಳಿಗೆ ಹಸು, ಎಮ್ಮೆ, ಕುದುರೆ, ಹಂದಿ ಇವುಗಳನ್ನು ಕಟ್ಟಿಹಾಕಬೇಕು. ಕಟ್ಟುವುದಕ್ಕೆ ಮೊದಲು ಕೆಳಕ್ಕೆ ಹುಲ್ಲು, ತರಗು, ಕಸ ಕಡ್ಡಿ ಇವುಗಳನ್ನೆಲ್ಲಾ ಹಾಸಿರಬೇಕು. ಹಾಗೆ ಮಾಡಿದಲ್ಲಿ ದನಗಳ ಸಗಣಿ ಗಂಜಲ ಇವುಗಳೆಲ್ಲವೂ ಅಲ್ಲೇ ನಿಂತು ತೆಂಗಿನ ಮರಗಳಿಗೆ ಬಹಳ ಉತ್ತಮವಾದ ಗೊಬ್ಬರವಾಗಿ ಪರಿಣಮಿಸುವುದು. ಅಲದೆ ತೆಂಗಿನ ತೋಟಗಳಲ್ಲಿ ರಾತ್ರಿಕಾಲದಲ್ಲಿ ಕುರಿಗಳ ಮಂದೆಯನ್ನು ತಡಿದಿರಬಹುದು. ಇವುಗಳನ್ನು ಪ್ರತಿರಾತ್ರಿಯೂ ಒಂದೇ ಸ್ಥಳದಲ್ಲಿ ನಿಲ್ಲಿಸದೆ ಒಂದೊಂದು ರಾತ್ರಿ ಒಂದೊಂದು ಭಾಗದಲ್ಲಿ ತಡದರೆ ಪೂರ್ತ ತೋಟಕ್ಕೆ ಇವುಗಳ ಹಿಕ್ಕೆ ಮತ್ತು ಗಂಜಲವು ಬೀಳುವುವು. ಹೀಗೆ ಕುರಿಗಳನ್ನು ತಡೆಯುವುದಕ್ಕೆ ಮೊದಲು ಮತ್ತು ನಂತರದಲ್ಲಿ ಸ್ವಲ್ಪ ಮಟ್ಟಿಗೆ ಕುಂಟೆ ಹೊಡೆದರೆ ಬಹಳ ಪ್ರಯೋಜನವುಂಟು. ಅಲ್ಲದೆ ಮರಗಳ ಬುಡದ ಸುತ್ತಲೂ ಸುಮಾರು ಐದು ಅಡಿ ಧೂರ ಬೇರುಗಳ ಸುತ್ತಲ ಮಣ್ಣನ್ನೆಲ್ಲಾ ಅಗೆದು ಮಳೆಕಾಲದ ಪೂರ್ತಿ ಬೇರುಗಳೆಲ್ಲವೂ ಮೇಲಕ್ಕೆ ಕಾಣುವಂತಿಟ್ಟಿದ್ದು ಮಳೆಕಾಲವು ತೀರಿದೊಡನೆಯೇ ಸುಮಾರು ನಾಲ್ಕು ಅಂಗುಲ ಪ್ರಮಾಣ ಬೂದಿ, ಮೂಳೆ ಪುಡಿ, ಒತ್ತದ ಹೊಟ್ಟು, ಗೋಡು ಮಣ್ಣು, ದನುವಿನ ಸಗಣಿ ಇವೇ ಮೊದಲಾದ ಗೊಬ್ಬರಗಳನ್ನು ಬೇರುಗಳ ಮೇಲೆ ಹರವಿ ಗೊಬ್ಬರದ ಮೇಲೆ ಮಣ್ಣನ್ನು ಹಾಕಿ ಸ್ವಲ್ಪಮಟ್ಟಿಗೆ ದಮ್ಮಸ್ಸ್ ಮಾಡಿದರೆ ಬಹಳ ಪ್ರಯೋಜನ ಉಂಟು. ಹುರಿಯನ್ನು ಹೊಸೆಯುವ ಕೆಲಸಕ್ಕೆ ಬಾರದ ತೆಂಗಿನ ಮೊಟ್ಟೆ ಚಾಪೆಯನ್ನು ಹೆಣೆಯುವ ಕೆಲಸಕ್ಕಾಗದ ಗರಿ, ಒಲೆಗೆ ಹಾಕುವುದಕ್ಕೆ ಬಾರದ ಮೊಟ್ಟೆ, ಗೂದಮಟ್ಟೆ ಮತ್ತು ಸಿದರೆ ಇವುಗಳೆಲ್ಲವನ್ನೂ ಮರಗಳ ಮಧ್ಯೆ ರಾಶಿಮಾಡಿ ಸೂರ್ಯಾಸ್ತಮಯವಾದನಂತರದಲ್ಲಿ ಬೆಂಕಿಹಾಕಿ ಉರಿಸಿ ಬೂದಿಯೊಡನೆ ದನವಿನ ಸಗಣಿಯನ್ನು ಬೆರಸಿ ಬೇರುಗಳ ಸುತ್ತಲೂ ಹರವಿ ಅಗತೆ ಮಾಡಿದರೆ ಚಿಕ್ಕ ವಯಸ್ಸಿನ ಗಿಡಗಳಲ್ಲಿ ಬಹಳ ಜಾಗ್ರತೆಯಾಗಿ ಹುವ್ವು ಬಿಡುವುದೆಂದೂ ಫಲ ಬಿಡುತ್ತಿರುವ ಮರಗಳಲ್ಲಿ ಹೇರಳವಾಗಿ ಫಲಬಿಡುವುದೆಂದೂ ಹೇಳುತ್ತಾರೆ. ತೆಂಗಿನ ಮರಗಳಿಗೆ ಸುಣ್ಣವು ಅತ್ಯವಶ್ಯಕವಾಗಿದೆ. ಒಂದು ವರುಷ ಹಸರು ಸೊಪ್ಪಿನ ಗೊಬ್ಬರವನ್ನು ಹಾಕುವುದು, ಮುಂದಲ ವರುಷ ಸುಣ್ಣವನ್ನು ಹಾಕುವುದೆ ಈ ಕ್ರಮವರಿತು ವ್ಯವಸಾಯ ಮಾಡುವುದು ಉತ್ತಮವಾಗಿದೆ. ಎಕರೆಗೆ ಹತ್ತು ಹನ್ನೆರಡು ಕುಕ್ಕೆ ಸುಣ್ಣವು ಸಾಕಾಗುವುದು.

ಉತ್ಪತ್ತಿ:—ಮೇಲೆ ಹೇಳಿದ ಕ್ರಮವರಿತು ವ್ಯವಸಾಯ ಮಾಡಿದರೆ ಸೊಸಿಗಳನ್ನು ನೆಟ್ಟ ಆರು ಅಥವಾ ಏಳನೆ ವರುಷದಲ್ಲಿ ಫಲ ಬಿಡಲು ಆರಂಭವಾಗುವುದು. ಪೂರ್ಣ ಫಲ ಬಿಡುವಾಗ್ಯೆ ಒಂದೊಂದು ಗಿಡಕ್ಕೆ ೫೦ರಿಂದ ೧೦೦ರ ವರೆಗೂ ಕಾಯಿ ಬಿಡುವುದು. ಮಧ್ಯ ವಯಸ್ಸಿನ ಮರಗಳಲ್ಲಿ ೧೫೦—೨೦೦ ಕಾಯಿಗಳು ಬಿಡುವುವೆಂದು ಹೇಳುತ್ತಾರೆ. ಎಳನೀರಿಗೆ ಬಹಳ ಗಿರಾಕಿ ಇದ್ದ ಹೊರ್ತು ಕಾಯಿಗಳು ಚನ್ನಾಗಿ ಬಲಿಯುವ ವರಿವಿಗೂ ಕೀಳಬಾರದು. ಕೆಳಭಾಗದ ಗೊನೆಯಲ್ಲಿ ಒಂದೆರಡು ಕಾಯಿಗಳು ತಳಲುಗಳಾಗಿರುವುವೆಂದು ಕಂಡು ಬಂದಾಗ್ಯೆ ಅದು ಮತ್ತು ಅದರ ಮೇಲ್ಭಾಗದ ಗೊನೆಗಳ ಕಾಯಿಗಳನ್ನು ಕೀಳಬೇಕು. ಕಾಯಿಗಳನ್ನು ಕೀಳಿಸುವಾಗ್ಯೆ ಗಿಡದ ಮೊಟ್ಟೆಗಳ ಮಧ್ಯೆ ಇರಬಹುದಾದ ಕಚರಾಗಳು, ಒಣಗಿದ ಗರಿಗಳು ಇವುಗಳೆಲ್ಲವನ್ನೂ ಕಿತ್ತುಹಾಕಿ ಇರುವೆ ಅಳಿಲು ಮತ್ತು ಇಲಿ ಇವುಗಳು ಗೂಡುಗಳಿದ್ದರೆ ನೋಡಿ ತೆಗೆದು ಹಾಕಬೇಕು. ಸುಮಾರು ೯೦ ಮಣ ಕೊಪ್ಪರಿಗೆ ೪೦೦ ರೂಪಾಯಿನವರಿವಿಗೂ ಅಷ್ಟೇ ಕೊಪ್ಪರಿ ಎಣ್ಣೆಗೆ ೬೫೦ ರೂಪಾಯಿನವರಿವಿಗೂ ಬೆಲೆ ಸಿಕ್ಕುವದು. ತೆಂಗಿನ ಕಾಯಿನ ಮೇಲಿನ ಮೊಟ್ಟೆಯನ್ನು ನೀರಿನಲ್ಲಿ ನೆನಿಸಿ ಕದವೆಯನ್ನು ತೆಗೆದು ಅದರಿಂದ ಹುರಿ, ಹಗ್ಗ ಮೊದಲಾದವುಗಳನ್ನು ತಯಾರಿಸುವುದು. ಕದವೆಯು ಮಣಕ್ಕೆ ೧—೪—೦ ಮೊದಲ್ಗೊಂಡು ೪—೪—೦ ರೂಪಾಯಿಗಳವರಿವಿಗೂ ಬೆಲೆಯಾಗುವುದು.

ಕೆ. ಗ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಹಂಪನಕಟ್ಟೆ ಬಳಿ ಗ್ರಾಮ ಮುನ್ಸೀಫ್ ಕೋರ್ಟು.

ಅಯ್ಯಾ ಪತ್ರಕರ್ತರೇ,

ಮುನ್ಸಿಪಾಲಿಟಿಯವರು ಪಟ್ಟಣದ ಸೌಂದರ್ಯದ ಬಗ್ಯೆ ನಾನಾ ವಿಧಗಳಲ್ಲಿ ಪ್ರಯತ್ನಪಡುತ್ತಾರೆ. ಗ್ಯಾಸುದೀಪ ಮತ್ತು ಹಲವು ನೂತನ ಕಟ್ಟೋಣಗಳಿಂದ ಹಂಪನಕಟ್ಟೆಯು ಈಗ ಬಹಳ ಚಲೋದು ಕಾಣುತ್ತದೆ. ಆದರೆ ಪಂಚಮರ ಕೊಡದಬ್ಬು ಗುಡಿಯಂತೆ ಕಟ್ಟಲ್ಪಟ್ಟಿರುವ ಗ್ರಾಮ ಮುನ್ಸೀಫ್ ಕೋರ್ಟು ಈ ಸೌಂದರ್ಯವನ್ನೆಲ್ಲಾ ಅಡಗಿಸಿ ಬಿಡುವದು. ಈ ಕಟ್ಟೋಣವು ಪಟ್ಟಣದ ಮಧ್ಯ ಸ್ಥಳವಾದ ಹಂಪನಕಟ್ಟೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಕಟ್ಟಿಸಬೇಕಿತ್ತು. ಹ್ಯಾಗೂ ಕಟ್ಟಿಸಿ ಆಯಿತು.

ಅದನ್ನು ಕಳದ ಒಂದೆರಡು ವರ್ಷಗಳಿಂದ ಹಾಗೆಯೇ ಖಾಲಿ ಬಿಟ್ಟಿರುತ್ತಾರೆ. ಯಾಕೋ ತಿಳಿಯದು! ಮಲೀನರು ಈ ಕಟ್ಟೋಣ ಚಾವಡಿಗಳಿಗೆ ಹೋಗಿ ನಾನಾ ತರದ ಹೇಸಿಗೆಯ ದುರ್ಗಂಧಗಳಿಂದ ಇದನ್ನು ಇನ್ನೂ ಆದಷ್ಟು ಆಕ್ಷೇಪಕರವಾಗಿ ಮಾಡುತ್ತಾರೆ. ನಡಿಯಕೂಡದ ಕುದುರೆ ನಾಯಿ ಇತ್ಯಾದಿ ಪಶುಗಳು ಇದನ್ನು ತಮ್ಮ ವಿರಾಮ ಸ್ಥಳವನ್ನಾಗಿ ಮಾಡುತ್ತವೆ. ಈ ವಿದ್ಯಮಾನಗಳಿಂದ ಈ ಕಟ್ಟೋಣವು ಪ್ರಕೃತ ಪಟ್ಟಣದ ಸೌಂದರ್ಯ ಮಾತ್ರವನ್ನಲ್ಲಾ. ಆರೋಗ್ಯವನ್ನು ಸಹ ಕೆಡಿಸಲು ಆಸ್ಪದಕೊಡುತ್ತದೆ. ಆದ್ದರಿಂದ ಈ ಕಟ್ಟೋಣವನ್ನು ಉಪಯೋಗಿಸುವುದು ಅನುಚಿತ ಕಂಡರೆ ಇದನ್ನು ಬೇಗನೇ ನೆಲ ಸಮಮಾಡಿ ಮುನ್ಸಿಪಾಲಿಟಿಯವರು ಇಲ್ಲಿ ಒಂದು ಚಿಕ್ಕ ನಿರ್ಮಲವಾದ ಹೂ ತೋಟವನ್ನು ಮಾಡುವದು ಯುಕ್ತವಾಗಿರುವದು.

ಹಂಪನಕಟ್ಟೆ ನಿವಾಸಿ.

“ಕುದ್ರಿ ಪದವು”.

ಅಯ್ಯಾ, ಮುಲ್ಕಿ, ತಾ. 3-5-14.

ಮುಲ್ಕಿಯಿಂದ ಸುಮಾರು ೧೦ ಯಾ ೧೧ ಮೈಲುಗಳ ದೂರದಲ್ಲಿ ಕಿನ್ನಿಗೋಳಿ ಸಮೀಪ “ಕುದ್ರಿ ಪದವು” ಎಂಬ ಸ್ಥಳದಲ್ಲಿ ಭಾರೀ ಸಂತೆಯು ಏರ್ಪಟ್ಟು ಒಂದು ಯಾ ಒಂದುವರೆ ತಿಂಗಳುಗಳ ವರೆಗೆ ವ್ಯಾಪಾರ ನಡಿಯುವದು. ಇಲ್ಲಿ ಈ ಸಂತೆಯು ಬಹಳ ವರ್ಷಗಳಿಂದ ನಡೆದು ಬರುತ್ತದೆ. ಹಲವು ಕಡೆಗಳಿಂದ ವ್ಯಾಪಾರಸ್ಥರು ಇಲ್ಲಿಗೆ ಬರುವರು. ಈ ಪದವು ಮುಖ್ಯ ಮುಖ್ಯವಾದ ಹಲವು ಗ್ರಾಮಗಳ ನಡುಮಧ್ಯ ಇರುವುದರಿಂದ ವ್ಯವಸಾಯ ವೃತ್ತಿಗಳಲ್ಲಿಯೇ ಇದ್ದು ಕಸಬಾ ಬಜಾರುಗಳಿಗೆ ಹೋಗಲಾರದ ಅನೇಕ ಕೃಷಿಕರಿಗೆ ಇಲ್ಲಿಗೆ ಬಂದು ಮಳೆಕಾಲದ ಬಗ್ಯೆ ಬೇಕಾದ ಜೀನಸು ಇತ್ಯಾದಿಗಳನ್ನು ಪಡಿಯಲು ಅನುಕೂಲವಾಗಿರುವದು. ಈ ಸಂತೆಯು ಜನರಿಗೆ ಬಹಳ ಉಪಯೋಗಕರವಾದ್ದರಿಂದಲೇ ಇದು ಬಹಳ ವರ್ಷದಿಂದ ಬಾಳಿ ಇನ್ನೂ ಊರ್ಜಿತಾವಸ್ಥೆಯಲ್ಲಿರುತ್ತದೆ.

ಆದರೆ ಈ ಪದವಿನಲ್ಲಿ ನೀರಿಲ್ಲದೆ ವ್ಯಾಪಾರಸ್ಥರೂ ಗಿರಾಕಿಗಳೂ ಬಹಳವಾಗಿ ಬಳಲುತ್ತಿದ್ದಾರೆ. ಸಂತೆಗೆ ಬೆಂಕಿ ಅಕಸ್ಮಿತವಾಗಿ ಬಿದ್ದರೆ ನೊಂದಿಸುವ ಯಾವ ಉಪಾಯವೂ ಇಲ್ಲ. ಹೀಗೆ ನಾಲ್ಕಾರು ವರ್ಷಗಳ ಹಿಂದೆ ಬೆಂಕಿ ಬಿದ್ದು ಬಹಳ ನಷ್ಟ ಉಂಟಾಗಿರುವುದು. ಕುಡಿಯಲು ನೀರು ಬೇಕಾದರೆ ಮೂರು ಮೈಲುಗಳ ದೂರವಿರುವ ಮನೆಗಳಿಗೆ ಹೋಗಿ ನೀರನ್ನು ತರಬೇಕು. ನೀರಿನ ಅಡಚಣಿಯ ಇಲ್ಲಿಯ ಸಂಕಷ್ಟಗಳನ್ನು ಹೇಳಿ ತೀರದು. ಇಲ್ಲಿಯೇ ವಾಸಿಸಿರಬೇಕಾದ ವ್ಯಾಪಾರಸ್ಥರೂ ಇನ್ನೂ ಹಲವರೂ ಅಶುದ್ಧ ನೀರನ್ನು ಕುಡಿದು ಮಳೆ ಬಿದ್ದೊಡನೆ ರಕ್ತಾತಿಸಾರ ಮೊದಲಾದ ರೋಗಗಳಿಂದ ಬಳಲುವರು. ಪದವಿನ ಸಂತೆಯಲ್ಲಿ ಡುಡಿದಕ್ಕಿಂತ ಹೆಚ್ಚು ಹಣವು ಈ ರೋಗಗಳ ನಿವೃತ್ತಿ ಬಗ್ಯೆ ಖರ್ಚಾಗಿ ಬಡ ವ್ಯಾಪಾರಸ್ಥರು ಇನ್ನೂ ಹೆಚ್ಚಿನ ಕಷ್ಟಗಳಿಗೆ ಗುರಿಯಾಗುವರು. ಸಂತೆ ಕೂಡುವ ಸ್ಥಳವು ಮುಲ್ಕಿ ದೊಡ್ಡ ಮನೆ ಕಾಳಪ್ಪ ಶೆಟ್ರರ ಕುಟುಂಬದವರದ್ದಾಗಿರುತ್ತದೆ. ಸಂತೆಗಳ ಬಾಡಿಗೆಯು ಇವರಿಗೆ ದೊರಕುವದು. ಆದ್ದರಿಂದ ಕುಡಿಯುವ ನೀರಿನ ಭಾವಿಯನ್ನು ತೋಡಿಸಿ ಜನರ ಆರೋಗ್ಯವನ್ನು ಕಾಪಾಡಿಸುವ ಏರ್ಪಾಡನ್ನು ಮಾಡಿದರೆ ಸಂತೆಯ ಸ್ಥಿತಿಯು ಮತ್ತಷ್ಟು ಅಭಿವೃದ್ಧಿ ಹೊಂದಿ ಶೆಟ್ರ ಕುಟುಂಬದವರ ಉತ್ಪತ್ತಿಯೂ ಹೆಚ್ಚುವದು.

ಒಂದು ವೇಳೆ ಸ್ಥಳದ ಮಾಲಿಕರು ಇಲ್ಲಿ ಭಾವಿಯನ್ನು ತೋಡಿಸದಿದ್ದರೆ ಲೋಕಲ್ ಬೋರ್ಡಿನವರಾದರೂ ಈ ವಿಷಯವನ್ನು ಚಿತ್ತಕ್ಕೆ ತಂದುಕೊಂಡು ಒಂದು ಭಾವಿಯನ್ನು ತೋಡಿಸುವಂತೆ ಹ್ಯಾಗಾದರೂ ಮಾಡುವುಧು ಅಗತ್ಯವಾಗಿರುತ್ತದೆ. ಅಷ್ಟೇ ಅಲ್ಲ. ಈ ಪದವಿಗೆ ಬರುವ ಮಾರ್ಗವು ಸಹ ಬಹಳ ಕೆಟ್ಟ ಸ್ಥಿತಿಯಲ್ಲಿರುವದರಿಂದ ಮಾರ್ಗವನ್ನು ಸಹ ದುರುಸ್ತಿ ಮಾಡಿಸಿದರೆ ಬಡ ವ್ಯಾಪಾರಸ್ಥರಿಗೆ ಮಹದುಪಕಾರವಾಗುವದು.

ವ್ಯಾಪಾರಸ್ಥ.

ಕೊಸ್ಮೊಪೊಲಿಟನ್ ಕ್ಲಬ್ಬ್, ಮಂಗಳೂರು.

ಅಯ್ಯಾ,

ಮಂಗಳೂರಲ್ಲಿ ಈ ಕ್ಲಬ್ಬು ತೆರಿಯೋಣಾಗಿ ಒಂದೆರಡು ವರ್ಷಗಳಾಗುತ್ತಲಿವೆ. ಎಲ್ಲಾ ಜಾತಿಯವರಿಂದಲೂ ಈ ಕ್ಲಬ್ಬು ಬಹಳ ಒಳ್ಳೇ ರೀತಿಯಲ್ಲಿ ಉಪಯೋಗಿಸಲ್ಪಡುತ್ತದೆ. ಉತ್ಪತ್ತಿಯೂ ಸಹ ಕಡಮೆ ಇಲ್ಲ. ಆದರೆ ಮಂಗಳೂರಲ್ಲಿ ಈ ತನಕ ತೆರಿಯೋಣಾದ ಇಂಥಾ ಕ್ಲಬ್ಬುಗಳಿಗೆಲ್ಲಾ ತಗಲಿದ ಅಂಟುರೋಗವು ಇದಕ್ಕೆ ಸಹ ತಗಲುವುದೋ ಎಂತ ಸಂಶಯ ಪಡಲು ಕಾರಣವಿದೆ. ಈ ಅಂಟುರೋಗ ತಗಲಿದ ಇಲ್ಲಿಯ ಎಲ್ಲಾ ಕ್ಲಬ್ಬುಗಳು ರೋಗದ ಬೇನೆಯನ್ನು ತಾಳಲಾರದೆ ಮೃತಪಟ್ಟಿರುವವು. ವಿಶೇಷ ಪ್ರಯೋಜನಕಾರಿಯಾದ ಈ ಕ್ಲಬ್ಬಿಗೆ ಸಹ ಇಂಥಾ ಗತಿಯು ಪ್ರಾಪ್ತವಾಗದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ.

ಕ್ಲಬ್ಬಿನ ಚಂದಾದಾರರಾದ ಹಲವು ಮಹನೀಯರು ಕೆಲವು ತಿಂಗಳುಗಳಿಂದ ತಿಂಗಳುಕಟ್ಲೆ ವಂತಿಗೆಯನ್ನು ಕೊಡದೆ ಬಾಕಿ ಇಟ್ಟಿರುವರು. ಕ್ಲಬ್ಬಿಗಿರುವ ಒಟ್ಟಿನ ಉತ್ಪತ್ತಿಯಲ್ಲಿ ಅರೆವಾಸಿಗಿಂತ ಹೆಚ್ಚಾದ ಮೊಬಲಗು ವಸೂಲಾಗದೆ ಬಾಕಿ ಇರುತ್ತದೆ. ಕಾರಣವೇನೆಂತ ತಿಳಿಯದು. ನಾಲ್ಕಾರು ತಿಂಗಳುಗಳ ವಂತಿಗೆಯನ್ನು ಬಾಕಿ ಇಟ್ಟ ನಂತರ ಎಂಥವನಿಗಾದರೂ ಕ್ಲಬ್ಬಿನ ವಹಿವಾಟೇ ಬೇಡವೆಂತ ಕಾಣುತ್ತದೆ. ಹೀಗಾಗಿ ಮೆಂಬರರ ಸಂಖ್ಯೆಯು ಕಡಮೆಯಾಗಿ ಕ್ಲಬ್ಬು ಸಂಕೋಚಗೊಂಡು ಕೃಷವಾಗಿ ಹೋಗುವದು. ಕ್ಲಬ್ಬಿನ ಮೆಂಬರರೆಲ್ಲರೂ ಈ ವಿಷಯವನ್ನು ಬೇಗನೇ ನೋಡಿಕೊಳ್ಳಬೇಕೆಂಬ ಅಪೇಕ್ಷೆಯಿಂದ ಇದನ್ನು ತಮಗೆ ಬರಕೊಂಡಿರುವೆನು.

ಕ್ಲಬ್ಬ್ ಮೆಂಬರರಲ್ಲೊಬ್ಬ.

ಮಲ್ಪೆ,
ತಾ. 3-5-14.

ಸ್ವಾಮಿ,

ಮಂಗಳೂರು ನೇತ್ರಾವತಿ ಸಂಕದ ಹತ್ತರ ನದಿಗೆ ತಾಗಿ ಅಥವಾ ಕೆಲವಂಶ ನದಿಯಲ್ಲಿಯೇ ಮುಳುಗಿರುವ ಕುದ್ರು ಸ್ಥಳವು ಸರಕಾರದವರಿಂದ ಹರಾಜು ಹಾಕಲ್ಪಟ್ಟು ಮಂಗಳೂರಿನ ಹಲವು ಸಂಪನ್ನರು ಈ ಸ್ಥಳಗಳನ್ನು ಎಕ್ರೆ ಒಂದಕ್ಕೆ ಸಾವಿರ ಸಾವಿರ ರೂಪಾಯಿಗಳನ್ನು ಕೊಟ್ಟು ಪಡದರೆಂಬದಾಗಿ ತಿಳಿಯುತ್ತೇನೆ. ಏನೋ ವಿಶೇಷ ಉತ್ಪತ್ತಿಯನ್ನು ಈ ಸ್ಥಳಗಳಿಂದ ಹುಟ್ಟಿಸಬಹುದಾಗಿರಬೇಕು. ಇಲ್ಲದಿದ್ದರೆ ಇಂಥಾ ಸ್ಥಳಗಳನ್ನು ಬಹಳ ಹಣ ಕೊಟ್ಟು ಪಡಿಯಲು ಕಾರಣವಿಲ್ಲ. ಆದ್ದರಿಂದ ವಿಶೇಷ ಉತ್ಪತಿಯುಂಟಾಗುವಂತೆ ಈ ಸ್ಥಳಗಳನ್ನು ಹ್ಯಾಗೆ ಉಪಯೋಗಿಸಬಹುದು? ಎಂಥಾ ಕೃತಗಳನ್ನು ಈ ಸ್ಥಳಗಳಲ್ಲಿ ನಡಿಸಬಹುದೆಂಬುದನ್ನು ಈ ಸ್ಥಳಗಳನ್ನು ಪಡಕೊಂಡ ಮಂಗಳೂರಿನ ಸಂಪನ್ನರ್ಯಾರಾದರೂ ತಮ್ಮ ಪತ್ರ ಮೂಲಕ ತಿಳಿಸಿದರೆ ಉಪಕಾರವಾಗುತ್ತಿತ್ತು. ಏಕಂದರೆ ನಮ್ಮ ಪ್ರಾಂತ್ಯಗಳಲ್ಲಿ ಸಹ ಇಂಥಾ ಸ್ಥಳಗಳು ಇರುವವು. ಕೆಲವು ವರ್ಗಕ್ಕೆ ಸೇರಿ ಇರುವವುಗಳು ಸಹ ಇರಬಹುದು. ನಾವು ಸಹ ಮಂಗಳೂರಿನವರಂತೆಯೇ ಪ್ರಯೋಜನ ಪಡಿಯುಬಹುದೆಂಬ ಕೋರಿಕೆಯಿಂದ ಇದನ್ನು ಬರೆದಿರುತ್ತೇನೆ. ಉಪಕಾರ ಮಾಡಲು ತಪ್ಪಲು ಬಾರದೆಂಬದಾಗಿ ಅಪೇಕ್ಷಿಸುವ,

ವರ್ಗದಾರ.

ಸ್ವಾಮಿ,

ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಈ ಕೆಳಗಿನ ಕೆಲವು ಸಂಗತಿಗಳನ್ನು ಛಾಪಿಸಿ ಪ್ರಕಟಿಸುವದಾದರೆ ಬಾಯಿಬಾರದ ಮೂಕ ಪ್ರಾಣಿಗಳಾದ ಪಶ್ವಾದಿಗಳಿಗೆ ಬಹಳ ಉಪಕಾರವಾಗುತ್ತಿತ್ತು.

ನಮ್ಮ ಈ ಪುತ್ತೂರು ಕಸಬೆಯಲ್ಲಿ ದನಗಳಿಗೆ ವ ಎಮ್ಮೆಗಳಿಗೆ ಮೇಯುವ ಸ್ಥಳವು ಬಹಳ ದೂರವಾಗಿದ್ದು ವೀರಮಲೆ ಗುಡ್ಡೆ ಕಡೆಗೆ ಹೋಗಿ ಮಧ್ಯಾನ್ಹ ಹೊತ್ತಿಗೆ ವಾಪಸು ಬರುವಂಥಾ ಈ ಮೂಕ ಪ್ರಾಣಿಗಳಿಗೆ ಸುಮಾರು ೧॥ ಮೈಲು ಉದ್ದದ ಪಾಸಲೆ ವರೇಗೂ ಒಂದು ಕಡೆಯಾದರೂ ಕುಡಿಯಲಿಕ್ಕೆ ನೀರಿನ ಆಶ್ರಯವಿಲ್ಲದೆ ಬಿಸಿಲಿನ ತಾಪಕ್ಕೆ ಬಾಯಾರಿ ಕಂಗೆಟ್ಟು ಬಾಯಿಯಿಂದ ನೊರೆ ಕಾರುತ್ತಾ ಆಯಾಸಪಟ್ಟು ಬರುತ್ತಿರುವದನ್ನು ನೋಡಿದರೆ ಎಂಥಾ ಕಲ್ಲೆದೆಯಾಗಿರುವ ಕಠಿಣ ಮನುಷ್ಯನ ಹೃದಯವಾದರೂ ಕರಗಿ ನೀರಾಗದೆ ಇರದು. ಈ ಪಶುಗಳು ಬರುತ್ತಿರುವ ಮಾರ್ಗದ ಬದಿಯಲ್ಲಿ ದೊಡ್ಡ ದೊಡ್ಡ ಕಟ್ಟೋಣಗಳನ್ನು ಕಟ್ಟಿಕೊಂಡು ಸುಖದಿಂದ ಕಾಲ ಕಳೆಯುತ್ತಿರುವ ಐಶ್ವರ್ಯವಂತರಾದ ಸಾಹುಕಾರರೂ ತಾಲೂಕು ಬೋರ್ಡು ಮೆಂಬರರೂ ಸ್ವಲ್ಪವಾದರೂ ಲಕ್ಷ್ಯಕೊಡದಿರುವದನ್ನು ನೋಡಿದರೆ ಬಹಳ ವಿಷಾದಪಡಬೇಕಾಗುತ್ತದೆ. ಇದಲ್ಲದೆ ಮಹಾರಾಜೇಶ್ರಿ ಡಿಪ್ಯುಟಿ ಕಲೆಕ್ಟರರ ಬಂಗ್ಲೆಯ ಸಮೀಪ ಒಬ್ಬ ಮಹನೀಯರು ಕಲ್ಲಿನಿಂದ ಮರಿಗೆ ಕಟ್ಟಿಸಿ ಅದಕ್ಕೆ ಸುಣ್ಣದ ಗಾರೆಯಿಂದ ಅಲಂಕರಿಸಿದ್ದೇ ಹೊರತು ಇಂಥಾ ನೀರಿಲ್ಲದ ಸಮಯದಲ್ಲಿ ಬಡ ಪಶುಗಳಿಗಾಗಿ ಕನಿಕರಪಟ್ಟು ನೀರು ಹಾಕದಿರುವದನ್ನು ನೋಡಿ ವ್ಯಸನಪಟ್ಟು ಆ ಕಲ್ಲಿನ ಮರಿಗೆಯೇ ಬಿಸಿಲಿನ ತಾಪದಿಂದ ಬಾಯಾರಿ ನೀರನ್ನು ಬೇಡುತ್ತದೋ ಎಂಬಂತೆ ತೋರುತ್ತದೆ.

ಈ ವಿಷಯದಲ್ಲಿ ಈ ಊರ ನಿವಾಸಿಯಲ್ಲದ ಒಬ್ಬ ಪ್ರಯಾಣಸ್ಥರು ತಮ್ಮ ತಾ. ೧ನೇ ಪತ್ರಿಕೆಯಲ್ಲಿ ಪ್ರಕಟಿಸಿದ ಸಂಗ್ತಿಯು ಯಥಾರ್ಥವಾಗಿರುತ್ತದೆ.

ಆದುದರಿಂದ ಇನ್ನಾದರೂ ನಮ್ಮ ಊರ ಮಹಾನುಭಾವರಲ್ಲಿ ಯಾರಾದರೂ ಈ ಬಡ ಮೂಕಪ್ರಾಣಿಗಳಾದ ಪಶುಗಳ ಕಡೆಗೆ ದಯವಿಟ್ಟು ಅವುಗಳ ತೃಷಾಶಾಂತ್ಯರ್ಥವಾಗಿ ಅವುಗಳು ಬರುವ ಹಾದಿಯಲ್ಲಿ ಎಲ್ಲಿಯಾದರೂ ಒಂದೆರಡುಕಡೆ ನೀರನ್ನು ಒದಗಿಸಿಕೊಟ್ಟು ಪುಣ್ಯಕಟ್ಟಿಕೊಳ್ಳಬೇಕೆಂದು ಬೇಡಿಕೊಳ್ಳುವ.

ಪುತ್ತೂರು, 5-5-14. ಒಬ್ಬ ಊರನಿವಾಸಿ.

ವಿದೇಶ ವೃತ್ತಾಂತ.

ಎಪ್ರಿಲ್ ತಾ. ೨೮ರಲ್ಲು ಲಂಡನಿನ ಫೆಲಿಕ್ಸ್ಟೊವ್ ಎಂಬ ಹೊಟೇಲ್ ಸುಟ್ಟುಹೋಯಿತು. ಇದು ಸಫ್ರಜೆಟ್ಟರ ಕೆಲಸವೆಂದು ಗೊತ್ತಿಗೆ ಬಂದದೆ.

ಮೆಕ್ಸಿಕೋ ರಾಜ್ಯದವರಿಗೂ ಯುನೈಟೆಡ್ ಸ್ಟೇಟಿನವರಿಗೂ ಆದ ಯುದ್ಧದ ಸಂಬಂಧ ಒಪ್ಪಂದವಾಗುವಹಾಗಿದೆ. ಅಮೇರಿಕಾನರ ಶರ್ತಗಳನ್ನು ಮೆಕ್ಸಿಕಾನರು ಸ್ವೀಕರಿಸುವುದಕ್ಕಿದ್ದಾರೆ. ಆದುದರಿಂದ ತಾತ್ಕಾಲಿಕ ಯುದ್ಧ ನಿಲ್ಲಿಸುವ ಒಪ್ಪಂದ ಮಾಡಿಕೊಂಡಿದ್ದಾರೆ.

ವೀರಕ್ರುಸಿನಲ್ಲಿ ಅಮೇರಿಕಾನರ ಸಿವಿಲ್ ಗವರ್ನಮೆಂಟು ಸ್ಥಾಪಿಸಲ್ಪಟ್ಟಿರುವುದು.

ಮೆಕ್ಸಿಕೋ ಸರಕಾರದ ವಿರೋಧ ಪಕ್ಷದ ಜನರಲ್ ವಿಲ್ಲ ಮತ್ತು ಜನರಲ್ ಕರಾಂಜರವರು ಅಮೇರಿಕಾನರ ಮತ್ತು ಮೆಕ್ಸಿಕಾನರ ಯುದ್ಧಕಾಲದಲ್ಲಿ ತಟಸ್ಥರಾಗಿರಲು ಮನಸ್ಸು ಮಾಡಿರುವಲ್ಲದೆ ಅಮೇರಿಕಾನರೊಡನೆ ಸ್ನೇಹಭಾವದಲ್ಲಿಯೇ ಇದ್ದುಳಿಯುವರು.

ಯುನೈಟೆಡ್‌ಸ್ಟೇಟ್ ಮತ್ತು ಹುರೇಟರೊಡನೆ ಸಂಧಾನ ನಡಿಸಲು ತಕ್ಕ ಸನ್ನಾಹ ನಡಿಯುತ್ತಿದೆಯಾದರೂ ದಂಗೆಗಾರರ ಪಕ್ಷದ ಜನರಲ್ ಕರಾಂಜರವರು ತಾತ್ಕಾಲಿಕ ಯುದ್ಧವನ್ನು ನಿಲ್ಲಿಸಲು ಒಡಂಬಡುವದಿಲ್ಲ. ಇವರು ಜನರಲ್ ವಿಲ್ಲರೊಡನೆ ೧೨,೦೦೦ ಸೈನೀಕರನ್ನು ಟೆಂಪಿಯಾಕೋ ಎಂಬ ಪಟ್ಣವನ್ನು ಹಿಡಿದುಕೊಳ್ಳಲು ಕಳುಹಿಸಿರುವರು.

ಮೆಕ್ಸಿಕೋ ಪಟ್ಣದಿಂದ ಸಾವಿರಾರು ಮಂದಿ ವಿದೇಶಿಯರು ವೀರಕ್ರುಸಿಗೆ ಬರುತ್ತಲೇ ಇದ್ದಾರೆ.

ಐರ್ಲ್ಯಾಂಡಿಗೆ ಹೋಮರೂಲು ಕೊಡಕೂಡದೆಂದು ಸಾಧಿಸುವ ಅಲಸ್ಟರಿನವರು ಗುಟ್ಟಾಗಿ ಈ ವರೆಗೆ ೩೦,೦೦೦ ಅಮೇರಿಕಾನರ ಸಣ್ಣ ನಮೂನೆಯ ರೈಫಲ್ ಕೋವಿಗಳನ್ನೂ ೩ ಮಿಲಿಯ ತೋಟೆಗಳನ್ನೂ ತರಿಸಿಕೊಂಡಿರುವರೆಂತ ಜರ್ಮನ್ ದೇಶದ ಒಂದು ವರ್ತಮಾನ ಪತ್ರವುಹೇಳುವುದು. ಅಲಸ್ಟರಿನವರಿಗೆ ಮತ್ತು ಸರಕಾರದವರಿಗಿರುವ ಭೇದವು ತಕ್ಕ ರೀತಿಯಲ್ಲಿ ಕೊನೆಗಾಣುವ ಹಾಗಿದೆ. ಅಲಸ್ಟರಿಗೆ ಹೆಚ್ಚಿನ ಆಯುಧ ಸಾಮಗ್ರಿಗಳು ಸಾಗಿಸಲ್ಪಡದ ಹಾಗೆ ಸರಕಾರದವರು ಜಾಗ್ರತೆ ತಕ್ಕೊಂಡಿರುವರಲ್ಲದೆ ಇದರ ಮುಂದಾಳುಗಳನ್ನು ಕೈದುಮಾಡಿ ವಿಚಾರಣೆಗೆ ಗುರಿ ಮಾಡಲು ಅಪ್ಪಣೆ ಕೊಟ್ಟಿರುವರು. ಕೆಪ್ಟನ್ ಕ್ರೇಗ್ ಮತ್ತು ಮೆಜರ್ ಮೆಕ್‌ಕಾಲ್ಮೊಂಟ್ ಎಂಬ ಅಲಸ್ಟರಿನ ವಲಂಟಿಯರರ ಸೇನೆಯ ಮುಂದಾಳುಗಳನ್ನು ಹಿಡಿಯಲು ಹುಕುಂ ಆಗಿತ್ತು. ಆದರೆ ಸದ್ಯಾ ಈ ಹುಕುಂ ಹಿಂದಕ್ಕೆ ಇಡಲ್ಪಟ್ಟಿರುವುದು.

ಇರ್ಲ್ಯಾಂಡ್ ಮತ್ತು ಅಲಸ್ಟರಿನ ವಾದವನ್ನು ಒಡಂಬಡಿಕೆ ಮೂಲಕ ತೀರಿಸುವರೆ ಉಭಯ ಪಕ್ಷದ ಮೆಂಬರರು ಇರುವ ಒಂದು ಕಮಿಶನ್ ನೇಮಿಸಲ್ಪಡುವುದು.

ಅಂಗೋಲದ ಸಾನ್ ಸಾಲ್ವದೊರ್ ಎಂಬಲ್ಲಿಯ ದೇಶೀಯರು ದಂಗೆ ಎದ್ದು ೨೦ ಬಿಳೀ ಜನರನ್ನು ಕೊಂದು ಹಾಕಿ, ಪೋರ್ಚುಗೀಸ್ ಜನರಲರನ್ನು ಹಿಂದಟ್ಟಿ, ಕಾರ್ಖಾನೆಗಳನ್ನು ಸುಟ್ಟುಹಾಕಿದರು. ಪ್ರೊಟೆಸ್ಟಾಂಟ ಮತ್ತು ರೋಮನ್ ಕೆಥೊಲಿಕ ಪಾದ್ರಿಗಳು ಓಡಿ ಹೋಗಿರುವರು.

ಜಪಾನ್ ದೇಶದಲ್ಲಿ ಆಗಾಗ್ಗೆ ನೀರು ಮತ್ತು ಬೆಂಕಿಯ ಹಾವಳಿಯಿಂದ ಊರುಗಳೇ ಹಾಳಾಗುವವು. ಇಂಥಾ ಸಂದರ್ಭದಲ್ಲಿ ರೈತರು ಕಷ್ಟಪಟ್ಟು ಬೆಳೆದ ದವಸ ಧಾನ್ಯ, ಮುಖ್ಯವಾಗಿ ಭತ್ತಕೂಡ ನಾಶವಾಗಿ ರೈತರಿಗೆ ಬಹಳ ನಷ್ಟವುಂಟಾಗುವದು. ಇದನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಆ ದೇಶದಲ್ಲಿ ಒಂದು ಕ್ರಮವು ರೂಢಿಯಲ್ಲಿರುವದು. ಅದೇನೆಂದರೆ—ಅಲ್ಲಲ್ಲೇ ಮುಖ್ಯ ಮುಖ್ಯವಾದ ಪಟ್ಟಣಗಳಲ್ಲಿ ನಾಲ್ಕಾರು ಜನರು ಸೇರಿ ಅಕ್ಕಿಯನ್ನು ಕೊಂಡಿಡುವ ಒಂದು ದೊಡ್ಡ ಕೋಠಿಯನ್ನಿಡುವರು. ರೈತರು ಬೆಳೆದ ಭತ್ತವನ್ನೆಲ್ಲಾ ಕಟ್ಟಿ ಅಕ್ಕಿಮಾಡಿಸಿ ಅಂಥಾ ಯಾವುದಾದರೊಂದು ಕೋಠಿಗೆ ತೆಗೆದುಕೊಂಡು ಹೋಗುವನು. ಅಲ್ಲಿ ಅದನ್ನು ಚೆನ್ನಾಗಿ ಪರೀಕ್ಷಿಸಿ ದರ್ಜೆವಾರು ವಿಂಗಡಿಸಿ ಚೀಲಗಳ ಬಾಯಿಗೆಲ್ಲಾ ಮೊಹರು ಮಾಡಿ ಕೋಠಿಯಲ್ಲಿಡುವರು. ರೈತನಿಗೆ ಅವನ ಧಾನ್ಯವು ಬಾಳಬಹುದಾದಷ್ಟು ಬೆಲೆಗೆ ಒಂದು ರಶೀದಿಯನ್ನು ಕೊಡುವರು. ಅವಶ್ಯ ಬಿದ್ದರೆ ರೈತನು ಇಂಥಾ ರಶೀದಿಯನ್ನು ಯಾರಾದರೂ ಬ್ಯಾಂಕಿನವರು ಕೊಂಡುಕೊಳ್ಳಲು ಇಚ್ಛೆಪಟ್ಟರೆ ಅವರಿಗೆ ಮಾರಿ ಹಣವನ್ನು ಪಡೆಯಬಹುದು. ರೈತನ ಉಪಯೋಗಕ್ಕೆ ಮಧ್ಯೆ ಯಾವಾಗಲಾದರೂ ಅಕ್ಕಿಯು ಅವಶ್ಯವಾದರೆ ಕೋಠಿಯ ಅಧಿಕಾರಿಗಳಿಗೆ ಅರ್ಜಿ ಹಾಕಿಕೊಂಡರೆ ಅಕ್ಕಿಯನ್ನು ಪರೀಕ್ಷಿಸುವ, ವಿಂಗಡಿಸುವ, ಮತ್ತು ಕಾಪಾಡಿಟ್ಟುಕೊಳ್ಳುವ ಕೆಲಸಗಳಿಗೆಲ್ಲಾ ತಗಲುವ ಖರ್ಚನ್ನು ಅವನಿಂದ ವಸೂಲು ಮಾಡಿಕೊಂಡು ಅವನಿಗೆ ಅಕ್ಕಿಯನ್ನು ಕೊಡುವರು. ಅಕ್ಕಿಯನ್ನು ತೆಗೆದುಕೊಂಡು ಅದನ್ನು ಕಾಪಾಡಿಟ್ಟುಕೊಂಡಿರುವುದು, ಹೀಗೆ ಅಕ್ಕಿಯನ್ನು ತಂದಿಟ್ಟಿರುವ ರೈತರಿಗೆ ಅವಶ್ಯವಾದಾಗ ಸಾಲ ಕೊಡುವದು, ಭತ್ತದ ವ್ಯವಸಾಯವನ್ನು ಪ್ರೋತ್ಸಾಹಗೊಳಿಸುವದು, ಮಾರಾಟವನ್ನು ನೋಡಿಕೊಳ್ಳುವುದು, ಪರದೇಶಗಳಿಗೆ ಕಳುಹಿಸುವುದು, ಪ್ರದರ್ಶನಗಳನ್ನು ನಡಿಸುವುದು, ಮತ್ತು ಗೊಬ್ಬರ, ಯಂತ್ರಗಳೇ ಮೊದಲಾದ ಇತರ ವ್ಯವಸಾಯ ಸಂಬಂಧವಾದ ಮಟ್ಟುಗಳನ್ನು ಉಪಯೋಗಿಸುವ ವಿಷಯದಲ್ಲಿ ರೈತರಿಗೆ ತಿಳುವಳಿಕೆಯನ್ನು ಹೆಚ್ಚಿಸುವುದು, ಇವೇ ಮೊದಲಾದವುಗಳು ಇಂಥಾ ಕೋಠಿಗಳ ಮುಖ್ಯವಾದ ಕೆಲಸಗಳಾಗಿವೆ.

ಎರಡೇ ಚಕ್ರಗಳಿಂದ ನಡಿಸಲ್ಪಡುವ ಹೊಸ ನಮೂನೆಯ ಮೊಟೊರ್‌ಕಾರ್ ಬರ್ಮಿಂಗ್ಹಾಮ್ ಮೊಟೊರ್‌ಕಾರ್ ಕಂಪೆನಿಯಲ್ಲಿ ಮೆ| ವೂಲ್ಸಿಟೊಲು ಎಂಬವರಿಂದ ನಿರ್ಮಿಸಲ್ಪಟ್ಟಿರುವುದು.

ಬರೋಡೆಯ ಗಾಯಕವಾಡರೂ ಮಹಾರಾಣಿಯವರೂ ತಾ. ೪ರಲ್ಲು ಲಂಡನ್ನಿಗೆ ತಲಪಿದರು.

ಮೆಕ್ಸಿಕೋ ಪ್ರೆಸಿಡೆಂಟರಾದ ಹುರೇಟರು ರಾಜಿನಾಮೆ ಕೊಡುವ ಆಲೋಚನೆ ಮಾಡಿರುವರೆಂತ ತಿಳಿದು ಬರುತ್ತದೆ.

ಮೆಕ್ಸಿಕೊ ಸರಕಾರ ಕಡೆಯ ಸೈನೀಕರಲ್ಲಿ ಕೆಲವು ನೂರು ಮಂದಿ ವೀರಕ್ರುಸಿನ ಹೊರಗೆ ಇರುವ ನೀರಾವರಿ ಕೆಲಸವನ್ನು ಹಾಳುಮಾಡಲು ಪ್ರಯತ್ನಿಸಿ ಪಟ್ಟಣಕ್ಕೆ ನೀರು ಸಿಗದ ಹಾಗೆ ಮಾಡಬೇಕೆಂದು ಆಲೋಚಿಸಿದರು. ಆದರೆ ಈ ಕಾರ್ಯವು ಕೂಡಲೇ ತಡೆಯಲ್ಪಟ್ಟಿತು. ಜನರಲ್ ಮಾಸ್ ಎಂಬ ಮೆಕ್ಸಿಕಾನನು ವೀರಕ್ರುಸನ್ನು ಅಮೇರಿಕಾನರಿಂದ ಬಿಡಿಸುವುದಕ್ಕಾಗಿ ದೊಡ್ಡ ಸೇನೆಯನ್ನು ಸಿದ್ಧಪಡಿಸಿರುವನು. ಆದರೆ ಒಂದೇ ಸಾರಿ ಅಮೇರಿಕಾನರ ಮೇಲೆ ಬೀಳಲು ಮನಸ್ಸು ಮಾಡದೆ ವೀರಕ್ರುಸಿಗೆ ಆಹಾರ ಸಾಮಗ್ರಿಗಳು ಹೋಗುವ ದಾರಿಗಳನ್ನು ಬಲಕಾಯಿಸುತ್ತಿರುವನು.

ಮೆಕ್ಸಿಕೋದ ಮಂತ್ರಿಗಳು ರಾಜಿಕೊಟ್ಟಿರುವುದರಿಂದ ಅಲ್ಲಿಯ ಸ್ಥಿತಿಯು ಭಯಂಕರವಾಗಿರುವುದು. ಹುರೇಟರು ಏನುವ ಾಡಬೇಕೆಂದರಿಯದೆ ತಾನೂ ರಾಜಿಕೊಡಲು ಆಲೋಚಿಸಿರುವರು.

ಉತ್ತರ ಹಿಂದೂಸ್ಥಾನ.

ಇದೇ ತಾ. ೨೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೪,೦೩೬ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೧,೯೫೩ ಮಂದಿ ಮೃತಪಟ್ಟರು. ಈ ಪೈಕಿ ಡಿಲ್ಲಿ ೧; ಮುಂಬಾಯಿ ೬೫೭; ಮದ್ರಾಸ್ ೯; ಬಂಗಾಳ ೪೩; ಬಿಹಾರ್ ೨೦೦೫; ಸಂಯುಕ್ತ ಸಂಸ್ಥಾನ ೨೭೦೦; ಪಂಜಾಬು ೪೯೪೩; ಬರ್ಮ ೨೨೪; ಮೈಸೂರು ೩೩; ಹೈದರಾಬಾದ್ ೨; ಬೊಪಾಲ್ ೨; ರಾಜಪುತಾನ ೩೨; ವಾಯವ್ಯ ಸರಹದ್ದು ೭; ಮತ್ತು ಕಾಶ್ಮೀರ ೨೬ ಮರಣಗಳಾದವು.

ದಕ್ಷಿಣ ಆಫ್ರೀಕದ ಭಾರತೀಯರ ಅರಿಷ್ಟಾವಸ್ಥೆಗಳನ್ನು ವಿಚಾರಿಸಿ ತಿಳಿದುಕೊಳ್ಳಲು ಆಫ್ರೀಕಕ್ಕೆ ಹೋಗಿ ಹಿಂದೆರಳಿ ಬಂದ ರೆವರೆಂಡ್ ಅಂಡ್ರೂಸರವರು ಡಿಲ್ಲಿಯ ಸ್ಟೀಪನ್ಸ್ ಕಾಲೇಜಿಯಲ್ಲಿ ಪುನಃ ಕೆಲಸ ತೊಡಗಿರುವರು. ಜೂನು ತಿಂಗಳಲ್ಲಿ ತನ್ನ ಈ ಕೆಲಸವನ್ನು ಬಿಟ್ಟು ಭಾರತೀಯ ಕವಿಶ್ರೇಷ್ಠರಾದ ರವೀಂದ್ರನಾಥಟಾಗೋರರವರಿಂದ ಸ್ಥಾಪಿಸಲ್ಪಟ್ಟ ಬೋಲಾಪುರದ ಶಾಲೆಯಲ್ಲಿ ಕೆಲಸವನ್ನು ತೊಡಗುವರು. ಇವರು ಸ್ಟೀಪನ್ಸ್ ಕೊಲೇಜಿನ ಪೂರಾ ಸಂಬಂಧವನ್ನು ಬಿಟ್ಟು ಬಿಡುವದಿಲ್ಲ. ಬೋಲಾಪುರ ಶಾಲಾ ರಜಾ ಕಾಲದಲ್ಲಿ ಡಿಲ್ಲಿ ಕಾಲೇಜಿಗೆ ಬಂದು ಲೆಕ್ಚರುಗಳನ್ನು ಕೊಡುವರೆ ಒಪ್ಪಿಕೊಂಡಿರುವರು. ಕಾಲೇಜಿಯ ಸ್ಟಾಯಿಫಂಡ್ ಹಕ್ಕನ್ನು ಬಿಟ್ಟು ಬಿಟ್ಟಿರುತ್ತಾರೆ. ಕಳದ ವಾರ ಡಿಲ್ಲಿಯ ಸೈಂಟ್ ಜೇಮ್ಸ್ ದೇವಾಲಯದಲ್ಲಿ ರೆವರೆಂಡ್ ಅಂಡ್ರೂಸರವರು “ದಕ್ಷಿಣ ಆಫ್ರೀಕದಲ್ಲಿ ಪಡೆದ ಅನುಭಕ್ಕೆ ಕ್ರಿಸ್ತನು ಮಾದರಿಯಾಗಿದ್ದಾನೆ” ಎಂಬ ಪ್ರಸ್ತಾಪದ ಮೇಲೆ ಭಾಷಣಕೊಟ್ಟು ಭಾರತೀಯರ ಗುಣವನ್ನು ಕ್ರಿಸ್ತನ ಗುಣಕ್ಕೆ ಸರಿಹೋಲಿಸಿದರು. ರೆ| ಅಂಡ್ರೂಸರವರ ಮೊಣಗಂಟು ನೋವು ಇನ್ನೂ ಗುಣವಾಗದಿರುವುದರಿಂದ ವೈದ್ಯ ಪರೀಕ್ಷೆಮಾಡಿಸಿಕೊಳ್ಳುವರೆ ಬೇಗನೇ ಸಿಮ್ಲಾಕ್ಕೆ ಹೋಗುವರು.

ಡಿಲ್ಲಿಯ ಮೊಟೊರ್ ಕಾರ್ಖಾನೆಯಲ್ಲಿ ತಾ. ೨೮ನೇ ರಾತ್ರಿ ಫಕ್ಕನೇ ಬೆಂಕಿವುಂಟಾಗಿ ಭಾರಿ ಅನಾಹುತ ಸಂಭವಿಸಲಿಕ್ಕಿತ್ತು. ಪರಂತು, ಡಿಲ್ಲಿ ಸ್ಟೀಪನ್ಸ್ ಕಾಲೇಜಿಯ ವಿದ್ಯಾರ್ಥಿಗಳು ಸಹಾಯಕ್ಕೆ ಹೋಗಿ ತಮ್ಮ ಜೀವದ ಮರವೆ ಇಲ್ಲದೆ ಬೆಂಕಿಯು ಮೊಟೊರ್ ಬಂಡಿಗೆ ಹಾಕುವ ಎಂಣೆ ಇಟ್ಟಸ್ಥಳಕ್ಕೆ ತಲಪುವ ಮೊದಲೇ ಬೆಂಕಿಯಾರಿಸಿದರು. ಒಂದು ಮೊಟೊರು ಮಾತ್ರ ಸುಟ್ಟುಹೋಯಿತು.

ಬಿಹಾರಿನ ಪೋಲಿಸ್ ಇನ್ಸ್‌ಪೆಕ್ಟರ್ ರಾ| ಆರ್. ಕೆ. ಮುಕರ್ಜಿಯವರು ಇಂಗ್ಲಿಷ್ ವಿಧವಾಗಿ ಗುಪ್ತಪೋಲಿಸ್ ತರ್ಬೀತು ಪಡಿಯುವರೆ ಸರ್ಕಾರ ಖರ್ಚಿನಿಂದ ಲಂಡನಿಗೆ ಕಳುಹಿಸಲ್ಪಟ್ಟಿರುವರು.

* * *

ಕಲ್ಕತ್ತೆಯ ಯೂನಿವರ್ಸಿಟಿಗೆ ಲಕ್ಷಗಟ್ಟಳೆಯಲ್ಲಿ ಹಣ ಉಡಿಗೆರೆ ಮಾಡಿದ ಸರ್. ಟಿ. ಪಾಲಿತರವರು ವ್ಯಾಧಿ ಹಿಡಿದು ಮಲಗಿರುವರು.

* * *

ಕಲ್ಕತ್ತೆಯಲ್ಲಿ ಬಿರುಗಾಳಿಯು ಬೀಸಿ ಬಹಳ ಹಾವಳಿಯನ್ನುಂಟು ಮಾಡಿರುವುದು. ಈ ಬಿರುಗಾಳಿಯಿಂದ ತಾ. ೨೮ರಲ್ಲು ಟೊಲ್ಲೆಗಂಜಿಯಲ್ಲಿ ಎರಡು ಉಪ್ಪರಿಗೆಯ ಮನೆಯು ಬಿದ್ದುಹೋಯಿತು. ಮನೆಯಲ್ಲಿದ್ದವರಲ್ಲಿ ಹೆಚ್ಚಿನವರು ತಪ್ಪಿಸಿಕೊಂಡರು. ಒಬ್ಬ ಮಹಮ್ಮದೀ ಹುಡುಗನು ಮಾತ್ರ ಈ ಅವಗಡಕ್ಕೆ ತುತ್ತಾಗಿ ಅಪಾಯ ಸ್ಥಿತಿಯಲ್ಲಿರುವನು. ಬರ್ದವಾನ್, ಹೂಗ್ಲಿ ಜಿಲ್ಲೆಗಳಲ್ಲಿಯೂ ಈ ಬಿರುಗಾಳಿಯಿಂದ ಅತಿರೇಕ ನಷ್ಟ ಉಂಟಾಗಿರುವುದು. ಜಮಲಪುರ ಟಾನದಲ್ಲಿ ನೂರಾರು ಮನೆಗಳೂ ಮರಗಳೂ ಗಾಳಿಯಿಂದ ನೆಲಸಮವಾಗಿರುವವು. ೮ ಮಂದಿ ಜಖಂ ಹೊಂದಿರುವರು. ನೂರಾರು ದನಕರುಗಳು ಸತ್ತುಹೋಗಿರುವವು· ನೂರಾರು ಮಂದಿ ಮನೆಮಾರಿಲ್ಲದೆ ನಿರ್ಗತಿಕರಾಗಿರುವರು. ತಾ ೨೯ರಲ್ಲು ಸುಂಟರ ಗಾಳಿಬೀಸಿ ಮತ್ತಷ್ಟು ಹೆಚ್ಚಿನ ಅವಗಡಗಳು ಸಂಭವಿಸಿರುವವು. ಕಿಡ್ಡರ್‌ಪುರ ಎಂಬಲ್ಲಿ ವಿದ್ಯುಚ್ಛಕ್ತಿಯ ಸರಿಗೆಯು ಬಿದ್ದು ಇಬ್ಬರು ಮನುಷ್ಯರೂ ಒಬ್ಬ ಹುಡುಗನೂ ಸತ್ತುಹೋದರು. ಕೋಟೆಯಲ್ಲಿ (ಫೋರ್ಟ್) ಬಿರುಗಾಳಿಯೊಡನೆ ಕಲ್ಮಳೆ ಬಿದ್ದುದರಿಂದ ಅನೇಕ ಕಟ್ಟಡಗಳ ಕಿಡಿಕಿ ಬಾಗಲುಗಳು ಒಡೆದು ಕೋಣೆಗಳು ನೆರೆಯಿಂದ ತುಂಬಿದುವು. ಒಬ್ಬ ಹುಡುಗನಿಗೆ ಮಿಂಚು ಹೊಡೆಯಿತು. ೪೪ ವರ್ಷಗಳಿಂದ ಇಂತಹ ಬಿರುಗಾಳಿ ಬೀಸಲಿಲ್ಲವೆಂತ ಹಿಂದೂಸ್ಥಾನದಲ್ಲಿ ೪೪ ವರ್ಷಗಳಿಂದ ಇರುವ ಸೆಂಟ್ ಕ್ಸಾವಿಯರ್ಸ್ ಕಾಲೇಜಿಯ ಫಾದರ್ ಫ್ರಾನರ್ಟ್ಸೆಯವರು ಹೇಳುವರು. ಈ ಬಿರುಗಾಳಿಗೆ ಒಂದೆರಡು ಹಡಗಗಳೂ ಸಿಕ್ಕೊಂಡು ಬಹಳ ಕಷ್ಟಪಟ್ಟವು. ತಂತೀ ಕಂಭಗಳೂ ಬಿದ್ದು ಹೆಚ್ಚಿನ ನಷ್ಟ ಸಂಭವಿಸಿತು. ಸಾವಿರಾರು ಪಕ್ಷಿಗಳೂ ಸತ್ತು ಬಿದ್ದುವು.

* * *

ಬೊಂಬಾಯಿ ಆಧಿಪತ್ಯದಲ್ಲಿ ಬೂರಗದ ಮರಗಳು ಬಹಳವಾಗಿ ಬೆಳೆಯುವವು. ಇವುಗಳನ್ನು ರೇಷ್ಮೆ ಹತ್ತಿಯ ಮರವೆಂದು ಕರೆಯುವರು. ಮಳೆಕಾಲವು ಕಳೆದ ಕೂಡಲೆ ಮರಗಳ ಎಲೆಗಳೆಲ್ಲವೂ ಉದುರಿಹೋಗಿ ಜನವರಿ ತಿಂಗಳಿಂದ ಮಾರ್ಚಿ ಕೊನೆಯವರಿವಿಗೂ ಮರವು ಎಲೆಯಿಲ್ಲದೆ ಬರಿದಾಗಿರುವುದು. ಆಗ್ಯೆ ಮರ ತುಂಬಾ ಹುವ್ವುಗಳು ಬಿಡುವವು. ಸ್ವಲ್ಪ ಕಾಲದನಂತರ ದಪ್ಪ ದಪ್ಪ ಕಾಯಿಗಳಾಗುವವು: ಪ್ರತಿ ಕಾಯಿನ ಒಳಭಾಗದಲ್ಲೂ ಹೇರಳವಾಗಿ ಬಿತ್ತಗಳಿರುವವು. ಕಾಯಿಗಳು ಚೆನ್ನಾಗಿ ಬಲಿತ ಮೇಲೆ ಒಡೆದು, ಹತ್ತಿಯ ಆಗಿರುವ ಒಂದು ಮೃದುವಾದ ಪದಾರ್ಥವು ಕಾಣುವುದು. ಇದು ಚೆನ್ನಾಗಿ ಒಡೆದ ಮೇಲೆ ಬಿತ್ತದೊಡನೆ ಕೂಡಿದ ಹತ್ತಿಯು ಕೆಳಕ್ಕೆ ಬೀಳುವುದು. ಇದನ್ನು ಸುಪ್ಪತ್ತಿಗೆ ಮತ್ತು ದಿಂಬುಗಳನ್ನು ಮಾಡಲು ಬಹಳವಾಗಿ ಉಪಯೋಗಿಸುತ್ತಾರೆ.

—o—

ಮಧುಪಾನ ನಿವಾರಣೆಯನ್ನು ಮಾಡುವ ಬಗ್ಗೆ ಮುಂಬಾಯಿಯಲ್ಲಿ ದೇಶೀಯ ಮದ್ಯಗಳ ಮೇಲೆ ಹೆಚ್ಚಿನ ಸುಂಕವು ಹಾಕಲ್ಪಟ್ಟಿರುವುದು. ೨೫ ಡಿಗ್ರಿಯ ಮದ್ಯದ ಮೇಲೆ ಸುಂಕವು ೧೨ ಆಣೆಗೆ ಹೆಚ್ಚಿಸಲ್ಪಟ್ಟಿರುವುದು. ಆದರೆ ಬಲವಿಲ್ಲದ ಕಮ್ಮಿ ತ್ರಾಣದ ಮದ್ಯಗಳ ಮೇಲಿನ ಸುಂಕವು ತಗ್ಗಿಸಲ್ಪಟ್ಟದೆ. ೬೦ ಡಿಗ್ರಿ ತ್ರಾಣದ ಮದ್ಯದ ಸುಂಕವು ೨೫ ಡಿಗ್ರಿಯ ಮದ್ಯದ ಮೇಲಿನ ಸುಂಕಕ್ಕಿಂತ ಸಮ ಅರ್ಧಪಾಲಷ್ಟು ಕಮ್ಮಿಯಾಗಿದೆ. ಹೀಗೆ ೪೦ ಡಿಗ್ರಿ ತ್ರಾಣದ ಮದ್ಯದ ಮೇಲಿನ ಸುಂಕವೂ ತಗ್ಗಿಸಲ್ಪಟ್ಟದೆ. ಬಲವಾದ ಮದ್ಯದ ಬದಲಿಗೆ ಕಮ್ಮಿ ತ್ರಾಣದ ಮದ್ಯವನ್ನು ಕೊಡಬೇಕೆಂಬದೇ ಕಮ್ಮಿ ತ್ರಾಣದ ಮದ್ಯದ ಮೇಲಿನ ಸುಂಕವು ತಗ್ಗಿಸಲ್ಪಟ್ಟದ್ದಕ್ಕೆ ಕಾರಣವಾಗಿದೆ.

* * *

ಹಿಂದೂಸ್ಥಾನದ ೧೯೧೧ನೇ ಖಾನೇಶುಮಾರಿಯ ಲೆಕ್ಕದ ಪ್ರಕಾರ ಹಿಂದೂಸ್ಥಾನದ ಒಟ್ಟು ಜನಸಂಖ್ಯೆ ೩೪೪,೩೬೧,೦೫೭ರಲ್ಲಿ ೫೩,೩೬೮,೬೫೧ ಮಂದಿ ಮುಟ್ಟಕೂಡದೆಂದು ಮೇಲ್ಜಾತಿಯವರಿಂದ ತಿರಸ್ಕರಿಸಲ್ಪಡುವ ನಿರಾಶ್ರಿತ ಜನರು ಇದ್ದಾರೆ ಎಂದು ತಿಳಿದು ಬರುತ್ತದೆ. ಹಿಂದೂಸ್ಥಾನದ ಒಟ್ಟು ಜನಸಂಖ್ಯೆಯಲ್ಲಿ ಹಿಂದೂಗಳ ೨೦೭,೦೫೦, ೫೫೭ ಸಂಖ್ಯೆಯನ್ನು ನೋಡುವುದಾದರೆ ಶೇಕಡಾ ೨೪·೮ರಂತೆ ಮುಟ್ಟಕೂಡದವರೆಂದು ತಿರಸ್ಕರಿಲ್ಪಡುವ ಅನಾಶ್ರಿತರು ಇದ್ದಾರೆ. ಈ ಅನಾಶ್ರಿತರನ್ನು ಮೇಲಿನ ಸ್ಥಿತಿಗೆ ತರುವುದಕ್ಕಾಗಿ ಈಗಲೀಗ ಪ್ರಯತ್ನವು ಮಾಡಲ್ಪಡುತ್ತಿದೆ. ನಿರಾಶ್ರಿತ ಜನ ಸಹಾಯಕ ಸಂಘಗಳೆಂದು ಕರೆಯಿಸಲ್ಪಡುವ ಸಂಘಗಳ ಆಡಳಿತೆಯಲ್ಲಿ ೧೯೧೨ನೇ ಇಸವಿಯಲ್ಲಿ ೨೭ ಶಾಲೆಗಳೂ ೧೨೩೧ ವಿದ್ಯಾರ್ಥಿಗಳೂ, ೫೭ ಉಪಾಧ್ಯಾಯರೂ ಇದ್ದರು. ೧೯೧೧ನೇ ಇಸವಿಯಲ್ಲಿ ೨೨ ಶಾಲೆಗಳೂ ೧೦೮೪ ವಿದ್ಯಾರ್ಥಿಗಳೂ ೪೭ ಉಪಾಧ್ಯಾಯರೂ ಇದ್ದರು. ಈ ನಿರಾಶ್ರಿತ ಜನರ ಸಂಖ್ಯೆಯನ್ನೂ ಈ ಶಾಲೆಗಳ ಸಂಖ್ಯೆಯನ್ನೂ ಸರಿ ನೋಡುವುದಾದರೆ ಶಾಲೆಗಳು ಕೇವಲ ಕೊಂಚವೆಂದೇ ಹೇಳಬೇಕಾಗಿದೆ.

* * *

ಸಂಯುಕ್ತ ಸಂಸ್ಥಾನದ ರಾಷ್ಟ್ರಗಳಲ್ಲಿ ಚರ್ಮದ ಬೆಲೆಯು ಏರಿಕೊಂಡಿರುವುದರಿಂದ ಚಕ್ಕಳದ ಜೋಡುಗಳನ್ನು ಮೆಡುವುದು ಬಡವರಿಗೆ ಅಸಾಧ್ಯವಾಗಿ ಪರಿಣಮಿಸಿಯದೆ. ಆದುದರಿಂದ ಬೇರೊಂದು ಪದಾರ್ಥದಿಂದ ಉತ್ತಮವಾದ ಜೋಡುಗಳನ್ನು ನಿರ್ಮಿಸುವವರಿಗೆ ೧| ಸಾವಿರ ರೂಪಾಯಿ ಬಹುಮಾನ ಕೊಡುತ್ತೇವೆಂದು ಬ್ರಿಟಿಷ್ ಇಂಡಿಯಾ ಸಂಘದವರು ಪ್ರಕಟಿಸಿದ್ದಾರೆ.

* * *

ಇಂಗ್ಲಾಂಡಿಗೆ ಹೋಗಿರುವ ಕಾಂಗ್ರೆಸ್ ಪ್ರತಿನಿಧಿಗಳ ಮಂಡಳಿಗೆ ಪಂಜಾಬಿನಿಂದ ರಾ| ಲಾಜಪತ್‌ರಾಯಿರವರು ಆರಿಸಲ್ಪಟ್ಟು ಕಳದ ಶನಿವಾರ ಶೀಮೆಗೆ ಪ್ರಯಾಣಮಾಡಿದರು.

* * *

ದಕ್ಷಿಣ ಆಫ್ರೀಕದ ಭಾರತೇಯರ ಸ್ಥಿತಿಗತಿಗಳನ್ನು ತಿಳಿಯಲು ದಕ್ಷಿಣ ಆಫ್ರೀಕಕ್ಕೆ ಹೋಗಿ ಹಿಂದೆರಳಿ ಬಂದ ರೆವರೆಂಡ್ ಆಂಡ್ರೂಸರವರು ಲಾಹೋರಿನ ದೇವಾಲಯದಲ್ಲಿ:—"ಭಾರವಾದ ಹೊರೆ ಹೊತ್ತವರೇ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು" ಎಂಬ ಕ್ರೈಸ್ತ ಸತ್ಯವೇದದ ಮಾತಿನ ಮೇಲೆ ಭಾಷಣಕೊಟ್ಟು ದಕ್ಷಿಣ ಆಫ್ರಿಕದಲ್ಲಿ ಯೇಸುಕ್ರಿಸ್ತನ ಸಾರುಪ್ಯವನ್ನು ಸಮೀಪವಾಗಿ ಬಹಳವಾಗಿ ಆಶ್ಚರ್ಯ ರೀತಿಯಲ್ಲಿ ಕಂಡೆನು. ಈ ಭಾರತೇಯ ಜನರಿಗೆ ಅಲ್ಲಿ ದೇವಾಲಯಗಳು ಮುಚ್ಚಲ್ಪಟ್ಟಿದ್ದರೂ ದೇವಾಲಯಗಳು ತುಂಬಿರುವ ದೇಶದ ಜನರಿಗಿಂತಲೂ ಒಳ್ಳೇ ರೀತಿಯಲ್ಲಿ ಆಗ ತಾನೇ ಬಂದಿಖಾನೆಯಿಂದ ಬಿಡುಗಡೆಯಾದ ಭಾರತೇಯ ಹೆಂಗಸರು ಜೈಲರರ ಮತ್ತು ವಾರ್ಡರರ ವಿಷಯವಾಗಿ ತೋರಿಸಿದ ದಯಾಭಾವವನ್ನೂ ಕರುಣಾಸ್ಪದವಾದ ಮಾತುಗಳನ್ನೂ ಕೇಳಿ ಆಶ್ಚರ್ಯಪಟ್ಟೆನು. ಲೋಕದಲ್ಲಿರುವಷ್ಟು ಕಾಲ ದುಃಖಪಡುವವರಿಗಾಗಿದ್ದ ಯೇಸುಕ್ರಿಸ್ತನು ಈ ಲೋಕದ ಆ ಬಡ ಮನುಷ್ಯರನ್ನು "ನನ್ನ ಬಳಿಗೆ ಬನ್ನಿರಿ" ಎಂದು ಕರೆಯಲಾರನೇ ಎಂದು ತನ್ನಷ್ಟಕ್ಕನೇ ಭಾವಿಸಿದೆನು ಎಂಬಿತ್ಯಾದಿ ಮಾತುಗಳಿಂದ ಭಾಷಣ ಕೊಟ್ಟು ಕಡೆಯವರು ಮೊದಲನೇಯವರಾಗುವರು, ಮೊದಲನೇಯವರು ಕಡೇಯವರಾಗುವರೆಂಬ ಮಾತು ಈ ಭಾರತೇಯರಲ್ಲಿ ನೆರವೇರುವುದು ಎಂಬದಾಗಿ ಕಡೆಗೆ ರೆ| ಅಂಡ್ರೂಸರು ಹೇಳಿ ಭಾಷಣವನ್ನು ಮುಗಿಸಿದರು.

ದಕ್ಷಿಣ ಹಿಂದೂಸ್ಥಾನ.

ಮೈಸೂರು ಸರಕಾರದವರು ಮೈಸೂರಿಂದ ಹಾಸನದ ಮಾರ್ಗವಾಗಿ ಅರಸೀಕೆರೆಗೆ ೧೦೦ ಮೈಲಿಗಳ ದೂರ ರೈಲ್ ಹಾಕುವುದನ್ನು ಹಿಂದೂಸ್ಥಾನದ ಸ್ಟೇಟ್ ಸೆಕ್ರಟರಿಯವರು ಮಂಜೂರು ಮಾಡಿರುವರು.

* * *

ತಿರುವಾಂಕೂರು (ಅನಂತಶಯನ) ಸಂಸ್ಥಾನಕ್ಕೆ ಸೇರಿದ ತೇನಮಲಾಯಿ ಎಂಬ ಸ್ಥಳದಲ್ಲಿ ಕಳದ ವಾರ ಅಲ್ಲಿಯ ದಿವಾನರವರು ದೀಪದ ಕಡ್ಡಿ ತಯಾರಾಗುವ ಕಾರ್ಖಾನೆಯ ಹೊಸ ಕಟ್ಟಡಕ್ಕೆ ಅಸ್ತಿವಾರ ಶಿಲೆಯನ್ನು ಹಾಕಿ ಪತಿಷ್ಠೆ ಮಾಡಿದರು.

* * *

ಬರಂಹಪುರದ ಒಬ್ಬ ನೇಯಿಗೆ ಕೆಲಸದವನು ತನ್ನ ಹೆಂಡತಿಯ ಮೇಲೆ ಅನುಮಾನದಲ್ಲೆ ಇರುತ್ತಿದ್ದನು. ಕಳದ ತಾ. ೨೫ನೇ ರಾತ್ರಿ ಅವಳನ್ನು ಕೊಂದುಹಾಕಿದನು· ಅಜುಬಾಜಿನ ಜನರಿಗೆ ಈ ವಿಷಯವು ತಿಳಿದು ಅವನ ಮನೆಯ ಕಡೆಗೆ ಓಡಿಬಂದು ಬಾಗಲು ತೆರೆಯ ಹೇಳಿದರೂ ಅವನು ತೆರೆಯದ್ದರಿಂದ ಬಾಗಿಲು ಒಡೆದು ಒಳನುಗ್ಗಿ ನೋಡಲು ಹೆಂಗಸು ಸತ್ತಿದ್ದಳು. ಅವನು ಅವಳ ಕೈಕಾಲುಗಳನ್ನು ಕಟ್ಟಿ ಕಬ್ಬಿನದ ಕೋಲಿನಿಂದ ಹೊಡೆದು ಕೊಂದಿದ್ದನು.

* * *

ಕಲಿಕೋಟೆಯಲ್ಲಿ ಜರಗಲಿಕ್ಕಿರುವ ಪರಸ್ಪರ ಸಹಾಯಕ ಸಂಘಗ' ಡಿಸ್ಟ್ರಿಕ್ಟ್ ಕನ್ಫರೆನ್ಸಿನ ಸನ್ನಾಹವು ಬಹಳ ಚಲೋ ರೀತಿಯಿಂದ ನಡಿಯುತ್ತಲಿದೆ. ಈಕನ್ಫರೆನ್ಸಿನ ಸ್ವಾಗತ ಕಮಿಟಿಯ ಸೆಕ್ರಟರಿಗಳಾದ ರಾ. ಎಮ್. ಸಿ. ಕೃಷ್ಣವರ್ಮ ರಾಜರವರು ಬಹಳ ಚಟುವಟಿಕೆಯಿಂದ ಎಲ್ಲೆಲ್ಲಿಯೂ ಇದಕ್ಕಾಗಿ ಸಾಹಸಪಡುತ್ತಿದ್ದಾರೆ. ಕಳದ ಸೋಮವಾರ ಚಾಲಪುರಮ್ ಎಂಬಲ್ಲಿ ಸ್ವಾಗತ ಕಮಿಟಿಯ ಒಂದು ಮೀಟಿಂಗ್ ರಾ| ಕೆ. ಸಿ. ಶ್ರೀವೀರರಾಯರ್ ರಾಜರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಈ ಸಭೆಯಲ್ಲಿ ಸುಮಾರು ೩೪ ಮಂದಿ ಗೃಹಸ್ಥರು ಕಾರ್ಯ ನಿರ್ವಾಹಕ ಮೆಂಬರರಾಗಿ ಆರಿಸಲ್ಪಟ್ಟರು. ಕನ್ಫರೆನ್ಸ್ ತಾ. ೧೫-೧೬ರಲ್ಲು ಬಹುಮಾನಪಟ್ಟ ಮಿ| ಎಲ್, ಇ. ಬಕ್ಲೆ. ಐ. ಸಿ. ಎಸ್‌ರವರ ಅಧ್ಯಕ್ಷತೆಯಿಂದ ಕೂಡಿ ಬರುವುದು. ಮೊದಲನೇ ದಿನ ಸಭೆಯು ಪ್ರಾತಃಕಾಲ ೧೧ ಗಂಟೆಗೆ ಕೂಡಿ ಪರಾನ್ಹ ೫ ಗಂಟೆಯ ವರೇಗೆ ಜರಗುವುದು. ಈ ದಿನದ ಸಭೆಯಲ್ಲಿ ರಿಟಯರ್ಡ್ ಸೆಶ್ಯನ್ಸ್ ಜಡ್ಜರಾದ ರಾಜ ಕೆ. ಸಿ. ಮನವೇದನ್ ರಾಜರವರ ಸ್ವಾಗತ ಭಾಷಣವೂ ಸಭಾಧ್ಯಕ್ಷರ ಪ್ರಥಮ ಭಾಷಣವೂ, ಆಯಾ ವಿಷಯಗಳ ಮೇಲೆ ಲೇಖನಗಳನ್ನು ಓದುವದು ಇತ್ಯಾದಿ ಸಭಾ ಕೆಲಸಗಳು ನಡೆಯುವುದು.

* * *

ತಾ. ೨೮ರಲ್ಲು ತಿನ್ನವೆಲ್ಲಿಯಲ್ಲಿ ಒಂದು ಭಾರಿ ಮೋಟರ್ ಅವಗಡವು ಸಂಭವಿಸಿರುವುದು. ಪಾಲ್ಮಕೋಟ ಮೋಟರ್ ಕಂಪೆನಿಗೆ ಸೇರಿದ ಒಂದು ಬಂಡಿಯಲ್ಲಿ ೪೦ ಮಂದಿ ಪ್ರಯಾಣಿಕರನ್ನು ಹೇರಿಸಿಕೊಂಡು ಬಹಳ ರಭಸವಾಗಿ ಓಡ್ಯಾಡುತ್ತಿರುವಾಗ ಫಕ್ಕನೇ ಬಂದು ಗೋಳಿ ಮರಕ್ಕೆ ತಾಗಿತು. ಗಾಡಿ ನಡಿಸುವ 'ಕಂಡಕ್ಟರ್' ಮರಕ್ಕೆ ಬಡಿಯಲ್ಪಟ್ಟು ಅಲ್ಲಿಯೇ ಒಂದೂವರೆ ತಾಸುಗಳ ವರೆಗೆ ಮೂರ್ಛಿತನಾಗಿ ಬಿದ್ದಿದ್ದನು. ಅನಂತರ ಆಸ್ಪತ್ರಿಗೆ ಕೊಂಡುಹೋದಲ್ಲಿ ಕೂಡ್ಲೇ ಮೃತಪಟ್ಟನು. ಬಂಡಿಯು ಒಡದುಹೋಗಿ ಹ್ಯಾಗೂ ಮತ್ತೊಂದು ಬಂಡಿಯ ಮೂಲಕ ನಿಲ್ಲಿಸಲ್ಪಟ್ಟಿತು. ಗಾಡಿಯಲ್ಲಿದ್ದ ಇತರ ಪ್ರಯಾಣಿಕರೂ ಬಹಳ ಜಖಂ ಹೊಂದಿರುವರು. ಬಂಡಿಯ ಡ್ರ್ಯಾವರ್ (ದೇಶಿಯ ಕ್ರೈಸ್ತ) ವಿಲಿಯಂ ಎಂಬವನೂ, ಮತ್ತೊಬ್ಬನೂ ತಲೆ ತಪ್ಪಿಸಿಕೊಂಡಿರುವರು. ಡ್ರ್ಯಾವರನು ಮದ್ರಾಸಿಗೆ ಓಡಿ ಹೋಗಿರುವನೆಂತ ತಿಳಿದು ಬಂದುದರಿಂದ ಪೋಲಿಸಿನವರು ಅವನನ್ನು ಕೈದು ಮಾಡಲು ಅಲ್ಲಿಗೆ ಹೋಗಿರುವರು. ಈ ಡ್ರ್ಯಾವರನು ಬಂಡಿ ನಡಿಸುವುದರ ಯಾವದೊಂದು ತರ್ಬೀತು ಪಡದವನೂ ಅಲ್ಲ. ಲ್ಯಾಸನ್ಸು ಇದ್ದವನೂ ಅಲ್ಲ.

* * *

ಮುಂಬಾಯಿ ಗವರ್ನರರಾದ ವಿಲ್ಲಿಂಗ್ಡನ್ ಪ್ರಭುಗಳವರು ಬರುವ ಜೂನ್ ತಿಂಗಳ ತಾ. ೫ರಲ್ಲು ಪರಿವಾರ ಸಹಿತ ಉದಕ ಮಂಡಲಕ್ಕೆ ಚಿತ್ತೈಸಿ ಅಲ್ಲಿಯ ಸರಕಾರ ಮಂದಿರದಲ್ಲಿ ಉಳಕೊಳ್ಳುವರು.

* * *

ಕಳೆದ ಕೆಲವು ವರುಷಗಳಿಂದಲೂ ಮದರಾಸ್ ಆಧಿಪತ್ಯದಲ್ಲಿ ತಿನ್ನವೆಲ್ಲಿ ಡಿಸ್ಟ್ರಿಕ್ಟಿನಲ್ಲಿ ಬೆಳೆಯತಕ್ಕ ತಿನ್ನವೆಲ್ಲಿ ಹತ್ತಿಯ ಉತ್ಪತ್ತಿಯು ಹೆಚ್ಚುವಂತೆ ಮಾಡುವದಕ್ಕಾಗಿ ಕೆಲಸಗಳು ನಡಿಸಲ್ಪಡುತ್ತಿದ್ದವು. ಮೂರು ಜಮೀನುಗಳು ಬೆಳೆಯಲ್ಲಿ ಬಹಳ ಚೆನ್ನಾಗಿ ಬೆಳೆದು ಹೇರಳವಾಗಿ ಫಲ ಬಿಟ್ಟಿದ್ದ ಮೂರು ಗಿಡಗಳ ಬಿತ್ತವನ್ನೇ ಆರಿಸಿ ಅವುಗಳಿಂದಲೇ ಬೇರೆ ಬೆಳೆಯನ್ನು ಬೆಳೆಯುವುದು, ಅದರಲ್ಲಿ ಉತ್ತಮವಾದ ಗಿಡಗಳ ಬೀಜವನ್ನೇ ಪುನಹ ಉಪಯೋಗಿಸುವುದು, ಈ ರೀತಿಯಲ್ಲಿ ಶೇಖರಿಸಲ್ಪಟ್ಟ ಮೂರು ತರಹೆ ಬಿತ್ತನೆ ಬೀಜಗಳಲ್ಲಿ ಒಂದು ಮಾದರಿಯನ್ನು ಕಳೆದ ಸಾಲಿನಲ್ಲಿ ಒಬ್ಬ ರೈತನಿಗೆ ಕೊಟ್ಟು, ಅವನ ಹಿಡುವಳಿ ಜಮೀನು ಸುಮಾರು ೨೦ ಎಕ್ರೆ ವಿಸ್ತೀರ್ಣದಲ್ಲಿ ಬೆಳೆಯನ್ನಿಡಿಸಿದ್ದರು. ಇದು ಬಹಳ ಉತ್ತಮವಾದ ಬೆಳೆಯಾಗಿರುವುದನ್ನು ನೋಡಿ ಸುತ್ತುಮುತ್ತಲ ಇತರ ರೈತರುಗಳೂ ಬಿತ್ತನೆಗೆ ಇದರ ಬೀಜವನ್ನು ಅಪೇಕ್ಷಿಸುತ್ತಿದ್ದಾರೆ. ಈ ಬೆಳೆಯಲ್ಲಿ ಎಕ್ರೆಗೆ ಸಾಧಾರಣ ಹತ್ತಿ ಬೆಳೆಗಿಂತಲೂ ೧೫| ರೂಪಾಯಿ ಬಾಳುವಷ್ಟು ಜಾಸ್ತಿ ಉತ್ಪತ್ತಿಯಾಗುವುದೆಂದು ಗೊತ್ತು ಮಾಡಲ್ಪಟ್ಟಿದೆ. ಈ ರೀತಿ ಲೆಖ್ಖಾಚಾರ ಹಾಕಿದರೆ ಅದೊಂದು ಹಳ್ಳಿಯಲ್ಲಿ ವರುಷಕ್ಕೆ ಇದುವರಿವಿಗೂ ಆಗುತ್ತಿದ್ದುದಕ್ಕಿಂತಲೂ ೧೫ ಸಾವಿರ ರೂಪಾಯಿನ ಹತ್ತಿಯು ಹೆಚ್ಚು ಉತ್ಪತ್ತಿಯಾದಂತಾಗುವುದು.

ಕೆಲವು ಮಾದರಿ ಅಕ್ಕಿಗಳನ್ನು ಪರೀಕ್ಷಿಸಿದ್ದರಿಂದ ಒಬ್ಬ ರಸಾಯನ ಶಾಸ್ತ್ರಜ್ಞರು ಬರೆಯುವುದೇನೆಂದರೆ—ಅಕ್ಕಿಯನ್ನು ಸ್ವಲ್ಪ ಎಣ್ಣೆ ಮತ್ತು ಕಾಗೆಬಂಗಾರದ ಪುಡಿಯೊಡನೆ ಮಿಶ್ರಮಾಡಿ ಚೆನ್ನಾಗಿ ಕುಲುಕಿ ಅಕ್ಕಿಯು ಬಹಳ ಹೊಳುಪಾಗಿರುವಂತೆ ಮಾಡುವ ಪದ್ಧತಿಯು ಈಚೆಗೆ ಹೆಚ್ಚುತ್ತಾ ಇದೆ. ಇಂಥಾ ಅಕ್ಕಿಯಿಂದ ಮಾಡಿ ತಿನ್ನುವವರಿಗೆ ಕಾಗೆಬಂಗಾರವನ್ನು ಬೆರಸುವುದರಿಂದ ಉಂಟಾಗುವುದಕ್ಕಿಂತಲೂ ಹೆಚ್ಚು ಕೇಡು ಅಕ್ಕಿಯಲ್ಲಿರುವ ಜೀರ್ಣಕಾರಿಯಾದ ಒಂದು ಪದಾರ್ಥವು ನಷ್ಟವಾಗುವದರಿಂದ ಉಂಟಾಗುತ್ತದೆ. ಪ್ರತಿಯೊಂದು ಅಕ್ಕಿಕಾಳಿನಲ್ಲಿಯೂ ಈ ಜೀರ್ಣಕಾರಿಯಾದ ಪದಾರ್ಥದ ಒಂದು ಪೊರೆ ಇರುವುದು. ಇದಕ್ಕೆ ವಿಟಮಿನ್ ಎಂದು ಹೆಸರು. ಈ ಪದಾರ್ಥವು ಹೋಗುವದರಿಂದ ಅನ್ನವನ್ನು ತಿನ್ನುವವರಿಗೆ ಭೇದಿ ಉಪದ್ರವು ಬರುವುದು· ಇದನ್ನೆಲ್ಲಾ ನೋಡಿದರೆ ನೋಟಕ್ಕೆ ಚೆನ್ನಾಗಿ ಕಾಣಲೆಂದು ಅಕ್ಕಿಯನ್ನು ಚೆನ್ನಾಗಿ ತೊಳಸಿ ತೌಡಿನ ಅಂಶವೆಲ್ಲವನ್ನೂ ತೆಗೆದುಹಾಕದೆ ಇರುವುದೇ ಆರೋಗ್ಯಕ್ಕೆ ಸಹಕಾರಿಯೆಂದು ಹೇಳಬಹುದು.

* * *

ರಾಜಮಹೇಂದ್ರಿಯಲ್ಲಿ ಆಶ್ಚರ್ಯಕರವಾದ ನೇತ್ರಾವಧಾನವು ಕಳೆದ ವಾರದಲ್ಲಿ ನಡೆಯಲ್ಪಟ್ಟಿತೆಂದು ಪ್ರಕಟವಾಗಿದೆ. ಒಂದು ಸಭೆಯೊಳಗೆ ವೀರರಾಘುವಯ್ಯ ಎಂಬವರು ದೂರದಲ್ಲಿ ಕುಳಿತು ಒಂದು ಪುಸ್ತಕವನ್ನು ನೋಡುತ್ತ ತಮ್ಮ ಕಣ್ಣು ಸಜ್ಞೆಯನ್ನು ಮಾಡುತ್ತಿರಲು ಅದನ್ನು ದೂರದಿಂದಲೇ ನೋಡುತ್ತಿದ್ದ ವೀರಭದ್ರಯ್ಯನವರು ಗ್ರಹಿಸಿಕೊಂಡು ಒಂದು ಕಾಗದದ ಮೇಲೆ ಬರೆಯುತ್ತ, ಬಂದರಂತೆ· ಹೀಗೆ ಬರೆದುದರಲ್ಲಿ ಪೂರ್ಣ ವಿರಾಮ, ಅರ್ಧ ವಿರಾಮ ಇತ್ಯಾದಿ ಸಜ್ಞೆಗಳು ಕೂಡಾ ಆ ಪುಸ್ತಕದಲ್ಲಿದ್ದಂತೆಯೇ ಬರೆಯಲ್ಪಟ್ಟಿದ್ದುದಂತೆ.

* * *

ಇಂಡಿಯಾ ಕೌನ್ಸಿಲಿನ ಕಾರ್ಯನಿರ್ವಾಹಕ ಸಭೆಯಲ್ಲಿ ಮೆಂಬರರಾಗಿರುವ ಸರ್ ಕೃಷ್ಣಕುಮಾರ ಗುಪ್ತರವರು ಸಭ್ಯತನವನ್ನು ಬಿಟ್ಟುಬಿಡುವುದರಲ್ಲಿದ್ದಾರೆ. ಆ ಸ್ಥಾನಕ್ಕೆ ಸರ್ ಶಂಕರನಾಯರರವರು ನಿಯಮಿಸಲ್ಪಡುವರೆಂಬ ವಾರ್ತೆ ಇದೆ·

ದಕ್ಷಿಣ ಕನ್ನಡ.

WANTED.

An experienced Matric trained to act as the Head Master in "Saraswati Vidyalaya School" Gungoli. Pay Rs 15—20 according to qualifications. Applications with testimonials should reach the undersigned by the 15th June 14.

Gungoli } G. Murthappa Naik.
29—4—14. } *Manager,*
S. V. SCHOOL.

WANTED.

An experienced Book keeper.
Apply to x
C/o this paper.

ಬೇಕಾಗಿದೆ!

ಯಾಲಕ್ಕಿ ಕೃಷಿ ಅನುಭವವುಳ್ಳ ಮತ್ತು ಲೆಖ್ಖ ಪತ್ರಗಳನ್ನು ಕ್ರಮವಾಗಿ ಇರಗೊಡಿಸುವ ಮಾಹೀತಿಯುಳ್ಳ ನಂಬಿಗಸ್ತ ರೈಟರು ಬೇಕಾಗಿದೆ. ಸಂಬಳ ವಗೈರೆ ಮಾಹೀತಿ ಬಗ್ಯೆ ಮೊಕ್ತಾ ವ ಕಾಗದಪತ್ರ ನಡಿಸಿ ತಿಳಿದುಕೊಳ್ಳ ಬಹುದು.

ಬಿ. ಆರ್. ಶೇಶಪ್ಪ ರೈ.
ಕಾಫಿ ಪ್ಲಾಂಟರ್,
ಭಾಗಮಂಡಲ ಪೋಸ್ಟು,
ಕೊಡಗುಜಿಲ್ಲೆ.

ನೋಟೀಸು.

ಉಪ್ಪಿನಂಗಡಿ ತಾಲೂಕು ಉಜ್ರೆಯಲ್ಲಿರುವ ಮಿಶ್ಯನ್ ಶಾಲೆಗೆ ಪ್ರೈಮರಿ ಗ್ರೇಡಿನ ಉಪಾಧ್ಯಾಯರೊಬ್ಬರು ಅಗತ್ಯವಿರುವದರಿಂದ, ಇದಕ್ಕೆ ಉಮೇದ್ವಾರರಾಗ ಬೇಕೆಂದಿರುವವರು ವಿಳಂಬ ಮಾಡದೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಬರಕೊಳ್ಳಬೇಕಾಗಿ ತಿಳಿಯ ಪಡಿಸುವ,

ರೆವೆರೆಂಡ್ ಟಿ. ರಿತ್ತರ್.
ಬಾಸೆಲ್ ಮಿಶ್ಯನ್,
ಪುತ್ತೂರು.

* * *

ಹಳೆಅಂಗಡಿ:—ಪಾವಂಜಿ ಗ್ರಾಮದ ಪಟೇಲ ಮಿ| ಎಚ್. ಜಿಯಾವುದ್ದೀನ್ ಅಸ್ಸದಿಯವರು ಇತ್ತಲಾಗೆ ಎರಡು ಮೂರು ಚೋರಿಗಳ ಪತ್ತೆಯನ್ನು ಬಹಳ ಪ್ರಯತ್ನವಿಟ್ಟು ಗೊತ್ತು ಹಚ್ಚಿ ಪೋಲಿಸಿನವರಿಗೆ ಒಪ್ಪಿಸಿದ್ದರಿಂದ ಅವರಿಗೆ ಸರಕಾರದಿಂದ ರೂ. ೫ ಬಹುಮಾನ ಸಿಕ್ಕಿರುವುದೆಂತ ತಿಳಿಯುತ್ತೇನೆ.

ಮಂಗಳೂರು.

ಈ ವರ್ಷದ ಫ್ಯಾನಲ್ ಎಲ್. ಎಮ್. ಎಸ್. ಪರೀಕ್ಷೆಯಲ್ಲಿ ರಾ| ಬಂಟ್ವಾಳ ಗಣಪತಿ ಮಲ್ಯರವರು ಪ್ರಥಮ ತರಗತಿಯಲ್ಲಿಯೂ ರಾ| ಬೋಳ· ದಯಾನಂದ ರಾವ್‌ರವರು ೨ನೇ ತರಗತಿಯಲ್ಲಿಯೂ ತೇರ್ಗಡೆ ಹೊಂದಿರುವರು. ಕಳದ ೨೦ ವರ್ಷಗಳಿಂದ ಎಲ್ ಎಮ್. ಎಸ್. ಪರೀಕ್ಷೆಯಲ್ಲಿ ಮೊದಲನೇ ತರಗತಿಯಲ್ಲಿ ಒಬ್ಬನಾದರೂ ತೇರಲಿಲ್ಲವಾದರೂ ಈ ವರ್ಷ ನಮ್ಮ ಊರಿನವರಾದ ರಾ| ಬಂಟ್ವಾಳ ಗಣಪತಿ ಮಲ್ಯರು ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದರೆಂಬದನ್ನು ತಿಳಿಸುವುದು ತುಂಬಾ ಸಂತೋಷಕರವಾದ ವಿಷಯವಾಗಿರುವುದು.

ಕಂಕನಾಡಿಯ ರಾ| ಗುರುವಪ್ಪ ಎಂಬವರ ಮನೆಯಲ್ಲಿ ಅವರ ಮಗಳು ಶೀಮೆ ಎಣ್ಣೆಯ ಕೈ ದೀಪವನ್ನು ಹಿಡಕೊಂಡು ಹೋಗುವಾಗ ಅದು ಪಕ್ಕನೇ ಕೈ ತಪ್ಪಿ ಕೆಳಗೆ ಬಿದ್ದು ಎಣ್ಣೆಗೆ ಬೆಂಕಿ ಹಿಡಿದು ಆಕೆಯು ತೊಟ್ಟುಕೊಂಡಿದ್ದ ನಿಲುವಂಗಿಗೆ ತಗಲಿ ಮೈಯೆಲ್ಲಾ ಸುಟ್ಟುಹೋಗಿ ಮೃತಪಟ್ಟಳು.

ಮಂಗಳೂರ ನಿರಾಶ್ರಿತ ಜನ ಸಹಾಯಕ ಸಂಘದವರು ಹಳ್ಳಿಹಳ್ಳಿಗಳಲ್ಲಿ ಪಂಚಮರನ್ನು ಒಟ್ಟು ಕೂಡಿಸಿ ಪಂಚಮರ ಉದ್ಧರಣೆ ವಿಧಾನವನ್ನು ಬೋಧಿಸುವ ಬಗ್ಯೆ ಇಬ್ಬರು ಪಂಚಮ ತರುಣರಿಗೆ ಭಾಷಣ ಮಾಡುವ ತರಬೇತಿಕೊಟ್ಟು ಇವರ ಪೈಕಿ ಕುಲಶೇಕರ ಮುಂಡಪ್ಪ ಎಂಬ ಒಬ್ಬನನ್ನು ಕಾಸರಗೋಡು ತಾಲೂಕಿಗೆ ಕಳುಹಿಸಿದ್ದಾರೆ.

ಮಡಿಕೇರಿ ಗುಡ್ಡೆ ಬಳಿ ಇರುವ ಜೋರ್ಜ ಪೆರೇರನ ಮಗ ಗಾಬ್ರು ಪೆರೇರನು ಜಡ್ಕಾ ದಾವಿದ್ ಸೋಜಗೆ ಕೋಳಿ ಕಟ್ಟುವ ಕತ್ತಿಯಿಂದ ಹೊಡೆದು ಹಿಂಸೆ ಮಾಡಿದ್ದಾಗಿ ಮಂಗಳೂರು ಟೌನ್ ಮೇಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿ ಮಾಡಲ್ಪಟ್ಟಿದ್ದನು. ಟೌನ್ ಮೇಜಿಸ್ಟ್ರೇಟರು ಇದೇ ಕಳೆದ ತಾ. ೬ನೇ ಬುಧವಾರ ಆಪಾದಿತನಿಗೆ ೩ ತಿಂಗಳ ಕಠಿಣ ಸಜಾ ವಿಧಿಸಿದರು.

ಇಲ್ಲಿಯ ಅಸಿಸ್ಟಾಂಟ ಇಂಜಿನಿಯರರಾದ ರಾ. ಯು. ವೆಂಕಟರಾವ್‍ರವರು ಸೇಲಮ್ ಜಿಲ್ಲೆಗೆ ವರ್ಗಾಯಿಸಲ್ಪಟ್ಟಿರುವರು.

ಮೆ| ಎಸ್. ಅಲ್ವಾರಿಸರು ಮತ್ತು ರಾ| ಎನ್. ಮರ್ತು ಭಂಡಾರಿಯವರು ಪುನಃ ಸ್ಪೆಶ್ಯಲ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ಅಸಿಸ್ಟಾಂಟ್ ಕನ್‍ಸರ್‍ವೇಟರ್ ಅಫ್ ಫೋರೆಸ್ಟರಾದ ಮೆ| ಡಬ್ಲ್ಯೂ. ಸಿ. ಹಾರ್ಟರವರು ಈ ಜಿಲ್ಲೆಗೆ ಸ್ಪೆಶ್ಯಲ್ ಡ್ಯೂಟಿಯ ಮೇಲೆ ವರ್ಗಾಯಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನಲ್ ಆಫೀಸರರ ಸರ್ಕೀಟು:—ಮೇ ತಾ. ೧೧ ಬ್ರಹ್ಮಾವರ; ತಾ. ೧೨-೧೩ ಉಡ್ಪಿ; ತಾ. ೧೪ ಪಡುಬಿದ್ರಿ; ತಾ. ೧೫ ಬೆಳ್ಮಣ್ಣು; ತಾ. ೧೬-೧೭ ಮತ್ತು ೧೮ ಕಾರ್ಕಳ; ತಾ. ೧೯-೨೦ ನಾರಾವಿ; ತಾ. ೨೧-೨೨ ಮತ್ತು ೨೩ ಮೂಡಬಿದ್ರಿ; ತಾ. ೨೪-೨೫ ಮಂಗಳೂರು; ತಾ. ೨೬ ಪಡುಬಿದ್ರೆ; ತಾ. ೨೭-೨೮ ಕಾಪು; ತಾ. ೨೯-೩೦-೩೧ ಉಡ್ಪಿ; ಜೂನು ತಾ. ೧-೨ ಬ್ರಹ್ಮಾವರ; ತಾ. ೩ ಕುಂದಾಪುರ.

ಕುಂದಾಪುರ ತಾಲೂಕು ಆಫೀಸಿನ ೫ನೇ ಕ್ಲಾರ್ಕ ರಾ| ಟಿ. ಕೃಷ್ಣರಾವ್‍ರವರಿಗೆ ಕಳೆದ ತಾ. ೨೨ರಿಂದ ೨ ತಿಂಗಳ ಪ್ರಿವಿಲೆಜ್ ರಜೆ ಕೊಡಲ್ಪಟ್ಟಿರುವುದು. ಇವರ ಬದಲಿಗೆ ಕುಂದಾಪುರ ತಾಲೂಕು ಆಫೀಸಿನ ಸ್ಪೆಶ್ಯಲ್‍ಫಂಡು ಕ್ಲಾರ್ಕರಾಗಿದ್ದು ಈಗ ಕಾರ್ಕಳ ತಾಲೂಕು ಆಫೀಸಿನ ಆಕ್ಟಿಂಗ್ ಕ್ಲಾರ್ಕರಾಗಿರುವ ರಾ| ಕೆ. ನರಸಿಂಹ ಕಾಮತರವರೂ, ರಾ| ಕೆ. ನರಸಿಂಹ ಕಾಮತರ ಬದಲಿಗೆ ಕುಂದಾಪುರ ಸ್ಟೇಶನರಿ ಸಬ್ ಮೇಜಿಸ್ಟ್ರೇಟ ಆಫೀಸಿನ ೨ನೇ ಕ್ಲಾರ್ಕ ರಾ| ಎಸ್. ಸುಂದರರಾಯರೂ ನೇಮಿಸಲ್ಪಟ್ಟಿರುವರು. ಇವರಿಬ್ಬರೂ ಇದೇ ತಾ. ೧೦ರಲ್ಲು ತಪ್ಪದೆ ಚಾರ್ಜು ತಕ್ಕೊಳ್ಳಬೇಕಾಗುವುದು.

ಕುಂದಾಪುರ ತಾಲೂಕು ಬೋರ್ಡು ಮೆಂಬರರ ಸಭೆಯು ಇದೇ ತಿಂಗಳ ತಾ. ೨೨ಕ್ಕೆ ಮೂಡಬಿದ್ರೆ ಮೊಕ್ಕಾಮಿನಲ್ಲಿ ಕೂಡುವುದು.

ಮಂಗಳೂರು ಮಹಿಳಾ ಸಭೆಯವರಿಂದ ಏರ್ಪಡಿಸಲ್ಪಟ್ಟ ಫೆನ್ಸಿಸೇಲಿನ ವೃತ್ತಾಂತವು:—ಮಹಿಳಾ ಸಭೆಯ ಅಧ್ಯಕ್ಷರಾದ ಧಾರೇಶ್ವರ ಗಿರಿಜಾಬಾಯಿಯಮ್ಮನವರಿಂದ ಗಣಪತಿ ಸೆಕೆಂಡರಿ ಶಾಲೆಯ ಸಭಾಸದನದಲ್ಲಿ ಈ ಫೆನ್ಸಿ ಸೇಲು ಏರ್ಪಡಿಸಲ್ಪಟ್ಟಿತು. ವಿಕ್ರಿತಕ್ಕೆ ಒಟ್ಟಿಗೆ ೪೧೧ ಒಡವೆಗಳು ಇಡೋಣಾಗಿದ್ದವು. ಈ ಒಡವೆಗಳ ವಿಕ್ರಿತದಿಂದ ರೂ. ೬೫—೧೧—೬ ದೊರಕಿರುತ್ತದೆ. ಹಿಂದು ಸ್ತ್ರೀಯರುಗಳಿಂದ ನೂತನವಾಗಿ ಏರ್ಪಡಿಸಲ್ಪಟ್ಟ ಈ ಫೆನ್ಸಿಸೇಲಿಗೆ ಇಟ್ಟ ಒಡವೆಗಳೆಲ್ಲವು ಸ್ತ್ರೀಯರುಗಳಿಂದಲೇ ತಯ್ಯಾರು ಮಾಡಲ್ಪಟ್ಟದ್ದಾಗಿರುವವು. ಸಾರಸ್ವತರಿಂದಲೇ ನಡಿಸಲ್ಪಡುವುದಾದರೂ ಎಲ್ಲಾ ಜಾತಿ ಮತಸ್ಥರ ಮಕ್ಕಳುಗಳಿಗೆ ಏನೂ ಭೇದವಿಲ್ಲದೆ ವಿದ್ಯಾದಾನವನ್ನು ಕೊಡುವ ಗಣಪತಿ ಸೆಕೆಂಡರಿ ಶಾಲೆಯ ಸಹಾಯಾರ್ಥವಾಗಿ ಈ ಸೇಲಿನ ಮೂಲಕ ದೊರಕುವ ಹಣವು ಕೊಡೋಣಾಗುವದೆಂದು ಹೇಳಿ ಶ್ರೀಮತಿ ನಯಂಪಳ್ಳಿ ಲಲಿತಾಬಾಯಿಯವರು ಶ್ರೀಮತಿ ಲಕ್ಷ್ಮೀಬಾಯಿ ಖಾಟವರತಂಸಿಯವರನ್ನು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕೆಂದು ವಿಜ್ಞಾಪಿಸಿಕೊಂಡರು. ಶ್ರೀಮತಿ ಕಾರ್ನಾಡ ಶಾಂತಾಬಾಯಿಯವರು ಈ ವಿಜ್ಞಾಪನೆಯನ್ನು ಅನುಮೋದಿಸಿದನಂತರ ಶ್ರೀಮತಿ ಲಕ್ಷ್ಮೀಬಾಯಿ ಖಾಟವ ರತಂಸಿಯವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು. ಶ್ರೀಮತಿ ಬಸರೂರು ಶಾಂತಾಬಾಯಿ, ಶ್ರೀ| ಚಂದಾವರ ಸುಶೀಲಾಬಾಯಿ, ಶ್ರೀ| ಪಂಡಿತ ಸುಂದರಾಬಾಯಿ, ಶ್ರೀ| ಕಲ್ಲೆ ಸುಗುಣೀಬಾಯಿ, ಮತ್ತು ಶ್ರೀ| ಧಾರೇಶ್ವರ ಕಮಲಾಬಾಯಿ, ಇವರು ಇಂಪಾದ ಹಾಡುಗಳನ್ನು ಹಾಡಿ ಫಿಟಿಲ್ ಹಾರ್ಮೋನಿಯಮ್ ಮೊದಲಾದವುಗಳನ್ನು ಬಾರಿಸಿ ಸಭಿಕರನ್ನು ವಿನೋದಗೊಳಿಸಿದರು. ಅಧ್ಯಕ್ಷರ ಭಾಷಣವು ಶ್ರೀ| ಮಣಿಬಾಯಿ ಮಾವಜಿಯವರಿಂದ ಓದಿ ಹೇಳಲಾಯಿತು. ಈ ಭಾಷಣದ ತಾತ್ಪರ್ಯವನ್ನು ಶ್ರೀ| ಬೆನಗಲ್ ಪದ್ಮಾಬಾಯಿಯವರು ಸಭಿಕರಿಗೆ ಸಂಕ್ಷೇಪವಾಗಿ ಹೇಳಿದರು. ತಮ್ಮ ಗೃಹಗಳ ಅಲಂಕಾರದ ಬಗ್ಯೆ ಮತ್ತು ತಮ್ಮ ಮಕ್ಕಳ ಆಟದ ಬಗ್ಯೆ ಬಹಳ ಕಾಲ ಶ್ರಮಪಟ್ಟು ತಯ್ಯಾರಿಸಿದ ಒಡವೆಗಳನ್ನು ಶಾಲೆಯ ಉಪಯೋಗಾರ್ಥವಾಗಿ ಒಪ್ಪಿಸಿಕೊಟ್ಟ ಈ ಫೆನ್ಸಿಸೇಲಿನ ಏರ್ಪಾಡಿಗೆ ಹೆಚ್ಚಿನ ಸಹಾಯ ಮಾಡಿದ ಸ್ತ್ರೀಯರುಗಳ ಹೆಸರುಗಳನ್ನು ತಿಳಿಯುವುದು ಅಗತ್ಯವಾಗಿದೆ. ಇವರ್ಯಾರಂದರೆ:-ಶ್ರೀಮತಿಗಳಾದ ಕತ್ರಿ ಲೀಲಾಬಾಯಿ, ಗೊಲ್ಲರಕೇರಿ ರತ್ನಾಬಾಯಿ, ಬಸ್ರೂರು ಶಾಂತಾಬಾಯಿ ಮತ್ತು ರತ್ನಾಬಾಯಿ, ಕೇಳ ಅಮ್ಮಣ್ಣಿಬಾಯಿ ಮತ್ತು ಪಾವನಾಬಾಯಿ, ಕುಲಕರ್ಣಿ ಭವಾನಿಬಾಯಿ, ಆರೂರು ವರದಾಬಾಯಿ, ಬಜೆಕಳ ಗಿರಿಜಾಬಾಯಿ, ಮುಂಡ್ಕೂರ ಅಂಬಾಬಾಯಿ, ಮತ್ತು ಮೈತ್ರಾಯಿಣಿಬಾಯಿ, ಡೊಂಗರಕೇರಿ ರಮಾಬಾಯಿ, ಸುಜೀರ ಗಿರಿಜಾಬಾಯಿ, ಮತ್ತು ಶಾರದಾಬಾಯಿ, ಮ. ಹೀರಾಬಾಯಿ, ಅ. ಗಿರಿಜಾಬಾಯಿ, ಬೆನಗಲ ತಾರಾಬಾಯಿ, ಬಿ. ಶಾಂಭವಿಬಾಯಿ, ಕಾರ್ನಾಡ ಚಂದ್ರಭಾಗಿಯಮ್ಮ, ಮುರ್ಡೇಶ್ವರ ಕಲ್ಯಾಣಿಬಾಯಿ, ಕಿಲ್ಪಾಡಿ ಸುಂದರಿಬಾಯಿ, ಕವಳಿಗೆ ಭವಾನಿಬಾಯಿ, ತೊಂಭತ್ತ ಲಕ್ಷ್ಮೀಬಾಯಿ ಮೊದಲಾದ ಇನ್ನು ಕೆಲವು ಸ್ತ್ರೀಯರು. ಈ ಫೆನ್ಸಿ ಸೇಲಿನ ಸಹಾಯಾರ್ಥವಾಗಿ ಗವರ್ನಮೆಂಟ್ ಕೋಲೇಜಿನ ಹೆಡ್ ಮಾಸ್ತರರಾದ ಮೆ| ಮೆಲಿಮ್ ದೊರೆಗಳವರೂ ಇವರ ಪತ್ನಿಯರೂ ರೂ. ೧೦ನ್ನು ಕಳುಹಿಸಿಕೊಟ್ಟಿರುತ್ತಾರೆ. ಕರ್ನೂಲಿನಿಂದ ಅಸಿಸ್ಟಾಂಟ್ ಸರ್ಜನರಾದ ಗಣೇಶಸುಂದರರಾವ್‍ರವರು ಕಳುಹಿಸಿಕೊಟ್ಟ ರೂ. ೧೦, ಮತ್ತು ರಾ| ಕೆ. ಸೋಮನಾಥ ಭಟಜೀಯವರು ಕಳುಹಿಸಿಕೊಟ್ಟ ರೂ. ೨ನ್ನು ಮಹಿಳಾ ಸಭೆಯವರು ಕೃತಜ್ಞತೆಯಿಂದ ಸ್ವೀಕರಿಸಿರುತ್ತಾರೆ. ಶ್ರೀ| ನಯಂಪಳ್ಳಿ ಲಲಿತಾಬಾಯಿಯವರು ಸಭಾಧ್ಯಕ್ಷರನ್ನೂ, ಈ ಏರ್ಪಾಡನ್ನು ಅನುಗೊಳಿಸುವರೆ ಶ್ರಮಪಟ್ಟ ಸ್ಟುಡೆಂಟ್ಸ್ ಬ್ರದರ್‍ಹೂಡ್ ವಿದ್ಯಾರ್ಥಿ ಸಂಘದ ವಿದ್ಯಾರ್ಥಿಗಳನ್ನೂ, ಸಭಿಕರನ್ನೂ ವಂದಿಸಿದರು. ಶಾಲಾಧಿಕಾರಿಗಳ ಪರವಾಗಿ ಮ| ರಾ| ರಾ| ಸುಜೀರ ರಘುನಾಥಯ್ಯನವರು ಮಂಗಳೂರು ಮಹಿಳಾ ಸಭೆಯವರ ಉಪಕಾರ ಸ್ಮರಣೆಯನ್ನು ಮಾಡಿದ ನಂತರ ಸಭೆಯು ಅಗಲಿತು.

ಆರೋಗ್ಯದಾಯಿನಿ ಎಂಬ ಚಿಕಿತ್ಸಾಭವನಕ್ಕೆ ವಂತಿಗೆ ಕೊಟ್ಟವರ ಹೆಸರುಗಳು:—

ರಾ| ಕೆ. ರಾಮುಣ್ಣಿ ಮೇಸ್ತ್ರಿ ಕಣ್ಣನೂರ್; ಸ್ನೇಹಿತ, ತಲಚೇರಿ ರಾ| ಯಮ್. ಮಂಗೇಶರಾವ್ ತಲಚೇರಿ; ರಾ| ಪಿ. ದೇವರಾವ್ ಕಾಸರಗೋಡು; ರಾ| ಕೆ. ಪಿ. ಅಚ್ಯುತ್ರಯ್ಯ ಕಾಸರಗೋಡು; ರಾ| ಪಿ. ಆನಂದರಾವ್ ವಕೀಲ್ ಕಾಸರಗೋಡು; ರಾ| ಯಮ್. ಮೈಂದಪ್ಪ ಭಂಡಾರಿ ಮಂಜೇಶ್ವರ; ಸರ್ವಜನಕ್ಷೇಮಕಾಂಕ್ಷಿ ಮಂಜೇಶ್ವರ; ಟಿ. ಕ್ರಿಶ್ಚಿಯನ್ ಯಸ್‍ಕ್ವಾಯರ್ ಕಣ್ಣನೂರ್ ಆಣೆ ೮; ರಾ| ಕಾರಾಯಿ ಕೃಷ್ಣನ್ ಕಣ್ಣನೂರ್ ಆಣೆ ೮; ರಾ| ಕೆ. ನಾರಾಯಣ ಶೆಟ್ಟಿ ಕಾಸರಗೋಡ್ ಆಣೆ ೪; ರಾ| ಬಿ. ಸುಬ್ಬರಾವ್ ಕಾಸರಗೋಡು ಆಣೆ ೪; ರಾ| ಎ. ಕೆ. ಕೇಳು ಬಿ. ಎ. ತಲಚೇರಿ ಆಣೆ ೨; ಮಿಸ್ತರ್ ಸೈಯದ್ ಕದಿವಿ ಕಣ್ಣನೂರು ಆಣೆ ೨; ಸಿಡ್ನಿ ರೋಬರ್ಟ್ಸ್ ಎಸ್ಕ್ವಯರ್ ಐ. ಸಿ. ಯಸ್. ಡಿಸ್ಟ್ರಿಕ್ಟ್ ಜಡ್ಜ ತಲಚೇರಿ. ಇವರು ವನಸ್ಪತಿ ಶಾಸ್ತ್ರ ವಿಷಯವಾದ ಒಂದು ಪುಸ್ತಕವನ್ನು ಇನಾಂ ಕೊಟ್ಟಿರುವರು.

* * *

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಅವಲ್ ಮಸ್ಕತಿ ಅಕ್ಕಿ	5—8—0	5-13—0
ದುಯಂ „ „	5—0—0	5—3—0
ಗುಡ್ಡು	4-13—0	4-15—0
ಅವಲ್ ಬೆಳ್ತಿಗೆ	5—13—0	6—0—0
ಗುಡ್ಡು ಬೆಳ್ತಿಗೆ	5—3—0	5—5—0
ಹುರುಳಿ ಗೋಣಿ, ೧ರ		7—3—0
ರಂಗೂನ್ ಗೋಣಿ ೧ರ	9—3—0	9—4—0
ಉಪ್ಪು ಗೋಣಿ ೧ರ	3—8—0	3-10—0
ಕೊಬ್ರಿ ಖಂಡಿ ೧ರ	98-0-0	105—0—0
ಊರು ಬೆಲ್ಲ ಖಂಡಿ ೧ರ		40—0—0
ಗೋದಿ ಗೋಣಿ ೧ಕ್ಕೆ		11—8—0
ಕಡಲೆ ಗೋಣಿ ೧ಕ್ಕೆ	9—0—0	9—8—0
ಉದ್ದು ಗೋಣಿ ೧ರ		10—4—0
ತೊಗರಿ ಗೋಣಿ ೧ರ		11—0—0
ತೊಗರಿಬೇಳೆ ಗೋಣಿ ೧ರ	11-0—0	14—0—0
ಕೊಬ್ರಿ ಹಿಂಡಿ ಖಂಡಿ೧ರ	31—0—0	32—0—0
ಎಳ್ಳಿಂಡಿ ಖಂಡಿ ೧ರ	32—8—0	40—0—0
ಕೊಬ್ರಿ ಎಣ್ಣೆ ಮಣ ೧ರ		7—5—0
ಎಳ್ಳೆಣ್ಣೆ ಮಣ ೧ರ	7—2—0	7—4—0
ಬೆಳೆಗೋಟು ಖಂಡಿ ೧ರ	90—0—0	96—0—0
ಕಾಫಿ ಖಂಡಿ ೧ರ	215—0—0	225—0—0
ಯಾಲಕ್ಕಿ ಮಣ ೧ಕ್ಕೆ	40—0—0	50—0—0

* * *


ಜೀನತಾನ
"JINTAN" Pill Case (Exact Size)
3 pills come out from here at each opening.
LOOKING GLASS
JINTAN
ಜೀನತಾನ

ಈಗಲೇ ಪರೀಕ್ಷಿಸಿ ನೋಡಿರಿ.

ಜೀನತಾನಿನ ವಿಶೇಷ ಗುಣಗಳು:—ಅತ್ಯುತ್ತಮವಾದ ಜೀರ್ಣಕಾರಿಯು, ಇದಕ್ಕೆ ಸಮಾನವಾದ ಜೀರ್ಣಕಾರಿಯು ಮಂತ್ತೊಂದಿರದು, ಜೀರ್ಣಶಕ್ತಿ ಕಡಮೆಯಾದ ಅನ್ನಕೋಶವು ಇದರ ಸೇವನೆಯಿಂದ ಎಂದೂ ಬಾಧಿಸಲ್ಪಡದು.

ರೋಗಗಳು ಅಂಟದಂತೆ ಮಾಡುವ ಪೂತಿನಾಶಕರ ವಿಶೇಷವಾದ ಗುಣವು ಇದಕ್ಕಿರುತ್ತದೆ. ಇದು ಉಪಯೋಗಿಸುವವರ ಶ್ವಾಸವನ್ನು ಸುವಾಸನೆಯುಳ್ಳದ್ದಾಗಿ ಮಾಡುವುದು.

ಹೊಗೆಸೊಪ್ಪು ವ ಇತರ ಮಾದಕ ಪದಾರ್ಥಗಳ ವಾಸನೆಯುನ್ನು ಇದನ್ನು ಸೇವಿಸಿದ ಮಾತ್ರದಿಂದ ಪೂರ್ಣವಾಗಿ ಹೋಗಲಾಡಿಸಬಹುದು.

ಸಂಗೀತ ಹಾಡುವವರೂ, ಉಪನ್ಯಾಸಕರೂ, ಇದನ್ನು ಉಪಯೋಗಿಸಿದರೆ ಗಂಟ್ಲಿನ ನಾಳಗಳು ಶುದ್ಧವಾಗುತ್ತವೆ. ಬಾಯಿಯ ದುರ್ವಾಸನೆ ನಾಶವಾಗುವದು.

ಕ್ರಯ. 30 ಮಾತ್ರೆಗಳುಳ್ಳ ಪೊಟ್ಟಣಕ್ಕೆ ರೂ. 0-1-6. 195 ಮಾತ್ರೆಗಳುಳ್ಳ ಡಬ್ಬಿಗೆ ರೂ. 0-8-0. 65 ಮಾತ್ರೆಗಳುಳ್ಳ ಪೊಟ್ಟಣಕ್ಕೆ 0-3-0. 455 ಮಾತ್ರೆಗಳುಳ್ಳ ಸುಂದರವಾದ ಕನ್ನಡಿ ಡಬ್ಬಿಗೆ ರೂ. 1.

ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಎಂಡ್ ಕೊ,
ಪಾರ್ಕ ಟೌನ್, ಮದ್ರಾಸು.

S. VAIDYA & Co.
Park Town, Madras.

ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇನನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ. ಅಗ್ನಿಮಾಂದ್ಯ. ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:-

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ ಟೌನು, ಮದ್ರಾಸು.

S. VAIDYA & Co.,
Park Town, Madras.

"ಆಯೊನಿಕ್ ಫಾರ್ಮಸಿ"

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗ್ರಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯೂಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯೂರಿಫ್ಯಾಯಿಂಗ್ ಸೊಲ್ಯೂಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು- ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co.,
Park Town, Madras.

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ ಟೌನ್ ಮದ್ರಾಸು.

ಪ್ರಕಟನೆ.

ಮಂಗಳೂರು ತೇರಬೀದಿಯಲ್ಲಿರುವ ಕೆ. ಯಮ್. ದಾಸಪ್ರಭುಗಳ ಬುಕ್ ಶಾಪಿನಲ್ಲಿ ಅಥವಾ ಗ್ರಂಥಕರ್ತರಿಂದ ಶೀದಾ ಕ್ರಯಕ್ಕೆ ದೊರೆಯುವ ಪುಸ್ತಕಗಳು.

ವಕೀಲ ಹಳಿಗೇರಿ ಕೃಷ್ಣರಾಯರಿಂದ ರಚಿಸಲ್ಪಟ್ಟವುಗಳು.

ಪ್ರತಿ ೧ಕ್ಕೆ ಟಪ್ಪಾಲ್ ಹಾಸಲು ವಿನಹ ಕ್ರಯ.

(೧) ಅಧ್ಯಾತ್ಮವಿಚಾರ, ಪ್ರತ್ಯಗಾತ್ಮನ ಚಿತ್ರ ಸಮೇತ ... ... ರೂ. ೨—೪—೦.

(೨) ಆ ಗ್ರಂಥ (ಅಧ್ಯಾತ್ಮವಿಚಾರ)ದ ಕುರಿತು ಮಾಧ್ವರು ಹೇಳುವ ಆಕ್ಷೇಪಣೆಗಳಿಗೆ ಉತ್ತರ. ಇದರಲ್ಲಿ ಪ್ರಸಂಗತಃ ಶ್ರೀಮದ್ಭಗವದ್ಗೀತೆ ಮೊದಲಾದ ಸ್ವದೇಶೀಯ ದೇಶೀಯ ಗ್ರಂಥಗಳ ಆಧಾರದ ಮೇಲೆ ಮಧ್ವಮತವು ಸ್ವವಿರುದ್ಧವಾದದ್ದೆಂದು ವಗೈರೆ ತೋರಿಸೋಣಾಗಿರುತ್ತದೆ. ಕ್ರಯ ಆಣೆ ೦—೨—೦.

(೩) ಸ್ವಾಯಂಭುವ ಮನುವಂಶಾವಳಿ (ದೇವನಾಗರೀ ಅಕ್ಷರ) ಕನ್ನಡ ಉಪೋದ್ಘಾತ ಸಮೇತ ಕ್ರಯ ರೂಪಾಯಿ ೧—೦—೦.

ಈ ಪೈಕಿ ೧ನೇ ೩ನೇಯವುಗಳು ವೆಲ್ಯುಪೆಯಬಲ್ ಪೋಸ್ಟದ್ವಾರಾ ಕಳುಹಿಸೋಣಾಗಬಹುದು.

೨ನೇದರ ಬಗ್ಯೆ, ಅದನ್ನು ಕೊಂಡುಕೊಳ್ಳುವವರು ೨|| ಆಣೆಯ ಟಪ್ಪಾಲುಚೀಟುಗಳನ್ನು ಮುಂದಾಗಿ ಕಳುಹಿಸಬೇಕಾಗುವದು.

ಮಂಗಳೂರು ಟೌನ್‌ನಲ್ಲಿ ಕೊಂಡುಕೊಳ್ಳುವವರು ಹಾಸಲು ಕೊಡಬೇಕಾದ್ದಿಲ್ಲ.

H. Krishna Rao.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ನರೆ ಕೂದಲನ್ನಿಟ್ಟುಕೊಂಡು
ಮುದುಕರಾಗಿ ಕಾಣುವದೇಕೆ?

☞ ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪ ತರದ ಕೂದಲಿಗೆ ಹಚ್ಚುವ ಬಣ್ಣಗಳ ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಚಾಗಿ ಅಸಂಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷ ಪಡುವಿರಿ.

ಕ್ರಯ ಬುರುಸು ಸಮೇತ ಬಾಟ್ಲಿ 1ಕ್ಕೆ ರೂ. 1.
ಅಂಚೆ ಹಾಸಲು ಆಣೆ 0—4—0.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.
V. A. S. PANI,
No. 3, Erulappen Street, Madras.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.
ಮ| ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.

ಮಂಗಳೂರು.
ಪಾವಂಜೆ ಗೋಪಾಲಕೃಷ್ಣ
ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಓಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.
ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ. 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್.
ಶ್ರೀಕುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

Canarese Novels Etc.

ಕನ್ನಡ ಪುಸ್ತಕಗಳು.

ಮ| ರಾ| ರಾ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.
ವಂಗವಿಜೇತ ಹೊಸ ನಾವಿಲ್	1—4
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4
ನವಾಬನಂದಿನಿ ಡಿಟೊ 2ನೇ ಭಾಗ	1—8
ಸೀತಾರಾಮ (ಇತಿಹಾಸ)	1—8
ವಿಷವೃಕ್ಷ ದ್ವಿ. ಮು.	1—4
ದೇವೀ ಚೌಧುರಾಣಿ-ಡಿಟೊ	1—4
ರಾಜಸಿಂಹ-(ಇತಿಹಾಸ)	1—5
ಕಪಾಲಕುಂಡಲ	0.13
ಮೃಣ್ಮಯಿ-ಡಿಟೊ 2ನೇ ಭಾಗ	1—1
ಕೃಷ್ಣಕಾಂತನ ಉಯಿಲು	1—0
ಮನೋರಮ [ಪತ್ತೇದಾರಿ ಕಥೆ]	1—0
ಪರಿಮಳ-ಡಿಟೊ-ದ್ವಿ. ಮು.	0.10
ಸಾಧನೆ. ಡಿಟೊ	0—8
ಕೊಹಿನೂರು [ಇತಿಹಾಸ]	0.12
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3

	ರೂ. ಆ.
ಕಮಲಾ ಕಾಂತ ದ್ವಿ. ಮು.	0—2
ಲೀಲೆ [ಸಮಾಜ ಚಿತ್ರ]	0—4
ಮಾಲತಿ [ಅತಿ ಮನೋಹರ] ದ್ವಿ. ಮು.	0—3
ರಾಧಾರಾಣಿ [ಕಾದಂಬರಿ] ತೃ. ಮು.	0—3
ಯುಗುಳಾಂಗುರೀಯ ,,	0—3
ಭ್ರಾಂತಿವಿಲಾಸ ,,	0—8
ನೊಂದನುಡಿ [ಸ್ತ್ರೀನೀತಿ]	0—2
ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ವೈಜ್ಞಾನಿಕ ಪ್ರಹಸನ [ನಕಲಿ]	0—4
ಚಿರತ್ನನಾಟಕರತ್ನ ಡಿಟೊ	0—7
ಚಿತ್ರವಿಚಿತ್ರಾವಳಿ [Tit-Bits]	0—8
ನೀರದೆ [ಹೊಸ ಕಾದಂಬರಿ]	0—8
ಭಾರತಮಹಿಳಾ [ಸ್ತ್ರೀನೀತಿ]	0—8
ಅಮೃತಪುಳಿನ [ನಾವಿಲ್]	0.11

ಇತ್ಯಾದಿ.

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0—8
ಕ. ಕವಿಚರಿತೆ [ಪೂರ್ವಭಾಗ]	3—2
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6
ಕಲಾನಾಥ ಡಿಟೊ	0—8
ಶೋಭನೆ [ಬಂಗಾಳಿ ನಾವಿಲ್]	0.12
ಯಾಮಿನಿ [ಬಂಗಾಳೀ ನಾವಿಲ್]	0—3
ಪ್ರಿಯಂವದೆ [ಪತಿವ್ರತಾ ಕಥೆ]	0—8
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8
ಸನ್ಯಾಸಿ [ಹೊಸ ಕಾದಂಬರಿ]	0—6
ಮೃತ್ಯು ಪರೀಕ್ಷೆ ಡಿಟೊ	0—2
ಬೃಂದಾವನ ಡಿಟೊ	0—2
ಸುಮನೋರಮ ಡಿಟೊ	0—2
ಮಾಲಿನಿ ಡಿಟೊ	0—2
ಪ್ರೇಮಪಿಪಾಸೆ ಡಿಟೊ	0—2
ವಿರಕ್ತಳಾದ ಸೌದಾಮಿನಿ ಡಿಟೊ	0—5
ಚಿತ್ರಕಳಾವತಿ ಡಿಟೊ	0—2
ಚಾತುರ್ಯವತಿ ಡಿಟೊ	0—2
ವಸುಮತಿ ಡಿಟೊ	0—2
ವಿಲಕ್ಷಣಶಿಕ್ಷಣ ಡಿಟೊ	0—2
ಪದ್ಮಿನಿ ಡಿಟೊ	0—2
ಭಾನುಮತಿ ಡಿಟೊ	0—2
ಸತೀರೋಹಿಣಿ ಡಿಟೊ	0—2
ಸಂತಾಪಕ ಡಿಟೊ	0—4
ಚಂದ್ರಮತಿ [ಸ್ತ್ರೀನೀತಿ]	0—6

	ರೂ. ಆ.
ನಿರ್ಭಾಗ್ಯಚಾಣಕ್ಯ [ಹೊಸಕಾದಂಬರಿ]	0—6
ಅನಂಗಸುಂದರಿ ಡಿಟೊ	0—8
ತಾರಾ ಸುಂದರಿ ಡಿಟೊ	0—8
ರಾಧಾಮಾಧವಿ ಡಿಟೊ	0—8
ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0—9
ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0—9
ಧರ್ಮಪದವೆಂಬ ಬುದ್ಧಗೀತೆ	0.12
ಜೈಮಿನಿಭಾರತ [ಸಟೀಕಾತಾತ್ಪರ್ಯ]	4—0
ಹರಿಕಥಾಮೃತಸಾರ ಡಿಟೊ	1—6
ಚದುರಂಗಬೋಧಿನಿ	0—3
ಸರ್ವೇಮ್ಯಾನ್ಯುಯಲ್	0—5
ನ್ಯಾಯದರ್ಪಣ [ಲಾ]	1—0
ವ್ಯವಹಾರ ದೀಪಿಕೆ [ಲಾ]	3—0
ಶಾಕುಂತಲ ನಾಟಕ ದ್ವಿ. ಮು.	0—9
ಶೂರಸೇನಚರಿತ್ರೆ ನಾಟಕ ಡಿಟೊ	1—0
ಚಂಡಕಾಶಿಕ ನಾಟಕ ಡಿಟೊ	0.12
ರಾಮವರ್ಮ ಲೀಲಾವತೀ ನಾಟಕ	0—8
ಪಾಂಚಾಲೀ ಪರಿಣಯ ನಾಟಕ	0.10
ಚಂಡೀಮದಮರ್ದನ ನಾಟಕ	0—5
ಪ್ರಬೋಧ ಚಂದ್ರೋದಯ ನಾಟಕ	0.10
ಭರ್ತೃಹರಿ ನಿರ್ವೇದ ನಾಟಕ	0—3
ನಿರುಪಮಾ [ನಾಟಕ]	0.12
ಧ್ರುವವಿಜಯ [ನಾಟಕ]	0—4
ಸೀತಾಪರಿಣಯ [ನಾಟಕ]	0—4
ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—
ಎಸ್. ಟಿ. ಎ., ಬೆಂಗಳೂರು ಸಿಟಿ.

ಪ್ರಸಿದ್ಧ ಕನ್ನಡ ಗ್ರಂಥಗಳು

1. **ಜಪಾನರುನ್ನತಿಗೆ ಮೂಲಾಧಾರ:**—ನವನಾಗರೀಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಅತ್ಯಾಶ್ಚರ್ಯಕರವಾದೀ ಕಥೆಯನ್ನು ಓದಬೇಕು. ಇಂತಹ ಸುಬೋಧಕವಾದ ಕಣ್ಮನಗಳಿಗಾನಂದವನ್ನುಂಟುಮಾಡುವ ಗ್ರಂಥವನ್ನು ಹಿಂದೆ ನೀವು ಯಾವಾಗಲೂ ನೋಡಿಲ್ಲ. ಮೈಸೂರು ಮಹಾರಾಜರಿಗೆ "ಡೆಡಿಕೇಟ್" ಮಾಡಲ್ಪಟ್ಟಿದೆ. ಮೈಸೂರು ಮಹಾರಾಜರ, ಯುವರಾಜರ ಮತ್ತು ಕಥೆಯ ಸಂದರ್ಭಗಳಿಗನುಕೂಲಿಸುವಂತೆ, ನೇತ್ರಾನಂದಕರವಾದ 12 "ಹಾಪ್‌ಟೋನ್" ಚಿತ್ರಗಳೂ ಇದರಲ್ಲಿವೆ. ಮೈಸೂರು ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಸ್ವಧರ್ಮ ರಕ್ಷಣೆಗಾಗಿ ರಾಜನೂ, ರಾಣಿಯೂ, ಸೇನಾಪತಿಯೂ, ಸತ್ಯಜಿಯಾದ ಕುರುಬನೂ, ಪುರೋಹಿತನೇ ಮುಂತಾದವರು ಪ್ರಾಣಾರ್ಪಣವಂ ಮಾಡುವ ಸಂದರ್ಭಗಳನ್ನೂ ಮತ್ತು ಅವರುಗಳೆಲ್ಲರೂ ದೇವರುಗಳಿಂದ ಬದುಕಿಸಲ್ಪಟ್ಟ ಬಳಿಕ ರಾಜನಿಗೂ, ಕನ್ಯೆಗೂ ವಿವಾಹ ಪಟ್ಟಾಭಿಷೇಕಗಳು ನಡೆವುದನ್ನೂ, ಅವುಗಳ ಕಣ್ಣೆದುರಿಗೆ ನಡೆದಂತೆ ತೋರಿಸುವ ಫೋಟೋಗ್ರಾಫಿನ ಮೇಲೆ ನಿರ್ಮಿಸಿದ ಸಹಜ ಚಿತ್ರಗಳನೂ ನೋಡಿ ಯಾರ ಹೃದಯವು ತಾನೇ ಕರಗದೇ ಇರವುದು? ಕ್ರಯ ವಿ. ಪಿ. ಪ್ಯಾಕಿಂಗ್ ಸಹಿತ:—ಚಿನ್ನದ ಗಿಲ್ಟಿನದು ರೂ. 2—4—0; ಆವ್ವಲ್ ಗ್ಲೇಜ್ ರೂ. 1—8—0; ದುಯ್ಯಂ 1—4—0.

2 **ಧರ್ಮಪದ:**—17 ಕೋಟಿ ಮುಸಲ್ಮಾನರಿಗೆ "ಖೊರಾನೂ" 32 ಕೋಟಿ ಹಿಂದೂಗಳಿಗೆ "ಭಗವದ್ಗೀತೆಯೂ" 40 ಕೋಟಿ ,ಕ್ರಿಸ್ತರಿಗೆ "ಬೈಬಲೂ" ಹೇಗೆ ಪೂಜ್ಯವಾದ ಗ್ರಂಥಗಳೋ, 55 ಕೋಟಿ ಬೌದ್ಧರಿಗೆ ಈ ಗ್ರಂಥವು ಹಾಗಿದೆ. ಸಾವಿರಾರು ಗ್ರಂಥಗಳಿಂದ ಪಡೆವ ಜ್ಞಾನವನ್ನು ಇದೊಂದರಿಂದ ಪಡೆಯಬಹುದು. ಮೈಸೂರು ಮಹಾರಾಜರ; ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಜಪಾನ್‌ನಲ್ಲಿರುವ ಬುದ್ಧ ವಿಗ್ರಹದ ನೇತ್ರಾನಂದಕರವಾದ ಭಾವಚಿತ್ರಗಳಿವೆ. ಕ್ರಯ ವಿ. ಪಿ. ಸಹಿತ ರೂ. 1.

2. **ಬೌದ್ಧಾವತಾರ:**—ಲೋಕೋದ್ಧಾರಕನಾದ "ಶ್ರೀ ಗೌತಮಬುದ್ಧ ಭಗವಂತನ" ಅತ್ಯಾಶ್ಚರ್ಯಕರವಾದ ಜನ್ಮ ಚರಿತ್ರೆ. ಕ್ರಯ ವಿ. ಪಿ. ಸಹಿತ 0-6-0.

ವಿಳಾಸ:— 1. ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು,
ಚಾಮರಾಜ ಪೇಟೆ, ಮೈಸೂರು.
2. ಶ್ರೀವಾಣೀವಿಲಾಸ ಬುಕ್ ಡಿಪೋ, ಮೈಸೂರು.
3. ದಿ. ಜನರಲ್ ಏಜನ್ಸಿ, ಮೈಸೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್ ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ
ಜುಲಾಯಿ ತಿಂಗಳಲಿ
ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	211,900—0—0
Paid up Capital	186,900—0—0
Deposits	481,989—11—9
Reserve Fund	27,530—4—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively. Terms on application.

Short-notice Deposits requiring one week's notice of withdrawal after one month received @ 2½% per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	211,900—0—0
ಆಗತ ಮೂಲ ಧನವು „	186,900—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	481,989—11—9
ರಕ್ಷಿತ ಧನವು	27,530—4—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. May 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ, ಬಳ್ಳಾರಿ

THE ANGLO INDIAN DRUG & CHEMICAL COMPANY, 16 MARKET BOMBAY 2.

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ. ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

KAMINIA
OIL
Regd
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co
BOMBAY

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತುಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ. ನಯವಾಗಿ ಚಕಚಕಿಸುವವು; ನಿಬಿಡವಾದ ನೀಲ ಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪು ಕೊಡುತ್ತೆ, ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ, ಸುಂಡಿನ ಹೊಟ್ಟನ್ನು ಅಣಗಿಸುತ್ತೆ, ಉತ್ತಮೊತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ,ನರೆಕೂದಲನ್ನುಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲರ್ಹವಾಗಿರುತ್ತೆ.

ಇದರ ಬೆಲೆ 1 ಸೀಸೆಗೆ ರೂ. 1. ಅಂಚೆಯ ವೆಚ್ಚ ಆಣೆ 4 ಬೇರೆ ತೆರಬೇಕು.
3 ಸೀಸೆಗಳಿಗೆ ರೂ. 2—10—0. ಅಂಚೆಯ ವೆಚ್ಚ ಆಣೆ 7.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ. ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆಯು ಉತ್ತಮೋತ್ತಮವಾದದ್ದೆಂದು ತಿಳಿಯಬೇಕು. ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರಿಯುತ್ತಿದ್ದಾರೆ.

ಅಮೇರಿಕದ ಡಾಕ್ತರರ ಅವಿಶ್ರಾಂತ ಪರಿಶ್ರಮದ ಅದ್ಭುತ ಚಮತ್ಕಾರ. ಅಪೂರ್ವ ಶಕ್ತಿಯನ್ನು ಕೊಡತಕ್ಕ **ಪ್ರೊ. ಜೇಮ್ಸರವರ ವಿದ್ಯುತ್ ಶಕ್ತಿವರ್ಧಕ ಗುಟಿಕಾ,** ದುರ್ಬಲತೆ, ಧಾತು ಕ್ಷೀಣತೆ, ಅಗ್ನಿಮಾಂದ್ಯ, ಖಾಸಶ್ವಾಸ, ಕ್ಷಯಾದಿ ರೋಗಗಳಿಂದ ಮೃತ್ಯುವಿನ ಕೋರೆಗಳಲ್ಲಿ ಸಿಲುಕಿರುವವರಿಗೆ, ಅಥವಾ ರೋಗಗಳಿಂದ ಮುಕ್ತರಾಗಿ ಸಾಯಲಿಚ್ಛಿಸುವವರನ್ನು, ಕೆಲಕಾಲ ಪರ್ಯಂತ ಅವರ ಮೃತ್ಯುವನ್ನು ಹಿಂದಟ್ಟಿ ಅವರ ಶರೀರದಲ್ಲಿಯ ಸರ್ವ ರೋಗಗಳನ್ನು ಹೋಗಲಾಡಿಸಿ, ವಿದ್ಯುಚ್ಛಕ್ತಿಯ ಯೋಗದಿಂದ ಪುನಃ ಸ್ವರ್ಗಸುಖವನ್ನು ಅವರಿಗೆ ಕೊಡಲಾಪ **ರಾಮಬಾಣದಂತಹ** ಹುಸಿಯಾಗದ ಉಪಾಯವೆಂದರೆ ಪ್ರೊ. ಜೇಮ್ಸರವರ ಶಕ್ತಿವರ್ಧಕ ಗುಳಿಗೆಗಳೇ. ಸ್ಮೃತಿಶಕ್ತಿಯ ನಾಶ, ಪಚನಕ್ರಿಯೆಯ ವಿಕಾರ, ಮೇಧಾಶಕ್ತಿಯ ಮೂಢತೆ, ಮುಖರೇಖೆಯ ಪಾಂಡುತೆ, ಅಪೌರುಷತೆ, ಸ್ವಪ್ನದೋಷ, ನಾಡಿಗಳ ಶಿಥಿಲತೆ, ಇವೇ ಮೊದಲಾದ ರೋಗಗಳಿಂದ ಉಂಟಾಗುವ ಮಾನಸಿಕ ಕ್ಲೇಶ ಮತ್ತು ನಿರಾಶೆಗಳನ್ನು ಕಿತ್ತುಹಾಕಲಿಕ್ಕೆ ಉಪಲಬ್ಧವಾಗಿರುವ ಉತ್ತಮೋತ್ತಮವಾದ ಔಷಧವನ್ನು ಉಪಯೋಗಿಸಿ ಸರ್ವ ಸಂಕಷ್ಟಗಳಿಂದ ಬಿಡುಗಡೆಯನ್ನು ಹೊಂದಿ, ಈ ಮಹೋಷಧದ ಗುಣಾನುವಾದವನ್ನು ಮುಕ್ತಕಂಠವಾಗಿ ಹಾಡುತ್ತಿರುವರು; ಆದರೆ ಈ ತನಕ ಸರ್ವ ರೋಗಗಳಿಗೆ ತುತ್ತಾಗಿರುವ ಮತ್ತು ದಾರುಣವಾದ ದುಃಖಗಳಿಂದ ಅಳಲುತ್ತಿರುವ ಲಕ್ಷೋಪಲಕ್ಷ ಅಭಾಗಿ ಜನರಿಗೆ ನಮ್ಮ ವಿನಂತಿಯು ಇದೇ ಒಂದೇಯೊಂದು ಸರ್ವ ರೋಗಸಂಹಾರಿಣಿಯಾಗಿರುವ ಪ್ರೊ. ಜೇಮ್ಸರವರ ಈ ವಿದ್ಯುತ್ ಶಕ್ತಿವರ್ಧಕ ಗುಳಿಗೆಳನ್ನು ಸೇವಿಸಿ ನೋಡಿರಿ. ಇದಕ್ಕೆ ಸಾವಿರಾರು ಸಿಫಾರಸ್ ಪತ್ರಗಳು ಬಂದಿವೆ.

PROF. JAMES
ELECTRO-TONIC
PEARLS
FOR
HEALTH, STRENGTH & ENERGY

40 ಗುಳಿಗೆಗಳಿರುವ ಸೀಸೆ ೧ಕ್ಕೆ ರೂ. 2—0—0.
ತಪ್ಪಾಲು ಖರ್ಚು... ... „ 0—4—0.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗುಣವಾಗುವದು ಉರಿಯುವದಿಲ್ಲ. ಶೀಶೆ ೧ಕ್ಕೆ 0—4—0.

ಕಾಮಿನಿಯಾ ಕೋಲ್ಡ ಕ್ರೀಮ್.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದ ಮೇಲಿರುವ ಮುಡಮೆಗಳು, ಕಪ್ಪು ಕಲೆಗಳು ಹೋಗುವದು. ಇದಕ್ಕೆ ಪರಿಮಳವು ಇದೆ. ಶೀಶೆ ೧ಕ್ಕೆ 0—12—0.

ಕಾಮಾಟೋನ್.

ಧಾತುಪುಷ್ಟಿ, ಧಾತುವೃದ್ಧಿಯಾಗುವದು.
ಶೀಶೆ ೧ಕ್ಕೆ 2—0—0.

ಸರಸಪರಿಲಾ.

ರಕ್ತಶುದ್ಧಿಗೆ ಶೀಶೆ ೧ಕ್ಕೆ 1—0—0.

ವಿದ್ಯುಚ್ಛಕ್ತಿ ಮಾತ್ರೆ.

ಸ್ತ್ರೀಯರ ರಜೋದರ್ಶನದಲ್ಲಿ ಆಗುವ ಹೊಟ್ಟೆನೋವಿಗೆ. ೨೫ ಮಾತ್ರೆ ಶೀಶೆ ೧ಕ್ಕೆ 1—4—0.

ಓಡ್‌ಪೆನ್ಸ್ ಕಫಪೇಯೂಷ.

ಶ್ವಾಸ, ಖಾಸ, ಕೆಮ್ಮು ಇವುಗಳಿಗೆ ಸಿದ್ಧೌಷಧ.
ಶೀಶೆ ೧ಕ್ಕೆ 1—4—0.

ರುಬ್ಯಾಡ್.

ವಿರೇಚನಕ್ಕೆ ಔಷಧಿ 0—10—0.

ಟ್ರೇಜೋ ಟೆಬ್ಲೆಟ್ಸ್.

ಶಿರೋವೇದನೆಗೆ ದಿವ್ಯ ಔಷಧ ಶೀಶೆ ೧ಕ್ಕೆ 0–12–0.

ಕ್ಯುರೇಲಾಯಿನ್.

ಪ್ರಮೇಹಕ್ಕೆ. ಶೀಶೆ ೧ಕ್ಕೆ 1—8—0.

ಒಡ್‌ಮನ್ಸ ಮಲೇರಿಯಸ್ ಪಿಲ್ಸ್.

ಎಲ್ಲಾ ತರದ ಜ್ವರದ ಮೇಲೆ; ಶೀಶೆ ೧ಕ್ಕೆ 1—0—0.

ಕರ್ಣರೋಗ ಚಿಕಿತ್ಸಾ.

ಕಿವಿಯಲ್ಲೆ ಉಂಟಾಗುವ ಸ್ಫುರಣ, ಕಜ್ಜಿ, ಕೀವು, ಸೋರುವಿಕೆಗೆ. ಶೀಶೆ ೧ಕ್ಕೆ 0—8—0.

ದಂತಮಂಜನ.

ಡಬ್ಬಿ ೧ಕ್ಕೆ 0—2—0.

ಕಜ್ಜಿ ಮುಲಾಮು.

ಶೀಶೆ ೧ಕ್ಕೆ 0—3—0.

ಕೊಲೆರಾ ರೋಗದ ಔಷಧಿ.

ಶೀಶೆ ೧ಕ್ಕೆ 0—6—0.

ಅತೀ ಮನೋಹರವಾದ ಸುರಭಿಯು. (ರಜಿಸ್ಟರ್ಡ್)

ಒಟ್ಟೊ—ದಿಲ್ ಬಹಾರ್!!

ಈ ಸುಗಂಧ ದ್ರವವು ಮಧುರ—ಕೋಮಲ—ಚಿರಸ್ಥಾಯಿ—ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ—ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ಆಣೆ 8. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ ಆಣೆ 12. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2. ಅಂಚೆಯ ವೆಚ್ಚ ಬೇರೆ ಆಣೆ 4. ಒಟ್ಟೊ—ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0—12—0.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

ಒಂದು ತಿಂಗಳು ಮಾತ್ರ! ಬಹುಮಾನ! ತ್ವರೆಮಾಡಿರಿ!

ವಿವೇಕಚೂಡಾಮಣಿ

ಶ್ರೀಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯವೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟ ಸಂಖ್ಯೆಗಳು ೪೪೪. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೋ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ ರೂ. ೨—೪—೦, ಹಾಸಲು ೪ ಆಣೆ.

ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಸಟೀಕಾ ಮುಕುಂದಮಾಲೆ ಸ್ತೋತ್ರ ಒಂದು, ಮಹಿಂನಾ ಸ್ತೋತ್ರ ಒಂದು ಈ ಎರಡು ಪುಸ್ತಕಗಳನ್ನು ಬಹುಮಾನವಾಗಿ ಕೊಡುತ್ತೇವೆ.

ಕಥಾಕಲ್ಪವೃಕ್ಷ.

ಪೂರ್ವಕಾಲದ ಕವೀಶ್ವರರ ವೃತ್ತಾಂತಗಳಿಂದಲೂ, ಮನೋಹರವಾದ ನೀತಿಕಥೆಗಳಿಂದಲೂ ಕೂಡಿ ಗುನುಷ್ಯ, ಪಶು, ಪಕ್ಷಿ, ಕ್ರಿಮಿಕೀಟಗಳ ಸ್ವಭಾವಧರ್ಮಗಳನ್ನು ತಿಳಿಸುವ, ವಾತಾವರಣ, ವಿದ್ಯುಲ್ಲತೆ ಮುಂತಾದ ತತ್ವಗಳ ವರ್ಣನೆಯುಳ್ಳ ಮತ್ತು ಯಂತ್ರಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರಗಳನ್ನು ವರ್ಣಿಸುವ ಗ್ರಂಥ ಅತ್ಯಂತ ಉಪಯೋಗವಾದದ್ದು. ಕ್ರಯ ರೂ. ೦—೧೦—೦. ಹಾಸಲು ೦—೩—೦.

ರಘುಕುಲಚರಿತ್ರೆ.

ಕಾಳಿದಾಸ ಮಹಾಕವಿಯ ರಘುವಂಶ ಮಹಾಕಾವ್ಯವೇ ‹‹ರಘುಕುಲಚರಿತಂ" ಎಂಬ ಈ ಕಥೆ. ಮೊದಲನೇ ಭಾಗ ದಿಲೀಪನ ವಶಿಷ್ಠಾಶ್ರಮ ಪ್ರಯಾಣ, ನಂದಿನೀಧೇನುವಿನ ವರಪ್ರಸಾದ, ರಘುರಾಜಾಭಿಷೇಕ, ರಘುದಿಗ್ವಿಜಯ, ಅಜನ್ಸ್ವಯಂವರಾಬಿಗಮನ, ಸ್ವಯಂವರವರ್ಣನ, ಅಜಪಾಣಿಗ್ರಹಣ, ಅಜವಿಲಾಪ ಇಂತು ಎಂಟು ಬಗೆಯ ವಿಚಿತ್ರ ಚರಿತ್ರೆಯನ್ನೊಳಗೊಂಡಿದೆ.

ಕ್ರಯ ರೂ. ೦—೮—೦. ಹಾಸಲು ೦—೨—೦.

ಸಟೀಕಾಬ್ರಹಜ್ಜಾತಕ

ಕ್ರಯ ರೂ. ೫—೦—೦. ಹಾಸಲು ರೂ. ೦—೮—೦.

ವಿಳಾಸ:— ಎಚ್. ಎನ್. ರಾವ್ ಆಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾ ಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರ

ಬರ್ಮಿಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.



ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲೆಪಾಶಿ, ವೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಷ್ಟು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೋ ಪೆರೆಡ್ಯಾಸ್.

PARADISE
THE FLORAL
PERFUMERY Co.
BOMBAY.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೋ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಜಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಜಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್ಫ್ಯುಮರಿ ಕಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ		12-0-0	A ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	,,	,,	6-0-0	B ಅರಗಜ	,,	,,	1-0-0
ಕಸ್ತೂರಿ ಬತ್ತಿ	,,	,,	3-0-0	ಕಸ್ತೂರಿ ಬಿಲ್ಲೆ	,,	,,	2-0-0
ಜವಾಜಿ ಬತ್ತಿ	,,	,,	2-0-0	ಜವಾಜಿ ಬಿಲ್ಲೆ	,,	,,	1-0-0
ಪುಣಗಿನ ಬತ್ತಿ	,,	,,	1-8-0	ಕೇಸರಿ ಬಿಲ್ಲೆ	,,	,,	0-8-0
A ಪನ್ನೀರ್ ಬತ್ತಿ	,,	,,	0-12-0	ತಾಂಬೂಲ ರತ್ನ	ಸೀಸೆ 1ಕ್ಕೆ		0-4-0
ಮಸಾಲಾ ಬತ್ತಿ	,,	,,	0-6-0	ದಶಾಂಗ	ಡಬ್ಬಿ 1ಕ್ಕೆ		0-4-0

ಮೇನೇಜರ್, ‹‹ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಯಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಸ್ನೇಹಲತಾ

ಮಸ್ತಕತಾಪಹಾರಿಣೀ ತೈಲ.

ತಲೆನೋವು, ತಲೆಭಾರ, ನಿದ್ರಾಭಂಗ, ಕಣ್ಣುನೋವು, ಹೆಂಗಸರ ತಲೆಶಿಡಿತ, ತಲೆಕುತ್ತು ಪರಿಹಾರ. ಕೇಶವು ರಮ್ಯವಾಗಿ ಉದ್ದುದ್ದ ಬೆಳೆಯುವುದು. ಬಾಲ ನರೆ ಕಪ್ಪಾಗುವುದು. ಉಷ್ಣದಿಂದುಂಟಾದ ತುರಿಕಜ್ಜಿ ಮಾಗುವುದು. ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ತೈಲವನ್ನು ಒಂದು ಸಲ ಉಪಯೋಗಿಸಿ ನೋಡಿರಿ!

ಕ್ರಯ 4 ಔನ್ಸಿನ ಸೀಸೆಗೆ ೦—೧೨—೦. ಡಜನ್ ಬಾಟ್ಲಿಗಳಿಗೆ ರೂ. 8. ವಿ. ಪಿ. ಬೇರೆ.

ಸರ್ವರೋಗಪರಿಹಾರವಾದ ನೀಲಗಿರಿಯ ಯುಕಲಿಪ್ಟಸ್ ತೈಲ—ಔನ್ಸ್ ಸೀಸೆಗೆ 5 ಆಣೆ. ಡಜನಿಗೆ ರೂ. 3. ವಿ. ಪಿ. ಚಾರ್ಜು ಪ್ರತ್ಯೇಕ.

ಇಕ್ಲಿಪ್ಸ್ ರಬ್ಬರ್ ಮೊಹರುಗಳೂ ಫೊಟೋ ಎನ್‌ಲಾರ್ಜಮೆಂಟುಗಳೂ ಅಗ್ಗದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಹೋಪ್‌ಕೊಟೇಜು,
ಕಂಕನಾಡಿ ಪೋಸ್ಟು.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

(ಧಾತುಪೌಷ್ಟಿಕ ವಜ್ರಾಂಗಪಾಕ.)

ಆಸ್ಟ್ರೇಲಿಯಾ ದೇಶದ ಬರ್ರಿಂಗ್‌ಬಾರ್ ಎಂಬ ಸ್ಥಳೀಕರಾದ ಮಿ| ಬಿ. ಹ್ಯಾರಿಸನ್ (Mr. B. Harrison, F. L. S.) ರವರು ಮುಳ್ಳುಗಳಿಲ್ಲದ ಒಂದು ಜಾತಿಯ ಪಾಪಾಸುಗಳ್ಳಿಯ ಗಿಡವನ್ನು ಕುರಿತು ಬರಿಯುವುದೇನಂದರೆ:—"ಈ ಜಾತಿಯ ಪಾಪಾಸುಗಳ್ಳಿ ಗಿಡಗಳ ಪ್ರಯೋಜನಗಳು ಇನ್ನೂ ಜನಗಳ ತಿಳುವಳಿಕೆಗೆ ಬಂದಿರುವುದಿಲ್ಲ. ಉಷ್ಣದೇಶಗಳಲ್ಲಿ ಮತ್ತು ಪೈರುಗಳು ಚನ್ನಾಗಿ ಬಲಿಯದ ಬೆಂಗಾಡು ಪ್ರದೇಶಗಳಲ್ಲಿಯೂ ಇವು ದನಕರುಗಳ ಮೇವಿಗಲ್ಲದೆ ಮನುಷ್ಯರ ಆಹಾರಕ್ಕೂ ಪದಾರ್ಥಗಳನ್ನು ಒದಗಿಸಿಕೊಡುವವು. ಮಳೆಯಿಲ್ಲದ ಕಾಲಗಳಲ್ಲೂ ಮತ್ತು ಬೇಸಿಗೆಯಲ್ಲೂ ಇತರ ಗಿಡಗಳೆಲ್ಲವೂ ಬತ್ತಿಹೋಗುತ್ತಿರುವಾಗ್ಯೆ ಈ ಪಾಪಾಸುಗಳ್ಳಿಯ ಗಿಡಗಳು ಬಹಳ ಸೊಂಪಾಗಿ ಬೆಳೆದು ಹೇರಳವಾಗಿ ಫಲಬಿಡುವುದು. ಈ ಗಿಡಗಳನ್ನು ಇತರ ಯಾವ ಪೈರುಗಳೂ ಬೆಳೆಯದಿರುವ ಜಮೀನುಗಳಲ್ಲಿ ನೆಟ್ಟಾಗ್ಯೂ ಇವು ಬಹಳ ಚನ್ನಾಗಿ ಬೆಳೆದು ಒಂದು ವರುಷದ ನಂತರ ಎಕರೆಗೆ ಸುಮಾರು ೧೦೦ ಟನ್ ತೂಕ ರುಚಿಯಾದ ಮತ್ತು ಪುಷ್ಟಿಕರವಾದ ದನವಿನ ಮೇವು ಸಿಕ್ಕುವುದು. ಇದನ್ನು ಹಸು, ಎಮ್ಮೆ, ಆಡು, ಕುರಿ ಇವುಗಳೆಲ್ಲವಕ್ಕೂ ತಿನ್ನಿಸಬಹುದು. ಇವುಗಳಲ್ಲಿ ಎಕರೆಗೆ ಸುಮಾರು ೮ ಟನ್ ತೂಕ ರುಚಿಯಾದ ಮತ್ತು ಪುಷ್ಟಿಕರವಾದ ಹಣ್ಣುಗಳು ಸಿಕ್ಕುವವು. ಇವುಗಳಲ್ಲಿ ಹೇರಳವಾಗಿ ಸಕ್ಕರೆಯೂ ಮತ್ತು ಆರೋಗ್ಯಕರವಾದ ಇತರ ಆಹಾರ ಪದಾರ್ಥಗಳೂ ಇರುವವು. ಮತ್ತು ಇವುಗಳಿಂದ ಉಪ್ಪಿನಕಾಯಿ ಅಥವಾ ಮೊರಬ್ಬಾಗಳನ್ನು ಮಾಡಿ ಬಹಳ ಕಾಲವಿಟ್ಟಿರಬಹುದು. ಒಂದೊಂದು ಮಾದರಿ ಗಿಡದ ಹಣ್ಣು ಒಂದೊಂದು ಪ್ರಮಾಣವಿರುವುದು. ಹ್ಯಾಗಂದರೆ, ಹಣ್ಣುಗಳು ಒಂದು ನೆಲಗಡಲೆ ಬಿತ್ತದ ಗಾತ್ರ ಮೊದಲ್ಗೊಂಡು ಒಂದು ದೊಡ್ಡ ಮಧುರಂಗದ ಬಾಳೆಕಾಯಿನ ಗಾತ್ರವರಿವಿಗೂ ಇರುವುವು. ಅಚ್ಚ ಕೆಂಪು, ಮಧ್ಯಸ್ತವಾದ ಕೆಂಪು, ಕಿತ್ತಲೆ, ಹಳದಿ ಮತ್ತು ಬಿಳುಪು ಬಣ್ಣದವುಗಳಾಗಿರುವುವು. ಗಿಡ ಒಂದಕ್ಕೆ ೨ ಮಣ ಮೊದಲ್ಗೊಂಡು ೮ ಮಣದವರಿವಿಗೂ ಹಣ್ಣು ಬಿಡುವುದು. ಬೇರೆ ಬೇರೆ ಜಾತಿಯ ಪಾಪಾಸುಗಳ್ಳಿಯ ಗಿಡಗಳನ್ನು ಒಂದೇ ಹೊಲದಲ್ಲಿ ನೆಟ್ಟರೆ ವರುಷದ ಸದಾಕಾಲದಲ್ಲಿಯೂ ಫಲ ಸಿಕ್ಕುವಂತೆ ಮಾಡಿಕೊಳ್ಳಬಹುದು. ಈ ಗಿಡದ ಎಲೆಗಳನ್ನು ಕೆಲವು ದೇಶಗಳಲ್ಲಿ ತರಕಾರಿಯಾಗಿ ಉಪಯೋಗಿಸುವರು. ಪ್ರಜಾಸಂಖ್ಯೆಯು ಹೆಚ್ಚಾಗಿ ಕೆಲವರಿಗೆ ಹೊಟ್ಟೆತುಂಬಾ ಆಹಾರವು ಸಿಕ್ಕದೆ ಕಷ್ಟವಾಗಿರುವ ಇಂಡಿಯಾ ದೇಶದಲ್ಲಿ ಈ ಗಿಡವು ಬಹಳ ಪ್ರಯೋಜನಕಾರಿಯಾದ

ದ್ದೆಂದು ಹೇಳಬಹುದು. ಹಾಗೆ ಇಂಡಿಯಾ ದೇಶೀಯರು ಇದರ ವ್ಯವಸಾಯಕ್ಕೆ ಗಮನ ಕೊಡಬೇಕೆಂಬ ಉದ್ದೇಶದಿಂದಲೇ ನಾನು ಈ ವಿಷಯವನ್ನು ಪ್ರಚಾರಗೊಳಿಸುತ್ತಿದ್ದೇನೆ. ಮತ್ತು ಇದುವರಿವಿಗಿನ ಅನುಭವದಲ್ಲಿ ಈ ಜಾತಿಯ ಪಾಪಾಸುಗಳ್ಳಿಯಂತೆ ಮಳೆಯಿಲ್ಲದ ಮತ್ತು ಕ್ಷಾಮಕಾಲಗಳಲ್ಲಿ ಮನುಷ್ಯರಿಗೆ ಆಹಾರ ಮತ್ತು ದನಕರುಗಳಿಗೆ ಮೇವನ್ನು ಒದಗಿಸಿಕೊಡತಕ್ಕ ಗಿಡವು ಸಸ್ಯವರ್ಗದಲ್ಲಿ ಮತ್ತ್ಯಾವುದೂ ಇಲ್ಲವೆಂದು ತಿಳಿಯಬರುತ್ತದೆ. "ಮೇಲೆ ಹೇಳಲ್ಪಟ್ಟ ಮುಳ್ಳಿಲ್ಲದ ಈ ಜಾತಿಯ ಪಾಪಾಸುಗಳ್ಳಿಯನ್ನು ಬೆಳೆಯಲಪೇಕ್ಷೆಯುಳ್ಳವರು ಮದರಾಸಾಧಿಪತ್ಯದಲ್ಲಿ ಗುಂಟೂರು ಡಿಸ್ಟ್ರಿಕ್ಟ್ ಬಾಪಟ್ಲಾ ಎಂಬ ಸ್ಥಳದಲ್ಲಿ ಬಾಯಿಸ್ ಇಂಡಸ್ಟ್ರಿಯಲ್ ಹೋಂ ಛಾರ್ಜಿನಲ್ಲಿರುವ (Officer in charge of the Boys Industrial Home, Bapatla, Guntur District, Madras Presidency) ರಿಗೆ ಬರದರೆ ಅವರು ಈ ಗಿಡದ ಎಲೆಗಳನ್ನು ಕಳುಹಿಸಿ ಕೊಡುವರು. ಅವುಗಳನ್ನು ನೆಟ್ಟರೆ ಬೇರೊಡೆದು ಗಿಡಗಳಾಗುವುವು. ಸ್ಯಾಲ್‌ವೇಷನ್ ಆರ್ಮಿ (Salvation Army) ಯವರು ಕಳೆದ ಎರಡು ವರುಷಗಳಿಂದೀಚೆಗೆ ಇಂಡಿಯಾ ದೇಶದಲ್ಲಿ ಇದರ ವ್ಯವಸಾಯವನ್ನು ಬಹಳ ಪ್ರೋತ್ಸಾಹಗೊಳಿಸುತ್ತಿರುವುದಾಗಿ ತಿಳಿಯಬರುತ್ತದೆ. ಕಿ. ಗ.

~~~

ಹದಿನೆರಡು ಮೂರ್ಖರು.

~~~

1. ಸ್ವಬುದ್ಧಿಗನುಚಿತವೆಂದು ತೋರುವ ಕಾರ್ಯವ ಜನಪದಕೆ ಹೆದರಿ ಮಾಡುವವ ಮೂರ್ಖ.
2. ಸ್ವಬುದ್ಧಿಗುತ್ತಮವೆಂದು ತೋರುವ ಕಾರ್ಯವ ಜನಪದಕೆ ಹೆದರಿ ಮಾಡದವ ಮೂರ್ಖ.
3. ತ್ಯಾಗವಿಲ್ಲದ ಭಕ್ತಿ, ತೋರಿಸುವವ ಮೂರ್ಖ.
4. ಕಾರಣ ವಿವೇಚಿಸದೆ ಶಿಟ್ಟು ಮಾಡುವವ ಮೂರ್ಖ.
5. ಚಾಡಿ ದೂಷಣೆ ಕೇಳಿ ದ್ವೇಷ ಬೆಳಿಸುವವ ಮೂರ್ಖ.
6. ಅಧಿಕಾರ ತಪ್ಪಿದ ಬಳಿಕ ಪೂಜ್ಯತ್ವ ಬಯಸುವವ ಮೂರ್ಖ.
7. ಕುಲವ ಮರೆತು ಗರ್ವ ಪಡೆಯುವವ ಮೂರ್ಖ.
8. ತನ್ನ ಮಕ್ಕಳ ದೂರು ಅನ್ಯರೊಡನ್ನಾಡುವವ ಮೂರ್ಖ.
9. ತನ್ನ ನಿವಾಸದಲ್ಲಿ ಸೇವಕನ ಕುಟುಂಬಕೆ ವಸ್ತಿಗೆಡೆ ಕೊಡುವವ ಮೂರ್ಖ.
10. ವ್ಯಾಧಿ ಗುಣವಾಗದೆಂದು ರೋಗಿಗೆ ಹೇಳುವವ ಮೂರ್ಖ.
11. ಧನದ ಪ್ರಯೋಜನವನ್ನರಿಯದ ಸಂಪನ್ನನೇ ಮೂರ್ಖ.
12. ಆಡಿ ಮಾಡದವ ಕಡುಮೂರ್ಖನಯ್ಯಾ.

~~~

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

~~~

ದಕ್ಷಿಣ ಕನ್ನಡ ಜಿಲ್ಲೆಯ ಕೆಥೊಲಿಕ್ ಎಸೋಶಿಯೇಶನ್.

~~~

ಅಯ್ಯಾ,

ಒಂದು ವರ್ಷದಿಂದ ಈಚೆಗೆ ರೋಮನ್ ಕಥೋಲಿಕ ಮತಾಧಿಕಾರಿಗಳು ಏರ್ಪಡಿಸಲಿಕ್ಕೆ ಪ್ರಯತ್ನಿಸುತ್ತಿದ್ದ ಮಂಗಳೂರು ದಿಯೊಸೀಜನ ಕೆಥೋಲಿಕ್ ಎಸೋಶಿಯೇಶನ್ ಎಂಬ ಸಂಘದ ಜೆನೆರಲ್ ಮೀಟಿಂಗ್ ಎಂಬ ಸಭೆಯು ಸದರಿ ಮತಾಧಿಕಾರಿಗಳ ಸಹಾಯಕರೆನ್ನಿಸುವ ಮೆ. ಪಾಸ್ಕಲ್ ಲೋಬರವರ ಮುಖಾಂತರ ಕೆಥೋಲಿಕ್ ಯುನಿಯನ್ ಕ್ಲಬ್ಬಿನಲ್ಲಿ ಕಳೆದ ಆದಿತ್ಯವಾರ ಸಾಯಂಕಾಲ ೫-೩೦ ಘಂಟೆ ಸಮಯಕ್ಕೆ ಜರಗಿತು. ಸದರಿ ಲೋಬರವರ ನೆಂಟರಾದ ಮೆ. ಎ. ಜೆ. ಲೋಬರವರು ಅಧ್ಯಕ್ಷರಾಗಿದ್ದರು. ನೆರೆದ ೫೦ ವ ೬೦ ಸಭಿಕರಲ್ಲಿ ಹೆಚ್ಚಿನವರು ಮೆ. ಪಾಸ್ಕಲ್ ಲೋಬರವರ ಸ್ನೇಹಿತರಾಗಿದ್ದ ಕೆಲವು ಮುಂದಾಳುಗಳೂ ಕೊಡಿಯಾಲ ಬೈಲ ಸೊಡಲಿಟಿಯ ಮೆಂಬರುಗಳೂ ಆಗಿದ್ದರಲ್ಲದೆ, ಕೆಥೋಲಿಕ ಕ್ರೈಸ್ತ ಸಮುದಾಯದ ಪ್ರತಿ ಒಂದು ಮುಖ್ಯ ಸಂಗತಿಗಳಲ್ಲಿ ಮುಂದೆ ಬಂದು ಕೆಲಸ ನಡಿಸುವ ಮೆ. ಸ್ಯಾಮುನ್ ಅಲ್ವರಿಸ್, ಮೆ. ಮಾರ್ಟಿನ್ ಪ್ಯಾಸ್, ದಿವಾನ್ ಬಹದೂರು ಪಿಂಟೋ, ವಕೀಲರಾದ ಮೆ. ಅಲ್ಬರ್ಟ್ ಗೊನ್ಸಾಲ್ವಿಸ್ ಮೊದಲಾದ ಸಮುದಾಯದ ನಿಜವಾದ ಮುಂದಾಳುಗಳನೇಕರು ಈ ಸಭೆಯಲ್ಲಿ ಗೈರ್ ಹಾಜರಾಗಿದ್ದರು. ಮೀಟಿಂಗಿನ ಹೆಚ್ಚಿನ ಸಮಯವನ್ನು ಲೆಕ್ಚರುಗಳಲ್ಲಿ ಕಳೆದು, ಕಡೆಗೆ ಮೊದಲೇ ತಯಾರಿಸಿ ತಂದ ಠರಾವುಗಳನ್ನು ಸಭಿಕರಿಗೆ ಓದಿ ಹೇಳಿ, ಸದರಿಯವುಗಳನ್ನು ವಿರೋಧಿಸಲಿಕ್ಕೆ ಯಾರೂ ಇಲ್ಲದೆ ಮಂಜೂರು ಮಾಡಲ್ಪಟ್ಟವು ಎಂಬದಾಗಿ ನೆನಸಲ್ಪಟ್ಟವು. ಹೀಗೆ ಮಂಜೂರು ಮಾಡಿದ ಅನೇಕ ಸಂಗತಿಗಳನ್ನು ಊರಿನಲ್ಲಿ ಖಂಡಿಸುವವರನ್ನು ನಾನು ಕೇಳಿರುತ್ತೇನೆ. ಇಂಥವರು ಮೀಟಿಂಗಿನಲ್ಲಿ ಯಾಕೆ ಹಾಜರಿರಲಿಲ್ಲಾ. ವಿರೋಧಿಸದೆ ಎಸೋಸಿಯೇಶನ್ ಸ್ಥಾಪನೆಯಾಗಬೇಕೆಂಬ ಉದ್ದೇಶ ಇವರು ಮೀಟಿಂಗಿಗೆ ಕರೆಯಲ್ಪಡಲಿಲ್ಲವೋ ಏನೋ ಎಂಬದಾಗಿ ಗೊತ್ತಾಗುವುದಿಲ್ಲಾ.

ಕೆಥೋಲಿಕ ಮತಸ್ಥ.

~~~

"ಇವುಗಳಿಗೆಲ್ಲಾ (ಹೋಟೇಲುಗಳಿಗೆಲ್ಲಾ) ವಿಶೇಷ ಪ್ರೋತ್ಸಾಹ ಕೊಡುವ ವರ್ಗವು ಯಾವುದು."

~~~

ಪತ್ರಕರ್ತರೇ, ಮಂಗಳೂರು, 12-5-14.

ತಮ್ಮ ಪತ್ರದ ಕಳದ ಸಂಚಿಕೆಯಲ್ಲಿ ಛಾಪಿಸಲ್ಪಟ್ಟ "ಅತ್ರಿಗೋತ್ರಜರ" ಕನ್ಯಾಪಿತನು ವರಪಿತನಲ್ಲವೋ ಎಂಬ ವಿಷಯದಲ್ಲಿ ಹಲವು ಯಥಾರ್ಥ ಸಂಗತಿಗಳು ಹೇಳೋಣಾಗಿವೆ. ಇವುಗಳಿಗೆಲ್ಲಾ (ಹೊಟೇಲುಗಳಿಗೆಲ್ಲಾ) ವಿಶೇಷ ಪ್ರೋತ್ಸಾಹ ಕೊಡುವ ವರ್ಗವು ಯಾವುದು ಎಂಬ ಪ್ರಶ್ನಾ ರೂಪದಲ್ಲಿ ವಿದ್ಯಾರ್ಥಿಗಳು ಹೊಟೇಲುಗಳ ಪ್ರೋತ್ಸಾಹಕ ವರ್ಗದಲ್ಲಿ ಪ್ರಮುಖರೆಂತ ಸೂಚಿಸಿರುವಂತೆ ತೋರುತ್ತದೆ. ವಿದ್ಯಾರ್ಥಿ ಭವನಗಳು ಏರ್ಪಡಿಸಿದನಂತರ ಸಹ ವಿದ್ಯಾರ್ಥಿಗಳು ಹೊಟೇಲುಗಳ ಪೋಷಕ ವರ್ಗಕ್ಕೆ ಸೇರಿರುವರಂತಾದರೆ ಇದೊಂದು ಬಹಳ ವ್ಯಸನಕರ ವಿಷಯವಾಗಿರುವುದು. ಹೊಟೇಲುಗಳ ವ್ಯಾಪಾರವು ಇತ್ತಲಾಗೆ ಐದಾರು ವರುಷಗಳಿಂದ ಬಹಳ ಏರುತ್ತಾ ಹೋಗಿ ಹೊಟೇಲುಗಳ ಸಂಖ್ಯೆಯು ಅಧಿಕವಾಗಿರುವದು. ಗಡಂಗುಗಳಿಗೆ ಹೋಗಿ ಸಾರಾಯಿ ಕುಡಿಯುವವರು ಆಯಾ ಸಮಯಗಳಲ್ಲಿ ಗಡಂಗುಗಳಿಗೆ ಹೋಗಿ ಸಾರಾಯಿ ಕುಡಿಯದೆ ಇದ್ದರೆ ಯಾವ ಕೆಲಸಕ್ಕೂ ಮನಸ್ಸು ಕೊಡಲಾರದೆ ಹುಚ್ಚರಂತಾಗುವರು. ಅದೇ ರೀತಿ ಅಂದರೆ ಪ್ರಕೃತ ಹೊಟೇಲುಗಳಿಗೆ ಹೋಗಿ ಕಾಫಿ ಕುಡಿಯುವವರ ಸ್ಥಿತಿಯೂ ಆಗಿರುತ್ತದೆ. ಇನ್ನೂ ಸ್ನೇಹಿತರನ್ನು ಹೊಟೇಲುಗಳಿಗೆ ಕರಕೊಂಡು ಹೋಗಿ ಒಂದೇ 'ಬೈಟಿಕ'ದಲ್ಲಿ ಎಂಥಾ ಬಡವನಾದರೂ ಒಂದೆರಡು ರೂಪಾಯಿಗಳನ್ನು ಚಲ್ಲಿಬಿಡುವ ವಿಧಾನಗಳೇ ಮೊದಲಾದವುಗಳ ವಿಚಾರವನ್ನು ಮಾಡುತ್ತಾ ಹೋದರೆ ಗಡಂಗುಗಳಿಗೂ ಕಾಫಿ ಹೊಟೇಲುಗಳಿಗೂ ಇರುವ ಭೇದವು ಬಹಳ ಸ್ವಲ್ಪವೇ ಎಂತ ತೋರಿಬರುತ್ತದೆ. ಗಡಂಗುಗಳಿಗೆ ಸರಕಾರದವರಿಂದ ಲೈಸನ್ಸು ಬೇಕು. ಹೊಟೇಲುಗಳಿಗೆ ಇದು ಬೇಡಾ, ಅಣ್ಣ ತಮ್ಮಂದಿಯರೋಪಾದಿಯಲ್ಲಿ ಗಡಂಗು ಮತ್ತು ಹೊಟೇಲುಗಳು ಪರಸ್ಪರ ಸಹಕಾರ ಸಂಸ್ಥೆಗಳಾಗಿ ಕೆಲಸ ನಡಿಸುತ್ತಲಿವೆ ಎಂತ ಹೇಳಿದರೆ ಇವೆರಡರ ಇನ್ನು ಹೆಚ್ಚಿನ ವರ್ಣನೆಯು ಅಗತ್ಯವಿರದು.

ಮುಂಬಯಿ ಸಂಸ್ಥಾನದ ಕೆಲವು ಕಡೆಗಳಲ್ಲಿ ವಿದ್ಯಾರ್ಥಿ ವರ್ಗದವರು ವೇಶ್ಯೆಯರಿಂದ ಮತ್ತು ಸಾರಾಯಿ ಗಡಂಗುಗಳಿಂದ ಸಮಾಜದಲ್ಲಿ ಉಂಟಾಗುವ ಹಾವಳಿಯನ್ನು ತಡೆಯುವರೆ ಮಾಡುತ್ತಿರುವ ಕೆಲವು ಪ್ರಯತ್ನಗಳನ್ನು ವರ್ತಮಾನ ಪತ್ರಗಳಲ್ಲಿ ಓದಿ ತಿಳಿದಿರುವೆನು: ಕುಡಿಕರು ಮತ್ತು ವಿಟ ಪುರುಷರು ಗಡಂಗುಗಳನ್ನು ಮತ್ತು ವೇಶ್ಯಾ ಸ್ತ್ರೀಯರ ಗೃಹಗಳನ್ನು ಸೇರುತ್ತಿರುವಾಗ ಅವರನ್ನು ಬಹಿರಂಗವಾಗಿ ಕಂಡು ಹಿಡಿದು ಇವನ್ನು ಒಳನುಗ್ಗದಂತೆ ಪ್ರಯತ್ನ ನಡಿಸುವರು. ಈ ರೀತಿ ಇತರ ಕಡೆಗಳ ವಿದ್ಯಾರ್ಥಿಗಳ ವರ್ತನೆಯು ಇರುವುದು. ಹೋಟೇಲುಗಳ ಪ್ರೋತ್ಸಾಹಕ ವರ್ಗದಲ್ಲಿ ವಿದ್ಯಾರ್ಥಿಗಳು ಸೇರಿರುವರೆಂಬ ಸೂಚನೆಯನ್ನು 'ಅತ್ರಿಗೋತ್ರಜ'ರು ಮಾಡಿದ್ದನ್ನು ಓದಿ ನೋಡಿದೊಡನೆ ಇವರ ಈ ಅಭಿಪ್ರಾಯವನ್ನು ವಿದ್ಯಾರ್ಥಿಗಳ ಲಕ್ಷ್ಯಕ್ಕೆ ತರುವುದುಚಿತವೆಂತ ಈ ಪತ್ರವನ್ನು ತಮಗೆ ಬರಕೊಂಡೆನು. ಗಡಂಗುಗಳ ಮತ್ತು ವೇಶ್ಯಾ ಸ್ತ್ರೀಯರುಗಳ ಮಾತು ಹಾಗಿರಲಿ. ವಿದ್ಯಾರ್ಥಿಗಳು ಕಾಫಿ ಗಡಂಗುಗಳನ್ನು ಸೇರದಂತೆಯಾದರೂ ವಿದ್ಯಾರ್ಥಿಗಳೇ ಪ್ರಯತ್ನಿಸುವದು ಅಗತ್ಯ. ಮಂಗಳೂರಲ್ಲಿ ಪ್ರತಿಯೊಂದು ಶಾಲೆ ಕೊಲೇಜುಗಳಲ್ಲಿ ವಿದ್ಯಾರ್ಥಿಭವನ, ನಾನಾ ಬಗೆಯ ವಿದ್ಯಾರ್ಥಿ ಸಂಘಗಳಿವೆ. ಸ್ಟೂಡೆಂಟ್ಸ್ ಬ್ರದರ ಹೂಡ್ ಎಂಬ ಸಂಘವೂ ಇರುವುದು. ಈ ಸಂಘದವರೆಲ್ಲರು ವಿದ್ಯಾರ್ಥಿಗಳು ಕಾಫಿ ಗಡಂಗುಗಳನ್ನು ಸೇರುವುದರಿಂದ ಉಂಟಾಗುವ ಕೆಡಕನ್ನು ಗ್ರಹಿಸಿಕೊಂಡು ಇಂಥಾ ಕೆಡಕನ್ನು ಕಿತ್ತು ಬಿಡುವ ಬಗ್ಯೆ ಬೇಕಾದ ಸಾಧನಗಳನ್ನು ತಮ್ಮ ಕಾರ್ಯ ಕ್ರಮ ವಿವರದಲ್ಲಿ ಸೇರಿಸಿಕೊಳ್ಳುವದು ಅವಶ್ಯ.

ವಿದ್ಯಾರ್ಥಿಗಳ ಹಿತಚಿಂತಕ.

~~~

ವಿದೇಶ ವೃತ್ತಾಂತ.

~~~

ಭಾರತೀಯ ಹಾಲಹವಾಲೆಗಳನ್ನು ಇಂಗ್ಲಾಂಡಿನ ಜನರ ಮುಂದಿಡುವರೆ ರಾಷ್ಟ್ರೀಯ ಸಭೆಯ ಪರವಾಗಿ ಲಂಡನಿಗೆ ಹೋದ ಪ್ರತಿನಿಧಿ ಮಂಡಳಿಯವರು ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಕ್ರೂ ಪ್ರಭುಗಳವರಿಗೆ ಭೇಟಿ ಕೊಟ್ಟು ಕೌನ್ಸಿಲಿನ ಬದಲಾವಣೆ ಸಂಬಂಧ ಚರ್ಚಿಸುವರು. ಹೌಸ್ ಅಫ್ ಕಾಮನ್ಸ್ ಸಭೆಯ ಮೆಂಬರರ ಕೂಡೆ ಈ ಪ್ರತಿನಿಧಿ ಮಂಡಳಿಯವರು ಅನಂತರ ಮೀಟಿಂಗ್ ನಡಿಸುವರು. ಸರ್ ವಿಲಿಯಮ್ ವೆಡ್ಡರ್ಬರ್ನರವರು ಈ ಪ್ರತಿನಿಧಿ ಮಂಡಳಿಯ ಬಹುಮಾನಾರ್ಥವಾಗಿ ಒಂದು ಸುಖಭೋಜನವನ್ನು ಬೃಹಸ್ಪತಿವಾರ ಕೊಡಿಸುವರು. ಕಡೆಗೆ ಪ್ರತಿನಿಧಿ ಮಂಡಳಿಯವರು ಕನ್ಫರೆನ್ಸಿಗೆ ಹಾಜರಾಗುವರು. ಈ ಕನ್ಫರೆನ್ಸಿಗೆ ಕೊರ್ಟ್ನಿ ಪ್ರಭುಗಳವರು ಅಧ್ಯಕ್ಷರಾಗಿರುವರು.

~~~

ಎನ್ನಿ ಬಿಸೆಂತರು ನಾರಾಯಣಯ್ಯರ ಮಕ್ಕಳ ಸಂಬಂಧ ಮದ್ರಾಸ್ ಹ್ಯಾಕೋರ್ಟಿನಲ್ಲಿ ಆದ ತೀರ್ಪಿನ ಮೇಲೆ ಪ್ರೀವಿ ಕೌನ್ಸಿಲಿಗೆ ಅಪೀಲು ಮಾಡಿಕೊಂಡಿದ್ದರಷ್ಟೆ. ಲೋರ್ಡ್ ಚೇನ್ಸಲ್ಲರು ಈ ಅಪೀಲಿನ ಮೇಲೆ ತಾ. ೬ರಲ್ಲು ತೀರ್ಮಾನ ಕೊಟ್ಟು ಕೆಳಗಿನ ಕೋರ್ಟಿನಲ್ಲಿ ಹುಡುಗರ ಪರವಾಗಿ ಯಾರೂ ವಾದಿಸಲಿಲ್ಲ. ವಿವಾದ ಸಂಗತಿಗಳು ಸರಿಯಾಗಿ ವಾದಿಸಲ್ಪಡಲಿಲ್ಲ. ನಿಜವಾದ ಪ್ರಶ್ನೆಗೆ ಕೋರ್ಟಿನ ನಿಗಾ ಕೊಡಲ್ಪಡಲಿಲ್ಲ. ಆದರೆ ಇದು ಕೋರ್ಟಿನ ತಪ್ಪಲ್ಲ. ಆದುದರಿಂದ ಕೆಳಗಿನ ತೀರ್ಮಾನವು ನಿಲ್ಲತಕ್ಕದಲ್ಲ ಎಂಬದಾಗಿ ನಿರ್ಣಯಿಸಿದರು.

~~~

ಮುನ್ಸಿಪಾಲಿಟಿಯಲ್ಲಿ ಓಟು ಕೊಡಲು ಹಕ್ಕುಳ್ಳ ಹೆಂಗಸರಿಗೆ ಇಂಗ್ಲಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಸ್ವಾತಂತ್ರ್ಯ ಕೊಡಬೇಕೆಂಬ ಸೆಲ್‌ಬೋರ್ನ್ ಪ್ರಭುಗಳ ಮಸೂದೆಯು ಪ್ರಭು ಮಂದಿರದಲ್ಲಿ ಬಹು ಮತದಿಂದ ಬಿದ್ದುಹೋಯಿತು.

~~~

ಪರಾಫಿನ್ ವೇಕ್ಸ್ ಎಂಬ ಮೇಣವನ್ನು ೧೨೫ ಡಿಗ್ರಿ ಬಿಸಿ ಮಾಡಿ ಸ್ನಾನಮಾಡಿಸುವುದು ವಾತ, ನೋವು ಇತ್ಯಾದಿ ನೋವುಗಳಿಗೆ ಅಮೂಲ್ಯ ಔಷಧಿ ಎಂಬದಾಗಿ ಈಚೆಗೆ ಡಾಕ್ಟರ್ ಬಿ. ಸೇಂಡ್ ಫೋರ್ಟ ಎಂಬ ಫ್ರೆಂಚ್ ವೈದ್ಯರು ಕಂಡುಕೊಂಡಿರುವರು. ಈ ಮೇಣವನ್ನು ಬಿಸಿ ಮಾಡಿ ಆ ದಾಕ್ತರರು ಘಾಯ ರಾಜ ಕುರು ಮೊದಲಾದವುಗಳಿಗೆ ಹಚ್ಚಿದರು. ಇದರಿಂದ ನೋವು ಮಾತ್ರವಲ್ಲ; ಘಾಯಗಳೂ ಬೇಗನೇ ಗುಣವಾದುದನ್ನು ಇವರು ಕಂಡು ಇದರ ಹೆಚ್ಚಿನ ಪ್ರಯೋಗವನ್ನು ಕಂಡುಕೊಳ್ಳುವರೆ ೧೦೦ ಗೆಲನ್ ಮೇಣ ಬಿಸಿಮಾಡಿ ವಾತ ರೋಗಿಗಳಿಗೆ ಮೈ ತುಂಬಾ ತೊಡೆದರು. ಇದರಿಂದ ರೋಗಿಗಳು ಗುಣ ಹೊಂದಿರುವರು.

~~~

ಅಮೇರಿಕದ ಇಲಿನೋಯಿಸ್ ಎಂಬ ಪಟ್ಟಣದಲ್ಲಿ ಸೋಲ್ಜರರ ಮನೆಯಲ್ಲಿ ಒಬ್ಬ ಹೆಂಗಸು ಈಚೆಗೆ ೬೦ ವರ್ಷಗಳಿಂದ ಗಂಡಸಿನ ವೇಷದಿಂದ ಕಾಲಕ್ಷೇಪ ಮಾಡುತ್ತಿದ್ದದ್ದು ಈಗ ತಾನೇ ಕಂಡು ಹಿಡಿಯಲ್ಪಟ್ಟಿರುವುದು. ಈ ಹೆಂಗಸು ೬೨ ವರ್ಷಗಳ ಹಿಂದೆ ಐರ್ಲಾಂಡಿನಿಂದ ಅಮೇರಿಕಕ್ಕೆ ಹುಡುಗರ ಉಡುಪು ಹಾಕಿಕೊಂಡು ಹೋಗಿದ್ದಳು. ೬೦ ವರ್ಷಗಳ ಹಿಂದೆ ಅಲ್ಲಿ ಅಂತಃಕಲಹವಾದಾಗ ಇವಳು ಸೇನೆಗೆ ಸೇರಿಕೊಂಡು ಕೆಲವು ಕಠಿಣ ಯುದ್ಧದಲ್ಲಿ ಬಹಳ ಧೈರ್ಯಶಾಲಿಯಾಗಿ ಹೋರಾಡಿದಳು. ಯುದ್ಧ ತೀರಿದ ನಂತರ ಯುದ್ಧದ ಕಾಲ ಪಟ್ಟ ಶ್ರಮದಿಂದ ಇತರ ಕೆಲಸ ಮಾಡಲು ಅನನುಕೂಲವಾಗಿ ಸೋಲ್ಜರರ ಮನೆಗೆ ಹೋಗಿ ಸೇರಿಕೊಂಡು ಜೀವನ ಸಾಗಿಸುತ್ತಾ ಇದ್ದಳು. ಯಾರಿಗಾದರೂ ಇವಳು ಹೆಂಗಸೆಂದು ಗೊತ್ತಿಗೆ ಬರಲೇ ಇಲ್ಲ. ಆದರೆ ಈಚೆಗೆ ಇವಳು ಅಸ್ವಸ್ಥದಲ್ಲಿ ಬಿದ್ದುದರಿಂದ ದಾಕ್ತಾರರ ಆರೈಕೆಯಲ್ಲಿರಬೇಕಾಯಿತು. ಆಗ ದಾಕ್ತಾರರಿಗೆ ಇವಳು ಹೆಂಗಸು ಎಂದು ತಿಳಿದು ಬಂದುದರಿಂದ ಗುಟ್ಟು ಹೊರಗೆ ಹಾಕಿದರು.

~~~

ಪ್ರಾಚೀನ ಪಟ್ಟಣವಾದ ರುಹೆಮ್ಸ್ ಎಂಬಲ್ಲಿ ಈಚೆಗೆ ಒಂದು ವಿಚಿತ್ರವು ಕಂಡುಕೊಳ್ಳಲ್ಪಟ್ಟಿರುವುದು. ಒಬ್ಬ ಹೆಂಗಸು ಸಮಾಧಿ ಸ್ಥಳಕ್ಕೆ ಹೋದಾಗ ಆಗ ತಾನೇ ತೋಡಿದ್ದ ಸಮಾಧಿಯಲ್ಲಿ ರಕ್ತ ಚಿಮಿಕಿದ್ದ ಕಾಗ್ದ ಚೂರುಗಳು ನೂಕಿದದ್ದು ಕಂಡು ಬಂತು. ಸಮೀಪವೇ ಇದ್ದ ಅಗಿಯುವವರನ್ನು ಅವಳು ಹತ್ತಿರ ಕರೆದು ಅದನ್ನು ಅಗಿಸಿದ್ದಲ್ಲಿ ಒಬ್ಬ ಮನುಷ್ಯನ ಹೃದಯವು ಇದ್ದ ಪಾರ್ಸೆಲ್ ಸಿಕ್ಕಿತು. ಈ ವಿಷಯವು ಪೋಲಿಸಿನವರಿಗೂ ದಾಕ್ತಾರರಿಗೂ ತಿಳಿಸಿದ್ದಲ್ಲಿ ದಾಕ್ತಾರರು ಬಂದು ಪರೀಕ್ಷಿಸಿದಾಗ ಅದರೊಳಗೆ ಉದ್ದವಾದ ಸೂಜಿಯು ಹಾಕಲ್ಪಟ್ಟಿತು. ೧೦ ಗುಂಡುಸೂಜಿಗಳು ಮಣ್ಣು ಹಿಡಿದಿದ್ದವು. ಇದು ಯಾರಿಗಾದರೂ ಕೇಡು ಮಾಡಲು ಮಾಟಗಾರ ಯಾ ಮಾಟಗಾರತಿಯಿಂದ ಮಾಡಲ್ಪಟ್ಟಿರಬೇಕೆಂತ ಭಾವಿಸಲ್ಪಟ್ಟಿರುವುದು.

~~~

ದಕ್ಷಿಣ ಆಫ್ರಿಕದ ಜೊಹನ್ನೆಸ್‌ಬರ್ಗಿನ ಮುಸಲ್ಮಾನರ ಒಂದು ಪ್ರತಿನಿಧಿಮಂಡಳಿಯನ್ನು ಬರಮಾಡಿಕೊಳ್ಳುವರೆ ಜನರಲ್ ಸ್ಮಟ್ಟರವರು ಒಪ್ಪಿರುವರೆಂದೂ ವಿವಾಹ ಸಂಬಂಧವಾಗಿರುವ ವಿಷಯವನ್ನು ಇತ್ಯರ್ಥಮಾಡಿ ಕೊಡುವರೆ ಮಾತು ಕೊಟ್ಟಿರುವರೆಂತಲೂ, ಪಾರ್ಲಿಮೆಂಟ್ ಸಭೆಯ ಮುಂದೆ ಇಂಡಿಯನ್ ಇಮಿಗ್ರೇಶನ್ ಆಕ್ಟು ಬಂದಾಗ ಸರಕಾರದವರು ಭಾರತೀಯರ ಈ ವಿಷಯವಾದ ವಿಜ್ಞಾಪನೆಗೆ ಅಡ್ಡಿಮಾಡುವ ಹಾಗಿಲ್ಲವೆಂದೂ ಸ್ಮಟ್ಟರವರ ಮಾತಿನಿಂದ ತಿಳಿದು ಬರುತ್ತದೆ.

~~~

ಕೆನಡಾ ದೇಶದ ಗವರ್ನರ ಜನರಲರಾಗಿ ಪ್ರಿನ್ಸ್ ಅಲೆಕ್ಷಂದರ್ ಅಫ್ ಟೆಕ್ಕರವರು ನೇಮಿಸಲ್ಪಟ್ಟಿರುವರು.

~~~

ಅಲ್ಬಾನಿಯ ಹೊಸ ರಾಜ್ಯಕ್ಕೆ ಒಳಗಾಗವೆಂದು ಹಟ ಹಿಡಿದ ಸ್ವತಂತ್ರ ಸರಕಾರವನ್ನು ಸ್ಥಾಪಿಸಿಕೊಂಡ ಎಪಿರೋಟೆಯವರಿಗೂ ಅಲ್ಬಾನಿಯರಿಗೂ ಕದನ ನಡೆಯುತ್ತಲಿದೆ. ಕೊಡ್ರ ಎಂಬಲ್ಲಿ ತಾ. ೬ರಲ್ಲು ಉಭಯತರೊಳಗೆ ಕದನವಾಗಿ ೫೦೦ ಅಲ್ಬಾನಿಯರು ಹತರಾದರು. ಎಪಿರೋಟೆಯರಲ್ಲಿಯೂ ಅತಿರೇಕ ಪ್ರಾಣನಷ್ಟವಾಗಿರುವುದು. ಅದಲ್ಲದೆ ಅಮಾನುಷ್ಯಕರವಾದ ಹಿಂಸೆಯು ನಡೆಯುತ್ತಲಿದೆ ಎಂಬ ವಾರ್ತೆಯು ಬಂದಿರುವುದು. ಎದೆ, ಕೈ, ಕಾಲುಗಳಿಗೆ ಮೊಳೆ ಜಡಿದು ಕ್ರೂಜಿಗೆ ಹಾಕುತ್ತಿದ್ದಾರೆ. ಮಕ್ಕಳ ಬೆರಳು ಕೈ ಇತ್ಯಾದಿಗಳನ್ನು ಕಡಿದು ಹಿಂಸೆ ಪಡಿಸುತ್ತಿದ್ದಾರೆ. ಅನೇಕ ಅಲ್ಬಾನಿಯರನ್ನು ಕೊಂದು ಅವರ ಮನೆಗಳನ್ನು ಸುಟ್ಟುಹಾಕಿದರು ಎಂಬ ವಾರ್ತೆಯು ಬಂದಿರುವುದು.

ಕಡೆಗೆ ಬಂದ ವಾರ್ತೆಯ ಪ್ರಕಾರ ಎಪಿರೊಟೆ ಸರಕಾರದವರು ಇಂಟರ್ ನೇಶನಲ್ ಕಮಿಶನ್ ಎಂಬ ಸಂಘದ ಸಭೆಯ ಆಲೋಚನೆಯ ಮೇಲೆ ಸದ್ಯಾ ಯುದ್ಧ ನಿಲ್ಲಿಸುವರೆ ಒಪ್ಪಿರುವರೆಂತ ತಿಳಿದು ಬರುವುದು.

~~~

ಉತ್ತರ ಹಿಂದೂಸ್ಥಾನ.

ಇದೇ ಕಳದ ತಾ. ೨೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೨,೮೨೨ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೧೦೭೯ ಮಂದಿ ಮೃತಪಟ್ಟರು. ಈ ಪೈಕಿ ಪಂಜಾಬು ೪೭೮೭; ಸಂಯುಕ್ತ ಸಂಸ್ಥಾನ ೩೬೩೨; ಬಿಹಾರ್ ಮತ್ತು ಒರಿಸ್ಸ ೧೫೭೫; ಮುಂಬಾಯಿ ೭೨೦; ಮದ್ರಾಸ್ ೭; ಬಂಗಾಳ ೩೨; ಬರ್ಮ ೧೫೩; ಮೈಸೂರು ೨೫; ಹೈದರಾಬಾದ್ ೨೩; ರಜಪುತಾನ ೩೩; ಮರಣಗಳಾದವು.

~~~

ಚಿತಗೊಂಗಿನ ಅಮೋದಿನಿ ದೇವಿ ಎಂಬ ಹೆಂಗಸು ಈಚೆಗೆ ತಾನೇ ಆತ್ಮಹತ್ಯ ಮಾಡಿಕೊಂಡಿರುವಳು. ಈ ವಿಷಯ "ಬಂಗಾಳಿ" ಪತ್ರಿಕೆಯಲ್ಲಿ ಕೆಳಗಿನ ವಾರ್ತೆಯು ಪ್ರಕಟಿಸಲ್ಪಟ್ಟಿರುವುದು. ಅಮೋದಿನಿ ದೇವಿಯು ಚಿತಗೊಂಗಿನ ಬಾಬು ನಿವ್ರಾಣ ಚಂದ್ರ ಮುಕರ್ಜಿ ಬಿ. ಎ. ಇವರ ಮಗಳು. ಇವಳು ಡಕ್ಕಾಜಿಲ್ಲೆಯ ಶಹನಿಹತಿ ಎಂಬ ಗ್ರಾಮದ ಮನ್ಮಥನಾಥ ಬೆನರ್ಜಿ ಬಿ. ಎರವರಿಗೆ ವಿವಾಹವಾದಳು. ಅನಂತರ ಬೆನರ್ಜಿಯರು ವಾಂತಿಭೇದಿ ರೋಗದಿಂದ ಮೃತಪಟ್ಟರು. ಅವರು ಮೃತಪಟ್ಟಾಗ ದೇವಿಗೆ ೧೫ ವರ್ಷ ವಯಸ್ಸಾಗಿತ್ತು. ಆ ಕಾಲದಲ್ಲಿ ಗಂಡನ ಚಿತೆಗೆ ಬಿದ್ದು ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಿಸಿದಳು. ಆದರೆ ಅವಳ ಕಡೆಯ ಜನರು ಎದುರಿಸಿದ್ದರಿಂದ ಈ ಕೃತ್ಯವನ್ನು ಮಾಡಲಾಗಲಿಲ್ಲ. ಅನಂತರ ಈ ವಿಧವೆಯು ಗಂಡನ ಮನೆಯಿಂದ ತಂದೆಯ ಮನೆಗೆ ಬಂದು ಅಕಳಂಕವಾದ ಜೀವನ ಮಾಡುತ್ತಿದ್ದಳು. ಒಳ್ಳೇ ವಿದ್ಯಾಭ್ಯಾಸ ಮಾಡಿದಳು. ಆಯಾ ಪುಸ್ತಕಗಳನ್ನು ಓದಿದಳು. ತನ್ನನ್ನು ಬಿಟ್ಟುಹೋದ ಗಂಡನ ಆತ್ಮವನ್ನು ಪುನಃ ಸೇರಬಹುದೇ, ಇದು ಸಾಧ್ಯವೋ ಎಂಬಿತ್ಯಾದಿ ಪ್ರಶ್ನೆಗಳು ಅವಳಲ್ಲಿ ಹುಟ್ಟಿ ಆಗ್ಗಾಗ್ಯೆ ಈ ವಿಷಯ ತನ್ನ ಚಿಕ್ಕತಾಯಿಯನ್ನು ಕೇಳುತ್ತಿದ್ದಳು. ಇದೇ ಕಳದ ಎಪ್ರೀಲ್ ತಾ. ೨೮ರಲ್ಲು ರಾತ್ರಿ ಒಬ್ಬಳಾಗಿ ಮಲಗಿದ್ದಲ್ಲಿಂದ ಮೆಲ್ಲನೆ ಎದ್ದು ಮನೆಯ ಒಂದು ಮೂಲೆಗೆ ಸೇರಿ ಸಣಬಿನಿಂದ ತನ್ನನ್ನು ಸುತ್ತಿಕೊಂಡು ಶೀಮೆ ಎಂಣೆ ಹೊಯ್ದುಕೊಂಡು ಬೆಂಕಿ ಹಚ್ಚಿಕೊಂಡಳು. ಆಚೆ ಮನೆಯಲ್ಲಿದ್ದ ದೇವಿಯ ಚಿಕ್ಕಪ್ಪನು ಮಲಗಲಿಕ್ಕೆ ಹೋಗುವ ಕಾಲ ಬೆಂಕಿಯ ಕಿಡಿ ಹಾರುತ್ತಿರುವುದನ್ನು ಕಂಡು ಓಡಿಬಂದು ನೋಡಲು ದೇವಿಯು ಸಮಾಧಾನದಿಂದ ಬೆಂಕಿಯ ಮಧ್ಯೆ ಕುಳಿತ್ತಿದ್ದಳು. ಅವಳನ್ನು ಸಂರಕ್ಷಿಸಲು ಅವಳ ಸಂಬಂಧಿಕರು ಪ್ರಯತ್ನಪಟ್ಟಾಗ ಅವಳು—ನನ್ನ ಗಂಡನು ತೀರಿ ಹೋದಂದಿನಿಂದ ನನ್ನ ಒಡಲಲ್ಲಿ ಸುಡುತ್ತಿದ್ದ ಬೆಂಕಿಯನ್ನು ಈಗಿನ ಬೆಂಕಿಗೆ ಸರಿಹೋಲಿಸಿದರೆ ಈ ಬೆಂಕಿಯು ಅದರ ಎದುರಿಗೆ ಏನೂ ಇಲ್ಲ. ನನ್ನನ್ನು ಸಂರಕ್ಷಿಸ ಬೇಡಿರಿ ಎಂದು ಕೂಗಿಕೊಂಡಳು. ಡಾಕ್ಟರರು ಕರೆಯಲ್ಪಟ್ಟು ಅವಳಿಗೆ ಚಿಕಿತ್ಸೆ ನಡಿಸಿದಾಗ ಅವಳು ಔಷಧಿ ತಕ್ಕೊಳ್ಳಲು ನಿರಾಕರಿಸಿ ನೀರನ್ನು ಕೇಳಿದಳು. ಅವಸರದಿಂದ ಯಾರೋ ಕುಪ್ಪಿಯ ಬಿಂದಿಗೆಯಲ್ಲಿ ನೀರನ್ನು ತಂದರು. ಆದರೆ ಅವಳು ಅದನ್ನು ನಿರಾಕರಿಸಿ ಮಣ್ಣಿನ ಪಾತ್ರೆಯಲ್ಲಿ ನೀರು ತರಬೇಕೆಂದಳು. ಅವಳ ಸ್ನೇಹಿತರು ನೀನು ಈ ಕ್ರೂರ
~~~

ಬೆಂಕಿಯಿಂದ ಸಾಯುವುದೇಕೆ ಎಂದು ಪ್ರಯತ್ನಿಸಿದಲ್ಲಿ ಅವಳು ಬೆಂಕಿದೇವರಿಗೆ (ಬ್ರಹ್ಮ) ಜೀವವನ್ನು ಅರ್ಪಿಸುವುದು ಪಾಪವಲ್ಲ, ತನಗೆ ನೋವೂ ಆಗುವುದಿಲ್ಲ ಎಂದು ಹೇಳಿ ಬೆಳಿಗ್ಯೆ ೫-೩೦ಕ್ಕೆ ನಿದ್ರಿಸಿ ಪ್ರಾಣಬಿಟ್ಟಳು.

* * *

ಸತಾರ ಡಿಸ್ಟ್ರಿಕ್ಟ್ ಮುನ್ಸಿಫ್‌ಕೋರ್ಟಿನ ನಾಜರ್ ಅಲೆಕ್ಷಂದರ್ ಲೂಯಿಸ್ ಎಂಬವನೂ ಅವನ ಇಬ್ಬರು ಕ್ಲಾರ್ಕರೂ ೨,೦೩೩ ರೂಪಾಯಿ ವಿಶ್ವಾಸ ಘಾತುಕ ಮಾಡಿದ್ದಾರೆಂದು ಆಪಾದಿಸಲ್ಪಟ್ಟಿರುವರು.

—o—

ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಪರಸ್ಪರ ಸಹಾಯಕ ಸಂಘಗಳು ಎಷ್ಟು ಪ್ರಯೋಜನಕಾರಿ ಎಂಬದು ಧಾರವಾಡದ ನೇಯಿಗೆ ಕೊಓಪರೇಟಿವ್ ಸೊಸ್ಯಾಟಿಯ ಲೆಕ್ಕ ಪರಿಶೋಧಕರ ವರದಿಯಿಂದ ತಿಳಿದು ಬರುವುದು. ಈ ಸೊಸ್ಯಾಟಿಯವರು ರೇಷ್ಮೆ, ನೀಲಿ, ನೂಲು ಇತ್ಯಾದಿಗಳನ್ನು ರಖಂ ಆಗಿ ತಕ್ಕೊಂಡು ರೂಪಾಯಿಗೆ ೩ ಪೈಯ ನಫೆ ಇಟ್ಟು ಸೊಸ್ಯಾಟಿಯ ಇತರ ಮೆಂಬರರಿಗೆ ಮಾರುವರು. ಹೀಗೆ ಈ ನೇಯಿಗೆಯವರು ಮಾರ್ವಾರಿಗಳ ಕೈಗೆ ತಪ್ಪಿದಂತಾಗುವುದು. ನೇಯಿಗೆಯವರಿಂದ ಮಾಡಲ್ಪಟ್ಟ ವಸ್ತುಗಳ ಕೀವಣಾತಿ ಮೇಲೆ ಈ ಸೊಸ್ಯಾಟಿಯಿಂದ ಸಾಲವೂ ಕೊಡಲ್ಪಡುವುದು. ಈ ವಸ್ತು ಮ್ಹಾಲಿಕನು ಆ ವಸ್ತುಗಳನ್ನು ಪ್ರತಿವಾರವೂ ಪೇಟೆಗೆ ತಕ್ಕೊಂಡು ಹೋಗಿ ಮಾರಾಟಕ್ಕೆ ಇಡಬಹುದು. ಈ ಉಪಾಯದಿಂದ ನೇಯಿಗೆಯವನಿಗೆ ತನ್ನ ವಸ್ತುಗಳನ್ನು ಪೇಟೆಯಲ್ಲಿ ಅಗ್ಗ ಅಗ್ಗವಾಗಿ ಮಾರಬೇಕೆಂಬ ಕುತೂಹಲವೇ ಇರದು. ಈ ಸೊಸ್ಯಾಟಿಯಿಂದ ಬರೇ ವ್ಯಾಪಾರ ಸುಧಾರಣೆ ಮಾತ್ರವಲ್ಲ; ನೇಯಿಗೆಯವರಲ್ಲಿ ಸಮಾಜಿಕ ಸುಧಾರಣೆಯೂ ಉಂಟಾಗಿರುವುದು. ಈ ಸಮಾಜದವರು ಸಮಾಜಿಕ ಕ್ಲಬುಗಳನ್ನೂ ಮಾಡಿಕೊಂಡಿರುವರು. ಇವರು ತಮ್ಮ ಮಕ್ಕಳನ್ನು ಸರಕಾರದ ನೇಯಿಗೆ ಶಾಲೆಗೆ ಕಳುಹಿಸಿ ತರ್ಬೀತು ಮಾಡಿಸುತ್ತಲಿರುವರು. ಹೀಗೆ ಈ ನೇಯಿಗೆಯವರು ಕೊಓಪರೇಟಿವ್ ಸೊಸ್ಯಾಟಿಯ ಮೂಲಕ ದಿನೇ ದಿನೇ ಮೇಲ್ಮೆಯನ್ನು ಹೊಂದುತ್ತಲಿರುವರು.

* * *

ಬಡ ಗಾಡಿಗಾರರನ್ನು ಖೂನಿಮಾಡಿ ಕೆಲವು ವರ್ಷಗಳಿಂದ ಜೀವನ ಸಾಗಿಸುತ್ತಿದ್ದ ಮರಾಠಿ ಕೃಷಿಗಾರ ನಾರಾಯಣ ರಾಘೂ ಎಂಬವನನ್ನು ಬ್ರಿಟಿಷ್ ಮತ್ತು ನೈಜಾಮ ಗುಪ್ತ ಪೋಲಿಸಿನವರು ಬಹು ಪ್ರಯತ್ನದಿಂದ ಪತ್ತೆ ಮಾಡಿರುವರು. ನಾರಾಯಣ ರಾಘು ಎಂಬವನು ಔರಂಗಾಬಾದ್ ಜಿಲ್ಲೆಯಲ್ಲಿ ಒಂದು ಭೂಮಿಯುಳ್ಳವನಾಗಿದ್ದು ಹೆಂಡತಿ ಮತ್ತು ಮಕ್ಕಳೊಡನೆ ಸುಖಃ ಕಾಲಕ್ಷೇಪ ಮಾಡುತ್ತಿದ್ದನು. ನೆರೆಹೊರೆಯವರು ಇವನನ್ನು ಮಾನ್ಯ ಪುರುಷನೆಂದೇ ಭಾವಿಸಿದ್ದರು. ಆದರೆ ಈಗ ಹೊರಬಿದ್ದ ಗುಟ್ಟನ್ನು ನೋಡುವಾಗ ರಾಘು ನರರಾಕ್ಷಸನೆಂದೇ ವಿದಿತವಾಗುವುದು. ಕಳೆದ ೯ ವರ್ಷಗಳಿಂದ ಖೂನಿಮಾಡುವುದೇ ಅವನ ಮುಖ್ಯ ವೃತ್ತಿಯಾಗಿತ್ತು. ರಾಘು ಎಂಬವನು ದತ್ತೂರದ ಪ್ರಯೋಗವನ್ನು ಒಬ್ಬ ಸಾಧುವಿನಿಂದ ಕಲಿತುಕೊಂಡು ಅದರ ಜಾರಿಯನ್ನು ಮಾಡಲು ಅಲ್ಲಲ್ಲಿ ಕೂಡುವ ಸಂತೆಗಳಿಗೆ ಹೋಗಿ ಈ ದುರ್ವ್ಯಾಪ್ತಿಯನ್ನು ಮಾಡುತ್ತಿದ್ದನು. ಉಪ್ಪಿನಕಾಯಿ; ತೊಗರಿ ಇತ್ಯಾದಿಗಳಲ್ಲಿ ಈ ದತ್ತೂರವನ್ನು ಬೆರಸಿ ಕೊಡುವನು. ಮೊದಲಾಗಿ ರಾಘು ತನ್ನೊಡನೆ ಸಂತೆಗೆ ಬಂದಿದ್ದ ಗ್ರಾಮಸ್ಥರಿಬ್ಬರಿಗೆ ಇದನ್ನು ಕೊಟ್ಟನು. ಇವನ ದತ್ತೂರ ಪ್ರಯೋಗಿಸಿದ ಉಪ್ಪಿನಕಾಯಿ ತಿಂದ ಒಬ್ಬನು ಮೂರ್ಛಿತನಾದನು. ಚೆನ್ನಾಗಿ ತಿಂದ ಮತ್ತೊಬ್ಬನಿಗೆ ಹುಚ್ಚು ಹಿಡಿದಂತಾಗಿ ಓಡಿ ಹೋಗಿ ಭಾವಿಗೆ ಬಿದ್ದು ಸತ್ತನು. ಸತ್ತವನು ತಾನಾಗಿ ಬಿದ್ದನೆಂತ ರಾಘುವು ಅವನ ಸಂಬಂಧಿಕರಿಗೆ ಹೇಳಿದನು. ಸಂಬಂಧಿಕರಿಗೆ ರಾಘುವಿನ ಮೇಲೆ ಅನುಮಾನ ಹುಟ್ಟಿದರೂ ತಕ್ಕ ರುಜುವಾತು ಇಲ್ಲದ್ದರಿಂದ ಸುಮ್ಮಗಾದರು. ಅನಂತರ ರಾಘುವು ಪ್ರತಿವಾರ ಸಂತೆಗಳಿಗೆ ಹೋಗಿ ಅಲ್ಲಿ ಅಲ್ಲಿ ಗಾಡಿಗಳನ್ನು ೩೦-೪೦ ಮೈಲು ದೂರ ಹೋಗಲಿಕ್ಕೆ ಎಂತ ಬಾಡಿಗೆಗೆ ಮಾಡಿಕೊಂಡು ದಾರಿಯಲ್ಲಿ ಗಾಡಿಯವರಿಗೆ ಈ ದತ್ತೂರವನ್ನು ಪ್ರಯೋಗಿಸಿ ಅವರನ್ನು ಕೊಂದು ಕಾಡಿನಲ್ಲಾಗಲೀ ಭಾವಿಯಲ್ಲಾಗಲೀ ಹೆಣವನ್ನು ಬಿಸಾಡಿ ಅಲ್ಲಿಂದ ನೂರಾರು ಮೈಲುಗಳ ದೂರ ಹೋಗಿ ಗಾಡಿ ಎತ್ತುಗಳನ್ನು ಮಾರಿ ಹಣ ಸಂಪಾದಿಸುವನು. ಈ ರೀತಿಯಲ್ಲಿ ೩೦-೪೦ ಮಂದಿಯನ್ನು ಕೊಂದಿರುವನೆಂತ ತಿಳಿದು ಬಂದಿದೆ. ರಾಘುವು ಅಲ್ಲಲ್ಲಿ ಮಾರಿದ ಎತ್ತು ಗಾಡಿಗಳೂ ಈಗ ತಾನೇ ತಲಾಸಿ ಆಗಿರುವವು. ರಾಘುವಿನ ಒಳಬಿದ್ದ ಒಬ್ಬ ಗಾಡಿಗಾರನಾದರೂ ಈ ವರೆಗೆ ತಪ್ಪಿಸಿಕೊಳ್ಳದೆ ಇದ್ದುದರಿಂದ ಇವನ ಈ ದುಷ್ಕೃತ್ಯವು ಗುಪ್ತವಾಗಿಯೇ ಇತ್ತು. ಆದರೆ ಖೂನಿಗಳು ನಡಿಸಲ್ಪಡುತ್ತವೆಂಬ ವಾರ್ತೆಯು ಹರಡಿತ್ತು. ಇದು ದಕಾಯಿತರಿಂದಲೇ ಎಂಬದಾಗಿ ಪೋಲಿಸಿನವರು ಭಾವಿಸಿ ತಲಾಸಿಯಲ್ಲೇ ಇದ್ದು ಈಗ ರಾಘುವನ್ನು ಹಿಡಿದಿರುವರು.

* * *

ಲಾಹೋರಿನ ರೋಮನ್ ಕಥೊಲಿಕ್ ಸೇಕ್ರೇಡ್ ಹಾರ್ಟ್ ಕನ್‌ವೆಂಟ್ ಸ್ಕೂಲು ಎಂಬ ಹುಡಿಗಿಯರ ಶಾಲೆಗೆ ಹೋಗುತ್ತಿದ್ದ ಕೆಲವು ಹಿಂದೂ ಮತ್ತು ಬ್ರಹ್ಮ ಸಮಾಜದ ಬಾಲಿಕೆಯರು ಅಲ್ಲಿಯ ನನ್ಸ್‌ಗಳ ಜೀವನಕ್ಕೆ ಮರುಳಾಗಿ ರೋಮನ್ ಕಥೋಲಿಕ ಮತವನ್ನವಲಂಬಿಸಿದರೆಂಬ ವಾರ್ತೆಯು ಹಬ್ಬಿದ್ದರಿಂದ ಲಾಹೋರಿನ ಹಿಂದೂಗಳಲ್ಲಿ ಬಹಳ ಚಳವಳಕ್ಕೆ ಕಾರಣವಾಗಿದೆ. ಮತಾಂತರಗೊಂಡ ಕೆಲವು ಹುಡುಗಿಯರು ಅಲ್ಲಿಯ ಮಾನ್ಯ ಕುಟುಂಬದವರೆಂಬ ವಾರ್ತೆ ಇದೆ. ಹುಡುಗಿಯರನ್ನು ಮತಾಂತರಗೊಳಿಸಲು ತಮ್ಮಿಂದ ಪ್ರೇರೇಪಣೆಯು ನಡಿಯಲಿಲ್ಲವೆಂದು ನನ್ಸರ ವಾದವಾಗಿದೆ. 'ಟ್ರಿಬ್ಯೂನ್' ಎಂಬ ಪತ್ರಿಕೆಯಲ್ಲಿ ಸರಳದೇವಿ ಚೌದುರಾಣಿ ಎಂಬ ಭಾರತೀಯ ಮಹಿಳೆಯು ಈ ವಿಷಯ ಬರದ ಲೇಖನದಲ್ಲಿ ಈ ಹುಡುಗಿಯರು ಮತಾಂತರಗೊಂಡದ್ದರ ತಪ್ಪನ್ನು ಹೆತ್ತವರ ಮೇಲೆಯೇ ಹೊರಿಸಿರುವಳು. ತಮ್ಮ ಸ್ವಮತದ ಸಂಬಂಧವಾದ ತಕ್ಕ ಜ್ಞಾನವನ್ನೂ ಆಲೋಚನೆಯನ್ನೂ ಹೆತ್ತವರು ತಮ್ಮ ಮಕ್ಕಳಲ್ಲಿ ಹುಟ್ಟಿಸದೆ ಇದ್ದುದೇ ಅವರು ಕ್ರೈಸ್ತ ಮತವನ್ನು ಅವಲಂಬಿಸುವ ಹಾಗಾಯಿತೆಂಬದೇ ಸರಳದೇವಿಯರ ವಾದವಾಗಿರುವುದು.

* * *

ಅಲ್ಲಹಾಬಾದಿನ ಫಟಾಗ್ರ ಸೆಶ್ಯನ್ಸ್ ಜಡ್ಜ ಕೋರ್ಟಿನಲ್ಲಿ ಈಗ ತಾನೇ ಒಂದು ಅಪೂರ್ವ ಕೊಲೆ ಮೊಕದಮೆಯು ತನಖಿಯಾಗುತ್ತಿರುವುದು. ಸುಮಾರು ೨೧ ವರ್ಷ ವಯಸ್ಸಿನ ಫಟಾಗ್ರಾ ಸ್ಟೇಶನಿನ ಟಿಕೆಟ್ ಕಲೆಕ್ಟರ್ ಹೆಮ್ಮರ್ ಎಂಬವನು ಮೊದಲನೇ ಅಪರಾಧಿ, ೨ನೇ ಅಪರಾಧಿ ಅದೇ ಸ್ಥಳದ ರೈಲ್ವೆ ಆಫೀಸಿನಲ್ಲಿ ಫಿಟ್ಟರನಾದ ಜೇಮ್ಸ್ ಕ್ರಿಸ್ಟಿ ಎಂಬವನು. ಧರಮ್‌ದಾಸ್ ದಾನಿಯೇಲ್ಸ್ ಎಂಬವನ ಮಗಳು ಸಾರ ಎಂಬಾಕೆಯನ್ನು ಮೊದಲನೇ ಅಪರಾಧಿ ಹೆಮ್ಮರನು ೧೯೧೩ನೇ ಇಸವಿ ಮೇ ತಿಂಗಳ ತಾ. ೨೬ರಲ್ಲು ವಿವಾಹ ಮಾಡಿಕೊಂಡನು. ಆದರೆ ದಂಪತಿಗಳೊಳಗೆ ಗೃಹಸ್ಥಾಶ್ರಮವು ಸಂತೋಷಕರವಾಗಿ ಪರಿಣಮಿಸದ್ದರಿಂದ ಹೆಮ್ಮರನ ಹೆಂಡತಿಯು ತಂದೆಯ ಮನೆಗೆ ಹೋಗಿ ವಾಸ ಮಾಡಿದಳು. ೧೯೧೩ನೇ ಇಸವಿ ದಶಂಬರ ತಿಂಗಳ ತಾ. ೧೯ರಲ್ಲು ಹೆಮ್ಮರನು ಹೆಂಡತಿಯ ತಂದೆಯ ಮನೆಗೆ ಬಂದು ಹೆಂಡತಿಯನ್ನು ಕರಕೊಂಡು ಹೋದನು. ಮರುದಿನ ಹುಡುಗಿಯು ಕಾಣೆಯಾದಳೆಂದು ಪೋಲಿಸಿಗೆ ವರದಿ ಮಾಡಿದನು. ಹುಡುಗಿಯ ತಂದೆಗೆ ಈ ವಾರ್ತೆಯು ತಲಪುತ್ತಲೇ ಅವನು ಬಂದು ಅಳಿಯನನ್ನು ವಿಚಾರಿಸಲು ಹೆಂಡತಿಯನ್ನು ತನ್ನ ತಂದೆಯ ಮನೆಗೆ ಕಳುಹಿಸಿ ಕೊಟ್ಟಿದ್ದೇನೆಂದು ಹೇಳಿದನು. ಹುಡುಗಿಯ ತಂದೆಯು ಹೆಮ್ಮರನ ತಂದೆಯ ಮನೆಗೆ ಹೋಗಿ ವಿಚಾರಿಸಲು ಅವಳು ಬರಲೇ ಇಲ್ಲವೆಂಬ ಉತ್ತರವು ದೊರಕಿತು. ಪೋಲಿಸಿನವರಿಗೆ ಈ ವಿಷಯ ವರದಿ ಮಾಡಿದ್ದಲ್ಲಿ ಅವರು ಅನುಮಾನದ ಮೇಲೆ ಹೆಮ್ಮರನ ಸಂಬಂಧಿಕನೊಬ್ಬನನ್ನು ಹಿಡಿದು ವಿಚಾರಿಸಲು ಹೆಮ್ಮರನೂ ಕ್ರಿಸ್ಟಿಯೂ ತಾನೂ ಕೂಡಿ ಅವಳನ್ನು ಕೊಂದು ಗಂಗಾನದಿಗೆ ಬಿಸಾಡಿರುವೆವೆಂಬದಾಗಿ ಸತ್ಯವನ್ನು ಅರಿಕೆ ಮಾಡಿದನು. ಕೂಡ್ಲೇ ಪೋಲಿಸಿನವರು ಹೋಗಿ ನದಿಯಲ್ಲಿ ನೋಡಲು ಹುಡುಗಿಯ ಶವವು ದೊರಕಿತು. ಮೊಕದಮೆಯು ವಿಚಾರಣೆಯಾಗುತ್ತಿದೆ.

* * *

ಮುಂಬಾಯಿಯ ಕೊಲೋಬದಲ್ಲಿ ಪುನಃ ತಾ. ೧೮ರಲ್ಲು ಹತ್ತಿ ಮೂಟೆಗಳಿಗೆ ಬೆಂಕಿ ಬಿತ್ತು. ಆದರೆ ಬೆಂಕಿ ಆರಿಸುವ ಯಂತ್ರದಿಂದ ಕೂಡ್ಲೇ ಆರಿಸಿದ್ದರಿಂದ ೪೦೦ ರೂಪಾಯಿಗಳ ನಷ್ಟ ಮಾತ್ರವಾಗಿರುವುದು.

* * *

ಕಲ್ಕತ್ತಾ ಪಟ್ಟದಲ್ಲಿ ದೇಶೀಯ ದೊಡ್ಡ ಮನುಷ್ಯರು ಒಂದು ಸ್ವದೇಶಿ ಜಹಜಿನ ಕಂಪೆನಿಯನ್ನು ಪ್ರಾರಂಭಿಸುವವರಾಗಿದ್ದಾರೆ. ಈ ಕಂಪೆನಿಯ ಕೆಲಸವನ್ನೆಲ್ಲಾ ನಿಪುಣನಾದ ಒಬ್ಬ ಜಾಪಾನ್ ಕಾರೇಗಾರನಿಂದ ಮಾಡಿಸುವರು. ಜಹಜುಗಳು ಅಲ್ಲಿಂದ ಮದರಾಸಿಗೂ ರಂಗೂನಿಗೂ ಹೋಗಿ ಬರುತ್ತವೆ.

* * *

ವಾಯವ್ಯ ಸರಹದ್ದಿನಲ್ಲಿ ಒಬ್ಬ ಸಿಂಧಿಯು ರೈಲ್ವೇ ಗಾಡಿಯಿಂದ ೧೩ ಚೀಲಗಳ ಗೋಧಿ ಕದ್ದದಕ್ಕಾಗಿ ಮೇಜಿಸ್ಟ್ರೇಟರು ಅವನಿಗೆ ೬ ತಿಂಗಳ ಕಠಿಣ ಸಜಾ ವಿಧಿಸಿದರು. ಆ ಸಿಂಧಿಯು ತಾನು ೨೦ ವರ್ಷ ಪ್ರಾಯದವನೆಂದೂ ಇದುವರೆಗೆ ಕಳವುಗಳೇನೂ ಮಾಡಿದವನಲ್ಲವೆಂದೂ ಅಪೀಲ್ ಮಾಡಿಕೊಂಡನು. ಕರಾಚಿಯ ಜಡ್ಜಿಗಳು ಇಂಥಾ ರೈಲ್ವೇ ಗಾಡಿಯಲ್ಲಿ ನಡೆಯುವ ಕಳುವನ್ನು ನಿಲ್ಲಿಸಬೇಕೆಂದು ಹೇಳಿ ೬ ತಿಂಗಳ ಸಜವನ್ನು ೧೮ ತಿಂಗಳಿಗೆ ಜಾಸ್ತಿ ಮಾಡಿದರು.

* * *

ಪಂಜಾಬು ಆಧಿಪತ್ಯಕ್ಕೆ ಸೇರಿದ ಲಾಹೋರ್ ಪಟ್ಣದಲ್ಲಿ ವಿದ್ಯಾಶಾಲೆಗಳ ಅಧಿಕಾರಿಗಳೆಲ್ಲಾ ಸೇರಿ ಆ ಪ್ರಾಂತ್ಯದೊಳಗೆ ವಿದ್ಯಾರ್ಥಿಗಳಲ್ಲಿ ಅರಾಜಕ ಮತವು ಹಬ್ಬುತ್ತಿರುವುದನ್ನು ಅಣಗಿಸುವುದಕ್ಕೆ ಏನು ಮಾಡಬೇಕೆಂದು ಆಲೋಚನೆ ನಡಿಸಿದರು.

* * *

ಕರ್ಪೂರ ದ್ರಾವಕವು ಹಿಂದೂಸ್ಥಾನಕ್ಕೆ ಹೊರಗಿನಿಂದ ಬಹಳವಾಗಿ ಬರುತ್ತಿದೆ. ಇದನ್ನು ನಮ್ಮ ದೇಶದಲ್ಲಿ

ಕಾರ್ಖಾನೆಗಳನ್ನಿಟ್ಟು ತಯಾರು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಕೆಲವು ಕಾರೇಗಾರರು ಕಳೆದ ವಾರ ಡೀರಾಡೂನ್ ಪಟ್ಣದಲ್ಲಿ ಸೇರಿ ಆಲೋಚನೆ ಮಾಡಿದ್ದಾರೆ. ಲಾಹೋರು ಮತ್ತು ಭಾವಲಿ ಎಂಬ ಪಟ್ಟಣಗಳಲ್ಲಿ ಎರಡು ಕಾರ್ಖಾನೆಗಳನ್ನು ಇಡಲು ಆಲೋಚನೆ ಆಗಿಯದೆ. ಇದಕ್ಕಾಗಿ ಶೀಮೆಯಿಂದ ಭಾರಿ ಯಂತ್ರಗಳು ತರಿಸಲ್ಪಡುವವು.

* * *

ದಕ್ಷಿಣ ಆಫ್ರೀಕದ ಭಾರತೀಯ ವಿಚಾರಕ ಸಂಘದವರು ಮಾಡಿರುವ ತೀರ್ಮಾನದ ಮುಖ್ಯ ವಿಷಯಗಳು:- ದಕ್ಷಿಣ ಆಫ್ರೀಕದಲ್ಲಿ ಮೂರು ವರ್ಷಗಳ ಕಾಲ ವಾಸ ಮಾಡಿಕೊಂಡಿದ್ದ ದೇಶೀಯರು ಎಂದರೆ ಈಗಾಗಲೀ ಅಥವಾ ಪೂರ್ವ ಕಾಲದಲ್ಲಿ ಆಗಲೀ ದಕ್ಷಿಣ ಆಫ್ರೀಕದಲ್ಲಿ ಒಬ್ಬಳಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವಂಥವರು ಅಂಥಾ ಪತ್ನಿಯರ ಹೆಸರುಗಳನ್ನೆಲ್ಲಾ ರಿಜಿಸ್ಟರ್ ಮಾಡಿಸುವುದಲ್ಲದೆ ಅವರು ಭರತಖಂಡದಿಂದ ತಮ್ಮ ಮಕ್ಕಳುಮರಿಗಳನ್ನು ಕರೆದುಕೊಂಡು ದಕ್ಷಿಣ ಆಫ್ರೀಕಕ್ಕೆ ಹೋಗುವುದಕ್ಕೆ ಅವಕಾಶವಾಗಬೇಕು.

ಅವರವರ ಮತ ಧರ್ಮಾನುಸಾರವಾಗಿ ಮದುವೆಯಾಗುವುದಕ್ಕೆ ಕೇಪ್ ಕಾಲನಿಯ ೧೮೬೦ನೇ ವರ್ಷದ ೧೬ನೇ ನಂಬ್ರ ಆಕ್ಟನುಸರಿಸಿ ಪುರೋಹಿತರನ್ನು ನಿಯಮಿಸಿಕೊಳ್ಳುವುದಕ್ಕಾಗಿ ಒಂದು ಶಾಸನವು ಏರ್ಪಾಡಾಗಬೇಕು.

ಒಬ್ಬ ಮನುಷ್ಯನು ಅನೇಕ ಮಂದಿ ಪತ್ನಿಯರನ್ನು ಮಾಡಿಕೊಳ್ಳುವ ಆಚಾರವನ್ನು ಹೊಂದಿದ್ದರೂ ಸದ್ಯ ಒಬ್ಬಳೇ ಪತ್ನಿಯೊಡನೆ ವಾಸಮಾಡುತ್ತಿರುವಾಗ ಅಂತಹ ಮದುವೆಯು ಅವರವರ ಮತ ಪದ್ಧತಿ ಪ್ರಕಾರ ಜರುಗಿದ್ದರೂ ಅದು ಸಲ್ಲತಕ್ಕುದೇ ಎಂದು ರಿಜಿಸ್ಟರ್ ಮಾಡಲು ಶಾಸನವಾಗಬೇಕು.

ನೇಟಾಲ್ ದೇಶದಲ್ಲಿ ೧೮೯೫ನೇ ವರ್ಷದ ೧೭ನೇ ನಂಬ್ರ ಆಕ್ಟಿನ ೬ನೇ ಪ್ರಕರಣದ ಪ್ರಕಾರ ಕೆಲವು ದೇಶೀಯರು ಅಲ್ಲಿ ವಾಸಮಾಡಬೇಕಾಗಿದ್ದರೆ ವರ್ಷಕ್ಕೆ ೪೫ ರೂಪಾಯಿ ತಲೆಗಂದಾಯವನ್ನು ತೆತ್ತು ಅಪ್ಪಣೆ ಚೀಟನ್ನು ಪಡೆಯಬೇಕೆಂದಿರುವ ನಿರ್ಬಂಧವನ್ನು ತಪ್ಪಿಸಿ ಬಿಡಬೇಕು.

೧೯೧೩ನೇ ವರ್ಷದ ಇಮಿಗ್ರೇಷನ್ ಶಾಸನವನ್ನನುಸರಿಸಿ ಕೈ ಗುರ್ತಿನ ಅಪ್ಪಣೆ ಚೀಟಿಯನ್ನು ಕೊಡಬೇಕೆಂದಿರುವ ಏರ್ಪಾಡಿನ ವಿಷಯದಲ್ಲಿ ಸುಧಾರಣೆ ಮಾಡಬೇಕು. ಈ ಸರ್ಟಿಫಿಕೇಟುಗಳು ಮೂರು ವರ್ಷ ಕಾಲ ಮಾತ್ರ ವ್ಯವಹಾರದಲ್ಲಿರಬೇಕು.

ಕೇಪ್ ಟೌನಿನ ಇಮಿಗ್ರೇಷನ್ ಶಾಖಾ ಕಾರ್ಯಾಲಯದಲ್ಲಿ ಒಬ್ಬ ದ್ವಿಭಾಷಿಯು ನೇಮಿಸಲ್ಪಡಬೇಕು.

ಭಾರತೀಯರಿಂದ ಹೆಬ್ಬೆಟ್ಟಿನ ಬದಲಿಗೆ ೧೦ ಬೆರಳುಗಳಿಂದಲೂ ಒತ್ತಿಸಿಕೊಳ್ಳುವ ಪದ್ಧತಿಯನ್ನು ತಪ್ಪಿಸಬೇಕು.

ಗುರುತಿನ ಅಪ್ಪಣೆ ಚೀಟಿಕೊಡುವುದಕ್ಕೂ ತತ್ಕಾಲಿಕ ರಶೀದಿಯನ್ನು ಕೊಡುವುದಕ್ಕೂ ಇರುವ ೧೩ ರೂಪಾಯಿಯನ್ನು ತಗ್ಗಿಸಬೇಕು. ದೀರ್ಘ ಕಾಲಕ್ಕೆ ಅಪ್ಪಣೆ ಬೇಕಾಗಿದ್ದರೆ ಆ ಫೀಸು ಹೆಚ್ಚಾಗಿರಬಹುದು.

ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗಬೇಕಾಗಿದ್ದಾಗ ಅವನು ಹೋಗತಕ್ಕ ಊರಿನಲ್ಲಿರುವ ಎಮಿಗ್ರೇಷನ್ ಅಧಿಕಾರಿಗಳಿಗೆ ತಂತೀ ವಾರ್ತೆಯನ್ನು ಕಳುಹಿಸಬೇಕಾದ ಪದ್ಧತಿಯನ್ನು ತೆಗೆದುಹಾಕಬೇಕು.

ನೇಟಲಿನಲ್ಲಿ ವಾಸಮಾಡುವುದಕ್ಕೆ ಎಮಿಗ್ರೇಷನ್ ಅಧಿಕಾರಿಗಳು ಅಪ್ಪಣೆ ಚೀಟಿಯನ್ನು ಕೊಟ್ಟ ಬಳಿಕ ಆ ಚೀಟಿಯ ಯಜಮಾನನ ಹೆಬ್ಬೆಟ್ಟಿನ ಗುರುತು ಹಾಕಿರುವಾಗಲೂ ಯೂನ್ಯನ್ ಪ್ರಭುತ್ವದ ಪ್ರದೇಶದಲ್ಲಿ ಪ್ರವೇಶಿಸುವುದಕ್ಕೆ ದೇಶೀಯರಿಗೆ ಸಂಪೂರ್ಣ ಅಧಿಕಾರವಿರುವಂತೆ ಭಾವಿಸಲ್ಪಡಬೇಕು.

ಭರತ ಖಂಡದಿಂದ ದಕ್ಷಿಣ ಆಫ್ರೀಕದಲ್ಲಿರುವ ತಮ್ಮ ಪತಿಯರ ಬಳಿಗೆ ಮಕ್ಕಳುಗಳ ಸಮೇತ ಹೋಗುವ ಸ್ತ್ರೀಯರ ಕುರಿತು ವಿಚಾರಮಾಡುವುದಕ್ಕಾಗಿ ಭರತಖಂಡದ ಸರಕಾರದೊಡನೆ ಏರ್ಪಾಡು ಮಾಡಬೇಕು ಎಂಬಿತ್ಯಾದಿ ಸಿಫಾರಸುಗಳನ್ನು ಮಾಡಿರುವರು.

* * *

ಕಳೆದ ಆದಿತ್ಯವಾರ ಕಲ್ಕತ್ತೆಗೆ ಸೇರಿದ ಭವಾನಿಪುರದಲ್ಲಿ ಪುನಃ ವರದಕ್ಷಿಣೆಯ ಸಂಬಂಧವಾದ ಒಂದು ಆತ್ಮಹತ್ಯವು ನಡೆಯಿತು. ಮದುವೆಯ ಸಂಬಂಧ ಕೆಲವು ಕಾಲದಿಂದ ಪೇಚಾಟಪಡುತ್ತಿದ್ದ ಒಬ್ಬ ಮಾನ್ಯ ಬ್ರಾಹ್ಮಣ ಗೃಹಸ್ಥರ ದೇವಿ ಎಂಬ ಮಗಳು ಆದಿತ್ಯವಾರ ಬೆಳಿಗ್ಯೆ ವಸ್ತ್ರಕ್ಕೆ ಶೀಮೆ ಎಣ್ಣೆ ಹೊಯ್ದು ಬೆಂಕಿ ಕೊಟ್ಟು ಸ್ವಘಾತ ಮಾಡಿಕೊಂಡಳು. ನೆರೆಹೊರೆಯ ಜನರು ಮನೆಗೆ ಬೆಂಕಿ ಬಿತ್ತೆಂದು ಅರಿತು ಬೆಂಕಿ ಆರಿಸುವ ಇಂಜಿನು ಇತ್ಯಾದಿಗಳನ್ನು ತರಿಸಿ ನೋಡಲು ಮನೆಗೆ ಬೆಂಕಿ ಹತ್ತಿರಲಿಲ್ಲ. ಮಾಳಿಗೆಯಿಂದ ಹೊಗೆ ಬರುವುದನ್ನು ನೋಡಿ ಮಾಳಿಗೆಯ ಬಾಗಲು ಒಡೆಯಲು ದೇವಿಯು ಬೆಂಕಿಯ ಮಧ್ಯದಲ್ಲಿ ಉರಿಯುತ್ತಿದ್ದಳು. ಬೆಂಕಿ ಆರಿಸುವ ಯುಂತ್ರದ ಹುದ್ದೆದಾರರು ಕೂಡಲೇ ಬೆಂಕಿ ಆರಿಸಿದರು. ಆದರೆ ಹುಡುಗಿಯು ಸಾಯಂಕಾಲದೊಳಗೆ ಮೃತಪಟ್ಟಳು.

* * *

ದಕ್ಷಿಣ ಹಿಂದೂಸ್ಥಾನ.

ವಿಜಯನಗರದ ೯ನೇ ಡಿಸ್ಟ್ರಿಕ್ಟ್ ಕನ್ಫರೆನ್ಸ್ ಸಭೆಯು ತಾ. ೧೮-೧೯ರಲ್ಲು ಭೂಪತ್ರಿರಾಜು ವೆಂಕಟಪತಿ ರಾಜು ಬಿ. ಎ. ಬಿ. ಎಲ್‌ರವರ ಅಧ್ಯಕ್ಷತೆಯಲ್ಲಿ ಕೂಡಿ ಬರುವುದು. ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸಭೆಯು ತಾ. ೧೬ರಲ್ಲು ಮೆ| ಎ. ಪಿ. ಪತ್ರೂರವರ ಅಧ್ಯಕ್ಷತೆಯಲ್ಲಿ ಜರಗುವುದು. ೬ನೇ ಡಿಸ್ಟ್ರಿಕ್ಟ್ ಸಾಮಾಜಿಕ ಸುಧಾರಣಾ ಸಭೆಯು ತಾ. ೧೭ರಲ್ಲು ಮೆ| ಆಟಿಅಪ್ಪಾಡು ಪಂತ್ಲುಗಾರುರವರ ಅಧ್ಯಕ್ಷತೆಯಲ್ಲಿ ಜರಗುವುದು.

* * *

ಮದರಾಸ್ ಪಟ್ಣದಲ್ಲಿ ಸಣ್ಣ ಹುಡುಗರು ಬೀಡಿ, ಸಿಗರೇಟ್‌ಗಳನ್ನು ಸೇದುವದು ಹೆಚ್ಚುತ್ತಾ ಬಂದಿರುವುದನ್ನು ಕಂಡು ಈ ದುರಾಭ್ಯಾಸವನ್ನು ತಪ್ಪಿಸುವುದಕ್ಕಾಗಿ ಒಂದು ಕಾನೂನು ಮಾಡಿ ಜಾರಿಗೆ ತರಬೇಕೆಂದು ಅಲ್ಲಿನ ಮುತ್ಯಾಲ ಪೇಟೆಯ ಮುಸಲ್ಮಾನ್ ಅಂಜುಮಾನ ಸಂಘದವರು ಮದರಾಸ್ ಗವರ್ನಮೆಂಟಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿರುತ್ತಾರೆ.

* * *

ತಿರುವಂಕೋಡಿನ ಚೀಫ್ ಜಸ್ಟಿಸರಾಗಿರುವ ಮೆ| ಕೃಷ್ಣನ್‌ನಾಯರ್ ಬಿ. ಎ. ಬಿ. ಎಲ್ ರವರು ತಿರುವಂಕೋಡಿನ ದಿವಾನರಾಗಿ ನೇಮಿಸಲ್ಪಟ್ಟಿರುವರು.

* * *

ತಂಜಾವೂರಿನಲ್ಲಿ ಒಬ್ಬ ಮುಹಮ್ಮದೀಯನು ಪ್ಲೇಗ್ ಬೇನೆ ತಗಲಿ ಕಾಲವಾದನು. ಅದು ಅಂಟು ಜಾಡ್ಯವೆಂದೂ ಆ ಶವವನ್ನು ಸುಡುವುದು ಕ್ಷೇಮಕರವೆಂದೂ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸೆನಿಟರಿ ಆಫೀಸರರು ಹೇಳಿದರ ಮೇಲೆ ಮ್ಯುನಿಸಿಪಾಲಿಟಿಯವರು ಆ ಮಹಮ್ಮದೀಯನ ಶವವನ್ನು ಅವನ ಸಹೋದರನ ಸಮ್ಮತಿ ಪಡೆದು ಸುಟ್ಟುಬಿಟ್ಟರು. ಅದರ ಮೇಲೆ ಅಲ್ಲಿನ ಮಹಮ್ಮದೀಯರು ತಮ್ಮ ಮತ ಪದ್ಧತಿಗೆ ಶವವನ್ನು ಸುಟ್ಟದ್ದು ವಿರೋಧವಾಯಿತೆಂದು ಗಲಭೆ ಮಾಡಿದರು. ಈ ವಿಚಾರವು ಮದರಾಸ್ ನ್ಯಾಯವಿಧಾಯಕ ಸಭೆಯ ಮುಂದೆಯೂ ತರಲ್ಪಟ್ಟಿತು. ಅದರ ಮೇಲೆ ಸರಕಾರದವರು ತನಖಿಮಾಡಿ ಶವವನ್ನು ಸುಡಬೇಕಾದ ಅಗತ್ಯವಿರಲಿಲ್ಲವೆಂದು ಇನ್ನು ಮುಂದೆ ಇಂಥ ಸಂದರ್ಭಗಳಲ್ಲಿ ಸ್ಥಳಾಧಿಕಾರಿಗಳು ಪ್ರಜೆಗಳ ಮತಾಚಾರಕ್ಕೆ ವಿರೋಧವಾಗುವಂಥಾ ಕಾರ್ಯಗಳನ್ನು ನಡಿಸದಂತೆ ನೋಡಿಕೊಳ್ಳಬೇಕೆಂದೂ ಅಪ್ಪಣೆ ಮಾಡಿರುವರು.

* * *

ಇದೇ ತಿಂಗಳ ತಾ. ೧೮ರಲ್ಲು ಮದ್ರಾಸ್ ಗವರ್ನರ ಪ್ರಭುಗಳವರು ನ್ಯಾಯವಿಧಾಯಕ ಸಭೆಯ ಮೆಂಬರರಿಗೆ ಒಂದು ಗಾರ್ಡನ್ ಪಾರ್ಟಿ ಎಂಬ ವನಭೋಜನ ಸತ್ಕಾರವನ್ನು ಕೊಡುವರು.

* * *

ದಕ್ಷಿಣ ಕನ್ನಡ.

* * *

NOTICE.

I issued a circular that I am repairing motors, cycles etc. a few days ago without the consent of Khan Sahib Haji Abdullah Haji Kasim Sahib Bahadur under whom I am a chauffer. I gave my address as M. Govindan C/o Messers. A. R. Kamath & Sons without the consent of Messers. A. R. Kamath & Sons also. I wish to withdraw that circular.

M. Govindan.

* * *

ಉಪ್ಪಿನಂಗಡಿ:—ಇಲ್ಲಿಂದ ಸುಮಾರು ೧೮ ಮೈಲು ದೂರವಿರುವ ಹತ್ಯಡ್ಕ ಎಂಬ ಗ್ರಾಮದಲ್ಲಿರುವ ಪಡ್ಡಾಯಬೆಟ್ಟು ಗಣಪತಿ ಭಟ್ಟರ ಮನೆಗೆ ಬೆಂಕಿ ತಾಗಿ ಸುಮಾರು ೨೦೦೦ ರೂಪಾಯಿಯ ನಷ್ಟವಾಗಿರುತ್ತದೆಂಬದನ್ನು ತಿಳಿಸಲು ವಿಷಾದಿಸುತ್ತೇವೆ.

ಕಳೆದ ತಿಂಗಳ ತಾ. ೩೧ಕ್ಕೆ ಚೆನ್ನಾಗಿ ಮಳೆಯು ಸುರಿಯಿತು. ತಾ. ೧ಕ್ಕೆ ಗಾಳಿಮಳೆ ಸಹಾ ಬಿತ್ತು. ಬೀಸಿದ ಗಾಳಿಯಿಂದ ಬಡವರ ಮನೆಯ ಮಾಡಿನ ಮುಳಿಹುಲ್ಲು ದಿಕ್ಕಾಪಾಲಾಗಿ ಬಿದ್ದು ಹೋಗಿಯದೆ, ಮತ್ತು ಕೆಲವು ಕಡೆಯಲ್ಲಿ ಮರಗಳು ಗಾಳಿಯಿಂದ ಬೇರು ಸಹಿತ ಕಿತ್ತು ಮಲಗಿಕೊಂಡಿವೆ, ಅಂಥಾ ಬಿರುಗಾಳಿ ಬಂದಿರುತ್ತದೆ. ತಾ. ೨ಕ್ಕೆ ರಾತ್ರಿ ಹಿಡಿದ ಮಳೆಯು ಬೆಳಿಗ್ಯೆ ವರೆಗೆ ಇತ್ತು. ಆದರೆ ಹೊಳೆಯಲ್ಲಿ ನೀರು ಚಡಿತವಾದದ್ದು ಕಂಡುಬರುವುದಿಲ್ಲ, ಬಾವಿಯಲ್ಲಿ ನೀರಿಲ್ಲದೆ ಹೊಳೆಯಿಂದ ನೀರು ತರಬೇಕಾಗಿದೆ.

* * *

ಪುತ್ತೂರು. ಡಿವಿಜನ್ ಆಫೀಸರರ ಸರ್ಕೀಟು:- ಮೇ ತಾ. ೧೪ ಪುತ್ತೂರು ಉಪ್ಪಿನಂಗಡಿ; ತಾ. ೧೫—೧೬ ಉಪ್ಪಿನಂಗಡಿ ತಾ. ೧೭—೨೧ ಬೆಳ್ತಂಗಡಿ ತಾ. ೨೨—೨೩.

ಪುತ್ತೂರು; ತಾ. ೨೪—೨೫, ಮಂಗಳೂರು; ತಾ. ೨೬ ಪುತ್ತೂರು; ೨೭ರಿಂದ ೩೦ ಕಾಸರಗೋಡು.

ಹೆಡ್ ಕನಿಸ್ಟೇಬಲ ರಾ। ನಾರ್ಣಪ್ಪಯ್ಯನವರನ್ನು ಹೊಡೆದು ಹಿಂಸೆ ಪಡಿಸಿದ ವ ವಕೀಲ ಕೃಷ್ಣಯ್ಯ ಎಂಬವರನ್ನು ಕೊಂದ ಜೇಡರ ಕೃಷ್ಣ ಎಂಬವನ ಮೇಲೆ ಇದ್ದ ಮೊಕದಮೆಯು ಇಲ್ಲಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ತನಖೆಗೆ ಆರಂಭಿಸಿ ತಾ. ೧೮ಕ್ಕೆ ಇಟ್ಟಿರುವರು.

ಎಪ್ರಿಲ್ ತಾ. ೩೦ ಮತ್ತು ಮೇ ತಾ. ೧ರಲ್ಲು ಇಲ್ಲಿ ಭಾರೀ ಬಿರುಗಾಳಿ ಮಳೆ ಬಂದು ಅನೇಕ ಜನರಿಗೆ ಭಾರೀ ನಷ್ಟವನ್ನು ಉಂಟುಮಾಡಿತು.

ಕೊರೆನೇಶನ್ ಕಂಪೆನಿಯ ಜಡ್ಕ ಬಂಡಿಯಲ್ಲಿ ಲೈಸನ್ಸ್ ಶರ್ತಕ್ಕೆ ವಿರೋಧವಾಗಿ ಎಂಟು ಜನರಿಗಿಂತ ಹೆಚ್ಚು ಜನರಿಗೆ ಕುಳ್ಳಿರಿಸಿದ ಕುರಿತು ಇಲ್ಲಿಯ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತನಖಿ ನಡಿಯುತ್ತಿದ್ದ ಮೊಕದಮೆಯಲ್ಲಿ ಡ್ರಾಯಿವರ್ ಮತ್ತು ಏಜಂಟರಿಗೆ ರೂಪಾಯಿ ೫೦ರಂತೆ ಜುರುಮಾನೆ ವಿಧಿಸಲ್ಪಟ್ಟಿರುವದು.

ಕಾಣ್ಯಾರು ಗ್ರಾಮದ ಮಠದ ಯಾದವೇಂದ್ರ ಆಚಾರ್ಯ, ರಾಘವೇಂದ್ರ ಉಪಾಧ್ಯಾಯ, ನಾರಾಯಣ ಭಟ್ಟ, ವೆಂಕಟರಮಣ ಭಟ್ಟ, ನಾರ್ಣಪ್ಪ ಭಟ್ಟ, ರಾಮಣ್ಣ ಕೃಷ್ಣ ಗೌಡ, ಚನಿಯ ಗೌಡ, ಪೋಕರೆ ಬ್ಯಾರಿ ಕೂಡಾ ತಮ್ಮನ್ನು ಅಕ್ರಮ ಕೈದು ಮಾಡಿ ಬಲತ್ಕಾರದಿಂದ ದಸ್ತೈವೇಜು ಬರಿಸಿಕೊಂಡರೆಂಬದಾಗಿ ಮಹಾ ಲಕ್ಷ್ಮಿ ಅಮ್ಮ, ಪದ್ಮಾವತಿ ಅಮ್ಮ ಕೂಡಾ ಬೆಳ್ಳಾರೆ ಸ್ಟೇಶನಿನಲ್ಲಿ ಕೊಟ್ಟ ಫಿರ್ಯಾದಿ ಇಲ್ಲಿಯ ಮೇಜಿಸ್ಟೇಟ ಕೋರ್ಟಿನಲ್ಲಿ ತನಖಿ ನಡದು ಮುದ್ದೈಯಾಲೆರನ್ನು ಖುಲಾಸುಪಡಿಸಿರುವರು.

WANTED.

An experienced Book keeper.
Apply to x
C/o this paper.

ಬೇಕಾಗಿದೆ!

ಯಾಲಕ್ಕಿ ಕೃಷಿ ಅನುಭವವುಳ್ಳ ಮತ್ತು ಲೆಖ್ಖ ಪತ್ರಗಳನ್ನು ಕ್ರಮವಾಗಿ ಇರಗೊಡಿಸುವ ಮಾಹೀತಿಯುಳ್ಳ ನಂಬಿಗಸ್ತ ರೈಟರು ಬೇಕಾಗಿದೆ. ಸಂಬಳ ವಗೈರೆ ಮಾಹೀತಿ ಬಗ್ಯೆ ಮೊಕ್ತಾ ವ ಕಾಗದ ಪತ್ರ ನಡಿಸಿ ತಿಳಿದುಕೊಳ್ಳ ಬಹುದು.

ಬಿ. ಆರ್. ಶೇಶಪ್ಪ ರೈ.
ಕಾಫಿ ಪ್ಲಾಂಟರ್,
ಭಾಗಮಂಡಲ ಪೋಸ್ಟು,
ಕೊಡಗುಜಿಲ್ಲೆ.

ಮಂಗಳೂರು.

ದಕ್ಷಿಣ ಕನ್ನಡಾ ಜಿಲ್ಲಾ ಸೆಂಟ್ರಲ್ ಕೊವೊಪರೇಟಿವ್ ಬೇಂಕಿನ ಜನರಲ್ ಮಿೂಟಿಂಗ್ ಇದೇ ತಿಂಗಳ ತಾರೀಕು ೧೮ನೇ ಸೋಮವಾರ ಪ್ರಾತಃಕಾಲ ೯ ಗಂಟೆಗೆ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಕೂಡಿ ಬರುವುದು.

ದಕ್ಷಿಣ ಕನ್ನಡ ಪಬ್ಲಿಕ್ ಕನ್ವೇಯನ್ಸ್ ಕಂಪೆನಿಯ ಪರವಾಗಿ ಉಡ್ಪಿ ಪುತ್ತೂರು ರಸ್ತೆಗಳನ್ನು ಸರ್ವೆ ಮಾಡಿ ಕಂಪೆನಿಯವರಿಗೆ ತಕ್ಕ ಸಲಹೆ ಕೊಡುವ ಬಗ್ಗ್ಯೆ ಮದ್ರಾಸಿನಿಂದ ಮೊಟೊರ್ ವೈಜ್ಞಾನಿಕರಾದ ಮೆ। ಎಫ್. ಆರ್. ವಾರ್ಡ್ ದೊರೆಗಳು ಇದೇ ತಾ. ೨೦ರಲ್ಲು ಮಂಗಳೂರಿಗೆ ಬರುವರೆಂತ ಕೇಳುತ್ತೇವೆ.

ಆಕ್ಟಿಂಗ್ ಲೇಂಡ್ ರಿಕೊರ್ಡು ತಹಸೀಲದಾರರಾಗಿರುವ ರಾ। ಕೆ. ಶಿವರಾಯರು ರೂ ೧೫೦ರ ಮಂಗಳೂರು ತಾಲೂಕು ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿಯೂ, ಮಂಗಳೂರು ತಾಲೂಕು ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿರುವ ರಾ। ಎಚ್. ಶಂಕರರಾಯರು ರೂ ೧೫೦ರ ಆಕ್ಟಿಂಗ್ ಲೇಂಡ್ ರಿಕಾರ್ಡ್ ತಹಸೀಲದಾರರಾಗಿಯೂ ನೇಮಿಸಲ್ಪಟ್ಟಿರುವರು.

ಈ ವಾರದಲ್ಲಿ ತುಫಾನು ವಿಶೇಷವಾಗಿದ್ದದರಿಂದ ಸರಕುಗಳನ್ನು ಹಡಗಕ್ಕೆ ತುಂಬಿಸುವುದು ಅಸಾಧ್ಯವಾಯಿತು. ನೂರಾರು ಕಾಫಿ ಗೋಣಿಗಳು ನೀರಿನ ಸಾಲಾದವು. ಗೋಟು ಅಡಿಕೆ ತುಂಬಿಸಿದ ಒಂದು ಮಂಜಿಯು ಮುಳುಗಿಹೋಯಿತು. ಆದರೆ ಇದರಲ್ಲಿದ್ದ ಕಲಾಶಿಗಳನ್ನು ಕೆಲ ಮೊಗೇರರು ಸಾಹಸಪಟ್ಟು ರಕ್ಷಿಸಿದರು.

ಕುಂದಾಪುರ ಫಿರ್ಕ I ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ। ಎಮ್. ಶ್ಯಾಮರಾಯರಿಗೆ ಇದೇ ಬರುವ ಜೂನು ತಿಂಗಳ ತಾ. ೧ರಿಂದ ೩ ತಿಂಗಳ ಪ್ರಿವಿಲೆಜ್ ರಜಿ ಕೊಡೋಣಾಗಿರುವುದರಿಂದ ಇವರ ಬದಲಿಗೆ ಕುಂದಾಪುರ ತಾಲೂಕು ಆಫೀಸಿನ ಹೆಡ್ ಕ್ಲಾರ್ಕ ರಾ। ಎಮ್. ಕೃಷ್ಣರಾಯರು ರೂ. ೪೦ರ I ಗ್ರೇಡ್ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿಯೂ ಇವರ ಬದಲಿಗೆ ಪ್ರಿವಿಲೆಜ್ ರಜಿ ಮೇಲಿರುವ ಕಾರ್ಕಳ ತಾಲೂಕು ಆಫೀಸ್ ಹೆಡ್ ಕ್ಲಾರ್ಕ ರಾ। ಎಚ್. ಅಣ್ಣಪ್ಪಯ್ಯನವರು ರೂ. ೩೫ರ ಮೇಲೆ ಕುಂದಾಪುರ ತಾಲೂಕು ಆಫೀಸ್ ಹೆಡ್ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ಉಡ್ಪಿ ಲೇಂಡ್ ರಿಕಾರ್ಡ್ಸ್ ಇನ್ಸ್‌ಪೆಕ್ಟರರಾದ ರಾ। ಕೆ. ನಾಗಪ್ಪಯ್ಯನವರು ರೂ ೪೦ರ ಉಡ್ಪಿ ಫಿರ್ಕ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿಯೂ ಉಡ್ಪಿ ಫಿರ್ಕ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ। ಬಿ. ಗಣಪತಿರಾಯರು ರೂ. ೩೫ರ ಉಡ್ಪಿ ಆಕ್ಟಿಂಗ್ ಲೇಂಡ್ ರಿಕಾರ್ಡ್ಸ್ ಇನ್ಸ್‌ಪೆಕ್ಟರರಾಗಿಯೂ ನೇಮಿಸಲ್ಪಟ್ಟಿರುವರು.

ಮಂಗಳೂರು ಮಹಿಳಾ ಸಭೆಯವರಿಂದ ಏರ್ಪಡಿಸಿದ ಫೆನ್ಸಿಸೇಲಿನಿಂದ ಈ ತನಕ ಕೂಡಿ ಬಂದ ಹಣವು ರೂ. ೭೦೦ಕ್ಕೆ ಮಿಕ್ಕಿರುವುದಾಗಿ ತಿಳಿಯುತ್ತೇವೆ.

ಈ ಜಿಲ್ಲೆಯ ರೋಮನ್ ಕೆಥೋಲಿಕರ ಅಭಿವೃದ್ಧಿಯನ್ನು ಸಾಧಿಸುವರೆ ದಕ್ಷಿಣ ಕನ್ನಡಾ ಜಿಲ್ಲಾ ಕೆಥೊಲಿಕ್ ಎಸೋಶಿಯೇಶನ್ ಎಂಬ ಸಂಘವು ಸ್ಥಾಪಿಸಲ್ಪಟ್ಟಿರುವುದು. ಎಲಿಮೆಂಟರಿ ವಿದ್ಯಾಭ್ಯಾಸದೊಡನೆ ಕೈಗಾರಿಕೆಗಳ ಅಭ್ಯಾಸವನ್ನು ಸಹ ಮಾಡಿಸಿ ಕೆಥೊಲಿಕ್ ಸಮಾಜದ ಏಳಿಗೆಯನ್ನು ಸಾಧಿಸುವುದು ಈ ಸಂಘದ ಮುಖ್ಯ ಉದ್ದೇಶವಾಗಿರುತ್ತದೆ. ಘನ ಹೊಂದಿದ ಬಿಶೋಪ ಪ್ರಭುಗಳವರೂ ವ್ಯಾಕರ್ ಜನರಲರವರೂ ಮತ್ತು ಕೆಥೊಲಿಕ ಮಿಶ್ಯನಿನ ಪ್ರೊಕ್ಯುರೇಟರ್‌ರವರೂ ಈ ಸಂಘದ ಎಕ್ಸ್ ಒಫಿಸಿಯೊ ಮೆಂಬರರಾಗಿರುವರು. ೧೮ ವರುಷ ಪ್ರಾಯ ಮಿಕ್ಕಿದ ಕೆಥೊಲಿಕ ಯುವಕ ಯುವತಿಯವರು ಈ ಸಂಘದ ಮೆಂಬರರಾಗಿ ಸೇರಬಹುದು. ಮೆಂಬರರಲ್ಲಿ ವರುಷ ಒಂದಕ್ಕೆ ರೂ. ೧ರಂತೆ ಚಂದಾಹಣ ಕೊಡುವವರು ಒಂದನೇ ತರಗತಿಯವರು, ೮ ಆಣೆ ವಂತಿಗೆ ಕೊಡುವವರು ಎರಡನೇ ತರಗತಿಯುವರು, ೪ ಆಣೆ ಕೊಡುವವರು ಮೂರನೇ ತರಗತಿಯವರು ಎಂಬುವ ಮೂರು ದರ್ಜೆಗಳಿರುವವು. ರೂ. ೫೦೦ನ್ನು ಸಹಾಯ ದ್ರವ್ಯವಾಗಿ ಕೊಡುವವನು ಸ್ಥಾಪಕನೆಂತಲೂ ರೂ. ೨೦೦ನ್ನು ಕೊಡುವವನು ಆಶ್ರಯದಾತನೆಂತಲೂ ಗಣಿಸಲ್ಪಡುವನು. ಬಿಶೋಪ ಪ್ರಭುಗಳು ಸಂಘದ ಅಧ್ಯಕ್ಷರೂ ಸಂಘದ ಮೆಂಬರರಿಂದ ಚುನಾಯಿಸಲ್ಪಟ್ಟ ವೈದಿಕ ವರ್ಗಕ್ಕೆ ಸೇರಿದ ಗ್ರಹಸ್ಥನು ಸಂಘದ ಸೆಕ್ರೆಟರಿ ಮತ್ತು ಉಪಾಧ್ಯಕ್ಷನಾಗಿರುವನು. ಈ ಸಂಘಕ್ಕೆ ಕಾರ್ಯನಿರ್ವಾಹಕ ಕಮ್ಮಿಟಿಯು ಇರುವುದು. ಬೇಕಾದಂತೆ ಜಿಲ್ಲೆಯ ಆಯಾ ಕಡೆಗಳಲ್ಲಿ ಈ ಸಂಘದ ಶಾಖೆಗಳನ್ನು ಏರ್ಪಡಿಸ ಬೇಕಾಗಿರುತ್ತದೆ. ಕ್ರಿಸ್ತ್‌ಮಸ್ ದಿನಗಳಲ್ಲಿ ಈ ಸಂಘದ ವಾರ್ಷಿಕ ಮಹಾ ಸಭೆಯು ಕೂಡತಕ್ಕದ್ದಾಗಿರುತ್ತದೆ.

ವಿವಿಧ ವಿಷಯಗಳು.

ಹಿತ್ತಲು ಮತ್ತು ತೋಟಗಳಲ್ಲಿರುವ ಹುವ್ವು ಮತ್ತು ತರಕಾರಿ ಗಿಡಗಳಿಗೆ ನಾನಾ ವಿಧವಾದ ಹುಳು ಮತ್ತು ಹೇನುಗಳು ಮುತ್ತಿ ನಾಶ ಮಾಡುತ್ತವೆಯಷ್ಟೆ. ಇವುಗಳನ್ನು ಹೋಗಲಾಡಿಸಲು ಕೆಳಗೆ ಹೇಳಿದ ದ್ರಾವಕವು ಬಹಳ ಉಪಯೋಗಕರವಾಗಿರುವುದೆಂದು ತಿಳಿಯಬರುತ್ತದೆ. ಸುಮಾರು ಐದು ಸೇರು ಶೀಮೆ ಎಣ್ಣೆಯನ್ನು ಎರಡುವರೆ ಸೇರು ಕುದಿಯುವ ನೀರಿಗೆ ಹಾಕಿ ಸುಮಾರು ಒಂದು ಸೇರು ತೂಕ ಸಾಬೂನನ್ನು ಹಾಕಿ ಕಾಯಿಸಿ ಇಟ್ಟುಕೊಳ್ಳಬೇಕು. ಈ ಕಷಾಯಕ್ಕೆ ನೀರನ್ನು ಬೆರಸಿ ಗಿಡಗಳಿಗೆ ಚಿಮುಕಿಸಿದರೆ ಹುಳುಗಳು ಸಾಯುವುವು.

ಜೀನಸುಗಳ ಧಾರಣೆ, ಮಂಗಳೂರು. (೮೫೦)

ಅವಲ್ ಮಸ್ಕತಿ ಅಕ್ಕಿ ...	5—8—0	5-13—0
ದುಯಂ „ „ ...	5—0—0	5—4—0
ಗುಡ್ನು	4-13—0	4-15—0
ಅವಲ್ ಬೆಳ್ತಿಗೆ... ...	5—13—0	6-0—0
ಗುಡ್ನು ಬೆಳ್ತಿಗೆ	5—3—0	5—5—0
ಹುರುಳಿ ಗೋಣಿ, ೧ರ		7—3—0
ರಂಗೂನ್ ಗೋಣಿ ೧ರ ...	9—3—0	9—4—0
ಉಪ್ಪು ಗೋಣಿ ೧ರ ...	3—8—0	3-10—0
ಕೊಬ್ರಿ ಖಂಡಿ ೧ರ ...	100-0-0	106—0—0
ಊರು ಬೆಲ್ಲ ಖಂಡಿ ೧ರ		40—0—0
ಗೋದಿ ಗೋಣಿ ೧ಕ್ಕೆ...		11—8—0
ಕಡಲೆ ಗೋಣಿ ೧ಕ್ಕೆ	9—0—0	9—8—0
ಉದ್ದು ಗೋಣಿ ೧ರ		10—[illegible]—0
ತೊಗರಿ ಗೋಣಿ ೧ರ...		11—0—0
ತೊಗರಿಬೆಳೆ ಗೋಣಿ ೧ರ	11-0—0	14—0—0
ಕೊಬ್ರಿ ಹಿಂಡಿ ಖಂಡಿ೧ರ	31—0—0	32—0—0
ಎಳ್ಳಿಂಡಿ ಖಂಡಿ ೧ರ	32—8—0	40—0—0
ಕೊಬ್ರಿ ಎಣ್ಣೆ ಮಣ ೧ರ		7—5—0
ಎಳ್ಳೆಣ್ಣೆ ಮಣ ೧ರ ...	7—2—0	7—4—0
ಬಿಳಿಗೋಟು ಖಂಡಿ ೧ರ	96—0—0	102—0—0
ಕಾಫಿ ಖಂಡಿ ೧ರ ...	215—0—0	225—0—0
ಯಾಲಕ್ಕಿ ಮಣ ೧ಕ್ಕೆ	40—0—0	50—0—0

CANNADA INDIAN PENAL CODE.
ಕನ್ನಡ ಇಂಡಿಯನ್ ಪೆನಲ್ ಕೋಡ್.

ಇದರಿಂದ ಮೈಸೂರ್, ಮದ್ರಾಸ್ ಬೊಂಬಾಯಿ ಜಿಲ್ಲಾ
ಕನ್ನಡ ಭಾಷಾ ವಾಚಕಮಹಾಶಯರಿಗೆ
ತಿಳಿಯಪಡಿಸುವದೇನಂದರೆ:—

ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಕಳಾನಿಧಿ ಮುದ್ರಾಕ್ಷರಶಾಲೆಯೊಳ್ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲಿಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡೆಸಬೇಕಾದ ಆಚರಣೆಗಳಂದರೆ:—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ? ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ? ವಾರಂಟು ಕೊಡತಕ್ಕದ್ದೇ? ಜಾಮಿೂನ್ ತೆಗೆದುಕೊಂಡು ಬಿಡಬಹುದೇ? ರಾಜೀಯಾಗಬಹುದೇ? ರಾಜೀಯಾಗತಕ್ಕದ್ದಲ್ಲವೇ? ಎಂಬ ತಪಶೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮಿೂನ್‌ದಾರರುಗಳಿಗೂ, ಇತರ ಸಮಸ್ತ ಕೈಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು.

ತಾ॥ ಕ॥ ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕ್ರಮಪ್ರವೇಶ್ಯ ಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆ ಎಳೆಯುವುದು, ಆಸಾಮಿಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಯೆ ಅಕ್ರಮ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವುದು.

ಕನ್ನಡದಲ್ಲಿ ಇದುವರಿಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು. ಕ್ರಯ ಗ್ಲೇಜ್ ೨—೮—೦. ರಫ್ ೨—೦—೦. ಟಪ್ಪಾಲು ಚಾರ್ಜು ೦—೪—೦. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಪ್ರೊಪ್ರೈಟರ್ ಕಳಾನಿಧಿ ಪ್ರೆಸ್, ಚಿಕ್ಕಪೇಟೆ ಬೆಂಗಳೂರುಸಿಟಿ.

ಭವಿಷತ್ ಜನ್ಮಪತ್ರಿಕಾ.

ನಿಮ್ಮ ಮಕ್ಕಳು ಹುಟ್ಟಿದ ಸಂವತ್ಸರ, ಮಾಸ, ತಿಥಿ, ವಾರ, ಜನನಕಾಲವನ್ನು ಬರೆದು ಕಳುಹಿಸಿದರೆ ನಾವು ಲಗ್ನಕುಂಡಲಿ. ಅಂಶಕುಂಡಲಿ, ಮಹರ್ದಶಾ ಮೊದಲಾದವುಗಳನ್ನು ಮಾಡಿಹಾಕಿ ಶಿಶುವಿಗೆ ಹುಟ್ಟಿದ ನಕ್ಷತ್ರದೋಷ, ಬಾಲಾರಿಷ್ಟದೋಷ ವಿಚಾರವನ್ನು ಇದ್ದರೆ ಅವುಗಳ ಪರಿಹಾರಕ್ಕೆ ಶಾಂತಿ ಮಾಡುವ ಕ್ರಮಗಳನ್ನೂ ಮಾತಾಪಿತ್ರಾರಿಷ್ಟ ವಿಚಾರವನ್ನೂ ಶಿಶುವಿಗೆ ಮುಂದೆ ಇಷ್ಟನೆ ವರುಷಗಳಲ್ಲಿ ಇಂಥಾ ಕಂಟಕಗಳೇ ಬರುವ ವಿಷಯವನ್ನೂ ಶಿಶುವಿನ ಆಯುಷ್ಯ ವಿಷಯವನ್ನೂ ಸಹಾ ವಿಶದವಾಗಿ ಬರೆದು ಜನ್ಮಪತ್ರಿಕೆಯನ್ನು ತಯಾರುಮಾಡಿ ಕಳುಹಿಸುತ್ತೇವೆ.

ಬಾಲಗ್ರಹ ನಿವಾರಿಣೀ ಯಂತ್ರ.

ಈ ಮಹಾಯಂತ್ರವನ್ನು ಒಂದು ಬೆಳ್ಳಿ ತಾಯತದಲ್ಲಿ ಹಾಕಿ ಭದ್ರಪಡಿಸಿ ಮಕ್ಕಳಿಗೆ ಕಟ್ಟಿದರೆ ೧೨ ವರುಷದವರಿಗೂ ಬರತಕ ಬಾಲಾರಿಷ್ಟವು ಖಂಡಿತವಾಗಿ ಪರಿಹಾರವಾಗುತ್ತೆ. ಮತ್ತು ಈ ಮಹಾಯಂತ್ರವನ್ನು ಮಕ್ಕಳಿಲ್ಲದೆ ವ್ಯಸನಪಡತಕ್ಕ ಸ್ತ್ರೀಯರಿಗೆ ಕಟ್ಟಿದರೆ ಸಂದೇಹವಿಲ್ಲದೆ ಮಕ್ಕಳ ಫಲವಾಗುತ್ತೆ. ಬಾಲಗ್ರಹ ನಿವಾರಿಣಿ ಯಂತ್ರ ಸಹಿತ ಜನ್ಮಪ್ರತ್ರಿಕೆಗೆ ಕ್ರಯ ರೂ. ೨. ವಿಳಾಸ:—

ಟಿ. ಎಚ್. ಎಂ ಸಿದ್ಧಾಂತಿಗಳು,
ಹರಪನಹಳ್ಳಿ (ಜಿಲ್ಲಾ ಬಳ್ಳಾರಿ.)

MUSICAL MART
Kavi & Sons,
MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೊನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೊನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು
ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೧ ವಿಷಯಗಳ ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರ್ಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೦೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು,

ನಮ್ಮ ವಿಳಾಸ:—
ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ.

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಹಂಪನಕಟ್ಟಾ, ಮಂಗಳೂರು.

Madeena Watch Co., Madras

ದಿ. ನ್ಯೂ ಪೆಂಡುಲಂ ವಾಚ್. **Rs,-3—15—0.**

ಇದು ಒಂದು ಆಶ್ಚರ್ಯಕರವಾದ ಘಡಿಯಾರ.

Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಪಿಸಿಸಿನಂತೆ ಮೇಜಿನ ಮೇಲೂ ನಿಂದಿರಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೊಪ್ ವಾಚು ಕ್ರಯ	,,	1--12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2--12—0
ಸೆಲ್ಫ್ ಕ್ಲೊಸಿಕ್		3--15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1--13—0
ಚಿಕ್ಕ ಸೈಜು ಲೇಡಿವಾಚ್		2-15—0

ಕಾರೇಜ್ ಹಾರ್ಮೋನಿಯಂ ರೂ. 20=0—0, ಮ್ಯೂಜಿಕ್ ಕ್ಲಾಕ್ ರೂ. ೬—2—0, ಫಿಡಲು ರೂ. 8—0—0.

ಅಡ್ರಸ್:—ಮೆಡಿನಾವಾಚ್ ಕಂಪೆನಿ,
ನಂ. ೨೧ ಆನೆಕಾರಕೋರ್ಣ ಬೀದಿ, ಜಿ. ಟಿ. ಮದ್ರಾಸು.

THE BOMBAY LIFE ASSURANCE CO. LTD.

(Established 1908).
HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

„There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co. Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A, F. I. A., (London.)

Medical Referee:—Dr. R. Row, M. D. D. Sc. London.)

Manager:-Mr. K. S. Aiyar, Esq. B. A., F. S. A. A. (London). Justice of the Peace, The Honorary Presidency Magistrate and fellow of the Bombay University.

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು).
ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಬಗ್ಯೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಬಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್‌ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊಲಿಕ್ ಮಾರ್ಸ್‌ಲೆಂಡ್ ಪ್ರಾೃಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಎಕ್ಚುಯುಯರಿ:—ಮೆ। ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್‌ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್).

ಮ್ಯಾನೇಜರ್:—ರಾ। ಕೆ. ಎಸ್. ಅಯ್ಯರ್ ಬಿ. ಎ. ಎಫ್. ಎಸ್. ಎ. ಎ.(ಲಂಡನ್.) ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟ್ ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಉಡ್ಪಿ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಿಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಫುಪ್ಫುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಎಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನ್ಹೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಹಿಂದೂಸ್ಥಾನದ ಜೀವವಿಮೇ ಸಂಘುಗಳಲ್ಲಿ
ಅತಿ ಭದ್ರವಾದ್ದನ್ನು ಸೂಚಿಸುವಂಥಾದ್ದು:—

ಯುನ್ಯಾಟೆಡ್ ಎಸ್ಯುರೆನ್ಸ್ ಎಂಬುವ ವಿಮೆ ಸಂಘವು.

ವಿಮೆ ಉತ್ತರಾಯಿಸುವ ಹಲವು ನೂತನ ವಿಧಾನಗಳಿಂದ ಕೂಡಿರುತ್ತದೆ. ವಿವಾಹ ಮತ್ತು ಜೀವವಿಮೆಗಳ ಸಂಘುಗಳಲ್ಲಿ ಈ ತನಕ ಇಲ್ಲದ-ಅಗತ್ಯವಾಗಿ ಬೇಕಾಗಿರುವ ವಿಧಾನಗಳು ಇದರಲ್ಲಿರುವವು.

೭೫ ವರುಷಗಳ ಪ್ರಾಯದವರೂ ಸಹ ವಿಮೆ ಉತ್ತರಾಯಿಸುವ ವಿಶೇಷ ಕ್ರಮ. ೩ ತಿಂಗಳನಂತರ ವಿಮೆ ಪತ್ರವು ಸಂಪೂರ್ಣತ್ವವನ್ನು ಹೊಂದಬಹುದು.

ವಿವಾಹ ವಿಮೆಗಳಲ್ಲಿ ೧೮ ತಿಂಗಳುಗಳ ನಂತರ ವಿಮೆ ಕಂತುಗಳನ್ನು ತೆರಬೇಕೆಂತಿಲ್ಲ. ೩ ತಿಂಗಳ ನಂತರ ಈ ಸಂಬಂಧದ ವಿಮೆ ಪತ್ರವು ಸಹ ಸಂಪೂರ್ಣವಾಗಬಹುದು.

ಮೇಲೆ ಕಾಣಿಸಿದ ಪ್ರಯೋಜನಗಳ ಹೊರತು ವಿವಾಹ ಉಪನಯನ ಮತ್ತು ಜೀವವಿಮೆಗಳ ಸಾಮಾನ್ಯ ಮತ್ತು ಎನ್ಡೊವ್‌ಮೆಂಟ್ ಕ್ರಮಗಳಿಂದ ವಿಮೆದಾರರು ಶೆತ್ತ ದುಬಾರೆ ಮೊಬಲಗು ದೊರಕುವ ಸಂಭವವಿರುವವು. ಸಂಘದ ಭದ್ರತೆಗೆ ತಕ್ಕುದಾಗಿ ಸುಲಭವಾದ ವಿಮೆ ದರಗಳು.

ಒಳ್ಳೇ ಕಮಿಶನ್ ಮತ್ತು ಸಂಬಳದ ಮೇಲೆ ಏಜಂಟರುಗಳು ಬೇಕಾಗಿರುವರು.

ಈ ಸಂಘದಿಂದ ವಿಮೆ ಹಣ ಪಡದವರ ಹೆಸರುಗಳ ಪಟ್ಟಿಗೂ ಏಜನ್ಸಿಗಳ ಶರ್ತಕ್ಕೂ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

B. S. Nayak & Co., ಬಿ. ಎಸ್. ನಾಯಕ್ ಎಂಡ್ ಕೊ,
Chief Agents, ಚೀಫ್ ಏಜಂಟರು,
Udipi, S. C. ಉಡುಪಿ ದ.ಕ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗ್ಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗ್ಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯಾದರೂ ಇದನ್ನು ಸೇವಿಸಬಹುದು. ಅದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಅಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ್ಗ! ಅಗ್ಗ!! ॥ ಕುಟುಂಬ ಜೀವನಿ ॥ ಧರ್ಮ! ಧರ್ಮ!!

ಪ್ರಿಯ ಭಾರತಿಯ ಮಹನಿಯರೇ!

ಎಲ್ಲಾ ರೋಗಗಳನ್ನು ಗೆಲ್ಲುವ ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬ ಪೆಟ್ಟಿಗೆಯನ್ನು ತರಿಸಲು ಮರೆಯದೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ.

«ಅಕ್ಕರದಿಂ ಬೆಕ್ಕು ಬಂದು ಸಕ್ಕರೆಯಂ ನೆಕ್ಕಿದಂತೆ ।
ಠಕ್ಕರೆಲ್ಲಾ ಒಕ್ಕಲಿಗರ ರೊಕ್ಕವೆಲ್ಲ ಮುಕ್ಕಿ ಪೋದರ್ ॥ " ಎಂಬಂತೆ

ಈಗ ಇಮಿಟೇಶನ್ ಬಳೆ ತುಂಡುಗಳು ರತ್ನವೆಂಬ ಪೆಸರಿನಿಂದ ಎಲ್ಲಿ ನೋಡಿದರೂ ತುಂಬಿ ಹೋಗಿ, ಕಲ್ಯಾಣಿಗೆ ಖ್ಯಾತ್ ಕಡಿಮೆ ಆದ ಹಾಗೆ ಈಗಿನವರು ಠಕ್ಕಿನಿಂದಲೇ ಸುಲಿಗೆಯಾದರು.

ಪ್ರಿಯ ಬಾಂಧವರೇ! ನಮ್ಮನ್ನು ಹಾಗೆ ಗ್ರಹಿಸದೇಡಿರಿ. ಅಮೂಲ್ಯವಾದ ಮಾಣಿಕ್ಯವಾದರೂ ಹೇಮಾಶ್ರಯಬೇಕೇ ಬೇಕಾದ್ದರಿಂದ ನಮ್ಮನ್ನು ಆಶ್ರಯಕೊಡಿರಿ! ಪರೀಕ್ಷಿಸಿನೋಡಿರಿ!!

ನಮ್ಮ ವೈದ್ಯಾಲಯದಲ್ಲಿ ಶುಲಭವಾಗಿ ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ ಬಹಳ ಶೋಧನೆಯಿಂದಲೂ, ವನೌಷಧಗಳಿಂದಲೂ, ಸಿದ್ಧಕಲ್ಪ ಭೈರಾಗಿ ಪ್ರಯೋಗಗಳಿಂದಲೂ ತಯ್ಯಾರಿಸಿದ ಪೌಡರು ಮಾತ್ರೆಗಳೂ, ಲೇಹ ಚೂರ್ಣಗಳೂ, ತೈಲ್ಯ ಘೃತಗಳೂ, ಆಸವಾರಿಷ್ಟಗಳೂ, ಟೊನಿಕ್ ಅರಕ್‌ಗಳೂ ಬಡವರಿಗೆ ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಶಿಕ್ಕುತ್ತವೆ. ಕ್ರಯ ನಿರ್ಣಯಕ್ಕೆ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ; ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು. 10 ರೂಪಾಯಿಗಳ ಮೇಲೆ ಶೇಕಡಾ ರೂ. 10ಡಿಸ್ಕಾಂಟು ಶಿಕ್ಕುವದು. ತರಿಸಿಕೊಳ್ಳಿರಿ. ಸಂಘಕ್ಕೆ ಆಶ್ರಯ ಕೊಡಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S.U.N.&Co.
BENARES CITY.
KASHI
VISHWESHWAR.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ತಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುಷ್ಯವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ್.
ಶಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ದ್ರಿಟೊಬಿಲ್ಡಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು

ನೋಟೀಸು.

ನೆಶನಲ್ ಇನ್ಸೂರೆನ್ಸ್ ಎಂಡ್ ಬೆಂಕಿಂಗ್ ಕಂಪೆನಿ, ಅಮೃತಸಾರ್.

ಇವರು ತಮ್ಮ ಪಾಲುಮಾಲಿಕರಿಗೂ, ಠೇವಣಾತಿ ಇಟ್ಟವರಿಗೂ ವಿಮೆದಾರರಿಗೂ ಮತ್ತು ತಮ್ಮ ಇತರ ಕಕ್ಷಿಗಾರರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಪಿಪಲ್ಸ್ ಬೇಂಕು ಒಫ್ ಇಂಡಿಯಾ ಮತ್ತು ಅಮೃತಸಾರ ಬೇಂಕು ಇವುಗಳು ತಮ್ಮ ಲೇವಾದೇವಿಗಳನ್ನು ನಿಲ್ಲಿಸಿ ಬಿಟ್ಟಿರುವುದರಿಂದ ಇತರ ಬೇಂಕುಗಳ ಪಾಲುಮಾಲಿಕರಲ್ಲಿಯೂ, ಠೇವಣಾತಿ ಇಟ್ಟವರಲ್ಲಿಯೂ ಯೋಚನೆಯು ಪ್ರಾಪ್ತವಾಗಿರಬಹುದು. ಇಂಥಾ ಯೋಚನೆಯಿಂದ ಅಂಜಿಕೆಯು ನೆಶನಲ್ ಇನ್ಸೂರೆನ್ಸ್ ಎಂಡ್ ಬೇಂಕಿಂಗ್ ಈ ಕಂಪೆನಿಯ ಪಾಲುಮಾಲಿಕ ಮೊದಲಾದವರಲ್ಲಿ ಸ್ವಭಾವಿಕವಾಗಿ ಉಂಟಾಗಿರಬಹುದಾದ್ದರಿಂದ ಅಂಥಾ ಅಂಜಿಕೆ ಯೋಚನೆ ಮೊದಲಾದವುಗಳಿಗೆ ಏನೂ ಆಸ್ಪದವಿರದೆಂಬುದಾಗಿಯೂ ಒಂದು ವೇಳೆ ಎಂಥಾ ಅಡಚಣಿಗಳು ಬಂದು ಸಂಭವಿಸಿದರೂ ಈ ಅಡಚಣಿಗಳನ್ನು ಎದುರಾಡಲು ತಕ್ಕ ಹಣ ಸಂಗ್ರಹವು ಈ ಕಂಪೆನಿಯಲ್ಲಿದೆಂಬುದಾಗಿಯೂ ಈ ಮೂಲಕ ಕಂಪೆನಿಯ ಡಿರೆಕ್ಟರರುಗಳು ದೃಢಪಡಿಸಿರುತ್ತಾರೆ. ಅದಲ್ಲದೆ ಇತ್ತಲಾಗೆ ಈ ಕಂಪೆನಿಯವರು ಒಂದು ಲಕ್ಷ ರೂಪಾಯಿಗಳ ಭದ್ರತೆಯ ಠೇವಣಾತಿಯನ್ನು ಇಂಡಿಯಾ ಸರಕಾರದವರಲ್ಲಿರಿಸಿರುವರು.

ಪಿಪಲ್ಸ್ ಬೇಂಕಿನಿಂದಾಗಲಿ ಅಮೃತಸಾರ್ ಬೇಂಕಿನಿಂದಾಗಲಿ ಈ ಕಂಪೆನಿಗೆ ಏನೊಂದು ಬರತಕ್ಕದಿಲ್ಲ. ನಮ್ಮ ಕಂಪೆನಿಯು ಮುಖ್ಯ ಆಫೀಸು ಅಮೃತಸಾರದಲ್ಲಿರುವುದರಿಂದ ಅಮೃತಸಾರ್ ಬೇಂಕು ನಮ್ಮದೋ ಏನೆಂಬುವ ಗಲಿಬಿಲಿಯು ಕೆಲವರಲ್ಲಿರುವುದು. ಅಮೃತಸಾರ್ ಬೇಂಕಿಗೂ ನಮಗೂ ಯಾವ ಸಮ್ಮಂಧವೂ ಇರುವುದಿಲ್ಲ. ಅಮೃತಸಾರ ಬೇಂಕು ಪ್ರತ್ಯೇಕ ಬೇಂಕು ಆಗಿರುತ್ತದೆ ಮತ್ತು ಇದರ ಹೆಸರಲ್ಲಿ ಅಮೃತಸಾರ್ ಎಂಬುವುದನ್ನು ಕೂಡಿಸಿರುವರಾದರೂ ಇದರ ಮುಖ್ಯ ಆಫೀಸು ಲಾಹೋರಿನಲ್ಲಿರುತ್ತದೆ.

ನೆಶನಲ್ ಇನ್ಸೂರೆನ್ಸ್ ಮತ್ತು ಬೇಂಕಿಂಗ್ ಕಂಪೆನಿಯ ಡಿರೆಕ್ಟರರುಗಳು ತಮ್ಮಿಂದಾಗುವ ಯಥಾ ಯೋಗ್ಯ ಪ್ರಯತ್ನಗಳಿಂದ ಈಗಿನ ವಿದ್ಯಮಾನಗಳಲ್ಲಿ ಕಂಪೆನಿಗೆ ಏನೊಂದು ಅಪಾಯವು ಬಂದೊದಗದಂತೆ ಜಾಗರೂಕರಾಗಿರುವರೆಂಬುದಾಗಿ ಈ ಮೂಲಕ ದೃಢಪಡಿಸುತ್ತಾರಲ್ಲದೆ ಪಾಲಕ ಮೊದಲಾದವರೆಲ್ಲರೂ ಎಂದಿನಂತೆ ಈ ಕಂಪೆನಿಯಲ್ಲಿ ತುಂಬಾ ವಿಶ್ವಾಸವುಳ್ಳವರಾಗಿರುತ್ತಾರೆಂತ ದೃಢವಾಗಿ ನಂಬಿರುವರು.

ಪಿ. ಎಲ್. ರಾಜಪಾಲ್, ಬಿ. ಎ. **P. L. RAJPAL,** B. A.
ಮುಖ್ಯ ಮೇನೇಜರ್. *Chief Manager.*

ಟಿ. ಎಸ್. ಆರ್. ಐಯರ್, **T. S. R. AIYR,**
ಸೆಕ್ರೆಟರಿ, ಮದ್ರಾಸ್ ಬ್ರೇಂಚ್. *Secretary, Madras Branch.*

Estd. 1888. ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖ್ಮುಗಳೂ,ವ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೬ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪುರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಎಕ್ಸ್‌ಪ್ರೆಸ್ ವಾಚ್ ಕೊ.

3 ರತನ್ ಬಜಾರ್ ರೋಡ್, ಮದ್ರಾಸ್.

ಟೆಲಿಗ್ರಾಫ್ ವಿಳಾಸ: “ಎಕ್ಸ್‌ಪ್ರೆಸ್” ಮದ್ರಾಸು.



ನಂಬ್ರ 224. ಈ ವಾಚು ಸುಲಭವಾಗಿ ತೆರೆಯಲ್ಪಟ್ಟು ಮುಚ್ಚಲ್ಪಡುವುದು. ಎಲ್ಲರ ಕೈಗಳಿಗೂ ಹುದುವಾಗಿದೆ. ಕೆಂಪು ಕಲ್ಲುಗಳ ಸಹಿತ 9-4-0. ನಂಬ್ರ 225. ಕಲ್ಲುಗಳಿಲ್ಲದೆ ರೂ. 8—4—0.

ನಮ್ಮ ಕೂಡೆ ನಾಜೂಕಾದ ಹೆಚ್ಚು ಕಾಲ ಬಾಳುವ ಬಹಳೇ ವಾಚುಗಳಿರುವವು. ವಾಚುಗಳೆಲ್ಲವೂ ನಮಗಾಗಿಯೇ ತಯಾರಿಸಿದಂಥವುಗಳಾಗಿವೆ. ನಮ್ಮಿಂದಲೇ ಮೂರು ವರ್ಷಗಳ ಗ್ಯಾರಂಟು ಕೊಡಲ್ಪಡುವುದು. ತೃಪ್ತಿಯಾಗದಿದ್ದರೆ ಹಣ ಪರತು.



ನಂಬ್ರ 448. ನಿಕ್ಕಲ್ ಕೇಸು, 8 ದಿವಸಗಳ ಲಿವರ್ ವಾಚು ರೂ. 8—14—0. ನಂಬ್ರ 449. ಬೆಳ್ಳಿಯ ಕೇಸು ರೂ. 14.



ನಂಬ್ರ 814. ಸರ್ವರಿಂದಲೂ ಆಕರ್ಶಿಸಲ್ಪಡುವಂಥಾ ರಿಸ್ಟ್‌ವಾಚು. ಒಳ್ಳೇ ಜುವೆಲ್‌ಗಳುಳ್ಳದ್ದು. ನಿಕ್ಕಲ್ ಕೇಸ್ ರೂ. 5—14—0. ನಂಬ್ರ 815. ಸಿಲ್ವರ್ ಕೇಸ್ ರೂ. 9—12—0. ಚರ್ಮದ ಕೈಕಟ್ಟು ಮುಫತ್ತು.



“ಜೋನ್ಸನ್” ಲಿವರ್. ನಂಬ್ರ 984. ಈ ಕಾಲಕ್ಕೆ ಸರಿಯಾಗಿ ತಯಾರಿಸಿದ ಲಿವರ್ ವಾಚು. ಬಹಳ ನಾಜೂಕಾಗಿ ಮಾಡಲ್ಪಟ್ಟಿದೆ. ಒಳ್ಳೇ ಲಿವರ್ ಸ್ಪೆಶ್ಯಲ್ ಕ್ರಯ 5—14—0.



ನಂಬ್ರ 471. ನಿಕ್ಕಲ್ ಕೇಸು. ಹೆಂಗಸರು ಉಪಯೋಗಿಸತಕ್ಕ ಲೇಡಿಸ್ ವಾಚು. ಚೀಲ ಯಾ ರಿಸ್ಟ್ ರೂ. 4—8—0. ನಂಬ್ರ 472. ಅದೇ ಬೆಳ್ಳಿಯ ಮುಚ್ಚಳವಿದ್ದದ್ದು ರೂ. 7—14—0.


ಜೀನತಾನ
"JINTAN" Pill Case (Exact Size)
LOOKING GLASS
3 pills come out from here at each opening.
JINTAN

ಈಗಲೇ ಪರೀಕ್ಷಿಸಿ ನೋಡಿರಿ.

ಜೀನತಾನಿನ ವಿಶೇಷ ಗುಣಗಳು:—ಅತ್ಯಂತ್ರ ಮವಾದ ಜೀರ್ಣಕಾರಿಯು, ಇದಕ್ಕೆ ಸಮಾನವಾದ ಜೀರ್ಣಕಾರಿಯು ಮಂತ್ಯೊಂದಿರದು. ಜೀರ್ಣಶಕ್ತಿ ಕಡಮೆಯಾದ ಅನ್ನಕೋಶವು ಇದರ ಸೇವನೆಯಿಂದ ಎಂದೂ ಬಾಧಿಸಲ್ಪಡದು.

ರೋಗಗಳು ಅಂಟದಂತೆ ಮಾಡುವ ಪೂತಿನಾಶಕರ ವಿಶೇಷವಾದ ಗುಣವು ಇದಕ್ಕಿರುತ್ತದೆ. ಇದು ಉಪಯೋಗಿಸುವವರ ಶ್ವಾಸವನ್ನು ಸುವಾಸನೆಯುಳ್ಳದ್ದಾಗಿ ಮಾಡುವುದು.

ಹೊಗೆಸೊಪ್ಪು ವ ಇತರ ಮಾದಕ ಪದಾರ್ಥಗಳ ವಾಸನೆಯನ್ನು ಇದನ್ನು ಸೇವಿಸಿದ ಮಾತ್ರದಿಂದ ಪೂರ್ಣವಾಗಿ ಹೋಗಲಾಡಿಸಬಹುದು.

ಸಂಗೀತ ಹಾಡುವವರೂ, ಉಪನ್ಯಾಸಕರೂ, ಇದನ್ನು ಉಪಯೋಗಿಸಿದರೆ ಗಂಟ್ಲಿನ ನಾಳಗಳು ಶುದ್ಧವಾಗುತ್ತವೆ. ಬಾಯಿಯ ದುರ್ವಾಸನೆ ನಾಶವಾಗುವದು.

ಕ್ರಯ. 30 ಮಾತ್ರೆಗಳುಳ್ಳ ಪೊಟ್ಟಣಕ್ಕೆ ರೂ. 0-1-6. 195 ಮಾತ್ರೆಗಳುಳ್ಳ ಡಬ್ಬಿಗೆ ರೂ. 0-8-0. 65 ಮಾತ್ರೆಗಳುಳ್ಳ ಪೊಟ್ಟಣಕ್ಕೆ 0-3-0. 455 ಮಾತ್ರೆಗಳುಳ್ಳ, ಸುಂದರವಾದ ಕನ್ನಡಿ ಡಬ್ಬಿಗೆ ರೂ. 1.

ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಎಂಡ್ ಕೊ.
ಪಾರ್ಕ್ ಟೌನ್, ಮದ್ರಾಸು.

S. VAIDYA & Co.
Park Town, Madras.

ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡೈನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ. ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ.
ಪಾರ್ಕ್ ಟೌನು, ಮದ್ರಾಸು.

S. VAIDYA & Co.,
Park Town, Madras.

“ಆಯೊನಿಕ್ ಫಾರ್ಮಸಿ”

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಕಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co.,
Park Town, Madras.

ಎಸ್. ವೈದ್ಯಾ ಅಂಡ್ ಕೊ.
ಪಾರ್ಕ್ ಟೌನ್ ಮದ್ರಾಸು.

ಪ್ರಕಟನೆ.

ಮಂಗಳೂರು ತೇರಬೀದಿಯಲ್ಲಿರುವ ಕೆ. ಯಮ್. ದಾಸಪ್ರಭುಗಳ ಬುಕ್ ಶಾಪಿನಲ್ಲಿ ಅಥವಾ ಗ್ರಂಥಕರ್ತರಿಂದ ಶೀದಾ ಕ್ರಯಕ್ಕೆ ದೊರೆಯುವ ಪುಸ್ತಕಗಳು.

ವಕೀಲ ಹಳಿಗೇರಿ ಕೃಷ್ಣರಾಯರಿಂದ ರಚಿಸಲ್ಪಟ್ಟವುಗಳು.

ಪ್ರತಿ ೧ಕ್ಕೆ ಟಪ್ಪಾಲ್ ಹಾಸಲು ವಿನಹ ಕ್ರಯ.

(೧) ಅಧ್ಯಾತ್ಮವಿಚಾರ, ಪ್ರತ್ಯಗಾತ್ಮನ ಚಿತ್ರ ಸಮೇತ ... ... ರೂ. ೨-೪-೦.

(೨) ಆ ಗ್ರಂಥ (ಅಧ್ಯಾತ್ಮವಿಚಾರ)ದ ಕುರಿತು ಮಧ್ವರು ಹೇಳುವ ಆಕ್ಷೇಪಣೆಗಳಿಗೆ ಉತ್ತರ. ಇದರಲ್ಲಿ ಪ್ರಸಂಗತಃ ಶ್ರೀಮದ್ಭಗವದ್ಗೀತೆ ಮೊದಲಾದ ಸ್ವದೇಶೀಯ ದೇಶೀಯ ಗ್ರಂಥಗಳ ಆಧಾರದ ಮೇಲೆ ಮಧ್ವಮತವು ಸ್ವವಿರುದ್ಧವಾದದ್ದೆಂದು ವಗೈರೆ ತೋರಿಸೋಣಾಗಿರುತ್ತದೆ. ಕ್ರಯ ಆಣೆ ೦-೨-೦.

(೩) ಸ್ವಾಯಂಭುವ ಮನುವಂಶಾವಳಿ (ದೇವನಾಗರೀ ಅಕ್ಷರ) ಕನ್ನಡ ಉಪೋದ್ಘಾತ ಸಮೇತ ಕ್ರಯ ರೂಪಾಯಿ ೧-೦-೦.

ಈ ಪೈಕಿ ೧ನೇ ೩ನೇಯವುಗಳು ವೆಲ್ಯುಪೆಯೆಬಲ್ ಪೋಸ್ಟದ್ವಾರಾ ಕಳುಹಿಸೋಣಾಗಬಹುದು.

೨ನೇದರ ಬಗ್ಗೆ, ಅದನ್ನು ಕೊಂಡುಕೊಳ್ಳುವವರು ೨॥ ಆಣೆಯ ಟಪ್ಪಾಲುಚೀಟುಗಳನ್ನು ಮುಂದಾಗಿ ಕಳುಹಿಸಬೇಕಾಗುವದು.

ಮಂಗಳೂರು ಟೌನ್‌ನಲ್ಲಿ ಕೊಂಡುಕೊಳ್ಳುವವರು ಹಾಸಲು ಕೊಡಬೇಕಾದದ್ದಿಲ್ಲ.

H. Krishna Rao.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ನರೆ ಕೂದಲನ್ನಿಟ್ಟುಕೊಂಡು
ಮುದುಕರಾಗಿ ಕಾಣುವದೇಕೆ?

☞ ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳ ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಪಾಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷ ಪಡುವಿರಿ.

ಕ್ರಯ ಬುರುಸು ಸಮೇತ ಬಾಟ್ಲಿ 1ಕ್ಕೆ ರೂ. 1.
ಅಂಚೆ ಹಾಸಲು ಆಣೆ 0—4—0.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.
V. A. S. PANI,
No. 3, Erulappen Street, Madras.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!
ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತೃಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—
ಉಡುಪಿ.
ಮ॥ ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.

ಮಂಗಳೂರು.
ಪಾವಂಜೆ ಗೋಪಾಲಕೃಷ್ಣ
ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೋಓಪರೇಟಿವ್
ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.
ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೋ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೋಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೋ ಉತ್ತರಾಯಿಸಬಹುದು. ರದ್ದಾದ ವಿಮೋ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್.
ಶ್ರೀಕುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

Canarese Novels Etc.
ಕನ್ನಡ ಪುಸ್ತಕಗಳು.

ಮ॥ ರಾ॥ ರಾ॥ ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.
ವಂಗವಿಜೇತ ಹೊಸ ನಾವಿಲ್	1—4
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4
ನವಾಬನಂದಿನಿ ಡಿಟೊ 2ನೇ ಭಾಗ	1—8
ಸೀತಾರಾಮ (ಇತಿಹಾಸ)	1—8
ವಿಷವೃಕ್ಷ ದ್ವಿ. ಮು.	1—4
ದೇವೀ ಚೌಧುರಾಣಿ-ಡಿಟೊ	1—4
ರಾಜಸಿಂಹ-(ಇತಿಹಾಸ)	1—5
ಕಪಾಲಕುಂಡಲ	0.13
ಮೃಣ್ಮಯಿ-ಡಿಟೊ 2ನೇ ಭಾಗ	1—1
ಕೃಷ್ಣಕಾಂತನ ಉಯಿಲು	1—0
ಮನೋರಮ [ಸಕ್ರೀದಾರಿ ಕಥೆ]	1—0
ಪರಿಮಳ-ಡಿಟೊ-ದ್ವಿ. ಮು.	0.10
ಸಾಧನೆ. ಡಿಟೊ	0—8
ಕೊಹಿನೂರು [ಇತಿಹಾಸ]	0.12
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3

	ರೂ. ಆ.
ಕಮಲಾ ಕಾಂತ ದ್ವಿ. ಮು.	0—2
ಲೀಲೆ [ಸಮಾಜ ಚಿತ್ರ]	0—4
ಮಾಲತಿ [ಅತಿ ಮನೋಹರ] ದ್ವಿ. ಮು.	0—3
ರಾಧಾರಾಣಿ [ಕಾದಂಬರಿ] ತೃ. ಮು.	0—3
ಯುಗುಳಾಂಗುರೀಯ „	0—3
ಭ್ರಾಂತಿವಿಲಾಸ „	0—8
ನೊಂದನುಡಿ [ಸ್ತ್ರೀನೀತಿ]	0—2
ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ವೈಜ್ಞಾನಿಕ ಪ್ರಹಸನ [ನಕಲಿ]	0—4
ಚಿರತ್ನನಾಟಕರತ್ನ ಡಿಟೊ	0—7
ಚಿತ್ರವಿಚಿತ್ರಾವಳಿ [Tit-Bits]	0—8
ನೀರದೆ [ಹೊಸ ಕಾದಂಬರಿ]	0—8
ಭಾರತಮಹಿಳಾ [ಸ್ತ್ರೀನೀತಿ]	0—8
ಅಮೃತಪುಳಿನ [ನಾವಿಲ್]	0.11

ಇತ್ಯಾದಿ.

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0—8
ಕ. ಕವಿಚರಿತೆ [ಪೂರ್ವಭಾಗ]	3—2
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6
ಕಲಾನಾಥ ಡಿಟೊ	0—8
ಶೋಭನೆ [ಬಂಗಾಳಿ ನಾವಿಲ್]	0.12
ಯಾಮಿನಿ [ಬಂಗಾಳೀ ನಾವಿಲ್]	0—3
ಪ್ರಿಯಂವದೆ [ಪತಿವ್ರತಾ ಕಥೆ]	0—8
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8
ಸನ್ಯಾಸಿ [ಹೊಸ ಕಾದಂಬರಿ]	0—6
ಮೃತ್ಯು ಪರೀಕ್ಷೆ ಡಿಟೊ	0—2
ಬೃಂದಾವನ ಡಿಟೊ	0—2
ಸುಮನೋರಮ ಡಿಟೊ	0—2
ಮಾಲಿನಿ ಡಿಟೊ	0—2
ಪ್ರೇಮಪಿಪಾಸೆ ಡಿಟೊ	0—2
ವಿರಕ್ತಳಾದ ಸೌದಾಮಿನಿ ಡಿಟೊ	0—5
ಚಿತ್ರಕಳಾವತಿ ಡಿಟೊ	0—2
ಚಾತುರ್ಯವತಿ ಡಿಟೊ	0—2
ವಸುಮತಿ ಡಿಟೊ	0—2
ವಿಲಕ್ಷಣಶಿಕ್ಷಣ ಡಿಟೊ	0—2
ಪದ್ಮಿನಿ ಡಿಟೊ	0—2
ಭಾನುಮತಿ ಡಿಟೊ	0—2
ಸತೀರೋಹಿಣಿ ಡಿಟೊ	0—2
ಸಂತಾಪಕ ಡಿಟೊ	0—4
ಚಂದ್ರಮತಿ [ಸ್ತ್ರೀನೀತಿ]	0—6

	ರೂ. ಆ.
ನಿರ್ಭಾಗ್ಯಚಾಣಕ್ಯ [ಹೊಸಕಾದಂಬರಿ]	0—6
ಅನಂಗಸುಂದರಿ ಡಿಟೊ	0—8
ತಾರಾ ಸುಂದರಿ ಡಿಟೊ	0—8
ರಾಧಾಮಾಧವಿ ಡಿಟೊ	0—8
ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0—9
ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0—9
ಧರ್ಮಪದವೆಂಬ ಬುದ್ಧಗೀತೆ	0.12
ಜೈಮಿನಿಭಾರತ [ಸಟೀಕಾತಾತ್ಪರ್ಯ]	4—0
ಹರಿಕಥಾಮೃತಸಾರ ಡಿಟೊ	1—6
ಚದುರಂಗಬೋಧಿನಿ	0—3
ಸರ್ವೇಮ್ಯಾನ್ಯುಯಲ್	0—5
ನ್ಯಾಯದರ್ಪಣ [ಲಾ]	1—0
ವ್ಯವಹಾರ ದೀಪಿಕೆ [ಲಾ]	3—0
ಶಾಕುಂತಲ ನಾಟಕ ದ್ವಿ. ಮು.	0—9
ಶೂರಸೇನಚರಿತ್ರೆ ನಾಟಕ ಡಿಟೊ	1—[illegible]
ಚಂಡಕೌಶಿಕ ನಾಟಕ ಡಿಟೊ	0.12
ರಾಮವರ್ಮ ಲೀಲಾವತೀ ನಾಟಕ	0—8
ಪಾಂಚಾಲೀ ಪರಿಣಯ ನಾಟಕ	0.10
ಚಂಡೀಮದಮರ್ದನ ನಾಟಕ	0—5
ಪ್ರಬೋಧ ಚಂದ್ರೋದಯ ನಾಟಕ	0.10
ಭರ್ತೃಹರಿ ನಿರ್ವೇದ ನಾಟಕ	0—3
ನಿರುಪಮಾ [ನಾಟಕ]	0.12
ಧನಂಜಯ [ನಾಟಕ]	0—4
ಸೀತಾಪರಿಣಯ [ನಾಟಕ]	0—4
ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—
ಎಸ್. ಟಿ. ಎ., ಬೆಂಗಳೂರು ಸಿಟಿ.

ಪ್ರಸಿದ್ಧ ಕನ್ನಡ ಗ್ರಂಥಗಳು

1. ಜಪಾನರುನ್ನತಿಗೆ ಮೂಲಾಧಾರ:—ನವನಾಗರೀಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಅತ್ಯಾಶ್ಚರ್ಯಕರವಾದೀ ಕಥೆಯನ್ನು ಓದಬೇಕು. ಇಂತಹ ಸುಬೋಧಕವಾದ ಕಣ್ಮನಗಳಿಗಾನಂದವನ್ನುಂಟುಮಾಡುವ ಗ್ರಂಥವನ್ನು ಹಿಂದೆ ನೀವು ಯಾವಾಗಲೂ ನೋಡಿಲ್ಲ. ಮೈಸೂರು ಮಹಾರಾಜರಿಗೆ "ಡೆಡಿಕೇಟ್" ಮಾಡಲ್ಪಟ್ಟಿದೆ. ಮೈಸೂರು ಮಹಾರಾಜರ, ಯುವರಾಜರ ಮತ್ತು ಕಥೆಯ ಸಂದರ್ಭಗಳಿಗನುಕೂಲಿಸುವಂತೆ, ನೇತ್ರಾನಂದಕರವಾದ 12 "ಹಾಫ್‌ಟೋನ್" ಚಿತ್ರಗಳೂ ಇದರಲ್ಲಿವೆ. ಮೈಸೂರು ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಸ್ವಧರ್ಮ ರಕ್ಷಣೆಗಾಗಿ ರಾಜನೂ, ರಾಣಿಯೂ, ಸೇನಾಪತಿಯೂ, ಸತ್ಯಜೆಯಾದ ಕುರುಬನೂ, ಪುರೋಹಿತನೇ ಮುಂತಾದವರು ಪ್ರಾಣಾರ್ಪಣವಂ ಮಾಡುವ ಸಂದರ್ಭಗಳನ್ನೂ ಮತ್ತು ಅವರುಗಳೆಲ್ಲರೂ ದೇವರುಗಳಿಂದ ಬದುಕಿಸಲ್ಪಟ್ಟ ಬಳಿಕ ರಾಜನಿಗೂ, ಕನ್ಯೆಗೂ ವಿವಾಹ ಪಟ್ಟಾಭಿಷೇಕಗಳು ನಡೆವುದನ್ನೂ, ಅವುಗಳ ಕಣ್ಣೆದುರಿಗೆ ನಡೆದಂತೆ ತೋರಿಸುವ ಫೋಟೋಗ್ರಾಫಿನ ಮೇಲೆ ನಿರ್ಮಿಸಿದ ಸಹಜ ಚಿತ್ರಗಳನೂ ನೋಡಿ ಯಾರ ಹೃದಯವು ತಾನೇ ಕರಗದೇ ಇರವುದು? ಕ್ರಯ ವಿ. ಪಿ. ಪ್ಯಾಕಿಂಗ್ ಸಹಿತ:—ಚಿನ್ನದ ಗಿಲ್ಟಿನದು ರೂ. 2—4—0; ಅವ್ವಲ್ ಗ್ಲೇಜ್ ರೂ. 1—8—0; ದುಯ್ಯಂ 1—4—0.

2 ಧರ್ಮಪದ:—17 ಕೋಟಿ ಮುಸಲ್ಮಾನರಿಗೆ "ಖೊರಾನೂ" 32 ಕೋಟಿ ಹಿಂದೂಗಳಿಗೆ "ಭಗವದ್ಗೀತೆಯೂ" 40 ಕೋಟಿ ಕ್ರಿಸ್ತರಿಗೆ "ಬೈಬಲೂ" ಹೇಗೆ ಪೂಜ್ಯವಾದ ಗ್ರಂಥಗಳೋ, 55 ಕೋಟಿ ಬೌದ್ಧರಿಗೆ ಈ ಗ್ರಂಥವು ಹಾಗಿದೆ. ಸಾವಿರಾರು ಗ್ರಂಥಗಳಿಂದ ಪಡೆವ ಜ್ಞಾನವನ್ನು ಇದೊಂದರಿಂದ ಪಡೆಯಬಹುದು. ಮೈಸೂರು ಮಹಾರಾಜರ; ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಜಪಾನ್‌ನಲ್ಲಿರುವ ಬುದ್ಧವಿಗ್ರಹದ ನೇತ್ರಾನಂದಕರವಾದ ಭಾವಚಿತ್ರಗಳಿವೆ. ಕ್ರಯ ವಿ. ಪಿ. ಸಹಿತ ರೂ. 1.

2. ಬೌದ್ಧಾವತಾರ:—ಲೋಕೋದ್ಧಾರಕನಾದ "ಶ್ರೀ ಗೌತಮಬುದ್ಧಭಗವಂತನ" ಅತ್ಯಾಶ್ಚರ್ಯಕರವಾದ ಜನ್ಮ ಚರಿತ್ರೆ. ಕ್ರಯ ವಿ. ಪಿ. ಸಹಿತ 0-6-0.

ವಿಳಾಸ:— 1. ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು,
ಚಾಮರಾಜ ಪೇಟೆ, ಮೈಸೂರು.
2. ಶ್ರೀವಾಣೀವಿಲಾಸ ಬುಕ್ ಡಿಪೋ, ಮೈಸೂರು.
3. ದಿ. ಜನರಲ್ ಏಜನ್ಸಿ, ಮೈಸೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಸಾಲ.
ರಥಬೀದಿ ಮಂಗಳೂರು ದ. ಕ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	211,900—0—0
Paid up Capital	186,900—0—0
Deposits	481,989—11—9
Reserve Fund	27,530—4—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively. Terms on application.

Short-notice Deposits requiring one week's notice of withdrawal after one month received @ 2½% per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು "	225,000—0—0
ಪ್ರತಿಜ್ಞಾತ ಮೂಲ ಧನವು "	211,900—0—0
ಆಗತ ಮೂಲ ಧನವು "	186,900—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	481.989—11—9
ರಕ್ಷಿತ ಧನವು	27.530—4—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ವಾಲ್ಯಗಳಿಂದ ಕೇಳ್ಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ 21,685—0—0 ಸಂಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. May 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯುಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎ೦. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ, ಬಳ್ಳಾರಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧನಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೇಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ, ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"
ಮೈಸೂರು.

ಡೋಂಗರೆ
ಇವರ
ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ, ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪ್ಪಾಲ ಖರ್ಚು 0—4—0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ

ಬೇಗನೇ ಕೊಂಡುಕೊಳ್ಳಿ! ಬೇಗನೇ ಕೊಂಡುಕೊಳ್ಳಿ!!

ಇದೇ ಸುಕಾಲ!

ನಮ್ಮ ಕೂಡೆ ಪರಿಷ್ಕೃತ ಕೆಟಲಾಗುಗಳಾಗಲೀ ಸುಳ್ಳು ಸರ್ಟಿಫಿಕೇಟುಗಳಾಗಲೀ ಇಲ್ಲ. ಇತರರನ್ನು ದೂರಿ ನಮ್ಮನ್ನು ಹೊಗಳಿಕೊಳ್ಳುವುದೂ ಇಲ್ಲ. ನಮ್ಮ ವಾಚುಗಳನ್ನು ಸರ್ವರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದ ಬರೇ ಕೊಂಚ ಲಾಭದಿಂದ ನಾವು ವಾಚುಗಳನ್ನು ಮಾರುವೆವಷ್ಟೆ.

ನಂ. 1 ಪರಿಷ್ಕೃತವಾದ ಹೊಸನಮೂನೆಯ ಬೆಳ್ಳಿ ರಿಸ್ಟ್ ವಾಚು ಚರ್ಮದ ಕೈಕಟ್ಟು ಸಹಿತ, 10 ವರುಷಗಳ ಗ್ಯಾರಂಟು ರೂ. 5-8-0. ನಂ. 4 ಮಧ್ಯಮ ಸ್ಯಾಜು ಗನ್‌ಮೆಟಲ್ ವಾಚು 7 ವರುಷಗಳ ಗ್ಯಾರಂಟು ರೂ. 5-8-0. ನಂ. 5 ಲಿವರ್ ರೊಸ್ಕೊಪ್ ವಾಚು 1ನೇ ವಿಧ 20 ವರುಷಗಳ ಗ್ಯಾರಂಟು ರೂ. 7-8-0. ನಂ. 6 ಲಿವರ್ ರೊಸ್ಕೊಪ್ ವಾಚು 2ನೇ ವಿಧ 10 ವರ್ಷಗಳ ಗ್ಯಾರಂಟು ರೂ. 4-8-0. ನಂ. 10 ಎಲಾರ್ಮ್ ಟ್ಯಾಮ್‌ಪೀಸು 3 ವರುಷಗಳ ಗ್ಯಾರಂಟು ರೂ. 3-8-0. ನಂ. 11 ಬಿ ಟ್ಯಾಮ್‌ಪೀಸು 1ನೇ ವಿಧ 3 ವರುಷಗಳ ಗ್ಯಾರಂಟು ರೂ. 2-4-0. ನಂ. 13 ಕೆಲೆಂಡರ್ ಎಲಾರ್ಮ್ ಟ್ಯಾಮ್‌ಪೀಸು 6 ವರುಷಗಳ ಗ್ಯಾರಂಟು ರೂ. 4-8-0. ನಂ. 15. 8 ದಿವಸಗಳಿಗೊಂದಾವರ್ತಿ ಕೀಲಿ ಕೊಡುವ ಗನ್‌ಮೆಟಲ್ ವಾಚು 6 ವರುಷಗಳ ಗ್ಯಾರಂಟು ರೂ. 11. ನಂ. 16. 8 ದಿವಸಗಳಿಗೊಂದಾವರ್ತಿ ಕೀಲಿ ಬೆಳ್ಳಿ ವಾಚು 6 ವರುಷಗಳ ಗ್ಯಾರಂಟು ರೂ. 16-8-0. ನಂ. 17. 8 ದಿವಗಳಿಗೊಂದಾವರ್ತಿ ಕೀಲಿ ಕೊಡುವ ಜಾಪಾನ್ ಗಡಿಯಾರ ತಾರೀಕು ಸಹಾ ತೋರಿಸುವಂಥಾದ್ದು 10 ವರುಷಗಳ ಗ್ಯಾರಂಟು ರೂ. 12-8-0. ನಂ. 18. ಜೊಕರ್ ಎಲಾರ್ಮ್ ಟ್ಯಾಮ್‌ಪೀಸು 10 ವರುಷಗಳ ಗ್ಯಾರಂಟು ರೂ. 6-8-0.

ಮೇಲೆ ಹೇಳಿದ ಎಲ್ಲಾ ವಾಚು ಗಡಿಯಾರಗಳು ಗಟ್ಟಿಯಾದ ಲೋಹಗಳಿಂದ ಮಾಡಲ್ಪಟ್ಟದ್ದು. ಸಾಧಾರಣ ಲೋಹಗಳಿಂದ ಮತ್ತು ಹಿತ್ತಾಳಿಯಿಂದ ಮಾಡಲ್ಪಟ್ಟ ವಾಚು ಗಡಿಯಾರಗಳು ನಮ್ಮಿಂದಲೂ ಇತರರಿಂದಲೂ ಮೇಲೆ ಹೇಳಿದ ಕ್ರಯದ ಅರ್ಧಕ್ಕೆ ಕೊಡೋಣಾಗುವವು. ಪರಂತು, ಇವು ಗಟ್ಟಿಯಲ್ಲ.

ಬಹಳ ಅಗ್ಗ—ಕುಪನ್ ಕ್ರಮ—ಬೇಗನೇ ಕೊಂಡುಕೊಳ್ಳಿ!

6 ರೂಪಾಯಿಯ ವಾಚು, 3 ರೂಪಾಯಿಯ ಟ್ಯಾಮ್‌ಪೀಸು, ಬೀ ಟ್ಯಾಮ್‌ಪೀಸು, ಕೇಶರಂಜನ ಎಣ್ಣೆ ಇತ್ಯಾದಿಗಳು 4 ಆಣೆ 2 ಆಣೆಗೆ ದೊರೆಯುವ ವಿಧಾನವನ್ನು ಪತ್ರ ಬರೆದು ತಿಳಕೊಳ್ಳಬಹುದು.

ವಿಳಾಸ:— ನವಾಬ ಮಯಾನ್ನ ಎಂಡ್ ಕೊ.,
ವಾಚು ಮತ್ತು ಗಡಿಯಾರ ವ್ಯಾಪಾರಸ್ಥರು.
ಕಾದಿರಿ, ಅನಂತಪುರ ಡಿಸ್ಟ್ರಿಕ್ಟ್.

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.



ಅನ್ಸೋನಿಯ ಕಂಪೆನಿಯ ಜಿನ್ಯಾನ್ ಬಿ ಟ್ಯಾಮ್ ಪೀಸ್, ನಿಕ್ಕಲ್‌ಕೇಸ್, ಹಿಂದಿನಿಂದ ಕೀಲಿ ಕೊಡುವುದು. ಎತ್ತರಿಸಲ್ಪಟ್ಟ ಮುಖಬಿಲ್ಲೆ, ಪ್ರತಿ ಒಂದು ಕುಟುಂಬಕ್ಕೆ ಸುಲಭ ದರದಲ್ಲಿ ದೊರಿಯುವ ಉತ್ತಮ ಗಡಿಯಾರ, ಇದರ ಪ್ರಯೋಗವು ಈಗ ಸರ್ವಸಾಧಾರಣ ಎಲ್ಲರಿಗೂ ಗೊತ್ತದೆ. ಇದನ್ನು ಕೊಂಡುಕೊಳ್ಳುವವರ ಸಂಖ್ಯೆ ಪ್ರತಿದಿನವೂ ಹೆಚ್ಚಾಗುತ್ತಿದೆ.

ನಿಕ್ಕಲ್‌ಕೇಸ್ ರೂ. 2—8—0 (ದೊಡ್ಡ ಅಂಕೆ). ಎಲಾರ್ಮ್ ಸಹಿತ ರೂ. 4—8—0. ಟಪ್ಪಾಲು ಚಾರ್ಜು ಬೇರೆ.

ಸುಪಿರಿಯರ್ ರೈಲ್ವೇ ರೆಗ್ಯೂಲೇಟರ್.



ನಿಕ್ಕಲ್ ಬೆಳ್ಳಿಕೇಸ್, ಓಪನ್‌ಫೇಸ್, ಕೀಲೆಸ್, ದೊಡ್ಡ ಅಂಕೆಗಳು, ಬಲವಾದ ಮುಳ್ಳು, ನಿರ್ಭಿಡೆಯಾಗಿ ಪ್ರಯೋಗಿಸಬಹುದು. ಬಹಳವಾಗಿ ಮಾರುತ್ತಿರುವೆವು. ಅಗ್ಗ ಮತ್ತು ಚಲೋ ಗಡಿಯಾರ. ವ್ಯಾಟ್‌ಮೆಟಲ್ ಸರಪಣಿ ಸಹಿತ.

ರೂ. 2—15—0. ಟಪ್ಪಾಲು ಚಾರ್ಜು ಬೇರೆ.

ದಿ ಬೊಂಬೆ ಪೊಪ್ಯುಲರ್ ಏಜನ್ಸಿ,
ಡಾರವಿ, ಬೊಂಬೆ.
THE BOMBAY POPULAR AGENCY,
Dharvi Bombay.

ದೇಶಬಾಂಧವರೇ! ಇತ್ತ ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್
ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 96,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ. ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯು ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೊಜಿಟ್ ಹಣವನ್ನು ಗವರ್ನಮೆಂಟಿಗೆ ಕಳದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲ್ಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!! ಮದುವೆಯ ಮುಂಚಿತವಾಗಿಯೇ ಸತ್ತ ಹಣದ ದುಬಾರಿ ಹಣವು ಇಲ್ಲೇ ಕೊಡಲ್ಪಡುವುದು.

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ತರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಶನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,
ಕನ್ನಡ, ಮೈಸೂರು ಮತ್ತು ಕೊಡಗುಸಂಸ್ಥಾನದ ಮುಖ್ಯ ಏಜಂಟರು, ಉಡುಪಿ (ದ. ಕನ್ನಡ

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲ ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ ,, ,,	6-0-0	B ಅರಗಜ ,, ,,	1-0-0
ಕಸ್ತೂರಿ ಬತ್ತಿ ,, ,,	3-0-0	ಕಸ್ತೂರಿ ಬಿಲ್ಲೆ ,, ,,	2-0-0
ಜವಾಜಿ ಬತ್ತಿ ,, ,,	2-0-0	ಜವಾಜಿ ಬಿಲ್ಲೆ ,, ,,	1-0-0
ಪುಣಗಿನ ಬತ್ತಿ ,, ,,	1-8-0	ಕೇಸರಿ ಬಿಲ್ಲೆ ,, ,,	0-8-0
A ಪನ್ನೀರ್ ಬತ್ತಿ ,, ,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ ,, ,,	0-6-0	ದಶಾಂಗ ಡಬ್ಬಿ 1ಕ್ಕೆ	0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು.

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಮಳೆಗಾಲ! ಮಲೇರಿಯ!! ಶೀಘ್ರ ಕೊಂಡುಕೊಳ್ಳಿ!!!

ಹವೆಯ ಬದಲಾವಣೆಯಿಂದ ಉಂಟಾಗುವ ವ ಇತರ ತಲೆಪಿಡಿತ, ಕಣ್ಣುಬೇನೆ, ತಲೆಭಾರ, ನೆಗಡಿ, ಕಫ, ಖಾಸ, ಜ್ವರ, ಛಳಿಜ್ವರ, ಚಳಿವಾತ, ವಾಂತಿಭೇದಿ, ಉಷ್ಣಭೇದಿ ಇತ್ಯಾದಿ ನೂರಾರು ಜಾಡ್ಯಗಳೂ ಮನೆಮನೆಯಲ್ಲೂ ಪ್ರತ್ಯಕ್ಷವಾಗಿ ತೋರುತ್ತಿರುವ ಈ ಕಾಲದಲ್ಲಿ

ದಿವ್ಯ ಸಂಜೀವಿನೀ

ಯುಕೆಲಿಪ್ಟಸ್ ತೈಲ

ಎಂಬ ಅತ್ಯಪೂರ್ವಫಲಕಾರಿಯಾದ ಈ ಎಣ್ಣೆಯ ಸೀಸೆಯೊಂದನ್ನು ಗೃಹಸ್ಥರು ಸಂಗ್ರಹಿಸಿಕೊಳ್ಳಿ! ಈ ಎಣ್ಣೆ ಇದ್ದಲ್ಲಿ ಅವ ರೋಗದ ಸುಳಿವೂ ತೋರದು; ಎಂತಹ ರೋಗವನ್ನೂ ಇದು ತಡೆಗಟ್ಟಿ, ನಿರ್ಮೂಲಿಸಿ ಬಿಡುವುದು!! ಉಪಯೋಗಿಸಿದವರ ಅನುಭವಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ವಿಜ್ಞಾಪನೆಯು ನಮ್ಮೊಡನೆ ಇಲ್ಲ. ಔನ್ಸ್ ಸೀಸೆ 1ಕ್ಕೆ 5 ಆಣೆ. ವಿ. ಪಿ. ಬೇರೆ. ಒಂದೇ ಸಲ ಒಂದು ಡಜನ್ ಸೀಸೆಗಳನ್ನು ತರಿಸಿಕೊಂಡರೆ ರೂ. 3. ವಿ. ಪಿ. ಬೇರೆ.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ. ಕ.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

(ಧಾತುಪೌಷ್ಟಿಕ ವಜ್ರಾಂಗಪಾಕ.)

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು, ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ. ೩—೮—೦, ಒಮ್ಮೆಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೆಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಸಿಗುತ್ತವೆ. ಅನುಪಾನ ಪತ್ರಿಕೆ ಬಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— ವಿ. ಎಸ್. ಮೋಡಕ,
ಕರ್ನಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ತ್ರಿಕಾಲದರ್ಶಿ ಐನ.

ಭೂತ, ವರ್ತಮಾನ, ಭವಿಷತ್ ಕಾಲದಲ್ಲಿ ಆದ, ಆಗುವ ವಿಷಯಗಳನ್ನು ತಿಳಕೊಳ್ಳಬೇಕೆಂದಿದ್ದರೆ, ನಮ್ಮ ಪ್ರಖ್ಯಾತಿಪಟ್ಟ "ತ್ರಿಕಾಲದರ್ಶಿ ಐನ"ವನ್ನು ಕೊಂಡುಕೊಳ್ಳಿರಿ. ಈ ಐನವು ಹೂತಿಟ್ಟ ನಿಧಿ, ವ್ಯಾಪಾರದಲ್ಲಿ ಲಾಭ ಮತ್ತು ನಷ್ಟ, ಕೋರ್ಟಿನಲ್ಲಿ ಕಾರ್ಯಸಿದ್ಧಿ ಯಾ ಅಪಜಯ, ಪರೀಕ್ಷೆಯ ಫಲವನ್ನು ಮುಂದಾಗಿ ಹೇಳುವುದಲ್ಲದೆ ಮೃತ ಹೆತ್ತವರ ವಿಷಯವಾಗಿ ಹೆಂಡತಿ, ಮಗ, ಆಸ್ತಿ, ಕೆಲಸ, ಮನಸ್ಸಿನ ಅನುಮಾನ, ಜೀವಮಾನದಲ್ಲಿ ಎಂದಾದರೂ ನೀನು ಐಶ್ವರ್ಯವಂತನಾಗುತ್ತೀಯೋ, ಯಾ ನಿನಗೆ ದೇಶದಿಂದ, ಪರದೇಶದಿಂದ ಐಶ್ವರ್ಯವು ಬರುತ್ತದೋ ಎಂಬದನ್ನು ತಿಳಿದು ಹೇಳುವುದು. ನಿನ್ನ ದೂರದಲ್ಲಿರುವ ಸ್ನೇಹಿತರು, ಸಂಬಂಧಿಕರ ವಿಷಯವಾಗಿ ಈ ಐನವು ತಿಳಿಸುವುದು. ಪ್ರಸಿದ್ಧ ಪುರುಷರಿಂದ ಸರ್ಟಿಫಿಕೇಟುಗಳು ದೊರಕಿರುವವು.

ನಂಬ್ರ 1. ಸಾಧಾರಣ ಗ್ಲಾಸ್ ಐನ ರೂ. 2—9—0, ನಂಬ್ರ 2. ಕ್ರಿಸ್ಟಲ್, ಗ್ಲಾಸ್ ಐನ ರೂ. 3—9—0, ನಂಬ್ರ 3. ದೊಡ್ಡ ಮತ್ತು ಬಹಳ ಕಾಲ ಉಳಿಯುವ ಐನ ರೂ. 6—0—0. ಪೋಸ್ಟೇಜು ಮತ್ತು ಪೇಕಿಂಗ್ ಸಹಿತ. ಖಾಯಿಸ್ ಆಗದಿದ್ದ 1 ಮತ್ತು 2ನೇ ನಂಬ್ರದ ಐನವನ್ನು 24 ತಾಸಿನೊಳಗೆ ಹಿಂದೆ ಕಳುಹಿಸಿದರೆ ರೂ. 2 ಮತ್ತು ರೂ. 2—8—0 ಕೊಟ್ಟು ಹಿಂದೆ ತಕ್ಕೊಳ್ಳುವೆವು. ೩ನೇ ನಂಬ್ರದ ಐನವನ್ನು ಹಿಂದೆ ಪಡೆಯಲಾರೆವು.

Patel Ashabhai Vagjibhai,
Post Karamsad Dt. KAIRA,
B. B. & C. I. RAILWAY.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.
3 ಡಬ್ಬಿಗಳಿಗೆ 1—0—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0.

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

AMRUTANJAN

ತಲೆನೋವು, ವಾತ, ಎದೆ ನೋವು,
ಸಂಧಿ ವಾತ, ಶಿರೋಭಾರ, ಸೊಂಟದ ನೋವು, ಕಫ,
ಅರ್ಧಾಂಗವಾಯು, ಹಲ್ಲು ನೋವು, ಘಾಯ,
ಶೀತ, ಕೆಮ್ಮು ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು 0-8-0 ಡಜನ್ ಒಂದಕ್ಕೆ 5-4-0 ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ.
ಮರ್ಕೆಂಟಾಯಿಲ್ ಮಿಶನ್ ಬ್ರೇಂಚ್.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಪೆರ್ಲ್ಸ್ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.
ಕೊಚ್ಚಿಕಾರ್ ಬ್ರದರ್ಸ್.
ಕುಮಟೆ ಆರ್. ಪಿ. ಪೈ ಎಂಡ್ ಕಂಪನಿ.

ಅಮೃತಾಂಜನದ ಸೆಂಪಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಟಿನಲ್ಲಿ ದೊರೆಯುವದು.

ಅಮೃತಾಂಜನ ಡಿಪೊ,
109 ಫ್ರೇಯರ್ ರೋಡ,
ಮುಂಬಯಿ.

Printed & Published by V. S. Kamath at the Mangalore Trading Association's Sharada Press, Mangalore,

---

Registered No. 948 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ VIII ಮಂಗಳೂರು ತಾ. 22ನೇ ಶುಕ್ರವಾರ ಮೇ 1914. ಸಂಚಿಕೆ 21

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನವೆಂಟ್ ಕನ್ನಡ ಟ್ರಾನ್ಸಲೇಟರ್ ಮ| ರಾ| ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಸ್ತ್ರೀಮಲೆಯಾಳವೆಂಬ ಸಂಪೂರ್ಣ ಕಥೆ. ರಾವ್ ಬಹದ್ದೂರ್ ವಿರೇಶ ಲಿಂಗಂಪಂತರೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ ಬಹು ರಸಭರಿತವಾದ ಕಲ್ಪನಾಕಥೆ. ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ಣಾಟ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಬೆಲೆ ೮ ಆಣೆ.

೨. ಕೃಷ್ಣಾಕುಮಾರಿ—ಈ ಅದ್ಭುತವಾದ ವಚನ ನಾಟಕವು ಮೂಲ ಬಂಗಾಳಾ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ. ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು. ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಅಚ್ಚಾಗಿದೆ. ಬೆಲೆ ೧೦ ಆಣೆ.

೩. ಸದಾಹಾರ ವಿವೇಚನೆ—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು. ಬೆಲೆ ೨ ಆಣೆ.

ಈಗಲೇ ಅಚ್ಚಾದುದು
ಕೆಲವೇ ಪ್ರತಿಗಳಿವೆ

ರಾ. ಎಂ. ಎನ್. ಕಾಮತರವರಿಂದ ರಚಿಸಲ್ಪಟ್ಟ
ಕನ್ನಡ ಸಂಗೀತ ನಾಟಕ

ಚಂದ್ರಹಾಸಾಭ್ಯುದಯ.

ಬೆಲೆ ನಾಲ್ಕಾಣೆ ಮಾತ್ರ
ವಿ. ಪಿ. ಚಾರ್ಜು ಬೇರೆ.

ಅತೀ ಮನೋಹರವಾದ ಮುದ್ರಣ! ಮನೋರಂಜಕವಾದ ಗದ್ಯಪದ್ಯ!! ಅನೇಕ ವಿದುಷಿಯರಿಂದಲೂ ನಾಟಕಕಂಪೆನಿಯವರಿಂದಲೂ ಆದೃತವಾದುದು!! ಸರ್ವಾಂಗಸುಂದರವಾದ ಈ ಸಂಪೂರ್ಣ ನೂತನ ಕೃತಿಯ ಪ್ರಥಮ ಮುದ್ರಣವು ಈಗತಾನೆ ಪ್ರಕಟಿಸಲ್ಪಟ್ಟು, ಮೊದಲೇ ರಿಜಿಸ್ಟರಾದ ಆರ್ಡರುಗಳನ್ನು ತೀರಿಸಿದ ನಂತರ ಈಗ ಕೆಲವೇ ಪ್ರತಿಗಳು ಉಳಿದಿವೆ. ಸಂಗೀತಪ್ರಿಯರಿಂದಲೂ ನಾಟಕಕಲಾವಿಶಾರದರಿಂದಲೂ ಸಂಗ್ರಹಿಸಲು ಯೋಗ್ಯಮಾದುದು. ಗ್ರಾಹಕರು ತ್ವರೆಮಾಡಿ!

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸಾರ 0—2—0.

ಶೆಖೆ ಕಾಲದ ರಜೆಯು ತೀರಿ ಶಾಲೆಗಳು ಇನ್ನು ಬೇಗನೆ ತೆರಿಯೋಣಾಗುತ್ತಲಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟೆನ್ ಪೇನುಗಳು ಈಗಲೇ ಬಂದಿವೆ. ಕ್ರಯ—1ಕ್ಕೆ ರೂ. 1—14—0ರಿಂದ ರೂ. 7—14—0ರ ವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂಡ್ರಾ, ವೊಟರ್‌ಮೇನ್, ಸ್ವಾನ್, ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ:—ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ರಥಬೀದಿ, ಮಂಗಳೂರು.

Madeena Watch Co., Madras

ದಿ. ನ್ಯೂ ಪೆಂಡುಲಂ ವಾಚ್ **Rs, 3—15—0.**

ಇದು ಒಂದು ಆಶ್ಚರ್ಯಕರವಾದ ಘಡಿಯಾರ.

Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಪಿಸಿಸಿನಂತೆ ಮೇಜಿನ ಮೇಲೂ ನಿಂದಿರಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೊಪ್ ವಾಚು ಕ್ರಯ	,,	1--12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2--12—0
ಸೆಲ್ಫ್ ಕ್ಲೊಸಿಕ್		3--15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1--13—0
ಚಿಕ್ಕ ಸೈಜು ಲೇಡಿವಾಚ್		2-15—0

ಕಾರೇಜ್ ಹಾರ್ಮೋನಿಯಂ ರೂ. 20=0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಫಿಡಲು ರೂ. 8—0—0.

ಅಡ್ರಸ್:—ಮೆಡಿನಾವಾಚ್ ಕಂಪೆನಿ,
ನಂ. ೨೧ ಆನೆಕಾಂಕೋರ್ಣ ಬೀದಿ, ಜಿ. ಟಿ. ಮದ್ರಾಸು.

THE BOMBAY LIFE ASSURANCE CO. LTD.

(Established 1908).
HEAD OFFICE BOMBAY

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

„There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co. Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A, F. I. A., (London.)

Medical Referee:—Dr. R. Row, M. D. D. Sc. London.)

Manager:-Mr. K. S. Aiyar, Esq. B. A., F. S. A. A. (London). Justice of the Peace, The Honorary Presidency Magistrate and fellow of the Bombay University.

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು).
ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಬಗ್ಗೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್‌ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊಲಿಕ್ ಮಾರ್ಸ್ ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಎಕ್ಚುಯುಯರಿ:—ಮೆ। ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ ಎ. (ಲಂಡನ್)

ಮೆಡಿಕಲ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ ಡಿ. ಎಸ್. ಸಿ. (ಲಂಡನ್).

ಮ್ಯಾನೇಜರ್:—ರಾ। ಕೆ. ಎಸ್. ಅಯ್ಯರ್ ಬಿ. ಎ. ಎಫ್. ಎಸ್. ಎ. ಎ (ಲಂಡನ್.) ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟ್ ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಉಡ್ಪಿ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಇಲೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಆವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಆತನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಬ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಹಿಂದೂಸ್ಥಾನದ ಜೀವವಿಮೇ ಸಂಘಗಳಲ್ಲಿ
ಅತಿ ಭದ್ರವಾದ್ದನ್ನು ಸೂಚಿಸುವಂಥಾದ್ದು:—

ಯುನೈಟೆಡ್ ಎಸ್ಯುರೆನ್ಸ್ ಎಂಬುವ ವಿಮೆ ಸಂಘವು.

ವಿಮೆ ಉತ್ತರಾಯಿಸುವ ಹಲವು ನೂತನ ವಿಧಾನಗಳಿಂದ ಕೂಡಿರುತ್ತದೆ. ವಿವಾಹ ಮತ್ತು ಜೀವವಿಮೆಗಳ ಸಂಘಗಳಲ್ಲಿ ಈ ತನಕ ಇಲ್ಲದ-ಅಗತ್ಯವಾಗಿ ಬೇಕಾಗಿರುವ ವಿಧಾನಗಳು ಇದರಲ್ಲಿರುವವು.

೭೫ ವರುಷಗಳ ಪ್ರಾಯದವರೂ ಸಹ ವಿಮೆ ಉತ್ತರಾಯಿಸುವ ವಿಶೇಷ ಕ್ರಮ. ೩ ತಿಂಗಳನಂತರ ವಿಮೆ ಪತ್ರವು ಸಂಪೂರ್ಣತ್ವವನ್ನು ಹೊಂದಬಹುದು.

ವಿವಾಹ ವಿಮೆಗಳಲ್ಲಿ ೧೮ ತಿಂಗಳುಗಳ ನಂತರ ವಿಮೆ ಕಂತುಗಳನ್ನು ತೆರಬೇಕೆಂತಿಲ್ಲ. ೩ ತಿಂಗಳ ನಂತರ ಈ ಸಂಬಂಧದ ವಿಮೆ ಪತ್ರವು ಸಹ ಸಂಪೂರ್ಣವಾಗಬಹುದು.

ಮೇಲೆ ಕಾಣಿಸಿದ ಪ್ರಯೋಜನಗಳ ಹೊರತು ವಿವಾಹ ಉಪನಯನ ಮ... ಜೀವವಿಮೆಗಳ ಸಾಮಾನ್ಯ ಮತ್ತು ಎನ್ಡೊವ್‌ಮೆಂಟ್ ಕ್ರಮಗಳಿಂದ ವಿಮೆದಾರರು ತೆತ್ತ ದುಬಾರೆ ಮೊಬಲಗು ದೊರಕುವ ಸಂಭವವಿರುವವು. ಸಂಘದ ಭದ್ರತೆಗೆ ತಕ್ಕುದಾಗಿ ಸುಲಭವಾದ ವಿಮೆ ದರಗಳು.

ಒಳ್ಳೇ ಕಮಿಶನ್ ಮತ್ತು ಸಂಬಳದ ಮೇಲೆ ಏಜಂಟರುಗಳು ಬೇಕಾಗಿರುವರು.

ಈ ಸಂಘದಿಂದ ವಿಮೆ ಹಣ ಪಡದವರ ಹೆಸರುಗಳ ಪಟ್ಟಿಗೂ ಏಜನ್ಸಿಗಳ ಶರ್ತಕ್ಕೂ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

B. S. Nayak & Co.,	ಬಿ. ಎಸ್. ನಾಯಕ್ ಎಂಡ್ ಕೊ.
Chief Agents,	ಚೀಫ್ ಏಜಂಟರು,
Udipi, S. C.	ಉಡುಪಿ ದ.ಕ.

CANNADA INDIAN PENAL CODE.

ಕನ್ನಡ ಇಂಡಿಯನ್ ಪೆನಲ್ ಕೋಡ್.

ಇದರಿಂದ ಮೈಸೂರ್, ಮದ್ರಾಸ್ ಬೋಂಬಾಯಿ ಜಿಲ್ಲಾ
ಕನ್ನಡ ಭಾಷಾ ವಾಚಕಮಹಾಶಯರಿಗೆ
ತಿಳಿಯಪಡಿಸುವದೇನಂದರೆ:—

ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಕಳಾನಿಧಿ ಮುದ್ರಾಕ್ಷರಶಾಲೆಯೊಳ್ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲಿಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡೆಸಬೇಕಾದ ಆಚರಣೆಗಳಂದರೆ:—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ? ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ? ವಾರಂಟು ಕೊಡತಕ್ಕದ್ದೇ? ಜಾಮಿನ್ ತೆಗೆದುಕೊಂಡು ಬಿಡಬಹುದೇ? ರಾಜೀಯಾಗಬಹುದೇ? ರಾಜೀಯಾಗತಕ್ಕದ್ದಲ್ಲವೇ? ಎಂಬ ತಪಶೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ, ಇತರ ಸಮಸ್ತ ಕೈಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು.

ತಾ। ಕ। ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕ್ರಮಪ್ರವೇಶ್ಯ ಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆ ಎಳಿಯುವುದು, ಆಸಾಮಿಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಯೆ ಅಕ್ರಮ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವುದು.

ಕನ್ನಡದಲ್ಲಿ ಇದುವರಿಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು. ಕ್ರಯ ಗ್ಲೇಜ್ ೨—೮—೦. ರಫ್ ೨—೦—೦. ಟಪ್ಪಾಲು ಚಾರ್ಜು ೦—೪—೦. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಪ್ರೊಪ್ರೈಟರ್ ಕಳಾನಿಧಿ ಪ್ರೆಸ್, ಚಿಕ್ಕಪೇಟೆ ಬೆಂಗಳೂರುಸಿಟಿ.

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ
ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರ.

MUSICAL MART

Kavi & Sons,

MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವುದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ಸ್ಪಷ್ಟವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೬೧ ವಿಷಯಗಳ ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗೆದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರ್ಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೭೦೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲದೆ ಸಾಮಾನ್ಯರಿಗೂ ವಿಷದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ:—
ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ.

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಹಂಪನಕಟ್ಟಾ, ಮಂಗಳೂರು.



ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವವರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾವವು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವನು ಆಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುವಾಸವಾಗಿರುತ್ತದೆ ಇದು ಎಲ್ಲಾ ಕಡೆಗಳಲಿ ಮಾರಲ್ಪಡುವವು. ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3-4-0. ಅರ್ಧ ಬಾಟಿಗೆ 1-12-0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ್ಗ! ಅಗ್ಗ!! ॥ ಕುಟುಂಬ ಜೀವನಿ ॥ ಧರ್ಮ! ಧರ್ಮ!!

ಪ್ರಿಯ ಭಾರತಿಯ ಮಹನಿಯರೇ!

ಎಲ್ಲಾ ರೋಗಗಳನ್ನು ಗೆಲ್ಲುವ ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬ ಪೆಟ್ಟಿಗೆಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ.

,,ಅಕ್ಕರದಿಂ ಚಿಕ್ಕ ಬಂದು ಸಕ್ಕರೆಯಂ ನೆಕ್ಕಿದಂತೆ |
ರಕ್ಕರೆಲ್ಲಾ ಒಕ್ಕಲಿಗರ ರೊಕ್ಕವೆಲ್ಲ ಮುಕ್ಕಿ ಪೋದರ್ ‖ " ಎಂಬಂತೆ

ಈಗ ಇಮಿಟೇಶನ್ ಬಳೆ ತುಂಡುಗಳು ರತ್ನವೆಂಬ ಪೆಸರಿನಿಂದ ಎಲ್ಲಿ ನೋಡಿದರೂ ತುಂಬಿ ಹೋಗಿ, ಕಲ್ಯಾಣಿಗೆ ಖ್ಯಾತ್ ಕಡಿಮೆ ಆದ ಹಾಗೆ ಈಗಿನವರು ಠಕ್ಕಿನಿಂದಲೇ ಸುಲಿಗೆಯಾದರು.

ಪ್ರಿಯ ಬಾಂಧವರೇ! ನಮ್ಮನ್ನು ಹಾಗೆ ಗ್ರಹಿಸದೇಡಿರಿ. ಅಮೂಲ್ಯವಾದ ಮಾಣಿಕ್ಯವಾದರೂ ಹೇಮಾಶ್ರಯಬೇಕೇ ಬೇಕಾದ್ದರಿಂದ ನಮ್ಮನ್ನು ಆಶ್ರಯಕೊಡಿರಿ! ಪರೀಕ್ಷಿಸಿನೋಡಿರಿ!!

ನಮ್ಮ ವೈದ್ಯಾಲಯದಲ್ಲಿ ಶುಲಭವಾಗಿ ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ ಬಹಳ ಶೋಧನೆಯಿಂದಲೂ, ವನೌಷಧಗಳಿಂದಲೂ, ಸಿದ್ಧಕಲ್ಪ ಭೈರಾಗಿ ಪ್ರಯೋಗಗಳಿಂದಲೂ ತಯ್ಯಾರಿಸಿದ ಪೌಡರು ಮಾತ್ರೆಗಳೂ, ಲೇಹ ಚೂರ್ಣಗಳೂ, ತೈಲ್ಯ ಘೃತಗಳೂ, ಆಸವಾರಿಷ್ಟಗಳೂ, ಟೋನಿಕ್ ಅರಕ್‌ಗಳೂ ಬಡವರಿಗೆ ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಶಿಕ್ಕುತ್ತವೆ. ಕ್ರಯ ನಿರ್ಣಯಕ್ಕೆ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ; ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು. 10 ರೂಪಾಯಿಗಳ ಮೇಲೆ ಶೇಕಡಾ ರೂ. 10ಡಿಸ್ಕೌಂಟ ಶಿಕ್ಕುವದು. ತರಿಸಿಕೊಳ್ಳಿರಿ. ಸಂಘಕ್ಕೆ ಆಶ್ರಯ ಕೊಡಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೇನೇಜರ್.

S.U.N.&Co
BENARES CITY.
KASHI
VISHWESHWAR.

S. U. N. & CO.,
BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ತಮ್ಮ ವಿಳಾಸ:— ಯುಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ದಿ ಯುನಿವರ್ಸಲ್ ಎಶ್ಶ್ಯೂರೆನ್ಸ ಕಂಪೆನಿ ಲಿಮಿಟೆಡ್,

ಹೆಡ್ ಆಫೀಸು—191, ಬೌ ಬಜಾರ್, ಕಲ್ಕತ್ತ.

ಸಬ್ ಏಜಂಟರಿಗೆ ಮತ್ತು ಕೆ. ಎಸ್. ರಾವ್ ಬ್ರದರ್ಸ್, ಮಂಗಳೂರು ಇವರ ಮೂಲಕ ಸೇರಿದ ಮೆಂಬರರಿಗೆ—

ನೋಟೀಸು.

ಕೆ. ಎಸ್. ರಾವ್ ಬ್ರದರ್ಸ್ ಮಂಗಳೂರು ಇವರ ಏಜನ್ಸಿಯನ್ನು ರದ್ದು ಮಾಡಿ, ಕಂಪೆನಿಯ ಚೀಫ್ ಏಜಂಟರಾಗಿರುವ ಮೆಸ್ಸರ್ಸ್ ಲಕ್ಷ್ಮಣ ರಾವ್ ಬ್ರದರ್ಸ್‌ರವರಿಗೆ ಅವರ ಚಾರ್ಜನ್ನು ಕೊಟ್ಟಿರುತ್ತದೆಂಬ ವಿಷಯವನ್ನು ಮೇಲೆ ಕಾಣಿಸಿದ ಮೆಂಬರರ ಲಕ್ಷಕ್ಕೆ ಈ ಮೂಲಕ ತರೋಣಾಗಿಯದೆ. ಮೇಲೆ ಹೇಳಿದ ಸದರಿ ಮೆಂಬರರು ತಮ್ಮ ವಂತಿಗೆಯನ್ನು ಸೀದಾ ಉಡ್ಪಿ ಆಫೀಸಿಗೆ ಯಾ ಮೆಸ್ಸರ್ಸ್ ಜೋಸೆಫ್ ಬ್ರದರ್ಸ್, ಕಲ್ಪಣೆ, ಮಂಗಳೂರು—ಇವರಿಗೆ ಪಾವತಿ ಮಾಡಬೇಕೆಂಬದಾಗಿ ವಿಜ್ಞಾಪಿಸುತ್ತೇವೆ.

ಮೇಲಿನ ವಿಷಯದಿಂದ ಮೆಂಬರರು ಕಲವರಿಕೆ ಪಡಲು ಯಾ ಯಾವದೊಂದು ಅಸತ್ಯ ಕಥನಗಳು ಎದ್ದರೆ ದಿಗಿಲು ಪಡಲು ಕಾರಣವಿಲ್ಲವೆಂಬದನ್ನೂ ಈ ಮೂಲಕ ಮೆಂಬರರ ಚಿತ್ತಕ್ಕೆ ತರೋಣಾಗಿ ಅಂಥಾದಕ್ಕೆ ಗಮನ ಕೊಡಬಾರದೆಂತ ವಿಜ್ಞಾಪಿಸೋಣಾಗಿಯದೆ.

ಜೆ. ಸರ್ಕಾರ್,
ಸೆಕ್ರಿಟರಿ.

ವಿದ್ಯಾಸಾಗರ ಬುಕ್ ಡಿಪೋ, ಬೆಂಗಳೂರು ಸಿಟಿ.

ನಮ್ಮಲ್ಲಿ ಸರ್ಕಾರಿ, ಸ್ಕೂಲ್ ಪುಸ್ತಕ ಸಂಸ್ಕೃತ, ಕನ್ನಡ, ತೆಲುಗು, ಭಾಷೆಗಳಲ್ಲಿ ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ ಮತ್ತು ಉತ್ತಮ ಕಾದಂಬರಿಗಳೂ ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರಿಯುತ್ತವೆ.

ಕೆಲವು ಅಪೂರ್ವ ಪುಸ್ತಕಗಳು.

ಸಹಾಯವಿಲ್ಲದೆ ಇಂಗ್ಲಿಷು ಕಲಿಯುವ ಪುಸ್ತಕ ೫ ಭಾಗವುಳ್ಳದ್ದು ದೊಡ್ಡ ಪುಸ್ತಕ. ಬೆಲೆ ೧—೮—೦

ಚಂದಕಳಾ ಕಲಾನಾಥ ಮುಂತಾದ ಉತ್ತಮ ಕಾದಂಬರಿಗಳು ನಮ್ಮಲ್ಲಿ ದೊರಿಯುತ್ತವೆ.

[ಕನಕಾಲುತಾ ಅಥವಾ ಕಮಲಿನೀ ಚರಿತಂ	೦—೬—೦
ದಿವಾನ್ ರಂಗಾಚಾರ್ಯರ ಜೀವನ ಚರಿತ್ರೆ	೦—೬—೦
ದಿವಾನ್ ಶೇಷಾದ್ರಯ್ಯರವರ ಜೀವನ ಚರಿತ್ರೆ ಇಂಗ್ಲಿಷ್	೦—೬—೦
ಜಪನರುನ್ನತ ಸ್ಥಿತಿಗೆ ಮೂಲಾಧಾರ	೧—೪—೦
ಆರ್ಯ ಕೀರ್ತಿ	೦—೧೦—೦
ವೈದ್ಯಸಾರ ಸಂಗ್ರಹ	೩—೦—೦

ಇದು ಇಂಡಿಯ ದೇಷದಲ್ಲೆಲ್ಲಾ ದೊಡ್ಡ ವೈದ್ಯ ಗ್ರಂಥಗಳು ಘನ ಪಂಡಿತರಿಂದ ಪರಿಶೋಧಿಸಲ್ಪಟ್ಟದ್ದು.

ಹನುಮದ್ವಿಲಾಸ	೦—೮—೦
ಋಗ್ವೇದ ನಿತ್ಯ ಕರ್ಮ	೦—೪—೦

ಶೋಭನೆ, ನರಬಲಿ, ಯಾಮಿನಿ ಈ ಪುಸ್ತಕಗಳನ್ನು ಒಂದು ಸರ್ತಿ ಓದಿದರೆ ಯಾವಾಗಲೂ ಓದುತ್ತಿರಬೇಕೆಂದು ಇಷ್ಟವಾಗುತ್ತದೆ.

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್.
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 22ನೇ ಮೇ 1914.

ಹಿಂದೂ ಮತಾಭಿಮಾನವು.

ಜನಾಂಗಾಭಿವೃದ್ಧಿಗೂ ಜನಾಂಗದ ಐಕ್ಯಕ್ಕೂ ಭಾರತೀಯರು ಅನ್ಯಮತವನ್ನವಲಂಬಿಸುವುದರಿಂದ ವಿಶೇಷ ತೊಡಕುಂಟಾಗುವುದೆಂಬುದಾಗಿ ಹಲವು ದೇಶವತ್ಸಲರ ಅಭಿಪ್ರಾಯವಿರುವುದು. ಇಂಥಾ ಅಭಿಪ್ರಾಯವಿದ್ದರೂ ಹಿಂದುಗಳಲ್ಲಿ ಕೆಳತರಗತಿಯವರು ಮತಾಂತರಗೊಂಡು ಹೋಗದಂತೆ ಬೇಕಾದ ಪ್ರಯತ್ನಗಳನ್ನು ಮೇಲುಜಾತಿಯವರು ಈತನಕ ಸರಿಯಾಗಿ ಕೈಕೊಂಡಂತೆ ತೋರುವುದಿಲ್ಲ. ಇದರ ಬದಲಾಗಿ ಕೆಳತರಗತಿಯವರು ಅನ್ಯಮತವನ್ನವಲಂಬಿಸುವಂತೆ ಸಹಾಯಕರವಾದ ಕಟ್ಟಳೆಗಳನ್ನು ಮೇಲುಜಾತಿಯವರು ಆಚರಿಸುತ್ತಿರುವರು. ಈ ಕಟ್ಟಳೆಯ ಪ್ರಕಾರ ಹಿಂದೂ ಮತಸ್ಥನಾಗಿದ್ದರೂ ಸ್ಪರ್ಶಹೀನನೆಂದು ಮೇಲುಜಾತಿಯವರಿಂದ ತುಚ್ಛೀಕರಿಸಲ್ಪಡುವ ಕೆಳಜಾತಿಯವನು ಅನ್ಯಮತವನ್ನವಲಂಬಿಸಿದೊಡನೆ ಸರ್ವರಿಗೂ ಸ್ಪರ್ಶಯೋಗ್ಯನಾಗುವನು. ಮೇಲುಜಾತಿಯವರ ವರ್ತನೆಯು ಹೀಗಿದ್ದರೂ ತಾವು ಹಿಂದೂ ಮತವನ್ನು ಸರ್ವಥಾ ಬಿಡಬಾರದೆಂಬ ಅಭಿಮಾನದಿಂದ ಸ್ಪರ್ಶಹೀನರೆಂದು ಮೇಲುಜಾತಿಯವರಿಂದ ಎಣಿಸಲ್ಪಟ್ಟ ವರ್ಗದವರು ತಮ್ಮೊಳಗೆ ಹಿಂದೂ ಮತ ಧರ್ಮ ಸಂಸ್ಥಾಪನೆಗೆ ಬೇಕಾದ ಪ್ರಯತ್ನಗಳನ್ನು ಕೈಕೊಂಡಿರುವರು. ಇಂಥಾ ಪ್ರಯತ್ನಗಳಲ್ಲಿ ಮೇಲುಜಾತಿಯವರ ಪೂರ್ಣ ಸಹಾನುಭೂತಿಯು ಇರಬೇಕೆಂತ ತಿರುವಾಂಕೋಡು ಸಂಸ್ಥಾನದ ದಿವಾನರಾಗಿದ್ದ ದಿವಾನ್ ಬಹದ್ದೂರ್ ರಾಜಗೋಪಾಲಾಚಾರ್ಯರವರು ಹೇಳಿದ ಮಾತುಗಳನ್ನು ಇಲ್ಲಿಯ ಮೇಲುಜಾತಿಯವರು ಲಕ್ಷ್ಯಕ್ಕೆ ತಂದುಕೊಳ್ಳುವುದು ಅಗತ್ಯವಾಗಿರುವುದು.

ಮಲೆಬಾರಿನ ತೀಯರರ ಬಗ್ಯೆಯೂ, ಇಲ್ಲಿಯ ಬಿಲ್ಲವರ ಬಗ್ಯೆಯೂ ದೇವಸ್ಥಾನಗಳನ್ನು ಏರ್ಪಡಿಸಿದ ತಿರುವಾಂಕೋಡು ಸಂಸ್ಥಾನದಲ್ಲಿ ಜನ್ಮವೆತ್ತಿದ ಶ್ರೀನಾರಾಯಣ ಧರ್ಮ ಪರಿಪಾಲನಾಯೋಗ ಎಂಬ ಸಂಸ್ಥೆಯ ಪರಿಚಿತಿಯು ವಾಚಕರಲ್ಲಿರಬಹುದು. ಪಶ್ಚಿಮ ಕರಾವಳಿಯ ಸಮಾಜದಲ್ಲಿ ಹಿಂದುಳಿದ ಜಾತಿಯವರು ಅನ್ಯಮತವನ್ನವಲಂಬಿಸದಂತೆಯೂ, ಹಿಂದೂ ಧರ್ಮಾನುವರ್ತನೆಯು ಇವರಲ್ಲಿ ತಕ್ಕುದಾದ ರೀತಿಯಲ್ಲಿ ರೂಢಮೂಲವಾಗುವಂತೆಯೂ ಪ್ರಯತ್ನಿಸುವುದೇ ಈ ಧರ್ಮಪರಿಪಾಲನಾಯೋಗದ ಮುಖ್ಯ ಉದ್ದೇಶವಾಗಿದೆ. ರಾಜಗೋಪಾಲಾಚಾರ್ಯರು ತಮ್ಮ ದಿವಾನ್ ಪದವಿಯಿಂದ ನಿವೃತ್ತರಾಗುವ ಸಂದರ್ಭದಲ್ಲಿ ಶ್ರೀ ನಾರಾಯಣ ಧರ್ಮಪರಿಪಾಲನಾಯೋಗದವರಿಂದ ಒಂದು ಮಾನಪತ್ರವನ್ನು ಪಡೆಯುವವರಾದರು. ಬ್ರಾಹ್ಮಣ ಮಹನೀಯರಾದ ರಾಜಗೋಪಾಲಾಚಾರ್ಯರವರು ತಿರುವಾಂಕೋಡಿನ ತೀಯರರ ಪರವಾಗಿ ಯಾವ ಭಾವವನ್ನು ತೋರಿದರೆಂಬುದು ಈ ಮಾನಪತ್ರದಿಂದ ವ್ಯಕ್ತವಾಗುತ್ತದೆ. ಸರಕಾರದ ಶಾಲೆಗಳಲ್ಲಿಯೂ, ಸರಕಾರಿ ಉದ್ಯೋಗಗಳಲ್ಲಿಯೂ ತೀಯರರಿಗೆ ಪ್ರವೇಶವು ಸರಿಯಾಗಿ ದೊರಕುವಂತೆ ಪ್ರಯತ್ನಿಸಿದ ಈ ದಿವಾನರ ಶ್ರಮವನ್ನು ಈ ಮಾನಪತ್ರದಲ್ಲಿ ಕೊಂಡಾಡಿರುತ್ತಾರೆ; ರಾಜಕೀಯ ಹಕ್ಕು ಸ್ವಾತಂತ್ರ್ಯಗಳನ್ನು ಪಡಿಯುವುದರಲ್ಲಿ ಮಾಡಿದ ಸಹಾಯವನ್ನೂ ಶ್ಲಾಘಿಸಿರುವರು. ತೀಯರರ ದೇವಸ್ಥಾನಕ್ಕೆ ತಾನಾಗಿಯೇ ಬಂದು ಪ್ರಸಾದವನ್ನು ಪಡಕೊಂಡು ಹೋದ ದಿವಾನರ ಧರ್ಮ ಬುದ್ಧಿಯನ್ನೂ, ಚಿತ್ತ ಔದಾರ್ಯವನ್ನೂ ತೀಯರರು ವಿಶೇಷವಾಗಿ ಪ್ರಶಂಸಿಸಿರುವರು. ದಿವಾನರವರು ಈ ಮಾನ ಪತ್ರಕ್ಕೆ ದಯಪಾಲಿಸಿದ ಉತ್ತರವು ದಿವಾನರ ಈ ಉದಾರ ಬುದ್ಧಿಯನ್ನು ಮೇಲು ಜಾತಿಯ ಇತರರಲ್ಲಿಯೂ ಪ್ರೇರೇಪಿಸುವಂತಿರುವುದು. ಹಿಂದುಗಳಾಗಿಯೇ ಇದ್ದುಕೊಂಡು ಹಿಂದೂ ಧರ್ಮಾನುಸರಣೆಯನ್ನು ತಮ್ಮೊಳಗೆ ಸಾಧಿಸುತ್ತಿರುವ ಬಹಳ ಶ್ರಮಮಯವಾದ ತೀಯರರ ಈ ಪ್ರಯತ್ನಗಳಲ್ಲಿ ತನ್ನ ಪೂರ್ಣ ಸಹಾನುಭೂತಿಯು ಇರುವುದು. ಶ್ರೀ ರಾಮಾನುಜರಿಂದ ಸಂಸ್ಥಾಪಿಸಲ್ಪಟ್ಟ ಬ್ರಾಹ್ಮಣ ವರ್ಗಕ್ಕೆ ತಾನು ಸೇರಿದವನಾಗಿರುವೆನು. ದೇವರ ದೃಷ್ಟಿಯಲ್ಲಿ ಸರ್ವರೂ ಸಮಾನರು ಮತ್ತು ಮಹನೀಯರು ಯಾವ ಜಾತಿಯವರಲ್ಲಿ ಅವತಾರವೆತ್ತಿದರೂ ಅವರು ನಮ್ಮ ಶ್ರದ್ಧಾ ಭಕ್ತಿ ಪಾತ್ರರಾಗಿರುವರೆಂಬೀ ತತ್ವವನ್ನು ಬೋಧಿಸುವ ಶ್ರೀ ರಾಮಾನುಜರ ಧರ್ಮಾನುವರ್ತನೆಯಲ್ಲಿ ಬೆಳೆದವನಾದ್ದರಿಂದ ತೀಯರರ ಈ ಪ್ರಯತ್ನಗಳಲ್ಲಿ ತಾನು ಸಹಾನುಭೂತಿಯನ್ನು ತೋರುವುದು ಯಥಾಯುಕ್ತವಾಗಿರುವುದು ಹೀಗೆಂದುಕೊಂಡು ತೀಯರರ ಗುರುಗಳಾದ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿಯವರು ತೀಯರರ ಏಳಿಗೆಯ ಬಗ್ಯೆ ಮಾಡಿದ ಪ್ರಯತ್ನಗಳನ್ನು ರಾಜಗೋಪಾಲಾಚಾರ್ಯರವರು ಶ್ಲಾಘಿಸಿರುತ್ತಾರೆ. ಸಮಾಜವು ಎಲ್ಲಾ ವಿಷಯಗಳಲ್ಲಿಯೂ ಬಲಹೊಂದಬೇಕಾದರೆ ಅದರಲ್ಲಿ ನಿಶ್ಚಲವಾದ ಧರ್ಮ ಪರತೆಯು ಬೇರೂರಿರಬೇಕೆಂಬುದನ್ನು ಬೋಧಿಸಿ ತಿಳಿದು ನಾರಾಯಣ ಗುರು ಸ್ವಾಮಿಗಳವರು ನಡಿಸುವ ಪ್ರಯತ್ನಗಳು ಅವರ ವಿಶೇಷವಾದ ಮಹತ್ವಿಕೆಯನ್ನು ಸೂಚಿಸತಕ್ಕಂಥವುಗಳಾಗಿವೆ ಎಂತ ರಾಜ ಗೋಪಾಲಾಚಾರ್ಯರು ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿರುವರು.

ಮಲೆಬಾರಿನಲ್ಲಿ ತೀಯರರೆಂಬವರು ನಮ್ಮ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಬಿಲ್ಲವರೆಂತ ಕರೆಯಲ್ಪಡುವರು. ನಾರಾಯಣ ಗುರುಸ್ವಾಮಿಗಳವರ ಪ್ರೇರಣೆಯಿಂದ ನಮ್ಮಲ್ಲಿಯೂ ಬಿಲ್ಲವರ ಬಗ್ಯೆ ಒಂದು ದೇವಸ್ಥಾನವು ಸ್ಥಾಪಿತವಾಗಿದೆ. ಆದ್ದರಿಂದ ದಿವಾನ್ ಬಹದ್ದೂರ್ ರಾಜ ಗೋಪಾಲಾಚಾರ್ಯರವರು ಈ ಜಾತಿಯವರಲ್ಲಿ ತೋರಿಸಿರುವ ಹಿಂದೂ ಮತಾಭಿಮಾನವನ್ನು ಇಲ್ಲಿಯೂ ಸಹ ಸರ್ವರೂ ತಿಳಕೊಂಡು, ಅದು ಬರಿಯ ಆಚಾರಗಳಲ್ಲಿ ಮಾತ್ರ ಸಿಲುಕಿ ಬೀಳದಂತೆ ನೋಡಿಕೊಂಡು ಇಂಥಾ ಅಭಿಮಾನವನ್ನು ಸಮಾಜದ ಅಭಿವೃದ್ಧಿಗಾಗಿ ಹವಣಿಸುವುದು ಕರ್ತವ್ಯವಾಗಿರುತ್ತದೆ.

ವರಶುಲ್ಕವು ರಾಕ್ಷಸನೋ?

'ನಾನೊಬ್ಬ'ರ ತಪ್ಪು ವಿಚಾರ.

'ಅತ್ರಿಗೋತ್ರಜನವರಿಗೆ ಹಿಗ್ಗಲು ಅವಕಾಶವನ್ನು ಕೊಡುವುದು ಅನುಚಿತವೆಂದು ತೋರಿ 'ನಾನೊಬ್ಬ'ರು ಅಬದ್ಧವು ಸುಬದ್ಧಕ್ಕೆ ಮಾರ್ಗವನ್ನುಂಟು ಮಾಡುವುದೆಂಬ ಅಭಿಪ್ರಾಯದ ಮೇಲೆ ಬರೆದ ಲೇಖವನ್ನು ಕಳದ ಸಂಚಿಕೆಯಲ್ಲಿ ಓದಿ ನೋಡಿದರೆ ಅತ್ರಿಗೋತ್ರಜರ ಪತ್ರದ ತಪ್ಪು ವಿಚಾರವನ್ನು ನಾನೊಬ್ಬರು ಮಾಡಿರುವರೆಂಬದು ಸ್ಪಷ್ಟವಾಗುವುದು. ವರಶುಲ್ಕವನ್ನು ರಾಕ್ಷಸನೆಂತ ನಾನೊಬ್ಬರು ತಮ್ಮ ಲೇಖನಾರಂಭದಲ್ಲಿಯೇ ಕರೆದಿರುತ್ತಾರೆ. ವರಶುಲ್ಕವು ಎಂದೂ ರಾಕ್ಷಸನಲ್ಲ. ಹಿಂದೂ ಧರ್ಮಶಾಸ್ತ್ರದ ಪ್ರಕಾರವೂ ಈಗಿನ ಕಾನೂನಿನ ಪ್ರಕಾರವೂ ಬ್ರಾಹ್ಮಣ ಸ್ತ್ರೀಯರುಗಳಿಗೆ ಸ್ಥಿರಚರ ಸೊತ್ತುಗಳ ಮೇಲೆ ಪೂರ್ಣ ಸ್ವತಂತ್ರವು ಇರದು. ಸ್ತ್ರೀಯರುಗಳು ಅಶನಾರ್ಥಿಗಳಾಗಿರುವರು. ಆದ್ದರಿಂದ ತನ್ನ ಕುವರಿಗೆ ವಿವಾಹ ಕಾಲದಲ್ಲಿ ಆಪದ್ಧನವಾಗಿ ಕೊಡಬೇಕಾಗಿರುವಂಥಾ ಧನವು ರಾಕ್ಷಸಸ್ವಭಾವದ್ದಲ್ಲ. ಎಲ್ಲಾ ವಿಷಯಗಳಲ್ಲಿಯೂ ಸಮಾಜವು ಹಲವು ಕಾರಣಗಳಿಂದ ವಿಪರೀತಾವಸ್ಥೆಯಲ್ಲಿದೆ. ಈ ವಿಪರೀತಾವಸ್ಥೆಯು ಸ್ತ್ರೀಧನದಲ್ಲಿ ಸಹ ತೋರಿ ಬರುವುದರಿಂದ ಇದನ್ನೊಂದನ್ನು ಮಾತ್ರ ರಾಕ್ಷಸನೆಂತ ಕರೆದು, ಇಂಥಾ ವಿಪರೀತಾವಸ್ಥೆಯ ಮುಖ್ಯ ಕಾರಣಗಳ ವರ್ಣನೆಯನ್ನು ಪರಿಹಾಸ್ಯವೆನ್ನುವುದು ಸರಿಯಲ್ಲ. ಅತ್ರಿಗೋತ್ರಜರು ಈ ಕಾರಣಗಳ ವರ್ಣನೆಯನ್ನು ಈಗ ಸಮಾಜದಲ್ಲಿರುವಂತೆ ಬರೆದಿರುತ್ತಾರೆ. ವರ್ಣನೆಯು ಯಥಾರ್ಥವಾದದ್ದು ಎಂತ ತಿಳಿಯ ಬೇಕಲ್ಲದೆ, ಈ ವರ್ಣನೆಯಿಂದ ತೋರಿ ಬರುವ ವರ್ತನೆಯು ಪರಿಹಾಸ್ಯಕರವಾದರೆ, ತಪ್ಪು ಈ ವರ್ತನೆಯನ್ನನುಸರಿಸುವವರದ್ದಲ್ಲದೆ ಇದನ್ನು ಸಂಗ್ರಹಿಸಿ ಬರೆದ ಅತ್ರಿಗೋತ್ರಜರದ್ದಲ್ಲ. ನನಗಾದರೋ ಅತ್ರಿಗೋತ್ರಜರ ಮತ್ತು ನಾನೊಬ್ಬರ ಲೇಖನಗಳಲ್ಲಿ ವಿರೋಧವು ಕಾಣದು. ನಾನೊಬ್ಬರು ವರದಕ್ಷಿಣೆಯು ವಿಪರೀತವೆನ್ನುವರು, ಅದು ಏಕೆ ಹಾಗಾಗಿದೆಂಬುದನ್ನು ಅತ್ರಿಗೋತ್ರಜರು ತೋರಿಸಿರುವರು. ಆದ್ದರಿಂದ ಅತ್ರಿಗೋತ್ರಜರಿಗೆ ಹಿಗ್ಗಲೂ ನಾನೊಬ್ಬರಿಗೆ ಕುಗ್ಗಲೂ ಕಾರಣವಿರದು. ಗೆದ್ದವನು ಸೋತವನು ಯಾರೆಂತ ನಿರ್ಣಯಿಸುವುದು ಸಹ ಇಂಥಾ ಲೇಖನಗಳ ಮೂಲಕವಲ್ಲ.

ವಿಚಾರಿ.

ಗೋದಾವರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪಂಚಮರ ನೀತಿಭೇದಗಳು

ಗೋದಾವರೀ ಜಿಲ್ಲೆಯಲ್ಲಿ.

ಗೋದಾವರೀ ಜಿಲ್ಲೆಯ ಮುಖ್ಯ ಪಟ್ಟಣವಾದ ಕಾಕಿನಾಡಿನಲ್ಲಿಯೂ ಪಿತಾಪುರ, ಸಮಲಕೋಟೆ, ಎಲ್ಲೂರು ಮೊದಲಾದ ಒಳಪಟ್ಟಣಗಳಲ್ಲಿಯೂ ಪಂಚಮ ಸ್ತ್ರೀ ಪುರುಷರು ಪೋಶಾಕೆಮಟ್ಟಿಗೆ ನೋಡಲಿಕ್ಕೆ ಇತರ ಜನರಂತೆ ನನಗೆ ತೋರಿದರು. ಹಣವಂತ ಪಂಚಮರ ಸ್ತ್ರೀಯರು ಮೇಲುಜಾತಿಗಳ ಸ್ತ್ರೀಯರಂತೆ ಶೀರೆಗಳನ್ನು ಉಟ್ಟುಕೊಳ್ಳುತ್ತಾರೆ. ಚಿನ್ನ ಬೆಳ್ಳಿಯ ಆಭರಣಗಳನ್ನು ತೊಟ್ಟುಕೊಳ್ಳುತ್ತಾರೆ. ಹುಡುಗಿಯರೂ ಪ್ರಾಯಪ್ರಬುದ್ಧ ಸ್ತ್ರೀಯರೂ ಕಾಲಿಗೆ ಬೆಳ್ಳಿಯ "ಕಾಪುಲು" ಯಾನೆ ತೋಡೆಗಳೆಂಬ ಘೋರ ಸರಪಣಿಗಳಂತೆ ತೋರುವ ಆಭರಣವನ್ನು ಹಾಕಿಕೊಳ್ಳುತ್ತಾರೆ.

ಬಹು ಮಂದಿ ಪಂಚಮರು ಮೇಲುಜಾತಿಯವರಂತೆ ವರ್ಗದಾರರಾಗಿದ್ದಾರೆ. ಎಲ್ಲೂರಿನಲ್ಲಿ ಪಂದುಲ ವೆಂಕಯ್ಯ ಎಂಬ ಒಬ್ಬ ಹೊಲೆಯನು ಸರಕಾರಕ್ಕೆ ೫೦೦ ರೂಪಾಯಿ ತೀರ್ವೆ ತೆರುವ ವರ್ಗದಾರನಿದ್ದಾನೆ. ಇನ್ನೊಬ್ಬನು ಒಂದು ಲಕ್ಷ ರೂಪಾಯಿ ನಗದಿ ಹಣ ಇದ್ದವನಾಗಿದ್ದಾನೆ. ಕಾಕಿನಾಡಿನಲ್ಲಿ ಒಬ್ಬ ಪಂಚಮನು ತಿಂಗಳಿಗೆ ರೂಪಾಯಿ ೮ ಬಾಡಿಗೆ ಶಿಕ್ಕಬಹುದಾದ ಕಟ್ಟೋಣವನ್ನು ಕಟ್ಟಿಸಿ ಪಂಚಮ ಹುಡುಗರ ವಿದ್ಯಾರ್ಥಿಭವನವಾಗಿ ಉಪಯೋಗಿಸುವ ಬಗ್ಯೆ ರೂಪಾಯಿ ೫ ಬಾಡಿಗೆ ನಿರ್ಣಯಿಸಿ ಕೊಟ್ಟಿದ್ದಾನೆ.

ಗಂಡಸರ ಹೆಸರುಗಳು:—ಸುಬ್ರಮಣ್ಯಾ, ವೆಂಕಟಸಾಮಿ, ವೆಂಕಯ, ವೆಂಕಟರಾಮಯ್ಯ, ರಾಮಸ್ವಾಮಿ, ಶ್ರಿರಾಮುಲು, ಧರ್ಮರಾಯ, ರುದ್ರಾಕ್ಷಯ್ಯ, ಲಕ್ಷ್ಮಯ್ಯ, ಸುಗ್ರೀವ, ನರಶಿಂಹ, ಸೋಮಣ್ಣ, ಮಲ್ಲಿಕಾರ್ಜುನ, ನಾರಾಯಣ ಸ್ವಾಮಿ, ಮಾರ್ಕಾಂಡಯ್ಯ ಮೊದಲಾದವುಗಳು.

ಹೆಂಗಸರ ಹೆಸರುಗಳು:—ನಾಗಮ್ಮ, ಭಂಗಾರಮ್ಮ, ದುರ್ಗಮ್ಮ, ಮಾರೆಮ್ಮ, ದೇವಮ್ಮ, ಸರಸ್ವತಿ, ಗಂಗಮ್ಮ, ಯಮುನಮ್ಮ, ಸುಬ್ಬಮ್ಮ ಮೊದಲಾದವುಗಳು.

ಪಂಚಮರಲ್ಲಿ ಅವರ ಹೆಸರುಗಳಿಂದ ತೋರುವ ಪ್ರಕಾರ ವೈಷ್ಣವರೆಂತಲೂ, ಶೈವರೆಂತಲೂ ಮತಭೇದ ಉಂಟು. ಪುರಾಣಗಳ ದೇವತೆಗಳನ್ನು ಆರಾಧಿಸುತ್ತಾರೆ. ಮೇಲುಜಾತಿಯವರಂತೆ ಚಲೋ ಗೀತಗಳನ್ನು ಹಾಡಿ ಭಜನೆ ಮಾಡುವುದನ್ನು ನಾನು ನೋಡಿದೆನು. ಹಿಂದು ಹಬ್ಬಗಳನ್ನೂ ವ್ರತಗಳನ್ನೂ ಆಚರಿಸುತ್ತಾರೆ. ವಿಭೂತಿ, ಗೋಪಿ ಚಂದನ, ಗಂಧ, ಕುಂಕುಮ ಮೊದಲಾದವುಗಳಿಂದ ಮೇಲುಜಾತಿಯವರಂತೆ ಮುಖ ಅಲಂಕರಿಸಿಕೊಳ್ಳುತ್ತಾರೆ.

ಕಾಕಿನಾಡಿನಲ್ಲಿ ತೋಟಿಗಳ ಮಕ್ಕಳ ಬಗ್ಯೆ ಸಹ ಮುನಿಸಿಪಲಿನವರು ಶಾಲೆ ಇಟ್ಟಿದ್ದಾರೆ. ಕಾಕಿನಾಡಿನ ಕೊಲೇಜಿನಲ್ಲಿ ಅಂತೂ ಸರಕಾರಿ ಕೊಲೇಜು ಅಲ್ಲದಿದ್ದರೂ ೪ನೆ ಫೋರ್ಮಿನಲ್ಲಿ ಇಬ್ಬರು, ೩ನೆ ಫೋರ್ಮಿನಲ್ಲಿ ಒಬ್ಬನು, ೨ನೆ ಫೋರ್ಮಿನಲ್ಲಿ ೬, ಮತ್ತು ೧ನೆ ಫೋರ್ಮಿನಲ್ಲಿ ೮ ಈ ಮೇರೆಗೆ ೧೭ ಮಂದಿ ಪಂಚಮ ಮಕ್ಕಳು ಮೇಲು ಜಾತಿಗಳ ಹುಡುಗರೊಡನೆ ಮಿಶ್ರವಾಗಿ ವಿದ್ಯಾಭ್ಯಾಸ ಮಾಡುತ್ತಾರೆ. ಕೊಲೇಜಿಗೆ ಸೇರಿದ ತರುವಾಯ ಪಂಚಮ ಹುಡುಗರು ಅಸ್ಪೃಷ್ಯರೆನ್ನಿಸಿಕೊಳ್ಳುವುದಿಲ್ಲ.

೧೯೧೧-೧೨ನೆ ವರುಷದ ಮದ್ರಾಸು ವಿದ್ಯಾಖಾತೆಯ ರಿಪೋರ್ಟಿನ ೯೦-೯೧ನೆ ಪುಟಗಳಲ್ಲಿ ತೋರುವ ಪ್ರಕಾರ ತಿರುನಲ್ವೆಲಿ ಜಿಲ್ಲೆಯಲ್ಲಿ ಶಾಲೆಗೆ ಹೋಗುವ ಪ್ರಾಯದ ೧೦೦ ಪಂಚಮ ಮಕ್ಕಳಲ್ಲಿ ೯೧; ಮದ್ರಾಸಿನಲ್ಲಿ ೬೮ ಶಾಲೆಗೆ ಹೋಗುವಂಥವರಾಗಿದ್ದು ವಿದ್ಯಾಸಂಪತ್ತಿ ಮಟ್ಟಿಗೆ ತಿರುನಲ್ವೆಲಿ ಮತ್ತು ಮದ್ರಾಸು ಜಿಲ್ಲೆಗಳು ಗೋದಾವರಿ ಜಿಲ್ಲೆಗಿಂತಲೂ ಮಿಗಿಲು ಸ್ಥಿತಿಯಲ್ಲಿ ಇರುತ್ತವೆ. ಗೋದಾವರಿ ಜಿಲ್ಲೆಯಲ್ಲಿಯೂ ಜಿಲ್ಲೆಯ ಸರಾಸರಿಯಾದ ೧೧ಕ್ಕೆ ಮಿಕ್ಕಿ ಪಂಚಮ ಮಕ್ಕಳು ಶಾಲೆಗೆ ಹೋಗುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ.

ನಮ್ಮ ಜಿಲ್ಲೆಯಲ್ಲಿ ಪಂಚಮ ಜಾತಿಯ ಗಂಡಸರನ್ನೂ ಹೆಂಗಸರನ್ನೂ ನೋಡುತ್ತಲೆ ಪಂಚಮರೆಂತ ಹೇಳಬಹುದು. ಮೇಲುಜಾತಿಯವರಂತೆ ವಸ್ತ್ರಾಭರಣ ಧರಿಸಿಕೊಳ್ಳುವುದಕ್ಕೆ ಸ್ವತಂತ್ರವಿಲ್ಲ. ಕೆಲವು ಗ್ರಾಮಗಳಲ್ಲಿ ಪಂಚಮರು ಚಿನ್ನ ಬೆಳ್ಳಿಯ ಮುರುಗಳು ಕಿವಿಗಳಿಗೆ ಹಾಕಿಸಿಕೊಂಡ ಕಾರಣ ಮೇಲುಜಾತಿಯವರು ಕೂಟ ಕೂಡಿ ಅವರಿಂದ ಗ್ರಾಮ ದೈವದ ಡಬ್ಬಿಗೆ ರೂಪಾಯಿ ೨ ದಂಡವಾಗಿ ವಸೂಲು ಮಾಡಿಸಿದರು. ಕಾಫಿ ತೋಟಗಳಲ್ಲಿ ಧನಿಗಳಿಂದ ಸಂಪಾದಿಸಿದ ಪೋಶಾಕೆ ಸಹ ಊರಿಗೆ ಬರುತ್ತಲೇ ತಲೆಗಿಂಬಾಗಿ ಉಪಯೋಗಿಸಿಕೊಳ್ಳುವುದಾಗುತ್ತದೆ. ಕಾರ್ಕಳ ಸಮೀಪದ ಒಂದು ಗ್ರಾಮದಲ್ಲಿ ಒಬ್ಬ ಪಂಚಮನು ರುಮಾಲು ಸುತ್ತಿಕೊಂಡು, ಕೊಡೆ ಹಿಡಕೊಂಡು ಗದ್ದೆ ಹುಣಿಯಿಂದ ಹೋಗುವುದನ್ನು ಒಬ್ಬ ಸಂಪನ್ನನು ತನ್ನ ಜಗಲಿಯಲ್ಲಿ ಕೂತಲ್ಲಿಂದಲೇ ನೋಡಿ ಸಹಿಸಕೂಡದೆ ಆತನನ್ನು ಹೊಡಿಸಿದ ಕಾರಣ ಕ್ರಿಮಿನಲ್ ಮೊಕದಮೆ ಆಗಿತ್ತಾಗಿ ಒಬ್ಬ ಪೂಜ್ಯ ಗೃಹಸ್ಥನು ನನಗೆ ಹೇಳಿದನು.

ನಮ್ಮ ಜಿಲ್ಲೆಯಲ್ಲಿ ೫ ರೂಪಾಯಿ ತೀರ್ವೆ ತೆರುವ ಒಬ್ಬ ಪಂಚಮ ವರ್ಗದಾರನಾದರೂ ಇರುತ್ತಾನಾಗಿ ತೋರುವುದಿಲ್ಲ. ಮಂಗಳೂರಲ್ಲಿ ರೂಪಾಯಿ ೩೦೦ಕ್ಕೆ ಒಂದು ಮೂಲಗೇಣಿ ಹಿತ್ತಲನ್ನು ಕ್ರಯಕ್ಕೆ ಪಡಕೊಂಡ ಒಬ್ಬ ಪಂಚಮನು ಅತ್ಯಂತ ದೊಡ್ಡ ಪಂಚಮನೆನ್ನಿಸಿಕೊಳ್ಳುತ್ತಾನೆ. ಸರ್ವ ಪಂಚಮರೂ ಅತಿ ದರಿದ್ರಿಗಳಾಗಿದ್ದು ಮೂಲದ ಹೊಲೆಯರೂ ಸಾಲದ ಹೊಲೆಯರೂ ಅನ್ನಿಸಿಕೊಳ್ಳುವ ಪಶುಸಮಾನವಾಗಿ ಜೀವನಮಾಡಿಕೊಂಡಿರುವ ಬಹು ಜನ ಪಂಚಮರು ನಮ್ಮ ಜಿಲ್ಲೆಯಲ್ಲಿದ್ದಾರೆ.

ನಮ್ಮ ಜಿಲ್ಲೆಯ ಪಂಚಮ ಗಂಡಸರ ಹೆಸರುಗಳು—ಬೊಗ್ರ, ದೊಗ್ರ, ಬೊಗ್ಗು, ಬಬ್ಬು, ಐತ, ತೋಮ, ಅಂಗರ, ಬುದ್ದು, ಪುದ್ದು, ನಕ್ಕುರೆ, ತೇಡೆ, ಬಲ್ದೆ, ಕಪ್ಪೆ, ತಬುರೆ, ಪಂಜಿ, ಪೆರ್ಗುಡೆ, ಬೆರಂತೆ, ಬಸವಾ ಮೊದಲಾದವುಗಳು.

ಹೆಂಗಸರ ಹೆಸರುಗಳು:—ಪುಚ್ಚೆ, ತನಿಯರು, ಗುಜ್ಜಿ, ಬಿಜಿಲು, ಕುರ್ಜಿ, ಕೊರತಿ, ಬೊಗ್ಗಿ, ಮುದುರು, ಗುರ್ಬಿ, ನೊಕ್ಕೆ, ತಬುರು, ಚಿಲ್ಲೆ, ಕುಂಟೆ, ತಿಪ್ಪಿ ಮೊದಲಾದವುಗಳು.

ನಮ್ಮ ಜಿಲ್ಲೆಯ ಪಂಚಮರಿಗೆ ಭೂತಗಳ ಆರಾಧನೆ ಹೊರತು, ಇತರ ಯಾವ ಆರಾಧನೆ ವಿಧಾನವೂ ಇಲ್ಲ. ವಿವಾಹ, ಬೊಜ್ಜ ಮೊದಲಾದ ಶುಭಾಶುಭ ವೇಳ್ಯಗಳಲ್ಲಿ ಆಡುವ ಲೆಲೆಲೆಗಳು ಹೊರತು ದೇವರ ಸ್ತುತಿ ಹಾಡುವ ಗೀತಗಳು ಇಲ್ಲ. ಹೊಸದಾಗಿ ವಾದ್ಯದ ಮೇಳ ಮಾಡಿಸಿ ತಳ್ಳೇಲಿನ ಬಗ್ಯೆ ವಾದ್ಯ ತಂದು ಎರಡು ಮೂರು ಕಡೆಗಳಲ್ಲಿ ಪೆಟ್ಟು ತಿಂದರು. ಕೆಲವು ಪಂಚಮರು ಪ್ರಾತಃಕಾಲ ತುಳಸೀ ತೀರ್ಥ ಕುಡಿದು ಆಕಾಶದ ಕಡೆಗೆ ನೋಡಿ ದೇವರನ್ನು ನಮಸ್ಕರಿಸಿ ದಿನಚರ್ಯದ ಕಾರ್ಯ ಪ್ರಾರಂಭಿಸಬೇಕಾಗಿ ಆಶಿಸಿ ತುಳಸಿ ಗಿಡಗಳನ್ನು ನಡುತ್ತಲೇ ಮೇಲುಜಾತಿಯ ಕೂಲಿ ಆಳುಗಳು ಶಿಟ್ಟಾಗಿ "ನಮ್ಮ ದೇವರನ್ನು ನಿಮ್ಮ ಕೇಲುಗಳ ಮುಂದೆ ಇಟ್ಟು ಭ್ರಷ್ಟಮಾಡಕೂಡದು" ಎಂತ ವಿರೋಧಿಸಿದ ಕಾರಣ ಪಂಚಮರು ತುಳಸಿ ಗಿಡಗಳನ್ನೆ ಕಿತ್ತುಬಿಸಾಡಿದರು.

ಮಂಗಳೂರಲ್ಲಿ ಮುನಿಸಿಪಲಿನವರು ಅನಾಥ ಪಂಚಮ ಜಾತಿಗಳ ಮಕ್ಕಳ ವಿದ್ಯಾಪ್ರದಾನದ ಬಗ್ಯೆ ಇದುವರೆಗೆ ಏನೂ ಮಾಡಿದ್ದಿಲ್ಲ. ೧೮ ವರುಷಗಳಿಂದ ಹೇರಳ ಹಣ ನಾವು ಖರ್ಚು ಮಾಡುತ್ತ ಬಂದರೂ ಒಬ್ಬ ಪಂಚಮ ಹುಡುಗನಿಗಾದರೂ ಪ್ರಾೖಮೆರಿಗಿಂತ ಹೆಚ್ಚಿಗೆ ದರ್ಜೆಯ ವಿದ್ಯೆ ಕೊಡಿಸಲು ನಮಗೂ ಸಾಧ್ಯವಾಗಲಿಲ್ಲ. ಹಣದ ಅಡಚಣಿ ಸಂಬಂಧ ನಮ್ಮ ಶಾಲೆಗಳಲ್ಲಿ ಮೇಲುಕ್ಲಾಸುಗಳನ್ನಿಡಲಿಕ್ಕೆ ಆಗಲಿಲ್ಲ. ಅನ್ಯ ಶಾಲೆಗಳಲ್ಲಿ ಈ ಮಕ್ಕಳಿಗೆ ಪ್ರವೇಶವೇ ಇಲ್ಲ. ಬುದ್ಧಿ ಪ್ರಾಚುರ್ಯ ವಿಶೇಷವಿದ್ದ ಒಬ್ಬರಿಬ್ಬ ಹುಡುಗರನ್ನು ಹೆಕ್ಕಿ ತೆಗೆದು ಪರಜಿಲ್ಲೆಗಳಿಗೆ ಕಳುಹಿಸುವುದಕ್ಕೆ ಹೆತ್ತವರು ಅನುಮತಿಸುವುದಿಲ್ಲ.

ನಮ್ಮ ಜಿಲ್ಲೆಯಲ್ಲಿ ಶಾಲೆಗೆ ಹೋಗುವ ವಯಸ್ಸಿನ ಪ್ರತಿ ನೂರು ಪಂಚಮ ಮಕ್ಕಳಲ್ಲಿ ಒಂದು ಶಾಲೆಗೆ ಹೋಗುತ್ತದೆಂತ ಸರಕಾರಿ ರಿಪೋರ್ಟಿನಿಂದಲೇ ತೋರುತ್ತದೆ. ಉಳ್ಳಾಲ ಗ್ರಾಮದ ೨೦ ಮಂದಿ ಪಂಚಮರು ತಮ್ಮ ಮಕ್ಕಳ ಬಗ್ಯೆ ಒಂದು ಶಾಲೆ ಸ್ಥಾಪಿಸಬೇಕಾಗಿ ೨—೩ ತಿಂಗಳ ಮೊದಲು ಕಲೆಕ್ಟರ್ ದೊರೆಗಳಿಗೆ ಅರ್ಜಿ ಮಾಡಿದರು. ಆ ಗ್ರಾಮದಲ್ಲಿ ಶಾಲೆ ಅಗತ್ಯವುಂಟೊ ಎಂಬದು ವಿಚಾರಿಸಿ ರಿಪೋರ್ಟು ಮಾಡಬೇಕಾಗಿ ಆ ಅರ್ಜಿ ನನ್ನ ಬಳಿಗೆ ಬಂತು. ನಾನು ಉಳ್ಳಾಲ ಗ್ರಾಮಕ್ಕೆ ಹೋಗಿ ಕೆಲವು ಪಂಚಮರನ್ನು ಕರತರಿಸಿ ವಿಚಾರಿಸಿದ್ದಲ್ಲಿ ತಾವು "ಅರ್ಜಿ ಮಾಡಲೇ ಇಲ್ಲ, ದಸ್ಕತು ಹಾಕಲೇ ಇಲ್ಲ" ಅಂದರು. ಒಂದು ತಾಸಿನ ನಂತರ ದಾರಿಯಲ್ಲಿ ನಿರ್ಜನ ಸ್ಥಳದಲ್ಲಿ ನನಗೆ ನೋಡ ಸಿಕ್ಕಿ "ಸ್ವಾಮಿ, ನಾವು ಅರ್ಜಿ ಮಾಡಲಿಲ್ಲವೆಂತ ಸುಳ್ಳುಹೇಳಿದೆವು; ನಮ್ಮನ್ನು ಕ್ಷಮಿಸಬೇಕು. ಮೇಲು ಜಾತಿಗಳವರ ಮುಂದೆ ತಾವು ಕೇಳಿದ್ದರಿಂದ ನಾವು ಹಾಗೆ ಹೇಳಿದೆವು" ಅಂದರು. ಶಾಲೆ ಮಾಡಿದರೆ ಮಕ್ಕಳನ್ನು ಅಗತ್ಯವಾಗಿ ಶಾಲೆಗೆ ಕಳುಹಿಸುವೆವೆಂದು ಭರವಸ ಕೊಟ್ಟರು.

ಮಂಗಳೂರು,
ತಾ. 12—5—1914.

ಕುದ್ಮುಲ ರಂಗರಾವ್.

ಟೀ, ಕಾಫಿ, ಕೋಕೋ.

ಇಚೆಗೆ ಗೃಹಕೃತ್ಯದ ಖರ್ಚುಗಳು ಬಹಳವಾಗಿ ಹೆಚ್ಚಿ ಬಡಬಗ್ಗರಿಗೂ, ಸಾಧಾರಣವಾದ ಜನರಿಗೂ, ಸ್ವಲ್ಪ ಸಂಬಳಗಾರರಿಗೂ ಗೃಹಕೃತ್ಯವು ನಡಿಯುವದು ಬಹಳ ಶ್ರಮವಾಗಿರುವುದು ಸರ್ವರಿಗೂ ತಿಳಿದೇ ಇದೆ. ಶರೀರ ಪೋಷಣೆಗೆ ಅತ್ಯಾವಶ್ಯಕವಾದ ಖರ್ಚುಗಳನ್ನು ಅನಿವಾರ್ಯವಾದ ಖರ್ಚುಗಳೆಂದೂ, ಶರೀರದ ಪೋಷಣೆಗೆ ಅವಶ್ಯವಿಲ್ಲದ ಖರ್ಚನ್ನು ನಿವಾರ್ಯವಾದ ಖರ್ಚೆಂದೂ, ಗೃಹಕೃತ್ಯದ ಖರ್ಚು ೨ ವಿಧವಾಗಿವೆ. ಶರೀರದ ಪೋಷಣೆಗೆ ಅನ್ನವೂ ಬಟ್ಟೆಯೂ ಒಳ್ಳೆಯ ನೀರೂ ಒಳ್ಳೆಯ ಘಾಳಿಯೂ ಅತ್ಯವಶ್ಯಕವಾದವುಗಳು. ಕಾಫಿ, ಟೀ, ಸೋಡಾವಾಟರ್ ಮತ್ತು ಇತರ ಹೇಳಬಹುದಾದ ಮತ್ತು ಇತರ ಹೇಳಕೂಡದ ಪಾನೀಯಗಳು ಶುದ್ಧಾಂಗವಾಗಿ ಅವಶ್ಯವಿಲ್ಲ.

ಒಂದು ಮನೆಯನ್ನು ಕಟ್ಟಬೇಕಾದರೆ ಅದಕ್ಕೆ ಬೇಕಾದ ಕಲ್ಲು, ಇಟ್ಟಿಗೆ, ಮರ, ಹೆಂಚು, ಗಾರೆ, ಮೊದಲಾದ ಸಾಮಾನುಗಳನ್ನು ಆಲೋಚನೆಮಾಡಿ ಅತ್ಯಂತ ಜಾಗರೂಕತೆಯಿಂದ ತೆಗೆದುಕೊಂಡು ಬರುತ್ತೇವೆ. ಆತ್ಮನು ವಾಸಮಾಡುವ ಈ ಶರೀರವೆಂಬ ಮನೆಯನ್ನು ಕಟ್ಟುವುದಕ್ಕೆ ಎಂದರೆ, ಇದರ ವೃದ್ಧಿಗೂ ಆರೋಗ್ಯಕ್ಕೂ ಒಳ್ಳೆಯ ಅನ್ನಪಾನಗಳು ಬೇಕು. ಇವುಗಳನ್ನು ಕುರಿತು ಪ್ರಜಾಸಾಮಾನ್ಯರಲ್ಲಿ ೧೦೦೦ ಅಥವಾ ೧೦,೦೦೦ಕ್ಕೆ ಒಬ್ಬರಾದರೂ ಯೋಚನೆ ಮಾಡಿರುವರೋ ಇಲ್ಲವೋ? ಪ್ರಜೆಗಳು ಕೊಡುವ ಕಂದಾಯದಿಂದ ಭಾರಿ ವೇತನಗಳನ್ನು ಪಡಿಯುತ್ತಿರುವ ವೈದ್ಯಶ್ರೇಷ್ಠರು ಇವುಗಳನ್ನು ಕುರಿತು ಬುದ್ಧಿವಾದವನ್ನು ಜನಗಳಿಗೆ ಹೇಳದೆ ಇರುವುದು ಅತ್ಯಂತ ಶೋಚನೀಯವಾಗಿದೆ.

ಒಂದು ಕೆಲಸವನ್ನು ಮಾಡುವುದಕ್ಕೆ ಮುಂಚೆ ಇದರಿಂದ ಒಳ್ಳೆಯದಾಗುತ್ತದೆಯೇ ಇಲ್ಲವೇ ಎಂದು ಯೋಚನೆಯನ್ನು ಮಾಡಬೇಡವೆ? ಒಂದು ಪದಾರ್ಥವನ್ನು ತಿನ್ನುವುದಕ್ಕೆ ಮುಂಚೆ ಮತ್ತು ಒಂದು ಪಾನವನ್ನು ಕುಡಿಯುವುದಕ್ಕೆ ಮುಂಚೆ ಇವು ಒಳ್ಳೆಯವೇ? ಇವುಗಳಿಂದ ತನ್ನ ಶರೀರಕ್ಕೆ ಒಳ್ಳೆಯದಾಗುತ್ತದೆಯೋ? ಎಂದು ಮನುಷ್ಯನು ದೇವರು ಕೊಟ್ಟಿರುವ ಬುದ್ಧಿಯನ್ನು ಉಪಯೋಗಿಸಿ ಯೋಚನೆಮಾಡಿ ನೋಡಬೇಡವೇ? ಅವರು ಇವರು ಇಂತಹ ಆಹಾರವನ್ನು ತಿನ್ನುತ್ತಾರೆ. ಇಂತಹ ಪಾನವನ್ನು ಮಾಡುತ್ತಾರೆ ಎಂದು ಕುರಿಗಳು ಹಳ್ಳದಲ್ಲಿ ಬೀಳುವಂತೆ ಯೋಚನೆ ಮಾಡದೆ ಯಾವ ಕೆಲಸವನ್ನೂ ಮಾಡಬಾರದು.

ಹಸಿವಿಗಾಗಿ ಆಹಾರವು ಬೇಕು. ಬಾಯಾರಿಕೆಯನ್ನು ಅಣಗಿಸುವುದಕ್ಕೆ ನಿರ್ಮಲೋದಕವು ಸಾಕು. ಕಾಫಿ, ಟೀ, ಸೊಡಾವಾಟರ್ ಮುಂತಾದವುಗಳಿಂದ ಶರೀರಕ್ಕೆ ಕೆಡಕೇ ಹೊರತು ಏನೂ ಪ್ರಯೋಜನವಿಲ್ಲ. ಪಾಶ್ಚಾತ್ಯ ಪಂಡಿತರು ೧ ಪೌಂಡು ತೂಕ ಕೋಕೋವಿನಲ್ಲಿ ೬೦ ಗ್ರೇನ್, ೧ಪೌಂಡು ತೂಕ ಕಾಫಿಯಲ್ಲಿ ೭೦ ಗ್ರೇನ್ ೧ ಪೌಂಡು ತೂಕ ಟೀಯಲ್ಲಿ ೧೭೫ ಗ್ರೇನ್ ಅಥವಾ ಸುಮಾರು ೧ ರೂಪಾಯಿ ತೂಕ ಯೋರಿಕ್‌ಆಸಿಡ್ ಎಂಬ (ಮೂತ್ರಾಮ್ಲ) ವಿಷವಿರುವುದಾಗಿ ನಿಶ್ಚಯಿಸಿದ್ದಾರೆ. ಇದರಿಂದ ರಕ್ತನಾಳಗಳಲ್ಲಿ ಕಶ್ಮಲ ಶೇರಿ ಅವುಗಳಲ್ಲಿ ರಕ್ತ ಹರಿಯುವುದು ಕಡಿಮೆಯಾಗಿ ವಾತರೋಗದಿಂದ (ಕೀಲುಗಳಲ್ಲಿ ಚಳುಕು) ಬಹುಮೂತ್ರ, ಮಧು ಮೇಹ ಮುಂತಾದ ಅನೇಕ ವ್ಯಾಧಿಗಳು ಉಂಟಾಗುತ್ತವೆಯೆಂದು ಪಾಶ್ಚಾತ್ಯ ಪಂಡಿತರಲ್ಲಿ ಅತ್ಯಂತ ಪ್ರಖ್ಯಾತಿಯನ್ನು ಹೊಂದಿದವರು ನಿಶ್ಚಯಿಸಿ ಇರುತ್ತಾರೆ. ಆದುದರಿಂದಲೇ ಸಾವಿರಾರು ಮಂದಿಗಳು ಇದನ್ನು ಬಿಟ್ಟಿರುತ್ತಾರೆ ಅಥವಾ ಬಿಡುತ್ತಾ ಇದ್ದಾರೆ.

ನಮ್ಮ ಹಿಂದೂಶಾಸ್ತ್ರದಲ್ಲಿ, "ನಿಮಿತ್ತವಿಲ್ಲದೆ ಪಾಯಿಸಮಾಡಕೂಡದು" ಎಂದು ಹೇಳಿದೆ. ಎಂದರೆ ಹಬ್ಬದ ದಿನಗಳಲ್ಲಿ ಶ್ರಾದ್ಧದ ದಿನಗಳಲ್ಲಿ ಮಾತ್ರ ಪಾಯಿಸ ಮಾಡಬಹುದೇ ಹೊರತು ಪ್ರತಿ ದಿನವೂ ಪಾಯಸಮಾಡಕೂಡದೆಂಬ ಅರ್ಥ. ಈಗ್ಯ ಕಾಫಿ, ಟೀ, ಕೋಕೋ, ರೂಪವಾಗಿ ಪ್ರಜೆಗಳಲ್ಲಿ ಬಹು ಮಂದಿ ಪ್ರತಿನಿತ್ಯವೂ ೩-೪ ಆವರ್ತಿ ಪಾಯಸವನ್ನು ಕುಡಿಯುವುದರಿಂದ ಅನೇಕ ವ್ಯಾಧಿಗಳು ಮೇಲೆ ಹೇಳಿದಂತೆ ಉಂಟಾಗುತ್ತವೆ. ಇದೂ ಅಲ್ಲದೆ ಕಾಫಿಯಿಂದ ಹೃದ್ರೋಗವು ಉಂಟಾಗುವುದಾಗಿಯೂ, ಟೀ ಯಿಂದ ಅನ್ನಕೋಶವು ಕೆಟ್ಟು ಬಹುಮೂತ್ರವೂ ನಾಡಿವ್ಯಾಧಿಗಳೂ (nervous diseases) ನಿದ್ರಾರಹಿತ್ಯವೂ ಉಂಟಾಗುವುದಾಗಿ ಗೊತ್ತಾಗಿದೆ.

ಕಾಫಿಯು ಅರಬ್ಬೀ ದೇಶದಲ್ಲಿ ಹುಟ್ಟಿದ ಪದಾರ್ಥವಾಗಿದೆ. ಅಲ್ಲಿನ ದೇಶೀಯರು ಅದನ್ನು ಹುರದು ಕುಟ್ಟಿ ಪುಡಿಮಾಡಿ ಅದರಿಂದ ಕಷಾಯಮಾಡಿ ಆ ಕಷಾಯವನ್ನೂ, ಕಷಾಯದ ಕೆಳಗೆ ನಿಲ್ಲುವ ಮಡ್ಡಿಯನ್ನೂ, ಹಾಲು ಹಾಕದೆ ಸ್ವಲ್ಪ ಸಕ್ಕರೆ ಹಾಕಿ ಅಥವಾ ಹಾಕದೆ ಕುಡಿಯುತ್ತಾರೆ.

ಟೀ ಗಿಡವು ಚೀನಾ ದೇಶದಲ್ಲಿ ಹುಟ್ಟಿದ್ದು. ಇದು ನಿದ್ರೆಯನ್ನು ಕೆಡಿಸುವ ವಿಷಯದಲ್ಲಿ ಒಂದು ಇತಿಹಾಸವಿದೆ. ಏನಂದರೆ ಚೀನಾ ದೇಶದ ಒಬ್ಬ ರೋಗಿಯು ನಿದ್ರೆಯನ್ನು ಜೈಸಬೇಕೆಂದು ಎಷ್ಟು ಪ್ರಯತ್ನ ಪಟ್ಟರೂ ಸಾಧ್ಯವಾಗದೇ ತನ್ನ ಕಣ್ಣುಗಳ ರೆಪ್ಪೆಗಳನ್ನು ಕಿತ್ತು ಭೂಮಿಯ ಮೇಲೆ ಬಿಸಾಡಲು ಆ ರೆಪ್ಪೆಗಳು ಟೀ ಗಿಡವಾದಂತೆ ಹೇಳುತ್ತಾರೆ. ಸುಮಾರು ೩೦೦-೪೦೦ ವರ್ಷಗಳ ಹಿಂದೆ ಚೀನಾ ದೇಶದಿಂದ ಮೊಟ್ಟಮೊದಲು ಟೀ ಎಲೆಯನ್ನು ಪಾಶ್ಚಾತ್ಯ ದೇಶಕ್ಕೆ ತೆಗೆದುಕೊಂಡು ಹೋದಾಗ ಅದರ ಉಪಯೋಗವು ಅಲ್ಲಿನ ಜನರಿಗೆ ತಿಳಿಯದೆ ಅದನ್ನು ನೀರಿನಲ್ಲಿ ಹಾಕಿ ಬೇಯಿಸಿ ಕಷಾಯವನ್ನು ಆಚೆಗೆ ಚೆಲ್ಲಿ ಸೊಪ್ಪನ್ನು ತಿನ್ನುತ್ತಿದ್ದಂತೆ ತಿಳಿಯ ಬಂದಿದೆ.

ಕೋಕೋ ಎಂಬುವುದು ಮಾದಳದ ಹಣ್ಣಿನಂತೆ ಹಣ್ಣಿನ ಆಕಾರವಾಗಿರುವ ಒಂದು ಹಣ್ಣಿನ ಬೀಜದ ಪುಡಿಯಾಗಿದೆ. ಈ ಬೀಜಗಳನ್ನು ತೆಗೆದು ಗಾಣದಲ್ಲಿ ಹಾಕಿ ಅದರಲ್ಲಿನ ವಿಶೇಷವಾದ ಎಣ್ಣೆಯನ್ನು ತೆಗೆದು ಹಾಕಿ ಆ ಹಿಂಡಿಯನ್ನು ಪುಡಿಮಾಡಿ ಅದಕ್ಕೆ ಆರೊರೂಟ್ ಹಿಟ್ಟನ್ನು ಶೇರಿಸಿ ಕೋಕೋ ಎಂಬ ಹೆಸರಿನಿಂದ ಅಥವಾ ಅದಕ್ಕೆ ಸಕ್ಕರೆ ಸೇರಿಸಿ, ಮಿಠಾಯಿ ರೂಪವಾಗಿ ಮಾಡಿ ಅದನ್ನು ಕಡ್ಡಿಗಳ ರೂಪವಾಗಿಯಾಗಲೀ ಅಥವಾ ಮಾತ್ರೆಗಳ ರೂಪವಾಗಿಯಾಗಲೀ ಮಾಡಿ ಅದನ್ನು ಚಾಕೆಲೆಟ್ ಎಂಬ ಹೆಸರಿನಿಂದ ಮಾರುತ್ತಾರೆ. ಇವೆಲ್ಲವೂ ಶರೀರದಲ್ಲಿ ತತ್ಕಾಲಿಕವಾದ ಉತ್ತೇಜನವನ್ನು ಹುಟ್ಟಿಸಿ ಶರೀರಕ್ಕೆ ಕೆಡುಕನ್ನು ಉಂಟುಮಾಡುವ ಪದಾರ್ಥಗಳೇ ಹೊರತು ಶರೀರದ ಪೋಷಣೆಗೆ ಅವಶ್ಯವಾದ ಪದಾರ್ಥಗಳೆಲ್ಲಾ ಬೀದಿ ಗುಡಿಸುವ ಜಾಡ್‌ಮಾಲಿಗಳು ಮೊದಲ್ಗೊಂಡು ಸಕಲರೂ ಹಶಿವನ್ನು ಅಣಗಿಸುವದಕ್ಕೋಸ್ಕರ ಈ ಪಾನೀಯಗಳನ್ನು ಅಭ್ಯಾಸ ಮಾಡಿರುವುದರಿಂದ ಅವುಗಳಿಗೆ ಗಿರಾಕಿಯು ಹೆಚ್ಚಿ ಅವುಗಳ ಬೆಲೆಯು ಬಹಳ ಹೆಚ್ಚಿರುವುದರಿಂದಲೂ, ಸ್ವಲ್ಪ ವರಮಾನವುಳ್ಳವರು, ತಮ್ಮ ವರಮಾನದಲ್ಲಿ ಒಂದು ಭಾಗವನ್ನು ಇದಕ್ಕಾಗಿ ಖರ್ಚುಮಾಡಬೇಕಾಗಿರುವುದರಿಂದಲೂ, ವರಮಾನದಲ್ಲಿ ಉಳಿದ ಭಾಗವು ಸಂಸಾರದ ಅನಿವಾರ್ಯವಾದ ಖರ್ಚಿಗೆ ಸಾಲದೆ ಹೋಗಿ ಸಾಲಕ್ಕೆ ಗುರಿಯಾಗಿ ನಾನಾ ಕಷ್ಟಗಳನ್ನು ಅನುಭವಿಸುತ್ತಲಿದ್ದಾರೆ.

ಹಸಿವು ಚನ್ನಾಗಿ ಆಗುತ್ತಿದ್ದರೆ ದೇಹಕ್ಕೆ ಆರೋಗ್ಯ. ಹಸಿವು ಅಣಗಿ ಹೋದರೆ ದೇಹಕ್ಕೆ ಅನಾರೋಗ್ಯ. ಆದುದರಿಂದ ಮೇಲೆ ಕಂಡಂತೆ ಹಸಿವನ್ನು ಅಣಗಿಸಿ ದೇಹದಲ್ಲಿ ಕಾಲ ಕ್ರಮೇಣ ನಾನಾ ವಿಧವಾದ ವ್ಯಾಧಿಗಳನ್ನು ಉಂಟುಮಾಡುವ ಮೇಲ್ಕಂಡ ಪದಾರ್ಥಗಳನ್ನು ಯಾರೂ ಸೇವನೆ ಮಾಡಬಾರದು. ದೊಡ್ಡವರು ಬಹುಕಾಲದಿಂದ ಸೇವನೆಮಾಡಿ ತಮ್ಮ ದುರಭ್ಯಾಸವನ್ನು ತ್ವರೆಯಾಗಿ ಬಿಡಲು ಸಾಧ್ಯವಿಲ್ಲದೆ ಹೋದರೆ ಮೇಲೆ ಕಂಡ ಪದಾರ್ಥಗಳ ಸೇವನೆಯನ್ನು ಸ್ವಲ್ಪ ಸ್ವಲ್ಪವಾಗಿ ಕಡಿಮೆಮಾಡುತ್ತಾ ಬಂದು ಕಡೆಗೆ ಅದನ್ನು ಪೂರ್ತಿಯಾಗಿ ಬಿಡುವುದು ಒಳ್ಳೆಯದಾಗಿದೆ. ಮಕ್ಕಳಿಗಂತೂ ಈ ದುರಭ್ಯಾಸವನ್ನು ದೊಡ್ಡವರು ಕಲಿಸಿ ಕೊಡದೆ ಇದ್ದರೆ ಅವರಿಗೆ ಮಹೋಪಕಾರವನ್ನು ಮಾಡಿದಂತಾಗುವದಲ್ಲದೆ, ಸ್ವಲ್ಪ ವರಮಾನವುಳ್ಳವರು ಸಾಲಕ್ಕೆ ಗುರಿಯಾಗಿ ನಾನಾ ವಿಧವಾದ ಕಷ್ಟಗಳಿಗೆ ಸಿಕ್ಕಿ ನರಳುವದು ತಪ್ಪುವದು.

ಒ. ಪ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಹಿಂದೂಸ್ಥಾನ ಕೊಓಪರೇಟಿವ್ ಇನ್ಶೂರೆನ್ಸ್ ಕಂಪೆನಿ, ಕಲ್ಕತ್ತ.

ಈ ಸಂಘದ ೧೯೧೩ನೇ ಇಸವಿ ಎಪ್ರಿಲ್ ತಿಂಗಳ ೩೦ಕ್ಕೆ ಅಂತ್ಯವಾಗುವ ಐದು ವರ್ಷದ ಆದಾಯ ವೆಚ್ಚದ ಪರಿಶೋಧನಾ ವರದಿಯು ಬ್ರಿಟಿಷ್ ಇನ್ಸಿಟ್ಯೂಟ್ ಓಪ್ ಎಕ್ಚುವರಿಸ್ ಎಂಬ ಸ್ಥಾಪನೆಯ ಮಾಜಿ ಅಗ್ರಸ್ಥರಾದ ಟಿ. ಎ. ಯಂಗ್ F. I. A. F. R. A. S. ಇವರಿಂದ ತಲ್ಪಿರುತ್ತದ್ದಾಗಿ ತಿಳಿಯುತ್ತೇವೆ. ಸಂಘದ ಎಲ್ಲಾ ಖರ್ಚು ಕಳದು, ಸಂಘವು ನಿರಾತಂಕವಾಗಿ ಅಭಿವೃದ್ಧಿಯನ್ನು ಹೊಂದುವರೆ ಯಾವ ತರದ ಅಡಚಣೆಯು ಕಂಡುಬರುವದಿಲ್ಲವೆಂತಲೂ, ಇಂಟರ್ ನೇಶನಲ್ ಕೊಂಗ್ರೇಸ್ ಓಫ್ ಇನ್ಸಿಟ್ಯೂಟಿನ ಅಗ್ರಸ್ಥರೂ ಮಾತ್ರವಲ್ಲದೆ ವಿಮೇ ಸಂಗತಿಯಲ್ಲಿ ಹೆಚ್ಚಿನ ಅನುಭವವುಳ್ಳವರಾಗಿ ಆ ಕುರಿತು ಅನೇಕ ಪ್ರಧಾನ ಗ್ರಂಥಗಳನ್ನು ಕೂಡಾ ಬರೆದಿರುವ ಟಿ. ಎ. ಯಂಗರವರ ಅಭಿಪ್ರಾಯವನ್ನು ಸಂಘದಲ್ಲಿ ನೇರವಾಗಿ ಯಾ ಪರಬಾರೆಯಾಗಿ ಸಂಬಂಧವುಳ್ಳವರೆಗೆಲ್ಲರಿಗೆ ತಿಳಿಸುವರೆ ಸಂತೋಷಗೊಳ್ಳುವೆವು. ಹಿಂದೂಸ್ಥಾನದಲ್ಲಿ ಇತ್ತಲಾಗೆ ಕೆಲವು ಈ ತರದ ಸಂಘಗಳು ದಿವಾಳಿ ಹೊಂದಿದ ಸಂಬಂಧ ಜನರೆಲ್ಲಾ ಹೆಚ್ಚಾಗಿ ಎದೆ

ಗುಂದಿದವರಾಗಿ ಪರಸ್ಪರ ಸಹಾಯಾರ್ಥವಾಗಿ ಸ್ಥಾಪಿಸಿರುವ ಸ್ವದೇಶೀಯ ವಿಮೆ ಸಂಘಗಳನ್ನು ಅನುಗ್ರಹಿಸುವದೆ ಸಂಧಿಗ್ಧಮಾನಸರಾಗಿರುವದು ಆಶ್ಚರ್ಯವಲ್ಲ. ಆದರೆ ಹಿಂದುಸ್ಥಾನ ಕೊಓಪರೇಟಿವ್ ವಿಮೋ ಸಂಘದ ಅಧ್ಯಕ್ಷರೆಲ್ಲಾ ಮಹಾ ನಿಪುಣರಾಗಿರುವದರಿಂದಲೂ ಸಂಘವು ಮಿಸ್ತರ್ ಯಂಗರವರ ಅಭಿಪ್ರಾಯದ ಮೇರೆಗೆ ಚನ್ನಾಗಿ ಬೇರೂರಿದ್ದಾಗಿರುವುದರಿಂದಲೂ ಈ ಸಂಘದಲ್ಲಿ ಯಾವತ್ತು ಜನರಿಗೆ ಜೀವವಿಮೋ ಉತ್ತರಾಯಿಸುವದಕ್ಕೆ ಅನುಮಾನವಿರದು.

ನನ್ನ ಮುಂದಿನ ಗತಿ ಏನು?

ಅಯ್ಯಾ,

ಸಾತ್ವಿಕನೂ, ರಸಿಕನೂ, ಸ್ವತಂತ್ರಿಯೂ, ತಪೋನಿಷ್ಠನೂ ಆದವನೇ ಸಾರಸ್ವತನೆಂದು ನನ್ನ ಭಾವನೆ ಇತ್ತು. ಒಂದು ಕಾಲದಲ್ಲಿ ನಾನು ಈ ಚತುರ್ಗುಣಗಳಿಂದ ಭರಿತನಾಗಿದ್ದೆನು. ಆದರೆ ನನ್ನ ಈಗಿನ ಸ್ಥಿತಿ ಏನೆಂದು ವರ್ಣಿಸಲಿ? ನವನಾಗರಿಕತೆಯ ಚಳವಳದಲ್ಲಿ ಮೇಲಿನ ಗುಣಗಳು ಒಂದೊಂದಾಗಿ ನನ್ನನ್ನು ತೊಲಗುವಂತೆ ತೋರುತ್ತದೆ.

ಈಗೀಗ ಸಾತ್ವಿಕ ಗುಣ ನನ್ನಲ್ಲಿ ಕಾಣಬರುವುದೇ ಅಪರೂಪವೆಂದು ನನ್ನನ್ನು ಹೀಯಾಳಿಸುತ್ತಾರೆ. ಇದೊಂದು ಆಶ್ಚರ್ಯವಲ್ಲ. ಗುರುಹಿರಿಯರ ಮೇಲೆ ವಿಶ್ವಾಸ ಮತ್ತು ಭಕ್ತಿ ನನಗೆ ಅತಿ ಕಡಮೆ. ನನ್ನನ್ನು ಜನಿಸಿದ ತಂದೆಯನ್ನು ಬಹಿರಂಗದಲ್ಲಿ ತಂದೆ ಎಂದು ಕರೆಯಲು ನಾನು ನಾಚುತ್ತೇನೆ. ಇದಕ್ಕೆ ಕಾರಣವೇನೆಂದು ಹೇಳಲಾರೆ. ನನ್ನ ತಂದೆಯು ನನ್ನ ಹಾಗೆ ಇಂಗ್ಲೀಷು ತಿಳಿದವನಲ್ಲ. ಅವನ ಉಡುಪಿಗೂ ನನ್ನ ವೇಷಕ್ಕೂ ರಾತ್ರೆ ಹಗಲು. ಇವೇ ಕಾರಣಗಳಾಗಿರಬಹುದು. ನನ್ನ ವಿದ್ಯೆಯ ಗೋಸ್ಕರ ನನ್ನ ತಂದೆಯು ಇದ್ದ ಆಸ್ತಿಯನ್ನು ಮಾರಿ ನನ್ನನ್ನು ವಿದ್ಯಾವಂತನನ್ನಾಗಿ ಮಾಡಿ ಕಂಡವರ ಕಾಲು ಹಿಡಿದು, ಸರಕಾರಿ ಕೆಲಸವನ್ನು ದೊರಕಿಸಿಕೊಟ್ಟಿರುವುದಾದರೂ ಸಂಸಾರ ಪೋಷಣೆಯ ಕಾರ್ಯವು ಈಗ ನಾನು ನಡಿಸುವುದರಿಂದ ಮನೆಯಲ್ಲಿ ನಾನೇ ಯಜಮಾನನಾಗಿ, ಕುರ್ಚಿಯ ಮೇಲೋ ಮಂಚದ ಮೇಲೋ ಪವಡಿಸಿ, ತಂದೆಯನ್ನು ನೆಲದಲ್ಲಿ ಕೂಡ್ರುವಂತೆ ಮಾಡುತ್ತೇನೆ! ಈ ಸಂಗತಿ ಹಾಗಿರಲಿ—ನನ್ನ ಕುಲಗುರುಗಳ ಮೇಲಾದರೂ ಭಯಭಕ್ತಿಯಿಂದ ನಡಕೊಳ್ಳುತ್ತೇನೋ? ಗುರುಗಳು ಎಂಬ ಶಬ್ದ ನನ್ನ ಕಿವಿಗೆ ಬಿತ್ತು ಎಂದರೆ ಹುಚ್ಚನಂತೆ ನಟಿಸುತ್ತೇನೆ. ಗುರುಮಠವೆಂಬ ಸಂಸ್ಥೆಯೇ ಅನಾವಶ್ಯಕವೆಂದು ನನಗೆ ತೋರಹತ್ತಿದೆ. ನಮಗೆ ಸ್ವೇಚ್ಛೆಯಾಗಿ ವರ್ತಿಸುವರೆ ಆತಂಕಿಸುವ ಗುರುಗಳ ಮೇಲೆ ನನಗೆ ವಿಶ್ವಾಸವು ಉಳಿಯುವ ಬಗೆ ಹೇಗೆ?

ನಾನು ಒಮ್ಮೆ ರಸಿಕನೆಂದು ಕರೆಯಲ್ಪಡುತ್ತಿದ್ದೆನು. ಈ ಗುಣವೂ ನನ್ನಲ್ಲಿ ಈಗ ಕಾಣಬರುವುದಿಲ್ಲವಂತೆ. ಆದರೆ ಇದಕ್ಕೆ ನಾನು ಒಪ್ಪಲಾರೆ. ಹೀಗೆ ಅನ್ನುವವರು ಬರೇ ಮೂಢರೆಂದು ತಿಳಿಯುತ್ತೇನೆ. ಉಡುಪುತೊಡುಪುಗಳಲ್ಲಿ ನನ್ನ ಆಹಾರ ಪಾನಾದಿಗಳನ್ನು-ಇವು ಏನು ಎಂತ ತಿಳಿದವರು ನನ್ನನ್ನು ರಸಿಕನೆಂದು ಕರೆಯದೆ ಇರರು.

ನನಗೆ ಸ್ವಾಭಾವಿಕವಾದ ಸ್ವತಂತ್ರ ಗುಣ ಸಹಾ ನನ್ನಲ್ಲಿ ಲೋಪಹೊಂದಿದೆ. ಈ ಸ್ವಗೌರವ ನನ್ನನ್ನು ತೊಲಗದೆ ಇದ್ದರೆ ಸುಧಾರಣೆಯ ನೆವದಿಂದ ನನ್ನಲ್ಲಿರುವ ಕೋಮಲ ವಸ್ತುವನ್ನು ಹೀನ ಹಸ್ತಗಳಿಗೆ ಒಡ್ಡುತ್ತೇನೋ?

ಸರಿ! ಮೂರು ಗುಣಗಳ ಅವಸ್ಥೆ ಹೀಗಾಯಿತು! ನನ್ನ ತಪೋನಿಷ್ಠತೆ ಹ್ಯಾಗಿದೆ ಎಂದು ನೋಡುತ್ತೇನೆ. ನನ್ನ ಅಜ್ಜನ ಕಾಲದಲ್ಲಿ ನಮ್ಮ ಮನೆಯಲ್ಲಿ ನಿತ್ಯವೂ ಎರಡಾವರ್ತಿ ದೇವರ ಪೂಜೆ ಸಾಗುತ್ತಿತ್ತು. ದೇವರನ್ನು ಪೂಜಿಸುವುದೆಂದರೇನು? ನಮ್ಮ ಹಿರಿಯರು ಅಜ್ಞರಲ್ಲವೇ? ನಮ್ಮ ವಿದ್ಯಾಬಲ ಅವರಲ್ಲಿ ಎಲ್ಲಿಯದು? ದೇವರನ್ನು ಪೂಜಿಸಿದರೇನೇ ಆತನು ಒಲಿಯುತ್ತಾನೋ? ಈ ಕಾರಣಗಳಿಂದ ದೇವರನ್ನು ಮನೆಯಲ್ಲಿ ಇರಗೊಡಿಸುವುದು ಸಹಾ ನನಗೆ ಅಗತ್ಯ ತೋರಲಿಲ್ಲ. ಸಮೀಪದ ದೇವಸ್ಥಾನದ ಅರ್ಚಕರ ವಶ ದೇವರನ್ನು ಕೊಡುವದೆಂದು ಯೋಚಿಸಿದೆನು. ಅರ್ಚಕರು ಒಪ್ಪಲಿಲ್ಲ. ಯಾವ ರಗಳೆಯೂ ಬೇಡವೆಂದು ದೇವರನ್ನು ಭಾವಿಯೊಳಕ್ಕೆ ಬಿಸಾಡಿರುತ್ತೇನೆ! ಮನಸ್ವಿ ತಿನ್ನುವುದು, ಕುಡಿಯುವುದು, ವಿಷಯಗಳಲ್ಲಿ ಮಗ್ನನಾಗುವುದು, ಇವೇ ನನ್ನ ಮುಖ್ಯ ಕರ್ತವ್ಯಗಳು! ಈ ಸುಖವನ್ನು ಅನುಭವಿಸಬೇಕೆಂದು ಅಲ್ಲವೇ ನಾನು ಮನುಷ್ಯ ಜನ್ಮವನ್ನು ಎತ್ತಿ ಬಂದದ್ದು? ಈ ಶರೀರವಿರುವ ವರೇಗೆ ಸಂತೋಷಪಟ್ಟದ್ದೇ ಆಯಿತು. ನಂತರದ ವಿಷಯ ನನಗಿಲ್ಲ. ಈ ಶರೀರ ಸತ್ತ ಮೇಲೆ ನಾನು ಏನಾಗುವೆನು? ದೇವರು ನನ್ನನ್ನು ನಿರ್ಮಿಸಿದ ಉದ್ದೇಶವೇನು? ಎಂಬೀ ಸಂಗತಿಗಳ ಗೋಜಿಗೆನೇ ನಾನು ಹೋಗಲಾರೆ. ಪ್ರಾತಃಸ್ನಾನ, ಸಂಧ್ಯಾವಂದನೆ, ಜಪ, ತಪ ಇವೆಲ್ಲಾ ಮುದಿ ಅಜ್ಞದಿರಿಗೆ ಹೇಳಿದ ಮಾತು! ನನ್ನಂಥಾ "ವಿದ್ಯಾವಂತ"ನು ಈ ಕಾರ್ಯಗಳಲ್ಲಿ ಉದ್ಯುಕ್ತನಾಗುವುದು ಬರೇ ನಾಚಿಕೆಗೇಡಲ್ಲವೇ? 'ರೈಬಹದ್ದೂರ' 'ದಿವಾನಬಹದ್ದೂರ' 'ಖಾನಬಹದ್ದೂರ' ಮುಂತಾದ ಬಿರುದಾವಳಿಗಳಾದರೂ ಮೋಕ್ಷಕ್ಕೆ ಒಂದು ದಾರಿ! ಇವುಗಳ ಕಡೆಗೆ ಅನುನಿತ್ಯವೂ ಲಕ್ಷ್ಯವಿಟ್ಟು ವರ್ತಿಸುತ್ತಿದ್ದೇನೆ. ನನ್ನ ವಿದ್ಯಾಮಹಿಮೆಯನ್ನು ವರ್ಣಿಸಲು ಮಹಾಶೇಷನಿಂದಲೂ ಅಸಾಧ್ಯ! ಮೈದಾನಿನಲ್ಲಿ ನನ್ನ ಹಾಗಿನ ವಿದ್ಯಾಪ್ರವೀಣರ ಕೂಟವು ಯಾವಾಗಲೂ ಕಾಣಬಹುದು. ಅಲ್ಲಿ ನಡೆಯತಕ್ಕ ಸ್ತುತ್ಯ ಸಂಭಾಷಣೆಯನ್ನು ಒಂದು ತಾಸು ಕಿವಿಕೊಟ್ಟು ಕೇಳಿದ್ದಲ್ಲಿ ಸರ್ವವೂ ವ್ಯಕ್ತವಾಗುವುದು!

ಅಯ್ಯಾ, ಸಾಕು ಮಾಡುತ್ತೇನೆ. ನಮ್ಮೊಳಗೆ ನಾವು ನೋಡುವ ಕಾಲ ಹೇಗುಂಟೋ!

ಸಾರಸ್ವತ.

* * *

ಮ॥ ರಾ॥ ರಾ॥ ಸ್ವದೇಶಾಭಿಮಾನಿ ಎಡಿಟರರಿಗೆ.

ಅಯ್ಯಾ,

ನಮ್ಮ ಪಾವಂಜೆ ಗ್ರಾಮದ ಪಟೇಲ್ ಜಿಯಾ ಉದ್ದೀನ್ ಸಾಹೇಬ ಅಸದಿಯವರು ನಮ್ಮ ತೋಕೂರ್ ಬೋರ್ಡ ಹಿಂದುಸ್ಥಾನಿ ಶಾಲೆಯ ಕಟ್ಟಡವನ್ನು ಕಟ್ಟುವ ಕಂಟ್ರಾಕ್ಟ ವಹಿಸಿಕೊಂಡಿರುತ್ತಾರೆ. ಅದರಗೋಸ್ಕರ ಅವರು ಪಡುಬಿದ್ರೆಯಿಂದ ಮರಗಳನ್ನು ಸಾಟಿಮಾಡಿ ರಹದಾರಿ ಸಮೇತ ಗಾಡಿಗಳಲ್ಲಿ ತುಂಬಿಸಿ ತರುತ್ತಾ ಮೂಲ್ಕಿ ಕಡವು ದಾಟುವಾಗ್ಯೆ ಒಂದು ಗಾಡಿಯು ಹಿಂದೆ ಉಳಿಯಿತು. ಪರ್ಮಿಟು ಮುಂದಿನ ಗಾಡಿಯವರ ಹತ್ತರವಿತ್ತು. ಮೂಲ್ಕಿ ಠಾಣೆಯ ಕಟ್ಟೆಗೆ ಸುಂಕ ವಸೂಲ್ ಮಾಡುವ ಕಂಟ್ರಾಕ್ಟದಾರರು ಪೋಲಿಸಿನವರಿಂದ ಸದರಿ ಗಾಡಿಯನ್ನು ಹಿಡಿಸಿ, ಕೈದು ಮಾಡಿಸಿ ಆ ದಿನ ರಾತ್ರೆ ಸಮಯವಾದ್ದರಿಂದ ಬೆಳಿಗ್ಯೆ ಬಿಟ್ಟು ಬಿಟ್ಟರಂತೆ. ಹೀಗೆ ಪ್ರತಿಗಾಡಿಗೆ ಒಂದೊಂದು ಪರ್ಮಿಟು ಬೇಕಾದರೆ ಬಹಳ ಕಷ್ಟವಾಗುವದು, ಮತ್ತು ಕಟ್ಟೆಗೆ ಕಂಟ್ರಾಕ್ಟರ ಇರುತ್ತಾ ಪೋಲಿಸ್‌ನವರು ಅದರಲ್ಲಿ ಪ್ರವೇಶಿಸಿದ್ದು ಸರಿಯಲ್ಲ. ನಮ್ಮ ಪಟೇಲರು ಪೋಲಿಸ್ ಇಲಾಖೆಯಿಂದ ಇನಾಂ ಪಡಕೊಂಡು ಬಹುಮಾನಪಟ್ಟವರಾಗಿರುತ್ತಾರೆ. ಅವರ ಗತಿಯೇ ಹೀಗೆ ಆದರೆ ಬೇರೆಯವರನ್ನು ಯಾರು ಕೇಳುವರು? ಇನ್ನಾದರೂ ಹೀಗೆ ಗಾಡಿಯವರಿಗೆ ಉಪದ್ರ ಕೊಡದಂತೆ ಮೇಲ್ ಆಫೀಸರರು ಜಾಗ್ರತೆ ಹೇಳಬೇಕು. ಮರುದಿನ ಪಟೇಲರು ಮೂಲ್ಕಿಗೆ ಹೋಗಿ, ತಕ್ಕ ವ್ಯವಸ್ಥೆಗೊಳಿಸಿ ಹಿಂದೆ ಬಂದರು.

ಇಂತಿ ತಮ್ಮ ವಿಧೇಯ
ಜಲಾಲುದ್ದಿನ್ ಅಸದಿ
ಮಾಸ್ತರ್.

* * *

ಸ್ವಾಮಿ,

'ಪುತ್ತು ಪ್ರಭುಗಳ ಓಣಿ'ಯೆಂದು ಕರೆಯಲ್ಪಡುವ ಹೂಮಾರ್ಕೆಟಿನ ಇದಿರಿರುವ ರಸ್ತೆಯು ಹೊಲಸು ನಾತಗಳ ತೌರುಮನೆಯಾಗಿ ಇನ್ನೆಷ್ಟುಕಾಲವಿರಬೇಕಾಗಿದೆಯೋ ತಿಳಿಯದು. ಸೆನಿಟೇಶನ್ ಸಮ್ಮಂಧವಾಗಿ ವಿಚಾರಮಾಡುತ್ತಿರುವ ಅಧಿಕಾರಿಗಳು ಸರ್ವದಾ ಹೊಲಸಿನ ಪರಿಚಯದಲ್ಲೇ ಇರುವುದರಿಂದ,—ಪೇಟೇ ಮಧ್ಯೆ ಇರುವ ಈ ದಾರಿಯ ಅಸಹನೀಯ ಹೇಸಿಕೆಗಳ ಕುರಿತು ಉದಾಸೀನರಾಗಿರುವುದು ಅಷ್ಟೊಂದು ಆಶ್ಚರ್ಯವಲ್ಲ. ಕೊಳೆತ ಬಾಳೆಯೆಲೆಗಳು, ಸೆಗಣಿ ಗಂಜಳದ ಹುಳಿಹಿಡಿದು ನಾರುವ ನೀರು, ಇತ್ಯಾದಿಗಳಿಂದ ನಿಬಿಡವಾಗಿರುವ ವೈತರಣೀಸಮ ನಲ್ಲಿಗಳು ಮಾರ್ಗದಲ್ಲೆಲ್ಲ ಹೊಂಡ ಕಲ್ಲು ಕಸಕಡ್ಡಿಗಳು, ಇವುಗಳಿಂದ ಹೊರಡುವ ನುಸಿ ನೊಣಗಳ ತಂಡ ತಂಡಗಳು,—ಇವನ್ನೆಲ್ಲ ನೋಡಿದರೆ ಅಲ್ಲಿ ಆಗಾಗ್ಗೆ ಮನೆಗಳಿಗೆ ಬೀಗ ಹಾಕಿ, ಜನಗಳು ಬಿಡಾರವೆತ್ತಿ ಹೋಗುತ್ತಿರುವುದು ಅದೇಕೆಂದು ಸ್ಪಷ್ಟವಾಗದಿರದು.

ಈ ವಿಷಯ ಆದಷ್ಟು ತ್ವರ್ಯದಲ್ಲಿ ಪಟ್ಟಣ ತಾತರು ಗಮನಿಸಿ ರಸ್ತೆಯನ್ನು ಶುಚಿಗೊಳಿಸಿ, ಈ ಪ್ರಾಂತ್ಯಕ್ಕೆ ಕ್ಷೇಮವನ್ನುಂಟುಮಾಡುವರೆಂದು ನಂಬಿರುವೆನು.

'ಪುಟ್ಟು'

* * *

ಉದ್ದಿ ಕಲ್ಲುಸಂಕದ ಗೇಟು.

ಸ್ವಾಮಿ,

ಇಲ್ಲಿಯ ಗೇಟನ್ನು ಹಾದು ಹೋಗುವ ಗಾಡಿಗಳಿಗೆ, (ಬೋರ್ಡ ರೂಲ್ಸುಗಳಿಗೆ ವಿರೋಧವಾಗಿ) ಹೋಗುತ್ತಲೂ, ಇಪ್ಪತ್ತನಾಲ್ಕು ತಾಸುಗಳಿಗೆ ಮೊದಲು ಬರುತ್ತಲೂ ಹೀಗೆ ಎರಡೂ ಬಾರಿ ಸುಂಕವನ್ನು ವಸೂಲುಮಾಡುತ್ತಾರೆಂದು ತಿಳಿಯಬರುತ್ತದೆ. ಇದು ನಿಜವಾದರೆ, ಸರಕಾರಿ ಕಾಯಿದೆ ಹಾಗಿರಲಿ, ನನ್ನಂತಹ ಬಡಗಾಡಿಗಾರರಿಗೆ ಅನ್ಯಾಯವಾಗುವುದರಿಂದ ಈ ಕುರಿತು ವಿಚಾರಮಾಡುವಂತೆ ಮೇಲಾಫೀಸರರನ್ನು ನಿಮ್ಮ ಅಮೂಲ್ಯ ಪತ್ರದ ಮೂಲಕ ಬೇಡಿಕೊಂಡಿರುವೆನು.

ಬಡ ಗಾಡಿಗಾರ.

* * *

ವಿದೇಶ ವೃತ್ತಾಂತ.

ಐರ್ಲಾಂಡಿಗೆ ಹೋಮ್‌ರೂಲ್ ಕೊಡುವರೆ ವಿರೋಧಿಸುವ ಪಕ್ಷದವರು ಅಲಸ್ಟರಿಗೆ ಗುಟ್ಟಾಗಿ ಗುಂಡು ಮದ್ದುಗಳನ್ನು ಸಾಗಿಸುತ್ತಲೇ ಇದ್ದಾರೆ.

* * *

ಮೆಕ್ಸಿಕೋದಲ್ಲಿ ದಂಗೆಗಾರರ ಪಕ್ಷದವರಿಗೂ ಪ್ರೆಸಿಡೆಂಟ ಹುರೇಟರ ಪಕ್ಷದವರಿಗೂ ಯುದ್ಧವಾಗುತ್ತಿದೆ. ಹುರೇಟರ ಪಕ್ಷದವರು ಕೆಲವು ಸ್ಥಳಗಳಲ್ಲಿ ಸೋತು ಹೋದರು. ಅಮೇರಿಕ ಮತ್ತು ಮೆಕ್ಸಿಕಾನರ ಸಂಧಾನ ಸಭೆಯು ನಯಗರಾ ಜೋಗಿನಲ್ಲಿ ಕೂಡಿಬರುವುದು.

* * *

ಮಾಜಿ ಮುಂಬಾಯಿ ಗವರ್ನರರಾಗಿದ್ದ ಸಿಡ್ನೆನ್ ಹಾಮ್ ಪ್ರಭುಗಳು ಹಿಂದೂಸ್ಥಾನದ ವೈದ್ಯ ಕೆಲಸದ ಚಲೋ ಕಾರ್ಯಗಳು ಗ್ರೇಟ್ ಬ್ರಿಟಾನಿನಲ್ಲಿ ಇನ್ನು ಹೆಚ್ಚಿನ ಗಮನಕ್ಕೆ ತರಲ್ಪಡಲಿಲ್ಲ; ಹಿಂದೂಸ್ಥಾನದ ರೋಗನಿವಾರಣೆಗಳ ಮಾಹಿತಿಯನ್ನು ಕಲಿತುಕೊಳ್ಳುವ ಒಂದು ರಿಸರ್ಚ್ ಶಾಲೆಯನ್ನು ಮುಂಬಾಯಿಯಲ್ಲಿ ಸ್ಥಾಪಿಸುವರೆ ಇಂಗ್ಲಾಂಡಿನ ಯಾವನೊಬ್ಬ ಶ್ರೀಮಂತನು ದ್ರವ್ಯ ಸಹಾಯ ಮಾಡುವುದಾದರೆ ಮಹಾ ಪುಣ್ಯ ಕೆಲಸ ಮಾಡಿದಂತಾಗುವುದೆಂತ ಒಂದು ಪತ್ರಿಕೆಗೆ ಬರದಿರುವರು.

* * *

ಇಂಗ್ಲಾಂಡಿನ ಹಿಂಡ್ಲೆ ಎಂಬಲ್ಲಿ ಒಂದು ಹತ್ತಿ ಕಾರ್ಖಾನೆಗೆ ಬೆಂಕಿ ಬಿದ್ದು ೩೦,೦೦೦ ಪವನುಗಳ ನಷ್ಟವಾಗಿರುವುದಲ್ಲದೆ ಇದರಿಂದ ೭೦೦ ಮಂದಿ ಕೆಲಸಗಾರರು ಕೆಲಸವಿಲ್ಲದೆ ಇರುವರು.

* * *

ಫ್ರೆಂಚ್ ಇಂಟೆಲಿಜೆನ್ಸ್ ಡಿಪಾರ್ಟಮೆಂಟಿಗೆ ಜರ್ಮನ್ ದೇಶದ ಹಡಗ ಮತ್ತು ಮೆಶಿನುಗಳ ನಕ್ಷೆಯನ್ನು ಕೊಟ್ಟಿದ್ದಳೆಂಬ ಆಪಾದನೆಯ ಮೇಲೆ ಒಬ್ಬ ಹುಡುಗಿ ಕ್ಲಾರ್ಕಳಿಗೆ ಬೆರ್ಲಿನಿನಲ್ಲಿ ೩೦ ತಿಂಗಳ ಸಜಾ ವಿಧಿಸಲ್ಪಟ್ಟಿತು.

* * *

ಉತ್ತರ ಹಿಂದೂಸ್ಥಾನ.

ಭರತಖಂಡದೊಳಗೆಲ್ಲಾ ಮುಂಬಾಯಿಯ ಮಿ॥ ಮಾತ್ರೆಯವರನ್ನು ಮೀರಿದ ಶಿಲ್ಪಿಯು ಮತ್ತಾರೂ ಇರುವುದಿಲ್ಲ. ಇವರು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ, ಪಾಶ್ಚಾತ್ಯರಲ್ಲೂ ವಿಶೇಷ ಪ್ರಖ್ಯಾತಿಯನ್ನು ಪಡೆದಿರುವರು. ಇವರು ದೇವಾಲಯಕ್ಕೆ ಎಂಬ ಹೆಸರಿನಿಂದ ನಿರ್ಮಿಸಿರುವ ವಿಗ್ರಹವು ಜಗತ್ಪ್ರಸಿದ್ಧವಾಗಿರುವುದು. ಇದು ಒಬ್ಬ ಭಾರತೀಯ ಮಹಿಳೆಯು ದೇವಾಲಯಕ್ಕೆ ಹೋಗುತ್ತಿರುವಂತೆ ಕಲ್ಲಿನ ಮೇಲೆ ಕೆತ್ತಲ್ಪಟ್ಟ ವಿಗ್ರಹವಾಗಿದೆ. ಗ್ಲೇಡ್‌ಸ್ಟನ್, ಸ್ರಿಫಿಕ್, ಬರ್ಡ್‌ವುಡ್ ಮೊದಲಾದ ಆಂಗ್ಲ ಪ್ರಮುಖರು ಈ ಮಾತ್ರೆಯವರನ್ನೂ ಇವರಿಂದ ನಿರ್ಮಿತವಾದ ವಿಗ್ರಹಗಳನ್ನೂ ಅತ್ಯಂತವಾಗಿ ಶ್ಲಾಘಿಸಿರುವರು. ಚಿತ್ರಲೇಖನದಲ್ಲಿ ಪ್ರಸಿದ್ಧರಾದ ರಾಜರಾಮರವಿವರ್ಮರವರು ಈ ಮಾತ್ರೆಯವರನ್ನು ಸಣ್ಣ ವಯಸ್ಸಿನಲ್ಲಿಯೇ ನೋಡಿ ಸ್ವಲ್ಪ ದಿನಗಳಲ್ಲೇ ಈತನು ಮಹಾ ಪುರುಷನಾಗುವನೆಂದು ನುಡಿದಿದ್ದರು. ಅದು ನಿಜವಾಯಿತು ಈ ಮಾತ್ರೆಯವರು ಮಿ॥ ವಾಡಿಯಾ, ರಾನಡೆ, ರುಸ್ತುಂಜಿ, ಮಾಡಲಿಕ್, ವಿಕ್ಟೋರಿಯಾರಾಣಿ, ಗ್ವಾಲಿಯೋರ್, ಮೈಸೂರು ಮೊದಲಾದ ಕೆಲವು ಸಂಸ್ಥಾನದ ಮಹಾ ರಾಜರುಗಳ ಶಿಲಾ ಮೂರ್ತಿಗಳನ್ನು ನಿರ್ಮಿಸಿ ಬಹಳ ಮೆಚ್ಚುಗೆಯನ್ನು ಪಡೆದಿರುವರು. ಚಿತ್ರ ಲೇಖನದಲ್ಲಿ ರಾಜರವಿ ವರ್ಮರವರೂ, ಕವಿತ್ವದಲ್ಲಿ ರವೀಂದ್ರನಾಥ ಟಾಗೋರರವರೂ ಪ್ರಸಿದ್ಧರಾಗಿ ಭರತ ಖಂಡದ ರವಿಗಳಾಗಿಯೇ ಪರಿಣಮಿಸಿದರು. ಈ ಮಾತ್ರೆಯವರು ಶಿಲ್ಪ ಕರ್ಮದಲ್ಲಿ ಅವರಂತೆಯೇ ವಿಖ್ಯಾತಿ ಪಡೆದು ದೇಶಕ್ಕೆ ಗೌರವವನ್ನು ತರುತ್ತಲಿದ್ದಾರೆ.

* * *

ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ಪ್ಲೇಗು ಸೋಂಕಿದವರ ಸಂಖ್ಯೆಯು ಹೆಚ್ಚಾದರೂ ಮರಣ ಸಂಖ್ಯೆಯು ೩೬೨೬ ಮಂದಿಗೆ ತಗ್ಗಿರುವುದು. ಮೇ ತಿಂಗಳ ತಾ. ೨ಕ್ಕೆ ಅಂತ್ಯವಾಗುವ ವಾರದಲ್ಲಿ ಪ್ಲೇಗು ಮರಣ ಸಂಖ್ಯೆಯು ೧೨,೮೨೨. ಕಳೆದ ವಾರ ೮೬೩೦ ಮಂದಿ ಮಾತ್ರ ಮೃತಪಟ್ಟಿರುವರು. ಈ ಪೈಕಿ ಪಂಜಾಬು ೩೨೩೮; ಸಂಯುಕ್ತ ಸಂಸ್ಥಾನ ೨೨೧೬; ಬಿಹಾರ್ ಮತ್ತು ಒರಿಸ್ಸ ೧೯೭೪; ಮುಂಬಾಯಿ ೬೭೩; ಬರ್ಮ ೧೨೦; ಬಂಗಾಳ ೨೩; ಮದ್ರಾಸ್ ೪ ಮರಣಗಳಾದವು.

* * *

ನಾಗಪುರದ ಮೆಹಿಡ್‌ಬಾಗ್ ಎಂಬಲ್ಲಿಯ ಮಹಮ್ಮದೀಯರ ಧರ್ಮಗುರು ಖಾನ್ ಬಹದ್ದೂರ್ ಎಚ್. ಎಮ್. ಮಾಲಕ್ ಎಂಬವರು ಅಸ್ಮಾಬಾಯಿಯನ್ನು ಒಂದು ಕೋಣೆಯಲ್ಲಿ ಮಡಗಿಟ್ಟಿರುವರೆಂಬದಾಗಿ ಆಪಾದಿಸಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು. ಈ ಮೊಕದಮೆಯ ವಾದವು ಈ ರೀತಿಯಾಗಿರುವುದು. ಮಾಜಿ ಮಲಕರು ಮಹಮ್ಮದೀಯರ ಉಪಶಾಖೆಯನ್ನು ಸೃಷ್ಟಿಸಿದವರು. ಇವರಿಗೆ ೪ ಪತ್ನಿಯರಿದ್ದರು. [illegible] ಮರಣ ನಂತರ ೧೪ ವರ್ಷಗಳ ಹಿಂದೆ ಈಗಿನ [illegible] ರ್ಮ ತಕ್ಕೊಂಡರು. ಮಾಜಿ ಮಾಲಕರ [illegible] ೩ ಮಂದಿ ಈಗಿನ ಮಾಲಕರ ಕೂಡೆ ಪತ್ನಿಯರಂತೆಯೇ ವಾಸ ಮಾಡಿದರು. ೬ ತಿಂಗಳ ಹಿಂದೆ ಅಸ್ಮಾಬಾಯಿ ಮತ್ತು ಈ ಶಾಖೆಯ ಇತರ ೫೪ ಮೆಂಬರರು ಮಾಲಕರ ಹೊಸ ಬದಲಾವಣೆಗಳಿಗೆ ಮೆಚ್ಚದೆ ಅವರನ್ನು ಬಿಟ್ಟುಹೋದರು. ಈಚೆಗೆ ಸ್ವಲ್ಪ ದಿವಸಗಳ ಹಿಂದೆ ಅಸ್ಮಾಬಾಯಿ (ಮಾಜಿ ಮಾಲಕರ ಪತ್ನಿಯರಲ್ಲಿ ಒಬ್ಬಳು) ಅವಳ ಮಗಳು, ಮಾಜಿ ಮಾಲಕರ ಇಬ್ಬರು ಸಹೋದರಿಯರು ಮತ್ತು ತಾಯಿ ತಮ್ಮ ಸ್ವಇಚ್ಛೆಯಿಂದ ಪುನಃ ಹಿಂದೆರಳಿ ಬಂದು ತಮ್ಮನ್ನು ಸೇರಿಸಿಕೊಳ್ಳಬೇಕೆಂದು ಮಾಲಕರನ್ನು ಕೇಳಿಕೊಂಡರು. ಮಾಲಕರು ಇದಕ್ಕೆ ಇಷ್ಟ ಪಡದೆ ಅಸ್ಮಾಬಾಯಿಯನ್ನು ಕೋಣೆಯೊಳಗೆ ಬಚ್ಚಿಟ್ಟು ತನ್ನ ಇಚ್ಛೆಗೆ ವಿರೋಧವಾಗಿ ನಡೆದುದ್ದರಿಂದ ತುಂಡು ತುಂಡಾಗಿ ಕಡದು ಬಿಡುವೆನೆಂತ ಹೆದರಿಸಿರುವರು ಎಂಬದೇ ಫಿರ್ಯಾದಿಯ ವಾದವಾಗಿರುವುದು. ಮೆಜಿಸ್ಟ್ರೇಟರು ತನಖಿ ನಡಿಸಿ ಮಾಲಕರು ಅಸ್ಮಾಬಾಯಿಯನ್ನು ಹೆಂಡತಿಯಂತೆ ನಡಿಸಿದುದರಿಂದ ಮಹಮ್ಮದೀ ಆಕ್ಟಿನ ಪ್ರಕಾರ ಅವರ ಮೇಲೆ ತಪ್ಪು ಸಾಬೀತಾಗುವುದಿಲ್ಲವೆಂದು ಹೇಳಿ ಖುಲಾಸುಪಡಿಸಿದರು.

* * *

ಲಾಹೋರ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಮುಷ್ಕರ ಹಾಕಿದವರಲ್ಲಿ ಕೆಲವರಿಗೆ ಶಿಕ್ಷೆ ವಿಧಿಸಲ್ಪಟ್ಟಿತ್ತಷ್ಟೆ. ಈ ಸಂಬಂಧ ವಿದ್ಯಾರ್ಥಿಗಳು ಲೆಪ್ಟನೆಂಟ ಗವರ್ನರರವರಿಗೆ ಮಾಡಿಕೊಂಡ ಮನವಿಗೆ ಮೊದಲಿನ ತೀರ್ಮಾನವನ್ನು ರದ್ದುಮಾಡಲು ಏನೊಂದೂ ಆಧಾರ ಕಾಣುವುದಿಲ್ಲ ಎಂಬ ಉತ್ತರವು ಲೆಪ್ಟನೆಂಟ ಗವರ್ನರರವರಿಂದ ದೊರಕಿರುವುದು.

* * *

ಕರಾಚಿಯ ಒಬ್ಬ ಹೆಂಗಸು ಆಯುಧಗಳನ್ನು ಹಾಸಿಗೆಯ ಒಳಗೆ ಮಡಗಿ ಕಚ್ಛಿ ದೇಶಕ್ಕೆ ವೈಯ್ಯುತ್ತಿದ್ದಳೆಂಬದಾಗಿ ಆರೋಪಿಸಲ್ಪಟ್ಟಿದ್ದಳು, ಅವಳಿಗೆ ೫೦ ರೂಪಾಯಿಗಳ ಜುರುಮಾನೆ ವಿಧಿಸಲ್ಪಟ್ಟಿತು. ದೀಪಾವಳಿ ಹಬ್ಬದ ಸಮಯ ತನ್ನ ಮಗನಿಗೆ ಆಟಕ್ಕಾಗಿ ಅದನ್ನು ಕೊಂಡು ಹೋಗುತ್ತಿದ್ದೆನೆಂಬದು ಹೆಂಗಸಿನ ವಾದವಾಗಿತ್ತು.

* * *

ಅಲ್ಲಹಾಬಾದ್ ಹ್ಯಾಕೋರ್ಟಿನಲ್ಲಿ ತಾ. ೧೩ರಲ್ಲು ಒಂದು ವಿಚಿತ್ರವಾದ ಅಪೀಲು ತನಕಿಗೆ ಬಂದಿರುವುದು. ಒಬ್ಬ ಹೆಂಗಸನ್ನು ಕೊಂದ ಆರೋಪಣೆಯ ಮೇಲೆ ಒಬ್ಬ ಮಹಮ್ಮದೀಯನಿಗೆ ಶಹಾಪುರ ಜಡ್ಜರು ಮರಣ ಶಿಕ್ಷೆಯನ್ನು ವಿಧಿಸಿದ್ದರು. ಮೃತಳು ಆಪಾದಿತನ ಸ್ನೇಹಿತಳಾಗಿದ್ದು ಒಂದು ದಿನ ಕುತ್ತಿಗೆ ಕಡಿಯಲ್ಪಟ್ಟು ಕೋಣೆಯೊಳಗೆ ಸತ್ತು ಬಿದ್ದಿದ್ದಳು. ಕೆಲವು ವಸ್ತ್ರಗಳೂ ಅಲ್ಲಿ ಬಿದ್ದಿದ್ದವು. ಪೋಲಿಸ್ ಸುಪರಿಂಟೆಂಡೆಂಟರಾದ ಮಿ॥ ಕೋರ್ಡನರು ತನ್ನ ಬೇಟೆನಾಯಿಯ ಕೂಡೆ ಆ ಸ್ಥಳಕ್ಕೆ ಹೋಗಿ ನಾಯಿಯನ್ನು ವಾಸನೆತಕ್ಕೊಳ್ಳಲು ಕೋಣೆಯೊಳಗೆ ಬಿಟ್ಟು ಕಡೆಗೆ ನಾಯಿಗೆ "ಅವನನ್ನು ಬೇಟೆಯಾಡು, ಬೇಟೆಯಾಡು" ಅಂದರು. ನಾಯಿಯು ಕೋರ್ಡನರನ್ನು ಆಪಾದಿತನ ಮನೆಗೆ ತಕ್ಕೊಂಡು ಹೋಯಿತು. ಕೋರ್ಡನರು ಅವನನ್ನು ಈ ನಾಯಿಯ ಆಧಾರದ ಮೇಲೆ ಕೈದುಮಾಡಿ ವಿಚಾರಣೆಗೆ ಗುರಿ ಮಾಡಿದರು. ಜಡ್ಜರು ಮರಣದಂಡನೆಯನ್ನು ವಿಧಿಸಿದರು. ಈ ತೀರ್ಮಾನದ ಮೇಲೆ ಅಪೀಲು ಮಾಡಿಕೊಂಡಲ್ಲಿ ಆ ವಸ್ತ್ರವು ಅಪೀಲುದಾರನಿಗೆ ಸೇರಿದೆಂಬದಕ್ಕೆ ತಕ್ಕ ರುಜುವಾತಿಲ್ಲವಾದ್ದರಿಂದ ಮರಣ ದಂಡನೆಯನ್ನು ವಜಾ ಮಾಡಿ ಆಪಾದಿತನನ್ನು ಖುಲಾಸು ಪಡಿಸಿದರು.

* * *

ಮುಂಬಾಯಿಯಲ್ಲಿ ಒಬ್ಬ ಭಾರತೀಯ ಹುಡುಗಿಯು ಮನೆಯಲ್ಲಿ ತಂದಿಟ್ಟಿದ್ದ ಕೆಲವು ಕ್ವಿನಾನ್ ಮಾತ್ರೆಗಳನ್ನು ಆಕಸ್ಮತ್ತಾಗಿ ತಿಂದು ಮೂರ್ಛೆ ಹೊಂದಿ ಆಸ್ಪತ್ರಿಗೆ ವೈಯ್ಯಲ್ಪಟ್ಟು ಶೈತೋಪಚಾರ ನಡಿಸಿದರೂ ಮೃತಪಟ್ಟಳು.

* * *

ವರದಕ್ಷಿಣೆಯನ್ನು ಕೊಡಲಾರದೆ ಪೇಚಾಟ ಪಡುತ್ತಿದ್ದ ತಂದೆಯ ಚಿಂತನೆಯನ್ನು ಹೋಗಲಾಡಿಸುವ ಉದ್ದೇಶದಿಂದ ಸ್ನೇಹಲತೆಯು ಆತ್ಮಹತ್ಯಮಾಡಿಕೊಂಡಂದಿನಿಂದ ಬಂಗಾಳದಲ್ಲಿ ಈ ತೆರನಾಗಿ ಬಲಿಯಾಗುತ್ತಿರುವ ಹೆಮ್ಮಕ್ಕಳ ಸಂಖ್ಯೆಯು ಹೆಚ್ಚುತ್ತಲೇ ಇದೆ. ಡಕ್ಕದ ಸರತ್ ಚಂದ್ರ ರೋಯಿ ಎಂಬವರ ೧೩ ವರ್ಷ ವಯಸ್ಸಿನ ಬಾಲಿಕೆಯು ಸ್ನೇಹಲತೆಯ ಮರಣ ವಾರ್ತೆಯನ್ನು ಕೇಳಿದಂದಿನಿಂದ ಮನಸ್ಸಿನಲ್ಲಿ ಕಳವಳಪಡುತ್ತಿದ್ದು ಕಳೆದ ಬ್ರಹಸ್ಪತಿವಾರ ಶೀಮೆ ಎಣ್ಣೆಯನ್ನು ಹೊಯ್ದುಕೊಂಡು ಬೆಂಕಿ ತಾಗಿಸಿಕೊಂಡಳು. ಅವಳಿಗೆ ವಿವಾಹಕ್ಕೆ ಏರ್ಪಾಡಾಗಿ ಬೇಗನೇ ವಿವಾಹವಾಗಲಿಕ್ಕಿತ್ತು. ಸರತ್ ಚಂದ್ರರೋಯಿಯವರೇನೊ ಬಡವರಲ್ಲ. ವರದಕ್ಷಿಣೆಯನ್ನು ಕೊಡಲು ಹಣವಿಲ್ಲದೆ ತೊಂದರೆ ಪಡಬೇಕಾದವರಲ್ಲ. ಹೀಗಿದ್ದರೂ ಆ ಬಾಲಕಿಯು ಇಂತಹ ಕೃತ್ಯವನ್ನು ಮಾಡಿಕೊಂಡಳು. ಸ್ನೇಹಲತೆಯ ಆತ್ಮಘಾತದ ಪರ್ಯಾಲೋಚನೆಯೇ ಇವಳು ಆತ್ಮಹತ್ಯಮಾಡಿಕೊಳ್ಳಲು ನಿಷ್ಕರ್ಷಿಸಲು ಕಾರಣವಾಯಿತು. ಹುಡುಗಿಯು ಇನ್ನೂ ಜೀವದಿಂದಿದ್ದಾಳೆ. ಆದರೆ ಸುಟ್ಟುಗಾಯಗಳಿಂದ ಬದುಕುವುದು ಕಷ್ಟವಾಗಿದೆ.

* * *

ಮುಂಬಾಯಿಯಲ್ಲಿ ಹತ್ತಿ ಮೂಟೆಗಳಿಗೆ ತಾ. ೧೯ರಲ್ಲು ಬೆಂಕಿ ಬಿದ್ದು ೩೦೦೦ ಬೇಲ್ ಹತ್ತಿ ಸುಟ್ಟು ಹೋಗಿ ೪ ಲಕ್ಷ ರೂಪಾಯಿಗಳ ನಷ್ಟವಾಗಿರುವುದು.

* * *

ಪೂನೆಯಲ್ಲಿ ತಾ. ೧೯ರಲ್ಲು ಕೂಡಿದ ಸೋಶ್ಯಲ್ ಕನ್ಫರೆನ್ಸಿನಲ್ಲಿ ಸರ್ವ ಜಾತಿಯುವರು ಕೂಡಿ ಸಹಪಂಕ್ತಿಭೋಜನಮಾಡಿದರು.

* * *

ದಕ್ಷಿಣ ಹಿಂದೂಸ್ಥಾನ.

ವಿಜಯಪಟಾಮ್ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಕನ್ಫರೆನ್ಸ್ ತಾ. ೧೪ರಲ್ಲು ಎಲ್ಲಾಮಿನ್‌ಚಿಲ್ಲ ಎಂಬಲ್ಲಿ ರಾ| ಬಿ. ವೆಂಕಟಪತಿ ರಾಜರವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ರೈತರನ್ನು ಅಭಿವೃದ್ಧಿಗೆ ತರುವುದು, ನೀರಾವರಿ, ವಿದ್ಯಾಭ್ಯಾಸ ಮೊದಲಾದವುಗಳ ಕುರಿತು ಅಧ್ಯಕ್ಷರು ಭಾಷಣ ಕೊಟ್ಟು ಜಿಲ್ಲೆಯ ಶಾಲೆಗಳ ಸಂಖ್ಯೆ, ಬಾಲಕರ ಸಂಖ್ಯೆ, ರೈತರ ಸಂಖ್ಯೆ ಭೂಮಿಯ ವಿಸ್ತೀರ್ಣ ಮೊದಲಾದವುಗಳ ಆಧಾರದಿಂದ ಜಿಲ್ಲೆಯ ಈಗಿನ ಸ್ಥಿತಿಯು ಅಧೋಗತಿಯಲ್ಲಿರುವುದರಿಂದ ಉಚ್ಚಸ್ಥಿತಿಗೆ ಬರುವಂತೆ ಪ್ರಯತ್ನಿಸಬೇಕೆಂದು ಸಭಿಕರನ್ನು ಪ್ರೋತ್ಸಾಹಗೊಳಿಸಿದರು.

* * *

ತಿರುವಂಕೋಡಿನ ಚೀಫ್ ಜಸ್ಟಿಸರಾದ ಕೃಷ್ಣನ್ ನಾಯರರು ಅದೇ ಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟದ್ದರಿಂದ ಸೀನಿಯರ್ ಜಡ್ಜರಾದ ಮೆ| ಎಫ್. ಜಿ. ಆರ್. ಬಿ. ಹಂಟರವರು ಚೀಫ್ ಜಡ್ಜರಾಗಿ ನೇಮಿಸಲ್ಪಟ್ಟಿರುವರು.

* * *

ಮೆ| ಮಿರ್ ಸುಲ್ತಾನ್ ಮೊಹಿದಿನ್ ಬಾರ್-ಎಟ್-ಲಾ, ಮದ್ರಾಸ್, ಇವರು ದಕ್ಷಿಣ ಆರ್ಕಾಡಿನ ಕಲೆಕ್ಟರಾದ ಮೆ| ಅಜುಜಿದ್ದೀನರ ಮೇಲೆ ಚಂಗಲ್ಪಟ್ಟ್ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿ ಮಾನನಷ್ಟ ದಾವೆಮಾಡಿರುವರು. ಚೆಂಗಲ್ಪಟ್ಟ್ ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸಿಫರ ಮುಂದೆ ವಿಚಾರಣೆಯಾಗುತ್ತಿದ್ದ ಒಂದು ದಾವೆಯಲ್ಲಿ ಮೆ| ಅಜುಜಿದ್ದೀನರು ಮೆ| ಸುಲ್ತಾನ್ ಮೊಹಿದ್ದೀನರನ್ನು ಪಚಾರಿಸಿ ಮಾತಾಡಿದರೆಂತಲೂ ಮೊಹಿದ್ದೀನರ ಮಾಜಿ ತಂದೆ ಮೆ| ಮಿರ್‌ಅನ್ಸರುದ್ದೀನರನ್ನು "ವಂಚಕ"ನೆಂದು ಕರದರೆಂತಲೂ ಈ ದಾವೆಯ ವಾದವಾಗಿರುವುದು.

* * *

ತಾ. ೧೯ರಲ್ಲು ಉದಕಮಂಡಲದಲ್ಲಿ ಕೂಡಿದ ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಆಫೀಸರರಲ್ಲದ ನಾಮುಧಾರ್ ಮೆಂಬರರುಗಳಿಂದ ೧೨೪ ಪ್ರಶ್ನೆಗಳು ಹಾಕಲ್ಪಟ್ಟವು ಈ ಪ್ರಶ್ನೆಗಳಲ್ಲಿ ಮಕ್ಕಳು ಬೀಡಿ ಸೇದದ ಹಾಗೆ ಒಂದು ಕಾನೂನನ್ನು ಜಾರಿಗೆ ತರುವುದು, ಮಹಮ್ಮದೀಯರ ಪ್ರತಿನಿಧಿಗಳನ್ನು ಸ್ಥಳಿಕ ಪ್ರತಿನಿಧಿ ಸಭೆಗಳಲ್ಲಿ ಸೇರಿಸುವುದು, ವಿಧ್ಯಾರ್ಥಿಗಳು ಸಿಗರೇಟು ಸೇದದ ಹಾಗೆ ಒಂದು ಕ್ರಮ ಜಾರಿಗೆ ತರುವುದು ಇವೇ ಮೊದಲಾದ ಪ್ರಸ್ತಾಪಗಳ ಮೇಲಿನ ಪ್ರಶ್ನೆಗಳು ಮುಖ್ಯವಾದುವುಗಳಾಗಿರುವವು.

* * *

ಕಲ್ಲಿಕೋಟೆಯಲ್ಲಿ ಜರುಗಿದ ಕೊಯಮುತ್ತೂರು ಕೋಆಪರೇಟಿವ್ ಕೊನ್ಫರೆನ್ಸಿನ ವೃತ್ತಾಂತವು: ಇದೇ ತಾ. ೧೫ರಲ್ಲು ಕಲ್ಲಿಕೋಟೆಯಲ್ಲಿ ಈ ಕೊನ್ಫರೆನ್ಸು ಸಭೆ ಸೇರಿತು. ಮೆ| ಬಕ್ಲಿದೊರೆಗಳವರು ಅಧ್ಯಕ್ಷರಾಗಿದ್ದರು. ಸುಮಾರು ೪೦೦ ಪ್ರತಿನಿಧಿಗಳು ಹಾಜರಿದ್ದರು. ಮೆ| ಶ್ರೀಲೀರರಾಯನ್ ರಾಜರವರು ಸ್ವಾಗತ ಕಮಿಟೆಯ ಅಧ್ಯಕ್ಷರಾಗಿ,—"ಈ ಪರಸ್ಪರ ಸಹಾಯಕ ಸಂಘಗಳು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದು ಅವುಗಳ ಉದ್ದಿಶ್ಯವನ್ನು ನೆರವೇರಿಸುವುದರಲ್ಲಿ ವಿಳಂಬಗೊಳುತ್ತಲಿವೆ; ಅವು ತಮ್ಮ ಮೆಂಬರುಗಳಿಗೆ ಬೇಕಾದಂತೆ ಸಹಾಯ ದ್ರವ್ಯವನ್ನೊದಗಿಸಿ ಕೊಟ್ಟು ಅವರು ತಂತಮ್ಮ ವ್ಯಾಪಾರದಲ್ಲಿ ಸುಲಭದಿಂದ ಲಾಭ ಹೊಂದುವಂತೆ ಮಾಡುತ್ತಿವೆ. ಆದರೂ ತಾರ್‍ವಾಡ ಕ್ರಮ ಮತ್ತು ಮರುಮಕ್ಕತ್ತಾಯ ಕಟ್ಟಿನ ಕ್ರಮಗಳ ನ್ಯೂನತೆಗಳಿಂದಲೂ, ಕೆಲಸಗಾರರು ಬಡಸ್ಥಿತಿಯಲ್ಲಿರುವ ದೆಶೆಯಿಂದಲೂ, ಅವರು ಸಂಕಷ್ಟಗಳಿಂದ ವಿಮೋಚನೆ ಹೊಂದಲಿಕ್ಕೆ ಅನುಕೂಲವಾದ ಧನ ಸಹಾಯವು ಅವರಿಗೆ ಇಲ್ಲದಿರುವುದರಿಂದಲೂ, ಬೇಸಾಯಿಯರ ಬಡತನ ಮತ್ತು ಸಾಲಕೊಡುವವರ ಅಧಿಕ ಬಡ್ಡಿ ಕ್ರಮದಿಂದಲೂ, ಪರಸ್ಪರ ಸಹಾಯಕ ಸಂಘಗಳ ಪ್ರಯೋಜನವು ಎಲ್ಲರಿಗೂ ತಿಳಿಯಲು ಇನ್ನೂ ತಡೆಯುಂಟಾಗಿದೆ" ಎಂದು ತಿಳಿಸಿದರು. ಗ್ರಾಮ ಕೂಟಗಳು ಸರಿಯಾಗಿ ವ್ಯವಸ್ಥೆಗೊಳ್ಳದಿರುವುದು ಪರಸ್ಪರ ಸಹಾಯಕ ಸಂಘಗಳಿಗೆ ಮತ್ತೊಂದು ತೊಡಕು. ಅನಂತರ ಮೆ| ಬಕ್ಲಿಯವರು ಇಂತಹ ಕಾನ್ಫರೆನ್ಸುಗಳಿಂದ ಪಶ್ಚಿಮ ಕರಾವಳಿ ಜಿಲ್ಲೆಗಳಲ್ಲಿ ಪರಸ್ಪರ ಸಹಾಯಕ್ಕೆ ಹೆಚ್ಚಿನ ಸಹಾಯವಾಗುವುದೆಂದೂ ಈ ಪದ್ಧತಿಯನ್ನು ಈ ಜಿಲ್ಲೆಗಳಲ್ಲಿ ರೂಢಿಗೆ ತರಲು ಯಾವ ಉಪಾಯವನ್ನು ಮಾಡಬೇಕೆಂದು ಚರ್ಚಿಸಬೇಕಾಗಿಯೂ ಅಪ್ಪಣೆ ಕೊಡಿಸಿದರು. ನಂತರ ವಿದುಷಿಯರಾದ ಹಲವರಿಂದ ಪರಸ್ಪರ ಸಹಾಯದ ವಿಷಯವಾದ ವಿವಿಧ ಪ್ರಬಂಧಗಳು ಓದಲ್ಪಟ್ಟವು. ಈ ಸಂಘಗಳ ರಿಜಿಸ್ತ್ರಾರರವರೇ ಓದಿದ ಪ್ರಬಂಧವು [illegible]ದ್ದಿತು. ಈ ದೇಶದ ಮುಖ್ಯ ವೃತ್ತಿಯ ಜನ[illegible]ವರಾದುದರಿಂದ ಪರಸ್ಪರ ಸಹಾಯವು [illegible]ಯದಲ್ಲಿ ಮುಖ್ಯವಾಗಿ ಫಲಕಾರಿಯಾಗುವ ಹಾಗೆ ಏರ್ಪಾಡು ಮಾಡಬೇಕೆಂದರು. ಭೂಮಿಯ ಉತ್ಪತ್ತಿಯು ಬೇಸಾಯಿಗೆ ಸಾಂಗವಾಗಿ ಹೆಚ್ಚಿನ ಪ್ರಯೋಜನವನ್ನು ಕೊಡಬೇಕಾದರೆ ವ್ಯಾಪಾರ ರಹಸ್ಯವನ್ನು ಚೆನ್ನಾಗಿ ಅರಿತುಕೊಳ್ಳಬೇಕು ಮುಂತಾಗಿ ಅದರಲ್ಲಿ ಸೂಚಿಸಲ್ಪಟ್ಟದ್ದಿತು.

* * *

, **ಕೊಡಗು:**—ಈ ತಾಲೂಕಿಗೆ ಸೇರಿದ ಚಿಂಗನಾಡು ಕುಂದಚೇರಿ ಎಂಬಲ್ಲಿ ಒಬ್ಬ ಶಿವಳ್ಳಿ ಬ್ರಾಹ್ಮಣನ ಗೈರ್ಹಾಜರಿ ಕಾಲದಲ್ಲಿ ಕೆಲವು ಕಳ್ಳರು ಅವನ ಮನೆನುಗ್ಗಿ ಮನೆಯಲ್ಲಿ ಇದ್ದ ಆಳನ್ನು ಮತ್ತು ಬ್ರಾಹ್ಮಣ ಸ್ತ್ರೀಯನ್ನು ಹಿಂಸೆ ಪಡಿಸಿ ಅವಳ ಮೈಯಲ್ಲಿದ್ದ ಕೆಲವು ಆಭರಣಗಳನ್ನೂ ನಗಗಳನ್ನೂ ಅಪಹರಿಸಿ ಅವಳನ್ನು ಅರ್ಧ ಜೀವದಲ್ಲಿ ಬಿಟ್ಟು ಹೋಗಿರುತ್ತಾರೆ. ಪೋಲಿಸಿನವರು ಪತ್ತೆಯಲ್ಲಿದ್ದು ಕಳದ ವಾರದಿಂದ ಅನುಮಾನದ ಮೇಲೆ ಕೆಲವು ಮಂದಿಯನ್ನು ಹಿಡಿದು ವಿಚಾರಿಸಲು ಒಂದು ದೊಡ್ಡ ಕಳ್ಳರ ಗುಂಪೇ ಇದೆ ಎಂದು ತಿಳಿದುಬಂದಿದೆ. ಇವರಿಂದ ಹಲವು ಖೂನಿ ಮೊಕದಮೆಗಳು ಹೊರಬೀಳುವ ಹಾಗಿದೆ. ತಾ. ೧೫ರಲ್ಲು ಪೋಲಿಸಿನವರು ೧೯ ಮಂದಿಯನ್ನು ಕೈದು ಮಾಡಿರುತ್ತಾರೆ. ಈ ಕಳ್ಳರ ಗುಂಪಿಗೆ ಕೆಲವು ದೊಡ್ಡ ಮನುಷ್ಯರು ಸಹಾ ಸೇರಿದ್ದಾಗಿ ತಿಳಿದು ಬಂದಿರುತ್ತೆ.

ಕೊಡಗು ದೇಶದ ಕಮಿಷನರ್ ಸಾಹೇಬರವರು ಇದೇ ತಾ. ೧೦ರಲ್ಲು ಒಂದು ವರುಷದ ಫರ್ಲೋರಜೆಯ ಮೇಲೆ ಹೋಗಿರುತ್ತಾರಾದ್ದರಿಂದ ಅವರ ಬದಲಿಗೆ ಡಿ. ಮೆ ಸಾಹೇಬರಾಗಿದ್ದ ಎಲ್ಲ್ಸಿ ಎಂಬವರೂ ಇವರ ಬದಲಿಗೆ ಮದ್ರಾಸ್ ಸಂಸ್ಥಾನದಿಂದ ಮೆ| ಗ್ರಾಹಮ್ ದೊರೆಗಳೂ ಬಂದು ಚಾರ್ಜು ತಕ್ಕೊಂಡಿರುತ್ತಾರೆ.

ಮಡಿಕೇರಿಯಲ್ಲಿರುವ ರಾ| ನಾಗರತ್ನ ಪಿಳ್ಳೆಯವರು ತನ್ನ ಮಗಳನ್ನು ತನ್ನ ಹೆಂಡತಿ ತಮ್ಮನಾದ ರಾ| ನಟೇಸನ್ ಐ. ಎಮ್. ಎಸ್‌ರವರಿಗೆ ಮದ್ರಾಸಿನಲ್ಲಿ ವಿವಾಹ ಮಾಡಿಕೊಟ್ಟದಕ್ಕಾಗಿ ಇಲ್ಲಿಯ ತನ್ನ ಕೆಲವು ಸ್ನೇಹಿತರಿಗೆ ಒಂದು ಊಟಕೊಟ್ಟಿರುತ್ತಾರೆ. ಈ ಜನರಲ್ಲಿ ಅಕ್ಕನ ಮಗಳ ಬಿಟ್ಟವ ಕೆಟ್ಟ, ಮಾವನ ಮಗಳ ಮಾಡಿದವ ಕೆಟ್ಟ ಎಂಬ ವಾಡಿಕೆ ನಡಿಯುತ್ತೆ. ಊರಿಗೆ ಒಂದು ಭಾಷೆ ಜಾತಿಗೆ ಒಂದು ನಡಪು ನಡಿಯುತ್ತೆ. ಜಗತ್ತಿನಲ್ಲಿ ಯಾವ್ಯಾವ ಜನರುಗಳಲ್ಲಿ ಯಾವ್ಯಾವ ಆಚಾರ ನಡೆಯುತ್ತೆ ಎಂಬದನ್ನೂ ತಿಳಿದು ಹೇಳುವುದು ಕಷ್ಟ.

ಇದೇ ಕಳದ ತಾ. ೧೪ರಲ್ಲು ಮಡಿಕೇರಿ ತಾಲೂಕಿನಲ್ಲಿ ಸರಾಫ ಕೆಲಸ ಮಾಡುತ್ತಿದ್ದ ಒಬ್ಬ ಕೊಡಗರವನು ತನ್ನ ಮನೆಯಲ್ಲಿ ಕುತ್ತಿಗೆಗೆ ಹಗ್ಗ ಹಾಕಿ ಆತ್ಮಹತ್ಯ ಮಾಡಿಕೊಂಡಿರುವನು. ಕಾರಣವೇನೋ ತಿಳಿಯದು.

* * *

ಉಪಯುಕ್ತ ವಿಷಯಗಳು.

ಹೂವುಗಳನ್ನು ನೀರಲ್ಲಿಡುವುದಕ್ಕಿಂತಲೂ ತೇವ ಹೊಗೆಯಲ್ಲಿಟ್ಟರೆ ಹೆಚ್ಚುಕಾಲ ಬಾಡದೆ ಉಳಿಯುವವು. ಹೂವಿನ ಪಾತ್ರೆಗಳಲ್ಲಿ ಒದ್ದೆ ಹ್ಯೊಗೆಯನ್ನು ಹಾಕಿ ಹೂಗಳನ್ನು ಇಡಬೇಕು.

* * *

ಚೂರಿಗೆ ತುಕ್ಕು ಹಿಡಿದರೆ ಅದನ್ನು ಕೊಂಚಕಾಲ ನೀರುಳ್ಳಿಯಲ್ಲಿ ಹೂತಿಟ್ಟು ಅನಂತರ ತೆಗೆದು ಶುಚಿ ಮಾಡಿದರೆ ತುಕ್ಕು ಬೇಗನೇ ಹೋಗುವುದು.

* * *

ಹೊಸ ಬಾಚಣಿಕೆಗಳನ್ನು ಪ್ರಯೋಗಿಸುವ ಮೊದಲು ಸಾಬೂನು ನೀರಿನಿಂದ ತೊಳೆಯಬೇಕು. ಅದು ಒಣಗಿದ ನಂತರ ಅದಕ್ಕೆ ಸ್ವಲ್ಪ ಇಪ್ಪೇ ಎಣ್ಣೆ ತಾಗಿಸಬೇಕು. ಹೀಗೆ ಮಾಡಿದರೆ ಬಾಚಣಿಕೆಯು ದೀರ್ಘಕಾಲ ಉಳಿಯುವುದು.

* * *

ಮೀನು ಯಾ ಕೋಳಿ ಮಾಂಸ ಬೇಯಿಸುವಾಗ ಅರ್ಧ ಲಿಂಬೇಹಣ್ಣು ಹಾಕಿಬಿಟ್ಟರೆ ಮಾಂಸವು ಅತಿ ಬೆಳ್ಳಗೆ ಕಾಣುವುದು.

* * *

ನಿಂಬೆ ಹಣ್ಣುಗಳನ್ನು ನೀರಿನ ಭರಣಿಯಲ್ಲಿ ಹಾಕಿಟ್ಟು ವಾರ ವಾರ ನೀರು ಬದಲಾಯಿಸುತ್ತಾ ಇದ್ದರೆ ಅವು ಒಣಗದೆ ಬಹುಕಾಲ ಈಗ ತಾನೇ ಮರದಿಂದ ಕ್ಕೊದ ಹಣ್ಣುಗಳಂತಿರುವುವು.

* * *

ವಜ್ರವನ್ನು ಪರೀಕ್ಷಿಸುವ ಒಂದು ಸುಲಭ ಉಪಾಯವು ಕಂಡು ಹಿಡಿಯಲ್ಪಟ್ಟಿರುವುದು. ಕಾಗದ ಚೂರಿನ ಮೇಲೆ ಒಂದು ಬೊಟ್ಟುಮಾಡಿ ವಜ್ರದಿಂದ ನೋಡಬೇಕು. ತಾಜಾ ವಜ್ರವಾದರೆ ಆ ಒಂದು ಬೊಟ್ಟು ಮಾತ್ರ ಕಾಣಿಸುವುದು. ನಕಲಿ ವಜ್ರವಾದರೆ ಹೆಚ್ಚಿಗೆ ಬೊಟ್ಟುಗಳು ಕಾಣಿಸುವವು.

* * *

ಎಣ್ಣೆಯ ಬಾಟ್ಲಿಗಳಿಗೆ ಬೂದಿ ತುಂಬಿಸಿ ತಣ್ಣೀರು ಪಾತ್ರೆಯಲ್ಲಿ ಅವನ್ನು ಹಾಕಿ ಅರ್ಧ ತಾಸು ಬಿಸಿಮಾಡಿ ತಣ್ಣಗಾದ ಮೇಲೆ ಸಾಬೂನ್ ನೀರಿನಿಂದ ತೊಳದರೆ ಶುದ್ಧವಾಗುವುದು.

* * *

ದಕ್ಷಿಣ ಕನ್ನಡ.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ $\frac{38}{1914}$.

ಪೀಟರ್ ಪಿಂಟೊ—ಅರ್ಜಿದಾರ.

ಕಳದ ೧೯೧೧ನೇ ಇಸವಿ ಮಾರ್ಚಿ ತಾ. ೨೭ರಲ್ಲು ಕಡೂರ್ ಜಿಲ್ಲಾ ಇಟ್ಟಗೆಕೋಲು ಕಾಫಿ ತೋಟದಲ್ಲಿ ಮೃತಪಟ್ಟ ಜೋನ್ ಸಾಲ್ವದೋರ್ ಪಿಂಟೊ ಎಂಬವನ ಸಾಲಗಳನ್ನು ವಸೂಲು ಮಾಡುವರೆ ೧೮೮೯ನೇ ಇಸವಿಯ VIIನೇ ಆಕ್ಟಿನ ಮೇರೆಗೆ ಸರ್ಟಿಫಿಕೇಟು ಕೊಡಬೇಕಾಗಿ ಸದ್ರಿಯವನ ಅಣ್ಣ ಮೇಲ್ಕಂಡ ಅರ್ಜಿದಾರನು ಅರ್ಜಿ ಬರಕೊಂಡಿರುವದರಿಂದ ಆ ಕುರಿತು ಯಾರಾದರೂ ಆಕ್ಷೇಪ ಹೇಳುವಂಥಾದ್ದು ಇದ್ದರೆ ಅದನ್ನು ಬರುವ ೧೯೧೪ನೇ ಜೂನ್ ತಾರೀಕು ೯ರ ವಳಗೆ ಕುದ್ದಾಗಲೀ ವಕೀಲರ ಮುಖಾಂತರವಾಗಲೀ ಸದರಿ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗಿರುತ್ತದೆ.

ಮಂಗ್ಳೂರು
ತಾ. 19-5-14.

P. D'Souza
Vakil for Petitioner.

* * *

ವಿಟ್ಲ:—ತಾ. ೧೧ರಲ್ಲು ವಿಟ್ಲ ಕಸಬೆಯಲ್ಲಿರುವ ಪಕೀರಗೌಡನ ಹೆಂಡತಿಯು ಕಾರೆ ಸೊಪ್ಪಿನ ರಸ ಕುಡಿದು ಆತ್ಮಹತ್ಯಮಾಡಿಕೊಂಡಳು. ಈ ಆತ್ಮಹತ್ಯದ ಕಾರಣವು ತಿಳಿಯಲಿಲ್ಲ. ತನಖಿ ನಡೆಯುತ್ತಲಿದೆ.

ಕಲ್ಲಿಕೋಟೆಯಲ್ಲಿ ಕೂಡಿದ ಕೊಆಪರೇಟಿವ್ ಕನ್ಫರೆನ್ಸಿಗೆ ಇ[illegible] ಕೊಆಪರೇಟಿವ್ ಸಂಘದಿಂದ ಮು| ರಾ| ಲಕ್ಷ್[illegible]ಸ್ವಾಮಿಜಿ ರಾ| ಸುಂದರ ಭಟ್ಟರು ರಾ| ಶಂಕರನಾ[illegible]ಣ ಭಟ್ಟರು ಪ್ರತಿನಿಧಿಗಳಾಗಿ ಹೋಗಿರುತ್ತಾರೆ.

[illegible]ಂಬಳ ಬದ್ವಕುಂಞಿಬ್ಯಾರಿಗಳ ಮಗ ಇಸ್ಮಾ[illegible]ಬ್ಯಾರಿಯು ವಿಟ್ಲ ಕಸಬೆ ಶ್ರೀಧರಇಂದ್ರರ ಹೆಂಡ[illegible]ಮೇಲೆ ಸುಳ್ಳು ಬನಾವಣೆ ನೋಟೀಸು ಹಚ್ಚಿದನೆಂತ [illegible]ನಲ್ ಆಫೀಸರರ ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಡಿವಿಜನಲ್ ಆಫೀಸರರು ಆಪಾದಿತನಿಗೆ ೯ ತಿಂಗಳ ಸಜಾ ವಿಧಿಸಿರುವರು.

* * *

ಬಂಟ್ವಾಳ:—ಇಲ್ಲಿಯ ಸಬ್ ರಿಜಿಸ್ತ್ರಾರರಾದ ರಾ| ಎಮ್. ಲಕ್ಷ್ಮಣರಾಯರು ಇದೇ ತಿಂಗಳ ತಾ. ೧೮ರಿಂದ ರಜೆ ಪಡೆದು ಪುತ್ತೂರಿಗೆ ಹೋಗಿರುವುದರಿಂದ ಅವರ ಬದಲಿಗೆ ಸದರಿ ಆಫೀಸಿನ ಕ್ಲಾರ್ಕರಾದ ರಾ| ಎನ್. ಟಿ. ಬಾಬುರಾಯರು ಚಾರ್ಜು ನೋಡುತ್ತಿರುವರು.

* * *

ಮಿತ್ತನಡ್ಕ:—ಇಲ್ಲಿ ಇದೇ ತಿಂಗಳ ತಾ. ೧೧ನೇ ರಾತ್ರಿ ಸುಮಾರು ೧೧ ಗಂಟೆಗೆ ಅಂಗಡಿ ಕಟ್ಟಡಗಳಿಗೆ ಬೆಂಕಿಬಿದ್ದು ಇಲ್ಲಿಯ ಜಾತ್ರೆಗೆ ಮ್ಹಾಲು ತಂದಿದ್ದ ಸೋಮ ಪುರುಷರ ಸುಮಾರು ರೂ. ೫೦೦ಕ್ಕೆ ಮೇಲ್ಪಟ್ಟು ಜವಳಿ ಫೋನಗ್ರಾಫ್ ವಗೈರೆ ಸುಟ್ಟುಹೋಗಿದೆ. ಖಾಯಂ ಅಂಗಡಿ ಇರುವ ಮಂಜೇಶ್ವರ ಆಮದೆ ಬ್ಯಾರಿಯ ಸುಮಾರು ರೂ. ೪೦೦ರ ಸೊತ್ತುಗಳೂ ಕಂಟ್ರಾಕ್ಟರ್ ಅರೆಕಲ್ಲು ನರಶಿಂಹ ಪ್ರಭುಗಳ ಹೊಸ ಕಟ್ಟಡಕ್ಕೆ ಒದಗಿಸಿಟ್ಟ ಮರಗಳ ಪೈಕಿ ಸುಮಾರು ೫೦ ರೂಪಾಯಿಯ ಮರವೂ, ಬಾವುಟ್ಟೆಬ್ಯಾರಿಯ ಸುಮಾರು ೨೦೦ ರೂಪಾಯಿ ಕ್ರಯ ಬಾಳುವ ಎರಡು ಕಟ್ಟಡಗಳೂ ಪೂರ್ಣವಾಗಿ ಬೆಂಕಿಯ ಆಹುತಿಯಾದವು.

* * *

ಮಂಗಳೂರು.

ಪಾಸ್‌ಪೋರ್ಟು ಕುರಿತಾದ ಹೊಸ ನಿಯಮಗಳು:—ಮಾನ್ಯ ಡಾಕ್ಟರ್ ನಾಯರರವರು ಕಳದ ಸಾರಿ ನ್ಯಾಯ ವಿಧಾಯಕ ಸಭೆಯಲ್ಲಿ ಚರ್ಚಿಸಿದ ಮೇರೆಗೆ ಪಾಸ್‌ಪೋರ್ಟು ಕುರಿತಾದ ನಿಯಮಗಳು ಈಗ ತಾನೇ ತಿದ್ದಲ್ಪಟ್ಟಿರುವವು. ಮದರಾಸಿನ ಸೆನಿಟರಿ ಕಮಿಷನರೂ ಸರ್ಜನ್ ಜನರಲರೂ ಸೂಚಿಸಿದಂತೆ ಇನ್ನು ಮುಂದೆ ಪ್ರಯಾಣಿಕರಿಗೆ ಪಾಸ್‌ಪೋರ್ಟಿಗೆ ಬದಲಾಗಿ ಅವರು ದಸ್ಕತು ಹಾಕಿ ಪಡಕೊಳ್ಳಬೇಕಾದ ಒಂದು ನೋಟೀಸ್ ಕೊಡಲ್ಪಡುವುದು. ಇದನ್ನು ಪ್ರಯಾಣಿಕನು ಯಾವ ಊರಿಗೆ ಹೋಗುತ್ತಾನೋ ಅಲ್ಲಿ ನಿಯಮಿಸಲ್ಪಟ್ಟ ಅಧಿಕಾರಿಗಳಿಗೆ ತಾನಾಗಿ ಆಗಲೀ ಟಪ್ಪಾಲ್ ದ್ವಾರವಾಗಲೀ ಅಥವಾ ಜವಾನನ ಮೂಲಕವಾಗಿಯಾಗಲೀ ಮುಟ್ಟಿಸ ಬೇಕಾಗಿರುವುದು. ಅದನ್ನು ಪಡಕೊಂಡ ಆಫೀಸರನು ಅಂತಹ ಪ್ರಯಾಣಿಕನ ವಾಸ್ತವ್ಯವನ್ನು ಗೊತ್ತುಮಾಡಿ ಅದರ ನೆರೆಯಲ್ಲಿ ಒಂದು ತಿಂಗಳೊಳಗೆ ಉಂಟಾಗ ಬಹುದಾದ ಆವುದೊಂದು ವಿಶೇಷ ತೆರೆದ ಕಾಹಿಲೆ ಮತ್ತು ಇಲಿಗಳ ಸಾಯುವಿಕೆಗಳ ಕುರಿತು ಕೂಡ್ಲೇ ವರ್ತಮಾನವನ್ನು ತನಗೆ ಮುಟ್ಟಿಸುವಂತೆ ಪ್ರಯಾಣಿಕನನ್ನು ಎಚ್ಚರಿಸುವನು. ಅಲ್ಲಿಂದ ಬೇರೊಂದು ಊರಿಗೆ ಪ್ರಯಾಣ ಮಾಡುವುದಾದರೆ ಮತ್ತೊಂದು ನೋಟೀಸನ್ನು ಪಡೆದುಕೊಳ್ಳುವ ಅಗತ್ಯವಿರುವುದಿಲ್ಲ. ಈ ಕಾಯಿದೆಯು ಇದೇ ಜೂನು ತಾ. ೧ರಿಂದ ಜಾರಿಗೆ ಬರುವುದು.

ಮಂಗಳೂರಲ್ಲಿ ಕೂಡಿದ ದಕ್ಷಿಣ ಕನ್ನಡ ಜಿಲ್ಲಾ ಸೆಂಟ್ರಲ್ ಕೊವೊಪರೇಟಿವ್ ಬೇಂಕಿನ ಜನರಲ್ ಮೀಟಿಂಗಿನ ವೃತ್ತಾಂತ:—ಕಳದ ಸಂಚಿಕೆಯಲ್ಲಿ ತಿಳಿಸಿದಂತೆ ಈ ಬೇಂಕಿನ ಜನರಲ್ ಮೀಟಿಂಗ್ ಇದೇ ತಾ. ೧೮ನೇ ಸೋಮವಾರ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಕೂಡಿಬಂತು. ಈ ಸಭೆಯಲ್ಲಿ ರಾ| ಬಿ. ರಾಮರಾಯರು, ರಾ| ಎಮ್. ಶಿವರಾಯರು, ರಾ| ಎಮ್. ಅನಂತರಾವ್, ರಾ| ಬಿ. ವಿ. ಕೃಷ್ಣರಾವ್, ರಾ| ಎಚ್. ಗಣಪತಿರಾವ್, ರಾ| ಕೆ. ನರಸಿಂಗ ನಾಯಕರು ಕಾಸರಗೋಡು, ರಾ| ಕೆ. ಕೃಷ್ಣರಾವ್ ಬಂಟ್ವಾಳ—ಈ ಏಳು ಮಂದಿ ಮೆನೇಜಮೆಂಟ್ ಬೋರ್ಡಿನ ಮೆಂಬರರಾಗಿ ಆರಿಸಲ್ಪಟ್ಟರು. ಈ ಮೆಂಬರರ ಅವಧಿಯು ಎರಡು ವರ್ಷಗಳ ಕಾಲಕ್ಕಿದ್ದು ಇದೇ ಬರುವ ಜುಲಾಯಿ ತಿಂಗಳಿಂದ ಜಾರಿಗೆ ಬರುವುದು.

ರಿಜಿಸ್ಟರ್ ಮಾಡಿದ ಕೊವೊಪರೇಟಿವ್ ಸೊಸ್ಯಾಟಿಗಳಿಂದ ಬರುವ ಠೇವಣಾತಿಗಳಿಗೆ ಸೇಕಡಾ ೬॥ ಸಲೆ ಬಡ್ಡಿ ಕೊಡಬೇಕು. ಕೊವೊಪರೇಟಿವ್ ಸೊಸ್ಯಾಟಿಗಳ ರಿಜಿಸ್ತ್ರಾರರ ಅಪ್ಪಣೆ ಪಡಕೊಂಡು ಬೇಂಕಿನ ಸಿಲುಕು ಹಣವನ್ನು ಇತರ ಸೆಂಟ್ರಲ್ ಕೊವೊಪರೇಟಿವ್ ಬೇಂಕುಗಳಿಗೆ ಸೇಕಡಾ ೬॥। ಸಲೆ ಬಡ್ಡಿಗೆ ಕಮ್ಮಿ ಇಲ್ಲದೆ ಎರವಾಗಿ ಕೊಡಬಹುದು.

ಉಪ್ಪಿನಂಗಡಿ ತಾಲೂಕಿನ ಕೊವೊಪರೇಟಿವ್ ಸೊಸ್ಯಾಟಿಗಳನ್ನು ಇನ್ಸ್‌ಪೆಕ್ಷನ್ ಮಾಡುವರೆಯೂ ಆಡಿಟ್ ಮಾಡುವರೆಯೂ ಮಾಹೆಯಾನ ರೂ. ೨೦ರ ತಲಬಿನ ಒಬ್ಬ ಇನ್ಸ್‌ಪೆಕ್ಟರನನ್ನು ನೇಮಿಸಿ ಸಂಬಂಧಪಟ್ಟ ಸೊಸ್ಯಾಟಿಗಳಿಂದ ಮೆನೇಜಿಂಗ್ ಬೋರ್ಡಿನವರಿಗೆ ಯುಕ್ತ ತೋರುವ ರೀತಿಯಲ್ಲಿ ಈ ಸಂಬಳದ ಹಣವನ್ನು ಕೂಡಿಸಬೇಕೆಂಬ ನಿರ್ಣಯವಾಯಿತು.

ಮುಲ್ಕಿ ಮತ್ತು ಅದರ ಉತ್ತರ ಕಡೆಯಲ್ಲಿರುವ ಸೊಸ್ಯಾಟಿಗಳಿಗೆ ಒಬ್ಬ ಒನರರಿ ಇನ್ಸ್‌ಪೆಕ್ಟರನನ್ನೂ ಜಿಲ್ಲೆಯ ಇತರ ತಾಲೂಕುಗಳಿಗೆ ಅಂದರೆ ಮಂಗಳೂರು ಕಾಸರಗೋಡು ತಾಲೂಕುಗಳ ಸೊಸ್ಯಾಟಿಗಳಿಗೆ ಒಬ್ಬ ಒನರರಿ ಇನ್ಸ್‌ಪೆಕ್ಟರನನ್ನೂ ರೂ. ೧೪ ಮತ್ತು ರೂ. ೮ರ ಪ್ರಯಾಣದಭತ್ತೆ ಕೊಟ್ಟು ನೇಮಿಸಬೇಕೆಂಬ ನಿರ್ಣಯವಾಯಿತು.

ಬೇಂಕಿನ "ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳನ್ನು ಪ್ರೆಸಿಡೆಂಟಿ ಯಾ ಸೆಕ್ರೆಟರಿಯರಿಗೆ ಮದ್ರಾಸ್ ಬೇಂಕಿನಲ್ಲಿ ತೆರೆಯುವ ಅಧಿಕಾರವು ಕೊಡಲ್ಪಟ್ಟಿತು.

ಈ ದಕ್ಷಿಣ ಕನ್ನಡ ಸೆಂಟ್ರಲ್ ಬೇಂಕು ಸ್ಥಾಪನೆಯಾಗಿ ಐದು ತಿಂಗಳುಗಳು ಮಾತ್ರ ಕಳೆಯುವುದರಿಂದ ಬೇಂಕಿನ ಲಾಭವನ್ನು ಒಂದು ವರ್ಷದ ನಂತರ ಹಂಚಿಕೊಡಬೇಕೆಂಬ ನಿರ್ಣಯವಾಯಿತು.

ಮ| ರಾ| ವಿ. ರಾಮರಾಯರವರು ಮಂಗಳೂರು ಟೌನ್ ಸ್ಪೆಶ್ಯಲ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ಮುನಿಸಿಪಾಲಿಟಿಗಳಲ್ಲಿ ಕಟ್ಟಡಗಳನ್ನು ಕಟ್ಟಿಸುವುದರ ಕುರಿತಾಗಿ ಹೊಸ ನಿಯಮಗಳನ್ನು ಸರಕಾರದವರು ಪ್ರಕಟಿಸಿರುವರು. ಇವು ಇದೇ ಜೂನು ತಿಂಗಳ ತಾ. ೧ರಿಂದ ಜಾರಿಗೆ ಬರುವವು. ಇವುಗಳ ಮೇರೆಗೆ ಪ್ರತಿಯೊಂದು ಕಟ್ಟಡವು ಆರೋಗ್ಯಕ್ಕೆ ಅನುಕೂಲವಾದ ಸ್ಥಳದಲ್ಲಿದೆಯೋ, ಅದರಲ್ಲಿನ ಕೊಳೆಗಳನ್ನು ಶುಚಿಗೊಳಿಸುವ ಅನುಕೂಲತೆಯುಳ್ಳ ಸ್ಥಳದಲ್ಲಿದೆಯೋ, ಎಂಬುದನ್ನು ಅಧಿಕಾರಿಗಳು ವಿಚಾರಿಸಿಕೊಳ್ಳತಕ್ಕದ್ದು. ಕಟ್ಟಡದ ನೆಲಭಾಗವು ಮಾರ್ಗದ ನಲ್ಲಿಗಳಿಗಿಂತ ಎತ್ತರವಾಗಿದ್ದು ಅದರಲ್ಲಿ ಆ ಕಟ್ಟಡದ ಮಲಿನ ನೀರು ಸುಲಭವಾಗಿ ಹರಿದು ಹೋಗುವಂತಹ ಅನುಕೂಲತೆಗಳಿರಬೇಕು. ನಿವಾಸಕ್ಕಾದರೆ ಪ್ರತಿಯೊಂದು ಕಟ್ಟಡವು ವಾಯು ಬೆಳಕುಗಳ ಸಂಚಾರಕ್ಕೆ ಯೋಗ್ಯವಾದಂತಹ ವಿಶಾಲ ಕಿಟಿಕಿ ದ್ವಾರಗಳನ್ನು ಕೂಡಿರಬೇಕು. ಅಂಗಳಗಳು ನೆರೆಯ ನಲ್ಲಿಗಳಿಗಿಂತ ಒಂದು ಅಡಿಗಾದರೂ ಎತ್ತರವಾಗಿಯೇ ಇರಬೇಕು. ಕುಡಿಯಲಿಕ್ಕೆ ಉಪಯೋಗಿಸುವ ನೀರಿಗೆ ಸಂಪರ್ಕವಿರದಂತಹ ರೀತಿಯಲ್ಲಿ ದೂರವಾಗಿ ಪ್ರತಿಯೊಂದು ಕಟ್ಟಡಕ್ಕೆ ಅಗತ್ಯವಾದಷ್ಟು ಪಾಯಿಖಾನೆಗಳಿರಬೇಕು.

ಮಲೆಬಾರು ಜಿಲ್ಲಾ ಪಾಲಘಾಟ್ ಸಬ್ ಕೋರ್ಟಿನಲ್ಲಿ ಅಲ್ಲಿಯ ಸಬ್ ಜಡ್ಜ ದೇಶಿಕಾಚಾರ್ಯರು ಇಬ್ಬರು ಪಂಚಮರನ್ನು ಕೆಲವು ತಿಂಗಳ ಮೊದಲು ಪೇದೆ ಉದ್ಯೋಗಕ್ಕೆ ನೇಮಿಸಿದ್ದರು. ಕಣ್ಣಾನೂರ ಮುನ್ಸಿಪಾಲ್ ಚೇಯರ್ಮೇನರಾದ ರಾ. ಪಿ. ಕುಂಞಂಬುಗಳು ಒಬ್ಬ ಪಂಚಮನನ್ನು ವೋವರ್‌ಶಿಯರರ ಪೇದೆಯಾಗಿಯೂ ಇನ್ನೊಬ್ಬ ಪಂಚಮನನ್ನು ಮುನ್ಸಿಪಲ್ ಆಫೀಸಿನಲ್ಲೆ ಮಶಾಲ್ಜಿಯಾಗಿಯೂ ನೇಮಿಸಿದ್ದಾರೆ. ಮಂಗಳೂರ ಹಜೂರ ಖಚೇರಿಯಲ್ಲಿ ಒಂದು ತಿಂಗಳ ಮೊದಲು ಒಬ್ಬ ಪಂಚಮನನ್ನು ಕಲೆಕ್ಟರ್ ದೊರೆಗಳು ಮಶಾಲ್ಜಿಯಾಗಿ ನೇಮಿಸಿದರು. ಖಜಾನಾ ಡಿಪ್ಯುಟಿ ಕಲ್ಲೆಕ್ಟರ್ ಪಿ ಕುಞ್ಞಾಯನ್ ಸಾಹೇಬ್ ಬಹದ್ದೂರರವರು ಇನ್ನೊಬ್ಬನನ್ನು ಇದೇ ತಿಂಗಳ ೧೮ರಿಂದ ಮಶಾಲ್ಜಿಯಾಗಿ ನೇಮಿಸಿದ್ದಾರೆ.

ಇದೇ ತಿಂಗಳ ತಾರೀಕು ೨೪ನೇ ಆದಿತ್ಯವಾರ ಪ್ರಾತಃಕಾಲ ೭॥ ಘಂಟೆಗೆ ಮಂಗಳೂರು ಬ್ರಹ್ಮ ಮಂದಿರದಲ್ಲಿ ಮ| ರಾ| ರಾ| ಉಳ್ಳಾಲ ರಘುನಾಥಯ್ಯನವರು ದೇವಾ

ರಾಧನೆ ಮತ್ತು ಉಪನ್ಯಾಸ ಮಾಡಿಸುವರು.

ಉಪನ್ಯಾಸದ ವಿಷಯ—"ಧರ್ಮದ ಜ್ಞಾನ, ವಿಶ್ವಾಸ, ಜೀವನ.

ಇಲ್ಲಿಯ ಬಂದರ ಮಾಸ್ತರರಾಗಿರುವ ಮೆ| ಲೆಫ್ಟನೆಂಟ ಡಬ್ಲ್ಯು. ಕೆಲ್ಲೆ ದೊರೆಗಳವರು ಇಲ್ಲಿಯ ಸೆಂಟ್‌ಪೌಲ್ ಚರ್ಚಿನ ಲೇ ಟ್ರಸ್ಟಿಯಾಗಿ ನೇಮಕವಾಗಿದ್ದಾರೆ. ಮೆ| ಎಚ್. ಮೆಲಿಮ್ ಸಹಾ ದೊರೆಗಳನ್ನು ತಿರಿಗೊಮ್ಮೆ ಅದೇ ಕೆಲಸಕ್ಕೆ ನೇಮಕ ಮಾಡಿದ್ದಾರೆ.

ಕಾಸರಗೋಡು ರೇಂಜಿನ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರ ರಾ| ಪಂಜೆ ಮಂಗೇಶರಾಯರ ಪ್ರಿವೇಲೆಜ್ ರಜೆಯು ಒಂದು ತಿಂಗಳಿಗೆ ಹೆಚ್ಚಿಸೋಣಾಗಿಯದೆ.

ಡ್ಯೂಪಿಟಿ ಕಲೆಕ್ಟರ ಮೆ| ಸಿ. ಗೋಪಾಲನ್‌ನ್ಯಾಯರರ ರಜೆಯು ತಿರಿಗೊಂದು ತಿಂಗಳಿಗೆ ಹೆಚ್ಚಿಸಲ್ಪಟ್ಟಿರುವುದು.

ಲೋಕಲ್ ಬೋರ್ಡುಗಳ ಮೆಂಬರರನ್ನು ಚುನಾಯಿಸುವುದರಲ್ಲಿ ಜನರು ಈಗಲೀಗ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಲಿರುವರು. ಮಂಗಳೂರು ತಾಲೂಕು ಬೋರ್ಡಿಗೆ ನೊನ್ ಆಫೀಸಿಯಲ್ ಪ್ರೆಸಿಡೆಂಟರು ನೇಮಕವಾದನಂತರ ತಾಲೂಕು ಬೋರ್ಡು ಮೆಂಬರುತನಕ್ಕೆ ಜನರು ಮತ್ತಷ್ಟು ಮೇಲೊತ್ತಿ ಬರುತ್ತಿರುವರು. ಕಳೆದ ವಾರದಲ್ಲಿ ಬಂಟ್ವಾಳದಲ್ಲಿ ನಡೆದ ತಾಲೂಕು ಬೋರ್ಡು ಮೆಂಬರರ ಚುನಾವಣೆಯು ಕೋಲಾಹಲವೇ ಇದಕ್ಕೆ ಒಂದು ದೃಷ್ಟಾಂತವಾಗಿರುತ್ತದೆ. ೧೫-೨೦ ಮೈಲು ದೂರ ನಿವಾಸಿಸಿರುವ ಓಟರುಗಳು ಸಹಾ ಈ ಬಗ್ಗೆ ಬಂಟ್ವಾಳಕ್ಕೆ ಹೋಗಿ ತಮ್ಮ ಓಟುಗಳನ್ನು ಕೊಡುವವರಾದರು. ಮು| ರಾ| ಬಡಿಲ ದೂಮರ್ತೈ, ಮತ್ತು ಇಲ್ಲಿಯ ಒನರರಿ ಬೆಂಚ್ ಮೇಜಿಸ್ಟ್ರೇಟರಾದ ಮು| ರಾ| ನರಶಿಂಗ ಮರ್ತು ಭಂಡಾರಿಗಳು ಈ ಚುನಾವಣೆಯು ಮೆಂಬರುತನಕ್ಕೆ ಉಮೇದ್ವಾರರಾಗಿದ್ದರು. ಓಟುಗಳಲ್ಲಿ ೭೮ ಓಟುಗಳು ರಾ| ಭಂಡಾರಿಗಳವರಿಗೂ ೫೪ ಓಟುಗಳು ರಾ| ದೂಮರ್ತೈಗಳಿಗೂ ಸಿಕ್ಕಿರುವದೆಂಬದಾಗಿ ತಿಳಿಯುತ್ತೇವೆ.

ಇದೇ ತಾ. ೨೦ರಲ್ಲು ತಾಲೂಕು ಬೋರ್ಡು ಮೀಟಿಂಗು ಕೂಡಿ ಬಂತು. ಈ ಮೀಟಿಂಗಿನಲ್ಲಿ ಮುಖ್ಯವಾಗಿ ಮಳೆಗಾಲದ ರಸ್ತೆಗಳ ದುರುಸ್ತಿ ಬಗ್ಗೆ ಲೋಕಲ್ ಫಂಡ್ ಇಂಜಿನಿಯರರಿಂದ ಕಳುಹಿಸಲ್ಪಟ್ಟ ಅಂದಾಜು ಪಟ್ಟಿಗಳು ಸೆಂಕ್ಷನ್ ಆಗಿರುವವು. ಇದೇ ತಾ. ೨೫ನೇ ಸೋಮವಾರ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಜರಗುವುದು.

ಕಳೆದ ೨೩ ವರ್ಷಗಳಿಂದ ಕೆನರಾಹೈಸ್ಕೂಲಿನ ಹೆಡ್ ಮಾಸ್ತರರಾಗಿರುವ ಮು| ರಾ| ಆರ್ಕಳ ವಾಸುದೇವರಾವ್ ಬಿ. ಎ. ಎಲ್. ಟಿಯವರು ಈ ಶಾಲೆಯ ಆಡಳಿತೆ ಬೋರ್ಡಿನ ಹುಕುಮಿಗನುಸಾರವಾಗಿ ತಮ್ಮ ಚಾರ್ಜನ್ನು ಬಿಟ್ಟುಕೊಟ್ಟರೆಂತ ತಿಳಿದು ತುಂಬಾ ವಿಷಾದಪಡುತ್ತೇವೆ.

ಮಂಗಳೂರು ಮಹಿಳಾ ಸಭೆಯವರ ವಾರ್ಷಿಕ ಮಹಾ ಸಭೆಯು ಕುಮಾರ ಮಂಗಳ ಜಮೀನ್ದಾರಿಣೀ ಶ್ರೀಮತಿ ರಾಧಾಬಾಯಿಯವರ ಅಧ್ಯಕ್ಷತೆಯಲ್ಲಿ ಬರುವ ವಾರದಲ್ಲಿ ಜರಗುವದು. ಈ ಸಂದರ್ಭದಲ್ಲಿ ಮುಂಬಾಯಿಯ ಸೇವಾಸದನದ ಸಿಸ್ಟರ್ ಕೆ. ಸುಶೀಲಾಬಾಯಿಯವರು ಸಮಾಜ ಸೇವೆಯ ವಿಷಯ ಒಂದು ಉಪನ್ಯಾಸವನ್ನು ಓದುವರು.

ದಕ್ಷಿಣ ಕನ್ನಡ ಪಬ್ಲಿಕ್ ಕನ್ವೇಯನ್ಸ್ ಕಂಪೆನಿಯ ಬಗ್ಗೆ ದಾರಿ ಸರ್ವೆ ಮಾಡಲು ಬಂದಿದ್ದ ಮೆ| ಎಫ್. ಆರ್. ವಾರ್ಡ ದೊರೆಗಳು ನಿನ್ನೆಯ ದಿನ ಬಂಟ್ವಾಳ ಪಾಣೆಮಂಗಳೂರು ರಸ್ತೆಗಳನ್ನು ನೋಡಿಕೊಂಡು ಮೋಟೊರು ಬಂಡಿಗಳ ಚಲಾವಣೆ ಬಗ್ಗೆ ದಾರಿಯು ಚಲೋದಾಗಿದೆಂಬ ಅಭಿಪ್ರಾಯಪಟ್ಟಿರುವರಂತೆ. ಈ ದಿನ ಉಡುಪಿ ಅತ್ತಕಡೆ ದಾರಿಗಳನ್ನು ನೋಡುವರೆ ಹೋಗಿರುವರು.

ಪಟ್ಟಣದಲ್ಲಿ ರಾತ್ರಿ ಮುನ್ಸಿಪಾಲ್ ದೀಪಗಳನ್ನು ಹಚ್ಚುವ ರೂಢಿಯು ಈಗಲೀಗ ಕಮ್ಮಿಯಾದಂತೆ ತೋರುತ್ತದೆಂತಲೂ ಕೊರೊನೇಶನ್ ಗಾರ್ಡನಿನ ೩ ದೀಪಗಳಲ್ಲಿ ಒಂದು ಮಾತ್ರ ಹಚ್ಚಲ್ಪಡುತ್ತದೆಂತಲೂ ಉರ್ವ, ಜಪ್ಪು, ವಾಸ್ ರಸ್ತೆಯತ್ತಕಡೆಯ ದೀಪಗಳಲ್ಲಿ ಕೆಲವು ದೀಪಗಳು ರಾತ್ರಿಕಾಲ ಹಚ್ಚಲ್ಪಡುವುದೇ ಇಲ್ಲವೆಂತಲೂ ಆ ಪ್ರಾಂತ್ಯಗಳ ಬಾತ್ಮೀದಾರರು ನಮಗೆ ತಿಳಿಸಿರುವರು. ಈ ವಿಷಯ ಮುನ್ಸಿಪಾಲಿಟಿಯವರು ತಕ್ಕ ನಿಗಾ ಕೊಡಬೇಕಾಗಿದೆ.

ಇಲ್ಲಿ ಕೆಲವು ದಿವಸಗಳಿಂದ ನಾಟಕವಾಡುತ್ತಿದ್ದ ಮೈಸೂರು ರತ್ನಾವಳಿ ನಾಟಕ ಕಂಪೆನಿಯವರು ತಾ. ೨೦ನೇ ರಾತ್ರಿ ತಮ್ಮ ಕಡೇ ನಾಟಕವನ್ನು ಆಡಿ ತೋರಿಸಿದರು. ನಾಟಕವಾದೊಡನೆ ಗವರ್ನಮೆಂಟ್ ಕಾಲೇಜಿಯ ಸಂಸ್ಕೃತ ಪಂಡಿತರಾದ ರಾ| ರಾಜಾಚಾರ್ಯರು ಪಂಜೆ ಮಂಗೇಶರಾಯರು ಗೈರ್ಹಾಜರು ಆಗಿರುವುದರಿಂದ ತಾನು ಅವರ ಬದಲಾಗಿ ಮಾತಾಡಬೇಕಾಯಿತೆಂತ ಹೇಳಿ ನಾಟಕ ಕಂಪೆನಿಯ ಪಾತ್ರಗಳನ್ನು ಯಥಾಯುಕ್ತ ರೀತಿಯಲ್ಲಿ ಶ್ಲಾಘಿಸಿದನಂತರ ರಾ| ಸುಜೀರ ರಘುನಾಥಯ್ಯನವರು ಮಂಗಳೂರು ಮಹಾಜನರಿಂದ ತಯಾರಿಸಲ್ಪಟ್ಟ ಒಂದು ಚಿನ್ನದ ಬಾಜಿಬಂದನ್ನು ರಾ| ವರದಾಚಾರ್ಯರಿಗೂ ನಾಟಕದಲ್ಲಿ ವಿದೂಷಕ ಪಾರ್ಟು ಮಾಡುತ್ತಿದ್ದ ರಾ| ಎಮ್. ಕೃಷ್ಣಮೂರ್ತಿರಾಯರಿಗೆ ಒಂದು ಚಿನ್ನದ ಪದಕವನ್ನೂ ಬಹುಮಾನಿಸಿದರು.

ಇದೇ ತಾ. ೧೯ನೇಗೆ ಉದಕಮಂಡಲದಲ್ಲಿ ಕೂಡಿದ ನ್ಯಾಯ ವಿಧಾಯಕ ಸಭೆಯಲ್ಲಿ ಬಹುಮಾನಪಟ್ಟ ಕೆ. ಪಿ. ಮೆನೊನರವರು ನೀಲೇಶ್ವರ ನದಿಯ ಅಳುವೆಯನ್ನು ಕಾಟು ಕಚೇರಿ ಸಮೀಪ ತೋಡಿಸುವರೆ ಇಲ್ಲಿಯ ಕಲೆಕ್ಟರ ದೊರೆಗಳವರಿಂದ ಹುಕುಂ ಕೊಡೋಣಾಗಿತ್ತೋ? ಹೀಗೆ ಹುಕುಂ ಕೊಡೋಣಾದ ಪಕ್ಷದಲ್ಲಿ ಅದು ಯಾರ ನಿಮಿತ್ಯ ಕೊಡೋಣಾಯಿತು? ಈ ಹುಕುಂ ಕೊಡುವ ಮೊದಲು ಈ ವಿಷಯ ವಿಶೇಷ ಮಾಹಿತಿದಾರರ ಅಭಿಪ್ರಾಯವು ಕೇಳೋಣಾಗಿತ್ತೋ? ಮತ್ತು ಹೀಗೆ ಅಳುವೆಯನ್ನು ಕಡಿಸಿದ್ದರಿಂದ ಅಲ್ಲಿಯ ಸಮೀಪವಿರುವ ಒಂದು ತೆಂಗಿನ ಕಾಯಿ ತೋಟವು ನಾಶವಾಗಿ ಹೋದದ್ದು ಹೌದೋ? ಈ ವಿಷಯ ಜನರ ಮನವಿ ಏನಾದರೂ ರೆವಿನ್ಯು ಬೋರ್ಡಿಗೆ ಬಂದಿರುವುದೋ? ಎಂಬೀ ಮೊದಲಾದ ಪ್ರಶ್ನೆಗಳನ್ನು ಕೇಳಿದರು. ರೆವಿನ್ಯು ಬೋರ್ಡಿನವರಿಗೆ ಈ ವಿಷಯ ಜನರ ಮನವಿಯು ಬಂದಿರುವುದಾಗಿಯೂ ಈ ಅಧಿಕಾರಿಗಳಿಂದ ಈ ಮನವಿ ಮೇಲೆ ಕೊಡೋಣಾಗುವ ಹುಕುಂ ಅತೃಪ್ತಿಕರವೆಂತ ತೋರಿದರೆ ಈ ವಿಷಯವನ್ನು ಕುರಿತು ಸರಕಾರಕ್ಕೆ ಪುನಃ ಮನವಿ ಬರಕೊಳ್ಳಬಹುದೆಂತಲೂ ಈಗಲೇ ಈ ವಿಷಯ ಇತರ ತನಖಿಯನ್ನು ನಡಿಸುವುದು ಅನಾವಶ್ಯಕವೆಂತಲೂ ಸರಕಾರದವರು ಉತ್ತರಕೊಟ್ಟಿರುತ್ತಾರೆ.

ಕೃಷಿ ಡಿಪ್ಟಿ ಡೈರೆಕ್ಟರರಾದ ರಾ| ಎಚ್. ಸೆಮ್ಸನ್ ದೊರೆಗಳವರು ತಾ. ೨೦ರಲ್ಲಿ ಮಂಗಳೂರಿಗೆ ತಲಪಿ ನಿನ್ನೆ ದಿವಸ ಕೊಡಿಯಾಲಬೈಲಿನಲ್ಲಿ ರಾ| ಕೆ. ಟಿ. ಆಳ್ವರು ಬೆಳೆಯಿಸಿದ ಹಸಿ ಗೊಬ್ಬರದ ಪೈರನ್ನು ಕಲೆಕ್ಟರ ದೊರೆಯವರ ಜೊತೆಯಲ್ಲಿ ಸಂದರ್ಶಿಸಿ ಈ ಜಿಲ್ಲೆಯಲ್ಲಿ ಈ ಪೈರು ಚನ್ನಾಗಿ ಬೆಳೆಯುವದೆಂದು ಅಭಿಪ್ರಾಯಪಟ್ಟಿರುವರು. ಬರುವ ವರ್ಷ ಈ ಗೊಬ್ಬರದ ಪೈರನ್ನು ಹೆಚ್ಚಿನ ಜನರು ಬೆಳೆಯಿಸುವ ವಿಲೆವಾರಿ ಮಾಡಲಾದೀತು. ಪೈರು ಬಹಳ ಒಳ್ಳೇದುಂಟು. ರೈತರೆಲ್ಲರೂ ಕೊಡಿಯಾಲ ಬೈಲು ಕಂಕನಾಡಿ ಗ್ರಾಮಗಳಲ್ಲಿ ಬೆಳೆಯಿಸಿದ ಈ ಪೈರುಗಳನ್ನು ನೋಡಿ ಅಭಿಪ್ರಾಯ ಮಾಡಿಕೊಳ್ಳುವದು ಬಹಳ ಅವಶ್ಯವಾಗಿರುತ್ತದೆ. ಈಹೊತ್ತು ಕಂಕನಾಡಿ ಗ್ರಾಮವನ್ನು ಸಂದರ್ಶಿಸಿ ನಾಳೆ ಹಿಂತೆರಳುವರು. ಕೊಡಿಯಾಲಬೈಲಿನಲ್ಲಿ ಹೊಸತಾಗಿ ಮಾಡಿಸಿದ ನೀರಿನ ಯಂತ್ರವನ್ನು ಸಹ ನೋಡಿ ಸಂತೋಷಪಟ್ಟರು.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೨ ಪ್ಲೇಗು ಮರಣಗಳಿದ್ದವು.

ವಿವಿಧ ವಿಷಯಗಳು.

ಖಾಸಿ ಮತ್ತು ಜಯಿಂಟಿಯಾ ಗುಟ್ಟಗಳಲ್ಲಿ ಮಾಡಿದ ಪರೀಕ್ಷೆಗಳಲ್ಲಿ ಎಲುಬಿನ ಪುಡಿಯು ಬತ್ತದ ಪೈರಿಗೆ ಬಹಳ ಒಳ್ಳೆಯ ಗೊಬ್ಬರವಾಗಿ ಕಂಡುಬರುವುದರಿಂದ ಆಸಾಮಿನ ವ್ಯವಸಾಯದ ಇಲಾಖೆಯವರ ಯಂತ್ರೋಪಕರಣಗಳನ್ನು ತಂದಿಟ್ಟು ಮಣಕ್ಕೆ ೩ ರೂಪಾಯಿನಂತೆ ಎಲುಬಿನ ಪುಡಿಯನ್ನು ರೈತರಿಗೆ ಸರಬರಾಯಿ ಮಾಡುವುದಕ್ಕೆ ಪ್ರಯತ್ನಮಾಡುತ್ತಲಿದ್ದಾರೆ. ಈಗ ಮಣಕ್ಕೆ ೪|| ರೂಪಾಯಿನಿಂದ ೫ ರೂಪಾಯಿವರೆಗೂ ಹೆಚ್ಚು ಬೆಲೆಯನ್ನು ಕೊಟ್ಟು ರೈತರು ಎಲುಬಿನ ಪುಡಿಯನ್ನು ತಮ್ಮ ಗದ್ದೆಗಳಿಗೆ ಗೊಬ್ಬರವಾಗಿ ಹಾಕುತ್ತಲಿದ್ದಾರೆ. ವ್ಯವಸಾಯದ ಇಲಾಖೆಯು ಮೇಲ್ಕಂಡ ಏರ್ಪಾಟಿನಿಂದ ಅವರು ರೈತರಿಗೆ ಬಹಳವಾಗಿ ಸಹಾಯಮಾಡಿದಂತಾಗುವದು.

50 ರೂಪಾಯಿಗಳ ಬಹುಮಾನ.

ಜೈನ ಬೋರ್ಡಿಂಗ್ ಹೌಸಿಗೆ ಬೆಳ್ಗಾಂ ಅತ್ತಕಡೆಯಿಂದ ಒಬ್ಬ ಪೈಲವಾನರು ಬಂದಿರುತ್ತಾರೆ. ಇವರನ್ನು ಎದುರಾಯಿಸಲಿಕ್ಕೆ ನಿಂತು ಗೆದ್ದವರಿಗೆ ೫೦ ರೂಪಾಯಿಗಳ ಬಹುಮಾನವನ್ನು ಕೊಡಲ್ಪಡುವದು. ವಿಶೇಷ ಮಾಹಿತಿಯನ್ನು ಬೋರ್ಡಿಂಗ್ ಹೌಸಿನಲ್ಲಿ ತಿಳಕೊಳ್ಳಬಹುದು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಅವಲ್ ಮಸ್ಕತಿ ಅಕ್ಕಿ ...	5—9—0	5-10—0
ದುಯಂ „ „ ...	5—0—0	5—4—0
ಗುಡ್ನು	4-13—0	4-15—0
ಅವಲ್ ಬೆಳ್ತಿಗೆ... ...	5—13—0	6-0—0
ಗುಡ್ನು ಬೆಳ್ತಿಗೆ	5—3—0	5—5—0
ಹುರುಳಿ ಗೋಣಿ, ೧ರ		7—3—0
ರಂಗೂನ್ ಗೋಣಿ ೧ರ ...	9—3—0	9—4—0
ಉಪ್ಪು ಗೋಣಿ ೧ರ ...	3—8—0	3-10—0
ಕೊಬ್ರಿ ಖಂಡಿ ೧ರ ...	100-0-0	106—0—0
ಊರು ಬೆಲ್ಲ ಖಂಡಿ ೧ರ		40—0—0
ಗೋದಿ ಗೋಣಿ ೧ಕ್ಕೆ...		11—8—0
ಕಡಲೆ ಗೋಣಿ ೧ಕ್ಕೆ	9—0—0	9—8—0
ಉದ್ದು ಗೋಣಿ ೧ರ		10—4—0
ತೊಗರಿ ಗೋಣಿ ೧ರ...		11—0—0
ತೊಗರಿಬೇಳೆ ಗೋಣಿ ೧ರ	11-0—0	14—0—0
ಕೊಬ್ರಿ ಹಿಂಡಿ ಖಂಡಿ೧ರ	31—0—0	32—0—0
ಎಳ್ಹಿಂಡಿ ಖಂಡಿ ೧ರ	32—8—0	40—0—0
ಕೊಬ್ರಿ ಎಣ್ಣೆ ಮಣ ೧ರ		7—5—0
ಎಳ್ಳೆಣ್ಣೆ ಮಣ ೧ರ ...	7—2—0	7—4—0
ಬಿಳಿಗೋಟು ಖಂಡಿ ೧ರ	96—0—0	102—0—0
ಕಾಫಿ ಖಂಡಿ ೧ರ ...	215—0—0	225—0—0
ಯಾಲಕ್ಕಿ ಮಣ ೧ಕ್ಕೆ	40—0—0	50—0—0

Estd. 1888. ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖುಗಳೂ,ವ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ನೆಚ್ಚ ೪ ಆಣೆ.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸೆ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪುರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಎಕ್ಸ್‌ಪ್ರೆಸ್ ವಾಚ್ ಕೊ.

3 ರತನ್ ಬಜಾರ್ ರೋಡ್, ಮದ್ರಾಸ್.

ಟೆಲಿಗ್ರಾಫ್ ವಿಳಾಸ: "ಎಕ್ಸ್‌ಪ್ರೆಸ್" ಮದ್ರಾಸು.

ನಮ್ಮ ಕೂಡೆ ನಾಜೂಕಾದ ಹೆಚ್ಚು ಕಾಲ ಬಾಳುವ ಬಹಳೇ ವಾಚುಗಳಿರುವವು. ವಾಚುಗಳೆಲ್ಲವೂ ನಮಗಾಗಿಯೇ ತಯಾರಿಸಿದಂಥವುಗಳಾಗಿವೆ. ನಮ್ಮಿಂದಲೇ ಮೂರು ವರ್ಷಗಳ ಗ್ಯಾರಂಟು ಕೊಡಲ್ಪಡುವುದು. ತೃಪ್ತಿಯಾಗದಿದ್ದರೆ ಹಣ ಪರತು.



ನಂಬ್ರ 224. ಈ ವಾಚು ಸುಲಭವಾಗಿ ತೆರೆಯಲ್ಪಟ್ಟು ಮುಚ್ಚಲ್ಪಡುವುದು. ಎಲ್ಲರ ಕೈಗಳಿಗೂ ಹುದುವಾಗಿದೆ. ಕೆಂಪು ಕಲ್ಲುಗಳ ಸಹಿತ 9-4-0 ನಂಬ್ರ 225. ಕಲ್ಲುಗಳಿಲ್ಲದೆ ರೂ. 8—4—0.

ನಂಬ್ರ 448. ನಿಕ್ಕಲ್ ಕೇಸು, 8 ದಿವಸಗಳ ಲಿವರ್ ವಾಚು ರೂ. 8—14—0. ನಂಬ್ರ 449. ಬೆಳ್ಳಿಯ ಕೇಸು ರೂ. 14.



ನಂಬ್ರ 814. ಸರ್ವರಿಂದಲೂ ಆಕರ್ಶಿಸಲ್ಪಡುವಂಥಾ ರಿಸ್ಟ್‌ವಾಚು. ಒಳ್ಳೇ ಜುವೆಲ್‌ಗಳುಳ್ಳದ್ದು. ನಿಕ್ಕಲ್ ಕೇಸ್ ರೂ. 5—14—0. ನಂಬ್ರ 815. ಸಿಲ್ವರ್ ಕೇಸ್ ರೂ. 9—12—0. ಚರ್ಮದ ಕೈಕಟ್ಟು ಮುಫತ್ತು.



"ಜೋನ್ಸನ್" ಲಿವರ್.

ನಂಬ್ರ 984. ಈ ಕಾಲಕ್ಕೆ ಸರಿಯಾಗಿ ತಯಾರಿಸಿದ ಲಿವರ್ ವಾಚು. ಬಹಳ ನಾಜೂಕಾಗಿ ಮಾಡಲ್ಪಟ್ಟದೆ. ಒಳ್ಳೇ ಲಿವರ್ "ಸ್ಪೆಶ್ಯಲ್ ಕ್ರಯ 5—14—0



ನಂಬ್ರ 471. ನಿಕ್ಕಲ್ ಕೇಸು. ಹೆಂಗಸರು ಉಪಯೋಗಿಸತಕ್ಕ ಲೇಡಿಸ್ ವಾಚು. ಚೀಲ ಯಾ ರಿಸ್ಟ್ ರೂ. 4—8—0. ನಂಬ್ರ 472. ಅದೇ ಬೆಳ್ಳಿಯ ಮುಚ್ಚಳವಿದ್ದದ್ದು ರೂ. 7—14- 0.

ಒಂದು ತಿಂಗಳು ಮಾತ್ರ! ಬಹುಮಾನ! ತ್ವರೆಮಾಡಿರಿ!

ವಿವೇಕಚೂಡಾಮಣಿ

ಶ್ರೀಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮಾವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೬೩ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯವೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟ ಸಂಖ್ಯೆಗಳು ೪೪೮. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೋ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ ರೂ. ೨—೪—೦, ಹಾಸಲು ೪ ಆಣೆ.

ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಸಟೀಕಾ ಮುಕುಂದಮಾಲೆ ಸ್ತೋತ್ರ ಒಂದು, ಮಹಿಂನಾ ಸ್ತೋತ್ರ ಒಂದು ಈ ಎರಡು ಪುಸ್ತಕಗಳನ್ನು ಬಹುಮಾನವಾಗಿ ಕೊಡುತ್ತೇವೆ.

ಕಥಾಕಲ್ಪವೃಕ್ಷ.

ಪೂರ್ವಕಾಲದ ಕವೀಶ್ವರರ ವೃತ್ತಾಂತಗಳಿಂದಲೂ, ಮನೋಹರವಾದ ನೀತಿಕಥೆಗಳಿಂದಲೂ ಕೂಡಿ ಗುನುಷ್ಯ, ಪಶು, ಪಕ್ಷಿ, ಕ್ರಿಮಿಕೀಟಗಳ ಸ್ವಭಾವಧರ್ಮಗಳನ್ನು ತಿಳಿಸುವ, ವಾತಾವರಣ, ವಿದ್ಯುಲ್ಲತೆ ಮುಂತಾದ ತತ್ವಗಳ ವರ್ಣನೆಯುಳ್ಳ ಮತ್ತು ಯಂತ್ರಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರಗಳನ್ನು ವರ್ಣಿಸುವ ಗ್ರಂಥ ಅತ್ಯಂತ ಉಪಯೋಗವಾದದ್ದು. ಕ್ರಯ ರೂ. ೦—೧೦—೦. ಹಾಸಲು ೦—೩—೦.

ರಘುಕುಲಚರಿತ್ರೆ.

ಕಾಳಿದಾಸ ಮಹಾಕವಿಯ ರಘುವಂಶ ಮಹಾಕಾವ್ಯವೇ „ರಘುಕುಲಚರಿತಂ" ಎಂಬ ಈ ಕಥೆ. ಮೊದಲನೇ ಭಾಗ ದಿಲೀಪನ ವಶಿಷ್ಠಾಶ್ರಮ ಪ್ರಯಾಣ, ನಂದಿನೀಧೇನುವಿನ ವರಪ್ರಸಾದ, ರಘುರಾಜಾಭಿಷೇಕ, ರಘುದಿಗ್ವಿಜಯ, ಅಜಸ್ವಯಂವರಾಬಿಗಮನ, ಸ್ವಯಂವರವರ್ಣನ, ಅಜಪಾಣಿಗ್ರಹಣ, ಅಜವಿಲಾಪ ಇಂತು ಎಂಟು ಬಗೆಯ ವಿಚಿತ್ರ ಚರಿತ್ರೆಯನ್ನೊಳಗೊಂಡಿದೆ.

ಕ್ರಯ ರೂ. ೦—೮—೦. ಹಾಸಲು ೦—೨—೦.

ಸಟೀಕಾಬ್ರಹಜ್ಜಾತಕ

ಕ್ರಯ ರೂ. ೫—೦—೦. ಹಾಸಲು ರೂ. ೦—೮—೦.

ವಿಳಾಸ:— ಎಚ್. ಎನ್. ರಾವ್ ಆಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ



ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ. ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರ

'ಬರ್ಮಿಸ್ ಬ್ಯುಟಿ ಒಯಿಲ್'

ಎಂಬ

ಬರ್ಮಾದೇಶದ ಸೌಂದರ್ಯ.



ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲೆಪಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಷ್ಟು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ಯಾಸ್.

PARADISE
THE FLORAL
PERFUMERY Co.
BOMBAY.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಚಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಚಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್ಫ್ಯುಮರಿ ಕಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಹು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	„ „	6-0-0	B ಅರಗಜ	„	„	1-0-0
ಕಸ್ತೂರಿ ಬತ್ತಿ	„ „	3-0-0	ಕಸ್ತೂರಿ ಬಿಲ್ಲೆ	„	„	2-0-0
ಜವಾಜಿ ಬತ್ತಿ	„ „	2-0-0	ಜವಾಜಿ ಬಿಲ್ಲೆ	„	„	1-0-0
ಪುಣಗಿನ ಬತ್ತಿ	„ „	1-8-0	ಕೇಸರಿ ಬಿಲ್ಲೆ	„	„	0-8-0
A ಪನ್ನೀರ್ ಬತ್ತಿ	„ „	0-12-0	ತಾಂಬೂಲ ರತ್ನ	ಸೀಸೆ 1ಕ್ಕೆ		0-4-0
ಮಸಾಲಾ ಬತ್ತಿ	„ „	0-6-0	ದಶಾಂಗ	ಡಬ್ಬಿ 1ಕ್ಕೆ		0-4-0

ಮೇನೇಜರ್, „ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಮಳೆಗಾಲ! ಮಲೇರಿಯ!! ಶೀಘ್ರ ಕೊಂಡುಕೊಳ್ಳಿ!!!

ಹವೆಯ ಬದಲಾವಣೆಯಿಂದ ಉಂಟಾಗುವ ವ ಇತರ ತಲೆಪಿಡಿತ, ಕಣ್ಣುಬೇನೆ, ತಲೆಭಾರ, ನೆಗಡಿ, ಕಫ, ಶ್ವಾಸ, ಜ್ವರ, ಛಳಿಜ್ವರ, ಚಳಿವಾತ, ವಾಂತಿಭೇದಿ, ಉಷ್ಣಭೇದಿ ಇತ್ಯಾದಿ ನೂರಾರು ಜಾಡ್ಯಗಳೂ ಮನೆಮನೆಯಲ್ಲೂ ಪ್ರತ್ಯಕ್ಷವಾಗಿ ತೋರುತ್ತಿರುವ ಈ ಕಾಲದಲ್ಲಿ

ದಿವ್ಯ ಸಂಜೀವಿನೀ

ಯುಕೆಲಿಪ್ಟಸ್ ತ್ಯೆಲ

ಎಂಬ ಅತ್ಯಪೂರ್ವ ಫಲಕಾರಿಯಾದ ಈ ಎಣ್ಣೆಯ ಸೀಸೆಯೊಂದನ್ನು ಗೃಹಸ್ಥರು ಸಂಗ್ರಹಿಸಿಕೊಳ್ಳಿ! ಈ ಎಣ್ಣೆ ಇದ್ದಲ್ಲಿ ಆವ ರೋಗದ ಸುಳಿವೂ ತೋರದು; ಎಂತಹ ರೋಗವನ್ನೂ ಇದು ತಡೆಗಟ್ಟಿ, ನಿರ್ಮೂಲಿಸಿಬಿಡುವುದು!! ಉಪಯೋಗಿಸಿದವರ ಅನುಭವಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ವಿಜ್ಞಾಪನೆಯು ನಮ್ಮೊಡನೆ ಇಲ್ಲ. ಟಿನ್ಸ್ ಸೀಸೆ 1ಕ್ಕೆ 5 ಆಣೆ. ವಿ. ಪಿ. ಬೇರೆ. ಒಂದೇ ಸಲ ಒಂದು ಡಜನ್ ಸೀಸೆಗಳನ್ನು ತರಿಸಿಕೊಂಡರೆ ರೂ. 3, ವಿ. ಪಿ. ಬೇರೆ.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ. ಕ.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

(ಧಾತುಪೌಷ್ಟಿಕ ವಜ್ರಾಂಗಪಾಕ.)

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು, ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಜಿಷ್ಣೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ. ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಸಿಗುತ್ತವೆ. ಅನುಪಾನ ಪತ್ರಿಕೆ ಬಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— ವಿ. ಎಸ್. ಮೋಡಕ,
ಕರ್ನಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ತ್ರಿಕಾಲದರ್ಶಿ ಐನ.

ಭೂತ, ವರ್ತಮಾನ, ಭವಿಷತ್ ಕಾಲದಲ್ಲಿ ಆದ, ಆಗುವ ವಿಷಯಗಳನ್ನು ತಿಳಕೊಳ್ಳಬೇಕೆಂದಿದ್ದರೆ, ನಮ್ಮ ಪ್ರಖ್ಯಾತಿಪಟ್ಟ "ತ್ರಿಕಾಲದರ್ಶಿ ಐನ"ವನ್ನು ಕೊಂಡುಕೊಳ್ಳಿರಿ. ಈ ಐನವು ಹೂತಿಟ್ಟ ನಿಧಿ, ವ್ಯಾಪಾರದಲ್ಲಿ ಲಾಭ ಮತ್ತು ನಷ್ಟ, ಕೋರ್ಟಿನಲ್ಲಿ ಕಾರ್ಯಸಿದ್ಧಿ ಯಾ ಅಪಜಯ, ಪರೀಕ್ಷೆಯ ಫಲವನ್ನು ಮುಂದಾಗಿ ಹೇಳುವುದಲ್ಲದೆ ಮೃತ ಹೆತ್ತವರ ವಿಷಯವಾಗಿ ಹೆಂಡತಿ, ಮಗ, ಆಸ್ತಿ, ಕೆಲಸ, ಮನಸ್ಸಿನ ಅನುಮಾನ, ಜೀವಮಾನದಲ್ಲಿ ಎಂದಾದರೂ ನೀನು ಐಶ್ವರ್ಯವಂತನಾಗುತ್ತೀಯೋ, ಯಾ ನಿನಗೆ ದೇಶದಿಂದ, ಪರದೇಶದಿಂದ ಐಶ್ವರ್ಯವು ಬರುತ್ತದೋ ಎಂಬದನ್ನು ತಿಳಿದು ಹೇಳುವುದು. ನಿನ್ನ ದೂರದಲ್ಲಿರುವ ಸ್ನೇಹಿತರು, ಸಂಬಂಧಿಕರ ವಿಷಯವಾಗಿ ಈ ಐನವು ತಿಳಿಸುವುದು. ಪ್ರಸಿದ್ಧ ಪುರುಷರಿಂದ ಸರ್ಟಿಫಿಕೇಟುಗಳು ದೊರಕಿರುವವು.

ನಂಬ್ರ 1. ಸಾಧಾರಣ ಗ್ಲಾಸ್ ಐನ ರೂ. 2—9—0, ನಂಬ್ರ 2. ಕ್ರಿಸ್ಟಲ್, ಗ್ಲಾಸ್ ಐನ ರೂ. 3—9—0, ನಂಬ್ರ 3. ದೊಡ್ಡ ಮತ್ತು ಬಹಳ ಕಾಲ ಉಳಿಯುವ ಐನ ರೂ. 6—0—0. ಪೋಸ್ಟೇಜು ಮತ್ತು ಪೇಕಿಂಗ್ ಸಹಿತ. ಖಾಯಿಸ್ ಆಗದಿದ್ದ 1 ಮತ್ತು 2ನೇ ನಂಬ್ರದ ಐನವನ್ನು 24 ತಾಸಿನೊಳಗೆ ಹಿಂದೆ ಕಳುಹಿಸಿದರೆ ರೂ. 2 ಮತ್ತು ರೂ. 2—8—0 ಕೊಟ್ಟು ಹಿಂದೆ ತಕ್ಕೊಳ್ಳುವೆವು. ೩ನೇ ನಂಬ್ರದ ಐನವನ್ನು ಹಿಂದೆ ಪಡೆಯಲಾರೆವು.

Patel Ashabhai Vagjibhai,
Post Karamsad Dt. KAIRA,
B. B. & C. I. RAILWAY.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಶಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಬೇಗನೇ ಕೊಂಡುಕೊಳ್ಳಿ! ಬೇಗನೇ ಕೊಂಡುಕೊಳ್ಳಿ!!

ಇದೇ ಸುಕಾಲ!

ನಮ್ಮ ಕೂಡೆ ಪರಿಷ್ಕೃತ ಕೆಟಲಾಗುಗಳಾಗಲೀ ಸುಳ್ಳು ಸರ್ಟಿಫಿಕೇಟುಗಳಾಗಲೀ ಇಲ್ಲ. ಇತರರನ್ನು ದೂರಿ ನಮ್ಮನ್ನು ಹೊಗಳಿಕೊಳ್ಳುವುದೂ ಇಲ್ಲ. ನಮ್ಮ ವಾಚುಗಳನ್ನು ಸರ್ವರೂ ಕೊಂಡುಕೊಳ್ಳಬೇಕೆಂಬ ಉದ್ದೇಶದಿಂದ ಬರೇ ಕೊಂಚ ಲಾಭದಿಂದ ನಾವು ವಾಚುಗಳನ್ನು ಮಾರುವೆವಷ್ಟೆ.

ನಂ. 1 ಪರಿಷ್ಕೃತವಾದ ಹೊಸನಮೂನೆಯ ಬೆಳ್ಳಿ ರಿಸ್ಟ್ ವಾಚು ಚರ್ಮದ ಕೈಕಟ್ಟು ಸಹಿತ, 10 ವರುಷಗಳ ಗ್ಯಾರಂಟು ರೂ. 5-8-0. ನಂ. 4 ಮಧ್ಯಮ ಸ್ಯಾಚು ಗನ್‌ಮೆಟಲ್ ವಾಚು 7 ವರುಷಗಳ ಗ್ಯಾರಂಟು ರೂ. 5-8-0. ನಂ. 5 ಲಿವರ್ ರೊಸ್ಕೋಪ್ ವಾಚು 1ನೇ ವಿಧ 20 ವರುಷಗಳ ಗ್ಯಾರಂಟು ರೂ. 7-8-0. ನಂ. 6 ಲಿವರ್ ರೊಸ್ಕೋಪ್ ವಾಚು 2ನೇ ವಿಧ 10 ವರ್ಷಗಳ ಗ್ಯಾರಂಟು ರೂ. 4-8-0. ನಂ. 10 ಎಲಾರ್ಮ್ ಟ್ಯಾಮ್‌ಪೀಸು 3 ವರುಷಗಳ ಗ್ಯಾರಂಟು ರೂ. 3-8-0. ನಂ. 11 ಬಿ ಟ್ಯಾಮ್‌ಪೀಸು 1ನೇ ವಿಧ 3 ವರುಷಗಳ ಗ್ಯಾರಂಟು ರೂ. 2-4-0. ನಂ. 13 ಕೆಲೆಂಡರ್ ಎಲಾರ್ಮ್ ಟ್ಯಾಮ್‌ಪೀಸು 6 ವರುಷಗಳ ಗ್ಯಾರಂಟು ರೂ. 4-8-0. ನಂ. 15. 8 ದಿವಸಗಳಿಗೊಂದಾವರ್ತಿ ಕೀಲಿ ಕೊಡುವ ಗನ್‌ಮೆಟಲ್ ವಾಚು 6 ವರುಷಗಳ ಗ್ಯಾರಂಟು ರೂ. 11. ನಂ. 16. 8 ದಿವಸಗಳಿಗೊಂದಾವರ್ತಿ ಕೀಲಿ ಬೆಳ್ಳಿ ವಾಚು 6 ವರುಷಗಳ ಗ್ಯಾರಂಟು ರೂ. 16-8-0. ನಂ. 17. 8 ದಿವಗಳಿಗೊಂದಾವರ್ತಿ ಕೀಲಿ ಕೊಡುವ ಜಾಪಾನ್ ಗಡಿಯಾರ ತಾರೀಕು ಸಹಾ ತೋರಿಸುವಂಥಾದ್ದು 10 ವರುಷಗಳ ಗ್ಯಾರಂಟು ರೂ. 12-8-0. ನಂ. 18. ಜೋಕರ್ ಎಲಾರ್ಮ್ ಟ್ಯಾಮ್‌ಪೀಸು 10 ವರುಷಗಳ ಗ್ಯಾರಂಟು ರೂ. 6-8-0.

ಮೇಲೆ ಹೇಳಿದ ಎಲ್ಲಾ ವಾಚು ಗಡಿಯಾರಗಳು ಗಟ್ಟಿಯಾದ ಲೋಹಗಳಿಂದ ಮಾಡಲ್ಪಟ್ಟದ್ದು. ಸಾಧಾರಣ ಲೋಹಗಳಿಂದ ಮತ್ತು ಹಿತ್ತಾಳಿಯಿಂದ ಮಾಡಲ್ಪಟ್ಟ ವಾಚು ಗಡಿಯಾರಗಳು ನಮ್ಮಿಂದಲೂ ಇತರರಿಂದಲೂ ಮೇಲೆ ಹೇಳಿದ ಕ್ರಯದ ಅರ್ಧಕ್ಕೆ ಕೊಡೋಣಾಗುವವು. ಪರಂತು, ಇವು ಗಟ್ಟಿಯಲ್ಲ.

ಬಹಳ ಅಗ್ಗ—ಕುಪನ್ ಕ್ರಮ—ಬೇಗನೇ ಕೊಂಡುಕೊಳ್ಳಿ!

6 ರೂಪಾಯಿಯ ವಾಚು, 3 ರೂಪಾಯಿಯ ಟ್ಯಾಮ್‌ಪೀಸು, ಬೀ ಟ್ಯಾಮ್‌ಪೀಸು, ಕೇಶರಂಜನ ಎಣ್ಣೆ ಇತ್ಯಾದಿಗಳು 4 ಆಣೆ 2 ಆಣೆಗೆ ದೊರೆಯುವ ವಿಧಾನವನ್ನು ಪತ್ರ ಬರೆದು ತಿಳಕೊಳ್ಳಬಹುದು.

ವಿಳಾಸ:— ನವಾಬ ಮಯಾನ್ನ ಎಂಡ್ ಕೋ.,
ವಾಚು ಮತ್ತು ಗಡಿಯಾರ ವ್ಯಾಪಾರಸ್ಥರು.
ಕಾದಿರಿ, ಅನಂತಪುರ ಡಿಸ್ಟ್ರಿಕ್ಟ್.

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್, ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೋಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.



ಅನ್ಸೋನಿಯ ಕಂಪೆನಿಯ ಜಿನ್ನ್ಯಾನ್ ಬಿ ಟ್ಯಾಮ್‌ಪೀಸ್, ನಿಕ್ಕಲ್‌ಕೇಸ್, ಹಿಂದಿನಿಂದ ಕೀಲಿ ಕೊಡುವುದು. ಎತ್ತರಿಸಲ್ಪಟ್ಟ ಮುಖಬಿಲ್ಲೆ, ಪ್ರತಿ ಒಂದು ಕುಟುಂಬಕ್ಕೆ ಸುಲಭ ದರದಲ್ಲಿ ದೊರಿಯುವ ಉತ್ತಮ ಗಡಿಯಾರ, ಇದರ ಪ್ರಯೋಗವು ಈಗ ಸರ್ವಸಾಧಾರಣ ಎಲ್ಲರಿಗೂ ಗೊತ್ತದೆ. ಇದನ್ನು ಕೊಂಡುಕೊಳ್ಳುವವರ ಸಂಖ್ಯೆ ಪ್ರತಿದಿನವೂ ಹೆಚ್ಚಾಗುತ್ತಿದೆ.

ನಿಕ್ಕಲ್‌ಕೇಸ್ ರೂ. 2—8—0 (ದೊಡ್ಡ ಅಂಕೆ). ಎಲಾರ್ಮ್ ಸಹಿತ ರೂ. 4—8—0. ಟಪ್ಪಾಲು ಚಾರ್ಜು ಬೇರೆ.

ಸುಪಿರಿಯರ್ ರೈಲ್ವೇ ರೆಗ್ಯುಲೇಟರ್.



ನಿಕ್ಕಲ್ ಬೆಳ್ಳಿಕೇಸ್, ಓಪನ್‌ಫೇಸ್, ಕೀಲೆಸ್, ದೊಡ್ಡ ಅಂಕೆಗಳು, ಬಲವಾದ ಮುಳ್ಳು, ನಿರ್ಭಿಡೆಯಾಗಿ ಪ್ರಯೋಗಿಸಬಹುದು. ಬಹಳವಾಗಿ ಮಾರುತ್ತಿರುವೆವು. ಅಗ್ಗ ಮತ್ತು ಚಲೋ ಗಡಿಯಾರ. ವ್ಯಾಟ್‌ಮೆಟಲ್ ಸರಪಣಿ ಸಹಿತ.

ರೂ. 2—15—0. ಟಪ್ಪಾಲು ಚಾರ್ಜು ಬೇರೆ.

ದಿ ಬೊಂಬೆ ಪೋಪ್ಯುಲರ್ ಏಜನ್ಸಿ,
ಡಾರವಿ, ಬೊಂಬೆ.
THE BOMBAY POPULAR AGENCY,
Dharvi Bombay.

ದೇಶಬಾಂಧವರೇ! ಇತ್ತ ಗಮನಿಸಿ!!

ಏಜಂಟರಿಗೂ ವಿಮೇದಾರರಿಗೂ ಸುಸಮಯ!! ಬಿಡಬೇಡಿರಿ!!!

ಗವರ್ನಮೆಂಟ್ ಸೆಕ್ಯೂರಿಟಿಯುಳ್ಳ

ದಿ ಯುನಿವರ್ಸಲ್ ಎಸ್ಯುರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಮೂಲಧನ 10,00,000 ವಿಮೆದಾರರ ಸಂಖ್ಯೆ 96,000ಕ್ಕಿಂತ ಹೆಚ್ಚು.

ವೃದ್ಧಾಪ್ಯದಲ್ಲಿ ತನಗೂ—ತನ್ನ ನಂತರ ತನ್ನ ವಾರಿಸುದಾರನಿಗೂ ಒಂದೇ ಗಂಟಿನಿಂದ ದ್ರವ್ಯಸಹಾಯಮಾಡುವುದು ವಿಮೆಸಂಘವಲ್ಲದೆ—ಆಪ್ತಸ್ನೇಹವಲ್ಲ. ಆದುದರಿಂದಲೇ ಪ್ರತಿಯೊಬ್ಬನೂ ತನ್ನ ಜೀವವಿಮೆಯನ್ನು ಉತ್ತರಾಯಿಸುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರೂ ಪುರುಷರೂ ತಿಂಗಳಿಗೆ ಎಂಟು ಆಣೆ ಮೊದಲ್ಗೊಂಡು ಬೇಕಾದಷ್ಟು ಹೆಚ್ಚು ಹಣವನ್ನು ಈ ಕಂಪೆನಿಗೆ ಪಾವತಿ ಮಾಡಿ ಇಷ್ಟವಿದ್ದಂತೆ ತಮ್ಮ ಜೀವವಿಮೆಯನ್ನು ಉತ್ತರಾಯಿಸಬಹುದು. ಲಾಭಸಹಿತವಾದ ನಮ್ಮ ಕಂಪೆನಿಯ 'ಪ್ರಿಮಿಯಮ್' ದರಗಳು, ಇದೇ ತರದ ಬೇರೆ ಕಂಪೆನಿಗಳ ಲಾಭರಹಿತವಾದ ದರಗಳಿಗಿಂತ ಬಹಳ ಕಡಿಮೆ! ಬೇಕಾದವರು ಸರಿಹೋಲಿಸಿ ನೋಡಿ. ವೈದ್ಯಪರೀಕ್ಷೆಯಿಲ್ಲದ "ಪ್ರೊವಿಡೆಂಟ್" ಶಾಖೆಯ ವಿವಾಹ ಮತ್ತು ಜೀವವಿಮೆಯಿಂದ ಸ್ವಲ್ಪ ಖರ್ಚು! ಬಹಳ ಲಾಭ!! ಪ್ರಖ್ಯಾತ ವಿದ್ವಾಂಸರಿಂದ ಸ್ಥಾಪಿಸಲ್ಪಟ್ಟು, ಸಮರ್ಥ ಡಿರೆಕ್ಟರರುಗಳಿಂದ ನಡೆಯಿಸಲ್ಪಡುತ್ತಿರುವ ಈ ಕಂಪೆನಿಯು ಇದೇ 1912ನೇ ಇಸವಿಯಲ್ಲಿ ಪಾಸಾದ ಇಂಡಿಯನ್ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಆಕ್ಟಿನ ಸಮ್ಮಂಧ ಅಗತ್ಯವಿರುವ ಡಿಪೋಜಿಟ್ ಹಣವನ್ನು ಗವರ್ನಮೆಂಟಿಗೆ ಕಳದ ಜೂನು ತಿಂಗಳಲ್ಲಿ ಒಪ್ಪಿಸಿರುತ್ತದೆ. ಇದರಿಂದ ಕಂಪೆನಿಯ ಸ್ಥಿರತ್ವದ ವಿಚಾರದಲ್ಲಿ ದೃಢನಂಬಿಕೆ! ಪೊಲಿಸಿದಾರರಿಗೂ ಸಂಪೂರ್ಣ ಭದ್ರತೆ!! ಮದುವೆಯ ಮುಂಚಿತವಾಗಿಯೇ ತೆತ್ತ ಹಣದ ದುಬಾರಿ ಹಣವು ಇಲ್ಲೇ ಕೊಡಲ್ಪಡುವುದು.

ಕಂಪೆನಿಯ ಎಲ್ಲಾ ನಿಯಮಗಳನ್ನು ತಿಳಿಯಲಪೇಕ್ಷಿಸುವವರು, ಕೆಳಗಿನ ವಿಳಾಸಕ್ಕೆ ಬರೆದು, ಮಾಹಿತಿ ಪತ್ರಗಳನ್ನು (Prospectus) ತರಿಸಿಕೊಳ್ಳಿ. ನಂಬಿಗಸ್ಥರಾದ ಒಳ್ಳೆ ಕೆಲಸಮಾಡುವ ಏಜಂಟರು ಎಲ್ಲಾ ಕಡೆಗಳಲ್ಲಿಯೂ ಬೇಕು. ಧಾರಾಳವಾದ ಕಮಿಷನ್! ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ನಡೆಯಿಸಿ.

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,
ಕನ್ನಡ, ಮೈಸೂರು ಮತ್ತು ಕೊಡಗುಸಂಸ್ಥಾನದ ಮುಖ್ಯ ಏಜಂಟರು, ಉಡುಪಿ (ದ. ಕನ್ನಡ)


ಜಿನತಾನ
"JINTAN" Pill Case (Exact Size)
3 pills come out from here at each opening.
LOOKING GLASS
JINTAN

ಈಗಲೇ ಪರೀಕ್ಷಿಸಿ ನೋಡಿರಿ.

ಜೀನತಾನಿನ ವಿಶೇಷ ಗುಣಗಳು:—ಅತ್ಯುತ್ತಮವಾದ ಜೀರ್ಣಕಾರಿಯು, ಇದಕ್ಕೆ ಸಮಾನವಾದ ಜೀರ್ಣಕಾರಿಯು ಮುಂಚೆಂದಿರದು. ಜೀರ್ಣಶಕ್ತಿ ಕಡಮೆಯಾದ ಅನ್ನಕೋಶವು ಇದರ ಸೇವನೆಯಿಂದ ಎಂದೂ ಬಾಧಿಸಲ್ಪಡದು.

ರೋಗಗಳು ಅಂಟದಂತೆ ಮಾಡುವ ಪೂತಿನಾಶಕರ ವಿಶೇಷವಾದ ಗುಣವು ಇದಕ್ಕಿರುತ್ತದೆ. ಇದು ಉಪಯೋಗಿಸುವವರ ಶ್ವಾಸವನ್ನು ಸುವಾಸನೆಯುಳ್ಳದ್ದಾಗಿ ಮಾಡುವುದು.

ಹೊಗೆಸೊಪ್ಪು ವ ಇತರ ಮಾದಕ ಪದಾರ್ಥಗಳ ವಾಸನೆಯನ್ನು ಇದನ್ನು ಸೇವಿಸಿದ ಮಾತ್ರದಿಂದ ಪೂರ್ಣವಾಗಿ ಹೋಗಲಾಡಿಸಬಹುದು.

ಸಂಗೀತ ಹಾಡುವವರೂ, ಉಪನ್ಯಾಸಕರೂ, ಇದನ್ನು ಉಪಯೋಗಿಸಿದರೆ ಗಂಟ್ಲಿನ ನಾಳಗಳು ಶುದ್ಧವಾಗುತ್ತವೆ. ಬಾಯಿಯ ದುರ್ವಾಸನೆ ನಾಶವಾಗುವದು.

ಕ್ರಯ. 30 ಮಾತ್ರೆಗಳ್ಳುಳ್ಳ ಪೊಟ್ಟಣಕ್ಕೆ ರೂ. 0-1-6. 195 ಮಾತ್ರೆಗಳುಳ್ಳ ಡಬ್ಬಿಗೆ ರೂ. 0-8-0. 65 ಮಾತ್ರೆಗಳುಳ್ಳ ಪೊಟ್ಟಣಕ್ಕೆ 0-3-0. 455 ಮಾತ್ರೆಗಳುಳ್ಳ, ಸುಂದರವಾದ ಕನ್ನಡಿ ಡಬ್ಬಿಗೆ ರೂ. 1.

ಪ್ರಾಮುಖ್ಯ ಏಜಂಟರು:—
ಎಸ್. ವೈದ್ಯಾ ಎಂಡ್ ಕೊ,
ಪಾರ್ಕ್ ಟೌನ್, ಮದ್ರಾಸು.
S. VAIDYA & Co.
Park Town, Madras.

ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ. ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ್ ಟೌನು, ಮದ್ರಾಸು.
S. VAIDYA & Co.,
Park Town, Madras.

"ಆಯೊನಿಕ್ ಫಾರ್ಮೆಸಿ"

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗ್ರಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮೆಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co.,
Park Town, Madras.
ಎಸ್. ವೈದ್ಯಾ ಆಂಡ್ ಕೊ.
ಪಾರ್ಕ್ ಟೌನ್ ಮದ್ರಾಸು.

ಪ್ರಕಟನೆ.

ಮಂಗಳೂರು ತೇರಬೀದಿಯಲ್ಲಿರುವ ಕೆ. ಯಮ್. ದಾಸಪ್ರಭುಗಳ ಬುಕ್ ಶಾಪಿನಲ್ಲಿ ಅಥವಾ ಗ್ರಂಥಕರ್ತರಿಂದ ಶೀದಾ ಕ್ರಯಕ್ಕೆ ದೊರೆಯುವ ಪುಸ್ತಕಗಳು.

ವಕೀಲ ಹಳಿಗೇರಿ ಕೃಷ್ಣರಾಯರಿಂದ ರಚಿಸಲ್ಪಟ್ಟವುಗಳು.

ಪ್ರತಿ ೧ಕ್ಕೆ ಟಪ್ಪಾಲ್ ಹಾಸಲು ವಿನಹ ಕ್ರಯ.

(೧) ಅಧ್ಯಾತ್ಮವಿಚಾರ, ಪ್ರತ್ಯಗಾತ್ಮನ ಚಿತ್ರ ಸಮೇತ ... ... ರೂ. ೨—೪—೦.

(೨) ಆ ಗ್ರಂಥ (ಅಧ್ಯಾತ್ಮವಿಚಾರ)ದ ಕುರಿತು ಮಾಧ್ವರು ಹೇಳುವ ಆಕ್ಷೇಪಣೆಗಳಿಗೆ ಉತ್ತರ. ಇದರಲ್ಲಿ ಪ್ರಸಂಗತಃ ಶ್ರೀಮದ್ಭಗವದ್ಗೀತೆ ಮೊದಲಾದ ಸ್ವದೇಶೀಯ ದೇಶೀಯ ಗ್ರಂಥಗಳ ಆಧಾರದ ಮೇಲೆ ಮಧ್ವಮತವು ಸ್ವವಿರುದ್ಧವಾದದ್ದೆಂದು ವಗ್ಯೆರೆ ತೋರಿಸೋಣಾಗಿರುತ್ತದೆ. ಕ್ರಯ ಆಣೆ ೦—೨—೦.

(೩) ಸ್ವಾಯಂಭುವ ಮನುವಂಶಾವಳಿ (ದೇವನಾಗರೀ ಅಕ್ಷರ) ಕನ್ನಡ ಉಪೋದ್ಘಾತ ಸಮೇತ ಕ್ರಯ ರೂಪಾಯಿ ೧—೦—೦.

ಈ ಪೈಕಿ ೧ನೇ ೩ನೇಯವುಗಳು ವೆಲ್ಯುಪೆಯೆಬಲ್ ಪೋಸ್ಟದ್ವಾರಾ ಕಳುಹಿಸೋಣಾಗಬಹುದು.

೨ನೇದರ ಭಗ್ಯೆ, ಅದನ್ನು ಕೊಂಡುಕೊಳ್ಳುವವರು ೨॥ ಆಣೆಯ ಟಪ್ಪಾಲುಚೀಟುಗಳನ್ನು ಮುಂದಾಗಿ ಕಳುಹಿಸಬೇಕಾಗುವದು.

ಮಂಗಳೂರು ಟೌನ್‌ನಲ್ಲಿ ಕೊಂಡುಕೊಳ್ಳುವವರು ಹಾಸಲು ಕೊಡಬೇಕಾದ್ದಿಲ್ಲ.

H. Krishna Rao.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ನರೆ ಕೂದಲನ್ನಿಟ್ಟುಕೊಂಡು
ಮುದುಕರಾಗಿ ಕಾಣುವದೇಕೆ?

☞ ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳ ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಚಾಗಿ ಅಸಂಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷ ಪಡುವಿರಿ.

ಕ್ರಯ ಬುರುಸು ಸಮೇತ ಬಾಟ್ಲಿ 1ಕ್ಕೆ ರೂ. 1.
ಅಂಚೆ ಹಾಸಲು ಆಣೆ 0—4—0.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.
V. A. S. PANI,
No. 3, Erulappen Street, Madras.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!!

ಹನೂಮತ್ಪ್ರವರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.
ಮ। ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.

ಮಂಗಳೂರು.
ಪಾವಂಜೆ ಗೋಪಾಲಕೃಷ್ಣ
ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಓಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಅಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ. 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗ್ಯೆರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವದಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್,
ಶ್ರೀಶುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

Canarese Novels Etc.

ಕನ್ನಡ ಪುಸ್ತಕಗಳು.

ಮ। ರಾ। ರಾ। ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.		ರೂ. ಆ.
ವಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ. ಮು.	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ನವಾಬನಂದಿನಿ ಡಿಟೊ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ. ಮು.	0—3
ಸೀತಾರಾಮ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ. ಮು.	0—3
ವಿಷವೃಕ್ಷ ದ್ವಿ. ಮು.	1—4	ಯುಗುಳಾಂಗುರೀಯ ,,	0—3
ದೇವೀ ಚೌಧುರಾಣಿ-ಡಿಟೊ	1—4	ಭ್ರಾಂತಿವಿಲಾಸ ,,	0—8
ರಾಜಸಿಂಹ-(ಇತಿಹಾಸ)	1—5	ನೊಂದಸುಡಿ [ಸ್ತ್ರೀನೀತಿ]	0—2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ಮೃಣ್ಮಯಿ-ಡಿಟೊ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿರತ್ನನಾಟಕರತ್ನ ಡಿಟೊ	0—7
ಮನೋರಮ [ಪತ್ತೇದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit-Bits]	0—8
ಪರಿಮಳ-ಡಿಟೊ-ದ್ವಿ. ಮು.	0.10	ನೀರದೆ [ಹೊಸ ಕಾದಂಬರಿ]	0—8
ಸಾಧನೆ. ಡಿಟೊ	0—8	ಭಾರತಮಹಿಳಾ [ಸ್ತ್ರೀನೀತಿ]	0—8
ಕೊಹಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0.11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3	ಇತ್ಯಾದಿ.	

ಶ್ರೀ ಮಾರುತೀ ಚಿತ್ರಪಟ.

ತ್ರಿ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟ ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0—8	ನಿರ್ಭಾಗ್ಯಚಾಣಕ್ಯ [ಹೊಸಕಾದಂಬರಿ]	0—6
ಕೆ. ಕವಿಚರಿತೆ [ಪೂರ್ವಭಾಗ]	3—2	ಅನಂಗಸುಂದರಿ ಡಿಟೊ	0—8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾಮಾಧವಿ ಡಿಟೊ	0—8
ಕಲಾನಾಥ ಡಿಟೊ	0—8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0—9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0—9
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0—8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4—0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8	ಹರಿಕಥಾಮೃತಸಾರ ಡಿಟೊ	1—6
ಸನ್ಯಾಸಿ [ಹೊಸ ಕಾದಂಬರಿ]	0—6	ಚದುರಂಗಬೋಧಿನಿ	0—3
ಮೃತ್ಯು ಪರೀಕ್ಷೆ ಡಿಟೊ	0—2	ಸರ್ವೇಮ್ಯಾನ್ಯುಯಲ್	0—5
ಬೃಂದಾವನ ಡಿಟೊ	0—2	ನ್ಯಾಯದರ್ಪಣ [ಲಾ]	1—0
ಸುಮನೋರಮ ಡಿಟೊ	0—2	ವ್ಯವಹಾರ ದೀಪಿಕೆ [ಲಾ]	3—0
ಮಾಲಿನಿ ಡಿಟೊ	0—2	ಶಾಕುಂತಲ ನಾಟಕ ದ್ವಿ. ಮು.	0—9
ಪ್ರೇಮಪಿಪಾಸೆ ಡಿಟೊ	0—2	ಶೂರಸೇನಚರಿತ್ರೆ ನಾಟಕ ಡಿಟೊ	1—0
ವಿರಕ್ತಳಾದ ಸೌದಾಮಿನಿ ಡಿಟೊ	0—5	ಚಂಡಕಾಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	6—2	ರಾಮವರ್ಮ ಲೀಲಾವತೀ ನಾಟಕ	0—8
ಚಾತುರ್ಯವತಿ ಡಿಟೊ	0—2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0—2	ಚಂಡೀಮದಮರ್ದನ ನಾಟಕ	0—5
ವಿಲಕ್ಷಣಶಿಕ್ಷಣ ಡಿಟೊ	0—2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0—2	ಭರ್ತೃಹರಿ ನಿರ್ವೇದ ನಾಟಕ	0—3
ಭಾನುಮತಿ ಡಿಟೊ	0—2	ನಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0—2	ಧ್ರುವವಿಜಯ [ನಾಟಕ]	0—4
ಸಂತಾಪಕ ಡಿಟೊ	0—4	ಸೀತಾಪರಿಣಯ [ನಾಟಕ]	0—4
ಚಂದ್ರಮತಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

ಎಸ್. ಟಿ. ಎ., ಬೆಂಗಳೂರು ಸಿಟಿ.

ಪ್ರಸಿದ್ಧ ಕನ್ನಡ ಗ್ರಂಥಗಳು

1. **ಜಪಾನರುನ್ನತಿಗೆ ಮೂಲಾಧಾರ:**—ನವನಾಗರೀಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಅತ್ಯಾಶ್ಚರ್ಯಕರವಾದೀ ಕಥೆಯನ್ನು ಓದಬೇಕು. ಇಂತಹ ಸುಬೋಧಕವಾದ ಕಣ್ಮನಗಳಿಗಾನಂದವನ್ನುಂಟುಮಾಡುವ ಗ್ರಂಥವನ್ನು ಹಿಂದೆ ನೀವು ಯಾವಾಗಲೂ ನೋಡಿಲ್ಲ. ಮೈಸೂರು ಮಹಾರಾಜರಿಗೆ "ಡೆಡಿಕೇಟ್" ಮಾಡಲ್ಪಟ್ಟಿದೆ. ಮೈಸೂರು ಮಹಾರಾಜರ, ಯುವರಾಜರ ಮತ್ತು ಕಥೆಯ ಸಂದರ್ಭಗಳಿಗನುಕೂಲಿಸುವಂತೆ, ನೇತ್ರಾನಂದಕರವಾದ 12 "ಹಾಪ್‌ಟೋನ್" ಚಿತ್ರಗಳೂ ಇದರಲ್ಲಿವೆ. ಮೈಸೂರು ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಸ್ವಧರ್ಮ ರಕ್ಷಣೆಗಾಗಿ ರಾಜನೂ, ರಾಣಿಯೂ, ಸೇನಾಪತಿಯೂ, ಸತ್ಪ್ರಜೆಯಾದ ಕುರುಬನೂ, ಪುರೋಹಿತನೇ ಮುಂತಾದವರು ಪ್ರಾಣಾರ್ಪಣವಂ ಮಾಡುವ ಸಂದರ್ಭಗಳನ್ನೂ ಮತ್ತು ಅವರುಗಳೆಲ್ಲರೂ ದೇವರುಗಳಿಂದ ಬದುಕಿಸಲ್ಪಟ್ಟ ಬಳಿಕ ರಾಜನಿಗೂ, ಕನ್ಯೆಗೂ ವಿವಾಹ ಪಟ್ಟಾಭಿಷೇಕಗಳು ನಡೆವುದನ್ನೂ, ಅವುಗಳ ಕಣ್ಣೆದುರಿಗೆ ನಡೆದಂತೆ ತೋರಿಸುವ ಫೋಟೋಗ್ರಾಫಿನ ಮೇಲೆ ನಿರ್ಮಿಸಿದ ಸಹಜ ಚಿತ್ರಗಳನೂ ನೋಡಿ ಯಾರ ಹೃದಯವು ತಾನೇ ಕರಗದೇ ಇರವುದು? ಕ್ರಯ ವಿ. ಪಿ. ಪ್ಯಾಕಿಂಗ್ ಸಹಿತ:—ಚಿನ್ನದ ಗಿಲ್ಟಿನದು ರೂ. 2—4—0; ಅವ್ವಲ್ ಗ್ಲೇಜ್ ರೂ. 1—8—0; ದುಯ್ಯಂ 1—4—0.

2 **ಧರ್ಮಪದ:**—17 ಕೋಟಿ ಮುಸಲ್ಮಾನರಿಗೆ "ಖೊರಾನೂ" 32 ಕೋಟಿ ಹಿಂದೂಗಳಿಗೆ "ಭಗವದ್ಗೀತೆಯೂ" 40 ಕೋಟಿ ಕ್ರಿಸ್ತರಿಗೆ "ಬೈಬಲೂ" ಹೇಗೆ ಪೂಜ್ಯವಾದ ಗ್ರಂಥಗಳೋ, 55 ಕೋಟಿ ಬೌದ್ಧರಿಗೆ ಈ ಗ್ರಂಥವು ಹಾಗಿದೆ. ಸಾವಿರಾರು ಗ್ರಂಥಗಳಿಂದ ಪಡೆವ ಜ್ಞಾನವನ್ನು ಇದೊಂದರಿಂದ ಪಡೆಯಬಹುದು. ಮೈಸೂರು ಮಹಾರಾಜರ; ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಜಪಾನ್‌ನಲ್ಲಿರುವ ಬುದ್ಧವಿಗ್ರಹದ ನೇತ್ರಾನಂದಕರವಾದ ಭಾವಚಿತ್ರಗಳಿವೆ. ಕ್ರಯ ವಿ. ಪಿ. ಸಹಿತ ರೂ. 1.

2. **ಬೌದ್ಧಾವತಾರ:**—ಲೋಕೋದ್ಧಾರಕನಾದ "ಶ್ರೀ ಗೌತಮಬುದ್ಧ ಭಗವಂತನ" ಅತ್ಯಾಶ್ಚರ್ಯಕರವಾದ ಜನ್ಮ ಚರಿತ್ರೆ. ಕ್ರಯ ವಿ. ಪಿ. ಸಹಿತ 0-6-0.

ವಿಳಾಸ:— 1. ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು,
ಚಾಮರಾಜ ಪೇಟೆ, ಮೈಸೂರು.
2. ಶ್ರೀವಾಣೀವಿಲಾಸ ಬುಕ್ ಡಿಪೋ, ಮೈಸೂರು.
3. ದಿ. ಜನರಲ್ ಏಜನ್ಸಿ, ಮೈಸೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು „	225,000—0—0
Subscribed Capital	211,900—0—0	ಪ್ರತಿಜ್ಞಾತ ಮೂಲ ಧನವು „	211,900—0—0
Paid up Capital	186,900—0—0	ಆಗತ ಮೂಲ ಧನವು „	186,900—0—0
Deposits	481,989—11—9	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	481,989—11—9
Reserve Fund	27,530—4—0	ರಕ್ಷಿತ ಧನವು	27,530—4—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively. Terms on application.

Short-notice Deposits requiring one week's notice of withdrawal after one month received @ 2½% per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಯೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. May 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ, ಬಳ್ಳಾರಿ

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

KAMINIA
OIL
Regd.
Delicately perfumed oil for beautifying and increasing the growth of the hair.
To be rubbed well into the roots of the hair daily.
KAMINIA
PERFUMERY Co.
BOMBAY

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ: 2-10-0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ವಿಶೀಶರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮೆಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದ್ಯದ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಿಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಎಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸ್ನರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

PROF JAMES
ELECTRO-TONIC
PEARLS

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಮವೂ, ಅಕಾಲಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯುವರಿಗೆ ಮತ್ತು ಮಾನಸಿಕ ಪ್ರವೃತ್ತಿಯುವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ಠಾಕರೀ, ಗ್ರಾ. ಪಾರಸಿವನೀ, ತಾ. ರಾಮಟೇಕ, ಜಿ. ನಾಗಪುರ.—"ತಾವು ನನಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಳಿಗೆಗಳಿಂದ ನನಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಳಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ. ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ."

4 ವಿ. ಆರ್. ಚಾಕ್ಕೊ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಜೀ ನರಸಿಂಗರಾವ್, ಸಂಸ್ಥಾನ ಫಲಟನ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಹೆಚ್ಚಾದ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ತರರು ಈ ರೀತಿ ಬರೆಯುವರು:-ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್
ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

ಆರ್. ಮಾರ್ಟಿನ್ನರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇವು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧-೮-೦.

ಆರ್. ಮಾರ್ಟಿನ್ನರ ಮೆಜಿಕ್ ಸ್ಪೆಸಿಫಿಕ್.

ಮೇಹ ಮೊದಲಾದ ರೋಗಗಳು ಎರಡೇ ಬಾಟ್ಲಿ ಸ್ಪೆಸಿಫಿಕಿನಿಂದ ಗುಣವಾಗುವಾಗ ನೀವು ನಿಮ್ಮ ಹಣವನ್ನು ಡಾಕ್ತರರ ಚಿಕಿತ್ಸೆಗೆ ವೆಚ್ಚಮಾಡುವುದೇಕೆ? ಈ ಔಷಧಿಯನ್ನು ಒಂದೇ ಸಾರಿ ಕುಡಿಯುವ ಮಾತ್ರದಿಂದ ಮೂತ್ರ ಕೋಶದ ಉರಿಯು ನಿಂತುಹೋಗುವುದು. ಪುನಃ ತಲೆದೋರುವ ಸಂಭವವೇ ಇಲ್ಲ. ಈ ಔಷಧಿಯನ್ನು ತಕ್ಕೊಳ್ಳುವುದರಿಂದ ಯಾವದೊಂದು ಕೆಡಕು ಇಲ್ಲವೆಂಬುದು ನಿಶ್ಚಯವು. ಕ್ರಯ ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ನರ ಮೆಜಿಕ್ ಮಾತ್ರೆಗಳು.

ಸ್ನಾಯುಗಳ ಬಲಹೀನತೆ, ಧಾತು ಬಲಹೀನತೆ, ಮೆದುಳಿನ ಅಶಕ್ತಿ ಇದರಿಂದ ಹುಟ್ಟುವ ವಿವಿಧ ರೋಗಗಳು ಅಂದರೆ ನಿದ್ರೆ ಬಾರದಿರುವುದು, ಕನಸು, ಕೈ ನಡುಗುವುದು, ಕಣ್ಣಿನ ಮೇಲೆ ಸಣ್ಣ ಸಣ್ಣ ಚುಕ್ಕೆಗಳು, ಚಿಂತೆ, ಮಾನಸಿಕ ಶಕ್ತಿಯ ಕುಂದು, ಮಲಬದ್ಧತೆ, ಮೊದಲಾದ ಸರ್ವ ವಿಧದ ರೋಗಗಳು ಗುಣಹೊಂದುವವು. ಎರಡು ಬಾಟ್ಲಿ ಕುಡಿಯುವುದರಿಂದ ಅತಿರೇಕ ಬಲವು ಬರುವುದು. ೩೦ ಮಾತ್ರೆಗಳುಳ್ಳ ಬಾಟ್ಲಿ ೧ಕ್ಕೆ ರೂ. ೧—೦—೦. ವಿ. ಪಿ. ಚಾರ್ಜು ೧—೩ ಬಾಟ್ಲಿ ವರೇಗೆ ೫ ಆಣೆ ಹೆಚ್ಚಿಗೆ. ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ. **R. D. Ketely & Co.**
ನಂಬ್ರ ಡಿ. ಫ್ರೆಯರರೋಡ್, ಮುಂಬಯಿ. *No. D. Frere Road,*
Near Wright & Co. Fort Bombay.

ಮುಳಿಯಿಲ್‌ರವರ ದಿವ್ಯೌಷಧಗಳು.

1. ಕೋಲೇರಾ ಮಾತ್ರೆ—ಇದನ್ನು ಜೇನಲ್ಲಿ ಕೊಡುವುದರಿಂದ ಉಬಾಲು ಜುಲಾಬು ಗುಣಪಡುವುದು. ಡಜನಿಗೆ ರೂ. 0—6—0.

2. ಕೋಲೇರಾ ಚೂರ್ಣ—ಈ ಚೂರ್ಣವನ್ನು ಜೇನಿನಲ್ಲಿ ಮಿಶ್ರಮಾಡಿ ಕೊಡುವ ವರೆಗೆ ರೋಗಿಯು ಬದುಕಿದ್ದರೆ ನಿಶ್ಚಯವಾಗಿ ಗುಣಪಡುವನು. ಎಷ್ಟು ಕಠಿಣತರವಾಗಿದ್ದರೂ 2 ಯಾ 3 ಸಾರಿಯ ಔಷಧಿ ಗುಣಪಡಿಸುವುದು. ಡಜನ್ ಪೊಟ್ಟಣಗಳಿಗೆ 0—12—0.

3. ಕೋಲೇರಾ ಮಿಕ್ಸ್ಚರ್—ಸ್ಥೂಲ ಶರೀರದ ವ ಶೀತ ಶರೀರದ ಮೇಲ್ಜಾತಿಯ ವ ಇತರ ಜಾತಿಯ ಹೆಂಗಸರಿಗೆ ಇದು ಅತಿ ಪ್ರಯೋಜನಕರವೆ. 2 ಔನ್ಸಿಗೆ ರೂ. 1—0—0.

4. ಚಂದ್ರೋದಯ ದ್ರಾವಕ—ಎಲ್ಲಾ ತರದ ಅಜೀರ್ಣಕ್ಕೆ ಸಕ್ಕರೆಯಲ್ಲಿ ಉಪಯೋಗಿಸುವುದು. 1 ಔನ್ಸಿಗೆ 1—4—0.

While Cholera was prevailing in Muliyar etc. last year, I have tried the Cholera Pills prepared by Messrs Muliyil and Sons. I found them efficacious. I hope the public will appreciate it as it is cheap and gives speedy relief. (sd) A DEVAPPA PUNJA B.A. B.L.
Kasaragod, 18—3—13. Tahsildar.

5. ಪಲ್ಲೆ ಏಕ ಮಾತ್ರೆ. 6 ವಯಸ್ಸಿನ ಕೆಳಗಿನ ಮಕ್ಕಳಿಗಿರುವ ನೇವಸಕ್ಕೆ ಅತ್ಯುತ್ತಮ ಡಜನಿಗೆ ರೂ. 0—6—0.

6. ಸಿಂಹತ್ಯಾದಿ ಮಾತ್ರೆ. ಎಲ್ಲಾ ತರದ ಕೆಮ್ಮಿಗೆ ಜೇನು ವ ಅಡುಸೋಗೆ ರಸದಲ್ಲಿ ಸೇವಿಸುವುದು. ಡಜನಿಗೆ 0—4—0.

ನಾನು ಮಕ್ಕಳ ಶೀತ ವ ಕೆಮ್ಮಿಗೆ ಹೊಮ್ಯೊಪತಿ ಔಷಧಿಗಳನ್ನು ಒಂದು ತಿಂಗಳು ಪ್ರಯೋಗ ಮಾಡಿದಾಗ್ಯೂ ಪ್ರಯೋಜನ ಕಂಡುಬಾರದೆ ಈ ಗುಳಿಗೆಗಳ ಪೈಕಿ ಸಿಂಹತ್ಯಾದಿ ಮತ್ತು ಪಲ್ಲೆ ಏಕ ಮಾತ್ರೆಯನ್ನು ಮೂರೇ ದಿನ ಪ್ರಯೋಗಿಸಿದ್ದಲ್ಲಿ ಥಕ್ಕನೇ ಗುಣವಾಯಿತು. ಸಣ್ಣ ಮಕ್ಕಳ ಕೆಮ್ಮು ಕಫಾದಿಗಳಿಂದ ಕಷ್ಟ ತೊಂದರೆ ಪಡುವ ಎಲ್ಲಾ ತಾಯಂದಿರಿಗೆ ಇದನ್ನು ಶಿಫಾರಸು ಮಾಡುತ್ತೇನೆ.

Karkal 14th June 13. (sd.) P. SOANS, Pastor.

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.
Muliyil & Sons, *Kasargod, S. C.*

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಸೆಯ ಜ್ವರ ಮುಂತಾಗಿ ಎಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತ ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೇಗೆ ಪೋಸ್ಟೇಜು 4 ಆಣೆ.

ಎ. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—„ಶ್ರೀ ಸೀತಾರಾಘವ ವೈದ್ಯಶಾಲಾ"
ಮೈಸೂರು.

ಡೋಂಗರೆ
ಇವರ
ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ, ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪ್ಪಾಲ ಖರ್ಚು 0-4-0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.
3 ಡಬ್ಬಿಗಳಿಗೆ 1—0—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0.

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

AMRUTANJAN
INDIA

ತಲೆನೋವು, ವಾತ, ಎದೆ ನೋವು,
ಸಂಧಿ ವಾತ, ಶಿರೋಭಾರ, ಸೊಂಟದ ನೋವು, ಕಫ,
ಅರ್ಧಾಂಗವಾಯು, ಹಲ್ಲು ನೋವು, ಘಾಯ,
ಶೀತ, ಕೆಮ್ಮು ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು 0-8-0 ಡಜನ್ ಒಂದಕ್ಕೆ 5-4-0 ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ.
ಮರ್ಕೆಂಟಾಯಿಲ್ ಮಿಶನ್ ಬ್ರೇಂಚ್.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಪರ್ಲ್ಸ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.
ಕೊಚ್ಚಿಕಾರ್ ಬ್ರದರ್ಸ್.
ಕುಮಟೆ ಆರ್. ಪಿ. ಪೈ ಎಂಡ್ ಕಂಪನಿ.

ಅಮೃತಾಂಜನದ ಸೆಂಪಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಟಿನಲ್ಲಿ ದೊರೆಯುವದು.

ಅಮೃತಾಂಜನ ಡಿಪೋ,
109 ಫ್ರೇಯರ್ ರೋಡ,
ಮುಂಬಯಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ VIII ಮಂಗಳೂರು ತಾ. 29ನೇ ಶುಕ್ರವಾರ ಮೇ 1914. ಸಂಚಿಕೆ 22

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ|| ರಾ|| ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. **ಸತ್ಯರಾಜಾ ಪೂರ್ವದೇಶ ಯಾತ್ರೆಗಳು**—ಭಾಗ ೧— ಸ್ತ್ರೀಮಲೆಯಾಳವೆಂಬ ಸಂಪೂರ್ಣ ಕಥೆ. ರಾವ್ ಬಹದ್ದೂರ್ ವಿರೇಶ ಲಿಂಗಂಪಂತರೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ ಬಹು ರಸಭರಿತವಾದ ಕಲ್ಪನಾಕಥೆ. ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ಣಾಟ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. **ಬೆಲೆ ೮ ಆಣೆ.**

೨. **ಕೃಷ್ಣಾಕುಮಾರಿ**—ಈ ಅದ್ಭುತವಾದ ವಚನ ನಾಟಕವು ಮೂಲ ಬಂಗಾಳಾ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ. ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು. ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಪುಟಾಕ್ಷರಗಳಿಂದ ಅಚ್ಚಾಗಿದೆ. **ಬೆಲೆ ೧೦ ಆಣೆ.**

೩. **ಸದಾಹಾರ ವಿವೇಚನೆ**—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು. **ಬೆಲೆ ೨ ಆಣೆ.**

ಈಗಲೇ ಅಚ್ಚಾದುದು
ಕೆಲವೇ ಪ್ರತಿಗಳಿವೆ

ಕನ್ನಡ ಸಂಗೀತ ನಾಟಕ
ಚಂದ್ರಹಾಸಾಭ್ಯುದಯ.

ಬೆಲೆ ನಾಲ್ಕಾಣೆ ಮಾತ್ರ
ವಿ. ಪಿ. ಚಾರ್ಜು ಬೇರೆ

ಅತೀ ಮನೋಹರವಾದ ಮುದ್ರಣ! ಮನೋರಂಜಕವಾದ ಗದ್ಯಪದ್ಯ!! ಅನೇಕ ವಿದುಷಿಯರಿಂದಲೂ ನಾಟಕಕಂಪೆನಿಯವರಿಂದಲೂ ಆದೃತವಾದುದು!! ಸರ್ವಾಂಗಸುಂದರವಾದ ಈ ಸಂಪೂರ್ಣ ನೂತನ ಕೃತಿಯ ಪ್ರಥಮ ಮುದ್ರಣವು ಈಗತಾನೆ ಪ್ರಕಟಿಸಲ್ಪಟ್ಟು, ಮೊದಲೇ ರಿಜಿಸ್ಟರಾದ ಆರ್ಡರುಗಳನ್ನು ತೀರಿಸಿದ ನಂತರ ಈಗ ಕೆಲವೇ ಪ್ರತಿಗಳು ಉಳಿದಿವೆ. ಸಂಗೀತಪ್ರಿಯರಿಂದಲೂ ನಾಟಕಕಲಾವಿಶಾರದರಿಂದಲೂ ಸಂಗ್ರಹಿಸಲು ಯೋಗ್ಯವಾದುದು. ಗ್ರಾಹಕರು ತ್ವರೆಮಾಡಿ!

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸಾರ 0—2—0.

ಶೆಖೆ ಕಾಲದ ರಜೆಯು ತೀರಿ ಶಾಲೆಗಳು ಇನ್ನು ಬೇಗನೆ ತೆರಿಯೋಣಾಗುತ್ತಲಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟೆನ್ ಪೇನುಗಳು ಈಗಲೇ ಬಂದಿವೆ. ಕ್ರಯ–1ಕ್ಕೆ ರೂ. 1—14—0ರಿಂದ ರೂ. 7—14—0ರವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂಡ್ರಾ, ವೊಟರ್‌ಮೇನ್, ಸ್ವಾನ್, ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ:—
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನಿನ ಶಾರದಾ ಛಾಪಖಾನೆ, ಮಂಗಳೂರು.

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.
3 ಡಬ್ಬಿಗಳಿಗೆ 1—0—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0.

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

ತಲೆನೋವು, ವಾತ, ಎದೆ ನೋವು,
ಸಂಧಿ ವಾತ, ಶಿರೋಭಾರ, ಸೊಂಟದ ನೋವು, ಕಫ,
ಅರ್ಧಾಂಗವಾಯು, ಹಲ್ಲು ನೋವು, ಘಾಯ,
ಶೀತ, ಕೆಮ್ಮು ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯುಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು **0-8-0** ಡಜನ್ ಒಂದಕ್ಕೆ **5-4-0** ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ.
ಮರ್ಕೆಂಟಾಯಿಲ್ ಮಿಶನ್ ಬ್ರೆಂಚ್.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಪರ್ಲ್ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.
ಕೊಚ್ಚಿಕಾರ್ ಬ್ರದರ್ಸ್.
ಕುಮಟೆ ಆರ್. ಪಿ. ಪೈ ಎಂಡ್ ಕಂಪನಿ.

ಅಮೃತಾಂಜನದ ಸೆಂಪಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಟಿನಲ್ಲಿ ದೊರೆಯುವದು.

ಅಮೃತಾಂಜನ ಡಿಪೊ,
109 ಫ್ರೇಯರ್ ರೋಡ,
ಮುಂಬಯಿ.

Printed & Published by V. S. Kamath at the Mangalore Trading Association's Sharada Press, Mangalore,

---

Registered No. 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ VIII ಮಂಗಳೂರು ತಾ. 29ನೇ ಶುಕ್ರವಾರ ಮೇ 1914. ಸಂಚಿಕೆ 22

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ|| ರಾ|| ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಸ್ತ್ರೀಮಲೆಯಾಳವೆಂಬ ಸಂಪೂರ್ಣ ಕಥೆ. ರಾವ್ ಬಹದ್ದೂರ್ ವಿರೇಶ ಲಿಂಗಂಪಂತರೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ ಬಹು ರಸಭರಿತವಾದ ಕಲ್ಪನಾಕಥೆ. ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ಣಾಟ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. **ಬೆಲೆ ೮ ಆಣೆ.**

೨. ಕೃಷ್ಣಾಕುಮಾರಿ—ಈ ಅದ್ಭುತವಾದ ವಚನ ನಾಟಕವು ಮೂಲ ಬಂಗಾಳಾ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ. ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು. ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಅಚ್ಚಾಗಿದೆ. **ಬೆಲೆ ೧೦ ಆಣೆ.**

೩. ಸದಾಹಾರ ವಿವೇಚನೆ—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು. **ಬೆಲೆ ೨ ಆಣೆ.**

ಈಗಲೇ ಅಚ್ಚಾದುದು
ಕೆಲವೇ ಪ್ರತಿಗಳಿವೆ

ಕನ್ನಡ ಸಂಗೀತ ನಾಟಕ

ಚಂದ್ರಹಾಸಾಭ್ಯುದಯ.

ಬೆಲೆ ನಾಲ್ಕಾಣೆ ಮಾತ್ರ
ವಿ. ಪಿ. ಚಾರ್ಜು ಬೇರೆ

ಅತೀ ಮನೋಹರವಾದ ಮುದ್ರಣ! ಮನೋರಂಜಕವಾದ ಗದ್ಯಪದ್ಯ!! ಅನೇಕ ವಿದುಷಿಯರಿಂದಲೂ ನಾಟಕಕಂಪೆನಿಯವರಿಂದಲೂ ಆದೃತವಾದುದು!! ಸರ್ವಾಂಗಸುಂದರವಾದ ಈ ಸಂಪೂರ್ಣ ನೂತನ ಕೃತಿಯ ಪ್ರಥಮ ಮುದ್ರಣವು ಈಗತಾನೆ ಪ್ರಕಟಿಸಲ್ಪಟ್ಟು, ಮೊದಲೇ ರಿಜಿಸ್ಟರಾದ ಆರ್ಡರುಗಳನ್ನು ತೀರಿಸಿದ ನಂತರ ಈಗ ಕೆಲವೇ ಪ್ರತಿಗಳು ಉಳಿದಿವೆ. ಸಂಗೀತಪ್ರಿಯರಿಂದಲೂ ನಾಟಕಕಲಾವಿಶಾರದರಿಂದಲೂ ಸಂಗ್ರಹಿಸಲು ಯೋಗ್ಯವಾದುದು. ಗ್ರಾಹಕರು ತ್ವರೆಮಾಡಿ!

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸಾರ 0—2—0.

ಶೆಖೆ ಕಾಲದ ರಜೆಯು ತೀರಿ ಶಾಲೆಗಳು ಇನ್ನು ಬೇಗನೆ ತೆರಿಯೋಣಾಗುತ್ತಲಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟೆನ್ ಪೇನುಗಳು ಈಗಲೇ ಬಂದಿವೆ. ಕ್ರಯ—1ಕ್ಕೆ ರೂ. 1—14—0ರಿಂದ ರೂ. 7—14—0ರ ವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂದ್ರಾ, ವೊಟರ್‌ಮೇನ್, ಸ್ವಾನ್, ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ:—
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನಿನ ಶಾರದಾ ಛಾಪಖಾನೆ, ಮಂಗಳೂರು.

ROLL No. 2

CONTD

FROM
1910

TO 1914

CONTD in REEL No. 3

P.K.G.
15.380

SWADESHABHIMANI
KANNADA WEEKLY
PUBLISHED FROM
MANGALORE

MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI